# THE BOOK WAS DRENCHED

UNIVERSAL
LIBRARY
OU_200839
UNIVERSAL
LIBRARY

OSMANIA UNIVERSITY LIBRARY

Call No. K.294.1/V46 R. Accession No. K5244.

Author ವೆಂಕಟರಾವ್, H. P.

Title ಅವತಾರಿಕ ಸಾಹಿತ್ಯ 1953

Volume .10.

This book should be returned on or before the date last marked below

# ಋಗ್ವೇದಸಂಹಿತಾ

ಭಾಗ—೧೯

ನಾಲ್ಕನೆಯ ಅಷ್ಟಕದ ೧-೪ನೇ ಅಧ್ಯಾಯಗಳು

ಐದನೆಯ ಮಂಡಲದ ಸೂಕ್ತಗಳು ೯-೬೨

ಶ್ರೀ ಜಯಚಾಮರಾಜೇಂದ್ರ ವೇದರತ್ನಮಾಲಾ

ಸಂಖ್ಯೆ—೧೯

# RIG-VEDA

ಸಾಯಣಭಾಷ್ಯಸಮೇತಾ

# ಋಗ್ವೇದ ಸಂಹಿತಾ

( ಕರ್ಣಾಟಕ ಭಾಷಾರ್ಥಾನುವಾದವಿವರಣೆಗಳೊಡನೆ )

ಭಾಗ—೧೯

ನಾಲ್ಕನೆಯ ಅಷ್ಟಕದ ೧-೩ನೇ ಅಧ್ಯಾಯವು

ಐದನೆಯ ಮಂಡಲದ ಸೂಕ್ತಗಳು ೯-೬೨

*Translated with Exhaustive Critical Notes & Explanations*

*by*

ASTHANA MAHAVIDWAN

H. P VENKATA RAO

*Editor.*

*Printed at*

SREE VINAYAK PRINTING WORKS, MYSRORE

1953

Published by the gracious permission of

His Highness

Sri Jayachamarajendra Wadiyar Bahadur,

G.C.B., G.C.S.I., Maharaja of Mysore.



ಯದುವಂಶಪಯಃಪಾರಾವಾರಸುಧಾಕರರೂ ಸತ್ಸಂಪ್ರದಾಯವೈದಿಕವಿದ್ಯಾವರ್ಧಕರೂ

ಮೈಸೂರು ದೇಶವನ್ನಾಳುವ ಧರ್ಮಪ್ರಭುಗಳೂ ಆದ ಶ್ರೀಮನ್ಮಹಾರಾಜ

**ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್,**

**ಜಿ.ಸಿ.ಬಿ., ಜಿ.ಸಿ.ಎಸ್.ಐ. ರವರು.**

ವೇದಪ್ರಕಟನಕಾರ್ಯಕ್ಕಾಗಿ ನಿಯಮಿತವಾಗಿರುವ

# ವೇದವಿಮರ್ಶನ ವಿದ್ವನ್ಮಂಡಲಿ

—o—


Translator & Editor :

ಆಸ್ಥಾನ ಮಹಾವಿದ್ವಾನ್ H. P. ವೆಂಕಟರಾವ್

Associate :

ಶ್ರೀ G. N. ಚಕ್ರವರ್ತಿ, M. A,

Professor of Sanskrit, St. Philomina's College, Mysore.


---

## ಸಹಾಯಕ ವಿದ್ವನ್ಮಂಡಲಿ

1. ಬ್ರ॥ ಶ್ರೀ॥ ಜಿ. ವಿಷ್ಣುಮೂರ್ತಿಭಟ್ಟರು, ವ್ಯಾಕರಣವಿದ್ವಾನ್, ಶ್ರೀಮನ್ಮಹಾರಾಜರವರ ಸಂಸ್ಕೃತಮಹಾಪಾಠಶಾಲಾ, ಮೈಸೂರು.
2. ಆಸ್ಥಾನ ವಿದ್ವಾನ್ ಬ್ರ॥ ಶ್ರೀ॥ H. ಗಂಗಾಧರಶಾಸ್ತ್ರಿಗಳು, ಜ್ಯೋತಿಷ ವಿದ್ವಾನ್ ಮತ್ತು ಕರ್ಣಾಟಕ ಭಾಷಾಪಂಡಿತರು,
3. ಬ್ರ॥ ಶ್ರೀ॥ ಶ್ರೀನಿವಾಸಶಾಸ್ತ್ರಿಗಳು, ಋಗ್ವೇದ ಘನಪಾಠಿಗಳು.
4. ಬ್ರ॥ ಶ್ರೀ॥ ಹಿಟ್ಟವಳ್ಳಿ ಬಿಳಿಗಿರಿರಂಗಾಜೋಯಿಸರು, ಶ್ರೌತ ವಿದ್ವಾನ್.
5. ಬ್ರ॥ ಶ್ರೀ॥ ಹಿಟ್ಟವಳ್ಳಿ ದೇವರಭಟ್ಟರು, ಮೀಮಾಂಸಾದರ್ಶನ ಪಂಡಿತರು.
6. ಬ್ರ॥ ಶ್ರೀ॥ ವೆಂಕಟರಮಣಾಚಾರ್, M A., B. T., ಸಾಹಿತ್ಯವಿದ್ವಾನ್.
7. ಬ್ರ॥ ಶ್ರೀ॥ S. ರಂಗನಾಥನ್, ಸಾಹಿತ್ಯವಿದ್ವಾನ್, ಅರಮನೆ ಸರಸ್ವತೀ ಭಂಡಾರ.
8. ಬ್ರ॥ ಶ್ರೀ॥ ಪುತ್ತೂರು ಅನಂತಕೃಷ್ಣಮಾಚಾರ್, ಸಾಹಿತ್ಯ ವಿದ್ವಾನ್, Govt. Oriental Research Institute. Mysore.
9. ಬ್ರ॥ ಶ್ರೀ॥ S. ಸೀತಾರಾಮಶಾಸ್ತ್ರಿಗಳು, ರಿಟೈರ್ಡ್ ಪಂಡಿತರು. Govt. Oriental Research Institute, Mysore.

# ಪೀಠಿಕೆ.

ಋಗ್ವೇದ ಸಂಹಿತೆಯ ಈ ಭಾಗದಲ್ಲಿ ನಾಲ್ಕನೆಯ ಅಷ್ಟಕದ ಮೊದಲ ಮೂರು ಅಧ್ಯಾಯಗಳಿರುವವು. ನಾವು ಈ ಗ್ರಂಥವನ್ನು ಪ್ರಾರಂಭಮಾಡಿದಾಗ ಒಂದೊಂದು ಭಾಗದಲ್ಲಿ ಒಂದೊಂದು ಅಧ್ಯಾಯದಂತೆ ಸೇರಿಸಿ ವಿಸ್ತಾರವಾದ ವಿವರಣೆ ಇರಬೇಕೆಂದು ಉದ್ದೇಶಿಸಲಾಗಿತ್ತು. ಅದರಂತೆ ಪ್ರಥಮಮಂಡಲದ ಅಧ್ಯಾಯಗಳೆಲ್ಲವನ್ನೂ ಒಂದೊಂದು ಭಾಗದಲ್ಲಿ ಒಂದೊಂದು ಅಧ್ಯಾಯವಿರುವಂತೆ ಮುದ್ರಿಸಲಾಗಿದೆ. ಈಚಿಗೆ ಸರ್ಕಾರದವರು ಈ ಗ್ರಂಥದ ಒಟ್ಟು ಮುದ್ರಣ ವೆಚ್ಚವನ್ನು ನಿಗದಿ ಮಾಡಿ ಗ್ರಂಥವು ಒಟ್ಟು ಮೂವತ್ತು ಭಾಗಗಳಲ್ಲಿ ಮುಗಿಯಬೇಕೆಂದು ನಿಷ್ಕರ್ಷೆಮಾಡಿರುವುದರಿಂದ ಅಲ್ಲಿಂದ ಮುಂದಕ್ಕೆ ಕೆಲವು ಭಾಗಗಳಲ್ಲಿ ಎರಡು ಅಧ್ಯಾಯಗಳಂತೆಯೂ ಮೂರು ಅಧ್ಯಾಯಗಳಂತೆಯೂ ಸೇರಿಸಲಾಗಿದೆ ಆದರೂ ಇದುವರೆಗೆ ಇಪ್ಪತ್ತು ಭಾಗಗಳಲ್ಲಿ ಮೂವತ್ತು ಅಧ್ಯಾಯಗಳು ಮಾತ್ರ ಮುಗಿದಿರುತ್ತೆ ಉಳಿದಿರುವ ಮೂವತ್ತನಾಲ್ಕು ಅಧ್ಯಾಯಗಳು ಇನ್ನು ಮುಂದಿನ ಹತ್ತು ಭಾಗಗಳಲ್ಲಿ ಮುಗಿಯಬೇಕಾಗಿರುವುದರಿಂದ ಪ್ರತಿಭಾಗದಲ್ಲಿಯೂ ನಾಲ್ಕು ಅಧ್ಯಾಯಗಳಂತೆ ಸೇರಿಸಿ ಮುದ್ರಿಸಲಾಗುವುದು.

ಋಗ್ವೇದದಲ್ಲಿ ಪ್ರತಿಮಂಡಲದಲ್ಲಿಯೂ ಇರುವ ಸೂಕ್ತಗಳು ಒಂದು ಕ್ರಮವನ್ನನುಸರಿಸಿ ವಿಂಗಡಿಸಲ್ಪಟ್ಟಿರುತ್ತವೆ. ಸೂಕ್ತಗಳು ಸಾಧಾರಣವಾಗಿ ಒಬ್ಬ ದೇವತೆಯನ್ನೇ ಉದ್ದೇಶಿಸಿರುತ್ತವೆ ಆದರೆ ಕೆಲವು ಸಂದರ್ಭಗಳಲ್ಲಿ ಒಂದು ಸೂಕ್ತಕ್ಕೆ ಅನೇಕ ದೇವತೆಗಳಿರಬಹುದು ಒಂದೊಂದು ಋಕ್ಕಿಗೆ ಒಬ್ಬೊಬ್ಬ ದೇವತೆ ಇರಬಹುದು. ಅಥವಾ ಒಂದೇ ಋಕ್ಕಿಗೆ ಇಬ್ಬರು ದೇವತೆಗಳಿರಬಹುದು. ಆದರೆ ಪ್ರಾಯಶಃ ಒಂದು ಸೂಕ್ತಕ್ಕೆ ಒಂದೇ ದೇವತೆ. ಋಗ್ವೇದದಲ್ಲಿ ವಿಶೇಷವಾಗಿ ಸ್ತುತವಾಗಿರುವ ದೇವತೆಗಳೆಂದರೆ, ಅಗ್ನಿ, ಇಂದ್ರ, ಮರುತ್ತುಗಳು, ವಿಶ್ವೇದೇವತೆಗಳು, ಅಶ್ವಿನೀದೇವತೆಗಳು, ಪವಮಾನಸೋಮ ಇತ್ಯಾದಿ ಅದರಲ್ಲಿ ಹೆಚ್ಚುಮಂತ್ರಗಳು ಅಗ್ನಿ ಮತ್ತು ಇಂದ್ರದೇವತೆಗಳ ಪರವಾಗಿಯೇ ಇವೆ. ಒಟ್ಟು ಋಗ್ವೇದದಲ್ಲಿ ಸುಮಾರು ಕಾಲುಭಾಗವು ಇಂದ್ರನ ಪರವಾಗಿದೆ ಇಂದ್ರನಾದ ಮೇಲೆ ಹೆಚ್ಚು ಮಂತ್ರಗಳು ಅಗ್ನಿಪರವಾಗಿವೆ. ಅನಂತರ ಇತರ ದೇವತೆಗಳು.

ಋಗ್ವೇದದಲ್ಲಿ ಋಷಿಗಳೂ ಅನೇಕರಿರುವರು ಇವರಲ್ಲಿ ಸಾಧಾರಣವಾಗಿ ಪ್ರತಿಯೊಬ್ಬ ಋಷಿಯೂ ಮೊದಲು ಅಗ್ನಿಯನ್ನೂ, ಅನಂತರ ಇಂದ್ರನನ್ನೂ, ಅನಂತರ ಇತರ ದೇವತೆಗಳನ್ನು ಸ್ತುತಿಸುವ ಸೂಕ್ತಗಳನ್ನು ಒಂದೆಡೆಯಲ್ಲಿ ಸೇರಿಸಿರುವುದರಿಂದ ಋಷಿಕ್ರಮವನ್ನನುಸರಿಸಿ ಅಗ್ನಿ ಮೊದಲಾದ ದೇವತಾ ಪರವಾದ ಸೂಕ್ತಗಳ ಸಮೂಹವು ಅನೇಕ ಕಡೆಗಳಲ್ಲಿರುವವು. ಈ ದೇವತೆಗಳ ಗುಣವರ್ಣನೆಯೂ ಅಲ್ಪಸ್ವಲ್ಪ ವ್ಯತ್ಯಾಸದೊಡನೆ ಒಂದೇ ವಿಧವಾಗಿರುವವು. ಆದುದರಿಂದ ಮೊದಲು ಮೊದಲು ಪ್ರತಿದೇವತೆಯ ಗುಣವರ್ಣನೆಯನ್ನೂ, ಆಯಾ ಸೂಕ್ತಗಳಲ್ಲಿರುವ ಕ್ಲಿಷ್ಟ ಶಬ್ದಗಳನ್ನೂ, ದೇವತೆಗಳ ವೈಶಿಷ್ಟ್ಯವನ್ನು ನಾವು ಇದುವರೆಗೆ ವಿಸ್ತಾರವಾಗಿ ವಿವರಿಸಿದೇವೆ. ಇನ್ನು ಮುಂದೆ, ಹಿಂದೆ ವಿವೃತವಾದ ವಿಷಯಗಳ ವರ್ಣನೆಯನ್ನು ಸಂಕ್ಷೇಪಮಾಡಿ, ಹೊಸವಿಷಯಗಳನ್ನು ಮಾತ್ರ ಅವಶ್ಯಕತೆ ತೋರಿದಾಗ ವಿವರಿಸಲಾಗುವುದು ಹೀಗೆ ಮಾಡುವುದರಿಂದ ಗ್ರಂಥದ ಶ್ರೇಷ್ಠತೆಗೆ ಲೋಪಬಾರದೆ ವಿಸ್ತಾರವು ಮಾತ್ರ ಕಮ್ಮಿಯಾಗುವುದು. ಮತ್ತು ಕೆಲವು ಸಂದರ್ಭಗಳಲ್ಲಿ ಒಂದೇ ದೇವತೆಯ ಪರವಾದ ಅನೇಕ ಸೂಕ್ತಗಳು ಒಟ್ಟಾಗಿದ್ದಲ್ಲಿ

ಆ ದೇವತೆಯ ವರ್ಣನೆ ಮೊದಲಾದ ವಿಶಿಷ್ಟಸಂಗತಿಗಳನ್ನು ಮೊದಲನೆಯ ಸೂಕ್ತದ ಪ್ರಾರಂಭದಲ್ಲಿಯೇ ವಿಸ್ತಾರವಾಗಿ ಪೀಠಿಕಾರೂಪವಾಗಿ ವಿವರಿಸಿ ಅನಂತರ ಋಕ್ಕುಗಳ ಪ್ರತಿಪದಾರ್ಥ ಭಾವಾರ್ಥಗಳನ್ನು ಮಾತ್ರ ವಿವರಿಸಲಾಗಿರುವುದು. ಈ ವಿಧವೂ ಒಂದು ರೀತಿಯಲ್ಲಿ ವಾಚಕರಿಗೆ ಅನುಕೂಲವಾಗಿಯೇ ಇರುವುದು.

ಅತಿಪ್ರಾಚೀನವೂ, ಅತಿಗಹನವೂ, ಅತಿವಿಸ್ತಾರವೂ, ಸರ್ವಶಾಸ್ತ್ರಗಳಿಗೂ, ಮೂಲಭೂತವೂ ಆದ ಇಂತಹ ಋಗ್ವೇದ ಸಂಹಿತೆಯನ್ನು ಸರಳವಾದ ಕನ್ನಡ ಭಾಷೆಯಲ್ಲಿ ವಿಮರ್ಶಾನುವಾದಸಹಿತವಾಗಿ ಪ್ರಕಾಶಪಡಿಸುವುದು ಸುಲಭವಾದ ಕೆಲಸವಲ್ಲ. ಆದರೂ ಇಂತಹ ಮಹತ್ಕಾರ್ಯದಿಂದ ಪಂಡಿತಪಾಮರರಾದಿಯಾದ ಸಕಲ ಜನರೂ ಜ್ಞಾನಾಭಿವೃದ್ಧಿಯನ್ನು ಪಡೆದು ಈಶ್ವರಾನುಗ್ರಹಕ್ಕೆ ಪಾತ್ರರಾಗಲೆಂಬ ಘನವಾದ ಉದ್ದೇಶದಿಂದ ಕರ್ನಾಟಕ ಸಿಂಹಾಸನಾಧೀಶ್ವರರೂ, ವೇದವಿದ್ಯಾಭಿಮಾನಿಗಳೂ, ಸ್ವಯಂಪಂಡಿತರೂ, ಪ್ರಜಾನುರಾಗಿಗಳೂ, ದೈವಭಕ್ತಿತತ್ಪರರೂ ಆದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಬಿ., ಜಿ ಸಿ.ಎಸ್.ಐ** ಮಹಾಪ್ರಭುವರ್ಯರೂ ಅವರ ಸರ್ಕಾರದವರೂ ಬಹುದ್ರವ್ಯಸಾಧ್ಯವಾದ ಈ ಗ್ರಂಥಪ್ರಕಟನೆಯನ್ನು ತಮ್ಮ ಉದಾರಾಶ್ರಯದಿಂದ ಪ್ರೋತ್ಸಾಹಮಾಡುತ್ತಿರುವುದು ಕರ್ನಾಟಕ ಜನಕೋಟಿಯ ಸುಕೃತವೆಂದೇ ಹೇಳಬೇಕು. ಇಂತಹ ಉದಾರಮತಿಗಳಾದ ನಮ್ಮ ಪ್ರಭುವರ್ಯರಿಗೂ, ಅವರ ಕುಟುಂಬಕ್ಕೂ ರಾಜಕುಮಾರಿಯರಿಗೂ, **ಶ್ರೀಕಂಠದತ್ತನೃಸಿಂಹರಾಜ ಒಡೆಯರ್** ಎಂಬ ಶುಭನಾಮಾಂಕಿತರಾದ ರಾಜಕುಮಾರರಿಗೂ, ಸಮಸ್ತ ಪ್ರಜಾಕೋಟಿಗೂ ಸಹ ವೇದಪುರುಷನಾದ ಸರ್ವೇಶ್ವರನು ಐಹಿಕ ಫಲಗಳಾದ ಆಯುರಾರೋಗ್ಯೈಶ್ವರ್ಯಾದಿ ಸಕಲ ಸಂಪತ್ತನ್ನೂ ಪಾರಮಾರ್ಥಿಕವಾದ ಅಧ್ಯಾತ್ಮಜ್ಞಾನವನ್ನೂ ಇತೋಽಪ್ಯತಿಶಯವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು.
ಶ್ರೀನಂದ್ವಿಜಯನಾಮ ಸಂ॥ ನಿಜವೈಶಾಖ ಶುದ್ಧ ಪಂಚಮೀ ಸೋಮವಾರ
ತಾ॥ 18-5-1953

ಅನುವಾದಕ
**ಹೆಚ್. ಪಿ. ವೆಂಕಟರಾವ್,**
ಆಸ್ಥಾನ ಮಹಾವಿದ್ವಾನ್

# ವಿಷಯಾನುಕ್ರಮಣಿಕೆ

## ನಾಲ್ಕನೆಯ ಅಷ್ಟಕದಲ್ಲಿ ಮೊದಲನೆಯ ಅಧ್ಯಾಯವು
## ಐದನೆಯ ಮಂಡಲದ ಸೂಕ್ತಗಳು


| | | ಪುಟಸಂಖ್ಯೆ |
|---|---|---|
| ೯ | **ತ್ವಾಮಗ್ನೇ ಹವಿಷ್ಮಂತಃ ಎಂಬ ಒಂಭತ್ತನೆಯ ಸೂಕ್ತ—** | |
| | ಸೂಕ್ತದ ಪೀಠಿಕೆ—ಅಗ್ನಿಯ ಪ್ರಶಂಸೆ | 1 |
| | ಅಗ್ನಿಯ ಹವ್ಯವಾಹಕತ್ವ | 2 |
| | ಅಗ್ನಿಗೂ ದೇವತೆಗಳಿಗೂ ನಡೆದ ಸಂವಾದ | 2 |
| | ಅಗ್ನಿಯು ನೀರಿನಲ್ಲಿ ಅವಿತುಕೊಂಡಿದ್ದ ವಿಚಾರ (ತೈತ್ತಿರೀಯ ಸಂಹಿತೆಯಲ್ಲಿರುವಂತೆ) | 4 |
| | ಅಗ್ನಿಗೂ ಅಂಗಿರಸ್ಸಿಗೂ ಇರುವ ಸಂಬಂಧ | 5 |
| | ಅಗ್ನಿಯ ಪ್ರಸರಣ ಶಕ್ತಿ | 7 |
| | ಅಗ್ನಿಯ ಸರ್ವಾಧಾರತ್ವ ಮತ್ತು ಸರ್ವಶಕ್ತಿತ್ವ | 8 |
| | ಸೂಕ್ತದ ಋಷಿದೇವತಾಛಂದಸ್ಸುಗಳು ಮತ್ತು ವಿನಿಯೋಗ | 9 |
| | ಜಾತವೇದಶ್ಶಬ್ದವಿವರಣೆ ಇತ್ಯಾದಿ | 12 |
| ೧೦ | **ಅಗ್ನ ಓಜಿಷ್ಠಂ ಎಂಬ ಹತ್ತನೆಯ ಸೂಕ್ತ—** | 20 |
| | ಸೂಕ್ತದ ಋಷಿದೇವತಾಛಂದಸ್ಸುಗಳು, ವಿನಿಯೋಗ ಇತ್ಯಾದಿ | 21 |
| ೧೧ | **ಜನಸ್ಯ ಗೋಪಾ ಅಜನಿಷ್ಟ ಎಂಬ ಹನ್ನೊಂದನೆಯ ಸೂಕ್ತ—** | 31 |
| | ಅರಣಿಗಳಲ್ಲಿ ಅಗ್ನಿಯನ್ನು ಉತ್ಪತ್ತಿಮಾಡುವ ವಿಚಾರ | 37 |
| ೧೨ | **ಪ್ರಾಗ್ನಯೇ ಬೃಹತೇ ಎಂಬ ಹನ್ನೆರಡನೆಯ ಸೂಕ್ತ—** | 41 |
| ೧೩ | **ಅರ್ಚಂತಸ್ತ್ವಾ ಎಂಬ ಹದಿಮೂರನೆಯ ಸೂಕ್ತ—** | 52 |
| ೧೪ | **ಅಗ್ನಿಂ ಸ್ತೋಮೇನ ಬೋಧಯ ಎಂಬ ಹದಿನಾಲ್ಕನೆಯ ಸೂಕ್ತ—** | 60 |
| ೧೫ | **ಪ್ರ ವೇಧಸೇ ಕವಯೇ ಎಂಬ ಹದಿನೈದನೆಯ ಸೂಕ್ತ—** | 67 |
| ೧೬ | **ಬೃಹದ್ವಯೋ ಹಿ ಭಾನವೇ ಎಂಬ ಹದಿನಾರನೆಯ ಸೂಕ್ತ—** | 74 |
| ೧೭ | **ಆ ಯಜ್ಞೈರ್ದೇವ ಎಂಬ ಹದಿನೇಳನೆಯ ಸೂಕ್ತ—** | 81 |

| | | ಪುಟಸಂಖ್ಯೆ |
|---|---|---|
| ೧೮ | ಪ್ರಾತರಗ್ನಿಃ ಪುರುಪ್ರಿಯಃ ಎಂಬ ಹದಿನೆಂಟನೆಯ ಸೂಕ್ತ— | 87 |
| ೧೯ | ಅಭ್ಯವಸ್ಥಾಃ ಎಂಬ ಹತ್ತೊಂಭತ್ತನೆಯ ಸೂಕ್ತ— | 94 |
| ೨೦ | ಯಮಗ್ನೇ ವಾಜಸಾತಮ ಎಂಬ ಇಪ್ಪತ್ತನೆಯ ಸೂಕ್ತ— | 100 |
| ೨೧ | ಮನುಷ್ವತ್ತ್ವಾ ನಿ ಧೀಮಹಿ ಎಂಬ ಇಪ್ಪತ್ತೊಂದನೆಯ ಸೂಕ್ತ— | 105 |
| ೨೨ | ಪ್ರ ವಿಶ್ವಸಾಮನ್ ಎಂಬ ಇಪ್ಪತ್ತೆರಡನೆಯ ಸೂಕ್ತ— | 110 |
| ೨೩ | ಅಗ್ನೇ ಸಹಂತಮಾ ಭರ ಎಂಬ ಇಪ್ಪತ್ತಮೂರನೆಯ ಸೂಕ್ತ— | 115 |
| ೨೪ | ಅಗ್ನೇ ತ್ವಂ ನಃ ಎಂಬ ಇಪ್ಪತ್ತನಾಲ್ಕನೆಯ ಸೂಕ್ತ— | 120 |
| ೨೫ | ಅಚ್ಛಾ ವೋ ಅಗ್ನಿಂ ಎಂಬ ಇಪ್ಪತ್ತೈದನೆಯ ಸೂಕ್ತ— | 123 |
| ೨೬ | ಅಗ್ನೇ ಪಾವಕ ರೋಚಿಷಾ ಎಂಬ ಇಪ್ಪತ್ತಾರನೆಯ ಸೂಕ್ತ— | 134 |
| ೨೭ | ಅನಸ್ವಂತಾ ಸತ್ಪತಿಃ ಎಂಬ ಇಪ್ಪತ್ತೇಳನೆಯ ಸೂಕ್ತ | 142 |
| ೨೮ | ಸಮಿದ್ಧೋ ಅಗ್ನಿರ್ದಿವಿ ಎಂಬ ಇಪ್ಪತ್ತೆಂಟನೆಯ ಸೂಕ್ತ— | 150 |
| | ಅಗ್ನೇ ಶರ್ಧ ಎಂಬ ಋಕ್ಕಿನ ವಿಶೇಷವಿನಿಯೋಗ | 154 |
| ೨೯ | ತ್ರ್ಯರ್ಯಮಾ ಎಂಬ ಇಪ್ಪತ್ತೊಂಭತ್ತನೆಯ ಸೂಕ್ತ— | 158 |
| ೩೦ | ಕ್ವ೧ ಸ್ಯ ವೀರಃ ಎಂಬ ಮೂವತ್ತನೆಯ ಸೂಕ್ತ— | 178 |
| | **ಸುಖರಥಂ** ಎಂಬ ಶಬ್ದದ ಅರ್ಥವಿವರಣೆ ಇತ್ಯಾದಿ | 180 |
| | ನಾನಾದೇವತೆಗಳ ವಾಹನಗಳು | 180 |
| | **ದಾಸಪತ್ನೀಃ** ಎಂಬ ಶಬ್ದದ ಅರ್ಥವಿವರಣೆ | 186 |
| | **ಕಂ, ಈಂ ಇತ್ ಉ** ಎಂಬ ನಿಪಾತಗಳ ಪ್ರಯೋಗ ಇತ್ಯಾದಿ | 189 |
| | **ಅರ್ಕ** ಶಬ್ದದ ನಾನಾರ್ಥಗಳು | 190 |
| | ಇಂದ್ರನು **ನಮುಚಿ**ಯೆಂಬ ಅಸುರನನ್ನು ಸಂಹಾರಮಾಡಿದ ವಿಷಯ ಋಗ್ವೇದ ಮತ್ತು ಯಜುರ್ವೇದಗಳಲ್ಲಿ ಹೇಳಿರುವಂತೆ | 193 |
| | **ದಾಸ, ದಸ್ಯು** ಎಂಬ ಶಬ್ದಗಳ ವಿವರಣೆ; ದಸ್ಯುಜನರು ಯಾರು ಎಂಬ ವಿಚಾರ | 199 |
| | **ಶುಷ್ಣ** ಎಂಬ ಅಸುರನ ವೃತ್ತಾಂತ | 201 |
| | **ಶಂಬರನ** ವಿಷಯ | 201 |
| | **ಪಿಪ್ರುವಿನ** ವಿಷಯ | 201 |

ಪುಟಸಂಖ್ಯೆ

ಧುನಿ ಮತ್ತು ಚುಮುರಿ 202
ವರ್ಚೀ ಎಂಬ ಅಸುರನ ವಿಷಯ 202

೩೧. ಇಂದ್ರೋ ರಥಾಯ ಎಂಬ ಮೂವತ್ತೊಂದನೆಯ ಸೂಕ್ತ— 210

೩೨. ಆದರ್ದರುತ್ಸಮಸೃಜಃ ಎಂಬ ಮೂವತ್ತೆರಡನೆಯ ಸೂಕ್ತ— 226
ಪಂಚಜನರು ಯಾರು ಎಂಬ ವಿಚಾರ 240

ನಾಲ್ಕನೆಯ ಅಷ್ಟಕದಲ್ಲಿ ಮೊದಲನೆಯ ಅಧ್ಯಾಯವು ಸಮಾಪ್ತವು.

## ಎರಡನೆಯ ಅಧ್ಯಾಯವು

೩೩. ಮಹಿ ಮಹೇ ತವಸೇ ಎಂಬ ಮೂವತ್ತಮೂರನೆಯ ಸೂಕ್ತ— 245
ಸೂಕ್ತದ ಪೀಠಿಕೆ-ವಿಶ್ವೇದೇವತೆಗಳ ವಿಷಯ 245
ವೈಶ್ವದೇವಸೂಕ್ತಗಳಲ್ಲಿ ನೈಮಿತ್ತಿಕವಾಗಿ ಪ್ರಶಂಸಿತವಾಗತಕ್ಕ ದೇವತೆಗಳು 247

೩೪. ಅಜಾತಶತ್ರುಮಜರಾ ಎಂಬ ಮೂವತ್ತನಾಲ್ಕನೆಯ ಸೂಕ್ತ— 262

೩೫. ಯಸ್ತೇ ಸಾಧಿಷ್ಠಃ ಎಂಬ ಮೂವತ್ತೈದನೆಯ ಸೂಕ್ತ— 275

೩೬. ಸ ಆ ಗಮದಿಂದ್ರಃ ಎಂಬ ಮೂವತ್ತಾರನೆಯ ಸೂಕ್ತ— 283

೩೭. ಸಂ ಭಾನುನಾ ಯತತೇ ಎಂಬ ಮೂವತ್ತೇಳನೆಯ ಸೂಕ್ತ— 291
ಘೃತಪೃಷ್ಠಃ, ಸ್ವಂಚಾಃ ಇತಾದಿ ಶಬ್ದಗಳ ವಿವರಣೆ 293
ಆಶಿರದ್ರವ್ಯಗಳು 298

೩೮. ಉರೋಷ್ಟ ಇಂದ್ರ ಎಂಬ ಮೂವತ್ತೆಂಟನೆಯ ಸೂಕ್ತ— 301

೩೯. ಯದಿಂದ್ರ ಚಿತ್ರ ಎಂಬ ಮೂವತ್ತೊಂಭತ್ತನೆಯ ಸೂಕ್ತ— 307

ಮೇಹನಾ ಎಂಬ ಶಬ್ದಕ್ಕೆ ಯಾಸ್ಕರ ನಿರ್ವಚನ ಇತ್ಯಾದಿ. 309
ದಾವನೇ, ಅಕೂಪಾರಸ್ಯ ಎಂಬ ಶಬ್ದಗಳಿಗೆ ಯಾಸ್ಕರ ನಿರ್ವಚನ 311
ಕಚ್ಛಪ ಶಬ್ದಕ್ಕೆ ಯಾಸ್ಕರ ಅವಯವಾರ್ಥವಿವರಣೆ. 312

೪೦. ಆ ಯಾಹ್ಯದ್ರಿಭಿಃ ಎಂಬ ನಲವತ್ತನೆಯ ಸೂಕ್ತ- 316

ಋಜೀಷೀ ಎಂಬ ಹೆಸರು ಇಂದ್ರನಿಗೆ ಬರಲು ಕಾರಣವೇನು-ಋಜೀಷ ಶಬ್ದದ ವಿವರಣೆ-
ಶ್ಯೇನಪಕ್ಷಿಯು ಸ್ವರ್ಗದಿಂದ ಸೋಮವನ್ನು ತಂದ ವಿಚಾರ ಇತ್ಯಾದಿ 322
ಸ್ವರ್ಭಾನು (ರಾಹು) ಎಂಬ ಅಸುರನ ವಿಷಯ 326

ಪುಟಸಂಖ್ಯೆ

೪೧. **ಕೋ ನು ವಾಂ ಮಿತ್ರಾವರುಣೌ ಎಂಬ ನಲವತ್ತೊಂದನೆಯ ಸೂಕ್ತ-** 336

ಸೂಕ್ತದ ಪೀಠಿಕೆ-**ವಿಶ್ವೇದೇವತೆಗಳ ಪರಿಚಯ**-ವಿಶ್ವೇದೇವತೆಗಳು ಯಾರು ಇತ್ಯಾದಿ ವಿಷಯ ವಿಮರ್ಶೆ 336

ಈ ವಿಷಯದಲ್ಲಿ ವಿದಗ್ಧಶಾಕಲ್ಯಋಷಿಗೂ ಯಾಜ್ಞವಲ್ಕ್ಯನೆಂಬ ಋಷಿಗೂ ನಡೆದ ಸಂವಾದ ಇತ್ಯಾದಿ 346

**ಕಣ್ವಹೋತಾ ತ್ರಿತಃ** 358

ಅಹಿರ್ಬುಧ್ನ್ಯನೆಂಬ ದೇವತೆಯ ವಿಷಯ 385

**ನಿರ್ಋತಿಯ** ವಿಷಯ 393

೪೨. **ಪ್ರ ಶಂತಮಾ ವರುಣಂ ಎಂಬ ನಲವತ್ತೆರಡನೆಯ ಸೂಕ್ತ** 400

**ಪೃಷದ್ಯೋನಿ**ಶಬ್ದಾರ್ಥವಿವರಣೆ ಇತ್ಯಾದಿ 402

**ಪಂಚಹೋತಾ** ಎಂಬ ಶಬ್ದದ ಅರ್ಥವಿವರಣೆ ಇತ್ಯಾದಿ 404

೪೩. **ಆ ಧೇನವಃ ಪಯಸಾ ಎಂಬ ನಲವತ್ತಮೂರನೆಯ ಸೂಕ್ತವು—** 429

**ರಾಕಾ** ಎಂಬ ದೇವತೆಯ ವಿಷಯ ಇತ್ಯಾದಿ 431

೪೪. **ತಂ ಪ್ರತ್ನಥಾ ಪೂರ್ವಥಾ ಎಂಬ ನಲವತ್ತನಾಲ್ಕನೆಯ ಸೂಕ್ತ-** 455

ಈ ಋಕ್ಕಿಗೆ ಯಾಸ್ಕರ ನಿರ್ವಚನ 458

**ಯಾದೃಗೇವ ದದೃಶೇ ತಾದೃಗುಚ್ಯತೇ** ಎಂಬ ವಾಕ್ಯದ ವಿಮರ್ಶೆ ಇತ್ಯಾದಿ 467

**ಛಾಯಾ** ಎಂಬ ಶಬ್ದದ ನಾನಾರ್ಥಗಳು, ವಿವರಣೆ ಇತ್ಯಾದಿ 469

೪೫. **ವಿದಾ ದಿವೋ ವಿಷ್ಯನ್ ಎಂಬ ನಲವತ್ತೈದನೆಯ ಸೂಕ್ತ—** 490

**ನವಗ್ವ, ದಶಗ್ವ** ಎಂಬ ಶಬ್ದಗಳ ಅರ್ಥವಿವರಣೆ ಇತ್ಯಾದಿ. 501

**ಸರಮಾ** ಎಂಬ ದೇವಶುನಿಯ ವಿಷಯ 502

**ಸರಮಾ** ಎಂಬ ದೇವಶುನಿಗೂ **ಪಣಿ**ಗಳೆಂಬ ಅಸುರರಿಗೂ ಅವರು ಅಪಹರಿಸಿದ ಗೋವುಗಳ ವಿಷಯದಲ್ಲಿ ನಡೆದ ಸಂಭಾಷಣೆ. 503

೪೬. **ಹಯೋ ನ ವಿದ್ವಾನ್ ಎಂಬ ನಲವತ್ತಾರನೆಯ ಸೂಕ್ತ—** 511

**ದೇವಾನಾಂ ಪತ್ನೀಃ** ಎಂಬ ಋಕ್ಕಿಗೆ ಯಾಸ್ಕರ ನಿರ್ವಚನ 522

**ಉತ ಗ್ನಾ ವ್ಯಂತು** ಎಂಬ ಋಕ್ಕಿಗೆ ಯಾಸ್ಕರ ನಿರ್ವಚನ 523

ನಾಲ್ಕನೆಯ ಅಷ್ಟಕದಲ್ಲಿ ಎರಡನೆಯ ಅಧ್ಯಾಯವು ಸಮಾಪ್ತವು.

ಪುಟಸಂಖ್ಯೆ

## ಮೂರನೆಯ ಅಧ್ಯಾಯವು


೪೭. **ಪ್ರಯುಂಜತೀ ದಿವ ಏತಿ ಎಂಬ ನಲವತ್ತೇಳನೆಯ ಸೂಕ್ತ—** 525

ಸೂಕ್ತದ ಪೀಠಿಕೆ. 525

**ಉಷೋದೇವತೆಗೂ** ಪೃಥಿವಿಗೂ ಇರುವ ಮಾತೃದುಹಿತೃಸಂಬಂಧ ಇತ್ಯಾದಿ ವಿಷಯವಿಮರ್ಶೆ 528

೪೮. **ಕದು ಪ್ರಿಯಾಯ ಧಾಮ್ನೇ ಎಂಬ ನಲವತ್ತೆಂಟನೆಯ ಸೂಕ್ತ—** 536

೪೯. **ದೇವಂ ವೋ ಅದ್ಯ ಎಂಬ ನಲವತ್ತೊಂಭನೆಯ ಸೂಕ್ತ—** 544

ಭಗನೆಂಬ ದೇವತೆಯ ವಿಷಯ 546

೫೦. **ವಿಶ್ವೋ ದೇವಸ್ಯ ನೇತುಃ ಎಂಬ ಐವತ್ತನೆಯ ಸೂಕ್ತ—** 554

೫೧. **ಅಗ್ನೇ ಸುತಸ್ಯ ಪೀತಯೇ ಎಂಬ ಐವತ್ತೊಂದನೆಯ ಸೂಕ್ತ—** 562

**ಋತಧೀತಯಃ ಸತ್ಯಧರ್ಮಾಣಃ** ಎಂಬ ಶಬ್ದಗಳ ಅರ್ಥವಿವರಣೆ 564

**ಚಮೂಃ** ಎಂಬ ಶಬ್ದದ ಅರ್ಥವಿವರಣೆ 567

ದೇವತೆಗಳು ಸೋಮಪಾನಮಾಡುವಾಗ **ವಾಯುವಿಗೆ** ಹೇಗೆ ಪ್ರಥಮಸ್ಥಾನವು ಲಭಿಸಿತೆಂಬ ವಿಷಯದಲ್ಲಿ ಐತರೇಯ ಬ್ರಾಹ್ಮಣದಲ್ಲಿ ಹೇಳಿರುವ ಪೂರ್ವೇತಿಹಾಸವು 568

**ಅಷ್ಟವಸುಗಳು** 577

**ಆದಿತ್ಯರು**–ಇವರು ಎಷ್ಟುಮಂದಿ ಇತ್ಯಾದಿ 578

**ಆದಿತ್ಯ**ಶಬ್ದಾರ್ಥವಿವರಣೆ–ನಿರ್ವಚನ ಇತ್ಯಾದಿ 583

೫೨. **ಪ್ರ ಶ್ಯಾವಾಶ್ವ ಎಂಬ ಐವತ್ತೆರಡನೆಯ ಸೂಕ್ತ—** 591

ಸೂಕ್ತದ ಪೀಠಿಕೆ–**ಶ್ಯಾವಾಶ್ವ**ಋಷಿಯ ಪರಿಚಯ 591

**ಮರುದ್ದೇವತೆಯ ಪರಿಚಯ** 594

**ರುದ್ರನು** ಮರುದ್ದೇವತೆಗಳಿಗೆ ತಂದೆಯೆಂಬ ವಿಚಾರ 595

ಇಂದ್ರನಿಗೂ ಮರುತ್ತುಗಳಿಗೂ ಇರುವ ಸಾಹಚರ್ಯ 596

ಮರದ್ದೇವತೆಗಳ ವಿಶೇಷವಿವರಣೆ 597

**ಮರುತಃ** ಎಂಬ ಶಬ್ದದ ನಿರ್ವಚನ 598

ಮರುದ್ದೇವತೆಗಳ ವೈಶಿಷ್ಟ್ಯ ಮತ್ತು ಗುಣವರ್ಣನೆ ಇತ್ಯಾದಿ 599

**ಆ** ಎಂಬ ನಿಪಾತದ ನಾನಾರ್ಥಗಳು. 607

**ಅಸಾಮಿಶವಸಃ** ಎಂಬ ಶಬ್ದದ ಅರ್ಥವಿವರಣೆ. 612

**ಪೃಶ್ನಿಮಾತರಃ** ಎಂಬ ಶಬ್ದದ ಅರ್ಥವಿವರಣೆ–ಈ ಹೆಸರು ಮರುದ್ದೇವತೆಗಳಿಗೆ ಬಂದ ವಿಚಾರ ಇತ್ಯಾದಿ 626

ಪುಟಸಂಖ್ಯೆ

೫೩. **ಕೋ ವೇದ ಜಾನಂ ಎಂಬ ಐವತ್ತಮೂರನೆಯ ಸೂಕ್ತ—** 629

ಮರುದ್ದೇವತೆಗಳ ಆಭರಣಗಳ ವಿವರಣೆ ಇತ್ಯಾದಿ 635
**ಕೋಶ**ಶಬ್ದಾರ್ಥವಿವರಣೆ, ಯಾಸ್ಕರ ನಿರ್ವಚನ ಇತ್ಯಾದಿ. 638
**ಸರಯು** ಎಂಬ ನದಿಯ ವಿಷಯ 643
**ಅನಿತಭಾ, ಕುಭಾ** ಎಂಬ ನದಿಗಳು 643
**ರಸಾ** ಎಂಬ ನದಿಯ ವಿಷಯ 643

೫೪. **ಪ್ರ ಶರ್ಧಾಯ ಮಾರುತಾಯ ಎಂಬ ಐವತ್ತನಾಲ್ಕನೆಯ ಸೂಕ್ತ—** 652

**ಚಿತ್** ಎಂಬ ಶಬ್ದದ ಅರ್ಥ ಮತ್ತು ಪ್ರಯೋಗಗಳು 658
**ರುದ್ರಾಃ** ಎಂಬ ಹೆಸರು ಮರುದ್ದೇವತೆಗಳಿಗೆ ಬರಲು ಕಾರಣ 660
**ರಜಃ** ಶಬ್ದಾರ್ಥವಿಚಾರ-ನಾನಾರ್ಥಗಳು ಮತ್ತು ಪ್ರಯೋಗಗಳು 660
**ವೃಕ್ಷ** ಶಬ್ದದ ಅವಯವಾರ್ಥ 664
**ಇವ** ಎಂಬ ಶಬ್ದದ ಅರ್ಥ ಮತ್ತು ಪ್ರಯೋಗ 664
**ಅರ್ಯಮಾ** ಎಂಬ ದೇವತೆಯ ವಿಷಯ 668
**ನಾಕ** ಶಬ್ದಾರ್ಥವಾದ ವಿಚಾರ-ಈ ಶಬ್ದಕ್ಕೆ ಯಾಸ್ಕರ ವಿವರಣೆ ಮತ್ತು ನಾನಾರ್ಥಗಳು ಉದಾಹರಣೆ ಸಹಿತ 674
**ಅಸ್ಮೇ** ಎಂಬ ಶಬ್ದಕ್ಕೆ ಏಳು ವಿಭಕ್ತಿಗಳಲ್ಲಿಯೂ ಇರುವ ಪ್ರಯೋಗ ಉದಾಹರಣೆ ಸಹಿತವಾಗಿ 677

೫೫. **ಪ್ರಯಜ್ಯವೋ ಮರುತಃ ಎಂಬ ಐವತ್ತೈದನೆಯ ಸೂಕ್ತ—** 683

**ಸಮುದ್ರ** ಶಬ್ದಾರ್ಥ ವಿವರಣೆ 691
**ಪರ್ವತ** ಶಬ್ದಾರ್ಥ-ಉದಾಹರಣೆ ಸಹಿತ 696

೫೬. **ಅಗ್ನೇ ಶರ್ಧಂತಂ ಎಂಬ ಐವತ್ತಾರನೆಯ ಸೂಕ್ತ—** 702

**ಉಪಸರ್ಗ** ಎಂದರೇನು-**ಅವ** ಎಂಬ ಉಪಸರ್ಗದ ಅರ್ಥವಿವರಣೆ 704
**ಸ್ಯಃ ತ್ಯಂ ಸ್ಯ** ಎಂಬ ಶಬ್ದಗಳ ಅರ್ಥ ಇತ್ಯಾದಿ 715
**ರಥ** ಶಬ್ದಾರ್ಥವವರಣೆ 717
**ರೋದಸೀ** ಎಂಬ ಶಬ್ದದ ನಾನಾರ್ಥಗಳು-ಉದಾಹರಣೆ ಸಹಿತ 718

೫೭. **ಆ ರುದ್ರಾಸ ಇಂದ್ರವಂತಃ ಎಂಬ ಐವತ್ತೇಳನೆಯ ಸೂಕ್ತ—** 722

ಇಂದ್ರನಿಗೂ ಮರುತ್ತುಗಳಿಗೂ ಇರುವ ಸಖ್ಯ 725
**ಗೋತಮ**ಋಷಿಯ ದಾಹಶಮನಾರ್ಥವಾಗಿ ಮರುದ್ದೇವತೆಗಳು ಜಲಪೂರ್ಣವಾದ ಬಾವಿಯನ್ನು ತಂದು ಒದಗಿಸಿದ ವಿಚಾರ ಇತ್ಯಾದಿ 727

ಪುಟಸಂಖ್ಯೆ

**ವಾಶೀಮಂತಃ** ಎಂಬ ಶಬ್ದಕ್ಕೆ ಯಾಸ್ಕರ ನಿರ್ವಚನವು 729
**ಯಮ**(ಯುಗಲ) ಶಬ್ದಾರ್ಥವಿವರಣೆ ಇತ್ಯಾದಿ 733
**ಅನವಭ್ರರಾಧಸಃ** ಎಂಬ ಶಬ್ದದ ಅರ್ಥವಿವರಣೆ 734
**ಹಯೇ** ಎಂಬ ಶಬ್ದದ ಅರ್ಥವಿವರಣೆ ಮತ್ತು ಪ್ರಯೋಗ-ಉದಾಹರಣೆ ಸಹಿತ 739

೫೮. **ತಮು ನೂನಂ ತವಿಷೀಂ ಎಂಬ ಐವತ್ತೆಂಟನೆಯ ಸೂಕ್ತ—** 740

**ಉ** ಎಂಬ ನಿಪಾತದ ವಿವರಣೆ ಮತ್ತು ಪ್ರಯೋಗ 742
**ಮಾರುತಂ ಗಣಂ** ಎಂಬ ಶಬ್ದಗಳ ಅರ್ಥವಿವಣೆ 744
**ನ್ಯಾನ್** ಎಂಬ ಶಬ್ದದ ಅರ್ಥವಿವರಣೆ ಇತ್ಯಾದಿ 745
**ಪರೋಕ್ಷಕೃತ, ಪ್ರತ್ಯಕ್ಷಕೃತ, ಆಧ್ಯಾತ್ಮಿಕ** ಎಂಬ ಮೂರುವಿಧ ಋಕ್ಕುಗಳು 747
**ಕವಿ**ಶಬ್ದದ ಅರ್ಥವಿವರಣೆ-ಉದಾಹರಣೆ ಸಹಿತ 749
ಮರುದ್ದೇವತೆಗಳಲ್ಲಿ ಎಲ್ಲರೂ ಒಂದೇವಿಧವಾಗಿಯೂ ಸಮಾನರಾಗಿಯೂ ಇರುವರೆಂಬ ವಿಚಾರ 754

೫೯. **ಪ್ರ ವಃ ಸ್ಪಳಕ್ರನ್ ಎಂಬ ಐವತ್ತೊಂಭತ್ತನೆಯ ಸೂಕ್ತ—** 760

**ನ** ಎಂಬ ಶಬ್ದದ ಅರ್ಥ ಮತ್ತು ಪ್ರಯೋಗ 770
ಮರುದ್ದೇವತೆಗಳಲ್ಲಿ ಜ್ಯೇಷ್ಠ ಕನಿಷ್ಠ ಎಂಬ ಭೇವವಿಲ್ಲದೆ ಎಲ್ಲರೂ ಸಮಾನರು ಎಂಬ ವಿಷಯ 775
ಭೂಮಿಯ ಮೇಲೆ ವೃಷ್ಟಿಯಾಗುವುದನ್ನು ದೇವತೆಗಳು ಹೇಗೆ ತಿಳಿಯುವರು ಎಂಬ ವಿಷಯ 777

೬೦. **ಈಳೇ ಅಗ್ನಿಂ ಸ್ವವಸಂ ಎಂಬ ಅರವತ್ತನೆಯ ಸೂಕ್ತ—** 779

ಮರುದ್ದೇವತೆಗಳ ಆಭರಣಗಳ ವರ್ಣನೆ 786

೬೧. **ಕೇ ಷ್ಠಾ ನರಃ ಎಂಬ ಅರವತ್ತೊಂದನೆಯ ಸೂಕ್ತ—** 793
ಸೂಕ್ತದ ಪೀಠಿಕೆ-ಶ್ಯಾವಾಶ್ವ ಋಷಿಯ ವಿವಾಹವಿಷಯ ಇತ್ಯಾದಿ 794
**ತರಂತ**ರಾಜನ ಮಹಿಷಿಯಾದ ಶಶೀಯಸಿಯ ದಾನಸ್ತುತಿ 803
**ನೇಮಃ** ಎಂಬ ಶಬ್ದದ ವಿವರಣೆ ಮತ್ತು ಯಾಸ್ಕರ ನಿರ್ವಚನ ಇತ್ಯಾದಿ 808
**ಪುರುಮೀಳ್ಹ**ರಾಜನ ದಾನಪ್ರಶಂಸೆ ಇತ್ಯಾದಿ 811
**ಅಪ್ರತಿಷ್ಕುತಃ** ಎಂಬ ಶಬ್ದದ ಅರ್ಥವಿವರಣೆ 816
**ಶ್ಯಾವಾಶ್ವಋಷಿಯ** ವಿವಾಹವರ್ಣನೆ-ಶೌನಕಮಹರ್ಷಿಯು ಹೇಳಿರುವಂತೆ 822
ಶ್ಯಾವಾಶ್ವಋಷಿಯು ತನ್ನ ವಿವಾಹವಿಚಾರವಾಗಿ ರಾತ್ರಿದೇವತೆಯನ್ನು ರಥವೀತಿರಾಜನಲ್ಲಿಗೆ ಕಳುಹಿಸುವುದು 824
ರಥವೀತಿರಾಜನು ತಪೋವನಕ್ಕೆ ಹೋದ ವಿಷಯವರ್ಣನೆ 826

ಪುಟಸಂಖ್ಯೆ


| | | |
|---|---|---|
| ೬೨. | **ಋತೇನ ಋತಮಪಿಹಿತಂ ಎಂಬ ಅರವತ್ತೆರಡನೆಯ ಸೂಕ್ತ—** | 827 |
| | ಸೂಕ್ತದ ಪೀಠಿಕೆ-ಮಿತ್ರಾವರುಣರ ಸೂಕ್ಷ್ಮಪರಿಚಯ | 827 |
| | ಮಿತ್ರಾವರುಣರ ಗುಣಾತಿಶಯಗಳು | 829 |
| | ಮಿತ್ರಾವರುಣರ ಸಾಹಚರ್ಯದ ಸ್ವರೂಪ ಮತ್ತು ಅವರ ಕ್ರಿಯೆಗಳು | 831 |
| | ಮಿತ್ರಾವರುಣರ ವಿಷಯದಲ್ಲಿ Roth ಎಂಬ ಜರ್ಮನ್ ಪಂಡಿತನ ಅಭಿಪ್ರಾಯ | 833 |
| | **ಮಂದೇಹಾರುಣ** ಎಂಬ ದ್ವೀಪವಾಸಿಗಳಾದ ಅಸುರರ ವಿಷಯ | 838 |
| | **ಬರ್ಹಿಃ** ಮತ್ತು **ಗರ್ತಂ** ಎಂಬ ಶಬ್ದಗಳ ಅರ್ಥವಿವರಣೆ ಇತ್ಯಾದಿ | 845 |
| | **ತಿಲ್ವಿಲೇ** ಎಂಬ ಶಬ್ದದ ಅರ್ಥವಿವರಣೆ | 848 |


ವಿಷಯಾನುಕ್ರಮಣಿಕೆ ಸಮಾಪ್ತವು.

## ಸಂಕೇತಾಕ್ಷರಗಳ ವಿವರಣೆಯು.

---

ಅಥ. ಸಂ.—ಅಥರ್ವವೇದಸಂಹಿತಾ
ಆಪ. ಸೂ.—ಆಪಸ್ತಂಬಶ್ರೌತಸೂತ್ರ
ಆಪ. ಧ. ಸೂ.—ಆಪಸ್ತಂಬ ಧರ್ಮಸೂತ್ರ
ಆಪ. ಪ. ಸೂ—ಆಪಸ್ತಂಬ ಪರಿಭಾಷಾಸೂತ್ರ
ಆ. ಸೂ. ಅಥವಾ ಆ. ಆಶ್ವಲಾಯನ ಶ್ರೌತಸೂತ್ರ
ಉ ಸೂ.—ಉಣಾದಿ ಸೂತ್ರ
ಋ. ಸಂ.—ಋಗ್ವೇದ ಸಂಹಿತಾ
ಐ. ಆ —ಐತರೇಯಾರಣ್ಯಕ
ಐ. ಉ. ಐತರೋಯೋಪನಿಷತ್
ಐ. ಬ್ರಾ.—ಐತರೇಯ ಬ್ರಾಹ್ಮಣ
ಛಾ. ಉ.—ಛಾಂದೋಗ್ಯೋಪನಿಷತ್
ಜೈ ಪೂ. ಸೂ.—ಜೈಮಿನೀಯ ಪೂರ್ವಮೀಮಾಂಸಾ ಸೂತ್ರ
ಜೈ. ನ್ಯಾ. ವಿ.—ಜೈಮಿನಿಯ ನ್ಯಾಯಮಾಲಾವಿಸ್ತರ
ತಾ. ಬ್ರಾ.—ತಾಂಡ್ಯಮಹಾ ಬ್ರಾಹ್ಮಣ
ತೈ ಆ.—ತೈತ್ತಿರೀಯ ಆರಣ್ಯಕ
ತೈ. ಬ್ರಾ.—ತೈತ್ತಿರೀಯ ಬ್ರಾಹ್ಮಣ
ತೈ. ಸಂ.—ತೈತ್ತಿರೀಯ ಸಂಹಿತಾ
ನಿ.—ನಿರುಕ್ತ, ನಿಘಂಟು
ಪಾ ಸೂ.—ಪಾಣಿನೀಯ ಸೂತ್ರ
ಪಾ. ಶಿ —ಪಾಣಿನೀಯ ಶಿಕ್ಷಾ
ಫಿ ಅಥವಾ ಫಿ. ಸೂ —ಫಿಟ್ ಸೂತ್ರ
ಬ್ರ. ಸೂ.—ಬ್ರಹ್ಮಸೂತ್ರ
ಮ. ಭಾ.—ಮಹಾಭಾರತ
ಮ. ಸ್ಮೃ —ಮನು ಸ್ಮೃತಿ
ಮೈ. ಸಂ —ಮೈತ್ರಾಯಣೀಯಸಂಹಿತಾ
ಯಾ ಸ್ಮೃ.—ಯಾಜ್ಞವಲ್ಕ್ಯ ಸ್ಮೃತಿ
ವಾ. ಸಂ.—ವಾಜಸನೇಯ ಸಂಹಿತಾ
ವಾ. ಪು.—ವಾಯುಪುರಾಣ
ವಿ ಪು.—ವಿಷ್ಣುಪುರಾಣ
ವೇ. ಸೂ.—ವೇದಾಂತ ಸೂತ್ರ
ಶ. ಬ್ರಾ.—ಶತಪಥಬ್ರಾಹ್ಮಣ
ಸಾ. ಸಂ.—ಸಾಮವೇದ ಸಂಹಿತಾ ಇತ್ಯಾದಿ.

---

Printed by
K. Venkatasubbiah,
at Sri Vinayak Printing Works,
Mysore.

॥ ಶ್ರೀ ॥

॥ ಶ್ರೀ ಮಹಾಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಶ್ವ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

**ಸಾಯಣಭಾಷ್ಯಸಹಿತಾ**

# ಋಗ್ವೇದಸಂಹಿತಾ

**ಭಾಗ—೧೯**

## ॥ ಚತುರ್ಥಾಷ್ಟಕೇ ಪ್ರಥಮೋಽಧ್ಯಾಯಃ ॥

**ನಾಲ್ಕನೆಯ ಅಷ್ಟಕದಲ್ಲಿ ಮೊದಲನೆಯ ಅಧ್ಯಾಯವು.**

**ಐದನೆಯ ಮಂಡಲದ ಒಂಭತ್ತನೆಯ ಸೂಕ್ತವು.**

## ಪೀಠಿಕೆ.

### ಅಗ್ನಿಪ್ರಶಂಸೆ.

ನಾಲ್ಕನೆಯ ಅಷ್ಟಕದ ಮೊದಲನೆಯ ಅಧ್ಯಾಯದ ಈ ಪೀಠಿಕೆಯಲ್ಲಿ ೫ನೇ ಮಂಡಲದ ೨೮ನೇ ಸೂಕ್ತದ ವರೆಗೆ ಅಗ್ನಿಪ್ರಶಂಸಾತ್ಮಕವಾದ ಮಂತ್ರಗಳಿರುತ್ತವೆ ಈ ಭಾಗಗಳು ಅತ್ರಿಗೋತ್ರೋತ್ಪನ್ನರಾದ ಋಷಿಗಳಿಂದ ನಿರ್ಮಿತವಾಗಿರುತ್ತವೆ. ಈ ಋಷಿಗಳು ಅಗ್ನಿಯ ಮಹದ್ಗುಣಗಳನ್ನು ಸ್ತುತಿಸಿ ಸತ್ಯಾತ್ಮಕವಾದ ಅಗ್ನಿಯೇ ಸಕಲ ಜಗತ್ತಿಗೂ ಧಾರಕನೆಂದು ವರ್ಣಿಸಿದ್ದಾರೆ. ಈ ಪ್ರಕರಣದಲ್ಲಿ ಅಗ್ನಿಯ ಮುಖ್ಯವಾದ ಕೆಲವು ವಿಶೇಷಗುಣಗಳು ಅನೇಕವಿಧದಲ್ಲಿ ಪ್ರಶಂಸಿತವಾಗಿವೆ. ಮುಖ್ಯವಾಗಿ,

(೧.) ಅಗ್ನಿಯೇ ಯಜ್ಞನಿರ್ವಾಹಕನು, ಹವ್ಯವಾಹಕನು, ಯಜ್ಞದ್ವಾರಾ ದೇವಮಾನವಾದಿ ಸಕಲಜಗತ್ತಿಗೂ ಧಾರಕನು. ಆದುದರಿಂದ ಸಕಲ ಯಜ್ಞಗಳೂ ಇವನನ್ನೇ ಆಶ್ರಯಿಸಿವೆಯೆಂಬ ವಿಷಯ.

(೨.) ಈ ಅಗ್ನಿಯು ಜಾತವೇದಸ್ಸೆಂದೂ, ಅಂಗಿರಸ್ಸೆಂದೂ ಪ್ರಖ್ಯಾತನಾಗಿದ್ದಾನೆ ಯಜ್ಞಾಗ್ನಿಯ ಪ್ರಜ್ವಲನಕ್ಕೆ ಅಂಗಿರಸ್ಸೇ ಮೂಲಕಾರಣನಾದುದರಿಂದ ಅಗ್ನಿಗೂ ಅಂಗಿರಸ್ಸಿಗೂ ಅನೇಕ ಸಂದರ್ಭಗಳಲ್ಲಿ ತಾದಾತ್ಮ್ಯವನ್ನೇ ತೋರಿಸಿ ಅಗ್ನಿಯನ್ನೂ ಅಂಗಿರಸ್ಸೆಂದೇ ಸಂಬೋಧಿಸಿದೆ

(೩.) ಈ ಅಗ್ನಿಯು ತ್ರಿಷಧಸ್ಥನಾದುದರಿಂದ ಇವನು ತ್ರಿತನೆಂದೂ ಪ್ರಖ್ಯಾತನಾಗಿ ತನ್ನ ಸರ್ವವ್ಯಾಪಕತ್ವವನ್ನು ಪ್ರಕಟಿಸಿರುವ ವಿಷಯವೂ ಪ್ರಧಾನವಾದ ಅಂಶ.

(೪ ) ಯಜ್ಞವೇ ದೇವತೆಗಳ ಜೀವಾಧಾರವಾದುದರಿಂದಲೂ, ಅಗ್ನಿಯೇ ಯಜ್ಞನಿರ್ವಾಹಕನಾದುದರಿಂದಲೂ ಸಕಲ ದೇವತೆಗಳೂ ತಮ್ಮ ಸ್ಥಿತಿಗೆ ಅಗ್ನಿಯನ್ನೇ ಆಶ್ರಯಿಸಿರುತ್ತಾರೆ. ದೇವಮಾನವಾದಿಗಳ ಸ್ಥಿತಿಗೆ ಕಾರಣನಾದ ಅಗ್ನಿಯೇ ಪರವಸ್ತುವಾಗಿದ್ದು **“ ಸ ಹಿ ಸತ್ಯೋ ಭವತಿ”** ಎಂದು ಸ್ತುತನಾಗಿದ್ದಾನೆ

ಈ ರೀತಿ ಅಗ್ನಿಯ ಪ್ರಧಾನಗುಣಗಳ ವರ್ಣನೆಯೇ ಈ ಋಷಿಗಳ ಸ್ತುತಿವಸ್ತುವಾಗಿದೆ ಈ ಅಂಶಗಳು ಯಾವ ರೀತಿ ಪ್ರಕೃತವಾದ ಪ್ರಕರಣವಲ್ಲಿ ವರ್ಣಿತವಾಗಿದೆಯೆಂಬುದನ್ನು ಸಂಕ್ಷೇಪವಾಗಿ ಇಲ್ಲಿ ವಿಮರ್ಶಿಸಲಾಗುತ್ತದೆ ಮೊದಲನೆಯದಾಗಿ,

## ಅಗ್ನಿಯ ಹವ್ಯವಾಹಕತ್ವ.

ಎಲ್ಲಕ್ಕಿಂತಲೂ ಮೊದಲು ಈ ಪ್ರಕರಣದಲ್ಲಿ ಅಗ್ನಿಯ ಹವ್ಯವಾಹಕತ್ವವು ಪ್ರಶಂಸಿತವಾಗಿದೆ. ಜಗದ್ವ್ಯವಹಾರಕ್ಕೆಲ್ಲಾ ಆಧಾರಭೂತವಾದ ಯಜ್ಞನಿರ್ವಹಣವು ಜಗತ್ತಿನ ಸ್ಥಿತಿಗತಿಗಳಿಗೆ ಅತ್ಯವಶ್ಯವಾಗಿದೆ ಈ ಯಜ್ಞವು ಪರಿಪೂರ್ಣವಾಗಿ ನಿರ್ವಹಿಸಲ್ಪಡಬೇಕಾದರೆ ಅಗ್ನಿಯೇ ಈ ಕಾರ್ಯಸಾಧಕನಾಗಿರಬೇಕು. ಆದುದರಿಂದ ಅವನೇ ಮುಖ್ಯ ಹೋತೃವೂ ಹವಿರ್ವಾಹಕನೂ ಆಗಿರಬೇಕು. **“ಮನ್ಯೇ ತ್ವಾ ಜಾತವೇದಸಂ ಸ ಹವ್ಯಾನಕ್ಷ್ಯಾನುಷಕ್”** ಜಾತವೇದೋರೂಪನಾದ ಅಗ್ನಿಯೇ ನಿರಂತರವಾದ ಹವ್ಯವಾಹಕನೆಂದು ನಮ್ಮ ದೃಢವಿಶ್ವಾಸವಿದೆಯೆಂದು ಋಷಿಯು ತನ್ನ ಶ್ರದ್ಧೆಯನ್ನು ಪ್ರಥಮತಃ ವ್ಯಕ್ತಪಡಿಸಿದ್ದಾನೆ. (೫. ೯. ೧ )

ಹವಿಸ್ಸನ್ನೇ ಆಹಾರವನ್ನಾಗಿ ನಂಬಿಕೊಂಡಿರುವ ದೇವತೆಗಳು ಯಜ್ಞಹವಿಸ್ಸನ್ನುಹಂಚುವ ಅಗ್ನಿಯು ಸ್ವಲ್ಪ ಕಣ್ಮರೆಯಾದರೂ ಪ್ರಕ್ಷುಬ್ಧರಾಗುತ್ತಾರೆ. ಅಂತಹ ಸನ್ನಿವೇಶಗಳಲ್ಲಿ ಅಗ್ನಿಯನ್ನು ವಿನಯದಿಂದ ಪ್ರಾರ್ಥಿಸಿ ಹವಿರ್ವಹನಕರ್ಮವನ್ನು ನೆರವೇರಿಸುವಂತೆ ಪ್ರಾರ್ಥಿಸುತ್ತಾರೆ. ಇಂತಹ ಕೆಲವು ಸನ್ನಿವೇಶಗಳು ಋಕ್ಸಂಹಿತೆಯಲ್ಲಿಯೇ ವರ್ಣಿತವಾಗಿರುತ್ತವೆ ಉದಾಹರಣೆಗೆ ಋ. ಸಂ. ೧೦. ೫೧ ನೇ ಸೂಕ್ತದ ವಿವರಣೆಯನ್ನು ಇಲ್ಲಿ ಪರಿಶೀಲಿಸಬಹುದು. ಉದಾಹೃತವಾಗುವ ಈ ಸೂಕ್ತದಲ್ಲಿ ದೇವತೆಗಳು ಹವಿರ್ವಹನಕರ್ಮಕ್ಕಾಗಿ ಅಗ್ನಿಯನ್ನು ಪ್ರಾರ್ಥಿಸುವುದೂ, ಅಗ್ನಿಯು ತನ್ನ ಪ್ರಿಯವಾದ ಒಂದು ನಿಯಮವನ್ನು ಸೂಚಿಸಿ ದೇವತೆಗಳು ಆ ನಿಯಮವನ್ನು ಪಾಲಿಸುವುದಾದರೆ ತಾನು ಹವಿರ್ವಹನಕರ್ಮವನ್ನು ನಿರ್ವಹಿಸುವುದಾಗಿ ಭರವಸೆಯನ್ನು ನೀಡುತ್ತಾನೆ ಅದರ ವಿವರಣೆಯು ಈ ರೀತಿಯಿರುತ್ತದೆ.

**ದೇವತೆಗಳು:**—ಎಲೈ ಅಗ್ನಿಯೇ, ನೀನು ನೀರಿನಲ್ಲಿ ಅವಿತುಕೊಂಡು ಕಣ್ಮರೆಯಾಗಿರುವಾಗ ನಿನ್ನನ್ನು ಮರೆಮಾಡಿರುವ ಆವರಣವು ಅತಿಸ್ಥೂಲವಾಗಿದೆ ಆದರೂ ಸಹ, ಎಲೈ ಜಾತವೇದಸ್ಸೇ, ನಮ್ಮಲ್ಲೊಬ್ಬನು ಮಾತ್ರ ನಿನ್ನ ನಾನಾರೂಪಾತ್ಮಕವಾದ ಸ್ವರೂಪವನ್ನು ಅರಿತು ನಿನ್ನನ್ನು ಅರಿಸಲು ಸಿದ್ಧನಾಗಿದ್ದಾನೆ. ದಯವಿಟ್ಟು ನಮಗೆ ಉಪಕಾರಿಯಾಗಿರು.

**ಅಗ್ನಿ:**—ಎಲೈ ದೇವತೆಗಳೇ, ನಿಮ್ಮ ನಡುವೆ ನನ್ನ ಅನಂತಸ್ವರೂಪಗಳನ್ನು ತಿಳಿದಿರುವವನು ಯಾರು ? ನನ್ನನಾನಾ ರೂಪಗಳೂ ನಿಮ್ಮಲ್ಲಿ ಯಾರಿಗೆ ಹೇಗೆ ಗೋಚರವಾಗಿರುತ್ತದೆ ? ಎಲೈ ಮಿತ್ರಾವರುಣರೇ, ದೇವಮಾರ್ಗಕ ವಾದುದೂ ಪ್ರಭಾಯುತವಾದದೂ ಆದ ನನ್ನ ವಾಹನವೆಲ್ಲಿ ?

**ದೇವತೆಗಳು:**— ಜಾತವೇದೋರೂಪನಾದ ಎಲೈ ಅಗ್ನಿಯೇ, ಉದಕಗಳಲ್ಲಿಯೂ ಓಷಧಿಗಳಲ್ಲಿಯೂ ಅಂತ ರ್ಗತನಾದ ನಿನ್ನನ್ನು ನಾವು ಬಹುಕಾಲ ಹುಡಿಕಿದೆವು. ಅನಂತರ ನಿನ್ನ ನಿಧಾನಪ್ರದೇಶಗಳಾದ ಹತ್ತು ಸ್ಥಾನ ಗಳಿಂದಲೂ, ನಿನ್ನ ಜ್ವಾಲೆಯು ಪ್ರಸರಿಸುವುದರಿಂದ ಆ ದಿಕ್ಕುಗಳ ಮೂಲಕ ಯಮನು ನಿನ್ನನ್ನು ಗುರ್ತಿಸಿದನು

**ಅಗ್ನಿ:**—ಎಲೈ ದೇವತೆಗಳೇ, ಹೋತ್ರಾತ್ಮಕವಾದ ಕರ್ಮದಿಂದ ತಪ್ಪಿಸಿಕೊಳ್ಳಲು ನಾನು ಮರೆಯಾದೆ ಪುನಃ ನೀವು ನನ್ನನ್ನು ಆ ಕರ್ಮಕ್ಕೆ ಎಲ್ಲಿ ನಿಯೋಜಿಸುವಿರೋ ಎಂದು ಆ ಕರ್ಮಭಾರಕ್ಕೆ ಹೆದರಿದವನಾಗಿ ನಾನು ಇಲ್ಲಿ ಬಂದು ಅವಿತುಕೊಂಡಿದ್ದೇನೆ ಆದುದರಿಂದಲೇ ನನ್ನ ಬೇರೆ ಬೇರೆ ರೂಪಗಳೂ ಸಹ ಈ ಉದಕಗಳಲ್ಲಿಯೇ ಅಂತರ್ಗತವಾಗಿವೆ. ಅಗ್ನಿರೂಪನಾದ ನಾನು ಪುನಃ ಆ ಭಾರವನ್ನು ವಹಿಸಲಿಚ್ಛಿಸುವುದಿಲ್ಲ

**ದೇವತೆಗಳು:**—ಎಲೈ ಅಗ್ನಿಯೇ, ಭಕ್ತನಾದ ಮನುವು ಯಜ್ಞವನ್ನಾಚರಿಸಿ ಹವಿಸ್ಸನ್ನರ್ಪಿಸಬೇಕೆಂದಿದ್ದಾನೆ. ಆದುದರಿಂದ ಅವನಿಗೂ ತನ್ಮೂಲಕ ನಮಗೂ ಸಹಾಯಮಾಡಲು ಬಾ ಗುಹೆಯಲ್ಲಿ ಈ ಮರೆಯಲ್ಲಿ ಅಂತರ್ಗತನಾಗಿ ರುವುದೂ ನಿನಗೊಂದು ಭೂಷಣವು. ದೇವತೆಗಳು ಸಂಚರಿಸುವ ಮಾರ್ಗಗಳು ಋಜುವಾಗಿರುವಂತೆ ಮಾಡು ಮತ್ತು ಉದಾರವಾದ ಮನಸ್ಸಿನಿಂದ ನಮ್ಮ ಹವಿಸ್ಸುಗಳನ್ನು ನಮಗೆ ವಹಿಸಿ ನಮಗೆ ಉಪಕಾರವನ್ನು ಮಾಡು

**ಅಗ್ನಿ:**—ರಥವನ್ನು ನಡೆಸತಕ್ಕ ಸಾರಥಿಯು ದಾರಿಯನ್ನುಆಕ್ರಮಿಸಿ ತನ್ನ ಕಾರ್ಯವನ್ನು ನಿರ್ವಹಿಸುವಂತೆ ನನ್ನ ಅಗ್ರಜರೂ ಸಹ ಈ ಹವಿರ್ವಹನ ಕ್ರಿಯೆಯಲ್ಲಿಯೇ ನಿರತರಾಗಿದ್ದರು. ಆದರೆ ಆ ಭಾರವನ್ನು ತಡೆಯಲಾರದೇ ಅವರು ಮೃತರಾದರು ಎಲೈ ದೇವತೆಗಳೇ, ನಾನು ಆ ಅನುಭವದಿಂದ ಭೀತನಾಗಿ ದೂರವಾಗಿ ಬಂದು ಇಲ್ಲಿ ಅವಿತು ಕೊಂಡಿದ್ದೇನೆ ಬೇಟೆಗಾರನ ಧನುಷ್ಟಂಕಾರಕ್ಕೆ ಮೃಗವು ಬೆದರುವಂತೆ ನಾನೂ ಸಹ ಹೆದರಿ ನಡುಗಿದೆನು

**ದೇವತೆಗಳು:**—ಎಲೈ ಅಗ್ನಿಯೇ, ಎಂತಹ ಗುರುತರವಾದ ಕೆಲಸವು ನಿನ್ನ ಭಾಗಕ್ಕೆ ಸೇರಿದರೂ ಸಹ ನಿನ್ನ ಶೈಥಿಲ್ಯಕ್ಕೂ ಮರಣಕ್ಕೂ ಅದು ಕಾರಣವಾಗದೇ ಇರುವಂತೆ ನಾವು ಅನುಗ್ರಹಿಸುತ್ತೇವೆ. ಜಾತವೇದೋರೂಪನಾದ ಎಲೈ ಅಗ್ನಿಯೇ, ನಿನಗೆ ಮರಣಾಭಾವವನ್ನು ಅನುಗ್ರಹಿಸುವ ದೇವತೆಗಳ ಹವಿಸ್ಸನ್ನು ವಹಿಸಿ ಅವರಿಗೆ ಅದನ್ನು ಹಂಚಿ ಉಪಕಾರಮಾಡು

**ಅಗ್ನಿ:**—ಎಲೈ ದೇವತೆಗಳೇ, ನಾನು ಈ ಕರ್ಮಭಾರವನ್ನು ವಹಿಸಬೇಕಾದರೆ ನನಗೆ ಸಾರವತ್ತಾದುದೂ. ಪ್ರಯಾಜ ಮತ್ತು ಅನೂಯಾಜರೂಪವಾದುದೂ ಆದ ಹವಿಸ್ಸನ್ನು ನನಗೇ ಪ್ರತ್ಯೇಕವಾಗಿಡತಕ್ಕದ್ದು ಉದಕಗಳ ಸಾರವಾದ ಘೃತವನ್ನೂ, ಓಷಧಿಗಳ ಸಾರವಾದ ಪುರುಷನನ್ನೂ ನನಗರ್ಪಿಸಿರಿ ಮತ್ತು ನನಗೆ ದೀರ್ಘಾಯಸ್ಸನ್ನು ಅನುಗ್ರಹಿಸಬೇಕು

**ದೇವತೆಗಳು:**—ಎಲೈ ಅಗ್ನಿಯೇ, ಸಾರವತ್ತಾದ ಪ್ರಯಾಜಾನೂಯಾಜರೂಪವಾದ ಹವಿಸ್ಸುಗಳು ನಿನ್ನ ವಾಗಿರಲಿ ಉದಕಗಳ ಸಾರವಾದ ಘೃತವೂ ಮತ್ತು ವೀರ್ಯವತ್ತಾದ ಸಕಲ ಹವಿಸ್ಸುಗಳೂ ನಿನ್ನವಾಗಿರಲಿ ಯಜ್ಞದ ಪ್ರಧಾನವಾದ ಭಾಗವೇ ನಿನ್ನದಾಗಿರಲಿ ಮತ್ತು ನಾಲ್ಕು ದಿಕ್ಕುಗಳೂ ದಿಗಂತಗಳೂ ನಿನಗೆ ನಮ್ರತೆಯಿಂದ ತಲೆಬಾಗಿ ನಿನಗೆ ಪೂಜ್ಯಭಾವವನ್ನು ತೋರಿಸಲಿ–ಎಂದು ಅಗ್ನಿಯ ಮಹಿಮೆಯನ್ನು ಈ ಸನ್ನಿವೇಶವು ವಿವರಿಸುತ್ತದೆ

ಇದೇ ಕಥಾರೂಪವಾದ ಸಂದರ್ಭವು ತೈತ್ತಿರೀಯಸಂಹಿತೆಯಲ್ಲಿ ಈ ರೀತಿ ತಿಳಿಸಲ್ಪಟ್ಟಿದೆ.

**ಅಗ್ನೇಸ್ತ್ರಯೋ ಜ್ಯಾಯಾಗ್ಂಸೋ ಭ್ರಾತರ ಆಸನ್ತೇ ದೇವೇಭ್ಯೋ ಹವ್ಯಂ ವಹಂತಃ ಪ್ರಾಮೀಯಂತ ಸೋಽಗ್ನಿರಬಿಭೇದಿತ್ಥಂ ವಾವ ಸ್ಯ ಆರ್ತಿಮಾರಿಷ್ಯತೀತಿ ಸ ನಿಲಾಯತ ಸೋಽಪಃ ಪ್ರಾವಿಶತ್ತಂ ದೇವತಾಃ ಪ್ರೈಷಮೈಚ್ಛನ್ತಂ ಮತ್ಸ್ಯಃ ಪ್ರಾಬ್ರವೀತ್ತಮಶಪದ್ಧಿಯಾಧಿಯಾ ತ್ವಾ ವಧ್ಯಾಸುರ್ಯೋ ಮಾ ಪ್ರಾವೋಚ ಇತಿ ತಸ್ಮಾನ್ಮತ್ಸ್ಯಂ ಧಿಯಾಧಿಯಾ ಘ್ನಂತಿ ಶಪ್ತೋ ಹಿ ತಮನ್ವವಿಂದನ್ತಮಬ್ರುವನ್ನುಪ ನ ಆ ವರ್ತಸ್ವ ಹವ್ಯಂ ನೋ ವಹೇತಿ ಸೋಽಬ್ರವೀದ್ವರಂ ವೃಣೈ ಯದೇವ ಗೃಹೀತಸ್ಯಾಹುತಸ್ಯ ಬಹಿಃ ಪರಿಧಿ ಸ್ಕಂದಾತ್ತನ್ಮೇ ಭ್ರಾತೄಣಾಂ ಭಾಗಧೇಯಮಸದಿತಿ ।**

(ತೈ ಸಂ ೨-೬-೬-೧)

ಅಗ್ನಿಗೆ ಮೂರು ಜನ ಜ್ಯೇಷ್ಠಭ್ರಾತೃಗಳಿದ್ದರು. ಅವರೆಲ್ಲರೂ ದೇವತೆಗಳಿಗೆ ಹವಿಸ್ಸನ್ನು ವಹಿಸುವ ಕಾರ್ಯದಲ್ಲಿ ನಿರತರಾಗಿದ್ದು ಆ ಕಾರ್ಯಭಾರವನ್ನು ವಹಿಸಲು ಶಕ್ತಿಯಿಲ್ಲದೇ ಆ ಶ್ರಮದಿಂದಲೇ ಮೃತರಾದರು. ಅಗ್ನಿಯು ತಾನು ದೇವತೆಗಳ ಕಣ್ಣಿಗೆ ಬಿದ್ದರೆ ತನಗೆ ಆ ಕಾರ್ಯಭಾರವು ಅಂಟುವುದೆಂದೂ, ತನ್ನ ಭ್ರಾತೃಗಳಿಗೆ ಆದ ಗತಿಯೇ ತನಗೂ ಸಿದ್ಧವೆಂದು ಅರಿತು ಅಲ್ಲಿಂದ ತಪ್ಪಿಸಿಕೊಂಡು ಹೋಗಿ ನೀರಿನಲ್ಲಿ ಅವಿತುಕೊಂಡು ಕಣ್ಮರೆಯಾದನು ದೇವತೆಗಳು ಅವನನ್ನು ಕಂಡು ಹಿಡಿಯಲು ಪ್ರಯತ್ನಿಸಿದರು. ಆಗ ಒಂದು ಮತ್ಸ್ಯವು ಅವರಿಗೆ ಅಗ್ನಿಯು ಅಲ್ಲಿರುವುದನ್ನು ತಿಳಿಸಿಬಿಟ್ಟಿತು ಆಗ ಅಗ್ನಿಯು "ನೀನು ನನ್ನನ್ನು ದೇವತೆಗಳ ಗಮನಕ್ಕೆ ತಂದುದರಿಂದ ಮಾನವರು ಸಂಕಲ್ಪಿಸಿದೊಡನೆಯೇ ನಿನ್ನನ್ನು ಕೊಲ್ಲಲಿ" ಎಂದು ಶಪಿಸಿದನು ಈ ಶಾಪದ ಫಲವಾಗಿಯೇ ಮಾನವರು ತಮ್ಮಿಷ್ಟಬಂದಂತೆಲ್ಲಾ ಮತ್ಸ್ಯಗಳಗುಂವನು ಕೊಲ್ಲುತ್ತಾರೆ. ಆಗ ದೇವತೆಗಳು ಅಗ್ನಿಯನ್ನು ಸಮೀಪಿಸಿ "ಎಲೈ ಅಗ್ನಿಯೇ, ನೀನು ಬಂದು ನಮಗೆ ಹವಿಸ್ಸನ್ನು ವಹಿಸ್ಸಿ ನಮಗೆ ಉಪಕಾರಮಾಡು" ಎಂದು ಪ್ರಾರ್ಥಿಸಿದರು. ಆಗ ಅಗ್ನಿಯು "ನನಗೆ ಒಂದು ವರವನ್ನು ಕೊಟ್ಟರೆ ನಾನು ಒಪ್ಪಿಕೊಳ್ಳುವೆನು" ಎಂದು ಹೇಳಿದನು. ಅದೇನೆಂದರೆ, "ಯಜ್ಞವೇದಿಯಲ್ಲಿ ಪರಿಧಿಯ ಹೊರಗೆ ಯಜ್ಞಹವಿಸ್ಸಿನ ಯಾವ ಪ್ರಮಾಣದ ಭಾಗವು ಬೀಳುವುದೋ ಅದೆಲ್ಲವೂ ನಿಮಗೋಸ್ಕರ ಮೃತರಾದ ನನ್ನಭ್ರಾತೃಗಳಿಗೆ ಸೇರಬೇಕು. ಹಾಗಾದರೆ ನಾನು ಈ ಕಾರ್ಯಕ್ಕೆ ಒಪ್ಪಿಕೊಳ್ಳುವೆನು" ಎಂದನು. ಆಗ ದೇವತೆಗಳು ಒಪ್ಪಿ ಆ ಸಮಯವನ್ನು ಪಾಲಿಸಿದರು ಎಂದಿದೆ

ತೈತ್ತಿರೀಯ ಸಂಹಿತೆಯಲ್ಲಿ ವರ್ಣಿತವಾಗಿರುವ ಈ ಸಂದರ್ಭದಲ್ಲಿ ಎರಡು ಹೊಸ ವಿಷಯಗಳಿರುತ್ತವೆ ಅಗ್ನಿಯು ಅಂತರ್ಗತನಾಗಿರುವಾಗ ಮತ್ಸ್ಯಗಳು ಅಗ್ನಿಯ ಸ್ಥಿತಿಯನ್ನು ದೇವತೆಗಳಿಗೆ ತಿಳಿಸಿ ಅವನಿಂದ ಶಪ್ತವಾದದೂ ಮತ್ತು ಅಗ್ನಿಯು ತನ್ನ ಭ್ರಾತೃಗಳಿಗೆ ಹವಿರ್ಭಾಗವು ಲಭಿಸಬೇಕೆಂದು ಪ್ರಾರ್ಥಿಸಿದುದೂ ಋಕ್ಸಂಹಿತೆಯಲ್ಲಿಲ್ಲ. ಮತ್ತು ಅಲ್ಲಿ ದೇವತೆಗಳು ಅಗ್ನಿಗೆ ಅಮರ್ತ್ಯತ್ವವುಂಟಾಗುವಂತೆ ಮಾಡುವುದಾಗಿ ಭರವಸೆಯಿತ್ತಿರುವುದು ತೈತ್ತಿರೀಯ ಸಂಹಿತೆಯಲ್ಲಿಲ್ಲ

ಇದೇ ವಿಧವಾಗಿ, ಋಕ್ಸಂಹಿತೆಯಲ್ಲಿ ಇನ್ನೊಂದು ಸಂದರ್ಭದಲ್ಲೂ ಸಹ ಇಂದ್ರನಿಗೂ ಅಗ್ನಿಗೂ ನಡೆದ ಸಂಭಾಷಣೆಯೂ ಅಗ್ನಿಯಿಂದಲೇ ಇಂದ್ರಾದಿ ದೇವತೆಗಳು ಉಪಕೃತರಾಗುವುದನ್ನೂ, ಅಗ್ನಿಯ ಸರ್ವಶ್ರೇಷ್ಠತ್ವವನ್ನೂ ತಿಳಿಸುವುದಾಗಿದೆ. ಆ ಸನ್ನಿವೇಶದ ವಿವರಣೆಯು ಈ ರೀತಿಯಲ್ಲಿರುತ್ತದೆ

**ಇಮಂ ನೋ ಅಗ್ನ ಉಪಯಜ್ಞಮೇಹಿ ಪಂಚಯಾಮಂ ತ್ರಿವೃತಂ ಸಪ್ತತಂತುಂ ।**
**ಅಸೋ ಹವ್ಯವಾಳುತನಃ ಪುರೋಗಾ ಜ್ಯೋಗೇವ ದೀರ್ಘಂ ತಮ ಆಶಯಿಷ್ಠಾಃ॥**

(ಋ ಸಂ. ೧೦-೧೨೪-೧)

ಎಲೈ ಅಗ್ನಿಯೇ, ಐದುವಿಧವಾದ ಹವಿಸ್ಸುಳ್ಳದ್ದೂ, ತ್ರಿವೃದಾತ್ಮಕವಾದುದೂ ಸಪ್ತತಂತುರೂಪವುಳ್ಳದ್ದೂ ಆದ ನಮ್ಮ ಈ ಯಜ್ಞದಲ್ಲಿ ಭಾಗಿಯಾಗಲು ಬಾ. ನಮಗೆಲ್ಲಾ ಪ್ರಧಾನನಾಗಿದ್ದುಕೊಂಡು ನಮ್ಮ ಹವಿಸ್ಸುಗಳನ್ನು ವಹಿಸುವವನಾಗು. ನೀನು ಬಹಳಕಾಲ ಈ ಅಂಧಕಾರದಲ್ಲಿಯೇ ಗುಪ್ತವಾಗಿದ್ದೀಯೆ, ಇದು ಸರಿಯಲ್ಲ.

**ಅದೇವಾದ್ದೇವಃ ಪ್ರಚತಾ ಗುಹಾ ಯನ್ ಪ್ರಪಶ್ಯಮಾನೋ ಅಮೃತತ್ವಮೇಮಿ ।**
**ಶಿವಂಯತ್ಸಂತಮಶಿವೋ ಜಹಾಮಿ ಸ್ವಾತ್ಸಖ್ಯಾದರಣೀಂ ನಾಭಿಮೇಮಿ ॥**

(ಋ. ಸಂ. ೧೦-೧೨೪-೨)

**ಅಗ್ನಿಃ—**ಎಲೈ ದೇವತೆಗಳೇ, ನಿಮ್ಮ ಪ್ರಾರ್ಥನೆಯಂತೆ, ಅದೈವಿಕವಾದ ಪ್ರದೇಶದಿಂದ ಮತ್ತು ವಸ್ತುಗಳಿಂದ ನಾನು ವೈದಿಕಸ್ವರೂಪವನ್ನುಪ್ರೇರಿಸುತ್ತೇನೆ. ಈ ಅಂಧಕಾರದಿಂದ ನಾನು ಆವಿರ್ಭೂತನಾಗಿ ಅಮರ್ತ್ಯತ್ವವನ್ನುಪ್ರಕಟಿಸುತ್ತೇನೆ ಶುದ್ಧವಾದ ಯಜ್ಞಕಾಲದಲ್ಲಿ ಅಶುದ್ಧಿಯನ್ನು ನೋಡಿದೊಡನೆಯೇ ನಾನು ದೂರನಾಗುತ್ತೇನೆ ನಮ್ಮ ಪೂರ್ವ ಸಂಬಂಧವನ್ನು ಸ್ಮರಿಸಿ ನಾನು ನಿಮ್ಮ ಆಹ್ವಾನವನ್ನು ಮನ್ನಿಸುತ್ತೇನೆ–

ಎಂದು ಇರುವ ಇಂದ್ರಾಗ್ನಿಗಳ ಸಂವಾದವು ಮೇಲಿನ ಸಂದರ್ಭದಂತೆಯೇ ಹವಿಸ್ಸನ್ನು ವಹಿಸುವ ಕಾರ್ಯದಲ್ಲಿ ದೇವತೆಗಳು ಅಗ್ನಿಯನ್ನು ಪ್ರಾರ್ಥಿಸಿ ತತ್ಕಾರ್ಯಕ್ಕೆ ಅಗ್ನಿಯನ್ನುಳಿದು ಇನ್ನಾರಿಗೂ ಸಾಮರ್ಥ್ಯವಿಲ್ಲ ಎಂಬ ವಿಷಯವನ್ನು ಸಂಪೂರ್ಣವಾಗಿ ತಿಳಿಸುತ್ತದೆ ಅದನ್ನೇ ಪ್ರಕೃತವಾದ ಸಂದರ್ಭದಲ್ಲಿ **"ಸ ಹವ್ಯಾ ವಕ್ಷ್ಯಾನುಷಕ್"** ಎಂದು ತಿಳಿಸಿದೆ (೫-೯-೧)

## ಅಗ್ನಿಗೂ ಅಂಗಿರಸ್ಸಿಗೂ ಇರುವ ಸಂಬಂಧ.

ಮೇಲೆ ವಿವರಿಸಿದಂತೆ ಉದಕಾಂತರ್ಗತನಾಗಿದ್ದ ಅಗ್ನಿಯನ್ನು ದೇವತೆಗಳಲ್ಲಿ **ಯಮನು** ಗುರ್ತಿಸಿದನು ಎಂಬಂತೆ, ಬೇರೆ ಕೆಲವಡೆಗಳಲ್ಲಿ, ಗುಹಾಂತರ್ಗತನಾಗಿದ್ದ ಇದೇ ಅಗ್ನಿಯನ್ನು **ಅಂಗಿ**ರಸ್ಸುಗಳು ಕಂಡುಹಿಡಿದು ಅವನನ್ನು ಪೂಜಿಸಿದರು ಎಂದು ಸ್ಪಷ್ಟವಾಗಿದೆ. ಇದನ್ನೇ **"ತ್ವಾಮಗ್ನೇ ಅಂಗಿರಸೋ ಗುಹಾ ಹಿತಮನ್ವವಿಂದನ್"** ಸಕಲ ವೃಕ್ಷಗಳಲ್ಲೂ ಉದಕಗಳಲ್ಲೂ ಅಂತರ್ಗತನಾದ ಅಗ್ನಿಯನ್ನು ಅಂಗಿರಸ್ಸುಗಳು ಹುಡುಕಿ ಕಂಡು ಹಿಡಿದರು. (೫-೧೧-೬) ಈ ಕಾರಣದಿಂದಲೇ ಅನೇಕ ಸಂದರ್ಭಗಳಲ್ಲಿ ಅಗ್ನಿಯನ್ನೇ ಅಂಗಿರಸ್ಸೆಂದೂ ಸಂಬೋಧಿಸಿದೆ (೫-೧೧-೭)

**"ತ್ವಂ ನೋ ಅಗ್ನೇ ಅಂಗಿರಃ ಸ್ತುತಃ"** (೫-೧೦-೭) ಇತ್ಯಾದಿ ವಾಕ್ಯಗಳಿಂದ ಅಗ್ನಿಗೂ ಅಂಗಿರಸ್ಸುಗಳಿಗೂ ಇರುವ ತಾದಾತ್ಮ್ಯವೊಂದು ಕಡೆ, ಮತ್ತು ನಿಕಟ ಸಂಬಂಧವಿನ್ನೊಂದು ಕಡೆ ಇವೆರಡಂಶಗಳೂ ಅಂಗಿರಸ್ಸುಗಳ ಔನ್ನತ್ಯವನ್ನು ತಿಳಿಸುತ್ತವೆ

ಋಕ್ಸಂಹಿತೆಯಲ್ಲಿ ಸುಮಾರು ತೊಂಭತ್ತು ಸೂಕ್ತಗಳಿಗೆ ಅಂಗಿರಸ್ಸೂ ತತ್ಸಂತತಿಯ ಋಷಿಗಳೂ ಕರ್ತೃಗಳಾಗಿದ್ದಾರೆ. ವಸಿಷ್ಠ, ಭಾರಧ್ವಾಜ, ಅತ್ರಿ, ವಾಮದೇವ, ವಿಶ್ವಾಮಿತ್ರ, ಗೃತ್ಸಮದ ಇತ್ಯಾದಿ ಋಷಿಗಳು ಅಂಗಿರಸ್ಸನ್ನು ತಮ್ಮಪೂರ್ವಪಿತೃವೆಂದು ಪ್ರಶಂಸಿಸಿದ್ದಾರೆ ವಿರೂಪ, ನವಗ್ವ, ದಶಗ್ವ ಇವರೆಲ್ಲರೂ ಈ ಅಂಗಿರಸ್ಸಿನ ಸಂತತಿಗೇ ಸೇರಿದವರು "ಪ್ರಥಮದಲ್ಲಿ ಆದಿತ್ಯರು ಮತ್ತು ಅಂಗಿರಸ್ಸುಗಳು ಎಂಬ ಎರಡು ಗುಂಪುಗಳು ಮಾತ್ರವಿದ್ದವು" ಎಂದು ಶತಪಥಬ್ರಾಹ್ಮಣದ ವಾಕ್ಯವು ಈ ಸಂತತಿಯ ಔನ್ನತ್ಯವನ್ನು ತಿಳಿಸುತ್ತದೆ ಈ ಅಂಗಿರಾ ಋಷಿಯೂ, ತತ್ಸಂತತಿಯವರೂ ಸಹ ತಮ್ಮ ಸತ್ಕರ್ಮಗಳ ಪ್ರಭಾವವನ್ನು ಇಹದಲ್ಲಿ ಬಿಟ್ಟು ತಾವು ಸ್ವರ್ಗಕ್ಕೆ ಹೋಗಿ ಅಲ್ಲಿ ಪಿತೃತ್ವವನ್ನು ಪಡೆದರೆಂದಿದೆ. ಈ ಕರ್ಮಗಳ ಪ್ರಭಾವದಿಂದಲೇ ಅವರು ಋಷಿಗಳೂ, ಪಿತೃಗಳೂ ಮತ್ತು ದೇವತೆಗಳೂ ಆಗಿದ್ದಾರೆ. ಅವರ ಎಲಾ ಕೃತಿಗಳಲ್ಲೂ ಇರುವ ಸಾಮರಸ್ಯವೂ ಔನ್ನತ್ಯವೂ ಅವರ ಮಹತ್ತ್ವವನ್ನು ತಿಳಿಸುತ್ತವೆ.

ಋಕ್ಸಂಹಿತೆಯಲ್ಲಿ ಅನೇಕ ದೇವತೆಗಳೊಡನೆ ಅಂಗಿರಸ್ಸಿಗಿರುವ ತಾದಾತ್ಮ್ಯಸಂಬಂಧವನ್ನು ತಿಳಿಸಿದೆ. ಅದರಲ್ಲೂ ಅಗ್ನಿ ಮತ್ತು ಇಂದ್ರನೊಡನೆ ಅವನಿಗಿರತಕ್ಕ ಸಂಬಂಧವು ಅತ್ಯಂತ ನಿಕಟವಾದುದು ಯಾಜ್ಞಿಕವಾದ ಅಗ್ನ್ಯುತ್ಪಾದನೆಯ ಪ್ರಥಮಕಾರ್ಯವು ಅಂಗಿರಾಋಷಿಗೆ ಸಂಬಂಧಿಸಿತಾದುದರಿಂದ ಅಗ್ನಿಯೇ ಅಂಗಿರಸ್ಸೆಂದೂ ನಿರ್ದಿಷ್ಟನಾಗಿದ್ದಾನೆ **"ಸಹಸಃ ಸೂನೋ ಅಂಗಿರಃ"** ಇತ್ಯಾದ್ಯನೇಕ ವಾಕ್ಯಗಳಲ್ಲಿ ಅಗ್ನಿಯನ್ನು ಅಂಗಿರಸ್ಸೆಂದೇ ಕರೆದಿದೆ (೮-೬೦-೨ , ೮ ೭೪-೧೧ , ೮-೭೭-೫ , ೮-೮೪-೪ , ೮-೧೦೨-೧೭) **"ಅಂಗಿರೋನಾಮಕಮುನಿಃ ಕಾರಣತ್ವಾತ್ ಅಂಗಾರರೂಪಸ್ಯಅಗ್ನೇರಂಗಿರಸ್ತ್ವ"** ಅಗ್ನಿಯ ಆವಿರ್ಭಾವಕ್ಕೆ ಅಂಗಿರಸ್ಸುಗಳು ಕಾರಣರಾದುದರಿಂದಲೇ ಅಗ್ನಿಯೂ **ಅಂಗಿರಸ್** ಎಂಬ ನಾಮದಿಂದಲೇ ನಿರ್ದಿಷ್ಟನಾಗಿದ್ದಾನೆ ಎಂದು ಸಾಯಣರು ತಿಳಿಸಿದ್ದಾರೆ (ಸಾ ಭಾ. ೧-೧-೬)

ಇದೇ ಅಂಗಿರಸ್ಸುಗಳಿಂದ ಪೂಜಿತನಾದುದರಿಂದ ಅಗ್ನಿಯು ಅಂಗಿರಸ್ಸುಗಳಲ್ಲೆಲ್ಲಾ ಶ್ರೇಷ್ಠನೆಂದು ಪರಿಗಣಿತನಾಗಿದ್ದಾನೆ ಮಂತ್ರಪೂತವಾದ ಹವಿಸ್ಸನ್ನರ್ಪಿಸಿದ ಯಜಮಾನನನ್ನು ಅಂಗಿರಸ್ಸುಗಳಲ್ಲೆಲ್ಲಾ ಶ್ರೇಷ್ಠವಾದ ಅಗ್ನಿಯಲ್ಲಿಗೆ ಆ ಹವಿಸ್ಸು ಕರೆದೊಯ್ಯುತ್ತದೆ. (೧-೩೧-೨, ೧-೪೫-೩, ೧-೧೨೭-೨, ೮-೨೮-೧೦, ೮-೪೩-೧೮) ಈ ವಿಧವಾದ ಪ್ರಭಾವವಿರುವುದರಿಂದಲೇ ಅವರು ದೇವತ್ವವನ್ನೂ ಪಿತೃತ್ವವನ್ನೂ ಪಡೆದರು ಎಂದು ಅವರ ಮಾಹಾತ್ಮ್ಯದ ವಿಷಯವಾಗಿ ಒಂದೆರಡು ಕಡೆಗಳಲ್ಲಿ ಅಂಗಿರಸ್ಸುಗಳ ವಿಷಯವನ್ನು ಸೂಕ್ಷ್ಮವಾಗಿ ತಿಳಿಸಿದೆ [ಋಗ್ವೇದ ಸಂಹಿತಾ. ಭಾಗ ೧ ಪು 641-642 ಭಾಗ. ೮ ಪು 188-189] ಬ್ರಾಹ್ಮಣ ಮತ್ತು ಉಪನಿಷದಾದಿಗಳಲ್ಲೂ ಸಹ ಅಗ್ನಿಗೂ ಅಂಗಿರಸ್ಸುಗಳಿಗೂ ಇರುವ ಸಾಕ್ಷಾತ್ಸಂಬಂಧದ ವಿಷಯವು ಪ್ರಶಂಸಾರೂಪದಲ್ಲಿ ಕೆಲವಡೆಗಳಲ್ಲಿ ಉಕ್ತವಾಗಿರುತ್ತದೆ. ಆ ಅಂಶಗಳನ್ನೂ ಇಲ್ಲಿ ಸೂಕ್ಷ್ಮವಾಗಿ ತಿಳಿಸಲಾಗುತ್ತದೆ ಪ್ರಕೃತವಾದ ಅಧ್ಯಾಯದಲ್ಲಿ **"ಅಂಗಿರಸೋ ಗುಹಾ ಹಿತಮನ್ವವಿಂದನ್"** ಎಂಬ ವಾಕ್ಯದಿಂದ(ಋ ಸಂ ೫-೧೧-೬)ಯಾವ ಅಂಶವು ಸೂಚಿತವಾಗಿದೆಯೋ ಅದೇ ಅಂಶವನ್ನು ಬ್ರಾಹ್ಮಣ ಮತ್ತು ಉಪನಿಷತ್ತುಗಳೂ ಸಹ ಪ್ರಶಂಸಿಸುತ್ತವೆ.

ಐತರೇಯಬ್ರಾಹ್ಮಣದಲ್ಲಿ ಉಕ್ತವಾಗಿರುವಂತೆ ಹಿಂದೆ **ಅಗ್ನಿಮಾರುತಶಸ್ತ್ರದ** ವಿವರಣೆಯನ್ನು ತಿಳಿಸುವಾಗ ಪ್ರಜಾಪತಿಯು ತನ್ನ ಪುತ್ರಿಯನ್ನೇ ಮೋಹಿಸಿದ ಕಾಲದಲ್ಲಿ ಅವನ ವೀರ್ಯವು ಅಗ್ನಿವೈಶ್ವಾನರನ ಅನುಗ್ರಹದಿಂದ ಭೃಗು, ಆದಿತ್ಯ, ಅಂಗಿರಸ್ಸುಗಳು ಇವರ ಉತ್ಪತ್ತಿಗೆ ಕಾರಣವಾಯಿತೆಂಬಂಶವನ್ನು ತಿಳಿಸಿದೆ **"ಯೇಽಂಗಾರಾ ಆಸಂಸ್ತೇಽಂಗಿರಸೋಽಭವನ್"** (ಐ. ಬ್ರಾ ೩ ೩೪)

ಇಂದ್ರನ ಅಭಿಷೇಕಕಾಲದಲ್ಲಿ ಮರುತ್ತುಗಳೊಡನೆ ರಾಜಸಿಂಹಾಸನವನ್ನು ಕಳುಹುವಂತೆ ಇದೇ ಅಂಗಿರಸ್ಸುಗಳು ಪ್ರಾರ್ಥಿತರಾಗಿದ್ದಾರೆ (ಐ ಬ್ರಾ ೮-೧೨) ಅಲ್ಲಿ ಇವರು ದೇವತೆಗಳೆಂದೇ ಪರಿಗಣಿತರಾಗಿದ್ದಾರೆ ಅಲ್ಲದೇ, ಆದಿತ್ಯರಿಗೂ ಅಂಗಿರಸ್ಸುಗಳಿಗೂ ಇರುವ ಸಂಬಂಧವನ್ನು ತಿಳಿಸುವ ಕಥಾಸಂದರ್ಭದಲ್ಲಿ ಅಂಗಿರಸ್ಸುಗಳಿಗೆ ದಕ್ಷಿಣಾರೂಪದಲ್ಲಿ ಕೊಡಲ್ಪಟ್ಟ ದಾಹಾತ್ಮಕವಾದ ಪೃಥ್ವಿಯನ್ನು ಅದರ ದಾಹವನ್ನು ತಡೆಯಿದೆ ಅದನ್ನು ಎಸೆದುಬಿಟ್ಟುದುದರಿಂದ ಅದರ ಪ್ರಕೃತವಾದ ಅಸಮುಸ್ಥಿತಿಗೆ (ವಿಷಮುಸ್ಥಿತಿಗೆ) ಕಾರಣರಾದರೆಂದೂ ವಿವೃತವಾಗಿದೆ (ಐ ಬ್ರಾ ೬-೩೪, ೩೫) ಸ್ವರ್ಗಸ್ಥಿತಿಯನ್ನು ಸಾಧಿಸಲು ಅಂಗಿರಸ್ಸುಗಳಿಗೂ ಆದಿತ್ಯರಿಗೂ ನಡೆದ ವ್ಯವಹಾರವನ್ನು ತೈತ್ತಿರೀಯಬ್ರಾಹ್ಮಣ (೨-೨-೩-೫-) ಮತ್ತು ಶತಪಥಬ್ರಾಹ್ಮಣ(೩-೨-೧-೧೦)ಇತ್ಯಾದಿ ಶ್ರುತಿಗಳು ವಿವರಿಸಿವೆ. ಈ ವಿವರಣೆಯನ್ನುಯಥೋಚಿತವಾಗಿ ಮುಂದೆ ತಿಳಿಸಲಾಗುತ್ತದೆ. ಪ್ರಕೃತದಲ್ಲಿ ಅಗ್ನಿಗೂ ಅಂಗಿರಸ್ಸುಗಳಿಗೂ ಇರುವ ಸಂಬಂಧವನ್ನು ತಿಳಿಸುವುದೇ ಈ ಪ್ರಕರಣದ ವಿಷಯ

ಗಳಲ್ಲಿ ಒಂದಾದುದುರಿಂದ ಆ ಅಂಶವನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ. ಐತರೇಯ ಬ್ರಾಹ್ಮಣದಲ್ಲಿ ಉಕ್ತವಾಗಿರುವಂತೆಯೇ ಶತಪಥಬ್ರಾಹ್ಮಣದಲ್ಲಿಯೂ ಸಹ ಅಂಗಿರಸ್ಸುಗಳ ಉತ್ಪತ್ತಿಗೆ ಅಗ್ನಿಯೇ ಮೂಲವೆಂಬುದನ್ನು ಅನೇಕ ಕಡೆಗಳಲ್ಲಿ ತಿಳಿಸಿದೆ. (೪-೫-೧-೮)

ವರುಣನ ದೇಹದಿಂದ ಹೊರಟ ರಸವೇ ಅಂಗಿರಸ್ಸಿನ ರೂಪದಲ್ಲಿ ಪರಿವರ್ತಿತವಾಯಿತೆಂದೂ ಈ ಮೂಲ ಪುರುಷನಿಂದ ೧೦ ಅಂಗಿರಸ್ಸುಗಳು ಜನಿಸಿದರೆಂದೂ ಇವರೇ ಆಂಗಿರಸವೇದದ ದ್ರಷ್ಟೃಗಳಾದರೆಂದೂ, ಈ ವೇದವು ಅವರ ತಪಸ್ಸಿನ ಫಲವಾಗಿ ನಿರ್ಮಿತವಾದುದರಿಂದ ಉಳಿದ ವೇದಗಳಿಗಿಂತಲೂ ಈ ವೇದವೇ ಅತ್ಯುತ್ತಮವಾದುದೆಂದೂ **ಗೋಪಥಬ್ರಾಹ್ಮಣದ** ವಿವರಣೆಯಿರುತ್ತದೆ.

(ಗೋ ಬ್ರಾ ೧-೧-೯)

ಈ ಅಂಗಿರಸ್ಸುಗಳೇ ಅಧ್ಯಾತ್ಮತತ್ತ್ವಬೋಧಕರೆಂದು ಮುಂದೆ ಉಪನಿಷತ್ತುಗಳಲ್ಲಿ ಪ್ರಶಂಸಿಸಿದೆ. **"ಅಥರ್ವಾಂಗಿರಸಃ ಪುಚ್ಛಂ ಪ್ರತಿಷ್ಠಾ"** (ತೈ ಉ. ೨-೩) ಎಂದು ತೈತ್ತಿರೀಯಉಪನಿಷತ್ತಿನಲ್ಲೂ,

> **ತಂ ಹಾಂಗಿರಾ ಉದ್ಗೀಥಮುಪಾಸಾಂಚಕ್ರ ಏತಮು ಏವಾಂಗಿರಸಂ ಮನ್ಯಂತೇಽಂಗಾನಾಂ ಯದ್ರಸಃ**

(ಛಾ. ಉ. ೧-೨-೧೦)

ಅಂಗಗಳಿಗೆಲ್ಲಾ ರಸರೂಪವಾದುದರಿಂದ ಉದ್ಗೀಥವೇ ಅಂಗಿರಸ್ಸುಗಳೆಂದು ಛಾಂದೋಗ್ಯದಲ್ಲಿಯೂ ಅಂಗಿರಸ್ಸುಗಳು ಪ್ರಶಂಸೆಯಿರುತ್ತದೆ. **ಘೋರಆಂಗಿರಸನು** ಉಪದೇಶಿಸಿದ ಆತ್ಮತತ್ತ್ವವು ಉಪನಿಷತ್ತುಗಳಲ್ಲಿ ಅತ್ಯಂತ ಪ್ರಸಿದ್ಧವಾದುದಾಗಿದೆ. (ಛಾ. ಉ. ೩-೧೬,೧೭) ಈ ರೀತಿಯಾಗಿ, ಅಂಗಿರಸ್ಸುಗಳು ಅಧ್ಯಾತ್ಮತತ್ತ್ವರೂಪವೇ ಆಗಿರುವರೆಂದು ವರ್ಣಿತರಾಗಿದ್ದಾರೆ. ಇವರಿಗೂ, ಮತ್ತು **ಸ ಹಿ ಸತ್ಯೋ ಯಂ ಪೂರ್ವೇ ಚಿದ್ದೇವಾಸಶ್ಚಿದ್ಯಮೀಧಿರೇ** ದೇವತೆಗಳಿಂದೆಲ್ಲಾ ಪೂಜಿತನಾದ ಅಗ್ನಿಯೇ ಸತ್ಯಾತ್ಮಕನು ಎಂದು ಯಾವ ಅಗ್ನಿಯು ಪರವಸ್ತುರೂಪನಾಗಿ ವರ್ಣಿತನಾಗಿರುವನೋ (ಋ. ಸಂ. ೫-೨೫-೨) ಆ ಅಗ್ನಿಗೂ ತಾದಾತ್ಮ್ಯವನ್ನು ತೋರಿಸಿ ಪ್ರಕೃತವಾದ ಪ್ರಕರಣದಲ್ಲಿ **"ತ್ವಂ ನೋ ಅಗ್ನೇ ಅಂಗಿರಃ ಸ್ತುತಃ** ಇತ್ಯಾದಿಯಾಗಿ ಸ್ತುತವಾಗಿದೆ (೫-೧೦-೭)

## ಅಗ್ನಿಯ ಪ್ರಸರಣಶಕ್ತಿ

ಇದೇ ಅಧ್ಯಾಯದಲ್ಲಿ **ತ್ರಿತ, ಅಧ್ರಿಗು** ಎಂಬ ವಿಶೇಷಣಗಳು ಅಗ್ನಿಯ ವಿಶೇಷಗುಣಗಳನ್ನುತಿಳಿಸುವುವಾಗಿವೆ. **ತ್ರಿತ**ಶಬ್ದಕ್ಕೆ ನಾನಾರ್ಥಗಳಿರುತ್ತವೆ. **ತ್ರಿತ**ನೆಂಬ ಪುರುಷನ ಹೆಸರನ್ನು ಸೂಚಿಸುವ ಅಂಕಿತನಾಮವಾಗಬಹುದು. (**ತ್ರಿತ**ನೆಂಬ ಪುರುಷನ ವಿಷಯದಲ್ಲಿರುವ ಇತಿಹಾಸವನ್ನು ಹಿಂದೆ ೮ ನೇ ಭಾಗದಲ್ಲಿ ತಿಳಿಸಿದೆ. ಪುಟ. 443-447) ಅಥವಾ ಈ ಪದವು ಇಂದ್ರಾದಿದೇವತೆಗಳಿಗೆ ವಿಶೇಷಣವಾಗಿ ಅವರ ವಿಶೇಷಗುಣಗಳನ್ನು ತಿಳಿಸಬಹುದು. ಈ ರೀತಿ ಈ ವಿಶೇಷಣವು ಯಾವ ಯಾವ ದೇವತೆಗಳ ವಿಶೇಷಗುಣಗಳನ್ನು ಯಾವ ಯಾವ ಕ್ರಮದಲ್ಲಿ ಸೂಚಿಸುವುದು ಮತ್ತು ಈ ಪದಪ್ರಯೋಗದ ಔಚಿತ್ಯವೇನು ಎಂಬುದನ್ನು ಸಂದರ್ಭ ಒದಗಿದಾಗ ತಿಳಿಸಲಾಗುತ್ತದೆ. ಪ್ರಕೃತದಲ್ಲಿ (೫-೯-೪) ತ್ರಿಸ್ಥಾನವ್ಯಾಪಿಯಾದ ಅಗ್ನಿಯೆಂದು ಸಾಯಣರ ವಿವರಣೆಯಿರುತ್ತದೆ **"ಮೂರ್ಧಾ ದಿವಃ"** ಇತ್ಯಾದಿ ನಿರುಕ್ತ ವಾಕ್ಯಗಳು ಈ ತ್ರಿತನ ಸ್ವರೂಪವನ್ನು ವರ್ಣಿಸುವುದಾಗಿದೆ

**ಅಧ್ರಿಗೋ** ಎಂಬ ವಿಶೇಷಣವು ಅಗ್ನಿಯ ಇನ್ನೊಂದು ವಿಶೇಷಗುಣವನ್ನು ತಿಳಿಸುವುದಾಗಿದೆ. **ಅಧ್ರಿ** ಶಬ್ದಕ್ಕೆ ಸಾಯಣರು ಅಪ್ರತಿಹತವಾದದು ಎಂದರ್ಥಮಾಡಿ **ಅಧ್ರಿಗೋ** ಎಂದರೆ ಅಪ್ರತಿಹತವಾದ ಗಮನವುಳ್ಳವನು ಎಂದು

ತಾತ್ಪರ್ಯವನ್ನು ಹೇಳಿದ್ದಾರೆ. ಅಥವಾ ಅಗ್ನಿಯ ಔದಾರ್ಯದಿ ವಿಶೇಷಗುಣಗಳನ್ನೂ ಸಹ ತಿಳಿಸುವ ವಿಶೇಷಣವಾಗಿರಬಹುದು. ಕೆಲವು ಆಂಗ್ಲಪಂಡಿತರು ಶಮಿತೃರೂಪನಾದ ಅಧ್ರಿಗುವಿಗೂ (ಐ. ಬ್ರಾ. ೨-೬,೭) ಅಗ್ನಿಗೂ ಸಂಬಂಧವನ್ನು ತಿಳಿಸುವ ವಿವರಣೆಯನ್ನು ಹೇಳಿದ್ದಾರೆ. ಆದರೆ ಆ ವಿವರಣವು ಅಷ್ಟು ಸಮಂಜಸವಾಗಿರುವುದಿಲ್ಲ. ಯಜ್ಞನಿರ್ವಹಣಕಾಲದಲ್ಲಾಗಲಿ, ತನ್ನ ಪ್ರಭಾವಪ್ರಕಟನೆಯಲ್ಲಾಗಲಿ ಅಪ್ರತಿಹತವಾದ ಪ್ರಸರಣವುಳ್ಳವನೆಂದು ಮಾತ್ರ ತಾತ್ಪರ್ಯ.

## ಅಗ್ನಿಯ ಸರ್ವಾಧಾರತ್ವ ಮತ್ತು ಸರ್ವಶಕ್ತಿತ್ವ.

ಜಗದ್ಧಾರಕವಾದ ಯಜ್ಞಕಾರ್ಯನಿರ್ವಹಣದಲ್ಲಿ ಅಗ್ನಿಗೆ ಅತ್ಯಂತ ಪ್ರಧಾನವಾದ ಸ್ಥಾನವಿರುವುದರಿಂದಲೇ **"ಅಗ್ನೇ ನೇಮಿರರಾँ ಇವ ದೇವಾಂಸ್ತ್ವಂ ಪರಿಭೂರಸಿ"**ಎಲೈಅಗ್ನಿಯೇ, ಅರಗಳ ಸುತ್ತಲೂ ನೇಮಿಯು ಸುತ್ತುವರಿಯುವಂತೆ ನೀನು ಸಕಲದೇವತೆಗಳನ್ನೂ ಸುತ್ತುವರಿದು ಅವರ ಭದ್ರವಾದ ಸ್ಥಿತಿಗೆ ಕಾರಣನಾಗಿರುತ್ತೀಯೆ ಎಂದು ಪ್ರಶಂಸಿಸಿದೆ. (೫-೧೩-೬) ಅಗ್ನಿಯು ಕೇವಲ ದೇವತೆಗಳ ಭದ್ರತೆಗೆ ಮಾತ್ರ ಕಾರಣನಲ್ಲ. ವಿಶ್ವನಿಯಮವೇ ಅಗ್ನಿಯ ಸಂಕಲ್ಪಾಧೀನವು. ಅಗ್ನಿಯೇ ವಿಶ್ವಧಾರಕನೂ, ನಿಯಾಮಕನೂ ಆದ ಪರದೈವವು ಎಂಬ ಅಭಿಪ್ರಾಯವನ್ನು **"ಋತೇನ ಋತಂ ಧರುಣಂ ಧಾರಯಂತ"** (೫-೧೫-೨) ವಿಶ್ವಧಾರಕವಾದುದೂ ಸತ್ಯಾತ್ಮಕವಾದುದೂ ಆದ ಯಜ್ಞವನ್ನು ಅಗ್ನಿಯು ಧರಿಸುತ್ತಾನೆ ಇತ್ಯಾದಿಯಾಗಿ ಶ್ರುತಿವಾಕ್ಯಗಳು ಪ್ರಶಂಸಿಸುತ್ತವೆ. ಯಜ್ಞವು ದ್ಯುಲೋಕಧಾರಕವು. ದ್ಯುಲೋಕಸ್ಥರಾದ ದೇವತೆಗಳಿಗೆ ಜೀವಾತುವು. ದ್ಯುಲೋಕಸ್ಥನೂ ಆದಿತ್ಯರೂಪನೂ ಆದ ಅಗ್ನಿಯೂ ಯಜ್ಞಪೋಷಕನು. ಇಂತಹ ದಿವ್ಯಾತ್ಮನು ಅಂತರಿಕ್ಷದಲ್ಲಿ ವಿರಾಜಿಸುತ್ತಾನೆ. ಅವನನ್ನು ಋಷಿಗಳು ನಮಿಸಿ ಸ್ತುತಿಸುತ್ತಾರೆ ಎಂಬ ತಾತ್ಪರ್ಯವನ್ನು ಕೊಡುವ ಇಂತಹ ಮಂತ್ರಗಳೂ, **ತ್ರಿತ, ಕವಿ, ಜಾತವೇದಸ್** ಇತ್ಯಾದಿ ವಿಶೇಷಣಗಳೂ ಅಗ್ನಿಯ ಸರ್ವಾಂತರ್ಯಾಮಿತ್ವವನ್ನೂ ಸರ್ವಜ್ಞತ್ವವನ್ನೂ ಸರ್ವಶಕ್ತಿತ್ವವನ್ನೂ ತಿಳಿಸುತ್ತವೆ. **"ಮಿತ್ರೋ ನ ಯಜ್ಞಿಯಃ"** (೫-೧೦-೨), **"ಭಗೋ ನ ವಾರಮೃಣ್ವಿರೇ** (೫-೧೬-೨) ಇತ್ಯಾದಿ ಸಂದರ್ಭಗಳಲ್ಲಿ ಅಗ್ನಿಗೂ **ಮಿತ್ರ, ಭಗ** ಇತ್ಯಾದ್ಯಾದಿತ್ಯನ ರೂಪಾಂತರಗಳಿಗೂ ಉಪಮೆ ಅಥವಾ ತಾದಾತ್ಮ್ಯವನ್ನು ತೋರಿಸಿದೆ. **"ತ್ರಿರಂತರಿಕ್ಷಂ ಸವಿತಾ ಮಹಿತ್ವನಾ"** ಇತ್ಯಾದಿ ಮಂತ್ರಗಳಲ್ಲಿ ಯಾವ ಸವಿತೃವು ಪೃಥಿವ್ಯಾದಿ ಮೂರು ಲೋಕಗಳಲ್ಲೂ ಪ್ರಭುತ್ವವನ್ನು ಮಾಡಿ ಪ್ರಕಾಶಿಸುವ ದೇವನೆಂದೂ ವರ್ಣಿತನಾಗಿದ್ದಾನೋ ಅದೇ ಸವಿತೃವು ಅಗ್ನಿರೂಪನೇ ಆಗಿದ್ದಾನೆ. **"ಯಾದೃಗೇವ ದದೃಶೇ ತಾದೃಗುಚ್ಯತೇ"** (೫-೪೪-೬) ಇದೇ ದಿವ್ಯಾತ್ಮನಾದ ಅಗ್ನಿಯು ಪೃಥಿವ್ಯಾದಿ ಲೋಕಗಳಲ್ಲಿ ಯಾವರೂಪದಿಂದ ಪ್ರಕಾಶಿಸುವನೋ ಆದೇ ರೂಪದಿಂದ ನಿರ್ದಿಷ್ಟನಾಗುತ್ತಾನೆ. ಆದುದರಿಂದಲೇ,

**ಯುಂಜಂತಿ ಬ್ರಧ್ನಮರುಷಂ ಚರಂತಂ ಪರಿ ತಸ್ಥುಷಃ । ರೋಚಂತೇ ರೋಚನಾ ದಿವಿ ॥**

(ಋ. ಸಂ ೧-೬-೧)

ವಾಯು, ಸೂರ್ಯ, ಇಂದ್ರಾದಿರೂಪಗಳಲ್ಲಿರತಕ್ಕ ಒಂದೇ ದೇವನನ್ನು ನಾನಾ ರೂಪಗಳಲ್ಲಿ ಪ್ರಶಂಸಿಸುವರು. ಈ ಅಗ್ನಿಯ ಅಥವಾ ಈಶ್ವರರೂಪಿಯಾದ ಇಂದ್ರನ ಪ್ರಭಾವಿಶೇಷಗಳೇ ನಕ್ಷತ್ರಗಳು ಇತ್ಯಾದಿಯಾಗಿ ಜ್ಯೋತೀರೂಪದ ಏಕತತ್ತ್ವವು ಸ್ತುತವಾಗಿದೆ **"ಮಿತ್ರೋ ಅಗ್ನಿರ್ಭವತಿ"** (೩-೫-೪-;); **"ತ್ವಮಗ್ನೇ ವರುಣೋ ಜಾಯಸೇ"** (೫-೩-೧), **"ತ್ವಂ ವರುಣ ಉತ ಮಿತ್ರೋ ಅಗ್ನೇ"** (೭-೧೨-೩), **"ತ್ವಮಗ್ನ ಇಂದ್ರೋ ವೃಷಭಃ" ; ತ್ವಮಗ್ನೇ ರಾಜಾ ವರುಣಃ; ತ್ವಮಗ್ನೇ ತ್ವಷ್ಟಾ; ತ್ವಮಗ್ನೇ ರುದ್ರೋ ಅಸುರಃ;**(೨-೧-೩ರಿಂದ೬)ಇತ್ಯಾದ್ಯನೇಕ ಮಂತ್ರಗಳಲ್ಲಿ ಸಕಲದೇವತೆಗಳೂ ಅಗ್ನಿಯ ರೂಪಾಂತರಗಳೇ ಆಗಿರುವುವು ಎಂಬ ವಿಷಯವನ್ನುನಿಷ್ಕೃಷ್ಟವಾಗಿ ತಿಳಿಸಿದೆ.

ಪ್ರಕೃತವಾದ ಅಧ್ಯಾಯದಲ್ಲಿರುವ ಅಗ್ನಿಪ್ರಶಂಸೆಯಲ್ಲಿ ಈ ಕೆಲವು ವಿಷಯಗಳೇ ಪ್ರಧಾನವಾಗಿವೆ ಯಜ್ಞಪ್ರಾಧಾನ್ಯವನ್ನು ಅಗ್ನಿಯಲ್ಲದೇ ಬೇರೊಬ್ಬ ದೇವತೆಗೆ ವಹಿಸಲು ಸಾಧ್ಯವಿಲ್ಲ. ಆದುದರಿಂದಲೇ **"ಸಂ ಯಜ್ಞಾಸಶ್ಚರಂತಿ** .." ಸಕಲ ಯಜ್ಞಗಳೂ ಈ ಅಗ್ನಿಯನ್ನೇ ಆಶ್ರಯಿಸಿವೆಯೆಂದೂ, **"ತವ ತ್ಯೇ ಅರ್ಚಯೋ ಭ್ರಾಜಂತೋ..... ಪರಿಜ್ಮಾನಃ"** ಅಗ್ನಿಯ ಪ್ರಭಾಯುತವಾದ ಕಿರಣಗಳೇ ಸಕಲಲೋಕಗಳನ್ನೂ ವ್ಯಾಪಿಸಿಹರಡುವುವೆಂದೂ ಅಗ್ನಿಯೇ ಸಕಲಲೋಕಧಾರಕನೆಂದೂ ವರ್ಣಿಸಿದೆ

॥ ಸಾಯಣಭಾಷ್ಯಂ ॥

**ಪಂಚಮೇ ಮಂಡಲೇ ಪ್ರಥಮೇಽನುವಾಕೇ ಪೂರ್ವಮಷ್ಟೌಸೂಕ್ತಾನಿ ವ್ಯಾಖ್ಯಾತಾನಿ । ತ್ವಾಮಗ್ನೇ ಹವಿಷ್ಮಂತ ಇತಿ ಸಪ್ತರ್ಚಂ ನವಮಂ ಸೂಕ್ತಮಾತ್ರೇಯಸ್ಯ ಗಯಸ್ಯಾರ್ಷಂ । ಸಪ್ತಮೀಪಂಚಮ್ಯೌ ಪಂಕ್ತೀ ಶಿಷ್ಟಾ ಅನುಷ್ಟುಭಃ । ಅಗ್ನಿರ್ದೇವತಾ । ತಥಾ ಚಾನುಕ್ರಮ್ಯತೇ । ತ್ವಾಮಗ್ನೇ ಗಯೋಽಂತ್ಯಾ-ಪಂಚಮ್ಯೌ ಪಂಕ್ತೀ ಇತಿ ॥ ಪ್ರಾತರನುವಾಕ ಆಶ್ವಿನಶಸ್ತ್ರೇ ಚೈತದಾದಿಕೇ ದ್ವೇ ಸೂಕ್ತೇ ಶಂಸನೀಯೇ । ತಥೈವ ಸೂತ್ರಿತಂ । ತ್ವಾಮಗ್ನೇ ಹವಿಷ್ಮಂತ ಇತಿ ಸೂಕ್ತೇ । ಆ ೪-೧೩ । ಇತಿ ॥**

ಅನುವಾದವು—ಐದನೆಯ ಮಂಡಲದ ಮೊದಲನೆಯ ಅನುವಾಕದಲ್ಲಿ ಎಂಟು ಸೂಕ್ತಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಯಿತು. ಈಗ ಈ ಅಧ್ಯಾಯದಲ್ಲಿ ಒಂಭತ್ತನೆಯ ಸೂಕ್ತದಿಂದ ವ್ಯಾಖ್ಯಾನವು ಆರಂಭಿಸಲ್ಪಡುವುದು. **ತ್ವಾಮಗ್ನೇ ಹವಿಷ್ಮಂತಃ** ಎಂಬ ಈ ಸೂಕ್ತವು ಐದನೆಯ ಮಂಡಲದ ಮೊದಲನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ಗಯ ಆತ್ರೇಯಃ ಎಂಬುವನು ಋಷಿಯು ಈ ಸೂಕ್ತದ ಐದು ಮತ್ತು ಏಳನೆಯ ಋಕ್ಕುಗಳು ಪಂಕ್ತಿಶ್ಛಂದಸ್ಕವು ಉಳಿದ ಋಕ್ಕುಗಳು ಅನುಷ್ಟುಪ್ ಛಂದಸ್ಕವು. ಅಗ್ನಿಯು ದೇವತೆಯು ಅನುಕ್ರಮಣಿಕೆಯಲ್ಲಿ-**ತ್ವಾಮಗ್ನೇ ಗಯೋಽನ್ತ್ಯಾ-ಪಂಚಮ್ಯೌ ಪಂಕ್ತೀ** ಎಂದು ಹೇಳಿರುವುದು ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಗಳ ಪಠನಕ್ಕಾಗಿ ಈ ಸೂಕ್ತ ಮತ್ತು ಮುಂದಿನ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ-**ತ್ವಾಮಗ್ನೇ ಹವಿಷ್ಮಂತ ಇತಿ ಸೂಕ್ತೇ** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು.

## ಸೂಕ್ತ—೯

॥ ಮಂಡಲ—೫ ॥ ಅನುವಾಕ—೧ ॥ ಸೂಕ್ತ—೯ ॥
॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೧ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೭
ಋಷಿಃ—ಗಯ ಆತ್ರೇಯಃ
ದೇವತಾ—ಅಗ್ನಿಃ ॥
॥ ಛಂದಃ—೧-೪, ೬. ಅನುಷ್ಟುಪ್ । ೫, ೭. ಪಂಕ್ತಿಃ ॥

॥ ಸಂಹಿತಾಪಾಠಃ ॥

ತ್ವಾಮಗ್ನೇ ಹವಿಷ್ಮಂತೋ ದೇವಂ ಮರ್ತಾಸ ಈಳತೇ ।
ಮನ್ಯೇ ತ್ವಾ ಜಾತವೇದಸಂ ಸ ಹವ್ಯಾ ವಕ್ಷ್ಯಾನುಷಕ್ ॥ ೧ ॥

॥ ಪದಪಾಠಃ ॥

ತ್ವಾಂ । ಅಗ್ನೇ । ಹವಿಷ್ಮಂತಃ । ದೇವಂ । ಮರ್ತಾಸಃ । ಈಳತೇ ।
ಮನ್ಯೇ । ತ್ವಾ । ಜಾತಃವೇದಸಂ । ಸಃ । ಹವ್ಯಾ । ವಕ್ಷಿ । ಅನುಷಕ್ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಾಂ ದೇವಂ ದೀಪ್ಯಮಾನಂ ಹವಿಷ್ಮಂತೋ ಹೋಮಸಾಧನದ್ರವ್ಯಸಮೇತಾ ಮರ್ತಾಸೋ ಮರ್ತ್ಯಾ ಈಳತೇ । ಸ್ತುವಂತಿ । ಅಹಂ ಚ ಜಾತವೇದಸಂ । ಜಾತಮುತ್ಪನ್ನಂ ಚರಾಚರಂ ಭೂತಜಾತಂ ವೇತ್ತೀತಿ ಜಾತವೇದಾಃ । ಅಥವಾ ಜಾತಾನಿ ಸ್ಥಾವರಜಂಗಮಾತ್ಮಕಾನ್ಯೇನಂ ವಿದುರಿತಿ ಜಾತವೇದಾಃ । ಯದ್ವಾ । ವೇದ ಇತಿ ಧನನಾಮ । ಜಾತಂ ಸರ್ವಂ ವೇದೋ ಧನಂ ಯಸ್ಯಾಸೌ ಜಾತವೇದಾಃ । ಏವಂವಿಧಂ ತ್ವಾ ತ್ವಾಂ ಮನ್ಯೇ । ಸ್ತೌಮಿ । ಮನಿರತ್ರ ಸ್ತುತ್ಯರ್ಥೇ ವರ್ತತೇ ಧಾತೂನಾಮನೇಕಾರ್ಥತ್ವಾತ್। ಸ ತ್ವಂ ಹವ್ಯಾ ಹವನಸಾಧನಾನಿ ಹವೀಂಷ್ಯಾನುಷಕ್ ನಿರಂತರತಯಾನುಷಕ್ತಂ ಯಥಾ ತಥಾ ವಕ್ಷಿ । ವಹಸಿ ॥ ಹವಿಷ್ಮಂತಃ । ಹವಿಃಶಬ್ದ ಔಣಾದಿಕಇಸ್ಪ್ರತ್ಯಯಾಂತತ್ವಾತ್ಪ್ರತ್ಯಯಸ್ವರೇಣಾಂತೋದಾತ್ತಃ । ತದಸ್ಯಾಸ್ತೀತಿ ಮತುಪ್ । ಪದಸಂಜ್ಞಾಯಾ ಅಪವಾದತ್ವೇನ ತಸೌ ಮತ್ವರ್ಥ ಇತಿ ಭಸಂಜ್ಞಾಯಾಂ ರುತ್ವಾಭಾವಃ । ಮತುಬ್ವಸೋರನುದಾತ್ತತ್ವಾತ್ಪ್ರತ್ಯಯಸ್ವರ ಏವ ಶಿಷ್ಯತೇ । ದೇವಂ । ಅಚ್‌ಪ್ರತ್ಯಯಾಂತತ್ವಾದ್ದೇವಶಬ್ದೋಽಂತೋದಾತ್ತಃ । ಮರ್ತಾಸಃ । ಮೃಙ್ ಪ್ರಾಣತ್ಯಾಗೇ।

ಅಸಿಹಸಿವೃಜಾತ್ಯಾದಿನಾ ತನ್ । ಗುಣಃ । ಮರ್ತಃ । ಜಸೇರಸುಕ್ । ಮರ್ತಾಸಃ । ನಿತ್ತ್ವಾದಾದ್ಯು-ದಾತ್ತಃ । ಈಳತೇ । ಈಡ ಸ್ತುತೌ। ಅದಾದಿತ್ವಾಚ್ಛಪೋ ಲುಕ್ । ಆತ್ಮನೇಪದೇಷ್ವನತೋ ಝೋರೇತ್ವಂ। ಅತ್ರ ಡಕಾರಸ್ಯಾಧ್ಯೇತೃಸಂಪ್ರದಾಯಪ್ರಾಪ್ತೋ ಳಕಾರಃ । ಲಸಾರ್ವಧಾತುಕಾನುದಾತ್ತತ್ವೇನ ಧಾತು-ಸ್ವರೇ ಪ್ರಾಪ್ತೇ ಆಸ್ವಮಿಕೋ ನಿಘಾತಃ । ಮನ್ಯೇ । ಶ್ಯನೋ ನಿತ್ತ್ವಾದಾದ್ಯುದಾತ್ತತ್ವಂ । ತ್ವಾ । ಯುಷ್ಮಿಶ್ರಣೇ । ಮದಿಕ್ಪ್ರತ್ಯಯಾಂತೋ ಯುಷ್ಮಚ್ಛಬ್ದಃ ಪ್ರತ್ಯಯಸ್ವರೇಣಾಂತೋದಾತ್ತಃ । ತ್ವಮಾವೇ-ಕವಚನ ಇತಿ ಮಪರ್ಯಂತಸ್ಯ ತ್ವಾದೇಶಃ । ದ್ವಿತೀಯಾಯಾಂ ಚ । ಪಾ ೭-೨-೮೭ । ಇತ್ಯಾಕಾರಃ । ಏಕಾದೇಶ ಉದಾತ್ತೇನೋದಾತ್ತ ಇತ್ಯೇಕಾದೇಶೋಽಪ್ಯುದಾತ್ತ ಏವ । ತ್ವಾಮೌ ದ್ವಿತೀಯಾಯಾ ಇತಿ ತ್ವಾದೇಶಃ । ಸ್ಥಾನಿವದ್ಭಾವೇನಾಂತೋದಾತ್ತತ್ವೇ ಪ್ರಾಪ್ತೇಽನುದಾತ್ತಂ ಸರ್ವಮಪಾದಾದಾವಿತ್ಯನು-ದಾತ್ತತ್ವಂ । ಜಾತವೇದಸಂ । ಜನೀ ಪ್ರಾದುರ್ಭಾವೇ । ಕ್ತಃ । ಶ್ವೀದಿತೋ ನಿಷ್ಠಾಯಾಮಿತೀಟ್ಪ್ರತಿ-ಷೇಧಃ । ಜನಸನಖನಾಂ ಸನ್ಝಲೋರಿತ್ಯಾತ್ವಂ । ಪ್ರತ್ಯಯಸ್ವರೇಣಾಂತೋದಾತ್ತಃ । ವೇದಸ್ಶಬ್ದೋಽ-ಪ್ಯಸುನ್ಪ್ರತ್ಯಯಾಂತತ್ವಾದಾದ್ಯುದಾತ್ತಃ । ಕರ್ಮಧಾರಯಪಕ್ಷೇ ಸಮಾಸಾಂತೋದಾತ್ತಾಪವಾದತ್ವೇನ ತತ್ಪುರುಷೇ ತುಲ್ಯಾರ್ಥೇತ್ಯಾದಿನಾ ಪೂರ್ವಪದಪ್ರಕೃತಿಸ್ವರೇ ಪ್ರಾಪ್ತೇ ಕೃದುತ್ತರಪದಪ್ರಕೃತಿಸ್ವರತ್ವಂ । ತದಪವಾದತ್ವೇನ ಗತಿಕಾರಕಯೋರಪಿ ಪೂರ್ವಪದಪ್ರಕೃತಿಸ್ವರತ್ವಂ ಚೇತಿ ಪೂರ್ವಪದಪ್ರಕೃತಿಸ್ವರತ್ವಂ । ಬಹುವ್ರೀಹಿಪಕ್ಷೇ ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮಿತಿ । ಹವ್ಯಾ । ಹವಮರ್ಹತೀತ್ಯಸ್ಮಿನ್ನರ್ಥೇ-ಯ ಇತ್ಯನುವರ್ತಮಾನೇ ಛಂದಸಿ ಚೇತಿ ಯಃ । ನಪುಂಸಕತ್ವಾಚ್ಛೇರಾದೇಶಃ । ಶೇಶ್ಛಂದಸಿ ಬಹುಲಮಿತಿ ಲೋಪಃ । ಪ್ರತ್ಯಯಲಕ್ಷಣೇನ ನುಮ್ । ದೀರ್ಘನಲೋಪೌ । ಪ್ರತ್ಯಯಸ್ವರೇಣಾಂತೋದಾತ್ತಃ। ವಕ್ಷಿ । ವಹ ಪ್ರಾಪಣೇ । ಸಿಪ್ । ಲುಗನುವೃತ್ತೌ ಬಹುಲಂ ಛಂದಸೀತಿ ಶಪೋ ಲುಕ್ । ಢತ್ವಕತ್ವಷ-ತ್ವಾನಿ । ಸಿಪಃ ಪಿತ್ತ್ವಾನುದಾತ್ತತ್ವೇನ ಧಾತುಸ್ವರೇಣಾದ್ಯುದಾತ್ತತ್ವೇ ಪ್ರಾಪ್ತೇ ನಿಘಾತಃ । ಆನುಷಕ್ । ಅನುಪೂರ್ವಸ್ಯ ಷಜ್ಜೇಃ ಕ್ವಿಪ್ । ನಕಾರಲೋಪಃ ಕುತ್ವಂ ಚ । ಧಾತ್ವಾದೇಃ ಸಕಾರಸ್ಯೋಪಸರ್ಗಾತ್ಸು-ನೋತೀತ್ಯಾದಿನಾ ಷತ್ವಂ । ದೀರ್ಘಶ್ಛಾಂದಸಃ । ಕೃದುತ್ತರಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ದೇವಂ**—ಪ್ರಕಾಶಮಾನನಾದ । **ತ್ವಾ**—ನಿನ್ನನ್ನು । **ಹವಿಷ್ಮಂತಃ**—ಹವಿಸ್ಸನ್ನು ಹೊಂದಿರತಕ್ಕವರೂ । **ಮರ್ತಾಸಃ**—ಮಾನವರೂ ಆದ ಯಜಮಾನರು । **ಈಳತೇ**—ಸ್ತುತಿಸುತ್ತಾರೆ । (ನಾನೂ ಸಹ) । **ಜಾತವೇದಸಂ**—ಜಾತವೇದೋರೂಪನಾದ । **ತ್ವಾ**—ನಿನ್ನನ್ನು । **ಮನ್ಯೇ**—ಸ್ತುತಿಸುತ್ತೇನೆ । **ಸಃ**—ಅತಹ ಸರ್ವಜ್ಞನಾದ ನೀನು । **ಹವ್ಯಾ**—ಹವಿಸ್ಸುಗಳನ್ನು । **ಆನುಷಕ್**—ನಿರಂತರವೂ । **ವಕ್ಷಿ**—ದೇವತೆಗಳಿಗೆ ವಹಿಸುತ್ತೀಯೆ ।

॥ ಭಾವಾರ್ಥ ॥

ಎಲೈ ಅಗ್ನಿಯೇ, ಪ್ರಕಾಶಮಾನನಾದ ನಿನ್ನನ್ನು ಹವಿಸ್ಸನ್ನು ಹೊಂದಿರತಕ್ಕವರೂ, ಮಾನವರೂ ಆದ ಯಜಮಾನರು ಸ್ತುತಿಸುತ್ತಾರೆ ಜಾತವೇದೋರೂಪನಾದ ನಿನ್ನನ್ನು ನಾನೂ ಸಹ ಸ್ತುತಿಸುತ್ತೇನೆ ಅಂತಹ ಸರ್ವಜ್ಞನಾದ ನೀನು ನಿರಂತರವೂ ದೇವತೆಗಳಿಗೆ ಹವಿಸ್ಸನ್ನು ವಹಿಸುತ್ತೀಯೆ.

## English Translation

Mortals bearing oblations glorify you, Agni, the divine: I praise you, Jatavedas, for that you convey successively oblations (to the gods)

### ವಿಶೇಷವಿಷಯಗಳು

**ಹವಿಷ್ಮಂತಃ—ಹೋಮಸಾಧನದ್ರವ್ಯಸಮೇತಾಃ ।** ದೇವತೆಗಳನ್ನುದ್ದೇಶಿಸಿ ಅಗ್ನಿಯಲ್ಲಿ ಹೋಮ ಮಾಡುವುದಕ್ಕಾಗಿ ಹವಿಸ್ಸು(ಅನ್ನ), ಆಜ್ಯ, ಸಮಿತ್ತು ಮೊದಲಾದ ಹೋಮದ್ರವ್ಯಗಳನ್ನು ಸಿದ್ಧಪಡಿಸಿಟ್ಟುಕೊಂಡಿರುವ ಯಜಮಾನರು ಎಂದಭಿಪ್ರಾಯವು.

**ಜಾತವೇದಸಂ—ಜಾತಮುತ್ಪನ್ನಂ ಚರಾಚರಂ ಭೂತಜಾತಂ ವೇತ್ತೀತಿ ಜಾತವೇದಾಃ । ಅಥವಾ ಜಾತಾನಿ ಸ್ಥಾವರಜಂಗಮಾತ್ಮಕಾನಿ ಏನಂ ವಿದುರಿತಿ ಜಾತವೇದಾಃ । ಯದ್ವಾ ವೇದ ಇತಿ ಧನನಾಮ । ಜಾತಂ ಸರ್ವಂ ವೇದೋ ಧನಂ ಯಸ್ಮಾತ್ಸೌ ಜಾತವೇದಾಃ ।** ಜಾತವೇದಸಂ ಎಂಬ ಶಬ್ದಕ್ಕೆ ಸಾಯಣರು ಮೂರುವಿಧವಾದ ಅರ್ಥವನ್ನು ಹೇಳಿರುವರು. ಈ ಅಗ್ನಿಯು ಪ್ರಪಂಚದಲ್ಲಿ ಉತ್ಪನ್ನವಾಗುವ ಸಮಸ್ತ ಚರಾಚರ ವಸ್ತುಗಳನ್ನೂ ತಿಳಿಯುವವನಾದ್ದರಿಂದ ಇವನಿಗೆ ಜಾತವೇದಾಃ ಎಂದು ಹೆಸರು, ಅಥವಾ ಪ್ರಪಂಚದಲ್ಲಿ ಹುಟ್ಟಿರುವ ಸಮಸ್ತ ಚರಾಚರಾತ್ಮಕವಾದ ಪ್ರಾಣಿವರ್ಗವೆಲ್ಲವೂ ಈ ಅಗ್ನಿಯನ್ನು ತಿಳಿದಿರುವುದರಿಂದ ಅಗ್ನಿಗೆ ಜಾತವೇದಾಃ ಎಂದು ಹೆಸರು; ಅಥವಾ ವೇದಃಶಬ್ದಕ್ಕೆ ಧನವೆಂಬ ಅರ್ಥವಿರುವುದು ( ನಿ. ೩-೯) ಯಜ್ಞಮಾಡುವ ಯಜಮಾನರಿಗೆ ಕೊಡುವುದಕ್ಕಾಗಿ ಧನವನ್ನು ಹೊಂದಿರುವವನಾದ್ದರಿಂದ ಅಗ್ನಿಗೆ ಜಾತವೇದಾಃ ಎಂದು ಹೆಸರು, ಎಂದು ಮೂರು ವಿಧವಾದ ಅರ್ಥವಿವರಣೆಯನ್ನೂ ಮಾಡಿರುವರು. ಇದಲ್ಲದೆ-

**ಮಮ ನಾಮ ಪ್ರಥಮಂ ಜಾತವೇದಃ ಪಿತಾ ಮಾತಾ ಚ ದಧತುರ್ಯದಗ್ರೇ ।**

(ತೈ- ಸಂ. ೧-೫-೧೦-೧)

ಎಂದರೆ, ನನ್ನ ತಂದೆತಾಯಿಗಳೇ ನನಗೆ ಮೊದಲು ಜಾತವೇದಾಃ ಎಂಬ ಹೆಸರನ್ನು ಇಟ್ಟಿರುವರು ಎಂದು ಅಗ್ನಿಯೇ ಹೇಳಿಕೊಂಡಿದಾನೆ

**ಮನ್ಯೇ-ಸ್ತೌಮಿ ।** ಸ್ತೋತ್ರಮಾಡುತ್ತೇನೆ. ಇಲ್ಲಿ ಮನಿಧಾತುವಿಗೆ ಸ್ತುತ್ಯರ್ಥದಲ್ಲಿ ಪ್ರಯೋಗವಿರು ವುದೆಂದು ಭಾಷ್ಯಕಾರರು ವಿವರಿಸಿದ್ದಾರೆ.

॥ ಸಂಹಿತಾಪಾಠಃ ॥

ಅಗ್ನಿರ್ಹೋತಾ ದಾಸ್ವತಃ ಕ್ಷಯಸ್ಯ ವೃಕ್ತಬರ್ಹಿಷಃ ।
ಸಂ ಯಜ್ಞಾಸಶ್ಚರಂತಿ ಯಂ ಸಂ ವಾಜಾಸಃ ಶ್ರವಸ್ಯವಃ ॥ ೨ ॥

॥ ಪದಪಾಠಃ ॥

ಅಗ್ನಿಃ । ಹೋತಾ । ದಾಸ್ವತಃ । ಕ್ಷಯಸ್ಯ । ವೃಕ್ತ${}_{\text{S}}$ಬರ್ಹಿಷಃ ।
ಸಂ । ಯಜ್ಞಾಸಃ । ಚರಂತಿ । ಯಂ । ಸಂ । ವಾಜಾಸಃ । ಶ್ರವಸ್ಯವಃ ॥ ೨ ॥

॥ ಸಾಯಣಭಾಷ್ಯಂ ॥

ಯಮಗ್ನಿಂ ಯಜ್ಞಾಸಃ ಸರ್ವೇ ಯಜ್ಞಾಃ ಸಂ ಚರಂತಿ ಸಹಿತಾ ಗಚ್ಛಂತಿ । ಶ್ರವಸ್ಯವೋ ಯಜಮಾನಸ್ಯ ಪ್ರಭೂತಾಂ ಕೀರ್ತಿಂ ಸಂಪಾದಯಂತೋ ವಾಜಾಸೋ ಹವೀಂಷಿ ಯಮಗ್ನಿಂ ಸಂ ಚರಂತಿ ಪ್ರಾಪ್ನುವಂತಿ । ಏವಂವಿಶಿಷ್ಟೋಽಗ್ನಿರ್ದಾಸ್ವತೋ ಹವಿಷ್ಪ್ರಕ್ಷೇಪಣಾದಿದಾನವತೋ ವೃಕ್ತ-ಬರ್ಹಿಷಃ । ವೃಕ್ತಾನಿ ಲೂನಾನಿ ಬರ್ಹೀಂಷಿ ದರ್ಭಾ ಯೇನಾಸೌ ವೃಕ್ತಬರ್ಹಿಃ । ತಸ್ಯ ಕ್ಷಯಸ್ಯ । ಕ್ಷಿಯಂತಿ ನಿವಸಂತ್ಯಸ್ಮಿನ್ ಸ್ವರ್ಗಸಾಧನಫಲಾನೀತಿ ಕ್ಷಯಃ । ತಸ್ಯ ಯಜಮಾನಸ್ಯ ಯಾಗಾರ್ಥಂ ಹೋತಾ ದೇವಾನಾಮಾಹ್ವಾತಾ ಭವತಿ ॥ ದಾಸ್ವತಃ । ದಾ ದಾನೇ । ಅಸುನ್ಪ್ರತ್ಯಯಾಂತಃ । ಮತು-ಪೋಽದುಪಧಾತ್ವಾದ್ವತ್ವಂ । ಧಾತುಸ್ವರೇಣಾದ್ಯುದಾತ್ತ ಏವ । ಕ್ಷಯಸ್ಯ । ಕ್ಷಿ ನಿವಾಸಗತ್ಯೋಃ । ಕ್ಷಯೋ ನಿವಾಸ ಇತ್ಯಾದ್ಯುದಾತ್ತತ್ವಂ । ವೃಕ್ತಬರ್ಹಿಷಃ । ವೃಜೀ ವರ್ಜನೇ । ವರ್ಜನಮತ್ರೋಪಚಾರಾಚ್ಛೇ-ದನಂ । ನಿಷ್ಠಾ । ಪ್ರತ್ಯಯಸ್ವರೇಣಾಂತೋದಾತ್ತಃ । ಬಹುವ್ರೀಹಿತ್ವಾತ್ಪೂರ್ವಪದಪ್ರಕೃತಿಸ್ವರತ್ವಂ । ಯಜ್ಞಾಸಃ । ಯಜ್ಞಶಬ್ದೋ ಯಜಯಾಚೇತ್ಯಾದಿನಾ ನಙ್ಪ್ರತ್ಯಯಾಂತೋಽನ್ತೋದಾತ್ತಃ । ಚರಂತಿ । ಚರ ಗತಿಭಕ್ಷಣಯೋಃ । ಅದುಪದೇಶಾಲ್ಲಸಾರ್ವಧಾತುಕಾದನುದಾತ್ತತ್ವಂ । ಯದ್ವೃತ್ತಾನ್ನಿತ್ಯಮಿತಿ ನಿಘಾತಾಭಾವಃ । ವಾಜಾಸಃ । ವಜೇರ್ಘಞ್ । ವಾಜಃ । ಕರ್ಷಾತ್ವತ ಇತ್ಯಂತೋದಾತ್ತತ್ವಂ । ಛಾಂದಸತ್ವಾತ್ ಞ್ನಿತ್ಯಾದಿರ್ನಿತ್ಯಮಿತ್ಯಾದ್ಯುದಾತ್ತಃ । ಶ್ರವಸ್ಯವಃ । ಛಂದಸಿ ಪರೇಚ್ಛಾಯಾಮಿತಿ ಕ್ಯಚ್ । ಕ್ಯಾಚ್ಛಂದಸೀತ್ಯುಪ್ರತ್ಯಯಃ । ಪ್ರತ್ಯಯಸ್ವರೇಣಾಂತೋದಾತ್ತಃ ॥

॥ ಪ್ರತಿಪದಾರ್ಥ ॥

**ಯಂ**—ಯಾವ ಅಗ್ನಿಯನ್ನು । **ಯಜ್ಞಾಸಃ**—ಸಕಲ ಯಜ್ಞಗಳೂ । **ಸಂ ಚರಂತಿ**—ಒಟ್ಟುಗೂಡಿಕೊಂಡು ಸೇವಿಸುವುವೋ (ಯಾವ ಅಗ್ನಿಯನ್ನೇ) । **ಶ್ರವಸ್ಯವಃ**-(ಯಜಮಾನನಿಗೆ) ಕೀರ್ತಿಸಂಪಾದಕವಾದ । **ವಾಜಾಸಃ**-ಹವಿಸ್ಸುಗಳು । **ಸಂ (ಚರಂತಿ)**—ಸೇರಿ ಹೊಂದಿಕೊಳ್ಳುವುವೋ (ಅಂತಹ) । **ಅಗ್ನಿಃ**—ಅಗ್ನಿಯು । **ದಾಸ್ವತಃ**—ಹವಿಸ್ಸನ್ನರ್ಪಿಸುವವನೂ । **ವೃಕ್ತಬರ್ಹಿಷಃ**—ಕತ್ತರಿಸಿದ ದರ್ಭೆಗಳಿಂದ ಆಸನವನ್ನು ಅರ್ಪಿಸುವವನೂ ಆದ । **ಕ್ಷಯಸ್ಯ**—ಮಾನವನಿಗೆ । **ಹೋತಾ**—(ಯಜ್ಞದಲ್ಲಿ ದೇವತೆಗಳನ್ನು ಕರೆಯುವ) ಹೋತೃವಾಗುತ್ತಾನೆ ।

॥ ಭಾವಾರ್ಥ ॥

ಯಾವ ಅಗ್ನಿಯನ್ನು ಸಕಲ ಯಜ್ಞಗಳೂ ಒಟ್ಟುಗೊಂಡು ಸೇವಿಸುವುವೋ, ಯಾವ ಅಗ್ನಿಯನ್ನೇ ಯಜಮಾನನಿಗೆ ಕೀರ್ತಿಸಂಪಾದಿಸಬೇಕೆಂಬ ಉದ್ದಿಶ್ಯವುಳ್ಳ ಹವಿಸ್ಸುಗಳು ಸೇರಿಕೊಳ್ಳುವುವೋ ಅಂತಹ ಅಗ್ನಿಯು ಹವಿಸ್ಸನ್ನರ್ಪಿಸುವವನೂ ಕತ್ತರಿಸಿದ ದರ್ಭಗಳಿಂದ ಆಸನವನ್ನರ್ಪಿಸುವವನೂ ಆದ ಮಾನವನಿಗೆ ಯಜ್ಞಾರ್ಥವಾಗಿ ದೇವತೆಗಳನ್ನು ಕರೆಯುವ ಹೋತೃವಾಗುತ್ತಾನೆ

## English Translation

Agni is the invoker of the gods (on behalf of) him, the donor (of the oblation), the abode (of the fruit of good works) by whom the sacred grass has been strewn; (he) in whom congregate all sacrifices securing food and fame.

॥ ಸಂಹಿತಾಪಾಠಃ ॥

ಉತ ಸ್ಮ ಯಂ ಶಿಶುಂ ಯಥಾ ನವಂ ಜನಿಷ್ಟಾರಣೀ ।
ಧರ್ತಾರಂ ಮಾನುಷೀಣಾಂ ವಿಶಾಮಗ್ನಿಂ ಸ್ವಧ್ವರಂ ॥ ೩ ॥

॥ ಪದಪಾಠಃ ॥

ಉತ । ಸ್ಮ । ಯಂ । ಶಿಶುಂ । ಯಥಾ । ನವಂ । ಜನಿಷ್ಟ । ಅರಣೀ ಇತಿ ।
ಧರ್ತಾರಂ । ಮಾನುಷೀಣಾಂ । ವಿಶಾಂ । ಅಗ್ನಿಂ । ಸುऽಅಧ್ವರಂ ॥ ೩ ॥

॥ ಸಾಯಣಭಾಷ್ಯಂ ॥

ಉತ ಸ್ಮ ಅಪಿ ಚ ಮಾನುಷೀಣಾಂ ಮನೋರ್ಜಾತಾನಾಂ ವಿಶಾಂ । ವಿಶಂತಿ ಪ್ರವಿಶಂತಿ ಗರ್ಭಾಶಯಮಿತಿ ವಿಶಃ ಪ್ರಜಾಃ । ತಾಸಾಂ ಧರ್ತಾರಮಾಹಾರಾದಿಪಾಕದ್ವಾರೇಣ ಶರೀರಧಾತೂನಾಂ ಪೋಷಕಂ ಸ್ವಧ್ವರಂ ಶೋಭನಯಜ್ಞಂ ಯಮಗ್ನಿಮರಣೀ ದ್ವೇ ಅರಣೀ ನವಂ ನೂತನಂ ಶಿಶುಂ ಯಥಾ ಅಪತ್ಯಮಿವ ಜನಿಷ್ಟ ಅಜನಿಷಾತಾಂ । ಅರಣೀ ಪ್ರಜಾನಾಂ ಪೋಷಣಾರ್ಥಂ ಚೈತಮಗ್ನಿಮಸೃಜತಾಮಿತ್ಯರ್ಥಃ॥ ಶಿಶುಂ । ಶೋ ತನೂಕರಣೇ । ಆದೇಚ ಇತ್ಯಾದಿನಾ ಆತ್ವಂ । ಶಃ ಕಿತ್ಸನ್ವಚ್ಚೇತ್ಯುಪ್ರತ್ಯಯಃ ಸನ್ವದ್ಭಾವಶ್ಚ । ದ್ವಿರ್ಭಾವೋಽಭ್ಯಾಸಸ್ಯ ಹ್ರಸ್ವಶ್ಚ । ಸನ್ಯತ ಇತೀತ್ವಂ । ಆತೋ ಧಾತೋರಿತ್ಯಾಕಾರಲೋಪಃ। ನಿತ್ತ್ವಾದಾದ್ಯುದಾತ್ತಃ । ಯಥಾ । ಯಥೇತಿ ಪಾದಾಂತ ಇತಿ ಸರ್ವಾನುದಾತ್ತಃ । ಜನಿಷ್ಟ । ಜನೀ ಪ್ರಾದುರ್ಭಾವೇ । ಲುಙ್ । ಛಾಂದಸತ್ವಾದ್ವಚನವ್ಯತ್ಯಯಃ । ಅರಣೀ । ಋ ಗತೌ । ಅರ್ತಿಸೃಭೃಧೃಧಮ್ಯಶ್ಯವಿತೃಭ್ಯೋಽನಿರಿತ್ಯನಿಪ್ರತ್ಯಯ ಆದ್ಯುದಾತ್ತಃ । ಆಭ್ಯಾಮರ್ತಿ ಗಚ್ಛತ್ಯಗ್ನಿರಿತ್ಯರಣೀ । ಕಥಮಪಾದಾನಾರ್ಥ ಔಣಾದಿಕೋಽನಿಃ । ತಾಭ್ಯಾಮನ್ಯತ್ರೋಣಾದಯಃ । ಪಾ. ೩-೪ ೭೫ । ಇತಿ ನಿಯಮಾದ್ಧೀಮಾದಿತ್ವಾತ್ಸಿದ್ಧಂ । ಮಾನುಷೀಣಾಂ । ಮನೋರ್ಜಾತಾವಞ್ಯತೌ ಷುಕ್ಚೇತ್ಯಞ್ಪ್ರತ್ಯಯಃ ಷುಗಾಗಮಶ್ಚ । ಞ್ನಿತ್ಯಾದಿರ್ನಿತ್ಯಮಿತ್ಯಾದ್ಯುದಾತ್ತತ್ವಂ । ವಿಶಾಂ । ವಿಶ ಪ್ರವೇಶನೇ । ಕರ್ತರಿ ಕ್ವಿಪ್ । ಸಾವೇಕಾಚ ಇತಿ ವಿಭಕ್ತೇರುದಾತ್ತತ್ವಂ । ಸ್ವಧ್ವರಂ । ಹಿಂಸಾರ್ಥಸ್ಯ ಧ್ವರತೇಃ ಪಚಾದ್ಯಚ್ । ನ ವಿದ್ಯತೇ ಧ್ವರೋ ಯಾಗಹಿಂಸಾ ಯಸ್ಮಿನ್ನಿತ್ಯಧ್ವರಃ । ಬಹುವ್ರೀಹಿಸ್ವರಾಪವಾದತ್ವೇನ ನಞ್ಸುಭ್ಯಾಮಿತ್ಯಂತೋದಾತ್ತಃ ॥

॥ ಪ್ರತಿಪದಾರ್ಥ ॥

**ಉತ**—ಮತ್ತು | **ಮಾನುಷೀಣಾಂ**—ಮನುವಂಶೋತ್ಪನ್ನರಾದ **ವಿಶಾಂ**—ಪ್ರಜೆಗಳಿಗೆಲ್ಲಾ || **ಧರ್ತಾರಂ**—ಪೋಷಕನೂ | **ಸ್ವಧ್ವರಂ**—ಶ್ರೇಷ್ಠವಾದ ಯಜ್ಞವುಳ್ಳವನೂ ಆದ | **ಯಂ ಅಗ್ನಿಂ**—ಯಾವ ಅದೇ ಅಗ್ನಿಯನ್ನು | **ಅರಣೀ**—ಎರಡು ಮರದ ತುಂಡುಗಳೂ ಸಹ | **ನವಂ**—ನೂತನವಾದ | **ಶಿಶುಂ ಯಥಾ**—ಶಿಶುವನ್ನು ಹಡೆಯುವಂತೆ | **ಜನಿಷ್ಟ**—ಉತ್ಪನ್ನಮಾಡಿದವು.

॥ ಭಾವಾರ್ಥ ॥

ಮನುವಂಶೋತ್ಪನ್ನರಾದ ಪ್ರಜೆಗಳಿಗೆಲ್ಲಾ ಪೋಷಕನೂ, ಶ್ರೇಷ್ಠವಾದ ಯಜ್ಞವುಳ್ಳವನೂ ಆದ ಯಾವ ಅದೇ ಅಗ್ನಿಯನ್ನು ಕಟ್ಟಿಗೆಗಳೆರಡೂ ಸಹ ನೂತನವಾದ ಶಿಶುವನ್ನು ಹಡೆಯುವಂತೆ ಉತ್ಪನ್ನಮಾಡಿದವು.

English Translation

He (it is) whom the two stieks have engendered like a new-born babe, the supporter of men the descendants of Manu, the fit object of sacrifice.

॥ ಸಂಹಿತಾಪಾಠಃ ॥

ಉತ ಸ್ಮ ದುರ್ಗೃಭೀಯಸೇ ಪುತ್ರೋ ನ ಹ್ವಾರ್ಯಾಣಾಂ ।

ಪುರೂ ಯೋ ದಗ್ಧಾಸಿ ವನಾಗ್ನೇ ಪಶುರ್ನ ಯವಸೇ ॥ ೪ ॥

॥ ಪದಪಾಠಃ ॥

ಉತ । ಸ್ಮ । ದುಃಽಗೃಭೀಯಸೇ । ಪುತ್ರಃ । ನ । ಹ್ವಾರ್ಯಾಣಾಂ ।

ಪುರು । ಯಃ । ದಗ್ಧಾ । ಅಸಿ । ವನಾ । ಅಗ್ನೇ । ಪಶುಃ । ನ । ಯವಸೇ ॥ ೪ ॥

॥ ಸಾಯಣಭಾಷ್ಯಂ ॥

ಉತ ಸ್ಮ ಅಪಿ ಚ ಹ್ವಾರ್ಯಾಣಾಂ ಕುಟಿಲಂ ಗಚ್ಛತಾಂ ಸರ್ಪಾಣಾಂ । ಯದ್ವಾ । ಆಸ್ಕಂದಿತಾದಿಗತಿವಿಶೇಷೇಣ ವಕ್ರಗಮನಾನಾಮಶ್ವಾನಾಂ ಪುತ್ರೋ ನ ಪುತ್ರ ಇವ ಬಾಲಸರ್ಪ ಇವಾಶಿಕ್ಷಿತಬಾಲಾಶ್ವ ಇವ ವಾ ದುರ್ಗೃಭೀಯಸೇ । ದುಃಖೇನ ಗೃಹ್ಯಸೇ । ಹೇ ಅಗ್ನೇ ಯಸ್ತ್ವಂ ಪುರು ಬಹೂನಿ ವನಾ ವನಾನಿ ದಗ್ಧಾಸಿ ದಾಹಕೋ ಭವಸಿ । ಕಥಮಿವ । ಯವಸೇ ತೃಣೇ ಪಶುರ್ನ ಪಶುರಿವ । ಅಯಮರ್ಥಃ । ಅತ್ಯಂತಕ್ಷುಧಾರ್ತಃ ಪಶುಸ್ತೃಣವಿಷಯೇ ವಿಸೃಷ್ಟಃ ಸನ್ ಯಥಾ ಸರ್ವಂ ಭಕ್ಷಯತಿ ತದ್ವದಿತ್ಯರ್ಥಃ ॥ ದುರ್ಗೃಭೀಯಸೇ । ಗ್ರಹ ಉಪಾದಾನೇ । ಯಕ್ । ಬ್ರುವ ಈಡಿತ್ಯನುವೃತ್ತೌ

**ಖಹುಲಂ ಛಂದಸೀತೀಡಾಗಮಃ । ಗ್ರಹೀತ್ಯಾದಿನಾ ಸಂಪ್ರಸಾರಣಂ। ಹೃಗ್ರಹೋರ್ಭಶ್ಛಂದಸೀತಿ ಭಕಾರಃ । ನಿಘಾತಃ । ಹ್ವಾರ್ಯಾಣಾಂ । ಹ್ವೃ ಕೌಟಿಲ್ಯೇ । ಋಹಲೋರ್ಣ್ಯತ್ । ಆದಿವೃದ್ಧಿಃ । ತಿತ್ಸ್ವರಿತಮಿತಿ ಸ್ವರಿತತ್ವಂ । ಪುರು । ಪೄ ಪಾಲನಪೂರಣಯೋಃ । ಪೄಭಿದಿವ್ಯಧಿಗೃಧಿಧೃಷಿದೃಶಿಭ್ಯ ಇತಿ ಕುಪ್ರತ್ಯಯಃ । ಉದೋಷ್ಠ್ಯಪೂರ್ವಸ್ಯೇತ್ಯುತ್ವಂ । ಪ್ರತ್ಯಯಸ್ವರೇಣಾಂತೋದಾತ್ತತ್ವಂ । ಅಸಿ । ಯದ್ವೃತ್ತಾನ್ನಿತ್ಯಮಿತಿ ನ ನಿಘಾತಃ ॥**

॥ ಪ್ರತಿಪದಾರ್ಥ ॥

**ಉತ**—ಮತ್ತು । **ಅಗ್ನೇ**—ಎಲೈ ಅಗ್ನಿಯೇ । **ಹ್ವಾರ್ಯಾಣಾಂ**—ವಕ್ರಗಮನಗಳುಳ್ಳ ಸರ್ಪಗಳ । **ಶಿಶುರ್ನ**—ಮರಿಗಳು ಬಹಳ ಪ್ರಯಾಸದಿಂದ ಹಿಡಿಯಲ್ಪಡುವಂತೆ । **ದುರ್ಗೃಭೀಯಸೇ**—ಶ್ರಮದಿಂದ ಹೊಂದಲ್ಪಡುತ್ತೀಯೆ । **ಯಃ**—ಯಾವ ಅದೇ ನೀನು । **ಯವಸೇ**—ಹಸಿವಿನಿಂದ ಹುಲ್ಲಿಗಾಗಿ ಆತುರಪಡುತ್ತಿದ್ದ । **ಪಶುರ್ನ**—ಪಶುವು ಪೂರ್ಣವಾಗಿ ಹುಲ್ಲನ್ನು ತಿಂದುಬಿಡುವಂತೆ । **ಪುರು**—ಅನೇಕವಾದ । **ವನಾ**—ಕಾಡುಗಳನ್ನು । **ದಗ್ಧಾಸಿ**—ಪೂರ್ಣವಾಗಿ ಸುಡುತ್ತೀಯೆ ।

॥ ಭಾವಾರ್ಥ ॥

ಎಲೈ ಅಗ್ನಿಯೇ, ವಕ್ರಗಮನಗಳುಳ್ಳ ಸರ್ಪಗಳ ಮರಿಗಳನ್ನು ಹಿಡಿಯುವುದು ಎಷ್ಟು ಪ್ರಯಾಸವೋ, ನಿನ್ನನ್ನು ಹೊಂದುವುದೂ ಅಷ್ಟೇ ಪ್ರಯಾಸವಾಗುತ್ತದೆ. ಹಸಿವಿನಿಂದ ಹುಲ್ಲಿಗಾಗಿ ಆತುರಪಡುತ್ತಿದ್ದ ಪಶುವನ್ನು ಬಿಟ್ಟೊಡನೆಯೇ ಅದು ಹುಲ್ಲುಗಾವಲನ್ನು ಪೂರ್ಣವಾಗಿ ತಿಂದುಬಿಡುವಂತೆ, ನೀನೂ ಸಹ ಅನೇಕ ಕಾಡುಗಳನ್ನು ಪೂರ್ಣವಾಗಿ ದಹಿಸಿ ಬಿಡುತ್ತೀಯೆ

English Translation

You are laid hold of with diffieulty like the young of tortuously-twining (snakes) ; you who are the consumer of many forests, as an animal is of fodder.

॥ ಸಂಹಿತಾಪಾಠಃ ॥

**ಅಧ ಸ್ಮ ಯಸ್ಯಾರ್ಚಯಃ ಸಮ್ಯಕ್ಸಂಯಂತಿ ಧೂಮಿನಃ ।**
**ಯದೀಮಹ ತ್ರಿತೋ ದಿವ್ಯುಪ ಧ್ಮಾತೇವ ಧಮತಿ ಶಿಶೀತೇ ಧ್ಮಾತರೀ ಯಥಾ ॥ ೫ ॥**

॥ ಪದಪಾಠಃ ॥

**ಅಧ । ಸ್ಮ । ಯಸ್ಯ । ಅರ್ಚಯಃ । ಸಮ್ಯಕ್ । ಸಂऽಯಂತಿ । ಧೂಮಿನಃ ।**

**ಯತ್ । ಈಂ । ಅಹ । ತ್ರಿತಃ । ದಿವಿ । ಉಪ । ಧ್ಮಾತಾऽಇವ । ಧಮತಿ । ಶಿಶೀತೇ । ಧ್ಮಾತರಿ । ಯಥಾ ॥**

॥ ಸಾಯಣಭಾಷ್ಯಂ ॥

ಅಧ ಸ್ಮ ಅಪಿ ಚ ಧೂಮಿನೋ ಧೂಮವತೋ ಯಸ್ಯಾಗ್ನೇರರ್ಚಯೋಽರ್ಚೀಂಷಿ ಸಮ್ಯಕ್ ಶೋಭನಂ ಸಂಯಂತಿ ಸರ್ವತಃ ಪ್ರಾಪ್ನುವಂತಿ ತ್ರಿತಸ್ತ್ರಿಷು ಸ್ಥಾನೇಷು ತತೋ ವ್ಯಾಪ್ತಃ ತ್ರೀಣಿ ಸ್ಥಾನಾನಿ ವಾತೀತ್ಯ ದಿವ್ಯಂತರಿಕ್ಷೇ ಯದ್ಯದಾ ಈಮಯಮಾತ್ಮಾನಮುಪ ಧಮತಿ ಉಪವರ್ಧಯತಿ ತದಾ ಜ್ವಾಲಾಃ ಸರ್ವತೋ ನಿರ್ಗಚ್ಛಂತೀತ್ಯರ್ಥಃ । ಕಥಮಿವ । ಧ್ಮಾತೇವ । ಕರ್ಮಾರೋ ಯಥಾ ಭಸ್ತ್ರಾದಿಭಿರಗ್ನಿಂ ಸಂವರ್ಧಯತಿ ತದ್ವತ್ಸ್ವಾತ್ಮಾನಂ ವರ್ಧಯತೀತ್ಯರ್ಥಃ । ಕಿಂಚ ಧ್ಮಾತರಿ ಯಥಾ । ಯಥಾ ಧ್ಮಾತೃಸಮೀಪೇ ವಿದ್ಯಮಾನೋಽಗ್ನಿಸ್ತೇನ ಧ್ಮಾಯಮಾನಃ ಸ ಆತ್ಮಾನಂ ಶಿಶೀತೇ ತೀಕ್ಷ್ಣೀಕರೋತಿ ತದ್ವತ್ಸ್ವಯಮೇವ ಸ್ವಾತ್ಮಾನಂ ತೀಕ್ಷ್ಣೀಕರೋತೀತ್ಯರ್ಥಃ । ಅಹೇತಿ ಪಾದಪೂರಣಃ ॥ ಯಂತಿ । ಇಣ್ ಗತೌ । ಯಚ್ಛಬ್ದಯೋಗಾನ್ನಿಘಾತಾಭಾವಃ । ಧಮತಿ । ಧ್ಮಾ ಶಬ್ದಾಗ್ನಿಸಂಯೋಗಯೋಃ । ಪಾಘ್ರಾದಿನಾ ಧಮಾದೇಶಃ । ಪೂರ್ವವನ್ನಿಘಾತಾಭಾವಃ । ಶಿಶೀತೇ । ಶೋ ತನೂಕರಣೇ । ವ್ಯತ್ಯಯೇನಾತ್ಮನೇಪದೀ । ಶ್ಲಾವಿತ್ಯನುವರ್ತಮಾನೇ ಬಹುಲಂ ಛಂದಸೀತಿ ವಿಕರಣಸ್ಯ ಶ್ಲುಃ । ಆದೇಚ ಉಪದೇಶೇ ಶಿತೀತ್ಯಾತ್ವಂ । ಶ್ಲಾವಿತಿ ದ್ವಿರ್ವಚನಂ । ಬಹುಲಂ ಛಂದಸೀತ್ಯಭ್ಯಾಸಸ್ಯೇತ್ವಂ ಉಭೇ ಅಭ್ಯಸ್ತಸಂಜ್ಞಾಯಾಮಾತ ಈ ಹಲ್ಯಘೋರಿತೀತ್ವಂ । ತಿಙ ಉತ್ತರತ್ವಾನ್ನಿಘಾತಾಭಾವಃ ॥

॥ ಪ್ರತಿಪದಾರ್ಥ ॥

**ಅಧ**—ಮತ್ತು । **ಧ್ಮಾತೇವ**—ಕಮ್ಮಾರನು ಅಗ್ನಿಯನ್ನು ಊದಿ ವೃದ್ಧಿಪಡಿಸುವಂತೆಯೂ । **ಧ್ಮಾತರೀ ಯಥಾ**—ಕಮ್ಮಾರನ ಅಗ್ಗಿಷ್ಟಿಕೆಯಿಲ್ಲಿರುವ ಅಗ್ನಿಯು। **ಶಿಶೀತೇ**—ಕಮ್ಮಾರನು ಭಸ್ತ್ರಿಕೆಯಿಂದ ಊದಿದಾಗ ತನ್ನ ಸ್ವರೂಪವನ್ನು ಬೆಳಸುವಂತೆಯೂ । **ಯತ್**—ಯಾವಾಗ । **ತ್ರಿತಃ**—ಮೂರು ಸ್ಥಾನಗಳನ್ನೂ ಮೀರಿ । **ದಿವಿ**—ಅಂತರಿಕ್ಷದಲ್ಲಿ । **ಈಂ**—ತನ್ನ ಸ್ವರೂಪವನ್ನು । **ಉಪ ಧಮತಿ**—ವೃದ್ಧಿಹೊಂದುವಂತೆ ಮಾಡಿಕೊಳ್ಳುವನೋ ಆಗ । **ಧೂಮಿನಃ**—ಧೂಮವಂತನಾದ । **ಯಸ್ಯ**—ಯಾವ ಆದೇ ಅಗ್ನಿಯ । **ಅರ್ಚಯಃ**—ಜ್ವಾಲೆಗಳು । **ಸಮ್ಯಕ್ ಸಂಯಂತಿ**—ಸರ್ವತ್ರ ಶೋಭನಾತ್ಮಕವಾಗಿ ವ್ಯಾಪಿಸುತ್ತವೆ ।

ಭಾವಾರ್ಥ

ಕಮ್ಮಾರನು ಅಗ್ನಿಯನ್ನು ಊದಿ ವೃದ್ಧಿಪಡಿಸುವಂತೆಯೂ ಕಮ್ಮಾರನ ಅಗ್ಗಿಷ್ಟಿಕೆಯಲ್ಲಿರುವ ಅಗ್ನಿಯು ಭಸ್ತ್ರಿಕೆಯಿಂದ ಊದಿದಾಗ ತನ್ನ ಸ್ವರೂಪವನ್ನು ಬೆಳಸಿಕೊಳ್ಳುವಂತೆಯೂ ಯಾವಾಗ ಮೂರು ಸ್ಥಾನಗಳನ್ನೂ ಮೀರಿ ಅಂತರಿಕ್ಷದಲ್ಲಿ ತನ್ನ ಸ್ವರೂಪವನ್ನು ವೃದ್ಧಿಹೊಂದುವಂತೆ ಮಾಡಿಕೊಳ್ಳುವನೋ ಆಗ, ಧೂಮವಂತನಾದ ಯಾವ ಅದೇ ಅಗ್ನಿಯ ಜ್ವಾಲೆಗಳು ಸರ್ವತ್ರ ಶೋಭನಾತ್ಮಕವಾಗಿ ವ್ಯಾಪಿಸುತ್ತವೆ

English Translation

Of whom smoke-emitting, the flames intensely collect ; then, when diffused in the three regions Agni inflates himself in the firmament, like the blower of a bellowes, and sharpens (his flames), as (the fire blazes from the blast) of the blower.

॥ ಸಂಹಿತಾಪಾಠಃ ॥

ತವಾಹಮಗ್ನ ಊತಿಭಿರ್ಮಿತ್ರಸ್ಯ ಚ ಪ್ರಶಸ್ತಿಭಿಃ ।
ದ್ವೇಷೋಯುತೋ ನ ದುರಿತಾ ತುರ್ಯಾಮ ಮರ್ತ್ಯಾನಾಂ ॥ ೬ ॥

॥ ಪದಪಾಠಃ ॥

ತವ । ಅಹಂ । ಅಗ್ನೇ । ಊತಿऽಭಿಃ । ಮಿತ್ರಸ್ಯ । ಚ । ಪ್ರಶಸ್ತಿऽಭಿಃ ।
ದ್ವೇಷಃऽಯುತಃ । ನ । ದುಃऽಇತಾ । ತುರ್ಯಾಮ । ಮರ್ತ್ಯಾನಾಂ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಮಿತ್ರಸ್ಯ ಸರ್ವೇಷಾಂ ಮಿತ್ರಭೂತಸ್ಯ ತವೋತಿಭಿರ್ಯುಷ್ಮತ್ಕರ್ತೃಕರಕ್ಷಣೈರ್ಯುಷ್ಮತ್ಪ್ರಶಸ್ತಿಭಿಶ್ಚ ಸ್ವತ್ಕೃತೈಃ ಸ್ತೋತ್ರೈಶ್ಚ ಮರ್ತ್ಯಾನಾಂ ಶತ್ರುಭೂತಾನಾಂ ಮನುಷ್ಯಾಣಾಂ ದುರಿತಾ ದುರಿತಾನಿ ತತ್ಕರ್ತೃಕಾಣಿ ಪಾಪಸಾಧನಕರ್ಮಾಣಿ ದ್ವೇಷಯುತೋ ನ ದ್ವೇಷಯುಕ್ತಾನ್ ಶತ್ರೂನಿವ ತುರ್ಯಾಮ । ತರೇಯಂ । ಅಯಮರ್ಥಃ । ತ್ವದ್ರಕ್ಷಣೈಸ್ತ್ವತ್ಸಂಬಂಧಿಸ್ತುತಿಭಿಶ್ಚ ಬಾಹ್ಯಾಭ್ಯಂತರಶತ್ರೂನ್ ತರೇಯಮಿತ್ಯರ್ಥಃ ॥ ಊತಿಭಿಃ । ಅವ ರಕ್ಷಣೇ । ಕ್ತಿನ್ । ಜ್ವರತ್ವರಸ್ರಿವ್ಯವಿಮವಾಮುಪಧಾಯಾಶ್ಚೇತ್ಯೂಟ್। ಊತಿಯೂತಿಸಾತಿಹೇತಿಕೀರ್ತಯಶ್ಚೇತ್ಯಂತೋದಾತ್ತೋ ನಿಪಾತಿತಃ। ಪ್ರಶಸ್ತಿಭಿಃ। ಶಂಸು ಸ್ತುತೌ । ಕ್ತಿನ್ । ಕೃದುತ್ತರಪ್ರಕೃತಿಸ್ವರಾಪವಾದತ್ವೇನ ತಾದೌ ಚ ನಿತಿ ಕೃತ್ಯತಾವಿತಿ ಗತೇರುದಾತ್ತತ್ವಂ । ದ್ವೇಷೋಯುತಃ । ದ್ವಿಷ ಅಪ್ರೀತೌ । ಭಾವೇऽಸುನ್ಪ್ರತ್ಯಯಃ । ಯು ಮಿಶ್ರಣೇ । ಕರ್ತರಿ ಕ್ವಿಪ್ । ತುಕ್ । ಕೃದುತ್ತರಪದಪ್ರಕೃತಿಸ್ವರತ್ವಂ । ತುರ್ಯಾಮ । ತೃ ಪ್ಲವನತರಣಯೋಃ । ಪ್ರಾರ್ಥನಾಯಾಂ ಲಿಙ್ । ಯಾಸುಟ್ । ಲಿಙಃ ಸಲೋಪೋऽನಂತ್ಯಸ್ಯೇತಿ ಸಕಾರಲೋಪಃ । ಬಹುಲಂ ಛಂದಸೀತಿ ಶಪೋ ಲುಕ್ । ಉದೋಷ್ಠ್ಯಪೂರ್ವಸ್ಯ ಬಹುಲಂ ಛಂದಸೀತ್ಯುತ್ವಂ । ಯಾಸುಡಾಗಮಸ್ಯೋದಾತ್ತತ್ವಾಚ್ಛೇಷನಿಘಾತಃ । ಅಪಾದಾದಾವಿತಿ ಪ್ರತಿಷೇಧಾನ್ನಿಘಾತಾಭಾವಃ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಅಹಂ**—ನಾನು । **ಮಿತ್ರಸ್ಯ**—ಸಕಲರಿಗೂ ಮಿತ್ರನಾದ । **ತವ**—ನಿನ್ನ । **ಊತಿಭಿಃ**—ರಕ್ಷಣೆಗಳಿಂದಲೂ । **ಪ್ರಶಸ್ತಿಭಿಶ್ಚ**—ನಿನ್ನನ್ನುದ್ದೇಶಿಸಿದ ಸ್ತೋತ್ರಗಳ ಸಹಾಯದಿಂದಲೂ । **ಮರ್ತ್ಯಾನಾಂ**—ಮಾನವರಿಗೆ ಸಹಜವಾದ । **ದುರಿತಾ**—ಪಾಪಗಳನ್ನು । **ದ್ವೇಷೋಯುತೋ ನ**—ದ್ವೇಷಯುತರಾದ ಶತ್ರುಗಳನ್ನು ಜಯಿಸುವಂತೆ । **ತುರ್ಯಾಮ**—ದಾಟುವಂತಾಗಲಿ ।

॥ ಭಾವಾರ್ಥ ॥

ಎಲೈ ಅಗ್ನಿಯೇ, ಸಕಲರಿಗೂ ಮಿತ್ರನಾದ ನಿನ್ನ ರಕ್ಷಣೆಗಳಿಂದಲೂ, ನಿನ್ನನ್ನುದ್ದೇಶಿಸಿದ ಸ್ತೋತ್ರಗಳ ಸಹಾಯದಿಂದಲೂ, ಮಾನವರಿಗೆ ಸಹಜವಾದ ಪಾಪಗಳನ್ನು ನಾನು ದಾಟುವಂತಾಗಲಿ. ದ್ವೇಷಯುತರಾದ ಶತ್ರುಗಳನ್ನು ಜಯಿಸುವಂತೆ ಆ ಪಾಪಗಳಿಂದ ಮುಕ್ತನಾಗುವಂತಾಗಲಿ.

## English Translation

By the protections of you, Agni, the friend (of all), and by our praises (of you), may we pass safe from the evil acts of men, as if from malignant (enemies).

॥ ಸಂಹಿತಾಪಾಠಃ ॥

ತಂ ನೋ ಅಗ್ನೇ ಅಭೀ ನರೋ ರಯಿಂ ಸಹಸ್ವ ಆ ಭರ ।

ಸ ಕ್ಷೇಪಯತ್ಸ ಪೋಷಯದ್ಭುವದ್ವಾಜಸ್ಯ ಸಾತಯ ಉತೈಧಿ ಪೃತ್ಸು ನೋ ವೃಧೇ ॥ ೨ ॥

॥ ಪದಪಾಠಃ ॥

ತಂ । ನಃ । ಅಗ್ನೇ । ಅಭಿ । ನರಃ । ರಯಿಂ । ಸಹಸ್ವಃ । ಆ । ಭರ ।

ಸಃ । ಕ್ಷೇಪಯತ್ । ಸಃ । ಪೋಷಯತ್ । ಭುವತ್ । ವಾಜಸ್ಯ । ಸಾತಯೇ । ಉತ । ಏಧಿ । ಪೃತ್ಽಸು । ನಃ । ವೃಧೇ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಸಹಸ್ವೋ ಬಲವನ್ನರೋ ಹವಿಷಾಂ ನೇತಾರೋ ನೋಽಸ್ಮಾಕಂ ತಂ ರಯಿಂ ಲೋಕೇ ಪ್ರಸಿದ್ಧಂ ಪಶ್ವಾದಿಲಕ್ಷಣಂ ಧನಮಭ್ಯಾ ಭರ । ಆಭಿಮುಖ್ಯೇನಾಹರ । ಪೂರ್ವೋಕ್ತಃ ಸೋಽಗ್ನಿಃ ಕ್ಷೇಪಯತ್ । ಅಸ್ಮದೀಯಾನ್ ಶತ್ರೂನ್ ಕ್ಷೇಪಯತು । ಸೋಽಗ್ನಿಃ ಪೋಷಯತ್ । ಅಸ್ಮಾನ್ಪೋಷಯತು । ವಾಜಸ್ಯಾನ್ನಸ್ಯ ಸಾತಯೇ ಲಾಭಾಯ ಭುವತ್ । ಭವತು । ಉತ ಅಪಿ ಚ ಹೇ ಅಗ್ನೇ ಪೃತ್ಸು ಪೃತನಾಸು ಯುದ್ಧೇಷು ನೋಽಸ್ಮಾಕಂ ವೃಧೇ ಸಮೃದ್ಧಯ ಏಧಿ । ಭವ । ಸಂಗ್ರಾಮೇ ಶತ್ರುವಿಜಯಾರ್ಥಂ ಸ ತ್ವಂ ಸಮೃದ್ಧಿಂ ಕುರ್ವಿತ್ಯರ್ಥಃ ॥ ಸಹಸ್ವಃ ಷಹ ಮರ್ಷಣೇ । ಅಸುನ್ । ಸಹತ್ಯನೇನ ಶತ್ರೂನಿತಿ ಸಹೋ ಬಲಂ । ಮತುಪ್ । ಮಾದುಪಧಾಯಾ ಇತಿ ವತ್ವಂ । ಮತುವಸೋ ರುಃ ಸಂಬುದ್ಧೌ ಛಂದಸೀತಿ ರುತ್ವಂ । ಆಮಂತ್ರಿತಸ್ಯ ಚೇತಿ ನಿಘಾತಃ । ಕ್ಷೇಪಯತ್ । ಕ್ಷಿಪ ಪ್ರೇರಣೇ । ಣಿಜಂತಾಲ್ಲೇಟ್ । ಇತಶ್ಚ ಲೋಪಃ । ಲೇಟೋಽಡಾಟಾವಿತ್ಯಡಾಗಮಃ । ಶಬ್ಗುಣಾಯಾದೇಶಾ ಪರರೂಪತ್ವಂ ಚ । ಪೋಷಯತ್ । ಪುಷ ಪುಷ್ಟೌ । ಭುವತ್ । ಭೂ ಸತ್ತಾಯಾಂ । ಭೂಸುವೋಸ್ತಿಙೀತಿ ಗುಣಪ್ರತಿಷೇಧಃ । ಉವಙ್ । ಏಧಿ । ಅಸ ಭುವಿ । ಘ್ವಸೋರೇದ್ಧಾವಭ್ಯಾಸಲೋಪಶ್ಚೇತ್ಯೇತ್ವಂ । ತಸ್ಯಾಸಿದ್ಧತ್ವಾದ್ಧುಝಲ್ಭ್ಯೋ ಹೇರ್ಧಿರಿತಿ ಧಿರಾದೇಶಃ । ನಿಘಾತಃ । ಪೃತ್ಸು । ಪದಾದಿಷ್ವಿತ್ಯಾದಿನಾ ಪೃತನಾಶಬ್ದಸ್ಯ ಪೃದಾದೇಶಃ । ಸಾವೇಕಾಚ್ತ್ವಾದಂತೋದಾತ್ತತ್ವಂ ॥

॥ ಪ್ರತಿಪದಾರ್ಥ ॥

**ಸಹಸ್ವಃ**—ಶಕ್ತಿಯುತನಾದ । **ಅಗ್ನೇ**—ಎಲೈಅಗ್ನಿಯೇ । **ನರಃ**—ಹವಿಸ್ಸುಗಳಿಗೆ ನೇತೃವಾದ ನೀನು । **ತಂ ರಯಿಂ**—ಪ್ರಸಿದ್ಧವಾದ ಧನವನ್ನು । **ನಃ ಅಭಿ**—ನಮಗಭಿಮುಖವಾಗಿ । **ಆ ಭರ**—ತೆಗೆದುಕೊಂಡು ಬಾ । **ಸಃ**—ಪ್ರಸಿದ್ಧನಾದ ಅಗ್ನಿಯು । **ಕ್ಷೇಪಯತ್**—ನಮ್ಮ ಶತ್ರುಗಳನ್ನು ಉರಳಿಸಲಿ । **ಸಃ**—ಅದೇ ಅಗ್ನಿಯು । **ಪೋಷಯತ್**—(ನಮ್ಮನ್ನು) ಪೋಷಿಸಲಿ । **ವಾಜಸ್ಯ**—ಅನ್ನದ । **ಸಾತಯೇ**—ಲಾಭಕ್ಕಾಗಿ । **ಭುವತ್**—ಸಹಾಯಕನಾಗಿರಲಿ । **ಉತ**—ಮತ್ತು (ಎಲೈ ಅಗ್ನಿಯೇ) । **ಪೃತ್ಸು**—ಯುದ್ಧಗಳಲ್ಲಿ । **ನಃ**—ನಮ್ಮ । **ವೃಧೇ**—ಸಮೃದ್ಧಿಗಾಗಿ । **ಏಧಿ**—ಸಹಾಯಕನಾಗಿ ಬಾ ।

॥ ಭಾವಾರ್ಥ ॥

ಶಕ್ತಿಯುತನಾದ ಅಗ್ನಿಯೇ, ಹವಿಸ್ಸುಗಳಿಗೆ ನೇತೃವಾದ ನೀನು ಪ್ರಸಿದ್ಧವಾದ ಧನವನ್ನುನಮಗಭಿಮುಖವಾಗಿ ತೆಗೆದುಕೊಂಡು ಬಾ ಪ್ರಸಿದ್ಧನಾದ ಅಗ್ನಿಯು ನಮ್ಮ ಶತ್ರುಗಳನ್ನು ಉರಳಿಸಲಿ. ಅದೇ ಅಗ್ನಿಯು ನಮ್ಮನ್ನು ಪೋಷಿಸಲಿ. ನಮಗೆ ಅನ್ನಲಾಭವನ್ನುಂಟುಮಾಡಲಿ. ಎಲೈ ಅಗ್ನಿಯೇ, ಯುದ್ಧಗಳಲ್ಲಿ ನಮ್ಮ ಜಯಕ್ಕಾಗಿಯೂ ನಮ್ಮ ಸಂಪತ್ಸಮೃದ್ಧಿಗಾಗಿಯೂ ನಮಗೆ ಸಹಾಯಕನಾಗಿರು.

English Translation

Powerful Agni, bestow upon us the institutors (of pious rites), that wealth (which we desire) : may he discomfit (our foes) . may he cherish us may he be ever ready to bestow upon us food : and Agni, be present in battles for our success.

## ಹತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಅಗ್ನ ಓಜಿಷ್ಠಮಿತಿ ಸಪ್ತರ್ಚಂ ದಶಮಂ ಸೂಕ್ತಂ । ಋಷ್ಯಾದಿ ವಿನಿಯೋಗಶ್ಚ ಪೂರ್ವವತ್ । ಚತುರ್ಥೀಸಪ್ತಮ್ಯೌ ಪಂಕ್ತೀ । ಅಗ್ನ ಓಜಿಷ್ಠಮಂತ್ಯಾಚತುರ್ಥ್ಯೌ ಚೇತ್ಯನುಕ್ರಾಂತಂ ॥**

ಅನುವಾದವು—**ಅಗ್ನ ಓಜಿಷ್ಠಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸು ಮತ್ತು ವಿದಿಯೋಗವು ಹಿಂದಿನ ಸೂಕ್ತಕ್ಕೆ ಹೇಳಿರುವಂತೆಯೇ ಇದೆ. ಆದರೆ ಈ ಸೂಕ್ತದ ನಾಲ್ಕು ಮತ್ತು ಏಳನೆಯ ಋಕ್ಕುಗಳು ಪಂಕ್ತಿಛಂದಸ್ಕವು. ಅನುಕ್ರಮಣಿಕೆಯಲ್ಲಿ-**ಅಗ್ನ ಓಜಿಷ್ಠ ಮಂತ್ಯಾಚತುರ್ಥ್ಯೌ ಚ** ಎಂದು ಹೇಳಿರುವುದು.

## ಸೂಕ್ತ—೧೦

|| ಮಂಡಲ—೫ || ಅನುವಾಕ—೧ || ಸೂಕ್ತ—೧೦ ||
|| ಅಷ್ಟಕ—೪ || ಅಧ್ಯಾಯ— ೧ || ವರ್ಗ—೨ ||
ಸೂಕ್ತದಲ್ಲಿರುವ ಋಕ್ಸಂಖ್ಯೆ —೭
|| ಋಷಿಃ—ಗಯ ಆತ್ರೇಯಃ ||
|| ದೇವತಾ—ಅಗ್ನಿಃ ||
|| ಛಂದಃ—೧-೩, ೫-೬, ಅನುಷ್ಟುಪ್ | ೪, ೭, ಪಂಕ್ತಿಃ ||

|| ಸಂಹಿತಾಪಾಠಃ ||

ಅಗ್ನ ಓಜಿಷ್ಠಮಾ ಭರ ದ್ಯುಮ್ನಮಸ್ಮಭ್ಯಮಧ್ರಿಗೋ ।
ಪ್ರ ನೋ ರಾಯಾ ಪರೀಣಸಾ ರತ್ಸಿ ವಾಜಾಯ ಪಂಥಾಂ ॥ ೧ ॥

|| ಪದಪಾಠಃ ||

ಅಗ್ನೇ । ಓಜಿಷ್ಠಂ । ಆ । ಭರ । ದ್ಯುಮ್ನಂ । ಅಸ್ಮಭ್ಯಂ । ಅಧ್ರಿಗೋ ಇತ್ಯಧ್ರಿऽಗೋ ।
ಪ್ರ । ನಃ । ರಾಯಾ । ಪರೀಣಸಾ । ರತ್ಸಿ । ವಾಜಾಯ । ಪಂಥಾಂ ॥ ೧ ॥

|| ಸಾಯಣಭಾಷ್ಯಂ ||

ಹೇ ಅಗ್ನೇ ಓಜಿಷ್ಠಂ ಬಲವತ್ತಮಂ ದ್ಯುಮ್ನಂ । ದ್ಯೋತತೇ ಕಟಕಮುಕುಟಾದಿರೂಪೇಣ ಸರ್ವತ್ರ ಪ್ರಕಾಶತ ಇತಿ ದ್ಯುಮ್ನಂ ಧನಂ । ಅಸ್ಮಭ್ಯಮಾ ಭರ । ಆಹರ । ಹೇ ಅಧ್ರಿಗೋ ಅಧೃತಗಮನ । ಅಧೃತಮಪ್ರತಿಹತಂ ಗಮನಂ ಯಸ್ಯೇತ್ಯಧೃತಾ ಅನಿವಾರಿತಾ ಗಾವೋ ರಶ್ಮಯೋ ಯಸ್ಯೇತಿ ವಾಧೃತ-ಗುರುಧ್ರಿಗುಃ । ತಸ್ಯ ಸಂಬೋಧನಂ । ನೋಽಸ್ಮಾನ್ ಪರೀಣಸಾ ಪರಿತೋ ವ್ಯಾಪಕೇನ ರಾಯಾ ಧನೇನ ಪ್ರಕರ್ಷೇಣ ಯೋಜಯ । ವಾಜಾಯಾನ್ನಲಾಭಾಯ ಪಂಥಾಂ ಪಂಥಾನಮನ್ನಸ್ಯ ಮತ್ಸಮೀಪ-ಪಪ್ರಾಪ್ತಿಸಾಧನಂ ಮಾರ್ಗಂ ರತ್ಸಿ । ವಿಲಖ । ಕುರ್ವಿತ್ಯರ್ಥಃ ॥ ಓಜಿಷ್ಠಂ । ಉಬ್ಜ ಆರ್ಜವೇ । ಉಬ್ಜೇ-ರ್ಬಲೋಪಶ್ಚೇತ್ಯಸುನ್ ಬಲೋಪಶ್ಚ । ಗುಣಃ । ಓಜಃ । ತದಸ್ಯಾಸ್ತೀತ್ಯರ್ಥೇಽಸ್ಮಾಯಾಮೇಧೇತ್ಯಾ-ದಿನಾ ವಿನಿಃ । ಅತಿಶಾಯನ ಇತೀಷ್ಠನ್ । ವಿನ್ಮತೋರ್ಲುಕ್ । ಟೇರಿತಿ ಟಿಲೋಪಃ । ನಿತ್ತ್ವಾದಾದ್ಯು-ದಾತ್ತಃ । ದ್ಯುಮ್ನಂ । ದ್ಯುತ ದೀಪ್ತಾವಿತ್ಯಸ್ಮಾದ್ಧಾತೋಃ ಸುಮ್ನದ್ಯುಮ್ನನಿಮ್ನೇತ್ಯಾದಿನಾ ನಕ್ಪ್ರತ್ಯಯೋ ಮಕಾರಶ್ಚಾಂತಾದೇಶೋ ನಿಪಾತ್ಯತೇ । ಪ್ರತ್ಯಯಸ್ವರೇಣಾಂತೋದಾತ್ತಃ । ಅಧ್ರಿಗೋ । ಅಧೃತಶಬ್ದಸ್ಯ ಅಧ್ರ್ಯಾದೇಶಃ । ಗೋಶಬ್ದಸ್ಯೋಪಸರ್ಜನಹ್ರಸ್ವತ್ವಂ । ಆಮಂತ್ರಿತಸ್ಯ ನಿಘಾತಃ । ಪರೀಣಸಾ । ಣಸ ಕೌಟಿಲ್ಯೇಽತ್ರ ವ್ಯಾಪ್ತ್ಯರ್ಥೋ ಧಾತೂನಾಮನೇಕಾರ್ಥತ್ವಾತ್ । ಅಸ್ಮಾತ್ಸಂಪದಾದಿಲಕ್ಷಣೋ

ಭಾವೇ ಕ್ವಿಪ್ । ಪರಿ ಪ್ರಾಪ್ತಂ ನಸ್ ವ್ಯಾಪನಂ ಯಸ್ಯ ತತ್ತಥೋಕ್ತಂ । ಉಪಸರ್ಗಾದಸಮಾಸೇऽಪೀತಿ ಣತ್ವಂ । ಅತ್ರ ವ್ಯಾಪಣಕ್ರಿಯಯಾ ಯುಕ್ತಸ್ಯ ಪರೇರ್ಣಸತಿಂ ಪ್ರತ್ಯುಪಸರ್ಗಸಂಜ್ಞಾ ನಾಸ್ತಿ ಯತ್ಕ್ರಿ-ಯಾಯುಕ್ತಾಸ್ತಂ ಪ್ರತಿ ಗತ್ಯುಪಸರ್ಗಸಂಜ್ಞಾಃ । ಪಾ. ೧-೪-೬೦-೩ । ಇತಿ ನ್ಯಾಯಾತ್ । ಅತಃ ಕಥಂ ಣತ್ವಂ । ಏವಂ ತರ್ಹ್ಯುಪಸರ್ಗಾದ್ಬಹುಲಮಿತಿ ವಚನಾತ್ ಣಸೋ ಣತ್ವಂ ಭವಿಷ್ಯತಿ । ನಿಪಾತಸ್ಯ ಚೇತಿ ಪೂರ್ವಪದಸ್ಯ ದೀರ್ಘಃ । ಬಹುವ್ರೀಹೌ ಪ್ರಕೃತ್ಯೇತಿ ಪೂರ್ವಪದಪ್ರಕೃತಿಸ್ವರತ್ವಂ । ರತ್ಸಿ । ರದ ವಿಲೇಖನೇ । ಭೌವಾದಿಕಃ । ಬಹುಲಂ ಛಂದಸೀತಿ ಶಪೋ ಲುಕ್ । ಪಾದಾದಿತ್ವಾನ್ನಿಘಾತಾಭಾವಃ । ಪಂಥಾಂ । ದ್ವಿತೀಯೈಕವಚನ ಇತೋऽತ್ ಸರ್ವನಾಮಸ್ಥಾನ ಇತ್ಯತ್ । ನಕಾರಲೋಪಶ್ಛಾಂದಸಃ । ಪಥಿಮಥೋಃ ಸರ್ವನಾಮಸ್ಥಾನ ಇತ್ಯಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

**ಅಧ್ರಿಗೋ**—ಅಪ್ರತಿಹತವಾದ ಗಮನಶಕ್ತಿಯುಳ್ಳ । **ಅಗ್ನೇ**—ಎಲೈ ಅಗ್ನಿಯೇ । **ಓಜಿಷ್ಠಂ**—ಅತ್ಯಂತ ಶಕ್ತಿಯುತವಾದುದೂ । **ದ್ಯುಮ್ನಂ**—ಪ್ರಕಾಶಮಾನವಾದುದೂ ಆದ ಧನವನ್ನು **ಅಸ್ಮಭ್ಯಂ**—ನಮಗೆ । **ಆ ಭರ**—ತಂದೊದಗಿಸು । **ನಃ**—ನಮ್ಮನ್ನು । **ಪರೀಣಸಾ**—ಸರ್ವತ್ರ ವ್ಯಾಪಕವಾದ । **ರಾಯಾ**—ಧನದಿಂದ । **ಪ್ರ**—ಪೂರ್ಣವಾಗಿರುವಂತೆ ಮಾಡು । **ವಾಜಾಯ**—ನಮ್ಮ ಅನ್ನಲಾಭಕ್ಕಾಗಿ । **ಪಂಥಾಂ**—ಸರಿಯಾದ ಮಾರ್ಗವನ್ನು । **ರತ್ಸಿ**—ನಿರ್ಮಿಸಿಕೊಡು ।

॥ ಭಾವಾರ್ಥ ॥

ಅಪ್ರತಿಹತವಾದ ಗಮನಶಕ್ತಿಯುಳ್ಳ ಎಲೈ ಅಗ್ನಿಯೇ, ಅತ್ಯಂತ ಶಕ್ತಿಯುತವಾದುದೂ, ಪ್ರಕಾಶಮಾನವಾದುದೂ ಆದ ಧನವನ್ನು ನಮಗೆ ತಂದೊದಗಿಸು. ಸರ್ವತ್ರ ವ್ಯಾಪಕವಾದ ಧನವನ್ನು ಹೊಂದಿ ನಾವು ಪೂರ್ಣರಾಗಿರುವಂತೆ ಮಾಡು. ನಮಗೆ ಅನ್ನಲಾಭಕ್ಕಾಗಿ ಸರಿಯಾದ ಮಾರ್ಗವನ್ನು ನಿರ್ಮಿಸಿಕೊಡು

English Translation

Agni, of irresistible prowess, bring to us most powerful treasure; (invest us) with surrounding wealth ; mark out the paths to abundanee.

---

॥ ಸಂಹಿತಾಪಾಠಃ ॥

ತ್ವಂ ನೋ ಅಗ್ನೇ ಅದ್ಭುತ ಕ್ರತ್ವಾ ದಕ್ಷಸ್ಯ ಮಂಹನಾ ।

ತ್ವೇ ಅಸುರ್ಯಮಾರುಹತ್ಕ್ರಾಣಾ ಮಿತ್ರೋ ನ ಯಜ್ಞಿಯಃ ॥ ೨ ॥

॥ ಪದಪಾಠಃ ॥

ತ್ವಂ । ನಃ । ಅಗ್ನೇ । ಅದ್ಭುತ । ಕ್ರತ್ವಾ । ದಕ್ಷಸ್ಯ । ಮಂಹನಾ ।

ತ್ವೇ ಇತಿ । ಅಸುರ್ಯಂ । ಆ । ಅರುಹತ್ । ಕ್ರಾಣಾ । ಮಿತ್ರಃ । ನ । ಯಜ್ಞಿಯಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಅದ್ಭುತ ಸಾಮರ್ಥ್ಯಾತಿಶಯೇನ ಸರ್ವೇಷಾಮಾಶ್ಚರ್ಯಭೂತ ತ್ವಂ ನೋಽಸ್ಮಾಕಂ ಕ್ರತ್ವಾ ಕರ್ಮಣಾಸ್ಮತ್ಕೃತೇನ ಯಜ್ಞಾದಿವ್ಯಾಪಾರೇಣ ಪ್ರೀತಃ ಸನ್ ದಕ್ಷಸ್ಯ ಬಲಸ್ಯ ಧನಸ್ಯ ವಾ ಮಂಹನಾ ಮಂಹನಂ ನಾಮ ದಾನಂ ಕುರ್ವಿತಿ ಶೇಷಃ। ಯತಃ ಕಾರಣತ್ತ್ವೇ ತ್ವಯ್ಯಸುರ್ಯಮಸುರಘ್ನಂ ಬಲಮಾರುಹತ್ ಆರೂಢಂ ಅತೋ ಮಿತ್ರೋ ನ ಸೂರ್ಯ ಇವ ಯಜ್ಞಿಯೋ ಯಜ್ಞಾರ್ಹಸ್ತ್ವಂ ಕ್ರಾಣಾ ಯಜ್ಞಘಾತಕರಾಕ್ಷಸಾಪನೋದನಲಕ್ಷಣಾನಿ ಕರ್ಮಾಣಿ ಕುರ್ವಾಣೋ ಭವ ॥ ಅದ್ಭುತ ಆಮಂತ್ರಿತಸ್ಯಾದ್ಯುದಾತ್ತತ್ವಂ । ಕ್ರತ್ವಾ। ಡುಕೃಞ್ ಕರಣೇ । ಕೃಞಃ ಕತುರಿತಿ ಕತುಪ್ರತ್ಯಯಃ । ಕಕಾರೋ ಗುಣವೃದ್ಧಿಪ್ರತಿಷೇಧಾರ್ಥಃ । ಯಣಾದೇಶಃ । ಕ್ರತುಃ ಕರ್ಮ । ತೃತೀಯೈಕವಚನೇ ಜಸಾದಿಷು ವಾವಚನಮಿತಿ ವಚನಾನ್ನಾಭಾವಾಭಾವಃ । ದಕ್ಷಸ್ಯ । ದಕ್ಷ ಗತಿಹಿಂಸನಯೋಃ । ದಕ್ಷ್ಯಂತೇ ಹಿಂಸ್ಯಂತೇಽನೇನ ಶತ್ರವ ಇತಿ ದಕ್ಷಂ ಬಲಂ । ಕರಣಾಧಿಕರಣಯೋಶ್ಚೇತಿ ಘಞ್ । ಞಿತ್ತ್ವಾದಾದ್ಯುದಾತ್ತಃ । ಮಂಹನಾ । ಮಂಹತಿರ್ದಾನಕರ್ಮಾ । ಸುಪಾಂ ಸುಲುಗಿತ್ಯಾಕಾರಾದೇಶಃ । ತ್ವೇ । ಸುಪಾಂ ಸುಲುಗಿತ್ಯಾದಿನಾ ಙೇಃ ಶೇಆದೇಶಃ । ಸುಬಾದೇಶತ್ವಾದನುದಾತ್ತಃ । ತ್ವಶಬ್ದಃ ಪ್ರತ್ಯಯಸ್ವರೇಣಾಂತೋದಾತ್ತಃ । ಏಕಾದೇಶ ಉದಾತ್ತೇನೋದಾತ್ತ ಇತ್ಯೇಕಾದೇಶಸ್ಯೋದಾತ್ತತ್ವಂ । ಆರುಹತ್ । ರುಹೇರ್ಲಾಟೋಲುಙ್ ಕೃಮೃದೃರುಹಿಭ್ಯಶ್ಛಂದಸೀತಿ ಚ್ಲೇರಙಾದೇಶಃ । ಙಿತ್ತ್ವಾದ್ಗುಣಾಭಾವಃ । ಕ್ರಾಣಾ । ಡುಕೃಞ್ ಕರಣೇ ಶಾನಚ್ । ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ಯಣಾದೇಶಃ । ಸುಪಾಂ ಸುಲುಗಿತ್ಯಾತ್ವಂ । ಚಿತ ಇತ್ಯಂತೋದಾತ್ತಃ । ಯಜ್ಞಿಯಃ । ಯಜ್ಞಮರ್ಹತೀತ್ಯಸ್ಮಿನ್ನರ್ಥೇ ಯಜ್ಞರ್ತ್ವಿಗ್ಭ್ಯಾಂ ಘಖಞಾವಿತಿ ಘಃ । ಪ್ರತ್ಯಯಸ್ವರೇಣಾಂತೋದಾತ್ತಃ ॥

॥ ಪ್ರತಿಪದಾರ್ಥ ॥

**ಅದ್ಭುತ**—ಅಲೌಕಿಕವಾದ ಸಾಮರ್ಥ್ಯವುಳ್ಳ । **ಅಗ್ನೇ**—ಎಲೈ ಅಗ್ನಿಯೇ । **ತ್ವಂ**—ನೀನು । **ನಃ**—ನಮ್ಮ । **ಕ್ರತ್ವಾ**—ಕರ್ಮಗಳಿಂದ (ತೃಪ್ತನಾಗಿ) । **ದಕ್ಷಸ್ಯ**—ಶಕ್ತಿಯ । **ಮಂಹನಾ**—ಅಧಿಕ್ಯವನ್ನು (ನಮ್ಮಲ್ಲಿ) ಉಂಟುಮಾಡು । **ತ್ವೇ**—ನಿನ್ನಲ್ಲಿ । **ಅಸುರ್ಯಂ**—ಶತ್ರುನಾಶಕವಾದ ಶಕ್ತಿಯು । **ಆರುಹತ್**—ವ್ಯಾಪ್ತವಾಗಿದೆ । **ಮಿತ್ರೋ ನ**—ಮಿತ್ರದೇವನಂತೆ । **ಯಜ್ಞಿಯಃ**—ಪೂಜಾರ್ಹನಾದ ನೀನು । **ಕ್ರಾಣಾ**—ಅದ್ಭುತಕರ್ಮಗಳನ್ನು ಮಾಡುವವನಾಗಿದ್ದೀಯೆ ।

॥ ಭಾವಾರ್ಥ ॥

ಅಲೌಕಿಕವಾದ ಸಾಮರ್ಥ್ಯವುಳ್ಳ ಎಲೈ ಅಗ್ನಿಯೇ, ನೀನು ನಮ್ಮ ಯಜ್ಞಾದಿಕರ್ಮಗಳಿಂದ ತೃಪ್ತನಾಗಿ ನಮಗೆ ಅತ್ಯಧಿಕವಾದುದೂ ಮಹತ್ವವುಳ್ಳದೂ ಆದ ಶಕ್ತಿಯನ್ನುಂಟುಮಾಡು ನಿನ್ನಲ್ಲಿ ಶತ್ರುನಾಶಕವಾದ ಶಕ್ತಿಯು ವ್ಯಾಪಿಸಿದೆ ಮಿತ್ರದೇವನಂತೆ ಪೂಜಾರ್ಹನಾದ ನೀನು ಅದ್ಭುತಕರ್ಮಗಳನ್ನು ಮಾಡುವವನಾಗಿದ್ದೀಯೆ.

English Translation

Marvellous Agni, (gratified) by our acts, (produce) in us greatness of vigour : in you abides the strength destroying evil spirits : you who are to be worshipped, like Mitra, are the doer (of great deeds).

॥ ಸಂಹಿತಾಪಾಠಃ ॥

ತ್ವಂ ನೋ ಅಗ್ನ ಏಷಾಂ ಗಯಂ ಪುಷ್ಟಿಂ ಚ ವರ್ಧಯ ।
ಯೇ ಸ್ತೋಮೇಭಿಃ ಪ್ರ ಸೂರಯೋ ನರೋ ಮಘಾನ್ಯಾನಶುಃ ॥ ೩ ॥

॥ ಪದಪಾಠಃ ॥

ತ್ವಂ । ನಃ । ಅಗ್ನೇ । ಏಷಾಂ । ಗಯಂ । ಪುಷ್ಟಿಂ । ಚ । ವರ್ಧಯ ।
ಯೇ । ಸ್ತೋಮೇಭಿಃ । ಪ್ರ । ಸೂರಯಃ । ನರಃ । ಮಘಾನಿ । ಆನಶುಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಮೇಷಾಂ ನಸ್ತ್ವತ್ಸ್ತಾವಕಾನಾಮಸ್ಮಾಕಂ ಗಯಂ । ಗಮ್ಯತೇ ನಿವಾಸಾಯೇತಿ ಗಯಂ ಗೃಹಂ ಗೀಯತೇ ಸ್ತೂಯತ ಇತಿ ವಾ ಗಯಂ ಧನಂ । ಪುಷ್ಟಿಂ ಚ ಗವಾದಿವಿಷಯಾಂ ಪುಷ್ಟಿಂ ಚ ವರ್ಧಯ । ಪ್ರಾಪಯ । ವೃದ್ಧಿಂ ಪ್ರಾಪಯ । ಯೇ ಲೋಕೇ ಪ್ರಸಿದ್ಧಾಃ ಸೂರಯೋ ಲಬ್ಧವರ್ಣಾ ನರಃ ಸ್ತೋತಾರೋ ಮನುಷ್ಯಾಃ ಸ್ತೋಮೇಭಿಃ ಸ್ತೋಮೈಃ ಸ್ತೋತ್ರೈರ್ಮಘಾನಿ ಮಂಹನೀಯಾನಿ ಗವಾದಿಧನಾನಿ ಯಥಾ ಪ್ರಾನಶುಃ ಪ್ರಾಪ್ನುವನ್ ತದ್ವದ್ವಯಮಪೀತ್ಯರ್ಥಃ ॥ ಗಯಂ । ಗೃಹಪಕ್ಷೇ ಗಮೇರಥ್ಯಾಕೃದಯಶ್ಚೇತಿ ಯತ್ಪ್ರತ್ಯಯಾಂತೋ ಮಕಾರಲೋಪಶ್ಚ ನಿಪಾತ್ಯತೇ । ಧನಪಕ್ಷೇ ಗಾ

ಸ್ತುತೌ । ಅಸ್ಮಾದ್ಯತ್ಪ್ರತ್ಯಯಃ । ಹ್ರಸ್ವತ್ವಂ । ಯತೋಽನಾವ ಇತ್ಯಾದ್ಯುದಾತ್ತತ್ವಂ । ಪುಷ್ಟಿಂ । ಪುಷ ಪುಷ್ಟೌ । ಸ್ತ್ರಿಯಾಂ ಕ್ತಿನ್ । ಛಾಂದಸತ್ವಾದಂತೋದಾತ್ತತ್ವಂ । ಸ್ತೋಮೇಭಿಃ । ಷ್ಟುಞ್ ಸ್ತುತೌ । ಅರ್ತಿಸ್ತುಸುಹು ಇತ್ಯಾದಿನಾ ಮನ್ । ಗುಣಃ । ನಿತ್ತ್ವಾದಾದ್ಯುದಾತ್ತಃ । ಆನಶುಃ । ಅಶೂ ವ್ಯಾಪ್ತೌ । ಲಿಟ್ । ದ್ವಿರ್ವಚನಂ । ಹಲಾದಿಶೇಷಃ । ಅತ ಆದೇರಿತ್ಯಾತ್ವಂ । ಅಶ್ನೋತೇಶ್ಚೇತಿ ನುಡಾಗಮಃ । ನಿಘಾತಃ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಯೇ**—ಹಿಂದೆ ಪ್ರಸಿದ್ಧರಾದವರೂ । **ಸೂರಯಃ**—ಉತ್ತಮವಾದ ಸ್ತುತಿನಿರ್ಮಾಪಕರೂ ಆದ । **ನರಃ**—ಯಾವ ಋತ್ವಿಗಾದಿ ಮಾನವರು । **ಸ್ತೋಮೇಭಿಃ**—ಸ್ತೋತ್ರಗಳಿಂದ । **ಮಘಾನಿ**—ಪ್ರಶಸ್ತ್ಯವಾದ ಧನಗಳನ್ನು । **ಪ್ರ ಆನಶುಃ**—ಪೂರ್ಣವಾಗಿ ಪಡೆದರೋ (ಆದರಂತೆಯೇ) । **ತ್ವಂ**—(ನಮ್ಮಿಂದ ಸ್ತುತನಾದ) ನೀನು । **ಏಷಾಂ**—ನಿನ್ನ ಸ್ತುತಿಕರ್ತರಾದ । **ನಃ**—ನಮ್ಮ । **ಗಯಂ**—ಗೃಹಾದಿ ಧನವನ್ನೂ । **ಪುಷ್ಟಿಂ ಚ**—ಗವಾದಿ ಸಂಪತ್ಪುಷ್ಟಿಯನ್ನೂ । **ವರ್ಧಯ**—ವೃದ್ಧಿಯಾಗುವಂತೆ ಮಾಡು ।

॥ ಭಾವಾರ್ಥ ॥

ಎಲೈ ಅಗ್ನಿಯೇ, ಹಿಂದೆಲ್ಲಾ ಪ್ರಸಿದ್ಧರಾದವರೂ, ನಿನ್ನನ್ನುದ್ದೇಶಿಸಿ ಉತ್ತಮವಾದ ಸ್ತುತಿಯನ್ನು ನಿರ್ಮಿಸಿದವರೂ ಆದ ಋತ್ವಿಗಾದಿ ಮಾನವರು ಸ್ತೋತ್ರಗಳ ಫಲವಾಗಿ ಪ್ರಶಸ್ತ್ಯವಾದ ಧನಗಳನ್ನು ಪಡೆದರು. ಆದರಂತೆಯೇ, ನಮ್ಮಿಂದ ಸ್ತುತನಾದ ನೀನು, ನಿನ್ನ ಸ್ತುತಿಕರ್ತರಾದ ನಮ್ಮ ಗೃಹಾದಿಧನನ್ನೂ, ಗವಾದಿ ಸಂಪತ್ಪುಷ್ಟಿಯನ್ನೂ ವೃದ್ಧಿಯಾಗುವಂತೆ ಮಾಡು.

## English Translation

Augment, Agni, our dwelling and prosperity, for the devout men (who have propitiated you) by their praises have acquired riches.

॥ ಸಂಹಿತಾಪಾಠಃ ॥

ಯೋ ಅಗ್ನೇ ಚಂದ್ರ ತೇ ಗಿರಃ ಶುಂಭಂತ್ಯಶ್ವರಾಧಸಃ ।

ಶುಷ್ಮೇಭಿಃ ಶುಷ್ಮಿಣೋ ನರೋ ದಿವಶ್ಚಿದ್ಯೇಷಾಂ ಬೃಹತ್ಸುಕೀರ್ತಿರ್ಬೋಧತಿ ತ್ಮನಾ ॥ ೪ ॥

॥ ಪದಪಾಠಃ ॥

ಯೇ । ಅಗ್ನೇ । ಚಂದ್ರ । ತೇ । ಗಿರಃ । ಶುಂಭಂತಿ । ಅಶ್ವಽರಾಧಸಃ ।

ಶುಷ್ಮೇಭಿಃ । ಶುಷ್ಮಿಣಃ । ನರಃ । ದಿವಃ । ಚಿತ್ । ಯೇಷಾಂ । ಬೃಹತ್ । ಸುಽಕೀರ್ತಿಃ । ಬೋಧತಿ ।

ತ್ಮನಾ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಚಂದ್ರ ಸರ್ವೇಷಾಂ ಪ್ರಾಣಿನಾಮಾಹ್ಲಾದಕರ ಯೇ ನರಸ್ತೇ ಗಿರಸ್ತ್ವತ್ಸಂಬಂಧಿಸ್ತೋತ್ರರೂಪಾ ವಾಚಃ ಶುಂಭಂತಿ । ಶೋಭನಾಃ ಕುರ್ವಂತಿ ತೇಽಶ್ವರಾಧಸೋಽಶ್ವಧನಾ ಭವಂತಿ। ಏತೇನ ಸಮೃದ್ಧಿರುಪಲಕ್ಷ್ಯತೇ। ಕಿಂಚ । ಶುಷ್ಮಿಣೋ ಬಲವಂತಃ ಸಂತಃ ಶುಷ್ಮೇಭಿಃ ಶುಷ್ಮೈಃ ಸ್ವಕೀಯೈರ್ಬಲೈಃ ಸತ್ತ್ವೈಃ ಶತ್ರುಶೋಷಕಾ ಭವಂತಿ। ಯೇಷಾಂ ತ್ವತ್ಸಂಬಂಧಿನಂ ಸ್ತವಂ ಕುರ್ವತಾಂ ದಿವಶ್ಚಿದಾಕಾಶಾದಪಿ ಬೃಹನ್ಮಹತೀ ಸುಕೀರ್ತಿರ್ಭವತಿ । ಸರ್ವದಿಗಂತರಾವರ್ತಿನೀ ಕೀರ್ತಿರ್ಭವತೀತ್ಯರ್ಥಃ । ಏವಂವಿಧಂ ತ್ವಾಂ ಗಯಸ್ತ್ಮನಾತ್ಮನಾ ಸ್ವಯಮೇವ ಬೋಧತಿ । ಬೋಧಯತಿ ॥ ಶುಂಭಂತಿ । ಶುಭ ಶುಂಭ ದೀಪ್ತೌ । ತುದಾದಿಃ । ಪಾದಾದಿತ್ವಾನ್ನಿಘಾತಾಭಾವಃ । ಲಸಾರ್ವಧಾತುಕಾನುದಾತ್ತತ್ವೇ ಪ್ರಾಪ್ತೇ ಸತಿ ಶಿಷ್ಟತ್ವಾದ್ವಿಕರಣಸ್ವರ ಏವ । ಅಶ್ವರಾಧಸಃ । ಅಶೂ ವ್ಯಾಪ್ತೌ । ಅಶೂಪ್ರುಷೀತ್ಯಾದಿನಾ ಕ್ವನ್ । ಅಶ್ನುತೇ ವ್ಯಾಪ್ನೋತ್ಯಧ್ವಾನಮಿತ್ಯಶ್ವಃ । ನಿತ್ತ್ವಾದಾದ್ಯುದಾತ್ತಃ । ರಾಧ ಸಾಧ ಸಂಸಿದ್ಧೌ । ಅಸುನ್ । ರಾಧ್ನುವಂತಿ ಸಾಧಯಂತ್ಯನೇನ ಧರ್ಮಾದೀನೀತಿ ರಾಧೋ ಧನಂ । ಬಹುವ್ರೀಹಿತ್ವಾತ್ಪೂರ್ವಪದಪ್ರಕೃತಿಸ್ವರತ್ವಂ । ಬೃಹತ್ । ವೃಹ ವೃಹಿ ವೃದ್ಧೌ । ಶತೃ । ಜುಷ್ಟೋ ಲೋಪಶ್ಛಾಂದಸಃ । ಪ್ರತ್ಯಯಸ್ವರಃ । ಬೋಧತಿ । ಬುಧ ಅವಗಮನೇ । ಣ್ಯಂತಾತ್ ಶಪಿ ಕೃತೇ ತಸ್ಯ ಛಂದಸ್ಯುಭಯಥೇತಿ ಸಾರ್ವಧಾತುಕಸಂಜ್ಞಾಯಾಂ ಣಿಲೋಪಃ । ಯದ್ವೃತ್ತಾನ್ನಿತ್ಯಮಿತಿ ನಿಘಾತಾಭಾವಃ । ಧಾತುಸ್ವರೇಣಾದ್ಯುದಾತ್ತಃ । ತ್ಮನಾ । ಮಂತ್ರೇಷ್ವಾಙ್ಯಾದೇರಾತ್ಮನ ಇತ್ಯಾಕಾರಲೋಪಃ ॥

॥ ಪ್ರತಿಪದಾರ್ಥ ॥

**ಚಂದ್ರ**—ಆಹ್ಲಾದಕರನಾದ । **ಅಗ್ನೇ**—ಎಲೈ ಅಗ್ನಿಯೇ । **ಯೇ ನರಃ**—ಯಾವ ಋತ್ವಿಗಾದಿ ಮಾನವರು । **ತೇ ಗಿರಃ**—ನಿನ್ನ ಸ್ತುತಿರೂಪವಾದ ವಾಕ್ಕನ್ನು ಪಠಿಸಿ । **ಶುಂಭಂತಿ**—ನಿನ್ನ ಮಹಿಮೆಯನ್ನು ಕೊಂಡಾಡುವರೋ । **ತೇ**—ಅವರು । **ಅಶ್ವರಾಧಸಃ**—ಅಶ್ವರೂಪವಾದ ಧನವುಳ್ಳವರಾಗಿರುತ್ತಾರೆ । **ಶುಷ್ಮಿಣಃ**—ಶಕ್ತಿಯುತರಾಗಿ । **ಶುಷ್ಮೇಭಿಃ**—ತಮ್ಮ ಶಕ್ತಿಗಳಿಂದ ಶತ್ರುನಾಶಕರಾಗುತ್ತಾರೆ । **ಯೇಷಾಂ**—ಯಾವ ನಿನ್ನ ಸ್ತುತಿಕರ್ತರ । **ಬೃಹತ್**—ಅತ್ಯಧಿಕವಾದುದೂ । **ಸುಕೀರ್ತಿಃ**—ಶ್ರೇಷ್ಠವಾದುದೂ ಆದ ಯಶಸ್ಸು ಇರುವುದೋ ಅದು । **ದಿವಶ್ಚಿತ್**—ಅಂತರಿಕ್ಷದಲ್ಲೆಲ್ಲಾ ಹರಡಿ । **ತ್ಮನಾ**—ಸ್ವಪ್ರೇರಣೆಯಿಂದಲೇ। **ಬೋಧತಿ**—(ನಿನ್ನನ್ನು ಎಚ್ಚರ) ಗೊಳಿಸುತ್ತದೆ

॥ ಭಾವಾರ್ಥ ॥

ಆಹ್ಲಾದಕಾರಕನಾದ ಎಲೈ ಅಗ್ನಿಯೇ, ಯಾವ ಋತ್ವಿಗಾದಿ ಮಾನವರು ನಿನ್ನ ಸ್ತುತಿರೂಪವಾದ ವಾಕ್ಯನ್ನು ಪಠಿಸಿ ನಿನ್ನ ಮಹಿಮೆಯನ್ನು ಕೊಂಡಾಡುವರೋ, ಅವರು ಅಶ್ವರೂಪವಾದ ಧನವುಳ್ಳವರಾಗುತ್ತಾರೆ. ಮತ್ತು ಶಕ್ತಿಯುತರಾಗಿ ತಮ್ಮ ಶಕ್ತಿಗಳಿಂದ ಶತ್ರುನಾಶಕರಾಗುತ್ತಾರೆ ಯಾವ ನಿನ್ನ ಸ್ತುತಿಕರ್ತರ ಅತ್ಯಧಿಕವಾದುದೂ ಶ್ರೇಷ್ಠವಾದುದೂ ಆದ ಯಶಸ್ಸು ಇರುವುದೋ ಅದು ಅಂತರಿಕ್ಷದಲ್ಲೆಲ್ಲಾ ಹರಡಿ ಸ್ವಪ್ರೇರಣೆಯಿಂದಲೇ ನಿನ್ನನ್ನು ಎಚ್ಚರಗೊಳಿಸುತ್ತದೆ.

English Translation

Delightful Agni, those men who glorify you with hymns become rich in horses, and are invigorated with (foe-destroying) energies; and their great renown, spread through the firmament, arouses (you) of your own accord.

ಸಂಹಿತಾಪಾಠಃ

ತವ ತ್ಯೇ ಅಗ್ನೇ ಅರ್ಚಯೋ ಭ್ರಾಜಂತೋ ಯಂತಿ ಧೃಷ್ಣುಯಾ ।
ಪರಿಜ್ಮಾನೋ ನ ವಿದ್ಯುತಃ ಸ್ವಾನೋ ರಥೋ ನ ವಾಜಯುಃ ॥ ೫ ॥

॥ ಪದಪಾಠಃ ॥

ತವ । ತ್ಯೇ । ಅಗ್ನೇ । ಅರ್ಚಯಃ । ಭ್ರಾಜಂತಃ । ಯಂತಿ । ಧೃಷ್ಣುಽಯಾ ।
ಪರಿಽಜ್ಮಾನಃ । ನ । ವಿಽದ್ಯುತಃ । ಸ್ವಾನಃ । ರಥಃ । ನ । ವಾಜಽಯುಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಧೃಷ್ಣುಯಾ ಧೃಷ್ಣವೋಽತ್ಯಂತಪ್ರಗಲ್ಭಾ ಭ್ರಾಜಂತೋ ದೀಪ್ಯಮಾನಾಸ್ತ್ಯೇ ತೇ ಪ್ರಸಿದ್ಧಾ ಅರ್ಚಯಸ್ತ್ವದೀಯಾ ರಶ್ಮಯೋ ಯಂತಿ । ಸರ್ವತೋ ಗಚ್ಛಂತಿ । ಕಥಮಿವ । ಪರಿಜ್ಮಾನಃ ಪರಿತೋ ಗಂತ್ರ್ಯಃ ಸರ್ವತೋ ವ್ಯಾಪ್ತಾ ವಿದ್ಯುತೋ ನಾಚಿರಪ್ರಭಾ ಇವ । ಅನೇನ ಪ್ರಕಾಶಾತಿಶಯ ಉಕ್ತಃ । ಸ್ವಾನಃ ಶಬ್ದಾಯಮಾನೋ ರಥೋ ನ ರಥಮಿವ । ಅನೇನಾರ್ಚಿಷಾಂ ಸ್ವನಾಧಿಕ್ಯಮುಕ್ತಂ । ವಾಜಯುರ್ನ ಅನ್ನಕಾಮ ಇವಾನ್ನಾರ್ಥಂ ಯುದ್ಧೇಷು ಶತ್ರುವಿಜಯಾಯ ಯಥಾ ಪ್ರವರ್ತತೇ ತದ್ವದಿತ್ಯರ್ಥಃ । ಅನೇನಾಹುತಿವಿಷಯೋಽಭಿಲಾಷ ಉಕ್ತಃ ॥ ಯಂತಿ । ಇಣ್ ಗತೌ । ಧೃಷ್ಣುಯಾ ।

**ಞಿಧೃಷಾ ಪ್ರಾಗಲ್ಭ್ಯೇ । ತ್ರಸಿಗೃಧಿಧೃಷಿಕ್ಷಿಪೇಃ ಕ್ನುಃ ಇತ್ಯಾದಿನಾ ಕ್ನುಪ್ರತ್ಯಯಃ । ಆದಿತಶ್ಚ । ಪಾ. ೭-೨-೧೬ । ಇತೀಟ್ಪ್ರತಿಷೇಧಃ । ಬಹುವಚನೇ ಸುಪಾಂ ಸುಲುಗಿತ್ಯಾದಿನಾ ಯಾಜಾದೇಶಃ । ಚಿತ ಇತ್ಯಂತೋದಾತ್ತತ್ವಂ । ಪರಿಜ್ಮಾನಃ । ಅಜ ವ್ರಜ ಗತೌ । ಪರಿಪೂರ್ವಾದಸ್ಮಾತ್ ಅನ್ಯೇಭ್ಯೋಽಪಿ ದೃಶ್ಯಂತ ಇತಿ ಮನಿನ್ । ಅಕಾರಲೋಪಶ್ಛಾಂದಸಃ । ನಿತ್ತ್ವಾದಾದ್ಯುದಾತ್ತಃ । ವಾಜಯುಃ । ವಾಜಮಾತ್ಮನ ಇಚ್ಛತೀತಿ ಕ್ಯಚ್ । ನ ಛಂದಸ್ಯಪುತ್ರಸ್ಯೇತೀತ್ವದೀರ್ಘಯೋಃ ಪ್ರತಿಷೇಧಃ । ಕ್ಯಾಚ್ಛಂದಸೀತ್ಯುಪ್ರತ್ಯಯಃ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಧೃಷ್ಣುಯಾ**—ಶತ್ರುನಿರೋಧಕವಾದ ಶಕ್ತಿಯುಳ್ಳವೂ । **ಭ್ರಾಜಂತಃ**—ಕಾಂತಿಯುತವೂ । **ತ್ಯೇ**—ಪ್ರಸಿದ್ಧವಾದವೂ ಆದ । **ತವ ಅರ್ಚಯಃ**—ನಿನ್ನ ರಶ್ಮಿಗಳು । **ಪರಿಜ್ಮಾನಃ**—ಸರ್ವತ್ರವ್ಯಾಪಕವಾದ । **ವಿದ್ಯುತಃ ನ**—ವಿದ್ಯುತ್ಪ್ರಭೆಯಂತೆಯೂ (ಮಿಂಚಿನಂತೆಯೂ) । **ಸ್ವಾನಃ**—ಶಬ್ದಮಾಡುತ್ತಲೂ । **ವಾಜಯುಃ**—ಅನ್ನಾರ್ಥವಾಗಿ (ಯುದ್ಧದಲ್ಲಿ) ಮುನ್ನುಗ್ಗುತ್ತಲೂ ಇರುವ । **ರಥೋ ನ**—ರಥದಂತೆಯೂ । **ಯಂತಿ**—ಸರ್ವತ್ರ ಪ್ರಸರಿಸುತ್ತವೆ ।

॥ ಭಾವಾರ್ಥ ॥

ಎಲೈ ಅಗ್ನಿಯೇ, ಶತ್ರುನಿರೋಧಕವಾದ ಶಕ್ತಿಯುಳ್ಳವೂ, ಕಾಂತಿಯುತವೂ, ಪ್ರಸಿದ್ಧವಾದವೂ ಆದ ನಿನ್ನ ರಶ್ಮಿಗಳು ಸರ್ವತ್ರವ್ಯಾಪಕವಾದ ವಿದ್ಯುತ್ಪ್ರಭೆಯಂತೆಯೂ, ಶಬ್ದಮಾಡುವುದೂ ಅನ್ನಾರ್ಥವಾಗಿ ಯುದ್ಧದಲ್ಲಿ ಮುನ್ನುಗ್ಗುವುದೂ ಆದ ರಥದಂತೆಯೂ ಸರ್ವತ್ರ ಪ್ರಸರಿಸುತ್ತವೆ.

## English Translation

These your bright and fierce flames, Agni, spread around like the circumambient lightnings, and are like a rattling chariot rushing (into battle) for booty.

ಸಂಹಿತಾಪಾಠಃ

**ನೂ ನೋ ಅಗ್ನ ಊತಯೇ ಸಬಾಧಸಶ್ಚ ರಾತಯೇ ।**

**ಅಸ್ಮಾಕಾಸಶ್ಚ ಸೂರಯೋ ವಿಶ್ವಾ ಆಶಾಸ್ತರೀಷಣಿ ॥ ೭ ॥**

ಪದಪಾಠಃ

ನು । ನಃ । ಅಗ್ನೇ । ಊತಯೇ । ಸಽಬಾಧಸಃ । ಚ । ರಾತಯೇ ।

ಅಸ್ಮಾಕಾಸಃ । ಚ । ಸೂರಯಃ । ವಿಶ್ವಾಃ । ಆಶಾಃ । ತರೀಷಣಿ ॥ ೬ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ನೋಽಸ್ಮಾಕಂ ನು ಕ್ಷಿಪ್ರಮೂತಯೇ ರಕ್ಷಾಯೈ ಭವ । ಸಬಾಧಸಶ್ಚ ದಾರಿದ್ರ್ಯನಿಮಿತ್ತಬಾಧಸಹಿತಸ್ಯ ಚ ರಾತಯೇ ಧನಾನಾಂ ದಾನಾಯ ಭವ । ಕಿಂಚ ಅಸ್ಮಾಕಾಸೋಽಸ್ಮಾಕಾಃ ಪುತ್ರಮಿತ್ರಾದಯಃ ಸೂರಯಃ ಸ್ತೋತಾರೋ ವಿಶ್ವಾಃ ಸರ್ವಾ ಆಶಾ ದಿಶಸ್ತರೀಷಣಿ । ತಾಸಾಂ ತರಣೇ ಕ್ಷಮಾ ಭವಂತು । ಅಥವಾ ಆಶಾಃ ಕಾಮಾಃ । ಅಯಮರ್ಥಃ । ಸ್ವಾಭಿಲಷಿತಪ್ರಶಸ್ತಸಮಸ್ತವಸ್ತುಸಂಪಾದನಂ ಕುರ್ವಿತ್ಯರ್ಥಃ ॥ ಸಬಾಧಸಃ । ಬಾಧೇರಸುನ್ । ಬಾಧಸಾ ಸಹ ವರ್ತತ ಇತಿ ಸಬಾಧಾಃ । ವೋಪಸರ್ಜನಸ್ಯೇತಿ ಸಹಸ್ಯ ಸಭಾವಃ । ಕೃದುತ್ತರಪದಪ್ರಕೃತಿಸ್ವರತ್ವಂ । ರಾತಯೇ । ರಾ ದಾನೇ । ಕ್ತಿನ್ । ಮಂತ್ರೇ ವೃಷೇಷಪಚಮನವಿದಭೂವೀರಾ ಉದಾತ್ತ ಇತ್ಯಂತೋದಾತ್ತಃ । ಅಸ್ಮಾಕಾಸಃ । ತಸ್ಮಿನ್ನಣಿ ಚ ಯುಷ್ಮಾಕಾಸ್ಮಾಕಾವಿತ್ಯಣಿ ಕೃತೇಽಸ್ಮಾಕಾದೇಶಃ । ಛಾಂದಸತ್ವಾದಣೋ ಲೋಪಃ । ಬಹುವಚನೇಽಸುಗಾಗಮಃ । ಷಷ್ಠೀಬಹುವಚನೇ ಮಧ್ಯೋದಾತ್ತತ್ವೇನ ದೃಷ್ಟತ್ವಾತ್ತಥಾವಿಧಮಾದೇಶಮತ್ರಾಪಿ ಕೃತವಾನಾಚಾರ್ಯಃ । ವಿಶ್ವಾಃ । ವಿಶೇರಶಿಪ್ರುಷೀತ್ಯಾದಿನಾ ಕ್ವನ್ । ನಿತ್ತ್ವಾದಾದ್ಯುದಾತ್ತಃ । ತರೀಷಣಿ । ತೄ ಪ್ಲವನತರಣಯೋಃ । ಕೃತ್ಯತ್ಯಭ್ಯಾಮೀಷನ್ । ಉ. ೪–೨೬ । ಇತೀಷನ್ । ಬಹುಲವಚನಾನ್ನಲೋಪಾಭಾವಃ । ಅಂತೋದಾತ್ತಶ್ಛಾಂದಸಃ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ನಃ**—ನಮ್ಮ । **ಊತಯೇ ನು**—ರಕ್ಷಣಾರ್ಥವಾಗಿರು । **ಸಬಾಧಸಃ ಚ**—ಹಿಂಸಾಕಾರಕವಾದ ದಾರಿದ್ರ್ಯನಾಶವನ್ನುಂಟುಮಾಡುವ । **ರಾತಯೇ** – ಧನಕ್ಕೆ (ದಾತನಾಗಿರು) । **ಸೂರಯಃ**—ನಿನ್ನ ಸ್ತುತಿಕರ್ತರಾದ । **ಅಸ್ಮಾಕಾಸಃ**—ನಮ್ಮ ಪುತ್ರಮಿತ್ರಾದಿಗಳು । **ವಿಶ್ವಾಃ**—ಸಮಸ್ತವಾದ । **ಆಶಾಃ**—ಇಷ್ಟಾರ್ಥಗಳನ್ನೂ । **ತರೀಷಣಿ**—ಹೊಂದುವ ಶಕ್ತಿಯುಳ್ಳವರಾಗಲಿ (ಅಥವಾ ಸಮಸ್ತ ದಿಕ್ಕುಗಳಲ್ಲೂ ವ್ಯಾಪಿಸುವ ಶಕ್ತಿಯುಳ್ಳವರಾಗಲಿ) ।

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಯಾವಾಗಲೂ ನಮ್ಮ ರಕ್ಷಣಾರ್ಥವಾಗಿಯೇ ಇರು. ಹಿಂಸಾಕಾರಕವಾದ ದಾರಿದ್ರ್ಯದ ನಾಶವನ್ನುಂಟುಮಾಡುವ ಧನಕ್ಕೆ ದಾತನಾಗಿರು. ನಿನ್ನ ಸ್ತುತಿಕರ್ತರಾದ ನಮ್ಮ ಪುತ್ರಮಿತ್ರಾದಿಗಳು ಸಮಸ್ತವಾದ ಇಷ್ಟಾರ್ಥಗಳನ್ನೂ ಹೊಂದುವ ಶಕ್ತಿಯುಳ್ಳವರಾಗಲಿ.

## English Translation

Be prompt, Agni, for our protection, and for the gift of poverty-repelling (riches) ; and may our pious (descendants be able to) compass all their desires-

### ಸಂಹಿತಾಪಾಠಃ

ತ್ವಂ ನೋ ಅಗ್ನೇ ಅಂಗಿರಃ ಸ್ತುತಃ ಸ್ತವಾನ ಆ ಭರ ।
ಹೋತರ್ವಿಭ್ವಾಸಹಂ ರಯಿಂ ಸ್ತೋತೃಭ್ಯಃ ಸ್ತವಸೇ ಚ ನ ಉತೈಧಿ ಪೃತ್ಸು
ನೋ ವೃಧೇ ॥ ೭ ॥

### ಪದಪಾಠಃ

ತ್ವಂ । ನಃ । ಅಗ್ನೇ । ಅಂಗಿರಃ । ಸ್ತುತಃ । ಸ್ತವಾನಃ । ಆ । ಭರ ।
ಹೋತಃ । ವಿಭ್ವಽಸಹಂ । ರಯಿಂ । ಸ್ತೋತೃಽಭ್ಯಃ । ಸ್ತವಸೇ । ಚ । ನಃ । ಉತ । ಏಧಿ । ಪೃತ್ಽಸು ।
ನಃ । ವೃಧೇ ॥ ೭ ॥

### ಸಾಯಣಭಾಷ್ಯಂ

ಹೇ ಅಗ್ನೇ ಅಂಗಿರಃ । ಕಾರ್ಯಕಾರಣಯೋರಭೇದೋಪಚಾರಾದಂಗಿರಸಾಂ ಪ್ರಕೃತಿಭೂತೋಽಪ್ಯಗ್ನಿರಂಗಿರಾ ಇತ್ಯುಚ್ಯತೇ । ಹೇ ಅಂಗಿರಃ ಪೂರ್ವೈಃ ಪುರಾತನೈರ್ಮಹರ್ಷಿಭಿಃ ಸ್ತುತಃ ಸ್ತವಾನ ಇದಾನೀಂತನೈಶ್ಚ ಸ್ತೂಯಮಾನಸ್ತ್ವಂ ವಿಭ್ವಾಸಹಂ ಮಹತಾಮಪ್ಯಭಿಭವಿತಾರಂ । ಅಭಿಭವಹೇತುತ್ವಾದಭಿಭವಿತೃ ಧನಮುಚ್ಯತೇ । ರಯಿಂ ಧನಂ ನೋಽಸ್ಮಾಕಮಾ ಭರ । ಆಹರ । ಹೇ ಹೋತರ್ದೇವಾನಾಮಾಹ್ವಾತಃ ಸ್ತೋತೃಭ್ಯೋ ನೋಽಸ್ಮಭ್ಯಂ ಸ್ತವಸೇ ಸ್ತೋತುಂ ಸಾಮರ್ಥ್ಯಂ ಚ ಪ್ರಯಚ್ಛ । ಉತಾಪಿ ಚ ಪೃತ್ಸು ಯುದ್ಧೇಷು ನೋಽಸ್ಮಾಕಂ ವೃಧೇ ಸಮೃದ್ಧ್ಯೈ ಏಧಿ । ಭವ ॥ ಸ್ತವಾನಃ । ಷ್ಟುಞ್ ಸ್ತುತೌ । ಶಾನಚಿ ಕರ್ಮಣಿ ವ್ಯತ್ಯಯೇನ ಶಪ್ಪ್ರತ್ಯಯ ಆದ್ಯುದಾತ್ತಶ್ಚ । ವಿಭ್ವಾಸಹಂ । ಸಂಹಿತಾಯಾಂ ವಿಭೂನಾಮಿತಿ ಷಷ್ಠೀಬಹುವಚನಸ್ಯ ಸುಪಾಂಸುಲುಗಿತ್ಯಾದಿನಾ ಆಕಾರಾದೇಶಃ । ತತ್ಪುರುಷೇ ಕೃತಿ ಬಹುಲಮಿತಿ ಷಷ್ಠ್ಯಾ ಅಲುಕ್ । ಪದಕಾರಸ್ತು ವಿಪೂರ್ವಾದ್ಭವತೇರಗಾಗಮೋಽನ್ಯೇಷಾಮಪಿ ದೃಶ್ಯತ ಇತಿ ದೀರ್ಘತ್ವಂ ಚ ಮತ್ವಾವಗ್ರಹಂ ಕುರ್ವಂತಿ । ಕೃದುತ್ತರಪದಪ್ರಕೃತಿಸ್ವರತ್ವಂ । ಸ್ತವಸೇ । ಷ್ಟುಞ್ ಸ್ತುತೌ । ತುಮರ್ಥೇಽಸೇನ್ಪ್ರತ್ಯಯಃ । ನಿತ್ತ್ವಾದಾದ್ಯುದಾತ್ತಃ ।

॥ ಪ್ರತಿಪದಾರ್ಥ ॥

**ಅಂಗಿರಃ**—ಅಂಗಿರಾ ರೂಪನಾದ । **ಅಗ್ನೇ**—ಎಲೈ ಅಗ್ನಿಯೇ । **ಸ್ತುತಃ**—ಹಿಂದಿನ ಋಷಿಗಳಿಂದ ಸ್ತುತನಾದವನೂ । **ಸ್ತವಾನಃ**—ಈಗಿನವರಿಂದ ಸ್ತುತಿಸಲ್ಪಡುವವನೂ ಆಗಿ । **ವಿಭ್ವಾಸಹಂ**—ಮಹಚ್ಛಕ್ತಿಯುಳ್ಳ ವಿರೋಧಿಯನ್ನೂ ಎದುರಿಸುವ ಶಕ್ತಿಯನ್ನು ಕೊಡುವ । **ರಯಿಂ**—ಧನವನ್ನು । **ನಃ**—ನಮಗೆ ।**ಆ ಭರ**—ತಂದು ಕೊಡು । **ಹೋತಃ**—ಹೊತೃರೂಪನಾದ ಎಲೈ ಅಗ್ನಿಯೇ । **ಸ್ತೋತೃಭ್ಯಃ**—ನಿನ್ನನ್ನು ಸ್ತುತಿಸುವ। **ನಃ**-ನಮಗೆ **ಸ್ತವಸೇ**—ನಿನ್ನನ್ನು ಸ್ತುತಿಸುವ ಸಾಮರ್ಥ್ಯವನ್ನು ಕೊಡು । **ಉತ**—ಮತ್ತು । **ಪೃತ್ಸು**—ಯುದ್ಧಗಳಲ್ಲಿ । **ನಃ**—ನಮ್ಮ । **ವೃಧೇ**—ವೃದ್ಧಿಸಾಧಕನಾಗಿ । **ಏಧಿ**—ಆಗಿರು ।

ಭಾವಾರ್ಥ

ಅಂಗಿರಾರೂಪನಾದ ಎಲೈ ಅಗ್ನಿಯೇ, ಹಿಂದಿನ ಋಷಿಗಳಿಂದ ಸ್ತುತನಾದವನೂ, ಈಗಿನವರಿಂದ ಸ್ತುತಿಸಲ್ಪಡುವವನೂ ಆಗಿ ಮಹಚ್ಛಕ್ತಿಯುಳ್ಳ ವಿರೋಧಿಯನ್ನು ಎದುರಿಸುವ ಶಕ್ತಿಯನ್ನು ಕೊಡುವ ಧನವನ್ನು ನಮಗೆ ಕೊಡು. ಹೋತೃರೂಪನಾದ ಎಲೈ ಅಗ್ನಿಯೇ, ನಿನ್ನನ್ನು ಸ್ತುತಿಸುವ ನಮಗೆ ನಿನ್ನನ್ನು ಸ್ತುತಿಸುವ ಸಾಮರ್ಥ್ಯವನ್ನು ಕೊಡು ಮತ್ತು ಯುದ್ಧಗಳಲ್ಲಿ ನಮ್ಮ ವೃದ್ಧಿಸಾಧಕನಾಗಿರು.

English Translation

Agni, you are Angiras , glorified in the past, glorified (at present), invoker (of the gods), bring unto us riches (enabling us) to overcome the mighty give to your praisers (ability) to praise you, and be (at hand) for our success in battles

## ಹನ್ನೊಂದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಜನಸ್ಯ ಗೋಪಾ ಇತಿ ಷಡೃಚಮೇಕಾದಶಂ ಸೂಕ್ತಮಾತ್ರೇಯಸ್ಯ ಸುತಂಭರಸ್ಯಾರ್ಷಂ ಜಾಗತಮಾಗ್ನೇಯಂ । ತಥಾ ಚಾನುಕ್ರಾಂತಂ । ಜನಸ್ಯ ಷಟ್ ಸುತಂಭರೋ ಜಾಗತಮಿತಿ ॥ ಪ್ರಾತರನುವಾಕ ಆಶ್ವಿನಶಸ್ತ್ರೇ ಚಾಸ್ಯ ಸೂಕ್ತಸ್ಯ ವಿನಿಯೋಗಃ ॥ ಜನಸ್ಯ ಗೋಪಾಸ್ತ್ವಮಗ್ನ ಋತಾಯವಃ। ಆ. ೪-೧೩ । ಇತಿ ॥**

ಅನುವಾದವು—**ಜನಸ್ಯ ಗೋಪಾಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು ಇದರಲ್ಲಿ ಆರು ಋಕ್ಕುಗಳಿರುವವು ಈ ಸೂಕ್ತಕ್ಕೆ ಸುತಂಭರ ಆತ್ರೇಯಃ ಎಂಬುವನು ಋಷಿಯು; ಅಗ್ನಿಯು ದೇವತೆಯು, ಜಗತೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಜನಸ್ಯ ಷಟ್ ಸುತಂಭರೋ ಜಾಗತಂ** ಎಂದು ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಪಠನಕಾಲದಲ್ಲಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಜನಸ್ಯ ಗೋಪಾಸ್ತ್ವಮಗ್ನ ಋತಾಯವಃ** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು.

## ಸೂಕ್ತ—೧೧

॥ ಮಂಡಲ—೫ ॥ ಅನುವಾಕ—೧ ॥ ಸೂಕ್ತ—೧೧ ॥
॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೧ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬
ಋಷಿಃ—ಗಯ ಆತ್ರೇಯಃ
ದೇವತಾ—ಅಗ್ನಿಃ ॥
॥ ಛಂದಃ—೧-೪, ೬ ಅನುಷ್ಟುಪ್ । ೫, ೬. ಪಂಕ್ತಿಃ ॥

॥ ಸಂಹಿತಾಪಾಠಃ ॥

ಜನಸ್ಯ ಗೋಪಾ ಅಜನಿಷ್ಟ ಜಾಗೃವಿರಗ್ನಿಃ ಸುದಕ್ಷಃ ಸುವಿತಾಯ ನವ್ಯಸೇ ।
ಘೃತಪ್ರತೀಕೋ ಬೃಹತಾ ದಿವಿಸ್ಪೃಶಾ ದ್ಯುಮದ್ವಿ ಭಾತಿ ಭರತೇಭ್ಯಃ
ಶುಚಿಃ ॥ ೧ ॥

॥ ಪದಪಾಠಃ ॥

ಜನಸ್ಯ । ಗೋಪಾಃ । ಅಜನಿಷ್ಟ । ಜಾಗೃವಿಃ । ಅಗ್ನಿಃ । ಸುऽದಕ್ಷಃ । ಸುವಿತಾಯ । ನವ್ಯಸೇ ।
ಘೃತऽಪ್ರತೀಕಃ । ಬೃಹತಾ । ದಿವಿಃಸ್ಪೃಶಾ । ದ್ಯುಃಮತ್ । ವಿ । ಭಾತಿ । ಭರತೇಭ್ಯಃ । ಶುಚಿಃ ॥ ೧ ॥

॥ ಸಾಯಣಭಾಷ್ಯಂ ॥

ಜನಸ್ಯ ಗೋಪಾ ಗೋಪಾಯಿತಾ ರಕ್ಷಿತಾ ಜಾಗೃವಿರ್ಜಾಗರಣಶೀಲಃ ಸದಾ ಪ್ರಬುದ್ಧಃ ಸುದಕ್ಷಃ ಸುಬಲಃ ಸರ್ವೈಃ ಶ್ಲಾಘನೀಯಬಲಃ ಸೋಽಗ್ನಿರ್ನವ್ಯಸೇ ನವತರಾಯ ಸುವಿತಾಯ ಲೋಕಾನಾಂ ಕಲ್ಯಾಣಾಯಾಜನಿಷ್ಟ । ಜಾತಃ । ಘೃತಪ್ರತೀಕೋ ಘೃತೇನ ಪ್ರಜ್ವಲಿತಾಂಗೋ ಬೃಹತಾ ಮಹತಾ ದಿವಿಸ್ಪೃಶಾಭ್ರಂಲಿಹೇನ ತೇಜಸಾ ಯುಕ್ತಃ ಶುಚಿಃ ಶುದ್ಧ ಏವಂವಿಧೋಽಗ್ನಿರ್ಭರತೇಭ್ಯ ಋತ್ವಿಗ್ಭ್ಯಸ್ತ-ದರ್ಥಂ ದ್ಯುಮದ್ದೀಪ್ತಿಮದ್ಯಥಾ ಭವತಿ ತಥಾ ವಿ ಭಾತಿ । ಪ್ರಕಾಶತೇ ॥ ಗೋಪಾಃ । ಗುಪೂ ರಕ್ಷಣೇ । ಆಯಪ್ರತ್ಯಯಃ । ಗೋಪಾಯತೇಃ ಕ್ವಿಪ್ । ಪರತ್ವಾದತೋ ಲೋಪಃ । ಅತ್ರ ಪರತ್ವಾದಪೃಕ್ತಲೋಪೇ ಕೃತೇ ವರ್ಣಾಶ್ರಯತ್ವಾತ್ ಪ್ರತ್ಯಯಲಕ್ಷಣಾಭಾವೇನ ಯಲೋಪೋ ನ ಸ್ಯಾತ್। ಲೋಪೋ ವ್ಯೋರ್ವ-ಲೀತಿ ಪ್ರಥಮಂ ಲೋಪಗ್ರಹಣಾಜ್ಜ್ಞಾಪಕಾದ್ಯಲೋಪ ಏವ ಭವತಿ। ಲೋಪಾಜಾದೇಶಸ್ಯ ಯಲೋಪ-ವಿಧಿಂ ಪ್ರತಿ ನ ಸ್ಥಾನಿವದ್ಭಾವಃ । ಪ್ರತ್ಯಯಸ್ವರಃ । ಜಾಗೃವಿಃ । ಜಾಗೃ ನಿದ್ರಾಕ್ಷಯೇ । ಜ್ವಾತ್ವಾಸ್ತ್ವಾ-

ಜಾಗೃಭ್ಯಃ ಕ್ವಿನ್ನಿತಿ ಕ್ವಿನ್ಪ್ರತ್ಯಯಃ । ಜಾಗ್ರೋಽವಿಚಿಣ್ಣಲ್ ಙಿತ್ಸ್ವಿತಿ ಪ್ರತಿಷೇಧಾದ್ಗುಣಾಭಾವಃ । ನಿತ್ತ್ವಾದಾದ್ಯುದಾತ್ತಃ । ಸುದಕ್ಷಃ । ಆದ್ಯುದಾತ್ತಂ ದ್ವ್ಯಚ್ಛಂದಸೀತ್ಯುತ್ತರಪದಾದ್ಯುದಾತ್ತತ್ವಂ । ಸುವಿ-ತಾಯ । ತನ್ವಾದೀನಾಂ ಛಂದಸ್ಯುಪಸಂಖ್ಯಾನಮಿತಿ ಸೋರುವಜಾದೇಶಃ। ಸೂಪಮಾನಾತ್ ಕ್ತ ಇತ್ಯು-ತ್ತರಪದಾಂತೋದಾತ್ತತ್ವಂ । ನವ್ಯಸೇ । ನವಶಬ್ದಾದತಿಶಾಯನೇಽರ್ಥ ಈಯಸುನ್ಪ್ರತ್ಯಯಃ । ಈಕಾರಲೋಪಶ್ಛಾಂದಸಃ । ಅತೋ ಲೋಪಃ । ಆದ್ಯುದಾತ್ತಃ । ದಿವಿಸ್ಪೃಶಾ । ಹೃದ್ದ್ಯುಭ್ಯಾಂ ಙೇರುಪಸಂಖ್ಯಾನಮಿತ್ಯಲುಕ್ । ಕೃದುತ್ತರಪದಪ್ರಕೃತಿಸ್ವರತ್ವಂ । ದ್ಯುಮತ್ । ಹ್ರಸ್ವನುಡ್ಭ್ಯಾಂ ಮತು-ಬಿತಿ ಹ್ರಸ್ವಾತ್ಪರಸ್ಯ ಮತುಪೋಽಂತೋದಾತ್ತತ್ವಂ ॥

ಪ್ರತಿಪದಾರ್ಥ

**ಸುದಕ್ಷಃ**—ಉತ್ತಮವಾದ ಶಕ್ತಿಯುಳ್ಳವನೂ । **ಜನಸ್ಯ**—ಮಾನವರಿಗೆಲ್ಲಾ । **ಗೋಪಾಃ**—ರಕ್ಷಕನೂ । **ಜಾಗೃವಿಃ**—ಯಾವಾಗಲೂ ಎಚ್ಚರವಾಗಿರುವವನೂ ಆದ । **ಅಗ್ನಿಃ**—ಅಗ್ನಿಯು । **ನವ್ಯಸೇ**—ನೂತನವಾದ । **ಸುವಿತಾಯ**—ಲೋಕ ಕಲ್ಯಾಣಕ್ಕಾಗಿ । **ಅಜನಿಷ್ಟ**—ಉತ್ಪನ್ನನಾಗಿದ್ದಾನೆ । **ಘೃತಪ್ರತೀಕಃ**—ಘೃತದಿಂದ ಪ್ರಜ್ವಲಿತವಾದ ದೇಹವುಳ್ಳವನೂ । **ಬೃಹತಾ**—ಮಹತ್ತಾದುದೂ । **ದಿವಿಸ್ಪೃಶಾ**—ಅಂತರಿಕ್ಷವನ್ನು ಸ್ಪರ್ಶಿಸುವುದೂ ಆದ ತೇಜಸ್ಸಿನಿಂದ ಕೂಡಿದವನೂ । **ಶುಚಿಃ**—ಶುದ್ಧನೂ ಆಗಿ । **ಭರತೇಭ್ಯಃ**—ಭರತಕುಲದ ಕ್ಷತ್ರಿಯರಿಗಾಗಿ । **ದ್ಯುಮತ್**—ಅಂತರಿಕ್ಷದಲ್ಲಿ । **ವಿ ಭಾತಿ**—ಪ್ರಕಾಶಿಸುತ್ತಾನೆ.

॥ ಭಾವಾರ್ಥ ॥

ಉತ್ತಮವಾದ ಶಕ್ತಿಯುಳ್ಳವನೂ, ಮಾನವರಿಗೆಲ್ಲಾ ರಕ್ಷಕನೂ, ಯಾವಾಗಲೂ ಎಚ್ಚರವಾಗಿರುವವನೂ ಆದ ಅಗ್ನಿಯು ನೂತನವಾದ ಲೋಕ ಕಲ್ಯಾಣಕ್ಕಾಗಿ ಉತ್ಪನ್ನನಾಗಿದ್ದಾನೆ ಘೃತದಿಂದ ಪ್ರಜ್ವಲಿತವಾದ ದೇಹವುಳ್ಳವನೂ, ಮಹತ್ತಾದುದೂ ಅಂತರಿಕ್ಷವನ್ನು ಸ್ಪರ್ಶಿಸುವುದೂ ಆದ ತೇಜಸ್ಸಿನಿಂದ ಕೂಡಿದವನೂ, ಶುದ್ಧನೂ ಆಗಿ ಅಗ್ನಿಯು ಭರತಕುಲದ ಕ್ಷತ್ರಿಯರಿಗಾಗಿ ಅಂತರಿಕ್ಷದಲ್ಲಿ ಪ್ರಕಾಶಿಸುತ್ತಾನೆ

English Translation

The vigilant, the powerful Agni, the protector of man, has been engendered for the present prosperity (of the world): fed with butter, (blazing) with intense (radiance) reaching to the sky, the pure Agni shines brilliantly for the Bharatas

॥ ಸಂಹಿತಾಪಾಠಃ ॥

ಯಜ್ಞಸ್ಯ ಕೇತುಂ ಪ್ರಥಮಂ ಪುರೋಹಿತಮಗ್ನಿಂ ನರಸ್ತ್ರಿಷಧಸ್ಥೇ
ಸಮೀಧಿರೇ ।
ಇಂದ್ರೇಣ ದೇವೈಃ ಸರಥಂ ಸ ಬರ್ಹಿಷಿ ಸೀದನ್ನಿ ಹೋತಾ ಯಜಥಾಯ
ಸುಕ್ರತುಃ ॥ ೨ ॥

॥ ಪದಪಾಠಃ ॥

ಯಜ್ಞಸ್ಯ । ಕೇತುಂ । ಪ್ರಥಮಂ । ಪುರಃऽಹಿತಂ । ಅಗ್ನಿಂ । ನರಃ । ತ್ರಿऽಸಧಸ್ಥೇ । ಸಂ । ಈಧಿರೇ ।
ಇಂದ್ರೇಣ । ದೇವೈಃ । ಸऽರಥಂ । ಸಃ । ಬರ್ಹಿಷಿ । ಸೀದತ್ । ನಿ । ಹೋತಾ । ಯಜಥಾಯ ।
ಸುऽಕ್ರತುಃ ॥ ೨ ॥

ಸಾಯಣಭಾಷ್ಯಂ

ನರ ಋತ್ವಿಜೋ ಯಜ್ಞಸ್ಯ ಯಾಗಸ್ಯ ಕೇತುಂ ಪ್ರಜ್ಞಾಪಕಂ ಪುರೋಹಿತಂ ಯಜಮಾನೈಃ ಪುರಸ್ಕೃತಮಿಂದ್ರೇಣ ದೇವೈಶ್ಚ ಸರಥಂ ತೇಷಾಂ ಮಾನ್ಯತ್ವಾತ್ಸಮಾನರಥಮಗ್ನಿಂ ತ್ರಿಷಧಸ್ಥೇ ತ್ರಿಸ್ಥಾನೇ ವಿಹಾರಪ್ರದೇಶೇ ಪ್ರಥಮಂ ಸಮೀಧಿರೇ। ಸಮೈಂಧತ । ಸುಕ್ರತುಃ ಶೋಭನಕರ್ಮಾ ಹೋತಾ ದೇವಾನಾಮಾಹ್ವಾತಾ ಸೋಽಗ್ನಿರ್ಬರ್ಹಿಷಿ ಬರ್ಹಿರ್ಯುಕ್ತೇ ತಸ್ಮಿನ್ ಸ್ಥಾನೇ ಯಜಥಾಯ ಯಜ್ಞಾಯ ನಿ ಷೀದತ್ । ಪ್ರತಿಷ್ಠಿತೋಽಭವದಿತಿ ಯಾವತ್ ॥ ಕೇತುಂ । ಕಿತ ಜ್ಞಾನೇ । ಔಣಾದಿಕ ಉಪ್ರತ್ಯಯಃ । ಅಂತೋದಾತ್ತಃ । ಪುರೋಹಿತಂ । ಪುರೋಽವ್ಯಯಮಿತಿ ಗತಿಸಂಜ್ಞಾಯಾಂ ಗತಿರನಂತರ ಇತಿ ಪೂರ್ವಪದಪ್ರಕೃತಿಸ್ವರತ್ವಂ । ತ್ರಿಷಧಸ್ಥೇ । ಆಹವನೀಯಾದಿಲಕ್ಷಣೇನ ತ್ರಿಪ್ರಕಾರೇಣಾನೇನ ಸಹ ತಿಷ್ಠತೀತಿ ತ್ರಿಷಧಸ್ಥಃ । ಕಪ್ರತ್ಯಯಃ । ಸಧ ಮಾದಸ್ಥಯೋಶ್ಛಂದಸೀತಿ ಸಧಾದೇಶಃ । ಕೃದುತ್ತರಪದಪ್ರಕೃತಿಸ್ವರತ್ವಂ । ಸೀದತ್ । ಸದೇಃ ಪಾಘ್ರಾದಿನಾ ಸೀದಾದೇಶಃ । ಬಹುಲಂ ಛಂದಸ್ಯಮಾಙ್ಯೋಗೇಽಪೀತ್ಯಡಭಾವಃ । ಪಾದಾದಿತ್ವಾನ್ನಿಘಾತಾಭಾವಃ । ಯಜಥಾಯ । ಯಜೇರೌಣಾದಿಕೋಽಥಪ್ರತ್ಯಯಃ । ಪ್ರತ್ಯಯಸ್ವರೇಣ ಮಧ್ಯೋದಾತ್ತಃ ॥

ಪ್ರತಿಪದಾರ್ಥ

**ನರಃ**—ಋತ್ವಿಗಾದಿಗಳು । **ಯಜ್ಞಸ್ಯ**—ಯಾಗಕ್ಕೆ । **ಕೇತುಂ**—ಪ್ರಜ್ಞಾಪಕನೂ । **ಪುರೋಹಿತಂ**—ಪೂಜ್ಯಸ್ಥಾನವನ್ನಾಕ್ರಮಿಸುವವನೂ । **ಇಂದ್ರೇಣ**—ಇಂದ್ರನೊಂದಿಗೂ । **ದೇವೈಃ**—ಇತರ ದೇವತೆಗಳೊಂದಿಗೂ । **ಸರಥಂ**—ಒಂದೇ ರಥದಲ್ಲಿ ಕುಳಿತುಕೊಳ್ಳುವವನೂ ಆದ । **ಅಗ್ನಿಂ**—ಅಗ್ನಿಯನ್ನು । **ತ್ರಿಷಧಸ್ಥೇ**—ಮೂರುಸ್ಥಾನ

ಗಳಲ್ಲಿ । **ಪ್ರಥಮಂ**—ಮೊದಲು । **ಸಮೀಧಿರೇ**—ಪ್ರಜ್ವಲಿಸುವಂತೆ ಮಾಡಿದರು । **ಸುಕ್ರತುಃ**—ಶ್ರೇಷ್ಠವಾದ ಕರ್ಮ ಕರ್ತನೂ । **ಹೋತಾ**—ದೇವತೆಗಳನ್ನು ಕರೆಯುವವನೂ ಆದ । **ಸಃ**—ಅಗ್ನಿಯು । **ಬರ್ಹಿಷಿ**—ದರ್ಭಾಸನಗಳ ಮೇಲೆ । **ಯಜಥಾಯ**—ಯಜ್ಞನಿರ್ವಹಣಕ್ಕಾಗಿ । **ನಿ ಸೀದತ್**—ಕುಳಿತಿದ್ದಾನೆ ।

॥ ಭಾವಾರ್ಥ ॥

ಯಾಗಕ್ಕೆ ಪ್ರಜ್ಞಾಪಕನೂ, ಪೂಜ್ಯಸ್ಥಾನವನ್ನಾಕ್ರಮಿಸುವವನೂ, ಇಂದ್ರನೊಂದಿಗೂ ಇತರ ದೇವತೆಗಳೊಂದಿಗೂ ಒಂದೇ ರಥದಲ್ಲಿ ಕುಳಿತುಕೊಳ್ಳುವವನೂ ಆದ ಅಗ್ನಿಯನ್ನು ಋತ್ವಿಗಾದಿಗಳು ಪ್ರಥಮತಃ ಆಹವನೀಯ ಗಾರ್ಹಪತ್ಯ, ದಕ್ಷಿಣಾಗ್ನಿ ಎಂಬ ಮೂರು ಸ್ಥಾನಗಳಲ್ಲಿ ಪ್ರಜ್ವಲಿಸುವಂತೆ ಮಾಡಿದರು ಶ್ರೇಷ್ಠವಾದ ಕರ್ಮಕರ್ತನೂ, ದೇವತೆಗಳನ್ನು ಕರೆಯುವವನೂ ಆದ ಅಗ್ನಿಯು ದರ್ಭಾಸನಗಳ ಮೇಲೆ ಯಜ್ಞನಿರ್ವಹಣಕ್ಕಾಗಿ ಕುಳಿತಿದ್ದಾನೆ

## English Translation

The priests have first kindled, in three places, Agni, the banner of sacrifice, the family priest, (riding) in the same car with Indra and the gods: he, the performer of pious acts, the invoker (of the gods) has sat down on the sacred grass for the (celebration of the) rite.

॥ ಸಂಹಿತಾಪಾಠಃ ॥

ಅಸಂಮೃಷ್ಟೋ ಜಾಯಸೇ ಮಾತ್ರೋಃ ಶುಚಿರ್ಮಂದ್ರಃ ಕವಿರುದತಿಷ್ಠೋ ವಿವಸ್ವತಃ ।
ಘೃತೇನ ತ್ವಾವರ್ಧಯನ್ನಗ್ನ ಆಹುತ ಧೂಮಸ್ತೇ ಕೇತುರಭವದ್ದಿವಿ ಶ್ರಿತಃ ॥

॥ ಪದಪಾಠಃ ॥

ಅಸಂಽಮೃಷ್ಟಃ । ಜಾಯಸೇ । ಮಾತ್ರೋಃ । ಶುಚಿಃ । ಮಂದ್ರಃ । ಕವಿಃ । ಉತ್ । ಅತಿಷ್ಠಃ । ವಿವಸ್ವತಃ । ಘೃತೇನ । ತ್ವಾ । ಅವರ್ಧಯನ್ । ಅಗ್ನೇ । ಆಽಹುತ । ಧೂಮಃ । ತೇ । ಕೇತುಃ । ಅಭವತ್ । ದಿವಿ । ಶ್ರಿತಃ ॥ ೩ ॥

॥ ಸಾಯಣಭಾಷ್ಯಂ

ಹೇ ಅಗ್ನೇ ಮಾತ್ರೋರರಣ್ಯೋಃ । ಸ್ವಜನನನಿಮಿತ್ತಾದರಣೀ ಮಾತರಾವಿತ್ಯುಚ್ಯೇತೇ । ತಾಭ್ಯಾಮಸಂಮೃಷ್ಟೋಽಬಾಧಿತ ಏವ ಜಾಯಸೇ । ಪ್ರಾದುರ್ಭೂತೋ ಭವಸಿ । ಮಂದ್ರಃ ಸರ್ವೈಃ ಸ್ತುತ್ಯಃ

**ಕವಿಃ ಕ್ರಾಂತಃ ಸರ್ವತ್ರ ವ್ಯಾಪ್ತಃ । ಅಥವಾ ಮೇಧಾವೀ ಶುಚಿಸ್ತ್ವಂ ವಿವಸ್ವತೋಽಗ್ನಿಹೋತ್ರಾದ್ಯರ್ಥಂ ಗೃಹೇ ವಿಶೇಷೇಣ ವಸತೋ ಯಜಮಾನಾದುದತಿಷ್ಠಃ । ಉದಿತೋಽಭವಃ । ಪೂರ್ವೇ ಮಹರ್ಷಯಸ್ತ್ವಾ ತ್ವಾಂ ಘೃತೇನಾವರ್ಧಯನ್ । ವೃದ್ಧಿಮನಯನ್ ಹೇ ಆಹುತ ಆಹುತಿಭಿರ್ಹುತ ತೇ ತವ ದಿವ್ಯಂತರಿಕ್ಷೇ ಶ್ರಿತೋ ವ್ಯಾಪ್ತೋ ಧೂಮಃ ಕೇತುಃ ಪ್ರಜ್ಞಾಪಕೋಽಭವತ್ । ಅಗ್ನ್ಯನುಮಾಪಕತ್ವಾದ್ಧೂಮಸ್ಯ ॥ ಮಾತ್ರೋಃ । ಉದಾತ್ತಯಣೋ ಹಲ್ಪೂರ್ವಾದಿತಿ ವಿಭಕ್ತೇರುದಾತ್ತತ್ವಂ । ಮಂದ್ರಃ । ಮದಿ ಸ್ತುತಿಮೋದಮದಸ್ವಪ್ನಕಾಂತಿಗತಿಷು । ಅತ್ರ ಸ್ತುತ್ಯರ್ಥಾದಸ್ಮಾತ್ಸ್ಫಾಯಿತಂಚೀತ್ಯಾದಿನಾ ರಕ್ । ಅಂತೋದಾತ್ತಃ । ಕವಿಃ । ಕ್ರಮೇರಿನ್ ಸಾರ್ವಧಾತುಭ್ಯ ಇತೀನ್ಪ್ರತ್ಯಯಃ । ಬಾಹುಲಕತ್ವಾನ್ಮಕಾರಸ್ಯ ವತ್ವಂ ರೇಫಲೋಪಶ್ಚ । ವ್ಯತ್ಯಯೇನಾಂತೋದಾತ್ತತ್ವಂ । ಉದತಿಷ್ಠಃ । ಉತ್ಪೂರ್ವಾದೂರ್ಧ್ವಕರ್ಮವಾಚಿನಸ್ತಿಷ್ಠತೇರಾತ್ಮನೇಪದಾಭಾವಃ । ವಿವಸ್ವತಃ । ವಿಪೂರ್ವಾದ್ವಸತೇಃ ಸಂಪದಾದಿಲಕ್ಷಣೋ ಭಾವೇ ಕ್ವಿಪ್ । ತದಸ್ಯಾಸ್ತೀತಿ ಮತುಪ್ । ಮಾದುಪಧಾಯಾಶ್ಚೇತಿ ವತ್ವಂ । ಮತುಪೋಽನುದಾತ್ತತ್ವಾದ್ಧಾತುಸ್ವರಃ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಮಾತ್ರೋಃ**—ನಿನ್ನ ಜನನಿಯರಾದ ಅರಣಿಗಳಿಂದ । **ಅಸಂವೃಷ್ಟಃ**—ಅಬಾಧಿತನಾಗಿ । **ಜಾಯಸೇ**—ಉತ್ಪನ್ನನಾಗುತ್ತೀಯೆ । **ಮಂದ್ರಃ**—ಪ್ರಶಂಸಾರ್ಹನೂ । **ಕವಿಃ**—ಸರ್ವವ್ಯಾಪಕನೂ (ಪ್ರಾಜ್ಞನೂ) । **ಶುಚಿಃ**—ಶುದ್ಧನೂ ಆದ ನೀನು । **ವಿವಸ್ವತಃ**—ಯಜ್ಞಕರ್ತನ ಸಹಾಯದಿಂದ । **ಉದತಿಷ್ಠಃ**—ಉದ್ಭೂತನಾಗಿದ್ದೀಯೆ । **ತ್ವಾ**—ನಿನ್ನನ್ನು । **ಘೃತೇನ**—ಘೃತದಿಂದ । **ಅವರ್ಧಯನ್**—(ಋತ್ವಿಗಾದಿಗಳು)ಪ್ರವೃದ್ಧನಾಗುವಂತೆ ಮಾಡಿದ್ದಾರೆ। **ಆಹುತ**—ಆಹುತಿಗಳಿಂದ ಪೂಜಿತನಾದ ಅಗ್ನಿಯೇ। **ದಿವಿ**—ಅಂತರಿಕ್ಷದಲ್ಲಿ । **ಶ್ರಿತಃ**—ವ್ಯಾಪಿಸಿರುವ । **ಧೂಮಃ**—ಧೂಮವು । **ತೇ**—ನಿನಗೆ । **ಕೇತುಃ**—ಪ್ರಜ್ಞಾಪಕವಾದ ಧ್ವಜದಂತೆ । **ಅಭವತ್**—ಆಗಿದೆ ।

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನ ಜನನಿಯರಾದ ಅರಣಿಗಳಿಂದ ನೀನು ಅಬಾಧಿತನಾಗಿ ಉತ್ಪನ್ನನಾಗಿದ್ದೀಯೆ. ಪ್ರಶಂಸಾರ್ಹನೂ, ಪ್ರಾಜ್ಞನೂ, ಶುದ್ಧನೂ ಆದ ನೀನು ಯಜ್ಞಕರ್ತನ ಸಹಾಯದಿಂದ ಉದ್ಭೂತನಾಗಿದ್ದೀಯೆ. ಋತ್ವಿಗಾದಿಗಳು ನಿನ್ನನ್ನು ಘೃತದಿಂದ ಪ್ರವೃದ್ಧನಾಗುವಂತೆ ಮಾಡಿದ್ದಾರೆ ಆಹುತಿಗಳಿಂದ ಪೂಜಿತನಾದ ಎಲೈ ಅಗ್ನಿಯೇ, ಅಂತರಿಕ್ಷದಲ್ಲಿ ವ್ಯಾಪಿಸಿರುವ ಧೂಮವು ನಿನಗೆ ಪ್ರಜ್ಞಾಪಕವಾದ ಧ್ವಜದಂತಾಗಿದೆ.

## English Translation

You are born unobstructed of two mothers : pure, adorable, wise, you have sprung up from (the devotion of) the householder : they have augmented you with butter : Agni, to whom burnt-offerings are made, the smoke is your banner spread abroad in the sky.

ವಿಶೇಷವಿಷಯಗಳು

**ಮಾತ್ರೋಃ—ಅರಣ್ಯೋಃ । ಸ್ವಜನನನಿಮಿತ್ತತ್ವಾತ್ ಅರಣೀ ಮಾತರಾವಿತ್ಯುಚ್ಯೇತೇ ।** ಯಜ್ಞದಲ್ಲಿ ಅಗ್ನಿಯನ್ನು ಉತ್ಪನ್ನಮಾಡುವುದಕ್ಕಾಗಿ ಎರಡು ಮರದ ತುಂಡುಗಳನ್ನು ಉಪಯೋಗಿಸುವರು. ಕೆಳಗಡೆ ಭೂಮಿಯ ಮೇಲೆ ಅಗಲವಾದ ಒಂದು ಮರದ ತುಂಡನ್ನು ಇಟ್ಟು ಅದರಲ್ಲಿ ಸ್ವಲ್ಪ ಹಳ್ಳವನ್ನು ಮಾಡಿ ಆ ಹಳ್ಳದಲ್ಲಿ ಹತ್ತಿ, ತೆಂಗಿನಜುಂಗು, ತರಗಲೆ ಮೊಲಾದ ಸುಲಭವಾಗಿ ಹತ್ತಿಕೊಳ್ಳುವ ಚೆನ್ನಾಗಿ ಒಣಗಿದ ವಸ್ತುಗಳನ್ನಿಟ್ಟು ಉದ್ದವಾಗಿ ಕೋಲಿನಂತಿರುವ ಇನ್ನೊಂದು ಮರದ ತುಂಡನ್ನು ಆ ಹಳ್ಳದ ಮೇಲಿಟ್ಟು ಮೊಸರನ್ನು ಕಡೆಯುವಂತೆ ಕಡೆಯುವರು ಹೀಗೆ ಸ್ವಲ್ಪಕಾಲ ಕಡೆದ ಮೇಲೆ ಆ ತಿಕ್ಕಾಟದಿಂದ ಬೆಂಕಿಯ ಒಂದು ಕಿಡಿಯು ಉಂಟಾಗಿ ಸಮೀಪದಲ್ಲಿರುವ ಹತ್ತಿ ಮೊದಲಾದ ಒಣಗಿದ ಪದಾರ್ಥಕ್ಕೆ ತಗಲಿ ಹತ್ತಿಕೊಳ್ಳುವುದು ಅನಂತರ ಅದನ್ನು ಕಾಷ್ಠಾದಿಗಳಿಂದ ಚೆನ್ನಾಗಿ ಉರಿಯುವಂತೆ ಮಾಡಿ ಯಜ್ಞಶಾಲೆಯಲ್ಲಿರುವ ಉತ್ತರವೇದಿ ಎಂಬ ಸ್ಥಳಕ್ಕೆ ವಿಧ್ಯುಕ್ತವಾಗಿ ತೆಗೆದುಕೊಂಡುಹೋಗಿ ಅಲ್ಲಿ ಸ್ಥಾಪಿಸುವರು ಈ ಕರ್ಮಕ್ಕೆ ಅಗ್ನಿ ಮಥನವೆಂದು ಹೆಸರು ಯಜ್ಞದ ಪ್ರಾರಂಭಕಾಲದಲ್ಲಿ ನಡೆಯಬೇಕಾದ ಕಾರ್ಯಕಲಾಪಗಳಲ್ಲಿ ಈ ಮಥನ ಕ್ರಿಯೆಯು ಮುಖ್ಯವಾದುದು. ಮಥನಮಾಡಿದ ಸ್ಥಳದಿಂದ ಉತ್ತರವೇದಿಯ ಬಳಿಗೆ ಅಗ್ನಿಯನ್ನು ತೆಗೆದುಕೊಂಡು ಹೋಗುವ ಕಾರ್ಯಕ್ಕೆ ಅಗ್ನಿಪ್ರಣಯನವೆಂದು ಹೆಸರು ಈ ಕರ್ಮವನ್ನೂ ಮಂತ್ರಪೂರ್ವಕವಾಗಿಯೂ ವಿಧಿವತ್ತಾಗಿಯೂ ಮಾಡಬೇಕು ಐತರೇಯ ಬ್ರಾಹ್ಮಣದಲ್ಲಿ ಅಗ್ನಿಮಥನ ಮತ್ತು ಅಗ್ನಿಪ್ರಣಯನವೆಂಬ ಕರ್ಮಗಳನ್ನು ವಿಸ್ತಾರವಾಗಿ ಹೇಳಿದೆ ಅವುಗಳನು ಋ ಸಂ ಭಾಗ ೧೨ ರಲ್ಲಿ 384 ಮತ್ತು 541ನೇ ಪೇಜುಗಳಲ್ಲಿ ನಾವು ವಿಸ್ತಾರವಾಗಿ ಬರೆದಿರುವುದನ್ನು ನೋಡಿ ತಿಳಿಯಬಹುದು.

॥ ಸಂಹಿತಾಪಾಠಃ ॥

ಅಗ್ನಿರ್ನೋ ಯಜ್ಞಮುಪ ವೇತು ಸಾಧುಯಾಗ್ನಿಂ ನರೋ ವಿ ಭರಂತೇ
ಗೃಹೇಗೃಹೇ ।
ಅಗ್ನಿರ್ದೂತೋ ಅಭವದ್ಧವ್ಯವಾಹನೋಽಗ್ನಿಂ ವೃಣಾನಾ ವೃಣತೇ
ಕವಿಕ್ರತುಂ ॥ ೪ ॥

ಪದಪಾಠಃ

ಅಗ್ನಿಃ । ನಃ । ಯಜ್ಞಂ । ಉಪ । ವೇತು । ಸಾಧುಯಾ । ಅಗ್ನಿಂ । ನರಃ । ವಿ । ಭರಂತೇ ।
ಗೃಹೇಽಗೃಹೇ ।
ಅಗ್ನಿಃ । ದೂತಃ । ಅಭವತ್ । ಹವ್ಯಃವಾಹನಃ । ಅಗ್ನಿಂ । ವೃಣಾನಾಃ । ವೃಣತೇ । ಕವಿಃಕ್ರತುಂ ॥ ೪ ॥

॥ ಸಾಯಣಭಾಷ್ಯಂ ॥

**ಸಾಧುಯಾ ಸರ್ವಪುರುಷಾರ್ಥಾನಾಂ ಸಾಧಕೋಽಗ್ನಿರ್ನೋ ಯಜ್ಞಮಸ್ಮದೀಯಂ ಯಾಗಂ ಪ್ರತ್ಯುಪ ವೇತು । ಆಗಚ್ಛತು । ನರೋ ಮನುಷ್ಯಾ ಗೃಹೇ ಗೃಹೇಽನುಗೃಹಮಗ್ನಿಂ ವಿ ಭರಂತೇ । ವಿಹರಂತಿ । ವಿಹರಣಂ ಕುರ್ವಂತೀತ್ಯರ್ಥಃ । ಹವ್ಯವಾಹನೋ ಹವ್ಯಾನಾಂ ಹವಿಷಾಂ ವೋಢಾಗ್ನಿರ್ದೂತೋ ದೇವಾನಾಂ ದೂತೋಽಭವತ್ । ವೃಣಾನಾಃ ಸಂಭಜಮಾನಾಃ ಸಂತಃ ಕವಿಕ್ರತುಂ ಕ್ರಾಂತಯಜ್ಞಮಗ್ನಿಂ ವೃಣತೇ । ಸಂಭಜಂತೇ ॥ ಸಾಧುಯಾ । ಸುಪಾಂ ಸುಲುಗಿತ್ಯಾದಿನಾ ವಿಭಕ್ತೇರ್ಯಾದೇಶಃ ॥**

॥ ಪ್ರತಿಪದಾರ್ಥ ॥

**ಸಾಧುಯಾ**—ಇಷ್ಟಾರ್ಥಗಳನ್ನು ಸಾಧಿಸುವ । **ಅಗ್ನಿಃ**—ಅಗ್ನಿಯು । **ನಃ**—ನಮ್ಮ । **ಯಜ್ಞಂ**—ಯಾಗಕ್ಕೆ । **ಉಪ ವೇತು**—ದಯಮಾಡಲಿ । **ನರಃ**—ಯಜಮಾನರು । **ಗೃಹೇಗೃಹೇ**—ಪ್ರತಿಯೊಂದು ಯಜ್ಞ ಗೃಹದಲ್ಲಿಯೂ । **ಅಗ್ನಿಂ**—ಅಗ್ನಿಯನ್ನು । **ವಿ ಭರಂತೇ**—ವಿಶೇಷ ರೀತಿಯಲ್ಲಿ ಆದರಿಸುತ್ತಾರೆ । **ಹವ್ಯವಾಹನಃ**—ಹವಿಸ್ಸನ್ನು ವಹಿಸತಕ್ಕ । **ಅಗ್ನಿಃ**—ಅಗ್ನಿಯು । **ದೂತಃ**—ದೇವದೂತನಾಗಿ । **ಅಭವತ್**—ಆದನು । **ವೃಣಾನಾಃ**—ಅಗ್ನಿಯನ್ನು ಆದರಿಸುವವರು । **ಅಗ್ನಿಂ**—ಅಗ್ನಿಯನ್ನು । **ಕವಿಕ್ರತುಂ**—ಯಜ್ಞನಿರ್ವಾಹಕನೆಂದು । **ವೃಣತೇ**—ಪೂಜಿಸುತ್ತಾರೆ ।

॥ ಭಾವಾರ್ಥ ।

ಇಷ್ಟಾರ್ಥಗಳ ಸಾಧಕನಾದ ಅಗ್ನಿಯು ನಮ್ಮ ಯಾಗಕ್ಕೆ ದಯಮಾಡಲಿ ಯಜಮಾನರು ಪ್ರತಿಯೊಂದು ಯಜ್ಞಗೃಹದಲ್ಲಿಯೂ ಅಗ್ನಿಯನ್ನು ವಿಶೇಷ ರೀತಿಯಲ್ಲಿ ಆದರಿಸುತ್ತಾರೆ ಹವಿರ್ವಾಹಕನಾದ ಅಗ್ನಿಯು ದೇವದೂತನಾಗಿದ್ದಾನೆ. ಅಗ್ನಿಯನ್ನು ಆದರಿಸುವವರೆಲ್ಲಾ ಅವನನ್ನು ಯಜ್ಞನಿರ್ವಾಹಕನೆಂದೇ ಪೂಜಿಸುತ್ತಾರೆ

English Translation

May Agni, the fulfiller (of all desires), come to our sacrifice · men cherish Agni in every dwelling : Agni, the bearer of oblations, has become the messenger (of the gods) : those adoring Agni adore him as the accom plisher of the sacrifice.

॥ ಸಂಹಿತಾಪಾಠಃ ॥

ತುಭ್ಯೇದಮಗ್ನೇ ಮಧುಮತ್ತಮಂ ವಚಸ್ತುಭ್ಯಂ ಮನೀಷಾ ಇಯಮಸ್ತು ಶಂ ಹೃದೇ ।

ತ್ವಾಂ ಗಿರಃ ಸಿಂಧುಮಿವಾವನೀರ್ಮಹೀರಾ ಪೃಣಂತಿ ಶವಸಾ ವರ್ಧಯಂತಿ ಚ ॥ ೫ ॥

॥ ಪದಪಾಠಃ ॥

ತುಭ್ಯ । ಇದಂ । ಅಗ್ನೇ । ಮಧುಮತ್ऽತಮಂ । ವಚಃ । ತುಭ್ಯಂ । ಮನೀಷಾ । ಇಯಂ । ಅಸ್ತು । ಶಂ । ಹೃದೇ ।

ತ್ವಾಂ । ಗಿರಃ । ಸಿಂಧುಂऽಇವ । ಅವನೀಃ । ಮಹೀಃ । ಆ । ಪೃಣಂತಿ । ಶವಸಾ । ವರ್ಧಯಂತಿ । ಚ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತುಭ್ಯ ತುಭ್ಯಂ ತ್ವದರ್ಥಂ ಮಧುಮತ್ತಮಮತ್ಯಂತಂ ಮಧುರಮಿದಂ ವಚಃ ಕ್ರಿಯತೇ । ಹೃದೇ ಹೃದಿ ಶಂ ಸುಖಂ ಕುರ್ವತೀಯಂ ಮನೀಷಾ ಸ್ತುತಿಸ್ತುಭ್ಯಮಸ್ತು । ಗಿರಃ ಸ್ತುತಿರೂಪಾ ವಾಚಸ್ತ್ವಾಮಾ ಪೃಣಂತಿ । ಪೂರಯಂತಿ । ಶವಸಾ ಬಲೇನ ವರ್ಧಯಂತಿ ಚ । ಕಥಮಿವ । ಮಹೀರ್ಮಹತ್ಯೋಽವನೀರವನ್ಯೋ ನದ್ಯಃ ಸಿಂಧುಮಿವ ಸಮುದ್ರಮಿವ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ತುಭ್ಯ**—ನಿನ್ನನ್ನುದ್ದೇಶಿಸಿಯೇ । **ಮಧುಮತ್ತಮಂ**—ಅತ್ಯಂತ ಮಾಧುರ್ಯೋಪೇತವಾದ । **ಇದಂ ವಚಃ**—ಈ ಸ್ತುತಿಯು (ನಿರ್ಮಿತವಾಗುತ್ತದೆ) । **ತುಭ್ಯಂ**—ನಿನಗೆ । **ಹೃದೇ**—ಹೃದಯದಲ್ಲಿ । **ಇಯಂ ಮನೀಷಾ**—ಈ ಸ್ತುತಿಯು । **ಶಂ**—ಸುಖಕಾರಕವಾಗಿ । **ಅಸ್ತು**—ಆಗಿರಲಿ । **ಮಹೀಃ**—ಮಹತ್ಸ್ವರೂಪವುಳ್ಳ । **ಅವನೀಃ**—ನದಿಗಳು । **ಸಿಂಧುಮಿವ**—ಸಾಗರವನ್ನು ತುಂಬುವಂತೆ । **ಗಿರಃ**—ಈ ಸ್ತುತಿಗಳು **ತ್ವಾಂ**—ನಿನ್ನನ್ನು । **ಆ ಪೃಣಂತಿ**—ತುಂಬುತ್ತವೆ । **ಶವಸಾ**—ಬಲದೊಡನೆ । **ವರ್ಧಯಂತಿ ಚ**—ಪ್ರವೃದ್ಧನಾಗುವಂತೆಯೂ ಮಾಡುತ್ತವೆ ।

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನನ್ನುದ್ದೇಶಿಸಿಯೇ, ಅತ್ಯಂತ ಮಾಧುರ್ಯೋಪೇತವಾದ ಈ ಸ್ತುತಿಯು ನಿರ್ಮಿತವಾಗುತ್ತದೆ. ಈ ಸ್ತುತಿಯು ನಿನ್ನ ಹೃದಯದಲ್ಲಾನಂದವನ್ನುಂಟುಮಾಡಲಿ. ಮಹತ್ತಾದ ನದಿಗಳು ನೀರಿನಿಂದ ಸಾಗರವನ್ನು ತುಂಬುವಂತೆ ಈ ಸ್ತುತಿಗಳು ನಿನ್ನನ್ನು ಸಂತೋಷದಿಂದ ತುಂಬುತ್ತವೆ ಮತ್ತು ನೀನು ಬಲದೊಡನೆ ವೃದ್ಧನಾಗುವಂತೆಯೂ ಮಾಡುತ್ತವೆ

## English Translation

To you, Agni, this most sweet speech (is addressed); may this praise be gratification to your heart pious hymns fill you, and augment you with vigour, as large rivers (replenish) the sea.

॥ ಸಂಹಿತಾಪಾಠಃ ॥

ತ್ವಾಮಗ್ನೇ ಅಂಗಿರಸೋ ಗುಹಾ ಹಿತಮನ್ವವಿಂದಞ್ಛಿಶ್ರಿಯಾಣಂ ವನೇ-ವನೇ ।
ಸ ಜಾಯಸೇ ಮಥ್ಯಮಾನಃ ಸಹೋ ಮಹತ್ತ್ವಾಮಾಹುಃ ಸಹಸಸ್ಪುತ್ರ-ಮಂಗಿರಃ ॥ ೬ ॥

॥ ಪದಪಾಠಃ ॥

ತ್ವಾಂ । ಅಗ್ನೇ । ಅಂಗಿರಸಃ । ಗುಹಾ । ಹಿತಂ । ಅನು । ಅವಿಂದನ್ । ಶಿಶ್ರಿಯಾಣಂ । ವನೇऽವನೇ ।
ಸಃ । ಜಾಯಸೇ । ಮಥ್ಯಮಾನಃ । ಸಹಃ । ಮಹತ್ । ತ್ವಾಂ । ಆಹುಃ । ಸಹಸಃ । ಪುತ್ರಂ । ಅಂಗಿರಃ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇऽಂಗಿರಸ ಋಷಯೋ ಗುಹಾ ಗುಹಾಯಾಂ ಹಿತಂ ನಿಹಿತಂ ನಿಗೂಢಂ ವನೇ ವನೇ ವೃಕ್ಷೇ ವೃಕ್ಷೇ ಶಿಶ್ರಿಯಾಣಮಾಶ್ರಿತಂ ತ್ವಾಮನ್ವವಿಂದನ್ । ಅಲಭಂತ । ಮಹಾನ್ಮಹತಾ ಸಹಃ ಸಹಸಾ ಬಲೇನ ಯುಕ್ತಃ ಸ ತ್ವಂ ಮಥ್ಯಮಾನೋ ಜಾಯಸೇ । ಹೇ ಅಂಗಿರೋऽಂಗಿರಸಾಂ ಪ್ರಕೃತಿಭೂತ ತ್ವಾಂ ಸಹಸಃ ಪುತ್ರಮಾಹುಃ ॥ ಶಿಶ್ರಿಯಾಣಂ । ಶ್ರಿಞ್ ಸೇವಾಯಾಂ । ಲಿಟಃ ಕಾನಚ್ । ಶಪಃ ಶ್ಲುಃ । ಶ್ಲಾವಿತಿ ದ್ವಿರ್ವಚನಂ । ಇಯಙಾದೇಶಃ । ಚಿತ್ತ್ವಾದಂತೋದಾತ್ತಃ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಅಂಗಿರಸಃ**—ಅಂಗಿರಾಋಷಿಗಳು । **ಗುಹಾ**—ಗುಹೆಯಲ್ಲಿ । **ಹಿತಂ**—ಅಂತರ್ಗತನಾಗಿದ್ದವನೂ । **ವನೇವನೇ**—ಪ್ರತಿವೃಕ್ಷದಲ್ಲಿಯೂ । **ಶಿಶ್ರಿಯಾಣಂ**—ಆಶ್ರಯವನ್ನು ಪಡೆದಿದ್ದವನೂ ಆದ । **ತ್ವಾಂ**—ನಿನ್ನನ್ನು । **ಅನ್ವವಿಂದನ್**—ಪಡೆದರು । **ಮಹತ್**—ಅತ್ಯಧಿಕವಾದ । **ಸಹಃ**—ಶಕ್ತಿಯಿಂದ ಕೂಡಿದ । **ಸಃ**—ನೀನು । **ಮಥ್ಯಮಾನಃ**—ಮಥನಕ್ರಿಯೆಯಿಂದ । **ಜಾಯಸೇ**—ಉತ್ಪನ್ನನಾಗುತ್ತೀಯೆ । **ಅಂಗಿರಃ**—ಅಂಗಿರಾರೂಪನೇ ಆದ ಎಲೈ ಅಗ್ನಿಯೇ । **ತ್ವಾಂ**—ನಿನ್ನನ್ನು । **ಸಹಸಃ ಪುತ್ರಂ**—ಶಕ್ತಿಪುತ್ರನೆಂಬುದಾಗಿ । **ಆಹುಃ**—ಕರೆಯುತ್ತಾರೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಗುಹೆಯಲ್ಲಿ ಅಂತರ್ಗತನಾಗಿದ್ದವನೂ, ಪ್ರತಿವೃಕ್ಷದಲ್ಲಿಯೂ ಆಶ್ರಯವನ್ನು ಪಡೆದಿದ್ದವನೂ ಆದ ನಿನ್ನನ್ನು ಅಂಗಿರಾಋಷಿಗಳು ತಮ್ಮ ಪ್ರಯತ್ನದ ಫಲವಾಗಿ ಪಡೆದರು. ಅತ್ಯಧಿಕವಾದ ಶಕ್ತಿಯಿಂದ ಕೂಡಿದ ನೀನು ಮಥನಕ್ರಿಯೆಯಿಂದ ಉತ್ಪನ್ನನಾಗುತ್ತೀಯೆ. ಅಂಗಿರಾರೂಪನೇ ಆದ ಎಲೈ ಅಗ್ನಿಯೆ ನಿನ್ನನ್ನು ಶಕ್ತಿಪುತ್ರನೆಂದೇ ಕರೆಯುತ್ತಾರೆ.

## English Translation

The Angirasas discovered you, Agni, hidden in secret, and taking refuge from wood to wood . you are generated, being churned with great force; therefore they have called you, Angiras, the son of strength.

॥ ವಿಶೇಷವಿಷಯಗಳು ॥

**ತ್ವಾಂ ಸಹಸಃ ಪುತ್ರಂ ಆಹುಃ**—ಅರಣಿಗಳಲ್ಲಿ ಕಡೆದು ಅಗ್ನಿಯನ್ನು ಉತ್ಪನ್ನಮಾಡುವಾಗ ಕಡೆಯುವುದಕ್ಕಾಗಿ ಬಹಳ ಬಲವನ್ನು ಉಪಯೋಗಿಸಬೇಕಾಗುವುದು ಈರೀತಿ ಬಲಪ್ರಯೋಗದಿಂದ ಅಗ್ನಿಯು ಉತ್ಪನ್ನವಾಗುವುದರಿಂದ ಅಗ್ನಿಯನ್ನು **ಸಹಸಃ ಪುತ್ರಂ** ಬಲದ ಪುತ್ರನು ಎಂದರೆ ಬಲಪ್ರಯೋಗದಿಂದ ಉತ್ಪನ್ನನಾದವನು ಎಂದು ಹೇಳುವುದು ಋಗ್ವೇದದಲ್ಲಿ ವಿಶೇಷವಾಗಿ ರೂಢಿಯಲ್ಲಿದೆ ಅಗ್ನಿಮಥನವಿಚಾರವಾಗಿ ಈ ಸೂಕ್ತದ ೩ನೆಯ ಋಕ್ಕಿನ ವಿಶೇಷಯಗಳಲ್ಲಿ ಬರೆದಿರುವುದನ್ನು (37 ನೇ ಪೇಜು) ನೋಡಿ.

## ಹನ್ನೆರಡನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಪ್ರಾಗ್ನಯೇ ಬೃಹತ ಇತಿ ಷಡೃಚಂ ದ್ವಾದಶಂ ಸೂಕ್ತಂ ಸುತಂಭರಸ್ಯಾರ್ಷಂ ತ್ರೈಷ್ಟುಭಮಾಗ್ನೇಯಂ । ಪ್ರಾಗ್ನಯ ಇತ್ಯನುಕ್ರಾಂತಂ ॥ ಪ್ರಾತರನುವಾಕ ಆಗ್ನೇಯೇ ಕ್ರತೌ ತ್ರೈಷ್ಟುಭೇ ಛಂದಸ್ಯಾಶ್ವಿನಶಸ್ತ್ರೇ ಚೇದಂ ಸೂಕ್ತಂ ವಿನಿಯುಕ್ತಂ । ಸೂತ್ರಿತಂ ಚ । ಪ್ರಾಗ್ನಯೇ ಬೃಹತೇ ಪ್ರ ವೇಧಸೇ । ಆ. ೪–೧೩ । ಇತಿ ॥**

ಅನುವಾದವು—**ಪ್ರಾಗ್ನಯೇ ಬೃಹತೇ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹನ್ನೆರಡನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಸುತಂಭರ ಆತ್ರೇಯಃ ಎಂಬುವನು ಋಷಿಯು; ಅಗ್ನಿಯು ದೇವತೆಯು, ತ್ರಿಷ್ಟುಪ್ ಛಂದಸ್ಸು, ಅನುಕ್ರಮಣಿಕೆಯಲ್ಲಿ—**ಪ್ರಾಗ್ನಯೇ** ಎಂದು ಮೊದಲಾಗಿ ಹೇಳಿರುವುದು ಪ್ರಾತರನುವಾಕಮಂತ್ರಪಠನಕಾಲದಲ್ಲಿ ಆಗ್ನೇಯಕ್ರತು ಸಂಬಂಧವಾದ ತ್ರಿಷ್ಟುಪ್ ಛಂದಸ್ಸಿನ ಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಪ್ರಾಗ್ನಯೇ ಬೃಹತೇ ಪ್ರ ವೇಧಸೇ ಕವಯೇ** ಎಂಬ ಸೂತ್ರದಿಂದ (ಆ. ೪–೧೩) ವಿವೃತವಾಗಿರುವುದು.

## ಸೂಕ್ತ—೧೨

॥ ಮಂಡಲ—೫ ॥ ಅನುವಾಕ—೧ ॥ ಸೂಕ್ತ—೧೨ ॥
॥ ಅಷ್ಟಕ—೪ ॥ ಅಧ್ಯಾಯ— ೧ ॥ ವರ್ಗ—೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬
॥ ಋಷಿಃ—ಸುತಂಭರ ಆತ್ರೇಯಃ ॥
॥ ದೇವತಾ—ಅಗ್ನಿಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಪ್ರಾಗ್ನಯೇ ಬೃಹತೇ ಯಜ್ಞಿಯಾಯ ಋತಸ್ಯ ವೃಷ್ಣೇ ಅಸುರಾಯ ಮನ್ಮ।
ಘೃತಂ ನ ಯಜ್ಞ ಆಸ್ಯೇ೩ ಸುಪೂತಂ ಗಿರಂ ಭರೇ ವೃಷಭಾಯ ಪ್ರತೀಚೀಂ ॥ ೧ ॥

॥ ಪದಪಾಠಃ ॥

ಪ್ರ । ಅಗ್ನಯೇ । ಬೃಹತೇ । ಯಜ್ಞಿಯಾಯ । ಋತಸ್ಯ । ವೃಷ್ಣೇ । ಅಸುರಾಯ । ಮನ್ಮ ।
ಘೃತಂ । ನ । ಯಜ್ಞೇ । ಆಸ್ಯೇ । ಸುऽಪೂತಂ । ಗಿರಂ । ಭರೇ । ವೃಷಭಾಯ । ಪ್ರತೀಚೀಂ ॥ ೧ ॥

॥ ಸಾಯಣಭಾಷ್ಯಂ ॥

**ಬೃಹತೇ ಸಾಮರ್ಥ್ಯಾತಿಶಯೇನ ಮಹತೇ ಯಜ್ಞಿಯಾಯ ಯಜ್ಞಾರ್ಹಾಯ ಋತಸ್ಯೋದಕಸ್ಯ ವೃಷ್ಣೇ ವರ್ಷಿತ್ರೇ । ಋತಮಿತ್ಯುದಕನಾಮಸು ಪಾಠಾತ್ । ಅಸುರಾಯ ಬಲವತೇ ॥ ಅಸೇರೌಣಾದಿಕ ಉರನ್ಪ್ರತ್ಯಯಃ ॥ ವೃಷಭಾಯ ಕಾಮಾನಾಂ ವರ್ಷಿತ್ರೇಽಗ್ನಯೇ ಮನ್ಮ ಜ್ಞಾನಸಾಧನಂ ಪ್ರತೀಚೀಮಭಿಮುಖೀಂ ಗಿರಂ ಸ್ತುತಿರೂಪಾಂ ವಾಚಂ ಪ್ರ ಭರೇ । ಪ್ರಣಯಾಮಿ । ಕಥಮಿವ । ಸುಪೂತಂ ಸಮ್ಯಕ್ಸಂಸ್ಕೃತಮಾಸ್ಯೇ ಪ್ರಹುತಂ ಯಜ್ಞೇ ಘೃತಂ ನ ಘೃತಮಿವ । ಆಸ್ಯೇ ಪ್ರಹುತಂ ಘೃತಂ ಯಥಾ ಪ್ರೀತಿಕರಂ ಭವತಿ ತಥಾ ಪ್ರೀತಿಕರೀಂ ಸ್ತುತಿಮಿತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಯಜ್ಞೇ**—ಯಜ್ಞಕಾಲದಲ್ಲಿ । **ಸುಪೂತಂ**—ಪರಿಶುದ್ಧವಾದ । **ಘೃತಂ**—ಆಜ್ಯಧಾರೆಯನ್ನು । **ಆಸ್ಯೇನ**—ಅಗ್ನಿಯ ವದನದಲ್ಲರ್ಪಿಸುವಂತೆ । **ಬೃಹತೇ**—ಮಹತ್ತ್ವರೂಪವುಳ್ಳವನೂ । **ಯಜ್ಞಿಯಾಯ**—ಯಜ್ಞಾರ್ಹನೂ ।

**ಋತಸ್ಯ**—ಉದಕಕ್ಕೆ । **ವೃಷ್ಣೇ**—ವರ್ಷಕಾರಕನೂ (ವೃಷ್ಟಿಯನ್ನು ಸುರಿಸುವವನೂ) । **ಅಸುರಾಯ**—ಶಕ್ತಿಯುತನೂ । **ವೃಷಭಾಯ**—ಕಾಮವರ್ಷಕನೂ ಆದ । **ಅಗ್ನಯೇ**—ಅಗ್ನಿಯನ್ನುದ್ದೇಶಿಸಿ । **ಮನ್ಮ**—ಮನನ ಸಾಧಕವಾದುದೂ । **ಪ್ರತೀಚೀಂ**—ಅವನನ್ನು ಎದುರುಗೊಳ್ಳುವುದೂ ಆದ । **ಗಿರಂ**—ಸ್ತುತಿಯನ್ನು **ಪ್ರಭರೇ**—ಅರ್ಪಿಸುತ್ತೇನೆ

॥ ಭಾವಾರ್ಥ ॥

ಯಜ್ಞಕಾಲದಲ್ಲಿ ಪರಿಶುದ್ಧವಾದ ಆಜ್ಯಧಾರೆಯನ್ನು ಅಗ್ನಿಯವದನದಲ್ಲರ್ಪಿಸುವಂತೆ ಮಹತ್ತ್ವರೂಪವುಳ್ಳವನೂ ಯಜ್ಞಾರ್ಹನೂ, ವೃಷ್ಟಿಕಾರಕನೂ, ಶಕ್ತಿಯುತನೂ, ಕಾಮವರ್ಷಕನೂ ಆದ ಅಗ್ನಿಯನ್ನುದ್ದೇಶಿಸಿ ಮನನ ಸಾಧಕವಾದುದೂ, ಅವನನ್ನು ಎದುರುಗೊಳ್ಳುವುದೂ ಆದ ಸ್ತುತಿಯನ್ನರ್ಪಿಸುತ್ತೇನೆ.

## English Translation

I offer to the great, the adorable Agni. the rainer of water, the vigorous, the showerer (of benefits), the present acceptable praise, like well-purified butter (poured) at sacrifices into his mouth.

ವಿಶೇಷವಿಷಯಗಳು

**ಬೃಹತೇ—ಸಾಮರ್ಥ್ಯಾತಿಶಯೇನ ಮಹತೇ** । ಅಗ್ನಿಯ ಸಾಮರ್ಥ್ಯಗಳು ಬಹಳವಾಗಿರುವುವು ತನ್ನನ್ನು ಭಜಿಸುವವರಿಗೆ ಇಷ್ಟಾರ್ಥಗಳನ್ನು ಕೊಡುವ ಶಕ್ತಿಯೂ, ಶತ್ರುಗಳನ್ನು ನಾಶಮಾಡುವ ಶಕ್ತಿಯೂ, ಯಜಮಾನರು ತನ್ನಲ್ಲಿ ಅರ್ಪಿಸಿದ ಹವಿರಾದಿ ದ್ರವ್ಯಗಳನ್ನುಉದ್ದಿಷ್ಟರಾದ ದೇವತೆಗಳಿಗೆ ಒಯ್ಯುವ ಶಕ್ತಿಯೂ, ಇನ್ನೂ ಅನೇಕವಿಧವಾದ ಶಕ್ತಿಸಾಮರ್ಥ್ಯಗಳು ಅಗ್ನಿಗೆ ಇರುವುದರಿಂದ ಅಗ್ನಿಯು ಅನೇಕ ಸಾಮರ್ಥ್ಯಾತಿಶಯವುಳ್ಳವನು ಎಂದು ಅಗ್ನಿಯ ಮಹತ್ತ್ವರೂಪವು ಇಲ್ಲಿ ವಿವೃತವಾಗಿದೆ

**ಅಸುರಾಯ**—ಅಸುರ ಶಬ್ದಕ್ಕೆ ಅನೇಕಾರ್ಥಗಳಿರುವುವು. ಇಲ್ಲಿ **ಅಸುರಾಯ—ಬಲವತೇ** । ಬಲವೆಂಬ ಅರ್ಥದಲ್ಲಿ ಈ ಶಬ್ದದ ಪ್ರಯೋಗವಿರುವುದು

**ಪ್ರತೀಚೀಂ**—ಈ ಶಬ್ದವು **ಗಿರಂ** ಎಂಬ ಶಬ್ದಕ್ಕೆ ವಿಶೇಷಣವಾಗಿರುವುದು ಅಗ್ನಿಯ ಅಭಿಮುಖವಾಗಿ (ಎದುರಿಗೆ) ನಿಂತು ಸ್ತುತಿವಾಕ್ಯವನ್ನು ಪಠಿಸುತ್ತೇನೆಂದು ಮುಖ್ಯಾಭಿಪ್ರಾಯವು

**ಸುಪೂತಂ ಘೃತಂ ಆಸ್ಯೇನ**—ಅಗ್ನಿಯ ಅಭಿಮುಖವಾಗಿ ನಿಂತು ಸ್ತೋತ್ರವನ್ನು ಪಠಿಸುವ ವಿಷಯದಲ್ಲಿ ಇಲ್ಲಿ ಒಂದು ದೃಷ್ಟಾಂತವು ಉಕ್ತವಾಗಿದೆ ಅಗ್ನಿಯಲ್ಲಿ ಆಜ್ಯ (ಘೃತ)ವನ್ನು ಹೋಮಮಾಡಿದರೆ ಅದು ಜಾಜ್ವಲ್ಯಮಾನವಾಗಿ ಪ್ರಕಾಶಿಸುತ್ತಾ ಉರಿಯುವುದು ಅನುಭವವೇದ್ಯವಾಗಿದೆ ಎಂದರೆ ಆಜ್ಯಧಾರೆಯಿಂದ ಅಗ್ನಿಯು ಸಂತುಷ್ಟನಾಗುವನೆಂಬ ಅಭಿಪ್ರಾಯವು ಸೂಚಿತವಾಗಿದೆ. ಆದ್ದರಿಂದ ಅಗ್ನಿಯ ಮುಖದಲ್ಲಿ ಎಂದರೆ ಜ್ವಾಲೆಗಳಿಂದ ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ ಘೃತ(ತುಪ್ಪ)ವನ್ನು ಹೋಮಮಾಡಿದರೆ ಅಗ್ನಿಯು ಯಾವರೀತಿ ಪ್ರೀತನಾಗುತ್ತಾನೆಯೋ ಆರೀತಿ ನಾನು (ಋಷಿಯು) ಅಗ್ನಿಯ ಅಭಿಮುಖವಾಗಿ ನಿಂತು ಪಠಿಸುವ ಸ್ತುತಿರೂಪವಾದ ವಾಕ್ಕುಗಳಿಂದ ಅಗ್ನಿಯು ಸಂತೋಷಗೊಳ್ಳಲಿ ಎಂದು ಋಷಿಯು ವರ್ಣಿಸಿದ್ದಾನೆ.

ಸಂಹಿತಾಪಾಠಃ

**ಋತಂ ಚಿಕಿತ್ವ ಋತಮಿಚ್ಚಿಕಿದ್ಧ್ಯೃತಸ್ಯ ಧಾರಾ ಅನು ತೃಂಧಿ ಪೂರ್ವೀಃ ।**
**ನಾಹಂ ಯಾತುಂ ಸಹಸಾ ನ ದ್ವಯೇನ ಋತಂ ಸಪಾಮ್ಯರುಷಸ್ಯ ವೃಷ್ಣಃ॥**

॥ ಪದಪಾಠಃ ॥

**ಋತಂ । ಚಿಕಿತ್ವಃ । ಋತಂ । ಇತ್ । ಚಿಕಿದ್ಧಿ । ಋತಸ್ಯ । ಧಾರಾಃ । ಅನು । ತೃಂಧಿ । ಪೂರ್ವೀಃ ।**
**ನ । ಅಹಂ । ಯಾತುಂ । ಸಹಸಾ । ನ । ದ್ವಯೇನ । ಋತಂ । ಸಪಾಮಿ । ಅರುಷಸ್ಯ । ವೃಷ್ಣಃ ॥ ೨ ॥**

॥ ಸಾಯಣಭಾಷ್ಯಂ ॥

**ಋತಂ ಸ್ತೋತ್ರಂ ಹೇ ಚಿಕಿತ್ವೋ ಜಾನನ್ನಗ್ನೇ ತ್ವಂ ಋತಂ ಮಯಾ ಕ್ರಿಯಮಾಣಮಿದಂ ಸ್ತೋತ್ರಂ ಚಿಕಿದ್ಧಿ । ಜಾನೀಹಿ ॥ ಕಿತ ಜ್ಞಾನೇ । ಜುಹೋತ್ಯಾದಿಃ । ಲೋಟಿ ರೂಪಂ । ಇದಿತಿ ಪೂರಣಃ । ಋತಮಿತಿ ಪದಸ್ಯ ಪರಸ್ಮಿನ್ನಾಮಂತ್ರಿತೇ ವಿದ್ಯಮಾನೇಽಪಿ ಛಾಂದಸತ್ವಾತ್ಪರಾಂಗವದ್ಭಾವಾಭಾವಃ॥ ಕಿಂಚ ಪೂರ್ವೀರ್ಬಹ್ವೀರೃತಸ್ಯೋದಕಸ್ಯ ಧಾರಾಸ್ತಸ್ಯ ಪೋಷಣಾರ್ಥಮುತ್ಪಾದಯಿತಮನು ತೃಂಧಿ । ಮೇಘಾನನುವಿಧ್ಯ । ಸಹಸಾ ಬಲೇನ ಯುಕ್ತೋಽಹಂ ಯಾತುಂ ಕರ್ಮಣಾಂ ನಾಶಕರೀಂ ಹಿಂಸಾಂ ನ ಸಪಾಮಿ । ನ ಸ್ಪೃಶಾಮಿ । ನ ಕರೋಮೀತಿ ಯಾವತ್ । ದ್ವಯೇನ ಚ ಸತ್ಯಾನೃತಾಭ್ಯಾಂ ಯತ್ಕಿಂಚಿದವೈದಿಕಂ ಕೃತ್ಯಂ ನ ಸಪಾಮಿ ॥ ಷಪ ಸಮವಾಯ ಇತಿ ಧಾತುಃ ॥ ಕಿಂತು ಅರುಷಸ್ಯ ರೋಚಮಾನಸ್ಯ ವೃಷ್ಣಃ ಕಾಮಾನಾಂ ವರ್ಷಿತುಸ್ತವ ಋತಂ ಸ್ತೋತ್ರಮೇವ ಸಪಾಮಿ ॥**

॥ ಪ್ರತಿಪದಾರ್ಥ ॥

**ಋತಂ**—ನನ್ನ ಸ್ತುತಿಯನ್ನು । **ಚಿಕಿತ್ವಃ**—ಅರಿಯುವ ಎಲೈ ಅಗ್ನಿಯೇ । **ಋತಂ**—ನನ್ನಿಂದ ನಿರ್ಮಿತವಾಗಿರುವ ಈ ಸ್ತುತಿಯನ್ನು । **ಚಿಕಿದ್ಧಿ**—ಪೂರ್ಣವಾಗಿ ಪ್ರಶಂಸಿಸು । **ಪೂರ್ವೀಃ**—ಅನೇಕವಾಗಿ । **ಋತಸ್ಯ**—ಉದಕದ । **ಧಾರಾಃ**—ಧಾರೆಗಳನ್ನು । **ಅನು ತೃಂಧಿ**—(ಮೇಘದಿಂದ) ಸುರಿಯುವಂತೆ ಮಾಡು । **ಸಹಸಾ**—ಶಕ್ತಿಯುತನಾಗಿ । **ಅಹಂ**—ನಾನು । **ಯಾತುಂ**—ಕರ್ಮಕ್ಕೆ ವಿಘ್ನಮಾಡುವ ಕಾರ್ಯವನ್ನು । **ನ ಸಪಾಮಿ**—ಆಚರಿಸುವುದಿಲ್ಲ । **ದ್ವಯೇನ**—ಸತ್ಯದಿಂದಾಗಲಿ ಅಥವಾ ಅಸತ್ಯದಿಂದಾಗಲಿ **ನ**—ತೊಂದರೆಗೊಳಿಸುವುದಿಲ್ಲ (ಆದರೆ) । **ಅರುಷಸ್ಯ**—ಆರೋಚಕವಾದ ವರ್ಣವುಳ್ಳವನೂ । **ವೃಷ್ಣಃ**—ಕಾಮವರ್ಷಕನೂ ಆದ ನಿನ್ನ । **ಋತಂ**—ಸ್ತುತಿಯನ್ನೇ (ಆಚರಿಸುತ್ತೇನೆ)

॥ ಭಾವಾರ್ಥ ॥

ನನ್ನಸ್ತುತಿಯ ವೈಶಿಷ್ಟ್ಯವನ್ನು ಅರಿಯತಕ್ಕ ಎಲೈ ಅಗ್ನಿಯೇ, ನನ್ನಿಂದ ನಿರ್ಮಿತವಾಗಿರುವ ಈ ಸ್ತುತಿಯನ್ನು ಪ್ರಶಂಸಿಸು. ಅನೇಕವಾಗಿ ಉದಕದ ಧಾರೆಗಳನ್ನು ಮೇಘದಿಂದ ಸುರಿಯುವಂತೆ ಮಾಡು. ನಾನು ನನ್ನ ಬಲದ

ಅಭಿಮಾನದಿಂದ ಕರ್ಮಕ್ಕೆ ವಿಘ್ನವನ್ನಾಚರಿಸುವುದಿಲ್ಲ ಸತ್ಯದಿಂದಾಗಲಿ ಅಥವಾ ಅಸತ್ಯದಿಂದಾಗಲಿ, ಕರ್ಮಕ್ಕೆ ತೊಂದರೆಗೊಳಿಸುವುದಿಲ್ಲ. ಆದರೆ, ಆರೋಚಕವಾದ ವರ್ಣವುಳ್ಳನನೂ, ಕಾಮವರ್ಷಕನೂ ಆದ ನಿನ್ನ ಸ್ತುತಿಯನ್ನೇ ನಿರ್ಮಿಸಿ ಪಠಿಸುತ್ತೇನೆ

## English Translation

Agni, who know (the purpose of) the sacrifice, assent to this rite: be favourable to the copious showers of water: (endowed) with strength, (I undertake) not (to obstruct) sacred acts, nor adjure the rite with both (truth and untruth), but (repeat the praise) of the resplendent showerer (of benefits).

### ವಿಶೇಷವಿಷಯಗಳು

ಈ ಋಕ್ಕಿನ ಅರ್ಥವು ಅಷ್ಟು ವಿಶದವಾಗಿಲ್ಲ. ಅರ್ಥವು ಸ್ಪಷ್ಟವಾಗುವುದಕ್ಕಾಗಿ ಅನೇಕ ಪದಗಳನ್ನು ಅಧ್ಯಾಹಾರಮಾಡಿ ಒಂದು ನಿರ್ದಿಷ್ಟವಾದ ಅಭಿಪ್ರಾಯವು ವ್ಯಕ್ತವಾಗುವಂತೆ ಪ್ರಯತ್ನಿಸಲಾಗಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ವಿವರಿಸಿದ್ದೇವೆ

**ಋತಂ**—ಈ ಋಕ್ಕಿನಲ್ಲಿ ಈ ಶಬ್ದವು ಮೂರಾವರ್ತಿ ಪಠಿತವಾಗಿದೆ. ಈ ಋತಶಬ್ದಕ್ಕೆ ಸಾಯಣರು ನನ್ನಿಂದ (ಋಷಿಯಿಂದ) ಮಾಡಲ್ಪಡುವ ಈ ಸ್ತೋತ್ರವನ್ನು ಎಂಬರ್ಥವನ್ನು ಹೇಳಿದ್ದಾರೆ ಋತಸ್ಯ ಎಂಬ ಶಬ್ದಕ್ಕೆ ಉದಕಸ್ಯ ಉದಕಗಳ ಎಂಬರ್ಥವನ್ನು ಹೇಳಿದ್ದಾರೆ. ಏಕೆಂದರೆ **ಋತಸ್ಯ ಧಾರಾಃ** ಎಂಬಲ್ಲಿ **ಧಾರಾಃ** ಜಲಧಾರೆಯು ಎಂಬ ಶಬ್ದ ಪ್ರಯೋಗವು ಋತಸ್ಯ ಎಂಬ ಶಬ್ದಕ್ಕೆ ಉದಕವನ್ನು (ಅಥವಾ ಘೃತವನ್ನು ?) ಎಂಬರ್ಥವನ್ನು ಸೂಚಿಸುವುದಾಗಿದೆ.

**ಯಾತುಂ—ಕರ್ಮಣಾಂ ನಾಶಕರೀಂ ಹಿಂಸಾಂ** । ಯಜ್ಞಕರ್ಮಕ್ಕೆ ವಿಘ್ನವನ್ನುಂಟುಮಾಡುವ ಹಿಂಸೆಯನ್ನು ಎಂದು ಅರ್ಥವನ್ನು ಹೊಂದಿಸಿದ್ದಾರೆ

**ದ್ವಯೇನ**—ಇಲ್ಲಿಯೂ ಸಹ ಸತ್ಯ, ಅನೃತ ಎಂಬ ಎರಡು ವಿಧ ಕರ್ಮವೆಂಬ ವಿವರಣೆಯು ಉಕ್ತವಾಗಿದೆ

---

॥ ಸಂಹಿತಾಪಾಠಃ ॥

**ಕಯಾ ನೋ ಅಗ್ನ ಋತಯನ್ನೃತೇನ ಭುವೋ ನವೇದಾ ಉಚಥಸ್ಯ ನವ್ಯಃ ।**
**ವೇದಾ ಮೇ ದೇವ ಋತುಪಾ ಋತೂನಾಂ ನಾಹಂ ಪತಿಂ ಸನಿತುರಸ್ಯ ರಾಯಃ ॥ ೩ ॥**

॥ ಪದಪಾಠಃ ॥

**ಕಯಾ । ನಃ । ಅಗ್ನೇ । ಋತಯನ್ । ಋತೇನ । ಭುವಃ । ನವೇದಾಃ । ಉಚಥಸ್ಯ । ನವ್ಯಃ ।**
**ವೇದ । ಮೇ । ದೇವಃ । ಋತುಪಾಃ । ಋತೂನಾಂ । ನ । ಅಹಂ । ಪತಿಂ । ಸನಿತುಃ । ಅಸ್ಯ ।**
**ರಾಯಃ ॥ ೩ ॥**

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಋತಯನ್ ಸರ್ವಪ್ರಾಣಿನಾಂ ಜೀವನಹೇತುಕಮುದಕಂ ಕುರ್ವನ್ ಕಯಾ ಕೇನಾಪ್ಯೃತೇನ ಸತ್ಯೇನ ಕ್ರಿಯಮಾಣೇನ ಕರ್ಮಣಾ ನ ಉಚಥಸ್ಯಾಸ್ಮದೀಯಸ್ಯ ಸ್ತೋತ್ರಸ್ಯ ನವೇದಾ ಜ್ಞಾತಾ ಭುವಃ । ಭವೇಃ । ನವ್ಯಃ ಸ್ತುತ್ಯ ಋತೂನಾಂ ಋತೂಪಾಃ । ದ್ವಿತೀಯ ಋತುಶಬ್ದೋಽನು-ವಾದಕಃ । ದೇವೋ ದ್ಯೋತಮಾನೋಽಗ್ನಿರ್ಮೇ ಮಾಂ ವೇದ ವೇತ್ತು । ಸನಿತುರ್ಭಜಮಾನಸ್ಯಾಸ್ಯ ಮಮ ರಾಯಃ ಪಶ್ವಾದಿಲಕ್ಷಣಸ್ಯ ಪತಿಂ ಸ್ವಾಮಿನಂ ತಮಗ್ನಿಮಹಂ ನ ಜಾನಾಮಿ ॥ ಭುವಃ । ಭೂ ಸತ್ತಾಯಾಂ । ಲಿಙರ್ಥೇ ಲೇಟ್ಯಡಾಗಮಃ । ಉವಙಾದೇಶಃ । ನವೇದಾಃ । ನ ನ ವೇತ್ತೀತಿ ವೇತ್ತೀತ್ಯ-ಸ್ಮಿನ್ನರ್ಥೇ ವರ್ತತೇ । ಕಥಮೇತಲ್ಲಭ್ಯತೇ । ನಿಪಾತನಾತ್ । ದ್ವಿನಞ್ಪೂರ್ವಸ್ಯಾಸುನ್ಪ್ರತ್ಯಯಾಂತಸ್ಯ ವೇದೇರೇಕಸ್ಯ ನಞಃ ಲೋಪೋಽನ್ಯಸ್ಯ ಪ್ರಕೃತಿಭಾವಶ್ಚ ಸ್ಕಂದಸ್ವಾಮಿನಾ ನಿಪಾತಿತಃ । ಪಾಣಿನಿನಾ ತು ನಭ್ರಾಣ್ನಪಾದಿತಿ ಸೂತ್ರೇನ ವೇತ್ತೀತ್ಯೇತಸ್ಮಿನ್ನರ್ಥೇ ನಿಪಾತಿತಃ । ಅಸ್ಯಾರ್ಥಸ್ಯಾನುಪಪನ್ನತ್ವಾತ್ ಸ್ಕಂದಸ್ವಾಮಿಪಕ್ಷ ಏವಾಶ್ರೀಯತೇ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಋತಯನ್**—(ಸಕಲ ಪ್ರಾಣಿಗಳಿಗೂ)ಉದಕವನ್ನು ಒದಗಿಸುತ್ತಾ । **ಕಯಾ ಋತೇನ**—ಯಾವ ಸತ್ಯಾತ್ಮಕವಾದ ಕರ್ಮದಿಂದ । **ನಃ**—ನಮ್ಮ । **ಉಚಥಸ್ಯ**—ಸ್ತೋತ್ರದ । **ನವೇದಾಃ**—ಜ್ಞಾತೃವಾಗಿ । **ಭುವಃ**—ಆಗುತ್ತೀಯೆ ? । **ನವ್ಯಃ**—ಸ್ತುತ್ಯನೂ । **ಋತೂನಾಂ**—ಋತುಗಳಿಗೆಲ್ಲಾ **ಋತುಪಾಃ**—ಪಾಲಕನೂ । **ದೇವಃ**—ಪ್ರಕಾಶಮಾನನೂ ಆದ ಅಗ್ನಿಯು । **ಮೇ**—ನನ್ನನ್ನು । **ವೇದ**—(ತನ್ನ ಭಕ್ತನೆಂದು) ಅರಿಯಲಿ । **ಸನಿತುः**—ಸಂಪದ್ಯುಕ್ತನಾದ । **ಅಸ್ಯ**—ನನ್ನ । **ರಾಯಃ**—ಧನಕ್ಕೆ । **ಪತಿಂ**—ಸ್ವಾಮಿಯಾದ ಅಗ್ನಿಯನ್ನು ಮಾತ್ರ । **ಅಹಂ**—ನಾನು । **ನ**—ಇನ್ನೂ ತಿಳಿದಿಲ್ಲ ।

॥ ಭಾವಾರ್ಥ ॥

ಎಲೈ ಅಗ್ನಿಯೇ, ಸಕಲ ಪ್ರಾಣಿಗಳಿಗೂ ಉದಕವನ್ನೊದಗಿಸುವ ಲೋಕೋಪಕಾರಕರನಾದ ನಿನ್ನನ್ನು ನಮ್ಮ ಯಾವ ಕರ್ಮಗಳು ನಮ್ಮ ಸ್ತೋತ್ರವನ್ನು ಅರಿಯುವಂತೆ ಮಾಡಬಲ್ಲವು ? ಸ್ತುತ್ಯನೂ ಋತುಪಾಲಕನೂ, ಪ್ರಕಾಶಮಾನನೂ ಆದ ಅಗ್ನಿಯು ನನ್ನನ್ನು ತನ್ನ ಭಕ್ತನೆಂದರಿಯಲಿ. ಸಂಪದ್ಯುಕ್ತನಾದ ನನ್ನ ಧನಕ್ಕೆ ಸ್ವಾಮಿಯಾದ ಅಗ್ನಿಯನ್ನು ಮಾತ್ರ ನಾನು ಇನ್ನೂ ಸಾಕ್ಷಾತ್ಕರಿಸಿ ನೋಡಿಲ್ಲ

## English Translation

Agni, bestower of water, by what (act of) truth may you, who are adorable, be cognizant of our adoration ? may the divine Agni, the guardian of the seasons recognize me : I (know) him not (yet) as the lord of the riches of which I am the possessor.

ವಿಶೇಷವಿಷಯಗಳು

ಈ ಋಕ್ಕಿನಲ್ಲಿಯೂ ಸಹ ನಾಲ್ಕಾವರ್ತಿ ಋತುಶಬ್ದ ಪ್ರಯೋಗವಿರುವುದು. ಮೊದಲನೆಯ **ಋತುಯನ್** ಎಂಬ ಶಬ್ದಕ್ಕೆ ಉದಕವೆಂದೂ, ಎರಡನೆಯ ಋತೇನ ಎಂಬ ಶಬ್ದಕ್ಕೆ ಸತ್ಯಾತ್ಮಕವಾದ ಕರ್ಮವೆಂದೂ, ಮೂರನೆಯ ಮತ್ತು ನಾಲ್ಕನೆಯ ಋತೂನಾಂ ಋತುಪಾಃ ಎಂಬ ಶಬ್ದಗಳಿಗೆ ಋತುಗಳೆಂದು (ಕಾಲವಾಚಕ) ಅರ್ಥವಿವರಣೆ ಇದೆ ಇಲ್ಲಿ ಋತುಪಾ ಋತೂನಾಂ ಎಂಬ ದ್ವಿರುಕ್ತಿ ಇದೆ ಇಂತಹ ದ್ವಿರುಕ್ತಿಪ್ರಯೋಗವು ಋಗ್ವೇದದಲ್ಲಿ ವಿಶೇಷವಾಗಿ ಕಂಡುಬರುವುದು—**ರಯಿಪತಿಂ ರಯೀಣಾಂ ; ವಿಶಾಂ ವಿಶ್ಪತಿಂ, ರಯೀಣಾಂ ತ್ವಾ ರಯಿಪತಿಂ; ವಸೂನಾಂ ವಸುಪತಿಂ** ಇತ್ಯಾದಿ

**ಸನಿತುಃ ಅಸ್ಯ ರಾಯಃ ಪತಿಂ ಅಹಂ ನ—ಭಜಮಾನಸ್ಯ ಮಮ ಪಶ್ವಾದಿಲಕ್ಷಣಸ್ಯ ಧನಸ್ಯ ಸ್ವಾಮಿನಂ ತಮಗ್ನಿಂ ನಾಹಂ ಜಾನಾಮಿ ।** ಅಗ್ನಿಯು ಧನಕ್ಕೆ ಅಧಿಪತಿಯಾಗಿರುವನು ಈ ಧನವು ಪಶು, ಅನ್ನ, ಗೃಹ ಮೊದಲಾದ ಅನೇಕ ಪ್ರಕಾರವಾಗಿರುವುದು ಇಂತಹ ಧನಕ್ಕೆ ಅಧಿಪತಿಯಾದ ಅಗ್ನಿಯ ಗುಣಗಳನ್ನು, ಸಾಮರ್ಥ್ಯಾತಿಶಯಗಳನ್ನು ನಾನು (ಋಷಿಯು ಅಲ್ಪಮತಿಯಾದ್ದರಿಂದ) ಚೆನ್ನಾಗಿ ತಿಳಿದಿಲ್ಲ ಎಂದು ಹೇಳಿ ಅಗ್ನಿಯ ಮಹತ್ತ್ವವನ್ನೂ ತನ್ನ ಅಲ್ಪತ್ವವನ್ನೂ ಋಷಿಯು ವ್ಯಕ್ತಪಡಿಸಿರುವನು

ಸಂಹಿತಾಪಾಠಃ

ಕೇ ತೇ ಅಗ್ನೇ ರಿಪವೇ ಬಂಧನಾಸಃ ಕೇ ಪಾಯವಃ ಸನಿಷಂತ ದ್ಯುಮಂತಃ।
ಕೇ ಧಾಸಿಮಗ್ನೇ ಅನೃತಸ್ಯ ಪಾಂತಿ ಕ ಆಸತೋ ವಚಸಃ ಸಂತಿ ಗೋಪಾಃ॥

ಪದಪಾಠಃ

ಕೇ । ತೇ । ಅಗ್ನೇ । ರಿಪವೇ । ಬಂಧನಾಸಃ । ಕೇ । ಪಾಯವಃ । ಸನಿಷಂತ । ದ್ಯುಽಮಂತಃ ।
ಕೇ । ಧಾಸಿಂ । ಅಗ್ನೇ । ಅನೃತಸ್ಯ । ಪಾಂತಿ । ಕೇ । ಅಸತಃ । ವಚಸಃ । ಸಂತಿ । ಗೋಪಾಃ ॥ ೪ ॥

ಸಾಯಣಭಾಷ್ಯಂ

**ಹೇ ಅಗ್ನೇ ಯೇ ರಿಪವೇ ಸ್ವಕೀಯಸ್ಯ ಶತ್ರೋಃ ಬಂಧನಾಸೋ ಬಂಧಕಾಃ ಸ್ಯುಸ್ತೇ ತತ್ಸಂಬಂಧಿನಸ್ತೇ ಪುರುಷಾಃ ಕೇ ಕೀದೃಶಾಃ । ಸಾಮರ್ಥ್ಯಾತಿಶಯಾದೇವಂವಿಧಾ ಇತಿ ಕೇನಾಪಿ ಜ್ಞಾತುಂ ನ ಶಕ್ಯಂತ ಇತ್ಯರ್ಥಃ । ಯೇ ಪಾಯವೋ ಜನಾನಾಂ ರಕ್ಷಿತಾರೋ ದ್ಯುಮಂತೋ ದೀಪ್ತಿಮಂತಃ ಸನಿಷಂತ ದೀನೇಭ್ಯೋ ಧನಂ ಪ್ರಯಚ್ಛಂತಿ ತ್ವದೀಯಾಃ ಕೇ ಕೀದೃಶಾಃ । ಯೇಽನೃತಸ್ಯಾಸತ್ಯಸ್ಯ ಧಾಸಿಂ ಧಾರಕಂ ಜನಂ ಪಾಂತಿ ರಕ್ಷಂತಿ ತೇ ತ್ವದೀಯಾ ಜನಾಃ ಕೇ ಸಂತಿ । ನ ಕೇಽಪೀತ್ಯರ್ಥಃ । ಯೇಽಸತೋ ದುಷ್ಟಸ್ಯಾಭಿಶಾಪಾದಿಲಕ್ಷಣಸ್ಯ ವಚಸೋ ಗೋಪಾ ಗೋಪಾಯಿತಾರೋ ರಕ್ಷಿತಾರಸ್ತೇ ತ್ವದೀಯಾಃ ಕೇ ಸಂತಿ । ನ ಕೇಽಪೀತ್ಯರ್ಥಃ । ಅಥವಾ ಯೇ ಕೇ ಜನಾ ರಿಪೋರ್ಬಂಧಕಾಃ । ಯೇ ಕೇ ಪಾಯವೋ ರಕ್ಷಿತಾರಃ ಸನಿಷಂತ ಧನಂ ಪ್ರಯಚ್ಛಂತಿ ದ್ಯುಮಂತಃ । ಯೇ ಕೇಽನೃತಸ್ಯಾಸತ್ಯಸ್ಯ ಧಾಸಿಂ ಧಾರಕಂ ಜನಂ ಪಾಂತಿ ಅನೃತಜನಿತಪಾಪಾತ್ಪರಿಹೃತ್ಯ ಸನ್ಮಾರ್ಗಪ್ರದಾನೇನ ರಕ್ಷಂತಿ । ಯೇ ಕೇಽಸತೋಽಭಿಶಾಪಾದಿಲಕ್ಷಣಾದ್ವಚಸೋ ಗೋಪಾ ಗೋಪಾಯಿತಾರಃ ಸಂತಿ ತೇ ಸರ್ವೇ ತ್ವದೀಯಾಃ । ತ್ವದುಪಾಸಕಾ ಇತ್ಯರ್ಥಃ ॥**

ಪ್ರತಿಪದಾರ್ಥ

**ಅಗ್ನೇ**—ಎಲೈ ಅಗ್ನಿಯೇ । **ತೇ**—ನಿನಗೆ ಸೇರಿದ ಮಾನವರಲ್ಲಿ । **ರಿಪವೇ**—ಶತ್ರುವಿಗೆ । **ಬಂಧನಾಸಃ**—ಬಂಧಕರು । **ಕೇ**—ಯಾರು ? । **ದ್ಯುಮಂತಃ**—ಕಾಂತಿಯುತರೂ । **ಪಾಯವಃ**—ದೀನರಕ್ಷಕರೂ ಆದ । **ಕೇ**—ಯಾರು । **ಸನಿಷಂತ**—ಆರ್ತರಿಗೆ ಧನದಾನಮಾಡುತ್ತಾರೆ ? । **ಅನೃತಸ್ಯ**—ಅಸತ್ಯದ । **ಧಾಸಿಂ**—ಧಾರಕನಾದ ಪುರುಷನನ್ನು । **ಕೇ**—ಯಾರು । **ಪಾಂತಿ**—ರಕ್ಷಿಸುತ್ತಾರೆ ? । **ಅಸತಃ**—ದುಷ್ಟವಾದ । **ವಚಸಃ**—ವಾಕ್ಕಿಗೆ । **ಗೋಪಾಃ**—ರಕ್ಷಕರು । **ಕೇ ಸಂತಿ**—ಯಾರಿದ್ದಾರೆ.

ಭಾವಾರ್ಥ

ಎಲೈ ಅಗ್ನಿಯೇ, ನಿನಗೆ ಸೇರಿದ ಮಾನವರ ಗುಂಪಿನಲ್ಲಿ ಸಜ್ಜನರಾರು ? ಅಸಜ್ಜನರಾರು ? ಶತ್ರುಗಳನ್ನು ಬಂಧಿಸಿ ಆರ್ತರಿಗೆ ಧನದಾನಮಾಡತಕ್ಕ ಕಾಂತಿಯುತರೂ, ದೀನರಕ್ಷಕರೂ ಎಷ್ಟು ಜನ ? ಅಸತ್ಯಾತ್ಮಕವಾದ ಪುರುಷನನ್ನೂ, ದುಷ್ಟ ಕರ್ಮಗಳನ್ನೂ ರಕ್ಷಿಸುವವರು ಎಷ್ಟು ಮಂದಿಯಿದ್ದಾರೆ ? ಅವರಾರು ?

English Translation

Who, Agni, among your (followers) are the imprisoners of foes ? who among them are the protectors (of men), the splendid distributors of gifts ? who among them defend the asserter of untruth ? who are the encouragers of evil deeds ?

ವಿಶೇಷವಿಷಯಗಳು

ಎಲೈ ಅಗ್ನಿಯೇ, ಶತ್ರುವನ್ನು ಜಯಿಸಿ ಬಂಧಿಸತಕ್ಕವರೂ, ದೀನರಕ್ಷಕರೂ, ಆರ್ತರಿಗೆ ಧನದಾನಮಾಡುವವರೂ, ಕಾಣದೆ ಅನೃತವನ್ನಾಡಿದವರನ್ನು ರಕ್ಷಿಸುವವರೂ, ಕೆಟ್ಟಮಾತುಗಳನ್ನು ಆಡದಂತೆ ಸದ್ಬುದ್ಧಿಯನ್ನು ಪಡೆದಿರುವವರೂ ಇಂತಹ ಸಜ್ಜನರೆಲ್ಲರೂ ನಿನ್ನವರೇ ಎಂದರೆ ನಿನ್ನನ್ನು ಭಜಿಸುವವರೇ ಆಗಿರುವರು ಎಂದು ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠಃ ॥

ಸಖಾಯಸ್ತೇ ವಿಷುಣಾ ಅಗ್ನ ಏತೇ ಶಿವಾಸಃ ಸಂತೋ ಅಶಿವಾ ಅಭೂವನ್।
ಅಧೂರ್ಷತ ಸ್ವಯಮೇತೇ ವಚೋಭಿರ್ಋಜೂಯತೇ ವೃಜಿನಾನಿ
ಬ್ರುವಂತಃ ॥ ೫ ॥

ಪದಪಾಠಃ

ಸಖಾಯಃ । ತೇ । ವಿಷುಣಾಃ । ಅಗ್ನೇ । ಏತೇ । ಶಿವಾಸಃ । ಸಂತಃ । ಅಶಿವಾಃ । ಅಭೂವನ್ ।
ಅಧೂರ್ಷತ । ಸ್ವಯಂ । ಏತೇ । ವಚಃऽಭಿಃ । ಋಜುऽಯತೇ । ವೃಜಿನಾನಿ । ಬ್ರುವಂತಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತೇ ತವ ಸಖಾಯಃ ಸ್ತೋತಾರೋ ವಿಷುಣಾ ವಿಪ್ರಕೀರ್ಣಾಃ ಸರ್ವತ್ರ ವ್ಯಾಪ್ತಾ ಏತೇ ಪೂರ್ವಮಶಿವಾಃ ಪರನಿಂದಾದಿಕುರ್ವಾಣಾಸ್ತ್ವತ್ಪರಿಚರ್ಯಾಂ ತ್ಯಜಂತೋಽಭದ್ರಾಃ ಸಂತ ಇದಾನೀಂ ತ್ವತ್ಪರಿಚರ್ಯಾಂ ಕುರ್ವಂತಃ ಶಿವಾಸಃ ಶಿವಾ ಆಢ್ಯಾ ಅಭೂವನ್ । ಕಿಂಚ ಯ ಋಜೂಯತ ಋಜು ಸಮ್ಯಗಾಚರತೇಽಪಿ ಮಹ್ಯಂ ವಚೋಭಿರಸಾಧೂಕ್ತಿಭಿರ್ವೃಜಿನಾನಿ ಕುಟಿಲಾನಿ ಬ್ರುವಂತಸ್ತ ಏತೇ ಮಮ ಸಪತ್ನಾಃ ಸ್ವಯಮೇವಾಧೂರ್ಷತ । ಅಹಿಂಸ್ಯಂತ ॥ ಧೂರ್ವತೇರ್ಹಿಂಸಾಕರ್ಮಣ ಇದಂ ರೂಪಂ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ವಿಷುಣಾಃ**—ಎಲ್ಲೆಲ್ಲಿಯೂ ಹರಡಿ ನೆಲೆಸಿರುವ । **ಏತೇ ತೇ ಸಖಾಯಃ**—ನಿನ್ನ ಸುಹೃದ್ರೂಪರಾದ ಈ ಮಾನವರು । **ಅಶಿವಾಃ ಸಂತಃ**—(ಪೂರ್ವದಲ್ಲಿ ನಿನ್ನನ್ನು ಭಜಿಸದೇ) ಅಮಂಗಳಾತ್ಮಕವಾದ ಕರ್ಮಕಾರಕರಾಗಿದ್ದು । (ಈಗ) । **ಶಿವಾಸಃ**—ನಿನ್ನ ಪೂಜಾರೂಪವಾದ ಮಂಗಳಕಾರ್ಯದಲ್ಲಿ । **ಅಭೂವನ್**—ತೊಡಗಿದ್ದಾರೆ । **ಋಜೂಯತೇ**—ಸತ್ಕರ್ಮಕಾರಕನಾದ ನನಗೆ । **ವಚೋಭಿಃ**—ದುಷ್ಟ ವಾಕ್ಕುಗಳಿಂದ । **ವೃಜಿನಾನಿ**—ಮೋಸಕೃತ್ಯಗಳನ್ನು । **ಬ್ರುವಂತಃ**—ಆಚರಿಸುವ । **ಏತೇ**—ನನ್ನ ಈ ಶತ್ರುಗಳು **ಸ್ವಯಂ**—ತಮ್ಮಷ್ಟಕ್ಕೆ ತಾವಾಗಿಯೇ । **ಅಧೂರ್ಷತ**—ಹಿಂಸೆಯನ್ನುಂಟುಮಾಡಿಕೊಳ್ಳಲಿ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಎಲ್ಲೆಲ್ಲಿಯೂ ಹರಡಿ ನೆಲೆಸಿರುವ ನಿನ್ನ ಸುಹೃದ್ರೂಪರಾದ ಈ ಮಾನವರು ಪೂರ್ವದಲ್ಲಿ ನಿನ್ನನ್ನು ಭಜಿಸದೇ ಅಮಂಗಳಾತ್ಮಕವಾದ ಕರ್ಮಕಾರಕರಾಗಿದ್ದು ಈಗ ನಿನ್ನ ಪೂಜಾರೂಪವಾದ ಮಂಗಳಕಾರ್ಯದಲ್ಲಿ

ತೊಡಗಿದ್ದಾರೆ. ಸತ್ಕರ್ಮಕಾರಕನಾದ ನನಗೆ ದುಷ್ಟವಾಕ್ಪ್ರಯೋಗಗಳಿಂದ ಮೋಸಕೃತ್ಯಗಳನ್ನು ಆಚರಿಸುವ ನನ್ನ ಈ ಶತ್ರುಗಳು ತಮ್ಮಷ್ಟಕ್ಕೆ ತಾವಾಗಿಯೇ ಹಿಂಸೆಯನ್ನುಂಟುಮಾಡಿಕೊಳ್ಳಲಿ.

## English Translation

These your friends, Agni, everywhere dispersed, were formerly unhappy (in abandoning your worship), but are again fortunate (by its renewal); may they who, with (censorious) words, impute fraudulent (practices) to me who pursue a straight path, bring evil upon themselves

|| ವಿಶೇಷವಿಷಯಗಳು ||

ಈಗ ಸಜ್ಜನರಾಗಿರುವವರೆಲ್ಲರೂ ಹಿಂದೆ ಎಂದರೆ ಅಗ್ನಿಯನ್ನು ಪೂಜಿಸುವುದಕ್ಕಿಂತ ಪೂರ್ವದಲ್ಲಿ ದುಷ್ಟರಾಗಿದ್ದರು, ಕೆಟ್ಟಕೆಲಸಗಳನ್ನು ಮಾಡುತ್ತಿದ್ದರು ಇಂತಹ ದುಷ್ಟಜನರೆಲ್ಲರೂ ಅಗ್ನಿಯನ್ನು ಪೂಜಿಸಿ ಅದರಿಂದ ಸದ್ಬುದ್ಧಿಯನ್ನು ಪಡೆದು ಸಜ್ಜನರಾಗಿದ್ದಾರೆ. ಆದರೆ ಆ ರೀತಿ ಅಗ್ನಿಯ ಪರಿಚರಣದಿಂದ ಸಜ್ಜನರಾಗದಿರುವ ಎಲ್ಲರಿಗೂ ಮೋಸಮಾಡತಕ್ಕ ನನ್ನ ಶತ್ರುಗಳಾದ ದುಷ್ಟಜನರಿಗೆ ಅವರ ಕರ್ಮಫಲಾನುಸಾರವಾಗಿ ಹಿಂಸೆಯುಂಟಾಗಲಿ ಎಂದು ಮುಖ್ಯಾಭಿಪ್ರಾಯ

ಸಂಹಿತಾಪಾಠಃ

ಯಸ್ತೇ ಅಗ್ನೇ ನಮಸಾ ಯಜ್ಞಮೀಟ್ಟ ಋತಂ ಸ ಪಾತ್ಯರುಷಸ್ಯ ವೃಷ್ಣಃ ।
ತಸ್ಯ ಕ್ಷಯಃ ಪೃಥುರಾ ಸಾಧುರೇತು ಪ್ರಸರ್ಸ್ರಾಣಸ್ಯ ನಹುಷಸ್ಯ ಶೇಷಃ ॥೬॥

॥ ಪದಪಾಠಃ ॥

ಯಃ । ತೇ । ಅಗ್ನೇ । ನಮಸಾ । ಯಜ್ಞಂ । ಈಟ್ಟೇ । ಋತಂ। ಸಃ । ಪಾತಿ । ಅರುಷಸ್ಯ । ವೃಷ್ಣಃ ।
ತಸ್ಯ । ಕ್ಷಯಃ । ಪೃಥುಃ । ಆ । ಸಾಧುಃ । ಏತು । ಪ್ರಽಸರ್ಸ್ರಾಣಸ್ಯ । ನಹುಷಸ್ಯ । ಶೇಷಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಯೋ ಮನುಷ್ಯೋ ಯಜ್ಞಂ ಯಜನೀಯಂ ತೇ ತ್ವಾಂ ನಮಸಾ ಸ್ತೋತ್ರೇಣೇಟ್ಟೇ ಸ್ತೌತಿ । ಯದ್ವಾ । ತೇ ತುಭ್ಯಂ ಯಜ್ಞಂ ಯಾಗಂ ನಮಸಾನ್ನರೂಪೇಣ ಹವಿಷೇಟ್ಟೇ ಯಜತಿ ॥ ಅಸ್ಮಿನ್ ಪಕ್ಷೇ ಯಜೇರ್ಬಹುಲಂ ಛಂದಸೀತಿ ಶಪಃ ಶ್ಲುಃ । ಶ್ಲಾವಿತಿ ದ್ವಿರ್ವಚನಂ । ಬಹುಲಂ ಛಂದಸೀತಿ ಸಂಪ್ರಸಾರಣಂ । ಸವರ್ಣದೀರ್ಘಃ । ಜಕಾರಸ್ಯ ಟಕಾರಃ ॥ ಯೋಽರುಷಸ್ಯ ರೋಚಮಾನಸ್ಯ

ವೃಷ್ಣಃ ಕಾಮಾನಾಂ ವರ್ಷಿತುರಗ್ನೇಋತಂ ಸ್ತೋತ್ರಂ ಪಾತಿ ರಕ್ಷತಿ ತಸ್ಯ ಯಜಮಾನಸ್ಯ ಕ್ಷಯೋ ಗೃಹಂ ಪೃಥುರ್ವಿಸ್ತೀರ್ಣಂ ಭವತಿ । ಪಶ್ವಾದಿಲಕ್ಷಣೈರ್ಧನೈಃ ಸಂಪೂರ್ಣಂ ಭವತೀತ್ಯರ್ಥಃ । ಪ್ರಸರ್ಸ್ರಾಣಸ್ಯ ಪ್ರಕರ್ಷೇಣ ಪರಿಚರ್ಯಾಂ ಗಚ್ಛತೋ ನಹುಷಸ್ಯ ಮನುಷ್ಯಸ್ಯ ಸಾಧುಃ ಕಾಮಾನಾಂ ಸಾಧಕಃ ಶೇಷಃ । ಶಿಷ್ಯತ ಇತಿ ಶೇಷಃ । ಪುತ್ರ ಐತು । ಆಗಚ್ಛತು । ಭವತ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಯಃ**—ಯಾವ ಮಾನವನು । **ಯಜ್ಞಂ**—ಪೂಜಾರ್ಹನಾದ । **ತೇ**—ನಿನ್ನನ್ನು । **ನಮಸಾ**—ಸ್ತುತಿಪೂರ್ವಕವಾಗಿ । **ಈಟ್ಟೇ**—ಸ್ತುತಿಸುವನೋ । **ಸಃ**—ಅವನು । **ಅರುಷಸ್ಯ**—ಆರೋಚಕವಾದ ಕಾಂತಿಯುಳ್ಳವನೂ । **ವೃಷ್ಣಃ**—ಕಾಮವರ್ಷಕನೂ ಆದ ಅಗ್ನಿಯ । **ಋತಂ**—ಯಜ್ಞಾಂಗವಾದ ಸ್ತುತಿಯನ್ನು । **ಪಾತಿ**—ರಕ್ಷಿಸುತ್ತಾನೆ । **ತಸ್ಯ**—ಅದೇ ಯಜಮಾನನ । **ಕ್ಷಯಃ**—ವಾಸಗೃಹವು । **ಪೃಥುಃ**—ವಿಸ್ತೃತವಾಗಿ ಬೆಳೆಯುತ್ತದೆ । **ಪ್ರಸರ್ಸ್ರಾಣಸ್ಯ**—ಅತ್ಯುತ್ತಮವಾಗಿ ನಿನ್ನನ್ನು ಪೂಜಿಸುವ । **ನಹುಷಸ್ಯ**—ಮಾನವನಿಗೆ । **ಸಾಧುಃ**—ಸದ್ಬುದ್ಧಿಯುಳ್ಳ । **ಶೇಷಃ**—ಪುತ್ರನು । **ಆ ಐತು**—ಉತ್ಪನ್ನನಾಗಲಿ

ಭಾವಾರ್ಥ

ಎಲೈ ಅಗ್ನಿಯೇ, ಯಾವ ಮಾನವನು ಪೂಜಾರ್ಹನಾದ ನಿನ್ನನ್ನು ಸ್ತುತಿಪೂರ್ವಕವಾಗಿ ಸ್ತುತಿಸುವನೋ ಅವನು ಆರೋಚಕವಾದ ಕಾಂತಿಯುಳ್ಳವನೂ, ಕಾಮವರ್ಷಕನೂ ಆದ ಅಗ್ನಿಯ ಯಜ್ಞಾಂಗವಾದ ಸ್ತುತಿಯನ್ನು ರಕ್ಷಿಸುತ್ತಾನೆ ಆದೇ ಯಜಮಾನನ ವಾಸಗೃಹವು ವಿಸ್ತೃತವಾಗಿ ಬೆಳೆಯುತ್ತದೆ. ಅತ್ಯುತ್ತಮವಾಗಿ ನಿನ್ನನ್ನು ಪೂಜಿಸುವ ಮಾನವನಿಗೆ ಸದ್ಬುದ್ಧಿಯುಳ್ಳ ಪುತ್ರನು ಉತ್ಪನ್ನನಾಗಲಿ

English Translation

May the dwelling of him, Agni, who celebrates your worship with reverence, of him who protects the sacrifice (offered) to the resplendent showerer (of benefits), be well stored and may a virtuous successor of the man who diligently worships you come in his place.

॥ ವಿಶೇಷವಿಷಯಗಳು ॥

ಹಿಂದಿನ ಎರಡು ಋಕ್ಕುಗಳಲ್ಲಿ ಅಗ್ನಿಯನ್ನು ಭಜಿಸದವರಿಗೆ ಉಂಟಾಗುವ ತೊಂದರೆಗಳನ್ನು ಹೇಳಿ ಈ ಋಕ್ಕಿನಲ್ಲಿ ಅಗ್ನಿಯನ್ನು ಸ್ತುತಿಸಿ ಹವಿಸ್ಸನ್ನರ್ಪಿಸುವವರಿಗೆ ದೊರೆಯುವ ಫಲವನ್ನು ಋಷಿಯು ವರ್ಣಿಸಿರುವನು. ಯಜ್ಞಾರ್ಹನಾದ ಅಗ್ನಿಗೆ ಹವಿಸ್ಸನ್ನರ್ಪಿಸಿ ನಮಸ್ಕಾರ ಮತ್ತು ಸ್ತೋತ್ರಗಳಿಂದ ಪ್ರಕಾಶಮಾನನೂ, ಇಷ್ಟಾರ್ಥಪ್ರದನೂ ಆದ ಅಗ್ನಿಯನ್ನು ಭಜಿಸುವ ಸಜ್ಜನರ ಗೃಹಗಳು ವೃದ್ಧಿಯಾಗುವುವು ಅವರಿಗೆ ಪಶು ಮೊದಲಾದ ಸಂಪತ್ಸಮೃದ್ಧಿಯುಂಟಾಗುವುದು ಅವರಿಗೆ ಒಳ್ಳೆಯ ಸುಪುತ್ರನು ಜನಿಸುವನು ಎಂದು ಋಷಿಯು ವರ್ಣಿಸಿದ್ದಾನೆ

# ಹದಿಮೂರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಅರ್ಚಂತಸ್ತ್ವೇತಿ ಷಡೃಚಂ ತ್ರಯೋದಶಂ ಸೂಕ್ತಂ ಸುತಂಭರಸ್ಯಾರ್ಷಂ ಗಾಯತ್ರಮಾಗ್ನೇಯಂ । ಅನುಕ್ರಾಂತಂ ಚ । ಅರ್ಚಂತೋ ಗಾಯತ್ರಂ ತ್ವಿತಿ ॥ ಪ್ರಾತರನುವಾಕ ಆಗ್ನೇಯಕ್ರತೌ ಗಾಯತ್ರೇ ಛಂದಸ್ಯಾಶ್ವಿನಶಸ್ತ್ರ ಇದಮಾದಿಕೇ ದ್ವೇ ಸೂಕ್ತೇ । ಸೂತ್ರಿತಂ ಚ । ಅರ್ಚಂತಸ್ತ್ವೇತಿ ಸೂಕ್ತೇ । ಆ. ೪-೧೩ । ಇತಿ ॥ ಆಹವನೀಯೋಪಸ್ಥಾನೇ ತ್ವಮಗ್ನೇ ಸಪ್ರಥಾ ಅಸೀತ್ಯೇಕಾ । ಸೂತ್ರಿತಂ ಚ । ಸಂ ನಃ ಸೃಜ ಸುಮತ್ಯಾ ವಾಜವತ್ಯಾ ತ್ವಮಗ್ನೇ ಸಪ್ರಥಾ ಅಸೀತಿ ಚ । ಆ. ೩-೧೦ । ಇತಿ ॥ ಅಶ್ವಮೇಧೇ ಪೌಷ್ಣೇಷ್ಟೌ ತ್ವಮಗ್ನೇ ಸಪ್ರಥಾ ಇತಿ ಪ್ರಥಮಾಜ್ಯಭಾಗಾನುವಾಕ್ಯಾ । ತ್ವಮಗ್ನೇ ಸಪ್ರಥಾ ಅಸಿ ಸೋಮ ಯಾಸ್ತೇ ಮಯೋಭುವ ಇತಿ ಸದ್ವಂತೌ । ಆ. ೧೦-೬ । ಇತಿ ॥**

ಅನುವಾದವು—**ಅರ್ಚಂತಸ್ತ್ವಾ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹದಿಮೂರನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಸುತಂಭರ ಆತ್ರೇಯಃ ಎಂಬುವನು ಋಷಿಯು, ಅಗ್ನಿಯು ದೇವತೆಯು, ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಅರ್ಚಂತೋ ಗಾಯತ್ರಂ ತು** ಎಂದು ಹೇಳಿರುವುದು. ಪ್ರಾತರನುವಾಕಮಂತ್ರಪಠನದಲ್ಲಿ ಆಗ್ನೇಯಕ್ರತುಸಂಬಂಧವಾದ ಗಾಯತ್ರೀಛಂದಸ್ಸಿನ ಮಂತ್ರಗಳಿಗಾಗಿಯೂ, ಆಶ್ವಿನಶಸ್ತ್ರಮಂತ್ರಪಠನಕ್ಕಾಗಿಯೂ ಈ ಸೂಕ್ತ ಮತ್ತು ಮುಂದಿನ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಅರ್ಚಂತಸ್ತ್ವೇತಿ ಸೂಕ್ತೇ** ಎಂಬ ಸೂತ್ರದಿಂದ (ಆ ೪-೧೩) ವಿವೃತವಾಗಿರುವುದು, ಆಹವನೀಯಾಗ್ನಿಯನ್ನು ಉಪಸ್ಥಾನಮಾಡುವಾಗ-**ತ್ವಮಗ್ನೇ ಸಪ್ರಥಾ ಅಸಿ** ಎಂಬ ( ಈ ಸೂಕ್ತದ ೪ ನೆಯ) ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯಶ್ರೌತಸೂತ್ರದ—**ಸಂ ನಃ ಸೃಜ ಸುಮತ್ಯಾ ವಾಜವತ್ಯಾ ತ್ವಮಗ್ನೇ ಸಪ್ರಥಾ ಅಸೀತಿ ಚ** ಎಂಬ ಸೂತ್ರದಿಂದ (ಆ. ೩-೧೦) ವಿವೃತವಾಗಿರುವುದು. ಮತ್ತು ಅಶ್ವಮೇಧಯಾಗದ ಪೌಷ್ಣೇಷ್ಟಿಯಲ್ಲಿ (ಪೂಷನ್ ಎಂಬ ದೇವತೆಯನ್ನುದ್ದೇಶಿಸಿ ಮಾಡುವ ಇಷ್ಟಿಯಲ್ಲಿ) **ತ್ವಮಗ್ನೇ ಸಪ್ರಥಾ** ಎಂಬ ಈ ಋಕ್ಕನ್ನು ಪ್ರಥಮಾಜ್ಯಭಾಗದ ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತ್ವಮಗ್ನೇ ಸಪ್ರಥಾ ಅಸಿ ಸೋಮ ಯಾಸ್ತೇ ಮಯೋ ಭುವ ಇತಿ ಸದ್ವಂತೌ** ಎಂಬ ಸೂತ್ರದಿಂದ (ಆ. ೧೦-೬) ವಿವೃತವಾಗಿರುವುದು.

## ಸೂಕ್ತ—೧೩

॥ ಮಂಡಲ—೫ ॥ ಅನುವಾಕ—೧ ॥ ಸೂಕ್ತ—೧೩ ॥
॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೫ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬
ಋಷಿಃ—ಸುತಂಭರ ಆತ್ರೇಯಃ
ದೇವತಾ—ಅಗ್ನಿಃ ॥
॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ಅರ್ಚಂತಸ್ತ್ವಾ ಹವಾಮಹೇಽರ್ಚಂತಃ ಸಮಿಧೀಮಹಿ ।**
**ಅಗ್ನೇ ಅರ್ಚಂತ ಊತಯೇ ॥ ೧ ॥**

॥ ಪದಪಾಠಃ ॥

**ಅರ್ಚಂತಃ । ತ್ವಾ । ಹವಾಮಹೇ । ಅರ್ಚಂತಃ । ಸಂ । ಇಧೀಮಹಿ ।**
**ಅಗ್ನೇ । ಅರ್ಚಂತಃ । ಊತಯೇ ॥ ೧ ॥**

॥ ಸಾಯಣಭಾಷ್ಯಂ ॥

**ಹೇ ಅಗ್ನೇ ತ್ವಾ ತ್ವಾಮರ್ಚಂತಃ ಪೂಜಯಂತೋ ವಯಂ ಹವಾಮಹೇ । ಆಹ್ವಯಾಮಃ । ಅರ್ಚಂತಃ ಸ್ತುವಂತೋ ವಯಮೂತಯೇ ರಕ್ಷಣಾಯ ತರ್ಪಣಾಯ ವಾ ತ್ವಾಂ ಸಮಿಧೀಮಹಿ । ಸಮಿದ್ಭಿಃ ಸಂದೀಪಯಾಮಃ । ಅರ್ಚಂತ ಇತಿ ತೃತೀಯಂ ಪದಮಾದರಾತಿಶಯಾರ್ಥಂ ॥**

॥ ಪ್ರತಿಪದಾರ್ಥ ॥

**ಅಗ್ನೇ**- ಎಲೈ ಅಗ್ನಿಯೇ । **ತ್ವಾ**—ನಿನ್ನನ್ನು । **ಅರ್ಚಂತಃ**—ಪೂಜಿಸುವ ನಾವು । **ಹವಾಮಹೇ**—ನಿನ್ನನ್ನು ಸಹಾಯಕ್ಕಾಗಿ ಕರೆಯುತ್ತೇವೆ । **ಅರ್ಚಂತಃ**—ನಿನ್ನನ್ನು ಸ್ತುತಿಸುತ್ತಾ । **ಉತಯೇ**—ರಕ್ಷಣಾರ್ಥವಾಗಿ **ಸಮಿಧೀಮಹಿ**—ಪ್ರಜ್ವಲಿತನನ್ನಾಗಿ ಮಾಡುತ್ತೇವೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಾವು ನಿನ್ನನ್ನು ಪೂಜಿಸುತ್ತಾ ನಮ್ಮ ಸಹಾಯಕ್ಕಾಗಿ ಪ್ರಾರ್ಥಿಸಿ ಕರೆಯುತ್ತೇವೆ. ನಿನ್ನನ್ನು ಸ್ತುತಿಸುತ್ತಾ ನಮ್ಮ ರಕ್ಷಣಾರ್ಥವಾಗಿ ನಿನ್ನನ್ನು ಪ್ರಜ್ವಲಿತನನ್ನಾಗಿ ಮಾಡುತ್ತೇವೆ.

## English Translation

Adoring you, Agni, we invoke you: adoring you we kindle you, adoring you for protection.

॥ ಸಂಹಿತಾಪಾಠಃ ॥

ಅಗ್ನೇಃ ಸ್ತೋಮಂ ಮನಾಮಹೇ ಸಿಧ್ರಮದ್ಯ ದಿವಿಸ್ಪೃಶಃ ।
ದೇವಸ್ಯ ದ್ರವಿಣಸ್ಯವಃ ॥ ೨ ॥

॥ ಪದಪಾಠಃ ॥

ಅಗ್ನೇಃ । ಸ್ತೋಮಂ । ಮನಾಮಹೇ । ಸಿಧ್ರಂ । ಅದ್ಯ । ದಿವಿಽಸ್ಪೃಶಃ ।
ದೇವಸ್ಯ । ದ್ರವಿಣಸ್ಯವಃ ॥ ೨ ॥

॥ ಸಾಯಣಭಾಷ್ಯಂ ॥

ದ್ರವಿಣಸ್ಯವೋ ದ್ರವಿಣಂ ಧನಮಿಚ್ಛಂತೋ ವಯಂ ದಿವಿಸ್ಪೃಶಃ ಸೂರ್ಯರೂಪೇಣಾಕಾಶಂ ವ್ಯಾಪ್ನುವತೋ ದೇವಸ್ಯ ದ್ಯೋತಮಾನಸ್ಯಾಗ್ನೇಃ ಸಿಧ್ರಂ ಪುರುಷಾರ್ಥಾನಾಂ ಸಾಧಕಂ ಸ್ತೋಮಂ ಸ್ತೋತ್ರಮದ್ಯಾಸ್ಮಿನ್ನಹನಿ ಮನಾಮಹೇ । ಬ್ರೂಮಃ ॥

॥ ಪ್ರತಿಪದಾರ್ಥ ॥

**ದ್ರವಿಣಸ್ಯವಃ**—ಧನಾಪೇಕ್ಷಿಗಳಾದ ನಾವು । **ದಿವಿಸ್ಪೃಶಃ**—ಸೂರ್ಯರೂಪದಲ್ಲಿ ಅಂತರಿಕ್ಷವನ್ನು ವ್ಯಾಪಿಸುವವನೂ । **ದೇವಸ್ಯ**—ಪ್ರಕಾಶಮಾನನೂ ಆದ । **ಅಗ್ನೇಃ**—ಅಗ್ನಿಯನ್ನುದ್ದೇಶಿಸಿದುದೂ । **ಸಿಧ್ರಂ**—ಪುರುಷಾರ್ಥಸಾಧಕವಾದುದೂ ಆದ । **ಸ್ತೋಮಂ**—ಸ್ತೋತ್ರವನ್ನು । **ಅದ್ಯ**— ಈ ಯಾಗಕಾಲದಲ್ಲಿ । **ಮನಾಮಹೇ**—ಪಠಿಸುತ್ತೇವೆ

॥ ಭಾವಾರ್ಥ ॥

ಧನಾಪೇಕ್ಷಿಗಳಾದ ನಾವು ಸೂರ್ಯರೂಪದಲ್ಲಿ ಅಂತರಿಕ್ಷವನ್ನು ವ್ಯಾಪಿಸುವವನೂ, ಪ್ರಕಾಶಮಾನನೂ ಆದ ಅಗ್ನಿಯನ್ನುದ್ದೇಶಿಸಿದುದೂ, ಪುರುಷಾರ್ಥಸಾಧಕವಾದುದೂ ಆದ ಸ್ತೋತ್ರವನ್ನು ಈ ಯಾಗಕಾಲದಲ್ಲಿ ಪಠಿಸುತ್ತೇವೆ.

## English Translation

Desirous of wealth, we recite to-day the effectual praise of the divine Agni, (whose radiance) reaches the sky.

### ವಿಶೇಷವಿಷಯಗಳು

ಅಗ್ನಿಯು ಮೂರು ರೂಪಗಳಲ್ಲಿ ಎಂದರೆ, ಆದಿತ್ಯರೂಪದಿಂದ ಸ್ವರ್ಗದಲ್ಲಿಯೂ, ವೈದ್ಯುತಾಗ್ನಿರೂಪದಿಂದ ಅಂತರಿಕ್ಷದಲ್ಲಿಯೂ, ಪಾರ್ಥಿವಾಗ್ನಿ (ಯಜ್ಞಾಗ್ನಿ ಅಥವಾ ಗೃಹ್ಯಾಗ್ನಿ ಅಥವಾ ದಾವಾಗ್ನಿ) ರೂಪದಿಂದ ಪೃಥಿವಿಯಲ್ಲಿಯೂ ವ್ಯಾಪಿಸಿರುವನೆಂದು ಹಿಂದೆ ಅನೇಕಾವರ್ತಿ ವಿವರಿಸಲಾಗಿದೆ. ಪ್ರಕೃತ ಋಕ್ಕಿನಲ್ಲಿ ಅಗ್ನಿಯು ಸೂರ್ಯರೂಪದಿಂದ ಸ್ವರ್ಗದಲ್ಲಿ (ಅಂತರಿಕ್ಷದಲ್ಲಿ) ಪ್ರಕಾಶಿಸುತ್ತಿರುವನೆಂದು ವಿವರಿಸಲಾಗಿದೆ.

**ಸಿಧ್ರಂ—ಸಾಧನಂ ।** ಸಿಧ್ರಶಬ್ದಕ್ಕೆ ಸಾಧನವೆಂಬ ಅರ್ಥವನ್ನು ಯಾಸ್ಕರು ವಿವರಿಸಿ (ನಿ. ೯-೩೮) ಉದಾಹರಣೆಗಾಗಿ

**ದ್ಯಾವಾ ನಃ ಪೃಥಿವೀ ಇಮಂ ಸಿಧ್ರಮದ್ಯ ದಿವಿಸ್ಪೃಶಂ ।**
**ಯಜ್ಞಂ ದೇವೇಷು ಯಚ್ಛತಾಂ ॥**

(ಋ. ಸಂ ೨-೪೧-೨೦)

ಎಂಬ ಋಕ್ಕನ್ನು ಉದಹರಿಸಿದ್ದಾರೆ.

॥ ಸಂಹಿತಾಪಾಠಃ ॥

## ಅಗ್ನಿರ್ಜುಷತ ನೋ ಗಿರೋ ಹೋತಾ ಯೋ ಮಾನುಷೇಷ್ವಾ ।
## ಸ ಯಕ್ಷದ್ದೈವ್ಯಂ ಜನಂ ॥ ೩ ॥

ಪದಪಾಠಃ

**ಅಗ್ನಿಃ । ಜುಷತ । ನಃ । ಗಿರಃ । ಹೋತಾ । ಯಃ । ಮಾನುಷೇಷು । ಆ ।**
**ಸಃ । ಯಕ್ಷತ್ । ದೈವ್ಯಂ । ಜನಂ ॥ ೩ ॥**

॥ ಸಾಯಣಭಾಷ್ಯಂ ॥

**ಹೋತಾ ದೇವಾನಾಮಾಹ್ವಾತಾ ಯೋಽಗ್ನಿರ್ಮಾನುಷೇಷ್ವಾ ವಸತಿ ಸೋಽಗ್ನಿರ್ನೋಽಸ್ಮಾಕಂ ಗಿರಃ ಸ್ತುತೀರ್ಜುಷತ । ಸೇವತಾಂ । ಸೋಽಗ್ನಿರ್ದೈವ್ಯಂ ಜನಂ ದೇವಸಂಬಂಧಿನಂ ಜನಂ ಯಕ್ಷತ್ । ಯಜತು ॥**

॥ ಪ್ರತಿಪದಾರ್ಥ ॥

**ಯಃ**—ಯಾವ । **ಅಗ್ನಿಃ—ಅಗ್ನಿ**ಯು । **ಮಾನುಷೇಷು**—ಮನುಷ್ಯರ ನಡುವೆ ಸ್ಥಿತನಾಗಿರುವನೋ । **ಸಃ**—ಅದೇ ಅಗ್ನಿಯು । **ನಃ**—ನಮ್ಮ । **ಗಿರಃ**—ಸ್ತುತಿರೂಪಗಳಾದ ವಾಕ್ಕುಗಳನ್ನು । **ಜುಷತ**—ಸೇವಿಸಲಿ (ಮತ್ತು) । **ದೈವ್ಯಂ ಜನಂ**—ದೇವತಾತ್ಮಕರಾದ ಜನರನ್ನುದ್ದೇಶಿಸಿ । **ಯಕ್ಷತ್**—ಯಾಗಮಾಡಲಿ.

### ಭಾವಾರ್ಥ

ಯಾವ ಅಗ್ನಿಯು ಮಾನವರ ಮಧ್ಯದಲ್ಲಿ ಸ್ಥಿತನಾಗಿರುವನೋ ಅದೇ ಅಗ್ನಿಯು ನಮ್ಮ ಸ್ತುತಿಗಳನ್ನು ಸೇವಿಸಲಿ. ಮತ್ತು ದೇವತಾತ್ಮಕರಾದ ಜನವನ್ನುದ್ದೇಶಿಸಿ ಯಾಗಮಾಡಲಿ.

### English Translation

May Agni, who amongst men is the invoker of the gods, accept our praises ; may he offer sacrifice to the divine beings-

### ವಿಶೇಶವಿಷಯಗಳು

**ಯಃ ಅಗ್ನಿಃ ಮಾನುಷೇಷು** ಅ—ಮನುಷ್ಯರ ಮಧ್ಯದಲ್ಲಿ ಇರುವ ಅಗ್ನಿಯು ಎಂದರೆ ಯಜ್ಞವೇದಿಯಲ್ಲಿ ಗಾರ್ಹಪತ್ಯಾದಿರೂಪದಿಂದ ಸ್ಥಾಪಿತನಾಗಿರುವ ಯಜ್ಞಾಗ್ನಿಯು. ಹಿಂದಿನ ಋಕ್ಕಿನಲ್ಲಿ ಸ್ವರ್ಗದಲ್ಲಿ ಆದಿತ್ಯ ರೂಪದಿಂದರುವ ಅಗ್ನಿಯನ್ನು ಸ್ತುತಿಸಲಾಗಿದೆ ಈ ಋಕ್ಕಿನಲ್ಲಿ ಪಾರ್ಥಿವಾಗ್ನಿಯನ್ನು ಪ್ರಶಂಸಿಸಿದೆ ಪಾರ್ಥಿವಾಗ್ನಿ ಯಲ್ಲಿ ಯಜ್ಞಾಗ್ನಿ, ಗೃಹ್ಯಾಗ್ನಿ, ದವಾಗ್ನಿ ಎಂಬ ಪ್ರಭೇಧಗಳಿದ್ದರೂ ಇಲ್ಲಿ **ನಃ ಗಿರಃ ಜುಷತ**—ನಮ್ಮ ಸ್ತೋತ್ರಗಳನ್ನು ಸೇವಿಸಲಿ ಎಂಬ ಪ್ರಾರ್ಥನೆಇರುವುದರಿಂದ ಯಜ್ಞಾಗ್ನಿಯನ್ನೇ ಉದ್ದೇಶಿಸಿ ಸ್ತುತಿಸಿರುವುದೆಂದು ತಿಳಿಯಬೇಕು

**ದೈ ವ್ಯಂ ಜನಂ—ದೇವಸಂಬಂಧಿನಂ ಜನಂ** । ದೇವಸಂಬಂಧಿಗಳಾದ ಜನರನು , ಎಂದರೆ ಯಜ್ಞದಲ್ಲಿ ಉದ್ದಿಷ್ಟರಾದ ದೇವತೆಗಳನ್ನು ಎಂದಭಿಪ್ರಾಯವು.

॥ ಸಂಹಿತಾಪಾಠಃ ॥

**ತ್ವಮಗ್ನೇ ಸಪ್ರಥಾ ಅಸಿ ಜುಷ್ಟೋ ಹೋತಾ ವರೇಣ್ಯಃ ।**

**ತ್ವಯಾ ಯಜ್ಞಂ ವಿ ತನ್ವತೇ ॥ ೪ ॥**

ಪದಪಾಠಃ

**ತ್ವಂ । ಅಗ್ನೇ । ಸಽಪ್ರಥಾಃ । ಅಸಿ । ಜುಷ್ಟಃ । ಹೋತಾ । ವರೇಣ್ಯಃ ।**

**ತ್ವಯಾ । ಯಜ್ಞಂ । ವಿ । ತನ್ವತೇ ॥ ೪ ॥**

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಜುಷ್ಟಃ ಸರ್ವದಾ ಪ್ರೀತೋ ವರೇಣ್ಯಃ ಸರ್ವೈರ್ವರಣೀಯೋ ಹೋತಾ ತ್ವಂ ಸಪ್ರಥಾಃ ಸರ್ವತಃ ಪೃಥುರಸಿ । ಭವಸಿ । ತಥಾಹ ಯಾಸ್ಕಃ । ಸಪ್ರಥಾಃ ಸರ್ವತಃ ಪೃಥುಃ । ನಿ. ೬. ೭. । ಇತಿ । ಕಿಂಚ ಸರ್ವೇ ಯಜಮಾನಾಸ್ತ್ವಯಾ ಸಾಧನೇನ ಯಜ್ಞಂ ವಿತನ್ವತೇ ॥**

ಪ್ರತಿಪದಾರ್ಥ

**ಅಗ್ನೇ**—ಎಲೈ ಅಗ್ನಿಯೇ । **ಜುಷ್ಟಃ**—ಸಂತೃಪ್ತನೂ । **ವರೇಣ್ಯಃ**—ಎಲ್ಲರಿಂದಲೂ ಆದೃತನೂ । **ಹೋತಾ**—ಹೋಮಸಂಪಾದಕನೂ ಆದ । **ತ್ವಂ**—ನೀನು । **ಸಪ್ರಥಾಃ**—ಸರ್ವವಿಧದಲ್ಲಿಯೂ ಆಧಿಕ್ಯವನ್ನು ಪಡೆದವನಾಗಿ । **ಅಸಿ**—ಆಗಿದ್ದೀಯೆ । **ತ್ವಯಾ**—ನಿನ್ನ ಸಹಾಯದಿಂದಲೇ । **ಯಜ್ಞಂ**—ಯಜ್ಞವನ್ನು । **ವಿ ತನ್ವತೇ**—(ಯಜಮಾನರು) ನಿರ್ವಹಿಸುತ್ತಾರೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಸಂತೃಪ್ತನೂ, ಎಲ್ಲರಿಂದಲೂ ಆದೃತನೂ, ಹೋಮಸಂಪಾದಕನೂ ಆದ ನೀನು ಸರ್ವವಿಧದಲ್ಲಿಯೂ ಆಧಿಕ್ಯವನ್ನು ಪಡೆದಿದ್ದೀಯೆ. ನಿನ್ನ ಸಹಾಯದಿಂದಲೇ ಯಜಮಾನರು ಯಜ್ಞವನ್ನು ನಿರ್ವಹಿಸುತ್ತಾರೆ.

English Translation

You, Agni, are mighty and gracious, the (ministrant) priest, the desired (of all): through you worshippers complete the sacrifice.

ವಿಶೇಷವಿಷಯಗಳು

**ಜುಷ್ಟಃ—ಸರ್ವದಾ ಪ್ರೀತಃ** । ಯಜಮಾನರು ಯಜ್ಞದಲ್ಲಿ ಅರ್ಪಿಸುವ ಹವಿರಾದಿಗಳಿಂದ ಯಾವಾಗಲೂ ಪ್ರೀತನಾದವನು, ಸಂತೋಷಗೊಂಡಿರುವವನು ಎಂದಭಿಪ್ರಾಯವು

**ವರೇಣ್ಯಃ—ಸರ್ವೈರ್ವರಣೀಯಃ** । ಎಲ್ಲರಿಂದಲೂ ಅಪೇಕ್ಷಿಸಲ್ಪಡುವವನು. ಅಗ್ನಿಯಿಲ್ಲದೆ ಯಜ್ಞ ಮಾಡಲು ಸಾಧ್ಯವಿಲ್ಲವಾದ್ದರಿಂದ ಯಜ್ಞಮಾಡುವ ಯಜಮಾನರಾದಿಸಮಸ್ತಜನರೂ ಅಗ್ನಿಯನ್ನು ಅಪೇಕ್ಷಿಸುವರು, ಅಗ್ನಿಯು ಎಲ್ಲರಿಗೂ ಬೇಕಾದವನು. ಆದುರಿಂದಲೇ ಈ ಋಕ್ಕಿನ ಉತ್ತರಾರ್ಧದಲ್ಲಿ-**ತ್ವಯಾ ಯಜ್ಞಂ ವಿ ತನ್ವತೇ**—ಸರ್ವರೂ ನಿನ್ನಿಂದಲೇ (ನಿನ್ನ ಸಹಾಯದಿಂದಲೇ) ಯಜ್ಞವನ್ನು ನಿರ್ವಹಿಸುವರು ಎಂದು ಹೇಳಿದೆ.

**ಸಪ್ರಥಾಃ—ಸಪ್ರಥಾಃ ಸರ್ವತಃ ಪೃಥುಃ । ತ್ವಮಗ್ನೇ ಸಪ್ರಥಾ ಅಸೀತ್ಯಪಿ ನಿಗಮೋ ಭವತಿ** (ನಿ. ೬-೭) ಅಗ್ನಿಯು ಎಲ್ಲಾ ಕಡೆಯಲ್ಲಿಯೂ (ದಹಿಸುವಾಗ) ವ್ಯಾಪಿಸುವವನಾದ್ದರಿಂದ ಅತ್ಯಂತ ವಿಸ್ತೃತವಾಗಿ ಹರಡುವನು ಎಂದು **ಸಪ್ರಥಾಃ** ಎಂಬ ಶಬ್ದಕ್ಕೆ ಯಾಸ್ಕರು ಅರ್ಥವನ್ನು ವಿವರಿಸಿ ಈ ಋಕ್ಕನ್ನೇ ಉದಾಹರಣೆಗಾಗಿ ಕೊಟ್ಟಿದ್ದಾರೆ

॥ ಸಂಹಿತಾಪಾಠಃ ॥

**ತ್ವಾಮಗ್ನೇ ವಾಜಸಾತಮಂ ವಿಪ್ರಾ ವರ್ಧಂತಿ ಸುಷ್ಟುತಂ ।**

**ಸ ನೋ ರಾಸ್ವ ಸುವೀರ್ಯಂ ॥ ೫ ॥**

॥ ಪದಪಾಠಃ ॥

**ತ್ವಾಂ । ಅಗ್ನೇ । ವಾಜ೯ಸಾತಮಂ । ವಿಪ್ರಾಃ । ವರ್ಧಂತಿ । ಸು೯ಸ್ತುತಂ ।**

**ಸಃ । ನಃ । ರಾಸ್ವ । ಸು೯ವೀರ್ಯಂ ॥ ೫ ॥**

॥ ಸಾಯಣಭಾಷ್ಯಂ ॥

**ಹೇ ಅಗ್ನೇ ವಿಪ್ರಾ ಮೇಧಾವಿನಃ ಸ್ತೋತಾರೋ ವಾಜಸಾತಮಂ । ವಾಜೋಽನ್ನಂ । ತದ್ದದತಂ ಸುಷ್ಟುತಂ ಪೂರ್ವೈರ್ಮಹರ್ಷಿಭಿಃ ಸಮ್ಯಕ್ ಸ್ತುತಂ ತಂ ತ್ವಾಂ ವರ್ಧಂತಿ । ಸ್ತೋತ್ರೈರ್ವರ್ಧಯಂತಿ । ಸ ತ್ವಂ ನೋಽಸ್ಮಭ್ಯಂ ಸುವೀರ್ಯಂ ಸರ್ವೈಃ ಶ್ಲಾಘನೀಯಂ ಬಲಂ ರಾಸ್ವ । ದೇಹಿ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ವಿಪ್ರಾಃ**—ಮೇಧಾವಿಗಳಾದ ಸ್ತೋತೃಗಳು । **ವಾಜಸಾತಮಂ**—ಅನ್ನ ದಾತನೂ । **ಸುಷ್ಟುತಂ**—ಸಕಲರಿಂದಲೂ ಸ್ತುತನಾದವನೂ ಆದ । **ತ್ವಾಂ**—ನಿನ್ನನ್ನು । **ವರ್ಧಂತಿ**—ಪ್ರವೃದ್ಧ ನಾಗುವಂತೆ ಮಾಡುತ್ತಾರೆ । **ಸಃ**—ಅಂತಹ ನೀನು । **ನಃ**—ನನುಗೆ । **ಸುವೀರ್ಯಂ**—ಶ್ಲಾಘ್ಯವಾದ ಬಲವನ್ನು । **ರಾಸ್ವ**—ಕೊಡು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಮೇಧಾವಿಗಳಾದ ಸ್ತೋತೃಗಳು ಅನ್ನದಾತನೂ ಸಕಲರಿಂದಲೂ ಸ್ತುತನಾದವನೂ ಆದ ನಿನ್ನನ್ನು ಪ್ರವೃದ್ಧನಾಗುವಂತೆ ಮಾಡುತ್ತಾರೆ. ಅಂತಹ ನೀನು ನಮುಗೆ ಶ್ಲಾಘ್ಯವಾದ ಶಕ್ತಿಯನ್ನುಂಟುಮಾಡು.

English Translation

Wise worshippers exalt you, Agni, the bountiful giver of food, the deservedly lauded : bestow upon us excellent strength.

**ವಿಶೇಷವಿಷಯಗಳು**

ವಿಪ್ರಾಃ—ವಿಪ್ರಶಬ್ದವು ಮೇಧಾವಿನಾಮಗಳಲ್ಲಿ ಪಠಿತವಾಗಿದೆ. (ನಿ ೩-೧೫) ಬುದ್ಧಿವಂತರು ಎಂದರ್ಥ ಈ ಶಬ್ದವು ಯಜ್ಞದಲ್ಲಿ ಭಾಗವಹಿಸುವ ಋತ್ವಿಜರು, ಸ್ತೋತ್ರಕರ್ತರು ಎಂಬರ್ಥದಲ್ಲಿಯೂ ಉಪಯೋಗಿಸಲ್ಪಡುವುದು **ವಿವಿಧಾನರ್ಥಾನಸ್ಯ ಪ್ರಾಪ್ತುಂ ಧಾತೀತಿ ವಿಪ್ರಃ** ಎಂದು ದುರ್ಗಾಚಾರ್ಯರ ವಿವರಣೆ ಇದೆ. ಮೇಧಾವಿ ಎಂದರೆ ಬುದ್ಧಿಯುಳ್ಳವನು ಎಂದು ಹೇಳಿ ಯಾಸ್ಕರು **ಮೇಧಾವೀ ಕಸ್ಮಾನ್ಮೇಧಯಾ ತದ್ವಾನ್ ಭವತಿ । ಮೇಧಾ ಮತೌ ಧೀಯತೇ ।** (ನಿ. ೩-೧೯) ಎಂದು ನಿರ್ವಚನವನ್ನು ಹೇಳಿದಾರೆ ಮೇಧಾವಿ ಎಂದರೆ ಏನು ಎಂದು ಪ್ರಶ್ನೆಮಾಡಿ ಉತ್ತಮವಾದ ಪರಿಜ್ಞಾನವು ಬುದ್ಧಿಯಲ್ಲಿ ಯಾವಪುರುಷನಿಗಿರುವುದೋ ಅಂತಹ ಬುದ್ಧಿಶಕ್ತಿಯಿರುವ ಪುರುಷನು ಎಂದು ಅರ್ಥವಿವರಣೆಮಾಡಿದಾರೆ.

**ವಾಜಸಾತಮಂ ಸುಷ್ಟುತಂ ವಿಪ್ರಾ ವರ್ಧಂತಿ**—ತನ್ನನ್ನು ಸ್ತೋತ್ರಾದಿಗಳಿಂದ ಸ್ತುತಿಸಿ ಯಜ್ಞದಲ್ಲಿ ಹವಿಸ್ಸನ್ನರ್ಪಿಸುವ ಜನರು ಅನ್ನಪ್ರದನೂ ಸಕಲರಿಂದ ಸ್ತುತ್ಯನೂ ಆದ ಈ ಅಗ್ನಿಯನ್ನು ಯಜ್ಞಗಳಲ್ಲಿ ಸಮಿಧಾದಿ

ದ್ರವ್ಯಗಳಿಂದಲೂ, ಆಜ್ಯಾಹುತಿಗಳಿಂದಲೂ ಚೆನ್ನಾಗಿ ಪ್ರಜ್ವಲಿಸುವಂತೆ (ಪ್ರಕಾಶಮಾನವಾಗಿ ಉರಿಯುವಂತೆ) ಮಾಡುತ್ತಾರೆ ಎಂದಭಿಪ್ರಾಯವು.

॥ ಸಂಹಿತಾಪಾಠಃ ॥

ಅಗ್ನೇ ನೇಮಿರರಾಁಇವ ದೇವಾಂಸ್ತ್ವಂ ಪರಿಭೂರಸಿ ।
ಆ ರಾಧಶ್ಚಿತ್ರಮೃಂಜಸೇ ॥ ೬ ॥

॥ ಪದಪಾಠಃ ॥

ಅಗ್ನೇ । ನೇಮಿಃ । ಅರಾನ್ಽಇವ । ದೇವಾನ್ । ತ್ವಂ । ಪರಿಽಭೂಃ । ಅಸಿ ।
ಆ । ರಾಧಃ । ಚಿತ್ರಂ । ಋಂಜಸೇ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಂ ದೇವಾನ್ ಪರಿಭೂರಸಿ । ಸ್ವತೇಜಸಾ ಪರಿಭವಸಿ । ಕಥಮಿವ । ನೇಮಿ। ಪ್ರಕಾಶಮಾನಶ್ಚಕ್ರಸ್ಯ ವಾಹ್ಯೋ ವಲಯೋಽರಾನಿವ ನಾಭಾವರ್ಪಿತಾನ್ ಸೂಕ್ಷ್ಮಾನ್ ಸ್ಥಾಪಕಾನಿವ ಃ ಕಿಂಚ ತ್ವಂ ಚಿತ್ರಂ ನಾನಾವಿಧಂ ರಾಧಃ । ಸಾಧಯಂತ್ಯನೇನ ಪುರುಷಾರ್ಥಾನಿತಿ ರಾಧೋ ಧನಂ। ಆ ಋಂಜಸೇ । ಸ್ತೋತೃಭ್ಯಃ ಪ್ರಸಾಧಯ । ಧನನಾಮಸು ಪಾಠಾದ್ರಾಧೋ ಧನಮಿತ್ಯುಕ್ತಂ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ನೇಮಿಃ**—ಚಕ್ರದ ಹೊರವಲಯವು। **ಅರಾನಿವ**—ಚಕ್ರದ ಒಳಗಡೆಯ ಆರೆಕಡ್ಡಿಗಳನ್ನೆಲ್ಲಾ ಸುತ್ತುವರಿದಿರುವಂತೆ । **ತ್ವಂ**—ನೀನು । **ದೇವಾನ್**—ಸಕಲ ದೇವತೆಗಳನ್ನೂ। **ಪರಿಭೂರಸಿ**—ಸುತ್ತುವರೆದು ವ್ಯಾಪಿಸಿದ್ದೀಯೆ । **ಚಿತ್ರಂ**—ನಾನಾವಿಧವಾದ । **ರಾಧಃ**—ಧನಗಳನ್ನು । **ಆ ಋಂಜಸೇ**—(ನಮಗೆ) ಒದಗಿಸಿಕೊಡು.

॥ ಭಾವಾರ್ಥ ।

ಎಲೈ ಅಗ್ನಿಯೇ, ಚಕ್ರದ ಹೊರವಲಯವು ಚಕ್ರದ ಒಳಗಡೆಯ ಆರೆಕಡ್ಡಿಗಳನ್ನೆಲ್ಲಾ ಸುತ್ತುವರೆದಿರುವಂತೆ ನೀನು ಸಕಲ ದೇವತೆಗಳನ್ನೂ ಸುತ್ತುವರೆದು ವ್ಯಾಪಿಸಿದ್ದೀಯೆ ಅಂತಹ ಮಹತ್ವವುಳ್ಳ ನೀನು ಸ್ತೋತೃಗಳಾದ ನಮಗೆ ನಾನಾವಿಧವಾದ ಧನಗಳನ್ನು ತುಂಬಿಕೊಡು

English Translation

Agni, you encompass the gods as the circumference (surrounds) the spokes (of a wheel) : bestow manifold wealth upon us.

|| ವಿಶೇಷವಿಷಯಗಳು ||

**ಅಗ್ನೇ ನೇಮಿಃ ಅರಾನಿವ ತ್ವಂ ದೇವಾನ್ ಪರಿಭೂಃ ಅಸಿ** ರಥಚಕ್ರದಲ್ಲಿ ಹೊರವಲಯವು (Rim, or Tyre) ಅರೆಕಡ್ಡಿಗಳನ್ನು (Spokes) ಸುತ್ತುಕಟ್ಟಿ ವ್ಯಾಪಿಸಿರುವಂತೆ ಅಗ್ನಿಯು ಸಮಸ್ತ ದೇವತೆಗಳನ್ನೂ ಸುತ್ತುವರೆದು ಇರುವನು ಎಂದರೆ ಸಮಸ್ತ ದೇವತೆಗಳಿಗೂ ಹವಿಸ್ಸನ್ನೂ ಒಯ್ಯುವುದರಿಂದ ಆ ದೇವತೆಗಳ ಬಳಿಯಲ್ಲಿ ಇರುವನು ಎಂದರೆ ಹವಿರ್ವಹನಾರ್ಥವಾಗಿ ಸಕಲದೇವತೆಗಳ ಬಳಿಗೂ ಹೋಗಿಬರುವನು ಎಂಬಭಿಪ್ರಾಯವು ಸೂಚಿತವಾಗಿದೆ.

## ಹದಿನಾಲ್ಕನೆಯ ಸೂಕ್ತವು.

|| ಸಾಯಣಭಾಷ್ಯಂ ||

**ಅಗ್ನಿಂ ಸ್ತೋಮೇನೇತಿ ಷಡೃಚಂ ಚತುರ್ದಶಂ ಸೂಕ್ತಂ ಸುತಂಭರಸ್ಯಾರ್ಷಂ ಗಾಯತ್ರಮಾಗ್ನೇಯಂ । ಅಗ್ನಿಂ ಸ್ತೋಮೇನೇತ್ಯನುಕ್ರಮಣಿಕಾ || ಪ್ರಾತರನುವಾಕಾಶ್ವಿನಶಸ್ತ್ರಯೋಃ ಪೂರ್ವಸೂಕ್ತೇನ ಸಹೋಕ್ತೋ ವಿನಿಯೋಗಃ ||**

ಅನುವಾದವು—**ಅಗ್ನಿ ಸ್ತೋಮೇನ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹದಿನಾಲ್ಕನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಸುತಂಭರ ಆತ್ರೇಯಃ ಎಂಬುವನು ಋಷಿಯು, ಅಗ್ನಿಯು ದೇವತೆಯು, ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಅಗ್ನಿಂ ಸ್ತೋಮೇನ** ಎಂದು ಮೊದಲಾಗಿ ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಪರನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದಿನ ಸೂಕ್ತದ ವಿನಿಯೋಗದಲ್ಲಿಯೇ ಹೇಳಲಾಗಿದೆ.

### ಸೂಕ್ತ—೧೪

|| ಮಂಡಲ—೫ || ಅನುವಾಕ—೧ || ಸೂಕ್ತ—೧೪ ||
|| ಅಷ್ಟಕ—೪ || ಅಧ್ಯಾಯ— ೧ || ವರ್ಗ—೬ ||
ಸೂಕ್ತದಲ್ಲಿರುವ ಋಕ್ಸಂಖ್ಯೆ—೬
|| ಋಷಿಃ—ಸುತಂಭರ ಆತ್ರೇಯಃ ||
|| ದೇವತಾ—ಅಗ್ನಿಃ ||
|| ಛಂದಃ—ಗಾಯತ್ರೀ ||

ಸಂಹಿತಾಪಾಠಃ

**ಅಗ್ನಿಂ ಸ್ತೋಮೇನ ಬೋಧಯ ಸಮಿಧಾನೋ ಅಮರ್ತ್ಯಂ ।**

**ಹವ್ಯಾ ದೇವೇಷು ನೋ ದಧತ್ ॥ ೧ ॥**

ಪದಪಾಠಃ ॥

**ಅಗ್ನಿಂ । ಸ್ತೋಮೇನ । ಬೋಧಯ । ಸಂऽಇಧಾನಃ । ಅಮರ್ತ್ಯಂ ।**

**ಹವ್ಯಾ । ದೇವೇಷು । ನಃ । ದಧತ್ ॥ ೧ ॥**

॥ ಸಾಯಣಭಾಷ್ಯಂ ॥

**ಹೇ ಸ್ತೋತರಮರ್ತ್ಯಮಮರಣಧರ್ಮಾಣಮಗ್ನಿಂ ಸ್ತೋಮೇನ ಸ್ತೋತ್ರೇಣ ಬೋಧಯ । ಸ್ವಾಭಿಲಷಿತಾರ್ಥಸಿದ್ಧಯೇ ಪ್ರಬೋಧಯ । ಯೋऽಗ್ನಿಃ ಸಮಿಧಾನಃ ಸ್ತೋತ್ರೈಃ ಸಮ್ಯಕ್ ಪ್ರಕಾಶಮಾನಃ ಸ ನೋ ಹವ್ಯಾಸ್ಮದೀಯಾನಿ ಹವ್ಯಾನಿ ಹವೀಂಷಿ ದೇವೇಷು ದಧತ್ । ನಿದಧಾತು ॥**

॥ ಪ್ರತಿಪದಾರ್ಥ ॥

(ಎಲೈ ಸ್ತೋತೃವೇ) **ಅಮರ್ತ್ಯಂ**—ಮರಣಧರ್ಮರಹಿತನಾದ । **ಅಗ್ನಿಂ**—ಅಗ್ನಿಯನ್ನು । **ಸ್ತೋಮೇನ**—ಸ್ತೋತ್ರದಿಂದ । **ಬೋಧಯ**—ಎಚ್ಚರಗೊಳಿಸು । **ಸಮಿಧಾನಃ**—ಚೆನ್ನಾಗಿ ಪ್ರಜ್ವಲಿತನಾದ ಅಗ್ನಿಯು । **ನಃ**—ನಮ್ಮ । **ಹವ್ಯಾ**—ಹವಿಸ್ಸುಗಳನ್ನು । **ದೇವೇಷು**—ದೇವತೆಗಳಲ್ಲಿಗೆ । **ದಧತ್**—ತೆಗೆದುಕೊಂಡು ಹೋಗಿಡಲಿ.

॥ ಭಾವಾರ್ಥ ॥

ಎಲೈ ಸ್ತೋತೃವೇ, ಮರಣಧರ್ಮರಹಿತನಾದ ಅಗ್ನಿಯನ್ನು ಸ್ತೋತ್ರದಿಂದ ಎಚ್ಚರಗೊಳಿಸು. ಚೆನ್ನಾಗಿ ಪ್ರಜ್ವಲಿತನಾದ ಅಗ್ನಿಯು ನಮ್ಮ ಹವಿಸ್ಸುಗಳನ್ನು ದೇವತೆಗಳಲ್ಲಿಗೆ ತೆಗೆದುಕೊಂಡು ಹೋಗಿಡಲಿ.

## English Translation

Waken the immortal Agni with praise, that, being kindled, he may bear our oblations to the gods.

ವಿಶೇಷವಿಷಯಗಳು

ಈ ಋಕ್ಕಿನಲ್ಲಿ ಮರಣಧರ್ಮರಹಿತನಾದ ಅಗ್ನಿಯನ್ನು ಸ್ತೋತ್ರಾದಿಗಳಿಂದ ಎಚ್ಚರಗೊಳಿಸೆಂದು ಸ್ತೋತ್ರವನ್ನು ಉದ್ದೇಶಿಸಿ ಹೇಳಿದೆ. ಎಂದರೆ ಯಜ್ಞಮಾಡುವ ಯಜಮಾನನು ಅಧ್ವರ್ಯು ಮೊದಲಾದ ಋತ್ವಿಕ್ಕುಗಳನ್ನು ಉದ್ದೇಶಿಸಿ ಮಂತ್ರಪೂರ್ವಕವಾಗಿ ಅಗ್ನಿಯನ್ನು ಮಥನಮಾಡಿ ಉತ್ಪತ್ತಿಮಾಡಿ ಎಂದು ಹೇಳಿರುವನು

ಎಂಬರ್ಥವು ಇಲ್ಲಿ ಸೂಚಿತವಾಗಿದೆ ಅಗ್ನಿಯು ಹೇಗೆ ಮರಣಧರ್ಮರಹಿತನು ಎಂದರೆ, ಅಗ್ನಿಗೆ ಕಾಷ್ಠಗಳನ್ನು ಆಜ್ಯಾದ್ಯಾಹುತಿಗಳನ್ನು ಸಮರ್ಪಿಸುವುದರಿಂದ ಯಾವಾಗಲೂ ಆರಿಹೋಗದೆ ಸರ್ವದಾ ಪ್ರಕಾಶಿಸುತ್ತಿರುವನು ಎಂಬಭಿಪ್ರಾಯವು **ಅಮರ್ತ್ಯಂ** ಎಂಬ ಶಬ್ದದಿಂದ ಸೂಚಿತವಾಗಿದೆ. ಯಜ್ಞಮಾಡುವ ಯಜಮಾನನು ಯಜ್ಞಾರಂಭದಲ್ಲಿ ಮಾಡಬೇಕಾದ ಕರ್ಮಗಳಲ್ಲಿ ಅಗ್ನಿಮಥನವೂ ಒಂದಾಗಿರುವುದರಿಂದ ಮಥನಮಾಡಿ ಅಗ್ನಿಯನ್ನು ಉತ್ಪಾದನೆ ಮಾಡಬೇಕೆಂದು ಅಧ್ವರ್ಯುವನ್ನೂ, ಆ ಮಥನಕಾರ್ಯಕ್ಕಾಗಿ ನಿರ್ದಿಷ್ಟವಾದ ಮಂತ್ರಗಳನ್ನು ಪಠಿಸಬೇಕೆಂದು ಹೋತೃವನ್ನು, ಸ್ತೋಮ ಮೊದಲಾದ ಸಾಮಮಂತ್ರಗಳನ್ನು ಗಾನಮಾಡಬೇಕೆಂದು ಉದ್ಗಾತೃವನ್ನೂ, ಅಗ್ನಿಯಲ್ಲಿ ದೇವತೆಗಳನ್ನುದ್ದೇಶಿಸಿ ಹವಿರಾದಿಗಳನ್ನು ಹೋಮಮಾಡಬೇಕೆಂದು ಇತರ ಋತ್ವಿಕ್ಕುಗಳನ್ನೂ, ಕೊನೆಯಲ್ಲಿ ಹೋಮಮಾಡಿದ ಹವಿಸ್ಸುಗಳನ್ನು ಉದ್ದಿಷ್ಟರಾದ ದೇವತೆಗಳಿಗೆ ಒಯ್ಯಬೇಕೆಂದು ಅಗ್ನಿಯನ್ನೂ ಪ್ರಾರ್ಥಿಸಿರುವುದು ಸ್ಪಷ್ಟವಾಗಿದೆ

॥ ಸಂಹಿತಾಪಾಠಃ ॥

**ತಮಧ್ವರೇಷ್ವೀಳತೇ ದೇವಂ ಮರ್ತಾ ಅಮರ್ತ್ಯಂ ।**

**ಯಜಿಷ್ಠಂ ಮಾನುಷೇ ಜನೇ ॥ ೨ ॥**

॥ ಪದಪಾಠಃ ॥

**ತಂ । ಅಧ್ವರೇಷು । ಈಳತೇ । ದೇವಂ । ಮರ್ತಾಃ । ಅಮರ್ತ್ಯಂ ।**

**ಯಜಿಷ್ಠಂ । ಮಾನುಷೇ । ಜನೇ ॥ ೨ ॥**

॥ ಸಾಯಣಭಾಷ್ಯಂ ॥

**ಮರ್ತಾ ಮನುಷ್ಯಾ ದೇವಂ ದ್ಯೋತಮಾನಮಮರ್ತ್ಯಮಮರಣಧರ್ಮಾಣಂ ಮಾನುಷೇ ಮನುಷ್ಯಾಣಾಂ ಸಂಬಂಧಿನಿ ಜನೇ ಲೋಕೇ ಯಜಿಷ್ಠಂ ಯಷ್ಟೃತಮಂ ತಮಗ್ನಿಮಧ್ವರೇಷು ಸಪ್ತ-ತಂತುಷ್ವೀಳತೇ । ಸ್ತುವಂತಿ ॥**

॥ ಪ್ರತಿಪದಾರ್ಥ ॥

**ದೇವಂ**—ಪ್ರಕಾಶಮಾನನೂ । **ಮಾನುಷೇ**—ಮಾನವಸಂಬಂಧಿಯಾದ । **ಲೋಕೇ**—ಪ್ರಪಂಚದಲ್ಲಿ । **ಯಜಿಷ್ಠಂ**—ಅತ್ಯಂತ ಪೂಜ್ಯನೂ । **ಅಮರ್ತ್ಯಂ**—ಮರಣಧರ್ಮರಹಿತನೂ ಆದ । **ತಂ**—ಅಗ್ನಿಯನ್ನು । **ಮರ್ತಾಃ**—ಮಾನವರು । **ಅಧ್ವರೇಷು**—ಯಜ್ಞಗಳಲ್ಲಿ । **ಈಳತೇ**—ಸ್ತುತಿಸುತ್ತಾರೆ.

॥ ಭಾವಾರ್ಥ ॥

ಪ್ರಕಾಶಮಾನನೂ, ಮಾನವ ಪ್ರಪಂಚದಲ್ಲಿ ಅತ್ಯಂತ ಪೂಜ್ಯನೂ, ಮರಣಧರ್ಮರಹಿತನೂ ಆದ ಅಗ್ನಿಯನ್ನು ಮಾನವರು ಯಜ್ಞಗಳಲ್ಲಿ ಸ್ತುತಿಸುತ್ತಾರೆ.

## English Translation

Mortals worship him, an immortal divinity, at their sacrifices, most adorable among the human race.

ವಿಶೇಷವಿಷಯಗಳು

**ಮಾನುಷೇ ಲೋಕೇ ಅಧ್ವರೇಷು ಮರ್ತ್ಯಾಃ ಈಳತೇ**—ಮನುಷ್ಯ ಲೋಕದಲ್ಲಿ ಎಂದರೆ ಈ ಭೂಮಿಯಲ್ಲಿ, ಯಜ್ಞವೇದಿಯಲ್ಲಿ ನಡೆಯುತ್ತಿರುವ ಯಜ್ಞಕರ್ಮಗಳಲ್ಲಿ ಮನುಷ್ಯರಾದ ಯಜಮಾನರು ಅಗ್ನಿಯನ್ನು ನಾನಾವಿಧಸ್ತುತಿಗಳಿಂದ ಸ್ತುತಿಸುತ್ತಾರೆ ಎಂದಭಿಪ್ರಾಯವು

॥ ಸಂಹಿತಾಪಾಠಃ ॥

**ತಂ ಹಿ ಶಶ್ವಂತ ಈಳತೇ ಸ್ರುಚಾ ದೇವಂ ಘೃತಶ್ಚುತಾ ।**

**ಅಗ್ನಿಂ ಹವ್ಯಾಯ ವೋಳ್ಹವೇ ॥ ೩ ॥**

॥ ಪದಪಾಠಃ ॥

ತಂ । ಹಿ । ಶಶ್ವಂತಃ । ಈಳತೇ । ಸ್ರುಚಾ । ದೇವಂ । ಘೃತಽಶ್ಚುತಾ ।

ಅಗ್ನಿಂ । ಹವ್ಯಾಯ । ವೋಳ್ಹವೇ ॥ ೩ ॥

॥ ಸಾಯಣಭಾಷ್ಯಂ ॥

ಶಶ್ವಂತೋ ಬಹವಃ ಸ್ತೋತಾರಸ್ತಂ ದೇವಮಗ್ನಿಮೀಳತೇ । ಸ್ತುವಂತಿ । ಕೀದೃಶಾಸ್ತೇ । ಘೃತಶ್ಚುತಾ ಘೃತಂ ಕ್ಷರಂತ್ಯಾ ಸ್ರುಚಾ ಸಹಿತಾಃ । ಕಿಮರ್ಥಂ ಸ್ತುವಂತಿ । ಹವ್ಯಾಯ ಹವ್ಯವಹನಾರ್ಥಂ ಚರುಪುರೋಡಾಶಾದಿಲಕ್ಷಣಂ ಹವಿರ್ವೋಢವೇ ವೋಢುಂ ॥

॥ ಪ್ರತಿಪದಾರ್ಥ ॥

**ಘೃತಶ್ಚುತಾ**—ಆಜ್ಯಧಾರೆಯನ್ನು ಸುರಿಸುವ । **ಸ್ರುಚಾ**—ಹವಿಷ್ಪಾತ್ರೆಯೊಡಗೂಡಿದ । **ಶಶ್ವಂತಃ**—ಅನೇಕ ಸ್ತೋತೃಗಳು । **ದೇವಂ**—ದೇವತಾತ್ಮನಾದ । **ತಂ ಅಗ್ನಿಂ**—ಅದೇ ಅಗ್ನಿಯನ್ನು । **ಹವ್ಯಾಯ**—ಹವಿಸ್ಸನ್ನು । **ವೋಢವೇ**—(ದೇವತೆಗಳಿಗೆ) ವಹಿಸುವುದಕ್ಕಾಗಿ । **ಈಳತೇ**—ಸ್ತುತಿಸುತ್ತಾರೆ.

॥ ಭಾವಾರ್ಥ ॥

ಆಜ್ಯಧಾರೆಯನ್ನು ಅರ್ಪಿಸುವ ಹವಿಷ್ಪಾತ್ರೆಯೊಡಗೂಡಿದ ಅನೇಕ ಸ್ತೋತೃಗಳು, ದೇವತೆಗಳಿಗೆ ಹವಿಸ್ಸನ್ನು ವಹಿಸುದವುಕ್ಕಾಗಿ ದೇವತಾತ್ಮನಾದ ಅದೇ ಅಗ್ನಿಯನ್ನು ಸ್ತುತಿಸುತ್ತಾರೆ.

## English Translation

Numerous (worshippers), pouring out butter from the (sacrificial) ladle, glorify him, the divine Agni, that he may convey their oblation (to the gods).

|| ವಿಶೇಷವಿಷಯಗಳು ||

**ಘೃತಶ್ಚುತಾ—ಘೃತಂ ಕ್ಷರಂತ್ಯಾ ಸ್ರುಚಾ ।** ಘೃತವನ್ನು ಸುರಿಸುತ್ತಿರುವ, ಎಂದರೆ ಹೋಮ ಮಾಡುವಾಗ ಆಜ್ಯವನ್ನು ಮರದ ಸೌಟುಗಳಲ್ಲಿ ತುಂಬಿಕೊಂಡು ಅಗ್ನಿಯಲ್ಲಿ ಹೋಮಮಾಡುವರು. ಆ ಸೌಟುಗಳಿಗೆ ಸ್ರುಕ್ಕುಗಳೆಂದು ಹೆಸರು. ಅಂತಹ ಸೌಟುಗಳಿಂದ ತುಪ್ಪವನ್ನೂ ಅಗ್ನಿಯಲ್ಲಿ ಸುರಿಯುವುದರಿಂದ ಅವುಗಳನ್ನು ಘೃತಶ್ಚುತಾ ಎಂಬ ಶಬ್ದದಿಂದ ವರ್ಣಿಸಲಾಗಿದೆ

|| ಸಂಹಿತಾಪಾಠಃ ||

ಅಗ್ನಿರ್ಜಾತೋ ಅರೋಚತ ಘ್ನನ್ದಸ್ಯೂಞ್ಜ್ಯೋತಿಷಾ ತಮಃ ।
ಅವಿಂದದ್ಗಾ ಅಪಃ ಸ್ವಃ ॥ ೪ ॥

|| ಪದಪಾಠಃ ||

ಅಗ್ನಿಃ । ಜಾತಃ । ಅರೋಚತ । ಘ್ನನ್ । ದಸ್ಯೂನ್ । ಜ್ಯೋತಿಷಾ । ತಮಃ ।
ಅವಿಂದತ್ । ಗಾಃ । ಅಪಃ । ಸ್ವಗರಿತಿ ಸ್ವಃ ॥ ೪ ॥

|| ಸಾಯಣಭಾಷ್ಯಂ

**ಜಾತೋಽರಣ್ಯೋರ್ಮಥನೇನ ಪ್ರಾದುರ್ಭೂತೋಽಗ್ನಿರ್ದಸ್ಯೂನ್ ಯಜ್ಞವಿಘ್ನಕಾರಿಣಃ ಶತ್ರೂನ್ ಘ್ನನ್ ಹಿಂಸನ್ ಜ್ಯೋತಿಷಾ ಸ್ವೇನ ತೇಜಸಾ ತಮೋ ಘ್ನನ್ನರೋಚತ । ಅದೀಪ್ಯತ । ಕಿಂಚ ಗಾ ಅಪ ಉದಕಾನಿ ಸ್ವಃ ಸೂರ್ಯಂ ಚಾವಿಂದತ್ । ಅವೇದಯತ್ ॥**

|| ಪ್ರತಿಪದಾರ್ಥ ||

**ಅಗ್ನಿಃ**—ಅಗ್ನಿಯು । **ಜಾತಃ**—ಉತ್ಪನ್ನನಾದೊಡನೆಯೇ । **ದಸ್ಯೂನ್**—ಯಜ್ಞಕ್ಕೆ ವಿಘ್ನವನ್ನುಂಟು ಮಾಡುವ ಶತ್ರುಗಳನ್ನು । **ಘ್ನನ್**—ನಾಶಪಡಿಸುತ್ತಲೂ । **ಜ್ಯೋತಿಷಾ**—ತನ್ನ ಪ್ರಭೆಯಿಂದ । **ತಮಃ**—ಅಂಧಕಾರವನ್ನು (ಓಡಿಸುತ್ತಲೂ) । **ಅರೋಚತ**—ಪ್ರಕಾಶಿಸಿದನು । **ಗಾಃ**—ಗೋವುಗಳನ್ನೂ । **ಅಪಃ**—ಉದಕಗಳನ್ನು । **ಸ್ವಃ**—ಆದಿತ್ಯನನ್ನೂ । **ಅವಿಂದತ್**—ಪ್ರಕಾಶಪಡಿಸಿದನು.

|| ಭಾವಾರ್ಥ ||

ಅಗ್ನಿಯು ಉತ್ಪನ್ನನಾದೊಡನೆಯೇ, ಯಜ್ಞಕ್ಕೆ ವಿಘ್ನವನ್ನುಂಟುಮಾಡುವ ಶತ್ರುಗಳನ್ನು ನಾಶಪಡಿಸುತ್ತಲೂ, ತನ್ನ ಪ್ರಭೆಯಿಂದ ಅಂಧಕಾರವನ್ನು ಓಡಿಸುತ್ತಲೂ ಪ್ರಕಾಶಿಸಿದನು. ಗೋವುಗಳನ್ನೂ ಉದಕಗಳನ್ನೂ ಆದಿತ್ಯನನ್ನೂ ಪ್ರಕಾಶಪಡಿಸಿದನು.

## English Translation

Agni, as soon as born, blazes brightly, destroying the Dasyus, and (dispersing) the darkness by his lustre: he has discovered the cows, the waters, the sun.

|| ವಿಶೇಷವಿಷಯಗಳು ||

ಯಜ್ಞದಲ್ಲಿ ಅಗ್ನಿಯನ್ನು ಮಥನಕ್ರಿಯೆಯಿಂದ ಉತ್ಪತ್ತಿಮಾಡಿದಕೂಡಲೇ ಆ ಅಗ್ನಿಯ ಪ್ರಕಾಶದಿಂದ ಕತ್ತಲೆಯು ಪರಿಹಾರವಾಗಿ ಸರ್ವವೂ ಪ್ರಭೆಯಿಂದ ಬೆಳಗುವಂತಾಯಿತು ಗೋವುಗಳೂ ಉದಕಗಳೂ, ಸೂರ್ಯನೂ ಸಹ ತಮ್ಮ ತಮ್ಮ ಕರ್ಮಗಳಲ್ಲಿ ಪ್ರವೃತ್ತರಾದರು ಎಂದು ಮುಖ್ಯಾಭಿಪ್ರಾಯವು.

---

|| ಸಂಹಿತಾಪಾಠಃ ||

**ಅಗ್ನಿಮೀಳೇನ್ಯಂ ಕವಿಂ ಘೃತಪೃಷ್ಠಂ ಸಪರ್ಯತ ।**

**ವೇತು ಮೇ ಶೃಣವದ್ಧವಂ ॥ ೫ ॥**

|| ಪದಪಾಠಃ ||

**ಅಗ್ನಿಂ । ಈಳೇನ್ಯಂ । ಕವಿಂ । ಘೃತऽಪೃಷ್ಠಂ । ಸಪರ್ಯತ ।**

**ವೇತು । ಮೇ । ಶೃಣವತ್ । ಹವಂ ॥ ೫ ॥**

|| ಸಾಯಣಭಾಷ್ಯಂ ||

**ಹೇ ಜನಾ ಈಳೇನ್ಯಂ ಸ್ತುತ್ಯಂ ಕವಿಂ ಕ್ರಾಂತದರ್ಶಿನಂ ಘೃತಪೃಷ್ಠಂ ದೀಪ್ತೋಪರಿಭಾಗಮಗ್ನಿಂ ಸಪರ್ಯತ । ಪೂಜಯತ । ಸೋಽಗ್ನಿರ್ಮೇ ಹವಂ ಮದೀಯಮಾಹ್ವಾನಂ ವೇತು । ಕಾಮಯತಾಂ । ಶೃಣವತ್ । ಶೃಣೋತು ಚ ॥**

|| ಪ್ರತಿಪದಾರ್ಥ ||

**ಈಳೇನ್ಯಂ**—ಸ್ತುತಿಗೆ ಯೋಗ್ಯನೂ | **ಕವಿಂ**—ಕ್ರಾಂತದರ್ಶಿಯೂ | **ಘೃತಪೃಷ್ಠಂ**—ಘೃತಮೂಲವಾದ ಜ್ವಾಲೆಯುಳ್ಳವನೂ ಆದ | **ಅಗ್ನಿಂ**—ಅಗ್ನಿಯನ್ನು | **ಸಪರ್ಯತ**—ಪೂಜಿಸಿರಿ (ಅದೇ ಅಗ್ನಿಯು) | **ಮೇ**—ನನ್ನ | **ಹವಂ**—ಆಹ್ವಾನರೂಪವಾದ ಸ್ತುತಿಯನ್ನು | **ವೇತು**—ತಿಳಿಯಲಿ (ಮತ್ತು) | **ಶೃಣವತ್**—ಆಲಿಸಿ ಕೇಳಲಿ |

|| ಭಾವಾರ್ಥ ||

ಸ್ತುತಿಗೆ ಯೋಗ್ಯನೂ, ಕ್ರಾಂತದರ್ಶಿಯೂ ಘೃತಮೂಲವಾದ ಜ್ವಾಲೆಯುಳ್ಳವನೂ ಆದ ಅಗ್ನಿಯನ್ನು ಪೂಜಿಸಿರಿ ಅದೇ ಅಗ್ನಿಯು ನನ್ನ ಆಹ್ವಾನರೂಪವಾದ ಸ್ತುತಿಯನ್ನು ಅರಿತು ಆಲಿಸಿ ಕೇಳಲಿ

## English Translation

Worship the adorable Agni, the sage, whose summit blazes with butter: may he hear and comprehend my invocation.

ವಿಶೇಷವಿಷಯಗಳು

**ಘೃತಸೃಷ್ಠಂ—ದೀಪ್ತೋಪರಿಭಾಗಂ |** ಅಗ್ನಿಯಲ್ಲಿ ಆಜ್ಯ(ಘೃತ)ವನ್ನು ಹೋಮಮಾಡುವುದರಿಂದ ಅಗ್ನಿಯನ್ನು ಘೃತಪೃಷ್ಠಶಬ್ದದಿಂದ ವರ್ಣಿಸಲಾಗಿದೆ ಎಂದರೆ ಆಜ್ಯಾಹುತಿಗಳಿಂದ ಅಗ್ನಿಯು ಚೆನ್ನಾಗಿ ಪ್ರಜ್ವಲಿತನಾಗಿ ಬೆಳಗುತ್ತಿರುವನು. ಅಂತಹ ಪ್ರಕಾಶಮಾನವಾದ ಅಗ್ನಿಯನ್ನು ಪೂಜಿಸಿರಿ ಎಂದರ್ಥವು

|| ಸಂಹಿತಾಪಾಠಃ ||

ಅಗ್ನಿಂ ಘೃತೇನ ವಾವೃಧುಃ ಸ್ತೋಮೇಭಿರ್ವಿಶ್ವಚರ್ಷಣಿಂ |
ಸ್ವಾಧೀಭಿರ್ವಚಸ್ಯುಭಿಃ || ೬ ||

|| ಪದಪಾಠಃ ||

ಅಗ್ನಿಂ | ಘೃತೇನ | ವವೃಧುಃ | ಸ್ತೋಮೇಭಿಃ | ವಿಶ್ವऽಚರ್ಷಣಿಂ |
ಸುऽಆಧೀಭಿಃ | ವಚಸ್ಯುऽಭಿಃ || ೬ ||

|| ಸಾಯಣಭಾಷ್ಯಂ ||

ಋತ್ವಿಜೋ ವಿಶ್ವಚರ್ಷಣಿಂ ವಿಶ್ವಸ್ಯ ದ್ರಷ್ಟಾರಂ ಸ್ವಾಧೀಭಿಃ ಶೋಭನಾಧ್ಯಾನೈರ್ವಚಸ್ಯುಭಿಃ ಸ್ತುತಿಕಾಮೈರ್ದೇವೈಃ ಸಮೇತಮಗ್ನಿಂ ಘೃತೇನ ಸ್ತೋಮೇಭಿಃ ಸ್ತೋಮೈಃ ಸ್ತೋತ್ರೈರ್ವವೃಧುಃ | ಅವರ್ಧಯನ್ ||

|| ಪ್ರತಿಪದಾರ್ಥ ||

**ಸ್ವಾಧೀಭಿಃ**—ಉತ್ತಮವಾದ ಧ್ಯಾನಕ್ಕೆ ಪಾತ್ರರೂ | **ವಚಸ್ಯುಭಿಃ**—ಸ್ತುತಿಕಾಮರೂ ಆದ ದೇವತೆಗಳೊಡಗೂಡಿದವನೂ | **ವಿಶ್ವಚರ್ಷಣಿಂ**—ಸಮಸ್ತವನ್ನೂ ನೋಡುವ ಶಕ್ತಿಯುಳ್ಳವನೂ ಆದ | **ಅಗ್ನಿಂ**—ಅಗ್ನಿಯನ್ನು | **ಘೃತೇನ**—ಆಜ್ಯದಿಂದಲೂ | **ಸ್ತೋಮೇಭಿಃ**—ಸ್ತುತಿಗಳಿಂದಲೂ | **ವವೃಧುಃ**—ಪ್ರವೃದ್ಧನಾಗುವಂತೆ ಮಾಡಿದರು.

|| ಭಾವಾರ್ಥ ||

ಉತ್ತಮವಾದ ಧ್ಯಾನಕ್ಕೆ ಪಾತ್ರರೂ, ಸ್ತುತಿಕಾಮರೂ ಆದ ದೇವತೆಗಳೊಡಗೂಡಿವನೂ, ಸಮಸ್ತವನೂ ನೋಡುವ ಶಕ್ತಿಯುಳ್ಳವನೂ ಆದ ಅಗ್ನಿಯನ್ನು ಋತ್ವಿಕ್ಕುಗಳು ಆಜ್ಯದಿಂದಲೂ ಸ್ತುತಿಗಳಿಂದಲೂ ಪ್ರವೃದ್ಧನಾಗುವಂತೆ ಮಾಡಿದರು.

English Translation

They have augmented Agni, the beholder of all, with oblation and with praises, along with the gods, the objects of pious meditations, desirous of praise.

|| ವಿಶೇಷವಿಷಯಗಳು ||

ಯಜ್ಞದಲ್ಲಿ ಧ್ಯಾನಯೋಗ್ಯರೂ ಸ್ತುತಿಯೋಗ್ಯರೂ ಆದ ದೇವತೆಗಳೊಡನಿರುವ, ಸಮಸ್ತವನ್ನೂ ನೋಡಬಲ್ಲ ಅಗ್ನಿಯನ್ನು ಋತ್ವಿಕ್ಕುಗಳು ಆಜ್ಯಾಹುತಿಗಳಿಂದ ಮಂತ್ರಪೂರ್ವಕವಾಗಿ ಜಾಜ್ವಲ್ಯಮಾನವಾಗಿ ಬೆಳಗುವಂತೆ ಮಾಡಿದರು ಎಂದರೆ ಋತ್ವಿಕ್ಕುಗಳು ಮಂತ್ರಪೂರ್ವಕವಾಗಿ ಹೋಮ ಮಾಡುವ ಆಜ್ಯಾಹುತಿಗಳಿಂದ ಅಗ್ನಿಯು ಜಾಜ್ವಲ್ಯಮಾನವಾಗಿ ಬೆಳಗುತ್ತಾ ಪ್ರಕಾಶಿಸಿದನು ಎಂದಭಿಪ್ರಾಯವು.

## ಹದಿನೈದನೆಯ ಸೂಕ್ತವು.

**ದ್ವಿತೀಯೋಽನುವಾಕೇಽಷ್ಟಾದಶ ಸೂಕ್ತಾನಿ | ತತ್ರ ಪ್ರ ವೇಧಸ ಇತಿ ಪಂಚರ್ಚಂ ಪ್ರಥಮಂ ಸೂಕ್ತಮಾಂಗಿರಸಸ್ಯ ಧರುಣಸ್ಯಾರ್ಷಂ ತ್ರೈಷ್ಟುಭಮಾಗ್ನೇಯಂ | ಅತ್ರಾನುಕ್ರಮಣಿಕಾ | ಪ್ರ ವೇಧಸೇ ಪಂಚಾಂಗಿರಸೋ ಧರುಣ ಇತಿ || ಪ್ರಾತರನುವಾಕ ಆಗ್ನೇಯೇ ಕ್ರತೌ ತ್ರೈಷ್ಟುಭೇ ಛಂದಸ್ಯಾಶ್ವಿನಶಸ್ತ್ರೇ ಚೇದಂ ಸೂಕ್ತಂ | ಸೂತ್ರಿತಂ ಚ | ಪ್ರ ವೇಧಸೇ ಕವಯೇ ತ್ವಂ ನೋ ಅಗ್ನೇ ವರುಣಸ್ಯ ವಿದ್ವಾನ್ | ಆ. ೪-೧೩ | ಇತಿ ||**

ಅನುವಾದವು—ಐದನೆಯ ಮಂಡಲದ ಎರಡನೆಯ ಅನುವಾಕದಲ್ಲಿ ಹದಿನೆಂಟು ಸೂಕ್ತಗಳಿರುವವು. ಅವುಗಳಲ್ಲಿ **ಪ್ರ ವೇಧಸೇ** ಎಂಬ ಸೂಕ್ತವು ಮೊದಲನೆಯದು ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಧರುಣ ಆಂಗಿರಸಃ ಎಂಬುವನು ಋಷಿಯು, ಅಗ್ನಿಯು ದೇವತೆಯು, ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—

**ಪ್ರ ವೇಧಸೇ ಪಂಚಾಂಗಿರಸೋ ಧರುಣಃ** ಎಂದು ಹೇಳಿರುವುದು. ಪ್ರಾತರನುವಾಕಮಂತ್ರಪರನದ ಆಗ್ನೇಯ ಕ್ರತು ಸಂಬಂಧವಾದ ತ್ರಿಷ್ಟುಪ್‌ಛಂದಸ್ಸಿನ ಮಂತ್ರಗಳಿಗಾಗಿಯೂ ಆಶ್ವಿನಶಸ್ತ್ರಮಂತ್ರಗಳಪರನಕ್ಕಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಪ್ರ ವೇಧಸೇ ಕವಯೇ ತ್ವಂ ನೋ ಅಗ್ನೇ ವರುಣಸ್ಯ ವಿದ್ವಾನ್** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು.

## ಸೂಕ್ತ—೧೫.

ಮಂಡಲ—೫ || ಅನುವಾಕ—೨ || ಸೂಕ್ತ—೧೫ ||
ಅಷ್ಟಕ—೪ || ಅಧ್ಯಾಯ—೧ || ವರ್ಗ—೭ ||
|| ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ||
|| ಋಷಿಃ—ಧರುಣ ಆಂಗಿರಸಃ ||
|| ದೇವತಾ—ಅಗ್ನಿಃ
|| ಛಂದಃ—ತ್ರಿಷ್ಟುಪ್ ||

|| ಸಂಹಿತಾಪಾಠಃ ||

ಪ್ರ ವೇಧಸೇ ಕವಯೇ ವೇದ್ಯಾಯ ಗಿರಂ ಭರೇ ಯಶಸೇ ಪೂರ್ವ್ಯಾಯ ।
ಘೃತಪ್ರಸತ್ತೋ ಅಸುರಃ ಸುಶೇವೋ ರಾಯೋ ಧರ್ತಾ ಧರುಣೋ ವಸ್ವೋ ಅಗ್ನಿಃ ॥ ೧ ॥

|| ಪದಪಾಠಃ ||

ಪ್ರ । ವೇಧಸೇ । ಕವಯೇ । ವೇದ್ಯಾಯ । ಗಿರಂ । ಭರೇ । ಯಶಸೇ । ಪೂರ್ವ್ಯಾಯ ।
ಘೃತಽಪ್ರಸತ್ತಃ । ಅಸುರಃ । ಸುಽಶೇವಃ । ರಾಯಃ । ಧರ್ತಾ । ಧರುಣಃ । ವಸ್ವಃ । ಅಗ್ನಿಃ ॥ ೧ ॥

|| ಸಾಯಣಭಾಷ್ಯಂ ||

ಯೋಽಗ್ನಿರ್ಘೃತಪ್ರಸತ್ತೋ ಹವೀರೂಪೇಣ ಘೃತೇನ ಪ್ರಸನ್ನೋಽಸುರೋ ಬಲವಾನ್ ಸುಶೇವಃ । ಶೋಭನಂ ಶೇವಂ ಸುಖಂ ಯಸ್ಯಾಸೌ ಸುಶೇವಃ ಶೇವಮಿತಿ ಸುಖನಾಮಸು ಪಾಠಾತ್ । ರಾಯೋ ಧನಸ್ಯ ಧರ್ತಾ ಪೋಷಕೋ ಧರುಣೋ ಹವಿಷಾಂ ಧಾರಕೋ ವಸ್ವೋ ವಾಸಕೋಽಗ್ನಿರ್ಭವತಿ ವೇಧಸೇ ವಿಧಾತ್ರೇ ಕವಯೇ ಕ್ರಾಂತದೃಶೇ ವೇದ್ಯಾಯ ಸ್ತುತ್ಯಾಯ ॥ ವಿದಿರಯಂ ಮನಿನಾ ಸಮಾನಾರ್ಥೋ ಮನಿಶ್ಚ ಸ್ತುತಿಕರ್ಮಾ ॥ ಯಶಸೇ ಯಶಸ್ವಿನೇ ಪೂರ್ವ್ಯಾಯ ಮುಖ್ಯಾಯ ತಸ್ಮಾ ಅಗ್ನಯೇ ಗಿರಂ ಸ್ತುತಿಂ ಪ್ರ ಭರೇ । ಪ್ರಣಯಾನಿ ॥

|| ಪ್ರತಿಪದಾರ್ಥ ||

**ಅಗ್ನಿಃ**—ಅಗ್ನಿಯು | **ಘೃತಪ್ರಸತ್ತಃ**—ಘೃತದಿಂದ ತೃಪ್ತಿಹೊಂದಿದವನೂ | **ಅಸುರಃ**—ಶಕ್ತಿವಂತನೂ | **ಸುಶೇವಃ**—ಉತ್ತಮವಾದ ಸುಖವಿಶಿಷ್ಟನೂ | **ರಾಯಃ**—ಧನಕ್ಕೆ | **ಧರ್ತಾ**—ಪೋಷಕನೂ | **ಧರುಣಃ**—ಹವಿಸ್ಸನ್ನು ಧರಿಸುವವನೂ | **ವಸ್ವಃ**—ವಸತಿದಾಯಕನೂ ಆಗಿದ್ದಾನೆ | **ವೇಧಸೇ**—ಸೃಷ್ಟಿಕರ್ತನೂ | **ಕವಯೇ**—ಕ್ರಾಂತಪ್ರಜ್ಞನೂ | **ವೇದ್ಯಾಯ**—ಸ್ತುತಿಗೆ ಯೋಗ್ಯನೂ | **ಯಶಸೇ**—ಯಶಸ್ಸುಳ್ಳವನೂ | **ಪೂರ್ವ್ಯಾಯ**—ಪ್ರಧಾನನೂ ಆದ ಅಗ್ನಿಯನ್ನು ಉದ್ದೇಶಿಸಿ | **ಗಿರಂ**—ಸ್ತುತಿಯನ್ನು | **ಪ್ರ ಭರೇ**—ಉತ್ತಮವಾಗಿ ಸಂಪಾದಿಸಿ ಅರ್ಪಿಸುತ್ತೇನೆ.

|| ಪ್ರತಿಪದಾರ್ಥ ||

ಅಗ್ನಿಯು ಘೃತದಿಂದ ತೃಪ್ತಿಯನ್ನು ಹೊಂದುವವನೂ, ಶಕ್ತಿವಂತನೂ, ಉತ್ತಮವಾದ ಸುಖವಿಶಿಷ್ಟನೂ, ಧನಕ್ಕೆ ಪೋಷಕನೂ, ಹವಿಸ್ಸನ್ನು ಧರಿಸುವವನೂ ಮತ್ತು ವಸತಿದಾಯಕನೂ ಆಗಿದ್ದಾನೆ ಸೃಷ್ಟಿಕರ್ತನೂ, ಕ್ರಾಂತ ಪ್ರಜ್ಞನೂ, ಸ್ತುತಿಗೆ ಯೋಗ್ಯನೂ, ಯಶಸ್ಸುಳ್ಳವನೂ, ಪ್ರಧಾನನೂ ಆದ ಅಗ್ನಿಯನ್ನುದ್ದೇಶಿಸಿ ಉತ್ತಮವಾದ ಸ್ತುತಿಯನ್ನು ನಿರ್ಮಿಸಿ ಅರ್ಪಿಸುತ್ತೇನೆ.

English Translation

I offer praise to Agni, the creator, the far-seeing, the adorable, the renowned, the first (of the gods); he who is propitiated by oblations, the strong, the giver of happiness, the possessor of riches, the receiver of oblations, the bestower of dwellings

|| ಸಂಹಿತಾಪಾಠಃ ||

ಋತೇನ ಋತಂ ಧರುಣಂ ಧಾರಯಂತ ಯಜ್ಞಸ್ಯ ಶಾಕೇ ಪರಮೇ ವ್ಯೋಮನ್ ।
ದಿವೋ ಧರ್ಮನ್ಧರುಣೇ ಸೇದುಷೋ ನೄಂಜಾತೈರಜಾತಾँ ಅಭಿ ಯೇ ನನಕ್ಷುಃ ॥ ೨ ॥

|| ಪದಪಾಠಃ ||

ಋತೇನ | ಋತಂ | ಧರುಣಂ | ಧಾರಯಂತ | ಯಜ್ಞಸ್ಯ | ಶಾಕೇ | ಪರಮೇ | ವಿऽಓಮನ್ |
ದಿವಃ | ಧರ್ಮನ್ | ಧರುಣೇ | ಸೇದುಷಃ | ನೄನ್ | ಜಾತೈಃ | ಅಜಾತಾನ್ | ಅಭಿ | ಯೇ | ನನಕ್ಷುಃ || ೨ ||

॥ ಸಾಯಣಭಾಷ್ಯಂ ॥

**ಯೇ ಯಜಮಾನಾ ದಿವೋ ದ್ಯುಲೋಕಸ್ಯ ಧರುಣೇ ಧಾರಕೇ ಧರ್ಮನ್ಯಜ್ಞೇ ಸೇದುಷ ಆಸೀನಾನ್ ನ್ನನಜಾತಾನ್ದೇವಾನ್ ಜಾತೈರ್ಮನುಷ್ಯೈಋತ್ವಿಗ್ಭಿರಭಿ ನನಕ್ಷುಃ ಅಭಿಪ್ರಾಪ್ನುವಂತಿ ತೇ ಯಜಮಾನಾ ಯಜ್ಞಸ್ಯ ಧರುಣಂ ಧಾರಕಮೃತಂ ಸತ್ಯರೂಪಮಗ್ನಿಂ ಶಾಕೇ ಕರ್ಮಣಿ ನಿಮಿತ್ತೇ ಪರಮ ಉತ್ಕೃಷ್ಟೇ ವ್ಯೋಮನ್ ಸ್ಥಾನ ಉತ್ತರವೇದ್ಯಾಮೃತೇನ ಸ್ತೋತ್ರೇಣ ಧಾರಯಂತ । ಧಾರಯಂತಿ ॥**

॥ ಪ್ರತಿಪದಾರ್ಥ ॥

**ಯೇ**—ಯಾವ ಯಜಮಾನರು । **ದಿವಃ**—ದ್ಯುಲೋಕಕ್ಕೆ । **ಧರುಣೇ**—ಧಾರಕವಾದ । **ಧರ್ಮನ್**—ಯಜ್ಞದಲ್ಲಿ । **ಸೇದುಷಃ**—ಕುಳಿತಿರುವವರೂ । **ನ್ನನ್**—ನೇತೃಗಳೂ । **ಅಜಾತಾನ್**—ಜನ್ಮರಹಿತರೂ ಆದ ದೇವತೆಗಳನ್ನು । **ಜಾತೈಃ**—ಮಾನವರಾದ ಋತ್ವಿಕ್ಕುಗಳೊಡನೆ । **ಅಭಿ ನನಕ್ಷುಃ**—ಒಟ್ಟಿಗೆ ಸೇರಿಸುವರೋ (ಆ ಯಜಮಾನರು) । **ಯಜ್ಞಸ್ಯ**—ಯಜ್ಞಕ್ಕೆ । **ಧರುಣಂ**—ಧಾರಕನೂ । **ಋತಂ**—ಸತ್ಯಾತ್ಮನೂ ಆದ ಅಗ್ನಿಯನ್ನು । **ಶಾಕೇ**—ಕರ್ಮನಿಮಿತ್ತವಾದುದೂ । **ಪರಮೇ**—ಉತ್ಕೃಷ್ಟವಾದುದೂ ಆದ । **ವ್ಯೋಮನ್**—ಉತ್ತರವೇದಿರೂಪವಾದ ಸ್ಥಾನದಲ್ಲಿ । **ಋತೇನ**—ಸ್ತುತಿಯೊಡನೆ । **ಧಾರಯಂತ**—ಸ್ಥಾಪಿಸಿ ನಿಲ್ಲಿಸಿದ್ದಾರೆ.

॥ ಭಾವಾರ್ಥ ॥

ಯಾವ ಯಜಮಾನರು ದ್ಯುಲೋಕಕ್ಕೆ ಧಾರಕವಾದ ಯಜ್ಞದಲ್ಲಿ ಕುಳಿತಿರುವವರೂ, ನೇತೃಗಳೂ, ಜನ್ಮರಹಿತರೂ ಆದ ದೇವತೆಗಳನ್ನು ಮಾನವರಾದ ಋತ್ವಿಕ್ಕುಗಳೊಡನೆ ಒಟ್ಟಿಗೆ ಸೇರಿಸುವರೋ ಆ ಯಜಮಾನರು ಯಜ್ಞಕ್ಕೆ ಧಾರಕನೂ, ಸತ್ಯಾತ್ಮನೂ ಆದ ಅಗ್ನಿಯನ್ನು ಕರ್ಮನಿಮಿತ್ತವಾದುದೂ, ಉತ್ಕೃಷ್ಟವಾದುದೂ ಆದ ಉತ್ತರವೇದಿರೂಪವಾದ ಸ್ಥಾನದಲ್ಲಿ ಸ್ತುತಿಪೂರ್ವಕವಾಗಿ ಸ್ಥಾಪಿಸಿ ನಿಲ್ಲಿಸಿದ್ದಾರೆ.

English Translation

They are detaining by sacrifice the true recipient (of offerings) in the most eminent place of the ceremony, who brings together the leaders (of the rite), the unborn, with the born (or gods and men), as seated at the solemnity which is the stay of heaven.

---

॥ ಸಂಹಿತಾಪಾಠಃ ॥

**ಅಂಹೋಯುವಸ್ತನ್ವಸ್ತನ್ವತೇ ವಿ ವಯೋ ಮಹದ್ದುಷ್ಟರಂ ಪೂರ್ವ್ಯಾಯ।**

**ಸ ಸಂವತೋ ನವಜಾತಸ್ತುತುರ್ಯಾತ್ಸಿಂಹಂ ನ ಕ್ರುದ್ಧಮಭಿತಃ ಪರಿ ಷ್ಠುಃ ॥ ೩ ॥**

॥ ಪದಪಾಠಃ ॥

ಅಂಹಃಽಯುವಃ । ತನ್ವಃ । ತನ್ವತೇ । ವಿ । ವಯಃ । ಮಹತ್ । ದುಸ್ತರಂ । ಪೂರ್ವ್ಯಾಯ ।

ಸಃ । ಸಂಽವತಃ । ನವಃಜಾತಃ । ತುತುರ್ಯಾತ್ । ಸಿಂಹಂ । ನ । ಕ್ರುದ್ಧಂ । ಅಭಿತಃ । ಪರಿ । ಸ್ಥುಃ ॥

॥ ಸಾಯಣಭಾಷ್ಯಂ ॥

**ಯೇ ಯಜಮಾನಾಃ ಪೂರ್ವ್ಯಾಯ ಮುಖ್ಯಾಯಾಸ್ಮಾ ಅಗ್ನಯೇ ಮಹದಧಿಕಂ ದುಷ್ಟರಂ ರಾಕ್ಷಸೈರ್ದುರ್ಷ್ಪ್ರಪಂ ವಯೋ ಹವೀರೂಪಮನ್ನಂ ಪ್ರಯಚ್ಛಂತಿ ತೇ ಯಜಮಾನಾಸ್ತನ್ವಃ ಸ್ವಾಸ್ತ್ರನೂರಂಹೋಯುವೋಽಂಹಸಾ ಪಿಯೋಜಿಕಾ ವಿ ತನ್ವತೇ । ವಿಸ್ತಾರಯಂತಿ । ನವಜಾತಃ ಸೋಽಗ್ನಿಃ ಸಂವತಃ ಸಂಗತಾನ್ ಶತ್ರೂನ್ ತುತುರ್ಯಾತ್ । ತರತು । ಕಿಂಚಾಭಿತಃ ಸರ್ವತೋ ವರ್ತಮಾನಾಃ ಶತ್ರವೋ ಮಾಂ ಪರಿ ವರ್ಜಯಿತ್ವಾ ಸ್ಥುಃ । ತಿಷ್ಠೇಯುಃ । ಕಥಮಿವ । ಮೃಗಾಃ ಕ್ರುದ್ಧಂ ಸಿಂಹಂ ನ ಸಿಂಹಮಿವ ॥**

॥ ಪ್ರತಿಪದಾರ್ಥ ॥

**(ಯೇ**—ಯಾವ ಯಜಮಾನರು) **ಪೂರ್ವ್ಯಾಯ**—ಪ್ರಧಾನನಾದ ಅಗ್ನಿದೇವನಿಗೆ । **ಮಹತ್**—ಅಧಿಕವಾದುದೂ । **ದುಷ್ಟರಂ**—ಅಸುರರಿಂದ ಹೊಂದಲು ಸಾಧ್ಯವಿಲ್ಲದುದೂ ಆದ । **ವಯಃ**—ಅನ್ನವನ್ನು (ಹವಿಸ್ಸನ್ನು) ಅರ್ಪಿಸುವರೋ (ಆ ಯಜಮಾನರು) । **ತನ್ವಃ**—ತಮ್ಮ ಶರೀರಗಳನ್ನು । **ಅಂಹೋಯುವಃ**—ಪಾಪರಹಿತವಾದುದನ್ನಾಗಿ ಮಾಡಿ । **ವಿ ತನ್ವತೇ**—ವೃದ್ಧಿಪಡಿಸಿಕೊಳ್ಳುತ್ತಾರೆ । **ನವಜಾತಃ**—ನೂತನವಾಗಿ ಉತ್ಪನ್ನನಾದ । **ಸಃ**—ಅಗ್ನಿಯು । **ಸಂವತಃ**—ಸುತ್ತಲೂ ಸೇರಿರುವ ಶತ್ರುಗಳನ್ನು । **ತುತುರ್ಯಾತ್**—ದೂರ ಓಡಿಸಲಿ । **ಕ್ರುದ್ಧಂ**—ಕೋಪಗೊಂಡ । **ಸಿಂಹಂ ನ**—ಸಿಂಹಕ್ಕೆ ಬೆದರಿ ಮೃಗಗಳೆಲ್ಲವೂ ಬಹುದೂರಪ್ರದೇಶಗಳಲ್ಲಿಯೇ ನಿಲ್ಲುವಂತೆ । **ಅಭಿತಃ**—ನನ್ನ ಸುತ್ತಲೂ ಸೇರಿರುವ ಶತ್ರುಗಳು । **ಪರಿ**—ನನ್ನನ್ನು ಬಿಟ್ಟು (ನನಗೆ ಬೆದರಿ) । **ಸ್ಥುಃ**—ದೂರದಲ್ಲಿಯೇ ನಿಂತಿರುವಂತಾಗಲಿ

॥ ಭಾವಾರ್ಥ ॥

ಯಾವ ಯಜಮಾನರು ಪ್ರಧಾನನಾದ ಅಗ್ನಿದೇವನಿಗೆ ಅತ್ಯಧಿಕವಾದುದೂ, ಅಸುರರಿಂದ ಹೊಂದಲು ಸಾಧ್ಯವಿಲ್ಲದುದೂ ಆದ ಹವಿಸ್ಸನ್ನು ಅರ್ಪಿಸುವರೋ ಆ ಯಜಮಾನರು ತಮ್ಮ ಶರೀರಗಳನ್ನು ಪಾಪರಹಿತವಾದುದನ್ನಾಗಿ ಮಾಡಿ ವೃದ್ಧಿಪಡಿಸಿಕೊಳ್ಳುತ್ತಾರೆ ನೂತನವಾಗಿ ಉತ್ಪನ್ನನಾದ ಅಗ್ನಿಯು ಸುತ್ತಲೂ ಸೇರಿರುವ ಶತ್ರುಗಳನ್ನು ದೂರವಾಗಿ ಓಡಿಸಲಿ. ಕೋಪಗೊಂಡಿರುವ ಸಿಂಹಕ್ಕೆ ಬೆದರಿ ಮೃಗಗಳೆಲ್ಲವೂ ಬಹುದೂರಪ್ರದೇಶದಲ್ಲಿ ನಿಲ್ಲುವಂತೆ ನನ್ನನ್ನು ಕಂಡು ಬೆದರಿದ ಶತ್ರುಗಳೆಲ್ಲರೂ ನನ್ನ ಹತ್ತಿರ ಸುಳಿಯದೇ ದೂರದಲ್ಲಿಯೇ ನಿಂತಿರುವಂತಾಗಲಿ

English Translation

They who (present) to the chief (of the gods) the great food (of sacrifice, unattainable (by the Rakshasas), enjoy forms exempt from defect: may that new born Agni scatter assembled (hosts): let them stand from around me, as (deer avoid) an angry lion.

॥ ಸಂಹಿತಾಪಾಠಃ ॥

ಮಾತೇವ ಯದ್ಭರಸೇ ಪಪ್ರಥಾನೋ ಜನಂಜನಂ ಧಾಯಸೇ ಚಕ್ಷಸೇ ಚ ।
ವಯೋವಯೋ ಜರಸೇ ಯದ್ದಧಾನಃ ಪರಿ ತ್ಮನಾ ವಿಷುರೂಪೋ ಜಿಗಾಸಿ॥

॥ ಪದಪಾಠಃ ॥

**ಮಾತಾಽಇವ । ಯತ್ । ಭರಸೇ । ಪಪ್ರಥಾನಃ । ಜನಂಽಜನಂ । ಧಾಯಸೇ । ಚಕ್ಷಸೇ । ಚ ।**
**ವಯಃಽವಯಃ । ಜರಸೇ । ಯತ್ । ದಧಾನಃ । ಪರಿ । ತ್ಮನಾ । ವಿಷುಽರೂಪಃ । ಜಿಗಾಸಿ ॥ ೪ ॥**

॥ ಸಾಯಣಭಾಷ್ಯಂ ॥

**ಪಪ್ರಥಾನಃ ಸರ್ವತ್ರ ಪ್ರಥಮಾನೋ ಯದ್ಯಸ್ತ್ವಂ ಮಾತೇವ ಜನನೀವ ಜನಂ ಜನಂ ಸರ್ವಂ ಜನಂ ಭರಸೇ ಬಿಭರ್ಷಿ । ಕಿಂಚ ದಾಯಸೇ ಧಾರಣಾಯ ಚಕ್ಷಸೇ ದರ್ಶನಾಯ ಚ ಸರ್ವೈಃ ಪ್ರಾರ್ಥ್ಯಸೇ। ಯದ್ಯದಾ ದಧಾನೋ ಧಾರ್ಯಮಾಣೋ ಭವಸಿ ತದಾ ವಯೋ ವಯಃ ಸರ್ವಮನ್ನಂ ಜರಸೇ । ಜರಯಸಿ । ಅಪಿ ಚ ವಿಷುರೂಪೋ ನಾನಾರೂಪಃ ಸನ್ ತ್ಮನಾತ್ಮನಾ ಪರಿ ಜಿಗಾಸಿ । ಸರ್ವಭೂತಾನಿ ಪರಿಗಚ್ಛಸಿ ॥**

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಯತ್**—ಯಾವಾಗ । **ಪಪ್ರಥಾನಃ**—ಸರ್ವತ್ರ ವೃದ್ಧಿಯನ್ನು ಪಡೆದು । **ಮಾತೇವ**—ಜನನಿಯಂತೆ । **ಜನಂಜನಂ**—ಸಕಲ ಜನರನ್ನೂ । **ಭರಸೇ**—ಭರಿಸುವೆಯೋ (ಯಾವಾಗ) । **ಧಾಯಸೇ**—ಜಗದ್ಧಾರಣೆಗೂ । **ಚಕ್ಷಸೇ ಚ**—ಅನುಗ್ರಹಿಸಿ ನೋಡುವುದಕ್ಕೂ ಸಹ (ಪ್ರಾರ್ಥಿತನಾಗುವೆಯೋ) । ಮತ್ತು **ಯತ್**—ಯಾವಾಗ । **ದಧಾನಃ**—ಸರ್ವರಿಂದಲೂ ಧರಿಸಲ್ಪಟ್ಟು । **ವಯೋ ವಯಃ**-ಸಮಸ್ತವಾದ ಅನ್ನವನ್ನೂ । **ಚರಸೇ**—ಪಕ್ವವಾಗುವಂತೆ ಮಾಡುವೆಯೋ (ಆಗ) । **ವಿಷುರೂಪಃ**—ನಾನಾವಿಧವಾದ ರೂಪವುಳ್ಳವನಾಗಿ । **ತ್ಮನಾ**—ಸ್ವಮಾಹಾತ್ಮ್ಯದಿಂದಲೇ । **ಪರಿ ಜಿಗಾಸಿ**—ಸಕಲವನ್ನೂ ವ್ಯಾಪಿಸಿ ನಿನ್ನ ಅಂತರ್ಗತವಾಗುವಂತೆ ಮಾಡಿ ಕೊಳ್ಳುತ್ತೀಯೆ.

॥ಭಾವಾರ್ಥ॥

ಎಲೈ ಅಗ್ನಿಯೇ, ಯಾವಾಗ ನೀನು ಸರ್ವತ್ರ ವೃದ್ಧಿಯನ್ನು ಪಡೆದು ಜನನಿಯಂತೆ ಸಕಲ ಜನರನ್ನೂ ಭರಿಸುವೆಯೋ, ಜಗದ್ಧಾರಣೆಗೂ ಮತ್ತು ಅನುಗ್ರಹಾತ್ಮಕವಾದ ದೃಷ್ಟಿಯಿಂದ ನೋಡುವುದಕ್ಕೂ ಪ್ರಾರ್ಥಿತನಾಗುವೆಯೋ ಮತ್ತು ಯಾವಾಗ ಸರ್ವರಿಂದಲೂ ಧರಿಸಲ್ಪಟ್ಟು ಸಮಸ್ತಸಾದ ಅನ್ನವನ್ನೂ ಪಕ್ವವಾಗುವಂತೆ ಮಾಡುವೆಯೋ, ಆಗ ನೀನು ನಾನಾವಿಧವಾದ ರೂಪವುಳ್ಳವನಾಗಿ ಸ್ವಮಾಹಾತ್ಮ್ಯದಿಂವಲೇ ಸಕಲವನ್ನೂ ವ್ಯಾಪಿಸಿ ನಿನ್ನ ಅಂತರ್ಗತವಾಗುವಂತೆ ಮಾಡಿಕೊಳ್ಳುತ್ತೀಯೆ.

## English Translation

When, everywhere predominating, you cherish all men like a mother, and (are implored by all) to behold and to support them: and when, being detained, you mature every kind of food, then, multiform (Agni), you comprise (all beings) in yourself.

ಸಂಹಿತಾಪಾಠಃ

ವಾಜೋ ನು ತೇ ಶವಸಸ್ಪಾತ್ವಂತಮುರಂ ದೋಘಂ ಧರುಣಂ ದೇವ ರಾಯಃ ।
ಪದಂ ನ ತಾಯುರ್ಗುಹಾ ದಧಾನೋ ಮಹೋ ರಾಯೇ ಚಿತಯನ್ನತ್ರಿಮಸ್ಪಃ ॥ ೫ ॥

ಪದಪಾಠಃ ॥

ವಾಜಃ । ನು । ತೇ । ಶವಸಃ । ಪಾತು । ಅಂತಂ । ಉರುಂ । ದೋಘಂ । ಧರುಣಂ । ದೇವ । ರಾಯಃ ।
ಪದಂ । ನ । ತಾಯುಃ । ಗುಹಾ । ದಧಾನಃ । ಮಹಃ । ರಾಯೇ । ಚಿತಯನ್ । ಅತ್ರಿಂ । ಅಸ್ಪರಿತ್ಯಸ್ಪಃ ॥

॥ ಸಾಯಣಭಾಷ್ಯಂ ॥

ಹೇ ದೇವ ದ್ಯೋತಮಾನಾಗ್ನೇ ಉರುಂ ಪೃಥುಂ ದೋಘಂ ಕಾಮಾನಾಂ ದೋಗ್ಧಾರಂ ರಾಯೋ ಧನಸ್ಯ ಧರುಣಂ ಧಾರಕಂ ವಾಜೋ ಹವಿರ್ಲಕ್ಷಣಮನ್ನಂ ತೇ ತ್ವದೀಯಸ್ಯ ಶವಸೋ ಬಲಸ್ಯಾಂತಂ ಸಮಾಪ್ತಿಂ ಸಂಪೂರ್ತಿಂ ನು ಅದ್ಯ ಪಾತು । ರಕ್ಷತು । ತಾಯುರ್ನ ತಸ್ಕರೋ ಯಥಾ ಗುಹಾ ಗುಹಾಯಾಂ ಪದಂ ದ್ರವ್ಯಂ ದಧಾನೋ ಧಾರಯನ್ ರಕ್ಷತಿ ತದ್ವತ್ ಮಹೋ ಮಹತೇ ರಾಯೇ ಧನಾಯ ಧನಲಾಭಾರ್ಥಂ ಚಿತಯನ್ ಸನ್ಮಾರ್ಗಂ ಪ್ರಕಾಶಯನ್ ಅತ್ರಿಮಸ್ಪಃ । ಅತ್ರಿಮೃಷಿಂ ಪ್ರೀಣಯಃ ॥ ಸ್ಪೃ ಪ್ರೀಣನಪಾರಣಯೋರಿತಿ ಧಾತುಃ ॥

॥ ಪ್ರತಿಪದಾರ್ಥ ॥

**ದೇವ**—ದೇವತಾತ್ಮನಾದ ಎಲೈ ಅಗ್ನಿಯೇ । **ಉರುಂ**—ಪ್ರಭೂತವಾದುದೂ । **ದೋಘಂ**—ಕಾಮವರ್ಷಕವಾದುದೂ । **ರಾಯಃ**—ಸಂಪತ್ತಿಗೆ । **ಧರುಣಂ**—ಧಾರಕವಾದುದೂ ಆದ । **ವಾಜಃ**—ಹವಿಸ್ಸಿನ ರೂಪದ ಅನ್ನವು । **ತೇ**—ನಿನ್ನ । **ಶವಸಃ**—ಶಕ್ತಿಯ । **ಅಂತಂ**—ಅವಧಿಯನ್ನು । **ನು**—ಈಗ । **ಪಾತು**—ರಕ್ಷಿಸಲಿ । **ಮಹಃ**—

ಮಹತ್ತಾದ । **ರಾಯೇ**—ಧನಕ್ಕೆ ।**ಚಿತಯನ್**—ನಮಗೆ ಸನ್ಮಾರ್ಗವನ್ನು ತೋರಿಸುತ್ತಾ । **ಗುಹಾ**—ಗುಹೆಯಲ್ಲಿ । **ಪದಂ**—ಗುಪ್ತವಾಗಿಟ್ಟಿರುವ ದ್ರವ್ಯವನ್ನು । **ದಧಾನಃ**—ಹೊಂದಿದ । **ತಾಯುಃ ನ**—ಕಳ್ಳನು ಎಚ್ಚರದಿಂದ ಅದನ್ನು । ರಕ್ಷಿಸುವಂತೆ । **ಅತ್ರಿಮುಷ್ಟಃ**—ಜಾಗರೂಕತೆಯಿಂದ ಅತ್ರಿಯನ್ನು ರಕ್ಷಿಸುತ್ತಾ ತೃಪ್ತಿಪಡಿಸು.

॥ ಭಾವಾರ್ಥ ॥

ದೇವತಾತ್ಮನಾದ ಎಲೈ ಅಗ್ನಿಯೇ, ಪ್ರಭೂತವಾದುದೂ, ಕಾಮವರ್ಷಕವಾದುದೂ, ಸಂಪತ್ತಿಗೆ ಧಾರಕವಾದುದೂ ಆದ ಹವಿಸ್ಸಿನ ರೂಪದ ಅನ್ನವು ನಿನ್ನ ಶಕ್ತಿಯನ್ನು ಪೂರ್ಣವಾಗಿ ರಕ್ಷಿಸಲಿ. ನೀನು ಮಹತ್ತಾದ ಧನಲಾಭಕ್ಕಾಗಿ ನಮಗೆ ಸನ್ಮಾರ್ಗವನ್ನು ತೋರಿಸುತ್ತಾ ಗುಹೆಯಲ್ಲಿ ಗುಪ್ತವಾಗಿಟ್ಟಿರುವ ದ್ರವ್ಯವನ್ನು ಹೊಂದಿದ ಕಳ್ಳನು ಎಚ್ಚರದಿಂದ ಅದನ್ನು ರಕ್ಷಿಸುವಂತೆ ಅತ್ರಿಯನ್ನು ಜಾಗರೂಕತೆಯಿಂದ ರಕ್ಷಿಸಿ ತೃಪ್ತಿಪಡಿಸು.

English Translation

Divine Agni, may the (sacrificial) food, the vast yielder (of benefits to men), the sustainer of riches, support the utmost of your vigour; and do you, considering (the means of acquiring) great riches, like a thief keeping concealed the article (he has stolen), be propitious to Atri.

## ಹದಿನಾರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಬೃಹದ್ವಯ ಇತಿ ಪಂಚರ್ಚಂ ದ್ವಿತೀಯಂ ಸೂಕ್ತಮಾತ್ರೇಯಸ್ಯ ಪೂರೋರಾರ್ಷಂ । ಅಂತ್ಯಾ ಪಂಕ್ತಿಃ ಶಿಷ್ಟಾ ಅನುಷ್ಟುಭಃ । ಅಗ್ನಿರ್ದೇವತಾ । ತಥಾ ಚಾನುಕ್ರಾಂತಂ । ಬೃಹತ್ಪೂರುಃ ಪಂಕ್ತ್ಯಂತಂ ಹೀತಿ ॥ ಪ್ರಾತರನುವಾಕ ಆಗ್ನೇಯೇ ಕ್ರತಾವಾನುಷ್ಟುಭೇ ಛಂದಸ್ಯಾಶ್ವಿನಶಸ್ತ್ರೇ ಚೇದಮಾದೀನಿ ದಶ ಸೂಕ್ತಾನಿ ಚತುರ್ಥನವಮವರ್ಜಿತಾನಿ । ಆದಿತಸ್ತ್ರಿಷು ಸೂಕ್ತೇಷ್ವಂತ್ಯಾಮುದ್ಧರೇತ್ । ತಥಾ ಚ ಸೂತ್ರಿತಂ । ಬೃಹದ್ವಯ ಇತಿ ದಶಾನಾಂ ಚತುರ್ಥನವಮೇ ಉದ್ಧರೇದುತ್ತಮಾಮುತ್ತಮಾಂ ಚಾದಿತಸ್ತ್ರಯಾಣಾಂ । ಆ. ೪-೧೩ । ಇತಿ ॥**

ಅನುವಾದವು—**ಬೃಹದ್ವಯ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಪೂರುರಾತ್ರೇಯಃ ಎಂಬುವನು ಋಷಿಯು, ಅಗ್ನಿಯು ದೇವತೆಯು, ಈ ಸೂಕ್ತದ ಕೊನೆಯ ಋಕ್ಕು ಪಂಕ್ತಿಛಂದಸ್ಕವು. ಉಳಿದ ಋಕ್ಕುಗಳು ಅನುಷ್ಟುಪ್‌ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಬೃಹತ್ಪೂರುಃ ಪಂಕ್ತ್ಯಂತಂ ಹ** ಎಂದು ಹೇಳಿರುವುದು. ಪ್ರಾತರನುವಾಕಮಂತ್ರಪಠನ ಕಾಲದಲ್ಲಿ ಆಗ್ನೇಯಕ್ರತುಸಂಬಂಧವಾದ ಅನುಷ್ಟುಪ್‌ಛಂದಸ್ಸಿನ ಮಂತ್ರಪಠನಕ್ಕಾಗಿಯೂ ಆಶ್ವಿನಶಸ್ತ್ರಮಂತ್ರಪಠನ

ಕ್ಕಾಗಿಯೂ ಈ ಸೂಕ್ತದಿಂದ ಮುಂದಿನ ಹತ್ತು ಸೂಕ್ತಗಳ—ನಾಲ್ಕು ಮತ್ತು ಒಂಭತ್ತನೆಯ ಸೂಕ್ತಗಳನ್ನು ಬಿಟ್ಟು—ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಬೃಹದ್ವಯ ಇತಿ ದಶಾನಾಂ ಚತುರ್ಥನವಮೇ ಉದ್ಧರೇದುತ್ತಮಾಮುತ್ತಮಾಂ ಚಾದಿತಸ್ತ್ರಯಾಣಾಂ** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು. ಮತ್ತು ಈ ಸೂಕ್ತದ ಮತ್ತು ಮುಂದಿನ ಎರಡು ಸೂಕ್ತಗಳ ಕೊನೆಯ ಋಕ್ಕುಗಳನ್ನು—ಆ ಋಕ್ಕುಗಳ ಪಂಕ್ತಿಚ್ಛಂದಸ್ಕವಾಗಿರುವುದರಿಂದ—ಬಿಟ್ಟು ಉಳಿದ ಮಂತ್ರಗಳನ್ನು ಮಾತ್ರ ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರ ಮಂತ್ರಗಳಿಗಾಗಿ ಪಠಿಸಬೇಕೆಂದು ನಿರ್ದಿಷ್ಟವಾಗಿರುವುದು

## ಸೂಕ್ತ—೧೬.

|| ಮಂಡಲ—೫ || ಅನುವಾಕ—೨ || ಸೂಕ್ತ—೧೬ ||
|| ಅಷ್ಟಕ—೪ | ಅಧ್ಯಾಯ—೧ || ವರ್ಗ—೮ ||
|| ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ||
|| ಋಷಿಃ—ಪೂರುರಾತ್ರೇಯಃ ||
|| ದೇವತಾಃ—ಅಗ್ನಿಃ ||
|| ಛಂದಃ—೧-೪, ಅನುಷ್ಟುಪ್ | ೫ ಪಂಕ್ತಿಃ ||

---

ಸಂಹಿತಾಪಾಠಃ

ಬೃಹದ್ವಯೋ ಹಿ ಭಾನವೇಽರ್ಚಾ ದೇವಾಯಾಗ್ನಯೇ ।
ಯಂ ಮಿತ್ರಂ ನ ಪ್ರಶಸ್ತಿಭಿರ್ಮರ್ತಾಸೋ ದಧಿರೇ ಪುರಃ ॥ ೧ ॥

|| ಪದಪಾಠಃ ||

ಬೃಹತ್ । ವಯಃ । ಹಿ । ಭಾನವೇ । ಅರ್ಚ । ದೇವಾಯ । ಅಗ್ನಯೇ ।
ಯಂ । ಮಿತ್ರಂ । ನ । ಪ್ರಶಸ್ತಿಽಭಿಃ । ಮರ್ತಾಸಃ । ದಧಿರೇ । ಪುರಃ ॥ ೧ ॥

|| ಸಾಯಣಭಾಷ್ಯಂ ||

**ಯಜ್ಞೋ ಭಾನವೇ ದೀಪ್ತಿಮತೇಽಗ್ನಯೇ ಬೃಹದ್ವಯೋ ಹವೀರೂಪಮನ್ನಂ ದೀಯತೇ ಹಿ । ಅತಸ್ತ್ವಮಪಿ ದೇವಾಯ ದ್ಯೋತಮಾನಾಯಾಗ್ನಯೇ ವಯೋಽರ್ಚ । ಪ್ರಯಚ್ಛ । ಮರ್ತಾಸೋ ಮನುಷ್ಯಾ ಯಮಗ್ನಿಂ ಮಿತ್ರಂ ನ ಸಖಾಯಮಿವ ಪ್ರಶಸ್ತಿಭಿಃ ಪ್ರಕೃಷ್ಟಾಭಿಃ ಸ್ತುತಿಭಿಃ ಪುರೋ ದಧಿರೇ। ಪುರಸ್ಕುರ್ವಂತಿ ||**

॥ ಪ್ರತಿಪದಾರ್ಥ ॥

**ಯಂ**—ಯಾವ ಅಗ್ನಿಯನ್ನು । **ಮರ್ತಾಸಃ**—ಮಾನವರು । **ಮಿತ್ರಂ ನ**—ತಮ್ಮ ಮಿತ್ರನನ್ನು ಆದರಿಸುವಂತೆ । **ಪ್ರಶಸ್ತಿಭಿಃ**—ಉತ್ತಮವಾದ ಸ್ತುತಿಗಳಿಂದ । **ಪುರಃ**—ತಮ್ಮ ಮುಂಭಾಗದಲ್ಲಿ । **ದಧಿರೇ**—ಸ್ಥಾಪಿಸಿದ್ದಾರೋ (ಅಂತಹ) । **ದೇವಾಯ**—ದೇವತಾತ್ಮನೂ । **ಭಾನವೇ**—ಕಾಂತಿಯುತನೂ ಆದ । **ಅಗ್ನಯೇ**—ಅಗ್ನಿಯನ್ನುದ್ದೇಶಿಸಿ । **ಬೃಹದ್ವಯಃ**—ಪ್ರಭೂತವಾದ ಹವಿಸ್ಸನ್ನು । **ಅರ್ಚ**—ಅರ್ಪಿಸಿರಿ.

॥ ಭಾವಾರ್ಥ ॥

ಮಾನವರು ಯಾವ ಅಗ್ನಿಯನ್ನು ತಮ್ಮ ಮಿತ್ರರನ್ನು ಆದರಿಸುವಂತೆ ಉತ್ತಮವಾದ ಸ್ತುತಿಗಳಿಂದ ಪ್ರಶಂಸಿಸಿ ತಮ್ಮ ಮುಂಭಾಗದಲ್ಲಿ ಸ್ಥಾಪಿಸಿದ್ದಾರೋ ಅಂತಹ ದೇವತಾತ್ಮನೂ, ಕಾಂತಿಯುತನೂ ಆದ ಅಗ್ನಿಯನ್ನುದ್ದೇಶಿಸಿ ಪ್ರಭೂತವಾದ ಹವಿಸ್ಸನ್ನರ್ಪಿಸಿರಿ.

English Translation

Offer abundant (sacrificial) food to the brilliant divine Agni, whom mortals have placed before them by praises as a friend

॥ ಸಂಹಿತಾಪಾಠಃ ॥

**ಸ ಹಿ ದ್ಯುಭಿರ್ಜನಾನಾಂ ಹೋತಾ ದಕ್ಷಸ್ಯ ಬಾಹ್ವೋಃ ।**

**ವಿ ಹವ್ಯಮಗ್ನಿರಾನುಷಗ್ಭಗೋ ನ ವಾರಮೃಣ್ವತಿ ॥ ೨ ॥**

॥ ಪದಪಾಠಃ ॥

**ಸಃ । ಹಿ । ದ್ಯುऽಭಿಃ । ಜನಾನಾಂ । ಹೋತಾ । ದಕ್ಷಸ್ಯ । ಬಾಹ್ವೋಃ ।**

**ವಿ । ಹವ್ಯಂ । ಅಗ್ನಿಃ । ಆನುಷಕ್ । ಭಗಃ । ನ । ವಾರಂ । ಋಣ್ವತಿ ॥ ೨ ॥**

॥ ಸಾಯಣಭಾಷ್ಯಂ ॥

**ಯೋಽಗ್ನಿರ್ಹವ್ಯಂ ಹವಿರ್ದೇವೇಷ್ವಾನುಷಕ್ ದೇವೇಷ್ವನುಷಕ್ತಂ ಕರೋತಿ ಬಾಹ್ವೋರ್ಭುಜಯೋರ್ದಕ್ಷಸ್ಯ ಬಲಸ್ಯ ದ್ಯುಭಿರ್ದ್ಯುತಿಭಿರ್ಯುಕ್ತಃ ಸೋಽಗ್ನಿರ್ಜನಾನಾಂ ಯಜಮಾನಾನಾಂ ಹೋತಾ ದೇವಾನಾಮಾಹ್ವಾತಾ ಭವತಿ । ಭಗೋ ನ ಸೂರ್ಯ ಇವ ವಾರಂ ವರಣೀಯಂ ಧನಂ ವ್ಯೃಣ್ವತಿ । ವಿಶೇಷೇಣ ಪ್ರಯಚ್ಛತಿ ಮನುಷ್ಯೇಷು ॥**

|| ಪ್ರತಿಪದಾರ್ಥ ||

**ಸ ಹಿ ಅಗ್ನಿಃ**—ಅದೇ ಅಗ್ನಿದೇವನು । **ಬಾಹ್ವೋಃ**—ತನ್ನ ಬಾಹುಗಳ । **ದಕ್ಷಸ್ಯ**—ಶಕ್ತಿರೂಪವಾದ । ದ್ಯುಭಿಃ—ಕಾಂತಿಗಳಿಂದ ಕೂಡಿಕೊಂಡೂ । **ಜನಾನಾಂ**—ಯಜಮಾನರಿಗೆ । **ಹೋತಾ**—ಹೋತೃರೂಪನಾಗಿದ್ದು ಕೊಂಡು । **ಹವ್ಯಂ**—ಹವಿಸ್ಸನ್ನು । **ಆನುಷಕ್**—(ದೇವತೆಗಳಿಗೆ) ಅನುಸ್ಯೂತವಾಗಿ ಹೊಂದಿಸುತ್ತಾನೆ । (ಮತ್ತು) **ಭಗಃ ನ**—ಸೂರ್ಯನಂತೆ । **ವಾರಂ**—ಅಪೇಕ್ಷಿತವಾದ ಧನವನ್ನು । **ವಿ ಋಣ್ವತಿ**—ವಿಶೇಷರೀತಿಯಲ್ಲಿ ಕೊಡುತ್ತಾನೆ.

|| ಭಾವಾರ್ಥ ||

ಅದೇ ಅಗ್ನಿದೇವನು ತನ್ನ ಬಾಹುಗಳ ಶಕ್ತಿರೂಪವಾದ ಕಾಂತಿಗಳಿಂದ ಕೂಡಿಯೂ, ಯಜಮಾನರಿಗೆ ಹೋತೃರೂಪನಾಗಿಯೂ ಇದ್ದು ಸಕಲ ದೇವತೆಗಳಿಗೂ ನಿಯಮಿತಪ್ರಕಾರದಲ್ಲಿ ಅನುಸ್ಯೂತವಾಗಿ ಹವಿಸ್ಸನ್ನು ಹೊಂದಿಸುತ್ತಾನೆ. ಮತ್ತು ಮಾನವರಿಗೆ ಸೂರ್ಯನಂತೆ ಅಪೇಕ್ಷಿತವಾದ ಧನವನ್ನೂ ಒದಗಿಸಿಕೊಡುತ್ತಾನೆ

English Translation

For that Agni, (endowed) with the lustre of the strength of his arms, is the ministrant priest of mortals, who (presents) the oblation to the gods in succession, and like Bhaga distributes desirable wealth.

|| ವಿಶೇಷವಿಷಯಗಳು ||

**ಭಗೋ ನ—ಸೂರ್ಯ ಇವ** । ಸೂರ್ಯನಂತೆ. ಸೂರ್ಯನು ಎಲ್ಲರಿಗೂ ಹೇಗೆ ಬೇಕಾದವನೋ ಅದರಂತೆ ಧನವೂ ಎಲ್ಲರಿಗೂ ಬೇಕಾದ ವಸ್ತುವು. ಎಲ್ಲರೂ ಅದನ್ನು ಅಪೇಕ್ಷಿಸುತ್ತಾರೆಂದಭಿಪ್ರಾಯವು.

|| ಸಂಹಿತಾಪಾಠಃ ||

**ಅಸ್ಯ ಸ್ತೋಮೇ ಮಘೋನಃ ಸಖ್ಯೇ ವೃದ್ಧಶೋಚಿಷಃ ।**
**ವಿಶ್ವಾ ಯಸ್ಮಿನ್ತುವಿಷ್ವಣಿ ಸಮರ್ಯೋ ಶುಷ್ಮಮಾದಧುಃ ॥ ೯ ॥**

|| ಪದಪಾಠಃ ||

**ಅಸ್ಯ । ಸ್ತೋಮೇ । ಮಘೋನಃ । ಸಖ್ಯೇ । ವೃದ್ಧಶೋಚಿಷಃ ।**
**ವಿಶ್ವಾ । ಯಸ್ಮಿನ್ । ತುವಿಽಸ್ವನಿ । ಸಂ । ಅರ್ಯೇ । ಶುಷ್ಮಂ । ಆಽದಧುಃ ॥ ೩ ॥**

॥ ಸಾಯಣಭಾಷ್ಯಂ ॥

**ಮಘೋನೋ ಮಘವತೋ ಧನವತೋ ವೃದ್ಧಶೋಚಿಷಃ । ವೃದ್ಧಾನಿ ಶೋಚೀಂಷಿ ತೇಜಾಂಸಿ ಯಸ್ಯಾಸೌ ವೃದ್ಧಶೋಚಿಃ । ತಸ್ಯೈವಂವಿಧಸ್ಯಾಗ್ನೇಃ ಸ್ತೋಮೇ ಸ್ತೋತ್ರೇ ಸಖ್ಯೇ ಚ ಸ್ಯಾಮ । ತುವಿಷ್ವಣಿ ಬಹುಶಬ್ದೇಽರ್ಯೋ ಸ್ವಾಮಿನಿ ಯಸ್ಮಿನ್ನಗ್ನೌ ವಿಶ್ವಾ ॥ ಸುಪಾಂ ಸುಲುಗಿತಿ ಡಾದೇಶಃ ॥ ವಿಶ್ವೇ ಸರ್ವ ಋತ್ವಿಜಃ ಶುಷ್ಮಂ ಬಲಂ ಹವಿರ್ಭಿಃ ಸ್ತೋತ್ರೈಶ್ಚ ಸಮಾದಧುಃ ಸಮ್ಯಗಾದಧತಿ ॥**

॥ ಪ್ರತಿಪದಾರ್ಥ ॥

**ತುವಿಷ್ವಣಿ**—ಅಧಿಕವಾದ ಶಬ್ದವುಳ್ಳವನೂ । **ಅರ್ಯೇ**—ಎಲ್ಲರಿಗೂ ಸ್ವಾಮಿಯೂ ಆದ । **ಯಸ್ಮಿನ್**—ಯಾವ ಅಗ್ನಿಯಲ್ಲಿ । **ವಿಶ್ವಾ**—ಸಮಸ್ತ ಋತ್ವಿಕ್ಕುಗಳೂ । **ಶುಷ್ಮಂ**—ಶಕ್ತಿಯನ್ನು । **ಸಂ ಆದಧುಃ**—ತುಂಬಿರುವರೋ ಅಂತಹ । **ಮಘೋನಃ**—ಧನವಂತನೂ । **ವೃದ್ಧಶೋಚಿಷಃ**—ಪ್ರಭೂತವಾದ ಕಾಂತಿಯುಳ್ಳವನೂ ಆದ । **ಅಸ್ಯ**—ಈ ಅಗ್ನಿಯ । **ಸ್ತೋಮೇ**—ಸ್ತುತಿಕರ್ಮದಲ್ಲಿಯೂ । **ಸಖ್ಯೇ**—ಸಖಿತ್ವದಲ್ಲಿಯೂ ನಾವು ಇರುವಂತಾಗಲಿ.

॥ ಭಾವಾರ್ಥ ॥

ಅಧಿಕವಾದ ಶಬ್ದವುಳ್ಳವನೂ, ಎಲ್ಲರಿಗೂ ಸ್ವಾಮಿಯೂ ಆದ ಯಾವ ಅಗ್ನಿಯಲ್ಲಿ ಸಮಸ್ತ ಋತ್ವಿಕ್ಕುಗಳೂ ಶಕ್ತಿಯನ್ನು ತುಂಬಿರುವರೋ ಅಂತಹ ಧನವಂತನೂ, ಪ್ರಭೂತವಾದ ಕಾಂತಿಯುಳ್ಳವನೂ ಆದ ಈ ಅಗ್ನಿಯ ಸ್ತುತಿಕರ್ಮದಲ್ಲಿಯೂ ಸಖಿತ್ವದಲ್ಲಿಯೂ ನಾವು ಇರುವಂತಾಗಲಿ.

English Translation

(May we be assiduous) in the praise, (and cherished) in the friendship, of that very radiant possessor of wealth, on whom, loud-sounding and all-ruling, (his) universal (worshippers) have conferred vigour.

॥ ವಿಶೇಷವಿಷಯಗಳು ॥

**ತುವಿಷ್ವಣೀ ಬಹುಶಬ್ದೇ ।** ಬೆಂಕಿಯು ಉರಿಯುತ್ತಿರುವಾಗ ಚಟಚಟ ಎಂದು ಮೊದಲಾಗಿ ಶಬ್ದಮಾಡುವುದು ಅನುಭವವೇದ್ಯವಾಗಿದೆ

---

॥ ಸಂಹಿತಾಪಾಠಃ ॥

**ಅಧಾ ಹ್ಯಗ್ನ ಏಷಾಂ ಸುವೀರ್ಯಸ್ಯ ಮಂಹನಾ ।**

**ತಮಿದ್ಯಹ್ವಂ ನ ರೋದಸೀ ಪರಿ ಶ್ರವೋ ಬಭೂವತುಃ ॥ ೪ ॥**

|| ಪದಪಾಠಃ ||

ಅಥ | ಹಿ | ಅಗ್ನೇ | ಏಷಾಂ | ಸುಽವೀರ್ಯಸ್ಯ | ಮಂಹನಾ |

ತಂ | ಇತ್ | ಯಹ್ವಂ | ನ | ರೋದಸೀ ಇತಿ | ಪರಿ | ಶ್ರವಃ | ಬಭೂವತುಃ || ೪ ||

|| ಸಾಯಣಭಾಷ್ಯಂ ||

**ಹೇ ಅಗ್ನೇ ಅಥ ಅಥೈಷಾಮಸ್ಮಾಕಂ ಯಜಮಾನಾನಾಂ ಸುವೀರ್ಯಸ್ಯ ಸರ್ವೈಃ ಸ್ಪೃಹಣೀಯಸ್ಯ ಬಲಸ್ಯ ಮಂಹನಾ ಮಂಹನಾಯೈ ದಾನಾಯ ಭವ || ಮಂಹತಿರ್ದಾನಕರ್ಮಾ || ರೋದಸೀ ದ್ಯಾವಾಪೃಥಿವ್ಯೌ ಯಹ್ವಂ ನ ಮಹಾಂತಂ ಸೂರ್ಯಮಿವ ಶ್ರವಃ ಸರ್ವೈಃ ಶ್ರವಣೀಯಂ ತಮಿತ್ತಮಗ್ನಿಮೇವ ಪರಿ ಬಭೂವತುಃ | ಪರಿಗೃಹ್ಣೀತಃ ||**

|| ಪ್ರತಿಪದಾರ್ಥ ||

**ಅಗ್ನೇ**—ಎಲೈ ಅಗ್ನಿಯೇ | **ಅಥ**—ನಮ್ಮ ಪೂಜಾಕಾಲದನಂತರ | **ಏಷಾಂ**—ಯಜಮಾನರಾದ ನಮಗೆ | **ಸುವೀರ್ಯಸ್ಯ**—ಶ್ರೇಷ್ಠವಾದ ಶಕ್ತಿಸಂಪತ್ತಿನ | **ಮಂಹನಾ**—ದಾನಮನಸ್ಕನಾಗಿರು | **ರೋದಸೀ**—ದ್ಯಾವಾಪೃಥಿವಿಗಳೆರಡೂ ಸಹ | **ಯಹ್ವಂ ನ**—ಮಹಾತ್ಮನಾದ ಸೂರ್ಯನನ್ನು ಸುತ್ತುವರೆದಿರುವಂತೆ | **ಶ್ರವಃ**—ಪ್ರಖ್ಯಾತಿಯನ್ನು ಹೊಂದಿರುವ | **ತಂ ಇತ್**—ಅಗ್ನಿಯನ್ನೇ | **ಪರಿ ಬಭೂವತುಃ**—ಸುತ್ತುವರೆದು ನಿಂತಿವೆ.

|| ಭಾವಾರ್ಥ ||

ಎಲೈ ಅಗ್ನಿಯೇ, ನಮ್ಮ ಪೂಜಾಕಾಲದನಂತರ ಯಜಮಾನರಾದ ನಮಗೆ ಶ್ರೇಷ್ಠವಾದ ಶಕ್ತಿಸಂಪತ್ತನ್ನು ಕೊಡಲು ಅನುಗ್ರಹಬುದ್ಧಿಯುಳ್ಳವನಾಗಿರು. ದ್ಯಾವಾಪೃಥಿವಿಗಳೆರಡೂ ಸಹ ಮಹಾತ್ಮನಾದ ಸೂರ್ಯನನ್ನು ಸುತ್ತುವರೆದಿರುವಂತೆ ಪ್ರಖ್ಯಾತನಾದ ಅಗ್ನಿಯನ್ನೂ ಸುತ್ತುವರೆದು ನಿಂತಿವೆ.

### English Translation

Now verily, Agni, (be disposed) for bestowing excellent strength on these (your worshippers) : heaven and earth have invested him with glory like the vast (sun)

|| ಸಂಹಿತಾಪಾಠಃ ||

ನೂ ನ ಏಹಿ ವಾರ್ಯಮಗ್ನೇ ಗೃಣಾನ ಆ ಭರ |

ಯೇ ವಯಂ ಯೇ ಚ ಸೂರಯಃ ಸ್ವಸ್ತಿ ಧಾಮಹೇ ಸಚೋತೈಧಿ

ಪೃತ್ಸು ನೋ ವೃಧೇ || ೫ ||

|| ಪದಪಾಠಃ ||

ನು । ನಃ । ಆ । ಇಹಿ । ವಾರ್ಯಂ । ಅಗ್ನೇ । ಗೃಣಾನಃ । ಆ । ಭರ ।

ಯೇ । ವಯಂ । ಯೇ । ಚ । ಸೂರಯಃ । ಸ್ವಸ್ತಿ । ಧಾಮಹೇ । ಸಚಾ । ಉತ । ಏಧಿ ।

ಪೃತ್ ಽ ಸು । ನಃ । ವೃಧೇ ॥ ೫ ॥

|| ಸಾಯಣಭಾಷ್ಯಂ ||

**ಹೇ ಅಗ್ನೇ ಗೃಣಾನಃ ಸ್ತೂಯಮಾನಃ ಸನ್ ನು ಕ್ಷಿಪ್ರಮೇಹಿ । ಯಜ್ಞಂ ಪ್ರತ್ಯಾಗಚ್ಛ । ಆಗತ್ಯ ಚ ನೋಽಸ್ಮಭ್ಯಂ ವಾರ್ಯಂ ವರಣೀಯಂ ಧನಮಾ ಭರ । ಸಂಪಾದಯ । ಯೇ ವಯಂ ಯಜಮಾನಾ ಯೇ ಚ ಸೂರಯಃ ಸ್ತೋತಾರಃ ಸಚಾ ಹವಿರ್ಭಿಃ ಸಹಿತಾ ಉಭೇ ಯೇ ವಯಂ ಸ್ವಸ್ತಿ ಸ್ತೋತ್ರಂ ಧಾಮಹೇ । ಕುರ್ಮಃ । ಉತಾಪಿ ಚ ಪೃತ್ಸು ಪೃತನಾಸು ನೋಽಸ್ಮಾಕಂ ವೃಧೇ ಸಮೃದ್ಧ್ಯೈ ಏಧಿ । ಭವ ॥**

|| ಪ್ರತಿಪದಾರ್ಥ ||

**ಅಗ್ನೇ**—ಎಲೈ ಅಗ್ನಿಯೇ । **ಗೃಣಾನಃ**—ನಮ್ಮಿಂದ ಸ್ತುತಿಸಲ್ಪಟ್ಟವನಾಗಿ । **ನು**—ಒಡನೆಯೇ । **ಏಹಿ**—(ನಮ್ಮ ಯಜ್ಞಕ್ಕೆ) ದಯಮಾಡು । **ನಃ**—ನಮಗೆ । **ವಾರ್ಯಂ**—ಅಪೇಕ್ಷಿತವಾದ ಧನವನ್ನು । **ಆ ಭರ**—ಸಂಪಾದಿಸಿ ಕೊಡು । **ಯೇ ವಯಂ**—ಯಾವ ನಾವು ಯಜ್ಞಕರ್ತರೋ । **ಯೇ ಚ**—ಅದೇ ಯಾವ ನಾವು । **ಸೂರಯಃ**—ಸ್ತುತಿಕರ್ತರೋ ಅಂತಹ ಎರಡು ವಿಧವಾಗಿಯೂ ಪೂಜಿಸುವ ನಾವು । **ಸಚಾ**—ಹವಿಸ್ಸುಗಳೊಡಗೂಡಿ । **ಸ್ವಸ್ತಿ**—ನಿನ್ನನ್ನು ಎದುರುಗೊಳ್ಳುವ ಸ್ತುತಿಯನ್ನು । **ಧಾಮಹೇ**—ಅರ್ಪಿಸುತ್ತೇವೆ । **ಪೃತ್ಸು**—ಯುದ್ಧಗಳಲ್ಲಿ । **ನಃ**—ನಮ್ಮ । **ವೃಧೇ**—ವೃದ್ಧಿಗಾಗಿ । **ಏಧಿ**—ಅನುಗ್ರಹಾತ್ಮಕನಾಗು.

|| ಭಾವಾರ್ಥ ||

ಎಲೈ ಅಗ್ನಿಯೇ, ನಮ್ಮಿಂದ ಸ್ತುತಿಸಲ್ಪಟ್ಟವನಾಗಿ, ನಮ್ಮ ಯಜ್ಞಕ್ಕೆ ಒಡನೆಯೇ ದಯಮಾಡು. ಯಜ್ಞಕರ್ತರೂ, ಸ್ತುತಿಕರ್ತರೂ ಆದ ನಾವು ಎರಡುವಿಧವಾದ ಕರ್ಮಗಳಿಂದಲೂ ಸಹ ನಿನ್ನನ್ನು ಪೂಜಿಸುತ್ತಾ ಹವಿಸ್ಸುಗಳಿಂದ ಸಿದ್ಧರಾಗಿ ನಿನ್ನನ್ನು ಎದುರುಗೊಳ್ಳುವ ಸ್ತುತಿಯನ್ನರ್ಪಿಸುತ್ತೇವೆ. ಯುದ್ಧಗಳಲ್ಲಿ ನಮಗೆ ಜಯವೂ, ವೃದ್ಧಿಯೂ ಲಭಿಸುವಂತೆ ಅನುಗ್ರಹಿಸು

## English Translation

Glorified by us, Agni, come quickly, and bring us desirable wealth: we who (are your worshippers), we (who are your) adorers, offer you welcome together with oblations: be favourable to us; be (our) success in battles.

# ಹದಿನೇಳನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಆ ಯಜ್ಞೈರಿತಿ ಪಂಚರ್ಚಂ ತೃತೀಯಂ ಸೂಕ್ತಮಾತ್ರೇಯಸ್ಯ ಪೂರೋರಾರ್ಷಮಾಗ್ನೇಯಂ। ಅಂತ್ಯಾ ಪಂಕ್ತಿಃ ಶಿಷ್ಟಾಃ ಪಂಕ್ತ್ಯಂತಪರಿಭಾಷಯಾನುಷ್ಟುಭಃ । ಆ ಯಜ್ಞೈರಿತ್ಯನುಕ್ರಮಣಿಕಾ॥ ಅಂತ್ಯಾವರ್ಜಂ ಪ್ರಾತರನುವಾಕಾಶ್ವಿನಶಸ್ತ್ರಯೋರ್ಬೃಹದ್ವಯ ಇತ್ಯಾದಿದಶಸೂಕ್ತಮಧ್ಯೇ ವಿನಿಯೋಗ ಉಕ್ತಃ॥**

ಅನುವಾದವು—**ಆ ಯಜ್ಞೈಃ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಮೂರನೆಯ **ಸೂಕ್ತವು.** ಇದರಲ್ಲಿ ಐದು ಋಕ್ಕುಗಳಿರುವವು ಈ ಸೂಕ್ತಕ್ಕೆ ಪೂರುರಾತ್ರೇಯಃ ಎಂಬುವನು ಋಷಿಯು; ಅಗ್ನಿಯು ದೇವತೆಯು, ಕೊನೆಯ ಋಕ್ಕು ಪಂಕ್ತಿಶ್ಛಂದಸ್ಕವು. ಉಳಿದ ಋಕ್ಕುಗಳು ಅನುಷ್ಟುಪ್ ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಆ ಯಜ್ಞೈಃ** ಎಂದು ಮೊದಲಾಗಿ ಹೇಳಿರುವುದು. ಈ ಸೂಕ್ತದ ಕೊನೆಯ ಋಕ್ಕನ್ನು ಬಿಟ್ಟು ಮಿಕ್ಕ ಋಕ್ಕುಗಳನ್ನು ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಪಠನಕ್ಕಾಗಿ ವಿನಿಯೋಗಿಸಬೇಕೆಂದು **ಬೃಹದ್ವಯಃ** ಎಂಬ ಹಿಂದಿನ ಸೂಕ್ತದ ವಿನಿಯೋಗದಲ್ಲಿಯೇ ತಿಳಿಸಲಾಗಿದೆ.

## ಸೂಕ್ತ—೧೭

॥ ಮಂಡಲ—೫ ॥ ಅನುವಾಕ—೨ ॥ ಸೂಕ್ತ—೧೭ ॥
॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೯ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೫
॥ ಋಷಿಃ—ಪೂರುರಾತ್ರೇಯಃ ॥
॥ ದೇವತಾ—ಅಗ್ನಿಃ ॥
॥ ಛಂದಃ—೧-೪, ಅನುಷ್ಟುಪ್ । ೫. ಪಂಕ್ತಿಃ ॥

॥ ಸಂಹಿತಾಪಾಠಃ ॥

ಆ ಯಜ್ಞೈರ್ದೇವ ಮರ್ತ್ಯ ಇತ್ಥಾ ತವ್ಯಾಂಸಮೂತಯೇ ।
ಅಗ್ನಿಂ ಕೃತೇ ಸ್ವಧ್ವರೇ ಪೂರುರೀಳೀತಾವಸೇ ॥ ೧ ॥

॥ ಪದಪಾಠಃ ॥

**ಆ । ಯಜ್ಞೈಃ । ದೇವ । ಮರ್ತ್ಯಃ । ಇತ್ಥಾ । ತವ್ಯಾಂಸಂ। ಊತಯೇ ।**

**ಅಗ್ನಿಂ । ಕೃತೇ । ಸುಽಅಧ್ವರೇ । ಪೂರುಃ । ಈಳೀತ । ಅವಸೇ ॥ ೧ ॥**

॥ ಸಾಯಣಭಾಷ್ಯಂ ॥

**ಹೇ ದೇವ ಮರ್ತ್ಯೋ ಮನುಷ್ಯ ಋತ್ವಿಗಿತ್ಥೇತ್ಥಂ ತವ್ಯಾಂಸಂ ಸ್ವತೇಜೋಭಿಃ ಪ್ರವೃದ್ಧಮಗ್ನಿಮೂತಯೇ ತರ್ಪಣಾಯ ಯಜ್ಞೈಃ ಸ್ತೋತ್ರೈರಾ ಹ್ವಯತಿ । ಕಿಂಚ ಪೂರುರ್ಮನುಷ್ಯಃ ಸ್ತೋತಾ ಕೃತೇ ಸ್ವಧ್ವರೇ ಶೋಭನೇ ಕ್ರತೌ ತಮಗ್ನಿಮವಸೇ ರಕ್ಷಣಾಯೇಳೀತ । ಸ್ತೌತಿ ॥**

॥ ಪ್ರತಿಪದಾರ್ಥ ॥

**ದೇವ**—ದೇವತಾತ್ಮನಾದ ಅಗ್ನಿಯೇ । **ಮರ್ತ್ಯಃ**—ಮಾನವರಾದ ಋತ್ವಿಕ್ಕು । **ಇತ್ಥಾ**—ಈ ರೀತಿಯಲ್ಲಿ **ತವ್ಯಾಂಸಂ**—ಸ್ವತೇಜಸ್ಸಿನಿಂದ ವೃದ್ಧಿಯನ್ನು ಹೊಂದಿದ ನಿನ್ನನ್ನು । **ಊತಯೇ**—ರಕ್ಷಣಾರ್ಥವಾಗಿ । **ಯಜ್ಞೈಃ**—ಯಜ್ಞಾಂಗವಾದ ಸ್ತುತಿಗಳಿಂದ । **ಆ (ಹ್ವಯಃ)**—ಪ್ರಾರ್ಥಿಸಿ ಕರೆಯುತ್ತಾನೆ । **ಪೂರುಃ**—ಸ್ತುತಿಕರ್ತನಾದ ಪೂರುವು । **ಸ್ವಧ್ವರೇ**—ಉತ್ತಮವಾದ ಯಾಗವು । **ಕೃತೇ**—ನೆರವೇರುವ ಕಾಲದಲ್ಲಿ । **ಅಗ್ನಿಂ**—ಅಗ್ನಿಯನ್ನು । **ಅವಸೇ**—ರಕ್ಷಣಾರ್ಥವಾಗಿ । **ಈಳೀತ**—ಸ್ತುತಿಸುತ್ತಾನೆ.

॥ ಭಾವಾರ್ಥ ॥

ದೇವತಾತ್ಮನಾದ ಎಲೈ ಅಗ್ನಿಯೇ, ಮಾನವನಾದ ಋತ್ವಿಕ್ಕು ಸ್ವತೇಜಸ್ಸಿನಿಂದ ವೃದ್ಧಿಯನ್ನು ಹೊಂದಿದ ನಿನ್ನನ್ನು ರಕ್ಷಣಾರ್ಥವಾಗಿ ವಿಧ್ಯುಕ್ತವಾದ ರೀತಿಯಲ್ಲಿ ಯಜ್ಞಾಂಗವಾದ ಸ್ತುತಿಗಳಿಂದ ಪ್ರಾರ್ಥಿಸಿ ಕರೆಯುತ್ತಾನೆ ಸ್ತುತಿಕರ್ತನಾದ ಪೂರುವು ಉತ್ತಮವಾದ ಯಜ್ಞನಿರ್ವಹಣಕಾಲದಲ್ಲಿ ಅಗ್ನಿಯನ್ನು ರಕ್ಷಣಾರ್ಥವಾಗಿ ಸ್ತುತಿಸುತ್ತಾನೆ.

English Translation

Divine Agni, a mortal thus with sacrifices (calls upon you) who are endowed with lustre for protection : Puru adores Agni for protection when the sacred rite is solemnized

॥ ವಿಶೇಷವಿಷಯಗಳು ॥

**ಪೂರುಃ**—ಈ ಋಕ್ಕಿನಲ್ಲಿ ಋಷಿಯು ತನ್ನ ಹೆಸರನ್ನು ಹೇಳಿಕೊಂಡಿದಾನೆ ಕರ್ತೃಕ್ರಿಯೆಗಳು ಪ್ರಥಮ-ಪುರುಷದಲ್ಲಿದ್ದರೂ ಉತ್ತಮಪುರುಷಾರ್ಥದಲ್ಲಿ ಉಪಯೋಗಿಸುವುದು ಋಗ್ವೇದದಲ್ಲಿ ವಿಶೇಷರೂಢಿಯಲ್ಲಿದೆ.

|| ಸಂಹಿತಾಪಾಠಃ ||

ಅಸ್ಯ ಹಿ ಸ್ವಯಶಸ್ತರಃ ಆಸಾ ವಿಧರ್ಮನ್ಮನ್ಯಸೇ ।

ತಂ ನಾಕಂ ಚಿತ್ರಶೋಚಿಷಂ ಮಂದ್ರಂ ಪರೋ ಮನೀಷಯಾ ॥

|| ಪದಪಾಠಃ ||

ಅಸ್ಯ । ಹಿ । ಸ್ವಯಶಃಽತರಃ । ಆಸಾ । ವಿಽಧರ್ಮನ್ । ಮನ್ಯಸೇ ।

ತಂ । ನಾಕಂ । ಚಿತ್ರಽಶೋಚಿಷಂ । ಮಂದ್ರಂ । ಪರಃ । ಮನೀಷಯಾ ॥ ೨ ॥

|| ಸಾಯಣಭಾಷ್ಯಂ ||

ಹೇ ವಿಧರ್ಮನ್ । ವಿಶಿಷ್ಟೋ ಧರ್ಮೋ ಯಸ್ಯಾಸೌ ವಿಧರ್ಮಾ ಸ್ತೋತಾ । ತಸ್ಯ ಸಂಬೋಧನಂ । ಹೇ ಸ್ತೋತಃ ಸ್ವಯಶಸ್ತರಃ ಸುಯಶಸಾಂ ಮಧ್ಯೇಽತಿಶಯೇನ ಸುಯಶಾಸ್ತ್ವಂ ಮನೀಷಯಾ ಪ್ರಕೃಷ್ಟಬುದ್ಧ್ಯಾ ಸಾಧನೇನ ಪ್ರಸಿದ್ಧಮಸ್ಯಾಮುಂ ಹ್ಯಗ್ನಿಮಾಸಾಸ್ಯೇನ ವಾಚಾ ಮನ್ಯಸೇ । ಸ್ತೌಷಿ । ಕಿಂವಿಶಿಷ್ಟಮಗ್ನಿಂ । ನಾಕಂ ಸುಖಂ । ಅಕಂ ದುಃಖಂ । ನ ವಿದ್ಯತೇಽಕಂ ಯಸ್ಯ ಸಃ । ತಂ ಚಿತ್ರಶೋಚಿಷಂ ಚಿತ್ರತೇಜಸಂ ಮಂದ್ರಂ ಸ್ತುತ್ಯಂ ಪರಃ ಪರಸ್ತಾತ್ತಿಷ್ಠಂತಂ ||

|| ಪ್ರತಿಪದಾರ್ಥ ||

**ವಿಧರ್ಮನ್**—ನಾನಾ ಕರ್ಮಗಳಲ್ಲಿ ಶ್ರದ್ಧೆಯಿರುವ ಎಲೈ ಸ್ತೋತೃವೇ । **ಸ್ವಯಶಸ್ತರಃ**—ಅತಿಶಯವಾದ ಕೀರ್ತಿಯುಳ್ಳ ನೀನು । **ನಾಕಂ**—ದುಃಖರಹಿತನೂ । **ಚಿತ್ರಶೋಚಿಷಂ**—ನಾನಾವಿಧವಾದ ಕಾಂತಿಯುಳ್ಳವನೂ । **ಮಂದ್ರಂ**—ಸ್ತುತ್ಯನೂ । **ಪರಃ**—ಲೌಕಿಕಸ್ಥಿತಿಯನ್ನು ಮೀರಿದ ಪ್ರಭಾವವುಳ್ಳವನೂ ಆದ । **ತಂ ಅಸ್ಯ ಹಿ**—ಆ ಅಗ್ನಿಯನ್ನೇ । **ಮನೀಷಯಾ**—ಶ್ರೇಷ್ಠವಾದ ಬುದ್ಧಿಯಿಂದ ಕೂಡಿದ । **ಆಸಾ**—ವಾಕ್ಕಿನಿಂದ । **ಮನ್ಯಸೇ**—ಸ್ತುತಿಸುತ್ತೀಯೆ

|| ಭಾವಾರ್ಥ ||

ಶ್ರದ್ಧೆಯಿಂದ ಅನೇಕಕರ್ಮಗಳನ್ನು ನಿರ್ವಹಿಸುವ ಎಲೈ ಸ್ತೋತೃವೇ, ನೀನು ಅತಿಶಯವಾದ ಕೀರ್ತಿಯುಳ್ಳವನಾಗಿ, ದುಃಖರಹಿತನೂ, ನಾನಾವಿಧವಾದ ಕಾಂತಿಯುಳ್ಳವನೂ, ಸ್ತುತ್ಯನೂ, ಲೌಕಿಕಸ್ಥಿತಿಯನ್ನು ಮೀರಿದ ಪ್ರಭಾವವುಳ್ಳವನೂ ಆದ ಆ ಅಗ್ನಿಯನ್ನೇ ಶ್ರೇಷ್ಠವಾದ ಬುದ್ಧಿಯಿಂದ ಕೂಡಿದ ವಾಕ್ಕಿನಿಂದ ಸ್ತುತಿಸುತ್ತೀಯೆ.

## English Translation

Performer of various functions, who are deservedly renowned, you praise by your words that Agni, who is possessed of wonderful splendour ; who is exempt from pain ; who is adorable and supreme in understanding.

|| ವಿಶೇಷವಿಷಯಗಳು ||

**ನಾಕಂ—ಸುಖಂ । ಅಕಂ ದುಃಖಂ । ನ ವಿದ ತೇಽಕಂ ಯಸ್ಯ ಸಃ ।** ಅಕವೆಂದರೆ ದುಃಖವು, ದುಃಖವಿಲ್ಲದಿರುವುದು ನಾಕವು, ಎಂದರೆ ಸುಖವು ಎಂದಭಿಪ್ರಾಯವು.

|| ಸಂಹಿತಾಪಾಠಃ ||

ಅಸ್ಯ ವಾಸಾ ಉ ಅರ್ಚಿಷಾ ಯ ಆಯುಕ್ತ ತುಜಾ ಗಿರಾ ।
ದಿವೋ ನ ಯಸ್ಯ ರೇತಸಾ ಬೃಹಚ್ಛೋಚಂತ್ಯರ್ಚಯಃ ॥ ೩ ॥

|| ಪದಪಾಠಃ ||

**ಅಸ್ಯ । ವೈ । ಅಸೌ । ಊಂ ಇತಿ । ಅರ್ಚಿಷಾ । ಯಃ । ಅಯುಕ್ತ । ತುಜಾ । ಗಿರಾ ।**
**ದಿವಃ । ನ । ಯಸ್ಯ । ರೇತಸಾ । ಬೃಹತ್ । ಶೋಚಂತಿ । ಅರ್ಚಯಃ ॥ ೩ ॥**

|| ಸಾಯಣಭಾಷ್ಯಂ ||

**ಯೋಽಗ್ನಿಸ್ತುಜಾ ಜಗದ್ರಕ್ಷಣಸಮರ್ಥೇನ ಬಲೇನ ಗಿರಾ ಸ್ತುತ್ಯಾಯುಕ್ತ ಸಂಬದ್ಧೋ ಭವತಿ ದಿವೋ ನ ದ್ಯೋತಮಾನಸ್ಯಾದಿತ್ಯಸ್ಯೇವ ಯಸ್ಯಾಗ್ನೇ ರೇತಸಾ ಪ್ರಭಯಾ ಕೃತ್ಸ್ನಂ ಜಗದ್ವ್ಯಾಪ್ತಂ ಯಸ್ಯಾಗ್ನೇರ್ಬೃಹದ್ಬೃಹಂತೋಽರ್ಚಯೋ ದೀಪ್ತಯಃ ಶೋಚಂತಿ ಪ್ರಕಾಶಂತೇ ಅಸ್ಯ ವೈ ಖಲ್ವಗ್ನೇರರ್ಚಿಷಾ ಪ್ರಭಯಾಸಾವಾದಿತ್ಯೋಽರ್ಚಿಷ್ಮಾನ್ಭವತಿ । ಉ ಇತಿ ಪೂರಣಃ ||**

|| ಪ್ರತಿಪದಾರ್ಥ ||

**ಯಃ**—ಯಾವ ಅಗ್ನಿಯು । **ತುಜಾ**—ಜಗದ್ರಕ್ಷಣಸಾಮರ್ಥ್ಯದಿಂದೊಡಗೂಡಿದ । **ಗಿರಾ**-ಸ್ತುತಿಯೊಡನೆ । **ಅಯುಕ್ತ**—ಸೇರಿಕೊಳ್ಳುವನೋ । **ದಿವೋ ನ**—ದ್ಯೋತನಾತ್ಮಕವಾದ ಅಂತರಿಕ್ಷದಂತೆ । **ಯಸ್ಯ**—ಯಾವ ಅಗ್ನಿಯ । **ರೇತಸಾ**—ಪ್ರಭೆಯಿಂದಲೇ । **ಬೃಹತ್**—ಮಹತ್ಸ್ವರೂಪವುಳ್ಳ । **ಅರ್ಚಯಃ**—ರಶ್ಮಿಗಳೆಲ್ಲವೂ ಸಹ । **ಶೋಚಂತಿ**—ಪ್ರಕಾಶಿಸುತ್ತವೆಯೋ ಅಂತಹ । **ಅಸ್ಯ**—ಈ ಅಗ್ನಿಯ । **ಅರ್ಚಿಷಾ ವೈ**—ಪ್ರಭೆಯಿಂದ ಮಾತ್ರವೇ। **ಅಸೌ**—ಆದಿತ್ಯನೂ ಪ್ರಭಾಯುತನಾಗುತ್ತಾನೆ

|| ಭಾವಾರ್ಥ ||

ಯಾವ ಅಗ್ನಿಯು ಜಗದ್ರಕ್ಷಣಸಾಮರ್ಥ್ಯದಿಂದೊಡಗೂಡಿದ ಸ್ತುತಿಯೊಡನೆ ಸೇರಿಕೊಳ್ಳುವನೋ, ಮತ್ತು ಯಾವ ಅಗ್ನಿಯ ಪ್ರಭೆಯಿಂದಲೇ ದ್ಯೋತನಾತ್ಮಕವಾದ ಅಂತರಿಕ್ಷದಂತೆ ಮಹತ್ಸ್ವರೂಪವುಳ್ಳ ರಶ್ಮಿಗಳೆಲ್ಲವೂ ಪ್ರಕಾಶಿಸುತ್ತವೆಯೋ ಅಂತಹ ಈ ಅಗ್ನಿಯ ಪ್ರಭೆಯಿಂದ ಮಾತ್ರವೇ ಆದಿತ್ಯನೂ ಪ್ರಭಾಯುತನಾಗುತ್ತಾನೆ.

## English Translation

He who is endowed with vigour, is (glorified) by praise, and by whose radiance, like that of the sky, the rays of light shine brightly : by his lustre, verily, (the sun is luminous).

|| ವಿಶೇಷವಿಷಯಗಳು ||

ಈ ಋಕ್ಕಿನಲ್ಲಿ ಅಗ್ನಿಯ ಪ್ರಭೆಯಿಂದಲೇ ಆದಿತ್ಯನು ಬೆಳಗುತ್ತಾನೆಂದು ವರ್ಣಿಸಿದೆ. ಅಗ್ನಿಯು ತನ್ನ ಮೂರು ರೂಪಗಳಲ್ಲಿ ಒಂದಾದ ಆದಿತ್ಯರೂಪದಿಂದ ಸ್ವರ್ಗ (ಅಂತರಿಕ್ಷ) ದಲ್ಲಿ ಬೆಳಗುತ್ತಿರುವನೆಂದು ಅನೇಕಕಡೆಗಳಲ್ಲಿ ಹೇಳಿದೆ. ಅದೇ ಅಭಿಪ್ರಾಯವು ಇಲ್ಲಿ ಸೂಚಿತವಾಗಿರುವುದು

ಸಂಹಿತಾಪಾಠಃ

ಅಸ್ಯ ಕೃತ್ವಾ ವಿಚೇತಸೋ ದಸ್ಮಸ್ಯ ವಸು ರಥ ಆ ।
ಅಧಾ ವಿಶ್ವಾಸು ಹವ್ಯೋಽಗ್ನಿರ್ವಿಕ್ಷು ಪ್ರ ಶಸ್ಯತೇ ॥ ೪ ॥

|| ಪದಪಾಠಃ ||

ಅಸ್ಯ । ಕ್ರತ್ವಾ । ವಿऽಚೇತಸಃ । ದಸ್ಮಸ್ಯ । ವಸು । ರಥೇ । ಆ ।
ಅಧ । ವಿಶ್ವಾಸು । ಹವ್ಯಃ । ಅಗ್ನಿಃ । ವಿಕ್ಷು । ಪ್ರ । ಶಸ್ಯತೇ ॥ ೪ ॥

|| ಸಾಯಣಭಾಷ್ಯಂ ||

**ವಿಚೇತಸಃ ಸುಮತಯ ಋತ್ವಿಜೋಽಸ್ಯ ದಸ್ಮಸ್ಯ ದರ್ಶನೀಯಸ್ಯಾಸ್ಯಾಗ್ನೇಃ ಕ್ರತ್ವಾ ಕರ್ಮಣಾ ಯಜ್ಞಾದಿನಾ ವಸು ವಸೂನಿ ಧನಾನಿ ರಥ ಆ ದಧತಿ । ಹವ್ಯೋ ಯಜ್ಞಾರ್ಥಮಾಹ್ವಾತವ್ಯಃ ಸೋಽಗ್ನಿರಥ ಅಥ ಉತ್ಪತ್ತ್ಯನಂತರಮೇವ ವಿಶ್ವಾಸು ಸರ್ವಾಸು ವಿಕ್ಷು ಪ್ರಜಾಸು ಪ್ರ ಶಸ್ಯತೇ । ಸ್ತೂಯತೇ ॥**

॥ ಪ್ರತಿಪದಾರ್ಥ ॥

**ದಸ್ಮಸ್ಯ**—ಚಿತ್ತಾಕರ್ಷಕವಾದ ರೂಪವುಳ್ಳ । **ಅಸ್ಯ**—ಈ ಅಗ್ನಿಯ । **ಕ್ರತ್ವಾ**—ಪೂಜಾಕರ್ಮದ ಫಲವಾಗಿ । **ವಿಚೇತಸಃ**—ಶ್ರೇಷ್ಠಮತಿಯುಳ್ಳ ಋತ್ವಿಕ್ಕುಗಳು । **ವಸು**—ಧನಗಳನ್ನು । **ರಥೇ**—ತಮ್ಮ ರಥದಲ್ಲಿ । **ಆ (ದಧತಿ)**—ತುಂಬಿಕೊಳ್ಳುತ್ತಾರೆ । **ಹವ್ಯಃ**—ಹವಿಸ್ಸಿಗೆ ಯೋಗ್ಯನಾದ । **ಅಗ್ನಿಃ**—ಅಗ್ನಿಯು । **ವಿಶ್ವಾಸು**—ಸಮಸ್ತವಾದ । **ವಿಕ್ಷು**—ಪ್ರಜೆಗಳಿಂದಲೂ । **ಪ್ರ ಶಸ್ಯತೇ**—ಪ್ರಶಂಸಿಸಲ್ಪಡುತ್ತಾನೆ.

|| ಭಾವಾರ್ಥ ||

ದರ್ಶನೀಯವಾದ ರೂಪವುಳ್ಳ ಈ ಅಗ್ನಿಯನ್ನು ಪೂಜಿಸುವುದರ ಫಲವಾಗಿ ಶ್ರೇಷ್ಠಮತಿಯುಳ್ಳ ಋತ್ವಿಕ್ಕುಗಳು ತಮ್ಮ ರಥಗಳಲ್ಲಿ ಧನವನ್ನು ತುಂಬಿಕೊಳ್ಳುತ್ತಾರೆ. ಹವಿಸ್ಸಿಗೆ ಯೋಗ್ಯನಾದ ಅಗ್ನಿಯು ಸಮಸ್ತರಾದ ಪ್ರಜೆಗಳಿಂದಲೂ ಪ್ರಶಂಸಿಸಲ್ಪಡುತ್ತಾನೆ.

English Translation

By the worship of him who is pleasing of aspect, the provident (heap) wealth in their cars: Agni, to whom oblations are due, is then grorified by people

|| ಸಂಹಿತಾಪಾಠಃ ||

ನೂ ನ ಇದ್ಧಿ ವಾರ್ಯ॑ಮಾಸಾ ಸ॑ಚಂತ ಸೂರ॑ಯಃ ।
ಊರ್ಜೋ॑ ನಪಾದ॑ಭಿಷ್ಟ॑ಯೇ ಪಾಹಿ ಶಗ್ಧಿ ಸ್ವಸ್ತ॑ಯ ಉತೈ॑ಧಿ
ಪೃತ್ಸ್ವ॑ ನೋ ವೃಧೇ ॥ ೫ ॥

|| ಪದಪಾಠಃ ||

ನು । ನಃ । ಇತ್ । ಹಿ । ವಾರ್ಯ॑ಂ । ಆಸಾ । ಸಚಂತ । ಸೂರ॑ಯಃ ।
ಊರ್ಜಃ । ನಪಾತ್ । ಅಭಿಷ್ಟ॑ಯೇ । ಪಾಹಿ । ಶಗ್ಧಿ । ಸ್ವಸ್ತ॑ಯೇ । ಉತ । ಏಧಿ ।
ಪೃತ್ಽಸು । ನಃ । ವೃಧೇ ॥ ೫ ॥

|| ಸಾಯಣಭಾಷ್ಯಂ ||

ಹೇ ಅಗ್ನೇ ನೋಽಸ್ಮಭ್ಯಂ ವಾರ್ಯಂ ವರಣೀಯಂ ಧನಂ ನು ಕ್ಷಿಪ್ರಂ ಯಚ್ಛ । ಇದ್ಧೀತಿ ಪೂರಣೌ । ಯತಃ ಸೂರಯಃ ಸ್ತೋತಾರಸ್ತ್ವತ್ತಃ ಸಕಾಶಾದಾಸಾಸ್ಯೇನ ಸ್ತೋತ್ರೇಣ ಸಚಂತ ಧನಂ ಲಭಂತೇ । ಕಿಂಚ ಹೇ ಊರ್ಜೋ ನಪಾದನ್ನಸ್ಯ ನ ಪಾತಯಿತರ್ಬಲಸ್ಯ ಪುತ್ರ ವಾ ಅಭಿಷ್ಟಯೇಽ-ಭೀಪ್ಸಿತೇ ಮಹ್ಯಮನ್ನಂ ಪ್ರಯಚ್ಛೇತಿ ಶೇಷಃ । ಪಾಹಿ । ಅಸ್ಮಾನಾಪದ್ಭ್ಯೋ ರಕ್ಷ । ಸ್ವಸ್ತಯೇ ಕ್ಷೇಮಾಯ ಪಶ್ವಾದಿಲಕ್ಷಣಸ್ಯ ಧನಸ್ಯ ಕ್ಷೇಮಾರ್ಥಂ ಶಗ್ಧಿ । ತ್ವಾಂ ಯಾಚೇ ॥ ವ್ಯತ್ಯಯೇನ ಮಧ್ಯಮಾ॥ ಶಕ್ತೋ ಭವೇತಿ ವಾ। ಹೇ ಅಗ್ನೇ ಉತಾಪಿ ಚ ಪೃತ್ಸು ಪೃತನಾಸು ನೋ ವೃಧೇ ಸವೃದ್ಧಯ ಏಧಿ ಭವ॥

|| ಪ್ರತಿಪದಾರ್ಥ ||

(ಎಲೈ ಅಗ್ನಿಯೇ) **ಸೂರಯಃ**—ಸ್ತೋತೃಗಳು | **ಆಸಾ**—ತಮ್ಮ ಸ್ತುತಿಗಳಿಂದ | **ಸಚಂತೆ**—ಯಾವ ಧನವನ್ನು ಹೊಂದುವರೋ | **ವಾರ್ಯಂ**—ಅಪೇಕ್ಷಿತವಾದ ಅದೇ ಧನವನ್ನು | **ನಃ ಇತ್**—ನಮಗೂ ಸಹ | **ಸು**—ಕ್ಷಿಪ್ರವಾಗಿ ದಯಪಾಲಿಸು | **ಉರ್ಜೋ ನಪಾತ್**—ಶಕ್ತಿಪುತ್ರನಾದ ಅಗ್ನಿಯೇ | **ಅಭಿಷ್ಟಯೇ**—ಅನ್ನಾಪೇಕ್ಷಿಯಾದ ನನಗೆ (ಅನ್ನವನ್ನು ಕೊಡು) | **ಪಾಹಿ**—(ನನ್ನನ್ನು) ರಕ್ಷಿಸು | **ಸ್ವಸ್ತಯೇ**—ನಮ್ಮ ಕ್ಷೇಮಸಂಪಾದನೆಗೆ | **ಶಗ್ಧಿ**—ಶಕ್ತನಾಗಿರು | **ಉತ**—ಮತ್ತು | **ವೃತ್ಸು**—ಯುದ್ಧಗಳಲ್ಲಿ | **ನಃ**—ನಮ್ಮ | **ವೃಧೇ**—ಜಯಕ್ಕೂ ವೃದ್ಧಿಗೂ | **ಏಧಿ**—ಸಾಹಾಯ್ಯಕನಾಗಿರು.

|| ಭಾವಾರ್ಥ ||

ಎಲೈ ಅಗ್ನಿಯೇ, ಸ್ತೋತೃಗಳು ತಮ್ಮ ಸ್ತುತಿಗಳಿಂದ ಯಾವ ಧನವನ್ನು ಹೊಂದುವರೋ, ಅಪೇಕ್ಷಿತವಾದ ಅದೇ ಧನವನ್ನು ನಮಗೂ ಸಹ ಕ್ಷಿಪ್ರವಾಗಿ ದಯಪಾಲಿಸು. ಶಕ್ತಿಪುತ್ರನಾದ ಎಲೈ ಅಗ್ನಿಯೇ, ಅನ್ನಾಪೇಕ್ಷಿಯಾದ ನನಗೆ ಅನ್ನವನ್ನು ಕೊಡು ನನ್ನನ್ನು ರಕ್ಷಿಸು ನಮ್ಮ ಕ್ಷೇಮಸಂಪಾದನೆಗೆ ಶಕ್ತನಾಗಿರು. ಮತ್ತು ಯುದ್ಧಗಳಲ್ಲಿ ನಮ್ಮ ಜಯಕ್ಕೂ, ವೃದ್ಧಿಗೂ ಸಾಹಾಯ್ಯಕನಾಗಿರು

## English Translation

Quickly, (Agni, give us) desirable (wealth), such as the devout combining with (pious) praise, (obtain) · son of strength, (be favourable) to (my) desires ; protect us (from calamity), be alert for our prosperity ; come for our success in battles.

|| ವಿಶೇಷವಿಷಯಗಳು ||

**ಊರ್ಜೋನಪಾತ್—ಅನ್ನಸ್ಯ ಪಾತಯಿತಃ ಬಲಸ್ಯ ಪುತ್ರ ವಾ** | ಊರ್ಜಃ ಎಂಬ ಶಬ್ದಕ್ಕೆ ಅನ್ನ, ಬಲ ಎಂಬರ್ಥಗಳಿರುವುದರಿಂದ ಅಗ್ನಿಯು ಅನ್ನಕ್ಕೆ ಸ್ವಾಮಿಯು ಅಥವಾ ಬಲದ ಪುತ್ರನು ಎಂದರೆ ಬಲಪ್ರಯೋಗ ಮಾಡಿ ಮಥನಮಾಡುವುದರಿಂದ ಉತ್ಪನ್ನನಾದವನು ಎಂದು ಅಗ್ನಿಯನ್ನು ಸಂಬೋಧಿಸಿದೆ.

**ಶಗ್ಧಿ—ಯಾಚೇ** | ಪ್ರಾರ್ಥಿಸುತ್ತೇನೆ. ಇಲ್ಲಿ ಉತ್ತಮಪುರುಷೈಕವಚನಕ್ಕೆ ಬದಲಾಗಿ ಮಧ್ಯಮಪುರುಷೈಕವಚನದ ಪ್ರಯೋಗವಿದೆ ಇಂತಹ ಪ್ರಯೋಗಗಳೂ ವಿಭಕ್ತಿವಚನಗಳ ವ್ಯತ್ಯಯವೂ ಋಗ್ವೇದದಲ್ಲಿ ವಿಶೇಷವಾಗಿ ಉಪಯೋಗಿಸಲ್ಪಡುವುದು

---

# ಹದಿನೆಂಟನೆಯ ಸೂಕ್ತವು.

|| ಸಾಯಣಭಾಷ್ಯಂ ||

**ಪ್ರಾತರಗ್ನಿರಿತಿ ಪಂಚರ್ಚಂ ಚತುರ್ಥಂ ಸೂಕ್ತಂ | ಅತ್ರೇಯಮನುಕ್ರಮಣಿಕಾ | ಪ್ರಾತಮ್ರ್ಯೃಕ್ತನಾಹಾ ದ್ವಿತ ಇತಿ | ಮ್ರುಕ್ತವಾಹಾ ಇತಿ ವಿಶೇಷಣವಿಶಿಷ್ಟ ಆತ್ರೇಯೋ ದ್ವಿತ ಋಷಿಃ | ಪಂಕ್ತ್ಯಂತಂ**

ಹೀತಿ ಹಿಶಬ್ದಾದಸ್ಯಾಪಿ ಸೂಕ್ತಸ್ಯ ಪಂಚಮೀ ಪಂಕ್ತಿಃ । ಪಂಕ್ತ್ಯಂತಪರಿಭಾಷಯಾ ಶಿಷ್ಟಾ ಅನುಷ್ಟುಭಃ॥ ಉಕ್ತೋ ವಿನಿಯೋಗಃ ಪ್ರಾತರನುವಾಕಾಶ್ವಿನಶಸ್ತ್ರಯೋಃ ॥

ಅನುವಾದವು—**ಪ್ರಾತರಗ್ನಿಃ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ಪ್ರಾತರ್ಮೃಕ್ತವಾಹಾ ದ್ವಿತಃ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಮೃಕ್ತವಾಹ ಎಂಬ ವಿಶೇಷಣವಿಶಿಷ್ಟನಾದ ದ್ವಿತ ಆತ್ರೇಯಃ ಎಂಬುವನು ಋಷಿಯು, ಅಗ್ನಿಯು ದೇವತೆಯು, ಕೊನೆಯ ಋಕ್ಕು ಪಂಕ್ತಿಛಂದಸ್ಕವು ಉಳಿದ ಋಕ್ಕುಗಳು ಅನುಷ್ಟುಪ್‌ಛಂದಸ್ಕವು. ಈ ಸೂಕ್ತದ ವಿನಿಯೋಗವು ಹಿಂದಿನ ಸೂಕ್ತದಂತೆ ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಪಠನಕ್ಕಾಗಿ ಉಪಯೋಗಿಸಲ್ಪಡುವುದು.

---

## ಸೂಕ್ತ—೧೮

॥ ಮಂಡಲ—೫ ॥ ಅನುವಾಕ—೨ ॥ ಸೂಕ್ತ—೧೮ ॥
॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೧೦ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೫
ಋಷಿಃ—ದ್ವಿತೋ ಮೃಕ್ತವಾಹಾ ಆತ್ರೇಯಃ ॥
ದೇವತಾ—ಅಗ್ನಿಃ ॥
॥ ಛಂದಃ—೧-೪, ಅನುಷ್ಟುಪ್ । ೫ ಪಂಕ್ತಿಃ ॥

ಸಂಹಿತಾಪಾಠಃ

**ಪ್ರಾತರಗ್ನಿಃ ಪುರುಪ್ರಿಯೋ ವಿಶಃ ಸ್ತವೇತಾತಿಥಿಃ ।**
**ವಿಶ್ವಾನಿ ಯೋ ಅಮರ್ತ್ಯೋ ಹವ್ಯಾ ಮರ್ತೇಷು ರಣ್ಯತಿ ॥ ೧ ॥**

॥ ಪದಪಾಠಃ ॥

**ಪ್ರಾತಃ । ಅಗ್ನಿಃ । ಪುರುಃಪ್ರಿಯಃ । ವಿಶಃ । ಸ್ತವೇತ । ಅತಿಥಿಃ ।**
**ವಿಶ್ವಾನಿ । ಯಃ । ಅಮರ್ತ್ಯಃ । ಹವ್ಯಾ । ಮರ್ತೇಷು । ರಣ್ಯತಿ । ೧ ॥**

॥ ಸಾಯಣಭಾಷ್ಯಂ

**ಪುರುಪ್ರಿಯೋ ಬಹುಪ್ರಿಯೋ ವಿಶೋ ಯಜಮಾನೇ ಧನಸ್ಯ ನಿವೇಶಕೋಽತಿಥಿಃ । ಯಜಮಾನಾನಾಂ ಗೃಹಾನ್ಪ್ರತಿ ತಿಥಿಷ್ವಭ್ಯೇತೀತ್ಯತಿಥಿಃ । ತಥಾಹ ಯಾಸ್ಕಃ । ಅತಿಥಿರಭ್ಯತಿತೋ ಗೃಹಾನ್ಭವತ್ಯ-**

**ಭ್ಯೇತಿ ತಿಥಿಷು ಪರಕುಲಾನೀತಿ ವಾ ಪರಗೃಹಾಣೀತಿ ವಾ । ನಿ. ೪-೫ । ಇತಿ ॥ ಏವಂವಿಧೋಽಗ್ನಿಃ ಪ್ರಾತಃ ಸ್ತವೇತ । ಸ್ತೂಯತೇ । ಅಮರ್ತ್ಯೋಽಮರಣಧರ್ಮಾ ಯೋಽಗ್ನಿರ್ಮರ್ತೇಷು ಮನುಷ್ಯೇಷು ಯಜಮಾನೇಷು ಸ್ಥಿತಾನಿ ವಿಶ್ವಾನಿ ಸರ್ವಾಣಿ ಹವ್ಯಾ ಹವ್ಯಾನಿ ಹವೀಂಷಿ ರಣ್ಯತಿ ಕಾಮಯತೇ ॥**

॥ ಪ್ರತಿಪದಾರ್ಥ ॥

**ಅಮರ್ತ್ಯಃ**—ಮರಣಧರ್ಮರಹಿತನಾದ । **ಯಃ**—ಯಾವ ಅಗ್ನಿಯು । **ಮರ್ತ್ಯೇಷು**—ಯಜಮಾನರಲ್ಲಿರತಕ್ಕ । **ವಿಶ್ವಾನಿ**—ಸಮಸ್ತವಾದ । **ಹವ್ಯಾ**—ಹವಿಸ್ಸುಗಳನ್ನೂ । **ರಣ್ಯತಿ**—ಅಪೇಕ್ಷಿಸುವನೋ ಅಂತಹ । **ಪುರುಪ್ರಿಯಃ**—ಅನೇಕರಿಗೆ ಬೇಕಾದವನೂ । **ವಿಶಃ**—ಯಜಮಾನರಿಗೆ । **ಅತಿಥಿಃ**—ಅತಿಥಿಯಂತೆ ಪೂಜ್ಯನೂ ಆದ । **ಅಗ್ನಿಃ**—ಅಗ್ನಿಯು । **ಪ್ರಾತಃ**—ಉಷಃ ಕಾಲದಲ್ಲೇ । **ಸ್ತವೇತ**—ಸ್ತುತಿಸಲ್ಪಡುತ್ತಾನೆ.

॥ ಭಾವಾರ್ಥ ॥

ಅಮರ್ತ್ಯನಾದ ಯಾವ ಅಗ್ನಿಯು ಯಜಮಾನರಲ್ಲಿರತಕ್ಕ ಸಮಸ್ತ ಹವಿಸ್ಸುಗಳನ್ನೂ ಅಪೇಕ್ಷಿಸುವನೋ ಅಂತಹ ಅನೇಕರಿಗೆ ಬೇಕಾದವನೂ, ಯಜಮಾನರಿಗೆ ಅತಿಥಿಯಂತೆ ಪೂಜ್ಯನೂ ಆದ ಅಗ್ನಿಯು ಉಷಃಕಾಲದಲ್ಲೇ ಸ್ತುತಿಸಲ್ಪಡುತ್ತಾನೆ

English Translation

Let Agni, the beloved of many, the guest of man, be present at dawn; he who, immortal, desires the oblations of mortals.

॥ ಸಂಹಿತಾಪಾಠಃ ॥

ದ್ವಿತಾಯ ಮೃಕ್ತವಾಹಸೇ ಸ್ವಸ್ಯ ದಕ್ಷಸ್ಯ ಮಂಹನಾ ।
ಇಂದುಂ ಸ ಧತ್ತ ಆನುಷಕ್ಸ್ತೋತಾ ಚಿತ್ತೇ ಅಮರ್ತ್ಯ ॥ ೨ ॥

॥ ಪದಪಾಠಃ ॥

**ದ್ವಿತಾಯ । ಮೃಕ್ತಽವಾಹಸೇ । ಸ್ವಸ್ಯ । ದಕ್ಷಸ್ಯ । ಮಂಹನಾ ।**
**ಇಂದುಂ । ಸಃ । ಧತ್ತೇ । ಆನುಷಕ್ । ಸ್ತೋತಾ । ಚಿತ್ । ತೇ । ಅಮರ್ತ್ಯ ॥ ೨ ॥**

॥ ಸಾಯಣಭಾಷ್ಯಂ ॥

**ಹೇ ಅಗ್ನೇ ದ್ವಿತಾಯ ದ್ವಿತಪುತ್ರಾಯ ಮೃಕ್ತವಾಹಸೇ । ಮೃಕ್ತಂ ಶುದ್ಧಂ ಹವಿರ್ದೇವೇಭ್ಯೋ ವಹತಿ ಪ್ರಾಪಯತೀತಿ ಮೃಕ್ತವಾಹಾಃ । ತಸ್ಮೈ ಸ್ವಸ್ಯಾತ್ಮೀಯಸ್ಯ ದಕ್ಷಸ್ಯ ಬಲಸ್ಯ ಧನಸ್ಯ ವಾ ಮಂಹನಾ**

**ಮಂಹನಾಯೈ ದಾನಾಯ ಭವ । ಹೇ ಅಮರ್ತ್ಯ ನಿತ್ಯಾಗ್ನೇ ಯತಃ ಕಾರಣಾತ್ತೇ ತುಭ್ಯಂ ಸ ವೃಕ್ತ-ವಾಹಾ ಆನುಷಕ್ ಸರ್ವದಾನುಷಕ್ತಮಿಂದುಂ ಸೋಮಂ ಧತ್ತೇ ಧಾರಯತಿ ಸ್ತೋತಾ ಚಿತ್ ಸ್ತೋತಾ ಚ ಭವತಿ ॥**

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ವೃಕ್ತವಾಹಸೇ**—ನಿನಗರ್ಪಿಸಲು ಶುದ್ಧವಾದ ಹವಿಸ್ಸನ್ನು ಹೊಂದಿರುವ । **ದ್ವಿತಾಯ**-ದ್ವಿತನಿಗೆ । **ಸ್ವಸ್ಯ**—ನಿನ್ನ ಸಂಬಂಧಿಯಾದ । **ದಕ್ಷಸ್ಯ**—ಶಕ್ತಿಯನ್ನು । **ಮಂಹನಾ**—ದಾನಮಾಡುವ ಮನಸ್ಸುಳ್ಳವನಾಗು । **ಅಮರ್ತ್ಯ**—ಮರಣಧರ್ಮರಹಿತನಾದ ಅಗ್ನಿಯೇ । **ಸಃ**—ವೃಕ್ತವಾಹನಾದ ದ್ವಿತನು । **ಆನುಷಕ್**—ಸರ್ವಕಾಲದಲ್ಲಿಯೂ । **ತುಭ್ಯಂ**—ನಿನ್ನನ್ನುದ್ದೇಶಿಸಿ ಅರ್ಪಿಸಲು । **ಸ್ತೋತಾ ಚಿತ್**—ಸ್ತುತಿಯನ್ನು ಪಠಿಸುತ್ತಾ । **ಇಂದುಂ**—ಸೋಮವನ್ನು । **ಧತ್ತೇ**—ಹಿಡಿದಿರುತ್ತಾನೆ

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನಗರ್ಪಿಸಲು ಶುದ್ಧವಾದ ಹವಿಸ್ಸನ್ನು ಹೊಂದಿರುವ ದ್ವಿತನಿಗೆ ನಿನ್ನ ಸಂಬಂಧಿಯಾದ ಶಕ್ತಿಯನ್ನು ದಾನಮಾಡುವ ಮನಸ್ಸುಳ್ಳವನಾಗು ಮರಣಧರ್ಮರಹಿತನಾದ ಎಲೈ ಅಗ್ನಿಯೇ, ವೃಕ್ತವಾಹನಾದ ದ್ವಿತನು ಸರ್ವಕಾಲದಲ್ಲಿಯೂ ನಿನ್ನನ್ನುದ್ದೇಶಿಸಿ ಅರ್ಪಿಸಲು ನಿನ್ನ ಸ್ತುತಿಯನ್ನು ಪಠಿಸುತ್ತಾ ಸೋಮವನ್ನು ಹಿಡಿದಿರುತ್ತಾನೆ

## English Translation

Be (willing to make) a grant of your own strength to Dwita, the bearer of the pure oblations ; for he, immortal Agni, your diligant praiser, brings to you continually the Soma juice.

---

॥ ಸಂಹಿತಾಪಾಠಃ ॥

ತಂ ವೋ ದೀರ್ಘಾಯುಶೋಚಿಷಂ ಗಿರಾ ಹುವೇ ಮಘೋನಾಂ।
ಅರಿಷ್ಟೋ ಯೇಷಾಂ ರಥೋ ವ್ಯಶ್ವದಾವನ್ನೀಯತೇ ॥ ೩ ॥

॥ ಪದಪಾಠಃ ॥

ತಂ । ವಃ । ದೀರ್ಘಾಯುಽಶೋಚಿಷಂ । ಗಿರಾ । ಹುವೇ । ಮಘೋನಾಂ ।
ಅರಿಷ್ಟಃ । ಯೇಷಾಂ । ರಥಃ । ವಿ । ಅಶ್ವಽದಾವನ್ । ಈಯತೇ ॥ ೩ ॥

|| ಸಾಯಣಭಾಷ್ಯಂ ||

**ಹೇ ಅಗ್ನೇ ದೀರ್ಘಾಯುಶೋಚಿಷಂ ದೀರ್ಘಗಮನದೀಪ್ತಿಂ ತಂ ವಃ । ಪೂಜಾಯಾಂ ಬಹುವಚನಂ । ತ್ವಾಂ ಮಘೋನಾಂ ಧನಿನಾಂ ಕೃತೇ ಗಿರಾ ಸ್ತೋತ್ರೇಣ ಹುವೇ । ಆಹ್ವಯಾಮಿ । ಹೇ ಅಶ್ವದಾವನ್ನಶ್ವಾನಾಂ ದಾತರ್ಯೇಷಾಂ ಧನಿನಾಂ ರಥೋ ಯುದ್ಧೇಷ್ವರಿಷ್ಟಃ ಶತ್ರುಭಿರಹಿಂಸಿತೋ ವೀಯತೇ ವಿಗಚ್ಛತು ॥**

|| ಪ್ರತಿಪದಾರ್ಥ ||

(ಎಲೈ ಅಗ್ನಿಯೇ) **ದೀರ್ಘಾಯುಶೋಚಿಷಂ**—ಅನೇಕಕಾಲದಿಂದ ಪ್ರಕಾಶಮಾನನಾಗಿರುವ । **ತಂ ವಃ**—ಪ್ರಸಿದ್ಧನಾದ ನಿನ್ನನ್ನು । **ಮಘೋನೀಂ**—ಧನಿಕರ ಪರವಾಗಿ । **ಗಿರಾ**—ಸ್ತುತಿಯಿಂದ । **ಹುವೇ**—ಪ್ರಾರ್ಥಿಸಿ ಕರೆಯುತ್ತೇನೆ । **ಅಶ್ವದಾವನ್**—ಅಶ್ವದಾತನಾದ ಅಗ್ನಿಯೇ । **ಯೇಷಾಂ**—ಅದೇ ಧನಿಕರ । **ರಥಃ**—ರಥವು । **ಅರಿಷ್ಟಃ**—(ಯುದ್ಧಗಳಲ್ಲಿ) ಶತ್ರುಗಳಿಂದ ಹಿಂಸಿಸಲ್ಪಡದೇ । **ವಿ ಈಯತೇ**—ಸುಖವಾಗಿ ಸಂಚರಿಸಲಿ.

|| ಭಾವಾರ್ಥ ||

ಎಲೈ ಅಗ್ನಿಯೇ, ಅನೇಕಕಾಲದಿಂದಲೂ ಪ್ರಕಾಶಿಸುತ್ತಿರುವವನೂ, ಪ್ರಸಿದ್ಧನೂ ಆದ ನಿನ್ನನ್ನು ಧನಿಕರ ಪರವಾಗಿ ಸ್ತುತಿಸಿ ಕರೆಯುತ್ತೇನೆ. ಅಶ್ವದಾತನಾದ ಅಗ್ನಿಯೇ, ಅದೇ ಧನಿಕರ ರಥವು ಯುದ್ಧಗಳಲ್ಲಿ ಶತ್ರುಗಳಿಂದ ಹಿಂಸಿಸಲ್ಪಡದೇ ಸುಖವಾಗಿ ಸಂಚರಿಸಲಿ.

English Translation

I invoke you bright-shining, through a long life, with praise, (for the benefit) of the affluent, that their chariot, giver of horses, may proceed unimpeded.

---

|| ಸಂಹಿತಾಪಾಠಃ ||

ಚಿತ್ರಾ ವಾ ಯೇಷು ದೀಧಿತಿರಾಸನ್ನುಕ್ಥಾ ಪಾಂತಿ ಯೇ ।
ಸ್ತೀರ್ಣಂ ಬರ್ಹಿಃ ಸ್ವರ್ಣರೇ ಶ್ರವಾಂಸಿ ದಧಿರೇ ಪರಿ ॥ ೪ ॥

|| ಪದಪಾಠಃ ||

ಚಿತ್ರಾ । ವಾ । ಯೇಷು । ದೀಧಿತಿಃ । ಆಸನ್ । ಉಕ್ಥಾ । ಪಾಂತಿ । ಯೇ ।
ಸ್ತೀರ್ಣಂ । ಬರ್ಹಿಃ । ಸ್ವಃऽನರೇ । ಶ್ರವಾಂಸಿ । ದಧಿರೇ । ಪರಿ ॥ ೪ ॥

॥ ಸಾಯಣಭಾಷ್ಯಂ ॥

**ಯೇಷ್ವೃತ್ವಿಕ್ಷು ಚಿತ್ರಾ ನಾನಾವಿಧಾ ದೀಧಿತಿರ್ಯಜ್ಞವಿಷಯಾ ಕ್ರಿಯಾ ಭವತಿ । ಯೇ ಆಸನ್ನಾಸ್ಯ ಉಕ್ಥೋಕ್ಥಾನಿ ಸ್ತೋತ್ರಾಣಿ ಪಾಂತಿ ರಕ್ಷಂತಿ ತೈರ್ಋತ್ವಿಗ್ಭಿಃ ಸ್ತೀರ್ಣಂ ಸ್ತೀರ್ಣಸ್ಯ ಬರ್ಹಿರ್ಬರ್ಹಿಷಃ ಪರ್ಯುಪರಿ ಶ್ರವಾಂಸ್ಯನ್ನಾನಿ ಹವೀಂಷಿ ಸ್ವರ್ಣರೇ । ಸ್ವಃ ಸ್ವರ್ಗಂ ನರಂ ಯಜಮಾನಂ ನಯತೀತಿ ಸ್ವರ್ಣರೋ ಯಜ್ಞಃ । ತಸ್ಮಿನ್ದಧಿರೇ । ನಿಧೀಯಂತೇ ॥**

॥ ಪ್ರತಿಪದಾರ್ಥ ॥

**ಯೇಷು**—ಯಾವ ಋತ್ವಿಕ್ಕುಗಳಲ್ಲಿ । **ಚಿತ್ರಾ**—ನಾನಾವಿಧವಾದ । **ದೀಧಿತಿಃ**—ಯಜ್ಞವಿಷಯಕವಾದ ಕ್ರಿಯೆಗಳು ನಿರ್ವಹಿಸಲ್ಪಡುವುವೋ । **ಯೇ**—ಯಾರು । **ಆಸನ್**—ತಮ್ಮ ಮುಖಗಳಲ್ಲಿ । **ಉಕ್ಥಾ**—ಸ್ತೋತ್ರಗಳನ್ನು । **ಪಾಂತಿ**—ರಕ್ಷಿಸುವರೋ (ಅಂತಹ ಋತ್ವಿಕ್ಕುಗಳಿಂದ) । **ಸ್ತೀರ್ಣಂ**—ವಿಸ್ತೃತವಾಗಿ ಹರಡಿದ । **ಬರ್ಹಿಃ ಪರಿ**—ದರ್ಭಾಸನಗಳ ಮೇಲೆ । **ಶ್ರವಾಂಸಿ**—(ಅನ್ನಗಳು) ಹವಿಸ್ಸುಗಳು । **ಸ್ವರ್ಣರೇ**—ಯಜಮಾನನಿಗೆ ಸ್ವರ್ಗಸಾಧಕವಾದ ಯಜ್ಞದಲ್ಲಿ । **ದಧಿರೇ**—ಇಡಲ್ಪಡುತ್ತವೆ

॥ ಭಾವಾರ್ಥ ॥

ಯಾವ ಋತ್ವಿಕ್ಕುಗಳು ನಾನಾವಿಧವಾದ ಯಜ್ಞಕರ್ಮಗಳ ನಿರ್ವಹಣಕ್ಕೆ ಪ್ರಸಿದ್ಧರಾಗಿರುವರೋ, ಯಾರು ತಮ್ಮ ಮುಖಗಳಿಂದ ಸರ್ವದಾ ಸ್ತುತಿಪಾಠಗಳನ್ನು ಪಠಿಸುತ್ತಾ ಅವನ್ನು ರಕ್ಷಿಸುತ್ತಿರುವರೋ ಅಂತಹ ಋತ್ವಿಕ್ಕುಗಳ ಯಜಮಾನನಿಗೆ ಸ್ವರ್ಗಸಾಧಕವಾದ ಯಜ್ಞಗಳಲ್ಲಿ ವಿಸ್ತೃತವಾಗಿ ಹರಡಿದ ದರ್ಭಾಸನಗಳ ಮೇಲೆ ಹವಿಸ್ಸುಗಳನ್ನಿಡುತ್ತಾರೆ.

English Translation

Amongst whom the ceremonial of many kinds is observed; who perpetuate the sacred hymns by their recital; by them the sacrificial viands are placed upon the strewn grass (at the sacrifice which) leads (the worshipper) to heaven.

---

॥ ಸಂಹಿತಾಪಾಠಃ ॥

ಯೋ ಮೇ ಪಂಚಾಶತಂ ದದುರಶ್ವಾನಾಂ ಸಧಸ್ತುತಿ ।

ದ್ಯುಮದಗ್ನೇ ಮಹಿ ಶ್ರವೋ ಬೃಹತ್ಕೃಧಿ ಮಘೋನಾಂ ನೃವದ-
ಮೃತ ನೃಣಾಂ ॥ ೫ ॥

|| ಪದಪಾಠಃ ||

**ಯೇ । ಮೇ । ಪಂಚಾಶತಂ । ದದುಃ । ಅಶ್ವಾನಾಂ । ಸಧಃಸ್ತುತಿ ।**

**ದ್ಯುಮತ್ । ಅಗ್ನೇ । ಮಹಿ । ಶ್ರವಃ । ಬೃಹತ್ । ಕೃಧಿ । ಮಘೋನಾಂ । ನೃಃವತ್ ।**

**ಅಮೃತ । ನೃಣಾಂ ॥ ೫ ॥**

|| ಸಾಯಣಭಾಷ್ಯಂ ||

**ಯೇ ಮಘವಾನೋ ದಾತಾರೋ ಮೇ ಮಹ್ಯಂ ಸಧಸ್ತುತಿ ಸ್ತುತ್ಯಾ ಸಹಿತಂ ಸ್ತುತೌ ಕೃತಾಯಾಂ ತತ್ಸಮನಂತರಮಶ್ವಾನಾಂ ಪಂಚಾಶತಂ ದದುಃ ಹೇ ಅಮೃತಾಗ್ನೇ ತ್ವಂ ತೇಷಾಂ ಮಘೋನಾಂ ನೃಣಾಂ ದ್ಯುಮತ್ ದೀಪ್ತಿಮನ್ಮಹಿ ಮಹದ್ಬೃಹತ್ಪರಿವೃಢಂ ನೃವತ್ಪರಿಚಾರಕಮನುಷ್ಯಯುಕ್ತಂ ಶ್ರವೋಽನ್ನಂ ಕೃಧಿ । ಕುರು । ದೇಹೀತ್ಯರ್ಥಃ ॥**

|| ಪ್ರತಿಪದಾರ್ಥ ||

**ಅಮೃತ**—ಮರಣರಹಿತನಾದ । **ಅಗ್ನೇ**—ಎಲೈ ಅಗ್ನಿಯೇ । **ಯೇ**—ಯಾವ ಧನಿಕರಾದ ದಾತೃಗಳು । **ಮೇ**—ನನಗೆ । **ಸಧಸ್ತುತಿ**—(ಅವರಿಗಾಗಿ ನಿನ್ನನ್ನು) ಸ್ತುತಿಸಿದ ಒಡನೆಯೇ । **ಪಂಚಾಶತಂ**—ಐವತ್ತು । **ಅಶ್ವಾನಾಂ**—ಅಶ್ವಗಳನ್ನು । **ದದುಃ**—ಕೊಟ್ಟರೋ ಅಂತಹ । **ಮಘೋನಾಂ**—ಧನಿಕರಾದ । **ನೃಣಾಂ**—ಮಾನವರಿಗೆ । **ದ್ಯುಮತ್**—ಕಾಂತಿಯುತವಾದುದೂ । **ಮಹಿ**—ಮಹತ್ತಾದುದೂ । **ಬೃಹತ್**—ಅತ್ಯಧಿಕವಾದುದೂ । **ನೃವತ್**—ಪುತ್ರಪೌತ್ರಾದಿಗಳಿಂದ ಕೂಡಿದುದೂ ಇದ । **ಶ್ರವಃ**—ಅನ್ನಸಂಪತ್ತನ್ನು । **ಕೃಧಿ**—ಉಂಟುಮಾಡು.

|| ಭಾವಾರ್ಥ ||

ಮರಣರಹಿತನಾದ ಎಲೈ ಅಗ್ನಿಯೇ, ಧನಿಕರಾದ ಯಾವ ದಾತೃಗಳ ಪರವಾಗಿ ನಿನ್ನನ್ನು ನಾನು ಸ್ತುತಿಸಿದೊಡನೆಯೇ, ನನಗೆ ಐವತ್ತು ಅಶ್ವಗಳನ್ನು ಕೊಟ್ಟರೋ ಅಂತಹ ಧನಿಕರಾದ ಮಾನವರಿಗೆ ಕಾಂತಿಯುತವಾದುದೂ, ಮಹತ್ತಾದುದೂ, ಅತ್ಯಧಿಕವಾದುದೂ ಮತ್ತು ಪುತ್ರಪೌತ್ರಾದಿಗಳಿಂದ ಕೂಡಿದುದೂ ಆದ ಅನ್ನಸಂಪತ್ತನ್ನೊದಗಿಸಿಕೊಡು

English Translation

Immortal Agni, bestow upon those opulent men, who, upon (my) praise (of you), gave to me fifty horses, and brilliant, ample, and abundant food, (supporting numerous) dependents

|| ವಿಶೇಷವಿಷಯಗಳು ||

ಈ ಋಕ್ಕಿನಲ್ಲಿ ಋಷಿಯು ತಾನು ಧನಿಕರ ಪರವಾಗಿ ಅಗ್ನಿಯನ್ನು ಸ್ತುತಿಸಿರುವುದಾಗಿಯೂ ಅವರಿಗೆ ಅನ್ನಾದಿ ಸಂಪತ್ತನ್ನು ಒದಗಿಸಿಕೊಡಬೇಕೆಂದೂ ಅಗ್ನಿಯನ್ನು ಪ್ರಾರ್ಥಿಸಿ ಧನಿಕರ ದಾನಪ್ರಶಂಸೆಮಾಡಿದಾನೆ.

## ಹತ್ತೊಂಭತ್ತನೆಯ ಸೂಕ್ತವು.

|| ಸಾಯಣಭಾಷ್ಯಂ ||

**ಅಭ್ಯವಸ್ಥಾ ಇತಿ ಪಂಚರ್ಚಂ ಪಂಚಮಂ ಸೂಕ್ತಂ । ಅತ್ರೇಯಮನುಕ್ರಮಣಿಕಾ । ಅಭ್ಯವಸ್ಥಾ ವವ್ರಿರ್ಗಾಯತ್ರ್ಯಾವನುಷ್ಟುಭೌ ವಿರಾಡ್ರೂಪೇತಿ । ಆತ್ರೇಯೋ ವವ್ರಿರ್ಋಷಿಃ । ಪ್ರಥಮಾದ್ವಿತೀಯೇ ಗಾಯತ್ರ್ಯೌ ತೃತೀಯಾಚತುರ್ಥ್ಯಾವನುಷ್ಟುಭೌ ಪಂಚಮೀ ವಿರಾಡ್ರೂಪಾ ಏಕಾದಶಿನಸ್ತ್ರಯೋಽಷ್ಟಕಶ್ಚ ವಿರಾಡ್ರೂಪೇತ್ಯುಕ್ತಲಕ್ಷಣೋಪೇತತ್ವಾತ್ ||**

ಅನುವಾದವು—**ಅಭ್ಯವಸ್ಥಾಃ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಐದನೆಯ ಸೂಕ್ತವು- ಇದರಲ್ಲಿ ಐದು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ಅಭ್ಯವಸ್ಥಾ ವವ್ರಿರ್ಗಾಯತ್ರ್ಯಾವನುಷ್ಟುಭೌ ವಿರಾಡ್ರೂಪಾ** ಎಂದು ಹೇಳಿರುವುದು ಈ ಸೂಕ್ತಕ್ಕೆ ವವ್ರಿರಾತ್ರೇಯಃ ಎಂಬುವನು ಋಷಿಯು; ಅಗ್ನಿಯು ದೇವತೆಯು; ಮೊದಲಿನ ಎರಡು ಋಕ್ಕುಗಳು ಗಾಯತ್ರೀಛಂದಸ್ಕವು, ಮೂರು ನಾಲ್ಕನೆಯ ಋಕ್ಕುಗಳು ಅನುಷ್ಟುಪ್ ಛಂದಸ್ಕವು, ಐದನೆಯ ಋಕ್ಕು ವಿರಾಡ್ರೂಪಾ ಎಂಬ ಛಂದಸ್ಸಿನದು. **ಏಕಾದಶಿನಸ್ತ್ರಯೋಽಷ್ಟಕಶ್ಚ ವಿರಾಡ್ರೂಪಾ** ಈ ಋಕ್ಕಿನ ಮೊದಲಿನ ಮೂರು ಪಾದಗಳಲ್ಲಿ ಹನ್ನೊಂದು ಹನ್ನೊಂದು ಅಕ್ಷರಗಳೂ, ನಾಲ್ಕನೆಯ ಪಾದದಲ್ಲಿ ಎಂಟು ಅಕ್ಷರಗಳೂ ಇರುವವು ಎಂದು ಈ ವಿರಾಡ್ರೂಪಾ ಎಂಬ ಛಂದಸ್ಸಿನ ಲಕ್ಷಣವು ಹೇಳಲ್ಪಟ್ಟಿರುವುದು.

### ಸೂಕ್ತ—೧೯.

ಮಂಡಲ—೫ || ಅನುವಾಕ—೨ || ಸೂಕ್ತ—೧೯ ||
ಅಷ್ಟಕ—೪ || ಅಧ್ಯಾಯ—೧ || ವರ್ಗ—೧೧ ||
|| ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ||
|| ಋಷಿಃ—ವವ್ರಿರಾತ್ರೇಯಃ ||
|| ದೇವತಾ—ಅಗ್ನಿಃ
|| ಛಂದಃ—೧, ೨. ಗಾಯತ್ರೀ । ೩, ೪. ಅನುಷ್ಟುಪ್ ।
೫ ವಿರಾಡ್ರೂಪಾ ||

|| ಸಂಹಿತಾಪಾಠಃ ||

**ಅಭ್ಯವಸ್ಥಾಃ ಪ್ರ ಜಾಯಂತೇ ಪ್ರ ವವ್ರೇರ್ವವ್ರಿಶ್ಚಿಕೇತ ।**

**ಉಪಸ್ಥೇ ಮಾತುರ್ವಿ ಚಷ್ಟೇ ॥ ೧ ॥**

॥ ಪದಪಾಠಃ ॥

ಅಭಿ । ಅವ್ऽಸ್ಥಾಃ । ಪ್ರ । ಜಾಯಂತೇ । ಪ್ರ । ವವ್ರೇಃ । ವವ್ರಿಃ । ಚಿಕೇತ ।

ಉಪಸ್ಥೇ । ಮಾತುಃ । ವಿ । ಚಷ್ಟೇ ॥ ೧ ॥

॥ ಸಾಯಣಭಾಷ್ಯಂ ॥

ವವ್ರೇರ್ಋಷೇರಭ್ಯುತ್ತರೋತ್ತರಮವಸ್ಥಾ ಅಶೋಭನಾ ದಶಾಃ ಪ್ರ ಜಾಯಂತೇ । ತಾದೃಶೀರ್ವವ್ರಿರ್ಹವಿಷಾಂ ಸಂಭಕ್ತಾ ಸೋಽಗ್ನಿಃ ಪ್ರ ಚಿಕೇತ । ಪ್ರಜಾನೀಯಾತ್ । ಜ್ಞಾತ್ವಾ ಚಾಪನಯತ್ವಿತಿ ಭಾವಃ । ಯೋಽಗ್ನಿರ್ಮಾತುಃ ಪೃಥಿವ್ಯಾ ಉಪಸ್ಥೇ ಸಮೀಪೇ ಸ್ಥಿತಂ ಪದಾರ್ಥಜಾತಂ ವಿ ಚಷ್ಟೇ ಪಶ್ಯತಿ॥

॥ ಪ್ರತಿಪದಾರ್ಥ ॥

**ವವ್ರೇಃ**—ವವ್ರಿನಾಮಕನಾದ ಋಷಿಗೆ (ನನಗೆ) । **ಅಭಿ**—ಒಂದಾದ ಮೇಲೊಂದು । **ಅವಸ್ಥಾಃ**—ಆಪತ್ಸನ್ನಿವೇಶಗಳು। **ಪ್ರ ಜಾಯಂತೇ**—ಉತ್ಪನ್ನವಾಗಿ ಒದಗುತ್ತವೆ । (**ಯಃ**—ಯಾವ ಅಗ್ನಿಯು)। **ಮಾತುಃ**—ತನ್ನ ಜನನಿಯಾದ ಪೃಥ್ವಿಯ । **ಉಪಸ್ಥೇ**—ಉತ್ಸಂಗದಲ್ಲಿ ಕುಳಿತು । **ವಿ ಚಷ್ಟೇ**—ಸಕಲವನ್ನೂ ವೀಕ್ಷಿಸುವನೋ (ಅಂತಹ) । **ವವ್ರಿಃ**—ಹವಿಸ್ಸನ್ನು ಸ್ವೀಕರಿಸುವ ಅಗ್ನಿಯು । **ಪ್ರ ಚಿಕೇತ**—(ವವ್ರಿಯ ಆಪತ್ತುಗಳನ್ನು) ಪೂರ್ಣವಾಗಿ ಅರಿಯಲಿ (ಮತ್ತು ನಾಶಮಾಡಲಿ)

॥ ಭಾವಾರ್ಥ ॥

ವವ್ರಿನಾಮಕನಾದ ಋಷಿಗೆ (ನನಗೆ) ಒಂದಾದಮೇಲೊಂದು ಆಪತ್ಸನ್ನಿವೇಶಗಳು ಒದಗುತ್ತಿವೆ. ತನ್ನ ಜನನಿಯಾದ ಪೃಥ್ವಿಯ ಉತ್ಸಂಗದಲ್ಲಿ ಕುಳಿತು ಸಕಲವನ್ನೂ ವೀಕ್ಷಿಸತಕ್ಕ ಅಗ್ನಿಯು ಹವಿಸ್ಸನ್ನು ಸ್ವೀಕರಿಸುವವನಾಗಿ ವವ್ರಿಯ (ನನ್ನ) ಆಪತ್ತುಗಳನ್ನರಿತು ಅವುಗಳನ್ನು ತಪ್ಪಿಸಲಿ.

English Translation

Unprosperous circumstances affect Vavri: may the accepter (of oblations) become cognizant (of them), as, reclining on the lap of his mother, he beholds all things.

॥ ಸಂಹಿತಾಪಾಠಃ ॥

ಜುಹುರೇ ವಿ ಚಿತಯಂತೋಽನಿಮಿಷಂ ನೃಮ್ಣಂ ಪಾಂತಿ ।

ಆ ದೃಳ್ಹಾಂ ಪುರಂ ವಿವಿಶುಃ ॥ ೨ ॥

|| ಪದಪಾಠಃ ||

**ಜುಹುರೇ । ವಿ । ಚಿತಯಂತಃ । ಅನಿಽಮಿಷಂ । ನೃಮ್ಣಂ । ಪಾಂತಿ ।**

**ಆ । ದೃಳ್ಹಾಂ । ಪುರಂ । ವಿವಿಶುಃ ॥ ೩ ॥**

|| ಸಾಯಣಭಾಷ್ಯಂ ||

**ಯೇ ವಿ ಚಿತಯಂತಸ್ತವ ಪ್ರಭಾವಂ ಜಾನಂತೋ ಜನಾಸ್ತ್ವಾನಿಮಿಷಂ ಸರ್ವದಾ ಜುಹುರೇ ಯಜ್ಞಾರ್ಥಂ ತ್ವಾಮಾಹ್ವಯಂತಿ ಆಹೂಯ ಚ ನೃಮ್ಣಂ ತವ ಬಲಂ ಹವಿರ್ಭಿಃ ಸ್ತೋತ್ರೈಶ್ಚ ಪಾಂತಿ ರಕ್ಷಂತಿ ತೇ ದೃಳ್ಹಾಂ ಶತ್ರುಭಿಃ ಸಾಧಯಿತುಮಶಕ್ಯಾಂ ಪುರಂ ಪುರೀಮಾ ವಿವಿಶುಃ । ಪ್ರವಿಶಂತಿ । ಶತಂ ಪೂರ್ಭಿರಾಯಸೀಭಿರ್ನಿ ಪಾಹಿ । ಋಗ್ವೇ. ೭-೩-೭ । ಇತಿ ನಿಗಮಃ ॥**

|| ಪ್ರತಿಪದಾರ್ಥ ||

(ಎಲೈ ಅಗ್ನಿಯೇ) **ವಿ ಚಿತಯಂತಃ**—(ನಿನ್ನ ಪ್ರಭಾವವನ್ನು) ಪೂರ್ಣವಾಗಿ ಅರಿತ ಜನರು । **ಅನಿಮಿಷಂ**—ಯಾವಾಗಲೂ । **ಜುಹುರೇ**—ಯಜ್ಞಾರ್ಥವಾಗಿ ನಿನ್ನನ್ನು ಆಹ್ವಾನಿಸುತ್ತಾರೆ । **ನೃಮ್ಣಂ**—ನಿನ್ನ ಶಕ್ತಿಯನ್ನು । **ಪಾಂತಿ**—ಸ್ತೋತ್ರಾದಿಗಳಿಂದ ವೃದ್ಧಿಪಡಿಸುವಂತೆ ರಕ್ಷಿಸುತ್ತಾರೆ । **ದೃಳ್ಹಾಂ**—ಶತ್ರುಗಳಿಂದ ಮುತ್ತಲು ಸಾಧ್ಯವಿಲ್ಲದ । **ಪುರಂ**—ಪಟ್ಟಣವನ್ನು । **ಆ ವಿವಿಶುಃ**—ಪ್ರವೇಶಿಸುತ್ತಾರೆ

|| ಭಾವಾರ್ಥ ||

ಎಲೈ ಅಗ್ನಿಯೇ, ನಿನ್ನ ಪ್ರಭಾವವನ್ನು ಪೂರ್ಣವಾಗಿ ಅರಿತ ಜನರು, ಸರ್ವದಾ ಯಜ್ಞವನ್ನಾಚರಿಸುತ್ತಾ ನಿನ್ನನ್ನು ಯಜ್ಞಕ್ಕೆ ಕರೆಯುತ್ತಾರೆ. ಸ್ತೋತ್ರಾದಿಗಳಿಂದ ನಿನ್ನ ಶಕ್ತಿಯನ್ನು ವೃದ್ಧಿಪಡಿಸುತ್ತಾ ರಕ್ಷಿಸುತ್ತಾರೆ. ಶತ್ರುಗಳಿಂದ ಮುತ್ತಲು ಸಾಧ್ಯವಿಲ್ಲದ ಪಟ್ಟಣವನ್ನು ಜಯಿಸಿ ಪ್ರವೇಶಿಸುತ್ತಾರೆ

English Translation

They who know (your power) invoke you incessantly and nourish (your) strength (by oblations): they dwell in an impregnable city.

---

|| ಸಂಹಿತಾಪಾಠಃ ||

ಆ ಶ್ವೈತ್ರೇಯಸ್ಯ ಜಂತವೋ ದ್ಯುಮದ್ವರ್ಧಂತ ಕೃಷ್ಟಯಃ ।

ನಿಷ್ಕಗ್ರೀವೋ ಬೃಹದುಕ್ಥ ಏನಾ ಮಧ್ವಾ ನ ವಾಜಯುಃ ॥ ೪ ॥

॥ ಪದಪಾಠಃ ॥

**ಆ । ಶ್ವೈತ್ರೇಯಸ್ಯ । ಜಂತವಃ । ದ್ಯುಽಮತ್ । ವರ್ಧಂತ । ಕೃಷ್ಟಯಃ ।**

**ನಿಷ್ಕಽಗ್ರೀವಃ । ಬೃಹತ್ಽಉಕ್ಥಃ । ಏನಾ । ಮಧ್ವಾ । ನ । ವಾಜಽಯುಃ ॥ ೩ ॥**

॥ ಸಾಯಣಭಾಷ್ಯಂ ॥

**ಜಾಯಂತ ಇತಿ ಜಂತವಃ । ಕೃಷ್ಟಯೋ ಮನುಷ್ಯಾ ಋತ್ವಿಜೋ ಮಧ್ವಾ ನ ಮಧುನೇವ ಏನ್ಯೈನಯಾ ಸ್ತುತ್ಯಾ । ಯದ್ವಾ ನಕಾರಶ್ಚಾರ್ಥಃ । ಮಧುನಾ ಚ ಶ್ವೈತ್ರೇಯಸ್ಯ । ಶ್ವಿತ್ರಮಂತರಿಕ್ಷಂ। ತತ್ರ ಭವಸ್ಯ ವೈದ್ಯುತಸ್ಯಾಗ್ನೇರ್ದ್ಯುಮದ್ದೀಪ್ತಿಮದ್ಬಲಮಾ ವರ್ಧಂತ । ಅಭಿವರ್ಧಯಂತಿ । ಕಿಂವಿಧಾಃ ಕೃಷ್ಟಯಃ । ನಿಷ್ಕಗ್ರೀವೋ ನಿಷ್ಕೇಣ ಸುವರ್ಣೇನಾಲಂಕೃತಗ್ರೀವಾಃ । ವ್ಯತ್ಯಯೇನೈಕವಚನಂ । ಬೃಹದುಕ್ಥೋ ಬೃಹತ್ಸ್ತೋತ್ರಾ ವಾಜಯುರನ್ನಕಾಮಾಃ ।**

॥ ಪ್ರತಿಪದಾರ್ಥ ॥

**ನಿಷ್ಕಗ್ರೀವಃ**—ಸುವರ್ಣಾಭರಣಗಳಿಂದ ಅಲಂಕೃತವಾದ ಕತ್ತುಳ್ಳವರೂ । **ಬೃಹದುಕ್ಥಃ**—ಪ್ರಭೂತವಾದ ಸ್ತೋತ್ರವುಳ್ಳವರೂ । **ವಾಜಯುಃ**—ಅನ್ನಾಪೇಕ್ಷಿಗಳೂ । **ಜಂತವಃ**—ಜನ್ಮವನ್ನು ಹೊಂದಿರುವವರೂ ಆದ । **ಕೃಷ್ಟಯಃ**—ಋತ್ವಿಗಾದಿ ಪ್ರಜೆಗಳು । **ಮಧ್ವಾ ನ**—ಮಧುವಿನಂತೆ ತೃಪ್ತಿಕಾರಕವಾದ ಸ್ತುತಿಗಳಿಂದ । **ಶ್ವೈತ್ರೇಯಸ್ಯ**—ಅಂತರಿಕ್ಷಸ್ಥವಾದ ಅಗ್ನಿಯ । **ದ್ಯುಮತ್**—ಕಾಂತಿಯುತವಾದ ಶಕ್ತಿಯನ್ನು । **ಆ ವರ್ಧಂತ**—ವೃದ್ಧಿಯಾಗುವಂತೆ ಮಾಡುತ್ತಾರೆ

॥ ಭಾವಾರ್ಥ ॥

ಸುವರ್ಣಾಭರಣಗಳಿಂದ ಅಲಂಕೃತವಾದ ಕತ್ತುಳ್ಳವರೂ, ಪ್ರಭೂತವಾದ ಸ್ತುತಿಯಿಂದ ಕೂಡಿದವರೂ, ಅನ್ನಾಪೇಕ್ಷಿಗಳೂ, ಜನ್ಮಾದಿಗಳುಳ್ಳವರೂ ಆದ ಋತ್ವಿಗಾದಿ ಪ್ರಜೆಗಳು ಮಧುವಿನಂತೆ ತೃಪ್ತಿಕಾರಕವಾದ ಸ್ತುತಿಗಳಿಂದ ಅಂತರಿಕ್ಷಸ್ಥನಾದ ಅಗ್ನಿಯ ಕಾಂತಿಯುತವಾದ ಶಕ್ತಿಯನ್ನು ವೃದ್ಧಿಯಾಗುವಂತೆ ಮಾಡುತ್ತಾರೆ.

English Translation

Living men, with collars of gold, earnest in praise, desirous of food, augment by this laudation the vigour of you abiding in the white firmament.

॥ ಸಂಹಿತಾಪಾಠಃ ॥

**ಪ್ರಿಯಂ ದುಗ್ಧಂ ನ ಕಾಮ್ಯಮಜಾಮಿ ಜಾಮ್ಯೋಃ ಸಚಾ।**

**ಘರ್ಮೋ ನ ವಾಜಜಠರೋಽದಬ್ಧಃ ಶಶ್ವತೋ ದಭಃ ॥ ೪ ॥**

॥ ಪದಪಾಠಃ ॥

ಪ್ರಿಯಂ । ದುಗ್ಧಂ । ನ । ಕಾಮ್ಯಂ । ಅಜಾಮಿ । ಜಾಮ್ಯೋಃ । ಸಚಾ ।

ಘರ್ಮಃ । ನ । ವಾಜಽಜಠರಃ । ಅದಬ್ಧಃ । ಶಶ್ವತಃ । ದಭಃ ॥ ೪ ॥

॥ ಸಾಯಣಭಾಷ್ಯಂ ॥

ಜಾಮ್ಯೋರ್ದ್ಯಾವಾಪೃಥಿವ್ಯೋಃ ಸಚಾ ಸಹಾಯಭೂತೋಽಗ್ನಿರ್ದುಗ್ಧಂ ನ ಪಯ ಇವ ಕಾಮ್ಯಂ ಕಮನೀಯಮಜಾಮಿ ದೋಷರಹಿತಂ ಪ್ರಿಯಮಸ್ಮದೀಯಂ ಸ್ತೋತ್ರಂ ಶೃಣೋತು । ಕಿಂವಿಧೋಽಗ್ನಿಃ ಘರ್ಮೋ ನ ಪ್ರವರ್ಗ್ಯ ಇವ ವಾಜಜಠರಃ । ವಾಜೋಽನ್ನಂ ಜಠರೇ ಯಸ್ಯ ಸಃ । ಘರ್ಮೋ ಯಥಾ ಹವ್ಯೇನಾಜ್ಯೇನ ಪಯಸಾಸಿಕ್ತೋ ವಾಜಜಠರಸ್ತದ್ವತ್ । ಹವಿರ್ಜಠರ ಇತ್ಯರ್ಥಃ । ಅದಬ್ಧಃ ಶತ್ರುಭಿಃ ಸ್ವಯಮಹಿಂಸಿತಃ ಶಶ್ವತಃ ಶಾಶ್ವತೋ ನಿತ್ಯೋ ದಭಃ ಶತ್ರೂಣಾಂ ಹಿಂಸಕಃ ॥

॥ ಪ್ರತಿಪದಾರ್ಥ ॥

**ಘರ್ಮೋ ನ**—ಪ್ರವರ್ಗ್ಯವು ನಾನಾವಿಧವಾದ ಹವಿಸ್ಸುಗಳಿಂದ ತುಂಬಿರುವಂತೆ । **ವಾಜಜಠರಃ**—ಅನ್ನಭರಿತವಾದ ಉದರವುಳ್ಳವನೂ । **ಅದಬ್ಧಃ**—ಶತ್ರುಗಳ ಹಿಂಸೆಗೆ ಸಿಲುಕದವನೂ । **ಶಶ್ವತಃ** - ಶಾಶ್ವತವಾಗಿ । **ದಭಃ**—ಶತ್ರುಗಳನ್ನು ಹಿಂಸಿಸುವವನೂ ಆದ ಅಗ್ನಿಯು । **ಜಾಮ್ಯೋಃ ಸಚಾ** – ತನ್ನ ಬಂಧುಗಳಾದ ದ್ಯಾವಾಪೃಥಿವಿಗಳೊಡನೆ ಕೂಡಿ । **ದುಗ್ಧಂ ನ**—ಕ್ಷೀರದಂತೆ । **ಕಾಮ್ಯಂ**—ಹಿತಕರವಾದುದೂ । **ಅಜಾಮಿ**—ದೋಷರಹಿತವಾದುದೂ ಆದ । **ಪ್ರಿಯಂ**—ನಮ್ಮ ಈ ಸ್ತುತಿಯನ್ನು ಕೇಳಲಿ

॥ ಭಾವಾರ್ಥ ॥

ಪ್ರವರ್ಗ್ಯವು ನಾನಾವಿಧವಾದ ಹವಿಸ್ಸುಗಳಿಂದ ತುಂಬಿರುವಂತೆ ಅನ್ನಭರಿತವಾದ ಉದರವುಳ್ಳವನೂ ಶತ್ರುಗಳ ಹಿಂಸೆಗೆ ಸಿಲುಕದವನೂ, ಶಾಶ್ವತವಾಗಿ ಶತ್ರುಗಳನ್ನು ಹಿಂಸಿಸುವವನೂ ಆದ ಅಗ್ನಿಯು ತನ್ನ ಬಂಧುಗಳಾದ ದ್ಯಾವಾಪೃಥಿವಿಗಳೊಡಗೂಡಿ ಕ್ಷೀರದಂತೆ ಹಿತಕರವಾದುದೂ, ದೋಷರಹಿತವಾದುದೂ ಆದ ನಮ್ಮ ಈ ಸ್ತುತಿಯನ್ನು ಕೇಳಲಿ

## English Translation

May (Agni) with his two relatives, (heaven and earth), hear this faultless (praise), acceptable as milk: he who like the mixed oblation, is filled with food, and, unsubdued, is ever the subduer of his foes.

|| ಸಂಹಿತಾಪಾಠಃ ||

ಕ್ರೀಳನ್ನೋ ರಶ್ಮ ಆ ಭುವಃ ಸಂ ಭಸ್ಮನಾ ವಾಯುನಾ ವೇವಿದಾನಃ ।

ತಾ ಅಸ್ಯ ಸನ್ಧೃಷಜೋ ನ ತಿಗ್ಮಾಃ ಸುಸಂಶಿತಾ ವಕ್ಷ್ಯೋ ವಕ್ಷಣೇಸ್ಥಾಃ ॥೫॥

॥ ಪದಪಾಠಃ ॥

ಕ್ರೀಳನ್ । ನಃ । ರಶ್ಮೇ । ಆ । ಭುವಃ । ಸಂ । ಭಸ್ಮನಾ । ವಾಯುನಾ । ವೇವಿದಾನಃ ।

ತಾಃ । ಅಸ್ಯ । ಸನ್ । ಧೃಷಜಃ । ನ । ತಿಗ್ಮಾಃ । ಸುऽಸಂಶಿತಾಃ । ವಕ್ಷ್ಯಃ । ವಕ್ಷಣೇऽಸ್ಥಾಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ರಶ್ಮೇ ರಶ್ಮಿಮನ್ನಗ್ನೇ ಕ್ರೀಳನ್ ವನೇಷು ಕ್ರೀಡನ್ ಭಸ್ಮನಾ ಸ್ವಕಾರ್ಯೇಣ ಭಸಿತೇನ ವಾಯುನಾ ಪ್ರೇರಕೇಣ ಮರುತಾ ಚ ಸಂ ವೇವಿದಾನಃ ಸಮ್ಯಕ್ ಜ್ಞಾಯಮಾನಸ್ತ್ವಂ ನೋऽಸ್ಮಾಕಮಾ ಭುವಃ । ಅಭಿಮುಖೋ ಭವ । ವಕ್ಷಣೇऽಸ್ಥಾ ವಕ್ಷಣೇ ವಹ್ನೌ ಸ್ಥಿತಾ ವಕ್ಷ್ಯಃ । ಹವಿರ್ವಹಂತೀತಿ ವಕ್ಷ್ಯೋ ಜ್ವಾಲಾಃ । ಸುಸಂಶಿತಾಃ ಸುತೀಕ್ಷ್ಣಾ ಧೃಷಜಃ ಶತ್ರೂಣಾಂ ಧರ್ಷಿಕಾಸ್ತಾ ಜ್ವಾಲಾ ಅಸ್ಯ ಯಜಮಾನಸ್ಯ ಮಮ ನ ತಿಗ್ಮಾ ನ ತೀಕ್ಷ್ಣಾಃ ಸನ್ । ಸಂತು । ಅಸ್ತೇರ್ಲೇಟಿ ರೂಪಂ ॥

|| ಪ್ರತಿಪದಾರ್ಥ ||

**ರಶ್ಮೇ**—ರಶ್ಮಿಯುತನಾದ ಎಲೈ ಅಗ್ನಿಯೇ । **ಭಸ್ಮನಾ**—ನಿನ್ನ ಭಸ್ಮಗಳೊಡನೆ । **ಕ್ರೀಳನ್**—(ಅರಣ್ಯಗಳಲ್ಲಿ( ಕ್ರೀಡಿಸುತ್ತಲೂ । **ವಾಯುನಾ**—ವಾಯುವಿನ ಸಹಾಯದಿಂದ । **ಸಂ ವೇವಿದಾನಃ**—ಎಲ್ಲರಿಗೂ ಗೋಚರವಾಗು ತ್ತಲೂ ಇರುವ ನೀನು । **ನಃ**—ನಮಗೆ । **ಆ ಭುವಃ**—ಅಭಿಮುಖನಾಗಿರು । **ವಕ್ಷಣೇಸ್ಥಾಃ**—ವಹ್ನಿಸ್ಥಿತವಾದವೂ । **ಸುಸಂಶಿತಾಃ**—ತೀಕ್ಷ್ಣವಾಗಿರುವುದೂ । **ಧೃಷಜಃ**—ಶತ್ರುಧರ್ಷಕವಾದವೂ । **ವಕ್ಷ್ಯಃ**—ಹವಿಸ್ಸನ್ನು ವಹಿಸುವುವೂ ಆದ । **ತಾಃ**—ನಿನ್ನ ಜ್ವಾಲೆಗಳು । **ಅಸ್ಯ**—ಈ ಯಜಮಾನನ ವಿಷಯದಲ್ಲಿ । **ನ ತಿಗ್ಮಾಃ ಸನ್**—ತೀಕ್ಷ್ಣವಾಗಿ ದಹಿಸುವಂತೆ ಇಲ್ಲದಿರಲಿ (ಹಿಂಸಿಸದಿರಲಿ)

|| ಭಾವಾರ್ಥ ||

ರಶ್ಮಿಯುತನಾದ ಅಗ್ನಿಯೇ, ನಿನ್ನ ಭಸ್ಮಗಳೊಡನೆ ಅರಣ್ಯದಲ್ಲಿ ಕ್ರೀಡಿಸುತ್ತಲೂ, ವಾಯುವಿನ ಸಹಾಯ ದಿಂದ ಎಲ್ಲರಿಗೂ ಗೋಚರವಾಗುತ್ತಲೂ ಇರುವ ನೀನು ನಮಗೆ ಅಭಿಮುಖನಾಗಿರು ವಹ್ನಿಸ್ಥಿತವಾದವೂ, ತೀಕ್ಷ್ಣ ವಾಗಿರುವುವೂ, ಶತ್ರುದರ್ಶಕವಾದವೂ, ಹವಿಸ್ಸನ್ನು ವಹಿಸುವುವೂ ಆದ ನಿನ್ನ ಜ್ವಾಲೆಗಳು ಈ ಯಜಮಾನನ ವಿಷಯದಲ್ಲಿ ತೀಕ್ಷ್ಣವಾಗಿ ದಹಿಸುವಂತೆ ಇಲ್ಲದಿರಲಿ (ಹಿಂಸಿಸದಿರಲಿ)

## English Translation

Radiant (Agni), you are made manifest by the wind, and are suporting amidst the ashes (of the forest); be present with us: and may the fierce fiery flames, destructive of foes, be gentle to this your worshipper

## ಇಪ್ಪತ್ತನೆಯ ಸೂಕ್ತವು.

|| ಸಾಯಣಭಾಷ್ಯಂ ||

**ಯಮಗ್ನ ಇತಿ ಚತುರ್ಋಚಂ ಷಷ್ಠಂ ಸೂಕ್ತಮತ್ರೀಣಾಂ ಪ್ರಯಸ್ವತಾಮಾರ್ಷಮಾಗ್ನೇಯಂ। ಅಂತ್ಯಾ ಪಂಕ್ತಿಃ ಶಿಷ್ಟಾ ಅನುಷ್ಟುಭಃ। ತಥಾ ಚಾನುಕ್ರಾಂತಂ। ಯಮಗ್ನೇ ಚತುಷ್ಕಂ ಪ್ರಯಸ್ವಂತಃ ಪಂಕ್ತ್ಯಂತಂ ಹೇತಿ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ತೋ ವಿನಿಯೋಗಃ ॥ ಅತ್ರೇಶ್ಚತುರ್ವೀರಾಖ್ಯೇಽಹೀನೇ ದ್ವಿತೀಯೇಽಹನೀದಂ ಸೂಕ್ತಮಾಜ್ಯಶಸ್ತ್ರಂ। ಸೂತ್ರಿತಂ ಚ। ಯಮಗ್ನೇ ವಾಜಸಾತಮೇತಿ ದ್ವಿತೀಯೇಽಹನ್ಯಾಜ್ಯಂ। ಆ. ೧೦-೨। ಇತಿ ॥**

ಅನುವಾದವು—**ಯಮಗ್ನೇ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ನಾಲ್ಕು ಋಕ್ಕುಗಳಿರುವವು. ಈ ಸೂಕ್ತಕ್ಕೆ ಪ್ರಯಸ್ವಂತ ಅತ್ರಯಃ ಎಂಬುವರು ಋಷಿಗಳು, ಅಗ್ನಿಯು ದೇವತೆಯು, ಕೊನೆಯ ಋಕ್ಕು ಪಂಕ್ತಿಶ್ಛಂದಸ್ಕವು. ಉಳಿದ ಋಕ್ಕುಗಳು ಅನುಷ್ಟುಪ್‌ಛಂದಸ್ಕವು ಅನುಕ್ರಮಣಿಕೆಯಲ್ಲಿ—**ಯಮಗ್ನೇ ಚತುಷ್ಕಂ ಪ್ರಯಸ್ವಂತಃ ಪಂಕ್ತ್ಯಂತಂ ಹಿ** ಎಂದು ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಗಳ ಪಠನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದು. ಅತ್ರಿಋಷಿಗಳು ಆಚರಿಸುವ **ಚತುರ್ವೀರ**ವೆಂಬ ಅಹೀನಯಾಗದಲ್ಲಿ ಎರಡನೆಯ ದಿವಸ ಈ ಸೂಕ್ತವನ್ನು ಆಜ್ಯಶಸ್ತ್ರಮಂತ್ರಪಠನಕ್ಕಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯಮಗ್ನೇ ವಾಜಸಾತಮೇತಿ ದ್ವಿತೀಯೇಽಹನ್ಯಾಜ್ಯಂ** ಎಂಬ ಸೂತ್ರದಿಂದ (ಆ. ೧೦-೨) ವಿಸ್ಪಷ್ಟವಾಗಿರುವುದು.

## ಸೂಕ್ತ—೨೦.

|| ಮಂಡಲ—೫ || ಅನುವಾಕ—೨ || ಸೂಕ್ತ—೨೦ ||
|| ಅಷ್ಟಕ—೪ | ಅಧ್ಯಾಯ—೧ || ವರ್ಗ—೧೨ ||
|| ಸೂಕ್ತದಲ್ಲಿರುವ ಋಕ್ಸಂಖ್ಯೆ—೪ ||
|| ಋಷಿಃ—ಪ್ರಯಸ್ವಂತ ಅತ್ರಯಃ ||
|| ದೇವತಾಃ—ಅಗ್ನಿಃ ||
|| ಛಂದಃ—೧-೩, ಅನುಷ್ಟುಪ್ | ೪. ಪಂಕ್ತಿಃ ||

|| ಸಂಹಿತಾಪಾಠಃ ||

ಯಮಗ್ನೇ ವಾಜಸಾತಮ ತ್ವಂ ಚಿನ್ಮನ್ಯಸೇ ರಯಿಂ ।
ತಂ ನೋ ಗೀರ್ಭಿಃ ಶ್ರವಾಯ್ಯಂ ದೇವತ್ರಾ ಪನಯಾ ಯುಜಂ ॥

|| ಪದಪಾಠಃ

ಯಂ । ಅಗ್ನೇ । ವಾಜಽಸಾತಮ । ತ್ವಂ । ಚಿತ್ । ಮನ್ಯಸೇ । ರಯಿಂ ।
ತಂ । ನಃ । ಗೀಃಽಭಿಃ । ಶ್ರವಾಯ್ಯಂ । ದೇವಽತ್ರಾ । ಪನಯ । ಯುಜಂ ॥ ೧ ॥

|| ಸಾಯಣಭಾಷ್ಯಂ ||

**ಹೇ ಅಗ್ನೇ ಹೇ ವಾಜಸಾತಮಾತ್ಯಂತಮನ್ನದ ತ್ವಂ ಯಂ ರಯಿಂ ಧನಮಸ್ಮಾಭಿರ್ದೀಯಮಾನಂ ಹವೀರೂಪಂ ಧನಂ ಮನ್ಯಸೇ ಬುಧ್ಯಸೇ । ಚಿದಿತಿ ಪಾದಪೂರಣಃ । ಶ್ರವಾಯ್ಯಂ ಶ್ರವಣೀಯಂ ಶಸ್ಯಂ ಗೀರ್ಭಿಃ ಸ್ತುತಿಭಿರ್ಯುಜಂ ಯುಕ್ತಂ ನೋಽಸ್ಮದೀಯಂ ಹವಿರ್ಲಕ್ಷಣಂ ಧನಂ ತಂ ದೇವತ್ರಾ ದೇವೇಷು ಪನಯ । ಪ್ರಾಪಯೇತ್ಯರ್ಥಃ ॥**

|| ಪ್ರತಿಪದಾರ್ಥ ||

**ವಾಜಸಾತಮ**—ಪ್ರಭೂತವಾಗಿ ಅನ್ನದಾನಮಾಡತಕ್ಕ । **ಅಗ್ನೇ**—ಎಲೈ ಅಗ್ನಿಯೇ । **ತ್ವಂ**—ನೀನು । **ಯಂ ರಯಿಂ**—ಯಾವ ನಮ್ಮ ಹವಿಸ್ಸಿನ ರೂಪದ ಧನವನ್ನು । **ಮನ್ಯಸೇ**—ಅನುಮೋದಿಸುತ್ತೀಯೋ ಅಂತಹ । **ಶ್ರವಾಯ್ಯಂ**—ಪ್ರಶಂಸಾರ್ಹವಾದುದೂ । **ಗೀರ್ಭಿಃ**—ಸ್ತುತಿಗಳಿಂದ । **ಯುಜಂ**—ಹೊಂದಿಕೊಂಡಿರುವುದೂ ಆದ। **ನಃ**—ನಮ್ಮ । **ತಂ**—ಅದೇ ಹವಿಸ್ಸನ್ನು । **ದೇವತ್ರಾ**—ದೇವತೆಗಳಲ್ಲಿಗೆ । **ಪನಯ**—ಸೇರಿಸು.

|| ಭಾವಾರ್ಥ ||

ಪ್ರಭೂತವಾಗಿ ಅನ್ನದಾನಮಾಡತಕ್ಕ ಎಲೈ ಅಗ್ನಿಯೇ, ನೀನು ನಮ್ಮ ಹವಿಸ್ಸಿನ ರೂಪದ ಯಾವ ಧನವನ್ನು ಅನುಮೋದಿಸುತ್ತೀಯೋ ಅಂತಹ ಪ್ರಶಂಸಾರ್ಹವಾದುದೂ, ಸ್ತುತಿಗಳಿಂದ ಹೊಂದಿಕೊಂಡಿರುವುದೂ ಆದ ನಮ ಅದೇ ಹವಿಸ್ಸನ್ನು ದೇವತೆಗಳಲ್ಲಿಗೆ ಸೇರಿಸು

## English Translation

That (sacrificial) wealth, Agni, bounteous giver of food, of wh ch you approve, and which deserves to be commended by our praises, convey to the gods

|| ಸಂಹಿತಾಪಾಠಃ ||

ಯೇ ಅಗ್ನೇ ನೇರಯಂತಿ ತೇ ವೃದ್ಧಾ ಉಗ್ರಸ್ಯ ಶವಸಃ ।

ಅಪ ದ್ವೇಷೋ ಅಪ ಹ್ವರೋಽನ್ಯವ್ರತಸ್ಯ ಸಶ್ಚಿರೇ ॥ ೨ ॥

॥ ಪದಪಾಠಃ ॥

ಯೇ । ಅಗ್ನೇ । ನ । ಈರಯಂತಿ । ತೇ । ವೃದ್ಧಾಃ । ಉಗ್ರಸ್ಯ । ಶವಸಃ ।

ಅಪ । ದ್ವೇಷಃ । ಅಪ । ಹ್ವರಃ । ಅನ್ಯಽವ್ರತಸ್ಯ । ಸಶ್ಚಿರೇ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಯೇ ಜನಾ ವೃದ್ಧಾಃ ಪಶ್ವಾದಿಲಕ್ಷಣೈರ್ಧನೈಃ ಸವೃದ್ಧಾಃ ಸಂತಸ್ತೇ ತುಭ್ಯಂ ನೇರಯಂತಿ ಹವೀಂಷಿ ನ ಪ್ರಯಚ್ಛಂತಿ ತ ಉಗ್ರಸ್ಯಾಧಿಕೇನ ಶವಸೋ ಬಲೇನಾನ್ನೇನ ವಾಪ ನೀತಾಃ । ಬಲಾನ್ನಹೀನಾ ಭವಂತೀತ್ಯರ್ಥಃ । ಕಿಂಚಾನ್ಯವ್ರತಸ್ಯಾನ್ಯದ್ವೈದಿಕಾದ್ವಿಭಕ್ತಂ ವ್ರತಂ ಕರ್ಮ ಯಸ್ಯ ತಸ್ಯಾಸುರಸ್ಯ ದ್ವೇಷಸ್ತ್ವತ್ಸಂಬಂಧಿನಂ ವಿರೋಧಂ ಹ್ವರೋಽತಿಹಿಂಸಾಂ ಚಾಪ ಸಶ್ಚಿರೇ । ಆತ್ಮಾನಂ ಪ್ರಾಪಯಂತಿ ॥

|| ಪ್ರತಿಪದಾರ್ಥ ||

**ಅಗ್ನೇ**—ಎಲೈ ಅಗ್ನಿಯೇ । **ಯೇ**—ಯಾವ ಮಾನವರು । **ವೃದ್ಧಾಃ**—ಸಂಪದ್ವೃದ್ಧಿಯನ್ನು ಪಡೆದವರಾಗಿದ್ದರೂ । **ತೇ**—ನಿನಗೆ । **ನೇರಯಂತಿ**—ಹವಿಸ್ಸುಗಳನ್ನರ್ಪಿಸುವುದಿಲ್ಲವೋ ಅವರು । **ಉಗ್ರಸ್ಯ**—ಅಧಿಕವಾದ । **ಶವಸಃ**—ಬಲದಿಂದ । **ಅಪ**—ವಿಹೀನರಾಗುತ್ತಾರೆ । **ಅನ್ಯವ್ರತಸ್ಯ**—ವೈದಿಕಕರ್ಮವನ್ನು ಬಿಟ್ಟು ಅವೈದಿಕವಾದ ಕರ್ಮಕರ್ತರು । **ದ್ವೇಷಃ**—ನಿನ್ನ ದ್ವೇಷವನ್ನೂ । **ಹ್ವರಃ**—(ನಿನ್ನಿಂದ) ಹಿಂಸೆಯನ್ನೂ । **ಅಪ ಸಶ್ಚಿರೇ**—ಪಡೆದುಕೊಳ್ಳುತ್ತಾರೆ

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ಮಾನವರು ಸಂಪದ್ವೃದ್ಧಿಯನ್ನು ಪಡೆದವರಾಗಿದ್ದರೂ ಸಹ ನಿನಗೆ ಹವಿಸ್ಸನ್ನರ್ಪಿಸುವುದಿಲ್ಲವೋ ಅವರು ಅಧಿಕವಾದ ಬಲದಿಂದ ವಿಹೀನರಾಗುತ್ತಾರೆ. ಮತ್ತು ವೈದಿಕಕರ್ಮವನ್ನು ಬಿಟ್ಟು ಕರ್ಮಭ್ರಷ್ಟರಾಗಿರುವ ಮಾನವರು ನಿನ್ನ ದ್ವೇಷವನ್ನೂ ಮತ್ತು ನಿನ್ನಿಂದ ಹಿಂಸೆಯನ್ನೂ ಪಡೆದುಕೊಳ್ಳುತ್ತಾರೆ

## English Translation

May those prosperous men who do not offer oblations to you become destitute of great strength, and may (the followers) of other (than Vaidik) observances incur (your) enmity and punishment.

॥ ಸಂಹಿತಾಪಾಠಃ ॥

ಹೋತಾರಂ ತ್ವಾ ವೃಣೀಮಹೇಽಗ್ನೇ ದಕ್ಷಸ್ಯ ಸಾಧನಂ ।

ಯಜ್ಞೇಷು ಪೂರ್ವ್ಯಂ ಗಿರಾ ಪ್ರಯಸ್ವಂತೋ ಹವಾಮಹೇ ॥೩॥

॥ ಪದಪಾಠಃ ॥

ಹೋತಾರಂ । ತ್ವಾ । ವೃಣೀಮಹೇ । ಅಗ್ನೇ । ದಕ್ಷಸ್ಯ । ಸಾಧನಂ ।

ಯಜ್ಞೇಷು । ಪೂರ್ವ್ಯಂ । ಗಿರಾ । ಪ್ರಯಸ್ವಂತಃ । ಹವಾಮಹೇ ॥ ೩ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಪ್ರಯಸ್ವಂತೋಽನ್ನವಂತ ಏತನ್ನಾಮಕಾ ವಯಂ ದಕ್ಷಸ್ಯ ಬಲಸ್ಯ ಸಾಧನಂ ಸಾಧಕಂ ಸಾಧಯಿತಾರಂ ತ್ವಾಂ ಹೋತಾರಂ ದೇವಾನಾಮಾಹ್ವಾತಾರಂ ವೃಣೀಮಹೇ । ಕಿಂಚ ಯಜ್ಞೇಷು ಪೂರ್ವ್ಯಂ ಮುಖ್ಯಂ ತ್ವಾಂ ಗಿರಾ ಸ್ತುತಿರೂಪಯಾ ವಾಚಾ ಹವಾಮಹೇ । ಸ್ತುಮಃ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಪ್ರಯಸ್ವಂತಃ**—ಪ್ರಯಸ್ವನ್ನಾಮಕರಾದ ನಾವು । **ದಕ್ಷಸ್ಯ**—ಶಕ್ತಿಗೆ । **ಸಾಧನಂ ತ್ವಾ**—ಸಾಧಕವಾದ ನಿನ್ನನ್ನು । **ಹೋತಾರಂ**—ದೇವತೆಗಳನ್ನು ಯಜ್ಞಕ್ಕೆ ಕರೆಯುವವನೆಂದು (ಹೋತೃವನ್ನಾಗಿ) । **ವೃಣೀಮಹೇ**—ಆರಿಸುತ್ತೇವೆ । **ಯಜ್ಞೇಷು**—ಯಜ್ಞಗಳಲ್ಲಿ । **ಪೂರ್ವ್ಯಂ**—ಮುಖ್ಯನಾದ ನಿನ್ನನ್ನು । **ಗಿರಾ**—ಸ್ತುತಿವಾಕ್ಯದಿಂದ । **ಹವಾಮಹೇ**—ಪ್ರಾರ್ಥಿಸಿ ಕರೆಯುತ್ತೇವೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಪ್ರಯಸ್ವನ್ನಾಮಕರಾದ ನಾವು ಶಕ್ತಿಸಾಧಕನಾದ ನಿನ್ನನ್ನು ಹೋತೃವನ್ನಾಗಿ ಆರಿಸುತ್ತೇವೆ. ಯಜ್ಞಕ್ಕೆ ಪ್ರಧಾನನಾದ ನಿನ್ನನ್ನು ಸ್ತುತಿವಾಕ್ಯದಿಂದ ಪ್ರಾರ್ಥಿಸಿ ಕರೆಯುತ್ತೇವೆ.

English Translation

We, Prayasvats, have recourse to you, the invoker (of the gods), the means of strength : we glorify you first at sacrifices with praise.

|| ಸಂಹಿತಾಪಾಠಃ ||

ಇತ್ಥಾ ಯಥಾ ತ ಊತಯೇ ಸಹಸಾವನ್ದಿವೇದಿವೇ ।
ರಾಯ ಋತಾಯ ಸುಕ್ರತೋ ಗೋಭಿಃ ಷ್ಯಾಮ ಸಧಮಾದೋ
ವೀರೈಃ ಸ್ಯಾಮ ಸಧಮಾದಃ ॥ ೪ ॥

|| ಪದಪಾಠಃ ||

ಇತ್ಥಾ । ಯಥಾ । ತೇ । ಊತಯೇ । ಸಹಸ್ಾವನ್ । ದಿವೇಽದಿವೇ ।
ರಾಯೇ । ಋತಾಯ । ಸುಕ್ರತೋ ಇತಿ ಸುಽಕ್ರತೋ । ಗೋಭಿಃ । ಸ್ಯಾಮ । ಸಧಽಮಾದಃ ।
ವೀರೈಃ । ಸ್ಯಾಮ । ಸಧಽಮಾದಃ ॥ ೪ ॥

|| ಸಾಯಣಭಾಷ್ಯಂ ||

**ಹೇ ಸಹಸಾವನ್ ಬಲವನ್ನಗ್ನೇ ದಿವೇ ದಿವೇಽನ್ವಹಂ ವಯಂ ತೇ ತವೋತಯೇ ರಕ್ಷಣಾಯ ಯಥಾ ಸ್ಯಾಮ ತಥೇತ್ಥೇತ್ಥಂ ಕುರು । ಹೇ ಸುಕ್ರತೋ ರಾಯೇ ಧನಾಯ ಋತಾಯ ಯಜ್ಞಾಯ ಚ ಯಥಾ ಸ್ಯಾಮ ತಥಾ ಕುರು । ಕಿಂಚ ವಯಂ ಗೋಭಿಃ ಸಧಮಾದಃ ಸಹ ಮಾದ್ಯಂತಃ ಸ್ಯಾಮ । ವೀರೈಃ ಪುತ್ರೈಶ್ಚ ಸಧಮಾದಃ ಸಹ ಮಾದ್ಯಂತಃ ಸ್ಯಾಮ । ತಥಾ ಕುರು ॥**

|| ಪ್ರತಿಪದಾರ್ಥ ||

**ಸಹಸಾವನ್**—ಶಕ್ತಿಯುತನಾದ ಎಲೈ ಅಗ್ನಿಯೇ । **ದಿವೇದಿವೇ**—ಪ್ರತಿನಿತ್ಯವೂ । (**ವಯಂ**—ನಾವು)। **ತೇ**—ನಿನ್ನ । **ಊತಯೇ**—ರಕ್ಷಣೆಯಲ್ಲಿ । **ಯಥಾ**—ಯಾವ ರೀತಿಯಿರಬೇಕೋ । **ಇತ್ಥಾ**-ಆ ರೀತಿ ಅನುಗ್ರಹಿಸು। **ಸುಕ್ರತೋ**—ಶ್ರೇಷ್ಠವಾದ ಕರ್ಮಕರ್ತನಾದ ಅಗ್ನಿಯೇ । **ರಾಯೇ**—ಧನಲಾಭಕ್ಕಾಗಿ । **ಋತಾಯ**—ಯಜ್ಞ ಕರ್ಮಕ್ಕೆ ನಿರತರಾಗಿ । **ಸ್ಯಾಮ**—ಇರುವಂತಾಗಲಿ । **ಗೋಭಿಃ**—ಗೋವುಗಳೊಡನೆ । **ಸಧಮಾದಃ**-ಸೇರಿಕೊಂಡು ಹರ್ಷಿಸುವವರಾಗಿ । **ಸ್ಯಾಮ**—ಇರುವಂತಾಗಲಿ । **ವೀರೈಃ**—ವೀರಪುತ್ರರುಗಳೊಡನೆ । **ಸದಮಾದಃ**— ಸೇರಿಕೊಂಡು ಹರ್ಷಿಸುವವರಾಗಿರೋಣ.

|| ಭಾವಾರ್ಥ ||

ಎಲೈ ಶಕ್ತಿಯುತನಾದ ಅಗ್ನಿಯೇ, ನಾವು ಪ್ರತಿದಿನವೂ ನಿನ್ನ ರಕ್ಷಣೆಯಲ್ಲಿಯೇ ಇರುವಂತೆ ಅನುಗ್ರಹಿಸು ಶ್ರೇಷ್ಠವಾದ ಕರ್ಮಕರ್ತನಾದ ಎಲೈ ಅಗ್ನಿಯೇ, ಧನಲಾಭಕ್ಕಾಗಿ ಯಜ್ಞಕರ್ಮದಲ್ಲಿ ನಿರತರಾಗಿರುವಂತೆಯೂ, ತತ್ಫಲವಾಗಿಯೇ ಗೋವುಗಳೊಡನೆಯೂ, ವೀರಪುತ್ರರುಗಳೊಡನೆಯೂ ಸೇರಿಕೊಂಡು ಹರ್ಷಿಸುವಂತಾಗಲಿ.

## English Translation

Possessor of strength, day by day so (provide), that we may enjoy your protection; doer of good deeds, may we (be deserving) of wealth through sacrifice, and may we be happy with cattle, happy with male descendants

---

# ಇಪ್ಪತ್ತೊಂದನೆಯ ಸೂಕ್ತವು.

---

॥ ಸಾಯಣಭಾಷ್ಯಂ

**ಮನುಷ್ವತ್ತ್ವೇತಿ ಚತುರ್ಋಚಂ ಸಪ್ತಮಂ ಸೂಕ್ತಮಾತ್ರೇಯಸ್ಯ ಸಸಸ್ಯಾರ್ಷಂ । ಮನುಷ್ವತ್ಸಸ ಇತ್ಯನುಕ್ರಮಣಿಕಾ । ಪಂಕ್ತ್ಯಂತಂ ಹೇತಿ ಪೂರ್ವತ್ರೋಕ್ತತ್ವಾದಿದಮಾದೀನಿ ತ್ರೀಣಿ ಸೂಕ್ತಾನಿ ಪಂಕ್ತ್ಯಂತಾನಿ । ಶಿಷ್ಟಾ ಅನುಷ್ಟುಭಃ । ಅಗ್ನಿರ್ದೇವತಾ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ತೋ ವಿನಿಯೋಗಃ ॥**

ಅನುವಾದವು—**ಮನುಷ್ವತ್ತ್ವಾ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ನಾಲ್ಕು ಋಕ್ಕುಗಳಿರುವವು. ಈ ಸೂಕ್ತಕ್ಕೆ ಸಸ ಆತ್ರೇಯಃ ಎಂಬುವನು ಋಷಿಯು; ಅಗ್ನಿಯು ದೇವತೆಯು; ಅನುಕ್ರಮಣಿಕೆಯಲ್ಲಿ **ಪಂಕ್ತ್ಯಂತಂ ಹ** ಎಂದು ಹೇಳಿರುವುದರಿಂದ ಈ ಸೂಕ್ತದಿಂದ ಮುಂದಿನ ಮೂರು ಸೂಕ್ತಗಳ ಕೊನೆಯ ಋಕ್ಕು ಪಂಕ್ತಿಶ್ಛಂದಸ್ಕವು ಉಳಿದ ಋಕ್ಕುಗಳು ಅನುಷ್ಟುಪ್‌ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಮನುಷ್ವತ್ಸಸಃ** ಎಂದು ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಗಳ ಪಠನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದು.

---

## ಸೂಕ್ತ—೨೧

॥ ಮಂಡಲ—೫ ॥ ಅನುವಾಕ—೨ ॥ ಸೂಕ್ತ—೨೧ ॥
॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೧೩ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೪
ಋಷಿಃ—ಸಸ ಆತ್ರೇಯಃ ॥
ದೇವತಾ—ಅಗ್ನಿಃ ॥
॥ ಛಂದಃ—೧-೩, ಅನುಷ್ಟುಪ್ । ೪. ಪಂಕ್ತಿಃ ॥

॥ ಸಂಹಿತಾಪಾಠಃ ॥

ಮನುಷ್ವತ್ತ್ವಾ ನಿ ಧೀಮಹಿ ಮನುಷ್ವತ್ಸಮಿಧೀಮಹಿ ।
ಅಗ್ನೇ ಮನುಷ್ವದಂಗಿರೋ ದೇವಾನ್ದೇವಯತೇ ಯಜ ॥ ೧ ॥

॥ ಪದಪಾಠಃ ॥

ಮನುಷ್ವತ್ । ತ್ವಾ । ನಿ । ಧೀಮಹಿ । ಮನುಷ್ವತ್ । ಸಂ । ಇಧೀಮಹಿ ।
ಅಗ್ನೇ ಮನುಷ್ವತ್ । ಅಂಗಿರಃ । ದೇವಾನ್ । ದೇವಽಯತೇ । ಯಜ ॥ ೧ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ತ್ವಾ ತ್ವಾಂ ಮನುಷ್ವನ್ಮನುರಿವ ನಿ ಧೀಮಹಿ । ಮನುಃಶಬ್ದೋ ಮನುಪರ್ಯಾಯಃ॥ ನಭೋಽಂಗಿರೋಮನುಷಾಂ ವತ್ಯುಪಸಂಖ್ಯಾನಮಿತಿ ಭಸಂಜ್ಞಾಯಾಂ ರುತ್ವಾಭಾವಃ॥ ಮನುಷ್ವನ್ಮನುರಿವ ತ್ವಾ ಸಮಿಧೀಮಹಿ । ಸಮಿದ್ಧಿಃ ಸಂದೀಪಯಾಮಃ । ಹೇ ಅಂಗಿರೋಽಂಗಾರಾತ್ಮಕಾಗ್ನೇ ದೇವಯತೇ ದೇವಕಾಮಾಯ ಯಜಮಾನಾಯ ಮನುಷ್ವನ್ಮನವೇ ಮನೋರಪತ್ಯಾಯ ದೇವಾನ್ ಯಜ ॥**

॥ ಪ್ರತಿಪದಾರ್ಥ ॥.

**ಅಗ್ನೇ**—ಎಲೈ ಅಗ್ನಿಯೇ । **ತ್ವಾ**—ನಿನ್ನನ್ನು । **ಮನುಷ್ವತ್**—ಮನುವಿನಂತೆ । **ನಿ ಧೀಮಹಿ**—ಧ್ಯಾನಿಸುತ್ತೇವೆ । **ಮನುಷ್ವತ್**—ಮನುವು ಮಾಡಿದಂತೆ । **ಸಮಿಧೀಮಹಿ**—(ನಿನ್ನನ್ನು) ಪ್ರಜ್ವಲಿಸುವಂತೆ ಮಾಡುತ್ತೇವೆ । **ಅಂಗಿರಃ**—ಅಂಗಿರಾತ್ಮಕನಾದ । **ಅಗ್ನೇ**—ಎಲೈ ಅಗ್ನಿಯೇ । **ದೇವಯತೇ**—ದೇವತೆಗಳನ್ನು ಸಹಾಯಕ್ಕಾಗಿ ಇಚ್ಛಿಸುವ ಯಜಮಾನನ ಪರವಾಗಿ । **ಮನುಷ್ವತ್**—ಮನುವಿನಂತೆ । **ದೇವಾನ್**—ದೇವತೆಗಳನ್ನುದ್ದೇಶಿಸಿ । **ಯಜ**—ಯಜ್ಞಮಾಡು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನನ್ನು ಮನುವು ಧ್ಯಾನಿಸಿದ ರೀತಿಯಲ್ಲೇ ನಾವೂ ಧ್ಯಾನಿಸುತ್ತೇವೆ. ಮನುವು ನಿನನ್ನು ಪ್ರಜ್ವಲಿಸುವಂತೆ ಮಾಡಿದ ರೀತಿಯಲ್ಲಿ ನಾವೂ ಮಾಡುತ್ತೇವೆ. ಅಂಗಿರಾತ್ಮಕನಾದ ಎಲೈ ಅಗ್ನಿಯೇ, ದೇವತೆಗಳನ್ನು ಒಲಿಸಿಕೊಳ್ಳುವ ಇಚ್ಛೆಯುಳ್ಳ ಯಜಮಾನನಿಗಾಗಿ ನೀನೂ ಮನುವಿನಂತೆ ದೇವತೆಗಳನ್ನುದ್ದೇಶಿಸಿ ಯಜ್ಞಮಾಡು

## English Translation

Like Manu, we mediate, Agni, upon you; like Manu, we kindled you: worship the gods on behalf of the (worshipper), devout as Manu.

|| ಸಂಹಿತಾಪಾಠಃ ||

**ತ್ವಂ ಹಿ ಮಾನುಷೇ ಜನೇಽಗ್ನೇ ಸುಪ್ರೀತ ಇಧ್ಯಸೇ ।**

**ಸ್ರುಚಸ್ತ್ವಾ ಯಂತ್ಯಾನುಷಕ್ಸುಜಾತ ಸರ್ಪಿರಾಸುತೇ ॥ ೨ ॥**

|| ಪದಪಾಠಃ ||

**ತ್ವಂ । ಹಿ । ಮಾನುಷೇ । ಜನೇ । ಅಗ್ನೇ । ಸುಽಪ್ರೀತಃ । ಇಧ್ಯಸೇ ।**

**ಸ್ರುಚಃ । ತ್ವಾ । ಯಂತಿ । ಆನುಷಕ್ । ಸುಽಜಾತ । ಸರ್ಪಿಃಽಆಸುತೇ ॥ ೨ ॥**

|| ಸಾಯಣಭಾಷ್ಯಂ ||

**ಹೇ ಅಗ್ನೇ ತ್ವಂ ಮಾನುಷೇ ಜನೇ ಮನುಷ್ಯಲೋಕೇ ಸುಪ್ರೀತಃ ಸ್ತೋತ್ರೈಃ ಸುಷ್ಠು ಪ್ರೀತಃ ಸನ್ ಇಧ್ಯಸೇ । ದೀಪ್ಯಸೇ । ಸ್ರುಚೋ ಹವಿರ್ಭಿಃ ಸಂಪೂರ್ಣಾ ಆನುಷಕ್ ಅನುಷಕ್ತಂ ಯಥಾ ಭವತಿ ತಥಾ ತ್ವಾ ತ್ವಾಂ ಯಂತಿ । ಪ್ರಾಪ್ನುವಂತಿ । ಹೇ ಸುಜಾತ ಹೇ ಸರ್ಪಿರಾಸುತೇ ಘೃತಯುಕ್ತಾನ್ನೇತಿ ॥**

ಪ್ರತಿಪದಾರ್ಥ

ಅಗ್ನೇ—ಎಲೈ ಅಗ್ನಿಯೇ । **ತ್ವಂ**—ನೀನು । **ಸುಪ್ರೀತಃ**—ಸ್ತೋತ್ರಾದಿಗಳಿಂದ ಸಂತೃಪ್ತನಾದಾಗ । **ಮಾನುಷೇ ಜನೇ**—ಮಾನವರ ಗುಂಪಿನಲ್ಲಿ । **ಇಧ್ಯಸೇ**—ಪ್ರಜ್ವಲಿತನಾಗುತ್ತೀಯೆ । **ಸುಜಾತ**—ಶ್ರೇಷ್ಠವಾದ ಜನ್ಮವುಳ್ಳವನೂ । **ಸರ್ಪಿರಾಸುತೇ**—ಘೃತರೂಪವಾದ ಅನ್ನವುಳ್ಳವನೂ ಆದ ಎಲೈ ಅಗ್ನಿಯೇ । **ಸ್ರುಚಃ**—ಹವಿಸ್ಸಿನಿಂದ ಪೂರ್ಣವಾದ ಸ್ರುಕ್ಪಾತ್ರೆಗಳು । **ಆನುಷಕ್**—ನಿರಂತರವಾಗಿ । **ತ್ವಾ**—ನಿನ್ನನ್ನು । **ಯಂತಿ**-ಸಮೀಪಿಸುತ್ತವೆ.

|| ಭಾವಾರ್ಥ ||

ಎಲೈ ಅಗ್ನಿಯೇ, ನೀನು ಸ್ತುತ್ಯಾದಿಗಳಿಂದ ಸಂತೃಪ್ತನಾದಾಗ ಮಾನವರ ಗುಂಪಿನಲ್ಲಿ ಪ್ರಜ್ವಲಿತನಾಗುತ್ತೀಯೆ ಶ್ರೇಷ್ಠವಾದ ಜನ್ಮವುಳ್ಳವನೂ, ಘೃತರೂಪವಾದ ಅನ್ನವುಳ್ಳವನೂ ಆದ ಎಲೈ ಅಗ್ನಿಯೇ, ಹವಿಸ್ಸಿನಿಂದ ಪೂರ್ಣವಾದ ಸ್ರುಕ್ಪಾತ್ರೆಗಳು ನಿರಂತರವಾಗಿ ನಿನ್ನನ್ನು ಸಮೀಪಿಸುತ್ತವೆ

English Translation

When you are pleased, Agni, you shine upon the human race; well-born, feeder upon clarified butter, the ladles are constantly uplifted to you.

॥ ಸಂಹಿತಾಪಾಠಃ ॥

ತ್ವಾಂ ವಿಶ್ವೇ ಸಜೋಷಸೋ ದೇವಾಸೋ ದೂತಮಕ್ರತ ।
ಸಪರ್ಯಂತಸ್ತ್ವಾ ಕವೇ ಯಜ್ಞೇಷು ದೇವಮೀಳತೇ ॥ ೩ ॥

॥ ಪದಪಾಠಃ ॥

ತ್ವಾಂ । ವಿಶ್ವೇ । ಸ್ಽಜೋಷಸಃ । ದೇವಾಸಃ । ದೂತಂ । ಅಕ್ರತ ।
ಸಪರ್ಯಂತಃ । ತ್ವಾ । ಕವೇ । ಯಜ್ಞೇಷು । ದೇವಂ । ಈಳತೇ ॥ ೩ ॥

॥ ಸಾಯಣಭಾಷ್ಯಂ ॥

ಸಜೋಷಸಃ ಸಹ ಪ್ರೀಯಮಾಣಾ ವಿಶ್ವೇ ಸರ್ವೇ ದೇವಾಸೋ ದೇವಾಸ್ತ್ವಾಂ ದೂತಮಕ್ರತ । ಅಕುರ್ವನ್ । ಅತಃ ಕಾರಣಾತ್ ಹೇ ಕವೇ ಕ್ರಾಂತದರ್ಶಿನ್ ದೇವಂ ದ್ಯೋತಮಾನಂ ತ್ವಾ ತ್ವಾಂ ಸಪರ್ಯಂತಃ ಪರಿಚರಂತೋ ಯಜಮಾನಾ ಯಜ್ಞೇಷ್ವೀಳತೇ । ದೇವಾನಾಹ್ವಾತುಂ ಯಾಚಂತೇ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಸಜೋಷಸಃ**—ನಿನ್ನಲ್ಲಿ ಸಮಾನವಾದ ಪ್ರೀತಿಯುಳ್ಳ । **ವಿಶ್ವೇ**—ಸಮಸ್ತರಾದ । **ದೇವಾಸಃ**—ದೇವತೆಗಳೆಲ್ಲರೂ । **ತ್ವಾಂ**—ನಿನ್ನನ್ನು । **ದೂತಂ**—ದೂತನನ್ನಾಗಿ । **ಅಕ್ರತ**—ಮಾಡಿದ್ದಾರೆ (ಆದುದರಿಂದ) । **ಕವೇ**—ಕ್ರಾಂತದರ್ಶಿಯಾದ ಎಲೈ ಅಗ್ನಿಯೇ । **ದೇವಂ**—ಪ್ರಕಾಶಮಾನನಾದ । **ತ್ವಾ**-ನಿನ್ನನ್ನು । **ಯಜ್ಞೇಷು**—ಯಜ್ಞಗಳಲ್ಲಿ । **ಸಪರ್ಯಂತಃ**—ಪೂಜಿಸತಕ್ಕ ಯಜಮಾನರು । **ಈಳತೇ**—ಸ್ತುತಿಸುತ್ತಾರೆ.

॥ ಭಾವಾರ್ಥ ॥

ಎಲೈ ಪ್ರಾಜ್ಞನಾದ ಅಗ್ನಿಯೇ, ನಿನ್ನಲ್ಲಿ ಸಮಾನವಾದ ಪ್ರೀತಿಯುಳ್ಳ ಸಮಸ್ತ ದೇವತೆಗಳೂ ನಿನ್ನನ್ನು ತಮ್ಮ ದೂತನನ್ನಾಗಿ ಆರಿಸಿದ್ದಾರೆ. ಆದುದರಿಂದಲೇ, ದೇವತಾತ್ಮನೂ, ಪ್ರಕಾಶಮಾನನೂ ಆದ ನಿನ್ನನ್ನು ಯಜಮಾನರು ಯಜ್ಞಗಳಲ್ಲಿ ಪೂಜಿಸುತ್ತಾ ಸ್ತುತಿಸುತ್ತಾರೆ

## English Translation

All the consentient divinities have made you their messenger ; therefore the pious worship you who are divine, wise Agni, at sacrifices.

|| ಸಂಹಿತಾಪಾಠಃ ||

ದೇವಂ ವೋ ದೇವಯಜ್ಯಯಾಗ್ನಿಮೀಳೀತ ಮರ್ತ್ಯಃ ।
ಸಮಿದ್ಧಃ ಶುಕ್ರ ದೀದಿಹ್ಯೃತಸ್ಯ ಯೋನಿಮಾಸದಃ ಸಸಸ್ಯ ಯೋನಿ-
ಮಾಸದಃ ॥ ೪ ॥

|| ಪದಪಾಠಃ ||

ದೇವಂ । ವಃ । ದೇವಯಜ್ಯಯಾ । ಅಗ್ನಿಂ । ಈಳೀತ । ಮರ್ತ್ಯಃ ।
ಸಂಽಇದ್ಧಃ । ಶುಕ್ರ । ದೀದಿಹಿ । ಋತಸ್ಯ । ಯೋನಿಂ । ಆ । ಅಸದಃ । ಸಸಸ್ಯ । ಯೋನಿಂ।
ಆ । ಅಸದಃ ॥ ೪ ॥

|| ಸಾಯಣಭಾಷ್ಯಂ ||

ಮರ್ತ್ಯೋ ಮನುಷ್ಯೋ ದೇವಂ ದ್ಯೋತಮಾನಮಗ್ನಿಮಗ್ರಣ್ಯಂ ವಸ್ತ್ವಾಂ ದೇವಯಜ್ಯಯಾ ದೇವಯಜ್ಯಾಯೈ ದೇವಯಾಗಾರ್ಥಮೀಳೀತ । ಸ್ತೋತುಮರ್ಹತಿ । ಹೇ ಶುಕ್ರ ಶೋಚಿಷ್ಮನ್ ಸಮಿದ್ಧೋ ಹವಿರ್ಭಿಃ ಪ್ರವೃದ್ಧಃ ಸನ್ ದೀದಿಹಿ । ದೀಪ್ಯಸ್ವ । ಋತಸ್ಯ ಸತ್ಯಭೂತಸ್ಯ ಸಸಸ್ಯ ಋಷೇರ್ಮಮ ಯೋನಿಂ ಯೋನಿಕಾರಣಂ ಸ್ವರ್ಗಸಾಧನಂ ಯಜ್ಞಸ್ಥಾನಮಾಸದಃ । ದೇವತಾರೂಪೇಣಾಸೀದ । ಆದರಾತಿಶಯದ್ಯೋತನಾರ್ಥಂ ಪುನರ್ವಚನಂ ॥

|| ಪ್ರತಿಪದಾರ್ಥ ||

(ಎಲೈ ಅಗ್ನಿಯೇ) **ಮರ್ತ್ಯಃ**—ಮಾನವನು । **ದೇವಂ**— ಪ್ರಕಾಶಮಾನನೂ । **ಅಗ್ನಿಂ**—ಅಗ್ನಿರೂಪನೂ ಆದ । **ವಃ**—ನಿನ್ನನ್ನು । **ದೇವಯಜ್ಯಯಾ**—ದೇವತೆಗಳನ್ನುದ್ದೇಶಿಸಿ ಯಾಗಮಾಡಲು । **ಈಳೀತ**-ಸ್ತುತಿಸುತ್ತಾನೆ। **ಶುಕ್ರ**—ಪ್ರಭಾಯುತನಾದ ಅಗ್ನಿಯೇ । **ಸಮಿದ್ಧಃ**—ಹವಿರಾದಿಗಳಿಂದ ಪ್ರಜ್ವಲಿತನಾದಾಗ (ನೀನು) । **ದೀದಿಹಿ**—ಪ್ರಕಾಶಿಸು । **ಋತಸ್ಯ**—ಸತ್ಯಾನುಯಾಯಿಯಾದ । **ಸಸಸ್ಯ**—ಸಸನೆಂಬ ಋಷಿಯ । **ಯೋನಿಂ**-ಯಜ್ಞಸ್ಥಾನದಲ್ಲಿ। **ಆಸದಃ**—ಆಸೀನನಾಗು । ಅಥವಾ [**ಋತಸ್ಯ**—ಯಜ್ಞದ । **ಯೋನಿಂ**—ಉತ್ಪತ್ತಿಸ್ಥಾನದಲ್ಲಿ । **ಆಸದಃ**—ಆಸೀನನಾಗು । **ಸಸಸ್ಯ**—ಸಸನಾಮಕನಾದ ಋಷಿಯ । **ಯೋನಿಂ**—ಯಜ್ಞಸ್ಥಾನದಲ್ಲಿ। **ಆಸದಃ**—ಆಸೀನನಾಗು.]

|| ಭಾವಾರ್ಥ ||

ಎಲೈ ಅಗ್ನಿಯೇ, ಪ್ರಕಾಶಮಾನನೂ, ದೇವತಾತ್ಮನೂ ಆದ ನಿನ್ನನ್ನು ದೇವತೆಗಳನ್ನುದ್ದೇಶಿಸಿ ಯಾಗಮಾಡಲು ಸ್ತುತಿಸುತ್ತಾನೆ ಪ್ರಭಾಯುತನಾದ ಅಗ್ನಿಯೇ, ನೀನು ಹವಿರಾದಿಗಳಿಂದ ಪ್ರಜ್ವಲಿತನಾಗಿ ಪ್ರಕಾಶಿಸು ಸತ್ಯಾನುಯಾಯಿಯಾದ ಸಸನೆಂಬ ಋಷಿಯ ಸತ್ಯಾತ್ಮಕವಾದ ಯಜ್ಞಸ್ಥಾನದಲ್ಲಿ ಆಸೀನನಾಗು

## English Translation

Man praises you, divine Agni, to convey his offerings to the Gods, bright Agni, blaze when kindled : take your seat in the chamber (of sacrifice): in the chamber of the sincere Sisa.

---

## ಇಪ್ಪತ್ತೆರಡನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಪ್ರ ವಿಶ್ವಸಾಮನ್ನಿತಿ ಚತುರ್ಋಚಮಷ್ಟಮಂ ಸೂಕ್ತಂ। ಆತ್ರೇಯೋ ವಿಶ್ವಸಾಮಾ ಋಷಿಃ। ಚತುರ್ಥೀ ಪಂಕ್ತಿಃ ಶಿಷ್ಟಾ ಅನುಷ್ಟುಭಃ। ಅಗ್ನಿರ್ದೇವತಾ। ತಥಾ ಚಾನುಕ್ರಾಂತಂ। ಪ್ರ ವಿಶ್ವಸಾಮನ್ನ್ವಿಶ್ವಸಾಮೇತಿ॥ ಉಕ್ತೋ ವಿನಿಯೋಗಃ ಪ್ರಾತರನುವಾಕಾಶ್ವಿನಶಸ್ತ್ರಯೋಃ॥**

ಅನುವಾದವು—**ಪ್ರ ವಿಶ್ವಸಾಮನ್** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು ಇದರಲ್ಲಿ ನಾಲ್ಕು ಋಕ್ಕುಗಳಿರುವವು ಈ ಸೂಕ್ತಕ್ಕೆ ವಿಶ್ವಸಾಮಾ ಆತ್ರೇಯಃ ಎಂಬುವನು ಋಷಿಯು, ಅಗ್ನಿಯು ದೇವತೆಯು, ನಾಲ್ಕನೆಯ ಋಕ್ಕು ಪಂಕ್ತಿಶ್ಛಂದಸ್ಕವು. ಉಳಿದ ಋಕ್ಕುಗಳ ಅನುಷ್ಟುಪ್ ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಪ್ರ ವಿಶ್ವಸಾಮನ್ನ್ವಿಶ್ವಸಾಮ** ಎಂದು ಹೇಳಿರುವುದು ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಗಳ ಪಠನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದು.

### ಸೂಕ್ತ—೨೨.

ಮಂಡಲ—೫ ॥ ಅನುವಾಕ—೨ ॥ ಸೂಕ್ತ—೨೨ ॥
ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೧೪ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ—೪ ॥
ಋಷಿಃ—ವಿಶ್ವಸಾಮಾತ್ರೇಯಃ ॥
ದೇವತಾ—ಅಗ್ನಿ. ॥
ಛಂದಃ—೧-೩, ಅನುಷ್ಟುಪ್ । ೪. ಪಂಕ್ತಿಃ ॥

---

ಸಂಹಿತಾಪಾಠಃ

ಪ್ರ ವಿಶ್ವಸಾಮನ್ನತ್ರಿವದರ್ಚಾ ಪಾವಕಶೋಚಿಷೇ ।
ಯೋ ಅಧ್ವರೇಷ್ವೀಡ್ಯೋ ಹೋತಾ ಮಂದ್ರತಮೋ ವಿಶಿ ॥ ೧ ॥

ಪದಪಾಠಃ

ಪ್ರ । ವಿಶ್ವಸಾಮನ್ । ಅತ್ರಿಽವತ್ । ಅರ್ಚ । ಪಾವಕಽಶೋಚಿಷೇ ।

ಯಃ । ಅಧ್ವರೇಷು । ಈಡ್ಯಃ । ಹೋತಾ । ಮುದ್ರಽತಮಃ । ವಿಶಿ ॥ ೧ ॥

॥ ಸಾಯಣಭಾಷ್ಯಂ ॥

**ಹೇ ವಿಶ್ವಸಾಮನ್ । ಋಷೇಃ ಸಂಬೋಧನಮೇತತ್ । ತ್ವಮತ್ರಿವದತ್ರಿರಿವ ಪಾವಕಶೋಚಿಷೇ ಶೋಧಕದೀಪ್ತಯೇ ತಸ್ಮಾ ಅಗ್ನಯೇ ಪ್ರಾರ್ಚ । ಪ್ರಗಾಯ । ಯೋಽಗ್ನಿರಧ್ವರೇಷ್ವೀಡ್ಯಃ ಸರ್ವೈರ್ಯಜ್ವಭಿಃ ಸ್ತುತ್ಯೋ ಹೋತಾ ದೇವಾನಾಮಾಹ್ವಾತಾ ವಿಶಿ ಜನೇ ಮಂದ್ರತಮಃ ಸ್ತುತ್ಯತಮಃ ॥**

॥ ಪ್ರತಿಪದಾರ್ಥ ॥

**ವಿಶ್ವಸಾಮನ್**—ಎಲೈ ವಿಶ್ವಸಾಮನಾಮಕನಾದ ಋಷಿಯೇ । **ಯಃ**—ಯಾವ ಅಗ್ನಿಯು । **ಅಧ್ವರೇಷು**—ಯಜ್ಞಗಳಲ್ಲಿ । **ಈಡ್ಯಃ**—ಪೂಜ್ಯನೋ । **ಹೋತಾ**—ಹೋತೃರೂಪನೋ । **ವಿಶಿ**—ಸಮಸ್ತ ಜನರಲ್ಲಿಯೂ । **ಮಂದ್ರತಮಃ**—ಅತ್ಯಂತ ಪ್ರಶಸ್ಯನೋ ಅಂತಹ । **ಪಾವಕಶೋಚಿಷೇ**—ಶುದ್ಧಿಕಾರಕವಾದ ಪ್ರಭೆಯುಳ್ಳ ಅಗ್ನಿಯನ್ನು ಕುರಿತು । **ಅತ್ರಿವತ್**—ಅತ್ರಿಋಷಿಯು ಪಠಿಸಿದಂತೆ । **ಪ್ರ ಅರ್ಚ**—ಉತ್ತಮವಾದ ಸ್ತುತಿಯನ್ನು ಪಠಿಸು

॥ ಭಾವಾರ್ಥ ॥

ವಿಶ್ವಸಾಮನಾಮಕನಾದ ಎಲೈ ಋಷಿಯೇ, ಯಜ್ಞಗಳಲ್ಲಿ ಅತ್ಯಂತ ಪೂಜ್ಯನೂ, ಹೋತೃರೂಪನೂ, ಸಮಸ್ತ ಜನರಲ್ಲಿಯೂ ಅತ್ಯಂತ ಪ್ರಶಸ್ಯನೂ, ಶುದ್ಧಕಾರಕವಾದ ದೀಪ್ತಿಯುಳ್ಳವನೂ ಆದ ಅಗ್ನಿಯನ್ನು ಕುರಿತು ಅತ್ರಿಋಷಿಯು ಪಠಿಸಿದಂತೆ ಉತ್ತಮವಾದ ಸ್ತುತಿಯನ್ನು ಪಠಿಸು

English Translation

Sing, Vishwasaman, like Atri, (a hymn) to the dispencer of purifying light : (to him) who is to be praised at sacrifices, the invoker of the gods, the most adorable by man.

———

॥ ಸಂಹಿತಾಪಾಠಃ ॥

ನ್ಯ೧ಗ್ನಿಂ ಜಾತವೇದಸಂ ದಧಾತಾ ದೇವಮೃತ್ವಿಜಂ ।

ಪ್ರ ಯಜ್ಞ ಏತ್ವಾನುಷಗದ್ಯಾ ದೇವವ್ಯಚಸ್ತಮಃ ॥ ೨ ॥

|| ಪದಪಾಠಃ ||

**ನಿ । ಅಗ್ನಿಂ । ಜಾತಃವೇದಸಂ । ದಧಾತ । ದೇವಂ । ಋತ್ವಿಜಂ ।**

**ಪ್ರ । ಯಜ್ಞಃ । ಏತು । ಆನುಷಕ್ । ಅದ್ಯ । ದೇವವ್ಯಚಃತಮಃ ॥ ೨ ॥**

|| ಸಾಯಣಭಾಷ್ಯಂ ||

**ಹೇ ಯಜಮಾನಾ ಜಾತವೇದಸಂ ಜಾತಪ್ರಜ್ಞಂ ಜಾತಧನಂ ವಾ ದೇವಂ ದ್ಯೋತಮಾನಮೃತ್ವಿಜಮೃತುಯಷ್ಟಾರಮಗ್ನಿಂ ನಿ ದಧಾತ । ನಿಧತ್ತ । ಕಿಂಚ ದೇವವ್ಯಚಸ್ತಮೋ ದೇವಾನಾಮಾಪ್ತತಮೋ ಯಜ್ಞೋ ಯಜ್ಞಸಾಧನಮಸ್ಮಾಭಿರ್ದೀಯಮಾನಂ ಹವಿರಾನುಷಕ್ ಅನುಷಕ್ತಂ ಯಥಾ ಭವತಿ ತಥಾದ್ಯಾಸ್ಮಿನ್ನಹನಿ ತಮಗ್ನಿಂ ಪ್ರೈತು । ಗಚ್ಛತು ॥**

॥ ಪ್ರತಿಪದಾರ್ಥ ॥

(ಎಲೈ ಯಜಮಾನರೇ) **ಜಾತವೇದಸಂ**—ಉತ್ಪನ್ನವಾದ ಸಕಲವನ್ನೂ ತಿಳಿಯುವ ಶಕ್ತಿಯುತನೂ । **ದೇವಂ**—ಪ್ರಕಾಶಮಾನನೂ । **ಋತ್ವಿಜಂ**—ಯಜ್ಞಕ್ಕೆ ಮುಖ್ಯವಾದ ಋತ್ವಿಗ್ರೂಪನೂ ಆದ । **ಅಗ್ನಿಂ**—ಅಗ್ನಿಯನ್ನು । **ನಿ ದಧಾತ**—(ಯಜ್ಞಭೂಮಿಯಲ್ಲಿ) ಸ್ಥಾಪಿಸಿರಿ । **ದೇವವ್ಯಚಸ್ತಮಃ**—ದೇವತೆಗಳಿಗೆಲ್ಲಾ ಅತ್ಯಂತ ಪ್ರಿಯಕರವಾದ । **ಯಜ್ಞಃ**—ಯಜ್ಞದಲ್ಲಿ ಅರ್ಪಿಸಿದ ಹವಿಸ್ಸು । **ಆನುಷಕ್**—ನಿರಂತರವಾಗಿ । **ಅದ್ಯ**—ಯಾಗದಲ್ಲಿ । **ಪ್ರ ಏತು**—(ಅಗ್ನಿಯನ್ನು) ಸೇರಿಕೊಳ್ಳಲಿ.

॥ ಭಾವಾರ್ಥ ॥

ಎಲೈ ಯಜಮಾನರೇ, ಉತ್ಪನ್ನವಾದ ಸಕಲವನ್ನೂ ತಿಳಿಯುವ ಶಕ್ತಿಯುಳ್ಳವನೂ, ಪ್ರಕಾಶಮಾನನೂ, ಯಜ್ಞಕ್ಕೆ ಮುಖ್ಯವಾದ ಋತ್ವಿಗ್ರೂಪನೂ ಆದ ಅಗ್ನಿಯನ್ನು ಯಜ್ಞಭೂಮಿಯಲ್ಲಿ ಸ್ಥಾಪಿಸಿರಿ. ದೇವತೆಗಳಿಗೆಲ್ಲಾ ಅತ್ಯಂತ ಪ್ರಿಯಕರವಾದ ಯಜ್ಞದಲ್ಲಿ ಅರ್ಪಿಸಿದ ಹವಿಸ್ಸು ಈ ಯಾಗದಲ್ಲಿ ನಿರಂತರವಾಗಿ ಅಗ್ನಿಯನ್ನು ಸೇರಿಕೊಳ್ಳಲಿ

## English Translation

Cherish the divine Agni, by whom all that exists is known, the priest (of the rite). may the sacrifice most suitable for the gods duly this day proceed to them.

---

|| ಸಂಹಿತಾಪಾಠಃ ||

**ಚಿಕಿತ್ವಿನ್ಮನಸಂ ತ್ವಾ ದೇವಂ ಮರ್ತಾಸ ಊತಯೇ ।**

**ವರೇಣ್ಯಸ್ಯ ತೇಽವಸ ಇಯಾನಾಸೋ ಅಮನ್ಮಹಿ ॥ ೩ ॥**

॥ ಪದಪಾಠಃ ॥

ಚಿಕಿತ್ವಿತ್ಽಮನಸಂ । ತ್ವಾ । ದೇವಂ । ಮರ್ತಾಸಃ । ಊತಯೇ ।

ವರೇಣ್ಯಸ್ಯ । ತೇ । ಅವಸಃ । ಇಯಾನಾಸಃ । ಅಮನ್ಮಹಿ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಚಿಕಿತ್ವಿನ್ಮನಸಂ । ಚಿಕಿತ್ವಿಜ್ಞಾನಮ್ಮನೋ ಯಸ್ಯಾಸೌ ಚಿಕಿತ್ವಿನ್ಮನಾಃ । ತಂ ದೇವಂ ತ್ವಾ ತ್ವಾಮಿಯಾನಾಸ ಉಪಗಚ್ಛಂತೋ ಮರ್ತಾಸೋ ಮನುಷ್ಯಾ ವಯಮೂತಯೇ ರಕ್ಷಣಾರ್ಥಂ ವರೇಣ್ಯಸ್ಯ ಸಂಭಜನೀಯಸ್ಯ ತೇ ತವಾವಸೋಽವಸೇ ತರ್ಪಣಾಯಾಮನ್ಮಹಿ । ಸ್ತುಮಃ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಚಿಕಿತ್ವಿನ್ಮನಸಂ**—ಎಲ್ಲವನ್ನೂ ತಿಳಿಯುವ ಮನಶ್ಶಕ್ತಿಯುಳ್ಳವನೂ । **ದೇವಂ**—ದೇವತಾತ್ಮನೂ ಆದ । **ತ್ವಾ**—ನಿನ್ನನ್ನು । **ಊತಯೇ**—ರಕ್ಷಣಾರ್ಥವಾಗಿ । **ಇಯಾನಾಸಃ**—ಸಮೀಪಿಸುವವರೂ । **ಮರ್ತಾಸಃ**—ಮಾನವರೂ ಆದ ನಾವು । **ವರೇಣ್ಯಸ್ಯ**—ಪೂಜ್ಯನೂ ಅದ್ಭುತನೂ ಆದ । **ತೇ**—ನಿನ್ನ । **ಅವಸಃ**—ಸಂತೃಪ್ತಿಗಾಗಿ । **ಅಮನ್ಮಹಿ**—ಸ್ತುತಿಸುತ್ತೇವೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಸಕಲವನ್ನೂ ತಿಳಿಯುವ ಮನಶ್ಶಕ್ತಿಯುಳ್ಳವನೂ ದೇವತಾತ್ಮನೂ ಆದ ನಿನ್ನನ್ನು ರಕ್ಷಣಾರ್ಥವಾಗಿ ಸಮೀಪಿಸುವವರೂ ಮಾನವರೂ ಆದ ನಾವು ಪೂಜ್ಯನೂ ಅದ್ಭುತನೂ ಆದ ನಿನ್ನ ಸಂತೃಪ್ತಿಗಾಗಿ ಸ್ತುತಿಸುತ್ತೇವೆ

## English Translation

Men have recourse to you divine Agni, who are of intelligent mind, for security : we praise you who are most excellent, seeking your protection.

॥ ಸಂಹಿತಾಪಾಠಃ ॥

ಅಗ್ನೇ ಚಿಕಿದ್ಧ್ಯ೧ಸ್ಯ ನ ಇದಂ ವಚಃ ಸಹಸ್ಯ ।

ತಂ ತ್ವಾ ಸುಶಿಪ್ರ ದಂಪತೇ ಸ್ತೋಮೈರ್ವರ್ಧಂತ್ಯತ್ರಯೋ

ಗೀರ್ಭಿಃ ಶುಂಭಂತ್ಯತ್ರಯಃ ॥ ೪ ॥

॥ ಪದಪಾಠಃ ॥

ಅಗ್ನೇ । ಚಿಕಿದ್ಧಿ । ಅಸ್ಯ । ನಃ । ಇದಂ । ವಚಃ । ಸಹಸ್ಯ ।

ತಂ । ತ್ವಾ । ಸುಽಶಿಪ್ರ । ದಂಽಪತೇ । ಸ್ತೋಮೈಃ । ವರ್ಧಂತಿ । ಅತ್ರಯಃ । ಗೀಃಽಭಿಃ ।

ಶುಂಭಂತಿ । ಅತ್ರಯಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಹೇ ಸಹಸ್ಯ ಸಹಸೋ ಬಲಸ್ಯ ಪುತ್ರ ನೋಽಸ್ಮದೀಯಮಸ್ಯೇದಂ ಪರಿಚರಣಮಿದಂ ವಚಃ ಸ್ತೋತ್ರಂ ಚಿಕಿದ್ಧಿ । ಜಾನೀಹಿ । ಹೇ ಸುಶಿಪ್ರ । ಶೋಭನೇ ಶಿಪ್ರೇ ಹನೂ ನಾಸಿಕೇ ವಾ ಯಸ್ಯಾಸೌ ಸುಶಿಪ್ರಃ । ತಸ್ಯ ಸಂಬೋಧನಂ । ಸುಶಿಪ್ರ ಸುಹನೋ ದಂಪತೇ ಗೃಹಪತೇ ತಂ ತ್ವಾಮ-ತ್ರಯೋಽತ್ರಿಪುತ್ರಾಃ ಸ್ತೋಮೈಃ ಸ್ತೋತ್ರೈರ್ವರ್ಧಂತಿ । ವರ್ಧಯಂತಿ । ಅತ್ರಯೋ ಗೀರ್ಭಿಃ ಶುಂಭಂತಿ । ಅಲಂಕುರ್ವಂತಿ ॥

॥ ಪ್ರತಿಪದಾರ್ಥ ॥

**ಸಹಸ್ಯ**—ಶಕ್ತಿಪುತ್ರನಾದ । **ಅಗ್ನೇ**—ಎಲೈ ಅಗ್ನಿಯೇ । **ನಃ**—ನಮ್ಮ । **ಅಸ್ಯ**—ಈ ಯಾಗಕ್ಕೆ ಸಂಬಂಧಿಸಿದ । **ಇದಂ ವಚಃ**—ಪೂಜಾಯೋಗ್ಯವಾದ ಈ ಸ್ತುತಿಯನ್ನು । **ಚಿಕಿದ್ಧಿ**—ತಿಳಿ । **ಸುಶಿಪ್ರ**—ಶ್ರೇಷ್ಠವಾದ ಕೆನ್ನೆಯುಳ್ಳವನೂ । **ದಂಪತೇ**—ಗೃಹಪತಿಯೂ ಆದ । **ತಂ**—ನಿನ್ನನ್ನು । **ಅತ್ರಯಃ**—ಅತ್ರಿಪುತ್ರರು । **ಸ್ತೋಮೈಃ**—ಸ್ತೋತ್ರಗಳಿಂದ । **ವರ್ಧಂತಿ**—ಪ್ರವೃದ್ಧನಾಗಿ ಬೆಳೆಯುವಂತೆ ಮಾಡುತ್ತಾರೆ । **ಅತ್ರಯಃ**—ಅದೇ ಅತ್ರಿಪುತ್ರರು । **ಗೀರ್ಭಿಃ**—ಸ್ತುತಿವಾಕ್ಯಗಳಿಂದ । **ಶುಂಭಂತಿ**—ಅಲಂಕರಿಸುತ್ತಾರೆ

॥ ಭಾವಾರ್ಥ ॥

ಶಕ್ತಿಪುತ್ರನಾದ ಎಲೈಅಗ್ನಿಯೇ, ನಮ್ಮ ಈ ಯಾಗಕ್ಕೆ ಸಂಬಂಧಿಸಿದುದೂ, ಪೂಜಾಯೋಗ್ಯವಾದುದೂ ಆದ ಈ ಸ್ತುತಿಯ ಸ್ವರೂಪವನ್ನು ತಿಳಿ. ಶ್ರೇಷ್ಠವಾದ ಕೆನ್ನೆಯುಳ್ಳವನೂ, ಗೃಹಪತಿಯೂ ಆದ ನಿನ್ನನ್ನು ಅತ್ರಿಪುತ್ರರು ಸ್ತೋತ್ರಗಳಿಂದ ಪ್ರವೃದ್ಧನಾಗಿ ಬೆಳೆಯುವಂತೆ ಮಾಡುತ್ತಾರೆ. ಅದೇ ಅತ್ರಿಪುತ್ರರು ಸ್ತುತಿವಾಕ್ಯಗಳಿಂದ ನಿನ್ನನ್ನು ಅಲಂಕರಿಸುತ್ತಾರೆ. (ಹೊಗಳುತ್ತಾರೆ)

## English Translation

Agni, son of strength recognize the words of this our (laudation): handsome-chinned, lord of the dwelling, the sons of Atri exalt you, such (as you are), by their praises : they embellish you by their hymns.

# ಇಪ್ಪತ್ತಮೂರನೆಯ ಸೂಕ್ತವು.

॥ ಸಾಯಣಭಾಷ್ಯಂ

**ಅಗ್ನೇ ಸಹಂತಮಿತಿ ಚತುರ್ಋಚಂ ನವಮಂ ಸೂಕ್ತಂ । ಅತ್ರಾನುಕ್ರಮಣಿಕಾ । ಅಗ್ನೇ ದ್ಯುಮ್ನೋ ವಿಶ್ವಚರ್ಷಣಿರಿತಿ । ದ್ಯುಮ್ನ ಋಷಿಃ । ಚತುರ್ಥೀ ಪಂಕ್ತಿಃ । ಆದ್ಯಾಸ್ತಿಸ್ರೋಽನುಷ್ಟುಭಃ । ಅಗ್ನಿರ್ದೇವತಾ ॥ ಪ್ರಾತರನುವಾಕಾಶ್ವಿನಶಸ್ತ್ರಯೋರ್ದಶಸೂಕ್ತಾಂತಃಪಾತಿತ್ವಾದುಕ್ತೋ ವಿನಿಯೋಗಃ ॥**

ಅನುವಾದವು—**ಅಗ್ನೇ ಸಹಂತಂ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ನಾಲ್ಕು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ಅಗ್ನೇ ದ್ಯುಮ್ನೋ ವಿಶ್ವಚರ್ಷಣಿಃ** ಎಂದು ಹೇಳಿರುವುದು. ಈ ಸೂಕ್ತಕ್ಕೆ ದ್ಯುಮ್ನೋ ವಿಶ್ವಚರ್ಷಣಿಃ ಎಂಬುವನು ಋಷಿಯು, ಅಗ್ನಿಯು ದೇವತೆಯು; ಈ ಸೂಕ್ತದ ಮೊದಲ ಮೂರು ಋಕ್ಕುಗಳು ಅನುಷ್ಟುಪ್ ಛಂದಸ್ಕವು, ನಾಲ್ಕನೆಯದು ಪಂಕ್ತಿಶ್ಛಂದಸ್ಕವು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಗಳ ಪಠನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೨೩

॥ ಮಂಡಲ—೫ ॥ ಅನುವಾಕ—೨ ॥ ಸೂಕ್ತ—೨೩ ॥
॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೧೫ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೪
ಋಷಿಃ—ದ್ಯುಮ್ನೋ ವಿಶ್ವಚರ್ಷಣಿಃ ॥
ದೇವತಾ—ಅಗ್ನಿಃ ॥
॥ ಛಂದಃ—೧-೩, ಅನುಷ್ಟುಪ್ । ೪. ಪಂಕ್ತಿಃ ॥

॥ ಸಂಹಿತಾಪಾಠಃ ॥

ಅಗ್ನೇ ಸಹಂತಮಾ ಭರ ದ್ಯುಮ್ನಸ್ಯ ಪ್ರಾಸಹಾ ರಯಿಂ ।
ವಿಶ್ವಾ ಯಶ್ಚರ್ಷಣೀರಭ್ಯಾ೩ಸಾ ವಾಜೇಷು ಸಾಸಹತ್ ॥ ೧ ॥

॥ ಪದಪಾಠಃ ॥

ಅಗ್ನೇ । ಸಹಂತಂ । ಆ । ಭರ । ದ್ಯುಮ್ನಸ್ಯ । ಪ್ರಸಹಾ । ರಯಿಂ ।
ವಿಶ್ವಾಃ । ಯಃ । ಚರ್ಷಣೀಃ । ಅಭಿ । ಆಸಾ । ವಾಜೇಷು । ಸಸಹತ್ ॥ ೧ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಪ್ರಾಸಹಾ ಪ್ರಕೃಷ್ಟೇನ ಬಲೇನ ಸಹಂತಂ ಶತ್ರೂನಭಿಭವಂತಂ ರಯಿಂ ಪುತ್ರಂ ದ್ಯುಮ್ನಸ್ಯ ದ್ಯುಮ್ನಾಯ ಮಮ ಋಷಯ ಆ ಭರ । ಆಹರ ॥ ಚತುರ್ಥ್ಯರ್ಥೇ ಷಷ್ಠೀ ॥ ಏತದೇವ ವಿವೃಣೋತಿ। ಯಃ ಪುತ್ರ ಆಸಾಸ್ಯೇನ ಸ್ತೋತ್ರೇಣ ಯುಕ್ತಃ ಸನ್ ವಾಜೇಷು ಯುದ್ಧೇಷ್ವಭಿ ಅಭಿಮುಖ್ಯೇನ ಗತಾನ್ ವಿಶ್ವಾಃ ಸರ್ವಾನ್ ಚರ್ಷಣೀರ್ಮನುಷ್ಯಾನ್ ಶತ್ರೂನ್ ಸಾಸಹತ್ ಅಭಿಭವತಿ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಯಃ**—ಯಾವ ಪುತ್ರನು । **ಆಸಾ**—(ನಿನ್ನ ಸ್ತುತಿಯಿಂದ ಕೂಡಿದ) ಮುಖವುಳ್ಳವನಾಗಿ । **ವಾಜೇಷು**—ಯುದ್ಧಗಳಲ್ಲಿ । **ಅಭಿ**—ತನ್ನನ್ನೆದುರಿಸಿ ಬಂದ । **ವಿಶ್ವಾಃ**—ಸಮಸ್ತರಾದ । **ಚರ್ಷಣೀಃ**—ಮಾನವರನ್ನೂ (ಶತ್ರುಗಳನ್ನೂ) । **ಸಾಸಹತ್**—ಸೋಲಿಸುವನೋ ಅಂತಹ । **ಪ್ರಾಸಹಾ**—ಉತ್ಕೃಷ್ಟವಾದ ಬಲದೊಡನೆ । **ಸಹಂತಂ**—ಶತ್ರುಗಳನ್ನು ಎದುರಿಸುವ । **ರಯಿಂ**—ಪುತ್ರನನ್ನು । **ದ್ಯುಮ್ನಸ್ಯ**—ದ್ಯುಮ್ನನಾಮಕನಾದ ನನಗೆ । **ಆ ಭರ**—ಒದಗಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಯುದ್ಧಗಳಲ್ಲಿ ನಿನ್ನನ್ನೇ ಸ್ತುತಿಸುವ ಮುಖವುಳ್ಳವನಾಗಿ ಯಾವ ಪುತ್ರನು ತನ್ನನ್ನೆದುರಿಸುವ ಸಮಸ್ತ ಶತ್ರುಗಳನ್ನೂ ಕೊಲ್ಲುವ ಶಕ್ತಿಯುಳ್ಳವನಾಗಿರುವನೋ ಅಂತಹ ಉತ್ತಮವಾದ ಬಲವುಳ್ಳ ಪುತ್ರನನ್ನು ದ್ಯುಮ್ನನಾಮಕನಾದ ನನಗೆ ಒದಗಿಸು.

## English Translation

Bestow, Agni, upon Dyumna a son, overcoming foes by his prowess; one who may with glory subdue all men in battle.

॥ ಸಂಹಿತಾಪಾಠಃ ॥

**ತಮಗ್ನೇ ಪೃತನಾಷಹಂ ರಯಿಂ ಸಹಸ್ವ ಆ ಭರ ।**

**ತ್ವಂ ಹಿ ಸತ್ಯೋ ಅದ್ಭುತೋ ದಾತಾ ವಾಜಸ್ಯ ಗೋಮತಃ ॥ ೨ ॥**

॥ ಪದಪಾಠಃ ॥

**ತಂ । ಅಗ್ನೇ । ಪೃತನಾऽಸಹಂ । ರಯಿಂ । ಸಹಸ್ವಃ । ಆ । ಭರ ।**

**ತ್ವಂ । ಹಿ । ಸತ್ಯಃ । ಅದ್ಭುತಃ । ದಾತಾ । ವಾಜಸ್ಯ । ಗೋऽಮತಃ ॥ ೨ ॥**

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಸಹಸೋ್ನೋ ಬಲವನ್ ಪೃತನಾಸಹಂ ಪೃತನಾಃ ಸೇನಾ ಅಭಿಭವಿತಾರಂ ರಯಿಂ ಪುತ್ರಂ ತ್ವಮಾ ಭರ । ಆಹರ । ತ್ವಂ ಹಿ ಸತ್ಯಃ ಸತ್ಯಭೂತೋಽದ್ಭುತೋ ಮಹಾನ್ ಗೋಮತೋ ಗೋಭಿರ್ಯುಕ್ತಸ್ಯ ವಾಜಸ್ಯಾನ್ನಸ್ಯ ದಾತಾ ॥**

॥ ಪ್ರತಿಪದಾರ್ಥ ॥

**ಸಹಸ್ವಃ**—ಶಕ್ತಿಯುತನಾದ । **ಅಗ್ನೇ**—ಎಲೈ ಅಗ್ನಿಯೇ । **ಪೃತನಾಸಹಂ**—ಶತ್ರುಸೇನೆಯನ್ನು ಸೋಲಿಸುವ ಬಲವುಳ್ಳ । **ರಯಿಂ**—ಪುತ್ರನನ್ನು । **ತ್ವಂ**—ನೀನು । **ಆ ಭರ**—ನನಗೆ ಸಂಪಾದಿಸಿಕೊಡು । **ತ್ವಂ ಹಿ**—ನೀನಾದರೋ । **ಸತ್ಯಃ**—ಸತ್ಯಾತ್ಮಕನಾಗಿಯೂ । **ಅದ್ಭುತಃ**—ಮಹತ್ಸ್ವರೂಪವುಳ್ಳವನಾಗಿಯೂ । **ಗೋಮತಃ**—ಗೋವುಗಳಿಂದ ಕೂಡಿದ । **ವಾಜಸ್ಯ**—ಅನ್ನಕ್ಕೆ । **ದಾತಾ**—ದಾತೃವಾಗಿಯೂ । ಇದ್ದೀಯೆ.

॥ ಭಾವಾರ್ಥ ॥

ಶಕ್ತಿಯುತನಾದ ಎಲೈ ಅಗ್ನಿಯೇ, ಶತ್ರುಸೇನೆಯನ್ನು ಸೋಲಿಸುವ ಬಲವುಳ್ಳ ಪುತ್ರನನ್ನು ನನಗೆ ನೀನು ಒದಗಿಸಿಕೊಡು. ನೀನು ಸತ್ಯಾತ್ಮಕನೂ, ಮಹತ್ಸ್ವರೂಪವುಳ್ಳವನೂ, ಗೋವುಗಳಿಂದ ಕೂಡಿದ ಅನ್ನಕ್ಕೆ ದಾತೃವೂ ಆಗಿದ್ದೀಯೆ

English Translation

Mighty Agni, grant us a son able to encounter hosts, for you are true and wonderful, and the giver of food with cattle

॥ ಸಂಹಿತಾಪಾಠಃ ॥

ವಿಶ್ವೇ ಹಿ ತ್ವಾ ಸಜೋಷಸೋ ಜನಾಸೋ ವೃಕ್ತಬರ್ಹಿಷಃ ।
ಹೋತಾರಂ ಸದ್ಮಸು ಪ್ರಿಯಂ ವ್ಯಂತಿ ವಾರ್ಯಾ ಪುರು ॥ ೩ ॥

॥ ಪದಪಾಠಃ ॥

ವಿಶ್ವೇ । ಹಿ । ತ್ವಾ । ಸಽಜೋಷಸಃ । ಜನಾಸಃ । ವೃಕ್ತಽಬರ್ಹಿಷಃ ।
ಹೋತಾರಂ । ಸದ್ಮಽಸು । ಪ್ರಿಯಂ । ವ್ಯಂತಿ । ವಾರ್ಯಾ । ಪುರು ॥ ೩ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಸಜೋಷಸಃ ಸಹ ಪ್ರೀಯಮಾಣಾ ವೃಕ್ತಬರ್ಹಿಷೋ ಲೂನಬರ್ಹಿಷೋ ವಿಶ್ವೇ ಸರ್ವೇ ಜನಾಸೋ ಜನಾ ಋತ್ವಿಜಃ ಸದ್ಮಸು ಯಜ್ಞಗೃಹೇಷು ಹೋತಾರಂ ದೇವಾನಾಮಾಹ್ವಾ-**

**ತಾರಂ ಪ್ರಿಯಂ ಸರ್ವೇಷಾಂ ಪ್ರೀತಿಕರಂ ತ್ವಾ ತ್ವಾಂ ಪುರು ಪುರೂಣಿ ಬಹೂನಿ ವಾರ್ಯಾ ವರಣೀಯಾನಿ ಧನಾನಿ ವ್ಯಂತಿ । ಯಾಚಂತೇ ॥**

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಸಜೋಷಸಃ**—ಸಮಾನವಾದ ಭಕ್ತಿಪ್ರೀತಿಯುಳ್ಳವರೂ । **ವೃಕ್ತಬರ್ಹಿಷಃ**—ಆಸನಾರ್ಥವಾಗಿ ಕತ್ತರಿಸಲ್ಪಟ್ಟ ದರ್ಭವನ್ನು ಸಿದ್ಧಪಡಿಸಿರುವವರೂ ಆದ । **ವಿಶ್ವೇ ಜನಾಸಃ**—ಸಮಸ್ತವಾದ ಋತ್ವಿಕ್ಕುಗಳೂ । **ಸದ್ಮಸು**—ಯಜ್ಞಗೃಹಗಳಲ್ಲಿ । **ಹೋತಾರಂ**—ಹೋತೃರೂಪನೂ । **ಪ್ರಿಯಂ**—ಎಲ್ಲರಿಗೂ ಪ್ರೀತಿಕಾರಕನೂ ಆದ । **ತ್ವಾ**—ನಿನ್ನನ್ನು । **ಪುರು**—ಅಧಿಕವಾದುದೂ । **ವಾರ್ಯಾ**—ಅಪೇಕ್ಷಿತವಾದುದೂ ಆದ ಧನವನ್ನು । **ವ್ಯಂತಿ**—ಯಾಚಿಸುತ್ತಾರೆ

॥ ಭಾವಾರ್ಥ ॥

ಎಲೈ ಅಗ್ನಿಯೇ, ಸಮಾನವಾದ ಭಕ್ತಿಪ್ರೀತಿಯುಳ್ಳವರೂ, ದರ್ಭಗಳನ್ನು ಕತ್ತರಿಸಿ ಶ್ರೇಷ್ಠವಾದ ಆಸನಗಳನ್ನು ಕಲ್ಪಿಸಿರುವವರೂ ಆದ ಸಮಸ್ತ ಋತ್ವಿಕ್ಕುಗಳೂ ಸಹ ಯಜ್ಞಗೃಹಗಳಲ್ಲಿ ಹೋತೃರೂಪನೂ, ಎಲ್ಲರಿಗೂ ಪ್ರೀತಿಕಾರಕನೂ ಆದ ನಿನ್ನನ್ನು ಅಧಿಕವಾದುದೂ, ಅಪೇಕ್ಷಿತವಾದುದೂ ಆದ ಧನವನ್ನು ಯಾಚಿಸುತ್ತಾರೆ.

English Translation

All men concurring in satisfaction, bearing the clipt sacred grass, solicit you, as the kind invoker of the gods, to the chambers (of sacrifice) for infinite wealth.

॥ ಸಂಹಿತಾಪಾಠಃ ॥

ಸ ಹಿ ಷ್ಮಾ ವಿಶ್ವಚರ್ಷಣಿರಭಿಮಾತಿ ಸಹೋ ದಧೇ ।
ಅಗ್ನ ಏಷು ಕ್ಷಯೇಷ್ವಾ ರೇವನ್ನಃ ಶುಕ್ರ ದೀದಿಹಿ ದ್ಯುಮತ್ಪಾವಕ ದೀದಿಹಿ ॥ ೪ ॥

॥ ಪದಪಾಠಃ ॥

ಸಃ । ಹಿ । ಸ್ಮ । ವಿಶ್ವಽಚರ್ಷಣಿಃ । ಅಭಿಽಮಾತಿ । ಸಹಃ । ದಧೇ ।
ಅಗ್ನೇ । ಏಷು । ಕ್ಷಯೇಷು । ಆ । ರೇವತ್ । ನಃ । ಶುಕ್ರ । ದೀದಿಹಿ । ದ್ಯುಽಮತ್ । ಪಾವಕ । ದೀದಿಹಿ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಸ ಲೋಕೇಷು ಪ್ರಸಿದ್ಧೋ ವಿಶ್ವಚರ್ಷಣಿರ್ಋಷಿರಭಿಮಾತಿ ಶತ್ರೂಣಾಂ ಹಿಂಸಕಂ ಸಹೋ ಬಲಂ ದಧೇ । ಧಾರಯತು । ಹಿ ಷ್ಮೇತಿ ಪೂರಣೌ । ಹೇ ಶುಕ್ರ ಶೋಚಿಷ್ಮನ್ ತ್ವಂ ನೋಽಸ್ಮ-ದೀಯೇಷು ಕ್ಷಯೇಷು ಗೃಹೇಷು ರೇವತ್ ಧನಯುಕ್ತಂ ಯಥಾ ಭವತಿ ತಥಾ ದೀದಿಹಿ । ದೀಪ್ಯಸ್ವ ಹೆ ಪಾವಕ ಪಾಪಾನಾಂ ಶೋಧಕಾಗ್ನೇ ತ್ವಂ ದ್ಯುಮದ್ದೀಪ್ತಿಯುಕ್ತಂ ಯಶೋಯುಕ್ತಂ ಚ ಧೀದಿಹಿ । ದೀಪ್ಯಸ್ವ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಸಃ**—ಪ್ರಸಿದ್ಧನಾದ । **ವಿಶ್ವಚರ್ಷಣಿಃ**—ವಿಶ್ವಚರ್ಷಣಿನಾಮಕನಾದ ಋಷಿಯು । **ಅಭಿಮಾತಿ**—ಶತ್ರುನಾಶಕವಾದ । **ಸಹಃ**—ಬಲವನ್ನು । **ದಧೇ**—ಹೊಂದಲಿ । **ಶುಕ್ರ**—ಪ್ರಭಾಯುತನಾದ ನೀನು । **ನಃ**—ನಮ್ಮ । **ಏಷು ಕ್ಷಯೇಷು**—ಈ ಯಾಗಗೃಹಗಳಲ್ಲಿ । **ರೇವತ್**—ಸಂಪತ್ಸಮೃದ್ಧಿಯಾಗುವಂತೆ ಆ **ದೀದಿಹಿ**—ಪ್ರಕಾಶಿಸು । **ಪಾವಕ**—ಶುದ್ಧಿಕಾರಕನಾದ ಎಲೈ ಅಗ್ನಿಯೇ। **ದ್ಯುಮತ್**-ಅತ್ಯಂತ ಪ್ರಕಾಶಕನಾಗಿ **ದೀದಿಹಿ**—ಪ್ರಜ್ವಲಿತನಾಗು

॥ ಭಾವಾರ್ಥ ॥

ಎಲೈ ಅಗ್ನಿಯೇ, ವಿಶ್ವಚರ್ಷಣಿ ಎಂಬ ಹೆಸರಿನಿಂದ ಪ್ರಸಿದ್ಧನಾದ ಋಷಿಯು ಶತ್ರುನಾಶಕವಾದ ಬಲವನ್ನು ಹೊಂದಲಿ. ಪ್ರಭಾಯುತನಾದ ನೀನು ನಮ್ಮ ಈ ಯಾಗಗೃಹಗಳಲ್ಲಿ ಸಂಪತ್ಸಮೃದ್ಧಿಯಾಗುವಂತೆ ಪ್ರಕಾಶಿಸು ಶುದ್ಧಿಕಾರಕನಾದ ಎಲೈ ಅಗ್ನಿಯೇ, ನಿನ್ನ ರಶ್ಮಿಗಳನ್ನು ಸರ್ವತ್ರ ಪ್ರಸರಿಸಿ ಅತ್ಯಂತ ಪ್ರಕಾಶಕನಾಗಿರುವಂತೆ ಪ್ರಜ್ವಲಿಸು

English Translation

May the (sage) on whom all men rely possess foe-subduing strength radiant Agni, so shine in our habitations that they may abound in riches shine, purifying Agni, dispensing light.

## ಇಪ್ಪತ್ತನಾಲ್ಕನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಅಗ್ನೇ ತ್ವಂ ನ ಇತಿ ಚತುರ್ಋಚಂ ದಶಮಂ ಸೂಕ್ತಂ । ಅತ್ರಾನುಕ್ರಮಣಿಕಾ । ಅಗ್ನೇ ತ್ವಂ ಗೌಪಾಯನಾ ಲೌಪಾಯನಾ ವಾ ಬಂಧುಃ ಸುಬಂಧುಃ ಶ್ರುತಬಂಧುರ್ವಿಪ್ರಬಂಧುಶ್ಚೈಕರ್ಚಾ ದ್ವೈಪದ-ಮಿತಿ । ವಿಂಶತಿಕಾ ದ್ವಿಪದಾ ವಿರಾಜ ಇತ್ಯುಕ್ತತ್ವಾಚ್ಚ । ಅಗ್ನಿರ್ದೇವತಾ ॥ ಮಹಾಪಿತೃಯಜ್ಞ ಆಹವನೀಯಂ ಪ್ರತಿ ಗಚ್ಛಂತ ಋತ್ವಿಜ ಇದಂ ಸೂಕ್ತಂ ಜಪೇಯುಃ । ತಥಾ ಚ ಸೂತ್ರಿತಂ । ಅಥೈನ ಮಭಿಸಮಾಯಂತಿ ಮಾ ಪ್ರ ಗಾಮಾಗ್ನೇ ತ್ವಂ ನ ಇತಿ ಜಪಂತಃ । ಆ. ೨-೧೯ । ಇತಿ ॥ ದಶರಾತ್ರೆ

**ಷಷ್ಠೇಽಹನಿ ತೃತೀಯಸವನೇ ಮೈತ್ರಾವರುಣಸ್ಯಾಗ್ನೇ ತ್ವಮಿತಿ ದ್ವೇ ತಂ ತ್ವಾ ಶೋಚಿಷ್ಠೇತ್ಯೇಕಾ। ಏವಂ ಮಿಲಿತೋ ದ್ವೈಪದಸ್ತೃಚಃ ಸ್ತೋತ್ರಿಯಃ। ತಥೈವ ಸೂತ್ರಿತಂ। ಅಗ್ನೇ ತ್ವಂ ನೋ ಅಂತಮೋಽಗ್ನೇ ಭವ ಸುಷಮಿಧಾ। ಆ ೮-೨। ಇತಿ॥**

ಅನುವಾದವು—**ಅಗ್ನೇ ತ್ವಂ ನಃ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇದರಲ್ಲಿ ನಾಲ್ಕು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ಅಗ್ನೇ ತ್ವಂ ಗೌಪಾಯನಾ ಲೌಪಾಯನಾ ವಾ ಬಂಧುಃ ಸುಬಂಧುಃ ಶ್ರುತಬಂಧುರ್ವಿಪ್ರಬಂಧುಶ್ಚೈಕರ್ಚಾ ದ್ವೈಪದಂ** ಎಂದು ಹೇಳಿರುವುದು. **ವಿಂಶತಿಕಾ ದ್ವಿಪದಾ ವಿರಾಜಃ** ಎಂದರೆ ಇಪ್ಪತ್ತು ಅಕ್ಷರಗಳುಳ್ಳ ಎರಡು ಅರ್ಧ ಋಕ್ಕುಗಳಿಂದ ಕೂಡಿರುವ ಋಕ್ಕಿಗೆ ದ್ವಿಪದಾ ವಿರಾಟ್ ಎಂದು ಈ ಛಂದಸ್ಸಿನ ಲಕ್ಷಣವು. ಈ ಸೂಕ್ತದ ನಾಲ್ಕು ಋಕ್ಕುಗಳಿಗೂ ಬಂಧು, ಸುಬಂಧು, ಶ್ರುತಬಂಧು, ವಿಪ್ರಬಂಧು ಎಂಬ ನಾಲ್ವರು ಕ್ರಮವಾಗಿ ಋಷಿಗಳು ಅಥವಾ ಗೌಪಾಯನಾ, ಲೌಪಾಯನಾ ಎಂಬೀರ್ವರೂ ಋಷಿಗಳು; ಅಗ್ನಿಯು ದೇವತೆಯು, ಮಹಾಪಿತೃಯಜ್ಞದಲ್ಲಿ ಆಹವನೀಯಾಗ್ನಿಯ ಸಮೀಪಕ್ಕೆ ಹೋಗುವಾಗ ಋತ್ವಿಕ್ಕುಗಳು ಈ ಸೂಕ್ತವನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅಥೈನಮಭಿಸಮಾಯಂತಿ ಮಾ ಪ್ರ ಗಾಮಾಗ್ನೇ ತ್ವಂ ನ ಇತಿ ಜಪಂತಃ** ಎಂಬ ಸೂತ್ರದಿಂದ (ಆ. ೨-೧೯) ವಿವೃತವಾಗಿರುವುದು. ಮತ್ತು ದಶರಾತ್ರವೆಂಬ ಯಾಗದ ಆರನೆಯ ದಿವಸ ತೃತೀಯ ಸವನಕಾಲದಲ್ಲಿ ಮೈತ್ರಾವರುಣನೆಂಬ ಋತ್ವಿಜನು **ಅಗ್ನೇ ತ್ವಂ** ಎಂದು ಮೊದಲಾದ ಎರಡು ಋಕ್ಕುಗಳನ್ನೂ **ತಂ ತ್ವಾ ಶೋಚಿಷ್ಠ** ಎಂಬ ಒಂದು ಋಕ್ಕನ್ನೂ ಸೇರಿಸಿ ತೃಚವನ್ನಾಗಿ (ಮೂರು ಋಕ್ಕುಗಳನ್ನಾಗಿ) ಮಾಡಿ ಸ್ತೋತ್ರಿಯ ತೃಚದ ಋಕ್ಕುಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತ ಸೂತ್ರದ—**ಅಗ್ನೇ ತ್ವಂ ನೋ ಅಂತಮೋಽಗ್ನೇ ಭವ ಸುಷಮಿಧಾ** ಎಂಬ ಸೂತ್ರದಿಂದ (ಆ. ೮-೨) ವಿವೃತವಾಗಿರುವುದು.

## ಸೂಕ್ತ—೨೪

॥ ಮಂಡಲ—೫ ॥ ಅನುವಾಕ—೨ ॥ ಸೂಕ್ತ—೨೪ ॥
॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೧೬ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೪

ಋಷಿಃ—೧, ೨, ೩, ೪. ಬಂಧುಃ ಸುಬಂಧುಃ ಶ್ರುತಬಂಧುರ್ವಿಪ್ರಬಂಧುಶ್ಚ ಗೌಪಾಯನಾ ಲೌಪಾಯನಾ ವಾ ॥
ದೇವತಾ—ಅಗ್ನಿಃ ॥
ಛಂದಃ—ದ್ವಿಪದಾ ॥

॥ ಸಂಹಿತಾಪಾಠಃ ॥

**ಅಗ್ನೇ ತ್ವಂ ನೋ ಅಂತಮ ಉತ ತ್ರಾತಾ ಶಿವೋ ಭವಾ ವರೂಥ್ಯಃ ।**

**ವಸುರಗ್ನಿರ್ವಸುಶ್ರವಾ ಅಚ್ಛಾ ನಕ್ಷಿ ದ್ಯುಮತ್ತಮಂ ರಯಿಂ ದಾಃ ॥೧॥ ॥೨॥**

॥ ಪದಪಾಠಃ ॥

ಅಗ್ನೇ । ತ್ವಂ । ನಃ । ಅಂತಮಃ । ಉತ । ತ್ರಾತಾ । ಶಿವಃ । ಭವ । ವರೂಥ್ಯಃ ।

ವಸುಃ । ಅಗ್ನಿಃ । ವಸುऽಶ್ರವಾಃ । ಅಚ್ಛ । ನಕ್ಷಿ । ದ್ಯುಮತ್ऽತಮಂ । ರಯಿಂ । ದಾಃ ॥ ೧-೨ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ವರೂಥ್ಯೋ ವರಣೀಯಃ ಸಂಭಜನೀಯಃ । ಯದ್ವಾ । ವರೂಥೈಃ ಪರಿಧಿಭಿರ್ವೃತಸ್ತ್ವಂ ನೋಽಸ್ಮಾಕಮಂತಮೋಽಂತಿಕತಮೋ ಭವ । ಉತಾಪಿ ಚ ತ್ರಾತಾ ರಕ್ಷಕಃ ಶಿವಃ ಸುಖಕರಶ್ಚ ಭವ । ವಸುರ್ವಾಸಕೋಽಗ್ನಿಃ ಸರ್ವೇಷಾಮಗ್ರಣೀರ್ವಸುಶ್ರವಾ ವ್ಯಾಪ್ತಾನ್ನಸ್ತ್ವಮಚ್ಛಾಭಿಮುಖ್ಯೇನ ನಕ್ಷಿ । ಅಸ್ಮಾನ್ವ್ಯಾಪ್ನುಹಿ । ದ್ಯುಮತ್ತಮಮತಿಶಯೇನ ದೀಪ್ತಿಮಂತಂ ರಯಿಂ ಪಶ್ವಾದಿಲಕ್ಷಣಾಂ ಧನಂ ದಾಃ । ಅಸ್ಮಭ್ಯಂ ದೇಹಿ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ವರೂಥ್ಯಃ**—ಅತ್ಯಂತ ಪೂಜ್ಯನಾದ । **ತ್ವಂ**—ನೀನು । **ನಃ**—ನಮಗೆ । **ಅಂತಮಃ**—ಅತ್ಯಂತ ಸಮೀಪಸ್ಥನಾಗಿ । **ಭವ**—ಇರು । **ಉತ**—ಮತ್ತು । **ತ್ರಾತಾ**—ನಮಗೆ ರಕ್ಷಕನಾಗಿಯೂ । **ಶಿವಃ**—ಮಂಗಳಕರನಾಗಿಯೂ (ಇರು) । **ವಸುಃ**—ವಸತಿದಾಯಕನೂ । **ಅಗ್ನಿಃ**—ಎಲ್ಲರಿಗೂ ನೇತೃಪ್ರಾಯನೂ । **ವಸುಶ್ರವಾಃ**—ಅನ್ನವನ್ನು ಹಂಚತಕ್ಕವನೂ ಆದ ನೀನು । **ಅಚ್ಛ**—ನಮಗಭಿಮುಖವಾಗಿದ್ದು । **ನಕ್ಷಿ**—ನಮ್ಮಲ್ಲಿ ವ್ಯಾಪಿಸಿರು । **ದ್ಯುಮತ್ತಮಂ**—ಅತ್ಯಂತ ಪ್ರಕಾಶಕವಾದ । **ರಯಿಂ**—ಧನವನ್ನು । **ದಾಃ**—(ನಮಗೆ) ಕೊಡು.

॥ ಭಾವಾರ್ಥ ॥

ಎಲೈ ಪೂಜ್ಯನಾದ ಅಗ್ನಿಯೇ, ನಮಗೆ ಅತ್ಯಂತ ಸಮೀಪಸ್ಥನಾಗಿದ್ದು ನಮಗೆ ರಕ್ಷಕನಾಗಿಯೂ, ಮಂಗಳ ಕಾರಕನಾಗಿಯೂ ಇರು. ವಸತಿದಾಯಕನೂ, ಎಲ್ಲರಿಗೂ ನೇತೃಪ್ರಾಯನೂ, ಅನ್ನವನ್ನು ಹಂಚತಕ್ಕವನೂ ಆದ ನೀನು ನಮಗಭಿಮುಖವಾಗಿದ್ದು ನಮ್ಮಲ್ಲಿ ವ್ಯಾಪಿಸಿರು. ಅತ್ಯಂತ ಪ್ರಕಾಶಕವಾದ ಧನವನ್ನು ನಮಗೆ ಕೊಡು.

English Translation

Agni, you are to be adored, be ever nigh to us, our protector and benefactor: you, who are the giver of dwellings and dispenser of food, be present with us: bestow upon us most brilliant wealth.

---

॥ ಸಂಹಿತಾಪಾಠಃ ॥

ಸ ನೋ ಬೋಧಿ ಶ್ರುಧೀ ಹವಮುರುಷ್ಯಾ ಣೋ ಅಘಾಯತಃ ಸಮಸ್ಮಾತ್ ।

ತಂ ತ್ವಾ ಶೋಚಿಷ್ಠ ದೀದಿವಃ ಸುಮ್ನಾಯ ನೂನಮೀಮಹೇ

ಸಖಿಭ್ಯಃ ॥ ೩ ॥ ೪ ॥

॥ ಪದಪಾಠಃ ॥

ಸಃ । ನಃ । ಬೋಧಿ । ಶ್ರುಧಿ । ಹವಂ । ಉರುಷ್ಯ । ನಃ । ಅಘ್ಽಯತಃ । ಸಮಸ್ಮಾತ್ ।

ತಂ । ತ್ವಾ । ಶೋಚಿಷ್ಠ । ದೀದ್ಽಇವಃ । ಸುಮ್ನಾಯ । ನೂನಂ । ಈಮಹೇ । ಸಖಿಽಭ್ಯಃ ॥೩॥೪॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಸ ತ್ವಂ ನೋಽಸ್ಮಾನ್ ಬೋಧಿ । ಬುಧ್ಯಸ್ವ । ಹವಮಸ್ಮದೀಯಮಾಹ್ವಾನಂ ಶ್ರುಧಿ । ಶೃಣು । ಅಘಾಯತೋಽಘಮಿಚ್ಛತಃ ಸಮಸ್ಮಾತ್ಸರ್ವಸ್ಮಾಜ್ಜನಾನ್ನೋಽಸ್ಮಾನುರುಷ್ಯ । ರಕ್ಷ । ಹೇ ಶೋಚಿಷ್ಠಾತಿಶೋಚಿಷ್ಮನ್ ದೀದಿವಃ ಸ್ವತೇಜೋಭಿರ್ದೀಪ್ಯಮಾನಾಗ್ನೇ ತಂ ತ್ವಾಂ ಸುಮ್ನಾಯ ಸುಖಾಯ । ಸುಮ್ನಮಿತಿ ಸುಖನಾಮ । ತದರ್ಥಂ ಸಖಿಭ್ಯಃ ಸಮಾನಖ್ಯಾತಿಭ್ಯಃ ಪುತ್ರೇಭ್ಯಸ್ತದರ್ಥಂ ಚ ನೂನಮೀಮಹೇ । ಯಾಚಾಮಹೇ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಸಃ**—ಪ್ರಸಿದ್ಧನಾದ ನೀನು । **ನಃ**—ನಮ್ಮನ್ನು (ನಮ್ಮ ಭಕ್ತಿಯನ್ನು) । **ಬೋಧಿ**—ತಿಳಿ **ಹವಂ**—ನಮ್ಮ ಸ್ತುತಿಪೂರ್ವಕವಾದ ಆಹ್ವಾನವನ್ನು । **ಶ್ರುಧಿ**—ಕೇಳು । **ಅಘಾಯತಃ**—ನಮಗೆ ಕೇಡನ್ನು ಕೋರುವ । **ಸಮಸ್ಮಾತ್**—ಸಮಸ್ತ ಶತ್ರುಗಳಿಂದಲೂ । **ನಃ**—ನಮ್ಮನ್ನು । **ಉರುಷ್ಯ**—ರಕ್ಷಿಸು । **ಶೋಚಿಷ್ಠ**—ಅತಿಶಯವಾದ ಪ್ರಭೆಯುಳ್ಳವನೂ । **ದೀದಿವಃ**—ಆ ಪ್ರಭೆಗಳೊಡನೆ ಪ್ರಕಾಶಿಸುವವನೂ ಆದ ಎಲೈ ಅಗ್ನಿಯೇ । **ತಂ ತ್ವಾ**—ಆ ನಿನ್ನನ್ನು । **ಸುಮ್ನಾಯ**—ಸುಖಾರ್ಥವಾಗಿಯೂ । **ಸಖಿಭ್ಯಃ**—ಇಷ್ಟರಾದ ಪುತ್ರಾರ್ಥವಾಗಿಯೂ । **ನೂನಂ**—ಈಗ । **ಈಮಹೇ**—ಸ್ತುತಿಸುತ್ತೇವೆ

॥ ಭಾವಾರ್ಥ ॥

ಎಲೈ ಅಗ್ನಿಯೇ, ಪ್ರಸಿದ್ಧನಾದ ನೀನು ನಮ್ಮ ಭಕ್ತಿಯನ್ನು ತಿಳಿ. ನಮ್ಮ ಸ್ತುತಿಪೂರ್ವಕವಾದ ಆಹ್ವಾನವನ್ನು ಕೇಳು ನಮಗೆ ಕೇಡನ್ನು ಬಯಸುವ ಸಮಸ್ತ ಶತ್ರುಗಳಿಂದಲೂ ನಮ್ಮನ್ನು ರಕ್ಷಿಸು. ಅತಿಶಯವಾದ ಪ್ರಭೆಯುಳ್ಳವನೂ ಆ ಪ್ರಭೆಗಳೊಡನೆ ಪ್ರಕಾಶಿಸುವವನೂ ಆದ ಎಲೈ ಅಗ್ನಿಯೇ, ನಿನ್ನನ್ನು ಸುಖಾರ್ಥವಾಗಿಯೂ, ಇಷ್ಟರಾದ ಪುತ್ರಾರ್ಥವಾಗಿಯೂ ಈಗ ಸ್ತುತಿಸುತ್ತೇವೆ

English Translation

Understand us, Agni; hear our invocation; defend us from all malevolent (people): most bright and resplendent Agni, we earnestly solicit you for the happiness (of ourselves) and our friends

## ಇಪ್ಪತ್ತೈದನೆಯ ಸೂಕ್ತವು.

**ಅಚ್ಛಾ ವೋ ಅಗ್ನಿಮಿತಿ ನವರ್ಚಮೇಕಾದಶಂ ಸೂಕ್ತಂ । ಅತ್ರಾನುಕ್ರಮಣಿಕಾ । ಅಚ್ಛಾ ವೋ ನವ ವಸೂಯವ ಅನುಷ್ಟುಭಮಿತಿ । ಅತ್ರೇಯಾ ವಸೂಯುನಾಮಾನ ಋಷಯಃ । ಅನುಷ್ಟುಪ್ । ಮಂಡಲಾದಿಪರಿಭಾಷಯಾಗ್ನಿರ್ದೇವತಾ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ತೋ ವಿನಿಯೋಗಃ ॥ ಪ್ರಾತಃಸವನೇಽಚ್ಛಾವಾಕ ವದಸ್ವೇತ್ಯುಕ್ತೇಽಚ್ಛಾ ವೋ ಅಗ್ನಿಮುವಸ ಇತ್ಯೃಚಮನುಬ್ರೂಯಾತ್ । ತಥಾ ಚ ಸೂತ್ರಿತಂ । ಅಚ್ಛಾ ವೋ ಅಗ್ನಿಮುವಸ ಇತ್ಯೃಚಮನ್ವಾಹ । ಆ. ೫-೭ । ಇತಿ ॥**

ಅನುವಾದವು—**ಅಚ್ಛಾ ವೋ ಅಗ್ನಿಂ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ಅಚ್ಛಾ ವೋ ನವ ವಸೂಯವ ಅನುಷ್ಟುಭಂ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಅತ್ರಿಗೋತ್ರೋದ್ಭವರಾದ ವಸೂಯವಃ ಎಂಬುವರು ಋಷಿಗಳು; ಅಗ್ನಿಯು ದೇವತೆಯು , ಅನುಷ್ಟುಪ್ ಛಂದಸ್ಸು ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದೆಯೇ ಹೇಳಲಾಗಿದೆ. ಮತ್ತು ಪ್ರಾತಸ್ಸವನಕಾಲದಲ್ಲಿ ಅಚ್ಛಾವಾಕ ಎಂಬ ಋತ್ವಿಜನನ್ನುದ್ದೇಶಿಸಿ ಅಧ್ವರ್ಯುವು **ವದಸ್ವ** ಎಂದು ಪ್ರೈಷ ಮಂತ್ರವನ್ನು ಪಠಿಸಿದಕೂಡಲೇ ಆ ಅಚ್ಛಾವಾಕನೆಂಬ ಋತ್ವಿಜನು—**ಅಚ್ಛಾ ವೋ ಅಗ್ನಿಮುವಸೇ** ಎಂಬ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅಚ್ಛಾ ವೋ ಅಗ್ನಿಮುವಸ ಇತ್ಯೃಚಮನ್ವಾಹ** ಎಂಬ ಸೂತ್ರದಿಂದ (ಆ. ೫-೭) ವಿವೃತವಾಗಿರುವುದು.

---

### ಸೂಕ್ತ—೨೫

॥ ಮಂಡಲ—೫ ॥ ಅನುವಾಕ—೨ ॥ ಸೂಕ್ತ—೨೫ ॥
॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೧೭, ೧೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯
॥ ಋಷಿಃ—ವಸೂಯವ ಅತ್ರೇಯಾಃ ॥
॥ ದೇವತಾ—ಅಗ್ನಿಃ ॥
॥ ಛಂದಃ—ಅನುಷ್ಟುಪ್ ॥

---

॥ ಸಂಹಿತಾಪಾಠಃ ॥

ಅಚ್ಛಾ ವೋ ಅಗ್ನಿಮುವಸೇ ದೇವಂ ಗಾಸಿ ಸ ನೋ ವಸುಃ ।
ರಾಸತ್ಪುತ್ರ ಋಷೂಣಾಮೃತಾವಾ ಪರ್ಷತಿ ದ್ವಿಷಃ ॥ ೧ ॥

|| ಪದಪಾಠಃ ||

**ಅಚ್ಛ । ವಃ । ಅಗ್ನಿಂ । ಅವಸೇ । ದೇವಂ । ಗಾಸಿ । ಸಃ । ನಃ । ವಸುಃ ।**

**ರಾಸತ್ । ಪುತ್ರಃ । ಋಷೂಣಾಂ । ಋತಽವಾ । ಪರ್ಷತಿ । ದ್ವಿಷಃ ||೧||**

|| ಸಾಯಣಭಾಷ್ಯಂ ||

**ಹೇ ವಸೂಯವೋ ವೋ ಯೂಯಂ ದೇವಮಗ್ನಿಮವಸೇ ರಕ್ಷಣಾಯಾಚ್ಛಾ ಗಾಸಿ । ಅಭಿಪ್ರಗಾಯತ । ವಸುರಗ್ನಿಹೋತ್ರಾರ್ಥಂ ಯಜಮಾನಾನಾಂ ಗೃಹೇ ವಾಸಯಿತಾ ಸೋಽಗ್ನಿರ್ನೋಽಸ್ಮಭ್ಯಂ ರಾಸತ್ । ಕಾಮಾನ್ದದಾತು । ಋಷೂಣಾಮೃಷೀಣಾಂ ಪುತ್ರಃ । ಋಷಿಭಿರ್ಮಂಥನೇನ ಜನಿತತ್ವಾತ್ಪುತ್ರ ಇತ್ಯುಪಚರ್ಯತೇ । ಋತಾವಾ ಋತಾವಾನ್ ಸತ್ಯವಾನುದಕವಾನ್ವಾ ಸೋಽಗ್ನಿರ್ದ್ವಿಷೋಽಸ್ಮಾಕಂ ಶತ್ರೂನ್ಪರ್ಷತಿ । ಪಾರಯತು ||**

|| ಪ್ರತಿಪದಾರ್ಥ ||

(ಎಲೈ ವಸೂಯುನಾಮಕರಾದ ಋಷಿಗಳೇ) **ವಃ**—ನೀವು । **ದೇವಂ**—ದೇವತಾತ್ಮನಾದ । **ಅಗ್ನಿಂ**—ಅಗ್ನಿಯನ್ನು । **ಅವಸೇ**—ರಕ್ಷಣಾರ್ಥವಾಗಿ । **ಅಚ್ಛಾ**—ಪ್ರಶಸ್ತವಾದ ರೀತಿಯಲ್ಲಿ । **ಗಾಸಿ**—ಸ್ತುತಿಸಿ ಗಾನಮಾಡಿರಿ। **ವಸುಃ**—ಯಜ್ಞಗೃಹದಲ್ಲಿ ವಾಸಿಸುವ । **ಸಃ**—ಆ ಅಗ್ನಿಯು । **ನಃ**—ನಮಗೆ । **ರಾಸತ್**—ಇಷ್ಟಾರ್ಥಗಳನ್ನು ಕೊಡಲಿ । **ಋಷೂಣಾಂ**—ಋಷಿಗಳಿಗೆ । **ಪುತ್ರಃ**—(ಮಥನಾದಿಗಳಿಂದ ಜನಿಸಿದ) ಪುತ್ರರೂಪನೂ । **ಋತಾವಾ**—ಸತ್ಯವಂತನೂ ಆದ ಅಗ್ನಿಯು । **ದ್ವಿಷಃ**—ನಮ್ಮ ಶತ್ರುಗಳನ್ನು । **ಪರ್ಷತಿ**—ನಾಶಮಾಡಲಿ.

|| ಭಾವಾರ್ಥ ||

ವಸೂಯುನಾಮಕರಾದ ಎಲೈ ಋಷಿಗಳೇ, ನೀವು ದೇವತಾತ್ಮನಾದ ಅಗ್ನಿಯನ್ನು ರಕ್ಷಣಾರ್ಥವಾಗಿ ಪ್ರಶಸ್ತವಾದ ರೀತಿಯಲ್ಲಿ ಸ್ತುತಿಸಿ ಗಾನಮಾಡಿರಿ. ಯಜ್ಞಗೃಹದಲ್ಲಿ ವಾಸಿಸುವ ಆ ಅಗ್ನಿಯು ನಮಗೆ ಇಷ್ಟಾರ್ಥಗಳನ್ನು ಕೊಡಲಿ ಮಥನಾದಿಗಳಿಂದ ಉತ್ಪನ್ನನಾದುದರಿಂದ ಋಷಿಗಳಿಗೆ ಪುತ್ರರೂಪನೂ, ಸತ್ಯವಂತನೂ ಆದ ಅಗ್ನಿಯು ನಮ್ಮ ಶತ್ರುಗಳನ್ನು ನಾಶಮಾಡಲಿ

## English Translation

Celebrate the divine Agni for his protection : may he who presides over dwellings grant (our desires) : may the son of the Rishis, the observers of truth, save us from those who hate us

॥ ಸಂಹಿತಾಪಾಠಃ ॥

**ಸ ಹಿ ಸತ್ಯೋ ಯಂ ಪೂರ್ವೇ ಚಿದ್ದೇವಾಸಶ್ಚಿದ್ಯಮೀಧಿರೇ ।**
**ಹೋತಾರಂ ಮಂದ್ರಜಿಹ್ವಮಿತ್ಸುದೀತಿಭಿರ್ವಿಭಾವಸುಂ ॥ ೨ ॥**

॥ ಪದಪಾಠಃ ॥

**ಸಃ । ಹಿ । ಸತ್ಯಃ । ಯಂ । ಪೂರ್ವೇ । ಚಿತ್ । ದೇವಾಸಃ।ಚಿತ್ । ಯಂ । ಈಧಿರೇ ।**
**ಹೋತಾರಂ । ಮಂದ್ರಜಿಹ್ವಂ । ಇತ್ । ಸುದೀತಿऽಭಿಃ।ವಿಭಾऽವಸುಂ ॥ ೨ ॥**

॥ ಸಾಯಣಭಾಷ್ಯಂ ॥

**ಪೂರ್ವೇ ಚಿತ್ಪೂರ್ವೇ ಮಹರ್ಷಯೋ ಹೋತಾರಂ ದೇವಾನಾಮಾಹ್ವಾತಾರಂ ಮಂದ್ರಜಿಹ್ವಂ ।** ಹವಿಷಾಂ ಪ್ರದಾನೇನ ದೇವಾನಾಂ ಮಾದಯಿತ್ರೀ ಜಿಹ್ವಾ ಯಸ್ಯ ಸಃ । ತಂ । ಯದ್ವಾ ಮೋದನಜಿಹ್ವಂ। ತಥಾಹ ಯಾಸ್ಕಃ । ಮಂದ್ರಜಿಹ್ವಂ ಮಂದನಜಿಹ್ವಂ ಮೋದನಜಿಹ್ವಮಿತಿ ವಾ । ನಿ ೬-೨೩ । ಇತಿ । **ಸುದೀತಿಭಿಃ** ಶೋಭನದೀಪ್ತಿಭಿರ್ಯುಕ್ತಂ **ವಿಭಾವಸುಂ** ಪ್ರಭಾಧನಂ **ಯಮ**ಗ್ನಿ**ಮೀಧಿರೇ** ಸಮೈಂಧತ **ದೇವಾಸಶ್ಚಿ**ದ್ದೇವಾ ಅಪಿ **ಯ**ಮಗ್ನಿ**ಮೀಧಿರೇ** ಸಮೈಂಧತ **ಸ ಹ್ಯ**ಗ್ನಿಃ **ಸತ್ಯೋ** ಭವತಿ । ಸತ್ಯಪ್ರತಿಶ್ರವೋ ಭವತಿ । **ಇದಿತಿ ಪೂರಣಃ** ।

॥ ಪ್ರತಿಪದಾರ್ಥ ॥

**ಹೋತಾರಂ**—ಯಜ್ಞಕ್ಕೆಲ್ಲಾ ಹೋತೃರೂಪನೂ । **ಮಂದ್ರಜಿಹ್ವಂ**—ಆಹ್ಲಾದಕಾರಕವಾದುದೂ, ಜಿಹ್ವಾರೂಪದಲ್ಲಿರುವುದೂ ಆದ ಜ್ವಾಲೆಯುಳ್ಳವನೂ । **ಸುದೀತಿಭಿಃ**—ಪ್ರಶಸ್ಯವಾದ ಕಾಂತಿಯಿಂದ ಕೂಡಿದವನೂ । **ವಿಭಾವಸುಂ**—ಪ್ರಭೆಯೇ ಧನವಾಗಿ ಉಳ್ಳವನೂ ಆದ । **ಯಂ**—ಯಾವ ಅಗ್ನಿಯನ್ನು । **ಪೂರ್ವೇ ಚಿತ್**—ಪುರಾತನರಾದ ಋಷಿಗಳು । **ಈಧಿರೇ**—ಪ್ರಜ್ವಲಿತನನ್ನಾಗಿ ಮಾಡಿದರೋ । (ಮತ್ತು) **ಯಂ**—ಯಾವ ಅದೇ ಅಗ್ನಿಯನ್ನು । **ದೇವಾಸಶ್ಚಿತ್**—ದೇವತೆಗಳೂ ಸಹ । **ಈಧಿರೇ**—ಪ್ರಜ್ವಲಿತನನ್ನಾಗಿ ಮಾಡಿದರೋ । **ಸ ಹಿ**—ಆದೇ ಅಗ್ನಿಯು । **ಸತ್ಯಃ**—ಸತ್ಯರೂಪನಾಗಿದ್ದಾನೆ

॥ ಭಾವಾರ್ಥ ॥

ಯಜ್ಞಕ್ಕೆಲ್ಲಾ ಹೋತೃರೂಪನೂ, ಆಹ್ಲಾದಕಾರಕವಾದುದೂ, ಜಿಹ್ವಾರೂಪದಲ್ಲಿರುವುದೂ ಆದ ಜ್ವಾಲೆಯುಳ್ಳವನೂ, ಪ್ರಶಸ್ಯವಾದ ಕಾಂತಿಯಿಂದ ಕೂಡಿದವನೂ, ಪ್ರಭೆಯೇ ಧನವಾಗಿ ಉಳ್ಳವನೂ ಆದ ಯಾವ ಅಗ್ನಿಯನ್ನು ಪುರಾತನರಾದ ಋಷಿಗಳೂ, ದೇವತೆಗಳೂ ಪ್ರಜ್ವಲಿತನನ್ನಾಗಿ ಮಾಡಿದರೋ ಆ ಅಗ್ನಿಯು ಸತ್ಯಾತ್ಮಕನಾಗಿಯೇ ಇದ್ದಾನೆ.

## English Translation

That Agni is true whom the ancients, whom the gods have kindled, as the bright-tongued invoker of the gods, radiant with holy splendours.

॥ ಸಂಹಿತಾಪಾಠಃ ॥

ಸ ನೋ ಧೀತೀ ವರಿಷ್ಠಯಾ ಶ್ರೇಷ್ಠಯಾ ಚ ಸುಮತ್ಯಾ ।
ಅಗ್ನೇ ರಾಯೋ ದಿದೀಹಿ ನಃ ಸುವೃಕ್ತಿಭಿರ್ವರೇಣ್ಯ ॥ ೩ ॥

॥ ಪದಪಾಠಃ ॥

ಸಃ । ನಃ । ಧೀತೀ । ವರಿಷ್ಠಯಾ । ಶ್ರೇಷ್ಠಯಾ । ಚ । ಸುಽಮತ್ಯಾ ।
ಅಗ್ನೇ । ರಾಯಃ । ದಿದೀಹಿ । ನಃ । ಸುವೃಕ್ತಿಽಭಿಃ । ವರೇಣ್ಯ ॥ ೩ ॥

॥ ಸಾಯಣಭಾಷ್ಯಂ ॥

ಸುವೃಕ್ತಿಭಿಃ ಸ್ತುತಿಭಿಃ ಸ್ತೂಯಮಾನ ವರೇಣ್ಯ ವರಣೀಯ ಹೇ ಅಗ್ನೇ ಸ ತ್ವಂ ವರಿಷ್ಠಯಾ ವರತಮೇನ ಶ್ರೇಷ್ಠಯಾತಿಶಯೇನ ಪ್ರಶಸ್ಯೇನ ನೋ ಧೀತೀ ಧೀತ್ಯಾಸ್ಮದೀಯೇನ ಪರಿಚರಣಾತ್ಮಕೇನ ಕರ್ಮಣಾ ಸುಮತ್ಯಾ ಚ । ಸುಮತಿರಿತಿ ಶಸ್ತ್ರಮುಚ್ಯತೇ । ಶಸ್ತ್ರೇಣ ಚ ಪ್ರೀತಃ ಸನ್ ರಾಯೋ ಧನಾನಿ ನೋಽಸ್ಮಭ್ಯಂ ದೀದಿಹಿ । ದೇಹಿ ॥

॥ ಪ್ರತಿಪದಾರ್ಥ ॥

**ಸುವೃಕ್ತಿಭಿಃ**—ಶ್ರೇಷ್ಠವಾದ ಸ್ತುತಿಗಳಿಂದ ಪ್ರಶಂಸಿತನಾಗುವವನೂ । **ವರೇಣ್ಯ**—ಅತ್ಯಂತ ಆದೃತನೂ ಆದ । **ಅಗ್ನೇ**—ಎಲೈ ಅಗ್ನಿಯೇ । **ಸಃ**—ಪ್ರಸಿದ್ಧನಾದ ನೀನು । **ವರಿಷ್ಠಯಾ**—ಅತ್ಯುತ್ತಮವಾದುದೂ । **ಶ್ರೇಷ್ಠಯಾ**—ಪ್ರಶಸ್ಯವಾದುದೂ ಆದ । **ನಃ**—ನಮ್ಮ । **ಧೀತೀ**—ಪೂಜಾಯೋಗ್ಯವಾದ ಕರ್ಮಗಳಿಂದಲೂ । **ಸುಮತ್ಯಾ ಚ**—ಶಸ್ತ್ರಾತ್ಮಕವಾದ ಸ್ತುತಿಗಳಿಂದಲೂ (ಸಂತೃಪ್ತನಾಗಿ) । **ನಃ**—ನಮಗೆ । **ರಾಯಃ**—ಧನಗಳನ್ನು, **ದೀದಿಹಿ**—ಕೊಡು

॥ ಭಾವಾರ್ಥ ॥

ಶ್ರೇಷ್ಠವಾದ ಸ್ತುತಿಗಳಿಂದ ಪ್ರಶಂಸಿತನಾಗುವವನೂ, ಅತ್ಯಂತ ಆದೃತನೂ ಆದ ಎಲೈ ಅಗ್ನಿಯೇ, ಪ್ರಸಿದ್ಧನಾದ ನೀನು ಅತ್ಯುತ್ತಮವಾದುದೂ, ಪ್ರಶಸ್ಯವಾದುದೂ ಆದ ನಮ್ಮ ಪೂಜಾಯೋಗ್ಯವಾದ ಕರ್ಮಗಳಿಂದಲೂ, ಶಸ್ತ್ರಾತ್ಮಕವಾದ ಸ್ತುತಿಗಳಿಂದಲೂ ಸಂತೃಪ್ತನಾಗಿ ನಮಗೆ ಧನಗಳನ್ನು ಕೊಡು.

## English Translation

Agni, to be propitiated by praises, (gratified) by our choice and most excellent adoration and hymns, bestow upon us riches.

॥ ಸಂಹಿತಾಪಾಠಃ ॥

ಅಗ್ನಿರ್ದೇವೇಷು ರಾಜತ್ಯಗ್ನಿರ್ಮರ್ತೇಷ್ವಾವಿಶನ್ ।
ಅಗ್ನಿರ್ನೋ ಹವ್ಯವಾಹನೋಽಗ್ನಿಂ ಧೀಭಿಃ ಸಪರ್ಯತ ॥ ೪ ॥

॥ ಪದಪಾಠಃ ॥

ಅಗ್ನಿಃ । ದೇವೇಷು । ರಾಜತಿ । ಅಗ್ನಿಃ । ಮರ್ತೇಷು । ಆಽವಿಶನ್ ।
ಅಗ್ನಿಃ । ನಃ । ಹವ್ಯಽವಾಹನಃ । ಅಗ್ನಿಂ । ಧೀಭಿಃ । ಸಪರ್ಯತ ॥ ೪ ॥

॥ ಸಾಯಣಭಾಷ್ಯಂ ॥

ಯೋಽಗ್ನಿರ್ದೇವೇಷು ದೇವಾನಾಂ ಮಧ್ಯೇ ರಾಜತಿ ದೇವತಾರೂಪೇಣ ಪ್ರಕಾಶತೇ । ಯೋಽಗ್ನಿರ್ಮರ್ತೇಷು ಮನುಷ್ಯೇಷ್ವಾವಿಶನ್ ಆಹವನೀಯಾದಿರೂಪೇಣ ಪ್ರವಿಷ್ಟೋ ಭವತಿ । ಯೋಽಗ್ನಿರ್ನೋಽಸ್ಮಾಕಂ ಹವ್ಯವಾಹನೋ ಭವತಿ ಅಸ್ಮದೀಯೇಷು ಯಜ್ಞೇಷು ದೇವತಾರ್ಥಂ ಹವ್ಯಾನಾಂ ವೋಢಾ ಭವತಿ ಹೇ ಯಜಮಾನಾಸ್ತಮಗ್ನಿಂ ಧೀಭಿಃ ಸ್ತುತಿಭಿಃ ಸಪರ್ಯತ । ಪರಿಚರತ ॥

॥ ಪ್ರತಿಪದಾರ್ಥ ॥

**ಅಗ್ನಿಃ**—ಅಗ್ನಿಯು । **ದೇವೇಷು**—ದೇವತೆಗಳ ನಡುವೆ । **ರಾಜತಿ**—ದೇವತಾರೂಪದಿಂದ ಪ್ರಕಾಶಿಸುತ್ತಾನೆ । **ಅಗ್ನಿಃ**—ಅಗ್ನಿಯು । **ಮರ್ತೇಷು**—ಮಾನವರಲ್ಲಿ । **ಆವಿಶನ್**—ಆಹವನೀಯಾದಿರೂಪದಲ್ಲಿ ಪ್ರವೇಶಿಸಿದ್ದಾನೆ । **ಅಗ್ನಿಃ**—ಅಗ್ನಿಯು । **ನಃ**—ನಮಗಾಗಿ । **ಹವ್ಯವಾಹನಃ**—(ದೇವತೆಗಳಿಗೆ) ಹವಿಸ್ಸನ್ನು ವಹಿಸುವವನಾಗಿದ್ದಾನೆ । (ಎಲೈ ಯಜಮಾನರೇ) **ಅಗ್ನಿಂ**—ಇಂತಹ ಪೂಜ್ಯನಾದ ಅಗ್ನಿಯನ್ನು । **ಧೀಭಿಃ**—ಸ್ತುತಿಗಳಿಂದ । **ಸಪರ್ಯತ**—ಪೂಜಿಸಿರಿ.

॥ ಭಾವಾರ್ಥ ॥

ಪೂಜ್ಯನಾದ ಅಗ್ನಿಯು ದೇವತೆಗಳ ನಡುವೆ ದೇವತಾರೂಪದಿಂದ ಪ್ರಕಾಶಿಸುತ್ತಾನೆ. ಅಗ್ನಿಯು ಮಾನವರ ನಡುವೆ ಆಹವನೀಯಾದಿ ರೂಪದಲ್ಲಿ ಪ್ರವೇಶಿಸಿದ್ದಾನೆ. ಅದೇ ಅಗ್ನಿಯು ನಮಗಾಗಿ ದೇವತೆಗಳಿಗೆ ಹವಿಸ್ಸನ್ನು ವಹಿಸುವವನಾಗಿದ್ದಾನೆ. ಎಲೈ ಯಜಮಾನರೇ, ಇಂತಹ ಪೂಜ್ಯನಾದ ಅಗ್ನಿಯನ್ನು ಸ್ತುತಿಗಳಿಂದ ಪೂಜಿಸಿರಿ.

## English Translation

Agni shines amongst the gods: Agni is present amongst mortals: Agni is the bearer of our oblations : glorify Agni with praises.

---

॥ ಸಂಹಿತಾಪಾಠಃ ॥

ಅಗ್ನಿಸ್ತುವಿಶ್ರವಸ್ತಮಂ ತುವಿಬ್ರಹ್ಮಾಣಮುತ್ತಮಂ ।
ಅತೂರ್ತಂ ಶ್ರಾವಯತ್ಪತಿಂ ಪುತ್ರಂ ದದಾತಿ ದಾಶುಷೇ ॥ ೫ ॥

॥ ಪದಪಾಠಃ ॥

ಅಗ್ನಿಃ । ತುವಿಶ್ರವಃಽತಮಂ । ತುವಿಽಬ್ರಹ್ಮಾಣಂ । ಉತ್ಽತಮಂ ।
ಅತೂರ್ತಂ । ಶ್ರವಯತ್ಽಪತಿಂ । ಪುತ್ರಂ । ದದಾತಿ । ದಾಶುಷೇ ॥ ೫ ॥

॥ ಸಾಯಣಭಾಷ್ಯಂ ॥

ಪುತ್ರಕಾಮೇಷ್ಟ್ಯಾಮಗ್ನಿಸ್ತುವಿಶ್ರವಸ್ತಮಮಿತಿ ದ್ವೇ ಸ್ವಿಷ್ಟಕೃತೋ ಯಾಜ್ಯಾನುವಾಕ್ಯೇ । ಸೂತ್ರಿತಂ ಚ । ಅಗ್ನಿಸ್ತುವಿಶ್ರವಸ್ತಮಮಿತಿ ದ್ವೇ ಸಂಯಾಜ್ಯೇ । ಆ. ೨-೧೦ । ಇತಿ ॥

ಅಗ್ನಿಸ್ತುವಿಶ್ರವಸ್ತಮಮತಿಶಯೇನ ಬಹ್ವನ್ನಂ ತುವಿಬ್ರಹ್ಮಾಣಂ ಬಹುಸ್ತೋತ್ರಮುತ್ತಮಮುತ್ಕೃಷ್ಟಮತೂರ್ತಂ ಶತ್ರುಭಿರಹಿಂಸಿತಂ ಶ್ರಾವಯತ್ಪತಿಂ । ಶ್ರಾವಯತಿ ವಿಶ್ರುತಾನ್ ಕರೋತಿ ಪತೀನ್ ಪಾಲಯಿತ್ರ್ಯಾನ್ಪಿತ್ರ್ಯಾನಿತಿ ಸ್ವಕರ್ಮಣಾ ಪಿತ್ರ್ಯಾಣಾಂ ಪ್ರಖ್ಯಾಪಕ ಇತಿ ಶ್ರಾವಯತ್ಪತಿಃ । ತಥಾವಿಧಂ ಪುತ್ರಂ ದಾಶುಷೇ ಹವೀಂಷಿ ದತ್ತವತೇ ಯಜಮಾನಾಯ ದದಾತಿ । ದದಾತು ॥

॥ ಪ್ರತಿಪದಾರ್ಥ ॥

**ಅಗ್ನಿಃ**—ಅಗ್ನಿಯು । **ದಾಶುಷೇ**—ಹವಿಸ್ಸನ್ನರ್ಪಿಸತಕ್ಕ ಯಜಮಾನನಿಗೆ । **ತುವಿಶ್ರವಸ್ತಮಂ**—ಅತಿ ಪ್ರಭೂತವಾದ ಅನ್ನಸಂಪದ್ಯುಕ್ತನೂ । **ತುವಿಬ್ರಹ್ಮಾಣಂ**—ಅತ್ಯಧಿಕವಾಗಿ ಸ್ತುತಿಯನ್ನು ನಿರ್ಮಿಸುವವನೂ । **ಉತ್ತಮಂ**—ಉತ್ಕೃಷ್ಟಗುಣಗಳುಳ್ಳವನೂ । **ಅತೂರ್ತಂ**—ಶತ್ರುಗಳಿಂದ ಹಿಂಸಿಸಲ್ಪಡದಿರುವವನೂ । **ಶ್ರಾವಯತ್ಪತಿಂ**—ತನ್ನ ಉತ್ತಮವಾದ ಕರ್ಮಗಳಿಂದ ಪಿತೃಪಿತಾಮಹಾದಿಗಳಿಗೆಲ್ಲಾ ಯಶಸ್ಸನ್ನು ತರುವವನೂ ಆದ । **ಪುತ್ರಂ**—ಪುತ್ರನನ್ನು । **ದದಾತಿ**—ಕೊಡಲಿ.

॥ ಭಾವಾರ್ಥ ॥

ಅಗ್ನಿಯು ಹವಿಸ್ಸನ್ನರ್ಪಿಸತಕ್ಕ ಯಜಮಾನನಿಗೆ ಅತಿಪ್ರಭೂತವಾದ ಅನ್ನಸಂಪದ್ಯುಕ್ತನೂ, ಅತ್ಯಧಿಕವಾಗಿ ದೇವತಾಸ್ತುತಿಗಳನ್ನು ನಿರ್ಮಿಸುವವನೂ, ಉತ್ಕೃಷ್ಟವಾದ ಗುಣಗಳುಳ್ಳವನೂ, ಶತ್ರುಗಳಿಂದ ಹಿಂಸಿಸಲ್ಪಡದಿರುವವನೂ, ತನ್ನ ಉತ್ತಮವಾದ ಕರ್ಮಗಳಿಂದ ಪಿತೃಪಿತಾಮಹಾದಿಗಳಿಗೆಲ್ಲಾ ಯಶಸ್ಸನ್ನು ತರುವವನೂ ಆದ ಪುತ್ರನನ್ನು ಅನುಗ್ರಹಿಸಲಿ

English Translation

May Agni bestow upon the donor (of the oblation) a son, abounding in food, abounding in devotion, excellent, unharmed, conferring honour upon his progenitors.

॥ ವಿಶೇಷವಿಷಯಗಳು ॥

ಪುತ್ರಕಾಮೇಷ್ಟಿ ಎಂಬ ಯಾಗದಲ್ಲಿ **ಅಗ್ನಿಸ್ತುವಿಶ್ರವಸ್ತಮಂ** ಎಂಬ ಈ ಋಕ್ಕನ್ನೂ ಇದರ ಮುಂದಿನ ಋಕ್ಕನ್ನೂ ಸ್ವಿಷ್ಟಕೃದ್ಯೋಮದಲ್ಲಿ ಯಾಜ್ಯಾ ಮತ್ತು ಅನುವಾಕ್ಯಾಮಂತ್ರಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ- **ಅಗ್ನಿಸ್ತುವಿಶ್ರವಸ್ತಮಮಿತಿ ದ್ವೇ ಸಂಯಾಜ್ಯೇ** ಎಂಬ ಸೂತ್ರದಿಂದ (ಆ. ೨-೧೦) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಅಗ್ನಿರ್ದದಾತಿ ಸತ್ಪತಿಂ ಸಾಸಾಹ ಯೋ ಯುಧಾ ನೃಭಿಃ ।
ಅಗ್ನಿರತ್ಯಂ ರಘುಷ್ಯದಂ ಜೇತಾರಮಪರಾಜಿತಂ ॥ ೬ ॥

॥ ಪದಪಾಠಃ ॥

ಅಗ್ನಿಃ । ದದಾತಿ । ಸತ್ಽಪತಿಂ । ಸಸಾಹ । ಯಃ । ಯುಧಾ । ನೃಽಭಿಃ ।
ಅಗ್ನಿಃ । ಅತ್ಯಂ । ರಘುಽಸ್ಯದಂ । ಜೇತಾರಂ । ಅಪರಾಽಜಿತಂ ॥ ೬ ॥

॥ ಸಾಯಣಭಾಷ್ಯಂ ॥

**ಯಃ ಪುತ್ರೋ ಯುಧಾ ಯುದ್ಧೇನ ನೃಭಿಃ ಪರಿಜನೈಃ ಸಸಾಹ ಶತ್ರೂನಭಿಭವತಿ ಸತ್ಪತಿಂ ಸತಾಂ ಪಾಲಯಿತಾರಂ ತಥಾವಿಧಂ ಪುತ್ರಮಗ್ನಿರ್ದದಾತಿ । ಅಸ್ಮಭ್ಯಂ ದದಾತು । ಕಿಂಚಾಗ್ನೀ ರಘು-ಷ್ಯದಂ। ರಘುರ್ಲಘುಃ ಸ್ಯದೋ ಜವೋ ಯಸ್ಯ ತಂ । ಜೇತಾರಂ ಶತ್ರೂಣಾಮಪರಾಜಿತಂ ಶತ್ರುಭಿರತ್ಯಂ। ಅತತಿ ಸತತಂ ಗಚ್ಛತೀತ್ಯತ್ಯೋಽಶ್ವಃ । ತಂ ದದಾತು ॥**

॥ ಪ್ರತಿಪದಾರ್ಥ ॥

**ಯಃ**—ಯಾವ ಪುತ್ರನು । **ಯುಧಾ**—ಯುದ್ಧಗಳಲ್ಲಿ । **ನೃಭಿಃ**—ತನ್ನ ಅನುಯಾಯಿಗಳೊಡನೆ । **ಸಸಾಹ**—ಶತ್ರುಗಳನ್ನು ಸೋಲಿಸುವನೋ ಅಂತಹವನೂ ಮತ್ತು । **ಸತ್ಪತಿಂ**—ಸಜ್ಜನರ ಪಾಲಕನೂ ಆದ ಪುತ್ರನನ್ನು । **ಅಗ್ನಿಃ**—ಅಗ್ನಿಯು । **ದದಾತಿ**—ಅನುಗ್ರಹಿಸಿ ಕೊಡಲಿ । **ಅಗ್ನಿಃ**—ಅದೇ ಅಗ್ನಿಯು । **ರಘುಷ್ಯದಂ**-ವೇಗಗಾಮಿಯಾದುದೂ । **ಜೇತಾರಂ**—(ಶತ್ರುಗಳನ್ನು) ಜಯಿಸತಕ್ಕದ್ದೂ । **ಅಪರಾಜಿತಂ**—(ಶತ್ರುಗಳಿಂದ) ಜಯಿಸಲ್ಪಡದಿರುವುದೂ ಆದ । **ಅತ್ಯಂ**—ಅಶ್ವವನ್ನೂ (ಕೊಡಲಿ).

॥ ಭಾವಾರ್ಥ ॥

ಯುದ್ಧಗಳಲ್ಲಿ ತನ್ನ ಅನುಯಾಯಿಗಳೊಡನೆ ಶತ್ರುಗಳನ್ನು ಸೋಲಿಸುವವನೂ, ಸಜ್ಜನರ ಪಾಲಕನೂ ಆದ ಪುತ್ರನನ್ನು ಅಗ್ನಿಯು ಅನುಗ್ರಹಿಸಿ ಕೊಡಲಿ. ಅದೇ ಅಗ್ನಿಯು ವೇಗಗಾಮಿಯಾದುದೂ, ಶತ್ರುಗಳನ್ನು ಜಯಿಸತಕ್ಕದ್ದೂ, ಶತ್ರುಗಳಿಂದ ಜಯಿಸಲ್ಪಡದಿರುವುದೂ ಆದ ಅಶ್ವವನ್ನೂ ಕೊಡಲಿ.

English Translation

May Agni bestow a son, the protector of the good, who, with his followers, may be victorious in battle : may he bestow a'swift-footed steed, conquering, unconquered.

॥ ಸಂಹಿತಾಪಾಠಃ ॥

ಯದ್ವಾಹಿಷ್ಠಂ ತದಗ್ನಯೇ ಬೃಹದರ್ಚ ವಿಭಾವಸೋ ।

ಮಹಿಷೀವ ತ್ವದ್ರಯಿಸ್ತ್ವದ್ವಾಜಾ ಉದೀರತೇ ॥ ೭ ॥

॥ ಪದಪಾಠಃ ॥

ಯತ್ । ವಾಹಿಷ್ಠಂ । ತತ್ । ಅಗ್ನಯೇ । ಬೃಹತ್ । ಅರ್ಚ । ವಿಭಾವಸೋ ಇತಿ ವಿಭಾಽವಸೋ ।

ಮಹಿಷೀಽಇವ । ತ್ವತ್ । ರಯಿಃ । ತ್ವತ್ । ವಾಜಾಃ । ಉತ್ । ಈರತೇ ॥ ೭ ॥

॥ ಸಾಯಣಭಾಷ್ಯಂ ॥

ಅಶ್ವಮೇಧೇ ಪೌಷ್ಣ್ಯಾಮಿಷ್ಟೌ ಯದ್ವಾಹಿಷ್ಠಮಿತಿ ಸ್ವಿಷ್ಟಕೃತೋ ಯಾಜ್ಯಾ । ಸೂತ್ರಿತಂ ಚ । ಯದ್ವಾಹಿಷ್ಠಂ ತದಗ್ನಯ ಇತಿ ಸಂಯಾಜ್ಯೇ । ಆ. ೧೦-೬ ಇತಿ ॥

ವಾಹಿಷ್ಠಂ ವೋಢೃತಮಂ ಯತ್ಸ್ತೋತ್ರಂ ತದಗ್ನಯೇ ಕ್ರಿಯತೇ । ಅತೋ ಹೇ ವಿಭಾವಸೋ ಪ್ರಭಾಧನಾಗ್ನೇ ಬೃಹದ್ಬೃಹತ್ಸನ್ನಂ ಧನಂ ವಾರ್ಚ । ಅಸ್ಮಭ್ಯಂ ಪ್ರಯಚ್ಛ । ಕಥಮಸ್ಮಾನ್ನಧನಪ್ರದಾತೃತ್ವ-

**ಮಿತ್ಯಪೇಕ್ಷಾಯಾಮಾಹ । ಯತಸ್ತ್ವತ್ತ್ವತ್ತಃ ಸಕಾಶಾನ್ಮಹಿಷೀ ಮಹತೀ ರಯಿರ್ಧನಮುದೀರತೇ ಉದ್ಗಚ್ಛತಿ । ವಾಜಾ ಅನ್ನಾನಿ ಚ ತ್ವತ್ತ್ವತ್ತ ಉದೀರತೇ ಉದ್ಗಚ್ಛಂತಿ । ಇವೇತಿ ಪೂರಣಃ ॥**

॥ ಪ್ರತಿಪದಾರ್ಥ ॥

**ಯತ್**—ಯಾವ ಸ್ತೋತ್ರವು । **ವಾಹಿಷ್ಠಂ**—ನಮ್ಮ ಭಕ್ತಿಯನ್ನು ಅತಿಶಯವಾಗಿ ವಹಿಸುವುದೋ । **ತತ್**—ಅದು । **ಅಗ್ನಯೇ**—ಅಗ್ನಿಯನ್ನುದ್ದೇಶಿಸಿ ಅರ್ಪಿತವಾಗುತ್ತದೆ । **ವಿಭಾವಸೋ**—ಪ್ರಭೆಯೇ ಧನವಾಗಿ ಉಳ್ಳ ಎಲೈ ಅಗ್ನಿಯೇ । **ಬೃಹತ್**—ಪ್ರಭೂತವಾದ ಧನವನ್ನು । **ಅರ್ಚ**—ನಮಗೆ ಕೊಡು (ಏತಕ್ಕೆಂದರೆ) । **ತ್ವತ್**-ನಿನ್ನಿಂದಲೇ । **ಮಹಿಷೀ**—ಪ್ರಭೂತವಾದ । **ರಯಿಃ**—ಧನವು । **ಉದೀರತೇ**—ಹೊರಕ್ಕೆ ಬರುತ್ತದೆ । **ವಾಜಾಃ**-ಅನ್ನಗಳೂ ಸಹ । **ತ್ವತ್**—ನಿನ್ನಿಂದಲೇ ಸಂಭವಿಸಿ ಪ್ರಸರಿಸುತ್ತವೆ.

॥ ಭಾವಾರ್ಥ ॥

ಯಾವ ಸ್ತೋತ್ರವು ನಮ್ಮ ಭಕ್ತಿಯನ್ನು ಅತಿಶಯವಾಗಿ ವಹಿಸುವುದೋ ಆ ಸ್ತೋತ್ರವು ಅಗ್ನಿಯನ್ನುದ್ದೇಶಿಸಿ ಅರ್ಪಿತವಾಗುತ್ತದೆ. ಪ್ರಭೆಯೇ ಧನವಾಗಿ ಉಳ್ಳ ಎಲೈ ಅಗ್ನಿಯೇ, ನಮಗೆ ಪ್ರಭೂತವಾದ ಧನವನ್ನು ಕೊಡು. ಏತಕ್ಕೆಂದರೆ, ಪ್ರಭೂತವಾದ ಧನಗಳೂ ಅನ್ನಗಳೂ ನಿನ್ನಿಂದಲೇ ಉದ್ಭವಿಸಿ ಹೊರಗೆ ಪ್ರಸರಿಸುತ್ತವೆ.

## English Translation

That (praise) which best conveys (our veneration, is due) to Agni : affluent in splendour, grant us, (Agn ), great (wealth), for from you vast riches and ample food proceed

**ವಿಶೇಷವಿಷಯಗಳು**

ಅಶ್ವಮೇಧಯಜ್ಞದ ಪೌಷ್ಣೇಷ್ಟಿಯಲ್ಲಿ **ಯದ್ವಾಹಿಷ್ಠಂ** ಎಂಬ ಈ ಋಕ್ಕನ್ನು ಸ್ವಿಷ್ಟಕೃದ್ಧೋಮದ ಯಾಜ್ಯಾ-ಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯದ್ವಾಹಿಷ್ಠಂ ತದಗ್ನಯ ಇತಿ ಸಂಯಾಜ್ಯೇ** ಎಂಬ ಸೂತ್ರದಿಂದ (ಆ ೧೦-೬) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ತವ ದ್ಯುಮಂತೋ ಅರ್ಚಯೋ ಗ್ರಾವೇವೋಚ್ಯತೇ ಬೃಹತ್ ।
ಉತೋ ತೇ ತನ್ಯತುರ್ಯಥಾ ಸ್ವಾನೋ ಅರ್ತ ತ್ಮನಾ ದಿವಃ ॥ ೮ ॥

॥ ಪದಪಾಠಃ ॥

**ತವ । ದ್ಯುಽಮಂತಃ । ಅರ್ಚಯಃ । ಗ್ರಾವಾಽಇವ । ಉಚ್ಯತೇ । ಬೃಹತ್ ।**
**ಉತೋ ಇತಿ । ತೇ । ತನ್ಯತುಃ । ಯಥಾ । ಸ್ವಾನಃ । ಅರ್ತ । ತ್ಮನಾ । ದಿವಃ ॥ ೮ ॥**

॥ ಸಾಯಣಭಾಷ್ಯಂ ॥

**ಹೇ ಅಗ್ನೇ ತವಾರ್ಚಯೋ ರಶ್ಮಯೋ ದ್ಯುಮಂತೋ ದೀಪ್ತಿಮಂತೋ ಭವಂತಿ । ಬೃಹನ್ಮಹಾನ್ ತ್ವಂ ಗ್ರಾವೇವಾಭಿಷವಗ್ರಾವೇವೋಚ್ಯತೇ । ಸ್ತೂಯಸೇ । ಉತೋ ಅಪಿ ಚ ತ್ಮನಾತ್ಮನಾ ದಿವೋ ದ್ಯೋತಮಾನಸ್ಯ ತೇ ತವ ಸ್ವಾನಃ ಶಬ್ದಸ್ತನ್ಯತುರ್ಯಥಾ ಮೇಘಗರ್ಜಿತಮಿವಾರ್ತ । ಉದ್ಗಚ್ಛತಿ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಅರ್ಚಯಃ**—ನಿನ್ನ ರಶ್ಮಿಗಳು । **ದ್ಯುಮಂತಃ**—ಪ್ರಭಾಯುತವಾಗಿವೆ । **ಬೃಹತ್**—ಮಹತ್ಸ್ವರೂಪವುಳ್ಳ ನೀನು । **ಗ್ರಾವೇವ**—ಸೋಮವನ್ನು ಹಿಂಡುವ ಕಲ್ಲಿನಂತೆ । **ಉಚ್ಯತೇ**—ಪ್ರಶಂಸಿಸಲ್ಪಡುತ್ತೀಯೆ । **ಉತೋ**—ಮತ್ತು । **ತ್ಮನಾ**—ಸ್ವಮಾಹಾತ್ಮ್ಯದಿಂದಲೇ । **ದಿವಃ**—ಪ್ರಕಾಶಮಾನನಾದ । **ತೇ**—ನಿನ್ನ । **ಸ್ವಾನಃ**—ಶಬ್ದವು । **ತನ್ಯತುಃ ಯಥಾ**—ಮೇಘಗರ್ಜನದಂತೆ । **ಅರ್ತ**—ಉದ್ಭವಿಸಿ ಪ್ರಸರಿಸುತ್ತದೆ

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನ ರಶ್ಮಿಗಳು ಪ್ರಭಾಯುತವಾಗಿವೆ ಮಹತ್ಸ್ವರೂಪವುಳ್ಳ ನೀನು ಸೋಮವನ್ನು ಹಿಂಡುವ ಕಲ್ಲಿನಂತೆ ಪ್ರಶಂಸಿಸಲ್ಪಡುತ್ತೀಯೆ. ಮತ್ತು ಸ್ವಮಾಹಾತ್ಮ್ಯದಿಂದಲೇ ಪ್ರಕಾಶಮಾನನಾದ ನಿನ್ನ ಶಬ್ದವು ಮೇಘಗರ್ಜನದಂತೆ ಉದ್ಭವಿಸಿ ಪ್ರಸರಿಸುತ್ತದೆ.

English Translation

Brilliant, Agni, are your rays : mighty are you termed, like the stone (that bruises the Soma), and your voice spontaneously spreads through the sky like thunder.

॥ ಸಂಹಿತಾಪಾಠಃ ॥

ಏವಾँ ಅಗ್ನಿಂ ವಸೂಯವಃ ಸಹಸಾನಂ ವವಂದಿಮ ।

ಸ ನೋ ವಿಶ್ವಾ ಅತಿ ದ್ವಿಷಃ ಪರ್ಷನ್ನಾವೇವ ಸುಕ್ರತುಃ ॥ ೯ ॥

॥ ಪದಪಾಠಃ ॥

ಏವ । ಅಗ್ನಿಂ । ವಸುಽಯವಃ । ಸಹಸಾನಂ । ವವಂದಿಮ ।

ಸಃ । ನಃ । ವಿಶ್ವಾಃ । ಅತಿ । ದ್ವಿಷಃ । ಪರ್ಷತ್ । ನಾವಾಽಇವ । ಸುಽಕ್ರತುಃ ॥ ೯ ॥

॥ ಸಾಯಣಭಾಷ್ಯಂ ॥

**ವಸೂಯವೋ ವಸುಕಾಮಾ ವಯಂ ಸಹಸಾನಮಸ್ಮಾಕಂ ಬಲಮಿವಾಚರಂತಮಗ್ನಿಮೇವಮುಕ್ತಪ್ರಕಾರೇಣ ವವಂದಿಮ । ಸ್ತುಮಃ । ಸುಕ್ರತುಃ ಶೋಭನಕರ್ಮಾ ಸೋಽಗ್ನಿರ್ನೋಽಸ್ಮಾನ್ ವಿಶ್ವಾಃ ಸರ್ವಾನ್ ದ್ವಿಷಃ ಶತ್ರೂನತಿ ಪರ್ಷತ್ । ಅತಿಪಾರಯತು । ಕಥಮಿವ । ನಾವಾ ಸಾಧನೇನ ಸಿಂಧುಮಿವ ॥**

॥ ಪ್ರತಿಪದಾರ್ಥ ॥

**ವಸೂಯವಃ**—ಧನಾಪೇಕ್ಷಿಗಳಾದ ನಾವು (ವಸೂಯುನಾಮಕರಾದ ಋಷಿಗಳು) । **ಸಹಸಾನಂ**—ಶಕ್ತಿಯುತವಾದ ಕಾರ್ಯಗಳನ್ನು ನೆರವೇರಿಸತಕ್ಕ । **ಅಗ್ನಿಂ**—ಅಗ್ನಿಯನ್ನು । **ವವಂದಿಮ**—ಸ್ತುತಿಸುತ್ತೇವೆ । **ನಾವಾ ಇವ**—ದೋಣಿಯಿಂದ ನದಿಯನ್ನು ಸುಲಭವಾಗಿ ದಾಟುವಂತೆ । **ಸುಕ್ರತುಃ**—ಶ್ರೇಷ್ಠವಾದ ಕರ್ಮಕರ್ತನಾದ **ಸಃ**—ಅಗ್ನಿಯು । **ನಃ**—ನಮ್ಮನ್ನು । **ವಿಶ್ವಾಃ**—ಸಮಸ್ತವಾದ । **ದ್ವಿಷಃ**—ಶತ್ರುಗಳಿಂದಲೂ । **ಅತಿ ಪರ್ಷತ್**—ದಾಟಿಸಲಿ.

॥ ಭಾವಾರ್ಥ ॥

ವಸೂಯುನಾಮಕರೂ, ಧನಾಪೇಕ್ಷಿಗಳೂ ಆದ ನಾವು ಶಕ್ತಿಯುತವಾದ ಕಾರ್ಯವನ್ನು ನೆರವೇರಿಸಬಲ್ಲ ಅಗ್ನಿಯನ್ನು ಸ್ತುತಿಸುತ್ತೇವೆ ದೋಣಿಯಿಂದ ನದಿಯನ್ನು ಸುಲಭವಾಗಿ ದಾಟುವಂತೆ ಶ್ರೇಷ್ಠವಾದ ಕರ್ಮಕರ್ತನಾದ ಅಗ್ನಿಯು ನಮ್ಮನ್ನು ಸಮಸ್ತವಾದ ಶತ್ರುಗಳಿಂದಲೂ ದಾಟಿಸಿ ರಕ್ಷಿಸಲಿ.

English Translation

Thus we, Vasuyus, glorify the vigorous Agni : may he, the performer of great deeds, enable us to pass over our enemies as (we cross a river) with a boat.

---

## ಇಪ್ಪತ್ತಾರನೆಯ ಸೂಕ್ತವು.

---

**ಅಗ್ನೇ ಪಾವಕೇತಿ ನವರ್ಚಂ ದ್ವಾದಶಂ ಸೂಕ್ತಂ । ವಸೂಯವ ಋಷಯಃ । ಗಾಯತ್ರೀ ಛಂದಃ । ಅಗ್ನಿರ್ದೇವತಾ । ತಥಾ ಚಾನುಕ್ರಾಂತಂ । ಅಗ್ನೇ ಗಾಯತ್ರಮಿತಿ ॥ ಪ್ರಾತರನುವಾಕ ಆಗ್ನೇಯೇ ಕ್ರತೌ ಗಾಯತ್ರೇ ಛಂದಸ್ಯಾಶ್ವಿನಶಸ್ತ್ರೇ ಚೇದಂ ಸೂಕ್ತಂ । ಸೂತ್ರಿತಂ ಚ । ಅಗ್ನೇ ಪಾವಕ ದೂತಂ ವ ಇತಿ ಸೂಕ್ತೇ । ಆ. ೪-೧೩ । ಇತಿ ॥ ಅಥಾನೇ ದ್ವಿತೀಯಾಯಾಮಿಷ್ಟಾ ಪ್ರಥಮಸ್ಯ ಹವಿಷೋಽಗ್ನೇ ಪಾವಕೇತ್ಯೇಷಾ ಯಾಜ್ಯಾ । ಸೂತ್ರಿತಂ ಚ । ಸ ನಃ ಪಾವಕ ದೀದಿವೋಽಗ್ನೇ ಪಾವಕ ರೋಚಿಷಾ । ಆ. ೨೧ । ಇತಿ ॥**

ಅನುವಾದವು— **ಅಗ್ನೇ ಪಾವಕ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹನ್ನೆರಡನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಸೂಯವಃ ಎಂಬುವರು ಋಷಿಗಳು, ಅಗ್ನಿಯು ದೇವತೆಯು, ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ— **ಅಗ್ನೇ ಗಾಯತ್ರಂ** ಎಂದು ಹೇಳಿರುವುದು. ಪ್ರಾತರನುವಾಕ ಮಂತ್ರಪಠನದಲ್ಲಿ ಆಗ್ನೇಯಕ್ರತುಸಂಬಂಧವಾದ ಗಾಯತ್ರೀಛಂದಸ್ಸಿನ ಋಕ್ಕುಗಳಿಗಾಗಿಯೂ ಆಶ್ವಿನಶಸ್ತ್ರಮಂತ್ರ ಪಠನಕ್ಕಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ— **ಅಗ್ನೇ ಪಾವಕ ದೂತಂ ವ ಇತಿ ಸೂಕ್ತೇ** ಎಂಬ ಸೂತ್ರದಿಂದ (ಆ ೪-೧೩) ವಿವೃತವಾಗಿರುವುದು. ಮತ್ತು ಆಧಾನಮಾಡುವಾಗ ಎರಡನೆಯ ಇಷ್ಟಿಯಲ್ಲಿ ಮೊದಲನೆಯ ಹವಿಸ್ಸನ್ನು ಹೋಮಮಾಡುವಾಗ **ಅಗ್ನೇ ಪಾವಕ** ಎಂಬ ಋಕ್ಕನ್ನು ಯಾಜ್ಯಾಮಂತ್ರ ವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಸ ನಃ ಪಾವಕ ದೀದಿವೋಽಗ್ನೇ ಪಾವಕ ರೋಚಿಷಾ** ಎಂಬ ಸೂತ್ರದಿಂದ (ಆ. ೨-೧) ವಿವೃತವಾಗಿರುವುದು.

---

## ಸೂಕ್ತ—೨೬

॥ ಮಂಡಲ—೫ ॥ ಅನುವಾಕ—೨ ॥ ಸೂಕ್ತ—೨೬ ॥
॥ ಅಷ್ಟಕ—೪ । ಅಧ್ಯಾಯ— ೧ ॥ ವರ್ಗ—೧೯, ೨೦ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯
॥ ಋಷಿಃ—ವಸೂಯವ ಆತ್ರೇಯಾಃ ॥
॥ ದೇವತಾ—ಅಗ್ನಿಃ ॥
॥ ಛಂದಃ—ಗಾಯತ್ರೀ ॥

---

॥ ಸಂಹಿತಾಪಾಠಃ ॥

ಅಗ್ನೇ ಪಾವಕ ರೋಚಿಷಾ ಮಂದ್ರಯಾ ದೇವ ಜಿಹ್ವಯಾ ।
ಆ ದೇವಾನ್ವಕ್ಷಿ ಯಕ್ಷಿ ಚ ॥ ೧ ॥

॥ ಪದಪಾಠಃ ॥

ಅಗ್ನೇ । ಪಾವಕ । ರೋಚಿಷಾ । ಮಂದ್ರಯಾ । ದೇವ । ಜಿಹ್ವಯಾ ।
ಆ । ದೇವಾನ್ । ವಕ್ಷಿ । ಯಕ್ಷಿ । ಚ ॥ ೧ ॥

॥ ಸಾಯಣಭಾಷ್ಯಂ ॥

**ಹೇ ಪಾವಕ ಶೋಧಕ ರೋಚಿಷಾ ಸ್ವದೀಪ್ತ್ಯಾ ಮಂದ್ರಯಾ ದೇವಾನಾಂ ಮಾದಯಿತ್ರ್ಯಾ ಜಿಹ್ವಯಾ ಚ ಹೇ ದೇವ ದ್ಯೋತಮಾನಾಗ್ನೇ ದೇವಾನಾ ವಕ್ಷಿ । ಯಜ್ಞಾರ್ಥಮಾವಹ । ಯಕ್ಷಿ ಚ । ತಾನ್ಯಜ ॥**

॥ ಪ್ರತಿಪದಾರ್ಥ ॥

**ಪಾವಕ**—ಶುದ್ಧಿಕಾರಕನೂ । **ದೇವ**—ದೇವಾತ್ಮನೂ ಆದ । **ಅಗ್ನೇ**—ಎಲೈ ಅಗ್ನಿಯೇ । **ರೋಚಿಷಾ**—ಕಾಂತಿಯುಕ್ತವಾದುದೂ । **ಮಂದ್ರಯಾ**—ಆಹ್ಲಾದಕಾರಕವಾದುದೂ । **ಜಿಹ್ವಯಾ**—ಜಿಹ್ವಾರೂಪವ್ದೂ ಆದ ಜ್ವಾಲೆಗಳಿಂದ । **ದೇವಾನ್**—ದೇವತೆಗಳನ್ನು । **ಆ ವಕ್ಷಿ**—ಯಜ್ಞಕ್ಕೆ ಕರೆದುಕೊಂಡು ಬಾ । **ಯಕ್ಷಿ ಚ**—ಅವರನ್ನುದ್ದೇಶಿಸಿ ಯಾಗಮಾಡು ।

॥ ಭಾವಾರ್ಥ ॥

ಶುದ್ಧೀಕಾರಕನೂ, ದೇವತಾತ್ಮನೂ ಆದ ಎಲೈ ಅಗ್ನಿಯೇ, ಕಾಂತಿಯುತವಾದುದೂ, ಆಹ್ಲಾದಕಾರಕವಾದುದೂ, ಜಿಹ್ವಾರೂಪವ್ದೂ ಆದ ಜ್ವಾಲೆಗಳಿಂದ ದೇವತೆಗಳನ್ನು ಯಜ್ಞಕ್ಕೆ ಕರೆದುಕೊಂಡು ಬಾ. ಅವರನ್ನುದ್ದೇಶಿಸಿ ಯಾಗಮಾಡು.

## English Translation

Divine purifier, Agni, with your radiant and pleasing tongue, bring hither and worship the gods.

॥ ಸಂಹಿತಾಪಾಠಃ ॥

ತಂ ತ್ವಾ ಘೃತಸ್ನವೀಮಹೇ ಚಿತ್ರಭಾನೋ ಸ್ವರ್ದೃಶಂ ।
ದೇವಾँ ಆ ವೀತಯೇ ವಹ ॥ ೨ ॥

॥ ಪದಪಾಠಃ ॥

ತಂ । ತ್ವಾ । ಘೃತಸ್ನೋ ಇತಿ ಘೃತsಸ್ನೋ । ಈಮಹೇ । ಚಿತ್ರಭಾನೋ ಇತಿ ಚಿತ್ರsಭಾನೋ ।
ಸ್ವಃsದೃಶಂ ।
ದೇವಾನ್ । ಆ । ವೀತಯೇ । ವಹ ॥ ೨ ॥

॥ ಸಾಯಣಭಾಷ್ಯಂ ॥

ಹೇ ಘೃತಸ್ನೋ ಘೃತಸ್ಯ ಪ್ರೇರಕ । ಯದ್ವಾ । ಘೃತೇನ ಜನಿತ । ಹೇ ಚಿತ್ರಭಾನೋ । ಚಿತ್ರಾ ನಾನಾವಿಧಾ ಭಾನವೋ ರಶ್ಮಯೋ ಯಸ್ಯಾಸೌ ಚಿತ್ರಭಾನುಃ । ತಸ್ಯ ಸಂಬೋಧನಂ । ಸ್ವರ್ದೃಶಂ ಸರ್ವದ್ರಷ್ಟಾರಂ ತಂ ತ್ವಾ ತ್ವಾಮೀಮಹೇ । ಯಾಚಾಮಹೇ । ಅತೋ ವೀತಯೇ ಹವಿಷಾಂ ಭಕ್ಷಣಾಯ ದೇವಾನಾ ವಹ ॥

॥ ಪ್ರತಿಪದಾರ್ಥ ॥

**ಘೃತಸ್ನೋ**—ಘೃತದಿಂದ ಉದ್ದೀಪಿತನಾದವನೂ | **ಚಿತ್ರಭಾನೋ**—ನಾನಾ ವಿಧವಾದ ರಶ್ಮಿಗಳುಳ್ಳವನೂ ಆದ ಎಲೈ ಅಗ್ನಿಯೇ | **ಸ್ವರ್ದೃಶಂ**—ಸಮಸ್ತವನ್ನು ನೋಡಬಲ್ಲವನೂ | **ತಂ**—ಪ್ರಸಿದ್ಧನೂ ಆದ | **ತ್ವಾ**—ನಿನ್ನನ್ನು | **ಈಮಹೇ**—ಪ್ರಾರ್ಥಿಸುತ್ತೇವೆ | **ವೀತಯೇ**—ಹವಿಸ್ಸನ್ನು ಭಕ್ಷಿಸಲು | **ದೇವಾನ್**—ದೇವತೆಗಳನ್ನು | **ಆ ವಹ**—ಕರೆದುಕೊಂಡು ಬಾ.

॥ ಭಾವಾರ್ಥ ॥

ಘೃತದಿಂದ ಉದ್ದೀಪಿತನಾದವನೂ, ನಾನಾ ವಿಧವಾದ ರಶ್ಮಿಗಳುಳ್ಳವನೂ ಆದ ಎಲೈ ಅಗ್ನಿಯೇ, ಸಮಸ್ತವನ್ನೂ ನೋಡಬಲ್ಲವನೂ ಪ್ರಸಿದ್ಧನೂ ಆದ ನಿನ್ನನ್ನು ಪ್ರಾರ್ಥಿಸುತ್ತೇವೆ. ಹವಿಸ್ಸನ್ನು ಭಕ್ಷಿಸಲು ದೇವತೆಗಳನ್ನು ಕರೆದುಕೊಂಡು ಬಾ

English Translation

Feeder upon butter, bright and variegated radiance we solicit you, the beholder of heaven, to bring the Gods hither to (partake of) the (sacrificial) food

---

॥ ಸಂಹಿತಾಪಾಠಃ ॥

ವೀತಿಹೋತ್ರಂ ತ್ವಾ ಕವೇ ದ್ಯುಮಂತಂ ಸಮಿಧೀಮಹಿ |
ಅಗ್ನೇ ಬೃಹಂತಮಧ್ವರೇ ॥ ೩ ॥

॥ ಪದಪಾಠಃ ॥

ವೀತಿऽಹೋತ್ರಂ | ತ್ವಾ | ಕವೇ | ದ್ಯುಮಂತಂ | ಸಂ | ಇಧೀಮಹಿ |
ಅಗ್ನೇ | ಬೃಹಂತಂ | ಅಧ್ವರೇ ॥ ೩ ॥

॥ ಸಾಯಣಭಾಷ್ಯಂ ॥

**ಹೇ ಕವೇ ಕ್ರಾಂತದರ್ಶಿನ್ನಗ್ನೇ ವೀತಿಹೋತ್ರಂ ಕ್ರಾಂತಯಜ್ಞಂ ದ್ಯುಮಂತಂ ದೀಪ್ತಿಮಂತಂ ಬೃಹಂತಂ ಮಹಾಂತಂ ತ್ವಾ ತ್ವಾಮಧ್ವರೇ ಯಜ್ಞೇ ಸಮಿಧೀಮಹಿ | ಸಮಿದ್ಭಿಃ ಸಂದೀಪಯಾಮಃ ॥**

॥ ಪ್ರತಿಪದಾರ್ಥ ॥

**ಕವೇ**—ಕ್ರಾಂತಪ್ರಜ್ಞನಾದ | **ಅಗ್ನೇ**—ಎಲೈ ಅಗ್ನಿಯೇ | **ವೀತಿಹೋತ್ರಂ**—ಹವಿಸ್ಸೇ ಆಹಾರವಾಗಿ ಉಳ್ಳವನೂ | **ದ್ಯುಮಂತಂ**—ಪ್ರಭಾಯುತನೂ | **ಬೃಹಂತಂ**—ಮಹತ್ಸ್ವರೂಪವುಳ್ಳವನೂ ಆದ | **ತ್ವಾ**—ನಿನ್ನನ್ನು | **ಅಧ್ವರೇ**—ಯಜ್ಞದಲ್ಲಿ | **ಸಮೀಧಿಮಹಿ**—ಪ್ರಜ್ವಲಿತನನ್ನಾಗಿ ಮಾಡುತ್ತೇವೆ.

॥ ಭಾವಾರ್ಥ ॥

ಕ್ರಾಂತಪ್ರಜ್ಞನಾದ ಎಲೈ ಅಗ್ನಿಯೇ, ಹವಿಸ್ಸೇ ಆಹಾರವಾಗಿ ಉಳ್ಳವನೂ, ಪ್ರಭಾಯುತನೂ, ಮಹತ್ಸ್ವರೂಪವುಳ್ಳವನೂ ಆದ ನಿನ್ನನ್ನು ಯಜ್ಞದಲ್ಲಿ ಪ್ರಜ್ವಲಿತನನ್ನಾಗಿ ಮಾಡುತ್ತೇವೆ.

English Translation

We kindle you at the sacrifice, wise Agni, whose food is the oblation, who are brilliant and vast.

---

॥ ಸಂಹಿತಾಪಾಠಃ ॥

**ಅಗ್ನೇ ವಿಶ್ವೇಭಿರಾ ಗಹಿ ದೇವೇಭಿರ್ಹವ್ಯದಾತಯೇ ।**

**ಹೋತಾರಂ ತ್ವಾ ವೃಣೀಮಹೇ ॥ ೪ ॥**

॥ ಪದಪಾಠಃ ॥

**ಅಗ್ನೇ । ವಿಶ್ವೇಭಿಃ । ಆ । ಗಹಿ । ದೇವೇಭಿಃ । ಹವ್ಯಃದಾತಯೇ ।**

**ಹೋತಾರಂ । ತ್ವಾ । ವೃಣೀಮಹೇ ॥ ೪ ॥**

॥ ಸಾಯಣಭಾಷ್ಯಂ

**ಹೇ ಅಗ್ನೇ ವಿಶ್ವೇಭಿಃ ಸರ್ವೈರ್ದೇವೇಭಿರ್ದೇವೈಃ ಸಹ ತ್ವಂ ಹವ್ಯದಾತಯೇ ಹವಿಷಾಂ ದಾತ್ರೇ ಯಜಮಾನಾಯ ತದರ್ಥಮಾ ಗಹಿ । ಯಜ್ಞಂ ಪ್ರತ್ಯಾಗಚ್ಛ । ಯತೋ ಹೋತಾರಂ ದೇವಾನಾಮಾಹ್ವಾತಾರಂ ತ್ವಾ ತ್ವಾಂ ವೃಣೀಮಹೇ । ಪ್ರಾರ್ಥಯಾಮಹೇ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ವಿಶ್ವೇಭಿಃ**—ಸಮಸ್ತವಾದ । **ದೇವೇಭಿಃ**—ದೇವತೆಗಳೊಡನೆ । **ಹವ್ಯದಾತಯೇ**—ಹವಿಸ್ಸನ್ನು ಅರ್ಪಿಸುವ ಯಜಮಾನನಲ್ಲಿಗೆ । **ಆ ಗಹಿ**—ದಯಮಾಡು । **ಹೋತಾರಂ**—ದೇವತೆಗಳಿಗೆ ಆಹ್ವಾತೃವಾದ । **ತ್ವಾ**—ನಿನ್ನನ್ನು । **ವೃಣೀಮಹೇ**—ಪ್ರಾರ್ಥಿಸುತ್ತೇವೆ

॥ ಭಾವಾರ್ಥ ॥

ಎಲೈ ಅಗ್ನಿಯೇ, ಸಮಸ್ತವಾದ ದೇವತೆಗಳೊಡನೆ ಹವಿಸ್ಸನ್ನರ್ಪಿಸುವ ಯಜಮಾನನಲ್ಲಿಗೆ ದಯಮಾಡು ಎಂಬುದಾಗಿ ದೇವತೆಗಳಿಗೆ ಆಹ್ವಾತೃವಾದ ನಿನ್ನನ್ನು ಪ್ರಾರ್ಥಿಸುತ್ತೇವೆ

English Translation

Come, Agni, with all the gods, to the donor (of the oblation) : we have recourse to you as their invoker

॥ ಸಂಹಿತಾಪಾಠಃ ॥

ಯಜಮಾನಾಯ ಸುನ್ವತ ಆಗ್ನೇ ಸುವೀರ್ಯಂ ವಹ ।
ದೇವೈರಾ ಸತ್ಸಿ ಬರ್ಹಿಷಿ ॥ ೫ ॥

॥ ಪದಪಾಠಃ ॥

ಯಜಮಾನಾಯ । ಸುನ್ವತೇ । ಆ । ಅಗ್ನೇ । ಸುವೀರ್ಯಂ । ವಹ ।
ದೇವೈಃ । ಆ । ಸತ್ಸಿ । ಬರ್ಹಿಷಿ ॥ ೫ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಸುನ್ವತೇಽಭಿಷವಂ ಕುರ್ವತೇ ಯಜಮಾನಾಯ ಸುವೀರ್ಯಂ ಶೋಭನಂ ಬಲಮಾ ವಹ । ಪ್ರಾಪಯ । ಕಿಂಚ ದೇವೈಃ ಸಹ ಬರ್ಹಿಷಿ ಯಜ್ಞ ಆ ಸತ್ಸಿ । ಆಸೀದೇತಿ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಸುನ್ವತೇ**—ಸೋಮರಸವನ್ನು ಹಿಂಡುವ । **ಯಜಮಾನಾಯ**—ಯಜ್ಞ ಕರ್ತನಿಗೆ । **ಸುವೀರ್ಯಂ**—ಶ್ರೇಷ್ಠವಾದ ಬಲವನ್ನು । **ಆ ವಹ**—ಹೊಂದಿಸಿಕೊಡು । **ದೇವೈಃ**—ದೇವತೆಗಳೊಡನೆ । **ಬರ್ಹಿಷಿ**—ದರ್ಭಾಸನಗಳ ಮೇಲೆ । **ಆ ಸತ್ಸಿ**—ಕುಳಿತುಕೊ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಸೋಮರಸವನ್ನು ಹಿಂಡುವ ಯಜ್ಞಕರ್ತನಿಗೆ ಶ್ರೇಷ್ಠವಾದ ಬಲವನ್ನು ಹೊಂದಿಸಿಕೊಡು. ದೇವತೆಗಳೊಡನೆ ಬಂದು ದರ್ಭಾಸನಗಳ ಮೇಲೆ ಕುಳಿತುಕೊ.

English Translation

To the institutor of the rite, pouring out the libation, bring excellent vigour ; sit down with the gods upon the sacred grass.

---

॥ ಸಂಹಿತಾಪಾಠಃ ॥

ಸಮಿಧಾನಃ ಸಹಸ್ರಜಿದಗ್ನೇ ಧರ್ಮಾಣಿ ಪುಷ್ಯಸಿ ।
ದೇವಾನಾಂ ದೂತ ಉಕ್ಥ್ಯಃ ॥ ೬ ॥

॥ ಪದಪಾಠಃ ॥

ಸಂಽಇಧಾನಃ । ಸಹಸ್ರಽಜಿತ್ । ಅಗ್ನೇ । ಧರ್ಮಾಣಿ । ಪುಷ್ಯಸಿ ।
ದೇವಾನಾಂ । ದೂತಃ । ಉಕ್ಥ್ಯಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ಸಹಸ್ರಜಿತ್ಸಹಸ್ರಸ್ಯ ಜೇತರಗ್ನೇ ಸಮಿಧಾನೋ ಹವಿರ್ಭಿಃ ಸಮಿಧ್ಯಮಾನ ಉಕ್ಥ್ಯಃ ಪ್ರಶಸ್ಯಸ್ತ್ವಂ ದೇವಾನಾಂ ದೂತಃ ಸನ್ ಧರ್ಮಾಣಿ ನಃ ಕರ್ಮಾಣಿ ಯಜ್ಞಾದಿಕ್ರಿಯಾಃ ಪುಷ್ಯಸಿ ॥ ಪೋಷಯಸಿ ॥

॥ ಪ್ರತಿಪದಾರ್ಥ ॥

**ಸಹಸ್ರಜಿತ್**—ಸಾವಿರಾರು ಸನ್ನಿವೇಶಗಳಲ್ಲಿ ಜಯವನ್ನು ಹೊಂದಿದ । **ಅಗ್ನೇ**—ಎಲೈ ಅಗ್ನಿಯೇ । **ಸಮಿಧಾನಃ**—ಹವಿಸ್ಸುಗಳಿಂದ। ಪ್ರಜ್ವಲಿತನಾದವನೂ । **ಉಕ್ಥ್ಯಃ**—ಪ್ರಶಂಸಿತನೂ ಆದ ನೀನು । **ದೇವಾನಾಂ**—ದೇವತೆಗಳಿಗೆ । **ದೂತಃ**—ದೂತನಾಗಿ । **ಧರ್ಮಾಣಿ**—ನಮ್ಮ ಯಜ್ಞಾದಿ ಕ್ರಿಯೆಗಳನ್ನು। **ಪುಷ್ಯಸಿ**—ಬೆಳಸುತ್ತೀಯೆ.

॥ ಭಾವಾರ್ಥ ॥

ಸಾವಿರಾರು ಸನ್ನಿವೇಶಗಳಲ್ಲಿ ಜಯವನ್ನು ಹೊಂದಿದ ಎಲೈ ಅಗ್ನಿಯೇ, ಹವಿಸ್ಸುಗಳಿಂದ ಪ್ರಜ್ವಲಿತನಾದವನೂ, ಸ್ತುತ್ಯನೂ ಆದ ನೀನು ದೇವತೆಗಳಿಗೆ ದೂತನಾಗಿ ನಮ್ಮ ಯಜ್ಞಾದಿ ಸತ್ಕರ್ಮಗಳನ್ನು ಬೆಳಸುತ್ತೀಯೆ.

English Translation

Victor over thousands, you favour, when kindled, our holy rites, the honoured messenger of the gods.

॥ ಸಂಹಿತಾಪಾಠಃ ॥

ನ್ಯ೧ಗ್ನಿಂ ಜಾತವೇದಸಂ ಹೋತ್ರವಾಹಂ ಯವಿಷ್ಠ್ಯಂ ।
ದಧಾತಾ ದೇವಮೃತ್ವಿಜಂ ॥ ೭ ॥

॥ ಪದಪಾಠಃ ॥

ನಿ । ಅಗ್ನಿಂ । ಜಾತಃವೇದಸಂ । ಹೋತ್ರಽವಾಹಂ । ಯವಿಷ್ಠ್ಯಂ ।
ದಧಾತ । ದೇವಂ । ಋತ್ವಿಜಂ ॥ ೭ ॥

॥ ಸಾಯಣಭಾಷ್ಯಂ ॥

**ಹೇ ಯಜಮಾನಾ ಜಾತವೇದಸಂ । ಜಾತಾನಿ ಭೂತಾನಿ ವೇತ್ತೀತಿ ಜಾತವೇದಾಃ । ತಂ ಹೋತ್ರವಾಹಂ ಹೋತ್ರಸ್ಯ ಯಜ್ಞಸ್ಯ ವೋಢಾರಂ ಯವಿಷ್ಠ್ಯಂ ಯುವತಮಂ ದೇವಂ ದ್ಯೋತಮಾನ-ಮೃತ್ವಿಜಮೃತಾ ಯಷ್ಟಾರಮಗ್ನಿಂ ನಿ ದಧಾತ । ನಿಧತ್ತ ॥**

॥ ಪ್ರತಿಪದಾರ್ಥ ॥

(ಎಲೈಯಜಮಾನರೇ) **ಜಾತವೇದಸಂ**—ಉತ್ಪನ್ನವಾದ ಸಕಲ ಭೂತಗಳನ್ನೂ ತಿಳಿದವನೂ । **ಹೋತ್ರ-ವಾಹಂ**—(ದೇವತೆಗಳಿಗೆ) ಹವಿಸ್ಸುಗಳನ್ನು ವಹಿಸುವವನೂ । **ಯವಿಷ್ಠ್ಯಂ**—ಅತ್ಯಂತ ಯುವಕನೂ । **ದೇವಂ**—ಪ್ರಕಾಶಮಾನನೂ । **ಋತ್ವಿಜಂ**—ಯಜ್ಞಕ್ಕೆ ಮುಖ್ಯನಾದ ಋತ್ವಿಗ್ರೂಪನೂ ಆದ । **ಅಗ್ನಿಂ**—ಅಗ್ನಿಯನ್ನು । **ನಿದಧಾತ**—ಸ್ಥಾಪಿಸಿ ಪೂಜಿಸಿರಿ.

॥ ಭಾವಾರ್ಥ ॥

ಎಲೈ ಯಜಮಾನರೇ, ಉತ್ಪನ್ನವಾದ ಸಕಲ ಭೂತಗಳನ್ನೂ ತಿಳಿದವನೂ, ದೇವತೆಗಳಿಗೆ ಹವಿಸ್ಸನ್ನು ವಹಿಸುವವನೂ, ಅತ್ಯಂತ ಯುವಕನೂ ಪ್ರಕಾಶಮಾನನೂ, ಯಜ್ಞಕ್ಕೆ ಮುಖ್ಯನಾದ ಋತ್ವಿಗ್ರೂಪನೂ ಆದ ಅಗ್ನಿಯನ್ನು ಸ್ಥಾಪಿಸಿ ಪೂಜಿಸಿರಿ.

English Translation

Reverence Angi, by whom all that is, is known, the bearer of oblations the youngest of the gods, the divine, the ministrant priest

---

॥ ಸಂಹಿತಾಪಾಠಃ ॥

**ಪ್ರ ಯಜ್ಞ ಏತ್ವಾನುಷಗದ್ಯಾ ದೇವವ್ಯಚಸ್ತಮಃ ।**

**ಸ್ತೃಣೀತ ಬರ್ಹಿರಾಸದೇ ॥ ೮ ॥**

॥ ಪದಪಾಠಃ ॥

**ಪ್ರ । ಯಜ್ಞಃ । ಏತು । ಆನುಷಕ್ । ಅದ್ಯ । ದೇವವ್ಯಚಃಽತಮಃ ।**

**ಸ್ತೃಣೀತ । ಬರ್ಹಿಃ । ಆಽಸದೇ ॥ ೮ ॥**

॥ ಸಾಯಣಭಾಷ್ಯಂ ॥

**ಅದ್ಯಾಸ್ಮಿನ್ನಹನಿ ದೇವವ್ಯಚಸ್ತಮೋ ದೇವೈಃ ಪ್ರಕಾಶಮಾನೈಃ ಸ್ತೋತೃಭಿರ್ವ್ಯಾಪ್ತತಮೋ ಯಜ್ಞೋ ಯಜ್ಞಸಾಧನಂ ಹವಿರಾನುಷಗನುಷಕ್ತಂ ಯಥಾ ಭವತಿ ತಥಾ ಪ್ರೈತು । ದೇವಾನ್ ಗಚ್ಛತು । ಹೇ ಋತ್ವಿಜ ಆಸದೇಽಗ್ನೇರಾಸದನಾರ್ಥಂ ಬರ್ಹಿಃ ಸ್ತೃಣೀತ ॥**

॥ ಪ್ರತಿಪದಾರ್ಥ ॥

**ಅದ್ಯ**—ಈ ಯಾಗದಲ್ಲಿ । **ದೇವವ್ಯಚಸ್ತಮಃ**—ಪ್ರಕಾಶಮಾನರಾದ ಸ್ತೋತೃಗಳಿಂದ ಅತ್ಯಂತ ಭಕ್ತಿಯುತವಾಗಿ ಅರ್ಪಿತವಾದ । **ಯಜ್ಞಃ**—ಹವಿಸ್ಸು । **ಆನುಷಕ್**—ಯಥಾವಿಧಿಯಾಗಿ । **ಪ್ರ ಏತು**—ದೇವತೆಗಳನ್ನು ಸೇರಲಿ (ಎಲೈ ಋತ್ವಿಕ್ಕುಗಳೇ) । **ಆಸದೇ**—ಅಗ್ನಿಯ ಆಸನಕ್ಕಾಗಿ । **ಬರ್ಹಿಃ**—ದರ್ಭಾಸನವನ್ನು । **ಸ್ತೃಣೀತ**—ಹರಡಿರಿ.

॥ ಭಾವಾರ್ಥ ॥

ಈ ಯಾಗದಲ್ಲಿ ಪ್ರಕಾಶಮಾನರಾದ ಸ್ತೋತೃಗಳಿಂದ ಅತ್ಯಂತ ಭಕ್ತಿಯುತವಾಗಿ ಅರ್ಪಿತವಾದ ಹವಿಸ್ಸು ಯಥಾವಿಧಿಯಾಗಿ ದೇವತೆಗಳನ್ನು ಸೇರಲಿ. ಎಲೈ ಋತ್ವಿಕ್ಕುಗಳೇ, ಅಗ್ನಿಯ ಆಸನಕ್ಕಾಗಿ ದರ್ಭಾಸನವನ್ನು ಹರಡಿರಿ.

English Translation

May the sacrifice most solemnly offered by the devout duly proceed to-day (to the gods): spread the sacred grass for their seat.

॥ ಸಂಹಿತಾಪಾಠಃ ॥

ಏದಂ ಮರುತೋ ಅಶ್ವಿನಾ ಮಿತ್ರಃ ಸೀದಂತು ವರುಣಃ ।

ದೇವಾಸಃ ಸರ್ವಯಾ ವಿಶಾ ॥ ೯ ॥

॥ ಪದಪಾಠಃ ॥

ಆ । ಇದಂ । ಮರುತಃ । ಅಶ್ವಿನಾ । ಮಿತ್ರಃ । ಸೀದಂತು । ವರುಣಃ ।

ದೇವಾಸಃ । ಸರ್ವಯಾ । ವಿಶಾ ॥ ೯ ॥

॥ ಸಾಯಣಭಾಷ್ಯಂ ॥

**ಮರುತೋ ಮರುದ್ಗಣಾ ಅಶ್ವಿನಾಶ್ವಿನೌ ದೇವಾನಾಂ ಭಿಷಜೌ ಮಿತ್ರಃ ಸೂರ್ಯೋ ವರುಣಶ್ಚ ದೇವಾಸ ಏತೇ ಸರ್ವೇ ದೇವಾಃ ಸರ್ವಯಾ ವಿಶಾ ಸಮಸ್ತೇನ ಸ್ವೀಯೇನ ಪರಿಜನೇನ ಸಾರ್ಧಮಿದಂ ಬರ್ಹಿರಾ ಸೀದಂತು ॥**

॥ ಪ್ರತಿಪದಾರ್ಥ ॥

**ಮರುತಃ**—ಮರುದ್ದೇವತೆಗಳೂ । **ಅಶ್ವಿನಾ**—ಅಶ್ವಿನೀದೇವತೆಗಳೂ । **ಮಿತ್ರಃ**—ಮಿತ್ರನೂ । **ವರುಣಃ**—ವರುಣನೂ । **ದೇವಾಸಃ**—ಈ ಸಕಲ ದೇವತೆಗಳೂ । **ಸರ್ವಯಾ ವಿಶಾ**—ತಮಗೆ ಸೇರಿದ ಸಕಲ ಪರಿವಾರದೇವತೆಗಳೊಡನೆ । **ಇದಂ**—ಈ ದರ್ಭಾಸನಗಳ ಮೇಲೆ । **ಆ ಸೀದಂತು**—ಕುಳಿತುಕೊಳ್ಳಲಿ.

॥ ಭಾವಾರ್ಥ ॥

ದೇವತಾತ್ಮರಾದ ಮರುತ್ತುಗಳೂ, ಅಶ್ವಿನೀದೇವತೆಗಳೂ, ಮಿತ್ರನೂ, ವರುಣನೂ ಸಹ ತಮಗೆ ಸೇರಿದ ಸಕಲ ಪರಿವಾರದೇವತೆಗಳೊಡನೆಯೂ ಸಹ ಈ ದರ್ಭಾಸನಗಳ ಮೇಲೆ ಬಂದು ಕುಳಿತುಕೊಳ್ಳಲಿ.

English Translation

May the Maruts, the Ashwins, Mitra, Varuna, the gods, with all their attendants, sit down upon this grass

## ಇಪ್ಪತ್ತೇಳನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಅನಸ್ವಂತೇತಿ ಷಡೃಚಂ ತ್ರಯೋದಶಂ ಸೂಕ್ತಂ । ಅತ್ರಾನುಕ್ರಮಣಿಕಾ । ಅನಸ್ವಂತಾ ಷಟ್ ತ್ರೈವೃಷ್ಣಪೌರುಕುತ್ಸ್ಯೌ ದ್ವೌ ತ್ರ್ಯರುಣತ್ರಸದಸ್ಯೂ ರಾಜಾನೌ ಭಾರತಶ್ಚಾಶ್ವಮೇಧೋಽಂತ್ಯಾಸ್ತಿ-ಸ್ರೋಽನುಷ್ಟುಭೋ ನಾತ್ಮಾತ್ಮನೇ ದದ್ಯಾದಿತಿ ಸರ್ವಾಸ್ವತ್ರಿಂ ಕೇಚಿದಂತ್ಯೈಂದ್ರಾಗ್ನೀತಿ । ತ್ರಿವೃಷ್ಣಸ್ಯ ಪುತ್ರಸ್ತ್ರ್ಯರುಣಃ ಪುರುಕುತ್ಸಸ್ಯ ಪುತ್ರಸ್ತ್ರಸದಸ್ಯುರ್ಭರತಸ್ಯ ಪುತ್ರೋಽಶ್ವಮೇಧ ಏತೇ ತ್ರಯೋಽಪಿ ರಾಜಾನಃ ಸಂಭೂಯಾಸ್ಯ ಸೂಕ್ತಸ್ಯ ಋಷಯಃ । ಯದ್ವಾ । ಅತ್ರಿರೇವ ಋಷಿಃ । ಆದ್ಯಾಸ್ತಿಸ್ರಸ್ತ್ರಿಷ್ಟು-ಭಶ್ಚತುರ್ಥಾದ್ಯಾಸ್ತಿಸ್ರೋಽನುಷ್ಟುಭಃ । ಷಷ್ಠೀಂದ್ರಾಗ್ನಿದೇವತ್ಯಾ ಶಿಷ್ಟಾಃ ಪಂಚಾಗ್ನೇಯ್ಯಃ ॥ ವಿನಿ-ಯೋಗೋ ಲೈಂಗಿಕಃ ॥**

ಅನುವಾದವು— **ಅನಸ್ವಂತಾ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹದಿಮೂರನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ— **ಅನಸ್ವಂತಾ ಷಟ್ ತ್ರೈವೃಷ್ಣಪೌರುಕುತ್ಸ್ಯೌ ದ್ವೌ ತ್ರ್ಯರುಣತ್ರಸದಸ್ಯೂ ರಾಜಾನೌ ಭಾರತಶ್ಚಾಶ್ವಮೇಧೋಽನ್ತ್ಯಾಸ್ತಿಸ್ರೋಽನುಷ್ಟುಭೋ ನಾತ್ಮಾತ್ಮನೇ ದದ್ಯಾದಿತಿ ಸರ್ವಾಸ್ವತ್ರಿಂ ಕೇಚಿದಂತ್ಯೈಂದ್ರಾಗ್ನೀ** ಎಂದು ಹೇಳಿರುವುದು. ಈ ಸೂಕ್ತಕ್ಕೆ ತ್ರಿವೃಷ್ಣ ಎಂಬ ರಾಜನ ಪುತ್ರನಾದ ತ್ರ್ಯರುಣ ಎಂಬುವನೂ, ಪುರುಕುತ್ಸರಾಜನ ಪುತ್ರನಾದ ತ್ರಸದಸ್ಯು ಎಂಬುವನೂ, ಭರತನ ಪುತ್ರನಾದ ಅಶ್ವಮೇಧ ಎಂಬ ರಾಜಪುತ್ರನೂ ಈ ಮೂವರೂ ಸೇರಿ ಋಷಿಗಳು. ಅಥವಾ ಈ ಸೂಕ್ತಕ್ಕೆ ಅತ್ರಿಯೇ ಋಷಿಯೆಂದೂ ಹೇಳಬಹುದು. ಈ ಸೂಕ್ತದ ಮೊದಲಿನ ಮೂರು ಋಕ್ಕುಗಳು ತ್ರಿಷ್ಟುಪ್ ಛಂದಸ್ಕವು. ನಾಲ್ಕರಿಂದ ಮೂರು ಋಕ್ಕುಗಳು ಅನುಷ್ಟುಪ್‌ಛಂದಸ್ಕವು. ಆರನೆಯ ಋಕ್ಕು ಇಂದ್ರಾಗ್ನಿದೇವತಾಕವು. ಉಳಿದ ಐದು ಋಕ್ಕುಗಳು ಅಗ್ನಿದೇವತಾಕವು. ವಿನಿಯೋಗವು ಲೈಂಗಿಕವು

## ಸೂಕ್ತ—೨೭.

॥ ಮಂಡಲ—೫ ॥ ಅನುವಾಕ—೨ ॥ ಸೂಕ್ತ—೨೭ ॥
॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೨೧ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬
ಋಷಿಃ—ತ್ರ್ಯರುಣಸ್ತ್ರೈವೃಷ್ಣ ಸ್ತ್ರಸದಸ್ಯುಶ್ಚ ಪೌರುಕುತ್ಸ ಅಶ್ವಮೇಧಶ್ಚ ಭಾರತ ಅತ್ರಿರ್ವಾ ॥
ದೇವತಾ—೧-೫. ಅಗ್ನಿಃ । ೬. ಇಂದ್ರಾಗ್ನೀ ॥
॥ ಛಂದಃ—೧-೩, ತ್ರಿಷ್ಟುಪ್ । ೪-೬. ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಅನಸ್ವಂತಾ ಸತ್ಪತಿರ್ಮಾಮಹೇ ಮೇ ಗಾವಾ ಚೇತಿಷ್ಠೋ ಅಸುರೋ ಮಘೋನಃ ।
ತ್ರೈವೃಷ್ಣೋ ಅಗ್ನೇ ದಶಭಿಃ ಸಹಸ್ರೈರ್ವೈಶ್ವಾನರ ತ್ರ್ಯರುಣಶ್ಚಿಕೇತ ॥ ೧ ॥

॥ ಪದಪಾಠಃ ॥

ಅನಸ್ವಂತಾ । ಸತ್ಽಪತಿಃ । ಮಮಹೇ । ಮೇ । ಗಾವಾ । ಚೇತಿಷ್ಠಃ । ಅಸುರಃ । ಮಘೋನಃ ।
ತ್ರೈವೃಷ್ಣಃ । ಅಗ್ನೇ । ದಶಽಭಿಃ । ಸಹಸ್ರೈಃ । ವೈಶ್ವಾನರ । ತ್ರಿಽಅರುಣಃ । ಚಿಕೇತ ॥ ೧ ॥

॥ ಸಾಯಣಭಾಷ್ಯಂ ॥

ಅತ್ರೀ ರಾಜರ್ಷೀಣಾಂ ದಾನಮಗ್ನೇಃ ಪುರತೋಽನೇನ ಸೂಕ್ತೇನಾವರ್ಣಯತ್ । ಹೇ ವೈಶ್ವಾನರ ವಿಶ್ವೇಷಾಂ ನರಾಣಾಂ ನೇತರಗ್ನೇ ಸತ್ಪತಿಃ ಸತಾಂ ಸಾಧೂನಾಂ ಪಾಲಯಿತಾ ಚೇತಿಷ್ಠೋ ಜ್ಞಾತೃತಮೋಽಸುರೋ ಬಲವಾನ್ಮಘೋನೋ ಮಘವಾ ಧನವಾನ್ ॥ ಪ್ರಥಮಾರ್ಥೇ ಜಸಿಃ ॥ ತ್ರೈವೃಷ್ಣಸ್ತ್ರಿವೃಷ್ಣಪುತ್ರಸ್ತ್ರ್ಯರುಣಸ್ತ್ರ್ಯರುಣ ಇತ್ಯೇತನ್ನಾಮಾ ರಾಜರ್ಷಿರನಸ್ವಂತಾನಸ್ವಂತಾವನಸಾ ಶಕಟೇನ ಸಂಯುಕ್ತೌ ಗಾವಾ ಗಾವಾವನಡ್ವಾಹೌ ಗವಾಂ ಹಿರಣ್ಯಾದೀನಾಂ ದಶಭಿಃ ಸಹಸ್ರೈಃ ಸಹ ಮೇ ಮಹ್ಯಂ ಮಮಹೇ । ದದೌ ॥ ಮಹಿ ದಾನೇ ॥ ಸ ರಾಜರ್ಷಿಶ್ಚಿಕೇತ । ಸರ್ವೈರ್ಜನೈರನೇನ ದಾನೇನ ಜ್ಞಾಯತೇ॥

॥ ಪ್ರತಿಪದಾರ್ಥ ॥

ವೈಶ್ವಾನರ—ಸಕಲ ಮಾನವರಿಗೂ ನೇತೃವಾದ । ಅಗ್ನೇ—ಎಲೈ ಅಗ್ನಿಯೇ । ಸತ್ಪತಿಃ—ಸಜ್ಜನರ ಪಾಲಕನೂ । ಚೇತಿಷ್ಠಃ—ವಿವೇಕಿಗಳಲ್ಲಿ ಉತ್ತಮನೂ । ಅಸುರಃ—ಶಕ್ತಿಯುತನೂ । ಮಘೋನಃ—ಧನವಂತನೂ ।

**ತ್ರೈವೃಷ್ಣಃ**—ತ್ರಿವೃಷ್ಣನ ಪುತ್ರನೂ ಆದ । **ತ್ರ್ಯರುಣಃ**—ತ್ರ್ಯರುಣನೆಂಬ ರಾಜರ್ಷಿಯು । **ಮೇ**—ನನಗೆ । **ಅನಸ್ವಂತಾ**—ಶಕಟದಿಂದ ಕೂಡಿದವೂ । **ದಶಭಿಃ ಸಹಸ್ರೈಃ**—ಹತ್ತು ಸಹಸ್ರ ಹಿರಣ್ಯಗಳಿಂದ ಕೂಡಿದವೂ ಆದ । **ಗಾವಾ**—ಗೋದ್ವಯವನ್ನು । **ಮಮಹೇ**—ಕೊಟ್ಟನು (ಆದುದರಿಂದಲೇ) । **ಚಿಕೇತ**—ಅವನು ಎಲ್ಲರಿಗೂ ತಿಳಿಯಲ್ಪಟ್ಟು ಪ್ರಸಿದ್ಧನಾಗಿದ್ದಾನೆ.

॥ ಭಾವಾರ್ಥ ॥

ವೈಶ್ವಾನರರೂಪಿಯಾದ ಎಲೈ ಅಗ್ನಿಯೇ, ಸಜ್ಜನರ ಪಾಲಕನೂ, ವಿವೇಕಿಗಳಲ್ಲಿ ಉತ್ತಮನೂ, ಶಕ್ತಿಯುತನೂ, ಧನವಂತನೂ, ತ್ರಿವೃಷ್ಣನ ಪುತ್ರನೂ ಆದ ತ್ರ್ಯರುಣನೆಂಬ ರಾಜರ್ಷಿಯು ಶಕಟದಿಂದ (ಗಾಡಿಯಿಂದ) ಕೂಡಿದವೂ, ಹತ್ತು ಸಹಸ್ರ ಹಿರಣ್ಯಗಳಿಂದ ಕೂಡಿದವೂ ಆದ ಗೋದ್ವಯವನ್ನು (ಎರಡು ಎತ್ತುಗಳನ್ನು) ನನಗೆ ಕೊಟ್ಟನು. ಆದುದರಿಂದಲೇ ಅವನು ಎಲ್ಲರಿಗೂ ತಿಳಿಯಲ್ಪಟ್ಟು ಪ್ರಸಿದ್ಧನಾಗಿದ್ದಾನೆ.

## English Translation

Agni, who are the protector of the good, most wise, powerful, and opulent; Tryaruna, the son of Trivrishna, has become renowned, Vaishwanara, in that he has bestowed upon me a pair of cattle with a waggon, and with ten thousands of treasure

---

॥ ಸಂಹಿತಾಪಾಠಃ ॥

ಯೋ ಮೇ ಶತಾ ಚ ವಿಂಶತಿಂ ಚ ಗೋನಾಂ ಹರೀ ಚ ಯುಕ್ತಾ ಸುಧುರಾ ದದಾತಿ ।
ವೈಶ್ವಾನರ ಸುಷ್ಟುತೋ ವಾವೃಧಾನೋಽಗ್ನೇ ಯಚ್ಛ ತ್ರ್ಯರುಣಾಯ ಶರ್ಮ ॥ ೨ ॥

॥ ಪದಪಾಠಃ ॥

ಯಃ । ಮೇ । ಶತಾ । ಚ । ವಿಂಶತಿಂ । ಚ । ಗೋನಾಂ । ಹರೀ ಇತಿ । ಚ । ಯುಕ್ತಾ । ಸುಽಧುರಾ । ದದಾತಿ ।
ವೈಶ್ವಾನರ । ಸುಽಸ್ತುತಃ । ವವೃಧಾನಃ । ಅಗ್ನೇ । ಯಚ್ಛ । ತ್ರಿಽಅರುಣಾಯ । ಶರ್ಮ ॥ ೨ ॥

॥ ಸಾಯಣಭಾಷ್ಯಂ ॥

**ಯಸ್ತ್ರ್ಯರುಣಃ ಶತಾ ಚ ಶತಾನಿ ಸುವರ್ಣಾನಾಂ ಗೋನಾಂ ಗವಾಂ ವಿಂಶತಿಂ ಚ ಯುಕ್ತಾ ರಥೇನ ಯುಕ್ತೌ ಸುಧುರಾ ಸುಧುರೌ ಸುಷ್ಠು ಧುರಂ ವಹಂತೌ ಹರೀ ಅಶ್ವೌ ಚ ಮೇ ಮಹ್ಯಂ ದದಾತಿ ಅದದಾತ್ ಹೇ ವೈಶ್ವಾನರಾಗ್ನೇ ಸುಷ್ಟುತೋಽಸ್ಮಾಭಿಃ ಸಮ್ಯಕ್ಸ್ತುತೋ ವವೃಧಾನೋ ಹವಿರ್ಭಿರ್ವರ್ಧಮಾನಸ್ತ್ವಂ ತಸ್ಮೈ ತ್ರ್ಯರುಣಾಯ ಶರ್ಮ ಸುಖಂ ಯಚ್ಛ । ಪ್ರಯಚ್ಛ ॥**

॥ ಪ್ರತಿಪದಾರ್ಥ ॥

**ವೈಶ್ವಾನರ**—ವೈಶ್ವಾನರರೂಪಿಯಾದ । **ಅಗ್ನೇ**—ಎಲೈ ಅಗ್ನಿಯೇ । **ಸುಷ್ಟುತಃ**—ನಮ್ಮಿಂದ ಉತ್ತಮವಾಗಿ ಸ್ತುತನಾಗಿಯೂ । **ವವೃಧಾನಃ**—ಹವಿಸ್ಸುಗಳಿಂದ ಪ್ರವೃದ್ಧನಾಗಿಯೂ ಇರುವ ನೀನು । **ಯಃ**—ಯಾವ ತ್ರ್ಯರುಣನು । **ಮೇ**—ನನಗೆ। **ಶತಾ ಚ**—ಶತಸಂಖ್ಯಾಕವಾದ ಸುವರ್ಣವನ್ನೂ। **ಗೋನಾಂ ವಿಂಶತಿಂ**—ಇಪ್ಪತ್ತು ಗೋವುಗಳನ್ನೂ । **ಸುಧರಾ**—ಭಾರವನ್ನು ವಹಿಸಲು ಯೋಗ್ಯವಾದವೂ । **ಯುಕ್ತಾ**—ರಥದೊಡನೆ ಕೂಡಿದವೂ ಆದ । **ಹರೀ ಚ**—ಎರಡು ಅಶ್ವಗಳನ್ನೂ । **ದದಾತಿ**—ಕೊಟ್ಟನೋ ಅಂತಹ । **ತ್ರ್ಯರುಣಾಯ**—ತ್ರ್ಯರುಣನೆಂಬ ರಾಜರ್ಷಿಗೆ । **ಶರ್ಮ**—ಸುಖವನ್ನು । **ಯಚ್ಛ**—ಕೊಡು

॥ ಭಾವಾರ್ಥ ॥

ವೈಶ್ವಾನರರೂಪಿಯಾದ ಎಲೈ ಅಗ್ನಿಯೇ, ನಮ್ಮಿಂದ ಉತ್ತಮವಾಗಿ ಸ್ತುತನಾಗಿಯೂ ಹವಿಸ್ಸುಗಳಿಂದ ಪ್ರವೃದ್ಧನಾಗಿಯೂ ಇರುವ ನೀನು ನನಗೆ ಶತಸಂಖ್ಯಾಕವಾದ ಸುವರ್ಣವನ್ನೂ, ಇಪ್ಪತ್ತು ಗೋವುಗಳನ್ನೂ ಭಾರವನ್ನು ವಹಿಸಲು ಯೋಗ್ಯವಾದವೂ, ರಥದೊಡನೆ ಕೂಡಿದವೂ ಆದ ಎರಡು ಅಶ್ವಗಳನ್ನೂ ಕೊಟ್ಟಿರುವ ತ್ರ್ಯರುಣನೆಂಬ ರಾಜರ್ಷಿಗೆ ಸುಖವನ್ನುಂಟುಮಾಡು

English Translation

Agni, Vaishwanara, you are deservedly praised and exalted ( by us ); bestow happiness upon Tryaruna, who gives me hundreds (of Suvarnas), twenty cattle, and a pair of burden-bearing horses

*****

॥ ಸಂಹಿತಾಪಾಠಃ ॥

ಏವಾ ತೇ ಅಗ್ನೇ ಸುಮತಿಂ ಚಕಾನೋ ನವಿಷ್ಠಾಯ ನವಮಂ ತ್ರಸದಸ್ಯುಃ।
ಯೋ ಮೇ ಗಿರಸ್ತುವಿಜಾತಸ್ಯ ಪೂರ್ವೀರ್ಯುಕ್ತೇನಾಭಿ ತ್ರ್ಯರುಣೋ ಗೃಣಾತಿ ॥ ೩ ॥

॥ ಪದಪಾಠಃ ॥

ಏವ । ತೇ । ಅಗ್ನೇ । ಸುಽಮತಿಂ । ಚಕಾನಃ । ನವಿಷ್ಠಾಯ । ನವಮಂ । ತ್ರಸದಸ್ಯುಃ ।
ಯಃ । ಮೇ । ಗಿರಃ । ತುವಿಽಜಾತಸ್ಯ । ಪೂರ್ವೀಃ । ಯುಕ್ತೇನ । ಅಭಿ । ತ್ರಿಽಅರುಣಃ । ಗೃಣಾತಿ ॥೩॥

॥ ಸಾಯಣಭಾಷ್ಯಂ ॥

**ಯಸ್ತ್ರ್ಯರುಣಸ್ತುವಿಜಾತಸ್ಯ ಬಹ್ವಪತ್ಯಸ್ಯ ಮೇ ಪೂರ್ವೀರ್ಬಹ್ವೀರ್ಗಿರಃ ಸ್ತುತೀಃ ಶ್ರುತ್ವಾ ಪ್ರೀತಃ ಸನ್ ಯುಕ್ತೇನಾಭಿಯುಕ್ತೇನ ಮನಸಾಭಿ ಗೃಣಾತಿ ಇದಂ ಗೃಹಾಣೇದಂ ಗೃಹಾಣೇತಿ ತಥಾ ಮಾಂ ಬ್ರವೀತಿ ಏವ್ಮೇವಂ ಹೇ ಅಗ್ನೇ ನವಿಷ್ಠಾಯಾತ್ಯಂತಂ ಸ್ತುತ್ಯಾಯ ತೇ ತುಭ್ಯಂ ನವಮಂ ನವತಮಾಂ ಸುಮತಿಂ ಸ್ತುತಿಂ ಚಕಾನಃ ಕಾಮಯಮಾನಸ್ತ್ರಸದಸ್ಯುರಪೀದಂ ಗೃಹಾಣೇದಂ ಗೃಹಾಣೇತಿ ಮಾಂ ಪ್ರಾರ್ಥಿತವಾನ್ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಯಃ ತ್ರ್ಯರುಣಃ**—ಯಾವ ತ್ರ್ಯರುಣನು । **ತುವಿಜಾತಸ್ಯ**—ಅನೇಕ ಪುತ್ರಯುಕ್ತನಾದ । **ಮೇ**—ನನ್ನಿಂದ ನಿರ್ಮಿತವಾದವೂ । **ಪೂರ್ವೀಃ**—ಅನೇಕವಾದವೂ । **ಗಿರಃ**—(ನಿನ್ನನ್ನು ಪ್ರಶಂಸಿಸುವುವೂ) ಆದ ಸ್ತುತಿಗಳಿಂದ (ತೃಪ್ತನಾಗಿ) । **ಯುಕ್ತೇನ**—ಭಕ್ತಿಯುತವಾದ ಮನಸ್ಸಿನಿಂದ । **ಅಭಿ ಗೃಣಾತಿ**—(ಈ ದಾನಗಳನ್ನು ಸ್ವೀಕರಿಸು) ಎಂದು ಹೇಳುವನೋ । **ಏವ**—ಅದೇ ರೀತಿಯಲ್ಲಿಯೇ । **ನವಿಷ್ಠಾಯ**—ಅತಿಶಯವಾದ ಪ್ರಶಂಸೆಗೆ ಅರ್ಹನಾದ । **ತೇ**—ನಿನ್ನನ್ನುದ್ದೇಶಿಸಿ (ನನ್ನಿಂದ) । **ನವಮಃ**—ನೂತನವಾಗಿ ನಿರ್ಮಿಸಿದ। **ಸುಮತಿಂ**—ಉತ್ತಮವಾದ ಸ್ತುತಿಯನ್ನು । **ಚಕಾನಃ**—ಅಪೇಕ್ಷಿಸುತ್ತಾ । **ತ್ರಸದಸ್ಯುಃ**—ತ್ರಸದಸ್ಯುವೂ ಕೂಡ (ಈ ದಾನಗಳನ್ನು ಪರಿಗ್ರಹಿಸು ಎಂದು ನನ್ನನ್ನು ಪ್ರಾರ್ಥಿಸಿದ್ದಾನೆ).

॥ ಭಾವಾರ್ಥ ॥

ಎಲೈ ಅಗ್ನಿಯೇ, ತ್ರ್ಯರುಣನಿಗೆ ನಿನ್ನ ಅನುಗ್ರಹವು ಲಭಿಸಬೇಕೆಂದು ನಿನ್ನನ್ನುದ್ದೇಶಿಸಿ ನಿರ್ಮಿಸಿ ಪಠಿಸಿದ ಉತ್ತಮವಾದ ಸ್ತುತಿಗಳಿಂದ ಸಂತುಷ್ಟನಾಗಿ ಅನೇಕ ಪುತ್ರಯುಕ್ತನಾದ ನನಗೆ ಅತ್ಯುತ್ತಮವಾದ ದಾನಗಳನ್ನುಯಾವ ರೀತಿ ಭಕ್ತಿಪೂರ್ವಕವಾಗಿ ಕೊಟ್ಟನೋ ಅದೇ ರೀತಿ ತ್ರಸದಸ್ಯುವೂ ಸಹ ತನಗೂ ನಿನ್ನ ಅನುಗ್ರಹಸಂಪಾದನೆಗಾಗಿ ನಿನ್ನನ್ನುದ್ದೇಶಿಸಿ ನಾನು ಉತ್ತಮವಾದ ಸ್ತುತಿಯನ್ನು ನಿರ್ಮಿಸಬೇಕೆಂಬ ಅಪೇಕ್ಷೆಯಿಂದ ಉತ್ತಮವಾದ ದಾನಗಳನ್ನು ಪರಿಗ್ರಹಿಸಬೇಕೆಂದು ನನ್ನನ್ನು ಪ್ರಾರ್ಥಿಸಿದ್ದಾನೆ

English Translation

As Tryaruna, pleased by the eulogies of me who have many children, presses with earnest (mind, gifts upon me), so does Trasadasyu, desirous, Agni, of your valued favour through your exceeding praise

॥ ಸಂಹಿತಾಪಾಠಃ ॥

ಯೋ ಮ ಇತಿ ಪ್ರವೋಚತ್ಯಶ್ವಮೇಧಾಯ ಸೂರಯೇ ।
ದದದೃಚಾ ಸನಿಂ ಯತೇ ದದನ್ಮೇಧಾಮೃತಾಯತೇ ॥ ೪ ॥

॥ ಪದಪಾಠಃ ॥

ಯಃ । ಮೇ । ಇತಿ । ಪ್ರಽವೋಚತಿ । ಅಶ್ವಽಮೇಧಾಯ । ಸೂರಯೇ ।
ದದತ್ । ಋಚಾ । ಸನಿಂ । ಯತೇ । ದದತ್ । ಮೇಧಾಂ । ಋತಽಯತೇ ॥ ೪ ॥

॥ ಸಾಯಣಭಾಷ್ಯಂ ॥

ಯೋ ಭಿಕ್ಷಮಾಣೋಽರ್ಥೀ ಸೂರಯೇ ಪ್ರೇರಕಾಯ ಧನಾನಾಂ ದಾತ್ರೇ ವಾಸ್ಮಾ ಅಶ್ವಮೇಧಾಯ ರಾಜರ್ಷಯೇ ಮೇ ಮಹ್ಯಂ ದೇಹೀತಿ ಪ್ರವೋಚತಿ ಪ್ರಬ್ರವೀತಿ । ಯೋಽಶ್ವಮೇಧಂ ಧನಾನಿ ಭಿಕ್ಷತ ಇತ್ಯರ್ಥಃ । ಋಚಾಗ್ನೇಃ ಸ್ತೋತ್ರೇಣ ಸಹ ಯತ ಆತ್ಮನಃ ಸಮೀಪಂ ಗಚ್ಛತೇ ತಸ್ಮಾ ಅರ್ಥಿನೇಽಶ್ವಮೇಧಃ ಸನಿಂ ಧನಂ ದದತ್ । ದದಾತಿ । ಹೇ ಅಗ್ನೇ ಋತಾಯತೇ ಯಜ್ಞಮಿಚ್ಛತೇ ತಸ್ಮಾ ಅಶ್ವಮೇಧಾಯ ಮೇಧಾಂ ಯಜ್ಞವಿಷಯಾಂ ಪ್ರಜ್ಞಾಂ ದದತ್ । ದೇಹಿ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಯಃ**—ಯಾವ ಅರ್ಥಿಯು । **ಸೂರಯೇ**—ಧನದಾತೃವಾದ । **ಅಶ್ವಮೇಧಾಯ**—ಅಶ್ವಮೇಧನೆಂಬ ರಾಜರ್ಷಿಯನ್ನು ಕುರಿತು । **ಮೇ**—ನನಗೆ (ಧನವನ್ನು ಕೊಡು) । **ಇತಿ**—ಎಂಬುದಾಗಿ । **ಪ್ರವೋಚತಿ**—ಪ್ರಾರ್ಥಿಸುವನೋ ಅಂತಹ । **ಋಚಾ**—(ಅಗ್ನಿಯನ್ನು ಪ್ರಶಂಸಿಸುವ) ಸ್ತುತಿಯಿಂದ ಕೂಡಿ । **ಯತೇ**—ಅವನಲ್ಲಿ ಹೋಗುವವನಿಗೆ । **ಸನಿಂ**—ಧನವನ್ನು । **ದದತ್**—ಕೊಡುತ್ತಾನೆ । **ಋತಾಯತೇ**—ಯಜ್ಞೇಚ್ಛುವಾದ ಆ ಅಶ್ವಮೇಧನಿಗೆ । **ಮೇಧಾಂ**—ಸುದ್ಬುದ್ಧಿಯನ್ನು । **ದದತ್**—ಕೊಡು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ಅರ್ಥಿಯು ಧನದಾತೃವಾದ ಅಶ್ವಮೇಧನೆಂಬ ರಾಜರ್ಷಿಯನ್ನು ಸಮೀಪಿಸಿ ಅವನಿಗೆ ನಿನ್ನ ಅನುಗ್ರಹಸಾಧಕವೂ, ನಿನ್ನನ್ನು ಪ್ರಶಂಸಿಸುವುದೂ ಆದ ಸ್ತುತಿಯಿಂದ ಕೂಡಿಕೊಂಡು ಧನವನ್ನು ಯಾಚಿಸುವನೋ ಅಂತಹ ಪುರುಷನಿಗೆ ಆ ಸ್ತುತಿಯಿಂದ ತನಗೊಳ್ಳೆಯದುಂಟಾಗುವುದೆಂಬ ಶ್ರದ್ಧೆಯಿಂದ ಧನವನ್ನು ದಾನ ಮಾಡುತ್ತಾನೆ ಯಜ್ಞೇಚ್ಛುವಾದ ಆ ಅಶ್ವಮೇಧನಿಗೆ ಸದ್ಬುದ್ಧಿಯನ್ನು ಕೊಡು

## English Translation

When Ashwamedha gives to him who solicits of him as a benefactor, saying (bestow wealth) upon me, and comes (to him) with a verse (in your praise), do you, Agni, grant intelligence to (the Raja) who wishes to offer sacrifice (to you).

॥ ಸಂಹಿತಾಪಾಠಃ ॥

ಯಸ್ಯ ಮಾ ಪರುಷಾಃ ಶತಮುದ್ಧರ್ಷಯಂತ್ಯುಕ್ಷಣಃ ।

ಅಶ್ವಮೇಧಸ್ಯ ದಾನಾಃ ಸೋಮಾ ಇವ ತ್ರ್ಯಾಶಿರಃ ॥ ೫ ॥

॥ ಪದಪಾಠಃ ॥

ಯಸ್ಯ । ಮಾ । ಪರುಷಾಃ । ಶತಂ । ಉತ್ಽಹರ್ಷಯಂತಿ । ಉಕ್ಷಣಃ ।

ಅಶ್ವಽಮೇಧಸ್ಯ । ದಾನಾಃ । ಸೋಮಾಃಽಇವ । ತ್ರಿಽಆಶಿರಃ ॥ ೫ ॥

॥ ಸಾಯಣಭಾಷ್ಯಂ ॥

ಯಸ್ಯ ಯೇನಾಶ್ವಮೇಧಸ್ಯಾಶ್ವಮೇಧೇನ ದಾನಾ ದತ್ತಾಃ ಪರುಷಾಃ ಕಾಮಾನಾಂ ಪೂರಕಾಃ ಶತಮುಕ್ಷಣ ಉಕ್ಷಾಣೋ ಬಲೀವರ್ದಾ ಮಾ ಮಾಮುದ್ಧರ್ಷಯಂತಿ ಉತ್ಕರ್ಷೇಣ ಹರ್ಷಯಂತಿ ಹೇ ಅಗ್ನೇ ತ ಉಕ್ಷಾಣಸ್ತ್ರ್ಯಾಶಿರಃ । ದಧಿಸಕ್ತುಪಯೋರೂಪಾಸ್ತಿಸ್ರ ಆಶಿರೋಽಧಿಶ್ರಯಣಸಾಧನಭೂತಾ ಯೇಷಾಂ ತೇ ತ್ರ್ಯಾಶಿರಃ । ಸೋಮಾ ಇವ ತವ ಪ್ರೀಣನಾಯ ಭವಂತು ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಯಸ್ಯ**—ಯಾವ । **ಅಶ್ವಮೇಧಸ್ಯ**—ಅಶ್ವಮೇಧನಿಂದ । **ದಾನಾಃ**—ದತ್ತವಾದವೂ । **ಪರುಷಾಃ**—ಕಾಮಪೂರಕವೂ ಆದ । **ಶತಂ ಉಕ್ಷಣಃ**—ನೂರು ಎತ್ತುಗಳೂ । **ಮಾ**—ನನ್ನನ್ನು । **ತ್ರ್ಯಾಶಿರಃ**—ದಧ್ಯಾದ್ಯಾಶಿರತ್ರಯರೂಪವಾದ । **ಸೋಮಾ ಇವ**—ಸೋಮರಸಗಳಂತೆ । **ಉದ್ಧರ್ಷಯಂತಿ**—ತೃಪ್ತಿಪಡಿಸುವುವೋ (ಅವು ನಿನ್ನ ತೃಪ್ತಿಗೂ ಸಾಧಕವಾಗಿರಲಿ).

॥ ಭಾವಾರ್ಥ ॥

ಎಲೈ ಅಗ್ನಿಯೇ, ಇದೇ ಅಶ್ವಮೇಧನಿಂದ ದತ್ತವಾದವೂ, ಕಾಮಪೂರಕವಾದವೂ ಆದ ನೂರು ಎತ್ತುಗಳೂ ಸಹ ಯಾವ ರೀತಿ ದಧ್ಯಾದ್ಯಾಶಿರತ್ರಯರೂಪವಾದ ಸೋಮರಸಗಳಂತೆ ನನ್ನನ್ನು ತೃಪ್ತಿಪಡಿಸುವುವೋ ಅದೇ ರೀತಿ ಅನನಿಂದ ದತ್ತವಾದ ಹವಿಸ್ಸುಗಳೂ ಸಹ ನಿನಗೆ ತೃಪ್ತಿಯನ್ನುಂಟುಮಾಡಲಿ.

## English Translation

Whose hundred robust oxen yield me delight, as the triple-mixed Soma, the offering of Ashwamedha (gratifies you).

॥ ಸಂಹಿತಾಪಾಠಃ ॥

ಇಂದ್ರಾ᳚ಗ್ನೀ ಶ॒ತ॒ದಾವ್ನ್ಯಶ್ವ॑ಮೇಧೇ ಸು॒ವೀರ್ಯ᳚ಂ ।
ಕ್ಷ॒ತ್ರಂ ಧಾ᳚ರಯತಂ ಬೃ॒ಹದ್ದಿ॒ವಿ ಸೂರ್ಯ᳚ಮಿವಾ॒ಜರಂ᳚ ॥ ೬ ॥

॥ ಪದಪಾಠಃ ॥

ಇಂದ್ರಾ᳚ಗ್ನೀ ಇತಿ᳚ । ಶ॒ತ॒ದಾವ್ನಿ᳚ । ಅಶ್ವ᳚ಽಮೇಧೇ । ಸು॒ಽವೀರ್ಯ᳚ಂ ।
ಕ್ಷ॒ತ್ರಂ । ಧಾ॒ರ॒ಯ॒ತ॒ಂ । ಬೃ॒ಹತ್ । ದಿ॒ವಿ । ಸೂರ್ಯ᳚ಂಽಇವ । ಅ॒ಜರಂ᳚ ॥ ೬ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರಾಗ್ನೀ ಶತದಾವ್ನಿ । ಶತಮುಪರಿಮಿತಮರ್ಥಿಭ್ಯೋ ಧನಂ ದದಾತೀತಿ ಶತದಾವಾ । ತಸ್ಮಿನ್ನಶ್ವಮೇಧೇ ರಾಜರ್ಷೌ ಸುವೀರ್ಯಂ ಶೋಭನವೀರ್ಯಸಹಿತಂ ಬೃಹನ್ಮಹದಜರಂ ಜರಾರಹಿತಂ ಕ್ಷತ್ರಂ ಧನಂ ಧಾರಯತಂ । ನಿಧಾರಯತಂ । ಕಥಮಿವ । ದಿವ್ಯಂತರಿಕ್ಷೇ ಸೂರ್ಯಮಿವ ॥**

॥ ಪ್ರತಿಪದಾರ್ಥ ॥

**ಇಂದ್ರಾಗ್ನೀ**—ಎಲೈ ಇಂದ್ರಾಗ್ನಿದೇವತೆಗಳೇ । **ಶತದಾವ್ನಿ**- ಅಪರಿಮಿತವಾಗಿ ಧನವನ್ನು ದಾನಮಾಡುವ **ಅಶ್ವಮೇಧೇ**—ಅಶ್ವಮೇಧನೆಂಬ ರಾಜರ್ಷಿಯಲ್ಲಿ । **ಸುವೀರ್ಯಂ**—ಉತ್ತಮವಾದ ಶಕ್ತಿಯಿಂದ ಕೂಡಿದುದೂ । **ಬೃಹತ್**—ಪ್ರಭೂತವಾದುದೂ । **ದಿವಿ**—ಅಂತರಿಕ್ಷಸ್ಥನಾದ । **ಸೂರ್ಯಂ ಇವ**—ಸೂರ್ಯನಂತೆ ಪ್ರಕಾಶಮಾನ ವಾದುದೂ । ಮತ್ತು **ಅಜರಂ**—ಕ್ಷಯರಹಿತವಾದುದೂ ಆದ । **ಕ್ಷತ್ರಂ**—ಧನವನ್ನು । **ಧಾರಯತಂ**—ತುಂಬಿರಿ.

॥ ಭಾವಾರ್ಥ ॥

ಎಲೈ ಇಂದ್ರಾಗ್ನಿಗಳೇ, ಅಪರಿಮಿತವಾಗಿ ಧನವನ್ನು ದಾನಮಾಡುವ ಅಶ್ವಮೇಧನೆಂಬ ರಾಜರ್ಷಿಯಲ್ಲಿ ಉತ್ತಮವಾದ ಶಕ್ತಿಯಿಂದ ಕೂಡಿದುದೂ, ಪ್ರಭೂತವಾದುದೂ, ಅಂತರಿಕ್ಷಸ್ಥನಾದ ಸೂರ್ಯನಂತೆ ಪ್ರಕಾಶಮಾನ ವಾದುದೂ ಮತ್ತು ಶಾಶ್ವತವಾದುದೂ ಆದ ಧನವನ್ನು ತುಂಬಿರಿ

## English Translation

Indra and Agni, bestow upon the munificent Ashwamedha infinite wealth with excellent posterity, undecaying as the sun in heaven.

## ಇಪ್ಪತ್ತೆಂಟನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಸಮಿದ್ಧೋ ಅಗ್ನಿರಿತಿ ಷಡೃಚಂ ಚತುರ್ದಶಂ ಸೂಕ್ತಂ । ಅತ್ರೇಯಮನುಕ್ರಮಣಿಕಾ । ಸಮಿದ್ಧೋ ವಿಶ್ವವಾರಾತ್ರೇಯೀ ತ್ರಿಷ್ಟುಬ್ಜಗತೀ ತ್ರಿಷ್ಟುಬನುಷ್ಟುಬ್ಗಾಯತ್ರ್ಯಾವಿತಿ । ಅತ್ರಿಗೋತ್ರೋತ್ಪನ್ನಾ ವಿಶ್ವವಾರಾನಾಮಿಕಾಸ್ಯ ಸೂಕ್ತಸ್ಯ ಋಷಿಃ । ಆದ್ಯಾತೃತೀಯೇ ತ್ರಿಷ್ಟುಭೌ ದ್ವಿತೀಯಾ ಜಗತೀ ಚತುರ್ಥ್ಯನುಷ್ಟುಪ್ ಅಂತ್ಯೇ ಗಾಯತ್ರ್ಯೌ । ಅಗ್ನಿರ್ದೇವತಾ ॥ ಸೂಕ್ತವಿನಿಯೋಗೋ ಲೈಂಗಿಕಃ ॥**

ಅನುವಾದವು—**ಸಮಿದ್ಧೋ ಅಗ್ನಿಃ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹದಿನಾಲ್ಕನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು ಅನುಕ್ರಮಣಿಕೆಯಲ್ಲಿ—**ಸಮಿದ್ಧೋ ವಿಶ್ವವಾರಾತ್ರೇಯೀ ತ್ರಿಷ್ಟುಬ್ಜಗತೀ ತ್ರಿಷ್ಟುಬನುಷ್ಟುಬ್ಗಾಯತ್ರೌ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಅತ್ರಿಗೋತ್ರೋತ್ಪನ್ನಳಾದ ವಿಶ್ವವಾರಾ ಎಂಬ ಸ್ತ್ರೀಯು ದೇವತೆಯು, ಅಗ್ನಿಯು ದೇವತೆಯು, ಈ ಸೂಕ್ತದ ಮೊದಲಿನ ಮತ್ತು ಮೂರನೆಯ ಋಕ್ಕುಗಳು ತ್ರಿಷ್ಟುಪ್‌ಛಂದಸ್ಕವು. ಎರಡನೆಯ ಋಕ್ಕು ಜಗತೀಛಂದಸ್ಕವು ನಾಲ್ಕನೆಯ ಋಕ್ಕು ಅನುಷ್ಟುಪ್ ಛಂದಸ್ಕವು ಕೊನೆಯ ಎರಡು ಋಕ್ಕುಗಳು ಗಾಯತ್ರೀಛಂದಸ್ಕವು. ಸೂಕ್ತವಿನಿಯೋಗವು ಲೈಂಗಿಕವು.

## ಸೂಕ್ತ—೨೮

॥ ಮಂಡಲ—೫ ॥ ಅನುವಾಕ—೨ ॥ ಸೂಕ್ತ—೨೮ ॥
॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೨೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬
ಋಷಿಃ—ವಿಶ್ವವಾರಾತ್ರೇಯೀ ॥
ದೇವತಾ—ಅಗ್ನಿಃ ॥
ಛಂದಃ—೧-೩. ತ್ರಿಷ್ಟುಪ್ । ೨. ಜಗತೀ । ೪. ಅನುಷ್ಟುಪ್ । ೫-೬ ಗಾಯತ್ರೀ॥

॥ ಸಂಹಿತಾಪಾಠಃ ॥

ಸಮಿದ್ಧೋ ಅಗ್ನಿರ್ದಿವಿ ಶೋಚಿರಶ್ರೇತ್ಪ್ರತ್ಯಙ್ಙುಷಸಮುರ್ವಿಯಾ ವಿ ಭಾತಿ ।
ಏತಿ ಪ್ರಾಚೀ ವಿಶ್ವವಾರಾ ನಮೋಭಿರ್ದೇವಾँ ಈಳಾನಾ ಹವಿಷಾ
ಘೃತಾಚೀ ॥ ೧ ॥

॥ ಪದಪಾಠಃ ॥

ಸಂಽಇದ್ಧಃ । ಅಗ್ನಿಃ । ದಿವಿ । ಶೋಚಿಃ । ಅಶ್ರೇತ್ । ಪ್ರತ್ಯಙ್ । ಉಷಸಂ । ಉರ್ವಿಯಾ । ವಿ । ಭಾತಿ ।
ಏತಿ । ಪ್ರಾಚೀ । ವಿಶ್ವಽವಾರಾ । ನಮಃಽಭಿಃ । ದೇವಾನ್ । ಈಳಾನಾ । ಹವಿಷಾ । ಘೃತಾಚೀ ॥ ೧ ॥

॥ ಸಾಯಣಭಾಷ್ಯಂ ॥

ಸಮಿದ್ಧಃ ಸಮ್ಯಗ್ದೀಪ್ತೋಽಗ್ನಿರ್ದಿವಿ ದ್ಯೋತಮಾನೇಽಂತರಿಕ್ಷೇ ಶೋಚಿಸ್ತೇಜೋಽಶ್ರೇತ್ । ಶ್ರಯತಿ । ತಥೋಷಸಂ ಪ್ರತ್ಯಙ್ ಉಷಸಮಭಿಮುಖಃ ಸನ್ ಉರ್ವಿಯೋರು ವಿಸ್ತೀರ್ಣಂ ವಿ ಭಾತಿ । ವಿಶೇಷೇಣ ಭ್ರಾಜತೇ । ನಮೋಭಿಃ ಸ್ತೋತ್ರೈರ್ದೇವಾನಿಂದ್ರಾದೀನೀಳಾನಾ ಸ್ತುವತೀ ಹವಿಷಾ ಪುರೋಡಾಶಾದಿಲಕ್ಷಣೇನ ಯುಕ್ತಯಾ ಘೃತಾಚೀ ಘೃತಾಚ್ಯಾ ಸ್ರುಚಾ ಸಹಿತಾ ವಿಶ್ವವಾರಾ ಸರ್ವಮಪಿ ಪಾಪರೂಪಂ ಶತ್ರುಂ ವಾರಯಿತ್ರ್ಯೇತನ್ನಾಮಿಕಾ ಪ್ರಾಚೀ ಪ್ರಾಙ್ಮುಖೀ ಸತ್ಯೇತಿ । ಏವಂಭೂತಮಗ್ನಿಂ ಪ್ರತಿಗಚ್ಛತಿ ॥

॥ ಪ್ರತಿಪದಾರ್ಥ ॥

**ಸಮಿದ್ಧಃ**—ಪೂರ್ಣವಾಗಿ ಪ್ರಜ್ವಲಿತನಾದ । **ಅಗ್ನಿಃ**—ಅಗ್ನಿಯು । **ದಿವಿ**—ಪ್ರಕಾಶಮಾನವಾದ ಅಂತರಿಕ್ಷದಲ್ಲಿ । **ಶೋಚಿಃ**—ತನ್ನ ತೇಜಸ್ಸನ್ನು । **ಅಶ್ರೇತ್**—ಹರಡುತ್ತಾನೆ । **ಉಷಸಂ ಪ್ರತ್ಯಙ್**—ಉಷಸ್ಸಿಗೆ ಅಭಿಮುಖವಾಗಿದ್ದು । **ಉರ್ವಿಯಾ**—ವಿಸ್ತೃತವಾಗಿ । **ವಿ ಭಾತಿ**- ಪ್ರಕಾಶಿಸುತ್ತಾನೆ । **ನಮೋಭಿಃ**—ಸ್ತುತಿಗಳಿಂದ । **ದೇವಾನ್**—ಇಂದ್ರಾದಿದೇವತೆಗಳನ್ನು । **ಈಳಾನಾ**—ಸ್ತುತಿಸುತ್ತಾ । **ಹವಿಷಾ**—ಹವಿಸ್ಸುಗಳಿಂದ ಕೂಡಿದ । **ಘೃತಾಚೀ**—ಸ್ರುಕ್ಪಾತ್ರೆಯನ್ನು ಹಿಡಿದವಳಾಗಿ । **ವಿಶ್ವವಾರಾ**—ವಿಶ್ವವಾರಾ ಎಂಬ ಋಷಿಯು । **ಪ್ರಾಚೀ**—ಪ್ರಾಙ್ಮುಖಳಾಗಿ (ಅಗ್ನಿಗೆ ಅಭಿಮುಖಳಾಗಿ) । **ಏತಿ**—ಅಗ್ನಿಯನ್ನು ಸಮೀಪಿಸುತ್ತಾಳೆ.

॥ ಭಾವಾರ್ಥ ॥

ಪೂರ್ಣವಾಗಿ ಪ್ರಜ್ವಲಿತನಾದ ಅಗ್ನಿಯು ಪ್ರಕಾಶಮಾನವಾದ ಅಂತರಿಕ್ಷದಲ್ಲಿ ತನ್ನ ತೇಜಸ್ಸನ್ನು ಹರಡುತ್ತಾನೆ ಉಷಸ್ಸಿಗೆ ಅಭಿಮುಖವಾಗಿದ್ದು ವಿಸ್ತೃತವಾಗಿ ಪ್ರಕಾಶಿಸುತ್ತಾನೆ. ಸ್ತುತಿಗಳಿಂದ ಇಂದ್ರಾದಿದೇವತೆಗಳನ್ನು ಸ್ತುತಿಸುತ್ತಾ ಹವಿಸ್ಸುಗಳಿಂದ ಕೂಡಿದ ಸ್ರುಕ್ಪಾತ್ರೆಯನ್ನು ಹಿಡಿದವಳಾಗಿ ವಿಶ್ವವಾರಾ ಎಂಬ ಋಷಿಯು ಅಗ್ನಿಗೆ ಅಭಿಮುಖಳಾಗಿ ಹೋಗುತ್ತಾಳೆ

## English Translation

Agni, when kindled, spreads lustre through the firmament, and shines in widely the presence of the dawn: Vishwavara, facing the east, glorifying the gods with praises, and bearing the ladle with the oblation, proceeds (to the sacred fire).

---

॥ ಸಂಹಿತಾಪಾಠಃ ॥

ಸಮಿಧ್ಯಮಾನೋ ಅಮೃತಸ್ಯ ರಾಜಸಿ ಹವಿಷ್ಕೃಣ್ವಂತಂ ಸಚಸೇ ಸ್ವಸ್ತಯೇ ।
ವಿಶ್ವಂ ಸ ಧತ್ತೇ ದ್ರವಿಣಂ ಯಮಿನ್ವಸ್ಯಾತಿಥ್ಯಮಗ್ನೇ ನಿ ಚ ಧತ್ತ ಇತ್ಪುರಃ॥

॥ ಪದಪಾಠಃ ॥

ಸಂಽಇಧ್ಯಮಾನಃ । ಅಮೃತಸ್ಯ । ರಾಜಸಿ । ಹವಿಃ । ಕೃಣ್ವಂತಂ । ಸಚಸೇ । ಸ್ವಸ್ತಯೇ ।

ವಿಶ್ವಂ । ಸಃ । ಧತ್ತೇ । ದ್ರವಿಣಂ । ಯಂ । ಇನ್ವಸಿ । ಆತಿಥ್ಯಂ । ಅಗ್ನೇ । ನಿ । ಚ । ಧತ್ತೇ । ಇತ್ । ಪುರಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಸಮಿಧ್ಯಮಾನಃ ಸಮ್ಯಗಿಧ್ಯಮಾನಸ್ತ್ವಮಮೃತಸ್ಯೋದಕಸ್ಯ ರಾಜಸಿ । ಈಶಿಷೇ । ತಥಾ ಹವಿಷ್ಕೃಣ್ವಂತಂ ಪುರೋಡಾಶಾದಿಹವಿಷ್ಕರ್ತಾರಂ ಯಜಮಾನಂ ಸ್ವಸ್ತಯೇಽವಿನಾಶಾಯ ಸಚಸೇ। ಸೇವಸೇ । ಕಿಂಚ ಯಂ ಯಜಮಾನಮಿನ್ವಸಿ ಗಚ್ಛಸಿ ಸ ಯಜಮಾನೋ ವಿಶ್ವಂ ಸಮಸ್ತಂ ದ್ರವಿಣಂ ಪಶ್ವಾದಿಲಕ್ಷಣಂ ಧನಂ ಧತ್ತೇ । ಧಾರಯತಿ । ಅಪಿ ಚ ಹೇ ಅಗ್ನೇ ಆತಿಥ್ಯಮತಿಥಿರೂಪಸ್ಯ ತವ ಯೋಗ್ಯಂ ಹವಿಃ ಪುರ ಇತ್ ತವ ಪುರಸ್ತಾದೇವ ನಿ ಧತ್ತೇ ಚ । ಸ್ಥಾಪಯತಿ ಚ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಸಮಿಧ್ಯಮಾನಃ**—ನೀನು ಪ್ರಜ್ವಲಿತನಾದಾಗ । **ಅಮೃತಸ್ಯ**—ಉದಕಕ್ಕ । ರಾಜಸಿ-ಪ್ರಭುವಾಗಿದ್ದೀಯೆ । **ಹವಿಷ್ಕೃಣ್ವಂತಂ**—ಹವಿಸ್ಸನ್ನರ್ಪಿಸುವ ಯಜಮಾನನನ್ನು । **ಸ್ವಸ್ತಯೇ**—ಅವನಿಗೆ ಕಲ್ಯಾಣವನ್ನುಂಟುಮಾಡಲು । **ಸಚಸೇ**—ಸೇವಿಸುತ್ತೀಯೆ । **ಯಂ**—ಯಾವ ಯಜಮಾನನನ್ನು । ಇನ್ವಸಿ—ಅನುಗ್ರಹಿಸಿ ಸಮೀಪಿಸುವೆಯೋ । **ಸಃ**—ಆ ಯಜಮಾನನು । **ವಿಶ್ವಂ**—ಸಮಸ್ತವಾದ । **ದ್ರವಿಣಂ**—ಧನವನ್ನೂ । **ಧತ್ತೇ**—ಹೊಂದುತ್ತಾನೆ । **ಅಗ್ನೇ**—ಎಲೈ ಅಗ್ನಿಯೇ । **ಆತಿಥ್ಯಂ**—ಅತಿಥಿಯಾದ ನಿನ್ನ ಪೂಜೆಗೆ ಯೋಗ್ಯವಾದ ಹವಿಸ್ಸನ್ನು । **ಪುರ ಇತ್**—ನಿನ್ನ ಮುಂಭಾಗದಲ್ಲೇ । **ನಿ ಧತ್ತೇ**—ಸ್ಥಾಪಿಸುತ್ತಾನೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಪ್ರಜ್ವಲಿತನಾದಾಗ ಉದಕಕ್ಕೆಲ್ಲಾ ಪ್ರಭುವಾಗಿದ್ದೀಯೆ. ಹವಿಸ್ಸನ್ನರ್ಪಿಸುವ ಯಜಮಾನನನ್ನು ಆವನಿಗೆ ಕಲ್ಯಾಣವುಂಟಾಗಲೆಂದು ಸೇವಿಸುತ್ತೀಯೆ ಯಾವ ಯಜಮಾನನನ್ನು ನೀನು ಅನುಗ್ರಹಿಸಿ ಸೇವಿಸುವೆಯೋ ಅವನು ಸಮಸ್ತವಾದ ಧನವನ್ನೂ ಹೊಂದುತ್ತಾನೆ. ಎಲೈ ಅಗ್ನಿಯೇ, ಅವನು ಅತಿಥಿಯಾದ ನಿನ್ನ ಪೂಜೆಗೆ ಯೋಗ್ಯವಾದ ಹವಿಸ್ಸನ್ನು ನಿನ್ನ ಮುಂಭಾಗದಲ್ಲೇ ಸ್ಥಾಪಿಸುತ್ತಾನೆ.

English Translation

When about to be kindled, Agni, you rule over ambrosial (water): you are present with the offerer of the oblation for his welfare: he to whom you repair acquires universal wealth; he places before you, Agni, the dues of hospitality

॥ ಸಂಹಿತಾಪಾಠಃ ॥

ಅಗ್ನೇ ಶರ್ಧ ಮಹತೇ ಸೌಭಗಾಯ ತವ ದ್ಯುಮ್ನಾನ್ಯುತ್ತಮಾನಿ ಸಂತು ।
ಸಂ ಜಾಸ್ಪತ್ಯಂ ಸುಯಮಮಾ ಕೃಣುಷ್ವ ಶತ್ರೂಯತಾಮಭಿ ತಿಷ್ಠಾ ಮಹಾಂಸಿ ॥ ೩ ॥

॥ ಪದಪಾಠಃ ॥

ಅಗ್ನೇ । ಶರ್ಧ । ಮಹತೇ । ಸೌಭಗಾಯ । ತವ । ದ್ಯುಮ್ನಾನಿ । ಉತ್ಽತಮಾನಿ । ಸಂತು ।
ಸಂ । ಜಾಃಪತ್ಯಂ । ಸುಽಯಮಂ । ಆ । ಕೃಣುಷ್ವ । ಶತ್ರುಽಯತಾಂ । ಅಭಿ । ತಿಷ್ಠ । ಮಹಾಂಸಿ ॥೩॥

॥ ಸಾಯಣಭಾಷ್ಯಂ ॥

ಪವಿತ್ರೇಷ್ಟ್ಯಾಂ ಸ್ವಿಷ್ಟಕೃತೋಽಗ್ನೇ ಶರ್ಧೇತಿ ಯಾಜ್ಯಾ । ಸೂತ್ರ್ಯತೇ ಹಿ । ಜುಷ್ಟೋ ದಮೂನಾ ಅಗ್ನೇ ಶರ್ಧ ಮಹತೇ ಸೌಭಗಾಯೇತಿ ಸಂಯಾಜ್ಯೇ । ಆ. ೨. ೧೨ । ಇತಿ ॥ ಸಾಕಮೇಧೇಷು ಮರುದ್ಭ್ಯಃ ಕ್ರೀಡಿಭ್ಯಃ ಪುರೋಡಾಶಂ ಸಪ್ತಕಪಾಲಮಿತ್ಯತ್ರಾಪ್ಯೇಷೈವ ಸ್ವಿಷ್ಟಕೃತೋ ಯಾಜ್ಯಾ । ಸೂತ್ರಿತಂ ಚ । ಜುಷ್ಟೋ ದಮೂನಾ ಅಗ್ನೇ ಶರ್ಧ ಮಹತೇ ಸೌಭಗಾಯೇತಿ ಸಂಯಾಜ್ಯೇ । ಆ. ೨. ೧೮. । ಇತಿ ॥

**ಹೇ ಅಗ್ನೇ ತ್ವಂ ಮಹತೇ ಪ್ರಭೂತಾಯ ಸೌಭಗಾಯಾಸ್ಮಾಕಂ ಶೋಭನಧನತ್ವಾಯ ಶರ್ಧ । ಶತ್ರೂನ್ ಸಹಸ್ವ । ತಥಾ ತವ ಸಂಬಂಧೀನಿ ದ್ಯುಮ್ನಾನಿ ಧನಾನಿ ತೇಜಾಂಸಿ ವಾ ಉತ್ತಮಾನ್ಯುತ್ಕೃಷ್ಟಾನಿ ಸಂತು । ಭವಂತು । ಕಿಂಚ ಹೇ ಅಗ್ನೇ ಸಂ ಜಾಸ್ಪತ್ಯಂ । ಜಾ ಜಾಯಾ ಚ ಪತಿಶ್ಚ ಜಾಯಾಪತೀ । ತಯೋಃ ಕರ್ಮ ಜಾಸ್ಪತ್ಯಂ । ತತ್ಸುಯಮಂ ಸುಷ್ಠು ನಿಯಮನೋಪೇತಂ । ಅನ್ಯೋನ್ಯಸಂಶ್ಲಿಷ್ಟಮಿತ್ಯರ್ಥಃ । ಸಮಾ ಕೃಣುಷ್ವ । ಸಮ್ಯಕ್ಕುರುಷ್ವ । ಅಪಿ ಚ ಶತ್ರೂಯತಾಂ ಶತ್ರುಮಾತ್ಮನ ಇಚ್ಛತಾಂ ಸಪತ್ನಾನಾಂ ಮಹಾಂಸಿ ತೇಜಾಂಸ್ಯಭಿ ತಿಷ್ಠ । ಆಕ್ರಮಸ್ವ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಮಹತೇ**—ಅತ್ಯಧಿಕವಾದ । **ಸೌಭಗಾಯ**—ನಮಗೆ ಕಲ್ಯಾಣಾತ್ಮಕವಾದ ಸಂಪತ್ತು ಲಭಿಸುವುದಕ್ಕಾಗಿ । **ಶರ್ಧ**—ನಮ್ಮ ಶತ್ರುಗಳನ್ನು ನಿರೋಧಿಸು । **ತವ**—ನಿನಗೆ ಸಂಬಂಧಿಸಿದ । **ದ್ಯುಮ್ನಾನಿ**—ಧನಗಳು । **ಉತ್ತಮಾನಿ**—ಉತ್ಕೃಷ್ಟವಾದವಾಗಿ । **ಸಂತು**—ಇರಲಿ । **ಜಾಸ್ಪತ್ಯಂ**—ದಂಪತಿಗಳ ಅನ್ಯೋನ್ಯ ಸಂಬಂಧವನ್ನು ಸೂಚಿಸುವ ಉತ್ತಮ ಕರ್ಮಗಳನ್ನು । **ಸುಯಮಂ**—ಒಂದಕ್ಕೊಂದು ಸೇರಿಕೊಂಡು ಒಂದು ನಿಯಮನದಲ್ಲಿರುವಂತೆ । **ಸಂ ಆಕೃಣುಷ್ವ**—ಪರಿಷ್ಕರಿಸು । **ಶತ್ರೂಯತಾಂ**—ನಮಗೆ ಕೇಡನ್ನು ಬಯಸುವವರ । **ಮಹಾಂಸಿ**—ತೇಜಸ್ಸುಗಳನ್ನು । **ಅಭಿ ತಿಷ್ಠ**—ನಿರೋಧಿಸಿ ನಿಲ್ಲು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಮಗೆ ಕಲ್ಯಾಣಾತ್ಮಕವಾದ ಸಂಪತ್ತು ಅಧಿಕವಾಗಿ ಲಭಿಸುವುದಕ್ಕಾಗಿ ನಮ್ಮ ಶತ್ರುಗಳನ್ನು ನಿರೋಧಿಸಿ ನಿಲ್ಲು ನಿನಗೆ ಸಂಬಂಧಿಸಿದ ಧನಗಳು ಉತ್ಕೃಷ್ಟವಾದವಾಗಿ ಇರಲಿ ದಂಪತಿಗಳ ಅನ್ಯೋನ್ಯ ಸಂಬಂಧವನ್ನು ಸೂಚಿಸುವ ಉತ್ತಮ ಕರ್ಮಗಳನ್ನು ಒಂದಕ್ಕೊಂದು ಸೇರಿಕೊಂಡು ಅವು ಒಂದು ನಿಯಮನದಲ್ಲಿರುವಂತೆ ಪರಿಷ್ಕರಿಸಿಡು ನಮಗೆ ಕೇಡನ್ನು ಬಯಸುವವರ ತೇಜಸ್ಸುಗಳನ್ನು ತಡೆದು ಆಕ್ರಮಿಸು

## English Translation

Repress, Agni, (our foes to ensure our) exceeding prosperity : may your riches ever be excellent . preserve in concord the relation of man and wife, and overpower the energies of the hostile.

॥ ವಿಶೇಷವಿಷಯಗಳು ॥

ಪವಿತ್ರೇಷ್ಟಿಯಲ್ಲಿ ಸ್ವಿಷ್ಟಕೃದ್ಧೋಮಮಾಡುವಾಗ **ಅಗ್ನೇ ಶರ್ಧ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ–**ಜುಷ್ಟೋ ದಮೂನಾ ಅಗ್ನೇ ಶರ್ಧ ಮಹತೇ ಸೌಭಗಾಯೇತಿ ಸಂಯಾಜ್ಯೇ** ಎಂಬ ಸೂತ್ರದಿಂದ (ಆ ೨-೧೨) ವಿವೃತವಾಗಿರುವುದು ; ಮತ್ತು ಸಾಕಮೇಧಯಾಗಗಳಲ್ಲಿಯೂ ಮರುದ್ಭ್ಯಃ ಕ್ರೀಡಿಭ್ಯಃ ಪುರೋಡಾಶಂ ಸಪ್ತಕಪಾಲಂ ಎಂದು ಹೇಳಿ ಹೋಮಮಾಡುವಾಗ ಸ್ವಿಷ್ಟಕೃದ್ಧೋಮದಲ್ಲಿ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಜುಷ್ಟೋ ದಮೂನಾ ಅಗ್ನೇ ಶರ್ಧ ಮಹತೇ ಸೌಭಗಾಯೇತಿ ಸಂಯಾಜ್ಯೇ** ಎಂಬ ಸೂತ್ರದಿಂದ (ಆ ೨-೧೮) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಸಮಿದ್ಧಸ್ಯ ಪ್ರಮಹಸೋಽಗ್ನೇ ವಂದೇ ತವ ಶ್ರಿಯಂ ।
ವೃಷಭೋ ದ್ಯುಮ್ನವಾಁ ಅಸಿ ಸಮಧ್ವರೇಷ್ವಿಧ್ಯಸೇ ॥ ೪ ॥

॥ ಪದಪಾಠಃ ॥

ಸಂಽಇದ್ಧಸ್ಯ । ಪ್ರಽಮಹಸಃ । ಅಗ್ನೇ । ವಂದೇ । ತವ । ಶ್ರಿಯಂ ।
ವೃಷಭಃ । ದ್ಯುಮ್ನಽವಾನ್ । ಅಸಿ । ಸಂ । ಅಧ್ವರೇಷು । ಇಧ್ಯಸೇ ॥ ೪ ॥

॥ ಸಾಯಣಭಾಷ್ಯಂ

**ಹೇ ಅಗ್ನೇ ಸಮಿದ್ಧಸ್ಯ ಪ್ರವೃದ್ಧಸ್ಯ ಪ್ರಮಹಸಃ ಪ್ರಕೃಷ್ಟತೇಜಸಸ್ತವ ಸಂಬಂಧಿನೀಂ ಶ್ರಿಯಂ ದೀಪ್ತಿಂ ವಂದೇ । ಅಹಂ ಯಜಮಾನಃ ಸ್ತೌಮಿ । ವೃಷಭಃ ಕಾಮಾನಾಂ ವರ್ಷಿತಾ ತ್ವಂ ದ್ಯುಮ್ನ-ವಾನಸಿ । ಧನವಾನ್ಭವಸಿ । ಅಧ್ವರೇಷು ಯಜ್ಞೇಷು ಸಮಿಧ್ಯಸೇ । ಸಮ್ಯಗ್ದೀಪ್ಯಸೇ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಸಮಿದ್ಧಸ್ಯ**—ಪೂರ್ಣವಾಗಿ ಪ್ರಜ್ವಲಿತನಾದವನೂ । **ಪ್ರ ಮಹಸಃ**—ಅತ್ಯುತ್ಕೃಷ್ಟವಾದ ತೇಜಸ್ಸುಳ್ಳವನೂ ಆದ । **ತವ**—ನಿನ್ನ । **ಶ್ರಿಯಂ**—ತೇಜಸ್ಸನ್ನು । **ವಂದೇ**—ನಮಸ್ಕರಿಸುತ್ತೇನೆ । **ವೃಷಭಃ**—ಕಾಮವರ್ಷಕನಾದ ನೀನು । **ದ್ಯುಮ್ನವಾನ್**—ಕಾಂತಿಯುತವಾದ ಧನವಂತನಾಗಿ । **ಅಸಿ**—ಆಗಿದ್ದೀಯೆ । **ಅಧ್ವರೇಷು**—ಯಜ್ಞಗಳಲ್ಲಿ । **ಸಂ ಇಧ್ಯಸೇ**—ಉತ್ತಮವಾಗಿ ಪ್ರಜ್ವಲಿತನಾಗುತ್ತೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಪೂರ್ಣವಾಗಿ ಪ್ರಜ್ವಲಿತನಾದವನೂ, ಅತ್ಯುತ್ಕೃಷ್ಟವಾದ ತೇಜಸ್ಸುಳ್ಳವನೂ ಆದ ನಿನ್ನ ತೇಜಸ್ಸನ್ನು ನಮಸ್ಕರಿಸುತ್ತೇನೆ ಕಾಮವರ್ಷಕನಾದ ನೀನು ಕಾಂತಿಯುತವಾದ ಧನವಂತನಾಗಿ ಆಗಿದ್ದೀಯೆ. ಯಜ್ಞಗಳಲ್ಲಿ ಉತ್ತಮವಾಗಿ ಪ್ರಜ್ವಲಿತನಾಗುತ್ತೀಯೆ.

## English Translation

I praise the glory, Agni, of you when kindled and blazing fiercely : you are the affluent showerer ( of benefits ), you are fitly lighted at sacrifices.

॥ ಸಂಹಿತಾಪಾಠಃ ॥

ಸಮಿ॑ದ್ಧೋ ಅಗ್ನ ಆಹುತ ದೇ॒ವಾನ್ಯ॑ಕ್ಷಿ ಸ್ವಧ್ವರ ।

ತ್ವಂ ಹಿ ಹ॑ವ್ಯ॒ವಾಳಸಿ॑ ॥ ೫ ॥

॥ ಪದಪಾಠಃ ॥

ಸಂ॒ಽಇ॑ದ್ಧಃ । ಅ॒ಗ್ನೇ॒ । ಆ॒ಽಹು॒ತ॒ । ದೇ॒ವಾನ್ । ಯ॒ಕ್ಷಿ॒ । ಸು॒ಽಅ॒ಧ್ವ॒ರ॒ ।

ತ್ವಂ । ಹಿ । ಹ॒ವ್ಯ॒ಽವಾಟ್ । ಅಸಿ॑ ॥ ೫ ॥

॥ ಸಾಯಣಭಾಷ್ಯಂ ॥

**ದರ್ಶಪೂರ್ಣಮಾಸಯೋಃ ಸಮಿದ್ಧೋ ಅಗ್ನ ಆಹುತೇತಿ ದ್ವೇ ಸಾಮಿಧೇನ್ಯೌ । ಸೂತ್ರಿತಂ ಚ । ಸಮಿದ್ಧೋ ಅಗ್ನ ಆಹುತೇತಿ ದ್ವೇ । ಆ. ೧-೨ । ಇತಿ ॥**

**ಹೇ ಆಹುತ ಯಜಮಾನೈರಾ ಸಮಂತಾದ್ಧುತ ಹೇ ಸ್ವಧ್ವರ ಶೋಭನಯಜ್ಞೋಪೇತ ಹೇ ಅಗ್ನೇ ಸಮಿದ್ಧಃ ಸಮ್ಯಗ್ದೀಪ್ತಸ್ತ್ವಂ ದೇವಾನ್ದ್ಯೋತಮಾನಾನಿಂದ್ರಾದೀನ್ಯಕ್ಷಿ । ಯಜಸ್ವ । ಹಿ ಯಸ್ಮಾತ್ಕಾರಣಾತ್ ಹೇ ಅಗ್ನೇ ತ್ವಂ ಹವ್ಯವಾಡಸಿ ಹವ್ಯಾನಾಂ ವೋಢಾ ಭವಸಿ । ಅತಃ ಕಾರಣಾದ್ದೇವಾನ್ಯಜಸ್ವೇತಿ ಸಂಬಂಧಃ ॥**

॥ ಪ್ರತಿಪದಾರ್ಥ ॥

**ಆಹುತ**—ಯಜಮಾನರಿಂದ ಕರೆಯಲ್ಪಟ್ಟವನೂ । **ಸ್ವಧ್ವರ**—ಶ್ರೇಷ್ಠವಾದ ಯಜ್ಞೋಪೇತನೂ ಆದ **ಅಗ್ನೇ**—ಎಲೈ ಅಗ್ನಿಯೇ । **ಸಮಿದ್ಧಃ**—ಪೂರ್ಣವಾಗಿ ಪ್ರಜ್ವಲಿತನಾದ । **ತ್ವಂ**—ನೀನು । **ದೇವಾನ್**—ದೇವತೆಗಳುನ್ನುದ್ದೇಶಿಸಿ । **ಯಕ್ಷಿ**—ಯಾಗಮಾಡು । **ಹಿ**—ಏತಕ್ಕೆಂದರೆ । ( **ತ್ವಂ**—ನೀನು ) । **ಹವ್ಯವಾಟ್**—ಹವಿಸ್ಸನ್ನು ವಹಿಸುವವನಾಗಿ । **ಅಸಿ**—ಆಗಿದ್ದೀಯೆ

॥ ಭಾವಾರ್ಥ ॥

ಯಜಮಾನರಿಂದ ಕರೆಯಲ್ಪಟ್ಟವನೂ, ಶ್ರೇಷ್ಠವಾದ ಯಜ್ಞೋಪೇತನೂ ಆದ ಎಲೈ ಅಗ್ನಿಯೇ, ನೀನು ದೇವತೆಗಳಿಗೆ ಹವಿಸ್ಸನ್ನು ವಹಿಸುವವನಾಗಿದ್ದೀಯೆ ಆದುದರಿಂದ, ನೀನು ಯಜಮಾನನಿಂದ ಪ್ರಜ್ವಲಿತನಾದೊಡನೆಯೇ' ದೇವತೆಗಳನ್ನುದ್ದೇಶಿಸಿ ಯಾಗಮಾಡು

## English Translation

Agni, you are kindled and invoked ; worship the gods at the holy rite, fo you are the bearer of the oblation.

॥ ವಿಶೇಷವಿಷಯಗಳು ॥

ದರ್ಶಪೂರ್ಣಮಾಸಯಾಗಗಳಲ್ಲಿ **ಸಮಿದ್ಧೋ ಅಗ್ನ ಆಹುತ** ಎಂಬ ಈ ಋಕ್ಕನ್ನೂ ಮುಂದಿನ ಋಕ್ಕನ್ನೂ ಸಾಮಿಧೇನೀಮಂತ್ರಗಳಿಗಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಸಮಿದ್ಧೋ ಅಗ್ನ ಆಹುತೇತಿ ದ್ವೇ** ಎಂಬ ಸೂತ್ರದಿಂದ (ಆ. ೧-೨) ವಿವೃತವಾಗಿರುವುದು

---

॥ ಸಂಹಿತಾಪಾಠಃ ॥

ಆ ಜುಹೋತಾ ದುವಸ್ಯತಾಗ್ನಿಂ ಪ್ರಯತ್ಯಧ್ವರೇ ।
ವೃಣೀಧ್ವಂ ಹವ್ಯವಾಹನಂ ॥ ೬ ॥

॥ ಪದಪಾಠಃ ॥

ಆ । ಜುಹೋತ । ದುವಸ್ಯತ । ಅಗ್ನಿಂ । ಪ್ರಽಯತಿ । ಅಧ್ವರೇ ।
ವೃಣೀಧ್ವಂ । ಹವ್ಯಽವಾಹನಂ ॥ ೬ ॥

॥ ಸಾಯಣಭಾಷ್ಯಂ ॥

ಹೇ ಋತ್ವಿಜೋ ಯೂಯಮಧ್ವರೇಽಸ್ಮದೀಯಯಾಗೇ ಪ್ರಯತಿ ಪ್ರವೃತ್ತೇ ಸತಿ ಹವ್ಯವಾಹನಂ ಹವಿಷಾಂ ವೋಢಾರಮೇತನ್ನಾಮಕಮಗ್ನಿಮಾ ಜುಹೋತ ' ಆ ಸಮಂತಾಜ್ಜುಹೋತ । ತಥಾ ದುವಸ್ಯತ । ಪರಿಚರತ । ವೃಣೀಧ್ವಂ । ಸಂಭಜಧ್ವಂ ಚ ಹವ್ಯವಾಹನಂ । ಹವ್ಯವಾಹನನಾಮಕಸ್ಯೈವಾಗ್ನೇರ್ದೇವತಾಸಂಬಂಧೋ ಯಜಮಾನೈರ್ವರಣೀಯತ್ವಂ ಚ ತೈತ್ತಿರೀಯೇ ಸ್ಪಷ್ಟಮಾಮ್ನಾತಂ। ತ್ರಯೋ ವಾ ಅಗ್ನಯೋ ಹವ್ಯವಾಹನೋ ದೇವಾನಾಂ ಕವ್ಯವಾಹನಃ ಪಿತೄಣಾಂ ಸಹರಕ್ಷಾ ಅಸುರಾಣಾಂ । ತ ಏತರ್ಹ್ಯಾಶಂಸಂತೇ ಮಾಂ ವರಿಷ್ಯತೇ ಮಾಮಿತಿ ವೃಣೀಧ್ವಂ ಹವ್ಯವಾಹನಮಿತ್ಯಾಹ ಯ ಏವ ದೇವಾನಾಂ ತಂ ವೃಣೀತೇ ॥ ತೈ. ಸಂ ೨ ೫-೮-೬ । ಇತಿ ॥

॥ ಪ್ರತಿಪದಾರ್ಥ ॥

( ಎಲೈ ಋತ್ವಿಕ್ಕುಗಳೇ ) **ಅಧ್ವರೇ**—ನಮ್ಮ ಯಾಗವು । **ಪ್ರಯತಿ**—ಆರಂಭಿಸಿದೊಡನೆಯೇ । ಹವ್ಯವಾಹನಂ—ಹವಿಸ್ಸನ್ನು ವಹಿಸತಕ್ಕ । **ಅಗ್ನಿಂ**—ಅಗ್ನಿಯನ್ನುದ್ದೇಶಿಸಿ । **ಆ ಜುಹೋತ**—ಹವಿಸ್ಸನ್ನರ್ಪಿಸಿರಿ । **ದುವಸ್ಯತ**—ಪೂಜಿಸಿರಿ । **ವೃಣೀಧ್ವಂ**—(ನಿಮ್ಮ ಹವಿಸ್ಸನ್ನು ದೇವತೆಗಳಿಗೆ ತಲಪಿಸುವ ದೂತನನ್ನಾಗಿ) ಆರಿಸಿರಿ

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ನಮ್ಮ ಯಾಗವು ಆರಂಭಿಸಿದೊಡನೆಯೇ, ಹವಿಸ್ಸನ್ನು ವಹಿಸತಕ್ಕ ಅಗ್ನಿಯನ್ನುದ್ದೇಶಿಸಿ ಹವಿಸ್ಸನ್ನರ್ಪಿಸಿರಿ ಆವನನ್ನು ಪೂಜಿಸಿ ನಿಮ್ಮ ಹವಿಸ್ಸನ್ನು ದೇವತೆಗಳಿಗೆ ತಲಪಿಸುವ ದೂತನನ್ನಾಗಿ ಆರಿಸಿರಿ

## English Translation

Offer worship and adoration to Agni, when the sacrifice issolemni zed ; select the bearer of the oblation to the gods.

---

## ಇಪ್ಪತ್ತೊಂಭತ್ತನೆಯ ಸೂಕ್ತವು.

---

**ತ್ರ್ಯರ್ಯಮೇತಿ ಪಂಚದಶರ್ಚಂ ಪಂಚದಶಂ ಸೂಕ್ತಂ । ಅತ್ರಾನುಕ್ರಮಣಿಕಾ । ತ್ರ್ಯರ್ಯಮಾ ಪಂಚೋನಾ ಗೌರಿವೀತಿಃ ಶಾಕ್ತ್ಯ ಐಂದ್ರಮುಶನಾ ಯದೌಶನಸೋ ವಾ ಪಾದ ಇತಿ । ಶಕ್ತಿಗೋತ್ರೋತ್ಪನ್ನೋ ಗೌರಿವೀತಿರ್ನಾಮ ಋಷಿಃ । ಅನುಕ್ತತ್ವಾತ್ತ್ರಿಷ್ಟುಪ್ । ಇಂದ್ರೋ ದೇವತಾ ಮಂಡಲಾದಿಪರಿಭಾಷಯಾ ನಿವೃತ್ತತ್ವಾತ್ । ಉಶನಾ ಯತ್ಸಹಸ್ಯೈರಿತಿ ಪಾದ ಔಶನಸ ಐಂದ್ರೋ ವಾ ॥ ಅಭಿಪ್ಲವಿಕೇ ತೃತೀಯೇಽಹನಿ ಮರುತ್ವತೀಯ ಏತನ್ನಿವಿದ್ಧಾನಂ । ಸೂತ್ರಿತಂ ಚ । ತೃತೀಯಸ್ಯ ತ್ರ್ಯರ್ಯಮಾ ಯೋ ಜಾತ ಏವೇತಿ ಮಧ್ಯಂದಿನಃ ॥ ಆ. ೭-೭ । ಇತಿ॥**

ಅನುವಾದವು—**ತ್ರ್ಯರ್ಯಮಾ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹದಿನೈದನೆಯ ಸೂಕ್ತವು ಇದರಲ್ಲಿ ಹದಿನೈದು ಋಕ್ಕುಗಳಿರುವವು ಅನುಕ್ರಮಣಿಕೆಯಲ್ಲಿ—**ತ್ರ್ಯರ್ಯಮಾ ಪಂಚೋನಾ ಗೌರಿವೀತಿಃ ಶಾಕ್ತ್ಯ ಐಂದ್ರಮುಶನಾ ಯದೌಶನಸೋ ವಾ ಪಾದಃ** ಎಂದು ಹೇಳಿರುವುದು ಈ ಸೂಕ್ತಕ್ಕೆ ಶಕ್ತಿಗೋತ್ರೋತ್ಪನ್ನನಾದ ಗೌರಿವೀತಿ ಎಂಬುವನು ಋಷಿಯು, ತ್ರಿಷ್ಟುಪ್‌ಛಂದಸ್ಸು, ಇಂದ್ರನು ದೇವತೆಯು, ಒಂಭತ್ತನೆಯ ಋಕ್ಕಿನಲ್ಲಿ **ಉಶನಾ ಯತ್ಸಹಸ್ಯೈಃ** ಎಂಬ ಮೊದಲನೆಯ ಪಾದಕ್ಕೆ ಇಂದ್ರನು ಅಥವಾ ಉಶನಾಃ ಎಂಬುವನು ದೇವತೆಯು ಅಭಿಪ್ಲವವೆಂಬ ಯಾಗದ ಮೂರನೆಯ ದಿನದಲ್ಲಿ ಮರುತ್ವತೀಯಶಸ್ತ್ರಮಂತ್ರಗಳನ್ನು ಪಠಿಸುವಾಗ ಈ ಸೂಕ್ತವನ್ನು ನಿವಿದ್ಧಾನೀಯಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತೃತೀಯಸ್ಯ ತ್ರ್ಯರ್ಯಮಾ ಯೋ ಜಾತ ಏವೇತಿ ಮಧ್ಯಂದಿನಃ** ಎಂಬ ಸೂತ್ರದಿಂದ (ಆ. ೭-೭) ವಿವೃತವಾಗಿರುವುದು.

---

## ಸೂಕ್ತ—೨೨.

॥ ಮಂಡಲ—೫ ॥ ಅನುವಾಕ—೨ ॥ ಸೂಕ್ತ—೨೯ ॥

॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೨೩, ೨೪, ೨೫ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫

ಋಷಿಃ—ಗೌರಿವೀತಿಃ ಶಾಕ್ತ್ಯಃ ॥

ದೇವತಾ—೧-೮, ೯ ರಲ್ಲಿ ೨-೪ ಪಾದಗಳು, ೧೦-೧೫. ಇಂದ್ರಃ। ೯ ರಲ್ಲಿ ೧ ನೆಯ ಪಾದವು, ಇಂದ್ರ ಉಶನಾ ವಾ ॥

॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ತ್ರ್ಯ॑ರ್ಯ॒ಮಾ ಮನು॑ಷೋ ದೇ॒ವತಾ॑ತಾ॒ ತ್ರೀ ರೋ॑ಚ॒ನಾ ದಿ॒ವ್ಯಾ ಧಾ॑ರಯಂತ।
ಅರ್ಚ॑ಂತಿ ತ್ವಾ ಮ॒ರುತಃ॑ ಪೂ॒ತದ॑ಕ್ಷಾ॒ಸ್ತ್ವಮೇ॑ಷಾ॒ಮೃಷಿ॑ರಿಂದ್ರಾಸಿ॒ ಧೀರಃ॑ ॥

॥ ಪದಪಾಠಃ ॥

ತ್ರೀ । ಅ॒ರ್ಯ॒ಮಾ । ಮನು॑ಷಃ । ದೇ॒ವಃತಾ॑ತಾ । ತ್ರೀ । ರೋ॒ಚ॒ನಾ । ದಿ॒ವ್ಯಾ । ಧಾ॒ರ॒ಯಂ॒ತ॒ ।
ಅರ್ಚ॑ಂತಿ । ತ್ವಾ॒ । ಮ॒ರುತಃ॑ । ಪೂ॒ತ್ಯದ॑ಕ್ಷಾಃ । ತ್ವಂ । ಏ॒ಷಾಂ । ಋಷಿಃ । ಇ॒ಂದ್ರ॒ । ಅ॒ಸಿ॒ । ಧೀರಃ॑ ॥ ೧ ॥

॥ ಸಾಯಣಭಾಷ್ಯಂ ॥

ಮನುಷೋ ಮನೋಃ ಸಂಬಂಧಿನಿ ದೇವತಾತಾ ದೇವತಾತೌ ಯಜ್ಞೇ ತ್ರೀ ತ್ರೀಣ್ಯರ್ಯಮಾ-ರ್ಯಮಾಣಿ ಯಾನಿ ತೇಜಾಂಸಿ ಸಂತಿ । ತಥಾ ತ್ರೀ ತ್ರೀಣಿ ರೋಚನಾ ರೋಚಮಾನಾನಿ ವಾಯ್ವಗ್ನಿ-ಸೂರ್ಯಾತ್ಮಕಾನಿ ದಿವ್ಯಾ ದಿವ್ಯಾನ್ಯಂತರಿಕ್ಷೇ ಭವಾನಿ ತಾನಿ ತೇಜಾಂಸಿ ಧಾರಯಂತ । ಮರುತೋ ಧಾರಯಂತಿ । ಪೂತದಕ್ಷಾಃ ಶುದ್ಧಬಲಾ ಮರುತಸ್ತ್ವಾ ತ್ವಾಮರ್ಚಂತಿ । ಸ್ತುವಂತಿ । ಹೇ ಇಂದ್ರ ಧೀರೋ ಧೀಮಾಂಸ್ತ್ವಮೇಷಾಂ ಮರುತಾಮೃಷಿರಸಿ । ದ್ರಷ್ಟಾ ಭವಸಿ ॥

॥ ಪ್ರತಿಪದಾರ್ಥ ॥

**ಮನುಷಃ**—ಮನುವಿಗೆ ಸಂಬಂಧಿಸಿದ । **ದೇವತಾತಾ**—ಯಜ್ಞದಲ್ಲಿ । **ತ್ರೀ**—ಮೂರು । **ಅರ್ಯಮಾ**—ತೇಜಸ್ಸುಗಳು (ಸ್ಥಿತವಾಗಿವೆ) । **ದಿವ್ಯಾ**—ಅಂತರಿಕ್ಷಸ್ಥವಾದ । **ತ್ರೀ ರೋಚನಾ**—ಮೂರು ತೇಜಃ ಪುಂಜಗಳನ್ನು । **ಧಾರಯಂತ**—ಮರುತ್ತುಗಳು ಧರಿಸಿದ್ದಾರೆ । **ಪೂತದಕ್ಷಾಃ**—ಪರಿಶುದ್ಧವಾದ ಬಲವುಳ್ಳ । **ಮರುತಃ**—ಮರುತ್ತುಗಳು । **ಇಂದ್ರ**—ಎಲೈ ಇಂದ್ರನೇ । **ತ್ವಾ**—ನಿನ್ನನ್ನು । **ಅರ್ಚಂತಿ**—ಪೂಜಿಸುತ್ತಾರೆ । **ತ್ವಂ**—ನೀನು । **ಏಷಾಂ**-ಈ ಮರುತ್ತುಗಳಿಗೆ । **ಧೀರಃ**—ಪ್ರಜ್ಞಾವಂತನಾದ । **ಋಷಿಃ ಅಸಿ**—ಋಷಿಯಾಗಿದ್ದೀಯೆ.

॥ ಭಾವಾರ್ಥ ॥

ಮನುವಿಗೆ ಸಂಬಂಧಿಸಿದುದೂ, ದೇವತೆಗಳನ್ನು ಪೂಜಿಸತಕ್ಕದ್ದೂ ಆದ ಯಜ್ಞದಲ್ಲಿ ಮೂರು ತೇಜಸ್ಸುಗಳು ಸ್ಥಿತವಾಗಿವೆ ಮರುತ್ತುಗಳು ಅಂತರಿಕ್ಷಸ್ಥವಾದುದೂ ಅಗ್ನಿವಾಯ್ವಾದಿತ್ಯರೂಪವಾದುದೂ ಆದ ಮೂರು ತೇಜಃ ಪುಂಜಗಳನ್ನು ಧರಿಸಿದ್ದಾರೆ ಎಲೈ ಇಂದ್ರನೇ, ಪರಿಶುದ್ಧವಾದ ಬಲವುಳ್ಳ ಮರುತ್ತುಗಳು ನಿನ್ನನ್ನು ಪೂಜಿಸುತ್ತಾರೆ.

## English Translation

In the adoration of the gods by Manu there are three effulgences, and they, (the Maruts), uphold three luminaries in heaven : the Maruts of pure energy worship you, for you, Indra, are their intelligent Rishi.

---

॥ ಸಂಹಿತಾಪಾಠಃ ॥

ಅನು ಯದೀಂ ಮರುತೋ ಮಂದಸಾನಮಾರ್ಚನ್ನಿಂದ್ರಂ ಪಪಿವಾಂಸಂ ಸುತಸ್ಯ ।

ಆದತ್ತ ವಜ್ರಮಭಿ ಯದಹಿಂ ಹನ್ನಪೋ ಯಹ್ವೀರಸೃಜತ್ಸರ್ತವಾ ಉ ॥

॥ ಪದಪಾಠಃ ॥

ಅನು । ಯತ್ । ಈಂ । ಮರುತಃ । ಮಂದಸಾನಂ । ಆರ್ಚನ್ । ಇಂದ್ರಂ । ಪಪಿವಾಂಸಂ । ಸುತಸ್ಯ ।

ಆ । ಅದತ್ತ । ವಜ್ರಂ । ಅಭಿ । ಯತ್ । ಅಹಿಂ । ಅಪಃ । ಯಹ್ವೀಃ । ಅಸೃಜತ್ । ಸರ್ತವೈ । ಊಂ ಇತಿ ॥ ೨ ॥

॥ ಸಾಯಣಭಾಷ್ಯಂ ॥

ಯದ್ಯದಾ ಮರುತೋ ಮಂದಸಾನಂ ತೃಪ್ಯಂತಂ ಸುತಸ್ಯಾಭಿಷುತಂ ಸೋಮಂ ಪಪಿವಾಂಸಂ ಪೀತವಂತಮಿಮಿಮೇನಮಿಂದ್ರಮನ್ವಾರ್ಚನ್ ಅನ್ವಸ್ತುವನ್ ತದೇಂದ್ರೋ ವಜ್ರಮಾದತ್ತ । ಆದದೌ । ತತೋ ಯದ್ಯದಾಹಿಂ ವೃತ್ರಮಭಿ ಹನ್ ಅಭ್ಯಹನ್ ಅಭಿಹತವಾನ್ ತದಾ ಯಹ್ವೀರ್ಮಹತೀರಪೋ ವೃತ್ರೇಣ ನಿರುದ್ಧಾನ್ಯುದಕಾನಿ ಸರ್ತವೈ ಸ್ವೈರತ್ವೇನ ಸರ್ತುಂ ಗಂತುಮಸೃಜತ್ ನಿರೋಧಾಚ್ಚಾಮುಂಚತ್ ॥

॥ ಪ್ರತಿಪದಾರ್ಥ ॥

**ಯತ್**—ಯಾವಾಗ । **ಮರುತಃ**—ಮರುತ್ತುಗಳು । **ಸುತಸ್ಯ**—ಹಿಂಡಲ್ಪಟ್ಟಿರುವ ಸೋಮವನ್ನು । **ಪಪಿವಾಂಸಂ**—ಪಾನಮಾಡಿದವನೂ । **ಮಂದಸಾನಂ**—ತೃಪ್ತಿಯನ್ನು ಪಡೆದಿರುವವನೂ ಆದ । **ಈಂ ಇಂದ್ರಂ**—ಇದೇ ಇಂದ್ರನನ್ನು । **ಅನು ಆರ್ಚನ್**—ಭಕ್ತಿಯಿಂದ ಸ್ತುತಿಸಿದರೋ ಆಗ । (**ಇಂದ್ರಃ**—ಇಂದ್ರನು) । **ವಜ್ರಂ**—ವಜ್ರಾಯುಧವನ್ನು । **ಆದತ್ತ**—ಕೈಯಲ್ಲಿ ಹಿಡಿದನು (ಇಂದ್ರನು) । **ಯತ್**—ಯಾವಾಗ । **ಅಹಿಂ**—ವೃತ್ರಾಸುರನನ್ನು । **ಅಭಿ ಹನ್**—ನಾಶಮಾಡಿದನೋ ( ಆಗ ) । **ಯಹ್ವೀಃ**—ಪ್ರಭೂತವಾದ । **ಅಪಃ**—ಉದಕಗಳನ್ನು । **ಸರ್ತವೈ**—ಸ್ವತಂತ್ರವಾಗಿ ಪಹಿಸಲು । **ಅಸೃಜತ್**—ಬಿಡಿಸಿದನು.

॥ ಭಾವಾರ್ಥ ॥

ಅಭಿಷುತವಾದ ಸೋಮವನ್ನು ಪಾನಮಾಡಿದವನೂ, ತೃಪ್ತಿಯನ್ನು ಪಡೆದವನೂ ಆದ ಇಂದ್ರನ್ನು ಮರುತ್ತುಗಳು ಭಕ್ತಿಯಿಂದ ಸ್ತುತಿಸಿದೊಡನೆಯೇ, ಇಂದ್ರನು ಕೈಯಲ್ಲಿ ವಜ್ರಾಯುಧವನ್ನು ಹಿಡಿದನು. ಇಂದ್ರನು ವೃತ್ರಾಸುರನನ್ನು ನಾಶಮಾಡಿದೊಡನೆಯೇ, ಪ್ರಭೂತವಾದ ಉದಕಗಳನ್ನು ಸ್ವತಂತ್ರವಾಗಿ ಪ್ರವಹಿಸಲು ಬಿಡಿಸಿದನು

English Translation

When the Maruts worship Indra, exulting and drinking of the effused libation, he grasps the thunderbolt wherewith he destroys Ahi, and sets the abundant waters free to flow

॥ ಸಂಹಿತಾಪಾಠಃ ॥

ಉತ ಬ್ರಹ್ಮಾಣೋ ಮರುತೋ ಮೇ ಅಸ್ಯೇಂದ್ರಃ ಸೋಮಸ್ಯ ಸುಷುತಸ್ಯ ಪೇಯಾಃ ।
ತದ್ಧಿ ಹವ್ಯಂ ಮನುಷೇ ಗಾ ಅವಿಂದದಹನ್ನಹಿಂ ಪಪಿವಾ ಇಂದ್ರೋ ಅಸ್ಯ ॥

॥ ಪದಪಾಠಃ ॥

ಉತ । ಬ್ರಹ್ಮಾಣಃ । ಮರುತಃ । ಮೇ । ಅಸ್ಯ । ಇಂದ್ರಃ । ಸೋಮಸ್ಯ । ಸುऽಸುತಸ್ಯ । ಪೇಯಾಃ ।
ತತ್ । ಹಿ । ಹವ್ಯಂ । ಮನುಷೇ । ಗಾಃ । ಅವಿಂದತ್ । ಅಹನ್ । ಅಹಿಂ । ಪಪಿऽವಾನ್ । ಇಂದ್ರಃ । ಅಸ್ಯ ॥ ೩ ॥

॥ ಸಾಯಣಭಾಷ್ಯಂ ॥

ಉತಾಪಿ ಚ ಹೇ ಬ್ರಹ್ಮಾಣೋ ಬೃಹಂತೋ ಹೇ ಮರುತೋ ಯೂಯಮಿಂದ್ರಶ್ಚ ಸುಸುತಸ್ಯ ಸುಷ್ಠ್ವಭಿಷುತಸ್ಯ ಮೇ ಮದೀಯಸ್ಯಾಸ್ಯ ಸೋಮಸ್ಯೇಮಂ ಸೋಮಂ ॥ ದ್ವಿತೀಯಾರ್ಥೇ ಷಷ್ಠೀ ॥ ಪೇಯಾಃ । ಪಿಬತ ॥ ಪಿಬತೇರಾಶೀರ್ಲಿಙಿ ಮಧ್ಯಮಬಹುವಚನಸ್ಯೈಕವಚನಂ ॥ ತದ್ಧಿ ತತ್ಖಲು ಹವ್ಯಂ ಯುಷ್ಮಾಭಿಃ ಪೀತಂ ಸೋಮಾತ್ಮಕಂ ಹವಿರ್ಮನುಷೇ ಮನುಷ್ಯಾಯ ಯಜಮಾನಾಯ ಗಾ ಧೇನೂರ್ವೃಷ್ಟಿಲಕ್ಷಣಾನ್ಯುದಕಾನಿ ವಾ ಅವಿಂದತ್ । ವೇದಯತಿ । ಯಜಮಾನಂ ಗಾ ಲಂಭಯತೀತ್ಯರ್ಥಃ । ಕಿಂಚಾಸ್ಯೇಮಂ ಸೋಮಂ ಪಪಿವಾನ್ ಪೀತವಾನಿಂದ್ರೋಽಹಿಂ ವೃತ್ರಮಹನ್ । ಅವಧೀತ್ ॥

॥ ಪ್ರತಿಪದಾರ್ಥ ॥

**ಉತ**—ಮತ್ತು । **ಬ್ರಹ್ಮಾಣಃ**—ಬೃಹದ್ರೂಪರಾದ । **ಮರುತಃ**—ಎಲೈ ಮರತ್ತುಗಳೇ । ( **ಯೂಯಂ**—ನೀವುಗಳೂ ) । **ಇಂದ್ರಃ**—ಇಂದ್ರನೂ । **ಸುಸುತಸ್ಯ**—ಶ್ರೇಷ್ಠವಾಗಿ ಹಿಂಡಿದ । **ಮೇ**—ನನ್ನ । **ಅಸ್ಯ ಸೋಮಸ್ಯ**—ಈ ಸೋಮವನ್ನು । **ಪೇಯಾಃ**—ಪಾನಮಾಡಿರಿ । **ತದ್ಧಿ ಹವ್ಯಂ**—ನಿಮ್ಮಿಂದ ಪಾನಮಾಡಲ್ಪಟ್ಟ ಅದೇ ಹವಿಸ್ಸು । **ಮನುಷೇ**—ಯಜ್ಞಕರ್ತನಾದ ಯಜಮಾನನಿಗೆ । **ಗಾಃ**—ಧೇನುಗಳನ್ನು । **ಅವಿಂದತ್**—ತಿಳಿಸಿಕೊಡುತ್ತದೆ । **ಅಸ್ಯ**—ಈ ಸೋಮವನ್ನು । **ಪಪಿವಾನ್**—ಪಾನಮಾಡಿದ। **ಇಂದ್ರಃ**—ಇಂದ್ರನು । **ಅಹಿಂ**—ವೃತ್ರನನ್ನು । **ಅಹನ್**—ನಾಶಮಾಡಿದನು.

॥ ಭಾವಾರ್ಥ ॥

ಬ್ರಹ್ಮದ್ರೂಪರಾದ ಎಲೈ ಮರುತ್ತುಗಳೇ, ನೀವುಗಳೂ ಇಂದ್ರನೂ ಶ್ರೇಷ್ಠವಾಗಿ ಹಿಂಡಿದ ಈ ಸೋಮರಸವನ್ನು ಪಾನಮಾಡಿರಿ. ನಿಮ್ಮಿಂದ ಪಾನಮಾಡಲ್ಪಟ್ಟ ಅದೇ ಹವಿಸ್ಸು ಯಜ್ಞಕರ್ತನಾದ ಯಜಮಾನನಿಗೆ ಧೇನುಗಳಿರುವ ಪ್ರದೇಶಗಳನ್ನು ತಿಳಿಸಿಕೊಡುತ್ತದೆ ಈ ಸೋಮವನ್ನು ಪಾನಮಾಡಿದ ಇಂದ್ರನು ವೃತ್ರನನ್ನು ನಾಶಪಡಿಸಿದನು

## English Translation

Or, mighty Maruts, and you also, Indra, drink of this my copiously-effused libation . then the offered libation obtains cattle for the offerer, and Indra, drinking of it, kills Ahi.

॥ ಸಂಹಿತಾಪಾಠಃ ॥

ಆದ್ರೋದಸೀ ವಿತರಂ ವಿ ಷ್ಕಭಾಯತ್ಸಂವಿವ್ಯಾನಶ್ಚಿದ್ಭಿಯಸೇ ಮೃಗಂ ಕಃ ।
ಜಿಗರ್ತಿಮಿಂದ್ರೋ ಅಪಜರ್ಗುರಾಣಃ ಪ್ರತಿ ಶ್ವಸಂತಮವ ದಾನವಂ ಹನ್॥

॥ ಪದಪಾಠಃ ॥

ಆತ್ । ರೋದಸೀ ಇತಿ । ವಿಽತರಂ । ವಿ । ಸ್ಕಭಾಯತ್ । ಸಂಽವಿವ್ಯಾನಃ । ಚಿತ್ । ಭಿಯಸೇ । ಮೃಗಂ।
ಕರಿತಿ ಕಃ ।

ಜಿಗರ್ತಿಂ । ಇಂದ್ರಃ । ಅಪಽಜರ್ಗುರಾಣಃ । ಪ್ರತಿ । ಶ್ವಸಂತಂ । ಅವ । ದಾನವಂ । ಹನ್ನಿತಿ ಹನ್ । ೪ ॥

॥ ಸಾಯಣಭಾಷ್ಯಂ ॥

ಇಂದ್ರಃ ಪರಮೈಶ್ವರ್ಯಯುಕ್ತ ಆತ್ಸೋಮಪಾನಾನಂತರಂ ರೋದಸೀ ದ್ಯಾವಾಪೃಥಿವ್ಯೌ ವಿತರಮತಿಶಯೇನ ॥ ಅಮು ಚ ಛಂದಸೀತಿ ವೇಃಸ್ತರಪಿ ಕೃತೇಽಮುಪ್ರತ್ಯಯಃ ॥ ವಿ ಷ್ಕಭಾಯತ್ । ವ್ಯಸ್ತಭ್ನಾತ್ । ಚಲನರಹಿತೇ ಅಕರೋತ್ । ಸಂವಿವ್ಯಾನಶ್ಚಿತ್ ಸಂವೃಣ್ವಾನಃ ಸಂಗಚ್ಛಮಾನೋ ವೇಂದ್ರಃ ॥ ವ್ಯಯತೇರ್ವಾ ಸಂವರಣಕರ್ಮಣೋ ವೇತೇರ್ವಾ ಗತಿಕರ್ಮಣೋ ರೂಪಂ । ಚಿದಿತ್ಯೇ- ವೇತ್ಯಸ್ಯಾರ್ಥೇ ವರ್ತತೇ । ಮೃಗಂ ಮೃಗವತ್ಪಲಾಯಮಾನಂ ವೃತ್ರಂ ಭಿಯಸೇ ಭಯಾಯ ಕಃ । ಅಕಾರ್ಷೀತ್ ॥ ಕರೋತೇರ್ಲುಙಿ ಮಂತ್ರೇ ಘಸಹ್ವರೇತ್ಯಾದಿನಾ ಚ್ಲೇರ್ಲೋಪಃ । ಬಹುಲಂ ಛಂದಸ್ಯ- ಮಾಙ್ಯೋಗೇಽಪೀತ್ಯಡಭಾವಃ ॥ ಇಂದ್ರೋ ಜಿಗರ್ತಿಂ ನಿರಂತರಮಾಚ್ಛಾದಯಂತಂ ಶ್ವಸಂತಂ ಭಯಾರ್ಥಂ ಶ್ವಾಸಂ ಕುರ್ವಂತಂ ದಾನವಂ ದನೋಃ ಪುತ್ರಂ ವೃತ್ರಮಪಜರ್ಗುರಾಣ ಆಚ್ಛಾದನಾದ್ವಿಮೋಚಯನ್ ಪ್ರತಿ ಪ್ರತಿಗತ್ಯಾವ ಹನ್ । ಅವಹತವಾನ್ ॥

॥ ಪ್ರತಿಪದಾರ್ಥ ॥

**ಇಂದ್ರಃ**—ಪ್ರಭುವಾದ ಇಂದ್ರನು । **ಆತ್**—ಸೋಮಪಾನವಾದೊಡನೆಯೇ । **ರೋದಸೀ**—ದ್ಯಾವಾ ಪೃಥಿವಿಗಳೆರಡನ್ನೂ । **ವಿತರಂ**—ಅತಿಶಯವಾಗಿಯೂ । **ವಿ ಷ್ಕಭಾಯತ್**—ದೃಢವಾಗಿಯೂ ಇರುವಂತೆ ಸ್ಥಾಪಿಸಿದನು । **ಸಂವಿವ್ಯಾನಶ್ಚಿತ್**—ದೃಢಸಂಕಲ್ಪದಿಂದ ಸಂಚರಿಸುತ್ತಿರುವಾಗಲೇ । **ಮೃಗಂ**—ಮೃಗದಂತೆ ಪಲಾಯನ ಮಾಡುತ್ತಿರುವ ವೃತ್ರನನ್ನು । **ಭಿಯಸೇ ಕಃ**—ಭಯದಿಂದ ಆವೃತನಾಗುವಂತೆ ಮಾಡಿದನು । **ಜಿಗರ್ತಿಂ**—ತನ್ನನ್ನು ಮುಚ್ಚಿಕೊಳ್ಳಲು ಪ್ರಯತ್ನಿಸಿದವನೂ । **ಶ್ವಸಂತಂ**—ಇತರರು ಭಯಪಡಲೆಂದು ವಿಕಾರವಾದ ಶ್ವಾಸವನ್ನು ಬಿಡುತ್ತಿದ್ದವನೂ ಆದ । **ದಾನವಂ**—ದನುವಿನ ಪುತ್ರನಾದ ವೃತ್ರನನ್ನು । **ಅಪಜರ್ಗುರಾಣಃ**—ಅವನು ಅವಿತುಕೊಳ್ಳುವುದನ್ನು ತಪ್ಪಿಸಿ । **ಪ್ರತಿ**—ಅವನನ್ನು ಎದುರಿಸಿ । **ಅವ ಹನ್**—ನಾಶಮಾಡಿದನು.

॥ ಭಾವಾರ್ಥ ॥

ಪ್ರಭುವಾದ ಇಂದ್ರನು ಸೋಮಪಾನವಾದೊಡನೆಯೇ, ದ್ಯಾವಾಪೃಥಿವಿಗಳನ್ನು ಅತಿಶಯವಾಗಿಯೂ, ದೃಢವಾಗಿಯೂ, ಇರುವಂತೆ ಸ್ಥಾಪಿಸಿದನು ಶತ್ರುನಾಶಕ್ಕಾಗಿ ದೃಢಸಂಕಲ್ಪದಿಂದ ಸಂಚರಿಸುತ್ತಿರುವಾಗಲೇ ಮೃಗದಂತೆ ಪಲಾಯನ ಮಾಡುತ್ತಿರುವ ವೃತ್ರನನ್ನು ಭಯದಿಂದ ಆವೃತನಾಗುವಂತೆ ಮಾಡಿದನು. ತನ್ನನ್ನು ಮುಚ್ಚಿಕೊಳ್ಳಲು ಪ್ರಯತ್ನಿಸಿದವನೂ, ಇತರರು ಭಯಪಡಲೆಂದು ವಿಕಾರವಾದ ಶ್ವಾಸವನ್ನು ಬಿಡುತ್ತಿದ್ದವನೂ ಆದ ದನುವಿನ ಪುತ್ರನಾದ ವೃತ್ರನನ್ನು ಅವನು ಅವಿತುಕೊಳ್ಳುವುದನ್ನು ತಪ್ಪಿಸಿ ಅವನನ್ನು ಎದುರಿಸಿ ನಾಶಮಾಡಿದನು

## English Translation

Thereupon he fixed firmly heaven and earth, and, resolutely advancing filled (Vritra), like a deer, with terror . stripping off his covering, Indra slew the Danava, endeavouring to hide, and panting with affright

———

॥ ಸಂಹಿತಾಪಾಠಃ ॥

ಅಧ ಕ್ರತ್ವಾ ಮಘವನ್ತುಭ್ಯಂ ದೇವಾ ಅನು ವಿಶ್ವೇ ಅದದುಃ ಸೋಮ-
ಪೇಯಂ ।
ಯತ್ಸೂರ್ಯಸ್ಯ ಹರಿತಃ ಪತಂತೀಃ ಪುರಃ ಸತೀರುಪರಾ ಏತಶೇ ಕಃ ॥ ೫ ॥

॥ ಪದಪಾಠಃ ॥

ಅಧ । ಕತ್ವಾ । ಮಘsವನ್ । ತುಭ್ಯಂ । ದೇವಾಃ । ಅನು । ವಿಶ್ವೇ । ಅದದುಃ । ಸೋಮsಪೇಯಂ ।
ಯತ್ । ಸೂರ್ಯಸ್ಯ । ಹರಿತಃ । ಪತಂತೀಃ । ಪುರಃ । ಸತೀಃ । ಉಪರಾಃ । ಏತಶೇ । ಕರಿತಿ ಕಃ ॥ ೫ ॥

॥ ಸಾಯಣಭಾಷ್ಯಂ ॥

ಅಧಾಪಿ ಚ ಹೇ ಮಘವನ್ ಘನವನ್ನಿಂದ್ರ ಕ್ರತ್ವಾ ಕ್ರತುನಾ ತ್ವದೀಯೇನ ಕರ್ಮಣಾ ವಿಶ್ವೇ ಸರ್ವೇ ದೇವಾ ದ್ಯೋತಮಾನಾ ಮಹ್ಯಾ್ಯದಯಸ್ತುಭ್ಯಂ ತ್ವದರ್ಥಂ ಸೋಮಪೇಯಂ ಸೋಮಪಾನ-ಮನ್ವದದುಃ । ಆನುಪೂರ್ವ್ಯೇಣ ದತ್ತವಂತಃ । ತತಃ ಪ್ರಭೃತೀಂದ್ರೋ ದೇವೇಭ್ಯಃ ಸರ್ವೇಭ್ಯೋಽಧಿ-ಕೋಽಭವದಿತ್ಯರ್ಥಃ । ತಥಾ ಚ ಶ್ರೂಯತೇ । ಸ ಮಹಾನ್ಭೂತ್ವಾ ದೇವತಾ ಅಬ್ರವೀದುದ್ಧಾರಂ ಮ ಉದ್ಧರತೇತ್ಯಾದಿ । ಐ. ಬ್ರಾ. ೩-೨೧ । ಹೇ ಇಂದ್ರ ಯದ್ಯಸ್ತ್ವಂ ಪತಂತೀರಾಗಚ್ಛಂತೀಃ ಪುರಃ ಸತೀಃ ಪುರಸ್ತಾದ್ಭವಂತೀಃ ಸೂರ್ಯಸ್ಯ ಸಂಬಂಧಿನೀರ್ಹರಿತೋ ವಡವಾ ಉಪರಾ ಉಪರತಾ ಮಂದಗತೀ-ರೇತಶ ಏತಶಾಖ್ಯಾಯ ಋಷಯೇ ಕಃ ಅಕಾರ್ಷೀಃ । ಏತಶೋ ಹಿ ಸ್ವಶ್ವಪುತ್ರೇಣ ಸೂರ್ಯೇಣ ಸಹ ಸ್ಪರ್ಧಾಮಕರೋದಿತಿ ಯಾವತ್ । ತಥಾ ಚ ನಿಗಮಾಂತರೇ । ಪ್ರೈತಶಂ ಸೂರ್ಯೇ ಪಸ್ಪೃಧಾನಂ ಸೌವಶ್ವ್ಯೇ ಸುಷ್ವಿಮಾವದಿಂದ್ರಃ । ಋಗ್ವೇ. ೧-೬೧-೧೫ । ಇತಿ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಏತಶೇ**—ಏತಶನೆಂಬ ಋಷಿಯ ಸಹಾಯಾರ್ಥವಾಗಿ । **ಯತ್**—ಯಾವ ನಿನ್ನ ಮಾಹಾತ್ಮ್ಯದಿಂದ । **ಪತಂತೀಃ**—ಎದುರು ಬರುತ್ತಿರುವುದೂ । **ಪುರಃ ಸತೀಃ**-ಮುಂಭಾಗದಲ್ಲಿ ಪ್ರಸರಿಸುತ್ತಿದ್ದುದೂ । **ಸೂರ್ಯಸ್ಯ**—ಸೂರ್ಯಸಂಬಂಧಿಯಾದುದೂ ಆದ । **ಹರಿತಃ**—ಅಶ್ವಗಳನ್ನು । **ಉಪರಾಃ ಕಃ**—ಮಂದಗತಿಯುಳ್ಳವನ್ನಾಗಿ ಮಾಡಿದೆಯೋ । **ಅಧ**—ಆ ಕಾರಣದಿಂದಲೇ । **ಮಘವನ್**—ಧನವಂತನಾದ ಎಲೈ ಇಂದ್ರನೇ । **ಕ್ರತ್ವಾ**—ನಿನ್ನ ಅತಿಶಯವಾದ ಕರ್ಮದಿಂದ ಸಂತುಷ್ಟರಾದ । **ವಿಶ್ವೇ ದೇವಾಃ**—ಸಕಲ ದೇವತೆಗಳೂ ಸಹ । **ತುಭ್ಯಂ**—ನಿನಗೆ । **ಸೋಮಪೇಯಂ**—ಸೋಮಪಾನವನ್ನು । **ಅನು ಅದುದುಃ**—( ಎಲ್ಲರಿಗಿಂತಲೂ ನಿನಗೆ ಮೊದಲು ) ಅನುಮೋದಿಸಿದರು.

॥ ಭಾವಾರ್ಥ ॥

ಎಲೈ ಇಂದ್ರನೇ, ಏತಶನೆಂಬ ಋಷಿಗೆ ಸಹಾಯಮಾಡುವ ಉದ್ದಿಶ್ಯವಾಗಿ ಯಾವ ನಿನ್ನ ಮಾಹಾತ್ಮ್ಯದಿಂದ ಎದುರು ಬರುತ್ತಿರುವುದೂ, ಮುಂಭಾಗದಲ್ಲಿ ಪ್ರಸರಿಸುತ್ತಿದ್ದುದೂ, ಸೂರ್ಯಸಂಬಂಧಿಯೂ ಆದ ಅಶ್ವಗಳನ್ನು ಮಂದಗತಿಯುಳ್ಳವನ್ನಾಗಿ ಮಾಡಿದೆಯೋ, ಆ ಕಾರಣದಿಂದಲೇ, ಧನವಂತನಾದ ಎಲೈ ಇಂದ್ರನೇ, ನಿನ್ನ ಅತಿಶಯವಾದ ಕರ್ಮದಿಂದ ಸಂತುಷ್ಟರಾದ ಸಕಲ ದೇವತೆಗಳೂ ಸಹ ಎಲ್ಲರಿಗಿಂತಲೂ ಮೊದಲೇ ನಿನಗೆ ಸೋಮಪಾನವನ್ನು ಅನುಮೋದಿಸಿದರು.

English Translation

Then, for this exploit, all the gods gave you, Maghavan, in succession, the Soma beverage; whence you have retarded, for the sake of Etasa, the advancing horses of the sun.

---

॥ ಸಂಹಿತಾಪಾಠಃ ॥

ನವ ಯದಸ್ಯ ನವತಿಂ ಚ ಭೋಗಾನ್ತ್ಸಾಕಂ ವಜ್ರೇಣ ಮಘವಾ ವಿವೃಶ್ಚತ್ ।
ಅರ್ಚಂತೀದ್ರಂ ಮರುತಃ ಸಧಸ್ಥೇ ತ್ರೈಷ್ಟುಭೇನ ವಚಸಾ ಬಾಧತ ದ್ಯಾಂ ॥

॥ ಪದಪಾಠಃ ॥

ನವ । ಯತ್ । ಅಸ್ಯ । ನವತಿಂ । ಚ । ಭೋಗಾನ್ । ಸಾಕಂ । ವಜ್ರೇಣ । ಮಘಽವಾ । ವಿಽವೃಶ್ಚತ್ ।
ಅರ್ಚಂತಿ । ಇಂದ್ರಂ । ಮರುತಃ । ಸಧಽಸ್ಥೇ । ತ್ರೈಸ್ತುಭೇನ । ವಚಸಾ । ಬಾಧತ । ದ್ಯಾಂ ॥ ೬ ॥

॥ ಸಾಯಣಭಾಷ್ಯಂ ॥

ಯದ್ಯದಾ ಮಘವಾ ಧನವಾನಿಂದ್ರಃ । ಅಸ್ಯೇತ್ಯನೇನ ಶಂಬರ ಉಚ್ಯತೇ । ಅಸ್ಯ ಶಂಬರಸ್ಯ ಸಂಬಂಧೀನಿ ನವ ನವಸಂಖ್ಯಾಕಾನಿ ನವತಿಂ ಚ ನವತಿಸಂಖ್ಯಾಕಾನಿ ಚ ಭೋಗಾನ್ಪುರಾಣಿ । ಭೋಗಾ-ನಿತ್ಯಂತೋದಾತ್ತಃ ಪುರವಚನಃ । ಸಾಕಂ ಯುಗಪದೇವ ವಜ್ರೇಣ ವಿವೃಶ್ಚತ್ ವ್ಯವೃಶ್ಚತ್ ಅಭಿನತ್ ತದಾ ಮರುತಃ ಸಧಸ್ಥೇ ಸಹಸ್ಥಾನೇ ಯುದ್ಧೇ ವಾ ಸ್ಥಿತಮಿಂದ್ರಂ ತ್ರೈಷ್ಟುಭೇನ ತ್ರಿಷ್ಟುಪ್ಛಂದಸ್ಕೇನ ವಚಸಾ ವಾಗ್ರೂಪೇಣ ಸ್ತೋತ್ರೇಣಾರ್ಚಂತಿ । ಅಸ್ತುವನ್ । ಇಂದ್ರ ಏವಂ ಸ್ತುತಃ ಸನ್ ದ್ಯಾಂ ಮರುದ್ಭಿಃ ಪ್ರಯುಜ್ಯಮಾನೇನ ಮಂತ್ರೇಣ ದೀಪ್ತಂ ಶಂಬರಾಖ್ಯಮಸುರಂ ಬಾಧತ । ಅಬಾಧತ । ಪಿಪೇಡೇ ॥

॥ ಪ್ರತಿಪದಾರ್ಥ ॥

**ಯತ್**— ಯಾವಾಗ | **ಮಘವಾ**— ಧನವಂತನಾದ ಇಂದ್ರನು | **ಅಸ್ಯ**—ಶಂಬರನ | **ನವ ನವತಿಂ ಚ**—ತೊಂಭತ್ತೊಂಭತ್ತು ಸಂಖ್ಯಾಕವಾದ | **ಭೋಗಾನ್**—ಪಟ್ಟಣಗಳನ್ನು | **ಸಾಕಂ**—ಒಂದೇ ಕಾಲದಲ್ಲಿ | **ವಜ್ರೇಣ**—ತನ್ನ ವಜ್ರಾಯುಧದಿಂದ | **ವಿವೃಶ್ಚತ್**— ಸೀಳಿಹಾಕಿದನೋ (ಆಗ) | **ಮರುತಃ**—ಮರುತ್ತುಗಳು | **ಸದಸ್ಥೇ**—ಏಕಸ್ಥಾನದಲ್ಲೇ ಇರತಕ್ಕ | **ಇಂದ್ರಂ**—ಇಂದ್ರನನ್ನು | **ತ್ರೈಷ್ಟುಭೇನ**—ತ್ರಿಷ್ಟುಪ್ ಛಂದಸಾತ್ಮಕವಾದ | **ವಚಸಾ**—ಸ್ತುತಿಯಿಂದ | **ಅರ್ಚಂತಿ**—ಪೂಜಿಸಿದರು (ಈ ಪೂಜೆಯಿಂದ ತೃಪ್ತನಾದ ಇಂದ್ರನು) | **ದ್ಯಾಂ**—ಪ್ರಕಾಶಮಾನನಾದ ಶಂಬರನನ್ನು | **ಬಾಧತ**—ಹಿಂಸಿಸಿದನು.

॥ ಭಾವಾರ್ಥ ॥

ಧನವಂತನಾದ ಇಂದ್ರನು ಶಂಬರನ ತೊಂಭತ್ತೊಂಭತ್ತು ಪಟ್ಟಣಗಳನ್ನೂ ಒಂದೇ ಕಾಲದಲ್ಲಿ ತನ್ನ ವಜ್ರಾಯುಧದಿಂದ ಸೀಳಿಹಾಕಿದೊಡನೆಯೇ, ಮರುತ್ತುಗಳು ಏಕಸ್ಥಾನದಲ್ಲೇ ಇರತಕ್ಕ ಇಂದ್ರನನ್ನು ತ್ರಿಷ್ಟುಪ್ ಛಂದಸ್ಸಿನಿಂದ ನಿರ್ಮಿತವಾದ ಸ್ತುತಿಗಳಿಂದ ಪೂಜಿಸಿದರು. ಈ ಮಂತ್ರಗಳಿಂದಲೇ ಪ್ರಕಾಶಮಾನನಾದ ಶಂಬರನನ್ನು ಇವುಗಳ ಪಠನದಿಂದ ತೃಪ್ತನಾದ ಇಂದ್ರನು ಹಿಂಸಿಸಿದನು.

## English Translation

Whereupon Maghavan has destroyed with his thunderbolt at once his (Shambara's) ninety and nine cities. the Maruts glorifying Indra in a common dwelling with the Trishtubh hymn, he destroyed the bright (city of the Asura).

---

॥ ಸಂಹಿತಾಪಾಠಃ ॥

**ಸಖಾ ಸಖ್ಯೇ ಅಪಚತ್ತೂಯಮಗ್ನಿರಸ್ಯ ಕ್ರತ್ವಾ ಮಹಿಷಾ ತ್ರೀ ಶತಾನಿ ।**
**ತ್ರೀ ಸಾಕಮಿಂದ್ರೋ ಮನುಷಃ ಸರಾಂಸಿ ಸುತಂ ಪಿಬದ್ವೃತ್ರಹತ್ಯಾಯ ಸೋಮಂ ॥ ೭ ॥**

॥ ಪದಪಾಠಃ ॥

**ಸಖಾ । ಸಖ್ಯೇ । ಅಪಚತ್ । ತೂಯಂ । ಅಗ್ನಿಃ । ಅಸ್ಯ । ಕ್ರತ್ವಾ । ಮಹಿಷಾ । ತ್ರೀ । ಶತಾನಿ ।**
**ತ್ರೀ । ಸಾಕಂ । ಇಂದ್ರಃ । ಮನುಷಃ । ಸರಾಂಸಿ । ಸುತಂ । ಪಿಬತ್ । ವೃತ್ರಹತ್ಯಾಯ । ಸೋಮಂ ॥ ೭ ॥**

॥ ಸಾಯಣಭಾಷ್ಯಂ ॥

ಸಖೇಂದ್ರಸ್ಯ ಮಿತ್ರಭೂತೋಽಗ್ನಿರ್ಮಹಿಷಾ ಮಹಿಷಾಣಾಂ ಪಶೂನಾಂ ತ್ರೀ ತ್ರೀಣಿ ಶತಾನಿ ಶತಸಂಖ್ಯಾಕಾನಿ ಸಖ್ಯೇ ಸಖ್ಯುರ್ಮಿತ್ರಭೂತಸ್ಯಾಸ್ಯೇಂದ್ರಸ್ಯ ಕ್ರತ್ವಾ ಕರ್ಮಣಾ ನಿಮಿತ್ತಭೂತೇನ ತೂಯಂ ಕ್ಷಿಪ್ರಮಪಚತ್ । ಪಪಾಚ । ಕಿಂಚ ಇಂದ್ರಃ ಪರಮೈಶ್ವರ್ಯಯುಕ್ತೋ ಮನುಷೋ ಮನೋಃ ಸಂಬಂಧೀನಿ ತ್ರೀ ತ್ರೀಣಿ ಸರಾಂಸಿ ಪಾತ್ರಾಣಿ । ಅತ್ರ ಸರಃಶಬ್ದೇನ ಪೂತಭೃದಾಧವನೀಯ-ದ್ರೋಣಕಲಶಸಂಜ್ಞಾನಿ ಪಾತ್ರಾಣ್ಯುಚ್ಯಂತೇ । ತೇಷು ಸ್ಥಿತಂ ಸುತಮಭಿಷುತಂ ಸೋಮಂ ಸಾಕಂ ಯುಗಪದೇವ ವೃತ್ರಹತ್ಯಾಯ ವೃತ್ರಹನನಾಯ ಪಿಬತ್ । ಅಪಿಬತ್ । ಪಪೌ ॥

॥ ಪ್ರತಿಪದಾರ್ಥ ॥

**ಸಖಾ**—ಇಂದ್ರಸಖನಾದ । **ಅಗ್ನಿಃ**—ಅಗ್ನಿಯು । **ಸಖ್ಯೇ**—ತನ್ನ ಆಪ್ತಮಿತ್ರನಾದ । **ಅಸ್ಯ**—ಇಂದ್ರನ । **ಕ್ರತ್ವಾ**—ಕರ್ಮಕ್ಕೆ ಸಹಾಯಮಾಡಲು । **ತೂಯಂ**—ಕ್ಷಿಪ್ರವಾಗಿ । **ತ್ರೀ ಶತಾನಿ**—ಮುನ್ನೂರು ಸಂಖ್ಯೆಯುಳ್ಳ । **ಮಹಿಷಾ**—ಮಹಿಷರೂಪವಾದ ಪಶುಗಳನ್ನು । **ಅಪಚತ್**—ಪಕ್ವಮಾಡಿದನು । **ಇಂದ್ರಃ**-ಇಂದ್ರನು । **ಮನುಷಃ**-ಮನುವಿಗೆ ಸಂಬಂಧಿಸಿದುದೂ । **ತ್ರೀ ಸರಾಂಸಿ**—ಮೂರು ದ್ರೋಣಕಲಶಪಾತ್ರೆಗಳಲ್ಲಿರುವುದೂ । **ಸುತಂ**—ವಿದ್ಯುಕ್ತವಾಗಿ ಹಿಂಡಲ್ಪಟ್ಟುದೂ ಆದ । **ಸೋಮಂ**—ಸೋಮರಸವನ್ನು । **ಸಾಕಂ**—ಒಂದೇ ಕಾಲದಲ್ಲಿ । **ವೃತ್ರಹತ್ಯಾಯ**—ವೃತ್ರನನ್ನು ಕೊಲ್ಲಲು ಶಕ್ತಿಯನ್ನು ಪಡೆಯುವುದಕ್ಕಾಗಿ । **ಪಿಬತ್**—ಪಾನಮಾಡಿದನು.

॥ ಭಾವಾರ್ಥ ॥

ಇಂದ್ರಸಖನಾದ ಅಗ್ನಿಯು ತನ್ನ ಆಪ್ತಮಿತ್ರನಾದ ಇಂದ್ರನ ಶತ್ರುನಾಶಕಕರ್ಮಕ್ಕೆ ಸಹಾಯಮಾಡಲು ಮುನ್ನೂರು ಮಹಿಷರೂಪವಾದ ಪಶುಗಳನ್ನು ಪಾಕಮಾಡಿದನು. ಮನುವಿನಿಂದ ಅರ್ಪಿತವಾದುದೂ, ಮೂರು ದ್ರೋಣ ಕಲಶಗಳಲ್ಲಿರುವುದೂ, ವಿಧ್ಯುಕ್ತವಾಗಿ ಹಿಂಡಲ್ಪಟ್ಟುದೂ ಆದ ಸೋಮರಸವನ್ನು ಒಂದೇಕಾಲದಲ್ಲಿ ಪಾನಮಾಡಿ ವೃತ್ರ ಹತ್ಯೆಗೆ ಬೇಕಾದ ಶಕ್ತಿಯನ್ನು ಪಡೆದನು

## English Translation

To aid (the undertaking of) his friend, Agni, the friend (of Indra), has quickly consumed three hundred buffaloes , and Indra, for the destruction of Vritra, has at once quaffed three vessels of Sama, offered by Manu

———

॥ ಸಂಹಿತಾಪಾಠಃ ॥

ತ್ರೀ ಯಚ್ಛತಾ ಮಹಿಷಾಣಾಮಘೋ ಮಾಸ್ತ್ರೀ ಸರಾಂಸಿ ಮಘವಾ ಸೋಮ್ಯಾಪಾಃ ।

ಕಾರಂ ನ ವಿಶ್ವೇ ಅಹ್ವಂತ ದೇವಾ ಭರಮಿಂದ್ರಾಯ ಯದಹಿಂ ಜಘಾನ ॥

॥ ಪದಪಾಠಃ ॥

ತ್ರೀ । ಯತ್ । ಶತಾ । ಮಹಿಷಾಣಾಂ । ಅಘಃ । ಮಾಃ । ತ್ರೀ । ಸರಾಂಸಿ । ಮಘವಾ । ಸೋಮ್ಯಾ । ಅಪಾಃ ।

ಕಾರಂ । ನ । ವಿಶ್ವೇ । ಅಹ್ವಂತ । ದೇವಾಃ । ಭರಂ । ಇಂದ್ರಾಯ । ಯತ್ । ಅಹಿಂ । ಜಘಾನ ॥ ೮॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಯದ್ಯದಾ ತ್ರೀ ತ್ರಯಾಣಾಂ ಶತಾ ಶತಸಂಖ್ಯಾಕಾನಾಂ ಮಹಿಷಾಣಾಂ ಪಶೂನಾಂ ಮಾ ಮಾಂಸಾನ್ಯಘಃ ಭಕ್ಷಿತವಾನಸಿ ॥ ಘಸೇರತ್ರೇರ್ವಾ ರೂಪಂ ॥ ಯದಾ ಚ ಮಘವಾ ಧನವಾಂಸ್ತ್ವಂ ಸೋಮ್ಯಾ ಸೋಮಮಯಾನಿ ತ್ರೀ ತ್ರೀಣಿ ಸರಾಂಸಿ ಪಾತ್ರಾಣ್ಯಪಾಃ ಪೀತವಾನಸಿ । ಯದ್ಯದೇಂದ್ರೋಽಹಿಂ ವೃತ್ರಂ ಜಘಾನ ಹತವಾನ್ ತದಾ ವಿಶ್ವೇ ಸರ್ವೇ ದೇವಾ ಭರಂ ಸೋಮಪಾನಾದಿನಾ ಪೂರ್ಣಮಿಂದ್ರಾಯೇಂದ್ರಂ ಯುದ್ಧಾರ್ಥಮಹ್ವಂತ । ಅಹ್ವಯಂತ । ತತ್ರ ದೃಷ್ಟಾಂತಃ । ಕಾರಂ ನ । ಸ್ವಾಮಿನಃ ಕರ್ಮಕರಮಿವ ತದ್ವತ್ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಯತ್**—ಯಾವಾಗ । **ತ್ರೀ ಶತಾ**—ಮುನ್ನೂರು ಸಂಖ್ಯೆಯುಳ್ಳ । **ಮಹಿಷಾಣಾಂ**—ಪಶುಗಳ । **ಮಾಃ**—ಮಾಂಸಗಳನ್ನು । **ಅಘಃ**—ಭಕ್ಷಿಸಿದೆಯೋ । (**ಯದಾ**—ಯಾವಾಗ) । **ಮಘವಾ**—ಧನವಂತನಾದ ನೀನು । **ಸೋಮ್ಯಾ**—ಸೋಮಭರಿತವಾದ । **ತ್ರೀ ಸರಾಂಸಿ**—ಮೂರು ದ್ರೋಣಕಲಶಗಳನ್ನು । **ಅಪಾಃ**—ಪಾನಮಾಡಿದೆಯೋ । **ಯತ್**—ಯಾವಾಗ । **ಅಹಿಂ**—ವೃತ್ರನನ್ನು । **ಜಘಾನ**—ಇಂದ್ರನು ಕೊಂದನೋ । **ವಿಶ್ವೇ ದೇವಾಃ**—ಸಮಸ್ತ ದೇವತೆಗಳೂ । **ಭರಂ**—(ಸೋಮಪಾನದಿಂದ) ಪೂರ್ಣನಾದ । **ಇಂದ್ರಾಯ**—ಇಂದ್ರನನ್ನು । **ಕಾರಂ ನ**—ಸ್ವಾಮಿಗಳು ಭೃತ್ಯನನ್ನು ಕರೆಯುವಂತೆ । **ಅಹ್ವಂತ**—ಯುದ್ಧಾರ್ಥವಾಗಿ ಕರೆದರು

॥ ಭಾವಾರ್ಥ ॥

ಎಲೈ ಇಂದ್ರನೇ, ಯಾವಾಗ ನೀನು ಮುನ್ನೂರು ಮಹಿಷರೂಪವಾದ ಪಶುಗಳ ಮಾಂಸವನ್ನು ಭಕ್ಷಿಸಿದೆಯೋ ಧನವಂತನಾದ ನೀನು ಯಾವಾಗ ಮೂರು ದ್ರೋಣಕಲಶಗಳಲ್ಲಿಯೂ ತುಂಬಿದ್ದ ಸೋಮವನ್ನೆಲ್ಲಾ ಪಾನಮಾಡಿದೆಯೋ ಮತ್ತು ಇಂದ್ರರೂಪವಾದ ನೀನು ಯಾವಾಗ ವೃತ್ರನನ್ನು ಕೊಂದೆಯೋ, ಆಗ ಸಮಸ್ತ ದೇವತೆಗಳೂ ಸಹ ಸೋಮಪಾನದಿಂದ ಭರಿತನಾದ ಇಂದ್ರನನ್ನು ಸ್ವಾಮಿಗಳು ಭೃತ್ಯನನ್ನು ಕರೆಯುವಂತೆ ಯುದ್ಧಾರ್ಥವಾಗಿ ಕರೆದರು

## English Translation

When you have eaten the flesh of the three hundred buffaloes, when you who are Maghavan have drunk the three vessels of Soma, and had slain Ahi, then all the gods summoned Indra, full of food, as if he had been a servant, to the battle.

॥ ಸಂಹಿತಾಪಾಠಃ ॥

ಉಶನಾ ಯತ್ಸಹಸ್ಯೈ೩ರಯಾತಂ ಗೃಹಮಿಂದ್ರ ಜೂಜುವಾನೇಭಿರಶ್ವೈಃ ।
ವನ್ವಾನೋ ಅತ್ರ ಸರಥಂ ಯಯಾಥ ಕುತ್ಸೇನ ದೇವೈರವನೋರ್ಹ
ಶುಷ್ಣಂ ॥ ೯ ॥

॥ ಪದಪಾಠಃ ॥

ಉಶನಾ । ಯತ್ । ಸಹಸ್ಯೈಃ । ಅಯಾತಂ । ಗೃಹಂ । ಇಂದ್ರ । ಜೂಜುವಾನೇಭಿಃ । ಅಶ್ವೈಃ ।
ವನ್ವಾನಃ । ಅತ್ರ । ಸ್ಽರಥಂ ಯಯಾಥ । ಕುತ್ಸೇನ । ದೇವೈಃ । ಅವನೋಃ । ಹ । ಶುಷ್ಣಂ ॥ ೯ ॥

॥ ಸಾಯಣಭಾಷ್ಯಂ ॥

ಉಶನಸಃ ಸ್ತೋಮ ಉಶನಾ ಯತ್ಸಹಸ್ಯೈರಿತಿ ಮರುತ್ವತೀಯೇ ಸೂಕ್ತಮುಖೀಯಾ । ಸೂತ್ರಿತಂ ಚ । ಉಶನಸಃ ಸ್ತೋಮೇನ ಗರಗೀರ್ಣಮಿವಾತ್ಮಾನಂ ಮನ್ಯಮಾನೋ ಯಜೇತೋಶನಾ ಯತ್ಸಹಸ್ಯೈರಯಾತಂ । ಆ. ೯-೫ । ಇತಿ ॥

ಯದ್ಯದಾ ಹೇ ಇಂದ್ರ ತ್ವಮುಶನಾ ಕಾವ್ಯಶ್ಚ ಸಹಸ್ಯೈರಭಿಭವನಶೀಲೈರ್ಜೂಜುವಾನೇಭಿರ್ಜೂಜುವಾನೈರ್ಗಚ್ಛದ್ಭಿರಶ್ವೈಃ ಕುತ್ಸಸ್ಯ ಗೃಹಮುಯಾತಂ ಅಗಚ್ಛತಂ ತದಾ ಹೇ ಇಂದ್ರ ತ್ವಮತ್ರಾಸ್ಮಿನ್ಕಾಲೇ ವನ್ವಾನಃ ಶತ್ರೂನ್ ಹಿಂಸನ್ ಕುತ್ಸೇನ ದೇವೈಶ್ಚ ಸಹ ಸರಥಂ ಸಮಾನಮೇಕಂ ರಥಂ ಯಯಾಥ । ಜಗಂಥ । ಕಿಂಚ ಶುಷ್ಣಮೇತನ್ನಾಮಕಮಸುರಮವನೋರ್ಹ । ಅಹಿಂಸೀಃ ಖಲು ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಯತ್**—ಯಾವಾಗ । (**ತ್ವಂ**—ನೀನೂ) । **ಉಶನಾ**—ಉಶನಸ್ಸೂ (ಒಟ್ಟಿಗೆ) । **ಸಹಸ್ಯೈಃ**—ಶತ್ರುಗಳನ್ನು ಪ್ರತಿಭಟಿಸುವ ಶಕ್ತಿಯುಳ್ಳವೂ । **ಜೂಜುವಾನೇಭಿಃ**—ವೇಗಗಾಮಿಯಾದವೂ ಆದ । **ಅಶ್ವೈಃ**—ಅಶ್ವಗಳೊಡನೆ । **ಗೃಹಂ**—(ಕುತ್ಸನ) ಗೃಹಕ್ಕೆ । **ಅಯಾತಂ**—ಹೋದಿರೋ । **ಅತ್ರ**—ಆ ಕಾಲದಲ್ಲಿ । **ವನ್ವಾನಃ**—ಶತ್ರುಗಳನ್ನು ಹಿಂಸಿಸುವವರಾಗಿ । **ಕುತ್ಸೇನ**—ಕುತ್ಸನೊಡನೆ । **ದೇವೈಃ**—ಇತರ ದೇವತೆಗಳೊಡನೆಯೂ । **ಸರಥಂ**—ಒಂದೇ ರಥದಲ್ಲಿ ಕುಳಿತು । **ಯಯಾಥ**—ಹೋದಿರಿ । **ಶುಷ್ಣಂ**—ಶುಷ್ಣನೆಂಬ ಅಸುರನನ್ನೂ । **ಅವನೋರ್ಹ**—ಹಿಂಸಿಸಿದಿರಿ

॥ ಭಾವಾರ್ಥ ॥

ಎಲೈ ಇಂದ್ರನೇ, ನೀನೂ ಉಶನಸ್ಸೂ ಒಟ್ಟಿಗೆ ಸೇರಿಕೊಂಡು ಶತ್ರುಗಳನ್ನು ಪ್ರತಿಭಟಿಸುವ ಶಕ್ತಿಯುಳ್ಳವೂ, ವೇಗಗಾಮಿಯಾದವೂ ಆದ ಅಶ್ವಗಳೊಡನೆ ಕುತ್ಸನ ಗೃಹಕ್ಕೆ ಹೋದ ಕಾಲದಲ್ಲಿ ಶತ್ರುಗಳನ್ನು ಹಿಂಸಿಸುವವರಾಗಿ ನೀವು ಕುತ್ಸನೊಡನೆಯೂ ಇತರ ದೇವತೆಗಳೊಡನೆಯೂ ಒಂದೇ ರಥದಲ್ಲಿ ಕುಳಿತು ಹೋದಿರಿ. ಮತ್ತು ಶುಷ್ಣನೆಂಬ ಅಸುರ

## English Translation

When, Indra, you and Ushanas, with vigorous and rapid coursers went to the dwelling of Kutsa, then, destroying his foes, you went in one chariot with Kutsa and the gods, and verily you have slain Sushna.

॥ ವಿಶೇಷವಿಷಯಗಳು ॥

ಉಶನಸಸ್ತೋಮವನ್ನುಪಠಿಸುವಾಗ **ಉಶನಾ ಯತ್ಸಹಸ್ಯೈಃ** ಎಂಬ ಈ ಸೂಕ್ತದ ಒಂಭತ್ತನೆಯ ಋಕ್ಕನ್ನು ಮರುತ್ವತೀಯಶಸ್ತ್ರಮಂತ್ರಗಳಲ್ಲಿ ಮೊದಲನೆಯ ಋಕ್ಕನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಉಶನಸಸ್ತೋಮೇನ ಗರಗೀರ್ಣಮಿವಾತ್ಮಾನಂ ಮನ್ಯಮಾನೋ ಯಜೇತೋಶನಾ ಯತ್ಸಹಸ್ಯೈರ-ಯಾತಂ** ಎಂಬ ಸೂತ್ರದಿಂದ (ಆ. ೯-೫) ವಿವೃತವಾಗಿರುವುದು.

---

॥ ಸಂಹಿತಾಪಾಠಃ ॥

ಪ್ರಾನ್ಯಚ್ಚಕ್ರಮವೃಹಃ ಸೂರ್ಯಸ್ಯ ಕುತ್ಸಾಯಾನ್ಯದ್ವರಿವೋ ಯಾತವೇಽಕಃ।
ಅನಾಸೋ ದಸ್ಯೂರಮೃಣೋ ವಧೇನ ನಿ ದುರ್ಯೋಣ ಆವೃಣಙ್ಮೃಧ್ರ-
ವಾಚಃ ॥ ೧೦ ॥

॥ ಪದಪಾಠಃ ॥

ಪ್ರ । ಅನ್ಯತ್ । ಚಕ್ರಂ । ಅವೃಹಃ । ಸೂರ್ಯಸ್ಯ । ಕುತ್ಸಾಯ । ಅನ್ಯತ್ । ವರಿವಃ । ಯಾತವೇ । ಅಕರಿತ್ಯಕಃ ।
ಅನಾಸಃ । ದಸ್ಯೂನ್ । ಅಮೃಣಃ । ವಧೇನ । ನಿ । ದುರ್ಯೋಣೇ । ಅವೃಣಕ್ । ಮೃಧ್ರವಾಚಃ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಪೂರ್ವಂ ದ್ವಿಚಕ್ರಸ್ಯ ಸೂರ್ಯಸ್ಯಾನ್ಯದೇಕಂ ಚಕ್ರಂ ಪ್ರಾವೃಹಃ । ಪೃಥಕ್ ಚಕರ್ಥ । ಅನ್ಯದೇಕಂ ಚಕ್ರಂ ಕುತ್ಸಾಯ ಕುತ್ಸಸ್ಯ ವರಿವೋ ಧನಂ ಯಾತವೇ ಪ್ರಾಪ್ತುಮಕಃ । ಅಕಾರ್ಷೀಃ । ಕಿಂಚ ಅನಾಸ ಆಸ್ಯರಹಿತಾನ್ । ಆಸ್ಯಶಬ್ದೇನ ಶಬ್ದೋಽಲಕ್ಷ್ಯತೇ । ಅಶಬ್ದಾನ್ಮೂಕಾನ್ ದಸ್ಯೂನಸುರಾನ್ ವಧೇನಾಯುಧೇನ ವಜ್ರೇಣಾಮೃಣಃ । ಅಹಿಂಸೀಃ । ದುರ್ಯೋಣೇ ಸಂಗ್ರಾಮೇ ಮೃಧ್ರವಾಚೋ ಹಿಂಸಿತವಾಗಿಂದ್ರಿಯಾನಸುರಾನ್ನ್ಯವೃಣಕ್ । ನಿತರಾಂ ಛಿನ್ನವಾನಸಿ । ಅಮೃಣೋ ನ್ಯವೃಣಗಿತಿ ದ್ವಿರುಕ್ತಿರಾದರಾರ್ಥಾ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಸೂರ್ಯಸ್ಯ**—ಸೂರ್ಯನ (ಎರಡುಚಕ್ರವುಳ್ಳ ರಥದ) । **ಅನ್ಯತ್ ಚಕ್ರಂ**—ಒಂದು ಚಕ್ರವನ್ನು । **ಪ್ರ ಅವೃಹಃ**—ನೀನು ಬೇರೆಮಾಡಿದೆ । **ಅನ್ಯತ್**—ಮತ್ತೊಂದನ್ನು । **ಕುತ್ಸಾಯ**—ಕುತ್ಸನಿಗೆ । **ವಸ್ವಿಃ**—ಧನವನ್ನು । **ಯಾತವೇ**—ಹೊಂದುವುದಕ್ಕೆ । **ಅಕಃ**—ಸಹಾಯವಾಗುವಂತೆ ಮಾಡಿದೆ । **ಅನಾಸಃ**—ವದನರಹಿತರೂ ಮೂಗರೂ ಆದ । **ದಸ್ಯೂನ್**—ಅಸುರರನ್ನು । **ವಧೇನ**—ವಧಸಾಧನವಾದ ವಜ್ರಾಯುಧದಿಂದ । **ಅವೃಣಃ**—ಹಿಂಸಿಸಿದೆ । **ದುರ್ಯೋಣೇ**—ಸಂಗ್ರಾಮದಲ್ಲಿ । **ಮೃಧ್ರವಾಚಃ**—ಹಿಂಸಾತ್ಮಕವಾದ ವಾಕ್ಕುಳ್ಳ ಅಸುರರನ್ನು । **ನಿ ಅವೃಣಕ್**—ಪೂರ್ಣವಾಗಿ ಛೇದಿಸಿರುವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಸೂರ್ಯನ ರಥದ ಎರಡು ಚಕ್ರಗಳಲ್ಲಿ ಒಂದನ್ನು ಬೇರೆ ಮಾಡಿದೆ. ಮತ್ತೊಂದನ್ನು ಕುತ್ಸನಿಗೆ ಧನವನ್ನು ಹೊಂದುವುದಕ್ಕೆ ಸಹಾಯವಾಗುವಂತೆ ಮಾಡಿದೆ. ವದನರಹಿತರಾಗ ಮೂಗರಾದ ಅಸುರರನ್ನು ವಧಸಾಧನವಾದ ವಜ್ರಾಯುಧದಿಂದ ಹಿಂಸಿಸಿದೆ. ಸಂಗ್ರಾಮದಲ್ಲಿ ಹಿಂಸಾಕಾರಕವಾದ ವಾಕ್ಕುಳ್ಳ ಅಸುರರನ್ನು ಪೂರ್ಣವಾಗಿ ಛೇದಿಸಿರುವೆ

English Traslation

You have formerly detached one wheel (of the car) of Surya : another you have given to Kutsa wherwith to acquire wealth : with the thunderbolt you have confounded the voiceless Dasyus, you have destroyed in battle the speech-bereft (foes).

---

॥ ಸಂಹಿತಾಪಾಠಃ ॥

ಸ್ತೋಮಾಸಸ್ತ್ವಾ ಗೌರಿವೀತೇರವರ್ಧನ್ನರಂಧಯೋ ವೈದಥಿನಾಯ ಪಿಪ್ರುಂ।
ಆ ತ್ವಾಮೃಜಿಶ್ವಾ ಸಖ್ಯಾಯ ಚಕ್ರೇ ಪಚನ್ಪಕ್ತೀರಪಿಬಃ ಸೋಮಮಸ್ಯ ॥

॥ ಪದಪಾಠಃ ॥

ಸ್ತೋಮಾಸಃ । ತ್ವಾ । ಗೌರಿऽವೀತೇಃ । ಅವರ್ಧನ್ । ಅರಂಧಯಃ । ವೈದಥಿನಾಯ । ಪಿಪ್ರುಂ ।
ಆ । ತ್ವಾಂ । ಋಜಿಶ್ವಾ । ಸಖ್ಯಾಯ । ಚಕ್ರೇ । ಪಚನ್ । ಪಕ್ತೀಃ । ಅಪಿಬಃ ಸೋಮಂ । ಅಸ್ಯ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಗೌರಿವೀತೇರೇತನ್ನಾಮಕಸ್ಯ ಮಂತ್ರದ್ರಷ್ಟುರ್ಮಮ ಸಂಬಂಧೀನಿ ಸ್ತೋಮಾಸಃ ಸ್ತೋತ್ರಾಣಿ ತ್ವಾ ತ್ವಾಮವರ್ಧನ್ । ವರ್ಧಯಂತು । ವೈದಥಿನಾಯ ವಿದಥಿನಃ ಪುತ್ರಾಯ ಋಜಿಶ್ವ-

**ನಾಮ್ನೇ ಪಿಪ್ರುಮೇತನ್ನಾಮಕಮಸುರಮರಂಧಯಃ । ವಶಮನಯಃ । ಹೇ ಇಂದ್ರ ಋಜಿಶ್ವನಾಮಾ ಕಶ್ಚಿದೃಷಿಃ ಸಖ್ಯಾಯ ತವ ಸಖಿತ್ವಾಯ ಪಕ್ತೀಃ ಪಕ್ತವ್ಯಾನಿ ಪುರೋಡಾಶಾದೀನಿ ಪಚನ್ ಪಾಕಂ ಕುರ್ವನ್ ತ್ವಾಮಾ ಚಕ್ರೇ । ಅಭಿಮುಖೀಚಕಾರ । ಕಿಂಚ ತ್ವಮಸ್ಯ ಋಜಿಶ್ವನಃ ಸಂಬಂಧಿನಂ ಸೋಮಮಪಿಬಃ । ಅಪಾಃ ॥**

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಗೌರಿವೀತೇಃ**—ಗೌರಿವೀತಿನಾಮಕನಾದ ನನ್ನಿಂದ ನಿರ್ಮಿತವಾದ । **ಸ್ತೋಮಾಸಃ**—ಸ್ತೋತ್ರಗಳು । **ತ್ವಾ**—ನಿನ್ನನ್ನು । **ಅವರ್ಧನ್**—ಪ್ರವೃದ್ಧನಾಗುವಂತೆ ಮಾಡಲಿ । **ವೈದಥಿನಾಯ**—ವಿದಥಿಪುತ್ರನಾದ ಋಜಿಶ್ವನಿಗೆ । **ಪಿಪ್ರುಂ**—ಪಿಪ್ರುವೆಂಬ ಅಸುರನನ್ನು । **ಅರಂಧಯಃ**—ವಶವಾಗುವಂತೆ ಮಾಡಿದೆ । **ಋಜಿಶ್ವಾ**—ಅದೇ ಋಷಿಯು । **ಸಖ್ಯಾಯ**—ನಿನ್ನ ಸಖಿತ್ವವನ್ನು ಸಂಪಾದಿಸಲು । **ಪಕ್ತೀಃ**—ಪಾಕಕ್ಕೆ ಯೋಗ್ಯವಾದ ಪುರೋಡಾಶಾದಿಗಳನ್ನು । **ಪಚನ್**—ಪಾಕಮಾಡುತ್ತಾ । **ತ್ವಾಂ**—ನಿನ್ನನ್ನು । **ಆ ಚಕ್ರೇ**—ಅಭಿಮುಖನನ್ನಾಗಿ ಮಾಡಿಕೊಂಡಿದ್ದಾನೆ । (**ತ್ವಂ**—ನೀನು) । **ಅಸ್ಯ**—ಋಜಿಶ್ವನ । **ಸೋಮಂ**—ಸೋಮವನ್ನು । **ಅಪಿಬಃ**—ಪಾನಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ಗೌರಿವೀತಿನಾಮಕನಾದ ನನ್ನಿಂದ ನಿರ್ಮಿತವಾದ ಸ್ತುತಿಗಳು ನಿನ್ನನ್ನು ಪ್ರವೃದ್ಧನಾಗುವಂತೆ ಮಾಡಲಿ. ವಿದಥಿಪುತ್ರನಾದ ಋಜಿಶ್ವನಿಗೆ ನೀನು ಪಿಪ್ರುವೆಂಬ ಅಸುರನನ್ನು ವಶವಾಗುವಂತೆ ಮಾಡಿದೆ ಅದೇ ಋಜಿಶ್ವನು ನಿನ್ನ ಸಖಿತ್ವವನ್ನು ಸಂಪಾದಿಸಲು ಪಾಕಕ್ಕೆ ಯೋಗ್ಯವಾದ ಪುರೋಡಾಶಾದಿಗಳನ್ನು ಪಾಕಮಾಡುತ್ತಾ ನಿನ್ನನ್ನು ಅಭಿಮುಖನನ್ನಾಗಿ ಮಾಡಿಕೊಂಡಿದ್ದಾನೆ ನೀನು ಅವನ ಸೋಮವನ್ನು ಪಾನಮಾಡು

English Translation

May the praises of Gaurivīti exalt you, you have humbled Pipru for the son of Vidathin: Rijishwan preparing dressed viands, has, through your friendship, brought you (to his presence), and you have drunk of his libation

———

॥ ಸಂಹಿತಾಪಾಠಃ ॥

ನವಗ್ವಾಸಃ ಸುತಸೋಮಾಸ ಇಂದ್ರಂ ದಶಗ್ವಾಸೋ ಅಭ್ಯರ್ಚಂತ್ಯರ್ಕೈಃ ।
ಗವ್ಯಂ ಚಿದೂರ್ವಮಪಿಧಾನವಂತಂ ತಂ ಚಿನ್ನರಃ ಶಶಮಾನಾ ಅಪವ್ರನ್ ॥

॥ ಪದಪಾಠಃ ॥

ನವಽಗ್ವಾಸಃ । ಸುತಽಸೋಮಾಸಃ । ಇಂದ್ರಂ । ದಶಽಗ್ವಾಸಃ । ಅಭಿ । ಅರ್ಚಂತಿ । ಅರ್ಕೈಃ ।
ಗವ್ಯಂ । ಚಿತ್ । ಊರ್ವಂ । ಅಪಿಧಾನಽವಂತಂ । ತಂ । ಚಿತ್ । ನರಃ । ಶಶಮಾನಾಃ । ಅಪ । ವ್ರನ್ ॥

|| ಸಾಯಣಭಾಷ್ಯಂ ||

**ದಶಪೇಯೇಽಹನಿ ಮರುತ್ವತೀಯೇ ಶಸ್ತ್ರೇ ನವಗ್ವಾಸ ಇತಿ ಸೂಕ್ತಮುಖೀಯಾ । ಸೂತ್ರಿತಂ ಚ । ನವಗ್ವಾಸಃ ಸುತಸೋಮಾಸ ಇಂದ್ರಂ ಸಖಾ ಹ ಯತ್ರ ಸಖಿಭಿರ್ನವಗ್ವೈರಿತಿ ನಿವಿದ್ಧಾನಯೋರಾದ್ಯೇ । ಆ. ೯. ೩ । ಇತಿ ||**

**ನವಗ್ವಾಸಃ । ಸತ್ರಯಾಗಮನುತಿಷ್ಠಂತೋ ಯೇ ನವಭಿರ್ಮಾಸೈಃ ಸಮಾಪ್ಯ ಗತಾಸ್ತೇ ನವಗ್ವಾಃ । ದಶಭಿರ್ಮಾಸೈಃ ಸಮಾಪ್ಯ ಯೇ ಗತಾಸ್ತೇ ದಶಗ್ವಾಃ । ಏತೆ ಉಭಯವಿಧಾ ಅಂಗಿರಸಃ ಸುತಸೋಮಾಸೋಽಭಿಷುತಸೋಮಾಃ ಸಂತ ಇಂದ್ರಮರ್ಕೈರರ್ಚನೀಯೈಃ ಸ್ತೋತ್ರೈರಭ್ಯರ್ಚಂತಿ । ಅಭಿಷ್ಟುವಂತಿ । ತಥಾ ಶಶಮಾನಾಃ ಸ್ತುವಂತೋ ನರೋ ನೇತಾರೋಽಂಗಿರಸೋಽಪಿಧಾನವಂತಂ ವಲೇ-ನಾಸುರೇಣಾಚ್ಛಾದಿತವಂತಂ ತಂ ಚಿತ್ ಬಹುಷು ಪ್ರದೇಶೇಷು ಪ್ರಸಿದ್ಧಮಪಿ ಗವ್ಯಂ ಚಿತ್ ಗೋಸಂಬಂಧಿ । ನಮಪ್ಯಪೂರ್ವಂ ಸಮೂಹಮಪ ವ್ರನ್ । ಅಪಾವೃಣ್ವನ್ ||**

|| ಪ್ರತಿಪದಾರ್ಥ ||

**ನವಗ್ವಾಸಃ**—ನವಮಾಸಗಳಲ್ಲಿ ಯಜ್ಞವನ್ನು ಪೂರ್ಣಮಾಡತಕ್ಕವರೂ । **ದಶಗ್ವಾಸಃ**—ದಶಮಾಸಗಳಲ್ಲಿ ಪೂರ್ಣಮಾಡತಕ್ಕವರೂ ಆದ ಅಂಗಿರಸಪುತ್ರರು । **ಸುತಸೋಮಾಸಃ**—ಸೋಮರಸಗಳನ್ನು ಹಿಡಿದವರಾಗಿ । **ಇಂದ್ರಂ**—ಇಂದ್ರನನ್ನು । **ಅರ್ಕೈಃ**—ಸ್ತೋತ್ರಗಳಿಂದ । **ಅಭ್ಯರ್ಚಂತಿ**-ಸ್ತುತಿಸಿ ಪೂಜಿಸುತ್ತಾರೆ । **ಶಶಮಾನಾಃ**-ಇಂದ್ರನನ್ನು ಪೂಜಿಸುವವರೂ । **ನರಃ**—ನೇತೃಗಳೂ ಆದ ಅಂಗಿರಸ್ಸುಗಳು । **ಊರ್ವಂ**—ಸಮೂಹರೂಪದಲ್ಲಿ । **ಗವ್ಯಂ ಚಿತ್**—ಗೋವುಗಳಿಂದ ತುಂಬಿದುದೂ । **ಅಪಿಧಾನವಂತಂ**—(ವಲನಿಂದ) ಆಚ್ಛಾದಿತವಾದುದೂ ಆದ । **ತಂ**—ಬಿಲವನ್ನು । **ಅಪ ವ್ರನ್**— ತೆರೆಯಲು ಸಮರ್ಥರಾದರು

|| ಭಾವಾರ್ಥ ||

ನವಗ್ವ ಮತ್ತು ದಶಗ್ವರೆಂದು ಪ್ರಸಿದ್ಧರಾದ ಅಂಗಿರಸಪುತ್ರರು ಸೋಮರಸವನ್ನು ಹಿಂಡಿ ಇಂದ್ರನಿಗೆ ಅರ್ಪಿಸಲು ಸಿದ್ಧರಾಗಿ ಸ್ತುತಿಗಳಿಂದ ಅವನನ್ನು ಪೂಜಿಸುತ್ತಾರೆ. ಇಂದ್ರನ ಸ್ತುತಿಪಾಠಕರೂ, ನೇತೃಗಳೂ ಆದ ಅಂಗಿರಸ್ಸುಗಳು ಗೋವುಗಳ ಸಮೂಹದಿಂದ ತುಂಬಿದುದೂ, ವಲನಿಂದ ಮುಚ್ಚಲ್ಪಟ್ಟದ್ದೂ ಆದ ಬಿಲವನ್ನು ತೆರೆಯಲು ಸಮರ್ಥರಾದರು

English Translation

The observers of the nine month's celebration, those of the ten months, pouring out libations, worship Indra with hymns : the leaders (of rites), glorifying him have set open the cave (concealing the cattle).

|| ವಿಶೇಷವಿಷಯಗಳು ||

ದಶಪೇಯವೆಂಬ ಯಾಗದ ಸೋಮಪಾನಕಾಲದಲ್ಲಿ ಮರುತ್ವತೀಯಶಸ್ತ್ರಮಂತ್ರಗಳನ್ನು ಪಠಿಸುವಾಗ **ನವ-ಗ್ವಾಸಃ** ಎಂಬ ಈ ಋಕ್ಕನ್ನು ಸೂಕ್ತದ ಪ್ರಾರಂಭದ ಋಕ್ಕನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—

**ನವಗ್ವಾಸಃ ಸುತಸೋಮಾಸ ಇಂದ್ರಂ ಸಖಾ ಹ ಯತ್ರ ಸಖಿಭಿರ್ನವಗ್ವೈರಿತಿ ನಿವಿದ್ಧಾನಯೋರಾದ್ಯೇ** ಎಂಬ ಸೂತ್ರದಿಂದ (ಆ. ೯-೩) ವಿವೃತವಾಗಿರುವುದು.

ಅಂಗಿರಾಋಷಿಗಳಲ್ಲಿ ಸತ್ರಯಾಗವನ್ನು ಒಂಭತ್ತು ತಿಂಗಳುಗಳಲ್ಲಿಯೇ ಮುಗಿಸಿ ಸಿದ್ಧಿಯನ್ನು ಪಡೆದವರಿಗೆ ನವಗ್ವ ಎಂದೂ ಪತ್ತುತಿಂಗಳುಗಳನ್ನು ಮುಗಿಸಿದರೆ ದಶಗ್ವ ಎಂದೂ ಹೇಳುವ ರೂಢಿ ಇರುವುದು. ನವಗ್ವ, ದಶಗ್ವ ಎಂಬ ಶಬ್ದಗಳ ಅರ್ಥವಿವರಣೆಯನ್ನು ನಾವು ಋ ಸಂ ಭಾಗ ೬ ಪುಟ 24 ಗಳಲ್ಲಿ ಹಿಂದೆಯೇ ವಿವರಿಸಿದೇವೆ

---

॥ ಸಂಹಿತಾಪಾಠಃ ॥

**ಕಥೋ ನು ತೇ ಪರಿ ಚರಾಣಿ ವಿದ್ವಾನ್ವೀರ್ಯಾ ಮಘವನ್ಯಾ ಚಕರ್ಥ ।**
**ಯಾ ಚೋ ನು ನವ್ಯಾ ಕೃಣವಃ ಶವಿಷ್ಠ ಪ್ರೇದು ತಾ ತೇ ವಿದಥೇಷು ಬ್ರವಾಮ ॥ ೧೩ ॥**

॥ ಪದಪಾಠಃ ॥

**ಕಥೋ ಇತಿ । ನು । ತೇ । ಪರಿ । ಚರಾಣಿ । ವಿದ್ವಾನ್ । ವೀರ್ಯಾ । ಮಘ್ರವನ್ । ಯಾ । ಚಕರ್ಥ । ಯಾ । ಚೋ ಇತಿ । ನು । ನವ್ಯಾ । ಕೃಣವಃ । ಶವಿಷ್ಠ । ಪ್ರ । ಇತ್ । ಊಂ ಇತಿ । ತಾ । ತೇ । ವಿದಥೇಷು । ಬ್ರವಾಮ ॥ ೧೩ ॥**

॥ ಸಾಯಣಭಾಷ್ಯಂ ॥

ಪರಿತ್ರೀನಾಮ್ನ್ಯೇಕಾಹೇ ಮರುತ್ವತೀಯನಿಷ್ಕೇವಲ್ಯಯೋಃ ಸೂಕ್ತಮುಖೀಯೇ ಕಥೋ ನು ತ ಇತ್ಯಾದ್ಯೇ ದ್ವೇ ಋಚೌ । ಸೂತ್ರಿತಂ ಚ । ಕಥೋ ನು ತೇ ಪರಿ ಚರಾಣಿ ವಿದ್ವಾನಿತಿ ದ್ವೇ । ಆ. ೯-೫ । ಇತಿ ॥

ಹೇ ಮಘವನ್ ಧನವನ್ನಿಂದ್ರ ತ್ವಂ ಯಾ ಯಾನಿ ವೀರ್ಯಾ ವೀರ್ಯಾಣಿ ಚಕರ್ಥ ಚಕೃಷೇ ಅಹಂ ತಾನಿ ವೀರ್ಯಾಣಿ ವಿದ್ವಾನ್ ಜಾನನ್ ತೇ ತುಭ್ಯಂ ಕಥೋ ನು ಕಥಂ ನು ಪರಿ ಚರಾಣಿ । ಪರಿಚರ್ಯಾಂ ಕರವಾಣಿ । ಹೇ ಶವಿಷ್ಠ ಬಲವತ್ತಮೇಂದ್ರ ತ್ವಂ ಯಾ ಚೋ ಯಾನಿ ಚೈವ ನವ್ಯಾ ನವ್ಯಾನಿ ನೂತನಾನಿ ವೀರ್ಯಾಣಿ ನು ಕ್ಷಿಪ್ರಂ ಕೃಣವಃ ಕುರ್ಯಾಃ ತೇ ತದ್ವೀರ್ಯಾಣಿ ತಾ ತಾನಿ ವೀರ್ಯಾಣಿ ವಿದಥೇಷು ಯಜ್ಞೇಷು ಪ್ರೇದು ಬ್ರವಾಮ । ಪ್ರೈವ ವದಾಮ ॥

॥ ಪ್ರತಿಪದಾರ್ಥ ॥

**ಮಘವನ್**—ಧನವಂತನಾದ ಎಲೈ ಇಂದ್ರನೇ । **ಯಾ**—ಯಾವ । **ವೀರ್ಯಾ**—ವೀರ್ಯಕರ್ಮಗಳನ್ನು । **ಚಕರ್ಥ**—ನೀನು ನೆರವೇರಿಸಿದ್ದೀಯೋ ಅವುಗಳನ್ನು । **ವಿದ್ವಾನ್**—ತಿಳಿದವನಾಗಿ । **ತೇ** —ನಿನಗೆ । **ಕಥೋ**

**ನು**—ಯಾವ ರೀತಿಯಲ್ಲಿ ತಾನೇ । **ಪರಿ ಚರಾಣಿ**—ಪೂಜೆಯನ್ನರ್ಪಿಸಬಲ್ಲೆನು । **ಶವಿಷ್ಠ**—ಅತ್ಯಂತ ಶಕ್ತಿಯುತನಾದ ಎಲೈ ಇಂದ್ರನೇ। **ಯಾ ಚೋ**—ಯಾವಯಾವ। **ನವ್ಯಾ**—ನೂತನವಾದ ವೀರ್ಯಕರ್ಮಗಳನ್ನೂ। **ನು**—ಕ್ಷಿಪ್ರವಾಗಿ । **ಕೃಣವಃ**—ಮಾಡುವೆಯೋ । **ತೇ**—ಅಂತಹ ನಿನ್ನ । **ತಾನಿ**—ಆ ವೀರ್ಯಕರ್ಮಗಳನ್ನೆಲ್ಲಾ । **ವಿದಥೇಷು**—ಯಜ್ಞಗಳಲ್ಲಿ । **ಪ್ರೇದು ಬ್ರವಾಮ**—ಪ್ರಶಂಸಿಸಿ ಪ್ರಕಟಿಸುತ್ತೇನೆ.

॥ ಭಾವಾರ್ಥ ॥

ಧನವಂತನಾದ ಎಲೈ ಇಂದ್ರನೇ, ಯಾವ ವೀರ್ಯಕರ್ಮಗಳನ್ನು ನೀನು ನೆರವೇರಿಸಿದ್ದೀಯೋ ಅವುಗಳ ಸ್ವರೂಪವನ್ನು ನಾನು ಪೂರ್ಣವಾಗಿ ಅರಿತು ನಿನಗೆ ಯಾವ ರೀತಿಯಲ್ಲಿ ಪೂಜೆಯನ್ನರ್ಪಿಸಲಿ ? ಅತ್ಯಂತ ಶಕ್ತಿಯುತನಾದ ಎಲೈ ಇಂದ್ರನೇ, ನೀನು ಯಾವ ಯಾವ ನೂತನವಾದ ವೀರ್ಯಕರ್ಮಗಳನ್ನು ಮಾಡುವೆಯೋ ಅಂತಹ ನಿನ್ನ ಆ ವೀರ್ಯಕರ್ಮಗಳನೆಲ್ಲಾ ಯಜ್ಞಗಳಲ್ಲಿ ಪ್ರಶಂಸಿಸಿ ಪ್ರಕಟಿಸುತ್ತೇನೆ.

## English Translation

Although, knowing the heroic acts which, Maghavan, you ahve performed, how may I adequately offer you adoration ? most mighty Indra, we ever celebrate at sacred rites the recent exploits which you have achieved.

॥ ವಿಶೇಷವಿಷಯಗಳು ॥

ಪರಿಕ್ರೀ ಎಂಬ ಹೆಸರಿನ ಒಂದು ದಿವಸದಮಟ್ಟಿಗೆ ಮಾಡುವ ಯಾಗವಿಶೇಷದಲ್ಲಿ ಮರುತ್ವತೀಯ ಮತ್ತು ನಿಷ್ಕೇವಲ್ಯಶಸ್ತ್ರಮಂತ್ರಗಳಲ್ಲಿ **ಕಥೋ ನು ತೇ** ಎಂಬ ಈ ಋಕ್ಕನ್ನೂ ಇದರ ಮುಂದಿನ ಋಕ್ಕನ್ನೂ ಪ್ರಾರಂಭ ಮಂತ್ರಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತ್ರಸೂತ್ರದ—**ಕಥೋ ನು ತೇ ಪರಿ ಚರಾಣಿ ವಿದ್ವಾನಿತಿ ದ್ವೇ** ಎಂಬ ಸೂತ್ರದಿಂದ (ಆ ೯-೫) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಏತಾ ವಿಶ್ವಾ ಚಕೃವಾಁ ಇಂದ್ರ ಭೂರ್ಯಪರೀತೋ ಜನುಷಾ ವೀರ್ಯೇಣ।
ಯಾ ಚಿನ್ನು ವಜ್ರಿನ್ಕೃಣವೋ ದಧೃಷ್ವಾನ್ನ ತೇ ವರ್ತಾ ತವಿಷ್ಯಾ ಅಸ್ತಿ ತಸ್ಯಾಃ ॥ ೧೪ ॥

॥ ಪದಪಾಠಃ ॥

ಏತಾ । ವಿಶ್ವಾ । ಚಕೃವಾನ್ । ಇಂದ್ರ । ಭೂರಿ । ಅಪರಿಽಇತಃ । ಜನುಷಾ । ವೀರ್ಯೇಣ ॥
ಯಾ । ಚಿತ್ । ನು । ವಜ್ರಿನ್ । ಕೃಣವಃ । ದಧೃಷ್ವಾನ್ । ನ । ತೇ । ವರ್ತಾ । ತವಿಷ್ಯಾಃ । ಅಸ್ತಿ । ತಸ್ಯಾಃ ॥ ೧೪ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ಅಪರೀತಃ ಶತ್ರುಭಿರಪರಿಗತಸ್ತ್ವಂ ಜನುಷಾ ಜನನಸಿದ್ಧೇನಾತ್ಮೀಯೇನ ವೀರ್ಯೇಣ ಬಲೇನ ಭೂರಿ ಭೂರೀಣಿ ಬಹೂನ್ಯೇತೈತಾನಿ ಪ್ರತ್ಯಕ್ಷೇಣೋಪಲಭ್ಯಮಾನಾನಿ ವಿಶ್ವಾ ವಿಶ್ವಾನಿ ವ್ಯಾಪ್ತಾನಿ ಭುವನಜಾತಾನಿ ಚಕೃವಾನ್ । ಕೃತವಾನಸಿ । ಹೇ ವಜ್ರಿನ್ ವಜ್ರವನ್ನಿಂದ್ರ ದಧೃಷ್ವಾನ್ ಸಪತ್ನಾನ್ಧರ್ಷ-ಯಂಸ್ತ್ವಂ ನು ಕ್ಷಿಪ್ರಂ ಯಾ ಚಿದ್ಯಾನಿ ಚ ವಿಶ್ವಾನಿ ಕೃಣವಃ ಕುರ್ಯಾಃ ತೇ ತ್ವದೀಯಸ್ಯ ತಸ್ಯಾಸ್ತ-ವಿಷ್ಯಾಸ್ತಸ್ಯ ಬಲಸ್ಯ ವರ್ತಾ ನಿವಾರಯಿತಾ ನ ಕೋऽಪ್ಯಸ್ತಿ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಅಪರೀತಃ**—ಯಾರಿಂದಲೂ ವಿರೋಧವಿಲ್ಲದೇ । **ಜನುಷಾ**—ನಿನ್ನ ಸ್ವಭಾವ ಸಿದ್ಧವಾದ । **ವೀರ್ಯೇಣ**—ಬಲದಿಂದ । **ಭೂರಿ**—ಪ್ರಭೂತವಾದವೂ । **ಏತಾ**—ಪ್ರತ್ಯಕ್ಷವಾಗಿ ಗೋಚರವಾಗಿರುವುದೂ ಆದ । **ವಿಶ್ವಾ**—ಸಮಸ್ತ ವಿಶ್ವವನ್ನೂ । **ಚಕೃವಾನ್**—ನಿರ್ಮಿಸಿದ್ದೀಯೆ । **ವಜ್ರಿನ್**—ವಜ್ರಾಯುಧವನ್ನು ಹಿಡಿದಿರುವ ಎಲೈ ಇಂದ್ರನೇ । **ದಧೃಷ್ವಾನ್**—ಶತ್ರುಗಳನ್ನು ನಾಶಮಾಡುವ ನೀನು । **ನು**—ಕ್ಷಿಪ್ರವಾಗಿ । **ಯಾ ಚಿತ್**—ಯಾವ ಯಾವ ಕರ್ಮಗಳನ್ನು। **ಕೃಣವಃ**—ಮಾಡುವೆಯೋ। **ತೇ**—ಅಂತಹ ನಿನ್ನ।**ತಸ್ಯಾಃ ತವಿಷ್ಯಾಃ**—ಅದೇಶಕ್ತಿಗೆ । **ವರ್ತಾ**—ನಿರೋಧಕನು । **ನ ಅಸ್ತಿ**—ಯಾರೂ ಇಲ್ಲ.

॥ ಭಾವಾರ್ಥ ॥

ಎಲೈ ಇಂದ್ರನೇ, ಯಾರ ವಿರೋಧವೂ ಇಲ್ಲದೇ, ನಿನ್ನ ಸ್ವಭಾವಸಿದ್ಧವಾದ ಬಲದಿಂದಲೇ ಅತಿ ಪ್ರಭೂತವಾದುದೂ ಮತ್ತು ಎಲ್ಲರ ಪ್ರತ್ಯಕ್ಷಕ್ಕೆ ಗೋಚರವಾಗಿರುವುದೂ ಆದ ಸಮಸ್ತ ವಿಶ್ವವನ್ನೂ ನಿರ್ಮಿಸಿದ್ದೀಯೆ. ವಜ್ರಾಯುಧವನ್ನು ಹಿಡಿದಿರುವ ಎಲೈ ಇಂದ್ರನೇ, ಶತ್ರುನಾಶಕನಾದ ನೀನು ಕ್ಷಿಪ್ರವಾಗಿ ಯಾವಯಾವ ಕರ್ಮಗಳನ್ನು ಮಾಡುವೆಯೋ ಅಂತಹ ನಿನ್ನ ಅದೇ ಶಕ್ತಿಗೆ ನಿರೋಧಕನು ಯಾರೂ ಇಲ್ಲ.

## English Translation

Unmatched (by any), you have done, Indra, all these many ( deeds ) by your innate energy : wielder of the thunderbolt, whatever you, the humbler of (foes), have undertaken, there is no one the arrester of this your prowess.

॥ ಸಂಹಿತಾಪಾಠಃ ॥

**ಇಂದ್ರ ಬ್ರಹ್ಮ ಕ್ರಿಯಮಾಣಾ ಜುಷಸ್ವ ಯಾ ತೇ ಶವಿಷ್ಠ ನವ್ಯಾ ಅಕರ್ಮ ।**

**ವಸ್ತ್ರೇವ ಭದ್ರಾ ಸುಕೃತಾ ವಸೂಯೂ ರಥಂ ನ ಧೀರಃ ಸ್ವಪಾ ಅತಕ್ಷಂ ॥**

॥ ಪದಪಾಠಃ ॥

ಇಂದ್ರ । ಬ್ರಹ್ಮ । ಕ್ರಿಯಮಾಣಾ । ಜುಷಸ್ವ । ಯಾ । ತೇ । ಶವಿಷ್ಠ । ನವ್ಯಾಃ । ಅಕರ್ಮ ।

ವಸ್ತ್ರಾಽಇವ । ಭದ್ರಾ । ಸುಽಕೃತಾ । ವಸುಽಯುಃ । ರಥಂ । ನ । ಧೀರಃ । ಸುಽಅಪಾಃ । ಅತಕ್ಷಂ ॥೧೫॥

॥ ಸಾಯಣಭಾಷ್ಯಂ ॥

ಹೇ ಶವಿಷ್ಠ ಬಲವತ್ತಮ ಶೂರತಮ ವೇಂದ್ರ ತೇ ತುಭ್ಯಂ ಯಾ ಯಾನಿ ಸ್ತೋತ್ರಾಣಿ ನವ್ಯಾ ನೂತನಾ ಅದ್ಯತನಾ ವಯಮಕರ್ಮ ಅಕುರ್ಮ ಹೇ ಇಂದ್ರ ತ್ವಂ ಕ್ರಿಯಮಾಣಾಸ್ಮಾಭಿಃ ಕ್ರಿಯಮಾಣಾನಿ ಬ್ರಹ್ಮ ಬ್ರಹ್ಮಾಣಿ ತಾನಿ ಸ್ತೋತ್ರಾಣಿ ಜುಷಸ್ವ । ಸೇವಸ್ವ । ಧೀರೋ ಧೀಮಾನ್ ಸ್ವಪಾಃ ಶೋಭನಕರ್ಮಾ ವಸೂಯುರ್ಧನಕಾಮೋಽಹಂ ವಸ್ತ್ರೇವ ವಸ್ತ್ರಾಣೀವ ಭದ್ರಾ ಭದ್ರಾಣಿ ಭಜನೀಯಾನಿ ಸುಕೃತಾ ಸುಷ್ಠು ಕೃತಾನಿ ಸ್ತೋತ್ರಾಣಿ ರಥಂ ನ ರಥಮಿವಾತಕ್ಷಂ । ಅಕರವಂ । ಸ್ತೋತ್ರಾಣ್ಯುಪಸಂಹಾರವದ್ಬ್ರಹ್ಮಾಣೀತ್ಯಭಿಪ್ರಾಯೇಣ ವಸ್ತ್ರನಿದರ್ಶನಮುಕ್ತಂ । ರಥದೃಷ್ಟಾಂತಸ್ತ್ವಾಗಮನಸಾಧನತ್ವಪ್ರತಿಪಾದನಾಯ । ಸ್ತೋತ್ರಾಣಿ ಸ್ವೀಕೃತ್ಯ ಮಹ್ಯಂ ಧನಂ ಪ್ರಯಚ್ಛೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಶವಿಷ್ಠ**—ಅತ್ಯಂತ ಶಕ್ತಿಯುತನಾದ । **ಇಂದ್ರ**—ಇಂದ್ರನೇ । **ತೇ**—ನಿನ್ನನ್ನು ಪ್ರಶಂಸಿಸಿ । **ನವ್ಯಾಃ**—ನೂತನಗಳಾದ । **ಯಾ**—ಯಾವ ಸ್ತುತಿಗಳನ್ನು । **ಅಕರ್ಮ**—ನಿರ್ಮಿಸುವೆವೋ (ಅಂತಹ) । **ಕ್ರಿಯಮಾಣಾ**—ನಮ್ಮಿಂದ ನಿರ್ಮಿತವಾಗುವ । **ಬ್ರಹ್ಮ**—ಸ್ತುತಿಗಳನ್ನು । **ಜುಷಸ್ವ**—ಸೇವಿಸು । **ಧೀರಃ**—ವಿವೇಕಜ್ಞಾನವುಳ್ಳವನೂ । **ಸ್ವಪಾಃ**—ಉತ್ತಮವಾದ ಕರ್ಮವುಳ್ಳವನೂ । **ವಸೂಯುಃ**—ಧನಾಪೇಕ್ಷಿಯೂ ಆದ ನಾನು । **ವಸ್ತ್ರೇವ**—ವಸ್ತ್ರಗಳನ್ನು ನೇಯುವಂತೆಯೂ । **ರಥಂ ನ**—ರಥವನ್ನು ರಚಿಸುವಂತೆಯೂ । **ಭದ್ರಾ**—ಮಂಗಳಾತ್ಮಕವಾದವೂ । **ಸುಕೃತಾ**—ಅತ್ಯುತ್ತಮವಾದವೂ ಆದ ಸ್ತುತಿಗಳನ್ನು । **ಅತಕ್ಷಂ**—ನಿರ್ಮಿಸಿದ್ದೇನೆ

॥ ಭಾವಾರ್ಥ ॥

ಅತ್ಯಂತ ಶಕ್ತಿಯುತನಾದ ಇಂದ್ರನೇ, ನಿನ್ನನ್ನು ಪ್ರಶಂಸಿಸಿ ನೂತನಗಳಂದ ಯಾವ ಸ್ತುತಿಗಳನ್ನು ನಿರ್ಮಿಸುವೆವೋ ಅಂತಹ ನಮ್ಮ ಸ್ತುತಿಗಳೆಲ್ಲವನ್ನೂ ಸೇವಿಸು. ವಿವೇಕಜ್ಞಾನವುಳ್ಳವನೂ, ಉತ್ತಮವಾದ ಕರ್ಮವುಳ್ಳವನೂ, ಧನಾಪೇಕ್ಷಿಯೂ ಆದ ನಾನು ವಸ್ತ್ರಗಳನ್ನು ನೇಯುವಂತೆಯೂ, ರಥವನ್ನು ರಚಿಸುವಂತೆಯೂ ಮಂಗಳಾತ್ಮಕವೂ ಆದ ಸ್ತುತಿಗಳನ್ನು ನಿರ್ಮಿಸಿದ್ದೇನೆ

English Translation

Most mighty Indra, be pleased to accept the prayers which we are about to offer, and the present praises which we repeat : firm, doing pious acts, and desirous of wealth, have I fabricated acceptable and pious works like (rich) garments, and like a chariot

# ಮೂವತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಕ್ವ ಸ್ಯ ವೀರ ಇತಿ ಪಂಚದಶರ್ಚಂ ಷೋಡಶಂ ಸೂಕ್ತಂ । ಅತ್ರಾನುಕ್ರಮಣಿಕಾ । ಕ್ವ ಸ್ಯ ಬಭ್ರುರೃಣಂಚಯೋऽಪ್ಯತ್ರ ರಾಜಾ ಸ್ತುತ ಇತಿ । ಬಭ್ರುರೃಷಿಃ । ಅನುಕ್ತತ್ವಾತ್ತ್ರಿಷ್ಟುಪ್ । ಇಂದ್ರೋ ದೇವತಾ । ಋಣಂಚಯನಾಮಾ ರಾಜಾಪಿ ಕ್ವಚಿತ್ಸ್ತೂಯತೇ । ಅತಃ ಸೋऽಪಿ ದೇವತಾ । ತೀವ್ರಸೋಮಾಖ್ಯ ಏಕಾಹೇ ಮರುತ್ವತೀಯಶಸ್ತ್ರ ಇದಂ ಸೂಕ್ತಂ ನಿವಿದ್ಧಾನಂ । ಸೂತ್ರಿತಂ ಚ । ತೀವ್ರಸೋಮೇನಾನ್ನಾದ್ಯಕಾಮಃ ಕ್ವ ಸ್ಯ ವೀರಃ । ಆ. ೯-೭ । ಇತಿ ॥**

ಅನುವಾದವು — **ಕ್ವ ಸ್ಯ ವೀರಃ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹದಿನಾರನೆಯ ಸೂಕ್ತವು ಇದರಲ್ಲಿ ಹದಿನೈದು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ— **ಕ್ವ ಸ್ಯ ಬಭ್ರುರೃಣಂಚಯೋಽಪ್ಯತ್ರ ರಾಜಾ ಸ್ತುತಃ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಬಭ್ರು ಎಂಬುವನು ಋಷಿಯು, ಇಂದ್ರನು ದೇವತೆಯು, ತ್ರಿಷ್ಟುಪ್ ಛಂದಸ್ಸು. ಈ ಸೂಕ್ತದಲ್ಲಿ ಋಣಂಚಯ ಎಂಬ ಹೆಸರಿನ ರಾಜನ ಸ್ತುತಿಯಿರುವುದು ಆದುದರಿಂದ ಆ ಋಣಂಚಯನೆಂಬ ರಾಜನೂ ಈ ಸೂಕ್ತಕ್ಕೆ ದೇವತೆಯೆಂದು ಹೇಳಬಹುದು. ತೀವ್ರಸೋಮವೆಂಬ ಒಂದುದಿವಸದ ಮಟ್ಟಿಗೆ ಮಾಡುವ ಯಾಗದಲ್ಲಿ ಮರುತ್ವತೀಯಶಸ್ತ್ರಮಂತ್ರಗಳಲ್ಲಿ ಈ ಸೂಕ್ತವನ್ನು ನಿವಿದ್ಧಾನೀಯಸೂಕ್ತವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ತೀವ್ರಸೋಮೇನಾನ್ನಾದ್ಯಕಾಮಃ ಕ್ವ ಸ್ಯ** ವೀರಃ ಎಂಬ ಸೂತ್ರದಿಂದ (ಆ. ೯-೭) ವಿವೃತವಾಗಿರುವುದು

## ಸೂಕ್ತ—೩೦

॥ ಮಂಡಲ—೫ ॥ ಅನುವಾಕ—೨ ॥ ಸೂಕ್ತ—೩೦ ॥
॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೨೬, ೨೭, ೨೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫
ಋಷಿಃ—ಬಭ್ರುರಾತ್ರೇಯಃ ॥
ದೇವತಾ—ಇಂದ್ರ ಋಣಂಚಯಶ್ಚ ॥
ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

**ಕ್ವ೧ ಸ್ಯ ವೀರಃ ಕೋ ಅಪಶ್ಯದಿಂದ್ರಂ ಸುಖರಥಮೀಯಮಾನಂ ಹರಿಭ್ಯಾಂ।**
**ಯೋ ರಾಯಾ ವಜ್ರೀ ಸುತಸೋಮಮಿಚ್ಛನ್ತದೋಕೋ ಗಂತಾ ಪುರುಹೂತ ಊತೀ ॥ ೧ ॥**

॥ ಪದಪಾಠಃ ॥

ಕ್ವ । ಸ್ಯಃ । ವೀರಃ । ಕಃ । ಅಪಶ್ಯತ್ । ಇಂದ್ರಂ । ಸುಖsರಥಂ । ಈಯಮಾನಂ । ಹರಿsಭ್ಯಾಂ ।

ಯಃ । ರಾಯಾ । ವಜ್ರೀ । ಸುತsಸೋಮಂ । ಇಚ್ಛನ್ । ತತ್ ॥ ಓಕಃ । ಗಂತಾ । ಪುರುsಹೂತಃ । ಊತೀ ॥ ೧ ॥

॥ ಸಾಯಣಭಾಷ್ಯಂ ॥

ವಜ್ರೀ ವಜ್ರವಾನ್ ಪುರುಹೂತೋ ಬಹುಭಿರಾಹೂತೋ ಯ ಇಂದ್ರೋ ರಾಯಾ ದೇಯೇನ ಧನೇನ ಸಹ ಸುತಸೋಮಮಿಚ್ಛನ್ ಅಭಿಷುತಸೋಮಂ ಯಜಮಾನಮನ್ವಿಚ್ಛನ್ ಊತೀ ಊತ್ಯೈ ರಕ್ಷಾಯೈ ತತ್ತಸ್ಯ ಯಜಮಾನಸ್ಯೌಕೋ ಗೃಹಂ ಗಂತಾ ಪ್ರಾಪ್ತೋ ಭವತಿ ವೀರೋ ವಿಕ್ರಾಂತಃ ಸ್ಯ ಸ ಇಂದ್ರಃ ಕ್ವ ಕುತ್ರ ವಿದ್ಯತೇ । ಸುಖರಥಂ ಶೋಭನಾಕ್ಷದ್ವಾರೋ ರಥೋ ಯಸ್ಯ ಸ ಸುಖರಥಃ । ಸುಷ್ಠು ಖನತಿ ಲಿಖತಿ ಭೂಮಿಮಿತಿ ವಾ ಸುಖಂ । ಕಾದ್ಯಗ್ರಥಂ । ಸುಹಿತಂ ಖೇಭ್ಯಃ ಖಂ ಪುನಃ ಖನತೇರಿತಿ ಯಾಸ್ಕಃ । ನಿ. ೩-೧೩ । ಹರಿಭ್ಯಾಂ ಸ್ವವಾಹನಾಭ್ಯಾಮಶ್ವಾಭ್ಯಾಮೀಯಮಾನಂ ಗಚ್ಛಂತಮಿಂದ್ರಂ ಕೋಽಪಶ್ಯತ್ । ಕಶ್ಚ ದದೃಶೇ ॥

॥ ಪ್ರತಿಪದಾರ್ಥ ॥

**ವಜ್ರೀ**—ವಜ್ರಾಯುಧವನ್ನು ಹಿಡಿದಿರುವವನೂ । **ಪುರೂಹೂತಃ**—ಅನೇಕರಿಂದ ಕರೆಯಲ್ಪಡುವವನೂ ಆದ । **ಯಃ**—ಯಾವ ಇಂದ್ರನು। **ಸುತಸೋಮಮಿಚ್ಛನ್**-ಹಿಂಡಿದ ಸೋಮವನ್ನು ಹಿಡಿದಿರುವ ಯಜಮಾನನನ್ನು ಅರಸುತ್ತಾ । **ರಾಯಾ**—ಧನದೊಡನೆ । **ಊತೀ**—ಅವನ ರಕ್ಷಣೆಗಾಗಿ । **ತತ್**—ಆ ಯಜಮಾನನ । **ಓಕಃ**—ಗೃಹಕ್ಕೆ। **ಗಂತಾ**—ಹೋಗುವವನೋ ಅಂತಹ । **ವೀರಃ**—ವೀರನಾದ ।**ಸ್ಯಃ**—ಆ ಇಂದ್ರನು । **ಕ್ವ**—ಎಲ್ಲಿದ್ದಾನೆ ? । **ಸುಖರಥಂ**—ಸುಖಕಾರಕವಾದ ರಥವುಳ್ಳವನೂ । **ಹರಿಭ್ಯಾಂ**—ಅಶ್ವಗಳೊಡನೆ । **ಈಯಮಾನಂ**—ಹೋಗುತ್ತಿರುವವನೂ ಆದ । **ಇಂದ್ರಂ**—ಇಂದ್ರನನ್ನು । **ಕಃ**—ಯಾವನು । **ಅಪಶ್ಯತ್**—ನೋಡಿದ್ದಾನೆ ?

॥ ಭಾವಾರ್ಥ ॥

ವಜ್ರಾಯುಧವನ್ನು ಹಿಡಿದಿರುವವನೂ, ಅನೇಕರಿಂದ ಕರೆಯಲ್ಪಡುವವನೂ ಆದ ಯಾವ ಇಂದ್ರನು ಸೋಮವನ್ನು ಹಿಂಡಿ ತನಗೆ ಅರ್ಪಿಸಲು ಹಿಡಿದಿರುವ ಯಜಮಾನನನ್ನು ಹುಡುಕಿ ಅವನಿಗೆ ಕೊಡಲು ಧನದೊಡನೆ ಆ ಯಜಮಾನನ ಗೃಹಕ್ಕೆ ಹೋಗುವನೋ ಅಂತಹ ವೀರನಾದ ಆ ಇಂದ್ರನು ಎಲ್ಲಿದ್ದಾನೆ ? ಸುಖಕಾರಕವಾದ ರಥವುಳ್ಳವನೂ, ಅಶ್ವಗಳೊಡನೆ ಹೋಗುತ್ತಿರುವವನೂ ಆದ ಇಂದ್ರನನ್ನು ಯಾವನು ನೋಡಿದ್ದಾನೆ ?

English Translation

Where is that hero ? who has seen Indra seated in his easy chariot, travelling with his horses, the thunderer, the invoked of many, who, desirous of the libation, is proceeding with riches to the habitation (of his worshipper) for his preservation ?

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಋಷಿಯು ಇಂದ್ರನ ಗುಣವರ್ಣನೆಯನ್ನು ಮಾಡುವುದಲ್ಲದೆ ಇಂದ್ರನು ಎಲ್ಲಿದ್ದಾನೆ ? ಆ ಇಂದ್ರನನ್ನು ಯಾವನು ನೋಡಿದ್ದಾನೆ ? ಎಂದು ಪ್ರಶ್ನೆಮಾಡಿ ಮುಂದಿನ ಋಕ್ಕಿನಲ್ಲಿ ಈ ಪ್ರಶ್ನೆಗಳಿಗೆ ಒಂದು ವಿಧವಾದ ಉತ್ತರವನ್ನು ತಾನೇ ಹೇಳಿದ್ದಾನೆ

ಓಕಃ—ಈ ಶಬ್ದಕ್ಕೆ ಯಾಸ್ಕರು **ಓಕ ಇತಿ ನಿವಾಸನಾಮೋಚ್ಯತೇ ।** (ನಿ. ೩-೩) ಓಕಃಶಬ್ದಕ್ಕೆ ನಿವಾಸಸ್ಥಾನ ಎಂದರೆ ವಾಸಮಾಡುವ ಮನೆ ಎಂಬರ್ಥವನ್ನು ಹೇಳಿದಾರೆ

ವೀರಃ—ವೀರಶಬ್ದಕ್ಕೆ ಯಾಸ್ಕರು—**ವೀರೋ ವೀರಯತ್ಯಮಿತ್ರಾನ್ । ವೇತೇರ್ವಾ ಸ್ಯಾದ್ಗತಿಕರ್ಮಣೋ ವೀರಯತೇರ್ವಾ** (ನಿ ೧-೭) ಎಂದು ನಿರ್ವಚನವನ್ನು ಹೇಳಿದಾರೆ. ಎಂದರೆ ಶತ್ರುಗಳನ್ನು ಯುದ್ಧದಲ್ಲಿ ಹೊಡೆದೋಡಿಸಿ ಚದುರಿಹೋಗುವಂತೆ ಮಾಡುವವನಿಗೆ ವೀರನೆಂದು ಹೆಸರು ಅಥವಾ ಹೋಗು ಎಂಬರ್ಥವುಳ್ಳ ವೀ ಎಂಬ ಧಾತುವಿನಿಂದ ವೀರಶಬ್ದವು ನಿಷ್ಪನ್ನವಾಗುವುದೆಂದು ಭಾವಿಸಿದರೆ ಹೋಗುವವನು ಎಂದರೆ ಯುದ್ಧದಲ್ಲಿ ಮುನ್ನುಗ್ಗಿ ಹೋಗುವವನು ಎಂದರ್ಥವಾಗಬಹುದು ಅಥವಾ **ವೀರ್** ಧಾತುವಿನಿಂದ ನಿಷ್ಪನ್ನವಾದಲ್ಲಿ ವೀರಶಬ್ದಕ್ಕೆ ಪ್ರಬಲವಾದ ಶಕ್ತಿಯುಳ್ಳವನು ಎಂಬರ್ಥವಾಗುವುದು ಎಂದು ಮೂರು ವಿಧವಾದ ಅರ್ಥವನ್ನು ವಿವರಿಸಿದಾರೆ.

**ಸುಖರಥಂ—ಶೋಭಾನಾಕ್ಷದ್ವಾರಃ ರಥೋ ಯಸ್ಯ ಸ ಸುಖರಥಃ । ಸುಷ್ಠು ಖನತಿ ಲಿಖತಿ ಭೂಮಿಮಿತಿ ವಾ ಸುಖಂ ತಾದೃಗ್ರಥಂ ।** ಸುಖಕರವಾದ ರಥವುಳ್ಳವನು ಎಂದರೆ ಇಂದ್ರನ ರಥದಲ್ಲಿ ನೆತ್ತನೆಯ ಆಸನವನ್ನು ಸಜ್ಜುಗೊಳಿಸಿರುವುದರಿಂದ ಕುಳಿತುಕೊಳ್ಳಲು ಸುಖವಾಗಿರುವುದು ಅಥವಾ ಸುಖಶಬ್ದಕ್ಕೆ ಚೆನ್ನಾಗಿ ಭೂಮಿಯಲ್ಲಿ (ರಥದ ಚಕ್ರವು) ಗುರುತುಮಾಡಿಕೊಂಡು ಹೋಗುವುದರಿಂದ ಸುಖವೆಂದು ಹೆಸರು. ಅಥವಾ ಯಾಸ್ಕರು ಸುಖಶಬ್ದಕ್ಕೆ—**ಸುಖಂ ಕಸ್ಮಾತ್ ಸುಹಿತಂ ಖೇಭ್ಯಃ । ಖಂ ಪುನಃ ಖನತೇಃ** (ನಿ. ೩-೧೩) ಎಂದು ನಿರ್ವಚನವನ್ನು ಹೇಳಿದಾರೆ ಖಂ ಶಬ್ದವು ಅಗಿ ಎಂಬರ್ಥವುಳ್ಳ **ಖನ್** ಧಾತುವಿನಿಂದ ನಿಷ್ಪನ್ನವಾಗಿ ಇಂದ್ರಿಯಗಳಿಗೆ ಹಿತಕರವಾಗಿರುವುದೆಂಬ ಅರ್ಥವನ್ನು ಕೊಡುವುದು.

**ಹರಿಭ್ಯಾಂ—ಸ್ವವಾಹನಾಭ್ಯಾಂ ಅಶ್ವಿಭ್ಯಾಂ ।** ಇಂದ್ರನ ಅಶ್ವಗಳು ಎರಡು. ಅವುಗಳಿಗೆ ಹರೀ ಎಂದು ಹೆಸರು. ನಾನಾ ದೇವತೆಗಳ ವಾಹನಗಳನ್ನು ಯಾಸ್ಕರು ವಿವರಿಸುತ್ತಾ—

> **ಹರೀ ಇಂದ್ರಸ್ಯ । ರೋಹಿತೋಽಗ್ನೇಃ । ಹರಿತ ಆದಿತ್ಯಸ್ಯ । ರಾಸಭಾವಶ್ವಿನೋಃ । ಅಜಾಃ ಪೂಷ್ಣಃ । ಪೃಷತ್ಯೋ ಮರುತಾಂ । ಅರುಣ್ಯೋ ಗಾವ ಉಷಸಃ । ಶ್ಯಾವಾಃ ಸವಿತುಃ । ವಿಶ್ವರೂಪಾ ಬೃಹಸ್ಪತೇಃ । ನಿಯುತೋ ವಾಯೋಃ ॥**
>
> (ನಿ ೨-೨೮)

ಇಂದ್ರನಿಗೆ ಹರೀ ಎಂಬ ಹೆಸರಿನ ಎರಡು ಅಶ್ವಗಳೇ ವಾಹನವು, ಅಗ್ನಿಗೆ ಕೆಂಪುಬಣ್ಣದ ಅಶ್ವವು, ಆದಿತ್ಯನಿಗೆ ಹಸುರು ಬಣ್ಣದ ಅಶ್ವಗಳು, ಅಶ್ವಿನೀದೇವತೆಗಳಿಗೆ ಎರಡು ಕತ್ತೆಗಳು, ಪೂಷನ್ ಎಂಬ ದೇವತೆಗೆ ಆಡುಗಳು, ಮರುದ್ದೇವತೆಗಳಿಗೆ ಚಿಕ್ಕೆಗಳುಳ್ಳ ಜಿಂಕೆಗಳು, ಉಷೋದೇವತೆಗೆ ಕೆಂಬಣ್ಣದ ಹಸುಗಳು, ಸವಿತೃದೇವತೆಗೆ ಮಾಸಲು ಕೆಂಪು ಬಣ್ಣದ ಕುದುರೆಗಳು, ಬೃಹಸ್ಪತಿಗೆ ವಿಚಿತ್ರ ಮತ್ತು ನಾನಾರೂಪಗಳುಳ್ಳ ಅಶ್ವಗಳು, ವಾಯುವಿಗೆ ನಿಯುತ್ ಎಂಬ ಹೆಸರಿನ ಅಶ್ವವು ಎಂದು ದೇವತೆಗಳಿಗೆ ಇರುವ ನಾನಾವಿಧ ವಾಹನಗಳನ್ನು ವಿವರಿಸಿದಾರೆ.

॥ ಸಂಹಿತಾಪಾಠಃ ॥

ಅವಾಚಚಕ್ಷಂ ಪದಮಸ್ಯ ಸಸ್ವರುಗ್ರಂ ನಿಧಾತುರನ್ವಾಯಮಿಚ್ಛನ್ ।
ಅಪೃಚ್ಛಮನ್ಯಾಁ ಉತ ತೇ ಮ ಆಹುರಿಂದ್ರಂ ನರೋ ಬುಬುಧಾನಾ
ಅಶೇಮ ॥ ೨ ॥

॥ ಪದಪಾಠಃ ॥

ಅವ । ಅಚಚಕ್ಷಂ । ಪದಂ । ಅಸ್ಯ । ಸಸ್ವಃ । ಉಗ್ರಂ । ನಿಽಧಾತುಃ । ಅನು । ಆಯಂ । ಇಚ್ಛನ್ ।
ಅಪೃಚ್ಛಂ । ಅನ್ಯಾನ್ । ಉತ । ತೇ । ಮೇ । ಆಹುಃ । ಇಂದ್ರಂ । ನರಃ । ಬುಬುಧಾನಃ । ಅಶೇಮ ॥

॥ ಸಾಯಣಭಾಷ್ಯಂ ॥

ಅಸ್ಯೇಂದ್ರಸ್ಯ ಪದಂ ಸ್ಥಾನಮವಾಚಚಕ್ಷಂ । ಅಹಮವಾದ್ರಾಕ್ಷಂ । ಕೀದೃಶಂ । ಸಸ್ವೋಽಂತರ್ಹಿತಮುಗ್ರಮುದ್ಗೂರ್ಣಂ। ಕಿಂಚ ಇಚ್ಛನ್ನಿಂದ್ರಮನ್ವಿಚ್ಛನ್ನಹಂ ನಿಧಾತುಃಸ್ವಂ ಸ್ಥಾಪಯಿತುರಸ್ಯೇಂದ್ರಸ್ಯ ಪದಮನ್ವಾಯಂ । ಅನ್ವಗಮಂ । ಅನ್ಯಾನುತಾನ್ಯಾನ್ವಿದುಷೋಽಪಿ ಮಾರ್ಗ ಇಂದ್ರಮಪೃಚ್ಛಂ । ಪೃಷ್ಟವಾನಸ್ಮಿ । ಪೃಷ್ಟಾಸ್ತೇ ಮೇ ಮಹ್ಯಮಿಂದ್ರಮಾಹುಃ । ಕಿಮಾಹುರಿತ್ಯುಚ್ಯತೇ । ನರೋ ಯಜ್ಞಾನಾಂ ನೇತಾರೋ ಬುಬುಧಾನಾ ಬುಭುತ್ಸಮಾನಾ ವಯಮಶೇಮ । ಇಂದ್ರಂ ಪ್ರಾಪ್ತವಂತಃ ಸ್ಮಃ । ಯದ್ಯಪೀಂದ್ರೋ ವಿದ್ಯತೇ ತಥಾಪಿ ದುರ್ಲಭಶ್ಚೇದನುಪಗಂತವ್ಯ ಇತಿ ಬುಭುತ್ಸಮಾನಃ ಸ್ವಭಾವಮಪೃಚ್ಛತ್ ಪೃಷ್ಟೈಶ್ಚ ಸುಲಭ ಇತ್ಯುಕ್ತ ಇಂದ್ರಸ್ಯ ಪ್ರಾಪ್ತ್ಯರ್ಥಂ ಸೂಕ್ತಶೇಷಮಪಶ್ಯದಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಸ್ಯ**—ಇಂದ್ರನ । **ಸಸ್ವಃ**—ಗೂಢವಾದುದೂ । **ಉಗ್ರಂ**—ಭಯಂಕರವಾದುದೂ ಆದ । **ಪದಂ**—ಸ್ಥಾನವನ್ನು । **ಅವಾಚಚಕ್ಷಂ**—ನಾನು ತಳಬಗ್ಗಿ ನೋಡಿದ್ದೇನೆ । **ನಿಧಾತುಃ**—ಸ್ವಯಂಸ್ಥಾಪಿತನಾದ ಇಂದ್ರನ (ಸ್ಥಾನವನ್ನು) । **ಇಚ್ಛನ್**—ದರ್ಶನಾಪೇಕ್ಷೆಯಿಂದ । **ಅನ್ವಾಯಂ**—ಆ ಪ್ರದೇಶಕ್ಕೆ ಹೋದೆನು । **ಉತ**—ಮತ್ತು **ಅನ್ಯಾನ್**—ಇತರ ಪ್ರಾಜ್ಞರನ್ನೂ ಸಹ । **ಅಪೃಚ್ಛಂ**—ಕೇಳಿದೆನು । **ನರಃ**—ಯಜ್ಞಕ್ಕೆ ನೇತೃಗಳೂ । **ಬುಬುಧಾನಾಃ**—ಇಂದ್ರಸ್ಥಾನವನ್ನು ತಿಳಿದವರೂ ಆದ ನಾವು । **ಅಶೇಮ**—ಇಂದ್ರನ ಸಾನ್ನಿಧ್ಯವನ್ನು ಪಡೆಯೋಣ (ಎಂಬುದಾಗಿ) । **ತೇ**— ಅವರು । **ಮೇ**—ನನಗ । **ಇಂದ್ರಂ**—ಇ ದ್ರನ ವಿಷಯವಾಗಿ । **ಆಹುಃ**—ಹೇಳಿದರು.

॥ ಭಾವಾರ್ಥ ॥

ಇಂದ್ರನ ಗೂಢವಾದುದೂ, ಭಯಂಕರವಾದುದೂ ಆದ ಸ್ಥಾನವನ್ನು ನಾನು ಕೆಳಬಗ್ಗಿ ನೋಡಿದ್ದೇನೆ. ಸ್ವಯಂಸ್ಥಾಪಿತನಾದ ಇಂದ್ರನ ಸ್ಥಾನವನ್ನು ಸಮೀಪಿಸಿ ವೀಕ್ಷಿಸಬೇಕೆಂಬಾಸೆಯಿಂದ ಆ ಪ್ರದೇಶಕ್ಕೆ ಹೋದೆನು. ಮತ್ತು ಈ ವಿಷಯದಲ್ಲಿ ಇತರ ಪ್ರಾಜ್ಞರನ್ನೂ ಕೇಳಿದೆನು. ಯಜ್ಞಕ್ಕೆ ನೇತೃಗಳೂ ಇಂದ್ರನ ಸ್ಥಾನವನ್ನು ತಿಳಿದವರೂ ಆದ ಅವರು "ನಾವು ಇಂದ್ರನನ್ನು ಪಡೆಯೋಣ' ಎಂಬುದಾಗಿ ಹೇಳಿದರು

## English Translation

I have looked down upon the secret and fearful place of his abiding, I have repaired, desiring him, (to the place of) the self-sustainer; I have inquired (of him) from others: they, the leaders (of rites), the searchers after wisdom, have said to me, let us have recourse to Indra.

॥ ಸಂಹಿತಾಪಾಠಃ ॥

ಪ್ರ ನು ವಯಂ ಸುತೇ ಯಾ ತೇ ಕೃತಾನೀಂದ್ರ ಬ್ರವಾಮ ಯಾನಿ ನೋ
ಜುಜೋಷಃ ।
ವೇದದವಿದ್ವಾಞ್ಛೃಣವಚ್ಚ ವಿದ್ವಾನ್ವಹತೇಽಯಂ ಮಘವಾ ಸರ್ವಸೇನಃ ॥

॥ ಪದಪಾಠಃ ॥

ಪ್ರ । ನು । ವಯಂ । ಸುತೇ । ಯಾ । ತೇ । ಕೃತಾನಿ । ಇಂದ್ರ । ಬ್ರವಾಮ । ಯಾನಿ । ನಃ । ಜುಜೋಷಃ ।
ವೇದತ್ । ಅವಿದ್ವಾನ್ । ಶೃಣವತ್ । ಚ । ವಿದ್ವಾನ್ । ವಹತೇ । ಅಯಂ । ಮಘಽವಾ ।
ಸರ್ವಽಸೇನಃ ॥ ೩ ॥

॥ ಸಾಯಣಭಾಷ್ಯಂ

ಹೇ ಇಂದ್ರ ತೇ ತ್ವದೀಯಾನಿ ಯಾನಿ ಕೃತಾನಿ ಕರ್ಮಾಣಿ ಸಂತಿ ನು ಅದ್ಯ ವಯಂ ಸ್ತೋತಾರಃ ಸುತೇ ಸೋಮೇಽಭಿಷುತೇ ಸತಿ ತಾನಿ ಕರ್ಮಾಣಿ ಪ್ರ ಬ್ರವಾಮ । ಪ್ರಕರ್ಷೇಣ ವದಾಮ । ತ್ವಮಪಿ ನೋಽಸ್ಮದರ್ಥಂ ಯಾನಿ ಕರ್ಮಾಣಿ ಜುಜೋಷಃ ಅಸೇವಥಾಃ ತಾನಿ ಕರ್ಮಾಣ್ಯವಿದ್ವಾನ್ ಇತಃ ಪೂರ್ವಮಜಾನನ್ ಜನೋ ವೇದತ್ । ಜಾನಾತು । ವಿದ್ವಾನ್ ಶೃಣವಚ್ಚ । ಶೃಣುಯಾಚ್ಚ । ಯದ್ವಾ । ವಿದ್ವಾನ್ ಜಾನನ್ ಪುರುಷಃ ಶೃಣವಚ್ಚ । ಅಜಾನಂತಮಪಿ ಜನಂ ಶ್ರಾವಯೇಚ್ಚ । ಸರ್ವಸೇನಃ ಸರ್ವಾಭಿಃ ಸೇನಾಭಿರ್ಯುಕ್ತೋ ಮಘವಾ ಧನವಾನ್ ವಿದ್ವಾನ್ ಜಾನನ್ನಯಮಿಂದ್ರೋ ಜಾನತಶ್ಚ ಶೃಣ್ವತಶ್ಚ ತಾನ್ ಜನಾನ್ ಪ್ರತಿ ವಹತೇ। ಅಶ್ವೈರುಹ್ಯತೇ॥ ವ್ಯತ್ಯಯೇನ ಕರ್ತೃಪ್ರತ್ಯಯಃ॥ ಪ್ರಾಪಯತಿ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ತೇ**—ನಿನ್ನ । **ಯಾ ಕೃತಾನಿ**—ಯಾವ ವೀರ್ಯಕರ್ಮಗಳು ಉಂಟೋ ಅವನ್ನು । **ನು**—ಈಗ । **ವಯಂ**—ಸ್ತೋತೃಗಳಾದ ನಾವು । **ಸುತೇ**—ಅರ್ಪಣಕ್ಕಾಗಿ ಸೋಮರಸವನ್ನು ಹಿಂಡಿ ಸಿದ್ಧವಾಗಿರುವಾಗ । **ಪ್ರಬ್ರವಾಮ**—ಪ್ರಶಂಸಿಸುತ್ತೇವೆ । **ನಃ**—ನಮಗೆ ಸಹಾಯಾರ್ಥವಾಗಿ । **ಯಾನಿ**—ಯಾವ

ಯಾವ ಕರ್ಮಗಳನ್ನು । **ಜುಜೋಷಃ**—ಆಚರಿಸುವೆಯೋ ಅವುಗಳನ್ನು । **ಅವಿದ್ವಾನ್**—ತಿಳಿಯದೆ ಇರತಕ್ಕ ಜನವು । **ವೇದತ್**—ತಿಳಿಯಲಿ । **ವಿದ್ವಾನ್**—ಅದರ ಮಹಿಮೆಯನ್ನರಿತವನೂ । **ಶೃಣವಚ್ಚ**—ಇತರರಿಗೆ ತಿಳಿಯುವಂತೆ ಪ್ರಕಟಿಸಲಿ ।**ಸರ್ವಸೇನಃ**—ಸಕಲಸೇನೆಗಳೊಡನೆ ಕೂಡಿದವನೂ । **ಮಘವಾ**-ಧನವಂತನೂ ಆದ । **ಅಯಂ**—ಇಂದ್ರನು । **ವಹತೇ**—ಅಶ್ವಗಳಿಂದ ವಹಿಸಲ್ಪಡುತ್ತಾನೆ

॥ ಭಾವಾರ್ಥ ॥

ಎಲೈ ಇಂದ್ರನೇ, ಸ್ತುತಿಕರ್ತರಾದ ನಾವು ನಿನಗೆ ಅರ್ಪಿಸುವುದಕ್ಕಾಗಿ ಹಿಂಡಿದ ಸೋಮವನ್ನು ಹಿಡಿದಿರುವ ಕಾಲದಲ್ಲಿಯೇ ನಿನ್ನ ಸಕಲ ವೀರ್ಯಕರ್ಮಗಳನ್ನೂ ಪ್ರಶಂಸಿಸುತ್ತೇವೆ. ನಮಗೆ ಸಹಾಯಾರ್ಥವಾಗಿ ಯಾವ ಯಾವ ಕರ್ಮಗಳನ್ನು ಆಚರಿಸುತ್ತೆಯೋ ಅವುಗಳನ್ನು ತಿಳಿಯದೇ ಇರತಕ್ಕ ಜನರು ತಿಳಿಯಲಿ. ಅದರ ಮಹಿಮೆಯನ್ನರಿತವರು ಇತರರಿಗೆ ತಿಳಿಯುವಂತೆ ಪ್ರಕಟಿಸಲಿ ಸಕಲ ಸೇನೆಗಳೊಡನೆ ಕೂಡಿದವನೂ, ಧನವಂತನೂ ಆದ ಇಂದ್ರನು ಅಶ್ವಗಳಿಂದ ವಹಿಸಲ್ಪಡುತ್ತಾನೆ.

## English Translation

When the libation is offered, Indra, we celebrate your exploits ; those (exploits) which you have been pleased (to achieve) for us : let him who is ignorant acquire knowledge (of them), let him who is acquainted(with them) make them known : this Maghavan (is) the lord of hosts.

॥ ವಿಶೇಷವಿಷಯಗಳು ॥

ಇಂದ್ರನ ಸಾಹಸಕಾರ್ಯಗಳು ಅನೇಕವಾಗಿರುವವು. ಅವುಗಳನ್ನು ಕೆಲವರು ತಿಳಿದಿರುವರು, ಕೆಲವರು ತಿಳಿಯದೇ ಇರುವ ಜನರು ಕೇಳಿ ತಿಳಿಯಲೆಂದು ಆ ಇಂದ್ರನ ಸಾಹಸಕೃತ್ಯಗಳನ್ನು ನಾನು ಪ್ರಶಂಸೆ ಮಾಡುತ್ತೇನೆ ಎಂದು ಋಷಿಯು ಹೇಳಿದಾನೆ.

---

॥ ಸಂಹಿತಾಪಾಠಃ ॥

ಸ್ಥಿರಂ ಮನಶ್ಚಕೃಷೇ ಜಾತ ಇಂದ್ರ ವೇಷೀದೇಕೋ ಯುಧಯೇ ಭೂಯ-
ಸಶ್ಚಿತ್ ।

ಅಶ್ಮಾನಂ ಚಿಚ್ಛವಸಾ ದಿದ್ಯುತೋ ವಿ ವಿದೋ ಗವಾಮೂರ್ವಮುಸ್ರಿ-
ಯಾಣಾಂ ॥ ೪ ॥

॥ ಪದಪಾಠಃ ॥

ಸ್ಥಿರಂ । ಮನಃ । ಚಕೃಷೇ । ಜಾತಃ । ಇಂದ್ರ । ವೇಷಿ । ಇತ್ । ಏಕಃ । ಯುಧಯೇ । ಭೂಯಸಃ । ಚಿತ್ ।

ಅಶ್ಮಾನಂ । ಚಿತ್ । ಶವಸಾ । ದಿದ್ಯುತಃ । ವಿ । ವಿದಃ । ಗವಾಂ । ಊರ್ವಂ । ಉಸ್ರಿಯಾಣಾಂ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ಜಾತ ಉತ್ಪನ್ನಮಾತ್ರ ಏವ ತ್ವಂ ಸ್ಥಿರಂ ಚಲನರಹಿತಂ ಮನಶ್ಚಿತ್ತಂ ಚಕೃಷೇ । ಚಕರ್ಥ । ಸರ್ವಾನ್ ಬಲಿಷ್ಠಾನ್ ಜಯೇಯಮಿತೀದೃಶಂ । ತಥಾ ಹೇ ಇಂದ್ರ ಏಕ ಇದಸಹಾಯ ಏವ ತ್ವಂ ಯುಧಯೇ ಯುದ್ಧಾಯ ಭೂಯಸಶ್ಚಿತ್ ಬಹುತರಾನ್ ರಾಕ್ಷಸಾದೀನಪಿ ವೇಷಿ । ಅವೇಃ । ಅಗಮಃ । ಕಿಂಚ ಅಶ್ಮಾನಂ ಚಿತ್ ಗವಾಮಾವರಕಂ ಪರ್ವತಮಪಿ ಶವಸಾ ಬಲೇನ ವಿ ದಿದ್ಯುತಃ । ವ್ಯಭಿನಃ। ಕಿಂಚ ಉಸ್ರಿಯಾಣಾಂ ಕ್ಷೀರಮುತ್ಸಾರಯಂತೀನಾಂ ಗವಾಂ ಧೇನೂನಾಮೂರ್ವಂ ಸಮೂಹಂ ವಿದಃ । ಅವೇದಯಃ । ಅಲಂಭಯಃ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಜಾತಃ**—ನೀನು ಉತ್ಪನ್ನನಾದೊಡನೆಯೇ । **ಸ್ಥಿರಂ**—ಅಚಲವಾದ । **ಮನಃ**—(ಶತ್ರುನಾಶಕ್ಕಾಗಿ) ಮನಸ್ಸಂಕಲ್ಪವನ್ನು । **ಚಕೃಷೇ**—ಮಾಡಿದ್ದೀಯೆ । **ಏಕ ಇತ್**—ಇತರ ಸಹಾಯವಿಲ್ಲದೆ ನೀನೊಬ್ಬನೇ । **ಯುಧಯೇ**—ಯುದ್ಧಾರ್ಥವಾಗಿ । **ಭೂಯಸಶ್ಚಿತ್**—ಅತ್ಯಧಿಕ ಸಂಖ್ಯಾಕರಾದ ಶತ್ರುಗಳನ್ನೂ ಸಹ । **ವೇಷಿ**—ಎದುರಿಸಿ ಹೋಗಿದ್ದೀಯೆ । **ಅಶ್ಮಾನಂ ಚಿತ್**—(ಗೋವುಗಳನ್ನು ನಿರೋಧಿಸಿರುವ) **ಪರ್ವತದ ಶಿಲೆ**ಗಳನ್ನೂ ಸಹ । **ಶವಸಾ**—ನಿನ್ನ ಬಲದಿಂದ । **ವಿ ದಿದ್ಯುತಃ**—ಭೇದಿಸಿರುವೆ । **ಉಸ್ರಿಯಾಣಾಂ**—ಕ್ಷೀರದಾಯಿಗಳಾದ । **ಗವಾಂ**—ಗೋವುಗಳ । **ಊರ್ವಂ**—ಸಮೂಹವನ್ನು । **ವಿದಃ**—ಪಡೆದೆ.

॥ ಭಾವಾರ್ಥ ॥

ಎಲೈ ಇಂದ್ರನೇ ನೀನು ಉತ್ಪನ್ನನಾದೊಡನೆಯೆ,, ನಿನ್ನ ಶತ್ರುನಾಶಕ್ಕಾಗಿ ಸ್ಥಿರವಾದ ಮನಃಸಂಕಲ್ಪವನ್ನು ಮಾಡಿದೆ. ಇತರರ ಸಹಾಯವಿಲ್ಲದೇ ನೀನೊಬ್ಬನೇ ಯುದ್ಧಾರ್ಥವಾಗಿ ಅತ್ಯಧಿಕಸಂಖ್ಯಾಕರಾದ ಶತ್ರುಗಳನ್ನು ಎದುರಿಸಿ ಹೋಗಿರುವೆ ಗೋವುಗಳನ್ನು ನಿರೋಧಿಸಿರುವ ಪರ್ವತದ ಶಿಲೆಗಳನ್ನೂ ನಿನ್ನ ಬಲದಿಂದ ಭೇದಿಸಿರುವೆ. ಕ್ಷೀರದಾಯಿಗಳಾದ ಗೋವುಗಳ ಸಮೂಹವನ್ನು ಪಡೆದೆ

## English Translation

As soon as generated, Indra, you have made your mind resolved : you have gone alone to contend against numerous (foes) : you have rent asunder the rock by your strength : you have rescued the herd of milk-yielding cows.

॥ ವಿಶೇಷವಿಷಯಗಳು ॥

**ಅಶ್ಮಾನಂ ಚಿತ್ ಶವಸಾ ವಿ ದಿದ್ಯುತಃ—ಗವಾಮಾವರಕಂ ಪರ್ವತಮಪಿ ಬಲೇನ ವ್ಯಥಿನಃ ।** ಇಲ್ಲಿ ಒಂದು ಪೂರ್ವೇತಿಹಾಸದ ವಿಷಯವು ಸೂಚಿತವಾಗಿರುವಂತೆ ಭಾಸವಾಗುವುದು ಪೂರ್ವದಲ್ಲಿ ಪಣಿಗಳೆಂಬ ಅಸುರರು ದೇವತೆಗಳ ಗೋವುಗಳನ್ನು ಅಪಹರಿಸಿಕೊಂಡು ಹೋಗಿ ಒಂದು ಪರ್ವತದ ಗುಹೆಯಲ್ಲಿ ಯಾರಿಗೂ ಗೋಚರವಾಗದಂತೆ ಬಚ್ಚಿಟ್ಟಿದ್ದರು. ಇಂದ್ರನು ಸರಮೆಯೆಂಬ ದೇವಶುನಿಯಿಂದ ಈ ವೃತ್ತಾಂತವನ್ನು ತಿಳಿದು ಅಲ್ಲಿಗೆ ಹೋಗಿ ಆ ಪರ್ವತದ ಗುಹೆಗೆ ಅಡ್ಡಲಾಗಿ ಮುಚ್ಚಿದ್ದ ದೊಡ್ಡ ಕಲ್ಲನ್ನು (ಕಲ್ಲುಚಪ್ಪಡಿ) ಸೀಳಿ ಗೋವುಗಳನ್ನು ಬಿಡಿಸಿದನು ಎಂಬ ವಿಷಯವು ಋಗ್ವೇದದಲ್ಲಿ ಅನೇಕಕಡೆ ವರ್ಣಿತವಾಗಿದೆ . ಕೆಲವು ಋಕ್ಕುಗಳಲ್ಲಿ ಅಗ್ನಿಯೇ ಈ ಕಾರ್ಯವನ್ನು ಮಾಡಿದನೆಂದೂ ಹೇಳಿದೆ ಬೃಹಸ್ಪತಿ ಅಥವಾ ಅಂಗಿರಾಋಷಿಗಳಿಗೂ ಈ ಇತಿಹಾಸದಲ್ಲಿ ಪಾತ್ರವಿದೆ ಎಂದು ಅಲ್ಲಲ್ಲಿ ವರ್ಣಿತವಾಗಿದೆ

**ಉಸ್ರಿಯಾಣಾಂ—ಉಸ್ರಿಯೇತಿ ಗೋನಾಮ । ಉತ್ಸ್ರಾವಿಣೋಽಸ್ಯಾಂ ಭೋಗಾಃ । ಉಸ್ರೇತಿ ಚ ।** (ನಿ. ೪-೧೯) ಉಸ್ರಿಯಾ ಎಂದರೆ ಗೋವಿನ ಹೆಸರು, ಉಸ್ರಾ ಎಂದೂ ಹೇಳುವುದುಂಟು. ಏಕೆಂದರೆ ಈ ಗೋವಿನಿಂದ ಭೋಗಗಳು ಅಥವಾ ಭೋಗಸಾಧನವಾದ ಕ್ಷೀರಾದಿಗಳು (ಹಾಲು, ಮೊಸರು, ಬೆಣ್ಣೆ, ತುಪ್ಪ ಮೊದಲಾದುವು) ಸ್ರವಿಸುತ್ತವೆ ಎಂದರೆ ಕರೆಯುತ್ತವೆ ಅದುದರಿಂದ ಉಸ್ರಿಯಾಃ ಅಥವಾ ಉಸ್ರಾಃ ಎಂದರೆ ಗೋವುಗಳು ಎಂದು ಹೆಸರು ಎಂದು ಈ ಶಬ್ದಕ್ಕೆ ಅರ್ಥವಿವರಣೆಮಾಡಿದಾರೆ.

॥ ಸಂಹಿತಾಪಾಠಃ ॥

ಪರೋ ಯತ್ತ್ವಂ ಪರಮ ಆಜನಿಷ್ಠಾಃ ಪರಾವತಿ ಶ್ರುತ್ಯಂ ನಾಮ ಬಿಭ್ರತ್ ।
ಅತಶ್ಚಿದಿಂದ್ರಾದಭಯಂತ ದೇವಾ ವಿಶ್ವಾ ಅಪೋ ಅಜಯದ್ದಾಸಪತ್ನೀಃ ॥

॥ ಪದಪಾಠಃ ॥

ಪರಃ । ಯತ್ । ತ್ವಂ । ಪರಮಃ । ಆಽಜನಿಷ್ಠಾಃ । ಪರಾಽವತಿ । ಶ್ರುತ್ಯಂ । ನಾಮ । ಬಿಭ್ರತ್ ।
ಅತಃ । ಚಿತ್ । ಇಂದ್ರಾತ್ । ಅಭಯಂತ । ದೇವಾಃ । ವಿಶ್ವಾಃ । ಅಪಃ । ಅಜಯತ್ । ದಾಸಽಪತ್ನೀಃ ॥

॥ ಸಾಯಣಭಾಷ್ಯಂ ॥

**ಯದ್ಯದಾ ಹೇ ಇಂದ್ರ ಪರಃ ಪರಸ್ತಾದುಪರಿಷ್ಟಾತ್ಸ್ಥಿತಃ ಪರಮ ಉತ್ಕೃಷ್ಟತಮಸ್ತ್ವಂ ಪರಾವತಿ ದೂರೇ ಶ್ರುತ್ಯಂ ಶ್ರವಣೀಯಂ ನಾಮ ನಾಮಧೇಯಂ ಬಿಭ್ರತ್ ಧಾರಯನ್ನಾಜನಿಷ್ಠಾಃ ಆ ಸಮಂತಾದಜಾಯಥಾಃ । ಶೇಷಃ ಪರೋಕ್ಷಕೃತಃ । ಅತಶ್ಚಿದತ ಆರಭ್ಯೈವ ದೇವಾ ದ್ಯೋತಮಾನಾ ಅಗ್ನ್ಯಾ-**

**ದಯ ಇಂದ್ರಾದಭಯಂತ । ಬಿಭ್ಯುಃ। ವಿಶ್ವಾ ಅಪಃ ಸರ್ವಾಣ್ಯುದಕಾನೀಂದ್ರೋಽಜಯತ್ । ವಶೀಚಕ್ರೇ। ಕೀದೃಶೀಃ । ದಾಸಪತ್ನೀಃ । ದಾಸೋ ವೃತ್ರಃ ಪತಿಃ ಪಾಲಯಿತಾ ಯಾಸಾಮಪಾಂ ತಾ ಇತಿ ॥**

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಯತ್**—ಯಾವಾಗ । **ಪರಃ**—ಅತ್ಯುನ್ನತಪ್ರದೇಶಸ್ಥನೂ । **ಪರಮಃ**—ಉತ್ಕೃಷ್ಟತಮನೂ ಆದ । **ತ್ವಂ**—ನೀನು । **ಪರಾವತಿ**—ಅತಿದೂರ ಪ್ರದೇಶದಲ್ಲಿ । **ಶ್ರುತ್ಯಂ**—ಅತಿ ಪ್ರಸಿದ್ಧವಾದ । **ನಾಮ**-ಹೆಸರನ್ನು । **ಬಿಭ್ರತ್**—ಧರಿಸಿಕೊಂಡು । **ಆ ಜನಿಷ್ಠಾಃ**—ಉತ್ಪನ್ನನಾದೆಯೋ । **ಅತಶ್ಚಿತ್**—ಆ ಒಡನೆಯೇ । **ದೇವಾಃ**—ಅಗ್ನ್ಯಾದಿ ದೇವತೆಗಳು । **ಇಂದ್ರಾತ್**—ಪ್ರಭುವಾದ ನಿನಗೆ । **ಅಭಯಂತ**—ಬೆದರಿದರು । **ದಾಸ-ಪತ್ನೀಃ**—ವೃತ್ರನೇ ಪತಿಯಾಗಿ ಉಳ್ಳ । **ವಿಶ್ವಾ ಅಪಃ**—ಸಮಸ್ತ ಉದಕಗಳನ್ನೂ । **ಅಜಯತ್**—ನಿನ್ನ ವಶಮಾಡಿಕೊಂಡ

॥ ಭಾವಾರ್ಥ ॥

ಎಲೈ ಇಂದ್ರನೇ, ಅತ್ಯುನ್ನತ ಪ್ರದೇಶಸ್ಥನೂ, ಉತ್ಕೃಷ್ಟತಮನೂ ಆದ ನೀನು ಅತಿಪ್ರಸಿದ್ಧವಾದ ಹೆಸರನ್ನು ಹೊಂದಿ ಅತಿದೂರ ಪ್ರದೇಶದಲ್ಲಿ ಉತ್ಪನ್ನನಾದೊಡನೆಯೇ, ಅಗ್ನ್ಯಾದಿ ದೇವತೆಗಳು ಪ್ರಭುವಾದ ನಿನಗೆ ಬೆದರಿದರು. ವೃತ್ರಪತ್ನಿಯರಾದ ಸಮಸ್ತ ಉದಕಗಳನ್ನೂ ನಿನ್ನ ವಶಮಾಡಿಕೊಂಡೆ.

English Translation

When you have been born most excellent and supreme, bearing a name widely renowned, then the gods have been in dread of Indra, and has subjugated all the waters, the brides of the slave (Vritra)

॥ ವಿಶೇಷವಿಷಯಗಳು ॥

**ದಾಸಪತ್ನೀಃ – ದಾಸೋ ವೃತ್ರಃ ಪತಿಃ ಪಾಲಯಿತಾ ಯಾಸಾಮಪಾಂ ತಾ ಇತಿ ದಾಸಪತ್ನೀಃ ।** ದಾಸನಾದ ವೃತ್ರಾಸುರನೇ ಪಾಲಕನಾಗಿವುಳ್ಳ (ಮೇಘದಲ್ಲಿ ಸಂಗೃಹೀತವಾದ) ಉದಕಗಳು ಎಂದರ್ಥವು ಈ **ದಾಸಪತ್ನೀಃ** ಎಂಬ ಶಬ್ದವು—

**ದಾಸಪತ್ನೀರಹಿಗೋಪಾ ಅತಿಷ್ಠನ್ನಿರುದ್ಧಾ ಆಪಃ ಪಣಿನೇವ ಗಾವಃ ।**

(ಋ ಸಂ. ೧-೩೨-೧೧)

ಎಂಬ ಋಕ್ಕಿನಲ್ಲಿಯೂ ಪಠಿತವಾಗಿರುವುದು. ಅಲ್ಲಿ ಈ ಶಬ್ದಕ್ಕೆ—**ದಾಸಪತ್ನೀಃ ದಾಸೋ ವಿಶ್ವೋಪಕ್ಷಪಣ-ಹೇತುರ್ವೃತ್ರಃ ಪತಿಃ ಸ್ವಾಮೀ ಯಾಸಾಮಪಾಂ ತಾ ದಾಸಪತ್ನೀಃ** ಎಂದರೆ ಸಮಸ್ತಜಗತ್ತಿಗೂ ತೊಂದರೆಯನ್ನುಂಟುಮಾಡುತ್ತಿದ್ದ ವೃತ್ರನಿಗೆ ದಾಸನೆಂದು ಹೆಸರು. ಆ ದಾಸನ ಆಧಿಪತ್ಯಕ್ಕೊಳಪಟ್ಟು ಅವನಿಂದ ತಡೆಯಲ್ಪಟ್ಟ ಎಂದರೆ ಮೇಘಮಂಡಲದಲ್ಲಿ ವೃಷ್ಟಿಯನ್ನು ಸುರಿಸದೆ ತಡೆಯಲ್ಪಟ್ಟಿರುವ ಉದಕಗಳಿಗೆ **ದಾಸಪತ್ನೀಃ** ಎಂದು ಹೆಸರು ಎಂದು ಅರ್ಥವಿವರಣೆಮಾಡಿದ್ದಾರೆ. ವೃತ್ರನು ಯಾವ ಉದಕಗಳಿಗೆ ಪತಿಯೋ ಅಥವಾ ಸ್ವಾಮಿಯೋ ಅಂತಹ ಉದಕಗಳು. ವೃತ್ರನು ಮೇಘರೂಪದಿಂದಿರುವುದರಿಂದ ಅವನು ಮೇಘದಲ್ಲಿರುವ ಉದಕಗಳಿಗೆ ಸ್ವಾಮಿ

ಯೆಂದು ಹೇಳಲ್ಪಡುವನು. ಇವನ ಅಧಿಕಾರಕ್ಕೊಳಪಟ್ಟ ಎಂದರೆ ಇವನ ಅಧೀನದಲ್ಲಿರುವ ಉದಕಗಳು ಎಂದಭಿಪ್ರಾಯವು ಯಾಸ್ಕರು ಮೇಲಿನ ಋಕ್ಕಿಗೆ ನಿರ್ವಚನವನ್ನು ಹೇಳುತ್ತಾ—

**ದಾಸಪತ್ನೀರ್ದಾಸಾಧಿಪತ್ನ್ಯಃ । ದಾಸೋ ದಸ್ಯತೇರುಪದಾಸಯತಿ ಕರ್ಮಾಣಿ ॥**

(ನಿ. ೨-೧೭)

ಎಂದು ಹೇಳಿರುವರು. ದಾಸ ಎಂದರೆ **ಕರ್ಮಕರಃ** ಕೆಲಸಮಾಡುವವನು, ಕೀಳುವೃತ್ತಿಯಿಂದ ಜೀವಿಸುವವನು. ಅಂತಹ ಕೆಲಸಗಾರರನ್ನು **ಅಧಿಷ್ಠಾಯ ಪಾಂತಿ** ಎಂದರೆ ರಕ್ಷಿಸುವುದರಿಂದ ಉದಕಗಳಿಗೆ **ಅಧಿಪತ್ನ್ಯಃ** ಎಂದು ಹೆಸರು. ಕೆಲಸಗಾರನು ಕೆಲಸಮಾಡಿದ್ದರಿಂದ ಬಳಲಿ ನೀರನ್ನು ಕುಡಿದು ವಿಶ್ರಾಂತಿಯನ್ನು ಪಡೆದು ಸುಖವಾಗಿರುವುದರಿಂದ ಈ ಉದಕಗಳು ಅವನಿಗೆ ರಕ್ಷಣೆಯನ್ನು ಕೊಡುವವು ಎಂದು ಹೇಳಲಾಗುವುದು ಆದುದರಿಂದ ದಾಸಪತ್ನೀಃ ಎಂಬ ಶಬ್ದಕ್ಕೆ ಕೆಲಸಗಾರನನ್ನು ಆಪ್ಯಾಯನಗೊಳಿಸುವ ಉದಕಗಳು ಎಂದು ಹೇಳಬೇಕು ದಾಸಶಬ್ದಕ್ಕೆ—**ದಸ್ಯತೇಃ ಉಪದಾಸಯತಿ ಕರ್ಮಾಣಿ** । ಕೃಷ್ಯಾದಿಕರ್ಮಗಳನ್ನು ಮಾಡುವವನಿಗೆ ದಾಸನೆಂದು ಹೇಳಬೇಕು ಎಂದು ರೂಪ ನಿಷ್ಪತ್ತಿ ಇರುವುದು ಇದಲ್ಲದೆ ಈ ದೇಶದ ಪೂರ್ವನಿವಾಸಿಗಳನ್ನು ಆರ್ಯಜನಾಂಗದವರು ದಾಸ, ದಸ್ಯು ಎಂಬ ಹೆಸರುಗಳಿಂದ ಕರೆಯುತ್ತಿದ್ದರು ದೇವತೆಗಳನ್ನು ಭಜಿಸದ, ಯಜ್ಞಾದಿಗಳನ್ನು ಮಾಡದ ಮತ್ತು ಯಜ್ಞಾದಿಕರ್ಮಗಳಿಗೆ ವಿಘ್ನವನ್ನುಂಟುಮಾಡುವ, ಕಳ್ಳತನವೇ ಮೊದಲಾದ ದುರ್ವ್ಯಾಪಾರಗಳಲ್ಲಿ ಪ್ರವೃತ್ತರಾಗಿರುವ ಮತ್ತು ಆರ್ಯಜನರಿಗೆ ನಾನಾವಿಧ ತೊಂದರೆಗಳನ್ನು ಕೊಡುತ್ತಾ ಅವರೊಡನೆ ಯುದ್ಧಮಾಡುತ್ತಿರುವ ಈ ದೇಶದ ಅನಾಗರಿಕರೂ ಒರಟುಜನರೂ, ಕಪ್ಪುಬಣ್ಣದವರೂ ಆದ ಪೂರ್ವನಿವಾಸಿಗಳನ್ನು ಆರ್ಯಜನರು ದಾಸ, ದಸ್ಯು ಎಂಬ ಹೆಸರಿನಿಂದ ಕರೆಯುತ್ತಿದ್ದರು ಆದುದರಿಂದ ದುಷ್ಟವೃತ್ತಿಯುಳ್ಳ ಜನರಿಗೆ ಅಸುರ, ದಾಸ, ದಸ್ಯು ಎಂಬ ಹೆಸರು ಆ ಕಾಲದಲ್ಲಿ ರೂಢವಾಗಿದ್ದಿತು ವೃತ್ರನೂ ಸಹ ಜನರಿಗೆ ಉಪಯೋಗವಾಗುವ ವೃಷ್ಟ್ಯುದಕವನ್ನು ಭೂಮಿಯ ಮೇಲೆ ಬೀಳದಂತೆ ತಡೆದು ಜನರಿಗೆ ಹಿಂಸೆಯನ್ನುಂಟುಮಾಡುತ್ತಿದ್ದುದರಿಂದ ಇವನನ್ನು ದಾಸ ಎಂಬ ಹೆಸರಿನಿಂದಲೇ ಅನೇಕಕಡೆ ಕರೆದಿದೆ- ಈ ದಾಸನಾದ ವೃತ್ರಾಸುರನ ಅಧೀನಕ್ಕೊಳಪಟ್ಟ ಉದಕಗಳನ್ನು ನಿರ್ದೇಶಿಸುವಾಗ **ದಾಸಪತ್ನೀಃ ಅಪಃ** ಎಂಬ ಶಬ್ದಗಳನ್ನು ಪ್ರಕೃತ ಋಕ್ಕಿನಲ್ಲಿಯೂ ಉಪಯೋಗಿಸಲಾಗಿದೆ

॥ ಸಂಹಿತಾಪಾಠಃ ॥

ತುಭ್ಯೇದೇತೇ ಮರುತಃ ಸುಶೇವಾ ಅರ್ಚಂತ್ಯರ್ಕಂ ಸುನ್ವಂತ್ಯಂಧಃ ।
ಅಹಿಮೋಹಾನಮಪ ಆ ಶಯಾನಂ ಪ್ರ ಮಾಯಾಭಿರ್ಮಾಯಿನಂ ಸಕ್ಷ-
ದಿಂದ್ರಃ ॥ ೬ ॥

॥ ಪದಪಾಠಃ ॥

ತುಭ್ಯ । ಇತ್ । ಏತೇ । ಮರುತಃ । ಸುsಶೇವಾಃ । ಅರ್ಚಂತಿ । ಅರ್ಕಂ । ಸುನ್ವಂತಿ । ಅಂಧಃ ।

ಅಹಿಂ । ಓಹಾನಂ । ಅಪಃ । ಆsಶಯಾನಂ । ಪ್ರ । ಮಾಯಾಭಿಃ । ಮಾಯಿನಂ । ಸಕ್ಷತ್ । ಇಂದ್ರಃ ॥ ೬ ॥

॥ ಸಾಯಣಭಾಷ್ಯಂ ॥

ಏತೇ ಮರುತಃ । ಮಹದ್ರವಂತಿ ವದಂತೀತಿ ಮರುತಃ ಸ್ತೋತಾರಃ । ಸುಶೇವಾಃ । ಶೇವಮಿತಿ ಸುಖನಾಮೈತತ್ । ಶೋಭನಸುಖಾಃ ಸಂತಃ । ಸ್ತೋತ್ರೇಣ ಶೋಭನಂ ಸುಖಮುತ್ಪಾದಯಂತ ಇತ್ಯರ್ಥಃ । ಹೇ ಇಂದ್ರ ತುಭ್ಯೇತ್ತುಭ್ಯಮೇವಾರ್ಕಮರ್ಚನೀಯಂ ಸ್ತೋತ್ರಮರ್ಚಂತಿ । ಸ್ತುವಂತಿ ಕುರ್ವಂತೀತ್ಯರ್ಥಃ । ಅಂಧಃ ಸೋಮಲಕ್ಷಣಮನ್ನಂ ಸುನ್ವಂತಿ । ಅಭಿಷವಂ ಕುರ್ವಂತಿ । ಇಂದ್ರಃ ಪರಮೈಶ್ವರ್ಯಯುಕ್ತೋ ಮಾಯಾಭಿಃ ಸ್ವಕೀಯಾಭಿಃ ಶಕ್ತಿಭಿರಹಿಂ ವೃತ್ರಂ ಪ್ರಸಕ್ಷತ್ । ಅಭ್ಯಭವತ್ । ಕೀದೃಶಂ । ಓಹಾನಂ ದೇವಾನ್ಬಾಧಮಾನಮಪ ಉದಕಾನ್ಯಾಶಯಾನಮಾವೃತ್ಯ ಶಯನಂ ಕುರ್ವಂತಂ ಮಾಯಿನಂ ಕಪಟವಂತಮಿತಿ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಏತೇ ಮರುತಃ**—ಈ ಸ್ತುತಿಕರ್ತರು । **ಸುಶೇವಾಃ**—ಶ್ರೇಷ್ಠವಾದ ಸುಖವನ್ನುಂಟು ಮಾಡತಕ್ಕವರಾಗಿ । **ತುಭ್ಯೇತ್**—ನಿನ್ನನ್ನೇ ಉದ್ದೇಶಿಸಿ । **ಅರ್ಕಂ**—ಸ್ತೋತ್ರವನ್ನು । **ಅರ್ಚಂತಿ**—ನಿರ್ಮಿಸಿ ಸ್ತುತಿಸುತ್ತಾರೆ । **ಅಂಧಃ**—ಸೋಮರೂಪವಾದ ಅನ್ನವನ್ನು । **ಸುನ್ವಂತಿ**—(ನಿನಗಾಗಿ) ಹಿಂಡುತ್ತಾರೆ । **ಇಂದ್ರಃ**—ಪ್ರಭುವಾದ ಇಂದ್ರನು । **ಮಾಯಾಭಿಃ**—ತನ್ನ ಅಸಾಧಾರಣವಾದ ಶಕ್ತಿಗಳಿಂದ । **ಓಹಾನಂ**—(ದೇವತೆಗಳನ್ನು) ಹಿಂಸಿಸುವವನೂ । **ಅಪಃ**—ಉದಕಗಳನ್ನು । **ಆಶಯಾನಂ**—ಆವರಿಸಿ ಮಲಗಿದ್ದವನೂ । **ಮಾಯಿನಂ**—ವಂಚಕನೂ ಆದ । **ಅಹಿಂ**—ವೃತ್ರವನ್ನು । **ಪ್ರ ಸಕ್ಷತ್**—ಸೋಲಿಸಿದನು.

॥ ಭಾವಾರ್ಥ ॥

ಎಲೈ ಇಂದ್ರನೇ ! ಈ ಸ್ತುತಿಕರ್ತರು ಉತ್ತಮವಾದ ಸುಖವನ್ನು ಉಂಟುಮಾಡತಕ್ಕವರಾಗಿ ನಿನ್ನನ್ನೇ ಉದ್ದೇಶಿಸಿ ಸ್ತೋತ್ರವನ್ನು ನಿರ್ಮಿಸಿ ಸ್ತುತಿಸುತ್ತಾರೆ. ನಿನಗಾಗಿ ಸೋಮರೂಪವಾದ ಅನ್ನವನ್ನು ಹಿಂಡುತ್ತಾರೆ ಪ್ರಭುವಾದ ಇಂದ್ರನು ತನ್ನ ಅಸಾಧಾರಣವಾದ ಶಕ್ತಿಗಳಿಂದ ದೇವತೆಗಳನ್ನು ಹಿಂಸಿಸುವವನೂ ಉದಕಗಳನ್ನು ಆವರಿಸಿ ನಿಂತಿದ್ದವನೂ, ವಂಚಕನೂ ಆದ ವೃತ್ರವನ್ನು ಸೋಲಿಸಿದನು.

## English Translation

These devoted Maruts eulogise you with pious praise, and pour out to you the sacrificial food : Indra has overcome by his devices the guileful Ahi, harassing the gods and arresting the waters

॥ ವಿಶೇಷವಿಷಯಗಳು ॥

**ಮರುತಃ—ಮಹತ್ ರವಂತಿ ವದಂತೀತಿ ಮರುತಃ ಸ್ತೋತಾರಃ ।** ಬಹಳವಾದ ಉಚ್ಚಧ್ವನಿಯಿಂದ ಎಂದರೆ ಘಟ್ಟಿಯಾಗಿ ಶಬ್ದಮಾಡುವವರು ಎಂದರೆ ಸ್ತೋತ್ರ ಪಠನವನ್ನು ಘಟ್ಟಿಯಾಗಿ ಮಾಡುತ್ತಿರುವವರು, ಸ್ತುತಿಕರ್ತರು ಎಂದು **ಮರುತಃ** ಎಂಬ ಶಬ್ದಕ್ಕೆ ಅನ್ವಯಾರ್ಥವನ್ನು ಭಾಷ್ಯಕಾರರು ವಿವರಿಸಿದ್ದಾರೆ.

**ಸುಶೇವಾಃ—ಶೇವಮಿತಿ ಸುಖನಾಮೈತತ್ । ಶೋಭನಸುಖಾಃ ಸಂತಃ । ಸ್ತೋತ್ರೇಣ ಶೋಭನಂ ಸುಖಮುತ್ಪಾದಯಂತ ಇತ್ಯರ್ಥಃ ।** ಶೇವಶಬ್ದವು ಸುಖನಾಮಗಳಲ್ಲಿ ಪಠಿತವಾಗಿದೆ (ನಿ ೩–೧೩) ಯಾಸ್ಕರು ಈ ಶಬ್ದದ ವಿಷಯವಾಗಿ—

**ಶೇವ ಇತಿ ಸುಖನಾಮ ಶಿಷ್ಯತೇರ್ವಕಾರೋ ನಾಮಕರಣೋಽನ್ತಸ್ಥಾಂತರೋಪಲಿಂಗೀ ।**
**ವಿಭಾಷಿತಗುಣಃ ಶಿವಮಿತ್ಯಪ್ಯಸ್ಯ ಭವತಿ ॥**

(ನಿ ೧೦–೧೭)

ಎಂದು ಹೇಳಿದಾರೆ. ಶೇವ ಎಂಬ ಶಬ್ದಕ್ಕೆ ಸುಖವೆಂದು ಅರ್ಥವು. ಈ ಶಬ್ದವು **ಶಿಷ್** ಧಾತುವಿನಿಂದ ನಿಷ್ಪನ್ನವಾಗಿದೆ. ಹೇಗೆಂದರೆ–ಶಿಷ್ ಧಾತುವಿನ (ಶಿಷ್ಯತಿ) ಮಧ್ಯದಲ್ಲಿರುವ ಷಕಾರವು ಅಂತಸ್ಥವೆನ್ನಿಸುವುದು ಅಂತಸ್ಥವರ್ಣಗಳೆಂದರೆ **ಯ, ರ, ಲ,** ವ ಎಂಬ ಅಕ್ಷರಗಳು ಈ ಅಂತಸ್ಥವರ್ಣಗಳಲ್ಲಿರುವ ವಕಾರವು ಷಕಾರದ ಸ್ಥಾನವನ್ನು ಆಕ್ರಮಿಸುವುದು ಇದನ್ನೇ ನಾಮಕರಣವೆಂದು ಹೇಳುವರು ಆದುದರಿಂದ ಶಿಷ್ ಧಾತುವಿನ ಷಕಾರವು ಲೋಪವಾದರೆ ಶಿ ಎಂಬ ಅಕ್ಷರ ಮಾತ್ರ ಉಳಿಯುವುದು ಇದಕ್ಕೆ ಅಂತಸ್ಥವರ್ಣವಾದ ವಕಾರವನ್ನು ಪ್ರತ್ಯಯವಾಗಿ ಸೇರಿಸುವುದರಿಂದ ಶಿವ ಎಂದಾಗುವು. ಶಿ ಎಂಬ ಅಕ್ಷರಕ್ಕೆ ಗುಣವು ಬಂದು ಶೇ ಎಂದಾಗಿ ಶೇವ ಎಂಬ ಶಬ್ದವಾಗುವುದು ಶಿವ ಎಂಬ ಶಬ್ದಪ್ರಯೋಗವೂ ಇರುವುದು ಎಂದಭಿಪ್ರಾಯವು

**ಇತ್**—ಈ ಶಬ್ದವು ಋಗ್ವೇದದಲ್ಲಿ ಅಥವಾ ಇತರವೇದಗಳಲ್ಲಿಯೂ ಸಹ ಏವ ಎಂಬ ಅವಧಾರಣಾರ್ಥವನ್ನು ಸೂಚಿಸುವುದು ಕೆಲವು ಸಂದರ್ಭಗಳಲ್ಲಿ ಈ ಶಬ್ದಕ್ಕೆ ಯಾವ ಅರ್ಥವೂ ಇಲ್ಲದೆ ಛಂದಸ್ಸಿನಲ್ಲಿರಬೇಕಾದ ಅಕ್ಷರಗಳನ್ನು ಪೂರೈಸುವುದಕ್ಕಾಗಿ ಎಂದರೆ ಪದಪೂರಣಕ್ಕಾಗಿ ಉಪಯೋಗಿಸಲ್ಪಡುವುದು ಯಾಸ್ಕರು—

**ಅಥ ಯೇ ಪ್ರವೃತ್ತೇಽರ್ಥೇಽಮಿತಾಕ್ಷರೇಷು ಗ್ರಂಥೇಷು ವಾಕ್ಯಪೂರಣಾ**
**ಆಗಚ್ಛಂತಿ ಪದಪೂರಣಾಸ್ತೇ ಮಿತಾಕ್ಷರೇಷ್ವನರ್ಥಕಾಃ ಕಮೀಮಿದ್ವಿತಿ ।**

(ನಿ. ೧–೯)

ಎಂದು ಹೇಳಿರುವರು ಎಂದರೆ–**ಕಂ, ಈಂ, ಇತ್, ಉ** ಎಂಬ ನಿಪಾತಗಳು (ಅವ್ಯಯಗಳು) ಛಂದೋಬದ್ಧವಲ್ಲದ ಗದ್ಯರೂಪವಾದ ಗ್ರಂಥಗಳಲ್ಲಿ ವಾಕ್ಯಪೂರಣಾರ್ಥವಾಗಿಯೂ, ಮಿತಾಕ್ಷರ ಗ್ರಂಥಗಳಲ್ಲಿ ಎಂದರೆ ನಿರ್ದಿಷ್ಟ ಸಂಖ್ಯೆಯ ಅಕ್ಷರಗಳನ್ನೊಳಗೊಂಡಿರುವ ಛಂದಸ್ಸುಗಳಲ್ಲಿ ಪದಪೂರಣಾರ್ಥವಾಗಿಯೂ ಉಪಯೋಗಿಸಲ್ಪಡುವವು ಇಂತಹ ಸಂದರ್ಭಗಳಲ್ಲಿ ಈ ನಿಪಾತಗಳಿಗೆ ನಿರ್ದಿಷ್ಟವಾದ ಯಾವ ಅರ್ಥವೂ ಇರುವುದಿಲ್ಲ ಎಂದು ಹೇಳಿದಾರೆ ಆದರೂ ಸಂದರ್ಭಾನುಸಾರವಾಗಿ ಈ ಶಬ್ದಗಳಿಗೆ ನಾನಾವಿಧ ಅರ್ಥಗಳನ್ನೂ ಹೇಳಿರುವುದು ಕಂಡುಬಂದಿದೆ ಪ್ರಕೃತವಾದ **ಇತ್** ಎಂಬ ಶಬ್ದಕ್ಕೆ **ಏವ** ಎಂಬ ಶಬ್ದದ ಅರ್ಥವೇ ಸಾಧಾರಣವಾಗಿ ಬಳಕೆಯಲ್ಲಿರುವುದು ಪ್ರಕೃತ ಋಕ್ಕಿನಲ್ಲಿ ತುಭ್ಯೇತ್ ಎಂಬ ಶಬ್ದಗಳಿಗೆ (**ತುಭ್ಯ+ಇತ್**) ತುಭ್ಯಮೇವ ಎಂದೇ ಭಾಷ್ಯಕಾರರೂ ಅರ್ಥವಿವರಣೆಮಾಡಿದ್ದಾರೆ

**ಅರ್ಕಂ— ಅರ್ಚನೀಯಂ ಸ್ತೋತ್ರಂ ।** ಅಥವಾ **ಅರ್ಚಂತ್ಯೇಭಿರರ್ಕಾಃ ಮಂತ್ರಾಃ ।**
ಅರ್ಕವೆಂದರೆ ಸ್ತೋತ್ರವು. ಸ್ತೋತ್ರಮಾಡಲು ಉಪಯೋಗಿಸುವುದರಿಂದ ಮಂತ್ರಗಳಿಗೆ ಅಥವಾ ಸ್ತೋತ್ರಗಳಿಗೆ ಅರ್ಕ ಗಳೆಂದು ಹೆಸರು. ಇಲ್ಲಿ ಅರ್ಕಂ ಎಂದರೆ ಇಂತಹ ಅರ್ಚನೀಯ ಮಂತ್ರಗಳಿಂದ ಕೂಡಿದ ಸ್ತೋತ್ರವೆಂದರ್ಥವು. ಯಾಸ್ಕರು ಈ ಶಬ್ದದ ವಿಷಯದಲ್ಲಿ ನಾಲ್ಕು ವಿಧವಾದ ಅರ್ಥಗಳನ್ನು ಹೇಳಿದ್ದಾರೆ—

(೧) **ಅರ್ಕಃ । ಅರ್ಕೋ ದೇವೋ ಭವತಿ ಯದೇನಮರ್ಚಂತಿ ।**
(೨) **ಅರ್ಕೋ ಮಂತ್ರೋ ಭವತಿ ಯದನೇನಾರ್ಚಂತಿ ॥**
(೩) **ಅರ್ಕಮನ್ನಂ ಭವತ್ಯರ್ಚತಿ ಭೂತಾನಿ ।**
(೪) **ಅರ್ಕೋ ವೃಕ್ಷೋ ಭವತಿ ಸಂವೃತ್ತಃ ಕಟುಕಿಮ್ನಾ ॥**
(ನಿ ೫-೪)

ಅರ್ಕಶಬ್ದಕ್ಕೆ ನಾಲ್ಕುವಿಧವಾದ ಅರ್ಥವನ್ನು ಈರೀತಿ ಹೇಳಿರುವರು—

**ದೇವಃ— ತಾವತ್ಸರ್ವ ಏವಾರ್ಕ ಇತ್ಯುಚ್ಯತೇ ಯದಸ್ಮಾದೇನಂ ದೇವಮರ್ಚಂತಿ ಸ್ತೋತಾರಃ ।** ಅರ್ಕ ಎಂದರೆ ದೇವತೆಯು. ಏಕೆಂದರೆ, ಇದರಿಂದ ಭಕ್ತರು ಯಾರನ್ನು ಪೂಜಿಸುವುದಕ್ಕೆ ಉಪಯೋಗಿಸುವರೋ ಅಂತಹ ವ್ಯಕ್ತಿ ಅಥವಾ ದೇವನು ಎಂದರೆ ಭಕ್ತರು ಪೂಜಿಸುವ ವಸ್ತುವಿಗೆ (ದೇವತೆಗೆ) ಅರ್ಕವೆಂದು ಹೆಸರು.

**ಅರ್ಕೋ ಮಂತ್ರೋ ಭವತಿ ಯತ್ ಯಸ್ಮಾತ್ ಅನೇನ ಮಂತ್ರೇಣ ಅರ್ಚಂತಿ ಸ್ತೋತಾರಃ ತಸ್ಮಾದರ್ಕಃ ।** ಅರ್ಕವೆಂದರೆ ಮಂತ್ರವೆಂದೂ ಅರ್ಥವಾಗುವುದು. ಏಕೆಂದರೆ, ಸ್ತೋತ್ರಮಾಡುವವರು ಇದರಿಂದ (ಅರ್ಕದಿಂದ ಅಥವಾ ಮಂತ್ರದಿಂದ) ದೇವತೆಯನ್ನು ಅರ್ಚಿಸುವರು. ಆದುದರಿಂದ ಅರ್ಕಶಬ್ದಕ್ಕೆ ಮಂತ್ರವೆಂದೂ ಅರ್ಥವು

**ಅರ್ಕಮನ್ನಂ ಭವತಿ— ತದ್ಧಿ ಅರ್ಚತಿ ಭೂತಾನಿ ಯೋ ಹಿ ಪೂಜ್ಯಃ ತಸ್ಯಾನ್ನಮಪಿ ಸಂಸ್ಕಾರ-ವಿಶೇಷೇಣ ಸಂಸ್ಕೃತಂ ಪೂಜಾಯಾಂ ಕ್ರಿಯತೇ, ಪೂಜ್ಯಂ ಚ ಸರ್ವಸ್ಯೈವಾನ್ನಂ ।** ಅರ್ಕವೆಂದರೆ ಅನ್ನವೆಂದೂ ಅರ್ಥವಾಗುವುದು. ಅನ್ನವು (ಆಹಾರವು) ಸಮಸ್ತಪ್ರಾಣಿಗಳಿಗೂ ಅವಶ್ಯಕವಾಗಿರುವುದರಿಂದ ಅನ್ನವನ್ನು ಎಲ್ಲರೂ ಆದರದಿಂದ ಗೌರವಿಸಿ ಅಪೇಕ್ಷಿಸುವರು, ಎಂದರೆ ಎಲ್ಲರೂ ಪ್ರೀತ್ಯಾದರಗಳಿಂದ ಗೌರವಿಸಿ ಬಯಸುವುದರಿಂದ ಅರ್ಕಶಬ್ದಕ್ಕೆ ಅನ್ನವೆಂದು ಅರ್ಥವಾಗುವುದು.

**ಅರ್ಕೋ ವೃಕ್ಷೋ ಭವತಿ ಯ ಏಷ ಪ್ರಸಿದ್ಧಃ । ಸಂವೃತ್ತಃ ಹಿ ಸಂಗತಃ ಸಂವ್ಯಾಪ್ತಃ ಕಟುಕಿಮ್ನಾ ಕಟುಕಭಾವೇನ ಭವತಿ ।** ಇನ್ನು ಅರ್ಕಶಬ್ದಕ್ಕೆ ವೃಕ್ಷವಿಶೇಷವೆಂಬ ಅರ್ಥವು ಪ್ರಸಿದ್ಧವಾಗಿಯೇ ಇದೆ ಅರ್ಕವೃಕ್ಷವೆಂದರೆ ಎಕ್ಕದ ಗಿಡವೆಂದು ಕರ್ನಾಟಕ ಭಾಷೆಯಲ್ಲಿ ಹೇಳುವರು. ಇದರ ಸಮಿತ್ತುಗಳನು ಹೋಮಾದಿಗಳಲ್ಲಿ ಉಪಯೋಗಿಸುವುದರಿಂದಲೂ, ಇದರ ಹಾಲನ್ನೂ, ಎಲೆಗಳನ್ನೂ ಔಷಧಾದಿಗಳಲ್ಲಿ ಬಳಸುವ ರೂಢಿಯಿರುವುದರಿಂದಲೂ ಅರ್ಕವೃಕ್ಷವು ಎಲ್ಲರಿಗೂ ತಿಳಿದ ವಸ್ತುವಾಗಿದೆ. ಇದು ಕಹಿಯಾಗಿರುವುದರಿಂದ ಕಟುಕಿಮ್ನಾ ಎಂದು ಹೇಳುವರು.

**ಅಂಧಃ— ಸೋಮಲಕ್ಷಣಮನ್ನಂ ।** ಅಂಧಃಶಬ್ದವು ಇಪ್ಪತ್ತೆಂಟು ಅನ್ನನಾಮಗಳಲ್ಲಿ ಪಠಿತವಾಗಿದೆ. (ನಿ ೩-೭) ಈ ಶಬ್ದಕ್ಕೆ ಅನ್ನವೆಂಬರ್ಥವಿದ್ದರೂ ಸೋಮರಸವನ್ನು ನಿರ್ದೇಶಿಸುವ ಸಂದರ್ಭಗಳಲ್ಲಿ ಈ ಶಬ್ದವನ್ನು ಉಪಯೋಗಿಸುವುದು ಋಗ್ವೇದದಲ್ಲಿ ವಿಶೇಷ ರೂಢಿಯಲ್ಲಿದೆ. ಯಾಸ್ಕರು—

**ಅಂಧಃ । ಅಂಧ ಇತ್ಯನ್ನನಾಮಾಧ್ಯಾನೀಯಂ ಭವತಿ । . ತಮೋಽಪ್ಯಂಧ ಉಚ್ಯತೇ ನಾಸ್ಮಿನ್ ಧ್ಯಾನಂ ಭವತಿ । ನ ದರ್ಶನಮಂಧಂತಮ ಇತ್ಯಭಿಭಾಷಂತೇ । ಅಯಮಪೀತರೋ ಏತ-ಸ್ಮಾದೇವ । ಪಶ್ಯದಕ್ಷಣ್ವಾನ್ನ ವಿ ಚೇತದಂಧಃ ಇತ್ಯಪಿ ನಿಗಮೋ ಭವತಿ ॥**

(ನಿ. ೫-೧)

ಎಂದು ಈ ಶಬ್ದದ ನಿರ್ವಚನವನ್ನು ಹೇಳಿದಾರೆ ಅಂಧಸ್‌ಶಬ್ದಕ್ಕೆ ಅನ್ನವೆಂದು ಸಾಮಾನ್ಯಾರ್ಥವು ಏಕೆಂದರೆ, ಈ ಅನ್ನವನ್ನು ಸಕಲರೂ ಅರಿಸುವರು ಎಂದರೆ ತಮಗೆ ದೊರೆಯಬೇಕೆಂದು ಪ್ರಾರ್ಥಿಸುವರು ಅಂಧಃಶಬ್ದಕ್ಕೆ ಕತ್ತಲೆ ಯೆಂದೂ ಅರ್ಥವು ಏಕೆಂದರೆ ಕತ್ತಲಲ್ಲಿ ಯಾವುದನ್ನು ನೋಡುವುದಕ್ಕಾಗಲೀ, ಮನಸ್ಸಿಟ್ಟು ಆಲೋಚಿಸುವುದ ಕ್ಕಾಗಲೀ ಸಾಧ್ಯವಿರುವುದಿಲ್ಲ ಸಾಧಾರಣವಾಗಿ ಜನರು **ಅಂಧಂತಮಃ** ಎಂಬ ಶಬ್ದವನ್ನು ಏನೂ ಕಾಣಿಸದಿರುವ ಕಗ್ಗತ್ತಲೆ, ಗಾಢಾಂಧಕಾರ ಎಂಬರ್ಥದಲ್ಲಿ ಉಪಯೋಗಿಸುವರು. ಈ ಎರಡರ್ಥಗಳೂ ಒಂದೇ ಶಬ್ದದಿಂದ (ಅಥವಾ ಧಾತುವಿನಿಂದ) ನಿಷ್ಪನ್ನವಾಗಿವೆ. ಕಣ್ಣಿರುವವನು ನೋಡುತ್ತಾನೆ, ಕುರುಡನು ನೋಡಲಾಗುವುದಿಲ್ಲ ಎಂಬರ್ಥ ವಿರುವ **ಪಶ್ಯದಕ್ಷಣ್ವಾನ್ನ ವಿ ಚೇತದಂಧಃ** ಎಂಬ ವೇದವಾಕ್ಯವನ್ನು ಯಾಸ್ಕರು ಉದಾಹರಣೆಯಾಗಿ ಕೊಟ್ಟಿದಾರೆ.

**ಮಾಯಾಭಿಃ—ಸ್ವಕೀಯಾಭಿಃ ಶಕ್ತಿಭಿಃ ।** ತನ್ನ ಶಕ್ತಿಸಾಮರ್ಥ್ಯಗಳಿಂದ , ಮಾಯಾಶಬ್ದವು ಪ್ರಜ್ಞಾ ನಾಮಗಳಲ್ಲಿ ಪಠಿತವಾಗಿದೆ. (ನಿ. ೩-೧೩) ಮತ್ತು ಯಾಸ್ಕರು—**ಮೂರ್ಧಾ ಭುವೋ** ಎಂಬ ಋಕ್ಕಿನ ನಿರ್ವಚನ ವನ್ನು ಹೇಳುವಾಗ **ಮಾಯಾಂ-ಪ್ರಜ್ಞಾಂ** ಎಂದೂ (ನಿ. ೭-೨೭) **ಶುಕ್ರಂ ತೇ ಅನ್ಯತ್** ಎಂಬ ಋಕ್ಕಿನ ನಿರ್ವಚನವನ್ನು ಹೇಳುವಾಗ **ವಿಶ್ವಾ ಹಿ ಮಾಯಾಃ** ಎಂಬ ಶಬ್ದಗಳಿಗೆ **ಸರ್ವಾಣಿ ಪ್ರಜ್ಞಾನಾನಿ** (ನಿ ೧೨-೧೭) ಎಂದೂ ಅರ್ಥವಿವರಣೆ ಮಾಡಿದಾರೆ. ಈ ಶಬ್ದವನ್ನು ಅಸುರರ ವಿಷಯದಲ್ಲಿಯೂ, ಕೆಲವು ಸಂದರ್ಭಗಳಲ್ಲಿ ಇಂದ್ರನ ವಿಷಯವಾಗಿಯೂ ಉಪಯೋಗಿಸಿರುವ ಸಂದರ್ಭದಲ್ಲಿ ಮಾಯಾಶಬ್ದಕ್ಕೆ ಕುಟಿಲೋಪಾಯ, ಮಸಲತ್ತು ಮುಂತಾದ ಅರ್ಥಗಳಲ್ಲಿ ಪ್ರಯೋಗಿಸಲಾಗಿದೆ.

---

॥ ಸಂಹಿತಾಪಾಠಃ ॥

ವಿ ಷೂ ಮೃಧೋ ಜನುಷಾ ದಾನಮಿನ್ವನ್ನಹನ್ಗವಾ ಮಘವನ್ತ್ಸಂಚಕಾನಃ।
ಅತ್ರಾ ದಾಸಸ್ಯ ನಮುಚೇಃ ಶಿರೋ ಯದವರ್ತಯೋ ಮನವೇ ಗಾತು-
ಮಿಚ್ಛನ್ ॥ ೭ ॥

॥ ಪದಪಾಠಃ ॥

ವಿ । ಸು । ಮೃಧಃ । ಜನುಷಾ । ದಾನಂ । ಇನ್ವನ್ । ಅಹನ್ । ಗವಾ । ಮಘ್ಽವನ್ । ಸಂಽಚಕಾನಃ ।
ಅತ್ರ । ದಾಸಸ್ಯ । ನಮುಚೇಃ । ಶಿರಃ । ಯತ್ । ಅವರ್ತಯಃ । ಮನವೇ । ಗಾತುಂ । ಇಚ್ಛನ್ ॥ ೭ ॥

॥ ಸಾಯಣಭಾಷ್ಯಂ ॥

**ಹೇ ಮಘವನ್ ಧನವನ್ನಿಂದ್ರ ಸಂಚಕಾನೋಽಸ್ಮಾಭಿಃ ಸ್ತೂಯಮಾನಸ್ತ್ವಂ ॥ ಸಂಪೂರ್ವಃ ಕಾಯತಿಃ ಶಬ್ದಕರ್ಮಾ । ತಸ್ಯ ಲಡರ್ಥೇ ಲಿಟಿ ರೂಪಂ ॥ ದಾನಂ ದೇವಾನಾಂ ಬಾಧಕಂ ವೃತ್ರಮಸುರಂ ಗವಾ ವಜ್ರೇಣೇನ್ನನ್ ಪ್ರೇರಯನ್ ಹಿಂಸನ್ ಜನುಷಾ ಜನ್ಮನಾ ಮೃಧಸ್ತದನುಚರಾನ್ರಾಕ್ಷಸಾದೀನ್ ಶತ್ರೂನ್ ಸು ಸುಷ್ಠು ವ್ಯಹನ್ । ವಿಜಘಂಥ । ಇಂದ್ರಸ್ಯಾಸುರಾ ಜನ್ಮಾರಭ್ಯ ಶತ್ರವ ಇತ್ಯರ್ಥಃ । ಹೇ ಇಂದ್ರ ತ್ವಮತ್ರಾಸ್ಮಿನ್ಯುದ್ಧೇ ಮನವೇ ನಮುಚಿನಾಪಹೃತಗೋಧನಾಯ ಮಹ್ಯಂ ಗಾತುಂ ಸುಖಮಿಚ್ಛನ್ ಅಭಿಲಷನ್ ನಮುಚೇರೀತನ್ನಾಮಕಸ್ಯೋಪಕ್ಷಪಯಿತುರಸುರಸ್ಯ ಸಂಬಂಧಿ ಶಿರಃ ಶೀರ್ಷಂ ಯದ್ಯದಾವರ್ತಯಃ ಅಚೂರ್ಣಯಃ ತದಾ ಶತ್ರೂನ್ ವಿಜಘಂಥೇತಿ ಪೂರ್ವೇಣ ಸಂಬಂಧಃ ॥**

॥ ಪ್ರತಿಪದಾರ್ಥ ॥

**ಮಘವನ್** ಧನವಂತನಾದ ಇಂದ್ರನೇ । **ಅತ್ರ**—ಈ ಯುದ್ಧದಲ್ಲಿ । **ಮನವೇ**—ಮನುಸಂಬಂಧಿಯಾದ ನನಗೆ । **ಗಾತುಂ**—ಸುಖವನ್ನು । **ಇಚ್ಛನ್**—ಇಚ್ಛಿಸುತ್ತಾ । **ನಮುಚೇಃ**—ನಮುಚಿಯೆಂಬ ಹೆಸರುಳ್ಳ । **ದಾಸಸ್ಯ**—ಅಸುರನ । **ಶಿರಃ**—ತಲೆಯನ್ನು । **ಯತ್**—ಯಾವಾಗ । **ಅವರ್ತಯಃ**—ಕಡಿದೆಯೋ ಆಗ । **ಸಂಚಕಾನಃ**—ನಮ್ಮಿಂದ ಸ್ತುತನಾದ ನೀನು । **ದಾನಂ**—ದೇವತೆಗಳಿಗೆ ಹಿಂಸಕನಾದ ಅಸುರನನ್ನು । **ಗವಾ**—ವಜ್ರಾಯುಧದಿಂದ । **ಇನ್ವನ್**—ಹಿಂಸಿಸುತ್ತ । **ಜನುಷಾ**—ಜನ್ಮತಃ ಸ್ವಭಾವಗುಣದಿಂದಲೇ । **ಮೃಧಃ**—ಹಿಂಸಕರಾದ ಆ ಅಸುರನ ಅನುಚರರನ್ನೂ ಸಹ । **ಸು**—ಪೂರ್ಣವಾಗಿ । **ವಿ ಅಹನ್**—ನಾಶಮಾಡಿರುವೆ.

॥ ಭಾವಾರ್ಥ ॥

ಧನವಂತನಾದ ಎಲೈ ಇಂದ್ರನೇ, ಈ ಯುದ್ಧದಲ್ಲಿ ಮನುಸಂಬಂಧಿಯಾದ ನನಗೆ ಸುಖವನ್ನುಂಟುಮಾಡಲು ನಮುಚಿಯೆಂಬ ಹೆಸರುಳ್ಳ ಅಸುರನ ತಲೆಯನ್ನು ಯಾವಾಗ ಕಡಿದೆಯೋ ಆಗ ನೀನು ನಮ್ಮಿಂದ ಸ್ತುತನಾಗಿ ದೇವತೆಗಳಿಗೆ ಹಿಂಸಕನಾದ ಅಸುರನನ್ನು ವಜ್ರಾಯುಧದಿಂದ ಹಿಂಸಿಸುತ್ತಾ ಜನ್ಮತಃ ಸ್ವಭಾವಗುಣದಿಂದಲೇ ಹಿಂಸಕರಾದ ಅವನ ಅನುಚರರನ್ನೂ ಸಹ ಪೂರ್ಣವಾಗಿ ನಾಶಮಾಡಿರುವೆ.

## English Translation

Maghavan, you are glorified by us, assailing with the thunderbolt the antagonist (of the gods), you have slain those who were ever hostile (to you) from your birth : desiring to do good to Manu, you have bruised the head of the slaves Namuchi.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ, ಮುಂದಿನ ಎರಡು ಋಕ್ಕುಗಳಲ್ಲಿಯೂ ಇಂದ್ರನು ನಮುಚಿ ಎಂಬ ರಾಕ್ಷಸನನ್ನು ಸಂಹಾರ ಮಾಡಿದ ವೃತ್ತಾಂತವು ವರ್ಣಿತವಾಗಿದೆ. ಈ ನಮುಚಿಯ ಸೂಕ್ಷ್ಮ ಪರಿಚಯನನ್ನು ಹೇಳಿ ಅನಂತರ ಇಂದ್ರನು ಇವನನ್ನು ಹೇಗೆ ವಧಿಸಿದನೆಂಬ ವಿಷಯವನ್ನು ವಿವರಿಸುವೆವು

ನಮುಚಿಯ ಹೆಸರು ಋಗ್ವೇದದಲ್ಲಿ ಒಂಭತ್ತು ಸಲವಲ್ಲದೆ, ವಾಜಸನೇಯ ಸಂಹಿತೆ, ತೈತ್ತಿರೀಯಬ್ರಾಹ್ಮಣ (ತೈ. ಬ್ರಾ ೧-೭-೧-೬, ೭), ಶತಪಥಬ್ರಾಹ್ಮಣ (ಶ. ಬ್ರಾ ೧೨-೭-೧-೧೦) ಮೊದಲಾದ ಸ್ಥಳಗಳಲ್ಲಿಯೂ ಈ ಹೆಸರು ಕಂಡುಬರುತ್ತದೆ ಇವನು ಅಸುರಸ್ವಭಾವದವನು ಎಂದೂ ಋಗ್ವೇದದಲ್ಲಿ ದಾಸ ಎಂದೂ (ಋ ಸಂ. ೫-೩೦-೭-, ೮) ವ್ಯವಹೃತನಾಗಿದಾನೆ. ಒಂದು ಕಡೆ (ಋ ಸಂ. ೧-೫೩-೭) ಮಾಯಿ ಎಂದು ವರ್ಣಿತನಾಗಿ ದಾನೆ. ಇಂದ್ರನು ನಮುಚಿಯನ್ನು ಸೋಲಿಸುವಾಗ ನಮೀ ಮತ್ತು ಸಾಯ್ಯ ಎಂಬುವರ ಸ್ನೇಹ ಅಥವಾ ಬೆಂಬಲವಿದಿ ತೆಂದು ಋಗ್ವೇದದಲ್ಲಿ ಹೇಳಿದೆ. (ಋ. ಸಂ ೧-೫೩-೭ , ೬-೨೦-೬) ಇತರ ಅಸುರರಂತೆ ನಮುಚಿಯೂ ಇಂದ್ರನಿಂದ್ದ ಹತನಾಗಿದಾನೆ (ಋ ಸಂ ೨-೧೪-೫ , ೭-೧೯-೫) ಅಥವಾ ಹೊಡೆದು ಕೆಡವಲ್ಪಟ್ಟದಾನೆ (೧-೫೩-೭) ಇಂದ್ರನು ವೃತ್ರನಮುಚಿ ಎಂಬ ಅಸುರರನ್ನು ವಧಿಸಿ ಅಸುರರ ನೂರು ಕೋಟೆಗಳನ್ನು ನಾಶಮಾಡಿದನು (ಋ. ಸಂ. ೭-೧೯-೫) ವೃತ್ರಾಸುರನ ಶಿರಸ್ಸನ್ನು ಛೇದಿಸುಸಂತೆ ನಮುಚಿಯ ಶಿರಸ್ಸನ್ನು ಛೇದಿಸುವುದಿಲ್ಲ, ಆದರೆ ಮಥನಮಾಡಿ (ಜಜ್ಝ) ಕೊಲ್ಲುತ್ತಾನೆ. (ಋ. ಸಂ. ೫-೩೦-೮ , ೬-೨೦-೬) ಅಥವಾ ಶಿರಸ್ಸನ್ನು ತಿರುಚಿ ಕೊಲ್ಲುತ್ತಾನೆ. (ಋ ಸಂ ೫ ೩೦-೭) ಅಥವಾ ನೀರಿನ ( ಸಮುದ್ರದ ) ನೊರೆಯಿಂದ ಅವನ ಶಿರಸ್ಸನ್ನು ತಿರುಚಿ (ಸುಲಿದು) ಕೊಲ್ಲುತ್ತಾನೆ. (ಋ ಸಂ ೮-೧೪-೩) ಕೆಲವು ಕಡೆ ಶಿರಸ್ಸನ್ನು ಕತ್ತರಿಸಿದನು ಎಂದೂ ಇದೆ (ತೈ ಬ್ರಾ ೧-೭-೧-೬, ೭) ಒಂದು ಸ್ಥಳದಲ್ಲಿ (ಋ ಸಂ ೧೦-೧೩೧-೪, ೫) ಇಂದ್ರನು ನಮುಚಿಯ ಪಾರ್ಶ್ವದಲ್ಲಿ ಕುಳಿತು ಮದ್ಯವನ್ನು ಪಾನಮಾಡಿದನು. ಆಗ ಸರಸ್ವತಿಯು ಅಶ್ವಿನೀದೇವತೆಗಳ ಸಹಾಯದಿಂದ ಗುಣಪಡಿಸಿದಳು ಎಂದಿದೆ ಇವೆಲ್ಲಾ ಋಗ್ವೇದದಲ್ಲಿ ಹೇಳಿರುವ ವಿವರಣೆಗಳು

ಈಗ ಯಜುರ್ವೇದದ ತೈತ್ತಿರೀಯ ಬ್ರಾಹ್ಮಣದಲ್ಲಿ ಇಂದ್ರನು ನಮುಚಿಯನ್ನು ಹೇಗೆ ಸಂಹಾರಮಾಡಿದನೆಂಬ ವಿಷಯವಿರುವುದನ್ನು ವಿವರಿಸುತ್ತೇವೆ **ನಮುಚಿಃ । ಇಂದ್ರೇಣ ಸಹ ಯುದ್ಧಂ ನ ಮುಂಚತೀತಿ ನಮುಚಿಃ ।** ಇಂದ್ರನೊಡನೆ ಯುದ್ಧಮಾಡುವುದನ್ನು ಬಿಡುವವನಲ್ಲವಾದ್ದರಿಂದ ಇವನಿಗೆ ನಮುಚಿಯೆಂದು ಹೆಸರು ಎಂದು ಕೆಲವು ಭಾಷ್ಯಕಾರರು ನಮುಚಿಶಬ್ದದ ರೂಪನಿಷ್ಪತ್ತಿ ಮಾಡಿರುವರು ಈ ಅಸುರನು ಮಹಾಬಲವುಳ್ಳವನಾದುದರಿಂದ ಇಂದ್ರನು ಇವನೊಡನೆ ಯುದ್ಧಮಾಡಿ ಜಯಿಸುವುದು ಬಹಳ ಕಷ್ಟವಾಯಿತು. ಆದ್ದರಿಂದ ಇಂದ್ರನು ಉಪಾಯದಿಂದ ಇವನನ್ನು ಸಂಹರಿಸಬೇಕಾಯಿತು ಈ ವಿಷಯದಲ್ಲಿ ತೈತ್ತಿರೀಯಬ್ರಾಹ್ಮಣದಲ್ಲಿ ಒಂದು ಉಪಾಖ್ಯಾನ ವಿರುವುದು—

**ಇಂದ್ರೋ ವೃತ್ರಗ್ಂ ಹತ್ವಾ । ಅಸುರಾನ್ ಪರಾಭಾವ್ಯ । ನಮುಚಿಮಾಸುರಂ ನಾಲಭತ । ತಗ್ಂ ಶಚ್ಯಾಗೃಹ್ಣಾತ್ । ತೌ ಸಮಲಭೇತಾಂ । ಸೋಽಸ್ಮಾದಭಿಶುನತರೋಽಭವತ್ । ಸೋಽಬ್ರವೀತ್ । ಸಂಧಾಗ್ಂ ಸಂದಧಾವಹೈ । ಅಥ ತ್ವಾವಸ್ರಕ್ಷ್ಯಾಮಿ । ನ ಮಾ ಶುಷ್ಕೇಣ ನಾರ್ದ್ರೇಣ ಹನಃ । ನ ದಿವಾ ನ ನಕ್ತಮಿತಿ । ಸ ಏತಮಪಾಂ ಫೇನಮಸಿಂಚತ್ । ನ ವಾ ಏಷ ಶುಷ್ಕೋ ನಾರ್ದ್ರೋ ವ್ಯುಷ್ಟಾಸೀತ್ । ಅನುದಿತಃ ಸೂರ್ಯಃ । ನ ವಾ ಏತದ್ದಿವಾ ನ ನಕ್ತಂ । ತಸ್ಯೈತಸ್ಮಿನ್ ಲೋಕೇ । ಅಪಾಂ ಫೇನೇನ ಶಿರ ಉದವರ್ತಯತ್ । ತದೇನಮನ್ವವರ್ತತ । ಮಿತ್ರದ್ರುಗಿತಿ । ಸ ಏತಾನಪಾಮಾರ್ಗಾನಜನಯತ್ । ತಾನಜುಹೋತ್ । ತೈರ್ವೈ ಸ ರಕ್ಷಾಗ್ಂಸ್ಯಪಾಹತ । ಯದಪಾಮಾರ್ಗಹೋಮೋ ಭವತಿ । ರಕ್ಷಸಾಮಪಹತ್ಯೈ ॥**

(ತೈ ಬ್ರಾ ೧-೭-೧-೬, ೭)

ಇಂದ್ರನು ವೃತ್ರಾಸುರನನ್ನು ಸಂಹಾರಮಾಡಿದ ಮೇಲೆ ಇನ್ನೂ ಇತರ ಅಸುರರನ್ನೂ ಸಂಹಾರಮಾಡಿದನು ಆದರೆ ನಮುಚಿಯೆಂಬ ಅಸುರನನ್ನು ಜಯಿಸಲಾಗಲಿಲ್ಲ. ಇವನು ಮಹಾಬಲಶಾಲಿಯಾಗಿದ್ದನು. ಯಾವ ವಿಧವಾದ ಆಯುಧ ಗಳಿಗೂ ಇವನು ಜಗ್ಗಲಿಲ್ಲ. ಆದುದರಿಂದ ಇಂದ್ರನು ಅವನನ್ನು ತನ್ನ ಶರೀರಬಲದಿಂದಲೇ ಗೆಲ್ಲಬೇಕೆಂದು ಬಯಸಿ ಅವನೊಡನೆ ಮಲ್ಲಯುದ್ಧವನ್ನು ಪ್ರಾರಂಭಿಸಿದನು. ಆದರೂ ಯುದ್ಧಮಾಡಿದಂತೆಲ್ಲಾ ನಮುಚಿಯ ಬಲವೇ ವೃದ್ಧಿ ಯಾಗುತ್ತಿತ್ತು. ಇಂದ್ರನು ಅವನ ಹಿಡಿತದಿಂದ ತಪ್ಪಿಸಿಕೊಳ್ಳಲಾಗಲಿಲ್ಲ ಆಗ ಇಂದ್ರನು ತನ್ನನ್ನು ಬಿಡಬೇಕೆಂದು ನಮುಚಿಯನ್ನು ಕೇಳಲು ಆಗ ಆ ಅಸುರನು ಇಂದ್ರನನ್ನು ಕುರಿತು—ಎಲೈ ಇಂದ್ರನೇ, ನಿನ್ನನ್ನು ಬಿಡಬೇಕಾದರೆ ನಾನು ಹೇಳಿದಂತೆ ಕೇಳಬೇಕು ಈಗ ನಾವು ಒಬ್ಬರಿಗೊಬ್ಬರು ಸಂಧಿಯನ್ನು (ಒಪ್ಪಂದವನ್ನು) ಮಾಡಿಕೊಳ್ಳೋಣ. ನೀನು ಮತ್ತೆ ನನ್ನೊಡನೆ ಯಾವುದಾದರೂ ತಂತ್ರದಿಂದ ಯುದ್ಧಮಾಡಿ ನನ್ನನ್ನು ಕೊಲ್ಲಬೇಕೆಂದು ಇಚ್ಛಿಸಬಹುದು. ಅಂತಹ ಸಂದರ್ಭದಲ್ಲಿ ನೀನು ನನ್ನನ್ನು ಕೊಲ್ಲಬೇಕೆಂದು ಉಪಯೋಗಿಸುವ ಆಯುಧವು ಹಸಿಯಾಗಿರಕೂಡದು, ಒಣಗಿರಲೂ ಕೂಡದು, ಹಗಲಿನಲ್ಲಿ ನನ್ನನ್ನು ಕೊಲ್ಲಕೂಡದು, ರಾತ್ರಿಕಾಲದಲ್ಲಿಯೂ ಕೊಲ್ಲಕೂಡದು. ಈ ನಿಯಮ ಗಳಿಗೆ ನೀನು ಒಪ್ಪುವಿಯಾದರೆ ನಿನ್ನನ್ನು ಬಿಡುವೆನು ಎಂದು ಹೇಳಿದನು. ಇಂದ್ರನು ಹಾಗೆಯೇ ಆಗಲೆಂದೊಪ್ಪಿ ಅವನ ಹಿಡಿತದಿಂದ ಬಿಡಿಸಿಕೊಂಡು ಇವನನ್ನು ಹೇಗೆ ಜಯಿಸಬೇಕೆಂದು ಆಲೋಚಿಸತೊಡಗಿದನು ಕೆಲವು ಕಾಲದ ಮೇಲೆ ಇಂದ್ರನು ಒಂದು ಉಪಾಯವನ್ನು ಯೋಚಿಸಿದನು. ಸಮುದ್ರತೀರದಲ್ಲಿ ಸಂಚರಿಸುತ್ತಿರುವಾಗ ಸಮುದ್ರದ ನೊರೆಯು ಅವನ ದೃಷ್ಟಿಗೆ ಬಿದ್ದಿತು. ಈ ನೊರೆಯು ಹಸಿಯೂ ಅಲ್ಲ, ಒಣಗಿದುದೂ ಅಲ್ಲ ಆದುದ ರಿಂದ ಇದನ್ನೇ ಆಯುಧವನ್ನಾಗಿ ಮಾಡಿಕೊಂಡು ನಮುಚಿಯನ್ನು ಸಂಹರಿಸುವೆನು. ರಾತ್ರಿಯು ಕಳೆದು ಉಷಃ ಕಾಲವು ಪ್ರಾರಂಭವಾಗಿ ಸೂರ್ಯನು ಉದಯಿಸುವುದಕ್ಕೆ ಮೊದಲು ಚೆನ್ನಾಗಿ ಬೆಳಕಾಗಿರುವುದು. ಆ ಕಾಲವು ಕತ್ತಲೆಯಿಲ್ಲದ್ದರಿಂದ ರಾತ್ರಿಯೂ ಅಲ್ಲ, ಸೂರ್ಯನು ಉದಯಿಸಿರುವುದಿಲ್ಲವಾದ್ದರಿಂದ ಹಗಲೂ ಅಲ್ಲ ಇಂತಹ ಕಾಲದಲ್ಲಿ ನಮುಚಿಯೊಡನೆ ಯುದ್ಧಮಾಡಿ ನೀರಿನ ನೊರೆಯಿಂದ ನಿರ್ಮಿತವಾದ ಆಯುಧದಿಂದ ಅವನನ್ನು ಕೊಂದರೆ ನಾನು ಆಡಿದಮಾತಿಗೆ ತಪ್ಪಿದಂತಾಗುವುದಿಲ್ಲ ಎಂದು ನಿಶ್ಚಯಿಸಿ ಅದರಂತೆ ನಮುಚಿಯೊಡನೆ ಯುದ್ಧಮಾಡಿ ಆ ನೊರೆ ಯಿಂದ ಅವನ ಶಿರಸ್ಸನ್ನು ಕತ್ತರಿಸಿದನು. ಆದರೂ ಆ ಅಸುರನು ಮೃತನಾಗದೆ ಇಂದ್ರನನ್ನು ಕೊಲ್ಲುವುದಕ್ಕಾಗಿ ಅವನನು ಅಟ್ಟಿಸಿಕೊಂಡು ಬಂದನು. ಎಲೈ ಮಿತ್ರದ್ರೋಹಿಯಾದ ಇಂದ್ರನೇ, ನಿಲ್ಲು ನಿಲ್ಲು ನೀನು ನನ್ನನ್ನು ಕೊಲ್ಲುವುದಿಲ್ಲವೆಂದು ಹಿಂದೆ ಮಾತುಕೊಟ್ಟು ಈಗ ಇಂತಹ ಮಿತ್ರದ್ರೋಹಕರವಾದ ಕೆಲಸವನ್ನು ಮಾಡಿರುತ್ತೀಯೆ. ನಿನ್ನನ್ನು ಈಗಲೂ ಕೊಲ್ಲದೆ ಬಿಡುವುದಿಲ್ಲ ಎಂದನು. ಆಗ ಇಂದ್ರನು ಹೆದರಿ ಅಪಾಮಾರ್ಗವೆಂಬ ವೃಕ್ಷವಿಶೇಷವನ್ನು ಸೃಷ್ಟಿಸಿ ಅದರ ಸಮಿತ್ತುಗಳಿಂದ ವೀರ್ಯವೃದ್ಧಿಗಾಗಿ ಅಗ್ನಿಯಲ್ಲಿ ಹೋಮಮಾಡಿದನು. ಅದರಿಂದ ಇಂದ್ರನ ಬಲವು ಅಧಿಕವಾಗಿ ಆ ನಮುಚಿಯನ್ನು ಸಂಹಾರಮಾಡಿದನು. ಆದುದರಿಂದ ರಾಕ್ಷಸರ ಬಾಧೆಯಿಂದ ಪಾರಾಗಬೇಕೆಂದು ಬಯಸುವವರು ಅಪಾಮಾರ್ಗಸಮಿತ್ತುಗಳಿಂದ ಅಗ್ನಿಯಲ್ಲಿ ವೀರ್ಯವೃದ್ಧಿಗಾಗಿ ಹೋಮಮಾಡಬೇಕು ಆ ಹೋಮ ದಿಂದ ಅವರ ಬಲವು ವೃದ್ಧಿಯಾಗಿ ರಾಕ್ಷಸರನ್ನು ಜಯಿಸಲು ಶಕ್ಯವಾಗುವುದು ಎಂದು ಉಪಾಖ್ಯಾನವಿದೆ. ಈ ನಮುಚಿಯ ಹೆಸರು ಋಗ್ವೇದದಲ್ಲಿ—

**ನಮ್ಯಾ ಯದಿಂದ್ರ ಸಖ್ಯಾ ಪರಾವತಿ ನಿಬರ್ಹಯೋ ನಮುಚಿಂ ನಾಮ ಮಾಯಿನಂ ॥**

(ಋ. ಸಂ ೧-೫೩-೭)

**ಯಃ ಪಿಪ್ರುಂ ನಮುಚಿಂ ಯೋ ರುಧಿಕ್ರಾಂ ತಸ್ಮಾ ಇಂದ್ರಾಯಾಂಧಸೋ ಜುಹೋತ ॥**

(ಋ. ಸಂ. ೨-೧೪-೫)

**ನೀವೇಶನೇ ಶತತಮಾವಿವೇಷೀರಹಞ್ವೃತ್ರಂ ನಮುಚಿಮುತಾಹನ್ ॥**

(ಋ. ಸಂ. ೭-೧೯-೫)

**ತ್ವಂ ಜಘಂಥ ನಮುಚಿಂ ಮಖಸ್ಯುಂ ದಾಸಂ ಕೃಣ್ವಾನ ಋಷಯೇ ವಿಮಾಯಂ ।**

(ಋ. ಸಂ. ೧೦-೭೩-೭)

**ಅತ್ರಾ ದಾಸಸ್ಯ ನಮುಚೇಃ ಶಿರೋ ಯದವರ್ತಯೋ ಮನವೇ ಗಾತುಮಿಚ್ಛನ್ ।**

(ಋ. ಸಂ. ೫-೩೦-೭)

**ಯುಜಂ ಹಿ ಮಾಮಕೃಥಾ ಆದಿದಿಂದ್ರ ಶಿರೋದಾಸಸ್ಯ ನಮುಚೇರ್ಮಥಾಯನ್ ।**

(ಋ ಸಂ. ೫-೩೦-೮)

**ಪ್ರ ಶ್ಯೇನೋ ನ ಮದಿರಮಂಶುಮಸ್ಮೈ ಶಿರೋ ದಾಸಸ್ಯ ನಮುಚೇರ್ಮಥಾಯನ್ ।**

(ಋ. ಸಂ. ೬-೨೦-೬)

**ಅಪಾಂ ಫೇನೇನ ನಮುಚೇಃ ಶಿರ ಇಂದ್ರೋದವರ್ತಯಃ ।**

(ಋ ಸಂ ೮-೧೪-೧೩)

**ಯುವಂ ಸುರಾಮಮಶ್ವಿನಾ ನಮುಚಾವಾಸುರೇ ಸಚಾ ॥**

(ಋ ಸಂ ೧೦-೧೩೧-೪)

ಎಂಬ ಋಕ್ಕುಗಳಲ್ಲಿರುವುದು. ಮತ್ತೆಲ್ಲಿಯೂ ಇರುವುದಿಲ್ಲ

ಮುಖ್ಯಾಭಿಪ್ರಾಯವು—**ಯದಾ ಇಂದ್ರಃ ಸ್ತೋಪಾಸಕಸ್ಯ ನಮೀನಾಮ್ನಾ ಋಷೇಃ ರಕ್ಷಣಾರ್ಥಂ ನಮುಚಿನಾಮಾನಮಸುರಂ ಹತವಾನ್ ತದಾ ತೇನ ನಮುಚಿನಾ ಸಹೈಕಸ್ಮಾದ್ಯುದ್ಧಾನಂತರಮನ್ಯದ್ಯುದ್ಧಮೇವಂ ಪ್ರಕಾರೇಣಾನೇಕಾನಿ ಯುದ್ಧಾನಿ ಚಕಾರ । ತಥೈಕಸ್ಮಾನ್ನಗರಾದನಂತರಮನ್ಯನ್ನಗರಮೇವಂ ಪ್ರಕಾರೇಣ ನಮುಚೇಃ ಸರ್ವಾಣ್ಯಪಿ ನಗರಾಣಿ ಹತವಾನಿತ್ಯರ್ಥಃ ॥** ಇಂದ್ರನು ತನ್ನನ್ನು ಸ್ತೋತ್ರಮಾಡುವ ನಮೀ ಎಂಬ ಋಷಿಯನ್ನು ಸಂರಕ್ಷಿಸುವುದಕ್ಕಾಗಿ ನಮುಚಿಯೆಂಬ ಅಸುರನೊಡನೆ ಅನೇಕಾವರ್ತಿ ಯುದ್ಧಮಾಡಿದನೆಂದೂ ಯುದ್ಧಮಾಡಿದಾಗಲೆಲ್ಲಾ ಅವನ ನಗರಗಳನ್ನು ಒಂದಾಗುತ್ತಲೊಂದನ್ನು ನಾಶಮಾಡಿ ಕಡೆಗೆ ಅವನನ್ನೂ ಸಂಹಾರಮಾಡಿದನೆಂದು ಪೂರ್ವೇತಿಹಾಸವಿರುವುದು. ಅದನ್ನು ಪ್ರಕೃತ ಋಕ್ಕಿನಲ್ಲಿಯೂ ಮುಂದಿನ ಎರಡು ಋಕ್ಕುಗಳಲ್ಲಿಯೂ ವರ್ಣಿಸಲಾಗಿದೆ.

**ದಾಸಸ್ಯ**—ಈ ಶಬ್ದವು ಈ ಸೂಕ್ತದಲ್ಲಿ ಈ ಋಕ್ಕಿನಲ್ಲಿಯೂ ಮುಂದಿನ ಎರಡು ಋಕ್ಕುಗಳಲ್ಲಿಯೂ ಪಠಿತವಾಗಿದೆ. ಈ ಶಬ್ದದ ಮತ್ತು ದಸ್ಯುವೆಂಬ ಶಬ್ದದ ವಿಸ್ತಾರವಾದ ವಿವರಣೆಯನ್ನು ನಾವು ಈ ಸೂಕ್ತದ ೯ ನೆಯ ಋಕ್ಕಿನ ವಿಶೇಷ ವಿಷಯಗಳಲ್ಲಿ (ಪುಟ 198-202) ವಿವರಿಸಿದೇವೆ.

॥ ಸಂಹಿತಾಪಾಠಃ ॥

ಯುಜಂ ಹಿ ಮಾಮಕೃಥಾ ಆದಿದಿಂದ್ರ ಶಿರೋ ದಾಸಸ್ಯ ನಮುಚೇರ್ಮಥಾಯನ್ ।
ಅಶ್ಮಾನಂ ಚಿತ್ಸ್ವರ್ಯಂ೧ವರ್ತಮಾನಂ ಪ್ರ ಚಕ್ರಿಯೇವ ರೋದಸೀ ಮರುದ್ಭ್ಯಃ ॥ ೮ ॥

॥ ಪದಪಾಠಃ ॥

ಯುಜಂ । ಹಿ । ಮಾಂ । ಅಕೃಥಾಃ । ಆತ್ । ಇತ್ । ಇಂದ್ರ । ಶಿರಃ । ದಾಸಸ್ಯ । ನಮುಚೇಃ । ಮಥಾಯನ್ । ಅಶ್ಮಾನಂ । ಚಿತ್ । ಸ್ವರ್ಯಂ । ವರ್ತಮಾನಂ । ಪ್ರ । ಚಕ್ರಿಯಾಇವ । ರೋದಸೀ ಇತಿ । ಮರುತ್‌ಭ್ಯಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಸ್ವರ್ಯಂ ಸ್ವರೇಣ ಸಹಿತಂ ವರ್ತಮಾನಂ ಭ್ರಮಂತಮಶ್ಮಾನಂ ಚಿತ್ ಮೇಘಮಿವ ಸ್ಥಿತಂ ದಾಸಸ್ಯೋಪಕ್ಷಪಯಿತುರ್ನಮುಚೇರಸುರಸ್ಯ ಶಿರೋ ಮಥಾಯನ್ ಚೂರ್ಣಯನ್ ಆದಿದನಂತರಮೇವ ಮಾಂ ಯುಜಂ ಸಖಾಯಮಕೃಥಾ ಹಿ । ಚಕೃಷೇ ಖಲು । ತದಾನೀಂ ಮರುದ್ಭ್ಯಸ್ತ್ವತ್ಸಹಾಯೇಭ್ಯೋ ರೋದಸೀ ದ್ಯಾವಾಪೃಥಿವ್ಯೌ ಚಕ್ರಿಯೇವ ಚಕ್ರೇ ಇವ ಪ್ರಾಸ್ತಾಂ ॥ ಉಪಸರ್ಗಶ್ರುತೇರ್ಯೋಗ್ಯಕ್ರಿಯಾಧ್ಯಾಹಾರಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಸ್ವರ್ಯಂ**—ನಾದಸಹಿತವಾದುದೂ । **ವರ್ತಮಾನಂ**—ಸುತ್ತುತ್ತಾ ಸಂಚರಿಸುತ್ತಿರುವುದೂ ಆದ । **ಅಶ್ಮಾನಂ ಚಿತ್**—ಮೇಘದಂತಿದ್ದ । **ದಾಸಸ್ಯ**—ಹಿಂಸಕನಾದ । **ನಮುಚೇಃ**—ನಮುಚಿಯ। **ಶಿರಃ**—ಶಿರಸ್ಸನ್ನು । **ಮಥಾಯನ್**—ಕಡಿಯುತ್ತಾ । **ಆದಿತ್**—ಆ ಒಡನೆಯೇ । **ಮಾಂ**—ನನ್ನನ್ನು । **ಯುಜಂ**—ಸಖನನ್ನಾಗಿ । **ಅಕೃಥಾಃ ಹಿ**—ಮಾಡಿಕೊಂಡೆಯಲ್ಲವೇ ? (ಆಗ) । **ಮರುದ್ಭ್ಯಃ**—ನಿನ್ನ ಸಖರಾದ ಮರುತ್ತುಗಳಿಂದ । **ರೋದಸೀ**—ದ್ಯಾವಾಪೃಥಿವಿಗಳೆರಡೂ । **ಚಕ್ರಿಯೇವ**—ಚಕ್ರಗಳಂತೆ । **ಪ್ರ (ಆಸ್ತಾಂ)**—ಭ್ರಮಣರೂಪವನ್ನು ಹೊಂದುವಂತಾದವು.

॥ ಭಾವಾರ್ಥ ॥

ಎಲೈ ಇಂದ್ರನೇ, ನಾದಸಹಿತವಾದುದೂ, ಸುತ್ತುತ್ತಾ ಸಂಚರಿಸುತ್ತಿರುವುದೂ ಆದ ಮೇಘದಂತಿದ್ದವನೂ, ಹಿಂಸಕನೂ ಆದ ನಮುಚಿಯ ಶಿರಸ್ಸನ್ನು ಕಡಿಯುತ್ತಾ ಆ ಒಡನೆಯೇ ನನ್ನನ್ನು ಸಖನನ್ನಾಗಿ ಮಾಡಿಕೊಂಡೆ. ಆ ಕಾಲದಲ್ಲಿ ನಿನ್ನ ಸಖರಾದ ಮರುತ್ತುಗಳಿಂದ ದ್ಯಾವಾಪೃಥಿವಿಗಳೆರಡೂ ಚಕ್ರಗಳಂತೆ ಭ್ರಮಣರೂಪವನ್ನು ಹೊಂದುವಂತಾದವು.

## English Translation

Verily you have made me, Indra, your associate when grinding the head of the slave Namuchi like a sounding and rolling cloud : and the heaven and earth (have been caused) by the Maruts (to revolve like a wheel).

---

॥ ಸಂಹಿತಾಪಾಠಃ ॥

ಸ್ತ್ರಿಯೋ ಹಿ ದಾಸ ಆಯುಧಾನಿ ಚಕ್ರೇ ಕಿಂ ಮಾ ಕರನ್ನಬಲಾ ಅಸ್ಯ
ಸೇನಾಃ ।
ಅಂತರ್ಹ್ಯಖ್ಯದುಭೇ ಅಸ್ಯ ಧೇನೇ ಅಥೋಪ ಪ್ರೈದ್ಯುಧಯೇ ದಸ್ಯು-
ಮಿಂದ್ರಃ ॥ ೯ ॥

॥ ಪದಪಾಠಃ ॥

ಸ್ತ್ರಿಯಃ । ಹಿ । ದಾಸಃ । ಆಯುಧಾನಿ । ಚಕ್ರೇ । ಕಿಂ । ಮಾ । ಕರನ್ । ಅಬಲಾಃ । ಅಸ್ಯ । ಸೇನಾಃ ।
ಅಂತಃ । ಹಿ । ಅಖ್ಯತ್ । ಉಭೇ ಇತಿ । ಅಸ್ಯ । ಧೇನೇ ಇತಿ । ಅಥ । ಉಪ । ಪ್ರ । ಐತ್ । ಯುಧಯೇ ।
ದಸ್ಯುಂ । ಇಂದ್ರಃ ॥ ೯ ॥

॥ ಸಾಯಣಭಾಷ್ಯಂ ॥

ದಾಸ ಉಪಕ್ಷಪಯಿತಾ ನಮುಚಿರಸುರಃ ಸ್ತ್ರಿಯಃ ಸ್ತ್ರೀರಾಯುಧಾನಿ ಯುದ್ಧಸಾಧನಾನಿ ಚಕ್ರೇ ಹಿ । ಕೃತವಾನ್ ಖಲು । ಇಂದ್ರೇಣ ಸಹ ಯೋದ್ಧುಂ ಪ್ರತಿಹಿತವಾನಿತ್ಯರ್ಥಃ । ಅಸ್ಯಾಸುರಸ್ಯ ಸಂಬಂಧಿನ್ಯೋಽಬಲಾಃ ಸ್ತ್ರೀರೂಪಾಃ ಸೇನಾ ಮಾ ಮಾಂ ಕಿಂ ಕರನ್ ಕಿಂ ಕುರ್ಯುರಿತಿ ಮನ್ಯಮಾನ ಇಂದ್ರಸ್ತಾಸಾಂ ಮಧ್ಯೇಽಸ್ಯಾಸುರಸ್ಯ ಧೇನೇ ಪ್ರೀಣಯಿತ್ರ್ಯೌ ಸುರೂಪೇ ಉಭೇ ದ್ವೇ ಸ್ತ್ರಿಯಾವಂತರಖ್ಯದ್ಧಿ । ಗೃಹಮಧ್ಯೇ ನಿದಧೇ ಖಲು । ಅಥಾನಂತರಮಿಂದ್ರೋ ದಸ್ಯುಂ ನಮುಚಿಂ ಯುಧಯೇ ಯುದ್ಧಾಯೋಪ ಪ್ರೈತ್ । ಉಪಪ್ರಾಗಚ್ಛತ್ ॥

॥ ಪ್ರತಿಪದಾರ್ಥ ॥

**ದಾಸಃ**—ಹಿಂಸಕನಾದ ಅಸುರನು । **ಸ್ತ್ರಿಯಃ**—ಸ್ತ್ರೀಯರನ್ನು । **ಆಯುಧಾನಿ**—ತನ್ನ ಯುದ್ಧಸಾಧನಗಳನ್ನಾಗಿ । **ಚಕ್ರೇ ಹಿ**—ಮಾಡಿದನಲ್ಲವೇ ? । **ಅಸ್ಯ**— “ಈ ಅಸುರಸಂಬಂಧಿಯಾದವರೂ । **ಅಬಲಾಃ**—ಅಬಲಾರೂಪರೂ ಆದ ಸ್ತ್ರೀಯರ । **ಸೇನಾಃ**—ಸೇನೆಗಳು । **ಮಾ**—ನನ್ನನ್ನು । **ಕಿಂ ಕರನ್**—ಏನು ಮಾಡಬಲ್ಲವು”

ಎಂದು ಅವರಲ್ಲಿ | **ಅಸ್ಯ**—ಈ ಅಸುರನಿಗೆ | **ಧೇನೇ**—ಪ್ರೀತಿಕಾರಕರಾದ | **ಉಭೇ**—ಇಬ್ಬರು ಸ್ತ್ರೀಯರನ್ನು | **ಅಂತಃ**—ಗೃಹದ ಒಳಭಾಗದಲ್ಲಿ | **ಅಖ್ಯತ್ ಹಿ**—ಅವಿಸಿಟ್ಟನಲ್ಲವೇ ? | **ಅಥ**—ಅನಂತರ | **ಇಂದ್ರಃ**—ಇಂದ್ರನು | **ದಸ್ಯುಂ**—ನಮುಚಿಯನ್ನು | **ಯುಧಯೇ**—ಯುದ್ಧಕ್ಕಾಗಿ | **ಉಪಪ್ರೈತ್**—ಎದುರಿಸಿದನು.

॥ ಭಾವಾರ್ಥ ॥

ಹಿಂಸಕನಾದ ಅಸುರನು ಸ್ತ್ರೀಯರನ್ನು ಯುದ್ಧಸಾಧನಗಳನ್ನಾಗಿ ಮಾಡಿದನು ' ಈ ಅಸುರ ಸಂಬಂಧಿಗಳೂ ಅಬಲೆಯರೂ ಆದ ಸ್ತ್ರೀಯರ ಸೇನೆಗಳು ನನ್ನನ್ನು ಏನು ಮಾಡಬಲ್ಲವು " ಎಂದು ಇಂದ್ರನು ಆ ಸ್ತ್ರೀಗಳ ನಡುವೆ ಅದೇ ಅಸುರನಿಗೆ ಅತ್ಯಂತ ಪ್ರೀತಿಕಾರಕನಾದ ಇಬ್ಬರನ್ನು ಬಂಧಿಸಿ ಗೃಹದ ಒಳಭಾಗಲ್ಲಿ ಅನಿಸಿಟ್ಟನು ಅನಂತರ ಇಂದ್ರನು ನಮುಚಿಯನ್ನು ಯುದ್ಧಕ್ಕಾಗಿ ಎದುರಿಸಿದನು

## English Traslation

The slave (Namuchi) made women his weapons · what will his female hosts do unto me ? the two his best beloved, ( Indra ) confined in the inner apartments, and then went forth to combat against the Dasyu

॥ ವಿಶೇಷವಿಷಯಗಳು ॥

**ದಾಸಃ, ದಸ್ಯುಂ**—ದಾಸಶಬ್ದವೂ ದಸ್ಯುಶಬ್ದವೂ ದಸ್ಯತಿ (ದಸ್) ಧಾತುವಿನಿಂದ ನಿಷ್ಪನ್ನವಾಗಿ, ಶೋಷಿಸು ವವನು, ನಾಶಮಾಡುವವನು ಎಂಬರ್ಥವನ್ನು ಕೊಡುವುದು ಯಾಸ್ಕರು—

**ದಾಸೋ ದಸ್ಯತೇರುಪದಾಸಯತಿ ಕರ್ಮಾಣಿ (ನಿ ೨-೧೭) ದಸ್ಯುರ್ದಸ್ಯತೇಃ ಕ್ಷಯಾರ್ಥಾದುಪ-ದಸ್ಯಂತ್ಯಸ್ಮಿನ್ರಸಾ ಉಪ ದಾಸಯತಿ ಕರ್ಮಾಣಿ (ನಿ ೭-೨೩).**

ಎಂದು ನಿರ್ವಚನವನ್ನು ಹೇಳಿರುವರು ಕೃಷಿಕರ್ಮಾದಿಗಳಿಗೆ ಉಪಯುಕ್ತವಾದ ನೀರನ್ನು ಶೋಷಿಸಿ ಆ ಕರ್ಮಗಳಿಗೆ ವಿಘ್ನವನ್ನುಂಟುಮಾಡಿ ಅವುಗಳನ್ನು ನಾಶಮಾಡುವವನು ಎಂದರ್ಥವು ಸೂಚಿತವಾಗುವುದು ಆದುದರಿಂದ ದಾಸ ಶಬ್ದವು ವೃತ್ರ, ಶುಷ್ಣ, ಪಿಪ್ರು, ನಮುಚಿ ಮುಂತಾದ ಅಸುರರ ವಿಷಯದಲ್ಲಿ ಉಪಯೋಗಿಸುವುದು ರೂಢಿಯಾಗಿದೆ.

ಋಗ್ವೇದದಲ್ಲಿ ದಾಸಶಬ್ದವು ಅಸುರರನ್ನು ಮಾತ್ರವಲ್ಲದೆ ಆರ್ಯಜನಾಂಗದವರೊಡನೆ ಪದೇಪದೆ ಯುದ್ಧ ಮಾಡುತ್ತಿದ್ದ ಈ ದೇಶದ ಪೂರ್ವನಿವಾಸಿಗಳಾದ ಮಾನವಶತ್ರುಗಳನ್ನು ಸೂಚಿಸುವುದಕ್ಕೆ ಉಪಯೋಗಿಸಲಾಗಿದೆ. ಈ ದಾಸರು ಅಥವಾ ಈ ದೇಶದ ಪೂರ್ವನಿವಾಸಿಗಳಾದ ಕಪ್ಪುಜನರು ಅಲ್ಲಲ್ಲಿ ಕೋಟೆಗಳನ್ನು ಕಟ್ಟಿಕೊಂಡು ಗುಂಪು ಗುಂಪಾಗಿ ಅಥವಾ ಅನೇಕ ಪಂಗಡಗಳಾಗಿ (clans) ವಾಸಿಸುತ್ತಿದ್ದರೆಂದು ಅನೇಕ ಕಡೆಗಳಲ್ಲಿ ಹೇಳಿದೆ.

**ಪ್ರತಿ ಯದಸ್ಯ ವಜ್ರಂ ಬಾಹ್ವೋರ್ಧುರ್ಹತ್ವೀ ದಸ್ಯೂನ್ ಪುರ ಆಯಸೀರ್ನಿ ತಾರೀತ್ |**

(ಋ ಸಂ. ೨-೨೦-೮)

ಎಂಬ ಋಕ್ಕಿನಲ್ಲಿ ಇಂದ್ರನು ಈ ದಸ್ಯುಗಳ ಕಬ್ಬಿಣದಿಂದ ನಿರ್ಮಿತವಾದ ಪಟ್ಟಣ ಅಥವಾ ದುರ್ಗಗಳನ್ನು ಭೇದಿಸಿದ ನೆಂದು ಹೇಳಿದೆ. ಮತ್ತು—

**ಸ ಜಾತೂಭರ್ಮಾ ಶ್ರದ್ದಧಾನ ಓಜಃ ಪುರೋ ವಿಭಿಂದನ್ನಚರದ್ವಿ ದಾಸೀಃ ||**

(ಋ. ಸಂ. ೧–೧೦೩–೩)

**ಇಂದ್ರಾಗ್ನೀ ನವತಿಂ ಪುರೋ ದಾಸಪತ್ನೀರಧೂನುತಂ |**

(ಋ. ಸಂ. ೩–೧೨–೬)

**ಪ್ರ ತೇ ವೋಚಾಮ ವೀರ್ಯಾ೩ಯಾ ಮಂದಸಾನ ಆರುಜಃ |**
**ಪುರೋ ದಾಸೀರಭೀತ್ಯ ||**

(ಋ. ಸಂ. ೪-೩೨-೧೦)

ಇತ್ಯಾದಿ ಋಕ್ಕುಗಳಲ್ಲಿ ದಾಸಜನರ ಪಟ್ಟಣಗಳ ಮತ್ತು ದುರ್ಗಗಳ ವಿಷಯದ ಪ್ರಸ್ತಾಪವಿದೆ. ಈ ದಾಸಜನರು ಕಪ್ಪುವರ್ಣದವರೆಂಬ ವಿಷಯದಲ್ಲಿಯೂ ಅನೇಕಕಡೆ ವರ್ಣನೆಗಳಿವೆ. (ಋ. ಸಂ. ೧-೧೦೧-೧ ; ೧-೧೩೦-೮ ; ೨-೨೦-೭ , ೪-೧೬-೧೩ , ೪-೪೭-೨೧ ; ೭-೫-೩ ಇತ್ಯಾದಿ). ಇವರ ಚರ್ಮವು ಕಪ್ಪುಬಣ್ಣದ್ದೆಂದು

**ಮನವೇ ಶಾಸದವ್ರತಾನ್ ತ್ವಚಂ ಕೃಷ್ಣಾಮರಂಧಯತ್ |**

(ಋ. ಸಂ ೧-೧೩೦-೮)

ಎಂಬ ಋಕ್ಕಿನಲ್ಲಿ ಸ್ಪಷ್ಟವಾಗಿ ಹೇಳಿದೆ. ಈ ದಾಸಜನರ ಬಣ್ಣವು ಕಪ್ಪಗಿರುವುದಲ್ಲವೆ ಇವರನ್ನು ಮೂಗಿಲ್ಲದವರೆಂದು ( ಅನಾಸ ) ಎಂದರೆ ನೀಗ್ರೋಜನಗಳಂತೆ ಚಪ್ಪಟೆಯಾದ ಮೂಗುಳ್ಳವರೆಂದೂ, ಸುಳ್ಳು ಹೇಳುವವರೆಂದೂ (ಮೃಧ್ರವಾಚಃ)—

**ಅನಾಸೋ ದಸ್ಯೂಁರಮೃಣೋ ವಧೇನ ನಿ ದುರ್ಯೋಣ ಆವೃಣಙ್ ಮೃಧ್ರವಾಚಃ |**

(ಋ. ಸಂ. ೫-೨೯-೧೦)

ಇತ್ಯಾದಿ ಋಕ್ಕುಗಳಲ್ಲಿ ವರ್ಣನೆಗಳಿವೆ. ಇವರ ದೇವತೆಯು ಶಿಶ್ನದೇವತೆಯೆಂದೂ ಆರ್ಯರ ಇಂದ್ರಾದಿ ದೇವತೆಗಳನ್ನು ಇವರು ಪೂಜಿಸುವವರಲ್ಲವೆಂದೂ (ಅಯಜ್ವಾನಃ) ಯಜ್ಞಾದಿಗಳನ್ನು ಮಾಡುವವರಲ್ಲವೆಂದೂ ಋ. ಸಂ. ೭-೨೧-೫ ; ೧-೩೩-೪, ೫ , ೫-೧೬-೯ , ೫-೭-೧೦ , ೫-೪೨-೯ , ೬-೧೪-೩ ; ೮-೭೦-೧೦ , ೧೦-೨೨-೭, ೮ ಇತ್ಯಾದಿ ಸ್ಥಳಗಳಲ್ಲಿ ಹೇಳಿದೆ. ಆರ್ಯರು ಈ ಕಪ್ಪುಜನರನ್ನು ಯುದ್ಧಾದಿಗಳಲ್ಲಿ ಜಯಿಸಿ ಇವರನ್ನು ಗುಲಾಮರನ್ನಾಗಿ ಕೆಲಸಮಾಡುವಂತೆ ಮಾಡುತ್ತಿದ್ದರೆಂದೂ ಆದುದರಿಂದ ದಾಸಶಬ್ದಕ್ಕೆ, ಗುಲಾಮ (Slave) ಸೇವಕ ಎಂಬ ಅರ್ಥಗಳು ಕ್ರಮವಾಗಿ ರೂಢಿಗೆ ಬಂದವೆಂದೂ ಊಹೆಮಾಡಬಹುದು (ಋ. ಸಂ. ೭-೮೬-೭, ೮-೫೬-೩ , ೧೦-೬೨-೧೦). ಈ ದಾಸಜನರ ವಿಷಯದಲ್ಲಿ Macdonell ಮತ್ತು Keith ಎಂಬ ಆಂಗ್ಲಪಂಡಿತರು ತಮ್ಮ ಅಭಿಪ್ರಾಯವನ್ನು ಈರೀತಿ ವ್ಯಕ್ತಪಡಿಸಿದ್ದಾರೆ—

The Rigveda, on the other hand, knows ದಸ್ಯು and ದಾಸ, both as aborigines independent of Aryan control and as subjugated slaves ; it is reasonable to reckon the ಶೂದ್ರ of the later texts as belonging to the aborigines who had been reduced to subjection by the Aryans. Strictly speaking, the defeated aborigines must have been regarded as slaves, but it is obvious that except on occasions when most of the men were slain, which may have occured quite often, there must have remained too many of them to be used as slaves

of individual owners. The villages of the aborigines must have continued to subsist, but under Aryan lordship and control; there may be this amonnt of truth in Baden Powell's theory, which practically traced all the early cultivating villages in India to Dravidian origin. On the other hand, the term ಶೂದ್ರ would also cover the wild hill tribes which lived by hunting and fishing, and many of which would acknowledge the superiority of their Aryan neighbours, it could, in fact, be applied to all beyand the pale of the Aryan State.

( Vedic Index of Names and Subjects, Vol I1 P. 388 )

ಈ ದಾಸಜನರ ಸ್ತ್ರೀಯರಿಗೆ ದಾಸಿ ಎಂದು ಹೆಸರು. ಋಗ್ವೇದದಲ್ಲಿ ಈ ಹೆಸರು ರೂಢಿಯಲ್ಲಿಲ್ಲದಿದ್ದರೂ ಅಥರ್ವಣವೇದದಲ್ಲಿಯೂ (ಅ. ವೇ. ೫-೨೨-೬, ೧೨-೩-೧೩; ೧೨-೪-೯,) ಇತರ ಸ್ಥಳಗಳಲ್ಲಿಯೂ (ಛಾ-ಉ. ೫-೧೩-೨, ಬೃ. ಉ ೬-೧-೧೦,) ಈ ಶಬ್ದದ ಪ್ರಯೋಗವಿದೆ. ಈ ಸ್ತ್ರೀಯರ ಪತಿಗಳು ಯುದ್ಧಲ್ಲಿ ಮೃತರಾದ ಮೇಲೆ ಆರ್ಯಜನರ ಸೇವಕರಾಗಿ ಕೆಲಸಮಾಡುತ್ತಿದ್ದರೆಂದೂ ಕೆಲವು ವೇಳೆ ಆರ್ಯಜನರು ಇವರ ಸಂಗವನ್ನು ಸಹಾ ಮಾಡುತ್ತಿದ್ದರೆಂದೂ ಇವರಲ್ಲಿ ಜನಿಸಿದ ಪುತ್ರರಿಗೆ ಆರ್ಯರೊಡನೆ ಸವ್ಯವಹಾರವಿರಲಿಲ್ಲವೆಂದೂ ತಿಳಿಯಬರುತ್ತದೆ. ಐತರೇಯ ಬ್ರಾಹ್ಮಣದಲ್ಲಿಯೂ (ಐ. ಬ್ರಾ. ೨-೧೯) ಕೌಶೀತಕೀ ಬ್ರಾಹ್ಮಣದಲ್ಲಿಯೂ (ಕೌ. ಬಾ ೧೨-೩) ದಾಸಿಯ ಪುತ್ರನಾದ ಕವಷ ಐಲೂಷನ ಉಪಾಖ್ಯಾನವಿದೆ. ಒಂದಾವರ್ತಿ ಋಷಿಗಳು ಸರಸ್ವತೀ ನದೀತೀರದಲ್ಲಿ ಯಜ್ಞಮಾಡುತ್ತಿದ್ದಾಗ ಈ ಕವಷ ಐಲೂಷನೆಂಬ ದಾಸಿಯ ಪುತ್ರನು ಆ ಋಷಿಗಳ ನಡುವೆ ಬಂದು ಕುಳಿತಿದ್ದನೆಂದೂ ಅದನ್ನು ನೋಡಿ ಆ ಋಷಿಗಳು ಇವನು ದಾಸಿಯ ಪುತ್ರನಾದ್ದರಿಂದ ಬ್ರಾಹ್ಮಣರಾದ ಋಷಿಗಳೊಡನೆ ವ್ಯವಹಾರಕ್ಕೆ ಯೋಗ್ಯನಲ್ಲವೆಂದೂ ಹೇಳಿ ಅವನನ್ನು ಅಲ್ಲಿಂದ ಹೊರದೂಡಿದರು ಅನಂತರ ಆ ಕವಷ ಐಲೂಷನು ದುಃಖದಿಂದ ಕಾಡಿಗೆ ಹೋಗಿ ದೇವತೆಗಳನ್ನು ಪ್ರಾರ್ಥಿಸಲು ಅವರು ವಿಶ್ವೇದೇವತೆಗಳನ್ನು ಸ್ತುತಿಸಿದರೆ ನಿನಗೆ ಋಷಿಯಾಗುವ ಯೋಗ್ಯತೆ ಉಂಟಾಗುವುದೆಂದು ಹೇಳಲು ಅವನು ಅದರಂತೆ ದೇವತೆಗಳನ್ನು ಸ್ತುತಿಸಿದನು. ಋ ಸಂ ಹತ್ತನೇ ಮಂಡಲದಲ್ಲಿ ೩೦, ೩೧, ೩೨, ೩೩, ೩೪, ಎಂಬ ಐದು ಸೂಕ್ತಗಳಿಗೆ ಈ ಕವಷ ಐಲೂಷನು ಋಷಿಯಾಗಿದಾನೆ. ಇದನ್ನು ಕಂಡು ಯಜ್ಞದಲ್ಲಿ ಭಾಗವಹಿಸುತ್ತಿದ್ದ ಋಷಿಗಳು ಇವನನ್ನು ತಮ್ಮ ಜತೆಗೆ ಸೇರಿಸಿಕೊಂಡರೆಂಬ ಇತಿಹಾಸವಿದೆ

ಈ ದಾಸ ಜನರು ಆರ್ಯರಿಗೆ ಶತ್ರುಗಳಾಗಿ ಅವರೊಡನೆ ಯುದ್ಧಮಾಡುತ್ತಿದ್ದರೆಂದೂ ಯಜ್ಞಾದಿಗಳಿಗೆ ವಿಘ್ನವನ್ನುಂಟುಮಾಡುತ್ತಿದ್ದರೆಂದೂ ಋ. ಸಂ. ೧-೧೫೮-೫, ೨-೧೩-೮, ೪-೩೦-೧೪, ೧೫, ೬-೨೦-೧೦, ೭-೯೯-೫, ೧೦-೪೯-೬, ೭ ಇತ್ಯಾದಿ ಋಕ್ಕುಗಳಲ್ಲಿ ವರ್ಣನೆ ಇದೆ. ಅನೇಕ ಸಂದರ್ಭಗಳಲ್ಲಿ (ಋ ಸಂ. ೫-೩೪-೬, ೭, ೭-೬-೩; ಅ. ವೇ. ೫-೧೧-೬) ದಾಸರನ್ನೂ, ಪಣಿಗಳನ್ನೂ ಒಟ್ಟಿಗೆ ಸೂಚಿಸಿರುವುದರಿಂದ ಇವರು ಒಂದೇ ಗುಂಪಿಗೆ ಸೇರಿದವರೆಂದು ಊಹಿಸಬಹುದು. ಈ ದಾಸರ ಐಶ್ವರ್ಯವು ಅಪಾರವಾಗಿತ್ತೆಂದು ಋ. ಸಂ ೧-೧೭೬-೪, ೪-೩೦-೧೩; ೭-೪೦-೬; ೧೦-೬೯-೫; ಅ ವೇ. ೭-೯-೨೦ ಇತ್ಯಾದಿ ಋಕ್ಕುಗಳಿಂದ ತಿಳಿಯಬರುವುದು. ಈ ದಾಸ ಜನರಲ್ಲಿ ಧುನಿ, ಪಿಪ್ರು ವರ್ಚಿನ್, ಶುಷ್ಣ, ಶಂಬರ ಮೊದಲಾದ ಮುಖಂಡರೂ, ಕಿರಾತ, ಕೀಕಟ, ಚಂಡಾಲ, ಪರ್ಣಕ, ಶಿಮ್ಯು ಎಂಬ ಪಂಗಡಗಳೂ ಇದ್ದವೆಂದು ತಿಳಿಯಬರುತ್ತದೆ. ಈ ದಾಸಜನರ ಮುಖಂಡರಾದ ಕೆಲವರ ವಿಷಯವು ಋಗ್ವೇದದಲ್ಲಿ ಸೂಚಿತವಾಗಿರುವುದನ್ನು ಸೂಕ್ಷ್ಮವಾಗಿ ವಿವರಿಸಲಾಗಿದೆ—

**ಶುಷ್ಣ**—ಇವನು ಕುತ್ಸನ ಮುಖ್ಯವಾದ ಶತ್ರುವು. ಇವನ ಹೆಸರು ಋಗ್ವೇದದಲ್ಲಿ ಸುಮಾರು **೪೦ ಸಲ** ಪಠಿತವಾಗಿದೆ. ಈ ಕುತ್ಸನಿಗೋಸ್ಕರ **ಅಥವಾ** ಕುತ್ಸನ ಜೊತೆಯಲ್ಲಿ ಇಂದ್ರನು **ಶುಷ್ಣನನ್ನು** ಕೊಲ್ಲುತ್ತಾನೆ (೪-೧೬-೧೨; ೫-೨೯-೯ ಇತ್ಯಾದಿ). ಅವನಿಗೆ ಬಲವಾದ ಕೋಟೆಗಳಿವೆ. (೧-೫೧-೧೧, ೪-೩೦-೧೩) ಚಲಿಸುವ ಕೋಟೆಯೆಂದು ಒಂದು ಕಡೆ ಹೇಳಿದೆ (೮-೧-೨೮) ಇಂದ್ರನು ಶುಷ್ಣನ ಕೋಟೆಗಳನ್ನು ನಾಶಮಾಡಿ ನೀರುಗಳನ್ನು ಬಿಡುಗಡೆಮಾಡುತ್ತಾನೆ (೧-೫೧-೧೧) ಶುಷ್ಣನ ವಂಶವನ್ನು ನಿರ್ಮೂಲಮಾಡಿ ಸ್ವರ್ಗೀಯೋದಕವನ್ನು (ಸ್ವರ್ವತೀಃ) ಗಳಿಸುತ್ತಾನೆ. (೮-೪೦-೧೦) ನಾಲ್ಕುಸಲ ಶುಷ್ಣನಿಗೆ **ಕುಯವ** ಎಂದರೆ ಕೆಟ್ಟಧಾನ್ಯವನ್ನುಂಟುಮಾಡುವವನು ಎಂಬ ವಿಶೇಷಣವಿದೆ. ಕೆಲವು ಕಡೆ ಇವನನ್ನು ಕುಯವ ಎಂತಲೇ ಕರೆದಿದೆ (೧-೧೦೩-೮, ೧-೧೦೪-೩) ಇಂದ್ರಶುಷ್ಣರ ಯುದ್ಧದ ಪರಿಣಾಮವು ಜಲವಿಮೋಚನೆ ಮಾತ್ರವಲ್ಲ, ಗೋವುಗಳ ಅಥವಾ ಸೂರ್ಯನ ಪ್ರಾಪ್ತಿಯೂ ಆಗಬಹುದು (೮-೮೫-೧೭). ಇಂದ್ರನೊಡನೆ ಯುದ್ಧಮಾಡುವಾಗ ಶುಷ್ಣನು ಅಂಧಕಾರದಲ್ಲಿ ಓಡಾಡುತ್ತಾನೆ. ಇವನಿಗೆ ಹಿಮದ ಪುತ್ರ ಮತ್ತು ದಾನವನೆಂದು ಹೆಸರಿದೆ (೫-೩೨-೪) ಈ **ವರ್ಣನೆಗಳಿಂದ** ಶುಷ್ಣನು ಅನಾವೃಷ್ಟಿಕಾರಕನೆನ್ನಬಹುದು.

**ಶಂಬರ**—ಈ ಹೆಸರು ಸುಮಾರು ಇಪ್ಪತ್ತುಸಲ ಪಠಿತವಾಗಿದೆ. ಇವನ ಹೆಸರು ಶುಷ್ಣ, ಪಿಪ್ರು ವರ್ಚಿಗಳೊಡನೆ ಸೇರಿ ಪಠಿತವಾಗಿಯೂ ಇದೆ. (೧-೧೦೧-೨, ೧-೧೦೩-೮, ೨-೧೯-೬, ೬-೧೮-೮) ಇಂದ್ರನು ಅಹಿ ಮತ್ತು ಶಂಬರ ಇವರೊಡನೆ ಯುದ್ಧಮಾಡುವಾಗ ಮರುತ್ತುಗಳು ಇಂದ್ರನಿಗೆ ಸಹಾಯಮಾಡಿವರು (೩-೪೭-೪) ಶಂಬರನನ್ನು ಭೇದಿಸಿದಾಗ ಇಂದ್ರನು ಆಕಾಶವನ್ನೇ ನಡುಗಿಸಿದನು (೧-೫೪-೪), ಪರ್ವತದ ಮೇಲೆವಾಸಿಸುತ್ತಿದ್ದ ಶಂಬರನನ್ನು ಹುಡುಕಿ (೨-೧೨-೧೧) ಪರ್ವತದಿಂದ ಕೆಳಕ್ಕುರುಳಿಸಿದನು (೧-೧೩೦-೭, ೬-೨೬-೫), ಕುಲಿತರನ ಪುತ್ರನಾದ ಶಂಬರನೆಂಬ ದಾಸನನ್ನು ಇಂದ್ರನು ದೊಡ್ಡಪರ್ವತದಿಂದ ಉರುಳಿಸಿದನು (೪-೩೦-೧೪) ತಾನೊಬ್ಬ ಸಣ್ಣದೇವತೆಯೆಂದು ತಿಳಿದುಕೊಂಡಿದ್ದ ಶಂಬರನನ್ನು ಹೊಡೆದು ಉನ್ನತ ಪ್ರದೇಶದಿಂದ ಬೀಳಿಸಿದನು (೭-೧೮-೨೦) ತೊಂಭತ್ತು (೧-೧೩೦-೭), ಸಾಧಾರಣವಾಗಿ ತೊಂಭತ್ತೊಂಭತ್ತು (೨-೧೯-೬ ಇತ್ಯಾದಿ) ಅಥವಾ ನೂರು (೨-೧೪-೬ ಇತ್ಯಾದಿ) ದುರ್ಗಗಳು ಇವನ ಅಧೀನದಲ್ಲಿವೆ ಒಂದು ಕಡೆ ಶಂಬರಾಣಿ ಎಂಬ ಶಬ್ದಕ್ಕೆ ಶಂಬರನ ಕೋಟೆಗಳು ಎಂಬರ್ಥವಿದೆ. ಇವುಗಳನ್ನು ಬೃಹಸ್ಪತಿಯು ಭೇದಿಸಿ ನಿಧಿಗಳಿಂದ ಸಹಿತವಾಗಿದ್ದ ಪ್ರರ್ವತಪ್ರದೇಶವನ್ನು ಪ್ರವೇಶಿಸಿದನು (೨-೨೪-೨). ಅತಿಥಿಗ್ವ (೧-೫೧-೬) ದಿವೋದಾಸ (೨-೧೯-೬) ಅಥವಾ ಇವರಿಬ್ಬರಿಗಾಗಿ (೧-೧೩೦-೭, ೪-೨೬-೩) ಇಂದ್ರನು ಶಂಬರನನ್ನು ಧ್ವಂಸಮಾಡುತ್ತಾನೆ ಎಂದಿದೆ ಶಂಬರ ಮತ್ತು ದಿವೋದಾಸ ಎಂಬಿಬ್ಬರೂ ಒಂದೇ ವ್ಯಕ್ತಿಯೆಂದು ಕೆಲವರು ಅಭಿಪ್ರಾಯಪಡುವರು.

**ಪಿಪ್ರು**—ಇವನು ಇಂದ್ರನ ಆಶ್ರಿತನಾದ ಋಜಿಶ್ವನ ಶತ್ರುವು. ಈ ಋಜಿಶ್ವನು ಇಂದ್ರನಿಗೆ ಸೋಮರಸವನ್ನು ಪಿಸಿ ಪಿಪ್ರುವಿನ ಮೇಲೆ ಯುದ್ಧಮಾಡುವಾಗ **ಅವನ** ಸಹಾಯವನ್ನು ಪಡೆಯುತ್ತಾನೆ. (೫-೨೯-೧೧, ೧೦-೯೯-೧೧) ಇಂದ್ರನು ಋಜಿಶ್ವನಿಂದ ಯುಕ್ತನಾಗಿ (೧-೧೦೧-೧, ೧೦-೧೩೮-೩) ಅಥವಾ ಅವನಿಗೋಸ್ಕರ (೪-೧೬-೧೩, ೬-೨೦-೭) ಪಿಪ್ರುವನ್ನು ಸೋಲಿಸಿದನು. ಅಹಿಯ ಮಾಯೆಗಳಿಂದ ಯುಕ್ತನಾದ ಪಿಪ್ರುವಿನ ಅಧೀನದಲ್ಲಿ ಅನೇಕ ಕೋಟೆಗಳಿವೆ. ಇಂದ್ರನು ಇವುಗಳನ್ನು ಭೇದಿಸುತ್ತಾನೆ (೧-೫೧-೫, ೬-೨೦-೭) ಇಂದ್ರನು ದಾಸನಾದ ಪಿಪ್ರುವನ್ನೂ ಮತ್ತು ಇತರರನ್ನೂ ವಧಿಸಿ ಉದಕಗಳನ್ನು ಹೊರಡಿಸಿದನು (೮-೩೨-೨). ಸೂರ್ಯನು ಆಕಾಶ ಮಧ್ಯದಲ್ಲಿ ತನ್ನ ರಥವನ್ನು ಬಿಚ್ಚಿದಾಗ ಪಿಪ್ರುವಿಗೆ ಅನುರೂಪನಾದ ಯೋಧನನ್ನು ಆರ್ಯಮನು ಕಂಡನು. ಋಜಿಶ್ವಯುಕ್ತನಾದ ಇಂದ್ರನು ಮಾಯಿಯಾದ ಪಿಪ್ರು ಎಂಬ ಅಸುರನ ಬಲವಾದ ಕೋಟೆಗಳನ್ನು ಧ್ವಂಸಮಾಡಿದನು (೧೦-೧೩೮-೩) ಕಾಡುಮೃಗರೂಪನಾದ ಪಿಪ್ರುವನ್ನು ಇಂದ್ರನು ಋಜಿಶ್ವನಿಗೆ ಒಪ್ಪಿಸಿದನು. (೪-೧೬-೧೩) ಋಜಿಶ್ವನೊಡನೆ ಸೇರಿ

ಕೊಂಡು ಇಂದ್ರನು ಕೃಷ್ಣವರ್ಣದವರ (ಕಪ್ಪು ಜನರ) ಸಂತತಿಯನ್ನೇ ನಾಶಮಾಡಿದನು (೧-೧೧೧-೧) ಇವನಿಗೆ, ಅಸುರ, ದಾಸ ಎಂಬ ಎರಡು ವಿಶೇಷಣಗಳೂ ಇರುವುದರಿಂದ ಇವನು ಅಸುರ ಸ್ವಭಾವವುಳ್ಳ ಮನುಷ್ಯ ಶತ್ರುವೆಂದು ಕೆಲವರ ಅಭಿಪ್ರಾಯ

**ನಮುಚಿ**– ಇವನ ವಿಷಯವನ್ನು ಇದೇ ಭಾಗದ 192-195 ನೇ ಪೇಜುಗಳಲ್ಲಿ ವಿವರಿಸಲಾಗಿದೆ.

**ಧುನಿ ಮತ್ತು ಚುಮುರಿ**—ಸಾಧಾರಣವಾಗಿ ಈ ಎರಡು ಹೆಸರುಗಳೂ ಒಟ್ಟಿಗೇ ಇರುತ್ತವೆ. ಒಂದುಸಲ ಮಾತ್ರ ಚುಮುರಿಯೊಬ್ಬನ ಹೆಸರು ಮಾತ್ರ ಇದೆ. ಒಂದುಸಲ ದ್ವಂದ್ವವಾಗಿಯೂ (೬-೨೧-೧೩) ಉಪಯೋಗಿಸಿದೆ ಇದರಿಂದ ಇವರಿಬ್ಬರ ಸಂಬಂಧ ಅತ್ಯಂತ ನಿಕಟವಾದುದೆಂದು ತಿಳಿದುಬರುತ್ತದೆ. ಇಂದ್ರನು ಇವರಿಬ್ಬರನ್ನೂ ನಿದ್ರಾ ಮಗ್ನರನ್ನಾಗಿ ಮಾಡಿದನು (೨-೧೫-೯; ೬-೨೦-೧೩; ೭-೧೯-೪) ಚುಮುರಿಗೂ ಇದೇ ರೀತಿ ಆಗಿದೆ (೬-೨೬-೬) ಶಂಬರ, ಪಿಪ್ರು, ಶುಷ್ಣ ಮೊದಲಾದವರೊಡನೆ ಇವರನ್ನು ಇಂದ್ರನು ಧ್ವಂಸಮಾಡಿ ಅವರ ಕೋಟೆಗಳನ್ನು ನಾಶಮಾಡಿದನು (೬-೧೮-೮) ತನಗೋಸ್ಕರ ಸೋಮರಸವನ್ನು ಸಿದ್ಧಪಡಿಸಿದ ದಭೀತಿಋಷಿಗೋಸ್ಕರ ಇವರಿಬ್ಬರೂ ಇಂದ್ರನಿಂದ ನಾಶಮಾಡಲ್ಪಟ್ಟರು ಅಥವಾ ನಿದ್ರಿತರಾಗುವಂತೆ ಮಾಡಲ್ಪಟ್ಟರು (೧೦-೧೧೩-೯) ಮತ್ತು ದಭೀತಿಯು ತನ್ನ ಭಕ್ತಿಗೆ ತಕ್ಕ ಪ್ರತಿಫಲವನ್ನು ದೇವತೆಗಳಿಂದ ಪಡೆದನು. (೬-೨೬-೬) ಇಂದ್ರನು ದಭೀತಿಗೋಸ್ಕರ ಮೂವತ್ತುಸಾವಿರ ದಸ್ಯುಗಳಿಗೆ ನಿದ್ರೆಬರುವಂತೆ ಮಾಡಿದನು (೪-೩೦-೨೧) ಮತ್ತು ಅವನಿಗೋಸ್ಕರ ದಸ್ಯುಗಳನ್ನು ಹಗ್ಗವಿಲ್ಲದೆ ಬಂಧಿಸಿದನು. (೨-೧೩-೯) ಧುನಿ ಎಂದರೆ ಘಟ್ಟಿಯಾಗಿ ಗರ್ಜಿಸುವವನು ಎಂದರ್ಥವು.

**ವರ್ಚೀ**—ಶಂಬರನ ಜತೆಯಲ್ಲಿ ಇವನ ಹೆಸರು ನಾಲ್ಕು ಸಲ ಪ್ರಸ್ತಾಪಿತವಾಗಿದೆ ಇವನೂ ಎಬ್ಬ ಅಸುರ (೭-೯೯-೫) ಆದರೆ ಶಂಬರನಂತೆ ಇವನಿಗೂ ದಾಸ ಎಂದು ಹೆಸರು (೬–೪೭–೨೧) ಇಂದ್ರನು ಶಂಬರನ ಕೋಟೆಗಳನ್ನು ಒಡೆದು ವರ್ಚಿಯ ಒಂದು ಲಕ್ಷ ಯೋಧರನ್ನು ನಾಶಮಾಡಿದನು (೨-೧೪-೬, ೪-೩೦-೧೫).

ಮೇಲೆ ಹೇಳಿದ ಮುಖಂಡರುಗಳಲ್ಲದೆ ವಲ, ದಭೀಕ, ರುಧಿಕ್ರ (೨-೧೪-೩, ೫) ಅನರ್ಶನಿ, ಸೃಬಿಂದ (೮-೩೨-೨) ಮತ್ತು ಇಲೀಬಿಶ (೧-೩೩.೧೨) ಎಂಬುವರೂ ಸಹ ದಾಸ ಎಂಬ ಜನರ ಗುಂಪಿಗೆ ಸೇರಿದವರೆಂದ ಹೇಳಬಹುದು.

**ದಾಸಃ ಸ್ತ್ರೀಯೋ ಆಯುಧಾನಿ ಚಕ್ರೇ**—ಈ ಋಕ್ಕಿನಲ್ಲಿ ಇನ್ನೊಂದು ವಿಷಯವು ಪ್ರಸ್ತಾಪಿಸಲ್ಪಟ್ಟಿದೆ ದಾಸನಾದ ನಮುಚಿಯು ಇಂದ್ರನೊಡನೆ ಯುದ್ಧಮಾಡುವುದಕ್ಕಾಗಿ ಕೆಲವು ಸ್ತ್ರೀಯರನ್ನು ಅಥವಾ ಸ್ತ್ರೀಸೈನಿಕರನ್ನು ಕಳುಹಿಸಿದನು. ಇಂದ್ರನು ಅವರನ್ನು ತಿರಸ್ಕಾರದೃಷ್ಟಿಯಿಂದ ನೋಡಿ ಈ ಸ್ತ್ರೀಯರೊಡನೆ ಯುದ್ಧಮಾಡುವುದು ತನ್ನ ಘನತೆಗೆ ಸರಿಯಲ್ಲವೆಂದು ಯೋಚಿಸಿ ಆ ಸ್ತ್ರೀಯರಲ್ಲಿ ನಮುಚಿಗೆ ಅತ್ಯಂತ ಪ್ರೀತಿಪಾತ್ರರಾದ ಇಬ್ಬರು ಯುವತಿಯರನ್ನು ಸೆರೆಯಲ್ಲಿಟ್ಟನು. ಉಳಿದ ಸ್ತ್ರೀಯರು ಓಡಿಹೋಗಲು ಇಂದ್ರನು ನಮುಚಿಯೊಡನೆ ಯುದ್ಧಮಾಡಲು ಹೊರಟನು ಎಂದು ವಿವರಿಸಲಾಗಿದೆ.

॥ ಸಂಹಿತಾಪಾಠಃ ॥

ಸಮತ್ರ ಗಾವೋಽಭಿತೋಽನವಂತೇಹೇಹ ವತ್ಸೈರ್ವಿಯುತಾ ಯದಾಸನ್।
ಸಂ ತಾ ಇಂದ್ರೋ ಅಸೃಜದಸ್ಯ ಶಾಕೈರ್ಯದೀಂ ಸೋಮಾಸಃ ಸುಷುತಾ
ಅಮಂದನ್ ॥ ೧೦ ॥

॥ ಪದಪಾಠಃ ॥

ಸಂ । ಅತ್ರ । ಗಾವಃ । ಅಭಿತಃ। ಅನವಂತ । ಇಹಽಇಹ । ವತ್ಸೈಃ। ವಿಽಯುತಾಃ । ಯತ್ । ಆಸನ್ ।
ಸಂ । ತಾಃ । ಇಂದ್ರಃ। ಅಸೃಜತ್ । ಅಸ್ಯ । ಶಾಕೈಃ । ಯತ್ । ಈಂ । ಸೋಮಾಸಃ । ಸುಽಸುತಾಃ ।
ಅಮಂದನ್ ॥ ೧೦ ॥

॥ ಸಾಯಣಭಾಷ್ಯಂ ॥

ಯದ್ಯದಾ ಗಾವೋ ವತ್ಸೈರ್ವಿಯುತಾ ಆಸನ್ ವಿಯುಕ್ತಾ ಅಭವನ್ ಅತ್ರಾಸ್ಮಿನ್ಕಾಲೇಽಭಿತಃ ಸರ್ವತೋ ನಮುಚಿನಾಽಪಹೃತಾ ಗಾವ ಇಹೇಹ ಇಹ ಚೇಹ ಚ ಸರ್ವತಃ ಸಮನವಂತ । ಅತ್ಯಂತಮಗಚ್ಛನ್ । ಯದ್ಯದಾ ಸುಷುತಾ ಬಭ್ರುನಾಮ್ನಾ ಋಷಿಣಾ ಸುಷ್ಠ್ವಭಿಷುತಾಃ ಸೋಮಾಸಃ ಸೋಮಾ ಈಮೇನಮಿಂದ್ರಮಮಂದನ್ ಅಮಾದಯನ್ ತದೇಂದ್ರಃ ಶಾಕೈಃ ಶಕ್ತೈರ್ಮರುದ್ಭಿಃ ಸಹಾಸ್ಯ ಬಭ್ರೋಃ ಸಂಬಂಧಿನೀರ್ನಮುಚಿನಾಪಹೃತಾಸ್ತಾ ಗಾಃ ಸಮಸೃಜತ್ । ವತ್ಸೈಃ ಸಹ ಸಮಯೋಜಯತ್ ॥

॥ ಪ್ರತಿಪದಾರ್ಥ ॥

**ಯತ್**—ಯಾವಾಗ । **ಗಾವಃ**—ಗೋವುಗಳು । **ವತ್ಸೈಃ**—ತಮ್ಮ ಕರುಗಳಿಂದ । **ವಿಯುತಾಃ ಆಸನ್**—ಬೇರೆ ಮಾಡಲ್ಪಟ್ಟವೋ । **ಅತ್ರ**—ಆ ಕಾಲದಲ್ಲಿ । **ಅಭಿತಃ**—ಸುತ್ತಲೂ । **ಇಹೇಹ**—ಎಲ್ಲೆಲ್ಲಿಯೂ । **ಸಂ ಅನವಂತ**—ಅಲೆದಾಡುತ್ತಿದ್ದವು । **ಯತ್**—ಯಾವಾಗ । **ಸುಷುತಾಃ**—ಶ್ರೇಷ್ಠರೀತಿಯಲ್ಲಿ ಹಿಂಡಲ್ಪಟ್ಟ । **ಸೋಮಾಃ**—ಸೋಮರಸಗಳು । **ಈಂ**—ಈ ಇಂದ್ರನನ್ನು । **ಅಮಂದನ್**—ಹರ್ಷಗೊಳಿಸಿದವೋ (ಆಗ) । **ಇಂದ್ರಃ**—ಇಂದ್ರನು । **ಶಾಕೈಃ**—ಅತ್ಯಂತ ಶಕ್ತಿಯುತರಾದ ಮರುತ್ತುಗಳೊಡನೆ ಕೂಡಿಕೊಂಡು । **ಅಸ್ಯ**—ಬಭ್ರುವಿನ । **ತಾಃ**—ಆ ಗೋವುಗಳನ್ನು । **ಸಂ ಅಸೃಜತ್**—ಅವುಗಳ ಕರುಗಳೊಡನೆ ಸೇರಿದನು.

॥ ಭಾವಾರ್ಥ ॥

ಯಾವಾಗ ಗೋವುಗಳು ತಮ್ಮ ಕರುಗಳಿಂದ ಬೇರೆ ಮಾಡಲ್ಪಟ್ಟವೋ ಆ ಕಾಲದಲ್ಲಿ ಅವು ಎಲ್ಲೆಲ್ಲಿಯೂ ಅಲೆದಾಡುತ್ತಿದ್ದವು ಆದರ ಉತ್ತಮ ರೀತಿಯಲ್ಲಿ ಹಿಂಡಿದ ಸೋಮರಸಗಳು ಇಂದ್ರನನ್ನು ಹರ್ಷಗೊಳಿಸಿದೊಡನೆಯೇ, ಇಂದ್ರನು ಅತ್ಯಂತ ಶಕ್ತಿಯುತರಾದ ಮರುತ್ತುಗಳೊಡನೆ ಕೂಡಿಕೊಂಡು ನಮುಚಿಯಿಂದ ಅಪಹೃತವಾದ ಬಭ್ರುವಿನ ಗೋವುಗಳನ್ನು ಅವುಗಳ ಕರುಗಳೊಡನೆ ಸೇರಿಸಿದನು.

## English Translation

When the cows were separated from their calves, they wandered about hither and thither; but when the well-offered libations had exhilarated him, then Indra, with his vigorous (Maruts), reunited them (with their calves).

॥ ವಿಶೇಷವಿಷಯಗಳು ॥

ಒಂದಾನೊಂದು ಕಾಲದಲ್ಲಿ ಈ ಸೂಕ್ತದ ಋಷಿಯಾದ ಬಭ್ರುವೆಂಬುವನ ಗೋವುಗಳು ತಮ್ಮ ಕರುಗಳೊಡನೆ ಅರಣ್ಯದಲ್ಲಿ ಮೇಯುತ್ತಿದ್ದಾಗ ನಮುಚಿಯೆಂಬ ಅಸುರನು ಗೋವುಗಳನ್ನು ಕರುಗಳಿಂದ ಪ್ರತ್ಯೇಕಿಸಿ ಅಪಹರಿಸಿದನು. ಕರುಗಳು ತಮ್ಮ ಹಸುಗಳನ್ನು ಕಾಣದೆ ಅರಣ್ಯದಲ್ಲಿ ಅಲೆದಾಡುತ್ತಿದ್ದವು. ಆಗ ಬಭ್ರುಋಷಿಯು ಇಂದ್ರನಿಗೆ ಸೋಮ ರಸವನ್ನು ಅರ್ಪಿಸಿ ಪ್ರಾರ್ಥಿಸಲು ಇಂದ್ರನು ಮರುದ್ದೇವತೆಗಳ ಸಹಾಯದಿಂದ ಬಭ್ರುಋಷಿಯ ಹಸುಗಳನ್ನು ನಮುಚಿಯಿಂದ ಬಿಡಿಸಿ ಅವು ತಮ್ಮ ಕರುಗಳೊಡನೆ ಸೇರುವಂತೆ ಮಾಡಿದನು ಎಂಬ ಇತಿಹಾಸವು ಇಲ್ಲಿ ಉಕ್ತವಾಗಿದೆ.

---

॥ ಸಂಹಿತಾಪಾಠಃ ॥

ಯದೀಂ ಸೋಮಾ ಬಭ್ರುಧೂತಾ ಅಮಂದನ್ನರೋರವೀದ್ವೃಷಭಃ ಸಾದನೇಷು ।
ಪುರಂದರಃ ಪಪಿವಾँ ಇಂದ್ರೋ ಅಸ್ಯ ಪುನರ್ಗವಾಮದದಾದುಸ್ರಿಯಾಣಾಂ॥

॥ ಪದಪಾಠಃ ॥

ಯತ್ । ಈಂ । ಸೋಮಾಃ । ಬಭ್ರುಽಧೂತಾಃ । ಅಮಂದನ್ । ಅರೋರವೀತ್ । ವೃಷಭಃ । ಸದನೇಷು ।
ಪುರಂಽದರಃ । ಪಪಿಽವಾನ್ । ಇಂದ್ರಃ । ಅಸ್ಯ । ಪುನಃ । ಗವಾಂ । ಅದದಾತ್ । ಉಸ್ರಿಯಾಣಾಂ ॥ ೧೧ ॥

॥ ಸಾಯಣಭಾಷ್ಯಂ ॥

ಯದ್ಯದಾ ಬಭ್ರುಧೂತಾ ಬಭ್ರುಣಾಭಿಷುತಾಃ ಸೋಮಾ ಈಮೇನಮಿಂದ್ರಮಮಂದನ್ ಆಮೋದಯನ್ ತದಾ ವೃಷಭಃ ಕಾಮಾನಾಂ ವರ್ಷಿತೇಂದ್ರಃ ಸದನೇಷು ಯುದ್ಧೇಷ್ವರೋರವೀತ್ । ಅತ್ಯರ್ಥಂ ಶಬ್ದಮಕರೋತ್ । ಪುರಂದರಃ ಪುರಾಂ ದಾರಯಿತಾಸ್ಯೇಮಂ ಸೋಮಂ ಪಪಿವಾನ್ ಪೀತವಾನಿಂದ್ರಃ ಪುನರುಸ್ರಿಯಾಣಾಂ ಕ್ಷೀರಮುತ್ಸ್ರಾವಿಣೀರ್ಗವಾಂ ಗಾ ಅದದಾತ್ । ಬಭ್ರವೇ ದದೌ ॥

॥ ಪ್ರತಿಪದಾರ್ಥ ॥

**ಯತ್**—ಯಾವಾಗ । **ಬಭ್ರುಧೂತಾಃ**—ಬಭ್ರುವಿನಿಂದ ಹಿಂಡಲ್ಪಟ್ಟ । **ಸೋಮಾಃ**-ಸೋಮರಸಗಳು । **ಈಂ**—ಇಂದ್ರನನ್ನು । **ಅಮಂದನ್**—ಹರ್ಷಗೊಳಿಸಿದವೋ (ಆಗ) । **ವೃಷಭಃ**—ಕಾಮವರ್ಷಕನಾದ ಇಂದ್ರನು । **ಸದನೇಷು**—ಯುದ್ಧಗಳಲ್ಲಿ । **ಅರೋರವೀತ್**—ಗಭೀರವಾದ ಶಬ್ದವನ್ನು ಮಾಡಿದನು । **ಪುರಂದರಃ**—ಶತ್ರುಪಟ್ಟಣಗಳನ್ನು ಸೀಳಿಹಾಕುವವನೂ । **ಅಸ್ಯ**—ಈ ಸೋಮವನ್ನು । **ಪಪಿವಾನ್**—ಪಾನಮಾಡಿದವನೂ ಆದ । **ಇಂದ್ರಃ**—ಇಂದ್ರನು । **ಪುನಃ**—ತಿರುಗಿಯೂ । **ಉಸ್ರಿಯಾಣಾಂ**—ಕ್ಷೀರಪ್ರಸವಿತ್ರಿಗಳಾದ । **ಗವಾಂ**—ಗೋವುಗಳ ಸಮೂಹವನ್ನು । **ಅದದಾತ್**—ಬಭ್ರುವಿಗೆ ಕೊಟ್ಟನು.

॥ ಭಾವಾರ್ಥ ॥

ಬಭ್ರುವಿನಿಂದ ಹಿಂಡಲ್ಪಟ್ಟ ಸೋಮರಸಗಳು ಇಂದ್ರನನ್ನು ಹರ್ಷಗೊಳಿಸಿದ ಕೂಡಲೇ, ಕಾಮವರ್ಷಕನಾದ ಇಂದ್ರನು ಯುದ್ಧಗಳಲ್ಲಿ ಗಭೀರವಾದ ಶಬ್ದವನ್ನು ಮಾಡಿದನು. ಶತ್ರುಪಟ್ಟಣಗಳನ್ನು ಸೀಳಿಹಾಕುವವನೂ, ಸೋಮವನ್ನು ಪಾನಮಾಡಿದವನೂ ಆದ ಇಂದ್ರನು ಕ್ಷೀರವನ್ನು ಕರೆಯತಕ್ಕ ಗೋವುಗಳನ್ನೆಲ್ಲಾ ಪುನಃ ಬಭ್ರುವಿಗೆ ಸೇರುವಂತೆ ಮಾಡಿದನು

English Translation

When the libations effused by Babhru had exhilarated him, the showerer (of benefits) shouted aloud in the combats : Indra, the destroyer of cities, quaffing (the Soma), restored to him his milk-yielding cattle.

॥ ವಿಶೇಷವಿಷಯಗಳು ॥

ಹಿಂದಿನ ಋಕ್ಕಿನಲ್ಲಿ ಹೇಳಲ್ಪಟ್ಟ ವಿಷಯವನ್ನೇ ಈ ಋಕ್ಕಿನಲ್ಲಿಯೂ ಪುನಃ ಹೇಳಲಾಗಿದೆ.

————

॥ ಸಂಹಿತಾಪಾಠಃ ॥

ಭದ್ರಮಿದಂ ರುಶಮಾ ಅಗ್ನೇ ಅಕ್ರನ್ಗವಾಂ ಚತ್ವಾರಿ ದದತಃ ಸಹಸ್ರಾ ।
ಋಣಂಚಯಸ್ಯ ಪ್ರಯತಾ ಮಘಾನಿ ಪ್ರತ್ಯಗ್ರಭೀಷ್ಮ ನೃತಮಸ್ಯ ನೃಣಾಂ ॥

॥ ಪದಪಾಠಃ ॥

ಭದ್ರಂ । ಇದಂ । ರುಶಮಾಃ । ಅಗ್ನೇ । ಅಕ್ರನ್ । ಗವಾಂ । ಚತ್ವಾರಿ । ದದತಃ । ಸಹಸ್ರಾ ।
ಋಣಂಽಚಯಸ್ಯ । ಪ್ರಽಯತಾ । ಮಘಾನಿ । ಪ್ರತಿ । ಅಗ್ರಭೀಷ್ಮ । ನೃಽತಮಸ್ಯ । ನೃಣಾಂ ॥ ೧೨ ॥

॥ ಸಾಯಣಭಾಷ್ಯಂ ॥

**ರುಶಮ ಇತಿ ಕಶ್ಚಿಜ್ಜನಪದವಿಶೇಷಃ । ಅತ್ರ ರುಶಮಶಬ್ದೇನ ತತ್ರತ್ಯಾ ಜನಾ ಉಚ್ಯಂತೇ । ರುಶಮಾ ಋಣಂಚಯನಾಮ್ನೋ ರಾಜ್ಞಃ ಕಿಂಕರಾ ಹೇ ಅಗ್ನೇ ಭದ್ರಂ ಕಲ್ಯಾಣಮಿದಂ ಕರ್ಮಾಕ್ರನ್ । ಅಕುರ್ವನ್ । ಕೀದೃಶಾಃ । ಗವಾಂ ಧೇನೂನಾಂ ಚತ್ವಾರಿ ಚತುಃಸಂಖ್ಯಾಯುಕ್ತಾನಿ ಸಹಸ್ರಾ ಸಹಸ್ರಾಣಿ ದದತೋ ಮಹ್ಯಂ ಪ್ರಯಚ್ಛಂತಃ । ರಾಜ್ಞಾ ಹಿ ದೀಯಮಾನಾನಿ ರಾಜಪುರುಷಾ ಏವ ಪ್ರಯಚ್ಛಂತೀತ್ಯರ್ಥಃ । ನೃಣಾಂ ನೇತೄಣಾಂ ಮಧ್ಯೇ ನೃತಮಸ್ಯಾತಿಶಯೇನ ನೇತೃತಮಸ್ಯ ಋಣಂಚಯಸ್ಯೈತನ್ನಾಮಕೇನ ರಾಜ್ಞಾ ಪ್ರಯತಾ ಪ್ರಯತಾನಿ ದತ್ತಾನಿ ಮಘಾನಿ ಗೋರೂಪಾಣಿ ಧನಾನಿ ವಯಂ ಪ್ರತ್ಯಗ್ರಭೀಷ್ಮ । ಪ್ರತಿಗೃಹೀತವಂತಃ ಸ್ಮಃ । ಪೂಜ್ಯಾರ್ಥಂ ಬಹುವಚನಂ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಗವಾಂ**—ಗೋವುಗಳ । **ಚತ್ವಾರಿ ಸಹಸ್ರಾ**—ನಾಲ್ಕುಸಹಸ್ರ ಸಂಖ್ಯೆಗಳನ್ನು । **ದದತಃ**—ನನಗೆ ದಾನಮಾಡಿದ । **ರುಶಮಾಃ**—ರುಶಮದೇಶದ ಪ್ರಜೆಗಳು । **ಭದ್ರಂ**—ಕಲ್ಯಾಣಕಾರಕವಾದ । ಇದಂ—ಈ ಕರ್ಮವನ್ನು । **ಅಕ್ರನ್**—ಮಾಡಿದ್ದಾರೆ । **ನೃಣಾಂ**—ಮಾನವರಲ್ಲೆಲ್ಲಾ (ನೇತೃಗಳಲ್ಲೆಲ್ಲಾ)। **ನೃತಮಸ್ಯ**—ಅತ್ಯಂತಶ್ರೇಷ್ಠನಾದ । **ಋಣಂಚಯಸ್ಯ**—ಋಣಂಚಯನಾಮಕನಾದ ರಾಜನಿಂದ । **ಪ್ರಯತಾ**—ಅರ್ಪಿತವಾದ । **ಮಘಾನಿ**—ಗೋರೂಪವಾದ ಧನವನ್ನು । **ಪ್ರತ್ಯಗ್ರಭೀಷ್ಮ**—ನಾವು ಪ್ರತಿಗ್ರಹಿಸಿದ್ದೇವೆ

॥ ಭಾವಾರ್ಥ ॥

ಎಲೈ ಅಗ್ನಿಯೇ, ನನಗೆ ನಾಲ್ಕು ಸಹಸ್ರ ಗೋವುಗಳನ್ನು ದಾನಮಾಡಿದ ರುಶಮದೇಶದ ಪ್ರಜೆಗಳು ಮಂಗಳಕಾರಕಗಳಾದ ಈ ಕರ್ಮಗಳನ್ನು ನೆರವೇರಿಸಿದ್ದಾರೆ. ನೇತೃಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠನಾದ ಮತ್ತು ನೇತೃವಾದ ಋಣಂಚಯ ನಾಮಕನಾದ ರಾಜನಿಂದ ಅರ್ಪಿತವಾದ ಗೋರೂಪದ ಧನಗಳನ್ನು ನಾವು ಸ್ವೀಕರಿಸಿದ್ದೇವೆ

## English Translation

The Rusamas giving me four thousand cows, Agni, have done well : we have accepted the wealth, the donation of the leader of leaders Rinanchaya.

॥ ವಿಶೇಷವಿಷಯಗಳು॥

ರುಶಮ ಎಂಬ ಜನಾಂಗಕ್ಕೆ ಋಣಂಚಯನೆಂಬುವನು ರಾಜನಾಗಿದ್ದನು. ಈ ರಾಜನ ಆಜ್ಞೆಯ ಪ್ರಕಾರ ರುಶಮಾ ಎಂಬ ಇವನ ಕಿಂಕರರು ಈ ಸೂಕ್ತದ ದ್ರಷ್ಟೃವಾದ ಬಭ್ರುಋಷಿಗೆ ಅನೇಕ ಗೋವುಗಳನ್ನು ದಾನವಾಗಿ ಕೊಟ್ಟರು. ಅದನ್ನು ಋಷಿಯು ಕೃತಜ್ಞತೆಯಿಂದ ಸ್ವೀಕರಿಸಿ ರಾಜನ ದಾನಪ್ರಶಂಸೆಮಾಡಿದಾನೆ. ಇದೇ ಸೂಕ್ತದ ೧೪ ಮತ್ತು ೧೫ ನೆಯ ಋಕ್ಕುಗಳಲ್ಲಿಯೂ ಈ ದಾನ ಪ್ರಶಂಸೆಯ ವರ್ಣನೆ ಇದೆ. ಅಲ್ಲಿ ಈ ಋಷಿಯು ತನಗೆ ಋಣಂಚಯರಾಜನು ನಾಲ್ಕು ಸಹಸ್ರಗೋವುಗಳನ್ನು ಕೊಟ್ಟನೆಂದು ಹೇಳಿದ್ದಾನೆ.

॥ ಸಂಹಿತಾಪಾಠಃ ॥

ಸುಪೇಶಸಂ ಮಾವ ಸೃಜಂತ್ಯಸ್ತಂ ಗವಾಂ ಸಹಸ್ರೈ ರುಶಮಾಸೋ ಅಗ್ನೇ ।
ತೀವ್ರಾ ಇಂದ್ರಮಮಮಂದುಃ ಸುತಾಸೋಽಕ್ತೋರ್ವ್ಯುಷ್ಟೌ ಪರಿ-
ತಕ್ಮ್ಯಾಯಾಃ ॥ ೧೩ ॥

॥ ಪದಪಾಠಃ ॥

ಸುಽಪೇಶಸಂ । ಮಾ । ಅವ । ಸೃಜಂತಿ । ಅಸ್ತಂ । ಗವಾಂ । ಸಹಸ್ರೈಃ।ರುಶಮಾಸಃ । ಅಗ್ನೇ ।
ತೀವ್ರಾಃ । ಇಂದ್ರಂ।ಅಮಮಂದುಃ । ಸುತಾಸಃ । ಅಕ್ತೋಃ।ವಿಽಉಷ್ಟೌ । ಪರಿಽತಕ್ಮ್ಯಾಯಾಃ ॥ ೧೩ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ರುಶಮಾಸೋ ರುಶಮಾ ಋಣಂಚಯಸ್ಯ ಕಿಂಕರಾಃ ಸುಪೇಶಸಂ ಸುರೂಪಮಲಂಕಾರಾಚ್ಛಾದನಾದಿಭಿಃ ಸಂಸ್ಕೃತಂ ಮಾ ಮಾಮಸ್ತಂ ಗೃಹಂ ಗವಾಂ ಧೇನೂನಾಂ ಸಹಸ್ರೈಃ ಸಹಾವ ಸೃಜಂತಿ । ಪ್ರಾಪಯಂತಿ ಸ್ಮ । ತದನಂತರಮೇವ ತೀವ್ರಾ ರಸವಂತಃ ಸುತಾಸೋ ಲಬ್ಧಬಹುಧನೇನ ಮಯಾಭಿಷುತಾಃ ಸೋಮಾಃ ಪರಿತಕ್ಮ್ಯಾಯಾಃ । ತಮಸಾ ಭೂತಾನಿ ಪರಿತಸ್ತಕತಿ ಗಚ್ಛತೀತಿ ಪರಿತಕ್ಮ್ಯಾ । ತಸ್ಯಾ ಅಕ್ತೋ ರಾತ್ರೇರ್ವ್ಯುಷ್ಟೌ ವ್ಯುಚ್ಛನೇ ಸತಿ। ಉಷಃಕಾಲ ಇತ್ಯರ್ಥಃ । ಇಂದ್ರಮಮಮಂದುಃ। ಅಮಾದಯನ್ । ಬಭ್ರುರ್ಗವಾಂ ಪ್ರಾಪ್ತ್ಯನಂತರಮವಿಲಂಬಿತಮೇವ ಸೋಮೇನೇಜ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ರುಶಮಾಸಃ**—ರುಶಮದೇಶದ ಪ್ರಜೆಗಳು । **ಗವಾಂ**—ಧೇನುಗಳ । **ಸಹಸ್ರೈಃ**—ಸಾವಿರಗಳಿಂದ ಕೂಡಿದುದೂ । **ಸುಪೇಶಸಂ**—ಉತ್ತಮವಾದ ಸಾಧನಗಳಿಂದ ಅಲಂಕೃತವಾದುದೂ ಆದ । **ಅಸ್ತಂ**—ಗೃಹವನ್ನು। **ಮಾ**—ನನಗೆ । **ಅವ ಸೃಜಂತಿ**—ಒಪ್ಪಿಸುತ್ತಾರೆ (ಅನಂತರ) । **ತೀವ್ರಾಃ**—ತೀಕ್ಷ್ಣವಾದ ರಸವುಳ್ಳವೂ । **ಸುತಾಸಃ**—ಹಿಂಡಲ್ಪಟ್ಟವೂ ಆದ ಸೋಮಗಳು । **ಪರಿತಕ್ಮ್ಯಾಯಾಃ**—ಕತ್ತಲಿನಿಂದ ಆವೃತವಾದ । **ಅಕ್ತೋಃ**—ರಾತ್ರಿಯ । **ವ್ಯುಷ್ಟೌ**—ಕೊನೆಯಾದ ಉಷಃಕಾಲದಲ್ಲಿ । **ಇಂದ್ರಂ**—ಇಂದ್ರನನ್ನು । **ಅಮಮಂದುಃ**—ಹರ್ಷಗೊಳಿಸಿದವು

॥ ಭಾವಾರ್ಥ ॥

ಎಲೈ ಅಗ್ನಿಯೇ, ರುಶಮದೇಶದ ಪ್ರಜೆಗಳು ಸಾವಿರಾರು ಧೇನುಗಳಿಂದ ಕೂಡಿದುದೂ ಉತ್ತಮವಾದ ಸಾಧನಗಳಿಂದ ಕೂಡಿದುದೂ ಆದ ಗೃಹವನ್ನು ನನಗೆ ಒಪ್ಪಿಸಿರುತ್ತಾರೆ ಅನಂತರ ತೀಕ್ಷ್ಣವಾದ ರಸವುಳ್ಳವೂ ಶ್ರೇಷ್ಠವಾಗಿ ಹಿಂಡಲ್ಪಟ್ಟವೂ ಆದ ಸೋಮರಸಗಳು ಕತ್ತಲಿನಿಂದ ಆವೃತವಾದ ರಾತ್ರಿಯ ಕೊನೆಯಾದ ಉಷಃಕಾಲದಲ್ಲಿ ಇಂದ್ರನನ್ನು ಹರ್ಷಗೊಳಿಸಿದವು.

English Translation

The Rusamas, Agni, have presented to me a beautiful abode, with thousands of cattle . the sharp libations have exhilarated Indra upon the breaking up of the (gloom-)investing night

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಬಭ್ರುಋಷಿಯು ಋಣಂಚಯ ರಾಜನಿಂದ ತನಗೆ ದತ್ತವಾದ ಗೃಹದಾನದ ಪ್ರಶಂಸೆಯನ್ನು ಮಾಡಿ ಆ ರಾಜನ ಶ್ರೇಯೋಭಿವೃದ್ಧಿಗಾಗಿ ಇಂದ್ರನಿಗೆ ಸೋಮರಸವನ್ನರ್ಪಿಸಿ ಪ್ರಾರ್ಥಿಸಿದನೆಂಬ ವಿವರವು ಉಕ್ತವಾಗಿದೆ

॥ ಸಂಹಿತಾಪಾಠಃ ॥

ಔಚ್ಛತ್ಸಾ ರಾತ್ರೀ ಪರಿತಕ್ಮ್ಯಾ ಯಾँ ಋಣಂಚಯೇ ರಾಜನಿ ರುಶಮಾನಾಂ।
ಅತ್ಯೋ ನ ವಾಜೀ ರಘುರಜ್ಯಮಾನೋ ಬಭ್ರುಶ್ಚತ್ವಾರ್ಯಸನತ್ಸಹಸ್ರಾ ॥

॥ ಪದಪಾಠಃ ॥

ಔಚ್ಛತ್ । ಸಾ । ರಾತ್ರೀ । ಪರಿಽತಕ್ಮ್ಯಾ । ಯಾ । ಋಣಂಽಚಯೇ । ರಾಜನಿ । ರುಶಮಾನಾಂ ।
ಅತ್ಯಃ । ನ । ವಾಜೀ । ರಘುಃ । ಅಜ್ಯಮಾನಃ । ಬಭ್ರುಃ । ಚತ್ವಾರಿ । ಅಸನತ್ । ಸಹಸ್ರಾ ॥ ೧೪ ॥

॥ ಸಾಯಣಭಾಷ್ಯಂ ॥

ರುಶಮಾನಾಂ ರುಶಮನಾಮ್ನಾಂ ಜನನಾಂ ರಾಜನಿ ಪ್ರಭಾವೃಣಂಚಯ ಏತತ್ಸಂಜ್ಞಕೇ ತತ್ಸಮೀಪ ಏವ ಯಾ ರಾತ್ರಿಃ ಪರಿತಕ್ಮ್ಯಾ ಪರಿತೋ ಗಂತ್ರೀ ಭವತಿ ಸಾ ರಾತ್ರ್ಯೌಚ್ಛತ್ । ವ್ಯುಷ್ಟಾಭವತ್ । ಅತ್ಯಃ ಸತತಗಾಮೀ ವಾಜೀ ನ ಅಶ್ವ ಇವ ರಘುಃ ಶೀಘ್ರಗಾಮ್ಯಜ್ಯಮಾನಃ ಪ್ರೇರ್ಯಮಾಣೋ ಬಭ್ರುರೇತನ್ನಾಮಕ ಋಷಿಶ್ಚತ್ವಾರಿ ಚತುಃಸಂಖ್ಯಾಕಾನಿ ಸಹಸ್ರಾ ಸಹಸ್ರಾಣಿ ಗೋರೂಪಾಣಿ ಧನಾನ್ಯಸತತ್ । ಅಲಭತ ॥

॥ ಪ್ರತಿಪದಾರ್ಥ ॥

**ಯಾ**—ಯಾವ ರಾತ್ರಿಯು । **ಪರಿತಕ್ಮ್ಯಾ**—ಕತ್ತಲನಿಂದ ಆವೃತವಾಗಿರುವುದೋ । **ಸಾ ರಾತ್ರೀ**—ಆ ರಾತ್ರಿಯು । **ರುಶಮಾನಾಂ**—ರುಶಮದೇಶದ ಪ್ರಜೆಗಳಿಗೆ । **ರಾಜನಿ**—ಪ್ರಭುವಾದ । **ಋಣಂಚಯೇ**—ಋಣಂಚಯನಾಮಕನಾದ ರಾಜನು (ಗೋಚರನಾದೊಡನೆಯೇ) । **ಔಚ್ಛತ್**—ಕೊನೆಗೊಳ್ಳುತ್ತದೆ (ಉಷಸ್ಸಿನ ಆವಿರ್ಭಾವವಾಗುತ್ತದೆ) (ಆ ಕಾಲದಲ್ಲಿ) । **ಅಜ್ಯಮಾನಃ**—ಆಹೂತನಾದವನೂ । **ಅತ್ಯಃ**—ಸತತಗಾಮಿಯಾದ । **ವಾಜೀ ನ**—ಅಶ್ವದಂತೆ । **ರಘುಃ**—ಶೀಘ್ರಗಾಮಿಯೂ ಆದ । **ಬಭ್ರುಃ**—ಬಭ್ರುನಾಮಕನಾದ ಋಷಿಯು । **ಚತ್ವಾರಿ ಸಹಸ್ರಾ**—ನಾಲ್ಕುಸಹಸ್ರ ಗೋರೂಪಗಳಾದ ಧನಗಳನ್ನು । **ಅಸನತ್**—ಪಡೆದನು

॥ ಭಾವಾರ್ಥ ॥

ಯಾವ ರಾತ್ರಿಯು ಕತ್ತಲಿನಿಂದ ಆವೃತವಾಗಿರುವುದೋ ಆ ರಾತ್ರಿಯು ರುಶಮದೇಶದ ಪ್ರಜೆಗಳಿಗೆ ಪ್ರಭುವಾದ ಋಣಂಚಯನಾಮಕನಾದ ದೊರೆಯು ಗೋಚರವಾದೊಡನೆಯೇ ಕೊನೆಗೊಂಡು ಉಷಸ್ಸಿನ ಆವಿರ್ಭಾವವಾಗುತ್ತದೆ ಆ ಕಾಲದಲ್ಲಿ ಆಹೂತನಾದವನೂ, ಜಾತ್ಯಶ್ವದಂತೆ ವೇಗಗಾಮಿಯೂ ಆದ ಬಭ್ರುವೆಂಬ ಋಷಿಯು ನಾಲ್ಕು ಸಹಸ್ರ ಗೋರೂಪಗಳಾದ ಧನಗಳನ್ನು ಪಡೆದನು.

English Translation

The (gloom-)investing night has dispersed with the dawn (upon the appearance of) Rinanchaya, the Raja of the Rusamas: Babhru being summoned, going like a fleet courser, has received the four thousand (cattle).

॥ ಸಂಹಿತಾಪಾಠಃ ॥

ಚತುಃಸಹಸ್ರಂ ಗವ್ಯಸ್ಯ ಪಶ್ವಃ ಪ್ರತ್ಯಗ್ರಭೀಷ್ಮ ರುಶಮೇಷ್ವಗ್ನೇ ।
ಘರ್ಮಶ್ಚಿತ್ತಪ್ತಃ ಪ್ರವೃಜೇಯ ಆಸೀದಯಸ್ಮಯಸ್ತಮ್ವಾದಾಮ ವಿಪ್ರಾಃ ॥

॥ ಪದಪಾಠಃ ॥

ಚತುಃಽಸಹಸ್ರಂ । ಗವ್ಯಸ್ಯ । ಪಶ್ವಃ । ಪ್ರತಿ । ಅಗ್ರಭೀಷ್ಮ । ರುಶಮೇಷು । ಅಗ್ನೇ ।
ಘರ್ಮಃ । ಚಿತ್ । ತಪ್ತಃ । ಪ್ರಽವೃಜೇ । ಯಃ । ಆಸೀತ್ । ಅಯಸ್ಮಯಃ । ತಂ । ಊಂ ಇತಿ ।
ಆದಾಮ । ವಿಪ್ರಾಃ ॥ ೧೫ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ವಯಂ ರುಶಮೇಷ್ವೇತತ್ಸಂಜ್ಞಕೇಷು ಜನೇಷು ಗವ್ಯಸ್ಯ ಗವಾತ್ಮಕಸ್ಯ ಪಶ್ವಃ ಪಶೋಃ ಪಶೂನಾಂ । ಜಾತಾವೇಕವಚನಂ । ಚತುಃ ಸಹಸ್ರಂ ಚತ್ವಾರಿ ಸಹಸ್ರಾಣಿ ಪ್ರತ್ಯಗ್ರಭೀಷ್ಮ । ಪ್ರತಿಗೃಹೀತವಂತಃ ಸ್ಮಃ । ಪ್ರವೃಜೇ ಪ್ರವೃಂಜನಾರ್ಥಂ ತಪ್ತಃ ಸಂತಪ್ತಃ ಶೋಭನವರ್ಣೋ ಘರ್ಮಶ್ಚಿನ್ಮಹಾವೀರ ಇವಾಯಸ್ಮಯೋಽಯೋಮಯೋ ಹಿರಣ್ಮಯೋ ಯಃ ಕಲಶ ಆಸೀತ್ ಅಭವತ್ ತಮು ದೋಹನಾರ್ಥಂ ಕಲಶಂ ಚ ವಿಪ್ರಾ ಮೇಧಾವಿನೋ ವಯಂ ರುಶಮೇಷ್ವಾದಾಮ । ಆದತ್ತವಂತಃ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । (ವಯಂ—ನಾವು) । ರುಶಮೇಷು—ರುಶಮದೇಶದ ಪ್ರಜೆಗಳಿಂದ । ಗವ್ಯಸ್ಯ—ಗೋರೂಪದ । ಪಶ್ವಃ—ಪಶುಗಳ । ಚತುಃ ಸಹಸ್ರಂ—ನಾಲ್ಕುಸಹಸ್ರಗಳನ್ನು । ಪ್ರತ್ಯಗ್ರಭೀಷ್ಮ—

ಪ್ರತಿಗ್ರಹಿಸಿದೆವು । **ಪ್ರವೃಜೇ**—ಪ್ರವರ್ಗ್ಯಾರ್ಥವಾಗಿ । **ತಪ್ತಃ**— ಸಂತಪ್ತವಾಗಿ ಹೊಂಬಣ್ಣವುಳ್ಳ । **ಘರ್ಮಃಶ್ಚಿತ್**- ಮಹಾವೀರದಂತೆ । **ಅಯಸ್ಮಯಃ**—ಹಿರಣ್ಮಯವಾದ । **ಯಃ**—ಯಾವ ಕಲಶಪಾತ್ರೆಯು । **ಆಸೀತ್**— ಇದ್ದಿತೋ । **ತಮು**—ಅದನ್ನೂ ಕೂಡ । **ವಿಪ್ರಾಃ**—ಮೇಧಾವಿಗಳಾದ ನಾವು । **ಆದಾಮ**—ಪರಿಗ್ರಹಿಸಿದೆವು.

॥ ಭಾವಾರ್ಥ ॥

ಎಲೈ ಅಗ್ನಿಯೇ, ರುಶಮದೇಶದ ಪ್ರಜೆಗಳಿಂದ ನಾವು ಗೋರೂಪದ ನಾಲ್ಕುಸಹಸ್ರ ಪಶುಗಳನ್ನು ಪರಿಗ್ರಹಿಸಿ ದೆವು ಪ್ರವರ್ಗ್ಯಕ್ಕಾಗಿ ಸಂತಪ್ತವಾಗಿ ಹೊಂಬಣ್ಣವುಳ್ಳ ಮಹಾವೀರದಂತೆ ಹಿರಣ್ಮಯವಾದ ಯಾವ ಕಲಶಪಾತ್ರೆ ಯಿದ್ದಿತೋ ಅದನ್ನೂ ಕೂಡ ಮೇಧಾವಿಗಳಾದ ನಾವು ಪರಿಗ್ರಹಿಸಿದೆವು.

English Translation

We have accepted, Agni, the four thousand cattle from the Rusamas : and the glowing, the golden ewer prepared for the solemnity, we who are wise have accepted it.

## ಮೂವತ್ತೊಂದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಇಂದ್ರೋ ರಥಾಯೇತಿ ತ್ರಯೋದಶರ್ಚಂ ಸಪ್ತದಶಂ ಸೂಕ್ತಂ । ಅವಸ್ಯುರ್ನಾಮಾತ್ರೇಯ ಋಷಿಃ । ತ್ರಿಷ್ಟುಪ್ ಛಂದಃ । ಇಂದ್ರೋ ದೇವತಾ । ಉಗ್ರಮಯಾತಂ ಸಂ ಹ ಯದ್ವಾಮಿತಿ ಪಾದಯೋಃ ಕ್ರಮೇಣ ಕುತ್ಸೋಶನಸೌ ವಿಕಲ್ಪೇನ ದೇವತಾ । ಇಂದ್ರಾಕುತ್ಸಾ ವಹಮಾನೇತ್ಯಸ್ಯಾ ಇಂದ್ರಃ ಕುತ್ಸಶ್ಚ । ತಥಾ ಚಾನುಕ್ರಾಂತಂ । ಇಂದ್ರೋ ರಥಾಯ ಸಪ್ತೋನಾವಸ್ಯುರುಗ್ರಮಿತಿ ಕೌತ್ಸ್ಯೈಶನಸೌ ವಾ ಪಾದೌ ಪರೈಂದ್ರಾಕೌತ್ಸೀತಿ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು—**ಇಂದ್ರೋ ರಥಾಯ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹದಿನೇಳನೆಯ ಸೂಕ್ತವು ಇದರಲ್ಲಿ ಹದಿಮೂರು ಋಕ್ಕುಗಳಿರುವವು. ಈ ಸೂಕ್ತಕ್ಕೆ **ಅವಸ್ಯುರಾತ್ರೇಯಃ** ಎಂಬುವನು ಋಷಿಯು; ಇಂದ್ರನು ದೇವತೆಯು; ತ್ರಿಷ್ಟುಪ್‌ಛಂದಸ್ಸು. ಈ ಸೂಕ್ತದ ೮ನೇ ಋಕ್ಕಿನ **ಉಗ್ರಮಯಾತಂ** ಮತ್ತು **ಸಂ ಹ ಯದ್ವಾಂ** ಎಂಬ ಮೂರು ಮತ್ತು ನಾಲ್ಕನೆಯ ಪಾದಗಳಿಗೆ ಕ್ರಮವಾಗಿ ಇಂದ್ರ ಅಥವಾ ಕುತ್ಸ ಉಶನಸ್ ಎಂಬುವರು ವಿಕಲ್ಪವಾಗಿ ದೇವತೆಗಳು. **ಇಂದ್ರಾ ಕುತ್ಸಾ ವಹಮಾನಾ** ಎಂಬ ಈ ಸೂಕ್ತದ ಒಂಭತ್ತ ನೆಯ ಋಕ್ಕಿಗೆ ಇಂದ್ರನೂ ಮತ್ತು ಕುತ್ಸನೂ ಸಹ ದೇವತೆಗಳು. ಅನುಕ್ರಮಣಿಕೆಯಲ್ಲಿ **ಇಂದ್ರೋ ರಥಾಯ ಸಪ್ತೋನಾವಸ್ಯುರುಗ್ರಮಿತಿ ಕೌತ್ಸ್ಯೈಶನಸೌ ವಾ ಪಾದೌ ಪರೈಂದ್ರಾಕೌತ್ಸೀ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

## ಸೂಕ್ತ—೩೧.

॥ ಮಂಡಲ—೫ ॥ ಅನುವಾಕ—೩ ॥ ಸೂಕ್ತ—೩೧ ॥
॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೨೯, ೩೦, ೩೧ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೩
ಋಷಿಃ—ಅವಸ್ಯುರಾತ್ರೇಯಃ ॥
ದೇವತಾ—೧-೭, ೮ ರಲ್ಲಿ ಎರಡನೆಯಪಾದ, ೧೦-೧೩. ಇಂದ್ರಃ । ೮ ರಲ್ಲಿ ಮೂರನೆಯ ಪಾದ. ಇಂದ್ರಃ ಕುತ್ಸೋವಾ । ೮ ರಲ್ಲಿ ನಾಲ್ಕನೆಯ ಪಾದ. ಇಂದ್ರ ಉಶನಾ ವಾ । ೯. ಇಂದ್ರಃ ಕುತ್ಸಶ್ಚ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಇಂದ್ರೋ ರಥಾಯ ಪ್ರವತಂ ಕೃಣೋತಿ ಯಮಧ್ಯಸ್ಥಾನ್ಮಘವಾ ವಾಜಯಂತಂ ।
ಯೂಥೇವ ಪಶ್ವೋ ವ್ಯುನೋತಿ ಗೋಪಾ ಅರಿಷ್ಟೋ ಯಾತಿ ಪ್ರಥಮಃ ಸಿಷಾಸನ್ ॥ ೧ ॥

॥ ಪದಪಾಠಃ ॥

ಇಂದ್ರಃ । ರಥಾಯ । ಪ್ರऽವತಂ । ಕೃಣೋತಿ । ಯಂ । ಅಧಿऽಅಸ್ಥಾತ್ । ಮಘऽವಾ । ವಾಜಃಯಂತಂ । ಯೂಥಾऽಇವ । ಪಶ್ವಃ । ವಿ । ಉನೋತಿ । ಗೋಪಾಃ । ಅರಿಷ್ಟಃ । ಯಾತಿ । ಪ್ರಥಮಃ । ಸಿಸಾಸನ್ ॥

॥ ಸಾಯಣಭಾಷ್ಯಂ ॥

ಮಘವಾ ಧನವಾನಿಂದ್ರೋ ವಾಜಯಂತಮನ್ನಮಿಚ್ಛಂತಂ ಯಂ ರಥಮಧ್ಯಸ್ಥಾತ್ ಅಧಿತಿಷ್ಠತಿ ತಸ್ಮೈ ರಥಾಯ ಪ್ರವತಂ ಪ್ರವಣಮಾಜಿಂ ಕೃಣೋತಿ ಕರೋತಿ । ಅಪಿ ಚ ಗೋಪಾ ಗೋಪಾಲಃ ಪಶ್ವೋ ಯೂಥೇವ ಪಶೋಃ ಪಶೂನಾಂ ಯೂಥಾನಿ ಯಥಾ ವ್ಯುನೋತಿ ಪ್ರೇರಯತಿ ತಥಾ ಶತ್ರುಸೈನ್ಯಾನಿ ಪ್ರೇರಯತಿ । ಅರಿಷ್ಟಃ ಶತ್ರುಭಿಃ ಸ್ವಯಮಹಿಂಸಿತಃ ಪ್ರಥಮೋ ದೇವಾನಾಂ ಮುಖ್ಯ ಇಂದ್ರಃ ಸಿಷಾಸನ್ ಶತ್ರುಧನಾನೀಚ್ಛನ್ ಯಾತಿ । ಗಚ್ಛತಿ ॥

॥ ಪ್ರತಿಪದಾರ್ಥ ॥

ಮಘವಾ—ಧನವಂತನಾದ । ಇಂದ್ರಃ—ಇಂದ್ರನು । ವಾಜಯಂತಂ—ಅನ್ನೇಚ್ಛುವಾದ । ಯಂ—ಯಾವ ರಥವನ್ನು । ಅಧ್ಯಸ್ಥಾತ್—ಆಶ್ರಯಿಸಿ ಕುಳಿತಿದ್ದಾನೋ । (ತಸ್ಮೈ)ರಥಾಯ—ಆ ರಥಕ್ಕೆ । ಪ್ರವತಂ—

ಅಧೋಮುಖವಾದ ಸಂಚಾರವಿರುವಂತೆ । **ಕೃಣೋತಿ**—ಮಾಡುತ್ತಾನೆ । **ಗೋಪಾಃ**—ಗೋಪಾಲಕನು । **ಪಶ್ವಃ**—ಪಶುಗಳ । **ಯೂಥೇವ**—ಗುಂಪುಗಳನ್ನು ಅಟ್ಟುವಂತೆ । **ವ್ಯೃನೋತಿ**—(ಶತ್ರುಸೈನ್ಯಗಳನ್ನು) ಅಟ್ಟಿಸಿಕೊಂಡು । **ಅರಿಷ್ಟಃ**—ಶತ್ರುಗಳಿಂದ ಅಹಿಂಸಿತನಾಗಿಯೂ । **ಪ್ರಥಮಃ**—ದೇವತೆಗಳಲ್ಲಿ ಮುಖ್ಯನಾಗಿಯೂ । **ಸಿಷಾಸನ್**—ಶತ್ರುಧನವನ್ನಿಚ್ಛಿಸುತ್ತಾ । **ಯಾತಿ**—ಮುಂದುವರಿಯುತ್ತಾನೆ.

॥ ಭಾವಾರ್ಥ ॥

ಧನವಂತನಾದ ಇಂದ್ರನು ಅನ್ನೇಚ್ಛುವಾದ ಯಾವ ರಥವನ್ನು ಹತ್ತಿ ಕುಳಿತಿದ್ದಾನೋ ಆ ರಥಕ್ಕೆ ದಿವ್ಯಲೋಕದಿಂದ ಪೃಥ್ವಿಗಭಿಮುಖವಾಗಿ ಅಧೋಮುಖವಾದ ಸಂಚಾರವಿರುವಂತೆ ಮಾಡುತ್ತಾನೆ ಗೋಪಾಲಕನು ಪಶುಗಳ ಗುಂಪುಗಳನ್ನು ಅಟ್ಟುವಂತೆ ಶತ್ರುಸೈನ್ಯಗಳನ್ನು ಅಟ್ಟಿಸಿಕೊಂಡು ಶತ್ರುಗಳಿಂದ ಅಹಿಂಸಿತನಾಗಿಯೂ ದೇವತೆಗಳಲ್ಲಿ ಮುಖ್ಯನಾಗಿಯೂ ಶತ್ರುಧನವನ್ನಿಚ್ಛಿಸುತ್ತಾ ಮುಂದುವರಿಯುತ್ತಾನೆ.

## English Translation

Indra, the possessor of opulence, directs downwards the car over which, intended (to receive sacrificial) viands, he presides · he proceeds unimpeded, the first of the gods, driving ( his enemies before him), as a herdsman drives the herds of cattle.

---

॥ ಸಂಹಿತಾಪಾಠಃ ॥

ಆ ಪ್ರ ದ್ರವ ಹರಿವೋ ಮಾ ವಿ ವೇನಃ ಪಿಶಂಗರಾತೇ ಅಭಿ ನಃ ಸಚಸ್ವ ।
ನಹಿ ತ್ವದಿಂದ್ರ ವಸ್ಯೋ ಅನ್ಯದಸ್ತ್ಯಮೇನಾಂಶ್ಚಿಜ್ಜನಿವತಶ್ಚಕರ್ಥ ॥ ೨ ॥

॥ ಪದಪಾಠಃ ॥

ಆ । ಪ್ರ । ದ್ರವ । ಹರಿऽವಃ । ಮಾ । ವಿ । ವೇನಃ । ಪಿಶಂಗऽರಾತೇ । ಅಭಿ । ನಃ । ಸಚಸ್ವ ।
ನಹಿ । ತ್ವತ್ । ಇಂದ್ರ । ವಸ್ಯಃ । ಅನ್ಯತ್ । ಅಸ್ತಿ । ಅಮೇನಾನ್ । ಚಿತ್ । ಜನಿऽವತಃ । ಚಕರ್ಥ ೨ ॥

॥ ಸಾಯಣಭಾಷ್ಯಂ ॥

ಹೇ ಹರಿವೋ ಹರಿವನ್ನಿಂದ್ರ ತ್ವಮಾಸ್ಮಾನಭಿಮುಖಂ ಪ್ರ ದ್ರವ । ಪ್ರಕರ್ಷೇಣ ಗಚ್ಛ । ಕಿಂತು ಮಾ ವಿ ವೇನಃ । ವೇನತಿಃ ಕಾಂತಿಕರ್ಮಾ । ಅಸ್ಮಾಸು ವಿಗತಕಾಮೋ ಮಾ ಭೂಃ । ಕಿಂಚ ಹೇ ಪಿಶಂಗರಾತೇ ಬಹುರೂಪಧನೇಂದ್ರ ನೋऽಸ್ಮಾನಭಿ ಸಚಸ್ವ । ಅಭಿಸೇವಸ್ವ । ಅಪಿ ಚ ಹೇ ಇಂದ್ರ ವಸ್ಯೋ ವಸೀಯಃ ಶ್ರೇಯಸ್ಕರಂ ತ್ವತ್ತ್ವತ್ತೋऽನ್ಯನ್ನಹ್ಯಸ್ತಿ । ಅನ್ಯದ್ವಸುಜಾತಂ ನಾಸ್ತಿ । ಅಮೇನಾಂಶ್ಚಿತ್ । ಮೇನಾಶಬ್ದಃ ಸ್ತ್ರೀವಾಚೀ । ಅಪಗತಸ್ತ್ರೀಕಾಂಶ್ಚಿತ್ ಜನಿವತೋ ಜಾಯಾವತಶ್ಚಕರ್ಥ । ಕರೋಷಿ ॥

॥ ಪ್ರತಿಪದಾರ್ಥ ॥

**ಹರಿವಃ**—ಅಶ್ವಯುಕ್ತನಾದ ಎಲೈ ಇಂದ್ರನೇ । **ಆ ಪ್ರ ದ್ರವ**—ನಮಗಭಿಮುಖವಾಗಿ ಆದರದಿಂದ ಬಾ । **ಮಾ ವಿ ವೇನಃ**—ನಮ್ಮಲ್ಲಿ ಅಭಿಮಾನಶೂನ್ಯನಾಗಿರಬೇಡ । **ಪಿಶಂಗರಾತೇ**—ಅನೇಕವಿಧವಾದ ಧನವುಳ್ಳ ಇಂದ್ರನೇ । **ನಃ**—ನಮ್ಮನ್ನು । **ಅಭಿ ಸಚಸ್ವ**—ಸೇವಿಸು । **ಇಂದ್ರ**—ಎಲೈ ಇಂದ್ರನೇ । **ತ್ವತ್**—ನಿನಗಿಂತಲೂ । **ವಸ್ಯಃ**—ಅಧಿಕವಾದ ಶ್ರೇಯಸ್ಕರನು । **ಅನ್ಯತ್ ನಹಿ ಅಸ್ತಿ**—ಬೇರೆಯಾರೂ ಇಲ್ಲವೇ ಇಲ್ಲ । **ಅಮೇನಾಂಶ್ಚಿತ್**—ಸ್ತ್ರೀರಹಿತನಾದವನನ್ನು । **ಜನಿವತಃ**—ಜಾಯಾಯುಕ್ತನಾಗುವಂತೆ । **ಚಕರ್ಥ**—ಮಾಡುತ್ತೀಯೆ.

॥ ಭಾವಾರ್ಥ ॥

ಅಶ್ವಯುಕ್ತನಾದ ಎಲೈ ಇಂದ್ರನೇ, ನಮಗಭಿಮುಖನಾಗಿ ಆದರದಿಂದ ಓಡಿ ಬಾ. ನಮ್ಮಲ್ಲಿ ಅಭಿಮಾನಶೂನ್ಯನಾಗಿರಬೇಡ. ಅನೇಕವಿಧವಾದ ಧನವನ್ನು ಹೊಂದಿರುವ ಇಂದ್ರನೇ, ನಮ್ಮನ್ನು ಸೇವಿಸು. ಎಲೈ ಇಂದ್ರನೇ ನಿನಗಿಂತಲೂ ಅಧಿಕವಾದ ಶ್ರೇಯಸ್ಕರನು ಬೇರೆ ಯಾರೂ ಇಲ್ಲವೇ ಇಲ್ಲ. ನೀನು ಸ್ತ್ರೀರಹಿತನಾದವನನ್ನು ಜಾಯಾಯುಕ್ತನಾಗುವಂತೆ ಮಾಡುತ್ತೀಯೆ

English Translation

Hasten to us, lord of horses : be not indifferent to us : distributor of manifold wealth, befriend us , for there is nothing else that is better, Indra, than you : you have given wives to those who were without women.

---

॥ ಸಂಹಿತಾಪಾಠಃ ॥

ಉದ್ಯತ್ಸಹಃ ಸಹಸ ಆಜನಿಷ್ಟ ದೇದಿಷ್ಟ ಇಂದ್ರ ಇಂದ್ರಿಯಾಣಿ ವಿಶ್ವಾ ।
ಪ್ರಾಚೋದಯತ್ಸುದುಘಾ ವವ್ರೇ ಅಂತರ್ವಿ ಜ್ಯೋತಿಷಾ ಸಂವವೃತ್ವತ್ತಮೋಽವಃ ॥

॥ ಪದಪಾಠಃ ॥

ಉತ್ । ಯತ್ । ಸಹಃ । ಸಹಸಃ । ಆ । ಅಜನಿಷ್ಟ । ದೇದಿಷ್ಟೇ । ಇಂದ್ರಃ । ಇಂದ್ರಿಯಾಣಿ । ವಿಶ್ವಾ ।
ಪ್ರ । ಅಚೋದಯತ್ । ಸುऽದುಘಾಃ । ವವ್ರೇ । ಅಂತಃ । ವಿ । ಜ್ಯೋತಿಷಾ । ಸಂऽವವೃತ್ವತ್ ।
ತಮಃ । ಅವರಿತ್ಯವಃ ॥ ೩ ॥

॥ ಸಾಯಣಭಾಷ್ಯಂ ॥

ಯದ್ಯದಾ ಸಹಃ ಸೂರ್ಯಸಂಬಂಧಿ ತೇಜಃ ಸಹಸ ಉಷಃಸಂಬಂಧಿನಸ್ತೇಜಸ ಉದಾಜನಿಷ್ಟ ಉಪರಿಷ್ಟಾತ್ ಪ್ರಾದುರ್ಬಭೂವ ತದೇಂದ್ರೋ ವಿಶ್ವಾ ವಿಶ್ವಾನಿ ಸರ್ವಾಣೀಂದ್ರಿಯಾಣಿ ಧನಾನಿ ।

**ಇಂದ್ರಿಯಮಿತಿ ಧನನಾಮೈತತ್ । ದೇದಿಷ್ಟೇ । ಯಜಮಾನೇಭ್ಯೋ ದಿಶತಿ । ವವ್ರೇ ನಿವಾರಕೇ ಪರ್ವತೇಽಂತರ್ಮಧ್ಯೇ ಬಲೇನ ನಿರುದ್ಧಾಃ ಸುದುಘಾಃ ಸುಷ್ಠು ದೋಗ್ಧ್ರೀರ್ಗಾಃ ಪ್ರಾಚೋದಯತ್ । ಪ್ರೈರಯತ್ । ಜ್ಯೋತಿಷಾ ತೇಜಸಾ ಸಂವವೃತ್ವತ್ ಸಂವರಣಶೀಲಂ ತಮೋ ವ್ಯವಃ । ನಿವಾರಿತವಾನ್॥**

॥ ಪ್ರತಿಪದಾರ್ಥ ॥

**ಯತ್**—ಯಾವಾಗ । **ಸಹಃ**—ಸೂರ್ಯನ ತೇಜಸ್ಸು । **ಸಹಸಃ**—ಉಷಸ್ಸಿನ ತೇಜಸ್ಸನ್ನು । **ಉತ್ ಆಜನಿಷ್ಟ**—ಆವರಿಸುವುದೋ ಆಗ । **ಇಂದ್ರಃ**—ಇಂದ್ರನು । **ವಿಶ್ವಾ**—ಸಮಸ್ತವಾದ । **ಇಂದ್ರಿಯಾಣಿ**—ಧನಗಳನ್ನು (ಯಜಮಾನನಿಗೆ) । **ದೇದಿಷ್ಟೇ**—ಕೊಡುತ್ತಾನೆ। **ವವ್ರೇ**—ನಿರೋಧಕವಾದ ಪರ್ವತದ । **ಅಂತಃ**—ಮಧ್ಯಭಾಗದಲ್ಲಿ (ತಡೆಯಲ್ಪಟ್ಟ) । **ಸುದುಘಾಃ**—ಕ್ಷೀರಭರಿತವಾದ ಗೋವುಗಳನ್ನು । **ಪ್ರಾಚೋದಯತ್**—ಹೊರಕ್ಕೆ ಬರುವಂತೆ ಮಾಡಿದನು । **ಸಂವವೃತ್ವತ್**—ಜಗತ್ತನ್ನಾವರಿಸಿದ । **ತಮಃ**—ಕತ್ತಲೆಯನ್ನು । **ಜ್ಯೋತಿಷಾ**—ತನ್ನ ತೇಜಸ್ಸಿನಿಂದ । **ವಿ ಅವಃ**—ನಾಶಪಡಿಸಿದನು.

॥ ಭಾವಾರ್ಥ ॥

ಸೂರ್ಯನ ತೇಜಸ್ಸು ಉಷಸ್ಸಿನ ತೇಜಸ್ಸನ್ನಾವರಿಸಿದೊಡನೆಯೇ ಇಂದ್ರನು ಯಜಮಾನನಿಗೆ ಸಮಸ್ತ ಧನಗಳನ್ನೂ ಕೊಡುತ್ತಾನೆ. ಅದೇ ಇಂದ್ರನು ನಿರೋಧಕವಾದ ಪರ್ವತದ ಮಧ್ಯಭಾಗದಲ್ಲಿ ತಡೆಯಲ್ಪಟ್ಟ ಕ್ಷೀರಭರಿತವಾದ ಗೋವುಗಳನ್ನು ಹೊರಕ್ಕೆ ಬರುವಂತೆ ಮಾಡಿದನು ಜಗತ್ತನ್ನಾವರಿಸಿದ ಕತ್ತಲೆಯನ್ನು ತನ್ನ ತೇಜಸ್ಸಿನಿಂದ ನಾಶಪಡಿಸಿದನು.

English Translation

When the light (of the sun) overpowers the light (of the dawn) Indra grants all (sorts of) wealth (to the worshipper) : he has liberated the milch-(cows) from the interior of the obstructing (mountain) ; he dissipates the enveloping darkness with light.

---

॥ ಸಂಹಿತಾಪಾಠಃ ॥

ಅನವಸ್ತೇ ರಥಮಶ್ವಾಯ ತಕ್ಷನ್ತ್ವಷ್ಟಾ ವಜ್ರಂ ಪುರುಹೂತ ದ್ಯುಮಂತಂ।
ಬ್ರಹ್ಮಾಣ ಇಂದ್ರಂ ಮಹಯಂತೋ ಅರ್ಕೈರವರ್ಧಯನ್ನಹಯೇ ಹಂತವಾ
ಉ ॥ ೪ ॥

॥ ಪದಪಾಠಃ ॥

**ಅನವಃ । ತೇ । ರಥಂ । ಅಶ್ವಾಯ । ತಕ್ಷನ್ । ತ್ವಷ್ಟಾ । ವಜ್ರಂ । ಪುರುಽಹೂತ । ದ್ಯುಽಮಂತಂ ।**
**ಬ್ರಹ್ಮಾಣಃ । ಇಂದ್ರಂ । ಮಹಯಂತಃ । ಅರ್ಕೈಃ । ಅವರ್ಧಯನ್ । ಅಹಯೇ । ಹಂತವೈ । ಊಂ ಇತಿ ॥**

॥ ಸಾಯಣಭಾಷ್ಯಂ ॥

**ಹೇ ಪುರುಹೂತ ಬಹುಭಿರಾಹೂತೇಂದ್ರ ತೇ ತ್ವದೀಯಂ ರಥಮಶ್ವಾಯಾಶ್ವಾಭ್ಯಾಂ ಸಂಯೋಗಾರ್ಹಮನವಃ। ಅನವೋ ಮನುಷ್ಯಾಃ । ಋಭವಸ್ತಕ್ಷನ್ । ಅತಕ್ಷನ್ । ಅಕುರ್ವನ್ । ತ್ವಷ್ಟಾ ಚ ತ್ವದ್ವೀಯಂ ವಜ್ರಂ ದ್ಯುಮಂತಂ ದೀಪ್ತಿಮಂತಮಕರೋತ್ । ಉ ಅಪಿ ಚ ಮಹಯಂತ ಇಂದ್ರಂ ಪೂಜಯಂತೋ ಬ್ರಹ್ಮಾಣೋಽಂಗಿರಸಃ ಪರಿವೃಢಾ ಮರುತೋ ವಾ ಅಹಯೇಽಹಿಂ ವೃತ್ರಂ ಹಂತವೈ ಹಂತುಮರ್ಕೈಃ ಸ್ತೋತ್ರೈರವರ್ಧಯನ್ । ವರ್ಧಿತವಂತಃ ॥**

॥ ಪ್ರತಿಪದಾರ್ಥ ॥

**ಪುರುಹೂತ**—ಅನೇಕರಿಂದ ಕರೆಯಲ್ಪಡತಕ್ಕ ಎಲೈ ಇಂದ್ರನೇ । **ತೇ**—ನಿನ್ನ । **ರಥಂ**—ರಥವನ್ನು । **ಅಶ್ವಾಯ**—ಅಶ್ವಗಳೊಡನೆ ಯೋಜಿಸಲು ಯೋಗ್ಯವಾಗುವಂತೆ । **ಅನವಃ**—ಮಾನವರಾದ ಋಭುಗಳು । **ತಕ್ಷನ್**-ಮಾಡಿದ್ದಾರೆ । **ತ್ವಷ್ಟಾ**—ತ್ವಷ್ಟೃವು । **ವಜ್ರಂ**—ನಿನ್ನ ವಜ್ರಾಯುಧವನ್ನು । **ದ್ಯುಮಂತಂ**—ಕಾಂತಿಯುತವಾಗಿರುವಂತೆ (ಮಾಡಿದ್ದಾನೆ) । **ಉ**—ಮತ್ತು । **ಇಂದ್ರಂ**—ಇಂದ್ರನನ್ನು । **ಮಹಯಂತಃ**—ಪೂಜಿಸುತ್ತಾ । **ಬ್ರಹ್ಮಾಣಃ**—ಪೂಜ್ಯರಾದ ಅಂಗಿರಸ್ಸುಗಳು । **ಅಹಯೇ**—ವೃತ್ರಾಸುರನ । **ಹಂತವೈ**—ನಾಶಕ್ಕಾಗಿ । **ಅರ್ಕೈಃ**—ಸ್ತೋತ್ರಗಳಿಂದ । **ಅವರ್ಧಯನ್**—(ನಿನ್ನನ್ನು) ಪ್ರವೃದ್ಧನಾಗುವಂತೆ ಮಾಡಿದರು.

॥ ಭಾವಾರ್ಥ ॥

ಅನೇಕರಿಂದ ಆಹೂತನಾಗುವ ಎಲೈ ಇಂದ್ರನೇ, ಮಾನವರಾದ ಋಭುಗಳು ನಿನ್ನ ರಥವನ್ನು ಅಶ್ವಗಳೊಡನೆ ಯೋಜಿಸಲು ಯೋಗ್ಯವಾಗುವಂತೆ ಮಾಡಿದ್ದಾರೆ. ತ್ವಷ್ಟೃವು ನಿನ್ನ ವಜ್ರಾಯುಧವನ್ನು ಕಾಂತಿಯುತವಾಗಿರುವಂತೆ ಮಾಡಿದ್ದಾನೆ. ಮತ್ತು ಪೂಜ್ಯರಾದ ಅಂಗಿರಸ್ಸುಗಳು ಇಂದ್ರನನ್ನು ಪೂಜಿಸುತ್ತಾ ವೃತ್ರಾಸುರನ ನಾಶಕ್ಕಾಗಿ ಸ್ತುತಿಗಳಿಂದ ಪ್ರಭುವಾದ ನಿನ್ನನ್ನು ಪ್ರವೃದ್ಧನಾಗುವಂತೆ ಮಾಡಿದ್ದಾರೆ

English Translation

The Ribhus have fabricated your car, Indra, the invoked of many, adapted to its horses . Twashtri (has made) your radiant thounderbolt : the venerable (Angirasas), praising Indra with hymns, have given him vigour for the destruction of Ahi.

---

॥ ಸಂಹಿತಾಪಾಠಃ ॥

ವೃಷ್ಣೇ ಯತ್ತೇ ವೃಷಣೋ ಅರ್ಕಮರ್ಚಾನಿಂದ್ರ ಗ್ರಾವಾಣೋ ಅದಿತಿಃ ಸಜೋಷಾಃ ।

ಅನಶ್ವಾಸೋ ಯೇ ಪವಯೋಽರಥಾ ಇಂದ್ರೇಷಿತಾ ಅಭ್ಯವರ್ತಂತ ದಸ್ಯೂನ್॥

॥ ಪದಪಾಠಃ ॥

ವೃಷ್ಣೇ । ಯತ್ । ತೇ । ವೃಷಣಃ । ಅರ್ಕಂ । ಅರ್ಚಾನ್ । ಇಂದ್ರ । ಗ್ರಾವಾಣಃ । ಅದಿತಿಃ । ಸಜೋಷಾಃ ।

ಅನಶ್ವಾಸಃ । ಯೇ । ಪವಯಃ । ಅರಥಾಃ । ಇಂದ್ರಇಷಿತಾಃ । ಅಭಿ । ಅವರ್ತಂತ । ದಸ್ಯೂನ್ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಯದ್ಯದಾ ವೃಷಣಃ ಸೇಚನಸಮರ್ಥಾ ಮರುತೋ ವೃಷ್ಣೇ ಕಾಮಾನಾಂ ವರ್ಷಿತ್ರೇ ತೇ ತುಭ್ಯಮರ್ಕಂ ಸ್ತೋತ್ರಮರ್ಚಾನ್ ಅಸ್ತುವನ್ । ಅಕುರ್ವನ್ನಿತ್ಯರ್ಥಃ । ತದಾದಿತಿರದೀನಾಃ । ವಚನವ್ಯತ್ಯಯಃ ॥ ಗ್ರಾವಾಣೋಽಭಿಷವಪಾಷಾಣಾಃ ಸಜೋಷಾಃ ಸಂಗತಾ ಬಭೂವುರಿತಿ ಶೇಷಃ । ಅನಶ್ವಾಸೋಽಶ್ವವರ್ಜಿತಾ ಅರಥಾ ರಥಹೀನಾ ಇಂದ್ರೇಷಿತಾ ಇಂದ್ರೇಣ ಪ್ರೇಷಿತಾಃ ಪವಯಃ ಪವಮಾನಾ ಗಚ್ಛಂತೋ ಯೇ ಮರುತೋ ದಸ್ಯೂನ್ ಶತ್ರೂನಭ್ಯವರ್ತಂತ ಅಭಿಭೂತಾನ್ ಕುರ್ವಂತೋ ವರ್ತಂತೇ ಸ್ಮ ತೇ ಮರುತೋಽರ್ಚಾನಿತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಯತ್**—ಯಾವಾಗ । **ವೃಷಣಃ**—ಸೇಚನಸಾಮರ್ಥ್ಯವುಳ್ಳ ಮರುತ್ತುಗಳು । **ವೃಷ್ಣೇ**—ಕಾಮವರ್ಷಕನಾದ ನಿನ್ನನ್ನುದ್ದೇಶಿಸಿ । **ಅರ್ಕಂ**—ಸ್ತುತಿಯನ್ನು । **ಅರ್ಚಾನ್**—ನಿರ್ಮಿಸಿ ಪಠಿಸಿದರೋ (ಆಗ) । **ಅದಿತಿಃ**—ಔನ್ನತ್ಯವನ್ನು ಹೊಂದಿದ । **ಗ್ರಾವಾಣಃ**—ಹಿಂಡುವ ಕಲ್ಲುಗಳು । **ಸಜೋಷಾಃ**—ಒಟ್ಟಿಗೆ ಸೇರಿಕೊಳ್ಳುತ್ತವೆ (ಆ ಒಡನೆಯೇ) । **ಅನಶ್ವಾಸಃ**—ಅಶ್ವರಹಿತರಾದವರೂ । **ಅರಥಾಃ**—ರಥರಹಿತರಾದವರೂ । **ಇಂದ್ರೇಷಿತಾಃ**—ಇಂದ್ರನಿಂದ ಚೋದಿತರಾದವರೂ । **ಪವಯಃ**—ಸಂಚಾರಸ್ವಭಾವವುಳ್ಳವರೂ ಆದ । **ಯೇ**—ಯಾವ ಮರುತ್ತುಗಳಿದ್ದಾರೆಯೋ ಅವರು । **ದಸ್ಯೂನ್**—ಶತ್ರುಗಳಿಗಭಿಮುಖವಾಗಿ । **ಅಭ್ಯವರ್ತಂತ**—ಅಟ್ಟಿಸಿ ಕೊಂಡು ಓಡುತ್ತಾರೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಸೇಚನಸಾಮರ್ಥ್ಯವುಳ್ಳ ಮರುತ್ತುಗಳು ಕಾಮವರ್ಷಕನಾದ ನಿನ್ನನ್ನುದ್ದೇಶಿಸಿ ಯಾವಾಗ ಸ್ತುತಿಯನ್ನು ನಿರ್ಮಿಸಿ ಪಠಿಸಿದರೋ ಆಗ ಔನ್ನತ್ಯವನ್ನು ಹೊಂದಿದವೂ, ಸೋಮರಸವನ್ನು ಹಿಂಡುವುವೂ ಆದ ಗ್ರಾವಗಳು ನಿನಗೆ ರಸವನ್ನು ಹಿಂಡಲು ಒಟ್ಟಿಗೆ ಸೇರಿಕೊಳ್ಳುತ್ತವೆ. ಆ ಒಡನೆಯೇ ಅಶ್ವರಹಿತರಾದವರೂ, ರಥರಹಿತ ರಾದವರೂ, ಇಂದ್ರನಿಂದ ಚೋದಿತರಾದವರೂ, ಸಂಚಾರಸ್ವಭಾವವುಳ್ಳವರೂ ಆದ ಯಾವ ಮರುತ್ತುಗಳಿದ್ದಾರೆಯೋ ಅವರು ಶತ್ರುಗಳಿಗಭಿಮುಖವಾಗಿ ಓಡುತ್ತಾರೆ.

## English Translation

When the Maruts, the showerers (of benefits), glorify you, Indra, the showerer (of desires), with praises, and the exulting stones delight (to bruise

the Soma), then, without horses, without chariots, they, the purifying (Maruts), dispatched by Indra, have overcome the Dasyus.

---

॥ ಸಂಹಿತಾಪಾಠಃ ॥

ಪ್ರ ತೇ ಪೂರ್ವಾಣಿ ಕರಣಾನಿ ವೋಚಂ ಪ್ರ ನೂತನಾ ಮಘವನ್ಯಾ ಚಕರ್ಥ ।
ಶಕ್ತೀವೋ ಯದ್ವಿಭರಾ ರೋದಸೀ ಉಭೇ ಜಯನ್ನಪೋ ಮನವೇ ದಾನುಚಿತ್ರಾಃ ॥ ೬ ॥

॥ ಪದಪಾಠಃ ॥

ಪ್ರ । ತೇ । ಪೂರ್ವಾಣಿ । ಕರಣಾನಿ । ವೋಚಂ । ಪ್ರ । ನೂತನಾ । ಮಘ್ಽವನ್ । ಯಾ । ಚಕರ್ಥ । ಶಕ್ತ್ಽವಃ । ಯತ್ । ವಿಽಭರಾಃ । ರೋದಸೀ ಇತಿ । ಉಭೇ ಇತಿ । ಜಯನ್ । ಅಪಃ । ಮನವೇ । ದಾನುಽಚಿತ್ರಾಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತ್ವದೀಯಾನಿ ಪೂರ್ವಾಣಿ ಪುರಾತನಾನಿ ಕರಣಾನಿ ಕರ್ಮಾಣಿ ಪ್ರ ವೋಚಂ ಅಹಂ ಪ್ರಕರ್ಷೇಣ ಬ್ರವೀಮಿ । ನೂತನಾ ನೂತನಾನಿ ನವಾನಿ ಕರ್ಮಾಣಿ ಪ್ರ ವೋಚಂ । ಪ್ರಬ್ರವೀಮಿ। ಹೇ ಮಘವನ್ ಧನವನ್ನಿಂದ್ರ ಯಾ ಯಾನಿ ಕರ್ಮಾಣಿ ಚಕರ್ಥ ಕೃತವಾನಸಿ ತಾನಿ ಪ್ರ ವೋಚಮಿತಿ ಸಂಬಂಧಃ । ಹೇ ಶಕ್ತೀವಃ ಶಕ್ತಿಮನ್ । ಶಕ್ತಿರ್ವಜ್ರಂ ಕರ್ಮ ವಾ । ತದ್ವನ್ನಿಂದ್ರ ಯತ್ ಯಸ್ತ್ವಮುಭೇ ರೋದಸೀ ದ್ಯಾವಾಪೃಥಿವ್ಯೌ ಜಯನ್ವಶೀಕುರ್ವನ್ ಅಪ ಉದಕಾನಿ ಮನವೇ ಮನುಷ್ಯಾಯ ವಿಭರಾಃ ವಿವಿಚ್ಯ ಬಿಭರ್ಷಿ । ಕೀದೃಶೀಃ । ದಾನುಚಿತ್ರಾಃ ಚಿತ್ರದಾನಾಃ ॥

॥ ಪ್ರತಿಪದಾರ್ಥ ॥

**ಮಘವನ್**—ಧನವಂತನಾದ ಇಂದ್ರನೇ । **ತೇ**—ನಿನ್ನ । **ಪೂರ್ವಾಣಿ**—ಪುರಾತನವಾದ । ಕರಣಾನಿ—ಕರ್ಮಗಳನ್ನು । **ಪ್ರ ವೋಚಂ**—ಪ್ರಶಂಸಿಸುತ್ತೇವೆ । **ನೂತನಾ**—ಹೊಸದಾದ । **ಯಾ ಚಕರ್ಥ**—ಯಾವ ಕರ್ಮಗಳನ್ನು ನೆರವೇರಿಸಿದ್ದೀಯೋ ಅವನ್ನೂ । **ಪ್ರ**—ಪ್ರಶಂಸಿಸುತ್ತೇವೆ । **ಶಕ್ತೀವಃ**—ಶಕ್ತಿಯುತನಾದ । **ಯತ್**-ಯಾವ ನೀನು । **ಉಭೇ ರೋದಸೀ**—ದ್ಯಾವಾಪೃಥಿವಿಗಳೆರಡನ್ನೂ । **ಜಯನ್**—ನಿನ್ನ ವಶಮಾಡಿಕೊಂಡು । **ದಾನುಚಿತ್ರಾಃ**—ನಾನಾವಿಧವಾದ ದಾನಶಕ್ತಿಯುಳ್ಳ । **ಅಪಃ**—ಉದಕಗಳನ್ನು । **ಮನವೇ**-ಮಾನವನಿಗೋಸ್ಕರ। **ವಿಭರಾಃ**—ಧರಿಸಿದ್ದೀಯೆ.

॥ ಭಾವಾರ್ಥ ॥

ಧನವಂತನಾದ ಇಂದ್ರನೇ, ನಿನ್ನ ಪುರಾತನವಾದ ಕರ್ಮಗಳನ್ನೂ, ನೂತನಕರ್ಮಗಳನ್ನೂ ಪೂರ್ಣವಾಗಿ ಪ್ರಶಂಸಿಸುತ್ತೇವೆ. ಶಕ್ತಿಯುತನಾದ ನೀನು ದ್ಯಾವಾಪೃಥಿವಿಗಳೆರಡನ್ನೂ ನಿನ್ನ ವಶಮಾಡಿಕೊಂಡು ನಾನಾ ವಿಧವಾದ ದಾನಶಕ್ತಿಯುಳ್ಳ ಉದಕಗಳನ್ನು ಮಾನವನಿಗೋಸ್ಕರ ಧರಿಸಿದ್ದೀಯೆ.

English Translation

I celebrate, Maghavan, your, ancient exploits, and those which you have newly achieved : wielder of the thunderbolt, subjugating both heaven and earth, you have distributed the wonderfully bountiful waters to man

---

॥ ಸಂಹಿತಾಪಾಠಃ ॥

ತದಿನ್ನು ತೇ ಕರಣಂ ದಸ್ಮ ವಿಪ್ರಾಹಿಂ ಯದ್ಘ್ನನ್ನೋಜೋ ಅತ್ರಾಮಿ-
ಮೀಥಾಃ ।
ಶುಷ್ಣಸ್ಯ ಚಿತ್ಪರಿ ಮಾಯಾ ಅಗೃಭ್ಣಾಃ ಪ್ರಪಿತ್ವಂ ಯನ್ನಪ ದಸ್ಯೂರಸೇಧಃ ॥

॥ ಪದಪಾಠಃ ॥

ತತ್ । ಇತ್ । ನು । ತೇ । ಕರಣಂ । ದಸ್ಮ । ವಿಪ್ರ । ಅಹಿಂ । ಯತ್ । ಘ್ನನ್ । ಓಜಃ । ಅತ್ರ । ಅಮಿಮೀಥಾಃ ।
ಶುಷ್ಣಸ್ಯ । ಚಿತ್ । ಪರಿ । ಮಾಯಾಃ । ಅಗೃಭ್ಣಾಃ । ಪ್ರಽಪಿತ್ವಂ । ಯನ್ । ಅಪ । ದಸ್ಯೂನ್ । ಅಸೇಧಃ ॥ ೭ ॥

॥ ಸಾಯಣಭಾಷ್ಯಂ ॥

ಹೇ ದಸ್ಮ ದರ್ಶನೀಯ ವಿಪ್ರ ಮೇಧಾವಿನ್ನಿಂದ್ರ ತ್ವಮತ್ರಾಸ್ಮಿಁಲ್ಲೋಕೇಽಹಿಂ ವೃತ್ರಮಸುರಂ ಘ್ನನ್ ಹಿಂಸನ್ ಯದೋಜೋ ಯದ್ಬಲಮಮಿಮೀಥಾಃ ಪ್ರಕಾಶಿತವಾನಸಿ ತದಿನ್ನು ತತ್ಖಲು ತೇ ತ್ವದೀಯಂ ಕರಣಂ ಕರ್ಮ ವಿದ್ಯತೇ । ಅಪಿ ಚ ಶುಷ್ಣಸ್ಯ ಚಿದೇತನ್ನಾಮಕಸ್ಯಾಪ್ಯಸುರಸ್ಯ । ಸಂಬಂಧಿನೀ-ರ್ಮಾಯಾ ಪ್ರಜ್ಞಾಃ ಪರ್ಯಗೃಭ್ಣಾಃ । ಪರಿಗೃಹೀತವಾನಸಿ । ಹೇ ಇಂದ್ರ ತ್ವಂ ಪ್ರಪಿತ್ವಂ ಸಂಗ್ರಾಮಂ ಸಮೀಪಂ ವಾ ಯನ್ ಪ್ರಾಪ್ನುವನ್ ದಸ್ಯೂನಸುರಾನಪಾಸೇಧಃ । ಅಪಾಬಾಧಥಾಃ ॥

॥ ಪ್ರತಿಪದಾರ್ಥ ॥

ದಸ್ಮ-ದರ್ಶನೀಯರೂಪವುಳ್ಳವನೂ । ವಿಪ್ರ-ಮೇಧಾವಿಯೂ ಆದ ಇಂದ್ರನೇ ನೀನು । ಅತ್ರ-ಈ ಲೋಕ ದಲ್ಲಿ । ಅಹಿಂ-ವೃತ್ರಾಸುರನನ್ನು । ಘ್ನನ್-ಹಿಂಸಿಸುತ್ತಾ । ಯತ್ ಓಜಃ-ಯಾವ ಬಲವನ್ನು । ಅಮಿಮೀಥಾಃ-

ನೀನು ಪ್ರಕಾಶಪಡಿಸಿದ್ದೀಯೋ । **ತದಿನ್ನು**—ಅದೇ । **ತೇ**—ನಿನ್ನ । **ಕರಣಂ**—ಅಸಾಧಾರಣವಾದ ಕರ್ಮವು । **ಶುಷ್ಣಸ್ಯ ಚಿತ್**—ಪ್ರಬಲನಾದ ಶುಷ್ಣನ ಸಂಬಂಧಿಯಾದ । **ಮಾಯಾಃ**—ವಂಚಕಬುದ್ಧಿಯನ್ನೂ ಸಹ । **ಪರಿ ಅಗೃಭ್ಣಾಃ**—ತಡೆದು ನಿಲ್ಲಿಸಿದ್ದೀಯೆ । **ಪ್ರಪಿತ್ವಂ**—ಯುದ್ಧಭೂಮಿಯನ್ನು । **ಯನ್**—ಪ್ರವೇಶಿಸುತ್ತಾ । **ದಸ್ಯೂನ್**—ಅಸುರರನ್ನು । **ಅಪ ಅಸೇಧಃ**—ಹಿಂಸಿಸಿದ್ದೀಯೆ.

॥ ಭಾವಾರ್ಥ ॥

ದರ್ಶನೀಯಸ್ವರೂಪನೂ, ಮೇಧಾವಿಯೂ ಆದ ಇಂದ್ರನೇ, ಈ ಲೋಕದಲ್ಲಿ ವೃತ್ರಾಸುರನನ್ನು ಹಿಂಸಿಸುತ್ತಾ ಯಾವ ಬಲವನ್ನು ನೀನು ಪ್ರಕಾಶಪಡಿಸಿದ್ದೀಯೋ ಅದೇ ನಿನ್ನ ಅಸಾಧಾರಣವಾದ ಕರ್ಮವು. ನೀನು ಪ್ರಬಲನಾದ ಶುಷ್ಣನ ವಂಚಕಬುದ್ಧಿಯನ್ನೂ ಸಹ ತಡೆದು ನಿಲ್ಲಿಸಿದ್ದೀಯೆ. ಮತ್ತು ಸಂಗ್ರಾಮಕ್ಕೆ ಪ್ರವೇಶಿಸುತ್ತಿದ್ದಾಗಲೇ ಅಸುರರನ್ನೆಲ್ಲಾ ಹಿಂಸಿಸಿದ್ದೀಯೆ

## English Translation

Handsome and sagacious Indra, this is your deed, that, slaying Ahi, you have here displayed your vigour you have arrested the devices of Sushna urging the combat . you have overcome the Dasyus

---

॥ ಸಂಹಿತಾಪಾಠಃ ॥

ತ್ವಮಪೋ ಯದವೇ ತುರ್ವಶಾಯಾರಮಯಃ ಸುದುಘಾಃ ಪಾರ ಇಂದ್ರ।
ಉಗ್ರಮಯಾತಮವಹೋ ಹ ಕುತ್ಸಂ ಸಂ ಹ ಯದ್ವಾಮುಶನಾರಂತ ದೇವಾಃ ॥ ೮ ॥

॥ ಪದಪಾಠಃ ॥

ತ್ವಂ । ಅಪಃ । ಯದವೇ । ತುರ್ವಶಾಯ । ಅರಮಯಃ । ಸುऽದುಘಾಃ । ಪಾರಃ । ಇಂದ್ರ ।
ಉಗ್ರಂ । ಅಯಾತಂ । ಅವಹಃ । ಹ । ಕುತ್ಸಂ । ಸಂ । ಹ । ಯತ್ । ವಾಂ । ಉಶನಾ । ಅರಂತ । ದೇವಾಃ ॥ ೮ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ತ್ವಂ ಪಾರೇ ನದೀನಾಂ ತೀರೇ । ಪ್ರವೃದ್ಧ ಇತಿ ಶೇಷಃ । ಸುದುಘಾ ಓಷಧಿವನಸ್ಪತೀನ್ ಸುಷ್ಠು ದುಹತೀರಪ ಉದಕಾನಿ ಯದವೇ ಯದುನಾಮಕಾಯ ರಾಜ್ಞೇ ತುರ್ವಶಾಯೈತನ್ನಾಮಕಾಯ ರಾಜ್ಞೇ ಚಾರಮಯಃ । ರಮಿತವಾನಸಿ । ಹೇ ಇಂದ್ರ ಯುವಾಂ । ತ್ವಂ ಕುತ್ಸಶ್ಚೇತಿ**

ಶೇಷಃ । ಉಗ್ರಮುದ್ಗೂರ್ಣಂ ಶುಷ್ಣಮಯಾತಂ । ಅಗಚ್ಛತಂ । ತದನಂತರಂ ತ್ವಂ ಶುಷ್ಣಂ ಹತ್ವಾ ಕುತ್ಸಮವಹೋ ಹ । ಸ್ವಗೃಹಂ ಪ್ರಾಪಿತವಾನಸಿ ಖಲು । ಯದ್ಯದಾ ವಾಂ ಯುವಾಮಿಂದ್ರಾಕುತ್ಸಾವುಶನಾ ಭಾರ್ಗವೋ ದೇವಾಶ್ಚ ಸಮರಂತ ಹ ಸಂಭೇಜಿರೇ ಖಲು ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ತ್ವಂ—ನೀನು । ಪಾರಃ—ನದಿಯ ದಡದಲ್ಲಿದ್ದು । ಸುದುಘಾಃ—ಓಷಧಿ ವನಸ್ಪತಿಗಳನ್ನು ಬೆಳೆಸತಕ್ಕ । ಅಪಃ—ಉದಕಗಳನ್ನು । ಯದವೇ—ಯದುನಾಮಕನಾದ ರಾಜನಿಗಾಗಿಯೂ । ತುರ್ವಶಾಯ—ತುರ್ವಶನೆಂಬ ರಾಜನಿಗಾಗಿಯೂ । ಅರಮಯಃ—ಫಲದಾಯಕವಾಗುವಂತೆ ಮಾಡಿದೆ । ವಾಂ—ನೀನೂ ಮತ್ತು ಕುತ್ಸನೂ । ಉಗ್ರಂ—ಭಯಂಕರನಾದ ಶುಷ್ಣನಲ್ಲಿಗೆ । ಅಯಾತಂ—ಹೋದಿರಿ (ಆಗ ನೀನು ಶುಷ್ಣನನ್ನು ಕೊಂದು) । ಕುತ್ಸಂ—ಕುತ್ಸನನ್ನು । ಅವಹೋ ಹ—ಸ್ವಗೃಹಕ್ಕೆ ಕಳುಹಿಸಿದೆ । ಯತ್-ಯಾವಾಗ ನೀನು ಕುತ್ಸನಿಗೆ ಸಹಾಯಮಾಡಿದೆಯೋ ಆಗ । ಉಶನಾ—ಉಶನಸ್ಸೂ । ದೇವಾಃ—ದೇವತೆಗಳೂ । ಸಂ ಅರಂತ ಹ—ನಿನ್ನನ್ನು ಸ್ತುತಿಸಿ ಪೂಜಿಸಿದ್ದಾರೆ

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ನದಿಯ ದಡದಲ್ಲಿದ್ದು ಓಷಧಿವನಸ್ಪತಿಗಳನ್ನು ಬೆಳೆಸತಕ್ಕ ಉದಕಗಳನ್ನು ಯದುವಿಗಾಗಿಯೂ, ತುರ್ವಶನಿಗಾಗಿಯೂ ಸಹ ಫಲದಾಯಕವಾಗುವಂತೆ ಮಾಡಿ ಆ ಕುತ್ಸನೂ ಪ್ರಬಲನಾದ ಶುಷ್ಣನನ್ನು ಎದುರಿಸಿ ಹೋದಾಗ ನೀನು ಶುಷ್ಣನನ್ನು ಕೊಂದು ಕುತ್ಸನನ್ನು ಅವನ ಮನೆಗೆ ಕಳುಹಿಸಿದೆ ನೀನು ಈರೀತಿ ಇವರಿಗೆಲ್ಲಾ ಸಹಾಯಮಾಡಿದುದರ ಕೃತಜ್ಞತಾರೂಪವಾಗಿ ಉಶನಸ್ಸೂ ಮತ್ತು ದೇವತೆಗಳೂ ನಿನ್ನನ್ನು ಸ್ತುತಿಸಿ ಪೂಜಿಸಿದ್ದಾರೆ

English Translation

You, Indra, (abiding on the further bank), have rendered the fert liziag waters agreeable to Yadu and Turvasu : you two, (Indra and Kutsa), have assailed the fierce (Sushna), and (having slain him), you have conveyed Kutsa (to his dwelling), and Ushanas and the gods have therefore honoured you both.

---

॥ ಸಂಹಿತಾಪಾಠಃ ॥

ಇಂದ್ರಾಕುತ್ಸಾ ವಹಮಾನಾ ರಥೇನಾ ವಾಮತ್ಯಾ ಅಪಿ ಕರ್ಣೇ ವಹಂತು ।
ನಿಃ ಷೀಮದ್ಭ್ಯೋ ಧಮಥೋ ನಿಃ ಷಧಸ್ಥಾನ್ಮಘೋನೋ ಹೃದೋ ವರಥಸ್ತಮಾಂಸಿ ॥ ೯ ॥

॥ ಪದಪಾಠಃ ॥

ಇಂದ್ರಾಕುತ್ಸಾ । ವಹಮಾನಾ । ರಥೇನ । ಆ । ವಾಂ । ಅತ್ಯಾಃ । ಅಪಿ । ಕರ್ಣೇ । ವಹಂತು ।

ನಿಃ । ಸೀಂ । ಅತ್ಽಭ್ಯಃ । ಧಮಥಃ । ನಿಃ । ಸಧಽಸ್ಥಾತ್ । ಮಘೋನಃ । ಹೃದಃ । ವರಥಃ । ತಮಾಂಸಿ ॥

॥ ಸಾಯಣಭಾಷ್ಯಂ ॥

ಹೇ ಇಂದ್ರಾಕುತ್ಸೇಂದ್ರಾಕುತ್ಸೌ ರಥೇನ ವಹಮಾನಾ ವಹಮಾನಾವುಹ್ಯಮಾನೌ ವಾಂ ಯುವಾಮತ್ಯಾ ಅಶ್ವಾಃ ಕರ್ಣೇಽಪಿ । ಸ್ತೋತ್ರಾಣಿ ಕೃಣೋತಿ ಕರೋತೀತಿ ಕರ್ಣಃ ಸ್ತೋತಾ ಯಜಮಾನೋ ವಾ । ತತ್ಸಮೀಪೇಽಪೀತಿ ಯಾವತ್ । ಆ ವಹಂತು । ಆ ಸಮಂತಾದ್ವಾಹಕಾ ಭವಂತು । ಯುವಾಮಪ್ಯದ್ಭ್ಯೋಽಪ್ಸು ಪ್ರವಿಷ್ಟಂ ಸೀಮೇನಂ ಶುಷ್ಣಾಸುರಂ ನಿರ್ಧಮಥಃ । ಅಬಾಧೇಥಾಂ । ಸೀಮಿತಿ ಶುಷ್ಣಾಸುರೋ ಬುದ್ಧಿಸ್ಥಃ ಪರಾಮೃಶ್ಯತೇ । ಸಧಸ್ಥಾತ್ಸ್ವಕೀಯಾತ್ಸ್ಥಾನಾನ್ನಿರಬಾಧೇಥಾಂ । ಮಘೋನೋ ಮಘವತೋ ಹವಿಷ್ಮತೋ ಯಜಮಾನಸ್ಯ ಹೃದೋ ಹೃದಯಾತ್ತಮಾಂಸ್ಯಜ್ಞಾನರೂಪಾಣಿ ಪಾಪಾನಿ ವರಥಃ । ನಿವಾರಯಥಃ ॥

॥ ಪ್ರತಿಪದಾರ್ಥ ॥

**ಇಂದ್ರಾಕುತ್ಸಾ**—ಎಲೈ ಇಂದ್ರಾಕುತ್ಸರೇ । **ವಾಂ**—ನಿಮ್ಮಿಬ್ಬರನ್ನೂ । **ರಥೇನ**—ರಥದಲ್ಲಿ । **ವಹಮಾನಾ**—ಹೊತ್ತುಕೊಂಡು ಬರತಕ್ಕ । **ಅತ್ಯಾಃ**—ಅಶ್ವಗಳು । **ಕರ್ಣೇ ಅಪಿ**—ಯಜಮಾನನಲ್ಲಿಗೆ । **ಆ ವಹಂತು**—ಕರೆದುಕೊಂಡು ಬರಲಿ (ನೀವಿಬ್ಬರೂ ಸಹ) **ಅದ್ಭ್ಯಃ**—ನೀರಿನಲ್ಲಿ ಅವಿತುಕೊಂಡಿದ್ದ । **ಸೀಂ**—ಶುಷ್ಣನನ್ನು । **ನಿಃ ಧಮಥಃ**—ಹಿಂಸಿಸಿದ್ದೀರಿ । **ಸಧಸ್ಥಾತ್**—ಅವನ ಸ್ವಸ್ಥಾನದಿಂದ । **ನಿಃ**—ಚಲಿಸುವಂತೆ ಮಾಡಿದಿರಿ । **ಮಘೋನಃ**—ಹವಿಷ್ಮಂತನಾದ ಯಜಮಾನನ । **ಹೃದಃ**—ಹೃದಯದಿಂದ । **ತಮಾಂಸಿ**—ಅಜ್ಞಾನರೂಪವಾದ ಕತ್ತಲನ್ನು । **ವರಥಃ**—ನಿವಾರಿಸಿದ್ದೀರಿ

॥ ಭಾವಾರ್ಥ ॥

ಎಲೈ ಇಂದ್ರಾಕುತ್ಸರೇ, ನಿಮ್ಮಿಬ್ಬರನ್ನೂ ರಥದಲ್ಲಿ ಹೊತ್ತುಕೊಂಡು ಬರತಕ್ಕ ಅಶ್ವಗಳು ನಿಮ್ಮನ್ನು ಯಜಮಾನನಲ್ಲಿಗೆ ಕರೆದುಕೊಂಡು ಬರಲಿ ನೀವಿಬ್ಬರೂ ಸಹ ನೀರಿನಲ್ಲಿ ಅವಿತುಕೊಂಡಿದ್ದ ಶುಷ್ಣನನ್ನು ಹಿಂಸಿಸಿದ್ದೀರಿ. ಮತ್ತು ಅವನನ್ನು ಸ್ವಸ್ಥಾನದಿಂದ ಚಲಿಸುವಂತೆ ಮಾಡಿದ್ದೀರಿ ಹವಿಷ್ಮಂತನಾದ ಯಜಮಾನನ ಹೃದಯದಿಂದ ಅಜ್ಞಾನರೂಪವಾದ ಕತ್ತಲನ್ನು ನಿವಾರಿಸಿದ್ದೀರಿ

## English Translation

May your steeds bring you both, Indra and Kutsa, riding in one chariot, to the worshipper · you have expelled him (Sushna) from the waters, from his proper abode . you have driven the glooms (of ignorance) from the heart of the affluent (adorer).

॥ ಸಂಹಿತಾಪಾಠಃ ॥

ವಾತಸ್ಯ ಯುಕ್ತಾನ್ತ್ಸುಯುಜಶ್ಚಿದಶ್ವಾನ್ಕವಿಶ್ಚಿದೇಷೋ ಅಜಗನ್ನವಸ್ಯುಃ ।
ವಿಶ್ವೇ ತೇ ಅತ್ರ ಮರುತಃ ಸಖಾಯ ಇಂದ್ರ ಬ್ರಹ್ಮಾಣಿ ತವಿಷೀಮವರ್ಧನ್॥

॥ ಪದಪಾಠಃ ॥

ವಾತಸ್ಯ । ಯುಕ್ತಾನ್ । ಸುಯುಜಃ । ಚಿತ್ । ಅಶ್ವಾನ್ । ಕವಿಃ । ಚಿತ್ । ಏಷಃ । ಅಜಗನ್ । ಅವಸ್ಯುಃ ।

ವಿಶ್ವೇ । ತೇ । ಅತ್ರ । ಮರುತಃ । ಸಖಾಯಃ । ಇಂದ್ರ । ಬ್ರಹ್ಮಾಣಿ । ತವಿಷೀಂ । ಅವರ್ಧನ್ ॥ ೧೦ ॥

॥ ಸಾಯಣಭಾಷ್ಯಂ ॥

ಕವಿಶ್ಚಿತ್ಪ್ರಾಜ್ಞೋಽಪ್ಯವಸ್ಯುರೇತನ್ನಾಮಕ ಏಷ ಮಂತ್ರದ್ರಷ್ಟಾ ವಾತಸ್ಯ ವಾಯೋರ್ವೇಗೇನ ಯುಕ್ತಾನ್ ಸಂಯುಕ್ತಾನ್ ಸುಯುಜಶ್ಚಿತ್ಸುಷ್ಠು ಯೋಜನೀಯಾನಶ್ವಾನಜಗನ್ । ಪ್ರಾಪ್ನೋತ್ । ಅವಸ್ಯೋಃ ಸಖಾಯೋ ವಿಶ್ವೇ ಸರ್ವೇ ಮರುತೋ ಬಹವಃ ಸ್ತೋತಾರೋ ಹೇ ಇಂದ್ರ ಅತ್ರಾಸ್ಮಿಁಲ್ಲೋಕೇ ತೇ ತ್ವದೀಯಾಂ ತವಿಷೀಂ ಬಲಂ ಬ್ರಹ್ಮಾಣಿ ಬ್ರಹ್ಮಭಿಃ ಸ್ತೋತ್ರೈರವರ್ಧನ್ । ಅವರ್ಧಯನ್ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಕವಿಶ್ಚಿತ್**—ಪ್ರಾಜ್ಞನಾದ । **ಏಷಃ ಅವಸ್ಯುಃ**—ಅವಸ್ಯು ನಾಮಕನಾದ ಈ ಋಷಿಯು । **ವಾತಸ್ಯ**—ವಾಯುವಿನ ವೇಗದಿಂದ । **ಯುಕ್ತಾನ್**—ಕೂಡಿರುವುವೂ । **ಸುಯುಜಶ್ಚಿತ್**—ರಥಕ್ಕೆ ಸುಲಭವಾಗಿ ಕಟ್ಟಲ್ಪಡತಕ್ಕವೂ ಆದ । **ಅಶ್ವಾನ್**—ಅಶ್ವಗಳನ್ನು । **ಅಜಗನ್**—ಪಡೆದನು । **ಸಖಾಯಃ**—ಅವನ ಸ್ನೇಹಿತರಾದ । **ವಿಶ್ವೇ ಮರುತಃ**—ಸಕಲ ಸ್ತೋತೃಗಳೂ । **ಅತ್ರ**—ಈ ಲೋಕದಲ್ಲಿ । **ತೇ**—ನಿನ್ನ । **ತವಿಷೀಂ**—ಬಲವನ್ನು । **ಬ್ರಹ್ಮಾಣಿ**—ಸ್ತುತಿಗಳಿಂದ । **ಅವರ್ಧನ್**—ವೃದ್ಧಿಯಾಗುವಂತೆ ಮಾಡಿದರು

॥ ಭಾವಾರ್ಥ ॥

ಎಲೈ ಇಂದ್ರನೇ, ಪ್ರಾಜ್ಞನೂ, ಅವಸ್ಯುನಾಮಕನೂ ಆದ ಈ ಋಷಿಯು ವಾಯುವಿನ ವೇಗದಿಂದ ಕೂಡಿರುವುವೂ ರಥಕ್ಕೆ ಸುಲಭವಾಗಿ ಕಟ್ಟಲ್ಪಡತಕ್ಕವೂ ಆದ ಅಶ್ವಗಳನ್ನು ಪಡೆದನು. ಅವನ ಸುಹೃತ್ತುಗಳಾದ ಸಕಲ ಸ್ತೋತ್ರಗಳೂ ಈ ಲೋಕದಲ್ಲಿ ನಿನ್ನ ಬಲವನ್ನು ಸ್ತುತಿಗಳಿಂದ ವೃದ್ಧಿಯಾಗುವಂತೆ ಮಾಡಿದರು.

## English Translation

The sage Avasyu has obtained docile horses, endowed (with the speed) of the wind: all your adorers, Indra, in this world, your friends, augment your vigour by their praises.

॥ ಸಂಹಿತಾಪಾಠಃ ॥

ಸೂರಶ್ಚಿದ್ರಥಂ ಪರಿತಕ್ಮ್ಯಾಯಾಂ ಪೂರ್ವಂ ಕರದುಪರಂ ಜೂಜುವಾಂಸಂ ।
ಭರಚ್ಚಕ್ರಮೇತಶಃ ಸಂ ರಿಣಾತಿ ಪುರೋ ದಧತ್ಸನಿಷ್ಯತಿ ಕ್ರತುಂ ನಃ ॥೧೧॥

॥ ಪದಪಾಠಃ ॥

ಸೂರಃ । ಚಿತ್ । ರಥಂ । ಪರಿತಕ್ಮ್ಯಾಯಾಂ । ಪೂರ್ವಂ । ಕರತ್ । ಉಪರಂ । ಜೂಜುವಾಂಸಂ ।
ಭರತ್ । ಚಕ್ರಂ । ಏತಶಃ । ಸಂ । ರಿಣಾತಿ । ಪುರಃ । ದಧತ್ । ಸನಿಷ್ಯತಿ । ಕ್ರತುಂ । ನಃ ॥ ೧೧ ॥

ಸಾಯಣಭಾಷ್ಯಂ ॥

ಇಂದ್ರಃ ಪರಿತಕ್ಮ್ಯಾಯಾಂ ಸಂಗ್ರಾಮೇ । ಪರಿತೋ ಗಚ್ಛಂತ್ಯಸ್ಯಾಂ ಭಯ ಇತಿ ಪರಿತಕ್ಮ್ಯಾ ಸಂಗ್ರಾಮಃ । ಏತಶಾಖ್ಯೇನ ಋಷಿಣಾ ಸಹ ಯೋದ್ಧುಃ ಸೂರಶ್ಚಿತ್ಸೂರ್ಯಸ್ಯಾಪಿ ಸಂಬಂಧಿನಂ ಜೂಜುವಾಂಸಂ ವೇಗೇನ ಗಚ್ಛಂತಂ ರಥಮುಪರಮುಪರತವ್ಯಾಪಾರಂ ಪೂರ್ವಂ ಕರತ್ । ಪುರೋಽಕರೋತ್ । ಏತಶ ಏತಶಾಯ ॥ ವಿಭಕ್ತಿವ್ಯತ್ಯಯಃ ॥ ಇಂದ್ರಃ ಪೂರ್ವಂ ದ್ವಿಚಕ್ರಸ್ಯ ರಥಸ್ಯೈಕಂ ಚಕ್ರಂ ಭರತ್ । ಅಹರತ್ । ಸ ಇಂದ್ರಸ್ತೇನ ಚಕ್ರೇಣಾಸುರಾನ್ ಸಂ ರಿಣಾತಿ । ಹಿನಸ್ತಿ । ಅಪಿ ಚ ಪುರೋ ದಧದಸ್ಮಾನ್ಪುರಸ್ಕುರ್ವನ್ ನೋಽಸ್ಮದೀಯಂ ಕ್ರತುಂ ಯಜ್ಞಂ ಸನಿಷ್ಯತಿ । ಸಂಭಜತು ॥

॥ ಪ್ರತಿಪದಾರ್ಥ ॥

**ಪರಿತಕ್ಮ್ಯಾಯಾಂ**—ಸಂಗ್ರಾಮದಲ್ಲಿ (ಇಂದ್ರನು)। **ಪೂರ್ವಂ**—ಹಿಂದೆ । **ಸೂರಶ್ಚಿತ್**—ಸೂರ್ಯನಿಗೆ ಸಂಬಂಧಿಸಿದ್ದರೂ ಸಹ । **ಜೂಜುವಾಂಸಂ**—ವೇಗವಾಗಿ ಚಲಿಸುತ್ತಿದ್ದ । **ರಥಂ**—ರಥವನ್ನು । **ಉಪರಂ**—ಚಲನರಹಿತವಾದುದನ್ನಾಗಿ । **ಕರತ್**—ಮಾಡಿದನು । **ಏತಶಃ**—ಏತಶನಿಗೆ ಸಹಾಯಮಾಡಲು । **ಚಕ್ರಂ**—ಒಂದು ಚಕ್ರನನ್ನು। **ಭರತ್**—ಅಪಹರಿಸಿದನು । **ಸಂ ರಿಣಾತಿ**—(ಆ ಚಕ್ರದಿಂದ ಅಸುರರನ್ನು) ಹಿಂಸಿಸಿ ನಾಶಪಡಿಸುತ್ತಾನೆ । **ಪುರೋದಧತ್**—(ನಮ್ಮನ್ನು) ಮುಂದಿಟ್ಟುಕೊಂಡು । **ನಃ**—ನಮ್ಮ । **ಕ್ರತುಂ**—ಯಜ್ಞವನ್ನು । **ಸನಿಷ್ಯತಿ**—ಸೇವಿಸಲಿ.

॥ ಭಾವಾರ್ಥ ॥

ಹಿಂದೆ ಸಂಗ್ರಾಮದಲ್ಲಿ ಸೂರ್ಯನಿಗೆ ಸಂಬಂಧಿಸಿದ್ದರೂ ಸಹ ವೇಗವಾಗಿ ಚಲಿಸುತ್ತಿದ್ದ ರಥವನ್ನು ಇಂದ್ರನು ಚಲನರಹಿತವಾಗುವಂತೆ ಮಾಡಿದನು. ಮತ್ತು ಆ ರಥದ ಚಕ್ರಗಳಲ್ಲಿ ಒಂದನ್ನು ಅಪಹರಿಸಿ ಏತಶನಿಗೆ ಸಹಾಯ ಮಾಡಿದನು. ಅದೇ ಚಕ್ರದಿಂದ ಅಸುರರನ್ನೆಲ್ಲಾ ಹಿಂಸಿಸಿದನು ಮತ್ತು ಉಳಿದವರನ್ನೂ ಹಿಂಸಿಸುತ್ತಾನೆ. ಆ ಇಂದ್ರನು ನಮ್ಮನ್ನು ಮುಂದಿಟ್ಟುಕೊಂಡು ನಮ್ಮ ಯಜ್ಞವನ್ನು ಸೇವಿಸಲಿ.

## English Translation

He, (Indra), has foimerly arrested in battle the rapid chariot of the sun : Etasa has borne away the wheel, and ( with it Indra ) demolishes ( his foes ) : may he, giving us precedence, be propitiated by our rite

—————

॥ ಸಂಹಿತಾಪಾಠಃ ॥

ಆಯಂ ಜನಾ ಅಭಿಚಕ್ಷೇ ಜಗಾಮೇಂದ್ರಃ ಸಖಾಯಂ ಸುತಸೋಮ-
ಮಿಚ್ಛನ್ ।
ವದನ್ಗ್ರಾವಾವ ವೇದಿಂ ಭ್ರಿಯಾತೇ ಯಸ್ಯ ಜೀರಮಧ್ವರ್ಯವಶ್ಚರಂತಿ ॥

॥ ಪದಪಾಠಃ ॥

ಆ । ಅಯಂ । ಜನಾಃ । ಅಭಿऽಚಕ್ಷೇ । ಜಗಾಮ । ಇಂದ್ರಃ । ಸಖಾಯಂ । ಸುತऽಸೋಮಂ । ಇಚ್ಛನ್ । ವದನ್ । ಗ್ರಾವಾ । ಅವ । ವೇದಿಂ । ಭ್ರಿಯಾತೇ । ಯಸ್ಯ । ಜೀರಂ । ಅಧ್ವರ್ಯವಃ । ಚರಂತಿ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಜನಾ ಅಭಿಚಕ್ಷೇ ಯುಷ್ಮಾನಭಿದ್ರಷ್ಟುಮಯಮಿಂದ್ರಃ ಸಖಾಯಂ ಸ್ತೋತಾರಂ ಸುತ-ಸೋಮಮಭಿಷುತಸೋಮಂ ಯಜಮಾನಮಿಚ್ಛನ್ನಭಿಲಷನ್ನಾ ಜಗಾಮ । ಆಗಚ್ಛತಿ । ಅಧ್ವರ್ಯವೋ ಯಸ್ಯ ಗ್ರಾವ್ಣೋ ಜೀರಂ ಕ್ಷೇಪಣಂ ಪ್ರೇರಣಂ ಚರಂತಿ ಸ ಗ್ರಾವಾ ಸೋಮಾಭಿಷವಪಾಷಾಣೋ ವದನ್ ಶಬ್ದಂ ಕುರ್ವನ್ ವೇದಿಮವ ಭ್ರಿಯಾತೇ । ಅಭಿಹ್ರಿಯತೇ ॥

॥ ಪ್ರತಿಪದಾರ್ಥ ॥

**ಜನಾಃ**—ಎಲೈ ಜನರೇ । **ಅಭಿಚಕ್ಷೇ**—ನಿಮ್ಮನ್ನು ಅನುಗ್ರಹಿಸಿ ನೋಡುವುದಕ್ಕಾಗಿ । **ಅಯಂ ಇಂದ್ರಃ**—ಈ ಇಂದ್ರನು । **ಸಖಾಯಂ**—ತನ್ನ ಸಖಿಭೂತನಾದವನೂ । **ಸುತಸೋಮಂ**—ಸೋಮವನ್ನು ಹಿಂಡಿದವನೂ ಆದ ಯಜಮಾನನನ್ನು । **ಇಚ್ಛನ್**—ಅಪೇಕ್ಷಿಸಿ । **ಆ ಜಗಾಮ**—ಬಂದಿದ್ದಾನೆ । **ಯಸ್ಯ**—ಯಾವ ಹಿಂಡುವ ಕಲ್ಲಿನ । **ಜೀರಂ**—ಪೇಷಣಾರ್ಥವಾದ ಚಲನವನ್ನು । **ಅಧ್ವರ್ಯವಃ**—ಅಧ್ವರ್ಯುಗಳು । **ಚರಂತಿ**—ಮಾಡುತ್ತಾರೋ । ( ಸೋಮವನ್ನು ಅರೆಯುವಂತೆ ಮಾಡುವರೋ ) । (ಸಃ) **ಗ್ರಾವಾ**—ಆ ಕಲ್ಲು । **ವದನ್**—ಶಬ್ದಮಾಡುತ್ತಾ । **ವೇದಿಂ**—ಯಜ್ಞವೇದಿಯನ್ನು । **ಅವ ಭ್ರಿಯಾತೇ** ಸ್ಪರ್ಶಿಸಿ ಸಿದ್ಧಮಾಡಲಿ ।

॥ ಭಾವಾರ್ಥ ॥

ಎಲೈ ಜನರೇ, ನಿಮ್ಮನ್ನು ಅನುಗ್ರಹಿಸಿ ನೋಡುವುದಕ್ಕಾಗಿ ಈ ಇಂದ್ರನು ತನ್ನ ಸಖಿಭೂತನಾದವನೂ ಸೋಮವನ್ನು ಹಿಂಡಿದವನೂ ಆದ ಯಜಮಾನನನ್ನು ಅಪೇಕ್ಷಿಸಿ ಬಂದಿದ್ದಾನೆ. ಯಾವ ಹಿಂಡುವ ಕಲ್ಲಿನ ಪೇಷಣಾರ್ಥ

ವಾದ ಚಲನವನ್ನು ಅಧ್ವರ್ಯುಗಳು ಮಾಡುವರೋ, ಎಂದರೆ ಸೋಮವನ್ನು ಅರೆಯುವಂತೆ ಮಾಡುವರೋ ಆ ಗ್ರಾವವು (ಹಿಂಡುವ ಕಲ್ಲು) ಶಬ್ದವನ್ನು ಮಾಡುತ್ತಾ ಯಜ್ಞವೇದಿಯನ್ನು ಸೃಷ್ಟಿಸಿ ಸಿದ್ಧಮಾಡಲಿ.

English Translation

Indra, oh people, has come to see you, wishing to behold his friend the offerer of the libation . let the creaking stones, for whose rotation the priests hasten, supply the altar.

---

॥ ಸಂಹಿತಾಪಾಠಃ ॥

ಯೇ ಚಾಕನಂತ ಚಾಕನಂತ ನೂ ತೇ ಮರ್ತಾ ಅಮೃತ ಮೋ ತೇ ಅಂಹ ಆರನ್ ।

ವಾವಂಧಿ ಯಜ್ಯೂಁರುತ ತೇಷು ಧೇಹ್ಯೋಜೋ ಜನೇಷು ಯೇಷು ತೇ ಸ್ಯಾಮ ॥ ೧೩ ॥

॥ ಪದಪಾಠಃ ॥

ಯೇ । ಚಾಕನಂತ । ಚಾಕನಂತ । ನು । ತೇ । ಮರ್ತಾಃ । ಅಮೃತ । ಮೋ ಇತಿ । ತೇ । ಅಂಹಃ । ಆ । ಅರನ್ ।

ವವಂಧಿ । ಯಜ್ಯೂನ್ । ಉತ । ತೇಷು । ಧೇಹಿ । ಓಜಃ । ಜನೇಷು । ಯೇಷು । ತೇ । ಸ್ಯಾಮ ॥ ೧೩ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಧನಾರ್ಥಂ ಯೇ ಜನಾಸ್ತ್ವಾಂ ಚಾಕನಂತ ಅಕಾಮಯಂತ ಪುನಶ್ಚ ತೇ ನು ಕ್ಷಿಪ್ರಮೇವ ತ್ವಾಂ ಚಾಕನಂತ ಹೇ ಅಮೃತ ಅಮರಣಶೀಲೇಂದ್ರ ಮರ್ತಾ ಮರಣಧರ್ಮಾಣಸ್ತೇ ಜನಾ ಅಂಹೋಽನರ್ಥಂ ಮೋ ಆರನ್ । ಮಾ ಗಮನ್ ॥ ಮಾ ಉ ಇತಿ ನಿಪಾತಸಮುದಾಯೋ ಮೇತ್ಯೇಕ-ನಿಪಾತಾರ್ಥೇ ವರ್ತತೇ ॥ ಉತಾಪಿ ಚ ಯಜ್ಯೂನ್ಯಜಮಾನಾನ್ವವಂಧಿ । ಸಂಭಜಸ್ವ । ಯೇಷು ಜನೇಷು ಯೇಷಾಂ ಜನಾನಾಂ ಮಧ್ಯೇ ವಯಂ ಸ್ತೋತಾರಸ್ತೇ ತ್ವದೀಯಾಃ ಸ್ಯಾಮ ಭವಾಮ ಹೇ ಇಂದ್ರ ತ್ವಂ ತೇಷು ಜನೇಷ್ವೋಜೋ ಬಲಂ ಧೇಹಿ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಯೇ**—ಯಾವ ಮಾನವರು । **ಚಾಕನಂತ**—ನಿನ್ನನ್ನು ಅಪೇಕ್ಷಿಸುವರೋ । **ತೇ ನು**—ಅವರೇನೇ । **ಚಾಕನಂತ**—(ಪದೇ ಪದೇ ಸಹಾಯಾರ್ಥವಾಗಿ) ಇಚ್ಛಿಸುತ್ತಾರೆ । **ಅಮೃತ**—ಮರಣಧರ್ಮರಹಿತ

ನಾದ ಎಲೈ ಇಂದ್ರನೇ । **ತೇ ಮರ್ತಾಃ**—ಅದೇ ಮಾನವರು । **ಅಂಹಃ**—ಪಾಪವನ್ನು । **ನೋ ಆರನ್**—ಅನುಸರಿಸದಿರಲಿ । **ಉತ**—ಮತ್ತು । **ಯಜ್ಯೂನ್**—ಯಜ್ಞಕರ್ತರಾದ ಯಜಮಾನರನ್ನು । **ವವಂಧಿ**—ಸೇವಿಸು । **ಯೇಷು ಜನೇಷು**—ನಿನ್ನ ಭಕ್ತರಲ್ಲಿ ಯಾವ ಯಾವ ಸ್ತೋತೃಗಳಿದ್ದಾರೋ ಅವರೆಲ್ಲರೂ । **ತೇ ಸ್ಯಾಮ**-ನಿನ್ನವರೇ ಆಗಿರುವಂತೆ ಮಾಡು । **ತೇಷು ಜನೇಷು**—ಆ ಜನರಲ್ಲಿ । **ಓಜಃ**—ಬಲವನ್ನು । **ಧೇಹಿ**—ಇಡು ।

॥ ಭಾವಾರ್ಥ ॥

ಎಲೈ ಇಂದ್ರನೇ, ಯಾವ ಮಾನವರು ನಿನ್ನನ್ನು ಒಂದು ಸಲ ಅಪೇಕ್ಷಿಸುವರೋ ಅವರೇ ನಿನ್ನನ್ನು ಪದೇ ಪದೇ ಅಪೇಕ್ಷಿಸುತ್ತಾರೆ. ಮರಣಧರ್ಮರಹಿತನಾದ ಎಲೈ ಇಂದ್ರನೇ, ಮಾನವರು ಪಾಪಕರ್ಮವನ್ನಾಚರಿಸದಿರಲಿ. ನೀನು ಯಜಮಾನರನ್ನು ಸೇವಿಸು ನಿನ್ನ ಭಕ್ತರಲ್ಲಿ ಯಾವ ಯಾವ ಸ್ತೋತೃಗಳಿದ್ದಾರೆಯೋ, ಅವರೆಲ್ಲರೂ ನಿನ್ನವರೇ ಆಗಿರುವಂತೆ ಮಾಡು ಆ ಜನರಲ್ಲಿ ಶಕ್ತಿಯನ್ನು ತುಂಬಿಡು.

English Translation

Immortal (Indra), let not the mortals who are wishing, anxiously wishing for you, fall into sin : be indeed pleased with the sacrificers, and grant vigour to those men amongst whom may we be (especially) yours

---

## ಮೂವತ್ತೆರಡನೆಯ ಸೂಕ್ತವು.

---

॥ ಸಾಯಣಭಾಷ್ಯಂ ॥

**ಅದರ್ದರುತ್ಸಮಿತಿ ದ್ವಾದಶರ್ಚಮಷ್ಟಾದಶಂ ಸೂಕ್ತಂ । ಗಾತುರ್ನಾಮಾತ್ರೇಯ ಋಷಿಃ । ತ್ರಿಷ್ಟುಪ್ ಛಂದಃ । ಇಂದ್ರೋ ದೇವತಾ । ತಥಾ ಚಾನುಕ್ರಾಂತಂ । ಅದರ್ದರ್ದ್ವಾದಶ ಗಾತುರಿತಿ ॥ ಗತೋ ವಿನಿಯೋಗಃ ॥**

ಅನುವಾದವು—**ಅದರ್ದರುತ್ಸಂ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹದಿನೆಂಟನೆಯ ಸೂಕ್ತವು. ಇದರಲ್ಲಿ ಹನ್ನೆರಡು ಋಕ್ಕುಗಳಿರುವವು. ಈ ಸೂಕ್ತಕ್ಕೆ ಗಾತುರಾತ್ರೇಯಃ ಎಂಬುವನು ಋಷಿಯು, ಇಂದ್ರನು ದೇವತೆಯು, ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಅದರ್ದರ್ದ್ವಾದಶ ಗಾತುಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

## ಸೂಕ್ತ—೩೨

॥ ಮಂಡಲ—೫ ॥ ಅನುವಾಕ—೩ ॥ ಸೂಕ್ತ—೩೨ ॥
॥ ಅಷ್ಟಕ—೪ ॥ ಅಧ್ಯಾಯ—೧ ॥ ವರ್ಗ—೩೨, ೩೩ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨
ಋಷಿಃ—ಗಾತುರಾತ್ರೇಯಃ ॥
ದೇವತಾ—ಇಂದ್ರಃ ॥
ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಅದರ್ದರುತ್ಸಮಸೃಜೋ ವಿ ಖಾನಿ ತ್ವಮರ್ಣವಾನ್ಬದ್ಬಧಾನಾಁ ಅರಮ್ಣಾಃ ।
ಮಹಾಂತಮಿಂದ್ರ ಪರ್ವತಂ ವಿ ಯದ್ವಃ ಸೃಜೋ ವಿ ಧಾರಾ ಅವ
ದಾನವಂ ಹನ್ ॥ ೧ ॥

॥ ಪದಪಾಠಃ ॥

ಅದರ್ದಃ । ಉತ್ಸಂ । ಅಸೃಜಃ । ವಿ । ಖಾನಿ । ತ್ವಂ । ಅರ್ಣವಾನ್ । ಬದ್ಬಧಾನಾನ್ । ಅರಮ್ಣಾಃ ।
ಮಹಾಂತಂ । ಇಂದ್ರ । ಪರ್ವತಂ । ವಿ । ಯತ್ । ವರಿತಿವಃ । ಸೃಜಃ । ವಿ । ಧಾರಾಃ । ಅವ ।
ದಾನವಂ । ಹನ್ನಿತಿ ಹನ್ ।' ೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಮುತ್ಸಮುತ್ಸ್ಯಂದಮಾನಂ ಮೇಘಮದರ್ದಃ । ವಿದಾರಿತವಾನಸಿ । ತದನಂತರಂ ಖಾನಿ ಮೇಘಸ್ಥೋದಕಾನಾಂ ನಿರ್ಗಮನದ್ವಾರಾಣಿ ವ್ಯಸೃಜಃ । ವಿಶೇಷೇಣ ಸೃಷ್ಟವಾನಸಿ । ಕಿಂಚ ಬದ್ಬಧಾನಾನ್ಬಾಧ್ಯಮಾನಾನರ್ಣವಾನುದಕವತೋ ಮೇಘಾನರಮ್ಣಾಃ । ವಿಸರ್ಜಯಸಿ । ಕ್ಷಾರಯಸೀತ್ಯರ್ಥಃ ॥ ಅತ್ರ ರಮ್ಣಾತಿರ್ವಿಸರ್ಜನಕರ್ಮಾ । ಹೇ ಇಂದ್ರ ಯದ್ಯಸ್ತ್ವಂ ॥ ಯದಿತಿ ಲಿಂಗವ್ಯತ್ಯಯಃ ॥ ಮಹಾಂತಂ ಪ್ರಭೂತಂ ಪರ್ವತಂ ಮೇಘಂ ವಿ ವಃ । ವಿವೃತವಾನಸಿ । ಧಾರಾ ಅಪಾಂ ವಿ ಸೃಜಃ । ವಿಸೃಷ್ಟವಾನಸಿ । ಅಪಿ ಚ ದಾನವಂ ದನೋಃ ಪುತ್ರಂ ವೃತ್ರಮಸುರಂ ಯದ್ವೋದಕಸ್ಯ ದಾತಾರಂ ಮೇಘಂ ವಾವ ಹನ್ । ಅಭಿಹತವಾನಸಿ । ಅತ್ರ ನಿರುಕ್ತಂ । ಅದೃಣಾ ಉತ್ಸಂ । ಉತ್ಸ ಉತ್ಸದನಾದ್ವೋತ್ಸ್ಯಂದನಾದ್ವೋನತ್ತೇರ್ವಾ ಸ್ಯಾತ್ । ವ್ಯಸೃಜೋಽಸ್ಯ ಖಾನಿ ತ್ವಮರ್ಣವಾನರ್ಣಸ್ವತ ಏತಾನಿತ್ಯಾದಿ । ನಿ. ೧೦-೯ ॥

॥ ಪ್ರತಿಪದಾರ್ಥ ॥

**ಇಂದ್ರಃ**—ಎಲೈ ಇಂದ್ರನೇ । **ತ್ವಂ**—ನೀನು । **ಉತ್ಸಂ**—ಜಲಸೇಚಕವಾದ ಮೇಘವನ್ನು । **ಅದರ್ದಃ**—ಸೀಳಿರುವೆ । **ಖಾನಿ**—(ಮೇಘಾಂತರ್ಗತವಾದ ಉದಕಗಳಿಗೆ) ದ್ವಾರಗಳನ್ನು । **ವಿ ಅಸೃಜಃ**—ಬಿಡಿಸಿರುವೆ । **ಬದ್ಬಧಾನಾನ್**—ಪ್ರತಿಬಂಧಿಸಲ್ಪಟ್ಟಿರುವ । **ಅರ್ಣವಾನ್**—ಉದಕಗಳನ್ನು । **ಅರಮ್ಣಾಃ**—ಪ್ರವಹಿಸುವಂತೆ ಮಾಡಿರುವೆ । **ಯತ್**—ಯಾವಾಗ । **ಮಹಾಂತಂ**—ಪ್ರಭೂತವಾದ । **ಪರ್ವತಂ**—ಮೇಘವನ್ನು । **ವಿವಃ**—ಸೀಳಿದೆಯೋ । **ಧಾರಾಃ**—ಉದಕಧಾರೆಗಳನ್ನು । **ವಿ ಸೃಜಃ**—ಪ್ರವಹಿಸುವಂತೆ ಬಿಡಿಸಿದೆಯೋ (ಆಗ) । **ದಾನವಂ**—ದನುವಿನ ಪುತ್ರನಾದ ವೃತ್ರಾಸುರನನ್ನು । **ಅವ ಹನ್**—ಕೊಂದಿರುವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಜಲಸೇಚಕವಾದ ಮೇಘವನ್ನು ಸೀಳಿರುವೆ. ಮೇಘಾಂತರ್ಗತವಾದ ಉದಕಗಳಿಗೆ ದ್ವಾರಗಳನ್ನು ಬಿಡಿಸಿರುವೆ. ಪ್ರತಿಬಂಧಿಸಲ್ಪಟ್ಟಿರುವ ಉದಕಗಳನ್ನು ಪ್ರವಹಿಸುವಂತೆ ಮಾಡಿರುವೆ. ನೀನು ಯಾವಾಗ ಪ್ರಭೂತವಾದ ಮೇಘವನ್ನು ಸೀಳಿದೆಯೋ, ಉದಕ ಧಾರೆಗಳನ್ನು ಪ್ರವಹಿಸುವಂತೆ ಬಿಡಿಸಿದೆಯೋ ಆಗ ದನುಪುತ್ರನಾದ ವೃತ್ರಾಸುರನನ್ನು ಕೊಂದಿರುವೆ.

## English Translation

You, Indra have rent the cloud asunder, you have set open the flood-gates, you have liberated the obstructed streams, you have opened the vast cloud, and have given vent to the showerers, having slain the Danava.

---

॥ ಸಂಹಿತಾಪಾಠಃ ॥

ತ್ವಮುತ್ಸಾँ ಋತುಭಿರ್ಬದ್ಬಧಾನಾँ ಅರಂಹ ಊಧಃ ಪರ್ವತಸ್ಯ ವಜ್ರಿನ್ ।
ಅಹಿಂ ಚಿದುಗ್ರ ಪ್ರಯುತಂ ಶಯಾನಂ ಜಘನ್ವಾँ ಇಂದ್ರ ತವಿಷೀಮಧತ್ಥಾಃ ॥ ೨ ॥

॥ ಪದಪಾಠಃ ॥

ತ್ವಂ । ಉತ್ಸಾನ್ । ಋತುಽಭಿಃ । ಬದ್ಬಧಾನಾನ್ । ಅರಂಹಃ । ಊಧಃ । ಪರ್ವತಸ್ಯ । ವಜ್ರಿನ್ ।
ಅಹಿಂ । ಚಿತ್ । ಉಗ್ರ । ಪ್ರಽಯುತಂ । ಶಯಾನಂ । ಜಘನ್ವಾನ್ । ಇಂದ್ರ । ತವಿಷೀಂ । ಅಧತ್ಥಾಃ ॥

॥ ಸಾಯಣಭಾಷ್ಯಂ ॥

ಹೇ ವಜ್ರಿನ್ ವಜ್ರವನ್ನಿಂದ್ರ ತ್ವಮೃತುಭಿರ್ಋತುಷು ವೃಷ್ಟಿಕಾಲೇಷು ಬದ್ಬಧಾನಾನ್ಪ್ರತಿಬಧ್ಯಮಾನಾನುತ್ಸಾನ್ಮೇಘಾನ್ಪ್ರತಿಬಂಧನಾದಮೋಚಯ ಇತಿ ಶೇಷಃ । ಅಪಿ ಚ ಪರ್ವತಸ್ಯ ಮೇಘಸ್ಯ

**ಸಂಬಂಧ್ಯೂಧೋ ಬಲಮುರಂಹಃ । ಅಗಮಯಃ । ಹೇ ಉಗ್ರ ಉದ್ಗೂರ್ಣಬಲೇಂದ್ರ ಪ್ರಯುತ-ಮುದ್ಯುಕ್ತಂ ಶಯಾನಂ ಜಲೇ ಶಯನಂ ಕುರ್ವಂತಮಹಿಂ ಚಿದ್ವೃತ್ರಂ ಚ ಜಘನ್ವಾನ್ ಹತವಾನಸಿ । ಹೇ ಇಂದ್ರ ತ್ವಂ ತವಿಷೀಂ ಬಲಮಧತ್ಥಾಃ । ಅಧಾರಯಃ । ವೃತ್ರವಧಾನಂತರಮಿಂದ್ರೋ ಲೋಕೇ ಪ್ರಖ್ಯಾತೋ ಭವತೀತ್ಯರ್ಥಃ ॥**

॥ ಪ್ರತಿಪದಾರ್ಥ ॥

**ವಜ್ರಿನ್**—ವಜ್ರಾಯುಧವನ್ನು ಹಿಡಿದಿರುವ ಎಲೈ ಇಂದ್ರನೇ । **ತ್ವಂ**—ನೀನು । **ಋತುಭಿಃ**—ಆಯಾ ವರ್ಷಾದಿ ಋತುಕಾಲಗಳಲ್ಲಿ । **ಬದ್ಬಧಾನಾನ್**—ಉದಕಗಳನ್ನು ಪ್ರತಿಬಂಧಿಸತಕ್ಕ । **ಉತ್ಸಾನ್**—ಮೇಘಗಳನ್ನು (ಭೇದಿಸಿ ಉದಕಗಳನ್ನು ಪ್ರವಹಿಸುವಂತೆ ಮಾಡಿದೆ) । **ಪರ್ವತಸ್ಯ**—ಮೇಘಾಂತರ್ಗತವಾಗಿದ್ದ । **ಊಧಃ**—ಜಲವನ್ನು । **ಅರಂಹಃ**—ಬಿಡಿಸಿ ಪ್ರವಹಿಸುವಂತೆ ಮಾಡಿದೆ । **ಉಗ್ರ**—ಭಯಂಕರನಾದ ಇಂದ್ರನೇ । **ಪ್ರಯುತಂ**—ನಿರೋಧಕ್ಕೆ ಉದ್ಯುಕ್ತನಾದವನೂ । **ಶಯಾನಂ**—ನೀರಿನಲ್ಲಿ ಸುಪ್ತನಾದವನೂ ಆದ । **ಅಹಿಂ ಚಿತ್**—ಅಹಿಯನ್ನೂ ಕೂಡ । **ಜಘನ್ವಾನ್**—ಕೊಂದಿದ್ದೀಯೆ । **ಇಂದ್ರ**—ಎಲೈ ಇಂದ್ರನೇ । **ತವಿಷೀಂ**—ನಿನ್ನ ಪ್ರಸಿದ್ಧವಾದ ಬಲವನ್ನು **ಅಧಸ್ಥಾಃ**—ಹೊಂದಿದ್ದೀಯೆ

॥ ಭಾವಾರ್ಥ ॥

ವಜ್ರಾಯುಧವನ್ನು ಹಿಡಿದಿರುವ ಎಲೈ ಇಂದ್ರನೇ, ನೀನು ಆಯಾವರ್ಷಾದಿ ಋತುಕಾಲಗಳಲ್ಲಿ ಉದಕಗಳನ್ನು ಪ್ರತಿಬಂಧಿಸತಕ್ಕ ಮೇಘಗಳನ್ನು ಭೇದಿಸಿ ಉದಕಗಳನ್ನು ಪ್ರವಹಿಸುವಂತೆ ಮಾಡಿದ್ದೀಯೆ. ಮೇಘಾಂತರ್ಗತವಾದ ಜಲವನ್ನು ಬಿಡಿಸಿ ಪ್ರವಹಿಸುವಂತೆ ಮಾಡಿದ್ದೀಯೆ. ಭಯಂಕರನಾದ ಎಲೈ ಇಂದ್ರನೇ, ನಿರೋಧಕ್ಕೆ ಉದ್ಯುಕ್ತನಾದವನೂ, ನೀರಿನಲ್ಲಿ ಸುಪ್ತನಾದವನೂ ಆದ ಅಹಿಯನ್ನೂ ಕೂಡ ಕೊಂದಿದ್ದೀಯೆ ಎಲೈ ಇಂದ್ರನೇ, ನೀನು ಹೊಂದಿರುವ ಬಲವು ಪ್ರಸಿದ್ಧವಾದುದು

## English Traslation

You, thunderer, (have set free) the obstructed clouds in their seasons, you have invigorated the strength of the cloud: fierce Indra, destroying the the mighty Ahi when slumbering (in the waters), you have established the reputation of your prowess

---

॥ ಸಂಹಿತಾಪಾಠಃ ॥

**ತ್ಯಸ್ಯ ಚಿನ್ಮಹತೋ ನಿರ್ಮೃಗಸ್ಯ ವಧರ್ಜಘಾನ ತವಿಷೀಭಿರಿಂದ್ರಃ ।**

**ಯ ಏಕ ಇದಪ್ರತಿರ್ಮನ್ಯಮಾನ ಆದಸ್ಮಾದನ್ಯೋ ಅಜನಿಷ್ಟ ತವ್ಯಾನ್ ॥**

॥ ಪದಪಾಠಃ ॥

ತ್ಯಸ್ಯ । ಚಿತ್ । ಮಹತಃ । ನಿಃ । ಮೃಗಸ್ಯ । ವಧಃ । ಜಘಾನ । ತವಿಷೀಭಿಃ । ಇಂದ್ರಃ ।

ಯಃ । ಏಕಃ । ಇತ್ । ಅಪ್ರತಿಃ । ಮನ್ಯಮಾನಃ । ಆತ್ । ಅಸ್ಮಾತ್ । ಅನ್ಯಃ । ಅಜನಿಷ್ಟ ।

ತವ್ಯಾನ್ ॥ ೩ ॥

॥ ಸಾಯಣಭಾಷ್ಯಂ ॥

ನಿರ್ಜಘಾನಾಯುಧಂ ಶಕ್ರೋ ವೃತ್ರೇಣ ಕ್ಷಿಪ್ತಮೋಜಸಾ । ವೃತ್ರಸ್ಯ ಗಾತ್ರಾದನ್ಯೋ ಯಃ ಪ್ರಾದುರ್ಭೂತೋ ಮಹಾಸುರಃ ॥ ವೃತ್ರಂ ಪೂರ್ವಂ ನಿಹತ್ಯೇಂದ್ರೋ ದ್ವಿತೀಯಂ ಶುಷ್ಣಸಂಜ್ಞಕಂ । ಪುನರ್ಜಘಾನೇಂದ್ರ ಇತಿ ಪರಾಭಿಃ ಕೀರ್ತಯತ್ಯೃಷಿರಿತಿ ॥ ಇಂದ್ರೋ ಮಹತಃ ಪ್ರಭೂತಸ್ಯ ಮೃಗಸ್ಯ ಮೃಗವಚ್ಛೀಘ್ರಗಾಮಿನಸ್ತ್ಯಸ್ಯ ಚಿತ್ ತಸ್ಯ ವೃತ್ರಸ್ಯ ಸಂಬಂಧಿ ವಧರಾಯುಧಂ ತವಿಷೀಭಿಃ ಸ್ವಕೀಯೈರ್ಬಲೈರ್ನಿರ್ಜಘಾನ । ನಿಃಶೇಷೇಣಾವಧೀತ್ । ಏಕ ಇದಸಹಾಯ ಏವಾಪ್ರತಿಃ ಪ್ರತಿದ್ವಂದ್ವಿರಹಿತೋ ಮನ್ಯಮಾನ ಆತ್ಮಾನಂ ಯೋಽಸ್ತೀತಿ ಶೇಷಃ । ಆತ್ತದಾನೀಮಸ್ಮಾದ್ವೃತ್ರಾತ್ತವ್ಯಾನ್ಪ್ರವೃದ್ಧತರೋಽನ್ಯೋಽಸುರೋಽಜನಿಷ್ಟ । ಪ್ರಾದುರಭೂತ್ ॥

॥ ಪ್ರತಿಪದಾರ್ಥ ॥

**ಯಃ**—ಯಾವ ವೃತ್ರನು । **ಏಕ ಇತ್**—ಅದ್ವಿತೀಯನೆಂದೂ । **ಅಪ್ರತಿಃ**—ಪ್ರತಿದ್ವಂದ್ವಿರಹಿತನೆಂದೂ । **ಮನ್ಯಮಾನಃ**—ತಿಳಿದಿದ್ದನೋ ಅಂತಹ । **ಮಹತಃ**—ಅದ್ಭುತಸ್ವರೂಪನೂ । **ಮೃಗಸ್ಯ**—ಮೃಗದಂತೆ ತೀಕ್ಷ್ಣ ಸ್ವರೂಪನೂ ಆದ । **ತಸ್ಯ ಚಿತ್**—ಅದೇ ವೃತ್ರನ । **ವಧಃ**—ಆಯುಧವನ್ನು । **ತವಿಷೀಭಿಃ**—ತನ್ನ ಬಲಗಳಿಂದ । **ಇಂದ್ರಃ**—ಇಂದ್ರನು । **ನಿಃ ಜಘಾನ**—ನಾಶಮಾಡಿದ್ದಾನೆ । **ಆತ್**—ಆಗ । **ಅಸ್ಮಾತ್**—ಆ ವೃತ್ರನಿಂದ । **ತವ್ಯಾನ್**—ಇನ್ನೂ ಅಧಿಕಬಲವುಳ್ಳ । **ಅನ್ಯಃ**—ಶುಷ್ಣಾಖ್ಯನಾದ ಬೇರೊಬ್ಬ ಅಸುರನು । **ಅಜನಿಷ್ಟ**—ಉತ್ಪನ್ನ ನಾದನು

॥ ಭಾವಾರ್ಥ ॥

ಯಾವ ವೃತ್ರನು ತಾನೇ ಅದ್ವಿತೀಯನೆಂದೂ, ಪ್ರತಿದ್ವಂದ್ವಿರಹಿತನೆಂದೂ ತಿಳಿದಿದ್ದನೋ ಅಂತಹ ಅದ್ಭುತ ಸ್ವರೂಪನೂ ಮೃಗದಂತೆ ತೀಕ್ಷ್ಣಸ್ವರೂಪನೂ ಆದ ಅದೇ ವೃತ್ರನ ಆಯುಧವನ್ನು ತನ್ನ ಬಲಗಳಿಂದ ಇಂದ್ರನು ನಾಶ ಮಾಡಿದ್ದಾನೆ. ಆಗ ಆ ವೃತ್ರನಿಂದ ಇನ್ನೂ ಅಧಿಕ ಬಲವುಳ್ಳ ಶುಷ್ಣಾಖ್ಯನಾದ ಬೇರೊಬ್ಬ ಅಸುರನು ಉತ್ಪನ್ನನಾದನು

English Translation

Indra, by his prowess, has annihilated the weapon of that mighty beast, from whom another more powerful, conceiving himself one and unmatched, was generated.

॥ ವಿಶೇಷವಿಷಯಗಳು ॥

**ಅನ್ಯಃ**—ಶುಷ್ಣನ ವಿಷಯದ ವಿವರಣೆಯನ್ನು ಇದೇ ಭಾಗದ 20 ನೇ ಪೇಜಿನಲ್ಲಿ ವಿವರಿಸಲಾಗಿದೆ

॥ ಸಂಹಿತಾಪಾಠಃ ॥

ತ್ಯಂ ಚಿದೇಷಾಂ ಸ್ವಧಯಾ ಮದಂತಂ ಮಿಹೋ ನಪಾತಂ ಸುವೃಧಂ ತಮೋಗಾಂ ।
ವೃಷಪ್ರಭರ್ಮಾ ದಾನವಸ್ಯ ಭಾಮಂ ವಜ್ರೇಣ ವಜ್ರೀ ನಿ ಜಘಾನ ಶುಷ್ಣಂ ॥ ೪ ॥

॥ ಪದಪಾಠಃ ॥

ತ್ಯಂ । ಚಿತ್ । ಏಷಾಂ । ಸ್ವಧಯಾ । ಮದಂತಂ । ಮಿಹಃ । ನಪಾತಂ । ಸುಽವೃಧಂ । ತಮಃಽಗಾಂ ।
ವೃಷಽಪ್ರಭರ್ಮಾ । ದಾನವಸ್ಯ । ಭಾಮಂ । ವಜ್ರೇಣ । ವಜ್ರೀ । ನಿ । ಜಘಾನ । ಶುಷ್ಣಂ ॥ ೪ ॥

॥ ಸಾಯಣಭಾಷ್ಯಂ ॥

ಏಷಾಂ ಪ್ರಾಣಿನಾಂ ಸ್ವಧಯಾನ್ನೇನ ಮಂದಂತಂ ಮೋದಮಾನಂ ಸರ್ವಪ್ರಾಣಿನಾಮನ್ನಂ ಸ್ವಯಮೇವ ಭುಂಜಾನಂ ಮಿಹಃ ಸೇಚನಸಮರ್ಥಸ್ಯ ಮೇಘಸ್ಯ ನಪಾತಂ ಪಾತಾರಂ ರಕ್ಷಿತಾರಂ। ಅತ್ರ ನಪಾಚ್ಛಬ್ದಃ ಪಾತರಿ ವರ್ತತೇ । ಪ್ರಾಣೋ ವೈ ತನೂನಪಾತ್ಸ ಹಿ ತನ್ವಃ ಪಾತಿ । ಐ. ಬ್ರಾ. ೨-೪ । ಇತಿ ಬ್ರಾಹ್ಮಣಂ । ಸುವೃಧಂ ಪ್ರವೃದ್ಧಂ ತಮೋಗಾಂ ತಮೋಽಂಧಕಾರಂ ಗಚ್ಛಂತಂ ತ್ಯಂ ಚಿತ್ತಂ ಚ ವೃತ್ರಂ ನಿಜಘಾನೇತಿ ಶೇಷಃ । ವೃಷಪ್ರಭರ್ಮಾ ವರ್ಷಣಶೀಲಸ್ಯ ಮೇಘಸ್ಯ ಪ್ರಹರ್ತಾ ವಜ್ರೀ ವಜ್ರವಾನಿಂದ್ರೋ ವಜ್ರೇಣ ಸ್ವಕೀಯೇನಾಯುಧೇನ ದಾನವಸ್ಯ ದನುಜಸ್ಯ ಭಾಮಂ । ಅತ್ರ ಕ್ರೋಧವಾಚಿಭಾಮಶಬ್ದೇನ ಕ್ರೋಧಾದುತ್ಪನ್ನಃ ಶುಷ್ಣಾಸುರೋ ಲಕ್ಷ್ಯತೇ । ತಂ ಶುಷ್ಣಾಸುರಂ ನಿ ಜಘಾನ । ಹತವಾನ್ ॥

॥ ಪ್ರತಿಪದಾರ್ಥ ॥

**ಏಷಾಂ**— ಪ್ರಾಣಿಗಳಿಗೆ ಸೇರಬೇಕಾದ । **ಸ್ವಧಯಾ**—ಅನ್ನದಿಂದ । **ಮದಂತಂ**— ಹರ್ಷಿಸುತ್ತಿರುವವನೂ। **ಮಿಹಃ**—ಮೇಘಕ್ಕೆ । **ನಪಾತಂ**—ರಕ್ಷಕನೂ । **ಸುವೃಧಂ**—ಅದ್ಭುತನಾಗಿ ಬೆಳೆದವನೂ । **ತಮೋಗಾಂ**—ಅಂಧ ಕಾರದಲ್ಲಿ ಸಂಚರಿಸುವವನೂ । **ದಾನವಸ್ಯ**—ವೃತ್ರಾಸುರನ । **ಭಾಮಂ**—ಕ್ರೋಧದಿಂದ ಉತ್ಪನ್ನನಾದವನೂ । **ತ್ಯಂ ಚಿತ್ ಶುಷ್ಣಂ**—ಪ್ರಸಿದ್ಧನೂ ಆದ ಶುಷ್ಣಾಸುರನನ್ನು । **ವೃಷಪ್ರಭರ್ಮಾ**—ವೃಷ್ಟಿಕಾರಕವಾದ ಮೇಘವನ್ನು ಸೀಳಿದವನೂ । **ವಜ್ರೀ**—ವಜ್ರಾಯುಧಯುಕ್ತನೂ ಆದ ಇಂದ್ರನು । **ವಜ್ರೇಣ**—ತನ್ನ ವಜ್ರಾಯುಧದಿಂದ । **ನಿ ಜಘಾನ**—ನಾಶಮಾಡಿದನು.

॥ ಭಾವಾರ್ಥ ॥

ಪ್ರಾಣಿಗಳಿಗೆ ಸೇರಬೇಕಾದ ಅನ್ನವನ್ನೆಲ್ಲಾ ತಾನೇ ಭುಜಿಸಿ ಅದರಿಂದ ಹರ್ಷಿಸುತ್ತಿದ್ದವನೂ, ಮೇಘದ ರಕ್ಷಕನೂ, ಅದ್ಭುತವಾಗಿ ಬೆಳೆದವನೂ, ಅಂಧಕಾರದಲ್ಲಿ ಸಂಚರಿಸುತ್ತಿದ್ದವನೂ, ವೃತ್ರಾಸುರನ ಕ್ರೋಧದಿಂದ ಉತ್ಪನ್ನನಾದವನೂ ಆದ ಶುಷ್ಣನೆಂಬ ಅಸುರನನ್ನು ಮೇಘಭಂಜಕನೂ ವಜ್ರಿಯೂ ಆದ ಇಂದ್ರನು ತನ್ನ ವಜ್ರಾಯುಧದಿಂದ ನಾಶ ಮಾಡಿದನು.

## English Translation

The wielder of the thunderbolt, the render of the rain-cloud, has destroyed with his bolt the mighty Sushna, the wrath-born ( son ) of the Danava, the walker in darkness, the protector of the showering cloud, exhilarating himself with the food of these (living creatures).

---

॥ ಸಂಹಿತಾಪಾಠಃ ॥

ತ್ವಂ ಚಿದಸ್ಯ ಕ್ರತುಭಿರ್ನಿಷತ್ತಮಮರ್ಮಣೋ ವಿದದಿದಸ್ಯ ಮರ್ಮ ।
ಯದೀಂ ಸುಕ್ಷತ್ರ ಪ್ರಭೃತಾ ಮದಸ್ಯ ಯುಯುತ್ಸಂತಂ ತಮಸಿ ಹರ್ಮ್ಯೇ ಧಾಃ ॥ ೫ ॥

॥ ಪದಪಾಠಃ ॥

ತ್ವಂ । ಚಿತ್ । ಅಸ್ಯ । ಕ್ರತುಽಭಿಃ । ನಿಽಸತ್ತಂ । ಅಮರ್ಮಣಃ । ವಿದತ್ । ಇತ್ । ಅಸ್ಯ । ಮರ್ಮ ।
ಯತ್ । ಈಂ । ಸುಽಕ್ಷತ್ರ । ಪ್ರಽಭೃತಾ। ಮದಸ್ಯ । ಯುಯುತ್ಸಂತಂ । ತಮಸಿ । ಹರ್ಮ್ಯೇ । ಧಾಃ ॥

॥ ಸಾಯಣಭಾಷ್ಯಂ ॥

ಅಮರ್ಮಣೋ ಮರ್ಮಹೀನಮಾತ್ಮಾನಂ ಮನ್ಯಮಾನಸ್ಯಾಸ್ಯ ವೃತ್ರಸ್ಯ ನಿಷತ್ತಂ ನಿಷಣ್ಣಂ ತ್ವಂ ಚಿತ್ ತ್ವತ್ತದೇವ ॥ ಲಿಂಗವ್ಯತ್ಯಯಃ ॥ ಮರ್ಮ ಪ್ರಾಣಸ್ಥಾನಂ । ಯತ್ರ ಸ್ಥಾನೇ ವಿದ್ಧೋ ಮ್ರಿಯತೇ ತನ್ಮರ್ಮೇತ್ಯುಚ್ಯತೇ । ಅಸ್ಯ ವೃತ್ರಸ್ಯ ಕ್ರತುಭಿಃ ಪ್ರಜ್ಞಾನೈರ್ಹೇ ಇಂದ್ರ ತ್ವಂ ವಿದದಿತ್ । ಅಜ್ಞಾಸೀರೇವ । ಯದ್ಯದಾ ಹೇ ಸುಕ್ಷತ್ರ ಸುಬಲೇಂದ್ರ ತ್ವಂ ಮದಸ್ಯ ಮಾದಕಸ್ಯ ಸೋಮಸ್ಯ ಪ್ರಭೃತಾ ಪ್ರಭೃತೌ ಸಂಭರಣೇ ಸತಿ ಯುಯುತ್ಸಂತಂ ಯೋದ್ಧುಮಿಚ್ಛಂತಮಿಮಮೇನಂ ವೃತ್ರಂ ಹರ್ಮ್ಯೇ ಹಾರಕೇ ತಮಸಿ ಧಾಃ ನ್ಯದಧಾಃ । ವೃತ್ರ ಇಂದ್ರಸ್ಯ ಭಯಾತ್ತಮಸಿ ಪ್ರಾವಿಶದಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಮರ್ಮಣಃ**—( ಎಲೈ ಇಂದ್ರನೇ ನೀನು ) ತನ್ನನ್ನು ಕೊಲ್ಲಲು, ತನ್ನ ಶರೀರದಲ್ಲಿ ( ಅಪಾಯಕರವಾದ ) ಸ್ಥಾನವೇ ಇಲ್ಲವೆಂದು ತಿಳಿದುಕೊಂಡಿದ್ದ ವೃತ್ರಾಸುರನ । **ನಿಷತ್ತಂ**—ರಹಸ್ಯವಾಗಿದ್ದ । **ಮರ್ಮ**—ಅಪಾಯ ಸ್ಥಾನವು । **ತ್ವಂ ಚಿತ್**—ಯಾವುದು ಇದ್ದಿತೋ ಅದನ್ನೇ । **ಅಸ್ಯ**—ಈ ವೃತ್ರನ । **ಕ್ರತುಭಿಃ**—ಕರ್ಮಗಳಿಂದ । **ವಿದತ್ ಇತ್**—ಕಂಡುಕೊಂಡೆಯಷ್ಟೆ । **ಯತ್**—ಯಾವಾಗ । **ಸುಕ್ಷತ್ರ**—ಅಧಿಕ ಬಲವುಳ್ಳ ಎಲೈ ಇಂದ್ರನೇ । **ಮದಸ್ಯ**— ಹರ್ಷವನ್ನುಂಟುಮಾಡುವ ಸೋಮವನ್ನು । **ಪ್ರಭೃತಾ**—ನೀನು ಪಾನಮಾಡಿದ ಮೇಲೆ । **ಹರ್ಮ್ಯೇ**—ದೃಷ್ಟಿಹಾರಕವಾದ (ಕಣ್ಣು ಕಾಣಿಸದಿರುವ) । **ತಮಸಿ**—ಕತ್ತಲಲ್ಲಿ । **ಯುಯುತ್ಸಂತಂ**—ಯುದ್ಧಮಾಡಲು ಸಿದ್ಧನಾಗುತ್ತಿರುವ ವೃತ್ರವನ್ನು । **ಧಾಃ**—ಕೆಳಕ್ಕೆ ಬೀಳಿಸಿದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ತನ್ನನ್ನು ಕೊಲ್ಲಲು ತನಗೆ ಅಪಾಯಕರವಾದ ಮರ್ಮಸ್ಥಾನವೇ ಇಲ್ಲವೆಂದು ಗರ್ವಪಡುತ್ತಿದ್ದ ವೃತ್ರಾಸುರನ ಅಂತಹ ಅಪಾಯಸ್ಥಾನವನ್ನು ವೃತ್ರನ ಕಾರ್ಯಗಳಿಂದಲೇ ನೀನು ತಿಳಿದುಕೊಂಡೆ. ಎಲೈ ಬಲಶಾಲಿಯಾದ ಇಂದ್ರನೇ ನೀನು ಹರ್ಷವನ್ನುಂಟುಮಾಡುವ ಸೋಮವನ್ನು ಪಾನಮಾಡಿದ ಮೇಲೆ ಏನೂ ಕಾಣಿಸದಿರುವ ಗಾಢಾಂಧಕಾರದಲ್ಲಿ ಯುದ್ಧಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದ ವೃತ್ರನನ್ನು ಕೆಳಗೆ ಬೀಳುವಂತೆ ನೂಕಿದೆ

English Translation

You have discovered, Indra, by his acts, the secret vital part of him who thought himself invulnerable, when, powerful Indra, in the exhilaration of the Soma, you have detected him preparing for combat in his dark abode.

॥ ಸಂಹಿತಾಪಾಠಃ ॥

ತ್ವಂಚಿದಿತ್ಥಾ ಕತ್ಪಯಂ ಶಯಾನಮಸೂರ್ಯೇ ತಮಸಿ ವಾವೃಧಾನಂ ।
ತಂ ಚಿನ್ಮಂದಾನೋ ವೃಷಭಃ ಸುತಸ್ಯೋಚ್ಚೈರಿಂದ್ರೋ ಅಪಗೂರ್ಯಾ ಜಘಾನ ॥ ೬ ॥

॥ ಪದಪಾಠಃ ॥

ತ್ವಂ । ಚಿತ್ । ಇತ್ಥಾ । ಕತ್ಪಯಂ । ಶಯಾನಂ । ಅಸೂರ್ಯೇ । ತಮಸಿ । ವವೃಧಾನಂ ।
ತಂ । ಚಿತ್ । ಮಂದಾನಃ । ವೃಷಭಃ । ಸುತಸ್ಯ । ಉಚ್ಚೈಃ । ಇಂದ್ರಃ । ಅಪಗೂರ್ಯ । ಜಘಾನ ॥

॥ ಸಾಯಣಭಾಷ್ಯಂ ॥

ಸುತಸ್ಯಾಭಿಷುತೇನ ಸೋಮೇನ ಮಂದಾನೋ ಮೋದಮಾನೋ ವೃಷಭಃ ಕಾಮಾನಾಂ ವರ್ಷಿತೇಂದ್ರ ಉಚ್ಚೈರೂರ್ಧ್ವಮಪಗೂರ್ಯ ವಜ್ರಮುದ್ಯಮ್ಯ ತಂ ಚಿತ್ತಮೇವ ವೃತ್ರಾಸುರಂ ಜಘಾನ । ಅವಧೀತ್ । ಕೀದೃಶಂ । ಇತ್ಥಾಮುತ್ರಾಂತರಿಕ್ಷಲೋಕೇ ಕತ್ಪಯಂ । ಕತ್ಸುಖಕರಂ ಪಯೋ ಯಸ್ಯ ತಂ । ಶಯಾನಮಪ್ಸು ಶಯನಂ ಕುರ್ವಂತಮಸೂರ್ಯೇ ಸೂರ್ಯರಹಿತೇ ತಮಸ್ಯಂಧಕಾರೇ ವವೃಧಾನಂ ವರ್ಧಮಾನಂ । ತ್ವಂ ಚಿದಿತಿ ಪುನರ್ವಚನಂ ಪೂರಣಾರ್ಥಂ ॥

॥ ಪ್ರತಿಪದಾರ್ಥ ॥

ಸುತಸ್ಯ—ಅಭಿಷುತವಾದ ಸೋಮದ ಪಾನದಿಂದ । ಮಂದಾನಃ—ಹರ್ಷಗೊಂಡವನೂ । ವೃಷಭಃ—ಕಾಮವರ್ಷಕನೂ ಆದ । ಇಂದ್ರಃ—ಇಂದ್ರನು । ಉಚ್ಚೈಃ ಅಪಗೂರ್ಯ—ತನ್ನ ವಜ್ರಾಯುಧವನ್ನು ಮೇಲಕ್ಕೆತ್ತಿ । ಇತ್ಥಾ—ಅಂತರಿಕ್ಷ ಲೋಕದಲ್ಲಿ । ಕತ್ಪಯಂ—ಸುಖಕರವಾದ ಉದಕಸ್ಥನೂ । ಶಯಾನಂ—ಅಂತರಿಕ್ಷದಲ್ಲಿ ಮಲಗಿದ್ದವನೂ । ಅಸೂರ್ಯೇ—ಸೂರ್ಯರಹಿತವಾದ । ತಮಸಿ—ಅಂಧಕಾರದಲ್ಲಿ । ವವೃಧಾನಂ—ವೃದ್ಧಿಯನ್ನು ಹೊಂದಿದವನೂ । ತ್ವಂ— ಪ್ರಸಿದ್ಧನೂ ಆದ । ತಂ ಚಿತ್ —ಆ ವೃತ್ರಾಸುರನನ್ನು । ಜಘಾನ—ಕೊಂದನು.

॥ ಭಾವಾರ್ಥ ॥

ಅಭಿಷುತವಾದ ಸೋಮದ ಪಾನದಿಂದ ಹರ್ಷಗೊಂಡವನೂ ಕಾಮವರ್ಷಕನೂ ಆದ ಇಂದ್ರನು ತನ್ನ ವಜ್ರಾಯುಧವನ್ನು ಮೇಲಕ್ಕೆತ್ತಿ ಅಂತರಿಕ್ಷದಲ್ಲಿ ಸುಖಕರವಾದ ಉದಕದ ಮಧ್ಯದಲ್ಲಿ ಮಲಗಿದ್ದವನೂ, ಸೂರ್ಯರಹಿತವಾದ ಅಂಧಕಾರದಲ್ಲಿ ವೃದ್ಧಿಯನ್ನು ಹೊಂದಿದವನೂ ಆದ ವೃತ್ರಾಸುರನನ್ನು ಕೊಂದನು.

## English Translation

Indra, the showerer (of benefits) exhilarated by the effused juices, uplifting (his thunderbolt), has slain him enjoying the dews of the fiirmament sleeping (amidst the waters), and thriving in sunless darkness

॥ ಸಂಹಿತಾಪಾಠಃ ॥

ಉದ್ಯದಿಂದ್ರೋ ಮಹತೇ ದಾನವಾಯ ವಧರ್ಯಮಿಷ್ಟ ಸಹೋ ಅಪ್ರತೀತಂ ।
ಯದೀಂ ವಜ್ರಸ್ಯ ಪ್ರಭೃತೌ ದದಾಭ ವಿಶ್ವಸ್ಯ ಜಂತೋರಧಮಂ ಚಕಾರ ॥

॥ ಪದಪಾಠಃ ॥

**ಉತ್ । ಯತ್ । ಇಂದ್ರಃ । ಮಹತೇ । ದಾನವಾಯ । ವಧಃ । ಯಮಿಷ್ಟ । ಸಹಃ । ಅಪ್ರತಿಽಇತಂ ।**

**ಯತ್ । ಈಂ । ವಜ್ರಸ್ಯ । ಪ್ರಽಭೃತೌ । ದದಾಭ । ವಿಶ್ವಸ್ಯ । ಜಂತೋಃ । ಅಧಮಂ । ಚಕಾರ ॥ ೭ ॥**

॥ ಸಾಯಣಭಾಷ್ಯಂ ॥

**ಯದ್ಯದೇಂದ್ರೋ ಮಹತೇ ಪ್ರಭೂತಾಯ ದಾನವಾಯ ವೃತ್ರಾಸುರಾಯ ಸಹಃ ಶತ್ರೂಣಾಮಭಿಭವಿತೃ ಅಪ್ರತೀತಂ ಕೇನಾಪ್ಯಪ್ರತಿಗತಂ ವಧರ್ವಜ್ರಮುದ್ಯಮಿಷ್ಟ ಉದಯಚ್ಛತ್ । ಯದ್ಯದಾ ವಜ್ರಸ್ಯ ಪ್ರಭೃತೌ ಪ್ರಹೃತೌ ಪ್ರಹರಣೇ ಸತಿ ॥ ಹೃಗ್ರಹೋರ್ಭ ಇತಿ ಭತ್ವಂ ॥ ಈಮೇನಂ ವೃತ್ರಂ ದದಾಭ ಅಹಿಂಸೀತ್ ತದಾ ವಿಶ್ವಸ್ಯ ಸರ್ವಸ್ಯ ಜಂತೋಃ ಪ್ರಾಣಿನೋಽಧಮಂ ನೀಚಂ ಚಕಾರ । ಅಕರೋತ್ ॥**

॥ ಪ್ರತಿಪದಾರ್ಥ ॥

**ಯತ್**—ಯಾವಾಗ । **ಇಂದ್ರಃ**—ಇಂದ್ರನು । **ಮಹತೇ**—ಅಧಿಕಬಲವುಳ್ಳವನೂ । **ದಾನವಾಯ**—ಅಸುರನೂ ಆದ ವೃತ್ರನ ಮೇಲೆ । **ಸಹಃ**—ಶತ್ರುಗಳನ್ನು ಪ್ರತಿಭಟಿಸುವುದೂ । **ಅಪ್ರತೀತಂ**—ಅಪ್ರತಿಹತವಾದುದೂ

ಆದ । **ವಧಃ**—ವಜ್ರಾಯುಧವನ್ನು । **ಉತ್ ಯಮಿಷ್ಟ**—ಪ್ರಯೋಗಿಸಿದನೋ, (ಮತ್ತು) । **ಯತ್**—ಯಾವಾಗ । **ವಜ್ರಸ್ಯ**—ವಜ್ರಾಯುಧದ । **ಪ್ರಭೃತೌ**—ಪ್ರಯೋಗವಾದಾಗ । **ಈಂ**—ವೃತ್ರನನ್ನು । **ದದಾಭ**—ಹಿಂಸಿಸಿದನೋ (ಆಗ ಅವನನ್ನು) । **ವಿಶ್ವಸ್ಯ**—ಸಮಸ್ತವಾದ । **ಜಂತೋಃ**—ಪ್ರಾಣಿಗಳಿಗಿಂತಲೂ । **ಅಧಮಂ**—ಕೆಳಗಿಳಿಯುವಂತೆ । **ಚಕಾರ**—ಮಾಡಿದನು.

॥ ಭಾವಾರ್ಥ ॥

ಅಧಿಕವಾದ ಬಲವುಳ್ಳವನೂ, ಅಸುರನೂ ಆದ ವೃತ್ರನ ಮೇಲೆ ಶತ್ರುಗಳನ್ನು ಪ್ರತಿಭಟಿಸುವುದೂ, ಅಪ್ರತಿಹತವಾದುದೂ ಆದ ವಜ್ರಾಯುಧವನ್ನು ಇಂದ್ರನು ಪ್ರಯೋಗಿಸಿದಾಗ ವೃತ್ರನು ಬಹಳವಾಗಿ ಹಿಂಸಿಸಲ್ಪಟ್ಟನು. ಆ ಒಡನೆಯೇ ಅವನು ಸಮಸ್ತಪ್ರಾಣಿಗಳಿಗಿಂತಲೂ ಕೆಳಗಿನ ಪ್ರದೇಶಕ್ಕೆ ದೂಡಲ್ಪಟ್ಟನು

English Translation

When Indra raised his powerful irresistible weapon against the mighty Danava, when he struck him with the blow of the thunderbolt, he made him the lowest of all creatures

॥ ಸಂಹಿತಾಪಾಠಃ ॥

ತ್ಯಂ ಚಿದರ್ಣಂ ಮಧುಪಂ ಶಯಾನಮಸಿನ್ವಂ ವವ್ರಂ ಮಹ್ಯಾದದುಗ್ರಃ ।
ಅಪಾದಮತ್ರಂ ಮಹತಾ ವಧೇನ ನಿ ದುರ್ಯೋಣ ಆವೃಣಙ್ಮೃಧ್ರವಾಚಂ ॥

॥ ಪದಪಾಠಃ ॥

ತ್ಯಂ । ಚಿತ್ । ಅರ್ಣಂ । ಮಧುಽಪಂ । ಶಯಾನಂ । ಅಸಿನ್ವಂ । ವವ್ರಂ । ಮಹಿ । ಆದತ್ । ಉಗ್ರಃ ।
ಅಪಾದಂ । ಅತ್ರಂ । ಮಹತಾ । ವಧೇನ । ನಿ । ದುರ್ಯೋಣೇ । ಅವೃಣಕ್ । ಮೃಧ್ರಽವಾಚಂ ॥ ೮ ॥

॥ ಸಾಯಣಭಾಷ್ಯಂ ॥

ಉಗ್ರ ಉದ್ಗೂರ್ಣಬಲ ಇಂದ್ರೋ ಮಹಿ ಮಹಾಂತಂ ತ್ಯಂ ಚಿತ್ತಮೇವ ವೃತ್ರಮಾದತ್ । ಆದದೌ । ಪ್ರತ್ಯಗ್ರಹೀತ್ । ಕೀದೃಶಂ । ಅರ್ಣಂ ಗಂತಾರಂ ಜಲಂ ಮೇಘಂ ವಾವೃತ್ಯ ಶಯಾನಂ ಶಯನಂ ಕುರ್ವಂತಂ । ಸ್ಥಿತವಂತಮಿತ್ಯರ್ಥಃ । ಮಧುಪಂ ಮಧುನೋಽಂಭಸಃ ಪಾತಾರಂ ಪಾಲಯಿತಾರಮಸಿನ್ವಂ ಸಪತ್ನಾನಾಮವಕ್ಷೇಪ್ತಾರಂ ।' ಅಸ್ಯೈತೇರಿದಂ ರೂಪಂ ॥ ವವ್ರಂ ವೃಣ್ವಂತಂ ಸರ್ವಮಾಚ್ಛಾದಯಂತಂ । ಸ ಇಮಾಲ್ಲೋಕಾನವೃಣೋತ್ತದ್ವೃತ್ರಸ್ಯ ವೃತ್ರತ್ವಂ । ತೈ. ಸಂ. ೨-೫-೨-೩ । ಇತಿ ಹಿ ತೈತ್ತಿರೀಯಕಂ । ತದನಂತರಮಿಂದ್ರೋ ದುರ್ಯೋಣೇ ಸಂಗ್ರಾಮೇ ಮಹತಾ ಪ್ರಭೂತೇನ

ವಧೇನ ವಜ್ರೇಣಾಪಾದಂ ಪಾದರಹಿತಮಮತ್ರಮಮಾತ್ರಂ ಪರಿಮಾಣರಹಿತಂ ಮೃಧ್ರವಾಚಂ ಹಿಂಸಿತ-ವಾಗಿಂದ್ರಿಯಂ । ಜೃಂಭಾಭಿಭೂತಮಿತ್ಯರ್ಥಃ । ವೃತ್ರಂ ನ್ಯವೃಣಕ್ । ನಿತರಾಮಹಿಂಸೀತ್ । ತಸ್ಮಾ-ಜ್ಜಂಜಭ್ಯಮಾನಾದಗ್ನೀಷೋಮೌ ನಿರಕ್ರಾಮತಾಂ ಪ್ರಾಣಾಪಾನೌ ವಾ ಏನಂ ತದಜಹಿತಾಂ । ತೈ. ಸಂ. ೨-೫-೨-೪ । ಇತಿ ಹಿ ತೈತ್ತಿರೀಯಕಂ ॥

॥ ಪ್ರತಿಪದಾರ್ಥ ॥

**ಉಗ್ರಃ**—ಭಯಂಕರವಾದ ಬಲವುಳ್ಳ ಇಂದ್ರನು । **ಅರ್ಣಂ**—ಜಲವನ್ನಾವರಿಸಿ ಸಂಚರಿಸುವವನೂ । **ಶಯಾನಂ**—ಅಂತರಿಕ್ಷದಲ್ಲಿ ಮಲಗಿರುವವನೂ । **ಮಧುಪಂ**—ಉದಕಕ್ಕೆ ಪಾಲಕನೂ । **ಅಸಿನ್ವಂ**—ಶತ್ರುಗಳನ್ನು ಸೋಲಿಸಿ ಬೀಳಿಸುವವನೂ । **ವವ್ರಂ**—ಸಕಲವನ್ನೂ ಆವರಿಸುವ ಶಕ್ತಿಯುಳ್ಳವನೂ । **ಮಹಿ**—ಅಧಿಕವಾದ ಶಕ್ತಿಯುಳ್ಳವನೂ ಆದ । **ತ್ಯಂ ಚಿತ್**—ಅದೇ ವೃತ್ರನನ್ನೇ (ಯಾವಾಗ) । **ಆದತ್**—ಹಿಡಿದುಕೊಂಡನೋ ಆಗ । **ದುರ್ಗೃಣೇ**—ಸಂಗ್ರಾಮದಲ್ಲಿ । **ಮಹತಾ**—ಪ್ರಭೂತವಾದ । **ವಧೇನ**—ವಜ್ರಾಯುಧದಿಂದ । **ಅಪಾದಂ**—ಪಾದರಹಿತನೂ । **ಅತ್ರಂ**—ಪರಿಮಾಣರಹಿತನೂ । **ಮೃಧ್ರವಾಚಂ**—ಹಿಂಸಾತ್ಮಕವಾದ ವಾಕ್ಕುಳ್ಳವನೂ ಆದ ವೃತ್ರಾಸುರನನ್ನು । **ನಿ ಅವೃಣಕ್**—ಪೂರ್ಣವಾಗಿ ಹಿಂಸಿಸಿದನು

॥ ಭಾವಾರ್ಥ ॥

ಭಯಂಕರವಾದ ಬಲವುಳ್ಳ ಇಂದ್ರನು ಜಲವನ್ನಾವರಿಸಿ ಸಂಚರಿಸುವವನೂ, ಅಂತರಿಕ್ಷದಲ್ಲಿ ಮಲಗಿರುವವನೂ, ಉದಕಕ್ಕೆ ಪಾಲಕನೂ, ಶತ್ರುಗಳನ್ನು ಸೋಲಿಸಿ ಕೆಳಕ್ಕೆ ಬೀಳಿಸುವವನೂ, ಸಕಲವನ್ನೂ ಆವರಿಸುವ ಶಕ್ತಿಯುಳ್ಳವನೂ ಆದ ಅದೇ ವೃತ್ರನನ್ನೇ ಯಾವಾಗ ಹಿಡಿದುಕೊಂಡನೋ ಆಗ ಸಂಗ್ರಾಮದಲ್ಲಿ ತನ್ನ ಮಹತ್ಸ್ವರೂಪವುಳ್ಳ ವಜ್ರಾಯುಧದಿಂದ ಪಾದರಹಿತನೂ ಪರಿಮಾಣರಹಿತನೂ ಹಿಂಸಾತ್ಮಕವಾದ ವಾಕ್ಕುಳ್ಳವನೂ ಆದ ವೃತ್ರನನ್ನು ಪೂರ್ಣವಾಗಿ ಹಿಂಸಿಸಿದನು.

## English Translation

The fierce Indra seized upon him, that vast moving (Vritra), when slumbering, (after) having drunk the Soma, subduing (his foe-), and enveloping (the world), and then slew him with his great weapon in battle, footless, measureless, speechless.

---

॥ ಸಂಹಿತಾಪಾಠಃ ॥

**ಕೋ ಅಸ್ಯ ಶುಷ್ಮಂ ತವಿಷೀಂ ವರಾತ ಏಕೋ ಧನಾ ಭರತೇ ಅಪ್ರತೀತಃ ।**

**ಇಮೇ ಚಿದಸ್ಯ ಜ್ರಯಸೋ ನು ದೇವೀ ಇಂದ್ರಸ್ಯೌಜಸೋ ಭಿಯಸಾ ಜಿಹಾತೇ ॥ ೯ ॥**

॥ ಪದಪಾಠಃ ॥

ಕಃ । ಅಸ್ಯ । ಶುಷ್ಮಂ । ತವಿಷೀಂ । ವರಾತೇ । ಏಕಃ । ಧನಾ । ಭರತೇ । ಅಪ್ರತಿಽಇತಃ ।

ಇಮೇ ಇತಿ । ಚಿತ್ । ಅಸ್ಯ । ಜ್ರಯಸಃ । ನು । ದೇವೀ ಇತಿ । ಇಂದ್ರಸ್ಯ । ಓಜಸಃ । ಭಿಯಸಾ ।

ಜಿಹಾತೇ ಇತಿ ॥ ೯ ॥

॥ ಸಾಯಣಭಾಷ್ಯಂ ॥

ಅಸ್ಯೇಂದ್ರಸ್ಯ ಸಂಬಂಧಿನೀಂ ಶುಷ್ಮಂ ಶೋಷಣೀಂ ತವಿಷೀಂ ಬಲಂ ಕೋ ವರಾತೇ । ನಿವಾರಯೇತ್ ॥ ಶುಷ್ಮಶಬ್ದಸ್ಯ ಸ್ತ್ರೀಲಿಂಗವಿಶೇಷಣತ್ವೇಽಪಿ ನಿಯತಲಿಂಗತ್ವಾತ್ಪುಲ್ಲಿಂಗತ್ವಮೇವ ॥ ಅಪ್ರತೀತಃ ಕೇನಾಪ್ಯಪ್ರತಿಗತ ಇಂದ್ರ ಏಕೋಽಸಹಾಯ ಏವ ಧನಾ ಧನಾನಿ ಶತ್ರೂಣಾಂ ವಸೂನಿ ಭರತೇ । ಬಿಭರ್ತಿ ಹರತೇ ವಾ । ದೇವೀ ದೇವ್ಯೌ ದ್ಯೋತಮಾನೇ ಇಮೇ ಚಿದೇವ ದ್ಯಾವಾಪೃಥಿವ್ಯೌ ಜ್ರಯಸೋ ವೇಗವತೋಽಸ್ಯೇಂದ್ರಸ್ಯ ಸಂಬಂಧಿನ ಓಜಸೋ ಬಲಾದುದ್ಭೂತೇನ ಭಿಯಸಾ ಭಯೇನ ನು ಕ್ಷಿಪ್ರಂ ಜಿಹಾತೇ । ಗಚ್ಛತಃ । ಚಲತ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಸ್ಯ**—ಈ ಇಂದ್ರನ । **ಶುಷ್ಮಂ**—ಶತ್ರುನಾಶಕವಾದ । **ತವಿಷೀಂ**—ಬಲವನ್ನು । **ಕಃ**—ಯಾವನು ತಾನೇ । **ವರಾತೇ**—ನಿರೋಧಿಸಬಲ್ಲನು ? **ಅಪ್ರತೀತಃ**—ಅಪ್ರತಿಹತನಾದ ಇಂದ್ರನು । **ಏಕಃ**—ಅಸಹಾಯನಾಗಿಯೇ । **ಧನಾ**—ಶತ್ರುಧನಗಳನ್ನು । **ಭರತೇ**—ಭರಿಸುತ್ತಾನೆ । **ದೇವೀ**—ದೇವತಾತ್ಮರಾದ । **ಇಮೇ ಚಿತ್**—ಈ ದ್ಯಾವಾಪೃಥಿವಿಗಳೂ ಸಹ । **ಜ್ರಯಸಃ**—ವೇಗಶಾಲಿಯಾದ । **ಅಸ್ಯ ಇಂದ್ರಸ್ಯ**—ಈ ಇಂದ್ರನ । **ಓಜಸಃ**—ಶಕ್ತಿಯ । **ಭಿಯಸಾ ನು**—ಭಯದಿಂದಲೇ । **ಜಿಹಾತೇ**—ಚಲಿಸುತ್ತವೆ.

॥ ಭಾವಾರ್ಥ ॥

ಈ ಇಂದ್ರನ ಶತ್ರುನಾಶಕವಾದ ಬಲವನ್ನು ಯಾವನು ತಾನೇ ನಿರೋಧಿಸಬಲ್ಲನು ? ಅಪ್ರತಿಹತನಾದ ಇಂದ್ರನು ಅಸಹಾಯನಾಗಿಯೇ ಶತ್ರುಧನಗಳನ್ನು ಭರಿಸುತ್ತಾನೆ ದೇವತಾತ್ಮರಾದ ಈ ದ್ಯಾವಾಪೃಥಿವಿಗಳೂ ಸಹ ವೇಗಶಾಲಿಯಾದ ಈ ಇಂದ್ರನ ಶಕ್ತಿಯ ಭಯದಿಂದಲೇ ಚಲಿಸುತ್ತವೆ

## English Translation

Who may resist the withering might of that Indra : he, single and irresistible, carries off the riches (of the enemy) : these two divine (beings, heaven and earth), proceed swiftly through fear of the strength of the quiek-moving Indra.

———

॥ ಸಂಹಿತಾಪಾಠಃ ॥

ನ್ಯ॑ಸ್ಮೈ ದೇ॒ವೀ ಸ್ವಧಿ॑ತಿರ್ಜಿಹೀತ॒ ಇಂದ್ರಾ॑ಯ ಗಾ॒ತುರು॑ಶ॒ತೀವ॑ ಯೇಮೇ ।
ಸಂ ಯದೋಜೋ॑ ಯು॒ವತೇ॒ ವಿಶ್ವ॑ಮಾ॒ಭಿರನು॑ ಸ್ವ॒ಧಾವ್ನೇ॑ ಕ್ಷಿ॒ತಯೋ॑ ನಮಂತ ॥ ೧೦ ॥

॥ ಪದಪಾಠಃ ॥

ನಿ । ಅ॒ಸ್ಮೈ॒ । ದೇ॒ವೀ । ಸ್ವಽಧಿ॑ತಿಃ । ಜಿ॒ಹೀ॒ತೇ॒ । ಇಂದ್ರಾ॑ಯ । ಗಾ॒ತುಃ । ಉ॒ಶ॒ತೀಽಇ॑ವ । ಯೇ॒ಮೇ॒ ।
ಸಂ । ಯತ್ । ಓಜಃ॑ । ಯು॒ವತೇ॑ । ವಿಶ್ವಂ॑ । ಆ॒ಭಿಃ । ಅನು॑ । ಸ್ವ॒ಧಾಽವ್ನೇ॑ । ಕ್ಷಿ॒ತಯಃ॑ । ನ॒ಮಂ॒ತ॒ ॥

॥ ಸಾಯಣಭಾಷ್ಯಂ ॥

ಸ್ವಧಿತಿಃ ಸ್ವಧೃತಿಃ ಸ್ವೇನ ಧೃತಾ ದೇವೀ ದ್ಯೋತಮಾನಾ ದ್ಯೌರಸ್ಮಾ ಇಂದ್ರಾಯ ನಿ ಜಿಹೀತೇ । ನೀಚತ್ವೇನ ಯಾತಿ । ಗಾತುರ್ಭೂಮಿರುಶತೀವ ಕಾಮಯಮಾನಾ ಯೋಷಿದಿವೇಂದ್ರಾಯ ಯೇಮೇ । ಆತ್ಮಾನಂ ನಿಯಚ್ಛತಿ । ಯಥೇಷ್ಟಮಾತ್ಮಾನಂ ವಿನಿಯೋಕ್ತುಂ ಯೋಗ್ಯಾ ಭವತೀತ್ಯರ್ಥಃ । ಯದ್ಯದೇಂದ್ರೋ ವಿಶ್ವಂ ಸಮಸ್ತಮೋಜೋ ಬಲಮಾಭಿಃ ಪ್ರಜಾಭಿಃ ಸಂ ಯುವತೇ ಸಂಯೋಜಯತಿ । ಇಂದ್ರಃ ಸ್ವಕೀಯಂ ಬಲಂ ಸರ್ವಾಸು ಪ್ರಜಾಸು ನಿಹಿತವಾನಿತ್ಯರ್ಥಃ । ಅನು ಆನುಕೂಲ್ಯೇನ ವರ್ತಮಾನಾಃ ಕ್ಷಿತಯೋ ಮನುಷ್ಯಾಃ । ಕ್ಷಿತಯ ಇತಿ ಮನುಷ್ಯನಾಮೈತತ್ । ಸ್ವಧಾವ್ನೇ ಬಲವತ ಇಂದ್ರಾಯ ನಮಂತ । ಸಂನಮಂತಿ । ಪ್ರಹ್ವೀಭವಂತಿ ॥

॥ ಪ್ರತಿಪದಾರ್ಥ ॥

**ಸ್ವಧಿತಿಃ**—ಸ್ವಶಕ್ತಿಯಿಂದಲೇ ತನ್ನ ಧಾರಣವನ್ನು ಮಾಡಿಕೊಳ್ಳತಕ್ಕವಳೂ । **ದೇವೀ**—ಪ್ರಕಾಶಮಾನಳೂ ಆದ ದ್ಯುಲೋಕಾಧಿದೇವತೆಯು । **ಅಸ್ಮೈ**—ಇಂದ್ರನ ವಿಷಯದಲ್ಲಿ । **ನಿ ಜಿಹೀತೇ**—ವಿನೀತಳಾಗಿರುತ್ತಾಳೆ । **ಗಾತುಃ**—ಪೃಥ್ವಿಯು । **ಉಶತೀವ**—ಪ್ರೇಮಪೂರಿತಳಾದ ಸ್ತ್ರೀಯಂತೆ । **ಇಂದ್ರಾಯ**—ಇಂದ್ರನ ಸಾಹಚರ್ಯಕ್ಕೆ । **ಯೇಮೇ**—(ತನ್ನ ಆತ್ಮವನ್ನು) ಅರ್ಪಿಸುತ್ತಾಳೆ । **ಯತ್**—ಯಾವಾಗ । (ಇಂದ್ರಃ—ಇಂದ್ರನು) **ವಿಶ್ವಂ**—ಸಮಸ್ತವಾದ । **ಓಜಃ**—ಬಲವನ್ನೂ । **ಆಭಿಃ**—ಸಕಲ ಪ್ರಜೆಗಳೊಡನೆಯೂ । **ಸಂ ಯುವತೇ**—ಒಟ್ಟುಗೂಡಿಸುವನೋ (ಆಗ) । **ಅನು**—ಇಂದ್ರನ ಇಷ್ಟಾನುಸಾರವಾಗಿ ವರ್ತಿಸುವ । **ಕ್ಷಿತಯಃ**—ಮಾನವರು । **ಸ್ವಧಾವ್ನೇ**—ಬಲಶಾಲಿಯಾದ ಇಂದ್ರನಿಗೆ । **ನಮಂತ**—ವಿನಯದಿಂದ ನಮಸ್ಕರಿಸುತ್ತಾರೆ.

॥ ಭಾವಾರ್ಥ ॥

ಸ್ವಶಕ್ತಿಯಿಂದಲೇ ತನ್ನ ಧಾರಣವನ್ನು ಮಾಡಿಕೊಳ್ಳತಕ್ಕವಳೂ ಪ್ರಕಾಶಮಾನಳೂ ಆದ ದ್ಯುಲೋಕಾಧಿದೇವತೆಯು ಇಂದ್ರನಲ್ಲಿ ವಿನೀತಳಾಗಿರುತ್ತಾಳೆ. ಪೃಥ್ವಿಯು ಪ್ರೇಮಪೂರಿತಳಾದ ಸ್ತ್ರೀಯಂತೆ ಇಂದ್ರನ ಸಾಹಚರ್ಯಕ್ಕೆ

ತನ್ನನ್ನೇ ಅರ್ಪಿಸುತ್ತಾಳೆ ಯಾವಾಗ ಇಂದ್ರನು ಸಮಸ್ತವಾದ ಬಲವನ್ನೂ ಸಕಲ ಪ್ರಜೆಗಳೊಡನೆಯೂ ಒಟ್ಟು ಗೂಡಿಸುವನೋ ಆಗ ಇಂದ್ರನ ಇಚ್ಛಾನುವರ್ತಿಗಳಾದ ಸಕಲ ಮಾನವರೂ ಬಲಶಾಲಿಯಾದ ಇಂದ್ರನಿಗೆ ವಿನಯದಿಂದ ನಮಸ್ಕರಿಸುತ್ತಾರೆ

English Translation

The divine, self-sustaining (heaven) comes to him; the moving (earth), like a loving (wife), resigns herself to Indra : when he shares all his vigour with these (his people), then in due succession, men offer reverence to the potent Indra

॥ ಸಂಹಿತಾಪಾಠಃ ॥

ಏಕಂ ನು ತ್ವಾ ಸತ್ಪತಿಂ ಪಾಂಚಜನ್ಯಂ ಜಾತಂ ಶೃಣೋಮಿ ಯಶಸಂ ಜನೇಷು ।
ತಂ ಮೇ ಜಗೃಭ್ರ ಆಶಸೋ ನವಿಷ್ಠಂ ದೋಷಾ ವಸ್ತೋರ್ಹವಮಾನಾಸ ಇಂದ್ರಂ ॥೧೧ ॥

॥ ಪದಪಾಠಃ ॥

ಏಕಂ । ನು । ತ್ವಾ । ಸತ್ऽಪತಿಂ । ಪಾಂಚ್ಯಽಜನ್ಯಂ । ಜಾತಂ । ಶೃಣೋಮಿ । ಯಶಸಂ । ಜನೇಷು ।
ತಂ । ಮೇ । ಜಗೃಭ್ರೇ । ಆಽಶಸಃ । ನವಿಷ್ಠಂ । ದೋಷಾ । ವಸ್ತೋಃ । ಹವಮಾನಾಸಃ । ಇಂದ್ರಂ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಾ ತ್ವಾಮೇಕಂ ಮುಖ್ಯಮೇವ ಜನೇಷು ಸರ್ವೇಷು ಮನುಷ್ಯೇಷು ಮಧ್ಯೇಽಹಂ ಮಂತ್ರದ್ರಷ್ಟಾ ಶೃಣೋಮ್ಯೃಷಿಮುಖ್ಯೇಭ್ಯಃ । ಕೀದೃಶಂ । ಸತ್ಪತಿಂ ಸತಾಂ ಸಾಧೂನಾಂ ಪಾಲಕಂ ಪಾಂಚಜನ್ಯಂ ಪಂಚಜನೇಭ್ಯೋ ಮನುಷ್ಯೇಭ್ಯೋ ಹಿತಂ ಜಾತಮುತ್ಪನ್ನಂ ಯಶಸಂ ಯಶೋಯುಕ್ತಂ ದೋಷಾ ಕ್ಷಪಾಯಾಂ ವಸ್ತೋರ್ವಾಸರೇ ಚ ಹವಮಾನಾಸಃ ಸ್ತುವಂತ ಆಶಸಃ ಕಾಮಾನಾಂ ಶಂಸಮಾನಾ ಮೇ ಮದೀಯಾಃ ಪ್ರಜಾ ನವಿಷ್ಠಮತಿಶಯೇನ ಸ್ತುತ್ಯಂ ತಮಿಂದ್ರಂ ಜಗೃಭ್ರೇ । ಗೃಹ್ಣಂತು । ಸ್ವೀಕುರ್ವಂತು ॥

॥ ಪ್ರತಿಪದಾರ್ಥ ॥

**ಸತ್ಪತಿಂ**—ಸಜ್ಜನರ ಪಾಲಕನೂ । **ಪಾಂಚಜನ್ಯಂ**—ಐದು ವಿಧವಾದ ಜನರಿಗೂ ಹಿತಕರನಾಗಿ । **ಜಾತಂ**—ಉತ್ಪನ್ನನಾದವನೂ । **ಯಶಸಂ**—ಯಶೋಯುಕ್ತನೂ ಆದ । **ತ್ವಾ**—ನಿನ್ನನ್ನು । **ಜನೇಷು**—ಮಾನವರಲ್ಲೆಲ್ಲಾ ।

**ಏಕಂ ನು**—ಅತಿ ಶ್ರೇಷ್ಠನಾದ ಪ್ರಧಾನನನ್ನಾಗಿ । **ಶೃಣೋಮಿ**—ಕೇಳಿದ್ದೇನೆ । **ದೋಷಾ**—ರಾತ್ರಿಯಲ್ಲೂ । **ವಸ್ತೋಃ** - ಹಗಲಿನಲ್ಲಿಯೂ । **ಹವಮಾನಾಸಃ**—(ನಿನ್ನನ್ನು) ಸ್ತುತಿಸುವವರೂ । **ಆಶಾಸಃ**—ಇಷ್ಟಾರ್ಥಗಳನ್ನು ಆಶಂಸಿಸುವವರೂ ಆದ । **ಮೇ**—ನನ್ನ ಪುತ್ರಾದಿಗಳು । **ನವಿಷ್ಠಂ**—ಅತಿಶಯವಾಗಿ ಸ್ತುತ್ಯನಾದ । **ತಂ ಇಂದ್ರಂ**—ಆ ಇಂದ್ರನನ್ನು । **ಜಗೃಭ್ರೇ**—ಸ್ವೀಕರಿಸಲಿ.

॥ ಭಾವಾರ್ಥ ॥

ಎಲೈ ಇಂದ್ರನೇ, ಸಜ್ಜನರ ಪಾಲಕನೂ, ಐದು ವಿಧವಾದ ಜನರಿಗೂ ಹಿತಕರನಾಗಿ ಉತ್ಪನ್ನನಾದವನೂ, ಯಶೋಯುಕ್ತನೂ ಆದ ನಿನ್ನನ್ನು ಮಾನವರಲ್ಲೆಲ್ಲಾ ಅತಿ ಶ್ರೇಷ್ಠನಾದ ಪ್ರಧಾನನೆಂದು ಕೇಳಿದ್ದೇನೆ. ಹಗಲೂ ರಾತ್ರಿಯೂ ನಿನ್ನನ್ನು ಸ್ತುತಿಸುವವರೂ, ಇಷ್ಟಾರ್ಥಗಳನ್ನು ಆಶಂಸಿಸುವವರೂ ಆದ ನನ್ನ ಪುತ್ರಾದಿಗಳು ಅತಿಶಯವಾಗಿ ಸ್ತುತ್ಯನಾದ ಆ ಇಂದ್ರನನ್ನು ಸ್ವೀಕರಿಸಲಿ

English Translation

Verily I hear of you as chief amongst men, the protector of the good friendly to the five classes of beings, the begotten, the renowned ; may my (progeny), representing (their wishes), and uttering his praises night and, day, propitiate the glorified Indra.

॥ ವಿಶೇಷವಿಷಯಗಳು ॥

**ಪಾಂಚಜನ್ಯಂ**—**ಗಂಧರ್ವಾ ಅಪ್ಸರಸೋ ದೇವಾ ಅಸುರಾ ರಕ್ಷಾಂಸಿ ಪಂಚಜನಾಃ । ನಿಷಾದಪಂಚಮಾಶ್ಚತ್ವಾರೋ ವರ್ಣಾ ವಾ** । ಗಂಧರ್ವರೂ, ಅಪ್ಸರಸ್ಸುಗಳೂ, ದೇವತೆಗಳೂ, ಅಸುರರೂ ಮತ್ತು ರಾಕ್ಷಸರೂ ಸೇರಿ ಐದು ಗುಂಪುಗಳು ಅಥವಾ ಐದನೆಯದಾದ ನಿಷಾದರ ಎಂದರೆ ಬೇಡರ ಗುಂಪಿನೊಂದಿಗೆ ಸೇರಿದ ನಾಲ್ಕು ವರ್ಣದ ಜನರು ಎಂದು ಸಾಯಣರ ವಿವರಣೆಯಿದೆ. ಈ ವರ್ಗೀಕರಣದಲ್ಲಿ ಅಭಿಪ್ರಾಯಭೇದಗಳಿವೆ ನಿರುಕ್ತಕಾರರು ತಮ್ಮ ಮತವೇನೆಂದು ಹೇಳದೇ ಇತರರ ಅಭಿಪ್ರಾಯಗಳನ್ನು ಮಾತ್ರ ಉದಹರಿಸಿರುವರು

> **ಪಂಚಜನಾ ( ಮಮ ಹೋತ್ರಂ ಜುಷಧ್ವಂ ) ಗಂಧರ್ವಾಃ ಪಿತರೋ ದೇವಾ ಅಸುರಾ ರಕ್ಷಾಂಸೀತ್ಯೇಕೇ । ಚತ್ವಾರೋ ವರ್ಣಾ ನಿಷಾದಃ ಪಂಚಮ ಇತ್ಯೌಪಮನ್ಯವಃ ।**
> (ನಿ. ೩-೮)

ಗಂಧರ್ವರು, ಪಿತೃಗಳು, ದೇವತೆಗಳು, ಅಸುರರು, ರಾಕ್ಷಸರು ಎಂದು ಐದು ವಿಧವಾದ ಜನರೆಂದು ಕೆಲವರೂ ಬ್ರಾಹ್ಮಣಾದಿ ನಾಲ್ಕು ವರ್ಣದವರೊಂದಿಗೆ ನಿಷಾದರೆಂಬ ಐದನೆಯ ಗುಂಪೂ ಸೇರಿ **ಪಂಚ**ಜನರೆಂದು ಉಪಮನ್ಯುವೇ ಮುಂತಾದವರೂ ಅಭಿಪ್ರಾಯಪಡುವರೆಂದು ಇತರರ ಅಭಿಪ್ರಾಯಗಳನ್ನು ಮಾತ್ರ ಹೇಳಿರುವರು.

ಹಿಂದೆ ದೇವತೆಗಳೆಲ್ಲರೂ ಅಗ್ನಿಯನ್ನು ಕುರಿತು ತಮಗಾಗಿ ಯಜ್ಞದಲ್ಲಿ ಅರ್ಪಿತವಾದ ಹವಿಸ್ಸನ್ನು ಸ್ವೀಕರಿಸಿ ಎಲ್ಲರಿಗೂ ಹಂಚಬೇಕೆಂದು ಪ್ರಾರ್ಥಿಸಿದಾಗ ಅಗ್ನಿಯು ಅದಕ್ಕೆ ಒಪ್ಪಿಕೊಂಡು;

> **ತದದ್ಯ ವಾಚಃ ಪ್ರಥಮಂ ಮಸೀಯ ಯೇನಾಸುರಾँ ಅಭಿ ದೇವಾ ಅಸಾಮ ।**
> **ಊರ್ಜಾದ ಉತ ಯಜ್ಞಿಯಾಸಃ ಪಂಚ ಜನಾ ಮಮ ಹೋತ್ರಂ ಜುಷಧ್ವಂ ।**
> (ಋ. ಸಂ. ೧೦-೫೩-೪).

**ಪಂಚಜನರೂ** ಈ ಹವಿಸ್ಸನ್ನು ಭೋಗಿಸಲಿ ಎಂದು ಉತ್ತರವನ್ನು ಕೊಟ್ಟರು. ಈ ವಾಕ್ಯವನ್ನು ಬೃಹದ್ದೇವತಾ ಕಾರರು ಉದಹರಿಸಿ **ಪಂಚಜನರು** ಯಾರು ಎಂದು ಅಭಿಪ್ರಾಯಭೇದಗಳನ್ನು ತೋರಿಸಿ ಚರ್ಚಿಸಿದ್ದಾರೆ.

**ಪ್ರತ್ಯುವಾಚಾಥ ತಾನಗ್ನಿರ್ವಿಶ್ವೇದೇವಾ ಯದೂಚ ಮಾಂ ।**
**ತತ್ಕರಿಷ್ಯೇ ಜುಷಂತಾಂ ತು ಹೋತ್ರಂ ಪಂಚಜನಾ ಮಮ ॥**

(ಬೃ. ದೇ. ೭-೬೬)

ಎಂಬ ಶ್ಲೋಕದಲ್ಲಿ ಅಗ್ನಿಯು ದೇವತೆಗಳಿಗೆ ಕೊಟ್ಟ ಉತ್ತರವನ್ನು ತಿಳಿಸಿ ಅನಂತರ **ಪಂಚಜನಶಬ್ದವನ್ನು** ವಿವರಿಸುತ್ತಾರೆ.

**ಶಾಲಾಮುಖ್ಯಃ ಪ್ರಣೀತಶ್ಚ ಪುತ್ರೋ ಗೃಹಪತೇಶ್ಚ ಯಃ ।**
**ಉತ್ತರೋ ದಕ್ಷಿಣಶ್ಚಾಗ್ನಿರೇತೇ ಪಂಚಜನಾಃ ಸ್ಮೃತಾಃ ॥**

(ಬೃ. ದೇ. ೭-೬೭)

ಎಂದರೆ ಶಾಲೆಯ ಪ್ರವೇಶಭಾಗದಲ್ಲಿರುವ ಅಗ್ನಿಯೂ, ಪ್ರಣೀತವಾದ ಆಹವನೀಯಾಗ್ನಿಯೂ ಯಜಮಾನನ **ಪುತ್ರ** ಭೂತನಾದ ಗಾರ್ಹಪತ್ಯಾಗಿಯೂ, ದಕ್ಷಿಣೋತ್ತರಾಗ್ನಿಗಳೂ ಸೇರಿ ಈ ಐದು ವಿಧವಾದ ಅಗ್ನಿಗಳೂ ಐದು ಬಗೆಯ ವರ್ಗಗಳೆಂದು ಸಾಂಪ್ರದಾಯಿಕವಾದ ವ್ಯವಹಾರ. ಇದೊಂದು ಮತ. ಅಲ್ಲದೆ,

**ಮನುಷ್ಯಾಃ ಪಿತರೋ ದೇವಾ ಗಂಧರ್ವೋರಗರಾಕ್ಷಸಾಃ ।**
**ಗಂಧರ್ವಾಃ ಪಿತರೋ ದೇವಾ ಅಸುರಾ ಯಕ್ಷರಾಕ್ಷಸಾಃ ॥**

(ಬೃ. ದೇ. ೭-೬೮)

ಮೊದಲನೆಯ ಅಭಿಪ್ರಾಯದಂತೆ **ಉರಗ ರಾಕ್ಷಸರು** ಒಂದು ಗುಂಪು, ಎರಡನೆಯದಲ್ಲಿ **ಯಕ್ಷರಾಕ್ಷಸರು ಒಂದು** ಗುಂಪು

**ಯಾಸ್ಕೌಪಮನ್ಯವಾವೇತಾನಾಹತುಃ ಪಂಚ ವೈ ಜನಾನ್ ।**
**ನಿಷಾದಪಂಚಮಾನ್ವರ್ಣಾ ಮನ್ಯತೇ ಶಾಕಟಾಯನಃ ॥**

(ಬೃ. ದೇ. ೭೬-೬೯)

ಯಾಸ್ಕರ ಮತವು ಮೊದಲನೆಯದೆಂದು ಬೃಹದ್ದೇವತಾಕಾರರು ಈ ವಾಕ್ಯದಲ್ಲಿ ಹೇಳಿರುವರು. ಆದರೆ ನಿರುಕ್ತದಲ್ಲಿ ಇತರರ ಮತಗಳನ್ನು ಹೇಳಿದೆಯೇ ಹೊರತು ಯಾಸ್ಕರ ಮತವನ್ನು ನಿಷ್ಕರ್ಷವಾಗಿ ತಿಳಿಸಿಲ್ಲ. ಪ್ರಾಯಃ ಅದನ್ನೇ ಅವರೂ ಅಂಗೀಕರಿಸಿರಬಹುದು.

**ಋತ್ವಿಜೋ ಯಜಮಾನಂ ಚ ಶಾಕಪೂಣಿಸ್ತು ಮನ್ಯತೇ ।**

(ಬೃ. ದೇ. ೭-೭೦)

ಹೋತ್ರಾದಿ ನಾಲ್ಕು ಋತ್ವಿಕ್ಕುಗಳೂ, ಯಜಮಾನನೂ ಸೇರಿ ಐದು ಗುಂಪೆಂದು ಶಾಕಪೂಣಿಯವರ ಮತ.

**ಚಕ್ಷುಃ ಶ್ರೋತ್ರಂ ಮನೋ ವಾಕ್ ಚ ಪ್ರಾಣಶ್ಚೇತ್ಯಾತ್ಮವಾದಿನಃ ।**
**ಗಂಧರ್ವಾಪ್ಸರಸೋ ದೇವಾ ಮನುಷ್ಯಾಃ ಪಿತರಸ್ತಥಾ ॥**
**ಸರ್ಪಾಶ್ಚ ಬ್ರಾಹ್ಮಣೇ ಚೈವ ಶ್ರೂಯಂತೇ ಹ್ಯೈತರೇಯಕೇ ।**

ಚಕ್ಷುಸ್ಸು, ಶ್ರೋತ್ರ, ಮನಸ್ಸು, ವಾಕ್ಕು ಮತ್ತು ಪ್ರಾಣ ಈ ಐದೂ ಪಂಚ ಜನರೆಂದು ಆಧ್ಯಾತ್ಮಿಕವಾದಿಗಳ ಮತ ಗಂಧರ್ವಾದಿಗಳೆಂದು ಐತರೇಯ ಬ್ರಾಹ್ಮಣದಲ್ಲಿ ವಿವರಿಸಿದೆ. (ಐ ಬ್ರಾ. ೩-೩೧-೫) ಇಂತಹ ಪಂಚಜನರೂ ಹವಿಸ್ಸನ್ನು ಭೋಗಿಸಲಿ ಎಂದು ಅಗ್ನಿಯು ದೇವತೆಗಳಿಗೆ ಉತ್ತರವನ್ನು ಕೊಟ್ಟಿದ್ದಾನೆ, ಎಂದು ಬೃಹದ್ದೇವತೆಯ ವಿವರಣೆಯಲ್ಲಿಯೂ ಅಭಿಪ್ರಾಯ ಭೇದಗಳು ಉದಹರಿಸಲ್ಪಟ್ಟಿವೆ.

ಪಂಚ ಜನಾಃ ಮತ್ತು ಪಂಚಕೃಷ್ಟೀಃ ಎಂಬ ಶಬ್ದಗಳು ಋಗ್ವೇದದಲ್ಲಿ ಅನೇಕಕಡೆ ಇವೆ—

**ತದದ್ಯ ವಾಚಃ ಪ್ರಥಮಂ ಮಸೀಯ ಯೇನಾಸುರಾँ ಅಭಿ ದೇವಾ ಅಸಾಮ ।**
**ಊರ್ಜಾದ ಉತ ಯಜ್ಞಿಯಾಸಃ ಪಂಚ ಜನಾ ಮಮ ಹೋತ್ರಂ ಜುಷಧ್ವಂ ॥**

(ಋ ಸಂ. ೧೦-೫೩-೪)

**ಪಂಚ ಜನಾ ಮಮ ಹೋತ್ರಂ ಜುಷಂತಾಂ ಗೋಜಾತಾ ಉತ ಯೇ ಯಜ್ಞಿಯಾಸಃ ।**

(ಋ ಸಂ. ೧೦-೫೩-೫)

**ಸದ್ಯಶ್ಚಿದ್ಯಃ ಶವಸಾ ಪಂಚಕೃಷ್ಟೀಃ ಸೂರ್ಯ ಇವ ಜ್ಯೋತಿಷಾಪಸ್ತತಾನ ॥**

(ಋ. ಸಂ ೧೦-೧೭೮-೩)

ಈ ಋಕ್ಕುಗಳಲ್ಲಿರುವ ಪಂಚಜನಾಃ ಮತ್ತು ಪಂಚಕೃಷ್ಟೀಃ ಎಂಬ ಶಬ್ದಗಳಿಗೆ ಯಾಸ್ಕರು ತಮ್ಮ ನಿರುಕ್ತದಲ್ಲಿ ಈರೀತಿ ವಿವರಣೆಮಾಡಿರುವರು—

**ಪಂಚ ಜನಾ ಮಮ ಹೋತ್ರಂ ಜುಷಧ್ವಂ ಗಂಧರ್ವಾಃ ಪಿತರೋ ದೇವಾ ಅಸುರಾ ರಕ್ಷಾಂಸೀತ್ಯೇಕೇ । ಚತ್ವಾರೋ ವರ್ಣಾ ನಿಷಾದಃ ಪಂಚಮ ಇತ್ಯೌಪಮನ್ಯವಃ । ನಿಷಾದಃ ಕಸ್ಮಾನ್ನಿಷದನೋ ಭವತಿ ನಿಷಣ್ಣಮಸ್ಮಿನ್ ಪಾಪಕಮಿತಿ ನೈರುಕ್ತಾಃ ಇತಿ ॥**

ಎಂದರೆ, ಪಂಚಜನರೆಂದರೆ, ಗಂಧರ್ವರು, ಪಿತೃಗಳು, ದೇವತೆಗಳು, ಅಸುರರು, ರಾಕ್ಷಸರು ಎಂದು ಐದು ವಿಧ ಜನರೆಂದು ಕೆಲವರು ಹೇಳುವರು ಬ್ರಾಹ್ಮಣಾದಿ ನಾಲ್ಕುವರ್ಣದವರೂ ನಿಷಾದ ಎಂಬ ಬೇಡರ ಜಾತಿಗೆ ಸೇರಿದ ಜನರೂ ಸೇರಿ ಐದು ವಿಧ ಜನರೆಂದು ಉಪಮನ್ಯು ಮುಂತಾದವರ ಮತವು. (ಇದನ್ನೇ ಸಾಯಣರು ಅನುಮೋದಿಸಿರುವರು). ನಿಷಾದರೆಂದರೆ ಪ್ರಾಣಿಗಳನ್ನು ಕೊಲ್ಲುವವರು ಅಥವಾ ಇವರಲ್ಲಿ ಪಾಪವು ತುಂಬಿರುವುದರಿಂದ ಇವರಿಗೆ ನಿಷಾದರೆಂದು ನೈರುಕ್ತಕಾರರು ಹೇಳುವರು. ಇದಲ್ಲದೆ ಆ ಕಾಲದಲ್ಲಿ ಐದು ಮುಖ್ಯವಾದ ಪಂಗಡಗಳು (tribes) ಇದ್ದಿರಬಹುದು. ಕವಿಯು ಈ ಅಭಿಪ್ರಾಯವನ್ನೇ ಇಟ್ಟುಕೊಂಡು **ಪಂಚ ಕ್ಷಿತೀನಾಂ** ಎಂದು ಹೇಳಿರಬಹುದು. ಹೇಗಾದರೂ ಈ ವಿಚಾರದಲ್ಲಿ ನಿರುಕ್ತಕಾರರಾದ ಯಾಸ್ಕರ ಕಾಲದಲ್ಲಿಯೂ ಸಹ ಅಭಿಪ್ರಾಯಭೇದ ವಿದ್ದಿತೆಂಬುವುದು ಸ್ಪಷ್ಟವಾಗಿದೆ

॥ ಸಂಹಿತಾಪಾಠಃ ॥

ಏವಾ ಹಿ ತ್ವಾಮೃತುಥಾ ಯಾತಯಂತಂ ಮಘಾ ವಿಪ್ರೇಭ್ಯೋ ದದತಂ ಶೃಣೋಮಿ ।
ಕಿಂ ತೇ ಬ್ರಹ್ಮಾಣೋ ಗೃಹತೇ ಸಖಾಯೋ ಯೇ ತ್ವಾಯಾ ನಿದಧುಃ ಕಾಮಮಿಂದ್ರ ॥ ೧೨ ॥

॥ ಪದಪಾಠಃ ॥

ಏವ । ಹಿ । ತ್ವಾಂ । ಋತುಽಥಾ । ಯಾತಯಂತಂ । ಮಘಾ । ವಿಪ್ರೇಭ್ಯಃ । ದದತಂ । ಶೃಣೋಮಿ ।
ಕಿಂ । ತೇ । ಬ್ರಹ್ಮಾಣಃ । ಗೃಹತೇ । ಸಖಾಯಃ । ಯೇ । ತ್ವಾಽಯಾ । ನಿಽದಧುಃ । ಕಾಮಂ । ಇಂದ್ರ ॥

॥ ಸಾಯಣಭಾಷ್ಯಂ ॥

ಏವ್ಯೈವಮುಕ್ತಪ್ರಕಾರೇಣ ಹಿ ಋತುಥಾ ಕಾಲೇ ಕಾಲೇ ಯಾತಯಂತಂ ಜಂತೂನ್ಪ್ರೇರಯಂತಂ ಹೇ ಇಂದ್ರ ತ್ವಾಂ ವಿಪ್ರೇಭ್ಯಃ ಸ್ತೋತೃಭ್ಯೋ ಮಘಾ ಮಘಾನಿ ಧನಾನಿ ದದತಂ ಯಚ್ಛಂತಂ ಶೃಣೋಮಿ । ನಿಶಾಮಯಾಮಿ । ಏತನ್ಮೃಷೈವ ಪ್ರತಿಭಾತಿ । ಹೇ ಇಂದ್ರ ತ್ವಾಯಾ ತ್ವಯಿ ಯೇ ಸ್ತೋತಾರಃ ಕಾಮಂ ಸ್ವಕೀಯಾಭಿಲಾಷಂ ನಿದಧುಃ ನ್ಯಕ್ಷಿಪನ್ ಬ್ರಹ್ಮಾಣೋ ಬೃಹಂತಸ್ತೇ ತ್ವದೀಯಾಃ ಸಖಾಯಃ ಸ್ತೋತಾರಃ ಕಿಂ ಗೃಹತೇ । ತ್ವತ್ತಃ ಕಿಂ ಗೃಹ್ಣಂತೇ । ಋಷಿಃ ಸ್ವಕೀಯಾಭಿಲಾಷಪ್ರಾಪ್ತಿವಿಲಂಬನಾದೇವಮುಕ್ತವಾನಿತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ಏವ—ಇದೇ ಪ್ರಕಾರದಲ್ಲಿ । **ಋತುಥಾ**—ಆಯಾ ಋತುಕಾಲಗಳಲ್ಲಿ । **ಯಾತಯಂತಂ**—ಜನರನ್ನು (ತತ್ತತ್ಕರ್ಮಗಳಿಗೆ) ಪ್ರಚೋದಿಸುವವನೂ । **ವಿಪ್ರೇಭ್ಯಃ**—ಸ್ತೋತೃಗಳಿಗೆ । **ಮಘಾ**—ಧನಗಳನ್ನು **ದದತಂ**—ಕೊಡುವವನೂ ಆದ । **ತ್ವಾ**—ನಿನ್ನ ವಿಷಯದಲ್ಲಿ । **ಶೃಣೋಮಿ**—(ತಿಳಿದವರಿಂದ) ಕೇಳಿದ್ದೇನೆ (ಎಲೈ ಇಂದ್ರನೇ) । **ತ್ವಾಯಾ**—ನಿನ್ನಲ್ಲಿ । **ಯೇ**—ಯಾವ ನಿನ್ನ ಸ್ತೋತೃಗಳು । **ಕಾಮಂ**—ತನ್ನ ಅಭೀಷ್ಟಗಳನ್ನು । **ನಿದಧುಃ**—ಇಡುವರೋ । **ಬ್ರಹ್ಮಾಣಃ**—ಮಹತ್ತ್ವರೂಪವುಳ್ಳವರೂ । **ತೇ**—ನಿನ್ನ ಸಂಬಂಧಿಗಳೂ ಆದ । **ಸಖಾಯಃ**—ಸ್ತೋತೃಗಳು । **ಕಿಂ ಗೃಹ್ಣತೇ**—(ನಿನ್ನಿಂದ) ಏನನ್ನು ಪಡೆಯಬಲ್ಲರು ?

॥ ಭಾವಾರ್ಥ ॥

ಎಲೈ ಇಂದ್ರನೇ, ನಿಯತವಾಗಿ ಜನರನ್ನು ಆಯಾ ಋತುಕಾಲಗಳಲ್ಲಿ ಆಯಾ ಕರ್ಮಗಳಿಗೆ ಪ್ರಚೋದಿಸುವವನೂ, ಸ್ತೋತೃಗಳಿಗೆ ಧನವನ್ನು ಕೊಡುವವನೂ ಆದ ನಿನ್ನ ವಿಷಯವನ್ನು ನಾನು ತಿಳಿದವರಿಂದ ಕೇಳಿದ್ದೇನೆ.

ಯಾವ ನಿನ್ನ ಸ್ತೋತೃಗಳು ತಮ್ಮ ಅಭೀಷ್ಟವನ್ನು ನಿನ್ನಲ್ಲಿಡುವರೋ, ಮಹತ್ತ್ವವನ್ನರಿತವರೂ ಮತ್ತು ನಿನ್ನ ಸಂಬಂಧಿಗಳೂ ಆದ ಆ ಸ್ತೋತೃಗಳು ನಿನ್ನಿಂದ ಏನನ್ನು ಪಡೆಯಬಲ್ಲರು ?

## English Translation

I hear of you influencing (creatures) according to the season, and giving riches to the pious; but what do your devoted friends ( obtain ), who have entrusted their desires, Indra, to you ?

---

**ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।**
**ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥**

**ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕ ಶ್ರೀವೀರಬುಕ್ಕಭೂಪಾಲ-**
**ಸಾಮ್ರಾಜ್ಯಧುರಂಧರೇಣ ಸಾಯಣಾಮಾತ್ಯೇನ ವಿರಚಿತೇ ಮಾಧವೀಯೇ ವೇದಾರ್ಥ-**
**ಪ್ರಕಾಶೇ ಋಕ್ಸಂಹಿತಾಭಾಷ್ಯೇ ಚತುರ್ಥಾಷ್ಟಕೇ ಪ್ರಥಮೋಽಧ್ಯಾಯಃ**
**॥ ಸಮಾಪ್ತಃ ॥**

ಶ್ರೀ

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ಚತುರ್ಥಾಷ್ಟಕದಲ್ಲಿ
ಮೊದಲನೆಯ ಅಧ್ಯಾಯವು ಸಮಾಪ್ತವಾದುದು.

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ॥

॥ ಶುಭಂ ಭೂಯಾತ್ ॥

॥ ಮಂಗಳಂ ॥

॥ ಶ್ರೀ ॥

॥ ಶ್ರೀ ಮಹಾಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

## ಸಾಯಣಭಾಷ್ಯಸಹಿತಾ

# ಋಗ್ವೇದಸಂಹಿತಾ

## ॥ ಚತುರ್ಥಾಷ್ಟಕೇ ದ್ವಿತೀಯೋಽಧ್ಯಾಯಃ ॥

## ॥ ನಾಲ್ಕನೆಯ ಅಷ್ಟಕದಲ್ಲಿ ಎರಡನೆಯ ಅಧ್ಯಾಯವು ॥

## ಐದನೆಯ ಮಂಡಲದಲ್ಲಿ ಮೂವತ್ತಮೂರನೆಯ ಸೂಕ್ತವು.

### ಪೀಠಿಕೆ.

ನಾಲ್ಕನೇ **ಅಷ್ಟಕದ** ಎರಡನೇ ಅಧ್ಯಾಯದ ಈ ಪ್ರಕರಣದಲ್ಲಿ ಐದನೇ ಮಂಡಲದ **೩೩ನೇ ಸೂಕ್ತದಿಂದ** ೪೬ನೇ ಸೂಕ್ತದ ವರೆಗಿನ ಒಟ್ಟು ೧೪ ಸೂಕ್ತಗಳಿವೆ. ಈ ಪ್ರಕರಣವನ್ನು ಸ್ಥೂಲವಾಗಿ ಎರಡು ಭಾಗ ಮಾಡಬಹುದು. ಮೊದಲನೆಯದಾಗಿ, **ಐಂದ್ರಾಣಿ ದ್ವಾದಶ** (ಬೃ. ದೇ. ೫–೨೭) ೫ನೇ ಮಂಡಲದ ೨೯ನೇ ಸೂಕ್ತದಿಂದ ೪೦ನೇ ಸೂಕ್ತದವರೆಗೆ ೧೨ ಐಂದ್ರಸೂಕ್ತಗಳು. ಅವುಗಳಲ್ಲಿ ಪ್ರಕೃತವಾದ ಅಧ್ಯಾಯದ ೮ ಸೂಕ್ತಗಳು ಎಂದರೆ ೪೦ನೇ ಸೂಕ್ತದ ವರೆಗೆ ಸೇರಿಕೊಳ್ಳುತ್ತವೆ. ಎರಡನೆಯದಾಗಿ,

**ಕೋ ನು ವಾಂ ವೈಶ್ವದೇವಾನಿ ಏಕಾದಶ ಪರಾಣ್ಯತಃ ।**
(ಬೃ. ದೇ ೫-೩೬)

“ **ಕೋ ನು ವಾಂ** ” ಎಂಬ ೪೧ನೇ ಸೂಕ್ತದಿಂದ ೫೧ನೇ ಸೂಕ್ತದವರೆಗಿನ ಒಟ್ಟು ೧೧ **ವೈಶ್ವದೇವಸೂಕ್ತಗಳು.** **ಅವುಗಳಲ್ಲಿ ಪ್ರಕೃತವಾದ ಅಧ್ಯಾಯದ** ೬ ಸೂಕ್ತಗಳು ಸೇರಿಕೊಳ್ಳುತ್ತದೆ. ಎಂದರೆ, ೮ ಐಂದ್ರಸೂಕ್ತಗಳು ಮತ್ತು

ಉಳಿದ ೬ ವೈಶ್ವದೇವಸೂಕ್ತಗಳು ಎಂದು ಸ್ಥೂಲವಾಗಿ ವಿಂಗಡಿಸಬಹುದು ಆದರೆ ಇದೇ ಸೂಕ್ತಗಳಲ್ಲಿ ಆನುಷಂಗಿಕ ವಾಗಿ ಪ್ರಶಂಸಿತವಾಗತಕ್ಕ ಇತರ ದೇವತೆಗಳೂ ಅಂತರ್ಗತರಾಗಿರುತ್ತಾರೆ ಆದುದರಿಂದ ಐಂದ್ರಸೂಕ್ತಗಳಲ್ಲಿ ಇಂತಹ ಸಂದರ್ಭಗಳೆಷ್ಟು ಮತ್ತು ವೈಶ್ವದೇವಸೂಕ್ತಗಳಲ್ಲಿ ನೈಮಿತ್ತಿಕವಾಗಿ ಅಂತರ್ಗತವಾಗಿರುವ ದೇವತೆಗಳಾರಾರು ಎಂಬ ವಿಷಯದಲ್ಲಿ ಪರಿಶೀಲನೆಯನ್ನು ಮಾಡಬೇಕಾದುದು ಅವಶ್ಯವಾಗಿರುತ್ತದೆ. ಪ್ರಥಮತಃ ಐಂದ್ರಸೂಕ್ತಗಳನ್ನು ವಿವರಿಸಿದರೆ,

೧

**ಯತ್ತ್ವಾ ಸೂರ್ಯೇತಿ ಚಾತ್ರೇಣಾಂ ಪಂಚರ್ಚೇ ಕರ್ಮ ಕೀರ್ತ್ಯತೇ ।**

(ಬೃ. ದೇ. ೫–೨೮)

**ಯತ್ ತ್ವಾ ಸೂರ್ಯ** ಎಂಬ ಮಂತ್ರದಿಂದ ಹಿಡಿದು ಐದು ಮಂತ್ರಗಳಲ್ಲಿ (೫–೪೦–೫ ರಿಂದ ೯) ಅತ್ರಿಯು ಕರ್ಮವು ಪ್ರಶಂಸಿತವಾಗಿದೆ ಐಂದ್ರಸೂಕ್ತಗಳ ನಡುವೆ ಈ ಪ್ರಸಂಗವಿದೆ. ವಿಷಯವು ಅತ್ರಿಕರ್ಮದ ಮಹಿಮೆಯನ್ನು ತಿಳಿಸುವುದಾದರೂ ಸಹ ಇಂದ್ರಪ್ರಶಂಸೆಯೂ ಇದರೊಡನೆ ಸೇರಿರುವುದರಿಂದ ಇಂದ್ರಸ್ತವನೇ ಅನುಸ್ಯೂತವಾಗಿರುವು ದೆಂದೂ ಸಹ ಹೇಳಬಹುದಾಗಿದೆ. **ಇಂದ್ರ ಮಾಯಾ ಅವಾಹನ್** (೫–೪೦–೬) ಇತ್ಯಾದಿ ವಾಕ್ಯಗಳು ಇದನ್ನು ಸ್ಪಷ್ಟಪಡಿಸುತ್ತವೆ ಸೂರ್ಯನು ಸ್ವರ್ಭಾನುವಿನಿಂದ ತಿರೋಹಿತನಾದಾಗ ಇಂದ್ರನ ಪ್ರಯತ್ನದಿಂದಲೂ ಮತ್ತು ಅತ್ರಿಯ ಪ್ರಯತ್ನದಿಂದಲೂ ಸ್ವರ್ಭಾನುವಿನ ನಾಶವಾಗಿ ಸೂರ್ಯಪ್ರಕಾಶವು ಜಗತ್ತಿಗೆಲ್ಲಾ ಹರಡಲು ಅನುಕೂಲವಾಯಿತೆಂಬುದೇ ಈ ಪ್ರಕರಣದ ಸಾರಾಂಶ ಅತ್ರಿಯ ಮಹತ್ತ್ವವನ್ನು ಐದನೆಯ ಮಂಡಲದ ಆರಂಭದ ಪೀಠಿಕೆಯಲ್ಲಿ ತಿಳಿಸಿದೆ ಪ್ರಕೃತದಲ್ಲಿ ಅದರ ವಿವರಣೆಯ ಅವಶ್ಯವಿಲ್ಲ. ಪ್ರಕೃತಸಂದರ್ಭವನ್ನು ಮಾತ್ರ ಸೂಕ್ಷ್ಮವಾಗಿ ತಿಳಿಸಲಾಗುತ್ತದೆ

ಸ್ವರ್ಭಾನುವು ಅಸುರಪುತ್ರನು ಅವನು ಸೂರ್ಯನನ್ನು ಮರೆಮಾಡಿ ಅವನ ಪ್ರಕಾಶವನ್ನು ತಡೆದಾಗ ಇಂದ್ರನೂ ಅತ್ರಿಯೂ ಅವನನ್ನು ನಾಶಗೊಳಿಸಿದರು ಎಂದು ಪ್ರಕೃತಸಂದರ್ಭದ ವರ್ಣನೆ ಆದರೆ ಈ ಸನ್ನಿವೇಶವು ಒಂದೊಂದೆಡೆಗಳಲ್ಲಿ ಒಂದೊಂದು ವಿಧವಾಗಿ ವರ್ಣಿತವಾಗಿದೆ ಉದಾಹರಣೆಗೆ—

**ಸ್ವರ್ಭಾನುರಾಸುರಸ್ಸೂರ್ಯಂ ತಮಸಾವಿಧ್ಯತ್ತಸ್ಮೈ ದೇವಾಃ ಪ್ರಾಯಶ್ಚಿತ್ತಿಮೈಚ್ಛನ್ತಸ್ಯ ಯತ್ಪ್ರಥಮಂ ತಮೋಽಪಾಘ್ನನ್ತ್ಸಾ ಕೃಷ್ಣಾವಿರಭವದ್ಯದ್ದ್ವಿತೀಯಗ್ಂ ಸಾ ಫಲ್ಗುನೀ ಯತ್ತೃತೀಯಗ್ಂ ಸಾ ವಲಕ್ಷೀ ಯಧ್ಯಸ್ಥಾದಪಾಕೃಂತನ್ತ್ಸಾವಿರ್ವಶಾ ಸಮಭವತ್ತೇ ದೇವಾ ದೇವಾ ಅಬ್ರುವನ್ ದೇವಪಶುರ್ವಾ ಅಯಗ್ಂ ಸಮಭೂಶ್ ॥**

(ತೈ. ಸಂ ೨–೧–೨–೨)

ಅಸುರಪುತ್ರನಾದ ಸ್ವರ್ಭಾನುವು ಒಂದು ಸಲ ಸೂರ್ಯನನ್ನು ಕತ್ತಲಿನಿಂದ ಆವರಿಸುವಂತೆ ಮಾಡಿದನು. ಆಗ ದೇವತೆ ಗಳು ಅದನ್ನು ನಿವಾರಿಸಲು ಯತ್ನಿಸಿದರು. ಅವರು ಆ ಕತ್ತಲಿನಲ್ಲಿ ಅರ್ಧಭಾಗವನ್ನು ನಾಶಪಡಿಸಿದೊಡನೆಯೇ ಒಂದು ಕರೀ ಮೇಘವು ಉತ್ಪನ್ನವಾಯಿತು. ಎರಡನೆಯ ಅರ್ಧದಿಂದ ಶುಭ್ರವಾದ ಮೇಘದ ಉತ್ಪತ್ತಿಯಾಯಿತು. ಮೂರನೆಯದರಿಂದ ಬಿಳೀವರ್ಣವುಳ್ಳದ್ದಾಯಿತು. ಅಸ್ಥಿಯ ಮೇಲ್ಭಾಗದಿಂದ ಕತ್ತರಿಸಲ್ಪಟ್ಟುದು, ವಂಧ್ಯಾರೂಪ ವಾದ ಪ್ರಾಣಿಯಾಗಿ ಪರಿಣಮಿಸಲ್ಪಟ್ಟಿತು. ಆಗ ದೇವತೆಗಳೆಲ್ಲರೂ ಸೇರಿ ಇದು ದೇವಪಶುವಾಗಿದೆ. ಇದನ್ನು ಯಾರನ್ನುದ್ದೇಶಿಸಿ ಅರ್ಪಿಸೋಣ ಎಂದು ಚರ್ಚಿಸುತ್ತಿದ್ದರು. ಇತ್ಯಾದಿಯಾಗಿ ತೈತ್ತಿರೀಯಸಂಹಿತೆಯಲ್ಲಿ ವರ್ಣಿತ

ಪರಿಸುತ್ತೇನೆ । **ಸಮರ್ಯ:**—ಮರುದಾದಿಗಳೊಡನೆ ಕೂಡಿದ । **ಯಃ**—ಯಾವ ಅದೇ ಇಂದ್ರನು । **ವಾಜಸಾತಾ**—ಅನ್ನಾರ್ಥವಾದ ಯುದ್ಧದಲ್ಲಿ । **ಸ್ತುತಃ**—ಸ್ತುತಿಸಲ್ಪಟ್ಟು । **ಅಸ್ಮೈ ಜನೇ**—(ಸಂವರಣನಾಮಕನಾದ) ನನ್ನಲ್ಲಿಡಬೇಕಾದ । **ಸುಮತಿಂ**—ಅನುಗ್ರಹಾತ್ಮಕವಾದ ಬುದ್ಧಿಯನ್ನು । **ಚಿಕೇತ**—ಅರಿಯುತ್ತಾನೆ.

॥ ಭಾವಾರ್ಥ ॥

ಮಾನವರಿಗೆಲ್ಲಾ ಶಕ್ತಿಯನ್ನು ಕೊಡುವ ನಿಮಿತ್ತವಾಗಿ ಮಹದ್ರೂಪವುಳ್ಳವನೂ, ಬಲಶಾಲಿಯೂ ಆದ ಇಂದ್ರನನ್ನುದ್ದೇಶಿಸಿ ಅತ್ಯಂತ ದುರ್ಬಲನಾದ ನಾನು ಮುಂದೆ ಹೇಳುವ ರೀತಿಯಲ್ಲಿ ಪ್ರಭೂತವೂ ಪ್ರಕಾಶಾತ್ಮಕವೂ ಆದ ಸ್ತುತಿಯನ್ನು ಪರಿಸುತ್ತೇನೆ. ಮರುದಾದಿಗಳೊಡನೆ ಕೂಡಿದ ಇಂದ್ರನು ಅನ್ನಾರ್ಥವಾಗಿ ನಡೆಯತಕ್ಕ ಯುದ್ಧದಲ್ಲಿ ಸ್ತುತಿಸಲ್ಪಟ್ಟು ಸಂವರಣನಾಮಕನಾದ ನನ್ನಲ್ಲಿಡಬೇಕಾದ ಅನುಗ್ರಹಾತ್ಮಕವಾದ ಬುದ್ಧಿಯನ್ನು ಅರಿಯುತ್ತಾನೆ.

## English Translation

Feeble as I am, I offer praise to the great and vigorous Indra, for this purpose, (that he may grant) strength to (our) people : he who, associated with the Maruts, shews favour to this person when praised for the sake of sustenance.

॥ ಸಂಹಿತಾಪಾಠಃ ॥

ಸ ತ್ವಂ ನ ಇಂದ್ರ ಧಿಯಸಾನೋ ಅರ್ಕೈರ್ಹರೀಣಾಂ ವೃಷನ್ಯೋಕ್ತ್ರಮಶ್ರೇಃ ।
ಯಾ ಇತ್ಥಾ ಮಘವನ್ನನು ಜೋಷಂ ವಕ್ಷೋ ಅಭಿ ಪ್ರಾರ್ಯಃ ಸಕ್ಷಿ ಜನಾನ್ ॥ ೨ ॥

॥ ಪದಪಾಠಃ ॥

ಸಃ । ತ್ವಂ । ನಃ । ಇಂದ್ರ । ಧಿಯಸಾನಃ । ಅರ್ಕೈಃ । ಹರೀಣಾಂ । ವೃಷನ್ । ಯೋಕ್ತ್ರಂ । ಅಶ್ರೇಃ ।
ಯಾಃ । ಇತ್ಥಾ । ಮಘವನ್ । ಅನು । ಜೋಷಂ । ವಕ್ಷಃ । ಅಭಿ । ಪ್ರ । ಅರ್ಯಃ । ಸಕ್ಷಿ । ಜನಾನ್ ॥

॥ ಸಾಯಣಭಾಷ್ಯಂ ॥

ಹೇ ವೃಷನ್ ವರ್ಷಕೇಂದ್ರ ಸ ಪ್ರಸಿದ್ಧಸ್ತ್ವಂ ನೋಽಸ್ಮಾನ್ಧಿಯಸಾನೋ ಧ್ಯಾಯನ್ ಅರ್ಕೈರರ್ಚನಸಾಧನೈಃ ಸ್ತೋತ್ರೈರ್ನಿಮಿತ್ತಭೂತೈರ್ಹರೀಣಾಂ ರಥೇ ನಿಯೋಜ್ಯಾನಾಮಶ್ವಾನಾಂ ಯೋಕ್ತ್ರಂ

ನಿಯೋಜನರಜ್ಜುಮಶ್ರೇಃ । ಆಶ್ರಯಸಿ । ಯಾಃ ॥ ಲಿಂಗವ್ಯತ್ಯಯಃ ॥ ಯಾನರ್ಕಾನ್ ಹೇ ಮಘವನ್ ಇತ್ಥೇತ್ಥಂ ಜೋಷಂ ಪ್ರೀತಿಮನು ವಕ್ಷೋಽವಹಃ ತೈರ್ನಿಮಿತ್ತೈರ್ಯೋಕ್ತ್ರಮಶ್ರೇರಿತಿ । ತಥಾ ಕೃತ್ವಾ-ಯೋಽಸ್ಮದರೀನ್ ಜನಾನಭಿ ಆಭಿಮುಖ್ಯೇನ ಪ್ರ ಪ್ರಕೃಷ್ಟಂ ಸಕ್ಷಿ । ಪರಾಭವ ॥

॥ ಪ್ರತಿಪದಾರ್ಥ ॥

**ಮಘವನ್**—ಧನವಂತನೂ । **ವೃಷವನ್**—ಕಾಮವರ್ಷಕನೂ ಆದ । **ಇಂದ್ರ**—ಎಲೈ ಇಂದ್ರನೇ । **ಸಃ**—ಪ್ರಸಿದ್ಧನಾದ । **ತ್ವಂ**—ನೀನು । **ಯಾಃ**—ಯಾವ ನಮ್ಮ ಸ್ತುತಿಗಳಲ್ಲಿ । **ಇತ್ಥಾ**—ಈ ಪ್ರಕಾರವಾಗಿ । **ಜೋಷಂ**—ಪ್ರೀತಿಯನ್ನು । **ಅನು ವಕ್ಷಃ**—ಹೊಂದಿರುತ್ತೀಯೋ (ಅಂತಹ) । **ಅರ್ಕೈಃ**—ನಮ್ಮ ಸ್ತುತಿಗಳಿಂದ ತೃಪ್ತನಾಗಿ । **ನಃ**—ನಮ್ಮನ್ನೇ । **ಧಿಯಸಾನಃ**—( ಅನುಗ್ರಹ ಬುದ್ಧಿಯಿಂದ ) ಯೋಚಿಸುತ್ತಾ । **ಹರೀಣಾಂ**—ಅಶ್ವಗಳ । **ಯೋಕ್ತ್ರಂ**—ಕಡಿವಾಣವನ್ನು । **ಅಶ್ರೇಃ**—ಹಿಡಿಯುತ್ತೀಯೆ । **ಅರ್ಯಃ**—(ನಮಗೆ) ಶತ್ರುರೂಪವಾದ । **ಜನಾನ್**—ಜನರನ್ನು । **ಅಭಿ**—ಸುತ್ತಲೂ । **ಪ್ರ ಸಕ್ಷಿ**—ಸೋಲಿಸು

॥ ಭಾವಾರ್ಥ ॥

ಧನವಂತನೂ ಕಾಮವರ್ಷಕನೂ ಆದ ಎಲೈ ಇಂದ್ರನೇ, ಜಗತ್ಪ್ರಸಿದ್ಧನಾದ ನೀನು ನಮ್ಮ ಸ್ತುತಿಗಳಲ್ಲಿ ಅಧಿಕವಾದ ಪ್ರೀತಿಯನ್ನು ಹೊಂದಿ ಅವುಗಳಿಂದ ಸಂತುಷ್ಟನಾಗಿ ನಮ್ಮನ್ನೇ ಅನುಗ್ರಹ ಬುದ್ಧಿಯಿಂದ ಯೋಚಿಸುತ್ತಾ, ನಮ್ಮಲ್ಲಿಗೆ ಬರಲು ನಿನ್ನ ಅಶ್ವಗಳನ್ನು ಸಿದ್ಧಮಾಡಿ ಅವುಗಳ ಕಡಿವಾಣವನ್ನು ಹಿಡಿಯುತ್ತೀಯೆ. ನನಗೆ ಶತ್ರುರೂಪವಾದ ಜನರನ್ನು ಪೂರ್ಣವಾಗಿ ಸೋಲಿಸು.

English Translation

You, Indra, meditating upon us, fasten the traces of yours horses, (incited), showerer (of benefits), by those praises in which you take suitable delight, and therefore overcome (for us) hostile men

---

॥ ಸಂಹಿತಾಪಾಠಃ ॥

ನ ತೇ ತ ಇಂದ್ರಾಭ್ಯ೧ಸ್ಮದೃಷ್ವಾಯುಕ್ತಾಸೋ ಅಬ್ರಹ್ಮತಾ ಯದಸನ್ ।
ತಿಷ್ಠಾ ರಥಮಧಿ ತಂ ವಜ್ರಹಸ್ತಾ ರಶ್ಮಿಂ ದೇವ ಯಮಸೇ ಸ್ವಶ್ವಃ ॥ ೩ ॥

॥ ಪದಪಾಠಃ ॥

ನ । ತೇ । ತೇ । ಇಂದ್ರ । ಅಭಿ । ಅಸ್ಮತ್ । ಋಷ್ವ । ಅಯುಕ್ತಾಸಃ । ಅಬ್ರಹ್ಮತಾ । ಯತ್ । ಅಸನ್ ।
ತಿಷ್ಠ । ರಥಂ । ಅಧಿ । ತಂ । ವಜ್ರಹಸ್ತ । ಆ । ರಶ್ಮಿಂ । ದೇವ । ಯಮಸೇ । ಸುಅಶ್ವಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಋಷ್ವ ಮಹನ್ನಿಂದ್ರ ಯತ್ ಯೇಽಸ್ಮದಸ್ಮತ್ತಸ್ತ್ವದ್ಭಕ್ತೇಭ್ಯೋಽನ್ಯೇಽಯುಕ್ತಾಸಸ್ತ್ವಯಾ-ಸಂಯುಕ್ತಾ ಅಸನ್ ಆಸನ್ ಅಭವನ್ ಅಬ್ರಹ್ಮತಾ । ಬ್ರಹ್ಮ ಪರಿವೃಢಂ ಕರ್ಮ । ತದ್ರಹಿತತ್ವಾತ್ ತೇ ನರಾಸ್ತೇ ತ್ವದೀಯಾ ನ ಭವಂತಿ । ಅತೋಽಸ್ಮದ್ಯಜ್ಞಮಭ್ಯಾಗಂತುಂ ತಂ ಪ್ರಸಿದ್ಧಂ ರಥಮಧಿ ತಿಷ್ಠ । ಹೇ ವಜ್ರಹಸ್ತೇಂದ್ರ ದೇವ ಸ್ವಶ್ವಸ್ತ್ವಂ ಯಂ ರಥಮಾರೋಢುಂ ರಶ್ಮಿಂ ಪ್ರಗೃಹಣಾ ಯಮಸೇ ನಿಯ-ಮಯಸಿ ತಮಧಿ ತಿಷ್ಠ ॥

॥ ಪ್ರತಿಪದಾರ್ಥ ॥

**ಋಷ್ವ**—ಮಹತ್ಸ್ವರೂಪವುಳ್ಳ । **ಇಂದ್ರ**—ಎಲೈ ಇಂದ್ರನೇ । **ಅಸ್ಮತ್**—ನಮಗಿಂತಲೂ ಬೇರೆಯಾದವರೂ । **ಅಯುಕ್ತಾ ಸಃ**—ನಿನ್ನಲ್ಲಿ ಭಕ್ತಿಯಿಲ್ಲದವರೂ ಆದ । **ಯತ್ ಅಸನ್**—ಯಾರಿದ್ದಾರೋ ಅವರು । **ಅಬ್ರಹ್ಮಣಾ**—ವೈದಿಕಮಾರ್ಗವನ್ನನುಸರಿಸದಿರುವುದರಿಂದ । **ತೇ**—ನಿನಗೆ ಸೇರಿದವರಾಗಿ । **ನ**—ಆಗುವುದಿಲ್ಲ (ಆದುದರಿಂದ ) । **ವಜ್ರಹಸ್ತ**—ವಜ್ರಾಯುಧವನ್ನು ಹಿಡಿದಿರುವವನೂ । **ದೇವ**—ದೇವಾತ್ಮನೂ ಆದ ಇಂದ್ರನೇ । **ಸ್ವಶ್ವಃ**-ಉತ್ತಮವಾದ ಅಶ್ವಗಳಿಂದ ಕೂಡಿದವನಾಗಿ । **ರಶ್ಮಿಂ**-(ಯಾವ ರಥದ) ಕಡಿವಾಣವನ್ನು । **ಆ ಯಮಸೇ**-ಕೈಯಲ್ಲಿ ಹಿಡಿದಿರುವೆಯೋ । **ತಂ ರಥಂ**—ಅದೇ ರಥವನ್ನು । **ಅಭಿ**—(ನಮ್ಮ ಯಜ್ಞಕ್ಕೆ) ಬರುವುದಕ್ಕಾಗಿ । **ಅಧಿ ತಿಷ್ಠ**—ಹತ್ತಿ ಕುಳಿತುಕೊ

॥ ಭಾವಾರ್ಥ ॥

ಮಹತ್ಸ್ವರೂಪವುಳ್ಳ ಎಲೈ ಇಂದ್ರನೇ, ನಮಗಿಂತಲೂ ಬೇರೆಯಾದವರೂ, ನಿನ್ನಲ್ಲಿ ಭಕ್ತಿಯಿಲ್ಲದವರೂ ಆಗಿ ಯಾರಿದ್ದಾರೋ ಅವರು ವೈದಿಕ ಮಾರ್ಗವನ್ನನುಸರಿಸದೇ ಇರುವುದರಿಂದ ನಿನಗೆ ಸೇರಿದವರಾಗಿ ಆಗುವುದಿಲ್ಲ. ಆದುದರಿಂದ, ವಜ್ರಾಯುಧಧಾರಿಯೂ ದೇವಾತ್ಮನೂ ಆದ ಎಲೈ ಇಂದ್ರನೇ, ಯಾವ ರಥಕ್ಕೆ ಉತ್ತಮವಾದ ಅಶ್ವಗಳನ್ನು ಕಟ್ಟಿ ಕೈಯಲ್ಲಿ ಕಡಿವಾಣವನ್ನು ಹಿಡಿದಿರುವೆಯೋ ಅದೇ ರಥವನ್ನು ನಮ್ಮ ಯಜ್ಞಕ್ಕೆ ಬರುವುದಕ್ಕಾಗಿ ಹತ್ತಿ ಕುಳಿತುಕೊ.

English Translation

Since, mighty Indra, those who, dffering from us, and not united with you through their lack of devotion, are not yours ; therefore, divine holder of the thunderbolt, you are possessed of excellent horses, ascend the car, whose reins you guide, (to come to our sacrifice).

---

॥ ಸಂಹಿತಾಪಾಠಃ ॥

ಪುರೂ ಯತ್ತ ಇಂದ್ರ ಸಂತ್ಯುಕ್ಥಾ ಗವೇ ಚಕರ್ಥೋರ್ವರಾಸು ಯುಧ್ಯನ್ ।
ತತಕ್ಷೇ ಸೂರ್ಯಾಯ ಚಿದೋಕಸಿ ಸ್ವೇ ವೃಷಾ ಸಮತ್ಸು ದಾಸಸ್ಯ ನಾಮ ಚಿತ್ ॥ ೪ ॥

॥ ಪದಪಾಠಃ ॥

**ಪುರು । ಯತ್ । ತೇ । ಇಂದ್ರ । ಸಂತಿ । ಉಕ್ಥಾ । ಗವೇ । ಚಕರ್ಥ । ಉರ್ವರಾಸು । ಯುಧ್ಯನ್ ।**

**ತತಕ್ಷೇ । ಸೂರ್ಯಾಯ । ಚಿತ್ । ಓಕಸಿ । ಸ್ವೇ । ವೃಷಾ । ಸಮತ್ಽಸು । ದಾಸಸ್ಯ । ನಾಮ । ಚಿತ್ ॥**

॥ ಸಾಯಣಭಾಷ್ಯಂ ॥

**ಹೇ ಇಂದ್ರ ತೇ ತವ ಯದ್ಯದಾ ಸ್ವಭೂತಾನಿ ಪುರು ಪುರೂಣಿ ಬಹೂನ್ಯುಕ್ಥೋಕ್ಥಾನಿ ಶಸ್ತ್ರಾಣಿ ಸಂತಿ ತದೋರ್ವರಾಸು ಸಸ್ಯೋಪೇತಾಸು ಭೂಮಿಷು ನಿಮಿತ್ತಭೂತಾಸು ಗವೇ ವೃಷ್ಟ್ಯುದಕಾಯ ಯುಧ್ಯನ್ ಜಲಪ್ರತಿಬಂಧಕಾನ್ ಸಂಹರನ್ ಚಕರ್ಥ । ಕರೋಷಿ ಭೇದನಂ । ಕುತ್ರೇತಿ । ಸೂರ್ಯಾಯ ಸೂರ್ಯಸ್ಯ ಸ್ವೇ ಸ್ವಕೀಯ ಓಕಸಿ ಸ್ಥಾನೇ । ವೃಷಾ ವರ್ಷಿತಾ ಸನ್ ತತಕ್ಷೇ । ಸಂಪಾದಯಸಿ । ಸಮತ್ಸು ಸಂಗ್ರಾಮೇಷು ದಾಸಸ್ಯ ವೃಷ್ಟಿಪ್ರತಿಬಂಧಕಕರ್ತುರೇತನ್ನಾಮಕಸ್ಯಾಸುರಸ್ಯ ನಾಮ ಚಿನ್ನಾಮಾಪಿ ತತಕ್ಷೇ । ನಾಶಯಸೀತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಯತ್**—ಯಾವ ಕಾರಣದಿಂದ । **ಪುರೂ**—ಅತ್ಯಧಿಕಸಂಖ್ಯೆಯುಳ್ಳ । **ಉಕ್ಥಾ**—ಶಸ್ತ್ರರೂಪವಾದ ಸ್ತುತಿಗಳೆಲ್ಲವೂ । **ತೇ**—ನಿನ್ನನ್ನೇ ಉದ್ದೇಶಿಸಿದವವಾಗಿ । **ಸಂತಿ**—ಆಗಿವೆಯೋ (ಆ ಕಾರಣದಿಂದ) । **ಉರ್ವರಾಸು**—ಸಸ್ಯಪೂರಿತವಾದ ಪೃಥ್ವಿಯ ಮೇಲೆ । **ಗವೇ**—ವೃಷ್ಟಿಯನ್ನು ಸುರಿಸುವುದಕ್ಕಾಗಿ । **ಯುಧ್ಯನ್**—(ವೃಷ್ಟಿ ಪ್ರತಿಬಂಧಕರಾದ ಶತ್ರುಗಳೊಡನೆ) ಯುದ್ಧಮಾಡುತ್ತಾ । **ಚಕರ್ಥ**—( ಅವರ ನಾಶವನ್ನು ) ಉಂಟುಮಾಡಿದ್ದೀಯೆ । **ವೃಷಾ**—ವೃಷ್ಟಿಯನ್ನು ಸುರಿಸತಕ್ಕ ನೀನು । **ಸಮತ್ಸು**—ಸಂಗ್ರಾಮವು ಪ್ರಾಪ್ತವಾದಾಗ । **ಸೂರ್ಯಾಯ**—ಸೂರ್ಯನ । **ಸ್ವೇ ಓಕಸಿಚಿತ್**—ಸ್ವಗೃಹದಲ್ಲಿಯೇ ( ಅಂತರಿಕ್ಷದಲ್ಲಿಯೇ ) । **ದಾಸಸ್ಯ**—ಅಸುರನ । **ನಾಮಚಿತ್**—ಹೆಸರನ್ನೇ । **ತತಕ್ಷೇ**—ನಾಶಮಾಡಿರುವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಶಸ್ತ್ರರೂಪಗಳಾದ ಸ್ತುತಿಗಳು ಅತ್ಯಧಿಕಸಂಖ್ಯೆಯಲ್ಲಿ ನಿರ್ಮಿತವಾಗಿ ನಿನಗರ್ಪಿಸಲ್ಪಡುತ್ತವೆ. ಅವೆಲ್ಲವೂ ನಿನ್ನನ್ನೇ ಉದ್ದೇಶಿಸಿವೆ. ಆಕಾರಣದಿಂದ ನೀನು ಸಸ್ಯಪೂರಿತವಾದ ಪೃಥ್ವಿಯಮೇಲೆ ವೃಷ್ಟಿಯನ್ನು ಸುರಿಸುವುದಕ್ಕಾಗಿ ವೃಷ್ಟಿಪ್ರತಿಬಂಧಕರಾದ ಶತ್ರುಗಳೊಡನೆ ಯುದ್ಧಮಾಡುತ್ತಾ ಅವರ ನಾಶವನ್ನುಂಟುಮಾಡಿದ್ದೀಯೆ ವೃಷ್ಟಿಸೇಚಕನಾದ ನೀನು, ಸಂಗ್ರಾಮವು ಪ್ರಾಪ್ತವಾದಾಗ ಸೂರ್ಯನ ಸ್ವಗೃಹವಾದ ಅಂತರಿಕ್ಷದಲ್ಲಿಯೇ ಅಸುರನ ಹೆಸರನ್ನೇ ನಾಶಮಾಡಿದೆ.

## English Translation

Inasmuch, Indra, as many praises are yours, therefore, combating for the sake of (shedding) waters on fertile (lands), you have effected (the discomfiture of its obstructors); you, who are the showerer (of benefits), have on behalf of the sun, destroyed in his own dwelling, the very name of (the Asura) Dasa, in battle

॥ ಸಂಹಿತಾಪಾಠಃ ॥

ವಯಂ ತೇ ತ ಇಂದ್ರ ಯೇ ಚ ನರಃ ಶರ್ಧೋ ಜಜ್ಞಾನಾ ಯಾತಾಶ್ಚ ರಥಾಃ ।

ಆಸ್ಮಾಂಜಗಮ್ಯಾದಹಿಶುಷ್ಮ ಸತ್ವಾ ಭಗೋ ನ ಹವ್ಯಃ ಪ್ರಭೃಥೇಷು ಚಾರುಃ ॥

॥ ಪದಪಾಠಃ ॥

ವಯಂ । ತೇ । ತೇ । ಇಂದ್ರ । ಯೇ । ಚ । ನರಃ । ಶರ್ಧಃ । ಜಜ್ಞಾನಾಃ । ಯಾತಾಃ । ಚ । ರಥಾಃ ।

ಆ । ಅಸ್ಮಾನ್ । ಜಗಮ್ಯಾತ್ । ಅಹಿಃಶುಷ್ಮ । ಸತ್ವಾ । ಭಗಃ । ನ । ಹವ್ಯಃ । ಪ್ರsಭೃಥೇಷು । ಚಾರುಃ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಯೇ ಚ ನರಃ ಕರ್ಮಣಾಂ ನೇತಾರ ಋತ್ವಿಗ್ಯಜಮಾನಾ ವಯಂ ಸ್ಮಃ ತೇ ವಯಂ ತೇ ತ್ವದೀಯಾಃ । ಕಿದೃಶಾ ವಯಂ । ಶರ್ಧೋ ಬಲಂ ಜಜ್ಞಾನಾ ಉತ್ಪಾದಯಂತಃ ಸ್ತುತಿಭಿರ್ಯಾತಾಶ್ಚ ಹೋತುಂ ತ್ವಾಂ ಪ್ರಾಪ್ತಾಶ್ಚ ರಥಾ ರಂಹಣಶೀಲಾಶ್ಚ । ಕಿಂಚ ಹೇ ಅಹಿಶುಷ್ಮ । ಅಹಿರಯನಾತ್। ಸರ್ವತೋ ವ್ಯಾಪ್ತಬಲೇಂದ್ರ ತ್ವದನುಗ್ರಹಾದ್ಧವ್ಯಃ ಸ್ತುತ್ಯಃ ಪ್ರತಿಭಟೈರಾಹ್ವಾತವ್ಯೋ ವಾ ಚಾರುಃ ಸಂಗಂತಾ ಸತ್ವಾ ಭೃತ್ಯಾದಿಃ ಪ್ರಭೃಥೇಷು ಸಂಗ್ರಾಮೇಷು ಯಜ್ಞೇಷು ವಾಸ್ಮಾನಾ ಜಗಮ್ಯಾತ್ । ಅಗಚ್ಛೇತ್ । ಭಗೋ ನ ಭಗ ಇವ ಹವ್ಯಶ್ಚಾರುಃ । ಭಗದೇವೋ ಯಥಾಸ್ಮತ್ಸಹಾಯ ಆಗಚ್ಛತಿ ತಥಾ ಭೃತ್ಯಾದಿರಾಗಚ್ಛೇದಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಶರ್ಧಃ**—(ನಿನ್ನ ) ಬಲವನ್ನು । **ಜಜ್ಞಾನಾಃ**—(ನಮ್ಮ ಸ್ತುತಿಗಳಿಂದ) ವೃದ್ಧಿಪಡಿಸುವವರೂ । **ಯಾತಾಶ್ಚ**—ನಿನ್ನನ್ನು ಸಮೀಪಿಸುವವರೂ । **ರಥಾಃ**—ನಿನ್ನ ಸಾನ್ನಿಧ್ಯಸಂಪಾದನೆಗೇ ಚಲಿಸುವವರೂ ಆದ । **ಯೇ ವಯಂ**—ಯಾವ ನಾವು । **ನರಃ**—ಕರ್ಮಗಳಿಗೆಲ್ಲಾ ನೇತೃಗಳಾಗಿದ್ದೇವೆಯೋ । **ತೇ**—ಅಂತಹ ನಾವು । **ತೇ**—ನಿನಗೇ ಸೇರಿದವರಾಗಿದ್ದೇವೆ । **ಅಹಿಶುಷ್ಮ**—ಶತ್ರುಶೋಷಕನಾದ ಎಲೈ ಇಂದ್ರನೇ । **ಹವ್ಯಃ**—ಪ್ರಶಸ್ಯವಾದ ಪರಾಕ್ರಮವುಳ್ಳವನೂ । **ಚಾರುಃ**—ಆಪ್ತನೂ ಆದ । **ಸತ್ವಾ**—ಅನುಯಾಯಿಯು । **ಪ್ರಭೃಥೇಷು**—ಸಂಗ್ರಾಮಗಳಲ್ಲಿ । **ಭಗೋ ನ**—ಭಗನಂತೆ ಸಹಾಯಕನಾಗಿ । **ಅಸ್ಮಾನ್**—ನಮ್ಮ ಸಮೀಪಕ್ಕೆ । **ಆ ಜಗಮ್ಯಾತ್**—ಬಂದು ಸೇರಲಿ

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ಬಲವನ್ನು ಸ್ತುತಿಗಳಿಂದ ವೃದ್ಧಿಪಡಿಸುವವರೂ, ನಿನ್ನನ್ನೇ ಸಮೀಪಿಸುವವರೂ, ನಿನ್ನ ಸಾನ್ನಿಧ್ಯಸಂತೋಷಕ್ಕಾಗಿಯೇ ಯತ್ನಿಸುವವರೂ ಆದ ಯಾವ ನಾವು ಕರ್ಮಗಳಿಗೆಲ್ಲಾ ನೇತೃಗಳಾಗಿದ್ದೇವೆಯೋ ಅಂತಹ

ನಾವು ನಿನಗೆ ಸೇರಿದವರೇ ಆಗಿದ್ದೇವೆ. ಶತ್ರುಶೋಷಕನಾದ ಎಲೈ ಇಂದ್ರನೇ, ಪ್ರಶಸ್ಯವಾದ ಪರಾಕ್ರಮವುಳ್ಳವನೂ, ಆಪ್ತನೂ ಆದ ಅನುಯಾಯಿಯು ಭಗನಂತೆ ಸಾಹಾಯ್ಯಕನಾಗಿ ಸಂಗ್ರಾಮಗಳಲ್ಲಿ ನಮ್ಮ ಸಹಾಯಕ್ಕೆ ಬರಲಿ.

## English Translation

We, Indra, are yours, and yours are they who are the leaders (of rites), promoters of (your), strength, and willing applicants (to you): all-powerful Indra, may adherents worthy of commendation, and faithful, come to us, like Bhaga, in battles.

---

॥ ಸಂಹಿತಾಪಾಠಃ ॥

ಪಪೃಕ್ಷೇಣ್ಯಮಿಂದ್ರ ತ್ವೇ ಹ್ಯೋಜೋ ನೃಮ್ಣಾನಿ ಚ ನೃತಮಾನೋ ಅಮರ್ತಃ ।
ಸ ನ ಏನೀಂ ವಸವಾನೋ ರಯಿಂ ದಾಃ ಪ್ರಾರ್ಯಃ ಸ್ತುಷೇ ತುವಿಮಘಸ್ಯ ದಾನಂ ॥ ೬ ॥

॥ ಪದಪಾಠಃ ॥

ಪಪೃಕ್ಷೇಣ್ಯಂ । ಇಂದ್ರ । ತ್ವೇ ಇತಿ । ಹಿ । ಓಜಃ । ನೃಮ್ಣಾನಿ । ಚ । ನೃತಮಾನಃ । ಅಮರ್ತಃ । ಸಃ । ನಃ । ಏನೀಂ । ವಸವಾನಃ । ರಯಿಂ । ದಾಃ । ಪ್ರ । ಅರ್ಯಃ । ಸ್ತುಷೇ । ತುವಿಮಘಸ್ಯ । ದಾನಂ ॥ ೬ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಪಪೃಕ್ಷೇಣ್ಯಂ ಸಂಪರ್ಕಾರ್ಹಂ ಪೂಜ್ಯಂ ವಾ ಓಜೋ ಬಲಂ ತ್ವೇ ಹಿ ತ್ವಯಿ ಖಲು । ತ್ವದಧೀನಮಿತ್ಯರ್ಥಃ । ನೃತಮಾನೋ ನೃತ್ಯನ್ ಅಮರ್ತೋಽಮರಣಧರ್ಮಾ ಸ ತ್ವಂ ವಸವಾನ ಆಚ್ಛಾದಯನ್ ಸ್ವತೇಜಸಾ ಜಗತ್ ನೃಮ್ಣಾನಿ ನೃಮಣಾನಿ ದ್ರವಿಣಾನಿ । ವಕ್ಷ್ಯಮಾಣರಯ್ಯಪೇಕ್ಷಯಾ ಚಶಬ್ದಃ । ಏನೀಮೇನವರ್ಣಾಂ ಶ್ವೇತವರ್ಣಾಂ ರಯಿಂ ಧನಂ ದಾಃ । ದೇಹಿ । ಅಹಂ ಚ ಅರ್ಯ ಈಶ್ವರಸ್ಯ ತುವಿಮಘಸ್ಯ ಪ್ರಭೂತಧನಸ್ಯ ಚ ದಾನಂ ಪ್ರ ಸ್ತುಷೇ । ಸ್ತೌಮಿ ॥

॥ ಪ್ರತಿಪದಾರ್ಥ ॥

**ಇಂದ್ರ**— ಎಲೈ ಇಂದ್ರನೇ | **ತ್ವೇ ಹಿ**—ನಿನ್ನಲ್ಲಿರತಕ್ಕ | **ಓಜಃ**—ಬಲವು | **ಪಪೃಕ್ಷೇಣ್ಯಂ**—ಅತ್ಯಂತ ಪ್ರಶಸ್ಯವೂ ಪ್ರಭಾಯುತವೂ ಆಗಿದೆ | **ನೃತಮಾನಃ**— ಹರ್ಷಯುತನೂ | **ಅಮರ್ತ್ಯಃ**—ಮರಣಧರ್ಮರಹಿತನೂ ಆದ | **ಸಃ**—ನೀನು | **ವಸಾನಃ**—ನಿನ್ನ ತೇಜಸ್ಸಿನಿಂದ ಜಗತ್ತನ್ನೆಲ್ಲಾ ಆವರಿಸುತ್ತಾ | **ನೃಮ್ಣಾನಿ**—ಧನ ಗಳನ್ನೂ | **ಏನೀಂ**—ಪ್ರಕಾಶಮಾನವಾದ | **ರಯಿಂ**—ಸಂಪತ್ತನ್ನೂ | **ನಃ**—ನಮಗೆ | **ದಾಃ**—ಕೊಡು ( ನಾನೂ ಸಹ ) | **ಆರ್ಯಃ**—ಪ್ರಭುವಾದವನೂ | **ತುವಿಮಘಸ್ಯ**—ಪ್ರಭೂತವಾದ ಧನವುಳ್ಳವನೂ ಆದ ನಿನ್ನ | **ದಾನಂ**— ದಾನವನ್ನು | **ಪ್ರ ಸ್ತುಷೇ**—ಪ್ರಶಂಸಿಸುತ್ತೇನೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನಲ್ಲಿರತಕ್ಕ ಶಕ್ತಿಯು ಅತ್ಯಂತ ಪ್ರಶಸ್ಯವೂ ಪ್ರಭಾಯುತವೂ ಆಗಿದೆ. ಹರ್ಷಯುತನೂ ಮರಣಧರ್ಮರಹಿತನೂ ಆದ ನೀನು ತೇಜಸ್ಸಿನಿಂದ ಜಗತ್ತನ್ನೆಲ್ಲಾ ಆವರಿಸುತ್ತಾ ಧನಗಳನ್ನೂ ಪ್ರಕಾಶಮಾನವಾದ ಸಂಪತ್ತನ್ನೂ ನಮಗೆ ಕೊಡು ನಾನೂ ಸಹ, ಪ್ರಭುವಾದವನೂ, ಪ್ರಭೂತವಾದ ಸಂಪತ್ತುಳ್ಳವನೂ ಆದ ನಿನ್ನ ದಾನ ವನ್ನು ಪ್ರಶಂಸಿಸುತ್ತೇನೆ

English Translation

Glorious, India, is your strength, exulting, immortal, and clothing (the world with light). give us riches, and brilliant wealth, and I will greatly praise the munificence of the opulent lord.

॥ ಸಂಹಿತಾಪಾಠಃ ॥

ಏವಾ ನ ಇಂದ್ರೋತಿಭಿರವ ಪಾಹಿ ಗೃಣತಃ ಶೂರ ಕಾರೂನ್ ।
ಉತ ತ್ವಚಂ ದದತೋ ವಾಜಸಾತೌ ಪಿಪ್ರೀಹಿ ಮಧ್ವಃ ಸುಷುತಸ್ಯ ಚಾರೋಃ ॥ ೭ ॥

॥ ಪದಪಾಠಃ ॥

ಏವ । ನಃ । ಇಂದ್ರ । ಊತಿಭಿಃ । ಅವ । ಪಾಹಿ । ಗೃಣತಃ । ಶೂರ । ಕಾರೂನ್ ।
ಉತ । ತ್ವಚಂ । ದದತಃ । ವಾಜಸಾತೌ । ಪಿಪ್ರೀಹಿ । ಮಧ್ವಃ । ಸುಸುತಸ್ಯ । ಚಾರೋಃ ॥ ೭ ॥

॥ ಸಾಯಣಭಾಷ್ಯಂ ॥

ಹೇ ಶೂರೇಂದ್ರ ಏವ್ಯೇವಂ ನೋಽಸ್ಮಾನ್ ಗೃಣತಃ ಸ್ತುವತಃ ಕಾರೂನ್ ಕರ್ತ್ರೂನೃತ್ವಿಜ ಊತಿಭೀ ರಕ್ಷಣೈರವ । ಪಾಲಯ । ಉತಾಪಿ ಚ ವಾಜಸಾತೌ ಸಂಗ್ರಾಮೇ ತ್ವಚಮಾಚ್ಛಾದಕಂ ರೂಪಂ

ದದತಃ ಪ್ರಯಚ್ಛತಃ ಸುಷುತಸ್ಯ ಸುಷ್ಠ್ವಭಿಷುತಸ್ಯ ಚಾರೋರ್ಮನೋಹರಸ್ಯ ಮಧ್ವಃ ಸೋಮಸ್ಯ ಪಿಪ್ರೀಹಿ । ಪ್ರೀಣಯಾತ್ಮಾನಂ । ದ್ವಿತೀಯಾರ್ಥೇ ಷಷ್ಠೀ । ಉಕ್ತಲಕ್ಷಣಂ ಸೋಮಂ ಪಿಬೇತ್ಯರ್ಥಃ ಅಥವಾ ತೃತೀಯಾರ್ಥೇ ಷಷ್ಠೀ । ಉಕ್ತಲಕ್ಷಣೇನ ಸೋಮಪಾನೇನ ಪ್ರೀಣಯ ॥

॥ ಪ್ರತಿಪದಾರ್ಥ ॥

**ಶೂರ**—ಪರಾಕ್ರಮಿಯಾದ । ಇಂದ್ರ –ಎಲೈ ಇಂದ್ರನೇ । **ಏವ**—ಒಂದೇ ರೀತಿಯಲ್ಲಿ । **ಗೃಣತಃ**—ನಿನ್ನನ್ನು ಸ್ತುತಿಸುವವರೂ । **ಕಾರೂನ್**—ಕರ್ಮ ( ಅಥವಾ ಸ್ತುತಿ ) ಕರ್ತರೂ ಆದ । **ನಃ**—ನಮ್ಮನ್ನು । **ಊತಿಭಿಃ**—ರಕ್ಷಣೆಗಳಿಂದ । **ಅವ ಪಾಹಿ**—ರಕ್ಷಿಸು । **ಉತ**—ಮತ್ತು । **ವಾಜಸಾತೌ**—ಯುದ್ಧದಲ್ಲಿ । **ತ್ವಚಂ**—ರೂಪವನ್ನು (ನಿನಗೆ) ಆಚ್ಛಾದಕವಾಗಿರತಕ್ಕ ರೂಪವನ್ನು । **ದದತಃ**—ಉಂಟುಮಾಡತಕ್ಕದ್ದೂ । **ಸುಷುತಸ್ಯ**—ಅತಿಶಯವಾಗಿ ಹಿಂಡಲ್ಪಟ್ಟಿದ್ದೂ । **ಚಾರೋಃ**—ಮನೋಹರವಾದುದೂ ಆದ । **ಮಧ್ವಃ**—ಸೋಮದ (ಪಾನದಿಂದ) । **ಪಿಪ್ರೀಹಿ**–ತೃಪ್ತಿಯನ್ನು ಹೊಂದು

॥ ಭಾವಾರ್ಥ ॥

ಪರಾಕ್ರಮಿಯಾದ ಎಲೈ ಇಂದ್ರನೇ, ಒಂದೇ ರೀತಿಯಲ್ಲಿ ನಿನ್ನನ್ನು ಸ್ತುತಿಸುವವರೂ, ಕರ್ಮನಿರ್ವಾಹಕರೂ ಆದ ನಮ್ಮನ್ನು ನಿನ್ನ ರಕ್ಷಣೆಗಳಿಂದ ರಕ್ಷಿಸು. ಮತ್ತು ಯುದ್ಧದಲ್ಲಿ ನಿನಗೆ ರಕ್ಷಕವಾಗಿರುವಂತೆ ಆಚ್ಛಾದಕವಾಗಿರತಕ್ಕ ರೂಪವನ್ನುಂಟುಮಾಡತಕ್ಕದ್ದೂ ಅತಿಶಯವಾಗಿ ಹಿಂಡಲ್ಪಟ್ಟಿದ್ದೂ, ಮನೋಹರವಾದುದೂ ಆದ ಸೋಮದ ಪಾನದಿಂದ ತೃಪ್ತಿಯನ್ನು ಹೊಂದು

## English Translation

Hero, Indra, with your protection defend us, praising and worshipping (you), and be propitiated (by drinking) of the well-effused and agreeable Soma juice that yields (a defensive) covering in combat.

---

॥ ಸಂಹಿತಾಪಾಠಃ ॥

ಉತ ತ್ಯೇ ಮಾ ಪೌರುಕುತ್ಸ್ಯಸ್ಯ ಸೂರೇಸ್ತ್ರಸದಸ್ಯೋರ್ಹಿರಣಿನೋ ರರಾಣಾಃ ।
ವಹಂತು ಮಾ ದಶ ಶ್ಯೇತಾಸೋ ಅಸ್ಯ ಗೈರಿಕ್ಷಿತಸ್ಯ ಕ್ರತುಭಿರ್ನು ಸಶ್ಚೇ ॥೮॥

॥ ಪದಪಾಠಃ ॥

ಉತ । ತ್ಯೇ । ಮಾ । ಪೌರುಃಕುತ್ಸ್ಯಸ್ಯ । ಸೂರೇಃ । ತ್ರಸದಸ್ಯೋಃ । ಹಿರಣಿನಃ । ರರಾಣಾಃ ।
ವಹಂತು । ಮಾ । ದಶ । ಶ್ಯೇತಾಸಃ । ಅಸ್ಯ । ಗೈರಿಃಕ್ಷಿತಸ್ಯ । ಕ್ರತುಽಭಿಃ । ನು । ಸಶ್ಚೇ ॥ ೮ ॥

॥ ಸಾಯಣಭಾಷ್ಯಂ ॥

ತ್ರಸದಸ್ಯುಶ್ಚ ವಿದಥೋ ಧ್ವನ್ಯಶ್ಚೇತಿ ತ್ರಯೋ ನೃಪಾಃ । ಅಶ್ವಾನ್ಧನಾನಿ ಗಾಶ್ಚಾದುರ್ಯಷಯೋ ತದ್ವದತ್ಯೃಷಿಃ ॥ ಉತಾಪಿ ಚ ತ್ಯೇ ತೇ ಮಾ । ಚತುರ್ಥ್ಯರ್ಥೇ ದ್ವಿತೀಯಾ । ಮಹ್ಯಮಿತ್ಯರ್ಥಃ। ರರಾಣಾಃ ರಾತೇರ್ದಾನಾರ್ಥಸ್ಯ ಕರ್ಮಣಿ ಲಿಟಃ ಕಾನಚಿ ರೂಪಂ ॥ ದತ್ತಾ ಇತ್ಯರ್ಥಃ । ಪೌರುಕುತ್ಸ್ಯಸ್ಯ ಪುರುಕುತ್ಸಾಪತ್ಯಸ್ಯ ಸೂರೇಃ ಪ್ರೇರಕಸ್ಯ ಹಿರಣಿನೋ ಹಿರಣ್ಯವತೋಽಸ್ಯ ತ್ರಸದಸ್ಯೋರೇತನ್ನಾಮಕಸ್ಯ ರಾಜರ್ಷೇರ್ಗೈರಿಕ್ಷಿತಸ್ಯ ಗಿರಿಕ್ಷಿತಗೋತ್ರೋತ್ಪನ್ನಸ್ಯ ಶ್ಯೇತಾಸಃ ಶುಭ್ರವರ್ಣಾ ದಶಾಶ್ವಾ ಮಾ ಮಾಂ ವಹಂತು । ಪ್ರಾಪಯಂತು । ಅಹಂ ಚ ಕ್ರತುಭಿಃ ಕರ್ಮಭೀ ರಥನಿಯೋಜನಾದಿಭಿರ್ಯಜ್ಞಾದಿಭಿರ್ವಾ ನು ಕ್ಷಿಪ್ರಂ ಸಶ್ಚೇ । ಗಚ್ಛೇಯಂ ॥

॥ ಪ್ರತಿಪದಾರ್ಥ ॥

**ಉತ**—ಮತ್ತು । **ಮಾ**—ನನಗೆ । **ರರಾಣಾಃ**—ಕೊಡಲ್ಪಟ್ಟವೂ । **ಗೈರಿಕ್ಷಿತಸ್ಯ**—ಗಿರಿಕ್ಷಿತನ ಗೋತ್ರೋತ್ಪನ್ನನೂ । **ಪೌರುಕುತ್ಸಸ್ಯ**—ಪುರುಕುತ್ಸನ ಪುತ್ರನೂ । **ಸೂರೇಃ**—ಸ್ತುತಿನಿರ್ಮಾಪಕನೂ । **ಹಿರಣಿನಃ**—ಧನವಂತನೂ ಆದ । **ಅಸ್ಯ ತ್ರಸದಸ್ಯೋಃ**—ಈ ತ್ರಸದಸ್ಯುವಿಗೆ ಸೇರಿದವೂ । **ಶ್ಯೇತಾಸಃ**—ಶುಭ್ರವರ್ಣವುಳ್ಳವೂ ಆದ । **ತ್ಯೇ ದಶ**—ಈ ದಶಾಶ್ವಗಳೂ । **ಮಾ**—ನನ್ನನ್ನು । **ವಹಂತು**—(ಯಜ್ಞ ಪ್ರದೇಶಕ್ಕೆ) ಕರೆದೊಯ್ಯಲಿ (ಮತ್ತು) । **ಕ್ರತುಭಿಃ**—ಕರ್ಮಗಳೊಂದಿಗೆ । **ನು**—ಶೀಘ್ರವಾಗಿ । **ಸಶ್ಚೇ**—ನನ್ನನ್ನು ಸೇರಿಸಲಿ.

॥ ಭಾವಾರ್ಥ ॥

ಗಿರಿಕ್ಷಿತನ ಗೋತ್ರೋತ್ಪನ್ನನೂ, ಪುರುಕುತ್ಸನ ಪುತ್ರನೂ ಸ್ತುತಿನಿರ್ಮಾಪಕನೂ, ಧನವಂತನೂ ಆದ ಈ ತ್ರಸದಸ್ಯುವಿಗೆ ಸೇರಿದವೂ ಶುಭ್ರವರ್ಣವುಳ್ಳವೂ ಆದ ಈ ದಶಾಶ್ವಗಳೂ ನನ್ನನ್ನು ಯಜ್ಞಪ್ರದೇಶಕ್ಕೆ ಕರೆದೊಯ್ಯಲಿ. ಮತ್ತು ನಮ್ಮನ್ನು ಕರ್ಮಗಳೊಂದಿಗೆ ಶೀಘ್ರವಾಗಿ ಸೇರುವಂತೆ ಮಾಡಲಿ.

English Translation

May those ten bright horses, the gift to me of the pious gold-possessing Trasadasyu, the son of Purukutsa, of the race of Girikshita, convey me (to the sacrifice), and may I proceed quickly with the rites

---

॥ ಸಂಹಿತಾಪಾಠಃ ॥

ಉತ ತ್ಯೇ ಮಾ ಮಾರುತಾಶ್ವಸ್ಯ ಶೋಣಾಃ ಕ್ರತ್ವಾಮಘಾಸೋ ವಿದಥಸ್ಯ ರಾತೌ ।
ಸಹಸ್ರಾ ಮೇ ಚ್ಯವತಾನೋ ದದಾನ ಆನೂಕಮರ್ಯೋ ವಪುಷೇ ನಾರ್ಚತ್ ॥ ೯ ॥

॥ ಪದಪಾಠಃ ॥

ಉತ । ತ್ಯೇ । ಮಾ । ಮಾರುತ್ಽಅಶ್ವಸ್ಯ । ಶೋಣಾಃ । ಕ್ರತ್ವಾಽಮಘಾಸಃ । ವಿದಥಸ್ಯ । ರಾತೌ । ಸಹಸ್ರಾ । ಮೇ । ಚ್ಯವತಾನಃ । ದದಾನಃ । ಆನೂಕಂ । ಅರ್ಯಃ । ವಪುಷೇ । ನ । ಆರ್ಚತ್ ॥ ೯ ॥

॥ ಸಾಯಣಭಾಷ್ಯಂ ॥

ಉತಾಪಿ ಚ ತ್ಯೇ ತೇಽಶ್ವಾ ವಕ್ಷ್ಯಮಾಣಾ ಮಾರುತಾಶ್ವಸ್ಯ । ಮರುತ್ಸದೃಶವೇಗಾಶ್ವಾನ್ಮರುತಾಶ್ವಃ । ತದಪತ್ಯಸ್ಯ ವಿದಥಸ್ಯೈತನ್ನಾಮಕಸ್ಯ ರಾಜ್ಞಃ ಶೋಣಾಃ ಶೋಣವರ್ಣಾಃ ಕ್ರತ್ವಾಮಘಾಸಃ ಕ್ರತುನಾ ಕರ್ಮಣಾ ಶೀಘ್ರಗಮನಾದಿಲಕ್ಷಣೇನ ಮಾಹನೀಯಾ ಅಶ್ವಾ ರಾತೌ ದಾನೇ ವಿನಿಯುಕ್ತಾ ಮಾಂ ವಹಂತೀತಿ ಶೇಷಃ । ಕಿಂಚ ಸಹಸ್ರಾ ಸಹಸ್ರಾಣ್ಯಪರಿಮಿತಾನಿ ಧನಾನ್ಯರ್ಯಃ ಪೂಜ್ಯಸ್ಯ ಮೇ । ಚತುರ್ಥ್ಯರ್ಥೇ ಷಷ್ಠೀ । ಪೂಜ್ಯಾಯ ಮಹ್ಯಂ ಚ್ಯವತಾನಶ್ಚ್ಯಾವಯನ್ ದದಾನಃ ಪ್ರಯಚ್ಛನ್ ಸ ಆನೂಕಮಾಭರಣಂ ಚ ವಪುಷೇ ಸ್ವಶರೀರಾಲಂಕಾರಾಯಾರ್ಚತ್ । ಪ್ರಾಯಚ್ಛತ್ । ನೇತಿ ಚಾರ್ಥೇ ॥

॥ ಪ್ರತಿಪದಾರ್ಥ ॥

**ಉತ**—ಮತ್ತು । **ಮಾರುತಾಶ್ವಸ್ಯ**—ಮರುತಾಶ್ವನ ಪುತ್ರನೂ । **ವಿದಥಸ್ಯ**—ವಿದಥನಾಮಕನೂ ಆದ ರಾಜನಿಗೆ ಸೇರಿದವೂ । **ಶೋಣಾಃ**—ಹೊಂಬಣ್ಣವುಳ್ಳವೂ । **ಕ್ರತ್ವಾಮಘಾಸಃ**—ಕರ್ಮಗಳಿಂದ ಮಹಾತ್ಮ್ಯವನ್ನು ಪಡೆದವೂ । **ರಾತೌ**—ದಾನಕಾಲದಲ್ಲಿ (ನನಗೆ ಕೊಡಲ್ಪಟ್ಟವೂ) ಆದ । **ತ್ಯೇ**—ಅಶ್ವಗಳು । **ಮಾ**—ನನ್ನನ್ನು (ಯಜ್ಞಕ್ಕೆ ಕರೆದೊಯ್ಯಲಿ) (ಅದೇ ರಾಜನು) । **ಸಹಸ್ರಾ**—ಅಪರಿಮಿತವಾದ ಧನಗಳನ್ನು । **ಅರ್ಯಃ**—ಗೌರವಾರ್ಹನಾದ । **ಮೇ**—ನನಗೆ । **ಚ್ಯವತಾನಃ**—ದಾನಮಾಡಬೇಕೆಂದಿಚ್ಛಿಸಿ । **ದದಾನಃ**—ಕೊಡುತ್ತಾ (ಅವುಗಳೊಂದಿಗೆ) **ವಪುಷೇ**—ಶರೀರದ ಅಲಂಕಾರಕ್ಕಾಗಿ । **ಆನೂಕಂ**—ಆಭರಣವನ್ನೂ । **ಆರ್ಚತ್**—ಕೊಟ್ಟನು

॥ ಭಾವಾರ್ಥ ॥

ಮರುತಾಶ್ವಪುತ್ರನೂ ವಿದಥನಾಮಕನೂ ಆದ ರಾಜನಿಂದ ದಾನಕಾಲದಲ್ಲಿ ನನಗೆ ಕೊಡಲ್ಪಟ್ಟವೂ, ಹೊಂಬಣ್ಣವುಳ್ಳವೂ, ಕರ್ಮಗಳಿಂದ ಮಹಾತ್ಮ್ಯವನ್ನು ಪಡೆದವೂ ಆದ ಅಶ್ವಗಳು ನನ್ನನ್ನು ಯಜ್ಞಕ್ಕೆ ಕರೆದೊಯ್ಯಲಿ ಆದೇ ರಾಜನು ಅವನ ಗೌರವಕ್ಕೆ ಪಾತ್ರನಾದ ನನಗೆ ಅಪರಿಮಿತವಾದ ಧನಗಳನ್ನು ಪ್ರೀತಿಯಿಂದ ದಾನಮಾಡಿ ನನ್ನ ಶರೀರಗಳನ್ನು ಅಲಂಕರಿಸಿಕೊಳ್ಳಲು ಆಭರಣಗಳನ್ನು ಕೊಟ್ಟನು.

English Translation

Or may those bay, well-actioned horses, the donation of Vidatha, the son of Marutashwa, (convey me) : or (may) the thousands (of treasure) which he was bestowing upon and giving to me, entitled to respect, and the ornaments which he presented (to decorate) the person, (contribute to the ceremony)

॥ ಸಂಹಿತಾಪಾಠಃ ॥

ಉತ ತ್ಯೇ ಮಾ ಧ್ವನ್ಯಸ್ಯ ಜುಷ್ಟಾ ಲಕ್ಷ್ಮಣ್ಯಸ್ಯ ಸುರುಚೋ ಯತಾನಾಃ ।
ಮಹ್ನಾ ರಾಯಃ ಸಂವರಣಸ್ಯ ಋಷೇರ್ವ್ರಜಂ ನ ಗಾವಃ ಪ್ರಯತಾ ಅಪಿ ಗ್ಮನ್ ॥ ೧೦ ॥

॥ ಪದಪಾಠಃ ॥

ಉತ । ತ್ಯೇ । ಮಾ । ಧ್ವನ್ಯಸ್ಯ । ಜುಷ್ಟಾಃ । ಲಕ್ಷ್ಮಣ್ಯಸ್ಯ । ಸುಽರುಚಃ । ಯತಾನಾಃ ।
ಮಹ್ನಾ । ರಾಯಃ । ಸಂಽವರಣಸ್ಯ । ಋಷೇಃ । ವ್ರಜಂ । ನ । ಗಾವಃ । ಪ್ರಽಯತಾಃ । ಅಪಿ । ಗ್ಮನ್ ॥

॥ ಸಾಯಣಭಾಷ್ಯಂ ॥

ಉತಾಪಿ ಚ ತ್ಯೇ ತೇ ವಕ್ಷ್ಯಮಾಣಾ ರಾಯೋ ಧ್ವನ್ಯಸ್ಯ ಧ್ವನ್ಯನಾಮಕಸ್ಯ ಲಕ್ಷ್ಮಣ್ಯಸ್ಯ ಲಕ್ಷ್ಮಣಪುತ್ರಸ್ಯ ರಾಜ್ಞಃ ಸಂಬಂಧಿನೋಽಶ್ವಾ ಮಾ ಜುಷ್ಟಾ ಮಾಂ ಪ್ರಾಪ್ತಾಃ ಸುರುಚಃ ಶೋಭನದೀಪ್ತಯೋ ಯತಾನಾ ವಹಮಾನಾಯ ಯತಮಾನಾಃ । ರಾಯೋ ಮಹ್ನಾ ಮಹತ್ತ್ವೇನ ಯುಕ್ತಾ ರಾಯಃ ಪ್ರಯತಾ ದತ್ತಾಃ ಸತ್ಯಃ ಸಂವರಣಸ್ಯ ಋಷೇರಪಿ ಗ್ಮನ್ । ಅಪಿಗತಾಃ । ಪ್ರಾಪ್ತಾ ಮದ್ಗೃಹಮಿತಿ ಶೇಷಃ । ವ್ರಜಂ ನ ಗಾವೋ ಗೋಷ್ಠಂ ಗಾವ ಇವ । ಯದ್ವಾ । ನೇತಿ ಚಾರ್ಥೇ । ಗಾವಶ್ಚ ಮಮ ವ್ರಜಮಪಿಗ್ಮನ್ । ಅತ್ರೈಂದ್ರೇ ಸೂಕ್ತೇ ಪ್ರಾಯೇಣೈಂದ್ರೇ ಮರುತೋ ರಾಜ್ಞಾಂ ಚ ದಾನಸ್ತುತಯಃ । ಅನು. ೨-೨೨ । ಇತ್ಯುಕ್ತತ್ವಾದ್ರಾಜ್ಞಾಂ ದಾನಸ್ತುತಿರವಿರುದ್ಧಾ ॥

॥ ಪ್ರತಿಪದಾರ್ಥ ॥

**ಉತ**—ಅಥವಾ । **ಲಕ್ಷ್ಮಣ್ಯಸ್ಯ**—ಲಕ್ಷ್ಮಣ ಪುತ್ರನೂ । **ಧ್ವನ್ಯಸ್ಯ**— ಧ್ವನ್ಯನಾಮಕನೂ ಆದ ರಾಜನು ದಾನಮಾಡಿದವೂ । **ಜುಷ್ಟಾಃ**—ನನ್ನನ್ನು ಸೇರಿದವೂ । **ಸುರುಚಃ**—ಪ್ರಕಾಶಮಾನವಾದ ಕಾಂತಿಯುಳ್ಳವೂ । **ಯತಾನಾಃ**—ನನ್ನನ್ನು ಕರೆದೊಯ್ಯಲು ಆತುರವುಳ್ಳವೂ ಆದ । **ತ್ಯೇ**—ಅಶ್ವಗಳು । **ಮಾ**—ನನ್ನನ್ನು (ಯಜ್ಞಕ್ಕೆ ಕರೆದೊಯ್ಯಲಿ) (ಮತ್ತು) । **ಗಾವಃ**—ಗೋವುಗಳು । **ವ್ರಜಂ ನ**—ಕೊಟ್ಟಗೆಯನ್ನು ಆತುರದಿಂದ ಹೋಗಿ ಸೇರುವಂತೆ । **ಪ್ರಯತಾಃ**—ನನಗೆ ಕೊಡಲ್ಪಟ್ಟವೂ । **ಮಹ್ನಾ**—ಮಹತ್ತ್ವಪೂರಿತವಾದವೂ ಆದ । **ರಾಯಃ**—ಧನಗಳು । **ಸಂವರಣಸ್ಯ ಋಷೇಃ**—ಸಂವರಣನಾಮಕನಾದ ಋಷಿಯ ಗೃಹಕ್ಕೆ । **ಅಪಿ ಗ್ಮನ್**—ಹೋಗಿ ಸೇರಲಿ

॥ ಭಾವಾರ್ಥ ॥

ಲಕ್ಷ್ಮಣಪುತ್ರನೂ, ಧ್ವನ್ಯನಾಮಕನೂ ಆದ ರಾಜನಿಂದ ದಾನಮಾಡಲ್ಪಟ್ಟವೂ, ನನ್ನ ಸ್ವಾಮ್ಯಕ್ಕೆ ಸೇರಿದವೂ, ಕಾಂತಿಯುತವಾದವೂ, ನನ್ನನ್ನು ಯಜ್ಞಕ್ಕೆ ಕರೆದೊಯ್ಯಲು ಆತುರವುಳ್ಳವೂ ಆದ ಅಶ್ವಗಳು ನನ್ನನ್ನು ಯಜ್ಞಕ್ಕೆ ಕರೆ

ದೊಯ್ಯಲಿ. ಗೋವುಗಳು ಕೊಟ್ಟಿಗೆಗಳನ್ನು ಆತುರದಿಂದ ಹೋಗಿ ಸೇರುವಂತೆ, ನನಗೆ ದಾನಮಾಡಲ್ಪಟ್ಟವೂ ಮಹತ್ತ್ವಪೂರಿತವೂ ಆದ ಧನಗಳು ಸಂವರಣನಾಮಕನಾದ ಋಷಿಯ (ನನ್ನ) ಗೃಹಕ್ಕೆ ಹೋಗಿ ಸೇರಲಿ.

English Translation

Or may the bright and active steeds bestowed upon me by Dhwanya, the son of Lakshmana (bear me) , the riches, endowed with greatness, that have been presented, have passed ( to the dwelling) of the Rishi Samvarana, like cows to their stalls

## ಮೂವತ್ತನಾಲ್ಕನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಅಜಾತಶತ್ರುಮಿತಿ ನವರ್ಚಂ ದ್ವಿತೀಯಂ ಸೂಕ್ತಂ ಪ್ರಾಜಾಪತ್ಯಸ್ಯ ಸಂವರಣಸ್ಯಾರ್ಷಮೈಂದ್ರಂ । ನವಮೀ ತ್ರಿಷ್ಟುಪ್ ಶಿಷ್ಟಾಸ್ತ್ರಿಷ್ಟುಂಬತಃಪರಿಭಾಷಯಾ ಜಗತ್ಯಃ। ಅಜಾತಶತ್ರುಂ ನವ ತ್ರಿಷ್ಟುಬಂತ-ಮಿತ್ಯನುಕ್ರಮಣಿಕಾ । ವಿನಿಯೋಗೋ ಲೈಂಗಿಕಃ ॥**

ಅನುವಾದವು—**ಅಜಾತಶತ್ರುಂ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಪ್ರಜಾಪತಿಪುತ್ರನಾದ ಸಂವರಣನೆಂಬುವನು ಋಷಿಯು, ಇಂದ್ರನು ದೇವತೆಯು, ಈ ಸೂಕ್ತದ ಒಂಭತ್ತನೆಯ ಋಕ್ಕು ತ್ರಿಷ್ಟುಪ್ ಛಂದಸ್ಕವು. ಉಳಿದ ಋಕ್ಕುಗಳು ಜಗತೀ ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಅಜಾತಶತ್ರುಂ ನವ ತ್ರಿಷ್ಟುಬಂತಂ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು

### ಸೂಕ್ತ—೩೧.

॥ ಮಂಡಲ—೫ ॥ ಅನುವಾಕ —೩ ॥ ಸೂಕ್ತ—೩೪ ॥
॥ ಅಷ್ಟಕ—೪ ॥ ಅಧ್ಯಾಯ—೨ ॥ ವರ್ಗ—೩, ೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯
ಋಷಿಃ—ಸಂವರಣಃ ಪ್ರಾಜಾಪತ್ಯಃ ॥
ದೇವತಾ—ಇಂದ್ರಃ ॥
॥ ಛಂದಃ—೧-೮, ಜಗತೀ । ತ್ರಿಷ್ಟುಪ್ ॥

|| ಸಂಹಿತಾಪಾಠಃ ||

ಅಜಾತಶತ್ರುಮಜರಾ ಸ್ವರ್ವತ್ಯನು ಸ್ವಧಾಮಿತಾ ದಸ್ಮಮೀಯತೇ ।
ಸುನೋತನ ಪಚತ ಬ್ರಹ್ಮವಾಹಸೇ ಪುರುಷ್ಟುತಾಯ ಪ್ರತರಂ ದಧಾತನ ॥

|| ಪದಪಾಠಃ ||

ಅಜಾತಽಶತ್ರುಂ । ಅಜರಾ । ಸ್ವಃಽವತೀ । ಅನು । ಸ್ವಧಾ । ಅಮಿತಾ । ದಸ್ಮಂ । ಈಯತೇ ।
ಸುನೋತನ । ಪಚತ । ಬ್ರಹ್ಮಽವಾಹಸೇ । ಪುರುಽಸ್ತುತಾಯ । ಪ್ರಽತರಂ । ದಧಾತನ ॥ ೧ ॥

|| ಸಾಯಣಭಾಷ್ಯಂ ||

**ಅಜಾತಶತ್ರುಂ । ಅನುತ್ಪನ್ನಾಃ ಶಾತಯಿತಾರೋ ಯಸ್ಯ ತಂ । ದಸ್ಮಂ ಶತ್ರೂಣಾಮುಪಕ್ಷಪಯಿತಾರಮಜರಾಕ್ಷೀಣಾ ಸ್ವರ್ವತೀ ಸ್ವರಣವತ್ಯಮಿತಾಪರಿಮಿತಾ ಸ್ವಧಾನ್ನಂ ಹವಿರನ್ವೀಯತೇ । ಅನುಪ್ರಾಪ್ನೋತಿ । ತದರ್ಥಂ ಹೇ ಋತ್ವಿಜಃ ಸುನೋತನ । ಅಭಿಷುಣುತ । ಪಚತ ಪುರೋಡಾಶಾದಿಕಂ । ಕಸ್ಮೈ । ಬ್ರಹ್ಮವಾಹಸೇ ಬ್ರಹ್ಮಣಃ ಪರಿವೃಢಸ್ಯ ಸ್ತೋತ್ರಸ್ಯ ವಾಹಕಾಯ ಪುರುಷ್ಟುತಾಯ ಬಹುಭಿಃ ಸ್ತುತಾಯೇಂದ್ರಾಯ । ಪ್ರತರಂ ಪ್ರಕೃಷ್ಟತರಂ ದಧಾತನ । ಧಾರಯತ ಸ್ವಸ್ವೋಚಿತಕರ್ಮ ॥**

|| ಪ್ರತಿಪದಾರ್ಥ ||

**ಅಜರಾ**—ಕ್ಷಯರಹಿತವೂ । **ಸ್ವರ್ವತೀ**—ಸ್ವರ್ಗಕ್ಕೆ ಸಾಧಕವೂ । **ಅಮಿತಾ**—ಅಪರಿಮಿತವೂ ಆದ । **ಸ್ವಧಾ**—ಹವಿಸ್ಸಿನ ರೂಪದ ಅನ್ನವು । **ಅಜಾತಶತ್ರುಂ**—ಶತ್ರುವೇ ಇಲ್ಲದಿರುವವನೂ । **ದಸ್ಮಂ**—ಶತ್ರುನಾಶಕನೂ ಆದ ದೇವನನ್ನು । **ಅನು ಈಯತೇ**—ಹೋಗಿ ಸೇರುತ್ತದೆ (ಎಲೈ ಋತ್ವಿಕ್ಕುಗಳೇ) । **ಸುನೋತನ**—ಸೋಮರಸವನ್ನು ಹಿಂಡಿರಿ । **ಪಚತ**—ಪುರೋಡಾಶಾದಿಗಳನ್ನು ಪಕ್ವಮಾಡಿರಿ । **ಬ್ರಹ್ಮವಾಹಸೇ**—ಅತ್ಯುತ್ತಮವಾದ ಸ್ತೋತ್ರಗಳನ್ನು ಸ್ವೀಕರಿಸಿ ವಹಿಸುವವನೂ । **ಪುರುಷ್ಟುತಾಯ**—ಅನೇಕರಿಂದ ಸ್ತುತನಾಗುವವನೂ ಆದ ಇಂದ್ರನನ್ನುದ್ದೇಶಿಸಿ । **ಪ್ರತರಂ**—ಅತ್ಯುತ್ತಮವಾಗಿ । **ದಧಾತನ**—( ನಿಮ್ಮ ನಿಮ್ಮ ) ಕರ್ಮಗಳನ್ನು ನೆರವೇರಿಸಿರಿ.

|| ಭಾವಾರ್ಥ ||

ಕ್ಷಯರಹಿತವೂ, ಅಪರಿಮಿತವೂ ಆದ ಹವಿಸ್ಸಿನ ರೂಪದ ಅನ್ನವು ಅಜಾತಶತ್ರುವೂ, ಶತ್ರುನಾಶಕನೂ ಆದ ದೇವನನ್ನು ಹೋಗಿ ಸೇರುತ್ತದೆ ಎಲೈ ಋತ್ವಿಕ್ಕುಗಳೇ, ಸೋಮರಸವನ್ನು ಹಿಂಡಿರಿ. ಪುರೋಡಾಶಾದಿಗಳನ್ನು ಪಕ್ವಮಾಡಿರಿ. ಅತ್ಯುತ್ತಮವಾದ ಸ್ತೋತ್ರಗಳನ್ನು ಸ್ವೀಕರಿಸಿ ವಹಿಸುವವನೂ, ಅನೇಕರಿಂದ ಸ್ತುತನಾಗುವವನೂ ಆದ ಇಂದ್ರನನ್ನುದ್ದೇಶಿಸಿ ನಿಮ್ಮ ನಿಮ್ಮ ಕರ್ಮಗಳನ್ನು ಅತ್ಯುತ್ತಮವಾಗಿ ನೆರವೇರಿಸಿರಿ

English Translation

The undecaying, heaven-conferring, unlimited (sacrificial) food, goes to the tamer (of enemies), whose adversaries are unborn: therefore (priests), pour out (the libation), dress (the cakes and butter), deligently discharge (your offices) to him who is the accepter of prayer, who is glorified by many.

---

॥ ಸಂಹಿತಾಪಾಠಃ ॥

ಆ ಯಃ ಸೋಮೇನ ಜಠರಮಪಿಪ್ರತಾಮಂದತ ಮಘವಾ ಮಧ್ವೋ ಅಂಧಸಃ ।

ಯದೀಂ ಮೃಗಾಯ ಹಂತವೇ ಮಹಾವಧಃ ಸಹಸ್ರಭೃಷ್ಟಿಮುಶನಾ ವಧಂ ಯಮತ್ ॥ ೨ ॥

॥ ಪದಪಾಠಃ ॥

ಆ । ಯಃ । ಸೋಮೇನ । ಜಠರಂ । ಅಪಿಪ್ರತ । ಅಮಂದತ । ಮಘವಾ । ಮಧ್ವಃ । ಅಂಧಸಃ ।
ಯತ್ । ಈಂ । ಮೃಗಾಯ । ಹಂತವೇ । ಮಹಾವಧಃ । ಸಹಸ್ರಭೃಷ್ಟಿಂ । ಉಶನಾ । ವಧಂ ।
ಯಮತ್ ॥ ೨ ॥

॥ ಸಾಯಣಭಾಷ್ಯಂ ॥

ಯೋ ಮಘವಾ ಸೋಮೇನ ಜಠರಂ ಸ್ವಕೀಯೋದರಮಾ ಸರ್ವತೋಽಪಿಪ್ರತ ಅಪೂರಯತ್ ಮಧ್ವೋ ಮಧುರರಸಸ್ಯಾಂಧಸಃ ಸೋಮಸ್ಯ ಪಾನೇನಾಮಂದತ । ಅತೃಪ್ಯತ್ । ಯದ್ಯದೇಮಯಂ ಮೃಗಾಯೈತನ್ನಾಮಕಾಯಾಸುರಾಯ ಹಂತವೇ ತಂ ಹಂತುಂ ಮಹಾವಧೋ ಮಹಾವಜ್ರಃ ಸಹಸ್ರ-ಭೃಷ್ಟಿರಪರಿಮಿತತೇಜಾ ಉಶನಾ ಕಾಮಯಮಾನಃ ಶತ್ರುಂ ಯದ್ವೋಶನಸಾ ಸಹ ವಧಂ ವಜ್ರಂ ಯಮತ್ ಉದಯಚ್ಛತ್ ತದಾಪಿಪ್ರತ ಅಮಂದತ ಚ ॥

॥ ಪ್ರತಿಪದಾರ್ಥ ॥

**ಯಃ**—ಯಾವನು । **ಸೋಮೇನ**—ಸೋಮರಸದಿಂದ । **ಜಠರಂ**—ತನ್ನ ಜಠರವನ್ನು । **ಆ ಅಪಿಪ್ರತ**—ಪೂರ್ಣವಾಗಿ ತುಂಬಿಕೊಳ್ಳುವನೋ ಅಂತಹ । **ಮಘವಾ**—ಇಂದ್ರನು । **ಮಧ್ವಃ**—ಮಧುರವಾದ । **ಅಂಧಸಃ**—ಸೋಮರಸದ ಪಾನದಿಂದ । **ಅಮಂದತ**—ತೃಪ್ತಿಯನ್ನು ಹೊಂದಿದನು । **ಯತ್**—ಅನಂತರವೇ । **ಈಂ**—

ಇಂದ್ರನು । **ಮೃಗಾಯ**—ಮೃಗನಾಮಕನಾದ ಅಸುರನನ್ನು । **ಹಂತವೇ**—ಕೊಲ್ಲಲು । **ಉಶನಾ**—ಇಚ್ಛಿಸಿ । **ಸಹಸ್ರಭೃಷ್ಟಿಃ**—ಸಾವಿರಾರು ಅಲಗುಗಳುಳ್ಳದ್ದೂ । **ಮಹಾವಧಃ**—ನಾಶಕರವಾದದ್ದೂ ಆದ । **ವಧಂ**—ವಜ್ರಾಯುಧವನ್ನು । **ಯುಮತ್**—ಎತ್ತಿ ಹಿಡಿದನು

॥ ಭಾವಾರ್ಥ ॥

ಸೋಮರಸದಿಂದ ತನ್ನ ಜಠರವನ್ನು ಪೂರ್ಣವಾಗಿ ತುಂಬಿಕೊಳ್ಳತಕ್ಕ ಇಂದ್ರನು ಮಧುರವಾದ ಸೋಮರಸದ ಪಾನದಿಂದ ತೃಪ್ತಿಯನ್ನು ಹೊಂದಿದನು. ಒಡನೆಯೇ, ಅವನು ಮೃಗನಾಮಕನಾದ ಅಸುರನನ್ನು ಕೊಲ್ಲಲಿಚ್ಛಿಸಿ ಸಾವಿರಾರು ಅಲಗುಗಳುಳ್ಳದ್ದೂ, ನಾಶಕಾರಕವಾದದ್ದೂ ಆದ ಪ್ರಜಾಯುಧವನ್ನು ಎತ್ತಿ ಕೈಯಲ್ಲಿ ಹಿಡಿದನು.

English Translation

Maghavan, who fills his belly with the Soma, is exhilarated (by drinking) of the sweet-savoured beverage, whereupon he has lifted up his destructive thousand-edged weapon, desiring to slay (the Asura) Mriga.

---

॥ ಸಂಹಿತಾಪಾಠಃ ॥

ಯೋ ಅಸ್ಮೈ ಘ್ರಂಸ ಉತ ವಾ ಯ ಊಧನಿ ಸೋಮಂ ಸುನೋತಿ ಭವತಿ
ದ್ಯುಮಾँ ಅಹ ।
ಅಪಾಪ ಶಕ್ರಸ್ತತನುಷ್ಟಿಮೂಹತಿ ತನೂಶುಭ್ರಂ ಮಘವಾ ಯಃ
ಕವಾಸಖಃ ॥ ೩ ॥

॥ ಪದಪಾಠಃ ॥

ಯಃ । ಅಸ್ಮೈ । ಘ್ರಂಸೇ । ಉತ । ವಾ । ಯಃ । ಊಧನಿ । ಸೋಮಂ । ಸುನೋತಿ । ಭವತಿ ।
ದ್ಯುಽಮಾನ್ । ಅಹ ।
ಅಪಽಅಪ । ಶಕ್ರಃ । ತತನುಷ್ಟಿಂ । ಊಹತಿ । ತನೂಽಶುಭ್ರಂ । ಮಘಽವಾ । ಯಃ । ಕವಽಸಖಃ ॥ ೩ ॥

॥ ಸಾಯಣಭಾಷ್ಯಂ ॥

ಯೋ ಯಜಮಾನೋಽಸ್ಮಾ ಇಂದ್ರಾಯ ಘ್ರಂಸೇ । ಅಹರ್ನಾಮೈತತ್ । ಗೃಹ್ಯಂತೇಽಸ್ಮಿನ್ರಸಾ ಇತಿ ಘ್ರಂಸಃ । ತಸ್ಮಿನ್ । ಉತ ವಾ ಅಥವಾ ಯೋ ಯಜಮಾನ ಊಧನಿ । ಉದ್ಧತತರಂ ಭವತ್ಯು-

ನ್ನದ್ಧಮಿತಿ ವೋಧೋ ರಾತ್ರಿಃ । ಸ್ನೇಹಪ್ರದಾನರಸಾಭ್ಯಾಮೂಧಸಿ ರಾತ್ರೌ ಚ ಸಮುತ್ಪಾದ್ರಾತ್ರಿರಪ್ಯೂಧ ಉಚ್ಯತೇ । ಅಹನಿ ರಾತ್ರೌ ಚ ಸೋಮಂ ಸುನೋತಿ ಸ ಭವತಿ ದ್ಯುಮಾನ್ ದೀಪ್ತಿಮಾನ್ ॥ ಅಹೇತಿ ವಿನಿಗ್ರಹಾರ್ಥೀಯಃ । ಕಿಂಚ ಶಕ್ರಃ ಶಕ್ತೋऽಯಮಿಂದ್ರಸ್ತತನುಷ್ಟಿಂ । ತತಂ ಧರ್ಮಸಂತತಿಂ ನುದತಿ ವಷ್ಟಿ ಕಾಮಯತೇ ಕಾಮಾನಿತಿ ತತನುಷ್ಟಿಃ । ತಂ ತನೂಶುಭ್ರಂ ತನೂಃ ಶುಭ್ರಾ ಶೋಭನೀಯಾಲಂಕಾರಾದಿಭಿರ್ಯಸ್ಯ ತಂ । ತಾದೃಶಂ ಸ್ವಪೋಷಕಮಯಜ್ವಾನಮಪೋಹತಿ । ಅಪರೋऽಪಶಬ್ದಃ ಪೂರಣಾರ್ಥಃ । ಮಘವಾ ಧನವಾನ್ಯಶ್ಚ ಕವಾಸಖಃ ಕುತ್ಸಿತಪುರುಷಸಹಾಯಸ್ತಮಪೋಹತೀತಿ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಯಜಮಾನನು । **ಅಸ್ಮೈ**—ಇಂದ್ರನನ್ನುದ್ದೇಶಿಸಿ । **ಘ್ರಂಸೇ**—ಅಹಸ್ಸಿನಲ್ಲಿಯೂ । **ಉತ ವಾ**—ಅಥವಾ । **ಯಃ**—ಯಾವನೂ । **ಊಧನಿ**—ರಾತ್ರಿಕಾಲದಲ್ಲಿಯೂ । **ಸೋಮಂ**—ಸೋಮರಸವನ್ನು (ಅರ್ಪಿಸುವುದಕ್ಕಾಗಿ) । **ಸುನೋತಿ**—ಹಿಂಡುವನೋ (ಅವನು) । **ದ್ಯುಮಾನ್**—ಕಾಂತಿಯುತನಾಗಿ । **ಭವತಿ**—ಆಗುತ್ತಾನೆ । **ಶಕ್ರಃ**—ಇಂದ್ರನು । **ತತನುಷ್ಟಿಂ**—(ದೈವಭಕ್ತಿಯಿಲ್ಲದೇ) ತನ್ನ ಸಂತತಿಯವಿಷಯದಲ್ಲೇ ದುರಭಿಮಾನವುಳ್ಳವನೂ । **ತನೂಶುಭ್ರಂ**—ಸ್ವದೇಹದ ವಿಷಯದಲ್ಲೇ ಅಭಿಮಾನವುಳ್ಳವನೂ ಆದ ಕರ್ಮಭ್ರಷ್ಟನನ್ನು। **ಅಪ ಊಹತಿ**—ತಿರಸ್ಕರಿಸುತ್ತಾನೆ । **ಯಃ**—ಯಾವನು । **ಮಘವಾ**—ಧನವಂತನಾಗಿದ್ದರೂ ಸಹ । **ಕವಾಸಖಃ**—ಕೆಟ್ಟಜನರ ಸ್ನೇಹಿತನಾಗಿರುವನೋ (ಅವನನ್ನೂ ತಿರಸ್ಕರಿಸುತ್ತಾನೆ)

॥ ಭಾವಾರ್ಥ ॥

ಯಾವ ಯಾವ ಯಜಮಾನರು ಇಂದ್ರನನ್ನುದ್ದೇಶಿಸಿ ಅಹೋರಾತ್ರಗಳಲ್ಲೂ ಸೋಮರಸವನ್ನು ಹಿಂಡಿ ಅರ್ಪಿಸುವರೋ ಅವರು ಕಾಂತಿಯುತರಾಗಿ ಆಗುತ್ತಾರೆ ಯಾರು ದೈವಭಕ್ತಿಯಿಲ್ಲದೇ ಕೇವಲ ತನ್ನ ಸಂತತಿಯವಿಷಯದಲ್ಲೂ, ಸ್ವದೇಹದವಿಷಯದಲ್ಲೂ ದುರಭಿಮಾನವನ್ನಿಟ್ಟುಕೊಂಡಿರುವರೋ ಮತ್ತು ಯಾರು ಧನವಂತರಾಗಿದ್ದರೂ ಕೆಟ್ಟಜನರ ಸ್ನೇಹಿತರಾಗಿರುವರೋ ಅವರನ್ನು ಇಂದ್ರನು ತಿರಸ್ಕರಿಸುತ್ತಾನೆ.

English Translation

He who pours out the libation to that Indra, by day or by night, undoubtedly becomes illustrious . Shakra disregards the man who is proud of his descendants and vain of his person, and who, though wealthy, is the friend of the base.

---

॥ ಸಂಹಿತಾಪಾಠಃ ॥

ಯಸ್ಯಾವಧೀತ್ಪಿತರಂ ಯಸ್ಯ ಮಾತರಂ ಯಸ್ಯ ಶಕ್ರೋ ಭ್ರಾತರಂ ನಾತ ಈಷತೇ ।
ವೇತೀದ್ವಸ್ಯ ಪ್ರಯತಾ ಯತಂಕರೋ ನ ಕಿಲ್ಬಿಷಾದೀಷತೇ ವಸ್ವ ಆಕರಃ ॥

॥ ಪದಪಾಠಃ ॥

ಯಸ್ಯ । ಅವಧೀತ್ । ಪಿತರಂ । ಯಸ್ಯ । ಮಾತರಂ । ಯಸ್ಯ । ಶಕ್ರಃ । ಭ್ರಾತರಂ । ನ । ಅತಃ । ಈಷತೇ । ವೇತಿ । ಇತ್ । ಊಂ ಇತಿ । ಅಸ್ಯ । ಪ್ರಯತಾ । ಯತಂಽಕರಃ । ನ । ಕಿಲ್ಬಿಷಾತ್ । ಈಷತೇ । ವಸ್ವಃ । ಆಽಕರಃ ॥ ೪ ॥

॥ ಸಾಯಣಭಾಷ್ಯಂ ॥

ಶಕ್ರೋ ಶಕ್ತೋಽಯಂ ಯಸ್ಯಾಯಜ್ವನಃ ಪಿತರಮವಧೀತ್ ಹತವಾನ್ । ಯಸ್ಯ ಚ ಮಾತರಮವಧೀತ್ । ಯಸ್ಯ ಚ ಭ್ರಾತರಂ ಅತೋಽಸ್ಮಾದಯಜ್ವನಃ ಸಕಾಶಾನ್ನೇಷತೇ । ನ ಬಿಭೇತಿ ನ ಗಚ್ಛತಿ ವಾ । ಕಿಂತ್ವಸ್ಯ ಪ್ರಯತಾ ದತ್ತಾನಿ ಹವೀಂಷಿ ವೇತೀದು । ಕಾಮಯತ ಏವ । ಅಯಜ್ವಾನಂ ಶಿಕ್ಷಯಿತ್ವಾ ನಿಯೋಜಯತೀತ್ಯರ್ಥಃ । ಯತಂಕರೋ ಯಮನಕರ್ತಾ ವಸ್ವೋ ವಸುನೋ ಧನಸ್ಯಾಕರ ಆಭಿಮುಖ್ಯಕರ್ತಾ ಯಃ ಕಿಲ್ಬಿಷಾತ್ಪಿತ್ರಾದಿವಧಯುಕ್ತಾನ್ನೇಷತೇ ನ ಚಲತಿ ನ ಬಿಭೇತಿ ವಾ । ಇಂದ್ರಸ್ಯಾಸ್ತೋತ್ಯಾಣಾಂ ಹತರಿಂದ್ರೋ ಯತೀನ್ ಸಾಲಾವೃಕೇಭ್ಯಃ ಪ್ರಾಯಚ್ಛತ್ ಅಂತರಿಕ್ಷೇ ಪೌಲೋಮಾನ್ಪೃಥಿವ್ಯಾಂ ಕಾಲಕಾಂಜ್ಯಾನರುನ್ಮುಖಾನ್ಯತೀನ್ ಸಾಲಾವೃಕೇಭ್ಯಃ ಪ್ರಾಯಚ್ಛಮಿತ್ಯಾದಿ ಶ್ರುತಿಷು ಪ್ರಸಿದ್ಧಾ ॥

॥ ಪ್ರತಿಪದಾರ್ಥ ॥

**ಶಕ್ರಃ**—ಇಂದ್ರನು । **ಯಸ್ಯ**—ಯಾವ ಪುರುಷನ । **ಪಿತರಂ**—ತಂದೆಯನ್ನು । **ಅವಧೀತ್**—ಕೊಂದನೋ । **ಯಸ್ಯ**—ಯಾವನ । **ಮಾತರಂ**—ತಾಯಿಯನ್ನು ( ಕೊಂದಿರುವನೋ ) **ಯಸ್ಯ**—ಯಾವನ । **ಭ್ರಾತರಂ**—ಸಹೋದರರನ್ನು ಕೊಂದಿರುವನೊ । **ಅತಃ**—ಈ ಎಲ್ಲಾ ಜನರಿಂದಲೂ । **ನ ಈಷತೇ**—ಭಯಪಡುವುದಿಲ್ಲ । **ಅಸ್ಯ**—ಇಂತಹವರಿಂದ । **ಪ್ರಯತಾ**—ಅರ್ಪಿತವಾದ ಹವಿಸ್ಸುಗಳನ್ನು । **ವೇತೀದು**—ಖಂಡಿತ ಅಪೇಕ್ಷಿಸಿ ಸ್ವೀಕರಿಸುತ್ತಾನೆ । **ಯತಂಕರಃ**—ಕರ್ಮಗಳ ನಿಯಮಗಳನ್ನು ಬೋಧಿಸುವವನೂ । **ವಸ್ವಃ**—ಧನಕ್ಕೆ । **ಆಕರಃ**—ಆಶ್ರಯನೂ ಆದ ಇಂದ್ರನು । **ಕಿಲ್ಬಿಷಾತ್**—ಅವೈದಿಕರ ಪಾಪಕೃತ್ಯಗಳಿಂದ । **ನ ಈಷತೇ**—ಬೆದರುವುದಿಲ್ಲ.

॥ ಭಾವಾರ್ಥ ॥

ಇಂದ್ರನು ಯಾವ ಪುರುಷನ ತಂದೆಯನ್ನಾಗಲಿ, ಮಾತೃವನ್ನಾಗಲಿ ಅಥವಾ ಭ್ರಾತೃವನ್ನಾಗಲಿ ಅವರವರ ಪಾಪಕಾರ್ಯಕ್ಕಾಗಿ ಕೊಂದಿರುವನೋ ಅಂತಹ ಪುರುಷನಿಗೆ ಬೆದರುವುದೂ ಇಲ್ಲ. ಅಥವಾ ಅವನು ಯೋಗ್ಯರೀತಿಯಿಂದಿದ್ದು ಹವಿಸ್ಸನ್ನರ್ಪಿಸಿದರೆ ಅದನ್ನು ತಿರಸ್ಕರಿಸದೆ ಸ್ವೀಕರಿಸುತ್ತಾನೆ. ಕರ್ಮಗಳ ನಿಯಮಗಳನ್ನು ಬೋಧಿಸುವವನೂ ಧನಕ್ಕೆ ಆಶ್ರಯನೂ ಆದ ಇಂದ್ರನು ಅವೈದಿಕರ ಪಾಪಕೃತ್ಯಗಳಿಂದ ಬೆದರುವುದಿಲ್ಲ

## English Translation

Shakra does not turn away from him whose father, whose mother, whose brother he has slain, but is willing to accept his offerings : the regulator (of acts), the bestower of riches, does not turn away from iniquity.

॥ ಸಂಹಿತಾಪಾಠಃ ॥

ನ ಪಂಚಭಿರ್ದಶಭಿ ರ್ವಷ್ಟ್ಯಾರಭಂ ನಾಸುನ್ವತಾ ಸಚತೇ ಪುಷ್ಯತಾ ಚನ ।
ಜಿನಾತಿ ವೇದಮುಯಾ ಹಂತಿ ವಾ ಧುನಿರಾ ದೇವಯುಂ ಭಜತಿ
ಗೋಮತಿ ವ್ರಜೇ ॥ ೫ ॥

॥ ಪದಪಾಠಃ ॥

ನ । ಪಂಚಽಭಿಃ । ದಶಽಭಿಃ । ವಷ್ಟಿ । ಆಽರಭಂ । ನ । ಅಸುನ್ವತಾ । ಸಚತೇ । ಪುಷ್ಯತಾ । ಚನ ।
ಜಿನಾತಿ । ವಾ । ಇತ್ । ಅಮುಯಾ । ಹಂತಿ । ವಾ । ಧುನಿಃ । ಆ । ದೇವಽಯುಂ । ಭಜತಿ ।
ಗೋಽಮತಿ । ವ್ರಜೇ ॥ ೫ ॥

॥ ಸಾಯಣಭಾಷ್ಯಂ ॥

**ಅಯಮಿಂದ್ರಃ ಪಂಚಭಿರ್ದಶಭಿರ್ವಾ ಸಹಾಯೈರಾರಭಮಾರಂಭಂ ಶತ್ರುಹನನಾಯಾಲಂಬನಂ ನ ವಷ್ಟಿ । ಸಾಹಾಯ್ಯಂ ನಾಪೇಕ್ಷತ ಇತ್ಯರ್ಥಃ । ಯದ್ವಾ । ಅಮುಮಿಂದ್ರಂ ಪಂಚಭಿರ್ದಶಭಿರ್ವಾ ಯಜ್ಞಾದನ್ಯೈರುಪಾಯೈರಾರಭಮಾರಬ್ಧುಮುದ್ಯೋಗಂ ಕರ್ತುಂ ನ ವಷ್ಟಿ । ನ ಕಾಮಯತೇ। ಅಸುನ್ವತಾಭಿಷವಮಕುರ್ವತಾ ಸಹ ಪುಷ್ಯತಾ ಚನ ಬಂಧ್ವಾದೀನಪೋಷಯತಾಪಿ ನ ಸಚತೇ। ನ ಸಂಗಚ್ಛತೇ। ಅಸುನ್ವಂತಮಭಿಷವಮಕುರ್ವಾಣಮಯಷ್ಟಾರಮಪುಷ್ಣಂತಂ ಚ ನ ಪ್ರಾಪ್ನೋತೀತ್ಯರ್ಥಃ । ನ ಕೇವಲಮಪ್ರಾಪ್ತಿಮಾತ್ರಂ ಕಿಂತು ಜಿನಾತಿ ವಾ । ವಾಶಬ್ದಶ್ಚಾರ್ಥೇ । ಜಿನಾತಿ ಚ । ಬಾಧತೇ । ಇದಿತಿ ಪೂರಣಃ । ಹಂತಿ ವಾಮುಯಾಮುಮಯಷ್ಟಾರಂ ಧುನಿಃ ಕಂಪಕಃ ಶತ್ರೂಣಾಂ । ದೇವಯುಂ ದೇವಮಿಂದ್ರಂ ಕಾಮಯಮಾನಂ ಯಜಮಾನಂ ಗೋಮತಿ ವ್ರಜ ಆ ಭಜತಿ । ಯೋಜಯತೀತ್ಯರ್ಥಃ ॥**

॥ ಪ್ರತಿಪದಾರ್ಥ ॥

(**ಇಂದ್ರಃ**—ಇಂದ್ರನು) । **ಆರಭಂ**—ಶತ್ರುನಿರೋಧಕವಾದ ಪ್ರಯತ್ನಕ್ಕೆ । **ಪಂಚಭಿಃ**—ಐದು ಜನರೊಡನೆಯಾಗಲಿ । **ಧಶಭಿಃ**—ಹತ್ತು ಜನರೊಡನೆಯಾಗಲಿ । **ನ ವಷ್ಟಿ**—ಸಹಾಯವನ್ನಪೇಕ್ಷಿಸುವುದಿಲ್ಲ । **ಅಸುನ್ವತಾ**—(ಯಜ್ಞಾರ್ಥವಾಗಿ) ಸೋಮವನ್ನು ಹಿಂಡದವನೂ । **ಪುಷ್ಯತಾ ಚನ**—ಬಂಧ್ವಾದಿಗಳನ್ನು ಪೋಷಿಸದಿರುವನೂ ಆದ ಪುರುಷನೊಂದಿಗೆ । **ನ ಸಚತೇ**—ಸೇರುವುದಿಲ್ಲ ( ಅಷ್ಟೇ ಅಲ್ಲದೇ ) । **ಜಿನಾತಿ ವಾ**—ಅವನನ್ನು ಹಿಂಸಿಸುತ್ತಾನೆ । **ಹಂತಿ ವಾ**—ಅಥವಾ ಕೊಲ್ಲುತ್ತಾನೆ । **ಅಮು**—ಇಂತಹ ಕರ್ಮಭ್ರಷ್ಟನನ್ನು । **ಧುನಿಃ**—ಬೆದರಿಸುವ ಇಂದ್ರನು । **ದೇವಯುಂ**—ಇಂದ್ರಾದಿ ದೇವತೆಗಳನ್ನು ಸಹಾಯಕ್ಕಾಗಿ ಅಪೇಕ್ಷಿಸಿ ಪೂಜಿಸುವ ಯಜಮಾನನನ್ನು । **ಗೋಮತಿ**—ಗೋವುಗಳಿಂದ ಭರಿತವಾದ । **ವಜ್ರೇ**—ಕೊಟ್ಟಿಗೆಯೊಡನೆ । **ಆ ಭಜತಿ**—ಸೇರಿಸುತ್ತಾನೆ.

॥ ಭಾವಾರ್ಥ ॥

ಇಂದ್ರನು ಶತ್ರುನಾಶಕವಾದ ತನ್ನ ಪ್ರಯತ್ನಕ್ಕೆ ಐದು ಜನರಾಗಲಿ ಅಥವಾ ಹತ್ತು ಜನರಾಗಲಿ, ಯಾವ ಗುಂಪಿನ ಸಹ ಯವನ್ನೂ ಅಪೇಕ್ಷಿಸುವುದಿಲ್ಲ ಯಜ್ಞಾರ್ಥವಾಗಿ ಸೋಮವನ್ನು ಹಿಂಡದವನೂ, ಬಂಧ್ವಾದಿಗಳನ್ನು

ಪೋಷಿಸದಿರುವವನೂ ಆದ ಪುರುಷನೊಂದಿಗೆ ಸೇರುವುದೇ ಇಲ್ಲ ಅಷ್ಟೇ ಅಲ್ಲದೇ ಅವನನ್ನು ಹಿಂಸಿಸುತ್ತಾನೆ. ಅಥವಾ ಕೊಲ್ಲುತ್ತಾನೆ. ಇಂತಹ ಕರ್ಮಭ್ರಷ್ಟನನ್ನು ಬೆದರಿಸುವ ಇಂದ್ರನು ಇಂದ್ರಾದಿದೇವತೆಗಳನ್ನು ಪೂಜಿಸುವ ಯಜಮಾನರಿಗೆ ಗೋವುಗಳಿಂದ ಭರಿತವಾದ ಕೊಟ್ಟಿಗೆಗಳನ್ನು ಒದಗಿಸುತ್ತಾನೆ.

## English Translation

He desires not (association in) enterprises with five or with ten ; he associates not with the man who does not present libations ; and cherishes not ( his dependants ) : nay, the terrifier (of foes) punishes him, but he places the devout man in a pasturage stocked with cattle.

---

॥ ಸಂಹಿತಾಪಾಠಃ ॥

ವಿತ್ವಕ್ಷಣಃ ಸಮೃತೌ ಚಕ್ರಮಾಸಜೋಽಸುನ್ವತೋ ವಿಷುಣಃ ಸುನ್ವತೋ ವೃಧಃ ।
ಇಂದ್ರೋ ವಿಶ್ವಸ್ಯ ದಮಿತಾ ವಿಭೀಷಣೋ ಯಥಾವಶಂ ನಯತಿ ದಾಸಮಾರ್ಯಃ ॥ ೬ ॥

॥ ಪದಪಾಠಃ ॥

ವಿಽತ್ವಕ್ಷಣಃ । ಸಂಽಋತೌ । ಚಕ್ರಂಽಆಸಜಃ । ಅಸುನ್ವತಃ । ವಿಷುಣಃ । ಸುನ್ವತಃ । ವೃಧಃ ।
ಇಂದ್ರಃ । ವಿಶ್ವಸ್ಯ । ದಮಿತಾ । ವಿಽಭೀಷಣಃ । ಯಥಾಽವಶಂ । ನಯತಿ । ದಾಸಂ । ಆರ್ಯಃ ॥ ೬ ॥

॥ ಸಾಯಣಭಾಷ್ಯಂ ॥

ಸಮೃತೌ ಸಂಗ್ರಾಮೇ ವಿತ್ವಕ್ಷಣೋ ವಿಶೇಷೇಣ ತನೂಕರ್ತಾ ಶತ್ರೂಣಾಂ ತದರ್ಥಂ ಚಕ್ರಮಾಸಜೋ ರಥಚಕ್ರಸ್ಯಾಸಂಜಯಿತಾಸುನ್ವತೋಽಯಜಮಾನಸ್ಯ ವಿಷುಣಃ ಪರಾಙ್ಮುಖಃ ಸುನ್ವತೋ ಯಜಮಾನಸ್ಯ ವೃಧೋ ವರ್ಧಯಿತೇಂದ್ರೋ ವಿಶ್ವಸ್ಯ ದಮಿತಾ ಶಿಕ್ಷಯಿತಾ ವಿಭೀಷಣೋ ಭಯಜನಕ ಆರ್ಯಃ ಸ್ವಾಮೀ ಯಥಾವಶಂ ಯಥೇಚ್ಛಂ ದಾಸಂ ದಾಸಕರ್ಮಾಣಂ ಜನಂ ನಯತಿ ಸ್ವವಶಂ ॥

॥ ಪ್ರತಿಪದಾರ್ಥ ॥

**ಸಮೃತೌ**—ಸಂಗ್ರಾಮದಲ್ಲಿ । **ವಿತ್ವಕ್ಷಣಃ**—ಶತ್ರುಬಲವನ್ನು ಕ್ಷಯಿಸುವಂತೆ ಮಾಡುವವನೂ । **ಚಕ್ರಮಾಸಜಃ**—ಅದಕ್ಕೆ ತನ್ನ ರಥಚಕ್ರವನ್ನು ವೇಗವಾಗಿ ಚಲಿಸುವಂತೆ ಮಾಡುವವನೂ । **ಅಸುನ್ವತಃ**—

**ಸೋ**ಮವನ್ನು ಹಿಂಡದಿರುವ ಪುರುಷನಿಂದ । **ವಿಷುಣಃ**—ಪರಾಙ್ಮುಖನಾಗುವವನೂ । **ಸುನ್ವತಃ**—ಯಜ್ಞಕ್ಕಾಗಿ ಸೋಮವನ್ನು ಹಿಂಡುವ ಯಜಮಾನನಿಗೆ । **ವೃಧಃ**—ವೃದ್ಧಿಕಾರಕನೂ ಆದ । **ಇಂದ್ರಃ**—ಇಂದ್ರನು । **ವಿಶ್ವಸ್ಯ**—ಲೋಕಕ್ಕೆಲ್ಲಾ । **ದಮಿತಾ**—ಶಿಕ್ಷಕನೂ । **ವಿಭೀಷಣಃ**—ಭಯಜನಕನೂ । **ಆರ್ಯಃ**—ಪ್ರಭುವೂ ಆಗಿ । **ಯಥಾವಶಂ**—ತನ್ನಿಷ್ಟಬಂದತೆ । **ದಾಸಂ**—ದಾಸಜನರನ್ನು । **ನಯತಿ**—ತನ್ನ ವಶಪಡಿಸಿಕೊಳ್ಳುತ್ತಾನೆ.

॥ ಭಾವಾರ್ಥ ॥

ಸಂಗ್ರಾಮದಲ್ಲಿ ಶತ್ರುಬಲವನ್ನು ಕ್ಷಯಿಸುವಂತೆ ಮಾಡುವವನೂ, ಅದಕ್ಕಾಗಿ ತನ್ನ ರಥಚಕ್ರವನ್ನು ವೇಗವಾಗಿ ಚಲಿಸುವಂತೆ ಮಾಡುವವನೂ, ಸೋಮವನ್ನು ಹಿಂಡದಿರುವ ಪುರಷನಿಂದ ಪರಾಙ್ಮುಖನಾಗುವವನೂ, ಯಜ್ಞಕ್ಕಾಗಿ ಸೋಮವನ್ನು ಹಿಂಡುವ ಯಜಮಾನನಿಗೆ ವೃದ್ಧಿಕಾರಕನೂ ಆದ ಇಂದ್ರನು ಲೋಕಕ್ಕೆಲ್ಲಾ ಶಿಕ್ಷಕನೂ, ಭಯ ಪ್ರಭುವೂ ಆಗಿ ದಾಸಜನರನ್ನು ತನ್ನಿಷ್ಟಬಂದಂತೆ ತನ್ನ ವಶಪಡಿಸಿಕೊಳ್ಳುತ್ತಾನೆ.

English Translation

Thinning (his enemies) in battle, and accelerating the wheels (of his car), he turns away from him who offers no libation, and augments (the prosperity of) the offerer : Indra, the subduer of all, the formidable, the lord, conducts the Dasa at his pleasure.

॥ ಸಂಹಿತಾಪಾಠಃ ॥

**ಸಮೀಂ ಪಣೇರಜತಿ ಭೋಜನಂ ಮುಷೇ ವಿ ದಾಶುಷೇ ಭಜತಿ ಸೂನರಂ ವಸು ।**

**ದುರ್ಗೇ ಚನ ಧ್ರಿಯತೇ ವಿಶ್ವ ಆ ಪುರು ಜನೋ ಯೋ ಅಸ್ಯ ತವಿಷೀಮಚುಕ್ರುಧತ್ ॥ ೭ ॥**

॥ ಪದಪಾಠಃ ॥

**ಸಂ । ಈಂ । ಪಣೇಃ । ಅಜತಿ । ಭೋಜನಂ । ಮುಷೇ । ವಿ । ದಾಶುಷೇ । ಭಜತಿ । ಸೂನರಂ । ವಸು । ದುಃಽಗೇ । ಚನ । ಧ್ರಿಯತೇ । ವಿಶ್ವಃ । ಆ । ಪುರು । ಜನಃ । ಯಃ । ಅಸ್ಯ । ತವಿಷೀಂ । ಅಚುಕ್ರುಧತ್ ॥ ೭ ॥**

॥ ಸಾಯಣಭಾಷ್ಯಂ ॥

**ಈಮುಯಮಿಂದ್ರಃ ಪಣೇರ್ವಣಿಜ ಇವ ಲುಬ್ಧಕಸ್ಯಾದಾತುರ್ಭೋಜನಂ ಧನಮುಷ್ಣಂ ವಾ ಮುಷೇ ಚೋರಯಿತುಂ ಸಮಜತಿ । ಸಮ್ಯಕ್ ಗಚ್ಛತಿ । ಗತ್ವಾ ಚಾದಾಯ ದಾಶುಷೇ ಹವಿರ್ದಾತ್ರೇ ಯಜಮಾನಾಯ ವಿ ಭಜತಿ ಸೂನರಂ ಶೋಭನಮನುಷ್ಯಂ ವಸು ಧನಂ । ಅಯಷ್ಟುರ್ಧನಮಾಕೃಷ್ಯ ಯಷ್ಟ್ರೇ ಪ್ರಯಚ್ಛತೀತ್ಯರ್ಥಃ । ನ ಕೇವಲಂ ವಣಿಗ್ಧನಪ್ರದಾನಮಾತ್ರಂ ಕಿಂತು ಪುರು ಪುರುಣಿ ದುರ್ಗೇ ಚನ ದುಃಖೇನ ಗಂತವ್ಯ ಆಪದ್ಯಪಿ ವಿಶ್ವಃ ಸರ್ವೋಽಪಿ ದಾತೃಜನ ಆ ಧ್ರಿಯತೇ । ಆಸ್ಥಾಪ್ಯತೇ । ಯೋ ಜನೋಽಸ್ಯೇಂದ್ರಸ್ಯ ತವಿಷೀಂ ಬಲಮಚುಕ್ರುಧತ್ ವಿಹಿತಾಕರಣಾದಿನಾ ತಸ್ಯ ಪಣೇರಜತೀತಿ ಪೂರ್ವಶೇಷಃ । ಯದ್ವಾ । ಯೋಽಸ್ಯ ತವಿಷೀಮಚುಕ್ರುಧತ್ ಸ ಸರ್ವೋಽಪಿ ಜನೋ ದುರ್ಗೇ ಚನಾಧ್ರಿಯತ ಇಂದ್ರೇಣ ॥ ಚನೇತ್ಯೇಕಪದಮಧ್ಯೇತೃಸಂಪ್ರದಾಯಪ್ರಾಪ್ತಂ ॥**

॥ ಪ್ರತಿಪದಾರ್ಥ ॥

**ಈಂ**—ಈ ಇಂದ್ರನು। **ಪಣೇಃ**—ದಾನರಹಿತನಾದ ಲೋಭಿಯ। **ಭೋಜನಂ**—ಅನ್ನಸಂಪತ್ತನ್ನು। **ಮುಷೇ**—ಅಪಹರಿಸುವುದಕ್ಕೆ । **ಸಂ ಅಜತಿ**—ಪ್ರಯತ್ನಿಸುತ್ತಾನೆ । **ದಾಶುಷೇ**—ಹವಿಸ್ಸನ್ನರ್ಪಿಸುವ ಯಜಮಾನನಿಗೆ । **ಸೂನರಂ**—ಮಾನವರಿಗೆ ಹಿತಕರವಾದ । **ವಸು**—ಧನವನ್ನು । **ವಿ ಭಜತಿ**—ಒದಗಿಸುತ್ತಾನೆ । **ಯಃ ಜನಃ**—ಯಾವ ಪುರುಷನು । **ಅಸ್ಯ**—ಇಂದ್ರನ । **ತವಿಷೀಂ**—ಬಲವನ್ನು । **ಅಚುಕ್ರುಧತ್**—ಅವಹೇಳನಮಾಡಿ । ಕೆರಳಿಸುವನೋ ಅಂತಹ । **ವಿಶ್ವಃ**—ಸಕಲಜನವೂ ಸಹ । **ಪುರು**—ಅತ್ಯಧಿಕವಾದ । **ದುರ್ಗೇ ಚನ**—ದುಃಖದಲ್ಲಿ । **ಆ ಧ್ರಿಯತೇ**—ಇಡಲ್ಪಡುತ್ತಾರೆ.

॥ ಭಾವಾರ್ಥ ॥

ಇಂದ್ರನು ದಾನರಹಿತನಾದ ಲೋಭಿಯ ಅನ್ನಸಂಪತ್ತನ್ನು ಅಪಹರಿಸಲು ಪ್ರಯತ್ನಿಸುತ್ತಾನೆ. ಮಾನವನಿಗೆ ಹಿತಕರವಾದ ಧನವನ್ನು ಹವಿಸ್ಸನ್ನರ್ಪಿಸುವ ಯಜಮಾನನಿಗೆ ಒದಗಿಸುತ್ತಾನೆ. ಯಾವ ಪುರುಷನು ಇಂದ್ರನ ಬಲವನ್ನು ಅವಹೇಳನಮಾಡಿ ಕೆರಳಿಸುವನೋ ಅಂತಹ ಸಕಲಜನವೂ ಸಹ ಅತ್ಯಧಿಕವಾದ ದುಃಖಕ್ಕೆ ಭಾಗಿಯಾಗ ಬೇಕಾಗುತ್ತವೆ

English Translation

He proceeds to plunder the wealth of the ( avaricious ), and bestows the riches that are prized by man upon the donor (of the libation) : every man is involved in great difficulty who provokes the might of Indra to wrath.

---

॥ ಸಂಹಿತಾಪಾಠಃ ॥

ಸಂ ಯಜ್ಜನೌ ಸುಧನೌ ವಿಶ್ವಶರ್ಧಸಾವವೇದಿಂದ್ರೋ ಮಘವಾ ಗೋಷು ಶುಭ್ರಿಷು ।

ಯುಜಂ ಹ್ಯ೧ನ್ಯಮಕೃತ ಪ್ರವೇಪನ್ಯುದೀಂ ಗವ್ಯಂ ಸೃಜತೇ ಸತ್ವಭಿ-
ರ್ಧುನಿಃ ॥ ೮ ॥

॥ ಪದಪಾಠಃ ॥

ಸಂ । ಯತ್ । ಜನೌ । ಸುsಧನೌ । ವಿಶ್ವsಶರ್ಧಸೌ । ಅವೇತ್ । ಇಂದ್ರಃ । ಮಘsವಾ । ಗೋಷು । ಶುಭ್ರಿಷು ।

ಯುಜಂ । ಹಿ । ಅನ್ಯಂ । ಅಕೃತ । ಪ್ರsವೇಪನೀ । ಉತ್ । ಈಂ । ಗವ್ಯಂ । ಸೃಜತೇ । ಸತ್ವsಭಿಃ । ಧುನಿಃ ॥ ೮ ॥

॥ ಸಾಯಣಭಾಷ್ಯಂ ॥

ಸಮವೇತ್ಸಂಜಾನಾತಿ ಯದ್ಯದಾ ಜನೌ ಪರಸ್ಪರಂ ಪ್ರತಿದ್ವಂದ್ವಿನೌ ಸುಧನೌ ಶೋಭನಧನೌ ವಿಶ್ವಶರ್ಧಸೌ ವ್ಯಾಪ್ತಬಲೌ ಬಹೂತ್ಸಾಹೌ ವಾ ಮಘವಾ ಧನವಾನಿಂದ್ರೋ ಗೋಷು ಶುಭ್ರಿಷು ಶೋಭನಾಸು ಗೋಷು ನಿಮಿತ್ತಭೂತಾಸು ಅನ್ಯಂ ಯಷ್ಟಾರಂ ಯುಜಂ ಸಹಾಯಮಕೃತ ಕೃತವಾನ್ ಪ್ರವೇಪನೀ ಶತ್ರೂಣಾಂ ಪ್ರವೇಪನವಾನ್ । ಈಮಸ್ಮೈ ಗವ್ಯಂ ಗೋಸಮೂಹಮುತ್ಸೃಜತೇ ಸತ್ವಭಿ-ರ್ಮರುದ್ಭಿಃ ಸಹ ಧುನಿರ್ಮೇಘಾನಾಂ ಕಂಪಯಿತಾ । ಇಂದ್ರೋ ಯಜಮಾನಮಯಜಮಾನಂ ವಾ ಯಂ ಜಾನಾತಿ ಗೋನಿಮಿತ್ತಂ ಜ್ಞಾತ್ವಾ ಯಜ್ವನೇ ಗೋಸಮೂಹಂ ಪ್ರಯಚ್ಛತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಮಘವಾ**—ಧನವಂತನಾದ । **ಇಂದ್ರಃ**—ಇಂದ್ರನು । **ಯತ್**—ಯಾವಾಗ । **ಶುಭ್ರಿಷು**—ಪ್ರಕಾಶಮಾನಗಳಾದ । **ಗೋಷು**—ಗೋವುಗಳ ನಿಮಿತ್ತವಾಗಿ (ಹೋರಾಡುವ) । **ಸುಧನೌ**—ಧನಸಂಪತ್ತುಳ್ಳವರೂ । **ವಿಶ್ವಶರ್ಧಸೌ**—ಅತ್ಯಧಿಕವಾದ ಬಲವುಳ್ಳವರೂ ಆದ । **ಜನೌ**—ಪ್ರತಿದ್ವಂದ್ವಿಗಳಲ್ಲಿ । **ಸಂ ಅವೇತ್**—(ಯಜ್ಞಕರ್ತನಾರು, ಅಲ್ಲದವನಾರು ಎಂದು) ವಿವೇಚನೆಮಾಡಿ ತಿಳಿಯುವನೋ ಆಗ । **ಪ್ರವೇಪನೀ**—ಶತ್ರುವಿಗೆ ಭಯವನ್ನು ಕಲ್ಪಿಸಿ । **ಅನ್ಯಂ**—ಯಜ್ಞಕರ್ತನಿಗೆ । **ಯುಜಂ**—ಸಹಾಯವನ್ನು । **ಅಕೃತ**—ಮಾಡುತ್ತಾನೆ । **ಸತ್ವಭಿಃ**—ಮರುತ್ತುಗಳೊಡನೆ । **ಧುನಿಃ**—ಮೇಘಗಳನ್ನು ಚಲಿಸುವಂತೆ ಮಾಡುವ ಇಂದ್ರನು । **ಈಂ**—ಇಂತಹ ಯಜಮಾನನಿಗೆ । **ಗವ್ಯಂ**—ಗೋ ಸಮೂಹವನ್ನು । **ಉತ್ಸೃಜತೇ**—ನಿರ್ಮಿಸುತ್ತಾನೆ.

॥ ಭಾವಾರ್ಥ ॥.

ಧನವಂತನಾದ ಇಂದ್ರನು ಪ್ರಕಾಶಮಾನಗಳಾದ ಗೋವುಗಳ ನಿಮಿತ್ತವಾಗಿ ಹೋರಾಡುವ ಧನಸಂಪತ್ತುಳ್ಳವರೂ ಅತ್ಯಧಿಕವಾದ ಬಲವುಳ್ಳವರೂ ಆದ ಪ್ರತಿದ್ವಂದ್ವಿಗಳಲ್ಲಿ ಯಜ್ಞಕರ್ತನಾರು ಅಲ್ಲದವನಾರು ಎಂದು ತಿಳಿದೊಡನೆಯೇ ಶತ್ರುವಿಗೆ ಭಯವನ್ನು ಕಲ್ಪಿಸಿ ಯಜ್ಞಕರ್ತನಿಗೆ ಸಹಾಯವನ್ನು ಮಾಡುತ್ತಾನೆ. ಮರುತ್ತುಗಳೊಡಗೂಡಿ ಮೆಘಗಳನ್ನು ಚಲಿಸುವಂತೆ ಮಾಡುವ ಇಂದ್ರನು ಇಂತಹ ಯಜಮಾನನಿಗೆ ಗೋ ಸಮೂಹವನ್ನು ನಿರ್ಮಿಸುತ್ತಾನೆ

## English Translation

When Indra, the possessor of opulence, discriminates between two men, both wealthy, and exerting themselves (against each other) for the sake of valuable cattle, he takes one of them as his associate, causing (his adversaries) to tremble, and the agitator (of the clouds), together with the Maruts, bestows upon him herds of cattle.

---

॥ ಸಂಹಿತಾಪಾಠಃ ॥

ಸಹಸ್ರಸಾಮಾಗ್ನಿವೇಶಂ ಗೃಣೀಷೇ ಶತ್ರಿಮಗ್ನ ಉಪಮಾಂ ಕೇತುಮರ್ಯಃ ।
ತಸ್ಮಾ ಆಪಃ ಸಂಯತಃ ಪೀಪಯಂತ ತಸ್ಮಿನ್ ಕ್ಷತ್ರಮಮವತ್ತ್ವೇಷಮಸ್ತು ॥

॥ ಪದಪಾಠಃ ॥

ಸಹಸ್ರಽಸಾಂ । ಆಗ್ನಿಽವೇಶಂ । ಗೃಣೀಷೇ । ಶತ್ರಿಂ । ಅಗ್ನೇ । ಉಪಽಮಾಂ । ಕೇತುಂ । ಅರ್ಯಃ ।
ತಸ್ಮೈ । ಆಪಃ । ಸಂಽಯತಃ । ಪೀಪಯಂತ । ತಸ್ಮಿನ್ । ಕ್ಷತ್ರಂ । ಅಮಽವತ್ । ತ್ವೇಷಂ । ಅಸ್ತು ॥

॥ ಸಾಯಣಭಾಷ್ಯಂ ॥

ಅಗ್ನಿವೇಶಿಸುತಂ ಶತ್ರಿಮಸಂಖ್ಯಾತಧನಪ್ರದಂ । ಅಶಾಸ್ತ ಋಷಿರಂತ್ಯರ್ಚಾ ಪ್ರಜಾಪತಿಸುತಃ ಸುಧೀಃ ॥ ಅರ್ಯೋಽಹಂ ಸಹಸ್ರಸಾಮಪರಿಮಿತಧನಪ್ರದಮಾಗ್ನಿವೇಶಿಮಗ್ನಿವೇಶಿಸುತಂ ಶತ್ರಿಮೇತನ್ನಾಮಕಂ ರಾಜರ್ಷಿಂ ಗೃಣೀಷೇ । ಗೃಣೇ । ಸ್ತೌಮಿ । ಹೇ ಅಗ್ನೇ ಅಂಗನಾದಿಗುಣವಿಶಿಷ್ಟೇಂದ್ರ । ಕೀದೃಶಂ ತಂ । ಉಪಮಾಮುಪಮಾನಭೂತಂ ಕೇತುಂ ಪ್ರಜ್ಞಾಪಕಂ । ಪ್ರಖ್ಯಾತಮಿತ್ಯರ್ಥಃ । ತಸ್ಮಾ ಆಪಃ ಸಂಯತಃ ಸಮ್ಯಕ್ ಗಚ್ಛಂತ್ಯಃ ಪೀಪಯಂತ । ಪ್ಯಾಯಂತಾಂ । ತಸ್ಮಿನ್ರಾಜ್ಞಿ ಕ್ಷತ್ರಂ ಧನಮಮವದ್ಬಲಸಹಿತಂ ತ್ವೇಷಂ ದೀಪ್ತಮಸ್ತ್ವಿತಿ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಅರ್ಯಃ**—ಅರ್ಯರೂಪನಾದ ನಾನು । **ಉಪಮಾಂ**—(ಯಜ್ಞಕರ್ತರಿಗೆ) ಮಾದರಿಪುರುಷನೂ । **ಕೇತುಂ**—ಪ್ರಖ್ಯಾತನೂ । **ಸಹಸ್ರಸಾಂ**—ಅಪರಿಮಿತವಾದ ಧನದ ದಾತನೂ । **ಅಗ್ನಿವೇಶಿಂ**—ಅಗ್ನಿವೇಶನ ಪುತ್ರನೂ ಆದ । **ಶತ್ರಿಂ**—ಶತ್ರಿಯೆಂಬ ರಾಜರ್ಷಿಯನ್ನು । **ಗೃಣೀಷೇ**—ಸ್ತುತಿಸುತ್ತೇನೆ । **ತಸ್ಮೈ**—ಆ ರಾಜನಿಗಾಗಿ । **ಆಪಃ**—ಉದಕಗಳು । **ಸಂಯತಃ**—ಒಟ್ಟಿಗೆ ಸೇರಿಕೊಂಡು । **ಪೀಪಯಂತ**—ತೃಪ್ತಿಪಡಿಸಲಿ । **ತಸ್ಮಿನ್**—ಆ ರಾಜನಲ್ಲಿ । **ಕ್ಷತ್ರಂ**—ಧನವು । **ಅಮವತ್**—ಬಲಸಹಿತವಾಗಿಯೂ । **ತ್ವೇಷಂ**—ಕಾಂತಿಯುಕ್ತವಾಗಿಯೂ । **ಅಸ್ತು**—ಸೇರಿಕೊಳ್ಳಲಿ ।

॥ ಭಾವಾರ್ಥ ॥

ಎಲೈ ಅಗ್ನಿಯೇ, ಪೂಜ್ಯನಾದ ನಾನು, ಯಜ್ಞಕರ್ತರಿಗೆಲ್ಲಾ ಮಾದರಿಯಾದ ಪುರುಷನೂ, ಪ್ರಖ್ಯಾತನೂ, ಅಪರಿಮಿತವಾದ ಧನದ ದಾತನೂ, ಅಗ್ನಿವೇಶನಪುತ್ರನೂ ಆದ ಶತ್ರಿಯೆಂಬ ರಾಜರ್ಷಿಯನ್ನು ಸ್ತುತಿಸುತ್ತೇನೆ. ಆ ರಾಜನಿಗಾಗಿ ಉದಕಗಳೆಲ್ಲಾ ಒಟ್ಟಿಗೆ ಸೇರಿಕೊಂಡು ತೃಪ್ತಿಪಡಿಸಲಿ. ಆ ರಾಜನಲ್ಲಿ ಬಲಸಹಿತವಾದುದೂ ಕಾಂತಿಯುತವಾದುದೂ ಆದ ಧನವು ಸೇರಿಕೊಳ್ಳಲಿ.

English Translation

I, Arya, Agni, praise Satri, the son of Agnivesha, the bestower of thousands, a type for comparison : may the collected waters yield him abundance , may wealth, and strength, and glory be upon him

## ಮೂವತ್ತೈದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಯಸ್ತೇ ಸಾಧಿಷ್ಠ ಇತ್ಯಷ್ಟರ್ಚಂ ತೃತೀಯಂ ಸೂಕ್ತಂ । ಅಂಗಿರೋಗೋತ್ರಃ ಪ್ರಭೂವಸುರ್ನಾಮ ಋಷಿಃ । ಅಂತ್ಯಾ ಪಂಕ್ತಿಃ । ಪಂಕ್ತ್ಯಂತಪರಿಭಾಷಯಾ ಶಿಷ್ಟಾ ಅನುಷ್ಟುಭಃ । ಇಂದ್ರೋ ದೇವತಾ । ಯಸ್ತೇಽಷ್ಟೌ ಪ್ರಭೂವಸುರಾಂಗಿರಸಃ ಪಂಕ್ತ್ಯಂತಮಿತ್ಯನುಕ್ರಾಂತಂ ॥ ಸೂಕ್ತವಿನಿಯೋಗೋ ಲೈಂಗಿಕಃ ॥ ಅಭಿಪ್ಲವಿಕೇಷೂಕ್ಥ್ಯೇಷು ತೃತೀಯಸವನ ಆದ್ಯಸ್ತೃಚೋಽಚ್ಛಾವಾಕಸ್ಯ ವೈಕಲ್ಪಿಕೋಽನುರೂಪಃ । ಸೂತ್ರಿತಂ ಚ । ಯಸ್ತೇ ಸಾಧಿಷ್ಠೋಽವಸೇ ಪುರಾಂ ಭಿಂದುರ್ಯುವಾ ಕವಿಃ । ಆ. ೭-೮ । ಇತಿ ॥ ದ್ವಿತೀಯತೃತೀಯಯೋಃ ಸ್ವರಸಾಮ್ನೋಶ್ಚಾದ್ಯೌ ತೃಚಾವನುರೂಪೌ । ಯಸ್ತೇ ಸಾಧಿಷ್ಠೋಽವಸ ಇತಿ ಷಳನುಷ್ಟುಭಃ । ಆ. ೮-೫ । ಇತಿ ಹಿ ಸೂತ್ರಿತಂ ॥**

ಅನುವಾದವು—**ಯಸ್ತೇ ಸಾಧಿಷ್ಠಃ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅಂಗಿರಾಋಷಿಗೋತ್ರೋದ್ಭವನಾದ ಪ್ರಭೂವಸುಃ ಎಂಬುವನು ಋಷಿಯು, ಇಂದ್ರನು ದೇವತೆಯು; ಈ ಸೂಕ್ತದ ಕೊನೆಯ ಋಕ್ಕು ಪಂಕ್ತಿಛಂದಸ್ಕವು. ಉಳಿದ ಋಕ್ಕುಗಳು ಅನುಷ್ಟುಪ್‌ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಯಸ್ತೇಽಷ್ಟೌ ಪ್ರಭೂವಸುರಾಂಗಿರಸಃ ಪಂಕ್ತ್ಯಂತಂ** ಎಂದು ಹೇಳಿರುವುದು. ಸೂಕ್ತವಿನಿಯೋಗವು ಲೈಂಗಿಕವು. ಅಭಿಪ್ಲವಸಂಬಂಧವಾದ ಉಕ್ಥ್ಯವೆಂಬ ಯಾಗಗಳಲ್ಲಿ ತೃತೀಯಸವನಕಾಲದಲ್ಲಿ ಈ ಸೂಕ್ತದ ಮೊದಲಿನ ತೃಚವನ್ನು (ಮೂರು ಋಕ್ಕುಗಳು) ಅಚ್ಛಾವಾಕವೆಂಬ ಋತ್ವಿಜನು ವಿಕಲ್ಪವಾಗಿ ಪಠಿಸಬೇಕಾದ ಅನುರೂಪತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯಸ್ತೇ ಸಾಧಿಷ್ಠೋಽವಸೇ ಪುರಾಂ ಭಿಂದುರ್ಯುವಾ ಕವಿಃ** ಎಂಬ ಸೂತ್ರದಿಂದ (ಆ. ೭-೮) ವಿವೃತವಾಗಿರುವುದು. ಎರಡು ಮತ್ತು ಮೂರನೆಯ ಸ್ವರಸಾಮಗಳೆಂಬ ಮಂತ್ರಗಳನ್ನು ಪಠಿಸುವಾಗ ಈ ಸೂಕ್ತದ ಮೊದಲನೆಯ ಮತ್ತು ಎರಡನೆಯ ತೃಚಗಳನ್ನು (೧-೩ ಮತ್ತು ೪-೬ ಋಕ್ಕುಗಳನ್ನು) ಅನುರೂಪತೃಚಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಯಸ್ತೇ ಸಾಧಿಷ್ಠೋಽವಸ ಇತಿ ಷಳನುಷ್ಟುಭಃ** ಎಂಬ ಸೂತ್ರದಿಂದ (ಆ. ೮-೫) ವಿವೃತವಾಗಿರುವುದು.

## ಸೂಕ್ತ—೩೫

॥ ಮಂಡಲ—೫॥ ಅನುವಾಕ—೩ ॥ ಸೂಕ್ತ—೩೫ ॥
॥ ಅಷ್ಟಕ—೪ । ಅಧ್ಯಾಯ— ೨ ॥ ವರ್ಗ—೫, ೬ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೮
॥ ಋಷಿಃ—ಪ್ರಭೂವಸುರಾಂಗಿರಸಃ ॥
॥ ದೇವತಾ—ಇಂದ್ರಃ ॥
॥ ಛಂದಃ—೧-೭. ಅನುಷ್ಟುಪ್ । ೮. ಪಂಕ್ತಿಃ ॥

॥ ಸಂಹಿತಾಪಾಠಃ ॥

ಯಸ್ತೇ ಸಾಧಿಷ್ಠೋಽವಸ ಇಂದ್ರ ಕ್ರತುಷ್ಟಮಾ ಭರ ।
ಅಸ್ಮಭ್ಯಂ ಚರ್ಷಣೀಸಹಂ ಸಸ್ನಿಂ ವಾಜೇಷು ದುಷ್ಟರಂ ॥ ೧ ॥

॥ ಪದಪಾಠಃ ॥

ಯಃ । ತೇ । ಸಾಧಿಷ್ಠಃ । ಅವಸೇ । ಇಂದ್ರ । ಕ್ರತುಃ । ತಂ । ಆ । ಭರ ।
ಅಸ್ಮಭ್ಯಂ । ಚರ್ಷಣಿಽಸಹಂ । ಸಸ್ನಿಂ । ವಾಜೇಷು । ದುಸ್ತರಂ ॥ ೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತವ ಯಃ ಸಾಧಿಷ್ಠೋಽತಿಶಯೇನ ಸಾಧಕಃ ಕ್ರತುರುಕ್ತಲಕ್ಷಣಂ ಕರ್ಮ ಪ್ರಜ್ಞಾ ವಾಸ್ತಿ ತಂ ಕ್ರತುಂ ನೋಽವಸೇಽಸ್ಮದ್ರಕ್ಷಣಾಯಾಸ್ಮಭ್ಯಮಾ ಭರ । ಆಹರ । ಕೀದೃಶಂ ತಂ । ಚರ್ಷಣೀಸಹಂ ಸರ್ವೇಷಾಂ ಮನುಷ್ಯಾಣಾಮಭಿಭವಿತಾರಂ ಸಸ್ನಿಂ ಸಂಸ್ನಾತಂ ಶುದ್ಧಂ ವಾಜೇಷು ಸಂಗ್ರಾಮೇಷು ದುಷ್ಟರಮನ್ಯೈರನಭಿಭಾವ್ಯಂ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ತೇ**—ನಿನ್ನ । **ಯಃ**—ಯಾವುದು । **ಸಾಧಿಷ್ಠಃ**— ಅತಿಶಯವಾಗಿ ಕಾರ್ಯಸಾಧಕವಾದ । **ಕ್ರತುಃ**—ಕರ್ಮವಾಗಿರುವುದೋ ಅಂತಹ । **ಚರ್ಷಣೀಸಹಂ**—ಶತ್ರುಜನರನ್ನು ಪ್ರತಿಭಟಿಸುವುದೂ । **ಸಸ್ನಿಂ**—ಶುದ್ಧವಾದುದೂ । **ವಾಜೇಷು**—ಸಂಗ್ರಾಮಗಳಲ್ಲಿ । **ದುಷ್ಟರಂ**—ಶತ್ರುಗಳಿಂದ ಪ್ರತಿಭಟಿಸಲು ಸಾಧ್ಯವಿಲ್ಲದುದೂ ಆದ । **ತಂ**—ಪ್ರಸಿದ್ಧವಾದ ಆ ಕರ್ಮವನ್ನು । **ಅಸ್ಮಭ್ಯಂ ಅವಸೇ**—ನಮ್ಮ ರಕ್ಷಣೆಗಾಗಿ । **ಆ ಭರ**—ಸಂಪಾದಿಸಿ ಸಂಸ್ಕರಿಸು (ಪ್ರಕಟಿಸು)

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ಯಾವ ಕರ್ಮವು ಅತಿಶಯವಾಗಿ ಕಾರ್ಯಸಾಧಕವಾಗಿರುವುದೋ, ಅಂತಹ ಶತ್ರುಜನರನ್ನು ಪ್ರತಿಭಟಿಸುವುದೂ, ಶುದ್ಧವಾದುದೂ, ಸಂಗ್ರಾಮಗಳಲ್ಲಿ ಶತ್ರುಗಳಿಂದ ಪ್ರತಿಭಟಿಸಲು ಸಾಧ್ಯವಿಲ್ಲದುದೂ, ಪ್ರಸಿದ್ಧವಾದುದೂ ಆದ ಕರ್ಮವನ್ನು ರಕ್ಷಣೆಗಾಗಿ ಸಂಪಾದಿಸಿ ಸಂಸ್ಕರಿಸು.

## English Translation

Perfect for our protection, Indra, that your act which is most effective, whch is the subduer of men, holy, and difficult to be encountered in battles

---

॥ ಸಂಹಿತಾಪಾಠಃ ॥

ಯದಿಂದ್ರ ತೇ ಚತಸ್ರೋ ಯಚ್ಛೂರ ಸಂತಿ ತಿಸ್ರಃ ।

ಯದ್ವಾ ಪಂಚ ಕ್ಷಿತೀನಾಮವಸ್ತತ್ಸು ನ ಆ ಭರ ॥ ೨ ॥

॥ ಪದಪಾಠಃ ॥

ಯತ್ । ಇಂದ್ರ । ತೇ । ಚತಸ್ರಃ । ಯತ್ । ಶೂರ । ಸಂತಿ । ತಿಸ್ರಃ ।

ಯತ್ । ವಾ । ಪಂಚ । ಕ್ಷಿತೀನಾಂ । ಅವಃ । ತತ್ । ಸು । ನಃ । ಆ । ಭರ ॥ ೨ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ತೇ ತವ ಯತ್ ಯಾ ಊತಯಶ್ಚತಸ್ರಶ್ಚತುರ್ಷು ವರ್ಣೇಷು ಸಂಶ್ರಿತಾಃ ಸಂತಿ ಯಾಶ್ಚ ಹೇ ಶೂರ ತಿಸ್ರಸ್ತ್ರಿಷು ಲೋಕೇಷು ವರ್ತಮಾನಾಃ । ಯದ್ವಾ । ವಾಶಬ್ದಶ್ಚಾರ್ಥೇ । ಯದ್ಯಾಶ ಪಂಚ ಕ್ಷಿತೀನಾಂ ಪಂಚಜನಸಂಬಂಧಿನ್ಯ ಊತಯಃ ಸಂತಿ ತತ್ಸರ್ವಮವೋ ರಕ್ಷಣಂ ಸು ಸುಷು ನೋಽಸ್ಮಭ್ಯಮಾ ಭರ । ಆಹರೇತಿ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ತೇ**—ನಿನ್ನ । **ಯತ್**—ಯಾವ ರಕ್ಷಣೆಗಳು । **ಚತಸ್ರಃ**—ನಾಲ್ಕು ವರ್ಣಗಳವರೊಡನೆಯೂ ಕೂಡಿ। **ಸಂತಿ**—ಇವೆಯೋ । **ಶೂರ**—ಎಲೈ ಪರಾಕ್ರಮಿಯೇ । **ಯತ್**—ಯಾವ ರಕ್ಷಣೆಗಳು **ತಿಸ್ರಃ**—ಮೂರು ಲೋಕಗಳನ್ನೂ ವ್ಯಾಪಿಸಬಲ್ಲವೋ । **ಯದ್ವಾ**—ಅಲ್ಲದೇ । **ಪಂಚ ಕ್ಷಿತೀನಾಂ**—ದೇವಗಂಧರ್ವಾದಿ ಐದು ಬಗೆಯ ಜನರಿಗೂ ರಕ್ಷಕವಾಗಿವೆಯೋ । **ತತ್ ಅವಃ**—ಆ ಎಲ್ಲಾ ರಕ್ಷಣಕಾರ್ಯಗಳನ್ನೂ । **ಸು**—ಅತಿಶಯವಾಗಿ । **ನಃ**—ನಮ್ಮ ಹಿತಕ್ಕೋಸ್ಕರ । **ಆ ಭರ**—ಸಂಪಾದಿಸು.

॥ ಭಾವಾರ್ಥ ॥

ಪರಾಕ್ರಮಿಯಾದ ಎಲೈ ಇಂದ್ರನೇ, ನಿನ್ನ ಯಾವ ರಕ್ಷಣೆಗಳು ನಾಲ್ಕು ವರ್ಣಗಳವರೊಡನೆಯೂ ಕೂಡಿವೆಯೋ, ಯಾವ ರಕ್ಷಣೆಗಳು ಮೂರು ಲೋಕಗಳನ್ನೂ ವ್ಯಾಪಿಸಬಲ್ಲೀ ಅಲ್ಲದೇ ಯಾವುವು ದೇವಗಂಧರ್ವಾದಿ ಐದು ಬಗೆಯ ಜನರಿಗೂ ರಕ್ಷಕವಾಗಿವೆಯೋ ಆ ಎಲ್ಲಾ ರಕ್ಷಣಕಾರ್ಯಗಳನ್ನೂ ನಮ್ಮ ಹಿತಕ್ಕಾಗಿ ಅತಿಶಯವಾಗಿ ಸಂಪಾದಿಸು.

## English Translation

Whatever protections, Indra, may be yours, whether four, or hero, three or those accorded to the five (classes) of men, bestow them freely upon us

---

॥ ಸಂಹಿತಾಪಾಠಃ ॥

ಆ ತೇಽವೋ ವರೇಣ್ಯಂ ವೃಷಂತಮಸ್ಯ ಹೂಮಹೇ ।
ವೃಷಜೂತಿರ್ಹಿ ಜಜ್ಞಿಷ ಆಭೂಭಿರಿಂದ್ರ ತುರ್ವಣಿಃ ॥ ೩ ॥

॥ ಪದಪಾಠಃ ॥

ಆ । ತೇ । ಅವಃ । ವರೇಣ್ಯಂ । ವೃಷನ್‌ಽತಮಸ್ಯ । ಹೂಮಹೇ ।
ವೃಷಽಜೂತಿಃ । ಹಿ । ಜಜ್ಞಿಷೇ । ಆಽಭೂಭಿಃ । ಇಂದ್ರ । ತುರ್ವಣಿಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ವೃಷಂತಮಸ್ಯ ಫಲಾನಾಂ ವರ್ಷಕತಮಸ್ಯ ತೇ ತವಾವೋ ರಕ್ಷಣಂ ಗಮನಂ ವಾ ವರೇಣ್ಯಂ ವರಣೀಯಮಾ ಹೂಮಹೇ । ಆಹ್ವಯಾಮಃ । ಹೇ ಇಂದ್ರ ವೃಷಜೂತಿರ್ವರ್ಷಣಗಮನಸ್ತುರ್ವಣಿಸ್ತೂರ್ಣವನಿರ್ಹಿಂಸಕೋ ವಾ ತ್ವಮಾಭೂಮಿಃ ಸರ್ವತೋ ಭವದ್ಭಿರ್ವ್ಯಾಪ್ತೈರ್ಮರುದ್ಭಿಃ ಸಹಾವೋ ಹಿ ಜಜ್ಞಿಷೇ । ಉತ್ಪಾದಯಸಿ ಖಲು । ತೇಽವ ಆಹ್ವಯಾಮ ಇತಿ । ಯದ್ವಾ । ವೃಷಗಮನಃ ಸನ್ಯಸ್ಮಾದ್ಯಜ್ಞಮಾಗತ್ಯ ಫಲಂ ಜಜ್ಞಿಷೇ ತಸ್ಮಾತ್ತೇಽವೋ ಹೂಮಹ ಇತಿ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ವೃಷಜೂತಿಃ**—ವೃಷ್ಟಿಯನ್ನು ಹಂಚುವವನೂ । **ತುರ್ವಣಿಃ**—ಶೀಘ್ರದಲ್ಲೀ ಶತ್ರುಗಳನ್ನು ನಾಶಮಾಡುವವನೂ ಆದ ನೀನು । **ಆಭೂಭಿಃ**—ಸರ್ವವ್ಯಾಪಕರಾದ ಮರುತ್ತುಗಳೊಂದಿಗೆ । **ಜಜ್ಞಿಷೇ ಹಿ**—ಯಾವ ರಕ್ಷಣೆಗಳನ್ನು ಉತ್ಪನ್ನ ಮಾಡುವೆಯೋ ಅಂತಹ । **ವೃಷಂತಮಸ್ಯ**—ಫಲವರ್ಷಕನಾದ । **ತೇ**—ನಿನ್ನ । **ವರೇಣ್ಯಂ**—ಅತ್ಯಂತ ಆದೃತವಾದ । **ಅವಃ**—ರಕ್ಷಣೆಯನ್ನು । **ಆ ಹೂಮಹೇ**—ಪ್ರಾರ್ಥಿಸುತ್ತೇವೆ

॥ ಭಾವಾರ್ಥ ॥

ಎಲೈ ಇಂದ್ರನೇ, ವೃಷ್ಟಿಯನ್ನು ಹಂಚುವವನೂ, ಶೀಘ್ರದಲ್ಲೀ ಶತ್ರುಗಳನ್ನು ನಾಶಮಾಡುವವನೂ ಆದ ನೀನು ಸರ್ವವ್ಯಾಪಕರಾದ ಮರುತ್ತುಗಳೊಂದಿಗೆ ಯಾವ ರಕ್ಷಣೆಗಳನ್ನು ಉತ್ಪನ್ನ ಮಾಡುವೆಯೋ ಅಂತಹ ಫಲವರ್ಷಕನಾದ ನಿನ್ನ ಅತ್ಯಂತ ಆದೃತವಾದ ರಕ್ಷಣೆಯನ್ನು ನಾವು ಪ್ರಾರ್ಥಿಸುತ್ತೇವೆ.

## nglish Translation

We invoke the desirable protection of you, the most liberal showerer (of benefits), that (protection) which you, the distributor of rain, the quick destroyer (of foes), grant (associated) with the present (Maruts).

॥ ಸಂಹಿತಾಪಾಠಃ ॥

ವೃಷಾ ಹ್ಯಸಿ ರಾಧಸೇ ಜಜ್ಞಿಷೇ ವೃಷ್ಣಿ ತೇ ಶವಃ ।
ಸ್ವಕ್ಷತ್ರಂ ತೇ ಧೃಷನ್ಮನಃ ಸತ್ರಾಹಮಿಂದ್ರ ಪೌಂಸ್ಯಂ ॥ ೪ ॥

॥ ಪದಪಾಠಃ ॥

ವೃಷಾ । ಹಿ । ಅಸಿ । ರಾಧಸೇ । ಜಜ್ಞಿಷೇ । ವೃಷ್ಣಿ । ತೇ । ಶವಃ ।
ಸ್ವಽಕ್ಷತ್ರಂ । ತೇ । ಧೃಷತ್ । ಮನಃ । ಸತ್ರಾಽಹಂ । ಇಂದ್ರ । ಪೌಂಸ್ಯಂ ॥ ೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ರಾಧಸೇ ಯಜಮಾನಾನಾಂ ಸಮೃದ್ಧಯೇ ವೃಷಾ ಹ್ಯಸಿ । ಫಲಸ್ಯ ವರ್ಷಕೋಽಸಿ ಖಲು । ಯದ್ವಾ । ವೃಷಾ ಖಲ್ವಸಿ । ರಾಧಸೇ ಧನಾರ್ಥಂ ಜಜ್ಞಿಷೇ । ಉತ್ಪದ್ಯಸೇ । ತೇ ಶವೋ ಬಲಂ ವೃಷ್ಣಿ ವರ್ಷಿತೃ । ತೇ ಮನಃ ಸ್ವಕ್ಷತ್ರಂ ಸ್ವಾಯತ್ತಬಲಂ ಧೃಷತ್ ಧರ್ಷಕಂ ವಿರೋಧಿನಾಂ । ಹೇ ಇಂದ್ರ ತೇ ಪೌಂಸ್ಯಂ ಪುಂಸ್ತ್ವಂ ಸತ್ರಾಹಂ ಸಂಘಹಂತೃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ವೃಷಾ**—ಕಾಮವರ್ಷಕನಾಗಿ । **ಅಸಿ ಹಿ**—ಆಗಿದ್ದೀಯೆ । **ರಾಧಸೇ**—(ಯಜಮಾನನ) ಧನಸಮೃದ್ಧಿಗಾಗಿ । **ಜಜ್ಞಿಷೇ**—ಉತ್ಪನ್ನನಾಗಿದ್ದೀಯೆ । **ತೇ**—ನಿನ್ನ । **ಶವಃ**—ಬಲವು । **ವೃಷ್ಣಿ**—ಇಷ್ಟಾರ್ಥಗಳನ್ನು ಸುರಿಸುವುದಾಗಿದೆ । **ತೇ**—ನಿನ್ನ । **ಸ್ವಕ್ಷತ್ರಂ**—ಸ್ವಾರ್ಜಿತವಾದ ಬಲವುಳ್ಳ । **ಮನಃ**—ಮನಸ್ಸು । **ಧೃಷತ್**—ಶತ್ರುಧರ್ಷಕವಾಗಿದೆ । **ಪೌಂಸ್ತ್ಯಂ**—ನಿನ್ನ ಪುರುಷಶಕ್ತಿಯು । **ಸತ್ರಾಹಂ**—(ಶತ್ರುಗಳನ್ನು) ಸಮೂಹರೂಪದಲ್ಲಿ ನಾಶಮಾಡತಕ್ಕದ್ದಾಗಿದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಕಾಮವರ್ಷಕನಾಗಿದ್ದೀಯೆ. ನೀನು ಯಜಮಾನನ ಧನಸಮೃದ್ಧಿಗಾಗಿ ಉತ್ಪನ್ನನಾಗಿದ್ದೀಯೆ. ನಿನ್ನ ಬಲವು ಇಷ್ಟಾರ್ಥಗಳನ್ನು ಸುರಿಸುವುದಾಗಿದೆ. ಸ್ವಾರ್ಜಿತವಾದ ಬಲವುಳ್ಳ ನಿನ್ನ ಮನಸ್ಸು ಶತ್ರುಧರ್ಷಕವಾಗಿದೆ. ನಿನ್ನ ಪುರುಷಶಕ್ತಿಯು ಶತ್ರುಗಳನ್ನು ಸಮೂಹರೂಪದಲ್ಲಿ ನಾಶಮಾಡತಕ್ಕದ್ದಾಗಿದೆ.

## English Translation

You are the showerer (of benefits), you are born to (bestow) riches; your strength rains (blessings), your self-invigorated mind is the restrainer (of adversaries), your manhood, Indra, is the destroyer of multitudes.

---

॥ ಸಂಹಿತಾಪಾಠಃ ॥

ತ್ವಂ ತಮಿಂದ್ರ ಮರ್ತ್ಯಮಮಿತ್ರಯಂತಮದ್ರಿವಃ ।

ಸರ್ವರಥಾ ಶತಕ್ರತೋ ನಿ ಯಾಹಿ ಶವಸಸ್ಪತೇ ॥ ೫ ॥

॥ ಪದಪಾಠಃ ॥

ತ್ವಂ । ತಂ । ಇಂದ್ರ । ಮರ್ತ್ಯಂ । ಅಮಿತ್ರಽಯಂತಂ । ಅದ್ರಿಽವಃ ।

ಸರ್ವಽರಥಾ । ಶತಕ್ರತೋ ಇತಿ ಶತಽಕ್ರತೋ । ನಿ । ಯಾಹಿ । ಶವಸಃ । ಪತೇ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ತಮಮಿತ್ರಯಂತಂ ಶತ್ರುತ್ವಮಾಚರಂತಂ ಶತ್ರುಂ ವೇಚ್ಛಂತಂ ಮರ್ತ್ಯಂ ಹೇ ಅದ್ರಿವೋ ವಜ್ರವನ್ನಿಂದ್ರ ಸರ್ವರಥಾ ಸರ್ವತ್ರ ವ್ಯಾಪ್ತೇನ ರಥೇನ ॥ ಸುಪಾಂ ಸುಲುಗಿತ್ಯಾಕಾರಃ ॥ ಹೇ ಶತಕ್ರತೋ ಹೇ ಶವಸಸ್ಪತೇ ಬಲಸ್ಯ ಪಾಲಕೇಂದ್ರ ನಿ ಯಾಹಿ । ನಿತರಾಂ ಗಚ್ಛಾಭಿಭವಿತುಂ ॥

॥ ಪ್ರತಿಪದಾರ್ಥ ॥

**ಅದ್ರಿವ**—ವಜ್ರಾಯುಧಧಾರಿಯೂ । **ಶತಕ್ರತೋ**—ಅನೇಕ ಕರ್ಮಗಳ ಕರ್ತನೂ । **ಶವಸಸ್ಪತೇ**—ಶಕ್ತಿಪಾಲಕನೂ ಆದ । **ಇಂದ್ರ**—ಎಲೈ ಇಂದ್ರನೇ । **ಸರ್ವರಥಾ**—ಸರ್ವತ್ರ ವ್ಯಾಪಿಸುವ ರಥದೊಡನೆ । **ತ್ವಂ**—ನೀನು । **ಅಮಿತ್ರಯಂತಂ**—ಶತ್ರುವಿನಂತೆ ಆಚರಿಸುತ್ತಿರುವ । **ತಂ ಮರ್ತ್ಯಂ**—ಆ ಮಾನವನನ್ನು ಎದುರಿಸಲು । **ನಿ ಯಾಹಿ**—ಹೊರಟು ಪ್ರತಿಭಟಿಸು

॥ ಭಾವಾರ್ಥ ॥

ವಜ್ರಾಯುಧವನ್ನು ಧರಿಸಿರುವವನೂ, ಅನೇಕ ಕರ್ಮಗಳನ್ನಾಚರಿಸುವವನೂ, ಶಕ್ತಿಪಾಲಕನೂ ಆದ ಎಲೈ ಇಂದ್ರನೇ, ಶತ್ರುವಿನಂತೆ ಆಚರಿಸುವ ಮಾನವರನ್ನು ಎದುರಿಸಲು ಸರ್ವತ್ರ ವ್ಯಾಪಿಸುವ ರಥದೊಡನೆ ಹೊರಡು.

## English Translation

Indra, wielder of the thunderbolt, rider in an all-pervading car, object of many rites, and lord of strength, proceed against the mortal who entertains hostility towards you.

॥ ಸಂಹಿತಾಪಾಠಃ ॥

ತ್ವಾಮಿದ್ವೃತ್ರಹಂತಮ ಜನಾಸೋ ವೃಕ್ತಬರ್ಹಿಷಃ ।
ಉಗ್ರಂ ಪೂರ್ವೀಷು ಪೂರ್ವ್ಯಂ ಹವಂತೇ ವಾಜಸಾತಯೇ ॥ ೬ ॥

॥ ಪದಪಾಠಃ ॥

ತ್ವಾಂ । ಇತ್ । ವೃತ್ರಹನ್ऽತಮ । ಜನಾಸಃ । ವೃಕ್ತಽಬರ್ಹಿಷಃ ।
ಉಗ್ರಂ । ಪೂರ್ವೀಷು । ಪೂರ್ವ್ಯಂ । ಹವಂತೇ । ವಾಜಽಸಾತಯೇ ॥ ೬ ॥

॥ ಸಾಯಣಭಾಷ್ಯಂ ॥

ಹೇ ವೃತ್ರಹಂತಮಾತಿಶಯೇನ ವೃತ್ರಾಣಾಂ ಹಂತರಿಂದ್ರ ತ್ವಾಮಿತ್ತ್ವಾಮೇವ ಜನಾಸೋ ಜನಾ ವೃಕ್ತಬರ್ಹಿಷ ಆಚ್ಛಾದಿತದರ್ಭಾಃ । ಪ್ರವೃತ್ತಯಜ್ಞಾ ಇತ್ಯರ್ಥಃ । ಉಗ್ರಮುದ್ಗೂರ್ಣಬಲಂ ಪೂರ್ವೀಷು ಬಹ್ವೀಷು ಪ್ರಜಾಸು ಮಧ್ಯೇ ಪೂರ್ವ್ಯಂ ಪುರಾತನಂ ಸಂತಂ ವಾಜಸಾತಯೇ ಸಂಗ್ರಾಮಾಯ ಹವಂತೇ । ಆಹ್ವಯಂತೇ ॥

॥ ಪ್ರತಿಪದಾರ್ಥ ॥

**ವೃತ್ರಹಂತಮ**- ವೃತ್ರನಾಶಕನಾದ ಎಲೈ ಇಂದ್ರನೇ । **ಪೂರ್ವೀಷು**-ಅನೇಕ ಮಾನವರ ನಡುವೆ । **ಉಗ್ರಂ**-ಅಧಿಕವಾದ ಬಲವುಳ್ಳವನೂ । **ಪೂರ್ವ್ಯಂ**—ಪುರಾತನನೂ ಆದ । **ತ್ವಾಮಿತ್**—ನಿನ್ನನ್ನೇ । **ವೃಕ್ತಬರ್ಹಿಷಃ**—ನಿನಗೆ ಆಸನವನ್ನು ಕಲ್ಪಿಸಲು ದರ್ಭಾಸನಗಳನ್ನು ನಿರ್ಮಿಸುವ । **ಜನಾಸಃ**—ಜನರು । **ವಾಜಸಾತಯೇ**—ಸಂಗ್ರಾಮದಲ್ಲಿ ಸಹಾಯಕ್ಕಾಗಿ । **ಹವಂತೇ**—ಕರೆಯುತ್ತಾರೆ.

॥ ಭಾವಾರ್ಥ ॥

ವೃತ್ರನಾಶಕನಾದ ಎಲೈ ಇಂದ್ರನೇ, ಅನೇಕ ಮಾನವರ ನಡುವೆಯೆಲ್ಲಾ ಅತ್ಯಧಿಕವಾದ ಬಲವುಳ್ಳವನೂ, ಪುರಾತನನೂ ಆದ ನಿನ್ನನ್ನೇ, ನಿನಗೆ ದರ್ಭಾಸನಗಳನ್ನು ಕಲ್ಪಿಸಿ ಯಜ್ಞಕ್ಕೆ ಸಿದ್ಧಪಡಿಸುವ ಮಾನವರು ಸಂಗ್ರಾಮದಲ್ಲಿ ಸಹಾಯಕ್ಕಾಗಿ ಅಪೇಕ್ಷಿಸಿ ಕರೆಯುತ್ತಾರೆ.

English Translation

Slayer of Vritra, men with clipped sacred grass invoke you, who are fierce and foremost among many, for aid in battle.

॥ ಸಂಹಿತಾಪಾಠಃ ॥

ಅಸ್ಮಾಕಮಿಂದ್ರ ದುಷ್ಟರಂ ಪುರೋಯಾವಾನಮಾಜಿಷು ।
ಸಯಾವಾನಂ ಧನೇಧನೇ ವಾಜಯಂತಮವಾ ರಥಂ ॥ ೭ ॥

॥ ಪದಪಾಠಃ ॥

ಅಸ್ಮಾಕಂ । ಇಂದ್ರ । ದುಸ್ತರಂ । ಪುರಃऽಯಾವಾನಂ । ಆಜಿಷು ।
ಸऽಯಾವಾನಂ । ಧನೇऽಧನೇ । ವಾಜऽಯಂತಂ । ಅವ । ರಥಂ ॥ ೭ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ಅಸ್ಮಾಕಂ ರಥಂ ರಂಹಣಸ್ವಭಾವಂ ವಾ ಪುತ್ರಮುವ । ರಕ್ಷ । ಕೀದೃಶಂ ರಥಂ । ದುಷ್ಟರಂ ದುಃಖೇನ ತರಣೀಯಮಾಜಿಷು ಸಂಗ್ರಾಮೇಷು ಪುರೋಯಾವಾನಂ ಪುರತೋ ಮಿಶ್ರಯಿತಾರಂ ಸಯಾವಾನಮನುಚರೈಃ ಸಹ ಗಂತಾರಂ ಧನೇ ಧನೇ ಸರ್ವೇಷು ಧನೇಷು ವಾಜಯಂತಂ ಸಂಗ್ರಾಮಂ ಧನಂ ವೇಚ್ಛಂತಂ ॥**

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ದುಷ್ಟರಂ**—ಇತರರಿಂದ ನಿಲ್ಲಿಸಲು ದುಃಸಾಧ್ಯವಾದುದೂ । **ಆಜಿಷು**—ಸಂಗ್ರಾಮಗಳಲ್ಲಿ । **ಪುರೋಯಾವಾನಂ**—ಅಗ್ರಭಾಗದಲ್ಲೇ ಓಡಾಡತಕ್ಕದ್ದೂ । **ಸಯಾವಾನಂ**—ಅನುಚರರೊಂದಿಗೆ ಸಂಚರಿಸತಕ್ಕದ್ದೂ । **ಧನೇಧನೇ**—ಪದೇಪದೇ ಧನಸಂಚಯಕ್ಕಾಗಿ । **ವಾಜಯಂತಂ**—ಸಂಗ್ರಾಮವನ್ನಿಚ್ಛಿಸುವುದೂ ಆದ । **ಅಸ್ಮಾಕಂ**—ನಮ್ಮ । **ರಥಂ**—ರಥವನ್ನು । **ಅವ**—ರಕ್ಷಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ಇತರರಿಂದ ನಿಲ್ಲಿಸಲು ದುಃಸಾಧ್ಯವಾದುದೂ, ಸಂಗ್ರಾಮಗಳಲ್ಲಿ ಮುಂಭಾಗದಲ್ಲೇ ಧೈರ್ಯವಾಗಿ ಓಡಾಡತಕ್ಕದ್ದೂ, ಅನುಚರರೊಂದಿಗೆ ಸಂಚರಿಸತಕ್ಕದ್ದೂ, ಪದೇ ಪದೇ ಧನಸಹಾಯಕ್ಕಾಗಿ ಸಂಗ್ರಾಮವನ್ನಿಚ್ಛಿಸುವುದೂ ಆದ ನಮ್ಮ ರಥವನ್ನು ರಕ್ಷಿಸು

English Translation

Defend, Indra, our chariot, difficult (to be stopped), mingling foremost in combats, followed by attendants. and eagerly striving for repeated spoil.

|| ಸಂಹಿತಾಪಾಠಃ ||

ಅಸ್ಮಾಕಮಿಂದ್ರೇಹಿ ನೋ ರಥಮವಾ ಪುರಂಧ್ಯಾ ।
ವಯಂ ಶವಿಷ್ಠ ವಾರ್ಯಂ ದಿವಿ ಶ್ರವೋ ದಧೀಮಹಿ ದಿವಿ ಸ್ತೋಮಂ ಮನಾಮಹೇ ॥ ೮ ॥

॥ ಪದಪಾಠಃ ॥

ಅಸ್ಮಾಕಂ । ಇಂದ್ರ । ಆ । ಇಹಿ । ನಃ । ರಥಂ । ಅವ । ಪುರಂऽಧ್ಯಾ ।
ವಯಂ । ಶವಿಷ್ಠ । ವಾರ್ಯಂ । ದಿವಿ । ಶ್ರವಃ । ದಧೀಮಹಿ । ದಿವಿ । ಸ್ತೋಮಂ । ಮನಾಮಹೇ ॥೮॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಅಸ್ಮಾಕಮಸ್ಮದೀಯ ಏವ ಸನ್ ಏಹಿ । ಆಗಚ್ಛ । ಆಗತ್ಯ ಚ ಪುರಂಧ್ಯಾ ಶೋಭನಬುದ್ಧ್ಯಾ ನೋऽಸ್ಮಾಕಂ ರಥಮವ । ರಕ್ಷ । ವಯಂ ಚ ಹೇ ಶವಿಷ್ಠ ಅತಿಶಯೇನ ಬಲವನ್ ತ್ವದನುಗ್ರಹಾದ್ವಾರ್ಯಂ ವರಣೀಯಂ ಶ್ರವೋऽನ್ನಂ ಕೀರ್ತಿಂ ವಾ ದಿವಿ ದ್ಯೋತಮಾನೇ ತ್ವಯಿ ದಧೀಮಹಿ । ಸ್ಥಾಪಯಾಮಃ । ತಥಾ ದಿವಿ ತ್ವಯಿ ಸ್ತೋಮಂ ಸ್ತೋತ್ರಂ ಮನಾಮಹೇ । ಕರವಾಮಹ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಅಸ್ಮಾಕಂ**—ನಮ್ಮಲ್ಲಿಗೆ । **ಏಹಿ**—ದಯಮಾಡು । **ಪುರಂಧ್ಯಾ**—ಅನುಗ್ರಹಾತ್ಮಕವಾದ ಬುದ್ಧಿಯಿಂದ । **ನಃ**—ನಮ್ಮ । **ರಥಂ**—ರಥವನ್ನು । **ಅವ**—ರಕ್ಷಿಸು । **ಶವಿಷ್ಠ**—ಅತ್ಯಂತ ಶಕ್ತಿಯುತನಾದ ಇಂದ್ರನೇ । **ವಯಂ**—ನಾವು । **ವಾರ್ಯಂ**—ಅಪೇಕ್ಷಿತವಾದ । **ಶ್ರವಃ**—ಅನ್ನವನ್ನು । **ದಿವಿ**—ಪ್ರಕಾಶಮಾನವಾದ ನಿನ್ನಲ್ಲಿ । **ದಧೀಮಹಿ**—ಸ್ಥಾಪಿಸುತ್ತೇವೆ । **ದಿವಿ**—ದೇವಾತ್ಮನಾದ ನಿನ್ನನ್ನೇ ಉದ್ದೇಶಿಸಿ । **ಸ್ತೋಮಂ**—ಸ್ತೋತ್ರವನ್ನು । **ಮನಾಮಹೇ**—ಪಠಿಸಿ ಅರ್ಪಿಸುತ್ತೇವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನಮ್ಮಲ್ಲಿಗೆ ದಯಮಾಡು. ನಮ್ಮ ರಥವನ್ನು ಅನುಗ್ರಾಹಾತ್ಮಕವಾದ ಬುದ್ಧಿಯಿಂದ ರಕ್ಷಿಸು. ಅತ್ಯಂತ ಶಕ್ತಿಯುತನಾದ ಎಲೈ ಇಂದ್ರನೇ, ಪ್ರಕಾಶಮಾನನಾದ ನಿನ್ನಲ್ಲಿ ನಾವು ಅತ್ಯಂತ ಆದೃತವಾದ ಅನ್ನವನ್ನು ಸ್ಥಾಪಿಸುತ್ತೇವೆ. ದೇವತಾತ್ಮನಾದ ನಿನ್ನನ್ನೇ ಉದ್ದೇಶಿಸಿ ಸ್ತುತಿಯನ್ನೂ ಪಠಿಸಿ ಅರ್ಪಿಸುತ್ತೇವೆ.

## English Translation

Come, Indra, to us; defend by your providence our car : we contemplate in you who, most mighty one, are divine, all desirable vigour : (to you), who are divine, we offer praise.

# ಮೂವತ್ತಾರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಸ ಆ ಗವುದಿತಿ ಷಡೃಚಂ ಚತುರ್ಥಂ ಸೂಕ್ತಂ ॥ ಅಂಗಿರಸಃ ಪ್ರಭೂವಸುರ್ಋಷಿಃ । ತೃತೀಯಾ ಜಗತೀ ಶಿಷ್ಟಾ ಅನುಕ್ತತ್ವಾತ್ ತ್ರಿಷ್ಟುಭಃ । ಇಂದ್ರೋ ದೇವತಾ । ಅನುಕ್ರಾಂತಂ ಚ । ಸ ಆ ಗವುತ್ ಷಟ್ ತೃತೀಯಾ ಜಗತೀತಿ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು—**ಸ ಆ ಗವುತ್** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅಂಗಿರಾಋಷಿವಂಶಸಂಭೂತನಾದ ಪ್ರಭೂವಸುಃ ಎಂಬುವನು ಋಷಿಯು. ಇಂದ್ರನು ದೇವತೆಯು. ಈ ಸೂಕ್ತದ ಮೂರನೆಯ ಋಕ್ಕು ಜಗತೀಛಂದಸ್ಕವು ಉಳಿದ ಋಕ್ಕುಗಳು ತ್ರಿಷ್ಟುಪ್‌ಛಂದಸ್ಕವು ಅನುಕ್ರಮಣಿಕೆಯಲ್ಲಿ—**ಸ ಆ ಗವುತ್ ಷಟ್ ತೃತೀಯಾ ಜಗತೀ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು

---

## ಸೂಕ್ತ—೩೬

॥ ಮಂಡಲ—೫ ॥ ಅನುವಾಕ—೩ ॥ ಸೂಕ್ತ—೩೬ ॥
॥ ಅಷ್ಟಕ—೪ ॥ ಅಧ್ಯಾಯ—೨ ॥ ವರ್ಗ—೭ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬
ಋಷಿಃ—ಪ್ರಭೂವಸುರಾಂಗಿರಸಃ ॥
ದೇವತಾ—ಇಂದ್ರಃ ॥
ಛಂದಃ—೧, ೨, ೪-೬ ತ್ರಿಷ್ಟುಪ್ । ೩ ಜಗತೀ ॥

---

॥ ಸಂಹಿತಾಪಾಠಃ ॥

ಸ ಆ ಗವುದಿಂದ್ರೋ ಯೋ ವಸೂನಾಂ ಚಿಕೇತದ್ದಾತುಂ ದಾಮನೋ ರಯೀಣಾಂ ।
ಧನ್ವಚರೋ ನ ವಂಸಗಸ್ತೃಷಾಣಶ್ಚಕಮಾನಃ ಪಿಬತು ದುಗ್ಧಮಂಶುಂ ॥೧॥

॥ ಪದಪಾಠಃ ॥

ಸಃ । ಆ । ಗವುತ್ । ಇಂದ್ರಃ । ಯಃ । ವಸೂನಾಂ । ಚಿಕೇತತ್ । ದಾತುಂ । ದಾಮನಃ । ರಯೀಣಾಂ ।
ಧನ್ವಚರಃ । ನ । ವಂಸಗಃ । ತೃಷಾಣಃ । ಚಕಮಾನಃ । ಪಿಬತು । ದುಗ್ಧಂ । ಅಂಶುಂ ॥ ೧ ॥

॥ ಸಾಯಣಭಾಷ್ಯಂ ॥

**ಸ ಇಂದ್ರೋಽಸ್ಮದ್ಯಜ್ಞಂ ಪ್ರತ್ಯಾ ಗಮತ್ । ಆಗಚ್ಛತು । ಯೋ ದೇವೋ ವಸೂನಾಂ ಧನಾನಾಂ । ಕರ್ಮಣಿ ಷಷ್ಠೀ ॥ ವಸೂನಿ ಧನಾನಿ ಚಿಕೇತತ್ ಜಾನಾತಿ ಪ್ರದಾತುಂ । ಸ ಕೀದೃಶಃ । ದಾಮನೋ ದಾತಾ ದಾನಮನಾ ವಾ ರಯೀಣಾಂ ಧನಾನಾಂ । ಗಮನೇ ದೃಷ್ಟಾಂತಃ । ಧನ್ವಚರೋ ನ ಧನುಷಾ ಸಹ ಸಂಚರನ್ ಧಾನುಷ್ಕ ಇವ ವಂಸಗೋ ವನನೀಯಗಮನಸ್ತೃಷಾಣೋಽತ್ಯಂತಂ ತೃಷಿತಶ್ಚಕಮಾನಃ ಕಾಮಯಮಾನಶ್ಚ ಸನ್ ದುಗ್ಧಮಭಿಷುತಮಂಶುಂ ಸೋಮಂ ಪಿಬತು ॥**

॥ ಪ್ರತಿಪದಾರ್ಥ ॥

**ಯಃ**—ಯಾವ ಇಂದ್ರನು । **ವಸೂನಾಂ**—ಧನಗಳನ್ನು । **ದಾತುಂ**—ಯಜಮಾನರಿಗೆ ಹಂಚಲು । **ಚಿಕೇತತ್**—ತಿಳಿದಿರುವನೋ (ಮತ್ತು) । **ರಯೀಣಾಂ**—ಧನಗಳ । **ದಾಮನಃ**—ದಾತನೋ । **ಸಃ ಇಂದ್ರಃ**—ಆ ಇಂದ್ರನು । **ಧನ್ವಚರೋ ನ**—ಧನುರ್ಧಾರಿಯಾದ ಯೋಧನಂತೆ । **ಆ ಗಮತ್**—ನಮ್ಮ ಯಜ್ಞಕ್ಕೆ ಬರಲಿ । **ವಂಸಗಃ**—ಆಕರ್ಷಕವಾದ ಗಮನವುಳ್ಳವನೂ । **ತೃಷಾಣಃ**—ಬಾಯಾರಿದವನೂ । **ಚಕಮಾನಃ**—( ಸೋಮ ಪಾನವನ್ನು ) ಅಪೇಕ್ಷಿಸಿದವನೂ ಆಗಿ । **ದುಗ್ಧಂ**—ಹಿಂಡಿರುವ । **ಅಂಶುಂ**—ಸೋಮವನ್ನು । **ಪಿಬತು**—ಪಾನಮಾಡಲಿ

॥ ಭಾವಾರ್ಥ ॥

ಯಾವ ಇಂದ್ರನು ಯಜಮಾನರಿಗೆ ಧನಗಳನ್ನು ಹಂಚಬೇಕೆಂದು ತಿಳಿದಿರುವನೋ, ಆ ಇಂದ್ರನು ಧನುರ್ಧಾರಿಯಾದ ಯೋಧನಂತೆ ನಮ್ಮ ಯಜ್ಞಕ್ಕೆ ಬರಲಿ. ಆಕರ್ಷಕವಾದ ಗಮನವುಳ್ಳವನೂ, ಬಾಯಾರಿದವನೂ ಸೋಮ ಪಾನವನ್ನು ಅಪೇಕ್ಷಿಸಿದವನೂ ಆಗಿ ಸೋಮರಸವನ್ನು ಪಾನಮಾಡಲಿ.

English Translation

May that Indra who is the donor of wealth, who knows ( how ) to distribute riches, come (to our sacrifice) marching boldly like a warrior , and may he, being thirsty, and desirous (of the draught), drink of the effused Soma juice

———

॥ ಸಂಹಿತಾಪಾಠಃ ॥

**ಆ ತೇ ಹನೂ ಹರಿವಃ ಶೂರ ಶಿಪ್ರೇ ರುಹತ್ಸೋಮೋ ನ ಪರ್ವತಸ್ಯ ಪೃಷ್ಠೇ ।**
**ಅನು ತ್ವಾ ರಾಜನ್ನರ್ವತೋ ನ ಹಿನ್ವನ್ ಗೀರ್ಭಿರ್ಮದೇಮ ಪುರುಹೂತ**
**ವಿಶ್ವೇ ॥ ೨ ॥**

॥ ಪದಪಾಠಃ ॥

ಆ । ತೇ । ಹನೂ ಇತಿ । ಹರಿ್ಽವಃ । ಶೂರ । ಶಿಪ್ರೇ ಇತಿ । ರುಹತ್ । ಸೋಮಃ । ನ । ಪರ್ವತಸ್ಯ । ಪೃಷ್ಠೇ ।

ಅನು । ತ್ವಾ । ರಾಜನ್ । ಅರ್ವತಃ । ನ । ಹಿನ್ವನ್ । ಗೀಃಽಭಿಃ । ಮದೇಮ । ಪುರು್ಽಹೂತ । ವಿಶ್ವೇ ॥ ೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಹೇ ಹರಿವೋ ಹರಿಭ್ಯಾಂ ತದ್ವನ್ ಶೂರ ತೇ ತವ ಹನೂ ಹನನಸಾಧನೇ । ಯದ್ಯ-ಪ್ಯಯಂ ಶಿಪ್ರಾವಚನಸ್ತಥಾಪಿ ಪುನಃ ಶಿಪ್ರಾಭಿಧಾನಾದ್ಘ್ರಾಣೋಽವಗಂತವ್ಯಃ । ಉಕ್ತರೂಪೇ ಸಂಹತೇ ವಾ ಶಿಪ್ರೇ ಆ ರುಹತ್ ಆರೋಹತು ಪ್ರಾಪ್ನೋತು ಸೋಮೋಽಸ್ಮದ್ದತ್ತಃ । ಪರ್ವತಸ್ಯ ಪೃಷ್ಠೇ ನ ರುಹತ್ । ನಾರೋಹತಿ । ತತ್ರ ನ ತಿಷ್ಠತೀತ್ಯರ್ಥಃ । ಯದ್ವಾ । ನಶಬ್ದಃ ಪುರಸ್ತಾತ್ಪ್ರಯುಕ್ತೋಽ-ಪ್ಯತ್ರೋಪಮಾರ್ಥಃ । ಪರ್ವತಸ್ಯ ಪೃಷ್ಠ ಉಪರಿಪ್ರದೇಶೇ ಸೋಮೋ ನ । ತತ್ರ ಯಥಾ ವಿಸ್ರಂಭೇಣ ಪ್ರಸರತಿ ತದ್ವತ್ । ಹೇ ರಾಜನ್ ರಾಜಮಾನೇಂದ್ರ ತ್ವಾ ತ್ವಾಮನು ತ್ವಯಾ ಸಹ ॥ ತೃತೀಯಾರ್ಥ ಇತ್ಯನೋಃ ಕರ್ಮಪ್ರವಚನೀಯತ್ವಂ ॥ ವಿಶ್ವೇ ವಯಮರ್ವತೋ ನಾಶ್ವಾನಿವ ತೃಣಾದಿಭಿರ್ಗೀರ್ಭಿಃ ಸ್ತುತಿಭಿರ್ಹಿನ್ವನ್ ಹಿನ್ವಂತಸ್ತ್ವಾಂ ಪ್ರೀಣಯಂತಃ ಸಂತೋ ಮದೇಮ । ಹೃಷ್ಯೇಮ ॥ ಹೇ ಪುರುಹೂತ ಬಹುಪ್ರಕಾರಂ ಬಹುಭಿರ್ವಾಹೂತೇಂದ್ರ ॥

॥ ಪ್ರತಿಪದಾರ್ಥ ॥

**ಹರಿವಃ**—ಅಶ್ವಯುಕ್ತನಾದವನೂ । **ಶೂರ**—ಶೂರನೂ ಆದ ಎಲೈ ಇಂದ್ರನೇ । **ಸೋಮಃ**—ಸೋಮವು । **ಪರ್ವತಸ್ಯ**—ಪರ್ವತದ । **ಪೃಷ್ಠೇ ನ**—ಶಿಖರಪ್ರದೇಶವನ್ನು ಹತ್ತುವಂತೆ । **ಹನೂ**—(ಶತ್ರು)ಹನನಸಾಧನವಾದ । **ತೇ ಶಿಪ್ರೇ**—ನಿನ್ನ ದವಡೆಯೊಳಕ್ಕೆ । **ಆ ರುಹತ್**—ಹತ್ತಲಿ (ಸೇರಿಕೊಳ್ಳಲಿ) । **ರಾಜನ್**—ಪ್ರಭುವಾದವನೂ । **ಪುರುಹೂತ**-ಅನೇಕರಿಂದ ಕರೆಯಲ್ಪಟ್ಟವನೂ ಆದ ಎಲೈ ಇಂದ್ರನೇ । **ಅರ್ವತೋ ನ**-ಅಶ್ವಗಳನ್ನು ತೃಣಾದಿಗಳಿಂದ ತೃಪ್ತಿಪಡಿಸುವಂತೆ । **ಗೀರ್ಭಿಃ**—ನಮ್ಮ ಸ್ತುತಿಗಳಿಂದ । **ಹಿನ್ವನ್**—ನಿನ್ನನ್ನು ಸಂತೋಷಗೊಳಿಸುತ್ತಾ । **ತ್ವಾ ಅನು**—ನಿನ್ನೊಡನೆ । **ವಿಶ್ವೇ ಮದೇಮ**—ನಾವೆಲ್ಲರೂ ಹರ್ಷಗೊಳ್ಳುವೆವು ।

॥ ಭಾವಾರ್ಥ ॥

ಅಶ್ವಯುಕ್ತನಾದವನೂ, ಶೂರನೂ ಆದ ಎಲೈ ಇಂದ್ರನೇ, ಸೋಮವು ಪರ್ವತದ ಶಿಖರಪ್ರದೇಶವನ್ನು ಹತ್ತುವಂತೆ ಶತ್ರುಹನನಸಾಧನವಾದ ನಿನ್ನ ದವಡೆಯೊಳಕ್ಕೆ ಹತ್ತಿ ತುಂಬಿಕೊಳ್ಳಲಿ. ಪ್ರಭುವಾದವನೂ, ಅನೇಕರಿಂದ ಕರೆಯಲ್ಪಟ್ಟವನೂ ಆದ ಎಲೈ ಇಂದ್ರನೇ, ಅಶ್ವಗಳನ್ನು ತೃಣಾದಿಗಳಿಂದ ತೃಪ್ತಿಪಡಿಸುವಂತೆ ನಮ್ಮ ಸ್ತುತಿಗಳಿಂದ ನಿನ್ನನ್ನು ಸಂತೋಷಗೊಳಿಸುತ್ತಾ ನಾವೆಲ್ಲರೂ ನಿನ್ನೊಡನೆ ಹರ್ಷಗೊಳ್ಳುವೆವು

## English Translation

Hero, lord of horses, may the the Soma ascend to your destructive jaw, as if to the summit of a mountain : may we all, royal Indra, who are invoked of many, give pleasure to you with our hymns, as to horses with fodder.

---

॥ ಸಂಹಿತಾಪಾಠಃ ॥

ಚಕ್ರಂ ನ ವೃತ್ತಂ ಪುರುಹೂತ ವೇಪತೇ ಮನೋ ಭಿಯಾ ಮೇ ಅಮತೇರಿ-
ದದ್ರಿವಃ ।
ರಥಾದಧಿ ತ್ವಾ ಜರಿತಾ ಸದಾವೃಧ ಕುವಿನ್ನು ಸ್ತೋಷನ್ಮಘವನ್ಪುರೂ-
ವಸುಃ ॥ ೩ ॥

॥ ಪದಪಾಠಃ ॥

ಚಕ್ರಂ । ನ । ವೃತ್ತಂ । ಪುರುऽಹೂತ । ವೇಪತೇ । ಮನಃ । ಭಿಯಾ । ಮೇ । ಅಮತೇಃ । ಇತ್ । ಅದ್ರಿऽವಃ ।
ರಥಾತ್ । ಅಧಿ । ತ್ವಾ । ಜರಿತಾ । ಸದಾऽವೃಧ । ಕುವಿತ್ । ನು । ಸ್ತೋಷತ್ । ಮಘऽವನ್ । ಪುರುऽವಸುಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಪುರುಹೂತ ಬಹುಭಿರಾಹೂತ ಹೇ ಅದ್ರಿವೋ ವಜ್ರವನ್ನಿಂದ್ರ ಮೇ ಮನೋಽಮತೇರಿದ್ದಾರಿದ್ರ್ಯಾದಸ್ತೋತುರ್ವಾ ಸಕಾಶಾದ್ಭಿಯಾ ಭೀತ್ಯಾ ವೇಪತೇ । ಕಂಪತೇ । ವೃತ್ತಂ ಚಕ್ರಂ ನ ಭೂಮೌ ವರ್ತಮಾನಂ ಚಕ್ರಮಿವ । ಯಸ್ಮಾದೇವಂ ತಸ್ಮಾದ್ರಥಾದಧ್ಯುಪರಿ ಸ್ಥಿತಂ ತ್ವಾ ತ್ವಾಂ ಹೇ ಸದಾವೃಧ ಸರ್ವದಾ ವರ್ಧಮಾನ ಹೇ ಮಘವನ್ನಿಂದ್ರ ಜರಿತಾ ಸ್ತೋತಾ ಪುರೂವಸುರಹಮೃಷಿಃ ಕುವಿದ್ಬಹು ನು ಕ್ಷಿಪ್ರಂ ಸ್ತೋಷತ್ । ಸ್ತೋಷ್ಯತಿ । ಸ್ತೂಯಾತ್ ॥ ಅತ್ರ ಕುವಿಚ್ಛಬ್ದಯೋಗೇಽಪ್ಯಾಖ್ಯಾತಸ್ಯ ಬಹುಲಗ್ರಹಣಾನ್ನಿಘಾತಃ ॥

॥ ಪ್ರತಿಪದಾರ್ಥ ॥

**ಪುರುಹೂತ**—ಅನೇಕರಿಂದ ಆಹೂತನಾಗುವವನೂ । **ಅದ್ರಿವಃ**—ವಜ್ರಾಯುಧವನ್ನು ಹಿಡಿದಿರುವವನೂ ಆದ । **ಮೇ**—ನನ್ನ। **ಮನಃ**—ಮನಸ್ಸು। **ಅಮತೇಃ**—ದಾರಿದ್ರ್ಯದ । **ಭಿಯಾ**—ಭಯದಿಂದ । **ವೃತ್ತಂ**—ನೆಲದ

ಮೇಲೆ ಸುತ್ತುತ್ತಿರುವ | **ಚಕ್ರಂ ನ**—ಚಕ್ರದಂತೆ | **ವೇಪತೇ**—ನಡಗುತ್ತದೆ | **ಸದಾವೃಧ**—ಸರ್ವದಾ ವೃದ್ಧಿಯನ್ನು ಹೊಂದುವವನೂ | **ಮಘವನ್**—ಧನವಂತನೂ ಆದ ಎಲೈ ಇಂದ್ರನೇ | **ರಥಾದಧಿ**—ರಥದ ಮೇಲೆ ಸ್ಥಿತನಾಗಿರುವ | **ತ್ವಾಂ**—ನಿನ್ನನ್ನು | **ಜರಿತಾ**—ಸ್ತುತಿಕರ್ತನೂ | **ಪುರೂವಸುಃ**—ಪುರೂವಸುನಾಮಕನೂ ಆದ ನಾನು | **ಕುವಿತ್**—ಅನೇಕ ಪ್ರಕಾರವಾಗಿಯೂ | **ನು**—ಕ್ಷಿಪ್ರವಾಗಿಯೂ | **ಸ್ತೋಷತ್**—ಸ್ತುತಿಸುತ್ತೇನೆ.

॥ ಭಾವಾರ್ಥ ॥

ಅನೇಕರಿಂದ ಆಹೂತನಾಗುವವನೂ, ವಜ್ರಾಯುಧವನ್ನು ಹಿಡಿದಿರುವವನೂ ಆದ ಎಲೈ ಇಂದ್ರನೇ, ನನ್ನ ಮನಸ್ಸು ದಾರಿದ್ರ್ಯದ ಭಯದಿಂದ ನೆಲದ ಮೇಲೆ ಸುತ್ತುತ್ತಿರುವ ಚಕ್ರದಂತೆ ನಡಗುತ್ತದೆ. ಸರ್ವದಾ ವೃದ್ಧಿಯನ್ನು ಹೊಂದುವವನೂ ಧನವಂತನೂ ಆದ ಎಲೈ ಇಂದ್ರನೇ, ರಥದ ಮೇಲೆ ಸ್ಥಿತನಾಗಿರುವ ನಿನ್ನನ್ನು, ಸ್ತುತಿಕರ್ತನೂ, ಪುರೂವಸುನಾಮಕನೂ ಆದ ನಾನು ಅನೇಕ ಪ್ರಕಾರವಾಗಿಯೂ ಕ್ಷಿಪ್ರವಾಗಿಯೂ ಸ್ತುತಿಸುತ್ತೇನೆ.

English Translation

Wielder of the thunderbolt, the invoked of many, my mind trembles through dread of poverty like a whirling wheel Maghavan, ever prosperous, may your worshipper, Puruvasu, praise you promptly and abundantly, seated in your chariot

---

॥ ಸಂಹಿತಾಪಾಠಃ ॥

ಏಷ ಗ್ರಾವೇವ ಜರಿತಾ ತ ಇಂದ್ರೇಯರ್ತಿ ವಾಚಂ ಬೃಹದಾಶುಷಾಣಃ ।
ಪ್ರ ಸವ್ಯೇನ ಮಘವನ್ಯಂಸಿ ರಾಯಃ ಪ್ರ ದಕ್ಷಿಣಿದ್ಧರಿವೋ ಮಾ ವಿ
ವೇನಃ ॥ ೪ ॥

॥ ಪದಪಾಠಃ ॥

ಏಷಃ । ಗ್ರಾವಾ᳚ಇವ । ಜರಿತಾ । ತೇ । ಇಂದ್ರ । ಇಯರ್ತಿ । ವಾಚಂ । ಬೃಹತ್ । ಆಶುಷಾಣಃ ।
ಪ್ರ । ಸವ್ಯೇನ । ಮಘ᳚ವನ್ । ಯಂಸಿ । ರಾಯಃ । ಪ್ರ । ದಕ್ಷಿಣಿತ್ । ಹರಿ᳚ವಃ । ಮಾ । ವಿ ।
ವೇನಃ ॥ ೪ ॥

॥ ಸಾಯಣಭಾಷ್ಯಂ ॥

**ಏಷ ಜರಿತಾ ಗರಿತಾ ಸ್ತೋತಾ ಗ್ರಾವೇವಾಭಿಷವಾಶ್ಮೇವ । ಸ ಯಥಾ ರಸಂ ಜನಯತಿ ತದ್ವತ್ ಹೇ ಇಂದ್ರ ತೇ ತುಭ್ಯಂ ವಾಚಂ ಸ್ತುತಿಮಿಯರ್ತಿ । ಪ್ರೇರಯತೀತ್ಯರ್ಥಃ । ಬೃಹನ್ಮಹತ್ಪ್ರಭೂತಂ ಫಲಮಾಶುಷಾಣ ಆಶು ಸಂಭಕ್ತಾ ಸನ್ ಹೇ ಮಘವನ್ ಸವ್ಯೇನ ಹಸ್ತೇನ ರಾಯೋ ಧನಾನಿ ಪ್ರ ಯಂಸಿ । ಪ್ರಯಚ್ಛಸಿ । ದಕ್ಷಿಣಿದ್ದಕ್ಷಿಣೇನಾಪಿ ಪ್ರ ಯಂಸೀತಿ ಶೇಷಃ । ಮಾ ವಿ ವೇನಃ । ವಿಗತಕಾಮಂ ಮಾ ಕಾರ್ಷೀಃ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಏಷಃ ಜರಿತಾ**—ಈ ಸ್ತುತಿಕರ್ತನು । **ಬೃಹತ್**—ಪ್ರಭೂತವಾದ ಫಲವನ್ನು । **ಆಶುಷಾಣಃ**—ನಿರೀಕ್ಷಿಸುತ್ತಾ । **ಗ್ರಾವೇವ**—ಸೋಮವನ್ನು ಹಿಂಡುವ ಕಲ್ಲು ರಸವನ್ನು ಉತ್ಪಾದನ ಮಾಡುವಂತೆ । **ತೇ**—ನಿನ್ನನ್ನು ಪ್ರಶಂಸಿಸುವ । **ವಾಚಂ**—ಸ್ತುತಿಯನ್ನು । **ಇಯರ್ತಿ**—ಉತ್ಪಾದನಮಾಡುತ್ತಾನೆ । **ಮಘವನ್**—ಧನವಂತನಾದ ಎಲೈ ಇಂದ್ರನೇ । **ಸವ್ಯೇನ**—ಎಡಗೈಯಿನಿಂದ । **ರಾಯಃ**—ಧನಗಳನ್ನು । **ಪ್ರ ಯಂಸಿ**—ಕೊಡುತ್ತೀಯೆ । **ಹರಿವಃ**—ಅಶ್ವಯುಕ್ತನಾದ ಎಲೈ ಇಂದ್ರನೇ । **ದಕ್ಷಿಣಿತ್**—ಬಲಗೈಯಿನಿಂದಲೂ ಸಹ । **ಪ್ರ (ಯಂಸಿ)**—ಉದಾರವಾಗಿ ಕೊಡು । **ಮಾ ವಿ ವೇನಃ**—ಕೊಡಲು ಹಿಂತೆಗೆಯಬೇಡ ।

॥ ಭಾವಾರ್ಥ ॥

ಎಲೈ ಇಂದ್ರನೇ, ಈ ಸ್ತುತಿಕರ್ತನು ಪ್ರಭೂತವಾದ ಫಲವನ್ನು ನಿರೀಕ್ಷಿಸುತ್ತಾ ಸೋಮವನ್ನು ಹಿಂಡುವ ಕಲ್ಲು ರಸವನ್ನು ಹೊರಡಿಸುವಂತೆ ನಿನ್ನನ್ನು ಪ್ರಶಂಸಿಸುವ ಸ್ತುತಿಯನ್ನು ಪ್ರಕಾಶಪಡಿಸುತ್ತಾನೆ. ಧನವಂತನಾದ ಎಲೈ ಇಂದ್ರನೇ, ನೀನು ಎಡಗೈಯಿನಿಂದ ಧನಗಳನ್ನು ಕೊಡುತ್ತೀಯೆ ಅದರಂತೆಯೇ ಅಶ್ವಯುಕ್ತನಾದ ಎಲೈ ಇಂದ್ರನೆ ಅದೇ ರೀತಿ ಬಲಗೈಯಿನಿಂದಲೂ ಕೊಡು. ಉದಾರವಾಗಿ ಕೊಡಲು ಹಿಂತೆಗೆಯಬೇಡ.

## English Translation

This your adorer, Indra, like the stone (that express the Soma juice), urges praise to you, participating in the great (reward): you bestow, Maghavan, riches with your left hand, you bestow them, lord of horses, with the right : be not reluctant.

॥ ಸಂಹಿತಾಪಾಠಃ ॥

ವೃಷಾ ತ್ವಾ ವೃಷಣಂ ವರ್ಧತು ದ್ಯೌರ್ವೃಷಾ ವೃಷಭ್ಯಾಂ ವಹಸೇ ಹರಿಭ್ಯಾಂ।
ಸ ನೋ ವೃಷಾ ವೃಷರಥಃ ಸುಶಿಪ್ರ ವೃಷಕ್ರತೋ ವೃಷಾ ವಜ್ರಿನ್ಭರೇ ಧಾಃ ॥

॥ ಪದಪಾಠಃ ॥

ವೃಷಾ । ತ್ವಾ ॥ ವೃಷಣಂ । ವರ್ಧತು । ದ್ಯೌಃ । ವೃಷಾ । ವೃಷऽಭ್ಯಾಂ । ವಹಸೇ । ಹರಿಃಭ್ಯಾಂ ।
ಸಃ । ನಃ । ವೃಷಾ । ವೃಷऽರಥಃ । ಸುऽಶಿಪ್ರ । ವೃಷಕ್ರತೋ ಇತಿ ವೃಷऽಕ್ರತೋ । ವೃಷಾ । ವಜ್ರಿನ್ ।
ಭರೇ । ಧಾಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಾ ತ್ವಾಂ ವೃಷಾ ವರ್ಷಿತ್ರೀ ದ್ಯೌರ್ದ್ಯೋತಯಿತ್ರೀ ಸ್ತುತಿಃ ॥ ದ್ಯೋತತೇರ್ದಿವ್ಯತೇರ್ವಾ ಸ್ತುತ್ಯರ್ಥಸ್ಯೇದಂ ರೂಪಂ ॥ ವೃಷಣಂ ಕಾಮಾನಾಂ ವರ್ಷಕಂ ತ್ವಾಂ ವರ್ಧತು । ವರ್ಧಯತು । ವೃಷಾ ತ್ವಂ ವೃಷಭ್ಯಾಂ ಸೇಕ್ತೃಭ್ಯಾಂ ಹರಿಭ್ಯಾಂ ವಹಸೇ । ಯಜ್ಞಂ ಪ್ರತ್ಯುಹ್ಯಸೇ । ಸುಶಿಪ್ರ ಶೋಭನಹನೋ ವೃಷಕ್ರತೋ ವರ್ಷಣಕರ್ಮನ್ ಹೇ ವಜ್ರಿನ್ ವಜ್ರಯುಕ್ತೇಂದ್ರ ಸ ತ್ವಂ ವೃಷಾ ವೃಷರಥಶ್ಚ ಸನ್ ನೋಽಸ್ಮಾನ್ ಭರೇ ಸಂಗ್ರಾಮೇ ಭರಣವತಿ ಯಜ್ಞೇ ವಾ ಧಾಃ । ಧಾರಯ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ವೃಷಾ**—ತುಷ್ಟಿದಾಯಕವಾದುದೂ । **ದ್ಯೌಃ**—ಪ್ರಕಾಶಮಾನವಾದುದೂ ಆದ ಈ ಸ್ತುತಿಯು । **ವೃಷಣಂ**—ಕಾಮವರ್ಷಕನಾದ । **ತ್ವಾ**—ನಿನ್ನನ್ನು । **ವರ್ಧತು**—ಬೆಳೆಯುವಂತೆ ಮಾಡಲಿ । **ವೃಷಾ**—ಕಾಮವರ್ಷಕನಾದ ನೀನು । **ವೃಷಭ್ಯಾಂ**—ಸೇಚನಸಾಮರ್ಥ್ಯವುಳ್ಳ । **ಹರಿಭ್ಯಾಂ**—ಅಶ್ವಗಳಿಂದ । **ವಹಸೇ**—ಒಯ್ಯಲ್ಪಡುತ್ತೀಯೆ । **ಸುಶಿಪ್ರ**—ಉತ್ತಮವಾದ ಕೆನ್ನೆಯುಳ್ಳವನೂ । **ವೃಷಕ್ರತೋ**—ಇಷ್ಟಾರ್ಥಪ್ರದವಾದ ಕರ್ಮವುಳ್ಳವನೂ । **ವಜ್ರಿನ್**—ವಜ್ರಾಯುಧವನ್ನು ಹಿಡಿದಿರುವವನೂ ಆದ ಇಂದ್ರನೇ । **ವೃಷಾ**—ಸೇಚನಸಾಮರ್ಥ್ಯವುಳ್ಳವನೂ । **ವೃಷರಥಃ**—ಇಷ್ಟಾರ್ಥಪ್ರದವಾದ ರಥವುಳ್ಳವನೂ ಆದ । **ಸಃ**—ನೀನು । **ನಃ**—ನಮ್ಮನ್ನು । **ಭರೇ**—ಯುದ್ಧದಲ್ಲಿ । **ಧಾಃ**—ಧರಿಸು (ರಕ್ಷಿಸು)

॥ ಭಾವಾರ್ಥ ॥

ಎಲೈ ಇಂದ್ರನೇ ತುಷ್ಟಿದಾಯಕವಾದುದೂ, ಪ್ರಕಾಶಮಾನವಾದುದೂ ಆದ ಈ ಸ್ತುತಿಯು ಕಾಮವರ್ಷಕನಾದ ನಿನ್ನನ್ನು ಬೆಳೆಯುವಂತೆ ಮಾಡಲಿ. ಕಾಮವರ್ಷಕನಾದ ನೀನು ಸೇಚನಸಾಮರ್ಥ್ಯವುಳ್ಳ ಅಶ್ವಗಳಿಂದ ಒಯ್ಯಲ್ಪಡುತ್ತೀಯೆ. ಉತ್ತಮವಾದ ಕೆನ್ನೆಯುಳ್ಳವನೂ, ಇಷ್ಟಾರ್ಥಪ್ರದವಾದ ಕರ್ಮವುಳ್ಳವನೂ, ವಜ್ರಾಯುಧವನ್ನು ಹಿಡಿದಿರುವವನೂ ಆದ ಎಲೈ ಇಂದ್ರನೇ, ಸೇಚನಸಾಮರ್ಥ್ಯವುಳ್ಳವನೂ, ಇಷ್ಟಾರ್ಥಪ್ರದವಾದ ರಥವುಳ್ಳವನೂ ಆದ ನೀನು ನಮ್ಮನ್ನು ಯುದ್ಧದಲ್ಲಿ ರಕ್ಷಿಸು

## English Translation

May the effective eulogium melt you, the showerer (of benefits): you, the showerer, are borne (to the sacrifice) by vigorous steeds: sender of rain, you of the handsome chin, wielder of the thunderbolt, showerer whose car showers down (blessings), you defend us in battle

॥ ಸಂಹಿತಾಪಾಠಃ ॥

ಯೋ ರೋಹಿ॑ತೌ ವಾ॒ಜಿನೌ॑ ವಾ॒ಜಿನೀ॑ವಾನ್ತ್ರಿ॒ಭಿಃ ಶ॒ತೈಃ ಸಚ॑ಮಾನಾ॒ವದಿ॑ಷ್ಟ।
ಯೂನೇ॒ ಸಮ॑ಸ್ಮೈ ಕ್ಷಿ॒ತಯೋ॑ ನಮಂತಾಂ ಶ್ರು॒ತರ॑ಥಾಯ ಮರುತೋ
ದುವೋ॒ಯಾ ॥ ೬ ॥

॥ ಪದಪಾಠಃ ॥

ಯಃ । ರೋಹಿ॑ತಾ । ವಾ॒ಜಿನಾ॑ । ವಾ॒ಜಿನೀ॑ಽವಾನ್ । ತ್ರಿ॒ಽಭಿಃ । ಶ॒ತೈಃ । ಸಚ॑ಮಾನಾ । ಅದಿ॑ಷ್ಟ ।
ಯೂನೇ॑ । ಸಂ । ಅ॒ಸ್ಮೈ॒ । ಕ್ಷಿ॒ತಯಃ॑ । ನ॒ಮಂ॒ತಾ॒ಂ । ಶ್ರು॒ತಽರ॑ಥಾಯ । ಮ॒ರು॒ತ॒ಃ । ದು॒ವ॒ಃಽಯಾ ॥ ೬ ॥

॥ ಸಾಯಣಭಾಷ್ಯಂ ॥

ಇಯಂ ಶತ್ರುತರಥಸ್ಯ ರಾಜ್ಞೋ ದಾನಸ್ತುತಿಃ । ಯೋ ರಾಜಾ ವಾಜಿನೀವಾನನ್ನವಾನ್ ಶ್ರುತರಥೋ ರೋಹಿತಾ ರೋಹಿತವರ್ಣೌ ವಾಜಿನಾ ವೇಜನವಂತಾವಶ್ವೌ ತ್ರಿಭಿಃ ಶತೈರ್ಗವಾಂ ಧನಾನಾಂ ವಾ ಉಕ್ತಸಂಖ್ಯಾಭಿಃ ಸಚಮಾನಾ ಸಂಗಚ್ಛಮಾನಾವದಿಷ್ಟ ॥ ದದಾತೇರ್ದಿಶತೇರ್ವಾ ಲುಙೀದಂ ರೂಪಂ ॥ ಯೂನೇ ಸರ್ವತ್ರ ಮಿಶ್ರಯಿತ್ರೇ ನಿತ್ಯತರುಣಾಯ ವಾಸ್ಮೈ ಶ್ರುತರಥಾಯ ಕ್ಷಿತಯಃ ಸರ್ವಾಃ ಪ್ರಜಾ ದುವೋಯಾ ॥ ತೃತೀಯೈಕವಚನಸ್ಯ ಯಾಜಾದೇಶಃ ॥ ಪರಿಚರ್ಯಯಾ ಸಂ ನಮಂತಾಂ । ಪ್ರಣತಾ ಭವಂತು । ಸೇವಂತಾಮಿತ್ಯರ್ಥಃ । ಹೇ ಮರುತ ಇತೀಂದ್ರಸಹಾಯ-ಭೂತಾನಾಂ ಮರುತಾಂ ಸಂಬೋಧನಂ ॥

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ವಾಜಿನೀವಾನ್**—ಅನ್ನಸಂಪದ್ಯುಕ್ತನಾದ । **ಯಃ**—ಯಾವ ಶ್ರುತರಥನೆಂಬ ರಾಜನು । **ರೋಹಿತಾ**—ಹೊಂಬಣ್ಣವುಳ್ಳವೂ । **ವಾಜಿನಾ**—ವೇಗಗಾಮಿಗಳಾದವೂ । **ತ್ರಿಭಿಃ ಶತೈಃ**—ಮುನ್ನೂರು ಗೋವುಗಳೊಡನೆ । **ಸಚಮಾನಾ**-ಸೇರಿಕೊಂಡಿರುವುವೂ ಆದ ಎರಡು ಅಶ್ವಗಳನ್ನು । **ಅದಿಷ್ಟ**-

ದಾನಮಾಡಿದನೋ ಅಂತಹ । **ಯೂನೇ**—ತರುಣನಾದ । **ಅಸ್ಮೈ ಶ್ರುತರಥಾಯ**—ಈ ಶ್ರುತರಥನಿಗೆ । **ಕ್ಷಿತಯಃ**—ಸಕಲಪ್ರಜೆಗಳೂ । **ದುವೋಯಾ**—ಸೇವೆಯನ್ನು ಸಲ್ಲಿಸಲಿ । **ಸಂ ನಮಂತಾಂ**—ರಾಜಭಕ್ತಿಯಿಂದ ನಮಸ್ಕರಿಸಲಿ

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಅನ್ನಸಂಪದ್ಯುಕ್ತನಾದ ಯಾವ ಶ್ರುತರಥನು ಹೊಂಬಣ್ಣವುಳ್ಳವೂ ವೇಗಗಾಮಿಗಳಾದವೂ, ಆದ ಎರಡು ಕುದುರೆಗಳನ್ನೂ ಮುನ್ನೂರು ಗೋವುಗಳನ್ನೂ ದಾನಮಾಡಿದನೋ ಅಂತಹ ತರುಣನಾದ ಈ ಶ್ರುತರಥನಿಗೆ ಸಕಲ ಪ್ರಜೆಗಳೂ ಸೇವೆಯನ್ನು ಸಲ್ಲಿಸಲಿ. ಮತ್ತು ರಾಜಭಕ್ತಿಯಿಂದ ನಮಸ್ಕರಿಸಲಿ.

English Translation

Maruts, may all men bow in obedience to that youthful Shrutaratha, the possessor of abundance, who has bestowed (upon us) two bay steeds accompanied by three hundred (cattle).

## ಮೂವತ್ತೇಳನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಸಂ ಭಾನುನೇತಿ ಪಂಚರ್ಚಂ ಪಂಚಮಂ ಸೂಕ್ತಮತ್ರೇರಾರ್ಷಂ ತ್ರೈಷ್ಟುಭಮೈಂದ್ರಂ । ಸಂ ಭಾನುನಾ ಪಂಚಾತ್ರಿರಿತ್ಯನುಕ್ರಮಣಿಕಾ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು—**ಸಂ ಭಾನುನಾ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಅತ್ರಿಯು ಋಷಿಯು, ಇಂದ್ರನು ದೇವತೆಯು; ತ್ರಿಷ್ಟುಪ್ ಛಂದಸ್ಸು ಅನುಕ್ರಮಣಿಕೆಯಲ್ಲಿ—**ಸಂ ಭಾನುನಾ ಪಂಚಾತ್ರಿಃ** ಎಂದು ಹೇಳಿರುವುದು ವಿನಿಯೋಗವು ಲೈಂಗಿಕವು

### ಸೂಕ್ತ—೩೭

॥ ಮಂಡಲ—೫ ॥ ಅನುವಾಕ—೩ ॥ ಸೂಕ್ತ—೩೭ ॥
॥ ಅಷ್ಟಕ—೪ । ಅಧ್ಯಾಯ—೨ ॥ ವರ್ಗ—೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೫
॥ ಋಷಿಃ—ಅತ್ರಿಃ ॥
॥ ದೇವತಾ—ಇಂದ್ರಃ ॥
॥ ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಸಂ ಭಾನುನಾ ಯತತೇ ಸೂರ್ಯಸ್ಯಾಜುಹ್ವಾನೋ ಘೃತಪೃಷ್ಠಃ ಸ್ವಂಚಾಃ।
ತಸ್ಮಾ ಅಮೃಧ್ರಾ ಉಷಸೋ ವ್ಯುಚ್ಛಾನ್ಯ ಇಂದ್ರಾಯ ಸುನವಾಮೇತ್ಯಾಹ॥

॥ ಪದಪಾಠಃ ॥

ಸಂ । ಭಾನುನಾ । ಯತತೇ । ಸೂರ್ಯಸ್ಯ । ಆಽಜುಹ್ವಾನಃ । ಘೃತಽಪೃಷ್ಠಃ । ಸುಽಅಂಚಾಃ ।
ತಸ್ಮೈ । ಅಮೃಧ್ರಾಃ । ಉಷಸಃ । ವಿ । ಉಚ್ಛಾನ್ । ಯಃ । ಇಂದ್ರಾಯ । ಸುನವಾಮ । ಇತಿ । ಆಹ॥

॥ ಸಾಯಣಭಾಷ್ಯಂ ॥

ಸೂರ್ಯಸ್ಯ ಭಾನುನಾ ತೇಜಸಾ ಸಹಾಜುಹ್ವಾನಃ ಸರ್ವತ್ರ ಹೂಯಮಾನಃ ॥ ಕರ್ಮಣಿ ಕರ್ತೃಪ್ರತ್ಯಯಃ । ಘೃತಪೃಷ್ಠಃ ಪ್ರದೀಪ್ತಜ್ವಾಲೋ ಘೃತಯುಕ್ತ ಪೃಷ್ಠಪ್ರದೇಶೋ ವಾ ಸ್ವಂಚಾಃ ಸ್ವಂಚನೋಽಗ್ನಿಃ ಸಂ ಯತತೇ । ಸಮ್ಯಕ್ ಪ್ರಯತ್ನಂ ಕರೋತಿ। ಉದಯಕಾಲೇ ಹ್ಯಗ್ನಯಃ ಪ್ರಜ್ವಾಲ್ಯಂತೇ। ತಸ್ಮಾತ್ಕಾರಣಾದ್ಯೋ ಯಜಮಾನ ಇಂದ್ರಾಯ ಸುನವಾಮೇತ್ಯಾಹ ಬ್ರೂತೇಽಧ್ವರ್ಯುಂ ಪ್ರತಿ ತಸ್ಮೈ ಯಜಮಾನಾಯಾಮೃಧ್ರಾ ಅಹಿಂಸಿತಾ ಉಷಸೋ ವ್ಯುಚ್ಛಾನ್ । ವ್ಯುಚ್ಛಂತು । ಉದಯಕಾಲೇಽಗ್ನಿಃ ಪ್ರಜ್ವಾಲಿತಸ್ತಸ್ಮಾತ್ಸೋಮಯಾಗಂ ಕುರ್ಮ ಇತಿ ಯೋ ಬ್ರೂತೇ ತಸ್ಯೈ ಸುದಿನಾನಿ ಭವಂತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಘೃತಪೃಷ್ಠಃ**—ಪ್ರದೀಪ್ತವಾದ ಜ್ವಾಲೆಯುಳ್ಳವನೂ । **ಸ್ವಂಚಾಃ**—ಶೋಭನ ಗಮನವುಳ್ಳವನೂ । **ಆಜುಹ್ವಾನಃ**—ಸರ್ವತ್ರ ಆಹೂತನಾದವನೂ ಆದ ಅಗ್ನಿಯು। **ಸೂರ್ಯಸ್ಯ**—ಸೂರ್ಯನ। **ಭಾನುನಾ**—ತೇಜಸ್ಸಿನೊಡನೆ । **ಸಂಯತತೇ**—ಸೇರಿ ಐಕ್ಯನಾಗುತ್ತಾನೆ (ಅಥವಾ ಸೂರ್ಯನ ಪ್ರಭೆಯೊಂದಿಗೆ ಸ್ಪರ್ಧಿಸಿ ಪ್ರಕಾಶಿಸುತ್ತಾನೆ) **ಯಃ**—ಯಾವ ಯಜಮಾನನು । **ಇಂದ್ರಾಯ**—ಇಂದ್ರನನ್ನುದ್ದೇಶಿಸಿ । **ಸುನವಾಮ**—(ಇಂದ್ರಾರ್ಪಣೆಗಾಗಿ) ಸೋಮವನ್ನು ಹಿಂಡೋಣ । **ಇತಿ**—ಎಂಬುದಾಗಿ । **ಆಹ**—ಹೇಳುವನೋ । **ತಸ್ಮೈ**—ಆ ಯಜಮಾನನಿಗೋಸ್ಕರ । **ಅಮೃಧ್ರಾಃ**—ಅಹಿಂಸಿತಗಳಾದ । **ಉಷಸಃ**—ಉಷಸ್ಸುಗಳು । **ವ್ಯುಚ್ಛಾನ್**—ಆವಿರ್ಭಾವವನ್ನು ಹೊಂದಿ ಪ್ರಕಾಶಿಸಲಿ.

॥ ಭಾವಾರ್ಥ ॥

ಪ್ರದೀಪ್ತವಾದ ಜ್ವಾಲೆಯುಳ್ಳವನೂ, ಶೋಭನ ಗಮನವುಳ್ಳವನೂ ಸರ್ವತ್ರ ಆಹೂತನಾದವನೂ ಆದ ಅಗ್ನಿಯು ತನ್ನ ಪ್ರಕಾಶದಿಂದ ಸೂರ್ಯನ ಪ್ರಭೆಯೊಡನೆ ಸ್ಪರ್ಧಿಸುತ್ತಾನೆ. ಯಾವ ಯಜಮಾನನು ಇಂದ್ರನನ್ನುದ್ದೇಶಿಸಿ ಇಂದ್ರಾರ್ಪಣೆಗಾಗಿ ಸೋಮವನ್ನು ಹಿಂಡೋಣ ಎಂದು ಹೇಳುವನೋ ಆ ಯಜಮಾನನಿಗೋಸ್ಕರ ಅಹಿಂಸಿತಗಳಾದ ಉಷಸ್ಸುಗಳು ಆವಿರ್ಭಾವವನ್ನು ಹೊಂದಿ ಪ್ರಕಾಶಿಸಲಿ.

## English Translation

The piously worshipped (Agni), when invoked, glistening with the oblation, vies with the splendour of the sun: may the dawns rise innoxious to him who says, let us offer oblations to Indra.

॥ ವಿಶೇಷ ವಿಷಯಗಳು ॥

**ಘೃತಪೃಷ್ಠಃ—ಪ್ರದೀಪ್ತಜ್ವಾಲೋ ಘೃತಯುಕ್ತಪೃಷ್ಠಪ್ರದೇಶೋ ವಾ ।** ಘೃತವನ್ನು ಹೋಮ ಮಾಡುವುದರಿಂದ ಅಗ್ನಿಯು ತೀಕ್ಷ್ಣವಾದುದೂ, ಪ್ರಕಾಶಮಾನವೂ ಆದ ಜ್ವಾಲೆಗಳಿಂದ ಬೆಳಗುತ್ತಿರುವನು ಎಂದಭಿಪ್ರಾಯವು. ಸಾಧಾರಣವಾಗಿ ಹೋಮಾದಿಗಳಿಂದ ಪ್ರಕಾಶಿಸುತ್ತಿರುವ ಅಗ್ನಿಯನ್ನು ಘೃತಪೃಷ್ಠ ಎಂಬ ಶಬ್ದದಿಂದ ಸ್ತುತಿಸುವುದು ರೂಢಿಯಾಗಿದೆ

**ಸ್ವಂಚಾಃ**—ಈ ಶಬ್ದಕ್ಕೆ ಯಾಸ್ಕರು—**ಸ್ವಂಚಾಃ ಸು ಅಂಚನಃ । ಆಜುಹ್ವಾನೋ ಘೃತಪೃಷ್ಠಃ ಸ್ವಂಚಾಃ ಇತ್ಯಪಿ ನಿಗಮೋ ಭವತಿ** (ನಿ. ೫-೭) ಎಂದು ನಿರ್ವಚನವನ್ನು ಹೇಳಿದಾರೆ. ಅಂಚನವೆಂದರೆ ಗಮನವೆಂಬರ್ಥವಿರುವುದರಿಂದ ಸ್ವಂಚಾಃ ಎಂದರೆ ಶೋಭನಗಮನವುಳ್ಳವನು ಎಂದರ್ಥವು ಅಗ್ನಿಗೆ ಗಮನವುಂಟೇ ಎಂದರೆ ಅಗ್ನಿಯನ್ನು ಅರಣಿಗಳಲ್ಲಿ ಮಥನಮಾಡಿ ಆ ಸ್ಥಳದಿಂದ ಉತ್ತರವೇದಿಯಲ್ಲಿ ಇರುವ ಆಹವನೀಯವೆಂಬ ಅಗ್ನಿಕುಂಡದ ಬಳಿಗೆ ತಂದು ಅಲ್ಲಿ ಸ್ಥಾಪಿಸುವರು. ಈ ಕರ್ಮಕ್ಕೆ ಅಗ್ನ್ಯಾನಯನ ಅಥವಾ ಅಗ್ನಿಪ್ರಣಯನವೆಂದು ಹೆಸರು. ಇದನ್ನು ವಿಧಿಪೂರ್ವಕವಾಗಿಯೂ ಮಂತ್ರಪೂರ್ವಕವಾಗಿಯೂ ಮಾಡುವರು. ಇದು ಯಜ್ಞದ ಪ್ರಾರಂಭ ಕರ್ಮಗಳಲ್ಲಿ ಬಹು ಮುಖ್ಯವಾದ ಯಜ್ಞಾಂಗಕರ್ಮವು. ಇದನ್ನು ಸೂಚಿಸುವುದಕ್ಕಾಗಿ ಇಲ್ಲಿ ಸ್ವಂಚಾಃ—ಶೋಭನ ಗಮನವುಳ್ಳವನು ಎಂದು ಸ್ತುತಿಸಲಾಗಿದೆ.

**ಸೂರ್ಯಸ್ಯ ಭಾನುನಾ ಆಜುಹ್ವಾನಃ ಸಂ ಯತತೇ**—ಪ್ರಾತಃಕಾಲದಲ್ಲಿ ಸೂರ್ಯನು ಉದಯಿಸುವಾಗ ಋತ್ವಿಕ್ಕುಗಳು ಅಗ್ನಿಯನ್ನು ಹೊತ್ತಿಸಿ ಪ್ರಜ್ವಲನವಾಗುವಂತೆ ಮಾಡುವರು. ಜಾಜ್ವಲ್ಯಮಾನವಾಗಿ ಉರಿಯುತ್ತಿರುವ ಆ ಅಗ್ನಿಯು ಬಹು ಪ್ರಕಾಶಮಾನವಾಗಿ ಬೆಳಗುತ್ತಿರುವುದರಿಂದ ಆಗತಾನೇ ಉದಯಿಸುತ್ತಿರುವ ಸೂರ್ಯನ ತೇಜಸ್ಸಿನೊಡನೆ ಅಗ್ನಿಯೂ ಆಹ್ವಾನಿಸಲ್ಪಟ್ಟು ಸೂರ್ಯನ ತೇಜಸ್ಸಿನಂತೆ ಬೆಳಗುತ್ತಾನೆ ಎಂಬಭಿಪ್ರಾಯವು ಸೂಚಿತವಾಗಿದೆ.

**ಯಃ ಇಂದ್ರಾಯ ಸುನವಾಮ ಇತಿ ಆಹ ತಸ್ಮೈ ಅನ್ಮೃಧ್ರಾ ಉಷಸಃ ವ್ಯುಚ್ಛಾನ್**—ಪ್ರಾತಃಕಾಲದಲ್ಲಿ ನೆರವೇರುವ ಯಜ್ಞದಲ್ಲಿ ಇಂದ್ರನಿಗಾಗಿ ಸೋಮರಸವನ್ನು ಹಿಂಡಿ ಅರ್ಪಿಸಬೇಕೆಂಬ ಅಪೇಕ್ಷೆಯನ್ನು ಯಾವ ಯಜಮಾನನು ವ್ಯಕ್ತಪಡಿಸುವನೋ ಅವನ ವಿಷಯದಲ್ಲಿ ಉಷೋದೇವತೆಗಳು ತೃಪ್ತರಾಗಿ ಆ ಯಜ್ಞದಿನವು ಯಜಮಾನನಿಗೆ ಸುದಿನ ಎಂದರೆ ಇಂದ್ರಾಗ್ನಿಗಳ ಅನುಗ್ರಹವನ್ನುಂಟುಮಾಡುವ ಸುದಿನ ( ಒಳ್ಳೆಯ ದಿನ ) ವಾಗಿ ಪರಿಣಮಿಸಲಿ ಎಂಬ ಆಶಯವು ಇಲ್ಲಿ ವ್ಯಕ್ತವಾಗಿದೆ.

॥ ಸಂಹಿತಾಪಾಠಃ ॥

**ಸಮಿ॑ದ್ಧಾಗ್ನಿರ್ವನವತ್ಸ್ತೀರ್ಣಬ॑ರ್ಹಿರ್ಯು॒ಕ್ತಗ್ರಾ॑ವಾ ಸು॒ತಸೋ॑ಮೋ ಜರಾತೇ ।**

**ಗ್ರಾವಾ॑ಣೋ ಯಸ್ಯೇ॑ಷಿ॒ರಂ ವ॒ದಂತ್ಯಯ॑ದಧ್ವ॒ರ್ಯುರ್ಹ॒ವಿಷಾವ॒ ಸಿಂಧುಂ॥**

॥ ಪದಪಾಠಃ ॥

**ಸಮಿ॑ದ್ಧಽಅಗ್ನಿಃ । ವ॒ನವ॒ತ್ । ಸ್ತೀ॒ರ್ಣಽಬ॑ರ್ಹಿಃ । ಯು॒ಕ್ತಽಗ್ರಾ॑ವಾ । ಸು॒ತಽಸೋ॑ಮಃ । ಜ॒ರಾ॒ತೇ ।**

**ಗ್ರಾವಾ॑ಣಃ । ಯಸ್ಯ॑ । ಇ॒ಷಿ॒ರಂ । ವ॑ದಂತಿ । ಅಯ॑ತ್ । ಅ॒ಧ್ವ॒ರ್ಯುಃ । ಹ॒ವಿಷಾ । ಅವ । ಸಿಂಧುಂ ॥೨॥**

॥ ಸಾಯಣಭಾಷ್ಯಂ ॥

**ಸಮಿದ್ಧಾಗ್ನಿಃ ಪ್ರದೀಪ್ತಾಗ್ನಿಃ ಸ್ತೀರ್ಣಬರ್ಹಿಃ ಪ್ರಸ್ತೃತದರ್ಭೋಽಯಂ ಯಜಮಾನೋ ವನವತ್। ಸಂಭಜತೇ । ಯುಕ್ತಗ್ರಾವಾ ನಿಯುಕ್ತಾಭಿಷವಪಾಷಾಣಃ ಸುತಸೋಮೋಽಭಿಷುತಸೋಮೋ ಜರಾತೇ । ಜರತಿ । ಸ್ತೌತಿ । ಯಸ್ಯಾಧ್ವರ್ಯೋರ್ಗ್ರಾವಾಣೋಽಭಿಷವಸಾಧನಾ ಇಷಿರಮೇಷಣೀಯಂ ಗಮನಶೀಲಂ ವಾ ಶಬ್ದಂ ವದಂತಿ ಸೋಽಧ್ವರ್ಯುರ್ಹವಿಷಾ ಸಹಾವಾಯತ್ ಸಿಂಧುಂ । ಪನ್ನೇಜನೀರವಗಚ್ಛತಿ ॥**

॥ ಪ್ರತಿಪದಾರ್ಥ ॥

**ಸಮಿದ್ಧಾಗ್ನಿಃ**—ಪ್ರಜ್ವಲಿತವಾದ ಅಗ್ನಿಯುಳ್ಳವನೂ । **ಸ್ತೀರ್ಣಬರ್ಹಿಃ**—ಆಸನಕ್ಕಾಗಿ ವಿಸ್ತೃತವಾಗಿ ಹರಡಿದ ದರ್ಭವುಳ್ಳವನೂ ಆದ ಯಜಮಾನನು । **ವನವತ್**—ಪೂಜೆಯನ್ನರ್ಪಿಸುತ್ತಾನೆ । **ಯುಕ್ತಗ್ರಾವಾ**—ರಸಪೇಷಣಕ್ಕಾಗಿ ಕಲ್ಲನ್ನು ಹಿಡಿದಿರುವವನೂ । **ಸುತಸೋಮಃ**—ಹಿಂಡಲ್ಪಟ್ಟ ಸೋಮವುಳ್ಳವನೂ ಆದ ಯಜಮಾನನು (ಅಥವಾ ಋತ್ವಿಕ್ಕು) । **ಜರಾತೇ**—ಸ್ತುತಿಸುತ್ತಾನೆ । **ಯಸ್ಯ**—ಯಾವ ಅಧ್ವರ್ಯುವಿನ । **ಗ್ರಾವಾಣಃ**—ಕಲ್ಲುಗಳು । **ಇಷಿರಂ**—ಚಲಿಸುವ ಶಬ್ದವನ್ನು । **ವದಂತಿ**—ಸೂಚಿಸುತ್ತವೆಯೋ । **ಅಧ್ವರ್ಯುಃ**—ಆ ಅಧ್ವರ್ಯುವು । **ಹವಿಷಾ**—ಹವಿಸ್ಸಿನೊಂದಿಗೆ । **ಸಿಂಧುಂ**—ನದಿಗೆ । **ಅವಾಯತ್**—(ಪೂರ್ವಾಂಗವಾದ ಕರ್ಮಕ್ಕಾಗಿ) ಇಳಿಯುತ್ತಾನೆ.

॥ ಭಾವಾರ್ಥ ॥

ಪ್ರಜ್ವಲಿತವಾದ ಅಗ್ನಿಯುಳ್ಳವನೂ, ಆಸನಕ್ಕಾಗಿ ವಿಸ್ತೃತವಾಗಿ ಹರಡಿದ ದರ್ಭವುಳ್ಳವನೂ ಆದ ಯಜಮಾನನು ಪೂಜೆಯನ್ನರ್ಪಿಸುತ್ತಾನೆ. ರಸಪೇಷಣಕ್ಕಾಗಿ ಗ್ರಾವವನ್ನು ಹಿಡಿದಿರುವವನೂ, ಹಿಂಡಲ್ಪಟ್ಟ ಸೋಮವುಳ್ಳವನ್ನೂ ಆದ ಯಜಮಾನನು ಅಥವಾ ಋತ್ವಿಕ್ಕು ಸ್ತುತಿಸುತ್ತಾನೆ. ಯಾವ ಅಧ್ವರ್ಯುವಿನ ಹಿಂಡುವ ಕಲ್ಲುಗಳು ಚಲಿಸುವ ಶಬ್ದವನ್ನು ಸೂಚಿಸುತ್ತವೆಯೋ, ಆ ಅಧ್ವರ್ಯುವು ಹವಿಸ್ಸಿನೊಂದಿಗೆ ಪೂರ್ವಾಂಗವಾದ ಕರ್ಮಕ್ಕಾಗಿ ನದಿಗೆ ಇಳಿಯುತ್ತಾನೆ.

## English Translation

He whose fire is kindled, whose sacred grass is strewn, offers worship he whose stone is uplifted, whose Soma juice is effused, offers praise : the priest, of whom the stones utter the sounds of bruising, descends with the oblation (for previous ablution) to the stream.

॥ ವಿಶೇಷವಿಷಯಗಳು ॥

**ಸಮಿದ್ಧಾಗ್ನಿಃ ಸ್ತೀರ್ಣಬರ್ಹಿಷಃ ವವವತ್ ಯುಕ್ತಗ್ರಾವಾ ಸುತಸೋಮಃ**—ಈ ವಿಶೇಷಣ ಪದಗಳೆಲ್ಲವೂ ಯಜ್ಞಮಾಡುವ ಯಜಮಾನನು ಯಜ್ಞಕ್ಕಾಗಿ ಮಾಡಿಕೊಂಡಿರುವ ಸಿದ್ಧತೆಗಳನ್ನು ವರ್ಣಿಸುವವು. ಎಂದರೆ ಯಜ್ಞಕರ್ತನಾದ ಯಜಮಾನನು ಪ್ರಾತಃಕಾಲದಲ್ಲಿ ಸೂರ್ಯೋದಯಾನಂತರ ಯಜ್ಞಮಾಡುವುದಕ್ಕಾಗಿ ಋತ್ವಿಕ್ಕುಗಳೊಡನೆ ವಿಧಿಪೂರ್ವಕವಾಗಿ ಅಗ್ನಿಸಮಿಂಧನ, ಅಗ್ನಿಪ್ರಣಯನ ಮೊದಲಾದ ಯಜ್ಞಾಂಗಕರ್ಮಗಳನ್ನು ಮಾಡಿ ಅಗ್ನಿಯನ್ನು ಉತ್ತರವೇದಿಯಲ್ಲಿ ಸ್ಥಾಪಿಸಿ ಅದರಲ್ಲಿ ಹೋಮಮಾಡುವುದಕ್ಕಾಗಿ ಸಮಿದಾದಿದ್ರವ್ಯಗಳಿಂದ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುತ್ತಾನೆ ಎಂಬರ್ಥವು **ಸಮಿದ್ಧಾಗ್ನಿಃ** ಎಂಬ ಶಬ್ದದಿಂದ ಸೂಚಿತವಾಗಿದೆ. ಅನಂತರ ಅಗ್ನಿಯಿಂದ (ಅಥವಾ ಹೋತೃವಿನಿಂದ) ಆಹ್ವಾನಿಸಲ್ಪಟ್ಟ ಯಜ್ಞಭೂಮಿಗೆ ಬರುವ ದೇವತೆಗಳು ಕುಳಿತುಕೊಳ್ಳುವುದಕ್ಕಾಗಿ ಒಂದೇಸಮನಾಗಿ ಕತ್ತರಿಸಿದ ದರ್ಭೆಗಳನ್ನು ಪದರಪದರವಾಗಿ ಎಂದರೆ ಒಂದು ಪದರದ ಮೇಲೆ ಮತ್ತೊಂದು ಪದರವನ್ನು ಅದರಮೇಲೆ ಮತ್ತೊಂದು ಪದರವನ್ನು ಈರೀತಿ ಮೂರು ಪದರಗಳನ್ನು ಹಾಸುವನು ಕುಳಿತುಕೊಳ್ಳುವವರಿಗೆ ಆಸನವು ಮೆತ್ತಗಿರುವುದಕ್ಕಾಗಿ ಈರೀತಿ ಮೂರು ಪದರಗಳನ್ನು ಹಾಕುವುದು ರೂಢಿಯು. ಇಂತಹ ಆಸನವನ್ನು ದೇವತೆಗಳಿಗಾಗಿ ಯಜಮಾನನು ಸಿದ್ಧಪಡಿಸಿಕೊಂಡಿರುತ್ತಾನೆ ಎಂಬ ಅಭಿಪ್ರಾಯವು **ಸ್ತೀರ್ಣಬರ್ಹಿಃ** ಎಂಬ ಶಬ್ದದಿಂದ ವ್ಯಕ್ತವಾಗಿದೆ. ಇದಾದನಂತರ ಅಧ್ವರ್ಯು ಮೊದಲಾದ ಋತ್ವಿಜರು ಕೈಗಳಲ್ಲಿ ಕಲ್ಲುಗಳನ್ನು ಹಿಡಿದುಕೊಂಡು ಸೋಮಲತೆಗಳನ್ನು ಜಜ್ಜಿ ರಸವನ್ನು ಹಿಂಡುವರು. ಈ ಸೋಮಾಭಿಷವಕ್ಕಾಗಿ ಕಲ್ಲುಗಳನ್ನು ಸಿದ್ಧಪಡಿಸಿಕೊಂಡಿರುವನೆಂದೂ ಅದರಿಂದ ಸೋಮವನ್ನು ಹಿಂಡಿ ತೆಗೆಯುವನೆಂದೂ **ಯುಕ್ತಗ್ರಾವಾ** ಮತ್ತು **ಸುತಸೋಮಃ** ಎಂಬಶಬ್ದಗಳಿಂದ ಅರ್ಥವಾಗುವುದು ಇವುಗಳೆಲ್ಲಾ ಎಂದರೆ ಅಗ್ನಿಪ್ರಜ್ವಲನೆ, ದೇವತಾಹ್ವಾನ, ಆಸನವಿಸ್ತರಣ, ಸೋಮಾಭಿಷವ ಇವು ಯಜ್ಞಕ್ಕಾಗಿ ಪೂರ್ವಭಾವಿಯಾಗಿ ಎಂದರೆ ಯಜ್ಞಾರಂಭದಲ್ಲಿ ಯಜ್ಞಾಂಗಗಳಾಗಿ ಮಾಡಬೇಕಾದ ಸಿದ್ಧತೆಗಳು. ಇವುಗಳನ್ನು ಯಜಮಾನನು ಮಾಡಿ ಯಜ್ಞವನ್ನಾಚರಿಸಲು ಸಿದ್ಧನಾಗಿರುವನು ಎಂಬ ವಿಷಯವು ಈ ಋಕ್ಕಿನ ಪೂರ್ವಾರ್ಧದಲ್ಲಿ ಸೂಚಿತವಾಗಿದೆ

ಉತ್ತರಾರ್ಧದಲ್ಲಿ ಯಜ್ಞೋಪಕ್ರಮವನ್ನು ಸೂಕ್ಷ್ಮವಾಗಿ ವಿವರಿಸಲಾಗಿದೆ—ಜರಾತೇ ಎಂಬ ಶಬ್ದವು ಯಜಮಾನ ಅಥವಾ ಹೋತೃವು ದೇವತೆಗಳನ್ನು ಸ್ತುತಿಸುವುದಕ್ಕೆ ಪ್ರಾರಂಭಿಸಿರುವನೆಂದೂ, **ಗ್ರಾವಾಣಃ ಯಸ್ಯ ಇಷಿರಂ ವದಂತಿ**—ಸೋಮವನ್ನು ಜಜ್ಜುವ ಕಲ್ಲುಗಳು ಸೋಮಾಭಿಷವಣಕಾರ್ಯದಲ್ಲಿ ಉದ್ಯುಕ್ತವಾಗಿ ಶ್ರಾವ್ಯವಾದ ಶಬ್ದಮಾಡುತ್ತಾ ಸೋಮರಸವನ್ನು ಹಿಂಡುತ್ತಿರುವುದನ್ನೂ, ಅಧ್ವರ್ಯು ಮುಂತಾದವರು ತಮ್ಮ ತಮ್ಮ ಕರ್ಮಗಳಲ್ಲಿ ಪ್ರವೃತ್ತರಾಗಿರುವ ವಿಷಯವನ್ನು **ಅಧ್ವರ್ಯುಃ ಹವಿಷಾ ಸಿಂಧುಂ ಅವ ಆಯತ್** ಎಂಬ ವಾಕ್ಯವೂ ವಿವರಿಸುವುದು

— — — —

॥ ಸಂಹಿತಾಪಾಠಃ ॥

ವಧೂರಿಯಂ ಪತಿಮಿಚ್ಛಂತ್ಯೇತಿ ಯ ಈಂ ವಹಾತೇ ಮಹಿಷೀಮಿಷಿರಾಂ ।
ಆಸ್ಯ ಶ್ರವಸ್ಯಾದ್ರಥ ಆ ಚ ಘೋಷಾತ್ಪುರೂ ಸಹಸ್ರಾ ಪರಿ ವರ್ತಯಾತೇ ॥

॥ ಪದಪಾಠಃ ॥

ವಧೂಃ । ಇಯಂ । ಪತಿಂ । ಇಚ್ಛಂತೀ । ಏತಿ । ಯಃ । ಈಂ । ವಹಾತೇ । ಮಹಿಷೀಂ । ಇಷಿರಾಂ ।
ಆ । ಅಸ್ಯ । ಶ್ರವಸ್ಯಾತ್ । ರಥಃ । ಆ । ಚ । ಘೋಷಾತ್ । ಪುರು । ಸಹಸ್ರಾ । ಪರಿ । ವರ್ತಯಾತೇ ॥

॥ ಸಾಯಣಭಾಷ್ಯಂ ॥

ಇಯಂ ವಧೂರಿಂದ್ರಸ್ಯ ಪತ್ನೀ ಪತಿಮಿಚ್ಛಂತೀ ಸ್ವಪ್ರಿಯಂ ಯಜ್ಞಗಮನಾಯ ಪ್ರವೃತ್ತ-ಮಿಚ್ಛಂತ್ಯೇತಿ । ಅನುಗಚ್ಛತಿ । ಯ ಇಂದ್ರ ಈಮೇನಾಂ ಮಹಿಷೀಂ ವಹಾತೇ ವಹತೀಷಿರಾಂ ಗಮನ-ವತೀಂ ಅಸ್ಯೇಂದ್ರಸ್ಯ ರಥ ಆ ಅರ್ವಾಗಸ್ಮದಭಿಮುಖಂ ಶ್ರವಸ್ಯಾತ್ । ಅನ್ನಮಿಚ್ಛತಿ । ಆ ಚ ಘೋಷಾತ್ । ಆಘುಷ್ಯತಿ । ಶಬ್ದಯತಿ । ಪುರ್ವತ್ಯಧಿಕಂ ಸಹಸ್ರಾ ಸಹಸ್ರಾಣಿ ಧನಾನಿ ಪರಿ ಪರಿತೋ ವರ್ತಯಾತೇ । ವರ್ತಯತಿ । ಪ್ರಾಪಯತಿ । ಶ್ರವಸ್ಯಾದಾ ಚ ಘುಷ್ಯಾದಿತಿ ವಾ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಇಂದ್ರನು । **ಇಷಿರಾಂ**—ತನ್ನೊಡನಾಡಿಯಾದ । **ಈಂ ಮಹಿಷೀಂ**—ತನ್ನ ಪಟ್ಟಮಹಿಷಿಯನ್ನು । **ವಹತೇ**—ಕರೆದುಕೊಂಡು ಬರುತ್ತಾನೋ(ಅವನ) । **ಇಯಂ ವಧೂಃ**—ಈ ಪತ್ನಿಯು । **ಪತಿಂ**—ತನ್ನ ಪತಿಯಾದ ಇಂದ್ರನು । **ಇಚ್ಛಂತೀ**—ಯಜ್ಞಾಭಿಮುಖವಾಗಿ ಹೋಗಬೇಕೆಂದಿಚ್ಛಿಸಿ । **ಏತಿ**—ಆತನನ್ನನುಸರಿಸಿ ಹೋಗುತ್ತಾಳೆ । **ಅಸ್ಯ**—ಇದೇ ಇಂದ್ರನ । **ರಥಃ**—ರಥವು । **ಆ**—ಸುತ್ತಲೂ । **ಶ್ರವಸ್ಯಾತ್**—(ಯಜಮಾನನನಿಗೆ) ಅನ್ನವನ್ನು ಆಶಂಸಿಸುತ್ತದೆ । **ಆ ಚ ಘೋಷಾತ್**—ಸುತ್ತಲೂ ಶಬ್ದಮಾಡುತ್ತದೆ । **ಪುರು**—ಅತ್ಯಧಿಕವಾಗಿಯೂ । **ಸಹಸ್ರಾ**—ಅಪರಿಮಿತವಾಗಿಯೂ ಇರುವ ಧನವನ್ನು । **ಪರಿ**—ಸುತ್ತಲೂ । **ವರ್ತಯತೇ**—ಒದಗಿಸುತ್ತದೆ.

॥ ಭಾವಾರ್ಥ ॥

ಯಾವ ಇಂದ್ರನು ತನ್ನೊಡನಾಡಿಯಾದ ತನ್ನ ಪಟ್ಟಮಹಿಷಿಯನ್ನು ಕರೆದುಕೊಂಡು ಬರುತ್ತಾನೋ ಅವನ ಪತ್ನಿಯು ತನ್ನ ಪತಿಯಾದ ಇಂದ್ರನು ಯಜ್ಞಾಭಿಮುಖವಾಗಿ ಹೋಗಬೇಕೆಂದಿಚ್ಛಿಸಿ ಆತನನ್ನನುಸರಿಸಿ ಹೋಗುತ್ತಾಳೆ. ಅದೇ ಇಂದ್ರನ ರಥವು ಸುತ್ತಲೂ ಯಜಮಾನನನಿಗೆ ಅನ್ನವನ್ನು ಆಶಂಸಿಸುತ್ತದೆ. ಸುತ್ತಲೂ ಶಬ್ದಮಾಡುತ್ತದೆ. ಅತ್ಯಧಿಕವಾಗಿಯೂ ಅಪರಿಮಿತವಾಗಿಯೂ ಇರುವ ಧನವನ್ನು ಸುತ್ತಲೂ ಒದಗಿಸುತ್ತದೆ.

## English Traαslation

The bride (of Indra), devoted to her lord, attends, him (to the rite), who thus brings (with him) his accompanying queen: may his car convey to us ample food; may it sound loudly; may it scatter around many thousands (of riches)

॥ ವಿಶೇಷ ವಿಷಯಗಳು ॥

ಈ ಋಕ್ಕಿನಲ್ಲಿ ಇಂದ್ರಪತ್ನಿಯು ಇಂದ್ರನನ್ನನುಸರಿಸಿ ಇಂದ್ರನೊಡನೆ ರಥದಲ್ಲಿ ಕುಳಿತು ಯಜ್ಞಭೂಮಿಗೆ ಬರುವ ವರ್ಣನೆ ಇದೆ. ಸಾಧಾರಣವಾಗಿ ಯಜ್ಞಾದಿಗಳಲ್ಲಿ ಸೋಮಪಾನಕ್ಕಾಗಿ ಇಂದ್ರನನ್ನು ಮಾತ್ರವೇ ಆಹ್ವಾನಿಸುವುದು ರೂಢಿಯು. ಆದರೆ ಈ ಋಕ್ಕಿನಲ್ಲಿ ಅನ್ನಾದಿಗಳನ್ನು ಕೊಡುವ ಸಾಮರ್ಥ್ಯವುಳ್ಳದ್ದೂ ಸಂಚರಿಸುವಾಗ ಚಕ್ರಚಲನದಿಂದ ಶಬ್ದವನ್ನುಂಟುಮಾಡುವುದೂ ಇಂದ್ರನನ್ನು ಪೂಜಿಸುವವರಿಗೆ ಧನಾದಿಗಳನ್ನು ಅಸಂಖ್ಯಾತವಾಗಿ ಕೊಡುವುದೂ ಆದ ರಥದಲ್ಲಿ ಇಂದ್ರನೂ ಅವನ ಪತ್ನಿಯಾದ ಇಂದ್ರಾಣಿಯೂ ಬರುವರೆಂಬ ಅರ್ಥವು ವಿವೃತವಾಗಿದೆ

**ಮಹಿಷೀ**—ಮಹಿಷ ಶಬ್ದವು ಮಹನ್ನಾಮಗಳಲ್ಲಿ ಪಠಿತವಾಗಿ (ನಿ. ೩-೧೩) ದೊಡ್ಡದು, ಮಹತ್ತ್ವರೂಪವುಳ್ಳದ್ದು ಎಂದು ಅರ್ಥವನ್ನು ಸೂಚಿಸುವುದು. ಆದ್ದರಿಂದ ಮಹಿಷೀ ಎಂಬ ಶಬ್ದಕ್ಕೆ ಪೂಜ್ಯಳು, ಶ್ರೇಷ್ಠಳು ಎಂಬರ್ಥಗಳನ್ನು ಹೇಳಬಹುದು.

**ವಧೂಃ**—ವಧೂಃ ಶಬ್ದವು ನದೀನಾಮಗಳಲ್ಲಿ ಪಠಿತವಾಗಿದೆ (ನಿ ೨-೨೪) ಸಾಧಾರಣವಾಗಿ ವಧೂಶ್ಶಬ್ದವು ಯೌವನವತಿಯಾದ ಮತ್ತು ವಿವಾಹಿತೆಯಾದ ಸ್ತ್ರೀ ಎಂಬರ್ಥದಲ್ಲಿಯೇ ಉಪಯೋಗಿಸುವುದು ರೂಢಿಯು

—

॥ ಸಂಹಿತಾಪಾಠಃ ॥

ನ ಸ ರಾಜಾ ವ್ಯಥತೇ ಯಸ್ಮಿನ್ನಿಂದ್ರಸ್ತೀವ್ರಂ ಸೋಮಂ ಪಿಬತಿ ಗೋಸ-
ಖಾಯಂ ।
ಆ ಸತ್ವನೈರಜತಿ ಹಂತಿ ವೃತ್ರಂ ಕ್ಷೇತಿ ಕ್ಷಿತೀಃ ಸುಭಗೋ ನಾಮ ಪುಷ್ಯನ್ ॥

॥ ಪದಪಾಠಃ ॥

ನ । ಸಃ । ರಾಜಾ । ವ್ಯಥತೇ । ಯಸ್ಮಿನ್ । ಇಂದ್ರಃ । ತೀವ್ರಂ । ಸೋಮಂ । ಪಿಬತಿ । ಗೋಽಸ-
ಖಾಯಂ ।
ಆ । ಸತ್ವನೈಃ । ಅಜತಿ । ಹಂತಿ । ವೃತ್ರಂ । ಕ್ಷೇತಿ । ಕ್ಷಿತೀಃ । ಸುಽಭಗಃ । ನಾಮ । ಪುಷ್ಯನ್ ॥ ೪ ॥

॥ ಸಾಯಣಭಾಷ್ಯಂ ॥

**ಸ ರಾಜಾ ನ ವ್ಯಥತೇ । ವ್ಯಥಿತೋ ನ ಭವತಿ । ಯಸ್ಮಿನ್ರಾಜನಿ ತದೀಯೇ ಯಜ್ಞ ಇಂದ್ರಸ್ತೀವ್ರಂ ಮದಜನಕಂ ಸೋಮಂ ಪಿಬತಿ ಗೋಸಖಾಯಂ । ವಿಕಾರೇ ಪ್ರಕೃತಿಶಬ್ದಃ ಕ್ಷೀರಾದಿಮಿಶ್ರಣವಂತಂ । ಸ ರಾಜಾ ಸತ್ವನೈಃ ಸತ್ವಭಿರನುಚರೈರಾ ಸರ್ವತೋಽಜತಿ । ಗಚ್ಛತಿ । ಹಂತಿ ಚ ವೃತ್ರಂ ಪಾಪಂ ವೈರಿಣಂ ವಾ । ಕ್ಷೇತಿ ಗಚ್ಛತಿ ಕ್ಷಿತೀಃ ಪ್ರಜಾಃ । ಅಥವಾ ಕ್ಷಿತೀರ್ನಿವಾಸಾನ್ನಿವಸತೇ । ಸುಭಗಃ ಶೋಭನಸುಖೋ ನಾಮ ನಾಮಕಂ ಧನಮಿಂದ್ರಸ್ಯ ಸ್ತೋತ್ರಂ ವಾ ಪುಷ್ಯನ್ ಪೋಷಯನ್ ॥**

॥ ಪ್ರತಿಪದಾರ್ಥ ॥

**ಯಸ್ಮಿನ್**—ಯಾವ ರಾಜನ ಯಜ್ಞದಲ್ಲಿ । **ಇಂದ್ರಃ**—ಇಂದ್ರನು । **ತೀವ್ರಂ**—ಮದಜನಕವಾದುದೂ । **ಗೋಸಖಾಯಂ**-ಹಾಲುಮಿಶ್ರಿತವಾದುದೂ ಆದ। **ಸೋಮಂ**-ಸೋಮರಸವನ್ನು । **ಪಿಬತಿ**-ಪಾನಮಾಡುತ್ತಾನೋ । **ಸ ರಾಜಾ**—ಆ ರಾಜನು । **ನ ವ್ಯಥತೇ**—ದುಃಖಿತನಾಗುವುದಿಲ್ಲ । **ಸತ್ವನೈಃ**—ತನ್ನ ಅನುಚರರೊಂದಿಗೆ । **ಆ**—ಸುತ್ತಲೂ (ನಿರ್ಭಯವಾಗಿ) ' **ಅಜತಿ**—ಸಂಚರಿಸಬಲ್ಲನು । **ವೃತ್ರಂ**—ಶತ್ರುವನ್ನು **ಹಂತಿ**—ನಾಶಪಡಿಸುತ್ತಾನೆ । **ಸುಭಗಃ**-ಶ್ರೇಷ್ಠವಾದ ಸುಖವನ್ನನುಭವಿಸುತ್ತಲೂ । **ನಾಮ**-ಇಂದ್ರನ ಹೆಸರನ್ನು । **ಪುಷ್ಯನ್**-ಪ್ರಶಂಸಿಸುತ್ತಲೂ । **ಕ್ಷಿತೀಃ**—ತನ್ನ ಪ್ರಜೆಗಳನ್ನು । **ಕ್ಷೇತಿ**—ಸುಖವಾಗಿ ವಾಸಿಸುವಂತೆ ಮಾಡುತ್ತಾನೆ .

॥ ಭಾವಾರ್ಥ ॥

ಯಾವ ರಾಜನ ಯಜ್ಞದಲ್ಲಿ ಇಂದ್ರನು ಮದಜನಕವಾದುದೂ, ಗವ್ಯಮಿಶ್ರಿತವಾದುದೂ ಆದ ಸೋಮರಸವನ್ನು ಪಾನಮಾಡುತ್ತಾನೋ ಆ ರಾಜನು ದುಃಖಿತನಾಗುವುದಿಲ್ಲ. ಅವನು ತನ್ನ ಅನುಚರರೊಂದಿಗೆ ಶತ್ರುಭಯವಿಲ್ಲದೇ ಎಲ್ಲೆಲ್ಲೂ ಸಂಚರಿಸಬಲ್ಲನು. ಶತ್ರುಗಳನ್ನು ನಾಶಪಡಿಸುವನು. ಮತ್ತು ಇಂದ್ರನ ದಿವ್ಯನಾಮಗಳನ್ನು ಪ್ರಶಂಸಿಸುತ್ತಾ ತಾನೂ ಶ್ರೇಷ್ಠವಾದ ಸುಖವನ್ನನುಭವಿಸುತ್ತಲೂ, ತನ್ನ ಪ್ರಜೆಗಳನ್ನೂ ಉತ್ತಮವಾಗಿ ವಾಸಿಸುವಂತೆಯೂ ರಾಜ್ಯಭಾರವನ್ನು ನಿರ್ವಹಿಸುತ್ತಾನೆ.

## English Translation

That prince suffers no evil in whose realm Indra drinks the sharp Soma juice mixed with milk : attended by faithful (followers), he moves (in all directions) : he destroys his enemy, he protects his subjects : enjoying prosperity, he cherishes the name of (Indra).

॥ ವಿಶೇಷವಿಷಯಗಳು ॥

**ಗೋಸಖಾಯಂ—ಕ್ಷೀರಾದಿಮಿಶ್ರಣವಂತಂ** । ಇಲ್ಲಿ ಕ್ಷೀರವನ್ನು ಸೂಚಿಸುವುದಕ್ಕಾಗಿ **ಗೋ** ಶಬ್ದದ ಪ್ರಯೋಗವಿದೆ. ಹಾಲಿನಿಂದ ಮಿಶ್ರಿತವಾದ ಸೋಮರಸವೆಂದರ್ಥವು. ಸೋಮರಸವನ್ನು ಶುದ್ಧಮಾಡಿ ಅದಕ್ಕೆ ಏನೂ ಮಿಶ್ರಮಾಡದೆ ಹಾಗೆಯೇ ಪಾನಮಾಡುವುದುಂಟು. ಅಂತಹ ಸೋಮಕ್ಕೆ ತೀವ್ರ ಎಂದು ಹೇಳುವರು. ಮತ್ತು ಸೋಮರಸವು ರುಚಿಕರವಾಗುವುದಕ್ಕಾಗಿ ಅದಕ್ಕೆ ಹಾಲು, ಮೊಸರು, ಹಿಟ್ಟು ಎಂಬ ದ್ರವ್ಯಗಳನ್ನು ಬೆರಸುವರು ಈ

ದ್ರವ್ಯಗಳಿಗೆ ಆಶಿರದ್ರವ್ಯಗಳೆಂದು ಹೆಸರು. ಹಾಲನ್ನು ಮಿಶ್ರಮಾಡಿದ ಸೋಮರಸಕ್ಕೆ ಗವಾಶಿರವೆಂದೂ, ಮೊಸರನ್ನು ಮಿಶ್ರಮಾಡಿದ ಸೋಮರಸಕ್ಕೆ ದಧ್ಯಾಶಿರವೆಂದೂ ಹಿಟ್ಟನ್ನು ಮಿಶ್ರಮಾಡಿದ ಸೋಮರಸಕ್ಕೆ ಯವಾಶಿರವೆಂದೂ ಹೇಳುವರು. ಪ್ರಕೃತ ಋಕ್ಕಿನಲ್ಲಿ ಗವಾಶಿರವೆಂಬ ಹಾಲನ್ನು ಮಿಶ್ರಮಾಡಿದ ಸೋಮರಸವನ್ನು ಇಂದ್ರನು ಪಾನಮಾಡುವನೆಂಬ ವಿಷಯವು ಉಕ್ತವಾಗಿದೆ.

ಸೋಮಪಾನದಿಂದ ಇಂದ್ರನು ತೃಪ್ತನಾದರೆ ಅದರಿಂದ ಯಜ್ಞಮಾಡುವ ಯಜಮಾನನಿಗೆ ಲಭಿಸುವ ಫಲಗಳು ಈ ಋಕ್ಕಿನಲ್ಲಿ ವರ್ಣಿತವಾಗಿವೆ. ಇಂದ್ರನು ಯಾವ ರಾಜನ ಯಜ್ಞದಲ್ಲಿ ಆಹ್ವಾನಿತನಾಗಿ ಬಂದು ತನಗೆ ತೃಪ್ತಿಯಾಗುವಂತೆ ಋತ್ವಿಜರಿಂದ ಅರ್ಪಿತವಾದ ಸೋಮರಸವನ್ನು ಪಾನಮಾಡುವನೋ ಆ ರಾಜನಿಗೆ ಯಾವ ವಿಧವಾದ ದುಃಖವೂ ಉಂಟಾಗುವುದಿಲ್ಲ. ಅವನನ್ನು ಅನೇಕ ಅನುಚರರು ಭೃತ್ಯರೂ ಇತರರೂ ಆಶ್ರಯಿಸುವರು. ಅವನು ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸಿ ಅನೇಕ ವಿಧವಾದ ಸುಖಗಳನ್ನನುಭವಿಸುತ್ತಾ ತನ್ನ ಪ್ರಜೆಗಳನ್ನು ಸುಖವಾಗಿರುವಂತೆ ಪಾಲಿಸುವನು ಎಂದು ಇಂದ್ರನ ಸೋಮಪಾನದ ಮಹತ್ತ್ವವನ್ನು ಈ ಋಕ್ಕಿನಲ್ಲಿ ವರ್ಣಿಸಲಾಗಿದೆ

---

॥ ಸಂಹಿತಾಪಾಠಃ ॥

ಪುಷ್ಯಾತ್ಕ್ಷೇಮೇ ಅಭಿ ಯೋಗೇ ಭವಾತ್ಯುಭೇ ವೃತೌ ಸಂಯುತೀ ಸಂ ಜಯಾತಿ ।
ಪ್ರಿಯಃ ಸೂರ್ಯೇ ಪ್ರಿಯೋ ಅಗ್ನಾ ಭವಾತಿ ಯ ಇಂದ್ರಾಯ ಸುತ-ಸೋಮೋ ದದಾಶತ್ ॥ ೫ ॥

॥ ಪದಪಾಠಃ ॥

ಪುಷ್ಯಾತ್ । ಕ್ಷೇಮೇ । ಅಭಿ । ಯೋಗೇ । ಭವಾತಿ । ಉಭೇ ಇತಿ । ವೃತೌ । ಸಂಯುತೀ ಇತಿ ಸಂಽಯುತೀ । ಸಂ । ಜಯಾತಿ ।
ಪ್ರಿಯಃ । ಸೂರ್ಯೇ । ಪ್ರಿಯಃ । ಅಗ್ನಾ । ಭವಾತಿ । ಯಃ । ಇಂದ್ರಾಯ । ಸುತಽಸೋಮಃ । ದದಾಶತ್ ॥ ೫ ॥

॥ ಸಾಯಣಭಾಷ್ಯಂ ॥

ಪುಷ್ಯಾತ್ ಪೋಷಯೇದ್ಧನಧಾನ್ಯಾದೀನ್ । ಕ್ಷೇಮೇ ಪ್ರಾಪ್ತಸ್ಯ ಧನಸ್ಯ ರಕ್ಷಣೇ ಯೋಗೇಽಲಬ್ಧಸ್ಯ ಪ್ರಾಪ್ತೌ ಚಾಭಿ ಭವಾತಿ । ಭವತಿ । ಅಭೀತ್ಯನರ್ಥಕೋ ಧಾತ್ವರ್ಥಾನುವಾದೀ ವಾ । ಪ್ರಭುರ್ಭವತೀ-

ತ್ಯರ್ಥಃ । ತಥೋಭೇ ವೃತೌ ವರ್ತಮಾನೇ ಸಂಯತೀ ನಿಯತೇ ಅಹೋರಾತ್ರೇ ಸಂ ಜಯಾತಿ । ಸಮ್ಯಕ್ ಜಯತಿ । ತೇ ಸುಖಕರೇ ಸ್ಯಾತಾಮಿತ್ಯರ್ಥಃ । ಕಿಂಚ ಸ ಪ್ರಿಯೋ ಭವತಿ ಸೂರ್ಯೇ ತಥಾ-ಗ್ನಾಗ್ನೌ ಪ್ರಿಯೋ ಭವತಿ ಯ ಇಂದ್ರಾಯ ಸುತಸೋಮೋ ದದಾಶತ್ ಸೋಮಂ ದದಾತಿ ॥

॥ ಪ್ರತಿಪದಾರ್ಥ ॥

**ಯಃ**-ಯಾವನು । **ಸುತಸೋಮಃ**-ಸೋಮರಸವನ್ನು ಹಿಂಡಿ । **ಇಂದ್ರಾಯ**—ಇಂದ್ರನನ್ನುದ್ದೇಶಿಸಿ । **ದದಾಶತ್**—ಅರ್ಪಿಸುತ್ತಾನೆಯೋ (ಅವನು) । **ಪುಷ್ಯಾತ್**—(ಬಂಧುಮಿತ್ರರನ್ನು) ಪೋಷಿಸುತ್ತಾನೆ । **ಕ್ಷೇಮೇ**—ಧನದರಕ್ಷಣೆಗೂ । **ಯೋಗೇ**—ಹೊಸಸಂಪತ್ತನ್ನು ಹೊಂದುವುದಕ್ಕೂ । **ಅಭಿ ಭವಾತಿ**—ಶಕ್ತನಾಗುತ್ತಾನೆ । **ಉಭೇ ವೃತೌ**—ಭೂತ, ವರ್ತಮಾನ ಮತ್ತು ಭವಿಷ್ಯತ್ಕಾಲಗಳಲ್ಲೂ (ಸರ್ವದಾ) । **ಸಂಯತೀ**—ನಿಯತವಾದ ಸಂಚಾರವುಳ್ಳ ಅಹೋರಾತ್ರಗಳಲ್ಲೂ । **ಸಂ ಜಯಾತಿ**- ಪೂರ್ಣವಾದ ಜಯವನ್ನು ಪಡೆಯುತ್ತಾನೆ । **ಸೂರ್ಯೇ**—ಸೂರ್ಯನಿಗೆ । **ಪ್ರಿಯಃ ಭವತಿ**-ಪ್ರೀತಿಪಾತ್ರನಾಗುತ್ತಾನೆ । **ಅಗ್ನಾ**-ಅಗ್ನಿಗೂ । **ಪ್ರಿಯಃ**-ಪ್ರೀತಿಪಾತ್ರನಾಗುತ್ತಾನೆ.

॥ ಭಾವಾರ್ಥ ॥

ಯಾವನು ಸೋಮರಸವನ್ನು ಹಿಂಡಿ ಇಂದ್ರನನ್ನುದ್ದೇಶಿಸಿ ಅರ್ಪಿಸುತ್ತಾನೆಯೋ ಅವನು ಬಂಧುಮಿತ್ರರನ್ನು ಪೋಷಿಸುತ್ತಾನೆ. ತನ್ನಲ್ಲಿರುವ ಸಂಪತ್ತನ್ನು ರಕ್ಷಿಸಿಕೊಳ್ಳುವುದಕ್ಕೂ ಹೊಸ ಸಂಪತ್ತನ್ನು ಪಡೆಯುವುದಕ್ಕೂ ಶಕ್ತನಾಗುತ್ತಾನೆ. ಭೂತ, ಭವಿಷ್ಯತ್ ಮತ್ತು ವರ್ತಮಾನಕಾಲಗಳಲ್ಲೆಲ್ಲಾ ಮತ್ತು ನಿಯತವಾದ ಸಂಚಾರವುಳ್ಳ ಅಹೋರಾತ್ರಗಳಲ್ಲೂ ಪೂರ್ಣವಾದ ಜಯವನ್ನು ಪಡೆಯುತ್ತಾನೆ. ಸೂರ್ಯನಿಗೂ ಮತ್ತು ಅಗ್ನಿಗೂ ಪ್ರೀತಿಪಾತ್ರನಾಗುತ್ತಾನೆ.

## English Translation

He cherishes (his kin) ; he (reigns) in welfare and prosperity ; he is victorious in present and continuous ( time ): dear is he to the sun, dear to Agni, who, with prepared libation, offers it to Indra

॥ ವಿಶೇಷವಿಷಯಗಳು ॥

ಹಿಂದಿನ ಋಕ್ಕಿನಲ್ಲಿ ಹೇಳಿದಂತೆಯೇ ಈ ಋಕ್ಕಿನಲ್ಲಿಯೂ ಇಂದ್ರನ ಸೋಮಪಾನದ ಮಹತ್ಸ್ವರೂಪವನ್ನೂ ಅದರಿಂದ ಲಭಿಸುವ ಫಲಗಳನ್ನು ವರ್ಣಿಸಲಾಗಿದೆ. ಆದರೆ ಇಲ್ಲಿ ರಾಜನೆಂದು ವ್ಯಕ್ತಿವಿಶೇಷವನ್ನು ಸೂಚಿಸಿರುವುದಿಲ್ಲ. ಇದು ಯಜ್ಞಮಾಡುವ ಯಾವ ಪುರುಷನಿಗಾದರೂ ಅನ್ವಯಿಸಬಹುದು.

# ಮೂವತ್ತೆಂಟನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಉರೋಷ್ಟ ಇತಿ ಪಂಚರ್ಚಂ ಷಷ್ಠಂ ಸೂಕ್ತಮತ್ರೇರಾರ್ಷಮಾನುಷ್ಟುಭಮೈಂದ್ರಂ । ಉರೋ-ರಾನುಷ್ಟುಭಮಿತ್ಯನುಕ್ರಾಂತಂ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು—ಉರೋಷ್ಟೇ ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು ಈ ಸೂಕ್ತಕ್ಕೆ ಅತ್ರಿಯು ಋಷಿಯು, ಇಂದ್ರನು ದೇವತೆಯು; ಅನುಷ್ಟುಪ್ ಛಂದಸ್ಸು ಅನುಕ್ರಮಣಿಕೆಯಲ್ಲಿ **ಉರೋರಾನುಷ್ಟುಭಂ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

## ಸೂಕ್ತ—೩೮

॥ ಮಂಡಲ—೫ ॥ ಅನುವಾಕ—೩ ॥ ಸೂಕ್ತ—೩೮ ॥

॥ ಅಷ್ಟಕ—೪ ॥ ಅಧ್ಯಾಯ—೨ ॥ ವರ್ಗ—೯ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥

ಋಷಿಃ—ಅತ್ರಿಃ ॥

ದೇವತಾ—ಇಂದ್ರಃ ॥

ಛಂದಃ—ಅನುಷ್ಟುಪ್ ॥

॥ ಸಂಹಿತಾಪಾಠಃ ॥

**ಉರೋಷ್ಟ ಇಂದ್ರ ರಾಧಸೋ ವಿಭ್ವೀ ರಾತಿಃ ಶತಕ್ರತೋ ।**

**ಅಧಾ ನೋ ವಿಶ್ವಚರ್ಷಣೇ ದ್ಯುಮ್ನಾ ಸುಕ್ಷತ್ರ ಮಂಹಯ ॥ ೧ ॥**

॥ ಪದಪಾಠಃ ॥

**ಉರೋಃ । ತೇ । ಇಂದ್ರ । ರಾಧಸಃ । ವಿಽಭ್ವೀ । ರಾತಿಃ । ಶತಕ್ರತೋ ಇತಿ ಶತಽಕ್ರತೋ ।**

**ಅಧ । ನಃ । ವಿಶ್ವಽಚರ್ಷಣೇ । ದ್ಯುಮ್ನಾ । ಸುಽಕ್ಷತ್ರ । ಮಂಹಯ ॥ ೧ ॥**

॥ ಸಾಯಣಭಾಷ್ಯಂ ॥

**ಹೇ ಇಂದ್ರ ಶತಕ್ರತೋ ಬಹುಕರ್ಮನ್ ತೇ ತವೋರೋಃ ಪ್ರಭೂತಸ್ಯ ರಾಧಸೋ ಧನಸ್ಯ ರಾತಿರ್ದಾನಂ ವಿಭ್ವೀ ಮಹತೀ । ಅಧಾತಃ ಕಾರಣಾತ್ ನೋಽಸ್ಮಭ್ಯಂ ಹೇ ವಿಶ್ವಚರ್ಷಣೇ ಸರ್ವಸ್ಯ**

ದ್ರಷ್ಟಃ ಸುಕ್ಷತ್ರ ಶೋಭನಧನೇಂದ್ರ । ಕ್ಷತ್ರಮಿತಿ ಧನನಾಮ । ದ್ಯುಮ್ನಾ ದ್ಯುಮ್ನಾನಿ ಧನಾನಿ ಮಂಹಯ। ಪ್ರಯಚ್ಛ ॥

॥ ಪ್ರತಿಪದಾರ್ಥ ॥

**ಶತಕ್ರತೋ**—ಅನೇಕ ಕರ್ಮಕರ್ತನಾದ । **ಇಂದ್ರ**—ಇಂದ್ರನೇ । **ತೇ**—ನಿನ್ನ । **ಉರೋಃ** - ಪ್ರಭೂತವಾದ । **ರಾಧಸಃ** —ಧನದ । **ರಾತಿಃ**—ದಾನವು । **ವಿಭ್ವೀ** - ಅತ್ಯಧಿಕವಾದುದು । **ಅಧ** - ಆದುದರಿಂದ । **ವಿಶ್ವಚರ್ಷಣೇ**—ಸರ್ವದ್ರಷ್ಟನೂ । **ಸುಕ್ಷತ್ರ**—ಶ್ರೇಷ್ಠವಾದ ಧನವುಳ್ಳವನೂ ಆದ ಆಲ್ಲೈ ಇಂದ್ರನೇ । **ನಃ**—ನಮಗೆ । **ದ್ಯುಮ್ನಾ**—ಧನಸಂಪತ್ತನ್ನು । **ಮಂಹಯ**—ಒದಗಿಸಿ ಕೊಡು.

॥ ಭಾವಾರ್ಥ ॥

ಅನೇಕ ಕರ್ಮಗಳಿಗೆ ಕರ್ತನಾದ ಎಲೈ ಇಂದ್ರನೇ, ನಿನ್ನ ಪ್ರಭೂತವಾದ ಧನದ ದಾನವು ಮಹಾ ಮಹಿಮೆಯುಳ್ಳದ್ದು. ಆದುದರಿಂದ ಸರ್ವದ್ರಷ್ಟನೂ, ಶ್ರೇಷ್ಠವಾದ ಧನವುಳ್ಳವನೂ ಆದ ಇಂದ್ರನೇ, ನೀನು ನಮಗೆ ಧನಸಂಪತ್ತನ್ನೊದಗಿಸು.

## English Translation

Indra of many exploits, liberal is the distribution of your abundant riches: therefore, all-beholder, possessor of excellent wealth, bestow upon us opulence.

॥ ವಿಶೇಷ ವಿಷಯಗಳು ॥

**ಶತಕ್ರತೋ—ಬಹುಕರ್ಮನ್** । ಅನೇಕ ಕರ್ಮಗಳನ್ನು ಮಾಡಿದವನು. ಎಂದರೆ ವೃತ್ರವಧವೇ ಮೊದಲಾದ ಯಾರಿಂದಲೂ ಮಾಡಲಸಾಧ್ಯವಾದ ಅನೇಕ ಸಾಹಸಕರ್ಮಗಳನ್ನು ಮಾಡಿದವನು ಎಂದಭಿಪ್ರಾಯವು. ಇಲ್ಲಿ ಶತ ಎಂಬ ಶಬ್ದಕ್ಕೆ ಅನೇಕ ಎಂದು ಅರ್ಥಮಾಡಬೇಕು. ಕ್ರತುಶಬ್ದಕ್ಕೆ ಕರ್ಮ, ಸಾಹಸಕಾರ್ಯ ಎಂದರ್ಥವಿರುವುದು. ಶಕ್ತಿಯನ್ನೂ, ಪರಾಕ್ರಮವನ್ನೂ, ಧೈರ್ಯವನ್ನೂ ಉಪಯೋಗಿಸಿ ಮಾಡಬಹುದಾದ ಸಾಹಸಕಾರ್ಯಕ್ಕೆ ಕ್ರತುವೆಂದೂ ಇಂತಹ ಅನೇಕ ಕಾರ್ಯಗಳನ್ನು ಇಂದ್ರನು ಮಾಡಿರುವ ಕಾರಣ ಇಂದ್ರನನ್ನು ಶತಕ್ರತು ಎಂಬ ಶಬ್ದದಿಂದಲೂ ಕರೆಯುವುದು ಋಗ್ವೇದದಲ್ಲಿ ವಿಶೇಷ ಬಳಕೆಯಿಲ್ಲಿದೆ.

---

॥ ಸಂಹಿತಾಪಾಠಃ ॥

ಯದೀಮಿಂದ್ರ ಶ್ರವಾಯ್ಯಮಿಷಂ ಶವಿಷ್ಠ ದಧಿಷೇ ।

ಪಪ್ರಥೇ ದೀರ್ಘಶ್ರುತ್ತಮಂ ಹಿರಣ್ಯವರ್ಣ ದುಷ್ಟರಂ ॥ ೨ ॥

॥ ಪದಪಾಠಃ ॥

ಯತ್ । ಈಂ । ಇಂದ್ರ । ಶ್ರವಾಯ್ಯಂ । ಇಷಂ । ಶವಿಷ್ಠ । ದಧಿಷೇ ।

ಪಪ್ರಥೇ । ದೀರ್ಘಶ್ರುತ್ऽತಮಂ । ಹಿರಣ್ಯಽವರ್ಣ । ದುಸ್ತರಂ ॥ ೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಶವಿಷ್ಠ ಅತಿಶಯೇನ ಬಲವನ್ ಯದಿಷಮನ್ನಂ ಶ್ರವಾಯ್ಯಂ ಶ್ರವಣೀಯಮೀಂ ಸರ್ವತೋ ದಧಿಷೇ ಧಾರಯಸಿ ದದಾಸಿ ವಾ ॥ ಇಷಶಬ್ದೋ ನಪುಂಸಕಲಿಂಗೋಽಪ್ಯಸ್ತಿ ॥ ಹೇ ಹಿರಣ್ಯವರ್ಣೇಂದ್ರ ತದನ್ನಂ ಪಪ್ರಥೇ । ಪ್ರಥತೇ । ಕಥಂ । ದೀರ್ಘಶ್ರುತ್ತಮಮತಿದೂರಶ್ರವಣೀಯತಮಂ । ಸರ್ವತ್ರ ಕೀರ್ತ್ಯಮಿತ್ಯರ್ಥಃ । ದುಷ್ಟರಮನಭಿಭಾವ್ಯಮುಕ್ತಲಕ್ಷಣಂ ಪ್ರಥತೇ ॥

॥ ಪ್ರತಿಪದಾರ್ಥ ॥

ಶವಿಷ್ಠ—ಅತ್ಯಂತ ಬಲಶಾಲಿಯಾದ । ಇಂದ್ರ—ಇಂದ್ರನೇ । ಯತ್—ಯಾವುದೋ ಒಂದು ನೀನು । ಶ್ರವಾಯ್ಯಂ—ಅತಿಪ್ರಸಿದ್ಧವಾದ । ಇಷಂ—ಅನ್ನವನ್ನು । ಈಂ—ಸರ್ವತ್ರ । ದಧಿಷೇ—ನೀನು ಹೊಂದಿದ್ದರೂ ಸಹ । ಹಿರಣ್ಯವರ್ಣ—ಹೊಂಬಣ್ಣದ ರೂಪವುಳ್ಳ ಇಂದ್ರನೇ । ದುಷ್ಟರಂ—ಆ ಅನ್ನವನ್ನು ಪಡೆಯುವುದು ಬಹು ದುಸ್ತರವೆಂದು । ದೀರ್ಘಶ್ರುತ್ತಮಂ—ಎಲ್ಲಾ ಕಡೆಗಳಿಗೂ ಕೇಳಿಸುವಂತೆ । ಪಪ್ರಥೇ—ಪ್ರಸಿದ್ಧವಾಗಿದೆ.

॥ ಭಾವಾರ್ಥ ॥

ಅತ್ಯಂತ ಬಲಶಾಲಿಯಾದ ಇಂದ್ರನೇ, ನೀನು ಅತಿಪ್ರಸಿದ್ಧವಾದುದೂ ಪ್ರಭೂತವಾದುದೂ ಆದ ಅನ್ನವನ್ನು ಹೊಂದಿರುವುದು ಎಲ್ಲರಿಗೂ ಗೊತ್ತಿದೆ. ಆದರೂ ಸಹ ಹೊಂಬಣ್ಣದ ರೂಪವುಳ್ಳ ಎಲೈ ಇಂದ್ರನೇ, ಆ ಅನ್ನವನ್ನು ಪಡೆಯುವುದು ಅತಿಪ್ರಯಾಸದ ಕೆಲಸವೆಂದು ಎಲ್ಲಾ ಕಡೆಗಳಿಗೂ ಕೇಳಿಸುವಷ್ಟು ಪ್ರಸಿದ್ಧವಾಗಿದೆ

## English Translation

Although, most mighty Indra, you possess well-known abundance (of food), yet golden-hued (deity) it is most notoriously reported as difficult (to be procured).

॥ ವಿಶೇಷವಿಷಯಗಳು ॥

ಈಂ—ಈಂ ಎಂಬ ಶಬ್ದವು ನಿಪಾತವೆಂದು ಪ್ರಸಿದ್ಧವಾಗಿದೆ ಈ ಶಬ್ದದ ವಿಷಯದಲ್ಲಿ ಯಾಸ್ಕರು—

ಅಥ ಯೇ ಪ್ರವೃತ್ತೇಽರ್ಥೇಽಮಿತಾಕ್ಷರೇಷು ಗ್ರಂಥೇಷು ವಾಕ್ಯಪೂರಣಾ ಆಗಚ್ಛಂತಿ ಪದಪೂರಣಾಸ್ತೇ ಮಿತಾಕ್ಷರೇಷ್ವನರ್ಥಕಾಃ ಕಮೀಮಿದ್ವಿತಿ ॥

(ನಿ. ೧-೯)

ಎಂದರೆ—ಕಂ, ಈ, ಇತ್, ಉ ಎಂಬ ನಿಪಾತಗಳಿಗೆ ನಿರ್ದಿಷ್ಟವಾಗಿ ಯಾವ ಅರ್ಥವೂ ಇರುವುದಿಲ್ಲ. ವಾಕ್ಯರೂಪವಾದ ಗ್ರಂಥಗಳಲ್ಲಿ ವಾಕ್ಯಪೂರಣಕ್ಕಾಗಿಯೂ ಛಂದೋಬದ್ಧವಾದ ಋಕ್ಕು ಮೊದಲಾದುವುಗಳಲ್ಲಿ ಪಾದಪೂರಣಕ್ಕಾಗಿಯೂ ಈ ಶಬ್ದಗಳ ಪ್ರಯೋಗವಿರುವುದೆಂದು ಹೇಳಿದಾರೆ ಛಂದಸ್ಸುಗಳ ಪಾದಗಳಲ್ಲಿ ( ಪಾದವೆಂದರೆ ಛಂದಸ್ಸಿನ ಒಂದು ಭಾಗ, ಸಾಮಾನ್ಯವಾಗಿ ನಾಲ್ಕನೆಯ ಒಂದುಭಾಗ) ನಿರ್ದಿಷ್ಟ ಸಂಖ್ಯೆಯ ಅಕ್ಷರಗಳಿರಬೇಕು. ಕೆಲವು ಸಂದರ್ಭಗಳಲ್ಲಿ ಪಾದದಲ್ಲಿ ಒಂದು ಅಕ್ಷರ ಕಡಿಮೆಯಾಗಿದ್ದರೆ ಅಂತಹ ಸಂದರ್ಭದಲ್ಲಿ ಈ ನಿಪಾತಗಳಲ್ಲಿ ಒಂದನ್ನು ಉಪಯೋಗಿಸಿ ಪಾದಪೂರಣಮಾಡುವುದರಿಂದ ಪದಪೂರಣಕ್ಕಾಗಿ ಈ ನಿಪಾತಗಳ ಪ್ರಯೋಗವಿರುವುದೆಂದು ಹೇಳಿದಾರೆ. ಇದಲ್ಲದೆ ಇತರ ವಿಧವಾದ ಬೇರೆ ಅರ್ಥವೂ ಆಗಬಹುದು. ಪ್ರಕೃತದಲ್ಲಿ ಈಂ ಎಂಬ ಶಬ್ದಕ್ಕೆ **ಸರ್ವತ್ರ, ಸರ್ವತಃ** ಎಂಬರ್ಥವಿರುವುದು. **ಕೆಲವು ಕಡೆ ಏವ** ಎಂಬ ಶಬ್ದದ ಅರ್ಥವನ್ನು ಹೇಳುವುದೂ ಉಂಟು, ಇತ್ಯಾದಿ

---

॥ ಸಂಹಿತಾಪಾಠ ॥

**ಶುಷ್ಮಾಸೋ ಯೇ ತೇ ಅದ್ರಿವೋ ಮೇಹನಾ ಕೇತಸಾಪಃ ।**

**ಉಭಾ ದೇವಾವಭಿಷ್ಟಯೇ ದಿವಶ್ಚ ಗ್ಮಶ್ಚ ರಾಜಥಃ ॥ ೩ ॥**

॥ ಪದಪಾಠಃ ॥

**ಶುಷ್ಮಾಸಃ । ಯೇ । ತೇ । ಅದ್ರಿವಃ । ಮೇಹನಾ । ಕೇತಽಸಾಪಃ ।**

**ಉಭಾ । ದೇವೌ । ಅಭಿಷ್ಟಯೇ । ದಿವಃ । ಚ । ಗ್ಮಃ । ಚ । ರಾಜಥಃ ॥ ೩ ॥**

॥ ಸಾಯಣಭಾಷ್ಯಂ ॥

ಹೇ ಅದ್ರಿವೋ ವಜ್ರವನ್ನಿಂದ್ರ ತೇ ತ್ವದೀಯಾ ಯೇ ಶುಷ್ಮಾಸೋ ಬಲಭೂತಾ ಮರುತಃ ಸಂತಿ । ಕೀದೃಶಾಸ್ತೇ । ಮೇಹನಾ ಮಂಹನೀಯಾಃ ಕೇತಸಾಪಃ ಪ್ರಜ್ಞಾಪಕಂ ಕರ್ಮಾಂತರಿಕ್ಷಂ ವಾ ಸ್ಪೃಶಂತಃ । ಉಭೌ ದೇವೌ ತ್ವಂ ಚ ಮರುತ್ಸಮೂಹಶ್ಚೇತ್ಯುಭೌ ಯುವಾಂ ದಿವಶ್ಚ ದ್ಯುಲೋಕಾತ್ ಗ್ಮಶ್ಚ ಭೂಮೇಃ ಸಕಾಶಾದಭಿಷ್ಟಯೇಽಭಿತೋ ಗಮನಾಯ ರಾಜಥಃ । ಈಶಾಥೇ ॥

॥ ಪ್ರತಿಪದಾರ್ಥ ॥

**ಅದ್ರಿವಃ**—ವಜ್ರಧಾರಿಯಾದ ಇಂದ್ರನೇ । **ಮೇಹನಾ**—ಪೂಜ್ಯರೂ । **ಕೇತಸಾಪಃ**—ಪ್ರಜ್ಞಾಪಕವಾದ ಕರ್ಮವುಳ್ಳವರೂ । **ತೇ**—ನಿನಗೆ । **ಶುಷ್ಮಾಸಃ**—ಬಲದಾಯಕರೂ ಆದ । **ಯೇ**—ಯಾವ ಮರುತ್ತುಗಳಿದ್ದಾರೋ (ಅವರೂ) । **ಉಭಾ ದೇವೌ**—ದೇವತಾತ್ಮರಾದ ನೀನು ಮತ್ತು ಮರುತ್ಸಂಘವೂ । **ದಿವಶ್ಚ**—ದ್ಯುಲೋಕದಿಂದಲೂ । **ಗ್ಮಶ್ಚ**—ಭೂಮಿಯಿಂದಲೂ । **ಅಭಿಷ್ಟಯೇ**—ಈ ಯಜ್ಞಭೂಮಿಗೆ ಬರಲು । **ರಾಜಥಃ**—ಪ್ರಭುಗಳಾಗಿ ಪ್ರಕಾಶಿಸುತ್ತಿದ್ದೀರಿ

॥ ಭಾವಾರ್ಥ ॥

ವಜ್ರಧಾರಿಯಾದ ಇಂದ್ರನೇ, ಪೂಜ್ಯರೂ ಪ್ರಜ್ಞಾಪಕವಾದ ಕರ್ಮವುಳ್ಳವರೂ, ನಿನಗೆ ಬಲದಾಯಕರೂ ಆದ ಯಾವ ಮರುತ್ತುಗಳಿದ್ದಾರೋ ಅವರೂ, ಮತ್ತು ನೀನೂ ಸೇರಿ ದೇವತಾತ್ಮರಾದ ನೀವು ಅತ್ಯುನ್ನತವಾದ ಸ್ಥಾನದಲ್ಲಿದ್ದು ದ್ಯಾವಾಪೃಥಿವಿಗಳಿಗೆಲ್ಲಾ ಪ್ರಭುಗಳಾಗಿ ಪ್ರಕಾಶಿಸುತ್ತಿದ್ದೀರಿ.

English Translation

Wielder of the thunderbolt, yours are the strong (Maruts), who are adorable, and whose exploits are renowned : both divinities, (you and they) rule at pleasure over heaven and earth.

॥ ವಿಶೇಷವಿಷಯಗಳು ॥

**ಅದ್ರಿವಃ**—ಅದ್ರಿಶಬ್ದವು ವಜ್ರನಾಮಗಳಲ್ಲಿಯೂ ಮೇಘನಾಮಗಳಲ್ಲಿಯೂ (ನಿ ೨-೨) ಪರ್ವತನಾಮಗಳಲ್ಲಿಯೂ ಉಕ್ತವಾಗಿದೆ. ಅದ್ರಿಯೆಂದರೆ ಗ್ರಾವಾ ಎಂಬ ಸೋಮಲತೆಯನ್ನು ಜಜ್ಜುವ ಕಲ್ಲು ಎಂದು ಅರ್ಥವು.

**ಮೇಹನಾ**—ಈ ಶಬ್ದಕ್ಕೆ ಯಾಸ್ಕರು **ಮೇಹನಾ ಮಂಹನೀಯಂ** ಎಂದರೆ ಪೂಜ್ಯವಾದ ಎಂಬರ್ಥವನ್ನು ಹೇಳಿ ಅದರ ಸಮರ್ಥನೆಗಾಗಿ **ಯದಿಂದ್ರ ಚಿತ್ರ** ಎಂಬ ಋಕ್ಕನ್ನು ಉದಾಹರಣೆಯಾಗಿ ಕೊಟ್ಟಿರುವರು

---

॥ ಸಂಹಿತಾಪಾಠಃ ॥

ಉತೋ ನೋ ಅಸ್ಯ ಕಸ್ಯ ಚಿದ್ದಕ್ಷಸ್ಯ ತವ ವೃತ್ರಹನ್ ।
ಅಸ್ಮಭ್ಯಂ ನೃಮ್ಣಮಾ ಭರಾಸ್ಮಭ್ಯಂ ನೃಮಣಸ್ಯಸೇ ॥ ೪ ॥

॥ ಪದಪಾಠಃ ॥

ಉತೋ ಇತಿ । ನಃ । ಅಸ್ಯ । ಕಸ್ಯ । ಚಿತ್ । ದಕ್ಷಸ್ಯ । ತವ । ವೃತ್ರಽಹನ್ ।
ಅಸ್ಮಭ್ಯಂ । ನೃಮ್ಣಂ । ಆ । ಭರ । ಅಸ್ಮಭ್ಯಂ । ನೃಽಮನಸ್ಯಸೇ ॥ ೪ ॥

॥ ಸಾಯಣಭಾಷ್ಯಂ ॥

ಉತೋ ಅಪಿ ಚ ಹೇ ವೃತ್ರಹನ್ನಿಂದ್ರ ನೋಽಸ್ಮಭ್ಯಂ ಕಸ್ಯ ಚಿದನಿರ್ದೇಶ್ಯಸ್ಯ ದಕ್ಷಸ್ಯ ಪ್ರವೃದ್ಧಸ್ಯ ದಾತುರ್ವಾಸ್ಯ ತವ ಸ್ವಭೂತೇಭ್ಯೋಽಸ್ಮಭ್ಯಂ । ಪುನಃಶ್ರುತಿರಾದರಾರ್ಥಾ । ನೃಮ್ಣಂ ನೃಮಣಂ ಧನಮಾಭರ । ಆಹರ । ಹೇ ಇಂದ್ರ ಯತಸ್ತ್ವಮಸ್ಮಭ್ಯಂ ನೃಮಣಸ್ಯಸೇ ಧನಮಿಚ್ಛಸಿ ॥

॥ ಪ್ರತಿಪದಾರ್ಥ ॥

ಉತೋ—ಅಲ್ಲದೇ । ವೃತ್ರಹನ್—ವೃತ್ರಹಂತಕನಾದ ಇಂದ್ರನೇ। ಅಸ್ಯ ತವ—ನಿನಗೆ ಸೇರಿದವರಾದ। ಅಸ್ಮಭ್ಯಂ—ನಮಗೆ । ಕಸ್ಯ ಚಿತ್ ದಕ್ಷಸ್ಯ—ಸಂಪತ್ಸಮೃದ್ಧನಾದ ಯಾವನಾದರೊಬ್ಬನ। ನೃಮ್ಣಂ—ಧನವನ್ನು । ಆ ಭರ—ತಂದು ಕೊಡು ( ಎಲೈ ಇಂದ್ರನೇ ) । ಅಸ್ಮಭ್ಯಂ—ನಮಗೆ । ನೃಮಣಸ್ಯಸೇ—ಧನಸಂಪತ್ತು ಲಭಿಸ ಬೇಕೆಂದಿಚ್ಛಿಸುತ್ತೀಯೇ.

॥ ಭಾವಾರ್ಥ ॥

ವೃತ್ರಹಂತಕನಾದ ಎಲೈ ಇಂದ್ರನೇ, ನಿನಗೆ ಸೇರಿದವರಾದ ನಮಗೆ ಸಂಪತ್ಸಮೃದ್ಧನಾದ ಯಾವನಾದರೊಬ್ಬನ ಧನವನ್ನು ತಂದುಕೊಡು. ನೀನು ಖಂಡಿತ ನಮಗೆ ಧನಸಂಪತ್ತು ಲಭಿಸಬೇಕೆಂದಿಚ್ಛಿಸುತ್ತೀಯೆ.

## English Translation

Slayer of Vritra, bring to us, your (worshippers), the wealth of any powerful (man) whatsoever, for you are disposed to enrich us.

॥ ವಿಶೇಷವಿಷಯಗಳು ॥

ನೃಮ್ಣಂ—ನೃಮ್ಣಶಬ್ದವು ಬಲನಾಮಗಳಲ್ಲಿಯೂ (ನಿ. ೩.೯) ಧನನಾಮಗಳಲ್ಲಿಯೂ (ನಿ. ೩.೯) ಪಠಿತವಾಗಿದೆ.

---

॥ ಸಂಹಿತಾಪಾಠಃ ॥

ನೂ ತ ಆಭಿರಭಿಷ್ಟಿಭಿಸ್ತವ ಶರ್ಮಞ್ಛತಕ್ರತೋ ।
ಇಂದ್ರ ಸ್ಯಾಮ ಸುಗೋಪಾಃ ಶೂರ ಸ್ಯಾಮ ಸುಗೋಪಾಃ ॥ ೫ ॥

॥ ಪದಪಾಠಃ ॥

ನು । ತೇ । ಆಭಿಃ । ಅಭಿಷ್ಟಿಽಭಿಃ । ತವ । ಶರ್ಮನ್ । ಶತಕ್ರತೋ ಇತಿ ಶತಽಕ್ರತೋ ।
ಇಂದ್ರ ॥ ಸ್ಯಾಮ । ಸುಽಗೋಪಾಃ । ಶೂರ । ಸ್ಯಾಮ । ಸುಽಗೋಪಾಃ ॥ ೫ ॥

॥ ಸಾಯಣಭಾಷ್ಯಂ ॥

**ಹೇ ಶತಕ್ರತೋ ಇಂದ್ರ ತೇ ತವಾಭಿರಭಿಷ್ಟಿಭಿರಭಿಗಮನೈರ್ನು ಶೀಘ್ರಂ ಸಮ್ಯದ್ಧಾ ಭವೇಮೇತಿ ಶೇಷಃ । ಹೇ ಇಂದ್ರ ತವ ಶರ್ಮನ್ ಶರ್ಮಣಿ ಸುಖೇ ಸತಿ ಸುಗೋಪಾಃ ಸ್ಯಾಮ । ಭವೇಮ । ಹೇ ಶೂರ ತವ ಶರ್ಮಣಿ ಸುಗೋಪಾಃ ಶೋಭನರಕ್ಷಣಾಃ ಸ್ಯಾಮ । ಭವೇಮ । ಪುನರುಕ್ತಿರಾದರಾರ್ಥಾ ॥**

॥ ಪ್ರತಿಪದಾರ್ಥ ॥

**ಶತಕ್ರತೋ**—ಎಲೈ ಇಂದ್ರನೇ । **ತೇ**—ನಿನಗಾಗಿ ನಿರ್ಮಿಸಿದ । **ಅಭಿಃ ಅಭಿಷ್ಟಿಭಿಃ**—ನಮ್ಮ ಈ ಸ್ತುತಿಗಳಿಂದ । **ನು**—ಶೀಘ್ರವಾಗಿ (ತೃಪ್ತಿಯನ್ನು ಹೊಂದು) । **ಇಂದ್ರ**—ಎಲೈ ಇಂದ್ರನೇ । **ತವ**—ನಿನಗೆ । **ಶರ್ಮನ್**-ಸುಖವುಂಟಾದಾಗ **ಸುಗೋಪಾಃ**—ಉತ್ತಮವಾದ ರಕ್ಷಣೆಯುಳ್ಳವರಾಗಿ । **ಸ್ಯಾಮ**—ನಾವು ಇರುವಂತಾಗಲಿ । **ಶೂರ**—ಪರಾಕ್ರಮಿಯಾದ ಎಲೈ ಇಂದ್ರನೇ । **ಸುಗೋಪಾಃ ಸ್ಯಾಮ**—ನಿನ್ನ ಉತ್ತಮವಾದ ರಕ್ಷಣೆಯನ್ನು ನಾವು ಹೊಂದುವಂತಾಗಲಿ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನಗಾಗಿ ನಿರ್ಮಿಸಿದ ನಮ್ಮ ಈ ಸ್ತುತಿಗಳಿಂದ ಶೀಘ್ರವಾಗಿ ತೃಪ್ತಿಯನ್ನು ಹೊಂದು ಶೂರನಾದ ಇಂದ್ರನೇ, ನಿನ್ನ ತೃಪ್ತಿಯ ಫಲವಾಗಿ ನಾವು ನಿನ್ನ ಉತ್ತಮವಾದ ರಕ್ಷಣೆಯನ್ನು ಹೊಂದುವಂತಾಗಲಿ.

English Translation

May we, Shatakratu, speedily (partake of) your felicity through these our prayers: may we be well secured, Indra, (by you). may we be carefully protected, hero, by you

## ಮೂವತ್ತೊಂಭತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಯದಿಂದ್ರ ಚಿತ್ರೇತಿ ಪಂಚರ್ಚಂ ಸಪ್ತಮಂ ಸೂಕ್ತಮತ್ರೇರಾರ್ಷಮೈಂದ್ರಂ । ಅಂತ್ಯಾ ಪಂಕ್ತಿಃ ಶಿಷ್ಟಾಃ ಪಂಕ್ತ್ಯಂತಪರಿಭಾಷಯಾನುಷ್ಟುಭಃ । ಯದಿಂದ್ರ ಪಂಕ್ತ್ಯಂತಮಿತ್ಯನುಕ್ರಮಣಿಕಾ ॥ ಅಭಿಪ್ಲವಿಕೇಷೂಕ್ಥ್ಯೇಷು ತೃತೀಯಸವನ ಆದ್ಯಸ್ತೃಚೋಽಚ್ಛಾವಾಕಸ್ಯ ವೈಕಲ್ಪಿಕಃ ಸ್ತೋತ್ರಿಯಃ । ಸೂತ್ರಿತಂ ಚ । ಯದಿಂದ್ರ ಚಿತ್ರ ಮೇಹನಾ ಯಸ್ತೇ ಸಾಧಿಷ್ಠೋಽವಸೇ । ಆ. ೭-೮ । ಇತಿ ॥**

ಅನುವಾದವು—**ಯದಿಂದ್ರ ಚಿತ್ರ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅತ್ರಿಯು ಋಷಿಯು, ಇಂದ್ರನು ದೇವತೆಯು· ಈ ಸೂಕ್ತದ

ಕೊನೆಯ ಋಕ್ಕು ಪಂಕ್ತಿಚ್ಛಂದಸ್ಕವು. ಉಳಿದ ಋಕ್ಕುಗಳು ಅನುಷ್ಟುಪ್‌ಛಂದಸ್ಕವು. ಅನುಕ್ರಮಣಿಕೆಯಲ್ಲಿ— **ಯದಿಂದ್ರ ಪಂಕ್ತ್ಯಂತಂ** ಎಂದು ಹೇಳಿರುವುದು. ಅಭಿಪ್ಲವಸಂಬಂಧವಾದ ಉಕ್ಥ್ಯಯಾಗಗಳಲ್ಲಿ ತೃತೀಯಸವನ ಕಾಲದಲ್ಲಿ ಈ ಸೂಕ್ತದ ಮೊದಲನೆಯ ಮೂರು ಋಕ್ಕುಗಳನ್ನು ಚ್ಛಾವಾಕನೆಂಬ ಋತ್ವಿಜನು ವೈಕಲ್ಪಿಕಸ್ತೋತ್ರಿಯ ಮಂತ್ರಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಯದಿಂದ್ರ ಚಿತ್ರ ಮೇಹನಾ ಯಸ್ತೇ ಸಾಧಿಷ್ಠೋಽವಸೇ** ಎಂಬ ಸೂತ್ರದಿಂದ (ಆ. ೭-೮) ವಿವೃತವಾಗಿರುವುದು

## ಸೂಕ್ತ—೩೯.

॥ ಮಂಡಲ—೫ ॥ ಅನುವಾಕ—೩ ॥ ಸೂಕ್ತ—೩೯ ॥
॥ ಅಷ್ಟಕ—೪ ॥ ಅಧ್ಯಾಯ—೨ ॥ ವರ್ಗ—೧೦ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೫
ಋಷಿಃ—ಅತ್ರಿಃ ॥
ದೇವತಾ—ಇಂದ್ರಃ ॥
॥ ಛಂದಃ—೧-೪, ಅನುಷ್ಟುಪ್ । ೫ ಪಂಕ್ತಿಃ॥

॥ ಸಂಹಿತಾಪಾಠಃ ॥

ಯದಿಂದ್ರ ಚಿತ್ರ ಮೇಹನಾಸ್ತಿ ತ್ವಾದಾತಮದ್ರಿವಃ ।
ರಾಧಸ್ತನ್ನೋ ವಿದದ್ವಸ ಉಭಯಾಹಸ್ತ್ಯಾ ಭರ ॥ ೧ ॥

॥ ಪದಪಾಠಃ ॥

ಯತ್ । ಇಂದ್ರ । ಚಿತ್ರ । ಮೇಹನಾ । ಅಸ್ತಿ । ತ್ವಾऽದಾತಂ । ಅದ್ರಿऽವಃ ।
ರಾಧಃ । ತತ್ । ನಃ । ವಿದದ್ವಸೋ ಇತಿ ವಿದತ್ऽವಸೋ । ಉಭಯಾಹಸ್ತಿ । ಆ । ಭರ ॥ ೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಹೇ ಚಿತ್ರ ಚಾಯನೀಯ ಹೇ ಅದ್ರಿವೋ ವಜ್ರವನ್ನಿಂದ್ರ ಯನ್ಮೇಹನಾ ಮಂಹನೀಯಂ ತ್ವಾದಾತಂ ತ್ವಯಾ ದಾತವ್ಯಂ ರಾಧೋ ಧನಮಸ್ತಿ ತದ್ಧನಂ ಹೇ ವಿದದ್ವಸೋ ಲಬ್ಧಧನೇಂದ್ರ ನೋಽಸ್ಮಭ್ಯಮುಭಯಾಹಸ್ತ್ಯುಭಾಭ್ಯಾಂ ಹಸ್ತಾಭ್ಯಾಮಾ ಭರ । ಆಹರ । ಅತ್ರ ಯದಿಂದ್ರ ಚಿತ್ರ ಚಾಯನೀಯ ಮಂಹನೀಯಂ ಧನಮಸ್ತೀತ್ಯಾದಿನಿರುಕ್ತಂ ದ್ರಷ್ಟವ್ಯಂ ॥ ನಿ. ೪-೪ ॥

॥ ಪ್ರತಿಪದಾರ್ಥ ॥

**ಚಿತ್ರ**— ಆಕರ್ಷಕವಾದ ರೂಪವುಳ್ಳವನೂ । **ಅದ್ರಿವಃ**— ವಜ್ರಧಾರಿಯೂ ಆದ । **ಇಂದ್ರ**—ಇಂದ್ರನೇ । **ಮೇಹನಾ**—ಪೂಜ್ಯವಾದುದೂ । **ತ್ವಾದಾತಂ**—ನಿನ್ನಿಂದ ಕೊಡಲ್ಪಡತಕ್ಕದ್ದೂ ಆದ । **ಯತ್ ರಾಧಃ**—ಯಾವ ಧನವು । **ಅಸ್ತಿ**—ಇದೆಯೋ । **ವಿದದ್ವಸೋ**—ಧನಸಂಪತ್ಪ್ರಭುವಾದ ಎಲೈ ಇಂದ್ರನೇ । **ತತ್**—ಆ ಧನವನ್ನು । **ನಃ**—ನಮಗೆ । **ಉಭಯಾ ಹಸ್ತಿ**—ಎರಡು ಕೈಗಳಿಂದಲೂ । **ಆ ಭರ**—ಒದಗಿಸಿಕೊಡು .

॥ ಭಾವಾರ್ಥ ॥

ಆಕರ್ಷಕವಾದ ರೂಪವುಳ್ಳವನೂ, ವಜ್ರಧಾರಿಯೂ ಧನಕ್ಕೆ ಪ್ರಭುವೂ ಆದ ಎಲೈ ಇಂದ್ರನೇ, ಪೂಜ್ಯವಾದುದೂ, ನಿನ್ನಿಂದ ಕೊಡಲ್ಪಡತಕ್ಕದ್ದೂ ಆದ ಯಾವ ಧನವಿದೆಯೋ, ಆ ಧನವನ್ನು ನಮಗೆ ಎರಡು ಕೈಗಳಿಂದಲೂ ತುಂಬಿಕೊಡು

## English Translation

Wonderful Indra, wielder of the thunderbolt, since precious treasure is to be distributed by you, bestow it, possessor of riches, with both hands, upon us

॥ ವಿಶೇಷ ವಿಷಯಗಳು ॥

**ಮೇಹನಾ**—ಈ ಶಬ್ದದ ಅರ್ಥವಿವರಣೆಮಾಡುವುದಕ್ಕಾಗಿ ಯಾಸ್ಕರು ಪ್ರಕೃತಸೂಕ್ತವನ್ನು ತೆಗೆದುಕೊಂಡು ಅದಕ್ಕೆ ನಿರ್ವಚನವನ್ನು ಹೇಳಿದ್ದಾರೆ—

> **ಯದಿಂದ್ರ ಚಿತ್ರಂ ಚಾಯನೀಯಂ ಮಂಹನೀಯಂ ಧನಮಸ್ತಿ । ಯನ್ಮ ಇಹ ನಾಸ್ತೀತಿ ವಾ ತ್ರೀಣಿ ಮಧ್ಯಮಾನಿ ಪದಾನಿ ತ್ವಯಾ ನಸ್ತದ್ದಾತವ್ಯಂ । ಅದ್ರಿವನ್ । ಅದ್ರಿರಾದೃಣಾತ್ಯೇತೇನ । ಅಪಿ ವಾತ್ತೇಃ ಸ್ಯಾತ್ । ತೇ ಸೋಮಾದ ಇತಿ ಹ ವಿಜ್ಞಾಯತೇ । ರಾಧ ಇತಿ ಧನನಾಮ ರಾಧ್ನವಂತ್ಯನೇನ । ತನ್ನಸ್ತ್ವಂ ವಿತ್ತಧನೋಭಾಭ್ಯಾಂ ಹಸ್ತಾಭ್ಯಾಮಾಹರ । ಉಭೌ ಸಮುದ್ಬಾಹು ಭವತಃ ॥**
>
> (ನಿ. ೪. ೪)

ಯಾಸ್ಕರು **ಮೇಹನಾ** ಎಂಬ ಶಬ್ದದ ಅವಯವಾರ್ಥವನ್ನು ಈ ರೀತಿ ವಿವರಿಸಿದ್ದಾರೆ—ಮೇಹನಾ ಎಂಬ ಶಬ್ದವು **ಮೇ+ಇಹ+ನ** ಎಂಬ ಮೂರು ಬೇರೆ ಬೇರೆ ಶಬ್ದಗಳಿಂದ ಸೇರಿ ಆಗಿದೆ ಎಂದರೆ **ಯತ್ ಮೇ ಇಹ ನ ಅಸ್ತಿ** ಎಂಬ ಐದು ಶಬ್ದಗಳಿರುವ ವಾಕ್ಯದಲ್ಲಿ ಮಧ್ಯದ **ಮೇ ಇಹ ನ** ಎಂಬ ಪದಗಳಿಂದ ಮೇಹನಾ ಎಂಬ ಶಬ್ದದ ರೂಪನಿಷ್ಪತ್ತಿಯಾಗಿದೆ. ನನಗೆ (ನನ್ನಲ್ಲಿ) ಯಾವುದು ಇರುವುದಿಲ್ಲವೋ ಅದನ್ನು ಎಂದು ಈ ವಾಕ್ಯಾಭಿಪ್ರಾಯವು ಧನಕ್ಕಾಗಿ ಇಂದ್ರನನ್ನು ಪ್ರಾರ್ಥಿಸುವ ಪುರುಷನು ಧನವು ತನ್ನಲ್ಲಿಲ್ಲದಿರುವುದರಿಂದಲೇ ಅದನ್ನು ಕೊಡಬೇಕೆಂದು ಇಂದ್ರನನ್ನು ಪ್ರಾರ್ಥಿಸುವನು ಯಾರಲ್ಲಿ ಯಾವ ಪದಾರ್ಥವಿರುವುದಿಲ್ಲವೋ ಅದನ್ನು ಅವರು ಮತ್ತೊಬ್ಬರಿಂದ ಯಾಚಿಸುತ್ತಾರೆ ಎಂಬ ನಿಯಮವನ್ನನುಸರಿಸಿ ಮೇಹನಾ ಎಂಬ ಶಬ್ದಕ್ಕೆ ಧನವೆಂದರ್ಥಮಾಡಿದೆ

ಎಲೈ ಇಂದ್ರನೇ, ನಿನ್ನಲ್ಲಿ ವಿಚಿತ್ರವೂ, ಉತ್ತಮವೂ ಆದ ಯಾವ ಧನವಿದೆಯೋ ಮತ್ತು ನನ್ನಲ್ಲಿ ಇಲ್ಲದಿರುವ ಧನವಿದೆಯೋ ಅಂತಹ ಧನವನ್ನು, ಎಲೈ ವಜ್ರಧಾರಿಯಾದ ಇಂದ್ರನೇ, ನಿನ್ನ ಎರಡು ಕೈಗಳಲ್ಲಿಯೂ ತುಂಬಿಕೊಂಡು ಬಂದು ನನಗೆ ಕೊಡು ಎಂದು ಮುಖ್ಯಾಭಿಪ್ರಾಯವು.

**ಅದ್ರಿ** ಎಂಬ ಶಬ್ದವು ಶೀಳು ಎಂಬರ್ಥವುಳ್ಳ ಆದೃಣಾತಿ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಪರ್ವತಾದಿಗಳನ್ನು ಅಥವಾ ಶತ್ರುಗಳನ್ನು ಇಂದ್ರನು ತನ್ನ ವಜ್ರಾಯುಧದಿಂದ ಶೀಳುವುದರಿಂದ ಇಂದ್ರನ ವಜ್ರಾಯುಧಕ್ಕೆ ಅದ್ರಿ ಎಂದು ಹೆಸರು. ಆ ವಜ್ರಾಯುಧವನ್ನು ಕೈಯಲ್ಲಿ ಧರಿಸಿರುವ ಇಂದ್ರನನ್ನು ಇಲ್ಲಿ ಅದ್ರಿವಃ ಎಂಬ ಸಂಬುದ್ಧ್ಯಂತಶಬ್ದದಿಂದ ಸಂಬೋಧಿಸಲಾಗಿದೆ. ಅಥವಾ ಅದ್–ಭಕ್ಷಿಸು ಎಂಬ ಧಾತುವಿನಿಂದಲಾದರೂ ಅದ್ರಿಶಬ್ದವು ನಿಷ್ಪನ್ನವಾಗಬಹುದು. ಸೋಮಲತೆಯನ್ನು ಜಜ್ಜುವ ಕಲ್ಲುಗಳಿಗೆ ಅದ್ರಿಯೆಂದು ಹೆಸರು. ಅವು ಸೋಮಲತೆಯನ್ನು ಅಗಿದುತಿನ್ನುನಂತೆ ಜಜ್ಜುವುದರಿಂದ ಆ ಕಲ್ಲಿಗೆ ಅದ್ರಿ ಎಂದೂ ಹೆಸರು. **ತೇ ಸೋಮಾದಃ** ಎಂಬ ವಾಕ್ಯದಲ್ಲಿ ಇದೇ ಅಭಿಪ್ರಾಯವು ಸೂಚಿತವಾಗಿದೆ.

ರಾಧಃ ಎಂಬ ಶಬ್ದವು ಸಮಾಧಾನಪಡಿಸು, ಸಂತೋಷಪಡಿಸು ಎಂಬರ್ಥವುಳ್ಳ ರಾಧ್ನವಂತಿ ಎಂಬ ಧಾತುವಿನಿಂದ ನಿಷ್ಪನ್ನವಾಗಿ ಧನವೆಂಬ ಅರ್ಥವನ್ನು ಸೂಚಿಸುವುದು ಏಕೆಂದರೆ, ಈ ಧನದಿಂದ ಇತರರನ್ನು ಸಮಾಧಾನ ಅಥವಾ ಸಂತೋಷಪಡಿಸಬಹುದಾದ್ದರಿಂದ ಇಂತಹ ವಸ್ತುವಿಗೆ **ರಾಧಃ**–ಧನವು ಎಂಬರ್ಥವು ವಿವೃತವಾಗಿದೆ. ಎಲೈ ಇಂದ್ರನೇ, ಇಂತಹ ಧನವನ್ನು ನಮಗೆ ಕೊಡುವುದಕ್ಕಾಗಿ ನಿನ್ನ ಎರಡುಕೈಗಳಿಂದಲೂ ತುಂಬಿಕೊಂಡು ತೆಗೆದುಕೊಂಡುಬಾ ಎಂದು ಇಂದ್ರನನ್ನು ಇಲ್ಲಿ ಪ್ರಾರ್ಥಿಸಲಾಗಿದೆ.

---

॥ ಸಂಹಿತಾಪಾಠಃ ॥

## ಯನ್ಮನ್ಯಸೇ ವರೇಣ್ಯಮಿಂದ್ರ ದ್ಯುಕ್ಷಂ ತದಾ ಭರ ।
## ವಿದ್ಯಾಮ ತಸ್ಯ ತೇ ವಯಮಕೂಪಾರಸ್ಯ ದಾವನೇ ॥ ೨ ॥

॥ ಪದಪಾಠಃ ॥

**ಯತ್ । ಮನ್ಯಸೇ । ವರೇಣ್ಯಂ । ಇಂದ್ರ । ದ್ಯುಕ್ಷಂ । ತತ್ । ಆ । ಭರ ।**

**ವಿದ್ಯಾಮ । ತಸ್ಯ । ತೇ । ವಯಂ । ಅಕೂಪಾರಸ್ಯ । ದಾವನೇ ॥ ೨ ॥**

॥ ಸಾಯಣಭಾಷ್ಯಂ ॥

**ಹೇ ಇಂದ್ರ ಯತ್ ದ್ಯುಕ್ಷಮನ್ನಂ ವರೇಣ್ಯಂ ವರಣೀಯಂ ಮನ್ಯಸೇ ತತ್ ದ್ಯುಕ್ಷಮಾ ಭರಾಸ್ಮಭ್ಯಂ । ತೇ ತವ ಸಂಬಂಧಿನೋ ವಯಂ ತಸ್ಯ ತಾದೃಶಸ್ಯೋಕ್ತಲಕ್ಷಣಸ್ಯಾಕೂಪಾರಸ್ಯ । ಅಕುತ್ಸಿತಃ ಪಾರೋಽಂತೋ ಯಸ್ಯ ತಾದೃಶಸ್ಯಾನ್ನಸ್ಯ ದಾವನೇ ದಾನೇ ವಿದ್ಯಾಮ । ಸ್ಯಾಮ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಯತ್** ಯಾವ । **ದ್ಯುಕ್ಷಂ**—ಅನ್ನವನ್ನು । **ವರೇಣ್ಯಂ**—ಆದೃತವಾದುದೆಂದು । **ಮನ್ಯಸೇ** ನೀನು ತಿಳಿಯುವೆಯೋ । **ತತ್**—ಆ ಅನ್ನವನ್ನು । **ಆ ಭರ**—ನಮಗೆ ತುಂಬಿಕೊಡು । **ತೇ**—ನಿನಗೆ ಸೇರಿದವರಾದ । **ವಯಂ**—ನಾವು । **ತಸ್ಯ**—ಅಂತಹ । **ಅಕೂಪಾರಸ್ಯ**—ಅಂತರಹಿತವಾದ ಅನ್ನದ । **ದಾವನೇ**—ದಾನಕ್ಕೆ ಯೋಗ್ಯರಾಗಿ ।**ವಿದ್ಯಾಮ**—ಇರುವೆವು ।

॥ ಭಾವಾರ್ಥ ॥

ಎಲೈ ಇಂದ್ರನೇ, ಯಾವ ಅನ್ನವನ್ನು ನೀನು ಅತ್ಯಂತ ಆದೃತವೆಂದು ತಿಳಿಯುವೆಯೋ, ಆ ಅನ್ನವನ್ನು ನಮಗೆ ತುಂಬಿಕೊಡು. ನಿನಗೆ ಸೇರಿದವರಾದ ನಾವು ಅಂತಹ ಅಕುತ್ಸಿತವಾದುದೂ ಅಂತರಹಿತವಾದುದೂ ಆದ ಅನ್ನದ ದಾನಕ್ಕೆ ಯೋಗ್ಯವಾಗಿರುವೆವು

## English Translation

Whatever food you consider desirable, Indra, bestow it: let us be to you (in the relation of your) gift of unlimited sustenance.

॥ ವಿಶೇಷವಿಷಯಗಳು ॥

**ದಾವನೇ, ಅಕೂಪಾರಸ್ಯ**—ಈ ಶಬ್ದಗಳ ಅರ್ಥವನ್ನು ವಿವರಿಸುವುದಕ್ಕಾಗಿ ಯಾಸ್ಕರು ಈ ಋಕ್ಕಿಗೆ ನಿರ್ವಚನವನ್ನು ಹೇಳಿದಾರೆ—

> **ದಾವನೇ । ಅಕೂಪಾರಸ್ಯ । ವಿದ್ಯಾಮ ತಸ್ಯ ತೇ ವಯಮಕೂಪಾರಸ್ಯ ದಾವನೇ । ವಿದ್ಯಾಮ ತಸ್ಯ ತೇ ವಯಮಕುಪರಣಸ್ಯ ದಾನಸ್ಯ ॥ ಆದಿತ್ಯೋಽಪ್ಯಕೂಪಾರ ಉಚ್ಯತೇಽಕೂಪಾರೋ ಭವತಿ ದೂರಪಾರಃ ॥ ಸಮುದ್ರೋಽಪ್ಯಕೂಪಾರ ಉಚ್ಯತೇಽಕೂಪಾರೋ ಭವತಿ ಮಹಾಪಾರಃ ॥ ಕಚ್ಛಪೋಽಪ್ಯಕೂಪಾರ ಉಚ್ಯತೇಽಕೂಪಾರೋ ನ ಕೂಪಮೃಚ್ಛತೀತಿ ॥ ಕಚ್ಛಪಃ ಕಚ್ಛಂ ಪಾತಿ ಕಚ್ಛೇನ ಪಾತೀತಿ ವಾ ಕಚ್ಛೇನ ಪಿಬತೀತಿ ವಾ ॥ ಕಚ್ಛಃ ಖಚ್ಛಃ ಖಚ್ಛದಃ । ಅಯಮಪೀತರೋ ನದೀಕಚ್ಛ ಏತಸ್ಮಾದೇವ । ಕಮುದಕಂ ತೇನ ಛಾದ್ಯತೇ ॥**
>
> (ನಿ ೪-೧೮)

ಇಲ್ಲಿ ದಾವನೇ ಎಂಬ ಶಬ್ದಕ್ಕೆ **ದಾನಸ್ಯ** (ನಮಗೆ) ಕೊಡುವುದಕ್ಕಾಗಿ ಎಂದರ್ಥವು **ಅಕೂಪಾರಸ್ಯ** ಎಂಬ ಶಬ್ದಕ್ಕೆ ನಾನಾರ್ಥಗಳಿರುವವು. **ಅಕೂಪಾರಸ್ಯ** ಎಂದರೆ **ಅಕುಪರಣಸ್ಯ** ಎಂದರ್ಥವೆಂದು ನಿರುಕ್ತಕಾರರ ವಚನವು. **ಅಕುಪರಣಸ್ಯ** ಎಂದರೆ ಏನು ? **ಕು** ಎಂದರೆ ಕುತ್ಸಿತ, ಸ್ವಲ್ಪ; **ಪರಣ** ಎಂದರೆ ಪೂರಣ, ತುಂಬಿರುವುದು, ಕುಪರಣ ಎಂದರೆ ಸ್ವಲ್ಪಮಾತ್ರವಿರುವುದು; ಅಕುಪರಣ ಎಂದರೆ ಸ್ವಲ್ಪವಲ್ಲದ ಎಂದರೆ ಹೆಚ್ಚಾದ, ಅಪಾರವಾದ, ಕೊನೆಯಿಲ್ಲದ ಎಂದರ್ಥವು. **ಅಕೂಪಾರಸ್ಯ** ಎಂಬ ಶಬ್ದಕ್ಕೂ ಇದೇ ಅರ್ಥವಿರುವುದು. ಈ ಅರ್ಥವು ಯಾವ ಯಾವ ಸಂದರ್ಭಗಳಲ್ಲಿ ಉಪಯೋಗಿಸಲ್ಪಡುವುದು ಎಂಬುದನ್ನು ನಿರುಕ್ತಕಾರರೇ ಈ ರೀತಿ ವಿವರಿಸಿದಾರೆ—

**ಆದಿತ್ಯೋಽಪ್ಯಕೂಪಾರ ಉಚ್ಯತೇಽಕೂಪಾರೋ ಭವತಿ ದೂರಪಾರಃ** । ಆದಿತ್ಯ ಅಥವಾ ಸೂರ್ಯನೆಂದೂ ಅಕೂಪಾರಶಬ್ದಕ್ಕೆ ಅರ್ಥವಾಗುವುದು. ಹೇಗೆಂದರೆ-ಸೂರ್ಯನು ಉದಯಕಾಲದಿಂದ ಅಸ್ತಮಯ ಕಾಲದವರೆಗೆ ಅಳೆಯುವುದಕ್ಕೆ ಸಾಧ್ಯವಿಲ್ಲದಷ್ಟು ಬಹುದೂರ ಸಂಚರಿಸುವವನಾದ್ದರಿಂದ ಆದಿತ್ಯನಿಗೂ ಅಕೂಪಾರ ಎಂದು ಹೆಸರು.

**ಸಮುದ್ರೋಽಪ್ಯಕೂಪಾರ ಉಚ್ಯತೇಽಕೂಪಾರೋ ಭವತಿ ಮಹಾಪಾರಃ** । ಸಮುದ್ರಕ್ಕೂ ಅಕೂಪಾರವೆಂದು ಹೆಸರು. ಏಕೆಂದರೆ, ಇದು ಬಹುದೂರ ವ್ಯಾಪಿಸಿರುವುದು. ಇದಕ್ಕೆ ಅಂತ್ಯವು ಸಮೀಪದಲ್ಲಿ ಕಾಣುವಂತಿಲ್ಲ. ಅಥವಾ ಪಾರವೆಂದರೆ ದಡ, ತೀರ ಎಂದು ಅರ್ಥಮಾಡಿದರೆ ನಿರುಕ್ತಕಾರರು ಹೇಳಿರುವಂತೆ **ಮಹಾಪಾರಃ** ಸಮುದ್ರ ತೀರವು ಕೊನೆಯಿಲ್ಲದ್ದು ಅತ್ಯಂತ ದೀರ್ಘವಾದುದು. ಇಂತಹ ಅಪಾರವಾದ ತೀರ ಪ್ರದೇಶವಿರುವುದರಿಂದ ಸಮುದ್ರಕ್ಕೂ ಅಕೂಪಾರವೆಂದು ಹೆಸರು.

**ಕಚ್ಛಪೋಽಪ್ಯಕೂಪಾರ ಉಚ್ಯತೇ ನ ಕೂಪಮೃಚ್ಛತಿ** । ಆಮೆಗೂ ಅಕೂಪಾರವೆಂದು ಹೆಸರು ಏಕೆಂದರೆ ಅಲ್ಪ ಉದಕವಿರುವ ಭಾವಿಯಲ್ಲಿ ವಾಸಮಾಡುತ್ತಾ ಹೆಚ್ಚಾದ ಸಂಚಾರಕ್ಕೆ ಅವಕಾಶವಿಲ್ಲದೆ ಅಲ್ಪ ಸ್ಥಳದಲ್ಲಿಯೇ ಇರುವುದು. ಇಲ್ಲಿ ಅಕೂಪಾರಶಬ್ದಕ್ಕೆ ಅ+ಕೂಪ+ಅರ ಎಂದು ಪದಚ್ಛೇದಮಾಡಿ ಅರ್ಥಮಾಡಬೇಕು.

**ಕಚ್ಛಪಃ ಕಚ್ಛಂ ಪಾತಿ ಕಚ್ಛೇನ ಪಾತೀತಿ ವಾ ಕಚ್ಛೇನ ಪಿಬತೀತಿ ವಾ । ಕಚ್ಛಃ ಖಚ್ಛಃ ಖಚ್ಛದಃ** । ಇಲ್ಲಿ ಆಮೆಯನ್ನು ನಿರ್ದೇಶಿಸುವುದಕ್ಕೆ ಕಚ್ಛಪ ಶಬ್ದವನ್ನು ಉಪಯೋಗಿಸಲಾಗಿದೆಯಷ್ಟೆ. ಪ್ರಸಂಗವಶದಿಂದ ಈ ಕಚ್ಛಪಶಬ್ದಕ್ಕೂ ಯಾಸ್ಕರು ನಿರ್ವಚನವನ್ನು ಹೇಳಿದಾರೆ—

(೧) ಕಚ್ಛವೆಂದರೆ ಆಮೆಯ ಮುಖ **ಕಚ್ಛಂ ಪಾತೀತಿ ಕಚ್ಛಪಃ**— ತನ್ನ ಮುಖ ಅಥವಾ ಶಿರಸ್ಸನ್ನು ವಿಶೇಷ ರೀತಿಯಿಂದ ರಕ್ಷಿಸಿಕೊಳ್ಳುವುದರಿಂದ ಆಮೆಗೆ ಕಚ್ಛಪನೆಂದು ಹೆಸರು ಈ ಅರ್ಥದಲ್ಲಿ ಪಾತಿ ಎಂಬ ಧಾತುವಿಗೆ **ಪಾ ರಕ್ಷಣೇ** ರಕ್ಷಿಸು.

(೨) ಅಥವಾ ಕಚ್ಛೇನ ಪಾತೀತಿ ವಾ ಕಚ್ಛಪಃ—ಈ ವಾಕ್ಯದಲ್ಲಿ ಪಾತಿ ಧಾತುವಿಗೆ **ಪಾ ಪಾನೇ**-ಪಾನ ಮಾಡು, ಕುಡಿ ಎಂದರ್ಥವಿರುವುದು. ಆಮೆಯು ತನ್ನ ಬಾಯಿಯಿಂದ (ಕಚ್ಛೇನ) ಕುಡಿಯುವುದರಿಂದ ಆಮೆಗೆ ಕಚ್ಛಪನೆಂದು ಹೆಸರು.

(೩) ಅಥವಾ **ಕಚ್ಛ** ಎಂದರ **ಖಚ್ಛ** ಎರಡು ಶಬ್ದಗಳಿಗೂ ಒಂದೇ ಅರ್ಥವು ಕ ಎಂದರ ಉದಕ, **ಖ** ಎಂದರೆ ಆಕಾಶ, ಸ್ಥಳ. **ಛಾದಯತೀತಿ ಛಃ ಛ** ಎಂದರೆ ಹೊದಿಕೆ, ಆಚ್ಛಾದನೆ, ಚಿಪ್ಪು ಇತ್ಯಾದಿ. ಆದುದರಿಂದ ಕಚ್ಛಪ ಎಂದರೆ ನೀರಿನಲ್ಲಿಯೇ—ವಾಸಮಾಡುತ್ತಾ ನೀರನ್ನೇ ಮರೆಮಾಡಿಕೊಂಡು ಎಂದರೆ ನೀರಿನಲ್ಲಿ ಮುಳುಗಿ ತನ್ನನ್ನೂ ಸಂರಕ್ಷಿಸಿಕೊಳ್ಳುವುದರಿಂದ ಆಮೆಗೆ ಕಚ್ಛಪ ಎಂದು ಹೆಸರು, ಅಥವಾ **ಖಚ್ಛಪ** ಎಂಬ ಶಬ್ದಕ್ಕೆ ಆಚ್ಛಾದನೆ ಚಿಪ್ಪು ಎಂದರ್ಥಮಾಡಿದರೆ ಅಪಾಯ ಕಾಲದಲ್ಲಿ ತನ್ನ ಶಿರಸ್ಸನ್ನು ಚಿಪ್ಪಿನೊಳಗೆ ಎಳೆದುಕೊಂಡು ತನ್ನನ್ನು ರಕ್ಷಿಸಿಕೊಳ್ಳುವುದರಿಂದ ಆಮೆಗೆ **ಖಚ್ಛಪ** ಅಥವಾ **ಕಚ್ಛಪ** ಎಂದು ಹೆಸರು

(೪) ಅಯಮುಪೀತರೋ ನದೀಕಚ್ಛ ಏತಸ್ಮಾದೇವ । ಕಮುದಕಂ ತೇನ ಛಾದ್ಯತೇ ॥ ಕಚ್ಛವೆಂದರೆ ನದೀತೀರಕ್ಕೂ ಹೆಸರು. ಇಲ್ಲಿ ಕ ಎಂದರೆ ಉದಕ, ನೀರು. ಚ್ಛ ಎಂದರೆ ಛಾದ್ಯತೆ-ಆವರಿಸಲ್ಪಡುವುದು. ನದೀ ತೀರವು ನೀರಿನಿಂದ ಆವರಿಸಲ್ಪಟ್ಟಿರುವುದರಿಂದ ಅದಕ್ಕೆ ಕಚ್ಛ ಎಂದು ಹೆಸರು

॥ ಸಂಹಿತಾಪಾಠಃ ॥

ಯತ್ತೇ ದಿತ್ಸು ಪ್ರರಾಧ್ಯಂ ಮನೋ ಅಸ್ತಿ ಶ್ರುತಂ ಬೃಹತ್ ।
ತೇನ ದೃಳ್ಹಾ ಚಿದದ್ರಿವ ಆ ವಾಜಂ ದರ್ಷಿ ಸಾತಯೇ ॥ ೩ ॥

॥ ಪದಪಾಠಃ ॥

ಯತ್ । ತೇ । ದಿತ್ಸು । ಪ್ರಽರಾಧ್ಯಂ । ಮನಃ । ಅಸ್ತಿ । ಶ್ರುತಂ । ಬೃಹತ್ ।
ತೇನ । ದೃಳ್ಹಾ । ಚಿತ್ । ಅದ್ರಿಽವಃ । ಆ । ವಾಜಂ । ದರ್ಷಿ । ಸಾತಯೇ ॥ ೩ ॥

॥ ಸಾಯಣಭಾಷ್ಯಂ ॥

ವಾಜಪೇಯೇಽತಿರಿಕ್ತೋಕ್ಥೇ ಯತ್ತೇ ದಿತ್ಸ್ವಿತ್ಯೇಷಾ । ಸೂತ್ರಿತಂ ಚ । ಯತ್ತೇ ದಿತ್ಸು ಪ್ರರಾಧ್ಯಂ ತ್ವಾಮಿಚ್ಛವಸಸ್ಪತೇ । ಆ. ೯-೯ । ಇತಿ ॥

ಹೇ ಇಂದ್ರ ತೇ ತವ ಯದ್ದಿತ್ಸು ದಾನೇಚ್ಛು ಪ್ರರಾಧ್ಯಂ ಪ್ರಕರ್ಷೇಣ ಸ್ತುತ್ಯಂ ಶ್ರುತಂ ವಿಶ್ರುತಂ ಬೃಹನ್ಮಹನ್ಮನೋಽಸ್ತಿ ತೇನ ಮನಸಾ ಹೇ ಅದ್ರಿವೋ ವಜ್ರವನ್ನಿಂದ್ರ ದೃಳ್ಹಾ ಚಿದ್ದೃಢಮಪಿ ವಾಜಮನ್ನಮಾ ದರ್ಷಿ । ಆದರಯಸಿ ಸಾತಯೇಽಸ್ಮತ್ಸಂಭಜನಾಯ ಲಾಭಾಯ ವಾ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ತೇ—ನಿನ್ನ । ದಿತ್ಸು—ದಾನಮಾಡುವ ಉದ್ದಿಶ್ಯವುಳ್ಳದ್ದೂ । ಪ್ರರಾಧ್ಯಂ—ಅತಿಶಯವಾಗಿ ಸ್ತುತಿಸಲ್ಪಡತಕ್ಕದ್ದೂ । ಶ್ರುತಂ—ಪ್ರಖ್ಯಾತವಾದುದೂ । ಬೃಹತ್—ಮಹತ್ಸ್ವರೂಪವುಳ್ಳದ್ದೂ ಆದ । ಯತ್—ಯಾವ । ಮನಃ—ಮನಸ್ಸು । ಅಸ್ತಿ—ಇರುವುದೋ । ತೇನ—ಆ ಮನಸ್ಸಿನಿಂದ ಕೂಡಿ । ಅದ್ರಿವಃ—ವಜ್ರಧಾರಿಯಾದ ಎಲೈ ಇಂದ್ರನೇ । ದೃಳ್ಹಾ ಚಿತ್—ದೃಢವಾದುದೂ ಪುಷ್ಟಿದಾಯಕವಾದುದೂ ಆದ । ವಾಜಂ—ಅನ್ನವನ್ನು । ಸಾತಯೇ—ನಮಗೆ ದಾನಮಾಡಲು । ಆ ದರ್ಷಿ—ಸಂಸ್ಕರಿಸಿ ಸಿದ್ಧಮಾಡ.

॥ ಭಾವಾರ್ಥ ॥

ವಜ್ರಧಾರಿಯಾದ ಎಲೈ ಇಂದ್ರನೇ, ದಾನಮಾಡುವ ಸಂಕಲ್ಪವುಳ್ಳದ್ದೂ, ಅತಿಶಯವಾಗಿ ಸ್ತುತಿಸಲ್ಪಡತಕ್ಕದ್ದೂ ಪ್ರಖ್ಯಾತವಾದುದೂ, ಮಹತ್ಸ್ವರೂಪವುಳ್ಳದ್ದೂ ಆದ ಯಾವ ಮನಸ್ಸು ಇರುವುದೋ ಆ ನಿನ್ನ ಮನಸ್ಸಿನಿಂದ ಕೂಡಿ ದೃಢವಾದುದೂ ಪುಷ್ಟಿದಾಯಕವಾದುದೂ ಆದ ಆ ಅನ್ನವನ್ನು ನಮಗೆ ದಾನಮಾಡಲು ಸಿದ್ಧಪಡಿಸು.

## English Translation

Since your bountiful and praiseworthy will is famous and vastl therefore, thunderer, you have got ready for bestowing upon us substantia, food

॥ ವಿಶೇಷವಿಷಯಗಳು ॥

ವಾಜಪೇಯಸಂಬಂಧವಾದ ಅತಿರಿಕ್ತೋಕ್ಥದಲ್ಲಿ **ಯತ್ತೇ ದಿತ್ಸು** ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಯತ್ತೇ ದಿತ್ಸು ಪ್ರರಾಧ್ಯಂ ತ್ವಾಮಿಚ್ಛವಸಸ್ಪತೇ** ಎಂಬ ಸೂತ್ರದಿಂದ (೬ ೯ ೯) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

**ಮಂಹಿಷ್ಠಂ ವೋ ಮಘೋನಾಂ ರಾಜಾನಂ ಚರ್ಷಣೀನಾಂ ।**
**ಇಂದ್ರಮುಪ ಪ್ರಶಸ್ತಯೇ ಪೂರ್ವೀಭಿರ್ಜುಜುಷೇ ಗಿರಃ ॥ ೪ ॥**

॥ ಪದಪಾಠಃ ॥

ಮಂಹಿಷ್ಠಂ । ವಃ । ಮಘೋನಾಂ । ರಾಜಾನಂ । ಚರ್ಷಣೀನಾಂ ।
ಇಂದ್ರಂ । ಉಪ । ಪ್ರಶಸ್ತಯೇ। ಪೂರ್ವೀಭಿಃ । ಜುಜುಷೇ । ಗಿರಃ ೪ ॥

॥ ಸಾಯಣಭಾಷ್ಯಂ ॥

ಮಘೋನಾಂ ಹವಿರ್ಲಕ್ಷಣಧನವತಾಂ ವೋ ಯುಷ್ಮಾಕಂ ಮಂಹಿಷ್ಠಮತಿಶಯೇನ ಪೂಜ್ಯಂ ಚರ್ಷಣೀನಾಂ ಮನುಷ್ಯಾಣಾಂ ರಾಜಾನಮಿಂದ್ರಮುಪೋಪೇತ್ಯ ಪ್ರಶಸ್ತಯೇ ಪ್ರಶಂಸಿತುಂ ಪೂರ್ವೀಭಿಃ ಪುರಾತನೀಭಿರ್ವಾಗ್ಭಿರ್ಗಿರಃ ಸ್ತೋತಾರೋ ಜುಜುಷೇ । ಸೇವಂತೇ ॥

॥ ಪ್ರತಿಪದಾರ್ಥ ॥

**ಮಘೋನಾಂ**—ಹವಿಸ್ಸಿನ ರೂಪದ ಧನಸಂಪತ್ತುಳ್ಳ । **ವಃ**—ನಿಮ್ಮಲ್ಲಿ । **ಮಂಹಿಷ್ಠಂ**—ಅತ್ಯಂತ ಪೂಜ್ಯನೂ । **ಚರ್ಷಣೀನಾಂ**— ಮಾನವರಿಗೆಲ್ಲಾ । **ರಾಜಾನಂ**—ಪ್ರಭುವೂ ಆದ । **ಇಂದ್ರಂ**—ಇಂದ್ರನನ್ನು । **ಉಪ**—ಸಮೀಪಿಸಿರಿ । **ಪ್ರಶಸ್ತಯೇ**-ಆವನನ್ನು ಪ್ರಶಂಸಿಸುವುದಕ್ಕೆ । **ಪೂರ್ವೀಭಿಃ**-ಪುರಾತನಗಳಾದ ಸ್ತುತಿಗಳಿಂದ। **ಗಿರಃ**—ಸ್ತೋತ್ರಗಳು । **ಜುಜುಷೇ**—ಸೇವಿಸುತ್ತಾರೆ (ಸ್ತೋತ್ರಮಾಡುತ್ತಾರೆ )

॥ ಭಾವಾರ್ಥ ॥

ಹವಿಸ್ಸಿನರೂಪವಾದ ಧನಸಂಪತ್ತುಳ್ಳ ನಿಮ್ಮಲ್ಲಿ ಅತ್ಯಂತ ಪೂಜ್ಯನೂ ಮಾನವರಿಗೆಲ್ಲಾ ಪ್ರಭುವೂ ಆದ ಇಂದ್ರನನ್ನು ಸ್ತೋತ್ರಗಳು ಸಮೀಪಿಸಿ ಪುರಾತನಗಳಾದ ಸ್ತುತಿಗಳಿಂದ ಪ್ರಶಂಸಿಸಿ ಸೇವಿಸುತ್ತಾರೆ.

## English Translation

With ancient (hymns) the pious approach Indra, to laud him who is most worthy of the beverage (the offering) of you who are opulent ; ( him ) who is the king of men.

॥ ಸಂಹಿತಾಪಾಠಃ ॥

ಅಸ್ಮಾ ಇತ್ಕಾವ್ಯಂ ವಚ ಉಕ್ಥಮಿಂದ್ರಾಯ ಶಂಸ್ಯಂ ।
ತಸ್ಮಾ ಉ ಬ್ರಹ್ಮವಾಹಸೇ ಗಿರೋ ವರ್ಧಂತ್ಯತ್ರಯೋ ಗಿರಃ ಶುಂಭಂತ್ಯ-
ತ್ರಯಃ ॥ ೫ ॥

॥ ಪದಪಾಠಃ ॥

ಅಸ್ಮೈ । ಇತ್ । ಕಾವ್ಯಂ । ವಚಃ । ಉಕ್ಥಂ । ಇಂದ್ರಾಯ । ಶಂಸ್ಯಂ ।
ತಸ್ಮೈ । ಊಂ ಇತಿ । ಬ್ರಹ್ಮವಾಹಸೇ । ಗಿರಃ । ವರ್ಧಂತಿ । ಅತ್ರಯಃ । ಗಿರಃ । ಶುಂಭಂತಿ ।
ಅತ್ರಯಃ ॥ ೫ ॥

॥ ಸಾಯಣಭಾಷ್ಯಂ ॥

**ಅಸ್ಮಾ ಇದಸ್ಮಾ ಏವೇಂದ್ರಾಯ ಕಾವ್ಯಂ ಕವೇಃ ಸ್ತೋತುಃ ಸಂಬಂಧಿ । ಯದ್ವಾ । ಕು ಶಬ್ದೇ । ಶಬ್ದನೀಯಂ ವಚೋ ವಾಗ್ರೂಪಮುಕ್ಥಂ ಶಸ್ತ್ರಂ ಶಂಸ್ಯಂ ಶಂಸನೀಯಂ । ಯಸ್ಮಾದೇವಂ ತಸ್ಮಾತ್ತಸ್ಮಾ ಉ ತಸ್ಮಾ ಇಂದ್ರಾಯೈವ ಬ್ರಹ್ಮವಾಹಸೇ ಪರಿವೃಢಸ್ಯ ಸ್ತೋತ್ರಸ್ಯ ವಾಹಕಾಯ ಗಿರಃ ಸ್ತುತೀರತ್ರಯೋಽತ್ರಿಗೋತ್ರಾ ವರ್ಧಂತಿ । ವರ್ಧಯಂತಿ । ಅತ್ರಯೋ ಗಿರಃ ಶುಂಭಂತಿ । ದೀಪಯಂತಿ । ಪುನರುಕ್ತಿರಾದರಾರ್ಥಾ ॥**

॥ ಪ್ರತಿಪದಾರ್ಥ ॥

**ಅಸ್ಮಾ ಇತ್ ಇಂದ್ರಾಯ**—ಈ ಇಂದ್ರನನ್ನುದ್ದೇಶಿಸಿಯೇ । **ಕಾವ್ಯಂ**—ಕಾವ್ಯಾತ್ಮಕವಾದುದೂ । **ವಚಃ**—ವಾಗ್ರೂಪವಾದುದೂ ಆದ । **ಉಕ್ಥಂ**—ಶಸ್ತ್ರಮಂತ್ರವು । **ಶಂಸ್ಯಂ**-ಪರಿಸಲ್ಪಡತಕ್ಕದ್ದು । **ಬ್ರಹ್ಮವಾಹಸೇ**—ಸ್ತುತಿಯನ್ನು ಸ್ವೀಕರಿಸತಕ್ಕ । **ತಸ್ಮಾ ಉ**—ಆ ಇಂದ್ರನನ್ನುದ್ದೇಶಿಸಿಯೇ । **ಗಿರಃ**—ಸ್ತುತಿಗಳನ್ನು । **ಅತ್ರಯಃ**—ಅತ್ರಿಗೋತ್ರೋತ್ಪನ್ನರಾದ ಋಷಿಗಳು । **ವರ್ಧಂತಿ**—ವೃದ್ಧಿಪಡಿಸುತ್ತಾರೆ । **ಅತ್ರಯಃ**—ಅದೇ ಆತ್ರೇಯರು । **ಗಿರಃ**—ಸ್ತುತಿಗಳನ್ನು । **ಶುಂಭಂತಿ**—ಪ್ರಕಾಶಪಡಿಸುತ್ತಾರೆ (ಪರಿಸುತ್ತಾರೆ).

॥ ಭಾವಾರ್ಥ ॥

ಕಾವ್ಯಾತ್ಮಕವಾದುದೂ, ವಾಗ್ರೂಪವಾದುದೂ ಆದ ಶಸ್ತ್ರಮಂತ್ರವು ಈ ಇಂದ್ರನನ್ನುದ್ದೇಶಿಸಿಯೇ ಪರಿಸಲ್ಪಡತಕ್ಕದ್ದು. ಸ್ತುತಿಯನ್ನು ಸ್ವೀಕರಿಸತಕ್ಕ ಆ ಇಂದ್ರನನ್ನುದ್ದೇಶಿಸಿಯೇ ಅತ್ರಿಗೋತ್ರೋತ್ಪನ್ನರಾದ ಋಷಿಗಳು ಸ್ತುತಿಗಳನ್ನು ವೃದ್ಧಿಪಡಿಸುತ್ತಾರೆ. ಅದೇ ಆತ್ರೇಯರು ಸ್ತುತಿಗಳನ್ನು ಪ್ರಕಾಶಪಡಿಸುತ್ತಾರೆ (ಪರಿಸುತ್ತಾರೆ).

English Translation

To that Indra is the poetical and articulate prayer to be recited: to him the conveyers of pious praise, the sons of Atri, raise their hymns. the sons of Atri illumine their hymns

## ನಲವತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಆ ಯಾಹ್ಯದ್ರಿಭಿರಿತಿ ನವರ್ಚಮಷ್ಟಮಂ ಸೂಕ್ತಂ । ಅತ್ರೇಯಮನುಕ್ರಮಣಿಕಾ । ಆ ಯಾಹಿ ನವ ತ್ರ್ಯೃಷ್ಣಿಗಾದ್ಯಂತ್ಯಾನುಷ್ಟುಮ್ಮಧ್ಯೇ ಚ ಸಾ ಸೌರೀ ತದಾದೀತಿಹಾಸಃ ಸ್ತುತಿಕರ್ಮತ್ವಾದತ್ರಿರ್ದೇವತೈವೇತಿ । ಕೃತ್ಸ್ನಸ್ಯ ಋಷಿಶ್ಚಾನ್ಯಸ್ಮಾತ್ । ಅನು. ೧೨-೨ । ಇತಿ ಪರಿಭಾಷಯಾತ್ರಿರ್ಋಷಿಃ ।**

**ಆದಾ ಸ್ತಿಸ್ರ ಉಷ್ಣಿಹಃ ಪಂಚಮೀನವಮ್ಯಾವನುಷ್ಟುಭೌ ಶಿಷ್ಟಾಸ್ತ್ರಿಷ್ಟುಭಃ । ಅತ್ರೇಃ ಸ್ತೂಯಮಾನತ್ವಾತ್ ಷಷ್ಠ್ಯಾದ್ಯಾ ಅತ್ರಿದೇವತಾಕಾ ಅತ್ರ್ಯಾರ್ಷೇಯಾಶ್ಚ ಪಂಚಮೀ ಸೂರ್ಯದೇವತ್ಯಾ ಶಿಷ್ಟಾ ಐಂದ್ರ್ಯಃ ॥ ದಶರಾತ್ರೇ ತೃತೀಯೇಽಹನಿ ಪ್ರಉಗಶಸ್ತ್ರ ಆದ್ಯಸ್ತೃಚ ಐಂದ್ರಃ ಪಂಚಮಃ । ಸೂತ್ರಿತಂ ಚ । ಆ ಯಾಹ್ಯದ್ರಿಭಿಃ ಸುತಂ ಸಜೂರ್ವಿಶ್ವೇಭಿರ್ದೇವೇಭಿಃ । ಆ. ೭ ೧೦ । ಇತಿ ॥ ಮಹಾವ್ರತೇಽಪ್ಯೌಷ್ಣಿಹತೃಚಾಶೀತಾವಯಂ ತೃಚಃ ॥**

ಅನುವಾದವು—**ಆ ಯಾಹ್ಯದ್ರಿಭಿಃ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ಆ ಯಾಹಿ ನವ ತ್ರ್ಯುಷ್ಣಿಗಾದ್ಯಂತ್ಯಾನುಷ್ಟುಪ್ಮಧ್ಯೇ ಚ ಸಾ ಸೌರೀ ತದಾದೀತಿಹಾಸಃ ಸ್ತುತಿಕರ್ತೃತ್ವಾದತ್ರಿರ್ದೇವತೈವ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಅತ್ರಿಯು ಋಷಿಯು, ಈ ಸೂಕ್ತದ ಮೊದಲಿನ ಮೂರು ಋಕ್ಕುಗಳು ಉಷ್ಣಿಕ್ ಛಂದಸ್ಕವು, ಐದು ಮತ್ತು ಒಂಭತ್ತನೆಯ ಋಕ್ಕುಗಳು ಅನುಷ್ಟುಪ್‌ಛಂದಸ್ಕವು. ಉಳಿದ ನಾಲ್ಕು ಋಕ್ಕುಗಳು ತ್ರಿಷ್ಟುಪ್‌ಛಂದಸ್ಕವು. ಈ ಸೂಕ್ತದ ಆರನೆಯ ಋಕ್ಕಿನಿಂದ ಒಂಭತ್ತನೆಯ ಋಕ್ಕಿನವರೆಗೆ ಇರುವ ನಾಲ್ಕು ಋಕ್ಕುಗಳಲ್ಲಿ ಅತ್ರಿಋಷಿಯ ಪ್ರಶಂಸೆ ಇರುವುದರಿಂದ ಆ ನಾಲ್ಕು ಋಕ್ಕುಗಳಿಗೆ ಅತ್ರಿಯು ದೇವತೆಯು, ಆ ಋಕ್ಕುಗಳಿಗೆ ಋಷಿಯೂ ಅತ್ರಿಯೇ ಆಗಿರುವನು. ಐದನೆಯ ಋಕ್ಕು ಸೂರ್ಯದೇವತಾಕವು. ದಶರಾತ್ರವೆಂಬ ಯಾಗದಲ್ಲಿ ಮೂರನೆಯ ದಿವಸ ಪ್ರಉಗಶಸ್ತ್ರಮಂತ್ರಪಠನಕಾಲದಲ್ಲಿ ಈ ಸೂಕ್ತದ ಮೊದಲ ಮೂರು ಋಕ್ಕುಗಳನ್ನು ಇಂದ್ರಸಂಬಂಧವಾದ ಐದನೆಯ ತೃಚವನ್ನಾಗಿ (ತೃಚವೆಂದರೆ ಮೂರು ಋಕ್ಕುಗಳು) ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಆ ಯಾಹ್ಯದ್ರಿಭಿಃ ಸುತಂ ಸಜೂರ್ವಿಶ್ವೇಭಿರ್ದೇವೇಭಿಃ** ಎಂಬ ಸೂತ್ರದಿಂದ (ಆ. ೭-೧೦) ವಿಸ್ತೃತವಾಗಿರುವುದು. ಮಹಾವ್ರತವೆಂಬ ಯಾಗದಲ್ಲಿಯೂ ಈ ಸೂಕ್ತದ ಮೊದಲನೆಯ ಮೂರು ಋಕ್ಕುಗಳು ಉಷ್ಣಿಕ್‌ಛಂದಸ್ಸಿನ ಮಂತ್ರಗಳಿಗಾಗಿ ವಿನಿಯೋಗಿಸಲ್ಪಡುವವು.

## ಸೂಕ್ತ—೪೦

॥ ಮಂಡಲ—೫ ॥ ಅನುವಾಕ—೩ ॥ ಸೂಕ್ತ—೪ ॥

॥ ಅಷ್ಟಕ—೪ । ಅಧ್ಯಾಯ—೨ ॥ ವರ್ಗ—೧೭, ೧೮ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೯

॥ ಋಷಿಃ—ಅತ್ರಿಃ ॥

॥ ದೇವತಾ—೧-೪ ಇಂದ್ರಃ । ೫ ಸೂರ್ಯಃ । ೬-೯ ಅತ್ರಿಃ ॥

॥ ಛಂದಃ—೧-೩, ಉಷ್ಣಿಕ್ । ೪, ೬-೮, ತ್ರಿಷ್ಟುಪ್ । ೫-೯, ಅನುಷ್ಟುಪ್ ॥

॥ ಸಂಹಿತಾಪಾಠಃ ॥

**ಆ ಯಾಹ್ಯದ್ರಿಭಿಃ ಸುತಂ ಸೋಮಂ ಸೋಮಪತೇ ಪಿಬ ।**
**ವೃಷನ್ನಿಂದ್ರ ವೃಷಭಿರ್ವೃತ್ರಹನ್ತಮ ॥ ೧ ॥**

॥ ಪದಪಾಠಃ ॥

ಆ । ಯಾಹಿ । ಅದ್ರಿಽಭಿಃ । ಸುತಂ । ಸೋಮಂ । ಸೋಮಽಪತೇ । ಪಿಬ ।

ವೃಷನ್ । ಇಂದ್ರ । ವೃಷಽಭಿಃ । ವೃತ್ರಹನ್ಽತಮ ॥ ೧ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ಆ ಯಾಹಿ । ಅಸ್ಮದ್ಯಜ್ಞಮಾಗಚ್ಛ । ಆಗತ್ಯ ಚ ಹೇ ಸೋಮಪತೇ ಸೋಮಸ್ಯ ಸ್ವಾಮಿನ್ನಿಂದ್ರ ಅದ್ರಿಭಿರ್ಗ್ರಾವಭಿಃ ಸುತಮಭಿಷುತಂ ಸೋಮಂ ಪಿಬ । ಹೇ ವೃಷನ್ ಫಲಸ್ಯ ವರ್ಷಯಿತ- ರ್ವೃತ್ರಹಂತಮಾತಿಶಯೇನ ಶತ್ರೂಣಾಂ ಹಂತೃತಮ ವೃಷಭಿರ್ವರ್ಷಕೈರ್ಮರುದ್ಭಿಃ ಸಹಾ ಯಾಹಿ ಪಿಬ ಚ ॥**

॥ ಪ್ರತಿಪದಾರ್ಥ ॥

ಇಂದ್ರ— ಎಲೈ ಇಂದ್ರನೇ । **ಆ ಯಾಹಿ**—(ನಮ್ಮ ಯಜ್ಞಕ್ಕೆ) ದಯಮಾಡು । **ಸೋಮಪತೇ**— ಸೋಮಕ್ಕೆ ಪ್ರಭುವಾದ ಇಂದ್ರನೇ । **ಅದ್ರಿಭಿಃ**—ಕಲ್ಲುಗಳಿಂದ (ಜಜ್ಜಿ) । **ಸುತಂ**—ಹಿಂಡಲ್ಪಟ್ಟ । **ಸೋಮಂ**— ಸೋಮರಸವನ್ನು । **ಪಿಬ**—ಪಾನಮಾಡು । **ವೃಷನ್**—ಇಷ್ಟಾರ್ಥಪ್ರದನೂ । **ವೃತ್ರಹಂತಮ**—ವೃತ್ರನನ್ನು ಪೂರ್ಣವಾಗಿ ನಾಶಮಾಡುವವನೂ ಆದ ಎಲೈ ಇಂದ್ರನೇ । **ವೃಷಭಿಃ**—ಕಾಮವರ್ಷಕಗಳಾದ ಮರುತ್ತುಗಳೊಡನೆ (ಯಜ್ಞಕ್ಕೆ ದಯಮಾಡು)

॥ ಭಾವಾರ್ಥ ॥

ಇಷ್ಟಾರ್ಥಪ್ರದನೂ, ವೃತ್ರನನ್ನು ಪೂರ್ಣವಾಗಿ ನಾಶಮಾಡುವವನೂ ಆದ ಎಲೈ ಇಂದ್ರನೇ, ನೀನೇ ಸೋಮಕ್ಕೆ ಪ್ರಭುವಾಗಿ ಕಲ್ಲುಗಳಿಂದ ಜಜ್ಜಿ ಹಿಂಡಲ್ಪಟ್ಟ ಸೋಮರಸವನ್ನು ಪಾನಮಾಡು

## English Translation

Come, Indra, (to our sacrifice); drink, lord of the Soma, of the juice expressed by the stones · showerer (of benefits), utter destroyer of Vritra, (come) with the showering (Maruts).

---

॥ ಸಂಹಿತಾಪಾಠಃ ॥

ವೃಷಾ ಗ್ರಾವಾ ವೃಷಾ ಮದೋ ವೃಷಾ ಸೋಮೋ ಅಯಂ ಸುತಃ ।

ವೃಷನ್ನಿಂದ್ರ ವೃಷಭಿರ್ವೃತ್ರಹನ್ತಮ ॥ ೨ ॥

॥ ಪದಪಾಠಃ ॥

ವೃಷಾ । ಗ್ರಾವಾ । ವೃಷಾ । ಮದಃ । ವೃಷಾ । ಸೋಮಃ । ಅಯಂ । ಸುತಃ ।

ವೃಷನ್ । ಇಂದ್ರ । ವೃಷಭಿಃ । ವೃತ್ರಹನ್ऽತಮ ॥ ೨ ॥

॥ ಸಾಯಣಭಾಷ್ಯಂ ॥

ಗ್ರಾವಾಭಿಷವಸಾಧನಃ ಪಾಷಾಣೋ ವೃಷಾ ವರ್ಷಕಃ ಸೋಮರಸಸ್ಯ ಫಲಸ್ಯ ವಾ । ಮದಃ ಸೋಮಪಾನೇನ ಜನಿತೋ ವೃಷಾ ವರ್ಷಕಃ । ಅಯಂ ಸುತೋಽಭಿಷುತಃ ಸೋಮೋ ವೃಷಾ । ತಂ ಸೋಮಂ ವೃಷಭಿಃ ಸಹ ಪಿಬ ॥

॥ ಪ್ರತಿಪದಾರ್ಥ ॥

ಗ್ರಾವಾ—ಸೋಮವನ್ನು ಹಿಂಡುವ ಕಲ್ಲು । ವೃಷಾ—ಕಾಮವರ್ಷಕವಾದುದು । ಮದಃ—ಸೋಮಪಾನದಿಂದ ಉಂಟಾದ ಹರ್ಷವು । ವೃಷಾ—ಇಷ್ಟಾರ್ಥಪ್ರದವಾದುದು । ಅಯಂ—ಇಲ್ಲಿರುವ । ಸುತಃ—ಅಭಿಷುತವಾದ । ಸೋಮಃ—ಸೋಮವು । ವೃಷಾ—ಕಾಮವರ್ಷಕವಾದುದು । ವೃಷನ್—ಇಷ್ಟಾರ್ಥಪ್ರದನೂ । ವೃತ್ರಹಂತಮ—ಪೂರ್ಣವಾಗಿ ವೃತ್ರನನ್ನು ನಾಶಮಾಡುವವನೂ ಆದ । ಇಂದ್ರ—ಎಲೈ ಇಂದ್ರನೇ । ವೃಷಭಿಃ—ಮರುತ್ತುಗಳೊಡನೆ (ಪಾನಮಾಡು) .

॥ ಭಾವಾರ್ಥ ॥

ಸೋಮವನ್ನು ಹಿಂಡುವ ಕಲ್ಲು ಕಾಮವರ್ಷಕವಾದುದು. ಸೋಮಪಾನದಿಂದ ಉಂಟಾದ ಹರ್ಷವು ಇಷ್ಟಾರ್ಥಪ್ರದವಾದುದು. ಇಲ್ಲಿ ಹಿಂಡಲ್ಪಟ್ಟು ಸಿದ್ಧವಾಗಿರುವ ಸೋಮವು ಅಪೇಕ್ಷಿತವಸ್ತುವನ್ನು ಕೊಡತಕ್ಕದ್ದು. ಇಷ್ಟಾರ್ಥಪ್ರದನೂ, ವೃತ್ರನನ್ನು ಪೂರ್ಣವಾಗಿ ನಾಶಮಾಡುವವನೂ ಆದ ಇಂದ್ರನು ಮರುತ್ತುಗಳೊಡನೆ ಅದನ್ನು ಪಾನಮಾಡಲಿ

## English Translation

The stone is the showerer, the inebriation is the showerer, this effused Soma is the showerer; showerer (of benefits), Indra, utter destroyer of Vritra, come with the showering (Maruts).

---

॥ ಸಂಹಿತಾಪಾಠಃ ॥

ವೃಷಾ ತ್ವಾ ವೃಷಣಂ ಹುವೇ ವಜ್ರಿನ್ ಚಿತ್ರಾಭಿರೂತಿಭಿಃ ।

ವೃಷನ್ನಿಂದ್ರ ವೃಷಭಿ ರ್ವೃತ್ರಹಂತಮ ॥ ೩ ॥

॥ ಪದಪಾಠಃ ॥

ವೃಷಾ । ತ್ವಾ । ವೃಷಣಂ । ಹುವೇ । ವಜ್ರಿನ್ । ಚಿತ್ರಾಭಿಃ । ಊತಿಽಭಿಃ ।

ವೃಷನ್ । ಇಂದ್ರ । ವೃಷಽಭಿಃ । ವೃತ್ರಹನ್ಽತಮ ॥ ೩ ॥

॥ ಸಾಯಣಭಾಷ್ಯಂ ॥

ಹೇ ವಜ್ರಿನ್ ವಜ್ರವನ್ನಿಂದ ವೃಷಾ ಸೋಮರಸಸ್ಯ ಸೇಕ್ತಾಹಂ ವೃಷಣಂ ತ್ವಾಂ ಹುವೇ । ಆಹ್ವಯಾಮಿ । ಕಿಮರ್ಥಂ । ಚಿತ್ರಾಭಿಶ್ಚಾಯನೀಯಾಭಿರೂತಿಭೀ ರಕ್ಷಾಭಿರ್ನಿಮಿತ್ತಭೂತಾಭಿಃ । ಶಿಷ್ಟಂ ಗತಂ ॥

॥ ಪ್ರತಿಪದಾರ್ಥ ॥

ವಜ್ರಿನ್—ವಜ್ರಧಾರಿಯಾದ । ಇಂದ್ರ—ಎಲೈ ಇಂದ್ರನೇ । ವೃಷಾ—ಸೋಮರಸವನ್ನು ಹಿಂಡುವ ನಾನು। ವೃಷಣಂ—ಕಾಮ ವರ್ಷಕನಾದ । ತ್ವಾ—ನಿನ್ನನ್ನು । ಚಿತ್ರಾಭಿಃ—ಅನೇಕ ವಿಧವಾದ । ಊತಿಭಿಃ— ರಕ್ಷಣೆಗಳ ನಿಮಿತ್ತವಾಗಿ । ಹುವೇ—ಕರೆಯುತ್ತೇನೆ । ವೃಷನ್—ಇಷ್ಟಾರ್ಥಪ್ರದನೂ । ವೃತ್ರಹಂತಮ—ವೃತ್ರನನ್ನು ಪೂರ್ಣವಾಗಿ ನಾಶಮಾಡುವವನೂ ಆದ ಎಲೈ ಇಂದ್ರನೇ । ವೃಷಭಿಃ—ಮರುತ್ತುಗಳೊಡನೆ (ದಯಮಾಡಿ ಸೋಮವನ್ನು ಪಾನಮಾಡು)

॥ ಭಾವಾರ್ಥ ॥

ವಜ್ರಾಯುಧವನ್ನು ಹಿಡಿದಿರುವ ಎಲೈ ಇಂದ್ರನೇ, ಸೋಮರಸವನ್ನು ಹಿಂಡುವ ನಾನು ಕಾಮವರ್ಷಕನಾದ ನಿನ್ನನ್ನು ಅನೇಕ ವಿಧವಾದ ರಕ್ಷಣೆಗಳ ನಿಮಿತ್ತವಾಗಿ ಕರೆಯುತ್ತೇನೆ. ಇಷ್ಟಾರ್ಥಪ್ರದನೂ, ವೃತ್ರನ ನಾಶಕನೂ ಆದ ಎಲೈ ಇಂದ್ರನೇ, ಇಷ್ಟಪ್ರದರಾದ ಮರುತ್ತುಗಳೊಡನೆ ದಯಮಾಡಿ ಸೋಮವನ್ನು ಪಾನಮಾಡು.

English Translation

Effusing the libation, I invoke you, the showerer (of benefits), for your marvellous protections: showerer (of benefits), Indra, utter destroyer of Vritra, come with the showering (Maruts).

॥ ಸಂಹಿತಾಪಾಠಃ ॥

ಋಜೀಷೀ ವಜ್ರೀ ವೃಷಭಸ್ತುರಾಷಾಟ್ಛುಷ್ಮೀ ರಾಜಾ ವೃತ್ರಹಾ ಸೋಮಪಾವಾ ।

ಯುಕ್ತ್ವಾ ಹರಿಭ್ಯಾಮುಪ ಯಾಸದರ್ವಾಙ್ಮಾಧ್ಯಂದಿನೇ ಸವನೇ ಮತ್ಸ-
ದಿಂದ್ರಃ ॥ ೪ ॥

॥ ಪದಪಾಠಃ ॥

ಋಜೀಷೀ । ವಜ್ರೀ । ವೃಷಭಃ । ತುರಾಷಾಟ್ । ಶುಷ್ಮೀ । ರಾಜಾ । ವೃತ್ರಽಹಾ । ಸೋಮಽಪಾವಾ ।
ಯುಕ್ತ್ವಾ । ಹರಿಽಭ್ಯಾಂ । ಉಪ । ಯಾಸತ್ । ಅರ್ವಾಙ್ । ಮಾಧ್ಯಂದಿನೇ । ಸವನೇ । ಮತ್ಸತ್ ।
ಇಂದ್ರಃ ॥ ೪ ॥

॥ ಸಾಯಣಭಾಷ್ಯಂ ॥

ಋಜೀಷೀ ವಜ್ರೀತ್ಯೇಷಾ ಬ್ರಾಹ್ಮಣಾಚ್ಛಂಸಿನಃ ಶಸ್ತ್ರಯಾಜ್ಯಾ । ಋಜೀಷೀ ವಜ್ರೀ ವೃಷಭಸ್ತುರಾಷಾಳಿತಿ ಯಾಜ್ಯಾ । ಆ. ೫. ೧೬. । ಇತಿ ಹಿ ಸೂತ್ರಿತಂ ॥

ಋಜೀಷೀ । ಸವನದ್ವಯೇಽಭಿಷುತಸ್ಯ ಗತಸಾರಸ್ಯ ಸೋಮರಸಸ್ಯ ತೃತೀಯಸವನ ಆಪ್ಯಾಯಾಭಿಷುತೋ ಯೋಽಸ್ತಿ ಸ ಋಜೀಷಃ ಸೋಮಃ ಸೋಽಸ್ಯಾಸ್ತೀತ್ಯೃಜೀಷೀ । ವಜ್ರೀ ವಜ್ರವಾನ್ ವೃಷಭೋ ವರ್ಷಿತಾ ತುರಾಷಾಟ್ ತುರಾಣಾಂ ತ್ವರಮಾಣಾನಾಂ ಶತ್ರೂಣಾಂ ಸೋಢಾ ಶುಷ್ಮೀ ಬಲವಾನ್ ರಾಜೇಶ್ವರಃ ಸರ್ವಸ್ಯ ವೃತ್ರಹಾ ವೃತ್ರಸ್ಯ ಹಂತಾ ಸೋಮಪಾವಾ ಸೋಮರಸಸ ಪಾತಾ ಏವಂ ಮಹಾನುಭಾವ ಇಂದ್ರೋ ಹರಿಭ್ಯಾಂ ಯುಕ್ತ್ವಾ ರಥಂ ಯೋಜಯಿತ್ವೋಪ ಯಾಸತ್ । ಉಪಗಚ್ಛತು । ಅರ್ವಾಙಸ್ಮದಭಿಮುಖಮಾಗಚ್ಛತು । ಮಾಧ್ಯಂದಿನೇ ಸವನೇ ಮತ್ಸತ್ ಮಾದ್ಯತು ಸೋಮೇನೇಂದ್ರಃ ॥

॥ ಪ್ರತಿಪದಾರ್ಥ ॥

**ಋಜೀಷೀ**—ಋಜೀಷಾತ್ಮಕವಾದ ಸೋಮವನ್ನು ಸ್ವೀಕರಿಸುವನೂ । **ವಜ್ರೀ**—ವಜ್ರಾಯುಧಧಾರಿಯೂ । **ವೃಷಭಃ**—ವೃಷ್ಟಿಸೇಚನವನ್ನು ಮಾಡಿಸುವವನೂ । **ತುರಾಷಾಟ್**—ಶತ್ರುಗಳನ್ನು ಎದುರಿಸುವ ಶಕ್ತಿಯುಳ್ಳವನೂ । **ಶುಷ್ಮೀ**—ಬಲಶಾಲಿಯೂ । **ರಾಜಾ**—ಪ್ರಭುವೂ । **ವೃತ್ರಹಾ**—ವೃತ್ರಹಂತಕನೂ । **ಸೋಮಪಾವಾ**—ಸೋಮ ರಸವನ್ನು ಪಾನಮಾಡುವವನೂ ಆದ ' **ಇಂದ್ರಃ**—ಇಂದ್ರನು । **ಅರ್ವಾಙ್**—ನಮಗಭಿಮುಖವಾಗಿ । **ಉಪ ಯಾಸತ್**—ದಯಮಾಡಲಿ । **ಮಾಧ್ಯಂದಿನೇ ಸವನೇ**—ಮಾಧ್ಯಂದಿನ ಸವನ ಕಾಲದಲ್ಲಿ । **ಮತ್ಸತ್**—(ಸೋಮ ಪಾನದಿಂದ) ಹರ್ಷಿತನಾಗಲಿ

॥ ಭಾವಾರ್ಥ ॥

ಋಜೀಷಾತ್ಮಕವಾದ ಸೋಮವನ್ನು ಸ್ವೀಕರಿಸುವವನೂ, ವಜ್ರಾಯುಧಧಾರಿಯೂ, ವೃಷ್ಟಿಸೇಚನವನ್ನು ಮಾಡಿಸುವವನೂ, ಶತ್ರುಗಳನ್ನು ಎದುರಿಸುವ ಶಕ್ತಿಯುಳ್ಳವನೂ, ಬಲಶಾಲಿಯೂ, ಪ್ರಭುವೂ ವೃತ್ರಹಂತಕನೂ, ಸೋಮರಸವನ್ನು ಪಾನಮಾಡುವವನೂ ಆದ ಇಂದ್ರನು ನಮಗಭಿಮುಖವಾಗಿ ದಯಮಾಡಲಿ ಮಾಧ್ಯಂದಿನ ಸವನಕಾಲದಲ್ಲಿ ಸೋಮಪಾನದಿಂದ ಹರ್ಷಿತನಾಗಲಿ.

## English Translation

May the accepter of the spiritless libation, the wielder of the thunderbolt, the showerer ( of benefits ), the overcomer of quick-(flying foes), the mighty, the monarch, the slayer of Vritra, the drinker of the Soma, having harnessed his horses, come down (to us) : may Indra be exhilarated at the mid-day sacrifice.

॥ ವಿಶೇಷವಿಷಯಗಳು ॥

**ಋಜೀಷೀ ವಜ್ರೀ** ಎಂಬ ಈ ಋಕ್ಕನ್ನು ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಶಸ್ತ್ರಯಾಜ್ಯಾ ಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತ್ರಸೂತ್ರದ—**ಋಜೀಷೀ ವಜ್ರೀ ವೃಷಭಸ್ತುರಾಷಾಳಿತಿ ಯಾಜ್ಯಾ** ಎಂಬ ಸೂತ್ರದಿಂದ (ಆ. ೫-೧೬) ವಿವೃತವಾಗಿರುವುದು.

**ಋಜೀಷೀ**—ಈ ಶಬ್ದಕ್ಕೆ ಯಾಸ್ಕರು ಈ ರೀತಿ ನಿರ್ವಚನವನ್ನು ಹೇಳಿದಾರೆ—

**ಋಜಿಷೀ ಸೋಮೋ ಯತ್ಸೋಮಸ್ಯ ಪೂಯಮಾನಸ್ಯಾತಿರಿಚ್ಯತೇ ತದೃಜೀಷಮಪಾರ್ಜಿತಂ ಭವತಿ ತೇನರ್ಜೀಷೀ ಸೋಮಃ। ಅಥಾಪ್ಯೈಂದ್ರೋ ನಿಗಮೋ ಭವತಿ ಋಜಿಷೀ ವಜ್ರೀ ಇತಿ॥**

(ನಿ ೫ ೧೨)

ಸೋಮಲತೆಗಳನ್ನು ಕಲ್ಲುಗಳಿಂದ ಜಜ್ಜಿ ರಸವನ್ನು ತೆಗೆದ ಮೇಲೆ ಉಳಿಯುವ ಸಿಪ್ಪೆಯಂತಿರುವ ರಸರಹಿತವಾದ **ಪದಾರ್ಥಕ್ಕೆ ಋಜೀಷವೆಂದು** ಹೆಸರು. ಈ ಋಜೀಷವನ್ನು ಬೇಡವೆಂದು ಎಸೆದುಬಿಡುವರು. ಕೆಲವು ಸಂದರ್ಭದಲ್ಲಿ **ಅಂತಹ ಋಜೀಷವನ್ನು** ನೀರಿನಲ್ಲಿ ನೆನೆಯಿಸಿ ಇನ್ನೂ ಸ್ವಲ್ಪ ರಸವನ್ನು ಹಿಂಡಿ ತೆಗೆಯುವರು ಅಂತಹ ಸೋಮರಸಕ್ಕೆ **ಋಜೀಷಃ ಸೋಮಃ** ಎಂದು ಹೆಸರು ತೃತೀಯ ಸವನಕಾಲದಲ್ಲಿ ಇಂತಹ ಋಜೀಷ ಸೋಮಕ್ಕೆ ಹಿಟ್ಟು ಮೊದಲಾದ ಆಶಿರದ್ರವ್ಯಗಳನ್ನು ಮಿಶ್ರಮಾಡಿ ಇಂದ್ರನಿಗೆ ಅರ್ಪಿಸುವರು. ಈ ಋಜೀಷ ಸೋಮವನ್ನು ಇಂದ್ರನು ಪಾನ ಮಾಡುವುದರಿಂದ ಇಂದ್ರನನ್ನು **ಋಜೀಷೀ** ಎಂಬ ಶಬ್ದದಿಂದಲೇ ಕರೆಯುವುದು ರೂಢಿಯಾಗಿದೆ. ಇದಲ್ಲದೆ ಇಂದ್ರನ ಹರೀ ಎಂಬ ಕುದುರೆಗಳು ಈ ಋಜೀಷವೆಂಬ ಸೋಮಲತೆಗಳ ಸಿಪ್ಪೆಯನ್ನು ತಿನ್ನುವವು ಎಂದು ಪ್ರಸಿದ್ಧವಾಗಿದೆ. ಈ ವಿಷಯದಲ್ಲಿ ಯಾಸ್ಕರು ಉದಾಹರಣೆಗಾಗಿ—**ಬದ್ಧಾಂ ತೇ ಹರೀಧಾನಾ ಉಪ ಋಜೀಷಂ ಜಿಘ್ರತಾಂ** ಎಂಬ ಶ್ರುತಿ ವಾಕ್ಯವನ್ನು ಹೇಳಿದಾರೆ. ಎಲೈ ಇಂದ್ರನೇ, ನಿನ್ನ ಕುದುರೆಗಳು ಧಾನ್ಯವನ್ನು ತಿಂದು ಈ ಋಜೀಷವನ್ನು ಮೂಸಿ ನೋಡಲಿ ಎಂದು ಮೇಲಿನ ವಾಕ್ಯದ ಅರ್ಥವು.

ಋಜೀಷವೆಂದರೇನು ? ಇದಕ್ಕೆ ಈ ಹೆಸರು ಬರಲು ಕಾರಣವೇನು ? ಯಜ್ಞದಲ್ಲಿ ಇದರ ಉಪಯೋಗವೇನು ? ಇತ್ಯಾದಿ ವಿಷಯಗಳು ಐತರೇಯ ಬ್ರಾಹ್ಮಣ ಮತ್ತು ತೈತ್ತಿರೀಯ ಸಂಹಿತೆಗಳಲ್ಲಿ ಹೇಳಿರುವುದನ್ನು ಇಲ್ಲಿ ಸೂಕ್ಷ್ಮವಾಗಿ ಪರಿಶೀಲಿಸುವೆವು—

**ಸೋಮೋ ವೈ ರಾಜಾಮುಷ್ಮಿಂಲ್ಲೋಕ ಆಸೀತ್ತಂ ದೇವಾಶ್ಚ ಋಷಯಶ್ಚಾಭ್ಯಧ್ಯಾಯನ್ ಕಥಮಯಮಸ್ಮಾತ್ಸೋಮೋ ರಾಜಾಗಚ್ಛೇದಿತಿ ತೇಽಬ್ರುವಂಶ್ಛಂದಾಂಸಿ ಯೂಯಂ ನ**

**ಇಮಂ ಸೋಮಂ ರಾಜಾನಮಾಹರೇತಿ ತಥೇತಿ ತೇ ಸುಪರ್ಣಾ ಭೂತ್ವೋದಪತನ್**
(ಐ. ಬ್ರಾ ೧೩–೨೫)

ಪೂರ್ವದಲ್ಲಿ ಸೋಮರಾಜನು (ಸೋಮಲತೆಯು ; ಗೌರವಾರ್ಥವಾಗಿ ಸೋಮಲತೆಯನ್ನು ಸೋಮರಾಜನೆಂದು ಕರೆಯುವ ರೂಢಿ ಇದೆ) ಎಂದರೆ ಸೋಮಲತೆಯು ಸ್ವರ್ಗಲೋಕದಲ್ಲಿದ್ದಿತು. ಈ ಲೋಕದಲ್ಲಿರಲಿಲ್ಲ. ಇದನ್ನು ತಿಳಿದು ದೇವತೆಗಳೂ ಋಷಿಗಳೂ ಈ ಸೋಮವನ್ನು ಇಲ್ಲಿಗೆ ತರುವ ಬಗೆ ಹೇಗೆ ಎಂದು ಆಲೋಚಿಸಿದರು. ಬಳಿಕ ಅವರು ಈ ವಿಚಾರವನ್ನು ವಿಮರ್ಶೆಮಾಡಿ ಸೋಮವನ್ನು ಸ್ವರ್ಗದಿಂದ ಭೂಮಿಗೆ ತರುವ ಶಕ್ತಿಯು ಛಂದಸ್ಸುಗಳಿಗೆ ಇರುವುದೆಂದು ತಿಳಿದು ಛಂದಸ್ಸುಗಳನ್ನು ಕುರಿತು—ಎಲೈ ಛಂದಸ್ಸುಗಳೇ, ನಮಗೋಸ್ಕರ ಎಂದರೆ ನಮ್ಮ ಯಜ್ಞದಲ್ಲಿ ಉಪಯೋಗಿಸುವುದಕ್ಕೋಸ್ಕರ ಸ್ವರ್ಗದಲ್ಲಿರುವ ಸೋಮವನ್ನು ಭೂಮಿಗೆ ತರಬೇಕೆಂದು ಪ್ರಾರ್ಥಿಸಿದರು. ಅವರ ಪ್ರಾರ್ಥನೆಯನ್ನಂಗೀಕರಿಸಿ ಛಂದಸ್ಸುಗಳು ಲೋಕದಲ್ಲಿ ಪ್ರಸಿದ್ಧನಾಗಿರುವ ಕೆಲವು ಪಕ್ಷಿಗಳ ರೂಪಗಳನ್ನು ಧರಿಸಿ ಸ್ವರ್ಗಲೋಕಕ್ಕೆ ಹಾರಿಹೋದವು. ಮೊದಲು ಜಗತೀ ಛಂದಸ್ಸು ಪಕ್ಷಿರೂಪವನ್ನು ಧರಿಸಿ ಸ್ವರ್ಗಲೋಕದ ಕಡೆಗೆ ಹಾರಿತು ಆದರೆ ಸ್ವಲ್ಪದೂರ ಹೋಗುವುದರೊಳಗಾಗಿ ಅದಕ್ಕೆ ಆಯಾಸವಾಗಿ ಸ್ವರ್ಗದವರೆಗೂ ಹೋಗಲಾರದೆ ಹಿಂತಿರುಗಿತು. ಬಳಿಕ ತ್ರಿಷ್ಟುಪ್‌ಛಂದಸ್ಸು ತಾನು ಸೋಮವನ್ನು ತರುತ್ತೇನೆಂದು ಹೇಳಿ ಅಂತರಿಕ್ಷಕ್ಕೆ ನೆಗೆಯಿತು. ಆದರೆ ಅರ್ಧದಾರಿಗಿಂತ ಸ್ವಲ್ಪದೂರ ಹೋಗುವುದರೊಳಗಾಗಿ ಆಯಾಸದಿಂದ ಬಳಲಿ ಹಿಂತಿರುಗಿತು ಈ ರೀತಿ ಜಗತೀ ಮತ್ತೂ ತ್ರಿಷ್ಟುಪ್ ಛಂದಸ್ಸುಗಳು ಸೋಮವನ್ನು ತರಲು ಸಾಮರ್ಥ್ಯವಿಲ್ಲದೆ ಹಿಂತಿರುಗಿ ಬಂದದ್ದನ್ನು ದೇವತೆಗಳು ನೋಡಿ ಗಾಯತ್ರೀ ಛಂದಸ್ಸಿನ ಸಮೀಪಕ್ಕೆ ಹೋಗಿ—ಎಲೈ ಗಾಯತ್ರಿಯೇ, ನಮಗಾಗಿ ನೀನು ಸ್ವರ್ಗದಿಂದ ಸೋಮವನ್ನು ತರಬೇಕೆಂದು ಪ್ರಾರ್ಥಿಸಿದರು. ಗಾಯತ್ರಿಯು ಹಾಗೆಯೇ ಆಗಲೆಂದೊಪ್ಪಿ ಶ್ಯೇನ ಪಕ್ಷಿಯ ರೂಪವನ್ನು ಧರಿಸಿ ಸ್ವರ್ಗಕ್ಕೆ ಹಾರಿಹೋಗಿ ಅಲ್ಲಿ ಸೋಮವನ್ನು ಕಾಯುತ್ತಿದ್ದ ಸ್ವಾನ, ಭ್ರಾಜ ಮೊದಲಾದ ಸೋಮಪಾಲಕರನ್ನು ಹೆದರಿಸಿ ಸೋಮವನ್ನು ಅಪಹರಿಸಿಕೊಂಡು ಬಂದು ಭೂಮಿಗೆ ತಂದಿತು. ಸೋಮಲತೆಯನ್ನು ತಂದದ್ದರಿಂದ ಛಂದಸ್ಸುಗಳಲ್ಲೆಲ್ಲಾ ಗಾಯತ್ರಿಗೆ ಶ್ರೇಷ್ಠವಾದ ಸ್ಥಾನವು ಲಭಿಸಿತು.

**ಸಾ ಯದ್ದಕ್ಷಿಣೇನ ಪದಾ ಸಮಗೃಭ್ಣಾತ್ತತ್ಪ್ರಾತಃಸವನಮಭವತ್ತದ್ಗಾಯತ್ರೀ ಸ್ವಮಾಯತನಮಕುರುತ ತಸ್ಮಾತ್ತತ್ಸಮೃದ್ಧತಮಂ ಮನ್ಯಂತೇ ಸರ್ವೇಷಾಂ ಸವನಾನಾಮಗ್ರಿಯೋ ಮುಖ್ಯೋ ಭವತಿ ಶ್ರೇಷ್ಠತಾಮಶ್ನುತೇ ಯ ಏವಂ ವೇದಾಥ ಯತ್ಸವ್ಯೇನ ಪದಾ ಸಮಗೃಭ್ಣಾತ್ತನ್ಮಾಧ್ಯಂದಿನಂ ಸವನಮಭವತ್ತದ್ವಿಸ್ರಂಸತ ತದ್ವಿಸ್ರಸ್ತಂ ನಾನ್ವಾಪ್ನೋತ್ಪೂರ್ವಂ ಸವನಂ ತೇ ದೇವಾಃ ಪ್ರಾಜಿಜ್ಞಾಸಂತ ತಸ್ಮಿಂಸ್ತ್ರಿಷ್ಟುಭಂ ಛಂದಸಾಮದಧುರಿಂದ್ರಂ ದೇವತಾನಾಂ ತೇನ ತತ್ಸಮಾವದ್ವೀರ್ಯಮಭವತ್ಪೂರ್ವೇಣ ಸವನೇನೋಭಾಭ್ಯಾಂ ಸವನಾಭ್ಯಾಂ ಸಮಾವದ್ವೀರ್ಯಾಭ್ಯಾಂ ಸಮಾವಜ್ಜಾಮಿಭ್ಯಾಂ ರಾಧ್ನೋತಿ ಯ ಏವಂ ವೇದಾಥ ಯನ್ಮುಖೇನ ಸಮಗೃಭ್ಣಾತ್ತತ್ತೃತೀಯಸವನಮಭವತ್ ।**

(ಐ ಬ್ರಾ ೧೩–೨೬)

ಸೋಮಲತೆಗಳನ್ನು ತರುವಾಗ ಶ್ಯೇನಪಕ್ಷಿಯು ತನ್ನ ಎರಡು ಕಾಲುಗಳಿಂದಲೂ, ಕೊಕ್ಕಿನಿಂದಲೂ ಕಚ್ಚಿಕೊಂಡು ತರುತ್ತಿದ್ದಿತು ಪಕ್ಷಿಯು ತನ್ನ ಬಲಗಾಲಿನಿಂದ ಹಿಡಿದುಕೊಂಡು ತಂದ ಸೋಮವು ( ಅಥವಾ ಸೋಮಲತೆಯು) ಪ್ರಾತಃಸವನವಾಯಿತು ಗಾಯತ್ರಿಯು ಅದನ್ನು ಎಂದರೆ ಪ್ರಾತಸ್ಸವನವನ್ನು ತನ್ನ ಸ್ವಕೀಯ

ಸ್ಥಾನವನ್ನಾಗಿ ಮಾಡಿಕೊಂಡಿತು. ಆದ್ದರಿಂದ ಸಮಸ್ತ ಸವನಗಳಲ್ಲಿಯೂ ಪ್ರಾತಃಸವನವೇ ಸರ್ವಶ್ರೇಷ್ಠವೆಂದು ಯಾಜ್ಞಿಕರ ಅಭಿಮತವು. ಆ ಪ್ರಾತಸ್ಸವನಕರ್ಮದಲ್ಲಿ ಮಂತ್ರಾದಿಗಳ ಪ್ರಯೋಗವೂ ವಿಶೇಷವಾಗಿರುವುದು. ಆದುದರಿಂದ ಈ ವಿಷಯವನ್ನು ಚೆನ್ನಾಗಿ ತಿಳಿದುಕೊಂಡಿರುವ ಪುರುಷನು ತನ್ನ ಸಮಾನರಾದವರ ಮಧ್ಯದಲ್ಲಿ ಶ್ರೇಷ್ಠನೂ ಮುಖ್ಯನೂ ಆಗಿರುವನೆಂದು ಪರಿಗಣಿಸಲ್ಪಡುವನು. ಗಾಯತ್ರಿಯು ಎಡಗಾಲಿನಿಂದ ಹಿಡಿದುಕೊಂಡು ತಂದ ಸೋಮದ ಭಾಗವು ಮಾಧ್ಯಂದಿನಸವನೆಂದು ಪ್ರಸಿದ್ಧವಾಯಿತು. ಎಡಗಾಲಿನಿಂದ ಸೋಮಲತೆಯನ್ನು ಹಿಡಿದುಕೊಂಡು ತರುವಾಗ ಬಲಗಾಲಿಗಿರುವಷ್ಟು ಶಕ್ತಿಯು ಎಡಗಾಲಿಗಿಲ್ಲದಿರುವುದರಿಂದ ಆ ಲತೆಗಳು ಕಾಲಿನಿಂದ ಆಗಾಗ ಸ್ವಲ್ಪ ಸ್ವಲ್ಪ ಜಾರುತ್ತಿದ್ದಿತು. ಈ ಕಾರಣದಿಂದ ಈ ಮಾಧ್ಯಂದಿನಸವನವು ಪ್ರಾತಃ ಸವನದಂತೆ ಶಕ್ತಿಸಾಮರ್ಥ್ಯಗಳಲ್ಲಿ ಸರಿಸಮನಾಗಲಿಲ್ಲ. ಇದನ್ನು ಕಂಡು ದೇವತೆಗಳು ವಿಚಾರ ವಿಮರ್ಶೆಮಾಡಿ ಮಾಧ್ಯಂದಿನಸವನಕರ್ಮದಲ್ಲಿ ಉಪಯೋಗಿಸುವ ಛಂದಸ್ಸುಗಳಿಗಾಗಿ ತ್ರಿಷ್ಟುಪ್ ಛಂದಸ್ಸನ್ನೂ ದೇವತೆಗಳಲ್ಲಿ ಶ್ರೇಷ್ಠನಾದ ಇಂದ್ರನನ್ನೂ ಸ್ಥಾಪಿಸಿದರು. ದೇವತೆಗಳಲ್ಲಿ ಶ್ರೇಷ್ಠನಾದ ಇಂದ್ರನ ಮತ್ತು ಅವನಿಗೆ ಪ್ರಿಯವಾದ ತ್ರಿಷ್ಟುಪ್ ಛಂದಸ್ಸಿನ ಸಾಹಚರ್ಯದಿಂದ ಮಾಧ್ಯಂದಿನಸವನವು ಶಕ್ತಿಸಾಮರ್ಥ್ಯಗಳಲ್ಲಿಯೂ, ಶ್ರೇಷ್ಠತೆಯಲ್ಲಿ ಯೂ ಪ್ರಾತಸ್ಸವನಕ್ಕೆ ಸರಿಸಮನಾದ ಸ್ಥಾನವನ್ನು ಪಡೆಯಿತು ಪ್ರಾತಃ ಸವನ ಮತ್ತು ಮಾಧ್ಯಂದಿನಸವನಗಳ ಈ ವಿಧವಾದ ಸರಿಸಮಾನತೆಯನ್ನೂ, ಶಕ್ತಿಸಾಮರ್ಥ್ಯಗಳನ್ನೂ, ಶ್ರೇಷ್ಠತೆಯನ್ನೂ ತಿಳಿದಿರುವ ಪುರುಷನು ಧನಾದಿಗಳಲ್ಲಿ ಸಮೃದ್ಧಿಯನ್ನೂ, ಶ್ರೇಯಸ್ಸನ್ನೂ ಪಡೆದು ಸುಖಿಸುವನು ಬಳಿಕ ಶ್ಯೇನರೂಪ ದಿಂದಿದ್ದ ಆ ಗಾಯತ್ರಿಯು ತನ್ನ ಕೊಕ್ಕಿನಿಂದ ಕಚ್ಚಿತಂದ ಸೋಮದ ಭಾಗವು ತೃತೀಯಸವನವೆಂದು ಪ್ರಸಿದ್ಧವಾಯಿತು.

**ತಸ್ಯ ಪತಂತೀ ರಸಮಧಯತ್ತದ್ವೀತರಸಂ ನಾನ್ವಾಪ್ನೋತ್ಪೂರ್ವೇ ಸವನೇ ತೇ ದೇವಾಃ ಪ್ರಾಜಿಜ್ಞಾಸಂತ ತತ್ಪಶುಷ್ವಪಶ್ಯಂಸ್ತದ್ಯದಾಶಿರಮವನಯಂತ್ಯಾಜ್ಯೇನ ಪಶುನಾ ಚರಂತಿ ತೇನ ತತ್ಸಮಾವದ್ವೀರ್ಯಮಭವತ್ಪೂರ್ವಾಭ್ಯಾಂ ಸವನಾಭ್ಯಾಂ ಸರ್ವೈಃ ಸವನೈಃ ಸಮಾವದ್ವೀ-ರ್ಯೈಃ ಸಮಾವಚ್ಛ್ರೀಮಿಭೀ ರಾಧ್ನೋತಿ ಯ ಏವಂ ವೇದ** ||

(ಐ. ಬ್ರಾ. ೧೩–೭)

ಗಾಯತ್ರಿಯು (ಶ್ಯೇನವು) ತನ್ನ ಕೊಕ್ಕಿನಿಂದ ಸೋಮಲತೆಯನ್ನು ಕಚ್ಚಿಕೊಂಡು ಬರುತ್ತಿರುವಾಗ ಆ ಲತೆಯಲ್ಲಿದ್ದ ರಸವನ್ನು ಸ್ವಲ್ಪ ಸ್ವಲ್ಪವಾಗಿ ಹೀರಿ ಕುಡಿಯುತ್ತಿದ್ದಿತು. ಆದ್ದರಿಂದ ಎಂದರೆ ಕೊಕ್ಕಿನಿಂದ ತಂದ ಸೋಮಲತೆಗಳಲ್ಲಿ ರಸವು ಹೆಚ್ಚಾಗಿಲ್ಲದೆ ಕಮ್ಮಿಯಾಗಿದ್ದುದರಿಂದ ಈ ತೃತೀಯಸವನವು ಶಕ್ತಿಸಾಮರ್ಥ್ಯಾದಿಗಳಲ್ಲಿ ಪ್ರಾತಃಸವನ ಮಾಧ್ಯಂದಿನಸವನಗಳಿಗೆ ಸರಿಸಮನಾಗಲಿಲ್ಲ. ಆದ್ದರಿಂದ ಈ ವಿಷಯವನ್ನು ಕಂಡ ದೇವತೆಗಳು ವಿಚಾರಮಾಡಿ ಇದಕ್ಕೆ ತಕ್ಕ ಸಾಧನೋಪಾಯವು ಪಶುಗಳಲ್ಲಿರುವುದೆಂದು ಕಂಡುಕೊಂಡರು. ಪಶುಗಳಲ್ಲಿ ಹಾಲು, ಅದರಿಂದ ಲಬ್ಧವಾಗುವ ಆಜ್ಯ (ತುಪ್ಪ) ಮೊದಲಾದ ಹವಿರ್ದ್ರವ್ಯಗಳು ದೊರಕುವವು. ಕ್ಷೀರವನ್ನು ಅಥವಾ ಹಾಲನ್ನು ಲತೆ ಗಳಲ್ಲಿ ಕಮ್ಮಿಯಾಗಿರುವ ಸೋಮರಸಕ್ಕೆ ಬೆರಸಿದರೆ ಆ ರಸವು ಶಕ್ತಿಯುತವಾಗುವುದು. ಆಜ್ಯದಿಂದಲೂ, ಪಶುಗಳ ಅವಯವಗಳಿಂದಲೂ ಹೋಮಾದಿಗಳನ್ನು ಮಾಡಿದರೆ ಸವನಕರ್ಮವು ಸಾಂಗವಾಗುವುದು. ಆದುದರಿಂದ ಯಜ್ಞ ಕರ್ಮವನ್ನು ತಿಳಿದವರು ತೃತೀಯಸವನದಲ್ಲಿ ಉಪಯೋಗಿಸುವ ಋಜೀಷಕ್ಕೆ (ಪ್ರಾತಃಸವನ ಮಾಧ್ಯಂದಿನ ಸ ನಗಳಲ್ಲಿ ರಸವನ್ನು ತೆಗೆದ ಬಳಿಕ ಉಳಿದಿರುವ ಸೋಮಲತೆಯ ಸಿಪ್ಪೆಗಳಿಗೆ ಋಜೀಷವೆಂದು ಹೇಳುವರು) ಹಾಲು ಮೊದಲಾದ ಆಶಿರದ್ರವ್ಯಗಳನ್ನು ಸೇರಿಸುವುದರಿಂದ, ಪಶುಗಳಿಂದ ಲಭಿಸತಕ್ಕ ಆಜ್ಯದಿಂದ ಮತ್ತು ಪಶುಗಳ ಹೃದಯಾದ್ಯಂಗಗಳಿಂದ

ಹೋಮಗಳನ್ನು ಮಾಡುವುದರಿಂದಲೂ ತೃತೀಯಸವನಕರ್ಮವು ಪ್ರಾತಸ್ಸವನಮಾಧ್ಯಂದಿನಸವನಗಳಿಗೆ ಶಕ್ತಿ ಸಾಮಾರ್ಥ್ಯಾದಿಗಳಲ್ಲಿ ಸರಿಸಮನಾಗುವುದು ಎಂದು ತಿಳಿದು ಅದರಂತೆ ಆಚರಿಸುವರು. ಈ ವಿಷಯವು ಶಾಖಾಂತರದಲ್ಲಿ ಈ ರೀತಿ ಹೇಳಲ್ಪಟ್ಟಿರುವುದು—

ಬ್ರಹ್ಮವಾದಿನೋ ವದಂತಿ ಕಸ್ಮಾತ್ಸತ್ಯಾದ್ಗಾಯತ್ರೀ ಕನಿಷ್ಠಾ ಛಂದಸಾಗ್ಂ ಸತೀ ಯಜ್ಞಮುಖಂ ಪರೀಯಾಯೇತಿ ಯದೇವಾದಃ ಸೋಮಮಾಹರತ್ತಸ್ಮಾದ್ಯಜ್ಞಮುಖಂ ಪರ್ಯೈತ್ತಸ್ಮಾತ್ತೇಜಸ್ವಿನೀತಮಾ ಪದ್ಭ್ಯಾಂ ದ್ವೇ ಸವನೇ ಸಮಗೃಹ್ಣಾನ್ಮುಖೇನೈಕಂ ಯನ್ಮುಖೇನ ಸಮಗೃಹ್ಣಾತ್ತದಧಯತ್ತಸ್ಮಾದ್ದ್ವೇ ಸವನೇ ಶುಕ್ರವತೀ ಪ್ರಾತಸ್ಸವನಂ ಚ ಮಾಧ್ಯಂದಿನಂ ಚ ತಸ್ಮಾತ್ತೃತೀಯಸವನ ಋಜೀಷಮಭಿಷುಣ್ವಂತಿ ಧೀತಮಿವ ಹಿ ಮನ್ಯಂತೇ ಆಶಿರಮವನಯತಿ ಸಶುಕ್ರತ್ವಾಯ ॥

(ತೈ. ಸಂ ೬-೧-೬-೪)

ಎಂದು ತೈತ್ತಿರೀಯ ಸಂಹಿತೆಯಲ್ಲಿ ಇದೇ ಅಭಿಪ್ರಾಯವು ಉಕ್ತವಾಗಿದೆ. ಈ ವಿಷಯವನ್ನು ಎಂದರೆ ಪ್ರಾತಃಸವನ ಮಾಧ್ಯಂದಿನಸವನ, ತೃತೀಯಸವನಗಳೆಂಬ ಮೂರು ಸವನಗಳೂ ಶಕ್ತಿಸಾಮರ್ಥ್ಯಗಳಲ್ಲಿಯೂ, ಶ್ರೇಷ್ಠತೆಯಲ್ಲಿಯೂ ಸರಿಸಮನಾದ ಸ್ಥಾನವನ್ನು ಪಡೆದಿರುವವು ಎಂಬ ವಿಷಯವನ್ನು ಯಾವ ಪುರುಷನು ತಿಳಿಯುವನೋ ಅವನು ಸರ್ವ ಸಮೃದ್ಧಿಯುಕ್ತನಾಗಿ ಸುಖಿಸುವನು

॥ ಸಂಹಿತಾಪಾಠಃ ॥

ಯತ್ತ್ವಾ ಸೂರ್ಯ ಸ್ವರ್ಭಾನುಸ್ತಮಸಾವಿಧ್ಯದಾಸುರಃ ।
ಅಕ್ಷೇತ್ರವಿದ್ಯಥಾ ಮುಗ್ಧೋ ಭುವನಾನ್ಯದೀಧಯುಃ ॥ ೫ ॥

॥ ಪದಪಾಠಃ ॥

ಯತ್ । ತ್ವಾ । ಸೂರ್ಯ । ಸ್ವಃऽಭಾನುಃ । ತಮಸಾ । ಅವಿಧ್ಯತ್ । ಆಸುರಃ ।
ಅಕ್ಷೇತ್ರऽವಿತ್ । ಯಥಾ । ಮುಗ್ಧಃ । ಭುವನಾನಿ । ಅದೀಧಯುಃ ॥ ೫ ॥

॥ ಸಾಯಣಭಾಷ್ಯಂ ॥

ಇದಮಾದಿಚತುರ್ಭಿರ್ಮಂತ್ರೈರತ್ರೀಣಾಂ ಕರ್ಮ ಕೀರ್ತ್ಯತೇ । ಹೇ ಸೂರ್ಯ ಪ್ರೇರಕ ದೇವ ತ್ವಾ ತ್ವಾಂ ಯದ್ಯದಾಸುರೋऽಸುರಸ್ಯ ಪ್ರಾಣಾಪಹರ್ತುರಸುರ್ಯಾ ವಾ ಪುತ್ರಃ ಸ್ವರ್ಭಾನುಃ ಸ್ವರ್ಭಾನುಸಂಜ್ಞಕಸ್ತಮಸಾ ಮಾಯಾನಿರ್ಮಿತೇನಾವಿಧ್ಯತ್ । ಆವೃಣೋದಿತ್ಯರ್ಥಃ । ತದಾ ಭುವನಾನಿ ಸರ್ವಾಣ್ಯದೀಧಯುಃ । ದೃಶ್ಯಂತೇ । ಯಥಾ ತತ್ರತ್ಯಃ ಸರ್ವೋ ಜನೋऽಕ್ಷೇತ್ರವಿತ್ ಸ್ವಸ್ಥಾನಮಜಾನನ್ ಮುಗ್ಧೋ ಮೂಢೋ ಭವತಿ ತಥಾ ॥

॥ ಪ್ರತಿಪದಾರ್ಥ ॥

**ಸೂರ್ಯ**— ಎಲೈ ಸೂರ್ಯದೇವನೇ । **ತ್ವಾ**— ನಿನ್ನನ್ನು । **ಯತ್**— ಯಾವಾಗ । **ಅಸುರಃ**— ಅಸುರಪುತ್ರನಾದ । **ಸ್ವರ್ಭಾನುಃ**— ಸ್ವರ್ಭಾನುವು । **ತಮಸಾ**— (ತನ್ನ ಮಾಯೆಯಿಂದ ನಿರ್ಮಿಸಿದ) ಅಂಧಕಾರದಿಂದ । **ಅವಿಧ್ಯತ್**— ಆವರಿಸಿದನೋ (ಆಗ) । **ಭುವನಾನಿ**— ಸಕಲಲೋಕಗಳೂ । **ಯಥಾ**— ಹೇಗೆ । **ಅಕ್ಷೇತ್ರವಿತ್**— ಅಲ್ಲಿಯ ಪ್ರಜೆಗಳಿಗೆಲ್ಲಾ ತಮ್ಮ ತಮ್ಮ ನಿವಾಸಗಳ ಜ್ಞಾನವೇ ಇಲ್ಲದಂತೆಯೂ । **ಮುಗ್ಧಃ**— ಮೂಢರಾಗಿರುವಂತೆಯೂ ಆಗುವುದೂ (ಹಾಗೆ) । **ಅಧೀಧಯುಃ**— ಕಾಣಿಸಿಕೊಂಡವು.

॥ ಭಾವಾರ್ಥ ॥

ಎಲೈ ಸೂರ್ಯನೇ, ಅಸುರಪುತ್ರನಾದ ಸ್ವರ್ಭಾನುವು ತನ್ನ ಮಾಯಾನಿರ್ಮಿತವಾದ ಅಂಧಕಾರದಿಂದ ಯಾವಾಗ ನಿನ್ನನ್ನು ಆವರಿಸಿದನೋ ಆಗ ಸಕಲಲೋಕಗಳೂ ಬೆದರಿದವು. ಅಲ್ಲಿಯ ಸಕಲ ನಿವಾಸಿಗಳೂ ತಮ್ಮ ತಮ್ಮ ನಿವಾಸಗಳನ್ನೇ ಅರಿಯದೇ ಮೂಢರಾದಂತಾದರು.

## English Translation

When, Surya, the son of the Asura Swarbhanu, overspread you with darkness, the worlds were beheld like one bewildered, knowing not his place.

॥ ವಿಶೇಷವಿಷಯಗಳು ॥

**ಸ್ವರ್ಭಾನುಃ**— ಇವನು ಅಸುರಸ್ವಭಾವದ ವ್ಯಕ್ತಿಯು. ಇವನು ತನ್ನ ಮಾಯೆಯಿಂದ ಸೂರ್ಯನನ್ನು ತಮಸ್ಸಿನಿಂದ (ಕತ್ತಲೆಯಿಂದ) ಮರೆಮಾಡುತ್ತಾನೆ. ಪ್ರಕೃತಸೂಕ್ತದಲ್ಲಿ ಇವನ ಹೆಸರು ೫, ೬, ೮, ೯ ನೇ ಋಕ್ಕುಗಳಲ್ಲಿ ಪ್ರಸಕ್ತವಾಗಿದೆ. ಇವನ ಮಾಯೆಗಳನ್ನೆದುರಿಸಿ ಇಂದ್ರನು ಯುದ್ಧಮಾಡಿರುವ ವಿಷಯವೂ ಅತ್ರಿಯು ಈ ವಿಷಯದಲ್ಲಿ ಇಂದ್ರನೊಡನೆ ಸಹಕರಿಸಿ ಸೂರ್ಯನ ನೇತ್ರವನ್ನು (ಪ್ರಕಾಶವನ್ನು) ಅಂತರಿಕ್ಷದಲ್ಲಿ ಪುನಃ ಸ್ಥಾಪಿಸಿದ ವಿಷಯವೂ ಈ ನಾಲ್ಕು ಋಕ್ಕುಗಳಲ್ಲಿ ಉಕ್ತವಾಗಿದೆ. ಬ್ರಾಹ್ಮಣಗಳಲ್ಲಿಯೂ ಈ ಅಸುರನ ಪ್ರಸ್ತಾಪವು ಅನೇಕ ಕಡೆ ಇದೆ ಪುರಾಣಾದಿಗಳಲ್ಲಿ ಇವನನ್ನು ರಾಹುವೆಂದು ಕರೆದಿದಾರೆ.

ಸ್ವರ್ಭಾನುವು ಅತ್ಯಂತ ಶಕ್ತಿಯುತನಾದ ಅಸುರನೆಂದು ಸಂಹಿತಾ ಮತ್ತು ಬ್ರಾಹ್ಮಣಾದಿಗಳಲ್ಲೆಲ್ಲಾ ವರ್ಣಿತನಾಗಿದ್ದಾನೆ ಲೌಕಿಕವ್ಯವಹಾರಗಳಲ್ಲಿ ಇವನೇ ರಾಹುವೆಂದು ಪ್ರಸಿದ್ಧನಾಗಿದ್ದಾನೆ. ಸಂಹಿತೆಯಲ್ಲಿ ಇವನಿಗೆ **ರಾಹು**ವೆಂಬ ಹೆಸರು ರೂಢಿಯಲ್ಲಿಲ್ಲ. ಆದರೆ **ತಮಸ್ತು ರಾಹುಸ್ಸ್ವರ್ಭಾನುಃ ಸೈಂಹಿಕೇಯೋ ವಿಧುಂತುದಃ** ಎಂದು ಅಮರಕೋಶದಲ್ಲಿ ವರ್ಣಿತವಾಗಿರುವ ಸ್ವರೂಪವೆಲ್ಲವೂ ಇವನಲ್ಲಿರುತ್ತದೆಯಾದುದರಿಂದ ಮುಂದೆ ಪುರಾಣಾದಿಗಳಲ್ಲಿ **ರಾಹುವೆಂದು** ಪ್ರಸಿದ್ಧನಾಗಿರುವ ಅಸುರನೇ ಈ ಸ್ವರ್ಭಾನುವೆಂದು ಹೇಳಬಹುದು. ಆದರೆ, ಪುರಾಣಾದಿಗಳಲ್ಲಿ **ರಾಹುವೆಂದರೆ**, ಅಸುರಶಿರಸ್ಸು ಎಂಬುದು ಮಾತ್ರ ಪ್ರಸಿದ್ಧವೆಂದೂ ತಿಳಿಯಬೇಕು ಸಾಯಣರು,

**ಯತ್ತ್ವಾ ಸೂರ್ಯ ಸ್ವರ್ಭಾನುಸ್ತಮಸಾವಿಧ್ಯದಾಸುರಃ** । (ಋ. ಸಂ. ೫-೪೦-೫) ಎಂಬ ಋಕ್ಕನ್ನು ವಿವರಿಸುವಾಗ, **ಅಸುರಃ ಅಸುರಸ್ಯ ಪ್ರಾಣಾಪಹರ್ತುರಸುರ್ಯಾ ವಾ ಪುತ್ರಃ । ಸ್ವರ್ಭಾನುಃ ಸ್ವರ್ಭಾನುಸಂಜ್ಞಕಃ** । ಅಸುರಪುತ್ರನೂ, ಸ್ವರ್ಭಾನುವೆಂಬ ಸಂಜ್ಞೆಯುಳ್ಳವನೂ ಆದ ಅಸುರವ್ಯಕ್ತಿಯೆಂದು ತಿಳಿಸಿದ್ದಾರೆ. ಕೇವಲ ಅಸುರನುಖವೆಂಬ ಅರ್ಥವು ತಿಳಿಸಲ್ಪಟ್ಟಿಲ್ಲ.

ಋಕ್ಸಂಹಿತೆಯಲ್ಲಿ ಸ್ವರ್ಭಾನುವಿನ ವಿಷಯವು ಪ್ರಕೃತ ಸನ್ನಿವೇಶದಲ್ಲಿ ಮಾತ್ರ ವರ್ಣಿತವಾಗಿದೆ. ಅದೂ ಸಹ ಅತ್ರಿಋಷಿಯ ಪ್ರಭಾವವನ್ನು ತಿಳಿಸುವ ಸನ್ನಿವೇಶ.

**ಯತ್ತ್ವಾ ಸೂರ್ಯ ಸ್ವರ್ಭಾನುಃ** .... (೫-೪೦-೫)
**ಸ್ವರ್ಭಾನೋರಧ ಯದಿಂದ್ರ ಮಾಯಾ** (೫-೪೦-೬)
**ಅತ್ರಿಃ ಸೂರ್ಯಸ್ಯ ದಿವಿ ಚಕ್ಷುರಾಧಾ ಸ್ವರ್ಭಾನೋಃ** .... (೫-೪೦-೮)
**ಯಂ ವೈ ಸೂರ್ಯಂ ಸ್ವರ್ಭಾನುಃ** .... (೫-೪೦-೯)

ಎಂಬ ಈ ನಾಲ್ಕು ಮಂತ್ರಗಳಲ್ಲಿ, ಅತ್ರಿಪ್ರಶಂಸಾಕಾಲದಲ್ಲಿ ಪ್ರಾಸಂಗಿಕವಾಗಿ ಪ್ರಸ್ತಾಪಿಸಲ್ಪಟ್ಟಿದೆ. ಈ ಮಂತ್ರಗಳ ಅರ್ಥವು ಈರೀತಿ ಇರುತ್ತದೆ.

(೫) ಎಲೈ ಸೂರ್ಯನೇ, ಅಸುರಪುತ್ರನಾದ ಸ್ವರ್ಭಾನುವು ತನ್ನ ಕಗ್ಗತ್ತಲೆಯಿಂದ ನಿನ್ನನ್ನು ವ್ಯಾಪಿಸಿ ಮರೆಸಿದಾಗ, ಲೋಕವೆಲ್ಲಾ ನಿನ್ನನ್ನೂ, ನಿನ್ನ ಸ್ಥಾನವನ್ನೂ ಕಾಣದೆ ಪೂರ್ಣವಾಗಿ ಭ್ರಾಂತವಾಯಿತು.

(೬) ಎಲೈ ಇಂದ್ರನೇ, ಸೂರ್ಯನ ಸುತ್ತಲೂ ವ್ಯಾಪಿಸಿದ್ದ ಕಗ್ಗತ್ತಲೆಯನ್ನು ನಾಶಮಾಡುವ ಪ್ರಯತ್ನದಲ್ಲಿ ನೀನು ತೊಡಗಿದ್ದ ಕಾಲದಲ್ಲ, ಅತ್ರಿಋಷಿಯು ತನ್ನ ನಾಲ್ಕನೆಯಮಂತ್ರದ ಸಹಾಯದಿಂದ ಕತ್ತಲಲ್ಲಿ ಮರೆಯಾಗಿದ್ದ ಸೂರ್ಯನನ್ನು ಕಂಡುಹಿಡಿದನು

(೮) ಅನಂತರ ಅತ್ರಿಯು ಸ್ವರ್ಭಾನುವಿನ ಕತ್ತಲುರೂಪವಾದ ಶಕ್ತಿಯನ್ನು ನಾಶಪಡಿಸಿ ಸೂರ್ಯನನ್ನು ಜಗದುಪಕಾರಕ್ಕಾಗಿ ಅಂತರಿಕ್ಷದಲ್ಲಿ ಸ್ಥಾಪಿಸಿದನು.

(೯) ಸ್ವರ್ಭಾನುವಿನಿಂದ ಆವೃತನಾಗಿದ್ದ ಸೂರ್ಯನನ್ನು ಆತ್ರೇಯರು ಅನಂತರ ಕಂಡುಕೊಂಡರು. ಸೂರ್ಯನ ಈ ಬಂಧವಿಮೋಚನೆಗೆ ಅತ್ರಿಗಳಲ್ಲದೇ ಬೇರೆ ಯಾರಿಂದಲೂ ಸಾಧ್ಯವಾಗಲಿಲ್ಲ.

ಇತ್ಯಾದಿಯಾಗಿ ಸ್ವರ್ಭಾನುವಿನ ಶಕ್ತಿಯನ್ನು ವರ್ಣಿಸಿದೆ. ಎಂದರೆ, ಜಗಚ್ಚಕ್ಷುವಾದ ಸೂರ್ಯನನ್ನು ಮರೆಸಿ ಜಗದ್ವ್ಯವಹಾರಕ್ಕೆ ಪ್ರತಿಬಂಧಕವನ್ನುಂಟುಮಾಡುವ ಅಸುರಶಕ್ತಿಯುಳ್ಳವನಾಗಿದ್ದನೆಂದು ತಿಳಿಯುತ್ತದೆ. ಇದೇ ಅಂಶವನ್ನು ಬೃಹದ್ದೇವತೆಯಲ್ಲಿ ತಿಳಿಸುತ್ತಾ—

**ಸ್ವರ್ಭಾನುದ್ವೃಷ್ಟಂ ಸೂರ್ಯಸ್ಯ ಅಪಹತ್ಯ ತತೋಽತ್ರಯಃ ।**
**ಸಪ್ತವಿಂಶತಿಭಿಃ ಸೂಕ್ತೈರಬೋಧೀತ್ಯಗ್ನಿಮಸ್ತುವನ್ ॥**

(ಬೃ. ದೇ. ೫-೧೨)

ಅತ್ರಿಗಳು ಸ್ವರ್ಭಾನುವಿನಿಂದ ಗ್ರಸ್ತನಾಗಿದ್ದ ಸೂರ್ಯನನ್ನು ಕತ್ತಲಿನಿಂದ ಬಿಡಿಸಿ ಅನಂತರ ಸೂರ್ಯಪ್ರಕಾಶವಾದನಂತರ ಅಗ್ನಿಯನು ಸ್ತುತಿಸಿದರು ಎಂದಿದೆ. ಇದೇ ಸ್ವರ್ಭಾನುವಿನ ವಿಷಯವನ್ನು ಕೌಷೀತಕೀಬ್ರಾಹ್ಮಣದಲ್ಲಿ ಕಥಾರೂಪವಾಗಿ ತಿಳಿಸುತ್ತಾ ಕೆಳಗೆ ಕಂಡಂತೆ ವಿವರಿಸಿದೆ

ಸ್ವರ್ಭಾನುವೆಂಬ ಅಸುರನು ಸೂರ್ಯನನ್ನು ಕತ್ತಲಿನಿಂದ ಮುಚ್ಚಿದನು. ದೇವತೆಗಳ ಪ್ರಾರ್ಥನೆಯಂತೆ ಅತ್ರಿಗಳು ಈ ಕತ್ತಲೆಯಿಂದ ಸೂರ್ಯನನ್ನು ಬಿಡಿಸುವುದಾಗಿ ಒಪ್ಪಿದರು. ಆಗ ಅವರು ವಿಷುವತ್ತಿಗೆ ಪೂರ್ವಭಾವಿಯಾಗಿ

ಸಪ್ತದಶಸ್ತೋಮದಿಂದ ಯುಕ್ತವಾದ ತ್ರ್ಯಹಾತ್ಮಕವಾದ ಯಾಗವನ್ನು ನೆರವೇರಿಸಿದರು. ಆಗ ಅಸುರನ ಕತ್ತಲೆಯು ಮುಂಭಾಗದಲ್ಲಿ ಮಾತ್ರ ನಾಶವಾಯಿತು. ಹಿಂಭಾಗದಲ್ಲಿ ನೆಲೆಸಿತು. ಅನಂತರ ವಿಷುವತ್ತಿನ ಊರ್ಧ್ವದಲ್ಲಿ ಪುನಃ ಇದೇ ತ್ರ್ಯಹಾತ್ಮಕವಾದ ಯಾಗವನ್ನು ನೆರವೇರಿಸಿದರು. ಆಗ ಹಿಂಭಾಗದಲ್ಲಿದ್ದ ಕತ್ತಲೂ ಸಹ ನಾಶವಾಯಿತು. ಆದುದರಿಂದ ಈ ವಿಧಿಯನ್ನು ವಿಧ್ಯುಕ್ತವಾಗಿ ಆಚರಿಸುವವರು ಲೋಕದ್ವಯದ ಕತ್ತಲನ್ನೂ ನಾಶಮಾಡಲು ಶಕ್ತರಾಗುತ್ತಾರ ಯಾವ ಮಂತ್ರದ ಪ್ರಭಾವದಿಂದ ಈ ಅಂಧಕಾರದ ನಾಶವಾಗುವುದೋ ಅದನ್ನು ಸ್ವರಸಾಮವೆಂದು ಕರೆಯುತ್ತಾರೆ. ಈ ಸ್ವರಸಾಮದ ಸಹಾಯದಿಂದಲೇ ಅತ್ರಿಗಳು ಸ್ವರ್ಭಾನುವಿನ ಶಕ್ತಿಯನ್ನು ನಾಶಮಾಡಲು ಶಕ್ತರಾದರು. (ಕೌ. ಬ್ರಾ. ೨೪.೩)

ಇದೇ ವಿಷಯವನ್ನು ತೈತ್ತಿರೀಯಸಂಹಿತೆಯಲ್ಲಿ ಕೊಂಚ ವ್ಯತ್ಯಸ್ತವಾಗಿ ತಿಳಿಸಿದೆ.

**ಸ್ವರ್ಭಾನುರಾಸುರಸ್ಸೂರ್ಯಂ ತಮಸಾವಿಧ್ಯತ್ತಸ್ಮೈ ದೇವಾಃ ಪ್ರಾಯಶ್ಚಿತ್ತಿಮೈಚ್ಛನ್ತಸ್ಯ ಯತ್ಪ್ರಥಮಂ ತಮೋಽಪಾಘ್ನನ್ತ್ಸಾ ಕೃಷ್ಣಾವಿರಭವದ್ಯದ್ದ್ವಿತೀಯಗ್ಂ ಸಾ ಫಲ್ಗುನೀ ಯತ್ತೃತೀಯಗ್ಂ ಸಾ ವಲಕ್ಷೀ ಯದಧ್ಯಸ್ಥಾದಪಾಕೃಂತನ್ತ್ಸಾವಿರ್ವಶಾ ಸಮಭವತ್ತೇ ದೇವಾ ಅಬ್ರುವನ್ದೇವ-ಪಶುರ್ವಾ ಅಯಗ್ಂ ಸಮಭೂತ್ಕಸ್ಮಾ ಇಮಮಾ ಲಪ್ಸ್ಯಾಮಹಾ ಇತ್ಯಥ ವೈ ತರ್ಹ್ಯಲ್ಪಾ ಪೃಥಿವ್ಯಾಸೀತ್ ॥**

**(ತೈ. ಸಂ. ೨-೧-೨-೨)**

ಸ್ವರ್ಭಾನುವೆಂಬ ಅಸುರನು ಸೂರ್ಯನನ್ನು ಕತ್ತಲಿನಿಂದ ಮುಚ್ಚಿದನು. ಆಗ ದೇವತೆಗಳು ಸೂರ್ಯನ ಬಿಡುಗಡೆಗೆ ಆಶಿಸಿದರು. ಆ ಪ್ರಯತ್ನದಲ್ಲಿ ಅವರು ಕತ್ತಲಿನ ಕೊಂಚ ಭಾಗವನ್ನು ಛೇದಮಾಡಿದರು. ಅದು ಕರಿಬಣ್ಣದ ಮೇಘರೂಪದಲ್ಲಿ ಪರಿಣಮಿಸಿತು. ಎರಡನೆಯ ಭಾಗವು ಶುಭ್ರವರ್ಣವುಳ್ಳದ್ದಾಯಿತು. ಮೂರನೆಯ ಭಾಗವು ಬಿಳಿಬಣ್ಣವುಳ್ಳದ್ದಾಯಿತು. ಕತ್ತಲಿನ ಮೇಲ್ಭಾಗದ ಪ್ರದೇಶವನ್ನು ಛೇದಿಸಿದಾಗ ಅದು ವಂಧ್ಯೆಯಾಗಿ ಪರಿಣಮಿಸಿತು. ಆಗ ದೇವತೆಗಳು ಅದನ್ನು ನೋಡಿ "ಇಲ್ಲೊಂದು ದೇವಪಶುವಿನ ನಿರ್ಮಾಣವಾಗಿದೆ ಈ ಪಶುವನ್ನು ಯಾರನ್ನುದ್ದೇಶಿಸಿ ಅರ್ಪಿಸಬೇಕು" ಎಂದು ಸಂಶಯಾವಿಷ್ಟರಾದರು. ಆಗ ಪೃಥ್ವಿಯು ಅತ್ಯಲ್ಪವಾಗಿದ್ದು ಸಸ್ಯಾದಿಗಳೂ ಸಹ ಇನ್ನೂ ಉತ್ಪನ್ನವಾಗದೇ ಇದ್ದುದರಿಂದ ಅದನ್ನು ಆದಿತ್ಯರಿಗೆ ಅರ್ಪಿಸಿದರು ಎಂದು ವರ್ಣಿತವಾಗಿದೆ. ಹೀಗೆ ಕಥಾಸಂದರ್ಭವು ಒಂದೇ ಆದರೂ ಸಹ, ವಿವರಣೆಯಲ್ಲಿ ವ್ಯತ್ಯಾಸಗಳಿರುತ್ತದೆ. ಇದೇ ಸನ್ನಿವೇಶವು ಶತಪಥಬ್ರಾಹ್ಮಣದಲ್ಲಿ ವರ್ಣಿತವಾಗಿದ್ದರೂ ಸಹ, ಅಲ್ಲಿರುವ ವಿವರಣೆಯೇ ಬೇರೆಯಾಗಿದೆ. ಹೇಗೆಂದರೆ—

**ಸ್ವರ್ಭಾನುರ್ಹವಾ ಅಸುರಃ । ಸೂರ್ಯಂ ತಮಸಾ ವಿವ್ಯಾಧ ಸ ತಮಸಾ ವಿದ್ಧೋ ನ ವ್ಯರೋಚತ ತಸ್ಯ ಸೋಮಾರುದ್ರಾವೇವೈತತ್ತಮೋಽಪಾಹತಾಗ್ಂ ಸ ಏಷೋಽಪಹತಪಾಪ್ಮಾ ತಪತಿ ॥**

**(ಶ. ಬ್ರಾ. ೫-೩-೨-೨)**

ಎಂದಿಲ್ಲಿ ಸೂರ್ಯನು ಸ್ವರ್ಭಾನುವಿನ ಕತ್ತಲಿನಿಂದ ಆವೃತನಾಗಿದ್ದಾಗ ಸೋಮಾರುದ್ರರು ಅವನನ್ನು ಕತ್ತಲಿನಿಂದ ಬಿಡಿಸಿದರು ಎಂದಿರುತ್ತದೆ. ಹೀಗೆ ಕೌಷೀತಕೀಬ್ರಾಹ್ಮಣದಲ್ಲಿ ಋಷಿಯ ಪ್ರಭಾವದಿಂದ ಸೂರ್ಯನ ಮುಕ್ತಿಯಾಯಿತೆಂದೂ ತೈತ್ತಿರೀಯಸಂಹಿತೆಯಲ್ಲಿ ದೇವತೆಗಳ ಪ್ರಯತ್ನದಿಂದಲೇ ನಡೆಯಿತೆಂದೂ ಮತ್ತು ಶತಪಥದಲ್ಲಿ ಸೋಮಾರುದ್ರರ ಪ್ರಭಾವದಿಂದ ಸೂರ್ಯನ ಮುಕ್ತಿಯಾಯಿತೆಂದೂ ತಿಳಿಸಿದೆ. ಹೀಗೆ ಸೂರ್ಯನ ಮುಕ್ತಿಯ ಕ್ರಮದ ವಿವರಣೆಯಲ್ಲಿ

ವ್ಯತ್ಯಾಸಗಳಿದ್ದರೂ ಸಹ ಸ್ವರ್ಭಾನುವಿನ ಶಕ್ತಿಯ ವಿಷಯದಲ್ಲೂ, ಅವನಿಂದ ಲೋಕವ್ಯವಹಾರಕ್ಕೇ ಉಂಟಾದ ಪ್ರತಿಬಂಧಕದ ವಿಷಯದಲ್ಲೂ ಒಂದೇ ಅಭಿಪ್ರಾಯವಿರುತ್ತದೆ.

ಪುರಾಣಾದಿಗಳಲ್ಲೂ ಮತ್ತು ಜ್ಯೋತಿಶ್ಶಾಸ್ತ್ರದಲ್ಲೂ ಸಹ ಯಾವ ರಾಹುಗ್ರಸ್ತನಾದ ಸೂರ್ಯನ ಮರೆಯನ್ನು ಗ್ರಹಣವೆಂದು ವರ್ಣಿಸಿದೆಯೋ, ಋಕ್ಸಂಹಿತಾದಿಗಳಲ್ಲಿ ಸ್ವರ್ಭಾನುಗ್ರಸ್ತನಾದ ಸೂರ್ಯನ ಮರೆಯೂ ಅದೇ ಗ್ರಹಣವಿಷಯವನ್ನು ತಿಳಿಸುವುದೇ ಎಂಬುದು ಪಂಡಿತರಿಗೆ ಒಂದು ಚರ್ಚಾವಿಷಯವಾಗಿದೆ. ಈ ಅಂಶವನ್ನು ಚರ್ಚಿಸಬೇಕಾದರೆ ಲೌಕಿಕಗ್ರಂಥಗಳಲ್ಲಿ ರಾಹುವಿನ ಸ್ವರೂಪವೇನು? ಈ ರಾಹುವಿನಲ್ಲೂ ಸ್ವರ್ಭಾನುವಿನಲ್ಲಿ ವರ್ಣಿತವಾಗಿರುವ ಅಂಶಗಳೆಲ್ಲವೂ ಇರುತ್ತವೆಯೋ ಎಂಬುದನ್ನು ಮೊದಲು ವಿಮರ್ಶಿಸಬೇಕು. ಪುರಾಣಾದಿಗಳಲ್ಲಿ ಸ್ವರ್ಭಾನುವನ್ನೂ ಮತ್ತು ರಾಹುವನ್ನೂ ಕಶ್ಯಪಪುತ್ರರೆಂದು ತಿಳಿಸಿವೆ. ಆದರೆ ವ್ಯಕ್ತಿಗಳು ಬೇರೆ ಬೇರೆಯೆಂದು ಹೇಳಬೇಕಾಗಬಹುದು.

**ಸ್ವರ್ಭಾನುರಶ್ವೋಽಶ್ವಪತಿರ್ವೃಷಪರ್ವಾಽಜಕಸ್ತಥಾ ।**

(ಮ. ಭಾ. ಆದಿ. ಪ ೬೬-೨೪)

ಎಂಬಲ್ಲಿ ಸ್ವರ್ಭಾನುವೆಂಬ ಅಸುರನು ಕಶ್ಯಪನುನಿಯಿಂದ ದುನುವೆಂಬ ಪತ್ನಿಯಲ್ಲಿ ಜನಿಸಿದನೆಂದೂ, ರಾಹುವೆಂಬುದು ಇವನ ನಾಮಾಂತರವೆಂದೂ ತಿಳಿಯುತ್ತದೆ. ಅಲ್ಲದೇ,

**ಸಿಂಹಿಕಾ ಸುಷುವೇ ಪುತ್ರಂ ರಾಹುಂ ಚಂದ್ರಾರ್ಕಮರ್ದನಂ ।**

(ಆದಿಪರ್ವ ೬೬-೩೧)

ಎಂಬಲ್ಲಿ ರಾಹುವು ಸಿಂಹಿಕಾಪುತ್ರನೆಂದೂ, ಚಂದ್ರ ಮತ್ತು ಸೂರ್ಯರನ್ನು ನುಂಗತಕ್ಕವನೆಂದೂ ತಿಳಿಸಿದೆ. ಹೀಗೆಯೇ ಇನ್ನೂ ಕೆಲವೆಡೆಗಳಲ್ಲಿ ರಾಹು ಮತ್ತ ಸ್ವರ್ಭಾನು ಇವರಿಬ್ಬರೂ ವ್ಯಕ್ತ್ಯಂತರವಲ್ಲವೆಂದೂ ಒಂದೇ ವ್ಯಕ್ತಿಯೆಂದೂ ತಿಳಿಸಿದೆ. ಅಲ್ಲದೇ ಬೃಹದ್ದೇವತೆಯಲ್ಲಿಯೂ ಸಹ,

**ಪ್ರಾಜಾಪತ್ಯೋ ಮರೀಚಿರ್ಹಿ ಮಾರೀಚಃ ಕಶ್ಯಪೋ ಮುನಿಃ ।**
**ತಸ್ಯ ದೇವ್ಯೋಽಭವಞ್ಜಾಯಾ ದಾಕ್ಷಾಯಣ್ಯಸ್ತ್ರಯೋದಶ ॥**
**ಅದಿತಿರ್ದಿತಿರ್ದನುಃ ಕಾಲಾ ದನಾಯುಃ ಸಿಂಹಿಕಾ ಮುನಿಃ ।**

(ಬೃ. ದೇ. ೫-೧೪೩, ೪)

ಪ್ರಜಾಪತಿಗೆ ಮರೀಚಿಯೆಂಬ ಪುತ್ರನೂ ಮರೀಚಿಗೆ ಕಶ್ಯಪನೆಂಬ ಪುತ್ರನೂ ಇದ್ದರು. ಕಶ್ಯಪನಿಗೆ ದಕ್ಷಪುತ್ರಿಯರಾದ ಹದಿಮೂರು ಜನ ದಿವ್ಯಸ್ತ್ರೀಯರೂ ಪತ್ನಿಯರಾಗಿದ್ದರು. ಅದಿತಿ, ದಿತಿ ದನು, ಕಾಲ, ದನಾಯು, ಸಿಂಹಿಕಾ ಇತ್ಯಾದಿ. ಹೀಗೆ, ವೈದಿಕವಾಕ್ಯಗಳಲ್ಲಿ ವಿಸ್ತೃತವಾಗಿರುವುದಕ್ಕೂ ಪುರಾಣಾದಿಗಳಲ್ಲಿ ವಿಸ್ತೃತವಾಗಿರುವುದಕ್ಕೂ ಅಧಿಕವಾದ ವ್ಯತ್ಯಾಸವಿರುವುದಿಲ್ಲ. ಆದುದರಿಂದ, ಯಾವ ರಾಹುಗ್ರಸ್ತನಾದ ಸೂರ್ಯನ ಅವಸ್ಥೆಯು ಸೂರ್ಯಗ್ರಹಣವೆಂದು ವರ್ಣಿತವಾಗಿದೆಯೋ, ಅದನ್ನೇ ಸ್ವರ್ಭಾನುಗ್ರಸ್ತವೆಂದು ವೈದಿಕ ವಾಕ್ಯಗಳಲ್ಲಿ ವರ್ಣಿಸಲ್ಪಟ್ಟಿದೆಯೆಂದು ಹೇಳಬಹುದೇ ಎಂಬ ಪ್ರಶ್ನೆಗೆ ಉತ್ತರವನ್ನು ಹೇಳಲು ಕೆಲವು ವೈದಿಕವಾಕ್ಯಗಳನ್ನೇ ಆಧಾರವಾಗಿಟ್ಟುಕೊಂಡು ವಿಮರ್ಶಿಸಬೇಕಾಗುತ್ತದೆ ಪ್ರಕೃತದಲ್ಲಿ ಸೂರ್ಯಗ್ರಹಣದ ವಿಷಯವು ಸ್ಪಷ್ಟವಾಗಿ ಉಕ್ತವಾಗಿದೆಯೋ, ಅದರ ನಿಷ್ಕೃಷ್ಟವಾದ ವಿವರಣೆಯಿರುತ್ತದೆಯೋ ಎಂಬ ವಿಷಯವನ್ನು ತಿಳಿಯಲು ಕೆಲವು ವಾಕ್ಯಗಳನ್ನು ಪರಿಶೀಲಿಸಬೇಕಾಗುತ್ತದೆ.

**ಸಾ ಮಾ ಸತ್ಯೋಕ್ತಿಃ ಪರಿ ಪಾತು ವಿಶ್ವತೋ ದ್ಯಾವಾ ಚ ಯತ್ರ ತತನನ್ನಹಾನಿ ಚ ।**
**ವಿಶ್ವಮನ್ಯನ್ನಿ ವಿಶತೇ ಯದೇಜತಿ ವಿಶ್ವಹಾಪೋ ವಿಶ್ವಾಹೋದೇತಿ ಸೂರ್ಯಃ ॥**

(ಋ. ಸಂ. ೧೦-೩೭-೨)

ಯಾವ ಸತ್ಯದಿಂದ ದ್ಯಾವಾಪೃಥಿವಿಗಳ ವಿಸ್ತೃತಿಯುಂಟಾಗುತ್ತದೆಯೋ, ಯಾವ ಸತ್ಯದಿಂದ ರಾತ್ರಿಹಗಲುಗಳ ಪರಿಭ್ರಮಣವುಂಟಾಗುತ್ತದೆಯೋ, ಆ ಸತ್ಯವು ನನ್ನನ್ನು ರಕ್ಷಿಸಲಿ. ಆ ಸತ್ಯದ ಪ್ರಭಾವದಿಂದಲೇ, ವಿಶ್ವವ್ಯವಹಾರಗಳೆಲ್ಲವೂ ನಡೆಯುತ್ತದೆ. ಸೂರ್ಯನೂ ಸಹ ತನ್ನ ಪರಿಭ್ರಮಣಾತ್ಮಕವಾದ ದೈನಂದಿನ ಚಲನವನ್ನು ಇಟ್ಟುಕೊಂಡಿರುತ್ತಾನೆ ಎಂಬ ಅರ್ಥವನ್ನು ಕೊಡುವ ಈ ಮಂತ್ರದ ಆಧಾರದ ಮೇಲೆ, ಸೂರ್ಯನು ಭೂಮಿಯ ಸುತ್ತಲೂ ಸುತ್ತುವನೆಂದೂ ಚಂದ್ರನ ಪ್ರತಿಬಂಧಕವುಂಟಾದಾಗ ಸೂರ್ಯಗ್ರಹಣವೆಂದೂ, ಈ ಚಂದ್ರನೇ ಸ್ವರ್ಭಾನುವೆಂದು ವರ್ಣಿತನಾಗಿರುವನೆಂದೂ ಕೆಲವು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ (Ludwig) ಆದರೆ ಈ ಅರ್ಥವು ಮೇಲಿನ ಮಂತ್ರದ ತಾತ್ಪರವನ್ನು ಸರಿಯಾಗಿ ತಿಳಿಸುವುದಿಲ್ಲ. ಅಲ್ಲದೆ, ಮೇಲಿನ ಅಭಿಪ್ರಾಯವನ್ನು ಸಮರ್ಥಿಸುವ ವಾಕ್ಯಗಳೂ ಸಹ ಋಕ್ಸಂಹಿತೆಯಲ್ಲಿರುತ್ತವೆ ಎಂದು ಹೇಳುವ ಸಂಭವವೂ ಇರುತ್ತದೆ. ಉದಾಹರಣೆಗೆ—

**ಅನಾಧೃಷ್ಟಾನಿ ಧೃಷಿತೋ ವ್ಯಾಸ್ಯನ್ನಿಧೀಁರದೇವಾಁ ಅಮೃಣದಯಾಸ್ಯಃ ।**
**ಮಾಸೇವ ಸೂರ್ಯೋ ವಸು ಪುರ್ಯಮಾ ದದೇ ಗೃಣಾನಃ ಶತ್ರೂಁರಶೃಣಾದ್ವಿರುಕ್ಮತಾ ॥**

(ಋ. ಸಂ. ೧೦-೧೩೮-೪)

ಎಂಬ ಮಂತ್ರದಲ್ಲಿ **ಮಾಸ**ಶಬ್ದಕ್ಕೆ **ಚಂದ್ರ**ನೆಂದು ಅರ್ಥಮಾಡಿ ಚಂದ್ರನಿಂದ ಸೂರ್ಯನು ಆವೃತನಾಗಿ ಹಿಡಿಯಲ್ಪಡುವಂತೆ ಅಸುರರ ಧನವು ಇಂದ್ರನಿಂದ ಹಿಡಿಯಲ್ಪಡಲಿ ಎಂಬ ತಾತ್ಪರ್ಯವನ್ನು ತೋರಿಸಿದ್ದಾರೆ.

(Journal of Amrican oriental Society. Vol. 13. p. LXII)

ಆದರೆ ಈ ಅರ್ಥವು ಶುದ್ಧ ತಪ್ಪಾಗುತ್ತದೆ. ಈ ಮಂತ್ರದಲ್ಲಿ ಚಂದ್ರನೆಂಬ ಅರ್ಥಕ್ಕೆ ಅವಕಾಶವೇ ಇಲ್ಲ "ಯಾವ ರೀತಿ ಸೂರ್ಯನು ಭೂಮಿಯ ರಸವನ್ನು ಗ್ರಹಣಮಾಡುವನೋ, ಆ ರೀತಿ" ಎಂಬುದೇ ಈ ಮಂತ್ರದ ತಾತ್ಪರ್ಯ ಆದುದರಿಂದ ಈ ಮಂತ್ರವು ಮೇಲಿನ ಅಭಿಪ್ರಾಯಕ್ಕೆ ಸಹಾಯಕವಾಗುವುದಿಲ್ಲ. ಹೀಗೆಯೇ ಇನ್ನೂ ಅನೇಕ ಮಂತ್ರಗಳಿಗೆ ತಪ್ಪರ್ಥಗಳನ್ನು ಹೇಳಿ ವಿಮರ್ಶಿಸಿದ್ದಾರೆ ಆದರೆ ಅವೆಲ್ಲವನ್ನೂ ಉದಾಹರಿಸುವುದು ಅಪ್ರಕೃತವಾಗುತ್ತದೆ

ಪ್ರಕೃತದಲ್ಲಿ ಸೂರ್ಯಭ್ರಮಣವು ಚಂದ್ರನಿಂದ ಪ್ರತಿಬಂಧಿತವಾಗುತ್ತದೆ ಎಂಬುದಕ್ಕೆ ಯಾವ ಆಧಾರವೂ ಇಲ್ಲ ಸ್ವರ್ಭಾನುವೆಂದರೆ ರಾಹುವೆಂದೇ ಅರ್ಥಮಾಡಬೇಕು, ರಾಹುವು ಸೂರ್ಯ ಮತ್ತು ಚಂದ್ರ ಇಬ್ಬರ ಗ್ರಹಣಕ್ಕೂ ಕಾರಣನಾಗಿರುತ್ತಾನೆ **ರಹತಿ ಗೃಹೀತ್ವಾ ತ್ಯಜತಿ ಚಂದ್ರಾರ್ಕೌ (ರಹ ತ್ಯಾಗೇ)** ಚಂದ್ರ ಮತ್ತು ಸೂರ್ಯರನ್ನು **ಮೊದಲು ಹಿಡಿದು** ಅನಂತರ ಅವರನ್ನು ಬಿಡುತ್ತಾನಾದುದರಿಂದ ರಾಹುವೆಂದು ಹೆಸರು, **ಸ್ವಃ ಆಕಾಶೇ ವಿಪರೀತ-ಲಕ್ಷಣಯಾ ಭಾತಿ ।** ಸೂರ್ಯ ಮತ್ತು ಚಂದ್ರ ಇವರಿಬ್ಬರಿಗಿಂತಲೂ ವ್ಯತ್ಯಸ್ತವಾಗಿ ಪ್ರಕಾಶಿಸುವುದರಿಂದ **ಸ್ವರ್ಭಾನು**ವೆಂದು ಹೆಸರು. ಇಂತಹ ಸ್ವರ್ಭಾನುವಿನಿಂದ ಸಂಭವಿಸಿದ ಗ್ರಹಣವನ್ನು ಅತ್ರಿಮಹರ್ಷಿಯ ತುರೀಯಮಂತ್ರವು ಮಾತ್ರ ಬಿಡಿಸಲು ಸಮರ್ಥವಾಯಿತು ಎಂದು ಪ್ರಕೃತಸೂಕ್ತದಲ್ಲಿ ಪ್ರಶಂಸಿಸಿದೆ.

॥ ಸಂಹಿತಾಪಾಠಃ ॥

ಸ್ವರ್ಭಾನೋರಧ ಯದಿಂದ್ರ ಮಾಯಾ ಅವೋ ದಿವೋ ವರ್ತಮಾನಾ ಅವಾಹನ್।
ಗೂಳ್ಹಂ ಸೂರ್ಯಂ ತಮಸಾಪವ್ರತೇನ ತುರೀಯೇಣ ಬ್ರಹ್ಮಣಾವಿಂದ-
ದತ್ರಿಃ ॥ ೬ ॥

॥ ಪದಪಾಠಃ ॥

ಸ್ವಃऽಭಾನೋಃ। ಅಧ। ಯತ್। ಇಂದ್ರ। ಮಾಯಾಃ। ಅವಃ। ದಿವಃ। ವರ್ತಮಾನಾಃ। ಅವऽಅಹನ್। ಗೂಳ್ಹಂ। ಸೂರ್ಯಂ। ತಮಸಾ। ಅಪऽವ್ರತೇನ। ತುರೀಯೇಣ। ಬ್ರಹ್ಮಣಾ। ಅವಿಂದತ್। ಅತ್ರಿಃ॥

॥ ಸಾಯಣಭಾಷ್ಯಂ ॥

ಅಧಾಥ ಜಗನ್ಮಾಡ್ಯಾನಂತರಂ ಸ್ವರ್ಭಾನೋರಸುರಸ್ಯ ಯಾಃ ಯಾ ಮಾಯಾಃ ಸಂತಿ। ಕೀದೃಶ್ಯಸ್ತಾಃ। ದಿವಃ ದ್ಯೋತಮಾನಾದಾದಿತ್ಯಾದವೋऽವಸ್ತಾದ್ವರ್ತಮಾನಾಃ। ತಮಪರಿತಿರೋಧಾನಾಸಾಮರ್ಥ್ಯಾದಿತಿ ಭಾವಃ। ಹೇ ಇಂದ್ರ ತಾಃ ಸರ್ವಾ ಅವಾಹನ್। ಅವಹಂಸಿ। ಅಥಾತ್ರೇರೇವ ಪರೋಕ್ಷವಾದ। ತಮಸಾಂಧಕಾರೇಣಾಪವ್ರತೇನಾಪಗತಕರ್ಮಣಾ ಗೂಳ್ಹಂ ಸೂರ್ಯಂ। ಅಂಧಕಾರಸ್ಯಾವರಣರೂಪತ್ವಾದಪವ್ರತತ್ವಂ। ತಥಾವಿಧಂ ತುರೀಯೇಣ ಬ್ರಹ್ಮಣಾ ಗ್ರಾವ್ಣೋ ಬ್ರಹ್ಮೇತ್ಯನೇನಾತ್ರಿರವಿಂದತ್। ಲಬ್ಧವಾನ್ ಆವರಣಾಪಗಮೋಪಾಯಂ ನಿವಾರಣಂ ಶುದ್ಧಂ ವಾ ಸೂರ್ಯಮಿತಿ। ಪೂರ್ವಮಂತ್ರಾಪೇಕ್ಷಯಾಸ್ಯ ತುರೀಯತ್ವಂ। ಏಕೈಕಂ ಮಾಯಾಂಶಮೇಕೈಕೇನ ಮಂತ್ರೇಣಾಪನೋದ್ಯ ಚತುರ್ಥೇನ ಮಂತ್ರೇಣ ನಿಲೀನಂ ತಮೋऽಪ್ಯನುದದಿತ್ಯರ್ಥಃ॥

॥ ಪ್ರತಿಪದಾರ್ಥ ॥

ಅಧ—ಅನಂತರ। ಇಂದ್ರ—ಎಲೈ ಇಂದ್ರನೇ। ದಿವಃ-ಪ್ರಕಾಶಮಾನನಾದ ಆದಿತ್ಯನ। ಅವಃ—ಅಧಃಪ್ರದೇಶದಲ್ಲಿ। ವರ್ತಮಾನಾಃ—(ಮೇಲ್ಭಾಗದ ಸೂರ್ಯನನ್ನು ಮರೆಮಾಡಿ) ಪೂರ್ಣವಾಗಿ ಆವರಿಸಿರುವ। ಸ್ವರ್ಭಾನೋಃ—ಸ್ವರ್ಭಾನುವಿನ। ಯತ್ ಮಾಯಾಃ—ಅಂಧಕಾರಾತ್ಮಕವಾದ ಯಾವ ಮಾಯಾಶಕ್ತಿಗಳಿವೆಯೋ ಅವನ್ನು। ಅವಾಹನ್—ನಾಶಮಾಡಿದೆ। ಅಪವ್ರತೇನ—(ಸೂರ್ಯನ, ಕರ್ಮನಿರೋಧಕವಾದ। ತಮಸಾ—ಕಗ್ಗತ್ತಲೆಯಿಂದ। ಗೂಳ್ಹಂ—ಮುಚ್ಚಲ್ಪಟ್ಟ। ಸೂರ್ಯಂ—ಸೂರ್ಯನನ್ನು। ಅತ್ರಿಃ—ಅತ್ರಿಋಷಿಯು। ತುರಿಯೇಣ-ಬ್ರಹ್ಮಣಾ—ನಾಲ್ಕನೆಯ ಮಂತ್ರಪಠನದಿಂದ। ಅವಿಂದತ್—ಪಡೆದನು

॥ ಭಾವಾರ್ಥ ॥

ಎಲೈ ಇಂದ್ರನೇ, ಪ್ರಕಾಶಮಾನನಾದ ಆದಿತ್ಯನ ಅಧಃಪ್ರದೇಶದಲ್ಲಿ ಮೇಲ್ಭಾಗದ ಸೂರ್ಯನನ್ನು ಮರೆಮಾಡಿ ಪೂರ್ಣವಾಗಿ ಆವರಿಸಿರುವ ಸ್ವರ್ಭಾನುವಿನ ಅಂಧಕಾರಾತ್ಮಕವಾದ ಮಾಯಾಶಕ್ತಿಗಳನ್ನು ನೀನು ನಾಶ

ಮಾಡಿದೊಡನೆಯೇ, ಕರ್ಮನಿರೋಧಕವಾದ ಕಗ್ಗತ್ತಲೆಯಿಂದ ಮುಚ್ಚಲ್ಪಟ್ಟ ಸೂರ್ಯನನ್ನು ಅತ್ರಿಋಷಿಯು ನಾಲ್ಕನೆಯ ಮಂತ್ರದ ಪಠನದಿಂದ ಪಡೆದನು

## English Translation

When Indra, you were dissipating those illusions of Swarbhanu which were spread below the sun, then Atri, by his fourth sacred prayer, discovered the sun concealed by the darkness impeding his functions.

॥ ವಿಶೇಷವಿಷಯಗಳು ॥

**ತುರೀಯೇಣ ಬ್ರಹ್ಮಣಾ**- ನಾಲ್ಕನೆಯ ಸ್ತುತಿಯಿಂದ ಅಥವಾ ಮಂತ್ರಪಠನದಿಂದ, ಈ ಸೂಕ್ತದಲ್ಲಿ ಸ್ವರ್ಭಾನುವಿನ ವಿಷಯವೂ ಅವನು ಸೂರ್ಯನ ತೇಜಸ್ಸನ್ನು ಮರೆಮಾಡಿ ಪ್ರಕಾಶಿಸದಂತೆ ಮಾಡಿದ ವಿಷಯವೂ ಉಕ್ತವಾಗಿದೆ. ಇಂದ್ರನು ಅತ್ರಿಋಷಿಯ ಸಹಾಯದಿಂದ ಈ ಅಸುರನನ್ನು ನಾಶಮಾಡಿ ಅಂಧಕಾರಾವೃತನಾಗಿದ್ದ ಸೂರ್ಯನನ್ನು ಪುನಃ ಪ್ರಕಾಶಮಾನನನ್ನಾಗಿ ಮಾಡಿದನು. ಈ ವಿಷಯವೂ ಈ ಸೂಕ್ತದ ೫, ೬, ೭, ೮ ನೆಯ ಋಕ್ಕುಗಳಲ್ಲಿ ವಿವರಿಸಲಾಗಿದೆ. ಆದುದರಿಂದ **ತುರೀಯೇಣ ಬ್ರಹ್ಮಣಾ**— ನಾಲ್ಕನೆಯ ಮಂತ್ರದಿಂದ ಎಂದರೆ ಇಲ್ಲಿ ನಾಲ್ಕನೆಯ (೫, ೬, ೭, ೮ ನೇ ಋಕ್ಕುಗಳಲ್ಲಿ ನಾಲ್ಕನೆಯದಾದ) **ಗ್ರಾವ್ಣೋ ಬ್ರಹ್ಮಾ** ಎಂಬ ಈ ಸೂಕ್ತದ ೮ ನೆಯ ಋಕ್ಕಿನಿಂದ ಅತ್ರಿಋಷಿಯು ಸೂರ್ಯನ ತೇಜಸ್ಸನ್ನು ಮತ್ತೆ ಪ್ರಕಾಶಪಡಿಸಿದನು ಎಂಬ ಅಭಿಪ್ರಾಯ ಇಲ್ಲಿ ಉಕ್ತವಾಗಿದೆ

---

॥ ಸಂಹಿತಾಪಾಠಃ ॥

ಮಾ ಮಾಮಿಮಂ ತವ ಸಂತಮತ್ರ ಇರಸ್ಯಾ ದ್ರುಗ್ಧೋ ಭಿಯಸಾ ನಿ ಗಾರೀತ್ ।

ತ್ವಂ ಮಿತ್ರೋ ಅಸಿ ಸತ್ಯರಾಧಾಸ್ತೌ ಮೇಹಾವತಂ ವರುಣಶ್ಚ ರಾಜಾ ॥ ೭ ॥

॥ ಪದಪಾಠಃ ॥

ಮಾ । ಮಾಂ । ಇಮಂ । ತವ । ಸಂತಂ । ಅತ್ರೇ । ಇರಸ್ಯಾ । ದ್ರುಗ್ಧಃ । ಭಿಯಸಾ । ನಿ । ಗಾರೀತ್ ।

ತ್ವಂ । ಮಿತ್ರಃ । ಅಸಿ । ಸತ್ಯಽರಾಧಾಃ । ತೌ । ಮಾ । ಇಹ । ಅವತಂ । ವರುಣಃ । ಚ । ರಾಜಾ ॥ ೭ ॥

॥ ಸಾಯಣಭಾಷ್ಯಂ ॥

ಇದಂ ಸೂರ್ಯವಾಕ್ಯಂ । ಹೇ ಅತ್ರೇ ಮಾಮಿಮಮೀದೃಗವಸ್ಥಂ ಮಾಂ ತವ ಸಂತಂ ತವ ಸ್ವಭೂತಮಿರಸ್ಯಾನ್ನೇಚ್ಛಯಾ ದ್ರುಗ್ಧೋ ದ್ರೋಗ್ಧಾಸುರೋ ಭಿಯಸಾ ಭಯಜನಕೇನ ತಮಸಾಂಧ-

**ಕಾರೇಣ ಮಾ ನಿ ಗಾರೀತ್ । ಮಾ ಗಿರತು । ಕಿಂಚ ಹೇ ಮಿತ್ರ ತ್ವಂ ಮಿತ್ರೋಽಸಿ । ಪ್ರಮಿಮಾತೇಃ ಸಕಾಶಾತ್ತ್ರಾತಾ ಭವಸಿ । ಸತ್ಯರಾಧಾಃ ಸತ್ಯಧನಶ್ಚ । ತೌ ರಾಜಾ ವರುಣಶ್ಚ ತ್ವಂ ಚ ತೌ ಯುವಾಂ ಮಾ ಮಾಮಿಹಾವತಂ । ರಕ್ಷತಂ । ಯದ್ವಾ । ಅತ್ರಿರೇವ ಮಿತ್ರ ಉಚ್ಯತೇ । ವರುಣಶ್ಚ ಯುವಾಂ ॥**

॥ ಪ್ರತಿಪದಾರ್ಥ ॥

**ಅತ್ರೇ**—ಎಲೈ ಅತ್ರಿಯೇ । **ತವ ಸಂತಂ**—ನಿನಗೆ ಸೇರಿದವನೂ । **ಇಮಂ ಮಾಂ**—ಅಂಧಕಾರಾವೃತನೂ ಆದ ನನ್ನನ್ನು **ಇರಸ್ಯಾ**—ಅನ್ನಾಪೇಕ್ಷೆಯಿಂದ ಕೂಡಿದವನೂ । **ದ್ರುಗ್ಧಃ**—ವಂಚಕನೂ ಆದ ಅಸುರನು । **ಭಿಯಸಾ**—ಭಯಜನಕವಾದ ಕಗ್ಗತ್ತಲೆಯಿಂದ । **ಮಾ ನಿ ಗಾರೀತ್**—ನುಂಗದಿರಲಿ । **ತ್ವಂ**—ನೀನು । **ಸತ್ಯರಾಧಾಃ**—ಸತ್ಯವೇ ಧನವಾಗಿ ಉಳ್ಳ । **ಮಿತ್ರಃ ಅಸಿ**—ಮಿತ್ರರೂಪನಾಗಿದ್ದೀಯೇ । **ರಾಜಾ**—ಪ್ರಭುವಾದ । **ವರುಣಶ್ಚ**—ವರುಣನೂ ಆಗಿರುವೆ । **ತೌ**—ನೀವಿಬ್ಬರೂ । **ಮಾ**—ನನ್ನನ್ನು । **ಇಹ**—ಈ ಸನ್ನಿವೇಶದಲ್ಲಿ । **ಅವತಂ**—ರಕ್ಷಿಸಿರಿ

॥ ಭಾವಾರ್ಥ ॥

ಎಲೈ ಅತ್ರಿಯೇ, ನಿನಗೆ ಸೇರಿದವನೂ ಅಂಧಕಾರಾವೃತನೂ ಆದ ನನ್ನನ್ನು ಅನ್ನಾಪೇಕ್ಷೆಯಿಂದ ಕೂಡಿದವನೂ ವಂಚಕನೂ ಆದ ಅಸುರನು ಭಯಜನಕವಾದ ಕಗ್ಗತ್ತಲೆಯಿಂದ ನುಂಗದಿರಲಿ ನೀನು ಸತ್ಯಧನನಾದ ಮಿತ್ರರೂಪನಾಗಿದ್ದೀಯೆ. ಪ್ರಭುವಾದ ವರುಣನೂ ನೀನೂ ಸೇರಿಕೊಂಡು ನನ್ನನ್ನು ಈ ಸನ್ನಿವೇಶದಲ್ಲಿ ರಕ್ಷಿಸಿರಿ (ಇದು ಸೂರ್ಯನ ವಾಕ್ಯವು)

English Translation

[Surya speaks]. Let not the violator, Atri through hunger, swallow with fearful (darkness) me who am yours, you are Mitra, whose wealth is truth: you and the royal Varuna both protect me.

॥ ಸಂಹಿತಾಪಾಠಃ ॥

ಗ್ರಾವ್ಣೋ ಬ್ರಹ್ಮಾ ಯುಯುಜಾನಃ ಸಪರ್ಯನ್ ಕೀರಿಣಾ ದೇವಾನ್ನಮ-
ಸೋಪಶಿಕ್ಷನ್ ।

ಅತ್ರಿಃ ಸೂರ್ಯಸ್ಯ ದಿವಿ ಚಕ್ಷುರಾಧಾತ್ಸ್ವರ್ಭಾನೋರಪ ಮಾಯಾ ಅಘು-
ಕ್ಷತ್ ॥ ೮ ॥

॥ ಪದಪಾಠಃ ॥

ಗ್ರಾವ್ಣಃ । ಬ್ರಹ್ಮಾ । ಯುಯುಜಾನಃ । ಸಪರ್ಯನ್ । ಕೀರಿಣಾ । ದೇವಾನ್ । ನಮಸಾ । ಉಪಶಿಕ್ಷನ್ ।

ಅತ್ರಿಃ । ಸೂರ್ಯಸ್ಯ । ದಿವಿ । ಚಕ್ಷುಃ । ಆ । ಅಧಾತ್ । ಸ್ವಃಭಾನೋಃ । ಅಪ । ಮಾಯಾಃ । ಅಘುಕ್ಷತ್ ॥

॥ ಸಾಯಣಭಾಷ್ಯಂ ॥

ಬ್ರಹ್ಮಾ ಬ್ರಾಹ್ಮಣೋಽತ್ರಿರ್ನಾಮಿಹಾವತಮಿತ್ಯುಪಶಿಕ್ಷನ್ ಗ್ರಾವ್ಣೋಽಭಿಷವಸಾಧನಾಯ ಯುಯುಜಾನೋ ಯುಂಜನ್ । ಇದ್ರಾರ್ಥಂ ಸೋಮಮಭಿಷುಣ್ವನ್ನಿತ್ಯರ್ಥಃ । ತಥಾ ಕೀರಿಣಾ । ಕೀರ್ಯತೇ ವಿಕ್ಷಿಪ್ಯತ ಇತಿ ಕೀರಿ ಸ್ತೋತ್ರಂ । ತೇನ ದೇವಾನ್ ಸಪರ್ಯನ್ ಪೂಜಯನ್ನಮಸಾ । ಉಕ್ತೈಃ ಸಾಧನೈಃ ಸೂರ್ಯಸ್ಯ ಸರ್ವಪ್ರೇರಕಸ್ಯ ಚಕ್ಷುಃ ಸರ್ವಸ್ಯ ಖ್ಯಾಪಕಂ ಮಂಡಲಂ ದಿವ್ಯಂತರಿಕ್ಷ ಆಧಾತ್ । ನಿಸ್ತಮಸ್ಕಂ ಕೃತವಾನಿತ್ಯರ್ಥಃ । ತದೇವ ಸ್ಪಷ್ಟಯತಿ । ಸ್ವರ್ಭಾನೋರೇತನ್ನಾಮಕಸ್ಯಾಸುರಸ ಮಾಯಾಃ । ಸ್ವಾಶ್ರಯಮಯಾ ಮೋಹಯಂತೀ ಪರಾಂಸ್ತಥಾ ಕುರ್ವತೀ ಮಾಯೇತ್ಯುಚ್ಯತೇ । ತಾದೃಶೀರ್ಮಾಯಾಃ । ತುರೀಯೇಣ ಬ್ರಹ್ಮಣೇತ್ಯುಕ್ತಂ । ತದೇತದುಕ್ತಂ ಯತ್ತುರೀಯಂ ಬ್ರಹ್ಮ । ತೇನಾತ್ರಿಸಹಾಯ ಇಂದ್ರೋಽಪಾಘುಕ್ಷತ್ । ಅಪಜುಗೋಪ । ನ್ಯವಾರಯದಿತ್ಯರ್ಥಃ । ಅಥವಾ ತೃತೀಯಪಾದ ಏವಂ ವ್ಯಾಖ್ಯೇಯಃ । ಸೂರ್ಯಸ್ಯ ದಿವಿ ಪೂರ್ವಮಾವೃತೇ ಪ್ರಕಾಶೇ ತದಪನೋದ್ಯ ಸ್ವಕೀಯಂ ಚಕ್ಷುರಾಧಾತ್ । ನಿವಾರಣಂ ತೇಜಃಸಂಸ್ತ್ಯಾಯಂ ದೃಷ್ಟವಾನಿತ್ಯರ್ಥಃ । ಸ್ವರ್ಭಾನುಮಾಯಯಾ ಸೂರ್ಯಸ್ಯಾವೃತಿಹಾರಿದ್ರವಿಕೇ ಸಮಾಮ್ನಾತಾ । ಸ್ವರ್ಭಾನುಶ್ಚಾಸುರಃ ಸೂರ್ಯಂ ತಮಸಾವಿಧ್ಯತ್ತಸ್ಮೈ ದೇವಾಃ ಪ್ರಾಯಶ್ಚಿತ್ತಮೈಚ್ಛನ್ ತಸ್ಯ ಯತ್ಪ್ರಥಮಂ ತಮೋಽಪಾಘ್ನನ್ ಸಾ ಕೃಷ್ಣಾವಿರಭವತ್ ಯದ್ವಿತೀಯಂ ಸಾ ಫಾಲ್ಗುನೀ ಯತ್ತೃತೀಯಂ ಸಾ ವಲಕ್ಷೀ ಯದಧ್ಯಸ್ಥಾದಪಾಕೃಂತನ್ನಿತ್ಯಾದಿ॥

॥ ಪ್ರತಿಪದಾರ್ಥ ॥

**ಬ್ರಹ್ಮಾ**—ಬ್ರಹ್ಮಜ್ಞಾನಿಯಾದ । **ಅತ್ರಿಃ**—ಅತ್ರಿಯು । **ಗ್ರಾವ್ಣಃ**—ಸೋಮಾಭಿಷವದ ಕಲ್ಲುಗಳನ್ನು । **ಯುಯುಜಾನಃ**—ಒಟ್ಟಿಗೆ ಸೇರಿಸುತ್ತಲೂ (ಇಂದ್ರನಿಗಾಗಿ ಸೋಮವನ್ನು ಹಿಂಡುತ್ತಲೂ) । **ಕೀರಿಣಾ**—ಸ್ತೋತ್ರದಿಂದ । **ದೇವಾನ್**—ದೇವತೆಗಳನ್ನು । **ಸಪರ್ಯನ್**—ಪೂಜಿಸುತ್ತಲೂ । **ನಮಸಾ**—ಹವಿಸ್ಸಿನ ರೂಪದ ಅನ್ನದಿಂದ । **ಉಪಶಿಕ್ಷನ್**—ಅಲಂಕರಿಸುತ್ತಲೂ । **ಸೂರ್ಯಸ್ಯ**—ಸೂರ್ಯನ । **ಚಕ್ಷುಃ**—ಮಂಡಲಾಕಾರವಾದ ಚಕ್ಷುಸ್ಸನ್ನು । **ದಿವಿ**—ಅಂತರಿಕ್ಷದಲ್ಲಿ । **ಆಧಾತ್**—ಸ್ಥಾಪಿಸಿದನು । **ಸ್ವರ್ಭಾನೋಃ**—ಸ್ವರ್ಭಾನುವಿನ । **ಮಾಯಾಃ**—ಮೋಹಜನಕವಾದ ಶಕ್ತಿಗಳನ್ನು । **ಅಪಾಘುಕ್ಷತ್** ನಿವಾರಣಮಾಡಿದನು.

॥ ಭಾವಾರ್ಥ ॥

ಬ್ರಹ್ಮಜ್ಞಾನಿಯಾದ ಅತ್ರಿಯು ಇಂದ್ರನಿಗಾಗಿ ಅಭಿಷವಗ್ರಾವಗಳಿಂದ ಸೋಮವನ್ನು ಹಿಂಡುತ್ತಲೂ, ದೇವತೆಗಳನ್ನು ಸ್ತೋತ್ರಗಳಿಂದ ಪೂಜಿಸುತ್ತಲೂ, ಹವಿಸ್ಸಿನ ರೂಪದ ಅನ್ನದಿಂದ ಅಲಂಕರಿಸುತ್ತಲೂ ಸೂರ್ಯನ

ಮಂಡಲಾಕಾರವಾದ ಚಕ್ಷುಸ್ಸನ್ನು (ಪ್ರಕಾಶವನ್ನು) ಅಂತರಿಕ್ಷದಲ್ಲಿ ಸ್ಥಾಪಿಸಿದನು. ಸ್ವರ್ಭಾನುವಿನ ಮೋಹಜನಕವಾದ ಶಕ್ತಿಯನ್ನು ನಿವಾರಣೆಮಾಡಿದನು.

### English Translation

Then the Brahman, (Atri), applying the stones together, propitiating the gods with praise, and adoring them with reverence, placed the eye of Surya in the sky : he dispersed the delusions of Swarbhanu.

॥ ಸಂಹಿತಾಪಾಠಃ ॥

ಯಂ ವೈ ಸೂರ್ಯಂ ಸ್ವರ್ಭಾನುಸ್ತಮಸಾ ವಿಧ್ಯದಾಸುರಃ ।
ಅತ್ರಯಸ್ತಮನ್ವವಿಂದ ನ್ನಹ್ಯನ್ಯೇ ಅಶಕ್ನುವನ್ ॥ ೯ ॥

॥ ಪದಪಾಠಃ ॥

ಯಂ । ವೈ । ಸೂರ್ಯಂ । ಸ್ವಃಽಭಾನುಃ । ತಮಸಾ । ಅವಿಧ್ಯತ್ । ಆಸುರಃ ।
ಅತ್ರಯಃ । ತಂ । ಅನು । ಅವಿಂದನ್ । ನಹಿ । ಅನ್ಯೇ । ಅಶಕ್ನುವನ್ ॥ ೯ ॥

॥ ಸಾಯಣಭಾಷ್ಯಂ ॥

ಅತ್ರಿಕೃತಂ ಸಾಮರ್ಥ್ಯಮನುವದತಿ ಯಂ ವೈ ಸೂರ್ಯಮಿತಿ । ನಿಗತವ್ಯಾಖ್ಯಾನಾ । ಅತ್ರಯಸ್ತಂ ಸೂರ್ಯಮನ್ವವಿಂದನ್ । ಇಂದ್ರಾರ್ಥಂ ಸೋಮಯಾಗದೇವತಾಸ್ತುತಿನಮಸ್ಕಾರೈರನುಕ್ರಮೇಣೇಷದೀಷತ್ತಮೋ ವಿರುಧ್ಯ ಲಬ್ಧವಂತ ಇತ್ಯರ್ಥಃ । ಅನ್ಯೇ ನಹ್ಯಶಕ್ನುವನ್ । ನ ಲಬ್ಧವಂತಃ ಖಲು ॥

॥ ಪ್ರತಿಪದಾರ್ಥ ॥

ಯಂ ವೈ ಸೂರ್ಯಂ—ಯಾವ ಸೂರ್ಯನನ್ನು । **ಆಸುರಃ**—ಅಸುರಪುತ್ರನಾದ । **ಸ್ವರ್ಭಾನುಃ**—ಸ್ವರ್ಭಾನುವು । **ತಮಸಾ**—ಕಗ್ಗತ್ತಲೆಯಿಂದ । **ಅವಿಧ್ಯತ್**—ಆವರಿಸಿ ಮರೆಮಾಡಿದನೋ । ತಂ—ಆ ಸೂರ್ಯನನ್ನು । **ಅತ್ರಯಃ**—ಅತ್ರಿಗೋತ್ರೋತ್ಪನ್ನರಾದ ಋಷಿಗಳು । **ಅನ್ವವಿಂದನ್**—ಪಡೆದರು । **ಅನ್ಯೇ**—ಇತರರು । **ನಹಿ ಅಶಕ್ನುವನ್**—ಈ ಕಲಸಮಾಡಲು ಸಮರ್ಥರಾಗಲಿಲ್ಲ.

॥ ಭಾವಾರ್ಥ ॥

ಯಾವ ಸೂರ್ಯನನ್ನು ಅಸುರಪುತ್ರನಾದ ಸ್ವರ್ಭಾನುವು ಕಗ್ಗತ್ತಲೆಯಿಂದ ಆವರಿಸಿ ಮರೆಮಾಡಿದನೋ ಆ ಸೂರ್ಯನನ್ನು ಅತ್ರಿಗೋತ್ರೋತ್ಪನ್ನರಾದ ಋಷಿಗಳು ಪಡೆದರು. ಇತರರ್ಯಾರೂ ಈ ಮಹತ್ಕಾರ್ಯಮಾಡಲು ಸಮರ್ಥರಾಗಲಿಲ್ಲ.

## English Translation

The sun, whom the Asura Swarbhanu, had enveloded with darkness, the sons of Atri subsequently recovered : no others were able (to effect his release)

# ನಲವತ್ತೊಂದನೆಯ ಸೂಕ್ತವು.

## ವಿಶ್ವೇದೇವತೆಗಳು

### ಪೀಠಿಕೆ.

**ಕೋನು ವಾಂ** ಎಂಬ ಈ ಸೂಕ್ತದಿಂದ ಮುಂದಿನ ಹನ್ನೊಂದು ಸೂಕ್ತಗಳು ವಿಶ್ವೇದೇವತಾಕವು. ವಿಶ್ವೇದೇವತೆಗಳಾರು ? ಅವರ ಸ್ವರೂಪವೇನು ? ಇತ್ಯಾದಿ ವಿಷಯಗಳನ್ನು ಇಲ್ಲಿ ವಿಮರ್ಶಿಸುವುದು ಅವಶ್ಯಕವಾಗಿದೆ.

**ಕೋ ನು ವಾಂ ವೈಶ್ವದೇವಾನಿ ಏಕಾದಶ ಪರಾಣ್ಯತಃ ।**

(ಬೃ. ದೇ. ೫–೩೬)

**"ಕೋ ನು ವಾಂ ಮಿತ್ರಾವರುಣಾ"** ಎಂಬ ಮಂತ್ರದಿಂದ ಆರಂಭವಾಗುವ ಸೂಕ್ತದಿಂದ ಮೊದಲುಗೊಂಡು ಒಟ್ಟು ಹನ್ನೊಂದು ಸೂಕ್ತಗಳು ವಿಶ್ವೇದೇವತೆಗಳನ್ನು ಉದ್ದೇಶಿಸಿ ಪ್ರಶಂಸಿಸುವ ಸೂಕ್ತಗಳಾಗಿವೆ ಎಂಬ ಬೃಹದ್ದೇವತಾವಾಕ್ಯವು ಋಕ್ಸಂಹಿತೆಯಲ್ಲಿ ಐದನೆಯ ಮಂಡಲದ ೪೧ ನೇ ಸೂಕ್ತದಿಂದ ೫೧ ನೇ ಸೂಕ್ತಗಳವರೆಗಿನ ಹನ್ನೊಂದು ಸೂಕ್ತಗಳಲ್ಲಿ ಪ್ರಶಂಸಿತವಾಗಿರುವ ವಿಷಯಗಳನ್ನು ಸೂಚಿಸುವುದಾಗಿದೆ ಇದನ್ನೇ ಸರ್ವಾನುಕ್ರಮಣಿಯಲ್ಲಿ **ವೈಶ್ವದೇವಂ ವೈ ತತ್** ಎಂದು ತಿಳಿಸಿದೆ

Macdonell Brihad Dwata English Translation. p. 175.

ವಿಶ್ವದೇವತೆಗಳೆಂದರೇನು ? ಎಂಬ ವಿಷಯದಲ್ಲಿ ನಿಸ್ಪೃಷ್ಟವಾದ ಅಭಿಪ್ರಾಯವನ್ನು ಹೇಳುವುದು ಸುಲಭವಲ್ಲ. ಎಲ್ಲಾ ದೇವತೆಗಳ ಸಮೂಹವೆಂದರ್ಥವೇ ಅಥವಾ ಒಂದು ನಿರ್ದಿಷ್ಟವಾದ ಸಂಖ್ಯೆಯನ್ನು ತಿಳಿಸುವ ದೇವತೆಗಳ ಪ್ರತ್ಯೇಕವಾದ ಒಂದು ಗಣವೇ ಎಂಬ ವಿಷಯದಲ್ಲಿ ಮತಭೇದಗಳಿರುತ್ತವೆ ಆದರೆ, ವಿಶ್ವೇದೇವಗಣಗಳೆಂದು ಋಕ್ಸಂಹಿತೆಯಲ್ಲಿ ಸಕಲದೇವತೆಗಳನ್ನೂ ಸ್ಪಷ್ಟವಾಗಿ ನಿರ್ದೇಶಿಸಿರುವ ಪ್ರಕರಣವೂ ಇರುತ್ತದೆ

**ಅಮೀ ಯೇ ದೇವಾ ಸ್ಥನ ತ್ರಿಷ್ವಾ ರೋಚನೇ ದಿವಃ ।**

(ಋ. ಸಂ. ೧–೧೦೫ ೫)

ಎಂಬ ಮಂತ್ರದಲ್ಲಿ ಯಾವ ಲೋಕತ್ರಯದ ದೇವತೆಗಳೆಲ್ಲರೂ ನಿರ್ದಿಷ್ಟರಾಗಿದ್ದಾರೋ, ಅದೇ ದೇವತೆಗಳ ವಿಷಯವನ್ನು ಬೃಹದ್ದೇವತೆಯಲ್ಲಿ ತಿಳಿಸುತ್ತಾ,

**ಬೃಹಸ್ಪತಿಪ್ರಚೋದಿತಾ ವಿಶ್ವೇದೇವಗಣಾಸ್ತ್ರಯಃ ।**
**ಜಗ್ಮುಸ್ತ್ರಿತಸ್ಯ ತಂ ಯಜ್ಞಂ ಭಾಗಾಂಶ್ಚ ಜಗೃಹುಃ ಸಹ ॥**

(ಬೃ. ದೇ. ೧-೧೩೬)

ಪೃಥಿವ್ಯಾದಿ ಮೂರು ಲೋಕಗಳಲ್ಲೂ ಮೂರು ಗುಂಪುಗಳಾಗಿ ವಿಭಕ್ತರಾಗಿರುವ ಸಕಲ ದೇವತೆಗಳೂ ಸಹ ಬೃಹಸ್ಪತಿಯಿಂದ ಪ್ರಚೋದಿತರಾಗಿ ತ್ರಿತನ ಯಜ್ಞಕ್ಕೆ ಬಂದು ಅದರಲ್ಲಿ ಭಾಗವಹಿಸಿದರು ಎಂದು **ವಿಶ್ವದೇವ** ಶಬ್ದಕ್ಕೆ ಸಕಲ ದೇವತೆಗಳೆಂದರ್ಥಮಾಡಿದೆ. ಇದೇ ಅಭಿಪ್ರಾಯವನ್ನು ಶತಪಥಬ್ರಾಹ್ಮಣದಲ್ಲೂ ವಿವರಿಸುತ್ತಾ,

**ವೈಶ್ವದೇವಶ್ಚತುರ್ಥಮಹರ್ಭವತಿ । ವಿಶ್ವೇ ವೈ ಸರ್ವೇ ದೇವಾಃ ಸರ್ವೇಷಾಂ ದೇವಾನಾಮಾಪ್ತ್ಯೈ ವೈಶ್ವದೇವಾ ಗ್ರಹಾ ಭವಂತಿ ವೈಶ್ವದೇವ್ಯಃ ಪರೋರುಚಃ ಸರ್ವಂ ವೈಶ್ವದೇವಮಸದಿತಿ ॥**

(ಶ. ಬ್ರಾ. ೧೩-೨-೧-೬)

ಚತುರ್ಥವಾದ ಅಹಸ್ಸು ವೈಶ್ವದೇವವಾದುದು. ವಿಶ್ವೇದೇವತೆಗಳೆಂದರೆ ಸಕಲ ದೇವತೆಗಳೆಂದರ್ಥ. ಚತುರ್ಥದಿನದಲ್ಲಿ ಅವರ ಪೂರ್ಣವಾದ ಅನುಗ್ರಹವು ಲಭ್ಯವಾಗಬೇಕಾದುದೇ ಉದ್ದಿಶ್ಯ. ಸೋಮಗ್ರಹಗಳು ವೈಶ್ವದೇವಗ್ರಹಗಳಾಗಿವೆ. ಪರೋರುಕ್‌ಸಂಜ್ಞಕಗಳಾದ ಕಲಾಪಗಳೂ ಸಹ ಸಕಲ ದೇವತೆಗಳ ಅನುಗ್ರಹವನ್ನೇ ಸಂಪಾದಿಸುವುದಾಗಿದೆ. ಆದುದರಿಂದ ಈ ಗ್ರಹಗಳು ಸಕಲ ದೇವತೆಗಳನ್ನೂ ತೃಪ್ತಿಪಡಿಸಬೇಕು ಎಂಬುದಾಗಿಯೂ, ಇದರಂತೆಯೇ,

**ಇತಿ ಹ ಸ್ಮಾಹ ಸತ್ಯಕಾಮೋ ಜಾಬಾಲೋ ವಿಶ್ವೇ ವೈ ಸರ್ವೇ ದೇವಾಸ್ತದೇನಾನ್ಯಥಾದೇವತಂ ಪ್ರೀಣಾತೀತಿ**

(ಶ. ಬ್ರಾ. ೧೩-೫-೧-೧)

ವಿಶ್ವೇದೇವತೆಗಳೆಂದರೆ ಸಕಲದೇವತೆಗಳೆಂದರ್ಥವು. ಆದುದರಿಂದಲೇ ವಿಶ್ವೇದೇವತಾಕವಾದ ಈ ಕರ್ಮದಿಂದ ಸಕಲ ದೇವತೆಗಳಿಗೂ ವೈಯಕ್ತಿಕವಾದ ತೃಪ್ತಿಯು ಲಭಿಸುತ್ತದೆ ಎಂದು ಸತ್ಯಕಾಮಜಾಬಾಲನು ಘೋಷಿಸಿದ್ದಾನ ಎಂದು ಶತಪಥದಲ್ಲಿ ಸ್ಪಷ್ಟವಾಗಿ ತಿಳಿಸಿದೆ ಹೀಗೆ ಸಕಲ ದೇವತೆಗಳಿಗೂ ಅನ್ವಯಿಸುವುದೆಂಬ ಮತವು ವೈದಿಕವಾಕ್ಯಗಳಲ್ಲೇ ಕೆಲವೆಡೆಗಳಲ್ಲಿದ್ದರೂ ಸಹ ಇನ್ನು ಕೆಲವಡೆಗಳಲ್ಲಿ ವೈಕಲ್ಪಿಕವಾದ ತಾತ್ಪರ್ಯಕ್ಕೆ ಅವಕಾಶವಾಗಿದೆ. ಉದಾಹರಣೆಗೆ—

**ಸ ನೈವ ವ್ಯಭವತ್ಸ ವಿಶಮಸೃಜತ ಯಾನ್ಯೇತಾನಿ ದೇವಜಾತಾನಿ ಗಣಶ ಆಖ್ಯಾಯಂತೇ ವಸವೋ ರುದ್ರಾ ಆದಿತ್ಯಾ ವಿಶ್ವೇ ದೇವಾ ಮರುತ ಇತಿ ।**

(ಬೃ. ಉ. ೧.೪.೧೨)

ಸೃಷ್ಟಿಕರ್ಮದಲ್ಲಿ ಉದ್ಯುಕ್ತನಾದ ಪ್ರಜಾಪತಿಯು ಇನ್ನೂ ಸೃಷ್ಟಿರೂಪವಾದ ಪೌಷ್ಕಲ್ಯವನ್ನು ಹೊಂದಿರಲಿಲ್ಲ ಆಗ ಅವನು ಪ್ರಜೆಗಳನ್ನೂ ಗಣರೂಪಗಳಲ್ಲಿ ನಿರ್ದಿಷ್ಟರಾಗುವ ದೇವತೆಗಳನ್ನೂ ಸೃಷ್ಟಿಸಿದನು. ಅವರೇ ವಸುಗಳು, ರುದ್ರರು, ಆದಿತ್ಯರು ಮತ್ತು ವಿಶ್ವೇದೇವತೆಗಳು ಅಲ್ಲದೇ ಮರುತ್ತುಗಳು ಎಂದಿರುವಾಗ, ಈ ಗಣಗಳಲ್ಲಿ ವಸುಗಳು ಅಷ್ಟಸಂಖ್ಯಾಕವಾದ ಗಣವನ್ನೂ, ರುದ್ರರು ಏಕಾದಶ (೧೧) ಸಂಖ್ಯಾಕವಾದ ಗಣವನ್ನೂ, ಆದಿತ್ಯರು ದ್ವಾದಶಸಂಖ್ಯೆಯುಳ್ಳ (೧೨) ಗಣವನ್ನೂ ಮತ್ತು ಮರುತ್ತುಗಳು ಸಪ್ತಸಂಖ್ಯಾಕವಾದ ಗಣವನ್ನು ತೋರುವುವು ಎಂದು ವಿವರಿಸಿ—ವಿಶ್ವೇದೇವಪದಕ್ಕೆ ಈರೀತಿ ಅರ್ಥವನ್ನು ಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ತಿಳಿಸಿದ್ದಾರೆ.

**ವಿಶ್ವೇದೇವಾಸ್ತ್ರಯೋದಶ ವಿಶ್ವಾಯಾ ಅಪತ್ಯಾನಿ। ಸರ್ವೇ ವಾ ದೇವಾಃ ॥**

(ಬೃ.ಉ.ಶಂ ಭಾ ೧.೪.೧೨)

**ವಿಶ್ವಾ** ಎಂಬುವಳ ಪುತ್ರರಾದ ಹದಿಮೂರು ದೇವತೆಗಳ ಗುಂಪೆಂದು ಒಂದರ್ಥ ಅಥವಾ ಸಕಲದೇವತೆಗಳೆಂದು ಇನ್ನೊಂದರ್ಥ ಎಂದು ವೈಕಲ್ಪಿಕವಾದ ಅರ್ಥವುಂಟೆಂದು ಹೇಳಿದ್ದಾರೆ. ಈ ವಿಶ್ವೆಯೆಂಬುವಳು ಯಾರು, ಇವಳ ಪುತ್ರತ್ವವು ದೇವತೆಗಳಿಗೆ ಹೇಗೆ ಪ್ರಾಪ್ತವಾಯಿತು ಎಂಬುದನ್ನು ಹೇಳುವುದು ಸುಲಭವಲ್ಲ. ಸಂಹಿತಾದಿಗಳಲ್ಲಿ ಇವಳು ಅಷ್ಟು ಪ್ರಖ್ಯಾತಳಾದ ವ್ಯಕ್ತಿಯೂ ಅಲ್ಲ. ಬೃಹದ್ದೇವತೆಯಲ್ಲಿ ಮಾತ್ರ ಒಂದು ಕಡೆಯಲ್ಲಿ ಇವಳ ಹೆಸರು ನಿರ್ದಿಷ್ಟವಾಗಿದೆ.

**ಅದಿತಿರ್ದಿತಿರ್ದನುಃ ಕಾಲಾ ದನಾಯುಃ ಸಿಂಹಿಕಾ ಮುನಿಃ ।**
**ಕ್ರೋಧಾ ವಿಶ್ವಾ ವರಿಷ್ಠಾ ಚ ಸುರಭಿರ್ವಿನತಾ ತಥಾ ।**
**ಕದ್ರೂಶ್ಚೈವೇತಿ ದುಹಿತೄಃ ಕಶ್ಯಪಾಯ ದದೌ ಸ ಚ ॥**

(ಬೃ. ದೇ. ೫.೧೪೪)

ಮರೀಚಿಪುತ್ರನಾದ ಕಶ್ಯಪನಿಗೆ ಹದಿಮೂರು ದೇವಪತ್ನಿಯರಿದ್ದರು. ಅವರಾರೆಂದರೆ, ಅದಿತಿ, ದಿತಿ, ದನು, ಕಾಲಾ, ದನಾಯು, ಸಿಂಹಿಕಾ, ಮುನಿ, ಕ್ರೋಧಾ, **ವಿಶ್ವಾ**, ವರಿಷ್ಠಾ, ಸುರಭಿ, ವಿನತಾ, ಕದ್ರು. ಇವರು ದಕ್ಷನ ಪುತ್ರಿಯರು. ಈ ಹದಿಮೂರು ಕನ್ಯೆಯರನ್ನೂ ದಕ್ಷನು ಕಶ್ಯಪನಿಗೆ ಕೊಟ್ಟು ವಿವಾಹಮಾಡಿದನು

**ತಾಸು ದೇವಾಸುರಾಶ್ಚೈವ ಗಂಧರ್ವೋರಗರಾಕ್ಷಸಾಃ ॥**

(ಬೃ. ದೇ ೫.೧೪೫)

ಈ ದಕ್ಷಪುತ್ರಿಯರಲ್ಲಿ ದೇವತೆಗಳೂ, ಅಸುರರೂ, ಗಂಧರ್ವರೂ, ಪನ್ನಗಗಳೂ, ರಾಕ್ಷಸಾದಿಗಳೂ ಉತ್ಪನ್ನರಾದರು. ಅದಿತಿಗೆ ಹನ್ನೆರಡು ಪುತ್ರರುತ್ಪನ್ನರಾದರು ಇತ್ಯಾದಿಯಾದ ವಿವರವನ್ನು ಕೊಡುತ್ತಾ ಅಗಸ್ತ್ಯ ಮತ್ತು ವಸಿಷ್ಠರ ಜನನಕ್ರಮವನ್ನು ನಿವರಿಸಿದೆ. ಅದೇ ಸಂದರ್ಭದಲ್ಲಿ,

**ಸರ್ವತ್ರ ಪುಷ್ಕರಂ ತತ್ರ ವಿಶ್ವೇ ದೇವಾ ಅಧಾರಯನ್ ।**

(ಬೃ ದೇ ೫.೧೫೫)

ಪುಷ್ಕರ (ಕಮಲಪುಷ್ಪ)ದಲ್ಲಿ ಸ್ಥಿತನಾಗಿದ್ದ ವಸಿಷ್ಠನನ್ನು ವಿಶ್ವೇದೇವತೆಗಳು ಧರಿಸಿದರು ಎಂದಿದೆ. **ವಿಶ್ವಾ** ಎಂಬುವಳು ಕಶ್ಯಪನ ಪತ್ನಿಯೆಂದಿದ್ದರೂ ಸಹ ವಿಶ್ವೇದೇವತೆಗಳು ಅವಳ ಪುತ್ರರೆಂದು ತಿಳಿಸಿಲ್ಲ. ಆದರೆ ಪುಷ್ಕರಸ್ಥನಾಗಿದ್ದ ವಸಿಷ್ಠನನ್ನು ಧರಿಸಿದ್ದು ಋಕ್ಸಂಹಿತೆಯಲ್ಲಿಯೂ ವರ್ಣಿತವಾಗಿದೆ.

**ಉತಾಸಿ ಮೈತ್ರಾವರುಣೋ ವಸಿಷ್ಠೋರ್ವಶ್ಯಾ ಬ್ರಹ್ಮನ್ಮನಸೋಽಧಿ ಜಾತಃ ।**
**ದ್ರಪ್ಸಂ ಸ್ಕನ್ನಂ ಬ್ರಹ್ಮಣಾ ದೈವ್ಯೇನ ವಿಶ್ವೇ ದೇವಾಃ ಪುಷ್ಕರೇ ತ್ವಾದದಂತ ॥**

(ಋ.ಸಂ. ೭-೩೩.೧೧)

ಎಲೈ ವಸಿಷ್ಠನೇ, ನೀನು ಮಿತ್ರಾವರುಣರಿಂದ ಊರ್ವಶಿಯಲ್ಲಿ ಉತ್ಪನ್ನನಾದವನು. ಪುಷ್ಕರಸ್ಥನಾದ ನಿನ್ನನ್ನು ವಿಶ್ವೇದೇವತೆಗಳು ಧರಿಸಿದರು ಎಂದಿದೆ. ಇಲ್ಲಿ **ವಿಶ್ವೇದೇವಾಃ** ಎಂದರೆ ಯಾರು ಎಂಬುದನ್ನು ಸಾಯಣರು ತಿಳಿಸಿಲ್ಲ. ನಿರುಕ್ತಕಾರರು ಇದೇ ವಾಕ್ಯಕ್ಕೆ ತಾತ್ಪರ್ಯವನ್ನು ತಿಳಿಸುವಾಗ,

**ಸರ್ವೇ ದೇವಾಃ ತ್ವಾಧಾರಯಂತ**

(ನಿ ೫-೧೪)

ಎಂಬುದಾಗಿ **ವಿಶ್ವೇ ದೇವಾಃ** ಎಂಬುದಕ್ಕೆ ಸಕಲ ದೇವತೆಗಳೂ ಸಹ ಎಂದರ್ಥಮಾಡಿದ್ದಾರೆ.

ಮತ್ಸ್ಯಪುರಾಣದಲ್ಲಿ ಮಾತ್ರ ಒಂದು ಕಡೆ ವಿಶ್ವೇದೇವತೆಗಳು ವಿಶ್ವಾ ಎಂಬುವಳ ಪುತ್ರರೆಂದೂ, ಅವರಾರೆಂದರೆ **ಕ್ರತು, ದಕ್ಷ, ವಸು, ಸತ್ಯ, ಕಾಲಕಾಮ, ಮುನಿ, ಕುರಜ, ಮನುಜ, ವೀಜ, ರೋಚಮಾನ** ಎಂಬ ಹತ್ತು ಮಂದಿಗಳೆಂದೂ ತಿಳಿಸಿದೆ. ಇವರು ಹವ್ಯಕವ್ಯಗಳಲ್ಲಿ ಪೂಜನೀಯರೆಂದೂ ಪ್ರಶಂಸಿಸಿದೆ. (ಮತ್ಸ್ಯ. ೨೦೩). ಇವರು ವಿಶ್ವಾಮಿತ್ರನಿಂದ ಶಾಪವನ್ನು ಹೊಂದಿದರೆಂದು ಮಾರ್ಕಂಡೇಯಪುರಾಣದಲ್ಲಿ ತಿಳಿಸಿದೆ. (ಮಾರ್ಕಂಡೇಯ ೭). ಆದರೆ ಸದ್ಯಃ ಪುರಾಣದ ಆಧಾರಗಳಿಂದ ನಾವು ವೈದಿಕವಾಕ್ಯಗಳ ಅರ್ಥವನ್ನು ನಿಷ್ಕರ್ಷಿಸಲು ಸಾಧ್ಯವಿಲ್ಲ.

ವೈದಿಕವಾಕ್ಯಗಳಲ್ಲಿ, ವಿಶ್ವದೇವತೆಗಳ ಪ್ರಶಂಸೆಯು ಮೂರುಬಗೆಯುಳ್ಳವಾಗಿವೆ. ಅದನ್ನೇ ಬೃಹದ್ದೇವತೆಯಲ್ಲಿ ಈರೀತಿ ತಿಳಿಸಿದೆ.

**ವೈಶ್ವದೇವಾನಿ ಸೂಕ್ತಾನಿ ತ್ರಿವಿಧಾನಿ ಭವಂತಿ ತು ।**
**ಸೂರ್ಯಸಂಸ್ತವಸಂಯುಕ್ತಂ ವಿಶ್ವಲಿಂಗಂ ಪೃಥಕ್‌ಸ್ತುತಿ ॥**

(ಬೃ. ದೇ ೩-೪೨)

ವಿಶ್ವೇದೇವತೆಗಳನ್ನು ಪ್ರಶಂಸಿಸಿ ಪ್ರಾರ್ಥಿಸತಕ್ಕ ಸೂಕ್ತಗಳು ಮೂರು ವಿಧವಾಗಿವೆ ಸೂರ್ಯಪ್ರಶಂಸೆಗಳೊಡನೆ ಕೂಡಿಕೊಂಡಿರತಕ್ಕ ಸೂಕ್ತಗಳು ಮೊದಲನೆಯ ಪಂಗಡಕ್ಕೆ ಸೇರಿದವು ಸಕಲ ದೇವತೆಗಳ ಸಾಮಾನ್ಯಧರ್ಮಗಳನ್ನೂ ನಿರ್ದೇಶಿಸಿ ಪ್ರಶಂಸಿಸುವ ಸೂಕ್ತಗಳು ಎರಡನೆಯ ಪಂಗಡದವು ಅದಲ್ಲದೆ, ವೈಯಕ್ತಿಕವಾದ ದೇವತೆಯನ್ನೇ ಪ್ರಶಂಸಿಸಿ ಆಯಾ ದೇವತೆಯ ವೈಯಕ್ತಿಕವಾದ ಗುಣಗಳನ್ನು ಸ್ತುತಿಸುವುದು (ಪೃಥಕ್‌ಸ್ತುತಿ) ಮೂರನೆಯ ಪಂಗಡಕ್ಕೆ ಸೇರಿದವು

**ಪೃಥಕ್ ಸ್ತುತೀತಿ ಯತ್ಪ್ರೋಕ್ತಂ ತದ್ವಿದ್ಯಾದ್ಬಹುದೈವತಂ ।**
**ವಿಶ್ವಲಿಂಗಂ ತು ತದ್ಯತ್ರ ವಿಶ್ವೈಃ ಸ್ವೈಃ ಕರ್ಮಜೈರ್ಗುಣೈಃ ॥**

(ಬೃ ದೇ ೩-೪೩)

ಮೇಲಿನ ಶ್ಲೋಕದಲ್ಲಿ ವಿವರಿಸಿದ **(೧) ಸೂರ್ಯಸಂಸ್ತವಸಂಯುಕ್ತ (೨) ವಿಶ್ವಲಿಂಗ (೩) ಪೃಥಕ್‌ಸ್ತುತಿ** ಎಂಬ ಈ ಮೂರುಬಗೆಯಾದ ಸ್ತುತಿಗಳಲ್ಲಿ, ಪೃಥಕ್‌ಸ್ತುತಿಯು ಅನೇಕ ದೇವತೆಗಳ ವೈಯಕ್ತಿಕಪ್ರಶಂಸೆಯುಳ್ಳದ್ದಾಗಿರುತ್ತದೆ. ದೇವತೆಗಳ ಸಾಮಾನ್ಯ ಧರ್ಮಗಳನ್ನು ತಿಳಿಸುವುದೇ ವಿಶ್ವಲಿಂಗವು. ಇದೇ ಅಂಶವನ್ನು ಬೇರೊಂದು ಕಡೆಯಲ್ಲಿ ತಿಳಿಸುತ್ತಾ, **ವಿಶ್ವಲಿಂಗ**ವೆಂದರೇನು ಎಂಬುದನ್ನು ವಿವರಿಸಿದೆ.

**ಋಷಿಭಿರ್ದೇವತಾಃ ಸರ್ವಾ ವಿಶ್ವಾಭಿಃ ಸ್ತುತಿಭಿಃ ಸ್ತುತಾಃ ।**
**ಸಂಜ್ಞಾ ತು ವಿಶ್ವಮಿತ್ಯೇಷಾ ಸರ್ವಾಸಾಮಪ್ಯ ನಿಪಾತಿತಾ ॥**

(ಬೃ ದೇ ೩-೩೪)

ಸಕಲ ದೇವತೆಗಳೂ ಸಹ ಸಂಯುಕ್ತವಾದ ಮತ್ತು ವಿಶ್ವಗುಣಗಳನ್ನು ವರ್ಣಿಸುವ ಸ್ತುತಿಗಳ **ಮೂಲಕ ಋಷಿಗಳಿಂದ** ಪ್ರಶಂಸಿತರಾಗಿದ್ದಾರೆ. **ವಿಶ್ವ** ಎಂಬ ಸಂಜ್ಞೆಯು **ಸರ್ವಾವಾಪ್ತಿ** ಎಂಬ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. **ಸರ್ವಾವಾಪ್ತಿ** ಎಂದರೆ ಸಕಲವನ್ನೂ ಅಡಕಮಾಡಿಕೊಂಡಿರುವುದು ಎಂದರ್ಥ. **ವಿಶ್ವೇ ದೇವಾಃ** ಎಂದರೆ, ಈ ಸಂಜ್ಞೆಯ ಪ್ರಕಾರ ಸಕಲ ದೇವತೆಗಳನ್ನೂ ಸೇರಿಸಿಕೊಂಡಿರುವುದು ಎಂದರ್ಥ. ಇದನ್ನೇ ಮೇಲೆ, **ವಿಶ್ವಲಿಂಗ** ಎಂಬ ಸಂಜ್ಞೆಯಿಂದ ವ್ಯವಹರಿಸಿದೆ. ನಿರುಕ್ತಕಾರರು **ವಿಶ್ವಲಿಂಗ**ವೆಂಬ ಸಂಜ್ಞೆಯನ್ನು ವಿವರಿಸುತ್ತಾ, ವಿಶ್ವವೆಂಬ ಪದದಿಂದ ಸೂಚಿತವಾಗಿರತಕ್ಕ **ದೇವತಾಪ್ರಶಂಸಕವಾದ ಸೂಕ್ತಗಳು ಮಾತ್ರ ವೈಶ್ವದೇವಸೂಕ್ತ**ಗಳೆಂದು ಹೇಳಿರುವ **ಶಾಕಪೂಣಿ**ಯವರ ಮತವನ್ನು ತಿಳಿಸಿದ್ದಾರೆ. (ನಿ. ೧೨-೪೦)

**ವಿಶ್ವೈಃ ಸ್ವೈಃ ಕರ್ಮಜೈರ್ಗುಣೈಃ (೩-೪೩)** ವಿಶ್ವಸಾಧಾರಣಗಳಾದ ಗುಣಗಳು ಆಯಾ ದೇವತೆಗಳ ವೈಯಕ್ತಿಕವಾದ ಕರ್ಮಜವೆಂದೂ ತಿಳಿಸಿದೆ. ಈ ಅರ್ಥದಲ್ಲಿ **ವಿಶ್ವಲಿಂಗ** ಮತ್ತು **ಪೃಥಕ್‌ಸ್ತುತಿ** ಈ ಎರಡು ಗುಂಪಿನ ಸೂಕ್ತಗಳಿಗೂ ಅಧಿಕವಾದ ವ್ಯತ್ಯಾಸವಿರುವುದಿಲ್ಲ ಹೇಗೆಂದರೆ, **ಸ್ವಕರ್ಮಜ**ವೆಂದರೇನು ಎಂಬುದನ್ನು ವಿವರಿಸುತ್ತಾ, ಸ್ವಕರ್ಮಜವಾದ ವಿಶ್ವಗುಣಗಳೇನೆಂಬುದನ್ನು ಈರೀತಿ ಸೂಚಿಸಿದೆ.

**ಸ್ತೂಯಂತೇ ದೇವತಾ ಹ್ಯಾಸು ಕರ್ಮಭಿಃ ಸ್ವೈಃ ಪೃಥಕ್‌ಪೃಥಕ್ ।**
**ಸ್ತುತಾಃ ಕರ್ಮಗುಣೈಃ ಸ್ವೈಃ ಸ್ವೈರ್ದೇವತಾ ಯತ್ರ ತತ್ರ ತು ॥**
**ಪೃಥಕ್ಕರ್ಮಸ್ತುತಿರ್ನಾಮ ವೈಶ್ವದೇವಂ ತದೇವ ತು ।**

(ಬೃ ದೇ. ೬-೬೯,೭೦)

ಎಲ್ಲೆಲ್ಲಿ ದೇವತೆಗಳು ಆಯಾ ವೈಯಕ್ತಿಕವಾದ ಗುಣಗಳ ವರ್ಣನೆಯಿಂದಲೂ ಆಯಾ ದೇವತೆಯ ವೈಯಕ್ತಿಕವಾದ ವ್ಯವಹಾರಗಳಿಂದಲೂ ಸ್ತುತರಾಗಿದ್ದಾರೆಯೋ ಅಲ್ಲೆಲ್ಲಾ **ಪೃಥಕ್ಕರ್ಮಸ್ತುತಿ** (ವೈಯಕ್ತಿಕವಾದ ಕರ್ಮಗಳ ಸ್ತುತಿ) ಗಳಿಗೆ ಅವಕಾಶವಾಗಿರುತ್ತದೆ. ಇಂತಹ ಸ್ತುತಿಯು ವೈಶ್ವದೇವಿಕವಾಗಿರುತ್ತದೆ

ಮೂರನೆಯದಾಗಿ, **ಸೂರ್ಯಸಂಸ್ತವಸಂಯುಕ್ತಂ** ಎಂಬ ವಾಕ್ಯದಿಂದ ವರ್ಣಿತವಾಗಿರುವ ವೈಶ್ವದೇವ ಸ್ತುತಿಯ ಸ್ವರೂಪವೇನೆಂಬುದನ್ನು ಪರಿಶೀಲಿಸಿದರೆ, ಅದರ ಸ್ವರೂಪವನ್ನು ಈರೀತಿ ತಿಳಿಸಿದೆ.

**ವಿಶ್ವಾನುದ್ದಿಶ್ಯ ಯದ್ದೇವಾನ್ ಸ್ತೌತಿ ಸೂರ್ಯಮನೇಕಧಾ ।**
**ದೇವಾನೇವಾಭಿಸಂಸ್ತೌತಿ ತಂ ಪ್ರಾಹುಃ ಸೂರ್ಯಸಂಸ್ತವಂ ॥**

(ಬೃ. ದೇ. ೩-೪೪)

ಯಾವ ಮಂತ್ರವು ವಿಶ್ವೇದೇವತೆಗಳನ್ನುದ್ದೇಶಿಸಿ ಬಹಳವಾಗಿ ಸೂರ್ಯನನ್ನೇ ಪ್ರಶಂಸಿಸುವುದೋ ಅಲ್ಲದೇ ಮುಖ್ಯವಾಗಿ ದೇವತಾಪ್ರಶಂಸಕವೇ ಆಗಿರುವುದೋ ಅದು **ಸೂರ್ಯಸಂಸ್ತವ** ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಆದರೆ, ಈ ನಿಯಮಕ್ಕೆ ಒಂದೆರಡು ಕಡೆಗಳಲ್ಲಿ ಅವ್ಯಾಪ್ತಿಯೂ ಇರುತ್ತದೆ. ಉದಾಹರಣೆಗೆ—

**ನ ತು ಭಾಗಸ್ಯ ಸೂಕ್ತಾದೌ ಸೂಕ್ತೇಷ್ವೇವೌಷಸೇಷು ವಾ ।**
**ನ ಸಾವಿತ್ರೇ ಹ್ಯಯಾಮೀತಿ ನ ಸೂರ್ಯಾಯಾಂ ಕೃತೌ ಮಹೇ ॥**

(ಬೃ. ದೇ. ೩-೪೫)

ಋಕ್ಸಂಹಿತೆಯುಲ್ಲೆಲ್ಲಾ ಭಗೋದ್ದಿಷ್ಟವಾಗಿ ಏಕಮಾತ್ರಸೂಕ್ತವಾದ ೭-೪೧ನೇ ಸೂಕ್ತದಲ್ಲಿ ಅನೇಕ ದೇವತೆಗಳು ನಿರ್ದಿಷ್ಟರಾಗಿದ್ದಾರೆ. ಆದರೆ ಅದು ವೈಶ್ವದೇವಸೂಕ್ತವಾಗಲಾರದು. ಈ ಸೂಕ್ತದ ಮೊದಲನೇ ಮಂತ್ರದಲ್ಲೇ ಸವಿತೃವಿನೊಡನೆ ಇಂದ್ರ, ಅಗ್ನಿ ಇತ್ಯಾದಿ ನಾನಾದೇವತೆಗಳನ್ನು ಪ್ರಶಂಸಿಸಿ ಪ್ರಾರ್ಥಿಸಿದೆ. ಆದರೆ ಅದೂ ವೈಶ್ವದೇವವಲ್ಲ. ಋ. ಸಂ. ೧೦.೮೫ನೇ ಸೂಕ್ತಕ್ಕೂ ಇದೇ ನಿಯಮವು ಅನ್ವಯಿಸುತ್ತದೆ. ಅದು ಕೇವಲ ಸೂರ್ಯಸೂಕ್ತವೆನಿಸಿಕೊಳ್ಳುತ್ತದೆ ಅನೇಕ ದೇವತಾಕವಾಗಿದ್ದರೂ ಸಹ ಈ ಮಂತ್ರಗಳೆಲ್ಲವೂ ಯಜ್ಞಕರ್ಮಗಳಲ್ಲಿ ಉಪಯುಕ್ತವಾಗುವಾಗ ವೈಶ್ವದೇವವೆನಿಸಿಕೊಳ್ಳುವುದಿಲ್ಲ. ಇದರಂತೆಯೇ,

**ಹ್ವಯಾಮ್ಯಗ್ನಿಂ ಪ್ರಥಮಂ ಸ್ವಸ್ತಯೇ ಹ್ವಯಾಮಿ ಮಿತ್ರಾವರುಣಾವಿಹಾವಸೇ ।**
**ಹ್ವಯಾಮಿ ರಾತ್ರೀಂ ಜಗತೋ ನಿವೇಶನೀಂ ಹ್ವಯಾಮಿ ದೇವಂ ಸವಿತಾರಮೂತಯೇ ॥**

(ಋ. ಸಂ. ೧.೩೫.೧)

ಇತ್ಯಾದಿ ಸ್ಥಳಗಳಲ್ಲಿ **ಸೂರ್ಯಸಂಸ್ತವಸಂಯುಕ್ತ**ವಾದ ವೈಶ್ವದೇವ ಎಂಬ ಗುಂಪಿಗೆ ಸೇರಿಸಬಹುದಾದ ಮಂತ್ರಗಳಿದ್ದು, ಸವಿತೃವಿನೊಡನೆ ಇತರ ದೇವತೆಗಳ ಪ್ರಶಂಸೆಯಿದೆ. ಆದರೆ ಇದೂ ಸಹ ವೈಶ್ವದೇವವಲ್ಲ. ಹೀಗೆ ಮೂರನೆಯ ಪಂಗಡಕ್ಕೆ ಸೇರಬಹುದೆಂದು ತೋರುವ ಅನೇಕ ಸೂಕ್ತಗಳು ಈ ನಿಯಮಕ್ಕೆ ಒಳಪಡುವುದಿಲ್ಲ.

ಈ ರೀತಿ ವಿಧಿಪ್ರತಿಷೇಧಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ವೈಶ್ವದೇವಸೂಕ್ತಗಳಲ್ಲಿ ಆನುಷಂಗಿಕವಾಗಿ ನಿರ್ದಿಷ್ಟರಾಗಿರುವ ದೇವತೆಗಳಾರು ಎಂಬುದನ್ನೂ ಅರಿಯಬೇಕು.

**ದೇವತಾಪಿವವೇಕ್ಷೇತ ಪ್ರಯೋಗೇ ಸರ್ವಕರ್ಮಣಾಂ ।**

(ಬೃ. ದೇ. ೮-೧೨೪)

ಸಕಲ ಕರ್ಮಗಳಿಗೂ ಪ್ರಯೋಗಕೌಶಲ್ಯವನ್ನು ಪಡೆಯುವುದಕ್ಕಾಗಿ ವೈಯಕ್ತಿಕವೂ, ಸಾಂಘಿಕವೂ ಆದ ಈ ದೇವತಾ ಸ್ವರೂಪಗಳನ್ನು ಪೂರ್ಣವಾಗಿ ತಿಳಿಯಬೇಕಾಗಿದೆ. ಆ ದೇವತೆಗಳಾರಾರೆಂದರೆ,

**ಸಪ್ತರ್ಷಯೋ ವಸವಶ್ಚಾಪಿ ದೇವಾ ಅಥರ್ವಾಣೋ ಭೃಗವಃ ಸೋಮಸೂರ್ಯಾಃ ।**
**ಪಥ್ಯಾ ಸ್ವಸ್ತೀ ರೋದಸೀ ಚೋಕ್ತಮಂತ್ರೇ ಕುಹೂರ್ಗುಙ್ಗೂರದಿತಿರ್ಧೇನುರಘ್ನ್ಯಾ ॥**

(ಬೃ. ದೇ. ೮-೧೨೫)

ಸಪ್ತರ್ಷಿಗಳು, ವಸುಗಳು, ದೇವತೆಗಳು, ಅಥರ್ವರು, ಭೃಗುಗಳು, ಸೋಮ, ಸೂರ್ಯ, ಸೂರ್ಯಾ, ಪಥ್ಯಾಸ್ವಸ್ತೀ, ಉಕ್ತಮಂತ್ರರಾದ ದ್ಯಾವಾಪೃಥಿವಿಗಳು, ಕುಹೂ, ಗುಂಗೂ, ಅದಿತಿ, ಧೇನು ಮತ್ತು ಅಘ್ನ್ಯಾ.

**ಅಸುನೀತಿರಿಳಾ ಚಾಪ್ತ್ಯಾ ವಿಧಾತಾನುಮತಿರ್ಯಾ ।**
**ಅಂಗಿರೋಭಿಃ ಸಹೈತಾಃ ಸ್ಯುರುಕ್ತಮಂತ್ರಾಶ್ಚ ದೇವತಾಃ ॥**

(ಬೃ. ದೇ. ೮ ೧೨೬)

ಅಸುನೀತಿ, ಇಳಾ, ಆಪ್ತ್ಯರು, ವಿಧಾತೃ, ಅಂಗಿರಾಸಹಿತವಾದ ಅನುಮತಿ, ಇವರೆಲ್ಲರೂ ಉಕ್ತಮಂತ್ರರಾದ ದೇವತೆಗಳೆಂದು ಗಣಿತರಾಗಿದ್ದಾರೆ. (ಇಲ್ಲಿ ನಿರ್ದಿಷ್ಟರಾದ ದೇವತೆಗಳು ಅಪರೂಪವಾಗಿ ಪ್ರಶಂಸಿತರಾಗಿರುವರು ಇವರೆಲ್ಲರೂ ವೈಶ್ವದೇವಸೂಕ್ತಗಳಲ್ಲಿ ಪ್ರಶಂಸಿತರಾಗಿದ್ದಾರೆ)

**ವೈಶ್ವಾನರೋ ಹಿ ಸುಪರ್ಣೋ ವಿವಸ್ವಾನ್ ಪ್ರಜಾಪತಿರ್ದ್ಯೌಃ ಸುಧನ್ವಾ ನಗೋಹ್ಯಃ ।**
**ಅಪಾಂನಪಾದರ್ಯಮಾ ವಾತಜೂತಿರಿಳಸ್ಪತಿಶ್ಚಾಪಿ ರಥಸ್ಪತಿಶ್ಚ ॥**

(ಬೃ. ದೇ. ೮.೧೨೭)

ವೈಶ್ವಾನರ, ಸುಪರ್ಣ, ವಿವಸ್ವಾನ್, ಪ್ರಜಾಪತಿ, ದ್ಯೌಃ, ಸುಧನ್ವ, ನಗೋಹ್ಯ, ಅಪಾಂನಪಾತ್, ಅರ್ಯಮನ್, ವಾತಜೂತಿ, ಇಳಸ್ಪತಿ ಮತ್ತು ರಥಸ್ಪತಿ.

**ಋಭವಃ ಪರ್ಜನ್ಯಃ ಪರ್ವತಾ ಗ್ನಾಶ್ಚ ದಕ್ಷೋ ಭಗೋ ದೇವಪತ್ನೀರ್ದಿಶಶ್ಚ ।**
**ಆದಿತ್ಯಾ ರುದ್ರಾಃ ಪಿತರೋಽಥ ಸಾಧ್ಯಾ ನಿಪಾತಿನೋ ವೈಶ್ವದೇವೇಷು ಸರ್ವೇ ॥**

(ಬೃ. ದೇ. ೮-೧೨೮)

ಋಭುಗಳು, ಪರ್ಜನ್ಯ, ಪರ್ವತಗಳು, ಗ್ನಾಸಂಜ್ಞಕದೇವತೆಗಳು, ದಕ್ಷ, ಭಗ, ದೇವಪತ್ನಿಯರು, ದಿಗ್ದೇವತೆಗಳು, ಆದಿತ್ಯರು, ರುದ್ರರು, ಪಿತೃಗಳು, ಸಾಧ್ಯರು ಇವರೆಲ್ಲರೂ ವೈಶ್ವದೇವಸೂಕ್ತದಲ್ಲಿ ಆನುಷಂಗಿಕವಾಗಿ ನಿರ್ದಿಷ್ಟರೂ ಪ್ರಾರ್ಥಿತರೂ ಆದ ದೇವತೆಗಳು.

ಒಟ್ಟಿನಲ್ಲಿ ವೈಶ್ವದೇವ ಸೂಕ್ತಗಳೆಂದರೇನು ಎಂಬ ಪ್ರಶ್ನೆಗೆ ಉತ್ತರವಾಗಿ ಅವುಗಳಸಾಮಾನ್ಯ ಲಕ್ಷಣವನು ತೋರಿಸುವ ಕೆಳಗಿನ ವಾಕ್ಯವನ್ನು ಉದಾಹರಿಸಿದೆ.

**ಅಸ್ತು ಶ್ರೌಷಟ್ವೈಶ್ವದೇವಂ ತೃತೀಯಂ ವೈಶ್ವದೇವಂ ಸ್ಯಾದ್ಬಹುದೇವತೇಷು ।**

(ಬೃ. ದೇ ೪-೭)

**"ಅಸ್ಯ ವಾಮಸ್ಯ ಪಲಿತಸ್ಯ"** ( ೧-೧೬೪ ) ಇತ್ಯಾದಿ ಸೂಕ್ತಗಳಲ್ಲಿ ತೋರಿರುವಂತೆ ಬಹುದೇವತಾಕವಾದ ಸ್ತುತಿಯಿರುವೆಡೆಗಳಲ್ಲೆಲ್ಲಾ ವೈಶ್ವದೇವ ಸೂಕ್ತಗಳೆಂದು ನಿರ್ಧರಿಸತಕ್ಕದ್ದು ಎಂಬುದು ಸಾಮಾನ್ಯ ನಿಯಮ. (ಆದರೆ, ಈ ನಿಯಮಕ್ಕಿರುವ ಅತಿವ್ಯಾಪ್ತಿ ಮತ್ತು ಅವ್ಯಾಪ್ತಿಗಳನ್ನು ಮೇಲಿನ ವಾಕ್ಯಗಳಲ್ಲಿ ವಿವರಿಸಿದೆ). ಈ ವಿಧವಾದ, ವೈಶ್ವದೇವ ಸೂಕ್ತಗಳು ಋಕ್ಸಂಹಿತೆಯಲ್ಲಿ ಬಹಳವಾಗಿವೆ. ಅವುಗಳಲ್ಲಿ, ಕೆಲವು ಪ್ರತ್ಯೇಕವಾದ ಸೂಕ್ತಗಳಾಗಿಯೂ, ಇನ್ನು ಕೆಲವು ಇತರ ದೇವತಾಕವಾದ ಸೂಕ್ತಗಳಲ್ಲಿ ಅಂತರ್ಗತವಾದ ಮಂತ್ರಗಳಾಗಿಯೂ ಇರುತ್ತವೆ. ಅವುಗಳಾವುವೆಂದರೆ,—

೧.೩-೭ ರಿಂದ ೯, ೧-೧೪; ೧.೨೩-೧೦ ರಿಂದ ೧೨; ೧.೮೯, ೧.೯೦; ೧.೧೦೫ ರಿಂದ ೧೦೭, ೧-೧೨೨; ೧-೧೩೯-೧, ೧೧; ೧-೧೬೪-೧ ರಿಂದ ೪೧, ೧.೧೮೬; ೨.೨೯; ೨.೩೧; ೨-೪೧-೧೩ ರಿಂದ ೧೫, ೩-೨೦-೧ ರಿಂದ ೫, ೩.೫೪ ರಿಂದ ೫೭, ೪-೫೫, ೫-೨೬-೯; ೪.೪೧; ೫.೪೨-೧ ರಿಂದ ೧೦, ೧೨ ರಿಂದ ೧೮; ೫-೪೩ ರಿಂದ ೪೫; ೫.೪೬.೧ ರಿಂದ ೬. ೫-೪೭ ರಿಂದ ೫೧; ೬-೨೧.೯, ೧೧; ೬-೪೯ ರಿಂದ ೫೨; ೭-೩೪-೧ ರಿಂದ ೧೫, ೧೮ ರಿಂದ ೨೫, ೭-೩೫ ರಿಂದ ೩೭, ೭-೩೯; ೭-೪೦; ೭.೪೨; ೭.೪೩, ೭.೫೦-೩; ೮-೨೫-೧೦ ರಿಂದ ೧೨; ೮-೨೭ ರಿಂದ ೩೦; ೮-೫೪-೩, ೪, ೮-೫೮-೨, ೩; ೮.೬೯-೧೧; ೮-೮೩; ೧೦-೩೧; ೧೦-೩೨; ೧೦-೩೩-೧; ೧೦-೩೫, ೧೦-೩೬; ೧೦-೫೬; ೧೦.೫೭; ೧೦-೬೧; ೧೦-೬೨.೭; ೧೦-೬೩-೧ ರಿಂದ ೧೪, ೧೭; ೧೦-೬೪-೬೬; ೧೦-೯೨, ೧೦-೯೩; ೧೦.೧೦೦; ೧೦-೧೦೯; ೧೦-೧೧೪; ೧೦-೧೨೬; ೧೦-೧೨೮; ೧೦-೧೩೭; ೧೦-೧೪೧; ೧೦-೧೫೫.೫; ೧೦-೧೫೭; ೧೦-೧೬೫; ೧೦-೧೮೧.

ವಿಶ್ವೇದೇವಾಃ ಅಥವಾ ಅಗ್ನಿಃ　　೯.೬೭.೨೭ ,
ವಿಶ್ವೇದೇವಾ: ಅಥವಾ ಅಂಗಿರಸಃ　೧೦.೬೨.೧ ರಿಂದ ೬ ;
ವಿಶ್ವೇದೇವಾ: ಅಥವಾ ಇಂದ್ರಃ　　೧-೧೨೧ ;
ವಿಶ್ವೇದೇವಾಃ ಅಥವಾ ಋತ್ವಿಜಃ　೮-೫೮-೧ , ೧೦-೧೦೧ ,
ವಿಶ್ವೇದೇವಾಃ ಅಥವಾ ಯೂಪಾಃ　೩-೮-೮ :

ಈ ಸೂಕ್ತಗಳ ದರ್ಶನವನ್ನು ಪಡೆದು ವಿಶ್ವೇದೇವತೆಗಳನ್ನು ಪ್ರಶಂಸಿಸಿ ಪ್ರಾರ್ಥಿಸಿರುವ ಋಷಿಗಳ ನಾಮವನ್ನು ಕೆಳಗಿನ ವಾಕ್ಯಗಳಲ್ಲಿ ತಿಳಿಸಿದೆ

ಮೇಧಾತಿಥಿರಗಸ್ತ್ಯಸ್ತು ಬೃಹದುಕ್ಥೋ ಮನುರ್ಗಯಃ ।
ಋಜಿಶ್ವಾ ವಸುಕರ್ಣಶ್ಚ ಶಾರ್ಯಾತೋ ಗೋತಮೋ ಲುಶಃ ॥
ಸ್ವಸ್ತ್ಯಾತ್ರೇಯಃ ಪರುಚ್ಛೇಪಃ ಕಕ್ಷೀವಾನ್ ಗಾಥಿನೌರ್ವಶೌ ।
ನಾಭಾಕಶ್ಚೈವ ನಿರ್ದಿಷ್ಟೋ ದುವಸ್ಯುರ್ಮಮತಾಸುತಃ ॥
ವಿಹವ್ಯಃ ಕಶ್ಯಪ ಋಷಿರವತ್ಸಾರಶ್ಚ ನಾಮ ಯಃ ।
ವಾಮದೇವೋ ಮಧುಚ್ಛಂದಾಃ ಪಾರ್ಥೋ ದಕ್ಷಸುತಾದಿತಿಃ ॥
ಜುಹೂರ್ಗೃತ್ಸಮದಶ್ಚರ್ಷಿರ್ದೇವಾಃ ಸಪ್ತರ್ಷಯಶ್ಚ ಯೇ ।
ಯಮೋಽಗ್ನಿಸ್ತಾಪಸಃ ಕುತ್ಸಃ ಕುಸೀದೀ ಚಿತ್ರ ಏವ ಚ ॥
ಬಂಧುಪ್ರಭೃತಯಶ್ಚೈವ ಚತ್ವಾರೋ ಭ್ರಾತರಃ ಪೃಥಕ್ ।
ವಿಷ್ಣುಶ್ಚ ನೇಜಮೇಷಶ್ಚ ನಾಮ್ನಾ ಸಂವನನಶ್ಚ ಯಃ ॥
ಏತೇ ತು ಸರ್ವ ಏವಾಸ್ಯ ವಿಶ್ವೈಃ ಸ್ವೈಃ ಕರ್ಮಜೈರ್ಗುಣೈಃ ।
ಸಮಸ್ತೈರಥ ಚ ವ್ಯಸ್ತೈಃ ಪೃಥಕ್ಸೂಕ್ತೇಷು ತುಷ್ಟುವುಃ ॥

(ಬೃ. ದೇ. ೩-೫೫ ರಿಂದ ೬೦).

ಮೇಧಾತಿಥಿ, ಅಗಸ್ತ್ಯ, ಬೃಹದುಕ್ಥ, ಮನು, ಗಯ, ಋಜಿಶ್ವಾ, ವಸುಕರ್ಣ, ಶಾರ್ಯಾತ, ಗೋತಮ, ಲುಶ, ಸ್ವಸ್ತ್ಯಾತ್ರೇಯ, ಪರುಚ್ಛೇಪ, ಕಕ್ಷೀವಾನ್, ಗಾಧಿಪುತ್ರನಾದ ವಿಶ್ವಾಮಿತ್ರ, ಊರ್ವಶೀಪುತ್ರನಾದ ವಸಿಷ್ಠ, ನಾಭಾಕ, ದುವಸ್ಯ, ಮಮತಾಪುತ್ರನಾದ ದೀರ್ಘತಮಸ್ಸು, ವಿಹವ್ಯ, ಕಶ್ಯಪ, ಅವತ್ಸಾರ, ವಾಮದೇವ, ಮಧುಚ್ಛಂದಸ್, ಪಾರ್ಥ, ದಕ್ಷ ಪುತ್ರಿಯಾದ ಅದಿತಿ, ಜುಹೂ, ಗೃತ್ಸಮದ, ಸಪ್ತರ್ಷಿಗಳು, ಯಮ, ಅಗ್ನಿ, ತಾಪಸ, ಕುತ್ಸ, ಕುಸೀದಿ, ತ್ರಿತ, ಬಂಧು ಮತ್ತು ತತ್ಸಹೋದರರು, ವಿಷ್ಣು, ನೇಜಮೇಷ ಮತ್ತು ಸಂವನನ

ಮೇಲೆ ಹೇಳಿದ ಈ ಋಷಿಗಳೆಲ್ಲರೂ ಸಹ ಪ್ರತ್ಯೇಕ ಸೂಕ್ತಗಳಲ್ಲಿ ಅಗ್ನಿಯನ್ನು ವಿಧವಿಧವಾಗಿ ಸ್ತುತಿಸಿದ್ದಾರೆ.

ಏತೇ ತು ಸರ್ವ ಏವಾಸ್ಯ ವಿಶ್ವೈಃ ಸ್ವೈಃ ಕರ್ಮಜೈರ್ಗುಣೈಃ ।
ಸಮಸ್ತೈರಥ ಚ ವ್ಯಸ್ತೈಃ ಪೃಥಕ್ಸೂಕ್ತೇಷು ತುಷ್ಟುವುಃ ॥

(ಬೃ. ದೇ. ೩ ೬೦)

ಅಗ್ನಿದೇವನ ನಾನಾವಿಧವಾದ ಕರ್ಮೋತ್ಪನ್ನವಾದ ವಿಶ್ವಗುಣಗಳ ವರ್ಣನವೇ ವಿಶ್ವೇದೇವತೆಗಳ ವರ್ಣನವು. ಎಂದರೆ, ಬೇರೆ ಬೇರೆ ದೇವತೆಗಳೆಲ್ಲರೂ ಅಗ್ನಿಯ ರೂಪಾಂತರಗಳೇ ಆಗಿರುವುದರಿಂದ ಅನೇಕ ದೇವತೆಗಳ ಸ್ತುತಿಯು ಅಗ್ನಿಯ ಅನೇಕಗುಣಗಳ ಪ್ರಶಂಸನವು. ಮೇಲೆ ನಿರ್ದಿಷ್ಟರಾದ ಸಕಲ ಋಷಿಗಳೂ ಸಹ ತಮ್ಮ ತಮ್ಮ ಕೃತಿಗಳಾದ ವೈಯಕ್ತಿಕವಾದ ಸೂಕ್ತಗಳಲ್ಲಿ ವಿಶ್ವದೇವರೂಪಿಯಾದ ಅಗ್ನಿದೇವನ ವಿಶ್ವಗುಣಗಳನ್ನೇ ಪೂರ್ಣವಾಗಿ ಸ್ತುತಿಸಿದ್ದಾರೆ ಎಂಬುದೇ ತಾತ್ಪರ್ಯವು. ಇದೇ ಅಭಿಪ್ರಾಯವನ್ನೇ ಇನ್ನೂ ಕೆಲವೆಡೆಗಳಲ್ಲೂ ಸ್ಪಷ್ಟವಾಗಿ ತಿಳಿಸಿದೆ. ಉದಾಹರಣೆಗೆ

**ಆಗ್ನೇಯಂ ಸೂಕ್ತಮೈಭಿರ್ಯದ್ವೈಶ್ವದೇವಮಿಹೋಚ್ಯತೇ ।**
**ತದ್ವಿಶ್ವಲಿಂಗಂ ಗಾಯತ್ರಂ ವೈಶ್ವದೇವೇಷು ಶಸ್ಯತೇ ॥**

(ಬೃ ದೇ. ೩-೩೩)

**ಐಭಿರಗ್ನೇ** (ಋ.ಸಂ. ೧.೧೪) ಎಂಬ ಮಂತ್ರದಲ್ಲಿ ಅಗ್ನಿಯನ್ನುದ್ದೇಶಿಸಿದ್ದರೂ ಸಹ ವಿಶ್ವೇದೇವತಾಕವಾಗಿದೆ. ಗಾಯತ್ರೀಚ್ಛಂದಸ್ಸಿನಲ್ಲಿ ನಿರ್ಮಿತವಾಗಿರುವುದರಿಂದ ಈ ಸೂಕ್ತದ ಮಂತ್ರಗಳು ವಿಶ್ವಲಿಂಗಾತ್ಮಕವಾಗಿವೆ ಮತ್ತು ವಿಶ್ವಗುಣಗಳನ್ನೂ ಪ್ರಶಂಸಿಸುವುವಾಗಿವೆ. ಆದುದರಿಂದಲೇ,

**ಯದ್ವೈಭಿರಿತಿ ಚೈತಸ್ಮಿನ್ ವೈಶ್ವದೇವೇಽಗ್ನಿಮರ್ಚತಿ ।**

(೩-೫೧)

ಎಂದು ಇದೇ ಭಾವವನ್ನು ಪದೇಪದೇ ತಿಳಿಸಿದೆ. ಅಲ್ಲದೇ ಅಗ್ನಿಹೋತ್ರಕ್ಕೂ ವಿಶ್ವೇದೇವತೆಗಳಿಗೂ ಇರುವ ಸಂಬಂಧವನ್ನು ವಿವರಿಸುತ್ತಾ ಐತರೇಯಬ್ರಾಹ್ಮಣದಲ್ಲಿ,

**ಯೋ ವಾ ಅಗ್ನಿಹೋತ್ರಂ ವೈಶ್ವದೇವಂ ಷೋಳಶಕಲಂ ಪಶುಷು ಪ್ರತಿಷ್ಠಿತಂ ವೇದ ವೈಶ್ವದೇವೇ-ನಾಗ್ನಿಹೋತ್ರೇಣ ಷೋಳಶಕಲೇನ ಪಶುಷು ಪ್ರತಿಷ್ಠಿತೇನ ರಾಧ್ನೋತಿ ॥**

(ಐ ಬ್ರಾ. ೫.೨೬)

ಹದಿನಾರು ಕಲೆಗಳುಳ್ಳದ್ದೂ, ಪಶುಗಳಲ್ಲಿ ಪ್ರತಿಷ್ಠಿತವಾದುದೂ ಆದ ಅಗ್ನಿಹೋತ್ರವು ವೈಶ್ವದೇವವೆಂದು ಯಾವನು ಅರಿಯುವನೋ ಮತ್ತು ವಿಶ್ವದೇವತಾಕವಾದ ಈ ಅಗ್ನಿಹೋತ್ರವನ್ನಾಚರಿಸುವನೋ ಅವನು ಪಶ್ವಾದಿಸಂಪದ್ಯುಕ್ತನಾಗಿ ಆಗುತ್ತಾನೆ ಎಂದು ಪ್ರಶಂಸಿಸಿದೆ. ಆದುದರಿಂದಲೇ,

**ಯಸ್ಯಾಗ್ನಿಹೋತ್ರಮದರ್ಶಮಪೌರ್ಣಮಾಸಮಚಾತುರ್ಮಾಸ್ಯಮನಾಗ್ರಯಣಮತಿಥಿವರ್ಜಿ-ತಂ ಚ ।**
**ಅಹುತಮವೈಶ್ವದೇವಮವಿಧಿನಾ ಹುತಮಾಸಪ್ತಮಾಂಸ್ತಸ್ಯ ಲೋಕಾನ್ ಹಿನಸ್ತಿ ॥**

(ಮುಂಡಕ. ೧.೨ ೩)

ಅಗ್ನಿಹೋತ್ರವು, ಪೌರ್ಣಮಾಸ, ಚಾತುರ್ಮಾಸ್ಯ, ಆಗ್ರಯಣ, ವೈಶ್ವದೇವ ಇತ್ಯಾದಿ ಕರ್ಮರಹಿತವಾಗಿದ್ದರೆ, ಸಪ್ತ ಲೋಕಗಳಲ್ಲೂ ಸಹ ಪುರುಷನ ಭವಿಷ್ಯಕ್ಕೆ ಕುಂದನ್ನುಂಟುಮಾಡುತ್ತದೆ ಎಂದು ವೈಶ್ವದೇವ ಕ್ರಿಯೆಯ ಪ್ರಾಶಸ್ತ್ಯವನ್ನು ಪ್ರಶಂಸಿಸಿವೆ. ಅಗ್ನಿಯಲ್ಲಿಯೇ ವಿಶ್ವದೇವತೆಗಳೆಲ್ಲರೂ ಅಂತರ್ಗತರಾಗಿದ್ದಾರೆ ಅಥವಾ ಇತರ ಸಕಲ ದೇವತೆಗಳ ಸ್ವರೂಪಗಳೆಲ್ಲವೂ ಅಗ್ನಿಯ ರೂಪಾಂತರಗಳು, ಆದುದರಿಂದಲೇ ಅಗ್ನಿಹೋತ್ರಕ್ಕೂ ವೈಶ್ವದೇವಕರ್ಮಕ್ಕೂ ತಾದಾತ್ಮ್ಯ

ಸಂಬಂಧವು ಎಂಬ ಈ ಅಂಶವನ್ನು ವೈಶ್ವದೇವನಿವಿನ್ಮಂತ್ರದಿಂದ ತಿಳಿಯಬಹುದು. ಇದರಂತೆಯೇ ಇನ್ನೂ ಕೆಲವು ಮಂತ್ರಗಳಲ್ಲೂ ಸಹ ವಿಶ್ವದೇವತೆಗಳು ಅಗ್ನಿಯಲ್ಲಿ ಅಡಗಿರುವ ವಿಷಯವನ್ನು ಸ್ಪಷ್ಟವಾಗಿಯೇ ತಿಳಿಸಿದೆ. ಉದಾಹರಣೆಗೆ–

**ತ್ವಮಗ್ನೇ ವರುಣೋ ಜಾಯಸೇ ಯತ್ತ್ವಂ ಮಿತ್ರೋ ಭವಸಿ ಯತ್ಸಮಿದ್ಧಃ ।**
**ತ್ವೇ ವಿಶ್ವೇ ಸಹಸಸ್ಪುತ್ರ ದೇವಾಸ್ತ್ವ ಮಿಂದ್ರೋ ದಾಶುಷೇ ಮರ್ತ್ಯಾಯ ॥**

(ಋ. ಸಂ. ೫-೩-೧)

ಎಲೈ ಅಗ್ನಿಯೇ, ನೀನೇ ವರುಣನು, ನೀನೇ ಮಿತ್ರನು ಮತ್ತು ನಿನ್ನಲ್ಲೇ ಸಕಲ ವಿಶ್ವದೇವತೆಗಳೂ ಅಂತರ್ಗತರಾಗಿದ್ದಾರೆ, ನಿನ್ನಲ್ಲಿ ಅರ್ಪಿತವಾದ ಹವಿಸ್ಸಿನಿಂದಲೇ ಅವರೆಲ್ಲರೂ ಜೀವಿಸುತ್ತಾರೆ. ನಿನಗರ್ಪಿತವಾಗುವ ಹವಿಸ್ಸೇ ಅವರಿಗೂ ಸೇರತಕ್ಕದ್ದು. ಮತ್ತು ಅವರೆಲ್ಲರಿಗೂ ಅರ್ಪಿತವಾಗತಕ್ಕದ್ದೂ ನಿನ್ನನ್ನೇ ಸೇರತಕ್ಕದ್ದು ಇತ್ಯಾದಿಯಾದ ಪ್ರಶಂಸೆಯಿದೆ. ಆದರೆ ಅವರಾರು ? ಎಷ್ಟು ಸಂಖ್ಯೆಯುಳ್ಳವರು ಎಂಬುದನ್ನು ವೈಶ್ವದೇವನಿವಿನ್ಮಂತ್ರದಲ್ಲಿ ತಿಳಿಸಿದೆ

**ತ್ರೀಣಿ ಶತಾ ತ್ರೀ ಸಹಸ್ರಾಣ್ಯಗ್ನಿಂ ತ್ರಿಂಶಚ್ಚ ದೇವಾ ನವ ಚಾಸಪರ್ಯನ್ ।**
**ಔಕ್ಷನ್ ಘೃತೈರಸ್ತೃಣನ್ಬರ್ಹಿರಸ್ಮಾ ಆದಿದ್ಧೋತಾರಂ ನ್ಯಸಾದಯಂತ ॥**

(ಋ ಸಂ ೩-೯-೯).

ಎಂಬುದು ವೈಶ್ವದೇವನಿವಿನ್ಮಂತ್ರವೆಂದು ಪರಿಗಣಿತವಾಗಿದೆ. ಇದರಲ್ಲಿ ದೇವತೆಗಳ ಸಂಖ್ಯಾನಿರ್ದೇಶವಿದೆ ಇದೇ ವಿಶ್ವೇದೇವತೆಗಳ ಸಂಖ್ಯೆ ಎಂದು ಬೃಹದಾರಣ್ಯಕದಲ್ಲಿ ಇದರ ವಿವರಣೆಯನ್ನು ತಿಳಿಸಿದೆ ಅಗ್ನ್ಯಂತರ್ಗತವಾದ ಈ ಸಕಲದೇವತೆಗಳ ಸಂಖ್ಯೆಯನ್ನು ವಿವರಿಸುತ್ತಾ —

**ಅಥ ಹೈನಂ ವಿದಗ್ಧಃ ಶಾಕಲ್ಯಃ ಪಪ್ರಚ್ಛ ಕತಿ ದೇವಾ ಯಾಜ್ಞವಲ್ಕ್ಯೇತಿ ಸ ಹೈತಯೈವ ನಿವಿದಾ ಪ್ರತಿಪೇದೇ ಯಾವಂತೋ ವೈಶ್ವದೇವಸ್ಯ ನಿವಿದುಚ್ಯಂತೇ ತ್ರಯಶ್ಚ ತ್ರೀ ಚ ಶತಾ ತ್ರಯಶ್ಚ ತ್ರೀ ಚ ಸಹಸ್ರೇತ್ಯೋಮಿತಿ ।**

(ಬೃ. ಉ ೩-೯-೧)

ಎಂದು ತಿಳಿಸಿದೆ ಮೇಲೆ ಉದ್ಧೃತವಾಗಿರುವ ಋ ಸಂ. ೩-೯-೯ ನೇ ಮಂತ್ರದ ಭಾಷ್ಯದಲ್ಲಿ ಸಾಯಣರು ಈ ಉಪನಿಷದ್ವಾಕ್ಯವನ್ನು ಉದಾಹರಿಸಿ ವಿವರಿಸಿದ್ದಾರೆ. ಇಲ್ಲಿ ವಿದಗ್ಧಶಾಕಲ್ಯನಿಗೂ ಯಾಜ್ಞವಲ್ಕ್ಯನಿಗೂ ದೇವತಾ ಸಂಖ್ಯೆಗಳ ವಿಷಯದಲ್ಲಿ ನಡೆದ ಸಂಭಾಷಣೆಯಿರುತ್ತದೆ.

**ವಿದಗ್ಧ ಶಾಕಲ್ಯ**—ಯಾಜ್ಞವಲ್ಕ್ಯನೇ, ದೇವತೆಗಳ ಒಟ್ಟು ಸಂಖ್ಯೆಯೆಷ್ಟು ? **ಯಾಜ್ಞವಲ್ಕ್ಯಃ**— ವಿಶ್ವದೇವನಿವಿನ್ಮಂತ್ರದಲ್ಲಿ ನಿರ್ದಿಷ್ಟರಾದ ಸಂಖ್ಯೆಯೇನಿದೆಯೋ ಅದೇ ವಿಶ್ವೇದೇವತೆಗಳ ಸಂಖ್ಯೆ. ಎಂದರೆ, ಮುನ್ನೂರ ಮೂರು ಮತ್ತು ಮೂರುಸಾವಿರದ ಮೂರು ಒಟ್ಟು ಮೂರುಸಾವಿರದ ಮುನ್ನೂರಆರು. ಆದರೆ ಈ ಸಂಖ್ಯೆಯು ಬೇರೆಡೆಯಲ್ಲಿ ಹೇಳಿರುವ ಸಂಖ್ಯೆಗಿಂತ ಕೊಂಚ ವ್ಯತ್ಯಸ್ತವಾಗಿದೆ. ಅದರ ಪ್ರಕಾರ ೧೧ × ೩ = ೩೩ ನ್ನು ಸೇರಿಸಿ ಕೊಳ್ಳಬೇಕು. ಎಂದರೆ ಒಟ್ಟು ಮೂರುಸಾವಿರದಮುನ್ನೂರಮುವ್ವತ್ತೊಂಭತ್ತು. ಇದೇ ಅಗ್ನ್ಯಂತರ್ಗತವಾದ ವಿಶ್ವೇದೇವತೆಗಳ ಸಂಖ್ಯೆ. ಈ ವಿಶ್ವೇದೇವತೆಗಳ ಪೂಜೆಯೇ ಅಗ್ನಿಪೂಜೆ ಮತ್ತು ಅಗ್ನಿಪೂಜೆಯೇ ವಿಶ್ವೇದೇವತೆಗಳ ಪೂಜೆ.

ಈ ರೀತಿಯಾದ ವರ್ಣನಗಳಲ್ಲಿ ವಿಶ್ವೇದೇವತೆಗಳು ಅಗ್ನ್ಯಂತರ್ಗತರಾಗಿರುವರು ಎಂದು ಹೇಳಿರುವುದು ಒಂದು ಕ್ರಮವಾದರೆ, ವಿಶ್ವೇದೇವತೆಗಳು ಪಂಚಜನಾತ್ಮಕರು ಎಂದು ಹೇಳಿ ವರ್ಣಿತವಾಗಿರುವ ಪ್ರಕರಣಗಳೂ ಕೆಲವಿವೆ. ಪಂಚಜನರೆಂದರೆ, ಇಂತಹ ಸಂದರ್ಭಗಳಲ್ಲಿ, ದೇವತೆಗಳು, ಮಾನವರು, ಯಕ್ಷರು, ಗಂಧರ್ವರು ಮತ್ತು ಪಿತೃಗಳು. ಈ ಅಂಶವನ್ನು ವೈಶ್ವದೇವಶಸ್ತ್ರಪ್ರಕರಣದಲ್ಲಿ ಈರೀತಿ ವಿವರಿಸಿದೆ.

> **ಪಾಂಚಜನ್ಯಂ ವಾ ಏತದುಕ್ಥಂ ಯದ್ವೈಶ್ವದೇವಂ ಸರ್ವೇಷಾಂ ವಾ ಏತತ್ಪಂಚಜನಾನಾಮುಕ್ಥಂ ದೇವಮನುಷ್ಯಾಣಾಂ ಗಂಧರ್ವಾಪ್ಸರಸಾಂ ಸರ್ಪಾಣಾಂ ಚ ಪಿತ್ರ್ಯಾಣಾಂ ಚೈತೇಷಾಂ ವಾ ಏತತ್ಪಂಚಜನಾನಾಮುಕ್ಥಂ ಸರ್ವ ಏನಂ ಪಂಚಜನಾ ವಿದುಃ ।**

(ಐ. ಬ್ರಾ. ೩-೩೧)

ವೈಶ್ವದೇವಕರ್ಮವು ಪಾಂಚಜನ್ಯವಾದುದು. ಎಂದರೆ ಐದುಗುಂಪಿನ ಜನರಿಗೂ ಸಂಬಂಧಿಸಿದುದು ಎಂದರೆ, ದೇವ, ಮನುಷ್ಯ, ಗಂಧರ್ವ, ಅಪ್ಸರಸ್ ಮತ್ತು ಪಿತೃಗಳು. ಈ ತತ್ತ್ವವನ್ನರಿತವನು, ಈ ಕರ್ಮಕುಶಲನು, ಎಂದು ವೈಶ್ವದೇವ ಕರ್ಮಪ್ರಶಂಸೆಯೂ ವಿಶ್ವೇದೇವತೆಗಳ ವರ್ಣನವೂ ಇರುತ್ತದೆ. ಈ ಕರ್ಮದ ಮಹತ್ವವನ್ನು ಪ್ರಶಂಸಿಸುವ ಇತರ ಸನ್ನಿವೇಶಗಳನ್ನೂ ಮುಂದೆ ತಿಳಿಸಲಾಗುತ್ತದೆ.

ಹೀಗೆ ಸರ್ವದೇವತಾಮಯನಾದ ಅಗ್ನಿಯಲ್ಲಿಯೇ ವಿಶ್ವೇದೇವತೆಗಳು ಅಡಕರಾಗಿರುವರು ಎಂಬುದು ಒಂದು ಸನ್ನಿವೇಶ, ವಿಶ್ವೇದೇವತೆಗಳಲ್ಲಿಯೇ ದೇವಮಾನವಾದಿ ಸಕಲಭೂತಗಳೂ ಅಡಕವಾಗಿರುವುವು ಎಂಬುದು ಇನ್ನೊಂದು ಸನ್ನಿವೇಶ. ಇವೇ ಅಲ್ಲದೇ, ಮೂರನೇ ಬಗೆಯಾದ ವರ್ಣನವೂ ವೈದಿಕವಾಕ್ಯಗಳಲ್ಲಿ ಪ್ರಸಿದ್ಧವಾಗಿವೆ. ವಿಶ್ವೇದೇವತೆಗಳು ಸೃಷ್ಟಿನಿಯಮನದಲ್ಲಿ ವರ್ಣಪ್ರಭೇದವನ್ನು ತೋರಿಸುವ ಒಂದು ಶಕ್ತಿಸಂಜ್ಞೆ ಎಂಬುದೇ ಈ ಮೂರನೆಯದು. ಈ ವರ್ಣನದ ಪ್ರಕಾರ ಅಗ್ನಿ, ಇಂದ್ರ, ವಿಶ್ವೇದೇವತೆಗಳು, ಈ ಮೂವರೂ ಮೂರು ವರ್ಣನಗಳನ್ನು ಪ್ರತಿಬಿಂಬಿಸತಕ್ಕ ದೇವತಾವಿಶೇಷಗಳು. ಋಕ್ಸಂಹಿತೆಯಲ್ಲಿ ಸೂಕ್ತವಿಭಾಗಕ್ರಮವೂ ಸಹ ಈ ಅಂಶವನ್ನು ಸೂಚಿಸುವುದಾಗಿದೆ. ಎಂಟನೆಯ ಮತ್ತು ಒಂಭತ್ತನೆಯ ಮಂಡಲಗಳನ್ನು ಬಿಟ್ಟರೆ ಉಳಿದ ಎಲ್ಲಾ ಮಂಡಲಗಳಲ್ಲೂ ಸಹ ಆದಿಯಲ್ಲಿ ಅಗ್ನಿ ಪ್ರಶಂಸಕವೂ ಅನಂತರ ಇಂದ್ರಪ್ರಶಂಸಕವೂ ಆದ ಸೂಕ್ತಗಳಿರುತ್ತವೆ. ತದನಂತರ ಸಾಧಾರಣವಾಗಿ ವಿಶ್ವೇದೇವ ಪ್ರಶಂಸಕವಾದ ಸೂಕ್ತಗಳು ಮುಂದುವರಿಯುತ್ತವೆ. ಮುಂದೆ ಬ್ರಾಹ್ಮಣಾದಿಗಳಲ್ಲೆಲ್ಲಾ ಅಗ್ನಿ, ಇಂದ್ರ ಮತ್ತು ವಿಶ್ವದೇವತೆಗಳಿಗೂ, ಬ್ರಾಹ್ಮ, ಕ್ಷಾತ್ರ ಮತ್ತು ವೈಶ್ಯ ಈ ಮೂರು ವರ್ಣಗಳಿಗೂ ಕ್ರಮವಾಗಿ ತಾದಾತ್ಮ್ಯವನ್ನು ತೋರಿಸಿದೆ. ಕೆಲವು ಉದಾಹರಣೆಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ.

> **ಪ್ರಜಾಪತಿರ್ವಾವ ಜ್ಯೇಷ್ಠಸ್ಸ ಹ್ಯೇತೇನಾಗ್ರೇಽಯಜತ ಪ್ರಜಾಪತಿರಕಾಮಯತ ಪ್ರ ಜಾಯೇ-ಯೇತಿ ಸ ಮುಖತಸ್ತ್ರಿವೃತಂ ನಿರಮಿಮೀತ ತಮಗ್ನಿರ್ದೇವತಾನ್ವಸೃಜತ ಗಾಯತ್ರೀ-ಚ್ಛಂದೋ ರಥಂತರꣳಸಾಮ ಬ್ರಾಹ್ಮಣೋ ಮನುಷ್ಯಾಣಾಮಜಃ ಪಶೂನಾಂ . . . ॥**

(ತೈ. ಸಂ. ೭-೧-೧-೪)

ಎಲ್ಲಕ್ಕಿಂತಲೂ ಪ್ರಥಮತಃ ಯಜ್ಞಕರ್ಮವನ್ನಾಚರಿಸಿದುದರಿಂದ ಪ್ರಜಾಪತಿಯೇ ಸರ್ವಶ್ರೇಷ್ಠನು. ಆಗ "ನಾನು ಸಂತತಿ ಯನ್ನು ಪಡೆಯಬೇಕು" ಎಂದು ಆಶಿಸಿದನು. ಆಗ ತ್ರಿವೃತವನ್ನು ಮುಖದಿಂದ ಪ್ರಕಟಿಸಿದನು. ಅದರಿಂದ ಅಗ್ನಿ

ದೇವನೂ, ಗಾಯತ್ರೀಚ್ಛಂದಸ್ಸೂ, ರಥಂತರಸಾಮವೂ, ಮಾನವರಲ್ಲಿ ಬ್ರಾಹ್ಮಣರೂ ಪಶುಗಳಲ್ಲಿ ಅಜವೂ ಉತ್ಪನ್ನವಾದವು. ಮುಖದಿಂದ ಉತ್ಪನ್ನವಾದುದರಿಂದ ಅವೆಲ್ಲವೂ ಶ್ರೇಷ್ಠತೆಯನ್ನು ಪಡೆದವು.

**ಉರಸೋ ಬಾಹುಭ್ಯಾಂ ಪಂಚದಶಂ ನಿರಮಿಮೀತ ತಮಿಂದ್ರೋ ದೇವತಾನ್ವಸೃಜ್ಯತ ತ್ರಿಷ್ಟುಪ್ಛಂದೋ ಬೃಹತ್ಸಾಮ ರಾಜನ್ಯೋ ಮನುಷ್ಯಾಣಾಮವಿಃ ಪಶೂನಾಂ ತಸ್ಮಾತ್ತೇ ವೀರ್ಯಾವಂತೋ ವೀರ್ಯಾದ್ಧ್ಯಸೃಜ್ಯಂತ ।**

(ತೈ. ಸಂ. ೭-೧-೧-೪-೫)

ಉರಸ್ಸಿನಿಂದಲೂ, ಬಾಹುಗಳಿಂದಲೂ ಪಂಚದಶವನ್ನು ಪ್ರಕಟಿಸಿದನು. ಆದರಿಂದ ಇಂದ್ರದೇವನೂ ತ್ರಿಷ್ಟುಪ್ಛಂದಸ್ಸೂ, ಬೃಹತ್ಸಾಮವೂ, ಮಾನವರ ನಡುವೆ ಕ್ಷತ್ರಿಯರೂ, ಪಶುಗಳ ನಡುವೆ ಮೇಷಗಳೂ ಉತ್ಪನ್ನವಾದುವು. ಬಾಹುವಿನ ವೀರ್ಯದಿಂದ ಜನಿಸಿದುದರಿಂದ ಅವೆಲ್ಲವೂ ವೀರ್ಯಸೂಚಕವಾದವು.

**ಮಧ್ಯತಸ್ಸಪ್ತದಶಂ ನಿರಮಿಮೀತ ತಂ ವಿಶ್ವೇದೇವಾ ದೇವತಾ ಅನ್ವಸೃಜ್ಯಂತ ಜಗತೀ ಛಂದೋ ವೈರೂಪಗ್ಂಸಾಮ ವೈಶ್ಯೋ ಮನುಷ್ಯಾಣಾಂ ಗಾವಃ ಪಶೂನಾಂ ತಸ್ಮಾತ್ತ ಆದ್ಯಾ ಅನ್ನಧಾನಾದ್ಧ್ಯಸೃಜ್ಯಂತ ತಸ್ಮಾದ್ಭೂಯಾಗ್ಂಸೋಽನ್ಯೇಽಭ್ಯೋ ಭೂಯಿಷ್ಠಾ ಹಿ ದೇವತಾ ಅನ್ವಸೃಜ್ಯಂತ ॥**

(ತೈ. ಸಂ ೭-೧-೧-೫)

ಅನಂತರ, ತನ್ನ ಮಧ್ಯಭಾಗದಿಂದ ಸಪ್ತದಶಸ್ತೋಮವನ್ನು ಪ್ರಕಟಿಸಿದನು. ಆದರಿಂದ ವಿಶ್ವೇದೇವತೆಗಳು ಉತ್ಪನ್ನರಾದರು. ಛಂದಸ್ಸುಗಳಲ್ಲಿ ಜಗತಿಯೂ, ಸಾಮಗಳಲ್ಲಿ ವೈರೂಪವೂ ಪ್ರಜೆಗಳಲ್ಲಿ, ವೈಶ್ಯರೂ, ಪಶುಗಳಲ್ಲಿ ಗೋವುಗಳೂ ಉತ್ಪನ್ನವಾದವು. ಇವೆಲ್ಲವೂ ಅನ್ನಕೋಶದಿಂದ ಉತ್ಪನ್ನವಾದುದರಿಂದ ಅನ್ನಸಂಪದ್ಯುಕ್ತವೂ ಭೋಗಾರ್ಹವೂ ಆದವು. ವಿಶ್ವೇದೇವತೆಗಳ ಸಂಬಂಧಿಗಳಾದುದರಿಂದ ಇವುಗಳ ಸಂಖ್ಯೆಯೂ ಸಹ ಅತ್ಯಧಿಕವಾದುವು, ಇತ್ಯಾದಿಯಾಗಿ ಅಗ್ನಿ, ಇಂದ್ರ ಮತ್ತು ವಿಶ್ವೇದೇವತೆಗಳ ಉತ್ಪತ್ತಿಕ್ರಮವನ್ನೂ, ಶಕ್ತಿಪ್ರಭೇದಗಳನ್ನೂ ತಿಳಿಸಿವೆ. ಇದೇ ಅಂಶವನ್ನು ಶತಪಥಬ್ರಾಹ್ಮಣದಲ್ಲಿಯೂ ಕೆಳಗೆ ಹೇಳಿರುವಂತೆ ವಿವರಿಸಿದೆ

**ಕ್ಷತ್ರಂ ವಾ ಇಂದ್ರಾಗ್ನೀ । ವಿಶೋ ವಿಶ್ವೇದೇವಾ ಯತ್ರ ವೈ ಕ್ಷತ್ರಮುಜ್ಜಯತ್ಯನ್ವಾಭಕ್ತಾ ವೈ ತತ್ರ ವಿಡ್ವದ್ವಿಶ್ವಾನ್ದೇವಾನನ್ವಾಭಜತಾಂ ತಸ್ಮಾದೇಷ ವೈಶ್ವದೇವಶ್ಚರುರ್ಭವತಿ ।**

(ಶ. ಬ್ರಾ. ೨-೪-೩-೬)

ಇಂದ್ರಾಗ್ನಿಗಳು ಕ್ಷಾತ್ರಸ್ವಭಾವದವರು. ವಿಶ್ವದೇವತೆಗಳು ವೈಶ್ಯಸ್ವಭಾವದವರು ಕ್ಷತ್ರಿಯರು ಎಲ್ಲೆಲ್ಲಿ ಜಯವನ್ನು ಪಡೆಯುವರೋ, ಅಲ್ಲೆಲ್ಲಾ ವೈಶ್ಯರೂ ಭಾಗವನ್ನು ಹೊಂದುವರು. ಆದುದರಿಂದಲೇ, ಇಂದ್ರಾಗ್ನಿಗಳ ಜಯದಲ್ಲಿ ವಿಶ್ವದೇವತೆಗಳೂ ಭಾಗವಹಿಸುವರು ಎಂದು ತಿಳಿಸಿದೆ. ಈ ವರ್ಣವಿಭಾಗವು ಒಂದು ವಿಧದಲ್ಲಿ ಸಹಜವಾಗಿಯೇ ಇದೆಯೆಂದು ಹೇಳಬಹುದು. ಹೇಗೆಂದರೆ, ಯಜ್ಞಾಗ್ನಿರೂಪದಲ್ಲಿ ದೇವತೆಗಳನ್ನು ಯಜ್ಞಕ್ಕೆ ಬರಮಾಡುತ್ತಲೂ, ದೇವತೆಗಳಿಗೆ ಹವಿಸ್ಸನ್ನು ವಹಿಸುತ್ತಲೂ ಮತ್ತು ದೇವಮಾನವರಿಗೆ ಸಂಬಂಧವನ್ನು ಬೆಳೆಸುತ್ತಲೂ ಅಗ್ನಿಯು ಪುರೋಹಿತರೂಪದಲ್ಲಿರುತ್ತಾನೆ. ತೀಕ್ಷ್ಣವಾದ ತೇಜಸ್ಸೂ ಮತ್ತು ವರ್ಚಸ್ಸೂ ಸಹ ಬ್ರಾಹ್ಮಣಲಕ್ಷಣಗಳು. ಅಸುರಾದಿ

ಗಳೊಂದಿಗೆ ಸರ್ವದಾ ಯುದ್ಧಮಾಡಿ ಜಯಲಾಭವನ್ನು ಪಡೆಯುವ ಇಂದ್ರನು ಸಹಜವಾದ ಕ್ಷಾತ್ರಶಕ್ತಿಯನ್ನು ಹೊಂದಿರುತ್ತಾನೆ. ಇವನ್ನುಳಿದರೆ ಉಳಿದ ಪ್ರಜೆಗಳು ವೈಶ್ಯರೆಂದು ಕರೆಯಲ್ಪಡುವಂತೆ, ಇಂದ್ರಾಗ್ನಿಗಳನ್ನುಳಿದ ಇತರ ದೇವತೆಗಳು ವೈಶ್ಯಗುಂಪಿಗೆ ಸೇರಿದವರು ಎಂದಿರುವ ಈ ವಿಭಾಗದಲ್ಲಿ ವಿಶ್ವೇದೇವತೆಗಳು ಇಂದ್ರಾಗ್ನಿಗಳಿಗಿಂತಲೂ ಭಿನ್ನರೆಂದೂ ಇಂದ್ರಾಗ್ನಿಗಳ ತೇಜಸ್ಸಾಗಲಿ ಅಥವಾ ವೀರ್ಯವಾಗಲಿ ಅವರಿಗಿರುವಷ್ಟಿಲ್ಲದವರೆಂದೂ ಅರ್ಥವಾಗುತ್ತದೆ.

ಈ ವಿಭಾಗಾನುಸಾರವಾಗಿಯೇ ಮೂರುಸವನಗಳಲ್ಲೂ ಇವರ ಭಾಗಗಳು ಕ್ಲೃಪ್ತವಾಗಿವೆ ಈ ವಿಭಾಗ ಕ್ರಮವನ್ನು ಸಂಹಿತಾ ಮತ್ತು ಬ್ರಾಹ್ಮಣವಾಕ್ಯಗಳಲ್ಲಿ ಕಾಣಬಹುದು.

**ಪ್ರಜಾಪತಿರ್ವೈ ಯಜ್ಞಂ ಛಂದಾಸಿ ದೇವೇಭ್ಯೋ ಭಾಗಧೇಯಾನಿ ವ್ಯಭಜತ್ಸ ಗಾಯತ್ರೀ-**
**ಮೇವಾಗ್ನಯೇ ವಸುಭ್ಯಃ ಪ್ರಾತಃಸವನೇಽಭಜತ್ತ್ರಿಷ್ಟುಭಮಿಂದ್ರಾಯ ರುದ್ರೇಭ್ಯೋ**
**ಮಧ್ಯಂದಿನೇ ಜಗತೀಂ ವಿಶ್ವೇಭ್ಯೋ ದೇವೇಭ್ಯ ಆದಿತ್ಯೇಭ್ಯಸ್ತೃತೀಯಸವನೇ ........॥**

(ಐ. ಬ್ರಾ, ೩-೧೩)

ಪ್ರಜಾಪ್ರತಿಯು ಯಜ್ಞಭಾಗಗಳನ್ನೂ ಛಂದಸ್ಸುಗಳನ್ನೂ ದೇವತೆಗಳಿಗೆ ಹಂಚಿದನು. ಪ್ರಾತಃಸವನದಲ್ಲಿ ಗಾಯತ್ರಿಯನ್ನು ಅಗ್ನಿಗೂ ಮತ್ತು ವಸುಗಳಿಗೂ, ಮಾಧ್ಯಂದಿನ ಸವನದಲ್ಲಿ ತ್ರಿಷ್ಟುಪ್ಪನ್ನು ಇಂದ್ರನಿಗೂ ಮತ್ತು ರುದ್ರರಿಗೂ, ತೃತೀಯ ಸವನದಲ್ಲಿ ಜಗತಿಯನ್ನು ವಿಶ್ವೇದೇವತೆಗಳಿಗೂ ಮತ್ತು ಆದಿತ್ಯರಿಗೂ ಹಂಚಿದನು, ಎಂದಿರುವ ಇದೇ ಪ್ರಕರಣವು ಶತಪಥ ಬ್ರಾಹ್ಮಣದಲ್ಲಿ ಕೊಂಚ ವ್ಯತ್ಯಸ್ತವಾಗಿದೆ. ಅದು ಹೇಗೆಂದರೆ,

**ಅಥ ಪ್ರಾತಃ । ಆಗ್ನೇಯಃ ಪುರೋಡಾಶೋ ಭವತ್ಯೈಂದ್ರಗ್ಂಸಾಂನಾಯ್ಯಂ ಪ್ರಾತಃಸವನ**
**ಮೇವಾಸ್ಯಾಗ್ನೇಯಃ ಪುರೋಡಾಶ ಆಗ್ನೇಯಗ್ಂಹಿ ಪ್ರಾತಃಸವನಮಥೈಂದ್ರಗ್ಂಸಾಂ-**
**ನಾಯ್ಯಂ ಮಾಧ್ಯಂದಿನಮೇವಾಸ್ಯ ತತ್ಸವನಮೈಂದ್ರಗ್ಂಹಿ ಮಾಧ್ಯಂದಿನಗ್ಂಸವನಂ ।**

(ಶ ಬ್ರಾ. ೨-೪-೪-೧೨)

ಪ್ರಾತಃಕಾಲದಲ್ಲಿ ಆಗ್ನೇಯವಾದ ಪುರೋಡಾಶವೂ ಇಂದ್ರಾರ್ಥವಾದ ಸಾಂನಾಯ್ಯವೂ ಅರ್ಪಿತವಾಗುವುದು ಪ್ರಾತಃ-ಸವನವೇ ಅಗ್ನಿಪ್ರೀತಿಕರವಾದುದು. ಅದರಂತೆಯೇ ಮಾಧ್ಯಂದಿನಸವನವು ಇಂದ್ರಪ್ರೀತಿಕರವಾದುದು.

**ಅಥ ಯಶ್ಶ್ವೋವೇದ್ಯುಃ । ಐಂದ್ರಾಗ್ನೇನ ಯಜತೇಽಮಾವಾಸ್ಯಾಯಾಂ ತೃತೀಯಸವನ-**
**ಮೇವಾಸ್ಯ ತದ್ವೈಶ್ವದೇವಂ ವೈ ತೃತೀಯಸವನಮಿಂದ್ರಾಗ್ನೀ ವೈ ವಿಶ್ವದೇವಾಃ ॥**

(ಶ. ಬ್ರಾ. ೨-೪-೪-೧೩)

ಅಮಾವಾಸ್ಯೆಯ ದಿನ ಅರ್ಪಿತವಾಗುವ ಐಂದ್ರಾಗ್ನಿ ಸಂಬಂಧವಾದ ಪುರೋಡಾಶವೇ ವೈಶ್ವದೇವೋದ್ದಿಷ್ಟವಾದ ತೃತೀಯ ಸವನವು. ಇಂದ್ರಾಗ್ನಿಗಳೇ ವಿಶ್ವೇದೇವತೆಗಳು, ಎಂದು ವರ್ಣಿತವಾಗಿರುವ ಈ ಸಂದರ್ಭದಲ್ಲಿ ಇಂದ್ರಾಗ್ನಿಗಳಿಗೂ ವಿಶ್ವೇದೇವತೆಗಳಿಗೂ ತಾದಾತ್ಮ್ಯವನ್ನು ತಿಳಿಸಿದೆ.

ಇದಲ್ಲದೇ, ವಿಶ್ವೇದೇವತೆಗಳಿಗೆ ತೃತೀಯಸವನದಲ್ಲಿ ಪ್ರಾಧಾನ್ಯವುಂಟು ಎಂದು ತಿಳಿಸುವ ಒಂದು ಐತಿಹಾಸಿಕ ಸಂದರ್ಭವೂ ಐತರೇಯ ಬ್ರಾಹ್ಮಣದಲ್ಲಿ ಈ ರೀತಿ ವರ್ಣಿತವಾಗಿದೆ.

**ದೇವಾ ವೈ ಯಜ್ಞಮತನ್ವತ ತಾಂಸ್ತನ್ವಾನಾನಸುರಾ ಅಭ್ಯಾಯನ್ ಯಜ್ಞವೇಶಸಮೇಷಾಂ ಕರಿಷ್ಯಾಮ ಇತಿ.. . . . . ....**
**ತೇ ವೈ ಪುರಸ್ತಾದಪಹತಾ ಅಸುರಾಃ ಪಶ್ಚಾತ್ಪರೀತ್ಯ ಪ್ರಾವಿಶಂಸ್ತೇ ದೇವಾಃ ಪ್ರತಿಬುಧ್ಯ ವಿಶ್ವಾನ್ದೇವಾನಾತ್ಮಾನಂ ಪಶ್ಚಾತ್ತೃತೀಯಸವನೇ ಪತ್ಯಾಹಂಸ್ತೇ ವಿಶ್ವೈರೇವ ದೇವೈರಾತ್ಮಭಿಃ ಪಶ್ಚಾತ್ತೃತೀಯಸವನೇಽಸುರರಕ್ಷಾಂಸ್ಯಪಾಘ್ನತ ತಥೈವೈತದ್ಯಜಮಾನಾ ವಿಶ್ವೈರೇವ ದೇವೈ-ರಾತ್ಮಭಿಃ ಪಶ್ಚಾತ್ತೃತೀಯಸವನೇಽಸುರರಕ್ಷಾಂಸ್ಯಪಘ್ನತೇ ತಸ್ಮಾದ್ವೈಶ್ವದೇವಂ ತೃತೀಯ-ಸವನಂ ||**

(ಐ ಬ್ರಾ ೬-೪)

ದೇವತೆಗಳು ಯಜ್ಞವನ್ನು ನೆರವೇರಿಸಬೇಕೆಂದು ಪ್ರಯತ್ನಿಸಿದಾಗ ಅಸುರರು ಪ್ರವೇಶಿಸಿ "ನಾವು ಇದಕ್ಕೆ ವಿಘ್ನವನ್ನುಂಟು ಮಾಡುವೆವು" ಎಂದು ಪ್ರಯತ್ನಿಸಿದರು ಆಗ ಪ್ರಾತಃ ಸವನದಲ್ಲಿ ಮಿತ್ರಾವರುಣರ ಸಹಾಯದಿಂದ ದಕ್ಷಿಣದಿಕ್ಕಿನಿಂದ ಪ್ರವೇಶಿಸಿದ ಅಸುರರನ್ನು ಓಡಿಸಿದರು. ಇಂದ್ರನು ಮಧ್ಯಭಾಗಕ್ಕೆ ರಕ್ಷಕನಾದನು., ಮತ್ತು ಇಂದ್ರಾಗ್ನಿಗಳು ಒಟ್ಟಿಗೆ ಸೇರಿ ಉತ್ತರದಿಕ್ಪಾಲಕರಾದರು. ಅಗ್ನಿಯು ಮುಂಭಾಗಕ್ಕೆ ರಕ್ಷಕನಾದನು ಮುಂಭಾಗದ ಪ್ರವೇಶಕ್ಕೆ ಅವಕಾಶ ವಿಲ್ಲದ ಅಸುರರು ಹಿಂಭಾಗದಿಂದ ಪ್ರವೇಶಿಸತೊಡಗಿದರು ಆಗ ದೇವತೆಗಳು ತೃತೀಯ ಸವನದಲ್ಲಿ ವಿಶ್ವೇದೇವತೆಗಳನ್ನು ಅಲ್ಲಿ ಪಾಲಕರನ್ನಾಗಿ ನಿಯಮಿಸಿದರು. ಅವರ ಸಹಾಯದಿಂದ ಹಿಂಭಾಗದಿಂದ ಪ್ರವೇಶಿಸುತ್ತಿದ್ದ ಅಸುರರನ್ನು ಓಡಿಸಿ ದರು ಆದುದರಿಂದಲೇ ತೃತೀಯಸವನದಲ್ಲಿ ವಿಶ್ವೇದೇವತೆಗಳಿಗೆ ಪ್ರಾಧಾನ್ಯವಿರುತ್ತದೆ. ಈತತ್ತ್ವವನ್ನರಿತವನು ಅಸುರ ರನ್ನು ಓಡಿಸಲು ಸಮರ್ಥನಾಗುತ್ತಾನೆ—

ಹೀಗೆ ಬ್ರಾಹ್ಮಣಾದಿಗಳಲ್ಲಿ, ಅಗ್ನಿ, ಇಂದ್ರ, ವಿಶ್ವೇದೇವತಗಳು ಎಂಬ ಕ್ರಮವಿದ್ದರೆ, ಉಪನಿಷತ್ತುಗಳಲ್ಲಿ ವಸು, ರುದ್ರ, ಆದಿತ್ಯ ಮತ್ತು ವಿಶ್ವೇದೇವತೆಗಳು ಎಂಬ ಕ್ರಮವಿರುತ್ತದೆ ಹೇಗೆಂದರೆ—

**ಬ್ರಹ್ಮವಾದಿನೋ ವದಂತಿ ಯದ್ವಸೂನಾಂ ಪ್ರಾತಃಸವನಂ ರುದ್ರಾಣಾಂ ಮಾಧ್ಯಂದಿನಂ ಸವನ-ಮಾದಿತ್ಯಾನಾಂ ಚ ವಿಶ್ವೇಷಾಂ ಚ ದೇವಾನಾಂ ತೃತೀಯಸವನಂ |**

(ಛಾ ಉ ೨-೨೪-೧)

ವಸುಗಳಿಗೆ ಪ್ರಾತಃಸವನವೂ, ರುದ್ರರಿಗೆ ಮಾಧ್ಯಂದಿನಸವನವೂ ಆದಿತ್ಯ ಮತ್ತು ವಿಶ್ವೇದೇವತೆಗಳಿಗೆ ತೃತೀಯ ಸವನವೂ ವಿಹಿತವಾಗಿವೆಯೆಂದು ಬ್ರಹ್ಮಜ್ಞಾನಿಗಳು ಹೇಳಿದ್ದಾರೆ.

**ಅಥ ಜುಹೋತಿ ನಮ ಆದಿತ್ಯೇಭ್ಯಶ್ಚ ವಿಶ್ವೇಭ್ಯಶ್ಚ ದೇವೇಭ್ಯೋ ದಿವಿಕ್ಷಿದ್ಭ್ಯೋ ಲೋಕಕ್ಷಿದ್ಭ್ಯೋ ಲೋಕಂ ನೋ ಯಜಮಾನಾಯ ವಿಂದತ |**

(ಛಾ ಉ ೨-೨೪-೧೧)

**ತಸ್ಮಾ ಆದಿತ್ಯಾಶ್ಚ ವಿಶ್ವೇ ಚ ದೇವಾಸ್ತೃತೀಯಸವನಂ ಸಂಪ್ರಯಚ್ಛಂತ್ಯೇಷ ಹ ವೈ ಯಜ್ಞಸ್ಯ ಮಾತ್ರಾಂ ವೇದ ಯ ಏವಂ ವೇದ ಯ ಏವಂ ವೇದ ||**

(ಛಾ. ಉ. ೨-೨೪-೧೬)

ಅನಂತರ, ಆದಿತ್ಯರಿಗೆ ನಮಸ್ಕಾರವು, ವಿಶ್ವೇದೇವತೆಗಳಿಗೆ ನಮಸ್ಕಾರವು. ಅಂತರಿಕ್ಷಸ್ಥರೂ, ಪೃಥ್ವೀಸ್ಥರೂ ಆದ ಈ ದೇವತೆಗಳಿಗೆ ನಮಸ್ಕಾರವು. ಯಜ್ಞಕರ್ತನಾದ ನನ್ನ ವಾಸಕ್ಕೆ ಒಂದು ಲೋಕವನ್ನು ಸಿದ್ಧಪಡಿಸಿ ಎಂದು ಪ್ರಾರ್ಥಿಸಿದಾಗ ಆದಿತ್ಯರೂ, ವಿಶ್ವೇದೇವತೆಗಳೂ ಅವನನ್ನು ತೃತೀಯಸವನದಿಂದ ಅನುಗ್ರಹಿಸುತ್ತಾರೆ.

ಪೃಷ್ಠ್ಯ ಷಡಹರೂಪವಾದ ಕ್ರಿಯಾಕಾಲಗಳಲ್ಲೂ ಸಹ ಇದೇ ರೀತಿಯಾದ ಕ್ರಮದಿಂದ ಅಗ್ನಿ, ಇಂದ್ರ ಮತ್ತು ವಿಶ್ವೇದೇವತೆಗಳಿಗೆ ಪ್ರಥಮಾಹ, ದ್ವಿತೀಯಾಹ ಮತ್ತು ತೃತೀಯಾಹಗಳಲ್ಲಿ ಪ್ರಾಧಾನ್ಯವಿರುವುದೆಂದು ಐತರೇಯ ಬ್ರಾಹ್ಮಣವು ವರ್ಣಿಸುತ್ತದೆ.

**(೧) ಅಗ್ನಿರ್ವೈ ದೇವತಾ ಪ್ರಥಮಮಹರ್ವಹತಿ ತ್ರಿವೃತ್‌ಸ್ತೋಮೋ ರಥಂತರಂ ಸಾಮ ಗಾಯತ್ರೀಚ್ಛಂದಃ ।**

(ಐ. ಬ್ರಾ. ೪-೨೯)

**(೨) ಇಂದ್ರೋ ವೈ ದೇವತಾ ದ್ವಿತೀಯಮಹರ್ವಹತಿ ಪಂಚದಶಸ್ತೋಮೋ ಬೃಹತ್ಸಾಮ ತ್ರಿಷ್ಟುಪ್ ಛಂದಃ ।**

(ಐ. ಬ್ರಾ. ೪-೩೧)

**(೩) ವಿಶ್ವೇ ವೈ ದೇವಾ ದೇವತಾಸ್ತೃತೀಯಮಹರ್ವಹಂತಿ ಸಪ್ತದಶಃ ಸ್ತೋಮೋ ವೈರೂಪಂ ಸಾಮ ಜಗತೀಛಂದಃ ।**

(ಐ. ಬ್ರಾ. ೫-೧)

ಪೃಷ್ಠ್ಯಷಡಹಗಳಲ್ಲಿ ಪ್ರಥಮದಿನ ಅಗ್ನಿದೇವತೆಯು ತ್ರಿವೃತ್‌ಸ್ತೋಮವನ್ನೂ, ರಥಂತರ ಸಾಮವನ್ನೂ ಮತ್ತು ಗಾಯತ್ರೀಛಂದಸ್ಸನ್ನೂ ಕೂಡಿಕೊಂಡಿರುತ್ತಾನೆ. ಎರಡನೆಯ ದಿನ ಇಂದ್ರದೇವತೆಯು ಪಂಚದಶಸ್ತೋಮವನ್ನೂ, ಬೃಹತ್ಸಾಮವನ್ನೂ ಮತ್ತು ತ್ರಿಷ್ಟುಪ್ ಛಂದಸ್ಸನ್ನೂ ಕೂಡಿಕೊಂಡಿರುತ್ತಾನೆ. ಮೂರನೆಯ ದಿನ ವಿಶ್ವೇದೇವತೆಗಳು ಸಪ್ತದಶಸ್ತೋಮ, ವೈರೂಪಸಾಮ ಮತ್ತು ಜಗತೀಛಂದಸ್ಸನ್ನು ಕೂಡಿಕೊಂಡಿರುತ್ತಾರೆ ಎಂದು ವಿಶ್ವೇದೇವತೆಗಳಿಗೆ ಮೂರನೆಯ ಸ್ಥಾನವನ್ನು ನಿರ್ದೇಶಿಸಿದೆ. ಈ ರೀತಿ ವಿಶ್ವೇದೇವತೆಗಳ ಸ್ಥಾನಮಾನಗಳಲ್ಲಿ ವ್ಯತ್ಯಸ್ತವಾದ ಅಭಿಪ್ರಾಯಗಳನ್ನು ತಿಳಿಸಿದೆ. ಆದರೆ ಇದೇ ವಿಶ್ವೇದೇವತೆಗಳು ನಾನಾ ತತ್ತ್ವಗಳನ್ನು ಪ್ರತಿಬಿಂಬಿಸುವುದರಿಂದ ಇವರನ್ನು ಅನೇಕ ಕಡೆಗಳಲ್ಲಿ ಅನೇಕ ವಿಧವಾಗಿ ವರ್ಣಿಸಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದಾಹರಣೆಗಾಗಿ ತೆಗೆದುಕೊಳ್ಳಬಹುದು.

**ಇಮೇ ವೈ ಪ್ರಾಣಾಃ । ಮನೋಜಾತಾ ಮನೋಯುಜೋ ದಕ್ಷಕ್ರತವೋ ವಾಗೇವಾಗ್ನಿಃ ಪ್ರಾಣೋದಾನೌ ಮಿತ್ರಾವರುಣೌ ಚಕ್ಷುರಾದಿತ್ಯಃ ಶ್ರೋತ್ರಂ ವಿಶ್ವೇದೇವಾಃ ।**

(ಶ ಬ್ರಾ ೩-೨-೨-೧೩)

ಚೈತನ್ಯಯುಕ್ತಗಳಾದ ಈ ಪ್ರಾಣಗಳು ಮನೋಜನ್ಯವಾದವು. ಅಗ್ನಿಯೇ ವಾಕ್ಕು ಮಿತ್ರಾವರುಣರೇ ಉಚ್ಛ್ವಾಸ ನಿಶ್ವಾಸಗಳು. ಆದಿತ್ಯನೇ ಚಕ್ಷುಸ್ತತ್ತ್ವವು. ವಿಶ್ವೇದೇವತೆಗಳೇ ಶ್ರೋತ್ರೇಂದ್ರಿಯತತ್ತ್ವವು

**ವೈಶ್ವದೇವಂ ವಾ ಅಂತರಿಕ್ಷಂ ತದ್ಯದೇನೇನೇಮಾಃ ಪ್ರಜಾಃ ಪ್ರಾಣತ್ಯಶ್ಚೋದಾನತ್ಯಶ್ಚಾಂತರಿಕ್ಷ ಮನುಚರಂತಿ ತೇನ ವೈಶ್ವದೇವಂ ವಷಟ್ಕೃತೇ ಜುಹೋತಿ ॥**

(ಶ.ಬ್ರಾ. ೩.೮-೩-೩೨)

ಶ್ರವಣೇಂದ್ರಿಯಕ್ಕೆ ಸಂಬಂಧಿಸಿದ ಶಬ್ದದ ಸಂಚಾರಕ್ಕೆ ಸಾಧನವಾಗಿರುವುದರಿಂದಲೂ, ಉಚ್ಛ್ವಾಸನಿಃಶ್ವಾಸಗಳ ಮೂಲಕ ಅಂತರಿಕ್ಷದಲ್ಲಿಯೇ ಸಕಲ ಭೂತಗಳೂ ವ್ಯವಹರಿಸುವುದರಿಂದಲೂ, ಇವುಗಳಿಗೆಲ್ಲ ಅಧಿದೇವತೆಗಳಾದ ವಿಶ್ವೇದೇವತೆಗಳೇ ಅಂತರಿಕ್ಷತತ್ವವನ್ನು ಪ್ರತಿಬಿಂಬಿಸುವವರಾಗಿದ್ದಾರೆ.

**ಏತಸ್ಯೈ ವೈ ಗೃಹ್ಣಾತಿ ಯ ಏಷ ತಪತಿ ವಿಶ್ವೇಭ್ಯೋ ಹ್ಯೇನಾ ದೇವೇಭ್ಯೋ ಗೃಹ್ಣಾತಿ ರಶ್ಮಯೋ ಹಸ್ಯ ವಿಶ್ವೇ ದೇವಾಸ್ತಸ್ಮಾದಾಹ ಹವಿಷ್ಮಾಂ ಅಸ್ತು ಸೂರ್ಯ ಇತಿ ॥**

(ಶ. ಬ್ರಾ ೩-೯-೨-೧೨)

ಸೂರ್ಯನಿಗೆ ಅರ್ಪಿತವಾಗುವ ಹವಿಸ್ಸುಗಳೆಲ್ಲವೂ ವಿಶ್ವೇದೇವತೆಗಳಿಗೆ ಅರ್ಪಿತವಾದಂತೆ. ಹೇಗೆಂದರೆ, ಸಕಲ ಸೂರ್ಯ ರಶ್ಮಿಗಳೂ ವಿಶ್ವೇದೇವತೆಗಳ ತತ್ತ್ವಸ್ವರೂಪಗಳೇ ಆಗಿವೆ. ಆದುದರಿಂದ ಸಂಚಾರವಿಷಯಗಳಾದ ಸೂರ್ಯರಶ್ಮಿಗಳೂ ಮತ್ತು ಸಂಚಾರಸಾಧನವಾದ ಅಂತರಿಕ್ಷವೂ ವಿಶ್ವೇದೇವತೆಗಳ ಪ್ರತೀಕಗಳೇ ಆಗಿವೆ. ಈ ಕಾರಣದಿಂದಲೇ ಇವರನ್ನು ದಿಕ್ಕುಗಳಿಗೆ ನಿರ್ಮಾಪಕರೆಂದೂ ತಿಳಿಸಿದೆ.

**ವಿಶ್ವೇ ದೇವಾ ವೈಶ್ವಾನರಾ ದಿಶಃ ಕೃತ್ವಾ ತಾಸ್ವೇತಾಮಾಶಿಷಮಾಶಾಸತ ।**

(ಶ. ಬ್ರಾ. ೬-೫-೨ ೬)

ವಿಶ್ವೇದೇವತೆಗಳು ದಿಕ್ಕುಗಳನ್ನೆಲ್ಲಾ ನಿರ್ಮಿಸಿ ಅವುಗಳನ್ನು ಆಶೀರ್ವದಿಸಿದರು. ದಿಕ್ಕುಗಳಿಗೂ ತದ್ವ್ಯಾಪಕವಾದ ಅಂತರಿಕ್ಷಕ್ಕೂ ಇವರೇ ಅಧಿದೇವತೆಗಳಾದುದರಿಂದ ಇವರೇ ಋತ್ವಾದಿಗಳಿಗೆಲ್ಲಾ ನಿಯಾಮಕರು ಮತ್ತು ತದನುಸಾರವಾಗಿ ವೃಷ್ಟ್ಯುತ್ಪಾದಕರು ಎಂದೂ ವರ್ಣಿತರಾಗಿದ್ದಾರೆ.

**ಋತವೋ ವೈ ವಿಶ್ವೇದೇವಾಸ್ತದೇನಾಂ ವಿಶ್ವೈರ್ದೇವೈರ್ಋತುಭಿಃ ಸಂವಿಧಾನಃ ।**

(ಶ. ಬ್ರಾ. ೭-೧-೧-೪೩)

**ವಿಶ್ವೇ ಚ ವೈ ದೇವಾ ಮರುತಶ್ಚ ವರ್ಷಸ್ಯೇಶತ ಊರ್ಜಸ್ವತೀ ।**

(ಶ. ಬ್ರಾ. ೭.೨.೨-೧೦)

ಇತ್ಯಾದಿಯಾದ ವಾಕ್ಯಗಳಿಂದ ಇವರ ಸರ್ವವ್ಯಾಪಕತ್ವವೂ ಅತಿಶಯವಾದ ಪ್ರಭಾವವೂ ಪ್ರಶಂಸಿತವಾಗಿವೆ. ಇಂತಹ ಅತಿಶಯವಾದ ಪ್ರಭಾವವಿರುವುದರಿಂದಲೇ ಇದರ ಪ್ರಶಂಸಕವಾಗಿ,

**ವಿಶ್ವೇ ವೈ ದೇವಾ ದೇವಾನಾಂ ಯಶಸ್ವಿತಮಾ ಯಶ ಏವಾಸ್ಮಿನ್ಧಧಾತಿ ॥**

(ಶ. ಬ್ರಾ ೧೩.೧.೨.೮)

ಸಕಲ ದೇವತೆಗಳ ನಡುವೆಯೂ ವಿಶ್ವೇದೇವತೆಗಳೇ ಅತ್ಯಂತ ಯಶಸ್ವಿಗಳು ಎಂಬ ಇವೇ ಮುಂತಾದ ಸ್ತುತಿವಾಕ್ಯ ಗಳಿರುತ್ತವೆ. ಹೀಗೆ ಕೆಲವೆಡೆಗಳಲ್ಲಿ ಇಂದ್ರಾಗ್ನಿಗಳೊಡನೆ ತಾದಾತ್ಮ್ಯವನ್ನು ತೋರಿಸಿಯೂ ಕೆಲವೆಡೆಗಳಲ್ಲಿ

ವೈಯಕ್ತಿಕವಾದ ಸ್ವರೂಪವನ್ನು ವರ್ಣಿಸಿಯೂ ಇವರನ್ನು ಅನೇಕವಿಧವಾಗಿ ಸ್ತುತಿಸಿರುತ್ತದೆ. ಈ ಎಲ್ಲಾ ವಿಧವಾದ ವರ್ಣನೆಗಳನ್ನು ಪರಿಶೀಲಿಸಿದರೆ, ಒಟ್ಟಿನಲ್ಲಿ ವಿಶ್ವೇದೇವತೆಗಳು ವಿಶ್ವದಲ್ಲಿ ಸಕಲ ಶಕ್ತಿಗಳನ್ನು ಪ್ರತಿಬಿಂಬಿಸುವ ದೇವತೆಗಳೆಂದು ಹೇಳಬಹುದು ಅಥವಾ ಸಕಲ ತತ್ತ್ವಗಳನ್ನೂ ಒಳಗೊಂಡಿರುವ ಬ್ರಹ್ಮಸ್ವರೂಪವೇ ವಿಶ್ವೇದೇವತಾಕವೆಂದೂ ಹೇಳಬಹುದು. ಹೇಗೆಂದರೆ—

> ತದ್ಧೈ ತತ್ಪಶ್ಯನ್ನೃಷಿರಭ್ಯನೂವಾದ । ಭೂತಂ ಭವಿಷ್ಯತ್ಪ್ರಸ್ತೌಮಿ ಮಹದ್ಬ್ರಹ್ಮೈಕಮಕ್ಷರಂ ಬಹು ಬ್ರಹ್ಮೈಕಮಕ್ಷರಮಿತ್ಯೇತದ್ಧ್ಯೇವಾಕ್ಷರಗ್ಂ ಸರ್ವೇ ದೇವಾಃ ಸರ್ವಾಣಿ ಭೂತಾನ್ಯಭಿಸಂಪದ್ಯಂತೇ ತದೇತದ್ಬ್ರಹ್ಮ ಚ ಕ್ಷತ್ರಂ ಚಾಗ್ನಿರೇವ ಬ್ರಹ್ಮೇಂದ್ರಃ ಕ್ಷತ್ರಮಿಂದ್ರಾಗ್ನೀ ವೈ ವಿಶ್ವೇ ದೇವಾ ವಿಡು ವಿಶ್ವೇದೇವಾಸ್ತದೇತದ್ಬ್ರಹ್ಮ ಕ್ಷತ್ರಂ ವಿಟ್ ॥
>
> (ಶ. ಬ್ರಾ. ೧೦.೪.೧.೮)

ಮಹತ್ತತ್ತ್ವದ ದರ್ಶನವನ್ನು ಪಡೆದ ಋಷಿವಾಕ್ಯವಿದು. ಭೂತಕಾಲಗಳಲ್ಲಿದ್ದುದೂ ಭವಿಷ್ಯತ್ತುಗಳಲ್ಲಿ ಇರುವುದೂ, ಮಹತ್ತಾದುದೂ, ನಾಶರಹಿತವಾದುದೂ, ನಾನಾ ರೂಪಾತ್ಮಕವಾದುದೂ ಆದ ಬ್ರಹ್ಮತತ್ತ್ವವನ್ನು ನಾನು ಸ್ತುತಿಸುತ್ತೇನೆ. ಸಕಲ ದೇವತೆಗಳೂ ಸಕಲ ಭೂತಗಳೂ ಈ ತತ್ತ್ವದಲ್ಲೇ ಅಂತರ್ಧಾನವನ್ನು ಹೊಂದುತ್ತವೆ. ಇದೇ ಬ್ರಹ್ಮರೂಪವು, ಇದೇ ಕ್ಷತ್ರರೂಪವು. ಅಗ್ನಿಯೇ ಬ್ರಹ್ಮಶಕ್ತಿಪ್ರತಿಪಾದಕನು. ಇಂದ್ರನೇ ಕ್ಷಾತ್ರಶಕ್ತಿ ಪ್ರತಿಪಾದಕನು. ವಿಶ್ವೇದೇವತೆಗಳೇ ಇಂದ್ರಾಗ್ನಿಗಳು. ಆದರೆ ವಿಶ್ವೇದೇವತೆಗಳು ವೈಶ್ಯಶಕ್ತಿಗೂ ಪ್ರತಿಪಾದಕರು. ಆದುದರಿಂದಲೇ ಸಕಲವನ್ನೂ ಅಡಕಮಾಡಿಕೊಂಡಿರುವ ಈ ತತ್ತ್ವವು ಬ್ರಹ್ಮ, ಕ್ಷತ್ರ ಮತ್ತು ವಿಶ್ ಎಂಬ ಈ ಎಲ್ಲಾ ಶಕ್ತಿಗಳಿಗೂ ಮೂಲವಾಗಿದೆ.

## ನಲವತ್ತೊಂದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಕೋ ನು ವಾಮಿತಿ ವಿಂಶತ್ಯೃಚಂ ನವಮಂ ಸೂಕ್ತಂ ಭೌಮಸ್ಯಾತ್ರೇರಾರ್ಷಂ । ಷೋಡಶೀಸಪ್ತದಶ್ಯಾವತಿಜಗತ್ಯೌ ವಿಂಶ್ಯೇಕಪದಾ ವಿರಾಟ್ ಶಿಷ್ಟಾಃ ಸಪ್ತದಶ ತ್ರಿಷ್ಟುಭಃ । ವಿಶ್ವೇ ದೇವಾ ದೇವತಾ । ತಥಾ ಚಾನುಕ್ರಾಂತಂ । ಕೋ ನು ವಿಂಶತಿರ್ವೈಶ್ವದೇವಂ ವೈ ತತ್ ಷೋಳಶ್ಯಾದ್ಯತಿಜಗತ್ಯಾವಂತ್ಯೈಕಪದೇತಿ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು—**ಕೋನು ವಾಂ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಇಪ್ಪತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅತ್ರಿಯು ಋಷಿಯು, ವಿಶ್ವೇದೇವತೆಗಳು ದೇವತೆಯು, ಈ ಸೂಕ್ತದ ಹದಿನಾರು ಮತ್ತು ಹದಿನೇಳನೆಯ ಋಕ್ಕುಗಳು ಅತಿಜಗತೀಛಂದಸ್ಕವು, ಇಪ್ಪತ್ತನೆಯ

ಋಕ್ಕು ಏಕಪದಾ ವಿರಾಟ್ ಎಂಬ ಛಂದಸ್ಸಿನದು: ಉಳಿದ ಋಕ್ಕುಗಳು ತ್ರಿಷ್ಟುಪ್ ಛಂದಸ್ಕವು. ಅನುಕ್ರಮಣಿಕೆಯಲ್ಲಿ- **ಕೋ ನು ವಿಂಶತಿರ್ವೈಶ್ವದೇವಂ ವೈ ತತ್ ಷೋಳಶ್ಯಾದ್ಯತಿಜಗತ್ಯಾವಂತ್ಯೈ**ಕಪದಾ ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

## ಸೂಕ್ತ—೩೧

॥ ಮಂಡಲ—೫ ॥ ಅನುವಾಕ—೩ ॥ ಸೂಕ್ತ—೪೧ ॥

॥ ಅಷ್ಟಕ—೪ । ಅಧ್ಯಾಯ— ೨ ॥ ವರ್ಗ— ೧೩ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೨೦

॥ ಋಷಿಃ—ಅತ್ರಿಃ ॥

॥ ದೇವತಾ—ವಿಶ್ವೇದೇವಾಃ ॥

॥ ಛಂದಃ—೧-೧೫, ೧೮-೧೯ ತ್ರಿಷ್ಟುಪ್ । ೧೬-೧೭, ಅತಿಜಗತೀ । ೨೦ ಏಕಪದಾ

॥ ಸಂಹಿತಾಪಾಠಃ ॥

**ಕೋ ನು ವಾಂ ಮಿತ್ರಾವರುಣಾವೃತಾಯನ್ದಿವೋ ವಾ ಮಹಃ ಪಾರ್ಥಿ-
ವಸ್ಯ ವಾ ದೇ ।
ಋತಸ್ಯ ವಾ ಸದಸಿ ತ್ರಾಸೀಥಾಂ ನೋ ಯಜ್ಞಾಯತೇ ವಾ ಪಶುಷೋ ನ
ವಾಜಾನ್ ॥ ೧ ॥**

॥ ಪದಪಾಠಃ ॥

**ಕಃ । ನು । ವಾಂ । ಮಿತ್ರಾವರುಣಾ । ಋತಯನ್ । ದಿವಃ । ವಾ । ಮಹಃ । ಪಾರ್ಥಿವಸ್ಯ । ವಾ । ದೇ ।
ಋತಸ್ಯ । ವಾ । ಸದಸಿ । ತ್ರಾಸೀಥಾಂ । ನಃ । ಯಜ್ಞSಯತೇ । ವಾ । ಪಶುSಸಃ । ನ । ವಾಜಾನ್ ॥**

॥ ಸಾಯಣಭಾಷ್ಯಂ ॥

**ಹೇ ಮಿತ್ರಾವರುಣಾ ದೇವೌ ವಾಂ ಯುವಾಂ ಕೋ ನು ಕಃ ಖಲು ಯಜಮಾನ ಋತಾಯ-ನ್ಯಜ್ಞಮಿಚ್ಛನ್ ಶಕ್ನುಯಾದಿತಿ ಶೇಷಃ । ತಸ್ಮಾತ್ಕೃತಂ ಮಯ್ಯೇವ । ದಿವಃ ಸದಸಿ ದ್ಯುಲೋಕಸಂಬಂಧಿನಿ ಸ್ಥಾನೇ ಮಹೋ ಮಹತಃ ಪಾರ್ಥಿವಸ್ಯ ಸದಸ್ಯೃತಸ್ಯೋತ್ಪಾದಕಸ್ಯಾಂತರಿಕ್ಷಸ್ಯ ಸದಸಿ । ತದ್ಧೇತುತ್ವಾ-ತ್ತಾಚ್ಛಬ್ದ್ಯಂ । ತ್ರಿಷು ಸ್ಥಾನೇಷು ನೋಽಸ್ಮಾನ್ ತ್ರಾಸೀಥಾಂ । ರಕ್ಷತಂ । ವಾಶಬ್ದಶ್ಚಾರ್ಥೇ । ಕಿಂಚ**

ಯಜ್ಞಾಯತೇ ದೇ ವಾ ಹವಿರ್ದಾತ್ರೇ ಚ ಮಹ್ಯಂ ಪಶುಷೋ ನ ವಾಜಾನ್ ಪಶುಷು ಸೀದತೋ ವಾಜಾನನ್ನಾನಿ ಕ್ಷೀರದಧ್ಯಾದೀನೀವ । ತಾನಿ ಯಥಾ ಪ್ರಯಚ್ಛಥಃ ತದ್ವದವತಮಿತಿ । ಯದ್ವಾ । ನಶಬ್ದಶ್ಚಾರ್ಥೇ । ಪಶುಷಃ ಪಶೂನ್ವಾಜಾಂಶ್ಚ ದತ್ತಮಿತ್ಯರ್ಥಃ ॥

॥ ಪ್ರತಿಪದಾರ್ಥ ॥

ಮಿತ್ರಾವರುಣೌ—ಎಲೈ ಮಿತ್ರಾವರುಣರೇ । ವಾಂ—ನಿಮ್ಮನ್ನುದ್ದೇಶಿಸಿ । ಕೋ ನು—ಯಾವ ಯಜಮಾನನು ತಾನೇ । ಋತಾಯನ್—ಯಜ್ಞಮಾಡಲು (ಸಮರ್ಥನಾಗಿದ್ದಾನೆ ?) । ದಿವಃ ವಾ ಸದಸಿ—ದ್ಯುಲೋಕಸ್ಥಾನದಿಂದಾಗಲಿ । ಮಹಃ—ಮಹತ್ತಾದ । ಪಾರ್ಥಿವಸ್ಯ ವಾ—ಪೃಥಿವೀಸ್ಥಾನದಿಂದಾಗಲಿ । ಋತಸ್ಯ ವಾ—ಅಂತರಿಕ್ಷಸ್ಥಾನದಿಂದಾಗಲಿ । ನಃ—ನಮ್ಮನ್ನು । ತ್ರಾಸೀಥಾಂ—ರಕ್ಷಿಸಿರಿ । ಯಜ್ಞಾಯತೇ—(ನಿಮ್ಮನ್ನು) ಯಜ್ಞದಿಂದ ಪೂಜಲಿಚ್ಛಿಸುವವನಿಗೂ । ದೇ ವಾ—ಹವಿಸ್ಸನ್ನರ್ಪಿಸುವವನಿಗೂ । ಪಶುಷಃ—ಪಶುಗಳನ್ನೂ । ವಾಜಾನ್—ಅನ್ನಗಳನ್ನೂ (ಒದಗಿಸಿ).

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ನಿಮ್ಮನ್ನುದ್ದೇಶಿಸಿ ಯಾವ ಯಜಮಾನನು ತಾನೇ ನಿಮಗೆ ತೃಪ್ತಿಕರವಾಗುವಂತೆ ಯಜ್ಞವನ್ನಾಚರಿಸಲು ಸಮರ್ಥನಾಗಿದ್ದಾನೆ ? ನೀವು ದ್ಯುಲೋಕಸ್ಥಾನದಲ್ಲಿರಲಿ, ಮಹತ್ತಾದ ಪೃಥಿವೀಸ್ಥಾನದಲ್ಲಿರಲಿ ಅಥವಾ ಅಂತರಿಕ್ಷಪ್ರದೇಶದಲ್ಲಿರಲಿ ಅಲ್ಲಿಂದೆಲ್ಲಾ ನಮ್ಮನ್ನು ರಕ್ಷಿಸಿರಿ. ನಿಮ್ಮನ್ನು ಯಜ್ಞಮುಖದಿಂದ ಪೂಜಿಸಲಿಚ್ಛಿಸುವವನಿಗೂ, ಹವಿಸ್ಸನ್ನರ್ಪಿಸುವವನಿಗೂ ಪಶುಗಳನ್ನೂ, ಅನ್ನಗಳನ್ನೂ ಒದಗಿಸಿರಿ.

## English Translation

Who, Mitra, and Varuna, desiring to sacrifice to you, (is able to do so) ? do you, whether (abiding) in the region of heaven, or of the vast earth, or of the firmament, protect us, and give to the donor (of the oblation), and to the sacrificer, cattle and food.

॥ ಸಂಹಿತಾಪಾಠಃ ॥

ತೇ ನೋ ಮಿತ್ರೋ ವರುಣೋ ಅರ್ಯಮಾಯುರಿಂದ್ರ ಋಭುಕ್ಷಾ ಮರುತೋ ಜುಷಂತ ।

**ನಮೋಭಿರ್ವಾ ಯೇ ದಧತೇ ಸುವೃಕ್ತಿಂ ಸ್ತೋಮಂ ರುದ್ರಾಯ ಮೀಳ್ಹುಷೇ ಸಜೋಷಾಃ ॥ ೨ ॥**

॥ ಪದಪಾಠಃ ॥

**ತೇ । ನಃ । ಮಿತ್ರಃ । ವರುಣಃ । ಅರ್ಯಮಾ । ಆಯುಃ । ಇಂದ್ರಃ । ಋಭುಕ್ಷಾಃ । ಮರುತಃ । ಜುಷಂತ । ನಮಃಽಭಿಃ । ವಾ । ಯೇ । ದಧತೇ । ಸುಽವೃಕ್ತಿಂ । ಸ್ತೋಮಂ । ರುದ್ರಾಯ । ಮೀಳ್ಹುಷೇ । ಸಽಜೋಷಾಃ ॥ ೨ ॥**

॥ ಸಾಯಣಭಾಷ್ಯಂ ॥

**ತೇ ಮಿತ್ರಾದಯೋ ದೇವಾ ನೋಽಸ್ಮಾಕಂ ಸುವೃಕ್ತಿಂ ಸ್ತೋಮಂ ಶೋಭನಪಾಪಾದಿವರ್ಜನವತ್ಸ್ತೋತ್ರಂ ನಮೋಭಿರ್ವಾ ಹವಿರ್ಭಿಶ್ಚ ಜುಷಂತ । ಸೇವಂತಾಂ । ಯೇ ದಧತೇ ಧಾರಯಂತ್ಯುಕ್ತಲಕ್ಷಣಂ ಸ್ತೋತ್ರಂ । ದೇವಾ ದ್ವಿವಿಧಾಃ ಸ್ತೋತ್ರಭಾಜೋ ಹವಿರ್ಭಾಜಶ್ಚ । ಅತ್ರ ಸ್ತೋತ್ರಭಾಜ ಉಚ್ಯಂತೇ । ಆಯುಃ ಸತತಗತಿರ್ವಾಯುರುಚ್ಯತೇ । ಅಥ ಮರುತ ಏವ ವಿಯುಜ್ಯ ವಿಶೇಷ್ಯಂತೇ । ರುದ್ರಾಯ ಮೀಳ್ಹುಷೇ ॥ ತೃತೀಯಾರ್ಥೇ ಚತುರ್ಥೀ ॥ ರುದ್ರೇಣ ಸಹ ಸಜೋಷಾಃ ಸಜೋಷಸಃ ಸಹ ಪ್ರೀಯಮಾಣಾಃ । ತೇಷಾಂ ಪುತ್ರತ್ವಾದಿತಿ ಭಾವಃ । ಕೇಚನ ರುದ್ರಾಯ ಸಜೋಷಾ ಇತ್ಯೇತನ್ಮಿತ್ರಾದಿಸರ್ವದೇವತಾವಿಶೇಷಣಮಿತಿ ಕಥಯಂತಿ ॥**

॥ ಪ್ರತಿಪದಾರ್ಥ ॥

**ಯೇ**—ಯಾವ ದೇವತೆಗಳು । **ಸುವೃಕ್ತಿಂ**—ಉತ್ತಮವಾಗಿ ನಿರ್ಮಿಸಿದ । **ಸ್ತೋಮಂ**—ಸ್ತೋತ್ರವನ್ನು । **ದಧತೇ**—ಸ್ವೀಕರಿಸಿ ಧರಿಸುವರೋ ಅವರೂ (ಅಂತಹ ಸ್ತೋತ್ರಭಾಜರೂ) । (ಅಥವಾ) **ಯೇ**—ಯಾರು । **ಮೀಳ್ಹುಷೇ**—ಇಷ್ಟಾರ್ಥಪ್ರದನಾದ । **ರುದ್ರಾಯ**—ರುದ್ರನೊಂದಿಗೆ । **ಸಜೋಷಾಃ**—ಸಮಾನವಾದ ಪ್ರೀತಿಯಿಂದ ಒಟ್ಟಿಗೆ ಹವಿಸ್ಸನ್ನು ಸ್ವೀಕರಿಸುವವರೂ (ಹವಿರ್ಭಾಜರೂ) ಆದ । **ತೇ**—ಆ ಸಕಲ ದೇವತೆಗಳೂ (ಎಂದರೆ) । **ಮಿತ್ರಃ**—ಮಿತ್ರನೂ । **ವರುಣಃ**—ವರುಣನೂ **ಅರ್ಯಮಾ**—ಅರ್ಯಮನೂ । **ಆಯುಃ**—ವಾಯುವೂ । **ಇಂದ್ರಃ**—ಇಂದ್ರನೂ । **ಋಭುಕ್ಷಾಃ**—ಋಭುಕ್ಷನೂ । **ಮರುತಃ**—ಮರುತ್ತುಗಳೂ । **ನಃ**—ನಮ್ಮ । **ನಮೋಭಿಃ**—ಸ್ತುತಿಗಳಿಂದ । **ಜುಷಂತ**—ಸೇವಿಸಿ ತೃಪ್ತರಾಗಲಿ

॥ ಭಾವಾರ್ಥ ॥

ಯಾವ ದೇವತೆಗಳು ಉತ್ತಮವಾಗಿ ನಿರ್ಮಿಸಿದ ಸ್ತುತಿಗಳನ್ನು ಸ್ವೀಕರಿಸಿ ಸ್ತೋತ್ರಭಾಜರೆಂದು ಪ್ರಸಿದ್ಧರಾಗಿದ್ದಾರೋ ಅವರೂ ಮತ್ತು ಇಷ್ಟಾರ್ಥಪ್ರದನಾದ ರುದ್ರನೊಂದಿಗೆ ಸಮಾನವಾದ ಪ್ರೀತಿಯಿಂದ ಕೂಡಿ ಒಟ್ಟಿಗೆ ಹವಿಸ್ಸನ್ನು ಸ್ವೀಕರಿಸಿ ಹವಿರ್ಭಾಜರೆಂದು ಪ್ರಖ್ಯಾತರಾಗಿರುವರೋ ಅವರೂ ಎಂದರೆ, ಮಿತ್ರ, ವರುಣ, ಅರ್ಯಮ, ವಾಯು, ಇಂದ್ರ, ಋಭುಕ್ಷ, ಮರುತ್ತುಗಳು ಈ ಸಕಲರೂ ನಮ್ಮ ಸ್ತುತಿಗಳನ್ನು ಸೇವಿಸಿ ತೃಪ್ತರಾಗಲಿ

## English Translation

May those divinities, Mitra, Varuna, Aryaman, Ayu, Indra, Ribhukshin, the Maruts who accept pious praise, be pleased by our adorations, partaking of the gratification afforded to Rudra, the showerer (of benefits).

॥ ಸಂಹಿತಾಪಾಠಃ ॥

ಆ ವಾಂ ಯೇಷ್ಠಾಶ್ವಿನಾ ಹುವಧ್ಯೈ ವಾತಸ್ಯ ಪತ್ಮನ್ರಥ್ಯಸ್ಯ ಪುಷ್ಟೌ ।
ಉತ ವಾ ದಿವೋ ಅಸುರಾಯ ಮನ್ಮ ಪ್ರಾಂಧಾಂಸೀವ ಯಜ್ಯವೇ ಭರಧ್ವಂ ॥

॥ ಪದಪಾಠಃ ॥

ಆ । ವಾಂ । ಯೇಷ್ಠಾ । ಅಶ್ವಿನಾ । ಹುವಧ್ಯೈ । ವಾತಸ್ಯ । ಪತ್ಮನ್ । ರಥ್ಯಸ್ಯ । ಪುಷ್ಟೌ ।
ಉತ । ವಾ । ದಿವಃ । ಅಸುರಾಯ । ಮನ್ಮ । ಪ್ರ । ಅಂಧಾಂಸಿಽಇವ । ಯಜ್ಯವೇ । ಭರಧ್ವಂ ॥ ೩ ॥

॥ ಸಾಯಣಭಾಷ್ಯಂ ॥

ಅನಯಾಶ್ವಿನೌ ರುದ್ರಶ್ಚೋಚ್ಯಂತೇ । ಹೇ ಅಶ್ವಿನಾಶ್ವಿನೌ ಯೇಷ್ಠಾ ಕಾಮಾನಾಂ ಯಂತೃತಮೌ ವಾಂ ಯುವಾಂ ವಾತಸ್ಯ ಪತ್ಮನ್ । ಧರ್ಮಸಾಮ್ಯಾದ್ಧರ್ಮಿಗ್ರಹಣಂ । ವಾಯುಸಮಾನಗತೇರಶ್ವಸ್ಯ ನಮನೇ ಪ್ರಾಪ್ತೌ ರಥ್ಯಸ್ಯ ರಥಸ್ಯ ಪುಷ್ಟೌ ಚ ನಿಮಿತ್ತೇ ಸತಿ ಹುವಧ್ಯೈ । ಹುವೇ । ಆಹ್ವಯಾಮಿ । ಆಹ್ವಾತುಂ ಪ್ರಭವಾಮಿ । ಅಥವಾ ವಾಯುವದ್ಯುವಯೋಃ ಶೀಘ್ರಗಮನಸಾಧನರಥಸ್ಯ ಪೋಷೇ ಚ ನಿಮಿತ್ತೇ ಸತಿ । ಉತ ವಾ ಕಿಂಚೇತ್ಯರ್ಥಃ । ದಿವೋ ದ್ಯೋತಮಾನಾಯ ॥ ಚತುರ್ಥ್ಯರ್ಥೇ ಷಷ್ಠೀ ॥ ಅಸುರಾಯ ಪ್ರಾಣಾಪಹರ್ತ್ರೇ ರುದ್ರಾಯ । ಯದ್ವಾ । ದ್ಯುಲೋಕಸಂಬಂಧಿನೇಽಸುರಾಯ ಪ್ರಾಣದಾತ್ರೇ ಸೂರ್ಯಾಯ ವಾಯವೇ ವಾ ಯಜ್ಯವೇ ಯಾಗಸಾಧಕಾಯ ಮನ್ಮ ಮನನೀಯಂ ಸ್ತೋತ್ರಂ ಪ್ರ ಭರಧ್ವಂ । ಸಂಪಾದಯತ ಹೇ ಋತ್ವಿಜಃ । ಅಂಧಾಂಸೀವಾನ್ನಾನಿ ಹವಿರ್ಲಕ್ಷಣಾನಿ ಹವೀಂಷಿ ಸ್ತೋತ್ರಂ ಚೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಯೇಷ್ಠಾ**—ಕಾಮಗಳನ್ನು ನಿಯಮನಮಾಡತಕ್ಕ । **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ವಾಂ**—ನಿಮ್ಮನ್ನು । **ವಾತಸ್ಯ**—ವಾಯುವಿನ । **ಪತ್ಮನ್**—ಗಮನದಂತೆ ವೇಗವುಳ್ಳ । **ರಥ್ಯಸ್ಯ**—ರಥದ । **ಪುಷ್ಟೌ**—ಗತಿ ವೃದ್ಧಿಗಾಗಿ । **ಹುವಧ್ಯೈ**—ಪ್ರಾರ್ಥಿಸಿ ಕರೆಯುತ್ತೇನೆ । **ಉತ ವಾ**—ಅಲ್ಲದೇ (ಎಲೈ ಋತ್ವಿಕ್ಕುಗಳೇ) । **ದಿವಃ**—

**ಪ್ರಕಾಶಮಾನನೂ** । **ಯಜ್ಯವೇ**—ಯಜ್ಞಸಾಧಕನೂ । **ಅಸುರಾಯ**—ಪ್ರಾಣಹರನೂ ಆದ ರುದ್ರನನ್ನು ಉದ್ದೇಶಿಸಿ । **ಅಂಧಾಂಸೀವ**—ಹವೀರೂಪದ ಅನ್ನಗಳನ್ನು ಸಂಪಾದಿಸುವಂತೆ । **ಮನ್ಮ**—ಮನನೀಯವಾದ ಸ್ತುತಿಯನ್ನು । **ಪ್ರ ಭರಧ್ವಂ**—ಸಂಪಾದಿಸಿರಿ.

॥ ಭಾವಾರ್ಥ ॥

ಕಾಮವನ್ನು ನಿಯಮನಮಾಡತಕ್ಕ ಎಲೈ ಅಶ್ವಿನೀದೇವತೆಗಳೇ, ವಾಯುವಿನ ಗಮನದಂತೆ ವೇಗವುಳ್ಳ ನಿಮ್ಮ ರಥವು ನಮ್ಮ ಯಜ್ಞಾಭಿಮುಖವಾಗಿ ತನ್ನ ಗಮನದ ಪುಷ್ಟಿಯನ್ನು ಹೊಂದಲೆಂದು ನಿಮ್ಮನ್ನು ಪ್ರಾರ್ಥಿಸುತ್ತೇವೆ. ಎಲೈ ಋತ್ವಿಕ್ಕುಗಳೇ, ಪ್ರಕಾಶಮಾನನೂ, ಯಜ್ಞಸಾಧಕನೂ ಮತ್ತು ಪ್ರಾಣಹರನೂ ಆದ ರುದ್ರನಿಗೆ ಅರ್ಪಿಸಲು ಹವಿರೂಪದ ಅನ್ನಗಳನ್ನು ಸಂಪಾದಿಸುವಂತೆ ಮನನೀಯವಾದ ಸ್ತುತಿಯನ್ನೂ ಸಂಪಾದಿಸಿರಿ (ಸ್ತೋತ್ರಮಾಡಿರಿ).

English Translation

I invoke you, Aswins, the restrainers (of desire), for the acceleration of your chariot with the swiftness of the wind: (priests) offer praise and oblations to the celestial destroyer of life, to the accomplisher of the sacrifice

॥ ಸಂಹಿತಾಪಾಠಃ ॥

ಪ್ರ ಸಕ್ಷಣೋ ದಿವ್ಯಃ ಕಣ್ವಹೋತಾ ತ್ರಿತೋ ದಿವಃ ಸಜೋಷಾ ವಾತೋ ಅಗ್ನಿಃ ।
ಪೂಷಾ ಭಗಃ ಪ್ರಭೃಥೇ ವಿಶ್ವಭೋಜಾ ಆಜಿಂ ನ ಜಗ್ಮುರಾಶ್ವಶ್ವತಮಾಃ ॥೪॥

॥ ಪದಪಾಠಃ ॥

ಪ್ರ । ಸಕ್ಷಣಃ । ದಿವ್ಯಃ । ಕಣ್ವಽಹೋತಾ । ತ್ರಿತಃ । ದಿವಃ । ಸಽಜೋಷಾಃ । ವಾತಃ । ಅಗ್ನಿಃ ।
ಪೂಷಾ । ಭಗಃ । ಪ್ರಽಭೃಥೇ । ವಿಶ್ವಽಭೋಜಾಃ । ಆಜಿಂ । ನ । ಜಗ್ಮುಃ । ಆಶ್ವಶ್ವಽತಮಾಃ ॥ ೪ ॥

॥ ಸಾಯಣಭಾಷ್ಯಂ ॥

ಅತ್ರ ಲಿಂಗೋಕ್ತದೇವತಾಃ । ಪ್ರ ಜಗ್ಮುರಿತಿ ಸಂಬಂಧಃ । ಸಕ್ಷಣೋ ಯಜ್ಞಂ ಸೇವಮಾನಃ ಶತ್ರೂಣಾಂ ಸೋಢಾ ವಾ ದಿವ್ಯೋ ದಿವಿ ಭವಃ ಕಣ್ವಹೋತಾ । ಕಣ್ವಾ ಋಷಯೋ ಮೇಧಾವಿನೋ ವಾ

**ಹೋತಾರ ಆಹ್ವಾತಾರೋ ಯಸ್ಯ ಸ ತಥೋಕ್ತಃ । ತ್ರಿತಸ್ತ್ರಿಷು ಕ್ಷಿತ್ಯಾದಿಸ್ಥಾನೇಷು ತಾಯಮಾನೋ ದಿವಃ ಸೂರ್ಯೇಣ ಸಹ ಸಜೋಷಾಃ ಸಮಾನಗತಿಃ ಸಮಾನಪ್ರೀತಿರ್ವಾ ವಾತ ಉಕ್ತಲಕ್ಷಣಕೋ ವಾಯುರಗ್ನಿಃ ಪೂಷಾ ಪೋಷಕ ಏತನ್ನಾಮಾ ಭಗಶ್ಚ ಪ್ರಭೃಥೇ ಪ್ರಭರಣವತ್ಯಸ್ಮಿನ್ಯಜ್ಞ ಉಕ್ತಾಃ ಸರ್ವದೇವಾ ವಿಶ್ವಭೋಜಾ ವಿಶ್ವರಕ್ಷಕಾಃ ಕೃತ್ಸ್ನಸ್ತ್ರಾತಾರೋ ವಾ ಆಶ್ವಶ್ವತಮಾಃ ಪ್ರಕೃಷ್ಟಗಮನಾಶ್ವವತಾಂ ಶ್ರೇಷ್ಠಾಃ ಸಂತ ಆಜಿಂ ನ ಸಂಗ್ರಾಮಮಿವ ಪ್ರ ಜಗ್ಮುಃ । ಪ್ರಗಚ್ಛಂತಿ ॥**

॥ ಪ್ರತಿಪದಾರ್ಥ ॥

**ಸಕ್ಷಣಿಃ**—ಯಜ್ಞಭಾಗವನ್ನು ಸ್ವೀಕರಿಸುವವನೂ । **ದಿವ್ಯಃ**—ದ್ಯುಲೋಕೋತ್ಪನ್ನನೂ । **ಕಣ್ವಹೋತಾ**—ಕಣ್ವಋಷಿಗಳೇ ಹೋತೃಗಳಾಗಿ ಉಳ್ಳವನೂ ಆದ । **ತ್ರಿತಃ**—ತ್ರಿತನೂ । **ದಿವಃ**—ಸೂರ್ಯನೊಡನೆ । **ಸಜೋಷಾಃ**—ಸಮಾನವಾದ ಪ್ರೀತಿಯುಳ್ಳ । **ವಾತಃ**—ವಾಯುವೂ । **ಅಗ್ನಿಃ**—ಅಗ್ನಿಯೂ । **ಪೂಷಾ**—ಪೂಷದೇವನೂ । **ಭಗಃ**—ಭಗನೂ । **ವಿಶ್ವಭೋಜಾಃ**—ವಿಶ್ವರಕ್ಷಕರಾದ ಸಕಲ ದೇವತೆಗಳೂ । **ಪ್ರಭೃತೇ**—ಈ ಯಜ್ಞಕ್ಕೆ । **ಆಶ್ವಶ್ವತಮಾಃ**—ವೇಗಗಾಮಿಗಳಾದ ಅಶ್ವಗಳಲ್ಲೂ ಶ್ರೇಷ್ಠವಾದ ಅಶ್ವಗಳು । **ಆಜಿಂ ನ**—ಯುದ್ಧಭೂಮಿಗೆ ಓಡಿಬರುವಂತೆ । **ಪ್ರ ಜಗ್ಮುಃ**—ಶೀಘ್ರವಾಗಿ ದಯಮಾಡಲಿ.

॥ ಭಾವಾರ್ಥ ॥

ಯಜ್ಞಭಾಗವನ್ನು ಸ್ವೀಕರಿಸುವವನೂ, ದ್ಯುಲೋಕೋತ್ಪನ್ನನೂ, ಕಣ್ವಋಷಿಗಳೇ ಹೋತೃಗಳಾಗಿ ಉಳ್ಳವನೂ ಆದ ತ್ರಿತನೂ, ಸೂರ್ಯನೊಡನೆ ಸಮಾನವಾದ ಪ್ರೀತಿಯುಳ್ಳ ವಾಯುವೂ, ಅಗ್ನಿಯೂ, ಪೂಷದೇವನೂ, ಭಗನೂ, ವಿಶ್ವರಕ್ಷಕರಾದ ಸಕಲದೇವತೆಗಳೂ ಈ ಯಜ್ಞಕ್ಕೆ ವೇಗಗಾಮಿಗಳಾದ ಉತ್ತಮವಾದ ಅಶ್ವಗಳಲ್ಲೂ ಅತ್ಯಂತ ಶ್ರೇಷ್ಠವಾದ ಅಶ್ವಗಳು ಸಂಗ್ರಾಮಕ್ಕೆ ಓಡಿಬರುವಂತೆ ಶೀಘ್ರವಾಗಿ ದಯಮಾಡಲಿ

English Translation

May the divine accepter of sacrifice, of whom the Kanwas are the priests, Trita, Vayu, and Agni, concurring in satisfaction with (the ruler of) heaven, or (Surya and) Pushan, and Bhaga, and they who are the protectors of the universe, (come quickly) to the sacrifice, as the fleetest coursers rush to battle.

॥ ವಿಶೇಷವಿಷಯಗಳು ॥

## ಕಣ್ವಹೋತಾ ತ್ರಿತಃ

ಪ್ರಕೃತವಾದ ಮಂತ್ರದಲ್ಲಿ ಉದ್ದಿಷ್ಟರಾದ ದೇವತೆಗಳೆಲ್ಲರೂ **ಲಿಂಗೋಕ್ತ ದೇವತೆಗಳೆಂದು** ಸಾಯಣರು ಪೀಠಿಕೆಯಲ್ಲಿ ತಿಳಿಸಿದ್ದಾರೆ. **ಲಿಂಗವೆಂದರೆ** ಆಯಾ ದೇವತೆಯ ವೈಯಕ್ತಿಕವೂ ಅಸಾಧಾರಣವೂ ಆದ ಗುಣವೆಂದರ್ಥ. ಉದಾಹರಣೆಗೆ, ಅಗ್ನಿ, ಇಂದ್ರ—ವಾಯು ಮತ್ತು ಸೂರ್ಯ ಇವರ ಅಸಾಧಾರಣಗುಣಗಳೇನು ಎಂದರೆ—

**ವ್ಯವಸ್ಯೇನ್ಮಂತ್ರಮಾಗ್ನೇಯಂ ಅಂಗೈರಗ್ನೇಶ್ಚ ಲಕ್ಷಿತಂ ।**
**ಹವಿಷ್ಪಂಕ್ತಿಪ್ರಧಾನೈಶ್ಚ ನಾಮಾಹ್ವಾನೈಶ್ಚ ಕೇವಲೈಃ ॥**

(ಬೃ. ದೇ. ೧-೮೬)

ಅಗ್ನಿಯ ವಿಶೇಷಗುಣಗಳನ್ನು ನಿರ್ದೇಶಿಸುವ ಮಂತ್ರಗಳಿಂದ ಅಗ್ನಿಯನ್ನು ಉಪಾಸಿಸತಕ್ಕದ್ದು. ಹವಿಷ್ಪಂಕ್ತಿ ಪ್ರಧಾನವಾದುದು ಒಂದು ಬಗೆ ಅಥವಾ ಆಹ್ವಾನರೂಪದಲ್ಲಿ ಪಠಿಸತಕ್ಕದ್ದು ಇನ್ನೊಂದು ಬಗೆ ಹೀಗೆ ಅಗ್ನಿಯ ಅಂಗಗಳನ್ನು ನಿರ್ದೇಶಿಸತಕ್ಕದ್ದು ಎರಡು ಬಗೆ. ಹಾಗೆಯೇ,

**ಐಂದ್ರಸ್ತು ಮಂತ್ರೋ ವಾಯವ್ಯೈರ್ಲಿಂಗೈರೈಂದ್ರೈಶ್ಚ ಲಕ್ಷ್ಯತೇ ।**
**ನಾಮಧೇಯೈಶ್ಚ ವಜ್ರಸ್ಯ ಬಲಕೃತ್ಯಾ ಬಲೇನ ಚ ॥**

(ಬೃ. ದೇ. ೧-೮೭)

ಇಂದ್ರನ ವಿಶೇಷಗುಣಗಳನ್ನು ನಿರ್ದೇಶಿಸುವ ಮಂತ್ರಗಳು ಇಂದ್ರನ ಸ್ವರೂಪವನ್ನು ಹೇಗೆ ವರ್ಣಿಸುವುವೋ ವಾಯುವಿನ ಸ್ವರೂಪಗಳನ್ನೂ ಹಾಗೆಯೇ ತಿಳಿಸುತ್ತವೆ. ವಜ್ರಾಯುಧದ ನಾಮಧೇಯನಿರ್ದೇಶಗಳಿಂದಲೂ, ಪರಾಕ್ರಮವನ್ನು ಸೂಚಿಸುವ ವ್ಯವಹಾರಗಳಿಂದಲೂ, ಪರಾಕ್ರಮಗಳ ವರ್ಣನೆಗಳಿಂದಲೂ ಇವರ ಸ್ವರೂಪವು ತಿಳಿಯುತ್ತದೆ. ಮತ್ತು

**ಸೌರಸ್ತು ಲಿಂಗೈಃ ಸೂರಸ್ಯ ಗುಣೈಃ ಸರ್ವೈಶ್ಚ ತೈಜಸೈಃ ।**
**ನಾಮಧೇಯೈಶ್ಚ ಚಂದ್ರಸ್ಯ ಸೂಕ್ತಂ ಚ ಭಜತೇಽತ್ರ ಯೈಃ ॥**

(ಬೃ. ದೇ. ೧-೮೮)

ಸೂರ್ಯನ ಸಕಲಗುಣಗಳ ವರ್ಣನದಿಂದಲೂ ಮತ್ತು ಪ್ರಭಾ ಸಂಬಂಧಿಯಾದ ಪ್ರಭೇದಗಳ ವಿವರಣೆಯಿಂದಲೂ ಸಹ ಸೂರ್ಯಮಂತ್ರಗಳನ್ನು ಗುರ್ತಿಸಬೇಕು. ಇತ್ಯಾದಿಯಾಗಿ ಲಿಂಗೋಕ್ತದೇವತೆಗಳನ್ನು ಗುರ್ತಿಸುವ ಬಗೆಯನ್ನು ತಿಳಿಸಿದೆ.

ಇದೇ ರೀತಿಯಲ್ಲಿ ಪ್ರಕೃತವಾದ ಮಂತ್ರದಲ್ಲೂ ಸಹ **ಅಗ್ನಿ, ಪೂಷ** ಮುಂತಾದ ದೇವತೆಗಳ ಸ್ಥಾನವನ್ನು ತಿಳಿಯಲು ಹೆಚ್ಚು ಶ್ರಮವಿಲ್ಲ. ಆದರೆ, **ಕಣ್ವಹೋತಾ ತ್ರಿತಃ** ಎಂಬಲ್ಲಿ **ತ್ರಿತನ** ಸ್ವರೂಪವನ್ನು ಅರಿಯುವುದು ಸ್ವಲ್ಪ ಶ್ರಮವಾಗುತ್ತದೆ. ಸಾಯಣರು "**ತ್ರಿಷು ಕ್ಷಿತ್ಯಾದಿಸ್ಥಾನೇಷು ತಾಯಮಾನಃ (ಸೂರ್ಯೇಣ ಸಹ ಸಮಾನಗತಿಃ) ವಾತಃ । ವಾಯುಃ** " ಪೃಥಿವ್ಯಾದಿ ಮೂರು ಲೋಕಗಳಲ್ಲಿರುವವನೂ, ಸೂರ್ಯನೊಡನೆ ಸಮಾನಗತಿಯುಳ್ಳವನೂ ಆದ ವಾಯುವೆಂದು ಸಾಯಣರು ವಿವರಿಸಿದ್ದಾರೆ. ಆದುದರಿಂದ **ದಿವಃ ಸಜೋಷಾಃ , ಕಣ್ವಹೋತಾ** ಎಂಬೆರಡೂ **ವಾತಃ** ಎಂಬುದಕ್ಕೆ ವಿಶೇಷಣವೆಂದಾಯಿತು. ಈ ಪಕ್ಷದಲ್ಲಿ **ಕಣ್ವಹೋತಾ** ಎಂಬ ವಿಶೇಷಣದ ತಾತ್ಪರ್ಯವೇನು ಎಂದರೆ ಅದನ್ನೂ ಈ ರೀತಿ ವಿವರಿಸಿದ್ದಾರೆ. **ಕಣ್ವಾ ಋಷಯೋ ಮೇಧಾವಿನೋ ವಾ ಹೋತಾರ ಆಹ್ವಾತಾರೋ ಯಸ್ಯ ಸಃ ।** ಕಣ್ವಶಬ್ದಕ್ಕೆ ಋಷಿಯೆಂದರ್ಥ. ಮೇಧಾವಿಯೆಂಬರ್ಥದಲ್ಲೂ ಈ ಶಬ್ದದ ಪ್ರಯೋಗವುಂಟು. ಈ ಶಬ್ದದ ಸಾಯಣರು ಈ ಪದದ ಅರ್ಥವನ್ನು ವಿವರಿಸುತ್ತಾ,

**ಕಣ್ವಶಬ್ದಾರ್ಥಃ । ಕಣಂತಿ ಧ್ವನಂತಿ ಸ್ತೋತ್ರಾದಿಪಾಠೇನೇತಿ ಕಣ್ವಾ ಋತ್ವಿಜಃ ।**

(ಸಾ. ಭಾ. ಋ. ಸಂ. ೧-೧೪೫)

ಸ್ತುತಿರೂಪವಾದ ಶಬ್ದವನ್ನು ಮಾಡುತ್ತಾ ಪೂಜಿಸುವವರಾದುದರಿಂದ ಋತ್ವಿಕ್ಕುಗಳಿಗೆ **ಕಣ್ವರು** ಎಂದು ಹೆಸರು ಎಂದು ತಿಳಿಸಿದ್ದಾರೆ. ಮೇಧಾವಿಗಳಾದ ಋಷಿಗಳೇ ಹೋತೃಗಳಾಗಿ ಉಳ್ಳ **ವಾಯುವು** ಎಂದು ಪ್ರಕೃತವಾದ ಮಂತ್ರದಲ್ಲಿ ತಾತ್ಪರ್ಯವನ್ನು ವಿವರಿಸಿದೆ ಇದಲ್ಲದೇ, **ದಿವಃ ಸಜೋಷಾಃ ತ್ರಿತಃ** । ಆದಿತ್ಯನೊಂದಿಗೆ ಸಮಾನಪ್ರೀತಿಯುಳ್ಳ **ತ್ರಿತ**ಸಂಜ್ಞಕನಾದ ದೇವನು ಎಂದು **ವಾಯು**ವಿಗಿಂತಲೂ ಭಿನ್ನವಾದ ದೇವತಾವಿಶೇಷವು ಈ ಪದದಿಂದ ನಿರ್ದಿಷ್ಟವಾಗಿರುತ್ತದೆ ಎಂಬ ಮತವೂ ಇರುತ್ತದೆ. ಆದುದರಿಂದ ಈ ಸಂದರ್ಭದಲ್ಲಿ **ಕಣ್ವಹೋತಾ** ಎಂಬ ವಿಶೇಷಣದಿಂದ ನಿಷ್ಕೃಷ್ಟವಾದ ಯಾವ ಅರ್ಥವು ಸಾಧ್ಯ ಮತ್ತು ಆ ವಿಶೇಷಣವು ಯಾವ ದೇವನಿಗೆ ವಿಶೇಷಣವಾಗಿದ್ದರೆ ಇಲ್ಲಿ ಅರ್ಥವು ಸಹಜವಾಗಿರುತ್ತದೆ, ಇತ್ಯಾದ್ಯಂಶಗಳನ್ನು ಸಧ್ಯಃ ಪರಿಶೀಲಿಸಬೇಕಾಗಿರುತ್ತದೆ

**ಪ್ರ ಸಕ್ಷಣೋ ದಿವ್ಯಃ** ಎಂಬ ಪದಗಳಿಗೆ ದೇವಲೋಕದ ವಿಜಯೀ ಎಂಬರ್ಥವನ್ನು ಮಾಡಿ ಇಂದ್ರಪರವಾದ ತಾತ್ಪರ್ಯವನ್ನೂ ಕೆಲವರು ಹೇಳಿದ್ದಾರೆ "The heavenly victor, he whose priest is Kanva, Trita " ಎಂಬುದಾಗಿ Griffith ಎಂಬ ಪಂಡಿತನು ಅರ್ಥಮಾಡಿ Heavenly victor ಎಂದರೆ **ಇಂದ್ರ**ನೆಂದು ತಾತ್ಪರ್ಯವನ್ನು ಹೇಳಿದ್ದಾನೆ. ಈ ಸಂದರ್ಭದಲ್ಲಿ **ಸಕ್ಷಣಃ** ಎಂಬ ಪದದ ಅರ್ಥವೇನು ಎಂಬುದನ್ನು ತಿಳಿಯಬೇಕು.

ಸಾಯಣರು **ಸಕ್ಷಣಃ ಯಜ್ಞಂ ಸೇವಮಾನಃ; ಶತ್ರೂಣಾಂ ಸೋಢಾ ವಾ** । ಯಜ್ಞವನ್ನು ಸೇವಿಸತಕ್ಕವನು ಎಂಬ ಒಂದರ್ಥವನ್ನೂ ಅಥವಾ ಶತ್ರುಗಳನ್ನು ಸೋಲಿಸುವ ಬಲವುಳ್ಳವನು ಎಂಬ ಇನ್ನೊಂದರ್ಥವನ್ನೂ ವೈಕಲ್ಪಿಕವಾಗಿ ಹೇಳಿದ್ದಾರೆ. **ಸಚ್** (ಸಂಜ್) ಧಾತುವಿನಿಂದ ನಿಷ್ಪನ್ನವಾದ ಸಕ್ಷಣ ಶಬ್ದವು ಮೊದಲನೆಯ ಅರ್ಥವನ್ನು ಕೊಡುತ್ತದೆ. ಒಟ್ಟುಗೂಡಿಕೊಂಡಿರುವವನು ಎಂದರ್ಥ ಪ್ರಕೃತದಲ್ಲಿ ಯಜ್ಞದೊಂದಿಗೆ ಕೂಡಿಕೊಂಡಿರುವವನು ಎಂದರೆ ಸೇವಿಸುವವನು ಎಂದು ತಾತ್ಪರ್ಯ ಈ ಅರ್ಥವನ್ನು ಹೇಳಿದರೆ, ಆಗ **ಸಕ್ಷಣ** ಎಂಬ ವಿಶೇಷಣವು ಕೇವಲ ಇಂದ್ರನಿಗೆ ಮಾತ್ರ ಅನ್ವಯಿಸಬೇಕಾಗಿಲ್ಲ. ಈ ಲಿಂಗವು ಅಗ್ನ್ಯಾದಿ ಇತರ ದೇವತೆಗಳಿಗೂ ಅನ್ವಿತವಾಗಬಹುದು ಆದುದರಿಂದ, ಪ್ರಕೃತದಲ್ಲಿ, ಎರಡನೆಯ ಅರ್ಥವನ್ನೇ ಹೇಳುವುದು ಸಹಜವಾಗಿರುತ್ತದೆ ಆಗ, **ಸಕ್ಷಣ**ಶಬ್ದವು **ಸಹ್**-ಧಾತುವಿನಿಂದ ನಿಷ್ಪನ್ನವಾಗಿ, ಶತ್ರುಗಳನ್ನು ಎದುರಿಸುವ ಶಕ್ತಿಯುಳ್ಳವನು ಎಂಬ ತಾತ್ಪರ್ಯವನ್ನು ಕೊಡುತ್ತದೆ. **ಸಕ್ಷಣ** ಪದವು ಋಕ್ಸಂಹಿತೆಯಲ್ಲೆಲ್ಲಾ ಇದೊಂದು ಕಡೆಯಲ್ಲದೇ ಇನ್ನೆಲ್ಲೂ ಪ್ರಯುಕ್ತವಾಗಿಲ್ಲ ಆದರೆ, **ಸಕ್ಷಣಿ** ಶಬ್ದವು ಇತರೆಡೆಗಳಲ್ಲಿ ಪ್ರಯುಕ್ತವಾಗಿದೆ ಈ ಎರಡು ಪದಗಳ ಅರ್ಥವೂ ಒಂದೇ ಎಂದು ಮಾತ್ರ ಹೇಳಬಹುದಾಗಿದೆ. ಒಂದೆರಡು ಕಡೆಗಳಲ್ಲಿ ಮಾತ್ರ **ಸಕ್ಷಣಿ** ಶಬ್ದವು ಮೊದಲನೆಯ ಅರ್ಥದಲ್ಲಿ ಪ್ರಯುಕ್ತವಾಗಿದ್ದರೂ ಸಹ, **ಸಹಸಾರ್ಥ**-ದಲ್ಲೂ, **ಶಕ್ತ್ಯರ್ಥ**ದಲ್ಲೂ, ಪ್ರಯುಕ್ತವಾಗಿರುವುದೇ ಅಧಿಕವಾಗಿದೆ ಉದಾಹರಣೆಗೆ- **ಸಿಂಚಂತಿ ಹರ್ಮ್ಯಸ್ಯ ಸಕ್ಷಣಿಂ** (ಋ ಸಂ ೧-೭೧-೪), **ಪರಿ ವೃತ್ರಾಣಿ ಸಕ್ಷಣಿಃ** (೯-೧೧೦-೧), **ಪೃತನಾಸು ಸಕ್ಷಣಿಂ** (೧-೧೧೧-೩) ಇತ್ಯಾದಿ ಸ್ಥಳಗಳಲ್ಲೆಲ್ಲಾ ಜಯವನ್ನು ಪಡೆಯುವ ಶಕ್ತಿಯುಳ್ಳವನೆಂದೇ ತಾತ್ಪರ್ಯ

ಪ್ರಕೃತವಾದ ಮಂತ್ರದಲ್ಲೂ ಸಹ **ಸಕ್ಷಣ**ಶಬ್ದಕ್ಕೆ ಜಯಶೀಲನೆಂದೇ ಅರ್ಥಮಾಡಿ ಅದು **ಇಂದ್ರ**ಪರವಾದ ವಿಶೇಷಣವೆಂದು ಅರ್ಥಮಾಡುವುದಾದರೆ ಆಗಲೂ ಒಂದು ಆಕ್ಷೇಪವು ಸಾಧ್ಯವಾಗಬಹುದು. **ತ್ರಿತನೂ** ಪ್ರಸಿದ್ಧನಾದ ಜಯಶಾಲಿಯೆಂದು ಖ್ಯಾತನಾಗಿದ್ದಾನೆ **ಸಕ್ಷಣ**ಶಬ್ದವು **ತ್ರಿತ**ನಿಗೂ ಏತಕ್ಕೆ ವಿಶೇಷಣವಾಗಿರಬಾರದು ಎಂಬ ಪ್ರಶ್ನೆಯೂ ಸಹಜವಾಗಿದೆ ಅಲ್ಲದೇ, **ಕಣ್ವಹೋತಾ** ಎಂಬ ವಿಶೇಷಣವು **ತ್ರಿತನ** ಗುಣವನ್ನು ಹೇಳುವುದು

ಸಹಜವಾಗಿದೆ ಇಂದ್ರನಿಗೆ ಈ ವಿಶೇಷಣವು ಅಧಿಕವಾಗಿ ಒಪ್ಪುವುದಿಲ್ಲ. **ಕಣ್ವಹೋತಾ** ಎಂಬ ವಿಶೇಷಣವೂ ಸಹ ಇದೊಂದೆಡೆಯಲ್ಲಲ್ಲದೆ, ಋಕ್ಸಂಹಿತೆಯಲ್ಲಿ ಇನ್ನೆಲ್ಲಿಯೂ ಪ್ರಯುಕ್ತವಾಗಿಲ್ಲ. **ಕಣ್ವಸಖಿ; ಕಣ್ವತಮ** ಇತ್ಯಾದಿ ಪ್ರಯೋಗಗಳಿರುವುದರಿಂದ ಆ ಸಂದರ್ಭಗಳಲ್ಲಿ ಅವುಗಳ ಅರ್ಥವೇನು, ಅವು ಯಾವ ದೇವತೆಯ ವಿಶೇಷಗುಣವನ್ನು ತಿಳಿಸುವುವು ಎಂಬುದನ್ನು ಪರಿಶೀಲಿಸಬೇಕು.

**ಸ ಇದಗ್ನಿಃ ಕಣ್ವತಮಃ ಕಣ್ವಸಖಾರ್ಯಃ ಪರಸ್ಯಾಂತರಸ್ಯ ತರುಷಃ ।**
**ಅಗ್ನಿಃ ಪಾತು ಗೃಣತೋ ಅಗ್ನಿಃ ಸೂರೀನಗ್ನಿರ್ದದಾತು ತೇಷಾಮವೋ ನಃ ॥**

**(ಋ ಸಂ ೧೦-೧೧೫-೫)**

ಎಂಬಲ್ಲಿ **ಕಣ್ವ**ಶಬ್ದಕ್ಕೆ ಸ್ತುತಿಕರ್ತರೆಂದರ್ಥ ಅಗ್ನಿಯು ಸ್ತುತಿಕರ್ತರಲ್ಲಿ ಶ್ರೇಷ್ಠನು ಎಂಬರ್ಥವನ್ನು ತೋರಿಸಲು **ಕಣ್ವತಮ** ಎಂಬ ವಿಶೇಷಣವೂ, ಸ್ತುತಿಕರ್ತರೇ ಸಖರಾಗಿ ಉಳ್ಳವನು ಎಂಬರ್ಥವನ್ನು ತೋರಿಸಲು **ಕಣ್ವಸಖಾ** ಎಂಬ ವಿಶೇಷಣವೂ ಪ್ರಯುಕ್ತವಾಗಿವೆ. ಈ ಎರಡು ಪದಗಳೂ ಅಗ್ನಿಯ ವಿಶೇಷಗುಣಗಳನ್ನು ತಿಳಿಸುತ್ತವೆ. ಇದಲ್ಲದೆ,

**ವಿ ಯಸ್ಯ ತೇ ಜ್ರಯಸಾನಸ್ಯಾಜರ ಧಕ್ಷೋರ್ನ ವಾತಾಃ ಪರಿ ಸಂತ್ಯಚ್ಯುತಾಃ ।**
**ಆ ರಣ್ವಾಸೋ ಯುಯುಧಯೋ ನ ಸತ್ವನಂ ತ್ರಿತಂ ನಶಂತ ಪ್ರ ಶಿಷಂತ ಇಷ್ಟಯೇ ॥**

(ಋ ಸಂ ೧೦-೧೧೫-೪)

ಎಂಬಲ್ಲಿ ಯೋಧನ ಗುಣವುಳ್ಳ **ತ್ರಿತನ** ವರ್ಣನೆಯಿದೆ ಇದು **ಅಗ್ನಿಯ** ವರ್ಣನೆಯು ತ್ರಿತರೂಪನಾದ ಈ ಅಗ್ನಿಯೇ ಮೇಲೆ ಉದಾಹೃತವಾಗಿರುವ ಇದರ ಮುಂದಿನ ಮಂತ್ರದಲ್ಲಿ **ಕಣ್ವತಮಃ, ಕಣ್ವಸಖಾ** ಎಂಬ ವಿಶೇಷಣಗಳಿಂದ ವರ್ಣಿತನಾಗಿದ್ದಾನೆ ಹೀಗೆ, ಅನೇಕ ಸಂದರ್ಭಗಳಲ್ಲಿ **ತ್ರಿತ**ಸಂಜ್ಞಕನಾದ ಅಗ್ನಿಯ ನಿರ್ದೇಶವಿರುವಂತೆಯೇ, ಪ್ರಕೃತವಾದ ಮಂತ್ರದಲ್ಲಿಯೂ ಅಗ್ನಿಯೇ ನಿರ್ದಿಷ್ಟನಾಗಿರುವನೆಂದು ಹೇಳಿದರೆ ತಪ್ಪಾಗಲಾರದು. ಆದರೆ, ಇಲ್ಲಿ, ಇನ್ನೊಂದು ವಿಧವಾದ ಆಕ್ಷೇಪಕ್ಕೆ ಅವಕಾಶವಿರುತ್ತದೆ. ಪ್ರಕೃತವಾದ ಮಂತ್ರದಲ್ಲಿ, **ಅಗ್ನಿ**ಯೆಂಬ ಪದವು ವಾಚ್ಯವಾಗಿಯೇ, **ಅಗ್ನಿ**ಯನ್ನು ನಿರ್ದೇಶಿಸುವಾಗ, ಪುನಃ **ಅಗ್ನಿ**ಪರವಾಗಿ **ತ್ರಿತ** ಎಂಬ ಪದಪ್ರಯೋಗವು ಅನಾವಶ್ಯಕವೆಂದು ಕೆಲವರು ಪ್ರಶ್ನಿಸಲೂ ಅವಕಾಶವಿರುತ್ತದೆ ಆದರೆ, ಆ ಆಕ್ಷೇಪದಲ್ಲಿ ಅರ್ಥವಿಲ್ಲ ಹಾಗಿದ್ದರೆ, ಅಗ್ನಿಯ ರೂಪಾಂತರವಾದ ಸೂರ್ಯರೂಪನಾದ ಪೂಷನ ನಿರ್ದೇಶವೂ ಅಪ್ರಕೃತನಾಗುತ್ತಿತ್ತು. **ವಾತ**ನೊಬ್ಬನನ್ನು ಬಿಟ್ಟು ಪ್ರಕೃತವಾದ ಮಂತ್ರದಲ್ಲಿ ಸ್ತುತರಾಗಿರುವ ಉಳಿದ ಎಲ್ಲಾ ದೇವತೆಗಳೂ ಸಹ ಜ್ಯೋತೀರೂಪವಾದ ಸ್ವರೂಪವುಳ್ಳ ದೇವತೆಗಳೇ ಆಗಿದ್ದಾರೆ. ಅದರಲ್ಲೂ **ದಿವಃ ಸಜೋಷಾಃ** ಎನ್ನುವ ವಿಶೇಷಣವು **ತ್ರಿತನಿಗೆ** ಸಹಜವಾಗಿ ಒಪ್ಪುತ್ತದೆ ಆದುದರಿಂದ ಜ್ಯೋತೀರೂಪನಾದ ಅಗ್ನಿಯು ಇಲ್ಲಿ **ತ್ರಿತ**ಪದದಿಂದ ವಾಚ್ಯನಾಗಿದ್ದಾನೆ ಎಂಬುದರಿಂದ ತಪ್ಪಾಗಲಾರದು ಎಂದು ಹೇಳಿದರೆ, **ತ್ರಿತ**ಶಬ್ದವು ಇಂದ್ರಾದಿಗಳ ವಿಶೇಷಗುಣಗಳನ್ನೂ ತೋರಿಸುವಂತೆ ಬೇರೆಕಡೆಗಳಲ್ಲಿ ಪ್ರಯುಕ್ತವಾಗಿರುವುದರಿಂದ ಪ್ರಕೃತವಾದ ಮಂತ್ರದಲ್ಲಿ ನಿಷ್ಕೃಷ್ಟವಾಗಿ ಅಗ್ನಿಯನ್ನೇ ನಿರ್ದೇಶಿಸುವುದು ಎಂಬುದಕ್ಕೆ ಏನು ಆಧಾರ ಎಂದು ಪ್ರಶ್ನಿಸಿದರೆ ಅದಕ್ಕೆ ಉತ್ತರವಾಗಿ ಎರಡು ವಿಧವಾದ ಸಮಾಧಾನವನ್ನು ಹೇಳಬಹುದು ಮೊದಲನೆಯದಾಗಿ, ಇದೇ ಸೂಕ್ತದಲ್ಲಿ ಅಂತರ್ಗತವಾಗಿರುವ ಇನ್ನೊಂದು ಮಂತ್ರವು ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ ಹೇಗೆಂದರೆ—

**ವೃಷ್ಣೋ ಅಸ್ತೋಷಿ ಭೂಮ್ಯಸ್ಯ ಗರ್ಭಂ ತ್ರಿತೋ ನಪಾತಮಪಾಂ ಸುವೃಕ್ತಿ ।**
**ಗೃಣೀತೇ ಅಗ್ನಿರೇತರೀ ನ ಶೂಷೈಃ ಶೋಚಿಷ್ಕೇಶೋ ನಿ ರಿಣಾತಿ ವನಾ ॥**

(ಋ. ಸಂ. ೫–४೧–೧೦).

ಎಂಬಲ್ಲಿ **ವೈದ್ಯುತಾಗ್ನಿ**ಯ ವರ್ಣನೆಯಿರುತ್ತದೆ. ಈ ವೈದ್ಯುತಾಗ್ನಿಯು ಮೇಘಕ್ಕೆ ಗರ್ಭಸ್ಥಾನೀಯವಾಗಿರುತ್ತದೆ **ತ್ರಿತ** ಪದವು ಈ ವೈದ್ಯುತಾಗ್ನಿಯ ವಿಶೇಷಣವಾಗಿರುತ್ತದೆ. ಆದುದರಿಂದ **ತ್ರಿತ** ಎಂಬ ಪದವು ಇಲ್ಲಿ ಅಗ್ನಿಯ ವೈಯಕ್ತಿಕ ಲಿಂಗನೆಂದು ಹೇಳಬಹುದು. ಎರಡನೆಯದಾಗಿ, ಇತರ ಕಡೆಗಳಲ್ಲಿ ಇಂದ್ರಾದಿಗಳನ್ನು ನಿರ್ದೇಶಿಸುವಾಗ ಈ ಪದದ ತಾತ್ಪರ್ಯವು ಬೇರೆ ವಿಧವಾಗಿರುತ್ತದೆ. ಆದುದರಿಂದ ಈ ಸಂದರ್ಭಗಳನ್ನು ತಿಳಿಯಲು **ತ್ರಿತ**ಶಬ್ದವು ಉಳಿದ ಯಾವ ಯಾವ ದೇವತೆಗಳಿಗೆ ವಿಶೇಷಣವಾಗಿರುತ್ತದೆ ಎಂಬುದನ್ನೂ ಗಮನಿಸಬೇಕಾಗಿದೆ—

(೧) ಯಾಸ್ಕರು ಈ ಪದವನ್ನು ಎರಡು ಸಂದರ್ಭಗಳಲ್ಲಿ ವಿವರಿಸುತ್ತಾ ಈ ಪದದ ನಿರ್ವಚನವನ್ನು ಎರಡು ವಿಧವಾಗಿ ತಿಳಿಸಿದ್ದಾರೆ. ಮೊದಲನೆಯದಾಗಿ ಋ. ಸಂ. ೧–೧೦೫–೮ ನೆಯ ಮಂತ್ರದ ತಾತ್ಪರ್ಯವನ್ನು ತಿಳಿಸುವಾಗ **"ತ್ರಿತಃ ತೀರ್ಣತಮೋ ಮೇಧಯಾ ಬಭೂವ"** ತ್ರಿತನು ಪ್ರಾಜ್ಞರಲ್ಲೆಲ್ಲಾ ಅತ್ಯಂತ ಶ್ರೇಷ್ಠನಾದವನು. ತನ್ನ ಮೇಧೆಯಿಂದ ಅಜ್ಞಾನವನ್ನು ಅತಿಶಯವಾಗಿ ದಾಟಿದುದರಿಂದ ಈ ಹೆಸರು ಎಂದು ವಿವರಿಸಿದೆ. ಇಲ್ಲಿ **ತ್ರಿತ**ನೆಂಬುದು ಬೃಹಸ್ಪತಿ ಶಿಷ್ಯನಾದ ಒಬ್ಬ ಮಹರ್ಷಿಯ ಹೆಸರು. (ಈ ಋಷಿಯ ಕಥೆಯನ್ನೂ ಇವನ ಮಹತ್ತ್ವವನ್ನೂ ಋಗ್ವೇದ ಸಂಹಿತಾ ಭಾಗ ೮ ಪುಟ 443 447 ಗಳಲ್ಲಿ ವಿವರಿಸಿದೆ. ಆ ವಿವರಣವು ಇಲ್ಲಿ ಅಪ್ರಕೃತ). (ನಿ ४-೬)

(೨) ಎರಡನೆಯದಾಗಿ, ಋ. ಸಂ. ೧-೧೪೭-೧ ನೇ ಮಂತ್ರವನ್ನು ವಿವರಿಸುವಾಗ **ತ್ರಿಸ್ಥಾನ ಇಂದ್ರಃ** ಮೂರು ಲೋಕಗಳಲ್ಲೂ ವ್ಯಾಪಿಸಿ ಸ್ಥಿತನಾಗಿರುವ ಇಂದ್ರನೆಂದು ತಾತ್ಪರ್ಯವನ್ನು ಹೇಳಿದ್ದಾರೆ. (ನಿ. ೯ ೨೫)

ಸಾಯಣರ ನಿರ್ವಚನವು ಹೆಚ್ಚು ಕಡಿಮೆ ನಿರುಕ್ತಕಾರರ ನಿರ್ವಚನವನ್ನೇ ಅನುಸರಿಸಿದೆ. ಸುಮಾರು ಇಪ್ಪತ್ತು ಮಂತ್ರಗಳಲ್ಲಿ **ತ್ರಿತನು** ಮಹರ್ಷಿಯೆಂದು ಪ್ರಶಂಸಿಸಿದ್ದಾರೆ. ಉಳಿದೆಡೆಗಳಲ್ಲೆಲ್ಲಾ ತ್ರಿಸ್ಥಾನವ್ಯಾಪಿಯೆಂದು ವಿವರಿಸಿ ಆಯಾ ಸಂದರ್ಭಗಳಿಗನುಸಾರವಾಗಿ, ವಾಯು, ವರುಣ, ಇಂದ್ರ, ಅಗ್ನಿ ಇತ್ಯಾದಿ ದೇವತೆಗಳಿಗೆ ವಿಶೇಷಣವಾಗಿದೆಯೆಂದು ತಿಳಿಸಿದ್ದಾರೆ. ನಾವು ಮೇಲೆ ತಿಳಿಸಿದಂತೆ, ಪ್ರಕೃತವಾದ ಮಂತ್ರದಲ್ಲಿ ವೈದ್ಯುತಾಗ್ನಿಯನ್ನು ಮಾತ್ರ ನಿರ್ದೇಶಿಸುವುದೆಂದು ನಿಷ್ಕೃಷ್ಟವಾಗಿ ಹೇಳಬೇಕಾದರೆ, ಉಳಿದೆಡೆಗಳಲ್ಲಿ ಈ ಪದದ ಪ್ರಯೋಗವನ್ನು ಗಮನಿಸಬೇಕು.

**ತ್ರಿತ** ಎಂಬ ಪದದ ಪ್ರಯೋಗವು ಋಕ್ಸಂಹಿತೆಯಲ್ಲಿ ನಲವತ್ತು ಸಂದರ್ಭಗಳಲ್ಲಿರುತ್ತದೆ. ಅವುಗಳಲ್ಲಿ ಅತ್ಯಧಿಕವಾಗಿ ಅಂತರಿಕ್ಷಸ್ಥವಾದ ಯಾವುದಾದರೂ ಒಂದು ದೇವತೆಯೊಡನಾಗಲಿ ಅಥವಾ ದೇವತೆಯೊಂದಿಗೆ ತಾದಾತ್ಮ್ಯವನ್ನು ಹೊಂದಿಯಾಗಲಿ, ಈ ಪದದ ಪ್ರಯೋಗವಿರುತ್ತದೆ. ಅಲ್ಲದೇ, ಕೆಲವು ಸಂದರ್ಭಗಳಲ್ಲಿ ಗೋಚರಾತೀತವಾದ ಸ್ಥಾನವನ್ನಾಕ್ರಮಿಸಿರುವ ದೇವತೆಯೆಂದೂ ವರ್ಣಿತವಾಗಿದೆ. ಈ ರೀತಿ ಸಂದರ್ಭಾಂತರಗಳಲ್ಲಿ ಈ **ತ್ರಿತ** ಪದಪ್ರಯೋಗಗಳನ್ನು ಸ್ಥೂಲವಾಗಿ ಎಂಟು ವಿಭಾಗಮಾಡಬಹುದು ಇವೆಲ್ಲವೂ **ತ್ರಿತನ** ಶಕ್ತಿವರ್ಣನಗಳು

(೧) ಇಂದ್ರನೊಡಗೂಡಿರುವ ಸನ್ನಿವೇಶಗಳು ೧೬. **" ಅನು ತ್ರಿತಸ್ಯ ಯುಧ್ಯತಃ ಶುಷ್ಮಂ "** (ಋ ಸಂ ೮–೭–೨४) ಇತ್ಯಾದಿ

(೨) ಇಂದ್ರನೊಡನೆಯಲ್ಲದೇ, ಕೇವಲ ಒಬ್ಬನೇ ವೃತ್ರಹಂತಕನೆಂದಿರುವ ಸನ್ನಿವೇಶ ೧. **( ಯಸ್ಯ ತ್ರಿತೋ ವ್ಯೋಜಸಾ ವೃತ್ರಂ ವಿಪರ್ವಮರ್ದಯತ್)** (೧-೧೮೭-೧)

(೩) ಮೇಧ್ಯಾಶ್ವರೂಪಿಯೆಂದು ವರ್ಣಿತನಾಗಿರುವುದು. ೧ **" ಅಸಿ ತ್ರಿತೋ ಗುಹ್ಯೇನ ವ್ರತೇನ "** (೧-೧೬೩-೩)

(೪) ಮರುತ್ತುಗಳೊಡಗೂಡಿರುವ ಸಂದರ್ಭಗಳು ೪ **" ತ್ರಿತಂ ಜರಾಯ ಜರತಾಂ "** (೨-೩೪-೧೦) ಇತ್ಯಾದಿ

(೫) ಅಗ್ನಿಯೊಡನೆ ತಾದಾತ್ಮ್ಯವನ್ನು ತೋರಿಸಿ ವರ್ಣಿತವಾಗಿರುವ ಸಂದರ್ಭಗಳು. ೭ **"ಯದೀಮಹ ತ್ರಿತೋ ದಿವಿ "** (೫-೯-೫) ಇತ್ಯಾದಿ

(೬) ವರುಣನೊಂದಿಗೆ ತಾದಾತ್ಮ್ಯವನ್ನು ಹೊಂದಿರುವುದು ೧ **"ತ್ರಿತಂ ಜೂತೀ ಸಪರ್ಯತ "** (೮ ೪೧-೬) ಇತ್ಯಾದಿ

(೭) ಸೋಮನೊಂದಿಗೆ ಕೂಡಿ ವರ್ಣಿತವಾಗಿರುವುದು. ೪ **" ಉಪ ತ್ರಿತಸ್ಯ "** ( ೯-೧೦೨-೨ ) ಇತ್ಯಾದಿ

(೮) ಗೋಚರಾತೀತವಾದ ಸ್ಥಾನದಲ್ಲಿ ವೈಯಕ್ತಿಕವೂ ಗಹನಾತೀತವೂ ಆದ ಸ್ವರೂಪವನ್ನು ಹೊಂದಿರುವವನು ಎಂದು ವರ್ಣಿತವಾಗಿರುವುದು ೬ **" ತ್ರಿತಾಯ ತದ್ವಿಭಾವರೀ "** ( ೮-೪೭-೧೪ ) ಇತ್ಯಾದಿ

ಹೀಗೆ ಒಟ್ಟು ೪೦ ಸನ್ನಿವೇಶಗಳಿವೆ ಇವುಗಳಲ್ಲಿ, ಇಂದ್ರನೊಡಗೂಡಿ ವರ್ಣಿತನಾಗಿರುವ ತ್ರಿತನು ಸಾಧಾರಣವಾಗಿ ಇಂದ್ರನೊಡನೆ ವೃತ್ರಾಸುರನೊಡನೆ ಯುದ್ಧಮಾಡುವಂತೆಯೂ ಅಥವಾ ಇಂದ್ರನಿಗೆ ಸೋಮವನ್ನು ಅರ್ಪಿಸುವಂತೆಯೂ ವರ್ಣಿತನಾಗಿದ್ದಾನೆ ಮರುತ್ತುಗಳ ಸಂಬಂಧವನ್ನು ಹೊಂದಿರುವಾಗ ವಿದ್ಯುತ್ಪ್ರಕಾಶಾದಿವ್ಯವಹಾರಗಳಿಗೆ ಸಹಾಯಕನಾಗಿದ್ದಾನೆ ಅಗ್ನಿಯೊಡನೆ ತಾದಾತ್ಮ್ಯವನ್ನೇ ಹೊಂದಿದ್ದಾನೆ ಇವನಾರು, ಇವನ ಸ್ವರೂಪವೇನು ಎಂದರೆ, ಇವನ ಸ್ಥಾನವೂ ಸ್ವರೂಪವೂ ಗೋಚರಾತೀತವೆಂದು ತಿಳಿಸಿದೆ

ಇಂತಹ ಅನಿರ್ವಚನೀಯನಾದ ತ್ರಿತನ ವಿಷಯವನ್ನು ವಿವರಿಸುವಾಗ ಪಂಡಿತರ ಅಭಿಪ್ರಾಯಗಳು ಏಕರೀತಿಯಲ್ಲಿರಲು ಸಾಧ್ಯವೇ ಇಲ್ಲ. ಆದುದರಿಂದ ಕೆಲವರು ಇಂದ್ರನೊಂದಿಗೂ, ಕೆಲವರು ವಾಯುವಿನೊಂದಿಗೂ, ಕೆಲವರು ಅಗ್ನಿಯೊಂದಿಗೂ ತಾದಾತ್ಮ್ಯವನ್ನು ತೋರಿಸಿ ವಿವರಿಸಿದ್ದಾರೆ. ಆದರೆ ಆಯಾ ಮೂಲ ದೇವತೆಗಳ ಸ್ವರೂಪವೇ ನಿಷ್ಕೃಷ್ಟವಾಗಿ ವರ್ಣಿತವಾಗಲು ಸಾಧವಿಲ್ಲ. **ಲಿಂಗೋಕ್ತ ದೇವತೆಗಳು** ಎಂಬ ವಿಭಾಗದಿಂದ ಆಯಾ ದೇವತೆಗಳ ವೈಯಕ್ತಿಕವಾದ ಲಿಂಗಜ್ಞಾನವು ಸಾಧ್ಯವೆಂದು ಹೇಳಲಾಗುವುದಿಲ್ಲ. ಒಂದೇ ವಿಶೇಷಣವು ಅನೇಕ ದೇವತೆಗಳ ಸಾಧಾರಣ ಧರ್ಮವನ್ನು ತಿಳಿಸುವುದಾಗಿರುವುದಕ್ಕೂ ಸಾಧ್ಯ. ಉದಾಹರಣೆಗೆ **ತ್ರಿತ** ಎಂಬ ವಿಶೇಷಣವೊಂದೇ, ಇಂದ್ರ, ಅಗ್ನಿ, ವಾಯು ಇತ್ಯಾದಿ ದೇವತೆಗಳ ತ್ರಿಲೋಕವ್ಯಾಪಕತ್ವವನ್ನು ವಿವರಿಸುವುದಾಗಿರುವುದರಿಂದ ನಿಷ್ಕೃಷ್ಟವಾದ ಅರ್ಥವನ್ನು ಹೇಳುವುದಕ್ಕೆ ಕಲವು ಸಂದರ್ಭಗಳಲ್ಲಿ ಭ್ರಮವಾಗುತ್ತದೆ. ಆದರೆ, ಪ್ರಕೃತದಲ್ಲಿ **ತ್ರಿತನು** ಯಾವ ದೇವತೆಯ

ವಿಶೇಷಗುಣವನ್ನು ಅಧಿಕವಾಗಿ ಪ್ರತಿಬಿಂಬಿಸುತ್ತಾನೆ ಎಂಬಂಶವನ್ನು ಮಾತ್ರ ವೈದಿಕವಾಕ್ಯಗಳ ಆಧಾರದಿಂದ ಸಾಧ್ಯ ಹಾದವುಟ್ಟಿಗೆ ತಿಳಿಸಬಹುದಾಗಿದೆ.

ಕೆಲವು ಪಂಡಿತರು ತ್ರಿತನಿಗೂ ಇಂದ್ರನಿಗೂ ತಾದಾತ್ಮ್ಯವನ್ನು ತೋರಿಸಿದ್ದರೂ ಸಹ, ತ್ರಿತನೂ ಇಂದ್ರನೂ ಸಾಧಾರಣವಾಗಿ ಒಟ್ಟಿಗೆ ನಿರ್ದಿಷ್ಟರಾಗಿರುವುದರಿಂದ ಇಂದ್ರನೊಡನೆ ವರ್ಣಿತವಾಗಿರುವ ಸಂದರ್ಭಗಳಲ್ಲೆಲ್ಲಾ ಋಷಿಯೆಂದೇ ಭಾವಿಸಬೇಕಾಗುತ್ತದೆ. (ಋ. ಸಂ. ೧.೫೨.೫, ೨-೧೧-೧೯,೨೦, ೫-೮೬-೧; ೮-೧೨-೧೬; ೧೦-೮-೭, ೧೦-೯೯-೬ ಇತ್ಯಾದಿ)

ವಾಯುವಿನೊಂದಿಗೆ ತಾದಾತ್ಮ್ಯವನ್ನು ಹೇಳಲು ಆಗುವುದಿಲ್ಲ ಹೇಗೆಂದರೆ, **ನಿ ಪಸ್ತ್ಯಾಸು ತ್ರಿತಃ ಸ್ತಭೂಯನ್** (೧೦.೪೬.೬) ಇತ್ಯಾದಿ ಸ್ಥಳಗಳಲ್ಲಿ ಗೃಹಸಖನೆಂದು ತ್ರಿತನ ವರ್ಣನೆಯಿರುತ್ತದೆ. ವಾಯುವು ಗೃಹಸಖನೆಂದು ಎಂದೂ ವರ್ಣಿತನಾಗಿಲ್ಲ, ಗೃಹಸಖನು ಅಗ್ನಿಯಲ್ಲದೇ ಬೇರೆಯಿಲ್ಲ.

ಅಗ್ನಿ, ವಾಯು, ಇಂದ್ರ ಇವರೆಲ್ಲರಿಗೂ ಸಮಾನ ಆಶ್ರಯವಾದ ಅಂತರಿಕ್ಷವೇ ತ್ರಿತನ ಆಶ್ರಯಸ್ಥಾನವೆಂಬುದು ಅನೇಕ ಸಂದರ್ಭಗಳಲ್ಲಿ ವರ್ಣಿತವಾಗಿದೆ ಆದುದರಿಂದ, ಇವರೆಲ್ಲರೊಂದಿಗೂ ಸಮಾನಗುಣವನ್ನು ಹೊಂದಿರುವ **ವೈದ್ಯುತಾಗ್ನಿಯೇ** ತ್ರಿತನಾಮನಿರ್ದಿಷ್ಟನಾಗಿರುತ್ತಾನೆ ಎಂಬ ಅಭಿಪ್ರಾಯವು ಸಾಧುವಾಗಿರುತ್ತದೆಂದು ಹೇಳಬಹುದು. ಮೇಲೆ ತಿಳಿಸಿರುವಂತೆ ತ್ರಿತನಿಗೂ ವಾರುಣಾಶ್ವಕ್ಕೂ ತೋರಿಸಿರುವ ತಾದಾತ್ಮ್ಯವೂ ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಮರುತ್ತುಗಳೊಡನೆ ಇರುವ ಸಾಹಚರ್ಯವೂ ಇದರಿಂದಲೇ ಸ್ಪಷ್ಟವಾಗುತ್ತದೆ. ಈ ವೈದ್ಯುತಾಗ್ನಿಯು ಅಗ್ನಿದೇವನ ರೂಪಗಳಲ್ಲೊಂದಾಗಿಯೇ ಇವೆ. ಆದುದರಿಂದ ತ್ರಿತನಿಗೂ ಅಗ್ನಿಗೂ ತಾದಾತ್ಮ್ಯವನ್ನು ತೋರಿಸುವುದೇ ಅತ್ಯಂತ ಸಹಜವಾದ ಅಭಿಪ್ರಾಯವಾಗಿರುತ್ತದೆ. ಕೊನೆಯದಾಗಿ, ಗೋಚರಾತೀತವಾದ ಸ್ಥಾನವೂ ಸಹ ವೈದ್ಯುತಾಗ್ನಿಯ ಸ್ವರೂಪವನ್ನು ಸೂಚಿಸುವುದಾಗಿಯೇ ಇರುತ್ತದೆ.

**ತ್ರಿಷು ಕ್ಷಿತ್ಯಾದಿಸ್ಥಾನೇಷು ತಾಯಮಾನಃ** ಎಂದು ಪ್ರಕೃತವಾದ ಮಂತ್ರದಲ್ಲಿ (೫-೪೧-೪) ಸಾಯಣರು ಹೇಳಿರುವ ನಿರ್ವಚನವು ಪಾರ್ಥಿವಾಗ್ನಿ, ಅಂತರಿಕ್ಷಸ್ಥನಾದ ವೈದ್ಯುತಾಗ್ನಿಮತ್ತು ದ್ಯುಲೋಕಸ್ಥನಾದ ಆದಿತ್ಯರೂಪನಾದ ಅಗ್ನಿ ಈ ಮೂರು ರೂಪಗಳನ್ನೂ ತಿಳಿಸುವುದಾಗಿರುತ್ತದೆಂಬುದರಲ್ಲಿ ಸಂಶಯವಿಲ್ಲ. ಋಕ್ಸಂಹಿತೆಯಲ್ಲಿ ಅಗ್ನಿಯ ಈ ಮೂರುರೂಪದ ಸ್ಥಿತಿಗಳನ್ನು ವರ್ಣಿಸಿರುವಷ್ಟು ಇನ್ನಾವ ಅಂಶವನ್ನು ಇಷ್ಟು ಅಧಿಕವಾಗಿ ವರ್ಣಿಸಿಲ್ಲ (**ತಿಸ್ರೋ ಯಹ್ವಸ್ಯ ಸಮಿಧಃ** (ಋ. ಸಂ. ೩-೨-೯).

**ಅಗ್ನೇ ತ್ರೀ ತೇ ವಾಜಿನಾ ತ್ರೀ ಷಧಸ್ಥಾ ತಿಸ್ರಸ್ತೇ ಜಿಹ್ವಾ ಋತಜಾತ ಪೂರ್ವೀಃ ।**
**ತಿಸ್ರ ಉ ತೇ ತನ್ವೋ ದೇವವಾತಾಸ್ತಾಭಿರ್ನಃ ಪಾಹಿ ಗಿರೋ ಅಪ್ರಯುಚ್ಛನ್ ॥**

(ಋ.ಸಂ ೩-೨೦-೨)

ಇತ್ಯಾದಿಯಾಗಿ, ಅಗ್ನಿಯ ಉತ್ಪತ್ತಿ, ವ್ಯಾಪ್ತಿ, ಸ್ವರೂಪ, ಕ್ರಿಯೆ ಇತ್ಯಾದಿ ಸಕಲವಿಧವಾದ ಪ್ರಭಾವಗಳನ್ನು ವರ್ಣಿಸುವಾಗಲೂ ಸಹ ಈ **ತ್ರಿತತ್ವವು** ನಿಯತವಾಗಿ ವರ್ಣಿತವಾಗಲೇಬೇಕು. (**ದಿವಸ್ಪರಿ ಪ್ರಥಮಂ ಜಜ್ಞೇ** ೧೦-೪೫-೧. ಇತ್ಯಾದಿ). ರೂಢವಾಗಿರತಕ್ಕ ಪಾರ್ಥಿವಾಗ್ನಿ ಮತ್ತು ಆದಿತ್ಯ ಈ ಎರಡು ರೂಪಗಳನ್ನು ಬಿಟ್ಟರೆ ಉಳಿದುದು

ಮೂರನೆಯ ವೈದ್ಯುತಾಗ್ನಿಯೇ ಆಗಬೇಕು. ಆದುದರಿಂದ ಈ ವೈದ್ಯುತಾಗ್ನಿಯೇ ತ್ರಿತಶಬ್ದವಾಚ್ಯನೆಂದು ಧಾರಾಳವಾಗಿ ಹೇಳಬಹುದೆಂದು ಕಾಣುತ್ತದೆ.

ಪ್ರಕೃತವಾದ ಮಂತ್ರದಲ್ಲಿಯೂ ಸಹ ತ್ರಿತಶಬ್ದಕ್ಕೆ ಅಗ್ನಿಯೆಂದೇ ಅರ್ಥಮಾಡಿ, ಕಣ್ವಹೋತಾ ಎಂಬ ವಿಶೇಷಣವು ಅಗ್ನಿಯನ್ನಲ್ಲದೇ ಇನ್ನಾವ ದೇವತೆಯನ್ನೂ ನಿರ್ದೇಶಿಸುವುದಿಲ್ಲ ಎಂಬ ಅಂಶವನ್ನು ಒತ್ತಿಹೇಳಬೇಕಾದರೆ, ಪುನಃ ತ್ರಿತನಿಗೂ ಅಗ್ನಿಗೂ ಇರತಕ್ಕ ಸಾಧಾರಣಗುಣಗಳನ್ನು ವಿಮರ್ಶಿಸಬೇಕಾಗುತ್ತದೆ. ಈ ಗುಣಗಳು ತ್ರಿತ ಮತ್ತು ಅಗ್ನಿಗಳಿಗೆ ಮಾತ್ರ ಸಮಾನಗುಣಗಳಾಗಿದ್ದು ಇತರ ದೇವತೆಗಳಿಗೆ ಈ ಗುಣವು ಅನ್ವಯಿಸಲ್ಪಡದಿರಬೇಕಾಗುತ್ತದೆ

ಆದುದರಿಂದ, ಮೇಲೆ ತ್ರಿತನ ವರ್ಣನೆಯ ವಿವರಗಳಲ್ಲಿ ಎಂಟು ಬಗೆಗಳನ್ನು ವಿಭಾಗಮಾಡಿ ತೋರಿಸಿದಂತೆಯೇ, ಅಗ್ನಿಯ ವರ್ಣನೆಗಳ ವಿವರಗಳಲ್ಲೂ ಸಹ ಅದೇ ಎಂಟು ಭಾಗವನ್ನು ಮಾಡಿ ತೋರಿಸಬಹುದು

(೧) ಮೊದಲನೆಯದಾಗಿ, ಅಗ್ನಿಗೂ ಇಂದ್ರನಿಗೂ ಇರುವ ಸಾಹಚರ್ಯ ಮತ್ತು ಸಂಬಂಧ. ಅಗ್ನಿ ಮತ್ತು ಇಂದ್ರ ಇಬ್ಬರನ್ನೂ ಒಟ್ಟಿಗೆ ಉದ್ದೇಶಿಸಿ ಸ್ತುತಿಸಿರುವ ಹನ್ನೊಂದು ಸೂಕ್ತಗಳು ಪ್ರತ್ಯೇಕವಾಗಿರುವುದಲ್ಲದೇ, ಇನ್ನೂ ಅನೇಕ ಸೂಕ್ತಗಳಲ್ಲಿ ಅಂತರ್ಗತವಾಗಿರುವ ಇತರ ಮಂತ್ರಗಳಲ್ಲೂ ಸಹ ಈ ಎರಡು ದೇವತೆಗಳನ್ನೂ ಒಟ್ಟಿಗೆ ಸ್ತುತಿಸಿ ಪ್ರಶಂಸಿಸಿದೆ

**ಚಕ್ರಾಥೇ ಹಿ ಸಧ್ರ್ಯ೧ಙ್ನಾಮ ಭದ್ರಂ ಸಧ್ರೀಚೀನಾ ವೃತ್ರಹಣಾ ಉತ ಸ್ಥಃ ।**
**ತಾವಿಂದ್ರಾಗ್ನೀ ಸಧ್ರ್ಯಂಚಾ ನಿಷದ್ಯಾ ವೃಷ್ಣಃ ಸೋಮಸ್ಯ ವೃಷಣಾ ವೃಷೇಥಾಂ ॥**

(ಋ ಸಂ ೧.೧೦೮.೩)

ಎಲೈ ಇಂದ್ರಾಗ್ನಿಗಳೇ, ನೀವು ಕಲ್ಯಾಣಾತ್ಮಕವಾದ ನಿಮ್ಮ ಹೆಸರುಗಳನ್ನು ಯಾವಾಗಲೂ ಸಂಯುಕ್ತವಾಗಿ ಒಡಗೂಡಿರುವುದೆಂದು ಪ್ರಸಿದ್ಧಮಾಡಿದ್ದೀರಿ. ಮತ್ತು ವೃತ್ರಾಸುರನ ಹಂತಕರಾಗಿ ವೃತ್ರಹನನಕಾಲದಲ್ಲಿಯೂ ಸಹ ಒಡಗೂಡಿದವರಾಗಿಯೇ ಇದ್ದೀರಿ. ಆದುದರಿಂದಲೇ, ಇಷ್ಟಾರ್ಥಪ್ರದರಾದ ಎಲೈ ಇಂದ್ರಾಗ್ನಿಗಳೇ, ಆ ನೀವಿಬ್ಬರೂ ಒಟ್ಟಿಗೆ ಸೇರಿ ಯಜ್ಞವೇದಿಯಲ್ಲಿ ಕುಳಿತು ಸ್ರವಿಸುತ್ತಿರುವ ನಿಮ್ಮ ಭಾಗದ ಸೋಮರಸವನ್ನು ಕುಡಿಯಿರಿ. ಇತ್ಯಾದಿಯಾಗಿ, ವೃತ್ರಹನನ, ಸೋಮಪಾನ ಮುಂತಾದ ಮುಖ್ಯ ವ್ಯವಹಾರಗಳಲೆಲ್ಲಾ ಇತರ ನಿಯತನಾದ ಸಾಹಚರ್ಯವು ಪ್ರಶಂಸಿತವಾಗಿದೆ. (ಋ. ಸಂ. ೧-೧೦೮-೫, ೧-೧೦೯-೫, ೧-೧೦೯-೮, ೩-೧೨-೪ ಇತ್ಯಾದ್ಯನೇಕ ಮಂತ್ರಗಳಲ್ಲಿ ಈ ಅಂಶವು ವಿಶದವಾಗಿ ವರ್ಣಿತವಾಗಿದೆ)

(೨) ಎರಡನೆಯದಾಗಿ, ವಾರುಣಾಶ್ವಕ್ಕೂ ತ್ರಿತನಿಗೂ ಯಾವ ಸಂಬಂಧವನ್ನು ಮೇಲೆ ತೋರಿಸಿದೆಯೋ ಅದೇ ಸಂಬಂಧವನ್ನು ಅಗ್ನಿಗೂ ವರುಣಾಶ್ವಕ್ಕೂ ತೋರಿಸಿದೆ ಯಾವ ದಧಿಕ್ರಾ ಎಂಬ ಅಂಶವು ಆದಿತ್ಯರೂಪಿಯೆಂದು ಪ್ರಶಂಸಿತವಾಗಿದೆಯೋ, ಅದೇ ಅಶ್ವವು

**ಹಂಸಃ ಶುಚಿಷದ್ವಸುರಂತರಿಕ್ಷಸದ್ಧೋತಾ ವೇದಿಷದತಿಥಿರ್ದುರೋಣಸತ್ ।**
**ನೃಷದ್ವರಸದೃತಸದ್ವ್ಯೋಮಸದಬ್ಜಾ ಗೋಜಾ ಋತಜಾ ಅದ್ರಿಜಾ ಋತಂ ॥**

(ಋ ಸಂ ೪-೪೦-೫)

ಜ್ಯೋತಿರಂತರ್ಗತವಾಗಿ ಹಂಸರೂಪದಲ್ಲಿಯೂ, ಅಂತರಿಕ್ಷದಲ್ಲಿ ವಸುರೂಪದಲ್ಲಿಯೂ ಯಜ್ಞವೇದಿಯಲ್ಲಿ ಹೋತೃ ರೂಪದಲ್ಲಿಯೂ, ಗೃಹದಲ್ಲಿ ಅತಿಥಿ ರೂಪದಲ್ಲಿಯೂ, ಅದ್ರಿಜನಾಗಿಯೂ ಋತಜನಾಗಿಯೂ ಇನ್ನೂ ಅನೇಕ ಗುಣಗಳಿಂದ **ಈ ದಧಿಕ್ರಾ**ಸಂಜ್ಞಕನಾದ ಅಗ್ನಿಯು ಸ್ತುತನಾಗಿದ್ದಾನೆ. **“ ದೀದಿವಾಂಸಂ ನಾಗ್ನಿಂ ”** (೪-೩೯-೨ , ) ಇತ್ಯಾದಿ ಯಾಗೆಲ್ಲಾ ವರ್ಣಿತವಾಗಿದೆ.

೩) ತ್ರಿತನು ಯಾವ ರೀತಿ (ಇಂದ್ರಸಾಹಚರ್ಯವಿಲ್ಲದೇ ಕೇವಲ ಒಬ್ಬನೇ) ವೃತ್ರಹಂತಕನೆಂದು ಸ್ತುತನಾಗಿ ರುವನೋ, ಅಗ್ನಿಯೂ ಸಹ ಅದೇ ರೀತಿಯಲ್ಲಿ ಸ್ತುತನಾಗಿದ್ದಾನೆ **ತಮು ತ್ವಾ ವೃತ್ರಹಂತಮಂ** (೧-೭೮-೪) ; **ಸ ವೃತ್ರಹಾ ಸನಯೋ ವಿಶ್ವವೇದಾಃ** (೩-೨೦-೪), **ಅಗ್ನಿರಗಾಮಿ ಭಾರತೋ ವೃತ್ರಹಾ ಪುರುಚೇತನಃ** (೬-೧೬-೧೯) ಇತ್ಯಾದಿ ಮಂತ್ರಗಳು ಅಗ್ನಿಯ ವೃತ್ರಹನನಕರ್ಮವನ್ನು ಪ್ರಶಂಸಿಸುತ್ತವೆ. ಒಟ್ಟು ಹದಿನಾರು ಮಂತ್ರಗಳಲ್ಲಿ ಅಗ್ನಿಯು ವೃತ್ರಹಂತಕನೆಂದು ಸ್ತುತನಾಗಿದ್ದಾನೆ. ಇವುಗಳಲ್ಲಿ ಏಳರಲ್ಲಿ ಇಂದ್ರನೊಡಗೂಡಿರುವ ವಿಷಯವು ತಿಳಿಸಿದೆ.

೪) ತ್ರಿತನಿಗೂ ಮರುತ್ತುಗಳಿಗೂ ಇರತಕ್ಕ ಸಾಹಚರ್ಯವು ಮೇಲೆ ಯಾವ ರೀತಿ ವರ್ಣಿತನಾಗಿದೆಯೋ ಅದೇ ಸಾಹಚರ್ಯವು ಅಗ್ನಿಗೂ ಮತ್ತು ಮರುತ್ತುಗಳಿಗೂ ಸಹ ಸ್ಥಾಪಿತವಾಗಿರುವ ಅಂಶವನ್ನು **ಮರುದ್ವೃಧಃ** (೩-೧೩-೬) ಇತ್ಯಾದಿ ವಿಶೇಷಣಗಳು ತಿಳಿಸುತ್ತವೆ. ಮರುತ್ತುಗಳಿಗೆ ಅಗ್ನಿಯೇ ಜಿಹ್ವೆಯೆಂದೂ ತಿಳಿಸಿದೆ **ಅಗ್ನಿಜಿಹ್ವಾ** (೧-೮೯-೭) ಇಲ್ಲಿ ಇನ್ನೊಂದು ವಿಶೇಷಾಂಶವನ್ನು ಗಮನಿಸಬೇಕು. **ಕಣ್ವತಮ**, **ಕಣ್ವಹೋತಾ** ಇತ್ಯಾದಿ ವಿಶೇಷಣಗಳು ಅಗ್ನಿ ಮತ್ತು ತ್ರಿತ ಇವರ ಪ್ರಶಂಸಾಕಾಲಗಳಲ್ಲಿ ಯಾವ ರೀತಿ ಪ್ರಯೋಗಿಸಲ್ಪಟ್ಟಿವೆಯೋ, ಅದೇ ರೀತಿ ಅಗ್ನಿ ಮತ್ತು ಮರುತ್ತುಗಳನ್ನು ಒಟ್ಟಿಗೆ ಸ್ತುತಿಸುವಾಗಲೂ ಸಹ **ಕಣ್ವ**ಸಂಜ್ಞಕರಾದ ಸ್ತುತಿಕರ್ತರೇ ಸಂಬೋಧಿತ ರಾಗಿದ್ದಾರೆ.

**ಸಹೋ ಷು ಣೋ ವಜ್ರಹಸ್ತೈಃ ಕಣ್ವಾಸೋ ಅಗ್ನಿಂ ಮರುದ್ಭಿಃ** ॥

(ಋ ಸಂ ೮-೭-೩೨)

ಎಂಬಲ್ಲಿ ಮರುತ್ತುಗಳೊಡಗೂಡಿದ ಅಗ್ನಿಯನ್ನು ಸ್ತುತಿಸಬೇಕೆಂದು **ಕಣ್ವರು** ಪ್ರಾರ್ಥಿತರಾಗಿದ್ದಾರೆ ಇಲ್ಲಿ ಕಣ್ವಶಬ್ದಕ್ಕೆ ಸ್ತೋತೃಗಳೆಂದಾಗಲಿ ಅಥವಾ ಕಣ್ವಗೋತ್ರೋತ್ಪನ್ನರಾದ ಋಷಿಗಳೆಂದಾಗಲಿ ಅರ್ಥವೆಂದು ಸಾಯಣರು ತಿಳಿಸಿದ್ದಾರೆ

೫) ಐದನೆಯವಾಗಿ, ತ್ರಿತನಿಗೂ ಅಗ್ನಿಗೂ ಇರತಕ್ಕ ಸಾಕ್ಷಾತ್ಸಂಬಂಧವೇ ಮಾತ್ರವಲ್ಲದೇ, ತ್ರಿತನಿಗೂ ಅಗ್ನಿಗೂ ಇರುವ ತಾದಾತ್ಮ್ಯವೇ ಮುಖ್ಯವಾದ ಅಂಶವು. ಈ ಸಂದರ್ಭದಲ್ಲಿ, ಇತರ ದೇವತೆಗಳಿಗಾರಿಗೂ ಅನ್ವಯಿಸದೇ ಇರತಕ್ಕ ಮುಖ್ಯ ಗುಣವಾವುದಾದರೂ ತ್ರಿತನಿಗೂ ಅಗ್ನಿಗೂ ಸಮಾನಧರ್ಮತ್ವವನ್ನು ಸೂಚಿಸುವುದಾಗಿ ಪ್ರಸಿದ್ಧವಾ ಗಿದೆಯೇ ಎಂಬ ಪ್ರಶ್ನೆಯೂ ಸಹಜವಾಗಿರುತ್ತದೆ. ಇದಕ್ಕೆ ಉತ್ತರವಾಗಿ ಇಂತಹ ಸಮಾನಧರ್ಮವು ಪ್ರಸಿದ್ಧವಾಗಿದೆ ಯೆಂದು ಧಾರಾಳವಾಗಿ ಹೇಳಬಹುದು. **ಆಪ್ತ್ಯ** ಎಂಬ ವಿಶೇಷಣವು ಋಕ್ಸಂಹಿತೆಯಲ್ಲಿ ಹತ್ತು ಸಂದರ್ಭಗಳಲ್ಲಿ ತ್ರಿತನ ಪರವಾಗಿ ಮಾತ್ರ ಪ್ರಯುಕ್ತವಾಗಿದೆ. **ಅಪ್ಪಿನಿಂದ** (ಉದಕ) ಪ್ರಾದುರ್ಭೂತನಾದುದರಿಂದ **ಆಪ್ತ್ಯ**ನೆಂಬ ನಿರ್ವಚನವು ತೈತ್ತಿರೀಯಬ್ರಾಹ್ಮಣದಲ್ಲೂ ತಿಳಿಸಲ್ಪಟ್ಟಿದೆಯೆಂದು ಸಾಯಣರು ಋ ಸಂ. ೧-೧೦೫ ನೇ ಸೂಕ್ತದ ಪೀಠಿಕೆಯಲ್ಲಿ—

**ತ್ರಿತಸ್ಯ ಚಾಪಾಂ ಪುತ್ರತ್ವಂ ತೈತ್ತಿರೀಯಾಃ ಸ್ಪಷ್ಟಮಾಮನಂತಿ ।**

**ತತಸ್ತ್ರಿತೋಽಜಾಯತ । ಯದದ್ಭ್ಯೋಽಜಾಯಂತ । ತದಾಪ್ತ್ಯಾನಾಮಾಪ್ತ್ಯತ್ವಂ ॥**

(ತೈ. ಬ್ರಾ. ೩-೨-೮-೧೧)

ಎಂಬ ಬ್ರಾಹ್ಮಣವಾಕ್ಯವನ್ನೇ ಉದಾಹರಿಸಿದ್ದಾರೆ. ಅಪ್ಪಿನಿಂದ ಉತ್ಪನ್ನನಾದುದರಿಂದ **ಆಪ್ತ್ಯನಾಯಿತು.** ಇದರ **ಆಪ್ತ್ಯ** ಎಂಬ ನಿಷ್ಪತ್ತಿಯು ಹೇಗೆ ಎಂದರೆ, ಅದು ಛಾಂದಸವೆಂದು ಸಾಯಣರು ಬೇರೆಡೆಯಲ್ಲಿ ಉತ್ತರವನ್ನು ಹೇಳಿದ್ದಾರೆ. **ತ್ರಿತಸ್ತದ್ವೇದಾಪ್ತ್ಯಃ** ಇತ್ಯಾದಿ ವಾಕ್ಯಗಳೇ ನಿದರ್ಶನಗಳು. (೧-೧೦೫-೯ ಇತ್ಯಾದಿ). ಅದೇ ಅಗ್ನಿಯು ಸಹ ಅಪ್ಪಿನಿಂದ ಪ್ರಾದುರ್ಭೂತನಾಗಿರುವನೆಂಬ ವಿವರಣವು ಅನೇಕ ಕಡೆಗಳಲ್ಲಿರುವುದು ಪ್ರಸಿದ್ಧವಾಗಿಯೇ ಇದೆ.

ಎಲೈ ಅಗ್ನಿಯೇ, ನೀನು ಉದಕಸ್ಥಾನವಾದ ಅಂತರಿಕ್ಷದಲ್ಲಿ **(ಅಗ್ನೇ ಅಪಾಂ ಸಮಿಧ್ಯಸೇ ದುರೋಣೇ)** ಪ್ರಜ್ವಲಿತನಾಗುತ್ತೀಯೆ. (ಋ. ಸಂ. ೩-೨೫-೫) ಅಗ್ನಿಯು ಅಪ್ಪುಗಳಿಂದ ಧರಿಸಲ್ಪಟ್ಟವನಾಗಿ ಯಾವಾಗ ಅವುಗಳನ್ನು ಆಕ್ರಮಿಸಿಕೊಂಡು ಇರುತ್ತಾನೆಯೋ, ಆಗ ನೀರಿನ ಧಾರೆಗಳು ತಮ್ಮ ಉತ್ಪತ್ತಿಸ್ಥಾನವಾದ ಆದಿತ್ಯನ ನಿವಾಸಸ್ಥಾನದಲ್ಲಿ ಅವನ ಕಿರಣಗಳಿಂದ ವ್ಯಾಪ್ತವಾಗಿ ನೂತನವಾದ ಸಂಸ್ಕಾರವನ್ನು ಹೊಂದುತ್ತವೆ. ಅನಂತರ ವಿದ್ಯುದ್ರೂಪದಲ್ಲಿರುವ ಅಗ್ನಿಯು ನೀರುಗಳೊಡನೆ ಒಂದಾಗಿ ಸೇರಿಕೊಳ್ಳುತ್ತಾನೆ. (**ಅಪಾಮುಪಸ್ಥೇ ವಿಭೃತಃ** ಋ. ಸಂ. ೧-೧೪೪-೨).

ನಭೋವಿತ್ತಾದ ಹೋತೃವು ಅಪ್ಪುಗಳ ಉತ್ಸಂಗದಲ್ಲಿ ವಿದ್ಯುದ್ರೂಪದಲ್ಲಿ ಸ್ಥಿತನಾಗಿದ್ದಾನೆ, (೧೦-೪೬-೧).

ಭೃಗುಋಷಿಗಳು ಅಪ್ಪುಗಳ ಮಧ್ಯಸ್ಥನಾದ ಅಗ್ನಿಯನ್ನು ಸಾಕ್ಷಾತ್ಕರಿಸಿ ಮಾನವರಲ್ಲಿ ಸ್ಥಾಪಿಸಿದರು. (೧೦-೪೬-೨, ೨-೪-೨)

**ನಿಧೀಯಮಾನಮಪಗೂಳ್ಹಮಪ್ಸು ಪ್ರ ಮೇ ದೇವಾನಾಂ ವ್ರತಪಾ ಉವಾಚ ॥** ದೇವತೆಗಳ ರಹಸ್ಯವನ್ನು ತಿಳಿದ ಮಹರ್ಷಿಯು ನನಗೆ ಅಗ್ನಿಯು ಅಪ್ಪುಗಳಲ್ಲಿ ಅಂತರ್ಗತನಾಗಿದ್ದಾನೆಂದು ಹೇಳಿದನು. (೧೮-೩೨-೬)

ಹೀಗೆ ಅಗ್ನಿಯೂ ಸಹ ಅಪ್ಪಿನಿಂದ ಜಾತನೆಂಬ ವಿವರಣವೂ ಮತ್ತು ತ್ರಿತನೂ ಅಪ್ಪಿನಿಂದ ಉತ್ಪನ್ನನಾದುದರಿಂದ **ಆಪ್ತ್ಯನೆಂಬ** ವಿವರಣವೂ ಒಂದೇ ರೀತಿಯಲ್ಲಿ ಅಂತರಿಕ್ಷಸ್ಥವಾದ ಅಪ್ಪಿನಿಂದ ಉತ್ಪನ್ನವಾದ ಕ್ರಮವನ್ನು ತಿಳಿಸುವುದರಿಂದ ಈ ಎರಡು ಬಗೆಯ ವಿವರಗಳೂ ಸಹ ವೈದ್ಯುತಾಗ್ನಿಯ ಸ್ವರೂಪವನ್ನೇ ತಿಳಿಸುವುವು ಎಂಬುದರಲ್ಲಿ ಸಂಶಯವೇ ಇರುವುದಿಲ್ಲ

ಇದೇ ರೀತಿಯಲ್ಲಿ **ಅಪಾಂ ನಪಾತ್** ಎಂಬ ವಿಶೇಷಣವೂ ಸಹ ವೈದ್ಯುತಾಗ್ನಿಯ ಸ್ವರೂಪವನ್ನೇ ತಿಳಿಸುತ್ತದೆ ಹೇಗೆಂದರೆ,

**ಅಪಾಂ ನಪಾದಾ ಹ್ಯಸ್ಥಾದುಪಸ್ಥಂ ಜಿಹ್ಮಾನಾಮೂರ್ಧ್ವೋ ವಿದ್ಯುತಂ ವಸಾನಃ ।**

**ತಸ್ಯ ಜ್ಯೇಷ್ಠಂ ಮಹಿಮಾನಂ ವಹಂತೀರ್ಹಿರಣ್ಯವರ್ಣಾಃ ಪರಿ ಯಂತಿ ಯಹ್ವೀಃ ॥**

(ಋ. ಸಂ ೨-೩೫-೯)

ವಿದ್ಯುದ್ರೂಪವಾದ ವಸ್ತ್ರವನ್ನು ಧರಿಸಿ ಅಪ್ಪುಗಳ ಪುತ್ರನು ಪ್ರಕಾಶಮಾನಗಳಾದ ಉದಕಗಳಲ್ಲಿ ಅಂತರ್ಗತನಾಗಿದ್ದಾನೆ. ಸ್ವರೂಪದಲ್ಲಿ ಹೊಂಬಣ್ಣವುಳ್ಳವನಾಗಿ ಅತ್ಯಂತ ಆಕರ್ಷಕನಾಗಿದ್ದಾನೆ.

ಮೇಲೆ ಉದಾಹೃತವಾಗಿರುವ ವಾಕ್ಯಗಳು **ತ್ರಿತ ಆಪ್ತ್ಯನಿಗೂ** ಮತ್ತು **ಅಪಾಂನಪಾತ್** ಸಂಜ್ಞಕನಾದ ಅಗ್ನಿಗೂ ಇರುವ ತಾದಾತ್ಮ್ಯವನ್ನು ತಿಳಿಸುವುದಾಗಿದೆ. ಎರಡು ವಿಶೇಷಣಗಳೂ ಸಹ ಅಂತರಿಕ್ಷಸ್ಥವಾದ ವೈದ್ಯುತಾಗ್ನಿಯ ಸ್ವರೂಪವರ್ಣನವೇ ಆಗಿವೆ. ಮೇಲೆಯೇ ತಿಳಿಸಿರುವಂತೆ, ಪ್ರಕೃತವಾದ ಮಂತ್ರದಲ್ಲಿ ನಿರ್ದಿಷ್ಟನಾಗಿರುವ ಕಣ್ವಹೋತೃವಾದ ತ್ರಿತನು ಈ ವೈದ್ಯುತಾಗ್ನಿಯಲ್ಲದೇ ಬೇರೆಯಲ್ಲವೆಂದು ನಿಸ್ಸಂದಿಗ್ಧವಾಗಿ ಹೇಳಬಹುದು.

೬) ತ್ರಿತನಿಗೂ ವರುಣನಿಗೂ ತಾದಾತ್ಮ್ಯವನ್ನು ತೋರಿಸಿರುವಂತೆಯೇ, ಅಗ್ನಿಗೂ ವರುಣನಿಗೂ ಸಹ ತಾದಾತ್ಮ್ಯವನ್ನು ತೋರಿಸಿರುವ ವಾಕ್ಯಗಳೂ ಅನೇಕವಾಗಿವೆ. ಉದಾಹರಣೆಗೆ ಅಗ್ನಿಮುಖವೇ ವರುಣಮುಖವೆಂದು ನಾನು ತಿಳಿದಿದ್ದೇನೆ (**ಅನೀಕಂ ವರುಣಸ್ಯ ಮಂಸಿ** ಋ. ಸಂ. ೭-೮೮-೨).

೭) **ಯುವಮೇತಾನಿ ದಿವಿ ರೋಚನಾನ್ಯಗ್ನಿಶ್ಚ ಸೋಮ ಸಕ್ರತೂ ಅಧತ್ತಂ ।**

(ಋ. ಸಂ. ೧-೯೩-೫)

ಎಲೈ ಅಗ್ನಿ ಮತ್ತು **ಸೋಮದೇವತೆಗಳೇ,** ನೀವಿಬ್ಬರೂ ಸಮಾನವಾದ ಕ್ರಿಯೆಯುಳ್ಳವರು ನಮ್ಮ ಕಣ್ಣಿಗೆ ಗೋಚರವಾಗುವ ಈ ಪ್ರಕಾಶಮಾನಗಳಾದ ನಕ್ಷತ್ರಮಂಡಲಗಳನ್ನು ನೀವಿಬ್ಬರೂ ಒಟ್ಟಿಗೆ ದ್ಯುಲೋಕದಲ್ಲಿ ಎತ್ತಿ ಹಿಡಿದಿದ್ದೀರಿ. ಇತ್ಯಾದಿ ವಾಕ್ಯಗಳಲ್ಲಿ ಅಗ್ನಿ ಮತ್ತು ಸೋಮ ಇವರಿಗಿರುವ ಸಂಬಂಧವನ್ನು ಮೇಲೆ ತ್ರಿತ ಮತ್ತು ಸೋಮರಿಗೆ ಇರುವ ಸಂಬಂಧವನ್ನು ತೋರಿಸಿರುವಂತೆಯೇ ತಿಳಿಸಿದೆ.

೮) ಕೊನೆಯದಾಗಿ, ಯಾವರೀತಿ ತ್ರಿತನು ಗೋಚರಾತೀತವಾದ ಸ್ಥಾನದಲ್ಲಿ ಅಡಗಿಕೊಂಡಿರುವನೆಂದು ವರ್ಣಿತನಾಗಿದ್ದಾನೆಯೋ, ಅದೇ ರೀತಿ ಅಗ್ನಿಯೂ ಸಹ ಪ್ರಶಂಸಿತನಾಗಿದ್ದಾನೆ.

**ತ್ವಾಮಗ್ನೇ ಅಂಗಿರಸೋ ಗುಹಾ ಹಿತಮನ್ವವಿಂದಞ್ಛಿಶ್ರಿಯಾಣಂ ವನೇವನೇ ।**

(ಋ. ಸಂ ೫-೧೧-೬)

ಎಲೈ ಅಗ್ನಿಯೇ, ರಹಸ್ಯಸ್ಥಾನದಲ್ಲಡಗಿದ್ದ ನಿನ್ನನ್ನು ಅಂಗಿರಸ್ಸುಗಳು ಕಂಡುಹಿಡಿದರು

**ಬೃಹಂತ ಇದ್ಭಾನವೋ ಭಾಋಜೀಕಮಗ್ನಿಂ ಸಚಂತ ವಿದ್ಯುತೋ ನ ಶುಕ್ರಾಃ ।**
**ಗುಹೇವ ವೃದ್ಧಂ ಸದಸಿ ಸ್ವೇ ಅಂತರಪಾರ ಊರ್ವೇ ಅಮೃತಂ ದುಹಾನಾಃ ॥**

(ಋ. ಸಂ. ೩-೧-೧೪)

ರಹಸ್ಯಸ್ಥನಾದ ಅಗ್ನಿಯನ್ನು ವಿದ್ಯುತ್ಪ್ರಕಾಶಗಳಂತಿರುವ ಮಹಜ್ಜ್ಯೋತಿಗಳು ಸೇವಿಸುತ್ತಿದ್ದವು. ಇತ್ಯಾದಿಯಾಗಿ ಗೋಚರಾತೀತವಾದ ಸ್ಥಾನದಲ್ಲಿ ಅಂತರ್ಗತನಾದ ಅಗ್ನಿಯ ವರ್ಣನವಿರುತ್ತದೆ.

ಈ ರೀತಿ ತ್ರಿತನಿಗೂ ಅಗ್ನಿಗೂ ಇರುವ ಸಾಮಾನ್ಯಧರ್ಮಗಳನ್ನು ವಿವರಿಸಿ **ತ್ರಿತನು ವೈದ್ಯುತಾಗ್ನಿಯಲ್ಲದೇ** ಬೇರೆಯಲ್ಲವೆಂಬ ಅಂಶವನ್ನು ಸಮರ್ಥಿಸಲು ಋಕ್ಸಂಹಿತಾವಾಕ್ಯಗಳೇ ಸ್ಪಷ್ಟವಾದ ಪ್ರಮಾಣಗಳಾಗಿವೆಯೆಂಬುದನ್ನು ತಿಳಿಸಿದೆ. ಇವೇ ಅಂಶವನ್ನು ಸ್ಥಿರಪಡಿಸಲು ಸಾಹಾಯ್ಯಕವಾದ ಇತರ ಬ್ರಾಹ್ಮಣಾದಿವಾಕ್ಯಗಳನ್ನೂ ಮೇಲೆಯೇ ಉದಾಹರಿಸಿದೆ.

॥ ಸಂಹಿತಾಪಾಠಃ ॥

ಪ್ರ ವೋ ರಯಿಂ ಯುಕ್ತಾಶ್ವಂ ಭರಧ್ವಂ ರಾಯ ಏಷೇಽವಸೇ ದಧೀತ ಧೀಃ ।
ಸುಶೇವ ಏವೈರೌಶಿಜಸ್ಯ ಹೋತಾ ಯೇ ವ ಏವಾ ಮರುತಸ್ತುರಾಣಾಂ ॥

॥ ಪದಪಾಠಃ ॥

ಪ್ರ । ವಃ । ರಯಿಂ । ಯುಕ್ತಽಅಶ್ವಂ । ಭರಧ್ವಂ । ರಾಯಃ । ಏಷೇ । ಅವಸೇ । ದಧೀತ । ಧೀಃ ।
ಸುಽಶೇವಃ । ಏವೈಃ । ಔಶಿಜಸ್ಯ । ಹೋತಾ । ಯೇ । ವಃ । ಏವಾಃ । ಮರುತಃ । ತುರಾಣಾಂ ॥ ೫ ॥

॥ ಸಾಯಣಭಾಷ್ಯಂ ॥

ಹೇ ಮರುತೋ ವೋ ಯೂಯಂ ರಯಿಂ ಧನಂ ಯುಕ್ತಾಶ್ವಮಶ್ವಸಹಿತಮಶ್ವಯೋಗ್ಯಂ ಪುತ್ರಂ ವಾ ಪ್ರ ಭರಧ್ವಂ । ಸಂಪಾದಯತ । ರಾಯೋ ಧನಾನಿ ಗವಾಶ್ವಾದಿಲಕ್ಷಣಾನ್ಯೇಷೇ ಪ್ರಾಪ್ತುಂ । ಅವಸೇ । ಅವ ಇತ್ಯನ್ನನಾಮ । ಅನ್ನಾಯ ಪ್ರಾಪ್ತಾನಾಂ ಧನಾನಾಂ ರಕ್ಷಣಾಯ ವಾ ಧೀಃ ಸ್ತೋತಾ ದಧೀತ । ಧಾರಯತಿ ಸ್ತುತಿಂ । ಸ ಚೌಶಿಜಸ್ಯ ಕಕ್ಷೀವತೋ ಹೋತಾತ್ರಿರೇವೈರ್ಗಂತವ್ಯೈಃ ಕಾಮ್ಯೈರ್ಗಮನಸಾಧನೈರಶ್ವೈರ್ವಾ ಸುಶೇವಃ । ಶೇವಮಿತಿ ಸುಖನಾಮ । ಸುಸುಖೋ ಭವತು । ಹೇ ಮರುತಸ್ತುರಾಣಾಂ ತ್ವರಮಾಣಾನಾಂ ವೋ ಯುಷ್ಮಾಕಂ ಯ ಏವಾಃ ಕಾಮಾ ಅಶ್ವಾ ವಾ ಸಂತಿ ತೈರಿತಿ ॥

॥ ಪ್ರತಿಪದಾರ್ಥ ॥

( ಎಲೈ ಮರುತ್ತುಗಳೇ ) **ವಃ**—ನೀವು । **ರಯಿಂ**—ಧನವನ್ನು । **ಯುಕ್ತಾಶ್ವಂ**—ಅಶ್ವಸಹಿತವಾಗಿರುವಂತೆ । **ಪ್ರ ಭರಧ್ವಂ**—ಸಂಪಾದಿಸಿ ಕೊಡಿರಿ । **ರಾಯಃ**—(ಹೊಸ) ಧನಗಳನ್ನು । **ಏಷೇ**—ಪಡೆಯುವುದಕ್ಕೂ । **ಅವಸೇ**—(ಇರುವುದನ್ನು) ರಕ್ಷಿಸಿಕೊಳ್ಳುವುದಕ್ಕೂ । **ಧೀಃ**—(ನಿಮ್ಮನ್ನು ಪ್ರಶಂಸಿಸುವ) ಸ್ತುತಿಯನ್ನು । **ದಧೀತ**—ನಿರ್ಮಿಸಿ ಪಠಿಸುತ್ತಾನೆ । **ಮರುತಃ**—ಎಲೈ ಮರತ್ತುಗಳೇ । **ತುರಾಣಾಂ**—ವೇಗಗಾಮಿಗಳಾದ । **ವಃ**—ನಿಮ್ಮ । **ಯೇ ಏವಾಃ**—ವೇಗವಾಗಿ ಸಂಚರಿಸುವ ಯಾವ ಅಶ್ವಗಳಿವೆಯೋ । **ಏವೈಃ**—ಅದೇ ಅಶ್ವಗಳೊಡನೆ । **ಔಶಿಜಸ್ಯ**—ಕಕ್ಷೀವಂತನ । **ಹೋತಾ**—ಹೋತೃವಾದ ಅತ್ರಿಯು । **ಸುಶೇವಃ**—ಉತ್ತಮವಾದ ಸುಖವನ್ನು ಪಡೆಯಲಿ.

॥ ಭಾವಾರ್ಥ ॥

ಎಲೈ ಮರುತ್ತಗಳೇ, ನಮಗೆ ಅಶ್ವಸಹಿತವಾದ ಧನವನ್ನು ಸಂಪಾದಿಸಿಕೊಡಿ ಹೊಸ ಧನಗಳನ್ನು ಪಡೆಯುವುದಕ್ಕೂ ಇರುವುದನ್ನು ರಕ್ಷಿಸಿಕೊಳ್ಳುವುದಕ್ಕೂ ಸಹ ಸ್ತುತಿಕಾರನು ನಿಮ್ಮನ್ನು ಪ್ರಶಂಸಿಸುವ ಸ್ತುತಿಯನ್ನು ನಿರ್ಮಿಸಿ ಪಠಿಸುತ್ತಾನೆ. ಎಲೈ ಮರುತ್ತುಗಳೇ, ವೇಗಗಾಮಿಗಳಾದ ನಿಮಗೆ ಸೇರಿದವೂ ಶೀಘ್ರಸಂಚಾರಿಗಳೂ ಆದ ಅಶ್ವಗಳೊಡಗೂಡಿ ಕಕ್ಷೀವಂತನ ಹೋತೃವಾದ ಅತ್ರಿಯು ಉತ್ತಮವಾದ ಸುಖವನ್ನು ಪಡೆಯಲಿ.

English Translation

Maruts, you bring wealth comprising horses· to acquire and preserve riches the wise man offers you praise: may the ministrant priest, (Atri), of the son of Ushij (Kakshivat), be made happy by those swift-going (horses) which are the swift.going (horses), Maruts, of you who are rapid in motion.

॥ ಸಂಹಿತಾಪಾಠಃ ॥

ಪ್ರ ವೋ ವಾಯುಂ ರಥಯುಜಂ ಕೃಣುಧ್ವಂ ಪ್ರ ದೇವಂ ವಿಪ್ರಂ
ಪನಿತಾರಮರ್ಕೈಃ ।
ಇಷುಧ್ಯವ ಋತಸಾಪಃ ಪುರಂಧೀರ್ವಸ್ವೀರ್ನೋ ಅತ್ರ ಪತ್ನೀರಾ ಧಿಯೇ
ಧುಃ ॥ ೬ ॥

॥ ಪದಪಾಠಃ ॥

ಪ್ರ । ವಃ । ವಾಯುಂ । ರಥಽಯುಜಂ । ಕೃಣುಧ್ವಂ । ಪ್ರ । ದೇವಂ । ವಿಪ್ರಂ । ಪನಿತಾರಂ । ಅರ್ಕೈಃ ।
ಇಷುಧ್ಯವಃ । ಋತಽಸಾಪಃ । ಪುರಂಽಧೀಃ । ವಸ್ವೀಃ । ನಃ । ಅತ್ರ । ಪತ್ನೀಃ । ಆ । ಧಿಯೇ । ಧುರಿತಿ ಧುಃ ॥

॥ ಸಾಯಣಭಾಷ್ಯಂ ॥

ಪ್ರ ವೋ ವಾಯುಮಿತಿ ಷಷ್ಠೀ ವಾಯವ್ಯೇ ಪಶೌ ಹವಿಷೋ ಯಾಜ್ಯಾ । ಪ್ರ ವೋ ವಾಯುಂ ರಥಯುಜಂ ಕೃಣುಧ್ವಮುತ ತ್ವಾಮದಿತೇ ಮಹಿ । ಆ. ೩-೮ । ಇತಿ ಸೂತ್ರಿತಂ ॥

ಹೇ ಮದೀಯಾ ಋತ್ವಿಜೋ ವೋ ಯೂಯಂ ವಾಯುಂ ವಾಯುದೇವಂ ರಥಯುಜಂ ಯಜ್ಞಗಮನಾಯ ರಥಸಂಬದ್ಧಂ ಕೃಣುಧ್ವಂ । ಕುರುಧ್ವಂ । ಪ್ರ ದೇವಂ ದ್ಯೋತಮಾನಂ ವಿಪ್ರಂ ವಿಶೇಷೇಣ ಕಾಮಾನಾಂ ಪೂರಕಂ ವಿಪ್ರವತ್ಪೂಜ್ಯಂ ವಾ ಪನಿತಾರಂ ॥ ಕರ್ಮಣಿ ಕರ್ತೃಪ್ರತ್ಯಯಃ ॥ ಸ್ತುತಮಿತ್ಯರ್ಥಃ । ಫಲಪ್ರದಾತಾರಂ ವಾ ಅರ್ಕೈರರ್ಚನಸಾಧನೈರ್ಮಂತ್ರೈಃ ಪ್ರ ಕೃಣುಧ್ವಂ । ಸ್ತುತ । ಕಿಂಚೇಷುಧ್ಯವೋ ಗಂತ್ರ್ಯ ಋತಸಾಪೋ ಯಜ್ಞಸ್ಪೃಶಃ ಪುರಂಧೀಃ ಪುರಂಧ್ಯಃ ಸ್ತ್ರೀರೂಪಾ ರೂಪವತ್ಯೋ

**ವಾ ವಸ್ವೀಃ ಪ್ರಶಂಸ್ಯಾಃ ಪತ್ನೀರ್ದೇವಪತ್ನ್ಯೋಽತ್ರಾಸ್ಮಿನ್ಯಜ್ಞೇ ನೋಽಸ್ಮದೀಯಾಯ ಧಿಯೇ ಕರ್ಮಣೇ ತನ್ನಿಷ್ಪತ್ತ್ಯ ಆ ಧುಃ । ಆಗತವತ್ಯಃ ॥**

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ), **ವಃ**—ನೀವು । **ವಾಯುಂ**—ವಾಯುದೇವನನ್ನು । **ರಥಯುಜಂ**—(ಯಜ್ಞ ಗಮನಕ್ಕಾಗಿ) ರಥವನ್ನು ಸಿದ್ಧಪಡಿಸುವಂತೆ । **ಕೃಣುಧ್ವಂ**—ಮಾಡಿರಿ । **ದೇವಂ**—ಪ್ರಕಾಶಮಾನನೂ । **ವಿಪ್ರಂ**—ವಿಶೇಷವಾಗಿ ಇಷ್ಟಾರ್ಥಗಳನ್ನು ಪೂರೈಸುವವನೂ । **ಪನಿತಾರಂ**—ಸ್ತುತ್ಯನೂ ಆದ ವಾಯುವನ್ನು । **ಅರ್ಕೈಃ**—ಸ್ತುತಿಗಳಿಂದ । **ಪ್ರ**—ಸ್ತುತಿಸಿರಿ । **ಇಷುಧ್ಯವಃ**—ಗಮನಶೀಲರೂ । **ಋತಸಾಪಃ**—ಯಜ್ಞಕರ್ಮವನ್ನು ಸ್ವೀಕರಿಸುವವರೂ । **ಪುರಂಧೀಃ**—ಸ್ತ್ರೀ ರೂಪರೂ । **ವಸ್ವೀಃ**—ಪ್ರಶಸ್ಯರೂ ಆದ । **ಪತ್ನೀಃ**—ದೇವಪತ್ನಿಯರು । **ಅತ್ರ**—ಈ ಯಜ್ಞದಲ್ಲಿ । **ನಃ**—ನಮ್ಮ । **ಧಿಯೇ**—ಕರ್ಮನಿಮಿತ್ತವಾಗಿ । **ಆ ಧುಃ**—ಬರಲಿ

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ನೀವು ವಾಯುದೇವನನ್ನು ಯಜ್ಞಗಮನಕ್ಕಾಗಿ ರಥವನ್ನು ಸಿದ್ಧಪಡಿಸುವಂತೆ ಮಾಡಿರಿ. ಪ್ರಕಾಶಮಾನನೂ, ವಿಶೇಷವಾಗಿ ಇಷ್ಟಾರ್ಥಗಳನ್ನು ಪೂರೈಸುವವನೂ ಸ್ತುತ್ಯನೂ ಆದ ವಾಯುವನ್ನು ಸ್ತೋತ್ರಗಳಿಂದ ಸ್ತುತಿಸಿರಿ. ಗಮನಶೀಲರೂ, ಯಜ್ಞವನ್ನು ಸ್ವೀಕರಿಸುವವರೂ, ಸ್ತ್ರೀರೂಪರೂ ಪ್ರಶಸ್ಯರೂ ಆದ ದೇವಪತ್ನಿಯರು ಈ ಯಜ್ಞಕ್ಕೆ ನಮ್ಮ ಕರ್ಮ ನಿಮಿತ್ತವಾಗಿ ಬರಲಿ

English Translation

Prevail, (priests), by your prayers, on Vayu, the divine, the fulfiller of desires, the adorable, to harness his chariot: may the light-moving accepters of sacrifice, the lovely and excellent wives (of the gods), come hither to our rite.

॥ ವಿಶೇಷವಿಷಯಗಳು ॥

**ಪ್ರ ವೋ ವಾಯುಂ** ಎಂಬ ಈ ಋಕ್ಕನ್ನು ವಾಯುದೇವತೆಯನ್ನುದ್ದೇಶಿಸಿ ಮಾಡುವ ಪಶುಯಾಗದಲ್ಲಿ ಹವಿಸ್ಸನ್ನು ಹೋಮಮಾಡುವಾಗ ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪ್ರ ವೋ ವಾಯುಂ ರಥಯುಜಂ ಕೃಣುಧ್ವಮುತ ತ್ವಾಮುದಿತೇ ಮಹಿ** ಎಂಬ ಸೂತ್ರದಿಂದ ( ಆ ೩-೮ ) ವಿವೃತವಾಗಿರುವುದು

॥ ಸಂಹಿತಾಪಾಠಃ ॥

**ಉಪ ವ ಏಷೇ ವಂದ್ಯೇಭಿಃ ಶೂಷೈಃ ಪ್ರ ಯಹ್ವೀ ದಿವಶ್ಚಿತಯದ್ಭಿರರ್ಕೈಃ ।**

**ಉಷಾಸಾನಕ್ತಾ ವಿದುಷೀವ ವಿಶ್ವಮಾ ಹಾ ವಹತೋ ಮರ್ತ್ಯಾಯ ಯಜ್ಞಂ ॥ ೭ ॥**

॥ ಪದಪಾಠಃ ॥

**ಉಪ । ವಃ । ಏಷೇ । ವಂದ್ಯೇಭಿಃ । ಶೂಷೈಃ । ಪ್ರ । ಯಹ್ವೀ ಇತಿ । ದಿವಃ । ಚಿತಯತ್ಃಭಿಃ । ಅರ್ಕೈಃ । ಉಷಸಾನಕ್ತಾ । ವಿದುಷೀ ಇವೇತಿ ವಿದುಷೀಽಇವ । ವಿಶ್ವಂ । ಆ । ಹ । ವಹತಃ । ಮರ್ತ್ಯಾಯ । ಯಜ್ಞಂ ॥ ೭ ॥**

॥ ಸಾಯಣಭಾಷ್ಯಂ ॥

ಹೇ ಉಷಾಸಾನಕ್ತಾ ಅಹೋರಾತ್ರಾಭಿಮಾನಿದೇವತೇ ಯಹ್ವೀ ಮಹತ್ಯೌ ವಂದ್ಯೇಭಿರ್ವಂದನಾರ್ಹೈರಿತರೈರ್ದೇವೈಃ ಸಹ ದಿವೋಽಂತರಿಕ್ಷಾದವಿಶೇಷೇಣ ಸರ್ವಪ್ರದೇಶಾದ್ವೋ ಯುಷ್ಮಭ್ಯಮುಪ ಪ್ರೈಷೇ। ಉಪಪ್ರಾಪಯಾಮಿ ಹವಿಃ ॥ ಈಷಿಃ ಪ್ರಾಪಣಕರ್ಮಾ ಸ್ವಾದುಪಪ್ರಾಭ್ಯಾಂ ಸಮನ್ವಿತಃ ॥ ಶೂಷೈಃ ಸುಖಕರೈಃ ಚಿತಯದ್ಭಿರ್ಜ್ಞಾಪಯದ್ಭಿರರ್ಕೈರ್ಮಂತ್ರೈಃ ಸಹೋಪಪ್ರಾಪಯಾಮಿ । ಹೇ ಉಕ್ತದೇವತೇ ವಿಶ್ವಂ ಸರ್ವಂ ಕರ್ತವ್ಯಜಾತಂ ವಿದುಷೀ ಇವ ಜಾನತ್ಯಾವಿವ ಮರ್ತ್ಯಾಯ ಯಜಮಾನಾಯ ಯಜ್ಞಮಾವಹತಃ । ಅಭಿಮುಖಂ ಪ್ರಾಪಯತಃ । ಹೇತಿ ಪೂರಣಃ । ಯದ್ವಾ । ಶೂಷೈರಿತ್ಯಾದೀನಿ ತೃತೀಯಾಬಹುವಚನಾಂತಾನಿ ವಂದ್ಯೇಭಿರಿತ್ಯಸ್ಯ ವಿಶೇಷಣಾನೀತಿ ಕೇಚಿದಾಹುಃ ॥

॥ ಪ್ರತಿಪದಾರ್ಥ ॥

**ಯಹ್ವೀ**—ಮಹತ್ಸ್ವರೂಪವುಳ್ಳ । **ಉಷಾಸಾನಕ್ತಾ**—ಎಲೈ ಅಹೋರಾತ್ರದೇವತೆಗಳೇ । **ದಿವಃ**—ಅಂತರಿಕ್ಷಸ್ಥರಾದವರೂ । **ವಂದ್ಯೇಭಿಃ**—ಪೂಜ್ಯರೂ ಆದ ಇತರ ದೇವತೆಗಳೊಡಗೂಡಿದ । **ವಃ**—ನಿಮ್ಮನ್ನುದ್ದೇಶಿಸಿ । **ಶೂಷೈಃ**—ಸುಖಕರವಾದವೂ । **ಚಿತಯದ್ಭಿಃ**—ಜ್ಞಾನಪೂರ್ಣವಾದವೂ ಆದ । **ಅರ್ಕೈಃ**—ಮಂತ್ರಗಳೊಡಗೂಡಿದ (ಹವಿಸ್ಸುಗಳನ್ನು) । **ಉಪ ಪ್ರ ಏಷೇ**—ಅರ್ಪಿಸುತ್ತೇನೆ (ಎಲೈ ದೇವತೆಗಳೇ) । **ವಿದುಷೀ ಇವ**—ಪ್ರಾಜ್ಞೆಯರಾದ ವಿದುಷಿಯರಂತೆ । **ವಿಶ್ವಂ**—ಸಮಸ್ತ ಕರ್ಮವಿಷಯಗಳನ್ನೂ (ನೀವು ತಿಳಿದವರಾಗಿ) । **ಮರ್ತ್ಯಾಯ**—ಮಾನವನಾದ ಯಜಮಾನನಿಗೆ । **ಯಜ್ಞಂ**—ಅವನ ಯಜ್ಞಸಾಧನವಾಗುವಂತೆ । **ಆ ವಹತಃ**-ಆ ಜ್ಞಾನವನ್ನೊದಗಿಸಿರಿ.

॥ ಭಾವಾರ್ಥ ॥

ಮಹತ್ಸ್ವರೂಪವುಳ್ಳ ಎಲೈ ಅಹೋರಾತ್ರಾಭಿಮಾನಿದೇವತಗಳೇ, ಅಂತರಿಕ್ಷಸ್ಥರಾದವರೂ, ಪೂಜ್ಯರೂ ಆದ ಇತರ ದೇವತೆಗಳೊಡನೆ ನಿಮ್ಮನ್ನುದ್ದೇಶಿಸಿ ಸುಖಕರವಾದವೂ ಜ್ಞಾನಪೂರ್ಣವೂ ಆದ ಮಂತ್ರಗಳೊಡಗೂಡಿದ ಹವಿಸ್ಸುಗಳನ್ನು ಅರ್ಪಿಸುತ್ತೇನೆ. ಎಲೈ ದೇವತೆಗಳೇ, ಪ್ರಾಜ್ಞೆಯರಾದ ವಿದುಷಿಯರಂತೆ ನೀವು ಸಮಸ್ತ ಕರ್ಮವಿಷಯಗಳನ್ನೂ ತಿಳಿದವರಾಗಿ ಮಾನವನಾದ ಯಜಮಾನನಿಗೆ ಅವನ ಯಜ್ಞಸಾಧನವಾಗುವಂತೆ ಆ ಜ್ಞಾನವನ್ನೊದಗಿಸಿರಿ

## English Translation

Mighty Day and night, to you, along with the adorable (deities) of heaven, I present (the oblation) with prayers delighting and explicit knowing, like two sages, all (that is required), you bring (it) to the worshipper for his sacrifice.

---

॥ ಸಂಹಿತಾಪಾಠಃ ॥

ಅಭಿ ವೋ ಅರ್ಚೇ ಪೋಷ್ಯಾವತೋ ನೄನ್ವಾಸ್ತೋಷ್ಪತಿಂ ತ್ವಷ್ಟಾರಂ ರರಾಣಃ ।

ಧನ್ಯಾ ಸಜೋಷಾ ಧಿಷಣಾ ನಮೋಭಿರ್ವನಸ್ಪತೀಁರೋಷಧೀ ರಾಯ ಏಷೇ ॥

॥ ಪದಪಾಠ ॥

ಅಭಿ । ವಃ । ಅರ್ಚೇ । ಪೋಷ್ಯಾऽವತಃ । ನೄನ್ । ವಾಸ್ತೋಃ । ಪತಿಂ । ತ್ವಷ್ಟಾರಂ । ರರಾಣಃ ।

ಧನ್ಯಾ । ಸऽಜೋಷಾಃ । ಧಿಷಣಾ । ನಮಃऽಭಿಃ । ವನಸ್ಪತೀನ್ । ಓಷಧೀಃ । ರಾಯಃ । ಏಷೇ ॥ ೮ ॥

॥ ಸಾಯಣಭಾಷ್ಯಂ ॥

**ಅಹಂ ಪೋಷ್ಯಾವತೋ ಬಹುಪೋಷ್ಯಜನಯುಕ್ತಾನ್ನೄನ್ಕರ್ಮನೇತೄನ್ ವೋ ಯುಷ್ಮಾನಭ್ಯರ್ಚೇ । ಅಭಿಪೂಜಯಾಮಿ । ಸ್ತೌಮೀತ್ಯರ್ಥಃ । ಕೇ ಪುನಸ್ತೇ ಯೂಯಂ । ಉಚ್ಯತೇ । ವಾಸ್ತೋಷ್ಪತಿಂ ತ್ವಷ್ಟಾರಂ ರರಾಣಃ ಸ್ತೋತ್ರಾದಿಭಿಃ ಕ್ರೀಡನ್ ಹವಿರ್ದದದ್ವಾಹಂ । ಧನ್ಯಾ ಧನಕರೀ ಸಜೋಷಾ ಇತರದೇವೈಃ ಸಹ ಗಚ್ಛಂತೀ ಪ್ರೀಣಯಂತೀ ವಾ ಧಿಷಣಾ । ವಾಙ್ನಾಮೈತತ್ । ವಾಗ್ದೇವತಾ ॥ ಏತಾ ದ್ವಿತೀಯಾರ್ಥೇ ಪ್ರಥಮಾಃ ॥ ಉಕ್ತಲಕ್ಷಣಾಂ ವಾಣೀಂ ವನಸ್ಪತೀನೋಷಧೀಶ್ಚ ನಮೋಭಿಃ ಸಹಾರ್ಚೇ ಇತಿ ಸಂಬಂಧಃ । ಕಿಮರ್ಥಂ । ರಾಯ ಏಷೇ ಧನಾನಿ ಪ್ರಾಪ್ತುಂ ॥**

॥ ಪ್ರತಿಪದಾರ್ಥ ॥

**ರರಾಣಃ**—ಸ್ತೋತ್ರಾದಿಗಳನ್ನು ಸಲಿಸುತ್ತಿರುವ ನಾನು । **ಪೋಷ್ಯಾವತಃ**—ಬಹುಜನರನ್ನು ಪೋಷಿಸುವವರೂ । **ನೄನ್**—ಯಜ್ಞಾದಿಕರ್ಮಗಳನ್ನು ನೆರವೇರಿಸುವವರೂ ಆದ । **ವಃ**—ನಿಮ್ಮನ್ನು (ಎಂದರೆ) । **ವಾಸ್ತೋಷ್ಪತಿಂ**—ವಾಸ್ತೋಷ್ಪತಿಯೆಂಬ ದೇವತೆಯನ್ನೂ । **ತ್ವಷ್ಟಾರಂ**—ತ್ವಷ್ಟೃವನ್ನೂ । **ಧನ್ಯಾ**—ಧನಕಾರಿಣಿಯೂ । **ಸಜೋಷಾಃ**—ಇತರ ದೇವತೆಗಳೊಡನೆ ಸಮಾನ ಪ್ರೀತಿಯಿಂದಿರುವವಳೂ ಆದ । **ಧಿಷಣಾ**—ವಾಗ್ದೇವತೆಯನ್ನೂ । **ವನಸ್ಪತೀನ್**—ವೃಕ್ಷಾಭಿಮಾನಿ ದೇವತೆಗಳನ್ನೂ ಅಥವಾ ವೃಕ್ಷಗಳನ್ನೂ । **ಓಷಧೀಃ**—ತರುಲತಾದಿ ಓಷಧಿಗಳನ್ನೂ

ಅಥವಾ ಅವುಗಳ ಅಭಿಮಾನಿದೇವತೆಗಳನ್ನೂ । **ರಾಯಃ ಏಷೇ**—ಧನಪ್ರಾಪ್ತಿಗಾಗಿ । **ನಮೋಭಿಃ**—ನಮಸ್ಕಾರ ಅಥವಾ ಸ್ತೋತ್ರಗಳಿಂದ । **ಅರ್ಚೇ**—ಪೂಜಿಸುತ್ತೇನೆ ಅಥವಾ ಸ್ತೋತ್ರಮಾಡುತ್ತೇನೆ.

॥ ಭಾವಾರ್ಥ ॥

ಸ್ತೋತ್ರಗಳನ್ನು ಪಠಿಸುತ್ತಿರುವ ನಾನು ಜನರನ್ನು ಪೋಷಿಸುವವರೂ ಯಜ್ಞಾದಿ ಕರ್ಮಗಳ ನೇತೃಗಳೂ ಆದ ನಿಮ್ಮನ್ನು ಎಂದರೆ, ವಾಸ್ತೋಷ್ಪತಿ ಎಂಬ ದೇವತೆಯನ್ನೂ ಧನಪ್ರದಳೂ ಇತರದೇವತೆಗಳೊಡನೆ ಪ್ರೀತಿಯಿಂದ ಇರುವವಳೂ ಆದ ವಾಗ್ದೇವತೆಯನ್ನೂ ವೃಕ್ಷಗಳು, ಲತೆಗಳು, ಬಳ್ಳಿಗಳು ಅಥವಾ ಇವುಗಳ ಅಭಿಮಾನಿದೇವತೆಗಳನ್ನೂ ಸಹ ಧನಪ್ರಾಪ್ತಿಗಾಗಿ ಸ್ತೋತ್ರಪರನ ನಮಸ್ಕಾರಾದಿಗಳಿಂದ ಪೂಜಿಸುತ್ತೇನೆ

English Translation

I glorify you, leaders (of rites), cherishers (of many), gratifying (with oblations, you) Twashtri the lord of foundations, and the goddess of speech, bestower of opulence, and sharer in the satisfaction (of the other divinities); also the lords of the forest, and the herbs, that I may obtain riches.

---

॥ ಸಂಹಿತಾಪಾಠಃ ॥

ತುಜೇ ನಸ್ತನೇ ಪರ್ವತಾಃ ಸಂತು ಸ್ವೈತವೋ ಯೇ ವಸವೋ ನ ವೀರಾಃ ।
ಪನಿತ ಆಪ್ತ್ಯೋ ಯಜತಃ ಸದಾ ನೋ ವರ್ಧಾನ್ನಃ ಶಂಸಂ ನರ್ಯೋ
ಅಭಿಷ್ಟೌ ॥ ೯ ॥

॥ ಪದಪಾಠಃ ॥

ತುಜೇ । ನಃ । ತನೇ । ಪರ್ವತಾಃ । ಸಂತು । ಸ್ವಃಏತವಃ । ಯೇ । ವಸವಃ । ನ । ವೀರಾಃ ।
ಪನಿತಃ । ಆಪ್ತ್ಯಃ । ಯಜತಃ । ಸದಾ । ನಃ । ವರ್ಧಾತ್ । ನಃ । ಶಂಸಂ । ನರ್ಯಃ । ಅಭಿಷ್ಟೌ ॥೯॥

॥ ಸಾಯಣಭಾಷ್ಯಂ ॥

ಪರ್ವತಾಃ ಪರ್ವವಂತಃ ಪೂರಣವಂತೋ ವಾ ಮೇಘಾಸ್ತನೇ ವಿಸ್ತೃತೇ ತುಜೇ ದಾನೇ । ಯದ್ವಾ । ತನೇತಿ ಪುತ್ರನಾಮ ॥ ಷಷ್ಠ್ಯರ್ಥೇ ಚತುರ್ಥೀ ॥ ಪುತ್ರಸ್ಯ ದಾನ ಇತ್ಯರ್ಥಃ । ಅಥವಾ ನಸ್ತುಜೇ ಪುತ್ರೇ ತನೇ ತತ್ಪುತ್ರೇ ಚ ಸ್ವೈತವಃ ಶೋಭನಗಮನಾಃ ಸಂತು । ಭವಂತು । ಕೀದೃಶಾಸ್ತೇ ।

**ಯೇ ವಸವೋ ಜಗತೋ ವಾಸಯಿತಾರೋ ವೀರಾ ನ ವೀರಾ ಇವ । ಕಿಂಚ ಪನಿತಃ ಸ್ತುತ ಆಪ್ತ್ಯಃ ಆಪ್ತವ್ಯಃ ಸರ್ವೈರ್ಯಜತೋ ಯಜನೀಯ ಆದಿತ್ಯಃ ಸದಾ ಸರ್ವದಾ ನಃ ಶಂಸಮಸ್ಮಾಕಂ ಸ್ತುತಿಂ ನರ್ಯೋ ನರೇಭ್ಯೋ ಹಿತೋ ದೇವೋऽಭಿಷ್ಟಾವಭಿತ ಏಷಣೇऽಭಿಗಮನೇ ವಾ ಸತಿ ವರ್ಧಾತ್ । ವರ್ಧಯೇತ್ ॥**

॥ ಪ್ರತಿಪದಾರ್ಥ ॥

**ಯೇ**—ಯಾವ ಮೇಘಗಳು । **ವೀರಾ ನ**—ವೀರರಂತೆ । **ವಸವಃ**—ಜಗತ್ತಿಗೆ ವಸತಿದಾಯಕರೋ ಅಂತಹ । **ಪರ್ವತಾಃ**—ಮೇಘಗಳು । **ನಃ**—ನಮಗೆ । **ತನೇ**—ಅತಿ ವಿಸ್ತೃತವಾದ । **ತುಜೇ**—( ಉದಕ ) ದಾನಕ್ಕಾಗಿ । **ಸ್ವೃತವಃ**—ಉತ್ಕೃಷ್ಟವಾದ ಗಮನವುಳ್ಳವಾಗಿ । **ಸಂತು**—ಆಗಿರಲಿ । **ಪನಿತಃ**—ಎಲ್ಲರಿಂದಲೂ ಪ್ರಶಂಸಿತನೂ । **ಆಪ್ತ್ಯಃ**—ಎಲ್ಲರಿಗೂ ಸುಲಭಸಾಧ್ಯನೂ । **ಯಜತಃ**—ಪೂಜಾಯೋಗ್ಯನೂ ಆದ ಆದಿತ್ಯನು । **ನರ್ಯಃ**—ಮಾನವರಿಗೆಲ್ಲಾ ಹಿತಕರನಾಗಿ । **ಅಭಿಷ್ಟೌ**—ಸುತ್ತಲೂ ವ್ಯಾಪಿಸುವಾಗ । **ನಃ**—ನಮ್ಮ । **ಶಂಸಂ**—ಸ್ತುತಿಯನ್ನು । **ವರ್ಧಾತ್**—ವೃದ್ಧಿಪಡಿಸಲಿ.

॥ ಭಾವಾರ್ಥ ॥

ಯಾವ ಮೇಘಗಳು ವೀರರಂತೆ ಜಗತ್ತಿಗೆ ವಸತಿದಾಯಕರೋ, ಅಂತಹ ಮೇಘಗಳು ನಮಗೆ ಅತ್ಯಂತ ಪ್ರಭೂತವಾಗಿ ಉದಕವನ್ನು ದಾನಮಾಡಲು ಉತ್ಕೃಷ್ಟವಾಗಿ ಸಂಚರಿಸಲಿ. ಎಲ್ಲರಿಂದಲೂ ಪ್ರಶಂಸಿತನೂ ಎಲ್ಲರಿಗೂ ಸುಲಭಸಾಧ್ಯನೂ ಪೂಜಾಯೋಗ್ಯನೂ ಆದ ಆದಿತ್ಯನು ಮಾನವರಿಗೆಲ್ಲಾ ಹಿತಕರನಾಗಿ ಸುತ್ತಲೂ ವ್ಯಾಪಿಸುವಾಗ ನಮ್ಮ ಸ್ತುತಿಯನ್ನು ವೃದ್ಧಿಪಡಿಸಲಿ.

## English Translation

May the Parvatas be (bountiful) to us in liberal donations; may they be favourable (to us) who are the establishers (of the world) like heroes, may the adored and adorable (deity), who is accessible (to all), who is friendly to man, ever grant us increase, being propitiated by our praise.

॥ ಸಂಹಿತಾಪಾಠಃ ॥

**ವೃಷ್ಣೋ ಅಸ್ತೋಷಿ ಭೂಮ್ಯಸ್ಯ ಗರ್ಭಂ ತ್ರಿತೋ ನಪಾತಮಪಾಂ ಸುವೃಕ್ತಿ ।**

**ಗೃಣೀತೇ ಅಗ್ನಿರೇತರೀ ನ ಶೂಷೈಃ ಶೋಚಿಷ್ಕೇಶೋ ನಿ ರಿಣಾತಿ ವನಾ ॥೧೦॥**

॥ ಪದಪಾಠಃ ॥

ವೃಷ್ಣಃ । ಅಸ್ತೋಷಿ । ಭೂಮ್ಯಸ್ಯ । ಗರ್ಭಂ । ತ್ರಿತಃ । ನಪಾತಂ । ಅಪಾಂ । ಸುಽವೃಕ್ತಿ ।

ಗೃಣೀತೇ । ಅಗ್ನಿಃ । ಏತರಿ । ನಃ । ಶೂಷೈಃ । ಶೋಚಿಃಽಕೇಶಃ । ನಿ । ರಿಣಾತಿ । ವನಾ ॥ ೧೦ ॥

॥ ಸಾಯಣಭಾಷ್ಯಂ ॥

ಭೂಮ್ಯಸ್ಯ । ಭೂಮಿರಂತರಿಕ್ಷಂ । ತದರ್ಹಸ್ಯ । ತಾದೃಶಸ್ಯ ವೃಷ್ಣೋ ವರ್ಷಕಸ್ಯ ಪರ್ಜನ್ಯಸ್ಯ ಅಥವಾ ಭೂಮ್ಯೋ ಭೂಮೇರೇವಾರ್ಹಃ ತದುಚಿತವೃಷ್ಟಿಪ್ರದಾನಾತ್ । ತಾದೃಶಸ್ಯ ಮೇಘಸ್ಯ ಗರ್ಭಂ ಗರ್ಭಸ್ಥಾನೀಯಮಪಾಂ ನಪಾತಂ ರಕ್ಷಕಂ ವೈದ್ಯುತಮಗ್ನಿಂ ಸುವೃಕ್ತಿ । ಸ್ತೋತ್ರಕರ್ಮೈತತ್ । ಶೋಭನಪಾಪಾದಿವರ್ಜನವತಾ ಸ್ತೋತ್ರೇಣಾಸ್ತೋಷಿ । ಸ್ತುತವಾನಹಂ । ಸ ತ್ರಿತಸ್ತ್ರೀಣ್ಯತಮಸ್ತ್ರಿಷು ಸ್ಥಾನೇಷ್ವನ್ಯೇಷು ತ್ರಿಷ್ವಾಪನ್ನೇಷು ತಾಯಮಾನೋಽಗ್ನಿರೇತರಿ ಗಂತರಿ ಮಯಿ ಶೂಷೈಃ ಸುಖಕರೈ ರಶ್ಮಿಭಿರ್ನ ಗೃಣೀತೇ । ನ ಗರಣಂ ಕುರುತೇ । ನ ಕ್ರುಧ್ಯತೀತ್ಯರ್ಥಃ । ಕಿಂತುಶೋಚಿಷ್ಕೇಶಃ ಪ್ರದೀಪ್ತರಶ್ಮಿಃ ಸನ್ ವನಾ ವನಾನಿ ನಿ ರಿಣಾತಿ । ಹಿನಸ್ತಿ । ದಹತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಭೂಮ್ಯಸ್ಯ**—ಅಂತರಿಕ್ಷಸ್ಥನಾದವನೂ । **ವೃಷ್ಣಃ**—ವೃಷ್ಟಿಕಾರಕನಾದವನೂ ಆದ ಪರ್ಜನ್ಯನಿಗೆ । **ಗರ್ಭಂ**—ಗರ್ಭರೂಪನೂ । **ಅಪಾಂ ನಪಾತಂ**—ಅಪ್ಪುಗಳಿಗೆ ರಕ್ಷಕನೂ ಆದ ವೈದ್ಯುತಾಗ್ನಿಯನ್ನು । **ಸುವೃಕ್ತಿ**—ಉತ್ತಮವಾಗಿ ರಚಿಸಿದ ಸ್ತುತಿಯಿಂದ । **ಅಸ್ತೋಷಿ**—ಸ್ತುತಿಸಿದ್ದೇನೆ । **ತ್ರಿತಃ**—ಪೃಥಿವ್ಯಾದಿ ಮೂರು ಸ್ಥಾನಗಳಲ್ಲೂ ಇರುವ । **ಅಗ್ನಿಃ**—ಅಗ್ನಿಯು । **ಏತರಿ**—(ಅವನನ್ನು) ಸಮೀಪಿಸಿ ಹೋಗುವ ನನ್ನ ಮೇಲೆ । **ಶೂಷೈಃ**—ಸುಖಕರ ವಾದ ರಶ್ಮಿಗಳಿಂದ । **ನ ಗೃಣೀತೇ**—ಕ್ರೋಧವನ್ನು ಪ್ರಕಟಿಸುವುದಿಲ್ಲ (ಆದರೆ) । **ಶೋಚಿಷ್ಕೇಶಃ**—ಪ್ರದೀಪ್ತವಾದ ರಶ್ಮಿಗಳುಳ್ಳವನಾಗಿ । **ವನಾ**—ವನಗಳನ್ನು । **ನಿ ರಿಣಾತಿ**—ದಹಿಸುತ್ತಾನೆ.

॥ ಭಾವಾರ್ಥ ॥

ಅಂತರಿಕ್ಷಸ್ಥನಾದವನೂ ವೃಷ್ಟಿಕಾರಕನೂ ಆದ ಪರ್ಜನ್ಯನಿಗೆ ಗರ್ಭರೂಪನೂ, ಅಪ್ಪುಗಳಿಗ ರಕ್ಷಕನೂ ಆದ ವೈದ್ಯುತಾಗ್ನಿಯನ್ನು ಉತ್ತಮವಾಗಿ ರಚಿಸಿದ ಸ್ತುತಿಯಿಂದ ನಾನು ಪ್ರಶಂಸಿಸಿದ್ದೇನೆ ಪೃಥಿವ್ಯಾದಿ ಮೂರು ಸ್ಥಾನ ಗಳಲ್ಲೂ ಇರುವ ಅಗ್ನಿಯು, ಅವನನ್ನು ಭಕ್ತಿಯಿಂದ ಸಮೀಪಿಸುವ ನನ್ನ ಮೇಲೆ ತನ್ನ ಸುಖಕರವಾದ ರಶ್ಮಿಗಳಿಂದ ಕೋಪವನ್ನು ಪ್ರಕಟಿಸುವುದಿಲ್ಲ. ಆದರೆ ಪ್ರದೀಪ್ತವಾದ ರಶ್ಮಿಗಳುಳ್ಳವನಾಗಿ ವನಗಳನ್ನೆಲ್ಲಾ ದಹಿಸುತ್ತಾನೆ.

## English Translation

I glorify with unqualified praise the embryo of the earth-fertilizing rain, the grandson of the waters, Agni, who is threefold, who rages (upon

me) not, when travelling, with (his) withering rays, but, bright-haired, consumes the forests.

॥ ಸಂಹಿತಾಪಾಠಃ ॥

ಕಥಾ ಮಹೇ ರುದ್ರಿಯಾಯ ಬ್ರವಾಮ ಕದ್ರಾಯೇ ಚಿಕಿತುಷೇ ಭಗಾಯ।
ಆಪ ಓಷಧೀರುತ ನೋಽವಂತು ದ್ಯೌರ್ವನಾ ಗಿರಯೋ ವೃಕ್ಷಕೇಶಾಃ॥

॥ ಪದಪಾಠಃ ॥

ಕಥಾ । ಮಹೇ । ರುದ್ರಿಯಾಯ । ಬ್ರವಾಮ । ಕತ್ । ರಾಯೇ । ಚಿಕಿತುಷೇ । ಭಗಾಯ ।
ಆಪಃ । ಓಷಧೀಃ । ಉತ । ನಃ । ಅವಂತು । ದ್ಯೌಃ । ವನಾ । ಗಿರಯಃ।ವೃಕ್ಷಕೇಶಾಃ ॥ ೧೧ ॥

॥ ಸಾಯಣಭಾಷ್ಯಂ ॥

ವಯಮತ್ರಯಃ ಕಥಾ ಕೇನ ಪ್ರಕಾರೇಣ ಮಹೇ ಮಹತೇ ರುದ್ರಿಯಾಯ ರುದ್ರಪುತ್ರಾಯ ಮರುದ್ಗಣಾಯ ಬ್ರವಾಮ ಸ್ತುತೀಃ । ಕತ್ ಕಿಂ ಚ ಸ್ತೋತ್ರಂ ರಾಯೇ ಧನಲಾಭಾಯ ಚಿಕಿತುಷೇ ಸರ್ವಂ ಜಾನತೇ ಭಗಾಯೈತನ್ನಾಮಕಾಯ ದೇವಾಯ ಬ್ರವಾಮ । ಉತಾಪಿ ಚಾಪೋಽಬ್ದೇವತಾ ಓಷಧೀರೋಷಧಯೋ ದ್ಯೌರ್ದ್ಯುದೇವತಾ ವನಾ ವನಾನಿ ಗಿರಯೋ ವೃಕ್ಷಕೇಶಾಃ । ವೃಕ್ಷಾ ಏವ ಕೇಶಸ್ಥಾನೀಯಾ ಯೇಷಾಂ ತೇ । ಏತಾ ಉಕ್ತಾ ದೇವತಾ ನೋಽಸ್ಮಾನವಂತು । ರಕ್ಷಂತು ॥

॥ ಪ್ರತಿಪದಾರ್ಥ ॥

**ರಾಯೇ**—( ನಮಗೆ ) ಧನಸಂಪತ್ತು ಲಭಿಸಲು । **ಮಹೇ**—ಪೂಜ್ಯವಾದ । **ರುದ್ರಿಯಾಯ**—ರುದ್ರಪುತ್ರರಾದ ಮರುತ್ತುಗಳ ಗಣಕ್ಕೆ । **ಕಥಾ**—ಯಾವ ಪ್ರಕಾರವಾಗಿ । **ಬ್ರವಾಮ**—ಸ್ತುತಿಯನ್ನರ್ಪಿಸೋಣ ? । **ಚಿಕಿತುಷೇ**—ಸರ್ವಜ್ಞನಾದ । **ಭಗಾಯ**—ಭಗನನ್ನುದ್ದೇಶಿಸಿ । **ಕತ್**—ಯಾವ ಸ್ತುತಿಯನ್ನು ಪಠಿಸೋಣ ? । **ಉತ**—ಮತ್ತು । **ಆಪಃ**—ಅಬ್ದೇವತೆಗಳೂ । **ಓಷಧೀಃ**—ಓಷಧಿಗಳೂ । **ದ್ಯೌಃ**—ದ್ಯುಲೋಕಾಧಿದೇವತೆಯೂ । **ವೃಕ್ಷಕೇಶಾಃ**—ವೃಕ್ಷರೂಪವಾದ ಕೇಶಗಳುಳ್ಳ । **ಗಿರಯಃ**—ಗಿರಿಗಳೂ । **ವನಾ**—ವನಗಳೂ । **ನಃ**—ನಮ್ಮನ್ನು । **ಅವಂತು**—ರಕ್ಷಿಸಲಿ.

॥ ಭಾವಾರ್ಥ ॥

ನಮಗೆ ಧನಸಂಪತ್ತು ಲಭಿಸುವ ನಿಮಿತ್ತವಾಗಿ ರುದ್ರಪುತ್ರರಾದ ಮರುತ್ತುಗಳ ಪೂಜ್ಯವಾದ ಗಣಕ್ಕೆ ಯಾವ ಪ್ರಕಾರವಾಗಿ ಸ್ತುತಿಯನ್ನರ್ಪಿಸೋಣ ? ಸರ್ವಜ್ಞನಾದ ಭಗನನ್ನುದ್ದೇಶಿಸಿ ಯಾವ ಸ್ತುತಿಯನ್ನು ಪಠಿಸೋಣ ? ಮತ್ತು

ಅಬ್ದೇವತೆಗಳೂ, ಓಷಧಿಗಳೂ, ದ್ಯುಲೋಕಾಧಿ ದೇವತೆಯೂ ವೃಕ್ಷರೂಪವಾದ ಕೇಶಗಳುಳ್ಳ ಪರ್ವತಗಳೂ ವನಗಳೂ ನಮ್ಮನ್ನು ರಕ್ಷಿಸಲಿ.

English Translation

How can we offer (fit praise) to the mighty posterity of Rudra, or to the all-knowing Bhaga, for (the sake of obtaining) riches? may the waters, may the plants, protect us, and the heaven, the woods, and the mountains, whose tresses are trees.

---

॥ ಸಂಹಿತಾಪಾಠಃ ॥

ಶೃಣೋತು ನ ಊರ್ಜಾಂ ಪತಿರ್ಗಿರಃ ಸ ನಭಸ್ತರೀಯಾँ ಇಷಿರಃ ಪರಿಜ್ಮಾ।
ಶೃಣ್ವಂತ್ವಾಪಃ ಪುರೋ ನ ಶುಭ್ರಾಃ ಪರಿ ಸ್ರುಚೋ ಬಬೃಹಾಣಸ್ಯಾದ್ರೇಃ ॥

॥ ಪದಪಾಠಃ ॥

ಶೃಣೋತು । ನಃ । ಊರ್ಜಾಂ । ಪತಿಃ । ಗಿರಃ । ಸಃ । ನಭಃ । ತರೀಯಾನ್ । ಇಷಿರಃ । ಪರಿಽಜ್ಮಾ ।
ಶೃಣ್ವಂತು । ಆಪಃ । ಪುರಃ । ನ । ಶುಭ್ರಾಃ । ಪರಿ । ಸ್ರುಚಃ । ಬಬೃಹಾಣಸ್ಯ । ಅದ್ರೇಃ ॥ ೧೨ ॥

॥ ಸಾಯಣಭಾಷ್ಯಂ ॥

ನೋಽಸ್ಮಾಕಂ ಗಿರಃ ಸ್ತುತೀಃ ಶೃಣೋತು । ಕಃ । ಊರ್ಜಾಂ ಬಲಾನಾಂ ಪತಿರ್ವಾಯುಃ । ಅಥವಾ ಊರ್ಜಾಮನ್ನಾನಾಂ ಪತಿಃ । ಪ್ರಾಣೋಪಾಧಿಕಸ್ಯ ವಾಯೋಃ ಕೃತ್ಸ್ನಾನ್ನತೃತ್ವಂ ಪ್ರಸಿದ್ಧಂ । ಶ್ರುತಿಶ್ಚ ಭವತಿ । ಪ್ರಾಣಸ್ಯಾನ್ನಮಿದಂ ಸರ್ವಂ ಪ್ರಜಾಪತಿರಕಲ್ಪಯತ್ । ಮನು. ೫-೨೮ । ಇತಿ । ಸ ನಭೋ ನಭಸಿ ಚಾರೀ ತರೀಯಾನ್ ತರಿತವ್ಯ ಇಷಿರೋ ಗಮನಶೀಲಃ ಪರಿಜ್ಮಾ ಪರಿತೋ ಗಂತಾ । ಕಿಂಚಾಪಃ ಶೃಣ್ವಂತು ಗಿರಃ । ಕೀದೃಶ್ಯಸ್ತಾಃ । ಪುರೋ ನ ಪುರಾಣೀವ ಶುಭ್ರಾ ದೀಪ್ತಾ ಬಬೃಹಾಣಸ್ಯ ವರ್ಧಮಾನಸ್ಯಾದ್ರೇರ್ಮೇಘಸ್ಯ ವಾ ಪರ್ವತಸ್ಯ ವಾ ಪರಿ ಪರಿತಃ ಸ್ರುಚಃ ಸರಣಶೀಲಾಃ ॥

॥ ಪ್ರತಿಪದಾರ್ಥ ॥

**ನಭಃ**—ಅಂತರಿಕ್ಷದಲ್ಲಿ । **ತರೀಯಾನ್**—ಸಂಚರಿಸುವವನೂ । **ಇಷಿರಃ**—(ಸರ್ವದಾ) ಚಲನವುಳ್ಳವನೂ । **ಪರಿಜ್ಮಾ**—ಸುತ್ತಲೂ ವ್ಯಾಪಿಸುವವನೂ । **ಊರ್ಜಾಂ**—ಶಕ್ತಿಗಳಿಗೆಲ್ಲಾ । **ಪತಿಃ**—ಒಡೆಯನೂ ಆದ । **ಸಃ**—ವಾಯುದೇವನು । **ನಃ**—ನಮ್ಮ । **ಗಿರಃ**—ಸ್ತುತಿಗಳನ್ನು । **ಶೃಣೋತು**—ಕೇಳಲಿ । **ಬಬೃಹಾಣಸ್ಯ**—

ಅತ್ಯುನ್ನತವಾಗಿ ಬೆಳೆದಿರುವ । **ಅದ್ರೇಃ**—ಪರ್ವತದ । **ಪರಿ**—ಸುತ್ತಲೂ । **ಸ್ರುಚಃ**—ಪ್ರವಹಿಸುವುವೂ । **ಪುರೋ ನ**—ಪಟ್ಟಣಗಳಂತೆ । **ಶುಭ್ರಾಃ**—ಪ್ರಕಾಶಮಾನವಾದವೂ ಆದ । **ಅಪಃ**—ಉದಕಗಳೂ । **ಶೃಣ್ವಂತು**—(ನಮ್ಮ ಸ್ತುತಿಗಳನ್ನು) ಕೇಳಲಿ

॥ ಭಾವಾರ್ಥ ॥

ಅಂತರಿಕ್ಷದಲ್ಲಿ ಸಂಚರಿಸುವವನೂ, ಸರ್ವದಾ ಚಲನವುಳ್ಳವನೂ ಸುತ್ತಲೂ ವ್ಯಾಪಿಸುವವನೂ, ಶಕ್ತಿಗಳಿಗೆಲ್ಲಾ ಒಡೆಯನೂ ಆದ ವಾಯುದೇವನು ನಮ್ಮ ಸ್ತುತಿಗಳನ್ನು ಕೇಳಲಿ. ಅತ್ಯುನ್ನತವಾಗಿ ಬೆಳೆದಿರುವ ಪರ್ವತದ ಸುತ್ತಲೂ ಪ್ರವಹಿಸುವುವೂ ಪಟ್ಟಣಗಳಂತೆ ಪ್ರಕಾಶಮಾನವಾದುವೂ ಆದ ಉದಕಗಳೂ ನಮ್ಮ ಸ್ತುತಿಗಳನ್ನು ಕೇಳಲಿ.

## English Translation

May the lord of vigour, (Vayu), hear our prayers; he who traverses he firmament, the circumambient: may the waters hear, bright as cities, flowing round the towering mountains.

---

॥ ಸಂಹಿತಾಪಾಠಃ ॥

ವಿದಾ ಚಿನ್ನು ಮಹಾಂತೋ ಯೇ ವ ಏವಾ ಬ್ರವಾಮ ದಸ್ರಾ ವಾರ್ಯಂ
ದಧಾನಾಃ ।
ವಯಶ್ಚನ ಸುಭ್ವ ಆವ ಯಂತಿ ಕ್ಷುಭಾ ಮರ್ತಮನುಯತಂ ವಧಸ್ನೈಃ ॥

॥ ಪದಪಾಠಃ ॥

ವಿದಾ । ಚಿತ್ । ನು । ಮಹಾಂತಃ । ಯೇ । ವಃ । ಏವಾಃ । ಬ್ರವಾಮ । ದಸ್ರಾಃ । ವಾರ್ಯಂ ।
ದಧಾನಾಃ ।
ವಯಃ । ಚನ । ಸುಽಭ್ವಃ । ಆ । ಅವ । ಯಂತಿ । ಕ್ಷುಭಾ । ಮರ್ತಂ । ಅನುಽಯತಂ । ವಧಽಸ್ನೈಃ ॥

॥ ಸಾಯಣಭಾಷ್ಯಂ ॥

ಹೇ ಮಹಾಂತೋ ಮರುತೋ ನು ಕ್ಷಿಪ್ರಂ ಯೂಯಂ ವಿದ । ಜಾನೀಥ ಸ್ತೋತ್ರಂ । ಹೇ ದಸ್ರಾ ದರ್ಶನೀಯಾ ವೋ ಯುಷ್ಮಾನ್ಯ ಏವಾ ಗಂತಾರೋ ಯುಷ್ಮಾನ್ಭಜಮಾನಾ ವಾರ್ಯಂ ವರಣೀಯಂ

**ಹವಿರ್ಧಾನಾ ದಧಾನಾ ಧಾರಯಂತೋ ವಾ ವಯಂ ಬ್ರವಾಮ ಸ್ತುತಿಂ । ಯದ್ವಾ । ಯೇ ವೋ ಯೂಯಮಿತ್ಯರ್ಥಃ । ಯೇ ಯೂಯಮೇವಾ ಅಸ್ಮದ್ಯಜ್ಞಮಭಿಗಂತಾರಸ್ತೇ ವಿದ । ಚಿದಿತಿ ಪೂರಣಃ । ವಯಶ್ಚನಾಗಂತಾರಶ್ಚೈತೇ ಮರುತಃ ಸುಭ್ವಃ ಸುಷ್ಠು ಭವಂತಃ ಪ್ರವೃದ್ಧಾ ಆ ಅಸ್ಮದಭಿಮುಖಮುವ ಯಂತಿ । ಗಚ್ಛಂತಿ । ಕಿಂ ಕುರ್ವಂತಃ । ಕ್ಷುಭಾ ಕ್ಷೋಭಕೇಣ ಸಹಿತಂ ಮರ್ತಂ ಮರಣಧರ್ಮಾಣಂ ವೈರಿಣಮನುಯತಮಭಿಗತಂ ವಧಸ್ನೈರಾಯುಧೈ- ಪರಿಹರಂತೋಽವ ಯಂತಿ ॥**

॥ ಪ್ರತಿಪದಾರ್ಥ ॥

**ಮಹಾಂತಃ**—ಮಹಾತ್ಮರಾದ ಎಲೈ ಮರುತ್ತುಗಳೇ । **ಮ**—ಕ್ಷಿಪ್ರನಾಗಿ । **ವಿದ**—ನಮ್ಮ ಸ್ತುತಿಯನ್ನರಿಯಿರಿ। **ದಸ್ಮಾಃ**—ಆಕರ್ಷವಾದ ರೂಪವುಳ್ಳ ಮರತ್ತುಗಳೇ । **ಏವಾಃ**—ನಿಮ್ಮನ್ನು ಸಮೀಪಿಸುವ । **ಯೇ**—ಯಾವ ನಾವು । **ವಾರ್ಯಂ**—ಆದೃತವಾದ ಹವಿಸ್ಸನ್ನು । **ದಧಾನಾ**—ಹಿಡಿದವರಾಗಿ । **ಬ್ರವಾಮ**—ನಿಮ್ಮ ಸ್ತುತಿಯನ್ನು ಪಠಿಸುತ್ತೇವೆ । **ವಯಶ್ಚನ**—ನಮ್ಮಭಿಮುಖವಾಗಿ ಬರುತ್ತಿರುವ ಮರುತ್ತುಗಳು । **ಸುಭ್ವಃ**—ಅನುಗ್ರಹ ಬುದ್ಧಿಯುಳ್ಳವ ರಾಗಿ । **ಕ್ಷುಭಾ**—ಪ್ರಕ್ಷುಬ್ಧವಾದ ಮನಸ್ಸಿನಿಂದ ಕೂಡಿದವನೂ । **ಅನುಯತಂ**—ಅವರನ್ನು ಎದುರಿಸುವವನೂ ಆದ । **ಮರ್ತಂ**—ಮಾನವನನ್ನು । **ವಧಸ್ನೈಃ**—ಆಯುಧಗಳಿಂದ ಹೊಡೆದೋಡಿಸಿ । **ಆ**—ನಮಗಭಿಮುಖವಾಗಿ । **ಅವ ಯಂತಿ**—ಬರುತ್ತಾರೆ.

॥ ಭಾವಾರ್ಥ ॥

ಮಹಾತ್ಮರೂ, ಆಕರ್ಷಕವಾದ ರೂಪವುಳ್ಳವರೂ ಆದ ಮರುತ್ತುಗಳೇ, ನಾವು ನಿಮಗೆ ಪ್ರಿಯವಾದ ಹವಿಸ್ಸನ್ನು ಹಿಡಿದು ನಿಮ್ಮನ್ನು ಸಮೀಪಿಸಿ ನಿಮ್ಮ ಸ್ತುತಿಯನ್ನು ಪಠಿಸುತ್ತೇವೆ. ನಮ್ಮ ಸ್ತುತಿಯ ಸ್ವರೂಪವನ್ನರಿಯಿರಿ. ನಮ ಗಭಿಮುಖವಾಗಿ ಬರುತ್ತಿರುವ ಮರುತ್ತುಗಳು ನಮ್ಮ ಮೇಲೆ ಅನುಗ್ರಹ ಬುದ್ಧಿಯುಳ್ಳವರಾಗಿಯೂ, ಮತ್ತು ಪ್ರಕ್ಷುಬ್ಧ ವಾದ ಮನಸ್ಸಿನಿಂದ ಕೂಡಿ ಅವರನ್ನೆದುರಿಸುವ ಮಾನವನನ್ನು ತಮ್ಮ ಆಯುಧಗಳಿಂದ ಹೊಡೆದೋಡಿಸುತ್ತಲೂ ಸಹ ನಮ್ಮಲ್ಲಿಗೆ ಬರುತ್ತಾರ.

## English Translation

Mighty Maruts, of goodly aspect, quickly hear (the praises) that we who repair to you repeat, offering acceptable (oblations): (the Maruts) coming hither, well-disposed, come down to us, (destroying) with their weapons the mortals opposed to them, (overcome) by agitation.

॥ ಸಂಹಿತಾಪಾಠಃ ॥

ಆ ದೈವ್ಯಾನಿ ಪಾರ್ಥಿವಾನಿ ಜನ್ಮಾಪಶ್ಚಾಚ್ಛಾ ಸುಮಖಾಯ ವೋಚಂ ।
ವರ್ಧಂತಾಂ ದ್ಯಾವೋ ಗಿರಶ್ಚಂದ್ರಾಗ್ರಾ ಉದಾ ವರ್ಧಂತಾಮಭಿಷಾತಾ
ಅರ್ಣಾಃ ॥ ೧೪ ॥

॥ ಪದಪಾಠಃ ॥

ಆ । ದೈವ್ಯಾನಿ । ಪಾರ್ಥಿವಾನಿ । ಜನ್ಮ । ಅಪಃ । ಚ । ಅಚ್ಛ । ಸುಮಖಾಯ । ವೋಚಂ ।
ವರ್ಧಂತಾಂ । ದ್ಯಾವಃ । ಗಿರಃ । ಚಂದ್ರಅಗ್ರಾಃ । ಉದಾ । ವರ್ಧಂತಾಂ । ಅಭಿಸಾತಾಃ । ಅರ್ಣಾಃ ॥

॥ ಸಾಯಣಭಾಷ್ಯಂ ॥

ದೈವ್ಯಾನಿ ದೇವಸಂಬಂಧೀನಿ ಪಾರ್ಥಿವಾನಿ ಪೃಥಿವೀಸಂಬಂಧೀನಿ ಚ ಜನ್ಮ ಜನ್ಮಾನ್ಯಪಶ್ಚಾಪಸಾಚ್ಛಾಭಿಪ್ರಾಪ್ತುಂ ಸುಮಖಾಯ ಶೋಭನಯಜ್ಞಾಯ ಮರುದ್ಗಣಾಯ ವೋಚಂ । ಬ್ರವೀಮಿ । ಗಿರಃ ಸ್ತುತಯೋ ವರ್ಧಂತಾಂ । ದ್ಯಾವೋ ದ್ಯೋತಮಾನಾಃ ಸ್ವಪ್ರತಿಪಾದ್ಯಾರ್ಥಪ್ರಕಾಶಿನ್ಯಶ್ಚಂದ್ರಾಗ್ರಾಃ । ಆಹ್ಲಾದನಂ ಹಿರಣ್ಯಂ ವಾಗ್ರೇ ಯಾಸಾಂ ತಾಃ । ತಾದೃಶ್ಯಃ ಸತ್ಯೋ ವರ್ಧಂತಾಂ । ಅರ್ಣಾ ನದ್ಯಶ್ಚಾಭಿಷಾತಾ ಮರುದ್ಭಿಃ ಸಂಭಕ್ತಾ ಉದೋದಕೇನ ವರ್ಧಂತಾಂ । ಸಮೃದ್ಧಾ ಭವಂತು ॥

॥ ಪ್ರತಿಪದಾರ್ಥ ॥

**ದೈವ್ಯಾನಿ**—ದ್ಯುಲೋಕಸಂಬಂಧವಾದುದಾಗಲಿ । **ಪಾರ್ಥವಾನಿ**—ಪೃಥಿವೀಸಂಬಂಧವಾದುದಾಗಲಿ ಆದ । **ಜನ್ಮ**—ಉತ್ಪತ್ತಿಯನ್ನು ಹೊಂದಿದ । **ಅಪಃ**—ಉದಕಗಳನ್ನು । **ಅಚ್ಛ**—ಹೊಂದುವುದಕ್ಕಾಗಿ । **ಸುಮಖಾಯ**—ಉತ್ತಮವಾದ ಯಜ್ಞಕ್ಕೆ ಅರ್ಹವಾದ ಮರುತ್ತುಗಳ ಗಣವನ್ನುದ್ದೇಶಿಸಿ । **ವೋಚಂ**—ಸ್ತುತಿಯನ್ನರ್ಪಿಸುತ್ತೇನೆ **ದ್ಯಾವಃ**—ಪ್ರಕಾಶಮಾನವಾದವೂ । **ಚಂದ್ರಾಗ್ರಾಃ**—ಆಹ್ಲಾದಕರವಾದ ಅಗ್ರಭಾಗವುಳ್ಳವೂ ಆದ । **ಗಿರಃ**—ಸ್ತುತಿಗಳು । **ವರ್ಧಂತಾಂ**—ವೃದ್ಧಿಯನ್ನು ಹೊಂದಲಿ । **ಅಭಿಷಾತಾಃ**—( ಮರುತ್ತುಗಳಿಂದ ) ಪೋಷಿತವಾದ । **ಅರ್ಣಾಃ**—ನದಿಗಳು । **ಉದಾ**—ಉದಕದಿಂದ । **ವರ್ಧಂತಾಂ**—ತುಂಬಿಕೊಳ್ಳಲಿ.

॥ ಭಾವಾರ್ಥ ॥

ದ್ಯುಲೋಕೋತ್ಪನ್ನವಾದುದಾಗಲಿ, ಪೃಥಿವ್ಯುತ್ಪನ್ನವಾದುದಾಗಲಿ ಆದ ಉದಕದ ಲಾಭಕ್ಕಾಗಿ ಉತ್ತಮವಾದ ಯಜ್ಞಕ್ಕೆ ಅರ್ಹರಾದ ಮರುತ್ತುಗಳ ಗಣವನ್ನುದ್ದೇಶಿಸಿ ಸ್ತುತಿಯನ್ನರ್ಪಿಸುತ್ತೇನೆ. ಪ್ರಕಾಶಮಾನವಾದವೂ, ಆಹ್ಲಾದಕರವಾದ ಅಗ್ರಭಾಗವುಳ್ಳವೂ ಆದ ಸ್ತುತಿಗಳು ವೃದ್ಧಿಯನ್ನು ಹೊಂದಲಿ ಮರುತ್ತುಗಳಿಂದ ಪೋಷಿತವಾದ ನದಿಗಳು ಉದಕದಿಂದ ತುಂಬಿಕೊಳ್ಳಲಿ (ತುಂಬಿಹರಿಯಲಿ)

## English Translation

I offer adoration to the company of the Maruts deserving of sacred sacrifice, to obtain the waters, whether born of heaven or earth. may my praises prosper: may the joy-bestowing heavens (flourish): may the rivers cherished (by the Maruts) be filled with water.

---

॥ ಸಂಹಿತಾಪಾಠಃ ॥

ಪದೇಪದೇ ಮೇ ಜರಿಮಾ ನಿ ಧಾಯಿ ವರೂತ್ರೀ ವಾ ಶಕ್ರಾ ಯಾ ಪಾಯುಭಿಶ್ಚ ।

ಸಿಷಕ್ತು ಮಾತಾ ಮಹೀ ರಸಾ ನಃ ಸ್ಮತ್ಸೂರಿಭಿರೃಜುಹಸ್ತ ಋಜುವನಿಃ॥

॥ ಪದಪಾಠಃ ॥

ಪದೇಽಪದೇ । ಮೇ । ಜರಿಮಾ । ನಿ । ಧಾಯಿ । ವರೂತ್ರೀ । ವಾ । ಶಕ್ರಾ । ಯಾ । ಪಾಯುಽಭಿಃ । ಚ।

ಸಿಸಕ್ತು । ಮಾತಾ । ಮಹೀ । ರಸಾ । ನಃ । ಸ್ಮತ್ । ಸೂರಿಽಭಿಃ । ಋಜುಽಹಸ್ತಾ । ಋಜುಽವನಿಃ ॥

॥ ಸಾಯಣಭಾಷ್ಯಂ ॥

ಜರಿಮಾ ಸ್ತುತಿರ್ಮೇ ಮದೀಯಾ ಪದೇ ಪದೇ ತದಾ ತದಾ ಭೂಮೌ ನಿ ಧಾಯಿ । ನಿಧೀಯತೇ । ಸ್ಥಾಪ್ಯತೇ । ಕ್ರಿಯತ ಇತ್ಯರ್ಥಃ । ಯಾ ಚ ಶಕ್ರಾ ಶಕ್ತಾ ಸತೀ ಪಾಯುಭೀ ರಕ್ಷಣೈರ್ವರೂತ್ರ್ಯಸ್ಮದುಪದ್ರವವಾರಯಿತ್ರೀ ಭವತಿ । ವಾಶಬ್ದಶ್ಚಾರ್ಥೇ । ಮಾತಾ ಸರ್ವಸ್ಯ ನಿರ್ಮಾತ್ರೀ ಮಹೀ ಮಹತೀ ಪೂಜ್ಯಾ ರಸಾ ಸಾರಭೂತಾ ಭೂಮಿಃ ಸಿಷಕ್ತು ಸೇವತಾಂ ನೋಽಸ್ಮಾಕಂ ಸ್ತುತಿಂ । ಅಥವಾ ಸ್ತುತಾ ನೋಽಸ್ಮಾನ್ ಸಿಷಕ್ತು । ಸ್ಮಚ್ಛಬ್ದಃ ಪ್ರಶಸ್ತವಚನಃ । ಪ್ರಶಸ್ತೈಃ ಸೂರಿಭಿರ್ಮೇಧಾವಿಭಿಃ ಸ್ತೋತೃಭಿರ್ನಿಮಿತ್ತೈಃ । ತೇಷಾಂ ಪರಿಚರ್ಯಯಾ ಪ್ರೀತೇತ್ಯರ್ಥಃ । ಋಜುಹಸ್ತಾಸ್ಮದನುಕೂಲಹಸ್ತಾ ಋಜುವನಿಃ ಕಲ್ಯಾಣದಾನಾ ಭವತು ॥

॥ ಪ್ರತಿಪದಾರ್ಥ ॥

ಮೇ—ನನ್ನ । ಜರಿಮಾ—ಸ್ತುತಿಯು । ಪದೇ ಪದೇ—ಆಗಿಂದಾಗ್ಗೆ । ನಿ ಧಾಯಿ—ಅರ್ಪಿತವಾಗುತ್ತದೆ । ಯಾ—ಅದೇ ಸ್ತುತಿಯು । ಶಕ್ರಾ—ಶಕ್ತಿಯುತವಾಗಿದ್ದು । ಪಾಯುಭಿಃ—ರಕ್ಷಣೆಗಳಿಂದ। ವರೂತ್ರೀ—

ಆಪನ್ನಿವಾರಕವಾಗುತ್ತದೆ । **ನಃ**—ನಮ್ಮ ಸ್ತುತಿಯನ್ನು । **ಮಾತಾ**—ಸಕಲವನ್ನು ನಿರ್ಮಿಸುವವಳೂ । **ಮಹೀ**—ಮಹಾತ್ಮಳೂ । **ರಸಾ**—ಸಾರವತ್ತಾದವಳೂ ಆದ ಪೃಥ್ವಿಯು । **ಸಿಷಕ್ತು**—ಸೇವಿಸಲಿ । **ಸೂರಿಭಿಃ**—ಸ್ತುತಿಕರ್ತರ ಸ್ತೋತ್ರಗಳಿಂದ ಪ್ರೀತಳಾಗಿ । **ಋಜುಹಸ್ತಾ**—ನಮಗೆ ಅನುಕೂಲವಾದ ಹಸ್ತವುಳ್ಳವಳೂ । **ಋಜುವನಿಃ**—ಕಲ್ಯಾಣಾತ್ಮಕವಾದ ದಾನವುಳ್ಳವಳೂ । **ಸ್ಯಾತ್**—ಆಗಲಿ

॥ ಭಾವಾರ್ಥ ॥

ಆಗಿಂದಾಗ್ಗೆ ನಮ್ಮ ಸ್ತುತಿಯು ಅರ್ಪಿತವಾಗುತ್ತದೆ. ಅದೇ ಸ್ತುತಿಯು ಶಕ್ತಿಯುತವಾಗಿದ್ದು ತನ್ನ ರಕ್ಷಣೆಗಳಿಂದ ಆಪನ್ನಿವಾರಕವಾಗುತ್ತದೆ. ಸಕಲ ನಿರ್ಮಾತೃಳೂ, ಮಹಾತ್ಮಳೂ ಸಾರವತ್ತಾದವಳೂ ಆದ ಪೃಥ್ವಿಯು ನಮ್ಮ ಸ್ತುತಿಯನ್ನು ಸೇವಿಸಲಿ (ಕೇಳಲಿ). ಸ್ತುತಿಕರ್ತರ ಸ್ತೋತ್ರಗಳಿಂದ ಪ್ರೀತಳಾಗಿ ನಮಗೆ ಅನುಕೂಲವಾದ ಹಸ್ತವುಳ್ಳವಳೂ ಮತ್ತು ಕಲ್ಯಾಣಾತ್ಮಕವಾದ ದಾನವುಳ್ಳವಳೂ ಆಗಲಿ.

## English Translation

My praise has been continually proffered as a protectress, powerful with (the means of) preservation. may the maternal and venerable earth accept our (praises), and, (pleased) with her pious (worshippers) be (to us) straight-handed, and the giver of good.

॥ ಸಂಹಿತಾಪಾಠ ॥

ಕಥಾ ದಾಶೇಮ ನಮಸಾ ಸುದಾನೂನೇವಯಾ ಮರುತೋ ಅಚ್ಛೋಕ್ತೌ
ಪ್ರಶ್ರವಸೋ ಮರುತೋ ಅಚ್ಛೋಕ್ತೌ ।
ಮಾ ನೋಽಹಿರ್ಬುಧ್ನ್ಯೋ ರಿಷೇ ಧಾದಸ್ಮಾಕಂ ಭೂದುಪಮಾತಿವನಿಃ ॥

॥ ಪದಪಾಠ ॥

ಕಥಾ । ದಾಶೇಮ । ನಮಸಾ । ಸುऽದಾನೂನ್ । ಏವಯಾ । ಮರುತಃ । ಅಚ್ಛಽಉಕ್ತೌ । ಪ್ರऽಶ್ರವಸಃ ।
ಮರುತಃ । ಅಚ್ಛಽಉಕ್ತೌ ।
ಮಾ । ನಃ । ಅಹಿಃ । ಬುಧ್ನ್ಯಃ । ರಿಷೇ । ಧಾತ್ । ಅಸ್ಮಾಕಂ । ಭೂತ್ । ಉಪಮಾತಿऽವನಿಃ ॥೧೬॥

॥ ಸಾಯಣಭಾಷ್ಯಂ ॥

ವಯಂ ಕಥಾ ಕೇನ ಪ್ರಕಾರೇಣ ದಾಶೇಮ ಪರಿಚರೇಮ ನಮಸಾ ಸ್ತೋತ್ರೇಣಾನ್ನೇನ ವಾ ಸುದಾನೂನ್ ಶೋಭನದಾನಾನ್ಮರುತಃ । ಏವಯೈವಂ ಕ್ರಿಯಮಾಣಪ್ರಕಾರೇಣಾಚ್ಛೋಕ್ತಾವಾಭಿಮುಖ್ಯೇನ ವಚನೇ ನಿಮಿತ್ತೇ ಸತಿ ತಾನ್ಮರುತಃ ಕಥಂ ಪರಿಚರೇಮ । ತೇಷಾಂ ದುರಾರಾಧ್ಯತ್ವಾದಿತಿ ಭಾವಃ । ಕಥಂ । ಪ್ರಶ್ರವಸಃ ಪ್ರಕೃಷ್ಟಾನ್ನಾ ಭವಂತಿ । ಅಚ್ಛೋಕ್ತೌ । ಅಭಿಗಂತ್ರ್ಯುಕ್ತಿಃ ಸ್ತುತಿರ್ಯಸ್ಯ ತಾದೃಶೇ ಮಯಿ । ಯದ್ವಾ । ಪ್ರಶ್ರವಸಃ ಪ್ರಕೃಷ್ಟಾನ್ನಸ್ಯ ಮಮಾಚ್ಛೋಕ್ತೌ ಸ್ತೋತ್ರನಿಮಿತ್ತೇ ಸತಿ ಮರುತಃ ಕಥಾ ಕೇನ ಪ್ರಕಾರೇಣ ದಾಶೇಮ । ಪುನರುಕ್ತಿರಾದರಾರ್ಥಾ । ಅಹಿರ್ಬುಧ್ನ್ಯೋ ದೇವೋ ನೋಽಸ್ಮಾನ್ ರಿಷೇ ಹಿಂಸಕಾಯ ಮಾ ಧಾತ್ । ಮಾ ಸ್ಥಾಪಯತು । ಸ ದೇವೋಽಸ್ಮಾಕಂ ಭೂತ್ ಭವತೂಪಮಾತಿವನಿಃ ಶತ್ರೂಣಾಂ ಹಂತಾ ॥

॥ ಪ್ರತಿಪದಾರ್ಥ ॥

**ಸುದಾನೂನ್**—ಶ್ರೇಷ್ಠವಾದ ದಾನಿಗಳಾದ । **ಮರುತಃ**—ಮರುತ್ತುಗಳನ್ನು । **ಕಥಾ**—ಯಾವ ರೀತಿಯಾದ । **ನಮಸಾ**—ಸ್ತುತಿಯಿಂದ (ಅಥವಾ ಹವಿಸ್ಸುಗಳಿಂದ) । **ದಾಶೇಮ** – ಪೂಜಿಸೋಣ ? । **ಏವಯಾ**—ಇದೇ ರೀತಿಯಲ್ಲಿ । **ಅಚ್ಛೋಕ್ತೌ**—ಅವರನ್ನುದ್ದೇಶಿಸಿದ ಉತ್ತಮ ಸ್ತುತ್ತಿಯಿರಲು । (**ಕಥಂ**—ಯಾವ ರೀತಿ) । **ಪ್ರಶ್ರವಸಃ**—ಅವರಿಗೆ ಉತ್ಕೃಷ್ಟವಾದ ಹವಿಸ್ಸು ಅರ್ಪಿತವಾಗಬಲ್ಲದು ? । **ಅಚ್ಛೋಕ್ತೌ**—ಉತ್ತಮವಾದ ಸ್ತುತಿಯೊಡನೆ ನಾನು ಸಿದ್ಧವಿದ್ದು । **ಮರುತಃ**—ಮರುತ್ತುಗಳನ್ನು (ಯಾವ ರೀತಿ ಪೂಜಿಸಲಿ ?) । **ಅಹಿರ್ಬುಧ್ನ್ಯಃ**—ಅಹಿರ್ಬುಧ್ನ್ಯದೇವನು । **ನಃ**—ನಮ್ಮನ್ನು । **ರಿಷೇ**—ಹಿಂಸಕನಾದ ಶತ್ರುವಿಗೆ । **ಮಾ ಧಾತ್**—ಬಿಟ್ಟುಕೊಡದಿರಲಿ । **ಅಸ್ಮಾಕಂ**—ನಮ್ಮ । **ಉಪಮಾತಿವನಿಃ**—ಶತ್ರುಗಳಿಗೆ ಹಿಂಸಕನಾಗಿ । **ಭೂತ್**—ಆಗಿರಲಿ

॥ ಭಾವಾರ್ಥ ॥

ಅತ್ಯುದಾರವಾಗಿ ದಾನಿಗಳಾದ ಮರುತ್ತುಗಳನ್ನು ನಾನು ಯಾವ ರೀತಿಯ ಸ್ತುತಿಯಿಂದ ಪೂಜಿಸಲಿ ? ಅಥವಾ ಪ್ರಕೃತದಲ್ಲಿ ಅತ್ಯುತ್ತಮವಾದ ಸ್ತುತಿಯೊಡನೆ ಸಿದ್ಧವಾಗಿರುವಾಗ ನಾನು ಅವರನ್ನು ಯಾವ ರೀತಿಯಲ್ಲಿ ಉತ್ತಮವಾದ ಹವಿರ್ಭಾಜನರಾಗುವಂತೆ ಮಾಡಲಿ ? ಅಹಿರ್ಬುಧ್ನ್ಯದೇವನು ನಮ್ಮನ್ನು ಹಿಂಸಕನಾದ ಶತ್ರುವಿಗೆ ಬಿಟ್ಟುಕೊಡದಿರಲಿ. ನಮ್ಮ ಶತ್ರುಗಳಿಗೆ ಹಿಂಸಕನಾಗಿರಲಿ.

## English Translation

How may be (duly) worship the liberal (Maruts) with praise, how adore the Maruts with present praise in a fitting manner, the glorious Maruts with present praise ? may Ahirbudhnya contrive not for our harm , may he be the destroyer (of our enemies).

॥ ವಿಶೇಷವಿಷಯಗಳು ॥

ನಿರುಕ್ತಕಾರರು **ಅಹಿರ್ಬುಧ್ನ್ಯ** ನಾಮಕನಾದ ದೇವನನ್ನು ಅಂತರಿಕ್ಷಸ್ಥನಾದ ದೇವತೆಯೆಂದು ಪರಿಗಣಿಸಿದ್ದಾರೆ. **ಅಹಿ**ಶಬ್ದಕ್ಕೆ ಸಾಧಾರಣವಾಗಿ ಸರ್ಪವೆಂದು ಹೆಸರು. ಇದನ್ನು **ಮೇಘ** ನಾಮಗಳಲ್ಲಿಯೂ ಮತ್ತು ಉದಕನಾಮಗಳಲ್ಲಿಯೂ ಪಠಿಸಿದೆ (ನಿ. ೨-೨೧, ೨-೨೪)! ಆದರೆ, **ಅಹಿರ್ಬುಧ್ನ್ಯ** ದೇವತೆಯ ಸ್ವರೂಪವನ್ನು ತಿಳಿಸುವಾಗ ಮೇಘಕ್ಕೂ ಉದಕಕ್ಕೂ ಇರುವ ಸಂಬಂಧವೇನು ? ಈ ದೇವತೆಗೆ ಈ ಹೆಸರು ಬರಲು ಕಾರಣವೇನು ಎಂಬುದನ್ನು ವಿಚಾರಿಸಬೇಕು.

ಕೇವಲ ಅಹಿಶಬ್ದಕ್ಕೆ ನಿರುಕ್ತಕಾರರು "**ಅಹಿಃ ಅಯನಾತ್ ಏತಿ ಅಂತರಿಕ್ಷೇ**" ಅಂತರಿಕ್ಷದಲ್ಲಿ ಸಂಚರಿಸುವುದರಿಂದ ಮೇಘಕ್ಕೆ ಅಹಿಯೆಂಬರ್ಥವೆಂದು ಈ ಪದದ ನಿರ್ವಚನವನ್ನು ತಿಳಿಸಿ, "**ಅಯಮಪೀತರೋಽಹಿರೇತಸ್ಮಾದೇವ ನಿರ್ಹ್ರಸಿತ ಉಪಸರ್ಗ ಆಹಂತೀತಿ |**" ಸರ್ಪವೆಂಬರ್ಥದಲ್ಲೂ ಇದೇ ನಿರ್ವಚನವು. ಆದರೆ, ಹೆಡೆಯಿಂದ ಹೊಡೆಯುವುದು ಎಂಬರ್ಥವೂ ಸಾಧ್ಯವಾಗುತ್ತದೆ. ( **ಆಹಂತ್ಯಸೌ ಭೋಗೇನ ಇತ್ಯಾದಿಃ** | ದುರ್ಗ ) ಎಂದು ಇನ್ನೊಂದರ್ಥವನ್ನೂ ವಿವರಿಸಿದ್ದಾರೆ. ಇದೇ ಸಂದರ್ಭದಲ್ಲಿ,

**ದಾಸಪತ್ನೀರಹಿಗೋಪಾ ಅತಿಷ್ಠನ್ನಿರುದ್ಧಾ ಆಪಃ ಪಣಿನೇವ ಗಾವಃ |**

(ಋ. ಸಂ. ೧-೩೨-೧೧)

ಎಂಬ ಮಂತ್ರವನ್ನುದಾಹರಿಸಿ ಅಲ್ಲಿ **ಅಹಿಗೋಪಾಃ** ಎಂಬ ಪದಕ್ಕೆ ಮೇಘಗಳನ್ನು ರಕ್ಷಿಸುವವರು ಎಂದರ್ಥಮಾಡಿದ್ದಾರೆ ಎಂದರೆ, ಇಲ್ಲಿ **ಅಹಿ**ಶಬ್ದಕ್ಕೆ **ವೃತ್ರ**ನೆಂದರ್ಥ. ಆದರೆ, **ಅಹಿ**ಶಬ್ದಕ್ಕೆ ದೇವವಿಶೇಷವೆಂಬ ಅರ್ಥದಲ್ಲೂ ಪ್ರಯೋಗವಿರುತ್ತದೆ. ಉದಾಹರಣೆಗೆ—

**ಉತ ನೋಽಹಿರ್ಬುಧ್ನ್ಯೋ೩ ಮಯಸ್ಕಃ ಶಿಶುಂ ನ ಪಿಪ್ಯುಷೀವ ವೇತಿ ಸಿಂಧುಃ |**
**ಯೇನ ನಪಾತಮಪಾಂ ಜುನಾಮ ಮನೋಜುವೋ ವೃಷಣೋ ಯಂ ವಹಂತಿ ||**

(ಋ. ಸಂ. ೧-೧೮೬-೫)

ಎಂಬಲ್ಲಿ ಸಾಯಣರು **ಅಹಿ**ಶಬ್ದಕ್ಕೆ ದೇವತಾವಿಶೇಷವೆಂದೇ ಅರ್ಥಮಾಡಿದ್ದಾರೆ. "**ಅಹಿಃ ಅಂತರಿಕ್ಷಗಾಮೀ ಅಹಂತಾ ವಾ ಅಹೀನೋ ವಾ ಅಹನ್ಯಮಾನೋ ವಾ ಏತನ್ನಾಮಕೋ ದೇವಃ**" ಎಂದು ನಿರ್ವಚನವನ್ನು ತೋರಿಸಿದ್ದಾರೆ ಈ ನಿರ್ವಚನದ ಸ್ವರೂಪವನ್ನು ಉದಾಹೃತನಾಗಿರುವ ಈ ಋಕ್ಕಿನ ತಾತ್ಪರ್ಯವನ್ನು ವಿವರಿಸುವಾಗ ಹಿಂದೆ ತಿಳಿಸಿದೆ. ಮತ್ತು ಇಲ್ಲಿ **ಬುಧ್ನ್ಯಃ** ಎಂಬ ಪದವು ಈ ದೇವತೆಯ ಸ್ಥಾನವನ್ನು ತಿಳಿಸತಕ್ಕದ್ದಾಗಿದೆ **ಬುಧ್ನಂ ಅಂತರಿಕ್ಷಂ ತದರ್ಹತೀತಿ ಬುಧ್ನ್ಯಃ ಅಂತರಿಕ್ಷಚಾರೀ ಏತನ್ನಾಮಕೋ ದೇವಃ |** ಅಂತರಿಕ್ಷ ಸಂಚಾರಿಯಾದ ಈ ಹೆಸರಿನ ದೇವನು ಎಂದು ತಾತ್ಪರ್ಯ. ಅಂತರಿಕ್ಷ ಸಂಚಾರಿಯಾದ ಈ ದೇವನ ವೈಯಕ್ತಿಕ ಸ್ವರೂಪವೇನು ಎಂಬ ವಿಷಯವು ಮುಖ್ಯವಾಗಿ ಪರಿಶೀಲಿಸಲ್ಪಡತಕ್ಕದ್ದಾಗಿದೆ. ನಿರುಕ್ತಕಾರರು ಈ ಪದದ ನಿರ್ವಚನವನ್ನು ಈ ರೀತಿ ತಿಳಿಸಿದ್ದಾರೆ.

**ಅಹಿರ್ಬುಧ್ನ್ಯಃ | ಯೋಽಹಿಃ ಸ ಬುಧ್ನ್ಯೋ೩ ಬುಧ್ನಮಂತರಿಕ್ಷಂ | ತನ್ನಿವಾಸಾತ್ |**

(ನಿ ೧೦-೪೪)

**ಬುಧ್ನ**ವೆಂದರೆ **ಅಂತರಿಕ್ಷ**ವೆಂದರ್ಥ । ಅದು ಹೇಗೆಂದರೆ, **ಬುಧ್ನಮಂತರಿಕ್ಷಂ ಬದ್ಧಾ ಅಸ್ಮಿನ್; ಧೃತಾ ಆಪ ಇತಿ ವಾ । ಇದಮಪೀತರದ್ಬುಧ್ನ ಮೇತಸ್ಮಾದೇವ । ಬದ್ಧಾ ಅಸ್ಮಿನ್ ಧೃತಾಃ ಪ್ರಾಣಾ ಇತಿ ।** ಉದಕಗಳನ್ನು ಧರಿಸುವುದರಿಂದ ಅಂತರಿಕ್ಷಕ್ಕೆ ಬುಧ್ನವೆಂದು ಹೆಸರು. ಪ್ರಕೃತದಲ್ಲಿ ಅಂತರಿಕ್ಷದಲ್ಲಿ ವಾಸಿಸುವುದರಿಂದ ಈ ದೇವತೆ ಅಹಿರ್ಬುಧ್ನನೆಂದು ಹೆಸರು ಎಂಬುದಾಗಿ ನಿರುಕ್ತಕಾರರೂ ದೇವತೆಯ ಸ್ಥಾನನಿರ್ದೇಶವನ್ನು ತೋರಿಸಿರುವರೇ ಹೊರತ ಈ ದೇವತೆಯ ವೈಯಕ್ತಿಕ ಸ್ವರೂಪವನ್ನು ತಿಳಿಸಿಲ್ಲ. ಆದರೆ ಈ ವಿಷಯದಲ್ಲಿ ಋಕ್ಸಂಹಿತಾವಾಕ್ಯಗಳಲ್ಲಿ ಯಾವುದಾದರೂ ವಿಶೇಷಾಂಶಗಳು ಉಪಲಬ್ಧವಾಗುವುದೇ ಎಂಬುದನ್ನು ಪ್ರಥಮತಃ ಪರಿಶೀಲಿಸಬೇಕು.

**ಅಬ್ಜಾ ಮುಕ್ಥೈರಹಿಂ ಗೃಣೀಷೇ ಬುಧ್ನೇ ನದೀನಾಂ ರಜಃಸು ಷೀದನ್ ।**
**ಮಾ ನೋಽಹಿರ್ಬುಧ್ನ್ಯೋ ರಿಷೇ ಧಾನ್ಮಾ ಯಜ್ಞೋ ಅಸ್ಯ ಸ್ರಿಧದೃತಾಯೋಃ ॥**

(ಋ ಸಂ ೭-೩೪-೧೬, ೧೭)

ಎಂಬ ಮಂತ್ರಗಳಲ್ಲಿ ಅಹಿರ್ಬುಧ್ನ್ಯದೇವನ ಪ್ರಾರ್ಥನೆಯಿರುತ್ತದೆ ಇವುಗಳಲ್ಲಿ ಮೊದಲನೆಯ ಮಂತ್ರದಲ್ಲಿ ಈ ದೇವ ಸ್ವರೂಪವು ಕೊಂಚಮಟ್ಟಿಗೆ ವರ್ಣಿತವಾಗಿದೆ ನೀರಿನಲ್ಲಿ ಉತ್ಪನ್ನನಾದವನೂ, ಅಂತರಿಕ್ಷದಲ್ಲಿ ಸ್ಥಿತನೂ ಆದ ಅಹಿಯನ್ನು ನಾನು ಸ್ತುತಿಸುತ್ತೇನೆ ಎಂದು ಕವಿಯು ಸಂಕಲ್ಪಿಸಿದ್ದಾನೆ. **ಅಹಿಶ್ಚಾಸೌ ಬುಧ್ನ್ಯಶ್ಚೇತ್ಯಹಿರ್ಬುಧ್ನ್ಯೋಽಗ್ನಿ ಬುಧ್ನ್ಯಾಂತರ್ಗತವಾದ ಅಹಿತ್ವವು ಅಗ್ನಿ**ದೇವನ ಗುಣವೆಂದು ಸಾಯಣರು ಇಲ್ಲಿ ತಾತ್ಪರ್ಯವನ್ನು ವಿವರಿಸಿದ್ದಾರೆ ಅಹಿಯೆಂಬ ವಿಶೇಷಣವು ಅಗ್ನಿಗಿರುವಂತೆಯೇ, ವೃತ್ರನಿಗೂ ಪ್ರಯುಕ್ತವಾಗಿರುತ್ತದೆ. ಅನೇಕ ಸಂದರ್ಭಗಳಲ್ಲಿ **ಅಹಿ** ಶಬ್ದಕ್ಕೆ **ವೃತ್ರ**ನೆಂದೇ ಅರ್ಥ ಆದರೆ,

**ಹಿರಣ್ಯಕೇಶೋ ರಜಸೋ ವಿಸಾರೇಽಹಿರ್ಧುನಿರ್ವಾತ ಇವ ಧ್ರಜೀಮಾನ್ ।**

(ಋ ಸಂ ೧-೭೯-೧)

ಇತ್ಯಾದಿಸ್ಥಳಗಳಲ್ಲಿ ಅಹಿ ಶಬ್ದಕ್ಕೆ **ಹಂತೃ**ವೆಂದರ್ಥಮಾಡಿದೆ. ಮೇಘಗಳನ್ನು ಕಂಪಿಸುವಂತೆ ಮಾಡುವವನು (ಧುನಿಃ ಮತ್ತು ಮೇಘಗಳನ್ನು ಸೀಳಿಹಾಕುವವನು ಇತ್ಯಾದಿಯಾಗಿ ಅಗ್ನಿಯನ್ನು ವರ್ಣಿಸಿದೆ. ಈ ರೀತಿ **ಅಹಿ**ಶಬ್ದವು ವೃತ್ರ ಗುಣವನ್ನು ತೋರಿಸುವಂತೆ ಅಗ್ನಿಯ ಗುಣಗಳನ್ನೂ ತೋರಿಸುತ್ತದೆ. ಆದರೆ, ಅಗ್ನಿಯ ವಿಶೇಷಗುಣವನ್ನು ತೋ ಸುವ ಇನ್ನೊಂದು ಪದದ ತಾತ್ಪರ್ಯವೂ ಮುಖ್ಯವಾಗಿ ಗಮನಿಸಲ್ಪಡತಕ್ಕದ್ದಾಗಿದೆ.

**ಸ ಜಾಯತ ಪ್ರಥಮಃ ಪಸ್ತ್ಯಾಸು ಮಹೋ ಬುಧ್ನೇ ರಜಸೋ ಅಸ್ಯ ಯೋನೌ ।**
**ಅಪಾದಶೀರ್ಷಾ ಗುಹಮಾನೋ ಅಂತಾಯೋ ಯುವಾನೋ ವೃಷಭಸ್ಯ ನೀಳೇ ॥**

(ಋ. ಸಂ. ೪-೧-೧೧)

ಪಾದರಹಿತನೂ ಶೀರ್ಷರಹಿತನೂ ಆದ ಅಗ್ನಿಯು ಅಂತರಿಕ್ಷದ ಬುಧ್ನದಲ್ಲಿ ಎಂದರೆ ಗೋಚರಾತೀತವಾದ ಮೂಲೆಯ ಅಡಗಿಕೊಂಡಿದ್ದಾನೆ. ಇತ್ಯಾದಿ ವರ್ಣನೆಗಳು ಅಗ್ನಿಪರ್ಯಾಯವಾಗಿ ಮಾತ್ರವಿರುತ್ತದೆ. ಈ ಉದಾಹರಣೆಗಳಿಂ **ಅಹಿವೃತ್ರ, ಅಪಾಂನಪಾತ್** ಎಂಬ ವಿಶೇಷಣಗಳು ಅಗ್ನಿ ಮತ್ತು ವೃತ್ರ ಇವರಿಬ್ಬರಿಗೂ ಸಮಾನವಾಗಿ ಯೆಂಬುದೂ ತಿಳಿಯುತ್ತದೆ.

ಅಲ್ಲದೇ, ಈ ಅಹಿರ್ಬುಧ್ನ್ಯದೇವತೆಯು ಸಾಧಾರಣವಾಗಿ **ಅಜ ಏಕಪಾತ್, ಅಪಾಂ ನಪಾತ್, ಸವಿತೃ** ಈ ದೇವತೆಗಳ ಸಾಹಚರ್ಯವನ್ನು ಹೊಂದಿರುವುದಾಗಿ ವರ್ಣಿತವಾಗಿರುತ್ತದೆ. ಇದಲ್ಲದೇ, ಪ್ರತ್ಯೇಕವಾಗಿ ಸ್ತುತವಾಗಿರುವ ಸಂದರ್ಭಗಳೂ ಉಂಟು. ಈ ದೇವತೆಗಳೆಲ್ಲರೂ ಅಗ್ನಿಯ ಅಥವಾ ಸೂರ್ಯನ ರೂಪಾಂತರಗಳೆಂಬುದು ಸ್ಪಷ್ಟವಾಗಿದೆ. **ಅಂತರಿಕ್ಷಸ್ಥವಾದ** ದೇವತೆಗಳೆಂದೂ ಹೇಳಬಹುದು. **ಅಪಾಂ ನಪಾತ್** ಎಂಬುದು **ಅಹಿರ್ಬುಧ್ನ್ಯ** ದೇವತೆಗೆ ವಿಶೇಷಣವಾಗಿ ಉಪಯೋಗಿಸಿರುವ ವಿಷಯವೂ ಸಹ ಮೇಲೆ ಉದಾಹೃತವಾಗಿರುವ ಋ. ಸಂ. ೭-೩೪-೧೬ ನೇ ಮಂತ್ರದಲ್ಲಿ ತಿಳಿಸಲ್ಪಟ್ಟಿದೆ. ಅಲ್ಲಿ **ಅಬ್ಜ** ಎಂಬುದೂ ಸಹ ಈ ದೇವತೆಯ ವಿಶೇಷಸ್ವರೂಪವನ್ನು ತಿಳಿಸುತ್ತದೆ. ಅಪಾಂ **ನಪಾತ್, ಅಬ್ಜ** ಎರಡಕ್ಕೂ ಒಂದೇ ಅರ್ಥವನ್ನು ಹೇಳಿದರೂ ತಪ್ಪಾಗಲಾರದು ( ಪುಷ್ಕರಪರ್ಣದಿಂದ ಉತ್ಪನ್ನನಾದುದರಿಂದ ಅಗ್ನಿಯು ಅಬ್ಜಜನು ಎಂಬ ವಿಷಯವನ್ನು ಮುಂದೆ ೬-೧೬-೧೩ ನೇ ಮಂತ್ರದ ವಿಶೇಷ ವಿಷಯಗಳಲ್ಲಿ ತಿಳಿಸಲಾಗುತ್ತದೆ). **ಅಹಿರ್ಬುಧ್ನ್ಯ**ವೆಂಬ ಪದವು ಯಾವ ರೀತಿ ಅಗ್ನಿಯ ಎಂದರೆ, ಅಂತರಿಕ್ಷಸ್ಥಾಗ್ನಿಯ ವಿಶೇಷಗುಣವನ್ನು ತಿಳಿಸುವುದೋ ಅದೇ ರೀತಿ ಅಸುರನಾಯಕನಾದ ವೃತ್ರನ ವಿಶೇಷಗುಣವನ್ನೂ ತಿಳಿಸುವುದರಿಂದ, ದೇವ ಅದೇವ ಎಂಬ ವಿರುದ್ಧರೂಪಗಳ ವಿಶೇಷಗುಣಗಳನ್ನು ಒಂದೇ ವಿಶೇಷಣವು ಯಾವ ರೀತಿ ವಿವರಿಸಬಲ್ಲದು ಎಂಬುದು ಒಂದು ಪ್ರಶ್ನೆ. ಇಂತಹ ಉದಾಹರಣೆಗಳು ಇದರಂತೆಯೇ ಇನ್ನೂ ಕೆಲವಿವೆ ಎಂಬುದನ್ನೂ ಪರಿಶೀಲಿಸಬಹುದು.

ಮೇಲೆ ಉದಾಹೃತವಾಗಿರುವ **ಹಿರಣ್ಯಕೇಶೋ ರಜಸಃ** ( ೧-೭೯-೧ ) ಎಂಬ ಮಂತ್ರದಲ್ಲಿ ಯಾವ **ಧುನಿಃ** ಎಂಬ ವಿಶೇಷಣವು ಅಗ್ನಿಯ ಸ್ವರೂಪವನ್ನು ವಿವರಿಸುವುದೋ, ಅದೇ ವಿಶೇಷಣವು ಅಸುರನ ಗುಣವನ್ನೂ ತಿಳಿಸುತ್ತದೆ. ಅಲ್ಲದೇ, ಈ ಪದವು ಅಸುರನ ನಾಮವೇ ಆಗಿರುತ್ತದೆ ಉದಾಹರಣೆಗೆ,

**ತ್ವಂ ನೃಭಿರ್ನೃಮಣೋ ದೇವವೀತೌ ಭೂರೀಣಿ ವೃತ್ರಾ ಹರ್ಯಶ್ವ ಹಂಸಿ ।**
**ತ್ವಂ ನಿ ದಸ್ಯುಂ ಚುಮುರಿಂ ಧುನಿಂ ಚಾಸ್ವಾಪಯೋ ದಭೀತಯೇ ಸುಹಂತು ॥**

(ಋಂ ಸಂ ೭-೧೯-೪)

ಎಂಬ ಮಂತ್ರದಲ್ಲಿ **ಧುನಿ**ಯೆಂಬುದು ಅಸುರನಾಮವಾಗಿಯೇ ಇರುತ್ತದೆ ಇದೇ ಅಂಶವನ್ನು **ಇಂದ್ರೋ ಧುನಿಂ ಚ ಚುಮುರಿಂ ಚ ದಂಭಯನ್** (೧೦-೧೧೩-೯) ಎಂಬ ಮಂತ್ರವೂ ತಿಳಿಸುತ್ತವೆ ೧.೧೭೪-೯ ರಲ್ಲಿ ಧುನಿಃ ಎಂಬುದು ಇಂದ್ರನಿಗೇ ವಿಶೇಷಣವಾಗಿರುತ್ತದೆ ಹೀಗೆ ಒಂದೇ ಪದವು ಸಂದರ್ಭಾನುಸಾರವಾಗಿ ದೇವ ಮತ್ತು ಅದೇವ ಎರಡು ಗುಂಪಿನ ವ್ಯಕ್ತಿಗಳ ಸ್ವರೂಪವನ್ನು ವರ್ಣಿಸುವ ವಿಶೇಷಣಗಳಾಗಿರತಕ್ಕದ್ದು ಅನುಚಿತವಾಗಲಾರದು ಪ್ರಕೃತದಲ್ಲಿ **ಅಹಿರ್ಬುಧ್ನ್ಯ** ಪದವು ದೇವತಾಪರವಾದ ವಿಶೇಷಣವಾದರೆ, ಆಗ ಅದು ಯಾವ ದೇವತೆಯ ವೈಯಕ್ತಿಕ ಸ್ವರೂಪವನ್ನು ವರ್ಣಿಸುತ್ತದೆ ಎಂಬ ವಿಷಯವನ್ನು ಪರಿಶೀಲಿಸಬೇಕಾಗುತ್ತದೆ. ಐತರೇಯಬ್ರಾಹ್ಮಣದಲ್ಲಿ ಈ ದೇವತೆಯ ಸ್ವರೂಪವು ಈರೀತಿ ವರ್ಣಿತವಾಗಿದೆ—

**ತಾಸು ವಾ ಅಹಿನಾ ಬುಧ್ನ್ಯೇನ ಪರೋಕ್ಷಾತ್ತೇಜೋಽದಧಾದೇಷ ಹ ವಾ ಅಹಿಬುಧ್ನ್ಯೋ ಯದಗ್ನಿರ್ಗಾರ್ಹಪತ್ಯೋಽಗ್ನಿನೈವಾಸ್ಯಸು ತದ್ಗಾರ್ಹಪತ್ಯೇನ ಪರೋಕ್ಷಾತ್ತೇಜೋ ದಧಾತಿ ।**

( ಐ ಬ್ರಾ. ೩-೩೬ )

ಎಂಬ ವಾಕ್ಯದಲ್ಲಿ **ಅಹಿರ್ಬುಧ್ನ್ಯ**ವೆಂದರೆ ಅಗ್ನಿ ಗಾರ್ಹಪತ್ಯವೆಂದರ್ಥಮಾಡಿದೆ. ಇದೇ ಅಭಿಪ್ರಾಯವನ್ನು ಇನ್ನೂ ವಿವರಿಸುತ್ತಾ ಸಾಯಣರು ತಮ್ಮ ಭಾಷ್ಯದಲ್ಲಿ ಈರೀತಿ ತಿಳಿಸಿದ್ದಾರೆ,

> **ಅಹಿನಾ ಬುಧ್ನ್ಯೇನ ಅಹಿಶಬ್ದ ಬುಧ್ನ್ಯಶಬ್ದ ದ್ವಯನಾಮಕಾಗ್ನಿವಿಶೇಷೇಣ ಪರೋಕ್ಷಾತ್ ಪರೋಕ್ಷರೂಪೇಣ ತೇಜೋಽದಧಾತ್ । ಯೋ ಗಾರ್ಹಪತ್ಯೋಽಗ್ನಿರಸ್ತಿ ಏಷ ಏವಾಹಿಶಬ್ದೇನ ಬುಧ್ನ್ಯಶಬ್ದೇನಾಭಿಹಿತಃ ॥** (ಸಾ ಭಾ.)

**ಅಹಿ, ಬುಧ್ನ್ಯ** ಎಂಬ ಎರಡು ಪದಗಳೂ **ಅಗ್ನಿ**ವಾಚಕಗಳು. ಈ ಅಗ್ನಿಯ ಸಹಾಯದಿಂದ ಪ್ರಜೆಗಳಲ್ಲಿ ತೇಜಸ್ಸು ಹರಡಲ್ಪಡುತ್ತದೆ. ಯಾವ **ಗಾರ್ಹಪತ್ಯಾ**ಗ್ನಿಯುಂಟೋ ಅದೇ ಅಗ್ನಿಯು **ಅಹಿ**ಶಬ್ದದಿಂದಲೂ **ಬುಧ್ನ್ಯ**ಶಬ್ದದಿಂದಲೂ ವಾಚ್ಯನಾಗಿದ್ದಾನೆ. ಅಲ್ಲದೇ ಈ ದೇವನ ಪರೋಕ್ಷತ್ವವೂ ಸೂಚಿತವಾಗಿದೆ **ಬುಧ್ನ್ಯ**ಪದವು ಈ ಪರೋಕ್ಷತ್ವವನ್ನು ತಿಳಿಸುತ್ತದೆ **ಅಪಾದಶೀರ್ಷಾ ಗುಹಮಾನೋ ಅಂತಾ** ಎಂಬ (೪-೧-೧೧) ಮೇಲೆ ಉದಾಹೃತವಾಗಿರುವ ವಾಕ್ಯದಿಂದ ಈ ಪರೋಕ್ಷತ್ವವು ತಿಳಿಸಲ್ಪಟ್ಟಿದೆ. ಪರೋಕ್ಷತ್ವವಿದ್ದರೂ ಸಹ ಪ್ರತ್ಯಕ್ಷರೂಪವಾದ ಪ್ರಭೆಯನ್ನು ಪ್ರಜೆಗಳಲ್ಲಿ ಹರಡುವುದಾಗಿ ಸ್ತುತಿಸಿದೆ ಅಗ್ನಿಗೆ **ಅಪಾದತ್ವವೂ,** ಅಶೀರ್ಷತ್ವವೂ, ಗುಹಮಾನತ್ವವೂ ಇರುವುದರಿಂದಲೇ, ಬುಧ್ನ್ಯಶಬ್ದವಾಚ್ಯನೆಂದು ಹೇಳಿದರೂ ತಪ್ಪಾಗಲಾರದು. ಅಗ್ನಿಯ ಇದೇ ಪರೋಕ್ಷತ್ವವೂ, ಬುಧ್ನ್ಯತ್ವವೂ ಸಹ ಅನೇಕಕಡೆಗಳಲ್ಲಿ ವರ್ಣಿತವಾಗಿರುತ್ತದೆ. ಇಂತಹ ಸಂದರ್ಭಗಳಲ್ಲೆಲ್ಲಾ, ಸೂರ್ಯರೂಪನಾದ ಅಗ್ನಿಯ ವರ್ಣನವೆಂಬುದು ತಿಳಿಯುತ್ತದೆ ಉದಾಹರಣೆಗೆ—

> **ದ್ವಿಮಾತಾ ಹೋತಾ ವಿಧಥೇಷು ಸಮ್ರಾಳನ್ವಗ್ರಂ ಚರತಿ ಕ್ಷೇತಿ ಬುಧ್ನಃ ।**
> **ಪ್ರ ರಣ್ಯಾನಿ ರಣ್ಯವಾಚೋ ಭರಂತೇ ಮಹದ್ದೇವಾನಾಮಸುರತ್ವಮೇಕಂ ॥**
>
> (ಋ ಸಂ ೩-೫೫-೭)

ಎಂಬಲ್ಲಿ ಅಗ್ನಿಯ ವರ್ಣನೆಸಿರುತ್ತದೆ ಆದರೆ, **ಬುಧ್ನ್ಯಃ ಚರತಿ, ಕ್ಷೇತಿ** ಎಂಬ ವಾಕ್ಯವನ್ನು ವಿವರಿಸುವಾಗ **ಸೂರ್ಯಭೂತಃ ತತ್ರ ವರ್ತತೇ,** ಸೂರ್ಯಭೂತನಾಗಿ ಅಂತರಿಕ್ಷದಲ್ಲಿ ಸಂಚರಿಸುತ್ತಾನೆ, ಅಗ್ನಿರೂಪದಲ್ಲಿ ಭೂಮಿಯ ಮೇಲಿ ವಸಿಸುತ್ತಾನೆ ಎಂದು ಸಾಯಣರು ತಿಳಿಸಿದ್ದಾರೆ. ಇದೇ ಸೂರ್ಯನು **ಗುಹಾಹಿತ**ನಾದಾಗ ಅಹಿಶಬ್ದವಾಚ್ಯನೂ ಆಗುತ್ತಾನೆ.

**ಸೂರ್ಯಂ ನ ದಸ್ರಾ ತಮಸಿ ಕ್ಷಿಯಂತಂ; (೧-೧೧೭-೫) ಗೂಳ್ಹಂ ಸೂರ್ಯಂ ತಮಸಾಪವ್ರತೇನ (೫-೪೦-೬)** । ಎಂಬ ವಾಕ್ಯಗಳು ಸೂರ್ಯನ ಪರೋಕ್ಷತ್ವವನ್ನು ತಿಳಿಸುತ್ತವೆ. ಇದೇ ಗುಹಾಂತರ್ಗತನಾದ ಸೂರ್ಯನು **ಅಹಿ**ಶಬ್ದವಾಚ್ಯನೂ ಆಗಿರಬಹುದು.

> **ಗುಹಾ ಹಿತಂ ಗುಹ್ಯಂ ಗೂಳ್ಹಮಪ್ಸ್ವಪೀವೃತಂ ಮಾಯಿನಂ ಕ್ಷಿಯಂತಂ ।**
> **ಉತೋ ಅಪೋ ದ್ಯಾಂ ತಸ್ತಭ್ವಾಂಸಮಹನ್ನಹಿಂ ಶೂರ ವೀರ್ಯೇಣ ॥**
>
> (ಋ. ಸಂ. ೨-೧೧-೫)

ಎಂಬಲ್ಲಿ ಇಂದ್ರನು ಗುಹಾಹಿತನಾದ ಅಹಿಯನ್ನು ಹನನಮಾಡಿದ ಕ್ರಮವು ವರ್ಣಿತವಾಗಿದೆ. ಇಲ್ಲಿ **ಗುಹಾಹಿತಂ, ಗುಹ್ಯಂ, ಗೂಳ್ಹಂ** ಇತ್ಯಾದಿ ವಿಶೇಷಣಗಳೆಲ್ಲವೂ ಸಹ **ಗೂಳ್ಹಂ ಸೂರ್ಯಂ** ಇತ್ಯಾದಿಯಾಗಿ ೫ ೪೦-೬ನೇ ಮಂತ್ರದಲ್ಲಿ ವರ್ಣಿತವಾಗಿರುವ ಸೂರ್ಯನ ವರ್ಣನೆಯಂತೆಯೇ ಇರುತ್ತದೆ. ಇಲ್ಲಿ **ಅಪೀವೃತಂ, ಅಪವ್ರತೇನ** ಇತ್ಯಾದಿ ವಿಶೇಷಣಗಳು ಗುಹಾಹಿತನಾದ ಅಥವಾ ಬುಧ್ನ್ಯನಾದ ಸೂರ್ಯನ ಅಥವಾ ಅಗ್ನಿಯ ವೃತ್ರತ್ವವನ್ನು ಸೂಚಿಸುತ್ತವೆ ಮೇಲೆ ಉದಾಹೃತವಾಗಿರುವ ೪-೧-೧೧ನೆಯ ಮಂತ್ರದಲ್ಲಿ **ಗುಹಮಾನೋ ಅಂತಾ** ಎಂಬ ಅಗ್ನಿವರ್ಣನವೂ ಸಹ ಇದೇ ಅಂಶವನ್ನು ತಿಳಿಸುತ್ತವೆ. ಎಂದರೆ, **ಅಹಿರ್ಬುಧ್ನ್ಯ**ಶಬ್ದಕ್ಕೆ ಗುಹಾಹಿತನಾದ ಸೂರ್ಯ ಅಥವಾ ಅಗ್ನಿ ಎಂದರ್ಥ ಮಾಡಿದರೆ ಆಗ ಅವನಿಗೆ ಅಹಿತ್ವವೂ, ವೃತ್ರತ್ವವೂ ಪ್ರಾಪ್ತವಾಗುತ್ತದೆ ಎಂದು ಹೇಳಬಹುದು ಈರೀತಿ ಅರ್ಥ ಮಾಡಲು ವೈದಿಕವಾದ ಆಧಾರವೇನು ಎಂದು ಪ್ರಶ್ನಿಸಿದರ ಅದಕ್ಕೆ ಉತ್ತರವಾಗಿ ವೈದಿಕವಾಕ್ಯಗಳನ್ನೇ ಪ್ರಮಾಣವಾಗಿ ತೋರಿಸಬಹುದು.

**ಅಹನ್ವೃತ್ರಮೃಚೀಷಮ ಔರ್ಣವಾಭಮಹೀಶುವಂ । ಹಿಮೇನಾವಿಧ್ಯದರ್ಬುದಂ ॥**

(ಋ ಸಂ ೮-೩೨-೨೬)

**ಆದೀಂ ಶವಸ್ಯಬ್ರವೀದೌರ್ಣವಾಭಮಹೀಶುವಂ । ತೇ ಪುತ್ರ ಸಂತು ನಿಷ್ಟುರಃ ॥**

(ಋ. ಸಂ. ೮-೭೭-೨)

ಇತ್ಯಾದಿ ವಾಕ್ಯಗಳಲ್ಲಿ **ವೃತ್ರ**ನಿಗೆ **ಔರ್ಣವಾಭ** ಎಂಬ ವಿಶೇಷಣವಿದೆ. ಇದೇ ವಿಶೇಷಣದ ಅರ್ಥವನ್ನು ಋ. ಸಂ. ೨-೧೧-೧೮ನೇ ಮಂತ್ರದಲ್ಲಿ ವಿವರಿಸುವಾಗ **ಔರ್ಣಃ ಊರ್ಣನಾಭಿಃ । ತದಾಭಂ ತತ್ಸದೃಶಮಿತ್ಯರ್ಥಃ । ತತಃ ತಮೋರೂಪಸ್ಯ ಹನನಾತ್ ।** ತಂತುವಾಯುಕೀಟ (ಜೇಡರಹುಳು) ದಂತೆ ಇರತಕ್ಕ ಎಂದರೆ ತಮೋರೂಪನಾಗಿರ ತಕ್ಕ ಎಂದು ಸಾಯಣರು ತಾತ್ಪರ್ಯವನ್ನು ಹೇಳಿದ್ದಾರೆ. ಬ್ರಾಹ್ಮಣಾದಿಗಳಲ್ಲಿ **ಊರ್ಣಾಯು**ವೆಂಬುವನು ಒಬ್ಬ ಗಂಧರ್ವನು. (ಸೂರ್ಯನೂ ಗಂಧರ್ವನೆಂದೇ ಸಂಹಿತಾದಿಗಳಲ್ಲಿ ಸ್ತುತನಾಗಿದ್ದಾನೆ) ಅಲ್ಲದೇ,

**ಅಗ್ನೇ ವಿಶ್ವೇಭಿಃ ಸ್ವನೀಕ ದೇವೈರೂರ್ಣಾವಂತಂ ಪ್ರಥಮಃ ಸೀದ ಯೋನಿಂ ।**
**ಕುಲಾಯಿನಂ ಘೃತವಂತಂ ಸವಿತ್ರೇ ಯಜ್ಞಂ ನಯ ಯಜಮಾನಾಯ ಸಾಧು ॥**

(ಋ. ಸಂ ೬-೧೫-೧೬)

ಎಂಬಲ್ಲಿ ಅಗ್ನಿಯೋನಿಯಾದ ವೇದಿಯನ್ನು **ಊರ್ಣವಂತಂ** ಎಂಬ ವಿಶೇಷಣದಿಂದ ಸ್ತುತಿಸಿದೆ ಇಲ್ಲಿ **ಊರ್ಣವಂತಂ** ಎಂಬುದಕ್ಕೂ **ಔರ್ಣವಾಭಂ** ಎಂಬ ವಿಶೇಷಣಕ್ಕೂ ತಾತ್ಪರ್ಯದಲ್ಲಿ ಏನೂ ವ್ಯತ್ಯಾಸವಿಲ್ಲವೆಂದು ಹೇಳಬಹುದು. ಇಂತಹ ವಿಶೇಷಣಗಳು ಗುಹಾಹಿತನಾದ ಸೂರ್ಯನ ಅಥವಾ ಅಗ್ನಿಯ ಆಧ್ಯಾತ್ಮಿಕವಾದ ಸ್ವರೂಪವನ್ನೂ ತಿಳಿಸುವು ದಾಗಿರುತ್ತವೆ. ಹೇಗೆಂದರೆ,

**ಅಮೀ ಯೇ ಸಪ್ತ ರಶ್ಮಯಸ್ತತ್ರಾ ಮೇ ನಾಭಿರಾತತಾ ।**

(ಋ. ಸಂ ೧-೧೦೫-೯)

ಸಪ್ತಪ್ರಾಣರೂಪದಲ್ಲಿರುವ ಈ ಏಳು ಸೂರ್ಯಕಿರಣಗಳಲ್ಲಿ ನನ್ನ ನಾಭಿಯು ವಿಸ್ತೃತವಾಗಿ ಬೆಳೆಯಿತು ಎಂಬ ವರ್ಣನೆಯನ್ನು

**ಸ ಯಥೋರ್ಣನಾಭಿಸ್ತಂತುನೋಚ್ಚರೇದ್ಯಥಾಗ್ನೇಃ ಕ್ಷುದ್ರಾ ವಿಸ್ಫುಲಿಂಗಾ ವ್ಯುಚ್ಚರಂತಿ ಏವ-ಮೇವಾಸ್ಮಾದಾತ್ಮನಃ ಸರ್ವೇ ಪ್ರಾಣಾಃ ಸರ್ವೇ ಲೋಕಾಃ ಸರ್ವೇ ದೇವಾಃ ಸರ್ವಾಣಿ ಭೂತಾನಿ ವ್ಯುಚ್ಚರಂತಿ........ಪ್ರಾಣಾ ವೈ ಸತ್ಯಂ ತೇಷಾಮೇಷ ಸತ್ಯಂ ॥**

(ಬೃ ಉ ೨-೧-೨೦)

ಅಗ್ನಿಯಿಂದ ಸಣ್ಣ ಕಿಡಿಗಳು ಹೊರಕ್ಕೆ ಹೊರಡುವಂತೆಯೂ, ತಂತುವಾಯುವಿನಿಂದ ತಂತುಗಳು ಹೊರಕ್ಕೆ ಹೊರಡುವಂತೆಯೂ ಈ ಆತ್ಮನಿಂದ ಸಕಲಪ್ರಾಣಗಳೂ ಆವಿರ್ಭೂತವಾಗುತ್ತವೆ ಎಂಬ ಈ ವರ್ಣನೆಯೊಡನೆ ಹೋಲಿಸಿದರೆ, ಆಗ ಸೂರ್ಯನಾಭಿ (ಅಥವಾ ಅಗ್ನಿನಾಭಿ)ಗೂ, ಆತ್ಮನಾಭಿಗೂ ಸಾದೃಶ್ಯವನ್ನು ಹೇಳಬಹುದು ಋ ಸಂ. ೧-೧೬೪-೫ ರಲ್ಲಿ ಸೂರ್ಯನ ಸಪ್ತತಂತುವಿನ ವಿಸ್ತೃತಿಯ ವಿಷಯವನ್ನು ಹಿಂದೆ ವಿಶದವಾಗಿ ತಿಳಿಸಿದೆ.

ಕೌಷೀತಕೀಬ್ರಾಹ್ಮಣದಲ್ಲಿ ಸೂರ್ಯನನ್ನು ಜೇಡರಹುಳುವಿಗೆ ಹೋಲಿಸಿದೆ. (೧೯-೩). ಆದುದರಿಂದ, ಸೂರ್ಯನಾಗಲಿ ಅಥವಾ ಸೂರ್ಯರೂಪನಾದ ಅಗ್ನಿಯಾಗಲಿ, ತನ್ನ ಕಿರಣಗಳನ್ನು ಪ್ರಕಾಶಪಡಿಸದೆ, ಸುಪ್ತವಾಗಿದ್ದಿದ್ದರೆ ಆಗ **ವೃತ್ರ**ನಾಮಾಂಕಿತನಾಗುತ್ತಾನೆ. ತನ್ನ ಕಿರಣಗಳನ್ನು ಪ್ರಕಾಶಪಡಿಸಿದರೆ ಆಗ **ದೇವ**ಸಂಜ್ಞಕನಾಗುತ್ತಾನೆಂದು ತಾತ್ಪರ್ಯ ಇದೇ ಅಭಿಪ್ರಾಯವನ್ನು ಶತಪಥಾದಿಗಳಲ್ಲಿ

**ತದಸಾವಾದಿತ್ಯ ಇಮಾಂಲ್ಲೋಕಾನ್ತ್ಸೂತ್ರೇ ಸಮಾಪಯತೇ ತದ್ಯತ್ತತ್ಸೂತ್ರಂ**

(ಶ ಬ್ರಾ. ೮ ೭-೩-೧೦)

ಇವೇ ಮುಂತಾದ ವಾಕ್ಯಗಳಿಂದ ತಿಳಿಸಿದೆ ಇದೇ ಸೂರ್ಯನ ಅಥವಾ ಸೂರ್ಯರೂಪನಾದ ಅಗ್ನಿಯು ಎರಡು ಅವಸ್ಥೆಗಳನ್ನು ಹೊಂದಿರುತ್ತಾನೆ. ಒಂದು ಬುದ್ಧಾವಸ್ಥೆ, ಇನ್ನೊಂದು ಸುಷುಪ್ತ್ಯವಸ್ಥೆ. ಅದು ಹೇಗೆಂದರೆ,

**ಅತೃಪ್ನುವಂತಂ ವಿಯತಮಬುಧ್ಯಮಾನಂ ಸುಷುಪಾಣಮಿಂದ್ರ ।**

(ಋ ಸಂ. ೪-೧೯-೩)

ಎಂಬಲ್ಲಿ **ಅಬುಧ್ಯಂ, ಸುಷುಪಾಣಂ** ಎಂಬ ವಿಶೇಷಣಗಳು ಗಮನಾರ್ಹವಾದವು. ಬೋಧವಿಲ್ಲದಿರುವ ಎಂದರೆ ಪ್ರಕಾಶವಿಲ್ಲದಿರುವ ಕಾಲದಲ್ಲಿ ಈ ವಿಶೇಷಣಗಳು **ಅಹಿ**ಯ ಸ್ವರೂಪವನ್ನು ತಿಳಿಸುತ್ತವೆ. ಸೂರ್ಯನಿಗಾಗಲಿ ಅಥವಾ ಅಗ್ನಿಗಾಗಲಿ, ಸ್ವಾಪಕಾಲ ಮತ್ತು ಬೋಧಕಾಲ ಎಂಬ ಎರಡು ಅವಸ್ಥೆಗಳು ಸಂಹಿತಾದಿಗಳಲ್ಲೆಲ್ಲಾ ಪ್ರಸಿದ್ಧವಾಗಿವೆ

**ತದಿಂದ್ರ ಪ್ರೇವ ವೀರ್ಯಂ ಚಕರ್ಥ ಯತ್ಸಸಂತಂ ವಜ್ರೇಣಾಬೋಧಯೋಽಹಿಂ ।**

(ಋ ಸಂ. ೧-೧೦೩-೭)

ಎಲೈ ಇಂದ್ರನೇ, ಮದೋನ್ಮತ್ತನಾದ ವೃತ್ರನನ್ನು ವಜ್ರಾಯುಧದಿಂದ ಹೊಡೆದು ನಿನ್ನ ಪರಾಕ್ರಮದಿಂದ ಎಚ್ಚರಗೊಳಿಸಿದೆ ಇತ್ಯಾದಿ ವಾಕ್ಯಗಳು ಸೂರ್ಯನ ಸುಪ್ತಾವಸ್ಥೆಯನ್ನೂ ಪ್ರಬೋಧಾವಸ್ಥೆಯನ್ನೂ ತಿಳಿಸುತ್ತವೆ. ಇದರಂತೆಯೇ, **ಉಷರ್ಬುಧಃ, ಅಬೋಧ್ಯಗ್ನಿಃ** (೫.೧.೧, ೪-೨೩-೭) ಇತ್ಯಾದಿ ವಾಕ್ಯಗಳು ಅಗ್ನಿಯ ಸುಪ್ತಾವಸ್ಥೆಯನ್ನು ಪ್ರಬೋಧಾವಸ್ಥೆಯನ್ನು ತಿಳಿಸುತ್ತವೆ. ಆದುದರಿಂದ ಸುಪ್ತಾವಸ್ಥೆಯಲ್ಲಿ ಸೂರ್ಯನಿಗಾಗಲಿ ಅಥವಾ ಅಗ್ನಿಗಾಗಲಿ, ಅಹಿತ್ವ ಅಥವಾ ವೃತ್ರತ್ವ ಬುದ್ಧಾವಸ್ಥೆಯಲ್ಲಿ ದೇವತ್ವ. ಇದರಂತೆಯೇ,

**ಅಷಾದಹಸ್ತೋ ಅಪೃತನ್ಯದಿಂದ್ರಮಾಸ್ಯ ವಜ್ರಮಧಿ ಸಾನೌ ಜಘಾನ ।**

(ಋ ಸಂ. ೧-೩೨ ೭)

**ಸಹದಾನುಂ ಪುರುಹೂತ ಕ್ಷಿಯಂತಮಹಸ್ತಮಿಂದ್ರ ಸಂ ಪಿಣಕ್ಕುಣಾರುಂ ।**

(ಋ. ಸಂ. ೩-೩೦-೮)

ಇತ್ಯಾದಿ ವಾಕ್ಯಗಳಲ್ಲಿ ಯಾವ **ಅಷಾತ್, ಅಹಸ್ತ,** ಇತ್ಯಾದಿ ವಿಶೇಷಣಗಳು ವೃತ್ರ, ಅಹಿವೃತ್ರ ಇತ್ಯಾದಿ ಅಸುರ ವಿಶೇಷ ಗಳನ್ನು ವರ್ಣಿಸುವುವು ಎಂಬುದೇ ಪ್ರಸಿದ್ಧವಾಗಿವೆಯೋ ಅವು ಸೂರ್ಯನ ವರ್ಣನೆಯೂ ಆಗಿರುವುದರಲ್ಲಿ ಸಂಶಯವಿಲ್ಲ.

**ಗುಹಾ ಶಿರೋ ನಿಹಿತಮೃಧಗಕ್ಷೀ ಅಸಿನ್ವನ್ನತ್ತಿ ಜಿಹ್ವಯಾ ವನಾನಿ ।**
**ಅತ್ರಾಣ್ಯಸ್ಮೈ ಪಡ್ಭಿಃ ಸಂ ಭರಂತ್ಯುತ್ತಾನಹಸ್ತಾ ನಮಸಾಧಿ ವಿಕ್ಷು ॥**

(ಋ ಸಂ ೧೦-೭೯-೨)

ಇತ್ಯಾದಿ ವಾಕ್ಯಗಳಲ್ಲಿ **ಗುಹಾ ಶಿರೋ ನಿಹಿತಂ** ಎಂಬ ವರ್ಣನಗಳು **ಬುಧ್ನೇ ರಜಸಃ** ಎಂಬ ವರ್ಣನೆಗಳೇ ಆಗಿವೆ

ಮೇಲೆ ಉದಾಹರಿಸಿರುವ ಪ್ರಮಾಣಗಳು **ಅಹಿರ್ಬುಧ್ನ್ಯನ** ಸ್ವರೂಪವನ್ನು ವಿವರಿಸುತ್ತವೆ. ಅಂತರಿಕ್ಷದಲ್ಲಿ ಗೂಢವಾದ ಪ್ರದೇಶದಲ್ಲಿ ಸುಪ್ತವಾಗಿರುವ ಕಾಲದಲ್ಲಿ ಅಗ್ನಿಯು ಅಹಿರ್ಬುಧ್ನ್ಯತ್ವವನ್ನು ಪಡೆಯುತ್ತಾನೆಂಬುದೇ ತಾತ್ಪರ್ಯ. ಪರೋಕ್ಷತ್ವವನ್ನು ಹೊಂದಿರತಕ್ಕ ಗಾರ್ಹಪತ್ಯಾಗ್ನಿಯೇ ಅಹಿರ್ಬುಧ್ನ್ಯದೇವನೆಂದು ಐತರೇಯಬ್ರಾಹ್ಮಣದಲ್ಲಿ ವರ್ಣಿತವಾಗಿರುವ ವಾಕ್ಯದ ತಾತ್ಪರ್ಯವೂ ಇದೇ ಆಗಿರುತ್ತದೆ.

॥ ಸಂಹಿತಾಪಾಠಃ ॥

ಇತಿ ಚಿನ್ನು ಪ್ರಜಾಯೈ ಪಶುಮತ್ಯೈ ದೇವಾಸೋ ವನತೇ ಮರ್ತ್ಯೋ ವ
ಆ ದೇವಾಸೋ ವನತೇ ಮರ್ತ್ಯೋ ವಃ ।
ಅತ್ರಾ ಶಿವಾಂ ತನ್ವೋ ಧಾಸಿಮಸ್ಯಾ ಜರಾಂ ಚಿನ್ಮೇ ನಿರ್ಋತಿರ್ಜಗ್ರಸೀತ॥

॥ ಪದಪಾಠಃ ॥

ಇತಿ । ಚಿತ್ । ನು । ಪ್ರಜಾಯೈ । ಪಶುಮತ್ಯೈ । ದೇವಾಸಃ । ವನತೇ । ಮರ್ತ್ಯಃ । ವಃ । ಆ ।
ದೇವಾಸಃ । ವನತೇ । ಮರ್ತ್ಯಃ । ವಃ ।
ಅತ್ರ । ಶಿವಾಂ । ತನ್ವಃ । ಧಾಸಿಂ । ಅಸ್ಯಾಃ ।ಜರಾಂ । ಚಿತ್ । ಮೇ । ನಿಃಋತಿಃ । ಜಗ್ರಸೀತ ॥ ೧೭ ॥

॥ ಸಾಯಣಭಾಷ್ಯಂ ॥

**ಹೇ ದೇವಾಸೋ ದೇವಾ ವೋ ಯುಷ್ಮಾನಿತಿ ಚಿದಿತ್ಥಮೇವ ನು ಕ್ಷಿಪ್ರಂ ಪ್ರಜಾಯೈ ಪಶುಮತ್ಯೈ ಪಶುಸಹಿತಾಯಾಪತ್ಯಾಯ ವನತೇ ಭಜತೇ ಮರ್ತ್ಯೋ ಮನುಷ್ಯೋ ಯಜಮಾನಃ । ಆ ದೇವಾಸ ಇತಿ ಪುನರುಕ್ತಿರಾದರಾರ್ಥಾ । ಅತ್ರಾಸ್ಮಿನ್ಯಜ್ಞೇ ಶಿವಾಂ ಧಾಸಿಮನ್ನಂ ಮೇ ಮಮಾಸ್ಯಾಸ್ತನ್ವೋ ದೇವ್ಯೈರನುಗೃಹೀತಸ್ಯ ಪುತ್ರಸ್ಯ ಕರೋತು ನಿರ್ಋತಿರ್ದೇವತಾ । ಜರಾಂ ಚಿಜ್ಜರಾಂ ಚ ಜಗ್ರಸೀತ । ಗ್ರಸತು ॥**

॥ ಪ್ರತಿಪದಾರ್ಥ ॥

**ದೇವಾಸಃ**—ಎಲೈ ದೇವತೆಗಳೇ । **ಮರ್ತ್ಯಃ**—ಮಾನವನು। **ವಃ ಚಿತ್**—ನಿಮ್ಮನ್ನು । **ನು**—ಕ್ಷಿಪ್ರವಾಗಿ। **ಪಶುಮತ್ಯೈ**—ಪಶುಗಳೊಂದಿಗೆ ಕೂಡಿದ । **ಪ್ರಜಾಯೈ**—ಪ್ರಜಾಸಂಪತ್ತಿಗಾಗಿ । **ವನತೇ**—ಪೂಜಿಸುತ್ತಾನೆ । **ದೇವಾಸಃ**—ಎಲೈ ದೇವತೆಗಳೇ । **ಮರ್ತ್ಯಃ**—ಅದೇ ಮಾನವನು । **ವನತೇ**—(ಖಂಡಿತವಾಗಿಯೂ) ಪೂಜಿಸುತ್ತಾನೆ । **ಅತ್ರ**—ಈ ಯಜ್ಞದಲ್ಲಿ । **ನಿರ್ಋತಿಃ**—ನಿರ್ಋತಿದೇವನು । **ಮೇ**—ನನ್ನ । **ಅಸ್ಯಾಃ**—ಈ ದೇಹರಕ್ಷಣೆಗಾಗಿ । **ಶಿವಾಂ ಧಾಸಿಂ**—ಅತ್ಯುತ್ತಮವಾದ ಅನ್ನವನ್ನು । **ತನ್ವಃ**—ಉಂಟುಮಾಡಲಿ । **ಜರಾಂಚಿತ್**—ಕ್ಷಯವನ್ನು । **ಜಗ್ರಸೀತ**—ದೂರಮಾಡಲಿ.

॥ ಭಾವಾರ್ಥ ॥

ಎಲೈ ದೇವತೆಗಳೇ, ಪಶುಗಳೊಂದಿಗೆ ಕೂಡಿದ ಪ್ರಜಾಸಂಪತ್ತಿಗಾಗಿ ಮಾನವನು ನಿಮ್ಮನ್ನು ಖಂಡಿತ ಪೂಜಿಸುತ್ತಾನೆ. ನಿಮ್ಮನ್ನು ಪೂಜಿಸಿಯೇ ತೀರುತ್ತಾನೆ ಈ ಸಂದರ್ಭದಲ್ಲಿ ನಿರ್ಋತಿದೇವನು ನನ್ನ ಈ ದೇಹಪೋಷಣೆಗೆ ಬೇಕಾದ ಉತ್ತಮವಾದ ಅನ್ನವನ್ನು ವೃದ್ಧಿಮಾಡಲಿ. ನಮ್ಮ ದೇಹವು ಮುಪ್ಪಿನಿಂದ ಕೃಶಿಸದಿರುವಂತೆ ಮಾಡಲಿ

## English Translation

The mortal (sacrificer) worships you, gods, at all times for progeny and cattle: verily, gods, the mortal worships you: may Nirriti, on this occasion, sustain my body with solutary food, and keep off decay.

॥ ವಿಶೇಷವಿಷಯಗಳು ॥

ಪ್ರಕೃತವಾದ ಮಂತ್ರದಲ್ಲಿ ನಿರ್ಋತಿಯು ದೇವತಾವಿಶೇಷವೆಂದು ಪರಿಗಣಿತವಾಗಿದೆ ಸಾಯಣರು ಇದಕ್ಕೆ ದೇವತೆಯೆಂದರ್ಥಮಾಡಿದ್ದಾರೆ. ಮತ್ತು ತನಗೆ ಉಪಕಾರವನ್ನು ಮಾಡಬೇಕೆಂದು ಯಜಮಾನನು ಪ್ರಾರ್ಥಿಸುತ್ತಾನೆ. ಇಂತಹ ಸಂದರ್ಭಗಳು ಅಪರೂಪ. ನಿರ್ಋತಿಯೆಂದರೆ ಸಾಧಾರಣವಾಗಿ ಕೆಡಕನ್ನುಂಟುಮಾಡತಕ್ಕ ದೇವತೆಯೆಂದು ಪ್ರಸಿದ್ಧವಾಗಿದೆ. ಪ್ರಕೃತದಲ್ಲಿ ಆ ದೇವತೆಯಿಂದ ಒಳ್ಳೆಯ ಫಲವನ್ನಪೇಕ್ಷಿಸಿದೆ. ಆದುದರಿಂದ ಈ ದೇವತೆಯ ನಿಜವಾದ ಸ್ವರೂಪವೇನೆಂಬುದನ್ನು ಅರಿಯಬೇಕಾದುದು ಅವಶ್ಯವಾಗಿರುತ್ತದೆ.

ನಿರುಕ್ತಕಾರರು **ನಿರ್ಋತಿ**ಪದವನ್ನು **ಪೃಥ್ವೀ**ನಾಮಗಳಲ್ಲಿ ಪಠಿಸಿದ್ದಾರೆ. (ನಿ. ೨-೫) ಅನಂತರ ಈ ಪದದ ನಿರ್ವಚನವನ್ನು ತೋರಿಸುತ್ತಾ,

**ಇಮಾನ್ಯೇಕವಿಂಶತಿಃ ಪೃಥಿವೀನಾಮಧೇಯಾನ್ಯನುಕ್ರಾಂತಾನಿ । ತತ್ರ ನಿರ್ಋತಿರ್ನಿರಮಣಾ-ದೃಚ್ಛತೇಃ ಕೃಚ್ಛ್ರಾಪತ್ತಿರಿತರಾ ಸಾ ಪೃಥಿವ್ಯಾ ಸಂದಿಹ್ಯತೇ । ತಯೋರ್ವಿಭಾಗಃ ॥**

(ನಿ ೨-೭)

ಈ ಪದವು ಎರಡು ಧಾತುವಿನಿಂದ ನಿಷ್ಪನ್ನವಾಗಬಹುದು. ಮೊದಲನೆಯದಾಗಿ **ರಮ್** ಧಾತುವಿನಿಂದ ನಿಷ್ಪನ್ನವಾದರೆ, **ನಿರಮಣಾತ್ । ನಿವಿಷ್ಟಾನಿ ರಮಂತೇ ಅಸ್ಯಾಂ ಭೂತಾನೀತಿ ನಿರ್ಋತಿಃ ಪೃಥಿವೀ ।** ಪೃಥ್ವಿಯನ್ನಾಶ್ರಯಿಸಿರುವ ಸಮಸ್ತ ಭೂತಗಳೂ ಪೃಥ್ವಿಯಿಂದ ಆನಂದವನ್ನನುಭವಿಸುತ್ತದೆಯಾದುದರಿಂದ ಪೃಥ್ವಿಗೆ **ನಿರ್ಋತಿ**ಯೆಂಬ ಹೆಸರು ಎರಡನೆಯದಾಗಿ, **ಋಚ್ಛತೇಃ , ಇತರಾ ಕೃಚ್ಛ್ರಾಪತ್ತಿಃ । ದುಃಖಸಂಜ್ಞಿಕಾ । ನಿರ್ಋತಿಃ ಪಾಪ್ಮಾ ।** ದುಃಖಕಾರಕಳಾದುದರಿಂದ **ನಿರ್ಋತಿ** ದೇವತೆಯು ಪಾಪಕಾರಕಳು ಆದರೆ, ಇಲ್ಲಿ ಸಮಾನ ನಾಮಧೇಯತ್ವಾತ್ ಸಮಾನಶ್ರುತಿತ್ವಂ **ಪೃಥಿವ್ಯಾ ಸಂದಿಹ್ಯತೇ** , ಈ ರೀತಿ ಈ ಪದದ ಎರಡು ವಿಧವಾದ ನಿರ್ವಚನವನ್ನು ತೋರಿಸಿ ಅನಂತರ ಈ ಪದಕ್ಕೆ ಸಂದರ್ಭಾನುಸಾರವಾಗಿ ಅರ್ಥವನ್ನು ಹೇಳಬೇಕೆಂದೂ ಪೃಥ್ವಿಯೆಂದರ್ಥವಿರುವಾಗ ಪಾಪಜನನಿಯೆಂದರ್ಥ ಮಾಡಬಾರದೆಂದೂ, ಎರಡನೆಯ ತಾತ್ಪರ್ಯವಿರುವಾಗ ಪೃಥ್ವಿಯೆಂದರ್ಥಮಾಡಬಾರದೆಂದೂ ತಿಳಿಸಿದ್ದಾರೆ

೧) **ಏಕಾ ನಿವಿಷ್ಟಾನಾಂ ಭೂತಾನಾಂ ರಮಯಿತ್ರೀ ।** ಒಬ್ಬಳು ಸಕಲ ಭೂತಗಳಿಗೂ ಸಂತೋಷಕಾರಕಳು

೨) **ಏಕಾ ಪುನಃ ಕೃಚ್ಛ್ರಮಾಪಾದಯಿತ್ರೀ ।** ಇನ್ನೊಬ್ಬಳು ದುಃಖದಾಯಕಳು ಎಂದು ಎರಡು ವಿಧವಾಗಿ ದುರ್ಗಾಚಾರ್ಯರು ವಿವರಿಸಿದ್ದಾರೆ. ನಿರುಕ್ತಕಾರರು ಈ ಸಂದರ್ಭದಲ್ಲಿ—

**ಯ ಈಂ ಚಕಾರ ನ ಸೋ ಅಸ್ಯ ವೇದ ಯ ಈಂ ದದರ್ಶ ಹಿರುಗಿನ್ನು ತಸ್ಮಾತ್ ।**
**ಸ ಮಾತುರ್ಯೋನಾ ಪರಿವೀತೋ ಅಂತರ್ಬಹುಪ್ರಜಾ ನಿರ್ಋತಿಮಾ ವಿವೇಶ ॥**

(ಋ. ಸಂ ೧-೧೬೪-೩೨)

ಎಂಬ ಮಂತ್ರವನ್ನು ಉದಾಹರಿಸಿ ನಿರ್ಋತಿಶಬ್ದಾರ್ಥವನ್ನು ವಿವರಿಸಿದ್ದಾರೆ. ಉದಾಹೃತವಾಗಿರುವ ಮಂತ್ರದಲ್ಲಿ ನಿರ್ಋತಿಶಬ್ದಕ್ಕೆ ಸಾಯಣರ ವ್ಯಾಖ್ಯಾನವನ್ನು ಹೇಳುತ್ತಾ ಮೊದಲು ನಿರುಕ್ತಕಾರರಿಗಿಂತ ಭಿನ್ನವಾದ ತಮ್ಮ ಅಭಿಪ್ರಾಯವನ್ನು ತಿಳಿಸಿ **ದುಃಖ**ವೆಂದರ್ಥಮಾಡಿದ್ದಾರೆ ಅನಂತರ ನಿರುಕ್ತಕಾರರ ಮತವನ್ನೂ ತಿಳಿಸಿ ದುಃಖಸಾಧನವಾದ ಭೂಮಿಯೆಂದರ್ಥಮಾಡಿದ್ದಾರೆ. ಆದರೆ ಪೃಥಿವಿಯೆಂದರ್ಥವಾದಾಗಲೆಲ್ಲಾ ಸಂತೋಷಸಾಧನವೆಂದೇ ಅರ್ಥ ಮಾಡಬೇಕೆಂದು ನಿರುಕ್ತಕಾರರ ಮತವಿರುವಂತೆ ಕಾಣುತ್ತದೆ ಆದರೆ, **ನಿರ್ಋತಿ**ಶಬ್ದಪ್ರಯೋಗವು ಅಧಿಕವಾಗಿ ಅನಿಷ್ಟ ದೇವತಾವಿಷಯಕವಾಗಿಯೇ ಇರುವಂತೆ ಕಾಣುತ್ತದೆ ಇವುಗಳಲ್ಲಿ ಒಂದೆರಡನ್ನು ಉದಾಹರಣೆಗೆ ತೆಗೆದು ಅವುಗಳ ತಾತ್ಪರ್ಯವನ್ನು ಪರಿಶೀಲಿಸಬಹುದು

**ಮೋ ಷು ಣಃ ಪರಾಪರಾ ನಿರ್ಋತಿರ್ದುರ್ಹಣಾ ವಧೀತ್ । ಪದೀಷ್ಟ ತೃಷ್ಣಯಾ ಸಹ ॥**

(ಋ ಸಂ ೧ ೩೮.೬)

ಎಂಬಲ್ಲಿ **ನಿರ್ಋತಿ**ಶಬ್ದಕ್ಕೆ ರಕ್ಷೋಜಾತಿದೇವತೆಯೆಂದರ್ಥಮಾಡಿದೆ. ನಮಗೆ ಆ ರಾಕ್ಷಸಸ್ವರೂಪವುಳ್ಳ ದೇವತೆಯು ಕೆಡಕನ್ನುಂಟುಮಾಡದಿರಲಿ ಎಂಬುದೇ ಪ್ರಾರ್ಥನೆ. ಇಂತಹ ಸಂದರ್ಭಗಳಲ್ಲಿ **ದುರ್ಭಿಕ್ಷ, ದುರಾಸೆ** ಇತ್ಯಾದಿ ಆಪತ್ಕಾರಕವಾದ ಶಕ್ತಿಗಳನ್ನೇ ದೇವತೆಯೆಂದು ನಿರ್ದೇಶಿಸಿದೆ. ಒಟ್ಟಿನಲ್ಲಿ ಪಾಪಾಧಿದೇವತೆಯೆಂದರ್ಥಮಾಡಬಹುದು. ಈ ಪದದ ತಾತ್ಪರ್ಯವನ್ನು ತೋರಿಸುತ್ತಾ Max Muller ಎಂಬ ಪಂಡಿತನು ತನ್ನ ಅಭಿಪ್ರಾಯವನ್ನು ಈ ರೀತಿ ತಿಳಿಸಿದ್ದಾನೆ.

" One of the meanings of **ನಿರ್ಋತಿ** is sin. It is derived from the same root which yielded **ಋತ** in the sense of right. **ನಿರ್ಋತಿ** was conceived, it would seem, as going away from the Path of right. It was personified as a power of destruction and evil ",

(Sacred Books of the East. Vol, 32 p. 88)

ನಿರ್ಋತಿಶಬ್ದಕ್ಕೆ ಇರುವ ಅನೇಕಾರ್ಥಗಳಲ್ಲಿ **ಪಾಪ**ವೆಂಬರ್ಥವೇ ಅಧಿಕವಾಗಿದೆ. **ಋತ**ಶಬ್ದವು ಯಾವ ಧಾತುವಿನಿಂದ ನಿಷ್ಪನ್ನವೋ, ನಿರ್ಋತಿಶಬ್ದವೂ ಅದೇ ಧಾತುವಿನಿಂದ ನಿಷ್ಪನ್ನವಾಗಿದೆ. **ಋತ**ಶಬ್ದಕ್ಕೆ **ಋಜುಮಾರ್ಗ, ಸತ್ಯ**ವೆಂದರ್ಥ. ಋಜುರಹಿತವಾದುದು ಮತ್ತು ಸತ್ಯರಹಿತವಾದುದು ಎಂಬುದೇ **ನಿರ್ಋತಿ**ಶಬ್ದಾರ್ಥ ಪಾಪ ಮತ್ತು ನಾಶ ಈ ಭಾವಗಳನ್ನು ಮೂರ್ತಿಮತ್ತಾಗಿ ಭಾವಿಸುವುದೇ **ನಿರ್ಋತಿ**ದೇವತಾಸ್ವರೂಪಜ್ಞಾನವು ಪಾಪಮಯವೂ ದುಃಖ ಕಾರಕವೂ ಆದ ಈ ದೇವತೆಯ ಪ್ರಭಾವದಿಂದ ತಪ್ಪಿಸಿಕೊಳ್ಳಲು ಕೆಲವು ವಿಧಿಗಳನ್ನಾಚರಿಸಬೇಕೆಂಬ ನಿಯಮವಿರುತ್ತದೆ. ಈ ನಿಯಮಗಳನ್ನು ತಿಳಿಸುವಾಗ ಈ ದೇವತೆಯ ಸ್ವರೂಪವೂ ಜೊತೆಯಲ್ಲಿಯೇ ತಿಳಿಸಲ್ಪಡುತ್ತದೆ ಉದಾಹರಣೆಗಾಗಿ ಕೆಲವು ಪ್ರಕರಣಗಳನ್ನು ಮಾತ್ರ ಇಲ್ಲಿ ಪರಿಶೀಲಿಸಬಹುದು.

**ಅಥಾತೋ ನೈರ್ಋತೀರ್ಹರಂತಿ । ಏತದ್ವೈ ದೇವಾ ಗಾರ್ಹಪತ್ಯಂ ಚಿತ್ವಾ ಸಮಾರೋಹನ್ನಯಂ ವೈ ಲೋಕೋ........ಸಮಾರೋಹಂಸ್ತೇ ತಮ ಏವಾನತಿದೃಶ್ಯಮಪಶ್ಯನ್ ॥**

(ಶ. ಬ್ರಾ ೭.೨.೧.೧)

ನಿರ್ಋತಿಸಂಜ್ಞಕಗಳಾದ ಇಷ್ಟಕೆಗಳನ್ನು (ಇಟ್ಟಿಗೆ) ರಚಿಸುವಾಗ ಪಠಿಸುವ ಮಂತ್ರಗಳಿವು ದೇವತೆಗಳು ಗಾರ್ಹಪತ್ಯಾಗ್ನಿ ಚಿತಿಯನ್ನು ರಚಿಸಿ ಅದರ ಆರೋಹಣಕ್ಕೆ ಸಿದ್ಧರಾದಾಗ, ಈ ಪೃಥ್ವೀರೂಪವಾದ ಗಾರ್ಹಪತ್ಯದಲ್ಲಿ ಕಗ್ಗತ್ತಲೆಯಿಂದ ಆವೃತವಾಗಿ ಯಾವುದನ್ನೂ ನೋಡಲಾಗಲಿಲ್ಲ.

**ತೇಽಬ್ರುವನ್ । ಉಪ ತಜ್ಜಾನೀತ ಯಥೇದಂ ತಮಃ ಪಾಪ್ಮಾನಮಪಹನಾಮಹಾ ಇತಿ ತೇಽಬ್ರುವಂಶ್ಚೇತಯಧ್ವಮಿತಿ ॥**

ನಾವು ಈ ಕಗ್ಗತ್ತಲೆಯನ್ನು ಯಾವ ರೀತಿ ದಾಟಬೇಕೆಂದು ಚಿಂತಿಸಬೇಕು. ನೀವೆಲ್ಲರೂ ಇದರ ನಾಶಕ್ಕೆ ಉಪಾಯ ವನ್ನು ಹುಡುಕುತ್ತಾ ಧ್ಯಾನಮಾಡಿರಿ ಎಂದಾಗ ಅಗ್ನಿಚಿತಿಯನ್ನು ರಚಿಸಬೇಕೆಂಬ ಅರಿವು ಅವರಿಗುಂಟಾಯಿತು

**ತೇ ಚೇತಯಮಾನಾಃ । ಏತಾ ಇಷ್ಟಕಾ ಅಪಶ್ಯನ್ನೈರ್ಋತೀಸ್ತಾ ಉಪಾದಧತ ತಾಭಿಸ್ತತ್ತಮಃ ಪಾಪ್ಮಾನಮಪಾಘ್ನತ ಪಾಪ್ಮಾ ವೈ ನಿರ್ಋತಿಃ ತದ್ಯದೇತಾಭಿಃ ಪಾಪ್ಮಾನಂ ನಿರ್ಋತಿಮಪಾಘ್ನತ ॥** (ಶ. ಬ್ರಾ. ೭.೨.೧.೩)

ಧ್ಯಾನಮಾಡುತ್ತಾ ನಿರ್ಋತಿಸಂಜ್ಞಕಗಳಾದ ಇಷ್ಟಕೆಗಳನ್ನು ಕಂಡುಕೊಂಡರು. ಆಗ ಅವುಗಳ ರಚನೆಯಿಂದ ತಮಸ್ಸನ್ನೂ ಪಾಪರೂಪವಾದ ನಿರ್ಋತಿಯನ್ನೂ ನಾಶಮಾಡಿದರು. ನಾಶರೂಪವಾದ ಪಾಪಸಮೂಹವೇ ನಿರ್ಋತಿಯು ನಿರ್ಋತಿಸಂಜ್ಞಕಗಳಾದ ಇಷ್ಟಕೆಗಳ ರಚನೆಯಿಂದ ಈ ಪಾಪವು ನಾಶವಾಗುತ್ತದೆ. ಇತ್ಯಾದಿಯಾಗಿ ಈ ದೇವತೆಯ ಸ್ವರೂಪವರ್ಣನವಿರುತ್ತದೆ. ಆದರೆ, ಈ ದೇವತೆಯ ನಾಶಕರವಾದ ಪ್ರಭಾವದಿಂದ ತಪ್ಪಿಸಿಕೊಳ್ಳಲು ಈ ದೇವತೆಗೂ ಸಹ ಪೂಜೆಯನ್ನೇ ಅರ್ಪಿಸಬೇಕಾಗುತ್ತದೆ.

> **ಅಸುನ್ವಂತಮಯಜಮಾನಮಿಚ್ಛೇತಿ । ಯೋ ವೈ ನ ಸುನೋತಿ ನ ಯಜತೇ ತಂ ನಿರ್ಋತಿ-ರ್ಋಚ್ಛತಿ ಸ್ತೇನಸ್ಯೇತ್ಯಾಮನ್ವಿಹಿ ತಸ್ಕರಸ್ಯೇತಿ .... .... ಯಥಾ ಸ್ತೇನತಸ್ಕರಃ ಪ್ರಲಾಯಮೇತ್ಯೆ ವಂ ಪ್ರಲಾಯಮಿ ಹಿ .... .... .... ನಮೋ ದೇವಿ ನಿರ್ಋತೇ ತುಭ್ಯ-ಮಸ್ತ್ವಿತಿ ನಮಸ್ಕಾರೇಣೈವೈನಾಮುಪಹತೇ ॥**
>
> (ಶ. ಬ್ರಾ. ೭.೨.೧.೯)

"ಎಲೈ ನಿರ್ಋತಿದೇವಿಯೇ, ಯಾವನು ಯಜ್ಞಕ್ಕಾಗಿ ಸೋಮವನ್ನು ಹಿಂಡುವುದಿಲ್ಲವೋ ಮತ್ತು ಯಜ್ಞದಲ್ಲಿ ಹವಿಸ್ಸನ್ನರ್ಪಿಸುವುದಿಲ್ಲವೋ, ಅವನನ್ನು ಹಿಂಸಿಸು. ಎಲೈ ದೇವಿಯೇ, ಚೋರನು ಹೋಗುವ ದಾರಿಯನ್ನೇ ನೀನೂ ಅನುಸರಿಸಿ ಅವನು ಅವಿತುಕೊಳ್ಳುವಂತೆಯೇ ನೀನೂ ಅವಿತುಕೋ. ಯಜಮಾನನಲ್ಲದವನನ್ನು ಸಮೀಪಿಸಿ ಅವನನ್ನು ಹಿಂಸಿಸು. ಎಲೈ ದೇವಿಯೇ, ನಿನಗೆ ನಮಸ್ಕಾರವು" ಎಂದು ಹೇಳಿ ನಮಸ್ಕಾರಮಾಡಿ ಆ ದೇವಿಯನ್ನು ಹೊರಕ್ಕೆ ಕಳುಹುತ್ತಾನೆ.

> **ನಮಃ ಸು ತೇ ನಿರ್ಋತೇ ತಿಗ್ಮತೇಜ ಇತಿ । ತಿಗ್ಮತೇಜಾ ವೈ ನಿರ್ಋತಿಸ್ತಸ್ಯಾ ಏತನ್ನಮ-ಸ್ಕರೋತ್ಯಯಸ್ಮಯಂ ವಿಚೃತಾ ಬಂಧಮೇತಮಿತ್ಯಯಸ್ಮಯೇನ ಹ ವೈ ತಂ ಬಂಧೇನ ನಿರ್ಋತಿರ್ಬಧ್ನಾತಿ .... .... .... ॥**
>
> (ಶ. ಬ್ರಾ. ೭.೨.೧.೯)

ತೀಕ್ಷ್ಣ ತೇಜಸ್ಸುಳ್ಳ ಎಲೈ ನಿರ್ಋತಿಯೇ, ನಿನಗೆ ನಮಸ್ಕಾರವು ಖಂಡಿತ ನಿನ್ನ ಪ್ರಭಾವವು ಬಹಳ ಹರಿತವೂ ಪ್ರಭೆಯುಳ್ಳದ್ದೂ ಆಗಿದೆ "ನನ್ನ ಈ ಅಯಃಶಲಾಕಾರೂಪವಾದ ಬಂಧನವನ್ನು ಸಡಿಲಗೊಳಿಸು" ಏತಕ್ಕೆಂದರೆ ನಿರ್ಋತಿಯು ಯಾರಲ್ಲಿ ಅಸಮಾಧಾನಗೊಳ್ಳುತ್ತಾಳೆಯೋ ಆ ಪುರುಷನನ್ನು ಕಠಿಣವಾದ ಅಯಃಶಲಾಕೆಗಳಿಂದಲೇ ಬಂಧಿಸುತ್ತಾಳೆ (ಇರಿಯುತ್ತಾಳೆ).

> **ಯಸ್ಯಾಸ್ತೇ ಘೋರ ಆಸಜ್ಜುಹೋಮೀತಿ । ಘೋರಾ ವೈ ನಿರ್ಋತಿಸ್ತಸ್ಯಾ ಏತದಾಸಜ್ಜು-ಹೋತಿ ಯತ್ತದ್ದೇವತ್ಯಂ ಕರ್ಮ ಕರೋತ್ಯೇಷಾಂ ಬಂಧಾನಾಮವಸರ್ಜನಾಯೇತಿ ಯೈರ್ಬಂ-ಧೈರ್ಬದ್ಧೋ ಭವತಿ ಯಾಂ ತ್ವಾ ಜನೋ ಭೂಮಿರಿತಿ ಪ್ರಮಂದತ ಇತೀಯಂ ವೈ ಭೂಮಿ-ರಸ್ಯಾಂ ವೈ ಸ ಭವತಿ ಯೋ ಭವತಿ ನಿರ್ಋತಿಂ ತ್ವಾಹಂ ಪರಿವೇದ ವಿಶ್ವತ ಇತಿ ನಿರ್ಋತಿರಿತಿ ತ್ವಾಹಂ ಪರಿವೇದ ಸರ್ವತ ಇತ್ಯೇತದಿಯಂ ವೈ ನಿರ್ಋತಿರಿಯಂ ವೈ ತಂ ನಿರರ್ಪಯತಿ ಯೋ ನಿರ್ಋಚ್ಛತಿ...............ಆಮಂತ್ರಿತೋ ಹಿನಸ್ತಿ ॥**
>
> (ಶ. ಬ್ರಾ. ೭.೨.೧.೧೧)

"ಎಲೈ ನಿರ್ಋತಿದೇವಿಯೇ, ನೀನು ಭಯಂಕರರೂಪಳಾಗಿದ್ದೀಯೆ" ಎಂದು ಸ್ತುತಿಸಿ ದೇವತಾಕಾರ್ಯವನ್ನಾಚರಿಸುವಾಗ ಅವಳ ಮುಖದಲ್ಲಿ ಆಹುತಿಯನ್ನರ್ಪಿಸುತ್ತಾನೆ. "ಎಲೈ ದೇವಿಯೇ, ಇದು ನಿನ್ನ ಬಂಧವಿಮೋಚನೆಗಾಗಿ" ಎಂದು ಅರ್ಪಿಸಿದರೆ, ಯಾವ ಬಂಧನದಿಂದ ಯಜಮಾನನು ಬದ್ಧನಾಗಿದ್ದಾನೆಯೋ ಅದರಿಂದ ಮುಕ್ತಿಯನ್ನುಪಡೆಯುತ್ತಾನೆ. "ಎಲೈ ದೇವಿಯೇ, ನಿನ್ನನ್ನೇ ಯಜಮಾನರು ಪೃಥ್ವಿಯೆಂದೂ ಸಂಬೋಧಿಸುತ್ತಾರೆ. ಆದರೆ, ನಾನು ಮಾತ್ರ ನಿನ್ನನ್ನು ಸರ್ವವ್ಯಾಪಕಳೆಂದೇ ತಿಳಿದಿರುತ್ತೇನೆ." ಇಲ್ಲಿ ಹೇಳಿರುವುದೂ ಸತ್ಯವಾಗಿಯೇ ಇದೆ. ಯಾವ ಯಜಮಾನನು ದೂಷ್ಯನೋ ಅವನನ್ನು ಪೃಥ್ವಿಯು ತಿರಸ್ಕರಿಸಿ ದೂರ ತಳ್ಳುತ್ತಾಳೆ. ಮೇಲೆ ಹೇಳಿದಂತೆ ನಿರ್ಋತಿಯ ಪೂಜೆಯನ್ನ ರ್ಪಿಸಿದರೆ ಆಗ ಯಜಮಾನನ ಬಂಧವಿಮೋಚನೆಯಾಗುತ್ತದೆ.

**ನೋಪಸ್ಪೃಶತಿ । ಪಾಪ್ಮಾ ವೈ ನಿರ್ಋತಿರ್ನೇತ್ಪಾಪ್ಮನಾ ಸಗ್ಂಸ್ಪೃಶಾ ಇತಿ ನ ಸಾದಯತಿ ಪ್ರತಿಷ್ಠಾ ವೈ ಸಾದನಂ ನೇತ್ಪಾಪ್ಮಾನಂ ಪ್ರತಿಷ್ಠಾಪಯಾನೀತಿ .... .... .... ॥**

(ಶ.ಬ್ರಾ ೭-೨-೧-೧೨)

ಯಜಮಾನನು ನಿರ್ಋತಿಸಂಜ್ಞಕಗಳಾದ ಇಷ್ಟಕೆಗಳನ್ನು ಸ್ಪರ್ಶಮಾಡುವುದಿಲ್ಲ ನಿರ್ಋತಿಯು ಪಾಪರೂಪವು. ಆದುದರಿಂದ ಅವನ್ನು ಸ್ಪರ್ಶಿಸಿದರೆ ಪಾಪಸಂಪರ್ಕವಾಗುತ್ತದೆ ಅವನು ಅವನ್ನು ಸ್ಥಾಪಿಸುವುದೂ ಇಲ್ಲ. ಅವನ್ನು ಸ್ಥಾಪಿಸಿದರೆ, ಪಾಪರೂಪವುಳ್ಳ ನಿರ್ಋತಿಯನ್ನೇ ತನ್ನ ಗೃಹದಲ್ಲಿ ಸ್ಥಾಪಿಸಿದಂತಾಗುತ್ತದೆ. — ಇತ್ಯಾದಿಯಾಗಿ, ಅನಿಷ್ಟ ಪ್ರಾಯಳಾದ ನಿರ್ಋತಿಯ ಪಾಪಪೂರಿತವೂ ದುಃಖಕಾರಕವೂ ಆದ ಪ್ರಭಾವದಿಂದ ತಪ್ಪಿಸಿಕೊಳ್ಳಲು ಅವಳನ್ನೇ ದೇವತಾವಿಶೇಷವೆಂದು ತಿಳಿದು ಪೂಜಿಸಿ ಅವಳನ್ನುಹೊರಕ್ಕೆ ಹೊರಡಿಸುತ್ತಾನೆ (**ನಮಸ್ಕಾರೇಣೈವೈನಾಮುಪಹತೇ**)

ಹೀಗೆ ನಿರ್ಋತಿಯ ಸ್ವರೂಪವರ್ಣನೆಯಿರುತ್ತದೆ. ನಿರ್ಋತಿಯು ಪೃಥ್ವೀರೂಪಳೆಂದರೂ ಸಹ, ಕೆಲವರಿಗೆ ಪೃಥ್ವಿಯು ಆನಂದದಾಯಿನಿಯಾಗುತ್ತಾಳೆ. ಆಗ **ರಮ್** ಧಾತುವಿನಿಂದ ಈ ಪದದ ನಿಷ್ಪತ್ತಿ ಇನ್ನು ಕೆಲವರಿಗೆ ಪೃಥ್ವಿಯು ದುಃಖಭಾಗಿನಿಯು. ಆಗ ಋಧಾತುವಿನಿಂದ ನಿಷ್ಪತ್ತಿ. ಒಂದೊಂದು ಸಲ ಪೃಥ್ವಿಗೂ ಈ ದೇವತೆಗೂ ತಾದಾತ್ಮ್ಯವನ್ನು ತೋರಿಸಿದರೂ ಸಹ, ಅನೇಕ ವೇಳೆಗಳಲ್ಲಿ ಪೃಥಿವಿಗಿಂತಲೂ ಭಿನ್ನವಾದ ದೇವತೆಯೆಂದೇ ಪರಿಗಣಿತ ಳಾಗಿದ್ದಾಳೆ

॥ ಸಂಹಿತಾಪಾಠಃ ॥

ತಾಂ ವೋ ದೇವಾಃ ಸುಮತಿಮೂರ್ಜಯಂತೀಮಿಷಮಶ್ಯಾಮ ವಸವಃ ಶಸಾ ಗೋಃ ।

ಸಾ ನಃ ಸುದಾನುರ್ಮೃಳಯಂತೀ ದೇವೀ ಪ್ರತಿ ದ್ರವಂತೀ ಸುವಿತಾಯ ಗಮ್ಯಾಃ ॥ ೧೮ ॥

॥ ಪದಪಾಠಃ ॥

ತಾಂ । ವಃ । ದೇವಾಃ । ಸುಮತಿಂ । ಊರ್ಜಯಂತೀಂ । ಇಷಂ । ಅಶ್ಯಾಮ । ವಸವಃ । ಶಸಾ । ಗೋಃ ।

ಸಾ । ನಃ । ಸುಽದಾನುಃ । ಮೃಳಯಂತೀ । ದೇವೀ । ಪ್ರತಿ । ದ್ರವಂತೀ । ಸುವಿತಾಯ । ಗಮ್ಯಾಃ ॥

॥ ಸಾಯಣಭಾಷ್ಯಂ ॥

ಹೇ ದೇವಾ ಹೇ ವಸವೋ ವಾಸಯಿತಾರೋ ವೋ ಯುಷ್ಮಾಕಂ ಸ್ವಭೂತಾಂ ತಾಂ ಪ್ರಸಿದ್ಧಾಂ ಸುಮತಿಂ ಶೋಭನಮನನಸಾಧನಾಂ । ಅನ್ನೇನ ಮತಿವೃದ್ಧಿರನ್ನಮಯಂ ಹಿ ಸೋಮ್ಯ ಮನಃ । ಛಾಂ ಉ. ೬ ಖ. ೪ । ಇತ್ಯಾದಿಷು ಪ್ರಸಿದ್ಧಾ । ಊರ್ಜಯಂತೀಂ ಬಲಕರೀಮಿಷಮೋಷಣಸಾಧನಮನ್ನಂ ಕ್ಷೀರದಧ್ಯಾದಿಲಕ್ಷಣಂ ಶಸಾ ಸ್ತುತ್ಯಾ ಗೋಃ ಸಕಾಶಾದಶ್ಯಾಮ । ಪ್ರಾಪ್ನುಯಾಮ । ಸಾ ದೇವೀ ನೋಽಸ್ಮಾನ್ ಸುವಿತಾಯ ಸುಖಾಯ ಪ್ರತಿ ಗಮ್ಯಾಃ । ಗಮ್ಯಾತ್ । ಅಭಿಗಚ್ಛೇತ್ । ಸೇಟ್ ದೇವತಾ ವಿಶೇಷ್ಯತೇ । ಸುದಾನುಃ ಶೋಭನದಾನಾ ಮೃಳಯಂತೀ ಸುಖಯಂತೀ ದ್ರವಂತ್ಯಸ್ಮದಭಿಮುಖಂ ಗಚ್ಛಂತೀ ॥

॥ ಪ್ರತಿಪದಾರ್ಥ ॥

**ದೇವಾಃ**—ದೇವಾತ್ಮರಾದ । **ವಸವಃ**—ಎಲೈ ವಸುಗಳೇ । **ಶಸಾ**—ನಮ್ಮ ಸ್ತುತಿಗಳ ಫಲವಾಗಿ । **ಗೋಃ**—ಆ ಗೋವಿನಿಂದ । **ವಃ**—ನಿಮ್ಮ ವಿಷಯದಲ್ಲಿರಬೇಕಾದುದೂ । **ತಾಂ**—ಪ್ರಖ್ಯಾತವಾದುದೂ ಆದ । **ಸುಮತಿಂ**—ಶ್ರೇಷ್ಠವಾದ ಮನಸ್ಸಿನ ಸ್ಥಿತಿಗೆ ಸಾಧಕವಾದುದೂ । **ಊರ್ಜಯಂತೀಂ**—ದೇಹಶಕ್ತಿಯನ್ನುಂಟುಮಾಡ ತಕ್ಕದ್ದೂ ಆದ । **ಇಷಂ**—ಕ್ಷೀರಾದಿರೂಪವಾದ ಅನ್ನವನ್ನು । **ಅಶ್ಯಾಮ**-ನಾವು ಪಡೆಯುವಂತಾಗಲಿ । **ಸಾ ದೇವೀ**-ಆ ದೇವಿಯು । **ಸುದಾನುಃ**—ಉತ್ತಮವಾದ ದಾನಯುಕ್ತಳಾಗಿಯೂ । **ಮೃಳಯಂತೀ**—ನಮ್ಮನ್ನು ಸುಖಪಡಿಸುವವಳಾಗಿಯೂ । **ದ್ರವಂತೀ**—ನಮ್ಮಲ್ಲಿಗೆ ಬರಲು ಆತುರವುಳ್ಳವಳಾಗಿಯೂ । ನಃ ನಮ್ಮ । **ಸುವಿತಾಯ**—ಹಿತಕ್ಕಾಗಿ । **ಪ್ರತಿ ಗಮ್ಯಾಃ**—ನಮಗಭಿಮುಖವಾಗಿ ಬರಲಿ

॥ ಭಾವಾರ್ಥ ॥

ದೇವಾತ್ಮರಾದ ಎಲೈ ವಸುಗಳೇ, ಆ ಗೋವಿನಿಂದ ಲಭಿಸತಕ್ಕ ಕ್ಷೀರಾದ್ಯನ್ನವು ನಿಮ್ಮ ವಿಷಯದಲ್ಲಿ ನಾವಿಡಬೇಕಾದ ಶುದ್ಧವಾದ ಮನಸಿಃಸ್ಥಿತಿಗೆ ಸಾಧಕವಾದುದು ಮತ್ತು ನಮ್ಮ ದೇಹಕ್ಕೆ ಪುಷ್ಟಿಯನ್ನೂ ಉಂಟುಮಾಡತಕ್ಕದ್ದು. ನಮ್ಮ ಸ್ತುತಿಯ ಫಲವಾಗಿ ನಾವು ಆ ಅನ್ನವನ್ನು ಪಡೆಯುವಂತಾಗಲಿ. ಮತ್ತು ಉತ್ತಮವಾದ ದಾನಯುಕ್ತಳಾಗಿಯೂ, ನಮಗೆ ಸುಖಕಾರಕಳಾಗಿಯೂ ನಮ್ಮನ್ನು ಅನುಗ್ರಹಿಸುವ ಆತುರವುಳ್ಳವಳಾಗಿಯೂ ಇರುವ ಆ ದೇವಿಯು ನಮ್ಮ ಹಿತಕ್ಕಾಗಿ ನಮಗಭಿಮುಖವಾಗಿ ಬರಲಿ

## English Translation

Divine Vasus, may we obtain from the adorable cow invigorating and mind-sustaining food : may that liberal and benignant goddess, hastening (hither), come for our felicity.

॥ ಸಂಹಿತಾಪಾಠಃ ॥

ಅಭಿ ನ ಇಳಾ ಯೂಥಸ್ಯ ಮಾತಾ ಸ್ಮನ್ನದೀಭಿರುರ್ವಶೀ ವಾ ಗೃಣಾತು ।
ಉರ್ವಶೀ ವಾ ಬೃಹದ್ದಿವಾ ಗೃಣಾನಾಭ್ಯೂರ್ಣ್ವಾನಾ ಪ್ರಭೃಥಸ್ಯಾಯೋಃ ॥

॥ ಪದಪಾಠಃ ॥

ಅಭಿ । ನಃ । ಇಳಾ । ಯೂಥಸ್ಯ । ಮಾತಾ । ಸ್ಮತ್ । ನದೀಭಿಃ । ಉರ್ವಶೀ । ವಾ । ಗೃಣಾತು ।
ಉರ್ವಶೀ । ವಾ । ಬೃಹತ್ಽದಿವಾ । ಗೃಣಾನಾ । ಅಭಿಽಊರ್ಣ್ವಾನಾ । ಪ್ರಽಭೃಥಸ್ಯ । ಆಯೋಃ ॥

॥ ಸಾಯಣಭಾಷ್ಯಂ ॥

ಅಭಿ ಗೃಣಾತು ನೋಽಸ್ಮಾನಿಳಾ ಭೂಮಿರ್ಯೂಥಸ್ಯ ಗೋಸಂಘಸ್ಯ ಮಾತಾ ನಿರ್ಮಾತ್ರೀ । ಯದ್ವೇಳಾ ಗೋರೂಪಧರಾ ಮನೋಃ ಪುತ್ರೀತ್ಯಾಹುಃ । ಯದ್ವಾ ಯೂಥಸ್ಯ ಮರುದ್ಗಣಸ್ಯ ನಿರ್ಮಾತ್ರೀಳಾ ಮಾಧ್ಯಮಿಕೀ ವಾಕ್ । ಅಥವೋರ್ವಶೀ ಮಾಧ್ಯಮಿಕೀ ವಾಕ್ । ನದೀಭಿರ್ಗಂಗಾದಿಭಿಃ ಸಹ ಗೃಣಾತು । ಸ್ಮಚ್ಛಬ್ದಃ ಪ್ರಶಸ್ತವಚನ ಇತ್ಯುಕ್ತಂ । ಪ್ರಾಶಸ್ತ್ಯಂ ಗೃಣಾತು । ವಾಥವೋರ್ವಶೀ ಬೃಹದ್ದಿವಾ ಪ್ರಭೂತದೀಪ್ತಿರ್ಗೃಣಾನಾ ಶಬ್ದಯಂತ್ಯಸ್ಮದೀಯಂ ಕರ್ಮ ಪ್ರಶಂಸಂತ್ಯಭ್ಯೂರ್ಣ್ವಾನಾಚ್ಛಾದಯಂತೀ । ಕಂ । ಆಯೋರಾಯುಂ ಮನುಷ್ಯಂ ಯಜಮಾನಂ । ಕೇನ । ಪ್ರಭೃಥಸ್ಯ ತೇಜಸೋ ವೋದಕಸ್ಯ ವಾ ದಾನೇನ । ಪ್ರಭೃಥಸ್ಯ ತೇಜಸೋ ವೋದಕಸ್ಯೇತಿ ನಿರುಕ್ತಂ । ೧೧-೪೯. । ಅಥವಾ ಪ್ರಭೃಧಸ್ಯ ಪ್ರಭರಣವತ ಆಯೋರ್ಯಜ್ಞಮಭ್ಯೂರ್ಣ್ವಾನಾಚ್ಛಾದಯಂತೀ ॥

॥ ಪ್ರತಿಪದಾರ್ಥ ॥

**ಯೂಥಸ್ಯ**—ಗೋ ಸಮುದಾಯಕ್ಕೆ । **ಮಾತಾ**—ಮಾತೆಯಾದ । **ಇಳಾ**—ಇಳಾದೇವಿಯೂ **ಉರ್ವಶೀ**—ಉರ್ವಶಿಯೂ ( ಮಾಧ್ಯಮಿಕಾ ವಾಕ್ ) । **ನದೀಭಿಃ**—ಗಂಗಾ ನದಿಗಳೊಂದಿಗೆ ಕೂಡಿ । **ನಃ**—ನಮ್ಮನ್ನು । **ಅಭಿ ಗೃಣಾತು**—ಅನುಗ್ರಹಿಸಲಿ । **ವಾ**—ಅಲ್ಲದೇ । **ಬೃಹದ್ದಿವಾ**—ಅತ್ಯಧಿಕವಾದ ಕಾಂತಿಯುಳ್ಳ । **ಉರ್ವಶೀ**—ಉರ್ವಶಿಯು । **ಗೃಣಾನಾ**—ನಮ್ಮ ಕರ್ಮಗಳನ್ನು ಪ್ರಶಂಸಿಸುತ್ತಲೂ । **ಆಯೋಃ**—ಯಜಮಾನನನ್ನು । **ಪ್ರಭೃಥಸ್ಯ**—ತೇಜಸ್ಸಿನ ಪ್ರಸರಣದಿಂದ । **ಅಭ್ಯೂರ್ಣ್ವಾನಾ**—ಹೊದ್ದಿಸುತ್ತಲೂ (ದಯಮಾಡಲಿ).

॥ ಭಾವಾರ್ಥ ॥

ಗೋ ಸಮುದಾಯಕ್ಕೆ ಮಾತೆಯಾದ ಇಳಾದೇವಿಯೂ, ಉರ್ವಶಿಯೂ ಗಂಗಾನದಿಗಳೊಂದಿಗೆ ಕೂಡಿ ನಮ್ಮನ್ನು ಅನುಗ್ರಹಿಸಲಿ. ಅಲ್ಲದೇ, ಅತ್ಯಧಿಕವಾದ ಕಾಂತಿಯುಳ್ಳ ಉರ್ವಶಿಯು ನಮ್ಮ ಕರ್ಮಗಳನ್ನು ಪ್ರಶಂಸಿಸುತ್ತಲೂ ಯಜಮಾನನನ್ನು ತೇಜಸ್ಸಿನ ಪ್ರಸರಣದಿಂದ ಹೊಂದಿಸುತ್ತಲೂ ದಯಮಾಡಲಿ.

## English Translation

May Ila, the mother of the herd, and Urvashi, with the rivers, be favourable to us: may the bright-shining Urvashi (come), commanding our devotion, and investing the worshipper with light

॥ ಸಂಹಿತಾಪಾಠಃ ॥

ಸಿಷಕ್ತು ನ ಊರ್ಜವ್ಯಸ್ಯ ಪುಷ್ಟೇಃ ॥ ೨೦ ॥

॥ ಪದಪಾಠಃ ॥

ಸಿಸಕ್ತು । ನಃ । ಊರ್ಜವ್ಯಸ್ಯ । ಪುಷ್ಟೇಃ ॥ ೨೦ ॥

॥ ಸಾಯಣಭಾಷ್ಯಂ ॥

**ಊರ್ಜವ್ಯಸ್ಯೈತನ್ನಾಮಕಸ್ಯ ರಾಜ್ಞಃ ಪುಷ್ಟೇಃ ಪೋಷಕಸ್ಯ ಸಂಬಂಧಿನೋ ನೋಽಸ್ಮಾನ್ ಸಿಷಕ್ತು । ಸೇವತಾಂ । ಸಾಮರ್ಥ್ಯಾದ್ದೇವಸಂಘ ಇತಿ ಗಮ್ಯತೇ । ಅಥವೋರ್ವಶೀ ಮರುದ್ಗಣೋ ವಾ ಗೃಹ್ಯತೇ ಪ್ರಕೃತತ್ವಾದಿತಿ ॥**

॥ ಪ್ರತಿಪದಾರ್ಥ ॥

**ಊರ್ಜವ್ಯಸ್ಯ**—ಊರ್ಜವ್ಯನಾಮಕನಾದ ರಾಜನ । **ಪುಷ್ಟೇಃ**—ವೃದ್ಧಿಗೆ ಕಾರಣರಾದ । **ನಃ**—ನಮ್ಮನ್ನು । **ಸಿಷಕ್ತು**—ಸೇವಿಸಲಿ.

॥ ಭಾವಾರ್ಥ ॥

ಆ ದೇವಿಯು ಊರ್ಜವ್ಯನಾಮಕನಾದ ರಾಜನ ವೃದ್ಧಿಗೆ ಕಾರಣರಾದ ನಮ್ಮನ್ನು ಸೇವಿಸಲಿ.

## English Translation

May she cherish us (as the servants) of our patron Urjavya.

# ನಲವತ್ತೆರಡನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಪ್ರ ಶಂತಮೇತ್ಯಷ್ಟಾದಶರ್ಚಂ ದಶಮಂ ಸೂಕ್ತಂ ಭೌಮಸ್ಯಾತ್ರೇರಾರ್ಷಂ ತ್ರೈಷ್ಟುಭಂ । ಪೂರ್ವ-ಸೂಕ್ತೇ ವೈ ತದಿತ್ಯುಕ್ತತ್ವಾದಿದಮಪಿ ವೈಶ್ವದೇವಂ । ತಮು ಷ್ಟುಹೀತ್ಯೇಕಾದಶೀ ರುದ್ರದೇವತ್ಯಾ । ಸಪ್ತದಶ್ಯೇಕಪದ್ಯೈತಯೋರುಪಾಂತ್ಯೈಕಪದೇತ್ಯನುಕ್ರಮಿಷ್ಯಮಾಣತ್ವಾತ್ । ಅತ್ರಾನುಕ್ರಮಣಿಕಾ । ಪ್ರ ಶಂತಮಾ ದ್ವ್ಯೂನೈಕಾದಶೀ ರೌದ್ರೀತಿ । ವಿನಿಯೋಗೋ ಲೈಂಗಿಕಃ ॥**

ಅನುವಾದವು— **ಪ್ರಶಂತಮಾ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇದರಲ್ಲಿ ಹದಿನೆಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅತ್ರಿಯು ಋಷಿಯು, ತ್ರಿಷ್ಟುಪ್‌ಛಂದಸ್ಸು, ಪೂರ್ವಸೂಕ್ತದಂತೆ ಈ ಸೂಕ್ತಕ್ಕೂ ವಿಶ್ವೇದೇವತೆಗಳು ದೇವತೆಯು, **ತಮುಷ್ಟುಹಿ** ಎಂಬ ಈ ಸೂಕ್ತದ ಹನ್ನೊಂದನೆಯ ಋಕ್ಕು ರುದ್ರದೇವತಾಕವು ಹದಿನೇಳನೆಯ ಋಕ್ಕು ಏಕಪದಾ ಎಂಬ ಛಂದಸ್ಸಿನದು. ಅನುಕ್ರಮಣಿಕೆಯಲ್ಲಿ **ಪ್ರ ಶಂತಮಾ ದ್ವ್ಯೂನೈಕಾದಶೀ ರೌದ್ರೀತಿ** ಎಂದು ಹೇಳಿರುವುದು ವಿನಿಯೋಗವು ಲೈಂಗಿಕವು.

## ಸೂಕ್ತ—೪೨

॥ ಮಂಡಲ—೫ ॥ ಅನುವಾಕ—೩ ॥ ಸೂಕ್ತ—೪೨ ॥

॥ ಅಷ್ಟಕ—೪ । ಅಧ್ಯಾಯ— ೨ ॥ ವರ್ಗ— ೧೭, ೧೮, ೧೯ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೮

॥ ಋಷಿಃ—ಅತ್ರಿಃ ॥

॥ ದೇವತಾ—೧-೧೦, ೧೨-೧೮ ವಿಶ್ವೇದೇವಾಃ । ೧೧ ರುದ್ರಃ ॥

॥ ಛಂದಃ—೧-೧೬, ೧೮ ತ್ರಿಷ್ಟುಪ್ । ೧೭ ಏಕಪದಾ

॥ ಸಂಹಿತಾಪಾಠಃ ॥

ಪ್ರ ಶಂತಮಾ ವರುಣಂ ದೀಧಿತೀ ಗೀರ್ಮಿತ್ರಂ ಭಗಮದಿತಿಂ ನೂನಮಶ್ಯಾಃ ।

ಪೃಷದ್ಯೋನಿಃ ಪಂಚಹೋತಾ ಶೃಣೋತ್ವತೂರ್ತಪಂಥಾ ಅಸುರೋ ಮಯೋಭುಃ ॥ ೧ ॥

॥ ಪದಪಾಠಃ ॥

ಪ್ರ । ಶಂऽತಮಾ । ವರುಣಂ । ದೀಧಿತೀ । ಗೀಃ । ಮಿತ್ರಂ । ಭಗಂ । ಅದಿತಿಂ । ನೂನಂ । ಅಶ್ಯಾಃ ।

ಪೃಷತ್ऽಯೋನಿಃ । ಪಂಚऽಹೋತಾ । ಶೃಣೋತು । ಅತೂರ್ತऽಪಂಥಾಃ । ಅಸುರಃ । ಮಯಃऽಭುಃ ॥

॥ ಸಾಯಣಭಾಷ್ಯಂ ॥

ಪ್ರ ಶಂತಮಾತ್ಯಂತಂ ಸುಖಕರೀ ಗೀಃ ಸ್ತುತಿರೂಪಾ ವಾಗ್ವರುಣಂ ಮಿತ್ರಂ ಭಗಮದಿತಿಂ ಚ ದೀಧಿತೀ ದೀಧಿತ್ಯಾ ಕರ್ಮಣಾ ಹವಿಷ್ಪ್ರಕ್ಷೇಪಣಾತ್ಮಕೇನ ಸಹ ನೂನಮವಿತಥಂ ಪ್ರಾಶ್ಯಾಃ । ಪ್ರಾಪ್ನೋತು । ಕಿಂಚ ಪೃಷದ್ಯೋನಿಃ ಪೃಷದ್ವರ್ಣಾಂತರಿಕ್ಷಸ್ಥಃ ಪಂಚಹೋತಾ ಪಂಚವಿಧಸ್ಯ ಪ್ರಾಣಾಪಾನಾದಿಹೋಮಸ್ಯ ಸಾಧಕೋ ವಾಯುಃ । ಯದ್ವಾ । ಪಂಚಹೋತೇತಿ ವಾಯೋರ್ನಾಮ । ವಾಯುಃ ಪಂಚಹೋತಾ ಸ ಪ್ರಾಣ ಇತಿ ಹಿ ಶ್ರುತೇಃ । ಸ ಚಾತೂರ್ತಪಂಥಾ ಅಹಿಂಸಿತಗತಿರಸುರಃ ಪ್ರಾಣಸ್ಯ ದಾತಾ ಮಯೋಭುಃ ಸುಖಸ್ಯಾಸ್ಪದಭೂತಃ । ಏವಮುಕ್ತಲಕ್ಷಣೋ ವಾಯುಃ ಶೃಣೋತು ಸ್ತೋತ್ರಮಿತಿ ॥

॥ ಪ್ರತಿಪದಾರ್ಥ ॥

**ಶಂತಮಾ**—ಅತ್ಯಂತ ಸುಖಕಾರಣಿಯಾದ । **ಗೀಃ**—(ನಮ್ಮ) ಸ್ತುತಿರೂಪವಾದ ವಾಕ್ಕು । **ದೀಧಿತೀ**—ಹವಿಷ್ಪ್ರದಾನಾದಿ ಕರ್ಮಗಳೊಡನೆ ಸೇರಿ । **ವರುಣಂ**—ವರುಣನನ್ನೂ । **ಮಿತ್ರಂ**—ಮಿತ್ರನನ್ನೂ । **ಭಗಂ**—ಭಗನನ್ನೂ । **ಅದಿತಿಂ**—ಅದಿತಿಯನ್ನೂ । **ನೂನಂ**—ಖಂಡಿತವಾಗಿ । **ಪ್ರ ಅಶ್ಯಾಃ**—ಹೋಗಿ ಸೇರಿಕೊಳ್ಳಲಿ । **ಪೃಷದ್ಯೋನಿಃ**—ಚಿತ್ರವರ್ಣಾತ್ಮಕವಾದ ಅಂತರಿಕ್ಷವೇ ಸ್ವಸ್ಥಾನವಾಗಿ ಉಳ್ಳವನೂ । **ಅತೂರ್ತಪಂಥಾಃ**—ಅಪ್ರತಿಹತವಾದ ಗಮನವುಳ್ಳವನೂ । **ಅಸುರಃ**—ಪ್ರಾಣದಾತನೂ । **ಮಯೋಭುಃ**—ಸುಖಸಂಪಾದಕನೂ । **ಪಂಚಹೋತಾ**—ಪ್ರಾಣಾಪಾನಾದಿ ರೂಪವಾದ ಪಂಚವಿಧವಾದ ಹೋಮಸಂಪಾದಕನೂ ಆದ ವಾಯುವು । **ಶೃಣೋತು**—ನಮ್ಮ ಸ್ತುತಿಯನ್ನು ಕೇಳಲಿ

॥ ಭಾವಾರ್ಥ ॥

ಅತ್ಯಂತ ಸುಖಕಾರಿಣಿಯಾದ ನಮ್ಮ ಸ್ತುತಿಯು ಹವಿಷ್ಪ್ರದಾನಾದಿ ಕರ್ಮಗಳೊಡನೆ ಸೇರಿ ವರುಣನನ್ನೂ ಮಿತ್ರನನ್ನೂ ಭಗನನ್ನೂ ಅದಿತಿಯನ್ನೂ ಖಂಡಿತವಾಗಿ ಹೋಗಿ ಸೇರಿಕೊಳ್ಳಲಿ ಚಿತ್ರವರ್ಣಾತ್ಮಕವಾದ ಅಂತರಿಕ್ಷವೇ ನಿವಾಸಸ್ಥಾನವಾಗಿ ಉಳ್ಳವನೂ, ಅಪ್ರತಿಹತವಾದ ಗಮನವುಳ್ಳವನೂ ಪ್ರಾಣದಾತನೂ ಸುಖಸಂಪಾದಕನೂ ಪ್ರಾಣಾಪಾನಾದಿ ರೂಪವಾದ ಪಂಚವಿಧವಾದ ಹೋಮಸಂಪಾದಕನೂ ಆದ ವಾಯುವು ನಮ್ಮ ಸ್ತುತಿಯನ್ನು ಕೇಳಲಿ.

## English Translation

May our most animating praise, together with our offerings, successfully attain Varuna, Mitra, Bhaga and Aditi: may the ministrant

of the five (vital airs, Vayu), the dweller in the dappled (firmament), he whose path is unimpeded, who is the giver of life, the bestower of happiness, hear

॥ ವಿಶೇಷವಿಷಯಗಳು ॥

## ಪೃಷದ್ಯೋನಿಃ ಪಂಚಹೋತಾ

**ಪೃಷದ್ಯೋನಿಃ** ಮತ್ತು **ಪಂಚಹೋತಾ** ಎಂಬ ಎರಡು ಪದಗಳೂ **ವಾಯುವಿನ** ಸ್ವರೂಪವನ್ನು ವರ್ಣಿಸುವುವು. ಪೃಷದ್ವರ್ಣವುಳ್ಳ ಅಂತರಿಕ್ಷಸ್ಥನಾದುದರಿಂದ ವಾಯುವಿಗೆ ಪೃಷದ್ಯೋನಿಃ ಎಂದು ಹೆಸರು ಪೃಶ್ನಿ-**ಗರ್ಭ**ವೆಂಬ ಪರ್ಯಾಯನಾಮವೂ ಉಂಟು ಇದು ಮೊದಲನೆಯ ವಿಶೇಷಣದ ತಾತ್ಪರ್ಯ. ಎರಡನೆಯದಾಗಿ **ಪಂಚಹೋತಾ** ಎಂಬುದಕ್ಕೆ **ಪಂಚವಿಧಸ್ಯ ಪ್ರಾಣಾಪಾನಾದಿಹೋಮಸ್ಯ ಸಾಧಕೋ ವಾಯುಃ ।** ಪಂಚವಿಧವಾದ ಪ್ರಾಣಾಪಾನಾದಿರೂಪವಾದ ಹೋಮಕ್ಕೆ ಸಾಧಕನಾದ ವಾಯುವೆಂದು ಅರ್ಥಮಾಡಿದೆ. ಈ ಎರಡು ವಿಶೇಷಣಗಳೂ ವಾಯುವಿನ ಯಾವ ಯಾವ ಸ್ವರೂಪಗಳನ್ನು ತಿಳಿಸುವುವು ಎಂಬುದನ್ನು ಪರಿಶೀಲಿಸಬೇಕು ಮೊದಲನೆಯದಾಗಿ

**ಪೃಷದ್ಯೋನಿಃ :—ಅಥಾತೋ ಮಧ್ಯಸ್ಥಾನಾ ದೇವತಾಃ । ತಾಸಾಂ ವಾಯುಃ ಪ್ರಥಮಾಗಾಮೀ ಭವತಿ** (ನಿ. ೧೦.೧) ಅಂತರಿಕ್ಷಸ್ಥವಾದದೇವತೆಗಳಲ್ಲಿ ವಾಯುವಿಗೇ ಮೊದಲಸ್ಥಾನವು ಪ್ರಥಮಗಾಮಿಯು ಎಂದು ನಿರುಕ್ತಕಾರರು ವಾಯುವಿನ ಸ್ಥಾನವನ್ನು ನಿರ್ದೇಶಿಸಿದ್ದಾರೆ. ಕೇವಲ ಅಂತರಿಕ್ಷಸ್ಥ ಎಂಬುದಕ್ಕೂ ಪೃಷದ್ಯೋನಿಃ ಅಥವಾ ಪೃಶ್ನಿಗರ್ಭ ಎಂಬುದಕ್ಕೂ ವ್ಯತ್ಯಾಸವಿರುತ್ತದೆ. ಪೃಷದ್ಯೋನಿಃ ಎಂಬ ವಿಶೇಷಣವು ವಾಯುವಿನ ಯಜ್ಞಭೋಕ್ತೃತ್ವದ ಅಧಿಕಾರವನ್ನೂ ಸೂಚಿಸುವುದಾಗಿದೆ

**ಅಥ ನಮೋ ವಾಯವೇಽಂತರಿಕ್ಷಕ್ಷಿತೇ ಲೋಕಕ್ಷಿತೇ ॥**

(ಛಾ ಉ ೨-೨೪-೯)

ಇತ್ಯಾದಿ ವಾಕ್ಯಗಳಲ್ಲಿ ಹೇಳಿರುವ ಯಾಗಭೋಕ್ತೃತ್ವವೇ ಪ್ರಕೃತವಾದ ಮಂತ್ರದಲ್ಲಿ ಸೂಚಿತವಾಗಿದೆ. ಈ ಸ್ಥಾನದಿಂದಲೇ ಅವನು ಯಾಜ್ಯನೆಂದು ಶತಪಥಬ್ರಾಹ್ಮಣದಲ್ಲಿ ಈರೀತಿ ತಿಳಿಸಿದೆ

**ತಾನ್ವಾಯುರಬ್ರವೀತ್ । ಉಪಾಹಮಾಯಾನೀತಿ ಕೇನೇತಿ ದಿಗ್ಭಿರಿತಿ ತಥೇತಿ ದಿಶ್ಯಾಭಿರ್ಹ ತದುವಾಚ ತಸ್ಮಾದ್ದ್ವಿತೀಯಾಯ್ಯೈ ಸ್ವಯಮಾತೃಣಾಯಾ ಅನಂತರ್ಹಿತಾ ದಿಶ್ಯಾ ಉಪಧೀಯಂತೇ ತಸ್ಮಾದಂತರಿಕ್ಷಾದನಂತರ್ಹಿತಾ ದಿಶೋಽನಂತರ್ಹಿತೋ ವಾಯುರನಂತರ್ಹಿತೋ ಹ್ಯೇಷ ಏತಾಭಿರುಪೈತ್ ॥**

(ಶ. ಬ್ರಾ ೬-೨-೩-೪)

ಎರಡನೆಯ ಅಂತಸ್ತಿನ ಚಿತಿಯೇ ಅಂತರಿಕ್ಷರೂಪದಲ್ಲಿ ಕಾಣಿಸಿಕೊಂಡಿತು ಅಲ್ಲಿಗೆ ನಾನು ಹತ್ತುತ್ತೇನೆಂದು ವಾಯುವು ಹೇಳಿದನು ಆಗ ಚಿತಿಯು ಇಷ್ಟಕೆಗಳೊಡನೆ ಸೇರಿದನು. ಆಗ ಅವು ಅಂತರಿಕ್ಷಗಳಿಂದ ಪ್ರತ್ಯೇಕಿಸಲ್ಪಡಲಿಲ್ಲ. ಆಗ

ವಾಯುವಿಗೂ ಸಹ ಇಷ್ಟ್ರಕಾರೂಪವಾದ ಅಂತರಿಕ್ಷದೊಡನೆ ನಿತ್ಯಸಂಬಂಧವು ಬೆಳೆಯಿತು ಇತ್ಯಾದಿಯಾಗಿ ಅಂತರಿಕ್ಷಸ್ಥಿತ್ವವೇ ಯಜ್ಞಾರ್ಹತೆಯನ್ನುಂಟುಮಾಡಿತು ಎಂದು ತಿಳಿಸಿದೆ. ಬ್ರಹ್ಮೋದ್ಯಕಾಲದಲ್ಲಿ ವಾಯುವಿನ ಸ್ವರೂಪವನ್ನು ವರ್ಣಿಸುತ್ತಾ,

**ವಾಯುರ್ಗೃಹಪತಿರಿತಿ ಹೈಕ ಆಹುಃ ಸೋಽಂತರಿಕ್ಷಲೋಕಸ್ಯ ಗೃಹಪತಿಃ ।**

ಇತ್ಯಾದಿಯಾಗಿ ಅಂತರಿಕ್ಷಲೋಕದ ಗಾರ್ಹಪತ್ಯವು ವಾಯುವಿನ ಅಧಿಕಾರವೆಂದು ತಿಳಿಸಿದೆ. ಈ ರೀತಿ **ಪೃಷದ್ಯೋನಿಃ** ಎಂಬ ವಿಷಯವು ವಾಯುವಿನ ಸ್ಥಾನನಿರ್ದೇಶಮಾಡುತ್ತಾ ಅಂತರಿಕ್ಷವೇ ವಾಯುವಿನ **ಯೋನಿಯು (ಸ್ಥಾನವು)** ಎಂದು ತಿಳಿಸುವುದಾದರೂ ಸಹ, ಕೆಲವೆಡೆಗಳಲ್ಲಿ ದ್ಯಾವಾಪೃಥಿವಿಗಳೆರಡೂ ವಾಯುವಿನ ಉತ್ಪತ್ತಿಗೆ ಕಾರಣಗಳೆಂದು ಸ್ಪಷ್ಟವಾಗಿ ತಿಳಿಸಿದೆ. ಉದಾಹರಣೆಗೆ—

**ರಾಯೇ ನು ಯಂ ಯಜ್ಞತೂ ರೋದಸೀಮೇ ರಾಯೇ ದೇವೀ ಧಿಷಣಾ ಧಾತಿ ದೇವಂ ॥**

(ಋ. ಸಂ. ೭-೯೦-೩)

ಇತ್ಯಾದಿ ವಾಕ್ಯಗಳಲ್ಲಿ ದ್ಯಾವಾಪೃಥಿವಿಗಳು ವಾಯುವನ್ನು ಜನಿಸುವಂತೆ ಮಾಡಿದವು ಎಂದು ಎರಡುಲೋಕಗಳಿಗೂ ವಾಯುಯೋನಿತ್ವವು ಸಾಧಾರಣವಾದ ಅಂಶವಾಗಿರುತ್ತದೆ. **ಪ್ರಾಣಾದ್ವಾಯುರಜಾಯತ (ಋ. ಸಂ. ೧೦-೯೦-೧೩)** ಪರಮಪುರುಷನ ಪ್ರಾಣದಿಂದ ವಾಯುವಿನ ಉತ್ಪತ್ತಿಯಾಯಿತು ಎಂಬ ವಾಕ್ಯಗಳು ಪ್ರಕೃತವಾದ ಮಂತ್ರದಲ್ಲಿ ಎರಡನೆಯ ವಿಶೇಷಣವಾದ ಪಂಚಹೋತಾ ಎಂಬ ಪದದಿಂದ ಸೂಚಿತವಾಗುವ ವಾಯುವಿನ ಪಂಚಹೋತೃತ್ವವನ್ನು ನಿರ್ದೇಶಿಸುವ ವಾಕ್ಯಗಳಾಗಿವೆ. **ಪಂಚಹೋತೃ** ಪದದಿಂದ ಸೂಚಿತವಾಗುವ ಪಂಚಪ್ರಾಣಗಳಿಗೂ ಮತ್ತು ವಾಯುವಿಗೂ ಇರತಕ್ಕ ಸಂಬಂಧವೂ ಮತ್ತು ವಾಯುವಿನ ಅಂತರಿಕ್ಷದ ಆಧಿಪತ್ಯವೂ ಒಟ್ಟಿಗೆ ಒಂದೇ ಸಂದರ್ಭದಲ್ಲಿ ಶತಪಥಬ್ರಾಹ್ಮಣದಲ್ಲಿ ಈ ರೀತಿ ತಿಳಿಸಿದೆ

**ಸ ಯಃ ಸ ವೈಶ್ವಾನರ.   .   ಅಂತರಿಕ್ಷಮೇವ ವಿಶ್ವಂ । ವಾಯುರ್ನರಃ ॥**

(ಶ. ಬ್ರಾ. ೯-೩-೧-೩)

ಅಂತರಿಕ್ಷವೇ ವಿಶ್ವವು ವಾಯುವು ಅಂತರಿಕ್ಷಾಧಿಪತಿಯಾದುದರಿಂದ ಇವನಿಗೂ **ವೈಶ್ವಾನರ** ಎಂಬ ಪ್ರತೀತಿಯುಂಟಾಗುತ್ತದೆ. ಅದಲ್ಲದೇ ವಾಯುವಿನ ಪ್ರಭಾವವು ಇನ್ನೂ ವಿವರಿಸಲ್ಪಡಬೇಕಾದರೆ,

**ಇದಮೇವಾಂತರಿಕ್ಷಂ । ತಸ್ಮಾದೇತದಲೋಮಕಮಲೋಮಕಮಿವ ಹ್ಯಂತರಿಕ್ಷಂ ತದೇತದ್ವಿಶ್ವಂ ಪ್ರಾಣ ಏವ ವಾಯುಃ ಸ ನರಃ ಸ ಮಧ್ಯೇನಾಸ್ಯ ಭವತಿ ಮಧ್ಯೇ ನ ಹ್ಯಂತರಿಕ್ಷಸ್ಯ ವಾಯುಃ ॥**

(ಶ ಬ್ರಾ. ೯-೩-೧-೫)

ವಿಶ್ವಪುರುಷನ ಈ ಮಧ್ಯಭಾಗವೇ ಅಂತರಿಕ್ಷವು. ಇದು ರೋಮರಹಿತವಾದುದಾಗಿದೆ ವಿಶ್ವಾತ್ಮನ ಈ ಭಾಗಕ್ಕೆ ವಾಯುವೇ ಪ್ರಾಣರೂಪನು, ಇವನೇ ನರನು. ಈ ವಾಯುವೇ ಮಧ್ಯಮಲೋಕಾಧಿಪತಿಯು, ಇತ್ಯಾದಿವಾಕ್ಯಗಳು ವಾಯುವಿನ ಸ್ವರೂಪ ಮತ್ತು ಅಧಿಕಾರಗಳನ್ನು ತಿಳಿಸುತ್ತವೆ

**ಅಥ ವಿಶ್ವಜ್ಯೋತಿಷಮುಪದಧಾತಿ । ವಾಯುರ್ವೈ ಮಧ್ಯಮಾ ವಿಶ್ವಜ್ಯೋತಿರ್ವಾಯುರ್ಹ್ಯೇವಾಂತರಿಕ್ಷಲೋಕೇ ವಿಶ್ವಂ ಜ್ಯೋತಿರ್ವಾಯುಮೇವೈತದುಪದಧಾತಿ ತಾಮನಂತರ್ಹಿತಾಂ ದಿಶ್ಯಾಭ್ಯ ಉಪದಧಾತಿ ದಿಕ್ಷು ತದ್ವಾಯುಂ ದಧಾತಿ ತಸ್ಮಾತ್ಸರ್ವಾಸು ದಿಕ್ಷು ವಾಯುಃ ॥**

(ಶ ಬ್ರಾ ೮-೩-೨-೧)

ವಿಶ್ವಜ್ಯೋತಿಸಂಜ್ಞಕಗಳಾದ ಇಷ್ಟಕೆಗಳನ್ನು ರಚಿಸುವಾಗ ಈ ರೀತಿಯಾದ ವಾಯುವಿನ ಪ್ರಶಂಸೆಯಿರುತ್ತದೆ ಮಧ್ಯಭಾಗದ ವಿಶ್ವಜ್ಯೋತಿಯೇ ವಾಯುವು ವಾಯುವೇ ಲೋಕಪ್ರಕಾಶಕವಾದ ಜ್ಯೋತಿಯು ಇದೇ ಸಕಲ ದಿಕ್ಕುಗಳನ್ನೂ ಮತ್ತು ಅವಾಂತರ ದಿಕ್ಕುಗಳನ್ನೂ ಪ್ರತಿಬಿಂಬಿಸುವುದರಿಂದ ಇದು ಸರ್ವವ್ಯಾಪಿಯಾದ ತೇಜೋಮೂರ್ತಿಯಾಗಿದೆ. ವಿಶ್ವಚೈತನ್ಯವನ್ನುಂಟುಮಾಡುವ ಶಕ್ತಿಯನ್ನೂ ಹೊಂದಿರುತ್ತದೆ. ವಿಶ್ವಜ್ಯೋತಿರೂಪವಾದ ಈ ವಾಯುವಿಗೆ ಅಂತರಿಕ್ಷವು ಕೇವಲ ಉತ್ಪತ್ತಿಸ್ಥಾನವೇ ಹೊರತು ಈ ವಾಯುವಿನ ಅಸ್ತಿತ್ವವು ಸರ್ವವ್ಯಾಪಕವಾಗಿದೆ.

**ವಾಯುರ್ವಾವ ಧರ್ತ್ರಂ ಚತುಷ್ಟೋಮಃ ಸ ಆಭಿಶ್ಚತಸೃಭಿರ್ದಿಗ್ಭಿಃ ಸ್ತುತೇ ತದ್ಯತ್ತಮಾಹ ಧರ್ತ್ರಮಿತಿ ಪ್ರತಿಷ್ಠಾ ವೈ ಧರ್ತ್ರಂ ವಾಯುರು ಸರ್ವೇಷಾಂ ಭೂತಾನಾಂ ಪ್ರತಿಷ್ಠಾ ತದೇವ ತದ್ರೂಪಮುಪದಧಾತಿ ಸ ವೈ ವಾಯುಮೇವ ಪ್ರಥಮಮುಪದಧಾತಿ ವಾಯುಮುತ್ತಮಂ ವಾಯುನೈವ ತದೇತಾನಿ ಸರ್ವಾಣಿ ಭೂತಾನ್ಯುಭಯತಃ ಪರಿಗೃಹ್ಣಾತಿ ॥**

(ಶ ಬ್ರಾ. ೮-೪-೧-೨೬)

ಚತುಷ್ಟೋಮಾಂಗವಾದ ಸ್ತುತಿಯಿಂದ ವಾಯುವಿನ ಪ್ರಶಂಸೆಯು ಈ ರೀತಿಯಿರುತ್ತದೆ. ಚತುಷ್ಟೋಮವೇ ಯಾಗಗಳಿಗೆಲ್ಲಾ ಧಾರಕವಾದರೆ, ವಾಯುವೇ ಈ ಚತುಷ್ಟೋಮವು. ಆದುದರಿಂದ, ವಾಯುವೇ ಸಕಲ ಯಾಗಗಳಿಗೂ ಧಾರಕವು. ಸಕಲ ದಿಕ್ಕುಗಳಿಂದಲೂ ಸ್ತುತಿರೂಪವಾದ ದಾನವನ್ನು ಮಾಡುತ್ತಾ ಬರುವುದರಿಂದ ವಾಯುವು ಸರ್ವದಿಕ್ಕಿನಿಂದಲೂ ಯಾಗಧಾರಕನಾಗಿರುತ್ತಾನೆ. ಅಲ್ಲದೇ, ಸಕಲ ಭೂತಗಳಿಗೂ ಆಧಾರಭೂತನಾಗಿದ್ದಾನೆ. ಅವಲಂಬನವೂ ಆಗಿದ್ದಾನೆ ಇತ್ಯಾದಿಯಾಗಿ ಯಜ್ಞಪ್ರಾಧಾನ್ಯವು ಪ್ರಶಂಸಿತವಾಗಿದೆ

ಪಂಚಹೋತಾ :—

ಪ್ರಕೃತವಾದ ಮಂತ್ರದಲ್ಲಿ ಪಂಚಪ್ರಾಣರೂಪವಾದ ಹೋಮಸಾಧಕನೆಂದು **ಪಂಚಹೋತಾ** ಎಂಬ ವಿಶೇಷಣವು ಪ್ರಶಂಸಿಸುವ ಸ್ವಾಯತ್ತಿಕ ಗುಣವಾವುದೆಂಬುದನ್ನು ಪರಿಶೀಲಿಸಬೇಕು. ಸಕಲ ಪ್ರಾಣಿಗಳಿಗೂ ಚೈತನ್ಯದಾಯಿಯಾದುದರಿಂದ ವಾಯುವೇ ಪ್ರಾಣಾಧಿಪತಿಯೆಂದು ಅನೇಕ ಕಡೆಗಳಲ್ಲಿ ಪ್ರಶಂಸಿತವಾಗಿದೆ ಭೂತಗಳಿಗೆಲ್ಲಾ ಚೈತನ್ಯದಾಯಿಗಳಾದ ಅಗ್ನಿ, ಆದಿತ್ಯ ಮತ್ತು ಸೋಮ ಈ ಮೂರುದೇವತೆಗಳಿಗೂ ಇವನೇ ಆಧಾರವು, ಆಶ್ರಯವು ಮತ್ತು ಅವಲಂಬನವು ಇವನೇ ವಿಶ್ವಪ್ರಾಣರೂಪನು, ಅದು ಹೇಗೆಂದರೆ,

**ವಾಯುರ್ವಾವ ಸಂವರ್ಗೋ ಯದಾ ವಾ ಅಗ್ನಿರುದ್ವಾಯತಿ ವಾಯುಮೇವಾಪ್ಯೇತಿ ಯದಾ ಸೂರ್ಯೋಽಸ್ತಮೇತಿ ವಾಯುಮೇವಾಪ್ಯೇತಿ ಯದಾ ಚಂದ್ರೋಽಸ್ತಮೇತಿ ವಾಯುಮೇವಾಪ್ಯೇತಿ ॥**

(ಛಾ ಉ. ೪-೩-೧)

ಲೋಕದಲ್ಲಿ ಸಕಲ ವಸ್ತುಗಳನ್ನೂ ವಾಯುವೇ ಸ್ವಾಯತ್ತೀಕರಿಸಿಕೊಳ್ಳುತ್ತಾನೆ. ಅಗ್ನಿಯು ಪ್ರಜ್ವಲಿಸಿ ಪ್ರಶಾಂತ ನಾಗುವಾಗಲೂ, ಸೂರ್ಯನು ಅಸ್ತಂಗತನಾದಮೇಲೂ ಮತ್ತು ಚಂದ್ರನು ಅಸ್ತಂಗತನಾದ ಮೇಲೂ ಸಹ ವಾಯುವನ್ನೇ ಸೇರಿ ಅಲ್ಲೇ ಐಕ್ಯವಾಗುತ್ತಾರೆ.

**ತೌ ವಾ ಏತೌ ದ್ವೌ ಸಂವರ್ಗೌ ವಾಯುರೇವ ದೇವೇಷು ಪ್ರಾಣಃ ಪ್ರಾಣೇಷು ॥**

(ಛಾ. ಉ. ೪-೩-೪)

ಜಗತ್ತಿನ ಸಂವರ್ಗಗಳಲ್ಲಿ (ಎಲ್ಲವನ್ನೂ ತನ್ನಲ್ಲಿಯೇ ಅಡಕಮಾಡಿಕೊಳ್ಳತಕ್ಕವು) ಮುಖ್ಯವಾಗಿ ಎರಡೇ ಸರ್ವಾಕರ್ಷಕ ವಾಗಿವೆ. ದೇವತೆಗಳಲ್ಲೆಲ್ಲಾ ವಾಯುವು ಮತ್ತು ಪಂಚವಿಧವಾದ ಪ್ರಾಣಗಳಲ್ಲೆಲ್ಲಾ ಪ್ರಾಣವು ವಾಯುವೂ ಪ್ರಾಣಗಳೂ ಭಿನ್ನತತ್ವಗಳಲ್ಲ

**ವಾಯುಃ ಪ್ರಾಣೋ ಭೂತ್ವಾ ನಾಸಿಕೇ ಪ್ರಾವಿಶತ್ ।**

(ಐ. ಉ. ೨. ೪)

ವಾಯುವೇ ಪ್ರಾಣರೂಪವಾಗಿ ನಾಸಿಕಗಳನ್ನು ಪ್ರವೇಶಿಸಿದನು ಇತ್ಯಾದಿಯಾಗಿ ವರ್ಣಿಸಿವೆ. ಪಂಚಪ್ರಾಣಗಳೂ ಸಹ ವಾಯುವಿನ ಪಂಚವಿಧವಾದ ರೂಪಾಂತರಗಳು ಎಂಬುದನ್ನು ಕೆಳಗಿನ ವಾಕ್ಯಗಳು ವಿವರಿಸುತ್ತವೆ ಅಲ್ಲದೇ, ಪ್ರಾಣ ರೂಪವಾದ ಸೋಮನಿಗೂ ವಾಯುವಿಗೂ ಇರತಕ್ಕ ಸಂಬಂಧವನ್ನೂ ತಿಳಿಸುತ್ತದೆ.

**ತಸ್ಯ ವೃಷ್ಣಿವಾಹನೋಽಶ್ವರಥೋ ದಕ್ಷಿಣಾ । ತ್ರಯೋಽಶ್ವಾ ದ್ವೌ ಸವ್ಯಷ್ಟೃಸಾರಥೀ ತೇ ಪಂಚಪ್ರಾಣಾ ಯೋ ವೈ ಪ್ರಾಣಃ ಸ ವಾತಸ್ತದ್ಯತೇ ತಸ ಕರ್ಮಣ ಏಷಾ ದಕ್ಷಿಣಾ ತಸ್ಮಾತ್ಪಂಚವಾತೀಯಂ ನಾಮ ॥**

(ತೈ. ಬ್ರಾ. ೫. ೨. ೪-೯) .

ಇದು **ಪಂಚವಾತೀಯ**ವೆಂಬ ಆಹುತ್ಯರ್ಪಣೆಯ ವಿವರಣವು ಇಲ್ಲಿ ಪಂಚಾಹುತಿಗಳಾವುವೆಂದರೆ, ಮೂರು ಅಶ್ವಗಳು, ಯೋಧ, ಮತ್ತು ಸಾರಥಿ. ಪಂಚಪ್ರಾಣಗಳೇ ಈ ಅಶ್ವತ್ರಯ, ಯೋಧ ಮತ್ತು ಸಾರಥಿ. ವಾಯುವಿನ ಪಂಚವಿಧವಾದ ರೂಪಾಂತರಗಳೇ ಈ ಪಂಚಪ್ರಾಣಗಳು. ಆದುದರಿಂದ ತನ್ನ ಪಂಚರೂಪಗಳಾದ ಆಹುತಿಗಳಿಂದ ಯಜ್ಞಸಾಧಕನಾಗಿರುವುದರಿಂದ ಈ **ಪಂಚವಾತೀಯತ್ವ**ದಿಂದ ಒಂದು ವಿಧವಾದ ಪಂಚಹೋತೃತ್ವವೂ ಸಿದ್ಧವಾಗು ತ್ತದೆ ಇದಲ್ಲದೇ, ಪಂಚಹೋತೃತ್ವಕ್ಕೆ ಆಧ್ಯಾತ್ಮಿಕವಾದ ಅರ್ಥವೂ ಇರುತ್ತದೆ ಕೆಳಗಿನ ವಿವರಣವು ಆಧಿದೈವಿಕ ಮತ್ತು ಅಧ್ಯಾತ್ಮಿಕರೂಪವಾದ ಎರಡು ವಿಧವಾದ ತಾತ್ಪರ್ಯಗಳನ್ನೂ ಒಳಗೊಂಡಿರುತ್ತದೆ. ಮತ್ತು ವಾಯುವಿನ ಪಂಚ ಹೋತೃತ್ವವನ್ನೂ ವಿಶದಪಡಿಸುತ್ತದೆ.

**ಪ್ರಾಣೋ ವೈ ವಾಯುಃ । ಪ್ರಾಣೋಽಗ್ನಿಸ್ತಸ್ಯೈವಾ ಇಷ್ಟಕಾ । ಯಃ ಪ್ರಾಣೋ ವ್ಯಾನೋಽಪಾನಃ ಸಮಾನ ಉದಾನಃ ॥**

(ಮೈತ್ರ್ಯುಪನಿಷತ್ ೬-೩೩)

ಒಂದು ದೃಷ್ಟಿಯಿಂದ ಗಾರ್ಹಪತ್ಯಾಗ್ನಿಯು ಪಂಚರ್ತುರೂಪಾತ್ಮಕವಾದ ಸಂವತ್ಸರರೂಪದಲ್ಲಿರುತ್ತದೆ, ಇನ್ನೊಂದು ದೃಷ್ಟಿಯಿಂದ ಇದೇ ಗಾರ್ಹಪತ್ಯವು ಪಂಚಪ್ರಾಣಾತ್ಮಕವಾದ ವಾಯುರೂಪದಲ್ಲಿರುತ್ತದೆ. ಪ್ರಾಣ, ಅಪಾನ, ವ್ಯಾನ,

ಉದಾನ ಮತ್ತು ಸಮಾನಸಂಜ್ಞಕಗಳಾದ ಪಂಚಪ್ರಾಣಗಳೂ ಈ ಗಾರ್ಹಪತ್ಯರೂಪದ ವಾಯುವಿಗೆ ಇಷ್ಟಕಗಳು. ಈ ಪಂಚಪ್ರಾಣರೂಪವಾದ ಹೋಮದ ಸಾಧಕನೇ ವಾಯುವು ಎಂದು ವಾಯುವಿನ ಪಂಚಹೋತೃತ್ವವು ವರ್ಣಿತವಾಗಿದೆ.

ಇದಲ್ಲದೇ, ಆತ್ಮಸಾಕ್ಷಾತ್ಕಾರರೂಪವಾದ ಯಜ್ಞದಲ್ಲಿ ಈ ಪಂಚಪ್ರಾಣಗಳನ್ನೊಳಗೊಂಡ ವಾಯುವಿನ ಹೋಮಸಾಧಕತ್ವವು ಹೇಗೆ ಎಂದರೆ, ಈ ಆಧ್ಯಾತ್ಮಿಕಸ್ವರೂಪವುಳ್ಳ ಹೋಮದ ವರ್ಣನವು ಈರೀತಿಯಿದೆ.

**ತಸ್ಯ ಹ ವಾ ಏತಸ್ಯ ಹೃದಯಸ್ಯ ಪಂಚ ದೇವಸುಷಯಃ ಸ ಯೋಽಸ್ಯ ಪ್ರಾಙ್‌ಸುಷಿ ಸ ಪ್ರಾಣಸ್ತಚ್ಚಕ್ಷುಃ ಸ ಆದಿತ್ಯಸ್ತದೇತತ್ತೇಜೋಽನ್ನಾದ್ಯಮಿತ್ಯುಪಾಸೀತ ತೇಜಸ್ವ್ಯನ್ನಾದೋ ಭವತಿ ಯ ಏವಂ ವೇದ ||**

(ಛಾ. ಉ. ೩-೧೩-೧)

ಪುರುಷ ಹೃದಯದಲ್ಲಿ ಬ್ರಹ್ಮಸಾಕ್ಷಾತ್ಕಾರರೂಪವಾದ ಯಜ್ಞಕ್ಕೆ ಐದು ಮಾರ್ಗಗಳಿವೆ ಇವುಗಳಲ್ಲಿ ಪೂರ್ವದಿಕ್ಕಿನ ದ್ವಾರವೇ ಪ್ರಾಣವು. ಅದೇ ಚಕ್ಷುಸ್ಸು ಮತ್ತು ಅದೇ ಆದಿತ್ಯನು. ಆ ತೇಜಸ್ಸನ್ನೇ ಅನ್ನವೆಂದುಪಾಸಿಸಬೇಕು. ಈ ತತ್ತ್ವವನ್ನರಿತವನು ತೇಜಸ್ವಿಯೂ ಅನ್ನವಂತನೂ ಆಗುತ್ತಾನೆ.

**ಅಥ ಯೋಽಸ್ಯ ದಕ್ಷಿಣಃ ಸುಷಿಃ । ಸ ವ್ಯಾನಸ್ತಚ್ಛ್ರೋತ್ರಂ ಸ ಚಂದ್ರಮಾಸ್ತದೇತಚ್ಛ್ರೀಶ್ಚ ಯಶಶ್ಚೇತ್ಯುಪಾಸೀತ ಶ್ರೀಮಾನ್ ಯಶಸ್ವೀ ಭವತಿ ಯ ಏವಂ ವೇದ ||**

(ಛಾ ಉ ೩-೧೩-೨)

ದಕ್ಷಿಣದಿಕ್ಕಿನ ಮಾರ್ಗವೇ ವ್ಯಾನವು ಅದೇ ಶ್ರೋತ್ರವು ಮತ್ತು ಚಂದ್ರನು. ಅದನ್ನೇ ಉಪಾಸಕನು ಯಶಸ್ಸೆಂದೂ ಸಂಪತ್ತೆಂದೂ ಉಪಾಸಿಸಬೇಕು ಈ ತತ್ತ್ವವನ್ನರಿತವನು ಶ್ರೀಮಂತನೂ ಮತ್ತು ಯಶಸ್ವಿಯೂ ಆಗುತ್ತಾನೆ.

**ಅಥ ಯೋಽಸ್ಯ ಪ್ರತ್ಯಙ್‌ಸುಷಿಃ ಸೋಽಪಾನಃ ಸಾ ವಾಕ್ ಸೋಽಗ್ನಿಸ್ತದೇತದ್ಬ್ರಹ್ಮ-ವರ್ಚಸಮನ್ನಾದ್ಯಮಿತ್ಯುಪಾಸೀತ ಬ್ರಹ್ಮವರ್ಚಸ್ಯನ್ನಾದೋ ಭವತಿ ಯ ಏವಂ ವೇದ ।**

(ಛಾ ಉ. ೩-೧೩-೩)

ಪಶ್ಚಿಮದಿಕ್ಕಿನ ಮಾರ್ಗವೇ ಅಪಾನವು. ಅದೇ ವಾಕ್ಕು ಮತ್ತು ಅಗ್ನಿಯು ಉಪಾಸಕನು ಅದನ್ನು ಬ್ರಹ್ಮವರ್ಚಸ್ಸಿಗೆ ಹೇತುವಾದ ಬ್ರಹ್ಮಜ್ಞಾನವೆಂದೂ ಅನ್ನವೆಂದೂ ಉಪಾಸಿಸಬೇಕು ಈ ತತ್ತ್ವವನ್ನರಿತವನು ಬ್ರಹ್ಮವರ್ಚಸ್ವಿಯೂ ಅನ್ನವಂತನೂ ಆಗುತ್ತಾನೆ.

**ಅಥ ಯೋಽಸ್ಯೋದಙ್‌ಸುಷಿಃ ಸ ಸಮಾನಸ್ತನ್ಮನಃ ಸ ಪರ್ಜನ್ಯಸ್ತದೇತತ್ಕೀರ್ತಿಶ್ಚ ವ್ಯುಷ್ಟಿ-ಶ್ಚೇತ್ಯುಪಾಸೀತ ಕೀರ್ತಿಮಾನ್ವ್ಯುಷ್ಟಿಮಾನ್ಭವತಿ ಯ ಏವಂ ವೇದ ||**

(ಛಾ. ಉ. ೩-೧೩-೪)

ಸಮಾನವೇ ಉತ್ತರ ದಿಕ್ಕಿನ ಮಾರ್ಗವು ಅದೇ ಮನಸ್ತತ್ತ್ವವು ಮತ್ತು ಪರ್ಜನ್ಯಾತ್ಮಕವು ಅದೇ ಕೀರ್ತಿದಾಯಕವು ಮತ್ತು ಸೌಂದರ್ಯಪ್ರದವು. ಈ ತತ್ತ್ವವನ್ನರಿತವನು ಕೀರ್ತಿವಂತನೂ ಪ್ರಭಾವಶಾಲಿಯೂ ಆಗುತ್ತಾನೆ

**ಅಥ ಯೋಽಸ್ಯೋರ್ಧ್ವಃ ಸುಷಿಃ ಸ ಉದಾನಃ ಸ ವಾಯುಃ ಸ ಆಕಾಶಸ್ತದೇತದೋಜಶ್ಚ ಮಹಶ್ಚೇತ್ಯುಪಾಸೀತೌಜಸ್ವೀ ಮಹಸ್ವಾನ್ಭವತಿ ಯ ಏವಂ ವೇದ ॥**

(ಛಾ. ಉ ३-೧३-೫)

ಉದಾನವೇ ಊರ್ಧ್ವಭಾಗದ ದ್ವಾರವು. ಅದೇ ವಾಯುವು ಮತ್ತು ಅದೇ ಆಕಾಶವು. ಉಪಾಸಕನು ಇದನ್ನು ಓಜಸ್ಸೆಂದೂ ಮತ್ತು ವೀರ್ಯವೆಂದೂ ಉಪಾಸಿಸಬೇಕು. ಇದನ್ನರಿತವನು ಓಜಸ್ವಿಯೂ ವೀರ್ಯವಂತನೂ ಆಗುತ್ತಾನೆ.

**ತೇ ವಾ ಏತೇ ಪಂಚ ಬ್ರಹ್ಮಪುರುಷಾಃ ಸ್ವರ್ಗಸ್ಯ ಲೋಕಸ್ಯ ದ್ವಾರಪಾಃ ಏತಾನೇವಂ ಪಂಚ . .... ಸ್ವರ್ಗಸ್ಯ ಲೋಕಸ್ಯ ದ್ವಾರಪಾನ್ವೇದ ॥**

(ಛಾ ಉ ३-೧३-೬)

ಈ ಐದು ವಿಧವಾದ ಪ್ರಾಣಾತ್ಮಕವಾದ ವಾಯು ವಿಭಾಗಗಳೇ ಬ್ರಹ್ಮಪುರುಷನ ದ್ವಾರಪಾಲಕರು. ಈ ತತ್ತ್ವವನ್ನರಿತವನು ಬ್ರಹ್ಮಸಾಯುಜ್ಯವನ್ನು ಪಡೆಯುತ್ತಾನೆ ಎಂಬುದಾಗಿ ಆಧ್ಯಾತ್ಮಿಕವಾದ ಪಂಚಹೋತೃತ್ವವು ವರ್ಣಿತವಾಗಿದೆ.

ಇದನ್ನೇ ಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ವಿವರಿಸುತ್ತಾ, **ಪ್ರಾಣಾಯ ಸ್ವಾಹೇತಿ ಹುತಂ ಹವಿಃ ಸರ್ವಮೇತತ್ತರ್ಪಯತೀತಿ** (ಛಾ. ಉ ಶ. ಭಾ ३-೧३.೧) ಇತ್ಯಾದಿ ವಾಕ್ಯಗಳಿಂದ ವಿವರಿಸಿದ್ದಾರೆ

॥ ಸಂಹಿತಾಪಾಠಃ ॥

ಪ್ರತಿ ವಾಂ ಸ್ತೋಮಮದಿತಿರ್ಜಗೃಭ್ಯಾತ್ಸೂನುಂ ನ ಮಾತಾ ಹೃದ್ಯಂ ಸುಶೇವಂ ।
ಬ್ರಹ್ಮ ಪ್ರಿಯಂ ದೇವಹಿತಂ ಯದಸ್ತ್ಯಹಂ ಮಿತ್ರೇ ವರುಣೇ ಯನ್ಮಯೋಭು ॥ ೨ ॥

॥ ಪದಪಾಠಃ ॥

ಪ್ರತಿ । ವಾಂ । ಸ್ತೋಮಂ । ಅದಿತಿಃ । ಜಗೃಭ್ಯಾತ್ । ಸೂನುಂ । ನ । ಮಾತಾ । ಹೃದ್ಯಂ । ಸುಽಶೇವಂ ।
ಬ್ರಹ್ಮ । ಪ್ರಿಯಂ । ದೇವಽಹಿತಂ । ಯತ್ । ಅಸ್ತಿ । ಅಹಂ । ಮಿತ್ರೇ । ವರುಣೇ । ಯತ್ । ಮಯಃಽಭು ॥ ೨ ॥

॥ ಸಾಯಣಭಾಷ್ಯಂ ॥

**ಮೇ ಮದೀಯಂ ಸ್ತೋಮಂ ಸ್ತೋತ್ರಮದಿತಿರ್ದೇವತಾ ಪ್ರತಿ ಜಗೃಭ್ಯಾತ್ । ಪ್ರತಿಗೃಹ್ಣಾತು । ಸೂನುಂ ನ ಮಾತಾ ಸ್ವತನುಜಂ ಜನನೀವ । ಸಾ ಯಥಾ ಪ್ರತಿಗೃಹ್ಯಾಲಿಂಗ್ಯ ಪರಿತುಷ್ಯತಿ ತದ್ವದಿತ್ಯರ್ಥಃ । ಕೀದೃಶಂ ತಂ । ಹೃದ್ಯಂ ಹೃದಯಂಗಮಂ ಸುಶೇವಂ ಶೋಭನಸುಖಕರಂ । ಏತದ್ದ್ವಯಂ ಸಾಧಾರಣಂ । ಕಿಂಚ ಬ್ರಹ್ಮ ಮಂತ್ರಜಾತಂ ಪ್ರಿಯಂ ಪ್ರಿಯಕರಂ ದೇವಹಿತಂ ದೇವೈಃ ಪ್ರಾಪ್ಯಂ ಯದಸ್ತಿ ಯದ್ಬ್ರಹ್ಮ ಮಯೋಭು ಸುಖಸಾಧನಂ ತದಹಂ ಮಿತ್ರೇ ವರುಣೇ ಚ ಪ್ರಾಪಯಾಮೀತಿ ಶೇಷಃ । ಯದ್ವಾ । ಮಿತ್ರೇ ವರುಣೇ ಚಾಹೋರಾತ್ರಾಭಿಮಾನಿದೇವಯೋರ್ಯದುಕ್ತಲಕ್ಷಣಂ ಬ್ರಹ್ಮ ಪರಿವೃಢಂ ಯಜ್ಞಾದಿರೂಪಂ ಕರ್ಮಾಸ್ತಿ ತದಹಂ ಧಾರಯಾಮೀತಿ ॥**

॥ ಪ್ರತಿಪದಾರ್ಥ ॥

**ಮಾತಾ**—ತಾಯಿಯು । **ಸೂನಂ ನ**—ತನ್ನ ಮಗುವನ್ನು ಆದರದಿಂದ ಅಪ್ಪಿಕೊಳ್ಳುವಂತೆ । **ಅದಿತಿಃ**—ಅದಿತಿಯು । **ಮೇ**—ನನ್ನ । **ಹೃದ್ಯಂ**—ಪ್ರೀತಿಜನಕವಾದುದೂ । **ಸುಶೇವಂ**—ಶೋಭನಾತ್ಮಕವಾದುದೂ ಆದ । **ಸ್ತೋಮಂ**—ಸ್ತೋತ್ರವನ್ನು । **ಪ್ರತಿ ಜಗೃಭ್ಯಾತ್**—ಸ್ವೀಕರಿಸಲಿ । **ಯತ್ ಬ್ರಹ್ಮ**—ಯಾವ ಮಂತ್ರವು । **ಪ್ರಿಯಂ**—ಪ್ರೀತಿಕಾರಕವಾಗಿಯೂ । **ದೇವಹಿತಂ**--ದೇವತೆಗಳಿಗೆ ಹಿತಕರವಾಗಿಯೂ । **ಅಸ್ತಿ**—ಇದೆಯೋ । **ಯತ್**—ಯಾವುದು । **ಮಯೋಭು**—ಸುಖದಾಯಕವಾಗಿಯೂ ಇದೆಯೋ ಆ ಮಂತ್ರವನ್ನು । **ಅಹಂ**—ನಾನು । **ಮಿತ್ರೇ**—ಮಿತ್ರನನ್ನುದ್ದೇಶಿಸಿಯೂ । **ವರುಣೇ**—ವರುಣನನ್ನುದ್ದೇಶಿಸಿಯೂ (ಅರ್ಪಿಸುತ್ತೇನೆ).

॥ ಭಾವಾರ್ಥ ॥

ತಾಯಿಯು ತನ್ನ ಮಗುವನ್ನು ಆದರದಿಂದ ಅಪ್ಪಿಕೊಳ್ಳುವಂತೆ ಅದಿತಿಯು ಆದರದಿಂದ ನನ್ನ ಪ್ರೀತಿಜನಕವಾದುದೂ, ಶೋಭನಾತ್ಮಕವಾದುದೂ ಆದ ಸ್ತೋತ್ರವನ್ನು ಸ್ವೀಕರಿಸಲಿ. ಯಾವ ಮಂತ್ರವು ಪ್ರೀತಿಕಾರಕವಾಗಿಯೂ ದೇವತೆಗಳಿಗೆ ಹಿತಕರವಾಗಿಯೂ ಇದೆಯೋ, ಯಾವುದು ಸುಖದಾಯಕವಾಗಿದೆಯೋ ಆ ಮಂತ್ರವನ್ನು ನಾನು ಮಿತ್ರನನ್ನೂ ವರುಣನನ್ನೂ ಉದ್ದೇಶಿಸಿ, ಅರ್ಪಿಸುತ್ತೇನೆ

English Translation

May Aditi accept my affectionate and devoted praise, as a mother (the endearments of) a son; the pleasing, delightful prayer that is approved of by the gods I address to Varuna and Mitra.

॥ ಸಂಹಿತಾಪಾಠಃ ॥

ಉದೀರಯ ಕವಿತಮಂ ಕವೀನಾಮುನತ್ತೈನಮಭಿ ಮಧ್ವಾ ಘೃತೇನ ।
ಸ ನೋ ವಸೂನಿ ಪ್ರಯತಾ ಹಿತಾನಿ ಚಂದ್ರಾಣಿ ದೇವಃ ಸವಿತಾ ಸುವಾತಿ ॥

॥ ಪದಪಾಠಃ ॥

ಉತ್ । ಈರಯ । ಕವಿಽತಮಂ । ಕವೀನಾಂ । ಉನತ್ತ । ಏನಂ । ಅಭಿ । ಮಧ್ವಾ । ಘೃತೇನ ।

ಸಃ । ನಃ । ವಸೂನಿ । ಪ್ರಽಯತಾ । ಹಿತಾನಿ । ಚಂದ್ರಾಣಿ । ದೇವಃ । ಸವಿತಾ । ಸುವಾತಿ ॥ ೩ ॥

॥ ಸಾಯಣಭಾಷ್ಯಂ ॥

ಉದೀರಯೇತ್ಯೇಷೈಕಾದಶಿನೇ ಸಾವಿತ್ರೇ ಪಶೌ ವಪಾಯಜ್ಯಾ । ಸೂತ್ರಿತಂ ಚ । ಉದೀರಯ ಕವಿತಮಂ ಕವೀನಾಂ ಭಗಂ ಧಿಯಂ ವಾಜಯಂತಃ ಪುರಂಧಿಮಿತಿ ದ್ವೇ । ಆ ೩-೭. । ಇತಿ ॥

ಅನಯಾ ಸವಿತಾ ಚ ಸ್ತೂಯತೇ । ಹೇ ಋತ್ವಿಜಃ ಕವೀನಾಂ ಕವಿತಮಂ ಕ್ರಾಂತದರ್ಶಿನಮಮುಂ ಪುರೋವರ್ತಿನಮಗ್ನಿಂ ಸವಿತಾರಂ ವೋದೀರಯ । ಊರ್ಧ್ವಂ ಪ್ರಾಪಯತ । ಹರ್ಷಯತೇತ್ಯರ್ಥಃ । ಏನಂ ದೇವಂ ಮಧ್ವಾ ಮಧುರೇಣ ಸೋಮರಸೇನ ಘೃತೇನ ಚಾಭ್ಯನತ್ತ । ಅಭಿಷಿಂಚತ । ತರ್ಪಯತೇತ್ಯರ್ಥಃ । ಸ ಸವಿತಾ ದೇವೋ ನೋಽಸ್ಮಭ್ಯಂ ವಸೂನಿ ನಿವಾಸಯೋಗ್ಯಾನಿ ಗವಾದಿಧನಾನಿ ಪ್ರಯತಾ ಪ್ರಯತಾನಿ ಹಿತಾನಿ ಚಂದ್ರಾಣ್ಯಾಹ್ಲಾದಕಾನಿ ಹಿರಣ್ಯಾನಿ ಸುವಾತಿ । ಪ್ರಯಚ್ಛತ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) **ಕವೀನಾಂ**—ಕವಿಗಳಲ್ಲೆಲ್ಲಾ । **ಕವಿತಮಂ**—ಅತ್ಯುತ್ತಮನಾದ ಕವಿಯಾದ ಸವಿತೃವನ್ನು । **ಉದೀರಯ**—ಹರ್ಷಗೊಳಿಸಿರಿ । **ಏನಂ**—ಈ ದೇವನನ್ನುದ್ದೇಶಿಸಿ । **ಮಧ್ವಾ**—ಮಧುರವಾದ ಸೋಮರಸದಿಂದಲೂ । **ಘೃತೇನ ಚ**—ಘೃತದಿಂದಲೂ । **ಅಭಿ ಉನತ್ತ**—ತೃಪ್ತಿಪಡಿಸಿರಿ । **ಸಃ ಸವಿತಾ**—ಅದೇ ಸವಿತೃದೇವನು । **ನಃ**—ನಮಗೆ । **ಪ್ರಯತಾ**—ಪರಿಪೂರ್ಣವಾದುದೂ । **ಹಿತಾನಿ**—ಹಿತಕರವಾದುದೂ । **ಚಂದ್ರಾನಿ**— ಆಹ್ಲಾದ ಕಾರಕವಾದುದೂ ಆದ । **ವಸೂನಿ**—ಧನಗಳನ್ನು । **ಸುವಾತಿ**—ಕೊಡಲಿ.

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ಕವಿಗಳಲ್ಲೆಲ್ಲಾ ಅತ್ಯುತ್ತಮವಾದ ಕವಿಯಾದ ಸವಿತೃದೇವನನ್ನು ಹರ್ಷಗೊಳಿಸಿರಿ. ಈ ದೇವನನ್ನುದ್ದೇಶಿಸಿ ಮಧುರವಾದ ಸೋಮರಸದಿಂದಲೂ ತೃಪ್ತಿಪಡಿಸಿರಿ. ಅದೇ ಸವಿತೃದೇವನು ನಮಗೆ ಪರಿಪೂರ್ಣವಾದುದೂ, ಹಿತಕರವಾದುದೂ, ಆಹ್ಲಾದಕಾರಕವಾದುದೂ ಆದ ಧನಗಳನ್ನು ಕೊಡಲಿ.

## English Translation

Celebrate, (priests), the most prophetic of the prophets, imbue him with the sweet libation, and may the divine Savitri bestow upon us ample' beneficial, and delightful riches.

॥ ವಿಶೇಷವಿಷಯಗಳು ॥

**ಉದೀರಯ** ಎಂಬ ಈ ಋಕ್ಕನ್ನು ಪಶುಯಾಗದಲ್ಲಿ ಏಕಾದಶೀ ಸವಿತೃ ಎಂಬ ದೇವತೆಯನ್ನುದ್ದೇಶಿಸಿ ಮಾಡುವ ವಪಾಹೋಮದಲ್ಲಿ ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಉದೀರಯ ಕವಿತಮಂ ಕವೀನಾಂ ಭಗಂ ಧಿಯಂ ವಾಜಯಂತಃ ಪುರಂಧಿಮಿತಿ ದ್ವೇ** ಎಂಬ ಸೂತ್ರದಿಂದ (ಆ. ೩-೭) ವಿವೃತವಾಗಿರುವುದು

॥ ಸಂಹಿತಾಪಾಠಃ ॥

ಸಮಿಂದ್ರ ಣೋ ಮನಸಾ ನೇಷಿ ಗೋಭಿಃ ಸಂ ಸೂರಿಭಿರ್ಹರಿವಃ ಸಂ ಸ್ವಸ್ತಿ ।
ಸಂ ಬ್ರಹ್ಮಣಾ ದೇವಹಿತಂ ಯದಸ್ತಿ ಸಂ ದೇವಾನಾಂ ಸುಮತ್ಯಾ ಯಜ್ಞಿಯಾನಾಂ ॥ ೪ ॥

॥ ಪದಪಾಠಃ ॥

ಸಂ । ಇಂದ್ರ । ನಃ । ಮನಸಾ । ನೇಷಿ । ಗೋಭಿಃ । ಸಂ । ಸೂರಿऽಭಿಃ । ಹರಿऽವಃ । ಸಂ । ಸ್ವಸ್ತಿ । ಸಂ । ಬ್ರಹ್ಮಣಾ । ದೇವऽಹಿತಂ । ಯತ್ । ಅಸ್ತಿ । ಸಂ । ದೇವಾನಾಂ । ಸುऽಮತ್ಯಾ । ಯಜ್ಞಿಯಾನಾಂ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ನೋಽಸ್ಮಾನ್ಮನಸಾ ಪ್ರಕೃಷ್ಟೇನ ಚೇತಸಾ ಗೋಭಿಃ ಸಹ ಸಂ ನೇಷಿ । ನಯಸಿ । ಅಸ್ಮಾನ್ ಗಾಃ ಪ್ರಾಪಯಸೀತ್ಯರ್ಥಃ । ಏವಂ ಸರ್ವತ್ರ । ಹೇ ಹರಿವೋ ಹರಿಭ್ಯಾಂ ತದ್ವನ್ನಿಂದ್ರ ಸೂರಿಭಿರ್ಮೇಧಾವಿಭಿಃ ಪುತ್ರೈರ್ಯುಕ್ತಿಗ್ಭಿರ್ವಾ ಸಂ ನೇಷಿ । ತಥಾ ಸ್ವಸ್ತಿ ಸ್ವಸ್ತಿಭಿಃ ಕ್ಷೇಮೈಃ ಸಂ ನೇಷಿ । ಬ್ರಹ್ಮಣಾ ಪ್ರಭೂತೇನಾನ್ನೇನ ಸಂ ನೇಷಿ । ಯದನ್ನಂ ದೇವಹಿತಮಸ್ತಿ ತೇನ । ಕಿಂಚ ಯಜ್ಞಿಯಾನಾಂ ಯಜ್ಞಾರ್ಹಾಣಾಂ ದೇವಾನಾಂ ಸುಮತ್ಯಾನುಗ್ರಹಬುದ್ಧ್ಯಾ ಸಂ ನೇಷಿ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ನಃ**—ನಮ್ಮನ್ನು । **ಮನಸಾ**—ಅನುಗ್ರಹಾತ್ಮಕವಾದ ಮನಸ್ಸಿನಿಂದ । **ಗೋಭಿಃ**—ಗೋವುಗಳೊಡನೆ । **ಸಂ (ನೇಷಿ)**—ಸೇರಿಸಿಡು । **ಹರಿವಃ**—ಹರಿನಾಮಕಗಳಾದ ಅಶ್ವಗಳುಳ್ಳ ಇಂದ್ರನೇ । **ಸೂರಿಭಿಃ**—ಮೇಧಾವಿಗಳಾದ ಪುತ್ರರೊಡನೆ । **ಸಂ (ನೇಷಿ)**—ಸೇರಿಸು । **ಸ್ವಸ್ತಿ**—ಮಂಗಳಗಳೊಡನೆ । **ಸಂ (ನೇಷಿ)**—ಸೇರಿಸು । **ಯತ್**—ಯಾವ ಅನ್ನವು । **ದೇವಹಿತಂ**—ದೇವತೆಗಳಿಗೂ ಹಿತಕರವಾಗಿ । **ಅಸ್ತಿ**—ಇದೆಯೋ ಅಂತಹ । **ಬ್ರಹ್ಮಣಾ**—ಪ್ರಭೂತವಾದ ಅನ್ನಸಂಪತ್ತಿನೊಡನೆ । **ಸಂ**—ಯೋಜಿಸು । **ಯಜ್ಞಿಯಾನಾಂ**—ಯಜ್ಞಾರ್ಹರಾದ । **ದೇವಾನಾಂ**—ದೇವತೆಗಳ । **ಸುಮತ್ಯಾ**—ಅನುಗ್ರಹ ಬುದ್ಧಿಯೊಡನೆ । **ಸಂ (ನೇಷಿ)**—ಸೇರಿಸು

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ಅನುಗ್ರಹಾತ್ಮಕವಾದ ಮನಸ್ಸಿನಿಂದ ನಮ್ಮನ್ನು ಗೋವುಗಳೊಡನೆಯೂ, ಮೇಧಾವಿಗಳಾದ ಪುತ್ರರೊಡನೆಯೂ, ದೇವತೆಗಳಿಗೂ ಹಿತಕರವಾಗಿರತಕ್ಕ ಪ್ರಭೂತವಾದ ಅನ್ನದೊಡನೆಯೂ ಸೇರಿಸಿಡು. ಮತ್ತು ಯಜ್ಞಾರ್ಹರಾದ ದೇವತೆಗಳ ಅನುಗ್ರಹಬುದ್ಧಿಯು ನಮ್ಮ ಮೇಲಿರುವಂತೆ ಮಾಡು.

English Translation

With a (willing) mind, Indra, you associate us with cattle, with pious (priests) and, lord of steeds, with prosperity, with (sacrificial) food that is agreeable to the gods, and with the favour of the adorable deities.

॥ ಸಂಹಿತಾಪಾಠಃ ॥

ದೇವೋ ಭಗಃ ಸವಿತಾ ರಾಯೋ ಅಂಶ ಇಂದ್ರೋ ವೃತ್ರಸ್ಯ ಸಂಜಿತೋ ಧನಾನಾಂ ।

ಋಭುಕ್ಷಾ ವಾಜ ಉತ ವಾ ಪುರಂಧಿರವಂತು ನೋ ಅಮೃತಾಸಸ್ತುರಾಸಃ ॥ ೫ ॥

॥ ಪದಪಾಠಃ ॥

ದೇವಃ । ಭಗಃ । ಸವಿತಾ । ರಾಯಃ । ಅಂಶಃ । ಇಂದ್ರಃ । ವೃತ್ರಸ್ಯ । ಸಂಽಜಿತ್ । ಧನಾನಾಂ ।

ಋಭುಕ್ಷಾಃ । ವಾಜಃ । ಉತ । ವಾ । ಪುರಂಽಧಿಃ । ಅವಂತು । ನಃ । ಅಮೃತಾಸಃ । ತುರಾಸಃ ॥ ೫ ॥

॥ ಸಾಯಣಭಾಷ್ಯಂ ॥

ಅತ್ರ ಲಿಂಗೋಕ್ತಾ ದೇವತಾಃ । ಭಗೋ ದೇವಃ ಸವಿತಾ ಚ ರಾಯೋ ಧನಸ್ಯ ಸ್ವಾಮ್ಯಂಶಸ್ತ್ವಷ್ಟಾ ವೃತ್ರಸ್ಯ ಹಂತೇಂದ್ರಶ್ಚ ಏತೇ ದೇವಾ ಧನಾನಾಂ ಸಂಜಿತಃ ಸಮ್ಯಗ್ಜೇತಾರ ಋಭುಕ್ಷಾ ಋಭುರ್ವಾಜಶ್ಚ ಉತ ವಾಪಿ ಚ ಪುರಂಧಿಃ ಬಹುಧೀಃ । ವಿಭ್ವೋಚ್ಯತೇ । ಏತೇ ಚಾನ್ಯೇ ಚಾಮೃತಾಸೋಽಮೃತಾ ಅಮರಣಧರ್ಮಾಣೋ ಭಗಾದಿದೇವಾಸ್ತುರಾಸೋಽಸ್ಮದ್ಯಜ್ಞಂ ಪ್ರತಿ ತ್ವರಮಾಣಾಃ ಸಂತೋ ನೋಽಸ್ಮಾನವಂತು । ರಕ್ಷಂತು ॥

॥ ಪ್ರತಿಪದಾರ್ಥ ॥

**ದೇವಃ**—ದೇವಾತ್ಮಕನಾದ । **ಭಗಃ**—ಭಗನೂ । **ರಾಯಃ**—ಧನಕ್ಕೆ ಸ್ವಾಮಿಯಾದ । **ಸವಿತಾ**—ಸವಿತೃ ದೇವನೂ । **ಅಂಶಃ**—ಅಂಶನೂ । **ವೃತ್ರಸ್ಯ**—ವೃತ್ರಹಂತಕನಾದ । **ಇಂದ್ರಃ**—ಇಂದ್ರನೂ । **ಧನಾನಾಂ**—ಧನಗಳಿಗೆ । **ಸಂಜಿತಃ**—ಸ್ವಾಮ್ಯವನ್ನು ಪಡೆದವರಾದ । **ಋಭುಕ್ಷಾಃ**—ಋಭುವೂ । **ವಾಜಃ**—ವಾಜನೂ । **ಉತ ವಾ**—ಮತ್ತು । **ಪುರಂಧಿಃ**—ಅನೇಕ ವಿಧವಾದ ಪ್ರಜ್ಞೆಯುಳ್ಳ ವಿಭ್ವನೂ । **ಅಮೃತಾಸಃ**—ಮರಣಧರ್ಮರಹಿತರಾದ ಸಕಲ ದೇವತೆಗಳೂ । **ತುರಾಸಃ**—ನಮ್ಮ ಯಜ್ಞಕ್ಕೆ ಬರಲು ಆತುರವುಳ್ಳವರಾಗಿ । **ನಃ**—ನಮ್ಮನ್ನು । **ಅವಂತು**—ರಕ್ಷಿಸಲಿ.

॥ ಭಾವಾರ್ಥ ॥

ದೇವತಾತ್ಮನಾದ ಭಗನೂ, ಧನಕ್ಕೆ ಸ್ವಾಮಿಯಾದ ಸವಿತೃದೇವನೂ, ಅಂಶನೂ, ವೃತ್ರಹಂತಕನಾದ ಇಂದ್ರನೂ ಧನಗಳಿಗೆ ಸ್ವಾಮ್ಯವನ್ನು ಪಡೆದ, ಋಭು, ವಾಜ ಮತ್ತು ವಿಭ್ವರೂ, ಮರಣ ಧರ್ಮವಿಲ್ಲದ ಸಕಲ ದೇವತೆಗಳೂ ನಮ್ಮ ಯಜ್ಞಕ್ಕೆ ಬರಲು ಆತುರವುಳ್ಳವರಾಗಿ ನಮ್ಮನ್ನು ರಕ್ಷಿಸಲಿ.

English Translation

May the divine Bhaga, Savitri, the lord of wealth, Ansa, Indra (the slayer) of vritra, (all) the conquerors of riches, Ribhukshin, Vaja and also Purandhi, immortals, hastening (to our sacrifice) preserve us.

॥ ಸಂಹಿತಾಪಾಠಃ ॥

ಮರುತ್ವತೋ ಅಪ್ರತೀತಸ್ಯ ಜಿಷ್ಣೋರಜೂರ್ಯತಃ ಪ್ರ ಬ್ರವಾಮಾ ಕೃತಾನಿ।
ನ ತೇ ಪೂರ್ವೇ ಮಘವನ್ನಾಪರಾಸೋ ನ ವೀರ್ಯಂ೧ ನೂತನಃ ಕಶ್ಚನಾಪ ॥ ೬ ॥

॥ ಪದಪಾಠಃ ॥

ಮರುತ್ವತಃ । ಅಪ್ರತಿಽಇತಸ್ಯ । ಜಿಷ್ಣೋಃ । ಅಜೂರ್ಯತಃ । ಪ್ರ । ಬ್ರವಾಮ । ಕೃತಾನಿ ।

ನ । ತೇ । ಪೂರ್ವೇ । ಮಘಽವನ್ । ನ । ಅಪರಾಸಃ । ನ । ವೀರ್ಯಂ । ನೂತನಃ । ಕಃ । ಚನ । ಆಪ ॥ ೬ ॥

॥ ಸಾಯಣಭಾಷ್ಯಂ ॥

ವಯಂ ಯಜಮಾನಾ ಮರುತ್ವತೋ ಮರುದ್ಭಿಸ್ತದ್ವತ ಇಂದ್ರಸ್ಯ ಕೃತಾನಿ ಕರ್ಮಾಣಿ ಪ್ರಬ್ರವಾಮ । ಪ್ರಖ್ಯಾಪಯಾಮ । ಕೀದೃಶಸ್ಯ ತಸ್ಯ । ಅಪ್ರತೀತಸ್ಯಾಪ್ರತಿಗತಸ್ಯ ಯುದ್ಧೇಽಪಲಾಯಮಾನಸ್ಯ । ನ ಕೇವಲಂ ತಾವನ್ಮಾತ್ರಂ । ಜಿಷ್ಣೋರ್ಜಯನಶೀಲಸ್ಯಾಜೂರ್ಯತೋಽಜೀರ್ಯಮಾಣಸ್ಯ । ಸರ್ವದಾ ಯೂನ ಇತ್ಯರ್ಥಃ । ಅಥ ಪ್ರತ್ಯಕ್ಷೇಣೋಚ್ಯತೇ । ಹೇ ಮಘವನ್ನಿಂದ್ರ ತೇ ತವ ವೀರ್ಯಂ ಪರಾಕ್ರಮಂ ಪೂರ್ವೇ ಪುರಾತನಾಃ ಪುರುಷಾ ನಾಪುಃ । ನಾಪರಾಸೋಽಪರೇಽಪಿ ನಾಪುಃ । ಕಿಂ ಬಹುನಾ । ನೂತನಃ ಕಶ್ಚನಾಶ್ಚರ್ಯಭೂತೋ ಯಃ ಕೋಽಪಿ ವೀರ್ಯಂ ನಾಪ । ನ ಪ್ರಾಪ್ನೋತಿ ॥

॥ ಪ್ರತಿಪದಾರ್ಥ ॥

**ಅಪ್ರತೀತಸ್ಯ**—ಅಪ್ರತಿಹತನೂ । **ಜಿಷ್ಣೋಃ**—ಜಯಶಾಲಿಯೂ । **ಅಜೂರ್ಯತಃ**—ಕ್ಷಯರಹಿತನೂ । **ಮರುತ್ವತಃ**—ಮರುತ್ತುಗಳೊಡನೆ ಇರುವವನೂ ಆದ ಇಂದ್ರನ । **ಕೃತಾನಿ**—ಕರ್ಮಗಳನ್ನು । **ಪ್ರ ಬ್ರವಾಮ**—ನಾವು ಪ್ರಶಂಸಿಸುತ್ತೇವೆ । **ಮಘವನ್**—ಧನವಂತನಾದ ಎಲೈ ಇಂದ್ರನೇ । **ತೇ**-ನಿನ್ನ । **ವೀರ್ಯಂ**-ಪರಾಕ್ರಮವನ್ನು । **ಪೂರ್ವೇ**—ಹಿಂದಿನವರಾರೂ । **ನ ( ಆಪುಃ )**—ಹೊಂದಿರಲಿಲ್ಲ । **ಅಪರಾಸಃ**—ಅನಂತರದವರಲ್ಲಿ ಯಾರೂ । **ನ**—ಹೊಂದಲಿಲ್ಲ । **ನೂತನಃ ಕಶ್ಚನ**—ಆಧುನಿಕರಲ್ಲಿ ಯಾರಾಗಲಿ । **ನ ಆಪ**—ಹೊಂದಲು ಸಾಧ್ಯವಿಲ್ಲ.

॥ ಭಾವಾರ್ಥ ॥

ಅಪ್ರತಿಹತನೂ ಜಯಶಾಲಿಯೂ ಕ್ಷಯರಹಿತನೂ ಮರುತ್ತುಗಳೊಡನೆ ಸದಾ ಇರುವವನೂ ಆದ ಇಂದ್ರನ ಸಾಹಸಕರ್ಮಗಳನ್ನು ನಾವು ಪ್ರಶಂಸಿಸುತ್ತೇವೆ. ಧನವಂತನಾದ ಎಲೈ ಇಂದ್ರನೇ, ನಿನ್ನ ಪರಾಕ್ರಮವನ್ನು ಹಿಂದಿನವರಾರೂ ಹೊಂದಿರಲಿಲ್ಲ ಅನಂತರದವರಲ್ಲಿ ಯಾರೂ ಹೊಂದಲಿಲ್ಲ. ಆಧುನಿಕರಲ್ಲಿ ಯಾರಾಗಲಿ ಹೊಂದಲು ಸಾಧ್ಯವಿಲ್ಲ.

## English Translation

We celebrate the exploits of Marutwat, the unrecoiling, the victorious, the undecaying: neither the ancients, Maghavan, nor their successors, have attained your prowess, nor has any one recent attained it

॥ ಸಂಹಿತಾಪಾಠಃ ॥

ಉಪ ಸ್ತುಹಿ ಪ್ರಥಮಂ ರತ್ನಧೇಯಂ ಬೃಹಸ್ಪತಿಂ ಸನಿತಾರಂ ಧನಾನಾಂ
ಯಃ ಶಂಸತೇ ಸ್ತುವತೇ ಶಂಭವಿಷ್ಠಃ ಪುರೂವಸುರಾಗಮಜ್ಜೋಹುವಾನಂ ॥

॥ ಪದಪಾಠಃ ॥

ಉಪ । ಸ್ತುಹಿ । ಪ್ರಥಮಂ । ರತ್ನಽಧೇಯಂ । ಬೃಹಸ್ಪತಿಂ । ಸನಿತಾರಂ । ಧನಾನಾಂ ।
ಯಃ । ಶಂಸತೇ । ಸ್ತುವತೇ । ಶಂಽಭವಿಷ್ಠಃ। ಪುರುಽವಸುಃ । ಆಽಗಮತ್ । ಜೋಽಹುವಾನಂ ॥ ೭ ॥

॥ ಸಾಯಣಭಾಷ್ಯಂ ॥

ಹೇ ಅಂತರಾತ್ಮನ್ ತ್ವಂ ಪ್ರಥಮಂ ಮುಖ್ಯಂ । ಪ್ರಕೃಷ್ಟತಮಮಿತ್ಯರ್ಥಃ । ರತ್ನಧೇಯಂ ರಮಣೀಯಧನದಾತಾರಂ ಧನಾನಾಂ ಹವಿರ್ಲಕ್ಷಣಾನಾಂ ಸನಿತಾರಂ ಸಂಭಕ್ತಾರಂ । ಅಥವಾ ರತ್ನಶಬ್ದೇನ ಮಣಿಮುಕ್ತಾದಯೋ ಗೃಹೀತಾ ಇಹ ಧನಶಬ್ದೇನ ಗವಾದಯಃ । ಗವಾದಿದಾತಾರಂ ಬೃಹಸ್ಪತಿಂ ಬೃಹತೋ ಮಂತ್ರಸ್ಯ ಪತಿಂ ಸ್ವಾಮಿನಂ ದೇವಮುಪ ಸ್ತುಹಿ । ಯೋ ದೇವಃ ಶಂಸತೇ ಶಸ್ತ್ರೈಃ ಸ್ತುವತೇ। ಸಾಮಭಿರ್ಯಜಮಾನಾಯ ಶಂಭವಿಷ್ಠಃ ಸುಖಸ್ಯ ಭಾವಯಿತೃತಮೋ ಭವತಿ । ಯಶ್ಚ ಜೋಹುವಾನಮಾಹ್ವಯಂತಂ ಯಜಮಾನಂ ಪುರೂವಸುಃ ಪ್ರಭೂತಧನಃ ಸನ್ನಾಗಮತ್ ಆಗಚ್ಛತಿ ತಮುಪ ಸ್ತುಹಿ

॥ ಪ್ರತಿಪದಾರ್ಥ ॥

(ಎಲೈ ಅಂತರಾತ್ಮನೇ) **ಯಃ**—ಯಾರು । **ಶಂಸತೇ**—ಶಸ್ತ್ರಮಂತ್ರಗಳಿಂದ ಪ್ರಶಂಸಿಸುವವನೂ । **ಸ್ತುವತೇ**—ಸಾಮಾದಿಗಳಿಂದ ಸ್ತುತಿಸುವವನೂ ಆದ ಯಜಮಾನನಿಗೆ । **ಶಂಭವಿಷ್ಠಃ**—ಸುಖದಾತನೋ ಮತ್ತು ( ಯಾರು ) । **ಜೋಹುವಾನಂ**—ತನ್ನ ಸಹಾಯಕ್ಕೆ ಬರುವಂತೆ ಪ್ರಾರ್ಥಿಸುವ ಯಜಮಾನನಲ್ಲಿಗೆ । **ಪುರೂವಸುಃ**—ಅಧಿಕವಾದ ಧನವನ್ನು ಹೊಂದಿದವನಾಗಿ । **ಆಗಮತ್**—ಬರುವನೋ ಅಂತಹ । **ಪ್ರಥಮಂ**—ಎಲ್ಲರಿಗಿಂತಲೂ ಶ್ರೇಷ್ಠನೂ । **ರತ್ನಧೇಯಂ**—ರತ್ನಾದಿ ಧನಗಳ ದಾತನೂ । **ಧನಾನಾಂ**—ಹವಿರಾದ್ಯನ್ನಸಂಪತ್ತುಗಳಿಗೆ । **ಸನಿತಾರಂ**—ವಿಭಾಜಕನೂ ಆದ । **ಬೃಹಸ್ಪತಿಂ**—ಬೃಹಸ್ಪತಿಯನ್ನು । **ಉಪ ಸ್ತುಹಿ**—ಸ್ತುತಿಸಿ ಪ್ರಶಂಸಿಸು.

॥ ಭಾವಾರ್ಥ ॥

ಎಲೈ ಅಂತರಾತ್ಮನೇ, ಶಸ್ತ್ರಾದಿಗಳಿಂದ ಪ್ರಶಂಸಿಸುವವನೂ, ಸಾಮಾದಿಗಳಿಂದ ಸ್ತುತಿಸುವವನೂ ಆದ ಯಜಮಾನನಿಗೆ ಸುಖದಾಯಕನೂ, ತನ್ನನ್ನು ಸಹಾಯಕ್ಕಾಗಿ ಪ್ರಾರ್ಥಿಸುವ ಯಜಮಾನನಲ್ಲಿಗೆ ಅಧಿಕವಾಗಿ ಧನವನ್ನು ಹೊತ್ತುಕೊಂಡು ಬರುವವನೂ ಎಲ್ಲರಿಗಿಂತಲೂ ಶ್ರೇಷ್ಠನೂ, ರತ್ನಾದಿ ಧನಗಳಿಗೆ ದಾತನೂ, ಹವಿರಾದ್ಯನ್ನಸಂಪತ್ತುಗಳ ವಿಭಾಜಕನೂ ಆದ ಬೃಹಸ್ಪತಿಯನ್ನು ಸ್ತುತಿಸಿ ಪ್ರಶಂಸಿಸು.

## English Translation

Glorify the first donor of precious treasure, Brihaspati, the distributer of riches, the bestower of great happiness upon him who recites or chants (his praise), who comes laden with ample wealth to his invoker

॥ ಸಂಹಿತಾಪಾಠಃ ॥

ತವೋತಿಭಿಃ ಸಚಮಾನಾ ಅರಿಷ್ಟಾ ಬೃಹಸ್ಪತೇ ಮಘವಾನಃ ಸುವೀರಾಃ ।
ಯೇ ಅಶ್ವದಾ ಉತ ವಾ ಸಂತಿ ಗೋದಾ ಯೇ ವಸ್ತ್ರದಾಃ ಸುಭಗಾಸ್ತೇಷು
ರಾಯಃ ॥ ೮ ॥

॥ ಪದಪಾಠಃ ॥

ತವ । ಊತಿಭಿಃ । ಸಚಮಾನಾಃ । ಅರಿಷ್ಟಾಃ । ಬೃಹಸ್ಪತೇ । ಮಘವಾನಃ । ಸುವೀರಾಃ ।
ಯೇ । ಅಶ್ವದಾಃ । ಉತ । ವಾ । ಸಂತಿ । ಗೋದಾಃ । ಯೇ । ವಸ್ತ್ರದಾಃ । ಸುಭಗಾಃ । ತೇಷು ।
ರಾಯಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಬೃಹಸ್ಪತೇ ತವೋತಿಭೀ ರಕ್ಷಾಭಿಃ ಸಚಮಾನಾಃ ಸಂಗಚ್ಛಮಾನಾ ಅರಿಷ್ಟಾ ಅಹಿಂಸಿತಾ ಮಘವಾನೋ ಧನವಂತಃ ಸುವೀರಾಃ ಶೋಭನಪುತ್ರಾಶ್ಚ ಭವಂತಿ । ಯೇ ತ್ವದನುಗೃಹಿತಾ ಅಶ್ವದಾ ಬಹೂನಾಮಶ್ವಾನಾಂ ದಾತಾರಃ ಸಂತಿ । ಉತ ವಾಥವಾ ಗೋದಾಃ ಸಂತಿ । ಯೇ ಚ ವಸ್ತ್ರದಾಃ ಸುಭಗಾಃ ಶೋಭನಧನಾಃ ಸಂತಿ ತೇಷು ಸರ್ವೇಷು ರಾಯೋ ಧನಾನಿ ಸಂಭವಂತ್ವಿತಿ ಶೇಷಃ ॥

॥ ಪ್ರತಿಪದಾರ್ಥ ॥

ಬೃಹಸ್ಪತೇ—ಎಲೈ ಬೃಹಸ್ಪತಿಯೇ । ತವ ಊತಿಭಿಃ —ನಿನ್ನ ರಕ್ಷಣೆಗಳೊಡನೆ । ಸಚಮಾನಾಃ - ಸೇರಿಕೊಂಡಿರತಕ್ಕ ಯಜಮಾನರು । ಅರಿಷ್ಟಾಃ—(ಶತ್ರುಗಳಿಂದ) ಅಹಿಂಸಿತರಾಗಿಯೂ । ಮಘವಾನಃ—ಧನಸಂಪತ್ತುಳ್ಳವರಾಗಿಯೂ । ಸುವೀರಾಃ—ಶ್ರೇಷ್ಠವಾದ ಪುತ್ರಾದಿಗಳಿಂದಲೂ ಸೇರಿಕೊಂಡಿರುತ್ತಾರೆ । ಯೇ ಸುಭಗಾಃ—ನಿನ್ನ ಅನುಗ್ರಹ ಸಂಪತ್ತನ್ನು ಪಡೆದಿರುವ ಯಾರು । ಅಶ್ವದಾಃ—ಅಶ್ವದಾತರಾಗಿಯೂ । ಉತ ವಾ—ಅಥವಾ । ಗೋದಾಃ—ಗೋವುಗಳ ದಾತರಾಗಿಯೂ (ಮತ್ತು) । ಯೇ (ಚ)—ಯಾರು । ವಸ್ತ್ರದಾಃ—ವಸ್ತ್ರದಾತರಾಗಿಯೂ । ಸಂತಿ—ಇರುತ್ತಾರೆಯೋ । ತೇಷು—ಅಂತಹವರಲ್ಲಿ । ರಾಯಃ—ಧನಗಳು ತುಂಬಿರಲಿ

॥ ಭಾವಾರ್ಥ ॥

ಎಲೈ ಬೃಹಸ್ಪತಿಯೇ, ನಿನ್ನ ರಕ್ಷಣೆಗಳೊಡನೆ ಸೇರಿಕೊಂಡಿರತಕ್ಕ ಯಜಮಾನರು ಶತ್ರುಗಳಿಂದ ಅಹಿಂಸಿತರಾಗಿಯೂ, ಧನಸಂಪತ್ತುಳ್ಳವರಾಗಿಯೂ, ಶ್ರೇಷ್ಠವಾದ ಪುತ್ರಾದಿಗಳಿಂದ ಕೂಡಿದವರಾಗಿಯೂ ಇರುತ್ತಾರೆ. ನಿನ್ನ ಅನುಗ್ರಹಸಂಪತ್ತನ್ನು ಪಡೆದಿರುವ ಯಾರು ಅಶ್ವದಾತರಾಗಿಯೂ, ಗೋವುಗಳ ದಾತರಾಗಿಯೂ, ವಸ್ತ್ರದಾತರಾಗಿಯೂ ಇರುವರೋ ಅಂತಹವರಲ್ಲೆಲ್ಲಾ ಧನಗಳು ತುಂಬಿರಲಿ

English Translation

Associated, Brihaspati, with your protections, (men) are unharmed (by foes), and become opulent and blessed with descendants: may wealth devolve on those who are generous, and givers of horses, of cows, of clothes.

---

॥ ಸಂಹಿತಾಪಾಠಃ ॥

ವಿಸರ್ಮಾಣಂ ಕೃಣುಹಿ ವಿತ್ತಮೇಷಾಂ ಯೇ ಭುಂಜತೇ ಅಪೃಣಂತೋ ನ ಉಕ್ಥೈಃ ।

ಅಪವ್ರತಾನ್ಪ್ರಸವೇ ವಾವೃಧಾನ್ಬ್ರಹ್ಮದ್ವಿಷಃ ಸೂರ್ಯಾದ್ಯಾವಯಸ್ವ ॥ ೯ ॥

॥ ಪದಪಾಠಃ ॥

ವಿಽಸರ್ಮಾಣಂ । ಕೃಣುಹಿ । ವಿತ್ತಂ । ಏಷಾಂ । ಯೇ । ಭುಂಜತೇ । ಅಪೃಣಂತಃ । ನಃ । ಉಕ್ಥೈಃ ।

ಅಪಽವ್ರತಾನ್ । ಪ್ರಽಸವೇ । ವವೃಧಾನಾನ್ । ಬ್ರಹ್ಮಽದ್ವಿಷಃ । ಸೂರ್ಯಾತ್ । ಯವಯಸ್ವ ॥ ೯ ॥

॥ ಸಾಯಣಭಾಷ್ಯಂ ॥

ಏಷಾಂ ವಕ್ಷ್ಯಮಾಣಾನಾಂ ವಿತ್ತಂ ಧನಂ ವಿಸರ್ಮಾಣಂ ವಿಸರಣಶೀಲಂ ಕೃಣುಹಿ । ಕುರು । ಹೇ ಬ್ರಹ್ಮಣಸ್ಪತೇ । ಏಷಾಮಿತ್ಯುಕ್ತಂ ಕೇಷಾಮಿತ್ಯಾಹ । ಯೇ ಭುಂಜತೇಽಪೃಣಂತೋಽಪ್ರಯಚ್ಛಂತಃ । ಕೇಭ್ಯಃ । ಉಕ್ಥೈಃ ಸ್ತುತಿಪ್ರತಿಪಾದಕೈಃ ಶಸ್ತ್ರೈರ್ವಿಶಿಷ್ಟೇಭ್ಯೋ ನೋಽಸ್ಮಭ್ಯಂ । ತಾನಪವ್ರತಾನಪಗತಕರ್ಮಣಃ ಪ್ರಸವ ಉತ್ಪತ್ತಿಮತಿ ಮನುಷ್ಯಲೋಕೇ ವವೃಧಾನಾನ್ ವರ್ಧಮಾನಾನ ್ರಹ್ಮದ್ವಿಷೋ ಬ್ರಾಹ್ಮಣದ್ವೇಷ್ಟ್ರೂನ್ಮಂತ್ರದ್ವೇಷ್ಟ್ರೂನ್ ವಾ ಸೂರ್ಯಾದ್ಯಾವಯಸ್ವ । ಪೃಥಕ್ಕುರು । ಅಂಧಕಾರೇ ಸ್ಥಾಪಯೇತ್ಯರ್ಥಃ ।

॥ ಪ್ರತಿಪದಾರ್ಥ ॥

(ಎಲೈ ಬೃಹಸ್ಪತಿಯೇ) **ಉಕ್ಥೈಃ**—ಶಸ್ತ್ರಾದಿಮಂತ್ರಗಳಿಂದ ಸ್ತುತಿಸುವ । **ನಃ**—ನಮಗೆ । **ಯೇ**—ಯಾರು। **ಅಪೃಣಂತಃ**—ದಾನಮಾಡದೇ । **ಭುಂಜತೇ**—(ಸಕಲ ಸಂಪತ್ತನ್ನೂ) ತಾವೇ ಅನುಭವಿಸುವರೋ । **ತೇಷಾಂ**—ಅಂತಹ ಲೋಭಿಜನಗಳ । **ವಿತ್ತಂ**—ಧನವನ್ನು । **ವಿಶರ್ವಾಣಂ**—ಚದುರಿಹೋಗುವಂತೆ । **ಕೃಣುಹಿ**—ಮಾಡು । **ಅಪವ್ರತಾನ್**—ವೈದಿಕ ಕರ್ಮರಹಿತರೂ । **ಪ್ರಸವೇ**—ಮಾನವ ಲೋಕದಲ್ಲಿ । **ವವೃಧಾನ್**—ವೃದ್ಧಿಯನ್ನು ಹೊಂದುತ್ತಾ । **ಬ್ರಹ್ಮದ್ವಿಷಃ**—ಮಂತ್ರಾದಿಗಳ ಮಹಾತ್ಮ್ಯವನ್ನು ಅರಿಯದೇ ತಿರಸ್ಕರಿಸುವ ಕರ್ಮ ಭ್ರಷ್ಟರನ್ನು । **ಸೂರ್ಯಾತ್**—ಸೂರ್ಯನಿಂದ । **ಯುವಯಸ್ವ**—ಬೇರೆಪಡಿಸು.

॥ ಭಾವಾರ್ಥ ॥

ಎಲೈ ಬೃಹಸ್ಪತಿಯೇ, ಶಸ್ತ್ರಾದಿಸ್ತುತಿವಿಶಿಷ್ಟರಾದ ನಮಗೆ ದಾನವಾಡದೇ ಯಾರು ಧನಿಕರು ಸಕಲಸಂಪತ್ತುಗಳನ್ನೂ ತಾವೇ ಅನುಭವಿಸುವರೋ ಅಂತಹ ಲೋಭಿಗಳ ಧನವು ಚದುರಿಹೋಗುವಂತೆ ಮಾಡು. ಮಾನವಲೋಕದಲ್ಲೇ ವೃದ್ಧಿಯನ್ನು ಪಡೆಯುತ್ತಾ ವೈದಿಕ ಕರ್ಮರಹಿತವಾಗಿಯೂ, ಮಂತ್ರಾದಿಗಳ ಮಹಾತ್ಮ್ಯವನ್ನರಿಯದೇ ತಿರಸ್ಕರಿಸುವವರಾಗಿಯೂ ಇರುವ ಕರ್ಮಭ್ರಷ್ಟರನ್ನು ಸೂರ್ಯನಿಂದ ಬೇರೆ ಎಂದರೆ ಅವರನ್ನು ಸೂರ್ಯಜ್ಯೋತಿಯಿಲ್ಲದಿರುವ ಕಗ್ಗತ್ತಲೆಯಲ್ಲಿಡು

## English Translation

Render transitory the riches of those who partake of enjoyment without giving satisfact on (to those who are eminent) by holy hymns: put apart from the sun, those who perform not sacred rites, and who, though prospering in their posterity, are the adversaries of prayer.

॥ ಸಂಹಿತಾಪಾಠಃ ॥

**ಯ ಓಹತೇ ರಕ್ಷಸೋ ದೇವವೀತಾವಚಕ್ರೇಭಿಸ್ತಂ ಮರುತೋ ನಿ ಯಾತ ।**
**ಯೋ ವಃ ಶಮೀಂ ಶಶಮಾನಸ್ಯ ನಿಂದಾತ್ತುಚ್ಛ್ಯಾನ್ಕಾಮಾನ್ಕರತೇ ಸಿಷ್ವಿದಾನಃ ॥ ೧೦ ॥**

॥ ಪದಪಾಠಃ ॥

ಯಃ । ಓಹತೇ । ರಕ್ಷಸಃ । ದೇವಽವೀತೌ । ಅಚಕ್ರೇಭಿಃ । ತಂ । ಮರುತಃ । ನಿ । ಯಾತ ।

ಯಃ । ವಃ । ಶಮೀಂ । ಶಶಮಾನಸ್ಯ । ನಿಂದಾತ್ । ತುಚ್ಯಾನ್ । ಕಾಮಾನ್ । ಕರತೇ । ಸಿಷ್ವಿದಾನಃ ॥ ೧೮ ॥

॥ ಸಾಯಣಭಾಷ್ಯಂ ॥

ಯೋ ಯಜಮಾನೋ ರಕ್ಷಸೋ ಬಲಿನೋ ರಾಕ್ಷಸಾನೋಹತೇ ಪ್ರಾಪಯತಿ ದೇವವೀತೌ । ದೇವಾನಾಂ ವೀತಿಃ ಪ್ರಾಪ್ತಿರ್ಭಕ್ಷಣಂ ವಾ ಯತ್ರ ಸ ತಥೋಕ್ತಃ । ತಸ್ಮಿನ್ಯಜ್ಞೇ । ಅನ್ಯಥಾನುಷ್ಠಾನಾದಿನಾಸುರಂ ಕರೋತೀತ್ಯರ್ಥಃ । ತಂ ಯಜಮಾನಮಚಕ್ರೇಭಿರಚಕ್ರೈ ರಥೈರ್ಹೇ ಮರುತೋ ನಿ ಯಾತ । ನಿತರಾಂ ಪ್ರಾಪಯತಾಂಧಕಾರಂ । ಯದ್ವಾ । ಅಚಕ್ರೇಭಿರಿತಿ ಪೂರ್ವತ್ರಾನ್ವಯಃ । ಚಕ್ರಶಬ್ದೇನಾಂಗಾನ್ಯುಚ್ಯಂತೇ । ಪುನಃಪುನರಂಗರಹಿತೈಃ ಕೇವಲೈರೇವ ಪ್ರಧಾನೈರೋಹತೇ ಪ್ರಾಪಯತಿ । ಸಾಂಗಂ ಹಿ ಕರ್ಮ ದೇವಾನಭ್ಯೇತಿ । ಯಶ್ಚ ವೋ ಯುಷ್ಮಾಕಂ ಶಮೀಂ ಕರ್ಮ ಸ್ತುತಿಲಕ್ಷಣಂ ಶಶಮಾನಸ್ಯ ಮಮ ಸಂಬಂಧಿ ನಿಂದಾತ್ ನಿಂದೇತ್ ವೈದಿಕಂ ಜ್ಯೋತಿಷ್ಟೋಮಾದಿರೂಪಂ ಕರ್ಮ ನಿಂದತಿ ಸ್ವಯಂ ಚ ತುಚ್ಯಾನ್ನಶ್ವರಾನ್ ಕಾಮಾನ್ ಕೃಷ್ಯಾದಿಜನಿತಭೋಗಾನ್ ಕರತೇ ಕುರುತೇ ಸಿಷ್ವಿದಾನಃ ಸ್ವಿದ್ಯನ್ನಾತ್ಮಾನಂ ಕ್ಲೇಶಯನ್ । ಅಥವಾ ಯುಷ್ಮಾಸು ಕಮನೀಯಾನ್ಭೋಗಾನ್ ತುಚ್ಯಾನ್ ಕರೋತಿ ॥

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ಯಃ**—ಯಾವ ಯಜಮಾನನು । **ದೇವವೀತೌ**—ದೇವತೆಗಳ ತೃಪ್ತ್ಯರ್ಥವಾಗಿ ನಡೆಯುವ ಯಜ್ಞದಲ್ಲಿ । **ರಕ್ಷಸಃ**—ರಾಕ್ಷಸರನ್ನು । **ಓಹತೇ**—ಸೇರಿಸುವನೋ । **ತಂ**—ಆ ಯಜಮಾನನನ್ನು । **ಅಚಕ್ರೇಭಿಃ**—ಚಕ್ರರಹಿತವಾದ ರಥಗಳೊಡನೆ । **ನಿ ಯಾತ**—ಅಂಧಕಾರದಲ್ಲಿ ದೂಡಿರಿ । **ಯಃ**—ಯಾವನು । **ವಃ**—ನಿಮ್ಮನ್ನುದ್ದೇಶಿ । **ಶಮೀಂ**—ಸ್ತುತಿಪೂರ್ವಕವಾದ ಕರ್ಮವನ್ನಾಚರಿಸುತ್ತಾ । **ಶಶಮಾನಸ್ಯ**—(ನಿಮ್ಮನ್ನು) ಪ್ರಶಂಸಿಸುವ ನನ್ನನ್ನು (ಅಥವಾ ನನಗೆ ಸೇರಿದವರನ್ನು) **ನಿಂದಾತ್**—ದೂಷಿಸುವನೋ ( ಅವನು ) **ಸಿಷ್ವಿದಾನಃ**-ತನ್ನನ್ನೇ ಕ್ಲೇಶಕ್ಕೆ ಗುರಿಮಾಡಿ ಬೆವರನ್ನು ಸುರಿಸುತ್ತಾ । **ತುಚ್ಯಾನ್**-ವ್ಯರ್ಥವಾದ । **ಕಾಮಾನ್**-ಭೋಗೇಚ್ಛೆಗಳನ್ನು । **ಕರತೇ**—ಕಲ್ಪಿಸಿಕೊಳ್ಳುತ್ತಾನೆ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಯಾವ ಯಜಮಾನನು ದೇವತೆಗಳ ತೃಪ್ತ್ಯರ್ಥವಾಗಿ ನಡೆಯುವ ಯಜ್ಞದಲ್ಲಿ ರಾಕ್ಷಸರನ್ನು ಸೇರಿಸುವನೋ, ಆ ಯಜಮಾನನನ್ನು ಚಕ್ರರಹಿತವಾದ ರಥಗಳೊಡನೆ ಅಂಧಕಾರದಲ್ಲಿ ದೂಡಿರಿ. ನಿಮ್ಮನ್ನು ದ್ವೇಶಿಸಿ ಸ್ತುತಿಪೂರ್ವಕವಾದ ಕರ್ಮವನ್ನಾಚರಿಸುತ್ತಾ ನಿಮ್ಮನ್ನು ಪ್ರಶಂಸಿಸುವ ನಮ್ಮನ್ನು ಅಥವಾ ನನಗೆ ಸೇರಿದವರನ್ನು ಯಾವನು ದೂಷಿಸುವನೋ ಅವನು ತನ್ನನ್ನು ಕೇವಲ ಕ್ಲೇಶಕ್ಕೆ ಗುರಿಮಾಡುವ ಬೆವರನ್ನು ಸುರಿಸುತ್ತಾ ಈ ಸಾರ್ಥಕವಲ್ಲದ ಭೋಗೇಚ್ಛೆಗಳನ್ನು ಕಲ್ಪಿಸಿಕೊಳ್ಳುತ್ತಾನೆ.

## English Translation

Send, Maruts, into darkness, with (cars) devoid of wheels, the man who invites the Rakshasas to the food of the gods; (him also) who reviles me when offering praise to you: whilst sweating, he toils (to realize) vain desires.

॥ ಸಂಹಿತಾಪಾಠಃ ॥

ತಮು ಷ್ಟುಹಿ ಯಃ ಸ್ವಿಷುಃ ಸುಧನ್ವಾ ಯೋ ವಿಶ್ವಸ್ಯ ಕ್ಷಯತಿ ಭೇಷಜಸ್ಯ ।
ಯಕ್ಷ್ವಾ ಮಹೇ ಸೌಮನಸಾಯ ರುದ್ರಂ ನಮೋಭಿರ್ದೇವಮಸುರಂ ದುವಸ್ಯ ॥ ೧೧ ॥

॥ ಪದಪಾಠಃ ॥

ತಂ । ಊಂ ಇತಿ । ಸ್ತುಹಿ । ಯಃ । ಸುಇಷುಃ । ಸುಧನ್ವಾ । ಯಃ । ವಿಶ್ವಸ್ಯ । ಕ್ಷಯತಿ । ಭೇಷಜಸ್ಯ ।
ಯಕ್ಷ್ವ । ಮಹೇ । ಸೌಮನಸಾಯ । ರುದ್ರಂ । ನಮಃಭಿಃ । ದೇವಂ । ಅಸುರಂ । ದುವಸ್ಯ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಆತ್ಮನ್ ತಮು ತಮೇವ ರುದ್ರಂ ಸ್ತುಹಿ । ಸ್ತುತಿಂ ಕುರು । ಯಃ ಸ್ವಿಷುಃ ಶೋಭನಬಾಣಃ ಸುಧನ್ವಾ ಚ । ವಿರೋಧಿಹಂತೃತ್ವಾತ್ಸ್ವಿಷುತ್ವಂ । ಯಶ್ಚ ವಿಶ್ವಸ್ಯ ಭೇಷಜಸ್ಯೌಷಧಸ್ಯ ಕ್ಷಯತಿ ಈಶ್ವರೋ ಭವತಿ । ಶಾರೀರಸ್ಯ ಸಾಂಸಾರಿಕಸ್ಯ ವಾ ರಿಷ್ಟಸ್ಯ ಶಮನಾಯೇಶ್ವರಸ್ಯ ವ್ಯತಿರಿಕ್ತಸ್ಯೌಷಧಸ್ಯಾಭಾವಾದ್ಭಿಷಕ್ತಮತ್ವಾಚ್ಚಾಸ್ಯ ಭೇಷಜಸ್ವಾಮಿತ್ವಂ । ಭಿಷಕ್ತಮಂ ತ್ವಾ ಭಿಷಜಾಂ ಶೃಣೋಮಿ । ಋಗ್ವೇ ೨.೩೩.೪. । ಇತ್ಯಾದಿಶ್ರುತೇಃ । ಕಿಂಚ ತಮೇವ ರುದ್ರಂ ದುಃಖಾತ್ತತ್ಸಾಧನಾದ್ದುರಿತಾದ್ವಾ ಮೋಚಯಿತಾರಂ ದೇವಂ ಯಕ್ಷ್ವ ಯಜ ಚ ಮಹೇ ಮಹತೇ ಸೌಮನಸಾಯ ಸುಮನಸ್ತ್ವಾಯ । ಈಶ್ವರಾರಾಧನಾಚ್ಚಿತ್ತಶಾಂತಿಃ ಪ್ರಸಿದ್ಧಾ । ಕಿಂಚ ನಮೋಭಿರ್ಹವಿರ್ಭಿರ್ನಮಸ್ಕಾರೈರ್ವಾ ದೇವಂ ದ್ಯೋತಮಾನಮಸುರಂ ಪ್ರಕೃಷ್ಟಾಸುಂ । ಬಲವಂತಮಿತ್ಯರ್ಥಃ । ಯದ್ವಾ । ಪ್ರಾಣದಾತಾರಂ ರುದ್ರಂ ದುವಸ್ಯ । ಪರಿಚರೇತಿ ॥

॥ ಪ್ರತಿಪದಾರ್ಥ ॥

**ಯಃ**—ಯಾವ ರುದ್ರನು । **ಸ್ವಿಷುಃ**—ಶ್ರೇಷ್ಠವಾದ ಬಾಣವುಳ್ಳವನೂ । **ಸುಧನ್ವಾ**—ಸಾರ್ಥಕವಾದ ಬಿಲ್ಲುಳ್ಳವನೂ ಆಗಿರುವನೋ । **ಯಃ**—ಯಾರು । **ವಿಶ್ವಸ್ಯ**—ಸಮಸ್ತವಾದ । **ಭೇಷಜಸ್ಯ**—ಔಷಧಿಗಳಿಗೂ ।

ಕ್ಷಯತಿ—ಪ್ರಭುವಾಗಿರುವನೋ ಅಂತಹ । ತಮು—ಆ ರುದ್ರನನ್ನೇ। ಸ್ತುಹಿ—ಸ್ತುತಿಸು। ರುದ್ರಂ—ಅದೇ ರುದ್ರನನ್ನುದ್ದೇಶಿಸಿ । ಮಹೇ—ಮಹತ್ತಾದುದೂ । ಸೌಮನಸಾಯ—ಉತ್ತಮವಾದುದೂ ಆದ ಮನಃಸ್ಥಿತಿಯ ಲಾಭಕ್ಕಾಗಿ । ಯಕ್ಷ್ವ—ಯಾಗಮಾಡು । ಅಸುರಂ—ಬಲಯುತನಾದ । ದೇವಂ—ಅದೇ ದೇವನನ್ನು । ನಮೋಭಿಃ-ನಮಸ್ಕಾರಗಳಿಂದ । ದುವಸ್ಯ—ಪೂಜಿಸು

॥ ಭಾವಾರ್ಥ ॥

ಯಾವ ರುದ್ರನು ಶ್ರೇಷ್ಠವಾದ ಬಾಣವುಳ್ಳವನೂ, ಸಾರ್ಥಕವಾದ ಬಿಲ್ಲುಳ್ಳವನೂ ಆಗಿರುವನೋ, ಯಾರು ಸಮಸ್ತವಾದ ಓಷಧಿಗಳಿಗೂ ಪ್ರಭುವಾಗಿರುವನೋ ಅಂತಹ ರುದ್ರನನ್ನೇ ಸ್ತುತಿಸು. ಅದೇ ರುದ್ರನನ್ನುದ್ದೇಶಿಸಿ ಮಹತ್ತಾದುದೂ, ಉತ್ತಮವಾದುದೂ ಆದ ಮನಃಸ್ಥಿತಿಯ ಲಾಭಕ್ಕಾಗಿ ಯಾಗಮಾಡು, ಬಲಯುತನಾದ ಅದೇ ದೇವನನ್ನು ನಮಸ್ಕಾರಗಳಿಂದ ಪೂಜಿಸು.

English Translation

Praise him who has the sure arrow, the strong bow, who presides over all sanitary drugs, worship Rudra for a comprehensive and sound understanding; adore the powerful divinity with prostrations.

॥ ಸಂಹಿತಾಪಾಠಃ ॥

ದಮೂನಸೋ ಅಪಸೋ ಯೇ ಸುಹಸ್ತಾ ವೃಷ್ಣಃ ಪತ್ನೀರ್ನದ್ಯೋ ವಿಭ್ವತಷ್ಟಾಃ ।

ಸರಸ್ವತೀ ಬೃಹದ್ದಿವೋತ ರಾಕಾ ದಶಸ್ಯಂತೀರ್ವರಿವಸ್ಯಂತು ಶುಭ್ರಾಃ ॥೧೨॥

॥ ಪದಪಾಠಃ ॥

ದಮೂನಸಃ । ಅಪಸಃ ।ಯೇ । ಸುಹಸ್ತಾಃ । ವೃಷ್ಣಃ । ಪತ್ನೀಃ । ನದ್ಯಃ । ವಿಭ್ವಃತಷ್ಟಾಃ ।

ಸರಸ್ವತೀ । ಬೃಹತ್ಃದಿವಾ । ಉತ । ರಾಕಾ । ದಶಸ್ಯಂತೀಃ । ವರಿವಸ್ಯಂತು । ಶುಭ್ರಾಃ ॥ ೧೨ ॥

॥ ಸಾಯಣಭಾಷ್ಯಂ ॥

ಅತ್ರ ಲಿಂಗೋಕ್ತದೇವತಾಃ । ದಮೂನಸೋ ದಾನಮನಸೋ ದಾಂತಮನಸೋ ವಾಪಸಶ್ಚಮ-ಸಾಶ್ವರಥಗವಾದಿಶೋಭನಕರ್ಮವಂತಃ ॥ ಮತ್ವರ್ಥೋ ಲುಪ್ಯತೇ ॥ ಅತ ಏವ ಸುಹಸ್ತಾಃ ಕುಶಲಹಸ್ತಾ

ಯೇ ಸಂತಿ ತ ಋಭವೋ ವೃಷ್ಣೋ ವರ್ಷಕಸ್ಯೇಂದ್ರಸ್ಯ ಪತ್ನೀಃ ಪತ್ನ್ಯಃ ಪಾಲಯಿತ್ರ್ಯಃ ನದ್ಯೋ ನದನಶೀಲಾ ಗಂಗಾದ್ಯಾ ವಿಭ್ವತಷ್ಟಾ ಋಭೂಣಾಂ ಮಧ್ಯಮೇನ ಕೃತಾಃ ಸರಸ್ವತ್ಯೇತನ್ನಾಮಿಕಾ ನದೀ ವಾಗ್ದೇವೀ ವಾ ಬೃಹದ್ದಿವಾ ಪ್ರಭೂತದೀಪ್ತಿರುತಾಪಿ ಚ ರಾಕಾ ದೇವೀ ಚ ದಶಸ್ಯಂತೀರ್ದಶಸ್ಯಂತ್ಯಃ ಕಾಮಾನ್ಪ್ರಯಚ್ಛಂತ್ಯಃ ಶುಭ್ರಾ ದೀಪ್ತಾಃ ತಾಶ್ಚ ವರಿವಸ್ಯಂತು । ಅಸ್ಮಭ್ಯಂ ಧನಮಿಚ್ಛಂತು ॥

॥ ಪ್ರತಿಪದಾರ್ಥ ॥

**ದಮೂನಸಃ**—ದಾನಮನಸ್ಕರೂ । **ಅಪಸಃ**—ಚಮಸನಿರ್ಮಾಣಾದ್ಯುತ್ತಮವಾದ ಕರ್ಮಕಂತರೂ । **ಸುಹಸ್ತಾಃ**—ಕುಶಲಕರ್ಮಕ್ಕೆ ಯೋಗ್ಯವಾದ ಹಸ್ತವುಳ್ಳವರೂ ಆದ । **ಯೇ**—ಯಾವ ಋಭುಗಳಿದ್ದಾರೋ ಅವರೂ । **ವೃಷ್ಣಃ**—ಕಾಮವರ್ಷಕನಾದ ಇಂದ್ರನ । **ಪತ್ನೀಃ**—ಪತ್ನಿಯರೂ । **ವಿಭ್ವತಷ್ಟಾಃ**—ವಿಭುವಿನಿಂದ ನಿರ್ಮಿತರಾದ । **ನದ್ಯಃ**—ನದಿಗಳೂ । **ಸರಸ್ವತೀ**—ಸರಸ್ವತಿಯೂ । **ಉತ**—ಮತ್ತು । **ಬೃಹದ್ದಿವಾ**—ಅತ್ಯಧಿಕವಾಗಿ ಪ್ರಕಾಶಿಸುವ । **ರಾಕಾ**—ರಾಕಾದೇವಿಯೂ । **ದಶಸ್ಯಂತೀಃ**—ನಮ್ಮ ಇಷ್ಟಾರ್ಥಗಳನ್ನೊದಗಿಸಿ ಕೊಡುತ್ತಾ । **ಶುಭ್ರಾಃ**—ಪ್ರಕಾಶಮಾನರಾಗಿದ್ದು । **ವರಿವಸ್ಯಂತು**—ನಮಗೆ ಧನಲಾಭವಾಗಲೆಂದು ಹರಸಲಿ

॥ ಭಾವಾರ್ಥ ॥

ದಾನಮನಸ್ಕರೂ, ಚಮಸನಿರ್ಮಾಣಾದ್ಯುತ್ತಮವಾದ ಕರ್ಮಕಂತರೂ, ಕುಶಲಕರ್ಮಕ್ಕೆ ಯೋಗ್ಯವಾದ ಹಸ್ತವುಳ್ಳವರೂ ಆದ ಯಾವ ಋಭುಗಳಿದ್ದಾರೋ ಅವರೂ, ಕಾಮವರ್ಷಕನಾದ ಇಂದ್ರನ ಪತ್ನಿಯರೂ, ವಿಭುವಿನಿಂದ ನಿರ್ಮಿತರಾದ ನದಿಗಳೂ, ಸರಸ್ವತಿಯೂ ಮತ್ತು ಅತ್ಯಧಿಕವಾಗಿ ಪ್ರಕಾಶಿಸುವ ರಾಕಾದೇವಿಯೂ ಸಹ ನಮ್ಮ ಇಷ್ಟಾರ್ಥಗಳನ್ನೊದಗಿಸಿಕೊಡುತ್ತಾ ಪ್ರಕಾಶಮಾನರಾಗಿದ್ದು ನಮಗೆ ಧನಲಾಭವಾಗಲೆಂದು ಹರಸಲಿ.

## English Translation

May the dexterous handed, humble-minded artisans (of the gods, the Ribhus); may the wives of the showerer (Indra); may the rivers carved out by Vibhu; may Saraswathi and the brilliant Raka, the illustrious granters of desires, be willing to grant us riches

॥ ಸಂಹಿತಾಪಾಠಃ ॥

ಪ್ರ ಸೂ ಮಹೇ ಸುಶರಣಾಯ ಮೇಧಾಂ ಗಿರಂ ಭರೇ ನವ್ಯಸೀಂ ಜಾಯ-

ಮಾನಾಂ ।

ಯ ಆಹನಾ ದುಹಿತುರ್ವಕ್ಷಣಾಸು ರೂಪಾ ಮಿನಾನೋ ಅಕೃಣೋದಿದಂ ನಃ ॥ ೧೩ ॥

॥ ಪದಪಾಠಃ ॥

ಪ್ರ । ಸು । ಮಹೇ । ಸುಽಶರಣಾಯ । ಮೇಧಾಂ । ಗಿರಂ । ಭರೇ । ನವ್ಯಸೀಂ । ಜಾಯಮಾನಾಂ ।

ಯಃ । ಆಹನಾಃ । ದುಹಿತುಃ । ವಕ್ಷಣಾಸು । ರೂಪಾ । ಮಿನಾನಃ । ಅಕೃಣೋತ್ । ಇದಂ । ನಃ ॥ ೧೩ ॥

॥ ಸಾಯಣಭಾಷ್ಯಂ ॥

ಸು ಸುಷ್ಠು ಪ್ರ ಭರೇ ಪ್ರಕರ್ಷೇಣ ಸಂಪಾದಯಾಮಿ ಮಹೇ ಮಹತೇ ಸುಶರಣಾಯ ಶೋಭನರಕ್ಷಕಾಯೇಂದ್ರಾಯ ಪರ್ಜನ್ಯಾಯ ವಾ ಸುಸುಖಾಯ ವಾ । ಕಿಂ । ಮೇಧಾಂ ಮತೌ ಧೀಯಮಾನಾಂ ಗಿರಂ ಸ್ತುತಿಂ । ಕೀದೃಶೀಂ । ನವ್ಯಸೀಂ ನವತರಾಮತಿಶಯೇನ ಸ್ತುತ್ಯಾಂ ವಾ ಜಾಯಮಾನಾಮಿದಾನೀಮುತ್ಪದ್ಯಮಾನಾಂ । ನೂತನಾಮಿತ್ಯರ್ಥಃ । ಯ ಇಂದ್ರಃ ಪರ್ಜನ್ಯೋ ವಾ ಆಹನಾ ಆಹಂತಾ ಸೇಕ್ತಾ ದುಹಿತುರ್ದುಹಿತೃಸ್ಥಾನೀಯಾಯಾಃ ಪೃಥಿವ್ಯಾ ಹಿತಾಯ ವಕ್ಷಣಾಸು ನದೀಷು ರೂಪಾ ರೂಪಾಣಿ ಮಿನಾನಃ ಕುರ್ವಾಣ ಇದಮುದಕಂ ನೋಽಸ್ಮಭ್ಯಮಕೃಣೋತ್ ಕರೋತು ॥

॥ ಪ್ರತಿಪದಾರ್ಥ ॥

**ಯಃ**— ಯಾವ ಇಂದ್ರನು । **ಆಹನಾಃ**—ವೃಷ್ಟಿಯನ್ನು ಸುರಿಸುವವನಾಗಿ । **ದುಹಿತುಃ**—ತನ್ನ ದುಹಿತೃವಾದ ಈ ಪೃಥ್ವಿಯ (ಹಿತಕ್ಕಾಗಿ) । **ವಕ್ಷಣಾಸು**— ನದಿಗಳಲ್ಲಿ । **ರೂಪಾ**—ಪ್ರವಾಹರೂಪಗಳನ್ನು । **ಮಿನಾನಃ**—ಉಂಟುಮಾಡುತ್ತಾ । **ಇದಂ**—ಈ ಉದಕವನ್ನು । **ನಃ**—ನಮ್ಮ ಹಿತಕ್ಕಾಗಿ । **ಅಕೃಣೋತ್**—ನಿರ್ಮಿಸಿದನೋ ಅಂತಹ । **ಮಹೇ**— ಮಹಾತ್ಮನಾದವನೂ । **ಸುಶರಣಾಯ**—ಉತ್ತಮವಾದ ಆಶ್ರಯದಾತನೂ ಆದ ಇಂದ್ರನಿಗೆ ಅರ್ಪಿಸಲು । **ನವ್ಯಸೀಂ**—ನೂತನವಾದುದೂ । **ಜಾಯಮಾನಾಂ**—ಈಗಲೇ ನಿರ್ಮಿತವಾದುದೂ । **ಮೇಧಾಂ**—ಧ್ಯಾನಾತ್ಮಕವಾದುದೂ ಆದ । **ಗಿರಂ**—ಸ್ತುತಿಯನ್ನು । **ಸು**—ಅತಿಶಯವಾಗಿ । **ಪ್ರ ಭರೇ**—ನಿರ್ಮಿಸುತ್ತೇನೆ.

॥ ಭಾವಾರ್ಥ ॥

ಯಾವ ಇಂದ್ರನು ವೃಷ್ಟಿಯನ್ನು ಸುರಿಸುವವನಾಗಿ ತನ್ನ ದುಹಿತೃವಾದ ಈ ಪೃಥ್ವಿಯ ಹಿತಕ್ಕಾಗಿ ನದಿಗಳಲ್ಲಿ ಪ್ರವಾಹ ರೂಪಗಳನ್ನುಂಟುಮಾಡುತ್ತಾ ಈ ಉದಕವನ್ನು ನಮ್ಮ ಹಿತಕ್ಕಾಗಿ ನಿರ್ಮಿಸಿದನೋ ಅಂತಹ ಮಹಾತ್ಮನಾದವನೂ ಉತ್ತಮವಾದ ಆಶ್ರಯದಾತನೂ ಆದ ಇಂದ್ರನಿಗೆ ಅರ್ಪಿಸಲು ನೂತನವಾದುದೂ, ಈಗಲೇ ಉತ್ಪನ್ನವಾದುದೂ ಧ್ಯಾನಾತ್ಮಕವಾದುದೂ ಆದ ಸ್ತುತಿಯನ್ನು ಅತಿಶಯವಾಗಿ ನಿರ್ಮಿಸುತ್ತೇನೆ.

## English Translation

To the great protector, (Indra), I offer devoutly pious praise, new and originated (at this time): to him, the showerer, who for his daughter (earth), giving form to the rivers, has provided this water for our (use).

॥ ಸಂಹಿತಾಪಾಠಃ ॥

ಪ್ರ ಸುಷ್ಟುತಿಃ ಸ್ತನಯಂತಂ ರುವಂತಮಿಳಸ್ಪತಿಂ ಜರಿತರ್ನೂನಮಶ್ಯಾಃ ।
ಯೋ ಅಬ್ದಿಮಾँ ಉದನಿಮಾँ ಇಯರ್ತಿ ಪ್ರ ವಿದ್ಯುತಾ ರೋದಸೀ ಉಕ್ಷ-
ಮಾಣಃ ॥ ೧೪ ॥

॥ ಪದಪಾಠಃ ॥

ಪ್ರ । ಸುऽಸ್ತುತಿಃ । ಸ್ತನಯಂತಂ । ರುವಂತಂ । ಇಳಃ । ಪತಿಂ । ಜರಿತಃ । ನೂನಂ । ಅಶ್ಯಾಃ ।
ಯಃ । ಅಬ್ದಿऽಮಾನ್ । ಉದನಿऽಮಾನ್ । ಇಯರ್ತಿ । ಪ್ರ । ವಿऽದ್ಯುತಾ । ರೋದಸೀ ಇತಿ ।
ಉಕ್ಷಮಾಣಃ ॥ ೧೪ ॥

॥ ಸಾಯಣಭಾಷ್ಯಂ ॥

ಅತ್ರ ಪರ್ಜನ್ಯಃ ಸ್ತೂಯತೇ । ಸುಷ್ಟುತಿಃ ಶೋಭನಾ ಸ್ತುತಿಃ ಸ್ತನಯಂತಂ ಗರ್ಜಂತಂ ರುವಂತಂ ವರ್ಷಣಜನಿತಂ ಶಬ್ದಂ ಕುರ್ವಾಣಮಿಳೋಽನ್ನಸ್ಯೋದಕಸ್ಯ ವಾ ಪತಿಂ ಸ್ವಾಮಿನಂ ಹೇ ಜರಿತಃ ಸ್ತೋತ-ಸ್ತ್ವದೀಯಾ ಸ್ತುತಿರ್ನೂನಂ ಪ್ರಾಶ್ಯಾಃ । ಪ್ರಕರ್ಷೇಣ ವ್ಯಾಪ್ನೋತು । ಯಶ್ಚ ಪರ್ಜನ್ಯೋಽಬ್ದಿಮಾನ್ । ಅಬ್ದಿರಪಾಂ ದಾನವಾನ್ಮೇಘಃ । ತದ್ವಾನ್ । ಉದನಿಮಾನುದಕವಾನ್ವಿದ್ಯುತಾ ತಡಿತಾ ರೋದಸೀ ದ್ಯಾವಾಪೃಥಿವ್ಯಾವುಕ್ಷಮಾಣಃ ಸಿಂಚನ್ ಪ್ರೇಯರ್ತಿ ಗಚ್ಛತಿ ॥

॥ ಪ್ರತಿಪದಾರ್ಥ ॥

ಜರಿತಃ—ಎಲೈ ಸ್ತೋತೃವೇ । ಯಃ—ಯಾವ ಪರ್ಜನ್ಯನು । ಅಬ್ದಿಮಾನ್—ಮೇಘಗಳನ್ನು ಸ್ವಾಧೀನದಲ್ಲಿಟ್ಟಿರುವನೋ । ಉದನಿಮಾನ್—ಉದಕವಂತನೋ (ಮತ್ತು) । ವಿದ್ಯುತಾ—ಮಿಂಚಿನಿಂದ । ರೋದಸೀ—ದ್ಯಾವಾಪೃಥಿವಿಗಳೆರಡನ್ನೂ । ಉಕ್ಷಮಾಣಃ—ಪ್ರಕಾಶಿತಗಳನ್ನಾಗಿ ಮಾಡುತ್ತಾ । ಪ್ರ ಇಯರ್ತಿ-ಸಂಚರಿಸುವನೋ

ಅಂತಹ | **ಸ್ತನಯಂತಂ**—ಗರ್ಜಿಸುವವನೂ | **ರುವಂತಂ**—ವೃಷ್ಟಿಸೇಚಕನಾದ ಶಬ್ದಕಾರಕನೂ | **ಇಳಃ**—ಅನ್ನಕ್ಕೆ (ಅಥವಾ ಉದಕಕ್ಕೆ) | **ಪತಿಂ**—ಸ್ವಾಮಿಯಾದವನೂ ಆದ ಪರ್ಜನ್ಯದೇವನನ್ನು | **ಸುಷ್ಟುತಿಃ**—ನಿನ್ನ ಉತ್ತಮವಾದ ಸ್ತುತಿಯು | **ನೂನಂ**—ಕ್ಷಿಪ್ರವಾಗಿ | **ಪ್ರ ಅಶ್ಯಾಃ**—ಹೋಗಿ ಸೇರಲಿ.

॥ ಭಾವಾರ್ಥ ॥

ಎಲೈ ಸ್ತೋತೃವೇ, ಯಾವ ಪರ್ಜನ್ಯನು ಮೇಘಗಳನ್ನೆಲ್ಲಾ ತನ್ನ ಸ್ವಾಧೀನದಲ್ಲೇ ಇಟ್ಟಿರುವನೋ, ಯಾವನು ಉದಕವಂತನೋ ಮತ್ತು ಯಾರು ತನ್ನ ವಿದ್ಯುತ್ತಿನಿಂದ ದ್ಯಾವಾಪೃಥಿವಿಗಳೆರಡನ್ನೂ ಪ್ರಕಾಶಿಸುವಂತೆ ಮಾಡುವನೋ ಮತ್ತು ಗರ್ಜಿಸುತ್ತಲೂ ಸಂಚರಿಸುವನೋ ಅಂತಹ ಅನ್ನಪತಿಯಾದ ಪರ್ಜನ್ಯದೇವನನ್ನು ನಿನ್ನ ಉತ್ತಮವಾದ ಸ್ತುತಿಯು ಕ್ಷಿಪ್ರವಾಗಿ ಹೋಗಿ ಸೇರಲಿ.

## English Translation

May your pious praise, oh worshipper, assuredly reach the thundering, roaring lord of Ila, who, impelling the clouds and distributing the rain, proceeds, illuminating the heaven and earth with lightning.

---

॥ ಸಂಹಿತಾಪಾಠಃ ॥

ಏಷ ಸ್ತೋಮೋ ಮಾರುತಂ ಶರ್ಧೋ ಅಚ್ಛಾ ರುದ್ರಸ್ಯ ಸೂನೂಂರ್ಯುವ-
ನ್ಯೂಂರುದಶ್ಯಾಃ ।
ಕಾಮೋ ರಾಯೋ ಹವತೇ ಮಾ ಸ್ವಸ್ತ್ಯುಪ ಸ್ತುಹಿ ಪೃಷದಶ್ವಾಂ ಅಯಾಸಃ ॥

॥ ಪದಪಾಠಃ ॥

ಏಷಃ । ಸ್ತೋಮಃ । ಮಾರುತಂ । ಶರ್ಧಃ । ಅಚ್ಛ । ರುದ್ರಸ್ಯ ಸೂನೂನ್ । ಯುವನ್ಯೂನ್ । ಉತ್ । ಅಶ್ಯಾಃ ।

ಕಾಮಃ । ರಾಯಃ । ಹವತೇ । ಮಾ । ಸ್ವಸ್ತಿ । ಉಪ । ಸ್ತುಹಿ । ಪೃಷತ್ಽಅಶ್ವಾನ್ । ಅಯಾಸಃ ॥೧೫॥

॥ ಸಾಯಣಭಾಷ್ಯಂ ॥

ಏಷ ಮಯಾ ಸಂಪಾದಿತಃ ಸ್ತೋಮಃ ಸ್ತೋತ್ರಂ ಮಾರುತಂ ಶರ್ಧೋ ಮರುತಾಂ ಬಲಮಚ್ಛಾಭಿಮುಖಮಶ್ಯಾಃ । ಪ್ರಾಪ್ನೋತು । ಸಮುದಾಯರೂಪೇಣ ಸ್ತುತ್ವಾ ಸಮುದಾಯಿರೂಪೇಣಾಹ । ರುದ್ರಸ್ಯ ಸೂನೂನ್ । ಏಷಾಂ ರುದ್ರೇಣ ಪುತ್ರತ್ವೇನ ಪರಿಕ್ಲೃಪ್ತಿರಸಕೃದುಕ್ತಾ । ಯುವನ್ಯೂನ್ಯೂನೋ ಮಿಶ್ರಣೇಚ್ಛೂನ್ವಾ ಉದುನ್ನತಮತ್ಯಧಿಕಮಶ್ಯಾಃ । ವ್ಯಾಪ್ನುಹಿ ಹೇ ಮನಃ । ಕಾಮಃ ಸಂಕಲ್ಪೋ ರಾಯೇ ಧನಾರ್ಥಂ ಮಾ ಮಾಂ ಸ್ವಸ್ತ್ಯವಿನಶ್ವರಂ ಹವತೇ । ಆಹ್ವಯತಿ । ಪ್ರೇರಯತೀತ್ಯರ್ಥಃ । ಯಸ್ಮಾದೇವಂ ತಸ್ಮಾತ್ಪೃಷದಶ್ವಾನ್ಪೃಷದ್ವರ್ಣಾಶ್ವೋಪೇತಾನಯಾಸೋ ಯಜ್ಞಂಗಂತ್ಯಾನುಪೋಪೇತ್ಯಸ್ತುಹಿ ॥

॥ ಪ್ರತಿಪದಾರ್ಥ ॥

ರುದ್ರಸ್ಯ—ರುದ್ರನ । **ಸೂನೂನ್**—ಪುತ್ರರೂ । **ಯುವನ್ಯೂನ್**—ಅತ್ಯಂತ ತರುಣರೂ ಆದ । **ಮಾರುತಂ**—ಮರುತ್ತುಗಳ । **ಶರ್ಧಃ**—ಸಮೂಹವನ್ನು । **ಏಷಃ**—ನನ್ನಿಂದ ಸಂಪಾದಿತವಾದ । **ಸ್ತೋಮಃ**—ಈ ಸ್ತೋತ್ರವು । **ಅಚ್ಛ**—ಅವರಿಗಭಿಮುಖವಾಗಿ । **ಉತ್ ಅಶ್ಯಾಃ**—ತೃಪ್ತಿಕರವಾಗುವಂತೆ ಹೋಗಿ ಸೇರಲಿ । **ಕಾಮಃ**—ನನ್ನ ಮನಃಸಂಕಲ್ಪವು । **ರಾಯೇ**—ಧನೇಚ್ಛೆಯುಳ್ಳದ್ದಾಗಿ । **ಮಾ**—ನನ್ನನ್ನು । **ಸ್ವಸ್ತಿ**—ಮಂಗಳಕರವಾದ ಮಾರ್ಗದಲ್ಲಿ । **ಹವತೇ**—ಪ್ರಚೋದಿಸುತ್ತದೆ । **ಪೃಷದಶ್ವಾನ್**—ಚಿತ್ರವರ್ಣವುಳ್ಳ ಅಶ್ವಗಳನ್ನು ಹತ್ತಿರುವವರೂ । **ಅಯಾಸಃ**—ಯಜ್ಞಕ್ಕೆ ಹೋಗುತ್ತಿರುವವರೂ ಆದ ದೇವತೆಗಳನ್ನು । **ಉಪ**—ಸಮೀಪಿಸಿ । **ಸ್ತುಹಿ**—ಸ್ತುತಿಸು.

॥ ಭಾವಾರ್ಥ ॥

ರುದ್ರಪುತ್ರರೂ, ಅತ್ಯಂತ ತರುಣರೂ ಆದ ಮರುತ್ತುಗಳ ಸಮೂಹವನ್ನು ನನ್ನಿಂದ ಸಂಪಾದಿತವಾದ ಈ ಸ್ತೋತ್ರವು ಅವರಿಗಭಿಮುಖರಾಗಿ ಅವರಿಗೆ ತೃಪ್ತಿಕರವಾಗುವಂತೆ ಹೋಗಿ ಸೇರಲಿ. ನನ್ನ ಮನಃಸಂಕಲ್ಪವು ಧನೇಚ್ಛೆಯುಳ್ಳದ್ದಾಗಿ ನನ್ನನ್ನು ಮಂಗಳಕರವಾದ ಮಾರ್ಗದಲ್ಲೇ ಪ್ರಚೋದಿಸುತ್ತದೆ. ಚಿತ್ರವರ್ಣಾತ್ಮಕವಾದ ಅಶ್ವಗಳನ್ನು ಹತ್ತಿರುವವರೂ, ಯಜ್ಞಕ್ಕೆ ಹೋಗುತ್ತಿರುವವರೂ ಆದ ದೇವತೆಗಳನ್ನು ಸಮೀಪಿಸಿ ಸ್ತುತಿಸು

## English Translation

May this hymn reach up to the presence of the might of the Maruts, the youthful sons of Rudra · the desire of riches incites me to holiness: glorify those who go to sacrifice on spotted steeds.

॥ ಸಂಹಿತಾಪಾಠಃ ॥

ಪ್ರೈಷ ಸ್ತೋಮಃ ಪೃಥಿವೀಮಂತರಿಕ್ಷಂ ವನಸ್ಪತೀಁರೋಷಧೀರಾಯೇ
ಅಶ್ಯಾಃ ।
ದೇವೋದೇವಃ ಸುಹವೋ ಭೂತು ಮಹ್ಯಂ ಮಾ ನೋ ಮಾತಾ ಪೃಥಿವೀ
ದುರ್ಮತೌ ಧಾತ್ ॥ ೧೬ ॥

॥ ಪದಪಾಠಃ ॥

ಪ್ರ । ಏಷಃ । ಸ್ತೋಮಃ । ಪೃಥಿವೀಂ । ಅಂತರಿಕ್ಷಂ । ವನಸ್ಪತೀನ್ । ಓಷಧೀಃ । ರಾಯೇ । ಅಶ್ಯಾಃ ।
ದೇವಃऽದೇವಃ । ಸುಽಹವಃ। ಭೂತು । ಮಹ್ಯಂ । ಮಾ । ನಃ । ಮಾತಾ । ಪೃಥಿವೀ । ದುಃಽಮತೌ ।
ಧಾತ್ ॥

॥ ಸಾಯಣಭಾಷ್ಯಂ ॥

ಏಷ ಸ್ತೋಮಃ ಸ್ತುತಿಃ ಪೃಥಿವ್ಯಾದಿದೇವತಾಃ ಪ್ರಾಶ್ಯಾಃ । ಪ್ರಾಪ್ನೋತು । ಕಿಮರ್ಥಂ । ರಾಯೇ ಧನಾರ್ಥಂ । ದೇವೋ ದೇವಃ ಸರ್ವೋऽಪಿ ದೇವೋ ಮಹ್ಯಂ ಮದರ್ಥಂ ಸುಹವೋ ಭೂತು । ಸ್ವಾಹ್ವಾನೋ ಭವತು । ನೋऽಸ್ಮಾನ್ದುರ್ಮತೌ ಮಾತಾ ಸರ್ವಸ್ಯ ನಿರ್ಮಾತ್ರೀ । ಯದ್ವಾ । ಅತ್ರೇರ್ಭೌಮತ್ವಾದ್ವಿಶೇಷೇಣ ಮಾತಾ । ತಾದೃಶೀ ಪೃಥಿವೀ ಮಾ ಧಾತ್ । ಮಾ ಸ್ಥಾಪಯತು ॥

॥ ಪ್ರತಿಪದಾರ್ಥ ॥

**ಏಷಃ ಸ್ತೋಮಃ**—ನನ್ನಿಂದ ನಿರ್ಮಿತವಾದ ಈ ಸ್ತುತಿಯು । **ರಾಯೇ**—ಧನಾರ್ಥವಾಗಿ । **ಪೃಥಿವೀಂ**—ಪೃಥಿವೀದೇವತೆಯನ್ನೂ । **ಅಂತರಿಕ್ಷಂ**—ಅಂತರಿಕ್ಷಾಭಿಮಾನಿದೇವತೆಯನ್ನೂ । **ವನಸ್ಪತೀನ್**—ವನಸ್ಪತಿದೇವತೆಗಳನ್ನೂ । **ಓಷಧೀಃ**—ಓಷಧ್ಯಧಿದೇವತೆಗಳನ್ನೂ । **ಪ್ರ ಅಶ್ಯಾಃ**—ಉತ್ತಮರೀತಿಯಲ್ಲಿ ಹೋಗಿ ಸೇರಲಿ । **ದೇವೋದೇವಃ**—ಪ್ರತಿಯೊಂದು ದೇವತೆಯೂ ಸಹ । **ಮಹ್ಯಂ**—ನನಗಾಗಿ । **ಸುಹವೋ ಭೂತು**—ಉತ್ತಮರೀತಿಯಲ್ಲಿ ಪ್ರಾರ್ಥಿತನಾಗಿ ಕರೆಯಲ್ಪಡಲಿ । **ಮಾತಾ**—ಜಗನ್ನಿರ್ಮಾತ್ರಿಯಾದ । **ಪೃಥೀವೀ**—ಪೃಥಿವಿಯು । **ನಃ**—ನಮ್ಮನ್ನು । **ದುರ್ಮತೌ**—ದುರ್ಬುದ್ಧಿಯೊಡನೆ । **ಮಾ ಧಾತ್**—ಇಡದಿರಲಿ

॥ ಭಾವಾರ್ಥ ॥

ನನ್ನಿಂದ ನಿರ್ಮಿತವಾದ ಈ ಸ್ತುತಿಯು ಧನಾರ್ಥವಾಗಿ ಪೃಥಿವೀದೇವತೆಯನ್ನೂ, ಅಂತರಿಕ್ಷಾಭಿಮಾನಿ ದೇವತೆಯನ್ನೂ, ವನಸ್ಪತಿದೇವತೆಗಳನ್ನೂ, ಓಷಧ್ಯಧಿದೇವತೆಗಳನ್ನೂ, ಸಹ ಉತ್ತಮವಾದ ರೀತಿಯಲ್ಲಿ ಹೋಗಿ ಸೇರಲಿ.

ಪ್ರತಿಯೊಂದು ದೇವತೆಯೂ ಸಹ ನನಗಾಗಿ ಉತ್ತಮವಾದ ರೀತಿಯಲ್ಲಿ ಪ್ರಾರ್ಥಿತನಾಗಿ ಕರೆಯಲ್ಪಡಲಿ ಜಗನ್ನಿರ್ಮಾತ್ರಿಯಾದ ಪೃಥಿವಿಯು ನಮ್ಮನ್ನು ದುರ್ಬುದ್ಧಿಯೊಡನೆ ಸೇರಿಸದಿರಲಿ.

English Translation

May this hymn attain (the divinities) of earth and heaven, the trees, the herbs, for (the sake of) wealth: may each individual deity be successfully invoked by me : let not mother earth take us into unfavourable thought.

॥ ಸಂಹಿತಾಪಾಠಃ ॥

ಉರೌ ದೇವಾ ಅನಿಬಾಧೇ ಸ್ಯಾಮ ॥ ೧೭ ॥

॥ ಪದಪಾಠಃ ॥

ಉರೌ । ದೇವಾಃ । ಅನಿಃಬಾಧೇ । ಸ್ಯಾಮ ॥ ೧೭ ॥

॥ ಸಾಯಣಭಾಷ್ಯಂ ॥

ಹೇ ದೇವಾ ಯುಷ್ಮಾಕಂ ಸಂಬಂಧಿನ್ಯುರೌ ಮಹತ್ಯನಿಬಾಧೇ ನಿತರಾಂ ಬಾಧರಹಿತೇ ಸುಖೇ ಸ್ಯಾಮ । ಭವೇಮ ವಯಮತ್ರಯಃ ॥

॥ ಪ್ರತಿಪದಾರ್ಥ ॥

**ದೇವಾಃ**—ಎಲೈ ದೇವತೆಗಳೇ । **ಉರೌ**—ಅತ್ಯಧಿಕವಾದುದೂ । **ಅನಿಬಾಧೇ**—ಪ್ರತಿಬಂಧಕರಹಿತವಾದುದೂ ಆದ ಸುಖದಲ್ಲಿ । **ಸ್ಯಾಮ**—ನಾವಿರುವಂತಾಗಲಿ.

॥ ಭಾವಾರ್ಥ ॥

ಎಲೈ ದೇವತೆಗಳೇ, ಅತ್ಯಧಿಕವಾದುದೂ, ಪ್ರತಿಬಂಧಕರಹಿತವಾದುದೂ ಆದ ಸುಖದಲ್ಲಿ ನಾವಿರುವಂತಾಗಲಿ.

English Translation

May we ever, gods, enjoy great and uninterrupted felicity.

॥ ಸಂಹಿತಾಪಾಠಃ ॥

ಸಮಶ್ವಿನೋರವಸಾ ನೂತನೇನ ಮಯೋಭುವಾ ಸುಪ್ರಣೀತೀ ಗಮೇಮ ।

ಆ ನೋ ರಯಿಂ ವಹತಮೋತ ವೀರಾನಾ ವಿಶ್ವಾನ್ಯಮೃತಾ ಸೌಭಗಾನಿ ॥೧೮॥

॥ ಪದಪಾಠಃ ॥

ಸಂ । ಅಶ್ವಿನೋಃ । ಅವಸಾ । ನೂತನೇನ । ಮಯಃऽಭುವಾ । ಸುऽಪ್ರನೀತೀ । ಗಮೇಮ ।

ಆ । ನಃ । ರಯಿಂ । ವಹತಂ । ಆ । ಉತ । ವೀರಾನ್ । ಆ । ವಿಶ್ವಾನಿ । ಅಮೃತಾ । ಸೌಭಗಾನಿ ॥೧೮॥

॥ ಸಾಯಣಭಾಷ್ಯಂ ॥

ವಯಮಶ್ವಿನೋರ್ನೂತನೇನ ಪೂರ್ವಮನ್ಯೈರನನುಭೂತೇನ ಮಯೋಭುವಾ ಸುಖಸ್ಯ ಭಾವಯಿತ್ರಾ ಸುಪ್ರಣೀತೀ ಶೋಭನಪ್ರಣಯನವತಾವಸಾ ರಕ್ಷಣೇನ ಸಂ ಗಮೇಮ । ಸಂಗಚ್ಛೇಮಹಿ । ಹೇ ಅಮೃತಾಮರಣಾವಶ್ವಿನಾ ನೋಽಸ್ಮಭ್ಯಂ ರಯಿಂ ಧನಮಾ ವಹತಂ । ಪ್ರಾಪಯತಂ । ಉತ ವೀರಾನ್ ಸುವೀರ್ಯವತಃ ಪುತ್ರಾನಪ್ಯಾ ವಹತಂ । ವಿಶ್ವಾನಿ ಸೌಭಗಾನ್ಯಪ್ಯಾ ವಹತಂ ॥

॥ ಪ್ರತಿಪದಾರ್ಥ ॥

(**ವಯಂ**—ನಾವು) । **ಅಶ್ವಿನೋಃ**—ಅಶ್ವಿನೀದೇವತೆಗಳ । **ನೂತನೇನ**—ನೂತನವಾದುದೂ (ಹಿಂದೆಲ್ಲಾ ಇಲ್ಲದ) । **ಮಯೋಭುವಾ**—ಸುಖಜನಕವಾದುದೂ । **ಸುಪ್ರಣೀತೀ**—ಉತ್ತಮವಾದ ಮಾರ್ಗದರ್ಶಕವಾದುದೂ ಆದ । **ಅವಸಾ**—ರಕ್ಷಣೆಯೊಡನೆ ಕೂಡಿ । **ಸಂ ಗಮೇಮ**—ಹೊಂದಿಕೊಂಡಿರುವಂತಾಗಲಿ । **ಅಮೃತಾ**—ಮರಣ ಧರ್ಮರಹಿತರಾದ ಎಲೈ ಅಶ್ವಿನೀದೇವತೆಗಳೇ । **ನಃ**—ನಮಗೆ । **ರಯಿಂ**—ಧನವನ್ನು । **ಆ ವಹತಂ**—ಒದಗಿಸಿರಿ । **ಆ ಉತ**—ಅಲ್ಲದೇ । **ವೀರಾನ್**—ವೀರಪುತ್ರರನ್ನು । **ಆ (ವಹತಂ)**—ಒದಗಿಸಿರಿ । **ವಿಶ್ವಾನಿ**—ಸಮಸ್ತವಾದ । **ಸೌಭಗಾನಿ**—ಕಲ್ಯಾಣಗಳನ್ನೂ । **ಆ (ವಹತಂ)**—ಒದಗಿಸಿರಿ.

॥ ಭಾವಾರ್ಥ ॥

ಹಿಂದೆ ಯಾರೂ ಅನುಭವಿಸದೆ ನೂತನವಾಗಿರುವುದೂ, ಸುಖಜನಕವಾದುದೂ, ಉತ್ತಮವಾದುದೂ, ಆದ ರಕ್ಷಣೆಯೊಡನೆ ಕೂಡಿ ನಾವು ಸರ್ವದಾ ಅವುಗಳನ್ನು ಹೊಂದಿರುವಂತಾಗಲಿ. ಮರಣಧರ್ಮರಹಿತರಾದ ಎಲೈ ಅಶ್ವಿನೀದೇವತೆಗಳೇ, ನಮಗೆ ಧನವನ್ನೂ ವೀರಪುತ್ರರನ್ನೂ, ಸಮಸ್ತವಾದ ಕಲ್ಯಾಣಗಳನ್ನೂ ಒದಗಿಸಿರಿ.

## English Translation

May we ever be participant of the unprecedented, joy-conferring and well-guided protection of the Aswins: bring to us, immortal (Aswins,) riches, male progeny, and all good things.

# ನಲವತ್ತಮೂರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಆ ಧೇನವ ಇತಿ ಸಪ್ತದಶರ್ಚಮೇಕಾದಶಂ ಸೂಕ್ತಮತ್ರೇರಾರ್ಷಂ ತ್ರೈಷ್ಟುಭಂ ವೈಶ್ವದೇವಂ । ಅತ್ರಾನುಕ್ರಮಣಿಕಾ । ಆ ಧೇನವಸ್ತ್ರ್ಯೂನೈತಯೋರುಪಾಂತ್ಯೈಕಪದೇತಿ ॥ ವಿನಿಯೋಗೋ ಲೈಂಗಿಕಃ ॥ ಅಪ್ತೋರ್ಯಾಮೇ ಏಕಧನಾಸು ಹವಿರ್ಧಾನಂ ಪ್ರತಿ ನೀಯಮಾನಾಸ್ವಾದ್ಯಾನುವಚನೀಯಾ । ಸೂತ್ರಿತಂ ಚ । ಆ ಧೇನವಃ ಪಯಸಾ ತೂರ್ಣ್ಯರ್ಥಾಃ ಸಮನ್ಯಾ ಯಂತ್ಯುಪ ಯಂತ್ಯನ್ಯಾಃ । ಆ. ೫. ೧. । ಇತಿ ॥**

ಅನುವಾದವು—**ಆ ಧೇನವಃ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು ಇದರಲ್ಲಿ ಹದಿನೇಳು ಋಕ್ಕುಗಳಿರುವವು. ಈ ಸೂತ್ರಕ್ಕೆ ಅತ್ರಿಯು ಋಷಿಯು, ವಿಶ್ವೇದೇವತೆಗಳು ದೇವತೆಯು, ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಆ ಧೇನವಸ್ತ್ರ್ಯೂನೈತಯೋರುಪಾಂತ್ಯೈಕಪದಾ** ಎಂದು ಹೇಳಿರುವುದು ವಿನಿಯೋಗವು ಲೈಂಗಿಕವು ಅಪ್ತೋರ್ಯಾಮಯಾಗದಲ್ಲಿ ಹವಿರ್ಧಾನವೆಂಬ ಸೋಮಾಸಯುಸ ಶಟಕದ ಬಳಿಗೆ ಏಕಧನವನ್ನು ತೆಗೆದುಗೊಂಡುಹೋಗುವಾಗ ಈ ಸೂಕ್ತದ ಮೊದಲನೆಯ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಆ ಧೇನವಃ ಪಯಸಾ ತೂರ್ಣ್ಯರ್ಥಾಃ ಸಮನ್ಯಾಯಂತ್ಯುಪ ಯಂತ್ಯನ್ಯಾಃ** ಎಂಬ ಸೂತ್ರದಿಂದ (ಆ. ೫-೧) ವಿವೃತವಾಗಿರುವುದು

## ಸೂಕ್ತ—೪೩

॥ಮಂಡಲ—೫ ॥ ಅನುವಾಕ—೪ ॥ ಸೂಕ್ತ—೪೩ ॥

॥ ಅಷ್ಟಕ—೪ ॥ ಅಧ್ಯಾಯ—೨ ॥ ವರ್ಗ—೨೦, ೨೧, ೨೨ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೭ ॥

ಋಷಿಃ—ಅತ್ರಿಃ ॥

ದೇವತಾ—ವಿಶ್ವೇದೇವಾಃ ॥

ಛಂದಃ—೧-೧೫, ೧೭ ತ್ರಿಷ್ಟುಪ್ । ೧೬ ಏಕಪದಾ ॥

॥ ಸಂಹಿತಾಪಾಠಃ ॥

ಆ ಧೇನವಃ ಪಯಸಾ ತೂರ್ಣ್ಯರ್ಥಾ ಅಮರ್ಧಂತೀರುಪ ನೋ ಯಂತು ಮಧ್ವಾ ।

ಮಹೋ ರಾಯೇ ಬೃಹತೀಃ ಸಪ್ತ ವಿಪ್ರೋ ಮಯೋಭುವೋ ಜರಿತಾ ಜೋಹವೀತಿ ॥ ೧ ॥

॥ ಪದಪಾಠಃ ॥

ಆ । ಧೇನವಃ । ಪಯಸಾ । ತೂರ್ಣಿऽಅರ್ಥಾಃ । ಅಮರ್ಧಂತೀಃ । ಉಪ । ನಃ । ಯಂತು । ಮಧ್ವಾ ।

ಮಹಃ । ರಾಯೇ । ಬೃಹತೀಃ । ಸಪ್ತ । ವಿಪ್ರಃ । ಮಯಃऽಭುವಃ । ಜರಿತಾ । ಜೋಹವೀತಿ ॥ ೧ ॥

॥ ಸಾಯಣಭಾಷ್ಯಂ ॥

ಧೇನವಃ ಪ್ರೀಣಯಿತ್ರ್ಯೋ ನದ್ಯೋ ಮಧ್ವಾ ಮಧುರೇಣ ಪಯಸಾ ರಸೇನ ಸಹಿತಾಸ್ತೂರ್ಣ್ಯರ್ಥಾಸ್ತ್ವರಮಾಣಗಮನಾಃ । ಅರ್ಥೋऽರ್ತೇಃ । ನಿ ೧. ೧೮. । ಇತಿ ಯಾಸ್ಕಃ । ಅಮರ್ಧಂತೀರಹಿಂಸಂತ್ಯಃ ಸತ್ಯೋ ನೋಽಸ್ಮಾನುಪಾ ಯಂತು । ಉಪಾಗಚ್ಛಂತು । ತದರ್ಥಂ ಮಹೋ ಮಹತೇ ರಾಯೇ ಧನಾಯ ಬೃಹತೀರ್ಮಹತೀಃ ಸಪ್ತ ಸರ್ಪಣಸ್ವಭಾವಾಃ ಸಪ್ತಸಂಖ್ಯಾಕಾ ಇಮಂ ಮೇ ಗಂಗೇ । ಋಗ್ವೇ ೧೦. ೭೫. ೫ । ಇತಿ ಮಂತ್ರೋಕ್ತಾ ಗಂಗಾದ್ಯಾ ವಾ । ತತ್ರ ಹಿ ಪ್ರಾಧಾನ್ಯೇನ ಸಪ್ತೈವೋಕ್ತಾಃ । ಮಯೋಭುವಃ ಸುಖಸ್ಯ ಭಾವಯಿತ್ರೀರ್ವಿಪ್ರೋ ವಿಶೇಷೇಣ ಪ್ರೀಣಯಿತಾ ಜರಿತಾ ಸ್ತೋತಾ ಜೋಹವೀತಿ । ಆಹ್ವಯತಿ ।

॥ ಪ್ರತಿಪದಾರ್ಥ ॥

**ಧೇನವಃ**—ತೃಪ್ತಿಕಾರಕಗಳಾದ ನದಿಗಳು । **ಮಧ್ವಾ**—ಮಧುರವಾದ । **ಪಯಸಾ**—ನೀರಿನೊಡಗೂಡಿ । **ತೂರ್ಣ್ಯರ್ಥಾಃ**—ವೇಗವಾಗಿ ಪ್ರವಹಿಸುವುಗಳಾಗಿಯೂ । **ಅಮರ್ಧಂತೀಃ**—ಯಾವ ರೀತಿಯಲ್ಲೂ ಹಿಂಸೆಯನ್ನಾಚರಿಸದೆಯೂ । **ನಃ ಉಪ**—ನಮ್ಮ ಸಮೀಪವಾಗಿ । **ಆ ಯಂತು**—ಹರಿದು ಬರಲಿ । **ಮಹೇ**—ಮಹತ್ತಾದ । **ರಾಯೇ**—ಧನಕ್ಕಾಗಿ । **ಬೃಹತೀಃ**—ಮಹತ್ಸ್ವರೂಪವುಳ್ಳವೂ । **ಸಪ್ತ**—ಗಂಗಾದಿ ಸಪ್ತಸಂಖ್ಯಾಕವೂ । **ಮಯೋಭುವಃ**—ಸುಖದಾಯಕವಾದವೂ ಆದ ನದಿಗಳನ್ನು । **ವಿಪ್ರಃ**—ಮೇಧಾವಿಯಾದ । **ಜರಿತಾ**—ಸ್ತುತಿಕರ್ತನು । **ಜೋಹವೀತಿ**—ಪ್ರಾರ್ಥಿಸಿ ಕರೆಯುತ್ತಾನೆ

॥ ಭಾವಾರ್ಥ ॥

ಮಾನವರಿಗೆಲ್ಲಾ ತೃಪ್ತಿಯನ್ನುಂಟುಮಾಡತಕ್ಕ ನದಿಗಳು ಮಧುರವಾದ ನೀರಿನೊಡಗೂಡಿ ವೇಗವಾಗಿ ಪ್ರವಹಿಸುವುಗಳಾಗಿಯೂ ಯಾವರೀತಿಯೂ ಹಿಂಸೆಯನ್ನಾಚರಿಸದೆಯೂ ಸಹ ನಮ್ಮ ಸಮೀಪವಾಗಿ ಹರಿದು ಬರಲಿ· ಮಹತ್ಸ್ವರೂಪವುಳ್ಳವೂ ಗಂಗಾದಿ ಸಪ್ತ ಸಂಖ್ಯಾಕವೂ, ಸುಖದಾಯಕವೂ ಆದ ನದಿಗಳನ್ನು ಮೇಧಾವಿಯೂ ಸ್ತುತಿಕರ್ತನೂ ಆದ ನಾನು ಪ್ರಾರ್ಥಿಸಿ ಕರೆಯುತ್ತೇನೆ

## English Translation

May the milch cows, quick-moving, doing no harm, come to us, (laden) with their sweet fluid; the wise worshipper invokes the seven-vast and joy-diffusing (rivers) for the sake of ample riches

॥ ವಿಶೇಷವಿಷಯಗಳು ॥

**ರಾಕಾ—ರಾಕಾ** ಎಂಬುದಕ್ಕೆ ಸಾಯಣರು ಹಿಂದೆ (ಋ. ಸಂ. ೨.೩೨.೪) ಸಂಪೂರ್ಣಚಂದ್ರಾ ಪೌರ್ಣಮಾಸೀ ಎಂಬರ್ಥವನ್ನು ಹೇಳಿದ್ದಾರೆ. ನಿರುಕ್ತಕಾರರು ಈ ಪದದ ನಿರ್ವಚನವನ್ನು ತಿಳಿಸುತ್ತಾ,

**ರಾಕಾ ರಾತೇರ್ದಾನಕರ್ಮಣಃ (ಹವಿರ್ದಾನನಿಮಿತ್ತಂ ಹಿ ಸಾ)**

(ನಿ ೧೧-೩೦)

ದಾನಾರ್ಥಕರ್ಮವುಳ್ಳ ರಾ ಧಾತುನಿಷ್ಪನ್ನವಾಗಿ **ರಾಕಾ** ಎಂಬ ಹೆಸರು ಪ್ರಸಿದ್ಧವಾಗಿದೆಯೆಂದು ತಿಳಿಸಿದ್ದಾರೆ

**ರಾಕಾ ವಾಕ್ ಸರಮಾಪ್ಸ್ವಾಶ್ಚ ಭೃಗವೋಽಥರ್ವಾ ಸರಸ್ವತೀ ।**

(ಬೃ ದೇ ೧-೨೮)

**ರಾಕಾ, ವಾಕ್,** ಇತ್ಯಾದಿ ದೇವತಾವಿಶೇಷಗಳು **ಇಂದ್ರ**ಲೋಕವಾದ ಅಂತರಿಕ್ಷಕ್ಕೆ ಸಂಬಂಧಿಸಿದವರು ಎಂದು ಬೃಹದ್ದೇವತಾವಾಕ್ಯದಿಂದ ತಿಳಿಯುತ್ತದೆ. ಈ ದೇವತೆಯನ್ನು ಅತ್ಯಂತ ಉದಾರವಾದ ಮನಸ್ಸಿನಿಂದ ಕೂಡಿದ ದಾನವುಳ್ಳವಳೆಂದು ಸ್ತುತಿಸಿದೆ ಮತ್ತು ದೇವತೆಗಳಿಗೆ ಭಗಿನಿಯೆಂದೂ, ದೇವತೆಗಳೊಡನೆ ಸಮಾನವಾದ ಪೂಜಾರ್ಹಳೆಂದೂ ಕೆಲವು ವಿವರಣೆಗಳಿಂದ ತಿಳಿಯುತ್ತದೆ ಐತರೇಯಬ್ರಾಹ್ಮಣದಲ್ಲಿ **ರಾಕಾ**ಪೂಜೆಯನ್ನು ನಿರ್ದೇಶಿಸುವ ಕಾಲದಲ್ಲಿ ಒಂದು ಆಶಂಕೆಯು ಉದ್ಭವಿಸಿ ಅದಕ್ಕೆ ಸಮಾಧಾನವೂ ಇರುತ್ತದೆ ಆ ಸಂದರ್ಭದಲ್ಲಿ ಸಾಯಣರು ಈರೀತಿ ವಿವರಿಸಿದ್ದಾರೆ—

> **ಸಂಪೂರ್ಣಚಂದ್ರಮಂಡಲಯುಕ್ತಾ ಪೌರ್ಣಮಾಸೀ ರಾಕಾ । ತದಭಿಮಾನಿದೇವತಾಯಾಃ ಪ್ರತಿಪಾದಿಕಾ ಋಗಪಿ ರಾಕೇತ್ಯುಚ್ಯತೇ । ಸೇಯಂ ರಾಕಾ ದೇವಾನಾಂ ಜಾಮೀ ನಾಮ ಭಗಿನೀ ॥**

(ಐ ಬ್ರಾ ಸಾ ಭಾ ೩-೩೭)

ಸಂಪೂರ್ಣಚಂದ್ರಮಂಡಲಯುಕ್ತವಾದ ಪೌರ್ಣಮಾಸಿಯೇ **ರಾಕಾ** ಎಂಬ ನಾಮದಿಂದ ನಿರ್ದಿಷ್ಟಳಾಗಿದ್ದಾಳೆ. ಆ ಅಭಿಮಾನದೇವತೆಯನ್ನು ಸ್ತುತಿಸುವ ಋಕ್ಕಿಗೂ ಸಹ **ರಾಕಾ** ಎಂಬ ಹೆಸರೇ ಪ್ರಸಿದ್ಧವಾಗಿದೆ. ಈದೇವತೆಯು ದೇವತೆಗಳಿಗೆಲ್ಲಾ ಸಹೋದರಿಯೆಂದು ಪೂಜಿತಳಾಗಿದ್ದಾಳೆ ಎಂದು ಬ್ರಾಹ್ಮಣವಾಕ್ಯಕ್ಕೆ ತಾತ್ಪರ್ಯವನ್ನು ತಿಳಿಸಿದ್ದಾರೆ ಈ ಸಂದರ್ಭದಲ್ಲಿ, ಈ ದೇವತೆಯ ಪೂಜಾಕ್ರಮದ ವಿಷಯದಲ್ಲಿ ಒಂದು ಸಂಶಯವುಂಟಾಗುತ್ತದೆ ಅದೇನೆಂದರೆ,

**ತದಾಹುಃ ರಾಕಾಂ ಪೂರ್ವಾಂ ಶಂಸೇಜ್ಜಾಮ್ಯೈ ವೈ ಪೂರ್ವಪೇಯಮಿತಿ ॥**

(ಐ ಬ್ರಾ ೩ ೩೭)

ದೇವಭಗಿನಿಯಾದ **ರಾಕಾ**ದೇವತೆಗೆ ದೇವಪತ್ನಿಯರಿಗಿಂತಲೂ ಪೂರ್ವಭಾವಿಯಾದ ಪೂಜೆಯು ಸಲ್ಲಬೇಕು ಎಂಬ ಅಭಿಪ್ರಾಯವು ಈ ವಾಕ್ಯದಲ್ಲಿ ತಿಳಿಸಿದೆ. ಆದರೆ, ಈ ವಿಧಿಯು ಪೂರ್ವಪಕ್ಷವಾಕ್ಯವು. **ಪೂರ್ವಪೇಯಂ ಪ್ರಥಮತಃ ಸೋಮಪಾನಂ ಯುಕ್ತಮಿತಿ ಪೂರ್ವಪಕ್ಷಃ** (ಸಾ.ಭಾ.) ಈ ಪೂರ್ವಪಕ್ಷವನ್ನು ನಿರಾಕರಿಸಿ **ರಾಕೆ**ಗಿಂತಲೂ ದೇವಪತ್ನಿಯರಿಗೇ ಪೂರ್ವಭಾವಿಯಾದ ಸೋಮಪಾನವು ವಿಹಿತವು ಎಂಬ ಸಿದ್ಧಾಂತವನ್ನು ಮುಂದಿನ ವಾಕ್ಯವು ತಿಳಿಸುತ್ತದೆ

**ತತ್ರಸ್ಮಾದ್ಧೃತ್ಯಂ ದೇವಾನಾಮೇವ ಪತ್ನೀಃ ಪೂರ್ವಾಃ ಶಂಸೇತ್ ।**

ದೇವಪತ್ನಿಯರಿಗೇ ಪೂರ್ವಭಾವಿಯಾದ ಪಾನವು. ಭಗಿನಿಗಿಂತಲೂ ಪತ್ನಿಯೇ ಪ್ರಥಮ ಪೂಜಾರ್ಹಳು, ಇತ್ಯಾದಿಯಾದ ಸಮಾಧಾನವನ್ನು ತಿಳಿಸಿದೆ. ಆದುದರಿಂದ ರಾಕೆಯು ದೇವಭಗಿನಿಯಾದುದರಿಂದ ದೇವಪತ್ನಿಯರಿಗೆ ಸಿಕ್ಕತಕ್ಕ ಪ್ರಥಮ ಸ್ಥಾನವು ದೊರೆಯುವುದಿಲ್ಲ.

**ಸಾಮಾನೋದರ್ಯಾ ಸ್ವಸಾ ಅನ್ಯೋದರ್ಯಾಯ್ಯೈ ಜಾಯಾಯಾ ಅನುಜೀವಿನೀ ಜೀವತಿ ॥**

(ಐ ಬ್ರಾ ೩-೩೭)

ಭಗಿನಿಯು ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ್ದರೂ, ಭಿನ್ನೋದರಳಾದ ಪತ್ನಿಯನ್ನು ಅನುಸರಿಸಿ ಜೀವಿಸುವುದರಿಂದ ಅವಳಿಗೆ ಎರಡನೆಯ ಸ್ಥಾನವು ಎಂದು ಸ್ಪಷ್ಟವಾಗಿ ತಿಳಿಸಿದೆ. ಅನಂತರ ರಾಕಾಪ್ರಶಂಸೆಯನ್ನುಮಾಡುತ್ತಾ,

**ರಾಕಾಂ ಶಂಸತಿ ರಾಕಾ ಹ ವಾ ಏತಾಂ ಪುರುಷಸ್ಯ ಸೇವಿನೀಂ ಸೀವ್ಯತಿ ಯೈಷಾ . ... ॥**

**ರಾಕಾಮಹಂ ಯಾಸ್ತೇ ರಾಕೇ** ಇತ್ಯಾದಿ ಮಂತ್ರಗಳನ್ನು ಪಠಿಸಿ ರಾಕಾಪೂಜೆಯನ್ನು ಸಲ್ಲಿಸಬೇಕೆಂದು ವಿಧಿಸಿದೆ. ರಾಕಾಪ್ರಶಂಸೆಯನ್ನು ಮಾಡತಕ್ಕ ಮಂತ್ರಕ್ಕೂ **ರಾಕಾ** ಎಂದೇ ನಾಮಧೇಯವು ಎಂದೂ ತಿಳಿಸಿದೆ. ಇದೇ **ರಾಕಾದೇವಿಯು** ಯಜ್ಞಕಾರ್ಯದಲ್ಲಿ ಅತಿಪ್ರಧಾನವಾದ ಸ್ಥಾನವನ್ನು ವಹಿಸಿ ಯಜಮಾನನಿಗೆ ಸಹಾಯಕಳಾಗುತ್ತಾಳೆಂದೂ ಪ್ರಶಂಸಿಸಿದೆ. ಯಜ್ಞಕಾಲಗಳಲ್ಲಿ ಛಂದಸ್ಸುಗಳ ಸಹಾಯವು ಅತ್ಯವಶ್ಯವಾದುದು ಈ ದೇವತೆಯನ್ನು ಛಂದೋರೂಪಿಯೆಂದೇ ತಿಳಿಸಿದೆ

**ಅನುಮತ್ಯೈ ಚರುಂ ಯಾನುಮತಿಃ ಸಾ ಗಾಯತ್ರೀ । ರಾಕಾಯ್ಯೈ ಚರುಂ ಯಾ ರಾಕಾ ಸಾ ತ್ರಿಷ್ಟುಪ್ । ಸಿನೀವಾಲ್ಯೈ ಚರುಂ ಯಾ ಸಿನೀವಾಲೀ ಸಾ ಜಗತೀ । ಕುಹ್ವೈ ಚರುಂ ಯಾ ಕುಹೂಃ ಸಾ ಅನುಷ್ಟುಪ್ । ಏತಾನಿ ವಾವ ಸರ್ವಾಣಿ ಛಂದಾಂಸಿ ಗಾಯತ್ರಂ ತ್ರೈಷ್ಟುಭಂ ಜಾಗತಮಾನುಷ್ಟುಭಮನ್ವನ್ಯಾನ್ಯೇತಾನಿ ಹಿ ಯಜ್ಞೇ ಪ್ರತಮಾಮಿವ ಕ್ರಿಯಂತೇ ।**

(ಐ. ಬ್ರಾ ೩-೪೭)

ಯಜ್ಞಕ್ರಿಯಾಕಲಾಪಗಳಿಗೆ ಛಂದಸ್ಸುಗಳ ಸಹಾಯವು ಅತ್ಯವಶ್ಯವೆಂದಮೇಲೆ ಆ ಛಂದಸ್ಸುಗಳನ್ನು ಅನುಮತ್ಯಾದಿ **ದೇವತೆಗಳೇ** ಪ್ರತಿಬಿಂಬಿಸುತ್ತಾರೆ. ಅನುಮತಿಯು ಗಾಯತ್ರೀರೂಪಳು; ರಾಕಾದೇವಿಯೇ ತ್ರಿಷ್ಟುಬಾತ್ಮಕಳು. ಸೀನೀವಾಲಿಯು ಜಗತೀರೂಪಳು. ಕುಹೂದೇವಿಯು ಅನುಷ್ಟುಬಾತ್ಮಕಳು. ಇವುಗಳೇ ಯಜ್ಞದಲ್ಲಿ ಪ್ರಾಚುರ್ಯಾತಿಶಯವನ್ನು ಹೊಂದುತ್ತವೆ ಎಂಬುದಾಗಿ ಇವರ ಪ್ರಶಂಸೆಯಿದೆ. ಇವರು ಛಂದೋರೂಪಿಣಿಗಳಾಗಿ ಯಜ್ಞಕ್ಕೆ ಸಾಹಾಯ್ಯಕರಾಗುವುದರಿಂದಲೇ, **ಪ್ರಜಾಪತಿಯ** ವಿಶ್ವನಿಯಮನ ಕಾರ್ಯಗಳಿಗೂ ನೆರವಾಗುತ್ತಾರೆ. ಅದು ಹೇಗೆಂದರೆ,

**ಸ ಯಃ ಸ ಧಾತಾಯಮೇವ ಸ ಧಾತ್ರಃ । ದ್ವಾದಶಕಪಾಲಃ ಪುರೋಡಾಶೋ ದ್ವಾದಶಕಪಾಲೋ ದ್ವಾದಶಮಾಸಾಃ ಸಂವತ್ಸರಃ ಸಂವತ್ಸರಃ ಪ್ರಜಾಪತಿಃ ಪ್ರಜಾಪತಿರ್ಧಾತಾಥ ಯತ್ತದ್ವಿತಾಂ ಪರಮಂ ಕ್ರಾಂತಮೇತಾನಿ ತಾನಿ ಪೂರ್ವಾಣಿ ಹವೀಂಷ್ಯನುಮತ್ಯೈ ಚರೂ ರಾಕಾಯ್ಯೈಚರುಃ ಸಿನೀವಾಲ್ಯೈ ಚರುಃ ಕುಹ್ವೈ ಚರುಃ . .. .... ॥**

(ಶ. ಬ್ರಾ. ೯-೫-೧-೩೮)

ಪ್ರಜಾಪತಿಯ ಧಾತೃರೂಪವೂ ಧಾರಕರೂಪವೂ ಆದ ಯಾವ ಕರ್ಮವಿದೆಯೋ ಅದನ್ನು ಅನುಸರಿಸಿ ಹವಿರರ್ಪಣೆಯು. ಪ್ರಜಾಪತಿಯು ಸಂವತ್ಸರರೂಪಿಯಾದುದರಿಂದ ಸಂವತ್ಸರಾವಯವಗಳಾದ ಹನ್ನೆರಡು ವಿಭಾಗಗಳನ್ನನುಸರಿಸಿ ದ್ವಾದಶ ಕಪಾಲಗಳಲ್ಲಿ ಪುರೋಡಾಶಗಳನ್ನರ್ಪಿಸತಕ್ಕದ್ದು. ಈ ಸಂದರ್ಭದಲ್ಲಿ ನಿಯತವಾಗಿ **ಅನುಮತಿ, ರಾಕಾ, ಸಿನೀವಾಲೀ** ಮತ್ತು **ಕುಹೂ** ಎಂಬ ದೇವತೆಗಳನ್ನೂ ಪೂಜಿಸಿ ಹವಿಸ್ಸುಗಳಿಂದ ತೃಪ್ತಿಪಡಿಸತಕ್ಕದ್ದು. **ರಾಕಾದಿ** ಈ ದೇವತೆಗಳೇ ಪ್ರಜಾಪತಿಯ ವಿಶ್ವಧಾರಕವಾದ ಕರ್ಮಗಳಿಗೆ ನಾನಾ ಪ್ರದೇಶಗಳಲ್ಲಿಯೂ ಸ್ಥಿರತೆಯನ್ನುಂಟುಮಾಡುತ್ತಾರೆ

**ತಾ ವಾ ಏತಾ ದೇವ್ಯಃ । ದಿಶೋ ಹ್ಯೇತಾಶ್ಛಂದಾಗ್ಂಸಿ ವೈ ದಿಶಶ್ಛಂದಾಗ್ಂಸಿ ದೇವ್ಯೋಽಥೈಷ**
**ಕಃ ಪ್ರಜಾಪತಿಸ್ತದ್ಯದ್ದೇವ್ಯಶ್ಚ ಕಶ್ಚ ತಸ್ಮಾದ್ದೇವಿಕಾಃ ಪಂಚ ಭವಂತಿ ಪಂಚ ಹಿ ದಿಶಃ ॥**

(ಐ. ಬ್ರಾ. ೯.೫ ೧-೩೯)

**ರಾಕಾ, ಸಿನೀವಾಲಿ,** ಈ ದೇವತೆಗಳೇ ವಿಶ್ವದ ನಾಲ್ಕು ದಿಗ್ದೇವತೆಗಳು ಆದುದರಿಂದ ಇವರು ವಿಶ್ವನಿಯಾಮಕರು. ಇವರೇ ಛಂದೋರೂಪಿಗಳು. ಆದುದರಿಂದ ವಿಶ್ವವ್ಯವಹಾರಕ್ಕೆ ಉಪಯುಕ್ತವಾದ ಯಜ್ಞಕರ್ಮದ ಸಹಾಯಕರು. ಇವರು **ಕ** ಸಂಜ್ಞಕನಾದ ಪ್ರಜಾಪತಿಯ ವಿಶ್ವಪೋಷಕವಾದ **ಕಾರ್ಯಕ್ಕೆ** ನೆರವಾಗಿರುವರು ಇವರು ದೇವಿಯರು **ಕ** ರೂಪಿಯಾದ ಪ್ರಜಾಪತಿಯೊಂದಿಗೆ **ಈ ದೇವಿಯರು** ಒಟ್ಟುಗೂಡಿರುವುದರಿಂದ ಇವರಿಗೆಲ್ಲಾ ಒಟ್ಟಿಗೆ **ದೇವಿಕಾಃ** ಎಂಬ ವ್ಯವಹಾರವು ಎಂಬುದಾಗಿ **ರಾಕಾ** ಮುಂತಾದ ದೇವತೆಗಳ ಪ್ರಶಂಸೆಯಿದೆ ಆದುದರಿಂದ, ಐತರೇಯ ಬ್ರಾಹ್ಮಣವಾಕ್ಯದಲ್ಲಿ **ರಾಕಾ** ದೇವತೆಗೆ, ದೇವಪತ್ನಿಯರಿಗಿಂತಲೂ ಕೊಂಚ ಅಪಕೃಷ್ಟವಾದ ಸ್ಥಾನವಿದ್ದರೂ ಉಳಿದೆಡೆಗಳಲ್ಲಿ ಈ ದೇವತೆಯ ಪ್ರಭಾವವನ್ನು ಅತ್ಯತಿಶಯವಾಗಿ ಕೊಂಡಾಡಿದೆ. ವಿಶ್ವದ ಪ್ರಜಾಸಂತತಿಯು ಅನುಸ್ಯೂತವಾಗಿ ವೃದ್ಧಿಯಾಗಲು ಈ ದೇವಿಯರ ಸಹಾಯವು ಅತ್ಯಾವಶ್ಯವೆಂಬಂಶವನ್ನು ತೈತ್ತಿರೀಯಸಂಹಿತೆಯಲ್ಲಿ ಪ್ರಶಂಸಿಸಿದೆ. ಯಾವ ಈ ದೇವಿಯರನ್ನು ಅವರ ಜಗತ್ಪೋಷಕಶಕ್ತಿಗಾಗಿ **ದೇವಿಕಾಃ** ಎಂದು ಸಂಬೋಧಿಸಿದೆಯೋ, ಅವರನ್ನೇ ಸಂತತಿಕಾಮನಾದ ಪುರುಷನು ಆರಾಧಿಸಬೇಕು.

**ದೇವಿಕಾ ನಿರ್ವಪೇತ್ಪ್ರಜಾಕಾಮಶ್ಛಂದಾಗ್ಂಸಿ ವೈ ದೇವಿಕಾಶ್ಛಂದಾಗ್ಂಸೀವ ಖಲು ವೈ ಪ್ರಜಾಶ್ಛಂದೋಭಿರೇವಾಸ್ಮೈ ಪ್ರಜಾಃ ಪ್ರ ಜನಯತಿ ಪ್ರಥಮಂ ಧಾತಾರಂ ಕರೋತಿ ಮಿಥುನೀ ಏವ ತೇನ ಕರೋತ್ಯನ್ವೇವಾಸ್ಮಾ ಅನುಮತಿರ್ಮನ್ಯತೇ ರಾತೇ ರಾಕಾ ಪ್ರ ಸಿನೀವಾಲೀ ಜನಯತಿ . .... .... ದೇವಿಕಾಶ್ಛಂದಾಗ್ಂಸಿ ॥**

(ತೈ. ಸಂ. ೩ ೪ ೯-೧)

ಸಂತತಿಕಾಮನಾದ ಪುರುಷನು **ರಾಕಾದಿ** ದೇವತೆಯರಿಗೆ ಹವಿಸ್ಸನ್ನರ್ಪಿಸಬೇಕು. ಈ ದೇವತೆಗಳೇ ಛಂದೋರೂಪಿಗಳು ಸಂತತಿಯೂ ಕೂಡ ಛಂದೋರೂಪದಲ್ಲೇ ಬೆಳೆಯುತ್ತದೆ ಆದುದರಿಂದ ಮಾತೃರೂಪಿಗಳಾದ **ರಾಕಾದಿಗಳೇ** ಪುತ್ರರೂಪರಾದ ಛಂದಸ್ಸುಗಳ ಉತ್ಪತ್ತಿಗೆ ಕಾರಣರು. **ಧಾತೃವೇ** ಪತಿಯು **ಅನುಮತೀ, ರಾಕಾ** ಇವರು

ಗಳೊಡನೆ ದಾಂಪತ್ಯಸಂಬಂಧವನ್ನು ಹೊಂದಿದನಂತರ ಸಂತತಿಯ ಉತ್ಪತ್ತಿಯಾಗುತ್ತದೆ. ಆದುದರಿಂದ ಈ ದೇವಿಕೆಗಳ ಪೂಜೆಯು ವಿಹಿತವಾಗಿದೆ. ಕೇವಲ ಪ್ರಜಾಸಂಪತ್ತುಗಳು ಮಾತ್ರವಲ್ಲದೇ, ಪಶುಸಂಪತ್ತನ್ನು ಹಾರೈಸುವವನೂ ಸಹ ಈ ಪೂಜಾಕ್ರಮುವನ್ನನುಸಂಸಬೇಕು.

**ಪಶವಶ್ಛಂದೋಭಿರೇವಾಸ್ಮೈ ಪಶೂನ್ ಪ್ರಜನಯತಿ ||**

(ತೈ. ಸಂ. ೩-೪-೯-೨)

ಇತ್ಯಾದಿ ವಾಕ್ಯಗಳಿಂದ ಈ ಅಂಶವನ್ನು ತಿಳಿಸಿದೆ. ಈ ನಾಲ್ಕು ದೇವಿಕೆಯರೂ ಚಂದ್ರನ ನಾಲ್ಕು ಸ್ವರೂಪಗಳು ಎಂಬ ವಿಷಯವನ್ನು ತಿಳಿಸುತ್ತಾ ಇವರ ರೂಪಗಳನ್ನು ಈರೀತಿ ವರ್ಣಿಸಿದೆ.

**ಪೂರ್ವಪಕ್ಷೋ ರಾಕಾಪರಪಕ್ಷಃ ಕುಹೂರಮಾವಾಸ್ಯಾ ಸಿನೀವಾಲೀ ಪೌರ್ಣಮಾಸ್ಯನುಮತಿ-ಶ್ಚಂದ್ರಮಾ ಧಾತಾ .... ।**

(ತೈ ಸಂ ೩-೪-೯ ೬)

ರಾಕಾದೇವತೆಯು ಮೊದಲನೆಯ ಪಕ್ಷವು ಕುಹೂದೇವತೆಯು ಎರಡನೆಯ ಪಕ್ಷವು ಸಿನೀವಾಲಿಯು ಅಮಾವಾಸ್ಯೆಯ ರಾತ್ರಿಯು ಅನುಮತಿಯು ಪೂರ್ಣಿಮಾ ರಾತ್ರಿಯು. ಧಾತೃವೇ ಚಂದ್ರನು. ಈ ಧಾತೃರೂಪನಾದ ಚಂದ್ರನ ಭಾರ್ಯಾರೂಪದಲ್ಲಿ ಇವರು ಜಗದ್ವ್ಯವಹಾರ ಕರ್ಮ ಪ್ರಕಾಶಕ್ಕೂ ಪೋಷಣೆಗೂ ಸಾಹಾಯ್ಯಕರಾಗಿರುತ್ತಾರೆ.

ಇಂತಹ ಪ್ರಭಾವವುಳ್ಳ ರಾಕಾದೇವಿಯ ಸ್ತುತಿಯು ಪ್ರಕೃತವಾದ ಮಂತ್ರದಲ್ಲಿ ಪಠಿತವಾಗಿ ಈ ದೇವತೆಯ ಪೂಜಾಕ್ರಮುವು ವಿಹಿತವಾಗಿದೆ.

॥ ಸಂಹಿತಾಪಾಠಃ ॥

ಆ ಸುಷ್ಟುತೀ ನಮಸಾ ವರ್ತಯಧ್ಯೈ ದ್ಯಾವಾ ವಾಜಾಯ ಪೃಥಿವೀ ಅಮೃಧ್ರೇ ।
ಪಿತಾ ಮಾತಾ ಮಧುವಚಾಃ ಸುಹಸ್ತಾ ಭರೇಭರೇ ನೋ ಯಶಸಾವವಿಷ್ಟಾಂ ॥ ೨ ॥

॥ ಪದಪಾಠಃ ॥

ಆ । ಸುಽಸ್ತುತೀ । ನಮಸಾ । ವರ್ತಯಧ್ಯೈ । ದ್ಯಾವಾ । ವಾಜಾಯ । ಪೃಥಿವೀ ಇತಿ । ಅಮೃಧ್ರೇ ಇತಿ ।
ಪಿತಾ । ಮಾತಾ । ಮಧುಽವಚಾಃ । ಸುಽಹಸ್ತಾ । ಭರೇಽಭರೇ । ನಃ । ಯಶಸಾ । ಅವಿಷ್ಟಾಂ ॥ ೨ ॥

॥ ಸಾಯಣಭಾಷ್ಯಂ ॥

**ಅಹಂ ಸುಷ್ಟುತೀ ಸುಷ್ಟುತ್ಯಾ ಶೋಭನಸ್ತೋತ್ರೇಣ ನಮಸಾ ಹವಿಷಾ ಚಾವೃಧ್ರೇ ಹಿಂಸಾರಹಿತೇ ದ್ಯಾವಾ ಪೃಥಿವೀ ದ್ಯಾವಾಪೃಥಿವ್ಯಾವಾ ವರ್ತಯಧ್ಯೈ | ಆವರ್ತಯಿತುಮಿಚ್ಛಾಮಿ ವಾಜಾಯಾನ್ನಾರ್ಥಂ | ಅನ್ನಂ ವೈ ವಾಜ ಇತಿ ಹಿ ಶ್ರುತಿಃ | ಪಿತಾ ಪಾಲಯಿತ್ರೀ ದ್ಯೌರ್ಮಾತಾ ನಿರ್ಮಾತ್ರೀ ಪೃಥಿವೀ ಮಧುವಚಾಃ ಪ್ರಿಯವಚನಾ ಸುಹಸ್ತಾಭಿಮತದಾನೇನ ಶೋಭನಹಸ್ತಾ | ಏತೇ ಉಭಯವಿಶೇಷಣೇ | ಯಶಸಾ ಯಶೋಯುಕ್ತೌ ದ್ಯಾವಾಪೃಥಿವ್ಯೌ ಭರೇ ಭರೇ ಸರ್ವೇಷು ಸಂಗ್ರಾಮೇಷು ಯಜ್ಞೇಷು ವಾ ನೋಽಸ್ಮಾನವಿಷ್ಟಾಂ | ರಕ್ಷತಾಂ ||**

॥ ಪ್ರತಿಪದಾರ್ಥ ॥

**ಸುಷ್ಟುತೀ**— ಅತ್ಯುತ್ತಮವಾದ ಸ್ತುತಿಯಿಂದಲೂ | **ನಮಸಾ**— ಹವಿಸ್ಸಿನಿಂದಲೂ ಕೂಡಿ | **ಅವೃಧ್ರೇ**— ಹಿಂಸಾರಹಿತರಾದ | **ದ್ಯಾವಾಪೃಥಿವೀ**— ದ್ಯಾವಾಪೃಥಿವಿಗಳನ್ನು | **ವಾಜಾಯ**— ಅನ್ನಾರ್ಥವಾಗಿ | **ಆ ವರ್ತಯಧ್ಯೈ**— ಸಮೀಪಿಸುತ್ತೇನೆ | **ಪಿತಾ**— ಲೋಕಪಾಲಕರೂ | **ಮಾತಾ**— ಲೋಕಜನನಿಯರೂ | **ಮಧುವಚಾಃ**— ಪ್ರಿಯವಾದ ವಾಕ್ಕುಳ್ಳವರೂ | **ಸುಹಸ್ತಾ**— ಉದಾರವಾಗಿ ದಾನಮಾಡುವ ಹಸ್ತವುಳ್ಳವರೂ | **ಯಶಸಾ**— ಕೀರ್ತಿ ಯುಕ್ತರೂ ಆದ ದ್ಯಾವಾಪೃಥಿವಿಗಳು | **ಭರೇ ಭರೇ**— ಪ್ರತಿಯೊಂದು ಯುದ್ಧದಲ್ಲಿಯೂ ಸಹ | **ನಃ**— ನಮ್ಮನ್ನು | **ಅವಿಷ್ಟಾಂ**— ರಕ್ಷಿಸಲಿ.

॥ ಭಾವಾರ್ಥ ॥

ಅತ್ಯುತ್ತಮವಾದ ಸ್ತುತಿಯಿಂದಲೂ ಹವಿಸ್ಸಿನಿಂದಲೂ ಕೂಡಿದವನಾಗಿ ನಾನು ಅನ್ನಾರ್ಥವಾಗಿ ದ್ಯಾವಾಪೃಥಿವಿಗಳನ್ನು ಸಮೀಪಿಸುತ್ತೇನೆ ಲೋಕಪಾಲಕರೂ, ಲೋಕಜನನಿಯರೂ, ಪ್ರಿಯವಾದ ವಾಕ್ಕುಳ್ಳವರೂ ಉದಾರವಾಗಿ ದಾನಮಾಡುವ ಹಸ್ತವುಳ್ಳವರೂ ಮತ್ತು ಯಶೋಯುಕ್ತರೂ ಆದ ದ್ಯಾವಾಪೃಥಿವಿಗಳು ಪ್ರತಿಯೊಂದು ಯುದ್ಧದಲ್ಲಿಯೂ ನಮ್ಮನ್ನು ರಕ್ಷಿಸಲಿ

## English Translation

(I purpose) to approach with pious praise, and with oblations, for (the sake of) the uninjured heaven and earth may the paternal (heaven), and the sweet-spoken, free-handed, maternal (earth), both enjoying renown, defend us in every battle

॥ ಸಂಹಿತಾಪಾಠಃ ॥

ಅಧ್ವರ್ಯವಶ್ಚಕೃವಾಂಸೋ ಮಧೂನಿ ಪ್ರ ವಾಯವೇ ಭರತ ಚಾರು-
ಶುಕ್ರಂ |

ಹೋತೇವ ನಃ ಪ್ರಥಮಃ ಪಾಹ್ಯಸ್ಯ ದೇವ ಮಧ್ವೋ ರರಿಮಾ ತೇ
ಮದಾಯ ॥ ೩ ॥

॥ ಪದಪಾಠಃ ॥

ಅಧ್ವರ್ಯವಃ । ಚಕ್ರುಽಸಾಂಸಃ । ಮಧೂನಿ । ಪ್ರ । ವಾಯವೇ । ಭರತ । ಚಾರು । ಶುಕ್ರಂ ।
ಹೋತಾಽಇವ । ನಃ । ಪ್ರಥಮಃ । ಪಾಹಿ । ಅಸ್ಯ । ದೇವ । ಮಧ್ವಃ । ರರಿಮ । ತೇ । ಮದಾಯ ॥೩॥

॥ ಸಾಯಣಭಾಷ್ಯಂ ॥

ಹೇ ಅಧ್ವರ್ಯವೋಽಧ್ವರಂ ಯುಂಜಾನಾ ಮಧೂನಿ ಮಧುರರಸಾನಿ ಸೋಮಾಜ್ಯಾದೀನಿ ಚಕೃವಾಂಸಃ ಕುರ್ವಾಣಾ ಯೂಯಂ ವಾಯವೇ ಪ್ರಥಮಂ ಪ್ರ ಭರತ ಪ್ರಕರ್ಷೇಣ ಸಂಪಾದಯತ ಚಾರು ಚರಣೀಯಂ ಶುಕ್ರಂ ದೀಪ್ತಂ ಸೋಮಂ । ಹೇ ವಾಯೋ ತ್ವಂ ಚ ಹೋತೇವ ಹೋತಾ ಯಥಾ ಪ್ರಥಮಂ ಪಿಬತಿ ತದ್ವನ್ನೋಽಸ್ಮದರ್ಥಮಸ್ಮಾಮುಂ ಸೋಮಂ ಪ್ರಥಮ ಇತರದೇವೇಭ್ಯಃ ಪೂರ್ವಂ ಪಾಹಿ । ಪಿಬ । ಹೇ ದೇವ ವಾಯೋ ಮಧ್ವೋ ಮಧುರಂ ಸೋಮರಸಂ ತೇ ಮದಾಯ ರರಿಮ । ದದಾಮ । ವಾಯೋಃ ಪೂರ್ವಪಾನಮುಸಕೃತ್ಪ್ರಪಂಚಿತಂ ॥

॥ ಪ್ರತಿಪದಾರ್ಥ ॥

**ಅಧ್ವರ್ಯವಃ**—ಎಲೈ ಅಧ್ವರ್ಯುಗಳೇ । **ಮಧೂನಿ**–ಮಧುರವಾದ ಸೋಮರಸಗಳನ್ನು । **ಚಕೃವಾಂಸಃ**—ಉತ್ಪನ್ನ ಮಾಡತಕ್ಕ ನೀವು (ಮೊದಲು) । **ವಾಯವೇ**—ವಾಯುವನ್ನುದ್ದೇಶಿಸಿ । **ಚಾರು**—ರಮಣೀಯವಾದುದೂ। **ಶುಕ್ರಂ**—ಪ್ರಕಾಶಮಾನವಾದುದೂ ಆದ ಸೋಮವನ್ನು । **ಪ್ರ ಭರತ**—ಅತಿಶಯವಾದ ರೀತಿಯಲ್ಲಿ ಅರ್ಪಿಸಿರಿ । **ದೇವ**—ದೇವಾತ್ಮನಾದ ವಾಯುವೇ । **ಮಧ್ವಃ**—ಮಧುರವಾದ ಸೋಮರಸವನ್ನು । **ತೇ**—ನಿನ್ನ । **ಮದಾಯ**—ಹರ್ಷಕ್ಕಾಗಿ । **ರರಿಮ**—ಅರ್ಪಿಸುತ್ತೇವೆ । **ನಃ**—ನಮ್ಮಿಂದ ಅರ್ಪಿತವಾಗುವ । **ಅಸ್ಯ**—ಈ ಸೋಮರಸವನ್ನು । **ಹೋತೇವ**—ಹೋತೃವು ಎಲ್ಲರಿಗಿಂತಲೂ ಮೊದಲು ಪಾನಮಾಡುವಂತೆ । **ಪ್ರಥಮಃ**—ಇತರ ದೇವತೆಗಳಿಗಿಂತಲೂ ನೀನೇ ಮೊದಲು । **ಪಾಹಿ**—ಪಾನಮಾಡು.

॥ ಭಾವಾರ್ಥ ॥

ಎಲೈ ಅಧ್ವರ್ಯುಗಳೇ, ಮಧುರವಾದ ಸೋಮರಸಗಳನ್ನು ಉತ್ಪನ್ನಮಾಡತಕ್ಕ ನೀವು ಮೊದಲು ವಾಯುವನ್ನುದ್ದೇಶಿಸಿ ರಮಣೀಯವಾದುದೂ, ಪ್ರಕಾಶಮಾನವಾದುದೂ ಆದ ಸೋಮವನ್ನು ಅತಿಶಯವಾದ ರೀತಿಯಲ್ಲಿ ಅರ್ಪಿಸಿರಿ. ದೇವಾತ್ಮನಾದ ಎಲೈ ವಾಯುವೇ, ನಾವು ನಿನಗೆ ಹರ್ಷವುಂಟಾಗಲು ಮಧುರವಾದ ಸೋಮರಸವನ್ನು ಅರ್ಪಿಸುತ್ತೇವೆ

ನಮ್ಮಿಂದ ಅರ್ಪಿತವಾಗುವ ಈ ಸೋಮರಸವನ್ನು, ಹೋತೃವು ಎಲ್ಲರಿಗಿಂತಲೂ ಮೊದಲು ಪಾನಮಾಡುವಂತೆ, ಇತರ ದೇವತೆಗಳಿಗಿಂತಲೂ ನೀನೇ ಮೊದಲು ಪಾನಮಾಡು.

## English Translation

Priests, who are preparing (the libation), first offer to Vayu the delightful and brilliant (Soma); and you, divine Vayu, like the Hotri, first drink of this sweet juice, (which) we offer for your exhilaration

---

॥ ಸಂಹಿತಾಪಾಠಃ ॥

ದಶ ಕ್ಷಿಪೋ ಯುಂಜತೇ ಬಾಹೂ ಅದ್ರಿಂ ಸೋಮಸ್ಯ ಯಾ ಶಮಿತಾರಾ ಸುಹಸ್ತಾ ।

ಮಧ್ವೋ ರಸಂ ಸುಗಭಸ್ತಿರ್ಗಿರಿಷ್ಠಾಂ ಚನಿಶ್ಚದದ್ದುದುಹೇ ಶುಕ್ರಮಂಶುಃ ॥

॥ ಪದಪಾಠಃ ॥

ದಶ । ಕ್ಷಿಪಃ । ಯುಂಜತೇ । ಬಾಹೂ ಇತಿ । ಅದ್ರಿಂ । ಸೋಮಸ್ಯ । ಯಾ । ಶಮಿತಾರಾ । ಸುಽಹಸ್ತಾ ॥

ಮಧ್ವಃ । ರಸಂ । ಸುಽಗಭಸ್ತಿಃ । ಗಿರಿಽಸ್ಥಾಂ । ಚನಿಶ್ಚದತ್ । ದುದುಹೇ । ಶುಕ್ರಂ । ಅಂಶುಃ ॥ ೪ ॥

॥ ಸಾಯಣಭಾಷ್ಯಂ ॥

ಅತ್ರಾಭಿಷವಸ್ಯ ಪ್ರತಿಪಾದ್ಯಮಾನತ್ವಾತ್ಸೋಮೋ ದೇವತಾ । ಯದ್ವಾ ಐಂದ್ರೀ । ಅದ್ರಿಮಭಿಷವಗ್ರಾವಾಣಂ ದಶ ಕ್ಷಿಪೋ ದಶಸಂಖ್ಯಾಕಾಃ ಕ್ಷೇಪ್ತ್ರ್ಯೋಽಂಗುಲಯೋ ಯುಂಜತೇ । ಗೃಹ್ಣಂತಿ । ಯದ್ವಾ । ಪರಸ್ಪರಂ ಯುಕ್ತಾ ಭವಂತಿ । ಬಾಹೂ ಅಧ್ವರ್ಯುಸಂಬಂಧಿನಾವದ್ರಿಂ ಯುಂಜಾತೇ । ಯಾ ಯೌ ಸುಹಸ್ತಾ ಶೋಭನಹನನೌ ಸೋಮಸ್ಯ ಶಮಿತಾರಾವಭಿಷೋತಾರೌ ತೌ ಬಾಹೂ ಯುಂಜಾತೇ । ಮಧ್ವೋ ಮಧುರಸ್ಯ ಸೋಮಸ್ಯ ರಸಂ ಗಿರಿಷ್ಠಾಂ ಗಿರಿಸ್ಥಾಯಿನಂ ಗಿರಿವದುನ್ನತಪ್ರದೇಶಸ್ಥಿತಂ ವಾ ಸುಗಭಸ್ತಿಃ ಶೋಭನಾಂಗುಲಿರಧ್ವರ್ಯುಶ್ಚನಿಶ್ಚದದಾಹ್ಲಾದಯನ್ ॥ ಚದಿ ಆಹ್ಲಾದನ ಇತ್ಯಸ್ಮಾದ್ಯಙ್ಲುಕಿ ಛಾಂದಸಂ ರೂಪಂ ॥ ದುದುಹೇ । ದೋಗ್ಧಿ । ಸ ಚಾಂಶುಃ ಶುಕ್ರಂ ನಿರ್ಮಲಂ ರಸಂ ದುದುಹೇ । ದುಗ್ಧೇ । ಯದ್ವೈಕಂ ವಾಕ್ಯಂ । ಅಂಶುರ್ವ್ಯಾಪ್ತಃ ಸುಗಭಸ್ತಿಃ ಸುಹಸ್ತೋಽಧ್ವರ್ಯುರ್ಮಧ್ವೋ ರಸಂ ದುದುಹೇ । ದೋಗ್ಧಿ ॥

॥ ಪ್ರತಿಪದಾರ್ಥ ॥

**ದಶ ಕ್ಷಿಪಃ**— ಹತ್ತು ಬೆರಳುಗಳೂ, (ಮತ್ತು) । **ಯಾ**—ಯಾವುವು । **ಸುಹಸ್ತಾ**—ಶ್ರೇಷ್ಠವಾದ ಹಸ್ತಗಳುಳ್ಳವಾಗಿ । **ಸೋಮಸ್ಯ**—ಸೋಮರಸದ । **ಶಮಿತಾರಾ**—ಹಿಂಡುವ ಸಾಧನಗಳೋ ಅಂತಹ । **ಬಾಹೂ**—(ಅಧ್ವರ್ಯುಗಳ) ಬಾಹುಗಳೂ । **ಅದ್ರಿಂ**—ಅಭಿಷವದ ಕಲ್ಲನ್ನು । **ಯುಂಜತೇ**—ಹಿಡಿಯುತ್ತವೆ । **ಸುಗಭಸ್ತಿಃ**—ಶ್ರೇಷ್ಠವಾದ ಬೆರಳುಗಳುಳ್ಳ ಅಧ್ವರ್ಯುವು । **ಗಿರಿಷ್ಠಾಂ**—ಪರ್ವತಪ್ರದೇಶಸ್ಥವಾದ । **ಮಧ್ವಃ**—ಮಧುರವಾದ ಸೋಮದ । **ರಸಂ**—ರಸವನ್ನು । **ಚನಿಶ್ಚದತ್**—ಹಿಂಡುತ್ತಾನೆ । **ಅಂಶುಃ**—ಸೋಮಲತೆಯೂ ಸಹ । **ಶುಕ್ರಂ**—ಶುಭ್ರವಾದ ರಸವನ್ನು । **ದುದುಹೇ**—ಸುರಿಸುತ್ತದೆ.

॥ ಭಾವಾರ್ಥ ॥

ಶ್ರೇಷ್ಠವಾದ ಹಸ್ತಗಳುಳ್ಳವಾಗಿ ಸೋಮರಸವನ್ನು ಹಿಂಡುವ ಸಾಧನಗಳಾದ ಅಧ್ವರ್ಯುಗಳ ಬಾಹುಗಳೂ, ಅವರ ಹತ್ತು ಬೆರಳುಗಳೂ ಅಭಿಷವದ ಕಲ್ಲನ್ನು ಹಿಡಿಯುತ್ತವೆ. ಶ್ರೇಷ್ಠವಾದ ಬೆರಳುಗಳುಳ್ಳ ಅಧ್ವರ್ಯುವು ಪರ್ವತಪ್ರದೇಶಸ್ಥವಾದ ಮಧುರವಾದ ಸೋಮದ ರಸವನ್ನು ಹಿಂಡುತ್ತಾನೆ ಸೋಮಲತೆಯೂ ಸಹ ಶುಭ್ರವಾದ ರಸವನ್ನು ಸುರಿಸುತ್ತದೆ

English Translation

The ten expressers of the juice, (the fingers) and the two arms of the priest, which are the dexterous immolators of the Soma, take hold of the stone: the exulting, skilful-fingered (priest) milks the mountain-born juice of the sweet Soma, and that Soma (yields its) pure juice

॥ ಸಂಹಿತಾಪಾಠಃ ॥

**ಅಸಾವಿ ತೇ ಜುಜುಷಾಣಾಯ ಸೋಮಃ ಕ್ರತ್ವೇ ದಕ್ಷಾಯ ಬೃಹತೇ ಮದಾಯ ।**

**ಹರೀ ರಥೇ ಸುಧುರಾ ಯೋಗೇ ಅರ್ವಾಗಿಂದ್ರ ಪ್ರಿಯಾ ಕೃಣುಹಿ ಹೂಯಮಾನಃ ॥ ೫ ॥**

॥ ಪದಪಾಠಃ ॥

ಅಸಾವಿ । ತೇ । ಜುಜುಷಾಣಾಯ । ಸೋಮಃ । ಕ್ರತ್ವೇ । ದಕ್ಷಾಯ । ಬೃಹತೇ । ಮದಾಯ ।

ಹರೀ ಇತಿ । ರಥೇ । ಸುಧುರಾ । ಯೋಗೇ । ಅರ್ವಾಕ್ । ಇಂದ್ರ । ಪ್ರಿಯಾ । ಕೃಣುಹಿ । ಹೂಯ-

ಮಾನಃ । ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತುಭ್ಯಂ ಜುಜುಷಾಣಾಯ ಸೇವಮಾನಾಯ ಸೋಮೋಽಸಾವಿ । ಅಭಿಷುತಃ । ಕಿಮರ್ಥಂ । ಕ್ರತ್ವೇ ಕ್ರತವೇ ವೃತ್ರವಧಾದಿಕರ್ಮಣೇ ದಕ್ಷಾಯ ಬಲಾಯ ಬೃಹತೇ ಮದಾಯ ಚ । ಯಸ್ಮಾದೇವಂ ತಸ್ಮಾತ್ ಹೇ ಇಂದ್ರ ತ್ವಂ ಹೂಯಮಾನಃ ಸನ್ ಸುಧುರಾ ಶೋಭನಾಯಾಂ ಧುರಿ ನಿಯುಕ್ತೌ ಪ್ರಿಯಾ ಪ್ರಿಯೌ ಹರೀ ಅಶ್ವೌ ಯೋಗೇ ಯೋಗಾರ್ಹೇ ಯುಕ್ತೇ ವಾ ರಥೇ ಯೋಜಯಿತ್ವಾ ತಂ ರಥಮರ್ವಾಗಸ್ಮದಭಿಮುಖಂ ಕೃಣುಹಿ । ಕುರು ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ದಕ್ಷಾಯ**-ನಿನ್ನ ಶಕ್ತಿವೃದ್ಧಿಗಾಗಿಯೂ । **ಬೃಹತೇ**-ಪ್ರಭೂತವಾದ । **ಮದಾಯ**-ಹರ್ಷಕ್ಕಾಗಿಯೂ । **ಜುಜುಷಾಣಾಯ**—ತೃಪ್ತಿಗಾಗಿಯೂ । **ಕ್ರತ್ವೇ**—ಅಸಾಧಾರಣವಾದ ಕರ್ಮನಿಮಿತ್ತವಾಗಿಯೂ । **ಸೋಮಃ**—ಸೋಮವು । **ತೇ**—ನಿನ್ನನ್ನುದ್ದೇಶಿಸಿ । **ಅಸಾವಿ**—ಹಿಂಡಲ್ಪಟ್ಟಿದೆ । **ಇಂದ್ರ**—ಎಲೈ ಇಂದ್ರನೇ । **ಹೂಯಮಾನಃ**—ನಮ್ಮಿಂದ ಪ್ರಾರ್ಥಿತನಾದೊಡನೆಯೇ । **ಸುಧುರಾ**—ಉತ್ತಮವಾದ ಭಾರವನ್ನು ವಹಿಸುವುವೂ । **ಪ್ರಿಯಾ**—ಪ್ರೀತಿಕಾರಕವೂ ಆದ । **ಹರೀ**—ನಿನ್ನ ಅಶ್ವಗಳನ್ನು । **ರಥೇ**—ನಿನ್ನ ರಥಕ್ಕೆ । **ಯೋಗೇ**—ಸೇರಿಸಿಕೊಂಡು (ಆ ರಥವನ್ನು) । **ಅರ್ವಾಕ್**—ನಮಗಭಿಮುಖವಾಗಿ । **ಕೃಣು ಹಿ**—ಮಾಡು

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ಶಕ್ತಿವೃದ್ಧಿಗಾಗಿಯೂ, ಪ್ರಭೂತವಾದ ಹರ್ಷಕ್ಕಾಗಿಯೂ, ತೃಪ್ತಿಗಾಗಿಯೂ, ಅಸಾಧಾರಣವಾದ ಕರ್ಮನಿಮಿತ್ತವಾಗಿಯೂ ನಿನ್ನನ್ನುದ್ದೇಶಿಸಿ ಸೋಮವು ಹಿಂಡಲ್ಪಟ್ಟಿದೆ ಎಲೈ ಇಂದ್ರನೇ, ನಮ್ಮಿಂದ ಪ್ರಾರ್ಥಿತನಾದೊಡನೆಯೇ, ಉತ್ತಮವಾದ ಭಾರವನ್ನು ವಹಿಸುವುವೂ, ಪ್ರೀತಿಕಾರಕವೂ ಆದ ನಿನ್ನ ಅಶ್ವಗಳನ್ನು ನಿನ್ನ ರಥಕ್ಕೆ ಸೇರಿಸಿಕೊಂಡು ಆ ರಥವನ್ನು ನಮಗಭಿಮುಖವಾಗಿ ಮಾಡು.

## English Translation

The soma has been effused, (Indra), for your gratification, for (giving you) strength in action, and for your great exhilaration: therefore, Indra

when invoked by us, put to your car, your two beloved, docile, well trained horses and come down.

॥ ಸಂಹಿತಾಪಾಠಃ ॥

ಆ ನೋ ಮಹೀಮರಮತಿಂ ಸಜೋಷಾ ಗ್ನಾಂ ದೇವೀಂ ನಮಸಾ ರಾತಹವ್ಯಾಂ।
ಮಧೋರ್ಮದಾಯ ಬೃಹತೀಮೃತಜ್ಞಾಮಾಗ್ನೇ ವಹ ಪಥಿಭಿರ್ದೇವ-
ಯಾನೈಃ ॥ ೬ ॥

॥ ಪದಪಾಠಃ ॥

ಆ । ನಃ । ಮಹೀಂ । ಅರಮತಿಂ । ಸಃಜೋಷಾಃ । ಗ್ನಾಂ । ದೇವೀಂ । ನಮಸಾ । ರಾತಃಹವ್ಯಾಂ ।
ಮಧೋಃ । ಮದಾಯ । ಬೃಹತೀ । ಋತಃಜ್ಞಾಂ । ಆ । ಅಗ್ನೇ । ವಹ । ಪಥಿಃಭಿಃ । ದೇವಃಯಾನೈಃ ॥

॥ ಸಾಯಣಭಾಷ್ಯಂ ॥

ಅತ್ರಾಗ್ನಿಂ ಸಂಬೋಧ್ಯ ಗ್ನಾದೇವತಾಯಾ ಆವಾಹ್ಯತ್ವಾದಸ್ಯಾಗ್ನಿರ್ಗ್ನಾ ವಾ ದೇವತಾ । ಹೇ ಅಗ್ನೇ ಸಜೋಷಾ ಅಸ್ಮಾಭಿಃ ಸಹ ಪ್ರೀಯಮಾಣಸ್ತ್ವಂ ಗ್ನಾಂ ದೇವೀಂ ಸರ್ವೈರ್ಗಂತವ್ಯಾಮೇತನ್ನಾಮಿಕಾಂ ದೇವತಾಂ । ಮೇನಾ ಗ್ನಾ ಇತಿ ಸ್ತ್ರೀಣಾಂ । ನಿ. ೩-೨೧. । ಇತಿ ಯಾಸ್ಕಃ । ನೋಽಸ್ಮದರ್ಥಂ ದೇವಯಾನೈರ್ದೇವೈರ್ಗಂತವ್ಯೈಃ ಪಥಿಭಿರ್ಮಾರ್ಗೈರಾ ಅಭಿಮುಖಮಾ ವಹ । ಕೀದೃಶೀಂ । ಮಹೀಂ ಮಹತೀಮರಮತಿಮಾ ಸಮಂತಾದ್ರಮಮಾಣಾಂ ಸರ್ವತ್ರ ಗಂತ್ರೀಂ ವಾ ನಮಸಾ ಸ್ತೋತ್ರೇಣ ಸಹ ರಾತಹವ್ಯಾಂ । ರಾತಂ ದತ್ತಂ ದಾನಾಯ ಸಂಕಲ್ಪಿತಂ ಹವ್ಯಂ ಯಸ್ಯಾಸ್ತಾಂ। ದತ್ತಹವಿಷ್ಕಾಮಿತ್ಯರ್ಥಃ । ಕಿಮರ್ಥಂ । ಮಧೋರ್ಮಧುರಸ್ಯ ಸೋಮಸ್ಯ ಮದಾಯ । ಪುನಃ ಕೀದೃಶೀಂ । ಬೃಹತೀಂ ಪ್ರವೃದ್ಧಾಮೃತಜ್ಞಾಂ ಯಜ್ಞಮಭಿಜಾನತೀಂ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಸಜೋಷಾಃ**—ನಮ್ಮಲ್ಲಿ ಒಂದೇ ರೀತಿಯ ಅಭಿಮಾನವುಳ್ಳವನಾಗಿ । **ಮಹೀಂ**—ಮಹಾತ್ಮಳೂ । **ಅರಮತಿಂ**—ಸರ್ವ ವ್ಯಾಪಕಳೂ । **ನಮಸಾ**—ಸ್ತುತಿಯೊಡನೆ ಸೇರಿದ । **ರಾತ-ಹವ್ಯಾಂ**—ಹವಿಸ್ಸನ್ನರ್ಪಿಸಲ್ಪಟ್ಟವಳೂ । **ಬೃಹತೀಂ**—ಪ್ರವೃದ್ಧಳಾದವಳೂ । **ಋತಜ್ಞಾಂ**—ಯಜ್ಞತತ್ತ್ವವನ್ನರಿ

ತವಳೂ ಆದ । **ಗ್ನಾಂ ದೇವೀಂ**—ಗ್ನಾನಾಮಕಳಾದ ದೇವಿಯನ್ನು । **ಮಧೋಃ**—ಮಧುರವಾದ ಸೋಮದ ಪಾನದ । **ಮದಾಯ**—ಹರ್ಷಲಾಭಕ್ಕಾಗಿ । **ದೇವಯಾನೈಃ ಪಥಿಭಿಃ**—ದೇವತೆಗಳು ಸಂಚರಿಸುವ ಮಾರ್ಗಗಳಿಂದ । **ನಃ ಆ ಆ ವಹ**—ನಮಗಭಿಮುಖವಾಗಿ ಕರೆದುಕೊಂಡು ಬಾ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಮ್ಮಲ್ಲಿ ಒಂದೇ ರೀತಿಯ ಅಭಿಮಾನವುಳ್ಳವನಾಗಿ ಮಹಾತ್ಮಳೂ, ಸರ್ವವ್ಯಾಪಕಳೂ, ಸ್ತುತಿಯೊಡನೆ ಸೇರಿದ ಹವಿಸ್ಸನ್ನರ್ಪಿಸಲ್ಪಟ್ಟವಳೂ, ಪ್ರವೃದ್ಧಳಾದವಳೂ, ಯಜ್ಞತತ್ತ್ವವನ್ನರಿತವಳೂ ಆದ ಗ್ನಾನಾಮಕಳಾದ ದೇವಿಯನ್ನು ಮಧುರವಾದ ಸೋಮಪಾನದ ಹರ್ಷದ ಲಾಭಕ್ಕಾಗಿ ದೇವತೆಗಳು ಸಂಚರಿಸುವ ಮಾರ್ಗಗಳಿಂದ ನಮಗಭಿಮುಖವಾಗಿ ಕರೆದುಕೊಂಡು ಬಾ.

## English Translation

Agni, being well pleased with us, bring to us, by paths frequented by the gods, the divine (female) Gna mighty and omnipresent, to whom oblations are offered with reverence, who is vast and cognizant of rites, to partake of the exhilaration of the sweet Soma.

॥ ಸಂಹಿತಾಪಾಠಃ ॥

ಅಂಜಂತಿ ಯಂ ಪ್ರಥಯಂತೋ ನ ವಿಪ್ರಾ ವಪಾವಂತಂ ನಾಗ್ನಿನಾ ತಪಂತಃ।
ಪಿತುರ್ನ ಪುತ್ರ ಉಪಸಿ ಪ್ರೇಷ್ಠ ಆ ಘರ್ಮೋ ಅಗ್ನಿಮೃತಯನ್ನಸಾದಿ ॥ ೭ ॥

॥ ಪದಪಾಠಃ ॥

ಅಂಜಂತಿ । ಯಂ । ಪ್ರಥಯಂತಃ । ನ । ವಿಪ್ರಾಃ । ವಪಾऽವಂತಂ । ನ । ಅಗ್ನಿನಾ । ತಪಂತಃ ।
ಪಿತುಃ । ನ । ಪುತ್ರಃ । ಉಪಸಿ । ಪ್ರೇಷ್ಠಃ । ಆ । ಘರ್ಮಃ । ಅಗ್ನಿಂ । ಋತಯನ್ । ಅಸಾದಿ ॥ ೭ ॥

॥ ಸಾಯಣಭಾಷ್ಯಂ ॥

ಪ್ರವರ್ಗ್ಯೇ ಮಹಾವೀರೇಽಭ್ಯಜ್ಯಮಾನೇಽಂಜಂತಿ ಯಮಿತ್ಯೇಷಾ । ಸೂತ್ರಿತಂ ಚ । ಅಂಜಂತಿ ಯಂ ಪ್ರಥಯಂತೋ ನ ವಿಪ್ರಾ ಇತ್ಯಜ್ಯಮಾನೇ । ಆ. ೪-೬ । ಇತಿ ॥

ಯಂ ಘರ್ಮಂ ಮಹಾವೀರಂ ಪ್ರಥಯಂತೋ ನ ॥ ನೇತಿ ಸಂಪ್ರತ್ಯರ್ಥೀಯಃ । ಅಸ್ಮಿನ್ಪ್ರಸ್ತಾವೇ ಸಂಪ್ರತ್ಯರ್ಥೇ ಪ್ರಯೋಗಃ ।' ಇದಾನೀಂ ಪ್ರಥಯಂತೋ ವಿಪ್ರಾ ಮೇಧಾವಿನ ಋತ್ವಿಜೋಽಧ್ವ-

ಯ್ಯಾರ್ದಯೋ ವಪಾವಂತಂ ನ ‖ ವಪಾವಂತಂ ಪ್ರವೃದ್ಧಂ ಪಶುಂ ಯಥಾಗ್ನಾ ತಪಂತಿ ತದ್ವದಗ್ನಿನಾ ತಪಂತೋಽಂಜಂತಿ । ಪಿತುರ್ನ ಪುತ್ರ ಉಪಸಿ ಪ್ರೇಷ್ಠಃ ಪಿತುರುಪಸ್ಥೇ ಪ್ರಿಯತಮಃ ಪುತ್ರ ಇವ ಘರ್ಮೋ ಮಹಾವೀರಃ । ಯದ್ವೈ ಇತ್ಯಪತತ್ತದ್ಘರ್ಮಸ್ಯ ಘರ್ಮತ್ವಂ। ತೈ. ಐ. ೫.೧.೫. । ಇತಿ ಹಿ ಶ್ರುತಿಃ । ಸ ಋತಯನ್ಯಜ್ಞಮಿಚ್ಛನ್ನಗ್ನಿಮಗ್ನಾವಾಸಾದಿ । ಆಸಾದಿತಃ । ಅತ್ರ ಪಿತೃಪುತ್ರದೃಷ್ಟಾಂತಃ ಸ್ಫೋಟಾದಿ-ರಾಹಿತ್ಯೇನ ಸುಖವಾಸಪ್ರಖ್ಯಾಪನಾರ್ಥಃ ‖

‖ ಪ್ರತಿಪದಾರ್ಥ ‖

**ವಪಾವಂತಂ ನ**—ಉತ್ತಮವಾದ ಕೊಬ್ಬಿನಿಂದ ಕೂಡಿದ ವಪೆಯುಳ್ಳ ಪಶುವನ್ನು ಅಗ್ನಿಯಲ್ಲಿ ಪಕ್ವಮಾಡುವಂತೆ । **ವಿಪ್ರಾಃ**—ಋತ್ವಿಕ್ಕುಗಳು । **ಯಂ**—ಯಾವ ಘರ್ಮಪಾತ್ರೆಯನ್ನು । **ಅಗ್ನಿನಾ**-ಅಗ್ನಿಯಿಂದ । **ತಪಂತಃ**-ಪಕ್ವಮಾಡುತ್ತಾ । **ಪ್ರಥಯಂತೋ ನ**—ಅದನ್ನು ಪ್ರಕಾಶಪಡಿಸುವಂತೆ । **ಅಂಜಂತಿ**—ಘೃತಾದ್ಯಂಜನಗಳಿಂದ ಅಲಂಕರಿಸುತ್ತಾರೋ । **ಘರ್ಮಃ**—ಅದೇ ಘರ್ಮಪಾತ್ರೆಯು ( ಮಹಾವೀರವು ) । **ಪ್ರೇಷ್ಠಃ**—ಪ್ರಿಯತಮನಾದ । **ಪುತ್ರಃ**—ಪುತ್ರನು । **ಪಿತುಃ**—ತಂದೆಯ । **ಉಪಸಿ ನ**—ತೊಡೆಯಮೇಲೆ ಆದರದಿಂದ ಕುಳಿತುಕೊಳ್ಳುವಂತೆ । **ಋತಯನ್**—ಯಜ್ಞನಿರ್ವಹಣವನ್ನಿಚ್ಛಿಸುತ್ತಾ । **ಅಗ್ನಿಂ**—ಅಗ್ನಿಯಲ್ಲಿ । **ಆ ಅಸಾದಿ**—( ಸ್ಫೋಟದ ಭೀತಿಯಿಲ್ಲದೆ ) ಸುಖವಾಗಿ ಕುಳಿತಿದೆ

‖ ಭಾವಾರ್ಥ ‖

ಉತ್ತಮವಾದ ಕೊಬ್ಬಿನಿಂದ ಕೂಡಿದ ವಪೆಯುಳ್ಳ ಪಶುವನ್ನು ಅಗ್ನಿಯಲ್ಲಿ ಪಕ್ವಮಾಡುವುದಕ್ಕಾಗಿ ಋತ್ವಿಕ್ಕುಗಳು ಯಾವ ಘರ್ಮಪಾತ್ರೆಯನ್ನು ಘೃತಾದ್ಯಂಜನಗಳಿಂದ ಅಲಂಕರಿಸುತ್ತಾರೋ ಅದೇ ಘರ್ಮಪಾತ್ರೆಯು ಪ್ರಿಯತಮನಾದ ಪುತ್ರನು ತಂದೆಯ ತೊಡೆಯ ಮೇಲೆ ಆದರದಿಂದ ಕುಳಿತುಕೊಳ್ಳುವಂತೆ ಯಜ್ಞನಿರ್ವಹಣವನ್ನಿಚ್ಛಿಸುತ್ತಾ ಅಗ್ನಿಯಲ್ಲಿ ಸ್ಫೋಟದ ಭೀತಿಯಿಲ್ಲದೆ ಸುಖವಾಗಿ ಕುಳಿತಿದೆ

## English Translation

The vessel which the priests, celebrating (it), supply with butter, as if roasting a marrow-yielding animal with fire, has been placed, desirous of the sacrifice, upon the fire, like a son upon the lap of his father.

‖ ವಿಶೇಷವಿಷಯಗಳು ‖

ಪ್ರವರ್ಗ್ಯವೆಂಬ ಯಾಗದ ಮಹಾವೀರನೆಂಬ ಕರ್ಮಕಾಲದಲ್ಲಿ **ಅಂಜಾತಿ ಯಂ** ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ-**ಅಂಜಂತಿ ಯಂ ಪ್ರಥಯಂತೋ** ನ ವಿಪ್ರಾ **ಇತ್ಯಜ್ಯಮಾನೇ** ಎಂಬ ಸೂತ್ರದಿಂದ (ಆ. ೪.೬) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಅಚ್ಛಾ ಮಹೀ ಬೃಹತೀ ಶಂತಮಾ ಗೀರ್ದೂತೋ ನ ಗಂತ್ವಶ್ವಿನಾ ಹುವಧ್ಯೈ ।

ಮಯೋಭುವಾ ಸರಥಾ ಯಾತಮರ್ವಾಗ್ಗಂತಂ ನಿಧಿಂ ಧುರಮಾಣಿರ್ನ ನಾಭಿಂ ॥ ೮ ॥

॥ ಪದಪಾಠಃ ॥

ಅಚ್ಛ । ಮಹೀ । ಬೃಹತೀ । ಶಂಽತಮಾ । ಗೀಃ । ದೂತಃ । ನ । ಗಂತು । ಅಶ್ವಿನಾ । ಹುವಧ್ಯೈ ।

ಮಯಃಽಭುವಾ । ಸಽರಥಾ । ಆ । ಯಾತಂ । ಅರ್ವಾಕ್ । ಗಂತಂ । ನಿಽಧಿಂ । ಧುರಂ । ಆಣಿಃ । ನ । ನಾಭಿಂ ॥ ೮ ॥

॥ ಸಾಯಣಭಾಷ್ಯಂ ॥

ಅಚ್ಛಾಭಿಮುಖಮಶ್ವಿನಾಶ್ವಿನೌ ಹುವಧ್ಯಾ ಆಹ್ವಾತುಂ ಗೀರಸ್ಮದೀಯಾ ಸ್ತುತಿರ್ದೂತೋ ನ ದೂತ ಇವಾಹ್ವಾತೇವ ಗಂತು । ಗಚ್ಛತು । ಗೀರ್ವಿಶೇಷ್ಯತೇ । ಮಹೀ ಪೂಜ್ಯಾ ಬೃಹತೀ ಮಹತೀ ಶಂತಮಾ ಸುಖತಮಾ । ಹೇ ಅಶ್ವಿನೌ ಮಯೋಭುವಾ ಸುಖಸ್ಯ ಭಾವಯಿತಾರೌ ಸರಥೈಕರಥೌ ಸಂತೌ ನಿಧಿಂ ನಿಹಿತಂ ಸೋಮಮರ್ವಾಗಭಿಮುಖಂ ಯಾತಂ । ಗಚ್ಛತಂ । ಧುರಂ ಭಾರವಾಹಿಕಾಂ ನಾಭಿಮಾಣಿರ್ನ ಕೀಲ ಇವ । ಯಥಾ ನಿಷ್ಕೀಲಾ ನಾಭೀ ರಥಂ ನ ನಿರ್ವಹತಿ ತದ್ವತ್ ಯುವಾಭ್ಯಾಂ ವಿಯುಕ್ತಃ ಸೋಮೋ ಯಾಗಂ ನ ನಿರ್ವಹತೀತಿ ಜ್ಞಾಪಯಿತುಮೇವಂ ದೃಷ್ಟಾಂತಿತಂ ॥

॥ ಪ್ರತಿಪದಾರ್ಥ ॥

**ಮಹೀ**—ಪೂಜ್ಯವಾದುದೂ । **ಬೃಹತೀ**—ಮಹತ್ತಾದುದೂ । **ಶಂತಮಾ**—ಅತ್ಯಂತ ಸುಖಕಾರಕವಾದುದೂ ಆದ । **ಗೀಃ**—ನಮ್ಮ ಸ್ತುತಿಯು । **ಅಶ್ವಿನಾ**—ಅಶ್ವಿನೀ ದೇವತೆಗಳನ್ನು । **ಹುವಧ್ಯೈ**—ಕರೆಯಲು **ದೂತೋ ನ**—ದೂತನಂತೆ । **ಅಚ್ಛ**—ಅವರಿಗಭಿಮುಖವಾಗಿ । **ಗಂತು**—ಹೋಗಲಿ (ಎಲೈ ಅಶ್ವಿನೀ ದೇವತೆಗಳೇ) **ಧುರಂ**—ಭಾರವನ್ನು ಹೊರತಕ್ಕ । **ನಾಭೀ**—ನಾಭಿಪ್ರದೇಶಸ್ಥವಾದ ಇರಚಿಪಟ್ಟಿಗೆ । **ಆಣಿಃ ನ**—ಅತಿ ಮುಖ್ಯವಾದ ಕೀಲಿರುವಂತೆ (ಯಜ್ಞಕ್ಕೆ ಅತಿಮುಖ್ಯರಾದ ನೀವು) **ಗಂತಂ**-ಆಗಮಿಸಿರಿ । **ಮಯೋಭುವಾ**-ಸುಖದಾಯಕರಾಗಿಯೂ, (ನೀವು) **ಸರಥಾ**—ಒಂದೇ ರಥದಲ್ಲಿ ಕುಳಿತವರಾಗಿಯೂ । **ನಿಧಿಂ**—ಇಲ್ಲಿಟ್ಟಿರತಕ್ಕ ಸೋಮಕ್ಕೆ । **ಅರ್ವಾಕ್**—ಅಭಿಮುಖವಾಗಿ । **ಆ ಯಾತಂ**—ದಯಮಾಡಿರಿ.

॥ ಭಾವಾರ್ಥ ॥

ಪೂಜ್ಯನಾದುದೂ, ಮಹತ್ವಾದುದೂ, ಅತ್ಯಂತ ಸುಖಕರವಾದುದೂ ಆದ ನಮ್ಮ ಸ್ತುತಿಯು ಅಶ್ವಿನೀ ದೇವತೆಗಳನ್ನು ಕರೆಯಲು ದೂತನಂತೆ ಅವರಿಗಭಿಮುಖವಾಗಿ ಹೋಗಲಿ. ಎಲೈ ಅಶ್ವಿನೀದೇವತೆಗಳೇ, ಭಾರವನ್ನು ಹೊರತಕ್ಕ ನಾಭಿಪ್ರದೇಶಸ್ಥವಾದ ಇರಚಿಪಟ್ಟಿಗೆ ಅತಿ ಮುಖ್ಯವಾದ ಕೀಲಿರುವಂತೆ ಯಜ್ಞಕ್ಕೆ ಅತಿಮುಖ್ಯರಾದ ನೀವು ಆಗಮಿಸಿರಿ. ನೀವು ನಮಗೆ ಸುಖದಾಯಕರಾಗಿಯೂ, ಒಂದೇ ರಥದಲ್ಲಿ ಕುಳಿತವರಾಗಿಯೂ ಇಲ್ಲಿಟ್ಟಿರತಕ್ಕ ಸೋಮಕ್ಕೆ ಅಭಿಮುಖವಾಗಿ ದಯಮಾಡಿರಿ.

## English Translation

May this adoring, earnest, and gratifying praise go like a messenger to summon the Aswins hither: come, Aswins, givers of happiness, riding in one chariot, come down to the deposited (Soma), as the bolt (is essential) to the axle of the waggon.

---

॥ ಸಂಹಿತಾಪಾಠಃ ॥

ಪ್ರ ತವ್ಯಸೋ ನಮಉಕ್ತಿಂ ತುರಸ್ಯಾಹಂ ಪೂಷ್ಣ ಉತ ವಾಯೋರದಿಕ್ಷಿ ।

ಯಾ ರಾಧಸಾ ಚೋದಿತಾರಾ ಮತೀನಾಂ ಯಾ ವಾಜಸ್ಯ ದ್ರವಿಣೋದಾ ಉತ ತ್ಮನ್ ॥ ೯ ॥

॥ ಪದಪಾಠಃ ॥

ಪ್ರ । ತವ್ಯಸಃ । ನಮಃಉಕ್ತಿಂ । ತುರಸ್ಯ । ಅಹಂ । ಪೂಷ್ಣಃ । ಉತ । ವಾಯೋಃ । ಅದಿಕ್ಷಿ ।

ಯಾ । ರಾಧಸಾ । ಚೋದಿತಾರಾ । ಮತೀನಾಂ । ಯಾ । ವಾಜಸ್ಯ । ದ್ರವಿಣಃದಾ । ಉತ । ತ್ಮನ್ ॥

॥ ಸಾಯಣಭಾಷ್ಯಂ ॥

ಅಹಮೃಷಿಸ್ತವ್ಯಸಃ ಪ್ರಕೃಷ್ಟಬಲಸ್ಯ ತುರಸ್ಯ ತ್ವರಮಾಣಸ್ಯ ಪೂಷ್ಣಃ ಪೋಷಕಸ್ಯ ದೇವಸ್ಯ । ಉಕ್ತಗುಣಕಾಯ ದೇವಾಯ ಉತಾಪಿ ಚ ವಾಯೋರುಕ್ತಲಕ್ಷಣಾಯ ಚ ನಮಉಕ್ತಿಂ ನಮ ಇತಿ ವಚನಂ ಸ್ತೋತ್ರಂ ಪ್ರಾದಿಕ್ಷಿ । ಪ್ರದಿಶಾಮಿ । ಯಾ ಯೌ ಪೂಷವಾಯೂ ರಾಧಸಾ ಹವಿರ್ಲಕ್ಷಣೇನ ನಿಮಿತ್ತೇನ ಮತೀನಾಂ ಚೋದಿತಾರಾ ಪ್ರೇರಯಿತಾರೌ । ಯದ್ವಾ । ರಾಧಸೇತಿ ಷಷ್ಠ್ಯರ್ಥೇ ತೃತೀಯಾ ।

**ರಾಧಸೋ ಧನಸ್ಯ ಮತೀನಾಂ ಚ ಚೋದಯಿತಾರೌ । ಯೌ ಚ ವಾಜಸ್ಯಾನ್ನಸ್ಯ ಸಂಗ್ರಾಮಸ್ಯ ವಾ ಚೋದಯಿತಾರೌ ತೌ ದೇವಾವುತಾಪಿ ಚ ತ್ಮನಾತ್ಮನ್ಯನನ್ಯಪ್ರೇರಣಾಯ್ವೈವ ದ್ರವಿಣೋದೌ ಭವತಮಿತಿ ಶೇಷಃ ॥**

॥ ಪ್ರತಿಪದಾರ್ಥ ॥

**ಯಾ**—ಯಾವ ಪೂಷನೂ ಮತ್ತ್ತ ವಾಯುವೂ ಸಹ । **ರಾಧಸಾ**—ಹವಿಸ್ಸಿನ ರೂಪದ ಅನ್ನದ ನಿಮಿತ್ತ ವಾಗಿ । **ಮತೀನಾಂ**—ಕಾಮಾತ್ಮಕವಾದ ಮನಸ್ಸುಗಳ । **ಚೋದಿತಾರಾ**—ಪ್ರೇರಕರೋ । **ಯಾ**—ಯಾರು । **ವಾಜಸ್ಯ**— ಅನ್ನಕ್ಕೆ (ಪ್ರೇರಕರೋ) । **ಉತ**—ಅಲ್ಲದೇ । **ತ್ಮನ್**—ಆತ್ಮಪ್ರೇರಣೆಯಿಂದಲೇ । **ದ್ರವಿಣೋದಾ**—ಧನದಾತರೂ ಆಗಿರುವರೋ ಅಂತಹ । **ತನ್ಯಸಃ**—ಪ್ರಕೃಷ್ಟವಾದ ಬಲವುಳ್ಳವರೂ । **ತುರಸ್ಯ**—ತ್ವರಿತವಾದ ಗಮನ ವುಳ್ಳವರೂ ಆದ । **ಪೂಷ್ಣಃ ಉತ ವಾಯೋಃ**—ಪೂಷದೇವನನ್ನೂ ಮತ್ತು ವಾಯುದೇವನನ್ನೂ ಉದ್ದೇಶಿಸಿ । **ನಮಉಕ್ತಿಂ**—ನಮಸ್ಕಾರ ಪೂರ್ವಕವಾದ ಸ್ತುತಿಯನ್ನು । **ಅಹಂ**—ನಾನು । **ಪ್ರ ಅದಿಕ್ಷಿ**—ಅತಿಶಯವಾಗಿ ಅರ್ಪಿಸುತ್ತೇನೆ

॥ ಭಾವಾರ್ಥ ॥

ಯಾವ ಪೂಷನೂ ಮತ್ತು ವಾಯುವೂ ಹವಿಸ್ಸಿನ ರೂಪದ ಅನ್ನದ ನಿಮಿತ್ತವಾಗಿ ಕಾಮಾತ್ಮಕವಾದ ಮನಸ್ಸುಗಳ ಪ್ರೇರಕರೋ, ಯಾರು ಅನ್ನಕ್ಕೆ ಪ್ರೇರಕರೋ, ಅಲ್ಲದೇ ಯಾರು ಆತ್ಮ ಪ್ರೇರಣೆಯಿಂದಲೇ ಧನದ ದಾತರಾಗಿರು ವರೋ ಅಂತಹ ಪ್ರಕೃಷ್ಟವಾದ ಬಲವುಳ್ಳವರೂ, ತ್ವರಿತವಾದ ಗಮನವುಳ್ಳವರೂ ಆದ ಪೂಷದೇವನನ್ನೂ ಮತ್ತು ವಾಯುದೇವನನ್ನೂ ಉದ್ದೇಶಿಸಿ ನಾನು ನಮಸ್ಕಾರ ಪೂರ್ವಕವಾದ ಸ್ತುತಿಯನ್ನು ಅತಿಶಯವಾಗಿ ಅರ್ಪಿಸುತ್ತೇನೆ.

## English Translation

I offer adoration to the powerful and rapid Pushan, and to (the powerful and rapid) Vayu, who are both instigators of the desire of wealth and of food, (who are both) distributors of riches.

---

॥ ಸಂಹಿತಾಪಾಠಃ ॥

ಆ ನಾಮಭಿರ್ಮರುತೋ ವಕ್ಷಿ ವಿಶ್ವಾನಾ ರೂಪೇಭಿರ್ಜಾತವೇದೋ ಹುವಾನಃ ।

ಯಜ್ಞಂ ಗಿರೋ ಜರಿತುಃ ಸುಷ್ಟುತಿಂ ಚ ವಿಶ್ವೇ ಗಂತ ಮರುತೋ ವಿಶ್ವ ಊತೀ ॥ ೧೦ ॥

॥ ಪದಪಾಠಃ ॥

ಆ । ನಾಮ॑ಽಭಿಃ । ಮ॒ರುತಃ॑ । ವ॒ಕ್ಷಿ॒ । ವಿಶ್ವಾ॑ನ್ । ಆ । ರೂ॒ಪೇಭಿಃ॑ । ಜಾ॒ತ॒ಽವೇ॒ದಃ॒ । ಹು॒ವಾ॒ನಃ ।

ಯ॒ಜ್ಞಂ । ಗಿರಃ॑ । ಜ॒ರಿ॒ತುಃ । ಸು॒ಽಸ್ತು॒ತಿಂ । ಚ॒ । ವಿಶ್ವೇ॑ । ಗಂ॒ತ॒ । ಮ॒ರು॒ತಃ॒ । ವಿಶ್ವೇ॑ । ಊ॒ತೀ ॥ ೧೦ ॥

॥ ಸಾಯಣಭಾಷ್ಯಂ ॥

**ಹೇ ಜಾತವೇದೋ ಜಾತಪ್ರಜ್ಞಾಗ್ನೇ ಹುವಾನೋಽಸ್ಮಾಭಿರಾಹೂಯಮಾನಃ ಸನ್ ವಿಶ್ವಾನ್ಮರುತಃ ಸರ್ವಾನಪಿ ಸ್ತೋತ್ರಭಾಜೋ ಹವಿರ್ಭಾಜಶ್ಚ ದೇವಾನ್ ನಾಮಭಿರಿಂದ್ರವರುಣೇತ್ಯಾದಿಲಕ್ಷಣೈರಾ ವಕ್ಷಿ । ಆವಹಸಿ । ರೂಪೇಭಿಃ ಸಹಸ್ರಾಕ್ಷವಜ್ರಹಸ್ತತ್ವಾದಿಲಕ್ಷಣೈ ರೂಪೈರಾ ವಕ್ಷಿ । ವಹಸಿ ಯಜ್ಞಂ । ಕಿಂಚ ಹೇ ಮರುತೋ ವಿಶ್ವೇ ಸರ್ವೇ ಯೂಯಂ ಯಜ್ಞಮಸ್ಮದೀಯಂ ಯಜ್ಞಸಂಬಂಧಿ ಹವಿರ್ವಾ ಜರಿತುಃ ಸ್ತೋತುಃ ಸಂಬಂಧಿನೀರ್ಗಿರಃ ಸ್ತುತಿವಚಾಂಸಿ ಸುಷ್ಟುತಿಂ ತತ್ಸಾಧ್ಯಾಂ ಶೋಭನಫಲಾಂ ಸ್ತುತಿಂ ಚ ॥ ಅವಯವಿನ್ಯಾಃ ಸ್ತುತೇರೇಕತ್ವಾದೇಕವಚನಂ । ಅವಯವಾನಾಂ ಬಹುತ್ವಾದ್ಬಹುವಚನಂ ॥ ಉಕ್ತೇ ಯಜ್ಞಸ್ತುತೀ ಅಭಿಲಕ್ಷ್ಯ ಗಂತ । ಆಗಚ್ಛತ । ವಿಶ್ವೇ ಚ ಯೂಯಮೂತೀ ಊತ್ಯಾ ರಕ್ಷಯಾ ಚ ಸಹ ಗಂತ ॥**

॥ ಪ್ರತಿಪದಾರ್ಥ ॥

**ಜಾತವೇದಃ**—ಜಾತಪ್ರಜ್ಞನಾದ ಅಗ್ನಿಯೇ । **ಹುವಾನಃ**—ನಮ್ಮಿಂದ ಪ್ರಾರ್ಥಿತನಾಗಿ । **ವಿಶ್ವಾನ್**—ಸಮಸ್ತರಾದ । **ಮರುತಃ**—ಮರುತ್ತುಗಳನ್ನೂ । **ನಾಮಭಿಃ**—ಆಯಾ ವೈಯಕ್ತಿಕವಾದ ನಾಮನಿರ್ದೇಶಗಳಿಂದ । **ಆ ವಕ್ಷಿ**—ಕರೆದುಕೊಂಡು ಬಾ । **ರೂಪೇಭಿಃ**—ವೈಯಕ್ತಿಕವಾದ ರೂಪನಿರ್ದೇಶಗಳಿಂದಲೂ । **ಆ (ವಕ್ಷಿ)**—ಕರೆದುಕೊಂಡು ಬಾ । **ಮರುತಃ**—ಎಲೈ ಮರುತ್ತುಗಳೇ । **ವಿಶ್ವೇ**—ನಿವೆಲ್ಲರೂ ಸಹ । **ಯಜ್ಞಂ**—ನಮ್ಮ ಯಜ್ಞಾಭಿಮುಖವಾಗಿಯೂ । **ಜರಿತುಃ**—ಸ್ತೋತೃವಿನ । **ಸುಷ್ಟುತಿಂ**—ಉತ್ತಮವಾದ ಸ್ತುತಿರೂಪವಾದ । **ಗಿರಃ**-ವಾಕ್ಕುಗಳಿಗಭಿಮುಖವಾಗಿಯೂ । **ಗಂತ**—ದಯಮಾಡಿರಿ । **ವಿಶ್ವೇ**—ನೀವೆಲ್ಲರೂ । **ಊತೀ**—ನಿಮ್ಮ ಸಮಸ್ತ ರಕ್ಷಣೆಗಳೊಡನೆಯೂ (ದಯಮಾಡಿರಿ)

॥ ಭಾವಾರ್ಥ ॥

ಜಾತವೇದೋರೂಪನಾದ ಎಲೈ ಅಗ್ನಿಯೇ, ನೀನು ನಮ್ಮಿಂದ ಪ್ರಾರ್ಥಿತನಾಗಿ, ಸಮಸ್ತವಾದ ಮರುತ್ತುಗಳನ್ನೂ ಸಹ ಆಯಾ ವೈಯಕ್ತಿಕವಾದ ನಾಮನಿರ್ದೇಶಗಳಿಂದಲೂ, ರೂಪನಿರ್ದೇಶಗಳಿಂದಲೂ ಕರೆದುಕೊಂಡು ಬಾ. ಎಲೈ ಮರುತ್ತುಗಳೇ, ನೀವೆಲ್ಲರೂ ಸಹ ನಿಮ್ಮ ಸಮಸ್ತ ರಕ್ಷಣೆಗಳೊಡನೆಯೂ ಕೂಡಿಕೊಂಡು ನಮ್ಮ ಯಜ್ಞಾಭಿಮುಖವಾಗಿಯೂ ಉತ್ತಮವಾದ ಸ್ತುತಿಗಳನ್ನು ಲಕ್ಷಿಸಿಯೂ ಇಲ್ಲಿಗೆ ದಯಮಾಡಿರಿ.

## English Translation

Bring hither Jatavedas, who are invoked by us all, the Maruts, under their several names and forms · come, all you Maruts, with all your protecting faculties, to the sacrifice, the praises, and the adoration of the worshipper.

॥ ಸಂಹಿತಾಪಾಠಃ ॥

ಆ ನೋ ದಿವೋ ಬೃಹತಃ ಪರ್ವತಾದಾ ಸರಸ್ವತೀ ಯಜತಾ ಗಂತು ಯಜ್ಞಂ।
ಹವಂ ದೇವೀ ಜುಜುಷಾಣಾ ಘೃತಾಚೀ ಶಗ್ಮ್ಯಾಂ ನೋ ವಾಚಮುಶತೀ
ಶೃಣೋತು ॥ ೧೧ ॥

॥ ಪದಪಾಠಃ ॥

ಆ । ನಃ । ದಿವಃ । ಬೃಹತಃ । ಪರ್ವತಾತ್ । ಆ । ಸರಸ್ವತೀ । ಯಜತಾ । ಗಂತು । ಯಜ್ಞಂ ।
ಹವಂ । ದೇವೀ । ಜುಜುಷಾಣಾ । ಘೃತಾಚೀ । ಶಗ್ಮ್ಯಾಂ । ನಃ । ವಾಚಂ । ಉಶತೀ । ಶೃಣೋತು ॥೧೧॥

॥ ಸಾಯಣಭಾಷ್ಯಂ ॥

ಆ ನೋ ದಿವ ಇತ್ಯೇಕಾದಶೀ ವ್ಯೂಢೇ ದಶರಾತ್ರೇ ನವಮೇಽಹನಿ ಪ್ರಉಗಶಸ್ತ್ರೇ ಸಾರಸ್ವತತೃಚೇ ದ್ವಿತೀಯಾ । ಸೂತ್ರಿತಂ ಚ । ಆ ನೋ ದಿವೋ ಬೃಹತಃ ಪರ್ವತಾದಾ ಸರಸ್ವತ್ಯಭಿ ನೋ ನೇಷಿ ವಸ್ಯಃ । ಆ. ೮. ೧೧ । ಇತಿ ॥

ನೋಽಸ್ಮಾಕಂ ಯಜ್ಞಂ ಯಜತಾ ಯಷ್ಟವ್ಯಾ ದೇವೀ ಸರಸ್ವತೀ ದಿವೋ ದ್ಯೋತಮಾನಾದ್ದ್ಯುಲೋಕಾದಾ ಗಂತು । ಆಗಚ್ಛತು । ತಥಾ ಬೃಹತೋ ಮಹತಃ ಪರ್ವತಾತ್ಪರ್ವವತಃ ಪೂರಣವತಃ ಪ್ರೀಣನವತೋ ವಾಂತರಿಕ್ಷಾನ್ಮೇಘಾದ್ವಾ ಸರಸ್ವತ್ಯಾ ಗಂತು । ಆಗಚ್ಛತು । ಅನೇನ ಮಾಧ್ಯಮಿಕೀ ವಾಗುಚ್ಯತೇ । ಯದ್ವೈತದ್ದಿವ ಇತ್ಯಸ್ಯ ವಿಶೇಷಣಂ । ಸಂತಿ ಹಿ ದ್ಯುಲೋಕಸ್ಯ ತ್ರೀಣಿ ಪರ್ವಾಣಿ ತಿಸ್ರೋ ದಿವಃ ಪೃಥಿವೀರಿತ್ಯಾದಿ ಶ್ರುತೇಃ । ಅಸ್ಮಿನ್ಪಕ್ಷೇ ದ್ವಿತೀಯ ಆಕಾರಃ ಪೂರಣಃ । ತದರ್ಥಂ ಹವಮಸ್ಮದೀಯಮಾಹ್ವಾನಂ ದೇವೀ ಸರಸ್ವತೀ ಜುಜುಷಾಣಾ ಸ್ತುತಿಂ ಸೇವಮಾನಾ ಘೃತಾಚೀ ಘೃತಮುದಕಮಂಚತೀ ನೋಽಸ್ಮದೀಯಾಂ ಶಗ್ಮ್ಯಾಂ ಸುಖಕರೀಂ ವಾಚಂ ಸ್ತುತಿಮುಶತೀ ಕಾಮಯಮಾನಾ ಸತೀ ಶೃಣೋತು ॥

॥ ಪ್ರತಿಪದಾರ್ಥ ॥

**ಯಜತಾ**—ಪೂಜ್ಯಳಾದ । **ಸರಸ್ವತೀ**—ಸರಸ್ವತೀ ದೇವಿಯು । **ನಃ**—ನಮ್ಮ । **ಯಜ್ಞಂ**—ಯಜ್ಞಕ್ಕೆ । **ದಿವಃ**—ದ್ಯುಲೋಕದಿಂದಾಗಲಿ । **ಆ ಗಂತು**—ದಯಮಾಡಲಿ (ಅಥವಾ) । **ಬೃಹತಃ**—ಮಹತ್ತಾದ । **ಪರ್ವತಾತ್**—ಅಂತರಿಕ್ಷದಿಂದಾಗಲಿ । **ಆ ( ಗಂತು )**—ದಯಮಾಡಲಿ । **ದೇವೀ**—ದೇವತಾತ್ಮಳಾದ ಸರಸ್ವತಿಯು । **ಹವಂ**—ನಮ್ಮ ಪ್ರಾರ್ಥನಾರೂಪವಾದ ಸ್ತುತಿಯನ್ನು । **ಜುಜುಷಾಣಾ**—ಸೇವಿಸುತ್ತಲೂ । **ಘೃತಾಚೀ**—ಉದಕ ಸೇಚನವನ್ನು ಮಾಡುತ್ತಲೂ । **ನಃ**—ನಮ್ಮ । **ಶಗ್ಮ್ಯಾಂ**—ಸುಖಕಾರಕವಾದ । **ವಾಚಂ**-ಸ್ತುತಿಯನ್ನು । **ಉಶತೀ**-ಇಚ್ಛಿಸುತ್ತಾ । **ಶೃಣೋತು**—ಕೇಳಲಿ.

॥ ಭಾವಾರ್ಥ ॥

ಪೂಜ್ಯಳಾದ ಸರಸ್ವತೀದೇವಿಯು ನಮ್ಮ ಯಜ್ಞಕ್ಕೆ ದ್ಯುಲೋಕದಿಂದಾಗಲಿ ಅಥವಾ ಮಹತ್ತಾದ ಅಂತರಿಕ್ಷದಿಂದಾಗಲಿ ದಯಮಾಡಲಿ. ದೇವತಾತ್ಮಳಾದ ಸರಸ್ವತಿಯು ನಮ್ಮ ಪ್ರಾರ್ಥನಾರೂಪವಾದ ಸ್ತುತಿಯನ್ನು ಸೇವಿಸಿ. ಉದಕ ಸೇಚನವನ್ನು ಮಾಡುತ್ತಲೂ ನಮ್ಮ ಸುಖಕಾರಕವಾದ ಸ್ತುತಿಯನ್ನು ಇಚ್ಛಿಸುತ್ತಾ ಅದನ್ನು ಲಾಲಿಸಿ ಕೇಳಲಿ.

English Translation

May the radiant Saraswati come to the sacrifice from the heavens or the spacious firmament . may the goddess, the showerer of water, propitiated by our invocation, and desirous of our gratifying praises, hear

॥ ವಿಶೇಷವಿಷಯಗಳು ॥

ವ್ಯೂಳ್ಹವೆಂಬ ದಶರಾತ್ರಯಾಗದ ಒಂಭತ್ತನೆಯ ದಿವಸ ಪ್ರಉಗಶಸ್ತ್ರಮಂತ್ರ ಪಠನ ಕಾಲದಲ್ಲಿ **ಆ ನೋ ದಿವಃ** ಎಂಬ ಈ ಋಕ್ಕನ್ನು ಸರಸ್ವತೀ ದೇವತಾಕವಾದ ತೃಚದಲ್ಲಿ ( ತೃಚವೆಂದರೆ ಮೂರು ಋಕ್ಕುಗಳು ) ಎರಡನೆಯ ಋಕ್ಕನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ— **ಆ ನೋ ದಿವೋ ಬೃಹತಃ ಪರ್ವತಾದಾ ಸರಸ್ವತ್ಯಭಿ ನೋ ನೇಷಿ ವಸ್ಯಃ** ಎಂಬ ಸೂತ್ರದಿಂದ (ಆ ೮.೧೧) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಆ ವೇಧಸಂ ನೀಲಪೃಷ್ಠಂ ಬೃಹಂತಂ ಬೃಹಸ್ಪತಿಂ ಸದನೇ ಸಾದಯಧ್ವಂ ।
ಸಾದದ್ಯೋನಿಂ ದಮ ಆ ದೀದಿವಾಂಸಂ ಹಿರಣ್ಯವರ್ಣಮರುಷಂ ಸಪೇಮ॥

॥ ಪದಪಾಠಃ ॥

ಆ । ವೇಧಸಂ । ನೀಲऽಪೃಷ್ಠಂ । ಬೃಹಂತಂ । ಬೃಹಸ್ಪತಿಂ । ಸದನೇ । ಸಾದಯಧ್ವಂ ।
ಸಾದತ್ऽಯೋನಿಂ । ದಮೇ । ಆ ದೀದಿऽವಾಂಸಂ । ಹಿರಣ್ಯऽವರ್ಣಂ । ಅರುಷಂ । ಸಪೇಮ ॥ ೧೨ ॥

॥ ಸಾಯಣಭಾಷ್ಯಂ ॥

ಏಷಾ ಬಾರ್ಹಸ್ಪತ್ಯಾ । ಹೇ ಋತ್ವಿಜೋ ಯೂಯಂ ಬೃಹಸ್ಪತಿಂ ಬೃಹತೋ ಮಂತ್ರಸ್ಯ ಸ್ವಾಮಿನಂ ದೇವಂ ಸದನೇऽಸ್ಮದ್ಯಾಗಗೃಹ ಆ ಸಾದಯಧ್ವಂ । ಸ್ಥಾಪಯಧ್ವಂ । ಕೀದೃಶಂ ದೇವಂ । ವೇಧಸಂ ವಿವಿಧಕರ್ತಾರಂ ನೀಲಪೃಷ್ಠಂ ಸ್ನಿಗ್ಧಾಂಗಂ ಬೃಹಂತಂ ಮಹಾಂತಂ । ತಥಾ ಸಂತಂ ವಯಮೃತ್ವಿ-

ಗ್ಯಜಮಾನಾಃ ಸಪೇಮ । ಪರಿಚರೇಮ । ಸ ಏವ ವಿಶೇಷ್ಯತೇ । ಸಾದದ್ಯೋನಿಂ ಯೋನಾ ಸೀದಂತಂ ದಮೇ ಯಾಗಗೃಹ ಆ ಸರ್ವತೋ ದೀದಿವಾಂಸಂ ದೀಪ್ಯಮಾನಂ ಹಿರಣ್ಯವರ್ಣಮರುಷಮಾರೋಚ-ಮಾನಂ । ಅಥವೇಯಮಾಗ್ನೇಯೀ । ಬೃಹತಃ ಪರಿವೃಢಸ್ಯ ಕರ್ಮಣಃ ಸ್ವಾಮೀತಿ ಬೃಹಸ್ಪತಿರಗ್ನಿರುಚ್ಯತೇ । ತಥಾ ನೀಲವರ್ಣಧೂಮಪೃಷ್ಠತ್ವಸದನಸಾದನಹಿರಣ್ಯವರ್ಣತ್ವಾದಿಲಿಂಗೈರಪ್ಯಗ್ನಿರೇವ ಬೃಹಸ್ಪತಿಃ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) **ವೇಧಸಂ**—ಸೃಷ್ಟಿಕರ್ತನೂ । **ನೀಲಪೃಷ್ಠಂ**—ನೀಲರೂಪವಾದ ಪೃಷ್ಠಭಾಗವುಳ್ಳವನೂ । **ಬೃಹಂತಂ**—ಮಹದ್ರೂಪನೂ ಆದ । **ಬೃಹಸ್ಪತಿಂ**—ಬೃಹಸ್ಪತಿದೇವನನ್ನು । **ಸದನೇ**—ನಮ್ಮ ಯಾಗ ಗೃಹದಲ್ಲಿ । **ಆ ಸಾದಯಧ್ವಂ**—ಸ್ಥಾಪಿಸಿರಿ । **ಸಾದದ್ಯೋನಿಂ**-ಯಜ್ಞವೇದಿಯಲ್ಲಿ ಸ್ಥಿತನಾಗಿರುವವನೂ । **ದಮೇ**-ಯಾಗಗೃಹದಲ್ಲಿ । **ಆ**—ಸರ್ವತ್ರ । **ದೀದಿವಾಂಸಂ**—ಪ್ರಕಾಶಿಸುತ್ತಿರುವವನೂ । **ಹಿರಣ್ಯವರ್ಣಂ**—ಆಕರ್ಷಕವಾದ ಹೊಂಬಣ್ಣವುಳ್ಳವನೂ । **ಅರುಷಂ**—ಆರೋಚಕನೂ ಆದ ಬೃಹಸ್ಪತಿಯನು । **ಸಪೇಮ**—ನಾವು ಪೂಜಿಸೋಣ.

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ಸೃಷ್ಟಿಕರ್ತನೂ, ನೀಲರೂಪವಾದ ಪೃಷ್ಠಭಾಗವುಳ್ಳವನೂ, ಮಹದ್ರೂಪನೂ ಆದ ಬೃಹಸ್ಪತಿದೇವನನ್ನು ನಮ್ಮ ಯಾಗಗೃಹದಲ್ಲಿ ಸ್ಥಾಪಿಸಿರಿ. ಯಜ್ಞವೇದಿಯಲ್ಲಿ ಸ್ಥಿತನಾಗಿರುವವನೂ, ಯಾಗಗೃಹದಲ್ಲಿ ಸರ್ವತ್ರ ಪ್ರಕಾಶಿಸುತ್ತಿರುವವನೂ ಆಕರ್ಷಕವಾದ ಹೊಂಬಣ್ಣವುಳ್ಳವನೂ, ಆರೋಚಕನೂ ಆದ ಬೃಹಸ್ಪತಿಯನ್ನು ನಾವು ಪೂಜಿಸೋಣ

English Translation

(Priests) place the mighty Brihaspati, the creator, whose back is dark blue, in the chamber (of sacrifice): let us worship him who is seated in the interior of the mansion, everywhere shining, golden-hued, resplendent

॥ ಸಂಹಿತಾಪಾಠಃ ॥

ಆ ಧರ್ಣಸಿರ್ಬೃಹದ್ದಿವೋ ರರಾಣೋ ವಿಶ್ವೇಭಿರ್ಗಂತ್ವೋಮಭಿರ್ಹುವಾನಃ ।
ಗ್ನಾ ವಸಾನ ಓಷಧೀರಮೃಧ್ರಸ್ತ್ರಿಧಾತುಶೃಂಗೋ ವೃಷಭೋ ವಯೋಧಾಃ ॥

॥ ಪದಪಾಠಃ ॥

ಆ । ಧರ್ಣಸಿಃ । ಬೃಹತ್ऽದಿವಃ । ರರಾಣಃ । ವಿಶ್ವೇಭಿಃ । ಗಂತು । ಓಮऽಭಿಃ । ಹುವಾನಃ ।
ಗ್ನಾಃ । ವಸಾನಃ । ಓಷಧೀಃ । ಅಮೃಧ್ರಃ । ತ್ರಿಧಾತುऽಶೃಂಗಃ । ವೃಷಭಃ । ವಯಃऽಧಾಃ ॥ ೧೩ ॥

॥ ಸಾಯಣಭಾಷ್ಯಂ ॥

ಇದಮಾದ್ಯೃಕ್ತ್ರಯಮಾಗ್ನೇಯಂ । ಅಗ್ನಿರಾ ಗಂತು ಆಗಚ್ಛತ್ವಸ್ಮದ್ಯಜ್ಞಂ ಧರ್ಣಸಿಃ ಸರ್ವಸ್ಯ ಧಾರಕೋ ಬೃಹದ್ದಿವಃ ಪ್ರಭೂತದೀಪ್ತೀ ರರಾಣೋ ರಮಮಾಣಃ ಕಾಮಾನ್ ಪ್ರಯಚ್ಛನ್ ಆ ವಿಶ್ವೇಭಿಃ ಸರ್ವೈರೋಮಭೀ ರಕ್ಷಣೈಃ ಸಹ ಹುವಾನ ಆಹೂಯಮಾನಃ । ಗ್ನಾ ಗಂತ್ರೀರ್ಜ್ವಾಲಾ ಓಷಧೀಶ್ಚ ವಸಾನೋಽಮೃಧ್ರೋಽಹಿಂಸಿತಸ್ತ್ರಿಧಾತುಶೃಂಗಸ್ತ್ರಿಪ್ರಕಾರಶೃಂಗವದುನ್ನತಲೋಹಿತಶುಕ್ಲಕೃಷ್ಣವರ್ಣಜ್ವಾಲೋ ವೃಷಭೋ ವರ್ಷಿತಾ ವಯೋಧಾ ಅನ್ನಸ್ಯ ದಾತಾ ಹವಿಷೋ ವಾ ಧಾರಕಃ ॥

॥ ಪ್ರತಿಪದಾರ್ಥ ॥

**ಬೃಹದ್ದಿವಃ**—ಪ್ರಭೂತವಾದ ಪ್ರಭೆಯುಳ್ಳವನೂ । **ರರಾಣಃ**—ಹರ್ಷಯುತನೂ । **ಗ್ನಾಃ**— ಚಲನಾತ್ಮಕಗಳಾದ ಜ್ವಾಲೆಗಳನ್ನೂ । **ಓಷಧೀಃ**—ಓಷಧಿಗಳನ್ನೂ । **ವಸಾನಃ**—ಧರಿಸಿರುವವನೂ । **ಅಮೃಧಃ**—ಅಹಿಂಸಿತನೂ । **ತ್ರಿಧಾತುಶೃಂಗಃ**—ಲೋಹಿತ, ಶುಕ್ಲ ಮತ್ತು ಕೃಷ್ಣವರ್ಣಾತ್ಮಕವೂ ಮತ್ತು ಶೃಂಗಗಳಂತಿರುವವೂ ಆದ ಜ್ವಾಲೆಗಳುಳ್ಳವನೂ । **ವೃಷಭಃ**—ಕಾಮವರ್ಷಕನೂ । **ವಯೋಧಾಃ**—ಅನ್ನದಾತನೂ । **ಧರ್ಣಸಿಃ**—ಸಕಲ ಜಗದ್ಧಾರಕನೂ ಆದ ಅಗ್ನಿಯು । **ವಿಶ್ವೇಭಿಃ**-ಸಮಸ್ತವಾದ । **ಓಮಭಿಃ**-ರಕ್ಷಣೆಗಳೊಂದಿಗೂ ಸಹ । **ಹುವಾನಃ**—ನಮ್ಮಿಂದ ಪ್ರಾರ್ಥಿತನಾದೊಡನೆಯೇ । **ಆ ಗಂತು**—ನಮ್ಮ ಯಜ್ಞಕ್ಕೆ ದಯಮಾಡಲಿ.

॥ ಭಾವಾರ್ಥ ॥

ಪ್ರಭೂತವಾದ ಪ್ರಭೆಯುಳ್ಳವನೂ, ಹರ್ಷಯುತನೂ, ಚಲನಾತ್ಮಕಗಳಾದ ಜ್ವಾಲೆಗಳನ್ನೂ ಓಷಧಿಗಳನ್ನೂ ಧರಿಸಿರುವವನೂ, ಅಹಿಂಸಿತನೂ ಲೋಹಿತ, ಶುಕ್ಲ ಮತ್ತು ಕೃಷ್ಣವರ್ಣಾತ್ಮಕವೂ ಮತ್ತು ಶೃಂಗಗಳಂತಿರುವುವೂ, ಆದ ಜ್ವಾಲೆಯುಳ್ಳವನೂ, ಕಾಮವರ್ಷಕನೂ, ಅನ್ನದಾತನೂ ಸಕಲ ಜಗದ್ಧಾರಕನೂ ಆದ ಅಗ್ನಿಯು ಸಮಸ್ತವಾದ ರಕ್ಷಣೆಗಳೊಂದಿಗೂ ಸಹ ನಮ್ಮಿಂದ ಪ್ರಾರ್ಥಿತನಾದೊಡನೆಯೇ, ನಮ್ಮ ಯಜ್ಞಕ್ಕೆ ದಯಮಾಡಲಿ.

English Translation

May the sustainer of all, (Agni), the greatly radiant, the delighter, come, with all his protecting (faculties), when invoked ; he who is clothed with flames and with plants ; who is irresistible ; who has horns of three colours, the showerer (of benefits), the accepter of oblations.

॥ ಸಂಹಿತಾಪಾಠಃ ॥

ಮಾತುಷ್ಪದೇ ಪರಮೇ ಶುಕ್ರ ಆಯೋರ್ವಿಪನ್ಯವೋ ರಾಸ್ಪಿರಾಸೋ ಅಗ್ಮನ್ ।

## ಸುಶೇವ್ಯಂ ನಮಸಾ ರಾತಹವ್ಯಾಃ ಶಿಶುಂ ಮೃಜಂತ್ಯಾಯವೋ ನ ವಾಸೇ ॥

॥ ಪದಪಾಠಃ ॥

ಮಾತುಃ । ಪದೇ । ಪರಮೇ । ಶುಕ್ರೇ । ಆಯೋಃ । ವಿಪನ್ಯವಃ । ರಾಸ್ಪಿರಾಸಃ । ಅಗ್ಮನ್ ।
ಸುಽಶೇವ್ಯಂ । ನಮಸಾ । ರಾತಽಹವ್ಯಾಃ । ಶಿಶುಂ । ಮೃಜಂತಿ । ಆಯವಃ । ನ । ವಾಸೇ ॥ ೧೪ ॥

॥ ಸಾಯಣಭಾಷ್ಯಂ ॥

ಆಯೋರ್ಮನುಷ್ಯಸ್ಯ ಯಜಮಾನಸ್ಯ ವಿಪನ್ಯವಃ । ಸ್ತೋತ್ರನಾಮೈತತ್ । ಸ್ತೋತಾರೋ ಹೋತ್ರಾದಯೋ ರಾಸ್ಪಿರಾಸಃ ॥ ರಾ ಧನಂ ಹವಿರ್ಲಕ್ಷಣಂ । ತತ್ಸ್ಪೃಶಂತಿ ರಾಸ್ಪಾ ಜುಹ್ವಾದಯಃ । ತದ್ವಾನ್ ರಾಸ್ಪೀ । ತದ್ವಂತೋ ರಾಸ್ಪಿರಾಃ ॥ ಉಕ್ತವಿಧಾ ಋತ್ವಿಜೋ ಮಾತುರ್ನಿರ್ಮಾತುಃ ಪೃಥಿವ್ಯಾಃ ಶುಕ್ರೇ ದೀಪ್ತೇ ಪರಮೇ ಪದ ಉತ್ತರವೇದ್ಯಾಂ ಸ್ಥಿತಮಗ್ಮನ್ । ಅಗಮನ್ । ಭಜಂತೇ । ತದರ್ಥಂ ಸುಶೇವ್ಯಂ ಸುಖಾಯ ಹಿತಂ ಶಿಶುಮುತ್ಪನ್ನಮಾತ್ರಂ ವಾಸೇ ವಾಸಾಯ ನಮಸಾ ಸ್ತೋತ್ರೇಣ ರಾತಹವ್ಯಾ ದತ್ತಹವ್ಯಾಃ । ಹವಿಷ್ಕಾ ಇತ್ಯರ್ಥಃ । ತಾದೃಶಾಸ್ತೇ ಮೃಜಂತಿ । ಸಂಮಾರ್ಜಯಂತಿ । ತತ್ರ ದೃಷ್ಟಾಂತಃ । ಆಯವೋ ನ ಲೌಕಿಕಾ ಮನುಷ್ಯಾ ಇವ । ತೇ ಯಥಾ ಶಿಶುಂ ವಾಸಾಯ ಮೃಜಂತಿ ತದ್ವತ್ ॥

॥ ಪ್ರತಿಪದಾರ್ಥ ॥

ರಾಸ್ಪಿರಾಸಃ—ಹವಿಸ್ಸಿನಿಂದ ತುಂಬಿದ ಜುಹೂಪಾತ್ರೆಯನ್ನು ಹಿಡಿದಿರುವವರೂ । ಆಯೋಃ—ಮಾನವನಾದ ಯಜಮಾನನಿಗೆ । ವಿಪನ್ಯವಃ—ಸ್ತೋತೃಗಳೂ ಹೋಮಸಂಪಾದಕರೂ ಆದ ಋತ್ವಿಕ್ಕುಗಳು । ಮಾತುಃ—ಪೃಥ್ವಿಯ । ಶುಕ್ರೇ—ಪ್ರಕಾಶಮಾನವಾದ । ಪರಮೇ ಪದೇ—ಉತ್ತರವೇದಿ ಪ್ರದೇಶಕ್ಕೆ । ಅಗ್ಮನ್—ಹೋಗಿದ್ದಾರೆ । ಶಿಶುಂ—ಎಳೆಯ ಶಿಶುವನ್ನು । ಆಯವೋ ನ—ಅದರ ಬೆಳವಣಿಗೆಯ ನಿಮಿತ್ತವಾಗಿ ಸವರಿ ಲಾಲಿಸುವಂತೆ । ರಾತಹವ್ಯಾಃ—ಹವಿಸ್ಸನ್ನು ಅರ್ಪಿಸಿದ ಋತ್ವಿಕ್ಕುಗಳು । ಸುಶೇವ್ಯಂ—ಸುಖವಾಗಿ ಸ್ಥಾಪಿತನಾದವನೂ । ಶಿಶುಂ—ಆಗ ತಾನೇ ಉತ್ಪನ್ನನಾದವನೂ ಆದ ಅಗ್ನಿಯನ್ನು । ವಾಸೇ—ಅವನ ವೃದ್ಧಿಗಾಗಿ । ನಮಸಾ—ಸ್ತುತಿಪೂರ್ವಕವಾಗಿ । ಮೃಜಂತಿ—ಸವರುತ್ತಾರೆ (ಪ್ರೀತಿಯಿಂದ ಪೋಷಿಸುತ್ತಾರೆ)

॥ ಭಾವಾರ್ಥ ॥

ಹವಿಸ್ಸಿನಿಂದ ತುಂಬಿದ ಜುಹೂ ಪಾತ್ರೆಯನ್ನು ಹಿಡಿದಿರುವವರೂ, ಮಾನವನಾದ ಯಜಮಾನನಿಗೆ ಸ್ತೋತೃಗಳೂ ಹೋಮ ಸಂಪಾದಕರೂ ಆದ ಋತ್ವಿಕ್ಕುಗಳು ಪೃಥ್ವಿಯ ಪ್ರಕಾಶಮಾನವಾದ ಉತ್ತರವೇದಿಪ್ರದೇಶಕ್ಕೆ ಹೋಗಿದ್ದಾರೆ. ಎಳೆಯ ಶಿಶುವನ್ನು ಅದರ ಬೆಳವಣಿಗೆಯ ನಿಮಿತ್ತವಾಗಿ ಸವರಿ ಲಾಲಿಸುವಂತೆ ಹವಿಸ್ಸನ್ನು ಅರ್ಪಿಸಿದ ಋತ್ವಿಕ್ಕುಗಳು ಸುಖವಾಗಿ ನಿಹಿತನಾದವನೂ, ಆಗತಾನೇ ಉತ್ಪನ್ನನಾದವನೂ ಆದ ಅಗ್ನಿಯನ್ನು ಅವನ ವೃದ್ಧಿಗಾಗಿ ಸ್ತುತಿಪೂರ್ವಕವಾಗಿ ಸವರುತ್ತಾರೆ ಎಂದರೆ ಪ್ರೀತಿಯಿಂದ ಪೋಷಿಸುತ್ತಾರೆ.

## English Translation

The holders of the (sacrificial) ladles, the ministrant priests of the man (who institutes the rite), have repaired to the bright and most excellent place of the maternal (earth): offerers of the oblation, they foster the tender infant, (Agni), with worship, as people rub (the limbs of a child to promote his) existence.

---

॥ ಸಂಹಿತಾಪಾಠಃ ॥

ಬೃಹದ್ವಯೋ ಬೃಹತೇ ತುಭ್ಯಮಗ್ನೇ ಧಿಯಾಜುರೋ ಮಿಥುನಾಸಃ ಸಚಂತ।
ದೇವೋದೇವಃ ಸುಹವೋ ಭೂತು ಮಹ್ಯಂ ಮಾ ನೋ ಮಾತಾ ಪೃಥಿವೀ
ದುರ್ಮತೌ ಧಾತ್ ॥ ೧೫ ॥

॥ ಪದಪಾಠಃ ॥

ಬೃಹತ್ । ವಯಃ । ಬೃಹತೇ । ತುಭ್ಯಂ । ಅಗ್ನೇ । ಧಿಯಾऽಜುರಃ । ಮಿಥುನಾಸಃ । ಸಚಂತ ।
ದೇವಃऽದೇವಃ । ಸುऽಹವಃ । ಭೂತು । ಮಹ್ಯಂ । ಮಾ । ನಃ । ಮಾತಾ । ಪೃಥಿವೀ । ದುಃऽಮತೌ ।
ಧಾತ್ ॥ ೧೫ ॥

॥ ಸಾಯಣಭಾಷ್ಯಂ ॥

ಬೃಹತ್ಪ್ರಭೂತಂ ವಯೋಽನ್ನಂ ಹೇ ಅಗ್ನೇ ಬೃಹತೇ ತುಭ್ಯಂ ಧಿಯಾಜುರಃ ಕರ್ಮಣಾ ಜೀರ್ಣಾ ಮಿಥುನಾಸಃ ಪತ್ನೀಭಿಃ ಸಹಿತಾಃ ಸಚಂತ । ಸೇವಂತೇ । ಜಾಯಾಪತೀ ಅಗ್ನಿಮಾದಧೀಯಾತಾಮಿತ್ಯಾದಿ-ಶ್ರುತೇಃ । ಅಧಿಕಾರಾಧ್ಯಾಯೇ ಷಷ್ಠೇ ಸ್ತ್ರಿಯಾ ಅಗ್ನ್ಯಧಿಕಾರಃ ಸ ಚ ಪತ್ಯಾ ಸಹೇತಿ ಹಿ ಪ್ರತಿಪಾದಿತಂ ಪೂ. ಮೀ. ೬. ೧ ೨೪ । ಅವಶಿಷ್ಟಂ ಗತಂ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ಧಿಯಾಜುರಃ—ಕರ್ಮಗಳಿಂದಲೇ ಕೃಶರಾಗಿರತಕ್ಕವರೂ । ಮಿಥುನಾಸಃ—ಪತ್ನಿಯರೊಡಗೂಡಿದವರೂ ಆದ ಯಜಮಾನರು । ಬೃಹತೇ—ಮಹದಾಕಾರನಾದ । ತುಭ್ಯಂ—ನಿನ್ನನ್ನುದ್ದೇಶಿಸಿ ।

**ಬೃಹತ್**—ಪ್ರಭೂತವಾದ । **ವಯಃ**—ಅನ್ನವನ್ನು । **ಸಚಂತೇ**—ಅರ್ಪಿಸಿ (ನಿನ್ನನ್ನು) ಸೇವಿಸುತ್ತಾರೆ । **ದೇವೋ-ದೇವಃ**—ಪ್ರತಿಯೊಂದು ದೇವತೆಯೂ ಸಹ । **ಮಹ್ಯಂ**—ನನಗಾಗಿ । **ಸುಹವೋ ಭೂತು**—ಉತ್ತಮ ರೀತಿಯಲ್ಲಿ ಪ್ರಾರ್ಥಿತನಾಗಿ ಕರೆಯಲ್ಪಡಲಿ । **ಮಾತಾ**—ಜಗನ್ನಿರ್ಮಾತ್ರಿಯಾದ । **ಪೃಥಿವೀ**—ಪೃಥಿವಿಯು । **ನಃ**—ನಮ್ಮನ್ನು । **ದುರ್ಮತೌ**—ದುರ್ಬುದ್ಧಿಯೊಡನೆ । **ಮಾ ಧಾತ್**—ಸೇರಿಸಿ ಇಡದಿರಲಿ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಕರ್ಮಗಳಿಂದಲೇ ಕೃಶರಾಗಿರತಕ್ಕವರೂ, ಪತ್ನಿಯರೊಡಗೂಡಿದವರೂ ಆದ ಯಜಮಾನರು ಮಹದಾಕಾರನಾದ ನಿನ್ನನ್ನುದ್ದೇಶಿಸಿ ಪ್ರಭೂತವಾದ ಅನ್ನವನ್ನರ್ಪಿಸಿ ನಿನ್ನನ್ನು ಸೇವಿಸುತ್ತಾರೆ. ಪ್ರತಿಯೊಂದು ದೇವತೆಯೂ ಸಹ ನನಗಾಗಿ ಉತ್ತಮರೀತಿಯಲ್ಲಿ ಪ್ರಾರ್ಥಿತನಾಗಿ ಕರೆಯಲ್ಪಡಲಿ. ಜಗನ್ನಿರ್ಮಾತ್ರಿಯಾದ ಪೃಥ್ವಿಯು ನಮ್ಮನ್ನು ದುರ್ಬುದ್ಧಿಯೊಡನೆ ಸೇರಿಸಿ ಇಡದಿರಲಿ

## English Translation

Married pairs, worn by devout rites, jointly offer abundant sacrificial food, Agni, to you who are mighty: may each individual divinity be successfully invoked by me: let them not take us into unfavourable thought.

॥ ಸಂಹಿತಾಪಾಠಃ ॥

ಉರೌ ದೇವಾ ಅನಿಬಾಧೇ ಸ್ಯಾಮ ॥ ೧೬ ॥

॥ ಪದಪಾಠಃ ॥

ಉರೌ । ದೇವಾಃ । ಅನಿಽಬಾಧೇ । ಸ್ಯಾಮ ॥ ೧೬ ॥

॥ ಸಾಯಣಭಾಷ್ಯಂ ॥

**ವ್ಯಾಖ್ಯಾತೇ ದ್ವೇ** ॥ (ಈ ಋಕ್ಕಿನ ಮತ್ತು ಮುಂದಿನ ಋಕ್ಕಿನ ಭಾಷ್ಯವನ್ನು ಹಿಂದಿನ ಸೂಕ್ತದ ಕೊನೆಯ ಎರಡು ಋಕ್ಕುಗಳಲ್ಲಿಯೇ ಹೇಳಿದೆ).

॥ ಪ್ರತಿಪದಾರ್ಥ ॥

**ದೇವಾಃ**—ಎಲೈ ದೇವತೆಗಳೇ । **ಉರೌ**—ಅತ್ಯಧಿಕವಾದುದೂ । **ಅನಿಬಾಧೇ**—ಪ್ರತಿಬಂಧಕರಹಿತವಾದುದೂ ಆದ ಸುಖದಲ್ಲಿ । **ಸ್ಯಾಮ**—ನಾವಿರುವಂತಾಗಲಿ.

॥ ಭಾವಾರ್ಥ ॥

ಎಲೈ ದೇವತೆಗಳೇ, ಅತ್ಯಧಿಕವಾದುದೂ, ಪ್ರತಿಬಂಧಕರಹಿತವಾದುದೂ ಆದ ಸುಖದಲ್ಲಿ ನಾವಿರುವಂತಾಗಲಿ.

## English Translation

May we ever, gods, enjoy great and uninterrupted felicity.

---

॥ ಸಂಹಿತಾಪಾಠಃ ॥

ಸಮಶ್ವಿನೋರವಸಾ ನೂತನೇನ ಮಯೋಭುವಾ ಸುಪ್ರಣೀತೀ ಗಮೇಮ ।
ಆ ನೋ ರಯಿಂ ವಹತಮೋತ ವೀರಾನಾ ವಿಶ್ವಾನ್ಯಮೃತಾ ಸೌಭಗಾನಿ ॥೧೭॥

॥ ಪದಪಾಠಃ ॥

ಸಂ । ಅಶ್ವಿನೋಃ । ಅವಸಾ । ನೂತನೇನ । ಮಯಃऽಭುವಾ । ಸುऽಪ್ರನೀತೀ । ಗಮೇಮ ।
ಆ । ನಃ । ರಯಿಂ । ವಹತಂ । ಆ । ಉತ । ವೀರಾನ್ । ಆ । ವಿಶ್ವಾನಿ । ಅಮೃತಾ । ಸೌಭಗಾನಿ ॥೧೭॥

॥ ಸಾಯಣಭಾಷ್ಯಂ ॥

(ಇದರ ಭಾಷ್ಯವು ಹಿಂದಿನ ಸೂಕ್ತದ ಕೊನೆಯ ಋಕ್ಕಿನಲ್ಲಿದೆ)

॥ ಪ್ರತಿಪದಾರ್ಥ ॥

(ವಯಂ—ನಾವು) । **ಅಶ್ವಿನೋಃ**—ಅಶ್ವಿನೀದೇವತೆಗಳ । **ನೂತನೇನ**—ನೂತನವಾದುದೂ (ಹಿಂದೆಲ್ಲೂ ಇಲ್ಲದುದೂ) । **ಮಯೋಭುವಾ**—ಸುಖಜನಕವಾದುದೂ । **ಸುಪ್ರಣೀತೀ**—ಉತ್ತಮವಾದ ಮಾರ್ಗದರ್ಶಕವಾದುದೂ ಆದ । **ಅವಸಾ**—ರಕ್ಷಣೆಯೊಡನೆ ಕೂಡಿ । **ಸಂಗಮೇಮ**—ಹೊಂದಿಕೊಂಡಿರುವಂತಾಗಲಿ । **ಅಮೃತಾ**—ಮರಣಧರ್ಮರಹಿತರಾದ ಎಲೈ ಅಶ್ವಿನಿಗಳೇ । **ನಃ**—ನಮಗೆ । **ರಯಿಂ**—ಧನವನ್ನು । **ಆ ವಹತಂ**—ಒದಗಿಸಿರಿ । **ಆ ಉತ**—ಅಲ್ಲದೇ । **ವೀರಾನ್**—ವೀರಪುತ್ರರನ್ನು । **ಆ (ವಹತಂ)**—ಒದಗಿಸಿರಿ । **ವಿಶ್ವಾನಿ**—ಸಮಸ್ತವಾದ । **ಸೌಭಗಾನಿ**—ಕಲ್ಯಾಣಗಳನ್ನೂ । **ಆ (ವಹತಂ)**—ಒದಗಿಸಿರಿ.

॥ ಭಾವಾರ್ಥ ॥

ಹಿಂದೆ ಯಾರೂ ಅನುಭವಿಸದೆ ನೂತನವಾಗಿರುವುದೂ, ಸುಖಜನಕವಾದುದೂ, ಉತ್ತಮವಾದ ಮಾರ್ಗದರ್ಶಕವಾದುದೂ ಆದ ರಕ್ಷಣೆಯೊಡಗೂಡಿ ಸರ್ವದಾ ನಾವು ಇರುವಂತಾಗಲಿ. ಮರಣಧರ್ಮರಹಿತರಾದ ಎಲೈ ಅಶ್ವಿನೀದೇವತೆಗಳೇ, ನಮಗೆ ಧನವನ್ನೂ, ವೀರಪುತ್ರರನ್ನೂ ಸಮಸ್ತವಾದ ಕಲ್ಯಾಣವನ್ನೂ ಒದಗಿಸಿರಿ.

## English Translation

May we ever be participant of the unprecedented, joy-conferring, and well-guiding protection of the Aswins: bring to us, immortal (Aswins), riches, male progeny, and all good things.

## ನಲವತ್ತನಾಲ್ಕನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ತಂ ಪ್ರತ್ನಥೇತಿ ಪಂಚದಶರ್ಚಂ ದ್ವಾದಶಂ ಸೂಕ್ತಂ । ಅವತ್ಸಾರೋ. ನಾಮ ಋಷಿಃ ಸ ಚ ಕಶ್ಯಪಗೋತ್ರಃ । ಯಾಸ್ವೃಕ್ಷು ಸದಾಪೃಣಬಾಹುವೃಕ್ತಾದಯಃ ಶ್ರುತಾಸ್ತಾಸು ತೇಽಪಿ ಸಮುಚ್ಚೀಯಂತೇ । ಚತುರ್ದಶೀಪಂಚದಶ್ಯೌ ತ್ರಿಷ್ಟುಭೌ ಶಿಷ್ಟಾಸ್ತ್ರಿಷ್ಟುಬಂತಪರಿಭಾಷಯಾ ಜಗತ್ಯಃ । ವಿಶ್ವೇ ದೇವಾ ದೇವತಾ । ಅನುಕ್ರಾಂತಂ ಚ । ತಂ ಪ್ರತ್ನಥಾ ಪಂಚೋನಾ ಕಾಶ್ಯಪೋಽವತ್ಸಾರೋಽನ್ಯೇ ಚ ಋಷಯೋಽತ್ರ ದೃಷ್ಟಲಿಂಗಾ ದ್ವಿತ್ರಿಷ್ಟುಬಂತಮಿತಿ ॥ ವಾಜಪೇಯೇಽತಿರಿಕ್ತೋಕ್ಥ ಆದಿತಸ್ತ್ರಯೋದಶರ್ಚಃ ಶಂಸನೀಯಾಃ । ಸೂತ್ರಿತಂ ಚ । ತಂ ಪ್ರತ್ನಥೇತಿ ತ್ರಯೋದಶಾನಾಮೇಕಾಂ ಶಿಷ್ಟ್ವಾಹೂಯ ದೂರೋಹಣಂ ರೋಹೇತ್ । ಆ ೯ ೯. । ಇತಿ ॥**

ಅನುವಾದವು – **ತಂ ಪ್ರತ್ನಥಾ** ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಹನ್ನೆರಡನೆಯ ಸೂಕ್ತವು. ಇದರಲ್ಲಿ ಹದಿನೈದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಕಶ್ಯಪಗೋತ್ರೋತ್ಪನ್ನನಾದ ಅವತ್ಸಾರ ಎಂಬ ಹೆಸರಿನವನು ಋಷಿಯು, ಈ ಸೂಕ್ತದ ಯಾವ ಯಾವ ಋಕ್ಕುಗಳಲ್ಲಿ ಸದಾಪೃಣ, ಬಾಹುವೃಕ್ತ ಮೊದಲಾದವರ ಋಷಿಗಳ ಹೆಸರುಗಳು ಪಠಿತವಾಗಿವೆಯೋ ಆಯಾ ಋಕ್ಕುಗಳಿಗೆ ಅವರುಗಳೇ ಋಷಿಗಳು, ವಿಶ್ವೇದೇವತೆಗಳು ದೇವತೆಯು; ಈ ಸೂಕ್ತದ ಹದಿನಾಲ್ಕು ಮತ್ತು ಹದಿನೈದನೆಯ ಋಕ್ಕುಗಳು ತ್ರಿಷ್ಟುಪ್ ಛಂದಸ್ಸುವು. ಉಳಿದ ಋಕ್ಕುಗಳು ಜಗತೀ ಛಂದಸ್ಸುವು. ಅನುಕ್ರಮಣಿಕೆಯಲ್ಲಿ—**ತಂ ಪ್ರತ್ನಥಾ ಪಂಚೋನಾ ಕಾಶ್ಯಪೋಽವತ್ಸಾರೋಽನ್ಯೇ ಚ ಋಷಯೋಽತ್ರ ದೃಷ್ಟಲಿಂಗಾ ದ್ವಿತ್ರಿಷ್ಟುಬಂತಂ** ಎಂದು ಹೇಳಿರುವುದು. ವಾಜಪೇಯವೆಂಬ ಯಾಗದಲ್ಲಿ ಅತಿರಿಕ್ತೋಕ್ಥಮಂತ್ರಪಠನದಲ್ಲಿ ಈ ಸೂಕ್ತದ ಮೊದಲಿನ ಹದಿಮೂರು ಋಕ್ಕುಗಳನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ— **ತಂ ಪ್ರತ್ನಥೇತಿ ತ್ರಯೋದಶಾನಾಮೇಕಾಂ ಶಿಷ್ಟ್ವಾಹೂಯ ದೂರೋಹಣಂ ರೋಹೇತ್** ಎಂಬ ಸೂತ್ರದಿಂದ (ಆ ೯-೯) ವಿವೃತವಾಗಿರುವುದು.

## ಸೂಕ್ತ—೪೪

॥ ಮಂಡಲ—೫ ॥ ಅನುವಾಕ—೩ ॥ ಸೂಕ್ತ—೪೪ ॥
॥ ಅಷ್ಟಕ—೪ ॥ ಅಧ್ಯಾಯ—೨ ॥ ವರ್ಗ—೨೩, ೨೪, ೨೫ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ॥
ಋಷಿಃ— ಅವತ್ಸಾರಃ, ಕಾಶ್ಯಪಃ ಅನ್ಯೇ ಚ ಋಷಯೋ ದೃಷ್ಟಲಿಂಗಾಃ ॥
ದೇವತಾ—ವಿಶ್ವೇದೇವಾಃ ॥
ಛಂದಃ—೧-೧೩, ಜಗತೀ । ೧೪, ೧೫ ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ತಂ ಪ್ರತ್ನಥಾ ಪೂರ್ವಥಾ ವಿಶ್ವಥೇಮಥಾ ಜ್ಯೇಷ್ಠತಾತಿಂ ಬರ್ಹಿಷದಂ ಸ್ವರ್ವಿದಂ ।
ಪ್ರತೀಚೀನಂ ವೃಜನಂ ದೋಹಸೇ ಗಿರಾಶುಂ ಜಯಂತಮನು ಯಾಸು ವರ್ಧಸೇ ॥ ೧ ॥

॥ ಪದಪಾಠಃ ॥

ತಂ । ಪ್ರತ್ನಽಥಾ । ಪೂರ್ವಽಥಾ । ವಿಶ್ವಽಥಾ । ಇಮಽಥಾ । ಜ್ಯೇಷ್ಠಽತಾತಿಂ । ಬರ್ಹಿಃಽಸದಂ । ಸ್ವಃಽವಿದಂ ।
ಪ್ರತೀಚೀನಂ । ವೃಜನಂ । ದೋಹಸೇ । ಗಿರಾ । ಆಶುಂ । ಜಯಂತಂ । ಅನು । ಯಾಸು । ವರ್ಧಸೇ ॥

॥ ಸಾಯಣಭಾಷ್ಯಂ ॥

ಇಯಮುತ್ತರಾ ಚ ದ್ವೇ ಐಂದ್ರ್ಯಾವಿತ್ಯಾಹುಃ । ತತ್ರೋಪಪತ್ತಿಮೇವಾಹ । ತಂ ಪ್ರತ್ನಥೇತ್ಯೇಷಾ ಶುಕ್ರಾಮಂಥಿಗ್ರಹಣೇ ವಿನಿಯುಕ್ತಾ । ಐಂದ್ರ್ಯಾ ಚ ಶುಕ್ರಾಮಂಥಿನೌ । ಯದ್ವೈಂದ್ರಂ ಶಂಸತಿ ತೇನ ಶುಕ್ರಾಮಂಥಿನಾ ಉಕ್ಥವಂತೌ । ಐ ಬ್ರಾ. ೩. ೧. । ಇತಿ ಹಿ ಬ್ರಾಹ್ಮಣಂ । ಅಧ್ವರ್ಯುರ್ಸಂಪ್ರೈಷೋಽಪಿ ಭವತಿ । ಪ್ರಾತಃಪ್ರಾತಃ ಸವಸ್ಯ ಶುಕ್ರವತೋ ಮಧುಶ್ಚುತ ಇಂದ್ರಾಯ ಸೋಮಾನ್ಪ್ರಸ್ಥಿತಾನ್ಪ್ರೇಷ್ಯ । ಶತ. ಬ್ರಾ. ೪. ೨. ೧. ೨೩. । ಇತಿ । ಪ್ರಶಾಸ್ತೃಪ್ರೈಷಶ್ಚ ಭವತಿ । ಹೋತಾ ಯಕ್ಷದಿಂದ್ರಂ ಪ್ರಾತಃ ಪ್ರಾತಃ ಸಾವಸ್ಯ । ಆ. ೫. ೫. । ಇತ್ಯಾದಿ । ಪ್ರಸ್ಥಿತಾ ಇಂದ್ರಾಯ ಸೋಮಾ ಇತಿ ಯಾಜ್ಯಾ ಚೈಂದ್ರೀ ।

**ಇದಂ ತೇ ಸೋಮ್ಯಂ ಮಧು । ಅ. ೫. ೫. । ಇತಿ । ತಸ್ಮಾದೈಂದ್ರ್ಯಾ ॥ ತಮಿಂದ್ರಂ ಪ್ರತ್ನಥಾ ಪುರಾತನಾ ಯಜಮಾನಾ ಇವ ಪೂರ್ವಥಾಸ್ಮದೀಯಾಃ ಪೂರ್ವೇ ಯಥಾ ವಿಶ್ವಥಾ ವಿಶ್ವೇ ಸರ್ವೇ ಪ್ರಾಣಿನೋ ಯಥೇಮಥೇಮ ಇದಾನೀಂ ವರ್ತಮಾನಾ ಯಜಮಾನಾಃ । ತೇ ಯಥೇಂದ್ರಸ್ಯ ಸ್ತುತ್ಯಾ ಫಲಮಲಭಂತ ತದ್ವದಯಮಪಿ ಹೇ ಅಂತರಾತ್ಮನ್ ತ್ವಮಪಿ ಜ್ಯೇಷ್ಠತಾತಿಂ ಜ್ಯೇಷ್ಠಂ ಬರ್ಹಿಷದಂ ಬರ್ಹಿಷಿ ಸೀದಂತಂ ಸ್ವರ್ವಿದಂ ಸರ್ವಜ್ಞಂ ಸರ್ವಸ್ಯ ಲಂಭಯಿತಾರಂ ವಾ ಪ್ರತೀಚೀನಂ ಪ್ರತ್ಯಸ್ಮದಭಿಮುಖಮಂಚಂತಂ ವೃಜನಂ । ಬಲನಾಮೈತದ್ಬಲವತಿ ವರ್ತತೇ । ಬಲವಂತಮಾಶುಂ ಶೀಘ್ರಗಾಮಿನಂ ವ್ಯಾಪ್ತಂ ವಾ ಜಯಂತಂ ಸರ್ವಮಭಿಭವಂತಮಿಂದ್ರಂ ಗಿರಾ ಸ್ತುತ್ಯಾ ಸಾಧನೇನ ದೋಹಸೇ । ಧುಕ್ಷ್ವ ಸರ್ವದಾ ಸರ್ವಾನ್ ಕಾಮಾನ್ । ಇತ್ಯಂತರಾತ್ಮನಃ ಪ್ರೈಷಃ । ಯಾಸು ಸ್ತುತಿಷು ವರ್ಧಸೇ ಪ್ರವೃದ್ಧೋ ಭವಸಿ ವರ್ಧಯಸಿ ವೇಂದ್ರಂ ಯಯಾ ಸ್ತುತ್ಯೇತಿ । ಯಾಸ್ವಿತಿ ವ್ಯತ್ಯಯೇನ ಬಹುವಚನಂ ॥**

॥ ಪ್ರತಿಪದಾರ್ಥ ॥

**ಪ್ರತ್ನಥಾ**— ಪುರಾತನರಾದ ಯಜಮಾನರೂ । **ಪೂರ್ವಥಾ**— ನಮ್ಮ ಹಿಂದಿನ ಪಿತೃಪಿತಾಮಹಾದಿಗಳೂ । **ವಿಶ್ವಥಾ**— ಸಕಲ ಯಜಮಾನರೂ । **ಇಮಥಾ**—ಈಗಿರುವ ಮಹಾತ್ಮರೂ । **ತಂ**—ಆ ಇಂದ್ರನನ್ನೇ (ಸ್ತುತಿಸಿ ತಮ್ಮ ಇಷ್ಟಾರ್ಥಗಳನ್ನು ಪಡೆದರು. (ಎಲೈ ಅಂತರಾತ್ಮನೇ ನೀನೂ ಸಹ) । **ಯಾಸು**—ಯಾವ ಸ್ತುತಿಗಳಿಂದ । **ಅನು ವರ್ಧಸೇ**— ಇಂದ್ರನನ್ನು ಪ್ರವೃದ್ಧನನ್ನಾಗಿ ಮಾಡಿ ನೀನೂ ತತ್ಫಲವಾದ ವೃದ್ಧಿಯನ್ನು ಹೊಂದುವೆಯೋ ಅಂತಹ । **ಗಿರಾ**—ಸ್ತುತಿರೂಪವಾದ ಸಾಧನದಿಂದ । **ಜ್ಯೇಷ್ಠತಾತಿಂ**—ಎಲ್ಲರಿಗಿಂತಲೂ ಅತ್ಯಂತ ಜ್ಯೇಷ್ಠನೂ । **ಬರ್ಹಿಷದಂ**— ದರ್ಭಾಸನಸ್ಥನೂ । **ಸ್ವರ್ವಿದಂ**—ಸರ್ವಜ್ಞನೂ । **ಪ್ರತೀಚೀನಂ**- ನಮಗಭಿಮುಖನಾಗಿರುವವನೂ । **ವೃಜನಂ**—ಬಲಶಾಲಿಯೂ । **ಆಶುಂ**— ಶೀಘ್ರಗಾಮಿಯೂ । **ಜಯಂತಂ**—ಜಯಶಾಲಿಯೂ ಆದ ಇಂದ್ರನನ್ನೇ (ಆರಾಧಿಸಿ) । **ದೋಹಸೇ**—(ಅವನಿಂದ) ನಿನ್ನ ಇಷ್ಟಾರ್ಥಗಳೆಲ್ಲಾ ವರ್ಷಿತವಾಗುವಂತೆ ಮಾಡು.

॥ ಭಾವಾರ್ಥ ॥

ಪುರಾತನರಾದ ಯಜಮಾನರೂ, ನಮ್ಮ ಹಿಂದಿನ ಪಿತೃಪಿತಾಮಹಾದಿಗಳೂ, ಸಕಲ ಯಜಮಾನರೂ, ಈಗಿರುವ ಮಹಾತ್ಮರೂ, ಆ ಇಂದ್ರನನ್ನೇ ಸ್ತುತಿಸಿ ತಮ್ಮ ಇಷ್ಟಾರ್ಥಗಳನ್ನು ಪಡೆದರು. ಎಲೈ ಅಂತರಾತ್ಮನೇ, ನೀನೂ ಸಹ ಯಾವ ಸ್ತುತಿಗಳಿಂದ ಇಂದ್ರನನ್ನು ಪ್ರವೃದ್ಧನನ್ನಾಗಿ ಮಾಡಿ ನೀನೂ ತತ್ಫಲವಾದ ವೃದ್ಧಿಯನ್ನು ಹೊಂದುವೆಯೋ ಅಂತಹ ಸ್ತುತಿರೂಪವಾದ ಸಾಧನದಿಂದ ಎಲ್ಲರಿಗಿಂತಲೂ ಅತ್ಯಂತ ಜ್ಯೇಷ್ಠನೂ, ದರ್ಭಾಸನಸ್ಥನೂ, ಸರ್ವಜ್ಞನೂ, ನಮಗಭಿಮುಖನಾಗಿರುವವನೂ, ಬಲಶಾಲಿಯೂ, ಶೀಘ್ರಗಾಮಿಯೂ, ಜಯಶಾಲಿಯೂ ಆದ ಇಂದ್ರನನ್ನೇ ಆರಾಧಿಸಿ ಅವನಿಂದ ನಿನ್ನ ಇಷ್ಟಾರ್ಥಗಳೆಲ್ಲಾ ವರ್ಷಿತವಾಗುವಂತೆ ಮಾಡು.

## English Translation

In like manner as the ancient (sages), those our predecessors, as all sages, and those of the present period, (have obtained their wishes by his praise), so do you by praise extract (my desires) from him who is the oldest

and best (of the gods), who is seated on the sacred grass, who is cognizant of heaven, coming to our presence, vigorous, swift, victorious, for by such praises you exalt him.

॥ ವಿಶೇಷವಿಷಯಗಳು ॥

ಈ ಸೂಕ್ತ ಮತ್ತು ಮುಂದಿನ ಸೂಕ್ತ ಇಂದ್ರದೇವತಾಕವೆಂದು ಹೇಳಲ್ಪಡುವುದು **ತಂ ಪ್ರತ್ನಥಾ** ಎಂಬ ಸೂಕ್ತವನ್ನು ಶುಕ್ರಾಮಂಥಿಗ್ರಹಣ ಕಾಲದಲ್ಲಿ ಪೂರ್ವಭಾವಿಯಾಗಿ ಪಠಿಸುವುದಕ್ಕಾಗಿ ಉಪಯೋಗಿಸುವರು **ಯದ್ವೈಂದ್ರಂ ಶಂಸತಿ ತೇನ ಶುಕ್ರಾಮಂಥಿನಾ ಉಕ್ಥವಂತೌ** (ಐ. ಬ್ರಾ. ೩-೧) ಇಂದ್ರದೇವತಾಕವಾದ ಈ ಸೂಕ್ತವನ್ನು ಪಠಿಸಿದರೆ ಶುಕ್ರಾಮಂಥಿಗ್ರಹಕ್ಕಾಗಿ ಪಠಿಸಬೇಕಾದ ಮಂತ್ರಗಳನ್ನು ಪಠಿಸಿದಂತಾಗುವುದು ಎಂದು ಐತರೇಯ ಬ್ರಾಹ್ಮಣ ವಾಕ್ಯವಿದೆ

ಇಲ್ಲಿ ಸ್ವಲ್ಪ ವಿವರಣೆಯು ಅವಶ್ಯಕವು ಯಜ್ಞದಲ್ಲಿ ಯಜಮಾನನ ಅಭ್ಯುದಯಾರ್ಥವಾಗಿ ಪ್ರಉಗಶಸ್ತ್ರ ಮಂತ್ರಗಳನ್ನು ಪಠಿಸುವ ರೂಢಿ ಇರುವುದು. ಈ ಶಸ್ತ್ರಮಂತ್ರಗಳಿಗೆ ಸಂಬಂಧಪಟ್ಟಂತೆ ಒಂಭತ್ತು ಗ್ರಹಗಳ ಮಂತ್ರಗಳನ್ನು ಪಠಿಸುವರು (ಗ್ರಹವೆಂದರೆ ಸೋಮರಸವನ್ನು ಪಾನಮಾಡುವ ಪಾತ್ರೆ) ವಾಯುಗ್ರಹ, ಇಂದ್ರವಾಯು ಗ್ರಹ, ಮೈತ್ರಾವರುಣಗ್ರಹ, ಆಶ್ವಿನಗ್ರಹ, ಶುಕ್ರಾಮಂಥಿಗ್ರಹ, ವೈಶ್ವದೇವಗ್ರಹ, ಸರಸ್ವತಿ ಎಂಬ ದೇವತೆಗಳನುದ್ದೇಶಿಸಿ ಉಪಾಂಶು, ಅಂತರ್ಯಾಮ, ವಾಯುವ, ಐಂದ್ರವಾಯುವ, ಮೈತ್ರಾವರುಣ, ಆಶ್ವಿನ, ಶುಕ್ರ, ಆಗ್ರಯಣ ಎಂಬ ಒಂಭತ್ತು ಗ್ರಹಗಳಿರುವವು. ಇವುಗಳಲ್ಲಿ ಶುಕ್ರಾಮಂಥಿಗ್ರಹದ ವಿಷಯದಲ್ಲಿ ಪ್ರಸಕ್ತವಾದ **ತಂ ಪ್ರತ್ನಥಾ** ಎಂಬ ಸೂಕ್ತಿನ ವಿನಿಯೋಗವಿರುವುದು. ಮತ್ತು ಈ ಸೂಕ್ತ ಅಧ್ವರ್ಯುವು ಹೋತೃವನ್ನುದ್ದೇಶಿಸಿ ಪಠಿಸುವ ಪ್ರೈಷಮಂತ್ರವೂ ಆಗಿರುವುದು. ಈ ವಿಷಯಗಳು ಶ್ರೌತಪ್ರಯೋಗಕ್ಕೆ ಸಂಬಂಧಪಟ್ಟಿರುವುದರಿಂದ ಮುಂದೆ ಪ್ರಉಗಶಸ್ತ್ರ ಮಂತ್ರಗಳನ್ನು ವಿವರಿಸುವಾಗ ಇದರ ವಿಷಯವಾಗಿ ಹೆಚ್ಚಾದ ಸಂಗತಿಗಳನ್ನು ತಿಳಿಸುವೆವು.

ಇದಲ್ಲದೆ ಶತಪಥ ಬ್ರಾಹ್ಮಣದಲ್ಲಿ ಈ ಸೂಕ್ತಿನ ವಿಷಯವಾಗಿ **ಪ್ರಾತಃ ಪ್ರಾತಃಸವಸ್ಯ ಶುಕ್ರವತೋ ಮಧುಶ್ಚುತ ಇಂದ್ರಾಯ ಸೋಮಾನ್ಪ್ರಸ್ಥಿತಾನ್ ಪ್ರೇಷ್ಯ** (ಶ. ಬ್ರಾ. ೪-೨-೧-೨೩) ಎಂದು ಪ್ರೈಷಮಂತ್ರದ ನಿರ್ದೇಶವೂ ಇರುವುದು. ಮತ್ತು ಈ ಸೂಕ್ತವನ್ನು ಪ್ರಶಾಸ್ತೃಪ್ರೈಷಮಂತ್ರವನ್ನಾಗಿಯೂ ಪಠಿಸಬೇಕೆಂದು ಆಶ್ವಲಾಯನ ಶ್ರೌತ್ರಸೂತ್ರದ-**ಹೋತಾಯಕ್ಷದಿಂದ್ರಂ ಪ್ರಾತಃ ಪ್ರಾತಸ್ಸಾವಸ್ಯ** (ಆ. ೫-೫) ಎಂಬ ಸೂತ್ರದಿಂದಲೂ, ಇಂದ್ರನನ್ನುದ್ದೇಶಿಸಿ ಈ ಸೂಕ್ತವನ್ನು ಪ್ರಸ್ಥಿತ ಯಾಜ್ಯಾ ಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ-**ಇದಂ ತೇ ಸೋಮ್ಯಂ ಮಧು** ಎಂಬ ಸೂತ್ರದಿಂದಲೂ (ಆ ೫-೫) ವಿವೃತವಾಗಿರುವುದು.

ಈ ಸೂಕ್ತಿಗೆ ಯಾಸ್ಕರು ನಿರ್ವಚನವನ್ನು ಹೇಳಿರುವರು—

**ಥಾ ಇತಿ ಚ । ತಂ ಪ್ರತ್ನಥಾ ಪೂರ್ವಥಾ ವಿಶ್ವಥೇಮಥಾ । ಪ್ರತ್ನ ಇವ ಪೂರ್ವ ಇವ ವಿಶ್ವ ಇವೇಮ ಇವೇತಿ ಅಯಮೇತರತರೋಽಮುಷ್ಮಾತ್ । ಅಸಾವಸ್ತತರೋಽಸ್ಮಾತ್ । ಅಮುಥಾ ಯಥಾಸಾವಿತಿ ವ್ಯಾಖ್ಯಾತಂ ॥**

(ನಿ. ೩-೧೬)

ಇಲ್ಲಿ **ಥಾ** ಎಂಬ ಶಬ್ದದ ಅಥವಾ ಉಪಸರ್ಗದ ಅರ್ಥವನ್ನೂ ವಿವರಿಸುವುದಕ್ಕಾಗಿ ಯಾಸ್ಕರು ಈ ಋಕ್ಕನ್ನೇ ಉದಾಹರಣೆಯಾಗಿ ತೆಗೆದುಕೊಂಡು ಈ ಋಕ್ಕಿನಲ್ಲಿರುವ **ಪ್ರತ್ನಥಾ, ಪೂರ್ವಥಾ, ವಿಶ್ವಥಾ, ಇಮಥಾ** ಎಂಬ ಶಬ್ದಗಳಲ್ಲಿರುವ **ಥಾ** ಎಂಬ ಉಪಸರ್ಗವು ಏನನ್ನು ತಿಳಿಸುತ್ತದೆ ಎಂಬ ವಿಷಯವನ್ನು ವಿವರಿಸಿದ್ದಾರೆ. **ಅಮುಥಾ** ಎಂದರೆ **ಯಥಾಸೌ** ಇದರಂತೆ ಎಂದು ಅರ್ಥವನ್ನು ಹಿಂದೆಯೇ ಹೇಳಿದೆಯಷ್ಟೆ. ಈಗಲೂ **ಥಾ** ಎಂಬ ಉಪಸರ್ಗಕ್ಕೆ **ಅಂತೆ** ಎಂದರ್ಥವನ್ನು ಹೇಳಬೇಕು. **ಪ್ರತ್ನಥಾ** ಎಂಬ ಶಬ್ದದಲ್ಲಿ **ಪ್ರತ್ನ** ವೆಂದರೆ ಪುರಾತನ, ಆದ್ದರಿಂದ **ಪ್ರತ್ನಥಾ** ಎಂದರೆ ಪುರಾತನರಂತೆ ಅಥವಾ ಹಿಂದಿನಂತೆ ಎಂದರ್ಥವು. ಇದರಂತೆ **ಪೂರ್ವಥಾ**-ಪೂರ್ವದಂತೆ, **ವಿಶ್ವಥಾ**-ಎಲ್ಲದರಂತೆ, **ಇಮಥಾ**-ಈಗಿನಂತೆ ಎಂದು ಈ ಶಬ್ದಗಳ ಅರ್ಥವು ಈಗ **ಅಯಂ** ಎಂಬ ಶಬ್ದಕ್ಕೆ **ಅಯಂ ಏತತರಃ**-ಇನ್ನೊಂದು ವಸ್ತುವಿಗಿಂತ ಸಮೀಪದಲ್ಲಿರುವುದು ಎಂದರೆ ಇದು, ಈ ವಸ್ತುವು ಎಂದರ್ಥವು; ಆದ್ದರಿಂದಲೇ ನಾವು ಸಮೀಪದಲ್ಲಿರುವ ವಸ್ತುವನ್ನು ನಿರ್ದೇಶಿಸುವಾಗ **ಅಯಂ**-ಇದು, ಈ (ವಸ್ತುವು) ಎಂದು ಹೇಳುವೆವು. ಹೀಗೆಯೇ **ಅಸೌ** ಎಂಬ ಶಬ್ದಕ್ಕೆ **ಅಸೌ ಅಸ್ತತರಃ** ಇದಕ್ಕಿಂತ (ಸಮೀಪದಲ್ಲಿರುವ ವಸ್ತುವಿಗಿಂತ) ದೂರದಲ್ಲಿರುವುದು ಎಂದರ್ಥವು. ಆದ್ದರಿಂದ ದೂರದಲ್ಲಿರುವ ವಸ್ತುವನ್ನು ನಾವು **ಅಸೌ**-ಅದು, ಆ (ವಸ್ತುವು) ಎಂದು ನಿರ್ದೇಶಿಸಿ ಹೇಳುವೆವು.

॥ ಸಂಹಿತಾಪಾಠಃ ॥

ಶ್ರಿಯೇ ಸುದೃಶೀರುಪರಸ್ಯ ಯಾಃ ಸ್ವರ್ವಿರೋಚಮಾನಃ ಕಕುಭಾಮ-
ಚೋದತೇ ।
ಸುಗೋಪಾ ಅಸಿ ನ ದಭಾಯ ಸುಕ್ರತೋ ಪರೋ ಮಾಯಾಭಿರೃತ
ಆಸ ನಾಮ ತೇ ॥ ೨ ॥

॥ ಪದಪಾಠಃ ॥

ಶ್ರಿಯೇ । ಸುಽದೃಶೀಃ । ಉಪರಸ್ಯ । ಯಾಃ । ಸ್ವಃ । ವಿಽರೋಚಮಾನಃ । ಕಕುಭಾಂ । ಅಚೋದತೇ ।
ಸುಽಗೋಪಾಃ । ಅಸಿ । ನ । ದಭಾಯ । ಸುಕ್ರತೋ ಇತಿ ಸುಽಕ್ರತೋ । ಪರಃ । ಮಾಯಾಭಿಃ । ಋತೇ ।
ಆಸ । ನಾಮ । ತೇ ॥ ೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಸ್ವಃ ಸ್ವರ್ಗೇ ವಿರೋಚಮಾನಸ್ತ್ವಮಚೋದತೇಽಪ್ರೇರಯಿತುಃ ॥ ಷಷ್ಠ್ಯರ್ಥೇ ಚತುರ್ಥೀ ॥ ಉಪರಸ್ಯ ಮೇಘಸ್ಯ ಸಂಬಂಧಿನ್ಯಃ ಸುದೃಶೀಃ ಸುರೋಚಮಾನಾ ಯಾ ಅಪಃ ಸಂತಿ ತಾಸಾ-

**ಮುಪಾಂ ಕಕುಭಾಂ ಸರ್ವಾಸಾಂ ದಿಶಾಂ ಮಧ್ಯೇ ಶ್ರಿಯೇ ಪ್ರಾಣಿನಾಂ ಶ್ರಯಣಾಯ ಪ್ರೇರಕೋ ಭವೇತಿ ಶೇಷಃ । ಹೇ ಸುಕ್ರತೋ ಶೋಭನವೃಷ್ಟಿಪ್ರದಾನಾದಿಕರ್ಮಕೇಂದ್ರ ತ್ವಂ ಸುಗೋಪಾಃ ಪ್ರಾಣಿನಾಂ ಸುಷ್ಠು ಗೋಪಾಯಿತಾಸಿ । ಅತೋ ನ ದಭಾಯ ನ ದಂಭನಾಯ ವಧಾಯ ಪ್ರಾಣಿನಾಂ ನಾಸಿ । ನ ಪ್ರಭವಸಿ । ತ್ವಂ ಚ ಮಾಯಾಭಿರಾಸುರೀಭಿಃ ಪರೋ ಮಾಯಾಭ್ಯಃ ಪರಸ್ತಾದ್ವರ್ತಮಾನಃ । ಯಸ್ಮಾತ್ತೇ ತ್ವದೀಯಂ ನಾಮ ನಾಮಕಂ ರೂಪಮೃತೇ ಸತ್ಯಲೋಕ ಆಸ ಆಸ್ತೇ ॥**

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಸ್ವಃ**—ಸ್ವರ್ಗದಲ್ಲಿ । **ವಿರೋಚಮಾನಃ**—ಪ್ರಕಾಶಿಸುವ ನೀನು । **ಉಪರಸ್ಯ**—ಮೇಘ ಸಂಬಂಧಿಯಾದುದೂ । **ಸುದೃಶೀಃ**—ಆಕರ್ಷಕವಾದುದೂ ಆದ । **ಯಾಃ**—ಯಾವ ಉದಕಗಳುಂಟೋ ಅವನ್ನು । **ಕಕುಭಾಂ**—ಸಕಲ ದಿಕ್ಕುಗಳ ಅಂತರಾಳಗಳಲ್ಲೂ । **ಶ್ರಿಯೇ**—ಪ್ರಾಣಿಗಳ ಕಲ್ಯಾಣಾರ್ಥವಾಗಿ । **ಅಚೋದತೇ**—(ಪ್ರವಹಿಸುವಂತೆ) ಪ್ರೇರಿಸಿದೆ । **ಸುಕ್ರತೋ**—ಶ್ರೇಷ್ಠವಾದ ಕರ್ಮವುಳ್ಳ ಇಂದ್ರನೇ । (**ತ್ವಂ**—ನೀನು) । **ಸುಗೋಪಾಃ ಅಸಿ**—(ಪ್ರಾಣಿಗಳಿಗೆಲ್ಲಾ) ಪೂರ್ಣವಾದ ರಕ್ಷಕನಾಗಿದ್ದೀಯೇ । **ದಭಾಯ**-ಅವುಗಳ ನಾಶಕ್ಕೆ (ಸಾಧನವಾಗಿ)। **ನ**—(ಖಂಡಿತ) ಇಲ್ಲ । **ಮಾಯಾಭಿಃ**—ಆಸುರೀ ಮಾಯೆಗಳಿಗಿಂತಲೂ । **ಪರಃ**—ನೀನು ಮೀರಿದವನಾಗಿದ್ದೀಯೆ । **ತೇ**—ನಿನ್ನ । **ನಾಮ**—ದಿವ್ಯನಾಮವು । **ಋತೇ**—ಸತ್ಯಲೋಕದಲ್ಲಿ । **ಆಸ**—ಸ್ಥಾಪಿತವಾಗಿದೆ (ಪ್ರಸಿದ್ಧವಾಗಿದೆ)

॥ ಭಾವಾರ್ಥ ॥

ಎಲೈ ಇಂದ್ರನೇ, ಸ್ವರ್ಗದಲ್ಲಿ ಪ್ರಕಾಶಿಸುವ ನೀನು, ಮೇಘಸಂಬಂಧಿಯಾದುದೂ, ಆಕರ್ಷಕವಾದುದೂ ಆದ ಯಾವ ಉದಕಗಳುಂಟೋ ಅವನ್ನು ಸಕಲ ದಿಕ್ಕುಗಳ ಅಂತರಾಳದಲ್ಲೂ ವ್ಯಾಪಿಸಿ ಪ್ರವಹಿಸುವಂತೆ ಪ್ರೇರಿಸಿ ಸಕಲ ಪ್ರಾಣಿಗಳಿಗೂ ಕಲ್ಯಾಣವನ್ನುಂಟುಮಾಡಿದೆ. ಶ್ರೇಷ್ಠವಾದ ಕರ್ಮವುಳ್ಳ ಇಂದ್ರನೇ, ನೀನು ಪ್ರಾಣಿಗಳಿಗೆಲ್ಲಾ ಪೂರ್ಣವಾದ ರಕ್ಷಕನಾಗಿದ್ದೀಯೆ ಖಂಡಿತ ಅವುಗಳ ನಾಶವನ್ನು ಇಚ್ಛಿಸುವುದಿಲ್ಲ. ನಿನ್ನ ಶಕ್ತಿಯು ಆಸುರೀ ಮಾಯೆಗಳಿಗಿಂತಲೂ ಮೀರಿದುದಾಗಿದೆ. ನಿನ್ನ ದಿವ್ಯನಾಮವು ಸತ್ಯಲೋಕದಲ್ಲೂ ಸ್ಥಾಪಿತವಾಗಿದೆ.

## English Translation

You, (Indra), who are radiant in heaven, spread through the regions, for the good (of mankind) those the beautiful (waters) of the un yielding cloud: doer of good deeds, you are the preserver (of men), not (destined for their detriment: you are superior to all delusions, your name abides in the world of truth.

॥ ಸಂಹಿತಾಪಾಠಃ ॥

ಅತ್ಯಂ ಹವಿಃ ಸಚತೇ ಸಚ್ಚ ಧಾತು ಚಾರಿಷ್ಟಗಾತುಃ ಸ ಹೋತಾ
ಸಹೋಭರಿಃ ।
ಪ್ರಸರ್ಸ್ರಾಣೋ ಅನು ಬರ್ಹಿರ್ವೃಷಾ ಶಿಶುರ್ಮಧ್ಯೇ ಯುವಾಜರೋ
ವಿಸ್ರುಹಾ ಹಿತಃ ॥ ೩ ॥

॥ ಪದಪಾಠಃ ॥

ಅತ್ಯಂ । ಹವಿಃ । ಸಚತೇ । ಸತ್ । ಚ । ಧಾತು । ಚ । ಅರಿಷ್ಟಽಗಾತುಃ । ಸಃ । ಹೋತಾ ।
ಸಹಃಽಭರಿಃ ।
ಪ್ರಽಸರ್ಸ್ರಾಣಃ । ಅನು । ಬರ್ಹಿಃ । ವೃಷಾ । ಶಿಶುಃ । ಮಧ್ಯೇ । ಯುವಾ । ಅಜರಃ । ವಿಽಸ್ರುಹಾ ।
ಹಿತಃ ॥ ೩ ॥

॥ ಸಾಯಣಭಾಷ್ಯಂ ॥

ಇಯಮಾಗ್ನೇಯೀ ಹೋತೃತ್ವಯುವತ್ವಾದಿಲಿಂಗೈಃ । ಅಯಮಗ್ನಿರತ್ಯಂ ಸತತಮತನಾರ್ಹಂ ಹವಿರಾಜ್ಯಾದಿಕಂ ಸಚತೇ । ಸೇವತೇ । ಕೀದೃಶಂ ಹವಿಃ । ಸತ್ । ಸತ್ಫಲಸಾಧನತ್ವಾದ್ಧವಿರಪಿ ಸತ್ । ಧಾತು ಚ ಧಾರಕಂ ಸರ್ವಸ್ಯ । ಹೂಯಮಾನಸ್ಯ ಹವಿಷ ಆದಿತ್ಯದ್ವಾರಾ ವೃಷ್ಟಿಸಾಧನತ್ವಾತ್ ತಯಾ ಚ ವೃಷ್ಟ್ಯಾ ಪ್ರಜೋತ್ಪತ್ತೇರ್ಧಾರಕತ್ವಂ । ತಥಾ ಹಿ । ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ । ಆದಿತ್ಯಾಜ್ಜಾಯತೇ ವೃಷ್ಟಿರ್ವೃಷ್ಟೇರನ್ನಂ ತತಃ ಪ್ರಜಾಃ । ಮನು. ೩. ೭೬. । ಇತಿ । ಅರಿಷ್ಟಗಾತುರಹಿಂಸಿತಗಮನಃ । ಸತಿ ತಸ್ಯ ಗಮನೇ ಯಜ್ಞನಿಷ್ಪತ್ತ್ಯಾ ಫಲಸಿದ್ಧೇರರಿಷ್ಟಗಮನತ್ವಂ । ತದೇವಾಹ । ಸ ಖಲು ಹೋತಾ ಹೋಮನಿಷ್ಪಾದಕಃ ಸಹೋಭರಿರ್ಬಲಸ್ಯ ಭರ್ತಾ ಬರ್ಹಿರನು ಪ್ರಸರ್ಸ್ರಾಣಃ ಪ್ರಕರ್ಷೇಣ ಸರನ್ ವೃಷಾ ವರ್ಷಕಃ ಫಲಸ್ಯ ಶಿಶುಃ ಸ ಇವ ರಕ್ಷಣೀಯೋಽಪ್ರೌಢೋ ವಾ ಯುವಾ ಸರ್ವತ್ರ ಮಿಶ್ರಯಿತಾಜರೋ ಜರಾರಹಿತೋ ವಿಸ್ರುಹಾ ವಿಸ್ರುಹಾಣಾಮೋಷಧೀನಾಂ ಮಧ್ಯೇ ಹಿತೋ ನಿಹಿತಃ ಸ್ಥಾಪಿತಃ । ಏವಂಭೂತಃ ಸಚತೇ ॥

॥ ಪ್ರತಿಪದಾರ್ಥ ॥

ಅರಿಷ್ಟಗಾತುಃ—ಅಹಿಂಸಿತವಾದ ಗಮನವುಳ್ಳವನೂ । ಹೋತಾ—ಹೋಮಸಂಪಾದಕನೂ । ಸಹೋಭರಿಃ—ಶಕ್ತಿಧಾರಕನೂ । ವೃಷಾ—ಕಾಮವರ್ಷಕನೂ । ಶಿಶುಃ—ಸದ್ಯೋಜಾತನೂ । ಯುವಾ—ತರುಣನೂ ।

**ಅಜರಃ**—ಕ್ಷಯರಹಿತನೂ । **ವಿಸ್ರುಹಾ**—ಓಷಧಿಗಳ । **ಮಧ್ಯೇ**—ಮಧ್ಯದಲ್ಲಿ । **ಹಿತಃ**—ಸ್ಥಾಪಿತನಾದವನೂ ಆದ । **ಸಃ**—ಅಗ್ನಿಯು । **ಬರ್ಹಿಃ ಅನು**—ದರ್ಭಾಸನದ ಮೇಲೆ । **ಪ್ರಸರ್ಸ್ರಾಣಃ**—ಚಲಿಸುತ್ತಾ । **ಧಾತು**—ಸರ್ವಾಧಾರಕವಾದದ್ದೂ । **ಅತ್ಯಂ ಚ**—ಸತತವಾಗಿ ಅರ್ಪಿತವಾಗತಕ್ಕದ್ದೂ । **ಸತ್ ಚ**—ಸತ್ಫಲಸಾಧಕವಾದದ್ದೂ ಆದ । **ಹವಿಃ**—ಹವಿಸ್ಸನ್ನು । **ಸಚತೇ**—ಸೇವಿಸುತ್ತಾನೆ

॥ ಭಾವಾರ್ಥ ॥

ಅಹಿಂಸಿತವಾದ ಗಮನವುಳ್ಳವನೂ, ಹೋಮಸಂಪಾದಕನೂ, ಶಕ್ತಿಧಾರಕನೂ, ಕಾಮವರ್ಷಕನೂ, ಸದ್ಯೋಜಾತನೂ, ತರುಣನೂ, ಕ್ಷಯರಹಿತನೂ, ಓಷಧಿಗಳ ಮಧ್ಯದಲ್ಲಿ ಸ್ಥಾಪಿತನಾದವನೂ ಆದ ಅಗ್ನಿಯು ದರ್ಭಾಸನದಮೇಲೆ ಚಲಿಸುತ್ತಾ, ಸರ್ವಾಧಾರಕವಾದದ್ದೂ, ಸತತವಾಗಿ ಅರ್ಪಿತವಾಗತಕ್ಕದ್ದೂ, ಸತ್ಫಲಸಾಧಕವಾದದ್ದೂ ಆದ ಹವಿಸ್ಸನ್ನು ಸೇವಿಸುತ್ತಾನೆ

English Translation

He, (Agni), is associated with the perpetual oblation that is the true (source of good), the sustainer of all, he is of unrestricted movement, the offerer (of burnt-offerings), the cherisher of strength · gliding especially over the sacred grass, the showerer (of benefits) ; an infant, a youth, exempt from decay, whose place is among plants.

॥ ಸಂಹಿತಾಪಾಠಃ ॥

ಪ್ರ ವ ಏತೇ ಸುಯುಜೋ ಯಾಮನ್ನಿಷ್ಟಯೇ ನೀಚೀರಮುಷ್ಮೈ ಯಮ್ಯ
ಋತಾವೃಧಃ ।
ಸುಯಂತುಭಿಃ ಸರ್ವಶಾಸೈರಭೀಶುಭಿಃ ಕ್ರಿವಿರ್ನಾಮಾನಿ ಪ್ರವಣೇ ಮುಷಾಯತಿ ॥ ೪ ॥

॥ ಪದಪಾಠಃ ॥

ಪ್ರ । ವಃ । ಏತೇ । ಸುಽಯುಜಃ । ಯಾಮನ್ । ಇಷ್ಟಯೇ । ನೀಚೀಃ । ಅಮುಷ್ಮೈ । ಯಮ್ಯಃ । ಋತಽವೃಧಃ ।
ಸುಯಂತುಽಭಿಃ । ಸರ್ವಽಶಾಸೈಃ । ಅಭೀಶುಽಭಿಃ । ಕ್ರಿವಿಃ । ನಾಮಾನಿ । ಪ್ರವಣೇ । ಮುಷಾಯತಿ ॥ ೪ ॥

॥ ಸಾಯಣಭಾಷ್ಯಂ ॥

**ಏಷಾ ಸೌರೀ ವಾ । ಏತೇ ರಶ್ಮಯಃ ಸುಯುಜಃ ಸುಷ್ಠು ಪರಸ್ಪರಂ ಸಂಯುಕ್ತಾ ಯಾಮನ್ಯಜ್ಞಗಮನ ಇಷ್ಟಯಿ ಏಷಣಾಯ ನೀಚೀಃ । ನೀಚಂ ಗಚ್ಛಂತೀತಿ ಶೇಷಃ । ಅಮುಷ್ಮೈ ಯಜಮಾನಾಯ ಯಮ್ಯೋ ಯಮ್ಯಾ ಗಮನಾರ್ಹಾಃ । ಅಥವಾ ಯಮೋ ನಿಯಮಿತಾದಿತ್ಯಃ । ತಸ್ಯ ಸಂಬಂಧಿನಃ । ಋತಾವೃಧೋ ಯಜ್ಞಸ್ಯ ವರ್ಧಯಿತಾರಶ್ಚ । ಅಯಮಾದಿತ್ಯಃ ಸುಯಂತುಭಿಃ ಸುಗಮನೈಃ ಸರ್ವಶಾಸೈಃ ಸರ್ವಸ್ಯ ಶಾಸಕೈರಭೀಶುಭೀ ರಶ್ಮಿಭಿಃ ಕ್ರಿವಿಃ ಕರ್ತಾ ನಾಮಾನಿ ನಾಮಕಾನ್ಯುದಕಾನಿ ಪ್ರವಣೇ ನಿಮ್ನೇ ಭೂಪ್ರದೇಶೇ ಮುಷಾಯತಿ । ಮುಷ್ಣಾತಿ । ಆದತ್ತ ಇತ್ಯರ್ಥಃ । ಅಥವಾಗ್ನಿನಾವಾಹ್ಯಸ್ಯಾಗ್ನೇರೇತೇಽಶ್ವಾ ಇಷ್ಟಯೇ ಯಜ್ಞಗಮನಾಯ ಯಾಮನಿ ರಥೇ ಸುಯುಜಃ ಪ್ರಗಚ್ಛಂತಿ । ಶಿಷ್ಟಂ ಸಮಾನಂ । ಕ್ರಿವಿಃ ಕ್ರಿವಿಸದೃಶೋಽಗ್ನಿಃ ಪ್ರವಣೇ ನ ಮಾನಿ ಹವೀಂಷ್ಯುಕ್ತಲಕ್ಷಣಾಭಿರ್ಜ್ವಾಲಾಭಿರ್ಮುಷಾಯತಿ । ಆದತ್ತೇ ॥**

॥ ಪ್ರತಿಪದಾರ್ಥ ॥

**ವಃ ಏತೇ**—ನಿನ್ನ ಈ ರಶ್ಮಿಗಳು । **ಸುಯುಜಃ**—ಪರಸ್ಪರವಾಗಿ ಹೊಂದಿಕೊಂಡು । **ಅಮುಷ್ಮೈ**—ಈ ಯಜಮಾನನಿಗೆ । **ಯಮ್ಯಃ**—ನಿಯಮನವುಳ್ಳ ಅಥವಾ ಆದಿತ್ಯಸಂಬಂಧಿಯಾದ । **ಋತಾವೃಧಃ**—ಯಜ್ಞವನ್ನು ಬೆಳೆಸುವುವಾಗಿಯೂ । **ಯಾಮನ್**—ಯಜ್ಞಕ್ಕೆ ಹೋಗುವುದರಲ್ಲಿ । **ಇಷ್ಟಯೇ**—ಇಚ್ಛೆಯುಳ್ಳವುವಾಗಿಯೂ । **ನೀಚೀಃ ಪ್ರ (ಗಚ್ಛಂತಿ)**—ಅಧೋಮುಖವಾಗಿ ಪ್ರಸರಿಸುತ್ತವೆ । **ಸುಯಂತುಭಿಃ**-ಉತ್ತಮವಾದ ಪ್ರಸರಣವುಳ್ಳವೂ । **ಸರ್ವಶಾಸೈಃ**—ಜಗನ್ನಿಯಾಮಕವಾದವೂ ಆದ । **ಅಭೀಶುಭಿಃ**—ಇದೇ ರಶ್ಮಿಗಳಿಂದ । **ಕ್ರಿವಿಃ**—ವ್ಯವಹರಿಸುವ ಆದಿತ್ಯನು ಅಥವಾ ಅಗ್ನಿಯು । **ನಾಮಾನಿ**—ಉದಕಗಳನ್ನು ಅಥವಾ ಹವಿಸ್ಸನ್ನು । **ಪ್ರವಣೇ**—ನಿಮ್ನಪ್ರದೇಶಗಳಲ್ಲಿ । **ಮುಷಾಯತಿ**—ಸೆಳೆದುಕೊಳ್ಳುತ್ತಾನೆ.

॥ ಭಾವಾರ್ಥ ॥

ಸೂರ್ಯನ ಅಥವಾ ಅಗ್ನಿಯ ಈ ರಶ್ಮಿಗಳು ಪರಸ್ಪರವಾಗಿ ಹೊಂದಿಕೊಂಡು ಈ ಯಜಮಾನನಿಗೆ ನಿಯಮನವುಳ್ಳ ಯಜ್ಞವನ್ನು ಬೆಳೆಸುವುವಾಗಿಯೂ, ಯಜ್ಞಕ್ಕೆ ಹೋಗುವುದರಲ್ಲಿ ಇಚ್ಛೆಯುಳ್ಳವುವಾಗಿಯೂ ಅಧೋಮುಖವಾಗಿ ಪ್ರಸರಿಸುತ್ತವೆ. ಉತ್ತಮವಾದ ಪ್ರಸರಣವುಳ್ಳವೂ ಜಗನ್ನಿಯಾಮಕವೂ ಆದ ಇದೇ ರಶ್ಮಿಗಳಿಂದ ವ್ಯವಹರಿಸುವ ಆದಿತ್ಯನು ಅಥವಾ ಅಗ್ನಿಯು ನಿಮ್ನಪ್ರದೇಶಗಳಲ್ಲಿರುವ ಉದಕಗಳನ್ನೆಲ್ಲಾ ಸೆಳೆದುಕೊಳ್ಳುತ್ತಾನೆ.

## English Translation

These well-combined rays (of the sun) are descending with intent to proceed on the path (of the sacrifice), amplifiers of the ceremony for this (its institutor) operating with these swift-moving, all-regulating rays, he (Aditya), steals the waters (that flow) in low places.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಭಾಷ್ಯಕಾರರು ಆದಿತ್ಯನ ಪರವಾಗಿಯೂ ಅಗ್ನಿಯ ಪರವಾಗಿಯೂ ಎರಡು ವಿಧ ಅರ್ಥವನ್ನು ವಿವರಿಸಿದ್ದಾರೆ. ಸೂರ್ಯನ ರಶ್ಮಿಗಳಂತೆಯೇ ಅಗ್ನಿಜ್ವಾಲೆಯ ರಶ್ಮಿಗಳೂ ಎಲ್ಲಾ ಕಡೆಗೂ ಪ್ರಸರಿಸುತ್ತವೆ ಸೂರ್ಯನ

ರಶ್ಮಿಗಳು ಹಳ್ಳ ಮೊದಲಾದ ತಗ್ಗಾದ ಪ್ರದೇಶದಲ್ಲಿರುವ ಉದಕಗಳನ್ನು ಸೆಳೆದುಕೊಳ್ಳುತ್ತವೆ ಎಂದರೆ ನೀರು ಒಣಗಿ ಹೋಗುವಂತೆ ಮಾಡುತ್ತವೆ. ಅಗ್ನಿಯ ರಶ್ಮಿಗಳು ಅಗ್ನಿಜ್ವಾಲೆಯ ಮೂಲಕ, ಯಜ್ಞದಲ್ಲಿ ಅರ್ಪಿಸುವ ಹವಿರಾದಿಗಳನ್ನು ಸೆಳೆದುಕೊಂಡು ಅವುಗಳನ್ನು ದೇವತೆಗಳ ಬಳಿಗೆ ಒಯ್ಯುತ್ತವೆ.

---

॥ ಸಂಹಿತಾಪಾಠಃ ॥

ಸಂಜರ್ಭುರಾಣಸ್ತರುಭಿಃ ಸುತೇಗೃಭಂ ವಯಾಕಿನಂ ಚಿತ್ತಗರ್ಭಾಸು ಸುಸ್ವರುಃ ।
ಧಾರವಾಕೇಷ್ವೃಜುಗಾಥ ಶೋಭಸೇ ವರ್ಧಸ್ವ ಪತ್ನೀರಭಿ ಜೀವೋ ಅಧ್ವರೇ ॥ ೫ ॥

॥ ಪದಪಾಠಃ ॥

ಸಂಽಜರ್ಭುರಾಣಃ । ತರುಽಭಿಃ । ಸುತೇಽಗೃಭಂ । ವಯಾಕಿನಂ । ಚಿತ್ತಽಗರ್ಭಾಸು । ಸುಽಸ್ವರುಃ । ಧಾರಽವಾಕೇಷು । ಋಜುಽಗಾಥ । ಶೋಭಸೇ । ವರ್ಧಸ್ವ । ಪತ್ನೀಃ । ಅಭಿ । ಜೀವಃ । ಅಧ್ವರೇ ॥ ೫ ॥

॥ ಸಾಯಣಭಾಷ್ಯಂ ॥

ಹೇ ಋಜುಗಾಥ ಶೋಭನಸ್ತುತಿಕಾಗ್ನೇ ತರುಭಿಸ್ತರುವಿಕಾರೈರ್ಗ್ರಹೈಃ ಸುತೇಗೃಭಮಭಿಷುತೇನ ರಸೇನ ಗೃಹೀತಂ ವಯಾಕಿನಂ । ಕುತ್ಸಿತಾ ವಯಾಃ ಶಾಖಾ ವಯಾಕಾ ಲತಾಃ । ತದ್ವಂತಂ ಸೋಮಂ ಚಿತ್ತಗರ್ಭಾಸು ಚಿತ್ತಗ್ರಾಹಿಣೀಷು ಸ್ತುತಿಷು ಸ್ತುತಿಭಿಃ ಸಹ ಸಂಜರ್ಭುರಾಣೋ ಗೃಭ್ಣನ್ ಗೃಹ್ಣನ್ ಸುಸ್ವರುಃ ಶೋಭನಗಮನಃ ಶೋಭನಸ್ತುತಿಕೋ ವಾ ತ್ವಂ ಧಾರವಾಕೇಷು । ಧಾರಯಂತಿ ವಾಕಾನ್ ಸ್ತೋತ್ರಾಣೀತಿ ಧಾರವಾಕಾ ಋತ್ವಿಗ್ಯಜಮಾನಾಃ । ತೇಷು ಮಧ್ಯೇ ಶೋಭಸೇ । ಕಿಂಚಾಧ್ವರೇ ಜೀವಃ ಸರ್ವಸ್ಯ ಜೀವಯಿತಾ ಪತ್ನೀಃ ಪಾಲಯಿತ್ರೀರೋಷಧೀರ್ಜ್ವಾಲಾ ವಾ ಅಭಿ ಅಭಿಮುಖಂ ವರ್ಧಸ್ವ । ಅಭಿವರ್ಧಯ ॥

॥ ಪ್ರತಿಪದಾರ್ಥ ॥

**ಋಜುಗಾಥ**—ನಿಷ್ಕಲ್ಮಷವಾದ ಸ್ತುತಿಯಿಂದ ಪೂಜಿತನಾಗುವ ಎಲೈ ಅಗ್ನಿಯೇ । **ತರುಭಿಃ**–ತರುನಿರ್ಮಿತವಾದ ಗ್ರಹ(ಪಾತ್ರೆ)ಗಳಿಂದ (ತುಂಬಿದುದೂ)। **ಸುತೇಗೃಭಂ**- ಅಭಿಷುತವಾದುದೂ ರಸಾತ್ಮಕವಾದುದೂ ಆದ। **ವಯಾಕಿನಂ**–

ಸೋಮವನ್ನು । **ಚಿತ್ತಗರ್ಭಾಸು**—ಚಿತ್ತಾಕರ್ಷಕವಾದ ಸ್ತುತಿಗಳೊಡನೆ । **ಸಂಜರ್ಭುರಾಣಃ**—ಸ್ವೀಕರಿಸುತ್ತಾ । **ಸುಸ್ವರುಃ**—ಉತ್ತಮವಾದ ಪ್ರಸರಣವುಳ್ಳವನಾಗಿ । **ಧಾರವಾಕೇಷು**—ಸ್ತುತಿಪಾರಕರಾದ ಋತ್ವಿಗಾದಿಗಳ ನಡುವೆ । **ಶೋಭಸೇ**—ಪ್ರಕಾಶಿಸುತ್ತಿದ್ದೀಯೆ । **ಅಧ್ವರೇ**—ಯಜ್ಞದಲ್ಲಿ । **ಜೀವಃ**—ಸಕಲಕ್ಕೂ ಜೀವದಾತನಾಗಿ । **ಪತ್ನೀಃ**—ಪಾಲಕಗಳಾದ ಜ್ವಾಲೆಗಳನ್ನು । **ಅಭಿ ವರ್ಧಸ್ವ**—ಪೂರ್ಣವಾಗಿ ವೃದ್ಧಿಯಾಗುವಂತೆ ಮಾಡು

॥ ಭಾವಾರ್ಥ ॥

ನಿಷ್ಕಲ್ಮಷವಾದ ಸ್ತುತಿಯಿಂದ ಪೂಜಿತನಾಗತಕ್ಕ ಎಲೈ ಅಗ್ನಿಯೇ, ತರುನಿರ್ಮಿತವಾದ ಗ್ರಹ(ಪಾತ್ರೆ)ಗಳಿಂದ ತುಂಬಿಸಿದುದೂ, ಅಭಿಷುತವಾದ ರಸಾತ್ಮಕವಾದುದೂ ಆದ ಸೋಮವನ್ನು ನೀನು ಚಿತ್ತಾಕರ್ಷಕರಾದ ಸ್ತುತಿಗಳೊಡನೆ ಸ್ವೀಕರಿಸುತ್ತಾ ಉತ್ತಮವಾದ ಪ್ರಸರಣವುಳ್ಳವನಾಗಿ ಸ್ತುತಿಪಾರಕರಾದ ಋತ್ವಿಗಾದಿಗಳ ನಡುವೆ ಪ್ರಕಾಶಿಸುತ್ತಿದ್ದೀಯೆ. ಯಜ್ಞದಲ್ಲಿ ಸಕಲಕ್ಕೂ ಜೀವದಾತನಾಗಿ ಪಾಲಕಗಳಾದ ಜ್ವಾಲೆಗಳನ್ನು ಪೂರ್ಣವಾಗಿ ವೃದ್ಧಿಯಾಗುವಂತೆ ಮಾಡು

## English Translation

Object of honest eulogium, (Agni), you shine amongst the reciters of your praises when the Soma is received at its effusion by the wooden (cups), and you accepting (the beverage), are animated by the heart-affecting (praises) giver of life, increase in the sacrifice your protecting flames

॥ ಸಂಹಿತಾಪಾಠಃ ॥

ಯಾದೃಗೇವ ದದೃಶೇ ತಾದೃಗುಚ್ಯತೇ ಸಂ ಛಾಯಯಾ ದಧಿರೇ ಸಿಧ್ರ-
ಯಾಪ್ಸ್ವಾ ।
ಮಹೀಮಸ್ಮಭ್ಯಮುರುಷಾಮುರು ಜ್ರಯೋ ಬೃಹತ್ಸುವೀರಮನಪಚ್ಯು-
ತಂ ಸಹಃ ॥ ೬ ॥

॥ ಪದಪಾಠಃ ॥

ಯಾದೃಕ್ । ಏವ । ದದೃಶೇ । ತಾದೃಕ್ । ಉಚ್ಯತೇ । ಸಂ । ಛಾಯಯಾ । ದಧಿರೇ । ಸಿಧ್ರಯಾ । ಅಪ್ಽಸು । ಆ ।

ಮಹೀಂ । ಅಸ್ಮಭ್ಯಂ । ಉರುಷಾಂ । ಉರು । ಜ್ರಯಃ । ಬೃಹತ್ । ಸುವೀರಂ । ಅನಪಚ್ಯುತಂ । ಸಹಃ ॥ ೬ ॥

॥ ಸಾಯಣಭಾಷ್ಯಂ ॥

ಏಷಾ ವೈಶ್ವದೇವೀ । ಯಾದೃಗೇವ ದದೃಶೇ ಯಾದೃಗ್ರೂಪಮೇವ ದೃಶ್ಯತೇ ತಾದೃಗುಚ್ಯತೇ । ತಾದೃಗ್ರೂಪಮೇವೋಚ್ಯತೇ । ಯಥಾದೃಷ್ಟಮೇವ ಸ್ತೂಯತೇ ನ ತು ಪರವಚನಪ್ರತ್ಯಯೇನ । ಯಸ್ಮಾಚ್ಛಾಯಯಾ ದೀಪ್ತ್ಯಾ ಸಿಧ್ರ್ಯಾ ಸಾಧಿಕಯಾ ಸಹಾಪ್ಸು ವ್ಯಾಪಕಾಸು ಸ್ತುತಿಷು ಅಪ್ಸ್ವೇವ ವಾ ಆ ಸಂ ದಧಿರೇ ಸಮ್ಯಗ್ಧಾರಯಂತಿ ಸ್ವೀಯಂ ರೂಪಂ ಸ್ತುತಿಂ ವಾ । ತೇ ದೇವಾ ಮಹೀಂ ಮಹತೀಂ ಪೂಜ್ಯಾಮುರುಷಾಂ ಬಹುದಾತ್ರೀಂ ರಯಿಮುರು ಪ್ರಭೂತಂ ಜ್ರಯೋ ವೇಗಂ ಬೃಹನ್ಮಹತ್ಸುವೀರಂ ಶೋಭನವೀರ್ಯಮಪತ್ಯಮನಪಚ್ಯುತಮನುಪಕ್ಷೀಣಂ ಸಹೋ ಬಲಂ ಚಾಭಿಭಾವುಕಮಸ್ಮಭ್ಯಂ ಪ್ರಯಚ್ಛಂತ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಯಾದೃಗೇವ**—(ಯಾವ ದೇವತೆಯು) ಯಾವರೂಪದಲ್ಲಿ । **ದದೃಶೇ**—ಕಾಣಲ್ಪಡುವುದೋ (ಗೋಚರವಾಗುವುದೋ) । **ತಾದೃಕ್**—ಆ ರೂಪಾನುಗುಣವಾಗಿಯೇ । **ಉಚ್ಯತೇ**—ನಿರ್ದೇಶಿಸಲ್ಪಡುತ್ತದೆ । **ಸಿಧ್ರ್ಯಾ**—ಸಂಘಾತಾತ್ಮಕವಾದ । **ಛಾಯಯಾ**—ಪ್ರಭೆಯೊಡನೆ (ಆ ದೇವತೆಗಳೆಲ್ಲರೂ) । **ಅಪ್ಸು**—ಉದಕಗಳಲ್ಲಿ । **ಆ ಸಂ ದಧಿರೇ**—(ತಮ್ಮ ಸ್ವರೂಪಗಳನ್ನೆಲ್ಲಾ) ಒಟ್ಟಿಗೆ ಸೇರಿದಂತೆ ಧರಿಸಿದ್ದಾರೆ. (ಅದೇ ದೇವತೆಗಳು) । **ಮಹೀಂ**—ಮಹತ್ತಾದುದೂ । **ಉರುಷಾಂ**—ಅಧಿಕವಾದುದೂ ಆದ ಧನವನ್ನೂ । **ಉರು**—ಅಧಿಕವಾದ । **ಜ್ರಯಃ**—ಶಕ್ತಿ (ವೇಗ) ಯನ್ನೂ । **ಬೃಹತ್**—ಅಧಿಕವಾಗಿ । **ಸುವೀರಂ**—ಉತ್ತಮರಾದ ಪುತ್ರರನ್ನೂ । **ಅನಪಚ್ಯುತಂ**—ಕ್ಷಯರಾಹಿತ್ಯವನ್ನೂ । **ಸಹಃ**—ಬಲವನ್ನೂ । **ಅಸ್ಮಭ್ಯಂ**—ನಮಗೆ ದಯಪಾಲಿಸಲಿ

॥ ಭಾವಾರ್ಥ ॥

ಯಾವ ದೇವತೆಯು ಯಾವ ರೀತಿ ಗೋಚರವಾಗುವುದೋ ಅದೇ ರೀತಿ ನಿರ್ದೇಶಿಸಲ್ಪಡುತ್ತದೆ ಆ ದೇವತೆಗಳೆಲ್ಲರೂ ಸಹ ತಮ್ಮ ಸಂಘಾತಾತ್ಮಕವಾದ ಪ್ರಭೆಯೊಡನೆ ಉದಕಗಳಲ್ಲಿ ಒಟ್ಟಿಗೆ ಸೇರಿದಂತೆ ರೂಪವನ್ನು ಧರಿಸಿದ್ದಾರೆ. ದೇವತೆಗಳು ಮಹತ್ತಾದುದೂ, ಅಧಿಕವಾದುದೂ ಆದ ಧನವನ್ನೂ, ಅಧಿಕವಾದ ವೇಗವನ್ನೂ, ಉತ್ತಮರಾದ ಅದೇ ಪುತ್ರರನ್ನೂ, ಕ್ಷಯರಾಹಿತ್ಯವನ್ನೂ ಬಲವನ್ನೂ ನಮಗೆ ದಯಪಾಲಿಸಲಿ.

## English Translation

Such as (the deity) is beheld, such is he said (to be): they abide with concentrated splendour in the waters: (may they bestow) upon us honourable and ample (riches), great energy, numerous male offspring, and undecaying vigour,

॥ ವಿಶೇಷವಿಷಯಗಳು ॥

**ಯಾದೃಗೇವ ದದೃಶೇ ತಾದೃಗುಚ್ಯತೇ** ಎಂಬ ಈ ಮಂತ್ರದಲ್ಲಿ ಪರವಸ್ತುವಿನ ದರ್ಶನದ ಸ್ವರೂಪವು ವಿವರಿಸಲ್ಪಟ್ಟಿದೆ. ಯಥಾರ್ಥವಾದ ಪರವಸ್ತುವಿನ ಸ್ವರೂಪವು ತಿಳಿಯುವುದು ಎಲ್ಲರಿಗೂ ಸಾಧ್ಯವಿಲ್ಲ ಯಾರು ಯಾರು ಈ ಪರವಸ್ತುವಿನ ಸ್ವರೂಪವನ್ನು ಅವರವರ ಶಕ್ತ್ಯನುಸಾರ ಎಷ್ಟೆಷ್ಟು ಸಾಕ್ಷಾತ್ಕರಿಸುವರೋ ಅಷ್ಟಷ್ಟು ಮಾತ್ರ ಅದನ್ನು ಪರವಸ್ತುವೆಂದು ಅವರವರ ವೈಯಕ್ತಿಕ ಭಾಷೆಯಲ್ಲಿ ವರ್ಣಿಸುತ್ತಾರೆ. **ಯಥಾ ದೃಷ್ಟಮೇವ ಶ್ರೂಯತೇ ನ ತು ಪರವಚನಪ್ರತ್ಯಯೇನ** ಎಂಬುದಾಗಿ ಸಾಯಣರು ಇದರ ತಾತ್ಪರ್ಯವನ್ನು ತಿಳಿಸಿದ್ದಾರೆ

**ಇಹ ತು ಭೂತಂ ಬ್ರಹ್ಮ ಜಿಜ್ಞಾಸ್ಯಂ ನಿತ್ಯತ್ವಾನ್ನ ಪುರುಷವ್ಯಾಪಾರತಂತ್ರಂ ।**

(ಬ್ರ ಸೂ ಭಾ ೧.೧.೧)

ಎಂಬುದಾಗಿ ಬ್ರಹ್ಮಸೂತ್ರಭಾಷ್ಯದಲ್ಲಿ **ವಸ್ತುತಂತ್ರ** ಮತ್ತು **ಪುರುಷತಂತ್ರ**ಗಳಿಗಿರುವ ವ್ಯತ್ಯಾಸವನ್ನು ತೋರಿಸಿದ್ದಾರೆ. ವಸ್ತುತಂತ್ರವು ಪುರುಷದೃಷ್ಟಿಗೆ ಮೀರಿದುದು. ಯಾವುದು ಪುರುಷದೃಷ್ಟಿಗೆ ಗೋಚರವೋ ಅದು ಪೂರ್ಣವಾದ ಪುರುಷ ತಂತ್ರವಲ್ಲ ಎಂಬುದಾಗಿ ವಿವರಿಸಿದ್ದಾರೆ ಅದರಂತೆಯೇ, ಸಾಯಣರು ಸಹ **ದರ್ಶನಪ್ರತ್ಯಯ** ಮತ್ತು **ಪುರವಚನ ಪ್ರತ್ಯಯ** ಎಂಬ ಎರಡು ಪ್ರತ್ಯಯಗಳಿಗೂ ಇರುವ ವ್ಯತ್ಯಾಸವನ್ನು ತೋರಿಸಿದ್ದಾರೆ ಇದೇ ಮಂತ್ರದ ತಾತ್ಪರ್ಯವನ್ನು ಶತಪಥಬ್ರಾಹ್ಮಣದಲ್ಲಿ ಈ ರೀತಿ ವಿವರಿಸಿದೆ

**ತಮೇತಮಗ್ನಿರಿತ್ಯಧ್ವರ್ಯವ ಉಪಾಸತೇ । ಯಜುರಿತ್ಯೇಷ ಹೀದಗ್ಂ ಸರ್ವಂ ಯುನಕ್ತಿ ಸಾಮೇತಿ ಛಂದೋಗಾ ಏತಸ್ಮಿನ್ ಹೀದಗ್ಂ ಸರ್ವಗ್ಂ ಸಮಾನಮುಕ್ಥಮಿತಿ ಬಹ್ವೃಚಾ ಏಷ ಹೀದಗ್ಂ ಸರ್ವಮುತ್ಥಾಪಯತಿ ಯಾತುರಿತಿ ಯಾತುವಿದ ಏತೇನ ಹೀದಗ್ಂ ಸರ್ವಂ ಯತಂ ವಿಷಮಿತಿ ಸರ್ಪಾಃ ಸರ್ಪ ಇತಿ ಸರ್ಪವಿದ ಊರ್ಗಿತಿ ದೇವಾ ರಯಿರಿತಿ ಮನುಷ್ಯಾ ಮಾಯೇತ್ಯಸುರಾಃ ಸ್ವಧೇತಿ ಪಿತರೋ ದೇವಜನ ಇತಿ ದೇವಜನವಿದೋ ರೂಪಮಿತಿ ಗಂಧರ್ವಾ ಗಂಧ ಇತ್ಯಪ್ಸರಸಸ್ತಂ ಯಥಾ ಯಥೋಪಾಸತೇ ತದೇವ ಭವತಿ ತದ್ಧೈ-ನಾನ್ಭೂತ್ವಾವತಿ ತಸ್ಮಾದೇತಮೇವಂವಿತ್ಸರ್ವೈರೇವೈತೈರುಪಾಸೀತ ಸರ್ವಗ್ಂ ಹೈತ-ದ್ಭವತಿ ಸರ್ವಗ್ಂ ಹೈನಮೇತದ್ಭೂತ್ವಾವತಿ ॥**

(ಶ ಬ್ರಾ. ೧೦.೫-೨-೨೦)

ಯಾವ ದಿವ್ಯತತ್ತ್ವವಿದೆಯೋ ಅದನ್ನು ಅಧ್ವರ್ಯುಗಳು **ಅಗ್ನಿ** (ಅಗ್ನಿಚಿತಿ) ಯೆಂದು ಉಪಾಸನೆ ಮಾಡುತ್ತಾರೆ. ಅಧ್ವರ್ಯುಗಳೆಂದರೆ ಯಜುರ್ವೇದಾನುಯಾಯಿಗಳು ಎಂದರ್ಥ ಸಮಸ್ತವಿಶ್ವವನ್ನೂ ಒಂದೇ ನಿಯಮದಲ್ಲಿ ಒಟ್ಟುಗೂಡಿ ಸೇರಿಸುವುದರಿಂದ ಈ ತತ್ತ್ವವು **ಯಜುಸ್** ಎಂದು ಕರೆಯಲ್ಪಟ್ಟಿದೆ **ಏಷ ಪುರುಷ ಇದಂ ಸರ್ವಂ ಜಗದ್ಯುನಕ್ತಿ ಸರ್ವತ್ರ ಸ್ವಯಂ ಸಂಗತ ಇತಿ** ಈ ಮಹಾಪುರುಷನು ಎಲ್ಲೆಲ್ಲೂ ತಾನೇ ವ್ಯಾಪಿಸಿ ಸಕಲ ಜಗತ್ತಿನಲ್ಲಿಯೂ ಐಕ್ಯವನ್ನು ಯೋಜಿಸುತ್ತಾನೆ ಎಂದು ಸಾಯಣರು ತಮ್ಮ ಭಾಷ್ಯದಲ್ಲಿ ತಿಳಿಸಿದ್ದಾರೆ. ಈ ತತ್ತ್ವದಲ್ಲಿ ವಿಶ್ವದ ಸಕಲ ವ್ಯಕ್ತಿಗಳು ಸಮಾನವಾದ ಆಶ್ರಯವನ್ನು ಪಡೆಯುತ್ತನೆ ಎಂಬ ಕಾರಣದಿಂದ ಛಂದೋಗರು ಈ ತತ್ತ್ವವನ್ನು

**ಸಾಮನ್** ಎಂಬ ಹೆಸರಿನಿಂದ ಕರೆದರು **ಏತಸ್ಮಿನ್ ಪರಮಾತ್ಮನಿ ಕಾರಣೇ ಸರ್ವಂ ಕಾರ್ಯಜಾತಂ ಸಮಾನ-ಮಿತಿ** ಜಗತ್ಕಾರಣರೂಪವಾದ ಈ ಪರಮಾತ್ಮನಲ್ಲಿ, ಇದರಿಂದಲೇ ಉತ್ಪನ್ನವಾದ ಸಕಲಕಾರ್ಯಗಳೂ ಸಮಾನ ಸ್ಥಾನವನ್ನು ಪಡೆಯುವುದರಿಂದ ಈ ನಾಮವು ಎಂದು ಸಾಯಣರ ವಿವರಣೆಯಿದೆ ಇದು ಸಾಮವೇದಾನುಯಾಯಿಗಳು ಪರವಸ್ತುವನ್ನು ವರ್ಣಿಸುವ ಕ್ರಮ.

ಈ ಮಹತ್ಕಾರಣವೇ ಸಕಲವನ್ನು **ಉತ್ಥಾಪಿಸುವುದು** ಇದರಿಂದಲೇ ಸಕಲವೂ ಉದ್ಭವಿಸುವುದರಿಂದ **ಬಹ್ವೃಚರು** (ಋಗ್ವೇದಾನುಯಾಯಿಗಳು) ಇದನ್ನು **ಉಕ್ಥ**ವೆಂದು ಕರೆದಿರುತ್ತಾರೆ

ಇದರಿಂದಲೇ ಪ್ರತಿಯೊಂದು ವಸ್ತುವೂ ಆಕರ್ಷಿತವಾಗಿರುವುದರಿಂದ ಮಂತ್ರಗಾರರು ಇದನ್ನು **ಮಾಯಾ-ವಸ್ತು** ಎಂದು (ಯಾತು) ಕರೆಯುತ್ತಾರೆ ಸರ್ಪವಿದರು ಇದನ್ನೇ **ಸರ್ಪ**ವೆಂದಾರಾಧಿಸುತ್ತಾರೆ ದೇವತೆಗಳು ಇದನ್ನೇ **ಊರ್ಕ್** (ಊರ್ಜ್) ಎಂದರೆ ಶಕ್ತಿಯುತವಾದ ಅನ್ನವೆಂದು ಕರೆಯುತ್ತಾರೆ ಅಸುರರು ಇದನ್ನೇ **ಮಾಯಾವಸ್ತು**ವೆಂದು ವರ್ಣಿಸಿ ಆರಾಧಿಸುತ್ತಾರೆ. ಸ್ವರ್ಗಂಗತರಾದ ಪಿತೃಗಳು ಇದನ್ನು **ಸ್ವಧಾ** ಎಂದು ಉಪಾಸಿಸುತ್ತಾರೆ. ದೇವಜನರು **ದೇವಜನ**ನೆಂದೂ, ಗಂಧರ್ವರು **ರೂಪ**ವೆಂದೂ, ಅಪ್ಸರಸ್ಸುಗಳು **ಗಂಧ**ವೆಂದೂ ಆರಾಧಿಸುತ್ತಾರೆ.

ಈ ರೀತಿಯಾಗಿ ಒಂದೊಂದು ದೃಷ್ಟಿಗೆ ಒಂದೊಂದು ವಿಧವಾಗಿ ಗೋಚರವಾಗಿರುವುದರಿಂದ ಪರವಸ್ತುವೂ ಸಹ ಅದೇ ರೂಪವನ್ನೇ ಹೊಂದುವ ಸ್ವರೂಪಯೋಗ್ಯತೆಯನ್ನು ಹೊಂದಿರುತ್ತದೆ ಆಯಾ ರೂಪಧಾರಿಯಾಗಿ **ತತ್ತದ್ರೂಪವನ್ನು** ಆರಾಧಿಸುವವರಿಗೆ ಆಯಾ **ರೂಪಾನುಗುಣವಾದ** ಫಲವನ್ನು **ಕೊಡುತ್ತದೆ.** ಆದರೆ, ಈ ಸಕಲ ರೂಪಗಳನ್ನೂ ಒಂದೇವಸ್ತುವಿನಲ್ಲಿ ಒಟ್ಟಿಗೆ ಸಾಕ್ಷಾತ್ಕರಿಸಿ ಯಾವನು ಆರಾಧಿಸುವನೋ ಅವನು ಆ ಸಮಗ್ರವಸ್ತುವನ್ನು ದರ್ಶನಮಾಡಿ **ಪೂರ್ಣ**ಫಲವನ್ನು ಪಡೆಯುತ್ತಾನೆ ಎಂಬುದಾಗಿ ದರ್ಶನದ ನಾನಾತ್ವವು ಸ್ತುತವಾಗಿರುತ್ತವೆ ಶತಪಥ ಬ್ರಾಹ್ಮಣದ ಈ ವಾಕ್ಯವು ಪ್ರಕೃತವಾದ ಮಂತ್ರದಲ್ಲಿ ವರ್ಣಿತವಾಗಿರುವ ಪರವಸ್ತುವಿನ ಐಕ್ಯವನ್ನೂ ಮತ್ತು ನಾನಾ ಸ್ವರೂಪಗಳನ್ನು ಹೊಂದಿರುವ ಈ ವಸ್ತುದರ್ಶನದ ನಾನಾತ್ವವನ್ನೂ ತಿಳಿಸುವುದಾಗಿದೆ ಇದನ್ನೇ ಭಗವದ್ಗೀತೆಯಲ್ಲಿ,

**ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ ।**

(ಭ ಗೀ ೪-೧೧)

ಯಾರು ಯಾರು ಯಾವ ಯಾವ ರೀತಿಯಲ್ಲಿ ನನ್ನನ್ನು ಭಜಿಸಿ ಉಪಾಸಿಸುವರೋ ಅವರನ್ನೆಲ್ಲಾ ಅದೇ ವಿಧದಲ್ಲಿ ನಾನು ಸಮಿಾಪಿಸುವೆನು ಎಂದು ಪರಮಾತ್ಮನ ಆಶ್ವಾಸನೆಯ ರೂಪದಲ್ಲಿ ತಿಳಿಸಿದೆ

ಮೇಲೆ ಹೇಳಿರುವ ವಿಭಾಗಗಳಲ್ಲಿ ಪರವಸ್ತುವಿನ ನಾನಾವಿಧವಾದ ಸ್ವರೂಪಗಳು ತಿಳಿಸಲ್ಪಟ್ಟಿವೆ **ಸಾತ್ತ್ವಿಕ, ರಾಜಸ** ಮತ್ತು **ತಾಮಸ** ಎಂಬ ಮೂರು ವಿಧವಾದ ವಿಭಾಗಗಳೂ **ತೋರುತ್ತವೆ** ಎಂದರೆ, ವಿಶ್ವಾತ್ಮನು ಸಕಲ ಸದಸದ್ವಸ್ತುಗಳನ್ನೂ ಒಳಗೊಂಡ ಸರ್ವವ್ಯಾಪಿಯಾಗಿರುವನು ಮತ್ತು ಸರ್ವಾಂತರ್ಯಾಮಿಯಾಗಿರುವನು. ಯಾವುದು ಜ್ಯೋತೀರೂಪವಾದ ತತ್ತ್ವವೋ, ಯಾವುದು ತಮೋರೂಪವಾದ ತತ್ತ್ವವೋ ಅವೆಲ್ಲವೂ ಪರಮಾತ್ಮನ ವಿಭೂತಿ ವಿಶೇಷವೇ ಆಗಿರುತ್ತದೆ ಮೇಲೆ ಹೇಳಿರುವ ವಿಭಾಗಗಳಲ್ಲಿ ಈ ಎರಡು ಬಗೆಯ ಸ್ವರೂಪಗಳೂ ಇವೆ ಅವುಗಳು ಯಾವುವೆಂದರೆ—

**೧) ಅಗ್ನಿಚಿತಿ; ೨) ಸಾಮ; ೩) ಉಕ್ಥ; ೪) ಮಾಯಾ; ೫) ಊರ್ಕ್** (ಊರ್ಜ) **೬) ಸ್ವಧಾ; ೭) ರೂಪ; ೮) ಗಂಧ ಇತ್ಯಾದಿ**

ಈ ರೀತಿಯಾಗಿ ವೈವಿಧ್ಯವನ್ನು ಹೊಂದಿರುವ ಐಕ್ಯವು ಹಿಂದೆ ಒಂದೆರಡು ಕಡೆಗಳಲ್ಲಿ ವರ್ಣಿತವಾಗಿದ್ದರೂ ಸಹ (ಋ. ಸಂ ೧-೧೬೪) ಇಲ್ಲಿಯ ತಾತ್ತ್ವಿಕಸ್ವರೂಪವರ್ಣನವು ಒಂದು ವಿಶೇಷರೂಪದಲ್ಲಿರುತ್ತದೆ, ಸತ್ತ್ವಶ್ರದ್ಧೆಯುಳ್ಳ ಋಷಿಗಳು ಯಾವುದನ್ನು ಆಧ್ಯಾತ್ಮಿಕತತ್ತ್ವವೆಂದಾರಾಧಿಸುವರೋ ಅದನ್ನೇ ತಾಮಸಪ್ರಕೃತಿಯುಳ್ಳ ಮಂತ್ರಗಾರರು ತಮ್ಮ ಮಾಟದ ಸಾಧನವೆಂದೂ, ಮಾಯಾರೂಪಿಯೆಂದೂ ಆರಾಧಿಸುತ್ತಾರೆ. ಆದುದರಿಂದ **ಸತ್, ಅಸತ್** ಎಂಬ ವಿಭಾಗವು ಕೇವಲ ಪುರುಷತಂತ್ರವು. ವಸ್ತುತಂತ್ರವು ಈ ಎರಡು ಬಗೆಯುಳ್ಳದ್ದೂ ಆಗಿರುತ್ತದೆ. ಯಾವುದು ದೇವತ್ವ ಪೂರ್ಣವೋ, ಯಾವುದು ಆಸುರೀಪ್ರಕೃತಿಯುಳ್ಳದ್ದೋ ಅಂತಹ ಈ ದೈವೀ ಮತ್ತು ಆಸುರೀ ಎಂಬ ಎರಡೂ ಈ ವಸ್ತು ತಂತ್ರದ ಪ್ರಭೇದಗಳೇ ಆಗಿವೆ. ಇದನ್ನೇ ಋಕ್ಸಂಹಿತೆಯಲ್ಲಿ,

**ಏಕ ಏವಾಗ್ನಿರ್ಬಹುಧಾ ಸಮಿದ್ಧ ಏಕಃ ಸೂರ್ಯೋ ವಿಶ್ವಮನು ಪ್ರಭೂತಃ ।**
**ಏಕೈವೋಷಾಃ ಸರ್ವಮಿದಂ ವಿ ಭಾತ್ಯೇಕಂ ವಾ ಇದಂ ವಿ ಬಭೂವ ಸರ್ವಂ ॥**

(ಋ. ಸಂ. ೮-೫೮-೨)

ಇತ್ಯಾದಿ ಮಂತ್ರಗಳಲ್ಲಿ ಬ್ರಹ್ಮೈಕ್ಯವು ಪ್ರತಿಪಾದಿತವಾಗಿದೆ. ಅಲ್ಲದೇ ಪ್ರಕೃತವಾದ ಮಂತ್ರದಲ್ಲಿ ಸಾಯಣರು ಹೇಳಿರುವ **ಪರವಚನಪ್ರತ್ಯಯವೆಂದರೆ** ಏನು, ಮತ್ತು **ಛಾಯಯಾ ಸಂದಧಿರೇ** ಎಂದರೇನು ಎಂಬ ಎರಡು ವಿಷಯಗಳನ್ನೂ ಮುಖ್ಯವಾಗಿ ಗಮನಿಸಬೇಕಾಗಿದೆ ಆದುದರಿಂದ ಪ್ರಥಮತಃ **ಛಾಯಯಾ** ಎಂಬ ಪದದಿಂದ ಸೂಚಿತವಾಗುವ ಅಂಶವೇನು ಎಂಬುದು ಪರಿಶೀಲನಾರ್ಹವಾದುದಾಗಿದೆ

## ಛಾಯಾ

ಪ್ರಕೃತವಾದ ಮಂತ್ರದಲ್ಲಿ **ಛಾಯಯಾ** ಎಂಬ ಪದಕ್ಕೆ ಸಾಯಣರು **ದೀಪ್ತ್ಯಾ** ಎಂದರೆ ಕಾಂತಿಯಿಂದ ಎಂದರ್ಥಮಾಡಿದ್ದಾರೆ ಇದು ವ್ಯವಹಾರವಿರುದ್ಧವಾದ ಅರ್ಥ. **ಛಾಯಾ** ಎಂದರೆ ಸಾಧಾರಣವಾಗಿ **ನೆರಳು** ಎಂದರ್ಥ, ಎಂದರೆ ಕಾಂತಿರಹಿತವಾದುದು ಇಲ್ಲಿ ಕಾಂತಿಯುತವಾದುದು ಎಂಬ ತಾತ್ಪರ್ಯವನ್ನು ಹೇಳುವುದರ ಅಭಿಪ್ರಾಯವೇನು ಎಂಬುದನ್ನು ವಿಚಾರಿಸಬೇಕು.

**ಯಾನ್ರಾಯೇ ಮರ್ತಾನ್ತ್ಸುಷೂದೋ ಅಗ್ನೇ ತೇ ಸ್ಯಾಮ ಮಘವಾನೋ ವಯಂ ಚ ।**
**ಛಾಯೇವ ವಿಶ್ವಂ ಭುವನಂ ಸಿಸಕ್ಷ್ಯಾಪಪ್ರಿವಾನ್ರೋದಸೀ ಅಂತರಿಕ್ಷಂ ॥**

(ಋ. ಸಂ. ೧-೭೭-೮)

ಎಂಬಲ್ಲಿ ದ್ಯಾವಾಪೃಥಿವಿಯನ್ನೆಲ್ಲಾ ಸುತ್ತಿ ಹರಡಿರುವ ಅಗ್ನಿಯ ವ್ಯಾಪಕತ್ವವನ್ನು **ಛಾಯೆಗೆ** ಹೋಲಿಸಿದೆ ಆದರೆ, **ಛಾಯಾ ಎಂಬುದರೊಡನೆ ಹೋಲಿಕೆ** ಇರಬೇಕಾದರೆ ಅಗ್ನಿಗೂ ಛಾಯೆಗೂ ಇರುವ ಸಾಧಾರಣ ಧರ್ಮವೇನು ಎಂದರೆ, ರಕ್ಷಣೆಗೆ ಆಶ್ರಯಸ್ಥಾನವಾಗಿರುವುದೆಂದರ್ಥ ರಕ್ಷಣೆಗೆ ಆಶ್ರಯವಾಗಿರುವ ಧರ್ಮವಿರುವುದರಿಂದ **ಛಾಯೆಯು**

ಉಪಮಾನವಿರುವುದರಿಂದ **ಛಾಯಾ** ಶಬ್ದಕ್ಕೆ ವಿಶೇಷಾರ್ಥದಲ್ಲಿ ಪ್ರಯೋಗವಿರುತ್ತದೆ. ಇದೇ ಅರ್ಥದಲ್ಲಿ **ಉಪಚ್ಛಾಯಾ ಮಿವ ಘೃಣೇಃ** (ಋ ಸಂ ೬-೧೬-೩೮) ಇತ್ಯಾದಿ ಮಂತ್ರಗಳಲ್ಲಿಯೂ ಸಹ ಈ ಪದದ ಪ್ರಯೋಗವಿರುತ್ತದೆ.

ಪ್ರಕೃತವಾದ ಮಂತ್ರದಲ್ಲಿ ಕೇವಲ ರಕ್ಷಣಾಶ್ರಯವೆಂಬ ಅರ್ಥದಲ್ಲೇ ಅಲ್ಲದೇ, ಉದಕಗಳಲ್ಲೆಲ್ಲಾ ವ್ಯಾಪಿಸಿರುವ ದೇವತೆಗಳ ಪ್ರತಿಬಿಂಬವೆಂದೂ ಮತ್ತು ಈ ಪ್ರತಿಬಿಂಬಗಳು ಅತ್ಯಂತ ಪ್ರಭಾಯುತವಾದ ದೀಪ್ತಿಯನ್ನು ಪ್ರಸರಿಸುವ ಸ್ವಭಾವವುಳ್ಳವೆಂದೂ ಸ್ಪಷ್ಟವಾದ ಅರ್ಥವನ್ನು ತಿಳಿಸುತ್ತವೆ. ಈ ದೇವತೆಗಳೆಲ್ಲರೂ ಪರವಸ್ತುವಿನ ವಿಭೂತಿವಿಶೇಷ ಗಳೇ ಹೊರತು ಬೇರೆಯಲ್ಲ. ಆದುದರಿಂದ, ದೇವತೆಗಳು ತಮ್ಮ ಛಾಯೆಯಿಂದ ವಿಶ್ವವನ್ನೆಲ್ಲಾ ವ್ಯಾಪಿಸಿದರು ಎಂದರೆ, ಆ ಪರವಸ್ತುವೇ ದೇವತಾರೂಪವಾದ ತನ್ನ ಛಾಯೆಯಿಂದ ಎಂದರೆ ಪ್ರತಿಬಿಂಬದಿಂದ ವಿಶ್ವವನ್ನೆಲ್ಲಾ ವ್ಯಾಪಿಸುತ್ತದೆ ಎಂದು ತಾತ್ಪರ್ಯವಾಗುತ್ತದೆ. ಯಾವ ಸಕಲ ಜಗತ್ತೂ ಸುಪ್ತಾವಸ್ಥೆಯಲ್ಲಿ ಈಶ್ವರನಲ್ಲೇ ಅಂತರ್ಗತವಾಗಿ (ಜಗತ್ತಿನ ದೃಷ್ಟಿಯಿಂದ) ಅಂಧಕಾರಮಯವಾದ ಸನ್ನಿವೇಶದಲ್ಲಿದ್ದವೋ ಆ ಜಗತ್ತಿನ ಸಕಲ ವೈಯಕ್ತಿಕ ಸ್ವರೂಪವೂ ಜಾಗ್ರದ ವಸ್ಥೆಯಲ್ಲಿ ಆವಿರ್ಭೂತವಾಗಲು ಇರತಕ್ಕ ಸಾಧನವೇ ಈ ಪರವಸ್ತುವಿನ **ಛಾಯಾ** ಆಗಿರುತ್ತದೆ. ಈ ಆವಿರ್ಭಾವಕ್ಕೆ ಪೂರ್ವದಲ್ಲಿ ಜ್ಯೋತಿಯಾಗಲಿ, ಪ್ರಕೇತವಾಗಲಿ, ಛಾಯೆಯಾಗಲಿ, ಶರ್ಮವಾಗಲಿ ಇರಲಿಲ್ಲ. ಆದರೆ, ಜಗತ್ತಿಗಿಂತಲೂ ಮರೆಯಾಗಿದ್ದ ಘರ್ಮತಾಪರೂಪವಾದ ತತ್ತ್ವವು ಮಾತ್ರ ಸುಪ್ತವಾಗಿದ್ದಿತು (ಋ ಸಂ ೧೦-೧೨೯-೧-೨) **ತಮ ಆಸೀತ್ತಮಸಾ ಗೂಹ್ಳಮಗ್ರೇ** ||

**ಋತಂ ಪಿಬಂತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟಾ ಪರಮೇ ಪರಾರ್ಧೇ ।**
**ಛಾಯಾತಪೌ ಬ್ರಹ್ಮವಿದೋ ವದಂತಿ ಪಂಚಾಗ್ನಯೋ ಯೇ ಚ ತ್ರಿಣಾಚಿಕೇತಾಃ ||**

(ಕ ಠ ಉ. ૩-೧)

ಅತ್ಯಂತ ಗೂಢವಾದ ಹೃದಯಾಕಾಶದಲ್ಲಿ ತಮ್ಮ ಸತ್ಕರ್ಮಗಳ ಫಲವಾದ ಸಂಯೋಗವನ್ನು ಹೊಂದಿ ಎರಡು ತತ್ತ್ವಗಳು ಸೇರಿಕೊಂಡಿರುವುವು. ಬ್ರಹ್ಮವಿತ್ತುಗಳು ಇವನ್ನು ಛಾಯಾತಪಗಳೆಂದು ಕರೆಯುತ್ತಾರೆ, ಎಂಬಲ್ಲಿ ಅವಿಭಕ್ತವಾದ ಪರಬ್ರಹ್ಮನ ಸ್ವರೂಪವು ಈ ಎರಡು ಸ್ವರೂಪವುಳ್ಳದ್ದಾಗಿರುತ್ತದೆ ಎಂದರ್ಥ ಇದೇ ಅಭಿಪ್ರಾಯವು.

**ಅಸಚ್ಚ ಸಚ್ಚ ಪರಮೇ ವ್ಯೋಮನ್ದಕ್ಷಸ್ಯ ಜನ್ಮನ್ನದಿತೇರುಪಸ್ಥೇ ।**
**ಅಗ್ನಿರ್ಹ ನಃ ಪ್ರಥಮಜಾ ಋತಸ್ಯ ಪೂರ್ವ ಆಯುನಿ ವೃಷಭಶ್ಚ ಧೇನುಃ ||**

(ಋ ಸಂ. ೧೦-೫.೭)

ಎಂಬ ಋಕ್ಕಿನಲ್ಲಿ ಅತ್ಯಂತ ಉತ್ಕೃಷ್ಟವಾದ ಅಂತರಿಕ್ಷಪ್ರದೇಶದಲ್ಲಿ ಅಗ್ನಿಯು ವರುಣನೊಂದಿಗೆ ಐಕ್ಯತೆಯನ್ನು ಹೊಂದಿರುವ ಕಾಲದಲ್ಲಿ **ಸತ್** ಮತ್ತು **ಅಸತ್ತು**ಗಳ ಸಂಯೋಗರೂಪವಾಗಿರುತ್ತಾನೆ ಎಂಬ ವರ್ಣನೆಯೂ ಸಹ ಇದೇ ಭಾವವನ್ನು ತಿಳಿಸುತ್ತದೆ

ಸದಸದಾತ್ಮಕವೂ, ಛಾಯಾತಪಾತ್ಮಕವೂ ಆದ ಮೂಲವಸ್ತುವಿಗೆ ತಾನು ವಿಕಾಸವನ್ನು ಹೊಂದಬೇಕೆಂಬ ಕಾಮವು ಮೃತ್ಯುವಿನಿಂದ ಜೀವರೂಪವಾದ ಸ್ಥಿತಿಗೆ ಪರಿಣತವಾಗಬೇಕೆಂಬುದೇ ಆಗಿದೆ. **ಮೃತ್ಯೋರ್ಮುಕ್ಷೀಯ ಮಾಮೃತಾತ್** (ಋ. ಸಂ. ೭ ೫೯-೧೨)

ಗೂಢವಾದುದೂ (ಜಗದ್ಗೋಚರಕ್ಕೆ ಸಿಕ್ಕದ) ಅಂಧಕಾರಾವೃತವೂ ಆದ ತತ್ತ್ವದಿಂದ ಪ್ರಕಾಶಿತವಾಗುವ ವಿಕಾಸತತ್ತ್ವದ ಆಶ್ರಯವು ಅತ್ಯಂತ ವಿಸ್ತೃತವಾದ ಪೃಥ್ವಿಯೇ ಆಗಿದೆ. (**ಭೂಮಿಃ**), ಈ ಪೃಥ್ವಿಯೇ ಅವಲಂಬನವು (support). ಆದರೆ, ಮೃತ್ಯುವಿನಿಂದ ಸ್ವಾತಂತ್ರ್ಯವನ್ನು ಪಡೆದಿದ್ದುದರಿಂದ ಮಾತ್ರ ಪುನಃ ಮೃತ್ಯುವೇ ಇಲ್ಲವೆಂದರ್ಥವಲ್ಲ.

**ಯ ಆತ್ಮದಾ ಬಲದಾ ಯಸ್ಯ ವಿಶ್ವ ಉಪಾಸತೇ ಪ್ರಶಿಷಂ ಯಸ್ಯ ದೇವಾಃ ।**
**ಯಸ್ಯ ಛಾಯಾಮೃತಂ ಯಸ್ಯ ಮೃತ್ಯುಃ ಕಸ್ಮೈ ದೇವಾಯ ಹವಿಷಾ ವಿಧೇಮ ॥**

(ಋ. ಸಂ. ೧೦-೧೨೧-೨)

ಎಂಬಲ್ಲಿ, ಸೃಷ್ಟಿಕರ್ತನಾದ ಪ್ರಜಾಪತಿಗೂ ಸಹ ಮೃತ್ಯುಬಂಧನವು ತಪ್ಪಿದ್ದಲ್ಲವೆಂದು ತಿಳಿಸಿದೆ. ಹಿರಣ್ಯಗರ್ಭ, ಅಗ್ನಿ, ಪ್ರಜಾಪತಿ ಇತ್ಯಾದಿಗಳು ಜೀವಮರಣತತ್ತ್ವಗಳೆರಡನ್ನೂ ಒಳಗೊಂಡಿವೆ. **ಸ ಸಂನಯಃ ಸ ವಿನಯಃ** (ಋ ಸಂ. ೨.೨೪.೯) ಇತ್ಯಾದಿ ವಾಕ್ಯಗಳಲ್ಲಿ ಈ ಅಂಶವು ಪ್ರಶಂಸಿತವಾಗಿದೆ. ಆದುದರಿಂದ ಉದಾಹೃತವಾಗಿರುವ ಈ ಮಂತ್ರದಲ್ಲಿ (ಋ. ಸಂ. ೧೦-೧೨೧-೨) **ಛಾಯಾ**ಪದದಿಂದ ಸೂಚಿತವಾಗಿರುವುದು ಪೂರ್ಣವಾದ ವ್ಯಾವಹಾರಿಕ ಪ್ರಪಂಚ. ಈ ವ್ಯಾವಹಾರಿಕಪ್ರಪಂಚದಲ್ಲಿ ಆಯಾ ವ್ಯಕ್ತಿಗಳು ತತ್ತತ್ಸ್ವರೂಪಾನುಗುಣವಾಗಿ ತಮ್ಮ ಮೂಲತತ್ತ್ವದ ಪ್ರತಿಬಿಂಬಗಳಾಗಿ ಪ್ರಕಾಶಿಸುತ್ತಿರುವುವು ಎಂಬುದೇ ತಾತ್ಪರ್ಯ. ಹೀಗೆ **ಛಾಯಾಮೃತ, ಸದಸತ್, ಅದಿತಿ—ದಿತಿ** (ಋ ಸಂ. ೫.೬೨.೮) ಇತ್ಯಾದಿ ಪ್ರಯೋಗಗಳೆಲ್ಲವೂ ಒಂದೇ ಅಭಿಪ್ರಾಯವನ್ನು ಸೂಚಿಸುತ್ತವೆ

ಹೀಗೆ **ಛಾಯಾ**ಶಬ್ದಕ್ಕೆ **ಜ್ಯೋತಿ**ಯೆಂದರ್ಥಮಾಡಿ, ಆ ಜ್ಯೋತಿಯು ವ್ಯಾವಹಾರಿಕಪ್ರಪಂಚದಲ್ಲಿ ಕಾಣತಕ್ಕ ಪರತತ್ತ್ವದ ನಾನಾವಿಧವಾದ ಆವಿರ್ಭಾವಸ್ವರೂಪಗಳು ಮತ್ತು ಮೂಲತತ್ತ್ವದ ಪ್ರತಿಬಿಂಬಗಳು ಎಂದು ತಾತ್ಪರ್ಯವನ್ನು ಹೇಳುವುದಕ್ಕೆ ಸಂಹಿತಾವಾಕ್ಯಗಳೇ ಆಧಾರವಾಗಿರುತ್ತವೆ. ಇದಕ್ಕೆ ವಿರುದ್ಧವಾಗಿ **ಛಾಯಾ**ಶಬ್ದಕ್ಕೆ **ತಮಸ್ಸು** ಎಂಬ ಅರ್ಥದಲ್ಲಿ ಪ್ರಯೋಗವಿರುವ ಸನ್ನಿವೇಶಗಳೂ ಕೆಲವಿವೆ. ಉದಾಹರಣೆಗೆ,

**ಯಜ್ಞವಲ್ಕ್ಯ ವೇದ ವಾ ಅಹಂ ತಂ ಪುರುಷಂ ಸರ್ವಸ್ಯಾತ್ಮನಃ ಪರಾಯಣಂ ಯಮಾತ್ಥ ಯ ಏವಾಯಂ ಛಾಯಾಮಯಃ ಪುರುಷಃ ಸ ಏಷ ವದೈವ ಶಾಕಲ್ಯ ತಸ್ಯ ಕಾ ದೇವತೇತಿ ಮೃತ್ಯುರಿತಿ ಹೋವಾಚ ॥**

(ಬೃ. ಉ ೩ ೯-೧೪)

ಎಂಬಲ್ಲಿ **ಛಾಯಾಮಯಃ** ಎಂಬುದಕ್ಕೆ ಶಂಕರಾಚಾರ್ಯರು **ಅಜ್ಞಾನಮಯಃ** ಎಂದು ತಾತ್ಪರ್ಯವನ್ನು ಹೇಳಿರುತ್ತಾರೆ. ಇಂತಹ ಪುರುಷನಿಗೆ **ಅಪ ಏವಾಯತನಮ್** ಅಪ್ಪೇ ವಾಸಸ್ಥಾನವು ಯಾವುದನ್ನು ಋಕ್ಸಂಹಿತೆಯಲ್ಲಿ **ತಮಸಾ ಗೂಳ್ಹಂ** ಎಂದು ವರ್ಣಿಸಿದೆಯೋ, ಅದನ್ನು **ಛಾಯಾಮಯಃ** ಎಂದು ವರ್ಣಿಸಿದೆ ಇದನ್ನೇ **ಅಪಾಮುಪಸ್ಥೇ, ಅದಿತೇರುಪಸ್ಥೇ, ನಿರ್ಋತೇರುಪಸ್ಥೇ**–ಇತ್ಯಾದಿ ವಿಶೇಷಣಗಳಿಂದಲೂ ವರ್ಣಿಸಿದೆ. **ಅಮೂರ್ತ, ಅಶಬ್ದ, ಶಾಂತ,** ಇತ್ಯಾದಿಗಳಿಂದ ಉಪನಿಷತ್ತುಗಳು ವರ್ಣಿಸುತ್ತವೆ.

ಆದುದರಿಂದ ಪರತತ್ತ್ವದ ಎರಡು ಅವಸ್ಥೆಯನ್ನು ವರ್ಣಿಸುವ ಸಂದರ್ಭದಲ್ಲೂ **ಛಾಯಾ** ಶಬ್ದದ ಪ್ರಯೋಗವಿರುತ್ತದೆ. ಕಾರಣಬ್ರಹ್ಮನು ಕಾರ್ಯಾವಸ್ಥೆಯಲ್ಲಿ ಪರಿಣಮಿತನಾದಾಗ ಅವನ ದೀಪ್ತಿವಿಶೇಷಗಳು **ಛಾಯಾ**

ಶಬ್ದದಿಂದ ವ್ಯವಹರಿಸಲ್ಪಡುತ್ತವೆ. ಸಕಲ ದೇವ ಮಾನವ ತಿರ್ಯಗ್ರೂಪವಾದ ಸಕಲ ಚರಾಚರಜಗತ್ತೂ ಸಹ ಈ ಪರಬ್ರಹ್ಮನ ಛಾಯಾರೂಪದಿಂದ ಇದನ್ನೇ ಪ್ರತಿಬಿಂಬಿಸುತ್ತವೆ ಎಂಬುದು ಒಂದರ್ಥ.

ಎರಡನೆಯದಾಗಿ, ಸೃಷ್ಟಿಕಾಲಕ್ಕಿಂತಲೂ ಪೂರ್ವದಲ್ಲಿ ಯಾವುದನ್ನು **ಅಮೂರ್ತ, ಅಶಬ್ದ, ಶಾಂತ** ಇತ್ಯಾದಿ ವಿಶೇಷಣಗಳಿಂದಲೂ (ಮೈತ್ರೀ. ೬-೩-೨೨, ೩೬) **ನೈವೇಹ ಕಿಂಚನಾಸ ಆಸೀನ್ಮೃತ್ಯುನೈವೇದ-ಮಾವೃತಮಾಸೀತ್** (ಬೃ. ಉ. ೧-೨-೧) ಸಕಲವೂ ಮೃತ್ಯುವಿನಿಂದಲೇ ಆವೃತವಾಗಿದ್ದಿತು ಇತ್ಯಾದಿ ವರ್ಣನ ಗಳಿಂದಲೂ, ಸ್ತುತಿಸಿದೆಯೋ ಆ ಕಾರಣರೂಪವಾದ ಪರಬ್ರಹ್ಮನ ಅವಿಕೃತಾವಸ್ಥೆಯೂ **ಛಾಯಾ** ಎಂಬ ಪದದಿಂದಲೇ ವರ್ಣಿಸಲ್ಪಟ್ಟಿರುತ್ತದೆ

ಪ್ರಕೃತವಾದ ಮಂತ್ರದಲ್ಲಿ ಮೊದಲನೆಯ ಅರ್ಥವೇ ಸಹಜವಾಗಿರುತ್ತದೆ. ಸಾಯಣರು **ಛಾಯಯಾ** ಎಂಬ ಪದಕ್ಕೆ **ದೀಪ್ತ್ಯಾ** ಎಂದು ಅರ್ಥಮಾಡುವುದರಲ್ಲಿ, ಯಾವ ಕಾರಣತತ್ತ್ವವು ದೃಷ್ಟಿವೈವಿಧ್ಯಗಳಿಂದ ನಾನಾರೂಪ ದಲ್ಲಿ ಸ್ತುತವಾಗಿರುವುದೋ ಅದೇ ತತ್ತ್ವದ ನಾನಾತ್ಮಕವಾದವೂ ಜ್ಯೋತಿರೂಪವೂ ಆದ ಪ್ರತಿಬಿಂಬಗಳು ಎಂದು ತಾತ್ಪರ್ಯವಾಗುತ್ತದೆ.

## ಮೂಲತತ್ತ್ವ

ಇದೇ ಮೂಲತತ್ತ್ವವನ್ನು **ಅಗ್ನಿ, ಸಾಮನ್, ಉಕ್ಥ, ಊರ್ಜ, ಗಂಧರ್ವ** ಇತ್ಯಾದಿ ನಾಮಗಳಿಂದ ಅವ ರವರ ದರ್ಶನಕ್ಕೆ ಗೋಚರವಾದ ಗುಣಗಳ ಆಧಾರದ ಮೇಲೆ ವರ್ಣಿಸಿ ಅಧ್ವರ್ಯುಗಳು, ಬಹ್ವೃಚರು ಇತ್ಯಾದ್ಯು ಪಾಸ ಕರು ಆರಾಧಿಸಿದ್ದಾರೆ. ಇಂದ್ರಾದಿ ದೇವತೆಗಳೆಲ್ಲರೂ ಒಂದೇ ತತ್ತ್ವದ ನಾನಾ ವಿಭೂತಿವಿಶೇಷಗಳಿಂದೂ ಆ ತತ್ತ್ವದ ಮಹಾಭಾಗ್ಯತೆಯಿಂದಲೇ **ರೂಪಂರೂಪಂ ಪ್ರತಿರೂಪೋ ಬಭೂವ** (ಋ. ಸಂ ೬-೪೭-೧೮) ಒಂದೇ ವಸ್ತುವು ಬೇರೆ ಬೇರೆ ರೂಪಾಂತರವನ್ನು ಹೊಂದುತ್ತದೆ ಎಂಬುದಾಗಿ ನಿರುಕ್ತಾದಿವಾಕ್ಯಗಳನ್ನು ಉದಾಹರಿಸಿ ದೇವತೈಕ್ಯದ ವಿಷ ಯದಲ್ಲಿ ವೈದಿಕಾಭಿಪ್ರಾಯವನ್ನು ವಿಸ್ತರಿಸಿ ತಿಳಿಸಿದೆ. (ಋ. ಸಂ.೧-೧೬೪-೪೬ ನೇ ಮಂತ್ರ ಉದಾ –**ಇಂದ್ರಂ ಮಿತ್ರಂ ವರುಣ ಮಗ್ನಿಮಾಹುಃ**), ಪ್ರಕೃತದಲ್ಲಿಯೂ ಅದೇ ವಿಷಯವಿದ್ದರೂ ಸಹ ಇಲ್ಲಿ ಕೇವಲ ದೇವತೈಕ್ಯವನ್ನು ಮಾತ್ರ ಪ್ರಸ್ತಾಪಿಸದೇ, ವಿಶ್ವೈಕ್ಯಪ್ರತಿಪಾದಕವಾದ ಈ ಮಂತ್ರವನ್ನು ವಿವರಿಸಿ ಜಗತ್ತಿನಲ್ಲಿ ಪ್ರಕಾಶಿತವಾಗಿರುವ **ಸದಸತ್, ಛಾಯಾತಪ,** ಜನ್ಮಮರಣ, **ಜ್ಯೋತಿ** ಮತ್ತು **ತಮಸ್** ಇತ್ಯಾದಿ ವಿರುದ್ಧಾಂಶಗಳೂ ಕೂಡ ಒಂದೇ ಆಶ್ರಯವನ್ನು ಹೊಂದಿರುತ್ತವೆ. ಬ್ರಹ್ಮಾತಿರಿಕ್ತವಾದ ವಸ್ತುವಾವುದೂ ಇಲ್ಲ ಎಂಬ ವಿಷಯದಲ್ಲಿ ವೈದಿಕವಾಕ್ಯಗಳಲ್ಲಿ ತಿಳಿಸಿರುವ ಅಭಿಪ್ರಾಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತದೆ.

**ಛಾಯಾ** ಎಂಬ ಪದವು ಪರತತ್ತ್ವದ ವ್ಯಾಕೃತ ಮತ್ತು ಅವ್ಯಾಕೃತಸ್ವರೂಪಗಳೆರಡನ್ನೂ ತಿಳಿಸುವುದಾಗಿದೆ ಯೆಂದು ಮೇಲೆ ತಿಳಿಸಿದೆ. ವ್ಯಾಕೃತ ಪ್ರಪಂಚದಲ್ಲಿ ನಾನಾತ್ವ ಮತ್ತು ಅವ್ಯಾಕೃತ ಸ್ಥಿತಿಯಲ್ಲಿ ಐಕ್ಯ **ಅಪಾದಶೀರ್ಷಾ ಗುಹಮಾನೋ ಅಂತಾ** (ಋ.ಸಂ ೪-೧-೧೧) ಇತ್ಯಾದಿ ವಾಕ್ಯಗಳು ಈ ಎರಡು ಅಂಶಗಳನ್ನು ವಿವರಿಸುವುವಾಗಿವೆ. (ಉದಾಹೃತವಾಗಿರುವ ೪-೧-೧೧ ನೇ ಮಂತ್ರದ ತಾತ್ಪರ್ಯವನ್ನು ಮೇಲೆ **ಅಹಿರ್ಬುಧ್ನ್ಯ** ವಿಷಯವನ್ನು ವಿವರಿಸುವಾಗ ತಿಳಿಸಿದೆ) ಇದರಂತೆಯೇ [illegible]

ಶಬ್ದವು ಸಂಖ್ಯಾವಾಚಕವಾಗಿ ಕೇವಲ ಸಹಸ್ರ ಸಂಖ್ಯೆಯನ್ನು ಮಾತ್ರ ನಿರ್ದೇಶಿಸುವುದಿಲ್ಲ. ಸಹಸ್ರಶಬ್ದಕ್ಕೆ ಅನಂತ ವೆಂದರ್ಥ. ಅನಂತವಾದ ರೂಪಗಳನ್ನೂ ತನ್ನಲ್ಲೇ ಹೊಂದಿರುವ **ಬ್ರಹ್ಮಯೋನಿ** (ಮು. ಉ ೩-೧-೩) ಯೆಂದರ್ಥ. **ತದೇಕಂ** (ಋ. ಸಂ. ೧೦.೧೨೯-೨) , **ವಿಶ್ವಮೇಕಂ** (ಋ.ಸಂ. ೩.೫೪.೮) ; **ವಚೋಭಿರೇಕಂ ಸಂತಂ ಬಹುಧಾ ಕಲ್ಪಯಂತಿ** (ಋ ಸಂ. ೧೦-೧೧೪.೫) ; ಇತ್ಯಾದಿ ಮಂತ್ರಗಳು ಇದೇ ತಾತ್ಪರ್ಯವನ್ನು ತಿಳಿಸುತ್ತವೆ. ಎಂದರೆ, **ಛಾಯಾ** ರೂಪದಿಂದ ಯಾವ ಯಾವ ಆವಿರ್ಭಾವವಾಗುವುದೋ ಆಯಾ ನಾಮನಿರ್ದೇಶವೆಂದರ್ಥ. ಈ ವಿಧವಾಗಿ ವ್ಯಾಕೃತಾ ವ್ಯಾಕೃತ ಸ್ವರೂಪಗಳೆರಡೂ ಒಂದೇ ಮೂಲವಸ್ತುವಿನಿದ್ದು ಅದರ ವಿಪರಿಣಾಮ ಮತ್ತು ಪರಾವೃತ್ತಿಗಳೇ ಜಗದ್ವ್ಯವಹಾರ ರೂಪ ಎಂಬ ವಿಷಯವನ್ನು ಸಂಹಿತಾವಾಕ್ಯಗಳು ಯಾವ ರೀತಿಯಲ್ಲಿ ಪರಿಶೀಲಿಸಿರುವುವು ಎಂಬುದನ್ನು ತಿಳಿಯುವುದೇ ಪ್ರಕೃತವಾದ ಉದ್ದಿಷ್ಯವಾಗಿದೆ

**ಯೇ ಅರ್ವಾಂಚಸ್ತಾಁ ಉ ಪರಾಚ ಆಹುರ್ಯೇ ಪರಾಂಚಸ್ತಾಁ ಉ ಅರ್ವಾಚ ಆಹುಃ ।**

(ಋ ಸಂ ೧.೧೬೪-೧೯)

ಅಧೋಮುಖವಾದ ಸಂಚಾರವುಳ್ಳ ಆದಿತ್ಯಚಕ್ರದ ಯಾವ ರಶ್ಮಿಗಳಿವೆಯೋ ಅವನ್ನೇ ಊರ್ಧ್ವಮುಖ ವಾದ ಸ್ಥಿತಿಗಳುಳ್ಳವು ಎಂಬುವನ್ನಾಗಿ ಕಾಲವಿತ್ತುಗಳು ಹೇಳುತ್ತಾರೆ ಯಾವ ರಶ್ಮಿಗಳು ಊರ್ಧ್ವಮುಖವಾದ ಪ್ರಸರಗಳುಳ್ಳವೋ ಅವನ್ನೇ ಅಧೋಗಾಮಿಯಾದವು ಎಂದೂ ಹೇಳುತ್ತಾರೆ. ಇದನ್ನೇ **ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ** ಎಂಬ ವಾಕ್ಯದಲ್ಲಿಯೂ (ಭ ಗೀ ೨-೬೯) ನಿರ್ದೇಶಿಸಿದೆ. ಈ ರೀತಿಯಾಗಿ ಪ್ರಕಾಶ ಮತ್ತು ಅಂಧಕಾರ ಈ ಎರಡು ಅಂಶಗಳನ್ನೂ ಒಂದೇ ಪದವು ಸೂಚಿಸುವುದೂ ಉಂಟು ಉದಾಹರಣೆಗೆ, **ವಿಶ್ವರೂಪ, ವೃತ್ರ** ಇತ್ಯಾದಿಯಾದ ಒಂದೆರಡು ಪದಗಳ ತಾತ್ಪರ್ಯಗಳನ್ನು ಕೆಲವು ಸಂದರ್ಭಗಳ ಪರಿಶೀಲನೆಯಿಂದ ವಿಮರ್ಶಿಸಬಹುದು

**ವಿಶ್ವರೂಪ** :—ಈ ಪದವು ಅಸುರನಿಗೆ ವಿಶೇಷಣವಾಗಿರುತ್ತದೆ. ಹಾಗೆಯೇ, ದೇವಮಾನವಾದಿಗಳಿಗೆಲ್ಲಾ ಸೃಷ್ಟಿಕರ್ತನಾದ **ತ್ವಷ್ಟೃ**ವಿಗೂ ವಿಶೇಷಣವಾಗಿರುತ್ತದೆ.

**ಅಸ್ಮಭ್ಯಂ ತತ್ತ್ವಾಷ್ಟ್ರಂ ವಿಶ್ವರೂಪಮರಂಧಯಃ ಸಾಖ್ಯಸ್ಯ ತ್ರಿತಾಯ ।**

(ಋ. ಸಂ ೨-೧೧-೧೯)

**ತ್ವಾಷ್ಟ್ರಸ್ಯ ಚಿದ್ವಿಶ್ವರೂಪಸ್ಯ ಗೋನಾಮಾಚಕ್ರಾಣಸ್ತ್ರೀಣಿ ಶೀರ್ಷಾ ಪರಾ ವರ್ಕ್ ।**

(ಋ ಸಂ. ೧೦-೮-೯)

ಇತ್ಯಾದಿ ಸನ್ನಿವೇಶಗಳಲ್ಲೆಲ್ಲಾ ಅಸುರನಾದ ವಿಶ್ವರೂಪನ ಹನನವು ವಿವೃತವಾಗಿರುತ್ತದೆ **ತ್ರಿಶೀರ್ಷ** ಎಂದರೆ ಮೂರು ಶಿರಸ್ಸುಳ್ಳವನು ಆರು ಕಣ್ಣುಳ್ಳವನು ಮತ್ತು ಸಪ್ತರಶ್ಮಿಗಳುಳ್ಳವನು ಇತ್ಯಾದಿಯಾಗಿರುವ ಈ ವಿಶ್ವರೂಪನ ವರ್ಣನೆಗಳು ಇವನ ಅಸುರತ್ವ ಮತ್ತು ದೇವತ್ವ ಎರಡನ್ನೂ ತಿಳಿಸುವುದಾಗಿವೆ ಅಸುರನಾದ ಈ ವಿಶ್ವರೂಪನ ಹನನವಾದೊಡನೆಯೇ, **ವೃತ್ರನ** ಆವಿರ್ಭಾವವಾಗುತ್ತದೆ. ಒಡನೆಯೇ ಅಗ್ನಿ ಮತ್ತು ಸೋಮ ಇವರಿಬ್ಬರೂ ವೃತ್ರಾಖ್ಯವಾದ ಆಸುರೀ ಶಕ್ತಿಗೆ ಒಳಪಡುತ್ತಾರೆ. ಇಂದ್ರನೂ ಮತ್ತು ತ್ವಷ್ಟೃವೂ ಇದರಿಂದ ಗಾಬರಿಗೊಳ್ಳುತ್ತಾರೆ. ಆಗ ತ್ವಷ್ಟೃವು ಇಂದ್ರನಿಗೆ ವಜ್ರಾಯುಧವನ್ನು ನಿರ್ಮಿಸಿಕೊಡುತ್ತಾನೆ. ಇಂದ್ರನು ವಜ್ರಾಯುಧವನ್ನು ಎತ್ತಿದೊಡನೆಯೇ ವೃತ್ರನಲ್ಲಿ ಅಂತರ್ಗತ

ರಾಗಿದ್ದ ಅಗ್ನಿ ಮತ್ತು ಸೋಮ ಇಬ್ಬರೂ ಸಹ ತಮ್ಮ ಭೀತಿಯನ್ನು ತೋರ್ಪಡಿಸಿದಾಗ ಇಂದ್ರನು ವೃತ್ರಾಸುರನ ಬಾಯನ್ನು ಅಗಲಿಸುವಂತೆ ಮಾಡುತ್ತಾನೆ. ಆಗ ಅಗ್ನಿ ಮತ್ತು ಸೋಮ ಇವರಿಬ್ಬರೂ ಹೊರಕ್ಕೆ ಬರುತ್ತಾರೆ ಎಂದಿರುವಾಗ ಈ ವಿವರಣೆಯ ತಾತ್ಪರ್ಯವೇನು ಎಂಬುದನ್ನು ಗಮನಿಸಬೇಕು. (**ಮುಖಾದಿಂದ್ರಶ್ಚಾಗ್ನಿಶ್ಚ**. ಋ. ಸಂ. ೧೦-೯೦.೧೩ ಎಂದು ಪುರುಷನ ಮುಖದಿಂದ ಇಂದ್ರ ಮತ್ತು ಅಗ್ನಿ ಇಬ್ಬರೂ ಆವಿರ್ಭೂತರಾದರು ಎಂದಿರುತ್ತದೆ),

ತ್ವಷ್ಟೃವಿನ ಸಂಕಲ್ಪದಿಂದ ಇಂದ್ರಸಿರೋಧಾರ್ಥವಾಗಿ ಉತ್ಪನ್ನನಾದ ಈ ವೃತ್ರನ ಸ್ವರೂಪವನ್ನು ವರ್ಣಿಸುತ್ತಾ ತೈತ್ತಿರೀಯ ಸಂಹಿತೆಯಲ್ಲಿ ಈ ರೀತಿ ತಿಳಿಸಿದೆ.

**ಸ ಇಮಾಂಲ್ಲೋಕಾನವೃಣೋದ್ಯದಿಮಾಂಲ್ಲೋಕಾನವೃಣೋತ್ತದ್ವೃತ್ರಸ್ಯ ವೃತ್ರತ್ವಂ ।**

(ತೈ. ಸಂ. ೨-೪-೧೨ ೨)

ಉತ್ಪನ್ನನಾದೊಡನೆಯೇ ಸಕಲ ಲೋಕಗಳನ್ನೂ ವ್ಯಾಪಿಸಿದುದರಿಂದ ಇವನಿಗೆ ವೃತ್ರನೆಂದು ಹೆಸರು ಎಂಬುದಾಗಿ ವಿಷ್ಣುವಿಗೂ ಮತ್ತು ವಿಶ್ವರೂಪನಿಗೂ ಇತರ ಕಡೆಗಳಲ್ಲಿ ಯಾವ ಲಕ್ಷಣಗಳನ್ನು ಹೇಳಿದೆಯೋ ಅದೇ ಲಕ್ಷಣವನ್ನು ಈ ವೃತ್ರನಿಗೂ ತಿಳಿಸಿದೆ. ಅಗ್ನಿ ಮತ್ತು ಸೋಮ ಇವರಿಬ್ಬರೂ ವೃತ್ರನಲ್ಲಿ ಅಂತರ್ಗತರಾಗಿದ್ದರೆಂದು ತಿಳಿಸಿರುವಂತೆಯೇ ದ್ಯಾವಾಪೃಥಿವಿಗಳೂ ಸಹ ಈ ವೃತ್ರನಲ್ಲಿಯೇ ಅಂತರ್ಗತರಾಗಿದ್ದರೆಂದೂ ತಿಳಿಸಿದೆ. ಇಂದ್ರನು, ಅಗ್ನಿ ಮತ್ತು ಸೋಮ ಇವರಿಬ್ಬರೂ ವೃತ್ರನಿಂದ ಹೊರಕ್ಕೆ ಬಂದೊಡನೆಯೇ ಪುನಃ ವಜ್ರಾಯುಧವನ್ನು ಮೇಲೆಕ್ಕೆತ್ತಿದಾಗ, ದ್ಯಾವಾಪೃಥಿವಿಗಳಿಬ್ಬರೂ ಸಹ ಇಂದ್ರನನ್ನು ತಡೆದು ನಾವಿಬ್ಬರೂ ಇವನಲ್ಲಿದ್ದೇವೆ, ಇವನನ್ನು ಹೊಡೆಯಬೇಡವೆಂದರು. ಆಗ ಅವನಿಂದ ಹೊರಕ್ಕೆ ಬಂದ ದ್ಯಾವಾಪೃಥಿವಿಗಳಿಬ್ಬರೂ ತಮ್ಮ ವೈಯಕ್ತಿಕವಾದ ಪ್ರಕಾಶವನ್ನು ಹೊಂದಿದರು ಎಂದಿರುವಾಗ ವೃತ್ರನ ಸರ್ವವ್ಯಾಪಕತ್ವವು ತಿಳಿಯುತ್ತದೆ. ಈ ಸಂದರ್ಭದಲ್ಲಿ ಇಂದ್ರನು ವಿಷ್ಣುವಿಗೆ ಹೇಳತಕ್ಕ ಮಾತು ಗಮನಾರ್ಹವಾದುದು

**ಸೋಽಬ್ರವೀದ್ವಿಷ್ಣವೇಹೀದಮಾ ಹರಿಷ್ಯಾವೋ ಯೇನಾಯಮಿದ ಮಿತಿ ಸ ವಿಷ್ಣುಸ್ತ್ರೇಧಾತ್ಮಾನಂ ವಿ ನ್ಯಧತ್ತ ಪೃಥಿವ್ಯಾಂ ತೃತೀಯಮಂತರಿಕ್ಷೇ ತೃತೀಯಂ ದಿವಿ ತೃತೀಯಂ ॥**

(ತೈ. ಸಂ. ೨.೪-೧೨-೩)

ಎಲೈ ವಿಷ್ಣುವೇ, ಮೂರುಲೋಕಗಳನ್ನೂ ತನ್ನ ಅಂತರ್ಗತವನ್ನಾಗಿ ಮಾಡಿಕೊಂಡಿರುವ ಈ ವೃತ್ರನನ್ನು ಸಂಹರಿಸಲು ನನಗೆ ಸಹಾಯಮಾಡು ಎಂದಾಗ ವಿಷ್ಣುವು ಮೂರುಲೋಕಗಳನ್ನೂ ವ್ಯಾಪಿಸಿದ್ದ ವೃತ್ರನನ್ನು ತಡೆಗಟ್ಟಲು ತಾನೂ ಮೂರುಲೋಕಗಳನ್ನೂ ವ್ಯಾಪಿಸಿದನು ಎಂದಿರುತ್ತದೆ- ಋ ಸಂ. ೧೦-೮೮-೯ ರಲ್ಲು **ಯಸ್ಮಿನ್ನಾಜುಹವುರ್ಭುವನಾನಿ ವಿಶ್ವಾ**—ಸಕಲ ವಿಶ್ವವನ್ನೂ ಅಗ್ನಿಯಲ್ಲಿ ಆಹುತಿರೂಪದಲ್ಲಿ ಅರ್ಪಿಸಿದರು ಎಂಬ ಯಾವ ವರ್ಣನವಿದೆಯೋ ವೃತ್ರವ್ಯಾಪಕತ್ವದಲ್ಲೂ ಅದೇ ಅಂಶವು ಸೂಚಿತವಾಗಿದೆ. ದೇವತೆಗಳು, ಶಾಸ್ತ್ರಗಳು, ಯಶಸ್ಸು, ಅನ್ನ, ರೂಪ ಇವೆಲ್ಲವೂ ವೃತ್ರನ ಮುಖದಿಂದಲೇ ಹೊರಕ್ಕೆ ಹೊರಟವು. ಪುರುಷಸೂಕ್ತದಲ್ಲಿ ಯಾವ ರೀತಿ ವರ್ಣಿತವಾಗಿದೆಯೋ ವೃತ್ರವಧಕಾಲದಲ್ಲೂ ಅದೇ ರೀತಿಯ ವರ್ಣನೆಗಳಿರುತ್ತವೆ. ಆದುದರಿಂದ ಅಸುರರೆಂದು ಪ್ರಸಿದ್ಧರಾದ **ವಿಶ್ವರೂಪ** ಮತ್ತು **ವೃತ್ರ** ಇವರಿಬ್ಬರ ವ್ಯಂಸನಕಾಲದಲ್ಲೂ ಸಹ ಸೃಷ್ಟಿಕಾಲಕ್ಕೆ ಪೂರ್ವಭಾವಿಯಾದ ಸಿದ್ಧತೆಯು ತೋರ್ಪಟ್ಟಿರುತ್ತದೆ. ಪುರುಷಸೂಕ್ತದಲ್ಲಿ ವರ್ಣಿತವಾಗಿರುವ ಪುರುಷವಿಭಾಗವೂ ವೃತ್ರಹನನಕಾಲದಲ್ಲಿ ವೃತ್ರವಿಭಾಗವೂ ಒಂದೇ

ರೀತಿಯಲ್ಲಿರುತ್ತದೆ. ಪುರುಷವಿಭಾಗಕಾಲದಲ್ಲಿ (**ವ್ಯದಧುಃ, ಕತಿಧಾ, ವ್ಯಕಲ್ಪಯನ್** ಇತ್ಯಾದಿ ವಾಕ್ಯಗಳಿಂದ ಸೂಚಿತವಾಗುವ, ಸೃಷ್ಟಿಪ್ರಯತ್ನವೂ ಮತ್ತು ದೇವಮಾನವಾದಿಗಳ ಉತ್ಪತ್ತಿಯೂ ಸಹ ವೃತ್ರಹನನಕಾಲದಲ್ಲೂ ವರ್ಣಿತವಾಗಿದೆ. ಆವೃತನಾಗಿರು, ಪರಿಭ್ರಮಣವನ್ನು ಹೊಂದು ಇತ್ಯಾದ್ಯರ್ಥಗಳನ್ನು ಕೊಡುವ **ವೃ** ಧಾತುವಿನಿಂದ **ವೃತ್ರ** ಪದವು ನಿಷ್ಪನ್ನವಾಗಿದೆ. ಆದುದರಿಂದ **ಈ ಗುಣಗಳಿರುವ ಅಗ್ನಿ** ಮತ್ತು **ಸೂರ್ಯಾದಿಗಳ** ಗುಣಗಳನ್ನೂ **ಈ** ವಿಶೇಷಣವು ಪ್ರಶಂಸಿಸಬಹುದು. **ಅಹಿ**ಶಬ್ದವೂ ಸಹ ಹೇಗೆ ವೃತ್ರನ ಗುಣವನ್ನು ವಿವರಿಸುವುದೋ ಹಾಗೆಯೇ, ಅಗ್ನಿ ಮತ್ತು ಸೋಮಗಳ ಗುಣವನ್ನೂ ತಿಳಿಸುತ್ತದೆ. ಯಾವ **ಅಹಿ**ಯೆಂಬ ವಿಶೇಷಣವು ವೃತ್ರನ ವೈಯಕ್ತಿಕಗುಣವನ್ನು ಸೂಚಿಸುವುದೋ ಅದೇ ರೀತಿ ಅಗ್ನ್ಯಾದಿಗಳ ಗುಣವನ್ನೂ ತಿಳಿಸುತ್ತದೆ. (**ಅಹಿರ್ಬುಧ್ನ್ಯ** ಎಂಬ ಪ್ರಕರಣದಲ್ಲಿ ಈ ವಿಷಯವನ್ನು ತಿಳಿಸಿದೆ). ಈ ಪ್ರಕರಣದಲ್ಲಿ ವೃತ್ರನಿಗೂ, ವರುಣನಿಗೂ ಇರುವ ಸಾಮ್ಯವನ್ನು ವಿಚಾರಿಸುವುದೂ ಅಗತ್ಯವಾಗಿರುತ್ತದೆ **ಆನೀದವಾತಂ** (ಋ. ಸಂ. ೧೦-೧೨೯-೨) ಇತ್ಯಾದಿ ಮಂತ್ರಗಳಲ್ಲಿ ವರ್ಣಿತವಾದಂತೆ ಯಾವ ಆವರಕವಾದ ಶಕ್ತಿಯಿಂದ ವಿಶ್ವವೆಲ್ಲವೂ ವ್ಯಾಪೃತವಾಗಿದೆಯೋ ಅದು **ವೃತ್ರ**ಶಬ್ದವಾಚ್ಯವಾಗಬಹುದು ಅಥವಾ **ವರುಣ** ಶಬ್ದವಾಚ್ಯವಾಗಬಹುದು. ಎರಡು ಪದಗಳೂ **ಆವೃತವಾಗು** ಎಂಬರ್ಥವನ್ನು ಕೊಡುವ **ವೃ** ಧಾತುವಿನಿಂದಲೇ ನಿಷ್ಪನ್ನವಾಗಿವೆ. ಈ ಧಾತುವಿನಿಂದ ವ್ಯಾಪಿಸು ಅಥವಾ ಆವೃತವಾಗು ಎಂಬರ್ಥವಲ್ಲದೇ, ಪುನಃಪುನಃ ಆವೃತವಾಗು ಎಂಬರ್ಥವೂ ಸಾಧ್ಯವಾಗುತ್ತದೆ ಈ ಅರ್ಥವು ಸಾಧ್ಯವಾಗುವುದರಿಂದಲೇ, **ಛಾಯಾ** ಶಬ್ದಕ್ಕೆ ಒಂದು ಸಲ ವ್ಯಾಕೃತವಾದ ಸ್ಥಿತಿ ಮತ್ತು ಇನ್ನೊಂದು ಸಲ ಅವ್ಯಾಕೃತವಾದ ಸ್ಥಿತಿ ಈ ರೀತಿಯಾದ ಎರಡು ಅರ್ಥವೂ ಸಾಧ್ಯವಾಗುತ್ತದೆ. ಸೃಷ್ಟಿಪ್ರಲಯಗಳು ಆವೃತ್ತರೂಪದಲ್ಲಿದ್ದು **ಛಾಯಾ** ಶಬ್ದಾರ್ಥವೂ ಈ ಕ್ರಮವನ್ನನುಸರಿಸುತ್ತದೆ. ಆದುದರಿಂದಲೇ ಅಗ್ನಿಯ ಚಲನವಲನವೂ ಸಹ ಪರ್ಯಾಯರೂಪದಲ್ಲಿರುತ್ತದೆ. **ಅಹಿರ್ಬುಧ್ನ್ಯ**ರೂಪದಲ್ಲಿ ಯಾವನು ಮೂಲತತ್ತ್ವವನ್ನು ಪ್ರತಿಬಿಂಬಿಸುವನೋ, ಅವನೇ ಯಾಗಶಾಲೆಯಲ್ಲಿ ಗಾರ್ಹಪತ್ಯಾದಿರೂಪದಲ್ಲಿರುತ್ತಾನೆ ಮತ್ತು ಜಗತ್ತೆಲ್ಲನನ್ನೂ ತನ್ನಲ್ಲೇ ಅಡಕಮಾಡಿಕೊಂಡು ಆಗಾಗ್ಗೆ ಹೊರಕ್ಕೆ ಪ್ರಕಾಶಿತವಾಗುವಂತೆ ಮಾಡುತ್ತಾನೆ. ಇದನ್ನೇ ಐತರೇಯಬ್ರಾಹ್ಮಣದಲ್ಲಿ ವರ್ಣಿಸುತ್ತಾ **ಸ ವಾ ಏಷೋಽಗ್ನಿರೇವ ಯದಗ್ನಿಷ್ಟೋಮಃ** (ಐ. ಬ್ರಾ ೩-೪೩) ಅಗ್ನಿಯು ಗುಹಾಹಿತನಾಗಿ ಲೋಕದ ಗೋಚರಕ್ಕೆ ಸಾಧಾರಣವಾಗಿ ಸಿಕ್ಕುವವನಲ್ಲ, ಆದರೆ ಅಗ್ನಿಷ್ಟೋಮರೂಪದಲ್ಲಿ ವೇದಿಕೆಯಲ್ಲಿ ಕಾಣಿಸಿಕೊಳ್ಳುವವನು ಎಂದರ್ಥ. ಎಂದರೆ, ಆವೃತರೂಪದಲ್ಲಿ ಆಧ್ಯಾತ್ಮಿಕವೂ, ಆಧಿದೈವಿಕವೂ ಆದ ಸ್ವರೂಪಗಳನ್ನು ಪ್ರಕಾಶಪಡಿಸುವವನು ಎಂದರ್ಥ. ಎಂದರೆ ಶಾಶ್ವತವಾದ ತಿರೋಧಾನವೂ ಇಲ್ಲ, ಶಾಶ್ವತವಾದ ಪ್ರಕಾಶವೂ ಇಲ್ಲ.

ಆದುದರಿಂದಲೇ ಈ ಅಗ್ನಿಷ್ಟೋಮವನ್ನು ರಥಚಕ್ರಕ್ಕೆ ಹೋಲಿಸಿದೆ (**ಯಥೈವ ಪ್ರಾಯಣಂ ಯಥೋದಯನಂ) ಯದಸ್ಯ ಪೂರ್ವಂ ಅಪರಂ ತದಸ್ಯ**–ಇದರ ಪ್ರಾರಂಭವಾವುದೋ ಕೊನೆಯೂ ಅದೇ ಆಗಿದೆ ಆದುದರಿಂದಲೇ **ಅಹೇರೀವ ಸರ್ಪಣಂ** ಎಂದು ಐತರೇಯ ಬ್ರಾಹ್ಮಣವೂ ಅಗ್ನಿಷ್ಟೋಮವನ್ನು ವರ್ಣಿಸಿದೆ. ಯಾವ ಪರತತ್ತ್ವವನ್ನು **ನ ಹ ವಾ ಅಸ್ಮಾ ಉದೇತಿ ನ ನಿಮ್ಲೋಚತಿ** ( ಛಾ. ಉ. ೩-೧೧-೩ ) ಅದು ಉದಯಿಸುವುದೂ ಅಲ್ಲ, ಅಸ್ತಮಿಸುವುದೂ ಇಲ್ಲ ಎಂದು ಯಾವ ರೀತಿ ವರ್ಣಿಸಿದೆಯೋ, ಸರ್ಪಾಕಾರದ ಭ್ರಮಣವುಳ್ಳ ಅಗ್ನಿಷ್ಟೋಮವನ್ನು ಅದೇ ರೀತಿ ವರ್ಣಿಸಿದೆ

ಈ ವಿಧವಾಗಿ ಒಂದು ಸಲ ಅಂತರ್ಹಿತವಾಗಿಯೂ ಇನ್ನೊಂದು ಸಲ ಬಾಹ್ಯಪ್ರಕಾಶವನ್ನು ಹೊಂದಿಯೂ ಆವೃತ್ತಿರೂಪದ **ಛಾಯಾ** ತತ್ತ್ವವನ್ನು ಋಕ್ಸಂಹಿತೆಯಲ್ಲಿ ಅನೇಕ ಸಂದರ್ಭಗಳಲ್ಲಿ ಪ್ರಶಂಸಿಸಿದೆ. ಆದರೆ ಅಲ್ಲೆಲ್ಲಾ **ಛಾಯಾ** ಎಂಬ ಪದವು ವಾಚ್ಯವಾಗಿರಬೇಕಾಗಿಲ್ಲ. ಅದೇ ಅಭಿಪ್ರಾಯವು ನಿಷ್ಕೃಷ್ಟವಾಗಿ ಸೂಚಿತವಾಗಿದೆ.

**ಸಮಾನಮೇತದುದಕಮುಚ್ಚೈತ್ಯವ ಚಾಹಭಿಃ ॥**

(ಋ ಸಂ ೧-೧೬೪-೫೧)

**ಸದೃಶೀರದ್ಯ ಸದೃಶೀರಿದು ಶ್ವೋ ದೀರ್ಘಂ ಸಚಂತೇ ವರುಣಸ್ಯ ಧಾಮ ॥**

(ಋ. ಸಂ. ೧-೧೨೩-೮)

**ಅನಂತಾಸ ಉರವೋ ವಿಶ್ವತಃ ಸೀಂ ಪರಿ ದ್ಯಾವಾಪೃಥಿವೀ ಯಂತಿ ಪಂಥಾಃ ॥**

(ಋ ಸಂ. ೫-೪೭-೨)

ಇತ್ಯಾದಿ ವಾಕ್ಯಗಳಲ್ಲಿರುವ ಅಭಿಪ್ರಾಯಗಳು ಪ್ರಕೃತವಾದ ಮಂತ್ರದಲ್ಲಿರುವ ತಾತ್ಪರ್ಯವನ್ನೇ ತಿಳಿಸುತ್ತವೆ ಪುನರಾವೃತ್ತಿರೂಪವಾದುದೂ, ವೈವಿಧ್ಯದಲ್ಲಿಯೂ ಐಕ್ಯವನ್ನು ತೋರಿಸತಕ್ಕದ್ದೂ ಆದ ಈ ತತ್ತ್ವವನ್ನು ತೈತ್ತಿರೀಯಸಂಹಿತೆಯಲ್ಲಿ ಬಹಳ ಅತಿಶಯವಾಗಿ ವರ್ಣಿಸಿರುತ್ತದೆ—ಯಾವ **ಛಾಯಾ**ತತ್ತ್ವವು ಎರಡು ರೂಪವುಳ್ಳದ್ದಾಗಿರುವುದೋ ಆದರೂ ಒಂದೇ ವಸ್ತುವಿನ ಎರಡು ರೂಪಾಂತರಗಳೋ ಹಾಗೆಯೇ ಪ್ರಕಾಶ ಮತ್ತು ತಮಸ್ಸು ಎಂಬ ಎರಡು ರೂಪಾಂತರಗಳ ವರ್ಣನೆಯೇ ಇದಾಗಿದೆ.

**ದ್ವೌ ಸಮುದ್ರೌ ವಿತತಾವಜೂರ್ಯೌ ಪರ್ಯಾವರ್ತೇತೇ ಜಠರೇವ ಪಾದಾಃ । ತಯೋಃ ಪಶ್ಯಂತೋ ಅತಿ ಯಂತ್ಯನ್ಯಮಪಶ್ಯಂತಃ । ಸೇತುನಾತಿ ಯಂತ್ಯನ್ಯಂ । ದ್ವೇ ದ್ರಧಸೀ ಸತತೀ ವಸ್ತ ಏಕಃ ಕೇಶೀ ವಿಶ್ವಾ ಭುವನಾನಿ ವಿದ್ವಾನ್ । ತಿರೋಧಾಯೈತ್ಯಸಿತಂ ವಸಾನಶ್ಶುಕ್ರಮಾ ದತ್ತೇ ಅನುಹಾಯ ಜಾರ್ಯೈ ॥**

(ತೈ. ಸಂ ೩-೨-೨-೧, ೨)

ಕ್ಷಯರಹಿತವಾದ ಎರಡು ಸಮುದ್ರಗಳಿವೆ. ಅವು ನಾಶರಹಿತವು. ಸಾಗರದ ಮಧ್ಯದಲ್ಲಿ ಅಲೆಗಳು ಹೇಗೆ ಒಂದಾದ ಮೇಲೊಂದು ಪರ್ಯಾಯರೂಪದಲ್ಲಿ ಆವಿರ್ಭವಿಸುವುವೋ ಹಾಗೆ ಈ ಸಮುದ್ರಗಳು ಪರ್ಯಾಯರೂಪದಲ್ಲಿ ಭ್ರಮಣವನ್ನು ಹೊಂದುತ್ತವೆ ಇವುಗಳಲ್ಲಿ ಒಂದರ ಸ್ವರೂಪವನ್ನರಿತವರಾಗಿಯೂ ಇನ್ನೊಂದರ ಸ್ವರೂಪವನ್ನರಿಯದವರಾಗಿಯೂ ಮಾನವರು ಈ ಅಹೋರಾತ್ರಗಳನ್ನು ಕಳೆಯುವರು. ಇವುಗಳಲ್ಲಿ ಒಂದನ್ನು ಆದಿತ್ಯನು ತನ್ನ ಕಿರಣಗಳಿಂದ ಆವರಿಸುತ್ತಾನೆ. (ಇದು ದೀಪ್ತಿರೂಪವಾದ ಛಾಯೆಯು) ಇನ್ನೊಂದನ್ನು ಮರೆಮಾಡಿರುತ್ತಾನೆ. ನಂತರ ಅಂಧಕಾರರೂಪವಾದ ರಾತ್ರಿಯನ್ನು ಬಿಟ್ಟು ಪ್ರಕಾಶಮಾನವಾದ ಅಹಸ್ಸನ್ನಾಕ್ರಮಿಸುತ್ತಾನೆ. ನಂತರ ಅಂಧಕಾರರೂಪವಾದ ರಾತ್ರಿಯನ್ನು ಬಿಟ್ಟು ಪ್ರಕಾಶಮಾನವಾದ ಅಹಸ್ಸನ್ನಾಕ್ರಮಿಸುತ್ತಾನೆ. ಇತ್ಯಾದಿಯಾಗಿ ಛಾಯಾದ್ವಯವೂ ವರ್ಣಿತವಾಗಿದೆ

ಆದುದರಿಂದ ಪ್ರಕೃತವಾದ ಮಂತ್ರದಲ್ಲಿ **ಯಾದೃಗೇವ ದದೃಶೇ** ಎಂಬ ವರ್ಣನೆಯಿಂದ ಪರವಸ್ತುವಿನ ಗೋಚರಾತೀತತ್ವವು ವರ್ಣಿತವಾಗಿದ್ದರೂ ಸಹ, ಅದೇ ವಸ್ತುವಿನ **ಛಾಯಾ**ರೂಪದ ಆವಿರ್ಭಾವದಿಂದ ಕೆಲವು ದೃಷ್ಟಿಗಳಿಗೆ ಕೆಲವು ಅಂಶಗಳು ಗೋಚರಕ್ಕೆ ಬೀಳುತ್ತವೆ. ಇದನ್ನೇ ಪುನಃ ಋಕ್ಸಂಹಿತೆಯಲ್ಲಿ,

**ಸುಪರ್ಣಂ ವಿಪ್ರಾಃ ಕವಯೋ ವಚೋಭಿರೇಕಂ ಸಂತಂ ಬಹುಧಾ ಕಲ್ಪಯಂತಿ ।**
**ಛಂದಾಂಸಿ ಚ ದಧತೋ ಅಧ್ವರೇಷು ಗ್ರಹಾನ್ತ್ಸೋಮಸ್ಯ ಮಿಮತೇ ದ್ವಾದಶ ॥**

(ಋ. ಸಂ ೧೦ ೧೧೪-೫)

ಸುಪತನಸಾದನನೂ, ಅದ್ವಿತೀಯನೂ ಆದ ಪರಮಾತ್ಮನನ್ನು ಕ್ರಾಂತಪ್ರಜ್ಞರಾದ ಮಾನವರು ನಾನಾವಿಧವಾದ ಕಲ್ಪನೆಗಳಿಂದ ಭಾವಿಸಿ ಅವನನ್ನು ಸ್ತುತಿಸುತ್ತಾರೆ ಎಂದಿದೆ. ಈ ಏಕತತ್ತ್ವವು ವಿಶ್ವಕ್ಕೆ ಆದಿಯಾಗಿಯೂ ಆಧಾರವಾಗಿಯೂ ಇರುತ್ತದೆ ಇದನ್ನೇ ಬೃಹದಾರಣ್ಯಕೋಪನಿಷತ್ತಿನಲ್ಲಿ ವರ್ಣಿಸುತ್ತಾ,

**ತದ್ಧೇದಂ ತರ್ಹ್ಯವ್ಯಾಕೃತಮಾಸೀತ್ ತನ್ನಾಮರೂಪಾಭ್ಯಾಮೇವ ವ್ಯಾಕ್ರಿಯತಾಸೌ ನಾಮಾಯಮಿದಂ ರೂಪಂ ಇತಿ ತದಿದಮಪ್ಯೇತರ್ಹಿ ನಾಮರೂಪಾಭ್ಯಾಮೇವ ವ್ಯಾಕ್ರಿಯತೇಽಸೌ ನಾಮಾಯಮಿದಂ ರೂಪ ಇತಿ ಸ ಏಷ ಇಹ ಪ್ರವಿಷ್ಟಃ ॥** (ಬೃ ೧ ೪ ೭)

ಈ ಬ್ರಹ್ಮವು ವ್ಯಾಕೃತರೂಪಕ್ಕೆ ಪರಿವರ್ತಿತವಾಗುವುದಕ್ಕೆ ಮೊದಲು ಇದು ಅಭಿನ್ನವೂ ಅದ್ವೈತವೂ ಆಗಿದ್ದಿತು. ಆಗ ಇದಕ್ಕೆ ನಾಮವಾಗಲಿ ಅಥವಾ ರೂಪವಾಗಲಿ ಇರಲಿಲ್ಲ ವ್ಯಾಕೃತರೂಪಾವಸ್ಥೆಯಲ್ಲಿ ವೈಯಕ್ತಿಕವಾದ ಭಿನ್ನತೆಯನ್ನು ಪಡೆದಾಗ ವೈಯಕ್ತಿಕವಾದ ನಾಮವೂ ಮತ್ತು ರೂಪವೂ ಪ್ರಸಿದ್ಧವಾಯಿತು- ಜಗದ್ವ್ಯವಹಾರಾವಸ್ಥೆಯಲ್ಲಿ ಮಾತ್ರ ಈ ವ್ಯಕ್ತಿಯ ಹೆಸರು ಇದು, ಇದೇ ವ್ಯಕ್ತಿಯ ರೂಪ ಇತ್ಯಾದಿ ನಿರ್ದೇಶಗಳಿರುತ್ತವೆ- ತತ್ಪೂರ್ವದಲ್ಲಿ ನಾಮರೂಪರಹಿತವಾದ ಅದ್ವೈತತತ್ತ್ವಮಾತ್ರವಿದ್ದಿತು. ವ್ಯಾವಹಾರಿಕಜಗತ್ತೆಲ್ಲವೂ ಈ ಪರತತ್ತ್ವದ ಅಂಶವೇ ಆಗಿರುತ್ತದೆ. ಇತ್ಯಾದಿಯಾಗಿ ಉಪನಿಷತ್ತುಗಳಲ್ಲಿ ಈ ಪರತತ್ತ್ವವನ್ನು ವರ್ಣಿಸಿದೆ.

ಈ ಏಕನೇ ವಿಶ್ವಾತ್ಮ, ವಿಶ್ವಾಂತರ್ಗತವಾದ ಚಿಚ್ಛಕ್ತಿ ಮತ್ತು ವಿಶ್ವಶಕ್ತಿಯ ಆಧಾರ ಇದು ಇತರ ಅನೇಕ ಮಂತ್ರಗಳಲ್ಲಿ ವರ್ಣಿತವಾಗಿರುವ ಕೇವಲ ಪೃಥ್ವಿಯೂ ಅಲ್ಲ. ಅಂತರಿಕ್ಷವೂ ಅಲ್ಲ. ಸೂರ್ಯನ ಪ್ರಕಾಶವೂ ಅಲ್ಲ ಭೌತಿಕವಾದ ಪ್ರಕೃತಿಶಕ್ತಿಯೂ ಅಲ್ಲ. ಬೃಹದಾರಣ್ಯಕದಲ್ಲಿ **ನೇತಿ ನೇತಿ** ಎಂಬ ನಿಷೇಧವಾಕ್ಯಗಳಿಂದಲೇ ಯಾವ ಪರಬ್ರಹ್ಮದ ಅಸ್ತಿತ್ವವನ್ನು ಪ್ರತಿಪಾದಿಸಿದೆಯೋ ಅದೇ ಬ್ರಹ್ಮತತ್ತ್ವವು ವಿಶ್ವಚೇತನವಾಗಿದೆ. **ಋತ, ಅದಿತಿ** ಎಂದು ಇತರ ಕಡೆಗಳಲ್ಲಿ ವರ್ಣಿತವಾಗಿರುವ ವಿಶ್ವತತ್ತ್ವವು ಇಲ್ಲಿ ಸ್ತುತವಾಗಿದೆ ವಿಶ್ವದ ನಾನಾ ಜೀವಗಳಲ್ಲೂ ಜೀವತತ್ತ್ವವನ್ನು ತುಂಬುವ ಈ ಶಕ್ತಿಯು ಸರ್ವವ್ಯಾಪಕವಾಗಿದೆ

ಈ ವಿಧವಾಗಿ **ರೂಪಂ ರೂಪಂ ಪ್ರತಿರೂಪೋ** ಬಭೂವ ಎಂಬ ಸೃಷ್ಟಿಸ್ವರೂಪಪ್ರತಿಪಾದಕವಾದ ತತ್ತ್ವದ ವರ್ಣನೆಯು ಅದ್ವೈತವನ್ನು ಬೋಧಿಸಿದರೆ, ಋಕ್ಸಂಹಿತಾವಾಕ್ಯಗಳಲ್ಲಿ ಯಾವ ತತ್ತ್ವವು ಪ್ರತಿಪಾದಿತವಾಗಿದೆಯೋ ಅದೇ ತತ್ತ್ವವೇ ಉಪನಿಷದಾದಿಗಳಲ್ಲಿಯೂ ವರ್ಣಿತವಾಗಿದೆಯೇ ? ಋಕ್ಸಂಹಿತೆಯಲ್ಲಿ ಕಾರ್ಯರೂಪದ ಪ್ರಪಂಚಕ್ಕು ಕಾರಣವಸ್ತುವಿಗೂ ಯಾವ ಸಂಬಂಧವು ಸೂಚಿತವಾಗಿದೆ ? ಅದೇ ಸಂಬಂಧವು ಉಪನಿಷದಾದಿಗಳಲ್ಲಿಯೂ ಸೂಚಿತವಾಗಿದೆಯೇ ಅಥವಾ ಅಲ್ಲಿ ಅಭಿಪ್ರಾಯ ಭೇದವಿದೆಯೇ ? ಪ್ರಕೃತವಾದ ಮಂತ್ರದಲ್ಲಿ **ಛಾಯಾ** ಶಬ್ದಕ್ಕೆ ಯಾವ ಅರ್ಥವನ್ನು ಹೇಳಿದೆಯೋ ಅದೇ ಅರ್ಥವು ಉಪನಿಷತ್ತುಗಳಲ್ಲಿಯೂ ಸಾಧ್ಯವಾಗುತ್ತದೆಯೇ ? ಇತ್ಯಾದ್ಯಂಶಗಳು ಆಧ್ಯಾತ್ಮಿಕತತ್ತ್ವವಿಮರ್ಶೆಗೆ ಅತ್ಯವಶ್ಯವಾದುದರಿಂದ ಉಪನಿಷತ್ತುಗಳಲ್ಲಿ ಇದೇ ತತ್ತ್ವವನ್ನು ಪ್ರತಿಪಾದಿಸುವ ವಾಕ್ಯಗಳ ತಾತ್ಪರ್ಯಕ್ಕೂ ಪ್ರಕೃತವಾದ ಮಂತ್ರದಲ್ಲಿ ಸೂಚಿತವಾಗುವ ತಾತ್ಪರ್ಯಕ್ಕೂ ವ್ಯತ್ಯಾಸವಿರುವುದೇ ಅಥವಾ **ಇಲ್ಲವೇ ಎಂಬ ವಿಷಯವನ್ನು ವಿಮರ್ಶಕಪೂರ್ವಕವಾಗಿ** ಪರಿಶೀಲಿಸಬೇಕು ಈ ವಿಷಯವನ್ನು ಮುಂದೆ ಯಥೋಚಿತವಾದ ಸಂದರ್ಭದಲ್ಲಿ ತಿಳಿಸಲಾಗುತ್ತದೆ.

॥ ಸಂಹಿತಾಪಾಠಃ ॥

ವೇತ್ಯಗ್ರುರ್ಜನಿವಾನ್ವಾ ಅತಿ ಸ್ಪೃಧಃ ಸಮರ್ಯತಾ ಮನಸಾ ಸೂರ್ಯಃ ಕವಿಃ ।
ಘ್ರಂಸಂ ರಕ್ಷಂತಂ ಪರಿ ವಿಶ್ವತೋ ಗಯಮಸ್ಮಾಕಂ ಶರ್ಮ ವನವತ್ ಸ್ವಾವಸುಃ ॥ ೭ ॥

॥ ಪದಪಾಠಃ ॥

ವೇತಿ । ಅಗ್ರುಃ । ಜನಿಽವಾನ್ । ವೈ । ಅತಿ । ಸ್ಪೃಧಃ । ಸಽಮರ್ಯತಾ । ಮನಸಾ । ಸೂರ್ಯಃ । ಕವಿಃ ।
ಘ್ರಂಸಂ । ರಕ್ಷಂತಂ । ಪರಿ । ವಿಶ್ವತಃ । ಗಯಂ । ಅಸ್ಮಾಕಂ । ಶರ್ಮ । ವನವತ್ । ಸ್ವಽವಸುಃ ॥ ೭ ॥

॥ ಸಾಯಣಭಾಷ್ಯಂ ॥

ಇಯಂ ಸೌರೀ । ಸೂರ್ಯೋ ದೇವೋಽಗ್ರುರಗ್ರಗಾಮೀ ಜನಿವಾನ್ವೈ ಜನ್ಮವಾನ್ ಜಾಯಾವಾನ್ವಾ। ಉಷಾ ಹ್ಯಸ್ಯ ಜಾಯಾ । ವಾ ಇತಿ ಪ್ರಸಿದ್ಧೌ । ಕವಿಃ ಕ್ರಾಂತದರ್ಶೀ ಸಮರ್ಯತಾ ಸಮರಮಿಚ್ಛತಾ ಮನಸಾ ಸ್ಪೃಧಃ ಸಂಗ್ರಾಮಾನತಿ ವೇತಿ । ಅತಿ ಗಚ್ಛತಿ ಮಂದೇಹಾನಸುರಾನ್ಯೋದ್ಧುಂ । ಘ್ರಂಸಂ ದೀಪ್ತಂ ಗಯಂ ಗೃಹಮಂತರಿಕ್ಷಂ ವಾ ವಿಶ್ವತಃ ಸರ್ವತೋ ರಕ್ಷಂತಂ । ಪರಿಚರೇಮೇತಿ ಶೇಷಃ । ಸ ದೇವೋಽಸ್ಮಾಕಂ ಶರ್ಮ ಸುಖಂ ಪರಿ ಸಮ್ಯಗ್ವನವತ್ । ದದ್ಯಾತ್ । ಸ್ವಾವಸುಃ ಸ್ವಾಯತ್ತಧನಃ ಸನ್ ॥

॥ ಪ್ರತಿಪದಾರ್ಥ ॥

**ಕವಿಃ**—ಕ್ರಾಂತದರ್ಶಿಯಾದ । **ಸೂರ್ಯಃ**—ಸೂರ್ಯದೇವನು । **ಅಗ್ರುಃ**—ಅಗ್ರಗಾಮಿಯಾಗಿಯೂ । **ಜನಿವಾನ್ವೈ**—ಪತ್ನಿಯಾದ ಉಷೆಯೊಡನೆ ಕೂಡಿಯೂ । **ಸಮರ್ಯತಾ**—(ಮಂದೇಹನಾಮಕರಾದ ಅಸುರರೊಡನೆ) ಯುದ್ಧಮಾಡತಕ್ಕ । **ಮನಸಾ**—ಮನಸ್ಸಿನೊಡನೆ । **ಸ್ಪೃಧಃ**—ಸಂಗ್ರಾಮಕ್ಕೆ । **ಅತಿ ವೇತಿ**—ಮುನ್ನುಗ್ಗುತ್ತಾನೆ । **ಸ್ವಾವಸುಃ**—ಸಕಲಧನವನ್ನೂ ತನ್ನಧೀನದಲ್ಲಿಟ್ಟಿರುವ ಸೂರ್ಯನು । **ಅಸ್ಮಾಕಂ**—ನಮಗೆ । **ಪರಿ**—ಪೂರ್ಣವಾದ । **ಶರ್ಮ**—ಸುಖವನ್ನೂ । **ವಿಶ್ವತಃ**—ಎಲ್ಲಾ ವಿಧಗಳಲ್ಲೂ । **ರಕ್ಷಂತಃ**—ರಕ್ಷಕವಾದುದೂ । **ಘ್ರಂಸಂ** ಪ್ರಕಾಶಮಾನವಾದುದೂ ಆದ । **ಗಯಂ**—ಗೃಹವನ್ನೂ । **ವನವತ್**—ಒದಗಿಸಿಕೊಡಲಿ ।

॥ ಭಾವಾರ್ಥ ॥

ಕ್ರಾಂತದರ್ಶಿಯಾದ ಸೂರ್ಯದೇವನು ಅಗ್ರಗಾಮಿಯಾಗಿಯೂ, ಜಾಯೆಯಾದ ಉಷೆಯೊಡನೆ ಕೂಡಿಯೂ ಮಂದೇಹನಾಮಕರಾದ ಅಸುರರೊಡನೆ ಯುದ್ಧಮಾಡತಕ್ಕ ಮನಸ್ಸಿನಿಂದ ಸಂಗ್ರಾಮಕ್ಕೆ ಮುನ್ನುಗ್ಗುತ್ತಾನೆ.

ಸಕಲ ಧನವನ್ನೂ ತನ್ನಧೀನದಲ್ಲಿಟ್ಟಿರುವ ಸೂರ್ಯನು ನಮಗೆ ಪೂರ್ಣವಾದ ಸುಖವನ್ನೂ, ಎಲ್ಲಾ ವಿಧಗಳಲ್ಲೂ ರಕ್ಷಕವಾದುದೂ, ಪ್ರಕಾಶಮಾನವಾದುದೂ ಆದ ಗೃಹವನ್ನೂ ಒದಗಿಸಿ ಕೊಡಲಿ,

## English Translation

The sage Surya, advancing, accompanied by his bride, (the dawn), proceeds boldly, intent on combat with his enemies: may he on whom riches are dependent, secure our entire felicity, (and grant) a brilliant and everywhere-protecting mansion

॥ ಸಂಹಿತಾಪಾಠಃ ॥

ಜ್ಯಾಯಾಂಸಮಸ್ಯ ಯತುನಸ್ಯ ಕೇತುನ ಋಷಿಸ್ವರಂ ಚರತಿ ಯಾಸು ನಾಮ ತೇ ।
ಯಾದೃಶ್ಮಿನ್ಧಾಯಿ ತಮಪಸ್ಯಯಾ ವಿದದ್ಯ ಉ ಸ್ವಯಂ ವಹತೇ ಸೋ ಅರಂ ಕರತ್ ॥ ೮ ॥

॥ ಪದಪಾಠಃ ॥

ಜ್ಯಾಯಾಂಸಂ । ಅಸ್ಯ । ಯತುನಸ್ಯ । ಕೇತುನಾ । ಋಷಿಽಸ್ವರಂ । ಚರತಿ । ಯಾಸು । ನಾಮ । ತೇ ।
ಯಾದೃಶ್ಮಿನ್ । ಧಾಯಿ । ತಂ । ಅಪಸ್ಯಯಾ । ವಿದತ್ । ಯಃ । ಊಂ ಇತಿ । ಸ್ವಯಂ । ವಹತೇ । ಸಃ ।
ಅರಂ । ಕರತ್ ॥ ೮ ॥

॥ ಸಾಯಣಭಾಷ್ಯಂ ॥

ಇಯಮಾಗ್ನೇಯೀ ಸೌರೀ ವಾ । ಹೇ ದೇವ ಜ್ಯಾಯಾಂಸಮತಿಶಯೇನ ಪ್ರವೃದ್ಧಮಸ್ಯ ಯತುನಸ್ಯ । ಯತತಿರ್ಗತಿಕರ್ಮಾ । ಗಂತುರಸ್ಯ ಸೂರ್ಯಸ್ಯ ॥ ಕರ್ಮಣಿ ಷಷ್ಠೀ ॥ ಅಮುಂ ಗಂತಾರಂ ಕೇತುನಾ ಪ್ರಜ್ಞಾಪಕೇನ ಕರ್ಮಣೋದಯಾದಿಲಕ್ಷಣೇನ ವಿಶಿಷ್ಟಮೃಷಿಸ್ವರಮೃಷಿಭಿಃ ಸ್ತುತ್ಯಂ ತ್ವಾಂ ಚರತಿ । ಗಚ್ಛತಿ । ಭಜತೇ ಯಜಮಾನಃ । ಕೇನ ಸಾಧನೇನ । ಯಾಸು ಸ್ತುತಿಷು ತೇ ತ್ವದೀಯಂ ನಾಮ ನಮನಂ ನಾಮಕಂ ವಾ ರೂಪಂ ವರ್ತತೇ ತಾಭಿರಿತ್ಯರ್ಥಃ । ಯದ್ವಾ । ಅಸ್ಯ ಯತುನಸ್ಯ ಗಮನಶೀಲಸ್ಯ ತವ ಕೇತುನಾ ತಮೋನಿರ್ಹರಣಾದಿಕರ್ಮಣಾ ವಿಶಿಷ್ಟಂ ತ್ವಾಂ ಚರತಿ । ಯಾದೃಶ್ಮಿನ್ಯಾದೃಶೇ ಕಾಮೇ

**ಧಾಯಿ ಧತ್ತೇ ॥ ಕರ್ತರಿ ಚಿಣ್ ॥ ಸಾಮರ್ಥ್ಯಾದನ್ಯನೋ ಗಮ್ಯತೇ । ತಂ । ಯಥಾನಿರ್ದೇಶಂ ಪ್ರತಿನಿರ್ದಿಷ್ಟವ್ಯತ್ವಾತ್ತಾದೃಶಮಿತ್ಯರ್ಥೋ ಜ್ಞಾತವ್ಯಃ । ತಾದೃಶಂ ಕಾಮಮಪಸ್ಯಯಾ ಕರ್ಮಣಾ ಹವಿಃಸ್ತುತ್ಯಾದಿಲಕ್ಷಣೇನ ವಿದತ್ । ವಿಂದತೇ । ಯ ಉ ಯ ಏವ ಸ್ವಯಮನನ್ಯಪ್ರೇರಿತಃ ಸನ್ ಸ್ವಮನೀಷಯೈವ ವಹತೇ ಧಾರಯತಿ ಫಲಂ ಸೋಽರಮಲಮತ್ಯರ್ಥಂ ಕರತ್ । ಕರೋತಿ । ಅಥವಾ ಯ ಉ ಯ ಏವ ಸ್ವಯಂ ವಹತೇ ಸ್ವಯಮೇವಾನುತಿಷ್ಠತಿ ಸೋಽತ್ಯರ್ಥಂ ಕುರ್ಯಾತ್ । ನ ಹ್ಯನ್ಯೇನ ಕಾರಿತಂ ಫಲವದ್ಭವತಿ ॥**

॥ ಪ್ರತಿಪದಾರ್ಥ ॥

(ಎಲೈ ಸೂರ್ಯನೇ) **ಯಾಸು**—ಯಾವ (ಋಷಿಗಳ) ಸ್ತುತಿಗಳಲ್ಲೆಲ್ಲಾ । **ತೇ**—ನಿನ್ನ । **ನಾಮ**—ಪ್ರಸಿದ್ಧವಾದ ನಾಮಸಂಕೀರ್ತನವಿದೆಯೋ ಅಂತಹ । **ಋಷಿಷ್ಟುತಂ**—ಋಷಿಗಳ ಸ್ತುತಿಗಳಿಂದ ಪ್ರಶಂಸಿತನಾದವನೂ । **ಜ್ಯಾಯಾಂಸಂ**—(ದೇವತೆಗಳಲ್ಲೆಲ್ಲಾ) ಜ್ಯೇಷ್ಠನೂ । **ಕೇತುನಾ**—ಉದಯಾದಿ ಲಕ್ಷಣಗಳಿಂದ ನಿರ್ದಿಷ್ಟನಾದವನೂ । **ಅಸ್ಯ ಯತುನಸ್ಯ**—ಸಂಚಾರಶೀಲನೂ ಆದ ನಿನ್ನನ್ನು । **ಚರತಿ**—(ಯಜಮಾನನು) ಸಮೀಪಿಸುತ್ತಾನೆ (ಪೂಜಿಸುತ್ತಾನೆ) । **ಯಾದೃಶ್ಮಿನ್**—ಯಾವ ರೀತಿಯ ಇಚ್ಛೆಯಲ್ಲಿ । **ಧಾಯಿ**—ಮನಸ್ಸನ್ನಿಡುವನೋ । **ತಂ**—ಅದೇ ಇಷ್ಟಾರ್ಥವನ್ನು । **ಅಪಸ್ಯಯಾ**—ತನ್ನ ಭಕ್ತಿಯುತವಾದ ಕರ್ಮದಿಂದ । **ವಿದತ್**—ಪಡೆಯುತ್ತಾನೆ । **ಯ ಉ**—ಯಾವನು । **ಸ್ವಯಂ**—(ನಿರ್ಬಂಧವಿಲ್ಲದೇ) ಸ್ವಯಂಪ್ರೇರಿತನಾಗಿ । **ಕರತ್**—ಪೂಜಾದಿಗಳನ್ನರ್ಪಿಸುವನೋ । **ಸಃ**—ಅವನು । **ಅರಂ**—ಪರ್ಯಾಪ್ತವಾದ ಫಲವನ್ನು । **ವಹತೇ**—ವಹಿಸುತ್ತಾನೆ (ಹೊಂದುತ್ತಾನೆ).

॥ ಭಾವಾರ್ಥ ॥

ಎಲೈ ಸೂರ್ಯನೇ, ಯಾವ ಋಷಿಗಳ ಸ್ತುತಿಗಳಲ್ಲೆಲ್ಲಾ ನಿನ್ನ ಪ್ರಸಿದ್ಧವಾದ ನಾಮಸಂಕೀರ್ತನವಿದೆಯೋ ಅಂತಹ ಋಷಿಗಳ ಸ್ತುತಿಗಳಿಂದ ಪ್ರಶಂಸಿತನಾದವನೂ ದೇವತೆಗಳಲ್ಲೆಲ್ಲಾ ಜ್ಯೇಷ್ಠನೂ, ಉದಯಾದಿಲಕ್ಷಣಗಳಿಂದ ನಿರ್ದಿಷ್ಟನಾದವನೂ ಸಂಚಾರಶೀಲನೂ ಆದ ನಿನ್ನನ್ನು ಯಜಮಾನನು ಸಮೀಪಿಸುತ್ತಾನೆ. ಯಜಮಾನನು ಯಾವ ಇಷ್ಟಾರ್ಥವನ್ನು ಪಡೆಯಬೇಕೆಂದು ಸಂಕಲ್ಪಿಸುವನೋ, ಅದೇ ಇಷ್ಟಾರ್ಥವನ್ನು ತನ್ನ ಭಕ್ತಿಯುತವಾದ ಕರ್ಮದಿಂದ ಪಡೆಯುತ್ತಾನೆ ಯಾವನು ನಿರ್ಬಂಧವಿಲ್ಲದೇ ಸ್ವಯಂಪ್ರೇರಿತನಾಗಿ ಪೂಜಾದಿಗಳನ್ನರ್ಪಿಸುವನೋ ಅವನು ಪರ್ಯಾಪ್ತವಾದ ಫಲವನ್ನು ಪಡೆಯುತ್ತಾನೆ

## English Translation

The (pious man) proceeds to you, most excellent (of the gods, who are indicated) by the sign of this moving (revolution) ; who are hymned by the Rishis in whose praises your name (is glorified) : he obtains that blessing by his devotion, on whatsoever (his desire) has been fixed ; and he also, who of his own accord offers (worship), acquires abundant (reward)

॥ ವಿಶೇಷವಿಷಯಗಳು ॥

**ಯಾದೃಶ್ಮಿನ್**—ಈ ಶಬ್ದಕ್ಕೆ ಯಾಸ್ಕರು ನಿರ್ವಚನವನ್ನು ಹೇಳುವಾಗ **ಯಾದೃಶ್ಮಿನ್ ಧಾಯಿ ತಮಪಸ್ಯಯಾವಿದತ್** (ನಿ ೬-೧೬) ಎಂಬ ಪ್ರಸಕ್ತ ಋಕ್ಕನ್ನೇ ಉದಾಹಣೆಯಾಗಿ ತೆಗೆದುಕೊಂಡು **ಯಾದೃಶೇಽಧಾಯಿ ತಮಪಸ್ಯಯಾವಿದತ್ ।** ಎಂದು ಅರ್ಥವಿವರಣೆ ಮಡಿದಾರೆ ನಿರುಕ್ತ ವ್ಯಾಖ್ಯಾಕಾರರಾದ ದುರ್ಗಾಚಾರ್ಯರು—

> **ಯಾದೃಶ್ಮಿನ್ ಯಾದೃಶೇ ಕಾಮೇ ಧಾಯಿ ಮನೋ ಧತ್ತೇ ತಂ ತಾದೃಶಂ ಕಾಮಂ ತಯಾ ಅಪಸ್ಯಯಾ ಕ್ರಿಯಯಾ ಹವಿಃಸ್ತುತ್ಯಾದಿಲಕ್ಷಣಯಾ ತವ ಪ್ರಸಾದಾತ್ ಅವಿದತ್ ಅಲಭತೇತ್ಯರ್ಥಃ ॥**

ಯಜ್ಞಮಾಡುವ ಯಜಮಾನನು ಯಾವವಿಧವಾದ ಅಪೇಕ್ಷೆಯನ್ನು ತನ್ನ ಮನಸ್ಸಿನಲ್ಲಿಡುವನೋ ಎಂದರೆ ಯಾವ ವಸ್ತುವನ್ನು ಬಯಸುವನೋ ಅದನ್ನು ಇಂದ್ರನಿಗೆ ಹವಿರಾದಿಗಳನ್ನು ಅರ್ಪಿಸುವುದರಿಂದ ಎಂದರೆ ಹವಿಃಪ್ರದಾನಾದಿಕರ್ಮದಿಂದಲೇ ಹೊಂದುವನು ಎಂದು ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠಃ ॥

ಸಮುದ್ರಮಾಸಾಮವ ತಸ್ಥೇ ಅಗ್ರಿಮಾ ನ ರಿಷ್ಯತಿ ಸವನಂ ಯಸ್ಮಿನ್ನಾಯತಾ ।
ಅತ್ರಾ ನ ಹಾರ್ದಿ ಕ್ರವಣಸ್ಯ ರೇಜತೇ ಯತ್ರಾ ಮತಿರ್ವಿದ್ಯತೇ ಪೂತಬಂಧನೀ ॥ ೯ ॥

॥ ಪದಪಾಠಃ ॥

ಸಮುದ್ರಂ । ಆಸಾಂ । ಅವ । ತಸ್ಥೇ । ಅಗ್ರಿಮಾ । ನ । ರಿಷ್ಯತಿ । ಸವನಂ । ಯಸ್ಮಿನ್ । ಆಽಯತಾ ।
ಅತ್ರ । ನ । ಹಾರ್ದಿ । ಕ್ರವಣಸ್ಯ । ರೇಜತೇ । ಯತ್ರ । ಮತಿಃ । ವಿದ್ಯತೇ । ಪೂತಽಬಂಧನೀ ॥ ೯ ॥

॥ ಸಾಯಣಭಾಷ್ಯಂ ॥

ಇಯಮಪಿ ಸೌರೀ । ಆಸಾಂ ಸ್ತುತೀನಾಂ ಸಮುದ್ರಂ ಸಮುದ್ರವತ್ಪರ್ಯವಸಾನಭೂತಂ ಸೂರ್ಯಮಗ್ರಿಮಾತ್ಯಂತಂ ಶ್ರೇಷ್ಠಾಸ್ಮದೀಯಾ ಸ್ತುತಿರವ ತಸ್ಥೇ । ಅವಗಚ್ಛತಿ । ಯದ್ವಾ । ಆಸಾಂ ಪ್ರಜಾನಾಮೃತ್ವಿಜಾಂ ಸ್ತುತಿರಿತಿ ಸಂಬಂಧಃ । ಸವನಂ । ಸೂಯತೇ ಸೋಮೋಽತ್ರೇತಿ ಸವನಂ ಯಜ್ಞಗೃಹಂ । ನ ರಿಷ್ಯತಿ । ನ ಹಿಂಸ್ಯತೇ । ಕಿಂತು ಪ್ರವರ್ಧತ ಇತ್ಯರ್ಥಃ । ಯಸ್ಮಿನ್ನಾಯತಾ ವಿಸ್ತೀರ್ಣಾನಿ

**ಸ್ತೋತ್ರಾಣಿ ತತ್ಸವನಸವನಿತಿ । ಅತ್ರಾಸ್ಮಿನ್ಯಜಮಾನಗೃಹೇ ಶ್ರವಣಸ್ಯ ಸ್ತುತಿಕರ್ತುರ್ಹಾರ್ದಿ ಹೃದಯಸಂಬಂಧಿ ಹೃದಯಗತಂ ಕಾಮ್ಯಂ ಫಲಂ ನ ರೇಜತೇ । ನ ವಿಚಲತಿ । ನ ವ್ಯೃಷಾ ಭವತಿ । ಯತ್ರ ಯಸ್ಮಿನ್ ಸ್ತೋತೃಗೃಹೇ ಮತಿಃ ಸ್ತುತಿಃ ಪೂತಬಂಧನೀ ಪೂತಂ ಸೂರ್ಯಮನುಬಧ್ನತೀ ವಿದ್ಯತೇ ಅತ್ರ ನ ರೇಜತ ಇತಿ ॥**

॥ ಪ್ರತಿಪದಾರ್ಥ ॥

**ಆಸಾಂ**—ನಮ್ಮ ಈ ಸ್ತುತಿಗಳಿಗೆಲ್ಲಾ । **ಸಮುದ್ರಂ**—ಸಮುದ್ರದಂತೆ ಏಕಭಾಜನನಾಗಿರುವ ಸೂರ್ಯನನ್ನು । **ಅಗ್ರಿಮಾ**—ಅತ್ಯುತ್ತಮವಾದ ನಮ್ಮ ಈ ಸ್ತುತಿಯು । **ಅವ ತಸ್ಥೇ**—ಹೋಗಿ ಸೇರಿ (ಅವನಲ್ಲಿ) ನೆಲೆಸುತ್ತದೆ । **ಯಸ್ಮಿನ್**—ಯಾವ ಯಜ್ಞಕರ್ಮದಲ್ಲಿ । **ಆಯತಾ**—ಸ್ತುತಿಗಳು ವಿಸ್ತೃತವಾಗಿ ಪಠಿತವಾಗುವುವೋ । **ಸವನಂ**—ಆ ಯಾಗವು । **ನ ರಿಷ್ಯತಿ**—ಕುಂಠಿತವಾಗುವುದಿಲ್ಲ । **ಯತ್ರ**—ಯಾವ ಯಜ್ಞಗೃಹದಲ್ಲಿ । **ಮತಿಃ**-(ಯಜಮಾನನ) ಸ್ತುತಿಯು (ಧ್ಯಾನವು) । **ಪೂತಬಂಧನೀ ವಿದ್ಯತೇ**—ಪಾವನನಾದ ಸೂರ್ಯನನ್ನೇ ಅನುಸಂಧಾನ ಮಾಡುವುದಾಗಿ ಇರುವುದೋ । **ಅತ್ರ**—ಅಂತಹ ಯಾಗಗೃಹದಲ್ಲಿ । **ಶ್ರವಣಸ್ಯ**—ಸ್ತುತಿಕರ್ತನ । **ಹಾರ್ದಿ**—ಪ್ರಿಯವಾದ ಇಷ್ಟಾರ್ಥವು । **ನ ರೇಜತೇ**—ಚಲಿಸುವುದಿಲ್ಲ (ವ್ಯರ್ಥವಾಗುವುದಿಲ್ಲ).

॥ ಭಾವಾರ್ಥ ॥

ನಮ್ಮ ಈ ಸ್ತುತಿಗಳಿಗೆಲ್ಲಾ ಸಮುದ್ರದಂತೆ ಏಕಭಾಜನನಾಗಿರುವ ಸೂರ್ಯನನ್ನು ಅತ್ಯುತ್ತಮವಾದ ನಮ್ಮ ಈ ಸ್ತುತಿಯು ಹೋಗಿ ಸೇರಿ ಅಲ್ಲಿ ನೆಲೆಸುತ್ತದೆ. ಯಾವ ಯಜ್ಞಕರ್ಮದಲ್ಲಿ ಸ್ತುತಿಗಳು ವಿಸ್ತೃತವಾಗಿ ಪಠಿತವಾಗುವುವೋ ಆ ಯಾಗವು ಕುಂಠಿತವಾಗುವುದಿಲ್ಲ ಯಾವ ಯಜ್ಞಗೃಹದಲ್ಲಿ ಯಜಮಾನನ ಧ್ಯಾನಾತ್ಮಕವಾದ ಸ್ತುತಿಯು ಪಾವನನಾದ ಸೂರ್ಯನನ್ನೇ ಅನುಸಂಧಾನಮಾಡುವುದೋ ಅಂತಹ ಯಾಗಗೃಹದಲ್ಲಿ ಸ್ತುತಿಕರ್ತನ ಪ್ರಿಯವಾದ ಇಷ್ಟಾರ್ಥವು ವ್ಯರ್ಥವಾಗುವುದಿಲ್ಲ

English Translation

The chiefest of these (our praises) proceed to the ocean-like sun: that chamber of sacrifice fails not in which (his praises) are prolonged: there the heart's desire of the worshipper is not disappointed where the mind is known to be attached to the pure (sun).

॥ ಸಂಹಿತಾಪಾಠಃ ॥

ಸ ಹಿ ಕ್ಷತ್ರಸ್ಯ ಮನಸಸ್ಯ ಚಿತ್ತಿಭಿರೇವಾವದಸ್ಯ ಯಜತಸ್ಯ ಸಧ್ರೇಃ ।

ಅವತ್ಸಾರಸ್ಯ ಸ್ಪೃಣವಾಮ ರಣ್ವಭಿಃ ಶವಿಷ್ಠಂ ವಾಜಂ ವಿದುಷಾ ಚಿದರ್ಧ್ಯಂ ॥ ೧೦ ॥

॥ ಪದಪಾಠಃ ॥

ಸಃ । ಹಿ । ಕ್ಷತ್ರಸ್ಯ । ಮನಸಸ್ಯ । ಚಿತ್ತಿಽಭಿಃ । ಏವಽವದಸ್ಯ । ಯಜತಸ್ಯ । ಸಧ್ರೇಃ ।

ಅವತ್ಽಸಾರಸ್ಯ । ಸ್ಪೃಣವಾಮ । ರಣ್ವಽಭಿಃ । ಶವಿಷ್ಠಂ । ವಾಜಂ । ವಿದುಷಾ । ಚಿತ್ । ಅರ್ಧ್ಯಂ ॥೧೦॥

॥ ಸಾಯಣಭಾಷ್ಯಂ ॥

ಇಯಮಪಿ ಸೌರೀ । ಸ ಹಿ ಸ ಖಲು ಸವಿತಾ ದೇವಃ ಸರ್ವೈಃ ಸ್ತುತ್ಯಃ । ಸರ್ವಕಾಮಪೂರಕ ಇತ್ಯರ್ಥಃ । ಹಿಶಬ್ದೋ ಲೋಕವೇದಯೋಃ ಪ್ರಸಿದ್ಧಿದ್ಯೋತಕಃ । ತಸ್ಮಾತ್ಸಕಾಶಾತ್ । ಅತ್ರಾನ್ಯೇ ಚ ಋಷಯೋಽತ್ರ ದೃಷ್ಟಲಿಂಗಾ ಇತ್ಯುಕ್ತತ್ವಾತ್ ಕ್ಷತ್ರಾದಯ ಋಷಯಃ । ಕ್ಷತ್ರಸ್ಯ ಮನಸಸ್ಯೈವಾವದಸ್ಯ ಯಜತಸ್ಯ ಸಧ್ರೇರವತ್ಸಾರಸ್ಯ ಚೈಷಾಮೃಷೀಣಾಮಸ್ಮಾಕಂ ರಣ್ವಭೀ ರಮಣೀಯಾಭಿಶ್ಚಿತ್ತಿಭಿಃ ಸ್ಪೃಣವಾಮ । ಪೂರಯಾಮ । ಕಿಂ ಶವಿಷ್ಠಂ ವಾಜಮತಿಶಯೇನ ಬಲವದನ್ನಂ । ಅನ್ನಂ ವೈ ವಾಜ ಇತಿ ಶ್ರುತೇಃ । ವಿದುಷಾ ಚಿದ್ವಿಪಶ್ಚಿತಾರ್ಧ್ಯಂ ಸಮರ್ಧನೀಯಂ ಸ್ಪೃಣವಾಮ । ಕ್ಷತ್ರಾದಯೋ ವಯಮಿತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಸ ಹಿ**— ಈ ಆದಿತ್ಯನೇ (ಸಕಲರಿಂದಲೂ ಸ್ತುತ್ಯನಾಗಿದ್ದಾನೆ) । **ಕ್ಷತ್ರಸ್ಯ**—ಕ್ಷತ್ರನ । **ಮನಸಸ್ಯ**—ಮನಸನ । **ಏವಾವದಸ್ಯ**—ಏವಾವದನ । **ಯಜತಸ್ಯ**—ಯಜತನ । **ಸಧ್ರೇಃ**—ಸಧ್ರಿಯ । **ಅವತ್ಸಾರಸ್ಯ**—ಅವತ್ಸಾರನ (ಈ ಎಲ್ಲಾ ಋಷಿಗಳ) । **ರಣ್ವಭಿಃ**—ರಮಣೀಯಗಳಾದ । **ಚಿತ್ತಿಭಿಃ**—ಧ್ಯಾನಾತ್ಮಕವಾದ ಮನಸ್ಸುಗಳೊಡಗೂಡಿ **ವಿದುಷಾ ಚಿತ್**—ಪ್ರಾಜ್ಞರಿಂದಲೂ ಕೂಡ । **ಅರ್ಧ್ಯಂ**—ಭಜನೀಯವಾದುದೂ । **ಶವಿಷ್ಠಂ**—ಅತ್ಯಂತ ಬಲಶಾಲಿಯಾದುದೂ ಆದ । **ವಾಜಂ**—ಅನ್ನವನ್ನು । **ಸ್ಪೃಣವಾಮ**—ಪೂರ್ಣವಾಗಿ ತುಂಬೋಣ

॥ ಭಾವಾರ್ಥ ॥

ಈ ಆದಿತ್ಯನೇ ಸಕಲರಿಗೂ ಸ್ತುತ್ಯನಾಗಿದ್ದಾನೆ. ಕ್ಷತ್ರ, ಮನಸ, ಏವಾವದ, ಸಧ್ರಿ, ಯಜತ, ಅವತ್ಸಾರ ಇತ್ಯಾದಿ ಸಕಲ ಋಷಿಗಳೂ ಸಹ ಯಾವ ಧ್ಯಾನಾತ್ಮಕವಾದ ಮನಸ್ಸಿನಿಂದ ತಮ್ಮ ಭಕ್ತಿಯನ್ನು ಪ್ರಕಟಿಸಿದರೋ ಅದೇ ಮನಸ್ಸಿನಿಂದ ಆ ಎಲ್ಲಾ ಭಕ್ತಿಭಾವಗಳಿಂದಲೂ ಸಹ ಪ್ರಾಜ್ಞರಿಂದಲೂ ಭಜನೀಯವಾದುದೂ, ಅತ್ಯಂತ ಬಲಶಾಲಿಯಾದುದೂ ಆದ ಅನ್ನವನ್ನು ಪೂರ್ಣವಾಗಿ ಪಡೆಯೋಣ

## English Translation

He verily (is to be glorified): let us, with the pleasant thoughts of Kshtra, Manasa, Avada, Yajata, Sadhri and Avatsara, fill up the invigorating food, (the portion) to be shared by the wise

॥ ಸಂಹಿತಾಪಾಠಃ ॥

ಶ್ಯೇನ ಆಸಾಮದಿತಿಃ ಕಕ್ಷ್ಯೋ೩ ಮದೋ ವಿಶ್ವವಾರಸ್ಯ ಯಜತಸ್ಯ ಮಾಯಿನಃ।
ಸಮನ್ಯಮನ್ಯಮರ್ಥಯಂತ್ಯೇತವೇ ವಿದುರ್ವಿಷಾಣಂ ಪರಿಪಾನಮಂತಿ ತೇ॥

॥ ಪದಪಾಠಃ ॥

ಶ್ಯೇನಃ । ಆಸಾಂ । ಅದಿತಿಃ । ಕಕ್ಷ್ಯಃ । ಮದಃ । ವಿಶ್ವಽವಾರಸ್ಯ । ಯಜತಸ್ಯ । ಮಾಯಿನಃ ।
ಸಂ । ಅನ್ಯಂಽಅನ್ಯಂ । ಅರ್ಥಯಂತಿ । ಏತವೇ । ವಿದುಃ । ವಿಽಸಾನಂ । ಪರಿಽಪಾನಂ । ಅಂತಿ । ತೇ ॥

॥ ಸಾಯಣಭಾಷ್ಯಂ ॥

ಮದದೇವತ್ಯೇಯಂ । ವಿಶ್ವವಾರಾದೀನಾಂ ತ್ರಯಾಣಾಮೃಷೀಣಾಂ ಸ್ವಭೂತ ಆಸಾಮಪಾಂ ಸೋಮರಸಲಕ್ಷಣಾನಾಂ ಮದಃ ಶ್ಯೇನಃ ಶಂಸನೀಯಗಮನಃ ಶೀಘ್ರಂ ಪಾತೃಸಕಾಶಂ ಗಂತಾದಿತಿರದೀನೋಽತಿಸಮೃದ್ಧಃ ಕಕ್ಷ್ಯಃ ಕಕ್ಷ್ಯಪೂರಕಶ್ಚ ಭವತೀತಿ ಶೇಷಃ । ತೇ ವಿಶ್ವವಾರಾದಯಃ ಸತ್ರೇ ಪ್ರವೃತ್ತಾ ಏತವೇ ಸೋಮಂ ಪ್ರಾಪ್ತುಂ ತತ್ಪಾನಾಯಾನ್ಯಮನ್ಯಂ ಪರಸ್ಪರಂ ಸಮರ್ಥಯಂತಿ। ಯಾಚಂತೇಽನುಜ್ಞಾಂ। ತೇ ವಿಷಾಣಂ ವಿಶೇಷೇಣ ಮದಸ್ಯ ದಾತಾರಂ ಪರಿಪಾನಮಂತ್ಯಂತಿಕೇ ವಿದುಃ । ಜಾನಂತಿ ಲಭಂತೇ ವಾ ॥

॥ ಪ್ರತಿಪದಾರ್ಥ ॥

**ವಿಶ್ವವಾರಸ್ಯ**- ವಿಶ್ವವಾರನ । **ಯಜತಸ್ಯ**—ಯಜತನ । **ಮಾಯಿನಃ**-ಮಾಯಿಯೆಂಬುವನ (ಈ ಎಲ್ಲಾ ಋಷಿಗಳಿಗೆ ಸೇರಿದ) । **ಆಸಾಂ**— ಸೋಮರಸದ । **ಮದಃ**— ಹರ್ಷವು । **ಶ್ಯೇನಃ**—ಪ್ರಶಸ್ತಗಮನವುಳ್ಳದ್ದೂ । **ಅದಿತಿಃ**—ಅತಿಸಮೃದ್ಧವಾದುದೂ । **ಕಕ್ಷ್ಯಃ**— ಕಂಠಪೂರ್ತಿಯಾದ ತೃಪ್ತಿಯುಳ್ಳದ್ದೂ ಆಗಿರುತ್ತದೆ । **ಏತವೇ**— ಈ ಸೋಮಪಾನಕ್ಕಾಗಿ । **ಅನ್ಯಮನ್ಯಂ**—ಈ ಋಷಿಗಳು ಒಬ್ಬರಿಗೊಬ್ಬರು । **ಸಂ ಅರ್ಥಯಂತಿ**— ಅನುಜ್ಞೆಯನ್ನು ಬೇಡುತ್ತಾರೆ । **ತೇ**—ಅವರು । **ವಿಷಾಣಾಂ**—ಅಧಿಕವಾಗಿ ಮದಜನಕವಾದ । **ಪರಿಪಾನಂ**—ಈ ಸೋಮಪಾನವನ್ನು । **ಅಂತಿ**— ಸಮೀಪದಲ್ಲಿಯೇ । **ವಿದುಃ**—ಪಡೆಯುತ್ತಾರೆ

॥ ಭಾವಾರ್ಥ ॥

ವಿಶ್ವವಾರ, ಯಜತ, ಮಾಯಿ ಈ ಋಷಿಗಳಿಗೆ ಸೇರಿದ ಸೋಮರಸದ ಹರ್ಷವು ಸ್ಪರ್ಧಿಸ್ಯವಾದುದೂ, ಅತಿ ಸಮೃದ್ಧವಾದುದೂ, ಕಂಠಪೂರ್ತಿಯಾದ ತೃಪ್ತಿಯುಳ್ಳದ್ದೂ ಆಗಿರುತ್ತದೆ. ಇದೇ ಸೋಮಪಾನಕ್ಕಾಗಿ ಈ ಋಷಿಗಳು ಒಬ್ಬರಿಗೊಬ್ಬರು ಅನುಜ್ಞೆಯನ್ನು ಬೇಡುತ್ತಾರೆ. ನಂತರ ಅಧಿಕವಾಗಿ ಮದಜನಕವಾದ ಈ ಸೋಮವನ್ನು ಒಡನೆಯೇ ಪಡೆಯುತ್ತಾರೆ ಮತ್ತು ಪಾನಮಾಡುತ್ತಾರೆ.

English Translation

Swift is the excessive and girth-distending inebriation of Vishwavara, Yajata and Mayin : (by dr nking) of these (juices) they urge one another to drink . they find the copious draught the promt giver of intoxication

---

॥ ಸಂಹಿತಾಪಾಠಃ ॥

ಸದಾಪೃಣೋ ಯಜತೋ ವಿ ದ್ವಿಷೋ ವಧೀದ್ಬಾಹುವೃಕ್ತಃ ಶ್ರುತವಿತ್ತ-
ರ್ಯೋ॒ ವಃ ಸಚಾ ।
ಉಭಾ ಸ ವರಾ ಪ್ರತ್ಯೇತಿ ಭಾತಿ ಚ ಯದೀಂ ಗಣಂ ಭಜತೇ ಸುಪ್ರಯಾ-
ವಭಿಃ ॥ ೧೨ ॥

॥ ಪದಪಾಠಃ ॥

ಸದಾಽಪೃಣಃ । ಯಜತಃ । ವಿ । ದ್ವಿಷಃ । ವಧೀತ್ । ಬಾಹುಽವೃಕ್ತಃ । ಶ್ರುತಽವಿತ್ । ತರ್ಯಃ । ವಃ ।
ಸಚಾ ।
ಉಭಾ । ಸಃ । ವರಾ । ಪ್ರತಿ । ಏತಿ । ಭಾತಿ । ಚ । ಯತ್ । ಈಂ । ಗಣಂ । ಭಜತೇ । ಸುಪ್ರಯಾವಽಭಿಃ

॥ ಸಾಯಣಭಾಷ್ಯಂ ॥

ಸದಾಪೃಣಃ ಸರ್ವದಾ ದಾನಶೀಲ ಏತನ್ನಾಮಾ ಯಜತೋ ಯಷ್ಟಾ ಚ ಬಾಹುವೃಕ್ತೋ ಬಾಹುಭ್ಯಾಂ ವೃಕ್ತದರ್ಭಶ್ಚ ಶ್ರುತವಿತ್ ಶ್ರುತಸ್ಯ ವೇತ್ತಾ ಚ ತರ್ಯಶ್ಚ । ಏತೇಷಾಂ ಸಂಜ್ಞಾನಾಂ ಪರಸ್ಪರಾಪೇಕ್ಷಯಾ ಪ್ರತ್ಯೇಕಮೇಕವಚನಂ । ಸ ಸ ಋಷಿರ್ದ್ವಿಷಃ ಶತ್ರೂನ್ವಿ ವಧೀತ್ ಹಿಂಸ್ಯಾತ್ ವೋ

**ಯುಷ್ಮಾಕಂ ಸಚಾ ಸಹಿತಃ । ಯುಷ್ಮಾಭಿಃ ಸಹಿತ ಇತ್ಯರ್ಥಃ । ಸ ಋಷಿರ್ವರಾ ಶ್ರೇಷ್ಠಾನ್ಯುಭೋಭಾನಿಹ-ಲೋಕಪರಲೋಕವಿಷಯೌ ಕಾಮೌ ಪ್ರತ್ಯೇತಿ । ಅಭಿಗಚ್ಛತಿ । ಭಾತಿ ಚ । ಯದ್ಯಸ್ಮಾದೀಮೇನಂ ಗಣಂ ದೇವಸಂಘಂ ಸುಪ್ರಯಾವಭಿಃ ಸುಷ್ಠು ಪ್ರಕರ್ಷೇಣ ಮಿಶ್ರಯದ್ಭಿಃ ಸ್ತೋತ್ರೈರ್ಭಜತೇ ತಸ್ಮಾದೇವಂ ಭಾತೀತಿ ।**

॥ ಪ್ರತಿಪದಾರ್ಥ ॥

**ಸದಾಪೃಣಃ**—ಸದಾಪೃಣನೂ । **ಯಜತಃ**—ಯಜತನೂ । **ಬಾಹುವೃಕ್ತಂ**—ಬಾಹುವೃಕ್ತನೂ । **ಶ್ರುತವಿತ್**—ಶ್ರುತವಿದನೂ । **ತರ್ಯಃ**—ತರ್ಯನೂ ( ಈ ಎಲ್ಲಾ ಋಷಿಗಳೂ ವೈಯಕ್ತಿಕವಾಗಿ) । **ವಃ**—ನಿಮ್ಮೊಡನೆ । **ಸಚಾ**—ಕೂಡಿಕೊಂಡು । **ದ್ವಿಷಃ**—ಶತ್ರುಗಳನ್ನು । **ವಿ ವಧೀತ್**—ಪೂರ್ಣವಾಗಿ ನಾಶಮಾಡಲಿ । **ಯತ್**—ಯಾವ ಋಷಿಯು । **ಈಂ ಗಣಂ**—ಈ ದೇವತಾಸಮುದಾಯವನ್ನು । **ಸುಪ್ರಯಾವಭಿಃ**—ಸ್ತುತಿಗಳೊಡನೆ ಸೇರಿಕೊಂಡ ಹವಿಸ್ಸುಗಳಿಂದ । **ಭಜತೇ**—ಪೂಜಿಸುವನೋ । **ಸಃ**—ಆ ಋಷಿಯು । **ವರಾ**—ಅತ್ಯುತ್ತಮವಾದವುಗಳೂ । **ಉಭಾ**—ಇಹಪರಗಳೆರಡು ಲೋಕಗಳಿಗೂ ಸೇರಿದವೂ ಆದ ಇಷ್ಟಾರ್ಥಗಳನ್ನು । **ಪ್ರತ್ಯೇತಿ**—ಹೊಂದುತ್ತಾನೆ । **ಭಾತಿ ಚ**—ಪ್ರಕಾಶಿಸುತ್ತಾನೆ

॥ ಭಾವಾರ್ಥ ॥

ಸದಾಪೃಣನೂ, ಯಜತನೂ, ಬಾಹುವೃಕ್ತನೂ, ಶ್ರುತವಿದನೂ, ತರ್ಯನೂ, ಈ ಎಲ್ಲಾ ಋಷಿಗಳೂ ಸಹ ವೈಯಕ್ತಿಕವಾಗಿ ನಿಮ್ಮೊಡನೆ ಕೂಡಿಕೊಂಡು ಶತ್ರುಗಳನ್ನು ಪೂರ್ಣವಾಗಿ ನಾಶಮಾಡಲಿ. ಯಾವ ಋಷಿಯು ಈ ದೇವತಾಸಮುದಾಯವನ್ನು ಸ್ತುತಿಗಳೊಡನೆ ಮಿಶ್ರಿತವಾದ ಹವಿಸ್ಸುಗಳಿಂದ ಪೂಜಿಸುವನೋ, ಆ ಋಷಿಯು ಅತ್ಯುತ್ತಮವಾದವೂ, ಇಹಪರಗಳೆರಡುಲೋಕಗಳಿಗೂ ಸೇರಿದವೂ ಆದ ಇಷ್ಟಾರ್ಥಗಳನ್ನು ಪಡೆದು ಪ್ರಕಾಶಿಸುತ್ತಾನೆ.

English Translation

May Sadaprina, Yajata, Bahuvrikta, Shrutavit, Tarya, associated, with you, destroy your foes. the Rishi obtains his desires in both (worlds), and shines brightly, whenever he adores with well-mingled (offerings and praises) the host (of heaven).

॥ ಸಂಹಿತಾಪಾಠಃ ॥

ಸುತಂಭರೋ ಯಜಮಾನಸ್ಯ ಸತ್ಪತಿರ್ವಿಶ್ವಾಸಾಮೂಧಃ ಸ ಧಿಯಾಮುದಂ-

ಚನಃ ।

**ಭರದ್ಧೇನೂ ರಸವಚ್ಛಿಶ್ರಿಯೇ ಪಯೋಽನುಬ್ರುವಾಣೋ ಅಧ್ಯೇತಿ ನ ಸ್ವಪನ್ ॥ ೧೩ ॥**

॥ ಪದಪಾಠಃ ॥

**ಸುತಂಽಭರಃ । ಯಜಮಾನಸ್ಯ । ಸತ್ಽಪತಿಃ । ವಿಶ್ವಾಸಾಂ । ಊಧಃ । ಸಃ । ಧಿಯಾಂ । ಉತ್ಽಅಂಚನಃ । ಭರತ್ । ಧೇನುಃ । ರಸ್ಽವತ್ । ಶಿಶ್ರಿಯೇ । ಪಯಃ । ಅನುಽಬ್ರುವಾಣಃ । ಅಧಿ । ಏತಿ । ನ । ಸ್ವಪನ್ ॥**

॥ ಸಾಯಣಭಾಷ್ಯಂ ॥

**ಯಜಮಾನಸ್ಯಾವತ್ಸಾರಸ್ಯ ಮಮ ಸುತಂಭರೋ ಯಾಗನಿರ್ವಾಹಕ ಏತನ್ನಾಮಾ ಋಷಿಃ ಸತ್ಪತಿಃ ಸತಾಂ ವಿದ್ಯಮಾನಾನಾಂ ಫಲಾನಾಂ ಪಾಲಯಿತಾ ಹೋತಾ ಭವತೀತ್ಯರ್ಥಃ । ಸ ಚ ವಿಶ್ವಾಸಾಂ ಧಿಯಾಂ ಸರ್ವೇಷಾಂ ಕರ್ಮಣಾಮೂಧ ಉದ್ಧತತರಂ ಫಲಮುದಂಚನ ಊರ್ಧ್ವಮುದ್ಗಮಯಿತಾ । ಫಲಪ್ರಾಪಕ ಇತ್ಯರ್ಥಃ । ಧೇನುರ್ಗೌಃ ರಸವತ್ಸಾರವತ್ಪಯೋ ಭರತ್ । ಅಹರತ್ । ತತ್ರ ಪಯಃ ಶಿಶ್ರಿಯೇ । ಶ್ರಯತಿ ಚಾಸ್ಯ ಸಾಮರ್ಥ್ಯಾತ್ । ತತ್ಸರ್ವಮನುಬ್ರುವಾಣೋಽನುಕ್ರಮೇಣ ಸಂಕೀರ್ತಯನ್ ನ ಸ್ವಪನ್ ಸ್ವಾಪಮಕುರ್ವನ್ ಅನವರತಮಧ್ಯೇತಿ । ಸ್ಮರತ್ಯವತ್ಸಾರಃ । ಸುತಂಭರಸ್ತಾದೃಶ ಇತಿ ॥**

॥ ಪ್ರತಿಪದಾರ್ಥ ॥

**ಯಜಮಾನಸ್ಯ**— ( ಅವತ್ಸಾರನಾಮಕನಾದ ) ಯಜಮಾನನಿಗೆ । **ಸುತಂಭರಃ**—ಸುತಂಭರನೆಂಬ ಋಷಿಯು । **ಸತ್ಪತಿಃ**—ಹೋತೃರೂಪನಾಗಿದ್ದಾನೆ । **ಸಃ**—ಅವನೇ । **ವಿಶ್ವಾಸಾಂ**—ಸಮಸ್ತವಾದ । **ಧಿಯಾಂ**—ಕರ್ಮಗಳಿಗೂ । **ಊಧಃ**—ಫಲಗಳನ್ನು । **ಉದಞ್ಚನಃ**—ಉದ್ಭವಿಸುವಂತೆ ಮಾಡುವವನಾಗಿದ್ದಾನೆ । **ಧೇನುಃ**—ಧೇನುವು । **ರಸವತ್**—ರಸಾತ್ಮಕವಾದ । **ಪಯಃ**—ಕ್ಷೀರವನ್ನು । **ಭರತ್**—ಒದಗಿಸುತ್ತದೆ । **ಶಿಶ್ರಿಯೇ**—(ಅದು) ವಿಭಕ್ತವಾಗುತ್ತದೆ । **ಅನುಬ್ರುವಾಣಃ**—ಇವುಗಳನ್ನೇ ಅನುಕ್ರಮವಾಗಿ ಸಂಕೀರ್ತನ ಮಾಡುತ್ತಾ । **ನ ಸ್ವಪನ್**—ಕೊಂಚವೂ ಆಲಸನಾಗದೆ । **ಅಧ್ಯೇತಿ**—(ಸುತಂಭರನು) ಅಧ್ಯಯನಮಾಡುತ್ತಾನೆ (ಧ್ಯಾನಮಾಡುತ್ತಾನೆ).

॥ ಭಾವಾರ್ಥ ॥

ಅವತ್ಸಾರನಾಮಕನಾದ ಯಜಮಾನನಿಗೆ ಸುತಂಭರನೆಂಬ ಋಷಿಯು ಹೋತೃರೂಪನಾಗಿದ್ದಾನೆ. ಅವನೇ ಸಮಸ್ತ ಕರ್ಮಗಳಿಗೂ ಫಲವನ್ನು ಉದ್ಭವಿಸುವಂತೆ ಮಾಡುತ್ತಾನೆ. ಧೇನುವು ರಸಾತ್ಮಕವಾದ ಕ್ಷೀರವನ್ನು ಒದಗಿಸುತ್ತದೆ. ಇವುಗಳನ್ನೇ ಅನುಕ್ರಮವಾಗಿ ಸಂಕೀರ್ತನ ಮಾಡುತ್ತಾ ಕೊಂಚವೂ ಆಲಸನಾಗದೆ ಸುತಂಭರನು ಅಧ್ಯಯನ ಮಾಡುತ್ತಾನೆ.

## English Translation

Sutambhara is the ministrant priest of the institutor of the sacrifice, the causer of the upward ascent of all holy rites: the milch cow offers juicy

(milk), the milk is distributed: announcing this in order, (Avatsara) studies the holy texts) without repose.

॥ ಸಂಹಿತಾಪಾಠಃ ॥

ಯೋ ಜಾಗಾರ ತಮೃಚಃ ಕಾಮಯಂತೇ ಯೋ ಜಾಗಾರ ತಮು ಸಾಮಾನಿ ಯಂತಿ ।
ಯೋ ಜಾಗಾರ ತಮಯಂ ಸೋಮ ಆಹ ತವಾಹಮಸ್ಮಿ ಸಖ್ಯೇ ನ್ಯೋಕಾಃ ॥ ೧೪ ॥

॥ ಪದಪಾಠಃ ॥

ಯಃ । ಜಾಗಾರ । ತಂ । ಋಚಃ । ಕಾಮಯಂತೇ । ಯಃ । ಜಾಗಾರ । ತಂ । ಊಂ ಇತಿ । ಸಾಮಾನಿ । ಯಂತಿ ।
ಯಃ । ಜಾಗಾರ । ತಂ । ಅಯಂ । ಸೋಮಃ । ಆಹ । ತವ । ಅಹಂ । ಅಸ್ಮಿ । ಸಖ್ಯೇ । ನಿऽಓಕಾಃ ॥

॥ ಸಾಯಣಭಾಷ್ಯಂ ॥

ಯೋ ದೇವೋ ಜಾಗಾರ ಸರ್ವದಾ ವಿನಿದ್ರೋ ಜಾಗರೂಕೋ ಗೃಹೇ ವರ್ತತೇ ತಮೃಚಃ ಸರ್ವಶಾಸ್ತ್ರಾತ್ಮಿಕಾಃ ಕಾಮಯಂತೇ । ಯಶ್ಚ ಜಾಗಾರ ತಮು ತಮೇವ ಸಾಮಾನಿ ಸ್ತೋತ್ರರೂಪಾಣಿ ಯಂತಿ । ಪ್ರಾಪ್ನುವಂತಿ । ಯೋ ಜಾಗಾರ ತಮಯಮಭಿಷುತಃ ಸೋಮ ಆಹ ವಕ್ತಿ ಮಾಂ ಸ್ವೀಕುರ್ವಿತಿ । ಹೇ ಅಗ್ನೇ ತಾದೃಶಸ್ಯ ತವ ಸಖ್ಯೇ ಸಮಾನಖ್ಯಾನೇ ಹಿತಕರಣೇ ನ್ಯೋಕಾ ನಿಯತಸ್ಥಾನೋಽಹಮಸ್ಮಿ । ಭವಾಮಿ ॥

॥ ಪ್ರತಿಪದಾರ್ಥ ॥

**ಯಃ**—ಯಾವ ದೇವನು । **ಜಾಗಾರ**—ಸರ್ವದಾ ಎಚ್ಚರವಾಗಿದ್ದಾನೋ । **ತಂ**—ಅವನನ್ನು । **ಋಚಃ**-ಋಙ್ಮಂತ್ರಗಳು । **ಕಾಮಯಂತೇ**—ಇಚ್ಛಿಸುತ್ತವೆ । **ಯಃ**-ಯಾವ ದೇವನು । **ಜಾಗಾರ**—ಎಚ್ಚರವಾಗಿದ್ದಾನೋ । **ತಮು**—ಅದೇ ದೇವನನ್ನು । **ಸಾಮಾನಿ**—ಸಾಮರೂಪವಾದ ಸ್ತುತಿಗಳು । **ಯಂತಿ**—ಹೋಗಿ ಸೇರುತ್ತವೆ । **ಯಃ**—ಯಾವ ದೇವನು । **ಜಾಗಾರ**—ಎಚ್ಚರವಾಗಿದ್ದಾನೋ । **ತವ ಸಖ್ಯೇ**—ನಿನ್ನೊಡನೆ ಸಖಿತ್ವದಲ್ಲಿ । **ನ್ಯೋಕಾಃ**—ನಿಯತವಾದ ಸ್ಥಾನವುಳ್ಳವನಾಗಿ । **ಅಹಂ**—ನಾನು । **ಅಸ್ಮಿ**—ಇದ್ದೇನೆ ಎಂದು । **ತಂ** ಅದೇ ಅಗ್ನಿಯನ್ನು । **ಅಯಂ ಸೋಮಃ**—ಈ ಸೋಮರಸವು । **ಆಹ**—ಹೇಳುತ್ತದೆ.

॥ ಭಾವಾರ್ಥ ॥

ಯಾವ ದೇವನು ಸರ್ವದಾ ಎಚ್ಚರವಾಗಿದ್ದಾನೋ ಅವನನ್ನು ಋಙ್ಮಂತ್ರಗಳೂ ಸಾಮರೂಪವಾದ ಸ್ತುತಿಗಳೂ ಇಚ್ಛಿಸಿ ಅವನನ್ನು ಸೇರಿಕೊಳ್ಳುತ್ತವೆ. ಯಾವ ದೇವನು ಎಚ್ಚರವಾಗಿದ್ದಾನೋ ಅವನನ್ನು ಕುರಿತು ' ನಿನೊಡನೆ ಸಖಿತ್ವದಲ್ಲಿ ನಿಯತವಾದ ಸ್ಥಾನವುಳ್ಳವನಾಗಿ ನಾನು ಇದ್ದೇನೆ " ಎಂದು ಸೋಮರಸವು ಹೇಳುತ್ತದೆ.

English Translation

Him who is ever vigilant, holy verses desire: to him who is ever vigilant sacred songs proceed: him who is ever vigilant the Soma thus addresses, I am always abiding in your fellowship

॥ ಸಂಹಿತಾಪಾಠಃ ॥

ಅ॒ಗ್ನಿರ್ಜಾ॑ಗಾರ॒ ತಮೃಚಃ॑ ಕಾಮಯಂತೇ॒ಽಗ್ನಿರ್ಜಾ॑ಗಾರ॒ ತಮು॒ ಸಾಮಾ॑ನಿ
ಯಂತಿ ॥
ಅ॒ಗ್ನಿರ್ಜಾ॑ಗಾರ॒ ತಮ॒ಯಂ ಸೋಮ॑ ಆಹ॒ ತವಾ॒ಹಮ॑ಸ್ಮಿ ಸ॒ಖ್ಯೇ ನ್ಯೋ॑ಕಾಃ ॥

॥ ಪದಪಾಠಃ ॥

ಅ॒ಗ್ನಿಃ । ಜಾ॒ಗಾ॒ರ॒ । ತಂ । ಋಚಃ॑ । ಕಾ॒ಮ॒ಯಂ॒ತೇ॒ । ಅ॒ಗ್ನಿಃ । ಜಾ॒ಗಾ॒ರ॒ । ತಂ । ಊಂ ಇತಿ॑ । ಸಾಮಾ॑ನಿ ।
ಯ॒ಂತಿ॒ ।
ಅ॒ಗ್ನಿಃ । ಜಾ॒ಗಾ॒ರ॒ । ತಂ । ಅ॒ಯಂ । ಸೋಮಃ॑ । ಆ॒ಹ॒ । ತವ॑ । ಅ॒ಹಂ । ಅ॒ಸ್ಮಿ॒ । ಸ॒ಖ್ಯೇ । ನಿಽಓ॑ಕಾಃ ॥

॥ ಸಾಯಣಭಾಷ್ಯಂ ॥

ಪೂರ್ವಯೈವ ನಿಗದಿತವ್ಯಾಖ್ಯಾ । ಯ ಇತ್ಯಸ್ಯ ಸ್ಥಾನೇಽಗ್ನಿರಿತಿ ವಿಶೇಷಃ ॥

॥ ಪ್ರತಿಪದಾರ್ಥ ॥

**ಅಗ್ನಿಃ**—ಅಗ್ನಿಯು । **ಜಾಗಾರ**—ಎಚ್ಚರವಾಗಿದ್ದಾನೆ । **ತಂ**—ಅವನನ್ನು । **ಋಚಃ** – ಋಙ್ಮಂತ್ರಗಳು । **ಕಾಮಯಂತೇ**—ಇಚ್ಛಿಸುತ್ತವೆ । **ಅಗ್ನಿಃ**—ಅಗ್ನಿಯು । **ಜಾಗಾರ**—ಎಚ್ಚರವಾಗಿದ್ದಾನೆ । **ತಮು**—ಅವನನ್ನೇ । **ಸಾಮಾನಿ**—ಸಾಮರೂಪವಾದ ಸ್ತುತಿಗಳು । **ಯಂತಿ**—ಹೋಗಿ ಸೇರಿಕೊಳ್ಳುತ್ತವೆ । **ಅಗ್ನಿಃ**—ಅಗ್ನಿಯು ।

**ಜಾಗಾರ**—ಎಚ್ಚರವಾಗಿದ್ದಾನೆ । **ತಂ**—ಅವನನ್ನು । **ಅಯಂ ಸೋಮಃ**—ಈ ಸೋಮವು । **ಅಹಂ**—ನಾನು । **ತವ ಸಖ್ಯೇ**—ನಿನ್ನ ಸಖಿತ್ವದಲ್ಲಿ । **ನ್ಯೋಕಾಃ**—ನಿಯತವಾದ ಸ್ಥಾನದಲ್ಲಿ । **ಅಸ್ಮಿ**—ಇರುವೆನು ಎಂದು । **ಆಹ**—ಹೇಳುತ್ತದೆ

॥ ಭಾವಾರ್ಥ ॥

ಅಗ್ನಿಯು ಎಚ್ಚರವಾಗಿದ್ದಾನೆ ಅವನನ್ನು ಋಙ್ಮಂತ್ರಗಳು ಇಚ್ಛಿಸುತ್ತವೆ, ಅಗ್ನಿಯು ಎಚ್ಚರವಾಗಿದ್ದಾನೆ. ಅವನನ್ನು ಸಾಮರೂಪವಾದ ಸ್ತುತಿಗಳು ಹೋಗಿ ಸೇರಿಕೊಳ್ಳುತ್ತವೆ. ಅಗ್ನಿಯು ಸರ್ವದಾ ಎಚ್ಚರವಾಗಿದ್ದಾನೆ. ಅವನನ್ನು ಕುರಿತು ಸೋಮವು "ನಾನು ನಿನ್ನ ಸಖಿತ್ವದೊಡನೆ ನಿಯತವಾದ ಸ್ಥಾನದಲ್ಲಿರುವೆನು" ಎಂದು ಹೇಳುತ್ತದೆ.

## English Translation

Agni is ever vigilant, and him holy verses desire : Agni is ever vigilant, and to him sacred songs proceed : Agni is ever vigilant and him the Soma thus addresses, I am ever abiding in your fellowship.

॥ ವಿಶೇಷವಿಷಯಗಳು ॥

ಹಿಂದಿನ ಋಕ್ಕಿನಲ್ಲಿ ಹೇಳಿರುವ ವಿಷಯಗಳನ್ನೇ ಇಲ್ಲಿ ಹೇಳಿದೆ. ಹಿಂದೆ **ಯಃ—ಜಾಗಾರ**—ಯಾರು ಗೃಹದಲ್ಲಿ ಯಾವಾಗಲೂ ನಿದ್ರೆಮಾಡದೆ ಜಾಗರೂಕನಾಗಿ ಇರುವನೋ ಎಂದು ಪ್ರಶ್ನೆಮಾಡಿ ಆ ಪ್ರಶ್ನೆಗೆ ಈ ಋಕ್ಕಿನಲ್ಲಿ **ಅಗ್ನಿಃ—ಜಾಗಾರ**—ಅಗ್ನಿಯೇ ಸದಾಕಾಲದಲ್ಲಿಯೂ ಯಜಮಾನರ ಗೃಹದಲ್ಲಿ ಜಾಗರೂಕನಾಗಿರುವನು ಎಂದು ಪ್ರತ್ಯುತ್ತರವನ್ನು ಋಷಿಯು ಹೇಳಿರುವನು.

# ನಲವತ್ತೈದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಅಥ ಚತುರ್ಥೇಽನುವಾಕೇ ದ್ವಾದಶ ಸೂಕ್ತಾನಿ । ತತ್ರ ವಿದಾ ದಿವ ಇತ್ಯೇಕಾದಶರ್ಚಂ ಪ್ರಥಮಂ ಸೂಕ್ತಂ । ಸದಾಪೃಣೋ ನಾಮಾತ್ರೇಯ ಋಷಿಃ । ತ್ರಿಷ್ಟುಪ್ ಛಂದಃ । ವೈ ತದಿತ್ಯುಕ್ತತ್ವಾದಿದಮಪಿ ವೈಶ್ವದೇವಂ । ವಿದಾ ಏಕಾದಶ ಸದಾಪೃಣ ಇತ್ಯನುಕ್ರಮಣಿಕಾ । ವಿನಿಯೋಗೋ ಲೈಂಗಿಕಃ ॥**

ಅನುವಾದವು—ಐದನೆಯ ಮಂಡಲದ ನಾಲ್ಕನೆಯ ಅನುವಾಕದಲ್ಲಿ ಹನ್ನೆರಡು ಸೂಕ್ತಗಳಿರುವವು. ಅವುಗಳಲ್ಲಿ **ವಿದಾ ದಿವಃ** ಎಂಬ ಈ ಸೂಕ್ತವು ಮೊದಲನೆಯದು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು ಈ ಸೂಕ್ತಕ್ಕೆ ಸದಾಪೃಣ ಆತ್ರೇಯಃ ಎಂಬುವನು ಋಷಿಯು; ವಿಶ್ವೇದೇವತೆಗಳು ದೇವತೆಯು; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ವಿದಾ ಏಕಾದಶ ಸದಾಪೃಣಃ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

## ಸೂಕ್ತ—೪೫

॥ಮಂಡಲ—೫ ॥ ಅನುವಾಕ—೪ ॥ ಸೂಕ್ತ—೪೫ ॥

॥ ಅಷ್ಟಕ—೪ ॥ ಅಧ್ಯಾಯ—೨ ॥ ವರ್ಗ—೨೬, ೨೭, ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥

ಋಷಿಃ—ಸದಾಪೃಣ ಆತ್ರೇಯಃ ॥

ದೇವತಾ—ವಿಶ್ವೇದೇವಾಃ ॥

ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ವಿದಾ ದಿವೋ ವಿಷ್ಯನ್ನದ್ರಿಮುಕ್ಥೈರಾಯತ್ಯಾ ಉಷಸೋ ಅರ್ಚಿನೋ ಗುಃ ।
ಅಪಾವೃತ ವ್ರಜಿನೀರುತ್ಸ್ವರ್ಗಾದ್ವಿ ದುರೋ ಮಾನುಷೀರ್ದೇವ ಆವಃ ॥೧॥

॥ ಪದಪಾಠಃ ॥

ವಿದಾಃ । ದಿವಃ । ವಿಽಸ್ಯನ್ । ಅದ್ರಿಂ । ಉಕ್ಥೈಃ । ಆಽಯತ್ಯಾಃ । ಉಷಸಃ । ಅರ್ಚಿನಃ । ಗುಃ ।
ಅಪ । ಅವೃತ । ವ್ರಜಿನೀಃ । ಉತ್ । ಸ್ವಃ । ಗಾತ್ । ವಿ । ದುರಃ । ಮಾನುಷೀಃ । ದೇವಃ । ಆವರಿ-
ತ್ಯಾವಃ ॥ ೧ ॥

॥ ಸಾಯಣಭಾಷ್ಯಂ ॥

ಅತ್ರೇಂದ್ರಾದಯೋ ಲಿಂಗೋಕ್ತದೇವತಾಃ । ಅತ್ರಾಂಗಿರಸಾಂ ಪಣಿಭಿರಪಹೃತ್ಯ ಗಿರೇರಧಃ ಸ್ಥಾಪಿತಾನಾಂ ಗವಾಮಿಂದ್ರೇಣ ವಿಮೋಕಃ ಪ್ರತಿಪಾದ್ಯತೇ । ವಿದಾಃ । ಅವೇದಯದಿಂದ್ರಃ । ಕಿಂ । ಗಾ ನಿಗೂಢಾ ಇತಿ ಸಂಬಂಧಃ । ಕಿಂ ಕುರ್ವನ್ । ಉಕ್ಥೈರಂಗಿರಸಾಂ ಸ್ತುತಿಭಿರ್ನಿಮಿತ್ತಭೂತಾಭಿರದ್ರಿಂ ವಜ್ರಂ ವಿಷ್ಯನ್ ಪ್ರಕ್ಷಿಪನ್ । ರಕ್ಷಕಾಣಾಮುಪರಿ ಗಿರಿಭೇದನಾಯ ಚ ವಿಷ್ಯನ್ । ಆಯತ್ಯಾ ಆಗಾಮಿನ್ಯಾ ಉಷಸಃ ಸಂಬಂಧಿನೋಽರ್ಚಿನೋ ರಶ್ಮಯೋ ಗುಃ । ಅಗಚ್ಛನ್ । ಸರ್ವತ್ರ ಪ್ರಸೃತಾ ಅಭವನ್ । ಅಪಾವೃತ ಅಪಾವೃಣೋದ್ವ್ರಜಿನೀಸ್ತಮಃಪುಂಜವತೀರ್ನಿಶಾಃ ಸ್ವಃ ಸ್ವರಣಶೀಲ ಆದಿತ್ಯ ಉದ್ಗಾತ್ । ಉದಗಾತ್ । ತಥಾ ಕೃತ್ವಾ ಮಾನುಷೀರ್ಮನುಷ್ಯಸಂಬಂಧಿನೀರ್ದುರೋ ದ್ವಾರಾಣಿ ದೇವಃ ಸೂರ್ಯೋ ವ್ಯಾವಃ । ವ್ಯವೃಣೋತ್ । ಅಂಧಕಾರಾಪನಯನೇನ ಮನುಷ್ಯಾದಿವ್ಯವಹಾರಾಯಾಕರೋದಿತ್ಯರ್ಥಃ ॥

॥ ಪ್ರತಿಪದಾರ್ಥ ॥

( **ಇಂದ್ರಃ**—ಇಂದ್ರನು) । **ಉಕ್ಥೈಃ**—ಅಂಗಿರಸ್ಸುಗಳ ಸ್ತುತಿಯ ಪ್ರತಿಫಲವಾಗಿ । **ದಿವಃ**—ಅಂತರಿಕ್ಷದಿಂದ । **ಅದ್ರಿಂ**—ವಜ್ರಾಯುಧವನ್ನು । **ವಿಷ್ಯನ್**—ಬೀಸುತ್ತಾ । **ವಿದಾಃ**—( ಗೂಢವಾಗಿದ್ದ ಗೋವುಗಳನ್ನು ) ಕಂಡುಹಿಡಿದನು । **ಉಷಸಃ**—ಉಷೋದೇವಿಯ । **ಆಯತ್ಯಾಃ**—ಅತಿವಿಸ್ತೃತವಾದ । **ಅರ್ಚಿಸಃ**—ರಶ್ಮಿಗಳು । **ಗುಃ**—ಸರ್ವತ್ರ ಪ್ರಸರಿಸಿದವು । **ಸ್ವಃ**—ಆದಿತ್ಯನು । **ಉದಗಾತ್**—ಉದಯಿಸಿದನು । **ವೃಜಿನೀಃ**—ಕಗ್ಗತ್ತಲೆಯನ್ನು । **ಅಪಾವೃತ**—ಚದುರಿಸಿದನು । **ಮಾನುಷೀಃ**—ಮಾನವರ ವ್ಯವಹಾರಕ್ಕೆ ಉಪಯುಕ್ತವಾದ । **ದುರಃ**—ಬಾಗಿಲುಗಳನ್ನು (ಅವಕಾಶವನ್ನು) । **ದೇವಃ**—ದೇವತಾತ್ಮನಾದ ಸೂರ್ಯನು । **ವಿ ಆವಃ**—ಬಿಡಿಸಿದನು.

॥ ಭಾವಾರ್ಥ ॥

ಅಂಗಿರಸ್ಸುಗಳ ಸ್ತುತಿಯ ಪ್ರತಿಫಲವಾಗಿ ಇಂದ್ರನು ಅಂತರಿಕ್ಷದಿಂದ ವಜ್ರಾಯುಧವನ್ನು ಬೀಸುತ್ತಾ ಗೂಢವಾಗಿದ್ದ ಗೋವುಗಳನ್ನು ಕಂಡುಹಿಡಿದನು. ಉಷೋದೇವಿಯ ಅತಿವಿಸ್ತೃತವಾದ ರಶ್ಮಿಗಳು ಸರ್ವತ್ರ ಪ್ರಸರಿಸಿದವು. ಆದಿತ್ಯನು ಉದಯಿಸಿ ಕಗ್ಗತ್ತಲೆಯನ್ನು ಚದುರಿಸಿದನು ಮಾನವರ ವ್ಯವಹಾರಕ್ಕೆ ಉಪಯುಕ್ತವಾದ ಅವಕಾಶಗಳನು ದೇವತಾತ್ಮನಾದ ಸೂರ್ಯನು ಕಲ್ಪಿಸಿದನು

## English Translation

(Indra) recovered (the hidden cattle), hurling his thunderbolt from heaven at the prayers of the Angirasas : the rays of the approaching dawn are spread around : the divine sun, scattering the clustered gloom, has risen and set open the doors of (the habitations of) men.

॥ ವಿಶೇಷವಿಷಯಗಳು ॥

ಈ ಸೂಕ್ತದಲ್ಲಿ ಅಂಗಿರಾಋಷಿಗಳ ಗೋವುಗಳನ್ನು ಪಣಿಗಳೆಂಬ ಅಸುರರು ಅಪಹರಿಸಿ ಪರ್ವತದ ಗುಹೆಯಲ್ಲಿ ಬಚ್ಚಿಟ್ಟಿದ್ದರೆಂಬ ವಿಷಯವನ್ನೂ ಇಂದ್ರನು ಸರಮೆ ಎಂಬ ದೇವಶುನಿಯ ಸಹಾಯದಿಂದ ಆ ಗೋವುಗಳಿದ್ದ ಗುಹಾಪ್ರದೇಶಗಳನ್ನು ಕಂಡುಹಿಡಿದು ಅವುಗಳನ್ನು ಬಿಡಿಸಿದ ವಿಷಯವನ್ನೂ ವಿವರಿಸಲಾಗಿದೆ.

॥ ಸಂಹಿತಾಪಾಠಃ ॥

ವಿ ಸೂರ್ಯೋ ಅಮತಿಂ ನ ಶ್ರಿಯಂ ಸಾದೋರ್ವಾದ್ಗವಾಂ ಮಾತಾ ಜಾನತೀ ಗಾತ್ ।

ಧನ್ವರ್ಣಸೋ ನದ್ಯಃ ಖಾದೋಅರ್ಣಾಃ ಸ್ಥೂಣೇವ ಸುಮಿತಾ ದೃಂಹತ ದ್ಯೌಃ ॥ ೨ ॥

॥ ಪದಪಾಠಃ ॥

ವಿ । ಸೂರ್ಯಃ । ಅಮತಿಂ । ನ । ಶ್ರಿಯಂ । ಸಾತ್ । ಆ । ಊರ್ವಾತ್ । ಗವಾಂ । ಮಾತಾ । ಜಾನತೀ । ಗಾತ್ ।

ಧನ್ವಽಅರ್ಣಸಃ । ನದ್ಯಃ । ಖಾದಃಽಅರ್ಣಾಃ । ಸ್ಥೂಣಾಽಇವ । ಸುಽಮಿತಾ । ದೃಂಹತ । ದ್ಯೌಃ ॥ ೨ ॥

॥ ಸಾಯಣಭಾಷ್ಯಂ ॥

ಸೂರ್ಯೋ ದೇವಃ ಶ್ರಿಯಂ ದೀಪ್ತಿಂ ವಿ ಸಾತ್ । ವಿಭಜತೇ । ಪ್ರಕಾಶಯತೀತ್ಯರ್ಥಃ । ಅಮತಿಂ ನ । ರೂಪನಾಮೈತತ್ । ರೂಪಮಿವ ದ್ರವ್ಯಂ । ಯಥಾ ದ್ರವ್ಯಾಣಿ ಘಟಪಟಾದೀನಿ ನೀಲಪೀತಾದಿರೂಪಂ ಲಭಂತೇ ತದ್ವತ್ । ತಥಾ ಗವಾಂ ರಶ್ಮೀನಾಂ ಮಾತೋಷಾ ಜಾನತೀ ಸೂರ್ಯ ಉದೇಷ್ಯತಿ ಮಯಾ ಚ ವ್ಯುಚ್ಛನಂ ಕರ್ತವ್ಯಮಿತಿ ಜಾನತ್ಯೂರ್ವಾನ್ಮಹತೋಽಂತರಿಕ್ಷಾದಾ ಗಾತ್ । ಆಗಚ್ಛತಿ । ತಥಾ ನದ್ಯಶ್ಚ ಧನ್ವರ್ಣಸಃ । ಧನ್ವತಿರ್ಗತಿಕರ್ಮಾ । ಧನ್ವಂತಿ ಗಚ್ಛಂತ್ಯರ್ಣಾಂಸಿ ಯಾಸು ತಾಸ್ತಥೋಕ್ತಾಃ । ದೀರ್ಘಾಭಾವಶ್ಛಾಂದಸಃ ॥ ಖಾದೋಅರ್ಣಾ ಭಕ್ಷಿತಕೂಲೋದಕಾಃ । ಕೂಲಂಕಷಾ ಇತ್ಯರ್ಥಃ । ನದ್ಯಶ್ಚೈವಂರೂಪಾ ಭವಂತಿ । ಕಿಂಚ ದ್ಯೌಶ್ಚ ಸುಮಿತಾ ಸುಷ್ಠು ಗೃಹೇ ಸ್ಥಾಪಿತಾ ಸ್ಥೂಣೇವ ಗೃಹಾಧಾರಸ್ತಂಭ ಇವ ದೃಂಹತ । ದೃಢಾಭವತ್ । ಏತತ್ಸರ್ವಂ ಸೂರ್ಯಸ್ಯಾಜ್ಞಯೇತಿ ಭಾವಃ ॥

॥ ಪ್ರತಿಪದಾರ್ಥ ॥

**ಸೂರ್ಯಃ**—ಸೂರ್ಯನು । **ಅಮತಿಂ ನ**—ಘಟಾದಿ ದ್ರವ್ಯ ಪದಾರ್ಥಗಳಿಗೆ ನೀಲಪೀತಾದಿ ರೂಪಗಳನ್ನು ಹಂಚುವಂತೆ । **ಶ್ರಿಯಂ**—ತನ್ನ ಪ್ರಭೆಯನ್ನು । **ವಿ ಸಾತ್**—ಸರ್ವತ್ರ ಪ್ರಸರಿಸಿ ಹರಡುವಂತೆ ಮಾಡುತ್ತಾನೆ । **ಗವಾಂ**—ರಶ್ಮಿಗಳಿಗೆ । **ಮಾತಾ**—ಜನನಿಯಾದ ಉಷೋದೇವಿಯು । **ಜಾನತೀ**—ಸೂರ್ಯೋದಯಕಾಲದಲ್ಲಿ ತನ್ನ ಕರ್ತವ್ಯವನ್ನರಿತು । **ಊರ್ವಾತ್**—ಮಹತ್ತಾದ ಅಂತರಿಕ್ಷದಿಂದ । **ಆ ಗಾತ್**—ಆವಿರ್ಭವಿಸಿ ಬರುತ್ತಾಳೆ । **ಧನ್ವರ್ಣಸಃ**—ವೇಗವಾಗಿ ಹರಿಯತಕ್ಕ । **ನದ್ಯಃ**—ನದಿಗಳು । **ಖಾದೋಅರ್ಣಾಃ**—ತಮ್ಮ ದಡಗಳನ್ನು ಕೊಚ್ಚುವ ಪ್ರವಾಹಗಳುಳ್ಳವಾಗಿವೆ । **ದ್ಯೌಃ**—ಅಂತರಿಕ್ಷವು । **ಸುಮಿತಾ**—ಸ್ಥಿರವಾಗಿ ನಿಲ್ಲಿಸಿದ । **ಸ್ಥೂಣಾ ಇವ**—ಗೃಹಸ್ತಂಭದಂತೆ । **ದೃಂಹತೆ**—ದೃಢವಾಗಿ ಸ್ಥಾಪಿತವಾಗಿದೆ

॥ ಭಾವಾರ್ಥ ॥

ಘಟಪಟಾದಿದ್ರವ್ಯಪದಾರ್ಥಗಳಿಗೆ ನೀಲಪೀತಾದಿ ರೂಪಗಳನ್ನು ಹಂಚುವಂತೆ ಸೂರ್ಯನು ತನ್ನ ಪ್ರಭೆಯನ್ನು ಸರ್ವತ್ರ ಪ್ರಸರಿಸಿ ಹರಡುವಂತೆ ಮಾಡುತ್ತಾನೆ. ರಶ್ಮಿಗಳಿಗೆ ಜನನಿಯಾದ ಉಷೋದೇವಿಯು ಸೂರ್ಯೋದಯ ಕಾಲ

ದಲ್ಲಿ ತನ್ನ ಕರ್ತವ್ಯವನ್ನರಿತು ಮಹತ್ತಾದ ಅಂತರಿಕ್ಷದಿಂದ ಆವಿರ್ಭವಿಸಿ ಬರುತ್ತಾಳೆ. ವೇಗವಾಗಿ ಹರಿಯುತಕ್ಕ ನದಿಗಳು ತಮ್ಮ ದಡಗಳನ್ನು ಕೊಚ್ಚುವ ಪ್ರವಾಹಗಳುಳ್ಳವಾಗಿವೆ. ಅಂತರಿಕ್ಷವು ಸ್ಥಿರವಾಗಿ ನಿಲ್ಲಿಸಿದ ಗೃಹಸ್ತಂಭದಂತೆ ದೃಢವಾಗಿ ಸ್ಥಾಪಿತವಾಗಿದೆ.

English Translation

The sun distributes his radiance as if it was a substance the parent of the rays of light, (the dawn), knowing his approach, comes from the spacious (firmament): the rivers with running waters flow, breaking down their banks the heaven is stable like a well-constructed pillar

॥ ಸಂಹಿತಾಪಾಠಃ ॥

ಅಸ್ಮಾ ಉಕ್ಥಾಯ ಪರ್ವತಸ್ಯ ಗರ್ಭೋ ಮಹೀನಾಂ ಜನುಷೇ ಪೂರ್ವ್ಯಾಯ ।
ವಿ ಪರ್ವತೋ ಜಿಹೀತ ಸಾಧತ ದ್ಯೌರಾವಿವಾಸಂತೋ ದಸಯಂತ ಭೂಮ॥

॥ ಪದಪಾಠಃ ॥

ಅಸ್ಮೈ । ಉಕ್ಥಾಯ । ಪರ್ವತಸ್ಯ । ಗರ್ಭಃ । ಮಹೀನಾಂ । ಜನುಷೇ । ಪೂರ್ವ್ಯಾಯ ।
ವಿ । ಪರ್ವತಃ । ಜಿಹೀತ । ಸಾಧತ । ದ್ಯೌಃ । ಆऽವಿವಾಸಂತಃ । ದಸಯಂತ । ಭೂಮ ॥ ೩ ॥

॥ ಸಾಯಣಭಾಷ್ಯಂ ॥

ಅಸ್ಮೈ ಮಹ್ಯಮುಕ್ಥಾಯ ಸ್ತೋತ್ರೇ ಪರ್ವತಸ್ಯ ಪರ್ವವತೋ ಮೇಘಸ್ಯ ಗರ್ಭೋ ಗರ್ಭಸ್ಥಾನೀಯಮುದಕಂ ಜಿಹೀತ । ಚಲತಿ । ಚಾಲಯತಿ ವೇಂದ್ರಃ । ಕೀದೃಶಾಯಾಸ್ಮೈ । ಮಹೀನಾಂ ಮಹತೀನಾಂ ಸ್ತುತೀನಾಂ ಜನುಷ ಉತ್ಪಾದಯಿತ್ರೇ ಪೂರ್ವ್ಯಾಯ ಪ್ರತ್ನಾಯ । ತದೇವ ಪುನರುಚ್ಯತೇ । ಪರ್ವತೋ ಮೇಘೋ ವಿ ಜಿಹೀತ । ದ್ಯೌಶ್ಚ ಸಾಧತ । ಸಾಧಯತಿ ವೃಷ್ಟಿಂ । ಆವಿವಾಸಂತಃ ಸರ್ವತಃ ಪರಿಚರಂತೋಽಂಗಿರಸೋ ಭೂಮಾತ್ಯಧಿಕಂ ದಸಯಂತ । ಉಪಕ್ಷಪಯಂತ್ಯಾತ್ಮಾನಂ ಕರ್ಮಭಿಃ ॥

॥ ಪ್ರತಿಪದಾರ್ಥ ॥

ಮಹೀನಾಂ—ಮಹದ್ಗುಣವುಳ್ಳ ಸ್ತುತಿಗಳಿಗೆ । ಜನುಷೇ—ಉತ್ಪಾದಕನಾದ । ಪೂರ್ವ್ಯಾಯ—ಇಂದಿನ ಋಷಿಗೆ ಯಾವರೀತಿ ಸಂಭವಿಸಿತೋ ಅದೇ ರೀತಿಯಲ್ಲಿ । ಉಕ್ಥಾಯ—ಸ್ತುತಿಕರ್ತನಾದ । ಅಸ್ಮೈ—ನನ್ನ

ಹಿತಕ್ಕಾಗಿ । **ಪರ್ವತಸ್ಯ**—ಮೇಘದ । **ಗರ್ಭಃ**—ಗರ್ಭಸ್ಥವಾದ ಉದಕವು । **ಜಿಹೀತೆ**—ವಿಸರ್ಜಿತವಾಗಿ (ಹರಿಯುತ್ತದೆ) । **ಪರ್ವತಃ**—ಮೇಘವು । **ವಿ (ಜೀಹಿತೆ)**—(ವೃಷ್ಟಿವಿಸರ್ಜನಕ್ಕಾಗಿ) ಸೀಳುತ್ತದೆ । **ದ್ಯೌಃ**—ಅಂತರಿಕ್ಷವು । **ಸಾಧತ**—ವೃಷ್ಟಿಸೇಚನವನ್ನು ನೆರವೇರಿಸುತ್ತದೆ । **ಆವಿವಾಸಂತಃ**—ಸರ್ವತ್ರ ಪೂಜಿಸುತ್ತಿರುವ ಅಂಗಿರಸ್ಸುಗಳು । **ಭೂಮ**—ಅತ್ಯಧಿಕವಾಗಿ । **ದಸಯಂತ**—ಕರ್ಮದ ಶ್ರಮದಿಂದ ಬಳಲುತ್ತಾರೆ.

॥ ಭಾವಾರ್ಥ ॥

ಮಹದ್ಗುಣಗಳುಳ್ಳ ಸ್ತುತಿಗಳಿಗೆ ನಿರ್ಮಾಪಕನಾದ ಹಿಂದಿನ ಋಷಿಗೆ ಯಾವ ವಿಧದಲ್ಲಾಯಿತೋ, ಅದೇ ರೀತಿಯಲ್ಲಿ ಸ್ತುತಿಕರ್ತನಾದ ನನ್ನ ಹಿತಕ್ಕಾಗಿ ಮೇಘದ ಗರ್ಭಸ್ಥವಾದ ಉದಕವು ವಿಸರ್ಜಿತವಾಗಿ ಹರಿಯುತ್ತದೆ. ಮೇಘವು ವೃಷ್ಟಿವಿಸರ್ಜನೆಗಾಗಿ ಸೀಳುತ್ತದೆ ಅಂತರಿಕ್ಷವು ವೃಷ್ಟಿಸೇಚನವನ್ನು ನೆರವೇರಿಸುತ್ತದೆ. ಸರ್ವತ್ರ ಪೂಜಿಸುತ್ತಿರುವ ಅಂಗಿರಸ್ಸುಗಳು ಅತ್ಯಧಿಕವಾದ ಕರ್ಮದ ಶ್ರಮದಿಂದ ಬಳಲುತ್ತಾರೆ.

## English Translation

To me, when offering praise, as to an ancient author of sacred songs, the burden of the cloud (descends); the cloud parts (with its burden); the sky performs (its office): the assiduously worshipping Angirasas are exhausted by much (adoration).

---

॥ ಸಂಹಿತಾಪಾಠಃ ॥

ಸೂಕ್ತೇಭಿರ್ವೋ ವಚೋಭಿರ್ದೇವಜುಷ್ಟೈರಿಂದ್ರಾ ನ್ವಗ್ನೀ ಅವಸೇ
ಹುವಧ್ಯೈ ॥ ೪ ॥
ಉಕ್ಥೇಭಿರ್ಹಿ ಷ್ಮಾ ಕವಯಃ ಸುಯಜ್ಞಾ ಆವಿವಾಸಂತೋ ಮರುತೋ
ಯಜಂತಿ ॥ ೪ ॥

॥ ಪದಪಾಠಃ ॥

ಸುಽಉಕ್ತೇಭಿಃ । ವಃ । ವಚಃಽಭಿಃ । ದೇವಽಜುಷ್ಟೈಃ । ಇಂದ್ರಾ । ನು । ಅಗ್ನೀ ಇತಿ । ಅವಸೇ ।
ಹುವಧ್ಯೈ ।
ಉಕ್ಥೇಭಿಃ । ಹಿ । ಸ್ಮ । ಕವಯಃ । ಸುಽಯಜ್ಞಾಃ । ಆಽವಿವಾಸಂತಃ । ಮರುತಃ । ಯಜಂತಿ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರಾ ಹೇ ಅಗ್ನೀ ॥ ಪರಸ್ಪರಾಪೇಕ್ಷಯಾ ಪ್ರತ್ಯೇಕಂ ದ್ವಿವಚನಂ । ಯದ್ಯಪ್ಯೇಕಮೇವ ಪದಂ ಮಧ್ಯೇ ವ್ಯವಧಾನಂ ಛಾಂದಸಂ ॥ ಹೇ ಇಂದ್ರಾಗ್ನೀ ವೋ ಯುವಾಂ ॥ ವ್ಯತ್ಯಯೇನ ಬಹುವಚನಂ ॥ ದೇವಜುಷ್ಟೈರ್ದೇವೈಃ ಸೇವನೀಯೈಃ ಸೂಕ್ತೇಭಿಃ ಸೂಕ್ತೈಃ ಸುವಚನೈಃ ಶೋಭನಗುಣಪ್ರಕಾಶನಪ್ರವ-ಣೈರ್ವಚೋಭಿರವಸೇಽಸ್ಮದ್ರಕ್ಷಣಾಯ ಹುವಧ್ಯೈ । ಆಹ್ವಯಾಮಿ । ನು ಕ್ಷಿಪ್ರಂ ಯುವಾಮುಕ್ಥೇಭಿಃ ಸ್ತೋತ್ರೈಃ ಕವಯೋಽನೂಚಾನಾಃ ಪೂರ್ವ ಋಷಯಃ ಸುಯಜ್ಞಾಃ ಶೋಭನಯಾಗಾ ಆವಿವಾಸಂತಃ ಸ್ತುತ್ಯಾದಿನಾ ಪರಿಚರಂತೋ ಮರುತೋ ಮರುತ್ಸದೃಶಾಃ ಕರ್ಮಸು ಶೀಘ್ರಾ ಯಜಂತಿ । ಪೂಜಯಂತಿ ॥ ಹಿ ಸ್ಮೇತಿ ಪೂರಣೌ ॥**

॥ ಪ್ರತಿಪದಾರ್ಥ ॥

**(ಹೇ)** ಇಂದ್ರಾ , **(ಹೇ)** ಅಗ್ನೀ—ಎಲೈ ಇಂದ್ರಾಗ್ನಿಗಳೇ । **ವಃ**—ನಿಮ್ಮನ್ನು । **ದೇವಜುಷ್ಟೈಃ**—ದೇವತೆಗಳಿಂದ ಸೇವಿಸಲ್ಪಡಲು ಯೋಗ್ಯವಾದವೂ । **ಸೂಕ್ತೇಭಿಃ**—ಸೂಕ್ತರೂಪದಲ್ಲಿರತಕ್ಕವೂ ( ಉತ್ತಮವಾಗಿ ನಿರ್ಮಿತವಾದವೂ) ಆದ । **ವಚೋಭಿಃ**—ಸ್ತುತಿವಾಕ್ಯಗಳಿಂದ । **ಅವಸೇ**—ನಮ್ಮ ರಕ್ಷಣಾರ್ಥವಾಗಿ । **ಹುವಧ್ಯೈ**-ಪ್ರಾರ್ಥಿಸಿ ಕರೆಯುತ್ತೇನೆ । **ನು**—ಖಂಡಿತವಾಗಿಯೂ । **ಸುಯಜ್ಞಾಃ**—ಉತ್ತಮವಾದ ಯಜ್ಞನಿರ್ವಾಹಕರೂ । **ಕವಯಃ**—ಅನೂಚಾನರೂ ಆದ ಋಷಿಗಳು । **ಆವಿವಾಸಂತಃ**—ನಿಮ್ಮನ್ನು ಉಪಚರಿಸುತ್ತಾ । **ಮರುತಃ**—ಮರುತ್ತುಗಳಂತೆ ಶೀಘ್ರವ್ಯವಹಾರವುಳ್ಳವರಾಗಿ । **ಉಕ್ಥೈಃ**—ಸ್ತುತಿರೂಪವಾದ ಸಾಧನಗಳಿಂದ । **ಯಜಂತಿ-ಹಿ ಸ.**—ಪೂಜಿಸುತ್ತಾರೆ

॥ ಭಾವಾರ್ಥ ॥

ಎಲೈ ಇಂದ್ರಾಗ್ನಿಗಳೇ, ದೇವತೆಗಳಿಂದ ಸೇವಿಸಲ್ಪಡಲು ಯೋಗ್ಯವಾದವೂ, ಸ್ತುತಿರೂಪದಲ್ಲಿರತಕ್ಕವೂ, ಉತ್ತಮವಾಗಿ ನಿರ್ಮಿತವಾದವೂ ಆದ ಸ್ತುತಿವಾಕ್ಯಗಳಿಂದ ನಮ್ಮ ರಕ್ಷಣಾರ್ಥವಾಗಿ ನಿಮ್ಮನ್ನು ಕರೆಯುತ್ತೇನೆ ಉತ್ತಮವಾದ ಯಜ್ಞನಿರ್ವಾಹಕರೂ, ಅನೂಚಾನರೂ ಆದ ಋಷಿಗಳು ನಿಮ್ಮನ್ನುಪಚರಿಸುತ್ತಾ ಮರುತ್ತುಗಳಂತೆ ಶೀಘ್ರವ್ಯವಹಾರಗಳುಳ್ಳವರಾಗಿ ಸ್ತುತಿರೂಪವಾದ ಸಾಧನಗಳಿಂದ ಪೂಜಿಸುತ್ತಾರೆ

## English Translation

Indra and Agni, I invoke you for my salvation with well-uttered words, agreeable to the gods; for verily, sages excelling in sacrifice, and deligently adoring, worship you with sacred songs, prompt as the Maruts (in devotion).

॥ ಸಂಹಿತಾಪಾಠಃ ॥

ಏತೋ ನ್ವ೧ಗಿದ್ಯ ಸುಧ್ಯೋ೩ಕ್ಷಿ ಭವಾಮ ಪ್ರ ದುಚ್ಛುನಾ ಮಿನವಾಮಾ ವರೀಯಃ ।

ಆರೇ ದ್ವೇಷಾಂಸಿ ಸನುತರ್ದಧಾಮಾಯಾಮ ಪ್ರಾಂಚೋ ಯಜಮಾನಮಚ್ಛ ॥ ೫ ॥

॥ ಪದಪಾಠಃ ॥

ಏತೋ ಇತಿ । ನು । ಅದ್ಯ । ಸುಽಧ್ಯಃ । ಭವಾಮ । ಪ್ರ । ದುಚ್ಛುನಾಃ । ಮಿನವಾಮ । ವರೀಯಃ ।

ಆರೇ । ದ್ವೇಷಾಂಸಿ । ಸನುತಃ । ದಧಾಮ । ಅಯಾಮ । ಪ್ರಾಂಚಃ । ಯಜಮಾನಂ । ಅಚ್ಛ ॥ ೫ ॥

॥ ಸಾಯಣಭಾಷ್ಯಂ ॥

**ಅಯಮಂಗಿರಸಾಂ ವಾದಃ । ಅದ್ಯಾಸ್ಮಿನ್ಯಾಗದಿನೇ ನು ಕ್ಷಿಪ್ರಮೇತೋ । ಏತ । ಗಚ್ಛತ । ಸುಧ್ಯಃ ಶೋಭನಕರ್ಮಾಣೋ ಭವಾಮ । ದುಚ್ಛುನಾ ದ್ವಿಷಃ ಪ್ರ ಮಿನವಾಮ । ಪ್ರಕರ್ಷೇಣ ಹಿಂಸಾಮ ವರೀಯಃ । ಅತ್ಯಂತಮಿತ್ಯರ್ಥಃ । ತದೇವೋಚ್ಯತೇ । ಸನುತಃ ಸಂಭಕ್ತ್ರ್ಯಾನ್ ದ್ವೇಷಾಂಸಿ ಯಜಮಾನಸ್ಯ ದ್ವೇಷ್ಟ್ರ್ಯಾನಾರೇ ದೂರೇ ದಧಾಮ । ಸ್ಥಾಪಯಾಮ । ಯದ್ವಾ । ಸನುತರಿತ್ಯಂತರ್ಹಿತನಾಮ । ಪೂರ್ವಂ ಪ್ರಕಾಶವೈರಿಣಾಂ ವಧ ಉಕ್ತ ಇದಾನೀಂ ಪ್ರಚ್ಛನ್ನಾನಾಮಿತಿ ವಿವೇಕಃ । ತದರ್ಥಂ ಯಜಮಾನಂ ಪ್ರಾಂಚಃ ಸದಾಪೃಣಮವತ್ಸಾರಂ ಚಾಚ್ಛಾಭಿಮುಖಮಯಾಮ । ಗಚ್ಛಾಮ ॥**

॥ ಪ್ರತಿಪದಾರ್ಥ ॥

**ಅದ್ಯ**—ಈ ಯಾಗಕ್ಕೆ । **ನು**—ಕ್ಷಿಪ್ರವಾಗಿ । **ಏತೋ**—ಬನ್ನಿರಿ । **ಸುಧ್ಯಃ**—ಉತ್ತಮವಾದ ಕರ್ಮಯುಕ್ತರಾಗಿ । **ಭವಾಮ**—ಇರೋಣ । **ದುಚ್ಛುನಾಃ**—ದ್ವೇಷಿಗಳನ್ನು । **ವರೀಯಃ**—ಅತ್ಯಧಿಕವಾಗಿ । **ಪ್ರ ಮಿನವಾಮ**—ಹಿಂಸಿಸೋಣ । **ಸನುತಃ**—ಯಜ್ಞಕರ್ಮದಲ್ಲಿ ಪ್ರವೇಶಿಸುವ । **ದ್ವೇಷಾಂಸಿ**—( ಯಜಮಾನನ ) ಶತ್ರುಗಳನ್ನು । **ಆರೇ**—ದೂರದಲ್ಲಿ । **ದಧಾಮ**—ಇಡೋಣ । **ಯಜಮಾನಂ**—ಯಜ್ಞಕರ್ತನಿಗೆ । **ಪ್ರಾಂಚಃ**—ಅಭಿಮುಖವಾಗಿ । **ಅಚ್ಛ ಅಯಾಮ**—ಹೋಗಿ ಸೇರೋಣ.

॥ ಭಾವಾರ್ಥ ॥

ಈ ಯಾಗಕ್ಕೆ ಎಲ್ಲರೂ ಕ್ಷಿಪ್ರವಾಗಿ ಬನ್ನಿರಿ. ನಾವೆಲ್ಲರೂ ಉತ್ತಮವಾದ ಕರ್ಮಯುಕ್ತರಾಗಿರೋಣ. ನಮ್ಮ ದ್ವೇಷಿಗಳನ್ನು ಪೂರ್ಣವಾಗಿ ಹಿಂಸಿಸಿ ನಾಶಪಡಿಸೋಣ ಯಜ್ಞಕರ್ಮದಲ್ಲಿ ಪ್ರವೇಶಿಸುವ ಯಜಮಾನನ ಶತ್ರುಗಳನ್ನೆಲ್ಲಾ ದೂರವಾಗಿ ಅಟ್ಟೋಣ. ಈ ಕಾರ್ಯಕ್ಕಾಗಿ ಯಜಮಾನನ ಅಭಿಮುಖವಾಗಿ ಹೋಗೋಣ.

## English Translation

Come to-day quickly: let us be engaged in pious acts: let us entirely annihilate the hostile: let us keep off all secret enemies: let us hasten to the presence of the institutor of the rite.

॥ ಸಂಹಿತಾಪಾಠಃ ॥

ಏತಾ ಧಿಯಂ ಕೃಣವಾಮಾ ಸಖಾಯೋಽಪ ಯಾ ಮಾತಾಁ ಋಣುತ ವ್ರಜಂ ಗೋಃ ।

ಯಯಾ ಮನುರ್ವಿಶಿಶಿಪ್ರಂ ಜಿಗಾಯ ಯಯಾ ವಣಿಗ್ವಂಕುರಾಪಾ ಪುರೀಷಂ ॥ ೬ ॥

॥ ಪದಪಾಠಃ ॥

ಆ । ಇತ । ಧಿಯಂ । ಕೃಣವಾಮ । ಸಖಾಯಃ । ಅಪ । ಯಾ । ಮಾತಾ । ಋಣುತ । ವ್ರಜಂ । ಗೋಃ ।

ಯಯಾ । ಮನುಃ । ವಿಶಿಽಶಿಪ್ರಂ । ಜಿಗಾಯ । ಯಯಾ । ವಣಿಕ್ । ವಂಕುಃ । ಆಪ । ಪುರೀಷಂ ॥೬॥

॥ ಸಾಯಣಭಾಷ್ಯಂ ॥

ಇದಮಪ್ಯಂಗಿರಸಾಂ ವಾಕ್ಯಂ। ಏತ । ಆಗಚ್ಛತ। ಆಗತ್ಯ ಚ ಧಿಯಂ ಸ್ತುತಿಃ ಕೃಣವಾಮ । ಕರವಾಮ । ಹೇ ಸಖಾಯಃ ಪರಸ್ಪರಂ ಸಖಿಭೂತಾ ಅಂಗಿರಸ ಇತ್ಯಂಗಿರಸಾಂ ವಚನಂ । ಯಾ ಧೀರ್ಮಾತಾ ಗವಾಂ ನಿರ್ಮಾತ್ರೀ ಗೋರ್ಗವಾಂ ವ್ರಜಂ ಪಣಿಭಿರಪಹೃತಮಪ ಋಣುತ ಅಪಾವೃಣೋತ್ । ಯಯಾ ಚ ಮನುರ್ವಿಶಿಶಿಪ್ರಂ ವಿಗತಹನುಂ ಶತ್ರುಂ ಜಿಗಾಯ ಜಿತವಾನ್। ಯದ್ವಾ। ಮನುಃ ಸರ್ವಸ್ಯ ಮಂತೇಂದ್ರೋ ವಿಶಿಶಿಪ್ರೋ ವೃತ್ರಃ । ಸ ತಮಸ್ಮಾಭಿಃ ಕೃತಯಾ ಸ್ತೋಮಲಕ್ಷಣಯಾ ಧಿಯಾ ಜಿಗಾಯ । ಯಯಾ ಚ ವಣಿಕ್ ವಣಿಗಿವಾಲ್ಪೇನ ಕರ್ಮಣಾ ಬಹುಫಲಾಕಾಂಕ್ಷೀ ಕಕ್ಷೀವಾನ್ ವಂಕುರ್ಜಲೇಚ್ಛಯಾ ವನಗಾಮೀ ಪುರೀಷಂ ಪೂರಕಮುದಕಮಾಪ। ಯಾಭಿಃ ಸುದಾಸೂ ಔಶಿಜಾಯ ವಣಿಜೇ ದೀರ್ಘಶ್ರವಸೇ ಮಧು ಕೋಶಃ । ಋಗ್ವೇ ೧. ೧೧೨. ೧೧. । ಇತಿ ಹಿ ಶ್ರುತಂ ॥

॥ ಪ್ರತಿಪದಾರ್ಥ ॥

**ಮಾತಾ**—ನಿರ್ಮಾತೃಯಾದ । **ಯಾ**—ಯಾವ ಸ್ತುತಿಯು । **ಗೋಃ**—ಗೋವುಗಳ । **ವ್ರಜಂ**—ಕೊಟ್ಟಿಗೆಯನ್ನು । **ಅಪ ಋಣ್ವತ**-ತೆರೆಯುವಂತೆ ಮಾಡಿತೋ । **ಯಯಾ**-ಯಾವ ಸ್ತುತಿಯಿಂದ । **ಮನುಃ**—ಮನುವು । **ವಿಶಿಶಿಪ್ರಂ**—ವಿಶಿಶಿಪ್ರನೆಂಬ ಅಸುರನನ್ನು । **ಜಿಗಾಯ**—ಜಯಿಸಿದನೋ । **ಯಯಾ**—ಯಾವುದರ ಸಹಾಯದಿಂದ । **ವಣಿಕ್**—ವಣಿಗ್ವ್ಯವಹಾರವುಳ್ಳ । ಕಕ್ಷೀವಂತನು । **ವಂಕುಃ**—ಜಲೇಚ್ಛೆಯಿಂದ ಕಾಡಿನಲ್ಲಿ ಸಂಚರಿಸುತ್ತಾ । **ಪುರೀಷಂ**—ಉದಕವನ್ನು । **ಆಪ**—ಪಡೆದನೋ (ಅಂತಹ) । **ಧಿಯಂ**—ಸ್ತುತಿಯನ್ನು । **ಕೃಣವಾಮ**-ನಿರ್ಮಿಸಿ ಪಠಿಸೋಣ । **ಸಖಾಯಃ**—ಎಲೈ ಸುಹೃತ್ತುಗಳಾದ ಅಂಗಿರಸ್ಸುಗಳೇ । **ಏತ**—ಬನ್ನಿರಿ.

॥ ಭಾವಾರ್ಥ ॥

ಮಾತೃಸ್ವರೂಪವಾದ ಯಾವ ಸ್ತುತಿಯು ಪಠಿತವಾದೊಡನೆಯೇ ಪಣಿಗಳಿಂದ ಅಪಹೃತವಾದ ಗೋವುಗಳ ಕೊಟ್ಟಿಗೆಯನ್ನು ತೆರೆಯುವಂತೆ ಮಾಡಿತೋ, ಯಾವ ಸ್ತುತಿಯಿಂದ ಮನುವು ವಿಶಿಶಿಪ್ರನೆಂಬ ಅಸುರರನ್ನು ಜಯಿಸಿದನೋ, ಯಾವುದರ ಸಹಾಯದಿಂದ ವಣಿಗ್ವ್ಯವಹಾರವುಳ್ಳ ಕಕ್ಷೀವಂತನು ಜಲೇಚ್ಛೆಯಿಂದ ಕಾಡಿನಲ್ಲಿ ಸಂಚರಿಸುತ್ತಾ ಉದಕವನ್ನು ಪಡೆದನೋ ಅಂತಹ ಸ್ತುತಿಯನ್ನು ನಿರ್ಮಿಸಿ ಪಠಿಸೋಣ. ಸುಹೃತ್ತುಗಳಾದ ಅಂಗಿರಸ್ಸುಗಳೇ, ಎಲ್ಲರೂ ಬನ್ನಿರಿ

English Translation

Come, friends, let us celebrate that solemn rite which was effectual in setting open the (secret) stalls of the (stolen) cattle; by which Manu overcame Visisipra; by which the merchant, going to the wood (for it), obtained the water.

॥ ವಿಶೇಷವಿಷಯಗಳು ॥

**ವಿಶಿಶಿಪ್ರಂ**—ಇಲ್ಲಿ ಭಾಷ್ಯಕಾರರು ವಿಶಿಶಿಪ್ರಶಬ್ದಕ್ಕೆ ವೃತ್ರನೆಂದು ಅರ್ಥಮಾಡಿದಾರೆ ವೃತ್ರನೆಂದರೆ ಶತ್ರುವೆಂದೂ ಅರ್ಥವು ಆದುದರಿಂದ ಪ್ರಕೃತ ಋಕ್ಕಿನಲ್ಲಿ ಮನುವು ತಾನು ಮಾಡಿದ ಸ್ತೋತ್ರಪ್ರಭಾವದಿಂದ ತನ್ನ ಶತ್ರುವನ್ನು ಗೆದ್ದನು ಎಂಬರ್ಥವು ಸೂಚಿತವಾಗುವುದು ಅಥವಾ ವಿಶಿಶಿಪ್ರನೆಂಬುವನು ಒಬ್ಬ ವ್ಯಕ್ತಿ ಅಥವಾ ಅಸುರನೆಂದು ಹೇಳಬಹುದು ಈ ಸಂದರ್ಭದಲ್ಲಿ ಈ ಶಬ್ದವು ಈ ಋಕ್ಕಿನಲ್ಲಿ ಮಾತ್ರ ಪಠಿತವಾಗಿ ಬೇರೆಲ್ಲಿಯೂ ಇಲ್ಲದಿರುವುದರಿಂದ ಇವನ ವಿಷಯವಾಗಿ ಏನನ್ನು ಹೇಳಲೂ ಸಾಧ್ಯವಿಲ್ಲ

**ಯಯಾ ವಣಿಕ್ ವಂಕುಃ ಪುರೀಷಂ ಆಪ**—ಉದಕಾರ್ಥವಾಗಿ ಕಾಡಿನಲ್ಲಿ ಸಂಚರಿಸುತ್ತಿದ್ದ ಕಕ್ಷೀವಂತನೆಂಬ ಋಷಿಯು ಈ ಸ್ತೋತ್ರದ ಪ್ರಭಾವದಿಂದ ನೀರನ್ನು ಪಡೆದನೆಂದು ಇಲ್ಲಿ ಹೇಳಿದೆ. ಆದರೆ ಭಾಷ್ಯಕಾರರು ಉದಾಹರಿಸಿರುವ,

**ಯಾಭಿಃ ಸುದಾನೂ ಔಶಿಜಾಯ ವಣಿಜೇ ದೀರ್ಘಶ್ರವಸೇ ಮಧು ಕೋಶೋ ಅಕ್ಷರತ್ ।**
**ಕಕ್ಷೀವಂತಂ ಸ್ತೋತಾರಂ ಯಾಭಿರಾವತಂ ತಾಭಿರೂ ಷು ಊತಿಭಿರಶ್ವಿನಾ ಗತಂ ॥**

(ಋ. ಸಂ ೧-೧೧೨-೧೧)

ಎಂಬ ಋಕ್ಕಿನಲ್ಲಿ ಕಕ್ಷೀವಾನ್ ಎಂಬ ಋಷಿಯು ಅಶ್ವಿನೀದೇವತೆಗಳನ್ನು ಸ್ತುತಿಸಿ ಅವರಿಂದ ರಕ್ಷಣೆಯನ್ನು ಪಡೆದನೆಂದು ಹೇಳಿದೆ. ಸ್ತುತಿಯು ಯಾವದೇವತೆಯನ್ನುದ್ದೇಶಿಸಿ ಪಠಿಸಿದ್ದರೂ ಆ ಸ್ತುತಿಯ ಪ್ರಭಾವದಿಂದ ಕಕ್ಷೀವಂತನು ತನ್ನ ಇಷ್ಟಸಿದ್ಧಿಯನ್ನು ಪಡೆದುದರಿಂದ ಇಲ್ಲಿ ಆ ಸ್ತುತಿಯ ಮಹಾತ್ಮೆಯು ಅತಿಶಯವಾಗಿರುವುದೆಂಬುದನ್ನು ತಿಳಿಸುವುದಕ್ಕಾಗಿ ಆ ವಿಷಯದ ವಿವರಣೆ ಇದೆ.

॥ ಸಂಹಿತಾಪಾಠಃ ॥

ಅನೂನೋದತ್ರ ಹಸ್ತಯತೋ ಅದ್ರಿರಾರ್ಚನ್ಯೇನ ದಶ ಮಾಸೋ ನವಗ್ವಾಃ ।
ಋತಂ ಯತೀ ಸರಮಾ ಗಾ ಅವಿಂದದ್ವಿಶ್ವಾನಿ ಸತ್ಯಾಂಗಿರಾಶ್ಚಕಾರ ॥ ೭ ॥

॥ ಪದಪಾಠಃ ॥

ಅನೂನೋತ್ । ಅತ್ರ । ಹಸ್ತsಯತಃ । ಅದ್ರಿಃ । ಆರ್ಚನ್ । ಯೇನ । ದಶ । ಮಾಸಃ । ನವsಗ್ವಾಃ ।
ಋತಂ । ಯತೀ । ಸರಮಾ । ಗಾಃ । ಅವಿಂದತ್ । ವಿಶ್ವಾನಿ । ಸತ್ಯಾ । ಅಂಗಿರಾಃ । ಚಕಾರ ॥ ೭ ॥

॥ ಸಾಯಣಭಾಷ್ಯಂ ॥

ಅತ್ರಾಸ್ಮಿನ್ಯಜ್ಞೇಽದ್ರಿರಭಿಷವಗ್ರಾವಾ ಹಸ್ತಯತೋ ಹಸ್ತೇನ ಸಂಹತಃ ಸನ್ ಅನೂನೋತ್ । ನೌತಿರತ್ರ ಶಬ್ದಮಾತ್ರೇ ವರ್ತತೇ । ಅಶಬ್ದಯತ್ । ಯೇನ ಗ್ರಾವ್ಣಾ ತದಭಿಷವೇಣ ದಶ ಮಾಸೋ ಮಾಸಾನ್ ದಶಮಾಸಪರ್ಯಂತಂ ನವಗ್ವಾಃ । ನವಮಾಸಪರ್ಯಂತಂ ಗವಾರ್ಥಮನುತಿಷ್ಠಂತೋಽಂಗಿರಸೋ ನವಗ್ವಾಃ । ನವಗೋಯುಕ್ತಾ ವಾರ್ಚನ್ ಅಪೂಜಯನ್ನಿಂದ್ರಂ । ಯದ್ವಾ। ದಶಸಂಖ್ಯಾಕಮಾಸೋಪೇತಾ ದಶಮಾಸಾನ-ಷ್ಠಾನಾ ಅಂಗಿರಸೋಽಪರೇ ನವಗ್ವಾಶ್ಚೈತೇ ಸರ್ವೇಽಪಿ ಯೇನಾರ್ಚಂತಿ । ನವಗ್ವಾಸಃ ಸುತಸೋಮಾಸ ಇಂದ್ರಂ । ಋಗ್ವೇ ೫ ೨೯ ೧೨ । ಇತಿ ಹಿ ನಿಗಮಃ । ಋತಂ ಸತ್ಯಂ ಯಜ್ಞಂ ವಾ ಯತೀ ಪ್ರಾಪ್ನುವತೀ ಸರಮಾ ಸರಣಶೀಲಾ ಸ್ತುತಿರೂಪಾ ವಾಗಂಗಿರಸಾಂ ಗವಾರ್ಥಮಿಂದ್ರೇಣ ಪ್ರಹಿತಾ ದೇವಶುನೀ ವಾ ಗಾ ಅವಿಂದತ್ ಪಣಿಭಿರಪಹೃತಾಃ । ವಿಶ್ವಾನಿ ಸರ್ವಾಣಿ ಸ್ತುತ್ಯಾದಿಲಕ್ಷಣಾನಿ ಸತ್ಯಾ, ಸತ್ಯಾನಿ ಚಕಾರಾಂಗಿರಾಃ ॥

॥ ಪ್ರತಿಪದಾರ್ಥ ॥

**ಯೇನ**—ಯಾವ ಅಭಿಷವದ ಕಲ್ಲಿನ ಸಹಾಯದಿಂದ । **ನವಗ್ವಾಃ**—ನವಗ್ವಸಂಜ್ಞಕರಾದ ಋಷಿಗಳು । **ದಶ ಮಾಸಃ**—ಹತ್ತು ತಿಂಗಳು ಪೂರ್ತ । **ಆರ್ಚನ್**—(ಇಂದ್ರನನ್ನು) ಪೂಜಿಸಿದರೋ (ಅಂತಹ) । **ಅದ್ರಿಃ**—ಹಿಂಡುವ ಕಲ್ಲು । **ಅತ್ರ**—ಈ ಯಜ್ಞದಲ್ಲಿ । **ಹಸ್ತಯತಃ**—ಕೈಯಿನಲ್ಲಿ ಹಿಡಿಯಲ್ಪಟ್ಟುದಾಗಿ । **ಅನೂನೋತ್**—

ಶಬ್ದಮಾಡುತ್ತಿದೆ | **ಸರಮಾ**—ಸರಮಾ ಎಂಬ ದೇವಶುನಿಯು | **ಋತಂ**-ಯಜ್ಞವನ್ನು | **ಯತೀ**-ಪ್ರವೇಶಿಸುತ್ತಾ | **ಗಾಃ**—ಗೋವುಗಳನ್ನು | **ಅವಿಂದತ್**—ಪಡೆದಳು | **ಅಂಗಿರಾಃ**—ಅಂಗಿರಾ ಋಷಿಗಳು | **ವಿಶ್ವಾನಿ**—ಸಮಸ್ತವಾದ ಯಜ್ಞಕರ್ಮಗಳನ್ನೂ | **ಸತ್ಯಾ**—ಸತ್ಯಾತ್ಮಕವಾಗುವಂತೆ | **ಚಕಾರ**—ಮಾಡಿದರು

॥ ಭಾವಾರ್ಥ ॥

ಯಾವ ಅಭಿಷವದ ಕಲ್ಲಿನ ಸಹಾಯದಿಂದ ನವಗ್ವಸಂಜ್ಞಕರಾದ ಋಷಿಗಳು ಹತ್ತುತಿಂಗಳು ಪೂರ್ತಿ ಇಂದ್ರನನ್ನು ಪೂಜಿಸಿದರೋ ಅಂತಹ ಹಿಂಡುವ ಕಲ್ಲು ಈ ಯಜ್ಞದಲ್ಲಿ ಕೈಯಿನಲ್ಲಿ ಹಿಡಿಯಲ್ಪಟ್ಟಿದಾಗ ಶಬ್ದಮಾಡುತ್ತಿದೆ, ಸರಮಾ ಎಂಬ ದೇವಶುನಿಯು ಯಜ್ಞವನ್ನು ಪ್ರವೇಶಿಸುತ್ತಾ ಗೋವುಗಳನ್ನು ಪಡೆದಳು ಅಂಗಿರಾಋಷಿಗಳು ಸಮಸ್ತವಾದ ಯಜ್ಞಕರ್ಮಗಳನ್ನೂ ಸತ್ಯಾತ್ಮಕವಾಗುವಂತೆ ಮಾಡಿದರು.

English Translation

At this sacrifice the stone (set in motion) by the hands (of the priests) makes a noice, whereby the nine-months ministrants celebrated the ten-months worship · when Sarama, going to the ceremony, discovered the cattle and Angiras rendered all the rites effective.

॥ ವಿಶೇಷವಿಷಯಗಳು ॥

**ನವಗ್ವಾಃ**—ಅಂಗಿರಾಋಷಿಗಳಲ್ಲಿ ಶ್ರೇಷ್ಠರಾದವರನ್ನು ನವಗ್ವ, ದಶಗ್ವ, ಎಂಬ ಹೆಸರಿನಿಂದ ಕರೆಯುವುದು ಋಗ್ವೇದದಲ್ಲಿ ರೂಢಿಯಾಗಿದೆ. ಈ ಹೆಸರು ಬರಲು ಕಾರಣವೇನೆಂಬುದು ವಿವರಿಸಲು ಭಾಷ್ಯಕಾರರು ಈ ರೀತಿ ವಿವರಿಸಿದ್ದಾರೆ—

**ನವಗ್ವೈಃ, ದಶಗ್ವೈಃ—ನವಭಿರ್ಮಾಸೈರ್ಗಚ್ಛಂತೀತಿ ನವಗ್ವಾಃ | ದಶಭಿರ್ಮಾಸೈರ್ಗಚ್ಛಂತೀತಿ ದಶಗ್ವಾಃ | ಅಂಗಿರಸಾಂ ಸತ್ರಮಾಸೀನಾನಾಂ ಮಧ್ಯೇ ಯೇ ನವಭಿರ್ಮಾಸೈರವಾಪ್ತಫಲಾ ಉತ್ಥಿತಾಸ್ತೇಷಾಂ ನವಗ್ವಾ ಇತಿ ಸಂಜ್ಞಾ | ದಶಭಿರ್ಮಾಸೈರ್ದಶಗ್ವಾ ಇತಿ ಚ** || ಅಂಗಿರಾಋಷಿಯ ವಂಶದಲ್ಲಿ ಕೆಲವರು ಸಂವತ್ಸರಕಾಲಮಾಡುವ ಸತ್ರಯಾಗದಲ್ಲಿ ಒಂಭತ್ತು ತಿಂಗಳಲ್ಲಿಯೇ ಯಜ್ಞಾನುಷ್ಠಾನದಿಂದ ಸಿದ್ಧಿಯನ್ನು ಪಡೆದಿರುವರು ಅವರನ್ನು **ಅಂಗಿರಸ್ತಮಾ ನವಗ್ವಾಃ** ಒಂಭತ್ತು ತಿಂಗಳಲ್ಲಿಯೇ ಇಷ್ಟಸಿದ್ಧಿಯನ್ನು ಪಡೆದ ಅಂಗಿರಾಋಷಿವಂಶಸ್ಥರಲ್ಲಿ ಶ್ರೇಷ್ಠರಾದವರು ಎಂದೂ ಹತ್ತು ತಿಂಗಳಲ್ಲಿ ಇಷ್ಟಸಿದ್ಧಿಯನ್ನು ಪಡೆದ ಅಂಗಿರಾಋಷಿವಂಶಸ್ಥರನ್ನು **ದಶಗ್ವಾಃ** ಎಂದೂ ಹೇಳುವ ರೂಢಿ ಇದೆ. ಈ ವಿಷಯದಲ್ಲಿ ಪಾಶ್ಚಾತ್ಯ ಪಂಡಿತರು ಈ ಶಬ್ದದ ಅರ್ಥವಿವರಣೆ ಮಾಡುವಾಗ—The term Navagva is applied to a man generally an Angiras, in the highest degree ( Angirastama-ಅಂಗಿರಸ್ತಮ ) who appears as a mystic race of olden times coupled with, and conceived probably as related to the Angirasas they are often associated with the Dasagvas (ದಶಗ್ವ). ಈ ಶಬ್ದ ಪ್ರಯೋಗವು ಋಗ್ವೇದದ ಅನೇಕ ಋಕ್ಕುಗಳಲ್ಲಿರುವುವು ಕೆಲವು ಉದಾಹರಣೆಗಳನ್ನು ಕೊಡುವೆವು.

**ಯೇನಾ ನವಗ್ವೋ ದಧ್ಯಙ್ಙಪೋರ್ಣುತೇ ಯೇನ ವಿಪ್ರಾಸ ಆಪಿರೇ ।**

(ಋ. ಸಂ. ೯-೧೦೮-೪)

**ನವಗ್ವೋ ನು ದಶಗ್ವೋ ಅಂಗಿರಸ್ತಮಃ ಸಚಾ ದೇವೇಷು ಮಂಹತೇ ।**

(ಋ. ಸಂ ೧೦-೬೨-೬)

**ಸಖಾ ಹ ಯತ್ರ ಸಖಿಭಿರ್ನವಗ್ವೈರಭಿಜ್ಞ್ವಾ ಸತ್ವಭಿರ್ಗಾ ಅನುಗ್ಮನ್ ।**

(ಋ. ಸಂ. ೩-೩೯-೫)

**ಅಂಗಿರಸೋ ನಃ ಪಿತರೋ ನವಗ್ವಾ ಅಥರ್ವಾಣೋ ಭೃಗವಃ ಸೋಮ್ಯಾಸಃ ।**

(ಋ. ಸಂ. ೧೦-೧೪-೬)

**ಯೇನಾ ನವಗ್ವೇ ಅಂಗಿರೇ ದಶಗ್ವೇ ಸಪ್ತಾಸ್ಯೇ ರೇವತೀ ರೇವದೂಷ ॥**

(ಋ. ಸಂ ೪-೫೧-೪)

ಇತ್ಯಾದಿ ಅನೇಕ ಋಗ್ವೇದದ ಋಕ್ಕುಗಳಲ್ಲಿಯೂ, ಅಥರ್ವೇದ ಸಂ. ೧೯-೧-೫೬ , ೧೮-೩-೨೦ ಮೊದಲಾದ ಮಂತ್ರಗಳಲ್ಲಿಯೂ ಈ ಶಬ್ದಗಳ ಪ್ರಯೋಗವಿದೆ. ಇವುಗಳಲ್ಲಿ ಎರಡನೆಯ ಉದಾಹರಣೆಯಲ್ಲಿ ಹೇಳಿರುವ ನವಗ್ವ ಮತ್ತು ದಶಗ್ವ ಎಂಬ ಪ್ರಖ್ಯಾತಿ ನಾಮವನ್ನು ಪಡೆದ ಅಂಗಿರಾಋಷಿವಂಶದಲ್ಲಿ ಶ್ರೇಷ್ಠನಾದವನು ದೇವತೆಗಳಿಂದಲೂ ಗೌರವಿಸಲ್ಪಡುತ್ತಾನೆ ಎಂಬುದು ಗಮನಾರ್ಹವಾಗಿದೆ.

ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕುಗಳಲ್ಲಿಯೂ ಸರಮಾ ಎಂಬ ದೇವಶುನಿಯು ಗೋವುಗಳನ್ನು ಪಡೆದ ಳೆಂದು ಹೇಳಿದೆ ಈ ವಿಷಯದಲ್ಲಿ—

ಭಾಷ್ಯಕಾರರು ಇಲ್ಲಿ ಒಂದು ಉಪಾಖ್ಯಾನವನ್ನು ಹೇಳಿರುವರು—ಸರಮಾ ಎಂಬುದು ದೇವತೆಗಳ ಬಳಿ ಇರುವ ಹೆಣ್ಣು ನಾಯಿಯು. ಪಣಿನಾಮಕ ದೈತ್ಯರು ದೇವತೆಗಳ ಗೋವುಗಳನ್ನು ಅಪಹರಿಸಿ ಗುಹೆಯಲ್ಲಿ ಬಚ್ಚಿಟ್ಟಿದ್ದಾಗ ಆ ಗೋವುಗಳನ್ನು ಹುಡುಕುವುದಕ್ಕಾಗಿ ಇಂದ್ರನು ಈ ಸರಮಾ ಎಂಬ ದೇವಶುನಿಯನ್ನು ಕಳುಹಿಸಿದನು ಲೋಕವ್ಯವಹಾರದಲ್ಲಿ ಬೇಟೆಗಾರನು ಮೃಗಗಳನ್ನು ಹುಡುಕುವುದಕ್ಕಾಗಿ ತನ್ನ ಬಳಿ ಇರುವ ಬೇಟೆ ನಾಯಿಯನ್ನು ಕಳುಹಿಸುವಂತೆ ಇಂದ್ರನೂ ಸಹ ಗವಾನ್ವೇಷಣಕ್ಕಾಗಿ ಈ ದೇವಶುನಿಯನ್ನು ಹೋಗೆನಲು ಆಗ ಅದು ಇಂದ್ರನನ್ನು ಕುರಿತು ಇಂತೆಂದಿತು-ಎಲೈ ಇಂದ್ರನೇ, ನೀನು ನನ್ನ ಮರಿಗಾಗಿ ಕ್ಷೀರಾದ್ಯಾಹಾರವನ್ನು ಕೊಡುವುದಾದರೆ ನಾನು ಹೋಗಿ ಗೋವುಗಳನ್ನು ಹುಡುಕಿ ತರುವನೆಂದಿತು. (ಶಾಟ್ಯಾಯನ ಶಾಖೆಯವರು ಹೇಳುವಂತೆ **ಅನ್ನಾದಿನೀಂ ತೇ ಸರಮೇ ಪ್ರಜಾಂ ಕರೋಮಿ ಯಾ ನೋ ಗಾ ಅನ್ವವಿಂದ**-ಎಲೈ ಸರಮೆಯೇ ನಿನ್ನ ಮರಿಗೆ ಆಹಾರವನ್ನು ಒದಗಿಸಿ ಕೊಡುವೆನು. ನೀನು ಹೋಗಿ ಗೋವುಗಳನ್ನು ಹುಡುಕಿಕೊಂಡು ಬಾ ಎಂದು ಹೇಳಲು) ಇಂದ್ರನು ಹಾಗೆಯೇ ಆಗಲೆಂದು ಹೇಳಲು ಆ ಶುನಿಯು ಹೊರಟು ಹುಡುಕುತ್ತಾ ಪಣಿಗಳು ಗೋವನ್ನು ಬಚ್ಚಿಟ್ಟಿದ್ದ ಪ್ರದೇಶವನ್ನು ಕಂಡು ಹಿಡಿದು ಅದನ್ನು ಇಂದ್ರನಿಗೆ ತಿಳಿಸಿತು. ಇಂದ್ರನು ಅದನ್ನು ತಿಳಿದು ಆ ಅಸುರರನ್ನು ಸಂಹರಿಸಿ ದೇವತೆಗಳ ಗೋವುಗಳನ್ನು ಬಿಡಿಸಿ ಹಿಂದಕ್ಕೆ ತಂದರು. ಈ ಅಭಿಪ್ರಾಯವೇ ಈ ಋಕ್ಕಿನಲ್ಲಿ ಪ್ರತಿಪಾದಿತವಾಗಿರುವುದು ಎಂದು.

ಸರಮಾ ಎಂಬುವುದು ದೇವತೆಗಳ ಎಂದರೆ ಇಂದ್ರನ ಶುನಿಯು ಇದಕ್ಕೆ ಎರಡು ಮರಿಗಳಿದ್ದವೆಂದೂ ಅವು ಮೃತ್ಯುದೇವತೆಯಾದ ಯಮನ ಬಳಿ ಇದ್ದವೆಂದೂ ಅವುಗಳಿಗೆ ತಾಯಿಯ ಹೆಸರನ್ನನುಸರಿಸಿ ಸಾರಮೇಯೌ ಎಂಬ ಹೆಸರಿದ್ದಿತೆಂದೂ ತಿಳಿದು ಬರುವುದು —

**ಅತಿ ದ್ರವ ಸಾರಮೇಯೌ ಶ್ವಾನೌ ಚತುರಕ್ಷೌ ಶಬಲೌ ಸಾಧುನಾ ಪಥಾ ।**

(ಋ. ಸಂ. ೧೦.೧೪.೧೦)

**ಯೌ ತೇ ಶ್ವಾನೌ ಯಮ ರಕ್ಷಿತಾರೌ ಚತುರಕ್ಷೌ ಪಥಿರಕ್ಷೀ ನೃಚಕ್ಷಸೌ ॥**

(ಋ. ಸಂ. ೧೦.೧೪.೧೧)

ಈ ಋಕ್ಕುಗಳಲ್ಲಿ ಸರಮಾ ಎಂಬ ದೇವಶುನಿಯ ಎರಡು ಮರಿಗಳಾದ ಸಾರಮೇಯೌ ಎಂಬ ನಾಯಿಗಳ ವಿಷಯವೂ ಅವುಗಳಿಗೆ ನಾಲ್ಕು ಕಣ್ಣುಗಳಿದ್ದ ವಿಷಯವೂ ತಿಳಿದು ಬರುವುದು. ಮೇಲೆ ಹೇಳಿದ ಸರಮಾ ಎಂಬ ದೇವಶುನಿಯು ಪಣಿಗಳ ಬಳಿಗೆ ಹೋಗಿ ಅವರೊಡನೆ ಸಂಧಾನಮಾಡಿದ ವಿಷಯವು ಋಗ್ವೇದದ ೧೦ ನೆಯ ಮಂಡಲದ ೧೦೮ ನೆಯ ಸೂಕ್ತದಲ್ಲಿ ಈ ರೀತಿ ವರ್ಣಿತವಾಗಿರುವುದು —

**ಕಿಮಿಚ್ಛಂತೀ ಸರಮಾ ಪ್ರೇದಮಾನಡ್ದೂರೇ ಹ್ಯಧ್ವಾ ಜಗುರಿಃ ಪರಾಚೈಃ ।**
**ಕಾಸ್ಮೇಹಿತಿಃ ಕಾ ಪರಿತಕ್ಮ್ಯಾಸೀತ್ಕಥಂ ರಸಾಯಾ ಅತರಃ ಪಯಾಂಸಿ ॥**
**ಇಂದ್ರಸ್ಯ ದೂತೀರಿಷಿತಾ ಚರಾಮಿ ಮಹ ಇಚ್ಛಂತೀ ಪಣಯೋ ನಿಧೀನ್ ವಃ ।**
**ಅತಿಷ್ಕದೋ ಭಿಯಸಾ ತನ್ನ ಆವತ್ತಥಾ ರಸಾಯಾ ಅತರಂ ಪಯಾಂಸಿ ॥**
**ಕೀದೃಙ್ಙಿಂದ್ರಃ ಸರಮೇ ಕಾ ದೃಶೀಕಾ ಯಸ್ಯೇದಂ ದೂತೀರಸರಃ ಪರಾಕಾತ್ ।**
**ಆ ಚ ಗಚ್ಛಾನ್ಮಿತ್ರಮೇನಾ ದಧಾಮಾಥಾ ಗವಾಂ ಗೋಪತಿರ್ನೋ ಭವಾತಿ ॥**
**ನಾಹಂ ತಂ ವೇದ ದಭ್ಯಂ ದಭತ್ಸ ಯಸ್ಯೇದಂ ದೂತೀರಸರಂ ಪರಾಕಾತ್ ।**
**ನ ತಂ ಗೂಹಂತಿ ಸ್ರವತೋ ಗಭೀರಾ ಹತಾ ಇಂದ್ರೇಣ ಪಣಯಃ ಶಯಧ್ವೇ ॥**
**ಇಮಾ ಗಾವಃ ಸರಮೇ ಯಾ ಐಚ್ಛಃ ಪರಿ ದಿವೋ ಅನ್ತಾನ್ ಸುಭಗೇ ಪತಂತೀ ।**
**ಕಸ್ತ ಏನಾ ಅವ ಸೃಜಾದಯುಧ್ವ್ಯುತಾಸ್ಮಾಕಮಾಯುಧಾ ಸಂತಿ ತಿಗ್ಮಾ ॥**
**ಅಸೇನ್ಯಾವಃ ಪಣಯೋ ವಚಾಂಸ್ಯನಿಷವ್ಯಾಸ್ತನ್ವಃ ಸಂತು ಪಾಪೀಃ ।**
**ಅಧೃಷ್ಟೋ ವ ಏತವಾ ಅಸ್ತು ಪನ್ಥಾ ಬೃಹಸ್ಪತಿರ್ವ ಉಭಯಾ ನ ಮೃಳಾತ್ ॥**
**ಅಯಂ ನಿಧಿಃ ಸರಮೇ ಅದ್ರಿಬುಧ್ನೋ ಗೋಭಿರಶ್ವೇಭಿರ್ವಸುಭಿರ್ನ್ಯೃಷ್ಟಃ ।**
**ರಕ್ಷಂತಿ ತಂ ಪಣಯೋ ಯೇ ಸುಗೋಪಾ ರೇಕು ಪದಮಲಕಮಾ ಜಗಂಥ ॥**
**ಏಹ ಗಮನ್ನೃಷಯಃ ಸೋಮಶಿತಾ ಅಯಾಸ್ಯೋ ಅಂಗಿರಸೋ ನವಗ್ವಾಃ ।**
**ತ ಏತಮೂರ್ವಂ ವಿಭಜಂತ ಗೋನಾಮಥೈತದ್ವಚಃ ಪಣಯೋ ವಮನ್ನಿತ್ ॥**
**ಏವಾ ಚ ತ್ವಂ ಸರಮ ಆಜಗಂಥ ಪ್ರಬಾಧಿತಾ ಸಹಸಾ ದೇವ್ಯೇನ ।**
**ಸ್ವಸಾರಂ ತ್ವಾ ಕೃಣವೈ ಮಾ ಪುನರ್ಗಾ ಅಪ ತೇ ಗವಾಂ ಸಭಗೇ ಭಜಾಮ ॥**

**ನಾಹಂ ವೇದ ಭ್ರಾತೃತ್ವಂ ನೋ ಸ್ವಸೃತ್ವಮಿಂದ್ರೋ ವಿದುರಂಗಿರಸಶ್ಚ ಘೋರಾಃ ।**
**ಗೋಕಾಮಾ ಮೇ ಅಚ್ಛದಯನ್ ಯದಾಯಮಪಾತ ಇತ ಪಣಯೋ ವರೀಯಃ ॥**

**ದೂರಮಿತ ಪಣಯೋ ವರೀಯ ಉದ್ಗಾವೋ ಯಂತು ಮಿನತೀರ್ಋತೇನ ।**
**ಬೃಹಸ್ಪತಿರ್ಯಾ ಅವಿಂದನ್ನಿಗೂಳ್ಹಾಃ ಸೋಮೋ ಗ್ರಾವಾಣ ಋಷಯಶ್ಚ ವಿಪ್ರಾಃ ॥**

(ಋ. ಸಂ. ೧೦.೧೦೮-೧ ರಿಂದ ೧೧)

ಇದರ ಅನುವಾದವನ್ನು ಕೆಳಗೆ ಕೊಟ್ಟಿರುತ್ತೇವೆ. ಇದು ಪಣಿಗಳಿಗೂ ಸರಮೆಗೂ ನಡೆದ ಸಂಭಾಷಣೆಯ ರೂಪದಲ್ಲಿರುವುದು. ಹಿಂದೆ ಬೃಹಸ್ಪತಿಯ ಗೋವುಗಳನ್ನು ವಲನ ಅನುಯಾಯಿಗಳಾದ ಪಣಿಗಳೆಂಬುವರು ಅಪಹರಿಸಿ ಒಂದು ರಹಸ್ಯ ಸ್ಥಳದಲ್ಲಿ ಬಚ್ಚಿಟ್ಟಿದ್ದರು. ಆಗ ಬೃಹಸ್ಪತಿಯ ಕೋರಿಕೆಯಂತೆ ಇಂದ್ರನು ಆ ಗೋವುಗಳನ್ನು ಹುಡುಕುವುದಕ್ಕಾಗಿ ದೇವಶುನಿಯಾದ ಸರಮೆಯನ್ನು ಕಳುಹಿಸಿದನು. ಆ ಸರಮೆಯು ಗೋವುಗಳನ್ನು ಹುಡುಕುತ್ತಾ ಬಹುದೂರ ಸಂಚರಿಸಿ ದಾರಿಯಲ್ಲಿ ಅಡ್ಡಲಾಗಿ ಸಿಕ್ಕಿದ ರಸಾ ಎಂಬ ಒಂದು ದೊಡ್ಡ ನದಿಯನ್ನು ದಾಟಿ ಪಣಿಗಳ ಸಮೀಪಕ್ಕೆ ಬಂದಿತು. ಆಗ ಆ ಪಣಿಗಳು ಸರಮೆಯು ಬಂದ ಉದ್ದೇಶವನ್ನು ತಿಳಿದು ಅದರೊಡನೆ ಸ್ನೇಹಮಾಡಿಕೊಳ್ಳುವ ಭಾವನೆಯಿಂದ ಇಂತು ಸಂಭಾಷಣೆಯನ್ನು ನಡೆಸಿದರು—

**ಪಣಿಗಳು**—ಎಲೈ ಸರಮೆಯೇ, ನೀನು ಬಹುದೂರದಿಂದ ಬಹುಕಷ್ಟಪಟ್ಟು ಇಲ್ಲಿಗೆ ಬಂದಿರುವಂತೆ ಕಾಣುತ್ತೀ. ನೀನು ಇಲ್ಲಿಗೆ ಬಂದ ಉದ್ದೇಶವೇನು ? ಇಲ್ಲಿಗೆ ಹೇಗೆ ಬಂದೆ ? ರಸಾ ಎಂಬ ನದಿಯನ್ನು ಹೇಗೆ ದಾಟಿದೆ ?

**ಸರಮೇ**—ಎಲೈ ಪಣಿಗಳೇ ಕೇಳಿರಿ. ನಾನು ಇಂದ್ರನಿಂದ ನಿಯಮಿತಳಾಗಿ ಅವನ ದೂತಿಯಂತೆ ಇಲ್ಲಿಗೆ ಬಂದಿರುವೆನು. ನೀವು ಬಚ್ಚಿಟ್ಟಿರುವ ಧನಗಳನ್ನು ಇಂದ್ರನು ಅಪೇಕ್ಷಿಸುವನು. ರಸಾನದಿಯು ಹೆದರಿ ನನಗೆ ದಾಟುವುದಕ್ಕೆ ಸಹಾಯಮಾಡಿತು. ಆದುದರಿಂದ ನಾನು ಆ ನದಿಯನ್ನು ದಾಟಿ ಬಂದೆನು.

**ಪಣಿಗಳು**—ಎಲೈ ಸರಮೆಯೇ, ಒಳ್ಳೇದು. ಇಂದ್ರನು ನಿನ್ನನ್ನು ದೂತಿಯನ್ನಾಗಿ ಕಳುಹಿಸಿರುವನೆಂದು ಹೇಳಿದೆಯಷ್ಟೆ. ಆ ಇಂದ್ರನು ನೋಡುವುದಕ್ಕೆ ಹೇಗಿರುವನು ? (ಪಣಿಗಳು ತಮ್ಮ ತಮ್ಮಲ್ಲಿ ಹೀಗೆ ಮಾತನಾಡಿಕೊಳ್ಳುವರು) ಸರಮೆಯು ಬಂದರೆ ಬರಲಿ. ಅದರೊಡನೆ ಸ್ನೇಹವನ್ನೇ ಮಾಡಿಕೊಳ್ಳೋಣ ಮತ್ತು ನಮ್ಮ ಗೋವುಗಳಿಗೆ ಅದೇ ಯಜಮಾನತಿಯಾಗಿರಲಿ

**ಸರಮೇ**—ನೀವು ಭಾವಿಸಿರುವಂತೆ ಆ ಇಂದ್ರನನ್ನು ಜಯಿಸಲು ಸಾಧ್ಯವಿಲ್ಲ. ನನ್ನನ್ನು ಕಳುಹಿಸಿದ ಆ ಇಂದ್ರನು ಶತ್ರುಗಳನ್ನು ಜಯಿಸುವನೇ ಹೊರತು ಅವನನ್ನು ಇತರರು ಜಯಿಸಲು ಸಾಧ್ಯವಿಲ್ಲ. ಆಳವಾದ ನದಿಗಳು ಸಹ ಅವನನ್ನು ತಡೆಯಲಾರವು. ಅವನಿಂದ ನೀವು ಸಂಹೃತರಾಗಿ ಮೃತ್ಯುಶಯ್ಯೆಯಲ್ಲಿ ಮಲಗಬೇಕಾಗುವುದು.

**ಪಣಿಗಳು**—ಎಲೈ ಸರಮೆಯೇ, ಇಗೋ ಈ ಗೋವುಗಳಿಗಾಗಿಯೇ ಅಲ್ಲವೇ ನೀನು ಅಂತರಿಕ್ಷಮಾರ್ಗದಿಂದ ಬಹುದೂರ ಬಂದು ಅವುಗಳನ್ನು ಅಪೇಕ್ಷಿಸುತ್ತಿರುವುದು ? ಆದರೆ ಆ ಗೋವುಗಳನ್ನು ಯುದ್ಧಮಾಡದೆ ನಿನಗೆ ಸುಮ್ಮನೆ ಒಪ್ಪಿಸುವವರಾರು ? ನಮ್ಮ ಆಯುಧಗಳು ಬಹು ಹರಿತವಾಗಿವೆ.

**ಸರಮೇ**—ನಿಮ್ಮ ಮಾತುಗಳಿಂದ ಏನು ಪ್ರಯೋಜನ ? ಆ ಮಾತಿನಲ್ಲಿ ಸೈನ್ಯದ ಬಲವಿರುವುದೇ, ನಿಮ್ಮ ಪಾಪಪೂರಿತವಾದ ಶರೀರಗಳಿಗೆ ಬಿಲ್ಲುಬಾಣಗಳಿಗೆ ಇರುವ ಶಕ್ತಿ ಇರುವುದೇ ? ನೀವು ಅನುಸರಿಸುವ ಮಾರ್ಗವು ಬಹುಕಷ್ಟಕರವಾದುದು. (ಗೋವುಗಳ ಮಾಲೀಕನಾದ) ಬೃಹಸ್ಪತಿಯು ನಿಮಗೆ ದಯ ವನ್ನು ತೋರಿಸುವುದಿಲ್ಲ, ನಿಮ್ಮ ಮಾತಿಗೆ ಬೆಲೆಯನ್ನು ಕೊಡುವುದಿಲ್ಲ.

**ಪಣಿಗಳು**—ಎಲೈ ಸರಮೇ, ಈ ಪಶುಧನವು, ಎಂದರೆ ಹಸುಗಳು ಕುದುರೆಗಳು, ದ್ರವ್ಯ ಮುಂತಾದವು ಗಳನ್ನು ನಾವು ಪರ್ವತಗಳಲ್ಲಿ ಸಂಗ್ರಹಿಸಿ ತಂದಿರುವೆವು, ಪಣಿಗಳಾದ ನಾವು ಅವುಗಳನ್ನು ಬಹು ಜಾಗರೂಕತೆಯಿಂದ ಕಾಪಾಡುತ್ತಿರುವೆವು. ಇಂತಹ ದುರ್ಗಮವಾದ ಸ್ಥಳಕ್ಕೆ ನೀನು ಏಕಾಂಗಿಯಾಗಿ ಬಂದಿರುವುದು ವ್ಯರ್ಥವು.

**ಸರಮೇ**—ಎಲೈ ಪಣಿಗಳೇ ಕೇಳಿ. ಋಷಿಗಳೂ, ಅಂಗಿರಸ್ಸುಗಳೂ ಸೋಮಪಾನದಿಂದ ಶಕ್ತಿಸಾಮರ್ಥ್ಯ ಗಳನ್ನು ಪಡೆದು ಅಯಾಸ್ಯನ ನಾಯಕತ್ವದಲ್ಲಿ ಇಲ್ಲಿಗೆ ಬಂದು ಈ ಗೋವುಗಳನ್ನು ಬಲಾತ್ಕಾರದಿಂದ ವಶಪಸಿಕೊಂಡು ತನ್ಮಲ್ಲಿ ಹಂಚಿಕೊಳ್ಳುವರು. ನೀವು ಆಡುತ್ತಿರುವ ಮಾತು ವ್ಯರ್ಥ್ಯವೆಂಬುದು ನಿಮಗೆ ಆಗ ಗೊತ್ತಾಗುವುದು

**ಪಣಿಗಳು**—ಎಲೈ ಸರಮೇ, ನಿನಗೆ ದೇವತೆಗಳ ಬೆಂಬಲವಿರುವಂತೆ ಕಾಣುವುದು. ಆದುದರಿಂದ ನಾವು ನಿನ್ನನ್ನು ನಮ್ಮ ಸೋದರಿಯಂತೆ ಭಾವಿಸುವೆವು. ನೀನು ಇಂದ್ರನ ಬಳಿಗೆ ಹಿಂದಕ್ಕೆ ಹೋಗಬೇಡ. ಇಲ್ಲಿಯೇ ಇರು. ಈ ಗೋವುಗಳಲ್ಲಿ ನಿನಗೂ ಒಂದು ಪಾಲನ್ನು ಕೊಡುವೆವು

**ಸರಮೇ**—ನೀವು ನೀಡುವ ಸ್ನೇಹಭಾವವೂ ಸಹೋದರಿತ್ವವೂ ನನಗೆ ಬೇಡ ಇಂದ್ರನೂ, ಭಯಂಕರವಾದ ಅಂಗಿರಸ್ಸುಗಳೂ ನನ್ನ ಸ್ವಭಾವವನ್ನು ತಿಳಿದಿರುವರು. ಗೋವುಗಳನ್ನು ಹುಡುಕುತ್ತಾ ನಾನು ಇಲ್ಲಿಗೆ ಬರುವಾಗ ಅವರು ಗೂಢಮಾರ್ಗದಿಂದ ನಿಮ್ಮ ವಾಸಸ್ಥಾನವನ್ನು ಅರಿತಿರುವರು ಆದುದರಿಂದ ಎಲೈ ಪಣಿಗಳೇ, ನೀವು ದೂರ ಓಡಿಹೋಗಿ ಬದುಕಿಕೊಳ್ಳಿರಿ

ಸಾವಕಾಶ ಮಾಡಬೇಡಿ, ದೂರದಲ್ಲಿರುವ ಸುರಕ್ಷಿತವಾದ ಪ್ರದೇಶಕ್ಕೇ ಹೋಗಿ. ಗುಹೆಯಲ್ಲಿಟ್ಟಿರುವ ಗೋವುಗಳು ಕ್ರಮವಾಗಿ ಈಚೆಗೆ ಬರಲಿ ಬೃಹಸ್ಪತಿ, ಸೋಮ ಮತ್ತು ಬುದ್ಧಿವಂತರಾದ ಋಷಿಗಳು ಈ ರಹಸ್ಯ ಸ್ಥಳವನ್ನು ಕಂಡುಹಿಡಿದು ಗೋವುಗಳಿರುವ ಗುಹೆಯ ಬಾಗಿಲನ್ನು ಒಡೆದು ಒಳಗೆ ನುಗ್ಗುವರು.

ಈ ಸಂಭಾಷಣೆಯಲ್ಲಿ ಒಂದು ಋಕ್ಕನ್ನು ಪಣಿಗಳೂ ಅದಕ್ಕೆ ಪ್ರತ್ಯುತ್ತರನಾಗಿ ಮತ್ತೊಂದು ಋಕ್ಕನ್ನು ಸರಮೆಯೂ ಹೇಳಿರುವರು, ಈ ಪಣಿಗಳು ಗೋವುಗಳನ್ನು ಅಪಹರಿಸಿದ ವಿಷಯಗಳು ಋಗ್ವೇದದಲ್ಲಿ ಅನೇಕ ಕಡೆ ಸೂಚಿತವಾಗಿರುವುದು

ಋಗ್ವೇದದಲ್ಲಿ ಪಣಿಶಬ್ದಕ್ಕೆ ವ್ಯಾಪಾರಾದಿಗಳನ್ನು ಮಾಡುವ ಧನಿಕನೆಂಬ ಅರ್ಥವಿದ್ದರೂ ಅವನು ಯಜ್ಞಾದಿ ಗಳನ್ನು ಮಾಡದೆ ಮತ್ತು ದಕ್ಷಿಣೆದಾನಾದಿಗಳನ್ನು ಕೊಡದಿರುವ ಮನುಷ್ಯನೆಂದೂ ಅರ್ಥವಿರುವುದರಿಂದ ಅವನನ್ನು ನಿಕೃಷ್ಟಭಾವನೆಯಿಂದ ನೋಡುವುದಲ್ಲದೆ ಅವನು ಗೌರವಾರ್ಹನಲ್ಲದವನೆಂದೂ ನೀಚಮನುಷ್ಯನೆಂದೂ ಋಷಿಗಳು

ಭಾವಿಸಿದ್ದಂತೆ ತೋರುವುದು. ಕೆಲವು ಕಡೆ ಪಣಿ ಎಂಬುವನು ಒಬ್ಬ ಪ್ರತ್ಯೇಕ ವ್ಯಕ್ತಿಯಾಗಿ ಕಂಡುಬರುವುದಾದರೂ ಈ ಶಬ್ದದ ಬಹುವಚನ ಪ್ರಯೋಗವು ವಿಶೇಷವಾಗಿರುವುದರಿಂದ ಪಣಯಃ ಎಂಬ ಶಬ್ದವು ಒಂದು ವರ್ಗದ ಜನರನ್ನು ಸೂಚಿಸುವುದಾಗಿರುವುದೆಂದು ತಿಳಿಯಬೇಕು ಈ ಪಣಿಗಳೆಂಬುವರು ಈ ದೇಶದ ಪೂರ್ವನಿವಾಸಿಗಳೆಂದೂ ಇವರು ವ್ಯಾಪಾರಾದಿಗಳಲ್ಲಿ ತೊಡಗಿದ್ದರೆಂದೂ ಆದರೂ ಇವರಲ್ಲಿ ಪ್ರಾಮಾಣಿಕತೆ ಇರಲಿಲ್ಲವಾದ್ದರಿಂದ ಇವರನ್ನು ಅಸುರರ ಗುಂಪಿಗೆ ಸೇರಿದವರೆಂದೂ ಜನರು ಹೇಳುತ್ತಿದ್ದರೆಂದೂ ಕೆಲವರ ಅಭಿಮತವು. ಇವರು ಯಜ್ಞಾದಿಗಳನ್ನು ಮಾಡದೆ ಯಾವ ಸತ್ಕರ್ಮಾನುಷ್ಠಾನದಲ್ಲಿಯೂ ಆಸಕ್ತಿ ಇಲ್ಲದೆ ನ್ಯಾಯ ಅಥವಾ ಅನ್ಯಾಯಮಾರ್ಗದಿಂದ ಕೇವಲ ದ್ರವ್ಯ ಸಂಪಾದನೆಯೇ ಮುಖ್ಯವೆಂದು ಪರಿಗಣಿಸಿ ಅದರಂತೆ ನಡೆಯುತ್ತಿದ್ದುದರಿಂದ ಇವರನ್ನು ಆರ್ಯರು ದಸ್ಯುಗಳೆಂತಲೂ, ನೀಚವೃತ್ತಿಯ ಮನುಷ್ಯರೆಂತಲೂ ಭಾವಿಸಿ ಆ ವಿಧವಾದ ಅಭಿಪ್ರಾಯವನ್ನು ಮಂತ್ರಾದಿಗಳಲ್ಲಿ ಹೊರಗೆಡವಿದ್ದಾರೆ. ಪಣಿಗಳ ವಿಷಯವಾಗಿ ಋಗ್ವೇದದಲ್ಲಿ ಅನೇಕ ಋಕ್ಕುಗಳಿರುವವು

॥ ಸಂಹಿತಾಪಾಠಃ ॥

ವಿಶ್ವೇ ಅಸ್ಯಾ ವ್ಯುಷಿ ಮಾಹಿನಾಯಾಃ ಸಂ ಯದ್ಗೋಭಿರಂಗಿರಸೋ ನವಂತ।
ಉತ್ಸ ಆಸಾಂ ಪರಮೇ ಸಧಸ್ಥ ಋತಸ್ಯ ಪಥಾ ಸರಮಾ ವಿದದ್ಗಾಃ ॥ ೮ ॥

॥ ಪದಪಾಠಃ ॥

ವಿಶ್ವೇ । ಅಸ್ಯಾಃ । ವಿಽಉಷಿ । ಮಾಹಿನಾಯಾಃ । ಸಂ । ಯತ್ । ಗೋಭಿಃ । ಅಂಗಿರಸಃ । ನವಂತ ॥
ಉತ್ಸಃ । ಆಸಾಂ । ಪರಮೇ । ಸಧಽಸ್ಥೇ । ಋತಸ್ಯ । ಪಥಾ । ಸರಮಾ । ವಿದತ್ । ಗಾಃ ॥ ೮ ॥

॥ ಸಾಯಣಭಾಷ್ಯಂ ॥

ವಿಶ್ವೇ ಸರ್ವೇಽಂಗಿರಸೋ ಮಾಹಿನಾಯಾ ಮಂಹನೀಯಾಯಾ ಅಸ್ಯಾ ಉಷಸೋ ವ್ಯುಷಿ ವ್ಯುಚ್ಛನೇ ಸತಿ ಗವಾಮಾವರಕೇಽಂಧಕಾರೇಽಪವೃತೇ ಸತಿ ಯದ್ಯದಾ ಗೋಭಿಃ ಸಂ ನವಂತ ಸಂಜಗ್ಮಿರೇ ತದಾಸಾಂ ಗವಾಮುತ್ಸಃ ಕ್ಷೀರಾದ್ಯುತ್ಸ್ರಾವಃ ಪರಮ ಉತ್ಕೃಷ್ಟೇ ಸಧಸ್ಥೇ ಸಹಸ್ಥಾನೇ ಯಜ್ಞ ಉಪಯುಕ್ತೋಽಭವದಿತ್ಯರ್ಥಃ । ಋತಸ್ಯ ಸತ್ಯಸ್ಯ ಪಥಾ ಮಾರ್ಗೇಣ ಸರಮಾ ವಾಕ್ ದೇವಶುನೀ ವಾ ಗಾ ನಿಗೂಢಾ ವಿದತ್ । ಅಲಭತ । ಯದ್ವಾ । ಆಸಾಂ ಗವಾಂ ಪರಮೇ ಸಧಸ್ಥೇ ಸಹಸ್ಥಾನೇ ವ್ರಜಸ್ಯ ನಿಗೂಹನಪ್ರದೇಶ ಉತ್ಸ ಉದಕಸ್ಯ ಪ್ರಸ್ರವಣೋ ವರ್ತತೇ । ಬಿಲಮಿತ್ಯರ್ಥಃ । ತೇನ ಋತಸ್ಯೋದಕಸ್ಯ ಪಥಾ ಮಾರ್ಗೇಣ ಸರಮಾ ಗಾ ವಿದತ್ ॥

॥ ಪ್ರತಿಪದಾರ್ಥ ॥

**ವಿಶ್ವೇ**—ಸಮಸ್ತರಾದ | **ಅಂಗಿರಸಃ**—ಅಂಗಿರಸ್ಸುಗಳೂ | **ಮಾಹಿನಾಯಾಃ**—ಪೂಜ್ಯಳಾದ | **ಅಸ್ಯಾಃ**—ಉಷಸ್ಸಿನ | **ವ್ಯುಷಿ**—ಆವಿರ್ಭಾವಕಾಲದಲ್ಲಿ | **ಯತ್**—ಯಾವಾಗ | **ಗೋಭಿಃ**—ಗೋವುಗಳೊಡನೆ | **ಸಂ ನವಂತ**—ಸೇರಿಕೊಂಡರೋ (ಆಗ) | **ಆಸಾಂ**—ಈ ಗೋವುಗಳ | **ಉತ್ಸಃ**—ಕ್ಷೀರಪ್ರವಾಹವು | **ಪರಮೇ**—ಉತ್ಕೃಷ್ಟವಾದ | **ಸಧಸ್ಥೇ**—ಯಜ್ಞಪ್ರದೇಶದಲ್ಲಿ (ಅರ್ಪಿತವಾಯಿತು) | **ಋತಸ್ಯ**—ಸತ್ಯದ | **ಪಥಾ**—ಮಾರ್ಗದಲ್ಲಿ | **ಸರಮಾ**—ದೇವಶುನಿಯು | **ಗಾಃ**—(ಅವಿಸಿದ್ಧ) ಗೋವುಗಳನ್ನು | **ವಿದತ್**—ಪಡೆದಳು.

॥ ಭಾವಾರ್ಥ ॥

ಸಮಸ್ತವಾದ ಅಂಗಿರಸ್ಸುಗಳೂ ಸಹ ಪೂಜ್ಯಳಾದ ಉಷಸ್ಸಿನ ಆವಿರ್ಭಾವಕಾಲದಲ್ಲಿ ಯಾವಾಗ ಗೋವುಗಳೊಡನೆ ಸೇರಿಕೊಂಡರೋ, ಆಗ ಈ ಗೋವುಗಳ ಕ್ಷೀರಪ್ರವಾಹವು ಉತ್ಕೃಷ್ಟವಾದ ಯಜ್ಞಪ್ರದೇಶದಲ್ಲಿ ಅರ್ಪಿತವಾಯಿತು. ಸತ್ಯದ ಮಾರ್ಗದಲ್ಲಿ ದೇವಶುನಿಯು ಅವಿಸಿದ್ಧ ಗೋವುಗಳನ್ನು ಪಡೆದಳು.

English Translation

When all the Angirasas, on the opening of this adorable dawn, came in contact with the (discovered) cattle, then milk and the rest were offered in the august assembly, for Sarama had found cows by the path of truth.

॥ ಸಂಹಿತಾಪಾಠಃ ॥

ಆ ಸೂರ್ಯೋ ಯಾತು ಸಪ್ತಾಶ್ವಃ ಕ್ಷೇತ್ರಂ ಯದಸ್ಯೋರ್ವಿಯಾ ದೀರ್ಘಯಾಥೇ ।
ರಘುಃ ಶ್ಯೇನಃ ಪತಯದಂಧೋ ಅಚ್ಛಾ ಯುವಾ ಕವಿರ್ದೀದಯದ್ಗೋಷು ಗಚ್ಛನ್ ॥ ೯ ॥

॥ ಪದಪಾಠಃ ॥

ಆ । ಸೂರ್ಯಃ । ಯಾತು । ಸಪ್ತಅಶ್ವಃ । ಕ್ಷೇತ್ರಂ । ಯತ್ । ಅಸ್ಯ । ಉರ್ವಿಯಾ । ದೀರ್ಘಯಾಥೇ ।
ರಘುಃ । ಶ್ಯೇನಃ । ಪತಯತ್ । ಅಂಧಃ । ಅಚ್ಛ । ಯುವಾ । ಕವಿಃ । ದೀದಯತ್ । ಗೋಷು ।
ಗಚ್ಛನ್ ॥ ೯ ॥

॥ ಸಾಯಣಭಾಷ್ಯಂ ॥

**ಸೂರ್ಯಃ ಸರ್ವಸ್ಯ ಪ್ರೇರಕೋ ದೇವಃ ಸಪ್ತಾಶ್ವಃ ಸರ್ಪಣಸ್ವಭಾವಾಶ್ವೋಪೇತಃ ಸಪ್ತಸಂಖ್ಯಾಕಾಶ್ವೋ ವಾ ಆ ಯಾತು। ಅಸ್ಮದಭಿಮುಖಮಾಗಚ್ಛತು । ಯದ್ಯಸ್ಮಾದಸ್ಯ ಸೂರ್ಯಸ್ಯ ದೀರ್ಘಯಾಥೇ ದೀರ್ಘಗಮನೇ ಕ್ಷೇತ್ರಂ ಗಂತವ್ಯಪ್ರದೇಶ ಉರ್ವಿಯೋರು ಅತಿಪ್ರಭೂತಾಯಾಮಃ । ಸ ಏವ ದೇವೋ ರಘುರ್ಲಘುಗಮನಃ ಸನ್ ಶ್ಯೇನಃ ಶಂಸನೀಯಗಮನೋಽಂಧೋ ದೀಯಮಾನಂ ಹವಿರಚ್ಛಾಭಿಲಕ್ಷ್ಯ ಪತಯತ್ । ಆಗಚ್ಛತಿ । ಯುವಾ ಸರ್ವತ್ರ ಮಿಶ್ರಯಿತಾ ಕವಿಃ ಕ್ರಾಂತದರ್ಶೀ ಸನ್ ಗೋಷು ರಶ್ಮಿಷು ಗಚ್ಛನ್ಮಧ್ಯೇ ವರ್ತಯನ್ ದೀದಯತ್ । ದೀಪ್ಯತೇ । ಯದ್ವಾ । ಶ್ಯೇನಃ ಸುಪರ್ಣೋಽಂಧೋಽಚ್ಛ ಪತಯತ್ । ದ್ಯುಲೋಕಸ್ಥಂ ಸೋಮಲಕ್ಷಣಂ ದೇವಾನಾಮನ್ನಮಸ್ಮದ್ಯಾಗಾರ್ಥಮಾನೇತುಂ ತದಭಿಮುಖಮಗಾತ್ । ಯುವೇತ್ಯಾದಿ ಶಿಷ್ಟಂ ಸಮಾನಂ ॥**

॥ ಪ್ರತಿಪದಾರ್ಥ ॥

**ಯತ್**—ಯಾವ ಕಾರಣದಿಂದ । **ಅಸ್ಯ**—ಸೂರ್ಯನ । **ದೀರ್ಘಯಾಥೇ**—ಬಹುದೂರ ಸಂಚರಿಸಲ್ಪಡಬೇಕಾದ । **ಕ್ಷೇತ್ರಂ**—ಗಂತವ್ಯಪ್ರದೇಶವು । **ಉರ್ವಿಯಾ**—ಅತಿ ವಿಸ್ತೃತವಾಗಿ ಬೆಳೆದಿರುವ ಮಾರ್ಗವುಳ್ಳದ್ದಾಗಿದೆಯೋ ಆದುದರಿಂದ । **ಸೂರ್ಯಃ**—ಸೂರ್ಯನು । **ಸಪ್ತಾಶ್ವಃ**—ಸಪ್ತಾಶ್ವಗಳೊಡಗೂಡಿ । **ಆ ಯಾತು**—ಬರಲಿ । **ಶ್ಯೇನಃ**—ಗಿಡುಗನಂತೆ । **ರಘುಃ**—ಲಘುಗಮನವುಳ್ಳ ಸೂರ್ಯನು । **ಅಂಧಃ ಅಚ್ಛ**—ಹವಿಸ್ಸಿಗೆ ಅಭಿಮುಖನಾಗಿ । **ಪತಯತ್**—ಇಳಿದು ಬರುತ್ತಾನೆ । **ಯುವಾ**—ನಿತ್ಯತರುಣನೂ । **ಕವಿಃ**—ಕ್ರಾಂತದರ್ಶಿಯೂ ಆದ ಸೂರ್ಯನು । **ಗೋಷು**—ರಶ್ಮಿಗಳ ನಡುವೆ । **ಗಚ್ಛನ್**—ಸಂಚರಿಸುವವನಾಗಿ । **ದೀದಯತ್**—ಪ್ರಕಾಶಿಸುತ್ತಾನೆ

॥ ಭಾವಾರ್ಥ ॥

ಯಾವ ಕಾರಣದಿಂದ ಸೂರ್ಯನ ಬಹುದೂರ ಸಂಚರಿಸಲ್ಪಡಬೇಕಾದ ಗಂತವ್ಯಪ್ರದೇಶವು ಅತಿವಿಸ್ತೃತವಾಗಿ ಬೆಳೆದಿರುವ ಮಾರ್ಗವುಳ್ಳದ್ದಾಗಿದೆಯೋ ಆದುದರಿಂದ ಸೂರ್ಯನು ತನ್ನ ಸಪ್ತಾಶ್ವಗಳೊಡನೆಯೂ ಕೂಡಿಕೊಂಡು ಬರಲಿ. ಗಿಡುಗನಂತೆ ಲಘುಗಮನವುಳ್ಳ ಸೂರ್ಯನು ಹವಿಸ್ಸಿಗೆ ಅಭಿಮುಖವಾಗಿ ಇಳಿದು ಬರುತ್ತಾನೆ. ನಿತ್ಯತರುಣನೂ, ಕ್ರಾಂತದರ್ಶಿಯೂ ಆದ ಸೂರ್ಯನು ರಶ್ಮಿಗಳ ನಡುವೆ ಸಂಚರಿಸುವವನಾಗಿ ಪ್ರಕಾಶಿಸುತ್ತಾನೆ.

## English Translation

May Surya, lord of seven steeds, arrive, for he has a distant goal (to reach) by a tedious route : fleet as a hawk he pounces upon the offered (sacrificial) food: ever young and far-seeing, he shines, moving amidst rays of light

॥ ವಿಶೇಷವಿಷಯಗಳು ॥

**ಸಪ್ತಾಶ್ವಃ**—ಸೂರ್ಯನ ಕುದುರೆಗಳು ಏಳು ಇವುಗಳಿಗೆ **ಹರಿತಃ** ಎಂದು ಹೆಸರು (ನಿ. ೨-೩-೮) ಸೂರ್ಯಾಶ್ವಗಳ ವಿಷಯವಾಗಿ ನಾವು ಹಿಂದೆಯೇ ವಿವರಿಸಿದೇವೆ

॥ ಸಂಹಿತಾಪಾಠಃ ॥

ಆ ಸೂರ್ಯೋ ಅರುಹಚ್ಛುಕ್ರಮರ್ಣೋಽಯುಕ್ತ ಯದ್ಧರಿತೋ ವೀತಪೃಷ್ಠಾಃ ।
ಉದ್ನಾ ನ ನಾವಮನಯಂತ ಧೀರಾ ಆಶೃಣ್ವತೀರಾಪೋ ಅರ್ವಾಗತಿಷ್ಠನ್॥

॥ ಪದಪಾಠಃ ॥

ಆ । ಸೂರ್ಯಃ । ಅರುಹತ್ । ಶುಕ್ರಂ । ಅರ್ಣಃ । ಅಯುಕ್ತ । ಯತ್ । ಹರಿತಃ । ವೀತಽಪೃಷ್ಠಾಃ ॥
ಉದ್ನಾ । ನ । ನಾವಂ । ಅನಯಂತ । ಧೀರಾಃ । ಆಽಶೃಣ್ವತೀಃ । ಆಪಃ । ಅರ್ವಾಕ್ । ಅತಿಷ್ಠನ್ ॥

॥ ಸಾಯಣಭಾಷ್ಯಂ ॥

ಸೂರ್ಯೋ ದೇವಃ ಶುಕ್ರಂ ದೀಪ್ತಮರ್ಣ ಉದಕಂ ಪ್ರತ್ಯಾರುಹತ್ । ಸರ್ವತಃ ಪ್ರಾದುರ್ಭವತಿ। ಯದ್ಯಸ್ಮಾದ್ಯದಾ ವಾ ಹರಿತೋಽಶ್ವಾನ್ವೀತಪೃಷ್ಠಾಃ ಕಾಂತಪೃಷ್ಠಾನಯುಕ್ತ ರಥೇಽಯೋಜಯತ್ ತದಾ ತಂ ಸೂರ್ಯಂ ಧೀರಾ ಧೀಮಂತೋ ಯಜಮಾನಾದಯ ಉದ್ನೋದಕೇನ ನಾವಂ ನ ನಾವಮಿವಾನಯಂತ । ತದಾಶೃಣ್ವತೀಃ ಸರ್ವತೋಽನುಜ್ಞಾಂ ಕುರ್ವಾಣಾ ಅಪೋಽರ್ವಾಗರ್ವಾಙ್ಮುಖಾ ಅತಿಷ್ಠನ್ । ಅಭವನ್ ॥

॥ ಪ್ರತಿಪದಾರ್ಥ ॥

**ಯತ್**— ಯಾವಾಗ । **ವೀತಪೃಷ್ಠಾಃ**—ಪ್ರಭಾಯುತವಾದ ಪೃಷ್ಠವುಳ್ಳ । **ಹರಿತಃ**—ತನ್ನ ಅಶ್ವಗಳನ್ನು । **ಅಯುಕ್ತ**— ರಥಕ್ಕೆ ಯೋಜಿಸಿದನೋ ( ಆಗ ) । **ಸೂರ್ಯಃ**—ಸೂರ್ಯನು । **ಶುಕ್ರಂ**—ಪ್ರಕಾಶಮಾನವಾದ । **ಅರ್ಣಃ**—ಉದಕಸ್ಥಾನದಲ್ಲಿ । **ಆ ರುಹತ್**—ಪ್ರಾದುರ್ಭವಿಸುತ್ತಾನೆ । **ಧೀರಾಃ**—ಧೀಮಂತರಾದ ಯಜಮಾನರು। **ಉದ್ನಾ**— ಉದಕದಿಂದ । **ನಾವಂ ನ**—ನಾವೆಯನ್ನು ಎಳೆದು ತರುವಂತೆ । **ಅನಯಂತ**—ಅವನನ್ನು ಆಕರ್ಷಿಸಿದ್ದಾರೆ । **ಆಪಃ**—ಉದಕಗಳು ।**ಆಶೃಣ್ವತೀಃ**—ಅವನ ಅನುಜ್ಞೆಯನ್ನು ಪಾಲಿಸುತ್ತಾ । **ಅರ್ವಾಕ್**—ಅಧೋಮುಖಪ್ರವಾಹವುಳ್ಳವಾಗಿ । **ಅತಿಷ್ಠನ್**— ಆದವು

॥ ಭಾವಾರ್ಥ ॥

ಪ್ರಭಾಯುತವಾದ ಪೃಷ್ಠಗಳುಳ್ಳ ತನ್ನ ಅಶ್ವಗಳನ್ನು ರಥಕ್ಕೆ ಯೋಜಿಸಿದೊಡನೆಯೇ, ಸೂರ್ಯನು ಪ್ರಕಾಶಮಾನವಾದ ಉದಕಸ್ಥಾನದಲ್ಲಿ ಪ್ರಾದುರ್ಭವಿಸುತ್ತಾನೆ ಧೀಮಂತರಾದ ಯಜಮಾನರು ಉದಕದಿಂದ ನಾವೆಯನ್ನು ಎಳೆದು ತರುವಂತೆ ಅವನನ್ನು ಆಕರ್ಷಿಸಿದ್ದಾರೆ. ಉದಕಗಳು ಅವನ ಅನುಜ್ಞೆಯನ್ನು ಪಾಲಿಸುತ್ತಾ ಅಧೋಮುಖಪ್ರವಾಹಗಳುಳ್ಳವಾಗಿ ಆದವು.

## English Translation

Surya has ascended above the glistening water, as soon as he has put to his bright-backed steeds: sage (worshippers) have drawn him, like a ship, across the sea: the waters, hearing his commands, have come down.

॥ ಸಂಹಿತಾಪಾಠಃ ॥

ಧಿಯಂ ವೋ ಅಪ್ಸು ದಧಿಷೇ ಸ್ವರ್ಷಾಂ ಯಯಾತರನ್ದಶ ಮಾಸೋ ನವಗ್ವಾಃ ।
ಅಯಾ ಧಿಯಾ ಸ್ಯಾಮ ದೇವಗೋಪಾ ಅಯಾ ಧಿಯಾ ತುತುರ್ಯಾಮಾತ್ಯಂಹಃ ॥ ೧೧ ॥

॥ ಪದಪಾಠಃ ॥

ಧಿಯಂ । ವಃ । ಅಪ್ಽಸು । ದಧಿಷೇ । ಸ್ವಃಽಸಾಂ । ಯಯಾ । ಅತರನ್ । ದಶ । ಮಾಸಃ । ನವಽಗ್ವಾಃ ।
ಅಯಾ । ಧಿಯಾ । ಸ್ಯಾಮ । ದೇವಽಗೋಪಾಃ । ಅಯಾ । ಧಿಯಾ । ತುತುರ್ಯಾಮ । ಅತಿ । ಅಂಹಃ ॥

॥ ಸಾಯಣಭಾಷ್ಯಂ ॥

ಹೇ ದೇವಾ ವೋ ಯುಷ್ಮಾಕಂ ಧಿಯಂ ಸ್ತುತಿಮುಪ್ಸ್ವಬ್ನಿಮಿತ್ತಾಂ ಸ್ವರ್ಷಾಂ ಸರ್ವಸ್ಯ ದಾತ್ರೀಂ ಧಧಿಷೇ । ಧಾರಯಾಮಿ । ವ್ಯತ್ಯಯೇನ ಮಧ್ಯಮಃ ॥ ಯಯಾ ಧಿಯಾ ಕರ್ಮಣಾ ನವಗ್ವಾ ಅಂಗಿರಸೋ ದಶ ಮಾಸೋಽತರನ್ ಸಮನುತಿಷ್ಠಂತ ಅಯಾನಯಾ ಧಿಯಾ ದೇವಗೋಪಾ ದೇವೈರ್ಗುಪ್ತಾಃ ಸ್ಯಾಮ । ಭವೇಮ । ಅಯಾ ಧಿಯಾಂಹಃ ಪಾಪಮತಿ ತುತುರ್ಯಾಮ । ಅತಿತರೇಮ ॥

॥ ಪ್ರತಿಪದಾರ್ಥ ॥

(ಎಲೈ ದೇವತೆಗಳೇ) **ಯಯಾ**—ಯಾವ ಸ್ತುತಿಯಿಂದ (ಅಥವಾ ಸ್ತುತಿಪೂರ್ವಕವಾದ ಕರ್ಮದಿಂದ) । **ನವಗ್ವಾಃ**—ನವಗ್ವಸಂಜ್ಞಕರಾದ ಅಂಗಿರಸ್ಸುಗಳು । **ದಶ ಮಾಸಃ**—ಹತ್ತುತಿಂಗಳು ಕಾಲ । **ಅತರನ್**—ಯಜ್ಞವನ್ನಾಚರಿಸಿದರೋ ಅಂತಹ । **ಧಿಯಂ**—ಸ್ತುತಿಯನ್ನು । **ವಃ**—ನಿಮ್ಮನ್ನುದ್ದೇಶಿಸಿ । **ಸ್ವರ್ಷಾಂ**—ಸರ್ವದಾತ್ರಿಯಾದ । **ಅಪ್ಸು**—ಉದಕದ ನಿಮಿತ್ತವಾಗಿ । **ದಧೀಷೇ**—ಅರ್ಪಿಸುತ್ತೇನೆ । **ಅಯಾ ಧಿಯಾ**—ಇದೇ ಸ್ತುತಿಯ

**ಅರ್ಪಣದಿಂದ । ದೇವಗೋಪಾಃ**—ದೇವತೆಗಳ ರಕ್ಷಣೆಗೆ ಒಳಪಟ್ಟವರಾಗಿ । **ಸ್ಯಾಮ**—ನಾವು ಆಗುವಂತಾಗಲಿ । **ಅಯಾ ಧಿಯಾ**—ಇದೇ ಸ್ತುತಿಯ ಸಹಾಯದಿಂದ । **ಅಂಹಃ**—ಪಾಪವನ್ನು । **ಅತಿ ತುತುರ್ಯಾಮ**—ಪೂರ್ಣವಾಗಿ ದಾಟುವಂತಾಗಲಿ.

॥ ಭಾವಾರ್ಥ ॥

ಎಲೈ ದೇವತೆಗಳೇ, ಯಾವ ಸ್ತುತಿಯಿಂದ ನವಗ್ವಸಂಜ್ಞಕರಾದ ಅಂಗಿರಸ್ಸುಗಳು ಹತ್ತುತಿಂಗಳ ಕಾಲ ಯಜ್ಞವನ್ನಾಚರಿಸಿದರೋ ಅಂತಹ ಸ್ತುತಿಯನ್ನು ನಿಮ್ಮನ್ನುದ್ದೇಶಿಸಿ ಸರ್ವದಾತ್ರಿಯಾದ ಉದಕದ ನಿಮಿತ್ತವಾಗಿ ಅರ್ಪಿಸುತ್ತೇನೆ ಇದೇ ಸ್ತುತಿಯ ಅರ್ಪಣದಿಂದ ನಾವು ದೇವತೆಗಳ ರಕ್ಷಣೆಗೆ ಒಳಪಟ್ಟವರಾಗಿ ಆಗುವಂತಾಗಲಿ. ಇದರ ಸಹಾಯದಿಂದಲೇ ಸಕಲ ಪಾಪವನ್ನು ನಾವು ದಾಟುವಂತಾಗಲಿ.

## English Translation

I offer to you, (gods), for the sake of water, an all-bestowing sacrifice, whereby the nine-months ministrants have completed the ten-months rite: may we, by this sacrifice, be the protected of the gods: may we, by this sacrifice, cross over the boundaries of sin.

## ನಲವತ್ತಾರನೇ ಸೂಕ್ತವು.

॥ ಸಾಯಣಭಾಷ್ಯಂ ॥

**ಹಯೋ ನೇತ್ಯಷ್ಟರ್ಚಂ ದ್ವಿತೀಯಂ ಸೂಕ್ತಂ ಪ್ರತಿಕ್ಷತ್ರಸ್ಯಾರ್ಷಂ। ಅಷ್ಟಮೀ ದ್ವಿತೀಯಾ ಚ ತ್ರಿಷ್ಟುಭೌ ಶಿಷ್ಟಾಃ ಷಟ್ ಜಗತ್ಯಃ । ಆದಿತಃ ಷಡ್ವೈಶ್ವದೇವ್ಯಃ ಸಪ್ತಮ್ಯಷ್ಟಮ್ಯೋರ್ದೇವಪತ್ನ್ಯೋ ದೇವತಾ । ತಥಾ ಚಾನುಕ್ರಾಂತಂ । ಹಯೋಽಷ್ಟೌ ಪ್ರತಿಕ್ಷತ್ರೋಽಂತ್ಯೇ ದ್ವ್ಯೃಚೋ ದೇವಪತ್ನೀಸ್ತ-ವೋಽಂತ್ಯಾ ತ್ರಿಷ್ಟುಪ್ ದ್ವಿತೀಯಾ ಚೇತಿ ॥ ಸೂಕ್ತವಿನಿಯೋಗೋ ಲೈಂಗಿಕಃ ॥**

ಅನುವಾದವು—**ಹಯೋ ನ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಪ್ರತಿಕ್ಷತ್ರ ಆತ್ರೇಯಃ ಎಂಬುವನು ಋಷಿಯು; ಈ ಸೂಕ್ತದ ಮೊದಲಿನ ಆರು ಋಕ್ಕುಗಳು ವಿಶ್ವೇದೇವತಾಕವು, ಏಳು ಮತ್ತು ಎಂಟನೆಯ ಋಕ್ಕುಗಳಿಗೆ ದೇವಪತ್ನಿಯರು ದೇವತೆಯು, ಎರಡು ಮತ್ತು ಎಂಟನೆಯ ಋಕ್ಕುಗಳು ತ್ರಿಷ್ಟುಪ್ ಛಂದಸ್ಸವು, ಉಳಿದ ಆರು ಋಕ್ಕುಗಳು ಜಗತೀ ಛಂದಸ್ಸವು, ಅನುಕ್ರಮಣಿಕೆಯಲ್ಲಿ—**ಹಯೋಽಷ್ಟೌ ಪ್ರತಿಕ್ಷತ್ರೋಽನ್ತ್ಯೇ ದ್ವ್ಯೃಚೋ ದೇವಪತ್ನೀಸ್ತವೋಽನ್ತ್ಯಾ ತ್ರಿಷ್ಟುಪ್ ದ್ವಿತೀಯಾ ಚ** ಎಂದು ಹೇಳಿರುವುದು. ಸೂಕ್ತವಿನಿಯೋಗವು ಲೈಂಗಿಕವು

## ಸೂಕ್ತ—೪೬

॥ಮಂಡಲ—೫ ॥ ಅನುವಾಕ—೪ ॥ ಸೂಕ್ತ—೪೬ ॥

॥ ಅಷ್ಟಕ—೪ ॥ ಅಧ್ಯಾಯ—೨ ॥ ವರ್ಗ—೨೮ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥

ಋಷಿಃ—ಪ್ರತಿಕ್ಷತ್ರ ಆತ್ರೇಯಃ ॥

ದೇವತಾ—೧-೬, ವಿಶ್ವೇದೇವಾಃ । ೭-೮, ದೇವಪತ್ನ್ಯಃ ॥

ಛಂದಃ—೧, ೩-೭ ಜಗತೀ । ೨, ೮ ತ್ರಿಷ್ಟುಪ್ ॥

---

॥ ಸಂಹಿತಾಪಾಠಃ ॥

ಹಯೋ ನ ವಿದ್ವಾಁ ಅಯುಜಿ ಸ್ವಯಂ ಧುರಿ ತಾಂ ವಹಾಮಿ ಪ್ರತರಣೀ-
ಮವಸ್ಯುವಂ ।
ನಾಸ್ಯಾ ವಶ್ಮಿ ವಿಮುಚಂ ನಾವೃತಂ ಪುನರ್ವಿದ್ವಾನ್ಪಥಃ ಪುರಏತ ಋಜು
ನೇಷತಿ ॥ ೧ ॥

॥ ಪದಪಾಠಃ ॥

ಹಯಃ । ನ । ವಿದ್ವಾನ್ । ಅಯುಜಿ । ಸ್ವಯಂ । ಧುರಿ । ತಾಂ । ವಹಾಮಿ । ಪ್ರऽತರಣೀಂ । ಅವಸ್ಯುವಂ ।
ನ । ಅಸ್ಯಾಃ । ವಶ್ಮಿ । ವಿऽಮುಚಂ । ನ । ಆऽವೃತಂ । ಪುನಃ । ವಿದ್ವಾನ್ । ಪಥಃ । ಪುರಃऽಏತಾ । ಋಜು ।
ನೇಷತಿ ॥ ೧ ॥

॥ ಸಾಯಣಭಾಷ್ಯಂ ॥

ಹಯೋ ನ ಅಶ್ವ ಇವ ವಿದ್ವಾನ್ ಸರ್ವಜ್ಞಃ ಪ್ರತಿಕ್ಷತ್ರಃ ಸ್ವಯಮನನ್ಯಪ್ರೇರಿತಃ ಸನ್ ಧುರಿ ಯಜ್ಞಾತ್ಮಿಕಾಯಾಮಯುಜಿ । ಯುಕ್ತೋಽಭವತ್ । ತಾಂ ಧುರಂ ಪ್ರತರಣೀಂ ಪ್ರಕರ್ಷೇಣ ತಾರಯಿತ್ರೀಮವಸ್ಯುವಂ ರಕ್ಷಯಿತ್ರೀಂ ವಹಾಮಿ । ಧಾರಯಾಮ್ಯಹಮಧ್ವರ್ಯುರ್ಹೋತಾ ವಾ । ಅಸ್ಯಾ ಧುರೋ ವಿಮುಚಂ ವಿಮೋಚನಂ ಪರಿತ್ಯಾಗಂ ನ ವಶ್ಮಿ । ನ ಕಾಮಯೇ । ನಾವೃತಂ ಪುನಃ ಪುನರಾವರಣಂ ಧಾರಣಮಪಿ ನ ಚ ವಶ್ಮಿ । ಮಮ ಕೋ ಭಾರ ಇತಿ ತದೇವೋಚ್ಯತೇ । ವಿದ್ವಾನ್ಮಾರ್ಗಾಭಿಜ್ಞೋಽಂತರ್ಯಾಮೀ ದೇವಃ ಪುರಏತಾ ಪುರತೋ ಗಂತಾ ಸನ್ ಪಥೋ ಯಜ್ಞಮಾರ್ಗಾನೃಜ್ವಕುಟಿಲಂ ನೇಷತಿ । ಪ್ರಾಪಯತಿ ॥

॥ ಪ್ರತಿಪದಾರ್ಥ ॥

**ವಿದ್ವಾನ್**—ಪ್ರಾಜ್ಞನಾದ ಪ್ರತಿಕ್ಷತ್ರನು । **ಹಯೋ ನ**—( ರಥಕ್ಕೆ ಯೋಜಿತನಾಗುವ ) ಅಶ್ವದಂತೆ । **ಸ್ವಯಂ**—ಸ್ವಯಂಪ್ರೇರಿತನಾಗಿ । **ಧುರಿ**—ಯಜ್ಞನಿರ್ವಹಣಕಾರ್ಯದಲ್ಲಿ । **ಅಯುಜಿ**—ನಿಯುಕ್ತನಾಗಿದ್ದಾನೆ । **ಪ್ರತರಣೀಂ**—ಉತ್ತಮವಾಗಿ ನಿರ್ವಹಿಸಲ್ಪಡಬಲ್ಲದೂ । **ಅವಸ್ಯುವಂ**—ರಕ್ಷಕವಾದುದೂ ಆದ । **ತಾಂ**—ಆ ಭಾರವನ್ನು । **ವಹಾಮಿ**—ನಾನು ಧರಿಸುತ್ತೇನೆ । **ಅಸ್ಯಾಃ**—ಈ ಕಾರ್ಯನಿರ್ವಹಣ ಭಾರದ । **ವಿಮುಚಂ**—ಪರಿತ್ಯಾಗವನ್ನು । **ನ ವಶ್ಮಿ**—ನಾನು ಇಚ್ಛಿಸುವುದಿಲ್ಲ । **ಪುನಃ ಆವೃತಂ**—ಪುನರಾವೃತ್ತಿಯ ಭಾರವನ್ನೂ । **ನ**—ಇಚ್ಛಿಸುವುದಿಲ್ಲ । **ವಿದ್ವಾನ್**—ಪ್ರಾಜ್ಞನಾದ ಋಷಿಯು । **ಪುರಏತಾ**—ಮುಂದಾಳಾಗಿದ್ದುಕೊಂಡು । **ಋಜು**—ನೇರವಾದ । **ಪಥಃ**—ಯಜ್ಞಮಾರ್ಗಗಳಿಗೆ । **ನೇಷತಿ**—ಒಯ್ಯುತ್ತಾನೆ.

॥ ಭಾವಾರ್ಥ ॥

ಪ್ರಾಜ್ಞನಾದ ಪ್ರತಿಕ್ಷತ್ರನು ರಥಕ್ಕೆ ಯೋಜಿತವಾಗುವ ಅಶ್ವದಂತೆ ಸ್ವಯಂಪ್ರೇರಿತನಾಗಿ ಯಜ್ಞನಿರ್ವಹಣ ಕಾರ್ಯದಲ್ಲಿ ನಿಯುಕ್ತನಾಗಿದ್ದಾನೆ ಉತ್ತಮವಾಗಿ ನಿರ್ವಹಿಸಲ್ಪಡಬಲ್ಲದೂ, ರಕ್ಷಕವಾದುದೂ ಆ ಭಾರವನ್ನು ನಾನು ಧರಿಸುತ್ತೇನೆ. ಈ ಕಾರ್ಯವನ್ನು ತಪ್ಪಿಸಿಕೊಂಡು ಈ ಭಾರದ ತ್ಯಾಗಕ್ಕೆ ನಾನು ಇಚ್ಛಿಸುವುದಿಲ್ಲ. ಪ್ರಾಜ್ಞನಾದ ಋಷಿಯು ಮಾರ್ಗದರ್ಶಕನಾಗಿದ್ದುಕೊಂಡು ನೇರವಾದ ಯಜ್ಞಮಾರ್ಗಗಳನ್ನು ತೋರಿಸಿಕೊಟ್ಟು ಇತರರನ್ನು ಆ ಮಾರ್ಗಕ್ಕೆ ಒಯ್ಯುತ್ತಾನೆ.

English Translation

The sage, (Pratikshatra), has, of his own accord, attached himself, to the burden (of sacrifice), like a horse (to a chariot): I support that transcendent and preservative load: I do not desire release from it, nor yet its reiterated imposition: the sage, going first, conducts (men) by the right path.

॥ ಸಂಹಿತಾಪಾಠಃ ॥

ಅಗ್ನ ಇಂದ್ರ ವರುಣ ಮಿತ್ರ ದೇವಾಃ ಶರ್ಧಃ ಪ್ರ ಯಂತ ಮಾರುತೋತ ವಿಷ್ಣೋ ।

ಉಭಾ ನಾಸತ್ಯಾ ರುದ್ರೋ ಅಧ ಗ್ನಾಃ ಪೂಷಾ ಭಗಃ ಸರಸ್ವತೀ ಜುಷಂತ ॥

॥ ಪದಪಾಠಃ ॥

ಅಗ್ನೇ । ಇಂದ್ರ । ವರುಣ । ಮಿತ್ರ । ದೇವಾಃ । ಶರ್ಧಃ । ಪ್ರ । ಯಂತ । ಮಾರುತ । ಉತ । ವಿಷ್ಣೋ ಇತಿ

ಉಭಾ । ನಾಸತ್ಯಾ । ರುದ್ರಃ । ಅಧ । ಗ್ನಾಃ । ಪೂಷಾ । ಭಗಃ । ಸರಸ್ವತೀ । ಜುಷಂತ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಗ್ನ ಇಂದ್ರ ವರುಣ ಮಿತ್ರ ದೇವಾ ಯೂಯಂ ಶರ್ಧೋ ಬಲಮಸ್ಮಾಕಂ ಪ್ರ ಯಂತ । ಪ್ರಾಪಯತ ॥ ಅತ್ರ ಸರ್ವತ್ರ ಪೂರ್ವಸ್ಯಾವಿದ್ಯಮಾನತ್ವೇನೋತ್ತರಸ್ಯೋತ್ತರಸ್ಯ ಪಾದಾದಿತ್ವಾದನಿಘಾತಃ । ಪ್ರಥಮಸ್ಯ ತು ಸ್ವತ ಏವ ಪಾದಾದಿತ್ವಂ । ಉತಾಪಿ ಚ ಹೇ ಮಾರುತ ಮಾರುತಾನಿ ಮರುತಾಂ ಬಲಾನಿ ಹೇ ವಿಷ್ಣೋ ಯೂಯಂ ಶರ್ಧಃ ಪ್ರ ಯಂತ ॥ ವಿಷ್ಣೋ ಇತ್ಯಸ್ಯೋತೇತ್ಯನೇನ ವ್ಯವಧಾನಾನ್ನಿಘಾತಃ ॥ ಕಿಂಚೋಭೋಭೌ ನಾಸತ್ಯಾ ಸತ್ಯಭೂತೌ ರುದ್ರೋಽಧ ಅಥ ಗ್ನಾ ಏತೇಷಾಂ ದೇವಾನಾಂ ಸ್ತ್ರಿಯಶ್ಚ ಪೂಷಾ ಭಗಃ ಸರಸ್ವತೀ ಚ ಜುಷಂತ । ಸೇವಂತಾಮಸ್ಮದೀಯಂ ಯಜ್ಞಂ ಸ್ತುತಿಂ ವಾ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಇಂದ್ರ**—ಎಲೈ ಇಂದ್ರನೇ । **ವರುಣ**—ಎಲೈ ವರುಣನೇ । **ಮಿತ್ರ**—ಎಲೈ ಮಿತ್ರನೇ । **ದೇವಾಃ**—ದೇವಾತ್ಮರಾದ ನೀವು । **ಶರ್ಧಃ**—ಬಲವನ್ನು । **ಪ್ರ ಯಂತ**—ನನಗೆ ಒದಗಿಸಿಕೊಡಿರಿ । **ಉತ**—ಮತ್ತು । **ಮಾರುತ**—ಎಲೈ ಮರುತ್ಸಂಘವೇ । **ವಿಷ್ಣೋ**—ಎಲೈ ವಿಷ್ಣುವೇ ( ನೀವೂ ಒದಗಿಸಿರಿ ) । **ಉಭಾ ನಾಸತ್ಯಾ**—ಅಶ್ವಿನೀ ದೇವತೆಗಳಿಬ್ಬರೂ । **ರುದ್ರಃ**—ರುದ್ರನೂ । **ಅಧ**—ಹಾಗೆಯೇ । **ಗ್ನಾಃ**—ದೇವಪತ್ನಿಯರೂ । **ಪೂಷಾ**—ಪೂಷದೇವನೂ । **ಭಗಃ**—ಭಗನೂ । **ಸರಸ್ವತೀ**—ಸರಸ್ವತಿಯೂ । **ಜುಷಂತ**—ನಮ್ಮ ಯಜ್ಞವನ್ನು ಸೇವಿಸಲಿ.

॥ ಭಾವಾರ್ಥ ॥

ಎಲೈ ಇಂದ್ರಾಗ್ನಿಗಳೇ, ಎಲೈ ಮಿತ್ರಾವರುಣರೇ, ದೇವಾತ್ಮರಾದ ನೀವು ನಮಗೆ ಶಕ್ತಿಯನ್ನು ಒದಗಿಸಿ ಕೊಡಿರಿ. ಮತ್ತು, ಎಲೈ ಮರುತ್ಸಂಘವೇ, ಎಲೈ ವಿಷ್ಣುವೇ ನೀವೂ ಒದಗಿಸಿರಿ. ಅಶ್ವಿನೀದೇವತೆಗಳೂ, ರುದ್ರನೂ, ದೇವಪತ್ನಿಯರೂ, ಪೂಷದೇವನೂ, ಭಗನೂ, ಸರಸ್ವತಿಯೂ ನಮ್ಮ ಯಜ್ಞವನ್ನು ಸೇವಿಸಲಿ

## English Translation

Agni, Indra, Varuna, Mitra, gods, confer (upon us) strength: or company of the Maruts, or Vishnu, (bestow it) and may both the Nasatyas, Rudra, the wives of the gods, Pushan, Bhaga, Saraswati, be pleased (by our adoration .

॥ ಸಂಹಿತಾಪಾಠಃ ॥

ಇಂದ್ರಾಗ್ನೀ ಮಿತ್ರಾವರುಣಾದಿತಿಂ ಸ್ವಃ ಪೃಥಿವೀಂ ದ್ಯಾಂ ಮರುತಃ ಪರ್ವತಾँ ಅಪಃ ।
ಹುವೇ ವಿಷ್ಣುಂ ಪೂಷಣಂ ಬ್ರಹ್ಮಣಸ್ಪತಿಂ ಭಗಂ ನು ಶಂಸಂ ಸವಿತಾರಮೂತಯೇ ॥ ೩ ॥

॥ ಪದಪಾಠಃ ॥

ಇಂದ್ರಾಗ್ನೀ ಇತಿ । ಮಿತ್ರಾವರುಣಾ । ಅದಿತಿಂ । ಸ್ವ೧ರಿತಿ ಸ್ವಃ । ಪೃಥಿವೀಂ । ದ್ಯಾಂ । ಮರುತಃ । ಪರ್ವತಾನ್ । ಅಪಃ ।
ಹುವೇ । ವಿಷ್ಣುಂ । ಪೂಷಣಂ । ಬ್ರಹ್ಮಣಃ । ಪತಿಂ । ಭಗಂ । ನು । ಶಂಸಂ । ಸವಿತಾರಂ । ಊತಯೇ ॥

॥ ಸಾಯಣಭಾಷ್ಯಂ ॥

ಇಂದ್ರಾದಿಸವಿತ್ರಂತಾನ್ ಚತುರ್ದಶ ದೇವಾನೂತಯೇಽಸ್ಮದ್ರಕ್ಷಣಾಯ ಹುವೇ । ಆಹ್ವಯಾಮಿ ಸ್ತೌಮಿ ವಾ । ಸ್ವರಿತ್ಯಾದಿತ್ಯ ಉಚ್ಯತೇ ಸ್ವರಣಾತ್ ॥

॥ ಪ್ರತಿಪದಾರ್ಥ ॥

(**ಅಹಂ**—ನಾನು) । **ಊತಯೇ**—ರಕ್ಷಣಾರ್ಥವಾಗಿ । **ಇಂದ್ರಾಗ್ನೀ**—ಇಂದ್ರಾಗ್ನಿಗಳನ್ನೂ । **ಮಿತ್ರಾವರುಣಾ**—ಮಿತ್ರಾವರುಣರನ್ನೂ । **ಅದಿತಿಂ**—ಅದಿತಿಯನ್ನೂ । **ಸ್ವಃ**—ಆದಿತ್ಯನನ್ನೂ । **ಪೃಥಿವೀಂ**—ಪೃಥಿವಿಯನ್ನೂ । **ದ್ಯಾಂ**—ದ್ಯುಲೋಕಾಧಿದೇವತೆಯನ್ನೂ । **ಮರುತಃ**—ಮರುತ್ತುಗಳನ್ನೂ । **ಪರ್ವತಾನ್**—ಪರ್ವತಗಳನ್ನೂ । **ಅಪಃ**—ಅಬ್ದೇವತೆಗಳನ್ನೂ । **ವಿಷ್ಣುಂ**—ವಿಷ್ಣುವನ್ನೂ । **ಪೂಷಣಂ**—ಪೂಷದೇವನನ್ನೂ । **ಬ್ರಹ್ಮಣಸ್ಪತಿಂ**—ಬ್ರಹ್ಮಣಸ್ಪತಿಯನ್ನೂ । **ಭಗಂ**—ಭಗನನ್ನೂ । **ಶಂಸಂ**—ಪ್ರಶಸ್ತನಾದ । **ಸವಿತಾರಂ**—ಸವಿತೃವನ್ನೂ । **ಹುವೇ**—ಪ್ರಾರ್ಥಿಸಿ ಕರೆಯುತ್ತೇನೆ.

॥ ಭಾವಾರ್ಥ ॥

ಇಂದ್ರಾಗ್ನಿಗಳನ್ನೂ ಮಿತ್ರಾವರುಣರನ್ನೂ, ಅದಿತಿಯನ್ನೂ ಆದಿತ್ಯನನ್ನೂ, ಪೃಥಿವಿಯನ್ನೂ, ದ್ಯುಲೋಕಾಧಿದೇವತೆಯನ್ನೂ ಮರುತ್ತುಗಳನ್ನೂ ಪರ್ವತಗಳನ್ನೂ, ಅಬ್ದೇವತೆಗಳನ್ನೂ, ವಿಷ್ಣುವನ್ನೂ, ಪೂಷದೇವನನ್ನು ಬ್ರಹ್ಮಣಸ್ಪತಿಯನ್ನೂ, ಭಗನನ್ನೂ, ಪ್ರಶಸ್ತನಾದ ಸವಿತೃವನ್ನೂ ಪ್ರಾರ್ಥಿಸಿ ಕರೆಯುತ್ತೇನೆ.

## English Translation

I invoke for protection Indra and Agni, Mitra and Varuna, Aditi, Swar, Earth, Heaven, the Maruts, the clouds, the waters, Vishnu, Pushan, Brahmanaspati, and Savitri

॥ ಸಂಹಿತಾಪಾಠಃ ॥

ಉತ ನೋ ವಿಷ್ಣುರುತ ವಾತೋ ಅಸ್ರಿಧೋ ದ್ರವಿಣೋದಾ ಉತ ಸೋಮೋ ಮಯಸ್ಕರತ್ ।
ಉತ ಋಭವ ಉತ ರಾಯೇ ನೋ ಅಶ್ವಿನೋತ ತ್ವಷ್ಟೋತ ವಿಭ್ವಾನು ಮಂಸತೇ ॥ ೪ ॥

॥ ಪದಪಾಠಃ ॥

ಉತ । ನಃ । ವಿಷ್ಣುಃ । ಉತ । ವಾತಃ । ಅಸ್ರಿಧಃ । ದ್ರವಿಣಃऽದಾಃ । ಉತ । ಸೋಮಃ । ಮಯಃ । ಕರತ್ ।
ಉತ । ಋಭವಃ । ಉತ । ರಾಯೇ । ನಃ । ಅಶ್ವಿನಾ । ಉತ । ತ್ವಷ್ಟಾ । ಉತ । ವಿऽಭ್ವಾ । ಅನು । ಮಂಸತೇ ॥ ೪ ॥

॥ ಸಾಯಣಭಾಷ್ಯಂ ॥

ಉತಾಪಿ ಚ ನೋಽಸ್ಮಾಕಂ ವಿಷ್ಣುರ್ವ್ಯಾಪಕೋ ದೇವೋ ಮಯಸ್ಕರತ್ । ಮಯ ಇತಿ ಸುಖನಾಮ । ಸುಖಂ ಕರೋತು । ಉತಾಪಿ ಚ ವಾತೋ ವಾಯುರಸ್ರಿಧೋಽಹಿಂಸಕಃ ಸನ್ ಮಯಸ್ಕರತ್ । ಕಿಂಚ ದ್ರವಿಣೋದಾ ಧನಸ್ಯ ದಾತಾ ಸೋಮೋಽಪಿ ಮಯಸ್ಕರತ್ । ಉತಾಪಿ ಚ ಋಭವೋ ನೋಽಸ್ಮಭ್ಯಂ ರಾಯೇ ಧನಾಯಾನು ಮಂಸತೇ । ಅನುಮನ್ಯಂತಾಂ । ಉತಾಶ್ವಿನಾಶ್ವಿನೌ ಚ ಉತ ತ್ವಷ್ಟಾ ದೇವ ಉತ ವಿಭ್ವಾ ಋಭೂಣಾಮನ್ಯತಮೋ ದೇವಃ । ಏತೇ ಸರ್ವೇಽಪ್ಯನು ಮಂಸತೇ । ಯದ್ವಾ । ಅನುಮಂಸ್ತ ಇತಿ ಪ್ರತ್ಯೇಕಂ ಸಂಬಂಧನೀಯಂ ॥

॥ ಪ್ರತಿಪದಾರ್ಥ ॥

ಉತ—ಅಥವಾ । ವಿಷ್ಣುಃ—ವಿಷ್ಣುವೂ । ಅಸ್ರಿಧಃ—ಅಹಿಂಸಕನಾದ । ವಾತಃ—ವಾಯುವೂ । ದ್ರವಿಣೋದಾಃ—ದ್ರವಿಣೋದರೂಪನಾದ ಅಗ್ನಿಯೂ । ಉತ—ಮತ್ತು । ಸೋಮಃ—ಸೋಮನೂ । ಮಯಃ-

ಸುಖವನ್ನು । **ನಃ**—ನಮಗೆ । **ಕರತ್**—ಉಂಟುಮಾಡಲಿ । **ಋಭ್ವಃ**-ಋಭುಗಳೂ । **ಉತ**—ಮತ್ತು । **ಅಶ್ವಿನಾ**-ಅಶ್ವಿನಿದೇವತೆಗಳೂ । **ತ್ವಷ್ಟಾ**—ತ್ವಷ್ಟೃವೂ । **ಉತ**—ಅಲ್ಲದೇ । **ವಿಭ್ವಾ**—ವಿಭ್ವನೂ । **ನಃ**—ನನ್ನು । **ರಾಯೇ**-ಧನಸಂಪತ್ತಿಗಾಗಿ । **ಅನು ಮಂಸತೇ**—ಅನುಗ್ರಹಿಸಲಿ.

॥ ಭಾವಾರ್ಥ ॥

ವಿಷ್ಣುವೂ, ಅಹಿಂಸಕನಾದ ವಾಯುವೂ, ದ್ರವಿಣೋದರೂಪನಾದ ಅಗ್ನಿಯೂ, ಮತ್ತು ಸೋಮನೂ ನಮಗೆ ಸುಖವನ್ನುಂಟುಮಾಡಲಿ. ಋಭುಗಳೂ ಮತ್ತು ಅಶ್ವಿನಿದೇವತೆಗಳೂ, ತ್ವಷ್ಟೃವೂ, ಮತ್ತು ವಿಭ್ವನೂ, ನಮಗೆ ಧನಸಂಪತ್ತಿಗಾಗಿ ಅನುಗ್ರಹಿಸಲಿ (ಅನುಮೋದಿಸಲಿ).

## English Translation

Or may Vishnu grant us felicity, or the innoxious wind, or Soma the bestower of riches ; or may the Ribhus, the Aswins, Twashtri, or Vibhwan bo favaurably disposed to our enrichment.

॥ ವಿಶೇಷವಿಷಯಗಳು ॥

**ವಿಭ್ವಾ**—ವಿಭ್ವ ಎಂಬುವನು ಋಭು ವಿಭು, ವಾಜ ಎಂಬ ಮೂರು ಜನ ಋಭುಗಳಲ್ಲಿ ಎರಡನೆಯವನು. ಈ ಋಕ್ಕಿನಲ್ಲಿ ಈ ಮೂರು ಮಂದಿಯನ್ನು ಋಭವಃ ಎಂಬ ಶಬ್ದದಿಂದ ನಿರ್ದೇಶಿಸಿದ್ದರೂ ವಿಭ್ವಾ ಎಂಬುವನ ಹೆಸರು ಪುನಃ ಪಠಿತವಾಗಿದೆ.

॥ ಸಂಹಿತಾಪಾಠಃ ॥

**ಉತ ತ್ಯನ್ನೋ ಮಾರುತಂ ಶರ್ಧ ಆ ಗಮದ್ದಿವಿಕ್ಷಯಂ ಯಜತಂ ಬರ್ಹಿ-**
**ರಾಸದೇ ।**
**ಬೃಹಸ್ಪತಿಃ ಶರ್ಮ ಪೂಷೋತ ನೋ ಯಮದ್ವರೂಥ್ಯಂ ವರುಣೋ**
**ಮಿತ್ರೋ ಅರ್ಯಮಾ ॥ ೫ ॥**

॥ ಪದಪಾಠಃ ॥

ಉತ । ತ್ಯತ್ । ನಃ । ಮಾರುತಂ । ಶರ್ಧಃ । ಆ । ಗಮತು । ದಿವಿsಕ್ಷಯಂ । ಯಜತಂ । ಬರ್ಹಿಃ । ಆsಸದೇ ।

ಬೃಹಸ್ಪತಿಃ । ಶರ್ಮ । ಪೂಷಾ । ಉತ । ನಃ । ಯಮತ್ । ವರೂಥ್ಯಂ । ವರುಣಃ । ಮಿತ್ರಃ । ಅರ್ಯಮಾ ॥ ೫ ॥

॥ ಸಾಯಣಭಾಷ್ಯಂ ॥

ಉತಾಪಿ ಚ ತ್ಯತ್ತನ್ಮಾರುತಂ ಶರ್ಧೋ ಮರುತಾಂ ಬಲಂ ಸಂಘೋ ನೋsಸ್ಮಾನಾ ಗಮತ್ । ಆಗಚ್ಛತು । ಕೀದೃಶಂ ತಚ್ಛರ್ಧಃ ದಿವಿಕ್ಷಯಂ ದ್ಯುಲೋಕೇ ವರ್ತಮಾನಂ ಯಜತಂ ಪೂಜ್ಯಂ । ಕಿಮ-ರ್ಥಮಾಗಮನಮಿತಿ ತದುಚ್ಯತೇ । ಬರ್ಹಿರ್ಬರ್ಹಿಷ್ಯಾಸದ ಉಪವೇಷ್ಟುಂ । ಉಪವಿಶ್ಯ ಹವಿಃಸ್ವೀಕಾ-ರಾಯೇತ್ಯರ್ಥಃ । ಕಿಂಚ ಬೃಹಸ್ಪತಿರ್ದೇವಃ ಶರ್ಮ ಸುಖಂ ಯಮತ್ । ಯಚ್ಛತು । ಉತ ನೋsಸ್ಮಭ್ಯಂ ಪೂಷಾಪಿ ಯಮತ್ । ಕೀದೃಶಂ ಶರ್ಮ । ವರೂಥ್ಯಂ । ವಾರಯತಿ ಶೀತವಾತಾದಿಕಮಿತಿ ವರೂಥಂ ಗೃಹಂ । ತದರ್ಹಂ ವರೂಥ್ಯಂ । ಕಿಂಚ ವರುಣಾದಯಸ್ತ್ರಯೋsಪಿ ಪ್ರತ್ಯೇಕಂ ಶರ್ಮ ಯಚ್ಛಂತು ॥

॥ ಪ್ರತಿಪದಾರ್ಥ ॥

ಉತ—ಅಲ್ಲದೇ । **ದಿವಿಕ್ಷಯಂ**—ದ್ಯುಲೋಕವರ್ತಿಯಾದುದೂ । **ಯಜತಂ**-ಪೂಜ್ಯವಾದುದೂ । **ತ್ಯತ್**-ಪ್ರಸಿದ್ಧವಾದುದೂ ಆದ । **ಮಾರುತಂ ಶರ್ಧಃ**—ಮರುತ್ತುಗಳ ಸಂಘವು । **ಬರ್ಹಿಃ**—ಆಸನದ ಮೇಲೆ । **ಆ ಸದೇ**—ಕುಳಿತುಕೊಳ್ಳಲು । **ನಃ**—ನಮ್ಮ ಕಡೆಗೆ । **ಆ ಗಮತ್**—ಬರಲಿ । ಉತ—ಮತ್ತು । **ಬೃಹಸ್ಪತಿಃ**—ಬೃಹಸ್ಪತಿಯೂ । **ಪೂಷಾ**—ಪೂಷದೇವನೂ । **ವರುಣಃ**—ವರುಣನೂ । **ಮಿತ್ರಃ**—ಮಿತ್ರನೂ । **ಅರ್ಯಮಾ**—ಅರ್ಯಮನೂ । **ನಃ**—ನಮಗೆ । **ವರೂಥ್ಯಂ**—ಗೃಹಸಂಬಂಧವಾದ । **ಶರ್ಮ**—ಸುಖವನ್ನು । **ಯಮತ್**—ಕೊಡಲಿ.

॥ ಭಾವಾರ್ಥ ॥

ದ್ಯುಲೋಕವರ್ತಿಯಾದುದೂ, ಪೂಜ್ಯವಾದುದೂ, ಪ್ರಸಿದ್ಧವಾದುದೂ ಆದ ಮರುತ್ತುಗಳ ಸಂಘವು ದರ್ಭಾಸನದ ಮೇಲೆ ಕುಳಿತುಕೊಳ್ಳಲು ನಮ್ಮ ಕಡೆಗೆ ಬರಲಿ ಬೃಹಸ್ಪತಿಯೂ, ಪೂಷದೇವನೂ, ವರುಣನೂ, ಅರ್ಯಮನೂ ನಮಗೆ ಗೃಹಸಂಬಂಧವಾದ ಸುಖವನ್ನು ಕೊಡಲಿ.

## English Translation

Or may the adorable, heaven-abiding company of the Maruts, come to us to take their seats on the sacred grass; or may Brihaspati, Pushan, Varuna, Mitra, Aryaman, bestow upon us domestic happiness.

॥ ಸಂಹಿತಾಪಾಠಃ ॥

ಉತ ತ್ಯೇ ನಃ ಪರ್ವತಾಸಃ ಸುಶಸ್ತಯಃ ಸುದೀತಯೋ ನದ್ಯಸ್ತ್ರಾಮಣೇ ಭುವನ್ ।
ಭಗೋ ವಿಭಕ್ತಾ ಶವಸಾವಸಾ ಗಮದುರುವ್ಯಚಾ ಅದಿತಿಃ ಶ್ರೋತು ಮೇ ಹವಂ ॥ ೬ ॥

॥ ಪದಪಾಠಃ ॥

ಉತ । ತ್ಯೇ । ನಃ । ಪರ್ವತಾಸಃ । ಸುಽಶಸ್ತಯಃ । ಸುಽದೀತಯಃ । ನದ್ಯಃ । ತ್ರಾಮಣೇ । ಭುವನ್ ।
ಭಗಃ । ವಿಽಭಕ್ತಾ । ಶವಸಾ । ಅವಸಾ । ಆ । ಗಮತ್ । ಉರುಽವ್ಯಚಾಃ । ಅದಿತಿಃ । ಶ್ರೋತು । ಮೇ ॥ ಹವಂ । ೬ ॥

॥ ಸಾಯಣಭಾಷ್ಯಂ ॥

ಉತಾಪಿ ಚ ತ್ಯೇ ತೇ ಪರ್ವತಾಸಃ ಪರ್ವವಂತೋಽದ್ರಯಃ ಸುಶಸ್ತಯಃ ಶೋಭನಸ್ತುತಯಃ ಕಿಂಚ ಸುದೀತಯಃ ಸುದಾನಾ ನದ್ಯಶ್ಚ ತ್ರಾಮಣೇ ಪಾಲನೇಽಸ್ಮಾಕಂ ಭುವನ್ । ಭವಂತು । ಭಗೋ ದೇವೋ ವಿಭಕ್ತಾ ಧನಾನಾಂ ವಿಭಾಗಕರ್ತಾ ದಾತಾ ಸನ್ ಶವಸಾನ್ನೇನಾವಸಾ ರಕ್ಷಣೇನ ಚ ಸಹಾ ಗಮತ್ । ಆಗಚ್ಛತು । ಉರುವ್ಯಚಾಃ ಪ್ರಭೂತವ್ಯಾಪ್ತಿರದಿತಿರದೀನಾ ದೇವಮಾತಾ ಮೇ ಹವಂ ಸ್ತುತಿಮಾಹ್ವಾನಂ ವಾ ಶ್ರೋತು । ಶೃಣೋತು ॥

॥ ಪ್ರತಿಪದಾರ್ಥ ॥

**ಉತ**—ಮತ್ತು । **ತ್ಯೇ**—ಪ್ರಸಿದ್ಧವಾದ । **ಪರ್ವತಾಸಃ**—ಮೇಘಗಳೂ । **ಸುಶಸ್ತಯಃ**—ಅತಿ ಪ್ರಶಸ್ತವಾದುವೂ । **ಸುದೀತಯಃ**—ದಾನಮನಸ್ಸುಳ್ಳವೂ ಆದ । **ನದ್ಯಃ**—ನದಿಗಳೂ । **ನಃ**—ನಮ್ಮ । **ತ್ರಾಮಣೇ**—ರಕ್ಷಣೆಯಲ್ಲಿ ಉದ್ಯುಕ್ತರಾಗಿ । **ಭುವನ್**—ಇರಲಿ । **ವಿಭಕ್ತಾ**—ಧನವನ್ನು ಹಂಚುವ ಶಕ್ತಿಯುಳ್ಳ । **ಭಗಃ**—ಭಗನು । **ಶವಸಾ**—ಅನ್ನದೊಡನೆಯೂ । **ಅವಸಾ**—ರಕ್ಷಣೆಯೊಡನೆಯೂ ಸಹ । **ಆ ಗಮತ್**—ಬರಲಿ । **ಉರುವ್ಯಚಾಃ**—ಅಧಿಕವಾದ ವ್ಯಾಪ್ತಿಯುಳ್ಳ । **ಅದಿತಿಃ**—ಅದಿತಿಯು । **ಮೇ**—ನನ್ನ । **ಹವಂ**—ಕರೆಯನ್ನು । **ಶ್ರೋತು**—ಕೇಳಲಿ

॥ ಭಾವಾರ್ಥ ॥

ಪ್ರಸಿದ್ಧವಾದ ಮೇಘಗಳೂ, ಅತಿ ಪ್ರಶಸ್ಯವಾದುವೂ, ದಾನಮನಸ್ಸುಳ್ಳವೂ ಆದ ನದಿಗಳೂ ನಮ್ಮ ರಕ್ಷಣೆಯಲ್ಲಿ ಉದ್ಯುಕ್ತರಾಗಿರಲಿ. ಧನವನ್ನು ಹಂಚುವ ಶಕ್ತಿಯುಳ್ಳ ಭಗನು ಅನ್ನದೊಡನೆಯೂ, ಇತರ ರಕ್ಷಣೆಯೊಡನೆಯೂ ಬರಲಿ. ಅಧಿಕವಾದ ವ್ಯಾಪ್ತಿಯುಳ್ಳ ಅದಿತಿಯು ನನ್ನ ಕರೆಯನ್ನು ಕೇಳಲಿ

## English Translation

Or may the glorious mountains, the beneficent rivers, be to us for our preservation : may Bhaga, the apportioner of wealth, come with abundance and protection : may this wide-pervading Aditi hear my invocation.

॥ ಸಂಹಿತಾಪಾಠಃ ॥

ದೇವಾನಾಂ ಪತ್ನೀರುಶತೀರವಂತು ನಃ ಪ್ರಾವಂತು ನಸ್ತುಜಯೇ ವಾಜಸಾತಯೇ ।
ಯಾಃ ಪಾರ್ಥಿವಾಸೋ ಯಾ ಅಪಾಮಪಿ ವ್ರತೇ ತಾ ನೋ ದೇವೀಃ ಸುಹವಾಃ ಶರ್ಮ ಯಚ್ಛತ ॥ ೭ ॥

॥ ಪದಪಾಠಃ ॥

ದೇವಾನಾಂ । ಪತ್ನೀಃ । ಉಶತೀಃ । ಅವಂತು । ನಃ । ಪ್ರ । ಅವಂತು । ನಃ । ತುಜಯೇ । ವಾಜಽಸಾತಯೇ ।
ಯಾಃ । ಪಾರ್ಥಿವಾಸಃ । ಯಾಃ । ಅಪಾಂ । ಅಪಿ । ವ್ರತೇ । ತಾಃ । ನಃ । ದೇವೀಃ । ಸುಽಹವಾಃ । ಶರ್ಮ । ಯಚ್ಛತ ॥ ೭ ॥

॥ ಸಾಯಣಭಾಷ್ಯಂ ॥

ಪತ್ನೀಸಂಯಾಜೇಷು ದೇವಪತ್ನೀನಾಂ ದೇವಾನಾಂ ಪತ್ನೀರಿತ್ಯಾದಿಕೇ ದ್ವೇ ಯಾಜ್ಯಾನುವಾಕ್ಯೇ। ಸೂತ್ರಿತಂ ಚ । ದೇವಾನಾಂ ಪತ್ನೀರುಶತೀರವಂತು ನ ಇತಿ ದ್ವೇ । ಆ. ೧. ೧೦. । ಇತಿ ॥ ಆಗ್ನಿಮಾರುತಶಸ್ತ್ರೇಽಪ್ಯೇತೇ । ದೇವಾನಾಂ ಪತ್ನೀರುಶತೀರವಂತು ನ ಇತಿ ದ್ವೇ ರಾಕಾಮಹಮಿತಿ ದ್ವೇ । ಆ. ೫. ೨೦.। ಇತಿ ॥

ದೇವಾನಾಮಿಂದ್ರಾದೀನಾಂ ಪತ್ನೀಃ ಪತ್ನ್ಯ ಉಶತೀರುಶತ್ಯೋಽಸ್ಮದೀಯಾಂ ಸ್ತುತಿಂ ಕರ್ಮ ವಾ ಕಾಮಯಮಾನಾ ನೋಽಸ್ಮಾನವಂತು । ರಕ್ಷಂತು । ತಥಾ ನೋಽಸ್ಮಾಕಂ ತುಜಯೇ ಬಲವತೇ ಪುತ್ರಾಯ ವಾಜಸಾತಯೇಽನ್ನಲಾಭಾಯ ಸಂಗ್ರಾಮಾಯ ವಾ ಪ್ರಾವಂತು । ಪ್ರಕರ್ಷೇಣ ರಕ್ಷಂತು

**ಗಚ್ಛಂತು ವಾ । ಯಾಃ ಪಾರ್ಥಿವಾಸಃ ಪೃಥಿವೀಸಂಬಂಧಿನ್ಯೋ ಯಾಶ್ಚಾಪಾಮುದಕಾನಾಂ ವ್ರತೇ ಕರ್ಮ- ಣ್ಯಂತರಿಕ್ಷೇ ವರ್ತಂತೇ ತಾ ಹೇ ದೇವೀರ್ದೇವ್ಯೋ ಹೇ ಸುಹವಾಃ ಶೋಭನಾಹ್ವಾನಾ ಯೂಯಂ ನೋಽಸ್ಮಭ್ಯಂ ಶರ್ಮ ಯಚ್ಛತ ॥**

॥ ಪ್ರತಿಪದಾರ್ಥ ॥

**ದೇವಾನಾಂ**—ಇಂದ್ರಾದಿ ದೇವತೆಗಳ । **ಪತ್ನೀಃ**—ಪತ್ನಿಯರು । **ಉಶತೀಃ**—ನಮ್ಮ ಸ್ತುತಿಗಳನ್ನು ಇಚ್ಛಿಸಿದವರಾಗಿ । **ನಃ**—ನಮ್ಮನ್ನು । **ಅವಂತು**—ರಕ್ಷಿಸಲಿ । **ನಃ**—ನಮಗೆ । **ತುಜಯೇ**—ಶಕ್ತಿಯುತವಾದ ಪುತ್ರಲಾಭಕ್ಕಾಗಿಯೂ । **ವಾಜಸಾತಯೇ**—ಅನ್ನಲಾಭಕ್ಕಾಗಿಯೂ । **ಪ್ರಾವಂತು**—ನಮ್ಮನ್ನು ಪೂರ್ಣವಾಗಿ ರಕ್ಷಿಸಲಿ । **ಯಾಃ**—ಯಾರು । **ಪಾರ್ಥಿವಾಸಃ**—ಪೃಥಿವೀಸ್ಥರಾಗಿದ್ದೀರೋ ಅವರೂ । **ಯಾಃ**-ಯಾರು । **ಅಪಾಂ- ವ್ರತೇ**—ಉದಕರಕ್ಷಕವಾದ ಅಂತರಿಕ್ಷಸ್ಥರಾಗಿದ್ದೀರೋ । **ತಾಃ ಅಪಿ**—ಅಂತಹವರೂ ಆದ । **ದೇವೀಃ**—ಎಲೈ ದೇವಪತ್ನಿಯರೇ । **ಸುಹವಾಃ**—ನಮ್ಮಿಂದ ಅತಿಶಯವಾಗಿ ಪ್ರಾರ್ಥಿಸಲ್ಪಟ್ಟು । **ನಃ**—ನಮಗೆ । **ಶರ್ಮ**—ಸುಖ ವನ್ನು । **ಯಚ್ಛತ**—ಕೊಡಿರಿ

॥ ಭಾವಾರ್ಥ ॥

ಇಂದ್ರಾದಿ ದೇವತೆಗಳ ಪತ್ನಿಯರು ನಮ್ಮ ಸ್ತುತಿಗಳನ್ನು ಇಚ್ಛಿಸಿದವರಾಗಿ ನಮ್ಮನ್ನು ರಕ್ಷಿಸಲಿ. ನಮಗೆ ಶಕ್ತಿಯುತವಾದ ಪುತ್ರಲಾಭಕ್ಕಾಗಿಯೂ ಅನ್ನ ಲಾಭಕ್ಕಾಗಿಯೂ ನಮ್ಮನ್ನು ಪೂರ್ಣವಾಗಿ ರಕ್ಷಿಸಲಿ. ಯಾರು ಪೃಥಿವೀಸ್ಥರೋ, ಯಾರು ಉದಕರಕ್ಷಕವಾದ ಅಂತರಿಕ್ಷಸ್ಥರೋ ಅಂತಹವರೂ ಆದ ಎಲೈ ದೇವಪತ್ನಿಯರೇ, ನಮ್ಮಿಂದ ನೀವು ಅತಿಶಯವಾಗಿ ಪ್ರಾರ್ಥಿಸಲ್ಪಟ್ಟು ನಮಗೆ ಸುಖವನ್ನು ಕೊಡಿರಿ.

English Translation

May the wives of the gods, desiring (our homage), defend us may they so protect us that (we may obtain) vigorous (offspring) and abundant food · whether terrestrial, or those in charge of the waters (in the firmament), do you, goddesses, earnestly invoked, bestow upon us felicity

॥ ವಿಶೇಷವಿಷಯಗಳು ॥

ಪತ್ನೀಸಂಯಾಜಹೋಮಗಳಲ್ಲಿ ದೇವಪತ್ನಿಯರನ್ನು ಉದ್ದೇಶಿಸಿ ಮಾಡುವ ಹೋಮಗಳಲ್ಲಿ **ದೇವಾನಾಂ- ಪತ್ನೀಃ** ಎಂಬ ಈ ಋಕ್ಕನ್ನೂ **ಉತ ಗ್ನಾ ವ್ಯಂತು** ಎಂಬ ಮುಂದಿನ ಋಕ್ಕನ್ನೂ ಕ್ರಮವಾಗಿ ಯಾಜ್ಯಾ ಮತ್ತು ಅನು ವಾಕ್ಯಾಮಂತ್ರಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ದೇವಾನಾಂ ಪತ್ನೀರುಶತೀರವಂತು ನ ಇತಿ ದ್ವೇ** ಎಂಬ ಸೂತ್ರದಿಂದ (ಆ. ೧-೧೦) ವಿವೃತವಾಗಿರುವುದು. ಮತ್ತು ಅಗ್ನಿಮಾರುತಶಸ್ತ್ರಮಂತ್ರಗಳಿಗಾಗಿಯೂ ಈ ಎರಡು ಋಕ್ಕುಗಳ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ದೇವಾನಾಂ ಪತ್ನೀರುಶತೀ ರ- ವಂತು ನ ಇತಿ ದ್ವೇ ರಾಕಾಮಹಮಿತಿ ದ್ವೇ** ಎಂಬ ಸೂತ್ರದಿಂದ (ಆ ೫-೨೦) ವಿವೃತವಾಗಿರುವುದು.

**ದೇವಾನಾಂ ಪತ್ನೀಃ**—ಇಲ್ಲಿ **ಪತ್ನ್ಯಃ** ಎಂದಿರಬೇಕಾಗಿದ್ದರೂ ವಿಭಕ್ತಿವ್ಯತ್ಯಯದಿಂದ ಪತ್ನೀಃ ಎಂದಿದೆ. ಈ ರೀತಿ ವಿಭಕ್ತಿವಚನಗಳ ವ್ಯತ್ಯಯವು ಛಾಂದಸವೆಂದು ಎಂದರೆ ಛಂದಸ್ಸಿನಲ್ಲಿ (ಋಕ್ಕುಗಳಲ್ಲಿ) ವಿಕಲ್ಪವಾಗಿ ಪ್ರಯೋಗಿಸಲ್ಪಡುವುದೆಂದು ಭಾಷ್ಯಕಾರರು ಹೇಳಿರುವರು. ಯಾಸ್ಕರು ದೇವಪತ್ನ್ಯಃ ಎಂಬ ಶಬ್ದಕ್ಕೆ **ದೇವಪತ್ನ್ಯೋ ದೇವಾನಾಂ ಪತ್ನ್ಯಃ** ದೇವತೆಗಳ ಪತ್ನಿಯರು ಎಂದು ನಿರ್ವಚನವನ್ನು ಹೇಳಿದಾರೆ (ನಿ ೧೨-೪೪) ಮತ್ತು ಈ ಶಬ್ದದ ಅರ್ಥವನ್ನು ವಿವರಿಸುವುದಕ್ಕಾಗಿ ಈ ಋಕ್ಕನ್ನೇ ಉದಾಹರಣೆಯಾಗಿ ತೆಗೆದುಕೊಂಡು ಈ ಋಕ್ಕಿಗೆ ನಿರ್ವಚನವನ್ನು ಹೇಳಿದ್ದಾರೆ—

> **ದೇವಾನಾಂ ಪತ್ನ್ಯ ಉಶತ್ಯೋಽವಂತು ನಃ ಪ್ರಾವಂತು ನಸ್ತುಜಯೇಽಪತ್ಯಜನನಾಯ ಚಾನ್ನಸಂಶನನಾಯ ಚ ಯಾಃ ಪಾರ್ಥಿವಾಸೋ ಯಾ ಅಪಾಮಪಿ ಕರ್ಮಣಿ ವ್ರತೇ ತಾ ನೋ ದೇವ್ಯಃ ಸುಹವಾಃ ಶರ್ಮ ಯಚ್ಛಂತು ಶರಣಂ ॥**
>
> (ನಿ. ೧೨-೪೫)

ದೇವತೆಗಳ ಪತ್ನಿಯರು ತಮ್ಮ ಇಚ್ಛೆಯಿಂದಲೇ ನಮ್ಮನ್ನು ರಕ್ಷಿಸಲಿ ಮತ್ತು ನಮ್ಮ ವಿಷಯದಲ್ಲಿ ಪ್ರೀತಿಯನ್ನೂ ಸ್ನೇಹವನ್ನೂ ತೋರಿಸಲಿ· ನಾವು ಪುತ್ರಸಂತತಿಯನ್ನೂ ಮತ್ತು ಅನ್ನಾದ್ಯಾಹಾಗಳನ್ನೂ ಪಡೆಯುವಂತೆ ಅನುಗ್ರಹಿಸಲಿ. ಭೂಮಿಯಲ್ಲಿ ಇರುವ ದೇವಪತ್ನಿಯರೂ ಮತ್ತು ಉದಕಗಳ ಕರ್ಮಪ್ರಧಾನವಾದ ( ವೃಷ್ಟಿ ಪ್ರಧಾನವಾದ ) ಅಂತರಿಕ್ಷದಲ್ಲಿರುವ ದೇವಪತ್ನಿಯರೂ ಶೋಭನಕರವಾದ ನಮ್ಮ ಆಹ್ವಾನವನ್ನು ಮನ್ನಿಸಿ ನಮಗೆ ಗೃಹವನ್ನೂ ರಕ್ಷಣೆಯನ್ನೂ ಒದಗಿಸಲಿ

॥ ಸಂಹಿತಾಪಾಠಃ ॥

ಉತ ಗ್ನಾ ವ್ಯಂತು ದೇವಪತ್ನೀರಿಂದ್ರಾಣ್ಯಗ್ನಾಯ್ಯಶ್ವಿನೀ ರಾಟ್ ।
ಆ ರೋದಸೀ ವರುಣಾನೀ ಶೃಣೋತು ವ್ಯಂತು ದೇವೀರ್ಯ ಋತುರ್ಜನೀನಾಂ ॥ ೮ ॥

॥ ಪದಪಾಠಃ ॥

ಉತ । ಗ್ನಾಃ । ವ್ಯಂತು । ದೇವಃಪತ್ನೀಃ । ಇಂದ್ರಾಣೀ । ಅಗ್ನಾಯೀ । ಅಶ್ವಿನೀ । ರಾಟ್ ।
ಆ । ರೋದಸೀ ಇತಿ । ವರುಣಾನೀ । ಶೃಣೋತು । ವ್ಯಂತು । ದೇವೀಃ । ಯಃ । ಋತುಃ । ಜನೀನಾಂ ॥

॥ ಸಾಯಣಭಾಷ್ಯಂ ॥

**ಉತಾಪಿ ಚ ಗ್ನಾಃ ಸ್ತ್ರಿಯೋ ದೇವಪತ್ನೀರ್ದೇವಪತ್ನ್ಯೋ ದೇವಾಃ ಪತಯೋ ಯಾಸಾಂ ತಾಃ । ತಾದೃಶ್ಯೋ ವ್ಯಂತು । ಹವಿರ್ಭಕ್ಷಯಂತು । ತಾ ವಿವಿಚ್ಯೋಚ್ಯಂತೇ । ಇಂದ್ರಾಣೀಂದ್ರಸ್ಯ ಪತ್ನ್ಯಗ್ನಾಯ್ಯಗ್ನೇಃ ಪತ್ನ್ಯಶ್ವಿನ್ಯಶ್ವಿನೋಃ ಪತ್ನೀ ರಾಟ್ ರಾಜಮಾನಾ । ಕಿಂಚ ರೋದಸೀ । ರುದ್ರಸ್ಯ ಪತ್ನೀತಿ**

ಯಾಸ್ಕೇನೋಕ್ತಂ । ಏವಂ ಸತಿ ನಿಷ್ಪಿತಸ್ತುಕಾ ರೋದಸೀ । ಋಗ್ವೇ. ೧. ೧೬೭. ೫. । ಇತ್ಯತ್ರ ಯಥಾ-ದ್ಯುದಾತ್ತಪ್ರಗೃಹ್ಯತೇ ನ ಸ್ತಸ್ತದ್ವದತ್ರಾಪಿ ಭಾವ್ಯಂ । ತಥಾಪಿ ಶಾಕಲ್ಯೇನ ಮಹರ್ಷಿಣೈವಮುಕ್ತತ್ವಾತ್ತ-ಥೈವ ದ್ರಷ್ಟವ್ಯಂ । ವರುಣಾನೀ ವರುಣಸ್ಯ ಪತ್ನ್ಯಃ ಸರ್ವತಃ ಪ್ರತ್ಯೇಕಂ ಶೃಣೋತು । ಕಿಂಚ ದೇವೀಃ ಪತ್ನೀಃಸಂಯಾಜದೇವ್ಯೋ ವ್ಯಂತು । ಖಾದಂತು ಹವಿಃ । ಯೋ ಜನೀನಾಂ ದೇವಜಾಯಾನಾಮೃತುಃ ಕಾಲಸ್ತದಭಿಮಾನೀ ದೇವೋಽಪಿ ಶೃಣೋತು ವೇತು ಚ । ಅತ್ರಾಪಿ ಚ ಗ್ನಾ ವ್ಯಂತು ದೇವಪತ್ನ್ಯಃ । ನಿ. ೧೨ ೪೬. । ಇತ್ಯಾದಿ ನಿರುಕ್ತಂ ದ್ರಷ್ಟವ್ಯಂ ॥

॥ ಪ್ರತಿಪದಾರ್ಥ ॥

**ಉತ**—ಮತ್ತು । **ದೇವಪತ್ನೀಃ**—ದೇವತೆಗಳೇ ಪತಿಗಳಾಗಿ ಉಳ್ಳ । **ಗ್ನಾಃ**—ಸ್ತ್ರೀದೇವತೆಗಳು । **ವ್ಯಂತು**—ಹವಿಸ್ಸನ್ನು ಭಕ್ಷಿಸಲಿ । **ಇಂದ್ರಾಣೀ**— ಇಂದ್ರಪತ್ನಿಯೂ । **ಅಗ್ನಾಯೀ**—ಅಗ್ನಿಪತ್ನಿಯೂ । **ಅಶ್ವಿನೀ**—ಅಶ್ವಿನೀದೇವತೆಗಳ ಪತ್ನಿಯೂ । **ರಾಟ್**—ಪ್ರಕಾಶಮಾನಳಾದ । **ರೋದಸೀ**—ರುದ್ರಪತ್ನಿಯೂ । **ವರುಣಾನಿ**—ವರುಣಪತ್ನಿಯೂ । **ಆ**—ಸುತ್ತಲೂ ಸೇರಿ । **ಶೃಣೋತು**—ನಮ್ಮ ಪ್ರಾರ್ಥನೆಯನ್ನು ಕೇಳಲಿ । **ದೇವೀಃ**—ದೇವತಾತ್ಮರಾದ ಅವರು । **ವ್ಯಂತು**—ಹವಿಸ್ಸನ್ನು ಸ್ವೀಕರಿಸಲಿ (ಪಾನಮಾಡಲಿ) । **ಯಃ**—ಯಾರು । **ಜನೀನಾಂ**—ದೇವಪತ್ನಿಯರಿಗೆ । **ಋತುಃ**—ಕಾಲನಿಯಾಮಕನಾದ ದೇವನೋ (ಅವನೂ ಸಹ ನಮ್ಮ ಸ್ತುತಿಯನ್ನು ಕೇಳಿ ಹವಿಸ್ಸನ್ನು ಸ್ವೀಕರಿಸಲಿ)

॥ ಭಾವಾರ್ಥ ॥

ದೇವತೆಗಳ ಪತ್ನಿಯಾದ ಸ್ತ್ರೀ ದೇವತೆಗಳು ನಮ್ಮ ಹವಿಸ್ಸನ್ನು ಭಕ್ಷಿಸಲಿ ಇಂದ್ರಪತ್ನಿಯೂ ಅಗ್ನಿಪತ್ನಿಯೂ ಅಶ್ವಿನೀ ದೇವತೆಗಳ ಪತ್ನಿಯೂ ಪ್ರಕಾಶಮಾನಳಾದ ರುದ್ರಪತ್ನಿಯೂ, ವರುಣಪತ್ನಿಯೂ ಸೇರಿ ನಮ್ಮ ಪ್ರಾರ್ಥನೆಯನ್ನು ಕೇಳಲಿ. ದೇವತಾತ್ಮರಾದ ಅವರು ನಮ್ಮ ಹವಿಸ್ಸನ್ನು ಸ್ವೀಕರಿಸಲಿ. ಯಾರು ದೇವಪತ್ನಿಯರಿಗೆ ಕಾಲನಿಯಾಮಕನಾದ ದೇವನೋ ಅವನೂ ಸಹ ನಮ್ಮ ಸ್ತುತಿಯನ್ನು ಕೇಳಿ ಹವಿಸ್ಸನ್ನು ಸ್ವೀಕರಿಸಲಿ

## English Translation

Or may the goddessse, the wives of the gods, accept (the offering): Indrani, Agnayi, the radiant Aswini, Rodasi, Varunani, may each hear (our prayer): may the goddesses partake (of the oblation) may the (personified) season of the wives of the gods, accept it.

॥ ವಿಶೇಷವಿಷಯಗಳು ॥

ಈ ಋಕ್ಕಿಗೂ ಯಾಸ್ಕರು ನಿರ್ವಚನವನ್ನು ಹೇಳಿದಾರೆ. ಮತ್ತು ಕೆಲವು ದೇವಪತ್ನಿಯರ ಹಸರುಗಳನ್ನೂ ಸಹ ಇಲ್ಲಿ ಹೇಳಿದಾರೆ. ಹೆಸರುಗಳೆಂದರೆ, ದೇವಪತ್ನಿಯರಿಗೆ ಪ್ರತ್ಯೇಕವಾದ ಹೆಸರುಗಳಿಲ್ಲ ಎಂದರೆ ಋಗ್ವೇದದಲ್ಲಿ ಇಂದ್ರಪತ್ನಿ ಮೊದಲಾದವರಿಗೆ ಪುರಾಣಾದಿಗಳಲ್ಲಿ ಹೇಳಿರುವಂತೆ ಶಚೀ ಮೊದಲಾದ ಹೆಸರುಗಳಿಲ್ಲ. ಆಯಾ ದೇವತೆಯ ಪತ್ನಿಯೆಂದು ನಿರ್ದಿಷ್ಟವಾದ ಶಬ್ದಗಳನ್ನೇ ಆಯಾ ದೇವತೆಗಳ ಪತ್ನಿಯರಿಗೆ ನಿರ್ದೇಶಿಸಿದೆ. ಹೇಗೆಂದರೆ, ಇಂದ್ರನ ಪತ್ನಿಗೆ ಇಂದ್ರಾಣೀ

ಎಂದೂ ಅಗ್ನಿಯ ಪತ್ನಿಗೆ ಅಗ್ನಾಯೀ ಎಂದೂ, ವರುಣನ ಪತ್ನಿಗೆ ವರುಣಾನೀ ಎಂದೂ ಇತ್ಯಾದಿ ನಾಮಗಳಿವೆ. ಅದನ್ನೇ ಯಾಸ್ಕರು ತಮ್ಮ ನಿರುಕ್ತದಲ್ಲಿ ವಿವರಿಸಿದಾರೆ—

**ಅಪಿ ಚ ಗ್ನಾ ವ್ಯಂತು ದೇವಪತ್ನ್ಯಃ। ಇಂದ್ರಾಣೀಂದ್ರಸ್ಯ ಪತ್ನ್ಯಗ್ನಾಯ್ಯಗ್ನೇಃ ಪತ್ನ್ಯಶ್ವಿನ್ಯ ಶ್ವಿನೋಃ ಪತ್ನೀ ರಾಟ್ ರಾಜತೇ। ರೋದಸೀಃ ರುದ್ರಸ್ಯ ಪತ್ನೀ। ವರುಣಾನೀ ಚ ವರುಣಸ್ಯ ಪತ್ನೀ। ವ್ಯಂತು ದೇವ್ಯಃ ಕಾಮಯಂತಾಂ ಯ ಋತುಃ ಕಾಲೋ ಜಾಯಾನಾಂ ಯ ಋತುಃ ಕಾಲೋ ಜಾಯಾನಾಂ॥** (ನಿ. ೧೨.೪೬)

ಮತ್ತು ದೇವಪತ್ನಿಯರಾದ ದೇವತಾಸ್ತ್ರೀಯರು ಹವೀರೂಪವಾದ ಆಜ್ಯವನ್ನು ಸ್ವೀಕರಿಸಿ ಪಾನಮಾಡಲಿ, ಅವರುಗಳಾರೆಂದರೆ—ಇಂದ್ರನ ಪತ್ನಿಗೆ ಇಂದ್ರಾಣಿಯೆಂದು ಹೆಸರು, ಅಗ್ನಿಯಪತ್ನಿಗೆ ಅಗ್ನಾಯೀ ಎಂದು ಹೆಸರು ಅಶ್ವಿನೀ ದೇವತೆಗಳ ಪತ್ನಿಗೆ ಅಶ್ವಿನೀ ಎಂದು ಹೆಸರು. ರಾಟ್ ಎಂದರೆ ಪ್ರಕಾಶಿಸುವ ದೇವಸ್ತ್ರೀ ಎಂದರ್ಥವು. ರುದ್ರನ ಪತ್ನಿಗೆ ರೋದಸೀ (ಪ್ರಥಮೈಕವಚನ) ಎಂದು ಹೆಸರು. ವರುಣನ ಪತ್ನಿಗೆ ವರುಣಾನೀ ಎಂದು ಹೆಸರು. ಋತುಃ ಎಂದರ ಕಾಲವು ಋತುರ್ಜನೀನಾಂ ಎಂದರೆ ಈ ದೇವಪತ್ನಿಯರು ಹವಿಸ್ಸನ್ನು ಸ್ವೀಕರಿಸುವ ಕಾಲವೆಂದರ್ಥವು. ಆದುದರಿಂದ ಮೇಲೆ ಹೇಳಿದ ದೇವತಾಸ್ತ್ರೀಯರಾದ ದೇವಪತ್ನಿಯರೆಲ್ಲರೂ ತಾವು ಹವಿಸ್ಸನ್ನು ಸ್ವೀಕರಿಸಬೇಕಾದ ನಿರ್ದಿಷ್ಟಕಾಲದಲ್ಲಿ ತಮ್ಮ ಹವಿಸ್ಸನ್ನು ಅಪೇಕ್ಷಿಸಿ ಅದನ್ನು ಸ್ವೀಕರಿಸಿ ತೃಪ್ತರಾಗಲಿ ಎಂದು ನಿರ್ವಚನದ ಮುಖ್ಯಾಭಿಪ್ರಾಯವು

**ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।**
**ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥**

**ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕಶ್ರೀವೀರಬುಕ್ಕಭೂಪಾಲಸಾಮ್ರಾಜ್ಯ-ಧುರಂಧರೇಣ ಸಾಯಣಾಮಾತ್ಯೇನ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶೇ ಋಕ್ಸಂಹಿತಾಭಾಷ್ಯೇ ಚತುರ್ಥಾಷ್ಟಕೇ ದ್ವಿತೀಯೋಽಧ್ಯಾಯಃ ಸಮಾಪ್ತಃ**

ಶ್ರೀಃ

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ಚತುರ್ಥಾಷ್ಟಕದಲ್ಲಿ
ಎರಡನೆಯ ಅಧ್ಯಾಯವು ಸಮಾಪ್ತವಾದುದು

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ॥

॥ ಶುಭಂ ಭೂಯಾತ್ ॥

॥ ಮಂಗಳಂ ॥

॥ ಶ್ರೀ ॥

॥ ಶ್ರೀ ಮಹಾಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

## ಸಾಯಣಭಾಷ್ಯಸಹಿತಾ

# ಋಗ್ವೇದಸಂಹಿತಾ

## ॥ ಚತುರ್ಥಾಷ್ಟಕೇ ತೃತೀಯೋಽಧ್ಯಾಯಃ ॥

### ॥ ನಾಲ್ಕನೆಯ ಅಷ್ಟಕದಲ್ಲಿ ಮೂರನೆಯ ಅಧ್ಯಾಯವು ॥

### ಐದನೆಯ ಮಂಡಲದಲ್ಲಿ ನಲವತ್ತೇಳನೆಯ ಸೂಕ್ತವು.

---

## ಪೀಠಿಕೆ.

ಈ ಅಧ್ಯಾಯದಲ್ಲಿ ಮೊದಲಿನ ಐದು ಸೂಕ್ತಗಳಿಗೆ (ಎಂದರೆ ಈ ಮಂಡಲದ ೪೭-೫೧ ಸೂಕ್ತಗಳು) ವಿಶ್ವೇದೇವತೆಗಳು ದೇವತೆಯು. ವಿಶ್ವೇದೇವತೆಗಳ ವಿಷಯವನ್ನು ನಾವು ಹಿಂದಿನ ಅಧ್ಯಾಯದಲ್ಲಿ ಎಂದರೆ ಈ ಭಾಗದ 336-352 ನೇ ಪುಟಗಳಲ್ಲಿ ಸೂಕ್ಷ್ಮವಾಗಿ ವಿವರಿಸಿದೇವೆ. ೫೨ ನೆಯ ಸೂಕ್ತದಿಂದ ೬೧ ನೇ ಸೂಕ್ತಗಳಿಗೆ (ಒಟ್ಟು ೧೦ ಸೂಕ್ತಗಳಿಗೆ) ಮರುತ್ತಗಳು ದೇವತೆಯು. ಈ ಅಧ್ಯಾಯದ ಕೊನೆಯ ಸೂಕ್ತವಾದ ೬೨ ನೆಯ ಸೂಕ್ತಕ್ಕೆ ಮಿತ್ರಾವರುಣರು ದೇವತೆಯು. ಈ ಅಧ್ಯಾಯದಲ್ಲಿ ಕಂಡುಬರುವ ಪ್ರತಿರಥ, ಪ್ರತಿಭಾನು, ಪ್ರತಿಪ್ರಭ, ಸ್ವಸ್ತಿ, ಶ್ಯಾವಾಶ್ವ, ಶ್ರುತವಿತ್, ಎಂಬ ಋಷಿಗಳ ವಿಷಯದಲ್ಲಿ ಹೆಚ್ಚು ಸಂಗತಿಗಳು ತಿಳಿದಿಲ್ಲವಾದ್ದರಿಂದ ಆ ವಿಷಯವಾದ ವಿವರಣೆಗೆ ಅವಕಾಶವಿಲ್ಲ. ಆದರೆ ಶ್ಯಾವಾಶ್ವನೆಂಬ ಋಷಿಯ ವಿಷಯವಾಗಿ ನಾವು ಹಿಂದೆಯೇ ಕೆಲವು ವಿಷಯಗಳನ್ನು ವಿವರಿಸಿದೇವೆ.

# ನಲವತ್ತೇಳನೆಯ ಸೂಕ್ತವು.

---

॥ ಸಾಯಣಭಾಷ್ಯಂ ॥

**ಅಥ ತೃತೀಯೋಽಧ್ಯಾಯ ಆರಭ್ಯತೇ । ತತ್ರ ಪ್ರಯುಂಜತೀತಿ ಸಪ್ತರ್ಚಂ ತೃತೀಯಂ ಸೂಕ್ತಂ ಪ್ರತಿರಥಸ್ಯಾರ್ಷಂ ತ್ರೈಷ್ಟುಭಂ । ಪೂರ್ವತ್ರ ವೈಶ್ವದೇವಂ ವೈ ತದಿತ್ಯುಕ್ತತ್ವಾದಿದಮಪಿ ವೈಶ್ವದೇವಂ । ಪ್ರಯುಂಜತೀ ಸಪ್ತ ಪ್ರತಿರಥ ಇತ್ಯನುಕ್ರಮಣಿಕಾ ವಿನಿಯೋಗೋ ಲೈಂಗಿಕಃ ॥**

ಅನುವಾದವು—ಈಗ ನಾಲ್ಕನೆಯ ಅಷ್ಟಕದಲ್ಲಿ ಎರಡನೆಯ ಅಧ್ಯಾಯವು ಸಮಾಪ್ತಿಯಾಗಿರುವುದರಿಂದ ಇನ್ನು ಮುಂದೆ ಮೂರನೆಯ ಅಧ್ಯಾಯದ ಅರ್ಥಾನುವಾದವಿವರಣೆಗಳನ್ನು ಪ್ರಾರಂಭಿಸಲಾಗುವುದು. ಈ ಅಧ್ಯಾಯದ ಪ್ರಥಮಸೂಕ್ತವಾದ **ಪ್ರಯುಂಜತೀ** ಎಂಬ ಸೂಕ್ತವು ಐದನೆಯ ಮಂಡಲದ ನಾಲ್ಕನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು ಈ ಸೂಕ್ತಕ್ಕೆ ಪ್ರತಿರಥ ಆತ್ರೇಯ ಎಂಬುವನು ಋಷಿಯು; ವಿಶ್ವೇದೇವತೆಗಳು ದೇವತೆಯು; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ **ಪ್ರಯುಂಜತೀ ಸಪ್ತ ಪ್ರತಿರಥಃ** ಎಂದು ಹೇಳಿರುವುದು ವಿನಿಯೋಗವು ಲೈಂಗಿಕವು.

---

## ಸೂಕ್ತ—೪೭

ಮಂಡಲ—೫ ॥ ಅನುವಾಕ—೪ ॥ ಸೂಕ್ತ—೪೭ ॥
ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ—೧ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
ಋಷಿಃ—ಪ್ರತಿರಥ ಆತ್ರೇಯಃ ॥
ದೇವತಾ—ವಿಶ್ವೇದೇವಾಃ ॥
ಛಂದಃ—ತ್ರಿಷ್ಟುಪ್ ॥

॥ ಸಹಿಂತಾಪಾಠಃ ॥

ಪ್ರಯುಂಜತೀ ದಿವ ಏತಿ ಬ್ರುವಾಣಾ ಮಹೀ ಮಾತಾ ದುಹಿತುರ್ಬೋಧಯಂತೀ ।
ಆವಿವಾಸಂತೀ ಯುವತಿರ್ಮನೀಷಾ ಪಿತೃಭ್ಯ ಆ ಸದನೇ ಜೋಹುವಾನಾ ॥

॥ ಪದಪಾಠಃ ॥

ಪ್ರ॒ಽಯು॒ಞ್ಜ॒ತೀ । ದಿ॒ವಃ । ಏ॒ತಿ॒ । ಬ್ರು॒ವಾ॒ಣಾ । ಮ॒ಹೀ । ಮಾ॒ತಾ । ದು॒ಹಿ॒ತುಃ । ಬೋ॒ಧಯ॑ನ್ತೀ ।

ಆ॒ಽವಿ॒ವಾಸ॑ನ್ತೀ । ಯು॒ವ॒ತಿಃ । ಮ॒ನೀ॒ಷಾ । ಪಿ॒ತೃಽಭ್ಯಃ॑ । ಆ । ಸದ॑ನೇ । ಜೋಹು॑ವಾನಾ ॥ ೧ ॥

॥ ಸಾಯಣಭಾಷ್ಯಂ ॥

ಏಷೋಷಸ್ಯಾ । ಪ್ರಯುಂಜತೀ ಪ್ರಾಣಿನಃ ಪ್ರಸ್ತುತೇಷು ಕರ್ಮಸು ದಿವೋ ದ್ಯುಲೋಕಾದೇತಿ । ಆಗಚ್ಛತಿ ಬ್ರುವಾಣಾ ಸ್ತೂಯಮಾನಾ ॥ ಕರ್ಮಣಿ ಕರ್ತೃಪ್ರತ್ಯಯಃ ॥ ಮಹೀ ಮಹತೀ ಮಾತಾ ಪ್ರಕಾಶಸ್ಯ ದೇವಾನಾಂ ವಾ ನಿರ್ಮಾತ್ರೀ ದುಹಿತುರ್ಭೂಮ್ಯಾ ಬೋಧಯಂತೀ ಬೋಧಂ ಕುರ್ವಾಣಾ । ತದುಪಜೀವ್ಯತ್ವಾತ್ ದುಹಿತೃತ್ವಮುಪಚರ್ಯತೇ । ಯದ್ವಾ ದುಹಿತುರ್ದಿವ ಇತಿ ಸಂಬಂಧಃ ॥ ಉಷಸೋ ದಿವೋ ದುಹಿತೃತ್ವಂ ವ್ಯುಚ್ಛಾ ದುಹಿತರ್ದಿವಃ । ಋಗ್ವೇ. ೧-೪೮-೧ । ಇತ್ಯಾದಿಷು ಪ್ರಸಿದ್ಧಂ । ಅನ್ಯತ್ರ ಚ ದಿವೋ ದುಹಿತಾ ಭುವನಸ್ಯ ಪತ್ನೀ । ಋಗ್ವೇ. ೭-೭೫-೪ । ಇತ್ಯುಷಸೋ ದ್ಯುದುಹಿತೃತ್ವಮಾಮ್ನಾತಂ ಅತ ಇದಮಧಿಗಮ್ಯತೇ । ಕದಾಚಿದ್ದ್ಯೌರುಷಸೋ ಜಾಯತ ಉಷಾಶ್ಚ ದಿವ ಇತಿ । ಪ್ರಜಾಪತಿರ್ವೈ ಸ್ವಾಂ ದುಹಿತರಮಭ್ಯಧ್ಯಾಯದ್ದಿವಮಿತ್ಯನ್ಯ ಆಹುರುಷಸಮಿತ್ಯನ್ಯೇ । ಐ ಬ್ರಾ. ೩-೩೩ । ಇತಿ ಹಿ ಶ್ರೂಯತೇ । ಲಿಂಗಂ ಚ ದೃಶ್ಯತೇ ಕಾರ್ಯಕಾರಣಭಾವವ್ಯತ್ಯಯೇಽದಿತೇರ್ದಕ್ಷೋ ಅಜಾಯತ ದಕ್ಷಾದ್ವದಿತಿಃ । ಋಗ್ವೇ. ೧೦-೭೨-೪ । ಇತಿ ॥ ಕಿಂಚ ಆವಿವಾಸಂತೀ ಪರಿಚರಂತೀ ಯುವತಿರ್ಮಿಶ್ರಯಂತೀ ಸರ್ವತ್ರ ನಿತ್ಯತರುಣೀ ವಾ ಮನೀಷಾ ಸ್ತುತಿಮತೀ ಪಿತೃಭ್ಯಃ ॥ ತೃತೀಯಾರ್ಥೇ ಪಂಚಮೀ ॥ ಪಿತೃಭಿಃ ಪಾಲಕೈರ್ದೇವೈಃ ಸಹ ಸದನೇ ಯಾಗಗೃಹ ಆ ಸರ್ವತೋ ಜೋಹುವಾನಾಹೂಯಮಾನಾ । ಯದ್ವಾ ಪಿತೃಭ್ಯಃ ಕರ್ಮಣಾಂ ಪಾಲಕೇಭ್ಯೋ ಜನಮಾನೇಭ್ಯ ಇಷ್ಟಪ್ರಾಪಣೇನ ಪಾಲಕೇಭ್ಯೋ ವಾ ತೇಷಾಮರ್ಥಾಯ ಜೋಹುವಾನಾ ॥

॥ ಪ್ರತಿಪದಾರ್ಥ ॥

ಮಹೀ—ಮಹತ್ಸ್ವರೂಪವುಳ್ಳವಳೂ । ಮಾತಾ—ಜಗನ್ಮಾತೆಯೂ ಆದ ಉಷಸ್ಸು । ದುಹಿತುಃ—ತನ್ನ ಪುತ್ರಿಯಾದ ಪೃಥ್ವಿಗೆ । ಬೋಧಯಂತೀ—ಎಚ್ಚರವನ್ನು ಕೊಡುತ್ತಲೂ । ಪ್ರಯುಂಜತೀ—ಎಲ್ಲಾ ಪ್ರಾಣಿಗಳನ್ನೂ ಆಯಾ ಕರ್ಮಗಳಿಗೆ ನಿಯೋಜಿಸುತ್ತಲೂ । ಬ್ರುವಾಣಾ—ಸ್ತುತಿಸಲ್ಪಟ್ಟವಳಾಗಿ । ದಿವಃ—ದ್ಯುಲೋಕದಿಂದ । ಏತಿ—ಬರುತ್ತಾಳೆ । ಯುವತಿಃ—ನಿತ್ಯ ತರುಣಿಯೂ । ಮನೀಷಾ—ಸ್ತುತಿಯುತಳೂ ಆದ ಉಷಸ್ಸು । ಆವಿವಾಸಂತೀ—(ಜಗತ್ತನ್ನು) ಸೇವಿಸುತ್ತಾ । ಪಿತೃಭ್ಯಃ—ಸಕಲ ಪಿತೃಗಳೊಡನೆ । ಸದನೇ—ಯಾಗಗೃಹದಲ್ಲಿ । ಆ—ಸರ್ವತ್ರ । ಜೋಹುವಾನಾ—ಪ್ರಾರ್ಥಿತಳಾಗಿ (ಬರುತ್ತಾಳೆ)

॥ ಭಾವಾರ್ಥ ॥

ಮಹತ್ಸ್ವರೂಪವುಳ್ಳವಳೂ, ಜಗನ್ಮಾತೆಯೂ ಆದ ಉಷಸ್ಸು ತನ್ನ ದುಹಿತೆಯಾದ ಪೃಥ್ವಿಗೆ ಎಚ್ಚರವನ್ನು ಕೊಡುತ್ತಲೂ, ಎಲ್ಲಾ ಪ್ರಾಣಿಗಳನ್ನೂ ಆಯಾ ಕರ್ಮಗಳಿಗೆ ನಿಯೋಜಿಸುತ್ತಲೂ, ಲೋಕದಿಂದ ಸ್ತುತಿಸಲ್ಪಟ್ಟವಳಾಗಿ

ದ್ಯುಲೋಕದಿಂದ ಆವಿರ್ಭವಿಸುತ್ತಾಳೆ. ನಿತ್ಯ ತರುಣಿಯೂ ಸ್ತುತಿಯುತಳೂ ಆದ ಉಷಸ್ಸು ಜಗತ್ತನ್ನು ಸೇವಿಸುತ್ತಾ ಸಕಲಪಿತೃಗಳೊಡನೆ ಯಾಗಗೃಹದಲ್ಲಿ ಸರ್ವತ್ರ ಪ್ರಾರ್ಥಿತಳಾಗಿ ಬರುತ್ತಾಳೆ.

## English Translation

Arousing (men to their labours), the adorable (Dawn) comes from the heaven, a mighty mother, the awakener of her daughter (earth): pious, ever young, and glorified (she comes), when invoked, to the chamber of sacrifice with the protecting (gods).

॥ ವಿಶೇಷವಿಷಯಗಳು ॥

**ಮಾತಾ ದುಹಿತುಃ** —ಮಾತೆಯಾದ ಉಷೋದೇವತೆಯು ತನ್ನ ದುಹಿತೃವಾದ (ಪುತ್ರಿಯಾದ) ಪೃಥ್ವಿಗೆ ಎಂಬ ವಿವರಣೆಯು ಈ ಋಕ್ಕಿನಲ್ಲಿದೆ. ಆದರೆ ಸ್ವಾಭಾವಿಕವಾಗಿ ದ್ಯಾವಾಪೃಥಿವಿಗಳೇ ಇತರ ದೇವತೆಗಳಿಗೆ ಮಾತಾ ಪಿತೃಗಳೆಂದು ಋಗ್ವೇದದಲ್ಲಿ ಅನೇಕ ಕಡೆ ಹೇಳಿದೆ ಅದರಂತೆ—

**ಸಹ ವಾಮೇನ ನ ಉಷೋ ವ್ಯುಚ್ಛಾ ದುಹಿತರ್ದಿವಃ ।**

(ಋ ಸಂ ೧-೪೮-೧)

**ಅಭಿಪಶ್ಯಂತೀ ವಯುನಾ ಜನಾನಾಂ ದಿವೋ ದುಹಿತಾ ಭುವನಸ್ಯ ಪತ್ನೀ ।**

(ಋ ಸಂ ೭-೭೫-೪)

ಇತ್ಯಾದಿ ಸ್ಥಳಗಳಲ್ಲಿ ಉಷೋದೇವತೆಯು ದ್ಯಾವಾಪೃಥಿವಿಗಳ ದುಹಿತೃವೆಂದು ಸ್ಪಷ್ಟವಾಗಿ ಹೇಳಿದೆ. ಆದ್ದರಿಂದ ಪ್ರಕೃತ ಋಕ್ಕಿನಲ್ಲಿ ಪೃಥಿವಿಯು ಉಷೋದೇವತೆಯ ಪುತ್ರಿಯೆಂದು ಹೇಳಿರುವುದು ಪರಸ್ಪರ ವಿರೋಧವಲ್ಲವೇ ಎಂದರೆ, ಅದಕ್ಕೆ ಭಾಷ್ಯಕಾರರು ಈ ರೀತಿ ಸಮಾಧಾನವನ್ನು ಹೇಳುತ್ತಾರೆ—ಕೆಲವು ಕಡೆ ಎಂದರೆ,

**ಕದಾ ಚಿದ್ದ್ಯೌರುಷಸೋ ಜಾಯತ ಉಷಾಶ್ಚ ದಿವ ಇತಿ ।**

ಮತ್ತು

**ಪ್ರಜಾಪತಿರ್ವೈ ಸ್ವಾಂ ದುಹಿತರಮಭ್ಯಧ್ಯಾಯದ್ದಿವಮಿತ್ಯನ್ಯ ಆಹುರುಷಸಮಿತ್ಯನ್ಯೇ ।**

(ಐ. ಬ್ರಾ. ೩-೩-೩)

**ಅದಿತೇರ್ದಕ್ಷೋ ಅಜಾಯತ ದಕ್ಷಾದ್ವದಿತಿಃ ಪರಿ ।**

(ಋ. ಸಂ ೧೦.೭೨.೪)

ಎಂಬ ಸ್ಥಗಳಲ್ಲಿ ಈ ರೀತಿ ವಿರೋಧಾಭಿಪ್ರಾಯವು ಕಂಡುಬರುವುದು. ಎಂದರೆ ಕೆಲವುಕಡೆ ಉಷೋ ದೇವತೆಯಿಂದ ದ್ಯೌಃ ಎಂದರೆ ದ್ಯುಲೋಕವು ಉತ್ಪನ್ನವಾಯಿತೆಂದೂ ಮತ್ತೆ ಕೆಲವು ಕಡೆ ದ್ಯುದೇವತೆಯಿಂದ ಉಷೋದೇವತೆಯ ಉತ್ಪತ್ತಿಯಾಯಿತೆಂದೂ ಹೇಳಿದೆ ಮತ್ತು ಮೇಲೆ ಉದಾಹರಿಸಿರುವ ಐತರೇಯ ಬ್ರಾಹ್ಮಣ ವಾಕ್ಯದಲ್ಲಿ ಪ್ರಜಾಪತಿಯ ಪುತ್ರಿಯೆಂದು ಹೇಳಿ ಆ ಪುತ್ರಿಯು ದ್ಯುದೇವತೆಯೆಂದು ಕೆಲವರೂ, ಉಷೋದೇವತೆಯೆಂದು ಕೆಲವರೂ ಹೇಳುವರು ಎಂದು ಅಭಿಪ್ರಾಯ ಭೇದವನ್ನು ತಿಳಿಸಿದೆ. ಇದಲ್ಲದೆ ಮೇಲೆ ಕೊಟ್ಟಿರುವ ಮೂರನೆಯ ಉದಾಹರಣೆಯಲ್ಲಿ ಅದಿತಿ

ಯಿಂದ ದಕ್ಷನು ಉತ್ಪನ್ನನಾದನು , ದಕ್ಷನಿಂದ ಅದಿತಿಯ ಉತ್ಪತ್ತಿಯಾಯಿತು ಎಂದು ಪರಸ್ಪರ ವಿರೋಧಾಭಿಪ್ರಾಯವು ಒಂದೇ ವಾಕ್ಯದಲ್ಲಿಯೇ ಸೂಚಿತವಾಗಿದೆ ಇದು ಹೇಗೆ ಸಮಂಜಸವು ? ಎಂದರೆ ಇಲ್ಲಿ ಎಂದರೆ ಈ ಸ್ಥಳಗಳಲ್ಲಿ ಈ ಅಭಿಪ್ರಾಯಗಳು ಅಥವಾ ಅರ್ಥಗಳು ವಿರೋಧವಾಗಿದೆಯೆಂದು ಭಾವಿಸಕೂಡದು ಇಲ್ಲಿ ನಿರ್ದಿಷ್ಟವಾದ ಅರ್ಥವೇ ಉಕ್ತವಾಗಿರುವುದು, ಆ ಅರ್ಥವನ್ನು ದೃಢೀಕರಿಸುವುದಕ್ಕಾಗಿ ಲಿಂಗವ್ಯತ್ಯಯವಿದೆಯೇ ಹೊರತು ಪರಸ್ಪರ ವಿರೋಧಾರ್ಥವು ಇಲ್ಲಿ ಸೂಚಿತವಾಗಿಲ್ಲ ಎಂದು ಸಮಾಧಾನವನ್ನು ಹೇಳಿದಾರೆ.

|| ಸಂಹಿತಾಪಾಠಃ ||

ಅಜಿರಾಸಸ್ತದಪ ಈಯಮಾನಾ ಆತಸ್ಥಿವಾಂಸೋ ಅಮೃತಸ್ಯ ನಾಭಿಂ ।
ಅನಂತಾಸ ಉರವೋ ವಿಶ್ವತಃ ಸೀಂ ಪರಿ ದ್ಯಾವಾಪೃಥಿವೀ ಯಂತಿ
ಪಂಥಾಃ ॥ ೨ ॥

॥ ಪದಪಾಠಃ ॥

ಅಜಿರಾಸಃ । ತತ್ऽಅಪಃ । ಈಯಮಾನಾಃ । ಆತಸ್ಥಿऽವಾಂಸಃ । ಅಮೃತಸ್ಯ । ನಾಭಿಂ ।
ಅನಂತಾಸಃ । ಉರವಃ । ವಿಶ್ವತಃ । ಸೀಂ । ಪರಿ । ದ್ಯಾವಾಪೃಥಿವೀ ಇತಿ । ಯಂತಿ । ಪಂಥಾಃ ॥ ೨ ॥

॥ ಸಾಯಣಭಾಷ್ಯಂ ॥

ಅಜಿರಾಸೋ ಗಮನಶೀಲಾಃ ॥ ಅಜಿರಿರಚ್‌ಪ್ರತ್ಯಯಾಂತೋऽಜಿರಶಿಶಿರೇತ್ಯಾದಿನಾ ನಿಪಾತಿತಃ ॥ ತದಪಸ್ತದೇವ ಪ್ರಕಾಶನರೂಪಂ ಕರ್ಮ ಯಸ್ಯ ತತ್ತಾದೃಶಮುಹರೀಯಮಾನಾ ಗಚ್ಛಂತೋऽಮೃತಸ್ಯ ಸೂರ್ಯಸ್ಯ ನಾಭಿಂ ಸಂನಾಹಕಂ ಮಂಡಲಂ ಅಮೃತಸ್ಯೋದಕಸ್ಯ ವಾ ನಾಭಿಮಂತರಿಕ್ಷಮಾತಸ್ಥಿವಾಂಸ ಆತಿಷ್ಠಂತೋऽನಂತಾಸೋऽಪರಿಮಿತಾ ಉರವೋ ವ್ಯಾಪ್ತಾಃ ಪಂಥಾಃ ಪತನಶೀಲಾ ರಶ್ಮಯೋ ದ್ಯಾವಾ-ಪೃಥಿವೀ ಪರಿ ದಿವಂ ಚ ಪೃಥಿವೀಂ ಚಾಂತರಿಕ್ಷಂ ಚ ವಿಶ್ವತಃ ಪರಿತೋ ಯಂತಿ । ಗಚ್ಛಂತಿ । ಸೀಮಿತಿ ಪೂರಣಃ ।

॥ ಪ್ರತಿಪದಾರ್ಥ ॥

**ಅಜಿರಾಸಃ**—ಗಮನಶೀಲವುಳ್ಳವೂ । **ತದಪಃ**—ಅಹಸ್ಸನ್ನು ಪ್ರಕಾಶನಪಡಿಸುವುದೊಂದೇ ಕರ್ಮವುಳ್ಳವಾಗಿ । **ಈಯಮಾನಾಃ**—ಸಂಚರಿಸುವುವೂ । **ಅಮೃತಸ್ಯ**—ಮರಣಧರ್ಮರಹಿತನಾದ ಸೂರ್ಯನ । **ನಾಭಿಂ**—ಮಂಡಲವನ್ನು । **ಆತಸ್ಥಿವಾಂಸಃ**—ಆಶ್ರಯಿಸಿರುವುವೂ । **ಅನಂತಾಸಃ**—ಅಪರಿಮಿತವಾದವೂ । **ಉರವಃ**—ವಿಸ್ತೃತವಾಗಿ ವ್ಯಾಪ್ತವಾದವೂ । **ಪಂಥಾಃ**—ಪಥನಶೀಲವುಳ್ಳವೂ ಆದ ರಶ್ಮಿಗಳು । **ದ್ಯಾವಾಪೃಥಿವೀ ಪರಿ**—ದ್ಯಾವಾಪೃಥಿವಿಗಳಿಗೆ ಸುತ್ತಲೂ । **ವಿಶ್ವತಃ**—ಸರ್ವತ್ರ । **ಯಂತಿ**—ಸಂಚರಿಸುತ್ತವೆ

॥ ಭಾವಾರ್ಥ ॥

ಸರ್ವದಾ ಸಂಚರಿಸುವ ಸ್ವಭಾವವುಳ್ಳವೂ, ಅಹಸ್ಸನ್ನು ಪ್ರಕಾಶಪಡಿಸುವುದೊಂದೇ ಕರ್ಮವಾಗಿ ಉಳ್ಳವೂ ಮರಣಧರ್ಮರಹಿತನಾದ ಸೂರ್ಯಮಂಡಲವನ್ನು ಆಶ್ರಯಿಸಿರುವುವೂ, ಅಪರಿಮಿತವಾದವೂ, ವಿಸ್ತೃತವಾಗಿ ವ್ಯಾಪ್ತವಾದವೂ ಪತನಶೀಲವುಳ್ಳವೂ ಆದ ರಶ್ಮಿಗಳು ದ್ಯಾವಾಪೃಥಿವಿಗಳಿಗೆ ಸುತ್ತಲೂ ಸರ್ವತ್ರ ಸಂಚರಿಸುತ್ತವೆ.

English Translation

The rays (of light) extending round, fulfilling their duty (of bringing on the day), abiding in contact with the orb of the immortal (sun), unlimited and diffusive, spread everywhere through heaven and earth.

॥ ಸಂಹಿತಾಪಾಠಃ ॥

ಉಕ್ಷಾ ಸಮುದ್ರೋ ಅರುಷಃ ಸುಪರ್ಣಃ ಪೂರ್ವಸ್ಯ ಯೋನಿಂ
ಪಿತುರಾ ವಿವೇಶ ।
ಮಧ್ಯೇ ದಿವೋ ನಿಹಿತಃ ಪೃಶ್ನಿರಶ್ಮಾ ವಿ ಚಕ್ರಮೇ ರಜಸಸ್ಪಾತ್ಯಂತೌ ॥ ೩ ॥

॥ ಪದಪಾಠಃ ॥

ಉಕ್ಷಾ । ಸಮುದ್ರಃ । ಅರುಷಃ । ಸುಽಪರ್ಣಃ । ಪೂರ್ವಸ್ಯ । ಯೋನಿಂ । ಪಿತುಃ । ಆ । ವಿವೇಶ ।
ಮಧ್ಯೇ । ದಿವಃ । ನಿಽಹಿತಃ । ಪೃಶ್ನಿಃ । ಅಶ್ಮಾ । ವಿ । ಚಕ್ರಮೇ । ರಜಸಃ । ಪಾತಿ । ಅಂತೌ ॥ ೩ ॥

॥ ಸಾಯಣಭಾಷ್ಯಂ ॥

ಸೌರ್ಯೋಽಯಂ ತೃಚಃ । ಉಕ್ಷೋದಕಸ್ಯ ಕಾಮಾನಾಂ ವಾ ಸೇಕ್ತಾ ಸಮುದ್ರಃ ಸಮುಂದನಃ । ಯದ್ವಾ । ಸಂಮೋದಂತೇ ತಸ್ಮಿನ್ದೇವಾ ಇತಿ ಸಮುದ್ರಃ । ಅರುಷ ಆರೋಚಮಾನಃ ಸುಪರ್ಣಃ ಸುಗಮನಃ ಪೂರ್ವಸ್ಯ । ಅವಯವಲಕ್ಷಣೇಯಂ । ಪೂರ್ವದಿಗವಯವಸ್ಯ ಪಿತುಃ ಪಾಲಕಸ್ಯಾಂತರಿಕ್ಷಸ್ಯ ಯೋನಿಮುತ್ಪಾದಕಮವಯವಮಾ ವಿವೇಶ । ಆವಿಷ್ಟವಾನ್ । ಪಶ್ಚಾದ್ದಿವೋ ಮಧ್ಯೇ ನಿಹಿತಃ ಪೃಶ್ನಿಃ । ಪ್ರಾಶ್ನುತ ಏನಂ ವರ್ಣ ಇತಿ ಪೃಶ್ನಿರಾದಿತ್ಯಃ । ಅಶ್ಮಾ ಸರ್ವತ್ರ ವ್ಯಾಪ್ತಃ । ಲುಪ್ತೋಪಮಾ ವಾ । ಅಶ್ಮಸದೃಶೋ ರಜಸೋಽನ್ತರಿಕ್ಷಸ್ಯಾಂತೌ ಪೂರ್ವಾಪರಭಾಗೌ ವಿ ಚಕ್ರಮೇ । ವಿಕ್ರಮತೇ । ಪಾತಿ ಚ ಜಗತ್ । ಜಗದ್ರಕ್ಷಾರ್ಥಂ ಕ್ರಮತ ಇತ್ಯರ್ಥಃ ॥

|| ಪ್ರತಿಪದಾರ್ಥ ||

**ಉಕ್ಷಾ**—ಉದಕಸೇಚಕನಾದುದೂ । **ಸಮುದ್ರಃ**—(ಎಲ್ಲವನ್ನೂ) ತೊಯ್ಯುವಂತೆ ಮಾಡುವುದೂ । **ಅರುಷಃ**—ಹೊಂಬಣ್ಣವುಳ್ಳದ್ದೂ । **ಸುಪರ್ಣಃ**—ಉತ್ತಮವಾದ ಪತನವುಳ್ಳದ್ದೂ (ಆದ ಸೂರ್ಯನ ರಥವು) । **ಪಿತುಃ**—ಪಾಲಕರಾದ ಅಂತರಿಕ್ಷದ । **ಪೂರ್ವಸ್ಯ**—ಪೂರ್ವಭಾಗದ । **ಯೋನಿಂ**—ಸ್ಥಾನವನ್ನು । **ಆ ವಿವೇಶ**—ಪ್ರವೇಶಿಸಿದೆ । **ದಿವಃ**—ಅಂತರಿಕ್ಷದ । **ಮಧ್ಯೇ**—ಮಧ್ಯಭಾಗದಲ್ಲಿ । **ನಿಹಿತಃ**—ಸ್ಥಾಪಿತನಾದ । **ಪೃಶ್ನಿಃ**—ಆದಿತ್ಯನು । **ಅಶ್ಮಾ**—ಸರ್ವವ್ಯಾಪಕನಾಗಿ । **ರಜಸಃ**—ಅಂತರಿಕ್ಷದ । **ಅಂತೌ**—ಪೂರ್ವ ಮತ್ತು ಪಶ್ಚಿಮ ಭಾಗಗಳೆರಡನ್ನೂ । **ವಿಚಕ್ರಮೇ**—ಆಕ್ರಮಿಸಿ ಸಂಚರಿಸುತ್ತಾನೆ । **ಪಾತಿ**—(ಜಗತ್ತನ್ನೂ) ರಕ್ಷಿಸುತ್ತಾನೆ ।

|| ಭಾವಾರ್ಥ ||

ಉದಕಸೇಚಕವಾದುದೂ, ಉದಕಬಿಂದುಗಳಿಂದ ಎಲ್ಲವನ್ನೂ ತೊಯ್ಯುವಂತೆ ಮಾಡತಕ್ಕದ್ದೂ, ಹೊಂಬಣ್ಣವುಳ್ಳದ್ದೂ, ಉತ್ತಮವಾದ ಪತನವುಳ್ಳದ್ದೂ ಆದ ಸೂರ್ಯನ ರಥವು ಪಾಲಕವಾದ ಅಂತರಿಕ್ಷದ ಪೂರ್ವಭಾಗದ ಸ್ಥಾನವನ್ನು ಪ್ರವೇಶಿಸಿದೆ. ಅಂತರಿಕ್ಷದ ಮಧ್ಯಭಾಗದಲ್ಲಿ ಸ್ಥಾಪಿತನಾದ ಆದಿತ್ಯನು ಸರ್ವವ್ಯಾಪಕನಾಗಿ ಅಂತರಿಕ್ಷದ ಪೂರ್ವ ಮತ್ತು ಪಶ್ಚಿಮಭಾಗಗಳೆರಡನ್ನೂ ಆಕ್ರಮಿಸಿ ಸಂಚರಿಸುತ್ತಾನೆ, ಜಗತ್ತನ್ನೂ ರಕ್ಷಿಸುತ್ತಾನೆ

English Translation

The showerer (of rain), the shedder of dew, the radiant and quick-going (car) has entered the region of the paternal east · the many-tinted and pervading (luminary) proceeds to both extermities of the firmament, (and so) preserves (the world).

---

|| ಸಂಹಿತಾಪಾಠಃ ||

ಚತ್ವಾರ ಈಂ ಬಿಭ್ರತಿ ಕ್ಷೇಮಯಂತೋ ದಶ ಗರ್ಭಂ ಚರಸೇ ಧಾಪಯಂತೇ ।

ತ್ರಿಧಾತವಃ ಪರಮಾ ಅಸ್ಯ ಗಾವೋ ದಿವಶ್ಚರಂತಿ ಪರಿ ಸದ್ಯೋ ಅಂತಾನ್ ॥

|| ಪದಪಾಠಃ ||

ಚತ್ವಾರಃ । ಈಂ । ಬಿಭ್ರತಿ । ಕ್ಷೇಮಽಯಂತಃ । ದಶ । ಗರ್ಭಂ । ಚರಸೇ । ಧಾಪಯಂತೇ ।

ತ್ರಿಽಧಾತವಃ । ಪರಮಾಃ । ಅಸ್ಯ । ಗಾವಃ । ದಿವಃ । ಚರಂತಿ । ಪರಿ । ಸದ್ಯಃ । ಅಂತಾನ್ ॥ ೪ ॥

॥ ಸಾಯಣಭಾಷ್ಯಂ ॥

**ಚತ್ವಾರ ಋತ್ವಿಜ ಈಮೇನಮಾದಿತ್ಯಂ ಕ್ಷೇಮಯಂತಃ ಕ್ಷೇಮಮಾತ್ಮನ ಇಚ್ಛಂತೋ ಬಿಭ್ರತಿ । ಧಾರಯಂತಿ ಹವಿರ್ಭಿಃ ಸ್ತುತಿಭಿಶ್ಚ । ಕಿಂಚ ದಶ ದಿಶೋ ಗರ್ಭಂ ಗರ್ಭವನ್ಮಧ್ಯ ಉತ್ಪನ್ನಮೇನಂ ಚರಸೇ ಚರಣಾಯೋದಯಾಸ್ತಮಯವ್ಯವಹಾರಾಯ ಧಾಪಯಂತೇ । ಗಮಯಂತಿ । ತ್ರಿಧಾತವಸ್ತ್ರಿಪ್ರಕಾರಾಃ ಶೀತೋಷ್ಣವರ್ಷಭೇದೇನ ತ್ರಿವಿಧಾ ಅಸ್ಯಾದಿತ್ಯಸ್ಯ ಪರಮಾ ಉತ್ಕೃಷ್ಟಾ ಗಾವೋ ರಶ್ಮಯೋ ದಿವೋಽಂತರಿಕ್ಷಸ್ಯಾಂತಾನ್ ಪರಿ ಪರಿತಃ ಸದ್ಯ ಉದಯಾನಂತರಮೇವ ಚರಂತಿ । ಗಚ್ಛಂತಿ ॥**

॥ ಪ್ರತಿಪದಾರ್ಥ ॥

**ಚತ್ವಾರಃ**—ನಾಲ್ಕು ಜನ ಋತ್ವಿಕ್ಕುಗಳೂ ಸಹ । **ಈಂ**-ಈ ಆದಿತ್ಯನನ್ನು । **ಕ್ಷೇಮಯಂತಃ**—ತಮ್ಮ ಹಿತಕ್ಕಾಗಿ ಇಚ್ಛಿಸಿ । **ಬಿಭ್ರತಿ**—(ಹವಿರಾದಿಗಳಿಂದ) ಧರಿಸುತ್ತಾರೆ । **ದಶ**—ಹತ್ತು ದಿಕ್ಕುಗಳೂ । **ಗರ್ಭಂ**—ಗರ್ಭದಂತೆ ತಮ್ಮ ಮಧ್ಯೆ ಉತ್ಪನ್ನನಾದ ಆದಿತ್ಯನನ್ನು । **ಚರಸೇ**—ಅವನ ಸಂಚಾರಕ್ಕಾಗಿ । **ಧಾಪಯಂತೇ**—ಪ್ರಚೋದಿಸುತ್ತವೆ । **ತ್ರಿಧಾತವಃ**—ಮೂರು ಪ್ರಕಾರಗಳುಳ್ಳ । **ಅಸ್ಯ**—ಈ ಆದಿತ್ಯನ । **ಪರಮಾಃ**—ಉತ್ಕೃಷ್ಟವಾದ । **ಗಾವಃ**—ರಶ್ಮಿಗಳು । **ದಿವಃ**—ಅಂತರಿಕ್ಷದ । **ಅಂತಾನ್**—ಸೀಮಾಪ್ರದೇಶದಿಂದ । **ಪರಿ**—ಸುತ್ತಲೂ । **ಸದ್ಯಃ**—ಉದಯವಾದೊಡನೆಯೇ । **ಚರಂತಿ**—ಸಂಚರಿಸುತ್ತವೆ.

॥ ಭಾವಾರ್ಥ ॥

ನಾಲ್ಕು ಜನ ಋತ್ವಿಕ್ಕುಗಳೂ ಸಹ ಈ ಆದಿತ್ಯನನ್ನು ತಮ್ಮ ಹಿತಕ್ಕಾಗಿ ಇಚ್ಛಿಸಿ ಹವಿರಾದಿಗಳಿಂದ ಅವನನ್ನು ಧರಿಸುತ್ತಾರೆ. ಹತ್ತು ದಿಕ್ಕುಗಳೂ ಗರ್ಭದಂತೆ ತಮ್ಮ ಮಧ್ಯೆ ಉತ್ಪನ್ನನಾದ ಆದಿತ್ಯನನ್ನು ಅವನ ಸಂಚಾರಕ್ಕಾಗಿ ಪ್ರಚೋದಿಸುತ್ತವೆ. ಶೀತೋಷ್ಣವರ್ಷಭೇದಗಳೆಂಬ ಮೂರು ಪ್ರಕಾರಗಳುಳ್ಳ ಈ ಆದಿತ್ಯನ ಉತ್ಕೃಷ್ಟವಾದ ರಶ್ಮಿಗಳು ಅಂತರಿಕ್ಷದ ಸೀಮಾ ಪ್ರದೇಶ ದಿಂದ ಉದಯವಾದೊಡನೆಯೇ ಸುತ್ತಲೂ ಸಂಚರಿಸುತ್ತವೆ

## English Translation

The four (chief priests) sustain him (with oblations and praises), seeking their own welfare: the ten (regions of space) invigorate him, their embryo, to travel (his daily course): his three elementary rays swiftly traverse the boundaries of the sky.

॥ ಸಂಹಿತಾಪಾಠಃ ॥

ಇದಂ ವಪುರ್ನಿವಚನಂ ಜನಾಸಶ್ಚರಂತಿ ಯನ್ನದ್ಯಸ್ತಸ್ಥುರಾಪಃ ।

ದ್ವೇ ಯದೀಂ ಬಿಭೃತೋ ಮಾತುರನ್ಯೇ ಇಹೇಹ ಜಾತೇ ಯಮ್ಯಾ೩ ಸಬಂಧೂ ॥ ೫ ॥

॥ ಪದಪಾಠಃ ॥

ಇದಂ । ವಪುಃ । ನಿಽವಚನಂ । ಜನಾಸಃ । ಚರಂತಿ । ಯತ್ । ನದ್ಯಃ । ತಸ್ಥುಃ । ಆಪಃ ।

ದ್ವೇ ಇತಿ । ಯತ್ । ಈಂ । ಬಿಭೃತಃ । ಮಾತುಃ । ಅನ್ಯೇ ಇತಿ । ಇಹಽಇಹ । ಜಾತೇ ಇತಿ । ಯಮ್ಯಾ ।

ಸಬಂಧೂ ಇತಿ ಸಽಬಂಧೂ ॥ ೫ ॥

॥ ಸಾಯಣಭಾಷ್ಯಂ ॥

ಜನಾಸೋ ಹೇ ಜನಾ ಋತ್ವಿಜ ಇದಂ ಪುರತೋ ದೃಶ್ಯಮಾನಂ ವಪುಃ ಶರೀರಂ ಮಂಡಲಂ ನಿವಚನಂ ಸ್ತುತ್ಯಂ ಭವತೀತಿ ಶೇಷಃ । ಯನ್ಮಂಡಲಮುಪಜೀವ್ಯ ನದ್ಯಶ್ಚರಂತಿ ಪ್ರವಹಂತಿ । ಆಪಶ್ಚ ಯನ್ಮಂಡಲಮಧಿತಸ್ಥುಃ । ಮಂಡಲಾಧೀನತ್ವಾತ್ತಾಸಾಂ । ಈನೋತದುಕ್ತಲಕ್ಷಣಂ ಯನ್ಮಂಡಲಂ ದ್ವೇ ಅಹೋರಾತ್ರೇ ಮಾತುರ್ನಿರ್ಮಾತುರ್ಮಾತ್ರಸ್ಥಾನೀಯಾದಂತರಿಕ್ಷಾದನ್ಯೇ ಇಹೇಹ ಜಾತೇ ಇಹ ಚೇಹ ಚ ಸೂರ್ಯೇ ಜಾತೇ ನಿಷ್ಪನ್ನೇ ಯಮ್ಯಾ ಯಮ್ಯೇ ನಿಯಮನೀಯೇ ಯುಗ್ಮಭೂತೇ ವಾ ಸಬಂಧೂ ಸಮಾನಬಲೇ ಸಮಾನಬಂಧನೇ ಉಭಯೋರಪ್ಯೇಕ ಏವ ಸೂರ್ಯೋ ಬಂಧಕೋಽಕ್ಷೋ ಯಯೋಸ್ತಾ-ದೃಶ್ಯಾ ಬಿಭೃತಃ ಧಾರಯತಃ ॥

॥ ಪ್ರತಿಪದಾರ್ಥ ॥

**ಜನಾಸಃ**—ಎಲೈ ಜನಗಳೇ । **ಯತ್**—ಯಾವ ಆದಿತ್ಯಮಂಡಲದ ಆಶ್ರಯದಿಂದ । **ನದ್ಯಃ**—ನದಿಗಳು। **ಚರಂತಿ**—ಪ್ರವಹಿಸುತ್ತವೆಯೋ । **ಆಪಃ**—ಉದಕಗಳು । **ತಸ್ಥುಃ**—ಯಾವುದನ್ನಾಶ್ರಯಿಸಿ ಇವೆಯೋ ಅಂತಹದೇ । **ನಿವಚನಂ**—ಸ್ತುತ್ಯನಾದ । **ಇದಂ ವಪುಃ**—ಈ ಆದಿತ್ಯಮಂಡಲವಾಗಿದೆ । **ಮಾತುಃ**—ಅಂತರಿಕ್ಷದಿಂದ । **ಜಾತೇ**—ಉತ್ಪನ್ನವಾದವೂ । **ಯಮ್ಯಾ**—ಲೋಕನಿಯಮನವನ್ನುಂಟುಮಾಡುವುವೂ । **ಸಬಂಧೂ**—(ಆದಿತ್ಯನೇ) ಸಮಾನವಾದ ಬಂಧುವಾಗಿ ಉಳ್ಳವೂ ಆದ । **ದ್ವೇ**—ಅಹೋರಾತ್ರಗಳೂ । **ಅನ್ಯೇ**—ಇತರ ಋತ್ವಾದಿಗಳೂ । **ಯತ್ ಈಂ**—ಯಾವ ಇವೇ ಸೂರ್ಯನನ್ನು । **ಇಹೇಹ**—ಆಯಾ ನಿಯಮಿತವಾದ ಪ್ರದೇಶಗಳಲ್ಲೆಲ್ಲಾ। **ಬಿಭೃತಃ**—ಧರಿಸುತ್ತವೆ.

॥ ಭಾವಾರ್ಥ ॥

ಎಲೈ ಜನಗಳೇ, ಯಾವ ಆದಿತ್ಯಮಂಡಲದ ಆಶ್ರಯದಿಂದ ನದಿಗಳು ಪ್ರವಹಿಸುತ್ತವೆಯೋ, ಯಾವುದನ್ನಾಶ್ರಯಿಸಿ ಉದಕಗಳು ಸ್ಥಿತವಾಗಿವೆಯೋ, ಅಂತಹ ಸ್ತುತ್ಯವಾದ ಈ ಆದಿತ್ಯಮಂಡಲವನ್ನು ವೀಕ್ಷಿಸಿರಿ ಅಂತರಿಕ್ಷದಿಂದ

ಉತ್ಪನ್ನವಾದವೂ ಲೋಕನಿಯಾಮಕವಾದವೂ, ಆದಿತ್ಯನೇ ಸಮಾನವಾದ ಬಂಧುವಾಗಿ ಉಳ್ಳವೂ ಆದ ಅಹೋರಾತ್ರಗಳೂ ಇತರ ಋತ್ವಾದಿಗಳೂ ಸಹ ಇದೇ ಸೂರ್ಯನನ್ನು ಆಯಾ ನಿಯಮಿತಪ್ರದೇಶಗಳಲ್ಲೆಲ್ಲಾ ಧರಿಸುತ್ತವೆ.

## English Translation

(Behold), men, this indescribable form from which the rivers (spring), and where the waters dwell; which (form, the firmament), the two, (day and night), associated and equally allied, as well as other (seasons), born (of it, as of a parent), here and there sustain

॥ ಸಂಹಿತಾಪಾಠಃ ॥

ವಿ ತನ್ವತೇ ಧಿಯೋ ಅಸ್ಮಾ ಅಪಾಂಸಿ ವಸ್ತ್ರಾ ಪುತ್ರಾಯ ಮಾತರೋ ವಯಂತಿ।
ಉಪಪ್ರಕ್ಷೇ ವೃಷಣೋ ಮೋದಮಾನಾ ದಿವಸ್ಪಥಾ ವಧ್ವೋ ಯಂತ್ಯಚ್ಛ
॥ ೬ ॥

॥ ಪದಪಾಠಃ ॥

ವಿ । ತನ್ವತೇ । ಧಿಯಃ । ಅಸ್ಮೈ । ಅಪಾಂಸಿ । ವಸ್ತ್ರಾ । ಪುತ್ರಾಯ । ಮಾತರಃ । ವಯಂತಿ ।
ಉಪಽಪ್ರಕ್ಷೇ । ವೃಷಣಃ । ಮೋದಮಾನಾಃ । ದಿವಃ । ಪಥಾ । ವಧ್ವಃ । ಯಂತಿ । ಅಚ್ಛ ॥ ೬ ॥

॥ ಸಾಯಣಭಾಷ್ಯಂ ॥

ಅಸ್ಮೈ ಸೂರ್ಯಾಯ ಧಿಯಃ ಸ್ತುತೀರಪಾಂಸಿ ಕರ್ಮಾಣಿ ಚ ವಿ ತನ್ವತೇ । ವಿಸ್ತಾರಯಂತಿ ಯಜಮಾನಾಃ । ಪುತ್ರಾಯ ಪುತ್ರಸ್ಥಾನೀಯಾಯ ಮಾತರೋ ನಿರ್ಮಾತ್ರ್ಯ ಉಷಸೋ ದಿಶೋ ವಾ ವಸ್ತ್ರಾ ವಸ್ತ್ರಾಣಿ ವಯಂತಿ । ನಿಷ್ಪಾದಯಂತಿ । ವಸ್ತ್ರಸದೃಶಾನಿ ತೇಜಾಂಸಿ ನಿವಿಡಾನಿ ಸಂಪಾದಯಂತೀತ್ಯರ್ಥಃ । ವೃಷಣಃ ಸೇಕ್ತುಃ ಸೂರ್ಯಸ್ಯೋಪಪ್ರಕ್ಷ ಉಪಪರ್ಚನೇ ಸಂಪರ್ಕೇ ಸತಿ ಮೋದಮಾನಾ ಹೃಷ್ಯಂತೋ ವಧ್ವೋ ವಧೂಸ್ಥಾನೀಯಾ ರಶ್ಮಯೋ ದಿವಸ್ಪಥಾ ಸೂರ್ಯಸಂಬಂಧಿನಾ ಮಾರ್ಗೇಣಾಸ್ಮದಭಿಮುಖಂ ಯಂತಿ । ಗಚ್ಛಂತಿ । ಪ್ರಸರಂತಿ ॥

॥ ಪ್ರತಿಪದಾರ್ಥ ॥

**ಅಸ್ಮೈ**—ಈ ಸೂರ್ಯನನ್ನು ಉದ್ದೇಶಿಸಿಯೇ । **ಧಿಯಃ**—ಸ್ತುತಿಗಳನ್ನೂ । **ಅಪಾಂಸಿ** ಯಜ್ಞಕರ್ಮಗಳನ್ನೂ । **ವಿ ತನ್ವತೇ**—(ಯಜಮಾನರು) ವಿಸ್ತರಿಸುತ್ತಾರೆ । **ಮಾತರಃ**—ಮಾತೃಪ್ರಾಯರಾದ ದಿಕ್ಕುಗಳು ।

**ಪುತ್ರಾಯ**—ತಮ್ಮ ಪುತ್ರಸ್ಥಾನೀಯನಾದ ಸೂರ್ಯನಿಗೆ । **ವಸ್ತ್ರಾ**—ತೇಜೋರೂಪವಾದ ವಸ್ತ್ರಗಳನ್ನು । **ವಯಂತಿ**—ಹೆಣೆಯುತ್ತಾರೆ । **ವೃಷಣಃ**—ವೃಷ್ಟಿಸೇಚಕನಾದ ಸೂರ್ಯನ । **ಉಪಪ್ರಕ್ಷೇ**—ಸಂಪರ್ಕವುಂಟಾದಾಗ । **ಮೋದಮಾನಾಃ**—ಹರ್ಷಗೊಳ್ಳತಕ್ಕವೂ । **ವಧ್ವಃ**—ಪತ್ನೀರೂಪವುಳ್ಳವೂ ಆದ ರಶ್ಮಿಗಳು । **ದಿವಸ್ಪಥಾ**—ಸೂರ್ಯಸಂಬಂಧವಾದ ಮಾರ್ಗದಿಂದ । **ಅಚ್ಛ**—ನಮಗಭಿಮುಖವಾಗಿ । **ಯಂತಿ**—ಪ್ರಸರಿಸಿ ಬರುತ್ತವೆ.

॥ ಭಾವಾರ್ಥ ॥

ಯಜಮಾನರು ಈ ಸೂರ್ಯನನ್ನುದ್ದೇಶಿಸಿಯೇ ಯಜ್ಞಕರ್ಮಗಳನ್ನೂ ಸ್ತುತಿಗಳನ್ನೂ ವಿಸ್ತರಿಸುತ್ತಾರೆ ಮಾತೃಪ್ರಾಯರಾದ ದಿಕ್ಕುಗಳು ತಮ್ಮ ಪುತ್ರನಾದ ಸೂರ್ಯನಿಗೆ ತೇಜೋರೂಪವಾದ ವಸ್ತ್ರಗಳನ್ನು ಹೆಣೆಯುತ್ತಾರೆ. ವೃಷ್ಟಿಸೇಚಕನಾದ ಸೂರ್ಯನ ಸಂಪರ್ಕವುಂಟಾದಾಗ ಹರ್ಷಗೊಳ್ಳತಕ್ಕವೂ, ಪತ್ನೀರೂಪವುಳ್ಳವೂ ಆದ ರಶ್ಮಿಗಳು ಸೂರ್ಯಸಂಬಂಧವಾದ ಮಾರ್ಗದಿಂದ ನಮಗಭಿಮುಖವಾಗಿ ಪ್ರಸರಿಸಿ ಬರುತ್ತವೆ.

English Translation

To him (worshippers) multiply praises and acts of adoration for (him as for) a son, the (divine) mothers weave garments (of light): rejoicing in the contact of their impregnation, the wives of the sun, (the solar rays), come to our presence by the path of the sky.

॥ ಸಂಹಿತಾಪಾಠಃ ॥

ತದಸ್ತು ಮಿತ್ರಾವರುಣಾ ತದಗ್ನೇ ಶಂ ಯೋರಸ್ಮಭ್ಯಮಿದಮಸ್ತು ಶಸ್ತಂ ।
ಅಶೀಮಹಿ ಗಾಧಮುತ ಪ್ರತಿಷ್ಠಾಂ ನಮೋ ದಿವೇ ಬೃಹತೇ ಸಾದನಾಯ ॥ ೭ ॥

॥ ಪದಪಾಠಃ ॥

**ತತ್ । ಅಸ್ತು । ಮಿತ್ರಾವರುಣಾ । ತತ್ । ಅಗ್ನೇ । ಶಂ । ಯೋಃ । ಅಸ್ಮಭ್ಯಂ । ಇದಂ । ಅಸ್ತು । ಶಸ್ತಂ । ಅಶೀಮಹಿ । ಗಾಧಂ । ಉತ । ಪ್ರತಿಽಸ್ಥಾಂ । ನಮಃ । ದಿವೇ । ಬೃಹತೇ । ಸದನಾಯ ॥ ೭ ॥**

॥ ಸಾಯಣಭಾಷ್ಯಂ ॥

**ಅತ್ರ ಲಿಂಗಸಿದ್ಧಾ ದೇವತಾಃ । ಹೇ ಮಿತ್ರಾವರುಣಾ ಮಿತ್ರಾವರುಣೌ ತದಿದಂ ಸೂಕ್ತಂ ಶಸ್ತಂ ಸ್ತುತಮಸ್ತು । ಭವತು । ಹೇ ಅಗ್ನೇ ತತ್ಸೂಕ್ತಂ ಶಸ್ತಮಸ್ತು । ಅಸ್ಮಭ್ಯಂ ಶಂ ಸುಖಾಯ ಯೋರ್ದುಃಖಾನಾಮಮಿಶ್ರಣಾಯೇದಂ ಶಸ್ತಮಸ್ತು । ವಯಂ ಚಾಶೀಮಹಿ ಪ್ರಾಪ್ನುಯಾಮ ಗಾಧಂ ಸ್ಥಿತಿಂ ।**

ಉತಾಪಿ ಚ ಪ್ರತಿಷ್ಠಾಂ ಸ್ಥಿತೇರವಿಚ್ಛಿತ್ತಿಂ ಚಾಶೀಮಹಿ । ನಮೋ ನಮಸ್ಕರೋಮಿ ದಿವೇ ದ್ಯೋತಮಾ-ನಾಯ ಸೂರ್ಯಾಯ ಬೃಹತೇ ಮಹತೇ ಸಾದನಾಯಾಶ್ರಯಾಯ ವಿಶ್ವಸ್ಯ ॥

॥ ಪ್ರತಿಪದಾರ್ಥ ॥

**ಮಿತ್ರಾವರುಣಾ**—ಎಲೈ ಮಿತ್ರವರುಣರೇ । **ತತ್ ಇದಂ**—ನಮ್ಮಿಂದ ಪಠಿತವಾಗತಕ್ಕ ಈ ಸ್ತುತಿಯು **ಶಸ್ತಂ ಅಸ್ತು**—ನಿಮ್ಮ ಪ್ರಶಂಸೆಗೆ ಪಾತ್ರವಾಗಲಿ । **ಅಗ್ನೇ**—ಎಲೈ ಅಗ್ನಿಯೇ । **ತತ್**—ಅದೇ ಸ್ತುತಿಯು । **ಅಸ್ಮಭ್ಯಂ**—ನಮಗೆ । **ಶಂಯೋಃ**—ದುಃಖರಹಿತವಾದ ಸುಖಸಾಧನವಾಗಿ । **ಅಸ್ತು**—ಆಗಿರಲಿ, (ನಿನ್ನ ಪ್ರಶಂಸೆಗೆ ಪಾತ್ರವಾಗಲಿ) । **ಗಾಧಂ**—ಉತ್ತಮ ಸ್ಥಿತಿಯನ್ನೂ । **ಉತ**—ಮತ್ತು । **ಪ್ರತಿಷ್ಠಾಂ**—ಅಚಲವಾದ ಸುಸ್ಥಿತಿಯನ್ನೂ । **ಅಶೀಮಹಿ**—ನಾವು ಪ್ರಾರ್ಥಿಸಿ ನಿರೀಕ್ಷಿಸುತ್ತೇವೆ (ಹೊಂದುವಂತಾಗಲಿ) । **ದಿವೇ**—ಪ್ರಕಾಶಮಾನನೂ । **ಬೃಹತೇ**—ಮಹತ್ಸ್ವರೂಪನೂ । **ಸಾದನಾಯ**—(ವಿಶ್ವಕ್ಕೆಲ್ಲಾ) ಆಶ್ರಯನೂ ಆದ ಸೂರ್ಯನಿಗೆ । **ನಮಃ**—ನಮಸ್ಕಾರವನ್ನರ್ಪಿಸುತ್ತೇವೆ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೆ, ನಮ್ಮಿಂದ ಪಠಿತವಾಗತಕ್ಕ ಈ ಸ್ತುತಿಯು ನಿಮ್ಮ ಪ್ರಶಂಸೆಗೆ ಪಾತ್ರವಾಗಲಿ, ಎಲೈ ಅಗ್ನಿಯೇ, ಅದೇ ಸ್ತುತಿಯು ನಿನ್ನಿಂದಲೂ ಪ್ರಶಂಸಿತವಾಗಿ ನಮಗೆ ದುಃಖರಹಿತವಾದ ಸುಖಕ್ಕೆ ಸಾಧನವಾಗಲಿ. ನಾವು ಉತ್ತಮವಾದುದೂ ಶಾಶ್ವತವಾದುದೂ ಆದ ಸ್ಥಿತಿಯನ್ನು ಹೊಂದುವಂತಾಗಲಿ. ಪ್ರಕಾಶಮಾನನೂ, ಮಹತ್ಸ್ವರೂಪನೂ, ವಿಶ್ವಕ್ಕೆಲ್ಲಾ ಆಶ್ರಯನೂ ಆದ ಸೂರ್ಯನಿಗೆ ನಾವು ನಮಸ್ಕಾರವನ್ನರ್ಪಿಸುತ್ತೇವೆ

English Translation

May this (hymn), Mitra and Varuna, be valued (by you). may it, Agni, be valued (by you) as the means to us of happiness unmixed : may we (thence) obtain stability and permanence : reverence be to you, radiant and mighty asylum (of the universe)

## ನಲವತ್ತೆಂಟನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಕದು ಪ್ರಿಯಾಯೇತಿ ಪಂಚರ್ಚಂ ಚತುರ್ಥಂ ಸೂಕ್ತಂ । ಪ್ರತಿಭಾನುರ್ನಾಮಾತ್ರೇಯ ಋಷಿಃ । ಜಗತೀ ಛಂದಃ । ವಿಶ್ವೇ ದೇವಾ ದೇವತಾ । ಅತ್ರಾನುಕ್ರಮಣಿಕಾ । ಕದು ಪಂಚ ಪ್ರತಿಭಾನುರ್ಜಾಗತ-ಮಿತಿ ॥ ಅಭಿಪ್ಲವಿಕೇ ಪಂಚಮೇಽಹನಿ ವೈಶ್ವದೇವಶಸ್ತ್ರ ಇದಂ ಸೂಕ್ತಂ ನಿವಿದ್ಧಾನಂ । ಸೂತ್ರಿತಂ ಚ । ಕದು ಪ್ರಿಯಾಯೇತಿ ವೈಶ್ವದೇವಂ । ಆ. ೭. ೭. । ಇತಿ ॥

ಅನುವಾದವು—**ಕದು ಪ್ರಿಯಾಯ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಪ್ರತಿಭಾನುರಾತ್ರೇಯಃ ಎಂಬುವನು ಋಷಿಯು; ವಿಶ್ವೇದೇವತೆಗಳು ದೇವತೆಯು ; ಜಗತೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಕದು ಪಂಚ ಪ್ರತಿಭಾನುರ್ಜಾಗತಂ** ಎಂದು ಹೇಳಿರುವುದು. ಅಭಿಪ್ಲವಸಂಬಂಧವಾದ ಯಾಗಗಳಲ್ಲಿ ಐದನೆಯ ದಿವಸ ವೈಶ್ವದೇವಶಸ್ತ್ರಮಂತ್ರಗಳ ಮಧ್ಯದಲ್ಲಿ ಈ ಸೂಕ್ತವನ್ನು ನಿವಿದ್ಧಾನೀಯಸೂಕ್ತವನ್ನಾಗಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಕದು ಪ್ರಿಯಾಯೇತಿ ವೈಶ್ವದೇವಂ** ಎಂಬ ಸೂತ್ರದಿಂದ (ಆ. ೭-೭) ವಿವೃತವಾಗಿರುವುದು.

---

## ಸೂಕ್ತ—೪೮

॥ ಮಂಡಲ—೫ ॥ ಅನುವಾಕ—೪ ॥ ಸೂಕ್ತ—೪೮ ॥

॥ ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ—೨ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೫

ಋಷಿಃ—ಪ್ರತಿಭಾನುರಾತ್ರೇಯಃ ॥

ದೇವತಾ—ವಿಶ್ವೇದೇವಾಃ ॥

ಛಂದಃ— ಜಗತೀ ॥

---

॥ ಸಂಹಿತಾಪಾಠಃ ॥

ಕದು ಪ್ರಿಯಾಯ ಧಾಮ್ನೇ ಮನಾಮಹೇ ಸ್ವಕ್ಷತ್ರಾಯ ಸ್ವಯಶಸೇ ಮಹೇ ವಯಂ ।

ಆಮೇನ್ಯಸ್ಯ ರಜಸೋ ಯದಭ್ರ ಆಁ ಅಪೋ ವೃಣಾನಾ ವಿತನೋತಿ ಮಾಯಿನೀ ॥ ೧ ॥

॥ ಪದಪಾಠಃ ॥

ಕತ್ । ಊಂ ಇತಿ । ಪ್ರಿಯಾಯ । ಧಾಮ್ನೇ । ಮನಾಮಹೇ । ಸ್ವಃಕ್ಷತ್ರಾಯ । ಸ್ವಯಶಸೇ । ಮಹೇ । ವಯಂ ।

ಆಮೇನ್ಯಸ್ಯ । ರಜಸಃ । ಯತ್ । ಅಭ್ರೇ । ಆ । ಅಪಃ । ವೃಣಾನಾ । ವಿತನೋತಿ । ಮಾಯಿನೀ ॥ ೧ ॥

॥ ಸಾಯಣಭಾಷ್ಯಂ ॥

**ಅತ್ರ ವೈದ್ಯುತಾಗ್ನಿಸಂಸ್ತವಃ । ಕದು ಕದಾ । ಉ ಇತಿ ಪೂರಣಃ । ಪ್ರಿಯಾಯ ಸರ್ವೇಷಾಂ ಪ್ರಿಯಭೂತಾಯ । ವೃಷ್ಟಿದ್ವಾರಾ ಹವಿರಾದಿಪ್ರಯೋಜಕತ್ವಾತ್ಸರ್ವಪ್ರಿಯತ್ವಮಸ್ಯ ಪ್ರಸಿದ್ಧಂ । ತಾದೃಶಾಯ ಧಾಮ್ನೇ ತೇಜಸೇ ವೈದ್ಯುತಾಯ । ಉತ್ತರವಾಕ್ಯೇಽಭ್ರೇಽಪೋ ವಿತನೋತೀತಿ ವಕ್ಷ್ಯಮಾಣತ್ವಾದಿದಂ ಲಭ್ಯತೇ । ಕೀದೃಶಾಯ । ಸ್ವಕ್ಷತ್ರಾಯ ಸ್ವಭೂತಬಲಾಯ ಕಿಂಚ ಸ್ವಯಶಸೇ ಸ್ವಭೂತಾನ್ನಾಯ। ಸರ್ವಮಪ್ಯನ್ನಂ ಹ್ಯಸ್ಯ ಸ್ವಂ । ಮಹೇ ಮಹತೇ ಪೂಜ್ಯಾಯ ವಯಂ ಕದಾ ಮನಾಮಹೇ । ಸ್ತವಾಮ । ಯತ್ ॥ ಉತ್ತರತ್ರ ಸ್ತ್ರೀಲಿಂಗನಿರ್ದೇಶಾದ್ಯೇತಿ ವಿಪರಿಣಾಮಯಿತವ್ಯಂ ॥ ಯಾಗ್ನೇಯೀ ಶಕ್ತಿರಮೇನ್ಯಸ್ಯ ಸಮಂತಾನ್ಮಾತವ್ಯಸ್ಯ ರಜಸೋಽಂತರಿಕ್ಷಸ್ಯ । ಅಪರಿಮಿತಮಪಿ ನಭ ಇಯದಿತಿ ಸರ್ವೈರ್ನಿರ್ಮೀಯತೇ । ಸಂಬಂಧಿನ್ಯಭ್ರೇ ಮೇಘೇ ಆ ಅಧಿ ಮೇಘಸ್ಯೋಪರ್ಯಪ ಉದಕಾನಿ ವೃಷ್ಟಿಲಕ್ಷಣಾನಿ ವಿತನೋತಿ ವಿಸ್ತಾರಯತಿ ವೃಣಾನಾಚ್ಛಾದಯಂತೀ ಸೇವ್ಯಮಾನಾ ವಾ ಮಾಯಿನೀ । ಮಾಯೇತಿ ಪ್ರಜ್ಞಾನಾಮ । ಪ್ರಜ್ಞಾವತೀ ಸತೀ । ಯದ್ಯಸ್ಯ ಸಂಬಂಧಿನೀ ಮಾಧ್ಯಮಿಕೀ ವಾಗಿತಿ ವಾ ಯೋಜ್ಯಂ ॥**

॥ ಪ್ರತಿಪದಾರ್ಥ ॥

**ಪ್ರಿಯಾಯ**— ಸರ್ವರಿಗೂ ಹಿತಕರವಾದುದೂ । **ಸ್ವಕ್ಷತ್ರಾಯ**—ಸ್ವಾಯತ್ತವಾದ ಶಕ್ತಿಯುಳ್ಳದ್ದೂ । **ಸ್ವಯಶಸೇ**—ಸ್ವಯಂ ಸಂಪಾದಿತವಾದ ಅನ್ನವುಳ್ಳದ್ದೂ । **ಮಹೇ**— ಪೂಜ್ಯವಾದದ್ದೂ ಆದ । **ಧಾಮ್ನೇ**—ವಿದ್ಯುದ್ರೂಪವಾದ ತೇಜಸ್ಸನ್ನುದ್ದೇಶಿಸಿ । **ಕದು**—ಯಾವಾಗ । **ವಯಂ**—ನಾವು । **ಮನಾಮಹೇ**—ಸ್ತುತಿಯನ್ನರ್ಪಿಸೋಣ । **ಮಾಯಿನೀ**— ಪ್ರಜ್ಞಾಯುತವಾದ । **ಯತ್**—ಯಾವ ಈ ಜ್ಯೋತಿಯು । **ಅಮೇನ್ಯಸ್ಯ**—ಪರಿಮಾಣದಿಂದ ನಿರ್ದಿಷ್ಟವಾದ । **ರಜಸಃ**—ಅಂತರಿಕ್ಷಕ್ಕೆ ಸಂಬಂಧಿಸಿದ । **ಅಭ್ರೇ ಆ**—ಮೇಘದ ಊರ್ಧ್ವಪ್ರದೇಶದಲ್ಲಿ । **ವೃಣಾನಾ**—ಅಂತರಿಕ್ಷವನ್ನು ಆಚ್ಛಾದಿಸುತ್ತಾ । **ಅಪಃ**—ಉದಕಗಳನ್ನು । **ವಿತನೋತಿ**—ವಿಸ್ತಾರವಾಗಿ ಹರಡುತ್ತದೆ ।

॥ ಭಾವಾರ್ಥ ॥

ಸರ್ವರಿಗೂ ಹಿತಕರವಾದುದೂ, ಸ್ವಾಯತ್ತವಾದ ಶಕ್ತಿಯುಳ್ಳದ್ದೂ, ಸ್ವಯಂಸಂಪಾದಿತವಾದ ಅನ್ನವುಳ್ಳದ್ದೂ, ಪೂಜ್ಯವಾದದ್ದೂ, ಆದ ವಿದ್ಯುದ್ರೂಪವಾದ ತೇಜಸ್ಸನ್ನುದ್ದೇಶಿಸಿ ನಾವು ಯಾವಾಗ ಸ್ತುತಿಯನ್ನು ಅರ್ಪಿಸೋಣ? ಪ್ರಜ್ಞಾಶಕ್ತಿಯಿಂದ ಕೂಡಿದ ಈ ಜ್ಯೋತಿಯು ಅಪರಿಮಿತವಾದುದೂ ಪರಿಮಾಣದಿಂದ ನಿರ್ದಿಷ್ಟವಾದುದೂ ಆದ ಅಂತರಿಕ್ಷದಲ್ಲಿ ಮೇಘದ ಊರ್ಧ್ವಪ್ರದೇಶದಲ್ಲಿ ಅಂತರಿಕ್ಷವನ್ನು ವ್ಯಾಪಿಸುತ್ತಾ ಉದಕಗಳನ್ನು ವಿಸ್ತಾರವಾಗಿ ಹರಡುತ್ತದೆ.

## English Translation

When may we offer adoration to the benevolent splendour, strong in its own (strength), self-sustaining with food, deserving of worship : when the delusive (energy of Agni), investing (the heavens), spreads the waters above the clouds over the unbounded firmament.

॥ ಸಂಹಿತಾಪಾಠಃ ॥

ತಾ ಅತ್ನತ ವಯುನಂ ವೀರವಕ್ಷಣಂ ಸಮಾನ್ಯಾ ವೃತಯಾ ವಿಶ್ವಮಾ ರಜಃ।
ಅಪೋ ಅಪಾಚೀರಪರಾ ಅಪೇಜತೇ ಪ್ರ ಪೂರ್ವಾಭಿಸ್ತಿರತೇ ದೇವ-
ಯುರ್ಜನಃ ॥ ೨ ॥

॥ ಪದಪಾಠಃ ॥

ತಾಃ । ಅತ್ನತ । ವಯುನಂ । ವೀರಽವಕ್ಷಣಂ । ಸಮಾನ್ಯಾ । ವೃತಯಾ । ವಿಶ್ವಂ । ಆ । ರಜಃ ।
ಅಪೋ ಇತಿ । ಅಪಾಚೀಃ । ಅಪರಾಃ । ಅಪ । ಈಜತೇ । ಪ್ರ । ಪೂರ್ವಾಭಿಃ । ತಿರತೇ । ದೇವಽಯುಃ । ಜನಃ ॥

॥ ಸಾಯಣಭಾಷ್ಯಂ ॥

ಇಯಮುಷಸ್ಯಾ । ತಾ ಉಷಸೋಽತ್ನತ । ವಿತನ್ವಂತಿ । ಕಿಂ । ವಯುನಂ ಪ್ರಜ್ಞಾನಂ । ಕೀದೃಶಂ । ವೀರವಕ್ಷಣಂ ವೀರೈರ್ಯುತ್ವಿಗ್ಭಿರ್ವಹನೀಯಂ । ಯದ್ವಾ । ವಕ್ಷಣಾಃ ಕಾರ್ಯವೋಢಾರೋ ಯೇನ ಪ್ರೇರ್ಯಂತೇ ತತ್ತಾದೃಶಂ । ಕಿಂಚ ಸಮಾನ್ಯೈಕರೂಪಯಾ ವೃತಯಾವರಕಯಾ ದೀಪ್ತ್ಯಾ ವಿಶ್ವಮಾ ಸರ್ವಮಪಿ ರಜೋ ಜಗದತ್ನತ । ಏವಂ ಸತಿ ದೇವಯುರ್ದೇವಕಾಮೋ ಜನೋಽಪಾಚೀರಪಾಂಚನಾಃ ಪ್ರತಿನಿವೃತ್ತಮುಖೀರಪರಾ ಅನ್ಯಾ ಆಗಾಮಿನೀರುಷಸೋಽಪೇಜತೇ । ಅಪಚಾಲಯತಿ । ಅಪರೋಽಪ- ಶಬ್ದಃ ಪೂರಣಃ । ಪೂರ್ವಾಭಿಸ್ತಾಭಿಃ ಪ್ರ ತಿರತೇ । ಪ್ರಪೂರ್ವಸ್ತಿರತಿರ್ವರ್ಧನಾರ್ಥಃ । ವರ್ಧಯತಿ ಸ್ವಮನೀಷಾಂ ವರ್ಧತೇ ವಾ ಸ್ವಯಂ ॥

॥ ಪ್ರತಿಪದಾರ್ಥ ॥

**ತಾಃ**—ಆ ಉಷಸ್ಸುಗಳು । **ವೀರವಕ್ಷಣಂ**—ಪ್ರಾಜ್ಞರಾದ ಋತ್ವಿಗಾದಿಗಳಿಂದ ವಹಿಸಲ್ಪಡತಕ್ಕ । **ವಯುನಂ**—ಜ್ಞಾನವನ್ನು । **ಅತ್ನತ**—ಹರಡುತ್ತವೆ । **ಸಮಾನ್ಯಾ**—ಒಂದೇ ರೂಪವುಳ್ಳದ್ದೂ । **ವೃತಯಾ**—ವ್ಯಾಪಕವಾದುದೂ ಆದ ಕಾಂತಿಯಿಂದ । **ವಿಶ್ವಂ**—ಸಮಸ್ತವಾದ । **ಆ ರಜಃ**—ಲೋಕವನ್ನೆಲ್ಲಾ ( ಆವರಿಸುತ್ತದೆ ) । **ದೇವಯುಃ**—ದೇವಕಾಮನಾದ । **ಜನಃ**—ಪುರುಷನು । **ಅಪಾಚೀಃ**—ಪ್ರತಿನಿವೃತ್ತವಾದ ಮುಖಗಳುಳ್ಳವೂ । **ಅಪರಾಃ**—ಮುಂದಕ್ಕೆ ಆವಿರ್ಭವಿಸುವುವೂ ಆದ ಉಷಸ್ಸುಗಳನ್ನು । **ಅಪೇಜತೇ**—ವಿಸರ್ಜಿಸುತ್ತಾನೆ । **ಪೂರ್ವಾಭಿಃ**—ಹಿಂದೆ ಆವಿರ್ಭೂತವಾದ ಉಷಸ್ಸುಗಳೊಂದಿಗೆ । **ಪ್ರ ತಿರತೇ**—ವೃದ್ಧಿಯನ್ನು ಹೊಂದುತ್ತಾನೆ

॥ ಭಾವಾರ್ಥ ॥

ಉಷಸ್ಸುಗಳು ಪ್ರಾಜ್ಞರಾದ ಋತ್ವಿಗಾದಿಗಳಿಂದ ವಹಿಸಲ್ಪಡತಕ್ಕ ಜ್ಞಾನವನ್ನು ಹರಡುತ್ತವೆ. ಒಂದೇ ರೂಪವುಳ್ಳದ್ದೂ, ವ್ಯಾಪಕವಾದುದೂ ಆದ ಕಾಂತಿಯಿಂದ ಸಮಸ್ತವಾದ ಲೋಕವನ್ನೆಲ್ಲಾ ಆವರಿಸುತ್ತದೆ. ದೇವ

ಕಾಮನಾದ ಪುರುಷನು ಪ್ರತಿನಿವೃತ್ತಗಳಾದ ಮುಖಗಳುಳ್ಳವೂ, ಮುಂದಕ್ಕೆ ಆವಿರ್ಭವಿಸುವುವೂ ಆದ ಉಷಸ್ಸುಗಳನ್ನು ವಿಸರ್ಜಿಸುತ್ತಾನೆ. ಹಿಂದೆ ಆವಿರ್ಭೂತವಾದ ಉಷಸ್ಸುಗಳೊಂದಿಗೆ ವೃದ್ಧಿಯನ್ನು ಹೊಂದುತ್ತಾನೆ.

English Translation

These dawns diffuse the consciousness that is apprehended by pious men and (overspread) the whole world with uniform, investing (light). the devout man disregards the dawns which have turned back and (those which) are to come, and improves (his understanding) by those which have proceded

॥ ಸಂಹಿತಾಪಾಠಃ ॥

ಆ ಗ್ರಾವಭಿರಹನ್ಯೇಭಿರಕ್ತುಭಿರ್ವರಿಷ್ಠಂ ವಜ್ರಮಾ ಜಿಘರ್ತಿ ಮಾಯಿನಿ ।
ಶತಂ ವಾ ಯಸ್ಯ ಪ್ರಚರನ್ತ್ಸ್ವೇ ದಮೇ ಸಂವರ್ತಯಂತೋ ವಿ ಚ ವರ್ತ-
ಯನ್ನಹಾ ॥ ೩ ॥

॥ ಪದಪಾಠಃ ॥

ಆ । ಗ್ರಾವಽಭಿಃ । ಅಹನ್ಯೇಭಿಃ । ಅಕ್ತುಽಭಿಃ । ವರಿಷ್ಠಂ । ವಜ್ರಂ । ಆ । ಜಿಘರ್ತಿ । ಮಾಯಿನಿ ।
ಶತಂ । ವಾ । ಯಸ್ಯ । ಪ್ರಽಚರನ್ । ಸ್ವೇ । ದಮೇ । ಸಂಽವರ್ತಯಂತಃ । ವಿ । ಚ । ವರ್ತಯನ್ ।
ಅಹಾ ॥ ೩ ॥

॥ ಸಾಯಣಭಾಷ್ಯಂ ॥

ಅತ್ರ ಪೂರ್ವಾರ್ಧ ಇಂದ್ರ ಉಚ್ಯತ ಉತ್ತರಾರ್ಧ ಇಂದ್ರಾತ್ಮಾ ಸೂರ್ಯಃ । ಆ ಹೂಯತ ಇತಿ ಶೇಷಃ । ಕೈಃ । ಅಹನ್ಯೇಭಿರಹನಿ ಸಂಪಾದಿತೈರಕ್ತುಭೀ ರಾತ್ರಿಭಿಃ । ತತ್ರ ನಿಷ್ಪನ್ನೈರಿತ್ಯರ್ಥಃ । ತಥಾವಿಧೈರ್ಗ್ರಾವಭಿಃ । ಸಾಧ್ಯೇ ಸಾಧನಶಬ್ದಃ ಗ್ರಾವಸಾಧ್ಯೈರಭಿಷವೈರ್ನಿಮಿತ್ತಭೂತೈಃ । ಆಗತ್ಯಾತ್ರ ಸೋಽಮೀಸನ್ ಮಾಯಿನಿ ವೃತ್ರೇ ನಿಮಿತ್ತೇ ಸತಿ ವರಿಷ್ಠಮುರುತರಂ ವಜ್ರಮಾ ಸರ್ವತೋ ಜಿಘರ್ತಿ । ದೀಪಯತಿ। ವಾ ಕಿಂಚ । ವಾಶಬ್ದಶ್ಚಾರ್ಥೇ । ಯಸ್ಯೇಂದ್ರಾತ್ಮಕಸ್ಯಾದಿತ್ಯಸ್ಯ ಶತಂ ಶತಸಂಖ್ಯಾಕಾ ರಶ್ಮಯಃ ಸ್ವೇ ದಮೇ ಸ್ವಕೀಯೇ ಗೃಹ ಆಕಾಶೇ ಪ್ರಚರನ್ ಪ್ರಚರಂತಿ । ಕಿಂ ಕುರ್ವಂತಃ । ಸಂವರ್ತಯಂತಃ ಪ್ರಾಣಿನೋ

ನಾಶಯಂತಃ । ಯದ್ವಾ । ಅಹಾಹಾನಿ ದಿವಸಾನ್ ಸಂವರ್ತಯಂತಃ ಸಮ್ಯಕ್ ಪ್ರವರ್ತಯಂತೋ ವಿ ಚ ವರ್ತಯನ್ ಅಹಾಹಾನಿ ನಿವರ್ತಯಂತಿ ಗತಾನ್ಯೇವ ಪುನಃ ಪ್ರಾಪಯಂತಿ ಚ । ತಪನಪರಿಸ್ಪಂದಾಧೀನತ್ವಾತ್ಪ್ರಾಣಿನಾಮಾಯುಃಕ್ಷಯಸ್ಯಾಹೋರಾತ್ರಾದಿವ್ಯವಹಾರಸ್ಯ ॥

॥ ಪ್ರತಿಪದಾರ್ಥ ॥

ಯಸ್ಯ—ಆದಿತ್ಯಾತ್ಮಕನಾದ ಯಾವ ಇಂದ್ರನ । **ಶತಂ**—ಶತಸಂಖ್ಯಾಕವಾದ ರಶ್ಮಿಗಳು । **ಸಂವರ್ತಯಂತಃ**—ಆವಿರ್ಭೂತಗಳಾದ ದಿನಗಳನು ಅಪಗತವಾಗುವಂತೆ ಮಾಡುತ್ತಲೂ । **ವಿ ಚ ವರ್ತಯನ್**—ಪುನಃ ಅದೇ ಅಹಸ್ಸುಗಳನ್ನು ಆವಿರ್ಭೂತವಾಗುವಂತೆ ಮಾಡುತ್ತಲೂ । **ಸ್ವೇ ದಮೇ**—ತನ್ನ ಸ್ವಂತಸ್ಥಾನವಾದ ಆಕಾಶದಲ್ಲಿ । **ಪ್ರಚರನ್**—ಸಂಚರಿಸುವುವೋ ಅಂತಹ ಇಂದ್ರನು । **ಅಹನ್ಯೇಭಿಃ**—ಅಹಸ್ಸುಗಳಲ್ಲಿ ಸಂಪಾದಿತವಾದವೂ । **ಅಕ್ತುಭಿಃ**-ರಾತ್ರಿ ಸಂಪಾದಿತವಾದವೂ ಆದ । **ಆ ಗ್ರಾವಭಿಃ**-ಸೋಮರಸಗಳಿಂದ (ಉತ್ತೇಜಿತನಾಗಿ) । **ಮಾಯಿನಿ**-ವಂಚಕನಾದ ವೃತ್ರನಮೇಲೆ ಪ್ರಯೋಗಿಸಲ್ಪಡತಕ್ಕದ್ದೂ । **ವರಿಷ್ಠಂ**—ವಿಸ್ತೃತವಾದುದೂ ಆದ । **ವಜ್ರಂ**—ವಜ್ರಾಯುಧವನ್ನು । **ಆ ಜಿಘರ್ತಿ**—ಹರಿತವಾದುದನ್ನಾಗಿ ಮಾಡುತ್ತಾನೆ

॥ ಭಾವಾರ್ಥ ॥

ಆದಿತ್ಯಾತ್ಮಕನಾದ ಯಾವ ಇಂದ್ರನ ಶತಸಂಖ್ಯಾಕವಾದ ರಶ್ಮಿಗಳು ಆವಿರ್ಭೂತಗಳಾದ ದಿನಗಳನ್ನು ಅಸ್ತಮಯವಾಗುವಂತೆ ಮಾಡುತ್ತಲೂ, ಪುನಃ ಅದೇ ಅಹಸ್ಸುಗಳನ್ನು ಆವಿರ್ಭೂತವಾಗುವಂತೆ ಮಾಡುತ್ತಲೂ ತನ್ನ ಸ್ವಂತಸ್ಥಾನದಲ್ಲಿ ಸಂಚರಿಸುವುವೋ ಅಂತಹ ಇಂದ್ರನು ಅಹೋರಾತ್ರಗಳೆರಡುಕಾಲಗಳಲ್ಲಿಯೂ ಸಂಪಾದಿತವಾದ ಸೋಮರಸಗಳಿಂದ ಉತ್ತೇಜಿತನಾಗಿ ವಂಚಕನಾದ ವೃತ್ರನ ಮೇಲೆ ಪ್ರಯೋಗಿಸಲ್ಪಡತಕ್ಕದ್ದೂ ವಿಸ್ತೃತವೂ ಆದ ವಜ್ರಾಯುಧವನ್ನು ಹರಿತವಾಗಿ ಮಾಡುತ್ತಾನೆ.

English Translation

(Animated) by the libations offered by day and by night, (Indra) sharpens his vast thunderbolt against the beguiler (Vritra); he whose hundred (rays) attend him in his own abode, sending away, and bringing back (revolving) days

---

॥ ಸಂಹಿತಾಪಾಠಃ ॥

ತಾವಸ್ಯ ರೀತಿಂ ಪರಶೋರಿವ ಪ್ರತ್ಯನೀಕಮಖ್ಯಂ ಭುಜೇ ಅಸ್ಯ ವರ್ಪಸಃ ॥

ಸಚಾ ಯದಿ ಪಿತುಮಂತಮಿವ ಕ್ಷಯಂ ರತ್ನಂ ದಧಾತಿ ಭರಹೂತಯೇ ವಿಶೇ ॥ ೪ ॥

॥ ಪದಪಾಠಃ ॥

ತಾಂ । ಅಸ್ಯ । ರೀತಿಂ । ಪರಶೋಃऽಇವ । ಪ್ರತಿ । ಅನೀಕಂ । ಅಖ್ಯಂ । ಭುಜೇ । ಅಸ್ಯ । ವರ್ಪಸಃ ।

ಸಚಾ । ಯದಿ । ಪಿತುಮಂತಂಽಇವ । ಕ್ಷಯಂ । ರತ್ನಂ । ದಧಾತಿ । ಭರऽಹೂತಯೇ । ವಿಶೇ ॥ ೪ ॥

॥ ಸಾಯಣಭಾಷ್ಯಂ ॥

ಇಯಮಪ್ಯಾಗ್ನೇಯೀ । ತಾಂ ಪ್ರಸಿದ್ಧಾಮಸ್ಯಾಗ್ನೇ ರೀತಿಂ ಸ್ವಭಾವಂ ಗತಿಂ ವಾ ಪರಶೋರಿವ ಪ್ರತಿ ಪರಶೋಃ ಪ್ರತಿನಿಧಿಮಿವ ಪಶ್ಯಾಮಿ । ಪರಶುರ್ಯಥಾ ಸ್ವಸ್ವಾಮಿನ್ಯಭಿಮತಂ ಸಾಧಯತಿ ತದ್ವದಿತ್ಯರ್ಥ;। ಅಸ್ಯ ವರ್ಪಸೋ ರೂಪವತೋಽಸ್ಯಾದಿತ್ಯಸ್ಯಾನೀಕಂ ರಶ್ಮಿಸಮೂಹಂ ಭುಜೇ ಭೋಗಾಯಾಖ್ಯಂ । ಕಥಯಾಮ್ಯಹಂ । ಯದಿ ಯಸ್ಮಾತ್ಸ ಚ ದೇವಃ ಸಚಾಽಸ್ಮತ್ಸಹಾಯಃ ಸನ್ ಪಿತುಮಂತಮನ್ನವಂತಂ ಕ್ಷಯಮಿವ ನಿವಾಸಮಿವ ಭರಹೂತಯೇ ಸಂಗ್ರಾಮೇ ಯಜ್ಞೇ ವಾಹ್ವಾನಯುಕ್ತಾಯ ವಿಶೇ ಯಜಮಾನಾಯ ರತ್ನಂ ರಮಣೀಯಂ ಧನಂ ದಧಾತಿ ಧಾರಯತಿ । ಉಭಯಮಪಿ ದದಾತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಸ್ಯ**—ಈ ಅಗ್ನಿಯ । **ತಾಂ**—ಪ್ರಸಿದ್ಧವಾದ । **ರೀತಿಂ**--ಸ್ವಭಾವವನ್ನು (ವ್ಯವಹಾರಗತಿಯನ್ನು) । **ಪರಶೋಃ ಪ್ರತಿ**—ಪರಶುವಿನ ಪ್ರತಿನಿಧಿಯಂತೆ (ನೋಡುತ್ತಿದ್ದೇನೆ) । **ಅಸ್ಯ ವರ್ಪಸಃ**—ತೇಜೋರೂಪಿಯಾದ ಈ ಆದಿತ್ಯನ । **ಅನೀಕಂ**—ರಶ್ಮಿಸಮೂಹವನ್ನು । **ಭುಜೇ**—ಪ್ರಾಣಿಗಳ ಭೋಗಸಾಧನವೆಂದು । **ಅಖ್ಯಂ**—ಪೂಜಿಸುತ್ತೇನೆ । **ಯದಿ**—ಒಂದು ವೇಳೆ । **ಸಚಾ**—ಯಜ್ಞಕರ್ತನೊಂದಿಗೆ (ಈ ಆದಿತ್ಯನು) ಸಹಾಯಕನಾಗಿದ್ದರೆ, (ಆಗ) । **ಭರಹೂತಯೇ**—ಯಜ್ಞಸ್ಥಾನದಲ್ಲಿ ಇವನನ್ನು ಪ್ರಾರ್ಥಿಸುವ । **ವಿಶೇ**—ಯಜಮಾನನಿಗೆ । **ಪಿತುಮಂತಂ**—ಅನ್ನ ಭರಿತವಾದ । **ಕ್ಷಯಂ ಇವ**—ಗೃಹದಂತಿರುವ । **ರತ್ನಂ**—ರಮಣೀಯವಾದ ಧನವನ್ನು । **ದಧಾತಿ**—ಕೊಡುತ್ತಾನೆ.

॥ ಭಾವಾರ್ಥ ॥

ಅಗ್ನಿಯ ಪ್ರಸಿದ್ಧವಾದ ವ್ಯವಹಾರಗತಿಯನ್ನು ಪರಶುವಿನ ಪ್ರತಿನಿಧಿಯಂತೆ ನೋಡುತ್ತಿದ್ದೇನೆ. ತೇಜೋರೂಪಿಯಾದ ಈ ಆದಿತ್ಯನ ರಶ್ಮಿಸಮೂಹವನ್ನು ಪ್ರಾಣಿಗಳ ಭೋಗಸಾಧನವೆಂದು ಪೂಜಿಸುತ್ತೇನೆ. ಈ ಆದಿತ್ಯನು ಯಜ್ಞಕರ್ತನೊಂದಿಗಿರುವಾಗ ಯಜ್ಞಸ್ಥಾನದಲ್ಲಿ ಇವನನ್ನು ಪ್ರಾರ್ಥಿಸುವ ಯಜಮಾನನಿಗೆ ಅನ್ನಭರಿತವಾದ ಗೃಹದಂತಿರುವ ರಮಣೀಯವಾದ ಧನವನ್ನು ಕೊಡುತ್ತಾನೆ

## English Translation

(I behold) the practice of that (Agni) as of a deputy: I celebrate the host (of rays) of that (resplendent) form, (designed for the enjoyment (of mankind)· if he be with (the worshipper), he bestows upon the man who invokes him at a sacrifice such opulence as a mansion abounding with food.

॥ ಸಂಹಿತಾಪಾಠಃ ॥

ಸ ಜಿಹ್ವಯಾ ಚತುರನೀಕ ಋಂಜತೇ ಚಾರು ವಸಾನೋ ವರುಣೋ ಯತನ್ನರಿಂ ।
ನ ತಸ್ಯ ವಿದ್ಮ ಪುರುಷತ್ವತಾ ವಯಂ ಯತೋ ಭಗಃ ಸವಿತಾ ದಾತಿ ವಾರ್ಯಂ ॥ ೫ ॥

॥ ಪದಪಾಠಃ ॥

ಸಃ । ಜಿಹ್ವಯಾ । ಚತುಃಽಅನೀಕಃ । ಋಂಜತೇ । ಚಾರು । ವಸಾನಃ । ವರುಣಃ । ಯತನ್ । ಅರಿಂ ।
ನ । ತಸ್ಯ । ವಿದ್ಮ । ಪುರುಷತ್ವತಾ । ವಯಂ । ಯತಃ । ಭಗಃ । ಸವಿತಾ । ದಾತಿ । ವಾರ್ಯಂ ॥ ೫ ॥

॥ ಸಾಯಣಭಾಷ್ಯಂ ॥

ಸೋಽಗ್ನಿಶ್ಚತುರನೀಕಶ್ಚತುರ್ದಿಕ್ಷು ಪ್ರಸೃತಜ್ವಾಲಃ ಸನ್ ಜಿಹ್ವಯಾ ಋಂಜತೇ । ಗಚ್ಛತಿ ಘೃತಾದಿಕಂ । ಯದ್ವಾ । ಜಿಹ್ವಯಾ ಚತುರನೀಕಃ ಸನ್ ಋಂಜತೇ । ಅಲಂಕರೋತಿ ಸ್ವಾತ್ಮಾನಂ । ಕಿಂ ಕುರ್ವನ್ । ಚಾರು ರಮಣೀಯಂ ತೇಜೋ ವಸಾನ ಆಚ್ಛಾದಯನ್ ವರುಣಸ್ತಮೋವಾರಕಃ ಸನ್ ಅರಿಮಮಿತ್ರಂ ಯತನ್ ಉದ್ಧರನ್ । ತಸ್ಯ । ತಮಿತ್ಯರ್ಥಃ । ತಂ ನ ವಿದ್ಮ । ನ ಜಾನೀಮೋ ವಯಂ ಪುರುಷತ್ವತಾ ಪುರುಷತ್ವೇನ ಕಾಮಾನಾಂ ಪೂರಕತ್ವೇನ ವಾ ಯುಕ್ತಂ ॥ ಅಪರೋ ಭಾವಪ್ರತ್ಯಯಃ ಪೂರಣಃ । ಯತೋಽಯಂ ಭಗೋ ಮಹಾನ್ ಭಜನೀಯಃ ಸವಿತಾ ಪ್ರೇರಕೋ ದೇವೋ ದಾತಿ ಯಚ್ಛತಿ ವಾರ್ಯಂ ವರಣೀಯಂ ಧನಂ ॥

॥ ಪ್ರತಿಪದಾರ್ಥ ॥

**ಸಃ**—ಅಗ್ನಿಯು । **ಚಾರು**—ರಮಣೀಯವಾದ ತೇಜಸ್ಸನ್ನು । **ವಸಾನಃ**—ಹರಡುತ್ತಲೂ । **ವರುಣಃ**—ತಮೋನಿವಾರಕನಾಗಿ । **ಅರಿಂ**—ಶತ್ರುವನ್ನು । **ಯತನ್**—ನಿರ್ಮೂಲವಮಾಡುತ್ತಲೂ । **ಚತುರನೀಕಃ**—ನಾಲ್ಕು ದಿಕ್ಕುಗಳಲ್ಲಿಯೂ ತನ್ನ ಜ್ವಾಲೆಯನ್ನು ಪ್ರಸರಿಸುತ್ತಲೂ। **ಜಿಹ್ವಯಾ**—ಜಿಹ್ವಾರೂಪದ ಜ್ವಾಲೆಗಳಿಂದ। **ಋಂಜತೇ**—ಯಜ್ಞಭೂಮಿಯನ್ನಲಂಕರಿಸುತ್ತಾನೆ । **ಯತಃ**—ಯಾವನ ಮಾಹಾತ್ಮ್ಯದಿಂದ । **ಭಗಃ**—ಪೂಜ್ಯನಾದ । **ಸವಿತಾ**—ಸವಿತೃದೇವನು । **ವಾರ್ಯಂ**—ಅಪೇಕ್ಷಿತವಾದ ಧನವನ್ನು । **ದಾತಿ**—ಕೊಡುತ್ತಾನೆಯೋ । **ತಸ್ಯ**—ಆ ದೇವನನ್ನು । **ಪುರುಷತ್ವತಾ**—ಪುರುಷರೂಪದಿಂದ । **ವಯಂ**—ನಾವು । **ನ ವಿದ್ಮ**—ಅರಿಯಲಾರೆವು.

॥ ಭಾವಾರ್ಥ ॥

ಅಗ್ನಿಯು ರಮಣೀಯವಾದ ತೇಜಸ್ಸನ್ನು ಹರಡುತ್ತಲೂ, ತಮೋನಾಶಕನಾಗಿ ಶತ್ರುವನ್ನು ನಿರ್ಮೂಲವಮಾಡುತ್ತಲೂ ನಾಲ್ಕು ದಿಕ್ಕುಗಳಲ್ಲಿಯೂ ತನ್ನ ಜ್ವಾಲೆಯನ್ನು ಪ್ರಸರಿಸುತ್ತಲೂ ಜಿಹ್ವಾರೂಪದ ಜ್ವಾಲೆಗಳಿಂದ ಯಜ್ಞ

ಭೂಮಿಯನ್ನಲಂಕರಿಸುತ್ತಾನ ಯಾವನ ಮಹಾತ್ಮ್ಯದಿಂದ ಪೂಜ್ಯನಾದ ಸವಿತೃದೇವನು ಅಪೇಕ್ಷಿತವಾದ ಧನವನ್ನು ಕೊಡುತ್ತಾನೆಯೋ, ಆ ದೇವನನ್ನು ಪುರುಷರೂಪದಿಂದ ನಾವು ಅರಿಯಲಾರೆವು.

English Translation

Blazing with his (fiery) tongue in the four quarters (of the horizon) he proceeds (to the sacrifice), wearing beautiful (lustre), the disperser of darkness, extirpating foes · we know him not (as endowed) with manhood. whereby this adorable Savitri bestows desirable (wealth).

## ನಲವತ್ತೊಂಬತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ದೇವಂ ವ ಇತಿ ಪಂಚರ್ಚಂ ಪಂಚಮಂ ಸೂಕ್ತಮಾತ್ರೇಯಸ್ಯ ಪ್ರತಿಪ್ರಭಸ್ಯಾರ್ಷಂ ತ್ರೈಷ್ಟುಭಂ ವೈಶ್ವದೇವಂ । ದೇವಂ ವಃ ಪ್ರತಿಪ್ರಭೋಽಂತ್ಯಾ ತೃಣಪಾಣಿರಿತ್ಯನುಕ್ರಮಣಿಕಾ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು—**ದೇವಂ ವಃ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಐದನೆಯ ಸೂಕ್ತವು ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಪ್ರತಿಪ್ರಭಃ ಎಂಬುವನು ಋಷಿಯು, ವಿಶ್ವೇದೇವತೆಗಳು ದೇವತೆಯು, ತ್ರಿಷ್ಟುಪ್‌ಛಂದಸ್ಸು. ಅನುಕ್ರಮಣಿಕೆಯಲ್ಲಿ—**ದೇವಂ ವಃ ಪ್ರತಿಪ್ರಭೋಽನ್ತ್ಯಾ ತೃಣಪಾಣಿಃ** ಎಂದು ಹೇಳಿರುವುದು ವಿನಿಯೋಗವು ಲೈಂಗಿಕವು.

## ಸೂಕ್ತ—೪೯

॥ ಮಂಡಲ—೫ ॥ ಅನುವಾಕ—೪ ॥ ಸೂಕ್ತ—೪೯ ॥
॥ ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ—೩ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥
ಋಷಿಃ—ಪ್ರತಿಪ್ರಭ ಆತ್ರೇಯಃ ॥
ದೇವತಾ—ವಿಶ್ವೇದೇವಾಃ ॥
ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ದೇವಂ ವೋ ಅದ್ಯ ಸವಿತಾರಮೇಷೇ ಭಗಂ ಚ ರತ್ನಂ ವಿಭಜಂತ-
ಮಾಯೋಃ ।
ಆ ವಾಂ ನರಾ ಪುರುಭುಜಾ ವವೃತ್ಯಾಂ ದಿವೇದಿವೇ ಚಿದಶ್ವಿನಾ ಸಖೀಯನ್॥

॥ ಪದಪಾಠಃ ॥

ದೇವಂ । ವಃ । ಅದ್ಯ । ಸವಿತಾರಂ । ಆ । ಈಷೇ । ಭಗಂ । ಚ । ರತ್ನಂ । ವಿಽಭಜಂತಂ । ಆಯೋಃ ।
ಆ । ವಾಂ । ನರಾ । ಪುರುಽಭುಜಾ । ವವೃತ್ಯಾಂ । ದಿವೇಽದಿವೇ । ಚಿತ್ । ಅಶ್ವಿನಾ । ಸಖಿಽಯನ್ ॥ ೧ ॥

ಸಾಯಣಭಾಷ್ಯಂ ॥

ದೇವಂ ದ್ಯೋತಮಾನಂ ಸವಿತಾರಂ ಸರ್ವಸ್ಯಾಭ್ಯನುಜ್ಞಾತಾರಂ ವಃ । ತ್ವಾಮಿತ್ಯರ್ಥಃ । ಯದ್ವಾ ಹೋತುರಿದಂ ವಾಕ್ಯಂ । ವೋ ಯಜಮಾನೇಭ್ಯೋ ಯುಷ್ಮಭ್ಯಮರ್ಥಾಯಾದ್ಯೇದಾನೀಮೇಷೇ । ಉಪಗಚ್ಛಾಮಿ । ಭಗಂ ಚ ಭಜನೀಯಂ ದೇವಮಾಯೋರ್ಮನುಷ್ಯಸ್ಯ ಯಜಮಾನಸ್ಯ ರತ್ನಂ ರಮಣೀಯಂ ಹವಿರ್ವಿಭಜಂತಂ । ಭಗೋ ವಾಂ ವಿಭಜತ್ವಿತಿ ಹಿ ಭಗಸ್ಯ ವಿಭಜನಂ ಪ್ರಸಿದ್ಧಂ । ರಾಯೋ ವಿಭಕ್ತಾ ಸಂಭರಶ್ಚ ವಸ್ವಃ । ಋಗ್ವೇ. ೪. ೧೭. ೧೧ । ಭಗೋ ವಿಭಕ್ತಾ ಶವಸಾ । ಋಗ್ವೇ. ೫. ೪೬. ೬ । ಇತಿ ಚ ಶ್ರುತಿಃ । ಯದ್ವಾ । ಚತುರ್ಥ್ಯರ್ಥೇ ಷಷ್ಠೀ । ಯಜಮಾನಾರ್ಥಂ ರತ್ನಂ ರಮಣೀಯಂ ಧನಂ ವಿಭಜಂತಂ । ಹೇ ನರಾ ನೇತಾರೌ ಹೇ ಪುರುಭುಜಾ । ಪುರು ಭುಂಜಾತೇ ಇತಿ ಪುರುಭುಜೌ । ಹೇ ಅಶ್ವಿನಾಶ್ವಿನೌ ವಾಂ ಯುವಾಂ ದಿವೇ ದಿವೇ ಪ್ರತಿದಿವಸಮಾ ವವೃತ್ಯಾಂ । ಆವರ್ತಯಾಮ್ಯಸ್ಮದಭಿಮುಖಂ । ಸಖೀಯನ್ ಯುವಯೋಃ ಸಖಿತ್ವಮಿಚ್ಛನ್ । ಚಿದಿತಿ ಪೂರಣಃ ॥

॥ ಪ್ರತಿಪದಾರ್ಥ ॥

(ಎಲೈ ಯಜಮಾನರೇ) **ವಃ**—ನಿಮ್ಮ ಪರವಾಗಿ । **ಅದ್ಯ**—ಈ ಯಜ್ಞಕಾಲದಲ್ಲಿ । **ದೇವಂ**—ದೇವತಾತ್ಮನಾದ । **ಸವಿತಾರಂ**—ಸವಿತೃವನ್ನೂ । **ಆಯೋಃ**—ಮಾನವನಿಗೆ । **ರತ್ನಂ**—ರಮಣೀಯವಾದ ಧನವನ್ನು । **ವಿಭಜಂತಂ**—ವಿಭಾಗ ಮಾಡುವ । **ಭಗಂ ಚ**-ಭಗನನ್ನೂ । **ಏಷೇ**-(ಪ್ರಾರ್ಥಿಸಲು) ಸಮೀಪಿಸುತ್ತೇನೆ । **ನರಾ**-ನೇತೃಗಳೂ । **ಪುರುಭುಜಾ**-ಅನೇಕ ಶ್ರೇಷ್ಠವಾದ ವಸ್ತುಗಳನ್ನು ಭುಜಿಸುವ ಸಾಮರ್ಥ್ಯವುಳ್ಳವರೂ ಆದ। **ಅಶ್ವಿನಾ**-ಎಲೈ ಅಶ್ವಿನೀ ದೇವತೆಗಳೇ । **ಸಖೀಯನ್ ಚಿತ್**—ನಿಮ್ಮ ಸಖಿತ್ವವನ್ನೇ ಇಚ್ಛಿಸಿ । **ದಿವೇ ದಿವೇ**—ಪ್ರತಿದಿನವೂ । **ವಾಂ**—ನಿಮ್ಮನ್ನು । **ಆ ವವೃತ್ಯಾಂ**—ಪುನಃ ಪುನಃ ಪ್ರಾರ್ಥಿಸುತ್ತೇನೆ.

॥ ಭಾವಾರ್ಥ ॥

ಎಲೈ ಯಜಮಾನರೇ, ನಿಮ್ಮ ಪರವಾಗಿ ಈ ಯಜ್ಞಕಾಲದಲ್ಲಿ ದೇವತಾತ್ಮನಾದ ಸವಿತೃವನ್ನೂ ಮಾನವನಿಗೆ ರಮಣೀಯವಾದ ಧನವನ್ನು ವಿಭಾಗಮಾಡುವ ಭಗನನ್ನೂ ಪ್ರಾರ್ಥಿಸಲು ಸಮೀಪಿಸುತ್ತೇನೆ. ನೇತೃಗಳೂ ಅನೇಕ ಶ್ರೇಷ್ಠವಾದ ವಸ್ತುಗಳನ್ನು ಭುಜಿಸುವ ಸಾಮರ್ಥ್ಯವುಳ್ಳವರೂ ಆದ ಎಲೈ ಅಶ್ವಿನೀದೇವತೆಗಳೇ, ನಿಮ್ಮ ಸಖಿತ್ವವನ್ನೇ ಇಚ್ಛಿಸಿ ಪ್ರತಿದಿನವೂ ನಿಮ್ಮನ್ನು ಪುನಃ ಪುನಃ ಪ್ರಾರ್ಥಿಸುತ್ತೇನೆ.

## English Translation

For you, (worshippers), I approach to-day the divine Savitri and Bhaga, the distributors of precious (wealth) amongst men : Aswins, (leaders of rites), enjoyers of many (good things), desiring your friendship, I solicit your daily presence.

॥ ವಿಶೇಷವಿಷಯಗಳು ॥

ಈ ಋಕ್ಕಿನ ಪೂರ್ವಾರ್ಧದಲ್ಲಿ ಸವಿತೃ ಮತ್ತು ಭಗ ಎಂಬ ಇಬ್ಬರು ದೇವತೆಗಳನ್ನೂ, ಉತ್ತರಾರ್ಧದಲ್ಲಿ ಅಶ್ವಿನೀದೇವತೆಗಳನ್ನು ಸ್ತುತಿಸಲಾಗಿದೆ

**ವಃ**—ಇಲ್ಲಿ **ತ್ವಾಂ** ಎಂದು ಏಕವಚನಕ್ಕೆ ಬದಲಾಗಿ ವಃ ಎಂದು ಬಹುವಚನಪ್ರಯೋಗವಿದೆ **ತ್ವಾಂ** ನಿನ್ನನ್ನು ಎಂದರೆ ಸವಿತೃದೇವನಾದ ನಿನ್ನನ್ನು ಎಂದರ್ಥವು ಅಥವಾ ಈ ವಾಕ್ಯವನ್ನು ಹೋತೃವೆಂಬ ಋತ್ವಿಜನು ಯಜಮಾನರನ್ನುದ್ದೇಶಿಸಿ ಹರಿಸಿದಾನೆಂದೂ ಭಾವಿಸಬಹುದೆಂದು ಭಾಷ್ಯಕಾರರು ಹೇಳಿದಾರೆ. ಈ ಸಂದರ್ಭದಲ್ಲಿ **ವಃ** ಎಂದರೆ **ಯುಷ್ಮಭ್ಯಂ** ಯಜ್ಞಮಾಡುವ ಯಜಮಾನರಾದ ನಿಮಗೆ ಧನಲಾಭವಾಗುವುದಕ್ಕಾಗಿ ಸವಿತೃದೇವನನ್ನು ಸ್ತುತಿಸಲು ಸಮೀಪಿಸುತ್ತೇನೆ ಎಂದು **ದೇವಂ ವಃ ಅದ್ಯ ಸವಿತಾರಂ ಏಷೇ** ಎಂಬ ವಾಕ್ಯದ ಅರ್ಥವು. ಇದ ರಂತೆಯೇ ಮುಂದಿನ ವಾಕ್ಯಗಳಿಗೂ ಅರ್ಥಮಾಡಬಹುದು

**ಭಗಂ ಚ ರತ್ನಂ ಆಯೋಃ ವಿಭಜಂತಂ (ಏಷೇ)**—ಈ ವಾಕ್ಯಕ್ಕೂ ಎರಡು ವಿಧವಾದ ಅರ್ಥವು ಸಾಧ್ಯವೆಂದು ಹೇಳಿದಾರೆ. ಈ ವಾಕ್ಯದಲ್ಲಿರುವ ರತ್ನಶಬ್ದಕ್ಕೆ—**ರಮಣೀಯಂ ಹವಿಃ** । ರಮಣೀಯವಾದ ಹವಿಸ್ಸು ಅಥವಾ ಅನ್ನವು, ರಮಣೀಯವಾದ ಧನಾದಿದ್ರವ್ಯವು. ಇಂತಹ ಅನ್ನಾದ್ಯಾಹಾರ ಅಥವಾ ಧನವನ್ನು ಮನುಷ್ಯಯಜ ಮಾನನಿಗೆ ವಿಭಾಗ ಮಾಡಿಕೊಡುವವನು ಎಂದರೆ ಆಯಾ ಯಜಮಾನರು ಮಾಡುವ ಯಜ್ಞಾದಿಕರ್ಮಗಳಿಗೆ ಅನು ಸಾರವಾಗಿ ಫಲರೂಪವಾದ ಧನಾದಿಗಳನ್ನು ಕೊಡುವವನು ಎಂದಭಿಪ್ರಾಯವು. ಯಾಸ್ಕರು ಭಗಶಬ್ದಕ್ಕೆ **ಭಗೋ ಭಜತೇಃ** (ನಿ. ೧.೭) ಈ ದೇವನು ಧನಾದಿಗಳನ್ನು ವಿಭಾಗಮಾಡಿ ಕೊಡುವವನಾದ್ದರಿಂದ ಭಗನೆಂದು ಹೆಸರು ಎಂದು ನಿರ್ವಚನವನ್ನು ಹೇಳಿದಾರೆ. ಪುರಾಣಾದಿಗಳಲ್ಲಿಯೂ, ಆಧುನಿಕ ಸಂಸ್ಕೃತದಲ್ಲಿಯೂ ಭಗಶಬ್ದಕ್ಕೆ ಸಾಮಾನ್ಯವಾಗಿ ಸೂರ್ಯನೆಂಬ (ದ್ವಾದಶಾದಿತ್ಯರಲ್ಲಿ ಒಬ್ಬನೆಂಬ) ಅರ್ಥವು ರೂಢಿಯಲ್ಲಿದ್ದರೂ ಋಗ್ವೇದದಲ್ಲಿ ಭಗನೇ ಪ್ರತ್ಯೇಕವಾದ ದೇವತೆಯೆಂದು ಸ್ಪಷ್ಟವಾಗಿ ನಿರ್ದೇಶಿಸಿದೆ. ಈ ದೇವತೆಯ ಮುಖ್ಯಕರ್ತವ್ಯ, (ಯಜಮಾನರಿಗೆ ಅಥವಾ ಸ್ತೋತೃಜನರಿಗೆ) ಕರ್ಮಫಲರೂಪವಾದ ಧನಾದಿಗಳನ್ನು ವಿಭಾಗಮಾಡಿಕೊಡುವುದು ಅಥವಾ ಹಂಚುವುದೇ ಆಗಿದೆ ಈ ವಿಷಯ

ವನ್ನು ಪ್ರಕೃತಋಕ್ಕಿನಲ್ಲಿ ವಿಭಜಂತಂ ಎಂಬ ಶಬ್ದದಿಂದ ಸ್ಪಷ್ಟವಾಗಿ ಹೇಳಿದೆ. ಮತ್ತು ಈ ವಿಷಯದಲ್ಲಿ ಉದಾಹರಣೆಗಾಗಿ ಭಾಷ್ಯಕಾರರು—

**ಏಭಿರ್ನೃಭಿರ್ನೃತಮೋ ಅಸ್ಯ ಶಾಕೈ ರಾಯೋ ವಿಭಕ್ತಾ ಸಂಭರಶ್ಚ ವಸ್ವಃ ।**

(ಋ. ಸಂ. ೪-೧೭-೧೧)

**ಭಗೋ ವಿಭಕ್ತಾ ಶವಸಾವಸಾ ಗಮದುರುವ್ಯಚಾ ಅದಿತಿಃ ಶ್ರೋತು ಮೇ ಹವಂ ।**

(ಋ. ಸಂ. ೫-೪೬-೬)

ಎಂಬ ಶ್ರುತಿವಾಕ್ಯಗಳನ್ನು ಹೇಳಿದಾರೆ. ಈ ಭಗದೇವನ ಗುಣವರ್ಣನೆಯು ೭ನೆಯ ಮಂಡಲದ ೪೧ ನೇ ಸೂಕ್ತದಲ್ಲಿ ಬಹಳ ಚೆನ್ನಾಗಿ ವಿವರಿಸಲ್ಪಟ್ಟಿದೆ. ಈ ಸೂಕ್ತದಲ್ಲಿ ಭಗನನ್ನೂ ಇತರ ದೇವತೆಗಳನ್ನೂ ಪ್ರಾತಃಕಾಲದಲ್ಲಿ ಆಹ್ವಾನಿಸಲಾಗಿದೆ ಎಂದರೆ ಪ್ರಾತಃಕಾಲದಲ್ಲಿ ಆಹ್ವಾನಿಸಲ್ಪಡುವ ಅಗ್ನಿ, ಅಶ್ವಿನೀದೇವತೆಗಳು ಮೊದಲಾದ ದೇವತೆಗಳ ಗುಂಪಿನಲ್ಲಿ ಭಗನೂ ಸೇರಿದಾನೆ. ಯಾಸ್ಕರು—**ತಸ್ಯ (ಭಗಸ್ಯ) ಕಾಲ ಪ್ರಾಗುತ್ಸರ್ಪಣಾತ್** (ನಿ. ೧೨-೧೩) ಈ ದೇವತೆಯು ಪ್ರಾತಃಕಾಲದಲ್ಲಿ ಆಹ್ವಾನಿಸಲ್ಪಡಬೇಕಾದ ದೇವತೆಯೆಂದು ಹೇಳಿ, ಇದೇ ಸೂಕ್ತದ **ಪ್ರಾತರ್ಜಿತಂ ಭಗಮುಗ್ರಂ ಹುವೇಮ** ಎಂಬ ಋಕ್ಕನ್ನು ಉದಾಹರಣೆಗಾಗಿ ಕೊಟ್ಟಿದಾರೆ ಸಾಧಾರಣವಾಗಿ ಈ ಭಗನನ್ನು ಪ್ರಾತಃಕಾಲದ ದೇವತೆಗಳಾದ ಸವಿತೃ ಮತ್ತು ಅಶ್ವಿನೀದೇವತೆಗಳ ಜತೆಯಲ್ಲಿಯೇ ಆಹ್ವಾನಿಸುವುದು ರೂಢಿಯಾಗಿದೆ ಅದರಂತೆ ಪ್ರಕೃತಋಕ್ಕಿನಲ್ಲಿಯೂ ಇರುವುದು

॥ ಸಂಹಿತಾಪಾಠಃ ॥

ಪ್ರತಿ ಪ್ರಯಾಣಮಸುರಸ್ಯ ವಿದ್ವಾನ್ತ್ಸೂಕ್ತೈರ್ದೇವಂ ಸವಿತಾರಂ ದುವಸ್ಯ ।
ಉಪ ಬ್ರುವೀತ ನಮಸಾ ವಿಜಾನಞ್ಜ್ಯೇಷ್ಠಂ ಚ ರತ್ನಂ ವಿಭಜಂತಮಾಯೋಃ ॥

॥ ಪದಪಾಠಃ ॥

ಪ್ರತಿ । ಪ್ರಯಾನಂ । ಅಸುರಸ್ಯ । ವಿದ್ವಾನ್ । ಸುಉಕ್ತೈಃ । ದೇವಂ । ಸವಿತಾರಂ । ದುವಸ್ಯ ।
ಉಪ । ಬ್ರುವೀತ । ನಮಸಾ । ವಿಜಾನನ್ । ಜ್ಯೇಷ್ಠಂ । ಚ । ರತ್ನಂ । ವಿಭಜಂತಂ । ಆಯೋಃ ॥ ೨ ॥

॥ ಸಾಯಣಭಾಷ್ಯಂ ॥

ಅಸುರಸ್ಯ ಶತ್ರೂಣಾಂ ನಿರಸಿತುಃ ಸವಿತುಃ ಪ್ರತಿ ಪ್ರಯಾಣಂ ಪ್ರತ್ಯಾಗತಿಂ ವಿದ್ವಾನ್ ಜಾನನ್ ಸೂಕ್ತೈಃ ಸವಿತಾರಂ ದೇವಂ ದುವಸ್ಯ । ಪರಿಚರ ಹೇ ಅಂತರಾತ್ಮನ್ । ಕಿಂಚಾಯೋರ್ಮನುಷ್ಯಾಯ

**ಜ್ಯೇಷ್ಠಂ ರತ್ನಂ ಧನಂ ಚ ವಿಭಜಂತಂ ಗಮಯಂತಮಿತ್ಯರ್ಥಃ । ನಮಸಾ ನಮಸ್ಕಾರೇಣ ಹವಿಷಾ ವಾ ವಿಜಾನನ್ । ವಿಶೇಷೇಣ ಭಾವಯನ್ನಿತ್ಯರ್ಥಃ ॥ ಯದ್ವಾಂತರ್ಣೀತಣ್ಯರ್ಥೋಽಯಂ ॥ ಜ್ಞಾಪಯನ್ ಉಪ ಬ್ರುವೀತ । ಸ್ತೌತು ಭವಾನ್ ॥**

॥ ಪ್ರತಿಪದಾರ್ಥ ॥

**ಅಸುರಸ್ಯ**—ಶತ್ರುನಾಶಕನಾದ ಸವಿತೃವಿನ । **ಪ್ರತಿಪ್ರಯಾಣಂ**—ಪುನರಾಗಮನವನ್ನು । **ವಿದ್ವಾನ್**—ತಿಳಿದವನಾಗಿ । **ದೇವಂ**—ದೇವತಾತ್ಮನಾದ । **ಸವಿತಾರಂ**—ಸವಿತೃದೇವನನ್ನು । **ಸೂಕ್ತೈಃ**—ಉತ್ತಮವಾದ ಸ್ತುತಿಗಳಿಂದ । **ದುವಸ್ಯ**—ಪೂಜಿಸು । **ಆಯೋಃ**—ಮಾನವನಿಗೆ । **ಜ್ಯೇಷ್ಠಂ**—ಪ್ರಶಸ್ಯವಾದ । **ರತ್ನಂ**—ಧನವನ್ನು । **ವಿಭಜಂತಂ**—ವಿಭಾಗಮಾಡುವವನೆಂದು । **ವಿಜಾನನ್**—ವಿಶೇಷರೀತಿಯಿಂದ ಅರಿತು । **ನಮಸಾ**—ಹವಿಸ್ಸಿನೊಡಗೂಡಿ । **ಉಪ ಬ್ರುವೀತ**—ಸ್ತುತಿಯನ್ನು ಪಠಿಸು

॥ ಭಾವಾರ್ಥ ॥

ಶತ್ರುನಾಶಕನಾದ ಸವಿತೃವಿನ ಪುನರಾಗಮನವನ್ನು ತಿಳಿದವನಾಗಿ ದೇವತಾತ್ಮನಾದ ಸವಿತೃದೇವನನ್ನು ಉತ್ತಮವಾದ ಸ್ತುತಿಗಳಿಂದ ಪೂಜಿಸು, ಮಾನವನಿಗೆ ಪ್ರಶಸ್ಯವಾದ ಧನವನ್ನು ವಿಭಾಗಮಾಡುವವನೆಂದು ವಿಶೇಷರೀತಿಯಿಂದ ಅರಿತು ಹವಿಸ್ಸಿನೊಡಗೂಡಿ ಸ್ತುತಿವಾಕ್ಯವನ್ನು ಪಠಿಸು

## English Translation

Knowing the approach of the expeller (of the foes of the gods from heaven), worship the divine Savitri with holy hymns. praise him with reverence, distinguishing him as distributing precious (treasures) amongst men

॥ ವಿಶೇಷವಿಷಯಗಳು ॥

ಈ ಮಕ್ಕಿನಲ್ಲಿ ಸವಿತೃದೇವತೆಯನ್ನು ಸ್ತುತಿಸಲಾಗಿದೆ ಈ ಮಕ್ಕಿನಲ್ಲಿರುವ **ಜ್ಯೇಷ್ಠಂ ಚ ರತ್ನಂ ವಿಭಜಂತಮಾಯೋಃ** ಎಂಬ ವಾಕ್ಯದಲ್ಲಿ ಭಗದೇವತೆಯ ವೈಶಿಷ್ಟ್ಯವನ್ನು ಸವಿತೃವಿನಲ್ಲಿ ಆರೋಪಿಸಿ ವರ್ಣಿಸಿದೆ. ಎಂದರೆ ಧನಾದಿಗಳನ್ನು ವಿಭಾಗಮಾಡಿಕೊಡುವವನು ಭಗದೇವತೆಯಾದರೂ, ಸವಿತೃದೇವನು ಯಜಮಾನನಿಗೆ ಶ್ರೇಷ್ಠವಾದ ರತ್ನಾದಿಗಳನ್ನು ಹಂಚಿಕೊಡಲಿ ಎಂಬ ಪ್ರಾರ್ಥನೆಯು ಇಲ್ಲಿ ಉಕ್ತವಾಗಿದೆ.

॥ ಸಂಹಿತಾಪಾಠಃ ॥

ಅದತ್ರ್ಯಾ ದಯತೇ ವಾರ್ಯಾಣಿ ಪೂಷಾ ಭಗೋ ಅದಿತಿರ್ವಸ್ತ ಉಸ್ರಃ ।

ಇಂದ್ರೋ ವಿಷ್ಣುರ್ವರುಣೋ ಮಿತ್ರೋ ಅಗ್ನಿರಹಾನಿ ಭದ್ರಾ ಜನಯಂತ ದಸ್ಮಾಃ ॥ ೩ ॥

॥ ಪದಪಾಠಃ ॥

ಅದತ್ರಯಾ । ದಯತೇ । ವಾರ್ಯಾಣಿ । ಪೂಷಾ । ಭಗಃ । ಅದಿತಿಃ । ವಸ್ತೇ । ಉಸ್ರಃ ।

ಇಂದ್ರಃ । ವಿಷ್ಣುಃ । ವರುಣಃ । ಮಿತ್ರಃ । ಅಗ್ನಿಃ । ಅಹಾನಿ । ಭದ್ರಾ । ಜನಯಂತ । ದಸ್ಮಾಃ ॥ ೩ ॥

॥ ಸಾಯಣಭಾಷ್ಯಂ ॥

ಅಯಮಗ್ನಿರದತ್ರಯಾದನೀಯಾನಿ ॥ ಅದೇರೌಣಾದಿಕೋಽತ್ರಪ್ರತ್ಯಯಃ । ಸುಪಾಂ ಸುಲುಗಿತಿ ಯಾಜಾದೇಶಃ॥ ಅಥವಾತ್ತೀತ್ಯದತ್ರಾ ಜಿಹ್ವಾ । ತಯಾ ವಾರ್ಯಾಣಿ ವರಣೀಯಾನಿ ಕಾಷ್ಠಾನಿ ದಯತೇ. ದಯತಿರನೇಕಕರ್ಮಾತ್ರ ದಹನೇ ವರ್ತತೇ । ದಹತೀತ್ಯರ್ಥಃ । ಸಾಮರ್ಥ್ಯಾದಗ್ನಿರಿತಿ ಗಮ್ಯತೇ । ಯದ್ವಾ ಅದನೀಯಾನಿ ವರಣೀಯಾನ್ಯನ್ನಾನಿ ದಯತೇ। ದದಾತಿ ಯಜಮಾನಾಯ ॥ ದಯ ದಾನಗತಿಹಿಂಸಾಬಲಾಖ್ಯಾನೇಷು ॥ ಕೀದೃಶೋಽಗ್ನಿಃ ಪೂಷಾ ಪೋಷಕೋ ಭಗೋ ಭಜನೀಯೋಽದಿತಿರಖಂಡನೀಯಃ । ಯದ್ವಾ । ಪೂಷಾದಯಸ್ತ್ರಯೋಽಪಿ ಪ್ರತ್ಯೇಕಮದನೀಯಾನಿ ವಾರ್ಯಾಣಿ ಚಾನ್ನಾನಿ ದಯತೇ । ಉಸ್ರಃ ಸೂರ್ಯೋ ವಸ್ತೇ । ಆಚ್ಛಾದಯತಿ । ಸಾಮರ್ಥ್ಯಾತ್ತೇಜಾಂಸಿ । ಇಂದ್ರಾದಯಃ ಪಂಚಾಪಿ ದೇವಾ ದಸ್ಮಾ ದರ್ಶನೀಯಾ ಅಹಾನಿ ಸರ್ವಾಣ್ಯಾಗಂತ್ಯಾಣಿ ಭದ್ರಾ ಶೋಭನೀಯಾನಿ ಜನಯಂತ । ಜನಯಂತಿ । ದಿವಸಾನಾಂ ಯಾಗದಾನಾದಿವಿಶಿಷ್ಟತ್ವಮೇವ ಭದ್ರತ್ವಂ ॥

॥ ಪ್ರತಿಪದಾರ್ಥ ॥

**ಪೂಷಾ**—ಪೂಷನೂ । **ಭಗಃ**—ಭಗನೂ । **ಅದಿತಿಃ**—ಅದಿತಿಯೂ । **ಅದತ್ರಯಾ**—ಭೋಗಕ್ಕ ಯೋಗ್ಯವಾದವೂ । **ವಾರ್ಯಾಣಿ**—ಅಪೇಕ್ಷಿತವಾದವೂ ಆದ ಅನ್ನಗಳನ್ನು । **ದಯತೇ**—ಕೊಡುತ್ತಾರೆ । **ಉಸ್ರಃ**—ಸೂರ್ಯನು । **ವಸ್ತೇ**—ತೇಜಸ್ಸನ್ನು ಧರಿಸುತ್ತಾನೆ । **ದಸ್ಮಾಃ**-ದರ್ಶನೀಯವಾದ ರೂಪವುಳ್ಳ । **ಇಂದ್ರಃ**—ಇಂದ್ರನೂ। **ವಿಷ್ಣುಃ**—ವಿಷ್ಣುವೂ । **ವರುಣಃ**—ವರುಣನೂ । **ಮಿತ್ರಃ**—ಮಿತ್ರನೂ । **ಅಗ್ನಿಃ**—ಅಗ್ನಿಯೂ । **ಭದ್ರಾ**—ಮಂಗಳಕರವಾದ । **ಅಹಾನಿ**—ಅಹಸ್ಸುಗಳನ್ನು (ದಿನಗಳನ್ನು) **ಜನಯಂತ**—ಉತ್ಪನ್ನಮಾಡುತ್ತಾರೆ.

॥ ಭಾವಾರ್ಥ ॥

ಪೂಷನೂ, ಭಗನೂ, ಅದಿತಿಯೂ ಭೋಗಕ್ಕ ಯೋಗ್ಯವಾದವೂ ಅಪೇಕ್ಷಿತವಾದವೂ ಆದ ಅನ್ನಗಳನ್ನು ಕೊಡುತ್ತಾರೆ ಸೂರ್ಯನು ತೇಜಸ್ಸನ್ನು ಧರಿಸುತ್ತಾನೆ. ದರ್ಶನೀಯವಾದ ರೂಪವುಳ್ಳ ಇಂದ್ರನೂ, ವಿಷ್ಣುವೂ, ವರುಣನೂ, ಮಿತ್ರನೂ, ಅಗ್ನಿಯೂ ಮಂಗಳಕರಗಳಾದ ಅಹಸ್ಸುಗಳನ್ನು (ದಿವಸಗಳನ್ನು) ಉತ್ಪನ್ನಮಾಡುತ್ತಾರೆ

## English Translation

Pushan, Bhaga, Aditi, bestow (severally) excellent viands. the fierce (sun) robes (himself with radiance). the good-looking (deities), Indra, Vishnu, Varuna, Mitra, Agni, give birth to happy days.

॥ ವಿಶೇಷವಿಷಯಗಳು ॥

**ಅದತ್ರಯಾ-ಅದನೀಯಾನಿ** । ಭಕ್ಷಿಸುವುದಕ್ಕೆ ಯೋಗ್ಯವಾದ ಹವಿರಾದಿಗಳು ಅಥವಾ **ಅತ್ತೀತಿತ್ಯದತ್ರಾ ಜಿಹ್ವಾ ತಯಾ ಅದತ್ರಯಾ** । ತಿನ್ನುವುದಕ್ಕ ಸಾಧನವಾದ ಅಂಗ ಎಂದರೆ ಜಿಹ್ವೆ, ನಾಲಗೆ ಎಂದರ್ಥವು. ಮೊದಲನೆಯ ಅರ್ಥದಲ್ಲಿ ಅದತ್ರಯಾ ಎಂಬ ಶಬ್ದವು ದ್ವಿತೀಯಾ ಬಹುವಚನಾಂತಪದವಾಗಿ ವಾರ್ಯಾಣಿ ಎಂಬ ಶಬ್ದಕ್ಕೆ ವಿಶೇಷಣಪದವಾಗಿದೆ. ಎರಡನೆಯ ಅರ್ಥದಲ್ಲಿ ಎಂದರೆ ಜಿಹ್ವೆಯೆಂಬರ್ಥದಲ್ಲಿ ಅದತ್ರಯಾ ಎಂಬ ಶಬ್ದವು ಚತುರ್ಥ್ಯೇಕವಚನಾಂತಪದವು

**ಪೂಷಾ, ಭಗಃ, ಅದಿತಿಃ—ಪೂಷಾ ಪೋಷಕಃ** । ಆಹಾರಾದಿಗಳನ್ನು ಕೊಟ್ಟು ಪೋಷಿಸುವವನು. **ಭಗಃ ಭಜನೀಯಃ** । ಭಜಿಸುವುದಕ್ಕೆ ಎಂದರೆ ಪೂಜಿಸಲ್ಪಡಲು ಯೋಗ್ಯನಾದ ದೇವತೆಯು. **ಅದಿತಿಃ ಅಖಂಡನೀಯಃ** । ಸರ್ವತ್ರ ವ್ಯಾಪಿಸಿರುವವನು ಈ ಮೂರು ಶಬ್ದಗಳೂ ಅಗ್ನಿಗೆ ವಿಶೇಷಣವೆಂದು ಅರ್ಥಮಾಡಿದಾರೆ. ಅಥವಾ **ಪೂಷಾ, ಭಗಃ, ಅದಿತಿಃ** ಎಂಬ ಮೂರು ಪ್ರತ್ಯೇಕ ದೇವತೆಗಳೆಂದೂ ಅರ್ಥಮಾಡಬಹುದೆಂದು ಭಾಷ್ಯಕಾರರು ಹೇಳಿದಾರೆ ಅಗ್ನಿಪರವಾಗಿ ಅರ್ಥಮಾಡುವಾಗ ದಯತೇ ಎಂಬ ಕ್ರಿಯಾಪದಕ್ಕೆ—**ದಯತೇ** । **ದಯತಿರನೇಕಕರ್ಮಾತ್ರ ದಹನೇ ವರ್ತತೇ** । ದಯತಿಧಾತುವಿಗೆ ಅನೇಕಾರ್ಥಗಳಿದ್ದು ಇಲ್ಲಿ ದಹಿಸುವುದು ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. ಎಂದರೆ ಅಗ್ನಿಯು ಹವಿರಾದಿದ್ರವ್ಯಗಳನ್ನು ದಹಿಸುವನು ಎಂದಭಿಪ್ರಾಯವು. ಅಥವಾ **ದಯತೇ ದದಾತಿ ಯಜಮಾನಾಯ** । ಯಜ್ಞಮಾಡುವ ಯಜಮಾನನಿಗೆ ಅನ್ನಾದಿ ದ್ರವ್ಯಗಳನ್ನು ಕೊಡುವನು ಎಂದು ದಯತಿ ಧಾತುವಿಗೆ ದಾನಾರ್ಥವನ್ನೂ ಹೇಳಬಹುದು. ದಹನಕರ್ಮವು ಅಗ್ನಿಗೆ ಮಾತ್ರ ಅನ್ವಯಿಸುವುದು ದಾನಕರ್ಮವು ಅಗ್ನಿಗೂ, ಪೂಷಮೊದಲಾದ ಇತರ ದೇವತೆಗಳಿಗೂ ಅನ್ವಯಿಸುವುದು.

**ವಸ್ತ ಉಸ್ರಃ**—ಪ್ರಸರಿಸು ಎಂಬರ್ಥವಿರುವ ಸೃಧಾತುವಿನಿಂದ ಉಸ್ರಶಬ್ದವು ನಿಷ್ಪನ್ನವಾಗಿ ತನ್ನ ಕಿರಣಗಳಿಂದ ಎಲ್ಲಾ ಕಡೆಗಳಲ್ಲಿಯೂ ಪ್ರಸರಿಸುವವನಾದ್ದರಿಂದ **ಉಸ್ರಃ** ಎಂದರೆ ಸೂರ್ಯನು ಎಂದರ್ಥವು. ಈ ಸೂರ್ಯನು ತನ್ನ ತೇಜಸ್ಸಿನಿಂದ ಸರ್ವವನ್ನೂ ಆಚ್ಛಾದಿಸುವನು ಎಂದರೆ ಆವರಿಸುವನು ಎಂಬರ್ಥವನ್ನು ಇಲ್ಲಿ ಭಾಷ್ಯಕಾರರು ವಿವರಿಸಿದಾರೆ.

**ಅಹಾನಿ—ಸರ್ವಾಣ್ಯಾಗಂತ್ರ್ಯಾಣಿ** । ಮುಂದೆ ಒದಗಬಹುದಾದ ಅಥವಾ ಪ್ರಾಪ್ತವಾಗುವ ಕಾರ್ಯಗಳು ಎಂದರ್ಥಮಾಡಿದಾರೆ.

ಈ ಋಕ್ಕಿನಲ್ಲಿ ಪೂಷಾ, ಭಗ, ಅದಿತಿ, ಸೂರ್ಯ, ಇಂದ್ರ, ವರುಣ, ಮಿತ್ರ, ಅಗ್ನಿ ಎಂಬ ದೇವತೆಗಳು ಮುಂದೆ ಎಂದರೆ ಉತ್ತರೋತ್ತರ ನಮಗೆ ಸಮಸ್ತ ಕಲ್ಯಾಣವನ್ನು ಉಂಟುಮಾಡಲಿ ಎಂದು ಪ್ರಾರ್ಥಿತರಾಗಿದಾರೆ.

॥ ಸಂಹಿತಾಪಾಠಃ ॥

ತನ್ನೋ ಅನರ್ವಾ ಸವಿತಾ ವರೂಥಂ ತತ್ಸಿಂಧವ ಇಷಯಂತೋ ಅನು ಗ್ಮನ್ ।

ಉಪ ಯದ್ವೋಚೇ ಅಧ್ವರಸ್ಯ ಹೋತಾ ರಾಯಃ ಸ್ಯಾಮ ಪತಯೋ ವಾಜರತ್ನಾಃ ॥ ೪ ॥

॥ ಪದಪಾಠಃ ॥

ತತ್ । ನಃ । ಅನರ್ವಾ । ಸವಿತಾ । ವರೂಥಂ । ತತ್ । ಸಿಂಧವಃ । ಇಷಯಂತಃ । ಅನು । ಗ್ಮನ್ ।

ಉಪ । ಯತ್ । ವೋಚೇ । ಅಧ್ವರಸ್ಯ । ಹೋತಾ । ರಾಯಃ । ಸ್ಯಾಮ । ಪತಯಃ । ವಾಜಽರತ್ನಾಃ ॥

॥ ಸಾಯಣಭಾಷ್ಯಂ ॥

ತತ್ಪ್ರಸಿದ್ಧಂ ವರೂಥಂ ವರಣೀಯಮಸ್ಮದಭಿಮತಂ ಧನಂ ನೋಽಸ್ಮಭ್ಯಮನರ್ವಾಪ್ರತ್ಯೃತಃ ಕೇನಾಪ್ಯತಿರಸ್ಕೃತಃ ಸವಿತಾ ದೇವಃ ಪ್ರಯಚ್ಛತ್ವಿತಿ ಶೇಷಃ ॥ ತದ್ಧನಂ ಸಿಂಧವಃ ಸ್ಯಂದನಶೀಲಾ ಇಷಯಂತೋ ಗಚ್ಛಂತ್ಯೋ ನದ್ಯೋಽನು ಅನುಸೃತ್ಯ ಗ್ಮನ್ । ಗಚ್ಛಂತು । ಧನಂ ದಾತುಂ ಗಚ್ಛಂತ್ವಿತ್ಯರ್ಥಃ। ಯದ್ಯಸ್ಮಾದಧ್ವರಸ್ಯ ಯಾಗಸ್ಯ ಹೋತಾ ಹೋಮನಿಷ್ಪಾದಕೋಽಹಮುಪ ವೋಚೇ ಉಪೇತ್ಯ ಬ್ರವೀಮಿ ತಸ್ಮಾತ್ತತ್ಪ್ರಯಚ್ಛಂತ್ವಿತಿ ಶೇಷಃ । ವಯಂ ಚಾತ್ರಯೋ ರಾಯೋ ಧನಸ್ಯ ಬಹುವಿಧಸ್ಯ ಪತಯಃ ಸ್ವಾಮಿನಃ ಸ್ಯಾಮ । ಭವೇಮ । ವಾಜರತ್ನಾ ಅನ್ನೇನ ಬಲೇನ ವಾ ರಮಣೀಯಾಃ । ಅಥವಾ ಯದ್ಯಸ್ಮಾದ್ವೋಚೇ ಸ್ತೌಮಿ ತಸ್ಮಾತ್ಸವಿತಾ ನೋ ವರೂಥಮಾಗಚ್ಛತು । ತಸ್ಮಾನ್ನದ್ಯಶ್ಚ ನೋ ವರೂಥಂ ಯಜ್ಞಮನು ಗ್ಮನ್ ಅನುಗಚ್ಛಂತ್ವಿತಿ ವಾ ಯೋಜ್ಯಂ ॥

॥ ಪ್ರತಿಪದಾರ್ಥ ॥

**ಅನರ್ವಾ**—ಅಪ್ರತಿಹತನಾದ। **ಸವಿತಾ**—ಸವಿತೃದೇವನು । **ನಃ**—ನಮಗೆ । **ತತ್**—ಪ್ರಸಿದ್ಧವಾದುದೂ । **ವರೂಥಂ**—ಅಪೇಕ್ಷಿತವಾದುದೂ ಆದ ಧನವನ್ನು (ಕೊಡಲಿ) । **ಇಷಯಂತಃ**—ಪ್ರವಹಿಸುವ । **ಸಿಂಧವಃ**—ನದಿಗಳು । **ತತ್**—ಅದೇ ಧನವನ್ನು (ನಮಗೆ ಕೊಡಲು) । **ಅನು ಗ್ಮನ್** ನಮಗಭಿಮುಖವಾಗಿ ಬರಲಿ । **ಯತ್**—ಯಾವ ಅದೇ ನಿಮಿತ್ತವಾಗಿ । **ಅಧ್ವರಸ್ಯ**—ಯಜ್ಞಕ್ಕೆ । **ಹೋತಾ**—ಹೋತೃವಾದ ನಾನು । **ಉಪ ವೋಚೇ**—ಅವರನ್ನು ಸಮೀಪಿಸಿ ಸ್ತುತಿಸುತ್ತೇನೆ । (ವಯಂ—ನಾವು) । **ರಾಯಃ**—ಧನಕ್ಕೆ । **ಪತಯಃ**—ಒಡೆಯರಾಗಿಯೂ। **ವಾಜರತ್ನಾಃ** ರಮಣೀಯವಾದ ಅನ್ನಸಂಪದ್ಯುಕ್ತರಾಗಿಯೂ । **ಸ್ಯಾಮ**—ಆಗುವಂತೆ (ದೇವತೆಗಳು ಅನುಗ್ರಹಿಸಲಿ)·

॥ ಭಾವಾರ್ಥ ॥

ಅಪ್ರತಿಹತನಾದ ಸವಿತೃದೇವನು ನಮಗೆ ಪ್ರಸಿದ್ಧವಾದುದೂ, ಅಪೇಕ್ಷಿತವಾದುದೂ ಆದ ಧನವನ್ನು ಕೊಡಲಿ ಪ್ರವಹಿಸುವ ನದಿಗಳು ಅದೇ ಧನವನ್ನು ನಮಗೆ ಒದಗಿಸಲು ನಮಗಭಿಮುಖವಾಗಿ ಬರಲಿ. ಯಜ್ಞದಲ್ಲಿ ಹೋತೃವಾದ ನಾನು ಅದೇ ನಿಮಿತ್ತವಾಗಿ ಅವರನ್ನು ಸಮೀಪಿಸಿ ಸ್ತುತಿಸುತ್ತೇನೆ. ನಾವು ಧನಕ್ಕೆ ಒಡೆಯರಾಗಿಯೂ, ರಮಣೀಯವಾದ ಅನ್ನಸಂಪದ್ಯುಕ್ತರಾಗಿಯೂ ಆಗುವಂತೆ ದೇವತೆಗಳು ಅನುಗ್ರಹಿಸಲಿ

## English Translation

May the irreproachable Savitri (grant) us that desirable (wealth), may the flowing rivers hasten to (convey) it to us, for which purpose I, the ministering priest of the sacrifice, repeat (pious praises). affluent in food, may we be the lords of (manifold) riches

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಸವಿತೃದೇವನನ್ನೂ, ನದಿಗಳನ್ನೂ ಸ್ತುತಿಸಲಾಗಿದೆ. ಇಲ್ಲಿ ಪ್ರಯುಕ್ತನಾಗಿರುವ ವರೂಥ ಶಬ್ದಕ್ಕೆ ಎರಡು ವಿಧವಾದ ಅರ್ಥವನ್ನು ಹೇಳಬಹುದು **ವರೂಥಂ । ವರಣೀಯಮಸ್ಮದಭಿಮತಂ ಧನಂ**—ನಾವು ಅಪೇಕ್ಷಿಸುವ ಧನವು ಎಂದು ಒಂದರ್ಥವು ಸವಿತೃದೇವನೂ, ನದಿಗಳೂ ನಾವು ಅಪೇಕ್ಷಿಸಡುವ ಧನವನ್ನು ನಮಗೆ ಕೊಡಲಿ ಎಂದರ್ಥವು. ನದಿಗಳ ವಿಷಯದಲ್ಲಿ ಧನವೆಂದರೆ ಹಣ ದ್ರವ್ಯ ಎಂದಾದರೂ ಆಗಬಹುದು ನದಿಗಳು ಕೃಷಿ ಕರ್ಮಗಳಿಗೆ ನೀರನ್ನು ಒದಗಿಸುವುದರಿಂದಲೂ ಕೃಷಿಯಿಂದ ಆಹಾರಾದಿಗಳು ದೊರೆಯುವುದರಿಂದಲೂ ಧನವೆಂದರೆ ಅನ್ನಾದ್ಯಾಹಾರರೂಪವಾದ ಧನವೆಂದೂ ಅರ್ಥವಾಗಬಹುದು. ಇವುಗಳನ್ನು ನಮಗೆ ಕೊಡಲಿ ಎಂಬ ಪ್ರಾರ್ಥನೆಯು ಇಲ್ಲಿ ಉಕ್ತವಾಗಿದೆ. ಎರಡನೆಯ ಅರ್ಥದಲ್ಲಿ ವರೂಥ ಶಬ್ದಕ್ಕೆ ಯಜ್ಞವೆಂದರ್ಥಮಾಡಿದರೆ ಆಗ ಈ ಋಕ್ಕಿನ ಉತ್ತರಾರ್ಧದಲ್ಲಿ ಹೋತೃವು **ಉಪ ಯದ್ವೋಚೇ ಅಧ್ವರಸ್ಯ ಹೋತಾ** ಎಂಬ ವಾಕ್ಯದಿಂದ ಪ್ರಾರ್ಥಿಸಿರುವಂತೆ ಸವಿತೃದೇವನೂ ನದಿಗಳೂ ನಾವು ಮಾಡುತ್ತಿರುವ ಈ ಯಜ್ಞಕ್ಕೆ ಬಂದು ನಮಗೆ ಧನಾದಿಗಳನ್ನು ಕೊಡಲಿ ಎಂಬ ಆಶಂಸನೆಯು ಉಕ್ತವಾಗಿದೆ. ಇದು ಇನ್ನೊಂದು ವಿಧವಾದ ಅರ್ಥವು.

॥ ಸಂಹಿತಾಪಾಠಃ ॥

**ಪ್ರ ಯೇ ವಸುಭ್ಯ ಈವದಾ ನಮೋ ದುರ್ಯೇ ಮಿತ್ರೇ ವರುಣೇ ಸೂಕ್ತವಾಚಃ ।**

**ಅವೈತ್ವಭ್ವಂ ಕೃಣುತಾ ವರೀಯೋ ದಿವಸ್ಪೃಥಿವ್ಯೋರವಸಾ ಮದೇಮ ॥೫॥**

॥ ಪದಪಾಠಃ ॥

ಪ್ರ । ಯೇ । ವಸುಭ್ಯಃ । ಈವತ್ । ಆ । ನಮಃ । ದುಃ । ಯೇ । ಮಿತ್ರೇ । ವರುಣೇ । ಸೂಕ್ತವಾಚಃ॥
ಅವ । ಏತು । ಅಭ್ವಂ । ಕೃಣುತ । ವರೀಯಃ । ದಿವಃ ಪೃಥಿವ್ಯೋಃ । ಅವಸಾ । ಮದೇಮ ॥ ೫ ॥

॥ ಸಾಯಣಭಾಷ್ಯಂ ॥

ಯೇ ಯಜಮಾನಾ ವಸುಭ್ಯೋ ಯಜ್ಞನಿವಾಸೇಭ್ಯೋ ದೇವೇಭ್ಯ ಈವದ್ಗಮನವನ್ನಮೋಽನ್ನಂ ಪಶ್ವಾತ್ಮಕಂ ಪ್ರ ದುಃ ಪ್ರಾದುಃ । ಯೇ ಚ ಮಿತ್ರೇ ದೇವೇ ವರುಣೇ ಚ ಸೂಕ್ತವಾಚಃ ಸೂಕ್ತವಚಸೋ ಭವಂತಿ ತಾನಸ್ಮಾನಭ್ವಂ ಮಹದ್ಧನಂ ತೇಜೋ ವಾಽಽವೈತು । ಅವಗಚ್ಛತು । ಹೇ ದೇವಾಃ ಕೃಣುತ ಕುರುತ ಚೈತೇಭ್ಯೋ ವರೀಯ ಉರುತರಂ ಸುಖಂ । ದಿವಸ್ಪೃಥಿವ್ಯೋರ್ದ್ಯಾವಾಪೃಥಿವ್ಯೋರವಸಾ ರಕ್ಷಣೇನ ಮದೇಮ । ಹೃಷ್ಯೇಮ ॥

॥ ಪ್ರತಿಪದಾರ್ಥ ॥

**ಯೇ**—ಯಾವ ಯಜಮಾನರು । **ವಸುಭ್ಯಃ**—ವಸುಗಳಿಗೆ । **ಈವತ್**—ಸಂಚಾರಯೋಗ್ಯವಾದ । **ನಮಃ**—ಅನ್ನವನ್ನು (ಪಶುರೂಪವಾದ ಅನ್ನವನ್ನು) । **ಪ್ರ ದುಃ**—ಅರ್ಪಿಸಿದರೋ । **ಯೇ**—ಯಾರು । **ಮಿತ್ರೇ**—ಮಿತ್ರನಿಗೂ । **ವರುಣೇ (ಚ)**—ವರುಣನಿಗೂ । **ಸೂಕ್ತವಾಚಃ**—ಉತ್ತಮವಾದ ಸ್ತುತಿಗಳನ್ನರ್ಪಿಸಿದರೋ (ಅಂತಹ ಯಜಮಾನರಿಗೆ) । **ಅಭ್ವಂ**—ಮಹತ್ತಾದ ಧನವು । **ಅವೈತು**—ಸಮೀಪಿಸಿ ಬರಲಿ । **ದೇವಾಃ**—ಎಲೈ ದೇವತೆಗಳೇ (ಇಂತಹ ಯಜಮಾನರಿಗೆ) । **ವರೀಯಃ**—ಅತ್ಯಧಿಕವಾದ ಸುಖವನ್ನು । **ಕೃಣುತ**—ಉಂಟುಮಾಡಿರಿ । **ದಿವಸ್ಪೃಥಿವ್ಯೋಃ**—ದ್ಯಾವಾಪೃಥಿವಿಗಳ । **ಅವಸಾ**—ರಕ್ಷಣದಿಂದ । **ಮದೇಮ**—ನಾವು ಸುಖದಿಂದಿರುವಂತಾಗಲಿ.

॥ ಭಾವಾರ್ಥ ॥

ಯಾವ ಯಜಮಾನರು ಪಶುರೂಪವಾದ ಅನ್ನವನ್ನು ವಸುಗಳಿಗೆ ಅರ್ಪಿಸಿದರೋ, ಯಾರು ಮಿತ್ರನಿಗೂ ವರುಣನಿಗೂ ಉತ್ತಮವಾದ ಸ್ತುತಿಗಳನ್ನರ್ಪಿಸಿದರೋ ಅಂತಹ ಯಜಮಾನರಾದ ನಮಗೆ ಮಹತ್ತಾದ ಧನವು ಬಂದೊದಗಲಿ. ಎಲೈ ದೇವತೆಗಳೇ, ಇಂತಹ ಭಕ್ತಿಯುತರಾದ ನಮಗೆ ಅತ್ಯಧಿಕವಾದ ಸುಖವನ್ನುಂಟುಮಾಡಿರಿ. ದ್ಯಾವಾಪೃಥಿವಿಗಳ ರಕ್ಷಣದಿಂದ ನಾವು ಸುಖದಿಂದಿರುವಂತಾಗಲಿ.

## English Translation

May ample wealth devolve upon those who have presented victims to the Vasus, and upon those who have repeated praises to Mitra and Varuna: confer upon them, (gods), felicity, and may we rejoice in the protection of heaven and earth.

॥ ವಿಶೇಷವಿಷಯಗಳು ॥

**ವಸುಭ್ಯಃ—ಯಜ್ಞನಿವಾಸೇಭ್ಯೋ ದೇವೇಭ್ಯಃ** । ವಸುಶಬ್ದಕ್ಕೆ ವಾಸಮಾಡುವುದು ಎಂಬರ್ಥವನ್ನು ಹೇಳಿ **ವಸುಭ್ಯಃ** ಎಂದರೆ ಯಜ್ಞಭೂಮಿಗೆ ಹವಿರಾದಿಗಳನ್ನು ಸ್ವೀಕರಿಸುವುದಕ್ಕಾಗಿ ಬಂದು ಅಲ್ಲಿ ಯಜ್ಞಸಮಾಪ್ತಿ ಯಾಗುವವರಿಗೂ ವಾಸಮಾಡುವ ದೇವತೆಗಳಿಗೆ ಎಂದರ್ಥಮಾಡಿದಾರೆ.

**ಸೂಕ್ತವಾಚಃ**—ಉತ್ತಮವಾದ ವಾಕ್ಯಗಳಿಂದ ಮಿತ್ರಾವರುಣಾದಿ ದೇವತೆಗಳನ್ನು ಸ್ತುತಿಸುವವರು ಎಂದರ್ಥವು. ಈ ಶಬ್ದವು **ಯೇ (ಯಜಮಾನಾಃ)** ಎಂಬ ಶಬ್ದಕ್ಕೆ ವಿಶೇಷಣವಾಗಿದೆ.

## ಐವತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ವಿಶ್ವೋ ದೇವಸ್ಯೇತಿ ಪಂಚರ್ಚಂ ಷಷ್ಠಂ ಸೂಕ್ತಂ ಸ್ವಸ್ತ್ಯಾತ್ರೇಯಸ್ಯಾರ್ಷಂ ವೈಶ್ವದೇವಂ ಪಂಚಮೀ ಪಂಕ್ತಿರಾದ್ಯಾಶ್ಚತಸ್ರೋಽನುಷ್ಟುಭಃ । ತದುಕ್ತಮನುಕ್ರಮಣ್ಯಾಂ । ವಿಶ್ವಃ ಸ್ವಸ್ತ್ಯಾತ್ರೇಯಃ ಪಂಕ್ತ್ಯಂತಮಿತಿ ॥ ಪೃಷ್ಠ್ಯಾಭಿಪ್ಲವಷಡಹಯೋಃ ಪ್ರಥಮೇಽಹನಿ ವೈಶ್ವದೇವಶಸ್ತ್ರೇ ವಿಶ್ವೋ ದೇವಸ್ಯೇತಿ ಪ್ರತಿಪತ್ತೃಚಸ್ಯಾದ್ಯಃ । ಸೂತ್ರಿತಂ ಚ । ವಿಶ್ವೋ ದೇವಸ್ಯ ನೇತುರಿತ್ಯೇಕಾ । ಆ. ೭. ೬. । ಇತಿ ॥ ಅಭಿಪ್ಲವಿಕೇಷು ದ್ವಿತೀಯಚತುರ್ಥಷಷ್ಠೇಷ್ವಹಃಸ್ವೇಷೈವ ವೈಶ್ವದೇವಸ್ಯ ಶಸ್ತ್ರಸ್ಯ ಪ್ರತಿಪತ್ । ಯುಗ್ಮೇ-ಷ್ವೇವಮಭಿಪ್ಲವೇ । ಆ. ೭. ೬. । ಇತಿ ಸೂತ್ರಿತತ್ವಾತ್ ॥**

ಅನುವಾದವು—**ವಿಶ್ವೋ ದೇವಸ್ಯ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಸ್ವಸ್ತ್ಯಾತ್ರೇಯಃ ಎಂಬುವನು ಋಷಿಯು; ವಿಶ್ವೇದೇವತೆಗಳು ದೇವತೆಯು; ಈ ಸೂಕ್ತದ ಮೊದಲಿನ ನಾಲ್ಕು ಋಕ್ಕುಗಳು ಅನುಷ್ಟುಪ್ ಛಂದಸ್ಕವು; ಐದನೆಯ ಋಕ್ಕು ಪಂಕ್ತಿಛಂದಸ್ಕವು ಅನುಕ್ರಮಣಿಕೆಯಲ್ಲಿ—**ವಿಶ್ವಃ ಸ್ವಸ್ತ್ಯಾತ್ರೇಯಃ ಪಂಕ್ತ್ಯಂತಂ** ಎಂದು ಹೇಳಿರುವುದು. ಪೃಷ್ಠ್ಯ ಮತ್ತು ಅಭಿಪ್ಲವಷಡಹವೆಂಬ ಯಾಗಗಳ ಮೊದಲನೆಯ ದಿವಸ ವೈಶ್ವದೇವಶಸ್ತ್ರಮಂತ್ರಪಠನಕಾಲದಲ್ಲಿ **ವಿಶ್ವೋ ದೇವಸ್ಯ** ಎಂಬ ಈ ಸೂಕ್ತದ ಮೊದಲಿನ ಋಕ್ಕನ್ನು ಪ್ರತಿಪತ್ತೃಚದ ಮೊದಲನೆಯ ಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ವಿಶ್ವೋ ದೇವಸ್ಯ ನೇತುರಿತ್ಯೇಕಾ** ಎಂಬ ಸೂತ್ರದಿಂದ (ಆ. ೭-೬) ವಿವೃತವಾಗಿರುವುದು ಮತ್ತು ಅಭಿಪ್ಲವಸಂಬಂಧವಾದ ಯಾಗಗಳ ಎರಡು, ನಾಲ್ಕು, ಆರನೆಯ ದಿವಸಗಳಲ್ಲಿಯೂ, ಈ ಸೂಕ್ತದ ಮೊದಲನೆಯ ಋಕ್ಕನ್ನು ವೈಶ್ವದೇವಶಸ್ತ್ರಮಂತ್ರಗಳಲ್ಲಿ ಪ್ರತಿಪತ್ತೃಚದ ಪ್ರಾರಂಭಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯುಗ್ಮೇಷ್ವೇವಮಭಿಪ್ಲವೇ** ಎಂಬ ಸೂತ್ರದಿಂದ (ಆ. ೭-೬) ವಿವೃತವಾಗಿರುವುದು

## ಸೂಕ್ತ—೫೦

॥ ಮಂಡಲ—೫ ॥ ಅನುವಾಕ—೪ ॥ ಸೂಕ್ತ—೫೦ ॥
॥ ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ—೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೫
ಋಷಿಃ—ಸ್ವಸ್ತ್ಯಾತ್ರೇಯಃ ॥
ದೇವತಾ—ವಿಶ್ವೇದೇವಾಃ ॥
ಛಂದಃ—೧-೪, ಅನುಷ್ಟುಪ್ । ೫ ಪಂಕ್ತಿಃ ॥

॥ ಸಂಹಿತಾಪಾಠಃ ॥

ವಿಶ್ವೋ ದೇವಸ್ಯ ನೇತುರ್ಮರ್ತೋ ವುರೀತ ಸಖ್ಯಂ ।
ವಿಶ್ವೋ ರಾಯ ಇಷುಧ್ಯತಿ ದ್ಯುಮ್ನಂ ವೃಣೀತ ಪುಷ್ಯಸೇ ॥ ೧ ॥

॥ ಪದಪಾಠಃ ॥

ವಿಶ್ವಃ । ದೇವಸ್ಯ । ನೇತುಃ । ಮರ್ತಃ । ವುರೀತ । ಸಖ್ಯಂ ।
ವಿಶ್ವಃ । ರಾಯೇ । ಇಷುಧ್ಯತಿ । ದ್ಯುಮ್ನಂ । ವೃಣೀತ । ಪುಷ್ಯಸೇ ॥ ೧ ॥

॥ ಸಾಯಣಭಾಷ್ಯಂ ॥

**ವಿಶ್ವಃ** ಸರ್ವೋ ಮರ್ತೋ **ನೇತುರ್ದೇವಸ್ಯ** । ಸವಿತುರಿತ್ಯರ್ಥಃ । ತಸ್ಯ **ಸಖ್ಯಂ ವುರೀತ** । ವೃಣೀತ **ವಿಶ್ವೋ** ಜನೋ **ರಾಯೇ** ಧನಸ್ಯೇ**ಷುಧ್ಯತಿ** ॥ ಪಂಚಮಲಕಾರಃ ॥ ಈಶೀತ । ತಸ್ಯಾನುಗ್ರಹಾತ್ ಸರ್ವೋ ಜನೋ **ದ್ಯುಮ್ನಂ** ಧನಂ **ವೃಣೀತ ಪುಷ್ಯಸೇ** ಪುಷ್ಟ್ಯೈ ಪರ್ಯಾಪ್ತಂ ಧನಂ ॥

॥ ಪ್ರತಿಪದಾರ್ಥ ॥

**ವಿಶ್ವಃ**—ಸಕಲನಾದ । **ಮರ್ತಃ**—ಮಾನವನೂ । **ನೇತುಃ**—ನೇತೃವಾದ । **ದೇವಸ್ಯ**—ಸವಿತೃದೇವನ । **ಸಖ್ಯಂ**—ಸಖಿತ್ವವನ್ನು । **ವುರೀತ**—ಪ್ರಾರ್ಥಿಸಿ ಪಡೆಯಲಿ । **ವಿಶ್ವಃ**—ಸಕಲಮಾನವನೂ । **ರಾಯೇ**—ಧನದ ಲಾಭಕ್ಕೆ । **ಇಷುಧ್ಯತಿ**—(ಸವಿತೃವಿನಿಂದ) ಅನುಗ್ರಹವನ್ನು ನಿರೀಕ್ಷಿಸಲಿ । **ಪುಷ್ಯಸೇ**—ಪುಷ್ಟವಾದ ಜೀವನಕ್ಕಾಗಿ । **ದ್ಯುಮ್ನಂ**—ಧನವನ್ನು । **ವೃಣೀತ**—ಆಶಿಸಲಿ.

॥ ಭಾವಾರ್ಥ ॥

ಸಕಲ ಮಾನವನೂ ನೇತೃವಾದ ಸವಿತೃದೇವನ ಸಖಿತ್ವವನ್ನು ಪ್ರಾರ್ಥಿಸಿ ಪಡೆಯಲಿ. ಸಕಲ ಮಾನವನೂ ಸವಿತೃವಿನ ಅನುಗ್ರಹದಿಂದಲೇ ಧನದ ಲಾಭವನ್ನು ಹೊಂದಲಿ ಪುಷ್ಟವಾದ ಜೀವನಕ್ಕಾಗಿ ಅವನಿಂದಲೇ ಧನವನ್ನು ಆಶಿಸಲಿ

## English Translation

Let every man solicit the friendship of the divine leader (of heaven, the sun): let every man desire (of him) riches: let him request affluence (wherewith) to nourish (his descendants).

॥ ವಿಶೇಷವಿಷಯಗಳು ॥

ಈ ಸೂಕ್ತಕ್ಕೆ ವಿಶ್ವೇದೇವತೆಗಳೇ ದೇವತೆಯೆಂದಿದ್ದರೂ ಸೂಕ್ತದ ಎಲ್ಲಾ ಋಕ್ಕುಗಳಲ್ಲಿಯೂ ಸವಿತೃದೇವನನ್ನೇ ವಿಶೇಷವಾಗಿ ಸ್ತುತಿಸಲಾಗಿದೆ. ಸವಿತೃವು ಸಾಧಾರಣವಾಗಿ ಯಜ್ಞಾರಂಭಕಾಲವಾದ ಪ್ರಾತಃಕಾಲದಲ್ಲಿ ಆಹ್ವಾನಿಸಲ್ಪಡುವುದರಿಂದ ನಾವು ಮಾಡುತ್ತಿರುವ ಈ ಯಜ್ಞಕ್ಕೆ ಸವಿತೃವೇ ಮಾರ್ಗದರ್ಶಕನಾಗಿ ಯಜ್ಞಕರ್ಮವು ಸಾಂಗವಾಗಿ ನೆರವೇರುವಂತೆಯೂ, ಆ ಯಜ್ಞದ ಫಲವಾಗಿ ನಮಗೆ ಪುತ್ರಪೌತ್ರಾದಿಸಹಿತವಾದ ಗೃಹ, ಧನ, ಅನ್ನ, ಮೊದಲಾದ ಸುಖಕಾರಕಗಳಾದ ವಸ್ತುಗಳನ್ನು ಅನುಗ್ರಹಿಸಬೇಕೆಂದೂ ಋಷಿಯು ಪ್ರಾರ್ಥಿಸಿದಾನೆ.

॥ ಸಂಹಿತಾಪಾಠ ॥

ತೇ ತೇ ದೇವ ನೇತರ್ಯೇ ಚೇಮಾಁ ಅನುಶಸೇ ।
ತೇ ರಾಯಾ ತೇ ಹ್ಯಾ೩ಪೃಚೇ ಸಚೇಮಹಿ ಸಚಥ್ಯೈಃ ॥ ೨ ॥

॥ ಪದಪಾಠಃ ॥

ತೇ । ತೇ । ದೇವ । ನೇತಃ । ಯೇ । ಚ । ಇಮಾನ್ । ಅನುಽಶಸೇ ।
ತೇ । ರಾಯಾ । ತೇ । ಹಿ । ಆಽಪೃಚೇ । ಸಚೇಮಹಿ । ಸಚಥ್ಯೈಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ನೇತರ್ದೇವ ತೇ ತವ ಸ್ವಭೂತಾಸ್ತೇ ವಯಂ ಯಜಮಾನಾ ಯೇ ಚಾನ್ಯ ಇಮಾನ್ ॥ ವಿಭಕ್ತಿವ್ಯತ್ಯಯಃ ॥ ಇಮೇ ಹೋತ್ರಾದಯೋಽನುಶಸೇ ಶಂಸಿತುಂ ಪ್ರಭವಂತಿ ತೇಽಪಿ ತ್ವದೀಯಾಃ । ಯದ್ವಾ । ಇಮಾನನ್ಯಾನಿಂದ್ರಾದೀನನುಶಸೇ ಕ್ರಮೇಣ ಶಂಸಿತುಂ ಪ್ರಭವಂತಿ । ಏಕೈವ ವಾ ಮಹಾ-ನಾತ್ಮಾ ದೇವತಾ ಸ ಸೂರ್ಯಃ ಸ ಹಿ ಸರ್ವಭೂತಾತ್ಮೇತ್ಯುಕ್ತತ್ವಾದಿತರಾಸಾಂ ದೇವತಾನಾಂ ತದಂತ-ರ್ಭಾವಾದಿತಿ ಭಾವಃ । ನ ಕೇವಲಂ ತ್ವಚ್ಛಂಸಕಾ ಏವೇತ್ಯರ್ಥಃ । ತ ಉಭಯೇ ವಯಂ ರಾಯಾ ಧನೇನ ಸಚೇಮಹೀತಿ ಸಂಬಂಧಃ । ತೇ ಹಿ ತೇ ಖಲ್ವಾಪೃಚ ಆಪರ್ಚನೀಯಾಃ ॥ ಕೃತ್ಯಾರ್ಥೇ ಕೇನ್ಪ್ರತ್ಯಯಃ । ಕೃನ್ಮೇಜಂತ ಇತ್ಯವ್ಯಯತ್ವಾದ್ವಿಭಕ್ತೇರದರ್ಶನಂ ॥ ಸಚಥ್ಯೈಃ ಸರ್ವೈಃ ಕಾಮ್ಯೈಃ ಸಚೇಮಹಿ । ಸಂಗ-ಚ್ಛೇಮಹಿ ।

॥ ಪ್ರತಿಪದಾರ್ಥ ॥

**ನೇತಃ**—ನೇತೃವಾದ! **ದೇವ**—ಎಲೈ ಸವಿತೃವೇ । **ತೇ**-ಈ ಯಜಮಾನರಾದ ನಾವು । **ತೇ**-ನಿನ್ನ ರಕ್ಷಣೆಗೆ ಸೇರಿದವರು । **ಯೇ ಚ**—ಯಾರು । **ಇಮಾನ್**—ಇಂದ್ರಾದಿ ಇತರ ದೇವತೆಗಳನ್ನು । **ಅನುಶಸೇ**—ಪ್ರಶಂಸಿಸಿ ಪೂಜಸುವರೋ (ಅವರೂ ಸಹ ನಿನ್ನವರೇ ಆಗಿದ್ದಾರೆ) । **ತೇ**—ಈ ನಮ್ಮ ಎರಡು ಗುಂಪಿನವರೂ ಸಹ । **ರಾಯಾ**—ಧನದೊಂದಿಗೆ ಸೇರಿದವರಂತಾಗಲಿ । **ತೇ ಹಿ**—ಅದೇ ನಾವು । **ಆಪೃಚೇ**—ನಮ್ಮ ತೃಪ್ತ್ಯರ್ಥವಾಗಿ । **ಸಚಥ್ಯೈಃ**—ನಮ್ಮ ಸಕಲ ಕಾಮುಗಳೊಂದಿಗೂ । **ಸಚೇಮಹಿ**—ಕೂಡಿಕೊಳ್ಳುವೆವು.

॥ ಭಾವಾರ್ಥ ॥

ನೇತೃವಾದ ಎಲೈ ಸವಿತೃವೇ, ಈ ಯಜಮಾನರಾದ ನಾವು ನಿನ್ನ ರಕ್ಷಣೆಗೆ ಸೇರಿದವರು. ನಾವಲ್ಲದೇ, ಇಲ್ಲಿ ಯಾರು ಇಂದ್ರಾದಿ ಇತರ ದೇವತೆಗಳನ್ನೂ ಪ್ರಶಂಸಿಸಿ ಪೂಜಿಸುವರೋ ಅವರೂ ನಿನ್ನವರೇ ಆಗಿದ್ದಾರೆ ನಮ್ಮ ಈ ಎರಡು ಗುಂಪಿನವರೂ ಧನಯುಕ್ತರಾಗಲಿ, ನಾವು ನಮ್ಮ ಇಷ್ಟಾರ್ಥಸಿದ್ಧಿಗೂ, ತೃಪ್ತಿಗಾಗಿಯೂ ನಮ್ಮ ಸಕಲ ಕಾಮುಗಳೊಂದಿಗೂ ಕೂಡಿಕೊಳ್ಳುವಂತಾಗಲಿ

## English Translation

Divine (leader of heaven), these (worshippers) are yours, and (so are they) who praise these (other gods) these (both) we associate with opulence, we (seek) to unite with (our) desires.

॥ ವಿಶೇಷವಿಷಯಗಳು ॥

**ಇಮಾನ್ ಅನುಶಸೇ—ಇಂದ್ರಾದೀನ್ ಶಂಸಿತುಂ ಪ್ರಭವಂತಿ ತೇऽಪಿ ತ್ವದೀಯಾಃ** । ಈ ಸೂಕ್ತಿನಲ್ಲಿ ಸವಿತೃದೇವನನ್ನು ಸ್ತುತಿಸಲಾಗಿದೆ ಆದ್ದರಿಂದ ಸವಿತೃದೇವನನ್ನು ಸ್ತುತಿಸುವ ಋತ್ವಿಗ್ಯಜಮಾನರಾದಿ ಜನಗಳು ಸುವಿತೃವಿಗೆ ಪ್ರೀತಿಪಾತ್ರರಾದವರೇ ಎಂದು ಋಷಿಯು ಹೇಳಿದಾನೆ. ಆದರೆ ಅದರಂತೆ ಇಂದ್ರಾದಿದೇವತೆಗಳನ್ನು ಸ್ತುತಿಸುವ ಜನರೂ ಸಹ ನಿನ್ನವರೇ ಎಂದು ಸವಿತೃದೇವನನ್ನುದ್ದೇಶಿಸಿ ಹೇಳಿರುವುದು ಸರಿಯೇ ಎಂದರೆ ಅದಕ್ಕೆ ಭಾಷ್ಯಕಾರರು ಸವಿತೃವು ಇತರ ದೇವತೆಗಳಲ್ಲಿ ಅಂತರಾತ್ಮನಾಗಿ ಇರುವನೆಂದೂ ಆದ್ದರಿಂದ ಇತರದೇವತೆಗಳನ್ನು ಉಪಾಸನೆ ಮಾಡಿದರೆ ಸವಿತೃ ಅಥವಾ ಸೂರ್ಯನನ್ನೇ ಉಪಾಸನೆ ಮಾಡಿದಂತಾಗುವುದೆಂದೂ ಹೇಳಿ ಇದರ ಸಮರ್ಥನೆಗಾಗಿ—

**ಏಕೈವ ವಾ ಮಹಾನಾತ್ಮಾ ದೇವತಾ ಸ ಸೂರ್ಯಃ ಸ ಹಿ ಸರ್ವಭೂತಾತ್ಮಾ** ।

ಎಂಬ ವಾಕ್ಯವನ್ನುದಾಹರಿಸಿದಾರೆ. ಆದ್ದರಿಂದ ಇಂದ್ರಾದಿದೇವತೆಗಳನ್ನು ಸ್ತುತಿಸುವವರೂ ಸವಿತೃದೇವನಿಗೆ ತನ್ನವರು ಎಂಬ ಭಾವನೆಯೇ ಇರುವುದು ಎಂಬ ವಿಷಯವನ್ನು ಸ್ಪಷ್ಟಪಡಿಸಿದಾರ.

॥ ಸಂಹಿತಾಪಾಠಃ ॥

ಅತೋ ನ ಆ ನ್ನನತಿಥೀನತಃ ಪತ್ನೀರ್ದಶಸ್ಯತ ।
ಆರೇ ವಿಶ್ವಂ ಪಥೇಷ್ಠಾಂ ದ್ವಿಷೋ ಯುಯೋತು ಯೂಯುವಿಃ ॥ ೩ ॥

॥ ಪದಪಾಠಃ ॥

ಅತಃ । ನಃ । ಆ । ನೄನ್ । ಅತಿಥೀನ್ । ಅತಃ । ಪತ್ನೀಃ । ದಶಸ್ಯತ ।
ಆರೇ । ವಿಶ್ವಂ । ಪಥೇಽಸ್ಥಾಂ । ದ್ವಿಷಃ । ಯುಯೋತು । ಯುಯುವಿಃ ॥ ೩ ॥

॥ ಸಾಯಣಭಾಷ್ಯಂ ॥

ಅತೋಽಸ್ಮಿನ್ಯಜ್ಞೇ ॥ ಸಾರ್ವವಿಭಕ್ತಿಕಸ್ತಸಿಃ ॥ ನೋಽಸ್ಮಾಕಮೃತ್ವಿಜಾಂ ನೄನ್ನೇತೄನತಿಥೀನ್ ತದ್ವತ್ಪೂಜ್ಯಾನ್ದೇವಾನಾ ದಶಸ್ಯತ । ಸರ್ವತಃ ಪರಿಚರತ । ಅತೋಽಸ್ಮಿನ್ಯಜ್ಞೇ ಪತ್ನೀರ್ದೇವಾನಾಂ ಪತ್ನೀರಪಿ ದಶಸ್ಯತ ಹವಿಷ್ಪ್ರದಾನಾದಿನಾ । ಯದ್ವಾ । ನೋಽಸ್ಮಭ್ಯಂ ನೄನ್ ಪುತ್ರಭೃತ್ಯಾದೀನತಿಥೀನ್ ಪತ್ನೀಶ್ಚೈತತ್ತ್ರಯಮತ್ರ ದಶಸ್ಯತ । ಹೇ ದೇವಾಃ ಪ್ರಯಚ್ಛತ । ಆರೇ ದೂರೇ ವಿಶ್ವಂ ಸರ್ವಂ ಪಥೇಷ್ಠಾಂ ಮಾರ್ಗೇ ವರ್ತಮಾನಂ ವೈರಿಣಂ ದ್ವಿಷೋಽಸ್ಮಾನಪಿ ದ್ವಿಷೋ ದ್ವೇಷ್ಟೄನ್ಯುಯೋತು ಪೃಥಕ್ಕರೋತು ದೇವಸಂಘಃ ಸವಿತಾ ವಾ ಯೂಯುವಿಃ ಸರ್ವಸ್ಯಾಮಿಶ್ರಯಿತಾ ಪೃಥಕ್ಕರ್ತಾ ॥

॥ ಪ್ರತಿಪದಾರ್ಥ ॥

**ಅತಃ**— ಆದ್ದರಿಂದ । **ನಃ**—ನಮಗೆ । **ನೄನ್**—ನೇತೃಗಳಾದವರೂ । **ಅತಿಥೀನ್**—ಅತಿಥಿಗಳಂತೆ ಪೂಜ್ಯರಾದವರೂ ಆದ ದೇವತೆಗಳನ್ನು । **ಆ ದಶಸ್ಯತ**—ಅತಿಶಯವಾಗಿ ಪೂಜಿಸಿರಿ । **ಅತಃ**—ಅದೇ ಕಾರಣದಿಂದ । **ಪತ್ನೀಃ**—ದೇವಪತ್ನಿಯರನ್ನೂ (ಪೂಜಿಸಿರಿ) । **ಯೂಯುವಿಃ**—ಸದಸತ್ತುಗಳನ್ನು ವಿಭಾಗಮಾಡತಕ್ಕ ಸವಿತೃವು । **ಪಥೇಷ್ಠಾಃ**—ನಮಗೆ ಮಾರ್ಗಕಂಟಕರಾಗಿ ನಿಂತಿರುವ । **ವಿಶ್ವಂ**—ಸಮಸ್ತರಾದ । **ದ್ವಿಷಃ**—ಶತ್ರುಗಳನ್ನೂ । **ಆರೇ ಯುಯೋತು**—ಬೇರೆಮಾಡಿ ದೂರವಾಗಿ ತಳ್ಳಲಿ.

॥ ಭಾವಾರ್ಥ ॥

ನಮಗೆ ನೇತೃಗಳಾದವರೂ, ಅತಿಥಿಗಳಂತೆ ಪೂಜ್ಯರೂ ಆದ ದೇವತೆಗಳನ್ನು ಅತಿಶಯವಾಗಿ ಪೂಜಿಸಿರಿ. ಅದೇ ಕಾರಣದಿಂದ ದೇವಪತ್ನಿಯರನ್ನೂ ಪೂಜಿಸಿರಿ. ಸದಸತ್ತುಗಳನ್ನು ವಿಭಾಗಮಾಡತಕ್ಕ ಸವಿತೃವು ನಮಗೆ ಮಾರ್ಗ ಕಂಟಕರಾಗಿ ನಿಂತಿರುವ ಸಮಸ್ತ ಶತ್ರುಗಳನ್ನೂ ಬೇರೆ ಮಾಡಿ ದೂರವಾಗಿ ತಳ್ಳಲಿ.

## English Translation

Worship, therefore, the leaders (of our rites), our guests, (the gods) and the wives (of the deities): may the (divine) discriminator drive to a distance every adversary, (and all our) enemies.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ದೇವತೆಗಳನ್ನು ಒಟ್ಟಿಗೆ ಸೇರಿಸಿ ಸ್ತುತಿಸಲಾಗಿದೆ. ಪೂರ್ವಾರ್ಧದಲ್ಲಿ ಹೇಳಿರುವ **ಅತಃ ನಃ ನ್ರೂನ್ ಅತಿಥೀನ್ ಪತ್ನೀಃ ಆ ದಶಸ್ಯತ** ಎಂಬ ವಾಕ್ಯಕ್ಕೆ ಎರಡು ವಿಧವಾಗಿ ಅರ್ಥಮಾಡಬಹುದೆಂದು ಭಾಷ್ಯಕಾರರು ಹೇಳಿದಾರೆ. **ನ್ರೂನ್ ಅಥಿತೀನ್** ಎಂಬ ಶಬ್ದಗಳಿಗೆ **ನೇತೄನ್ ಅತಿಥಿವತ್ಪೂಜ್ಯಾನ್ ದೇವಾನ್ ।** ಯಜ್ಞಕರ್ಮವನ್ನು ನೆರವೇರಿಸುವವರೂ ಅಥವಾ ಯಜ್ಞಕರ್ಮಗಳ ಅನುಷ್ಠಾನದಲ್ಲಿ ಮಾರ್ಗದರ್ಶಕರೂ, ಅತಿಥಿಗಳಂತೆ ಪೂಜ್ಯರೂ ಆದ ದೇವತೆಗಳನ್ನು ಎಂದು ಅರ್ಥಮಾಡಿ ಇಂತಹ ದೇವತೆಗಳನ್ನೂ ಅವರ ಪತ್ನಿಯರಾದ ದೇವಪತ್ನಿಯರನ್ನೂ ನಮ್ಮ ಈ ಯಜ್ಞದಲ್ಲಿ ಪರಿಚರಿಸಿ ಎಂದು ಒಂದು ವಿಧವಾದ ಅರ್ಥವು. **ನ್ರೂನ್ ಅತಿಥೀನ್** ಎಂಬ ಶಬ್ದಗಳಿಗೆ ಸಾಧಾರಣವಾಗಿ ಇರುವ ಅರ್ಥವನ್ನೇ ಎಂದರೆ ನಮ್ಮ ಯಜ್ಞಕ್ಕೆ ಬರುವ ಅಥವಾ ಬಂದಿರುವ ಅತಿಥಿಗಳಾದ ಮನುಷ್ಯರನ್ನು ಪೂಜಾದಿಗಳಿಂದ ಉಪಚರಿಸಿ ಎಂದು ಇನ್ನೊಂದು ವಿಧವಾದ ಅರ್ಥವು. ಈ ಎರಡುವಿಧ ಅರ್ಥಗಳಿಗೂ ಇಲ್ಲಿ ಅವಕಾಶವಿದೆ

॥ ಸಂಹಿತಾಪಾಠಃ ॥

ಯತ್ರ ವಹ್ನಿರಭಿಹಿತೋ ದುದ್ರವದ್ದ್ರೋಣ್ಯಃ ಪಶುಃ ।
ನೃಮಣಾ ವೀರಪಸ್ತ್ಯೋಽರ್ಣಾ ಧೀರೇವ ಸನಿತಾ ॥ ೪ ॥

॥ ಪದಪಾಠಃ ॥

ಯತ್ರ । ವಹ್ನಿಃ । ಅಭಿಽಹಿತಃ । ದುದ್ರವತ್ । ದ್ರೋಣ್ಯಃ । ಪಶುಃ ।
ನೃಽಮನಾಃ । ವೀರಽಪಸ್ತ್ಯಃ । ಅರ್ಣಾ । ಧೀರಾಽಇವ । ಸನಿತಾ ॥ ೪ ॥

॥ ಸಾಯಣಭಾಷ್ಯಂ ॥

ಯತ್ರ ಯಸ್ಮಿನ್ಯಜ್ಞೇ ವಹ್ನಿರ್ಯಜ್ಞಸ್ಯ ವೋಢಾಭಿಹಿತೋ ಯೂಪಂ ಪ್ರಾಪಿತೋ ದ್ರೋಣ್ಯೋ ಯೂಪಾರ್ಹಃ ಪಶುರ್ದುದ್ರವತ್ ಗಚ್ಛತಿ ಯೂಪಂ ಪ್ರತಿ ತತ್ರ ನೃಮಣಾ ಯಜಮಾನಮನಾಃ ಸನಿತಾ ವೀರಪಸ್ತ್ಯಃ । ವೀರಾ ಋತ್ವಿಗ್ಯಜಮಾನಾಃ ಪುತ್ರಭೃತ್ಯಾದಯೋ ವಾ ತದ್ವತ್ಪಸ್ತ್ಯಂ ಗೃಹಂ ಯಸ್ಯ ಸ ತಾದೃಶಃ । ಪ್ರೇರಿತಗೃಹೋ ವಾ । ಪುತ್ರಾದ್ಯುಪೇತಗೃಹಪ್ರದ ಇತ್ಯರ್ಥಃ । ಸನಿತಾ ಸಂಭಕ್ತಾ ಭವತಿ । ಅರ್ಣಾ ರಣಕುಶಲಾ ಧೀರೇವ ಯೋಷಿದಿವ । ಯದ್ವಾ । ಅರ್ಣಾನಿ ಹವೀಂಷ್ಯಭಿಲಕ್ಷ್ಯ ಸನಿತಾ ಭವತಿ ॥

॥ ಪ್ರತಿಪದಾರ್ಥ ॥

**ಯತ್ರ**—ಯಾವ ಯಾಗದಲ್ಲಿ । **ವಹ್ನಿಃ**—ಯಜ್ಞನಿರ್ವಾಹಕವಾದ ಅಗ್ನಿಯು । **ಅಭಿಹಿತಃ**—ಸ್ಥಾಪಿತವಾಗಿದೆಯೋ ಮತ್ತು । **ದ್ರೋಣ್ಯಃ**—ಯೂಪಾರ್ಹವಾದ । **ಪಶುಃ**—ಯಜ್ಞಪಶುವು । **ದುದ್ರವತ್**—ಯೂಪದ

ಹತ್ತಿರಕ್ಕೆ ಒಯ್ಯಲ್ಪಡುವುದೋ (ಅಲ್ಲಿ) | **ನೃಮಣಾಃ**—ಯಜಮಾನನಲ್ಲಿ ಅನುಗ್ರಹಮನಸ್ಕನಾದ ಸವಿತೃವು | **ಅರ್ಣಾ**—ದಾನಚತುರಳಾದ | **ಧೀರೇವ**—ಪತ್ನಿಯಂತೆ | **ವೀರಪಸ್ತ್ಯಃ**—ಪುತ್ರಾದಿಗಳಿಂದ ಕೂಡಿದ ಗೃಹಗಳನ್ನು | **ಸನಿತಾ**—ವಿಭಾಗಮಾಡುವವನಾಗಿದ್ದಾನೆ.

॥ ಭಾವಾರ್ಥ ॥

ಯಾವ ಯಾಗದಲ್ಲಿ ಯಜ್ಞನಿರ್ವಾಹಕವಾದ ಅಗ್ನಿಯು ಸ್ಥಾಪಿತವಾಗಿದೆಯೋ ಮತ್ತು ಯೂಪಾರ್ಹವಾದ ಯಜ್ಞಪಶುವು ಯೂಪದ ಹತ್ತಿರಕ್ಕೆ ಒಯ್ಯಲ್ಪಡುವುದೋ, ಅಲ್ಲಿ ಯಜಮಾನರಲ್ಲಿ ಅನುಗ್ರಹಮನಸ್ಕನಾದ ಸವಿತೃವು ದಾನಚತುರಳಾದ ಪತ್ನಿಯಂತೆ ಪುತ್ರಾದಿಗಳಿಂದ ಕೂಡಿದ ಗೃಹಗಳನ್ನು ವಿಭಾಗಮಾಡುವವನಾಗಿದ್ದಾನೆ.

## English Translation

When the victim fit to be bound, the subject (of the sacrifice), has been stationed (at the saerificial post): he, (Savitri), with mind well disposed towards the worshipper, the donor of dwellings and descendants is like a clever wife, the bestower (of wealth).

॥ ವಿಶೇಷವಿಷಯಗಳು ॥

ನಾವು ಮಾಡುತ್ತಿರುವ ಈ ಯಜ್ಞದಲ್ಲಿ ಅಗ್ನಿಯು ಉತ್ತರವೇದಿಯಲ್ಲಿರುವ ಆಹವನೀಯ ಕುಂಡದಲ್ಲಿ ಸ್ಥಾಪಿತನಾಗಿ ಪ್ರಜ್ವಲಿತನಾಗಿದಾನೆ. ಯಜ್ಞಕ್ಕಾಗಿ ಸಿದ್ಧಪಡಿಸಿರುವ ಪಶುವನ್ನು ಸಹ ಅದನ್ನು ಕಟ್ಟುವ ಯೂಪದ ಬಳಿಗೆ ಕರೆತಂದು ಮಂತ್ರಪೂರ್ವಕವಾಗಿ ಸಂಸ್ಕಾರಮಾಡಲಾಗಿದೆ. ಇಂತಹ ಈ ಯಜ್ಞದಲ್ಲಿ ಸವಿತೃದೇವನು ನಾವು ಅರ್ಪಿಸುವ ಹವಿರಾದಿಗಳಿಂದಲೂ, ಸ್ತುತಿಗಳಿಂದಲೂ ತೃಪ್ತನಾಗಿ ಯಜಮಾನನಿಗೆ ಅನುಗ್ರಹ ಮಾಡುವುದಕ್ಕಾಗಿ, ಚತುರಳಾದ ಸ್ತ್ರೀಯು ಮನೆಯ ಜನರಿಗೆ ಅನ್ನಾದ್ಯಾಹಾರಗಳನ್ನು ಸರಿಯಾಗಿ ವಿಭಾಗಮಾಡಿ ಒದಗಿಸುವಂತೆ (ಬಡಿಸುವಂತೆ) ಪುತ್ರಾದಿಗಳಿಂದಲೂ, ಇತರ ವಿಧವಾದ ಅನುಕೂಲಗಳಿಂದಲೂ ಸಮೃದ್ಧವಾದ ಗೃಹವನ್ನು ಒದಗಿಸಿಕೊಡಲಿ ಎಂದು ಮುಖ್ಯಾಭಿಪ್ರಾಯವು ಉಕ್ತವಾಗಿದೆ.

---

॥ ಸಂಹಿತಾಪಾಠಃ ॥

**ಏಷ ತೇ ದೇವ ನೇತಾ ರಥಸ್ಪತಿಃ ಶಂ ರಯಿಃ ।**

**ಶಂ ರಾಯೇ ಶಂ ಸ್ವಸ್ತಯ ಇಷಃಸ್ತುತೋ ಮನಾಮಹೇ ದೇವಸ್ತುತೋ ಮನಾಮಹೇ ॥ ೫ ॥**

॥ ಪದಪಾಠಃ ॥

ಏಷಃ । ತೇ । ದೇವ । ನೇತರಿತಿ । ರಥಃ ಪತಿಃ । ಶಂ । ರಯಿಃ ।

ಶಂ । ರಾಯೇ । ಶಂ । ಸ್ವಸ್ತಯೇ । ಇಷಃऽಸ್ತುತಃ । ಮನಾಮಹೇ । ದೇವಃಸ್ತುತಃ । ಮನಾಮಹೇ ॥೫॥

॥ ಸಾಯಣಭಾಷ್ಯಂ ॥

**ಹೇ ನೇತರ್ದೇವ ಸವಿತಸ್ತೇ ತವೈಷ ರಥಃಪತಿಃ ಸರ್ವಸ್ಯ ಪಾಲಕೋ ರಯಿರ್ದಾತವ್ಯಧನವಾನ್ ॥ ಮತ್ವರ್ಥೋ ಲುಪ್ಯತೇ ॥ ಶಂ ಕರೋತ್ವಿತಿ ಶೇಷಃ । ವಯಂ ಚ ರಾಯೇ ಧನಸ್ಯ ಶಂ ಸುಖಾಯ ಯದ್ವಾ । ರಾಯೇ ಧನಾಯ ಶಂ ಸುಖಾಯ ಚ ಸ್ವಸ್ತಯೇಽವಿನಾಶಾಯೇಷಃಸ್ತುತ ಏಷಣೀಯಸ್ಯ ಸವಿತುಃ ಸ್ತೋತಾರೋ ವಯಂ ಮನಾಮಹೇ । ಸ್ತುಮಃ । ದೇವಸ್ತುತೋ ದೇವಾನಾಂ ದೇವಸ್ಯ ವಾ ಸವಿತುಃ ಸ್ತೋತಾರೋ ಮನಾಮಹೇ । ಸ್ತುಮಃ ॥**

॥ ಪ್ರತಿಪದಾರ್ಥ ॥

**ನೇತಃ**—ನೇತೃವಾದ । **ದೇವ**—ಎಲೈ ಸವಿತೃವೇ । **ತೇ**—ನಿನ್ನ । **ರಯಿಃ**—ಧನಭರಿತವಾದುದೂ । **ಏಷಃ ರಥಸ್ಪತಿಃ**—ಪಾಲಕವೂ ಆದ ಈ ರಥವು । **ಶಂ**—(ನಮಗೆ) ಸುಖಕಾರಕವಾಗಲಿ । **ರಾಯೇ**—ಧನಕ್ಕಾಗಿಯೂ । **ಶಂ**—ಸುಖಕ್ಕಾಗಿಯೂ । **ಸ್ವಸ್ತಯೇ**—ಕಲ್ಯಾಣಕ್ಕಾಗಿಯೂ । **ಇಷಃ ಸ್ತುತಃ**—ಅದ್ಭುತನಾದ ಸವಿತೃವಿನ ಸ್ತುತಿ ಕರ್ತರಾದ ನಾವು । **ಮನಾಮಹೇ**—ಸ್ತುತಿಸುತ್ತೇವೆ । **ದೇವಸ್ತುತಃ**—ದೇವತಾತ್ಮನಾದ ಸವಿತೃವಿನ ಸ್ತುತಿಪಾಠಕ ರಾದ ನಾವು । **ಮನಾಮಹೇ**—ಸ್ತುತಿಸುತ್ತೇವೆ

॥ ಭಾವಾರ್ಥ ॥

ನೇತೃವಾದ ಎಲೈ ಸವಿತೃವೇ, ನಿನ್ನ ಧನಭರಿತವಾದುದೂ, ಪಾಲಕವೂ ಆದ ಈ ರಥವು ನಮಗೆ ಸುಖಕಾರಕ ವಾಗಲಿ. ಧನಕ್ಕಾಗಿಯೂ ಸುಖಕ್ಕಾಗಿಯೂ ಕಲ್ಯಾಣಕ್ಕಾಗಿಯೂ ಸಹ ದೇವತಾತ್ಮನಾದ ಸವಿತೃವಿನ ಸ್ತುತಿಕರ್ತರಾದ ನಾವು ಅವನನ್ನು ಸ್ತುತಿಸುತ್ತೇವೆ

## English Translation

Leader (of heaven), may this your protecting chariot, laden with riches, (come for our) happiness: praisers of the honoured (Savitri), we glorify him for felicity through well-being: praisers of the gods, we glorify (them)

॥ ವಿಶೇಷ ವಿಷಯಗಳು ॥

ಸೂಕ್ತದ ಉಪಸಂಹಾರರೂಪವಾದ ಈ ಋಕ್ಕಿನಲ್ಲಿ ಮಾರ್ಗದರ್ಶಕನಾದ ಸವಿತೃದೇವನ ರಥವೂ, ಸವಿತೃವೂ ಸಹ ನಮಗೆ ಸುಖವನ್ನೂ, ಧನವನ್ನೂ ಕಲ್ಯಾಣವನ್ನೂ ಒದಗಿಸಲೆಂದೂ ಇದಕ್ಕಾಗಿ ನಾವು ಈ ದೇವನನ್ನು ಸ್ತೋತ್ರ ಮಾಡುತ್ತೇವೆಂದೂ ಸೂಕ್ತದ್ರಷ್ಟ್ರುವಾದ ಋಷಿಯು ಪ್ರಾರ್ಥಿಸಿದಾನೆ

# ಐವತ್ತೊಂದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಅಗ್ನೇ ಸುತಸ್ಯೇತಿ ಪಂಚದಶರ್ಚಂ ಸಪ್ತಮಂ ಸೂಕ್ತಂ । ಅತ್ರೇಯಮನುಕ್ರಮಣಿಕಾ । ಅಗ್ನೇ ಪಂಚೋನಾ ಚತಸ್ರೋ ಗಾಯತ್ರ್ಯಃ ಷಳುಷ್ಣಿಹಸ್ತಿಸ್ರೋ ಜಗತ್ಯಸ್ತ್ರಿಷ್ಟುಭೋ ವಾಂತ್ಯೇ ಅನುಷ್ಟುಭಾವಿತಿ। ಋಷಿಶ್ಚಾಸ್ಯಸ್ಯಾದಿತಿ ಪರಿಭಾಷಯಾ ಸ್ವಸ್ತ್ಯಾತ್ರೇಯ ಋಷಿಃ । ಆದಿತಶ್ಚತಸ್ರೋ ಗಾಯತ್ರ್ಯಃ ಪಂಚಮ್ಯಾದ್ಯಾಃ ಷಡುಷ್ಣಿಹ ಏಕಾದಶ್ಯಾದ್ಯಾಸ್ತಿಸ್ರೋ ಜಗತ್ಯಸ್ತ್ರಿಷ್ಟುಭೋ ವಾ ಚತುರ್ದಶೀಪಂಚದಶ್ಯಾವನುಷ್ಟುಭೌ । ವಿಶ್ವೇ ದೇವಾ ದೇವತಾ ॥**

ಅನುವಾದವು—**ಅಗ್ನೇ ಸುತಸ್ಯ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಏಳನಯ ಸೂಕ್ತವು ಇದರಲ್ಲಿ ಹದಿನೈದು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ಅಗ್ನೇ ಪಂಚೋನಾ ಚತಸ್ರೋ ಗಾಯತ್ರ್ಯಃ ಷಳುಷ್ಣಿಹಸ್ತಿಸ್ರೋ ಜಗತ್ಯಸ್ತ್ರಿಷ್ಟುಭೋ ವಾಂತ್ಯೇ ಅನುಷ್ಟುಭೌ** ಎಂದು ಹೇಳಿರುವುದು ಈ ಸೂಕ್ತಕ್ಕೆ ಸ್ವಸ್ತ್ಯಾತ್ರೇಯಃ ಎಂಬುವನು ಋಷಿಯು, ವಿಶ್ವೇದೇವತೆಗಳೇ ದೇವತೆಯು, ಈ ಸೂಕ್ತದ ಮೊದಲಿನ ನಾಲ್ಕು ಋಕ್ಕುಗಳು ಗಾಯತ್ರೀಛಂದಸ್ಸುವು. ಐದರಿಂದ ಮುಂದಿನ ಆರು ಋಕ್ಕುಗಳು (೫–೧೦ ಋಕ್ಕುಗಳು) ಉಷ್ಣಿಕ್ ಛಂದಸ್ಸುವು, ಹನ್ನೊಂದರಿಂದ ಮುಂದಿನ ಮೂರು ಋಕ್ಕುಗಳು (೧೧–೧೩ ಋಕ್ಕುಗಳು) ಜಗತೀಛಂದಸ್ಸುವು ಅಥವಾ ತ್ರಿಷ್ಟುಪ್ ಛಂದಸ್ಸುವು. ಹದಿನಾಲ್ಕು ಹದಿನೈದನೆಯ ಋಕ್ಕುಗಳು ಅನುಷ್ಟುಪ್ ಛಂದಸ್ಸುವು.

---

## ಸೂಕ್ತ—೫೧.

॥ ಮಂಡಲ—೫ ॥ ಅನುವಾಕ—೪ ॥ ಸೂಕ್ತ—೫೧ ॥
॥ ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ— ೫, ೬, ೭ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ॥
ಋಷಿಃ—ಸ್ವಸ್ತ್ಯಾತ್ರೇಯಃ ॥
ದೇವತಾ—ವಿಶ್ವೇದೇವಾಃ ॥
ಛಂದಃ—೧-೪, ಗಾಯತ್ರೀ । ೫-೧೦ ಉಷ್ಣಿಕ್ । ೧೧-೧೩ ತ್ರಿಷ್ಟುಬ್ಜಗತೀ ವಾ । ೧೪,೧೫ ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಅಗ್ನೇ ಸುತಸ್ಯ ಪೀತಯೇ ವಿಶ್ವೈರೂಮೇಭಿರಾ ಗಹಿ ।
ದೇವೇಭಿರ್ಹವ್ಯದಾತಯೇ ॥ ೧ ॥

॥ ಪದಪಾಠಃ ॥

ಅಗ್ನೇ । ಸುತಸ್ಯ । ಪೀತಯೇ । ವಿಶ್ವೈಃ । ಊಮೇಭಿಃ । ಆ । ಗಹಿ ।

ದೇವೇಭಿಃ । ಹವ್ಯಃದಾತಯೇ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಂ ಸುತಸ್ಯ ಪೀತಯೇ ಸೋಮಪಾನಾಯ ವಿಶ್ವೈರೂಮೇಭಿರೂಮೈಃ ಸರ್ವೈರಪಿ ರಕ್ಷಕೈರ್ದೇವೇಭಿರ್ದೇವೈರಿಂದ್ರಾದಿಭಿಃ ಸಹ ಹವ್ಯಾದಾತಯೇಽಸ್ಮಾಕಂ ಹವಿರ್ದಾನಾಯ ತದ್ದಾತ್ರೇ ಯಜಮಾನಾಯ ವಾ ಆ ಗಹಿ । ಆಗಚ್ಛ ॥

॥ ಪ್ರತಿಪದಾರ್ಥ ॥

ಅಗ್ನೇ–ಎಲೈ ಅಗ್ನಿಯೇ । ಸುತಸ್ಯ–ಹಿಂಡಲ್ಪಟ್ಟ ಸೋಮದ । ಪೀತಯೇ–ಪಾನಕ್ಕಾಗಿ । ಊಮೇಭಿಃ–ರಕ್ಷಕರಾದ । ವಿಶ್ವೈಃ ದೇವೇಭಿಃ—ಸಕಲ ದೇವತೆಗಳೊಡನೆಯೂ । ಹವ್ಯದಾತಯೇ—ಹವಿಸ್ಸನ್ನರ್ಪಿಸುವ ಯಜಮಾನನಲ್ಲಿಗೆ । ಆ ಗಹಿ—ದಯಮಾಡು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಅಭಿಷುತವಾದ ಸೋಮರಸದ ಪಾನಕ್ಕಾಗಿ ರಕ್ಷಕರಾದ ಸಕಲ ದೇವತೆಗಳೊಡನೆಯೂ ಹವಿರ್ದಾತನಾದ ಯಜಮಾನನಲ್ಲಿಗೆ ದಯಮಾಡು.

## English Translation

Come, Agni, with all the protecting deities, to drink the libation: come with the gods.

॥ ಸಂಹಿತಾಪಾಠಃ ॥

ಋತಧೀತಯ ಆ ಗತ ಸತ್ಯಧರ್ಮಾಣೋ ಅಧ್ವರಂ ।

ಅಗ್ನೇಃ ಪಿಬತ ಜಿಹ್ವಯಾ ॥ ೨ ॥

॥ ಪದಪಾಠಃ ॥

ಋತಽಧೀತಯಃ । ಆ । ಗತ । ಸತ್ಯಽಧರ್ಮಾಣಃ । ಅಧ್ವರಂ ।

ಅಗ್ನೇಃ । ಪಿಬತ । ಜಿಹ್ವಯಾ ॥ ೨ ॥

॥ ಸಾಯಣಭಾಷ್ಯಂ ॥

**ಹೇ ಋತಧೀತಯಃ ಸತ್ಯಸ್ತುತಯೋಽಬಾಧ್ಯಕರ್ಮಾಣೋ ವಾ ದೇವಾ ಅಧ್ವರಮಸ್ಮದ್ಯಜ್ಞಮಾ ಗತ । ಆಗಚ್ಛತ । ಆಗತ್ಯ ಚ ಹೇ ಸತ್ಯಧರ್ಮಾಣಃ ಸತ್ಯಸ್ಯ ಧಾರಯಿತಾರೋ ಯೂಯಮಗ್ನೇರ್ಜಿಹ್ವಯಾ ಪಿಬತಾಜ್ಯಸೋಮಾದಿಕಂ ॥**

॥ ಪ್ರತಿಪದಾರ್ಥ ॥

**ಋತಧೀತಯಃ**—ಸತ್ಯಾತ್ಮಕವಾದ ಕರ್ಮವುಳ್ಳವರೂ । **ಸತ್ಯಧರ್ಮಾಣಃ**—ಸತ್ಯಧಾರಕರೂ ಆದ ಎಲೈ ದೇವತೆಗಳೇ । **ಅಧ್ವರಂ**—ನಮ್ಮ ಯಜ್ಞಕ್ಕೆ । **ಆ ಗತ**—ದಯಮಾಡಿ । **ಅಗ್ನೇಃ**—ಅಗ್ನಿಯ । **ಜಿಹ್ವಯಾ**—ನಾಲಿಗೆಯಂತಿರುವ ಜ್ವಾಲೆಯ ಮುಖದಿಂದ । **ಪಿಬತ**—ಸೋಮವನ್ನು ಪಾನಮಾಡಿರಿ.

॥ ಭಾವಾರ್ಥ ॥

ಸತ್ಯಾತ್ಮಕವಾದ ಕರ್ಮವುಳ್ಳವರೂ, ಸತ್ಯಧಾರಕರೂ ಆದ ದೇವತೆಗಳೇ, ನಮ್ಮ ಯಜ್ಞಕ್ಕೆ ದಯಮಾಡಿ, ಅಗ್ನಿಯ ಜಿಹ್ವೆಯಂತಿರುವ ಜ್ವಾಲೆಯ ಮುಖದಿಂದ ಸೋಮವನ್ನು ಪಾನಮಾಡಿರಿ.

## English Translation

(Gods who are) devoutly praised and worshipped in truth, come to the sacrifice, and drink the libation with the tongue of Agni.

॥ ವಿಶೇಷವಿಷಯಗಳು ॥

**ಋತಧೀತಯಃ—ಸತ್ಯಸ್ತುತಯೋಽಬಾಧ್ಯಕರ್ಮಾಣೋ ವಾ** । ಸತ್ಯವಾದ ವಾಕ್ಯಗಳಿಂದ ಸ್ತುತಿಸಲ್ಪಡುವವರು ಎಂದರೆ ಸ್ತೋತೃಜನರು ದೇವತೆಗಳಲ್ಲಿ ಸ್ತುತಿಸಿ ವರ್ಣಿಸಿರುವ ಗುಣಗಳೆಲ್ಲಾ ಸತ್ಯವಾದವುಗಳು ಅವರು ಸ್ತುತಿಸುವ ಸ್ತೋತ್ರಗಳಲ್ಲಿ ಅಥವಾ ಮಾಡುವ ವರ್ಣನೆಗಳಲ್ಲಿ ಯಾವ ಉತ್ಪ್ರೇಕ್ಷೆಯೂ ಇರುವುದಿಲ್ಲ ಎಂದಭಿಪ್ರಾಯವು. **ಅಥವಾ ಅಬಾಧ್ಯಕರ್ಮಾಣಃ** ಈ ದೇವತೆಗಳು ಮಾಡುವ ಕರ್ಮಗಳನ್ನು ಅಥವಾ ಸಾಹಸಕಾರ್ಯಗಳನ್ನೂ ಯಾರೂ ತಡೆಯಲಾರರು ಎಂದರೆ ದೇವತೆಗಳಿಗಾಗಲಿ ಅವರು ಮಾಡುವ ಕೆಲಸಗಳಿಗಾಗಲಿ ತಡೆಯನ್ನು ಅಥವಾ ವಿಘ್ನವನ್ನು ಮಾಡಲು ಯಾರಿಂದಲೂ ಸಾಧ್ಯವಿಲ್ಲ ಎಂದು ಇನ್ನೊಂದು ವಿಧವಾದ ಅರ್ಥವೂ ಇಲ್ಲಿ ಉಕ್ತವಾಗಿದೆ. ಇದೇ ಋಕ್ಕಿನಲ್ಲಿರುವ **ಸತ್ಯಧರ್ಮಾಣಃ** ಎಂಬ ಶಬ್ದಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಇದೇ ಅರ್ಥವೇ ಅನ್ವಯಿಸುವುದು. ಅಥವಾ ಸತ್ಯವನ್ನೇ ಎತ್ತಿ ಹಿಡಿಯುವವರು, ಸಜ್ಜನರು ಸತ್ಕರ್ಮವನ್ನು ಮಾಡುವಂತೆ ಅವರನ್ನು ಪ್ರೇರಿಸಿ ನಿಯಮನ ಮಾಡುವವರು ಅಥವಾ ಇವರ ನಿಯಮಗಳೂ ಕರ್ಮಗಳೂ ಯಾವಾಗಲೂ ಸತ್ಯವನ್ನೇ ಅವಲಂಬಿಸಿರುವುದೆಂದೂ ಆದ್ದರಿಂದ ಇವರನ್ನು **ಸತ್ಯಧರ್ಮಾಣಃ** ಎಂದು ಕರೆದಿದೆಯೆಂದೂ ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠಃ ॥

ವಿಪ್ರೇಭಿರ್ವಿಪ್ರ ಸಂತ್ಯ ಪ್ರಾತರ್ಯಾವಭಿರಾ ಗಹಿ ।
ದೇವೇಭಿಃ ಸೋಮಪೀತಯೇ ॥ ೩ ॥

॥ ಪದಪಾಠಃ ॥

ವಿಪ್ರೇಭಿಃ । ವಿಪ್ರ । ಸಂತ್ಯ । ಪ್ರಾತರ್ಯಾವಽಭಿಃ । ಆ । ಗಹಿ ।
ದೇವೇಭಿಃ । ಸೋಮಽಪೀತಯೇ ॥ ೩ ॥

॥ ಸಾಯಣಭಾಷ್ಯಂ ॥

ಹೇ ವಿಪ್ರ ಮೇಧಾವಿನ್ ವಿವಿಧಕಾಮಾನಾಂ ವಾ ಪೂರಕ ಹೇ ಸಂತ್ಯ ಸಂಭಜನೀಯಾಗ್ನೇ ವಿಪ್ರೇಭಿರುಕ್ತಲಕ್ಷಣೈಃ ಪ್ರಾತರ್ಯಾವಭಿಃ ಪ್ರಾತಃಕಾಲ ಆಗಂತೃಭಿರ್ದೇವೇಭಿರ್ದೇವೈಃ ಸಾರ್ಧಮಾ ಗಹಿ । ಆಗಚ್ಛ । ಕಿಮರ್ಥಂ । ಸೋಮಪೀತಯೇ ಸೋಮಪಾನಾಯ ॥

॥ ಪ್ರತಿಪದಾರ್ಥ ॥

**ವಿಪ್ರ**—ಮೇಧಾವಿಯೂ । **ಸಂತ್ಯ**—ಪೂಜ್ಯನೂ ಆದ ಎಲೈ ಅಗ್ನಿಯೇ । **ವಿಪ್ರೇಭಿಃ**—ಮೇಧಾವಿಗಳೂ । **ಪ್ರಾತರ್ಯಾವಭಿಃ**—ಪ್ರಾತಃಕಾಲದಲ್ಲಿ ಬರತಕ್ಕವರೂ ಆದ । **ದೇವೇಭಿಃ**—ದೇವತೆಗಳೊಡನೆ । **ಸೋಮಪೀತಯೇ**—ಸೋಮಪಾನಕ್ಕಾಗಿ । **ಆ ಗಹಿ**—ದಯಮಾಡು.

॥ ಭಾವಾರ್ಥ ॥

ಮೇಧಾವಿಯೂ, ಪೂಜ್ಯನೂ ಆದ ಎಲೈ ಅಗ್ನಿಯೇ, ಮೇಧಾವಿಗಳೂ, ಪ್ರಾತಃಕಾಲದಲ್ಲಿ ಬರತಕ್ಕವರೂ ಆದ ದೇವತೆಗಳೊಡನೆ ಸೋಮಪಾನಕ್ಕಾಗಿ ದಯಮಾಡು.

English Translation

Sage and adorable Agni, come with the wise and early-stirring divinities to drink the Soma libation

॥ ವಿಶೇಷವಿಷಯಗಳು ॥

ಪ್ರಾತಃಕಾಲದಲ್ಲಿ ಬರತಕ್ಕ ದೇವತೆಗಳೊಡನೆ ಯಜ್ಞಭೂಮಿಗೆ ಬಂದು ಅವರೊಡನೆ ಸೋಮಪಾನಮಾಡ ಬೇಕೆಂದು ಈ ಋಕ್ಕಿನಲ್ಲಿ ಅಗ್ನಿಯನ್ನು ಪ್ರಾರ್ಥಿಸಲಾಗಿದೆ ಪ್ರಾತಃಕಾಲದಲ್ಲಿ ಯಜ್ಞಭೂಮಿಗೆ ಬರುವ ದೇವತೆಗಳಾರು ಎಂದರೆ —

ಪ್ರಾತರಗ್ನಿಂ ಪ್ರಾತರಿಂದ್ರಂ ಹವಾಮಹೇ ಪ್ರಾತರ್ಮಿತ್ರಾವರುಣಾ ಪ್ರಾತರಶ್ವಿನಾ ।
ಪ್ರಾತರ್ಭಗಂ ಪೂಷಣಂ ಬ್ರಹ್ಮಣಸ್ಪತಿಂ ಪ್ರಾತಸ್ಸೋಮಮುತ ರುದ್ರಂ ಹುವೇಮ ॥

(ಋ. ಸಂ. ೭.೪೧-೧)

ಅಗ್ನಿ, ಇಂದ್ರ, ಮಿತ್ರಾವರುಣರು ಅಶ್ವಿನೀದೇವತೆಗಳು, ಭಗ, ಪೂಷನ್, ಬ್ರಹ್ಮಣಸ್ಪತಿ, ಸೋಮ, ರುದ್ರ ಎಂಬ ದೇವತೆಗಳನ್ನು ಪ್ರಾತಃಕಾಲದಲ್ಲಿ ಆಹ್ವಾನಿಸುತ್ತೇವೆ ಎಂದು ವಸಿಷ್ಠ ಋಷಿಯು ಈ ಋಕ್ಕಿನಲ್ಲಿ ಹೇಳಿದಾನೆ. ಇದಲ್ಲದೆ, ಈ ದೇವತೆಗಳಲ್ಲಿಯೂ ಪ್ರಾತಃಕಾಲದಲ್ಲಿ ಅಗ್ನಿ, ಅಶ್ವಿನೀದೇವತೆಗಳು, ಉಷಸ್ಸು, ಸವಿತೃ ಎಂಬ ದೇವತೆಗಳನ್ನೇ ಮುಖ್ಯವಾಗಿ ಆಹ್ವಾನಿಸುವ ರೂಢಿ ಇದೆ.

ಪ್ರಾತರ್ಹಿ ಯಜ್ಞಮಶ್ವಿನಾ ದಧಾತೇ ಪ್ರ ಶಂಸಂತಿ ಕವಯಃ ಪೂರ್ವಭಾಜಃ ।
ಪ್ರಾತರ್ಯಜಧ್ವಮಶ್ವಿನಾ ಹಿನೋತ ನ ಸಾಯಮಸ್ತಿ ದೇವಯಾ ಅಜುಷ್ಟಂ ॥

(ಋ. ಸಂ ೫.೭೭-೧,೨)

ಎಂಬ ಋಕ್ಕಿನಲ್ಲಿ ಅಶ್ವಿನೀದೇವತೆಗಳನ್ನು ಪ್ರಾತಃಕಾಲದಲ್ಲಿ ಆಹ್ವಾನಮಾಡುವ ವಿಷಯವು ಉಕ್ತವಾಗಿದೆ ಯಜ್ಞಕರ್ಮಗಳಿಗೆ ಅಗ್ನಿಯೇ ಅತ್ಯವಶ್ಯಕವಾಗಿರುವುದರಿಂದಲೂ, ಯಜ್ಞಕರ್ಮವು ಪ್ರಾತಃಕಾಲದಲ್ಲಿಯೇ ಪ್ರಾರಂಭವಾಗುವುದರಿಂದಲೂ ಅಗ್ನಿಯನ್ನೂ ಯಜ್ಞಾರಂಭಕಾಲವಾದ ಪ್ರಾತಃಕಾಲದಲ್ಲಿ ಮಥಿಸಿ ಆಹ್ವಾನಮಾಡುವುದು ಪ್ರಸಿದ್ಧವಾಗಿಯೇ ಇದೆ. ಇದರಂತೆ ಉಷಃಕಾಲವು ಸೂರ್ಯೋದಯಕ್ಕೆ ಪೂರ್ವದಲ್ಲಿ ಆವಿರ್ಭವಿಸುವುದರಿಂದ ಉಷೋದೇವತೆಯೂ ಪ್ರಾತಃಕಾಲದೇವತೆಯು ; ಸವಿತೃವು ಉದಯಿಸುತ್ತಿರುವ ಸೂರ್ಯನೇ ಆಗಿರುವುದರಿಂದ ಸವಿತೃವೂ ಪ್ರಾತಃಕಾಲದ ದೇವತೆಯೇ ಆಗಿರುವನು. ಆದ್ದರಿಂದ ಪ್ರಾತಃಕಾಲದಲ್ಲಿ ಈ ದೇವತೆಗಳೊಡನೆ ಯಜ್ಞಭೂಮಿಗೆ ಬಂದು ಸೋಮಪಾನಮಾಡಬೇಕೆಂದು ಅಗ್ನಿಯನ್ನು ಪ್ರಾರ್ಥಿಸಿದೆ.

॥ ಸಂಹಿತಾಪಾಠಃ ॥

ಅಯಂ ಸೋಮಶ್ಚಮೂ ಸುತೋಽಮತ್ರೇ ಪರಿ ಷಿಚ್ಯತೇ ।
ಪ್ರಿಯ ಇಂದ್ರಾಯ ವಾಯವೇ ॥ ೪ ॥

॥ ಪದಪಾಠಃ ॥

ಅಯಂ । ಸೋಮಃ । ಚಮೂ ಇತಿ । ಸುತಃ । ಅಮತ್ರೇ । ಪರಿ । ಸಿಚ್ಯತೇ ।
ಪ್ರಿಯಃ । ಇಂದ್ರಾಯ । ವಾಯವೇ ॥ ೪ ॥

॥ ಸಾಯಣಭಾಷ್ಯಂ ॥

**ಅಯಂ ಪುರತೋ ವರ್ತಮಾನಃ ಸೋಮಶ್ಚಮೂ ಚಮ್ವೋರತ್ರ್ಯೋರಧಿಷವಣಫಲಕಯೋಃ ಸುತೋಽಭಿಷುತಃ ಸನ್ ಅಮತ್ರೇ ಪಾತ್ರೇ ಪರಿ ಷಿಚ್ಯತೇ । ಪೂರ್ಯತೇ । ಸ ಚೇಂದ್ರಾಯ ವಾಯವೇ ಚ ಪ್ರಿಯಃ । ತಂ ಪಾತುಂ ಹೇ ಇಂದ್ರವಾಯೂ ಆಗಚ್ಛತಮಿತಿ ಶೇಷಃ ॥**

॥ ಪ್ರತಿಪದಾರ್ಥ ॥

**ಇಂದ್ರಾಯ**—ಇಂದ್ರನಿಗೂ । **ವಾಯವೇ**—ವಾಯುವಿಗೂ । **ಪ್ರಿಯಃ**—ಪ್ರೀತಿಕಾರಕವಾದ । **ಅಯಂ ಸೋಮಃ**—ಈ ಸೋಮವು । **ಚಮೂ**—ಚಮೂಪಾತ್ರೆಗಳಲ್ಲಿ । **ಸುತಃ**—ಹಿಂಡಲ್ಪಟ್ಟು । **ಅಮತ್ರೇ**—ಸೋಮ ಪಾತ್ರೆಯಲ್ಲಿ । **ಪರಿ ಷಿಚ್ಯತೇ**—ತುಂಬಲ್ಪಡುತ್ತದೆ.

॥ ಭಾವಾರ್ಥ ॥

ಇಂದ್ರನಿಗೂ, ವಾಯುವಿಗೂ ಪ್ರೀತಿಕಾರಕವಾದ ಈ ಸೋಮವು ಚಮೂಎಂಬ ಸೋಮರಸವನ್ನು ಹಿಂಡುವುದ ಕ್ಕಾಗಿ ಉಪಯೋಗಿಸುವ ಎರಡು ಮರದ ಹಲಗೆಗಳ ಮಧ್ಯದಲ್ಲಿ ಹಿಂಡಲ್ಪಟ್ಟು ಸೋಮಪಾತ್ರೆಯಲ್ಲಿ ತುಂಬಲ್ಪಡುತ್ತದೆ.

## English Translation

The Soma juice, effused into the ladles, is poured out into the vase, acceptable to Indra and Vayu.

॥ ವಿಶೇಷವಿಷಯಗಳು ॥

**ಚಮ್ವೋಃ—ಅತ್ರ್ಯೋಃ ಅಧಿಷವಣಫಲಕಯೋಃ ।** ಸೋಮಲತೆಗಳನ್ನು ಕಲ್ಲುಗಳಿಂದ ಜಜ್ಜಿ ರಸವನ್ನು ಹಿಂಡಿ ತೆಗೆಯುವರು ಆ ಕಲ್ಲುಗಳಿಗೆ ಗ್ರಾವಾ ಎಂದು ಹೆಸರು ಅದ್ರಿಯೆಂದು ಕೆಲವುಕಡೆ ಹೇಳಿದೆ. ಕೆಲವರು ಅದ್ರಿಯೆಂದರೆ ಕೆಳಭಾಗದಲ್ಲಿ ಅಗಲವಾಗಿ ಮಧ್ಯದಲ್ಲಿ ಒರಳಿನಂತೆ ಹಳ್ಳವಾಗಿರುವ ಕಲ್ಲೆಂದೂ, ಗ್ರಾವವೆಂದರೆ ಸೋಮ ಲತೆಗಳನ್ನು ಅದ್ರಿಯೆಂಬ ಕಲ್ಲಿನಮೇಲಿಟ್ಟು ಜಜ್ಜುವ ಇನ್ನೊಂದು ಕಲ್ಲೆಂದು ಹೇಳುವರು ಈ ಗ್ರಾವವೆಂಬ ಕಲ್ಲು ಬುಡ ದಲ್ಲಿ ದಪ್ಪವಾಗಿದ್ದು ಕೈಯಲ್ಲಿ ಹಿಡಿದುಕೊಳ್ಳಲು ಅನುಕೂಲವಾಗಿರುವಂತೆ ಗುಂಡುಕಲ್ಲಿನ ಆಕಾರದಲ್ಲಿರುವುದು. ಈ ಕಲ್ಲು ಗಳನ್ನು ಸ್ವಲ್ಪ ಹೆಚ್ಚುಕಡಿಮೆ ವೈದ್ಯರು ಔಷಧಾದಿಗಳನ್ನು ಅರೆಯುವುದಕ್ಕಾಗಿ ಉಪಯೋಗಿಸುವ ಕಲ್ಲುಬತ್ತುಗಳಿಗೆ (Pestle & Mortar) ಹೋಲಿಸಬಹುದು. ಸಾಧಾರಣವಾಗಿ ಸೋಮಲತೆಗಳಿಂದ ಸೋಮರಸವನ್ನು ಜಜ್ಜಿ ಹಿಂಡಿ ತೆಗೆಯುವುದಕ್ಕಾಗಿ ಈ ವಿಧವಾದ ಕಲ್ಲುಗಳ ಉಪಯೋಗವೇ ಹೆಚ್ಚಾಗಿರುವುದು. ಅವುಗಳ ವರ್ಣನೆಯೇ ವಿಶೇಷವಾಗಿ ಕಂಡು ಬರುವುದು. ಆದರೆ ಈ ಕಲ್ಲುಗಳಿಗೆ ಬದಲಾಗಿ ಮರದ ಹಲಗೆಗಳನ್ನು ಅಥವಾ ತುಂಡುಗಳನ್ನೂ ಉಪಯೋಗಿಸುವುದೂ ಉಂಟು. ಕೆಳಗಿನ ಹಲಗೆ ಸ್ವಲ್ಪ ಅಗಲವಾಗಿ ಮಧ್ಯದಲ್ಲಿ ಹಳ್ಳವಾಗಿರುವುದು. ಅದರ ಮೇಲೆ ಸೋಮಲತೆಗಳನ್ನು ಇಟ್ಟು ಜಜ್ಜುವ ಇನ್ನೊಂದು ಮರದತುಂಡು ದಪ್ಪನಾಗಿಯೂ ಉದ್ದವಾಗಿಯೂ ಇರುವುದು ಎರಡು ವಿಧವಾದ ಈ ಮರದ ತುಂಡುಗಳನ್ನೇ ಇಲ್ಲಿ **ಚಮ್ವೋಃ** ಎಂಬ ಶಬ್ದದಿಂದ ನಿರ್ದೇಶಿಸಿದೆ.

ಈ ಋಕ್ಕಿನಲ್ಲಿಯೂ ಮುಂದಿನ ಮೂರು ಋಕ್ಕುಗಳಲ್ಲಿಯೂ ಇಂದ್ರನನ್ನೂ ವಾಯುವನ್ನೂ ಸೋಮಪಾನ ಮಾಡಲು ಯಜ್ಞಭೂಮಿಗೆ ಬರಬೇಕೆಂದು ಪ್ರಾರ್ಥಿಸಿದೆ. ಮುಂದಿನ ಋಕ್ಕಿನಲ್ಲಿ ವಾಯುವನ್ನು ಮಾತ್ರ ಪ್ರಾರ್ಥಿಸ

ಲಾಗಿದೆ. ಏಕೆಂದರೆ ಯಜ್ಞದಲ್ಲಿ ವಾಯುವೇ ಮೊದಲು ಸೋಮಪಾನಮಾಡಲು ಅರ್ಹನೆಂದೂ ಕಾರಣಾಂತರದಿಂದ ಇಂದ್ರನೂ ವಾಯುವಿನ ಜತೆಯಲ್ಲಿ ಸೇರಿಕೊಂಡು ಇಬ್ಬರೂ ಒಟ್ಟಿಗೆ ಸೋಮಪಾನಮಾಡುವರೆಂದೂ ಪ್ರಸಿದ್ಧವು ಈ ವಿಷಯದಲ್ಲಿ ಎಂದರೆ ವಾಯುದೇವತೆಯು ಹೇಗೆ ಪ್ರಥಮಸೋಮಪಾನಕ್ಕೆ ಅರ್ಹನು ಎಂಬ ವಿಷಯದಲ್ಲಿ ಐತರೇಯಬ್ರಾಹ್ಮಣದಲ್ಲಿ ಪೂರ್ವೇತಿಹಾಸವಿದೆ

> **ದೇವಾ ವೈ ಸೋಮಸ್ಯ ರಾಜ್ಞೋಽಗ್ರಪೇಯೇ ನ ಸಮಪಾದಯನ್ನಹಂ ಪ್ರಥಮಃ ಪಿಬೇಯ-ಮಹಂ ಪ್ರಥಮಃ ಪಿಬೇಯಮಿತ್ಯೇವಾಕಾಮಯಂತ ತೇ ಸಂಪಾದಯಂತೋಽಬ್ರುವನ್ ಹಂತಾಜಿಮಯಾಮ ಸ ಯೋ ನ ಉಜ್ಜೇಷ್ಯತಿ ಸ ಪ್ರಥಮಃ ಸೋಮಸ್ಯ ಪಾಸ್ಯತೀತಿ ತಥೇತಿ ತ ಆಜಿಮಯುಸ್ತೇಷಾಮಾಜಿಂ ಯತಾಮಭಿಸೃಷ್ಟಾನಾಂ ವಾಯುರ್ಮುಖಂ ಪ್ರಥಮಃ ಪ್ರತ್ಯಪದ್ಯತಾಥೇಂದ್ರೋಽಥ ಮಿತ್ರಾವರುಣಾವಥಾಶ್ವಿನಾ ।**
>
> (ಐ. ಬ್ರಾ. ೯-೨೫)

ಪೂರ್ವದಲ್ಲಿ ದೇವತೆಗಳೆಲ್ಲರೂ ಸೇರಿ ಸೋಮಪಾನ ಮಾಡಬೇಕೆಂದು ಅಪೇಕ್ಷಿಸಿ ತಮ್ಮಲ್ಲಿ ಯಾರು ಮೊದಲು ಸೋಮಪಾನವನ್ನು ಮಾಡಬೇಕೆಂದು ವಿವಾದವುಂಟಾಗಲು ಆಗ ಅವರಲ್ಲಿ ನಾನು ಮೊದಲು, ತಾನು ಮೊದಲು ಪಾನಮಾಡಬೇಕೆಂದು ಚರ್ಚೆಗಾರಂಭವಾಯಿತು. ಈ ವಿಷಯವು ಯಾವ ರೀತಿಯಲ್ಲಿಯೂ ಇತ್ಯರ್ಥವಾಗದ್ದರಿಂದ ಅವರೆಲ್ಲರೂ ಸೇರಿ ಸಮಾಲೋಚನೆಮಾಡಿ ಒಂದು ಒಪ್ಪಂದಕ್ಕೆ ಬಂದರು. ಏನೆಂದರೆ, ನಾವೆಲ್ಲರೂ ಸೇರಿ ಒಂದು ಸ್ಪರ್ಧೆಯನ್ನು ಏರ್ಪಡಿಸೋಣ. ಅದರಲ್ಲಿ ಗೆದ್ದವರು ಮೊದಲು ಸೋಮಪಾನಮಾಡಲು ಅರ್ಹರಾಗುವರು ಎಂದು. ಅದಕ್ಕೆ ಎಲ್ಲರೂ ಒಪ್ಪಲು ಆಗ ಒಂದು ಸ್ಥಳದಿಂದ ದೂರದಲ್ಲಿರುವ ಮತ್ತೊಂದು ಸ್ಥಳಕ್ಕೆ ಓಡಿಹೋಗಿ ಅಲ್ಲಿರುವ ಒಂದು ಕಲ್ಲುಬಂಡೆಯನ್ನಾಗಲಿ, ವೃಕ್ಷವನ್ನಾಗಲಿ ಮೊದಲು ಸಮೀಪಿಸಿದವರು ಗೆದ್ದವರೆಂದು ಭಾವಿಸಬೇಕು ಎಂದು ಸ್ಪರ್ಧೆಯು ನಿಶ್ಚಯವಾಯಿತು. ಈ ರೀತಿ ಗೆದ್ದವರು ನಮ್ಮಗಳ ಮಧ್ಯದಲ್ಲಿ ಜಯಶಾಲಿಯಾಗಿ ಮೊದಲು ಸೋಮಪಾನವನ್ನು ಮಾಡಬೇಕು ಎಂಬ ಒಪ್ಪಂದಕ್ಕೆ ಎಲ್ಲರೂ ಸಮ್ಮತಿಸಲು ಎಲ್ಲಾ ದೇವತೆಗಳೂ ಏಕಕಾಲದಲ್ಲಿ ಓಡಲು ಪ್ರಾರಂಭಿಸಿದರು ಓಡುತ್ತಿರುವ ಎಲ್ಲಾ ದೇವತೆಗಳಲ್ಲಿ ವಾಯುವು ಎಲ್ಲರಿಗಿಂತಲೂ ಮುಂದಾಗಿ ನಿರ್ದಿಷ್ಟಸ್ಥಳವನ್ನು ಸೇರಿದನು ಇಂದ್ರನು ವಾಯುವಿನ ಹಿಂಭಾಗದಲ್ಲಿಯೇ ಬಂದು ಎರಡನೆಯವನಾದನು. ಅನಂತರ ಇಂದ್ರನ ಹಿಂದೆ ಮಿತ್ರಾವರುಣರೂ, ಅವರ ಹಿಂದೆ ಅಶ್ವಿನೀದೇವತಗಳೂ ಓಡಿಬಂದು ನಿರ್ದಿಷ್ಟಸ್ಥಳವನ್ನು ಸೇರಿದರು ಆದುದರಿಂದ ಈ ದೇವತೆಗಳಲ್ಲಿ ವಾಯುವೇ ಎಲ್ಲರಿಗಿಂತಲೂ ಮುಂದಾಗಿ ಓಡಿ ಜಯಶಾಲಿಯಾದನು.

> **ಸೋಽವೇದಿಂದ್ರೋ ವಾಯುರ್ವಾವ ನ ಉಜ್ಜಯತೀತಿ ತಮನು ಪರಾಪತತ್ಸಹ ನಾವಥೋಜ್ಜಯಾ-ವೇತಿ ಸ ನೇತ್ಯಬ್ರವೀದಹಮೇವೋಜ್ಜೇಷ್ಯಾಮೀತಿ ತೃತೀಯಂ ಮೇಽಥೋಜ್ಜಯಾವೇತಿ ನೇತಿ ಹೈವಾಬ್ರವೀದಹಮೇವೋಜ್ಜೇಷ್ಯಾಮೀತಿ ತುರೀಯಂ ಮೇಽಥೋಜ್ಜಯಾವೇತಿ ತಥೇತಿ ತಂ ತುರೀಯೇಽತ್ಯಾರ್ಜತ ತತ್ತುರೀಯಭಾಗಿಂದ್ರೋಽಭವತ್ತ್ರಿಭಾಗ್ವಾಯುಃ ॥**

ವಾಯುವೂ ಅವನ ಹಿಂದೆ ಇಂದ್ರನೂ ಓಡುತ್ತಿರುವಾಗ ಅವರಲ್ಲಿ ಈ ರೀತಿ ಪರಸ್ಪರ ಸಂವಾದವುಂಟಾಯಿತು. ವಾಯುವು ವೇಗವಾಗಿ ಓಡುತ್ತಿರುವುದನ್ನು ಅವನ ಹಿಂದಿದ್ದ ಇಂದ್ರನು ಕಂಡು ಈ ವಾಯುವೇ ಎಲ್ಲರಿಗಿಂತಲೂ ಮುಂಚಿತವಾಗಿ ಓಡಿ ಜಯಶಾಲಿಯಾಗುವನು. ಏನಾದರೂ ಮಾಡಿ ನಾನೂ ಇವನ ಜತೆಗೇ ಓಡಿ ಗೆಲ್ಲಬೇಕು ಎಂದು

ನಿಶ್ಚಯಿಸಿ, ತನ್ನ ಶಕ್ತಿಯನ್ನೆಲ್ಲಾ ಉಪಯೋಗಿಸಿ ವಾಯುವಿನ ಸಮೀಪದಲ್ಲಿಯೇ ಓಡಿದನು. ಆದರೂ ವಾಯುವನ್ನು ಹಿಂದಕ್ಕೆ ಹಾಕಿ ತಾನು ಮುದುವರಿಯುವ ಸೂಚನೆಯು ಕಾಣದಿರಲು, ಆಗ ಇಂದ್ರನು ವಾಯುವನ್ನು ಕುರಿತು—ಎಲೈ ವಾಯುವೇ, ನಾವಿಬ್ಬರೂ ಎಲ್ಲರಿಗಿಂತಲೂ ಮುಂದಾಗಿರುವೆವು ಆದ್ದರಿಂದ ನಾನಿಬ್ಬರೂ ಗೆದ್ದಂತೆ ಭಾವಿಸಿ ಪ್ರಥಮಸೋಮಪಾನವನ್ನು ಇಬ್ಬರೂ ಹಂಚಿಕೊಳ್ಳೋಣ. ನನಗರ್ಧ ನಿನಗರ್ಧ, ಈ ರೀತಿ ಇಬ್ಬರೂ ಸಹಕರಿಸಿ ಜಯವನ್ನು ಸಂಪಾದಿಸೋಣ ಎಂದನು. ಆ ಮಾತನ್ನು ಕೇಳಿ ವಾಯುವು—ಎಲೈ ಇಂದ್ರನೇ, ನಿನಗಿಂತಲೂ ನಾನು ಸ್ವಲ್ಪಮಟ್ಟಿಗಾದರೂ ಮುಂದಾಗಿಯೇ ಇರುವೆನು. ಆದ್ದರಿಂದ ನಾನೊಬ್ಬನೇ ಜಯಶಾಲಿಯಾಗುವೆನು. ಪ್ರಥಮ ಸೋಮಪಾನದಲ್ಲಿ ಎಲ್ಲವೂ ನನಗೇ ಸೇರಬೇಕು ನಿನಗೆ ಅರ್ಧವನ್ನು ಕೊಡುವುದಕ್ಕಾಗುವುದಿಲ್ಲ ಎಂದನು. ಆಗ ಇಂದ್ರನು—ಒಳ್ಳೇದು ಹಾಗಾದರೆ ನನಗೆ ಅರ್ಧಭಾಗ ಬೇಡ ಮೂರು ಭಾಗಗಳಲ್ಲಿ ಎರಡನ್ನು ನೀನು ತೆಗೆದುಕೊ, ನನಗೆ ಒಂದು ಭಾಗವನ್ನು ಮಾತ್ರ ಕೊಡು ಎನ್ನಲು, ವಾಯುವು ಅದಕ್ಕೂ ಒಪ್ಪದೆ, ಹೇಗಾದರೂ ನಾನೇ ಗೆಲ್ಲುವೆನು. ಎಲ್ಲಾ ಭಾಗವೂ ನನಗೇ ಸೇರುವುದು, ನಿನಗೆ ಮೂರರಲ್ಲಿ ಒಂದುಭಾಗವನ್ನೂ ಕೊಡಲು ನನಗಿಷ್ಟವಿಲ್ಲ ಎಂದನು ಆಗ ಇಂದ್ರನು ಮತ್ತೆ ವಾಯುವನ್ನು ಪ್ರಾರ್ಥಿಸುತ್ತಾ, ನನಗೆ ಮೂರರಲ್ಲೊಂದುಭಾಗವೂ ಬೇಡ. ಇನ್ನೂ ಕಡಿಮೆಯಾಗಿ ಎಂದರೆ ನಾಲ್ಕರಲ್ಲೊಂದುಭಾಗವನ್ನು ಕೊಟ್ಟರೆ ಸಾಕು. ಅದಕ್ಕಾದರೂ ಒಪ್ಪು ಎಂದು ಕೇಳಲು, ವಾಯುವು ಹಾಗೆಯೇ ಆಗಲೆಂದು ಅದಕ್ಕೊಪ್ಪಿದನು ಆದ್ದರಿಂದ ಐಂದ್ರವಾಯವಗ್ರಹದಲ್ಲಿ (ಎಂದರೆ ಇಂದ್ರ ಮತ್ತು ವಾಯು ಇಬ್ಬರು ಸೇರಿ ಸೋಮಪಾನಮಾಡುವ ಪಾತ್ರೆಯಲ್ಲಿ) ಇಂದ್ರನಿಗೆ ಒಂದುಭಾಗವೂ, ವಾಯುವಿಗೆ ಮೂರುಭಾಗವೂ ಇರಬೇಕೆಂದು ವ್ಯವಸ್ಥೆಯಾಯಿತು

**ತೌ ಸಹೈವೇಂದ್ರವಾಯೂ ಉದಜಯತಾಂ ಸಹ ಮಿತ್ರಾವರುಣೌ ಸಹಾಶ್ವಿನೌ ಶ ಏಷಾಮೇತೇ ಯಥೋಜ್ಜಿತಂ ಭಕ್ಷಾ ಇಂದ್ರವಾಯ್ವೋಃ ಪ್ರಥಮೋಽಥ ಮಿತ್ರಾವರುಣಯೋರಥಾಶ್ವಿನೋಃ ॥ ಸ ಏಷ ಇಂದ್ರತುರೀಯೋ ಗ್ರಹೋ ಗೃಹ್ಯತೇ ಯದೈಂದ್ರವಾಯವಃ ।**

ಈ ರೀತಿ ಇಂದ್ರ ಮತ್ತು ವಾಯುವು ಸಹಕರಿಸಿ ಸ್ಪರ್ಧೆಯನ್ನು ಗೆದ್ದು ನಿರ್ದಿಷ್ಟಪ್ರದೇಶವನ್ನು ಮೊದಲು ತಲಪಿದರು. ಅವರ ಹಿಂದೆ ಮಿತ್ರಾವರುಣರು ಬಂದುಸೇರಿದರು ಅವರ ಹಿಂದೆ ಅಶ್ವಿನೀದೇವತೆಗಳು ಬಂದರು ಆದ್ದರಿಂದ ಈ ದೇವತೆಗಳ ಮಧ್ಯದಲ್ಲಿ ಅವರು ಸ್ಪರ್ಧೆಯಲ್ಲಿ ಯಾವ ಯಾವ ಸ್ಥಾನವನ್ನು ಪಡೆದರೋ ಆ ಕ್ರಮದಲ್ಲಿ ಅವರು ಸೋಮಪಾನಕ್ಕೆ ಅರ್ಹರಾದರು. ಎಂದರೆ ಮೊದಲು ಇಂದ್ರವಾಯುಗಳು, ಅನಂತರ ಮಿತ್ರಾವರುಣರು, ಅವರನಂತರ ಅಶ್ವಿನೀದೇವತೆಗಳು ಸೋಮಪಾನ ಮಾಡಲು ವ್ಯವಸ್ಥೆಯುಂಟಾಯಿತು. ಹೀಗೆ ಇಬ್ಬಿಬ್ಬರು ದೇವತೆಗಳು ಸೇರಿ ಸೋಮಪಾನ ಮಾಡುವ ವ್ಯವಸ್ಥೆ ಎಂದು ದ್ವಿದೇವತ್ಯಗ್ರಹದ ಕ್ರಮವು (ಎಂದರೆ ಇಬ್ಬರು ದೇವತೆಗಳು ಒಟ್ಟಿಗೆ ಸೇರಿ ಸೋಮಪಾನ ಮಾಡುವ ಕ್ರಮವು) ರೂಢಿಗೆ ಬಂದಿತು. ಆದ್ದರಿಂದ ಐಂದ್ರವಾಯವಗ್ರಹದಲ್ಲಿ ಇಂದ್ರನಿಗೆ ನಾಲ್ಕರಲ್ಲಿ ಒಂದು ಭಾಗ ಮಾತ್ರ ಸೋಮಪಾನದಲ್ಲಿ ವ್ಯವಸ್ಥೆ ಇರುವುದು.

**ತದೇತದೃಷಿಃ ಪಶ್ಯನ್ನಭ್ಯನೂವಾಚ ನಿಯುತ್ವಾನ್ ಇಂದ್ರಸಾರಥಿರಿತಿ ।**

ಐಂದ್ರವಾಯವಗ್ರಹದಲ್ಲಿ ಇಂದ್ರನಿಗೆ ನಾಲ್ಕರಲ್ಲಿ ಒಂದುಭಾಗವಿರುವುದನ್ನು ಋಷಿಯು ದಿವ್ಯದೃಷ್ಟಿಯಿಂದ ತಿಳಿದು ಮುಂದಿನ ಋಕ್ಕಿನಲ್ಲಿ ಎಂದರೆ—**ಶತೇನಾ ನೋ ಅಭಿಷ್ಟಿಭಿರ್ನಿಯುತ್ವಾನ್ ಇಂದ್ರಸಾರಥಿಃ** । (ಋ ಸ ೪-೪೬-೨) ಎಂಬ ಋಕ್ಕಿನಲ್ಲಿ ಈ ವಿಷಯವನ್ನೂ **ನಿಯುತ್ವಾನ್ ಇಂದ್ರಸಾರಥಿಃ** ಎಂಬ ವಾಕ್ಯದಿಂದ ವ್ಯಕ್ತಪಡಿಸಿರುವನು. ಇಲ್ಲಿ **ನಿಯುತೋ ವಾಯೋಃ** ಎಂಬ ನಿರುಕ್ತವಚನದಂತೆ (ನಿ ೨-೨೮) ನಿಯುತ ಎಂಬ ಅಶ್ವಗಳು ವಾಯುದೇವನ

ವಾಹನವೆಂದು ಪ್ರಸಿದ್ಧವು. ಆದ್ದರಿಂದ ನಿಯುತ್ವತ್ಪದವು ವಾಯುಸಂಬಂಧವನ್ನು ಸೂಚಿಸುವುದು. ಮೇಲಿನ ಋಕ್ಕಿನಲ್ಲಿ ನಿಯುತ್ವಾನ್ ಎಂಬ ಪದವು ವಾಯುವಿನಿಂದ ಸಹಿತನಾದ ಇಂದ್ರನನ್ನು ಸೂಚಿಸುವುದು. **ಅಥಾ ವಾಯುಂ ನಿಯುತಃ ಸಶ್ಚತಸ್ವಾಃ** (ತೈ. ಬ್ರಾ. ೨-೮-೧-೧) ಇತ್ಯಾದಿ ಮಂತ್ರಗಳು ಈ ವಿಷಯವನ್ನು ಸಮರ್ಥಿಸುವುವು. **ಇಂದ್ರಸಾರಥಿಃ** ಎಂಬ ಶಬ್ದಕ್ಕೆ ವಾಯುವಿಗೆ ಸಾರಥಿಯಾದ ಇಂದ್ರನು ಎಂದಭಿಪ್ರಾಯವು. ಇಂದ್ರನು ವಾಯುವಿಗೆ ಸಾರಥಿಸ್ಥಾನದಲ್ಲಿರುವುದರಿಂದ ಇಂದ್ರನಿಗೆ ಪ್ರಥಮಸೋಮಪಾನದಲ್ಲಿ ಚತುರ್ಥಾಂಶಮಾತ್ರವಿರುವುದೆಂದು ಇದರಿಂದ ಸೂಚಿತವಾಗುವುದು.

**ತಸ್ಮಾದ್ಧಾಪ್ಯೇತರ್ಹಿ ಭರತಾಃ ಸತ್ವನಾಂ ವಿತ್ತಿಂ ಪ್ರಯಂತಿ ತುರೀಯೇ ಹೈವ ಸಂಗ್ರಹೀತಾರೋ ವದಂತೀ೨ಮುನ್ನೈವಾನೂಕಾಶೇನ ಯದದ ಇಂದ್ರಃ ಸಾರಥಿರಿವ ಭೂತ್ವೋದಜಯತ್।**

(ಐ. ಬ್ರಾ. ೯-೨೫)

ಮೇಲೆ ಹೇಳಿದ ವಿಷಯವನ್ನು ಲೋಕವ್ಯವಹಾರದೃಷ್ಟಿಯಿಂದ ಉದಾಹರಣೆ ಮೂಲಕವಾಗಿ ವಿಶದಪಡಿಸುವರು ಯುದ್ಧದಲ್ಲಿ ಯೋಧರಾದವರು ರಥಗಳಲ್ಲಿ ಕುಳಿತು ತಮ್ಮ ಸಾರಥಿಯ ಸಹಾಯದಿಂದ ಯುದ್ಧದಲ್ಲ ಜಯಶೀಲರಾಗಿ ಶತ್ರುಗಳ ಧನಾದಿಗಳನ್ನು ಆಕ್ರಮಿಸುವರು. ಆ ರೀತಿ ಆಕ್ರಮಿಸಿದಾಗ ಆ ಧನಾದಿಗಳಲ್ಲಿ ಒಂದು ಭಾಗವನ್ನು ಎಂದರೆ ನಾಲ್ಕರಲ್ಲಿ ಒಂದು ಭಾಗವನ್ನು ತಮಗೆ ಸಹಾಯಕರಾದ ಸಾರಥಿಗಳಿಗೆ ಕೊಡುವರು ಈ ಪದ್ಧತಿಯು ಲೋಕವ್ಯವಹಾರದಲ್ಲಿ ರೂಢಿಯಲ್ಲಿದೆ. ಅದರಂತೆ ದೇವತೆಗಳು ಏರ್ಪಡಿಸಿದ್ದ ಈ ಸ್ಪರ್ಧೆಯಲ್ಲಿ ಇಂದ್ರನು ವಾಯುವಿಗೆ ಸಾರಥಿಯಾಗಿ ವಾಯುವು ಜಯಶೀಲನಾಗಿದ್ದರಿಂದ ಸ್ಪರ್ಧೆಯಲ್ಲಿ ದೊರೆತ ಪ್ರಥಮಸೋಮಪಾನದಲ್ಲಿ ಚತುರ್ಥಾಂಶವು ಇಂದ್ರನ ಭಾಗವಾಯಿತು. ಇಂದ್ರನು ತನ್ನ ಚತುರ್ಥಾಂಶವನ್ನು ವಾಯುವಿಗೆ ಸಾರಥಿಯಾಗಿ ಗಳಿಸಿದನು ಎಂದು ಮುಖ್ಯಾಭಿಪ್ರಾಯವು

॥ ಸಂಹಿತಾಪಾಠಃ ॥

ವಾಯವಾ ಯಾಹಿ ವೀತಯೇ ಜುಷಾಣೋ ಹವ್ಯದಾತಯೇ ।
ಪಿಬಾ ಸುತಸ್ಯಾಂಧಸೋ ಅಭಿ ಪ್ರಯಃ ॥ ೫ ॥

॥ ಪದಪಾಠಃ ॥

ವಾಯೋ ಇತಿ । ಆ । ಯಾಹಿ । ವೀತಯೇ । ಜುಷಾಣಃ । ಹವ್ಯಽದಾತಯೇ ।
ಪಿಬ । ಸುತಸ್ಯ । ಅಂಧಸಃ । ಅಭಿ । ಪ್ರಯಃ ॥ ೫ ॥

॥ ಸಾಯಣಭಾಷ್ಯಂ ॥

**ವಾಯವಾ ಯಾಹೀತ್ಯೇಷಾ ಪೃಷ್ಠ್ಯಸ್ಯ ತೃತೀಯೇಽಹನಿ ಪ್ರಉಗಶಸ್ತ್ರೇ ವಾಯವ್ಯತೃಚಸ್ಯಾದ್ಯಾ । ಸೂತ್ರಿತಂ ಚ । ವಾಯವಾ ಯಾಹಿ ವೀತಯ ಇತ್ಯೇಕಾ ವಾಯೋ ಯಾಹಿ ಶಿವಾ ದಿವ ಇತಿ ದ್ವೇ । ಆ ೭-೧೦ । ಇತಿ ॥**

**ಹೇ ವಾಯೋ ಪ್ರಯೋಽನ್ನಂ ಸೋಮಾಖ್ಯಮಭಿ ಅಭಿಲಕ್ಷ್ಯ ಯಾಹಿ ವೀತಯೇ ಭಕ್ಷಣಾಯ ಜುಷಾಣಃ ಪ್ರೀಯಮಾಣೋ ಹವ್ಯದಾತಯೇ ಹವಿರ್ದಾತ್ರೇ ಯಜಮಾನಾಯ ತದರ್ಥಂ । ಆಗತ್ಯ ಚ ಸುತಸ್ಯಾಂಧಸೋಽಭಿಷುತಮಂಧೋಽನ್ನಂ ಸೋಮಲಕ್ಷಣಂ ಪಿಬ ॥**

॥ ಪ್ರತಿಪದಾರ್ಥ ॥

**ಜುಷಾಣಃ**—ಯಜಮಾನನಲ್ಲಿ ಅನುಗ್ರಹಬುದ್ಧಿಯನ್ನಿಟ್ಟಿರುವ । **ವಾಯೋ**—ಎಲೈ ವಾಯುವೇ । **ಹವ್ಯದಾತಯೇ**—ಹವಿಸ್ಸನ್ನರ್ಪಿಸುವ ಯಜಮಾನನಲ್ಲಿಗೆ । **ಪ್ರಯಃ ಅಭಿ**—ಹವಿಸ್ಸನ್ನು ಲಕ್ಷಿಸಿ । **ವೀತಯೇ**—ಅದರ ಭಕ್ಷಣಕ್ಕಾಗಿ । **ಆ ಯಾಹಿ**—ದಯಮಾಡು । **ಸುತಸ್ಯ**—ಅಭಿಷುತವಾದ । **ಅಂಧಸಃ**—ಸೋಮರೂಪವಾದ ಅನ್ನವನ್ನು । **ಪಿಬ**—ಪಾನಮಾಡು.

॥ ಭಾವಾರ್ಥ ॥

ಯಜಮಾನನಲ್ಲಿ ಅನುಗ್ರಹ ಬುದ್ಧಿಯನ್ನಿಟ್ಟಿರುವ ಎಲೈ ವಾಯುವೇ, ಹವಿಸ್ಸನ್ನರ್ಪಿಸುವ ಯಜಮಾನನಲ್ಲಿಗೆ ಹವಿಸ್ಸನ್ನು ಲಕ್ಷಿಸಿ ಅದರ ಭಕ್ಷಣಕ್ಕಾಗಿ ದಯಮಾಡು ಅಭಿಷುತವಾದ ಸೋಮವನ್ನು ಪಾನಮಾಡು.

## English Translation

Come, Vayu, propitious to the offerer of the libation, to partake of the sacrificial food, and drink of the effused juice

॥ ವಿಶೇಷವಿಷಯಗಳು ॥

**ವಾಯವಾ ಯಾಹಿ** ಎಂಬ ಈ ಋಕ್ಕನ್ನು ಪೃಷ್ಠ್ಯವೆಂಬ ಯಾಗದ ಮೂರನೆಯ ದಿವಸ ಪ್ರಉಗಶಸ್ತ್ರ-ಮಂತ್ರಪಠನಮಾಡುವಾಗ ವಾಯುದೇವತಾಕವಾದ ತೃಚದ (ಮೂರು ಋಕ್ಕುಗಳ) ಮೊದಲನೆಯ ಋಕ್ಕನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ವಾಯವಾ ಯಾಹಿ ವೀತಯ ಇತ್ಯೇಕಾ ವಾಯೋ ಯಾಹಿ ಶಿವಾ ದಿವ ಇತಿ ದ್ವೇ** ಎಂಬ ಸೂತ್ರದಿಂದ (ಆ. ೭-೧೦) ವಿವೃತವಾಗಿರುವುದು.

ವಾಯುವನ್ನು ದೇವತೆಗಳಲ್ಲೆಲ್ಲಾ ಮೊದಲು ಸೋಮಪಾನ ಮಾಡಲು ಈ ಋಕ್ಕಿನಲ್ಲಿ ಆಹ್ವಾನಮಾಡಿರುವ ವಿಷಯದಲ್ಲಿ ನಾವು ವಿಸ್ತಾರವಾಗಿ ಬರೆದಿರುವ ವಿವರಣೆಯನ್ನು ಹಿಂದಿನ ಋಕ್ಕಿನ ವಿಶೇಷವಿಷಯಗಳಲ್ಲಿ ನೋಡಿ.

॥ ಸಂಹಿತಾಪಾಠಃ ॥

ಇಂದ್ರಶ್ಚ ವಾಯವೇಷಾಂ ಸುತಾನಾಂ ಪೀತಿಮರ್ಹಥಃ ।

ತಾಞ್ಜುಷೇಥಾಮರೇಪಸಾವಭಿ ಪ್ರಯಃ ॥ ೬ ॥

॥ ಪದಪಾಠಃ ॥

ಇಂದ್ರಃ । ಚ । ವಾಯೋ ಇತಿ । ಏಷಾಂ । ಸುತಾನಾಂ । ಪೀತಿಂ । ಅರ್ಹಥಃ ।

ತಾನ್ । ಜುಷೇಥಾಂ । ಅರೇಪಸೌ । ಅಭಿ । ಪ್ರಯಃ ॥ ೬ ॥

॥ ಸಾಯಣಭಾಷ್ಯಂ ॥

ಪೃಷ್ಠ್ಯಸ್ಯ ತೃತೀಯೇಽಹನಿ ಪ್ರಉಗಶಸ್ತ್ರ ಐಂದ್ರವಾಯವತೃಚ ಇಂದ್ರಶ್ಚೇತ್ಯಾದಿಕೇ ದ್ವೇ ಋಚೌ ಶಂಸೇತ್ । ತಯೋಃ ಪ್ರಥಮಾಂ ದ್ವಿತೀಯಾಂ ವಾವರ್ತ್ಯ ತೃಚ ಸಂಪಾದಯೇತ್ । ತಥಾ ಚ ಸೂತ್ರಿತಂ। ಇಂದ್ರಶ್ಚ ವಾಯವೇಷಾಂ ಸುತಾನಾಮಿತಿ ದ್ವಯೋರನ್ಯತರಾಂ ದ್ವಿಃ । ಆ. ೭-೧೦ । ಇತಿ ॥

ಹೇ ವಾಯೋ ತ್ವಂ ಚೇಂದ್ರಶ್ಚೈಷಾಂ ಪುರತೋ ಗೃಹೀತಾನಾಂ ಸುತಾನಾಮಭಿಷುತಾನಾಂ ಸೋಮಾನಾಂ ಪೀತಿಂ ಪಾನಮರ್ಹಥಃ । ಯಸ್ಮಾದೇವಂ ತಸ್ಮಾತ್ತಾನ್ ಸೋಮರಸಾನ್ ಜುಷೇಥಾಂ ಸೇವೇಥಾಮರೇಪಸಾವಹಿಂಸಕೌ । ತದರ್ಥಂ ಪ್ರಯಃ ಸೋಮಾಖ್ಯಮನ್ನಮಭಿಲಕ್ಷ್ಯಾಗಚ್ಛತಮಿತಿ ಶೇಷಃ । ಯದ್ವಾ । ಪ್ರಯೋಽನ್ನರೂಪಾನ್ ॥

॥ ಪ್ರತಿಪದಾರ್ಥ ॥

ವಾಯೋ—ಎಲೈ ವಾಯುವೇ ನೀನೂ । **ಇಂದ್ರಶ್ಚ**—ಇಂದ್ರನೂ ಸಹ । **ಸುತಾನಾಂ**—ಹಿಂಡಿಸಿದ್ದವಾಗಿರುವ । **ಏಷಾಂ**—ಈ ಸೋಮರಸಗಳ । **ಪೀತಿಂ**—ಪಾನಕ್ಕೆ । **ಅರ್ಹಥಃ**—ಯೋಗ್ಯರಾಗಿದ್ದೀರಿ । **ಅರೇಪಸೌ**—ಹಿಂಸಾರಹಿತರಾಗಿದ್ದು । **ತಾನ್**—ಈ ರಸಗಳನ್ನು । **ಜುಷೇಥಾಂ**—ಸೇವಿಸಿರಿ । (ಆ ಕಾರಣದಿಂದ) । **ಪ್ರಯಃ ಅಭಿ**—ರಸರೂಪವಾದ ಅನ್ನವನ್ನು ಲಕ್ಷಿಸಿ ಬನ್ನಿರಿ.

॥ ಭಾವಾರ್ಥ ॥

ಎಲೈ ವಾಯುವೇ, ನೀನೂ ಇಂದ್ರನೂ ಸಹ ಹಿಂಡಿ ಸಿದ್ಧವಾಗಿರುವ ಈ ಸೋಮರಸಗಳ ಪಾನಕ್ಕೆ ಯೋಗ್ಯರಾಗಿದ್ದೀರಿ. ಹಿಂಸಾರಹಿತರಾಗಿದ್ದು ಈ ರಸಗಳನ್ನು ಸೇವಿಸಿರಿ. ಅದೇ ಕಾರಣದಿಂದ ರಸರೂಪವಾದ ಈ ಅನ್ನವನ್ನು ಲಕ್ಷಿಸಿ ಬನ್ನಿರಿ

English Translation

Indra and Vayu, you ought to drink of these libations be gratified by them, benevolent (divinities), and partake of the sacrificial food.

॥ ವಿಶೇಷವಿಷಯಗಳು ॥

ಪೃಷ್ಠ್ಯವೆಂಬ ಯಾಗದ ಮೂರನೆಯ ದಿವಸ ಪ್ರಉಗಶಸ್ತ್ರಮಂತ್ರಗಳಲ್ಲಿ ಐಂದ್ರವಾಯವತೃಚದ ಮಂತ್ರಗಳಿಗಾಗಿ **ಇಂದ್ರಶ್ಚ** ಎಂಬ ಈ ಋಕ್ಕನ್ನೂ ಅದರ ಮುಂದಿನ ಋಕ್ಕಾದ **ಸುತಾ ಇಂದ್ರಾಯ** ಎಂಬ ಋಕ್ಕನ್ನೂ ಪಠಿಸಬೇಕು. ಎಂದರೆ ಈ ಎರಡು ಋಕ್ಕುಗಳಲ್ಲಿ ಮೊದಲನೆಯ ಋಕ್ಕನ್ನಾಗಲಿ ಎರಡನೆಯ ಋಕ್ಕನ್ನಾಗಿ ತೃಚಕ್ಕಾಗಿ (ತೃಚವೆಂದರೆ ಮೂರು ಋಕ್ಕುಗಳು) ತೆಗೆದುಕೊಂಡು ಪಠಿಸಬೇಕು. ಈ ವಿಷಯವು ಆಶ್ವಲಾಯನ ಶ್ರೌತಸೂತ್ರದ **ಇಂದ್ರಶ್ಚ ವಾಯವೇಷಾಂ ಸುತಾನಾಮಿತಿ ದ್ವಯೋರನ್ಯತರಾಂ ದ್ವಿಃ** ಎಂಬ ಸೂತ್ರದಿಂದ (ಆ. ೭.೧೦) ವಿವೃತವಾಗಿರುವುದು.

—— ೦ ——

॥ ಸಂಹಿತಾಪಾಠಃ ॥

ಸುತಾ ಇಂದ್ರಾಯ ವಾಯವೇ ಸೋಮಾಸೋ ದಧ್ಯಾಶಿರಃ ।
ನಿಮ್ನಂ ನ ಯಂತಿ ಸಿಂಧವೋಽಭಿ ಪ್ರಯಃ ॥೭॥

॥ ಪದಪಾಠಃ ॥

**ಸುತಾಃ** । ಇಂದ್ರಾಯ । ವಾಯವೇ । **ಸೋಮಾಸಃ** । ದಧಿಽಆಶಿರಃ ।
ನಿಮ್ನಂ । ನ । ಯಂತಿ । ಸಿಂಧವಃ । ಅಭಿ । ಪ್ರಯಃ ॥ ೭ ॥

॥ ಸಾಯಣಭಾಷ್ಯಂ ॥

**ಇಂದ್ರಾಯ ವಾಯವೇ ಚ ಸೋಮಾಸಃ ಸೋಮಾ ದಧ್ಯಾಶಿರೋ ದಧ್ಯಾಶ್ರಯಣಾಃ ಸುತಾಃ । ಅಭಿಷುತಾಃ । ಸಂಪಾದಿತಾಃ । ತೇ ಚ ನಿಮ್ನಂ ಗರ್ತಂ ಸಿಂಧವೋ ನ ನದ್ಯ ಇವ ಹೇ ಇಂದ್ರವಾಯೂ ಯುವಾಮಭಿ ಯಂತಿ ಪ್ರಯೋಽನ್ನರೂಪಾಃ** ॥

॥ ಪ್ರತಿಪದಾರ್ಥ ॥

**ಇಂದ್ರಾಯ**—ಇಂದ್ರನಿಗಾಗಿಯೂ । **ವಾಯವೇ ಚ** -ವಾಯುವಿಗಾಗಿಯೂ ಸಹ । **ದಧ್ಯಾಶಿರಃ**—ದಧಿಮಿಶ್ರಿತವಾದ । **ಸೋಮಾಸಃ**—ಸೋಮರಸಗಳು । **ಸುತಾಃ**—ಸಂಪಾದಿತವಾಗಿವೆ (ಎಲೈ ಇಂದ್ರಾವಾಯುಗಳೇ) । **ಸಿಂಧವಃ**—ನದಿಗಳು । **ನಿಮ್ನಂ ನ**—ತಗ್ಗುಪ್ರದೇಶಗಳಲ್ಲಿ ವೇಗವಾಗಿ ಹರಿಯುವಂತೆ । **ಪ್ರಯಃ**—ರಸರೂಪವಾದ ಈ ಅನ್ನವು । **ಅಭಿ ಯಂತಿ**—ನಿಮ್ಮನ್ನು ಲಕ್ಷಿಸಿ ಆತುರದಿಂದ ಬರುತ್ತವೆ

॥ ಭಾವಾರ್ಥ ॥

ಇಂದ್ರನನ್ನೂ ವಾಯುವನ್ನೂ ಉದ್ದೇಶಿಸಿ ದಧಿಮಿಶ್ರಿತವಾದ ಸೋಮರಸಗಳು ಸಂಪಾದಿತವಾಗಿವೆ ಎಲೈ ಇಂದ್ರಾವಾಯುಗಳೇ, ನದಿಗಳು ತಗ್ಗುಪ್ರದೇಶಗಳಲ್ಲಿ ವೇಗವಾಗಿ ಹರಿಯುವಂತೆ ಈ ಸೋಮರಸಗಳು ನಿಮ್ಮ ಅಭಿಮುಖವಾಗಿ ವೇಗದಿಂದ ಹರಿದು ಬರುತ್ತವೆ

## English Translation

The Soma juices mixed with curds are poured out to Indra and to Vayu : the sacrificial viands proceed to you as rivers flow downwards.

॥ ವಿಶೇಷವಿಷಯಗಳು ॥

**ದಧ್ಯಾಶಿರಃ**—ದಧಿಮಿಶ್ರಿತವಾದ ಸೋಮರಸವು. ಸೋಮಲತೆಯಿಂದ ಹಿಂಡಿ ತೆಗೆದ ಸೋಮರಸವನ್ನು ಚೆನ್ನಾಗಿ ಶೋಧಿಸಿ ಪಾನಮಾಡುತ್ತಾರೆ. ಈ ವಿಧವಾದ ಸೋಮಕ್ಕೆ ಶುಕ್ರ, ತೀವ್ರ (ಶುದ್ಧ, ತೀಕ್ಷ್ಣ) ಎಂದು ಹೇಳುವುದುಂಟು. ಸೋಮರಸದ ರುಚಿಯನ್ನು ಹೆಚ್ಚಿಸುವುದಕ್ಕಾಗಿ ರಸಕ್ಕೆ ಹಾಲು, ಮೊಸರು, ಯವಧಾನ್ಯದ ಹಿಟ್ಟು ಇವುಗಳನ್ನು ಬೆರಸಿ ಪಾನಮಾಡುವುದೂ ಉಂಟು. ರಸಕ್ಕೆ ಬೆರಸುವ ಹಾಲು ಮೊದಲಾದ ವಸ್ತುಗಳಿಗೆ ಆಶಿರ ದ್ರವ್ಯವೆಂದು ಹೆಸರು. ಆದುದರಿಂದ ಹಾಲನ್ನು ಬೆರಸಿರುವ ಸೋಮರಸಕ್ಕೆ ಗವಾಶಿರವೆಂದೂ, ಮೊಸರನ್ನು ಬೆರಸಿರುವ ಸೋಮರಸಕ್ಕೆ ದಧ್ಯಾಶಿರವೆಂದೂ, ಯವಧಾನ್ಯದ ಹಿಟ್ಟನ್ನು ಬೆರಸಿರುವ ಸೋಮರಸಕ್ಕೆ ಯವಾಶಿರವೆಂದೂ ಹೇಳುವ ರೂಢಿ ಇದೆ. ಪ್ರಕೃತ ಋಕ್ಕಿನಲ್ಲಿ ಮೊಸರನ್ನು ಮಿಶ್ರಮಾಡಿದ ದಧ್ಯಾಶಿರವೆಂಬ ಸೋಮರಸವನ್ನು ಪಾನಮಾಡಬೇಕೆಂದು ಇಂದ್ರವಾಯುಗಳನ್ನು ಪ್ರಾರ್ಥಿಸಲಾಗಿದೆ.

॥ ಸಂಹಿತಾಪಾಠಃ ॥

ಸಜೂರ್ವಿಶ್ವೇಭಿರ್ದೇವೇಭಿರಶ್ವಿಭ್ಯಾಮುಷಸಾ ಸಜೂಃ ।
ಆ ಯಾಹ್ಯಗ್ನೇ ಅತ್ರಿವತ್ಸುತೇ ರಣ ॥೮॥

॥ ಪದಪಾಠಃ ॥

ಸಽಜೂಃ । ವಿಶ್ವೇಭಿಃ । ದೇವೇಭಿಃ । ಅಶ್ವಿಽಭ್ಯಾಂ । ಉಷಸಾ । ಸಽಜೂಃ ।
ಆ । ಯಾಹಿ । ಅಗ್ನೇ । ಅತ್ರಿಽವತ್ । ಸುತೇ । ರಣ ॥ ೮ ॥

॥ ಸಾಯಣಭಾಷ್ಯಂ ॥

ತೃತೀಯೇಽಹನಿ ಪ್ರಉಗಶಸ್ತ್ರೇ ಸಜೂರ್ವಿಶ್ವೇಭಿರಿತಿ ವೈಶ್ವದೇವಸ್ತೃಚಃ । ಸೂತ್ರಿತಂ ಚ । ಸಜೂರ್ವಿಶ್ವೇಭಿರ್ದೇವೇಭಿರುತ ನಃ ಪ್ರಿಯಾ ಪ್ರಿಯಾಸು । ಆ ೭.೧೦ । ಇತಿ ॥

ಹೇ ಅಗ್ನೇ ವಿಶ್ವೇಭಿಃ ಸರ್ವೈರ್ದೇವೇಭಿರ್ದೇವೈಃ ಸಜೂಃ ಸಂಗತಃ ಸನ್ ಅಶ್ವಿಭ್ಯಾಮುಷಸಾ ಚ ಸಜೂಃ ಸಮಾನಪ್ರೀತಿಃ ಸನ್ ಆ ಯಾಹಿ । ಆಗಹಿ । ಅತ್ರಿವದತ್ರಿರಿವ । ಅತ್ರೇರ್ಯಜ್ಞೇ ಯಥಾ ತಥೇತ್ಯರ್ಥಃ । ಯದ್ವಾ । ಅತ್ರಿರ್ಯಥಾ ಯಜ್ಞೇ ರಮತೇ ತದ್ವತ್ಸುತೇಽಭಿಷುತೇ ಸೋಮೇ ರಣ । ರಮಸ್ವ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ವಿಶ್ವೇಭಿಃ**-ಸಮಸ್ತರಾದ । **ದೇವೇಭಿಃ**-ದೇವತೆಗಳೊಡನೆಯೂ । **ಸಜೂಃ**-ಕೂಡಿಕೊಂಡು ಮತ್ತು । **ಅಶ್ವಿಭ್ಯಾಂ**—ಅಶ್ವಿನೀದೇವತೆಗಳೊಡನೆಯೂ । **ಉಷಸಾ**—ಉಷೋದೇವಿಯೊಡನೆಯೂ । **ಸಜೂಃ**—ಸಮಾನಪ್ರೀತಿಯಿಂದ ಕೂಡಿದವನಾಗಿ । **ಆ ಯಾಹಿ**—ದಯಮಾಡು । **ಅತ್ರಿವತ್**—ಅತ್ರಿಯಂತೆ । **ಸುತೇ**—ಸಂಪಾದಿತವಾದ ಈ ರಸದಿಂದ । **ರಣ**—ಹರ್ಷವನ್ನು ಹೊಂದು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಸಮಸ್ತವಾದ ದೇವತೆಗಳೊಡನೆಯೂ ಅಶ್ವಿನೀದೇವತೆಗಳೊಡನೆಯೂ, ಉಷೋದೇವಿಯೊಡನೆಯೂ ಸಮಾನಪ್ರೀತಿಯಿಂದ ಕೂಡಿದವನಾಗಿ ದಯಮಾಡು, ಸಂಪಾದಿತವಾದ ಈ ರಸದಿಂದ ಅತ್ರಿಯಂತೆ ಹರ್ಷವನ್ನು ಹೊಂದು.

## English Translation

Accompanied by all the gods, accompanied by the Aswins, and by Ushas, come, Agni, and, like Atri, delight in the libation.

॥ ವಿಶೇಷವಿಷಯಗಳು ॥

ಯಾಗದ ಮೂರನೆಯ ದಿವಸ ಪ್ರಉಗಶಸ್ತ್ರಮಂತ್ರಪಠನಕಾಲದಲ್ಲಿ **ಸಜೂರ್ವಿಶ್ವೇಭಿಃ** ಎಂದು ಮೊದಲಾಗುವ ತೃಚವು (ಈ ಸೂಕ್ತದ ೮, ೯, ೧೦ ನೆಯ ಋಕ್ಕುಗಳು) ವಿಶ್ವೇದೇವತೆಗಳನ್ನುದ್ದೇಶಿಸಿ ಪಠಿಸಬೇಕಾದ ತೃಚವು. ಈ ವಿಷಯವು ಆಶ್ವಲಾಯನಶ್ರೌತಸೂತ್ರದ—**ಸಜೂರ್ವಿಶ್ವೇಭಿರ್ದೇವೇಭಿರುತ ನಃ ಪ್ರಿಯಾ ಪ್ರಿಯಾಸು** ಎಂಬ ಸೂತ್ರದಿಂದ (ಆ. ೭-೧೦) ವಿವೃತವಾಗಿರುವುದು.

**ಸಜೂಃ**—ಈ ಶಬ್ದಕ್ಕೆ ಯಾಸ್ಕರು **ಸಜೂಃ ಸಹಜೋಷಣ** (ನಿ. ೯-೧೫) **ಸಮಾನಪ್ರೀತಿಃ** ಸಮಾನಪ್ರೀತಿಯುಳ್ಳವನು ಎಂದು ನಿರ್ವಚನವನ್ನು ಹೇಳಿದಾರೆ ಎಂದರೆ ಜತೆಯಲ್ಲಿರುವ ದೇವತೆಯೊಡನೆ ಪರಸ್ಪರ ಪ್ರೀತಿಯಿಂದಲೂ (ಸ್ನೇಹದಿಂದಲೂ) ಸಹಕಾರದಿಂದಲೂ ಸಹಿತನಾಗಿ ಎಂದಭಿಪ್ರಾಯವು. ಈ ಋಕ್ಕಿನಲ್ಲಿ ವಿಶ್ವೇದೇವತೆಗಳು, ಅಶ್ವಿನೀದೇವತೆಗಳು ಮತ್ತು ಉಷೋದೇವತೆಯೊಡನೆ ಯಜ್ಞಭೂಮಿಗೆ ಬರಬೇಕೆಂದು ಅಗ್ನಿಯನ್ನು ಪ್ರಾರ್ಥಿಸಲಾಗಿದೆ.

॥ ಸಂಹಿತಾಪಾಠಃ ॥

ಸಜೂರ್ಮಿತ್ರಾವರುಣಾಭ್ಯಾಂ ಸಜೂಃ ಸೋಮೇನ ವಿಷ್ಣುನಾ ।
ಆ ಯಾಹ್ಯಗ್ನೇ ಅತ್ರಿವತ್ಸುತೇ ರಣ ॥೯॥

॥ ಪದಪಾಠಃ ॥

ಸಽಜೂಃ । ಮಿತ್ರಾವರುಣಾಭ್ಯಾಂ । ಸಽಜೂಃ । ಸೋಮೇನ । ವಿಷ್ಣುನಾ ।
ಆ । ಯಾಹಿ । ಅಗ್ನೇ । ಅತ್ರಿಽವತ್ । ಸುತೇ । ರಣ ॥ ೯ ॥

॥ ಸಾಯಣಭಾಷ್ಯಂ ॥

ದ್ವೇ ನವಮೀದಶಮ್ಯಾ ಸ್ಪಷ್ಟೇ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಮಿತ್ರಾವರುಣಾಭ್ಯಾಂ**—ಮಿತ್ರಾವರುಣರೊಂದಿಗೆ । **ಸಜೂಃ**—ಕೂಡಿದವನಾಗಿಯೂ । **ಸೋಮೇನ**—ಸೋಮನೊಂದಿಗೂ । **ವಿಷ್ಣುನಾ**—ವಿಷ್ಣುವಿನೊಂದಿಗೂ । **ಸಜೂಃ**—ಕೂಡಿದವನಾಗಿಯೂ । **ಆ ಯಾಹಿ**—ಈ ಯಜ್ಞಕ್ಕೆ ದಯಮಾಡು । **ಸುತೇ**—ಸಂಪಾದಿತವಾದ ಈ ರಸದಿಂದ । **ಅತ್ರಿವತ್**—ಅತ್ರಿಯಂತೆ । **ರಣ**—ಹರ್ಷವನ್ನು ಹೊಂದು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಮಿತ್ರಾವರುಣರೊಂದಿಗೂ ಸೋಮನೊಂದಿಗೂ ವಿಷ್ಣುವಿನೊಂದಿಗೂ ಕೂಡಿದವನಾಗಿ ಈ ಯಜ್ಞಕ್ಕೆ ದಯಮಾಡು ಸಂಪಾದಿತವಾದ ಈ ರಸದಿಂದ ಅತ್ರಿಯಂತೆ ಹರ್ಷವನ್ನು ಹೊಂದು

English Translation

Accompanied by Mitra and Varuna, accompanied by Soma and Vishnu, come, Agni, and like Atri, delight in the libation.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಮಿತ್ರಾವರುಣರು, ಸೋಮದೇವತೆ, ವಿಷ್ಣು ಎಂಬ ದೇವತೆಗಳೊಡನೆ ಯಜ್ಞಭೂಮಿಗೆ ಬರಬೇಕೆಂದು ಅಗ್ನಿಯನ್ನು ಪ್ರಾರ್ಥಿಸಿದೆ. ಹಿಂದಿನ ಋಕ್ಕಿನ ಉತ್ತರಾರ್ಧವೇ ಈ ಋಕ್ಕಿನಲ್ಲಿಯೂ ಮುಂದಿನ ಋಕಿನಲ್ಲಿಯೂ ಪುನಃ ಪಠಿತವಾಗಿದೆ. ಅರ್ಥವು ಸ್ಪಷ್ಟವಾಗಿರುವುದೆಂದು ಹೇಳಿ ಭಾಷ್ಯಕಾರರು ಈ ಋಕ್ಕಿಗೂ ಮುಂದಿನ ಋಕ್ಕಿಗೂ ಭಾಷ್ಯವನ್ನು ಬರೆದಿರುವುದಿಲ್ಲ.

॥ ಸಂಹಿತಾಪಾಠಃ ॥

ಸಜೂರಾದಿತ್ಯೈರ್ವಸುಭಿಃ ಸಜೂರಿಂದ್ರೇಣ ವಾಯುನಾ ।
ಆ ಯಾಹ್ಯಗ್ನೇ ಅತ್ರಿವತ್ಸುತೇ ರಣ ॥೧೦॥

॥ ಪದಪಾಠಃ ॥

**ಸಽಜೂಃ । ಆದಿತ್ಯೈಃ । ವಸುಽಭಿಃ । ಸಽಜೂಃ । ಇಂದ್ರೇಣ । ವಾಯುನಾ ।**
**ಆ । ಯಾಹಿ । ಅಗ್ನೇ । ಅತ್ರಿಽವತ್ । ಸುತೇ । ರಣ ॥ ೧೦ ॥**

॥ ಸಾಯಣಭಾಷ್ಯಂ ॥

ಈ ಋಕ್ಕಿಗೂ ಸಾಯಣರು ಭಾಷ್ಯವನ್ನು ಬರೆದಿಲ್ಲ

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಆದಿತ್ಯೈಃ**—ಆದಿತ್ಯರೊಂದಿಗೂ । **ವಸುಭಿಃ**—ವಸುಗಳೊಂದಿಗೂ । **ಸಜೂಃ**–ಕೂಡಿಕೊಂಡು (ಮತ್ತು) । **ಇಂದ್ರೇಣ**—ಇಂದ್ರನೊಂದಿಗೂ । **ವಾಯುನಾ**— ವಾಯುವಿನೊಂದಿಗೂ । **ಸಜೂಃ**—ಕೂಡಿದವನಾಗಿಯೂ । **ಆ ಯಾಹಿ**—ದಯಮಾಡು । **ಸುತೇ**—ಸಂಪಾದಿತವಾದ ಈ ಸೋಮದಿಂದ । **ಅತ್ರಿವತ್**—ಅತ್ರಿಯಂತೆ । **ರಣ**—ಹರ್ಷವನ್ನು ಹೊಂದು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಆದಿತ್ಯರೊಂದಿಗೂ, ವಸುಗಳೊಂದಿಗೂ ಇಂದ್ರನೊಂದಿಗೂ, ವಾಯುವಿನೊಂದಿಗೂ ಕೂಡಿದವನಾಗಿ ಈ ಯಜ್ಞಕ್ಕೆ ದಯಮಾಡು ಸಂಪಾದಿತವಾದ ಈ ಸೋಮದಿಂದಅತ್ರಿಯಂತೆ ಹರ್ಷವನು ಹೊಂದು

## English Translation

Accompanied by Aditya and the Vasus, accompanied by Indra and by Vayu, come, Agni, and, like Atri, delight in the libation.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಆದಿತ್ಯರು, ವಸುಗಳು, ಇಂದ್ರ, ವಾಯು, ಎಂಬ ದೇವತೆಗಳನ್ನು ಜತೆಯಲ್ಲಿ ಕರೆತರಬೇಕೆಂದು ಅಗ್ನಿಯನ್ನು ಸ್ತುತಿಸಲಾಗಿದೆ. ಸಾಧಾರಣವಾಗಿ ವಸುಗಳು ಆದಿತ್ಯರು ಎಂಬ ದೇವತೆಗಳ ಜತೆಯಲ್ಲಿ ರುದ್ರರೆಂಬ ದೇವತೆಗಳ ಗುಂಪೂ ಸೇರಬೇಕಾಗಿದ್ದಿತು. ಆದರೆ ರುದ್ರರ ಹೆಸರು ಇಲ್ಲಿ ಪಠಿತವಾಗಿಲ್ಲ.

**ವಸುಭಿಃ— ಅಷ್ಟೌ ವಸವ ಏಕಾದಶ ರುದ್ರಾ ದ್ವಾದಶಾದಿತ್ಯಾ:** ಎಂದು ಹೇಳಿರುವಂತೆ ವಸುಗಳು ಎಂಟ ಮಂದಿ, ರುದ್ರರು ಹನ್ನೊಂದುಮಂದಿ, ಆದಿತ್ಯರು ಹನ್ನೆರಡುಮಂದಿ ದೇವತೆಗಳೆಂದು ಪ್ರಸಿದ್ಧರಾಗಿದ್ದಾರೆ ರುದ್ರರ ವಿಷಯ ಈ ಋಕ್ಕಿನಲ್ಲಿ ಹೇಳಿಲ್ಲವಾದ್ದರಿಂದ ಅವರ ವಿಷಯವನ್ನು ಬೇರೆ ಸಂದರ್ಭದಲ್ಲಿ ವಿವರಿಸಲಾಗುವುದು, ಆದ್ದರಿಂದ ಇಲ್ಲಿ ವಸುಗಳ ವಿಷಯವನ್ನೂ ಆದಿತ್ಯರ ವಿಷಯವನ್ನೂ ವಿವರಿಸಲಾಗುವುದು. ವಸುಗಳ ವಿಷಯದಲ್ಲಿ ಯಾಸ್ಕರು—

**ವಸವಃ । ವಸವೋ ಯದ್ವಿವಸತೇ ಸರ್ವಮಗ್ನಿರ್ವಸುಭಿರ್ವಾಸವ ಇತಿ ಸಮಾಖ್ಯಾ ತಸ್ಮಾತ್ಪೃಥಿವೀಸ್ಥಾನಾಃ । ಇಂದ್ರೋ ವಸುಭಿರ್ವಾಸವ ಇತಿ ಸಮಾಖ್ಯಾ ತಸ್ಮಾನ್ಮಧ್ಯಸ್ಥಾನಾಃ । ವಸವ ಆದಿತ್ಯರಶ್ಮಯೋ ವಿವಾಸನಾತ್ತಸ್ಮಾದ್ದ್ಯುಸ್ಥಾನಾಃ ॥** (ನಿ. ೧೨—೪೨)

ವಸುಗಳೆಂದರೆ ಯಾರು? ಎಂದರೆ, ವಸುಶಬ್ದಾರ್ಥದಿಂದ ವಸುಗಳ ಸ್ವರೂಪವನ್ನು ತಿಳಿಯಬಹುದು **ವಸವೋ ಯದ್ವಿವಸತೇ** ವಸುಗಳೆಂಬುವರು ವಸ್ತ್ರವನ್ನು ಧರಿಸುವಂತೆ ಎಲ್ಲವನ್ನೂ ಧರಿಸುವರು. ಎಂದರೆ ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿ ಇರುವರು. ಆದುದರಿಂದ ಎಲ್ಲಾ ಕಡೆಯಲ್ಲಿಯೂ ಎಂದರೆ ಪೃಥಿವ್ಯಂತರಿಕ್ಷಸ್ವರ್ಗಗಳೆಂಬ ತ್ರಿಸ್ಥಾನಗಳಲ್ಲಿಯೂ ವ್ಯಾಪಿಸಿರುವ ದೇವತೆಗಳಾದ್ದರಿಂದ ಇವರಿಗೆ ವಸುಗಳೆಂದು ಹೆಸರು. ಇದು ಹೇಗೆ ಎಂಬ ವಿಷಯವನ್ನು ಉದಾಹರಣೆಮೂಲಕ ತಿಳಿಸುವರು. ಅಗ್ನಿಯೂ ವಾಸವನು ಎಂದರೆ ವಸುಗಳಲ್ಲಿ ಒಬ್ಬನು ಎಂದು ಹೇಳಲ್ಪಡುವುದು. ಅಗ್ನಿ ಎಂದರೆ ಯಜ್ಞಾಗ್ನಿ ಅಥವಾ ಪಾರ್ಥಿವಾಗ್ನಿಯು ಪೃಥಿವಿಯಲ್ಲಿ ನೆಲೆಸಿರುವುದರಿಂದ ಈ ವಸುಗಳು ಪೃಥಿವೀಸ್ಥಾನ ದೇವತೆಗಳೆಂದು ಹೇಳಬಹುದು ಅದರಂತೆ ಇಂದ್ರನೂ ವಾಸವನು ಎಂದರೆ ವಸುಗಳಲ್ಲಿ ಒಬ್ಬನು. ಇಂದ್ರನು ಮಧ್ಯಮಸ್ಥಾನ (ಅಂತರಿಕ್ಷ)ದೇವತೆಯಾದ್ದರಿಂದ ವಸುಗಳು ಮಧ್ಯಮಸ್ಥಾನ ದೇವತೆಗಳೆಂದೂ ಹೇಳಬಹುದು ಆದಿತ್ಯರಶ್ಮಿಗಳಿಗೆ ವಸವಃ ಎಂದು ಪ್ರಸಿದ್ಧಿಯಿರುವುದರಿಂದಲೂ ಈ ಆದಿತ್ಯ ರಶ್ಮಿಗಳು ದ್ಯುಸ್ಥಾನದಲ್ಲಿ ಇರುವುದರಿಂದಲೂ ವಸುಗಳು ದ್ಯುಸ್ಥಾನದೇವತೆಗಳೆಂದೂ ಪ್ರಸಿದ್ಧವು. ಈ ರೀತಿ ವಸುಗಳು ಪೃಥಿವೀ, ಮಧ್ಯಸ್ಥಾನ (ಅಂತರಿಕ್ಷ) ದ್ಯುಸ್ಥಾನಗಳೆಂಬ ಮೂರು ಸ್ಥಾನಗಳಲ್ಲಿಯೂ (ಲೋಕಗಳಲ್ಲಿಯೂ) ವ್ಯಾಪಿಸಿರುವರು ಇದನ್ನು ಸಮರ್ಥಿಸುವುದಕ್ಕಾಗಿ ನಿರುಕ್ತಕಾರರು—

**ಸುಗಾ ವೋ ದೇವಾಃ ಸುಪಥಾ ಅಕರ್ಮ ಯ ಆ ಜಗ್ಮುಃ ಸವನಮಿದಂ ಜುಷಾಣಾಃ ।**
**ಜಕ್ಷಿವಾಂಸಃ ಪಪಿವಾಂಸಶ್ಚ ವಿಶ್ವೇಽಸ್ಮೇ ಧತ್ತ ವಸವೋ ವಸೂನಿ ॥**

(ವಾ ಸಂ. ೧—೧೮)

ಎಂಬ ವಾಜಸನೇಯಸಂಹಿತಾ (ಶುಕ್ಲಯಜುರ್ವೇದ) ವಾಕ್ಯವನ್ನು ಉದಾಹರಿಸಿದ್ದಾರೆ ಈ ಮಂತ್ರದಲ್ಲಿ ವಸುಗಳನ್ನು ದ್ಯುಸ್ಥಾನದೇವತೆಗಳೆಂದು ಸ್ತುತಿಸಲಾಗಿದೆ

**ಜ್ಮಯಾ ಅತ್ರ ವಸವೋ ರಂತ ದೇವಾ ಉರಾವಂತರಿಕ್ಷೇ ಮರ್ಜಯಂತ ಶುಭ್ರಾಃ ।**
**ಅರ್ವಾಕ್ಪಥ ಉರುಜ್ರಯಃ ಕೃಣುಧ್ವಂ ಶ್ರೋತಾ ದೂತಸ್ಯ ಜಗ್ಮುಷೋ ನೋ ಅಸ್ಯ ।'**

(ಋ ಸಂ. ೭—೩೯—೩)

ಎಂಬ ಋಕ್ಕಿನಲ್ಲಿ ವಸುಗಳನ್ನು ಅಂತರಿಕ್ಷ ಅಥವಾ ಮಧ್ಯಸ್ಥಾನ ಮತ್ತು ಪೃಥಿವೀಸ್ಥಾನ ದೇವತೆಗಳೆಂದು ಸ್ತುತಿಸಲಾಗಿದೆ.

**ಆದಿತ್ಯಃ**—ಯಾಸ್ಕರು ಆದಿತ್ಯಶಬ್ದದ ನಿರ್ವಚನವನ್ನು ಈ ರೀತಿ ಹೇಳಿದ್ದಾರೆ.—

**ಆದಿತ್ಯಃ ಕಸ್ಮಾದಾದತ್ತೇ ರಸಾನಾದತ್ತೇ ಭಾಸಂ ಜ್ಯೋತಿಷಾಮಾದೀಪ್ತೋ ಭಾಸೇತಿ ವಾದಿತೇಃ ಪುತ್ರ ಇತಿ ವಾ ॥**

(ನಿ ೨—೧೩)

ಆದಿತ್ಯನು ಯಾರು? ಎಂದರೆ—

(೧) **ಆದತ್ತ ಇತಿ ಆದಿತ್ಯಃ** । ಸ್ವೀಕರಿಸುವವನು, ಗ್ರಹಿಸುವವನು ಅಥವಾ ಆಕರ್ಷಿಸುವವನು ಎಂದು ಆದಿತ ಶಬ್ದಕ್ಕೆ ಅರ್ಥವು. ಏನನ್ನು ಗ್ರಹಿಸುವವನು ಎಂದರೆ, **ರಸಾನ್**-ಉದಕವನ್ನು ರಶ್ಮಿಗಳ ಮೂಲಕ ಆಕರ್ಷಿಸುವವನು. ಹೀಗೆ ಆಕರ್ಷಿಸಲ್ಪಟ್ಟ ಉದಕವು ಮೇಘರೂಪದಿಂದ ವೃಷ್ಟಿಯನ್ನುಂಟುಮಾಡು

ವುದು. ಆದುದರಿಂದ ಸಮುದ್ರಾದಿಜಲಾಶಯಗಳಿಂದ ರಶ್ಮಿಗಳ ಮೂಲಕ ಉದಕವನ್ನು ಆಕರ್ಷಿಸುವುದರಿಂದ ಆದಿತ್ಯನೆಂದು ಹೆಸರು.

(೨) **ಅಥವಾ ಆದತ್ತೇ ಭಾಸಂ ಜ್ಯೋತಿಷಾಂ** । ಸೂರ್ಯನು ಉದಯಿಸುವುದರಿಂದ ಸೂರ್ಯನ ಪ್ರಕಾಶವು ಇತರ (ಚಂದ್ರಾದಿಗಳೇ ಮೊದಲಾದ) ಎಲ್ಲಾ ವಸ್ತುಗಳ ಪ್ರಕಾಶವನ್ನೂ ತಗ್ಗಿಸಿ ಆ ಪ್ರಕಾಶವನ್ನು ಆಕರ್ಷಿಸುವುದರಿಂದ ಆದಿತ್ಯನೆಂದು ಹೆಸರು.

(೩) **ಅಥವಾ ಆದೀಪ್ತೋ ಭಾಸೇತಿ ವಾ** । ಎಲ್ಲಾ ಸ್ಥಳಗಳಲ್ಲಿಯೂ ಅಥವಾ ಸುತ್ತಲೂ (ರಶ್ಮಿಗಳ ಮೂಲಕ) ಆವರಿಸಿ ಪ್ರಕಾಶಿಸುವುದರಿಂದ ಆದಿತ್ಯನೆಂದು ಹೆಸರು.

(೪) **ಅಥವಾ ಅದಿತೇಃ ಪುತ್ರ ಇತಿ ವಾ** । ದೇವಮಾತೆಯಾದ ಅದಿತಿದೇವಿಯ ಪುತ್ರನಾದುದರಿಂದ ಆದಿತ್ಯನೆಂದು ಹೆಸರು ಎಂದು ನಿರ್ವಚನದ ಮುಖ್ಯಾಭಿಪ್ರಾಯವು. ಆದಿತ್ಯಶಬ್ದವು ಸೂರ್ಯನಿಗೆ ಪರ್ಯಾಯವಾದಾಗೆಲ್ಲಾ ಇವುಗಳಲ್ಲಿ ಯಾವ ಅರ್ಥವನ್ನಾದರೂ ಹೇಳಬಹುದು. ಆದರೆ ಈ ಋಕ್ಕಿನಲ್ಲಿ **ಆದಿತ್ಯೈಃ** ಎಂಬ ಬಹುವಚನ ಪ್ರಯೋಗವಿರುವುದರಿಂದ ಇಲ್ಲಿ ಆದಿತ್ಯ ಶಬ್ದವು ಸೂರ್ಯನಿಗೇ ಅಲ್ಲದೆ ಇತರ ದೇವತೆಗಳಿಗೂ ಅನ್ವಯಿಸುತ್ತದೆ. ನಿರುಕ್ತಕಾರರೇ ಈ ವಿಷಯದಲ್ಲಿ—

**ಏವಮನ್ಯಾಸಾಮಪಿ ದೇವತಾನಾಮಾದಿತ್ಯಪ್ರವಾದಾಃ ಸ್ತುತಯೋ ಭವಂತಿ । ತದ್ಯಥೈತನ್ಮಿತ್ರಸ್ಯ ವರುಣಸ್ಯಾರ್ಯಮ್ಣೋ ದಕ್ಷಸ್ಯ ಭಗಸ್ಯಾಂಶಸ್ಯೇತಿ** ।

(ನಿ. ೨—೧೩)

ಆದಿತ್ಯಪರವಾದ ಸ್ತುತಿಗಳು ಮಿತ್ರ, ವರುಣ, ಅರ್ಯಮಾ, ದಕ್ಷ, ಭಗ, ಅಂಶ ಎಂಬ ದೇವತೆಗಳಿಗೂ ಅನ್ವಯಿಸುತ್ತದೆ. ಎಂದರೆ ಈ ದೇವತೆಗಳನ್ನೂ ಆದಿತ್ಯರೆಂದು ಕರೆಯುತ್ತಾರೆ ಎಂದು ಹೇಳಿ ಉದಾಹರಣೆಗಾಗಿ—

**ಇಮಾ ಗಿರ ಆದಿತ್ಯೇಭ್ಯೋ ಘೃತಸ್ನೂಃ ಸನಾದ್ರಾಜಭ್ಯೋ ಜುಹ್ವಾ ಜುಹೋಮಿ ।**
**ಶೃಣೋತು ಮಿತ್ರೋ ಅರ್ಯಮಾ ಭಗೋ ನಸ್ತುವಿಜಾತೋ ವರುಣೋ ದಕ್ಷೋ ಅಂಶಃ ॥**

(ಋ. ಸಂ. ೨—೨೭—೧)

ಎಂಬ ಋಕ್ಕನ್ನು ಕೊಟ್ಟಿದ್ದಾರೆ. ಈ ಋಕ್ಕಿನಲ್ಲಿ ಮಿತ್ರ, ಅರ್ಯಮಾ, ಭಗ, ಧಾತಾ, ವರುಣ, ದಕ್ಷ, ಅಂಶ ಎಂಬುವರು ಆದಿತ್ಯರೆಂದೂ ಇವರು ಏಳು ಮಂದಿಯೆಂದೂ ವಿವರಿಸಿದೆ ಇದಲ್ಲದೆ

**ಅಥಾಪಿ ಮಿತ್ರಾವರುಣಯೋಃ । ಆದಿತ್ಯಾ ದಾನುನಸ್ಪತೀ ।**

(ನಿ. ೨—೧೩)

ಮಿತ್ರಾವರುಣರನ್ನೂ ಆದಿತ್ಯರೆಂದು ಪರಿಗಣಿಸಲಾಗುವುದು ಉದಾಹರಣೆಗೆ—

**ತಾ ಸಮ್ರಾಜಾ ಘೃತಾಸುತೀ ಆದಿತ್ಯಾ ದಾನುನಸ್ಪತೀ । ಸಚೇತೇ ಅನವಹ್ವರಂ ॥**

(ಋ. ಸಂ ೨—೪೧—೬)

ಎಂಬ ಋಕ್ಕಿನಲ್ಲಿ ಮಿತ್ರಾವರುಣರನ್ನು ಆದಿತ್ಯರೆಂದು ಕರೆದಿದೆ. ಇದಲ್ಲದೆ—

**ಅಥಾಪಿ ಮಿತ್ರಸ್ಯೈಕಸ್ಯ । ಪ್ರ ಸ ಮಿತ್ರ ಮರ್ತೋ ಅಸ್ತು ಪ್ರಯಸ್ವಾನ್ ಯಸ್ತ ಆದಿತ್ಯ ಶಿಕ್ಷತಿ ವ್ರತೇನ ಇತ್ಯಪಿ ನಿಗಮೋ ಭವತಿ ॥**

ಅನೇಕ ಸಂದರ್ಭಗಳಲ್ಲಿ ಮಂತ್ರದಲ್ಲಿ ಮಿತ್ರನೊಬ್ಬನನ್ನು ಮಾತ್ರ ನಿರ್ದೇಶಿಸಿದ್ದರೂ ಅವನನ್ನು ಆದಿತ್ಯನೆಂದೇ ಹೇಳಿದೆ. ಉದಾಹರಣೆಗೆ—

**ಪ್ರ ಸ ಮಿತ್ರ ಮರ್ತೋ ಅಸ್ತು ಪ್ರಯಸ್ವಾನ್ಯಸ್ತ ಆದಿತ್ಯ ಶಿಕ್ಷತಿ ವ್ರತೇನ ।**
**ನ ಹನ್ಯತೇ ನ ಜೀಯತೇ ತ್ವೋತೋ ನೈನಮಂಹೋ ಅಶ್ನೋತ್ಯಂತಿತೋ ನ ದೂರಾತ್ ॥**

(ಋ. ಸಂ. ೩.೫೯-೨)

ಎಂಬ ಋಕ್ಕಿನಲ್ಲಿ ಮಿತ್ರನನ್ನು ಮಾತ್ರ ಸ್ತುತಿಸಲಾಗಿದೆ ಮತ್ತು ಇವನನ್ನೂ ಆದಿತ್ಯನೆಂದು ಸಂಬೋಧಿಸಿದೆ.

**ಅಥಾಪಿ ವರುಣಸ್ಯೈಕಸ್ಯ । ಅಥಾ ವಯಮಾದಿತ್ಯ ವ್ರತೇ ತವ । ವ್ರತಮಿತಿ ಕರ್ಮನಾಮ ವೃಣೋತೀತಿ ಸತಃ ॥**

(ನಿ ೨೧೩)

ಮಿತ್ರನನ್ನು ನಿರ್ದೇಶಿಸಿದಂತೆಯೇ ವರುಣನೆಂಬ ಒಂದೇ ದೇವತೆಯನ್ನು ಮಂತ್ರದಲ್ಲಿ ಸ್ತುತಿಸಲಾಗಿದ್ದರೂ ಆ ಸಂದರ್ಭದಲ್ಲಿಯೂ ವರುಣನನ್ನು ಆದಿತ್ಯನೆಂದೇ ಹೇಳಿದೆ ಉದಾಹರಣೆಗೆ—

**ಉದುತ್ತಮಂ ವರುಣ ಪಾಶಮಸ್ಮದವಾಧಮಂ ವಿ ಮಧ್ಯಮಂ ಶ್ರಥಾಯ ।**
**ಅಥಾ ವಯಮಾದಿತ್ಯ ವ್ರತೇ ತವಾನಾಗಸೋ ಅದಿತಯೇ ಸ್ಯಾಮ ॥**

(ಋ ಸಂ ೧-೨೪-೧೫)

ಎಂಬ ಋಕ್ಕಿನಲ್ಲಿ ವರುಣನನ್ನು ಆದಿತ್ಯನೆಂದು ನಿರ್ದೇಶಿಸಿದೆ. ಇನ್ನು ಆದಿತ್ಯರೆಂಬ ದೇವತೆಗಳ ಸಂಖ್ಯಾಪರಿಮಿತಿಯೆಷ್ಟು ಎಂಬ ವಿಷಯವನ್ನು ಇಲ್ಲಿ ಸೂಕ್ಷ್ಮವಾಗಿ ಚರ್ಚಿಸುವುದು ಅವಶ್ಯಕವಾಗಿದೆ. ಮೇಲೆ ಉದಾಹರಣೆಗಾಗಿ ಕೊಟ್ಟಿರುವ **ಇಮಾ ಗಿರ ಆದಿತ್ಯೇಭ್ಯಃ** (ಋ. ಸಂ. ೨.೨೭-೧) ಎಂಬ ಋಕ್ಕಿನಲ್ಲಿ ಮಿತ್ರ ಅರ್ಯಮಾ, ಭಗಃ ವರುಣಃ ದಕ್ಷಃ ಅಂಶಃ ಎಂದು ಆರುಮಂದಿ ದೇವತೆಗಳ ಹೆಸರುಗಳಿವೆ. ಇವರೇ ಆದಿತ್ಯರೆಂದು ಹೇಳಲಾಗಿದೆ. ಆದರೆ **ತುವಿಜಾತಃ** ಎಂಬ ಶಬ್ದಕ್ಕೆ ನಿರುಕ್ತಕಾರರು **ಬಹುಜಾತಶ್ಚ ಧಾತಾ** (ನಿ. ೧೨-೨೬) ಧಾತಾ ಎಂದು ಅರ್ಥಮಾಡಿದಾರೆ. ಹೇಗೆಂದರೆ—**ತುವೀತಿ ಬಹುನಾಮ । ಸರ್ವವಿಧಾತೃತ್ವಾದ್ಬಹುಜನ್ಮಾ ಧಾತಾ ಯಾವದಧಿಕಾರಂ ಜನ್ಮೇತಿ ।** ಎಂದು ನಿರುಕ್ತಕಾರರು ಅರ್ಥಮಾಡಿದಾರೆ. ತುವಿ ಶಬ್ದಕ್ಕೆ ಬಹು, ಅನೇಕ ಎಂದರ್ಥ. ಜನ್ಮವೆಂದರೆ ಅಧಿಕಾರ. ತುವಿಜಾತ ಎಂದರೆ ಅನೇಕ ವಿಧವಾದ ಅಧಿಕಾರಗಳುಳ್ಳ ಸರ್ವವಿಧಾತೃವಾದ ಧಾತಾ ಎಂದು ಅರ್ಥವು ಎಂದು ತುವಿಜಾತಶಬ್ದಕ್ಕೆ ಅರ್ಥವಿವರಣೆಮಾಡಿರುವುದರಿಂದು ಈ ಋಕ್ಕಿನಲ್ಲಿ ಧಾತನೂ ಸೇರಿ ಏಳು ಮಂದಿ ಆದಿತ್ಯರೆಂದು ಹೇಳಬೇಕು. ಮತ್ತು **ಸಪ್ತ ದಿಶೋ ನಾನಾ ಸೂರ್ಯಾಃ** ಎಂಬ ಮಂತ್ರದಲ್ಲಿ ಆದಿತ್ಯರ ಸಂಖ್ಯೆಯು ಏಳು ಎಂದು ನಿರ್ದೇಶಿಸಿದೆ (ಋ ಸಂ ೯-೧೧೪-೩) ಆದರೆ ನಾಮನಿರ್ದೇಶವಿಲ್ಲ. **ದೇವಾ ಆದಿತ್ಯಾ ಯೇ ಸಪ್ತ** ಎಂದು ಮಾತ್ರ ತಿಳಿಸಿದೆ. ಹಿಂದೆ ಅದಿತಿಯ ವಿಷಯವನ್ನು ತಿಳಿಸುವಾಗ ೧೦-೭೨-೮, ೯ ಈ ಮಂತ್ರಗಳನ್ನು ಧ್ಧರಿಸಿ ಅದಿತಿಗೆ ಎಂಟು ಜನ ಪುತ್ರರೆಂದೂ ಅವರಲ್ಲಿ ಏಳು ಜನರನ್ನೂ ದೇವತೆಗಳಿಗೆ ಅರ್ಪಿಸಿದಳೆಂದೂ ಮಾರ್ತಾಂಡ

ನೆಂಬ ಎಂಟನೆಯವನನ್ನು ತಾನೇ ಇರಿಸಿಕೊಂಡು ಪೋಷಿಸಿದಳೆಂಬುದನ್ನೂ ವಿವರಿಸಿದೆ. ಇಲ್ಲಿಯೂ ಸಹ ಮಾರ್ತಾಂಡನನ್ನು ಬಿಟ್ಟು ಉಳಿದವರ ನಾಮನಿರ್ದೇಶವಿಲ್ಲ. **ಅ. ವೇ.** ೮-೯-೨೧ ನೇ ಮಂತ್ರದಲ್ಲಿ ಅದಿತಿಗೆ ಎಂಟುಪುತ್ರರೆಂದು ತಿಳಿಸಿದೆ. ೨-೨೭-೧ ನೇ ಮಂತ್ರದ ತಾತ್ಪರ್ಯವನ್ನು ವಿವರಿಸುವಾಗ ಸಾಯಣರು ಅವರ ಸಂಖ್ಯೆಯನ್ನು ತಿಳಿಸಲು ತೈತ್ತಿರೀಯಾರಣ್ಯಕದ ವಾಕ್ಯವನ್ನುದ್ಧರಿಸಿ **ಅಷ್ಟೌ ಪುತ್ರಾಸೋ ಅದಿತೇಃ... ...ತಾನನುಕ್ರಮಿಷ್ಯಾಮಃ । ಮಿತ್ರಶ್ಚ ವರುಣಶ್ಚ । ಧಾತಾ ಚಾರ್ಯಮಾ ಚ । ಅಗ್ಂಶಶ್ಚ ಭಗಶ್ಚ । ಇಂದ್ರಶ್ಚ ವಿವಸ್ವಾಗ್ಂಶ್ಚೇತ್ಯೇತೇ ।** (ತೈ. ಆ. ೧-೧೩-೩) ಅಲ್ಲಿರುವಂತೆ, ದಿತಿಯ ಅಷ್ಟಪುತ್ರರನ್ನು ತಿಳಿಸಿದ್ದಾರೆ

**ಉದಗಾದಯಮಾದಿತ್ಯಃ** (ಋ. ಸ ೧-೫೦-೧೨) , **ಉದಪಪ್ತದಸೌ ಸೂರ್ಯಃ** (ಋ. ಸಂ ೧-೧೯೧-೯) ಇತ್ಯಾದಿ ಸ್ಥಳಗಳಲ್ಲಿ ಸೂರ್ಯನಿಗೂ ಆದಿತ್ಯನಿಗೂ ತಾದಾತ್ಮ್ಯವನ್ನು ತಿಳಿಸಿದೆ. ಆದಿತೇಯನಾದ (ಅದಿತಿಪುತ್ರನಾದ) ಅಗ್ನಿಯೇ ಅಂತರಿಕ್ಷದಲ್ಲಿ ಸೂರ್ಯರೂಪದಲ್ಲಿ ದೇವತೆಗಳಿಂದ ಸ್ಥಾಪಿತನಾಗಿದ್ದಾನೆ, ಎಂದು ವರ್ಣಿತವಾಗಿರುವುದೂ ಉಂಟು.

**ಯದೇದೇನಮದಧುರ್ಯಜ್ಞಿಯಾಸೋ ದಿವಿ ದೇವಾಃ ಸೂರ್ಯಮಾದಿತೇಯಂ** (ಋ ಸಂ. ೧೦ ೮೮-೧೧) **ಅನರ್ವಾಣೋ ಹ್ಯೇಷಾಂ ಪಂಥಾ ಆದಿತ್ಯಾನಾಂ** (ಋ ಸಂ. ೮-೧೮-೨)ಎಂದು ಆದಿತ್ಯರ ಪಥದ ಸ್ವರೂಪವನ್ನು ತಿಳಿಸಿ **ತತ್ನ ನಃ ಸವಿತಾ ಭಗೋ ವರುಣೋ ಮಿತ್ರೋ ಅರ್ಯಮಾ** (ಋ. ಸಂ ೮-೧೮-೩) ಎಂಬ ನಾಲ್ಕು ಆದಿತ್ಯರೊಂದಿಗೆ ಸವಿತೃವಿನ ನಾಮವು ಸೇರಿದೆ. ಸೂರ್ಯ ಅಥವಾ ಸವಿತೃ ದೇವತೆಗೆ ಆದಿತ್ಯರಲ್ಲಿ ಏಳನೆಯ ಸ್ಥಾನವು ಕೆಲವೆಡೆಗಳಲ್ಲಿ ನಿರ್ದಿಷ್ಟವಾಗಿದೆ (ಅ. ವೇ. ೮-೨-೯ , ೩೭) ಕೆಲವೆಡೆಗಳಲ್ಲಿ ವರುಣನ ಜೊತೆಯಲ್ಲಿ ಇಂದ್ರನೂ ಆದಿತ್ಯನೆಂದು ಪರಿಗಣಿತನಾಗಿದ್ದಾನೆ (ಋ. ಸಂ. ೭-೮೫-೪)

**ತತ್ರ ತ್ವಾದಿತ್ಯಾ ರಕ್ಷತಾಂ ಸೂರ್ಯಾಚಂದ್ರಮಸಾವುಭೌ**

(ಅ ವೇ. ೮-೨-೧೫)

ಎಂಬ ಸ್ಥಳಗಳಲ್ಲಿ ಸೂರ್ಯ ಮತ್ತು ಚಂದ್ರ ಇವರಿಬ್ಬರನ್ನೂ ಆದಿತ್ಯರ ಗುಂಪಿನಲ್ಲಿ ಸೇರಿಸಿದೆ.

**ಮಾತಾದಿತ್ಯಾನಾಂ ದುಹಿತಾ ವಸೂನಾಂ . . ಹಿರಣ್ಯವರ್ಣಾ ಮಧುಕಶಾ**

(ಅ ವೇ ೯ ೧-೪)

ಹಿರಣ್ಯವರ್ಣಾತ್ಮಳಾದ ಮಧುಕಶೆಯನ್ನು ಆದಿತ್ಯಮಾತೆಯೆಂದೂ, ವಸುಪುತ್ರಿಯೆಂದೂ ಕರೆದಿದೆ. ಹೀಗೆ ಒಂದೊಂದು ಸನ್ನಿವೇಶದಲ್ಲಿ ಒಂದೊಂದು ವಿಧವಾಗಿ ಅದಿತಿಗೂ ಆದಿತ್ಯರಿಗೂ ಇರುವ ಸಂಬಂಧವನ್ನು ತಿಳಿಸಿದೆ. ಇವರ ಸಂಬಂಧವನ್ನು ತೈತ್ತಿರೀಯಬ್ರಾಹ್ಮಣದಲ್ಲಿ ಈ ರೀತಿ ವಿವರಿಸಿದೆ.

> **ಅದಿತಿಃ ಪುತ್ರಕಾಮಾ । ಸಾಧ್ಯೇಭ್ಯೋ ದೇವೇಭ್ಯೋ ಬ್ರಹ್ಮೌದನಮಪಚತ್ । ತಸ್ಯಾ ಉಚ್ಛೇಷಣಮದದುಃ । ತತ್ಪ್ರಾಶ್ನಾತ್ । ಸಾ ರೇತೋಽಧತ್ತ । ತಸ್ಯೈ ಧಾತಾ ಚಾರ್ಯಮಾ ಚಾ ಜಾಯೇತಾಂ । ಸಾ ದ್ವಿತೀಯಮಪಚತ್ । ತಸ್ಯಾ ಉಚ್ಛೇಷಣಮದದುಃ । ತತ್ಪ್ರಾಶ್ನಾತ್ ॥ ಸಾ ರೇತೋಽಧತ್ತ । ತಸ್ಯೈ ಮಿತ್ರಶ್ಚ ವರುಣಶ್ಚಾಜಾಯೇತಾಂ । ಸಾ ತೃತೀಯಮಪಚತ್। ತಸ್ಯಾ ಉಚ್ಛೇಷಣಮದದುಃ। ತತ್ಪ್ರಾಶ್ನಾತ್ । ಸಾ ರೇತೋಽಧತ್ತ । ತಸ್ಯಾ ಅಗ್ಂಶಶ್ಚ ಭಗಶ್ಚಾಜಾ-**

**ಯೇತಾಂ । ಸಾ ಚತುರ್ಥಮುಪಚತ್ । ತಸ್ಯಾ ಉಚ್ಛೇಷಣಮುದದುಃ । ತತ್ಪ್ರಾಶ್ನಾತ್ । ಸಾ ರೇತೋಽಧತ್ತ । ತಸ್ಯಾ ಇಂದ್ರಶ್ಚ ವಿವಿಸ್ವಾಗ್‌ಶ್ಚಾಜಾಯೇತಾಂ ॥**

(ತೈ ಬ್ರಾ ೧-೧-೯-೧, ೨, ೩)

ಅದಿತಿಯು ಪುತ್ರಕಾಮುಳಾಗಿ ದೇವತೆಗಳನ್ನೂ ಸಾಧ್ಯರನ್ನೂ ಉದ್ದೇಶಿಸಿ ಬ್ರಹ್ಮೌದನರೂಪವಾದ ಹವಿಸ್ಸನ್ನು ಪಕ್ವ ಮಾಡಿದಳು. ಅವರು ತಾವು ಆ ಹವಿಸ್ಸನ್ನು ಭುಜಿಸಿ ಅದರಲ್ಲಿ ಉಳಿದ ಶೇಷವನ್ನು ಅವಳಿಗೆ ಕೊಟ್ಟರು. ಅವಳು ಅದನ್ನು ಭುಜಿಸಿದಾಗ ಅದರ ಪ್ರಭಾವದಿಂದ **ಧಾತೃ ಅರ್ಯಮಾ** ಎಂಬಿಬ್ಬರು ಪುತ್ರರು ಜನಿಸಿದರು. ಇದೇ ಕ್ರಮವನ್ನು ಎರಡನೆಯ ಸಲ ಆಚರಿಸಿದಾಗ ಮಿತ್ರ ಮತ್ತು ವರುಣರೂ, ಮೂರನೆಯ ಸಲ ಅಂಶ ಮತ್ತು ಭಗರೂ, ನಾಲ್ಕನೆಯ ಸಲ ಇಂದ್ರ ಮತ್ತು ವಿವಸ್ವಂತರೂ ಉತ್ಪನ್ನರಾದರು. ಇವರೇ ಆದಿತ್ಯರು ಎಂದು ತೈತ್ತಿರೀಯಬ್ರಾಹ್ಮಣವು ವರ್ಣಿಸಿದೆ. ಇದೇ ವಿಷಯವನ್ನು ಶತಪಥಬ್ರಾಹ್ಮಣದಲ್ಲಿ ವಿವರಿಸುತ್ತಾ ಈ ರೀತಿ ತಿಳಿಸಿದೆ.

**ಸ ಮನಸಾ ಏವ ವಾಚಂ ಮಿಥುನಂ ಸಮಭವತ್ಸ ದ್ವಾದಶದ್ರಪ್ಸಾನ್ಗರ್ಭ್ಯಭವತ್ । ತೇ ದ್ವಾದಶ ಆದಿತ್ಯಾ ಅಸೃಜ್ಯಂತ ತಾನ್ ದಿಕ್ಷೂಪಾದಧತ್ ।**

(ಶ ಬ್ರಾ. ೬-೧-೨-೮)

(ಪ್ರಜಾಪತಿಯು) ವಾಕ್ಕಿನೊಡನೆ ತನ್ನ ಮಾನಸಿಕವಾದ ಸಂಬಂಧವನ್ನು ಹೊಂದಿದನು ಆಗ ಹನ್ನೆರಡು ದ್ರಪ್ಸಾತ್ಮಕವಾದ ಗರ್ಭವನ್ನು ಹೊಂದಿದನು. ಅದರ ಫಲವೇ ದ್ವಾದಶಾದಿತ್ಯರ ಆವಿರ್ಭಾವವು. ಆಗ ಅವರನ್ನು ದಿಕ್ಕುಗಳ ಪಾಲಕರನ್ನಾಗಿ ಇರಿಸಿದನು ಎಂದಿದೆ. ಇದೇ ರೀತಿಯಲ್ಲಿ ಆದಿತ್ಯರ ವಿಷಯವನ್ನು ತಿಳಿಸತಕ್ಕ ಇತರ ಶ್ರುತಿವಾಕ್ಯಗಳನ್ನೂ ಪರಿಶೀಲಿಸಬಹುದು.

**ಕತಮ ಆದಿತ್ಯಾ ಇತಿ । ದ್ವಾದಶ ವೈ ಮಾಸಾಃ ಸಂವತ್ಸರಸ್ಯೈತ ಆದಿತ್ಯಾ ಏತೇ ಹೀದಂ ಸರ್ವಮಾದದಾನಾ ಯಂತಿ ತೇ ಯದಿದಂ ಸರ್ವಮಾದದಾನಾ ಯಂತಿ ತಸ್ಮಾದಾದಿತ್ಯಾ ಇತಿ ॥**

(ಶ. ಬ್ರಾ ೧೧-೬-೩-೮)

ಆದಿತ್ಯರು ಎಷ್ಟು ಮಂದಿ ? ಆದಿತ್ಯರು ಹನ್ನೆರಡು ಸಂಖ್ಯೆಯುಳ್ಳವರು ಸಂವತ್ಸರದಲ್ಲಿ ಹನ್ನೆರಡು ಮಾಸಗಳಿವೆ ಇವುಗಳೇ ಆದಿತ್ಯರು ಆ ಮಾಸಗಳೇ ಸಕಲವನ್ನೂ ಪರಿಗ್ರಹಿಸಿ ಮುಂದುವರಿಯುತ್ತಿರುವುದರಿಂದ ಅವುಗಳಿಗೆ ಆದಿತ್ಯರೆಂದು ಹೆಸರು ಎಂದಿದೆ. ಇದೇ ಆದಿತ್ಯರ ವಿಷಯಕವಾದ ಕಥೆಯು ತೈತ್ತಿರೀಯ ಬ್ರಾಹ್ಮಣದಲ್ಲಿ ಈ ರೀತಿ ಉಕ್ತವಾಗಿದೆ—

**ಆದಿತ್ಯಾಶ್ಚಾಂಗಿರಸಶ್ಚ ಸುವರ್ಗೇ ಲೋಕೇಽಸ್ಪರ್ಧಂತ । ತೇಽಂಗಿರಸ ಆದಿತ್ಯೇಭ್ಯಃ। ಅಮುಮಾದಿತ್ಯಮಶ್ವಗ್ಂ ಶ್ವೇತಂ ಭೂತಂ ದಕ್ಷಿಣಾಮನಯನ್ । ತೇಽಬ್ರುವನ್ । ಯನ್ನೋಽವೇಷ್ಟ । ಸ ವರ್ಯೋಽಭೂದಿತಿ । ತಸ್ಮಾದಶ್ವಗ್ಂ ಸವರ್ಯೇತ್ಯಾಹ್ವಯಂತಿ । ತಸ್ಮಾದ್ಯಜ್ಞೇ ವರೋ ದೀಯತೇ। ಯತ್ಪ್ರಜಾಪತಿರಾಲಬ್ಧೋಽಶ್ವೋಽಭವತ್ । ತಸ್ಮಾದಶ್ವೋ ನಾಮ । ಯಚ್ಛ್ವಯದರುರಾಸೀತ್ । ತಸ್ಮಾದರ್ವಾ ನಾಮ । ಯತ್ಸದ್ಯೋ ವಾಜನ್ತ್ಸಮಜಯತ್ । ತಸ್ಮಾದ್ವಾಜೀ ನಾಮ । ಯದಸುರಾಣಾಂ ಲೋಕಾನಾದತ್ತ । ತಸ್ಮಾದಾದಿತ್ಯೋ ನಾಮ ॥**

(ತೈ ಬ್ರಾ. ೩-೯-೨೧-೧, ೨)

ಸ್ವರ್ಗದಲ್ಲಿ ಆದಿತ್ಯರೂ, ಅಂಗಿರಸ್ಸುಗಳೂ ಪರಸ್ಪರ ಸ್ಪರ್ಧಿಸಿದರು ಶ್ವೇತಾಶ್ವರೂಪನಾಗಿದ್ದ ಆದಿತ್ಯನನ್ನು ಅಂಗಿರಸ್ಸುಗಳು ಆದಿತ್ಯರಿಗೆ ದಕ್ಷಿಣಾರೂಪದಲ್ಲರ್ಪಿಸಿದರು. ಆಗ ಆದಿತ್ಯರು ಅಂಗಿರಸ್ಸುಗಳನ್ನು ಕುರಿತು "ನೀವು ತಂದಿರುವ ಈ ಆದಿತ್ಯನು ಅತ್ಯಂತ ಶ್ರೇಷ್ಠರೂಪನಾಗಿದ್ದಾನೆ" ಎಂದರು. ಆದಿತ್ಯರು ಅಶ್ವರೂಪಿಯಾದ ಆದಿತ್ಯನನ್ನು **ಸ ವರ್ಯಃ** (ಅವನು ಶ್ರೇಷ್ಠನು) ಎಂದು ಹೇಳಿದ್ದರಿಂದಲೇ ಲೋಕದಲ್ಲೂ ಅಶ್ವವು **ಸವರ್ಯ** ವೆಂದೇ ಕರೆಯಲ್ಪಟ್ಟಿತು. ಆದುದರಿಂದ ಯಜ್ಞದಲ್ಲಿ ಒಂದು ವರವು ದತ್ತವಾಯಿತು. ಯಜ್ಞಾರ್ಪಿತನಾದ ಪ್ರಜಾಪತಿಯು ಸರ್ವವ್ಯಾಪಿಯಾದುದರಿಂದ **ಅಶ್ವ**ವೆಂದೂ ಮತ್ತು ಚಕ್ಷುರ್ವೇದನೆಯನ್ನನುಭವಿಸಿದುದರಿಂದ **ಅರ್ವ**ವೆಂದೂ ಸಂಪತ್ತುಗಳನ್ನೆಲ್ಲಾ ತನ್ನ ವಶಮಾಡಿಕೊಂಡುದರಿಂದ **ವಾಜಿ**ಯೆಂದೂ, ಅಸುರರಿಂದ ಅವರ ಲೋಕಗಳನ್ನೆಲ್ಲಾ ಕಸಿದುಕೊಂಡುದರಿಂದ (ಆದತ್ತ) **ಆದಿತ್ಯ**ನೆಂದೂ ಪ್ರಸಿದ್ಧನಾಗಿದ್ದಾನೆ ಎಂದು ಆದಿತ್ಯಶಬ್ದದ ನಿರ್ವಚನವನ್ನು ತಿಳಿಸಿದೆ ಇದೇ ನಿರ್ವಚನವನ್ನು ತೈತ್ತಿರೀಯಾರಣ್ಯಕದಲ್ಲಿ ವಿವರಿಸುತ್ತಾ,

**ಯೋऽಸೌ ತಪನ್ನುದೇತಿ । ಸ ಸರ್ವೇಷಾಂ ಭೂತಾನಾಂ ಪ್ರಾಣಾನಾದಾಯೋದೇತಿ ।**

(ತೈ ಆ ೧-೧೪ ೧)

ಯಾವ ಈ ಸೂರ್ಯನು ಉದಯಿಸುವನೋ ಅವನು ಸಕಲ ಭೂತಗಳ ಪ್ರಾಣಗಳನ್ನೂ ಕಸಿದುಕೊಂಡು (ಆದಾ) ಉದಯಿಸುತ್ತಾನೆ ಆದುದರಿಂದಲೇ ಅವನು ಆದಿತ್ಯನು ಹೀಗೆ ಅದಿತಿಪುತ್ರತ್ವದಿಂದಲೇ ಆದಿತ್ಯರೆಂಬುದೂ, ಅಥವಾ **ಆದಾನ** ಕ್ರಿಯಾವಿಶಿಷ್ಟರಾದುದರಿಂದಲೇ ಆದಿತ್ಯರೆಂಬುದೂ ಎರಡು ವಿಧವಾದ ಸನ್ನಿವೇಶವೂ ವರ್ಣಿತವಾಗಿದೆ ಈ ಪದಕ್ಕೆ ನಿರುಕ್ತಕಾರರು ಈ ರೀತಿ ವಿವರಣೆಯನ್ನು ತಿಳಿಸಿದ್ದಾರೆ

**ಆದಿತ್ಯಃ ಕಸ್ಮಾತ್ । ಆದತ್ತೇ ರಸಾನ್ । ಆದತ್ತೇ ಭಾಸಂ ಜ್ಯೋತಿಷಾಂ । ಆದೀಪ್ತೋ ಭಾಸೇತಿ ವಾ । ಅದಿತೇಃ ಪುತ್ರ ಇತಿ ವಾ । ಸೂರ್ಯಮಾದಿತೇಯಂ । ಏವಮನ್ಯಾಸಾಮಪಿ ದೇವತಾನಾಮಾದಿತ್ಯಪ್ರವಾದಾಃ ಸ್ತುತಯೋ ಭವಂತಿ । ತದ್ಯಥೈತತ್ । ಮಿತ್ರಸ್ಯ ವರುಣಸ್ಯಾರ್ಯಮ್ಣೋ ದಕ್ಷಸ್ಯ ಭಗಸ್ಯಾಂಶಸ್ಯೇತಿ ॥**

(ನಿ ೨-೧೩)

"**ಸಹಸ್ರಗುಣಮುತ್ಸ್ರಷ್ಟುಮಾದತ್ತೇ ಹಿ ರಸಂ ರವಿಃ**" ಇತ್ಯಾದಿಯಾಗಿ ವರ್ಣಿತವಾಗಿರುವಂತೆ ರಸವನ್ನು ಆದಾನಮಾಡುವುದರಿಂದ ಆದಿತ್ಯನೆಂಬ ಹೆಸರು ಪ್ರಸಿದ್ಧವಾಗಿದೆ ರಸವನ್ನೇ ಅಲ್ಲದೇ, ಸಕಲ ತೇಜಸ್ಸನ್ನೂ ಆದಾನಮಾಡುತ್ತಾನೆ. ಪ್ರಕಾಶದಿಂದ ಪ್ರದೀಪ್ತನಾಗುವುದರಿಂದಾಗಲಿ ಅಥವಾ ಅದಿತಿಪುತ್ರನಾದುದರಿಂದಾಗಲಿ ಈ ಹೆಸರು ಪ್ರಸಿದ್ಧವಾಗಿದೆ. ಆದರೆ ಋಕ್ಸಂಹಿತೆಯಲ್ಲಿ ಸೂರ್ಯನನ್ನು ಅದಿತಿಪುತ್ರನೆಂದು ಕರೆದಿರುವುದು ಒಂದೆರಡು ಕಡೆಗಳಲ್ಲಿಮಾತ್ರ "**ದಿವಿ ದೇವಾಃ ಸೂರ್ಯ ಆದಿತೇಯಂ**" (ಋ. ಸಂ ೧೦-೮೮-೧೧) ಇತ್ಯಾದಿ ಸ್ಥಳಗಳಲ್ಲಿ ಈ ವಿವರಣರೂಪವಾದ ವರ್ಣನವಿದೆ. ಸೂರ್ಯನಲ್ಲದೇ ಮಿತ್ರ, ವರುಣ, ಅರ್ಯಮ, ದಕ್ಷ, ಭಗ, ಅಂಶ ಇವರನ್ನೂ ಆದಿತ್ಯರೆಂದೇ ನಿರ್ದೇಶಿಸಿದೆ.

ಹೀಗೆ ಆತ್ಮಗುಣವರ್ಣನವೇ **ಆದಿತ್ಯ**ಪದದ ತಾತ್ಪರ್ಯವಾದರೆ ಅದು ಸೂರ್ಯನಿಗೆ ಮಾತ್ರ ಅನ್ವಯಿಸುತ್ತದೆ ಅದಿತಿಪುತ್ರತ್ವವನ್ನು ತೋರಿಸುವುದಾದರೆ, ಮಿತ್ರಾವರುಣಾದಿಗಳಿಗೂ ಅನ್ವಯಿಸುತ್ತದೆ ಎರಡನೆಯ ಅರ್ಥವನ್ನು ಕೊಡುವುದಾದರೆ, ಆಗ ಅದಿತಿಪುತ್ರರೆಷ್ಟುಮಂದಿ ಎಂಬುದೂ ನಿಷ್ಕೃಷ್ಟವಾದ ವಿಷಯವಾಗಿಲ್ಲ ಆರು, ಎಂಟು, ಹನ್ನೆರಡು ಇತ್ಯಾದಿಯಾಗಿ ಸಂಖ್ಯಾನಿರ್ದೇಶಗಳಿವೆ ಈ ಸಂಖ್ಯೆಯನ್ನು ತೋರಿಸುವ ಕೆಲವು ಶ್ರುತಿವಾಕ್ಯಗಳನ್ನು ಮೇಲೆ ಉದಾಹರಿಸಿದೆ.

ಅತ್ಯುನ್ನತವಾದ ಅಂತರಿಕ್ಷದಲ್ಲಿ ಆದಿತ್ಯರೆಂದು ಪ್ರಸಿದ್ಧರಾದ ದೇವತೆಗಳು ಸ್ವಪ್ರಭುತ್ವದಿಂದ ಪ್ರಕಾಶಿಸುತ್ತಿದ್ದಾರೆ. ವೈದಿಕವಾಙ್ಮಯದಿಂದ ವರ್ಣಿತವಾಗಿರುವ ಆ ದೇವತೆಗಳ ಮೂಲರೂಪವನ್ನರಿಯಬೇಕಾದರೆ ಪುರಾಣಾದಿಗಳಲ್ಲಿರುವ ವಿವರಣೆಯೊಂದಿಗೆ ವರ್ಣನೆಗಳನ್ನು ಸೇರಿಸಿ ಮಿಶ್ರಮಾಡಬಾರದು. (ಈ ಸಂಪ್ರದಾಯದಂತೆ ಹನ್ನೆರಡು ಮಂದಿ ಆದಿತ್ಯರೂ ವರ್ಷದ ಹನ್ನೆರಡುಮಾಸಗಳನ್ನು ಪ್ರತಿಬಿಂಬಿಸತಕ್ಕವರು.) ಇವರು ಅಜರರೂ, ಅಮರ್ತ್ಯರೂ, ನಿತ್ಯರೂ, ಆದ ತತ್ತ್ವಪ್ರಕಾಶಕರು. ಅಮರಳೂ ಅಜರಳೂ ಆದ ಅದಿತಿಯೇ ಇವರ ಸ್ಥಿತಿಗೆ ಆಧಾರಭೂತಳು. ಈ ಆದಿತ್ಯರ ನಿವಾಸಸ್ಥಾನವೂ ಸಹ ಅಮರವಾದ ಜ್ಯೋತಿರೂಪವೇ ಆಗಿದೆ. ಆದುದರಿಂದ ವ್ಯಾವಹಾರಿಕವಾದುದೂ ಭ್ರಮಣಾತ್ಮಕವೂ, ಉದಯಾಸ್ತರೂಪಗಳುಳ್ಳದ್ದೂ ಆದ ವಿಶ್ವರಚನೆಯಲ್ಲಿ ಯಾವ ಯಾವ ತೇಜೋರೂಪಗಳಿವೆಯೋ ಅವು ನಿತ್ಯರಾದ ಈ ಆದಿತ್ಯರನ್ನು ಪ್ರತಿಬಿಂಬಿಸಲಾರವು. ಸೂರ್ಯ, ಚಂದ್ರ, ನಕ್ಷತ್ರಗಳು, ಇವುಗಳಲ್ಲಿ ಯಾರೂ ಈ ಆದಿತ್ಯತತ್ತ್ವವನ್ನು ಪ್ರತಿಬಿಂಬಿಸಲಾರವು. ವ್ಯಾವಹಾರಿಕಪ್ರಪಂಚಕ್ಕೆ ಸೇರಿದ ಸಕಲತೇಜೋರಾಶಿಗಳಿಂದಲೂ ಅತೀತವಾದ ತತ್ತ್ವವೇ ಈ ಆದಿತ್ಯತತ್ತ್ವವು ಎಂಬುದೇ Roth ಎಂಬ ಪಂಡಿತನ ಮತದ ತಾತ್ಪರ್ಯವಾಗಿದೆ

ಮುಖ್ಯವಾಗಿ ಮಿತ್ರಾವರುಣರನ್ನು ನಿರ್ದೇಶಿಸುವಾಗ ಉಪಯುಕ್ತವಾಗುವ ವಿಶೇಷಣಗಳು ಆದಿತ್ಯರ ಪರವಾಗಿಯೂ ಪ್ರಯುಕ್ತವಾಗಿವೆ.

**ಶುಚಯಃ** ( ಪ್ರಕಾಶಮಾನರು ), **ಹಿರಣ್ಯಯಾಃ** ( ಸುವರ್ಣರೂಪರು ), **ಪೂತಾಃ** ( ಶುದ್ಧರು ), **ಅವೃಜಿನಃ** ( ಪಾಪರಹಿತರು ); **ಅನವದ್ಯಾಃ** ( ದೋಷರಹಿತರು ), **ಋತಾವಾನಃ** ( ಪವಿತ್ರವಾದ ನಿಯಮವುಳ್ಳವರು) ; **ಕ್ಷತ್ರಿಯಾಃ** (ವೀರ್ಯವುಳ್ಳವರು) , **ಅರಿಷ್ಟಾಃ** (ಅಪ್ರತಿಹತರು) , **ಉರವಃ** (ವಿಸ್ತೃತವಾದ ಸ್ವರೂಪವುಳ್ಳವರು) ; **ಗಭೀರಾಃ** (ಅಗಾಧವಾದ ಸ್ವರೂಪವುಳ್ಳವರು) , **ಅಸ್ವಪ್ನಜಃ** (ನಿದ್ರಾರಹಿತರು) , **ಅನಿಮಿಷಾಃ** (ಕಣ್ಣುರೆಪ್ಪೆಗಳನ್ನು ಚಲಿಸದೆ ಇರತಕ್ಕವರು) ; **ಭೂರ್ಯಕ್ಷಾಃ** (ಅನೇಕ ಚಕ್ಷುಸ್ಸುಳ್ಳವರು) , **ದೀರ್ಘಧಿಯಃ** (ದೂರದೃಷ್ಟಿಯುಳ್ಳವರು ಅಥವಾ ಭವಿಷ್ಯವನ್ನರಿಯುವ ಶಕ್ತಿಯುಳ್ಳವರು) , **ಧೃತವ್ರತಾಃ** (ಸ್ಥಿರವಾದ ಸಂಕಲ್ಪವುಳ್ಳವರು) ಇತ್ಯಾದಿ ವಿಶೇಷಣಗಳಿಂದ ಆದಿತ್ಯರು ವರ್ಣಿತರಾಗಿದ್ದಾರೆ.

॥ ಸಂಹಿತಾಪಾಠಃ ॥

**ಸ್ವಸ್ತಿ ನೋ ಮಿಮೀತಾಮಶ್ವಿನಾ ಭಗಃ ಸ್ವಸ್ತಿ ದೇವ್ಯದಿತಿರನರ್ವಣಃ ।**
**ಸ್ವಸ್ತಿ ಪೂಷಾ ಅಸುರೋ ದಧಾತು ನಃ ಸ್ವಸ್ತಿ ದ್ಯಾವಾಪೃಥಿವೀ ಸುಚೇ-**
**ತುನಾ ॥೧೧॥**

॥ ಪದಪಾಠಃ ॥

**ಸ್ವಸ್ತಿ । ನಃ । ಮಿಮೀತಾಂ । ಅಶ್ವಿನಾ । ಭಗಃ । ಸ್ವಸ್ತಿ । ದೇವೀ । ಅದಿತಿಃ । ಅನರ್ವಣಃ ।**
**ಸ್ವಸ್ತಿ । ಪೂಷಾ । ಅಸುರಃ । ದಧಾತು । ನಃ । ಸ್ವಸ್ತಿ । ದ್ಯಾವಾಪೃಥಿವೀ ಇತಿ। ಸುऽಚೇತುನಾ ॥ ೧೧ ॥**

ಸಾಯಣಭಾಷ್ಯಂ ॥ ॥

**ಪೃಷ್ಠ್ಯಸ್ಯ ಷಷ್ಠೇಽಹನಿ ವೈಶ್ವದೇವಶಸ್ತ್ರೇ ಸ್ವಸ್ತಿ ನ ಇತಿ ತೃಚಃ । ಸೂತ್ರಿತಂ ಚ । ಸ್ವಸ್ತಿ ನೋ ಮಿಮೀತಾಮಶ್ವಿನಾ ಭಗ ಇತಿ ತೃಚ ಇತಿ ವೈಶ್ವದೇವಂ । ಆ ೮. ೧ । ಇತಿ ॥ ತಥಾ ಬೃಹಸ್ಪತಿಸವೇ ವೈಶ್ವದೇವನಿವಿದ್ಧಾನಾರ್ಥೋಽಯಂ ತೃಚಃ । ಸ್ವಸ್ತಿ ನೋ ಮಿಮೀತಾಮಶ್ವಿನಾ ಭಗ ಇತಿ ವೈಶ್ವದೇವಂ । ಆ ೯.೫ । ಇತಿ ಸೂತ್ರಿತತ್ವಾತ್ ॥**

**ನೋಽಸ್ಮಭ್ಯಮಶ್ವಿನಾಶ್ವಿನೌ ಸ್ವಸ್ತ್ಯವಿನಾಶಂ ಕ್ಷೇಮಂ ಮಿಮೀತಾಂ । ಕುರುತಾಂ । ಭಗಶ್ಚ ಸ್ವಸ್ತಿ ಕ್ಷೇಮಂ ಮಿಮೀತಾಂ । ತಥಾ ದೇವ್ಯದಿತಿಶ್ಚ ಸ್ವಸ್ತಿ ಮಿಮೀತಾಂ । ಅನರ್ವಣೋಽಪ್ರತ್ಯೃತಃ ಪೂಷಾ ಅಸುರಃ ಶತ್ರೂಣಾಂ ನಿರಸಿತಾ ಪ್ರಾಣಾನಾಂ ಬಲಾನಾಂ ದಾತಾ ವಾ ನಃ ಸ್ವಸ್ತಿ ದಧಾತು । ನೋಽಸ್ಮಭ್ಯಂ ದ್ಯಾವಾಪೃಥಿವೀ ದ್ಯಾವಾಪೃಥಿವ್ಯಾವಪಿ ಸುಚೇತುನಾ ಶೋಭನೇನ ಪ್ರಜ್ಞಾನೇನ ವಿಶಿಷ್ಟೇ ಸ್ವಸ್ತಿ ಮಿಮೀತಾಂ ॥**

॥ ಪ್ರತಿಪದಾರ್ಥ ॥

**ಅಶ್ವಿನಾ**—ಅಶ್ವಿನೀದೇವತೆಗಳು । **ನಃ**—ನಮಗೆ । **ಸ್ವಸ್ತಿ**—ಮಂಗಳವನ್ನು । **ಮಿಮೀತಾಂ**—ಉಂಟು ಮಾಡಲಿ । **ಭಗಃ**—ಭಗನೂ । **ದೇವೀ**—ದೇವತಾತ್ಮಳಾದ । **ಅದಿತಿಃ**—ಅದಿತಿಯೂ । **ಸ್ವಸ್ತಿ**—ಮಂಗಳವನ್ನುಂಟುಮಾಡಲಿ । **ಅನರ್ವಣಃ**— ಪ್ರತಿಹತನಾದವನೂ । **ಅಸುರಃ**—ಶತ್ರುನಾಶಕನೂ ಆದ । **ಪೂಷಾ**—ಪೂಷದೇವನು । **ಸ್ವಸ್ತಿ**—ಮಂಗಳವನ್ನು । **ದಧಾತು**—ಉಂಟುಮಾಡಲಿ । **ಸುಚೇತನಾ**—ಉತ್ತಮವಾದ ಪ್ರಜ್ಞೆಯಿಂದ ಕೂಡಿದ । **ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳೂ । **ನಃ**—ನಮಗೆ । **ಸ್ವಸ್ತಿ**—ಮಂಗಳವನ್ನುಂಟು ಮಾಡಲಿ.

॥ ಭಾವಾರ್ಥ ॥

ಅಶ್ವಿನೀದೇವತೆಗಳೂ, ಭಗನೂ, ದೇವತಾತ್ಮಳಾದ ಅದಿತಿಯೂ ನಮಗೆ ಮಂಗಳವನ್ನುಂಟುಮಾಡಲಿ ಅಪ್ರತಿಹತನೂ, ಶತ್ರುನಾಶಕನೂ ಆದ ಪೂಷನೂ, ಉತ್ತಮಪ್ರಜ್ಞೆಯಿಂದ ಕೂಡಿದ ದ್ಯಾವಾಪೃಥಿವಿಗಳೂ ನಮಗೆ ಕಲ್ಯಾಣಕಾರಕರಾಗಲಿ.

English Translation

May the Ashwins contribute to our prosperity : may Bhaga, and the divine Aditi (contribute) to (our) prosperity : may the irresistible Vishnu, the scatterer (of foes), bestow upon us prosperity : may the conscious Heaven and Earth (bestow upon us) prosperity.

॥ ವಿಶೇಷವಿಷಯಗಳು ॥

**ಸ್ವಸ್ತಿ ನೋ ಮಿತ್ರಾವರುಣಾ** ಎಂದು ಮೊದಲಾಗುವ ಮುಂದಿನ ಐದು ಋಕ್ಕುಗಳನ್ನು ನಮಗೆ ಕಲ್ಯಾಣ (ಮಂಗಳ) ವುಂಟಾಗಲಿ ಎಂಬ ಆಶಂಸನೆಯನ್ನು ವ್ಯಕ್ತಪಡಿಸುವುದಕ್ಕಾಗಿ ಪಠಿಸುವ ರೂಢಿ ಇರುವುದು

ಪೃಷ್ಠ್ಯವೆಂಬ ಯಾಗದ ಆರನೆಯ ದಿವಸ ವೈಶ್ವದೇವ ಶಸ್ತ್ರಮಂತ್ರಗಳನ್ನು ಪಠಿಸುವಾಗ **ಸ್ವಸ್ತಿ ನಃ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಸ್ವಸ್ತಿ ನೋ ಮಿಮೀತಾಮಶ್ವಿನಾ ಭಗ ಇತಿ ತೃಚ ಇತಿ ವೈಶ್ವದೇವಂ** ಎಂಬ ಸೂತ್ರದಿಂದ (ಆ. ೮ ೧) ವಿವೃತವಾಗಿರುವುದು. ಮತ್ತು ಬೃಹಸ್ಪತಿಸವವೆಂಬ ಯಾಗದಲ್ಲಿಯೂ ವೈಶ್ವದೇವಶಸ್ತ್ರಮಂತ್ರಗಳ ಮಧ್ಯದಲ್ಲಿ ಈ ಮೂರು ಋಕ್ಕುಗಳನ್ನು ನಿವಿದ್ಧಾನ ಮಂತ್ರಗಳನ್ನಾಗಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಸ್ವಸ್ತಿ ನೋ ಮಿಮೀತಾಮಶ್ವಿನಾ ಭಗ ಇತಿ ವೈಶ್ವದೇವಂ** ಎಂಬ ಸೂತ್ರದಿಂದ (ಆ. ೯ ೫) ವಿವೃತವಾಗಿರುವುದು

॥ ಸಂಹಿತಾಪಾಠಃ ॥

**ಸ್ವಸ್ತಯೇ ವಾಯುಮುಪ ಬ್ರವಾಮಹೈ ಸೋಮಂ ಸ್ವಸ್ತಿ ಭುವನಸ್ಯ ಯಸ್ಪತಿಃ ।**
**ಬೃಹಸ್ಪತಿಂ ಸರ್ವಗಣಂ ಸ್ವಸ್ತಯೇ ಸ್ವಸ್ತಯ ಆದಿತ್ಯಾಸೋ ಭವಂತು ನಃ ॥**

॥ ಪದಪಾಠಃ ॥

**ಸ್ವಸ್ತಯೇ । ವಾಯುಂ । ಉಪ । ಬ್ರವಾಮಹೈ । ಸೋಮಂ । ಸ್ವಸ್ತಿ । ಭುವನಸ್ಯ । ಯಃ । ಪತಿಃ ।**
**ಬೃಹಸ್ಪತಿಂ । ಸರ್ವಽಗಣಂ । ಸ್ವಸ್ತಯೇ । ಸ್ವಸ್ತಯೇ । ಆದಿತ್ಯಾಸಃ । ಭವಂತು । ನಃ ॥ ೧೨ ॥**

॥ ಸಾಯಣಭಾಷ್ಯಂ ॥

**ಸ್ವಸ್ತಯೇ ಕ್ಷೇಮಾಯ ವಾಯುಮುಪ ಬ್ರವಾಮಹೈ । ಸ್ತುಮ ಇತ್ಯರ್ಥಃ । ಸೋಮಂ ಚೋಪ ಬ್ರವಾಮಹೈ । ಯಶ್ಚ ಸೋಮೋ ಭುವನಸ್ಯ ಪತಿಃ ಪಾಲಕಃ । ಸರ್ವಲೋಕಜೀವನಸ್ಯ ಸೋಮಾಯತ್ತತ್ವಾತ್ । ತಥಾ ಸರ್ವಗಣಂ ಸರ್ವದೇವಗಣೋಪೇತಂ ಬೃಹಸ್ಪತಿಂ ಬೃಹತಃ ಕರ್ಮಣೋ ಮಂತ್ರಸ್ಯ ಪಾಲಯಿತಾರಂ ಸ್ವಸ್ತಯೇ ಸ್ತುಮಃ । ಆದಿತ್ಯಾಸ ಆದಿತ್ಯಾ ಅದಿತೇಃ ಪುತ್ರಾಃ ಸರ್ವೇ ದೇವಾ ಅರುಣಾದಯೋ ದ್ವಾದಶ ವಾ ನೋಽಸ್ಮಾಕಂ ಸ್ವಸ್ತಯೇ ಭವಂತು ॥**

॥ ಪ್ರತಿಪದಾರ್ಥ ॥

**ಸ್ವಸ್ತಯೇ**—ನಮ್ಮ ಕಲ್ಯಾಣಕ್ಕಾಗಿ । **ವಾಯುಂ**—ವಾಯುವನ್ನು । **ಉಪ ಬ್ರವಾಮಹೈ**—ಸ್ತುತಿಸುತ್ತೇವೆ । **ಯಃ**—ಯಾವ ಸೋಮದೇವನು । **ಭುವನಸ್ಯ**—ಲೋಕಗಳಿಗೆಲ್ಲಾ । **ಪತಿಃ**—ಪಾಲಕನೋ ಅಂತಹ । **ಸೋಮಂ**—ಸೋಮನನ್ನು ಸ್ತುತಿಸುತ್ತೇವೆ । **ಸರ್ವಗಣಂ**—ಸಕಲದೇವತಾಗಣದೊಂದಿಗೆ ಕೂಡಿರುವ ।

**ಬೃಹಸ್ಪತಿಂ**—ಬೃಹಸ್ಪತಿಯನ್ನೂ । **ಸ್ವಸ್ತಯೇ**—ನಮ್ಮ ಕಲ್ಯಾಣಕ್ಕಾಗಿ (ಸ್ತುತಿಸುತ್ತೇವೆ) । **ಆದಿತ್ಯಾಸಃ**—ಅದಿತಿಪುತ್ರರಾದ ಆದಿತ್ಯರು । **ನಃ**—ನಮಗೆ । **ಸ್ವಸ್ತಯೇ**—ಕಲ್ಯಾಣಕ್ಕಾಗಿ । **ಭವಂತು**—ಅನುಗ್ರಹಾತ್ಮರಾಗಿರಲಿ.

॥ ಭಾವಾರ್ಥ ॥

ನಮಗೆ ಕಲ್ಯಾಣಲಾಭಕ್ಕಾಗಿ ವಾಯುವನ್ನೂ, ಲೋಕಪಾಲಕನಾದ ಸೋಮನನ್ನೂ ಸ್ತುತಿಸುತ್ತೇವೆ. ಹಾಗೆಯೇ, ಸಕಲದೇವತಾಗಣದೊಂದಿಗೆ ಕೂಡಿದ ಬೃಹಸ್ಪತಿಯನ್ನೂ ಸ್ತುತಿಸುತ್ತೇವೆ. ಅದಿತಿಪುತ್ರರಾದ ಆದಿತ್ಯರು ನಮಗೆ ಕಲ್ಯಾಣವುಂಟಾಗುವಂತೆ ಅನುಗ್ರಹಾತ್ಮಕರಾಗಿರಲಿ.

## English Translation

We glorify Vayu for prosperity, Soma for prosperity, he who is the protector of the world : (we praise) Brihaspati (attended by) all the companies (of the deities), for prosperity, and for our prosperity may the Adityas be ours.

॥ ಸಂಹಿತಾಪಾಠಃ ॥

ವಿಶ್ವೇ ದೇವಾ ನೋ ಅದ್ಯಾ ಸ್ವಸ್ತಯೇ ವೈಶ್ವಾನರೋ ವಸುರಗ್ನಿಃ ಸ್ವಸ್ತಯೇ।
ದೇವಾ ಅವಂತ್ವೃಭವಃ ಸ್ವಸ್ತಯೇ ಸ್ವಸ್ತಿ ನೋ ರುದ್ರಃ ಪಾತ್ವಂಹಸಃ ॥೧೪॥

॥ ಪದಪಾಠಃ ॥

ವಿಶ್ವೇ । ದೇವಾಃ । ನಃ । ಅದ್ಯ । ಸ್ವಸ್ತಯೇ । ವೈಶ್ವಾನರಃ । ವಸುಃ । ಅಗ್ನಿಃ । ಸ್ವಸ್ತಯೇ ।
ದೇವಾಃ । ಅವಂತು । ಋಭವಃ । ಸ್ವಸ್ತಯೇ । ಸ್ವಸ್ತಿ । ನಃ । ರುದ್ರಃ । ಪಾತು । ಅಂಹಸಃ । ೧೪ ॥

॥ ಸಾಯಣಭಾಷ್ಯಂ ॥

ಸತ್ರಮಧ್ಯೇ ದೀಕ್ಷಿತೇ ವ್ಯಾಧಿತೇ ಸತಿ ತಸ್ಮಿನ್ನಹನಿ ವೈಶ್ವದೇವಶಸ್ತ್ರೇಽಯಂ ತೃಚೋ ನಿವಿದ್ಧಾನಾರ್ಥಃ । ಸೂತ್ರಿತಂ ಚ । ಸ್ವಸ್ತ್ಯಾತ್ರೇಯೇ ನಿವಿದಂ ದಧ್ಯಾತ್ । ಆ ೬.೯ । ಇತಿ । ಸ್ವಸ್ತ್ಯಾತ್ರೇಯ. ಶಬ್ದೇನಾಯಂ ತೃಚೋ ವಿವಕ್ಷಿತ ಇತಿ ತತ್ರ ವ್ಯಾಖ್ಯಾತಂ । ತಥಾ ರೂಪಾದಿಕೇ ಸತ್ರೇಯಂ ತೃಚೋ ಜಪ್ಯಃ ।

ವಿಶ್ವೇ ಸರ್ವೇಽಪಿ ದೇವಾ ನೋಽಸ್ಮಾನದ್ಯಾಸ್ಮಿನ್ಯಾಗದಿನೇ ಸ್ವಸ್ತಯೇ ಕ್ಷೇಮಾಯಾವಂತು । ವೈಶ್ವಾನರಃ । ವಿಶ್ವ ಏನಂ ನರಾ ನಯಂತೀತಿ ವೈಶ್ವಾನರಃ । ವಸುಃ ಸರ್ವಸ್ಯ ವಾಸಯಿತಾಗ್ನಿರ್ದೇವಃ ।

**ಅಯಮೇವಾಗ್ನಿರ್ವೈಶ್ವಾನರ ಇತಿ ಶಾಕಪೂಣಿಃ । ನಿ. ೭-೨೩. । ಇತಿ ಯಾಸ್ಕಃ । ಸೋಽಪಿ ಸ್ವಸ್ತಯೇಽವತು । ದೇವಾ ಋಭವೋಽಪಿ ಸ್ವಸ್ತಯೇಽವಂತು । ರುದ್ರೋ ದುಃಖಾದ್ದ್ರಾವಯಿತಾ ದೇವೋಽಪ್ಯಂಹಸಃ ಪಾಪಾತ್ ಸ್ವಸ್ತಿ ಪಾತು ನೋಽಸ್ಮಾನ್ ॥**

॥ ಪ್ರತಿಪದಾರ್ಥ ॥

**ವಿಶ್ವೇ**—ಸಮಸ್ತರಾದ । **ದೇವಾಃ**—ದೇವತೆಗಳೂ । **ನಃ**—ನಮ್ಮನ್ನು । **ಅದ್ಯ**—ಈ ಯಾಗದ ದಿನ । **ಸ್ವಸ್ತಯೇ**—ನಮಗೆ ಕಲ್ಯಾಣಲಾಭಕ್ಕಾಗಿ (ರಕ್ಷಿಸಲಿ) । **ವೈಶ್ವಾನರಃ**—ಸಕಲರಿಗೂ ಮಾರ್ಗದರ್ಶಕನೂ । **ವಸುಃ**—ವಸತಿದಾಯಕನೂ ಆದ । **ಅಗ್ನಿಃ**—ಅಗ್ನಿಯು । **ಸ್ವಸ್ತಯೇ**—ನಮಗೆ ಕಲ್ಯಾಣಕಾರಕನಾಗಲಿ । **ದೇವಾಃ**—ದೇವತಾತ್ಮರಾದ । **ಋಭವಃ**—ಋಭುಗಳು । **ಸ್ವಸ್ತಯೇ**—ನಮ್ಮ ಕಲ್ಯಾಣಕ್ಕಾಗಿ । **ಅವಂತು**—ರಕ್ಷಿಸಲಿ । **ರುದ್ರಃ**—ರುದ್ರದೇವನು । **ಸ್ವಸ್ತಿ**—ನಮ್ಮ ಮಂಗಳಕ್ಕಾಗಿ । **ನಃ**—ನಮ್ಮನ್ನು । **ಅಂಹಸಃ**—ಪಾಪದಿಂದ । **ಪಾತು**—ರಕ್ಷಿಸಲಿ.

॥ ಭಾವಾರ್ಥ ॥

ಸಮಸ್ತರಾದ ದೇವತೆಗಳೂ ಸಹ ಈ ಯಾಗದ ದಿನ ನಮ್ಮ ಕಲ್ಯಾಣಲಾಭಕ್ಕಾಗಿ ನಮ್ಮನ್ನು ರಕ್ಷಿಸಲಿ ಸಕಲರಿಗೂ ಮಾರ್ಗದರ್ಶಕನೂ ವಸತಿದಾಯಕನೂ ಆದ ಅಗ್ನಿಯು ನಮಗೆ ಕಲ್ಯಾಣಕಾರಕನಾಗಲಿ. ದೇವತಾತ್ಮರಾದ ಋಭುಗಳು ನಮ್ಮ ಕಲ್ಯಾಣಕ್ಕಾಗಿ ರಕ್ಷಿಸಲಿ. ರುದ್ರದೇವನು ನಮ್ಮ ಮಂಗಳಕ್ಕಾಗಿ ನಮ್ಮನ್ನು ಪಾಪದಿಂದ ರಕ್ಷಿಸಲಿ.

## English Translation

May all the gods be with us to-day for our prosperity: may Agni, the benefactor of all men, and giver of dwellings, (be with us) for (our) prosperity: may the divine Ribhus protect us for ( our ) prosperity : may Rudra preserve us from iniquity for (our) prosperity.

॥ ವಿಶೇಷವಿಷಯಗಳು ॥

ಯಜ್ಞಕರ್ಮಗಳು ನಡೆಯುತ್ತಿರುವಾಗ ಮಧ್ಯಕಾಲದಲ್ಲಿ ಯಜ್ಞದೀಕ್ಷೆಯನ್ನು ಕೈಗೊಂಡಿರುವ ಯಜಮಾನನು ವ್ಯಾಧಿಗ್ರಸ್ತ (ರೋಗಪೀಡಿತ)ನಾದರೆ ಆ ದಿವಸ **ವಿಶ್ವೇ ದೇವಾ ನಃ** ಎಂದು ಮೊದಲಾಗುವ ತೃಚವನ್ನು ಎಂದರೆ ಮೂರು ಋಕ್ಕುಗಳನ್ನು ವೈಶ್ವದೇವ ಶಸ್ತ್ರಮಂತ್ರಗಳ ಮಧ್ಯದಲ್ಲಿ ನಿವಿದ್ಧಾನಮಂತ್ರಗಳನ್ನಾಗಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಸ್ವಸ್ತ್ಯಾತ್ರೇಯೇ ನಿವಿದಂ ದಧ್ಯಾತ್** ಎಂಬ ಸೂತ್ರದಿಂದ (ಆ. ೬-೯) ವಿವೃತವಾಗಿರುವುದು. ಸೂತ್ರದಲ್ಲಿರುವ ಸ್ವಸ್ತ್ಯಾತ್ರೇಯ ಮಂತ್ರಕ್ಕೆ ಈ ಋಕ್ಕಿನಿಂದ ಮೊದಲಾಗುವ ತೃಚ ಎಂದರೆ ಮೂರು ಋಕ್ಕುಗಳೆಂದರ್ಥವು ವಿವೃತವಾಗಿರುವುದು. ಹಾಗೆಯೇ ಭಯಾದಿ ಸಂಕಟಗಳು ಪ್ರಾಪ್ತವಾದಾಗಲೂ ಈ ಮೂರು ಋಕ್ಕುಗಳನ್ನು ಜಪಿಸುವುದರಿಂದ ಭಯಪರಿಹಾರವಾಗುವುದೆಂದು ಹೇಳಲಾಗಿದೆ.

॥ ಸಂಹಿತಾಪಾಠಃ ॥

ಸ್ವಸ್ತಿ ಮಿತ್ರಾವರುಣಾ ಸ್ವಸ್ತಿ ಪಥ್ಯೇ ರೇವತಿ ।

ಸ್ವಸ್ತಿ ನ ಇಂದ್ರಶ್ಚಾಗ್ನಿಶ್ಚ ಸ್ವಸ್ತಿ ನೋ ಅದಿತೇ ಕೃಧಿ ॥೧೪॥

॥ ಪದಪಾಠಃ ॥

ಸ್ವಸ್ತಿ । ಮಿತ್ರಾವರುಣಾ । ಸ್ವಸ್ತಿ । ಪಥ್ಯೇ । ರೇವತಿ ।

ಸ್ವಸ್ತಿ । ನಃ । ಇಂದ್ರಃ । ಚ । ಅಗ್ನಿಃ । ಚ । ಸ್ವಸ್ತಿ । ನಃ । ಅದಿತೇ । ಕೃಧಿ ॥ ೧೪ ॥

॥ ಸಾಯಣಭಾಷ್ಯಂ ॥

ಹೇ ಮಿತ್ರಾವರುಣಾ ಅಹೋರಾತ್ರಾಭಿಮಾನಿದೇವೌ ಸ್ವಸ್ತಿ ಕುರುತಂ । ಹೇ ಪಥ್ಯೇ । ಪಂಥಾ ಅಂತರಿಕ್ಷಮಾರ್ಗಃ । ತತ್ರ ಹಿತಾ ಮಾರ್ಗಾಭಿಮಾನಿನೀ ದೇವೀ । ಹೇ ತಾದೃಶಿ ರೇವತಿ ಧನವತಿ ದೇವಿ ಸ್ವಸ್ತಿ ಕೃಧಿ। ಇಂದ್ರಶ್ಚಾಗ್ನಿಶ್ಚ ಪ್ರತ್ಯೇಕಂ ನೋಽಸ್ಮಭ್ಯಂ ಸ್ವಸ್ತಿ ಕೃಧಿ। ಹೇ ಅದಿತೇ ದೇವಿ ನಃ ಸ್ವಸ್ತಿ ಕೃಧಿ। ಕುರು ॥

॥ ಪ್ರತಿಪದಾರ್ಥ ॥

**ಮಿತ್ರಾವರುಣಾ**—ಎಲೈ ಮಿತ್ರಾವರುಣರೇ । **ಸ್ವಸ್ತಿ**—ನಮಗೆ ಮಂಗಳವುಂಟಾಗಲಿ । **ರೇವತಿ**—ಧನಯುಕ್ತಳಾದ । **ಪಥ್ಯೇ**—ಅಂತರಿಕ್ಷಮಾರ್ಗವೇ । **ಸ್ವಸ್ತಿ**—ನಮಗೆ ಕಲ್ಯಾಣವುಂಟಾಗಲಿ । **ಇಂದ್ರಃ**—ಇಂದ್ರನೂ **ಅಗ್ನಿಶ್ಚ**—ಅಗ್ನಿಯೂ । **ನಃ**—ನಮಗೆ । **ಸ್ವಸ್ತಿ**—ಮಂಗಳವನ್ನುಂಟುಮಾಡಲಿ । **ಅದಿತೇ**—ಎಲೈ ಅದಿತಿಯೇ । **ನಃ**—ನಮಗೆ । **ಸ್ವಸ್ತಿ**—ಮಂಗಳವನ್ನು । **ಕೃಧಿ**—ಉಂಟುಮಾಡು

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ ನಮಗೆ ಮಂಗಳವುಂಟಾಗಲಿ. ಧನಯುಕ್ತಳಾದ ಅಂತರಿಕ್ಷಮಾರ್ಗವೇ ನಮಗೆ ಕಲ್ಯಾಣವುಂಟಾಗಲಿ. ಇಂದ್ರನೂ ಅಗ್ನಿಯೂ ನಮಗೆ ಮಂಗಳವನ್ನುಂಟುಮಾಡಲಿ ಎಲೈ ಅದಿತಿಯೇ ನಮಗೆ ಮಂಗಳವನ್ನು ಉಂಟುಮಾಡು.

English Translation

Mitra, and Varuna, grant us prosperity: Path (of the firmament), and Goddess of riches, ( grant us ) prosperity: may Indra and Agni (grant us) prosperity; Aditi, bestow prosperity upon us.

॥ ಸಂಹಿತಾಪಾಠಃ ॥

ಸ್ವಸ್ತಿ ಪಂಥಾಮನು ಚರೇಮ ಸೂರ್ಯಾಚಂದ್ರಮಸಾವಿವ ।

ಪುನರ್ದದತಾಘ್ನತಾ ಜಾನತಾ ಸಂ ಗಮೇಮಹಿ ॥೧೫॥

॥ ಪದಪಾಠಃ ॥

ಸ್ವಸ್ತಿ । ಪಂಥಾಂ । ಅನು । ಚರೇಮ । ಸೂರ್ಯಾಚಂದ್ರಮಸೌಽಇವ ।

ಪುನಃ । ದದತಾ । ಅಘ್ನತಾ । ಜಾನತಾ । ಸಂ । ಗಮೇಮಹಿ ॥ ೧೫ ॥

॥ ಸಾಯಣಭಾಷ್ಯಂ ॥

ಪಂಥಾಂ ಪಂಥಾನಂ ಸ್ವಸ್ತಿ ಕ್ಷೇಮೇಣಾನು ಚರೇಮ ಸೂರ್ಯಾಚಂದ್ರಮಸಾವಿವ । ತೌ ಯಥಾ ನಿರಾಲಂಬೇ ಮಾರ್ಗೇ ರಾಕ್ಷಸಾದಿಭಿರನುಪದ್ರುತೌ ಸಂಚರತಸ್ತದ್ವತ್ । ಕಿಂಚ ವಯಂ ಪ್ರವಸಂತಃ ಪುನರ್ದದತಾಭಿಮತಮಘ್ನತಾ ಚಿರಕಾಲವಿಲಂಬಕೋಪೇನಾಹಿಂಸತಾ ಜಾನತಾವಿಸ್ಮರತಾ ಮದೀಯಶ್ಚಿರಕಾಲಂ ಗತಃ ಕೋಽಯಮಿತಿ ಸಂದೇಹಮಕುರ್ವತಾ। ಮದೀಯೋಽಯಮಿತಿ ಬುಧ್ಯಮಾನೇನೇತ್ಯರ್ಥಃ। ಉಕ್ತಲಕ್ಷಣೇನ ಬಂಧುಜನೇನ ಸಂ ಗಮೇಮಹಿ । ಯದ್ವಾ । ಪೂರ್ವಾರ್ಧಂ ಪ್ರವಸತಾಂ ವಾಕ್ಯಮುತ್ತರಾರ್ಧಂ ಬಂಧೂನಾಂ । ವಯಂ ಬಂಧವೋ ದದತಾಭಿಮತಮುಪಾರ್ಜಿತಂ ಯಚ್ಛತಾಘ್ನತಾ ಪ್ರಯಾಮಕೋಪೇನಾಹಿಂಸತಾ ಜಾನತಾ ಸಸ್ನೇಹಮಧಿಗಚ್ಛತಾ ಪ್ರವಸತಾ ಸಂ ಗಮೇಮಹಿ ॥

॥ ಪ್ರತಿಪದಾರ್ಥ ॥

**ಸೂರ್ಯಾಚಂದ್ರಮಸೌ ಇವ**—ಚಂದ್ರಸೂರ್ಯರು ತಮ್ಮ ಮಾರ್ಗಗಳನ್ನು ಶಾಶ್ವತವಾಗಿ ಅನುಸರಿಸುವಂತೆ । (**ವಯಂ**—ನಾವೂ ಸಹ) । **ಪಂಥಾಂ**—ನಮ್ಮ ಯಜ್ಞನಿರ್ವಹಣಮಾರ್ಗವನ್ನು । **ಸ್ವಸ್ತಿ**—ವಿಘ್ನವಿಲ್ಲದೇ । **ಅನು ಚರೇಮ**—ಅನುಸರಿಸುವಂತಾಗಲಿ । **ಪುನರ್ದದತಾ**—ನಮ್ಮ ಉಪಕಾರಕ್ಕೆ ಪ್ರತ್ಯುಪಕಾರಮಾಡುವವರೂ । **ಅಘ್ನತಾ**—ಅಹಿಂಸಕರೂ । **ಜಾನತಾ**—ನಮ್ಮ ಬಂಧುತ್ವವನ್ನು ಚೆನ್ನಾಗಿ ಅರಿಯುವವರೂ ಆದ ಬಂಧುಗಳೊಂದಿಗೆ। **ಸಂ ಗಮೇಮಹಿ**—ನಾವು ಸೇರಿಕೊಳ್ಳುವಂತಾಗಲಿ.

॥ ಭಾವಾರ್ಥ ॥

ಚಂದ್ರಸೂರ್ಯರು ತಮ್ಮ ಮಾರ್ಗಗಳನ್ನು ಶಾಶ್ವತವಾಗಿ ಅನುಸರಿಸುವಂತೆ ನಾವೂ ಸಹ ನಮ್ಮ ಯಜ್ಞನಿರ್ವಹಣ ಮಾರ್ಗವನ್ನು ವಿಘ್ನವಿಲ್ಲದೇ ಅನುಸರಿಸುವಂತಾಗಲಿ. ನಮ್ಮ ಉಪಕಾರಕ್ಕೆ ಪ್ರತ್ಯುಪಕಾರ ಮಾಡುವವರೂ, ನಮ್ಮ ಬಂಧುತ್ವವನ್ನು ಚೆನ್ನಾಗಿ ಅರಿಯುವವರೂ ಆದ ಬಂಧುಗಳೊಂದಿಗೆ ನಾವು ಸೇರಿಕೊಳ್ಳುವಂತಾಗಲಿ.

## English Translation

May we ever follow prosperously our path, like the sun and the moon: may we be associated with a requiting, grateful, and recognisant (kinsman).

॥ ವಿಶೇಷವಿಷಯಗಳು ॥

**ಪಥಾಂ ಸ್ವಸ್ತಿ ಅನುಚರೇಮ**— ಈ ವಾಕ್ಯಕ್ಕೆ ಮೇಲೆ ಹೇಳಿರುವ ಅರ್ಥವಲ್ಲದೆ, ಪ್ರಯಾಣಕಾಲದಲ್ಲಿ ಮಾರ್ಗಮಧ್ಯದಲ್ಲಿ ನಾವು ಸಂಧಿಸಬಹುದಾದ ಪ್ರಯಾಣಿಕರ ಜತೆಯಲ್ಲಿ ನಾವು ವಿಘ್ನವಿಲ್ಲದೆ ಕ್ಷೇಮದಿಂದ ಸಂಚರಿಸುವಂತಾಗಲಿ ಎಂಬ ಅರ್ಥವನ್ನೂ ಹೇಳಬಹುದೆಂದು ಭಾಷ್ಯಕಾರರು ಹೇಳಿದಾರೆ

## ಐವತ್ತೆರಡನೆಯ ಸೂಕ್ತವು.

### ಪೀಠಿಕೆ.

ಈ ಮಂಡಲದ ೫೨-೬೧ ವರೆಗಿನ ೧೦ ಸೂಕ್ತಗಳಿಗೆ ಶ್ಯಾವಾಶ್ವನೆಂಬುವನು ಋಷಿಯು ಈ ಹತ್ತು ಸೂಕ್ತಗಳಿಗೂ ಮರುತ್ತುಗಳೇ ದೇವತೆಯು. ಮೊದಲು ಶ್ಯಾವಾಶ್ವಋಷಿಯ ಪರಿಚಯವನ್ನು ಹೇಳಿ ಅನಂತರ ಮರುದ್ದೇವತೆಗಳ ವಿಷಯವನ್ನು ವಿವರಿಸಲಾಗುವುದು. ಶ್ಯಾವಾಶ್ವಋಷಿಯ ವಿಷಯದಲ್ಲಿ ಸಾಯಣರು ೬೧ನೆಯ ಸೂಕ್ತದ ಭಾಷ್ಯದಲ್ಲಿ ಕೆಲವು ವಿವರಣೆಗಳನ್ನು ಕೊಟ್ಟಿದಾರೆ. ಅವುಗಳನ್ನು ಮುಂದೆ ಆ ಸೂಕ್ತವನ್ನು ವಿವರಿಸುವಾಗ ತಿಳಿಸಲಾಗುವುದು ಈಗ ಶ್ಯಾವಾಶ್ವಋಷಿಯವಿಷಯದಲ್ಲಿ ಬೃಹದ್ದೇವತೆಯೆಂಬ ಗ್ರಂಥದಲ್ಲಿ ಹೇಳಿರುವುದನ್ನು ವಿವರಿಸುತ್ತೇವೆ—

**ರಾಜರ್ಷಿರಭವದ್ದಾರ್ಭ್ಯೋ ರಥವೀತಿರಿತಿ ಶ್ರುತಃ |**
**ಸ ಯಕ್ಷ್ಯಮಾಣೋ ರಾಜಾತ್ರಿಮಭಿಗಮ್ಯ ಪ್ರಸಾದ್ಯ ಚ ||**
**ಆತ್ಮಾನಂ ಕಾರ್ಯಮರ್ಥಂ ಚ ಖ್ಯಾಪಯನ್ಪ್ರಾಂಜಲಿಃ ಸ್ಥಿತಃ |**
**ಅವೃಣೀತರ್ಷಿಮಾತ್ರೇಯಮಾರ್ತ್ವಿಜ್ಯಾಯಾರ್ಚನಾನಸಂ ||**
**ಸ ಸಪುತ್ರೋಽಭ್ಯಗಚ್ಛತ್ತಂ ರಾಜಾನಂ ಯಜ್ಞಸಿದ್ಧಯೇ |**
**ಶ್ಯಾವಾಶ್ವಸ್ಯಾತ್ರಿಪುತ್ರಸ್ಯ ಪುತ್ರಃ ಖಲ್ವರ್ಚನಾನಸಃ ||**
**ಸಾಂಗೋಪಾಂಗಾನ್ಸರ್ವವೇದಾನ್ ಯಃ ಪಿತ್ರಾಧ್ಯಾಪಿತೋ ಮುದಾ |**
**ಅರ್ಚನಾನಾಃ ಸಪುತ್ರೋಽಥ ಗತ್ವಾ ನೃಪಮಯಾಜಯತ್ ||**
**ಯಜ್ಞೇ ಚ ವಿತತೇಽಪಶ್ಯದ್ರಾಜಪುತ್ರೀಂ ಯಶಸ್ವಿನೀಂ |**
**ಸ್ನುಷಾ ಮೇ ರಾಜಪುತ್ರೀ ಸ್ಯಾದಿತಿ ತಸ್ಯ ಮನೋಽಭವತ್ ||**

ಶ್ಯಾವಾಶ್ವಸ್ಯ ಚ ತಸ್ಯಾಂ ವೈ ಸಕ್ತಮಾಸೀತ್ತದಾ ಮನಃ ।
ಸಂಯುಜ್ಯಸ್ವ ಮಯಾ ರಾಜನ್ನಿತಿ ಯಾಜ್ಯಂ ಚ ಸೋಽಬ್ರವೀತ್ ॥

ಶ್ಯಾವಾಶ್ವಾಯ ಸುತಾಂ ದಿತ್ಸುರ್ಮಹಿಷೀಂ ಸ್ವಾಂ ನೃಪೋಽಬ್ರವೀತ್ ।
ಕಿಂ ತೇ ಮತಮಹಂ ಕನ್ಯಾಂ ಶ್ಯಾವಾಶ್ವಾಯ ದದಾಮಿ ಹಿ ॥

ಅತ್ರಿಪುತ್ರೋಽದುರ್ಬಲೋ ಹಿ ಜಾಮಾತಾ ತ್ವಾವಯೋರಿತಿ ।
ರಾಜಾನಮಬ್ರವೀತ್ಸಾಪಿ ನೃಪರ್ಷಿಕುಲಜಾ ಹ್ಯಹಂ ॥

ನಾನೃಷಿರ್ನೌ ತು ಜಾಮಾತಾ ನೈಷ ಮಂತ್ರಾನ್ ಹಿ ದೃಷ್ಟವಾನ್ ।
ಋಷಯೇ ದೀಯತಾಂ ಕನ್ಯಾ ವೇದಸ್ಯಾಂಬಾ ಭವೇತ್ತಥಾ ॥

ಋಷಿರ್ಮಂತ್ರದೃಶಂ ವೇದಪಿತರಂ ಮನ್ಯತೇ ಯತಃ ।
ಪ್ರತ್ಯಾಚಷ್ಟೇ ಸ ತಂ ರಾಜಾ ಸಹ ಸಂಮಂತ್ರ್ಯ ಭಾರ್ಯಯಾ ॥

ಅನೃಷಿರ್ನೈವ ಜಾಮಾತಾ ಕಶ್ಚಿದ್ಭವಿತುಮರ್ಹತಿ ।
ಪ್ರತ್ಯಾಖ್ಯಾತ ಋಷಿಸ್ತೇನ ವೃತ್ತೇ ಯಜ್ಞೇ ನ್ಯವರ್ತತ ॥

ಶ್ಯಾವಾಶ್ವಸ್ಯ ತು ಕನ್ಯಾಯಾ ಮನೋ ನೈವ ನ್ಯವರ್ತತ ।
ತತಸ್ತೌ ತು ನಿವರ್ತೇತಾಮುಭಾವೇವಾಭಿಜಗ್ಮತುಃ ॥

ಶಶೀಯಸೀಂ ತರಂತಂ ಚ ಪುರುಮೀಳ್ಹಂ ಚ ಪಾರ್ಥಿವಂ ।
ತರಂತಪುರುಮೀಳ್ಹೌ ತು ರಾಜಾನೌ ವೈದದಶ್ವ್ಯೃಷೀ ॥

ತಾಭ್ಯಾಂ ತೌ ಚಕ್ರತುಃ ಪೂಜಾಂ ಋಷಿಭ್ಯಾಂ ನೃಪತೀ ಸ್ವಯಂ ।
ಋಷಿಪುತ್ರಂ ಮಹಿಷ್ಯಾಶ್ಚ ದರ್ಶಯಾಮಾಸ ತಂ ನೃಪಃ ॥

ಅಜಾವಿಕಂ ಗವಾಶ್ವಂ ಚ ಶ್ಯಾವಾಶ್ವಾಯ ಶಶೀಯಸೀ ।
ಅತ್ರಿಂ ಯಾಜ್ಯಾರ್ಚಿತೌ ಗತ್ವಾ ಪಿತಾಪುತ್ರೌ ಸ್ವಮಾಶ್ರಮಂ ॥

ಅಭ್ಯವಾದಯತಾಮತ್ರಿಂ ಮಹರ್ಷಿಂ ದೀಪ್ತತೇಜಸಂ ।
ಶ್ಯಾವಾಶ್ವಸ್ಯ ವನಸ್ಯಾಸೀನ್ಮಂತ್ರಸ್ಯಾದರ್ಶನಾದಹಂ ॥

ನ ಲಬ್ಧವಾನಹಂ ಕನ್ಯಾಂ ಹಂತ ಸರ್ವಾಂಗಶೋಭನಾಂ ।
ಅಪ್ಯಹಂ ಮಂತ್ರದರ್ಶೀ ಸ್ಯಾಂ ಭವೇದ್ಧರ್ಷೋ ಮಹಾನ್ಮಮ ॥

ಇತ್ಯರಣ್ಯೇ ಚಿಂತಯತಃ ಪ್ರಾದುರಾಸೀನ್ಮರುದ್ಗಣಃ ।
ದದರ್ಶ ಸಂಸ್ಥಿನ್ಪಾರ್ಶ್ವೇ ತುಲ್ಯರೂಪಾನಿವಾತ್ಮನಃ ॥

ಸಮಾನವಯಸಶ್ಚೈವ ಮರುತೋ ರುಕ್ಮವಕ್ಷಸಃ ।
ತಾಂಸ್ತುಲ್ಯವಯಸೋ ದೃಷ್ಟ್ವಾ ದೇವಾನ್ಪುರುಷವಿಗ್ರಹಾನ್ ॥

ಶ್ಯಾವಾಶ್ವೋ ವಿಸ್ಮಿತೋಽಪೃಚ್ಛತ್ಕೇ ಷ್ಠೇತಿ ಮರುತಸ್ತದಾ ।
ತತಸ್ತು ಮರುತೋ ದೇವಾನ್ ರುದ್ರಸೂನೂನಬುಧ್ಯತ ॥
ಯ ಈಂ ವಹಂತ ಇತ್ಯಾಭಿರ್ಬುದ್ಧ್ವಾ ತುಷ್ಟಾವ ತಾಂಸ್ತಥಾ ।
ಅತಿಕ್ರಮಂ ಹಿ ತಂ ಮೇನೇ ಋಷಿರ್ವಿಪುಲಮಾತ್ಮನಃ ॥
.... .... .... ....
ರಥವೀತೇರ್ದುಹಿತರಮಗಚ್ಛನ್ಮನಸಾ ತದಾ ।
ಸ ಸದ್ಯ ಋಷಿರಾತ್ಮಾನಂ ಪ್ರವಕ್ಷ್ಯನ್ ರಥವೀತಯೇ ॥
. ....
ಆದಾಯ ಕನ್ಯಾಂ ತಾಂ ದಾರ್ಭ್ಯ ಉಪೇಯಾಯಾರ್ಚನಾನಸಂ ।
ಪಾದೌ ತಸ್ಯೋಪಸಂಗೃಹ್ಯ ಸ್ಥಿತ್ವಾ ಪ್ರಹ್ವಃ ಕೃತಾಂಜಲಿ. ॥
ರಥವೀತಿರಹಂ ದಾರ್ಭ್ಯ ಇತಿ ನಾಮ ಶಶಂಸ ಚ ।
ಮಯಾ ಸಂಗತಿಮಿಚ್ಛಂತಂ ತ್ವಾಂ ಪ್ರತ್ಯಾಚಕ್ಷಿ ಯತ್ಪುರಾ ॥
ತತ್ಕ್ಷಮಸ್ವ ನಮಸ್ತೇಽಸ್ತು ಮಾ ಚ ಮೇ ಭಗವನ್ಕ್ರುಧಃ ।
ಋಷೇಃ ಪುತ್ರಃ ಸ್ವಯಮೃಷಿಃ ಪಿತಾಸಿ ಭಗವನ್ನೃಷೇಃ ॥
ಹಂತ ಪ್ರತಿಗೃಹಾಣೇಮಾಂ ಸ್ನುಷಾಮಿತ್ಯೇವಮಬ್ರವೀತ್ ।
ಪಾದ್ಯಾರ್ಘ್ಯಮಧುಪರ್ಕೈಶ್ಚ ಪೂಜಯಿತ್ವಾ ಸ್ವಯಂ ನೃಪಃ ॥
ಶುಕ್ಲಮಶ್ವಶತಂ ದತ್ವಾ ಅನುಜಜ್ಞೇ ಗೃಹಾನ್ಪ್ರತಿ ।
ಶಶೀಯಸೀಂ ತರಂತಂ ಚ ಪುರುಮೀಳ್ಹಂ ಚ ಪಾರ್ಥಿವಂ ॥
ಷಡ್ಭಿಃ ಸನದಿತಿ ಸ್ತುತ್ವಾ ಜಗಾಮರ್ಷಿರಪಿ ಕ್ಷಯಂ ।

(ಬೃ. ದೆ. ೫ ೫೦ ಎಂದ ೮೦)

ರಥವೀತಿದಾರ್ಭ್ಯನೆಂಬ ರಾಜರ್ಷಿಯು ಯಾಗಮಾಡಲುದ್ದೇಶಿಸಿ ಅತ್ರಿಋಷಿಯಲ್ಲಿಗೆ ಹೋಗಿ ಆತನನ್ನು ಪೂಜಿಸಿ ಅವನ ಪುತ್ರನಾದ **ಅರ್ಚನಾನಸ**ನನ್ನು ತನ್ನ ಯಜ್ಞಕ್ಕೆ ಪೌರೋಹಿತ್ಯವನ್ನು ಸ್ವೀಕರಿಸಿ ತನಗೆ ಯಜ್ಞಮಾಡುವುದಕ್ಕೆ ಸಹಾಯ ಮಾಡಬೇಕೆಂದು ಪ್ರಾರ್ಥಿಸಿದನು. ಅವನು ಅದಕ್ಕೆ ಒಪ್ಪಿಕೊಂಡು ತನ್ನ ಪುತ್ರನಾದ ಶ್ಯಾವಾಶ್ವನೊಡನೆ ರಾಜನ ಗೃಹಕ್ಕೆ ಯಜ್ಞಕಾರ್ಯಕ್ಕಾಗಿ ಹೋದನು ಮತ್ತು ಯಜ್ಞವನ್ನು ನೆರವೇರಿಸಿದನು ಯಾಗಮಾಡತಕ್ಕ ಕಾಲದಲ್ಲಿ ಅರ್ಚನಾನಸನು ದೊರೆಯ ಮಗಳನ್ನು ನೋಡಿ ಆಕರ್ಷಿತನಾಗಿ ಅವಳನ್ನು ಶ್ಯಾವಾಶ್ವನಿಗೆ ಮದುವೆಮಾಡಿಕೊಳ್ಳಬೇಕೆಂದು ಆಸೆಪಟ್ಟನು. ಶ್ಯಾವಾಶ್ವನೂ ಸಹ ಅವಳಲ್ಲಿ ಮೋಹಗೊಂಡನು. ಆಗ ತಂದೆಮಕ್ಕಳಿಬ್ಬರೂ ರಾಜನಿಗೆ ತಮ್ಮ ಆಸೆಯನ್ನು ತಿಳಿಸಲು ಅವನೂ ಸಹ ಆ ಸಂಬಂಧಕ್ಕೆ ಒಪ್ಪಿ ತನ್ನ ಪತ್ನಿಯನ್ನು ಕೇಳಿ ಅನಂತರ ಉತ್ತರವನ್ನು ಕೊಡುವೆನೆಂದು ಹೇಳಲು ಅವನ ಪತ್ನಿಯು ಅದಕ್ಕೊಪ್ಪಲಿಲ್ಲ. ಶ್ಯಾವಾಶ್ವನು ಋಷಿಯಲ್ಲವೆಂದೂ, ಋಷಿಸಂತತಿಯಲ್ಲಿ ಹುಟ್ಟಿದ ತಮ್ಮ ಪುತ್ರಿಯನ್ನು ಅನೃಷಿಗೆ ಕೊಡಲು ಸಮ್ಮತಿಯಿಲ್ಲವೆಂದೂ ಅವಳು ತಿಳಿಸಿಬಿಟ್ಟಳು ಅದೇ ರೀತಿಯಲ್ಲಿ ದೊರೆಯೂ ಸಹ ತಂದೆಮಕ್ಕಳಿಬ್ಬರಿಗೂ ಉತ್ತರವನ್ನು ಕೊಟ್ಟನಂತರ ಅವರು ತಮ್ಮ ಊರಿಗೆ ಹಿಂತಿರುಗಿದರು. ಆದರೆ ಶ್ಯಾವಾಶ್ವನು ಮಾತ್ರ ರಾಜಕನ್ಯೆಯಲ್ಲಿಯೇ ನೆಟ್ಟಮನಸ್ಸುಳ್ಳವನಾದನು. ಹಿಂತಿರುಗುವಾಗ ದಾರಿಯಲ್ಲಿ **ಶಶೀಯಸನನ್ನೂ, ತರಂತ**

ನನ್ನೂ, ಮತ್ತು ರಾಜನಾದ **ಪುರುಮೀಳ್ಹನನ್ನೂ** ಸಂಧಿಸಿದರು. **ತರಂತ** ಮತ್ತು **ಪುರುಮೀಳ್ಹ** ಇವರಿಬ್ಬರೂ ಸಹ **ವಿದದಶ್ವ**ನೆಂಬ ರಾಜನ ಪುತ್ರರೂ ಸ್ವಯಂಋಷಿಗಳೂ ಆಗಿದ್ದರು. ಇವರಿಬ್ಬರೂ ಸಹ ಆಗಂತುಕರಾದ ತಂದೆಮಕ್ಕಳಿಬ್ಬರಿಗೂ ನಮಸ್ಕರಿಸಿ ಅವರನ್ನು ಸತ್ಕರಿಸಿ ಪೂಜಿಸಿದರು. ಆಗ ಅಂತಃಪುರದ ಸ್ತ್ರೀಯರೂ ಸಹ ಇವರನ್ನು ಗವಾಶ್ವಾದಿ ದಾನಗಳಿಂದ ಸತ್ಕರಿಸಿದರು. **ಶ್ಯಾವಾಶ್ವನು** ಮಾತ್ರ ತನಗೆ ಸುಂದರಸ್ತ್ರೀಯು ಲಭಿಸಲಿಲ್ಲವಲ್ಲ ಎಂದು ಕೊರಗುತ್ತಾ ಕಾಡಿನಲ್ಲಿ ಸಂಚರಿಸುತ್ತಿದ್ದಾಗ ಮರುತ್ತುಗಳ ಸಂಘವನ್ನು ಸಂಧಿಸಿದನು ಆಗ ಅವರು ರುದ್ರಪುತ್ರರೂ, ದೈವಾಂಶರೂ ಆದ ಮರುತ್ತುಗಳೆಂದು ತಿಳಿದು ಅವರನ್ನುಸ್ತುತಿಸಿದನು **ಕೇ ಷ್ಠಾ ನರಃ** (ಋ. ಸಂ.೫-೬೧)ಎಂಬ ಸೂಕ್ತದ ದ್ರಷ್ಟೃವಾದನು ಇದನ್ನು ತಿಳಿದ **ದರ್ಭನ** ಮಗನಾದ ರಥವೀತಿಯು ತನ್ನ ಪುತ್ರಿಯನ್ನುಕರೆದುಕೊಂಡು ಬಂದು ತಾನು ಹಿಂದೆ ತನ್ನ ಮಗಳನ್ನು ಕೊಡಲು ನಿರಾಕರಿಸಿದುದನ್ನು ಕ್ಷಮಿಸಬೇಕೆಂದೂ, ಈಗ ಶ್ಯಾವಾಶ್ವನು ಋಷಿಯಾದುದರಿಂದಲೂ ತನ್ನ ಮಗಳನ್ನು ಪರಿಗ್ರಹಿಸಲು ಅರ್ಹನಾದುದರಿಂದಲೂ ಅವಳನ್ನು ಸ್ವೀಕರಿಸಬೇಕೆಂದೂ ಪ್ರಾರ್ಥಿಸಿದನು. ಶ್ಯಾವಾಶ್ವನೂ ಅವನ ತಂದೆಯೂ ಇದಕ್ಕೆ ಒಪ್ಪಲು ಆಗ ಅರ್ಘ್ಯಪಾದ್ಯಾದಿಗಳ ಪೂರ್ವಕವಾಗಿ ಕನ್ಯಾದಾನವನ್ನು ಮಾಡಿದನು. ಆಗ ಶ್ಯಾವಾಶ್ವನು **ಪುರುಮೀಳ್ಹಾದಿಗಳು** ತನಗೆ ಮಾಡಿದ ಸಹಾಯಕ್ಕಾಗಿ ಅವರನ್ನು ವಂದಿಸಿ ಅವರನ್ನು ಸ್ತುತಿಸತಕ್ಕ ಆರು ಋಕ್ಕುಗಳನ್ನು ರಚಿಸಿದನು. ಅವುಗಳಲ್ಲಿ,

> **ಉತ ಮೇಽರಪದ್ಯುವತಿರ್ಮಮಂದುಷೀ ಪ್ರತಿ ಶ್ಯಾವಾಯ ವರ್ತನಿಂ ।**
> **ವಿ ರೋಹಿತಾ ಪುರುಮಿಳ್ಹಾಯ ಯೇಮತುರ್ವಿಪ್ರಾಯ ದೀರ್ಘಯಶಸೇ ॥**

(ಋ ಸಂ. ೫-೬೧-೯)

ಎಂಬ ಋಕ್ಕು **ಪುರುಮಿಳ್ಹ**ನನ್ನು ಸ್ತುತಿಸತಕ್ಕದ್ದು

> **ಯುವಾಂ ಗೋತಮಃ ಪುರುಮಿಳ್ಹೋ ಅತ್ರಿರ್ದಸ್ರಾ ಹವತೇಽವಸೇ ಹವಿಷ್ಮಾನ್ ।**
> **ದಿಶಂ ನ ದಿಷ್ಟಾಮೃಜೂಯೇವ ಯಂತಾ ಮೇ ಹವಂ ನಾಸತ್ಯೋಪ ಯಾತಂ ॥**

(ಋ ಸಂ ೧-೧೮೩-೫)

ಎಂಬ ಋಕ್ಕಿನಲ್ಲಿ **ಪುರುಮಿಳ್ಹನು** ಅಶ್ವಿನೀದೇವತೆಗಳನ್ನು ಸ್ತುತಿಸಿ ಅವರ ರಕ್ಷಣೆಯನ್ನು ಪಡೆದನೆಂದು ತಿಳಿಸಿದೆ.

## ಮರುದ್ದೇವತೆಗಳ ಪರಿಚಯ

ಋಗ್ವೇದದಲ್ಲಿ ಮರುದ್ದೇವಗಳನ್ನು ರುದ್ರಪುತ್ರರೆಂದು ಕರೆಯುವ ರೂಢಿ ಇದೆ. ಇವರು ರುದ್ರಪುತ್ರರು ಹೇಗಾದರು ಎಂಬ ವಿಷಯದಲ್ಲಿ ಸಾಯಣರು ಈರೀತಿ ವಿವರಿಸಿದಾರೆ—

> **ರುದ್ರೋ ಯದ್ವೋ ಮರುತೋ ರುಕ್ಮವಕ್ಷಸೋ ವೃಷಾಜನಿ ಪೃಶ್ನ್ಯಾಃ ಶುಕ್ರ ಊಧನಿ ।**

(ಋ ಸಂ. ೨-೩೪-೨)

ಎಂಬ ಋಕ್ಕಿನಲ್ಲಿ ಹೇಳುವಂತೆ ಮರುತ್ತುಗಳು ರುದ್ರಪುತ್ರರಾಗಿ ಪೃಶ್ನಿಯಲ್ಲಿ ಹುಟ್ಟಿದರೆಂದು ಪ್ರಸಿದ್ಧವಾದ ಕಥೆಯಿರುವುದರಿಂದ ಇವರನ್ನು ಸಂಬೋಧಿಸುವಾಗಲೆಲ್ಲಾ ಈ ವಿಶೇಷಣವನ್ನೇ ಹೆಚ್ಚಾಗಿ ಉಪಯೋಗಿಸಿದೆ. ಈ ಋಕ್ಕನ್ನು ವಿವರಿಸುವಾಗ ಸಾಯಣಾಚಾರ್ಯರು ಇನ್ನೊಂದು ಕಥೆಯನ್ನೂ ಹೇಳುತ್ತಾರೆ.

**ಪೃಶ್ನಿರ್ನಾನಾವರ್ಣಾ ಇಯಂ ಭೂಮಿಃ ಪುರಾ ಗೋರೂಪಧರಾಸೀತ್ । ತಸ್ಯಾಂ ಮಹೇಶೋ ವೃಷೋ ಭೂತ್ವಾ ಮರುತ ಉತ್ಪಾದಯಾಮಾಸೇತ್ಯಾಚಕ್ಷತೇ ।**

(ಸಾಯಣಭಾಷ್ಯ ಋ. ಸಂ. ೨-೩೪-೨)

ನಾನಾವರ್ಣವುಳ್ಳ ಪೃಥ್ವಿಯು ಹಿಂದೆ ಗೋರೂಪವನ್ನು ಧರಿಸಿದ್ದಾಗ ಮಹೇಶನು ವೃಷಭರೂಪದಿಂದ ಮರುತ್ತುಗಳನ್ನು ಉತ್ಪನ್ನಮಾಡಿದನು ಎಂಬ ಕಥೆಯಿದೆ ಎಂದು ಸಾಯಣರು ರುದ್ರನ ಮತ್ತು ಮರುತ್ತುಗಳ ಪಿತಾಪುತ್ರ ಸಂಬಂಧವನ್ನು ತಿಳಿಸಿದ್ದಾರೆ. ಮತ್ತು ಮೇಲಿನ ೨-೩೪-೨ ನೇ ಋಕ್ಕಿನಲ್ಲಿ ಹೇಳಿರುವ ಕಥೆಯು ತೈತ್ತಿರೀಯ ಸಂಹಿತೆಯಲ್ಲಿಯೂ ಉಕ್ತವಾಗಿರುವುದರಿಂದ ಅಲ್ಲಿನ ವಾಕ್ಯವನ್ನೂ ಉದಹರಿಸಿದ್ದಾರೆ.

**ಪೃಶ್ನಿಯೈ ವೈ ಪಯಸೋ ಮರುತೋ ಜಾತಾಃ ।**

(ತೈ. ಸಂ. ೨-೨-೧೧-೪)

ಆದುದರಿಂದಲೇ ಅನೇಕ ಕಡೆಗಳಲ್ಲಿ ಮರುತ್ತುಗಳಿಗೆ ರುದ್ರಪುತ್ರರೆಂದೇ ಸಂಬೋಧನೆಯಿದೆ ಉದಾಹರಣೆಗೆ—

**ಪ್ರ ಯೇ ಶುಂಭಂತೇ ಜನಯೋ ನ ಸಪ್ತಯೋ ಯಾಮನ್ರುದ್ರಸ್ಯ ಸೂನವಃ ಸುದಂಸಸಃ ।**

(ಋ ಸಂ ೧-೮೫-೧)

**ಇದಂ ಪಿತ್ರೇ ಮರುತಾಮುಚ್ಯತೇ ವಚಃ ಸ್ವಾದೋಃ ಸ್ವಾದೀಯೋ ರುದ್ರಾಯ ವರ್ಧನಂ ।**
**ರಾಸ್ವಾ ಚ ನೋ ಅಮೃತ ಮರ್ತಭೋಜನಂ ತ್ಮನೇ ತೋಕಾಯ ತನಯಾಯ ಮೃಳ ।**

(ಋ. ಸಂ. ೧-೧೧೪-೬)

ಎಂಬ ಋಕ್ಕುಗಳಲ್ಲಿಯೂ ಹೀಗೆಯೇ, ೧-೧೬೮-೯, ೨-೩೩-೧, ಮುಂತಾದ ಅನೇಕಕಡೆಗಳಲ್ಲಿಯೂ ಮರುತ್ತುಗಳಿಗೆ ರುದ್ರಪುತ್ರರೆಂಬ ವಿಶೇಷಣವಿದೆ. ಮೇಲೆ ಉದಹರಿಸಿರುವ ೧-೧೧೪-೬ ನೇ ಋಕ್ಕನ್ನು ವಿವರಿಸುವಾಗ ಸಾಯಣರು ಇನ್ನೊಂದು ಕಥೆಯನ್ನು ಹೇಳಿದ್ದಾರೆ.

**ರುದ್ರಸ್ಯ ಚ ಮರುತಾಂ ಪಿತೃತ್ವಮೇವಮಾಖ್ಯಾಯತೇ । ಪುರಾ ಕದಾಚಿದಿಂದ್ರೋಽಸುರಾನ್ ಜಿಗಾಯ । ತದಾನೀಂ ದಿತಿರಸುರಮಾತಾ ಇಂದ್ರಹನನಸಮರ್ಥಂ ಪುತ್ರಂ ಕಾಮಯಮಾನಾ ತಪಸಾ ಭರ್ತುಃ ಸಕಾಶಾದ್ಗರ್ಭಂ ಲೇಭೇ। ಇಮಂ ವೃತ್ತಾಂತಮವಗಚ್ಛನ್ನಿಂದ್ರೋ ವಜ್ರಹಸ್ತಃ ಸನ್ ಸೂಕ್ಷ್ಮರೂಪೋ ಭೂತ್ವಾ ತಸ್ಯಾ ಉದರಂ ಪ್ರವಿಶ್ಯ ತಂ ಗರ್ಭಂ ಸಪ್ತಧಾ ಬಿಭೇದ । ಪುನರಪ್ಯೇಕೈಕಂ ಸಪ್ತಖಂಡಮಕರೋತ್ । ತೇ ಸರ್ವೇ ಗರ್ಭೈಕದೇಶಾ ಯೋನೇರ್ನಿರ್ಗತ್ಯ ಅರುದನ್ । ಏತಸ್ಮಿನ್ನವಸರೇ ಲೀಲಾರ್ಥಂ ಗಚ್ಛಂತೌ ಪಾರ್ವತೀಪರಮೇಶ್ವರೌ ಇಮಾನ್ ದದೃಶತುಃ । ಮಹೇಶಂ ಪ್ರತಿ ಪಾರ್ವತೀ ಏವಮುವಾಚ । ಇಮೇ ಮಾಂಸಖಂಡಾ ಯಥಾ ಪ್ರತ್ಯೇಕಂ ಪುತ್ರಾಃ ಸಂಪದ್ಯಂತಾಮೇವಂ ತ್ವಯಾ ಕಾರ್ಯಂ ಮಯಿ ಚೇತ್ಪ್ರೀತಿರಸ್ತೀತಿ। ಸ ಚ ಮಹೇಶ್ವರಸ್ತಾನ್ ಸಮಾನರೂಪಾನ್ ಸಮಾನವಯಸಃ ಸಮಾನಾಲಂಕಾರಾನ್ ಪುತ್ರಾನ್ ಕೃತ್ವಾ ಗೌರ್ಯೈ ಪ್ರದದೌ ತವೇಮೇ ಪುತ್ರಾಃ ಸಂತ್ವಿತಿ । ಅತಃ ಸರ್ವೇಷು ಮಾರು**

**ತೇಷು ಸೂಕ್ತೇಷು ಮರುತೋ ರುದ್ರಪುತ್ರಾ ಇತಿ ಸ್ತೂಯಂತೇ । ರೌದ್ರೇಷು ಚ ಮರುತಾಂ ಪಿತಾ ರುದ್ರ ಇತಿ ।**

(ಸಾಯಣಭಾಷ್ಯ ಋ ಸಂ ೧.೧೧೪.೬)

ಪೂರ್ವದಲ್ಲಿ ಒಂದುಸಲ ಇಂದ್ರನು ಅಸುರರನ್ನು ಜಯಿಸಿದನು ಆಗ ಅಸುರಮಾತೆಯಾದ ದಿತಿಯು ಇಂದ್ರನನ್ನು ಕೊಲ್ಲಲು ಸಮರ್ಥನಾದ ಒಬ್ಬ ಪುತ್ರನನ್ನು ಪಡೆಯಬೇಕೆಂಬ ಆಸೆಯಿಂದ ತಪಸ್ಸನ್ನಾಚರಿಸಿ ತನ್ನ ಪತಿಯ ಅನುಗ್ರಹದಿಂದ ಗರ್ಭವನ್ನು ಧರಿಸಿದಳು. ಇಂದ್ರನು ಈ ಸಮಾಚಾರವನ್ನು ತಿಳಿದು ವಜ್ರಾಯುಧವನ್ನು ಹಿಡಿದುಕೊಂಡು ಸೂಕ್ಷ್ಮರೂಪಿಯಾಗಿ ಬಂದು ಅವಳ ಉದರವನ್ನು ಪ್ರವೇಶಿಸಿ ಆ ಗರ್ಭವನ್ನು ಏಳುಭಾಗವಾಗಿ ಸೀಳಿದನು. ಪುನಃ ಏಳೇಳು ತುಂಡುಗಳನ್ನಾಗಿ ಮಾಡಿದನು. ಆಗ ಅವೆಲ್ಲವೂ ಹೊರಕ್ಕೆ ಬಂದು ಅಳುತ್ತಿದ್ದುವು. ಆಗ ಲೀಲಾರ್ಥವಾಗಿ ಪಾರ್ವತೀ ಪರಮೇಶ್ವರರಿಬ್ಬರೂ ಸಂಚರಿಸುತ್ತಿದ್ದಾಗ ಇವನ್ನು ನೋಡಿ, ಪಾರ್ವತಿಯು ಮರುಕಗೊಂಡು ಮಹೇಶ್ವರನನ್ನು ಕುರಿತು ಅವೆಲ್ಲವನ್ನೂ ಮಕ್ಕಳನ್ನಾಗಿ ಪರಿವರ್ತಿಸಬೇಕೆಂದು ಬೇಡಿದಳು. ಆಗ ಈಶ್ವರನು ಅವೆಲ್ಲವನ್ನೂ ಒಂದೇ ರೂಪವುಳ್ಳವರನ್ನಾಗಿಯೂ, ಒಂದೇ ವಯಸ್ಸಿನವರಾಗಿಯೂ, ಒಂದೇ ಅಲಂಕಾರವುಳ್ಳವರನ್ನಾಗಿಯೂ ಮಾಡಿ ಪುತ್ರರೂಪರಾದ ಅವರನ್ನು ಇವು ನಿನ್ನ ಪುತ್ರರಾಗಿರಲಿ ಎಂದು ಗೌರಿಗೆ ಕೊಟ್ಟನು. ಆದುದರಿಂದ ಮರುತ್ಸೂಕ್ತ ಗಳಲ್ಲೆಲ್ಲಾ ಮರುತ್ತುಗಳಿಗೆ ರುದ್ರಪುತ್ರರೆಂದೂ, ರುದ್ರಸೂಕ್ತಗಳಲ್ಲಿ ರುದ್ರನಿಗೆ ಮರುತ್ತುಗಳ ಪಿತೃವೆಂದೂ ಹೇಳುವ ಕ್ರಮವಿದೆಯೆಂದು ಸಾಯಣರು ಈ ಕಥೆಯನ್ನು ಹೇಳಿರುತ್ತಾರೆ.

## ಇಂದ್ರನಿಗೂ ಮರುತ್ತುಗಳಿಗೂ ಇರುವ ಸಾಹಚರ್ಯ

ಇಂದ್ರನಿಗೂ ಮರುತ್ತುಗಳಿಗೂ ಇರುವ ಶಾಶ್ವತವಾದ ಸಾಹಚರ್ಯವು ಶ್ರುತಿಪ್ರಸಿದ್ಧವಾದುದು. ಇಂದ್ರನಿಗೂ ಮರುತ್ತುಗಳಿಗೂ ಇರುವ ರಾಜಪ್ರಜಾಸಂಬಂಧವೂ, ಮರುತ್ತುಗಳೊಡಗೂಡಿದ ಇಂದ್ರನಿಗೆ ಮುಖ್ಯವಾದ ಯಜ್ಞಕ್ರಿಯೆಗಳಲ್ಲಿ ಹವಿಸ್ಸಿನ ಅರ್ಪಣೆಯೂ, ಮತ್ತು ವೃತ್ರಾಸುರನೊಡನೆ ಯುದ್ಧವನ್ನು ನಡೆಸುವಾಗ ಇಂದ್ರನಿಗೆ ಮರುತ್ತುಗಳು ಸಹಾಯಮಾಡುವುದೂ ಸಂಹಿತೆಗಳಲ್ಲಿಯೂ ಬ್ರಾಹ್ಮಣಗಳಲ್ಲಿಯೂ ಅನೇಕಕಡೆ ಸ್ತುತಿಸಲ್ಪಟ್ಟಿವೆ ಇಂದ್ರನು ಮರುತ್ತುಗಳೊಡನೆ ಸೇರಿಕೊಂಡು ಉಳಿದ ದೇವತೆಗಳಿಂದ ಪ್ರತ್ಯೇಕವಾಗಿದ್ದುದನ್ನು ಹೇಳುವ ಪೂರ್ವಕಥೆಯೊಂದನ್ನು ಶತಪಥ ಬ್ರಾಹ್ಮಣದಲ್ಲಿ ಹೇಳಿರುತ್ತೆ

**ಆತಿಥ್ಯೇನ ವೈ ದೇವಾ ಇಷ್ಟ್ವಾ । ತಾನ್ತ್ಸಮದವಿಂದತ್ತೇ ಚತುರ್ಧಾ ವ್ಯದ್ರವನ್ನನ್ಯೋಽನ್ಯಸ್ಯ ಶ್ರಿಯಾ ಅತಿಷ್ಠಮಾನಾ ಅಗ್ನಿರ್ವಸುಭಿಃ, ಸೋಮೋ ರುದ್ರೈರ್ವರುಣ ಆದಿತ್ಯೈರಿಂದ್ರೋ ಮರುದ್ಭಿರ್ಬೃಹಸ್ಪತಿರ್ವಿಶ್ವೈರ್ದೇವೈಃ ।**

(ಶ. ಬ್ರಾ. ೩-೪-೨-೧)

ಹಿಂದೆ ದೇವತೆಗಳು ಆತಿಥ್ಯಕ್ರಿಯೆಯನ್ನು ನೆರವೇರಿಸಿದಾಗ ಅವರವರಲ್ಲೇ ವೈಮನಸ್ಯವುಂಟಾಗಿ ಒಬ್ಬರಿಗೊಬ್ಬರು ಸೋಲಲಿಷ್ಟಪಡದೇ ನಾಲ್ಕು ಗುಂಪುಮಾಡಿಕೊಂಡು ಬೇರೆ ಬೇರೆಯಾದರು. ಅಗ್ನಿಯು ವಸುಗಳೊಂದಿಗೂ, ಸೋಮನು ರುದ್ರರೊಂದಿಗೂ, ವರುಣನು ಆದಿತ್ಯರೊಂದಿಗೂ, ಇಂದ್ರನು ಮರುತ್ತುಗಳೊಂದಿಗೂ ಮತ್ತು ಬೃಹಸ್ಪತಿಯು ವಿಶ್ವೇದೇವತೆಗಳೊಂದಿಗೂ ಕೂಡಿಕೊಂಡು ಪ್ರತ್ಯೇಕವಾಗಿ ಗುಂಪುಮಾಡಿಕೊಂಡರು, ಎಂಬ ಈ ಕಥೆಯಲ್ಲಿ ಇಂದ್ರನು

ಮರುತ್ತುಗಳೊಡನೆ ಸಾಹಚರ್ಯವನ್ನು ಬೆಳೆಸಿ ಅವರೊಡನೆ ಇಟ್ಟುಕೊಂಡಿರುವ ನಿಕಟವಾದ ಸಂಬಂಧವನ್ನು ಹೇಳಿರುವುದು. ಇದೂ ಅಲ್ಲದೇ,ಇಂದ್ರನೇ ದೊರೆಯೆಂದೂ ಮರುತ್ತುಗಳೇ ಪ್ರಜೆಗಳೆಂದೂ ಅನೇಕಕಡೆ ಹೇಳಿದೆ. ಉದಾಹರಣೆಗೆ—

**ಕ್ಷತ್ರಂ ವಾ ಇಂದ್ರೋ ವಿಶೋ ಮರುತೋ ವಿಶಾ ವೈ ಕ್ಷತ್ರಿಯೋ ಬಲವಾನ್ ಭವತಿ ।**

(ಶ ಬ್ರಾ. ೪.೩.೩.೬).

ಇಂದ್ರನು ಕ್ಷಾತ್ರತೇಜಸ್ಸುಳ್ಳ ರಾಜನು, ಮರುತ್ತುಗಳೇ ಪ್ರಜೆಗಳು. ಪ್ರಜೆಗಳ ಸಹಕಾರದಿಂದಲೇ ರಾಜನು ಶಕ್ತಿಯುಳ್ಳವನಾಗಿ ಆಗುತ್ತಾನೆಂದೂ ಮರುತ್ತುಗಳ ಸಹಾಯದಿಂದ ಇಂದ್ರನ ಪರಾಕ್ರಮವು ವೃದ್ಧಿಯಾಯಿತೆಂದೂ ಸೂಚಿಸಿದೆ. ಈ ರೀತಿಯಾದ ನಿಕಟವಾದ ಸಂಬಂಧವೂ, ಸಾಹಚರ್ಯವೂ ಇರುವುದರಿಂದಲೇ ಇಂದ್ರನನ್ನೂ ಮರುತ್ತುಗಳನ್ನೂ ಒಟ್ಟಿಗೆ ಉದ್ದೇಶಿಸಿ ಹವಿಸ್ಸುಗಳನ್ನು ಅರ್ಪಿಸುವ ಕ್ರಮವೂ ಶ್ರುತಿಗಳಲ್ಲಿ ಕಂಡುಬರುತ್ತದೆ.

**ಅನವದ್ಯೈರಭಿದ್ಯುಭಿರ್ಮಖಃ ಸಹಸ್ವದರ್ಚತಿ ।**
**ಗಣೈರಿಂದ್ರಸ್ಯ ಕಾಮ್ಯೈಃ ॥**

(ಋ. ಸಂ ೧.೬.೮)

**ಮಂದ್ರಾಃ ಸುಜಿಹ್ವಾಃ ಸ್ವರಿತಾರ ಆಸಭಿಃ ಸಂಮಿಶ್ಲಾ ಇಂದ್ರೇ ಮರುತಃ ಪರಿಷ್ಟುಭಃ ।**

(ಋ. ಸಂ. ೧.೧೬೬.೧೧)

**ಸ ನೋ ಮರುದ್ಭಿರ್ವೃಷಭ ಶ್ರವೋ ಧಾ ಉಗ್ರ ಉಗ್ರೇಭಿಃ ಸ್ಥವಿರಃ ಸಹೋದಾಃ ।**

(ಋ ಸಂ ೧.೧೭೧.೫).

ಎಂಬಿವೇ ಮುಂತಾದ ಋಕ್ಕುಗಳಿಂದ ಇಂದ್ರನಿಗೂ ಮರುತ್ತುಗಳಿಗೂ ಒಟ್ಟಿಗೆ ಸೇರಿಸಿ ಆಹ್ವಾನವೂ ಹವಿಸ್ಸಿನ ಅರ್ಪಣೆಯೂ ಇದೆ. ಈ ರೀತಿಯ ಸಾಹಚರ್ಯವಿರುವುದರಿಂದಲೇ ಇಲ್ಲಿಯೂ ಸಹ **ಮರುತ್ವಾನ್** ಎಂಬ ವಿಶೇಷಣವಿದೆ. ಮರುತ್ತುಗಳೊಡಗೂಡಿರುವ ಇಂದ್ರನನ್ನು ಉದ್ದೇಶಿಸಿರುವ ಸಂದರ್ಭಗಳಲ್ಲೆಲ್ಲಾ **ಮರುತ್ವಾನ್** ಎಂದು ಕರೆದಿದೆಯೆಂದು ಬೃಹದ್ದೇವತೆಯಲ್ಲಿ ಈ ದೇವತೆಗಳ ಸಂಬಂಧಸೂಚಕವಾದ ವಿಶೇಷಣವನ್ನು ವಿವರಿಸಿದೆ.

**ಮರುದ್ಭಿಃ ಸಹ ಯತ್ರೇಂದ್ರೋ ಮರುತ್ವಾಂಸ್ತತ್ರ ಸೋಽಭವತ್ ।**

(ಬೃ ದೇ ೪.೫೬)

## ಮರುದ್ದೇವತೆಗಳ ವಿಶೇಷವಿವರಣೆ.

ಪುರಾಣಾದಿಗ್ರಂಥಗಳಲ್ಲಿಯೂ, ಆಧುನಿಕಸಾಹಿತ್ಯದಲ್ಲಿಯೂ, **ಮರುತ್ ವಾಯು** ಎಂಬ ಶಬ್ದಗಳ ಅರ್ಥ ವಿಷಯದಲ್ಲಿ ವಿಶೇಷ ವ್ಯತ್ಯಾಸವು ಕಂಡುಬರುವುದಿಲ್ಲ ಈ ಶಬ್ದಗಳ ವಿಷಯದಲ್ಲಿ ಗಾಳಿ ಅಥವಾ ವಾಯುದೇವತೆ ಎಂದೇ ಅರ್ಥಮಾಡಿ ವ್ಯವಹರಿಸುವ ರೂಢಿಇದೆ. ಆದರೆ ಋಗ್ವೇದದಲ್ಲಿ ಈ ಎರಡೂ ಶಬ್ದಗಳಿಗೂ ಅರ್ಥದಲ್ಲಿಯೂ ಪ್ರಯೋಗ ಅಥವಾ ವ್ಯವಹಾರದಲ್ಲಿಯೂ ಬಹಳ ವ್ಯತ್ಯಾಸವಿದೆ. ವಾಯು ಅಥವಾ ವಾತ ಎಂದರೆ ಅಂತರಿಕ್ಷ ಅಥವಾ ಆಕಾಶದಲ್ಲಿ ವ್ಯಾಪಿಸಿರುವ ಗಾಳಿ ಅಥವಾ ವಾಯುದೇವತೆ ಗಾಳಿ ಎಂಬ ಅರ್ಥಕ್ಕಿಂತಲೂ ವಾಯುದೇವತೆ ಎಂಬ ವ್ಯವಹಾರವೇ ಹೆಚ್ಚು ಬಳಕೆಯಲ್ಲಿದೆ. ಮತ್ತು ಈ ದೇವತೆಯನ್ನು ಸ್ತುತಿಸುವಾಗಲೆಲ್ಲಾ ಏಕವಚನ ಪ್ರಯೋಗವೇ ಇರುವುದು. ಆದರೆ ಮರುದ್ದೇವತೆಗಳನ್ನು ಯಾವಾಗಲೂ ಬಹುವಚನ ಪ್ರಯೋಗದಿಂದಲೇ ವ್ಯವಹರಿಸಲಾಗಿದೆ ಇದಲ್ಲದೆ ವಾಯು

ಮತ್ತು ಮರುತ್ತುಗಳ ವೈಶಿಷ್ಟ್ಯದಲ್ಲಿಯೂ ಬಹಳ ವ್ಯತ್ಯಾಸವಿದೆ. ವಾಯುವಿನ ಗುಣವರ್ಣನೆಯು ವಿಶೇಷವಾಗಿಲ್ಲ ವಾಯುವು ಅಂತರಿಕ್ಷದಲ್ಲಿ ನೆಲೆಸಿರುವುದರಿಂದ ಮಧ್ಯಸ್ಥಾನದೇವತೆಯೆಂದು ಪ್ರಸಿದ್ಧನಾಗಿದಾನೆ. ಮರುತ್ತುಗಳು ಅನೇಕ ರಾದ್ದರಿಂದ ಇವರನ್ನು ದೇವಗಣವೆಂದು ಕರೆಯುವ ರೂಢಿ ಇದೆ ಸಾಧಾರಣವಾಗಿ ಇವರನ್ನು **ಮಾರುತಂ ಶರ್ಧಃ, ಮಾರುತಂ ಗಣಂ** ಎಂಬ ಶಬ್ದಗಳಿಂದ ಅಥವಾ ಅದೇ ಅರ್ಥವಿರುವ ಇತರ ಶಬ್ದಗಳಿಂದ ವ್ಯವಹರಿಸುವುದೇ ರೂಢಿಯು ಇವರೂ ವಾಯುವಿನಂತೆ ಮಧ್ಯಮಸ್ಥಾನ ದೇವತೆಗಳೇ ಆಗಿದ್ದಾರೆ.

ಮರುತ್ತುಗಳು ಅತಿರಭಸದಿಂದ ಬೀಸುವ ಚಂಡಮಾರುತದ ಸ್ವರೂಪವು. ಮುಂಗಾರಮಳೆ ಹುಯ್ಯು ವಾಗ ಮಳೆಬರುವುದಕ್ಕೆ ಮೊದಲು ಅಥವಾ ಮಳೆಯು ಸುರಿಯುತ್ತಿರುವಾಗ ಗಾಳಿಯು ಅತಿರಭಸವಾಗಿ ಬೀಸುವುದು ಎಲ್ಲರಿಗೂ ಅನುಭವದ ವಿಷಯವೇ ಆಗಿದೆ. ರಭಸದಿಂದ ಬೀಸುವ ಈ ಚಂಡಮಾರುತವನ್ನೇ ಮರುದ್ದೇವತೆಗಳ ಸಂಘ ವೆಂದು ಋಗ್ವೇದದಲ್ಲಿ ವರ್ಣಿಸಿದೆ. ಮಳೆಯು ಹುಯ್ಯುವುದಕ್ಕೆ ಮೊದಲು ಅಥವಾ ಹುಯ್ಯುವಾಗ ಗಾಳಿಯ ರಭಸವು ವಿಶೇಷವಾಗಿರುವುದು. ಆದ್ದರಿಂದ ಮಳೆಗೂ ಮರುತ್ತಗಳಿಗೂ ವಿಶೇಷಸಂಬಂಧವಿದೆ ಆದುದರಿಂದಲೇ ಮರುತ್ತುಗಳನ್ನು **ಉಕ್ಷಣ**:- ಜಲಸ್ಯ **ಸೇಕ್ತಾರಃ** ನೀರಿನಿಂದ ಎಲ್ಲವನ್ನೂ ತೋಯಿಸುವವರು ಎಂದು ಮೊದಲಾದ ವಿಶೇಷಣ ಗಳಿಂದ ಸ್ತುತಿಸಲಾಗಿದೆ. ಇದಲ್ಲದೆ ಗುಡುಗು, ಮಿಂಚು, ಸಿಡಿಲು ಇವುಗಳಿಂದಲೂ, ಅತಿರಭಸವಾಗಿ ಬೀಸುತ್ತಿರುವ ಗಾಳಿಯಿಂದಲೂ ಕೂಡಿರುವ ವೃಷ್ಟಿಗೆ ವೃತ್ರಹನನಾದಿರೂಪವಾದ ಇಂದ್ರನ ಸಂಬಂಧವೂ ಇರುವುದರಿಂದ ಮರುದ್ದೇವತೆ ಗಳಿಗೂ ಇಂದ್ರನಿಗೂ ಸ್ನೇಹವೂ ಸಾಹಚರ್ಯವೂ ಇರುವುದೆಂದೂ ಅನೇಕಕಡೆ ಹೇಳಿದೆ ವೃಷ್ಟಿಯನ್ನು ಸುರಿಸದೆ ತಡೆದು ನಿಲ್ಲಿಸಿದ ಮೇಘಗಳನ್ನು ಅಥವಾ ವೃತ್ರನನ್ನು ಇಂದ್ರನು ತನ್ನ ವಜ್ರಾಯುಧದಿಂದ ಪ್ರಹರಿಸಿ ಮಳೆಗರೆಯುವಂತೆ ಮಾಡುತ್ತಾನೆ. ಆ ವೃಷ್ಟಿಕರ್ಮದಲ್ಲಿ ಮೇಘಗಳನ್ನು ಚದುರಿಸಿ ಮಳೆಹುಯ್ಯುವಂತೆ ಮರುತ್ತುಗಳು ಮಾಡುವುದರಿಂದ ವೃಷ್ಟಿಕರ್ಮಕ್ಕೆ ಮರುತ್ತುಗಳು ಇಂದ್ರನಿಗೆ ಸಹಾಯಮಾಡಿದಂತಾಗುತ್ತದೆ. ಈ ಕಾರಣದಿಂದಲೇ ಇಂದ್ರನಿಗೂ ಮರುತ್ತುಗಳಿಗೂ ವಿಶೇಷ ರೀತಿಯ ಸಖ್ಯವಿದೆ. ಇಂದ್ರನಿಗೆ **ಮರುತ್ವಾನ್** ಎಂಬ ವಿಶೇಷಣವು ಸಹ ಈ ಕಾರಣದಿಂದಲೇ ಉಂಟಾಗಿದೆ.

## ಮರುತಃ ಎಂಬ ಶಬ್ದದ ನಿರ್ವಚನ

**ಅಥಾತೋ ಮಧ್ಯಸ್ಥಾನಾ ದೇವಗಣಾಃ । ತೇಷಾಂ ಮರುತಃ ಪ್ರಥಮಾಗಾಮಿನೋ ಭವಂತಿ।**
**ಮರುತಃ । ಮರುತೋ ಮಿತರಾವಿಣೋ ವಾ ಮಿತರೋಚಿನೋ ವಾ ಮಹದ್ದ್ರವಂತೀತಿ ವಾ ॥**

(ನಿ ೧೧-೧೪)

ಎಂದು ಯಾಸ್ಕರು ಮರುತ ಶಬ್ದದ ನಿರ್ವಚನವನ್ನು ಹೇಳಿದ್ದಾರೆ—ಈಗ ಮಧ್ಯಸ್ಥಾನವಾದ ಅಂತರಿಕ್ಷಸ್ಥ ದೇವಗಣಗಳ ವಿಷಯವನ್ನು ಹೇಳುತ್ತೇವೆ. ಈ ಗಣಗಳಲ್ಲಿ ಮರುತ್ತುಗಳಿಗೇ ಪ್ರಥಮಸ್ಥಾನವು. **ಮರುತ್** ಎಂಬ ಶಬ್ದವು ಮಿ+ರು ಎಂಬ ಎರಡು ಧಾತುಗಳಿಂದ ನಿಷ್ಪನ್ನವಾಗಿದೆ. ಕ್ಲಪ್ತವಾದ ಎಂದರೆ ಅಳತೆಗೆ ಸರಿಯಾದ, ಒಂದೇವಿಧವಾದ ಅಥವಾ ಒಂದೇ ಸಮನಾದ ಶಬ್ದಮಾಡುವವರಾದ್ದರಿಂದ ಈ ದೇವತೆಗಳಿಗೆ ಮರುತ್ತುಗಳೆಂದು ಹೆಸರು. ಅಥವಾ ಮಿ+ರುಚ್ ಎಂಬ ಧಾತುಗಳಿಂದ ಮರುತ್ ಶಬ್ದವು ನಿಷ್ಪನ್ನವಾದರೆ ಒಂದೇ ಸಮನಾದ ಪ್ರಕಾಶವುಳ್ಳವರು ಎಂದೂ ಮಹತ್+ದ್ರು ಎಂಬ ಧಾತುವಿನಿಂದ ನಿಷ್ಪನ್ನವಾದರೆ ಬಹಳವಾಗಿ (ರಭಸವಾಗಿ) ಚಲಿಸುವವರು (ಬೀಸುವವರು) ಎಂದೂ ನಿರ್ವಚನದ ಅರ್ಥವು

ಈ ಮರುದ್ದೇವತೆಗಳಿಗೆ ಇತರ ದೇವತೆಗಳ ಮಧ್ಯದಲ್ಲಿ ಬಹು ಮುಖ್ಯವಾದ ಸ್ಥಾನವಿದೆ. ೩೩ ಸೂಕ್ತಗಳು ಪೂರ್ತಿಯಾಗಿ, ೭ ಇಂದ್ರನೊಡನೆ, ಮತ್ತು ಒಂದೊಂದು ಅಗ್ನಿ ಮತ್ತು ಪೂಷಣರೊಡನೆ ಹೀಗೆ ಒಟ್ಟು ೪೨ ಸೂಕ್ತಗಳು ಇವರನ್ನು ಸ್ತುತಿಸುತ್ತವೆ. ಇವರು ಒಟ್ಟಾಗಿ ಒಂದು ಗಣ ಅಥವಾ ಶರ್ಧರು (೧-೩೭-೧ ಇತ್ಯಾದಿ) ಮತ್ತು ಬಹುವಚನದಲ್ಲಿಯೇ ಪ್ರಯೋಗ. ಅವರು ಸಂಖ್ಯೆಯಲ್ಲಿ ಅರವತ್ತರ ಮೂವತ್ತರಷ್ಟು ( ೮-೮೫-೮ ) ಅಥವಾ ಏಳರ ಮೂರರಷ್ಟು (೧-೧೩೩-೬, ಅ. ವೇ ೧೩-೧-೧೩)ಅವರು ಜನನಹೊಂದಿದರೆಂಬುದು ಅನೇಕಸಾರಿ ಹೇಳಿದೆ. (೫-೫೭-೫; ಇತ್ಯಾದಿ). ಅವರು ರುದ್ರನ ಪುತ್ರರು, ಅವರಿಗೆ ರುದ್ರರೆಂದೇ ಹೆಸರು (೧-೩೯-೪ ಮತ್ತು ೭ ಇತ್ಯಾದಿ) ಕೆಲವುವೇಳೆ ರುದ್ರಿಯರೆಂದೂ (೧-೩೮-೭ ೨-೩೪-೧೦ ಇತ್ಯಾದಿ) ಹೆಸರು, ಪೃಶ್ನಿಯ ಮಕ್ಕಳು (೨-೩೪-೨, ೫-೫೨-೧೬, ೫-೬೦-೫, ೬-೬೬-೩) ಪೃಶ್ನಿಮಾತರಃ (ಪೃಶ್ನಿಯು ತಾಯಿಯಾಗಿ ಉಳ್ಳವರು) ಎಂದು ಅನೇಕಸಲ ಕರೆದಿದೆ. (೧-೨೩-೧೦, ಇತ್ಯಾದಿ, ಅ ವೇ. ೫-೨೧-೧೧). ಪೃಶ್ನಿ ಎಂಬ ಗೋವು (೫-೫೨-೧೬), ಅಥವಾ ಸಾಧಾರಣವಾಗಿ ಗೋವು (೮-೮೩-೧) ಅವರ ಜನನಿ, ಅವರನ್ನು ಗೋಮಾತರಃ ಎಂತಲೂ ಕರೆದಿದೆ (೧-೮೫-೩, ೮-೨೦-೮ನ್ನು ಹೋಲಿಸಿ), ಈ ಗೋವು ಪ್ರಾಯಶಃ ಚಂಡಮಾರುತದ ನಾನಾ ವರ್ಣರಂಜಿತವಾದ ಮೇಘವಿರಬಹುದು. ದೊಡ್ಡದಾದ ಕೆಚ್ಚಲುಳ್ಳ ಗೋವುಗಳು ಉರಿಯುತ್ತಾ ಬರುತ್ತವೆ (೨-೩೪-೫) ಎಂಬಲ್ಲಿ ಅವು ಬಿರುಗಾಳಿಯ ಕಾಲದಲ್ಲಿರುವ ಮಿಂಚು, ಸಿಡಿಲುಗಳಿಂದ ಯುಕ್ತವಾದ ಮೋಡವಲ್ಲದೆ ಬೇರೆಯಿರಲಾರದು. ಪೃಶ್ನಿಯಿಂದ ಜನಿಸಿದಾಗ, ಮರುತ್ತುಗಳನ್ನು ಅಗ್ನಿಗೆ ಹೋಲಿಸಿದೆ (೬-೬೬-೧ರಿಂದ ೩) ಸಿಡಿಲಿನ ನಗುವಿನಿಂದ, ಮರುತ್ತುಗಳು ಜನಿಸಿದರು. (೧-೨೩-೧೨; ೧-೩೮-೮ ನ್ನು ಹೋಲಿಸಿ). ಅಗ್ನಿಯು ಅವರಿಗೆ ರೂಪವನ್ನು ಕೊಟ್ಟನು ಅಥವಾ ಅವರನ್ನು ಪಡೆದನು. (೬-೩-೮, ೧-೭೧-೮). ವಾಯುವು ಅವರನ್ನು ಅಂತರಿಕ್ಷದ ಯೋನಿಯಲ್ಲಿ ಇಟ್ಟನು. (೧-೧೩೪-೪) ಮತ್ತು ಅವರು ಆಕಾಶದ ಮಕ್ಕಳು (೧೧-೭೭-೨), ಮತ್ತು ಆಕಾಶದ ವೀರರು. (ವೀರಾಃ ೧-೬೪-೪, ೧-೧೨೨-೧, ೫-೫೪-೧೦) ಅಥವಾ ಆಕಾಶದ ಗಂಡುಗಳು (೩-೫೪-೧೩, ೫-೫೯-೬). ಒಂದು ಕಡೆ, ಅವರಿಗೆ ಸಮುದ್ರವು ತಾಯಿ (ಸಮುದ್ರ ಮಾತರಃ) ಎಂದು ಹೇಳಿದೆ (೧೦-೭೮-೬). ಬೇರೆ ಕೆಲವು ಸ್ಥಳಗಳಲ್ಲಿ, ಆತ್ಮಯೋನಿಗಳು (ತಮ್ಮಿಂದ ತಾವೇ ಜನಿಸಿದವರು) (೧-೧೭೮-೨ ೫-೮೭-೨) ಎಂದಿದೆ

ಅವರು ಭ್ರಾತೃಗಳು, ಆದರೆ ಜ್ಯೇಷ್ಠ ಅಥವಾ ಕನಿಷ್ಠನೆಂಬ ವ್ಯತ್ಯಾಸವಿಲ್ಲ (೫-೫೯-೬, ೫-೬೦-೫), ಏಕೆಂದರೆ ಅವರೆಲ್ಲರೂ ಸಮಾನವಯಸ್ಕರು (೧-೧೬೫-೧). ಅವರೆಲ್ಲಾ ಒಟ್ಟಿಗೆ ಬೆಳೆದವರು (೫-೫೬-೫, ೭-೫೮-೧) ಮತ್ತು ಏಕ ಮನಸ್ಕರು. (೮-೨೦-೧ ಮತ್ತು ೨೧). ಅವರಿಗೆಲ್ಲಾ ಒಂದೇ ಜನ್ಮಸ್ಥಾನ (೫-೫೩-೩) ಮತ್ತು ಒಂದೇ ವಾಸಸ್ಥಳ (೧-೧೬೫-೧, ೭-೫೬-೧). ಅವರು ಆಕಾಶದಲ್ಲಿ, ಭೂಮಿಯಲ್ಲಿ, ಸ್ವರ್ಗದಲ್ಲಿ ಬೆಳೆದರು (೫-೫೫-೭) ಅಥವಾ ಮೂರು ಸ್ವರ್ಗಗಳಲ್ಲಿ ಬೆಳೆದರು. (೫-೬೦-೬). ಪರ್ವತವಾಸಿಗಳೆಂದೂ ಒಂದು ಕಡೆ (೮-೮೩-೧ ಮತ್ತು ೨) ಇದೆ

ಇಂದ್ರಾಣಿಯು ಅವರಿಗೆ ಮಿತ್ರಳು. ಇಂದ್ರಾಣಿ (೧೦-೮೬-೯) ಮತ್ತು ಸರಸ್ವತಿಯರೊಡನೆ (೭-೯೬-೨) ಕಲೆಯುತ್ತಾರೆ. ಅವರು ಈ ರೀತಿ ಬಾಂಧವ್ಯವಿಟ್ಟುಕೊಂಡಿರುವುದು ರೋದಸೀ ಎಂಬ ದೇವತೆಯೊಡನೆಯೇ ಹೆಚ್ಚು. ಅವಳು ಅವರಿಗೆ ಸುಖಸಾಧನಗಳನ್ನು ಒದಗಿಸುವವಳಾಗಿ, ಅವರೊಡನೆ ಅವರ ರಥದಲ್ಲಿ ನಿಂತಿರುತ್ತಾಳೆ (೫-೫೬-೮) ಅಥವಾ ಅವರ ಪಾರ್ಶ್ವದಲ್ಲಿ ನಿಂತಿರುತ್ತಾಳೆ (೬-೬೬-೬). ಅವಳ ಹೆಸರು ಬರುವ ಐದು ಸ್ಥಳಗಳಲ್ಲಿಯೂ ಮರುತರ ಜೊತೆಯಲ್ಲಿಯೇ ಅವಳು ಇರುವುದು (೧-೧೬೭-೪ ಮತ್ತು ೫ ಗಳನ್ನು ಹೋಲಿಸಿ). ಆದುದರಿಂದ ಅಶ್ವಿನಿಗಳಿಗೆ ಸೂರ್ಯೆಯಂತೆ ಅವಳು ಅವರ ವಧುವೆಂದು ಪರಿಗಣಿತಳಾಗಿದ್ದಾಳೆ. ಇದರಿಂದಲೇ ಅವರಿಗೆ "ಭದ್ರಜಾನಯಃ" (ಸುಂದರಳಾದ

ಭಾರ್ಯೆಯುಳ್ಳವರು) (೫-೬೧-೪) ಎಂಬ ವಿಶೇಷಣವು ಮತ್ತು ಅವರನ್ನು ವರರಿಗೆ (೫-೬೦-೪) ಎಂಬ ವಿಶೇಷಣವು ಮತ್ತು ಅವರನ್ನು ವರರಿಗೆ (೫-೬೦-೪) ಅಥವಾ ಯುವಕರಾದ ಪ್ರಣಯಿಗಳಿಗೆ ಹೋಲಿಸಿರುವುದು (೧೦.೭೮.೬)

ಮರುದ್ದೇವತೆಗಳ ತೇಜಸ್ಸು ಆಗಾಗ್ಗೆ ಪ್ರಸಕ್ತವಾಗುತ್ತದೆ. ಅವರು ಸುವರ್ಣವರ್ಣದವರು, ಸೂರ್ಯನಂತೆ ಉಜ್ವಲವಾದ ಕಾಂತಿಯುಳ್ಳವರು, ಜ್ವಲಿಸುವ ಅಗ್ನಿಯಂತೆ ಈಷದ್ರಕ್ತವರ್ಣದವರು (೬ ೬೬-೨; ೭ ೫೯-೧೧, ೮-೭-೭) ಬೆಂಕಿಯ ಜ್ವಾಲೆಗಳಂತೆ ಪ್ರಕಾಶಿಸುತ್ತಾರೆ (೧೦ ೭೮-೩). ಅಗ್ನಿಯ ರೂಪವುಳ್ಳವರು ಅಥವಾ ಅಗ್ನಿಯ ತೇಜಸ್ಸುಳ್ಳವರು (೧೦-೮೪-೧, ೩-೨೬-೫) ತೇಜಸ್ಸಿನಲ್ಲಿ ಅಗ್ನಿಗೆ ಅವರನ್ನು ಹೋಲಿಸಿದೆ (೧೧ ೭೮-೨). ಅವರು ಅಗ್ನಿಯಂತೆ (೨-೩೪-೧) ಅಥವಾ ಉದ್ದೀಪ್ತನಾದ ಅಗ್ನಿಯಂತೆ (೬.೬೬-೨) ಇದ್ದಾರೆ, ಅವರಿಗೆ ಅಗ್ನಿಯೆಂದೇ ಹೆಸರು (೩-೨೬-೪) ಸರ್ಪಗಳ ಕಾಂತಿಯುಳ್ಳವರು (ಅಹಿಭಾನವಃ ೧-೧೭೨-೧). ಪರ್ವತಗಳಲ್ಲಿ ಪ್ರಕಾಶಿಸುತ್ತಾರೆ (೮-೭-೧). ಅವರು "ಸ್ವಭಾನು" ಗಳು (ಸ್ವತಃ ಪ್ರಕಾಶಕರು ೧-೩೭-೨ ಇತ್ಯಾದಿ) ಈ ವಿಶೇಷಣವು ಬೇರೆ ಯಾವ ದೇವತೆಗಳಿಗೂ ಹೇಳಿಲ್ಲ ತೇಜಸ್ವಿಗಳು, ಜಾಜ್ವಲ್ಯಮಾನರು ಎನ್ನುವುದು ಪದೇ ಪದೇ ಬರುತ್ತದೆ. (೧-೧೬೫-೧೨, ಇತ್ಯಾದಿ).

ವಿಶೇಷವಾಗಿ ವಿದ್ಯುತ್ತಿನೊಡನೆ ಅವರಿಗೆ ಸಂಬಂಧವಿದೆ (೫-೫೪-೨, ೩ ಮತ್ತು ೧೧, ೧-೬೪-೫) ಮರುತರು ಘೃತವನ್ನು ಸುರಿಯುವಾಗ, ವಿದ್ಯುತ್ತುಗಳು ಭೂಮಿಯನ್ನು ನೋಡಿ, ಹಸನ್ಮುಖರಾಗುತ್ತಾರೆ (೧.೧೬೮.೮, ೫.೫೨ ೬ ನ್ನು ಹೋಲಿಸಿ). ಮರುತರು ಮಳೆಯನ್ನು ಕರೆದಾಗ, ಕರುವನ್ನು ಹಿಂಬಾಲಿಸುತ್ತಾ ಹಸುವು ಅರಚುವಂತೆ, ಸಿಡಿಲು ಧ್ವನಿಮಾಡುತ್ತದೆ. (೭-೫೬-೧೩). ವಿದ್ಯುತ್ತು ಅವರಿಗೆ ಎಷ್ಟರಮಟ್ಟಿಗೆ ಸಂಬಂಧಿಸಿದೆ ಎಂದರೆ ವಿದ್ಯುತ್ತು ಸಮಸ್ತಪದವಾಗಿ ಪ್ರಯುಕ್ತವಾಗಿರುವ ಐದು ಸ್ಥಳಗಳಲ್ಲಿ, ಒಂದು ಹೊರತಾಗಿ, ಉಳಿದುದೆಲ್ಲವೂ ಮರುತ್ ಎಂಬುದರೊಡನೆಯೇ ಇದೆ. ಸಿಡಿಲನ್ನು ಕೈಯಲ್ಲಿಯೇ ಹಿಡಿದುಕೊಂಡಿದ್ದಾರೆ. (೮-೭-೨೫, ೫ ೫೪ ೧೧) ಸಿಡಿಲೆಂದರೆ ಅವರಿಗೆ ಬಹಳ ಆನಂದ (೫-೫೪-೩). ಅವರ ಕೈಯಲ್ಲಿ ಭರ್ಜಿಗಳಿವೆ. ಇಲ್ಲಿ ಭರ್ಜಿ (ಋಷ್ಟಿ) ಎಂಬುದೂ ಸಿಡಿಲೇ ಇರಬೇಕು. ಏಕೆಂದರೆ ಅವರಿಗೆ ಋಷ್ಟಿವಿದ್ಯುತ್ (ಸಿಡಿಲನ್ನೇ ಭರ್ಜಿಯನ್ನಾಗಿ ಉಪಯೋಗಿಸುವವರು ಎಂದು ವಿಶೇಷಣವಿದೆ (೧-೧೬೮-೫, ೫ ೫೨-೧೩). ಇನ್ನು ಕೆಲವು ಸ್ಥಳಗಳಲ್ಲಿ ಅವರಿಗೆ ಬಂಗಾರದಿಂದ (೮-೭-೩೨). ಮಾಡಿದ ಕೊಡಲಿಯೂ ಆಯುಧವೆಂದಿದೆ (೧-೩೭-೨, ೧-೮೮-೩, ೫.೩೩.೪, ೫-೫೭-೨, ೮.೨೦ ೪). ಒಂದು ಸಲ ಅವರು ವಜ್ರಾಯುಧವನ್ನು ಧರಿಸಿದ್ದಾರೆಂದು ಇದೆ ಕೆಲವು ಸ್ಥಳಗಳಲ್ಲಿ ಧನುರ್ಬಾಣಧಾರಿಗಳೆಂದೂ (೫.೫೩-೪, ೫ ೫೭-೨ ; ೮-೨೦-೪ ಮತ್ತು ೧೨) ಒಂದು ಸಲ ಬಾಣವನ್ನು ಬಿಡುತ್ತಿರುವ ಬಿಲ್ಲುಗಾರರೆಂದೂ ಹೇಳಿದೆ ಆದರೆ ಈ ಲಕ್ಷಣವು ಅವರಿಗೆ ಅಪರೂಪ. ಅವರು ಪುಷ್ಪಹಾರ ಮೊದಲಾದ ಅಲಂಕಾರಗಳಿಂದ ಅಲಂಕೃತರಾಗಿದಾರೆ. (೫-೫೩-೪) ಬಂಗಾರದ ನಡುಪಟ್ಟಿಗಳನ್ನು ಹಾಕಿಕೊಂಡಿದಾರೆ (೫-೫೫ ೬) ವಿವಾಹಾರ್ಥಿಯಾದ ಶ್ರೀಮಂತನಂತೆ, ತಮ್ಮ ದೇಹವನ್ನು ಸುವರ್ಣಾಭರಣಗಳಿಂದ ಅಲಂಕರಿಸಿಕೊಳ್ಳುತ್ತಾರೆ (೫-೬೦-೪) ಬಾಹುಪುರಿ ಅಥವಾ ಕಾಲಂದಿಗೆ ಅವರ ವೈಯಕ್ತಿಕ ಆಭರಣ. ಈ ಆಭರಣಗಳಿಂದ ಅಲಂಕೃತರಾದ ಅವರು ನಕ್ಷತ್ರರಂಜಿತವಾದ ಆಕಾಶದಂತೆ ಅಥವಾ ಮೋಡದಿಂದ ಬೀಳುತ್ತಿರುವ ಮಳೆಯ ಹನಿಗಳಂತೆ ಥಳಥಳಿಸುತ್ತಾರೆ. ಅವರ ಭುಜದ ಮೇಲೆ ಭಲ್ಲೆಗಳೂ, ಕಾಲಿನಲ್ಲಿ ಕಾಲಂದಿಗೆಗಳೂ, ಎದೆಯ ಮೇಲೆ ಚಿನ್ನದ ಆಭರಣಗಳೂ, ಕೈಗಳಲ್ಲಿ ಕೆಂಡ ಕಾರುತ್ತಿರುವ ಸಿಡಿಲುಗಳೂ, ತಲೆಯ ಮೇಲೆ ಸುವರ್ಣಮಯವಾದ ಶಿರಸ್ತ್ರಾಣಗಳೂ ಇವೆ. (೫ ೫೪-೧೧).

ಮರುದ್ದೇವತೆಗಳು ಉಪಯೋಗಿಸುವ ರಥಗಳು ಮಿಂಚಿನಿಂದ ಹೊಳೆಯುತ್ತವೆ (೧.೮೮.೧ ; ೫-೫೪-೧೩), ಸುವರ್ಣಮಯವಾದವು (೫೫-೭-೧) ; ಚಿನ್ನದ ಚಕ್ರಗಳು ಅಥವಾ ನೇಮಿಗಳು (೧-೬೪-೧೧ ; ೧.೫೮-೫). ಅವುಗಳಲ್ಲಿ

ಆಯುಧಗಳಿವೆ. (೫.೫೭.೬). ನೀರಿನ ಬಾನೆಗಳಿವೆ (೧-೮೭-೨). ರಥವನ್ನು ಎಳೆಯುವ ಕುದುರೆಗಳು ಕಂದುಬಣ್ಣ (೧-೮೮ ೨ ; ೫ ೫೭.೪) ; ಬಂಗಾರದ ಗೊರಸುಗಳು (೮.೭.೨೭) ಮತ್ತು ಮನೋವೇಗವುಳ್ಳವು (೧ ೮೫-೪). ಈ ಅಶ್ವಗಳು ಚುಕ್ಕೆಗಳುಳ್ಳವು; ಪೃಷದಶ್ವರೆಂದು (ಚುಕ್ಕೆ ಚುಕ್ಕೆಯಾಗಿರುವ ಅಶ್ವಗಳುಳ್ಳವರು) ಇವರಿಗೆ ವೈಯಕ್ತಿಕವಾದ ಹೆಸರು. ಇವರ ರಥಕ್ಕೆ ಹೆಣ್ಣುಕುದುರೆಗಳನ್ನು ಕಟ್ಟಿದ್ದಾರೆ ಎಂದೂ (೧-೩೯-೬) ಇದೆ. ಇವರು ಗಾಳಿಯನ್ನು ತಮ್ಮ ರಥಕ್ಕೆ ಅಶ್ವವಾಗಿ ಕಟ್ಟಿದರೆಂದು (೫.೫೮-೭) ಹೇಳಿದೆ.

ಮರುತರು ಆಕಾಶದಂತೆ ಬೃಹದಾಕಾರರು ( ೫-೫೭-೪ ), ಭೂಮ್ಯಾಕಾಶಗಳನ್ನು ಮೀರಿದ್ದಾರೆ (೧೦-೭೭-೩) ಅವರ ಮಹತ್ತ್ವವು ಅಮಿತವಾದುದು (೫-೫೮-೨) , ಅವರ ಸಾಮರ್ಥ್ಯದ ಮಿತಿಯನ್ನು ಯಾರೂ ತಿಳಿಯ ಲಾರರು (೧ ೧೬೭-೯). ಅವರು ಯುವಕರು (೧-೬೪-೨ ; ೧-೧೬೫-೨ , ೫-೪೨-೧೫) ಮತ್ತು ಅವರಿಗೆ ವಾರ್ಧಕ್ಯವೇ ಇಲ್ಲ. (೧-೬೪-೩) ಅವರು ಅಸುರರು, ಉತ್ಸಾಹಶಾಲಿಗಳು, ಓಜಸ್ವಿಗಳು, ಕೊಳೆಯಿಲ್ಲದವರು (೧-೬೪-೨, ಮತ್ತು ೧೨) ಮತ್ತು ಧೂಳು ಇಲ್ಲದವರು (೬-೬೬ ೨). ಭಯಂಕರರೂಪರು (೧ ೧೯-೪), ಸಿಡುಕು ಸ್ವಭಾವದವರು (೭-೫೬-೮), ಭಯಂಕರರು (೫-೫೬-೨ ಮತ್ತು ೩, ೭-೫೮-೨) ದುಷ್ಟ ಮೃಗಗಳಂತೆ ಭೀಕರರು (೨-೩೪-೧ ಇತ್ಯಾದಿ) ಮಕ್ಕಳಂತೆ ಅಥವಾ ಕರುಗಳಂತೆ ಕ್ರೀಡಾಸಕ್ತರು (೧-೧೬೬-೨, ೭-೫೬-೧೬, ೨೦-೭೮-೬). ಕಪ್ಪಾದ ಬೆನ್ನುಭಾಗ ವುಳ್ಳ ಹಂಸಗಳಂತಿದ್ದಾರೆ (೭-೫೯-೭). ಅಯೋಮಯವಾದ ಕೋರೆದಾಡೆಗಳುಳ್ಳ ಕಾಡುಹಂದಿಗಳು (೧-೮೮-೫); ಸಿಂಹಗಳಂತಿದ್ದಾರೆ (೧.೬೪-೮).

ಅವರು ಗಟ್ಟಿಯಾಗಿ ಧ್ವನಿಮಾಡುತ್ತಾರೆ (೧-೧೬೯ ೭, ಇತ್ಯಾದಿ). ಆ ಧ್ವನಿಯೇ ಗುಡುಗು (೧ ೨೩-೧೧) ಅದು ಗಾಳಿಯು ಬೀಸುವ ಶಬ್ದವೂ ಹೌದು (೭-೫೬-೩). ಅವರು ಬಂದರೆ ಆಕಾಶವು ಭಯ ದಿಂದ ಅರಚುತ್ತದೆಯೋ ಎನ್ನುವಂತಿದೆ (೮-೭-೨೬) ಪರ್ವತಗಳನ್ನು ಕಂಪಿಸುವಂತೆಯೂ, ಭೂಮಿ ಅಥವಾ ಎರಡು ಲೋಕಗಳನ್ನು ನಡುಗುವಂತೆಯೂ ಮಾಡುತ್ತಾರೆ ರಥನೇಮಿಗಳಾದ ಪರ್ವತಗಳನ್ನು ಅಥವಾ ಬಂಡೆ ಗಳನ್ನು ಚೂರು ಚೂರು ಮಾಡುತ್ತಾರೆ ೧ ೬೪ ೧೧, ೫-೫೨-೯) ಗಾಳಿಯಿಂದ ಸಹಿತರಾಗಿ ಬಂದಾಗಲೇ ಅವರು ಪರ್ವತಗಳನ್ನು ಕಂಪಿಸುವಂತೆ ಮಾಡುವುದು (೮ ೭-೪) ವೃಕ್ಷಗಳನ್ನು ಉರುಳಿಸಿ, ಕಾಡಾನೆಗಳಂತೆ, ಕಾಡುಗಳನ್ನು ಭಕ್ಷಿಸುತ್ತಾರೆ (೧-೩೯-೫, ೧ ೬೪-೭). ಕಾಡುಗಳು ಅವರಿಗೆ ಹೆದರಿ ನೆಲಕ್ಕೆ ಬಗ್ಗುತ್ತವೆ (೫.೬೦-೨). ಪರ್ವತಗಳಂತೆ ಅಪ್ರತಿಹತರಾಗಿ ಸ್ವರ್ಗ ಮತ್ತು ಭೂಮಿಗಳ ಪ್ರಾಣಿಗಳನ್ನು ಕೆಳಕ್ಕೆ ಎಸೆಯುತ್ತಾರೆ (೧.೬೪-೩) ಸರ್ವ ಪ್ರಾಣಿಗಳೂ ಅವರಿಗೆ ಹೆದರುತ್ತವೆ (೧-೮೫ ೮). ಬಿರುಗಾಳಿಯಂತೆ ವೇಗವಾಗಿ ಚಲಿಸುತ್ತಾರೆ. (೧೦-೭೮-೩) ಧೂಳನ್ನು ಸುಳಿಯ ರೂಪದಲ್ಲಿ ಮೇಲಕ್ಕೆ ಎಬ್ಬಿಸುತ್ತಾರೆ (೧-೬೪-೧೨]. ಗಾಳಿಯನ್ನು ಅಥವಾ ಗಾಳಿಯ ಶಬ್ದ ವನ್ನು ಉಂಟುಮಾಡುತ್ತಾರೆ (೭-೫೬-೩ ). ಗಾಳಿಯ ಜೊತೆಯಲ್ಲಿ ಬರುತ್ತಾರೆ (೮-೭-೩, ೪ ಮತ್ತು ೧೭), ಅದನ್ನು ತಮ್ಮ ಅಶ್ವವನ್ನಾಗಿ ಮಾಡಿಕೊಳ್ಳುತ್ತಾರೆ (೫-೫೮-೭).

ಮಳೆಗರೆಯುವುದೇ ಅವರ ಕಾರ್ಯಗಳಲ್ಲಿ ಮುಖ್ಯವಾದುದು. ಮಳೆಯು ಅವರ ಉಡುಪು (೫-೫೭-೪) ಅವರು ಸಮುದ್ರದಿಂದ ಮೇಲಕ್ಕೆ ಎದ್ದು, ಮಳೆಯನ್ನು ಸುರಿಸುತ್ತಾರೆ. (೧-೩೮ ೯) ಎರಡು ಪ್ರಪಂಚಗಳಲ್ಲಿಯೂ ಮಳೆ ಸುರಿಸುತ್ತಾ, ಬೀಸುತ್ತಾರೆ (೧-೬೪-೬, ೮-೭-೧೬) ಮಳೆಯು ಅವರನ್ನು ಅನುಸರಿಸುತ್ತದೆ (೪-೫೩-೧೦). ನೀರನ್ನು ತರುತ್ತಾರೆ ಮತ್ತು ಮಳೆಯನ್ನು ಉಂಟುಮಾಡುತ್ತಾರೆ (೫-೫೮-೩). ಮಳೆಯಿಂದ ತಮ್ಮ ಪ್ರಕಾಶವನ್ನು ಮರೆಮಾಡಿ

ಕೊಳ್ಳುತ್ತಾರೆ (೫-೫೯-೧) ಸೂರ್ಯನ ಕಣ್ಣನ್ನು ಮಳೆಯಿಂದ ಮುಚ್ಚುತ್ತಾರೆ (೫-೫೯-೫). ಮಳೆಗರೆದಾಗ, ಮೋಡಗಳಿಂದ ಕತ್ತಲನ್ನುಂಟುಮಾಡುತ್ತಾರೆ (೧-೩೮-೯). ಗಾಳಿಯೊಡನೆ ವೇಗವಾಗಿ ಚಲಿಸುತ್ತಾ ಹಿಮವನ್ನೆರಚುತ್ತಾರೆ (೮-೭-೪). ಅಂತರಿಕ್ಷದ ಬಾನೆ (ಮೋಡ ೫-೫೩-೬; ೫-೫೯-೮) ಮತ್ತು ಪರ್ವತ ಪ್ರವಾಹಗಳು ನೀರು ಸುರಿಯುವಂತೆ ಮಾಡುತ್ತಾರೆ (೫-೫೯-೭). ಅವರು ಧಾವಿಸುವಾಗ ನೀರು ಪ್ರವಹಿಸುತ್ತದೆ. (೫-೫೮-೬) ಅವರ ಈ ಕಾರ್ಯದಿಂದ ಭೂಲೋಕದ ನದಿಯೊಂದಕ್ಕೆ 'ಮರುದ್ವೃಧಾ' (ಮರುತ್ತಗಳಿಂದ ಅಭಿವೃದ್ಧಿಪಡಿಸಲ್ಪಟ್ಟುದು ೧೦-೭೫-೫) ಎಂಬ ಹೆಸರು ಬಂದಿದೆ, ರುದ್ರಪುತ್ರರ ಬೆವರೇ ಮಳೆಯಾಯಿತು (೫-೫೮-೭). ಮರುತದಿಂದ ಸೃಷ್ಟವಾದ ವೃಷ್ಟಿಯು ಆಲಂಕಾರಿಕವಾಗಿ ಕ್ಷೀರ (೧-೧೬೬ ೩), ಘೃತ (೧-೮೫-೩ ; ೧೦-೮೮-೪), ಕ್ಷೀರ ಮತ್ತು ಘೃತ (೧-೬೪-೬), ಎನ್ನಿಸಿಕೊಂಡಿದೆ. ವಸಂತಕಾಲ (ಮಧು) ವನ್ನೆ ಸುರಿಸುತ್ತಾರೆ (೧-೮೫-೧೧) ಅಥವಾ ಭೂಮಿಯನ್ನು ಮಧುವಿನಿಂದ ತೋಯಿಸುತ್ತಾರೆ (೫-೫೪-೮). ಸಮುದ್ರದಿಂದ ನೀರನ್ನು ಆಕಾಶಕ್ಕೆ ಎತ್ತಿ, ಅಲ್ಲಿಂದ ಮಳೆ ರೂಪದಲ್ಲಿ ಭೂಮಿಯ ಮೇಲೆ ಸುರಿಸುತ್ತಾರೆ (ಅ ವೇ ೪-೨೭-೪) ಅವರು ಸುರಿಸುವ ಮಳೆಯ ಜೊತೆಯಲ್ಲಿ ಯಾವಾಗಲೂ ಮಿಂಚು, ಗುಡುಗುಗಳು ಇದ್ದೇ ಇರುತ್ತವೆ. ನೀರನ್ನು ಸುರಿಸುವ ಇಚ್ಛೆಯಿಂದ, ಮರುತ್ತಗಳು ಘರ್ಜಿಸುತ್ತಾ, ರಭಸದಿಂದ ನುಗ್ಗುತ್ತಾರೆ. (೫-೫೪-೩). ತಮ್ಮ ಸಾಮರ್ಥ್ಯದಿಂದ, ಗಾಳಿ, ಮಿಂಚು, ಸಿಡಿಲುಗಳನ್ನು ಉಂಟುಮಾಡುತ್ತಾರೆ ; ಕೆಚ್ಚಲಿನಿಂದ ಸ್ವರ್ಗೀಯ ವಸ್ತುಗಳನ್ನು ದೋಹನ ಮಾಡಿ, ಭೂಮಿಯನ್ನು ಹಾಲಿನಿಂದ ತುಂಬಿಸುತ್ತಾರೆ (೧-೬೪-೫) ಅವರಿಂದ ದುಗ್ಧವಾಗುವ ಚಿಲುಮೆಯು ಘರ್ಜಿಸುತ್ತದೆ. (೧-೬೪-೬). ಅವರಿಂದ ಉದಕವು ವೃಷ್ಟವಾದಾಗ, ಆಕಾಶವು, ಕೆಂಬಣ್ಣದ ವೃಷಭವು, ಗುಟುರುಹಾಕುತ್ತದೆ (೫-೫೮-೬). ಅಶ್ವವು ನೀರನ್ನು ಸೃಜಿಸುವಂತೆ ಮಾಡುತ್ತಾರೆ (೧-೬೪-೬). ಆಕಾಶದ ಮಳೆಯನ್ನು ಅನುಗ್ರಹಿಸಿ, ಅಶ್ವದಿಂದ ಉತ್ಪನ್ನವಾದ ಪ್ರವಾಹಗಳು ಚೆನ್ನಾಗಿ ಪ್ರವಹಿಸುವಂತೆ ಮಾಡುತ್ತಾರೆ (೫-೮೩-೬). ಅಶ್ವದೊಡನೆ ಸೇರಿ, ನೀರನ್ನುಂಟುಮಾಡುವಾಗ, ಮರುತ್ತುಗಳು ಸ್ವರ್ಣವರ್ಣದವರಾಗುತ್ತಾರೆ (೨-೩೪-೧೩)ಮೇಘಗಳು ಧ್ವನಿಗೈಯುವಾಗ, ಪ್ರವಾಹಗಳು ಮರುತ್ತಗಳ ರಥನೇಮಿಗಳ ಧ್ವನಿಯನ್ನು ಪ್ರತಿಧ್ವನಿಸುತ್ತವೆ (೧-೧೬೮-೮). ಇಂದ್ರನು ಸುರಿಸುವ ನೀರಿಗೆ "ಮರುತ್ವತೀ" ( ಮರುತದಿಂದ ಸಹಿತವಾದುವು ) ಎಂದು ಹೆಸರು (೧-೮೦-೪) ವೃಷ್ಟಿಕಾರಕರೆಂಬ ಅರ್ಥದಲ್ಲಿಯೋ, ಅವರಿಗೆ "ಪುರುದ್ರಪ್ಸಾಃ" ( ೫-೫೭-೫ ) ಅಥವಾ "ದ್ರಪ್ಸಿನಃ" (೧-೬೪-೨) (ಹೆಚ್ಚಾದ ಜಲಬಿಂದುಗಳುಳ್ಳವರು) ಮತ್ತು "ಸುದಾನವಃ" (ಚೆನ್ನಾಗಿ ನೀರಿನಲ್ಲಿ ನೆನೆದಿರುವವರು) ಎಂಬ ಹೆಸರುಗಳು. ಅವರು ಶಾಖವನ್ನು ಕಡಿಮೆ ಮಾಡುತ್ತಾರೆ (೫-೫೪-೧). ಆದರೆ, ಅವರೇ ಕತ್ತಲನ್ನು ಹೋಗಲಾಡಿಸಿ (೭-೫೬-೨೦) ಬೆಳಕನ್ನುಂಟುಮಾಡಿ (೧-೮೬-೧೦) ಸೂರ್ಯನಿಗೆ ದಾರಿ ಮಾಡುತ್ತಾರೆ (೮-೭-೮) ವಾಯುವಿನ ಪರಿಮಿತಿಯನ್ನು ಗೊತ್ತುಮಾಡಿದಾರೆ (೫-೫೫-೨) ; ಭೂಭಾಗಗಳನ್ನು ಮತ್ತು ತೇಜೋವಿಶಿಷ್ಟವಾದ ಆಕಾಶಭಾಗಗಳನ್ನು ವಿಸ್ತರಿಸಿ, ಎರಡು ಲೋಕಗಳನ್ನು ಪ್ರತ್ಯೇಕಿಸಿದಾರೆ (೮-೮೩-೯ ಮತ್ತು ೧೧).

ಗಾಳಿಯಲ್ಲಿ ಕೇಳಿಸುವ ಧ್ವನಿಯಿಂದಲೇ ಇರಬಹುದು, ಅವರಿಗೆ ಗಾಯಕರು(೫-೫೨-೧, ೫ ೬೦-೮,೫-೩೫-೯) ಎಂದಿರುವುದು. ಅವರು ಸ್ವರ್ಗಲೋಕದ ಗಾಯಕರು (೫ ೫೭-೫) ಒಂದು ಗಾನವನ್ನು ಗಾನಮಾಡುತ್ತಾರೆ (೧-೧೯-೪ ೧-೧೬೬-೭). ಹಾಡುತ್ತಾ ಸೂರ್ಯನು ಪ್ರಕಾಶಿಸುವಂತೆ ಮಾಡಿದರು (೮-೨೯-೧೦); ಕೊಳಲು ಊದುತ್ತಾ ಪರ್ವತವನ್ನು ಸೀಳಿದರು (೧-೮೫-೧೦). ಇಂದ್ರನು ಸರ್ಪವನ್ನು ವಧಿಸಿದಾಗ ಮರುತರು ಅವನಿಗಾಗಿ, ಗಾನಮಾಡಿ ಸೋಮರಸವನ್ನು ಸಿದ್ಧಪಡಿಸಿದರು (೫-೨೯ ೨; ೫-೩೦-೬). ಗಾನಮಾಡಿ ಇಂದ್ರನಿಗೆ ಸಾಮರ್ಥ್ಯವನ್ನು ಉಂಟುಮಾಡಿದರು (೧-೮೫-೨). ಅವರ ಗಾನವೆಂದರೆ ಮುಖ್ಯವಾಗಿ ಗಾಳಿಯಲ್ಲಿ ಹೇಳಿಬರುವಶಬ್ದ (೪-೨೨-೪ ನ್ನು ಹೋಲಿಸಿ), ಆದರೂ

ಅದು ಸ್ತುತಿಯಿಂದು ಭಾವಿಸಲ್ಪಟ್ಟಿದೆ (೩-೧೪-೪). ಇಂದ್ರಸಹಿತರಾಗಿರುವಾಗ, ಅವರು ಋತ್ವಿಜರೆಂದು ಆಹೂತರಾಗುತ್ತಾರೆ (೫-೨೯-೩) ಮತ್ತು ಋತ್ವಿಜರಿಗೆ ಹೋಲಿಸಲ್ಪಟ್ಟಿದ್ದಾರೆ (೧೦-೭೮-೧). ಅವರೇ ಮೊದಲು ಯಾಗ ಮಾಡಿದವರು (೨-೩೬-೨) ಶಿಷ್ಯರ ಮನೆಗಳಲ್ಲಿ ಅಗ್ನಿಯನ್ನು ಶುದ್ಧಿಮಾಡಿದವರೂ ಇವರೇ ; ಅಗ್ನಿಯನ್ನು ಉದ್ದೀಪ್ತಿಗೊಳಿಸಿದವರು ಭೃಗುಗಳು (೧೦.೧೨೨-೫) ಇತರ ಅನೇಕ ದೇವತೆಗಳಂತೆ ಇವರೂ ಸೋಮಪಾನ ಮಾಡುವರೆಂದು (೨-೩೬-೨, ೮-೮೩-೯ ರಿಂದ ೧೨ ಇತ್ಯಾದಿ) ಹೇಳಲ್ಪಟ್ಟಿದಾರೆ.

ಗುಡುಗು ಮಳೆ ಮತ್ತು ಇವರೂ ಒಂದು ಎಂಬ ಭಾವನೆಯಿರುವುದರಿಂದ, ಸ್ವಭಾವವಾಗಿ ಇವರು ಇಂದ್ರನ ಸ್ನೇಹಿತರು; ಸಹೋದ್ಯೋಗಿಗಳಾಗಿ ಅವನೊಡನೆ ನಿಕಟ ಬಾಂಧವ್ಯವುಳ್ಳವರಾಗಿದ್ದಾರೆ ತಮ್ಮ ಸ್ತುತಿ, ಗಾನ ಇವುಗಳಿಂದ (೧-೧೬೫-೧೧ ಇತ್ಯಾದಿ) ಇಂದ್ರನ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸುತ್ತಾರೆ (೩-೩೫-೯ ೬-೧೭-೧೧). ವೃತ್ರನೊಡನೆ ಯುದ್ಧದಲ್ಲಿ ಸಾಧಾರಣವಾಗಿ ಮರುತರೇ ಅವನಿಗೆ ಸಹಾಯಕರು (೮-೬೫.೨ ಮತ್ತು ೩, ೧೦-೧೧೩-೩) ತ್ರಿತ ಮತ್ತು ಇಂದ್ರರಿಗೆ ಅವರು ವೃತ್ರವಧೆಯಲ್ಲಿ ಸಹಾಯಮಾಡುತ್ತಾರೆ (೮-೭-೨೪). ವೃತ್ರವಧಕಾರಿಯಾದ ಸೂಕ್ತವನ್ನು ಗಾನಮಾಡುವಂತೆ ಪ್ರಾರ್ಥಿತರಾಗಿದ್ದಾರೆ (೮-೭೮-೧ ರಿಂದ ೩). ಸರ್ಪ ಮತ್ತು ಶಂಬರರೊಡನೆ ಇಂದ್ರನು ಮಾಡಿದ ಯುದ್ಧಗಳಲ್ಲಿ, ಅವನಿಗೆ ಸಹಾಯ ಮಾಡಿದರು (೩-೪೭-೩ ಮತ್ತು ೪). ಮರುತ್ಸಹಿತನಾಗಿಯೇ, ಇಂದ್ರನು ಬೆಳಕು (೮-೬೫.೪) ಮತ್ತು ಗೋವುಗಳನ್ನು (೧-೬-೫)ಪಡೆದನು ಮತ್ತು ಆಕಾಶಕ್ಕೆ ಆಧಾರಭೂತನಾದನು, (೭-೪೭-೫). ವಾಸ್ತವವಾಗಿ ನೋಡಿದರೆ ಇವರ ಸಹಾಯದಿಂದಲೇ ಇಂದ್ರನು ತನ್ನ ಎಲ್ಲಾ ಸಾಹಸಕಾರ್ಯಗಳನ್ನೂ ಮಾಡಿರುವುದು (೧-೧೦೦, ೧೦೧ ಮತ್ತು ೧೬೫ನೆಯ ಸೂಕ್ತಗಳು, ೧೦-೬೫). ಕೆಲವು ಸಂದರ್ಭಗಳಲ್ಲಿ ಮರುದ್ದೇವತೆಗಳೇ ಈ ಸಾಹಸಕಾರ್ಯಗಳಲ್ಲಿ ಇಂದ್ರನಿಗಿಂತ ಹೆಚ್ಚು ಸ್ವತಂತ್ರರು ಇಂದ್ರನಿಂದ ಸಹಿತರಾಗಿ, ಮರುತರು ವೃತ್ರನನ್ನು ಹೊಡೆಯುತ್ತಾರೆ (೧.೨೩-೯). ವೃತ್ರಾಸುರನ ಕೀಲುಗಳನ್ನು ಬೇರೆ ಬೇರೆ ಮಾಡಿದರು (೮-೭-೨೩) ಗೋವುಗಳನ್ನು ಕಂಡುಹಿಡಿತರು (೨-೩೪-೧). ಇತರ ದೇವತೆಗಳಂತೆ ಇವರಿಗೂ ಇಂದ್ರನೇ ನಾಯಕನು (೧-೨೩-೮; ಇತ್ಯಾದಿ). ಇಂದ್ರನಿಂದ ಯುಕ್ತರು (೧೦-೧೨೮-೨). ಅವರು ಇಂದ್ರನಿಗೆ ಪುತ್ರಸದೃಶರು (೧ ೧೦೦-೫) ಅವನ ಭ್ರಾತೃಗಳೆನ್ನಿಸಿಕೊಂಡಿದ್ದಾರೆ (೧-೧೭೦-೨). ಒಂದೆರಡು ಸಲ ಮಾತ್ರ ಮರುತ್ತುಗಳು ಇಂದ್ರನ ಕೈಬಿಟ್ಟುಬಿಟ್ಟರೆಂದು ಹೇಳಿದೆ. ಸರ್ಪದೊಡನೆ ಅವನೊಬ್ಬನೇ ಯುದ್ಧಮಾಡುವಂತೆ ಸನ್ನಿವೇಶವೊದಗಿಸಿ (೧.೧೬೫-೬). ಅವನನ್ನು ಒಂಟಿಯಾಗಿ ಬಿಟ್ಟುಬಿಟ್ಟರು (೮-೭-೩೧) ಒಂದೇ ಒಂದು ಋಕ್ಕಿನಲ್ಲಿ ಇಂದ್ರನಿಗೂ ಇವರಿಗೆ ದ್ವೇಷವೂ ಉಕ್ತವಾಗಿದೆ ಮರುತರು " ಎಲೈ ಇಂದ್ರನೇ ನಮ್ಮನ್ನು ವಧಿಸಲು ಇಚ್ಛಿಸುವುದೇಕೆ ? ಯುದ್ಧದಲ್ಲಿ ನಮ್ಮನ್ನು ವಧಿಸಬೇಡ" ಎಂದು ಇಂದ್ರನಿಗೆ ಹೇಳಿದಾರೆ ೧-೧೭೦-೨, ೧-೧೭೧ ೬ನ್ನು ಹೋಲಿಸಿ). ಬ್ರಾಹ್ಮಣವೊಂದರಲ್ಲಿಯೂ (ತೈ ಬ್ರಾ. ೨ ೭-೧೧.೧) ಇಂದ್ರಮರುತರಿಗೆ ಘರ್ಷಣೆಯಾಯಿತೆಂದು ಹೇಳಿದೆ.

ಇಂದ್ರಸಹಚರಿತರಾಗದೇ ಇರುವಾಗ, ಮರುತರಲ್ಲಿ ಹಿಂಸಾತ್ಮಕಗುಣಗಳು ಕಂಡುಬರುತ್ತವೆ. ಈ ವಿಷಯದಲ್ಲಿ ಅವರು ತಮ್ಮ ತಂದೆಯಾದ ರುದ್ರನ ಗುಣಗಳನ್ನು ತೋರ್ಪಡಿಸುತ್ತಾರೆ. ಅವರ ಆರಾಧಕರನ್ನು ಸಿಡಿಲು ತೊಂದರೆಪಡಿಸದಂತೆಯೂ, ಅವರ ದುರಾಗ್ರಹವು ಅವರನ್ನು ಮುಟ್ಟದಂತೆಯೂ ಮಾಡಬೇಕೆಂದು (೭-೫೬-೯) ಪ್ರಾರ್ಥಿತರಾಗಿದಾರೆ. ಅವರು ಎಸೆಯುವ ಬಾಣ ಮತ್ತು ಕಲ್ಲುಗಳನ್ನು (೧೧೭೨-೨), ಸಿಡಿಲು (೭-೫೭ ೪), ಗೋವು ಮತ್ತು ಮನುಷ್ಯರನ್ನು ವಧಿಸುವ ವಜ್ರಾಯುಧ (೭ ೫೬ ೧೭), ಇವುಗಳನ್ನು ತಪ್ಪಿಸಬೇ

ಕೆಂದು ಮೊರೆ ಇಟ್ಟಿದಾರೆ. ಅವರಿಂದ ಕೆಡಕುಂಟಾಗಬಹುದು (೧-೩೯-೮), ಅವರು ಕುಪಿತರಾಗಬಾರದೆಂದು ಬೇಡಿಕೆ (೧-೭೧-೧, ೭-೫೮-೫), ಅವರಿಗೆ ಸರ್ಪಗಳಂತೆ ಕೋಪ ಬರುತ್ತದೆ (೧-೬೪-೮ ಮತ್ತು ೯). ರುದ್ರನಂತೆ, ಇವರಿಂದಲೂ, ಸಿಂಧು, ಅಸಿಕ್ನಿ, ಸಮುದ್ರಗಳು ಮತ್ತು ಪರ್ವತಗಳಲ್ಲಿರುವ ಓಷಧಿಗಳು ಬೇಡಲ್ಪಟ್ಟಿವೆ (೮-೨೦-೨೫ರಿಂದ ೨೬); ಶುದ್ಧವೂ, ಅನುಕೂಲವೂ, ಸುಖಕರವೂ ಆದ ಚಿಕಿತ್ಸಾ ವಿಧಾನಗಳು ಮರುತ್ಸಹಿತನಾದ ರುದ್ರನಲ್ಲಿವೆ (೨-೩೩-೧೩). ಅದನ್ನು ಮರುತ್ತಗಳು ಮಳೆಯರೂಪದಲ್ಲಿ ಕೊಡುತ್ತಾರೆ (೫-೫೩-೧೪), ಆದುದರಿಂದ ಓಷಧಿ ಎಂದರೆ ಉದಕವಿರಬೇಕು. ಅಗ್ನಿಯಂತೆ, ಇವರಿಗೂ 'ಪಾವಕ' (ಶುದ್ಧಿಮಾಡುವವರು) ಎಂದು ಹೆಸರು (೭-೫೬-೧೨, ಇತ್ಯಾದಿ).

ಮೇಲೆ ಹೇಳಿದ ಗುಣಗಳಿಂದ, ಮರುತ್ತುಗಳು ಚಂಡಮಾರುತದ ದೇವತೆಗಳೆಂಬುದು ಸ್ಪಷ್ಟವಾಗುತ್ತದೆ 'ಮರುತ್' ಎಂದರೆ ಗಾಳಿ ಎಂದರ್ಥ ಮಾಡುವುದು ಬಹಳಮಟ್ಟಿಗೆ ಸರಿಯಾದರೂ, ಮೇಲೆಕಂಡ ಗುಣಗಳೆಲ್ಲವೂ ಅದರಲ್ಲಿ ಒಳಸಟ್ಟಂತೆ ಆಗುವುದಿಲ್ಲ

---

॥ ಸಾಯಣಭಾಷ್ಯಂ ॥

**ಪ್ರ ಶ್ಯಾವಾಶ್ವೇತಿ ಸಪ್ತದಶರ್ಚಮಷ್ಟಮಂ ಸೂಕ್ತಂ । ಅತ್ರೇಯಮನುಕ್ರಮಣಿಕಾ । ಶ್ಯಾವಾಶ್ವ ತ್ರ್ಯೂನಾ ಶ್ಯಾವಾಶ್ವೋ ಮಾರುತಂ ಹ ತತ್ಪಂಕ್ತಿಃ ಷಷ್ಠ್ಯಂತಾ ಚೇತಿ । ಆತ್ರೇಯಃ ಶ್ಯಾವಾಶ್ವ ಋಷಿಃ । ಹ ತದಿತಿ ಪ್ರಯೋಗಾದಿದಮಾದೀನಿ ದಶ ಸೂಕ್ತಾನಿ ಮರುದ್ದೇವತ್ಯಾನಿ । ಷಷ್ಠೀ ಸಪ್ತದಶೀ ಚ ಪಂಕ್ತ್ಯೌ ಶಿಷ್ಟಾಃ ಪಂಕ್ತ್ಯಂತಪರಿಭಾಷಯಾನುಷ್ಟುಭಃ । ಗತೋ ವಿನಿಯೋಗಃ ॥**

ಅನುವಾದವು—**ಪ್ರ ಶ್ಯಾವಾಶ್ವ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು ಇದರಲ್ಲಿ ಹದಿನೇಳು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ಪ್ರ ಶ್ಯಾವಾಶ್ವ ತ್ರ್ಯೂನಾ ಶ್ಯಾವಾಶ್ವೋ ಮಾರುತಂ ಹ ತತ್ಪಂಕ್ತಿಃ ಷಷ್ಠ್ಯಂತಾ ಚ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಶ್ಯಾವಾಶ್ವನೆಂಬುವನು ಋಷಿಯು, ಈ ಸೂಕ್ತದಿಂದ ಮುಂದಿನ ಹತ್ತು ಸೂಕ್ತಗಳು (೫೨-೬೧ ಸೂಕ್ತಗಳು) ಮರುದ್ದೇವತಾಕವು. ಈ ಸೂಕ್ತದ ಆರು ಮತ್ತು ಹದಿನೇಳನೆಯ ಋಕ್ಕುಗಳು ಪಂಕ್ತಿಚ್ಛಂದಸ್ಕವು, ಉಳಿದ ಋಕ್ಕುಗಳು ಅನುಷ್ಟುಪ್ ಛಂದಸ್ಕವು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

---

## ಸೂಕ್ತ—೫೨.

॥ ಮಂಡಲ—೫ ॥ ಅನುವಾಕ—೪ ॥ ಸೂಕ್ತ—೫೨ ॥

॥ ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ— ೮, ೯, ೧೦ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೭ ॥

ಋಷಿಃ—ಶ್ಯಾವಾಶ್ವ ಆತ್ರೇಯಃ ॥

ದೇವತಾ—ಮರುತಃ ॥

ಛಂದಃ—೧-೫, ೭-೧೬, ಅನುಷ್ಟುಪ್ । ೬, ೧೭ ಪಂಕ್ತಿಃ ॥

॥ ಸಂಹಿತಾಪಾಠಃ ॥

ಪ್ರ ಶ್ಯಾವಾಶ್ವ ಧೃಷ್ಣುಯಾರ್ಚಾ ಮರುದ್ಭಿರ್ಋಕ್ವಭಿಃ ।
ಯೇ ಅದ್ರೋಘಮನುಷ್ವಧಂ ಶ್ರವೋ ಮದಂತಿ ಯಜ್ಞಿಯಾಃ ॥ ೧ ॥

॥ ಪದಪಾಠಃ ॥

ಪ್ರ । ಶ್ಯಾವಽಅಶ್ವ । ಧೃಷ್ಣುಽಯಾ । ಅರ್ಚ । ಮರುತ್ಽಭಿಃ । ಋಕ್ವಽಭಿಃ ।
ಯೇ । ಅದ್ರೋಘಂ । ಅನುಽಸ್ವಧಂ । ಶ್ರವಃ । ಮದಂತಿ । ಯಜ್ಞಿಯಾಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಶ್ಯಾವಾಶ್ವ ಏತನ್ನಾಮಕ ಋಷೇ ಧೃಷ್ಣುಯಾ ಧೃಷ್ಣುಸ್ತ್ವಮೃಕ್ವಭಿಃ ಸ್ತುತ್ಯಾನ್ಮರುದ್ಭಿರ್ಮರುತಃ ಪ್ರಾರ್ಚ ॥ ದ್ವಿತೀಯಾರ್ಥೇ ತೃತೀಯಾ ॥ ಏವಂ ಸ್ವಯಮೇವ ಸಂಪ್ರೇಷ್ಯತಿ । ಯದ್ವಾ । ಯಜಮಾನೋ ಹೋತಾರಂ ಶ್ಯಾವಾಶ್ವಂ ಬ್ರೂತೇ । ಯದ್ವಾ। ಮರುದ್ಭಿರ್ಮರುತ್ಸದೃಶೈರ್ಋಕ್ವಭಿಃ ಸ್ತೋತೃಭಿಃ ಸಹ ಸ್ತೋತೃೈರ್ವಾರ್ಚ । ಸ್ತುಹೀತ್ಯರ್ಥಃ । ಯೇ ಮರುತೋ ಯಜ್ಞಿಯಾ ಯಜ್ಞಾರ್ಹಾ ಅನುಷ್ವಧಂ ಪ್ರತ್ಯಹಂ । ಹವಿರ್ಲಕ್ಷಣಾನ್ನಪ್ರದಾನಂ ಸ್ವಧಾ । ಅನು ಪಶ್ಚಾದ್ವಾ । ಅದ್ರೋಘಮಹಿಂಸಕಂ ಶ್ರವೋಽನ್ನಂ ಲಬ್ಧ್ವಾ ಮದಂತಿ ಹೃಷ್ಯಂತಿ ॥

॥ ಪ್ರತಿಪದಾರ್ಥ ॥

**ಶ್ಯಾವಾಶ್ವ**—ಎಲೈ ಶ್ಯಾವಾಶ್ವನೇ । **ಯೇ**—ಯಾವ ಮರುತ್ತುಗಳು । **ಯಜ್ಞಿಯಾಃ**—ಯಜ್ಞಾರ್ಹರಾಗಿ । **ಅನುಷ್ವಧಂ**—ಪ್ರತಿದಿನವೂ । **ಅದ್ರೋಘಂ**—ಅಹಿಂಸಾತ್ಮಕವಾದ । **ಶ್ರವಃ**—ಅನ್ನವನ್ನು (ಹೊಂದಿ) । **ಮದಂತಿ**—ಹರ್ಷಿಸುವರೋ ಅಂತಹ । **ಋಕ್ವಭಿಃ**—ಸ್ತುತ್ಯರಾದ । **ಮರುದ್ಭಿಃ**—ಮರುತ್ತುಗಳನ್ನು । **ಧೃಷ್ಣುಯಾ**—ಕ್ಲೇಶಸಹಿಷ್ಣುವಾದ ನೀನು । **ಪ್ರ ಅರ್ಚ**—ಅತಿಶಯವಾಗಿ ಪೂಜಿಸು

॥ ಭಾವಾರ್ಥ ॥

ಎಲೈ ಶ್ಯಾವಾಶ್ವನೇ, ಯಾವ ಮರುತ್ತುಗಳು ಯಜ್ಞಾರ್ಹರಾಗಿ ಪ್ರತಿದಿನವೂ ಅಹಿಂಸಾತ್ಮಕವಾದ ಅನ್ನವನ್ನು ಹೊಂದಿ ಹರ್ಷಿಸುವರೋ ಅಂತಹ ಸ್ತುತ್ಯರಾದ ಮರುತ್ತುಗಳನ್ನು ಕ್ಲೇಶಸಹಿಷ್ಣುವಾದ ನೀನು ಅತಿಶಯವಾಗಿ ಪೂಜಿಸು.

## English Translation

Offer worship with perseverance, Shyavaswa, to the praise-deserving Maruts they who are adorable and delight in the daily offered and inoffensive sacrificial food

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಸೂಕ್ತದ್ರಷ್ಟೃವಾದ ಶ್ಯಾವಾಶ್ವಋಷಿಯು ಮರುದ್ದೇವತೆಗಳನ್ನು ಪೂಜಿಸು ಎಂದು ತನ್ನನ್ನು ತಾನೇ ಸಂಬೋಧನೆ ಮಾಡಿಕೊಂಡಿದ್ದಾನೆ. ಅಥವಾ ಯಜ್ಞಮಾಡುವ ಯಜಮಾನನು ಹೋತೃವೆಂಬ ಋತ್ವಿಜನ ಪಾತ್ರವನ್ನು ವಹಿಸಿ ಯಜ್ಞವನ್ನು ನೆರವೇರಿಸುತ್ತಿರುವ ಶ್ಯಾವಾಶ್ವಋಷಿಯನ್ನು ಈ ಋಕ್ಕಿನಲ್ಲಿ ಸಂಬೋಧಿಸಿರುವನೆಂದು ಬೇಕಾದರೂ ಹೇಳಬಹುದು.

**ಋಕ್ವಭಿಃ ಮರುದ್ಭಿಃ ಪ್ರ ಅರ್ಚ—ಸ್ತುತ್ಯಾನ್ ಮರುತಃ ಪೂಜಯ ।** ಈ ವಾಕ್ಯದಲ್ಲಿ **ಋಕ್ವಭಿಃ ಮರುದ್ಭಿಃ** ಎಂಬ ಶಬ್ದಗಳು ತೃತೀಯಾಬಹುವಚನಾಂತ ಪದಗಳಾಗಿದ್ದರೂ ಈ ಶಬ್ದಗಳಿಗೆ **ದ್ವಿತೀಯಾರ್ಥೇ ತೃತೀಯಾ** ದ್ವಿತೀಯಾರ್ಥವನ್ನು ಸೂಚಿಸಲು ತೃತಿಯಾವಿಭಕ್ತಿಯ ಪ್ರಯೋಗವಿರುವುದು ಎಂದು ಭಾಷ್ಯಕಾರರು ಹೇಳಿದಾರೆ. ಎಂದರೆ ಪೂಜಾರ್ಹರಾದ ಮರುದ್ದೇವತೆಗಳಿಂದ ಎಂಬ ಸಹಜಾರ್ಥಕ್ಕೆ ಬದಲಾಗಿ ಸ್ತುತ್ಯರಾದ ಅಥವಾ ಪೂಜಾರ್ಹರಾದ ಮರುದ್ದೇವತೆಗಳನ್ನು ಎಂದರ್ಥಮಾಡಬೇಕು. ಅಥವಾ ಈ ವಾಕ್ಯಕ್ಕೆ—**ಮರುದ್ಭಿರ್ಮರುತ್ಸದೃಶೈರ್ಋಕ್ವಭಿಃ ಸ್ತೋತ್ರೈರ್ವಾ ಅರ್ಚ ಸ್ತುಹೀತ್ಯರ್ಥಃ ।** ಮರುದ್ದೇವತೆಗಳಿಗೆ ಸಮಾನರಾದ ಸ್ತೋತ್ರಮಾಡುವ ಋತ್ವಿಗ್ಜನರಿಂದ ಅಥವಾ ಸ್ತೋತ್ರಗಳಿಂದ ಸ್ತುತಿಸು ಎಂಬ ಅರ್ಥವನ್ನಾದರೂ ಹೇಳಬಹುದೆಂದು ಸಾಯಣರು ಎರಡು ವಿಧವಾದ ಅರ್ಥವಿವರಣೆಮಾಡಿದಾರೆ.

**ಅನುಷ್ವದಂ—ಪ್ರತ್ಯಹಂ ।** ಪ್ರತಿದಿವಸವೂ ಎಂದರ್ಥವು. ಅನು ಎಂಬ ನಿಪಾತಶಬ್ದಕ್ಕೆ ಯಾಸ್ಕರು—**ಅನ್ವಿತಿ ಸಾದೃಶ್ಯಾಪರಭಾವಂ ।** (ನಿ. ೧-೩) ಎಂದು ನಿರ್ವಚನವನ್ನು ಹೇಳಿದಾರೆ. ಅನು ಎಂದರೆ ಸಾದೃಶ್ಯ, ಒಂದು ವಸ್ತುವಿನಂತೆ ಇರುವ ಇನ್ನೊಂದು ವಸ್ತುವನ್ನು ನಿರ್ದೇಶಿಸುವಾಗ ಅದರಂತೆ ಎಂದು ಸಾದೃಶ್ಯ ಅಥವಾ ಉಪಮಾನವನ್ನು ಹೇಳುವಾಗ ಅನು ಎಂಬ ಶಬ್ದದ ಪ್ರಯೋಗವಿರುವುದು. ಅಥವಾ ಒಂದಾದನಂತರ ಮತ್ತೊಂದು ಎಂಬರ್ಥವನ್ನು ಹೇಳುವಾಗಲೂ ಅನುಶಬ್ದದ ಪ್ರಯೋಗವಿರುವುದು ಪ್ರಕೃತಋಕ್ಕಿನಲ್ಲಿ ಅನುಷ್ವಧಂ ಎಂಬ ಶಬ್ದಕ್ಕೆ ಒಂದು ದಿನದ ನಂತರ ಬರುವ ಮತ್ತೊಂದು ದಿನ ಎಂದರೆ ಪ್ರತಿದಿನವು ಎಂಬ ಅರ್ಥವನ್ನು ಹೇಳಿದೆ.

॥ ಸಂಹಿತಾಪಾಠಃ ॥

ತೇ ಹಿ ಸ್ಥಿರಸ್ಯ ಶವಸಃ ಸಖಾಯಃ ಸಂತಿ ಧೃಷ್ಣುಯಾ ।
ತೇ ಯಾಮನ್ನಾ ಧೃಷದ್ವಿನಸ್ತ್ಮನಾ ಪಾಂತಿ ಶಶ್ವತಃ ॥ ೨ ॥

॥ ಪದಪಾಠಃ ॥

ತೇ । ಹಿ । ಸ್ಥಿರಸ್ಯ । ಶವಸಃ । ಸಖಾಯಃ । ಸಂತಿ । ಧೃಷ್ಣುಯಾ ।
ತೇ । ಯಾಮನ್ । ಆ । ಧೃಷತ್ಽವಿನಃ । ತ್ಮನಾ । ಪಾಂತಿ । ಶಶ್ವತಃ ॥ ೨ ॥

॥ ಸಾಯಣಭಾಷ್ಯಂ ॥

**ತೇ ಹಿ ತೇ ಖಲು ಸ್ಥಿರಸ್ಯಾವಿಚಲಿತಸ್ಯ ಶವಸೋ ಬಲಸ್ಯ ಸಖಾಯಃ ಸಂತಿ । ಭವಂತಿ ಮಹ್ಯಂ । ಧೃಷ್ಣುಯಾ ಧೃಷ್ಣವಃ । ತೇ ಚ ಯಾಮನ್ನಾ । ಆ ಇತಿ ಚಾರ್ಥೇ । ಗಮನೇಽಪಿ ಧೃಷದ್ವಿನೋ ಧರ್ಷಣವಂತಸ್ತ್ಮನಾತ್ಮನಾನುಗ್ರಹೇಚ್ಛೈವಾಸ್ಮದುಪಕಾರಮನಪೇಕ್ಷ್ಯೈವ ಶಶ್ವತೋ ಬಹೂನಸ್ಮಾನ್ಪುತ್ರಭೃತ್ಯಾದೀನ್ಪಾಂತಿ । ರಕ್ಷಂತಿ ॥**

॥ ಪ್ರತಿಪದಾರ್ಥ ॥

**ತೇ**—ಯಾವ ಅದೇ ದೇವತೆಗಳು । **ಯಾಮನ್**—ಸಂಚಾರಕಾಲದಲ್ಲೂ । **ಧೃಷದ್ವಿನಃ**—(ಶತ್ರುಗಳನ್ನು) ಪ್ರತಿಭಟಿಸುವ ಶಕ್ತಿಯುಳ್ಳವರಾಗಿ । **ತ್ಮನಾ**—ಸ್ವಪ್ರೇರಣೆಯಿಂದಲೇ । **ಶಶ್ವತಃ**—ಬಹುಸಂಖ್ಯಾಕರಾದ ನಮ್ಮ ಪುತ್ರಭೃತ್ಯಾದಿಗಳನ್ನು । **ಪಾಂತಿ**—ರಕ್ಷಿಸುತ್ತಾರೆಯೋ ಅಂತಹ । **ಧೃಷ್ಣುಯಾ**—ಧರ್ಷಣಶಕ್ತಿಯುಳ್ಳ । **ತೇ**—ಅದೇ ದೇವತೆಗಳು । **ಸ್ಥಿರಸ್ಯ**—ಶಾಶ್ವತವಾದ । **ಶವಸಃ**—ಬಲಕ್ಕೆ । **ಸಖಾಯಃ**—ಪ್ರಿಯರಾದ ಪುರುಷರಾಗಿ । **ಸಂತಿ**—ಆಗಿರುತ್ತಾರೆ.

॥ ಭಾವಾರ್ಥ ॥

ಯಾವ ಅದೇ ದೇವತೆಗಳು ಸಂಚಾರಕಾಲದಲ್ಲೂ ಶತ್ರುಗಳನ್ನು ಪ್ರತಿಭಟಿಸುವ ಶಕ್ತಿಯುಳ್ಳವರಾಗಿ ಸ್ವಪ್ರೇರಣೆಯಿಂದಲೇ ಬಹುಸಂಖ್ಯಾಕರಾದ ನಮ್ಮ ಪುತ್ರಭೃತ್ಯಾದಿಗಳನ್ನು ರಕ್ಷಿಸುತ್ತಾರೆಯೋ ಅಂತಹ ಧರ್ಷಣಶಕ್ತಿಯುಳ್ಳ ಅದೇ ದೇವತೆಗಳು ಶಾಶ್ವತವಾದ ಬಲಕ್ಕೆ ಪ್ರಿಯರಾದ ಪುರುಷರಾಗಿ ಆಗಿರುತ್ತಾರೆ.

English Translation

They are the firm friends of steady vigour, who, proceeding resolute on their way, willingly protect (our) numerous (descendants).

॥ ವಿಶೇಷವಿಷಯಗಳು ॥

**ತೇ ಸ್ಥಿರಸ್ಯ ಶವಸಃ ಸಖಾಯಃ ಸಂತಿ**—ಆ ಮರುದ್ದೇವತೆಗಳು ಸ್ಥಿರವಾದ ಬಲಕ್ಕೆ ಸ್ನೇಹಿತರಾಗಿ ಇರುತ್ತಾರೆ ಎಂದರೆ ಇವರಿಗೂ ಬಲಕ್ಕೂ ಯಾವಾಗಲೂ ಪರಸ್ಪರ ಸಂಬಂಧವಿದೆ, ಇವರು ಯಾವಾಗಲೂ ಶಕ್ತಿವಂತರು ಇವರ ಶಕ್ತಿಸಾಮರ್ಥ್ಯಗಳು ಬಹಳವಾಗಿವೆ. ಅವುಗಳಿಗೆ ಯಾವಾಗಲೂ ಚ್ಯುತಿಯಿಲ್ಲ ಎಂದಭಿಪ್ರಾಯವು.

**ತ್ಮನಾ-ಆತ್ಮನಾ** ಎಂಬ ಶಬ್ದದ ಆಕಾರವು ಛಾಂದಸವಾಗಿ ಲೋಪವಾಗಿ **ತ್ಮನಾ** ಎಂದು ಮಾತ್ರ ಉಳಿದಿದೆ. ಆದರೂ **ತ್ಮನಾ** ಎಂಬ ಶಬ್ದಕ್ಕೆ **ಆತ್ಮನಾ** ಎಂಬ ಶಬ್ದದ ಅರ್ಥವೇ ಇರುವುದು. ಈ ವಿಧವಾದ ಪ್ರಯೋಗವು ಋಗ್ವೇದದಲ್ಲಿ ವಿಶೇಷ ರೂಢಿಯಲ್ಲಿದೆ.

**ಆ**-ಆ ಎಂಬ ನಿಪಾತಕ್ಕೆ ಅನೇಕಾರ್ಥಗಳಿರುವವು ಎಂದು ಯಾಸ್ಕರು ಹೇಳಿ ಅವುಗಳನ್ನು ಉದಾಹರಣೆಮೂಲಕವಾಗಿ ಸ್ಪಷ್ಟಪಡಿಸಿದ್ದಾರೆ.

ಆ ಇತ್ಯರ್ವಾಗರ್ಥೇ ।　　(ನಿ ೧-೧೩)

ಇಲ್ಲಿಂದ ಮುಂದಕ್ಕೆ ಅಥವಾ ಸುತ್ತಲೂ ಎಂದರ್ಥವು. **ಆ ಪರ್ವತಾತ್** ಎಂಬಲ್ಲಿ ಪರ್ವತದಿಂದ ಮುಂದಕ್ಕಿರುವ ಪ್ರದೇಶಗಳು ಅಥವಾ ಪರ್ವತದ ಸುತ್ತಮುತ್ತಲಿನ ಪ್ರದೇಶಗಳು ಎಂದರ್ಥವು.

**ಏತಸ್ಮಿನ್ನೇವಾರ್ಥೇ (ಸಮುಚ್ಚಯಾರ್ಥೇ) ದೇವೇಭ್ಯಶ್ಚ ಪಿತೃಭ್ಯ ಏತ್ಯಾಕಾರಃ ॥ (ನಿ. ೧.೪)**
ಸಮುಚ್ಚಯಾರ್ಥ ಎಂದರೆ ಮತ್ತು (ಎರಡು ಶಬ್ದಗಳಿಗೆ ಸಂಬಂಧವನ್ನು ತೋರಿಸುವ) ಎಂಬರ್ಥದಲ್ಲಿಯೂ ಆ ಎಂಬ ಶಬ್ದದ ಪ್ರಯೋಗವಿರುವುದು. **ದೇವೇಭ್ಯಶ್ಚ ಪಿತೃಭ್ಯ ಆ** ಎಂಬ ವಾಕ್ಯದಲ್ಲಿ ಆ ಎಂಬ ಶಬ್ದಕ್ಕೆ ಚ ಶಬ್ದಕ್ಕೆ ಇರುವ ಮತ್ತು ಎಂಬರ್ಥವೇ ಇರುವುದು. ಎಂದರೆ ದೇವತೆಗಳಿಗೂ ಮತ್ತು ಪಿತೃಗಳಿಗೂ ಎಂದು ವಾಕ್ಯದ ಅರ್ಥವು.

**ಸರ್ವೋತ್ತರಾಣಿ ಪದಾನಿ ಸರ್ವಪದಸಮಾಮ್ನಾಯೇ ।**

**(ನಿ. ೩.೧೪)**

ಹಿಕಂ ಮೊದಲಾದ ಒಂಭತ್ತು ಶಬ್ದಗಳು ಸರ್ವಪದಸಮಾಮ್ನಾಯವೆಂಬ ಶಬ್ದಗಳು ಪಟ್ಟಿಯಲ್ಲಿ ಸೇರಿರುವುದು ಈ ಶಬಗಳಲ್ಲಿ ಆ ಎಂಬ ಶಬ್ದವೂ ಇರುವುದು. ಎಂದರೆ ಆ ಎಂಬ ಶಬ್ದವು ಯಾವುದಾದರೂ ನಿರ್ದಿಷ್ಟಾರ್ಥದಲ್ಲಿ ವಾಕ್ಯಪೂರಣಕ್ಕಾಗಿಉಪಯೋಗಿಸಲ್ಪಡುವುದು.

**ಅಥಾಪ್ಯುಪಮಾರ್ಥೇ ದೃಶ್ಯತೇ । ಜಾರ ಆ ಭಗಂ ।** (ಋ ಸಂ ೧೦ ೧೧-೬) **ಜಾರ ಇವ ಭಗಂ । ಆದಿತ್ಯೋಽತ್ರ ಜಾರ ಉಚ್ಯತೇ । ರಾತ್ರೇರ್ಜರಯಿತಾ । ಸ ಏವ ಭಾಸಾಂ ॥**

( ನಿ, ೩.೧೩)

ಉಪಮಾರ್ಥದಲ್ಲಿಯೂ (ಹೋಲಿಕೆ) ಆ ಎಂಬ ಶಬ್ದದ ಪ್ರಯೋಗವಿರುವುದು ಎಂದರೆ ಆ ಎಂಬ ಶಬ್ದಕ್ಕೆ ಇವ ಎಂಬ ಶಬ್ದದ ಅರ್ಥವಿರುವುದು. **ಜಾರ ಆ ಭಗಂ** ಎಂಬ ವಾಕ್ಯಕ್ಕೆ **ಜಾರ ಇವ ಭಗಂ** । ಆದಿತ್ಯನಂತೆ ಇರುವ ಭಗದೇವತೆಯನ್ನು ಎಂದರ್ಥವು.

**ಆ । ಆ ಇತ್ಯಾಕಾರ ಉಪಸರ್ಗಃ ಪುರಸ್ತಾದೇವ ವ್ಯಾಖ್ಯಾತಃ । ಅಥಾಪ್ಯಧ್ಯರ್ಥೇ ದೃಶ್ಯತೇ । ಅಭ್ರ ಆ ಅಪಃ । ಅಭ್ರೇ ಆ ಅಪೋಽಪೋಽಭ್ರೇಽಧೀತಿ ॥**

( ನಿ ೫-೫)

ಆ ಎಂಬುದು ಉಪಸರ್ಗವು ಇದರ ಕೆಲವು ಅರ್ಥಗಳನ್ನು ಮೇಲೆಯೇ ಹೇಳಿದೆ ಈ ಅರ್ಥಗಳಲ್ಲದೆ ಈ ಶಬ್ದಕ್ಕೆ ಅಧಿ ಮೇಲೆ ಎಂಬ ಅರ್ಥವೂ ಇರುವುದು ಉದಾ—**ಅಭ್ರ ಆ ಅಪಃ** ಎಂಬಲ್ಲಿ (ಋ. ಸಂ. ೫-೪೮.೧) ಮೇಘದ ಮೇಲೆ ಇರುವ ಉದಕ ಎಂದೂ **ತೋದಸ್ಯೇವ ಆ ಮಹಸ್ಯ** (ಋ. ಸಂ. ೧-೧೫೦-೧) ಎಂಬಲ್ಲಿಯೂ ಆ ಎಂಬ ಶಬ್ದಕ್ಕೆ ಅಧಿ–ಮೇಲೆ ಎಂಬರ್ಥವಿರುವುದು.

॥ ಸಂಹಿತಾಪಾಠಃ ॥

ತೇ ಸ್ಯಂದ್ರಾಸೋ ನೋಕ್ಷಣೋಽತಿ ಷ್ಕಂದಂತಿ ಶರ್ವರೀಃ ।
ಮರುತಾಮಧಾ ಮಹೋ ದಿವಿ ಕ್ಷಮಾ ಚ ಮನ್ಮಹೇ ॥ ೩ ॥

॥ ಪದಪಾಠಃ ॥

ತೇ । ಸ್ಯಂದ್ರಾಸಃ । ನ । ಉಕ್ಷಣಃ । ಅತಿ । ಸ್ಕಂದಂತಿ । ಶರ್ವರೀಃ ।
ಮರುತಾಂ । ಅಧ । ಮಹಃ । ದಿವಿ । ಕ್ಷಮಾ । ಚ । ಮನ್ಮಹೇ ॥ ೩ ॥

॥ ಸಾಯಣಭಾಷ್ಯಂ ॥

ತೇ ಮರುತಃ ಸ್ಯಂದ್ರಾಸಃ ಸ್ಯಂದನಶೀಲಾ ಉಕ್ಷಣೋ ಜಲಸ್ಯ ಸೇಕ್ತಾರಶ್ಚ । ನೇತಿ ಚಾರ್ಥೇ । ಯಸ್ಮಾತ್ಸ್ಯಂದ್ರಾ ಅನ್ಯೇಷಾಂ ತಸ್ಮಾತ್ ಶರ್ವರೀಃ । ಶರ್ವರ್ಯೋ ರಾತ್ರಯಃ । ಕಾಲಾವಯವಾನಿತ್ಯರ್ಥಃ । ತಾನತಿ ಸ್ಕಂದಂತಿ । ಅತಿಕ್ರಮ್ಯ ಗಚ್ಛಂತಿ । ನಿತ್ಯಾ ಇತ್ಯರ್ಥಃ । ಯಸ್ಮಾದೇತ ಏವಂವಿಧಾಸ್ತಸ್ಮಾನ್ಮರುತಾಮಧಾಧುನಾ ಮಹಸ್ತೇಜೋ ದಿವಿ ದ್ಯುಲೋಕೇ ಕ್ಷಮಾ ಕ್ಷಮಾಯಾಂ ಭೂಮೌ ಚ ವರ್ತಮಾನಂ ಮನ್ಮಹೇ । ಸ್ತುಮಃ ।

॥ ಪ್ರತಿಪದಾರ್ಥ ॥

**ತೇ**— ಮರುತ್ತುಗಳು । **ಸ್ಯಂದ್ರಾಸಃ**— ತುಂತುರುಗಳಿಂದ ತೊಯ್ಯುವಂತೆ ಮಾಡುತ್ತಲೂ । **ಉಕ್ಷಣಃ**— ಜಲಸೇಚಕರಾಗಿಯೂ । **ಶರ್ವರೀಃ**— ರಾತ್ರಿಗಳನ್ನು । **ಅತಿ ಸ್ಕಂದಂತಿ**— ಅತಿಕ್ರಮಿಸಿ (ಕಾಲನಿಯಮಗಳಿಗೆ ಅತಿರಿಕ್ತರಾಗಿ) ಸಂಚರಿಸುತ್ತಾರೆ (ಆದುದರಿಂದ) । **ದಿವಿ** – ದ್ಯುಲೋಕದಲ್ಲಿಯೂ । **ಕ್ಷಮಾ**— ಪೃಥ್ವಿಯಲ್ಲಿಯೂ ಹರಡಿರುವ । **ಮರುತಾಂ**— ಮರುತ್ತುಗಳ । **ಮಹಃ**— ತೇಜಸ್ಸನ್ನು । **ಅಧ**— ಈಗ । **ಮನ್ಮಹೇ**— ಸ್ತುತಿಸುತ್ತೇವೆ

॥ ಭಾವಾರ್ಥ ॥

ಮರುತ್ತುಗಳು ಜಗತ್ತನ್ನು ತುಂತುರುಗಳಿಂದ ತೊಯ್ಯುವಂತೆ ಮಾಡುತ್ತಲೂ ಜಲಸೇಚಕರಾಗಿಯೂ, ರಾತ್ರ್ಯಾದಿ ಕಾಲನಿಯಮಗಳನ್ನು ಮೀರಿದವರಾಗಿಯೂ ತಮ್ಮ ಪ್ರಭಾವಗಳೊಡನೆ ಸಂಚರಿಸುತ್ತಾರೆ. ಆದುದರಿಂದ ದ್ಯುಲೋಕದಲ್ಲಿಯೂ, ಪೃಥ್ವಿಯಲ್ಲಿಯೂ ಹರಡಿರುವ ಮರುತ್ತುಗಳ ತೇಜಸ್ಸನ್ನು ಈಗ ಸ್ತುತಿಸುತ್ತೇವೆ.

English Translation

Gliding along. and shedding moisture, they pass through the nights: therefore we now celebrate the might of the Maruts, manifested in both heaven nad earth

॥ ವಿಶೇಷವಿಷಯಗಳು ॥

ಮಳೆಯು ಹುಯ್ಯುತ್ತಿರುವಾಗ ಮರುದ್ದೇವತೆಗಳ ಚಲನವು ವಿಶೇಷವಾಗಿರುವುದರಿಂದ ಎಂದರೆ ಗಾಳಿಯು ಬಹು ರಭಸದಿಂದ ಬೀಸುತ್ತಿರುವುದರಿಂದ ಮರುತ್ತುಗಳನ್ನು ಜಲಸೇಚಕರೆಂದು ಇಲ್ಲಿ ವರ್ಣಿಸಿದೆ.

॥ ಸಂಹಿತಾಪಾಠಃ ॥

ಮರುತ್ಸು ವೋ ದಧೀಮಹಿ ಸ್ತೋಮಂ ಯಜ್ಞಂ ಚ ಧೃಷ್ಣುಯಾ ।
ವಿಶ್ವೇ ಯೇ ಮಾನುಷಾ ಯುಗಾ ಪಾಂತಿ ಮರ್ತ್ಯಂ ರಿಷಃ ॥ ೪ ॥

॥ ಪದಪಾಠಃ ॥

ಮರುತ್ऽಸು । ವಃ । ದಧೀಮಹಿ । ಸ್ತೋಮಂ । ಯಜ್ಞಂ । ಚ । ಧೃಷ್ಣುಯಾ ।
ವಿಶ್ವೇ । ಯೇ । ಮಾನುಷಾ । ಯುಗಾ । ಪಾಂತಿ । ಮರ್ತ್ಯಂ । ರಿಷಃ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಅಧ್ವರ್ಯುರ್ಹೋತ್ರಾದಯೋ ವೋ ಯೂಯಂ ಮರುತ್ಸು ಧೃಷ್ಣುಯಾ ಧರ್ಷಕೇಷು ದಧೀಮಹಿ ॥ ವ್ಯತ್ಯಯೇನೋತ್ತಮಃ ॥ ಧತ್ತ । ಕಿಂ । ಸ್ತೋಮಂ ಸ್ತೋತ್ರಂ ಯಜ್ಞಂ ಚ । ಇಜ್ಯತೇऽನೇನೇತಿ ಯಜ್ಞಂ ಹವಿಃ । ತದುಭಯಂ ಕಿಮರ್ಥಂ ದೀಯತ ಇತಿ । ಯೇ ಮರುತೋ ವಿಶ್ವೇ ಸರ್ವೇऽಪಿ ಮಾನುಷಾ ಮಾನುಷಾಣಿ ಯುಗಾ ಯುಗಾನಿ । ಸರ್ವೇಷು ಕಾಲೇಷ್ವಿತ್ಯರ್ಥಃ । ಮರ್ತ್ಯಂ ಮರಣಧರ್ಮಾಣಂ ಯಜಮಾನಂ ರಿಷೋ ಹಿಂಸಕಾತ್ಸಕಾಶಾತ್ಪಾಂತಿ ರಕ್ಷಂತಿ ॥**

॥ ಪ್ರತಿಪದಾರ್ಥ ॥

(ಎಲೈ ಅಧ್ವರ್ಯುಗಳೇ) **ಯೇ**—ಯಾವ ಮರುತ್ತುಗಳು । **ವಿಶ್ವೇ**—ಸಂಪೂರ್ಣವಾದ । **ಮಾನುಷಾ ಯುಗಾ**—ಮಾನವನ ಆಯುಷ್ಕಾಲಗಳಲ್ಲೆಲ್ಲಾ । **ಮರ್ತ್ಯಂ**—ಮಾನವನಾದ ಯಜಮಾನನನ್ನು । **ರಿಷಃ**—ಹಿಂಸಕನಾದ ಶತ್ರುವಿನಿಂದ । **ಪಾಂತಿ**—ರಕ್ಷಿಸುವರೋ ಅಂತಹ । **ಧೃಷ್ಣುಯಾ**—ಶತ್ರುಧರ್ಷಕರಾದ । **ಮರುತ್ಸು**—ಮರುತ್ತುಗಳನ್ನುದ್ದೇಶಿಸಿ । **ವಃ**—ನೀವು । **ಸ್ತೋಮಂ**—ಸ್ತೋತ್ರವನ್ನೂ । **ಯಜ್ಞಂ ಚ**—ಹವಿಸ್ಸನ್ನೂ । **ದಧೀಮಹಿ**—ಅರ್ಪಿಸಿರಿ.

॥ ಭಾವಾರ್ಥ ॥

ಎಲೈ ಅಧ್ವರ್ಯುಗಳೇ, ಯಾವ ಮರುತ್ತುಗಳು ಸಂಪೂರ್ಣವಾದ ಮಾನವನ ಆಯುಷ್ಕಾಲಗಳಲ್ಲೆಲ್ಲಾ ಮಾನವನಾದ ಯಜಮಾನನನ್ನು ಹಿಂಸಕನಾದ ಶತ್ರುವಿನಿಂದ ರಕ್ಷಿಸುವರೋ ಅಂತಹ ಶತ್ರುಧರ್ಷಕರಾದ ಮರುತ್ತುಗಳನ್ನುದ್ದೇಶಿಸಿ ಸ್ತುತಿಯನ್ನೂ ಹವಿಸ್ಸನ್ನೂ ಅರ್ಪಿಸಿರಿ.

## English Translation

We enjoin you, (priests), to offer earnestly praise and sacrifice to the Maruts, who through all human ages, protect the mortal worshipper from harm.

॥ ವಿಶೇಷವಿಷಯಗಳು ॥

**ಮಾನುಷಾ ಯುಗಾ—ಮಾನುಷಾಣಿ ಯುಗಾನಿ । ಸರ್ವೇಷು ಕಾಲೇಷ್ವಿತ್ಯರ್ಥಃ ।** ಮನುಷ್ಯನು ಜೀವಿಸಿರುವಷ್ಟು ಕಾಲದಲ್ಲಿ; ಯಜಮಾನನು ಜೀವಿಸಿರುವ ಕಾಲದಲ್ಲಿ ಎಂದಭಿಪ್ರಾಯವು.

॥ ಸಂಹಿತಾಪಾಠಃ ॥

ಅರ್ಹಂತೋ ಯೇ ಸುದಾನವೋ ನರೋ ಅಸಾಮಿಶವಸಃ ।
ಪ್ರ ಯಜ್ಞಂ ಯಜ್ಞಿಯೇಭ್ಯೋ ದಿವೋ ಅರ್ಚಾ ಮರುದ್ಭ್ಯಃ ॥ ೫ ॥

॥ ಪದಪಾಠಃ ॥

ಅರ್ಹಂತಃ । ಯೇ । ಸುऽದಾನವಃ । ನರಃ । ಅಸಾಮಿऽಶವಸಃ ।
ಪ್ರ । ಯಜ್ಞಂ । ಯಜ್ಞಿಯೇಭ್ಯಃ । ದಿವಃ । ಅರ್ಚ । ಮರುತ್ऽಭ್ಯಃ ॥ ೫ ॥

॥ ಸಾಯಣಭಾಷ್ಯಂ ॥

**ಹೇ ಹೋತಃ ಹೇ ಆತ್ಮನ್ವಾ ಯೇऽರ್ಹಂತಃ ಪೂಜ್ಯಾಃ ಸುದಾನವಃ ಶೋಭನದಾನಾ ನರೋ ನೇತಾರಃ ಕರ್ಮಣಾಮಸಾಮಿಶವಸೋऽನಲ್ಪಬಲಾಃ ಸಂತಿ ತೇಭ್ಯೋ ಯಜ್ಞಿಯೇಭ್ಯೋ ಯಜ್ಞಾರ್ಹೇಭ್ಯೋ ದಿವೋ ದ್ಯೋತಮಾನೇಭ್ಯೋ ಮರುದ್ಭ್ಯಃ ॥ ವಿಭಕ್ತಿವಚನಯೋರ್ವ್ಯತ್ಯಯಃ ॥ ಯದ್ವಾ ಕರ್ಮಣಿ ಷಷ್ಠೀ ॥ ದೀಪ್ತಂ ಯಜ್ಞಂ ಯಜ್ಞಸಾಧನಂ ಹವಿಃ ಪ್ರಾರ್ಚ । ಪೂಜಯ । ಪ್ರಯಚ್ಛೇತ್ಯರ್ಥಃ । ಅಥವಾ ದಿವೋऽಂತರಿಕ್ಷಾದಾಗತೇಭ್ಯ ಇತಿ ಸಂಬಂಧಃ ॥**

॥ ಪ್ರತಿಪದಾರ್ಥ ॥

(ಎಲೈ ಹೋತೃವೇ) **ಯೇ**—ಯಾವ ಮರುತ್ತುಗಳು । **ಅರ್ಹಂತಃ**—ಪೂಜ್ಯರಾಗಿಯೂ । **ಸುದಾನವಃ**-ಉತ್ತಮವಾದ ದಾನಮನಸ್ಸುಳ್ಳವರಾಗಿಯೂ । **ನರಃ**—ಕರ್ಮಗಳಿಗೆ ನೇತೃಗಳಾಗಿಯೂ। **ಅಸಾಮಿಶವಸಃ**—ಅತ್ಯಧಿಕವಾದ ಬಲವುಳ್ಳವರಾಗಿಯೂ ಇರುವರೋ ಅಂತಹ । **ಯಜ್ಞಿಯೇಭ್ಯಃ**—ಯಜ್ಞಾರ್ಹರೂ । **ದಿವಃ**—ಪ್ರಕಾಶಮಾನರೂ ಆದ । **ಮರುದ್ಭ್ಯಃ**—ಮರುತ್ತುಗಳನ್ನುದ್ದೇಶಿಸಿ । **ಯಜ್ಞಂ**—ಹವಿಸ್ಸನ್ನು । **ಪ್ರ ಅರ್ಚ**—ಅತಿಶಯವಾಗಿ ಅರ್ಪಿಸು.

॥ ಭಾವಾರ್ಥ ॥

ಎಲೈ ಹೋತೃವೇ, ಯಾವ ಮರುತ್ತುಗಳು ಪೂಜ್ಯರಾಗಿಯೂ, ಉತ್ತಮವಾದ ದಾನಮನಸ್ಸುಳ್ಳವರಾಗಿಯೂ ಕರ್ಮಗಳಿಗೆ ನೇತೃಗಳಾಗಿಯೂ, ಅತ್ಯಧಿಕವಾದ ಬಲವುಳ್ಳವರಾಗಿಯೂ ಇರುವರೋ ಅಂತಹ ಯಜ್ಞಾರ್ಹರೂ, ಪ್ರಕಾಶಮಾನರೂ ಆದ ಮರುತ್ತುಗಳನ್ನು ಉದ್ದೇಶಿಸಿ ಹವಿಸ್ಸನ್ನು ಭಕ್ತಿಭಾವದಿಂದ ಅರ್ಪಿಸು.

English Translation

Offer sacrifice to the adorable Maruts, who (have come) from heaven who are worthy of worship, munificent leaders (of rites), and possessors of unequalled strength.

॥ ವಿಶೇಷವಿಷಯಗಳು ॥

**ಅಸಾಮಿಶವಸಃ—ಅನಲ್ಪಬಲಾಃ ।** ಅಲ್ಪವಲ್ಲದ ಎಂದರೆ ಅಧಿಕವಾದ ಬಲವುಳ್ಳವರು ಎಂದರ್ಥವು. ಯಾಸ್ಕರು ಅಸಾಮಿಶಬ್ದಕ್ಕೆ ನಿರ್ವಚನವನ್ನು ಈ ರೀತಿ ಹೇಳಿದಾರೆ—

**ಅಸಾಮಿ । ಬೃಹಸ್ಪತಿಂ ವರ್ಧಯ ನವ್ಯಮರ್ಕೈರರ್ಚನೀಯೈಃ ಸ್ತೋತ್ರೈರಸಾಮಿ ಸಾಮಿ ಪ್ರತಿಷಿದ್ಧಂ । ಸಾಮಿ ಸ್ಯತೇಃ । ಅಸಾಮ್ಯೋಜೋ ಬಿಭೃಥಾ ಸುದಾನವಃ । ಅನುಸಮಾಪ್ತಂ ಬಲಂ ಬಿಭೃತ ಕಲ್ಯಾಣದಾನಾಃ ॥**

(ನಿ. ೬.೨೩)

ಸ್ಯತಿ (ಕೊಲ್ಲು) ಧಾತುವಿನಿಂದ ನಿಷ್ಪನ್ನವಾದ ಸಾಮಿ ಎಂಬ ಶಬ್ದಕ್ಕೆ ಕೊನೆಗಾಣಿಸುವ, ಸ್ವಲ್ಪವಾಗಿರುವ ಎಂದರ್ಥವು. ಈ ಸಾಮಿಶಬ್ದಕ್ಕೆ ನಿಷೇಧಾರ್ಥಕವಾದ ಅ ಎಂಬ ಉಪಸರ್ಗವು ಸೇರಿ ಅಸಾಮಿ ಎಂದಾಗಿದೆ. ಆದ್ದರಿಂದ ಸಾಮಿ ಶಬ್ದಕ್ಕೆ ಇರುವ ಅರ್ಥಕ್ಕೆ ವಿರೋಧವಾದ ಅರ್ಥವೇ ಅಸಾಮಿ ಶಬ್ದಕ್ಕೆ ಇರುವುದು. ಸಾಮಿ ಶಬ್ದಕ್ಕೆ ಅಲ್ಪವೆಂಬರ್ಥವಿದೆ. ಆದ್ದರಿಂದ ಅಸಾಮಿಶಬ್ದಕ್ಕೆ ಅಲ್ಪವಲ್ಲದ ಎಂದರೆ ಅತ್ಯಧಿಕವಾದ ಎಂಬರ್ಥವನ್ನು ಹೇಳಬಹುದು. ನಿರುಕ್ತಕಾರರು ಇಲ್ಲಿ ಕೊಟ್ಟಿರುವ—**ಬೃಹಸ್ಪತಿಂ ವರ್ಧಯ ನವ್ಯಮರ್ಕೈರಸಾಮಿ** ಮತ್ತು **ಅಸಾಮ್ಯೋಜೋ ಬಿಭೃಥಾ ಸುದಾನವಃ** ಎಂಬ ಉದಾಹರಣ ವಾಕ್ಯಗಳಲ್ಲಿರುವ ಅಸಾಮಿಶಬ್ದಕ್ಕೆ ಅಧಿಕವಾದ, ಬಹಳವಾದ ಎಂದೇ ಅರ್ಥವು.

॥ ಸಂಹಿತಾಪಾಠಃ ॥

**ಆ ರುಕ್ಮೈರಾ ಯುಧಾ ನರ ಋಷ್ವಾ ಋಷ್ಟೀರಸೃಕ್ಷತ ॥**

**ಅನ್ವೇನಾಁ ಅಹ ವಿದ್ಯುತೋ ಮರುತೋ ಜಜ್ಝತೀರಿವ ಭಾನುರರ್ತ ತ್ಮನಾ ದಿವಃ ॥ ೬ ॥**

॥ ಪದಪಾಠಃ ॥

ಆ । ರುಕ್ಮೈಃ । ಆ । ಯುಧಾ । ನರಃ । ಋಷ್ವಾಃ । ಋಷ್ಟೀಃ । ಅಸೃಕ್ಷತ ।

ಅನು । ಏನಾನ್ । ಅಹ । ವಿದ್ಯುತಃ । ಮರುತಃ । ಜಜ್ಝತೀಃಽಇವ । ಭಾನುಃ । ಅರ್ತ । ತ್ಮನಾ ।
ದಿವಃ ॥ ೬ ॥

ಸಾಯಣಭಾಷ್ಯಂ ॥

ನರೋ ವೃಷ್ಟೇರ್ನೇತಾರ ಋಷ್ವಾ ಮಹಾಂತೋ ಮರುತೋ ರುಕ್ಮೈ ರೋಚಮಾನೈರಾಭರಣವಿಶೇಷೈರಾ ರೋಚಂತ ಇತಿ ಶೇಷಃ ॥ ಉಪಸರ್ಗಶ್ರುತೇಃ ಸಂಗತಕ್ರಿಯಾಧ್ಯಾಹಾರಃ ॥ ತಥಾ ಯುಧಾ ಪ್ರಹರಣಸಾಧನೇನಾಯುಧೇನಾ ರೋಚಂತೇ । ಏತೇ ಮರುತ ಋಷ್ಟೀರಾಯುಧವಿಶೇಷಾನಸೃಕ್ಷತ । ಪ್ರಕ್ಷಿಪಂತಿ ಮೇಘಭೇದಾರ್ಥಂ । ಏನಾನ್ಮರುತೋ ವಿದ್ಯುತೋಽಪಿ ಜಝ್ಝತೀರಿವ ಶಬ್ದಕಾರಿಣ್ಯ ಆಪ ಇವ । ಜಝ್ಝತೀರಾಪೋ ಭವಂತಿ ಶಬ್ದಕಾರಿಣ್ಯಃ । ನಿ-೬-೧೬ । ಇತಿ ನಿರುಕ್ತಂ । ಅನ್ವಹ ಅನುಗಚ್ಛಂತ್ಯೇವ । ದಿವೋ ದ್ಯೋತಮಾನಸ್ಯ ಮರುದ್ಗಣಸ್ಯ ಭಾನುರ್ದೀಪ್ತಿಸ್ತ್ಮನಾ ಸ್ವಯಮೇವಾರ್ತ । ನಿರಗಾತ್ ॥

॥ ಪ್ರತಿಪದಾರ್ಥ ॥

**ನರಃ**—ನೇತೃಗಳೂ । **ಋಷ್ವಾಃ**—ಮಹಾತ್ಮರೂ ಆದ ಮರುತ್ತುಗಳು । **ರುಕ್ಮೈಃ**—ತಮ್ಮ ಹೊಂಬಣ್ಣದ ಆಭರಣಗಳಿಂದ । **ಆ (ರೋಚಂತೇ)**—ಪ್ರಕಾಶಿಸುತ್ತಾರೆ । **ಯುಧಾ**—ಪ್ರಹರಣಸಾಧನವಾದ ಆಯುಧದೊಡನೆ । **ಆ**—ಪ್ರಕಾಶಿಸುತ್ತಾರೆ । **ಋಷ್ಟೀಃ**—ತಮ್ಮ ಭರ್ಜಿಗಳನ್ನು । **ಅಸೃಕ್ಷತ**—(ಶತ್ರುಗಳ ಮೇಲೆ) ಪ್ರಯೋಗಿಸುತ್ತಾರೆ । **ಏನಾನ್ ಮರುತಃ**—ಈ ಮರುತ್ತುಗಳನ್ನು । **ವಿದ್ಯುತಃ**—ವಿದ್ಯುತ್ತುಗಳು । **ಜಜ್ಝತೀರಿವ**—ಶಬ್ದಮಾಡುತ್ತಾ ಹರಿಯುವ ನೀರಿನ ಝರಿಗಳಂತೆ । **ಅನು ಅಹ**—ಅನುಸರಿಸಿಯೇ ತೀರುತ್ತವೆ । **ದಿವಃ**—ಪ್ರಕಾಶಮಾನವಾದ ಮರುದ್ಗಣದ । **ಭಾನುಃ**—ಪ್ರಭೆಯು । **ತ್ಮನಾ ಅರ್ತ**—ಸ್ವಪ್ರಕಾಶಿತವಾಗುತ್ತದೆ.

॥ ಭಾವಾರ್ಥ ॥

ನೇತೃಗಳೂ ಮಹಾತ್ಮರೂ ಆದ ಮರುತ್ತುಗಳು ತಮ್ಮ ಹೊಂಬಣ್ಣದ ಆಭರಣಗಳಿಂದಲೂ, ಪ್ರಹರಣ ಸಾಧನವಾದ ಆಯುಧದೊಡನೆಯೂ ಪ್ರಕಾಶಿಸುತ್ತಾರೆ. ತಮ್ಮ ಭರ್ಜಿಗಳನ್ನು ಶತ್ರುಗಳಮೇಲೆ ಪ್ರಯೋಗಿಸುತ್ತಾರೆ. ಶಬ್ದಮಾಡುತ್ತಾ ಹರಿಯುವ ನೀರುಗಳಂತೆ ಈ ವಿದ್ಯುತ್ತುಗಳು ಮರುತ್ತುಗಳನ್ನು ನಿಯತವಾಗಿ ಅನುಸರಿಸುತ್ತವೆ. ಪ್ರಕಾಶಮಾನವಾದ ಮರುದ್ಗಣದ ಪ್ರಭೆಯು ಸ್ವಪ್ರಕಾಶಿತವೇ ಆಗಿರುತ್ತದೆ.

## English Translation

Leaders (of the rains), the mighty Maruts shine with brilliant ornaments and weapons, and hurl javeline ( at their foes, the clouds ): the

॥ ಭಾವಾರ್ಥ ॥

ಎಲೈ ಹೋತೃವೇ, ಯಾವ ಮರುತ್ತುಗಳು ಪೂಜ್ಯರಾಗಿಯೂ, ಉತ್ತಮವಾದ ದಾನಮನಸ್ಸುಳ್ಳವರಾಗಿಯೂ ಕರ್ಮಗಳಿಗೆ ನೇತೃಗಳಾಗಿಯೂ, ಅತ್ಯಧಿಕವಾದ ಬಲವುಳ್ಳವರಾಗಿಯೂ ಇರುವರೋ ಅಂತಹ ಯಜ್ಞಾರ್ಹರೂ, ಪ್ರಕಾಶಮಾನರೂ ಆದ ಮರುತ್ತುಗಳನ್ನು ಉದ್ದೇಶಿಸಿ ಹವಿಸ್ಸನ್ನು ಭಕ್ತಿಭಾವದಿಂದ ಅರ್ಪಿಸು.

English Translation

Offer sacrifice to the adorable Maruts, who (have come) from heaven who are worthy of worship, munificent leaders (of rites), and possessors of unequalled strength.

॥ ವಿಶೇಷವಿಷಯಗಳು ॥

**ಅಸಾಮಿಶವಸಃ—ಅನಲ್ಪಬಲಾಃ ।** ಅಲ್ಪವಲ್ಲದ ಎಂದರೆ ಅಧಿಕವಾದ ಬಲವುಳ್ಳವರು ಎಂದರ್ಥವು. ಯಾಸ್ಕರು ಅಸಾಮಿಶಬ್ದಕ್ಕೆ ನಿರ್ವಚನವನ್ನು ಈ ರೀತಿ ಹೇಳಿದಾರೆ—

**ಅಸಾಮಿ । ಬೃಹಸ್ಪತಿಂ ವರ್ಧಯ ನವ್ಯಮರ್ಕೈರರ್ಚನೀಯೈಃ ಸ್ತೋತ್ರೈರಸಾಮಿ ಸಾಮಿ ಪ್ರತಿಷಿದ್ಧಂ । ಸಾಮಿ ಸ್ಯತೇಃ । ಅಸಾಮ್ಯೋಜೋ ಬಿಭೃಥಾ ಸುದಾನವಃ । ಅನುಸಮಾಪ್ತಂ ಬಲಂ ಬಿಭೃತ ಕಲ್ಯಾಣದಾನಾಃ ॥**

(ನಿ. ೬.೨೩)

ಸ್ಯತಿ (ಕೊಲ್ಲು) ಧಾತುವಿನಿಂದ ನಿಷ್ಪನ್ನವಾದ ಸಾಮಿ ಎಂಬ ಶಬ್ದಕ್ಕೆ ಕೊನೆಗಾಣಿಸುವ, ಸ್ವಲ್ಪವಾಗಿರುವ ಎಂದರ್ಥವು. ಈ ಸಾಮಿಶಬ್ದಕ್ಕೆ ನಿಷೇಧಾರ್ಥಕವಾದ ಅ ಎಂಬ ಉಪಸರ್ಗವು ಸೇರಿ ಅಸಾಮಿ ಎಂದಾಗಿದೆ. ಆದ್ದರಿಂದ ಸಾಮಿ ಶಬ್ದಕ್ಕೆ ಇರುವ ಅರ್ಥಕ್ಕೆ ವಿರೋಧವಾದ ಅರ್ಥವೇ ಅಸಾಮಿ ಶಬ್ದಕ್ಕೆ ಇರುವುದು. ಸಾಮಿ ಶಬ್ದಕ್ಕೆ ಅಲ್ಪವೆಂಬರ್ಥ ವಿದೆ. ಆದ್ದರಿಂದ ಅಸಾಮಿಶಬ್ದಕ್ಕೆ ಅಲ್ಪವಲ್ಲದ ಎಂದರೆ ಅತ್ಯಧಿಕವಾದ ಎಂಬರ್ಥವನ್ನು ಹೇಳಬಹುದು. ನಿರುಕ್ತಕಾರರು ಇಲ್ಲಿ ಕೊಟ್ಟಿರುವ—**ಬೃಹಸ್ಪತಿಂ ವರ್ಧಯ ನವ್ಯಮರ್ಕೈರಸಾಮಿ** ಮತ್ತು **ಅಸಾಮ್ಯೋಜೋ ಬಿಭೃಥಾ ಸುದಾನವಃ** ಎಂಬ ಉದಾಹರಣ ವಾಕ್ಯಗಳಲ್ಲಿರುವ ಅಸಾಮಿಶಬ್ದಕ್ಕೆ ಅಧಿಕವಾದ, ಬಹಳವಾದ ಎಂದೇ ಅರ್ಥವು.

॥ ಸಂಹಿತಾಪಾಠಃ ॥

## ಆ ರುಕ್ಮೈರಾ ಯುಧಾ ನರ ಋಷ್ವಾ ಋಷ್ಟೀರಸೃಕ್ಷತ ॥
## ಅನ್ವೇನಾँ ಅಹ ವಿದ್ಯುತೋ ಮರುತೋ ಜಜ್ಝತೀರಿವ ಭಾನುರರ್ತ ತ್ಮನಾ ದಿವಃ ॥ ೬ ॥

॥ ಪದಪಾಠಃ ॥

ಆ । ರುಕ್ಮೈಃ । ಆ । ಯುಧಾ । ನರಃ । ಋಷ್ವಾಃ । ಋಷ್ಟೀಃ । ಅಸೃಕ್ಷತ ।

ಅನು । ಏನಾನ್ । ಅಹ । ವಿಽದ್ಯುತಃ । ಮರುತಃ । ಜಜ್ಝತೀಃಽಇವ । ಭಾನುಃ । ಅರ್ತ । ತ್ಮನಾ । ದಿವಃ ॥ ೬ ॥

ಸಾಯಣಭಾಷ್ಯಂ ॥ ॥

ನರೋ ವೃಷ್ಟೇರ್ನೇತಾರ ಋಷ್ವಾ ಮಹಾಂತೋ ಮರುತೋ ರುಕ್ಮೈ ರೋಚಮಾನೈರಾಭರಣವಿಶೇಷೈರಾ ರೋಚಂತ ಇತಿ ಶೇಷಃ ॥ ಉಪಸರ್ಗಶ್ರುತೇಃ ಸಂಗತಕ್ರಿಯಾಧ್ಯಾಹಾರಃ ॥ ತಥಾ ಯುಧಾ ಪ್ರಹರಣಸಾಧನೇನಾಯುಧೇನಾ ರೋಚಂತೇ । ಏತೇ ಮರುತ ಋಷ್ಟೀರಾಯುಧವಿಶೇಷಾನಸೃಕ್ಷತ । ಪ್ರಕ್ಷಿಪಂತಿ ಮೇಘಭೇದಾರ್ಥಂ । ಏನಾನ್ಮರುತೋ ವಿದ್ಯುತೋಽಪಿ ಜಝ್ಝತೀರಿವ ಶಬ್ದಕಾರಿಣ್ಯ ಆಪ ಇವ । ಜಝ್ಝತೀರಾಪೋ ಭವಂತಿ ಶಬ್ದಕಾರಿಣ್ಯಃ । ನಿ-೬.೧೬ । ಇತಿ ನಿರುಕ್ತಂ । ಅನ್ವಹ ಅನುಗಚ್ಛಂತ್ಯೇವ । ದಿವೋ ದ್ಯೋತಮಾನಸ್ಯ ಮರುದ್ಗಣಸ್ಯ ಭಾನುರ್ದೀಪ್ತಿಸ್ತ್ಮನಾ ಸ್ವಯಮೇವಾರ್ತ । ನಿರಗಾತ್ ॥

॥ ಪ್ರತಿಪದಾರ್ಥ ॥

**ನರಃ**— ನೇತೃಗಳೂ । **ಋಷ್ವಾಃ**—ಮಹಾತ್ಮರೂ ಆದ ಮರುತ್ತುಗಳು । **ರುಕ್ಮೈಃ**—ತಮ್ಮ ಹೊಂಬಣ್ಣದ ಆಭರಣಗಳಿಂದ । **ಆ (ರೋಚಂತೇ)**—ಪ್ರಕಾಶಿಸುತ್ತಾರೆ । **ಯುಧಾ**—ಪ್ರಹರಣಸಾಧನವಾದ ಆಯುಧದೊಡನೆ । **ಆ**—ಪ್ರಕಾಶಿಸುತ್ತಾರೆ । **ಋಷ್ಟೀಃ**—ತಮ್ಮ ಭರ್ಜಿಗಳನ್ನು । **ಅಸೃಕ್ಷತ**—(ಶತ್ರುಗಳ ಮೇಲೆ) ಪ್ರಯೋಗಿಸುತ್ತಾರೆ । **ಏನಾನ್ ಮರುತಃ**—ಈ ಮರುತ್ತುಗಳನ್ನು । **ವಿದ್ಯುತಃ**—ವಿದ್ಯುತ್ತುಗಳು । **ಜಜ್ಝತೀರಿವ**—ಶಬ್ದಮಾಡುತ್ತಾ ಹರಿಯುವ ನೀರಿನ ಝರಿಗಳಂತೆ । **ಅನು ಅಹ**—ಅನುಸರಿಸಿಯೇ ಇರುತ್ತವೆ । **ದಿವಃ**—ಪ್ರಕಾಶಮಾನವಾದ ಮರುದ್ಗಣದ । **ಭಾನುಃ**—ಪ್ರಭೆಯು । **ತ್ಮನಾ ಅರ್ತ**— ಸ್ವಪ್ರಕಾಶಿತವಾಗುತ್ತದೆ.

॥ ಭಾವಾರ್ಥ ॥

ನೇತೃಗಳೂ ಮಹಾತ್ಮರೂ ಆದ ಮರುತ್ತುಗಳು ತಮ್ಮ ಹೊಂಬಣ್ಣದ ಆಭರಣಗಳಿಂದಲೂ, ಪ್ರಹರಣ ಸಾಧನವಾದ ಆಯುಧದೊಡನೆಯೂ ಪ್ರಕಾಶಿಸುತ್ತಾರೆ ತಮ್ಮ ಭರ್ಜಿಗಳನ್ನು ಶತ್ರುಗಳಮೇಲೆ ಪ್ರಯೋಗಿಸುತ್ತಾರೆ. ಶಬ್ದಮಾಡುತ್ತಾ ಹರಿಯುವ ನೀರುಗಳಂತೆ ಈ ವಿದ್ಯುತ್ತುಗಳು ಮರುತ್ತುಗಳನ್ನು ನಿಯತವಾಗಿ ಅನುಸರಿಸುತ್ತವೆ. ಪ್ರಕಾಶಮಾನವಾದ ಮರುದ್ಗಣದ ಪ್ರಭೆಯು ಸ್ವಪ್ರಕಾಶಿತವೇ ಆಗಿರುತ್ತದೆ.

## English Translation

Leaders (of the rains), the mighty Maruts shine with brilliant ornaments and weapons, and hurl javeline ( at their foes, the clouds ): the

lightnings, like roaring (torrents), daily follow the Maruts: the radiance of the resplendent (cohort) spontaneously breaks forth,

॥ ಸಂಹಿತಾಪಾಠಃ ॥

ಯೇ ವಾವೃಧಂತ ಪಾರ್ಥಿವಾ ಯ ಉರಾವಂತರಿಕ್ಷ ಆ ।
ವೃಜನೇ ವಾ ನದೀನಾಂ ಸಧಸ್ಥೇ ವಾ ಮಹೋ ದಿವಃ ॥ ೭ ॥

॥ ಪದಪಾಠಃ ॥

ಯೇ । ವವೃಧಂತ । ಪಾರ್ಥಿವಾಃ । ಯೇ । ಉರೌ । ಅಂತರಿಕ್ಷೇ । ಆ ।
ವೃಜನೇ । ವಾ । ನದೀನಾಂ । ಸಧಃಸ್ಥೇ । ವಾ । ಮಹಃ । ದಿವಃ ॥ ೭ ॥

॥ ಸಾಯಣಭಾಷ್ಯಂ ॥

ಯೇ ಮರುತಃ ಪಾರ್ಥಿವಾಃ ಪೃಥಿವೀಸಂಬದ್ಧಾಃ ಸಂತೋ ವವೃಧಂತ ವರ್ಧಂತೇ । ಯೇ ಚೋರೌ ಮಹತ್ಯಂತರಿಕ್ಷೇ ಚ ವವೃಧಂತ । ಆ ಇತಿ ಚಾರ್ಥೇ । ನದೀನಾಂ ನದನವತೀನಾಂ ವೃಜನೇ ವಾ ಬಲೇ ವವೃಧಂತ । ಮಹೋ ಮಹತೋ ದಿವೋ ದ್ಯುಲೋಕಸ್ಯ ಸಧಸ್ಥೇ ಸಹಸ್ಥಾನೇ ಚ ವವೃಧಂತ । ಉಭಯತ್ರ ವಾಶಬ್ದಶ್ಚಾರ್ಥೇ । ಏವಂ ಸರ್ವತ್ರ ವರ್ಧಮಾನಾ ಮರುತೋ ವೃಷ್ಟ್ಯರ್ಥಮನುಷ್ಟುಪ್ ಇತ್ಯಸ್ಮಿನ್ನಿರಸೃಕ್ಷತೇತಿ ಪೂರ್ವತ್ರ ಸಂಬಂಧಃ ॥

॥ ಪ್ರತಿಪದಾರ್ಥ ॥

**ಪಾರ್ಥಿವಾಃ**—ಪೃಥಿವೀಸ್ಥರಾದ । **ಯೇ**—ಯಾವ ಮರುತ್ತುಗಳಿದ್ದಾರೆಯೋ ಅವರು । **ವವೃಧಂತ**—ವೃದ್ಧಿಯನ್ನು ಹೊಂದುತ್ತಾರೆ । **ಉರೌ**—ವಿಸ್ತೃತವಾದ । **ಅಂತರಿಕ್ಷೇ**—ಅಂತರಿಕ್ಷದಲ್ಲಿ । **ಯೇ**—ಯಾರಿದ್ದಾರೋ। **ಆ**—ಅವರೂ ಸಹ ವೃದ್ಧಿಯನ್ನು ಹೊಂದುತ್ತಾರೆ । **ನದೀನಾಂ**—ಪ್ರವಾಹಾತ್ಮಕಗಳಾದ ನದಿಗಳ । **ವೃಜನೇ ವಾ**—ವೇಗದಲ್ಲಿ ಯಾರಿರುವರೋ ಅವರೂ । **ಮಹಃ**—ಮಹತ್ತಾದ । **ದಿವಃ**—ದ್ಯುಲೋಕದ । **ಸಧಸ್ಥೇ**—ಸ್ಥಾನದಲ್ಲಿ ಯಾವ ಮರುತ್ತುಗಳಿದ್ದಾರೆಯೋ ಅವರೆಲ್ಲರೂ ಸಹ ವೃದ್ಧಿಯನ್ನು ಪಡೆಯುತ್ತಾರೆ.

॥ ಭಾವಾರ್ಥ ॥

ಪೃಥಿವೀಸ್ಥರಾದ ಯಾವ ಮರುತ್ತುಗಳಿದ್ದಾರೆಯೋ, ಯಾರು ಅಂತರಿಕ್ಷಸ್ಥರೋ, ಯಾರು ಪ್ರವಾಹಾತ್ಮಕವಾದ ನದಿಗಳ ವೇಗವನ್ನು ಉತ್ಪನ್ನಮಾಡುವರೋ ಮತ್ತು ಮಹತ್ತಾದ ದ್ಯುಲೋಕಸ್ಥರಾದ ಯಾವ ಮರುತ್ತುಗಳಿದ್ದಾರೆಯೋ ಅವರೆಲ್ಲರೂ ಸಹ ವೃದ್ಧಿಯನ್ನು ಪಡೆಯುತ್ತಾರೆ.

## English Translation

The Maruts, who are of the earth are augmented, so are those in the vast firmament; they increase in the force of the rivers, and in the aggregate of the spacious heaven.

॥ ಸಂಹಿತಾಪಾಠಃ ॥

ಶರ್ಧೋ ಮಾರುತಮುಚ್ಛಂಸ ಸತ್ಯಶವಸಮೃಭ್ವಸಂ ।
ಉತ ಸ್ಮ ತೇ ಶುಭೇ ನರಃ ಪ್ರ ಸ್ಯಂದ್ರಾ ಯುಜತ ತ್ಮನಾ ॥ ೮ ॥

॥ ಪದಪಾಠಃ ॥

ಶರ್ಧಃ । ಮಾರುತಂ । ಉತ್ । ಶಂಸ । ಸತ್ಯಶವಸಂ । ಋಭ್ವಸಂ ।
ಉತ । ಸ್ಮ । ತೇ । ಶುಭೇ । ನರಃ । ಪ್ರ । ಸ್ಯಂದ್ರಾಃ । ಯುಜತ । ತ್ಮನಾ ॥ ೮ ॥

॥ ಸಾಯಣಭಾಷ್ಯಂ ॥

ಹೇ ಸ್ತೋತರ್ಮಾರುತಂ ಶರ್ಧೋ ಬಲಮುತ್ ಉತ್ಕೃಷ್ಟಂ ಶಂಸ । ಸ್ತುಹಿ । ಕೀದೃಶಂ ಶರ್ಧಃ। ಸತ್ಯಶವಸಂ ಸತ್ಯವೇಗಮೃಭ್ವಸಂ ಮಹದತಿಪ್ರವೃದ್ಧಂ । ಉತ ಸ್ಮಾಪಿ ಚ ನರೋ ವೃಷ್ಟೇರ್ನೇತಾರಸ್ತೇ ಮರುತಃ ಶುಭ ಉದಕಾರ್ಥಂ ಪ್ರ ಯುಜತ ಪ್ರಾಯುಂಜತ ಸಮಯೋಜಯನ್ ತ್ಮನಾತ್ಮನೈವ ಜಗದ್ರಕ್ಷಾಬುದ್ಧ್ಯೈವ ಸ್ಯಂದ್ರಾಶ್ಚಲನಸ್ವಭಾವಾಃ ಪೃಷತೀರಿತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಸ್ತೋತೃವೇ) **ಸತ್ಯಶವಸಂ**—ಸತ್ಯಾತ್ಮಕವಾದ ಬಲವುಳ್ಳದ್ದೂ । **ಋಭ್ವಸಂ**—ಮಹತ್ತಾದುದೂ ಆದ । **ಮಾರುತಂ ಶರ್ಧಃ**—ಮರುತ್ಸಂಘದ ಬಲವನ್ನು । **ಉತ್**—ಉತ್ಕೃಷ್ಟವಾಗಿ । **ಶಂಸ**—ಪ್ರಶಂಸಿಸು । **ನರಃ**—ನೇತೃಗಳಾದ । **ತೇ**—ಮರುತ್ತುಗಳು । **ಸ್ಯಂದ್ರಾಃ**—ಚಲನಸ್ವಭಾವವುಳ್ಳವರಾಗಿ । **ತ್ಮನಾ**—ಸ್ವಪ್ರೇರಣೆಯಿಂದಲೇ । **ಶುಭೇ**—ನಮ್ಮ ಕಲ್ಯಾಣಕ್ಕಾಗಿ । **ಪ್ರ ಯುಜತ**—ಪ್ರಯತ್ನಿಸುತ್ತಾರೆ.

॥ ಭಾವಾರ್ಥ ॥

ಎಲೈ ಸ್ತೋತೃವೇ, ನೇತೃಗಳಾದ ಮರುತ್ತುಗಳು ಚಲನಸ್ವಭಾವವುಳ್ಳವರಾಗಿ ಸ್ವಪ್ರೇರಣೆಯಿಂದಲೇ ನಮ್ಮ ಕಲ್ಯಾಣಕ್ಕಾಗಿ ಪ್ರಯತ್ನಿಸುತ್ತಾರೆ. ಆದುದರಿಂದ ಸತ್ಯಾತ್ಮಕವಾದ ಶಕ್ತಿಯುಳ್ಳದ್ದೂ ಮಹತ್ತಾದುದೂ ಆದ ಮರುತ್ಸಂಘದ ಬಲವನ್ನು ಉತ್ಕೃಷ್ಟವಾಗಿ ಪ್ರಶಂಸಿಸು.

## English Translation

Glorify the truth-invigorated and infinite strength of the Maruts, for they, the leaders (of the rains), gliding along, are labouring voluntarily for (our) good.

॥ ಸಂಹಿತಾಪಾಠಃ ॥

ಉತ ಸ್ಮ ತೇ ಪರುಷ್ಣ್ಯಾಮೂರ್ಣಾ ವಸತ ಶುಂಧ್ಯವಃ ।
ಉತ ಪವ್ಯಾ ರಥಾನಾಮದ್ರಿಂ ಭಿಂದಂತ್ಯೋಜಸಾ ॥ ೯ ॥

॥ ಪದಪಾಠಃ ॥

ಉತ । ಸ್ಮ । ತೇ । ಪರುಷ್ಣ್ಯಾಂ । ಊರ್ಣಾಃ । ವಸತ । ಶುಂಧ್ಯವಃ ।
ಉತ । ಪವ್ಯಾ । ರಥಾನಾಂ । ಅದ್ರಿಂ । ಭಿಂದಂತಿ । ಓಜಸಾ ॥ ೯ ॥

॥ ಸಾಯಣಭಾಷ್ಯಂ ॥

**ಉತ ಸ್ಮಾಪಿ ಚ ತೇ ಮರುತಃ ಪರುಷ್ಣ್ಯಾಮೇತನ್ನಾಮಿಕಾಯಾಂ ನದ್ಯಾಂ ವರ್ತಂತೇ । ಯ ಊರ್ಣಾ ದೀಪ್ತೀಃ ಶುಂಧ್ಯವಃ ಶೋಧಿಕಾ ವಸತ ಆಚ್ಛಾದಯಂತಿ ತೇ । ಉತಾಪಿ ಚ ಪವ್ಯಾ ನೇಮ್ಯಾ ರಥಾನಾಂ ಸ್ವಕೀಯಾನಾಂ ರಥಚಕ್ರೇಣೌಜಸಾ ಬಲೇನ ಚಾದ್ರಿಂ ಭಿಂದಂತಿ । ಮೇಘಂ ಗಿರಿಂ ವಾ ವಿದಾರಯಂತಿ ॥**

॥ ಪ್ರತಿಪದಾರ್ಥ ॥

**ಉತ**—ಅಲ್ಲದೇ । **ತೇ**—ಅದೇ ಮರುತ್ತುಗಳು । **ಪರುಷ್ಣ್ಯಾಂ**—ಪರುಷ್ಣೀನದಿಯಲ್ಲಿ (ಇರುತ್ತಾರೆ) । **ಊರ್ಣಾಃ**—ಪ್ರಕಾಶಮಾನವಾದುದೂ । **ಶುಂಧ್ಯವಃ**—ಪರಿಶುದ್ಧವಾದುದೂ ಆದ ತೇಜಸ್ಸನ್ನು । **ವಸತ್**—ಧರಿಸಿಕೊಂಡಿದ್ದಾರೆ । **ಉತ**—ಮತ್ತು । **ರಥಾನಾಂ**—ತಮ್ಮ ರಥಗಳ । **ಪವ್ಯಾ**—ನೇಮಿರೂಪವಾದ । **ಓಜಸಾ**—ಬಲದಿಂದ । **ಅದ್ರಿಂ**—ಮೇಘವನ್ನು । **ಭಿಂದಂತಿ**—ಸೀಳುತ್ತಾರೆ.

॥ ಭಾವಾರ್ಥ ॥

ಮರುತ್ತುಗಳು ಪರುಷ್ಣೀನದಿಯಲ್ಲಿರುತ್ತಾರೆ. ಪ್ರಕಾಶಮಾನವಾದುದೂ, ಪರಿಶುದ್ಧವಾದುದೂ ಆದ ತೇಜಸ್ಸಿನಿಂದ ಆವೃತರಾಗಿದ್ದಾರೆ. ಮತ್ತು ತಮ್ಮ ರಥಗಳ ನೇಮಿರೂಪವಾದ ಬಲದಿಂದ ಮೇಘವನ್ನು ಸೀಳುತ್ತಾರೆ.

## English Translation

Whether they (abide) on the Parushni (river), or, purifying (all), they clothe themselves with light, or whether they break through the clouds with strength by the wheels of their chariots.

—— O ——

॥ ಸಂಹಿತಾಪಾಠಃ ॥

ಆಪಥಯೋ ವಿಪಥಯೋಽಂತಸ್ಪಥಾ ಅನುಪಥಾಃ ।

ಏತೇಭಿರ್ಮಹ್ಯಂ ನಾಮಭಿರ್ಯಜ್ಞಂ ವಿಷ್ಟಾರ ಓಹತೇ ॥ ೧೦ ॥

॥ ಪದಪಾಠಃ ॥

ಆಽಪಥಯಃ । ವಿಽಪಥಯಃ । ಅಂತಃಽಪಥಾಃ । ಅನುಽಪಥಾಃ ।

ಏತೇಭಿಃ । ಮಹ್ಯಂ । ನಾಮಽಭಿಃ । ಯಜ್ಞಂ । ವಿಽಸ್ತಾರಃ । ಓಹತೇ ॥ ೧೦ ॥

॥ ಸಾಯಣಭಾಷ್ಯಂ ॥

ಆಪಥಯಃ । ಅಸ್ಮದಭಿಮುಖಾ ಮಾರ್ಗಾ ಯೇಷಾಂ ತೇ ತಾದೃಶಾಃ । ವಿಪಥಯೋ ವಿಷ್ವಙ್ಮಾರ್ಗಾ ಅಂತಸ್ಪಥಾ ದರೀಸುಷಿರಾದಿಮಾರ್ಗಾ ಅನುಪಥಾ ಅನುಕೂಲಮಾರ್ಗಾಶ್ಚ ಯೇ ಮರುತಃ ಸಂತಿ ತ ಏತೇಭಿರೇತೈಶ್ಚತುರ್ವಿಧೈರ್ನಾಮಭಿಃ ಸ್ವರೂಪೈರ್ಮಹ್ಯಂ ಮದರ್ಥಂ ಯಜ್ಞಂ ವಿಸ್ತಾರೋ ವಿಸ್ತೃತಾಃ ಸಂತ ಓಹತೇ । ವಹಂತಿ । ಯದ್ವಾ । ಏತೈರ್ನಾಮಭಿರುದಕೈಃ ಸಾರ್ಧಂ ಯಜ್ಞಮೋಹತೇ ॥

॥ ಪ್ರತಿಪದಾರ್ಥ ॥

**ಆಪಥಯಃ**— ನಮಗಭಿಮುಖವಾದ ಮಾರ್ಗವನ್ನು ಅನುಸರಿಸಲಿ (ಅಥವಾ) । **ವಿಪಥಯಃ**— ಬೇರೆಬೇರೆ ಮಾರ್ಗಗಳನ್ನನುಸರಿಸಲಿ (ಅಥವಾ) । **ಅಂತಸ್ಪಥಾಃ**— ಪರ್ವತದ ಗುಹಾದಿಮಾರ್ಗಾವಲಂಬಿಗಳಾಗಲಿ (ಅಥವಾ) । **ಅನುಪಥಾಃ**— ಅನುಕೂಲಮಾರ್ಗವುಳ್ಳವರಾಗಲಿ । **ಏತೇಭಿಃ**— ಈ ನಾಲ್ಕು ವಿಧಗಳುಳ್ಳವರಾದರೂ ಸಹ । **ನಾಮಭಿಃ**— ಆಯಾ ಸ್ವರೂಪಗಳಿಂದ । **ಮಹ್ಯಂ**— ನನಗಾಗಿ । **ಯಜ್ಞಂ**— ಯಜ್ಞವನ್ನು । **ವಿಸ್ತಾರಃ**— ವಿಸ್ತೃತವಾಗಿ ವೃದ್ಧಿಮಾಡಿ । **ಓಹತೇ**— ವಹಿಸಿಕೊಳ್ಳುತ್ತಾರೆ.

॥ ಭಾವಾರ್ಥ ॥

ಮರುತ್ತುಗಳು ನಮಗಭಿಮುಖವಾದ ಮಾರ್ಗವನ್ನನುಸರಿಸಲಿ, ಅಥವಾ ಬೇರೆಬೇರೆ ಮಾರ್ಗಗಳನ್ನನುಸರಿಸಲಿ ಅಥವಾ ಪರ್ವತದ ಗುಹಾದಿಮಾರ್ಗಾವಲಂಬಿಗಳಾಗಲಿ ಅಥವಾ ಅನುಕೂಲಮಾರ್ಗವುಳ್ಳವರಾಗಲಿ ಈ ನಾಲ್ಕು ವಿಧ

ಗಳುಳ್ಳವರಾದರೂ ಸಹ ಆಯಾ ಸ್ವರೂಪಗಳಿಂದ ನನಗಾಗಿ ಯಜ್ಞವನ್ನು ವಿಸ್ತೃತವಾಗಿ ವೃದ್ಧಿಮಾಡಿ ವಹಿಸಿಕೊಳ್ಳುತ್ತಾರೆ.

## English Translation

(Whether), following the paths that lead (to us), or that spread diversely, or those that sink into the hollows (of the mountain), or those that extend smoothly, they, (however) scattered, accept the sacrifice for my benefit, (when invoked by these appellations).

॥ ಸಂಹಿತಾಪಾಠಃ ॥

ಅಧಾ ನರೋ ನ್ಯೋಹತೇಽಧಾ ನಿಯುತ ಓಹತೇ ।
ಅಧಾ ಪಾರಾವತಾ ಇತಿ ಚಿತ್ರಾ ರೂಪಾಣಿ ದರ್ಶ್ಯಾ ॥ ೧೧ ॥

॥ ಪದಪಾಠಃ ॥

ಅಧ । ನರಃ । ನಿ । ಓಹತೇ । ಅಧ । ನಿಽಯುತಃ । ಓಹತೇ ।
ಅಧ । ಪಾರಾವತಾಃ । ಇತಿ । ಚಿತ್ರಾ । ರೂಪಾಣಿ । ದರ್ಶ್ಯಾ । ೧೧ ॥

॥ ಸಾಯಣಭಾಷ್ಯಂ ॥

**ಅಧಾಥ ನರೋಽಭಿಮತವೃಷ್ಟ್ಯಾ ದಿನೇತಾರೋ ನ್ಯೋಹತೇ । ನಿತರಾಂ ವಹಂತಿ ಜಗತ್ । ಅಧ ನಿಯುತಃ ಸ್ವಯಮೇವ ಮಿಶ್ರಯಿತಾರಃ ಸಂತ ಓಹತೇ । ಅಧಾಥ ಪಾರಾವತಾಃ । ಪರಾವದ್ದೂರದೇಶಃ। ತತ್ಸಂಬಂಧಿನಶ್ಚಾಂತರಿಕ್ಷಾದಿದೂರದೇಶೇ ಗ್ರಹತಾರಾಮೇಘಾದಿಧಾರಕಾಃ ಸಂತ ಓಹತ ಇತ್ಯರ್ಥಃ । ಇತ್ಯುಕ್ತಪ್ರಕಾರೇಣ ತೇಷಾಂ ರೂಪಾಣಿ ಚಿತ್ರಾ ನಾನಾವಿಧಾನಿ ಚಾಯನೀಯಾನಿ ವಾ ದರ್ಶ್ಯಾ ಸ್ವವ್ಯಾಪಾರೈರ್ದರ್ಶನೀಯಾನಿ ಭವಂತೀತಿ ಶೇಷಃ ॥**

॥ ಪ್ರತಿಪದಾರ್ಥ ॥

**ಅಧ**—ಒಂದು ಸಲ । **ನರಃ**—ನೇತೃಗಳಾದ ಮರುತ್ತುಗಳು । **ನ್ಯೋಹತೇ**—ಜಗತ್ತಿನ ಭಾರವನ್ನು ವಹಿಸುತ್ತಾರೆ । **ಅಧ**—ಇನ್ನೊಂದು ವಿಧದಲ್ಲಿ । **ನಿಯುತಃ**—ಎಲ್ಲರೂ ಒಟ್ಟಿಗೆ ಸೇರಿಕೊಂಡು । **ಓಹತೇ**—ಯಜ್ಞನಿರ್ವಹಣಭಾರವನ್ನು ವಹಿಸುತ್ತಾರೆ । **ಅಧ**—ಇನ್ನೊಂದು ರೀತಿಯಲ್ಲಿ । **ಪಾರಾವತಾಃ**—ಬಹುದೂರದೇಶವರ್ತಿಗಳಾಗಿ ಗ್ರಹನಕ್ಷತ್ರಾದಿಗಳ ಭಾರವನ್ನು ವಹಿಸುವರು । **ಇತಿ**—ಈ ರೀತಿಯಲ್ಲಿ । **ರೂಪಾಣಿ**—ಮರುತ್ತುಗಳ ರೂಪಗಳು । **ಚಿತ್ರಾ**—ನಾನಾವಿಧವಾಗಿಯೂ । **ದರ್ಶ್ಯಾ**—ಆಕರ್ಷಕವಾಗಿಯೂ ಇರುತ್ತವೆ.

॥ ಭಾವಾರ್ಥ ॥

ಮರುತ್ತುಗಳು ಒಂದು ವಿಧದಲ್ಲಿ ವೃಷ್ಟ್ಯಾದಿಗಳಿಗೆ ನೇತೃಗಳಾಗಿ ಜಗತ್ತಿನ ರಕ್ಷಣಭಾರವನ್ನು ವಹಿಸುತ್ತಾರೆ. ಇನ್ನೊಂದು ವಿಧದಲ್ಲಿ ಎಲ್ಲರೂ ಒಟ್ಟಿಗೆ ಸೇರಿಕೊಂಡು ಯಜ್ಞನಿರ್ವಹಣಭಾರವನ್ನು ವಹಿಸುತ್ತಾರೆ. ಇನ್ನೊಂದು ವಿಧದಲ್ಲಿ ಬಹುದೂರದೇಶವರ್ತಿಗಳಾಗಿ ಗ್ರಹನಕ್ಷತ್ರಾದಿಗಳ ಭಾರವನ್ನು ವಹಿಸುವರು. ಈ ರೀತಿ ಅವರು ನಾನಾರೂಪವುಳ್ಳವರಾಗಿಯೂ ಆಕರ್ಷಕವಾದ ಸ್ವರೂಪವುಳ್ಳವರಾಗಿಯೂ ಇರುತ್ತಾರೆ.

English Translation

Now, leaders (of the rains), they support (the world) : now, blending together, they bear (the oblation) : now, situated remote, ( they uphold distant objects) : so may their manifold forms be manifest.

॥ ಸಂಹಿತಾಪಾಠಃ ॥

ಛಂದಃಸ್ತುಭಃ ಕುಭನ್ಯವ ಉತ್ಸಮಾ ಕೀರಿಣೋ ನೃತುಃ ।

ತೇ ಮೇ ಕೇ ಚಿನ್ನ ತಾಯವ ಊಮಾ ಆಸನ್ದೃಶಿ ತ್ವಿಷೇ ॥ ೧೨ ॥

॥ ಪದಪಾಠಃ ॥

ಛಂದಃಽಸ್ತುಭಃ । ಕುಭನ್ಯವಃ । ಉತ್ಸಂ । ಆ । ಕೀರಿಣಃ । ನೃತುಃ ।

ತೇ । ಮೇ । ಕೇ । ಚಿತ್ । ನ । ತಾಯವಃ । ಊಮಾಃ । ಆಸನ್ । ದೃಶಿ । ತ್ವಿಷೇ ॥ ೧೨ ॥

॥ ಸಾಯಣಭಾಷ್ಯಂ ॥

ಛಂದಃಸ್ತುಭಶ್ಛಂದೋಭಿಃ ಸ್ತೋತಾರಃ ಕುಭನ್ಯವ ಉದಕೇಚ್ಛವಃ ಕೀರಿಣಃ ಸ್ತೋತಾರ ಉತ್ಸಂ ಕೂಪಮುಪೇಕ್ಷ್ಯ ತೃಷಿತಾಯ ಗೋತಮಾಯ ಯಾನ್ಮರುತ ಆ ನೃತುಃ ಸರ್ವತೋಽಕುರ್ವನ್ ಅನಯನ್ವಾ ಸ್ತೋತ್ರಂ । ಯದ್ವಾ । ಯೇ. ಛಂದಃಸ್ತುಭಶ್ಛಂದೋಭಿಃ ಸ್ತುತ್ಯಾಃ ॥ ಸ್ತೋಭತಿಃ ಸ್ತುತಿಕರ್ಮಾ ॥ ಕುಭನ್ಯವಃ ಸೇಕ್ತಾರೋ ವೃಷ್ಟ್ಯುದಕಸ್ಯ । ಕುಭಿರುಂದನಕರ್ಮಾ ॥ ಕೀರಿಣಃ ಸ್ತೋತುರ್ಗೋತಮಸ್ಯ ಪಾನಾರ್ಥಮುತ್ಸಂ ಕೂಪಮಾ ನೃತುಃ ಆನೀತವಂತಃ । ಅಸಿಂಚನ್ನುತ್ಸಂ ಗೋತಮಾಯ ತೃಷ್ಣಜೇ ಋಗ್ವೇ-೧-೮೫.೧೧ । ಇತಿ ಹ್ಯುಕ್ತಂ ॥ ನೃ ನಯೇ ಇತ್ಯಸ್ಯ ವಾ ನರ್ತತೇರ್ವಾ ವಿಕ್ಷೇಪಮಾತ್ರಾರ್ಥಸ್ಯೇದಂ

ರೂಪಂ || ತೇ ಮರುತಃ ಕೇ ಚಿನ್ಮೇ ಮಹ್ಯಂ ತಾಯವೋ ನ ಕದಾಚಿದಪ್ಯದೃಶ್ಯಾಸ್ತಸ್ಕರಾ ಇವ ಸ್ಥಿತಾ ಊಮಾ ರಕ್ಷಕಾ ದೃಶಿ ದರ್ಶನ ಆಸನ್ । ವಿಷಯಭೂತಾ ಅಭವನ್ । ಕೇಚಿತ್ತ್ವಿಷೇ ಶರೀರದೀಪ್ತ್ಯೈ ಬಲಾಯ ವಾಸನ್ । ಪ್ರಾಣರೂಪೇಣೇತಿ ಭಾವಃ ||

॥ ಪ್ರತಿಪದಾರ್ಥ ॥

**ಛಂದಸ್ತುಭಃ**—ಛಂದಸ್ಸುಗಳಿಂದ ಸ್ತುತಿಸಲ್ಪಡುವವರೂ । **ಕುಭನ್ಯವಃ**—ವೃಷ್ಟ್ಯುದಕವನ್ನು ಸುರಿಸುವವರೂ ಆದ ಮರುತ್ತುಗಳು । **ಕೀರಿಣಃ**—ಸ್ತುತಿಕರ್ತನಾದ ಗೋತಮನಿಗೆ । **ಉತ್ಸಂ**—ಕೂಪವನ್ನು(ಬಾವಿಯನ್ನು)। **ಆ ನೃತುಃ**—ಉತ್ಪನ್ನವಾಗುವಂತೆ ಮಾಡಿದರು । **ತೇ**—ಆ ಮರುತ್ತುಗಳಲ್ಲಿ । **ಕೇ ಚಿತ್**—ಕೆಲವರು । **ಮೇ**—ನನಗೆ । **ತಾಯವೋ ನ**—ಕಳ್ಳರಂತೆ ಮರೆಯಲ್ಲಿದ್ದು । **ಊಮಾಃ**—ರಕ್ಷಕರಾಗಿದ್ದಾರೆ (ಉಳಿದವರು) । **ತ್ವಿಷೇ**—ತಮ್ಮ ಕಾಂತಿಯ ಪ್ರಭಾವದಿಂದ । **ದೃಶಿ ಆಸನ್**—ಗೋಚರಕ್ಕೆ ಬಂದಿದ್ದಾರೆ.

॥ ಭಾವಾರ್ಥ ॥

ಛಂದಸ್ಸುಗಳಿಂದ ಸ್ತುತಿಸಲ್ಪಡುವವರೂ, ವೃಷ್ಟ್ಯುದಕವನ್ನು ಸುರಿಸುವವರೂ ಆದ ಮರುತ್ತುಗಳು ಸ್ತುತಿಕರ್ತನಾದ ಬಾಯಾರಿದ್ದ ಗೋತಮನಿಗೆ ಕೂಪವನ್ನು ಉತ್ಪನ್ನವಾಗುವಂತೆ ಮಾಡಿದರು. ಈ ಮರುತ್ತುಗಳಲ್ಲಿ ಕೆಲವರು ಕಳ್ಳರಂತೆ ಮರೆಯಲ್ಲಿದ್ದು ನನಗೆ ರಕ್ಷಕರಾಗಿದ್ದಾರೆ. ಉಳಿದವರು ತಮ್ಮ ಕಾಂತಿಯ ಪ್ರಭಾವದಿಂದ ನನ್ನ ಎದುರಿಗೆ ಪ್ರತ್ಯಕ್ಷರಾಗಿಯೇ ಇದ್ದು ರಕ್ಷಕರಾಗಿರುತ್ತಾರೆ.

English Translation

The reciters of sacred metres, desirous of water, and celebrating (the Maruts), have drawn them to (provide) a well (for Gotama): some of them, (invisible) as thieves, have been my defenders: some have been (obvious) to view through the light (of life)

|| ಸಂಹಿತಾಪಾಠಃ ||

ಯ ಋಷ್ವಾ ಋಷ್ಟಿವಿದ್ಯುತಃ ಕವಯಃ ಸಂತಿ ವೇಧಸಃ ।
ತಮೃಷೇ ಮಾರುತಂ ಗಣಂ ನಮಸ್ಯಾ ರಮಯಾ ಗಿರಾ ॥ ೧೩ ॥

॥ ಪದಪಾಠಃ ॥

ಯೇ । ಋಷ್ವಾಃ । ಋಷ್ಟಿಽವಿದ್ಯುತಃ । ಕವಯಃ । ಸಂತಿ । ವೇಧಸಃ ।
ತಂ । ಋಷೇ । ಮಾರುತಂ । ಗಣಂ । ನಮಸ್ಯ । ರಮಯ । ಗಿರಾ ॥ ೧೩ ॥

॥ ಸಾಯಣಭಾಷ್ಯಂ ॥

**ಯೇ ಮರುತ ಋಷ್ವಾ ದರ್ಶನೀಯಾ ಋಷ್ಟಿವಿದ್ಯುತ ಆಯುಧೈರ್ವಿದ್ಯೋತಮಾನಾಃ ಕವಯೋ ಮೇಧಾವಿನೋ ವೇಧಸಃ ಸರ್ವಸ್ಯ ವಿಧಾತಾರಃ ಸಂತಿ ತಂ ತೇಷಾಂ ಮಾರುತಂ ಗಣಂ ರಮಯಾ ರಮಣೀಯಯಾ ಗಿರಾ ಸ್ತುತ್ಯಾ ಹೇ ಋಷೇ ಶ್ಯಾವಾಶ್ವ ನಮಸ್ಯ । ಪರಿಚರ । ಸ್ತುಹಿ ॥**

॥ ಪ್ರತಿಪದಾರ್ಥ ॥

**ಋಷೇ**—ಎಲೈ ಶ್ಯಾವಾಶ್ವಋಷಿಯೇ । **ಯೇ**—ಯಾವ ಮರುತ್ತುಗಳು । **ಋಷ್ವಾಃ**—ದರ್ಶನೀಯರೂ । **ಋಷ್ಟಿವಿದ್ಯುತಃ**—ತಮ್ಮ ಆಯುಧಗಳಿಂದ ಪ್ರಕಾಶಿಸುವವರೂ । **ಕವಯಃ**—ಮೇಧಾವಿಗಳೂ । **ವೇಧಸಃ**—ಸೃಷ್ಟಿಕರ್ತರೂ ಆಗಿ । **ಸಂತಿ**—ಇದ್ದಾರೆಯೋ । **ತಂ**—ಅಂತಹ ಮರುತ್ತುಗಳ ಗಣವನ್ನು । **ರಮಯಾ**—ರಮಣೀಯವಾದ । **ಗಿರಾ**—ಸ್ತುತಿಯಿಂದ । **ನಮಸ್ಯ**—ಪೂಜಿಸು.

॥ ಭಾವಾರ್ಥ ॥

ಎಲೈ ಶ್ಯಾವಾಶ್ವಋಷಿಯೇ, ಯಾವ ಮರುತ್ತುಗಳು ದರ್ಶನೀಯರೂ, ತಮ್ಮ ಆಯುಧಗಳಿಂದ ಪ್ರಕಾಶಿಸುವವರೂ ಮೇಧಾವಿಗಳೂ ಸೃಷ್ಟಿಕರ್ತರೂ ಆಗಿದ್ದಾರೆಯೋ ಅಂತಹ ಮರುತ್ತುಗಳ ಗಣವನ್ನು ರಮಣೀಯವಾದ ಸ್ತುತಿಯಿಂದ ಪೂಜಿಸು.

English Translation

Glorify, Rishi, with grateful praise, the company of the Maruts, who are manifest, bright with lightning lances, who are wise, and the creators (of all things).

॥ ಸಂಹಿತಾಪಾಠಃ ॥

ಅಚ್ಛ ಋಷೇ ಮಾರುತಂ ಗಣಂ ದಾನಾ ಮಿತ್ರಂ ನ ಯೋಷಣಾ ।
ದಿವೋ ವಾ ಧೃಷ್ಣವ ಓಜಸಾ ಸ್ತುತಾ ಧೀಭಿರಿಷಣ್ಯತ ॥ ೧೪ ॥

॥ ಪದಪಾಠಃ ॥

ಅಚ್ಛ । ಋಷೇ । ಮಾರುತಂ । ಗಣಂ । ದಾನಾ । ಮಿತ್ರಂ । ನ । ಯೋಷಣಾ ।
ದಿವಃ । ವಾ । ಧೃಷ್ಣವಃ । ಓಜಸಾ । ಸ್ತುತಾಃ । ಧೀಭಿಃ । ಇಷಣ್ಯತ ॥ ೧೪ ॥

॥ ಸಾಯಣಭಾಷ್ಯಂ ॥

**ಹೇ ಋಷೇ ಮಾರುತಂ ಗಣಂ ಮರುತ್ಸಂಘಂ ಮಿತ್ರಂ ನ ಆದಿತ್ಯಮಿವ ದಾನಾ ಹವಿರ್ದಾನೇನ ಯೋಷಣಾ ॥ ಯೌತೇರಿದಂ ರೂಪಂ । ಯೌತೀತಿ ಯೋಷಾ ಸ್ತುತಿಃ ॥ ತಯಾ ಚಾಚ್ಛ ಅಭಿಗಚ್ಛೇತಿ ಶೇಷಃ । ಋಷೇರುತ್ತರಾರ್ಧಃ ಪ್ರತ್ಯಕ್ಷವಾದಃ । ಓಜಸಾ ಬಲೇನ ಹೇ ಧೃಷ್ಣವೋ ಧರ್ಷಕಾ ಮರುತೋ ದಿವೋ ವಾ ದ್ಯುಲೋಕಾದ್ವಾ । ವಾಶಬ್ದಶ್ರುತೇರಿತರಲೋಕದ್ವಯಾದ್ವಾ । ಧೀಭಿರಸ್ಮದೀಯಾಭಿಃ ಸ್ತುತಿಭಿಃ ಸ್ತುತಾ ಇಷಣ್ಯತ । ಗಚ್ಛತ ಯಜ್ಞಂ ॥**

॥ ಪ್ರತಿಪದಾರ್ಥ ॥

**ಋಷೇ**—ಎಲೈ ಋಷಿಯೇ । **ಮಾರುತಂ ಗಣಂ**—ಮರುತ್ಸಂಘವನ್ನು । **ಮಿತ್ರಂ ನ**—ಮಿತ್ರನನ್ನು ಸಮೀಪಿಸುವಂತೆ । **ದಾನಾ**—ಹವಿಸ್ಸಿನ ದಾನಗಳಿಂದಲೂ । **ಯೋಷಣಾ**—ಸ್ತುತಿಯಿಂದಲೂ । **ಅಚ್ಛ**—ಸಮೀಪಿಸು । **ಧೃಷ್ಣವಃ**—ಸಹನಶಕ್ತಿಯುಳ್ಳ ಎಲೈ ಮರುತ್ತುಗಳೇ । **ಧೀಭಿಃ**—ನಮ್ಮ ಸ್ತುತಿಗಳಿಂದ । **ಸ್ತುತಾಃ**—ಪ್ರಶಂಸಿತರಾಗಿ। **ಓಜಸಾ**—ನಿಮ್ಮ ಬಲದೊಡನೆ । **ದಿವೋ ವಾ**—ದ್ಯುಲೋಕದಿಂದಾಗಲಿ ಅಥವಾ ಇನ್ನಾವ ಪ್ರದೇಶದಿಂದಾಗಲಿ । **ಇಷಣ್ಯತ**— ನಮ್ಮ ಯಜ್ಞಕ್ಕೆ ದಯಮಾಡಿ.

॥ ಭಾವಾರ್ಥ ॥

ಎಲೈ ಋಷಿಯೇ, ಮಿತ್ರನನ್ನು ಸಮೀಪಿಸುವಂತೆ ಮರುತ್ಸಂಘವನ್ನು ಹವಿಸ್ಸಿನ ದಾನದಿಂದಲೂ, ಸ್ತುತಿಯಿಂದಲೂ ಸಮೀಪಿಸು. ಸಹನಶಕ್ತಿಯುಳ್ಳ ಎಲೈ ಮರುತ್ತುಗಳೇ. ನಮ್ಮ ಸ್ತುತಿಗಳಿಂದ ಪ್ರಶಂಸಿತರಾಗಿ ನಿಮ್ಮ ಬಲದೊಡನೆದ್ಯುಲೋಕದಿಂದಾಗಲೀ ಅಥವಾ ಇನ್ನಾವ ಪ್ರದೇಶದಿಂದಾಗಲಿ ನಮ್ಮ ಯಜ್ಞಕ್ಕೆ ದಯಮಾಡಿ.

English Translation

Approach, Rishi, with offerings and with praise, the company of the Maruts like a friend : come, sustaining (Maruts), with your strength, from heaven or (any other region), glorified by our hymns.

॥ ಸಂಹಿತಾಪಾಠಃ ॥

**ನೂ ಮನ್ವಾನ ಏಷಾಂ ದೇವಾಁ ಅಚ್ಛಾ ನ ವಕ್ಷಣಾ ।**

**ದಾನಾ ಸಚೇತ ಸೂರಿಭಿರ್ಯಾಮಶ್ರುತೇಭಿರಂಜಿಭಿಃ ॥ ೧೫ ॥**

॥ ಪದಪಾಠಃ ॥

ಸು । ಮನ್ಮಾನಃ । ಏಷಾಂ । ದೇವಾನ್ । ಅಚ್ಛ । ನ । ವಕ್ಷಣಾ ।

ದಾನಾ । ಸಚೇತ । ಸೂರಿಽಭಿಃ । ಯಾಮಽಶ್ರುತೇಭಿಃ । ಅಂಜಿಽಭಿಃ ॥ ೧೫ ॥

॥ ಸಾಯಣಭಾಷ್ಯಂ ॥

ಸು ಕ್ಷಿಪ್ರಮೇಷಾಂ ಮರುತಾಂ । ಏತಾನ್ಮರುತ ಇತ್ಯರ್ಥಃ । ಮನ್ಮಾನಃ ಸ್ತುವನ್ ದೇವಾನ್ಮರುದ್ವ್ಯತಿರಿಕ್ತಾನ್ವಕ್ಷಣಾ ವಹನೇನ ನಿಮಿತ್ತೇನಾಚ್ಛ ಅಭಿಪ್ರಾಪ್ತುಂ ನ ಮನುತೇ । ಸ ಸ್ತೋತಾ ಸೂರಿಭಿರ್ಮೇಧಾವಿಭಿರ್ಯಾಮಶ್ರುತೇಭಿಃ ಶೀಘ್ರಗಮನೇನ ವಿಶ್ರುತೈರಂಜಿಭಿಃ ಫಲಸ್ಯ ವ್ಯಂಜಕೈರ್ಮರುದ್ಭಿಃ ॥ ಸರ್ವಾಃ ಪಂಚಮ್ಯರ್ಥೇ ತೃತೀಯಾಃ ॥ ಉಕ್ತಲಕ್ಷಣೇಭ್ಯೋ ಮರುದ್ಭ್ಯೋ ದಾನಾಭಿಮತದಾನಾನಿ ಸಚೇತ ಸಂಗಚ್ಛತೇ ॥

॥ ಪ್ರತಿಪದಾರ್ಥ ॥

**ಸು**—ಕ್ಷಿಪ್ರವಾಗಿ । **ಏಷಾಂ**—ಈ ಮರುತ್ತುಗಳನ್ನು । **ಮನ್ಮಾನಃ**—ಸ್ತುತಿಸುತ್ತಾ । **ದೇವಾನ್**—(ಮರುತ್ತುಗಳಲ್ಲದೇ ಬೇರೆ) ದೇವತೆಗಳನ್ನು । **ವಕ್ಷಣಾ**—ಆಹ್ವಾನಿಸುವ ನಿಮಿತ್ತವಾಗಿ । **ಅಚ್ಛ**—ಸಮೀಪಿಸಲು । **ನ**—(ಯಜಮಾನನು) ಇಚ್ಛಿಸುವುದಿಲ್ಲ । **ಸೂರಿಭಿಃ**—ಮೇಧಾವಿಗಳೂ । **ಯಾಮಶ್ರುತೇಭಿಃ**—ತಮ್ಮ ಶೀಘ್ರಗಮನದಿಂದ ಪ್ರಖ್ಯಾತರಾದವರೂ । **ಅಂಜಿಭಿಃ**—ಫಲಪ್ರಕಾಶಕರೂ ಆದ ಮರುತ್ತುಗಳಿಂದ (ಅವರ ಅನುಗ್ರಹದಿಂದ) । **ದಾನಾ**—ಅಭಿಮತದಾನಗಳನ್ನು । **ಸಚೇತ**—ಹೊಂದಿಕೊಳ್ಳುತ್ತಾನೆ (ಯಜಮಾನನು ಪಡೆಯುತ್ತಾನೆ)

॥ ಭಾವಾರ್ಥ ॥

ಯಜಮಾನನು ಈ ಮರುತ್ತುಗಳನ್ನು ಯಥಾರೀತಿಯಲ್ಲಿ ಸ್ತುತಿಸುತ್ತಾ ಇವರಲ್ಲದೇ ಬೇರೆ ದೇವತೆಗಳನ್ನು ಆಹ್ವಾನಿಸಲು ಅವರನ್ನು ಸಮೀಪಿಸುವುದಿಲ್ಲ ಮೇಧಾವಿಗಳೂ ತಮ್ಮ ಶೀಘ್ರಗಮನದಿಂದ ಪ್ರಖ್ಯಾತರಾದವರೂ, ಫಲಪ್ರಕಾಶಕರೂ ಆದ ಮರುತ್ತುಗಳ ಅನುಗ್ರಹದಿಂದ ಅಭಿಮತದ ದಾನಗಳನ್ನು ಪಡೆಯುತ್ತಾನೆ

English Translation

Glorifying them promptly, desiring not to bring (other) deities to (his) presence, let (the worshipper) associate his gifts with those wise (divinites) renowned for their velocity, and distributors (of rewards)

॥ ಸಂಹಿತಾಪಾಠಃ ॥

ಪ್ರ ಯೇ ಮೇ ಬಂಧ್ವೇಷೇ ಗಾಂ ವೋಚಂತ ಸೂರಯಃ ಪೃಶ್ನಿಂ ವೋಚಂತ ಮಾತರಂ ।

ಅಧಾ ಪಿತರಮಿಷ್ಮಿಣಂ ರುದ್ರಂ ವೋಚಂತ ಶಿಕ್ವಸಃ ॥ ೧೬ ॥

॥ ಪದಪಾಠಃ ॥

ಪ್ರ । ಯೇ । ಮೇ । ಬಂಧುಽಏಷೇ । ಗಾಂ । ವೋಚಂತ । ಸೂರಯಃ । ಪೃಶ್ನಿಂ । ವೋಚಂತ । ಮಾತರಂ ।

ಅಧ । ಪಿತರಂ । ಇಷ್ಮಿಣಂ । ರುದ್ರಂ । ವೋಚಂತ । ಶಿಕ್ವಸಃ । ೧೬ ॥

॥ ಸಾಯಣಭಾಷ್ಯಂ ॥

ಯೇ ಮರುತೋ ಮೇ ಮಹ್ಯಂ ಬಂಧ್ವೇಷೇ ಸ್ವೇಷಾಂ ಬಂಧೂನಾಮನ್ವೇಷಣೇ ಸತಿ ಸೂರಯಃ ಪ್ರೇರಕಾ ಗಾಂ ಮಾಧ್ಯಮಿಕಾಂ ವಾಚಂ ಗೋದೇವತಾಂ ವಾ ಪ್ರ ವೋಚಂತ ಪ್ರಾವೋಚನ್ ॥ ಅವಿಶಿಷ್ಟ-ಮೃಷೇರ್ವಾಕ್ಯಂ । ಋಷಿರ್ಮರುದ್ವಾಕ್ಯಮನುವದತಿ । ತಸ್ಮಾದುತ್ತರಯೋರಾಖ್ಯಾತಯೋರ್ಯಚ್ಛಬ್ದಾ-ನನ್ವಯಾನ್ನಿಘಾತಃ ॥ ತೇ ಪೃಶ್ನಿಂ ದ್ಯುದೇವತಾಂ ಪೃಶ್ನಿವರ್ಣಾಂ ಗಾಂ ವಾ ಮಾತರಂ ವೋಚಂತ । ಅಬ್ರುವನ್ । ಪೃಶ್ನಿಯೈ ವೈ ಪಯಸೋ ಮರುತೋ ಜಾತಾ ಇತಿ ಶ್ರುತೇಃ । ಅಧಾಥ ಪಿತರಂ ಸ್ವಕೀಯ-ಮಿಷ್ಮಿಣಂ ಗಮನವಂತಮನ್ನವಂತಂ ವಾ ರುದ್ರಂ ವೋಚಂತ ಶಿಕ್ವಸಃ ಶಕ್ತಾಸ್ತೇ । ಮರುತಾಂ ರುದ್ರೇಣ ಪುತ್ರತ್ವಪರಿಗ್ರಹೋ ಬಹುಕೃತ್ವ ಉಪಪಾದಿತಃ ॥

॥ ಪ್ರತಿಪದಾರ್ಥ ॥

**ಸೂರಯಃ**—ಜಗತ್ಪ್ರೇರಕರಾದ । **ಯೇ**—ಯಾವ ಅದೇ ಮರುತ್ತುಗಳು । **ಬಂಧ್ವೇಷೇ**—ಅವರ ಬಂಧುಗಳ ವಿಷಯದಲ್ಲಿ ಪ್ರಶ್ನಿಸಿದಾಗ । **ಮೇ**—ನನಗೆ । **ಗಾಂ**—ಮಾಧ್ಯಮಿಕಾ ವಾಕ್ಕಿನ ರೂಪದಲ್ಲಿ । **ಪ್ರ ವೋಚಂತ**—ಉತ್ತರವನ್ನು ಕೊಟ್ಟರು । **ಪೃಶ್ನಿಂ**—ಪೃಶ್ನಿಯನ್ನು । **ಮಾತರಂ**—ತನ್ನ ತಾಯಿ ಎಂಬುದಾಗಿ । **ವೋಚಂತ**—ಹೇಳಿದರು । **ಅಧ**—ಅನಂತರ । **ಶಿಕ್ವಸಃ**—ಶಕ್ತರಾದ ಮರುತ್ತುಗಳು । **ಇಷ್ಮಿಣಂ**—ಅನ್ನಸಂಪದ್ಯುಕ್ತನಾದ । **ರುದ್ರಂ**—ರುದ್ರನನ್ನು । **ಪಿತರಂ**—ತಂದೆಯೆಂಬುದಾಗಿ । **ವೋಚಂತ**—ಹೇಳಿದರು.

॥ ಭಾವಾರ್ಥ ॥

ಜಗತ್ಪ್ರೇರಕರಾದ ಮರುತ್ತುಗಳು ಅವರ ಬಂಧುಗಳ ವಿಷಯದಲ್ಲಿ ಪ್ರಶ್ನಿಸಿದಾಗ ನನಗೆ ಮಾಧ್ಯಮಿಕಾ ವಾಕ್ಕಿನ ರೂಪದಲ್ಲಿ ಉತ್ತರವನ್ನು ಕೊಟ್ಟರು. ಶಕ್ತರಾದ ಮರುತ್ತುಗಳು ಪೃಶ್ನಿಯೇ ತಮ್ಮ ತಾಯಿಯೆಂದೂ, ಅನ್ನ ಸಂಪದ್ಯುಕ್ತನಾದ ರುದ್ರನೇ ತಮ್ಮ ತಂದೆಯೆಂದೂ ಹೇಳಿದರು.

## English Translation

To me, inquiring of their kindred, the sage (Maruts) have uttered a reply, they have declared Prishni ( to be their ) mother ; the mighty ones have declared the food-bestowing Rudra (to be their) father.

॥ ವಿಶೇಷವಿಷಯಗಳು ॥

**ಗಾಂ**—ಈ ಶಬ್ದಕ್ಕೆ ಮಾಧ್ಯಮಿಕಾ ವಾಕ್ಕು ಅಥವಾ ಗೋದೇವತೆ ಎಂಬ ಎರಡು ವಿಧ ಅರ್ಥಗಳನ್ನು ಹೇಳಿದಾರೆ. ಮಾಧ್ಯಮಿಕಾ ವಾಕ್ಕೆಂದರೆ ವಾಗ್ದೇವತೆ. ಈ ದೇವತೆಯು ಮಧ್ಯಮಸ್ಥಾನವಾದ ಅಂತರಿಕ್ಷದಲ್ಲಿ ನೆಲಸಿರುವ ದೇವತೆಯಾದ್ದರಿಂದ ಮಧ್ಯಮಸ್ಥಾನ ದೇವತೆ ಅಥವಾ ಮಾಧ್ಯಮಿಕಾ ವಾಕ್ ಎಂದು ಹೇಳಲ್ಪಡುವಳು. ಗೋಶಬ್ದಕ್ಕೆ ಇಲ್ಲಿ ಪೃಶ್ನಿರೂಪವಾದ ಗೋವು, ಮರುದ್ದೇವತೆಗಳ ತಾಯಿ ಎಂದರ್ಥವು ಮರುದ್ದೇವತೆಗಳಿಗೂ ಪ್ರಶ್ನಿಯೆಂಬ ಗೋವಿಗೂ ಏನು ಸಂಬಂಧ ಎಂದು ಋಷಿಯು ಆಲೋಚಿಸುತ್ತಿರುವಾಗ ಮರುದ್ದೇವತೆಗಳು ಋಷಿಯ ಪ್ರಶ್ನೆಗೆ ಪ್ರತ್ಯುತ್ತರವಾಗಿ ಈ ರೀತಿ ಹೇಳಿದರು ಎಂದು ವಿವರಿಸಿದೆ. ಏನನ್ನು ಹೇಳಿದರು ಎಂಬ ಮರುದ್ದೇವತೆಗಳ ಪ್ರತ್ಯುತ್ತರವನ್ನು ಋಷಿಯು ತನ್ನ ಸ್ವಂತ ವಾಕ್ಯಗಳಲ್ಲಿ ಈ ರೀತಿ ವಿವರಿಸಿದಾನೆ—

**ಪೃಶ್ನಿಂ ಮಾತರಂ ವೋಚಂತ ಅಧ ಇಷ್ಮಿಣಾಂ ರುದ್ರಂ ಪಿತರಂ ವೋಚಂತ**—ಮರುದ್ದೇವತೆಗಳು ಪೃಶ್ನಿಯನ್ನು ತಮ್ಮ ತಾಯಿಯೆಂದೂ, ರುದ್ರನನ್ನು ತಮ್ಮ ತಂದೆಯೆಂದೂ ತನಗೆ ಹೇಳಿದರು ಎಂದು ಋಷಿಯು ಇಲ್ಲಿ ವಿವರಿಸಿದಾನೆ. ಪೃಶ್ನಿಯು ಮರುದ್ದೇವತೆಗಳಿಗೆ ಹೇಗೆ ತಾಯಿಯು, ರುದ್ರನು ಹೇಗೆ ತಂದೆಯು ಎಂಬ ವಿಷಯವನ್ನು ನಾವು ಈ ಭಾಗದ 594–596 ನೇ ಪುಟಗಳಲ್ಲಿ ವಿವರಿಸಿದೇವೆ.

**ಪೃಶ್ನಿಂ**—ಮರುದ್ದೇವತೆಗಳನ್ನು ಪೃಶ್ನಿಮಾತರಃ—ಪೃಶ್ನಿಯೇ ಮಾತೃವಾಗಿ ಉಳ್ಳವರು ಎಂದು ಋಗ್ವೇದದ ಅನೇಕ ಋಕ್ಕುಗಳಲ್ಲಿ ವಿವರಿಸಲಾಗಿದೆ ಆದುದರಿಂದ ಪೃಶ್ನಿ ಮತ್ತೂ ಪೃಶ್ನಿಮಾತರಃ ಎಂಬ ಶಬ್ದಗಳ ವಿವರಣೆಯನ್ನು ಇಲ್ಲಿ ತಿಳಿಸುವುದು ಅವಶ್ಯಕವಾಗಿದೆ—

**ಮರುನ್ಮಾತಾ ನಾನಾವರ್ಣಾ । ತಾಮೇವಾಂತರಿಕ್ಷದೇವತಾಂ ಕೇಚಿದಾಹುಃ।** ಪೃಶ್ನಿ ಎಂಬ ಶಬ್ದವು **ಸ್ವಃ ನಾಕಃ** ಎಂಬ ಅಂತರಿಕ್ಷ ಮತ್ತು ಆದಿತ್ಯರ ಸಾಧಾರಣ ನಾಮಗಳಲ್ಲಿ (ನಿ. ೨–೧೩) ಉಕ್ತವಾಗಿದೆ ಮತ್ತು **ಪೃಶ್ನಿರಾದಿತ್ಯೋ ಭವತಿ ಪ್ರಾಶ್ನುತ ಏನಂ ವರ್ಣ ಇತಿ ನೈರುಕ್ತಾಃ** (ನಿ. ೨–೧೪). ಪ್ರಭೂತವಾದ ವರ್ಣವು ಇವನನ್ನು ಅತಿಶಯವಾದ ರೀತಿಯಿಂದ ವ್ಯಾಪಿಸುವ ಕಾರಣ ಆದಿತ್ಯನು ಪೃಶ್ನಿ ಎನಿಸುವನು ಎಂದು ಯಾಸ್ಕರಿಂದ ವ್ಯಾಖ್ಯಾತವಾಗಿದೆ. ಪೃಶ್ನಿ ಎಂಬ ದೇವಿಯು ಮರುತ್ತುಗಳ ಜನನಿಯು ಎಂದೂ, ಇವಳು ನಾನಾವರ್ಣವುಳ್ಳವಳಾಗಿರುವಳೆಂದೂ ಒಂದು ವಿಧವಾದ ಅರ್ಥವನ್ನು ವಿವರಿಸಿ, ಇವಳೇ ಅಂತರಿಕ್ಷಾಭಿಮಾನಿಯಾದ ದೇವತೆಯಾಗಿ ಇರುವಳೆಂದು ಹೇಳುವ

ಕೆಲವರ ಮತವನ್ನು ಹೇಳಿದ್ದಾರೆ ಮತ್ತು ಪೃಶ್ನಿಯು ಮರುತ್ತುಗಳ ಮಾತೃವೆಂಬ ವಿಷಯದಲ್ಲಿ "**ಪೃಶ್ನಿಯೈ ವೈ ಪಯಸೋ ಮರುತೋ ಜಾತಾಃ**" (ತೈ. ಸಂ. ೨-೨-೧೧-೪) ಎಂಬ ತೈತ್ತಿರೀಯಸಂಹಿತೆಯ ವಾಕ್ಯವನ್ನೂ, **ಪೃಶ್ನೇಃ ಪುತ್ರಾಃ ಉಪಮಾಸಃ** (ಋ. ಸಂ ೫ ೫೮-೫) ಎಂಬ ಋಕ್ಸಂಹಿತಾವಾಕ್ಯವನ್ನೂ ಉದಹರಿಸಿದ್ದಾರೆ.

**ಸಾ ದೇವೀ ತ್ವೇಷಂ ಅಯಾಸಂ ಮರುತಾಮನೀಕಂ ಅಸೂತ**—ಪೃಶ್ನಿದೇವಿಯು ಕಾಂತಿಯುಳ್ಳದ್ದಾಗಿಯೂ ಸಂಚರಣಶೀಲವಾಗಿಯೂ ಇರುವ ಏಕೋನಪಂಚಾಶತ್ ಸಂಖ್ಯಾತವಾಗಿರುವ (೪೯ ಜನರುಳ್ಳ) ಮರುತ್ತುಗಳ ಸಮೂಹವನ್ನು ಉತ್ಪನ್ನಮಾಡಿರುವಳು ಎಂದು ಅರ್ಥವನ್ನು ವಿವರಿಸಿದೆ.

**ಪೃಶ್ನಿಮಾತರಃ**—ಈ ಶಬ್ದಕ್ಕೆ ಭಾಷ್ಯಕಾರರು ನಾನಾವಿಧವರ್ಣಯುಕ್ತವಾದ ಭೂಮಿಯ ಪುತ್ರರು ಎಂದರ್ಥ ಮಾಡಿರುವರು ಮತ್ತು ಉದಾಹರಣೆಗಾಗಿ—

**ಪೃಶ್ನೇಃ ಪುತ್ರಾ ಉಪಮಾಸೋ ರಭಿಷ್ಠಾಃ ಸ್ವಯಾ ಮತ್ಯಾ ಮರುತಃ ಸಂ ಮಿಮಿಕ್ಷುಃ ||**

(ಋ ಸಂ ೫ ೫೯-೫)

ಎಂಬ ಋಕ್ಕನ್ನು ಕೊಟ್ಟು ಆ ಋಕ್ಕನ್ನು ವ್ಯಾಖ್ಯಾನ ಮಾಡುವಾಗ **ಪೃಶ್ನೇಃ ಪುತ್ರಾಃ** ಎಂಬ ಶಬ್ದಗಳಿಗೆ **ಗೋರೂಪಾಯಾ ಅಂತರಿಕ್ಷಸ್ಯ ವಾ ಪುತ್ರಸ್ಥಾನೀಯಾಃ**—ಎಂದರೆ ಗೋರೂಪವಾದ ಭೂಮಿಯ ಅಥವಾ ಅಂತರಿಕ್ಷ ದೇವತೆಯ ಪುತ್ರರೆಂದು ಅರ್ಥವಿವರಣೆಮಾಡಿರುವರು. ಸ್ಕಂದಸ್ವಾಮಿಯು—**ಪೃಶ್ನಿರಿತಿ ದ್ಯುನಾಮ | ದ್ಯೌರ್ಮಾತಾ ಯೇಷಾಂ ಮರುತಾಂ ತೇ ಪೃಶ್ನಿಮಾತರಃ | ದಿವಃ ಪುತ್ರಾ ಇತ್ಯರ್ಥಃ ||** ಪೃಶ್ನಿಯೆಂದರೆ ಸ್ವರ್ಗವು, ಅಂತರಿಕ್ಷ ಪುತ್ರರು ಎಂದು ಹೇಳಿರುವರು. ಅಂತರಿಕ್ಷದಲ್ಲಿಯೇ ಮರುತ್ತುಗಳ ಸಂಚಾರವಿರುವುದರಿಂದ ಅದರಿಂದ ಹುಟ್ಟಿದವರು ಎಂದು ಹೇಳುವುದು ಯುಕ್ತವಾಗಿದೆ. ಯಾಸ್ಕರು ಈ ಶಬ್ದಕ್ಕೆ ಈ ರೀತಿ ಅರ್ಥವಿವರಣೆ ಮಾಡಿರುವರು—

**ಸ್ವಃ | ಪೃಶ್ನಿಃ | ನಾಕಃ | ಗೌಃ | ವಿಷ್ಟಪಂ | ನಭ ಇತಿ ಷಟ್**
**ಸಾಧಾರಣಾನಿ || ಸಾಧಾರಣಾನ್ಯುತ್ತರಾಣಿ ದಿವಶ್ಚಾದಿತ್ಯಸ್ಯ ||**

(ನಿ. ೨-೧೩)

ಎಂದರೆ **ಸ್ವಃ ಪೃಶ್ನಿಃ ನಾಕಃ ಗೌಃ ವಿಷ್ಟಪಂ ನಭಃ** ಎಂಬ ಆರು ಶಬ್ದಗಳೂ ಸ್ವರ್ಗಃ (ದಿವಃ) ಮತ್ತು ಆದಿತ್ಯರನ್ನು ಸೂಚಿಸುವ ಸಾಧಾರಣ ಶಬ್ದಗಳು. ಮತ್ತು—

**ಪೃಶ್ನಿರಾದಿತ್ಯೋ ಭವತಿ | ಪ್ರಾಶ್ನುತ ಏನಂ ವರ್ಣ ಇತಿ ನೈರುಕ್ತಾಃ | ಸಂಸ್ಪ್ರಷ್ಟಾ ರಸಾನ್ | ಸಂಸ್ಪ್ರಷ್ಟಾ ಭಾಸಂ ಜ್ಯೋತಿಷಾಂ || ಸಂಸ್ಪೃಷ್ಟೋ ಭಾಸೇತಿ ವಾ || ಅಥ ದ್ಯೌಃ ಸಂಸ್ಪೃಷ್ಟಾ ಜ್ಯೋತಿಭಿಃ ಪುಣ್ಯಕೃದ್ಭಿಶ್ಚ ||**

(ನಿ. ೨-೧೪)

ಪೃಶ್ನಿಯೆಂದರೆ ಆದಿತ್ಯನು. ಉತ್ಕೃಷ್ಟವಾದ ಕಾಂತಿಯು ಇವನನ್ನು ಸುತ್ತಲೂ ವ್ಯಾಪಿಸಿರುವುದರಿಂದ ಪೃಶ್ನಿಯೆಂದರೆ ಆದಿತ್ಯನೆಂದು ನೈರುಕ್ತರು (ನಿರುಕ್ತಕಾರರು) ಹೇಳುವರು. **ಸಂಸ್ಪೃಷ್ಟಾ ರಸಾನ್** ಎಂದರೆ **ಸ ಹಿ ನಿತ್ಯಕಾಲಮೇವ ರಸಾನಾಂ ಸಂಸ್ಪ್ರಷ್ಟಾಭವತಿ | ಅಥಾಸ್ಯಕರ್ಮ ರಸಾದಾನಂ |** ರಸವೆಂದರೆ ಉದಕವನ್ನು ಮಳೆಯ ರೂಪದಲ್ಲಿ

ಸುರಿಸುವುದಕ್ಕೆ ಕಾರಣಭೂತನಾದುದರಿಂದ ಆದಿತ್ಯನಿಗೆ ಪೃಶ್ನಿಯೆಂದು ಹೆಸರು. ಅಥವಾ **ಸಂಸ್ಪೃಷ್ಟಾ ಭಾಸಂ ಜ್ಯೋತಿಷಾಂ**—ಗ್ರಹನಕ್ಷತ್ರಚಂದ್ರಾದಿಗಳ ಪ್ರಕಾಶವು **ಸೂರ್ಯನ ಪ್ರಕಾಶಾಧಿಕ್ಯದಿಂದ** ಮಲಿನವಾಗುವುದು. ಅಥವಾ **ಸಂಸ್ಪೃಷ್ಟೋ ಭಾಸೇತಿ ವಾ**—ತನ್ನ ಕಾಂತಿಯಿಂದ ಎಲ್ಲೆಡೆಯಲ್ಲಿಯೂ ವ್ಯಾಪಿಸುವವನು ಆದುದರಿಂದ ಪೃಶ್ನಿಯೆಂದರೆ ಆದಿತ್ಯನು.

ಇನ್ನು ಪೃಶ್ನಿಯೆಂದರೆ **ದ್ಯೌಃ** ಎಂದೂ ಅರ್ಥವು ಏಕೆಂದರೆ **ಸಂಸ್ಪೃಷ್ಟಾ ಜ್ಯೋತಿರ್ಭಿಃ ಪುಣ್ಯಕೃದ್ಭಿಶ್ಚ**—ಪ್ರಕಾಶದಿಂದಲೂ, ಪುಣ್ಯವಂತರಿಂದಲೂ ಹೊಂದಲ್ಪಡುವುದರಿಂದ ಪೃಶ್ನಿಯೆಂದರೆ ದ್ಯೌಃ (ಸ್ವರ್ಗವು) ಎಂದರ್ಥವು.

ಇದು ಯಾಸ್ಕರ ವಿವರಣೆಯು, ಆದುದರಿಂದ ಪೃಶ್ನಿಯೆಂದರೆ ದ್ಯೌಃ—ಸ್ವರ್ಗ, ಅಂತರಿಕ್ಷ ಎಂಬರ್ಥವನ್ನೆ ಸ್ವೀಕರಿಸಿ ಪೃಶ್ನಿಮಾತರಃ ಎಂಬ ಶಬ್ದಕ್ಕೆ ದಿವಸ್ಪುತ್ರಾಃ—ಅಂತರಿಕ್ಷದಲ್ಲಿ ಉತ್ಪನ್ನರಾದವರು ಎಂದು ಹೇಳುವುದೇ ಯುಕ್ತವಾಗಿರುವುದು

**ಯದ್ಯೂಯಂ ಪೃಶ್ನಿಮಾತರೋ ಮರ್ತಾಸಃ ಸ್ಯಾತನ ||**
(ಋ. ಸಂ. ೧-೩೮-೪)

ಎಂಬ ಋಕ್ಕಿನ ಅರ್ಥವಿವರಣೆಮಾಡುವಾಗ **ಪೃಶ್ನಿಮಾತರಃ** ಎಂಬ ಶಬ್ದಕ್ಕೆ **ಪೃಶ್ನಿನಾಮಕಧೇನುಪುತ್ರಾ ಮರುತಃ** ಎಂದು ಅರ್ಥಮಾಡಿರುವರು. ಮರುದ್ದೇವತೆಗಳನ್ನು ಸ್ತೋತ್ರಮಾಡುವ ಅನೇಕ ಸಂದರ್ಭಗಳಲ್ಲಿ ಪೃಶ್ನಿಮಾತರಃ ಎಂಬ ಶಬ್ದದ ಪ್ರಯೋಗವು ವಿಶೇಷವಾಗಿ ಕಂಡುಬರುವುದು. ಆದುದರಿಂದ ಈ ಶಬ್ದಕ್ಕೆ ಒಂದು ನಿರ್ದಿಷ್ಟವಾದ ಅರ್ಥವು ರೂಢಿಯಲ್ಲಿತ್ತೆಂದು ಧಾರಾಳವಾಗಿ ಹೇಳಬಹುದು ಋಗ್ವೇದದಲ್ಲಿ ಈ ಶಬ್ದಪ್ರಯೋಗವಿರುವ ಋಕ್ಕುಗಳನ್ನು ಕೆಳಗೆ ಕೊಟ್ಟಿರುವೆವು

**ಯದ್ಯೂಯಂ ಪೃಶ್ನಿಮಾತರೋ ಮರ್ತಾಸಃ ಸ್ಯಾತನ ||**
(ಋ ಸಂ. ೧-೩೮-೪)

**ಅರ್ಚಂತೋ ಅರ್ಕಂ ಜನಯಂತ ಇಂದ್ರಿಯಮಧಿ ಶ್ರಿಯೋ ದಧಿರೇ ಪೃಶ್ನಿಮಾತರಃ ||**
(ಋ ಸಂ. ೧-೮೫-೨)

**ಪೃಷದಶ್ವಾ ಮರುತಃ ಪೃಶ್ನಿಮಾತರಃ ಶುಭಂಯಾವಾನೋ ವಿದಥೇಷು ಜಗ್ಮಯಃ ||**
(ಋ. ಸಂ. ೧-೮೯-೭)

**ಸುಜಾತಾಸೋ ಜನುಷಾ ಪೃಶ್ನಿಮಾತರೋ ದಿವೋ ಮರ್ಯಾ ಆ ನೋ ಅಚ್ಛಾ ಜಿಗಾತನ ||**
(ಋ. ಸಂ. ೫-೫೯-೬)

**ಉದೀರಯಂತ ವಾಯುಭಿರ್ವಾಶ್ರಾಸಃ ಪೃಶ್ನಿಮಾತರಃ ||**
(ಋ ಸಂ. ೮-೭-೩)

**ಉದು ಸ್ವಾನೇಭಿರೀರತ ಉದ್ರಥೈರುದು ವಾಯುಭಿಃ । ಉತ್ಸ್ತೋಮೈಃ ಪೃಶ್ನಿಮಾತರಃ ||**
(ಋ. ಸಂ ೮-೭-೧೭)

**ಅಭೀಮೃತಸ್ಯ ವಿಷ್ಟಪಂ ದುಹತೇ ಪೃಶ್ನಿಮಾತರಃ ||**
(ಋ. ಸಂ. ೯-೩೪-೫)

ಸ್ವಶ್ವಾಃ ಸ್ಥ ಸುರಥಾಃ ಪೃಶ್ನಿಮಾತರಃ ಸ್ವಾಯುಧಾ ಮರುತೋ ಯಾಥನಾ ಶುಭಂ ॥
(ಋ. ಸಂ. ೫-೫೭-೨)

ಕೋಪಯಥ ಪೃಥಿವೀಂ ಪೃಶ್ನಿಮಾತರಃ ಶುಭೇ ಯದುಗ್ರಾಃ ಪೃಷತೀರಯುಗ್ಧ್ವಂ ॥
(ಋ ಸಂ. ೫-೫೭-೩)

ಪೃಶ್ನಿಮಾತರಃ ಎಂಬ ಶಬ್ದಪ್ರಯೋಗವಿರುವ ಋಕ್ಕುಗಳನ್ನೆಲ್ಲಾ ಮೇಲೆ ಕೊಟ್ಟಿರುತ್ತೆ. ಈ ಋಕ್ಕುಗಳಲ್ಲಿ ಪೃಶ್ನಿಮಾತರಃ ಎಂದ ಶಬ್ದಕ್ಕೆ ಮರುತ್ತುಗಳೆಂದೇ ಅರ್ಥವಿವರಣೆ ಇರುವುದರಿಂದ ಈ ಶಬ್ದವು ಈ ದೇವತೆಗಳ ವಿಷಯದಲ್ಲಿ ಮಾತ್ರ ಒಂದು ನಿರ್ದಿಷ್ಟವಾದ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದೆಂದು ಧಾರಾಳವಾಗಿ ಹೇಳಬಹುದು.

॥ ಸಂಹಿತಾಪಾಠಃ ॥

ಸಪ್ತ ಮೇ ಸಪ್ತ ಶಾಕಿನ ಏಕಮೇಕಾ ಶತಾ ದದುಃ ।
ಯಮುನಾಯಾಮಧಿ ಶ್ರುತಮುದ್ರಾಧೋ ಗವ್ಯಂ ಮೃಜೇ ನಿ ರಾಧೋ
ಅಶ್ವ್ಯಂ ಮೃಜೇ ॥ ೧೭ ॥

॥ ಪದಪಾಠಃ ॥

ಸಪ್ತ । ಮೇ । ಸಪ್ತ । ಶಾಕಿನಃ । ಏಕಂऽಏಕಾ । ಶತಾ । ದದುಃ ।
ಯಮುನಾಯಾಂ । ಅಧಿ । ಶ್ರುತಂ । ಉತ್ । ರಾಧಃ । ಗವ್ಯಂ । ಮೃಜೇ । ನಿ । ರಾಧಃ । ಅಶ್ವ್ಯಂ ।
ಮೃಜೇ ॥ ೧೭ ॥

॥ ಸಾಯಣಭಾಷ್ಯಂ ॥

ಸಪ್ತ ಸಪ್ತಸಂಖ್ಯಾಕಾಃ ಸಂಘಾಃ । ಸಪ್ತಗಣಾ ವೈ ಮರುತಃ । ತೈ. ಸಂ. ೨-೨-೧೧-೧ । ಇತಿ ಶ್ರುತೇಃ । ಅದಿತಿಗರ್ಭೇ ವರ್ತಮಾನಂ ವಾಯುಮಿಂದ್ರಃ ಪ್ರವಿಶ್ಯ ಸಪ್ತಧಾ ವಿದಾರ್ಯ ಪುನರೇಕೈಕಂ ಸಪ್ತಧಾ ವ್ಯದಾರಯತ್ ತ ಏಕೋನಪಂಚಾಶನ್ಮರುದ್ಗಣಾ ಅಭವನ್ನಿತಿ ಪುರಾಣೇಷು ಪ್ರಸಿದ್ಧಂ । ತೇ ಚ ಸಪ್ತಸಂಖ್ಯಾಕಾಃ ಶಾಕಿನಃ ಸರ್ವಮಪಿ ಕರ್ತುಂ ಶಕ್ತಾಃ । ತೇ ಚೈಕಮೇಕೈಕೈಕೋ ಗಣೋ ಮೇ ಮಹ್ಯಂ ಶತಾ ಶತಸಂಖ್ಯಾಕಾನಿ ಗವಾಶ್ವಯೂಥಾನಿ ದದುಃ । ದತ್ತವಂತಃ । ಪ್ರಯಚ್ಛಂತ್ವಿತಿ ವಾಶೀಃ । ತೈರ್ದತ್ತಂ ಯಮುನಾಯಾಂ ನದ್ಯಾಮಧಿ । ಅಯಂ ಸಪ್ತಮ್ಯರ್ಥಾನುವಾದೀ । ತತ್ರ ಶ್ರುತಂ ಪ್ರಸಿದ್ಧಂ ಗವ್ಯಂ ಗೋಸಮೂಹಾತ್ಮಕಂ ಗೋಸಂಬಂಧಿ ವಾ ರಾಧೋ ಧನಮುನ್ಮೃಜೇ । ಉನ್ಮಾರ್ಜಯಾಮಿ । ತಥಾ ತೈರ್ದತ್ತಮಶ್ವ್ಯಮಶ್ವಸಮೂಹಾತ್ಮಕಂ ತತ್ಸಂಬಂಧಿ ವಾ ರಾಧೋ ಧನಂ ನಿ ಮೃಜೇ । ನಿಮಾರ್ಜ್ಮಿ ॥

॥ ಪ್ರತಿಪದಾರ್ಥ ॥

**ಸಪ್ತ**—ಸಪ್ತಸಂಖ್ಯಾಕವಾದ । **ಸಪ್ತ**—ಮರುತ್ತುಗಳ ಏಳು ಗಣವು । **ಶಾಕಿನಃ**—ಸರ್ವಸಮರ್ಥರಾಗಿದ್ದು । **ಮೇ**—ನನಗೆ । **ಏಕಂ ಏಕಾ**—ಒಂದೊಂದು ಗಣವೂ । **ಶತಾ**—ಶತಸಂಖ್ಯಾಕವಾದ ಗವಾದಿಗಳನ್ನು । **ದದುಃ**—ಕೊಡಲಿ । **ಯಮುನಾಯಾಂ ಅಧಿ**—ಯಮುನಾನದಿಯ ದಡದಲ್ಲಿ । **ಶ್ರುತಂ**—ಪ್ರಸಿದ್ಧವಾದ । **ಗವ್ಯಂ**—ಗೋರೂಪವಾದ । **ರಾಧಃ**—ಧನವನ್ನು । **ಉನ್ಮೃಜೇ**—ನಾನು ಹೊಂದುವಂತಾಗಲಿ । **ಅಶ್ವ್ಯಂ**—ಅಶ್ವರೂಪವಾದ। **ರಾಧಃ**—ಧನವನ್ನೂ । **ನಿಮೃಜೇ**—ಹೊಂದುವಂತಾಗಲಿ.

॥ ಭಾವಾರ್ಥ ॥

ಸಪ್ತಸಂಖ್ಯಾಕವಾದ ಗಣಗಳಲ್ಲಿ ಪ್ರತಿಯೊಂದರಲ್ಲಿಯೂ ಏಳೇಳು ಸಂಖ್ಯೆಯಂತೆ ಇರುವ ಮರುತ್ತುಗಳು ಸರ್ವಸಮರ್ಥರಾಗಿದ್ದು ನನಗೆ ಒಂದೊಂದು ಗಣವೂ ಶತಸಂಖ್ಯಾಕವಾದ ಗವಾದಿಗಳನ್ನು ಕೊಡಲಿ ಯಮುನಾನದಿಯ ದಡದಲ್ಲಿ ಪ್ರಸಿದ್ಧವಾದ ಗೋರೂಪವಾದ ಧನವನ್ನು ನಾವು ಹೊಂದುವಂತಾಗಲಿ ಮತ್ತು ಅಶ್ವರೂಪವಾದ ಧನವನ್ನೂ ಹೊಂದುವಂತಾಗಲಿ

English Translation

May the seven times seven all-potent (Maruts, aggregated as) a single troop, bestow upon me hundreds (of cattle): may I possess wealth of cows, renowned upon the (banks of) the Yamuna : may I possess wealth of horses.

## ಐವತ್ತಮೂರನೆಯ ಸೂಕ್ತವು.

---

**ಕೋ ವೇದ ಜಾನಮಿತಿ ಷೋಡಶರ್ಚಂ ನವಮಂ ಸೂಕ್ತಂ । ಶ್ಯಾವಾಶ್ವ ಋಷಿಃ । ಆದ್ಯಾಪಂಚಮೀದಶಮ್ಯೇಕಾದಶೀಪಂಚದಶ್ಯಃ ಕಕುಭಃ ಷಷ್ಠೀಸಪ್ತಮೀನವಮೀತ್ರಯೋದಶೀಚತುರ್ದಶೀಷೋಡಶ್ಯಃ ಸತೋಬೃಹತ್ಯೋಽಷ್ಟಮೀ ದ್ವಾದಶೀ ಚ ಗಾಯತ್ರ್ಯೌ ದ್ವಿತೀಯಾ ಬೃಹತೀ ತೃತೀಯಾನುಷ್ಟುಪ್ ಚತುರ್ಥೀ ಪುರಉಷ್ಣಿಕ್ । ಮರುತೋ ದೇವತಾ । ತಥಾ ಚಾನುಕ್ರಾಂತಂ । ಕೋ ವೇದ ಷೋಳಶ ಕಕುಬ್ಬೃಹತ್ಯನುಷ್ಟುಪ್ ಪುರಉಷ್ಣಿಕ್ ಕಕುಪ್ಸತೋಬೃಹತ್ಯೌ ಗಾಯತ್ರೀ ಸತೋಬೃಹತೀ ಕಕುಭೌ ಗಾಯತ್ರೀ ಸತೋಬೃಹತ್ಯೌ ಕಕುಪ್ಸತೋ ಬೃಹತೀತಿ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು—**ಕೋ ವೇದ ಜಾನಂ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಹದಿನಾರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಶ್ಯಾವಾಶ್ವನು ಋಷಿಯು; ಮರುತ್ತುಗಳು ದೇವತೆಯು; ಈ ಸೂಕ್ತದ ಒಂದು, ಐದು, ಹತ್ತು, ಹನ್ನೊಂದು, ಹದಿನೈದನೆಯ ಋಕ್ಕುಗಳು ಕಕುಪ್ ಎಂಬ ಛಂದಸ್ಸಿನವು; ಆರು, ಏಳು, ಒಂಭತ್ತು, ಹದಿಮೂರು, ಹದಿನಾಲ್ಕು, ಹದಿನಾರನೆಯ ಋಕ್ಕುಗಳು ಸತೋಬೃಹತೀ-

ಛಂದಸ್ಕವು ; ಎಂಟು ಮತ್ತು ಹನ್ನೆರಡನೆಯ ಋಕ್ಕುಗಳು ಗಾಯತ್ರೀಛಂದಸ್ಕವು ; ಎರಡನೆಯ ಋಕ್ಕು ಬೃಹತೀ ಛಂದಸ್ಕವು ; ಮೂರನೆಯದು ಅನುಷ್ಟುಪ್ ಛಂದಸ್ಕವು ; ನಾಲ್ಕನೆಯದು ಪುರಉಷ್ಣಿಕ್ ಛಂದಸ್ಕವು. ಅನುಕ್ರಮಣಿಕೆ ಯಲ್ಲಿ—**ಕೋ ವೇದ ಷೋಳಶ ಕಕುಬ್ಬೃಹತ್ಯನುಷ್ಟುಪ್ ಪುರಉಷ್ಣಿಕ್ ಕಕುಪ್ಸತೋಬೃಹತ್ಯೌ ಗಾಯತ್ರೀ ಸತೋಬೃಹತೀ ಕಕುಭೌ ಗಾಯತ್ರೀ ಸತೋಬೃಹತ್ಯೌ ಕಕುಪ್ಸತೋಬೃಹತೀತಿ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

---

## ಸೂಕ್ತ—೫೩

ಮಂಡಲ—೫ ॥ ಅನುವಾಕ—೪ ॥ ಸೂಕ್ತ—೫೩ ॥

ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ—೧೧, ೧೨, ೧೩ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೬ ॥

ಋಷಿಃ—ಶ್ಯಾವಾಶ್ವ ಆತ್ರೇಯಃ ॥

ದೇವತಾ—ಮರುತಃ ॥

ಛಂದಃ—೧, ೫, ೧೦, ೧೧, ೧೫ ಕಕುಪ್ । ೨ ಬೃಹತೀ । ೩ ಅನುಷ್ಟುಪ್ । ೪. ಪುರಉಷ್ಣಿಕ್ । ೬, ೭, ೯, ೧೩, ೧೪, ೧೬ ಸತೋಬೃಹತೀ । ೮, ೧೨. ಗಾಯತ್ರೀ ॥

—— : ೦ : ——

॥ ಸಂಹಿತಾಪಾಠಃ ॥

ಕೋ ವೇದ ಜಾನಮೇಷಾಂ ಕೋ ವಾ ಪುರಾ ಸುಮ್ನೇಷ್ವಾಸ ಮರುತಾಂ।
ಯದ್ಯುಯುಜ್ರೇ ಕಿಲಾಸ್ಯಃ ॥ ೧ ॥

॥ ಪದಪಾಠಃ ॥

ಕಃ । ವೇದ । ಜಾನಂ । ಏಷಾಂ । ಕಃ । ವಾ । ಪುರಾ । ಸುಮ್ನೇಷು । ಆಸ । ಮರುತಾಂ ।
ಯತ್ । ಯುಯುಜ್ರೇ । ಕಿಲಾಸ್ಯಃ ॥ ೧ ॥

॥ ಸಾಯಣಭಾಷ್ಯಂ ॥

ಏಷಾಂ ॥ ಮರುತಾಂ ಪೂರ್ವಸೂಕ್ತೇ ಪ್ರಸ್ತುತತ್ವಾದತ್ರಾನ್ವಾದೇಶವಿಷಯತ್ವಾದೇಷಾಮಿತ್ಯಸ್ಯ ನಿಘಾತತಾ ॥ ಜಾನಮುತ್ಪತ್ತಿಂ ಕೋ ವೇದ । ಜಾನಾತಿ ಕಃ ಪುಮಾನ್ । ಕೋ ವಾ ಪುರಾ ಪೂರ್ವಮ- ಸ್ಯೈಷಾಂ ಮರುತಾಂ ಸುಮ್ನೇಷು ಸುಖೇಷ್ವಾಸ । ಭವತಿ । ಯದ್ಯದ್ಯೈತೇ ಕಿಲಾಸ್ಯಃ ಕಿಲಾಸೀಃ। ಪೃಷತೀ- ರಿತ್ಯರ್ಥಃ । ತಾ ಯುಯುಜ್ರೇ ರಥೇ ಯೋಜಿತವಂತಃ ತದೈಷಾಂ ಸ್ಥಿತಿಂ ಬಲಲಕ್ಷಣಾನಿ ಸುಖಾನಿ ಚ ಕೋ ಜಾನಾತೀತ್ಯರ್ಥಃ । ವೇಗವಿಷಯೇ ಸರ್ವತ್ರ ವಾಯೋರುಪಮಾಸ್ಪದತ್ವಾದಿತಿ ಭಾವಃ ॥

॥ ಪ್ರತಿಪದಾರ್ಥ ॥

**ಏಷಾಂ ಮರುತಾಂ**—ಈ ಮರುತ್ತುಗಳ । **ಜಾನಂ**—ಉತ್ಪತ್ತಿಯನ್ನು । **ಕೋ ವೇದ**—ಯಾವನು ಅರಿತಿದ್ದಾನೆ? । **ಯತ್**—ಯಾವಾಗ (ಈ ಮರುತ್ತುಗಳು) । **ಕಿಲಾಸ್ಯಃ**—ತಮ್ಮ ಚಿಕ್ಕೆಗಳುಳ್ಳ ಜಿಂಕೆಗಳನ್ನು । **ಯುಯುಜ್ರೇ**—ತಮ್ಮ ರಥಕ್ಕೆ ಯೋಜಿಸಿದರೋ (ಆಗ) । **ಮರುತಾಂ**—ಈ ಮರುತ್ತುಗಳ । **ಸುಮ್ನೇಷು**—ಸುಖಗಳಲ್ಲಿ ಭಾಗಿಯಾಗಿ । **ಪುರಾ**—ಮೊದಲು । **ಕೋ ವಾ ಆಸ**—ಯಾವನು ತಾನೇ ಆಗಿದ್ದನು?

॥ ಭಾವಾರ್ಥ ॥

ಈ ಮರುತ್ತುಗಳ ಉತ್ಪತ್ತಿಯನ್ನು ಯಾವನು ತಾನೇ ಅರಿತಿದ್ದಾನೆ? ಈ ಮರುತ್ತುಗಳು ತಮ್ಮ ಚಿಕ್ಕೆಗಳುಳ್ಳ ಜಿಂಕೆಗಳನ್ನು ಯಾವಾಗ ರಥಕ್ಕೆ ಯೋಜಿಸಿದರೋ ಆಗ ಈ ಮರುತ್ತುಗಳ ಸುಖಗಳಲ್ಲಿ ಯಾವನು ತಾನೇ ಮೊದಲು ಭಾಗಿಯಾಗಿದ್ದನು?.

English Translation

Who knows the birth of these (Maruts)? who has formerly been (participant) of the enjoyments of the Maruts (by whom) the spotted deer are harnessed (to their chariots)?

॥ ವಿಶೇಷವಿಷಯಗಳು ॥

**ಕಿಲಾಸ್ಯಃ—ಕಿಲಾಸೀಃ ಪೃಷತೀ ಇತ್ಯರ್ಥಃ** । ಮರುದ್ದೇವತೆಗಳಿಗೆ ಬಿಳೀಚಿಕ್ಕೆಗಳಿರುವ ಜಿಂಕೆಗಳೇ ವಾಹನವೆಂದು ಹೇಳಲ್ಪಟ್ಟಿದೆ. ಈ ವಿಷಯದಲ್ಲಿ ಯಾಸ್ಕರು—

> **ಹರೀ ಇಂದ್ರಸ್ಯ । ರೋಹಿತೋಽಗ್ನೇಃ । ಹರಿತ ಆದಿತ್ಯಸ್ಯ । ರಾಸಭಾವಶ್ವಿನೋಃ । ಅಜಾಃ ಪೂಷ್ಣಃ । ಪೃಷತ್ಯೋ ಮರುತಾಂ । ಅರುಣ್ಯೋ ಗಾವ ಉಷಸಃ । ಶ್ಯಾವಾಃ ಸವಿತುಃ । ವಿಶ್ವರೂಪಾ ಬೃಹಸ್ಪತೇಃ । ನಿಯುತೋ ವಾಯೋಃ ।**
>
> (ನಿ. ೨-೨೮)

ಎಂದು ನಾನಾ ದೇವತೆಗಳ ವಾಹನಗಳನ್ನು ವಿವರಿಸಿದಾರೆ. ಎಂದರೆ ಇಂದ್ರನಿಗೆ ಹರೀ ಎಂಬ ಹೆಸರಿನ ಎರಡು ಕುದುರೆಗಳೇ ವಾಹನಗಳು, ಅಗ್ನಿಗೆ ಸ್ವಲ್ಪ ಕೆಂಪುವರ್ಣದ ಕುದುರೆಗಳು; ಆದಿತ್ಯ ಅಥವಾ ಸೂರ್ಯನಿಗೆ ಹರಿದ್ವರ್ಣ (ಹಸರು ಅಥವಾ ಹಳದಿ) ವುಳ್ಳ (ಏಳು) ಕುದುರೆಗಳು, ಅಶ್ವಿನೀದೇವತೆಗಳಿಗೆ ಎರಡು ಕತ್ತೆಗಳು, ಪೂಷನೆಂಬ ದೇವತೆಗೆ ಆಡುಗಳು, ಮರುದ್ದೇವತೆಗಳಿಗೆ ಚಿಕ್ಕೆಗಳಿರುವ ಜಿಂಕೆಗಳು । ಉಷೋ ದೇವತೆಗೆ ಅರುಣ (ಕೆಂಪು ಬಣ್ಣದ) ಗೋವುಗಳು, ಸವಿತೃ ದೇವತೆಗೆ ಮಾಸಲು ಬಣ್ಣದ ಅಶ್ವಗಳು, ಬೃಹಸ್ಪತಿಗೆ ನಾನಾ ಬಣ್ಣದ ಅಶ್ವಗಳು, ವಾಯುದೇವತೆಗೆ ನಿಯುತ್ ಎಂಬ ಹೆಸರಿನ ವೇಗವಾಗಿ ಓಡುವ ಅಶ್ವಗಳು. ಎಂದು ನಿರ್ವಚನವನ್ನು ಹೇಳಿದಾರೆ. ಪ್ರಕೃತ ಋಕ್ಕಿನಲ್ಲಿ ಮರುದ್ದೇವತೆಗಳ ವಾಹನಗಳಾದ ಪೃಷತೀಃ—ಚಿಕ್ಕೆಗಳುಳ್ಳ ಜಿಂಕೆಗಳನ್ನು ಕಿಲಾಸ್ಯಃ ಎಂಬ ಶಬ್ದದಿಂದ ನಿರ್ದೇಶಿಸಿದೆ.

---

*

॥ ಸಂಹಿತಾಪಾಠಃ ॥

ಏತಾನ್ರಥೇಷು ತಸ್ಥುಷಃ ಕಃ ಶುಶ್ರಾವ ಕಥಾ ಯಯುಃ ।
ಕಸ್ಮೈ ಸಸ್ರುಃ ಸುದಾಸೇ ಅನ್ವಾಪಯ ಇಳಾಭಿರ್ವೃಷ್ಟಯಃ ಸಹ ॥ ೨ ॥

॥ ಪದಪಾಠಃ ॥

ಆ । ಏತಾನ್ । ರಥೇಷು । ತಸ್ಥುಷಃ । ಕಃ । ಶುಶ್ರಾವ । ಕಥಾ । ಯಯುಃ ।
ಕಸ್ಮೈ । ಸಸ್ರುಃ । ಸುऽದಾಸೇ । ಅನು ಆಪಯಃ । ಇಳಾಭಿಃ । ವೃಷ್ಟಯಃ । ಸಹ ॥ ೨ ॥

॥ ಸಾಯಣಭಾಷ್ಯಂ ॥

ಏತಾನ್ಮರುತೋ ರಥೇಷು ತಸ್ಥುಷಃ ಸ್ಥಿತವತಃ ಕ ಆ ಶುಶ್ರಾವ । ಶ್ರಾವಯೇದಿತ್ಯರ್ಥಃ । ಯದ್ವಾ। ಏತೇಷಾಂ ಕ್ರೋಶಧ್ವನಿಂ ರಥಧ್ವನಿಂ ಚ ಕಃ ಶೃಣುಯಾತ್ । ಕಥಾ ಕಥಂ ಯಯುರ್ಗಚ್ಛಂತಿ ತದಪಿ ಕೋ ಜಾನಾತಿ । ಯದ್ವಾ । ತಾನ್ ಕಥಮನ್ಯೇ ದೇವಾದಯೋಽನುಗಚ್ಛೇಯುಃ । ಕಸ್ಮೈ ಸುದಾಸೇ ಸುದಾನಾಯಾಪಯೋ ಬಂಧುಭೂತಾ ವ್ಯಾಪ್ತಾ ವೃಷ್ಟಯೋ ವರ್ಷಕಾಃ ॥ ಅಯಂ ಕರ್ತರಿ ಕ್ತಿಚ್ ॥ ಇಳಾಭಿರ್ಬಹುವಿಧೈರನ್ನೈಃ ಸಹ ಸಹಿತಾ ಅನು ಸಸ್ರುಃ । ಅನುಕ್ರಮೇಣಾವತರೇಯುಃ ॥

॥ ಪ್ರತಿಪದಾರ್ಥ ॥

**ರಥೇಷು**—ತಮ್ಮ ರಥಗಳಲ್ಲಿ । **ತಸ್ಥುಷಃ**—ಕುಳಿತಿರತಕ್ಕ । ಏತಾನ್—ಈ ಮರುತ್ತುಗಳನ್ನು (ಇವರ ದಿವ್ಯಧ್ವನಿಯನ್ನು) । **ಕಃ**—ಯಾವನು ತಾನೇ । **ಆ ಶುಶ್ರಾವ**—ಕೇಳಬಲ್ಲನು ? । **ಕಥಾ**—ಯಾವ ವಿಧದಲ್ಲಿ । **ಯಯುಃ**—ಸಂಚರಿಸಬಲ್ಲರು (ಎಂಬುದು ತಾನೇ ಯಾರಿಗೆ ಗೊತ್ತು ?) । **ಆಪಯಃ**—ಬಂಧುಗಳಂತೆ ಹಿತಕರ ವಾದ । **ವೃಷ್ಟಯಃ**—ವೃಷ್ಟಿಗಳು । **ಇಳಾಭಿಃ ಸಹ**—ಅನೇಕವಿಧವಾದ ಅನ್ನಗಳೊಡನೆ । **ಕಸ್ಮೈ ಸುದಾಸೇ**—ಉತ್ತಮವಾದ ಹವಿಸ್ಸನ್ನರ್ಪಿಸುವ ಯಾವ ಯಜಮಾನನ ಹಿತಕ್ಕಾಗಿ । **ಅನು ಸಸ್ರುಃ**—ಒಟ್ಟಿಗೆ ಸುರಿಯುತ್ತವೆ.

॥ ಭಾವಾರ್ಥ ॥

ಮರುತ್ತುಗಳು ತಮ್ಮ ರಥಗಳಲ್ಲಿ ಕುಳಿತಿರುವಾಗ ಇವರ ದಿವ್ಯಧ್ವನಿಯನ್ನೂ ರಥದ ಧ್ವನಿಯನ್ನೂ ಯಾವನು ತಾನೇ ಕೇಳಬಲ್ಲನು ? ಇವರ ಸಂಚಾರಕ್ರಮವು ಹೇಗೆಂಬುದು ಯಾರಿಗೆ ಗೊತ್ತು ? ಬಂಧುಗಳಂತೆ ಹಿತಕರವಾದ ವೃಷ್ಟಿಗಳು ಅನೇಕವಿಧವಾದ ಅನ್ನಗಳೊಡನೆ ಉತ್ತಮವಾದ ಹವಿಸ್ಸನ್ನರ್ಪಿಸುವ ಯಾವ ಯಜಮಾನನ ಹಿತಕ್ಕಾಗಿ ಒಟ್ಟಿಗೆ ಸುರಿಯುತ್ತವೆ ?

## English Translation

Who has heard them, when standing in their cars, (declare) whither they go ? Upon what liberal worshipper do their kindred rains descend together with manifold food ?

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ, ಹಿಂದಿನ ಋಕ್ಕಿನಲ್ಲಿಯೂ ಮರುದ್ದೇವತೆಗಳ ಪ್ರಭಾವವನ್ನೂ ಶಕ್ತಿಸಾಮರ್ಥ್ಯಗಳನ್ನೂ ಯಾರೂ ಚೆನ್ನಾಗಿ ತಿಳಿದಿಲ್ಲವೆಂಬ ವಿಷಯವನ್ನು ಋಷಿಯು ಪ್ರಶ್ನೆಯ ಮೂಲಕ ವಿವರಿಸಿದಾನೆ.

---

॥ ಸಂಹಿತಾಪಾಠಃ ॥

ತೇ ಮ ಆಹುರ್ಯ ಆಯಯುರುಪ ದ್ಯುಭಿರ್ವಿಭಿರ್ಮದೇ ।
ನರೋ ಮರ್ಯಾ ಅರೇಪಸ ಇಮಾನ್ಪಶ್ಯನ್ನಿತಿ ಷ್ಟುಹಿ ॥ ೩ ॥

॥ ಪದಪಾಠಃ ॥

ತೇ । ಮೇ । ಆಹುಃ । ಯೇ । ಆऽಯಯುಃ । ಉಪ । ದ್ಯುऽಭಿಃ । ವಿऽಭಿಃ । ಮದೇ ।
ನರಃ । ಮರ್ಯಾಃ । ಅರೇಪಸಃ । ಇಮಾನ್ । ಪಶ್ಯನ್ । ಇತಿ । ಸ್ತುಹಿ ॥ ೩ ॥

॥ ಸಾಯಣಭಾಷ್ಯಂ ॥

ಋಷಿರ್ಋಗ್ದ್ವಯಾಭ್ಯಾಂ ಮರುತ್ಪ್ರಾದುರ್ಭಾವಮಾಖ್ಯಾಸ್ಯನ್ನನಯಾ ಪ್ರಾದುರ್ಭೂತಾನ್ಪಶ್ಯನ್ನಾಹ । ತೇ ಮರುತ ಇತ್ಥಂ ಲಪತೇ ಮೇ ಮಹ್ಯಮಾಹುಃ ಯ ಉಪಾಯಯುಃ ಯೇ ಮರುತೋ ಮಾಂ ಪ್ರಾಪ್ತಾಃ । ಕೈಃ ಸಾಧನೈಃ । ದ್ಯುಭಿರ್ದ್ಯೋತಮಾನೈರ್ವಿಭಿರ್ಗಂತೃಭಿರಶ್ವೈಃ । ಕಿಮರ್ಥಂ । ಮದೇ ಮದಾಯ ಸೋಮಪಾನಜನಿತಾಯ । ಕಿಮಾಹುರಿತಿ ತದನುಬ್ರೂತೇ । ನರೋ ನೇತಾರೋ ಮರ್ಯಾ ಮನುಷ್ಯೇಭ್ಯೋ ಹಿತಾ ಅರೇಪಸೋಽಲೇಪಾಸ್ತೇ । ಹೇ ಋಷೇ ಇಮಾನಸ್ಮಾನ್ ಪಶ್ಯನ್ ತಥಾ ಸ್ಥಿತಾನ್ ಚಕ್ಷುಷಾವಲೋಕಯನ್ ಸ್ತುಹೀತ್ಯಾಹುಃ । ಯದ್ವಾ । ಇತೀತ್ಥಂ ಪಶ್ಯನ್ ಸ್ತುಹೀತಿ ॥

॥ ಪ್ರತಿಪದಾರ್ಥ ॥

**ಯೇ**—ಯಾವ ಮರುತ್ತುಗಳು । **ದ್ಯುಭಿಃ**—ಪ್ರಕಾಶಮಾನಗಳಾದ । **ವಿಭಿಃ**—ಅಶ್ವಗಳೊಡನೆ । **ಮದೇ**—ಸೋಮಪಾನದ ಹರ್ಷಾರ್ಥವಾಗಿ । **ಉಪ ಆಯಯುಃ**—ನನ್ನಲ್ಲಿಗೆ ಬಂದರೋ । **ತೇ**—ಆ ಮರುತ್ತುಗಳು । **ಮೇ**—ನನಗೆ (ಈ ರೀತಿ) । **ಆಹುಃ**—ಹೇಳಿದರು (ಎಲೈ ಋಷಿಯೇ) । **ನರಃ**—ನೇತೃಗಳೂ । **ಮರ್ಯಾಃ**—ಮಾನವರಿಗೆ ಹಿತಕಾರಿಗಳೂ । **ಅರೇಪಸಃ**—ಕಲ್ಮಷರಹಿತರೂ ಆದ । **ಇಮಾನ್**—ನಮ್ಮನ್ನು । **ಪಶ್ಯನ್**—ನೋಡಿದೊಡನೆಯೇ । **ಸ್ತುಹಿ**—ಸ್ತುತಿಸು । **ಇತಿ**—ಎಂಬುದಾಗಿ (ಹೇಳಿದರು)

॥ ಭಾವಾರ್ಥ ॥

ಮರುತ್ತುಗಳು ಪ್ರಕಾಶಮಾನಗಳಾದ ತಮ್ಮ ಅಶ್ವಗಳೊಡನೆ ಸೋಮಪಾನದ ಹರ್ಷಾರ್ಥವಾಗಿ ನನ್ನಲ್ಲಿಗೆ

ಬಂದಾಗ "ಎಲೈ ಋಷಿಯೇ, ನೇತೃಗಳೂ ಮಾನವರಿಗೆ ಹಿತಕಾರಿಗಳೂ, ಕಲ್ಮಷರಹಿತರೂ ಆದ ನಮ್ಮನ್ನು ನೋಡಿದೊಡನೆಯೇ ಸ್ತುತಿಸು" ಎಂಬುದಾಗಿ ಹೇಳಿದರು.

English Translation

To me have they spoken ; they who came to me with radiant steeds to (drink) the exhilarating beverage : to me (they have said), when beholding them, who are the formless leaders (of rites), and friends of man, repeat our praise.

* **** *

॥ ಸಂಹಿತಾಪಾಠಃ ॥

ಯೇ ಅಂಜಿಷು ಯೇ ವಾಶೀಷು ಸ್ವಭಾನವಃ ಸ್ರಕ್ಷು ರುಕ್ಮೇಷು ಖಾದಿಷು।
ಶ್ರಾಯಾ ರಥೇಷು ಧನ್ವಸು ॥ ೪ ॥

॥ ಪದಪಾಠಃ ॥

ಯೇ । ಅಂಜಿಷು । ಯೇ । ವಾಶೀಷು । ಸ್ವಽಭಾನವಃ । ಸ್ರಕ್ಷು । ರುಕ್ಮೇಷು । ಖಾದಿಷು ।
ಶ್ರಾಯಾಃ । ರಥೇಷು । ಧನ್ವಽಸು ॥ ೪ ॥

॥ ಸಾಯಣಭಾಷ್ಯಂ ॥

ಅನಯಾ ಮರುತಾಂ ಸ್ವರೂಪಂ ನಿರೂಪಯತಿ । ಹೇ ಮರುತೋ ಯುಷ್ಮಾಕಂ ಯೇ ಪ್ರಸಿದ್ಧಾಃ ಸ್ವಭಾನವಃ ಸ್ವದೀಪ್ತಯೋಽಂಜಿಷ್ವಾಭರಣೇಷು ಶ್ರಾಯಾ ಆಶ್ರಯಭೂತಾಃ ಸಂತಿ । ಯೇ ಚ ವಾಶೀಷ್ವಾಯುಧೇಷು । ಯೇ ಚ ಸ್ರಕ್ಷು ಮಾಲ್ಯೇಷು । ಯೇ ರುಕ್ಮೇಷೂರೋಭೂಷಣೇಷು । ಯೇ ಚ ಖಾದಿಷು ಹಸ್ತಪಾದಸ್ಥಿತಕಟಕೇಷು । ಹಸ್ತೇಷು ಖಾದಿಶ್ಚ ಕೃತಿಶ್ಚ । ಋಗ್ವೇ-೧.೧೬೮-೩ । ಪತ್ಸು ಖಾದಯಃ । ಋಗ್ವೇ-೫.೫೪-೧೧ । ಇತಿ ಹಿ ಶ್ರುತೀ ಭವತಃ । ರಥೇಷು ಧನ್ವಸು ಚ ಯೇ ಚ ಸ್ವಭಾನವಃ ಶ್ರಾಯಾಃ ಸಂತಿ । ಸುಧನ್ವಾನ ಇಷುಮಂತಃ ಸುರಥಾಃ ಪೃಶ್ನಿಮಾತರಃ । ಋಗ್ವೇ-೮.೫೭-೨ । ಇತಿ ಚ ನಿಗಮಃ । ತಾನ್ ಸರ್ವಾನ್ ಸ್ತುಮ ಇತಿ ಶೇಷಃ । ಯದ್ವಾ । ಯೇ ಸ್ವಭಾನವಃ ಸ್ವಾಯತ್ತದೀಪ್ತಯೋ ಮರುತೋಽಂಜಿಷ್ವಾಭರಣೇಷು ನಿಮಿತ್ತೇಷು ಶ್ರಾಯಾ ಆಶ್ರಯಾ ಭವಿಷ್ಯಾಮಃ । ಯೇ ಚ ವಾಶೀಷು ನಿಮಿತ್ತೇಷು । ಏವಂ ಸರ್ವತ್ರ ಯೋಜ್ಯಂ । ತಾದೃಗ್ವಿಧಾನಿಮಾನ್ಪಶ್ಯನ್ ಸ್ತುಹೀತಿ ಪೂರ್ವತ್ರ ಸಂಬಂಧಃ । ತೇಷಾಮೇವೇದಂ ವಾಕ್ಯಂ ॥

॥ ಪ್ರತಿಪದಾರ್ಥ ॥

**ಯೇ**—(ಮರುತ್ತುಗಳ) ಯಾವ ಪ್ರಸಿದ್ಧವಾದ । **ಸ್ವಭಾನವಃ**—ಸ್ವಯಂಪ್ರಕಾಶವು । **ಅಂಜಿಷು**—ಅವರ ಅಭರಣಗಳಲ್ಲಿಯೂ । **ಯೇ**—ಯಾವ ಪ್ರಭೆಗಳು । **ವಾಶೀಷು**—ಆಯುಧಗಳಲ್ಲಿಯೂ । **ಸ್ರಕ್ಷು**—ಹಾರ

ಗಳಲ್ಲಿಯೂ । **ಖಾದಿಷು**—ಕಟಕಗಳಲ್ಲಿಯೂ । **ರಥೇಷು**—ರಥಗಳಲ್ಲಿಯೂ । **ಧನ್ವಸು**—ಧನುಸ್ಸುಗಳಲ್ಲಿಯೂ । **ಶ್ರಾಯಾಃ**—ಆಶ್ರಯಿಸಿವೆಯೋ (ಅಂತಹ ಮರುತ್ತುಗಳನ್ನು ನೋಡಿದೊಡನೆಯೇ ಸ್ತುತಿಸು)

॥ ಭಾವಾರ್ಥ ॥

ಮರುತ್ತುಗಳು ಯಾವ ಪ್ರಸಿದ್ಧವಾದ ಸ್ವಯಂಪ್ರಕಾಶವು ಅವರ ಆಭರಣಗಳಲ್ಲಿಯೂ, ಆಯುಧಗಳಲ್ಲಿಯೂ ಹಾರಗಳಲ್ಲಿಯೂ, ಕಟಕಗಳಲ್ಲಿಯೂ, ಧನುಸ್ಸುಗಳಲ್ಲಿಯೂ ಆಶ್ರಯಿಸಿವೆಯೋ ಅಂತಹ ಮರುತ್ತುಗಳನ್ನು ನೋಡಿದೊಡನೆಯೇ ಸ್ತುತಿಸು.

English Translation

(The praise of them) who are all self-irradiating, splendid in ornaments, in arms, in garlands, in breast-plates, in bracelets, in chariots, in bows

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಮರುದ್ದೇವತೆಗಳ ಸ್ವರೂಪವರ್ಣನೆಯೂ, ಆಭರಣ ಮತ್ತು ಆಯುಧಗಳ ವರ್ಣನೆಯೂ ಇರುವುದು.

**ಸ್ವಭಾನವಃ—ಸ್ವಯಂ ದೀಪ್ತಯಃ** । ಸ್ವಯಂ ಪ್ರಕಾಶವು ಎಂದರೆ ಸ್ವಭಾವಸಿದ್ಧವಾದ ಪ್ರಭೆಯು. ಇತರ ವಸ್ತುಗಳ ಸಹಾಯವಿಲ್ಲದೆ ತಾನೇತಾನಾಗಿ ಬೆಳಗುವ ಸ್ವಭಾವವುಳ್ಳ ಪ್ರಕಾಶಕ್ಕೆ ಸ್ವಯಂಪ್ರಕಾಶ ಅಥವಾ ಸ್ವಭಾನು ಎಂದು ಹೆಸರು **ಸ್ವಭಾನವಃ** ಎಂಬ ಈ ಶಬ್ದವು ಮರುದ್ದೇವತೆಗಳನ್ನು ವರ್ಣಿಸುವುದಕ್ಕೆ ವಿಶೇಷವಾಗಿ ಉಪಯೋಗಿಸಲ್ಪಡುವುದು.

ಆಭರಣಗಳ ವಿಷಯದಲ್ಲ ಈ ಋಕ್ಕಿನಲ್ಲಿ ಕೆಲವು ಶಬ್ದಗಳ ಪ್ರಯೋಗವಿದೆ. **ಸ್ರಕ್ಷು, ರುಕ್ಮೇಷು, ಖಾದಿಷು** ಎಂಬ ಶಬ್ದಗಳು ನಾನಾವಿಧ ಆಭರಣಗಳ ಹೆಸರನ್ನು ಸೂಚಿಸುತ್ತವೆ. ಈ ಶಬ್ದಗಳೆಲ್ಲಾ ಸಪ್ತಮೀ ಬಹುವಚನಾಂತ ಪದಗಳು. **ಸ್ರಕ್ಷು** ಎಂದರೆ ಮಾಲೆಗಳು, ಹಾರಗಳು, ಸುವರ್ಣರತ್ನನಿರ್ಮಿತ ಹಾರಗಳು ಅಥವಾ ಪುಷ್ಪಹಾರಗಳಾದರೂ ಆಗಬಹುದು. **ರುಕ್ಮೇಷು** ಎಂದರೆ **ಉರೋಭೂಷಣೇಷು**-ಎದೆಯಮೇಲೆ ಧರಿಸುವ ಕೆಲವು ಆಭರಣ ವಿಶೇಷಗಳು. ಇವುಗಳ ಆಕಾರ, ರೂಪು ಮೊದಲಾದವು ಆ ಕಾಲದಲ್ಲಿ ಉಪಯೋಗಿಸುತ್ತಿದ್ದ ಕೆಲವು ಆಭರಣಗಳಂತೆ ಇದ್ದಿರಬಹುದು. ಈಗ ಅದರ ಸ್ವರೂಪವನ್ನು ವಿವರಿಸಲು ಸಾಧ್ಯವಿಲ್ಲ. ಮತ್ತು ಈ ಆಭರಣಗಳ ಅಲಂಕಾರವನ್ನು ಮರುದ್ದೇವತೆಗಳ ವಿಷಯದಲ್ಲಿ ಮಾತ್ರ ಹೇಳಲಾಗಿದೆ. ಇತರ ದೇವತೆಗಳ ಆಭರಣಗಳ ವಿವರಣೆಯೇ ಬೇರೆರೀತಿಯದಾಗಿದೆ. **ಖಾದಿಷು ಹಸ್ತಪಾದಸ್ಥಿತಕಟಕೇಷು**-ಹಸ್ತ ಮತ್ತು ಪಾದಗಳಲ್ಲಿ ಧರಿಸುವ ಕಟಕ(ಬಳೆ) ಗಳು ಎಂದು ಭಾಷ್ಯಕಾರರು ವಿವರಿಸಿದ್ದಾರೆ. ಮರುದ್ದೇವತೆಗಳ ಆಭರಣಗಳ ವಿವರಣೆಯು—

**ಏಷಾಮಂಸೇಷು ರಂಭಿಣೀವ ರಾರಭೇ ಹಸ್ತೇಷು ಖಾದಿಶ್ಚ ಕೃತಿಶ್ಚ ಸಂ ದಧೇ ।**

(ಋ. ಸಂ. ೧-೧೬೮-೩)

ಎಂಬ ಋಕ್ಕಿನಲ್ಲಿ ಇರುವುದು. ಇಲ್ಲಿ ತೋಳುಗಳಲ್ಲಿ **ತೋಳುಬಂದಿಯನ್ನೂ**, ಹಸ್ತಗಳಲ್ಲಿ ಕಟಕ ಅಥವಾ ಬಳೆಗಳನ್ನು ಧರಿಸಿರುವರೆಂದು ವರ್ಣಿಸಿದೆ.

**ಅಂಸೇಷು ವ ಋಷ್ಟಯಃ ಪತ್ಸು ಖಾದಯೋ ವಕ್ಷಸ್ಸು ರುಕ್ಮಾ ಮರುತೋ ರಥೇ ಶುಭಃ ।**
(ಋ. ಸಂ. ೫ ೫೪-೧೧)

ಎಂಬಲ್ಲಿ ಭುಜಗಳಲ್ಲಿ ಭುಜಕೀರ್ತಿಯನ್ನೂ, ಕಾಲುಗಳಲ್ಲಿ ಖಾದಿಯೆಂಬ ಬಳೆಗಳನ್ನೂ ಎದೆಯಲ್ಲಿ ರುಕ್ಮವೆಂಬ ಸುವರ್ಣಾಭರಣವನ್ನೂ ಧರಿಸಿರುವರೆಂದು ವರ್ಣಿಸಲಾಗಿದೆ. ಮರುದ್ದೇವತೆಗಳ ಆಯುಧಗಳ ವಿಷಯದಲ್ಲಿಯೂ ಪ್ರಕೃತ. ಋಕ್ಕಿನಲ್ಲಿ ರಥ ಮತ್ತು ಧನುಸ್ಸಿನ ಪ್ರಸ್ತಾಪವಿದೆ

**ಸ್ವಶ್ವಾಃ ಸ್ಥ ಸುರಥಾಃ ಪೃಶ್ನಿಮಾತರಃ ಸ್ವಾಯುಧಾ ಮರುತೋ ಯಥನಾ ಶುಭಂ ।**
(ಋ. ಸಂ. ೫-೫೭-೨)

ಎಂಬ ಋಕ್ಕಿನಲ್ಲಿ ಮರುದ್ದೇವತೆಗಳಿಗೆ ಉತ್ತಮವಾದ ಅಶ್ವಗಳಿಂದ ಕೂಡಿದ ಒಳ್ಳೆಯ ರಥಗಳೂ, ಒಳ್ಳೆಯ ಆಯುಧಗಳೂ ಇವೆಯೆಂದು ಹೇಳಿದೆ.

॥ ಸಂಹಿತಾಪಾಠಃ ॥

ಯು॒ಷ್ಮಾಕಂ॑ ಸ್ಮಾ॒ ರಥಾಁ॑ ಅನು॑ ಮು॒ದೇ ದ॑ಧೇ ಮರುತೋ ಜೀರದಾನವಃ ।
ವೃ॒ಷ್ಟೀ ದ್ಯಾವೋ॑ ಯ॒ತೀರಿ॑ವ ॥ ೫ ॥

॥ ಪದಪಾಠಃ ॥

ಯು॒ಷ್ಮಾಕ॑ಂ । ಸ್ಮ॒ । ರಥಾ॑ನ್ । ಅನು॑ । ಮು॒ದೇ । ದ॒ಧೇ॒ । ಮ॒ರು॒ತಃ॒ । ಜೀ॒ರ॒ಽದಾ॒ನ॒ವಃ॒ ।
ವೃ॒ಷ್ಟೀ । ದ್ಯಾವ॑ಃ । ಯ॒ತೀಃಽಇ॑ವ ॥ ೫ ॥

॥ ಸಾಯಣಭಾಷ್ಯಂ ॥

ಹೇ ಜೀರದಾನವಃ ಶೀಘ್ರದಾನಾ ಹೇ ಮರುತೋ ಯುಷ್ಮಾಕಂ ರಥಾನನೂದ್ದಿಶ್ಯ ಮುದೇ ಮೋದಾಯ ದಧೇ । ಧಾರಯಾಮಿ । ಕರೋಮೀತ್ಯರ್ಥಃ । ಸಾಮರ್ಥ್ಯಾತ್ಸ್ತೋತ್ರಮಿತಿ ಲಭ್ಯತೇ ॥ ಸ್ಮೇತಿ ಪೂರಣಃ । ವೃಷ್ಟೀ ವೃಷ್ಟ್ಯಾ ಯತೀಃ ಸರ್ವತ್ರ ಗಚ್ಛಂತೀರ್ದ್ಯಾವೋ ದೀಪ್ತೀರಿವ ದೃಶ್ಯಮಾನಾನ್ ರಥಾನಿತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಜೀರದಾನವಃ**—ಅತ್ಯುದಾರವಾಗಿ ದಾನಮಾಡತಕ್ಕ। **ಮರುತಃ**—ಎಲೈಮರುತ್ತುಗಳೇ। **ವೃಷ್ಟೀ**—ವೃಷ್ಟಿಯೊಂದಿಗೆ । **ಯತೀಃ**—ಕೂಡಿಕೊಂಡಿರುವ । **ದ್ಯಾವಃ ಇವ**-ವಿದ್ಯುತ್ಪ್ರಭೆಯಂತೆ ಪ್ರಕಾಶಿಸುವ । **ಯುಷ್ಮಾಕಂ**-ನಿಮ್ಮ । **ರಥಾನ್ ಅನು**—ರಥಗಳನ್ನು । **ಮುದೇ**—ಸಂತೋಷಾರ್ಥವಾಗಿ । **ದಧೇ**—ಧ್ಯಾನಿಸುತ್ತೇನೆ.

॥ ಭಾವಾರ್ಥ ॥

ಉದಾರವಾದ ದಾನಿಗಳಾದ ಎಲೈ ಮರುತ್ತುಗಳೇ, ವೃಷ್ಟಿಯೊಡನೆ ಕೂಡಿಕೊಂಡಿರುವ ವಿದ್ಯುತ್ಪ್ರಭೆಯಂತೆ ಪ್ರಕಾಶಿಸುವ ನಿಮ್ಮ ರಥಗಳನ್ನು ನಾನು ಸಂತೋಷಾರ್ಥವಾಗಿ ಧ್ಯಾನಿಸುತ್ತೇನೆ.

English Translation

I contemplate your chariots, munificent Maruts, with delight, like wandering lights in the rains.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಮರುದ್ದೇವತೆಗಳ ರಥವನ್ನು ಸ್ತುತಿಸಲಾಗಿದೆ. ಜೀರದಾನವಃ—ಶೀಘ್ರದಾನಾಃ ಯಜಮಾನರ ಇಷ್ಟಾರ್ಥಗಳನ್ನು ಬೇಗನೆ ಕೊಡುವವರೆಂದರ್ಥವು. ಕೆಲವು ಕಡೆ ಸುದಾನವಃ—ಒಳ್ಳೆಯ ಇಷ್ಟಾರ್ಥಪ್ರದರು ಎಂಬ ವಿಶೇಷಣವು ಮರುದ್ದೇವತೆಗಳ ವಿಷಯದಲ್ಲಿ ಪ್ರಯೋಗಿಸಲ್ಪಟ್ಟಿರುವುದು.

॥ ಸಂಹಿತಾಪಾಠಃ ॥

ಆ ಯಂ ನರಃ ಸುದಾನವೋ ದದಾಶುಷೇ ದಿವಃ ಕೋಶಮಚುಚ್ಯವುಃ ।

ವಿ ಪರ್ಜನ್ಯಂ ಸೃಜಂತಿ ರೋದಸೀ ಅನು ಧನ್ವನಾ ಯಂತಿ ವೃಷ್ಟಯಃ ॥೬॥

॥ ಪದಪಾಠಃ ॥

ಆ । ಯಂ । ನರಃ । ಸುऽದಾನವಃ । ದದಾಶುಷೇ । ದಿವಃ । ಕೋಶಂ । ಅಚುಚ್ಯವುಃ ।

ವಿ । ಪರ್ಜನ್ಯಂ । ಸೃಜಂತಿ । ರೋದಸೀ ಇತಿ । ಅನು । ಧನ್ವನಾ । ಯಂತಿ । ವೃಷ್ಟಯಃ ॥ ೬ ॥

॥ ಸಾಯಣಭಾಷ್ಯಂ ॥

ಕಾರೀರ್ಯಾಂ ತಿಸ್ರಃ ಪಿಂಡ್ಯೋ ಹೋತವ್ಯಾಃ । ತತ್ರ ದ್ವಿತೀಯಾಯಾ ಆ ಯಂ ನರ ಇತ್ಯನುವಾಕ್ಯಾ । ಸೂತ್ರಿತಂ ಚ । ಆ ಯಂ ನರಃ ಸುದಾನವೋ ದದಾಶುಷೇ ವಿದ್ಯುನ್ಮಹಸೋ ನರೋ ಅಶ್ಮದಿದ್ಯವಃ । ಆ-೨.೧೩ । ಇತಿ ॥

ನರೋ ನೇತಾರಃ ಸುದಾನವಃ ಶೋಭನದಾನಾ ಮರುತೋ ಯಂ ಕೋಶಂ । ಮೇಘನಾಮ್ಯೇತತ್ । ಅಪಾಂ ಕೋಶವದ್ಧಾರಕಂ ಮೇಘಂ ದದಾಶುಷೇ ಹವಿರ್ದತ್ತವತೇ ಯಜಮಾನಾಯ ದಿವೋಂತರಿಕ್ಷಾದಾಚುಚ್ಯವುಃ ಆಚ್ಯಾವಯಂತಿ ಪರ್ಜನ್ಯಂ ಮೇಘಂ ರೋದಸೀ ಅನು ದ್ಯಾವಾಪೃಥಿವ್ಯಾವನುಸೃತ್ಯ

**ವಿ ಸೃಜಂತಿ । ವಿಮೋಕ್ಷಯಂತಿ । ಪಶ್ಚಾತ್ ಧನ್ವನಾ ಸರ್ವತ್ರ ಗಚ್ಛತೋದಕೇನ ಸಹ ವೃಷ್ಟಯೋ ವೃಷ್ಟಿಪ್ರದಾ ಮರುತೋ ಯಂತಿ । ಸರ್ವತ್ರ ವ್ಯಾಪ್ನುವಂತಿ ॥**

॥ ಪ್ರತಿಪದಾರ್ಥ ॥

**ನರಃ**—ವೃಷ್ಟಿಗಳಿಗೆ ನೇತೃಗಳೂ । **ಸುದಾನವಃ**—ಉತ್ತಮವಾದ ದಾನಿಗಳೂ ಆದ ಮರುತ್ತುಗಳು । **ಯಂ ಕೋಶಂ**—ಉದಕವನ್ನು ಕೋಶದಂತೆ ರಕ್ಷಿಸುವ ಮೇಘವನ್ನು । **ದದಾಶುಷೇ**—ಹವಿಸ್ಸನ್ನರ್ಪಿಸತಕ್ಕ ಯಜಮಾನನಿಗಾಗಿ । **ದಿವಃ**— ಅಂತರಿಕ್ಷದಿಂದ । **ಆ ಅಚುಚ್ಯವುಃ**—ಕೆಳಗಿಳಿಯುವಂತೆ ಮಾಡುತ್ತಾರೆ । **ಪರ್ಜನ್ಯಂ**—ಮೇಘವನ್ನು । **ರೋದಸೀ ಅನು**—ದ್ಯಾವಾಪೃಥಿವಿಗಳನ್ನೆಲ್ಲಾ ಆಕ್ರಮಿಸುವಂತೆ । **ವಿ ಸೃಜಂತಿ**— ಸಡಿಲಿಸಿ ಬಿಡುತ್ತಾರೆ । **ವೃಷ್ಟಯಃ**—ವೃಷ್ಟಿಪ್ರದರಾದ ಮರುತ್ತುಗಳು । **ಧನ್ವನಾ**—ಸರ್ವತ್ರ ಪ್ರಸರಿಸುವ ಉದಕಗಳೊಡನೆ । **ಯಂತಿ**—ಸಂಚರಿಸುತ್ತಾರೆ.

॥ ಭಾವಾರ್ಥ ॥

ವೃಷ್ಟಿಗಳಿಗೆ ನೇತೃಗಳೂ, ಉತ್ತಮವಾದ ದಾನಿಗಳೂ ಆದ ಮರುತ್ತುಗಳು ಉದಕವನ್ನು ಕೋಶದಂತೆ ರಕ್ಷಿಸುವ ಮೇಘವನ್ನು ಹವಿಸ್ಸನ್ನರ್ಪಿಸತಕ್ಕ ಯಜಮಾನನಿಗಾಗಿ ಅಂತರಿಕ್ಷದಿಂದ ಕೆಳಗಿಳಿಯುವಂತೆ ಮಾಡುತ್ತಾರೆ. ದ್ಯಾವಾಪೃಥಿವಿಗಳನ್ನೆಲ್ಲಾ ಆಕ್ರಮಿಸುವಂತೆ ಮೇಘವನ್ನು ಸಡಿಲಿಸಿ ಬಿಡುತ್ತಾರೆ. ಆದೇ ವೃಷ್ಟಿಪ್ರದರಾದ ಮರುತ್ತುಗಳ: ಸರ್ವತ್ರ ಪ್ರಸರಿಸುವ ಉದಕಗಳೊಡನೆ ಸಂಚರಿಸುತ್ತಾರೆ.

## English Translation

Leaders (of the rain), munificent givers, they cause that which is the treasury (of water) to fall from the sky for (the benefit of) the donor (of the offering) : they let loose the rain cloud, and the shedders of rain spread (everywhere) with (abundant) water

॥ ವಿಶೇಷವಿಷಯಗಳು ॥

ಕಾರೀರಿಯೆಂಬ ಇಷ್ಟಿಯಲ್ಲಿ ಮೂರು ಪಿಂಡಗಳನ್ನು ಹೋಮಮಾಡಬೇಕು. ಅವುಗಳಲ್ಲಿ ಎರಡನೆಯ ಹೋಮದಲ್ಲಿ **ಆ ಯಂ ನರಃ** ಎಂಬ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ. ಶ್ರೌತಸೂತ್ರದ—**ಆ ಯಂ ನರಃ ಸುದಾನವೋ ದದಾಶುಷೇ ವಿದ್ಯುನ್ಮಹಸೋ ನರೋ ಅಶ್ಮದಿದ್ಯವಃ** ಎಂಬ ಸೂತ್ರದಿಂದ (ಆ. ೨.೧೩) ವಿವೃತವಾಗಿರುವುದು.

**ದಿವಃ ಕೋಶಂ ಅಚುಚ್ಯವುಃ**—ಕೋಶಶಬ್ದವು ಮೂವತ್ತು ಮೇಘನಾಮಗಳಲ್ಲಿ (ನಿ. ೨-೨೧) ಪಠಿತವಾಗಿದೆ. ಯಾಸ್ಕರು ಈ ಶಬ್ದಕ್ಕೆ ನಿರ್ವಚನವನ್ನು ಹೇಳುತ್ತಾ—

**ಪ್ರೀಣೀತಾಶ್ವಾನ್ ಹಿತಂ ಜಯಾಥ ಸ್ವಸ್ತಿವಾಹಂ ರಥಮಿತ್ಕೃಣುಧ್ವಂ ।**
**ದ್ರೋಣಾಹಾವಮವತಮಶ್ಮಚಕ್ರಮಂಸತ್ರಕೋಶಂ ಸಿಂಚತಾ ನೃಪಾಣಂ ॥**

(ಋ. ಸಂ. ೧೦.೧೦೧-೭)

ಎಂಬ ಋಕ್ಕನ್ನುದಾಹರಿಸಿ ಅಲ್ಲಿರುವ ಅಂಸತ್ರಕೋಶಂ ಎಂಬ ಶಬಕ್ಕೆ—

**ಅಂಸತ್ರಾಣಿ ವಃ ಕೋಶಸ್ಥಾನೀಯಾನಿ ಸಂತು ಕೋಶಃ ಕುಷ್ಣಾತೇರ್ವಿಕುಷಿತೋ ಭವತಿ।**
**ಅಯಮಪೀತರಃ ಕೋಶ ಏತಸ್ಮಾದೇವ ಸಂಚಯ ಆಚಿತಮಾತ್ರೋ ಮಹಾನ್ಭವತಿ॥**
**(ನಿ ೫-೨೬)**

ಎಂದು ಹೇಳಿದಾರೆ **ಕುಷ್**—ಎಳಿ ಎಂಬ ಧಾತುವಿನಿಂದ ಕೋಶಶಬ್ದವು ನಿಷ್ಪನ್ನವಾಗಿದೆ ಭಾವಿಯಲ್ಲಿರುವ ನೀರನ್ನು ಎಳೆದ ಅಥವಾ ಸೇದಿ ತರುವಂತೆ ಅನೇಕ ವಸ್ತುಗಳಿರುವ ಒಂದು ಚರ್ಮದ ಚೀಲ ಎಂದರ್ಥವಾಗಬಹುದು. ಭಾವಿಯಲ್ಲಿ ನೀರು ಯಾವ ರೀತಿ ಶೇಖರವಾಗಿದೆಯೋ ಅದರಂತೆ ಕೋಶವೆಂಬ (ಚರ್ಮದ) ಚೀಲದಲ್ಲಿಯೂ ಅನೇಕ ವಸ್ತುಗಳ ಶೇಖರವಾಗಿರುತ್ತದೆ. ಬತ್ತಳಿಕೆಯಲ್ಲಿ ಬಾಣಗಳಿರುವಂತೆ ಬತ್ತಳಿಕೆಯಿಂದ ಬಾಣಗಳನ್ನು ಒಂದೊಂದಾಗಿ ಹೇಗೆ ಹೊರಕ್ಕೆ ಎಳೆದುಕೊಳ್ಳುವರೋ ಅದರಂತೆ ಕೋಶದಲ್ಲಿ (ಚೀಲದಲ್ಲಿ) ರುವ ವಸ್ತುಗಳನ್ನು ಹೊರಕ್ಕೆ ತೆಗೆಯುವುದರಿಂದ ವಸ್ತುಗಳ ಸಂಚಯನ ಸ್ಥಾನಕ್ಕೆ ಕೋಶವೆಂಬ ಹೆಸರು ಬಂದಿದೆ ಆದ್ದರಿಂದ ನೀರು ಶೇಖರಿತವಾಗಿರುವ ಮೇಘವನ್ನೂ, ಇತರ ವಸ್ತುಗಳು ಶೇಖರಿತವಾಗಿರುವ (Collected) ಇತರ ಸ್ಥಳವನ್ನೂ (Store-house) ಕೋಶವೆಂದು ಕರೆಯುವ ರೂಢಿ ಇದೆ ಇಲ್ಲಿ ದಿವಃ ಕೋಶವೆಂದರ ಅಂತರಿಕ್ಷದಲ್ಲಿ ಒಟ್ಟಾಗಿ ಸೇರಿರುವ ಮೇಘಗಳ ಗುಂಪು ಎಂದರ್ಥವು. ಅವುಗಳನ್ನು ಮರುದ್ದೇವತೆಗಳು ಚದುರಿಸಿ ಅವುಗಳಲ್ಲಿರುವ ಉದಕಗಳನ್ನು ಕೆಳಕ್ಕೆ ಬೀಳುವಂತೆ ಮಾಡುತ್ತಾರೆಂದಭಿಪ್ರಾಯವು.

॥ ಸಂಹಿತಾಪಾಠಃ ॥

ತತೃದಾನಾಃ ಸಿಂಧವಃ ಕ್ಷೋದಸಾ ರಜಃ ಪ್ರ ಸಸ್ರುರ್ಧೇನವೋ ಯಥಾ ।
ಸ್ಯನ್ನಾ ಅಶ್ವಾ ಇವಾಧ್ವನೋ ವಿಮೋಚನೇ ವಿ ಯದ್ವರ್ತಂತ ಏನ್ಯಃ ॥ ೭ ॥

॥ ಪದಪಾಠಃ ॥

ತತೃದಾನಾಃ । ಸಿಂಧವಃ । ಕ್ಷೋದಸಾ । ರಜಃ । ಪ್ರ । ಸಸ್ರುಃ । ಧೇನವಃ । ಯಥಾ ।
ಸ್ಯನ್ನಾಃ । ಅಶ್ವಾಃಽಇವ । ಅಧ್ವನಃ । ವಿಽಮೋಚನೇ । ವಿ । ಯತ್ । ವರ್ತಂತೇ । ಏನ್ಯಃ ॥ ೭ ॥

॥ ಸಾಯಣಭಾಷ್ಯಂ ॥

**ಸಿಂಧವಃ ಸ್ಯಂದಮಾನಾ ಅಪಸ್ತತೃದಾನಾ ನಿರ್ಭಿಂದಂತೋ ಮೇಘಾನ್ಮರುತಃ ಕ್ಷೋದಸೋದಕೇನ ಸಹ ರಜೋಽಂತರಿಕ್ಷಂ ಪ್ರಸಸ್ರುಃ । ಪ್ರಸರಂತಿ । ಧೇನವೋ ಯಥಾ ಪಯಃ ಸಿಂಚಂತ್ಯೋ ನವಪ್ರಸೂತಾ ಗಾವ ಇವ । ಕಿಂಚ ದೃಷ್ಟಾಂತಾಂತರಂ । ಸ್ಯನ್ನಾ ಆಶುಗತಯೋಽಶ್ವಾ ಇವ ಯಥಾಧ್ವನೋ ವಿಮೋಚನೇ**

**ಮನುಷ್ಯಾಣಾಮಧ್ವವಿಮೋಕಾಯ ಸಂಚರಂತಿ ತಥೇತ್ಯರ್ಥಃ ॥ ಯದ್ಯದ್ಯೈನ್ಯಃ । ನದೀನಾಮ್ಯೆತತ್ । ನದ್ಯೋ ವಿ ವರ್ತಂತೇ ವಿವಿಧಂ ಸಂಚರಂತಿ । ಅಥವಾ ಪ್ರತಿನಿವೃತ್ಯ ವರ್ತಂತೇ । ಪ್ರವರ್ಧಂತ ಇತ್ಯರ್ಥಃ । ತದ್ಯೆವಂ ಕುರ್ವಂತೀತಿ ಪೂರ್ವತ್ರಾನ್ವಯಃ ॥**

॥ ಪ್ರತಿಪದಾರ್ಥ ॥

**ಧೇನವೋ ಯಥಾ**—ಧೇನುಗಳು ಕ್ಷೀರವನ್ನು ಸುರಿಸಿ ಹರಡುವಂತೆ । **ತತೃದಾನಾಃ**—ಮೇಘವನ್ನು ಸೀಳತಕ್ಕ ಮರುತ್ತುಗಳು । **ಕ್ಷೋದಸಾ**— ಉದಕದಿಂದ ಭರಿತವಾದ । **ಸಿಂಧವಃ**-ಪ್ರವಾಹಗಳನ್ನು । **ಪ್ರ ಸಸ್ರುಃ**- ಸರ್ವತ್ರ ಪ್ರಸರಿಸುವಂತೆ ಮಾಡಿದರು **ಅಧ್ವನಃ**—ಮಾರ್ಗಗಳಲ್ಲಿ । **ವಿಮೋಚನೇ**—ಸ್ವತಂತ್ರವಾಗಿ ಬಿಟ್ಟುಬಿಡುವ । **ಸ್ಯನ್ನಾಃ**— ವೇಗಗಾಮಿಗಳಾದ । **ಅಶ್ವಾ ಇವ**—ಅಶ್ವಗಳಂತೆ । **ಏನ್ಯಃ**—ನದಿಗಳು । **ಯತ್**—ಯಾವ ಅದೇಕಾಲ ದಲ್ಲಿ । **ವಿ ವರ್ತಂತೇ**—ಎಲ್ಲಾ ಕಡೆಗಳಲ್ಲಿಯೂ ಸ್ವತಂತ್ರವಾಗಿ ಹರಿಯುತ್ತವೆ.

॥ ಭಾವಾರ್ಥ ॥

ಧೇನುಗಳು ಕ್ಷೀರವನ್ನು ಸುರಿಸಿ ಹರಡುವಂತೆ, ಮೇಘವನ್ನು ಸೀಳತಕ್ಕ ಮರುತ್ತುಗಳು, ಉದಕದಿಂದ ಭರಿತವಾದ ಪ್ರವಾಹಗಳನ್ನು ಸರ್ವತ್ರ ಪ್ರಸರಿಸುವಂತೆ ಮಾಡಿದರು. ಮಾರ್ಗಗಳಲ್ಲಿ ಸ್ವತಂತ್ರವಾಗಿ ಬಿಟ್ಟುಬಿಡುವ ವೇಗಗಾಮಿಗಳಾದ ಅಶ್ವಗಳಂತೆ ನದಿಗಳೂ ಸಹ ಅದೇ ಕಾಲದಲ್ಲಿ ಸರ್ವತ್ರ ಸ್ವತಂತ್ರವಾಗಿ ಹರಿಯುತ್ತವೆ.

## English Translation

The gliding (torrents), issuing (from the clouds), overspread the firmament with water, as milch-cows (yield milk), and like rapid horses let loose upon the road, the rivers rush in various directions.

॥ ವಿಶೇಷವಿಷಯಗಳು ॥

ಮರುದ್ದೇವತೆಗಳು ಮೇಘಗಳನ್ನು ಭೇದಿಸಿ ಅವುಗಳ ಉದಕವನ್ನು ಭೂಮಿಯಮೇಲೆ ಬೀಳುವಂತೆ ಮಾಡು ವರು. ಆ ಉದಕಗಳು ನದೀ ಪ್ರವಾಹಗಳಾಗಿ ವೇಗದಿಂದ ಹರಿಯುವವು ಎಂದು ಈ ಋಕ್ಕಿನಲ್ಲಿ ವರ್ಣಿಸಲಾಗಿದೆ. ವೇಗಗಾಮಿಗಳಾದ ಪ್ರವಾಹವು ಯಾವರೀತಿ ಇರುವದು ಎಂಬ ವಿಷಯದಲ್ಲಿ ಋಷಿಯು ಎರಡು ದೃಷ್ಟಾಂತಗಳನ್ನು ಹೇಳಿ ದ್ದಾನೆ. **ಧೇನವೋ ಯಥಾ । ನವಪ್ರಸೂತಾ ಗಾವ ಇವ ।** ಹೊಸದಾಗಿ ಕರುವನ್ನು ಹಾಕಿರುವ ಹಸುಗಳು ಯಾವರೀತಿ ಯಥೇಚ್ಛವಾಗಿ ಹಾಲನ್ನು ಸುರಿಸುವವೋ (ಕೊಡುವವೋ) ಅದರಂತೆ ನದಿಯ ಪ್ರವಾಹಗಳು ಬಹಳವಾದ ನೀರಿನಿಂದ ತುಂಬಿ ಹರಿಯುತ್ತವೆ ಎಂಬುದು ಒಂದು ದೃಷ್ಟಾಂತವು. **ಅಧ್ವನಃ ವಿಮೋಚನೇ ಸ್ಯನ್ನಾ ಅಶ್ವಾಇವ । ಆಶುಗತಯ ಅಶ್ವಾಃ ಮನುಷ್ಯಾಣಾಮಧ್ವವಿಮೋಕಾಯ ಯಥಾ ಸಂಚರಂತಿ ತಥೇತ್ಯರ್ಥಃ ।** ವೇಗವಾಗಿ ಓಡತಕ್ಕ ಕುದುರೆಗಳನ್ನು ಮಾರ್ಗದಲ್ಲಿ ಬೇಗಬೇಗನೆ ಓಡುವಂತೆ ಮನುಷ್ಯರು ಪ್ರೇರಿಸಿದಾಗ ಸ್ವಭಾವಸಿದ್ಧವಾಗಿಯೇ ವೇಗಗಮನವುಳ್ಳ ಆ ಅಶ್ವಗಳು ಮನುಷ್ಯರ ಪ್ರೇರಣೆಯಿಂದ ಯಾವರೀತಿ ಮಾರ್ಗದಲ್ಲಿ ಅತಿ ವೇಗದಿಂದ ಓಡುವವೋ ಅದರಂತೆ ನದಿಯ ಪ್ರವಾಹಗಳು ಅತಿ ವೇಗವಾಗಿ ಹರಿಯುವವು ಎಂಬುದು ಇನ್ನೊಂದು ದೃಷ್ಟಾಂತವು. ಈ ಎರಡು

ದೃಷ್ಟಾಂತಗಳಲ್ಲಿ ಗೋವುಗಳ ದೃಷ್ಟಾಂತದಿಂದ ನದಿಗಳ ಪ್ರವಾಹದಲ್ಲಿ ಉದಕಗಳು ಬಹಳವಾಗಿರುವುದೆಂದೂ, ಎರಡನೆಯ ಅಶ್ವಗಳ ದೃಷ್ಟಾಂತದಲ್ಲಿ ಆ ನದೀ ಪ್ರವಾಹಗಳು ಅತಿ ವೇಗವಾಗಿ ಚಲಿಸುವುದೆಂದೂ (ಹರಿಯುವುದೆಂದೂ) ಇಲ್ಲಿ ವರ್ಣಿಸಲಾಗಿದೆ.

॥ ಸಂಹಿತಾಪಾಠಃ ॥

ಆ ಯಾತ ಮರುತೋ ದಿವ ಆಂತರಿಕ್ಷಾದಮಾದುತ ।

ಮಾವ ಸ್ಥಾತ ಪರಾವತಃ ॥ ೮ ॥

॥ ಪದಪಾಠಃ ॥

ಆ । ಯಾತ । ಮರುತಃ । ದಿವಃ । ಆ । ಅಂತರಿಕ್ಷಾತ್ । ಅಮಾತ್ । ಉತ ।

ಮಾ । ಅವ । ಸ್ಥಾತ । ಪರಾ್ಽವತಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಮರುತಃ ಪರಾವತೋಽತ್ಯಂತದೂರದೇಶಾತ್ ದಿವೋ ದ್ಯುಲೋಕಾದಾ ಯಾತ । ತಥಾಂತರಿಕ್ಷಾದಾ ಯಾತ । ಉತಾಪಿ ಚಾಮಾದಸ್ಮಾಲ್ಲೋಕಾದಾ ಯಾತ। ಪರಾವತ ಇತ್ಯತ್ರಾಪಿ ವಾ ಯೋಜ್ಯಂ। ಪರಾವತೋ ದೂರದೇಶೇ ತತ್ರ ತತ್ರ ದ್ಯುಲೋಕಾದೌ ಮಾವ ಸ್ಥಾತ । ಅವಸ್ಥಿತಿಂ ಮಾ ಕುರುತ ॥

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ಪರಾವತಃ**—ಅತ್ಯಂತ ದೂರದೇಶವಾದ । **ದಿವಃ**—ದ್ಯುಲೋಕದಿಂದಾಗಲಿ । **ಆ ಯಾತ**—ಬನ್ನಿರಿ । **ಅಂತರಿಕ್ಷಾತ್**—ಅಂತರಿಕ್ಷದಿಂದಾಗಲಿ । ಆ (**ಯಾತ**)-ಬನ್ನಿರಿ । **ಉತ**—ಅಥವಾ। **ಅಮಾತ್**—ಈ ಪೃಥ್ವೀಸ್ಥರಾಗಿದ್ದರೂ ಸಹ (ಬನ್ನಿರಿ) । **ಪರಾವತಃ**—ಬಹು ದೂರದೇಶಸ್ಥರಾಗಿಯೇ । **ಮಾ ಅವ ಸ್ಥಾತ**—ನಿಂತುಬಿಡಬೇಡಿರಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಅತ್ಯಂತ ದೂರದೇಶವಾದ ದ್ಯುಲೋಕದಿಂದಾಗಲಿ ಅಥವಾ ಅಂತರಿಕ್ಷದಿಂದಾಗಲಿ ಅಥವಾ ಪೃಥ್ವಿಯಿಂದಾಗಲಿ ನಮ್ಮಲ್ಲಿಗೆ ಬನ್ನಿರಿ. ನಮ್ಮಿಂದ ಬಹುದೂರವಿರತಕ್ಕ ದ್ಯುಲೋಕಾದಿಗಳಲ್ಲೇ ನಿಂತುಬಿಡಬೇಡಿ.

## English Translation

Come, Maruts, from heaven, from the firmaments, or from this (earth); tarry not far off.

॥ ವಿಶೇಷವಿಷಯಗಳು ॥

ಮರುದ್ದೇವತೆಗಳು ಪೃಥಿವ್ಯಂತರಿಕ್ಷಸ್ವರ್ಗಗಳೆಂಬ ಮೂರು ಸ್ಥಾನಗಳಲ್ಲಿಯೂ ವ್ಯಾಪಿಸಿರುವರೆಂಬ ವಿಷಯವು ಈ ಋಕ್ಕಿನಲ್ಲಿ ವರ್ಣಿತವಾಗಿದೆ ಎಂದರೆ ಮೂರು ಲೋಕಗಳಲ್ಲಿಯೂ ಮರುದ್ದೇವತೆಗಳ ಸಂಚಾರವು ಇರುವುದೆಂದಭಿಪ್ರಾಯವು.

॥ ಸಂಹಿತಾಪಾಠಃ ॥

ಮಾ ವೋ ರಸಾನಿತಭಾ ಕುಭಾ ಕ್ರುಮುರ್ಮಾ ವಃ ಸಿಂಧುರ್ನಿ ರೀರಮತ್।
ಮಾ ವಃ ಪರಿ ಷ್ಠಾತ್ಸರಯುಃ ಪುರೀಷಿಣ್ಯಸ್ಮೇ ಇತ್ಸುಮ್ನಮಸ್ತು ವಃ ॥ ೯ ॥

॥ ಪದಪಾಠಃ ॥

ಮಾ । ವಃ । ರಸಾ । ಅನಿತಭಾ । ಕುಭಾ । ಕ್ರುಮುಃ । ಮಾ । ವಃ । ಸಿಂಧುಃ । ನಿ । ರೀರಮತ್ ।
ಮಾ । ವಃ । ಪರಿ । ಸ್ಥಾತ್ । ಸರಯುಃ । ಪುರೀಷಿಣೀ । ಅಸ್ಮೇ ಇತಿ । ಇತ್ । ಸುಮ್ನಂ । ಅಸ್ತು । ವಃ॥

॥ ಸಾಯಣಭಾಷ್ಯಂ ॥

ಹೇ ಮರುತೋ ವೋ ಯುಷ್ಮಾನ್ ರಸಾ । ನದೀನಾಮೈತತ್ । ರಸಾ ನದೀ ಭವತಿ । ನಿ-೧೧-೨೫ । ಇತಿ ನಿರುಕ್ತಂ । ರಸನವತೀ ಶಬ್ದವತೀ । ಅನಿತಭಾ । ಇತಾ ಪ್ರಾಪ್ತಾ ಭಾ ಯಸ್ಯಾಃ ಸೇತಭಾ । ನ ತಾದೃಶ್ಯನಿತಭಾ । ಕುಭಾ ಕುತ್ಸಿತದೀಪ್ತಿಶ್ಚ ಮಾ ನಿ ರೀರಮತ್ ಮಾ ನಿಕೃಷ್ಟಂ ರಮತು । ಕ್ರುಮುಃ ಸರ್ವತ್ರಕ್ರಮಣಃ ಸಿಂಧುಃ ಸಮುದ್ರಶ್ಚ ಮಾ ನಿ ರೀರಮತ್ । ತಥಾ ಪುರೀಷಿಣೀ । ಪುರೀಷಮುದಕಂ । ತದ್ವತೀ ಸರಯುರಪಿ ಮಾ ಪರಿ ಷ್ಠಾತ್ । ಪರಿತಸ್ತಿಷ್ಠತು । ಮಾ; ನಿರುಣದ್ಧು । ಅಸ್ಮೇ ಇತ್ ಅಸ್ಮಾಸ್ವೇವಾಸ್ತು ಸುಮ್ನಂ ತ್ವದಾಗಮನಜನಿತಂ ಸುಖಂ ವೋ ಯುಷ್ಮಾಕಂ ಸಂಬಂಧಿ ಯುಷ್ಮತ್ಸ್ವಭೂತಂ ॥

॥ ಪ್ರತಿಪದಾರ್ಥ ॥

( ಎಲೈ ಮರುತ್ತುಗಳೇ ) । **ರಸಾ**—ರಸಾನಾಮಕನದಿಯೂ । **ಅನಿತಭಾ**—ಅನಿತಭಾ ಎಂಬ ನದಿಯೂ । **ಕುಭಾ**—ಕುಭಾ ಎಂಬ ನದಿಯೂ ಸಹ । **ವಃ**—ನಿಮ್ಮನ್ನು । **ಮಾ ನಿ ರೀರಮತ್**—ತಡೆಯದಿರಲಿ । **ಸಿಂಧುಃ**—ಸಮುದ್ರವೂ ಸಹ । **ಮಾ**—ತಡೆಯದಿರಲಿ । **ಪುರೀಷಿಣೀ**—ಉದಕಭರಿತವಾದ । **ಸರಯುಃ**—ಸರಯುನದಿಯೂ ಸಹ । **ವಃ**—ನಿಮ್ಮನ್ನು । **ಮಾ ಪರಿ ಸ್ಥಾತ್**-ತಡೆಯದಿರಲಿ । ವಃ-ನಿಮ್ಮ ಆಗಮನದಿಂದ ಜನಿಸುವ । **ಸುಮ್ನಂ**-ಸುಖವು । **ಅಸ್ಮೇ ಇತ್**—ನಮಗಾಗಿಯೇ । **ಅಸ್ತು**—ಇರಲಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ರ ಸಾ, ಅನಿತಭಾ, ಕುಭಾ ಎಂಬ ನದಿಗಳಲ್ಲಿ ಯಾವುವೂ ನಿಮ್ಮನ್ನು ತಡೆಯದಿರಲಿ ಸಮುದ್ರವೂ ಮತ್ತು ಉದಕಭರಿತವಾದ ಸರಯುನದಿಯೂ ಸಹ ನಿಮ್ಮನ್ನು ತಡೆಯದಿರಲಿ. ನಿಮ್ಮ ಆಗಮನದಿಂದ ಜನಿಸುವ ಸುಖವು ನಮಗಾಗಿಯೇ ಮೀಸಲಾಗಿರಲಿ.

## English Translation

Let not the Rasa, the Anitabha, the Kubha, or the wide-roving ocean delay you : let not the watery Sarayu oppose you : may the happiness. of your (approach) be ours

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ **ರಸಾ, ಅನಿತಭಾ, ಕುಭಾ, ಸರಯು** ಎಂಬ ನದಿಗಳ ಹೆಸರುಗಳು ಪಠಿತವಾಗಿವೆ. ಈ ನದಿಗಳಲ್ಲಿ ಅನಿತಭಾ, ಕುಭಾ ಎಂಬ ನದಿಗಳ ಹೆಸರು ಋಗ್ವೇದದಲ್ಲಿ ಈ ಋಕ್ಕಿನಲ್ಲಿ ಮಾತ್ರ ಪಠಿತವಾಗಿ ಬೇರೆ ಎಲ್ಲಿಯೂ ಇವುಗಳ ಪ್ರಸ್ತಾಪವೇ ಇಲ್ಲದಿರುವುದರಿಂದ ಇವುಗಳ ವಿಷಯವನ್ನು ಹೆಚ್ಚಾಗಿ ಹೇಳುವಂತಿಲ್ಲ. ಬಹುಶಃ ಈ ಎರಡು ನದಿಗಳು ಯಾವುದಾದರೂ (ಯಮುನಾ ?) ಒಂದು ದೊಡ್ಡ ನದಿಗೆ ಉಪನದಿಗಳಾಗಿರಬಹುದು. ಆದುದರಿಂದ ಅವು ಅಷ್ಟು ಪ್ರಸಿದ್ಧವಾಗಿಲ್ಲ.

**ಸರಯುಃ**—ಸರಯೂ ಎಂಬ ನದಿಯು ಪುರಾಣಪ್ರಸಿದ್ಧವಾಗಿದೆ. ರಾಮಾಯಣದಲ್ಲಿ ಅಯೋಧ್ಯಾನಗರವು ಸರಯೂ ನದಿಯ ತೀರದಲ್ಲಿತ್ತೆಂಬ ವರ್ಣನೆ ಇದೆ. ಋಗ್ವೇದದಲ್ಲಿಯೂ ಈ ನದಿಯ ಹೆಸರು ಪ್ರಕೃತ ಋಕ್ಕಿನಲ್ಲಿಯೂ,

**ಉತ ತ್ಯಾ ಸದ್ಯ ಆರ್ಯಾ ಸರಯೋರಿಂದ್ರ ಪಾರತಃ ।**
**ಅರ್ಣಾಚಿತ್ರರಥಾವಧೀಃ ॥**

(ಋ ಸಂ ೪-೩೦-೧೮)

ಎಂಬ ಋಕ್ಕಿನಲ್ಲಿ ಇಂದ್ರನು ಚಿತ್ರರಥನೆಂಬ ರಾಜನನ್ನು ಸರಯು ಎಂಬ ನದೀ ತೀರದಲ್ಲಿ ಕೊಂದನೆಂಬ ವಿಷಯವು ಉಕ್ತವಾಗಿದೆ.

**ಸರಸ್ವತೀ ಸರಯುಃ ಸಿಂಧುರೂರ್ಮಿಭಿರ್ಮಹೋ ಮಹೀರವಸಾ ಯಂತು ವಕ್ಷಣೀಃ ।**

(ಋ ಸಂ ೧೦-೬೪-೯)

ಎಂಬ ಋಕ್ಕಿನಲ್ಲಿ ಸರಸ್ವತೀ, ಸರಯು, ಸಿಂಧೂನದಿಗಳು ತಮ್ಮ ರಕ್ಷಣೆಗಳೊಡನೆ ಬರಲಿ ಎಂಬ ಪ್ರಾರ್ಥನೆ ಇದೆ ಸರಯುಃ ಎಂಬ ನದಿಯ ವಿಷಯವು ಋಗ್ವೇದದಲ್ಲಿ ಈ ಮೂರು ಋಕ್ಕುಗಳಲ್ಲಿ ಮಾತ್ರವಿರುವುದು. ಇನ್ನೆಲ್ಲಿಯೂ ಇಲ್ಲ

**ರಸಾ**—ರಸಾ ಎಂಬುದು ಒಂದು ಪ್ರಸಿದ್ಧವಾದ ನದಿ ಇರಬೇಕು ಅಥವಾ ಈಗ ಪ್ರಸಿದ್ಧವಾಗಿರುವ ಸಿಂಧುನದಿಗೇ ಈ ಹೆಸರಿತ್ತೆಂದು ಊಹಿಸಲೂ ಕಾರಣವಿದೆ. ಇದು ದೇವನದಿಯೆಂದು ಪ್ರಸಿದ್ಧವಾಗಿ ಒಂದಾನೊಂದು ಕಾಲದಲ್ಲಿ ಈ ನದಿಯ ನೀರು ಕಾರಣಾಂತರದಿಂದ ಬತ್ತಿಹೋಗಲು ಅದನ್ನು ಅಶ್ವಿನೀದೇವತೆಗಳು ತಮ್ಮ ಸಾಮರ್ಥ್ಯದಿಂದ

ಉದಕಪೂರ್ಣವನ್ನಾಗಿ ಮಾಡಿದರೆಂಬ ಇತಿಹಾಸವು ಋ. ಸಂ. ೧-೧೧೨-೧೨ ನೆಯ ಋಕ್ಕಿನಲ್ಲಿ ಅಶ್ವಿನೀದೇವತೆಗಳ ಗುಣವರ್ಣನೆಮಾಡುವಾಗ ಉಕ್ತವಾಗಿದೆ.

**ಅತ್ರೇತಿಹಾಸಮಾಚಕ್ಷತೇ । ಪಣಿಭಿರಸುರೈರಪಹ್ರಿಯಮಾಣಾ ಗಾ ಅನುಗಚ್ಛಂತಃ ದೇವಗೋಪಾಲಾ ರಸಾಂ ನಾಮಾಂತರಿಕ್ಷನದೀಮಗಾಧೋದಕಾಂ ನೋತ್ತರಿತುಂ ಶೇಕುಃ । ತದ್ವಿಜ್ಞಾತ್ವಾ ದೇವಾಃ ಸಂಕ್ರುದ್ಧಾಃ ರಸಾಂ ಶೇಪುಃ ನಿರುದಕಾ ಭವೇತಿ । ಸಾ ಪ್ರತ್ಯನೀತಾಸು ಗೋಷು ಅಶ್ವಿನೌ ಪರಿಚಚಾರ । ತಾವಶ್ವಿನೌ ಗತ್ವಾ ಪುನರಗಾಧೋದಕಾಂ ಚಕ್ರತುರಿತಿ ॥**

ಪಣಿಗಳೆಂಬ ಅಸುರರು ದೇವತೆಗಳ ಗೋವುಗಳನ್ನು ಅಪಹರಿಸಿಕೊಂಡು ಹೋದಾಗ ದೇವಗೋಪಾಲಕರು ಆ ಮಾರ್ಗವನ್ನನುಸರಿಸಿ ಅಸುರರನ್ನಟ್ಟಿಸಿಕೊಂಡು ಹೋಗಲು ದಾರಿಯಲ್ಲಿ ಅಗಾಧವಾದ ಜಲಪ್ರವಾಹದಿಂದ ಕೂಡಿದ ರಸಾ ಎಂಬ ಅಂತರಿಕ್ಷಸ್ಥವಾದ ನದಿಯು ಅಡ್ಡಲಾಗಿದ್ದುದರಿಂದ ಅದನ್ನು ದಾಟಲು ಅವರಿಂದ ಸಾಧ್ಯವಾಗಲಿಲ್ಲ. ಈ ವಿಷಯವು ದೇವತೆಗಳಿಗೆ ತಿಳಿಯಲಾಗಿ ಅವರು ಕೋಪದಿಂದ ಆ ನದಿಯನ್ನು ಒಣಗಿಹೋಗಲೆಂದು ಶಪಿಸಿದರು. ಒಡನೆಯೇ ಆ ನದಿಯ ನೀರೆಲ್ಲಾ ಬತ್ತಿಹೋಯಿತು. ಪುನಃ ಗೋವುಗಳನ್ನು ಓಂದಟ್ಟಿಕೊಂಡು ಹೋದನಂತರ ರಸಾನದಿಯು ಅಶ್ವಿನೀದೇವತೆಗಳನ್ನು ಪ್ರಾರ್ಥಿಸಲು ಅವರು ಬಂದು ಆ ನದಿಯನ್ನು ಸಮೃದ್ಧಿಯಾದ ನೀರಿನಿಂದ ತುಂಬಿದರು ಎಂಬ ಕಥೆಯನ್ನು ಸ್ಕಂದಸ್ವಾಮಿಗಳು ತಮ್ಮ ಭಾಷ್ಯದಲ್ಲಿ ವಿವರಿಸಿದ್ದಾರೆ. ಸಾಯಣರ ವಿವರಣೆಯು ಸ್ವಲ್ಪ ವ್ಯತ್ಯಾಸವಾಗಿದೆ ಅವರ ವಿವರಣೆಯು—

**ರಸಾ ನದೀ ಭವತಿ ರಸತೇಃ ಶಬ್ದಕರ್ಮಣ ಇತಿ ಯಾಸ್ಕಃ । ನಿ. ೧೧-೨೫ । ಹೇ ಅಶ್ವಿನೌ ಯಾಭಿರೂತಿಭಿರ್ಹೇತುಭೂತಾಭೀ ರಸಾಂ ನದೀಮನಾವೃಷ್ಟ್ಯಾ ಜಲರಹಿತಾಂ ಕ್ಷೋದಸಾ ಕೂಲಾನಿ ಸಂಪಿಂಷತೋದ್ನ ಉದಕೇನ ಪಿಪಿನ್ವಥುಃ ಯುವಾಂ ಪೂರಿತವಂತೌ ॥**

(ಸಾ ಭಾ )

ಶಬ್ದವನ್ನುಂಟುಮಾಡು ಎಂಬರ್ಥವನ್ನು ಕೊಡುವ ರಸ್ ಧಾತುವಿನಿಂದ ನಿಷ್ಪನ್ನವಾಗಿ ರಸಾ ಎಂದಾಗಿದೆಯೆಂದು ನಿರುಕ್ತಕಾರರ ನಿರ್ವಚನವನ್ನುದಹರಿಸಿ, ನದಿಯ ನೀರು ವೇಗವಾಗಿ ಹರಿಯುವುದರಿಂದ ಶಬ್ದಮಾಡುತ್ತಿರುವುದು. ಆ ಕಾರಣದಿಂದ ಈ ನದಿಗೆ ರಸಾ ಎಂದು ಹೆಸರು. ಆದರೆ ಈ ನದಿಯ ನೀರು ಒಣಗಿಹೋಗಿರುವುದಕ್ಕೆ ಅನಾವೃಷ್ಟಿಯೇ ಕಾರಣವೆಂದು ಹೇಳಿದ್ದಾರೆ ಈ ನದಿಯ ನೀರು ಅಗಾಧ ಪ್ರವಾಹದಿಂದ ಕೂಡಿ ದಾಟುವುದಕ್ಕೆ ಅಸಾಧ್ಯವಾಗಿರುತ್ತದೆಂದು ಕೆಲವುಕಡೆ ಹೇಳಿದೆ

**ಕಾಸ್ಮೇಹಿತಿಃ ಕಾ ಪರಿತಕ್ಮ್ಯಾಸೀತ್ಕಥಂ ರಸಾಯಾ ಅತರಃ ಪಯಾಂಸಿ ।**

(ಋ ಸಂ. ೧೦.೧೦೮-೧)

ಹಿಂದೆ ಪಣಿಗಳು ದೇವತೆಗಳ ಗೋವುಗಳನ್ನು ಅಪಹರಿಸಿಕೊಂಡು ಹೋಗಿ ಯಾರಿಗೂ ತಿಳಿಯದಂತೆ ಒಂದು ಪರ್ವತದ ಗುಹೆಯಲ್ಲಿ ಬಚ್ಚಿಟ್ಟಿದ್ದರು. ದೇವತೆಗಳ ಪ್ರಾರ್ಥನೆಯಂತೆ ಇಂದ್ರನು ಆ ಗೋವುಗಳನ್ನು ಬಚ್ಚಿಟ್ಟಿದ್ದ ಸ್ಥಳವನ್ನು ಕಂಡುಹಿಡಿಯುವುದಕ್ಕೆ ಸರಮೆಯೆಂಬ ದೇವಶುನಿ (ದೇವಲೋಕದ ಹೆಣ್ಣುನಾಯಿ) ಯನ್ನು ಕಳುಹಿಸಿದನು. ಅದು ಬಹುದೂರ ಸಂಚಾರಮಾಡಿ ಕಾಡುಮೇಡುಗಳನ್ನು ದಾಟಿ ಅನೇಕ ನದಿಗಳನ್ನು ಹಾಯ್ದು ಕೊನೆಗೆ ಪಣಿಗಳಿದ್ದ ಸ್ಥಳಕ್ಕೆ ಬಂದಿತು.

ಆಗ ಗೋವುಗಳನ್ನು ದೇವತೆಗಳಿಗೆ ಹಿಂದಕ್ಕೆ ಕೊಡಬೇಕೆಂಬ ವಿಷಯದಲ್ಲಿ ಪಣಿಗಳಿಗೂ ಸರಮೆಗೂ ಸ್ವಾರಸ್ಯವಾದ ಒಂದು ಸಂಭಾಷಣೆಯು ನಡೆಯಿತು. ಆಗ ಪಣಿಗಳು ಸರಮೆಯನ್ನು ಪ್ರಶ್ನಿಸುತ್ತಾ ಇಲ್ಲಿಗೆ ನೀನು ಬರುವಾಗ ಅಗಾಧ ವಾದ ಉದಕಪ್ರವಾಹದಿಂದ ಕೂಡಿದ ರಸಾ ನದಿಯನ್ನು ಹೇಗೆ ದಾಟಿ ಇಲ್ಲಿಗೆ ಬಂದೆ ಎಂದು ಕೇಳುತ್ತಾರೆ ಆದುದರಿಂದ ರಸಾನದಿಯು ಅಗಾಧ ಜಲಪ್ರವಾಹದಿಂದ ಕೂಡಿತ್ತೆಂದು ಹೇಳಬಹುದು. ಈ ಸಂದರ್ಭಗಳಲ್ಲಲ್ಲದೆ—

ಸಿಷಕ್ತು ಮಾತಾ ಮಹೀ ರಸಾ ನಃ ಸ್ಮತ್ಸೂರಿಭಿರ್ಋಜುಹಸ್ತ ಋಜುವನಿಃ ।

(ಋ. ಸಂ. ೫-೪೧-೧೫)

ಎಂಬ ಋಕ್ಕಿನಲ್ಲಿ ರಸಾ ಎಂಬ ಶಬ್ದಪ್ರಯೋಗವಿದೆ ಸಾಯಣರು ಈ ಋಕ್ಕಿಗೆ ಅರ್ಥಮಾಡುವಾಗ **ರಸಾ ಸಾರಭೂತಾ ಭೂಮಿಃ** ಎಂದು ಹೇಳಿದ್ದಾರೆ ಆದರೆ ಈ ಋಕ್ಕಿನಲ್ಲಿ **ಸಿಷಕ್ತು** ನೆನೆಯಿಸಲಿ ಎಂಬ ಶಬ್ದವಿರುವುದರಿಂದ ರಸಾ ಶಬ್ದಕ್ಕೆ ರಸಾ ಎಂಬ ನದಿಯೇ ನಿರ್ದಿಷ್ಟವಾಗಿರಬಹುದೆಂಬ ಊಹೆಗೆ ಅವಕಾಶವಿದೆ. ಮತ್ತು ಋ ಸಂ ೪-೪೩-೬, ೧೦-೭೫-೬, ೧೦-೧೨೧-೪, ೫-೫೩-೯, ೭-೭೨-೧೩, ಇತ್ಯಾದಿ ಋಕ್ಕುಗಳಲ್ಲಿ ರಸಾನದಿಯ ಹೆಸರು ಸೂಚಿತವಾಗಿದೆ.

॥ ಸಂಹಿತಾಪಾಠಃ ॥

ತಂ ವಃ ಶರ್ಧಂ ರಥಾನಾಂ ತ್ವೇಷಂ ಗಣಂ ಮಾರುತಂ ನವ್ಯಸೀನಾಂ ।

ಅನು ಪ್ರ ಯಂತಿ ವೃಷ್ಟಯಃ ॥ ೧೦ ॥

॥ ಪದಪಾಠಃ ॥

ತಂ । ವಃ । ಶರ್ಧಂ । ರಥಾನಾಂ । ತ್ವೇಷಂ । ಗಣಂ । ಮಾರುತಂ । ನವ್ಯಸೀನಾಂ ।

ಅನು । ಪ್ರ । ಯಂತಿ । ವೃಷ್ಟಯಃ ॥ ೧೦ ॥

॥ ಸಾಯಣಭಾಷ್ಯಂ ॥

ತಂ ಮಾರುತಮಿತ್ಯನೇನ ಸಂಬಧ್ಯತೇ । ವೋ ಯುಷ್ಮಾಕಂ ಪ್ರೇರಕಂ ನವ್ಯಸೀನಾಂ ನೂತನಾನಾಂ ರಥಾನಾಂ ಶರ್ಧಂ ಬಲಂ ತ್ವೇಷಂ ದೀಪ್ತಂ ತಂ ಮಾರುತಂ ಗಣಂ ಚ ಸ್ತೌಮೀತ್ಯರ್ಥಃ । ಯದ್ವಾ । ರಥಾನಾಂ ರಂಹಣಶೀಲಾನಾಂ ವೋ ಯುಷ್ಮಾಕಂ ಶರ್ಧಂ ಪರೇಷಾಮಭಿಭಾವುಕಂ ಗಣಂ ಸ್ತೌಮೀತ್ಯೇಕಮೇವ ವಾಕ್ಯಂ । ಅಥ ಪರೋಕ್ಷಕೃತಃ । ವೃಷ್ಟಯೋ ಯುಷ್ಮಾನನು ಪ್ರ ಯಂತಿ । ಪ್ರಕರ್ಷೇಣ ಗಚ್ಛಂತಿ । ಯದ್ವಾ ವರ್ಷಕಾ ಮರುತೋಽನು ಅನುಕೂಲಂ ಪ್ರಕೃಷ್ಟಂ ಯಂತಿ । ಗಚ್ಛಂತಿ ॥

॥ ಪ್ರತಿಪದಾರ್ಥ ॥

**ವಃ**—ನಿಮ್ಮ । **ನವ್ಯಸೀನಾಂ**—ನೂತನಗಳಾದ । **ರಥಾನಾಂ**—ರಥಗಳ । **ಶರ್ಧಂ**—ಬಲವನ್ನೂ । **ತ್ವೇಷಂ**—ಕಾಂತಿಯನ್ನೂ । **ತಂ ಮಾರುತಂ ಗಣಂ**—ಪ್ರಸಿದ್ಧವಾದ ಮರುದ್ಗಣವನ್ನೂ (ಸ್ತುತಿಸುತ್ತೇನೆ)। **ವೃಷ್ಟಯಃ**—ವೃಷ್ಟಿಗಳು । **ಅನು ಪ್ರ ಯಂತಿ**—ಮರುತ್ತುಗಳ ಇಚ್ಛಾನುಸಾರವಾಗಿ ಸಂಚರಿಸುತ್ತವೆ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನಿಮ್ಮ ನೂತನಗಳಾದ ರಥಗಳ ಶಕ್ತಿಯನ್ನೂ ಅವುಗಳ ಕಾಂತಿಯನ್ನೂ ಪ್ರಸಿದ್ಧವಾದ ಮರುದ್ಗಣವನ್ನೂ ನಾನು ಸ್ತುತಿಸುತ್ತೇನೆ. ವೃಷ್ಟಿಗಳು ಮರುತ್ತುಗಳ ಇಚ್ಛಾನುಸಾರವಾಗಿ ಸಂಚರಿಸುತ್ತವೆ.

English Translation

I praise that brilliant company of the Maruts, who have your strength of recent chariots, you whom the rains attend.

॥ ಸಂಹಿತಾಪಾಠಃ ॥

ಶರ್ಧಂಶರ್ಧಂ ವ ಏಷಾಂ ವ್ರಾತಂವ್ರಾತಂ ಗಣಂಗಣಂ ಸುಶಸ್ತಿಭಿಃ ।

ಅನು ಕ್ರಾಮೇಮ ಧೀತಿಭಿಃ ॥ ೧೧ ॥

॥ ಪದಪಾಠಃ ॥

**ಶರ್ಧಂऽಶರ್ಧಂ । ವಃ । ಏಷಾಂ । ವ್ರಾತಂऽವ್ರಾತಂ । ಗಣಂऽಗಣಂ । ಸುಶಸ್ತಿऽಭಿಃ ।**

**ಅನು । ಕ್ರಾಮೇಮ । ಧೀತಿऽಭಿಃ ॥ ೧೧ ॥**

॥ ಸಾಯಣಭಾಷ್ಯಂ ॥

**ಹೇ ಮರುತ ಏಷಾಂ ವೋ ಯುಷ್ಮಾಕಂ ಶರ್ಧಂ ಶರ್ಧಂ ತತ್ತದ್ಬಲಂ ವ್ರಾತಂ ವ್ರಾತಂ । ಅವಿವಕ್ಷಿತಗಣೋ ವ್ರಾತಃ । ತಂ ತಂ ವ್ರಾತಂ ವೋ ಗಣಂ ಗಣಂ ತಂ ತಂ ಸಪ್ತಸಪ್ತಸಮುದಾಯಾತ್ಮಕಂ ಗಣಂ ಗಣಂ ಚ ಸುಶಸ್ತಿಭಿಃ ಶೋಭನಸ್ತುತಿಭಿರ್ಧೀತಿಭಿಃ ಕರ್ಮಭಿರ್ಹವಿಷ್ಪ್ರದಾನಾದಿಲಕ್ಷಣೈರನು ಕ್ರಾಮೇಮ । ಅನುಗಚ್ಛೇಮ ॥**

॥ ಪ್ರತಿಪದಾರ್ಥ॥

(ಎಲೈ ಮರುತ್ತುಗಳೇ) **ಏಷಾಂ ವಃ**—ಪ್ರಸಿದ್ಧರಾದ ನಿಮ್ಮ । **ಶರ್ಧಂಶರ್ಧಂ**—ವೈಯಕ್ತಿಕವಾದ ಶಕ್ತಿಯನ್ನೂ । **ವ್ರಾತಂವ್ರಾತಂ**—ಶಕ್ತಿನಿರ್ದಿಷ್ಟವಾದ ಸಮುದಾಯವನ್ನೂ । **ಗಣಂಗಣಂ**—ಸಪ್ತಸಂಖ್ಯಾಕವಾಗಿ ವಿಭ

ಕ್ತವಾದ ವೈಯಕ್ತಿಕಗಣವನ್ನೂ । **ಸುಶಸ್ತಿಭಿಃ**—ಉತ್ತಮವಾದ ಸ್ತುತಿಗಳಿಂದೊಡಗೂಡಿದ । **ಧೀತಿಭಿಃ**—ಹವಿಷ್ಪ್ರದಾನಾದಿ ಕರ್ಮಗಳಿಂದ । **ಅನು ಕ್ರಾಮೇಮ**—ಪೂಜಿಸುತ್ತೇವೆ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಪ್ರಸಿದ್ಧರಾದ ನಿಮ್ಮ ವೈಯಕ್ತಿಕವಾದ ಶಕ್ತಿಯನ್ನೂ, ಶಕ್ತಿನಿರ್ದಿಷ್ಟವಾದ ಸಮುದಾಯವನ್ನೂ, ಸಪ್ತಸಂಖ್ಯಾಕವಾಗಿ ವಿಭಕ್ತವಾದ ವೈಯಕ್ತಿಕಗಣವನ್ನೂ ಉತ್ತಮವಾದ ಸ್ತುತಿಗಳಿಂದ ಒಡಗೂಡಿದ ಹವಿಷ್ಪ್ರದಾನಾದಿ ಕರ್ಮಗಳಿಂದ ಪೂಜಿಸುತ್ತೇವೆ

English Translation

Let us wait with sacred praises and holy rites upon your several strength, and separate troop, and individual company.

॥ ಸಂಹಿತಾಪಾಠಃ ॥

ಕಸ್ಮಾ ಅದ್ಯ ಸುಜಾತಾಯ ರಾತಹವ್ಯಾಯ ಪ್ರ ಯಯುಃ ।
ಏನಾ ಯಾಮೇನ ಮರುತಃ ॥ ೧೨ ॥

॥ ಪದಪಾಠಃ ॥

ಕಸ್ಮೈ । ಅದ್ಯ । ಸುऽಜಾತಾಯ । ರಾತऽಹವ್ಯಾಯ । ಪ್ರ । ಯಯುಃ ।
ಏನಾ । ಯಾಮೇನ । ಮರುತಃ ॥ ೧೨ ॥

ಸಾಯಣಭಾಷ್ಯಂ ॥ ॥

**ಅದ್ಯಾಸ್ಮಿನ್ದಿನೇ ಕಸ್ಮೈ ಸುಜಾತಾಯ ರಾತಹವ್ಯಾಯ ದತ್ತಹವಿಷ್ಕಾಯ ಪ್ರ ಯಯುಃ ಪ್ರಕರ್ಷೇಣ ಗಚ್ಛೆಯುರೇನಾನೇನ ಯಾಮೇನ ರಥೇನ ಮರುತಃ** ॥

॥ ಪ್ರತಿಪದಾರ್ಥ ॥

**ಅದ್ಯ**—ಈ ಯಾಗಾದಿನದಲ್ಲಿ । **ಮರುತಃ**—ಮರುತ್ತುಗಳು । **ಏನಾ ಯಾಮೇನ**—ಈ ರಥದಲ್ಲಿ ಕುಳಿತು **ಸುಜಾತಾಯ**—ಉತ್ತಮವಾದ ಜನ್ಮವುಳ್ಳವನೂ । **ರಾತಹವ್ಯಾಯ**—ಹವಿಸ್ಸನ್ನರ್ಪಿಸಿದವನೂ ಆದ । **ಕಸ್ಮೈ**—ಯಾವ ಯಜಮಾನನಲ್ಲಿಗೆ । **ಪ್ರ ಯಯುಃ**—ಹೊರಟಿದ್ದಾರೆ ?

॥ ಭಾವಾರ್ಥ ॥

ಈ ಯಾಗದಿನದಲ್ಲಿ ಮರುತ್ತುಗಳು ಈ ರಥದಲ್ಲಿ ಕುಳಿತು ಉತ್ತಮವಾದ ಜನ್ಮವುಳ್ಳವನೂ, ಹವಿಸ್ಸನ್ನರ್ಪಿಸಿದವನೂ ಆದ ಯಾವ ಯಜಮಾನನಲ್ಲಿಗೆ ಹೊರಟಿದ್ದಾರೆ ?

## English Translation

To what well-born and oblation-giving (worshipper) will the Maruts proceed to-day in this their car ?

॥ ಸಂಹಿತಾಪಾಠಃ ॥

ಯೇನ ತೋಕಾಯ ತನಯಾಯ ಧಾನ್ಯಂ೧ ಬೀಜಂ ವಹಧ್ವೇ ಅಕ್ಷಿತಂ ।

ಅಸ್ಮಭ್ಯಂ ತದ್ಧತ್ತನ ಯದ್ವ ಈಮಹೇ ರಾಧೋ ವಿಶ್ವಾಯು ಸೌಭಗಂ ॥೧೩॥

॥ ಪದಪಾಠಃ ॥

ಯೇನ । ತೋಕಾಯ । ತನಯಾಯ । ಧಾನ್ಯಂ । ಬೀಜಂ । ವಹಧ್ವೇ । ಅಕ್ಷಿತಂ ।

ಅಸ್ಮಭ್ಯಂ । ತತ್ । ಧತ್ತನ । ಯತ್ । ವಃ । ಈಮಹೇ । ರಾಧಃ । ವಿಶ್ವಽಆಯು । ಸೌಭಗಂ ॥ ೧೩ ॥

॥ ಸಾಯಣಭಾಷ್ಯಂ ॥

ಹೇ ಮರುತೋ ಯೇನ ಸದಯೇನ ಮನಸಾ ತೋಕಾಯ ಪುತ್ರಾಯ ತನಯಾಯ ತತ್ಪುತ್ರಾಯ ಧನಾಯ ವಾ ಧಾನ್ಯಂ ಬೀಜಮಕ್ಷಿತಮಕ್ಷೀಣಂ ವಹಧ್ವೇ ಧಾರಯಧ್ವೇ ತೇನ ಚಿತ್ತೇನಾಸ್ಮಭ್ಯಂ ತದ್ಧಾನ್ಯಂ ಬೀಜಂ ಧತ್ತನ। ಯಚ್ಚ ವೋ ಯುಷ್ಮಾನೀಮಹೇ ಯಾಚಾಮಹೇ ರಾಧೋ ಧನಂ ವಿಶ್ವಾಯು ಸರ್ವಾನ್ನೋಪೇತಂ ಕೃತ್ಸ್ನಾಯುಷ್ಯೋಪೇತಂ ವಾ ಸೌಭಗಂ ಸೌಭಾಗ್ಯಂ ಚ ತದ್ಧತ್ತನೇತಿ ಸಮನ್ವಯಃ॥

॥ ಪ್ರತಿಪದಾರ್ಥ ॥

(ಎಲೈ ಮರುತ್ತುಗಳೇ) **ಯತ್**—ಯಾವ ಕಾರಣದಿಂದ । (**ವಯಂ**—ನಾವು) । **ವಿಶ್ವಾಯು**—ಆಯುಷ್ಕಾಲಪೂರ್ತ ಇರತಕ್ಕದ್ದೂ । **ಸೌಭಗಂ**—ಮಂಗಳಕರವಾದುದೂ ಆದ । **ರಾಧಃ**—ಧನವನ್ನು । **ವಃ**—ನಿಮ್ಮಿಂದ । **ಈ ಮಹೇ**—ನಾವು ಪ್ರಾರ್ಥಿಸುತ್ತೇವೆಯೋ (ಆದುದರಿಂದಲೇ) । **ಯೇನ**—ಯಾವ ದಯಾಪೂರಿತವಾದ ಮನಸ್ಸಿನಿಂದ । **ತೋಕಾಯ**—ಪುತ್ರನಿಗೂ । **ತನಯಾಯ**—ಪೌತ್ರನಿಗೂ । **ಅಕ್ಷಿತಂ**—ಕ್ಷಯರಹಿತವಾದುದೂ । **ಧಾನ್ಯಂ**—ಧಾನ್ಯಾತ್ಮಕವಾದುದೂ ಆದ । **ಬೀಜಂ**—ಬೀಜವನ್ನು (ಹಂಚಲು) । **ವಹಧ್ವೇ**—ಹಿಡಿದಿದ್ದೀರೋ । **ತತ್**—ಅದನ್ನೇ । **ಅಸ್ಮಭ್ಯಂ**—ನಮಗೂ ಕೊಡಿರಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನಾವೂ ಸಹ ನಮ್ಮ ಆಯುಃಪರಿಮಿತಿಯಿರುವವರೆಗೂ ನಿಲ್ಲತಕ್ಕದ್ದೂ, ಮಂಗಳಕರವಾದುದೂ ಆದ ಧನವನ್ನು ನಿಮ್ಮಿಂದ ಪ್ರಾರ್ಥಿಸುತ್ತೇವೆ. ಆ ಕಾರಣದಿಂದ, ಯಾವ ನಿಮ್ಮ ದಯಾಪೂರಿತವಾದ ಮನಸ್ಸಿನಿಂದ ಪುತ್ರನಿಗೂ, ಪೌತ್ರನಿಗೂ ಸಹ ಕ್ಷಯರಹಿತವಾದುದೂ ಧಾನ್ಯಾತ್ಮಕವಾದುದೂ ಆದ ಬೀಜವನ್ನು ಹಂಚಲು ಹಿಡಿದಿದ್ದೀರೋ, ಅದೇ ಧಾನ್ಯವನ್ನು ಅದೇ ದಯೆಯಿಂದ ಕೂಡಿದ ಮನಸ್ಸಿನಿಂದ ನಮಗೂ ಹಂಚಿಕೊಡಿ.

English Translation

With the same (goodwill) that you bestow imperishable grain-seed upon a son or grandson, bestow it upon us, for we ask of you life-sustaining and auspicious wealth.

॥ ಸಂಹಿತಾಪಾಠಃ ॥

ಅತೀಯಾಮ ನಿದಸ್ತಿರಃ ಸ್ವಸ್ತಿಭಿರ್ಹಿತ್ವಾವದ್ಯಮರಾತೀಃ ।

ವೃಷ್ಟ್ವೀ ಶಂ ಯೋರಾಪ ಉಸ್ರಿ ಭೇಷಜಂ ಸ್ಯಾಮ ಮರುತಃ ಸಹ ॥ ೧೪ ॥

॥ ಪದಪಾಠಃ ॥

ಅತಿ । ಇಯಾಮ । ನಿದಃ । ತಿರಃ । ಸ್ವಸ್ತಿಽಭಿಃ । ಹಿತ್ವಾ । ಅವದ್ಯಂ । ಅರಾತೀಃ ।

ವೃಷ್ಟ್ವೀ । ಶಂ । ಯೋಃ । ಆಪಃ । ಉಸ್ರಿ । ಭೇಷಜಂ । ಸ್ಯಾಮ । ಮರುತಃ । ಸಹ ॥ ೧೪ ॥

॥ ಸಾಯಣಭಾಷ್ಯಂ ॥

ಹೇ ಮರುತೋ ವಯಂ ಸ್ವಸ್ತಿಭಿಃ ಕ್ಷೇಮೈರವದ್ಯಂ ಪಾಪಂ ಹಿತ್ವಾ ಪರಿತ್ಯಜ್ಯ ನಿದೋ ನಿಂದಕಾನರಾತೀಃ ಶತ್ರೂನ್ ತಿರಃ ಪ್ರಾಪ್ತಾನ್ । ಯದ್ವಾ ತಿರೋಽಂತರ್ಹಿತಂ । ಅತೀಯಾಮ । ಅತಿಕ್ರಮ್ಯ ಗಚ್ಛೇಮ । ತಿರಸ್ಕುರ್ಮ ಇತ್ಯರ್ಥಃ । ಅನೇನಾನಿಷ್ಟಪರಿಹಾರಃ ಪ್ರಾರ್ಥಿತ ಉತ್ತರೇಣೇಷ್ಟಪ್ರಾಪ್ತಿರುಚ್ಯತೇ । ವೃಷ್ಟ್ವೀ ವೃಷ್ಟಿಷು ಯುಷ್ಮತ್ಪ್ರೇರಿತಾಸು ಸತೀಷು ಶಂ ಸುಖಂ ಯೋಃ ಪಾಪಾನಾಂ ಯಾವನಂ ಚಾಪ ಉದಕಾನಿ ॥ ಶಸಃ ಸ್ಥಾನೇ ಜಸ್ ॥ ಉಸ್ರಿ ಗೋಯುಕ್ತಂ ಭೇಷಜಂ । ಯದ್ಯಪ್ಯೇತದುದಕನಾಮ ತಥಾಪಿ ಪೃಥಗಪಾಮಭಿಧಾನಾದತ್ರ ತದ್ಧೇತುಕಾರ್ಯಮನ್ನಮುಚ್ಯತೇ । ತತ್ಸರ್ವಂ ಸಹ ಸ್ಯಾಮ ಲಭೇಮಹಿ ಹೇ ಮರುತೋ ವಯಂ । ಯದ್ವಾ । ಅಪೋ ಯುಷ್ಮತ್ಪ್ರೇರಿತಾ ಉಕ್ತಂ ಸರ್ವಂ ಕುರ್ವಂತು । ವಯಂ ಸರ್ವೇ ಸಹೈವ ಸ್ಯಾಮ । ಭವೇಮ ಯುಷ್ಮತ್ಸ್ವಭೂತಾಃ ॥

॥ ಪ್ರತಿಪದಾರ್ಥ ॥

(ಎಲೈ ಮರುತ್ತುಗಳೇ) **ಸ್ವಸ್ತಿಭಿಃ**—ನಮ್ಮ ಮಂಗಳಕರವಾದ ಕರ್ಮಗಳಿಂದ । **ಅವದ್ಯಂ**—ಪಾಪವನ್ನು । **ಹಿತ್ವಾ**—ತ್ಯಜಿಸಿ । **ನಿದಃ**—ದೂಷಕರೂ । **ತಿರಃ**—ಅವಿತುಕೊಂಡಿರುವವರೂ ಆದ । **ಅರಾತೀಃ**—ಶತ್ರುಗಳನ್ನು । **ಅತಿ ಇಯಾಮ**—ಅತಿಕ್ರಮಿಸಿ ಹೋಗುವಂತಾಗಲಿ । **ಮರುತಃ**—ಎಲೈ ಮರುತ್ತುಗಳೇ । **ವೃಷ್ಟ್ವೀ**—ನಿಮ್ಮಿಂದ ಪ್ರೇರಿತಗಳಾದ ವೃಷ್ಟಿಗಳಿಂದ । **ಶಂ**—ಸುಖವನ್ನೂ । **ಯೋಃ**—ದುಃಖರಾಹಿತ್ಯವನ್ನೂ । **ಆಪಃ**—ಉದಕಗಳನ್ನೂ । **ಉಸ್ರಿ**—ಗೋಯುಕ್ತವಾದ । **ಭೇಷಜಂ**—ಅನ್ನವನ್ನೂ । **ಸಹ**—ಒಟ್ಟಿಗೆ । **ಸ್ಯಾಮ**—ಹೊಂದುವಂತಾಗಲಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನಮ್ಮ ಮಂಗಳಕರಗಳಾದ ಕರ್ಮಗಳಿಂದ ನಾವು ಪಾಪವನ್ನು ತ್ಯಜಿಸಿ ದೂಷಕರೂ ಅವಿತುಕೊಂಡಿರುವವರೂ ಆದ ಶತ್ರುಗಳನ್ನೂ ಅತಿಕ್ರಮಿಸಿ ಹೋಗುವಂತಾಗಲಿ. ಎಲೈ ಮರುತ್ತುಗಳೇ, ನಿಮ್ಮಿಂದ ಪ್ರೇರಿತಗಳಾದ ವೃಷ್ಟಿಗಳಿಂದ ಸುಖವನ್ನೂ, ದುಃಖರಾಹಿತ್ಯವನ್ನೂ ಉದಕಗಳನ್ನೂ, ಗೋಯುಕ್ತವಾದ ಅನ್ನವನ್ನೂ ಒಟ್ಟಿಗೆ ಹೊಂದುವಂತಾಗಲಿ.

English Translation

May we overcome our secret and reviling adversaries, having departed from iniquity by good deeds: may we possess, Maruts, through the rain (sent by you), unmixed happiness, water, cattle, and herbs.

॥ ಸಂಹಿತಾಪಾಠಃ ॥

ಸುದೇವಃ ಸಮಹಾಸತಿ ಸುವೀರೋ ನರೋ ಮರುತಃ ಸ ಮರ್ತ್ಯಃ ।

ಯಂ ತ್ರಾಯಧ್ವೇ ಸ್ಯಾಮ ತೇ ॥ ೧೫ ॥

॥ ಪದಪಾಠಃ ॥

ಸುऽದೇವಃ । ಸಮಹ । ಅಸತಿ । ಸುऽವೀರಃ । ನರಃ । ಮರುತಃ । ಸಃ । ಮರ್ತ್ಯಃ ।

ಯಂ । ತ್ರಾಯಧ್ವೇ । ಸ್ಯಾಮ । ತೇ ॥ ೧೫ ॥

॥ ಸಾಯಣಭಾಷ್ಯಂ ॥

**ಹೇ ಸಮಹ । ಪ್ರಶಸ್ತವಚನಃ ಸಮಹಶಬ್ದಃ । ಹೇ ಪೂಜಿತ ಮರುತಾಂ ಗಣ ಸುದೇವಃ ಕಲ್ಯಾಣ-ಮರುತ್ಸಂಜ್ಞಕದೇವೋಪೇತೋऽಸತಿ । ಭವತಿ । ಹೇ ನರೋ ನೇತಾರೋ ಹೇ ಮರುತಃ ಸ ಮರ್ತ್ಯಃ**

**ಸುವೀರಃ ಶೋಭನಪುತ್ರಾದ್ಯುಪೇತಶ್ಚಾಸತಿ । ಭವತಿ । ಯಂ ಮರ್ತ್ಯಂ ತ್ರಾಯಧ್ವೇ ಪಾಲಯಧ್ವೇ । ಏವಂ ಭವತಿ ತೇ ವಯಂ ಸ್ಯಾಮ ಯುಷ್ಮದೀಯಾಃ ॥**

॥ ಪ್ರತಿಪದಾರ್ಥ ॥

**ಸಮಹ**—ಪೂಜ್ಯರಾದ ಎಲೈ ಮರುತ್ತುಗಳೇ, । **ಯಂ**—ಯಾವ ಮಾನವನನ್ನು । **ತ್ರಾಯಧ್ವೇ**—ನೀವು ರಕ್ಷಿಸುವಿರೋ । **ಸಃ ಮರ್ತ್ಯಃ**—ಆ ಮಾನವನು । **ಸುದೇವಃ**—ದೇವತೆಗಳ ಅನುಗ್ರಹಕ್ಕೆ ಪಾತ್ರನಾಗಿ । **ಅಸತಿ**—ಇರುತ್ತಾನೆ । **ನರಃ**—ನೇತೃಗಳಾದ । **ಮರುತಃ**- ಎಲೈ ಮರುತ್ತುಗಳೇ । **ಸಃ**—ಅದೇ ಮಾನವನು । **ಸುವೀರಃ**—ವೀರಪುತ್ರಾದಿಗಳಿಂದ ಕೂಡಿದವನಾಗಿರುತ್ತಾನೆ । **(ವಯಂ**—ನಾವೂ ಸಹ) । **ತೇ**—ನಿಮಗೆ ಸೇರಿದವರಾಗಿ । **ಸ್ಯಾಮ**—ಆಗಿರುವೆವು.

॥ ಭಾವಾರ್ಥ ॥

ಪೂಜ್ಯರಾದ ಎಲೈ ಮರುತ್ತುಗಳೇ, ನೀವು ಯಾವ ಮಾನವನನ್ನು ರಕ್ಷಿಸುವಿರೋ, ಆ ಮಾನವನು ದೇವತೆಗಳ ಅನುಗ್ರಹಕ್ಕೆ ಪಾತ್ರನಾಗಿರುತ್ತಾನೆ. ನೇತೃಗಳಾದ ಎಲೈ ಮರುತ್ತುಗಳೇ, ಅದೇ ಮಾನವನು ವೀರಪುತ್ರಾದಿಗಳಿಂದ ಕೂಡಿದವನಾಗಿರುತ್ತಾನೆ. ನಾವೂ ಸಹ ಅವನಂತೆ ನಿಮ್ಮ ರಕ್ಷಣೆಯಲ್ಲಿಯೇ ಇರುವಂತಾಗಲಿ.

## English Translation

Renowned (host of) Maruts, leaders (of rites), that mortal is favoured by the gods, and blessed with progeny, whom you protect . may we be such as he is.

॥ ಸಂಹಿತಾಪಾಠಃ॥

ಸ್ತುಹಿ ಭೋಜಾನ್‌ತ್ಸ್ತುವತೋ ಅಸ್ಯ ಯಾಮನಿ ರಣನ್ಗಾವೋ ನ ಯವಸೇ।
ಯತಃ ಪೂರ್ವಾಂ ಇವ ಸಖೀರನು ಹ್ವಯ ಗಿರಾ ಗೃಣೀಹಿ ಕಾಮಿನಃ ॥೧೬॥

॥ ಪದಪಾಠಃ ॥

**ಸ್ತುಹಿ । ಭೋಜಾನ್ । ಸ್ತುವತಃ । ಅಸ್ಯ । ಯಾಮನಿ । ರಣನ್ । ಗಾವಃ । ನ । ಯವಸೇ ।**

**ಯತಃ । ಪೂರ್ವಾನ್ಽಇವ । ಸಖೀನ್ । ಅನು । ಹ್ವಯ । ಗಿರಾ । ಗೃಣೀಹಿ । ಕಾಮಿನಃ ॥ ೧೬ ॥**

॥ ಸಾಯಣಭಾಷ್ಯಂ ॥

**ಹೇ ಋಷೇ ಸ್ತುವತಃ ಸ್ತುತಿಂ ಕುರ್ವತೋಽಸ್ಯ ಯಜಮಾನಸ್ಯ ಯಾಮನಿ ಯಜ್ಞೇ ಭೋಜಾನ್ ದಾತೄನ್ಮರುತಃ ಸ್ತುಹಿ । ಗಾವೋ ನ ಯವಸೇ । ತೃಣಾದಿಭಕ್ಷಣಾಯ ಗಚ್ಛಂತ್ಯೋ ಗಾವೋ ಯಥಾ ರಮಂತೇ ತದ್ವನ್ಮರುತೋಽಪಿ ರಣನ್ । ರಮಂತಾಂ । ಯತೋ ಗಚ್ಛತೋ ಮರುತಃ ಪೂರ್ವಾನ್ ಪುರಾತನಾನ್ ಸಖೀನಿವಾನು ಹ್ವಯ । ಆಹ್ವಯ । ಕಾಮಿನಃ ಸ್ತುತೀಚ್ಛಾವತೋ ಮರುತೋ ಗಿರಾ ಸ್ತುತ್ಯಾ ಗೃಣೀಹಿ । ಸ್ತುಹಿ ॥**

॥ ಪ್ರತಿಪದಾರ್ಥ ॥

(ಎಲೈ ಋಷಿಯೇ) **ಸ್ತುವತಃ**—ಸ್ತುತಿಯನ್ನರ್ಪಿಸುವ । **ಅಸ್ಯ**—ಈ ಯಜಮಾನನ । **ಯಾಮನಿ**—ಯಜ್ಞದಲ್ಲಿ । **ಭೋಜಾನ್**—ದಾತೃಗಳಾದ ಮರುತ್ತುಗಳನ್ನು । **ಸ್ತುಹಿ**—ಸ್ತುತಿಸು । **ಯವಸೇ**—ತೃಣಾದಿ ಭಕ್ಷಣಕ್ಕೆ ಹೋಗತಕ್ಕ। **ಗಾವೋ ನ**—ಗೋವುಗಳಂತೆ । **ರಣನ್**—ಅವರು ಹರ್ಷವನ್ನು ಹೊಂದಲಿ । **ಪೂರ್ವಾನ್**—ಬಹಳ ಕಾಲದಿಂದ ಬೆಳೆಸಿದ ಮೈತ್ರಿಯುಳ್ಳ । **ಸಖೀನ್ ಇವ**—ಸ್ನೇಹಿತರನ್ನು ಕರೆಯುವಂತೆ । **ಯತಃ**—ಸಂಚರಿಸತಕ್ಕ ಅವರನ್ನು । **ಅನು ಹ್ವಯ**—ಆಹ್ವಾನಿಸು। **ಕಾಮಿನಃ**—ಸ್ತುತಿಯನ್ನು ಇಚ್ಛಿಸುವ ಅವರನ್ನು । **ಗಿರಾ**—ಸ್ತುತಿಯಿಂದ । **ಗೃಣೀಹಿ**—ಪ್ರಶಂಸಿಸು

॥ ಭಾವಾರ್ಥ ॥

ಎಲೈ ಋಷಿಯೇ, ಸ್ತುತಿಯನ್ನರ್ಪಿಸತಕ್ಕ ಈ ಯಜಮಾನನ ಯಜ್ಞದಲ್ಲಿ ದಾತೃಗಳಾದ ಮರುತ್ತುಗಳನ್ನು ಸ್ತುತಿಸು. ತೃಣಾದಿಭಕ್ಷಣಕ್ಕೆ ಹೋಗತಕ್ಕ ಗೋವುಗಳಂತೆ ಅವರು ಹರ್ಷವನ್ನು ಹೊಂದಲಿ. ಬಹಳಕಾಲದಿಂದ ಬೆಳೆಸಿದ ಮೈತ್ರಿಯುಳ್ಳ ಸ್ನೇಹಿತರನ್ನು ಕರೆಯುವಂತೆ ಸಂಚಾರಸ್ವಭಾವವುಳ್ಳ ಅವರನ್ನು ಆಹ್ವಾನಿಸು. ಸ್ತುತಿಯನ್ನು ಇಚ್ಛಿಸುವ ಅವರನ್ನು ಸ್ತುತಿಯಿಂದ ಪ್ರಶಂಸಿಸು.

### English Translation

Praise the givers of enjoyment, (the Maruts), at the sacrifice of this worshipper, (for they) delight in (pious praise), like cattle in fodder : wherefore call upon them as if upon old friends ; praise them, desirous of praise with a sacred hymn.

## ಐವತ್ತನಾಲ್ಕನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಪ್ರ ಶರ್ಧಾಯೇತಿ ಪಂಚದಶರ್ಚಂ ದಶಮಂ ಸೂಕ್ತಂ ಶ್ಯಾವಾಶ್ವಸ್ಯಾರ್ಷಂ ಮರುದ್ದೇವತಾಕಂ । ಚತುರ್ದಶೀ ತ್ರಿಷ್ಟುಪ್ ಶಿಷ್ಟಾ ಜಗತ್ಯಃ । ಪ್ರ ಶರ್ಧಾಯ ಪಂಚೋನಾ ಜಾಗತಮಂತ್ಯಾ ತ್ರಿಷ್ಟು-**

**ಬಿತ್ಯನುಕ್ರಾಂತಂ । ಸೂಕ್ತವಿನಿಯೋಗೋ ಲೈಂಗಿಕಃ । ಆದ್ಯೈಂದ್ರಾಮಾರುತ್ಯಾಂ ಪ್ರಧಾನಸ್ಯ ಯಾಜ್ಯಾ । ಸೂತ್ರಿತಂ ಚ । ಪ್ರ ಶರ್ಧಾಯ ಮಾರುತಾಯ ಸ್ವಭಾನವ ಇತ್ಯೈಂದ್ರೀಮನೂಚ್ಯ ಮಾರುತ್ಯಾ ಯಜೇತ್। ಆ. ೨.೧೧ । ಇತಿ ॥**

ಅನುವಾದವು—**ಪ್ರ ಶರ್ಧಾಯ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇದರಲ್ಲಿ ಹದಿನೈದು ಋಕ್ಕುಗಳಿರುವವು ಈ ಸೂಕ್ತಕ್ಕೆ ಶ್ಯಾವಾಶ್ವನು ಋಷಿಯು, ಮರುತ್ತುಗಳು ದೇವತೆಯು, ಈ ಸೂಕ್ತದ ಹದಿನಾಲ್ಕನೆಯ ಋಕ್ಕು ತ್ರಿಷ್ಟುಪ್‌ಛಂದಸ್ಸವು; ಉಳಿದ ಋಕ್ಕುಗಳು ಜಗತೀಛಂದಸ್ಸವು. ಅನುಕ್ರಮಣಿಕೆಯಲ್ಲಿ—**ಪ್ರ ಶರ್ಧಾಯ ಪಂಚೋನಾ ಜಾಗತಮುಪಾಂತ್ಯಾ ತ್ರಿಷ್ಟುಪ್** ಎಂದು ಹೇಳಿರುವುದು. ಸೂಕ್ತವಿನಿಯೋಗವು ಲೈಂಗಿಕವು. ಈ ಸೂಕ್ತದ ಮೊದಲನೆಯ ಋಕ್ಕನ್ನು ಇಂದ್ರಾಮರುದ್ದೇವತೆಗಳನ್ನುದ್ದೇಶಿಸಿ ಮಾಡುವ ಪ್ರಧಾನಹೋಮದಲ್ಲಿ ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪ್ರ ಶರ್ಧಾಯ ಮಾರುತಾಯ ಸ್ವಭಾನವ ಇತ್ಯೈಂದ್ರೀಮನೂಚ್ಯ ಮಾರುತ್ಯಾ ಯಜೇತ್** ಎಂಬ ಸೂತ್ರದಿಂದ (ಆ. ೨.೧೧) ವಿವೃತವಾಗಿರುವುದು

## ಸೂಕ್ತ—೫೪.

ಮಂಡಲ—೫ ॥ ಅನುವಾಕ—೪ ॥ ಸೂಕ್ತ—೫೪ ॥
ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ— ೧೪, ೧೫, ೧೬ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ॥
ಋಷಿಃ—ಶ್ಯಾವಾಶ್ವ ಆತ್ರೇಯಃ ॥
ದೇವತಾ—ಮರುತಃ ॥
ಛಂದಃ—೧-೧೩, ೧೫. ಜಗತೀ । ೧೪ ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಪ್ರ ಶರ್ಧಾಯ ಮಾರುತಾಯ ಸ್ವಭಾನವ ಇಮಾಂ ವಾಚಮನಜಾ ಪರ್ವತಚ್ಯುತೇ ।
ಘರ್ಮಸ್ತುಭೇ ದಿವ ಆ ಪೃಷ್ಠಯಜ್ವನೇ ದ್ಯುಮ್ನಶ್ರವಸೇ ಮಹಿ ನೃಮ್ಣಮರ್ಚತ ॥ ೧ ॥

॥ ಪದಪಾಠಃ ॥

ಪ್ರ । ಶರ್ಧಾಯ । ಮಾರುತಾಯ । ಸ್ವಭಾನವೇ । ಇಮಾಂ । ವಾಚಂ । ಅನಜ । ಪರ್ವತಚ್ಯುತೇ । ಘರ್ಮಸ್ತುಭೇ । ದಿವಃ । ಆ । ಪೃಷ್ಠಯಜ್ವನೇ । ದ್ಯುಮ್ನಶ್ರವಸೇ । ಮಹಿ । ನೃಮ್ಣಂ । ಅರ್ಚತ ॥೧॥

॥ ಸಾಯಣಭಾಷ್ಯಂ ॥

**ಪ್ರ ಅನಜೇತಿ ಸಂಬಂಧಃ । ಮಾರುತಾಯ ಮರುತ್ಸಂಬಂಧಿನೇ ಶರ್ಧಾಯ ಬಲಾಯೇಮಾಂ ಕ್ರಿಯಮಾಣಾಂ ವಾಚಂ ಸ್ತುತಿಂ ಪ್ರಾನಜ । ಪ್ರಾಪಯ । ಸ್ವಭಾನವೇ ಸ್ವಾಯತ್ತತೇಜಸೇ ಪರ್ವತಚ್ಯುತೇ ಪರ್ವತಸ್ಯ ಚ್ಯಾವಯಿತ್ರೇ ಘರ್ಮಸ್ತುಭೇ ಘರ್ಮಸ್ಯ ಸ್ತೋಭಯಿತ್ರೇ ದಿವ ಆ ದ್ಯುಲೋಕಾದಾಗಚ್ಛತೇ ಪೃಷ್ಠಯಜ್ವನೇ ಷಟ್ ಪೃಷ್ಠ್ಯೈ ರಥಂತರಬೃಹದಾದಿಭಿರೀಜಾನಾಯ ದ್ಯುಮ್ನಶ್ರವಸೇ ದ್ಯೋತಮಾನಾನ್ನಾಯ ಮಹಿ ಮಹತ್ ಪ್ರಭೂತಂ ನೃಮ್ಣಂ ಧನಂ ಹವಿರ್ಲಕ್ಷಣಮರ್ಚತ । ದದತೇತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಸ್ವಭಾನವೇ**—ಸ್ವಯಂ ಪ್ರಕಾಶಿತವೂ । **ಪರ್ವತಚ್ಯುತೇ—**(ವೃಷ್ಟ್ಯರ್ಥವಾಗಿ) ಮೇಘವನ್ನು ಸೀಳತಕ್ಕದ್ದೂ ಆದ । **ಮಾರುತಾಯ**—ಮರುತ್ಸಂಬಂಧಿಯಾದ । **ಶರ್ಧಾಯ**—ಸಂಘಾತ್ಮಕವಾದ ಶಕ್ತಿಗೆ । **ಇಮಾಂ**—ಈಗ ನಿರ್ಮಿತವಾಗುವ । **ವಾಚಂ**—ಸ್ತುತಿಯನ್ನು । **ಪ್ರ ಅನಜ**—ಅರ್ಪಿಸಿರಿ । **ಘರ್ಮಸ್ತುಭೇ**—ಉಷ್ಣವನು ನಿವಾರಿಸುವುದೂ । **ದಿವಃ ಆ**—ಅಂತರಿಕ್ಷದಿಂದ ಬರತಕ್ಕದ್ದೂ । **ಪೃಷ್ಠಯಜ್ವನೇ**—ಪೃಷ್ಠಸ್ತುತಿಗಳೊಡನೆ ಪೂಜಿಸಲ್ಪಡತಕ್ಕದ್ದೂ । **ದ್ಯುಮ್ನಶ್ರವಸೇ**—ಪ್ರಕಾಶಮಾನವಾದ ಅನ್ನವುಳ್ಳದ್ದೂ ಆದ ಮರುತ್ಸಂಘಕ್ಕೆ । **ಮಹಿ**—ಪ್ರಭೂತವಾಗಿ । **ನೃಮ್ಣಂ**— ಹವಿಸ್ಸಿನ ರೂಪದ ಧನವನ್ನು । **ಅರ್ಚತ**—ಅರ್ಪಿಸಿರಿ.

॥ ಭಾವಾರ್ಥ ॥

ಸ್ವಯಂಪ್ರಕಾಶಿತವೂ, ವೃಷ್ಟ್ಯರ್ಥವಾಗಿ ಮೇಘವನ್ನು ಸೀಳತಕ್ಕದ್ದೂ ಆದ ಮರುತ್ಸಂಬಂಧಿಯಾದ ಸಂಘಾತ್ಮಕವಾದ ಶಕ್ತಿಗೆ ಈಗ ನಿರ್ಮಿತವಾಗುವ ಸ್ತುತಿಯನ್ನರ್ಪಿಸಿರಿ. ಉಷ್ಣವನ್ನು ನಿವಾರಿಸುವುದೂ ಅಂತರಿಕ್ಷದಿಂದ ಬರತಕ್ಕದ್ದೂ ಪೃಷ್ಠಸ್ತುತಿಗಳೊಡನೆ ಪೂಜಿಸಲ್ಪಡತಕ್ಕದ್ದೂ. ಪ್ರಕಾಶಮಾನವಾದ ಅನ್ನವುಳ್ಳದ್ದೂ ಆದ ಮರುತ್ಸಂಘಕ್ಕೆ ಪ್ರಭೂತವಾಗಿ ಹವಿಸ್ಸಿನ ರೂಪದ ಧನವನ್ನು ಅರ್ಪಿಸಿರಿ.

## English Translation

Offer praise to the company of the Maruts, the self-irradiating, the precipitators of mountains : present liberal oblations to the assuagers of heat, to those who come from the sky, to whom solemn rites are familier, to the givers of abundant food.

॥ ಸಂಹಿತಾಪಾಠಃ ॥

ಪ್ರ ವೋ ಮರುತಸ್ತವಿಷಾ ಉದನ್ಯವೋ ವಯೋವೃಧೋ ಅಶ್ವಯುಜಃ ಪರಿಜ್ರಯಃ ।
ಸಂ ವಿದ್ಯುತಾ ದಧತಿ ವಾಶತಿ ತ್ರಿತಃ ಸ್ವರಂತ್ಯಾಪೋಽವನಾ ಪರಿಜ್ರಯಃ ॥೨॥

॥ ಪದಪಾಠಃ ॥

ಪ್ರ । ವಃ । ಮರುತಃ । ತವಿಷಾಃ । ಉದನ್ಯವಃ । ವಯಃಽವೃಧಃ । ಅಶ್ವಽಯುಜಃ । ಪರಿಽಜ್ರಯಃ ।
ಸಂ । ವಿಽದ್ಯುತಾ । ದಧತಿ । ವಾಶತಿ । ತ್ರಿತಃ । ಸ್ವರಂತಿ । ಆಪಃ । ಅವನಾ । ಪರಿಽಜ್ರಯಃ ॥ ೨ ॥

॥ ಸಾಯಣಭಾಷ್ಯಂ ॥

ಕಾರೀರ್ಯಾಂ ಪ್ರಥಮಸ್ಯಾಃ ಪಿಂಡ್ಯಾಃ ಪ್ರ ವೋ ಮರುತ ಇತಿ ಯಾಜ್ಯಾ । ಸೂತ್ರಿತಂ ಚ । ಪ್ರ ವೋ ಮರುತಸ್ತವಿಷಾ ಆ ಯಂ ನರಃ । ಆ. ೨-೧೩ । ಇತಿ ॥

ಹೇ ಮರುತೋ ವೋ ಯುಷ್ಮಾಕಂ ಗಣಾಃ ಪ್ರ ಪ್ರಾದುರ್ಭವಂತಿ । ಕೀದೃಶಾ ಗಣಾಃ । ತವಿಷಾ ದೀಪ್ತಾ ಮಹಾಂತೋ ವಾ ಉದನ್ಯವ ಉದಕೇಚ್ಛವೋ ಜಗದ್ರಕ್ಷಣಾರ್ಥಂ ವಯೋವೃಧೋಽನ್ನಸ್ಯ ವರ್ಧಯಿತಾರೋಽಶ್ವಯುಜೋ ಗಮನಾಯ ರಥೇಽಶ್ವಾನಾಂ ಯೋಕ್ತಾರಃ ಪರಿಜ್ರಯಃ ಪರಿತೋ ಗಂತಾರೋ ವಿದ್ಯುತಾ ಸಂ ದಧತಿ । ಸಂಗಚ್ಛಂತೇ । ತದಾನೀಂ ತ್ರಿತಸ್ತ್ರಿಷು ಸ್ಥಾನೇಷು ಶಾಯಮಾನೋ ಮೇಘೋ ಮರುದ್ಗಣೋ ವಾ ವಾಶತಿ । ಶಬ್ದಯತಿ । ಅಸ್ಮಿನ್ಪಕ್ಷೇ ಸಂಘವಾದೋಽಯಂ । ತದಾಪಃ ಪರಿಜ್ರಯಃ ಪರಿತೋ ಗಂತ್ರ್ಯ ಆಪೋಽವನಾವನೌ ಭೂಮೌ ಸ್ವರಂತಿ । ಅಧಃ ಪತಂತಿ ॥

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ತವಿಷಾಃ**—ಅತ್ಯಧಿಕವಾಗಿ ಶಕ್ತಿಯುತವೂ । **ಉದನ್ಯವಃ**—(ಜಗತ್ತಿಗಾಗಿ) ಉದಕವನ್ನು ಸುರಿಸತಕ್ಕವೂ । **ವಯೋವೃಧಃ**—ಅನ್ನಸಂಪದ್ವೃದ್ಧಿಗೆ ಕಾರಣವಾದವೂ ಆದ । **ವಃ**—ನಿಮ್ಮ ಸಂಘಗಳು । **ಪ್ರ**—ಉತ್ಕೃಷ್ಟವಾಗಿವೆ । **ಅಶ್ವಯುಜಃ**—ರಥಕ್ಕೆ ಅಶ್ವಗಳನ್ನು ಕಟ್ಟಿರುವುವೂ । **ಪರಿಜ್ರಯಃ**—ಸರ್ವತ್ರ ಸಂಚರಿಸುವುವೂ ಆಗಿ । **ವಿದ್ಯುತಾ**—ವಿದ್ಯುತ್ತಿನೊಡನೆ । **ಸಂ ದಧತಿ**—ಸೇರಿಕೊಳ್ಳುತ್ತವೆ । **ತ್ರಿತಃ**—ಮೂರು ಸ್ಥಾನಗಳಲ್ಲೂ ಇರುವ ಮರುತ್ಸಂಘವು (ಅಥವಾ ಮೇಘವು) । **ವಾಶತಿ**—ಶಬ್ದಮಾಡುತ್ತದೆ । **ಪರಿಜ್ರಯಃ**—ಸರ್ವತ್ರ ಪ್ರಸರಿಸಿ ಹರಿಯುವ । **ಆಪಃ**—ಉದಕಗಳು । **ಅವನಾ**—ಭೂಮಿಯಮೇಲೆ । **ಸ್ವರಂತಿ**—ಬಿದ್ದು ಹರಿಯುತ್ತವೆ

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಅತ್ಯಧಿಕವಾಗಿ ಶಕ್ತಿಯುತವಾದವೂ, ಜಗತ್ತಿಗಾಗಿ ಉದಕವನ್ನುಸುರಿಸತಕ್ಕವೂ, ಅನ್ನ ಸಂಪದ್ವೃದ್ಧಿಗೆ ಕಾರಣವಾದವೂ ಆದ ನಿಮ್ಮ ಸಂಘಗಳು ಉತ್ಕೃಷ್ಟವಾಗಿವೆ. ರಥಕ್ಕೆ ಅಶ್ವಗಳನ್ನು ಕಟ್ಟಿರುವುವೂ, ಸರ್ವತ್ರ ಸಂಚರಿಸುವುವೂ ಆಗಿ ವಿದ್ಯುತ್ತಿನೊಡನೆ ಸೇರಿಕೊಳ್ಳುತ್ತವೆ. ಆಗ ತ್ರಿಸ್ಥಾನದಲ್ಲೂ ಇರುವ ಮರುತ್ಸಂಘವು ಗುಡುಗುರೂಪವಾದ ಶಬ್ದವನ್ನು ಮಾಡುತ್ತದೆ. ಒಡನೆಯೇ ಸರ್ವತ್ರ ಪ್ರಸರಿಸಿ ಹರಿಯುವ ಉದಕಗಳು ಭೂಮಿಯ ಮೇಲೆ ಬಿದ್ದು ಹರಿಯುತ್ತವೆ

English Translation

Your (cohort), Maruts, is conspicuous, mighty, shedding water and augmenting food: yoking your horses (to your cars), spreading everywhere and combined with the lightning, the triple-(stationed company) roars aloud, and the circumambient waters fall upon the earth.

॥ ವಿಶೇಷಾಂಶಗಳು ॥

ಕಾರೀರ್ಯೇಷ್ಟಿಯಲ್ಲಿ ಪ್ರಧಮಪಿಂಡ ಹೋಮದಲ್ಲಿ **ಪ್ರ ವೋ ಮರುತ** ಎಂಬ ಈ ಋಕ್ಕನ್ನು ಯಾಜ್ಯಾ ಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪ್ರ ವೋ ಮರುತಸ್ತವಿಷಾ ಆ ಯಂ ನರಃ** ಎಂಬ ಸೂತ್ರದಿಂದ (ಆ. ೨-೧೨) ವಿವೃತವಾಗಿರುವುದು.

—— O ——

॥ ಸಂಹಿತಾಪಾಠಃ ॥

ವಿದ್ಯುನ್ಮಹಸೋ ನರೋ ಅಶ್ಮದಿದ್ಯವೋ ವಾತತ್ವಿಷೋ ಮರುತಃ ಪರ್ವತ-
ಚ್ಯುತಃ ।
ಅಬ್ದಯಾ ಚಿನ್ಮುಹುರಾ ಹ್ರಾದುನೀವೃತಃ ಸ್ತನಯದಮಾ ರಭಸಾ
ಉದೋಜಸಃ ॥ ೩ ॥

॥ ಪದಪಾಠಃ ॥

ವಿದ್ಯುತ್ಽಮಹಸಃ । ನರಃ । ಅಶ್ಮಽದಿದ್ಯವಃ । ವಾತಽತ್ವಿಷಃ । ಮರುತಃ । ಪರ್ವತಽಚ್ಯುತಃ ।
ಅಬ್ದಽಯಾ । ಚಿತ್ । ಮುಹುಃ । ಆ । ಹ್ರಾದುನಿಽವೃತಃ । ಸ್ತನಯತ್ಽಅಮಾಃ । ರಭಸಾಃ । ಉತ್ಽ-
ಓಜಸಃ ॥ ೩ ॥

॥ ಸಾಯಣಭಾಷ್ಯಂ ॥

ವಿದ್ಯುನ್ಮಹಸ ಇತಿ ತೃತೀಯಾ ಕಾರೀರ್ಯಾಮೇವ ದ್ವಿತೀಯಸ್ಯಾಃ ಪಿಂಡ್ಯಾ ಯಾಜ್ಯಾ । ಸೂತ್ರಿತಂ ಚ । ವಿದ್ಯುನ್ಮಹಸೋ ನರೋಽಶ್ಮದಿದ್ಯವಃ ಕೃಷ್ಣಂ ನಿಯಾನಂ ಹರಯಃ ಸುಪರ್ಣಾಃ । ಆ-೨. ೧೩ । ಇತಿ ॥

ವಿದ್ಯುನ್ಮಹಸೋ ವಿದ್ಯೋತಮಾನತೇಜಸೋ ನರೋ ವೃಷ್ಟ್ಯಾದೇರ್ನೇತಾರೋಽಶ್ಮದಿದ್ಯವೋ ವ್ಯಾಪ್ತಾಯುಧಾ ಅಶ್ಮಸಾರಮಯಾಯುಧಾ ವಾ ವಾತತ್ವಿಷಃ ಪ್ರಾಪ್ತದೀಪ್ತಯಃ ಪರ್ವತಚ್ಯುತಃ ಪರ್ವತಾನಾಂ ಮೇಘಾನಾಂ ವಾ ಚ್ಯಾವಯಿತಾರೋಽಬ್ದಯಾ ಚಿನ್ಮುಹುರುದಕಾನಾಂ ದಾತಾರಃ ॥ ಡಸೋ ಯಾಜಾದೇಶಃ । ಚಿದಿತಿ ಪೂರಣಃ ॥ ಹ್ರಾದುನೀವೃತೋ ಹ್ರಾದುನ್ಯಾ ಅಶನೇಃ ಪ್ರವರ್ತಕಾಃ ಸ್ತನಯದಮಾಃ । ಅಮಾಶಬ್ದಃ ಸಾಹಿತ್ಯವಾಚೀ । ಶಬ್ದೋಪೇತಗಣಾ ಇತ್ಯರ್ಥಃ । ರಭಸಾ ವೃಷ್ಟ್ಯರ್ಥಮುದ್ಯುಂಜಾನಾ ಉದೋಜಸ ಉದ್ಧತಬಲಾ ಮರುತೋ ವೃಷ್ಟ್ಯರ್ಥಂ ಪ್ರಾದುರ್ಭವಂತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ವಿದ್ಯುನ್ಮಹಸಃ**—ವಿದ್ಯುತ್ಪ್ರಕಾಶವುಳ್ಳವರೂ । **ನರಃ**—ನೇತೃಗಳೂ । **ಅಶ್ಮದಿದ್ಯವಃ**—ಶಿಲಾರೂಪವಾದ ಆಯುಧವುಳ್ಳವರೂ । **ವಾತತ್ವಿಷಃ**—ಸ್ವಾಯತ್ತವಾದ ಕಾಂತಿಯುಳ್ಳವರೂ । **ಪರ್ವತಚ್ಯುತಃ**—ಮೇಘವನ್ನು ಭೇದಿಸುವವರೂ । **ಮುಹುಃ**—ಪದೇಪದೇ । **ಅಬ್ದಯಾ**—ಉದಕವನ್ನು ದಾನಮಾಡುವವರೂ । **ಹ್ರಾದುನ್ಯಾಃ**-ವಜ್ರಾಯುಧವನ್ನು ಪ್ರಯೋಗಿಸುವವರೂ । **ಸ್ತನಯದಮಾಃ**—ಒಟ್ಟಿಗೆ ಶಬ್ದಮಾಡತಕ್ಕವರೂ । **ರಭಸಾಃ**—ವೃಷ್ಟ್ಯರ್ಥವಾಗಿ ಒಟ್ಟಿಗೆ ಸೇರಿಕೊಂಡವರೂ । **ಉದೋಜಸಃ**—ಅತ್ಯುತ್ಕಟವಾದ ಶಕ್ತಿಯುಳ್ಳವರೂ ಆದ । **ಮರುತಃ**—ಮರುತ್ತುಗಳು (ವೃಷ್ಟ್ಯರ್ಥವಾಗಿ ಪ್ರಾದುರ್ಭವಿಸುತ್ತಾರೆ)

॥ ಭಾವಾರ್ಥ ॥

ವಿದ್ಯುತ್ಪ್ರಕಾಶವುಳ್ಳವರೂ, ನೇತೃಗಳೂ, ಶಿಲಾರೂಪವಾದ ಆಯುಧವುಳ್ಳವರೂ ಸ್ವಾಯತ್ತವಾದ ಕಾಂತಿಯುಳ್ಳವರೂ, ಮೇಘವನ್ನು ಭೇದಿಸುವವರೂ, ಪದೇ ಪದೇ ಉದಕವನ್ನು ದಾನಮಾಡುವವರೂ, ವಜ್ರಾಯುಧವನ್ನು ಪ್ರಯೋಗಿಸುವವರೂ, ಒಟ್ಟಿಗೆ ಶಬ್ದಮಾಡತಕ್ಕವರೂ, ಒಟ್ಟಿಗೆ ಸೇರಿಕೊಂಡವರೂ, ಅತ್ಯುತ್ಕಟವಾದ ಶಕ್ತಿಯುಳ್ಳವರೂ ಆದ ಮರುತ್ತುಗಳು ವೃಷ್ಟ್ಯರ್ಥವಾಗಿ ಪ್ರಾದುರ್ಭವಿಸುತ್ತಾರೆ.

English Translation

The Maruts (appear) radiant with lightning, leaders (of the rain), armed with weapons of adamant, blazing with the wind, the precipitators of mountains, the repeated distributors of water, wielders of the thunder-bolt, roaring in concert, combining (to send rain), and of exceeding strength.

॥ ವಿಶೇಷವಿಷಯಗಳು ॥

ಕಾರೀರ್ಯೇಷ್ಟಿಯಲ್ಲಿ **ವಿದ್ಯುನ್ಮಹಸಃ** ಎಂಬ ಈ ಋಕ್ಕನ್ನು ಎರಡನೆಯ ಪಿಂಡಿಹೋಮದಲ್ಲಿ ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ವಿದ್ಯುನ್ಮಹಸೋ ನರೋಽಶ್ಮದಿದ್ಯವಃ ಕೃಷ್ಣಂ ನಿಯಾನಂ ಹರಯಃ ಸುಪರ್ಣಾಃ** ಎಂಬ ಸೂತ್ರದಿಂದ (ಆ. ೨.೧೩) ವಿವೃತವಾಗಿರುವುದು.

**ಚಿತ್—ಚಿದಿತಿ ಪೂರಣಃ ।** ಚಿತ್ ಎಂಬ ಶಬ್ದಕ್ಕೆ ಇಲ್ಲಿ ಯಾವ ನಿರ್ದಿಷ್ಟಾರ್ಥವೂ ಇರುವುದಿಲ್ಲ. ಪಾದಪೂರಣಾರ್ಥವಾಗಿ ಉಪಯೋಗಿಸಲ್ಪಟ್ಟಿರುವುದು ಎಂದು ಭಾಷ್ಯಕಾರರು ಹೇಳಿದ್ದಾರೆ. ಯಾಸ್ಕರು ತಮ್ಮ ನಿರುಕ್ತದಲ್ಲಿ—

**ಚಿದಿತ್ಯೇಷೋಽನೇಕಕರ್ಮಾ । ಆಚಾರ್ಯಶ್ಚಿದಿದಂ ಬ್ರೂಯಾದಿತಿ ಪೂಜಾಯಾಂ । ದಧಿಚಿದಿತ್ಯುಪಮಾರ್ಥೇ । ಕುಲ್ಮಾಷಾಂಶ್ಚಿದಾಹರೇತ್ಯವಕುತ್ಸಿತೇ ।**

(ನಿ. ೧-೪)

ಎಂದು ನಿರ್ವಚನವನ್ನು ಹೇಳಿದಾರೆ—**ಚಿತ್** ಎಂಬ ನಿಪಾತವು ಅನೇಕವಿಧವಾದ ಅರ್ಥಗಳಲ್ಲಿ ಪ್ರಯುಕ್ತವಾಗಿರುವುದು ಎಂದು ಹೇಳಿ ಅದನ್ನು ಸಮರ್ಥಿಸುವುದಕ್ಕಾಗಿ ಉದಾಹರಣೆಗಳನ್ನು ಕೊಟ್ಟಿದಾರೆ. **ಆಚಾರ್ಯಶ್ಚಿದಿದಂ ಬ್ರೂಯಾತ್** ಎಂಬ ವಾಕ್ಯದಲ್ಲಿ **ಚಿತ್** ಶಬ್ದವು ಗೌರವಾರ್ಥದಲ್ಲಿ ಪ್ರಯುಕ್ತವಾಗಿದೆ. **ದಧಿಚಿತ್** ಎಂಬಲ್ಲಿ ಉಪಮಾರ್ಥದಲ್ಲಿಯೂ, **ಕುಲ್ಮಾಷಾಂಶ್ಚಿತ್** ಎಂಬಲ್ಲಿ ನಿಂದಾರ್ಥಕವಾಗಿಯೂ ಪ್ರಯುಕ್ತವಾಗಿದೆ ಎಂದು ಉದಾಹರಣೆಗಳ ಅರ್ಥವನ್ನು ವಿವರಿಸಿದಾರೆ.

**ಸ್ತನಯದಮಾಃ—ಅಮಾ** ಎಂಬ ಶಬ್ದವು ಗೃಹನಾಮಗಳಲ್ಲಿ(ನಿ. ೩-೧೩ ಮತ್ತು ೧೧-೪೮) ಪಠಿತವಾಗಿದೆ. ಇಲ್ಲಿ ಭಾಷ್ಯಕಾರರು ಸಹಿತವೆಂಬರ್ಥವನ್ನು ಹೇಳಿದಾರೆ. ಆದ್ದರಿಂದ **ಸ್ತನಯದಮಾಃ**—ಎಂದರೆ ಶಬ್ದಸಹಿತರಾದವರು, ಸಿಡಿಲು, ಗುಡುಗು ಇವುಗಳಿಂದ ಸಹಿತರಾದವರು ಎಂದರ್ಥವು. ವೃಷ್ಟಿಯು ಸುರಿಯುತ್ತಿರುವಾಗ ಗಾಳಿಯು ರಭಸವಾಗಿಯೂ ಶಬ್ದಸಹಿತವಾಗಿಯೂ ಬೀಸುತ್ತಿರುವುದೆಂದೂ, ಸಿಡಿಲು, ಗುಡುಗು ಇವುಗಳ ಧ್ವನಿಯೂ ಕೇಳಿಬರುತ್ತಿರುವುದೆಂದೂ ಅಭಿಪ್ರಾಯವು.

॥ ಸಂಹಿತಾಪಾಠಃ ॥

**ವೃಗಕ್ತೂನ್ರುದ್ರಾ ವ್ಯಹಾನಿ ಶಿಕ್ವಸೋ ವ್ಯ೧ಂತರಿಕ್ಷಂ ವಿ ರಜಾಂಸಿ ಧೂತಯಃ।**
**ವಿ ಯದಜ್ರಾಁ ಅಜಥ ನಾವ ಈಂ ಯಥಾ ವಿ ದುರ್ಗಾಣಿ ಮರುತೋ**
**ನಾಹ ರಿಷ್ಯಥ ॥ ೪ ॥**

॥ ಪದಪಾಠಃ ॥

ವಿ । ಅಕ್ತೂನ್ । ರುದ್ರಾಃ । ವಿ । ಅಹಾನಿ । ಶಿಕ್ವಸಃ । ವಿ । ಅಂತರಿಕ್ಷಂ । ವಿ । ರಜಾಂಸಿ । ಧೂತಯಃ ।
ವಿ । ಯತ್ । ಅಜ್ರಾನ್ । ಅಜಥ । ನಾವಃ । ಈಂ । ಯಥಾ । ವಿ । ದುಃಗಾನಿ । ಮರುತಃ । ನ ।
ಅಹ । ರಿಷ್ಯಥ ॥ ೪ ॥

॥ ಸಾಯಣಭಾಷ್ಯಂ ॥

ಹೇ ರುದ್ರಾ ರುದ್ರಪುತ್ರಾ ಮರುತಃ ಅಕ್ತೂನ್ ರಾತ್ರೀರ್ವ್ಯಜಥೇತ್ಯುತ್ತರಾರ್ಧಗತೇನ ಸಂಬಧ್ಯತೇ । ಏವಂ ಸರ್ವತ್ರೇತಿ । ಕ್ಷಿಪಥೇತಿ ತಸ್ಯಾರ್ಥಃ । ಅಹಾನ್ಯಪಿ ವ್ಯಜಥ । ಹೇ ಶಿಕ್ವಸಃ ಶಕ್ತಾಃ ಸರ್ವಮಪಿ ಕರ್ತುಮಂತರಿಕ್ಷಂ ವ್ಯಜಥ । ತಥಾ ರಜಾಂಸಿ ವ್ಯಜಥ । ಹೇ ಧೂತಯಃ ಕಂಪಕಾ ಯದ್ಯದಾಜ್ರಾನ್ಮೇಘಾನ್ ವ್ಯಜಥ ಗಮಯಥ ನಾವ ಈಂ ತಾ ಯಥಾ ಸಮುದ್ರಂ ತದ್ವತ್ ದುರ್ಗಾಣಿ ಶತ್ರುನಗರಾಣಿ ವ್ಯಜಥ ಹೇ ಮರುತೋ ನಾಹ ರಿಷ್ಯಥ । ನೈವ ಹಿಂಸಥ ॥

॥ ಪ್ರತಿಪದಾರ್ಥ ॥

**ರುದ್ರಾಃ**—ರುದ್ರಪುತ್ರರಾದ ಎಲೈ ಮರುತ್ತುಗಳೇ । **ಅಕ್ತೂನ್**—ರಾತ್ರಿಗಳನ್ನು । **ವಿ ಅಜಥ**—ಪ್ರೇರಿಸುತ್ತೀರಿ । **ಅಹಾನಿ**—ಅಹಸ್ಸುಗಳನ್ನು । **ವಿ**—ಪ್ರೇರಿಸುತ್ತೀರಿ । **ಶಿಕ್ವಸಃ**—ಎಲ್ಲಾ ಕಾರ್ಯಗಳಿಗೂ ಶಕ್ತರಾಗಿದ್ದು । **ಅಂತರಿಕ್ಷಂ**—ಅಂತರಿಕ್ಷವನ್ನೂ । **ವಿ**—ಪ್ರೇರಿಸುತ್ತೀರಿ । **ರಜಾಂಸಿ**—ಸಕಲಲೋಕಗಳನ್ನೂ । **ವಿ**—ಪ್ರೇರಿಸುತ್ತೀರಿ। **ಧೂತಯಃ**—ಎಲ್ಲವನ್ನೂ ಕಂಪಿಸುವಂತೆ ಮಾಡುವ ಎಲೈ ಮರತ್ತುಗಳೇ । **ಯತ್**—ಯಾವಾಗ । **ಅಜ್ರಾನ್**—ಮೇಘಗಳನ್ನು । **ನಾವ ಈಂ ಯಥಾ**—ಸಮುದ್ರದ ಮೇಲೆ ದೋಣಿಯನ್ನು ಸಾಗಿಸುವಂತೆ । **ವಿ ಅಜಥ**—ಚಲಿಸುವಂತೆ ಮಾಡುತ್ತೀರೋ (ಆಗ) । **ದುರ್ಗಾಣಿ**—ಶತ್ರುನಗರಗಳನ್ನು । **ವಿ (ಅಜಥ)**—ಭೇದಿಸುತ್ತೀರಿ । **ಮರುತಃ**—ಎಲೈ ಮರುತ್ತುಗಳೇ । **ನಾಹ ರಿಷ್ಯಥ**—ನೀವು ಮಿತ್ರರನ್ನು ಹಿಂಸಿಸುವುದಿಲ್ಲ

॥ ಭಾವಾರ್ಥ ॥

ರುದ್ರಪುತ್ರರಾದ ಎಲೈ ಮರುತ್ತುಗಳೇ, ನೀವು ಅಹೋರಾತ್ರಗಳನ್ನೂ ಅಂತರಿಕ್ಷವನ್ನೂ ಅದರಂತೆಯೇ ಸಕಲಲೋಕಗಳನ್ನೂ ಪ್ರೇರಿಸುತ್ತೀರಿ. ಸರ್ವಶಕ್ತರಾಗಿದ್ದುಕೊಂಡು ಎಲ್ಲವನ್ನೂ ಕಂಪಿಸುವಂತೆ ಮಾಡುವ ಎಲೈ ಮರುತ್ತುಗಳೇ, ನೀವು ಯಾವಾಗ ಸಮುದ್ರದ ಮೇಲೆ ದೋಣಿಯನ್ನು ಸಾಗಿಸುವಂತೆ ಮೇಘಗಳನ್ನು ಚಲಿಸುವಂತೆ ಮಾಡುವಿರೋ ಆಗ ಶತ್ರುನಗರಗಳನ್ನು ಭೇದಿಸುತ್ತೀರಿ. ಎಲೈ ಮರುತ್ತುಗಳೇ, ನೀವು ಮಿತ್ರರನ್ನು ಹಿಂಸಿಸುವುದಿಲ್ಲ ನೀವೂ ಹಿಂಸಿತರಾಗುವುದಿಲ್ಲ.

## English Translation

Powerful Rudras, you urge on the nights and days, the firmament and the worlds: agitators (of all things), you toss the clouds like ships (in

the sea), so (you throw down) the strong places (of the enemy), but, Maruts, you do no harm.

॥ ವಿಶೇಷವಿಷಯಗಳು ॥

**ರುದ್ರಾಃ—ರುದ್ರಪುತ್ರಾ ಮರುತಃ ।** ರುದ್ರಪುತ್ರರಾದ ಮರುದ್ದೇವತೆಗಳು. ಇಲ್ಲಿ ರುದ್ರಪುತ್ರರನ್ನು ನಿರ್ದೇಶಿಸುವುದಕ್ಕಾಗಿ ರುದ್ರಶಬ್ದವನ್ನೇ ಉಪಯೋಗಿಸಿದೆ. ಪುತ್ರರನ್ನು ಸೂಚಿಸುವುದಕ್ಕೆ ತಂದೆಯ ಹೆಸರನ್ನು ಉಪಯೋಗಿಸುವುದು ಋಗ್ವೇದದಲ್ಲಿ ವಿಶೇಷ ರೂಢಿಯಲ್ಲಿದೆ. ಉದಾಹರಣೆಗೆ—

**ದೇವೇಭಿರ್ವಿಪ್ರಾ ಋಷಯೋ ನೃಚಕ್ಷಸೋ ವಿ ಪಿಬಧ್ವಂ ಕುಶಿಕಾಃ ಸೋಮ್ಯಂ ಮಧು ।**

(ಋ. ಸಂ. ೩-೫೩-೧೦)

**ಸುದಾನುಂ ದೇವಂ ರಥಿರಂ ವಸೂಯವೋ ಗೀರ್ಭೀ ರಣ್ವಂ ಕುಶಿಕಾಸೋ ಹವಾಮಹೇ ।**

(ಋ. ಸಂ. ೩-೩೬-೧)

ಇತ್ಯಾದಿ ಋಕ್ಕುಗಳಲ್ಲಿ ಕುಶಿಕಪುತ್ರರನ್ನು ಕುಶಿಕಾಃ, ಕುಶಿಕಾಸಃ ಎಂಬ ಶಬ್ದಗಳಿಂದ ನಿರ್ದೇಶಿಸಲಾಗಿದೆ.

**ವಿದ್ಯಾಮ ವಸ್ತೋರವಸಾ ಗೃಣಂತೋ ಭರದ್ವಾಜಾ ಉತ ತ ಇಂದ್ರ ನೂನಂ ।**

(ಋ. ಸಂ. ೬-೨೫-೯)

**ಏವಾ ನಪಾತೋ ಮಮ ತಸ್ಯ ಧೀಭಿರ್ಭರದ್ವಾಜಾ ಅಭ್ಯರ್ಚಂತ್ಯರ್ಕೈಃ ।**

(ಋ. ಸಂ. ೬-೫೦-೧೫)

ಇತ್ಯಾದಿ ಋಕ್ಕುಗಳಲ್ಲಿ ಭರದ್ವಾಜಪುತ್ರರನ್ನು ಅಥವಾ ಸಂತತಿಯವರನ್ನೂ ಭರದ್ವಾಜಾಃ ಎಂಬ ಶಬ್ದದಿಂದ ಸಂಬೋಧಿಸಿದೆ.

**ನೂ ತ್ವಾಮಗ್ನ ಈಮಹೇ ವಸಿಷ್ಠಾ ಈಶಾನಂ ಸೂನೋ ಸಹಸೋ ವಸೂನಾಂ ।**

(ಋ. ಸಂ. ೭-೭-೭)

**ವಸಿಷ್ಠಾಸಃ ಪಿತೃವದ್ವಾಚಮಕ್ರತ ದೇವಾँ ಈಳಾನಾ ಋಷಿವತ್ ಸ್ವಸ್ತಯೇ ।**

(ಋ. ಸಂ. ೧೦-೬೬-೧೪)

ಇತ್ಯಾದಿ ಋಕ್ಕುಗಳಲ್ಲಿ ವಸಿಷ್ಠಪುತ್ರರನ್ನು **ವಸಿಷ್ಠಾಃ, ವಸಿಷ್ಠಾಸಃ** ಎಂಬ ಶಬ್ದಗಳಿಂದ ಕರೆಯಲಾಗಿದೆ.

**ರಜಾಂಸಿ—ರಜೋ ರಜ್ಯತೇರ್ಜ್ಯೋತೀ ರಜ ಉಚ್ಯತೇ ಉದಕಂ ರಜ ಉಚ್ಯತೇ । ಲೋಕಾ ರಜಾಂಸ್ಯುಚ್ಯಂತೇ ।** (ನಿ. ೪-೧೯) ಬೆಳಗು ಎಂಬರ್ಥವನ್ನು ಕೊಡುವ **ರಂಜ್** ಧಾತುವಿನಿಂದ ನಿಷ್ಪನ್ನವಾಗಿ **ರಜಸ್** ಶಬ್ದಕ್ಕೆ ಜ್ಯೋತಿಯೆಂದೂ, ಉದಕವೆಂದೂ ಮತ್ತು ಲೋಕಗಳೆಂದೂ ಅರ್ಥವಾಗುತ್ತದೆ.

**ರಜಾಂಸಿ ಚಿತ್ರಾ ವಿ ಚರಂತಿ ತನ್ಯವೋ ದಿವಃ ಸಮ್ರಾಜಾ ಪಯಸಾ ನ ಉಕ್ಷತಂ ।**

(ಋ. ಸಂ. ೫-೬೩-೫)

ಎಂಬ ಋಕ್ಕನ್ನುದಾಹರಿಸಿ ನಿರುಕ್ತಕಾರರು **ರಜಾಂಸಿ** ಎಂಬ ಪದಕ್ಕೆ **ಲೋಕ**ಗಳು ಎಂದರ್ಥವಾಗುವುದೆಂದು ಹೇಳಿದ್ದಾರೆ. ನಿರುಕ್ತದ ೧೦ನೇ ಅಧ್ಯಾಯದ ೪೪ನೇ ಖಂಡದಲ್ಲಿ,

**ಅಬ್ಜಾಮುಕ್ಥೈರಹಿಂ ಗೃಣೀಷೇ ಬುಧ್ನೇ ನದೀನಾಂ ರಜಸ್ಸು ಷೀದನ್** । (ಋ. ಸಂ. ೭-೩೪-೧೬)

ಎಂಬ ಋಕ್ಕನ್ನು ವಿವರಿಸುವಾಗ **ರಜಸ್ಸು** ಎಂಬ ಪದಕ್ಕೆ **ಉದಕೇಷು**—ಉದಕಗಳಲ್ಲಿ ಎಂದರ್ಥವಾಗುವುದೆಂದೂ ಮತ್ತು ೧೨ನೇ ಅಧ್ಯಾಯದ ೭ನೆಯ ಖಂಡದಲ್ಲಿ,

**ಏತಾ ಉ ತ್ಯಾ ಉಷಸಃ ಕೇತುಮಕ್ರತ ಪೂರ್ವೇ ಅರ್ಧೇ ರಜಸೋ ಭಾನುಮಂಜತೇ ।**
(ಋ. ಸಂ. ೧-೯೨-೧)

ಎಂಬ ಋಕ್ಕನ್ನು ವಿವರಿಸುವಾಗ **ರಜಸಃ** ಎನ್ನುವುದಕ್ಕೆ ಅಂತರಿಕ್ಷವೆಂದೂ ಅರ್ಥನೂಡಿದ್ದಾರೆ.

**ತ್ರೀಣಿ ಭಾಂತಿ ರಜಾಂಸ್ಯಸ್ಯ ಯತ್ಪದಾನಿ ಕು ತೇಜಸಾ ।**

ಎಂದು ಬೃಹದ್ದೇವತಾಕಾರರು ವಿಷ್ಣುವಿನ ಮೂರು ಲೋಕಗಳ ಆಕ್ರಮಣವನ್ನು ವರ್ಣಿಸುವಾಗ ಮೂರು ಲೋಕಗಳ ಪರ್ಯಾಯಪದವಾಗಿ **ರಜಾಂಸಿ** ಎಂಬ ಪದವನ್ನುಪಯೋಗಿಸಿದ್ದಾರೆ. **ರಜಃ, ರಜಾಂಸಿ** ಎಂದರೆ ಸಾಮಾನ್ಯವಾಗಿ ಲೋಕಪರ್ಯಾಯವಾದ ಪದವಾಗಿರುತ್ತದೆ. ಆದರೆ,

**ಯನ್ಮಾ ಸೋಮಾಸೋ ಮಮದನ್ಯದುಕ್ಥೋಭೇ ಭಯೇತೇ ರಜಸೀ ಅಪಾರೇ ।**
(ಋ ಸಂ. ೪-೪೨-೬)

ಇತ್ಯಾದಿ ಋಕ್ಕುಗಳಲ್ಲಿ ಈ ಪದವು ದ್ವಿವಚನದಲ್ಲಿದ್ದು ದ್ಯಾವಾಪೃಥಿವಿಗಳೆಂದು ಪಾರಿಭಾಷಿಕವಾದ ಅರ್ಥವೇ ಹೇಳಲ್ಪಟ್ಟದೆ

———— :o: ————

॥ ಸಂಹಿತಾಪಾಠಃ ॥

ತದ್ವೀರ್ಯಂ ವೋ ಮರುತೋ ಮಹಿತ್ವನಂ ದೀರ್ಘಂ ತತಾನ ಸೂರ್ಯೋ ನ ಯೋಜನಂ ।
ಏತಾ ನ ಯಾಮೇ ಅಗೃಭೀತಶೋಚಿಷೋಽನಶ್ವದಾಂ ಯನ್ನ್ಯಯಾತನಾ ಗಿರಿಂ ॥ ೫ ॥

॥ ಪದಪಾಠಃ ॥

**ತತ್ । ವೀರ್ಯಂ । ವಃ । ಮರುತಃ । ಮಹಿಽತ್ವನಂ । ದೀರ್ಘಂ । ತತಾನ । ಸೂರ್ಯಃ । ನ । ಯೋಜನಂ ।**
**ಏತಾಃ । ನ । ಯಾಮೇ । ಅಗೃಭೀತಽಶೋಚಿಷಃ । ಅನಶ್ವಽದಾಂ । ಯತ್ । ನಿ । ಅಯಾತನ । ಗಿರಿಂ ॥**

॥ ಸಾಯಣಭಾಷ್ಯಂ ॥

**ಹೇ ಮರುತೋ ವೋ ಯುಷ್ಮಾಕಂ ತದ್ವೀರ್ಯಂ ಪ್ರಸಿದ್ಧಂ ಸಾಮರ್ಥ್ಯಂ ಮಹಿತ್ವನಂ ಮಹತ್ತ್ವಂ ದೀರ್ಘಮತ್ಯಂತಮಾಯತಂ ತತಾನ । ತನೋತಿ । ಲೋಕೇ ಸೂರ್ಯೋ ನ ಯೋಜನಂ ಸೂರ್ಯಸ್ತೇಜ ಇವ । ಏತಾ ನ ಏತವರ್ಣಾ ದೇವಾನಾಮಶ್ವಾ ಇವ । ತೇ ಯಥಾ ಯಾಮೇ ಗಮನೇ ಯೋಜನಂ ದೀರ್ಘಂ ತನ್ವಂತಿ ತದ್ವದಿತ್ಯಪರೋ ದೃಷ್ಟಾಂತಃ । ತೇ ಚಾಗೃಭೀತಶೋಚಿಷೋಽಗೃಹೀತತೇಜಸ್ಕಾಃ । ಯದ್ವೈತನ್ಮರುತಾಂ ವಿಶೇಷಣಂ । ಹೇ ಮರುತೋ ಯೂಯಮಗೃಭೀತಶೋಚಿಷಃ ಸಂತೋ ಯದ್ಯದಾನಶ್ವದಾಂ ವ್ಯಾಪಕೋದಕಾದಾತಾರಂ ಪಣಿಭಿರಪಹೃತಾನಾಮಶ್ವಾನಾಮಪ್ರದಾತಾರಂ ವಾ ಗಿರಿಂ ಮೇಘಂ ಪರ್ವತಂ ವಾ ನ್ಯಯಾತನ ನಿಹತವಂತಃ ॥**

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ಸೂರ್ಯಃ**—ಸೂರ್ಯನು । **ಯೋಜನಂ ನ**—ತನ್ನ ಪ್ರಭೆಯನ್ನು ವಿಶ್ವದಲ್ಲೆಲ್ಲಾ ಹರಡುವಂತೆಯೂ । **ಏತಾಃ ಯಾಮೇ ನ**—ದೇವತೆಗಳ ಅಶ್ವಗಳು ಸರ್ವತ್ರ ವ್ಯಾಪಿಸುವಂತೆಯೂ । **ವಃ**—ನಿಮ್ಮ । **ತದ್ವೀರ್ಯಂ**—ಪ್ರಸಿದ್ಧವಾದ ಸಾಮರ್ಥ್ಯವು । **ಮಹಿತ್ವನಂ**—ನಿಮ್ಮ ಮಹಿಮೆಯನ್ನು । **ದೀರ್ಘಂ**—ಅತಿದೀರ್ಘವಾಗಿ । **ತತಾನ**—ವಿಸ್ತರಿಸಿ ಪ್ರಸಿದ್ಧಪಡಿಸಿದೆ । **ಅಗೃಭೀತಶೋಚಿಷಃ**—ನಿಯಮನವಿಲ್ಲದ ಪ್ರಭೆಯುಳ್ಳ ನೀವು । **ಯತ್**—ಯಾವ ಅದೇ ಮಾಹಾತ್ಮ್ಯದಿಂದ । **ಅನಶ್ವದಾಂ**—ಉದಕವನ್ನು ಸುರಿಸದಿರುವ । **ಗಿರಿಂ**—ಮೇಘವನ್ನು । **ನ್ಯಯಾತನ**—ಸೀಳಿ (ವೃಷ್ಟಿಯನ್ನು ಸುರಿಸಿದ್ದೀರಿ).

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಸೂರ್ಯನು ತನ್ನ ಪ್ರಭೆಯನ್ನೆಲ್ಲಾ ವಿಶ್ವವ್ಯಾಪಕವಾಗಿ ಹರಡುವಂತೆಯೂ, ದೇವತೆಗಳ ಅಶ್ವಗಳು ತಮ್ಮ ಸಂಚಾರಕಾಲದಲ್ಲಿ ಸರ್ವತ್ರ ವ್ಯಾಪಿಸುವಂತೆಯೂ, ನಿಮ್ಮ ಪ್ರಸಿದ್ಧವಾದ ಸಾಮರ್ಥ್ಯವು ನಿಮ್ಮ ಮಹಿಮೆಯನ್ನು ಅತಿದೀರ್ಘವಾಗಿ ವಿಸ್ತರಿಸಿ ಪ್ರಸಿದ್ಧಿಪಡಿಸಿದೆ. ನಿಯಮನವಿಲ್ಲದ ಪ್ರಭೆಯುಳ್ಳ ನೀವು ಯಾವ ಅದೇ ಮಹಾತ್ಮ್ಯದಿಂದ ಉದಕವನ್ನು ಸುರಿಸದಿರುವ ಮೇಘವನ್ನು ಸೀಳಿ ವೃಷ್ಟಿಯನ್ನು ಸುರಿಸಿದ್ದೀರಿ

## English Translation

Your prowess, Maruts, has spread wide your glory as the sun (sends afar his) radiance, or the white (horses of the gods travel far) in their course : of unbounded lustre, you clove the cloud withholding the waters

॥ ವಿಶೇಷವಿಷಯಗಳು ॥

**ಮರುತಃ ಮಹಿತ್ವನಂ ಸೂರ್ಯೋ ನ ಯೋಜನಂ ದೀರ್ಘಂ ತತಾನ**—ಸೂರ್ಯನು ತನ್ನ ತೇಜಸ್ಸನ್ನು ಅಥವಾ ಬೆಳಕನ್ನು ಯಾವ ರೀತಿ ಎಲ್ಲೆಲ್ಲಿಯೂ ಹರಡುವನೋ ಅದರಂತೆ ಮರುದ್ದೇವತೆಗಳು ತಮ್ಮ ಅತ್ಯಧಿಕವಾದ ಶಕ್ತಿಸಾಮರ್ಥ್ಯಗಳನ್ನೂ, ಮಹಿಮೆಯನ್ನೂ, ಅತ್ಯಂತ ವಿಸ್ತಾರವಾಗಿ ಎಂದರೆ ಎಲ್ಲೆಲ್ಲಿಯೂ ಹರಡುವರು ಎಂದು ಮರುದ್ದೇವತೆಗಳ ಶಕ್ತಿಸಾಮರ್ಥ್ಯಗಳ ವ್ಯಾಪ್ತಿಯ ವಿಷಯದಲ್ಲಿ ಸೂರ್ಯನ ತೇಜಸ್ಸನ್ನು ದೃಷ್ಟಾಂತವಾಗಿ ಋಷಿಯು ಹೋಲಿಸಿದಾನೆ.

ಅನಶ್ವದಾಂ—ವ್ಯಾಪಕೋದಕಾದಾತಾರಂ । ಅಶೂ ವ್ಯಾಪ್ತೌ ಎಂಬ ಧಾತುವಿನಿಂದ ಅಶ್ವಶಬ್ದವು ನಿಷ್ಪನ್ನವಾಗಿ ಇಲ್ಲಿ ಉದಕವೆಂಬ ಅರ್ಥದಲ್ಲಿ ಪ್ರಯುಕ್ತವಾಗಿದೆ. ಅಶ್ವದ ಎಂದರೆ ಉದಕವನ್ನು ಕೊಡುವ ಮೇಘವು. ಅನಶ್ವದ ಎಂದರೆ ಅದಕ್ಕೆ ವಿರುದ್ಧವಾಗಿ ಉದಕವನ್ನು ವೃಷ್ಟಿರೂಪದಲ್ಲಿ ಸುರಿಸದೆ ತಡೆದಿಟ್ಟುಕೊಂಡಿರುವ ಮೇಘವು ಎಂಬರ್ಥವು ಇಲ್ಲಿ ನಿರ್ದಿಷ್ಟವಾಗಿದೆ.

॥ ಸಂಹಿತಾಪಾಠಃ ॥

ಅಭ್ರಾಜಿ ಶರ್ಧೋ ಮರುತೋ ಯದರ್ಣಸಂ ಮೋಷಥಾ ವೃಕ್ಷಂ ಕಪನೇವ ವೇಧಸಃ ।
ಅಧ ಸ್ಮಾ ನೋ ಅರಮತಿಂ ಸಜೋಷಸಶ್ಚಕ್ಷುರಿವ ಯಂತಮನು ನೇಷಥಾ ಸುಗಂ ॥ ೬ ॥

॥ ಪದಪಾಠಃ ॥

ಅಭ್ರಾಜಿ । ಶರ್ಧಃ । ಮರುತಃ । ಯತ್ । ಅರ್ಣಸಂ । ಮೋಷಥ । ವೃಕ್ಷಂ । ಕಪನಾऽಇವ । ವೇಧಸಃ ।
ಅಧ । ಸ್ಮ । ನಃ । ಅರಮತಿಂ । ಸಽಜೋಷಸಃ । ಚಕ್ಷುಃऽಇವ । ಯಂತಂ । ಅನು । ನೇಷಥ । ಸುऽಗಂ ॥

॥ ಸಾಯಣಭಾಷ್ಯಂ ॥

ಹೇ ವೇಧಸೋ ವೃಷ್ಟೇರ್ವಿಧಾತಾರೋ ಹೇ ಮರುತಃ ಶರ್ಧೋ ಭವತಾಂ ಗಣಮಭ್ರಾಜಿ । ಭ್ರಾಜತೇ । ಯದ್ಯಸ್ಮಾದರ್ಣಸಮುದಕವಂತಂ ವೃಕ್ಷಂ । ವೃಶ್ಚ್ಯತೇ ವಿದಾರ್ಯತ ಇತಿ ವೃಕ್ಷೋ ಮೇಘಃ। ತಂ ಮೋಷಥ । ತಾಡಯಥೇತ್ಯರ್ಥಃ । ಕಪನೇವ । ಇವೇತ್ಯನರ್ಥಕಃ । ಕಂಪನಾಃ ಸಂತಃ । ಯದ್ವಾ । ಕಪನಾಃ ಕ್ರಿಮಯೋ ವೃಕ್ಷಂ ಘುಣಾದಯಃ । ತೇ ಯಥಾ ಮುಷ್ಣಂತಿ ತದ್ವತ್ । ಅಧಾಪಿ ಚ । ಸ್ಮೇತಿ ಪೂರಣಃ । ನೋಽಸ್ಮಾನ್ । ಮಾಮಿತ್ಯರ್ಥಃ । ಹೇ ಸಜೋಷಸೋ ಯುಷ್ಮಾಸು ಪರಸ್ಪರಂ ಸಮಾನ-ಪ್ರೀತಯೋ ಯೂಯಮರಮತಿಮಾರಮಣಂ ಧನಾದಿಕಂ ಪ್ರತಿ ಯಂತಂ ಗಚ್ಛಂತಮನು ನೇಷಥ ಅನುಕ್ರಮೇಣ ನಯಥ ಸುಗಂ ಸುಗಮನಂ ಮಾರ್ಗಂ । ತತ್ರ ದೃಷ್ಟಾಂತಃ । ಚಕ್ಷುರಿವ । ತದ್ಯಥಾ ಮಾರ್ಗಪ್ರದರ್ಶನೇನ ನಾಯಕಂ ಭವತಿ ತದ್ವತ್ ॥

॥ ಪ್ರತಿಪದಾರ್ಥ ॥

ವೇಧಸಃ—ವೃಷ್ಟಿಕಾರಕರಾದ । ಮರುತಃ—ಎಲೈ ಮರುತ್ತುಗಳೇ । ಯತ್—ಯಾವಾಗ । ಅರ್ಣಸಂ—ಉದಕಭರಿತವಾದ । ವೃಕ್ಷಂ—ಮೇಘವನ್ನು । ಕಪನೇವ—ಕಂಪಿಸುವಂತೆ । ಮೋಷಥ—ಪ್ರಹರಿಸುತ್ತೀರೋ (ಆಗ) । ಶರ್ಧಃ—ಶಕ್ತಿಯುತವಾದ ನಿಮ್ಮ ಗಣವು । ಅಭ್ರಾಜಿ—ಪ್ರಕಾಶಿಸುತ್ತದೆ । ಸಜೋಷಸಃ—ನಿಮ್ಮ

ನಿಮ್ಮಲ್ಲೇ ಸಮಾನಪ್ರೀತಿಯಿಂದ ಹರ್ಷಿಸುವ ನೀವು । **ನಃ**—ನಮ್ಮನ್ನು। **ಚಕ್ಷುರಿವ**—ಚಕ್ಷುಸ್ಸು (ಕಣ್ಣು) ತನ್ನ ಯಜಮಾನನನ್ನು ಅಭಿಮತ ಪ್ರದೇಶಕ್ಕೆ ಒಯ್ಯುವಂತೆ । **ಅರಮತಿಂ**—ಧನಪ್ರದೇಶಕ್ಕೆ। **ಯಂತಂ**—ಹೋಗಿಸೇರುವ । **ಸುಗಂ**—ಉತ್ತಮವಾದ ಮಾರ್ಗಕ್ಕೆ । **ಅನು ನೇಷಥ**—ಕರೆದೊಯ್ಯಿರಿ.

॥ ಭಾವಾರ್ಥ ॥

ವೃಷ್ಟಿಕಾರಕರಾದ ಎಲೈ ಮರುತ್ತುಗಳೇ, ನೀವು ಯಾವಾಗ ಉದಕಭರಿತವಾದ ಮೇಘವನ್ನು ಕಂಪಿಸುವಂತೆ ಪ್ರಹರಿಸುತ್ತೀರೋ, ಆಗ ನಿಮ್ಮ ಗಣದ ಶಕ್ತಿಯು ಪ್ರಕಟಿತವಾಗಿ ಪ್ರಕಾಶಿಸುತ್ತದೆ. ನಿಮ್ಮನಿಮ್ಮಲ್ಲೇ ಸಮಾನಪ್ರೀತಿಯಿಂದ ಹರ್ಷಿಸುವ ನೀವು ಚಕ್ಷುಸ್ಸು (ಕಣ್ಣು) ತನ್ನ ಯಜಮಾನನನ್ನು ಅಭಿಮತಪ್ರದೇಶಕ್ಕೆಒಯ್ಯುವಂತೆ ಧನಪ್ರದೇಶಕ್ಕೆ ಹೋಗಿ ಸೇರುವ ಉತ್ತಮವಾದ ಮಾರ್ಗಕ್ಕೆ ನಮ್ಮನ್ನು ಕರೆದೊಯ್ಯಿರಿ.

## English Translation

Maruts, dispensers of rain, your strength is manifested when, haking the water-laden cloud, you let loose the shower: conjointly propitiated, conduct us by an easy path leading to prosperity, as the eye (shows the way).

॥ ವಿಶೇಷವಿಷಯಗಳು ॥

**ವೃಕ್ಷಂ**—ಇಲ್ಲಿ ವೃಕ್ಷಶಬ್ದಕ್ಕೆ ಮೇಘವೆಂಬ ಅರ್ಥವನ್ನು ಹೇಳಿದಾರೆ **ವೃಶ್ಚ್ಯತೇ ವಿದಾರ್ಯತ ಇತಿ ವೃಕ್ಷೋ ಮೇಘಃ** । ವೃಷ್ಟ್ಯರ್ಥವಾಗಿ ಎಂದರೆ ಮಳೆಯನ್ನು ಸುರಿಸುವುದಕ್ಕಾಗಿ ಇಂದ್ರನು ತನ್ನ ವಜ್ರಾಯುಧದಿಂದ ಮೇಘಗಳನ್ನು ಸೀಳುವನು. ಮತ್ತು ಮರುದ್ದೇವತೆಗಳು (ರಭಸವಾಗಿ ಬೀಸುವ ಗಾಳಿಗಳು) ಅಂತರಿಕ್ಷದಲ್ಲಿ ಗುಂಪಾಗಿ ಸೇರಿರುವ ಮೇಘಗಳನ್ನು ಸೀಳಿ ಎಂದರೆ ಚದುರಿಸಿ ಮಳೆಯನ್ನು ಹುಯ್ಯುವಂತೆ ಮಾಡುವರು. ಆದುದರಿಂದ ವೃಷ್ಟಿಗಾಗಿ ಸೀಳಲ್ಪಡುವುದರಿಂದ ಮೇಘಗಳಿಗೆ ವೃಕ್ಷಗಳೆಂದು ಹೆಸರು ಎಂದು ವೃಕ್ಷಶಬ್ದದ ಅವಯವಾರ್ಥವನ್ನು ಮೇಘಪರವಾಗಿ ವಿವರಿಸಿದಾರೆ

ಇವ—(**ಕಪನಾಇವ, ಚಕ್ಷುಃಇವ**) ಇವಶಬ್ದಕ್ಕೆ ಎರಡು ಮೂರು ಅರ್ಥಗಳಿರುವವು—

**ಅಥ ನಿಪಾತಾಃ । ಉಚ್ಚಾವಚೇಷ್ವರ್ಥೇಷು ನಿಪತಂತಿ। ಅಪ್ಯುಪಮಾರ್ಥೇಽಪಿ ಕರ್ಮೋಪ-ಸಂಗ್ರಹಾರ್ಥೇಽಪಿ ಪದಪೂರಣಾಃ। ತೇಷಾಮೇತೇ ಚತ್ವಾರ ಉಪಮಾರ್ಥೇ ಭವಂತಿ। ಇವೇತಿ ಭಾಷಾಯಾಂ ಚ । ಅನ್ವಧ್ಯಾಯಂ ಅಗ್ನಿರಿವೇಂದ್ರ ಇವೇತಿ ॥**

(ನಿ ೧-೪)

ಎಂದು ಯಾಸ್ಕರು ನಿರ್ವಚನವನ್ನು ಹೇಳಿದಾರೆ—ಈಗ ನಿಪಾತ ಎಂಬ ಶಬ್ದಗಳ ಸ್ವರೂಪವನ್ನು ತಿಳಿಸುವೆವು ಎಂದು ಪ್ರಾರಂಭಿಸಿ, ನಿಪಾತಗಳೆಂದರೇನು ಎಂಬ ಪ್ರಶ್ನೆಗೆ-ನಾಮಾಖ್ಯಾತಗಳಿಗೆ ಎಂದರೆ ಕರ್ತೃಕ್ರಿಯಾಪದಗಳನ್ನು ಸೂಚಿಸುವ ಸುಬಂತ ತಿಜಂತಶಬ್ದಗಳ ಜತೆಯಲ್ಲಿ ಸೇರಿ ಅನೇಕಾರ್ಥಗಳನ್ನುಂಟುಮಾಡುವ ಕೆಲವು ಶಬ್ದಗಳಿಗೆ ಅಥವಾ ಅಕ್ಷರಗಳಿಗೆ ಉಪಸರ್ಗ ಅಥವಾ ಅವ್ಯಯಗಳಿಗೆ ನಿಪಾತಗಳೆಂದು ಹೆಸರು. ಅನೇಕವಿಧವಾದ ಅರ್ಥಗಳಲ್ಲಿ ಇವುಗಳ ಪ್ರಯೋಗ

ವಿರುವುದರಿಂದ ( **ಅನೇಕಪ್ರಕಾರೇಷ್ವರ್ಥೇಷು ನಿಪತಂತೀತಿ ನಿಪಾತಾಃ** ) ಇವುಗಳಿಗೆ ನಿಪಾತಗಳೆಂದು ಹೆಸರು. ಈ ನಿಪಾತಗಳಿಗೆ **ಅಪಿ**-ಮತ್ತು, **ಉಪಮಾರ್ಥ**--ಹೋಲಿಸುವುದು, ಮೊದಲಾದ ಅರ್ಥಗಳಲ್ಲಿ ಇವುಗಳ ಪ್ರಯೋಗವೇ ಹೆಚ್ಚಾಗಿರುವುದು. ಕೆಳಗೆ ಕೊಟ್ಟಿರುವ ನಾಲ್ಕು ನಿಪಾತಗಳಿಗೆ ಉಪಮಾರ್ಥವಿರುವುದು. ಅವುಗಳಲ್ಲಿ **ಇವ** ಎಂಬ ಶಬ್ದವು ಭಾಷೆಯಲ್ಲಿಯೂ ಎಂದರೆ ಛಂದೋಬದ್ಧವಲ್ಲದ ಗದ್ಯರೂಪವಾದ ವಾಕ್ಯ ಅಥವಾ ಆಧುನಿಕಸಂಸ್ಕೃತಭಾಷೆ ಯಲ್ಲಿಯೂ, ಛಂದಸ್ಸು (ಋಕ್ಕು) ಗಳಲ್ಲಿಯೂ ಈ ಶಬ್ದದ ಪ್ರಯೋಗವಿರುವುದು. ಹೇಗೆಂದರೆ—**ಅಗ್ನಿರಿವ, ಇಂದ್ರ ಇವ** ಎಂಬಲ್ಲಿ **ಇವ** ಎಂಬ ಶಬ್ದವು ಉಪಮಾರ್ಥದಲ್ಲಿ ಪ್ರಯುಕ್ತವಾಗಿರುವುದು. ಮತ್ತು **ಇವೋಽಪಿ ದೃಶ್ಯತೇ (ಕದಾಚಿದನರ್ಥಕ ಇತಿ ವಾಕ್ಯಶೇಷಃ) ಸುವಿದುರಿವ, ಸುವಿಜ್ಞಾಯೇತೆ ಇವ ।** ಇವ ಎಂಬ ಶಬ್ದವು ಕೆಲವು ಸಂದರ್ಭಗಳಲ್ಲಿ ಯಾವ ನಿರ್ದಿಷ್ಟಾರ್ಥವೂ ಇಲ್ಲದೆ ವಾಕ್ಯಪೂರಣಕ್ಕಾಗಿ ಉಪಯೋಗಿಸಲ್ಪಡುವುದು. ಅಂತಹ ಸಂದರ್ಭ ಗಳಲ್ಲಿ **ಇವ** ಎಂಬ ಶಬ್ದಕ್ಕೆ ಯಾವ ವಿಧವಾದ ಅರ್ಥವೂ ಇರುವುದಿಲ್ಲ. ಸುವಿದುರಿವ ಎಂಬಲ್ಲಿ ಚೆನ್ನಾಗಿ ತಿಳಿಯಲ್ಪಡು ತ್ತದೆ ಎಂದು ಮಾತ್ರ ಅರ್ಥವು ಇವಶಬ್ದಕ್ಕೆ ಯಾವ ಅರ್ಥವೂ ಇರುವುದಿಲ್ಲ

॥ ಸಂಹಿತಾಪಾಠಃ ॥

ನ ಸ ಜೀಯತೇ ಮರುತೋ ನ ಹನ್ಯತೇ ನ ಸ್ರೇಧತಿ ನ ವ್ಯಥತೇ ನ ರಿಷ್ಯತಿ।
ನಾಸ್ಯ ರಾಯ ಉಪ ದಸ್ಯಂತಿ ನೋತಯ ಋಷಿಂ ವಾ ಯಂ ರಾಜಾನಂ
ವಾ ಸುಷೂದಥ ॥ ೭ ॥

॥ ಪದಪಾಠಃ ॥

**ನಃ । ಸಃ । ಜೀಯತೇ । ಮರುತಃ । ನ । ಹನ್ಯತೇ । ನ । ಸ್ರೇಧತಿ । ನ । ವ್ಯಥತೇ । ನ । ರಿಷ್ಯತಿ ।**
**ನ । ಅಸ್ಯ । ರಾಯಃ । ಉಪ । ದಸ್ಯಂತಿ । ನ । ಊತಯಃ । ಋಷಿಂ । ವಾ । ಯಂ । ರಾಜಾನಂ ।**
**ವಾ । ಸುಸೂದಥ ॥ ೭ ॥**

॥ ಸಾಯಣಭಾಷ್ಯಂ ॥

**ಹೇ ಮರುತೋ ಯೂಯಂ ಯಮೃಷಿಂ ಮಂತ್ರದ್ರಷ್ಟಾರಂ ಬ್ರಾಹ್ಮಣಂ ರಾಜಾನಂ ವಾ ಸೂಷೂದಥ ಕ್ಷಾರಯಥ ಪ್ರೇರಯಥ ಸತ್ಕರ್ಮಸು ಸ ಋಷೀ ರಾಜಾ ವಾ ನ ಜೀಯತೇ । ಅನ್ಯೈರ್ನ ಪರಾಭಾವ್ಯತೇ ॥ ಜಿ ಜಯೇ ಜ್ಯಾ ವಯೋಹಾನಾವಿತ್ಯಸ್ಯ ವಾ ರೂಪಂ ॥ ಹೇ ಮರುತೋ ನ ಹನ್ಯತೇ । ನ ಹಿಂಸ್ಯತೇ । ಅತ್ಯರ್ಥಂ ಪ್ರಾಣೈರ್ನ ವಿಯುಜ್ಯತೇ । ನ ಸ್ರೇಧತಿ । ನ ಕ್ಷೀಯತೇ । ನ ವ್ಯಥತೇ । ನ ಪೀಡ್ಯತೇ । ನ ರಿಷ್ಯತಿ । ನ ಹಿಂಸ್ಯತೇ । ಅತ್ರ ಹಿಂಸಾ ಬಾಧಮಾತ್ರಂ । ಅಸ್ಯ ರಾಯೋ ಧನಾನಿ ನೋಪ ದಸ್ಯಂತಿ । ನೋಪಕ್ಷೀಯಂತೇ । ತಥಾ ನೋತಯೋ ರಕ್ಷಾ ಅಪ್ಯುಪ ದಸ್ಯಂತಿ ॥**

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **(ಯೂಯಂ**-ನೀವು) । **ಯಂ**—ಯಾವ । **ಋಷಿಂ**—ಋಷಿಯನ್ನಾಗಲಿ । **ರಾಜಾನಂ ವಾ**—ದೊರೆಯನ್ನಾಗಲಿ । **ಸುಷೂದಥ**—ಸತ್ಕರ್ಮಕ್ಕೆ ಪ್ರೇರಿಸುವಿರೋ । **ಸಃ**—ಅವನು । **ನ ಜೀಯತೇ**—ಯಾರಿಂದಲೂ ಜಯಿಸಲ್ಪಡುವುದಿಲ್ಲ । **ನ ಹನ್ಯತೇ**—ಕೊಲ್ಲಲ್ಪಡುವುದಿಲ್ಲ । **ನ ಸ್ರೇಧತಿ**—ಕ್ಷಯವನ್ನು ಹೊಂದುವುದಿಲ್ಲ । **ನ ವ್ಯಥತೇ**—ತೊಂದರೆಗೊಳಗಾಗುವುದಿಲ್ಲ । **ನ ರಿಷ್ಯತಿ**—ಹಿಂಸಿತನಾಗುವುದಿಲ್ಲ । **ಅಸ್ಯ**—ಅವನ । **ರಾಯಃ**—ಧನಗಳು । **ನ ಉಪ ದಸ್ಯಂತಿ**—ಕ್ಷಯಿಸುವುದಿಲ್ಲ । **ಊತಯಃ**—ರಕ್ಷಣೆಗಳೂ । **ನ**—ಕ್ಷಯಿಸುವುದಿಲ್ಲ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನೀವು ಯಾವ ಋಷಿಯನ್ನಾಗಲಿ, ದೊರೆಯನ್ನಾಗಲಿ, ಸತ್ಕರ್ಮಕ್ಕೆ ಪ್ರೇರಿಸುವಿರೋ ಅವನು ಯಾರಿಂದಲೂ ಜಯಿಸಲ್ಪಡುವುದಿಲ್ಲ. ಕೊಲ್ಲಲ್ಪಡುವುದಿಲ್ಲ. ಕ್ಷಯವನ್ನು ಹೊಂದುವುದಿಲ್ಲ. ತೊಂದರೆಗೊಳಗಾಗುವುದಿಲ್ಲ. ಹಿಂಸಿತನಾಗುವುದಿಲ್ಲ. ಅವನ ಧನಗಳು ಕ್ಷಯಿಸುವುದಿಲ್ಲ. ರಕ್ಷಣೆಗಳೂ ಕುಂದುವುದಿಲ್ಲ.

English Translation

The sage, or the sovereign, whom you, Maruts, direct, is never overcome nor slain: he perishes not, nor suffers pain, nor undergoes injury, nor are his riches or his safety imperilled.

॥ ಸಂಹಿತಾಪಾಠಃ ॥

ನಿಯುತ್ವಂತೋ ಗ್ರಾಮಜಿತೋ ಯಥಾ ನರೋಽರ್ಯಮಣೋ ನ ಮರುತಃ ಕವಂಧಿನಃ ।
ಪಿನ್ವಂತ್ಯುತ್ಸಂ ಯದಿನಾಸೋ ಅಸ್ವರನ್ವ್ಯುಂದಂತಿ ಪೃಥಿವೀಂ ಮಧ್ವೋ ಅಂಧಸಾ ॥ ೮ ॥

॥ ಪದಪಾಠಃ ॥

ನಿಯುತ್ವಂತಃ । ಗ್ರಾಮಜಿತಃ । ಯಥಾ । ನರಃ । ಅರ್ಯಮಣಃ । ನ । ಮರುತಃ । ಕವಂಧಿನಃ ।
ಪಿನ್ವಂತಿ । ಉತ್ಸಂ । ಯತ್ । ಇನಾಸಃ । ಅಸ್ವರನ್ । ವಿ । ಉಂದಂತಿ । ಪೃಥಿವೀಂ । ಮಧ್ವಃ । ಅಂಧಸಾ ॥ ೮ ॥

॥ ಸಾಯಣಭಾಷ್ಯಂ ॥

ಕಾರೀರ್ಯಾಮೇವ ತೃತೀಯಸ್ಯಾಃ ಪಿಂಡ್ಯಾ ಯಾಜ್ಯಾ ನಿಯುತ್ವಂತ ಇತ್ಯೇಷಾ । ಸೂತ್ರಿತಂ ಚ । ನಿಯುತ್ವಂತೋ ಗ್ರಾಮಜಿತೋ ಯಥಾ ನರೋಽಗ್ನೇ ಬಾಧಸ್ವ ವಿ ಮೃಧೋ ವಿ ದುರ್ಗಹಾ । ಆ-೨-೧೩ । ಇತಿ ॥

ನಿಯುತ್ವಂತೋ ನಿಯುತ್ಸಂಜ್ಞಕೈರಶ್ವೈಸ್ತದ್ವಂತೋ ಮರುತೋ ಗ್ರಾಮಜಿತಃ ಸಂಘಾತ್ಮಕಸ್ಯ ಪದಾರ್ಥಸ್ಯ ವಿಶ್ಲೇಷಯಿತಾರೋ ನರೋ ನರಾಕಾರಾ ನೇತಾರೋ ವಾ । ಮರುತೋ ನಿಯುತ್ವಂತಃ । ಅಯಂ ಶಬ್ದೋಽತ್ರಾಶ್ವಸಾಮಾನ್ಯೇ ವರ್ತತೇ । ನಿತರಾಂ ಯುವನವಂತೋಽಶ್ವವಂತೋ ಗ್ರಾಮಜಿತೋ ಗ್ರಾಮಸ್ಯ ಜೇತಾರೋ ನರ ಇವ ಮನುಷ್ಯಾ ಇವ ತಥಾ ಭವಂತಿ । ಅರ್ಯಮಣೋ ನ ಅರ್ಯಮ-ಪ್ರಭೃತಯ ಆದಿತ್ಯಾ ಇವ । ದೀಪ್ತಾ ಇತಿ ಶೇಷಃ । ತಾದೃಶಾ ಮರುತಃ ಕವಂಧಿನ ಉದಕವಂತೋ ಭವಂತಿ । ಯದ್ಯದೇನಾಸ ಈಶ್ವರಾ ಉತ್ಸಂ ಕೂಪಾದಿನಿಮ್ನಪ್ರದೇಶಂ ಮೇಘಂ ವಾ ಪಿನ್ವಂತಿ ಪ್ಯಾಯ-ಯಂತ್ಯುದಕೇನ। ಯದಾಸ್ವರನ್ ಶಬ್ದಯಂತಿ ಯದಾ ವ್ಯುಂದಂತಿ ಪೃಥಿವೀಂ ಮಧ್ವೋ ಮಧುರಸ್ಯೋದಕ-ಸ್ಯಾಂಧಸಾ ಸಾರೇಣ ತದೈವಂ ಭವಂತಿ । ಯದ್ವಾ । ಯದಾಸ್ವರನ್ ತದಾ ಪಿನ್ವಂತ್ಯುತ್ಸಮಿನಾಸಃ ತದಾಂಧಸಃ ಪೃಥಿವೀಂ ವ್ಯುಂದಂತೀತಿ ॥

॥ ಪ್ರತಿಪದಾರ್ಥ ॥

**ನಿಯುತ್ವಂತಃ**—ನಿಯುತ್ಸಂಜ್ಞಕವಾದ ಅಶ್ವಗಳುಳ್ಳವರೂ । **ಗ್ರಾಮಜಿತಃ**—ಸಂಘಾತರೂಪದಲ್ಲಿರುವುದನ್ನು ಬಿಡಿಸುವವರೂ । **ನರಃ**—ನೇತೃಗಳೂ । **ಅರ್ಯಮಣೋ ನ**—ಅರ್ಯಮನೇ ಮುಂತಾದ ಆದಿತ್ಯರಂತೆ ಪ್ರಭಾಯುತರೂ ಆದ । **ಮರುತಃ**—ಮರುತ್ತುಗಳು । **ಕವಂಧಿನಃ**—ಉದಕಯುಕ್ತರಾಗಿದ್ದಾರೆ । **ಯತ್**—ಯಾವ ಅದೇ ಕಾಲವಲ್ಲಿ । **ಈನಾಸಃ**—ಪ್ರಭುಗಳಾದ ಮರುತ್ತುಗಳು । **ಉತ್ಸಂ**—ಕೂಪಾದಿಪ್ರದೇಶಗಳನ್ನು । **ಪಿನ್ವಂತಿ**—ಉದಕದಿಂದ ತುಂಬುತ್ತಾರೆ । **ಅಸ್ವರನ್**—ಶಬ್ದಮಾಡುತ್ತಾ । **ಪೃಥಿವೀಂ**—ಪೃಥ್ವಿಯನ್ನು । **ಮಧ್ವಃ**—ಉದಕದ **ಅಂಧಸಾ**—ಸಾರದಿಂದ । **ವ್ಯುಂದಂತಿ**—ತೊಯ್ಯುವಂತೆ ಮಾಡುತ್ತಾರೆ.

॥ ಭಾವಾರ್ಥ ॥

ನಿಯುತ್ಸಂಜ್ಞಕವಾದ ಅಶ್ವಗಳುಳ್ಳವರೂ, ಸಂಘಾತರೂಪದಲ್ಲಿರುವುದನ್ನು ಬಿಡಿಸುವವರೂ, ನೇತೃಗಳೂ, ಅರ್ಯಮನೇ ಮುಂತಾದ ಆದಿತ್ಯರಂತೆ ಪ್ರಭಾಯುತರೂ ಆದ ಮರುತ್ತುಗಳು ಉದಕಯುಕ್ತರಾಗಿದ್ದಾರೆ. ಉದಕಕ್ಕೆಲ್ಲಾ ಪ್ರಭುಗಳಾದ ಅದೇ ಮರುತ್ತುಗಳು ಕೂಪಾದಿ ಪ್ರದೇಶಗಳನ್ನು ಉದಕದಿಂದ ತುಂಬುತ್ತಾರೆ. ಶಬ್ದಮಾಡುತ್ತಾ ಪೃಥ್ವಿಯನ್ನು ಉದಕದ ಸಾರದಿಂದ ತೊಯ್ಯುವಂತೆ ಮಾಡುತ್ತಾರೆ.

## English Translation

Lords of the Niyut steeds, overcomers of multitudes, leaders (of rites), radiant as the Adityas, are the dispensers of water : when sovereign lords, they fill the clouds, and, loud sounding, moisten the earth with sweet (watery) sustenance.

॥ ವಿಶೇಷವಿಷಯಗಳು ॥

ಕಾರೀರ್ಯೇಷ್ಟಿಯ ತೃತೀಯ ಪಿಂಡಿಹೋಮದಲ್ಲಿ **ನಿಯುತ್ವಂತ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ನಿಯುತ್ವಂತೋ ಗ್ರಾಮಜಿತೋ ಯಥಾ ನರೋಽಗ್ನೇ ಬಾಧಸ್ವ ವಿ ಮೃಧೋ ವಿ ದುರ್ಗಹಾ** ಎಂಬ ಸೂತ್ರದಿಂದ (ಆ. ೨-೧೩) ವಿವೃತವಾಗಿರುವುದು.

**ನಿಯುತ್ವಂತಃ— ನಿಯುತ್** ಎಂಬ ಶಬ್ದವು ವಾಯುದೇವತೆಯ ವಾಹನವಾದ ಅಶ್ವವನ್ನು ಸೂಚಿಸುವುದ ಎಂದು ನಿರುಕ್ತದಲ್ಲಿ (ನಿ. ೨-೨೮) **ನಿಯುತೋ ವಾಯೋಃ** ಎಂದು ಪಠಿತವಾಗಿದೆ. ಆದರೆ ಪ್ರಕೃತಋಕ್ಕಿನಲ್ಲಿ ಮನುಷ್ಯ ಎಂಬ ಅರ್ಥವನ್ನು ಸೂಚಿಸುವ ನರಃ ಎಂಬ ಶಬ್ದಕ್ಕೆ ವಿಶೇಷಣವಾಗಿರುವುದರಿಂದ ಭಾಷ್ಯಕಾರರು ಹೇಳಿರುವಂತೆ **ಅಯಂ ಶಬ್ದೋಽತ್ರಾಶ್ವಸಾಮಾನ್ಯೇ ವರ್ತತೇ। ನಿತರಾಂ ಯವನವಂತೋಽಶ್ವವಂತೋ ಜೇತಾರೋ ನರ ಇವ ಮನುಷ್ಯಾ ಇವ।** ಇಲ್ಲಿ ಈ ನಿಯುತ್ ಶಬ್ದಕ್ಕೆ ಸಾಮಾನ್ಯವಾದ ಅಶ್ವವೆಂಬ ಅರ್ಥವಿರುವುದು. **ನಿತರಾಂ ಯವನವಂತಃ ನಿಯುತಃ**— ವಿಶೇಷವಾಗಿ ಎಂದರೆ ಶೀಘ್ರವಾಗಿ ಗಮನಸ್ವಭಾವ (ಓಡುವ ಸ್ವಭಾವ) ವಿರುವುದರಿಂದ ನಿಯುತಃ ಎಂದರೆ ಅಶ್ವಗಳು ಎಂದು ಈ ಶಬ್ದದ ಅವಯವಾರ್ಥವು. ಇಂತಹ ಅಶ್ವಗಳಿಂದ ಸಹಿತರಾದ ಮತ್ತು ಜಯಶಾಲಿಗಳಾದ ಮನುಷ್ಯರಂತೆ ಎಂಬ ಅರ್ಥವು ಇಲ್ಲಿ ಉಕ್ತವಾಗಿರುವುದು.

**ಅರ್ಯಮಣಃ— ಅರ್ಯಮಾ** ಎಂಬ ದೇವತೆಯು ಅದಿತಿಪುತ್ರರಾದ ಆದಿತ್ಯರೆಂಬ ದೇವತೆಗಳಲ್ಲಿ ಒಬ್ಬನು. ಈ ಆದಿತ್ಯರನ್ನು ಅಥವಾ ಅದಿತಿಪುತ್ರರಾದ ಇತರ ದೇವತೆಗಳನ್ನು ಸೂಚಿಸುವುದಕ್ಕಾಗಿ ಇಲ್ಲಿ **ಅರ್ಯಮನ್** ಎಂಬ ಶಬ್ದದ ಬಹುವಚನವು ಪ್ರಯುಕ್ತವಾಗಿದೆ.

**ಆದಿತ್ಯಾನ್ ವಿಷ್ಣುಂ ಸೂರ್ಯಂ ಬ್ರಹ್ಮಾಣಂ ಚ ಬೃಹಸ್ಪತಿಂ।**
**ಇಂದ್ರವಾಯೂ ಬೃಹಸ್ಪತಿಂ ಸುಹವೇಹ ಹವಾಮಹೇ।**
**ಅರ್ಯಮಣಂ ಬೃಹಸ್ಪತಿಮಿಂದ್ರಂ ದಾನಾಯ ಚೋದಯ।**
**ವಾತಂ ವಿಷ್ಣುಂ ಸರಸ್ವತೀಂ ಸವಿತಾರಂ ಚ ವಾಜಿನಂ॥**
(ಋ. ಸಂ. ೧೦-೧೪೧-೩,೪,೫)

ಎಂಬ ಋಕ್ಕುಗಳಲ್ಲಿ ಆದಿತ್ಯರೆಂಬ ದೇವತೆಗಳೆಂದರೆ ವಿಷ್ಣು, ಸೂರ್ಯ, ಬ್ರಹ್ಮ, ಬೃಹಸ್ಪತಿ, ಇಂದ್ರ, ವಾಯು, ಅರ್ಯಮಾ, ಸರಸ್ವತೀ ಇತ್ಯಾದಿ ದೇವತೆಗಳೆಂದು ನಿರ್ದೇಶಿಸಿದೆ. ಮತ್ತು ಅದಿತಿಪುತ್ರರಾದ ದೇವತೆಗಳು ಯಾರು ಎಂಬ ವಿಷಯದಲ್ಲಿ—

**ಸಪ್ತಭಿಃ ಪುತ್ರೈರದಿತಿಃ। ಉಪಪ್ರೈತ್ಪೂರ್ವ್ಯಂ ಯುಗಂ। ಪ್ರಜಾಯೈ ಮೃತ್ಯವೇ ತತ್। ಪರಾಮಾರ್ತಾಂಡಮಾಭರದಿತಿ। ತಾನನುಕ್ರಮಿಷ್ಯಾಮಃ। ಮಿತ್ರಶ್ಚ ವರುಣಶ್ಚ। ಧಾತಾ ಚಾರ್ಯಮಾ ಚ। ಅಗ್ಂಶಶ್ಚ ಭಗಶ್ಚ। ಇಂದ್ರಶ್ಚ ವಿವಸ್ವಾಗ್‍ಶ್ಚೇತ್ಯೇತೇ।**
(ತೈ. ಆ. ೧-೧೩-೨)

ಎಂಬ ತೈತ್ತಿರೀಯ ಆರಣ್ಯಕದ ವಾಕ್ಯದಲ್ಲಿ ಅದಿತಿಗೆ— ಮಿತ್ರ, ವರುಣ, ಧಾತಾ, ಅರ್ಯಮಾ, ಅಂಶ, ಭಗ, ಇಂದ್ರ, ವಿವಸ್ವಾನ್ ಎಂಬ ಎಂಟು ಮಂದಿ ಪುತ್ರರೆಂದು ಹೇಳಿದೆ. ಈ ಎಂಟು ಮಂದಿ ದೇವತೆಗಳನ್ನಾಗಲಿ, ಇತರ ದೇವತೆಗಳನ್ನಾಗಲಿ ಪ್ರಕೃತ ಋಕ್ಕಿನಲ್ಲಿ **ಅರ್ಯಮಣಃ** ಎಂಬ ಶಬ್ದದಿಂದ ನಿರ್ದೇಶಿಸಲಾಗಿದೆ.

॥ ಸಂಹಿತಾಪಾಠಃ ॥

ಪ್ರವತ್ವತೀಯಂ ಪೃಥಿವೀ ಮರುದ್ಭ್ಯಃ ಪ್ರವತ್ವತೀ ದ್ಯೌರ್ಭವತಿ ಪ್ರಯದ್ಭ್ಯಃ ।
ಪ್ರವತ್ವತೀಃ ಪಥ್ಯಾ ಅಂತರಿಕ್ಷ್ಯಾಃ ಪ್ರವತ್ವಂತಃ ಪರ್ವತಾ ಜೀರದಾನವಃ ॥

॥ ಪದಪಾಠಃ ॥

ಪ್ರವತ್ವತೀ । ಇಯಂ । ಪೃಥಿವೀ । ಮರುತ್ಽಭ್ಯಃ । ಪ್ರವತ್ವತೀ । ದ್ಯೌಃ । ಭವತಿ । ಪ್ರಯುತ್ಽಭ್ಯಃ ।
ಪ್ರವತ್ವತೀಃ । ಪಥ್ಯಾಃ । ಅಂತರಿಕ್ಷ್ಯಾಃ । ಪ್ರವತ್ವಂತಃ । ಪರ್ವತಾಃ । ಜೀರಽದಾನವಃ ॥ ೯ ॥

॥ ಸಾಯಣಭಾಷ್ಯಂ ॥

ಇಯಂ ಪೃಥಿವೀ ಮರುದ್ಭ್ಯೋ ಮರುತಾಮರ್ಥಾಯ ಪ್ರವತ್ವತೀ । ಪ್ರವಂತಃ ಪ್ರಕರ್ಷವಂತೋ ವಿಸ್ತೀರ್ಣಾಃ ಪ್ರದೇಶಾ ಯಸ್ಯಾಂ ಸಾ ಪ್ರವತ್ವತೀ । ತಾದೃಶೀ ಭವತಿ । ಕೃತ್ಸ್ನಾಪಿ ಭೂಮಿರ್ಮರುತ್ಪರಾ ಭವತೀತ್ಯರ್ಥಃ । ತಾಂ ಸರ್ವಾಮಪಿ ವ್ಯಾಪ್ನುವಂತೀತಿ ಯಾವತ್ । ತಥಾ ದ್ಯೌರಪಿ ಪ್ರಯದ್ಭ್ಯಃ ಪ್ರಕರ್ಷೇಣ ಗಚ್ಛದ್ಭ್ಯಸ್ತೇಭ್ಯಃ ಪ್ರವತ್ವತೀ ಭವತಿ । ಸಾಪಿ ಮರುತಾಂ ಸಂಚಾರಾಯ । ತಥಾಂತರಿಕ್ಷ್ಯಾ ಅಂತರಿಕ್ಷೇ ಭವಾಃ ಪಥ್ಯಾಃ ಸ್ವಗತಯೋಽಪಿ ಪ್ರವತ್ವತೀಃ ಪ್ರವತ್ವತ್ಯೋ ಮರುದ್ಭ್ಯೋ ಭವಂತಿ । ಪರ್ವತಾ ಅದ್ರಯೋ ಮೇಘಾ ವಾ ಪ್ರವತ್ವಂತೋ ಭವಂತಿ ಜೀರದಾನವಃ ಕ್ಷಿಪ್ರದಾನಾ ಮರುದ್ಭ್ಯಃ ॥

॥ ಪ್ರತಿಪದಾರ್ಥ ॥

**ಇಯಂ ಪೃಥಿವೀ**—ಈ ಪೃಥ್ವಿಯು । **ಮರುದ್ಭ್ಯಃ**—ಮರುತ್ತುಗಳಿಗಾಗಿ । **ಪ್ರವತ್ವತೀ**—ವಿಸ್ತೃತವಾದ ಪ್ರದೇಶಗಳುಳ್ಳದ್ದಾಗಿ । **ಭವತಿ**—ಇರುತ್ತದೆ । **ದ್ಯೌಃ**—ದ್ಯುಲೋಕವೂ ಸಹ । **ಪ್ರಯದ್ಭ್ಯಃ**—ಉತ್ತಮವಾದ ಸಂಚಾರವುಳ್ಳ ಮರುತ್ತುಗಳಿಗೆ । **ಪ್ರವತ್ವತೀ**—ವಿಸ್ತೃತವಾಗಿ ಹರಡಿದ ಪ್ರದೇಶಗಳುಳ್ಳದ್ದಾಗಿ ಇರುತ್ತದೆ । **ಅಂತರಿಕ್ಷ್ಯಾಃ**—ಅಂತರಿಕ್ಷಸ್ಥವಾದ । **ಪಥ್ಯಾಃ**—ಮಾರ್ಗಗಳೂ ಸಹ । **ಪ್ರವತ್ವತೀಃ**—(ಅವರ ಸಂಚಾರಕ್ಕಾಗಿಯೇ) ಹರಡಿವೆ । **ಜೀರದಾನವಃ**—ಅಧಿಕವಾಗಿ ವೃಷ್ಟಿದಾನವನ್ನು ಮಾಡತಕ್ಕ । **ಪರ್ವತಾಃ**—ಮೇಘಗಳೂ ಸಹ । **ಪ್ರವತ್ವಂತಃ**—ಅದೇ ಗುಣವನ್ನು ಹೊಂದಿವೆ.

॥ ಭಾವಾರ್ಥ ॥

ಮರುತ್ತುಗಳ ಸುಲಭಸಂಚಾರಕ್ಕಾಗಿಯೇ, ಈ ಪೃಥ್ವಿಯೂ, ಅಂತರಿಕ್ಷವೂ, ದ್ಯುಲೋಕವೂ ಮತ್ತು ಪರ್ವತಗಳೂ ಮತ್ತು ಎಲ್ಲೆಲ್ಲಿ ಮರುತ್ತುಗಳು ಸಂಚರಿಸುವುವೋ ಅವೆಲ್ಲವೂ ಅತ್ಯಧಿಕವಾಗಿ ತಮ್ಮ ಪ್ರದೇಶಗಳನ್ನು ವಿಸ್ತರಿಸಿ ಮರುತ್ತುಗಳಿಗೆ ಸಹಾಯಮಾಡುತ್ತಿವೆ.

## English Translation

This wide-extended earth is for the Maruts; the spacious heaven is for the spreading winds; the paths of the firmament are provided (for their course); for them the expanding clouds quickly bestow (their gifts).

॥ ಸಂಹಿತಾಪಾಠಃ ॥

ಯನ್ಮರುತಃ ಸಭರಸಃ ಸ್ವರ್ಣರಃ ಸೂರ್ಯ ಉದಿತೇ ಮದಥಾ ದಿವೋ ನರಃ ।
ನ ವೋಽಶ್ವಾಃ ಶ್ರಥಯಂತಾಹ ಸಿಸ್ರತಃ ಸದ್ಯೋ ಅಸ್ಯಾಧ್ವನಃ ಪಾರಮಶ್ನುಥ ॥ ೧೦ ॥

॥ ಪದಪಾಠಃ ॥

ಯತ್ । ಮರುತಃ । ಸಽಭರಸಃ । ಸ್ವಃಽನರಃ । ಸೂರ್ಯೇ । ಉತ್ಽಇತೇ । ಮದಥ । ದಿವಃ । ನರಃ ।
ನ । ವಃ । ಅಶ್ವಾಃ । ಶ್ರಥಯಂತ । ಅಹ । ಸಿಸ್ರತಃ । ಸದ್ಯಃ । ಅಸ್ಯ । ಅಧ್ವನಃ । ಪಾರಂ । ಅಶ್ನುಥ ॥೧೦॥

॥ ಸಾಯಣಭಾಷ್ಯಂ ॥

ಹೇ ಮರುತಃ ಸಭರಸಃ ಸಹಬಲಾಃ ಸ್ವರ್ಣರಃ ಸರ್ವಸ್ಯ ನೇತಾರೋ ಯೂಯಂ ಯದ್ಯದಾ ಸೂರ್ಯ ಉದಿತ ಉದ್ಗತೇ ಮಧ್ಯಾಹ್ನೇ ಮದಥ ಸೋಮೇನ ಹೇ ದಿವೋ ದ್ಯುಲೋಕಸ್ಯ ನರೋ ನೇತಾರಃ । ಯದಾ ಸೋಮಂ ಪಾತುಮಿಚ್ಛಥೇತ್ಯರ್ಥಃ । ತದಾ ವೋಽಶ್ವಾಃ ಸಿಸ್ರತಃ ಸರಂತೋ ನಾಹ ಶ್ರಥಯಂತ । ನೈವ ಶ್ಲಥಯಂತಿ । ಸದ್ಯಸ್ತದಾನೀಮೇವಾಸ್ಯಾಧ್ವನೋ ದೇವಯಜನಮಾರ್ಗಸ್ಯ ಪಾರಮಶ್ನುಥ । ವ್ಯಾಪ್ನುಥ । ಯದ್ವಾ । ಯದಾ ಸೋಮೇನ ಮದಥ ತದಾ ತ್ವದೀಯಾ ಅಶ್ವಾ ನ ಶಿಥಿಲಾ ಭವಂತಿ । ಯೂಯಂ ಚ ಕೃತ್ಸ್ನಸ್ಯ ಲೋಕತ್ರಯಮಾರ್ಗಸ್ಯ ಪಾರಮಶ್ನುಥ ॥

॥ ಪ್ರತಿಪದಾರ್ಥ ॥

ಸಭರಸಃ—ಒಟ್ಟುಗೂಡಿದ ಶಕ್ತಿಯುಳ್ಳವರೂ । **ಸ್ವರ್ಣರಃ** – ವಿಶ್ವಕ್ಕೆಲ್ಲಾ ನೇತೃಗಳೂ । **ದಿವಃ**— ದ್ಯುಲೋಕಕ್ಕೂ । **ನರಃ**—ನೇತೃಗಳೂ ಆದ । **ಮರುತಃ**—ಎಲೈ ಮರುತ್ತುಗಳೇ । **ಯತ್**—ಯಾವಾಗ । **ಸೂರ್ಯೇ ಉದಿತೇ**—ಸೂರ್ಯೋದಯವಾದಾಗ । **ಮದಥ**—ನೀವು ಸೋಮಪಾನದಿಂದ ಹರ್ಷಿಸುತ್ತೀರೋ ಆಗ । **ವಃ**—

ನಿಮ್ಮ ‌। **ಸಿಸ್ರತಃ**—ವೇಗಗಾಮಿಗಳಾದ। **ಅಶ್ವಾಃ**—ಅಶ್ವಗಳು । **ನ ಅಹ ಶ್ರಥಯಂತ**—ವಿಶ್ರಾಂತಿಯನ್ನೇ ತೆಗೆದುಕೊಳ್ಳುವುದಿಲ್ಲ । **ಸದ್ಯಃ**—ಒಡನೆಯೇ । **ಅಸ್ಯ ಅಧ್ವನಃ**—ಈ ಯಜ್ಞಭೂಮಿಗೆ ಬರುವ ಮಾರ್ಗದ । **ಪಾರಂ**—ಕೊನೆಯನ್ನು । **ಅಶ್ನುಥ**—ಸೇರುತ್ತೀರಿ.

॥ ಭಾವಾರ್ಥ ॥

ಒಟ್ಟುಗೂಡಿದ ಶಕ್ತಿಯುಳ್ಳವರೂ, ವಿಶ್ವಕ್ಕೆಲ್ಲಾ ನೇತೃಗಳೂ ಆದ ಎಲೈ ಮರುತ್ತುಗಳೇ, ನೀವು ಸೂರ್ಯೋದಯವಾದೊಡನೆಯೇ ಸೋಮಪಾನದಿಂದ ಹರ್ಷಿಸುತ್ತೀರಿ. ಆ ಕಾಲದಲ್ಲಿ ವೇಗಗಾಮಿಗಳಾದ ನಿಮ್ಮ ಅಶ್ವಗಳಿಗೆ ವಿಶ್ರಾಂತಿಯೆಂಬುದೇ ಇಲ್ಲ. ಆ ಒಡನೆಯೇ ನೀವು ಯಜ್ಞಭೂಮಿಗೆ ಕರೆದೊಯ್ಯುವ ಮಾರ್ಗವನ್ನು ಪೂರ್ಣವಾಗಿ ಸಂಚರಿಸಿ ಇಲ್ಲಿಗೆ ಬರುತ್ತೀರಿ

English Translation

Maruts of combined strength, leaders of the universe, guides of heaven, when the sun has risen you rejoice (in the Soma beverage), then your rapid steeds know no relaxation, but quickly you reach the limits of this road (to the sacrifice)

॥ ಸಂಹಿತಾಪಾಠಃ ॥

ಅಂಸೇಷು ವ ಋಷ್ಟಯಃ ಪತ್ಸು ಖಾದಯೋ ವಕ್ಷಃಸು ರುಕ್ಮಾ ಮರುತೋ ರಥೇ ಶುಭಃ ।
ಅಗ್ನಿಭ್ರಾಜಸೋ ವಿದ್ಯುತೋ ಗಭಸ್ತ್ಯೋಃ ಶಿಪ್ರಾಃ ಶೀರ್ಷಸು ವಿತತಾ ಹಿರಣ್ಯಯೀಃ ॥ ೧೧ ॥

॥ ಪದಪಾಠಃ ॥

ಅಂಸೇಷು । ವಃ । ಋಷ್ಟಯಃ । ಪತ್ಽಸು । ಖಾದಯಃ । ವಕ್ಷಃಽಸು । ರುಕ್ಮಾಃ । ಮರುತಃ । ರಥೇ । ಶುಭಃ ।
ಅಗ್ನಿಽಭ್ರಾಜಸಃ । ವಿಽದ್ಯುತಃ । ಗಭಸ್ತ್ಯೋಃ । ಶಿಪ್ರಾಃ । ಶೀರ್ಷಽಸು । ವಿತತಾಃ । ಹಿರಣ್ಯಯೀಃ ॥೧೧॥

॥ ಸಾಯಣಭಾಷ್ಯಂ ॥

**ಹೇ ಮರುತೋ ವೋ ಯುಷ್ಮಾಕಮಂಸೇಷ್ವೃಷ್ಟಯ ಆಯುಧಾನಿ ಭಾಸಂತ ಇತಿ ಶೇಷಃ । ಪತ್ಸು ಖಾದಯಃ ಕಟಕಾಃ । ವಕ್ಷಃಸು ರುಕ್ಮಾ ಹಾರಾಃ । ರಥೇ ಶುಭೋ ಮಧುರಾಪ್ರುಷಾ ಆಪಃ । ಅಗ್ನಿಭ್ರಾಜಸೋಽಗ್ನಿದೀಪ್ತಾ ವಿದ್ಯುತೋ ಗಭಸ್ತ್ಯೋರ್ಹಸ್ತಯೋರ್ಭಾಸಂತ ಇತ್ಯರ್ಥಃ । ಶೀರ್ಷಸು ಶಿರಃಸು ಹಿರಣ್ಯಯೀರ್ಹಿರಣ್ಮಯ್ಯಃ ಶಿಪ್ರಾ ಉಷ್ಣೀಷಮಯ್ಯೋ ವಿತತಾ ವಿಸ್ತೃತಾಃ । ಪ್ರತಿವಾಕ್ಯಂ ವಿತತಾ ಇತಿ ವಾ ಸಂಬಂಧನೀಯಂ ॥**

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ವಃ**—ನಿಮ್ಮ । **ಅಂಸೇಷು**-ಭುಜಗಳಲ್ಲಿ । **ಋಷ್ಟಯಃ**—ಆಯುಧಗಳೂ । **ಪತ್ಸು**—ಪಾದಗಳಲ್ಲಿ । **ಖಾದಯಃ**—ಕಟಕಗಳೂ । **ವಕ್ಷಃಸು**—ವಕ್ಷಃಪ್ರದೇಶಗಳಲ್ಲಿ । **ರುಕ್ಮಾಃ**—ಹಾರಗಳೂ । **ರಥೇ**—ರಥದಲ್ಲಿ । **ಶುಭಃ**—ಮಧುರವಾದ ಉದಕಗಳೂ । **ಗಭಸ್ತ್ಯೋಃ**-ಹಸ್ತಗಳಲ್ಲಿ । **ಅಗ್ನಿಭ್ರಾಜಸಃ**-ಅಗ್ನಿ ಪ್ರಕಾಶವುಳ್ಳ । **ವಿದ್ಯುತಃ**—ವಿದ್ಯುತ್ತು (ಮಿಂಚು)ಗಳೂ । **ಶೀರ್ಷಸು**—ಶಿರಸ್ಸುಗಳಲ್ಲಿ । **ಹಿರಣ್ಯಯೀಃ**—ಸುವರ್ಣನಿರ್ಮಿತವಾದ । **ಶಿಪ್ರಾಃ**—ಕಿರೀಟಗಳೂ । **ವಿತತಾಃ**—ವಿಸ್ತೃತವಾಗಿ ಪ್ರಕಾಶಿಸುತ್ತವೆ.

। ಭಾವಾರ್ಥ ॥

ಎಲೈ ಮರುತ್ತುಗಳೇ, ನಿಮ್ಮ ಭುಜಗಳಲ್ಲಿ ಆಯುಧಗಳೂ, ಪಾದಗಳಲ್ಲಿ ಕಟಕಗಳೂ, ವಕ್ಷಃಪ್ರದೇಶಗಳಲ್ಲಿ ಹಾರಗಳೂ, ರಥದಲ್ಲಿ ಮಧುರವಾದ ಉದಕಗಳೂ, ಹಸ್ತಗಳಲ್ಲಿ ಅಗ್ನಿಯಪ್ರಕಾಶವುಳ್ಳ ವಿದ್ಯುತ್ತುಗಳೂ ಶಿರಸ್ಸುಗಳಲ್ಲಿ ಸುವರ್ಣನಿರ್ಮಿತವಾದ ಕಿರೀಟಗಳೂ ವಿಸ್ತೃತವಾಗಿ ಪ್ರಕಾಶಿಸುತ್ತವೆ.

## English Translation

Lances (gleam), Maruts, upon your shoulders, anklets on your feet, golden cuirasses on your breasts, and pure (waters shine) in your chariots: lightnings blazing with fire glow in your hands, and golden tiaras are towering on your heads

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಮರುದ್ದೇವತೆಗಳು ಯಾವ ಯಾವ ಅವಯವಗಳಲ್ಲಿ ಯಾವ ಯಾವ ಆಭರಣಗಳನ್ನು ಧರಿಸಿರುವರೆಂಬ ವಿಷಯವನ್ನು ವಿಶದವಾಗಿ ತಿಳಿಸಿದೆ ಹೇಗೆಂದರೆ—ಬಾಹುಗಳಲ್ಲಿ ಋಷ್ಟಿ (ಭರ್ಜಿ) ಎಂಬ ಆಯುಧಗಳನ್ನು ಧರಿಸಿರುವರು, ಕಾಲುಗಳಲ್ಲಿ ಕಟಕ ಅಥವಾ ಕಾಲುಬಳೆಗಳನ್ನು ಧರಿಸಿರುವರು, ಎದೆಯಮೇಲೆ ರುಕ್ಮ ಅಥವಾ ಹಾರಗಳನ್ನು ಧರಿಸಿರುವರು, ಕೈಗಳಲ್ಲಿ ಅಗ್ನಿಯಂತೆ ಪ್ರಕಾಶಿಸುವ ವಿದ್ಯುತ್ತನ್ನು (ಮಿಂಚನ್ನು) ಅಥವಾ ಮಿಂಚಿನಂತೆ ಬೆಳಗುವ ಆಯುಧವಿಶೇಷಗಳನ್ನು ಧರಿಸಿರುವರು, ಶಿರಸ್ಸಿನಲ್ಲಿ ಶಿಪ್ರಾಃ ಎಂದರೆ ಸುವರ್ಣಮಯವಾದ ಶಿರಸ್ತ್ರಾಣ ಅಥವಾ ಕಿರೀಟವೆಂಬ ಆಭರಣವನ್ನು ಧರಿಸಿರುವರು ಎಂದು ಮರುದ್ದೇವತೆಗಳ ಅಲಂಕಾರಾದಿಗಳನ್ನು ಬಹು ಚೆನ್ನಾಗಿ ವಿವರಿಸಲಾಗಿದೆ

॥ ಸಂಹಿತಾಪಾಠಃ ॥

ತಂ ನಾಕಮರ್ಯೋ ಅಗೃಭೀತಶೋಚಿಷಂ ರುಶತ್ಪಿಪ್ಪಲಂ ಮರುತೋ ವಿ ಧೂನುಥ ।
ಸಮಚ್ಯಂತ ವೃಜನಾತಿತ್ವಿಷಂತ ಯತ್ಸ್ವರಂತಿ ಘೋಷಂ ವಿತತಮೃತಾಯವಃ ॥ ೧೨ ॥

॥ ಪದಪಾಠಃ ॥

ತಂ । ನಾಕಂ । ಅರ್ಯಃ । ಅಗೃಭೀತಽಶೋಚಿಷಂ । ರುಶತ್ । ಪಿಪ್ಪಲಂ । ಮರುತಃ । ವಿ । ಧೂನುಥ ।
ಸಂ । ಅಚ್ಯಂತ । ವೃಜನಾ । ಅತಿತ್ವಿಷಂತ । ಯತ್ । ಸ್ವರಂತಿ । ಘೋಷಂ । ವಿಽತತಂ । ಋತಽಯವಃ ॥

॥ ಸಾಯಣಭಾಷ್ಯಂ ॥

ಹೇ ಮರುತೋಽರ್ಯೋ ಗಂತಾರೋ ಯೂಯಂ ತಂ ಪ್ರಸಿದ್ಧಂ ನಾಕಮಾದಿತ್ಯಂ । ನಾಸ್ಮಿನ್ನಕಮಸ್ತೀತಿ ನಾಕಃ । ಅಗೃಭೀತಶೋಚಿಷಮಸುರೈರನಪಹೃತತೇಜಸ್ಕಂ ತಂ ರುಶಚ್ಛುಭ್ರವರ್ಣಂ ಪಿಪ್ಪಲಮುದಕಂ ವಿ ಧೂನುಥ । ವಿವಿಧಂ ಚಾಲಯಥ ॥ ಅಯಂ ದ್ವಿಕರ್ಮಕಃ ॥ ಯದ್ಯದಾ ವೃಜನಾ ಬಲಾನಿ ಸಮಚ್ಯಂತ ಸಂಗತಾ ಬಲಿನೋ ಭವಥ । ಹವಿರ್ಭಿರಸ್ಮದ್ದತ್ತೈರಿತಿ ಭಾವಃ । ಪಶ್ಚಾದತಿತ್ವಿಷಂತ ದೀಪ್ತಾ ಭವಥ ॥ ಉಭಯತ್ರ ಪುರುಷವ್ಯತ್ಯಯಃ । ಯದ್ವಾ । ಯದಾಸುರಾ ವೃಜನಾ ಬಲೈಃ ಸಮಚ್ಯಂತ ಅತಿತ್ವಿಷಂತ ತದಾ ಘೋಷಂ ಭಯಜನಕಂ ಶಬ್ದಂ ವಿತತಂ ವಿಸ್ತೃತಂ ಸ್ವರಂತಿ । ಕುರುತೇತ್ಯರ್ಥಃ ಋತಾಯವ ಉದಕಮಿಚ್ಛಂತೋ ಯೂಯಂ । ಯದ್ವಾ । ಉತ್ತರಾರ್ಧ ಋತ್ವಿಗ್ಯಜಮಾನಪರತಯಾ ವ್ಯಾಖ್ಯೇಯಃ । ಯದ್ಯದಾ ಋತಾಯವೋ ಯಜ್ಞಕಾಮಾ ಯಜಮಾನಾದಯೋ ಯದಾ ಸಮಚ್ಯಂತ ಸಂಗತಾ ವೃಜನಾ ಬಲಾನ್ಯತಿತ್ವಿಷಂತೇ ಚ ಸ್ವರಂತಿ ಘೋಷಂ ಸ್ತೋತ್ರಂ ವಿತತಂ ತದಾನೀಂ ಪಿಪ್ಪಲಂ ವಿ ಧೂನುಥೇತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಮರುತಃ**— ಎಲೈ ಮರುತ್ತುಗಳೇ । **ಅರ್ಯಃ** —ಸಂಚಾರಶೀಲರಾದ ನೀವು । **ತಂ ನಾಕಂ**—ಪ್ರಸಿದ್ಧವಾದ ಅಂತರಿಕ್ಷವನ್ನೂ । **ಅಗೃಭೀತಶೋಚಿಷಂ**—ಶತ್ರುಗಳಿಂದ ಅಪಹೃತವಾಗದ ತೇಜಸ್ಸುಳ್ಳದ್ದೂ । **ರುಶತ್**—ಪ್ರಕಾಶಮಾನಭಾಗಿರತಕ್ಕದ್ದೂ ಆದ । **ಪಿಪ್ಪಲಂ**—ಉದಕವನ್ನೂ । **ವಿ ಧೂನುಥ**—ಚಲಿಸುವಂತೆ ಮಾಡುತ್ತೀರಿ । **ಋತಾಯವಃ**—ವೃಷ್ಟಿರೂಪವಾದ ಉದಕವನ್ನು ಸುರಿಸಲಿಚ್ಛಿಸುವ ನೀವು । **ಯ. ತ್**—ಯಾವಾಗ । **ವೃಜನಾ**—ನಿಮ್ಮ ಶಕ್ತಿಗಳನ್ನು । **ಸಮಚ್ಯಂತ**—ಒಟ್ಟಿಗೆ ಸೇರಿಸುವಿರೋ ಆಗ । **ಅತಿ ತ್ವಿಷಂತ**—ಅಧಿಕವಾಗಿ ಪ್ರಕಾಶಿಸುತ್ತೀರಿ (ಹುತ್ತು) । **ವಿತತಂ**—ವಿಸ್ತೃತವಾದ । **ಘೋಷಂ**—ಶಬ್ದವನ್ನು । **ಸ್ವರಂತಿ**—ಮಾಡುತ್ತೀರಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಸಂಚಾರಶೀಲರಾದ ನೀವು ಪ್ರಸಿದ್ಧವಾದ ಅಂತರಿಕ್ಷವನ್ನೂ, ಶತ್ರುಗಳಿಂದ ಅಪಹೃತವಾಗದ ತೇಜಸ್ಸುಳ್ಳದ್ದೂ, ಪ್ರಕಾಶಮಾನವಾಗಿರತಕ್ಕದ್ದೂ ಆದ ಉದಕವನ್ನೂ ಚಲಿಸುವಂತೆ ಮಾಡುತ್ತೀರಿ. ವೃಷ್ಟಿರೂಪವಾದ ಉದಕವನ್ನು ಸುರಿಸಲಿಚ್ಛಿಸುವ ನೀವು ನಿಮ್ಮ ಶಕ್ತಿಗಳನ್ನು ಯಾವಾಗ ಒಟ್ಟಿಗೆ ಸೇರಿಸುವಿರೋ ಆಗ ಅಧಿಕವಾಗಿ ಪ್ರಕಾಶಿಸುತ್ತಾ ವಿಸ್ತೃತವಾದ ಶಬ್ದವನ್ನುಂಟುಮಾಡುತ್ತೀರಿ

## English Translation

Maruts, when moving, you agitate the heaven of unchecked radiance, and (stir) the bright water: when you combine your energies and are shining brilliantly, and when purposing to send down rain, you utter a loud shout.

॥ ವಿಶೇಷವಿಷಯಗಳು ॥

ನಿರುಕ್ತಕಾರರು **ನಾಕ** ಶಬ್ದವನ್ನು ೬ **ಸಾಧಾರಣ** ನಾಮಗಳಲ್ಲಿ ಸೇರಿಸಿ ಅವುಗಳ ಅರ್ಥವನ್ನು ಸಾಧಾರಣವೆಂದು ವಿವರಿಸುತ್ತಾ **ಸಾಧಾರಣಾನ್ಯುತ್ತರಾಣಿ ಷಟ್ ದಿವಶ್ಚಾದಿತ್ಯಸ್ಯ ಚ । ದ್ಯುಲೋಕಕ್ಕೂ ಆದಿತ್ಯನಿಗೂ** ಸಾಧಾರಣವಾದ ಪರ್ಯಾಯಪದಗಳೆಂದು ತಿಳಿಸಿದ್ದಾರೆ. (ನಿ. ೨-೧೩) ಅನಂತರ ಈ ಶಬ್ದದ ನಿರ್ವಚನವನ್ನು ತೋರಿಸುತ್ತಾ—**ನಾಕ ಆದಿತ್ಯೋ ಭವತಿ—ನೇತಾ ರಸಾನಾಂ। ನೇತಾ ಭಾಸಾಂ ಜ್ಯೋತಿಷಾಂ ಪ್ರಣಯಃ ।** (ನಿ ೨-೧೪) ರಸದ ವಾಹಕನೂ ಮತ್ತು ತೇಜೋವಾಹಕನೂ ಆದ **ಆದಿತ್ಯನಿಗೆ ನಾಕವೆಂದು** ಹೆಸರು ಎಂದು **ಆದಿತ್ಯನ** ಪರ್ಯಾಯವಾಗಿರುವುದನ್ನು ತಿಳಿಸಿ **ಅಥ ದ್ಯೌಃ। ಕಮಿತಿ ಸುಖನಾಮ ತತ್ಪ್ರತಿಷಿದ್ಧಂ ಪ್ರತಿಷಿಧ್ಯೇತ । ಕಂ** ಎಂಬುದು ಸುಖದ ಪರ್ಯಾಯನಾಮ। ಸುಖವಿಲ್ಲದಿರುವುದು **ಅಕಂ,** ಅದರ ಅಭಾವ ಎಂದರೆ ಸುಖಾಭಾವವಿಲ್ಲದಿರುವುದು , ದುಃಖರಹಿತವಾದುದು ಎಂದರ್ಥವೆಂದು ವಿವರಿಸಿ,

**ನ ವಾ ಅಮುಂ ಲೋಕಂ ಜಗ್ಮುಷೇ ಕಿಂ ಚ ನಾಕಂ ।**

(ಕಾಠಕ ಸಂ. ೨೧-೨)

ಎಂಬ ವಾಕ್ಯವನ್ನುದಹರಿಸಿ **ನ ವಾ ಅಮುಂ ಲೋಕಂ ಗತವತೇ ಕಿಂಚ ನಾಸುಖಂ , ಪುಣ್ಯಕೃತೋ ಹ್ಯೇವ ತತ್ರ ಗಚ್ಛಂತಿ ।** ಈ ಲೋಕಕ್ಕೆ (ಸ್ವರ್ಗಕ್ಕೆ)ಹೋದವರಿಗೆ ದುಃಖವೇ ಇಲ್ಲ. ಸುಕೃತಿಗಳಿಗೆ ಮಾತ್ರ ಈ ಲೋಕಕ್ಕೆ ಪ್ರವೇಶವುಂಟು ಎಂದು **ನಾಕ** ಶಬ್ದದ ಅರ್ಥವನ್ನು ತಿಳಿಸಿದ್ದಾರೆ. ಋಕ್ಸಂಹಿತೆಯಲ್ಲಿ ಈ ಪದವು **ಆದಿತ್ಯನ** ಪರ್ಯಾಯವಾಗಿ ಕೆಲವುಕಡೆಯೂ, **ಸ್ವರ್ಗದ** ಪರ್ಯಾಯವಾಗಿ ಕೆಲವು ಕಡೆಯೂ ಉಪಯೋಗಿಸಲ್ಪಟ್ಟಿದೆ.

**ತ್ರಿರಶ್ವಿನಾ ಸಿಂಧುಭಿಃ ಸಪ್ತಮಾತೃಭಿಸ್ತ್ರಯ ಆಹಾವಾಸ್ತ್ರೇಧಾ ಹವಿಷ್ಕೃತಂ ।**
**ತಿಸ್ರಃ ಪೃಥಿವೀರುಪರಿ ಪ್ರವಾ ದಿವೋ ನಾಕಂ ರಕ್ಷೇಥೇ ದ್ಯುಭಿರಕ್ತುಭಿರ್ಹಿತಂ ॥**

(ಋ ಸಂ ೧.೩೪-೮)

**ಯೇ ನಾಕಸ್ಯಾಧಿ ರೋಚನೇ ದಿವಿ ದೇವಾಸ ಆಸತೇ । ಮರುದ್ಭಿರಗ್ನ ಆ ಗಹಿ ॥**

(ಋ. ಸಂ. ೧-೧೯-೬)

ಇತ್ಯಾದಿ ಋಕ್ಕುಗಳಲ್ಲಿ **ಆದಿತ್ಯನ** ಪರ್ಯಾಯವಾಗಿಯೂ,

**ತೇಽವರ್ಧಂತ ಸ್ವತವಸೋ ಮಹಿತ್ವನಾ ನಾಕಂ ತಸ್ಥುರುರು ಚಕ್ರಿರೇ ಸದಃ ।**
**ವಿಷ್ಣುರ್ಯದ್ಧಾವದ್ವೃಷಣಂ ಮದಚ್ಯುತಂ ವಯೋ ನ ಸೀದನ್ನಧಿ ಬರ್ಹಿಷಿ ಪ್ರಿಯೇ ॥**

(ಋ. ಸಂ. ೧.೮೫.೭)

**ಯಜ್ಞೇನ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।**
**ತೇ ಹ ನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ॥**

(ಋ. ಸಂ. ೧.೧೬೪ ೫೦)

ಇತ್ಯಾದಿ ಋಕ್ಕುಗಳಲ್ಲಿ ಸ್ವರ್ಗಪರ್ಯಾಯವಾಗಿಯೂ ಇದೆ.

**ವೃಷ್ಯೈವ ಕಪಿಲೋ ಭೂತ್ವಾ ಯನ್ನಾಕಮಧಿರೋಹತಿ ।**

(ಬೃ ದೇ ೨-೬೬)

ಎಂಬ ಬೃಹದ್ದೇವತಾವಾಕ್ಯದಲ್ಲಿ **ಅಂತರಿಕ್ಷ**ವೆಂಬುದು ಸ್ಪಷ್ಟವಾಗಿದೆ.

**ಇತೋಽಸಾವಾದಿತ್ಯೋ ದ್ವಾವಿಂಶೇನ ಪರಮಾದಿತ್ಯಾಜ್ಜಯತಿ ತನ್ನಾಕಂ ತದ್ವಿಶೋಕಂ ॥**

(ಛಾ. ಉ. ೨.೧೦-೫)

ಎಂಬ ಛಾಂದೋಗ್ಯೋಪನಿಷತ್ತಿನ ವಾಕ್ಯದಲ್ಲಿ **ಶೋಕರಹಿತವಾದ ಸ್ವರ್ಗಲೋಕವು ಆದಿತ್ಯನ** ಲೋಕಕ್ಕಿಂತ ಉತ್ತಮವಾದುದೆಂದು ಹೇಳಿದೆ

[ಶತಪಥ ಬ್ರಾಹ್ಮಣದಲ್ಲೂ ತೈತ್ತಿರೀಯ ಉಪನಿಷತ್ತಿನಲ್ಲೂ ಬ್ರಹ್ಮವಿತ್ತಾದ ಮುದ್ಗಲಪುತ್ರನಿಗೆ **ನಾಕ** ಎಂಬ ಹೆಸರು ಪ್ರಸಿದ್ಧವಾಗಿದೆ ಅಲ್ಲಿ ದುಃಖರಹಿತನೆಂದರ್ಥ]

ಪ್ರಕೃತವಾದ ಋಕ್ಕಿನಲ್ಲಿ **ನ ವಿದ್ಯತೇ ಅಕಂ ದುಃಖಂ ತತ್ಸಾಧನಂ ಪಾಪಂ ವೇತಿ ನಾಕೋ ದ್ಯುಲೋಕಃ** । ದುಃಖವಾಗಲಿ ಅದಕ್ಕೆ ಹೇತುವಾದ ಪಾಪವಾಗಲಿ ಇಲ್ಲದಿರುವ ಅಂತರಿಕ್ಷವೆಂದರ್ಥ ಮಾಡಿದ್ದಾರೆ.

**ಅಚ್ಯಂತ, ಅತಿತ್ವಿಷಂತ**—ಈ ಎರಡು ಕ್ರಿಯಾಪದಗಳಿಗೆ ಪುರುಷವ್ಯತ್ಯಯವಾಗಿದೆ. ಎಂದರೆ, ಮಧ್ಯಮ ಪುರುಷಬಹುವಚನಕ್ಕೆ ಬದಲಾಗಿ ಪ್ರಥಮಪುರುಷಬಹುವಚನದ ಪ್ರಯೋಗವಿದೆ.

**ಯತ್ ವೃಜನಾ ಸಮುಚ್ಯಂತ ಅತಿತ್ವಿಷಂತ—ಯದಾ ಅಸ್ಮದ್ದತ್ತೈರ್ಹವಿರ್ಭಿಃ ಬಲಿನೋ ಭವಥ ತದಾ ದೀಪ್ತಾ ಭವಥ ।** ಎಲೈ ಮರುದ್ದೇವತೆಗಳೇ ನೀವು ಯಾವಾಗ ನಾವು ಅರ್ಪಿಸುವ ಹವಿರಾದಿಗಳನ್ನು ಸ್ವೀಕರಿಸು (ಭಕ್ಷಿಸು) ವಿರೋ ಆಗ ಹವಿಸ್ವೀಕಾರದಿಂದ ಎಂದರೆ ಅದರ ಪ್ರಭಾವದಿಂದ ಬಲಶಾಲಿಗಳಾಗಿ ಚೆನ್ನಾಗಿ ಪ್ರಕಾಶಿಸಿರಿ ಎಂದು ಒಂದುವಿಧವಾದ ಅರ್ಥವನ್ನು ಹೇಳಿ, ಇನ್ನೊಂದು ವಿಧ ಅರ್ಥವೂ ಸಾಧ್ಯವೆಂದು ಭಾಷ್ಯಕಾರರು ತಿಳಿಸಿದಾರೆ. **ಯದಾಸುರಾ ವೃಜನಾ ಅತಿತ್ವಿಷಂತ ತದಾ ಘೋಷಂ ವಿತತಂ ಸ್ವರಂತಿ**-ಅಸುರರು ಯಾವಾಗ ತಮ್ಮ ಬಲದ ಗರ್ವದಿಂದ

ಪ್ರವೃದ್ಧರಾಗಿ ಮೆರೆಯುವರೋ ಆಗ ನೀವು (ಮರುದ್ದೇವತೆಗಳು) ಅವರ ನಿಗ್ರಹಾರ್ಥವಾಗಿ ಭಯಂಕರವಾದ ಶಬ್ದವನ್ನು ಮಾಡಿ ಎಂದು ಇನ್ನೊಂದು ವಿಧವಾದ ಅರ್ಥವು. ಅಥವಾ ಈ ಋಕ್ಕಿನ ಉತ್ತರಾರ್ಧಕ್ಕೆ ಈ ಎರಡು ಅರ್ಥಗಳಲ್ಲದೆ ಋತ್ವಿಗ್ಯಜಮಾನರ ಪರವಾಗಿ ಇನ್ನೊಂದು ಅರ್ಥವೂ ಸಾಧ್ಯವೆಂದು ಅದನ್ನೂ ವಿವರಿಸಿದಾರೆ. **ಯತ್ ಋತಾಯವಃ ಸಮುಚ್ಛಂತ ವೃಜನ ಅತಿ ತ್ವಿಷಂತ ಚ ಸ್ವರಂತಿ ಘೋಷಂ ಪಿಪ್ಪಲಂ ವಿಧೂನುಥ—ಯದಾ ಯಜ್ಞಕಾಮಾ ಯಜಮಾನಾದಯೋ ಸಂಗತಾಃ ಬಲಾನ್ಯತಿತ್ವಿಷಂತ ಸ್ತೋತ್ರಂ ವಿತತಂ ಸ್ವರಂತಿ ಚ ತದಾನೀಂ ಪಿಪ್ಪಲಂ ವಿಧೂನುಥ।** ಯಾವಾಗ ಋತ್ವಿಗ್ಯಜಮಾನರಾದಿ ಜನರು ನಿಮ್ಮನ್ನುದ್ದೇಶಿಸಿ ಯಜ್ಞಮಾಡಲಿಚ್ಛೆಯಿಂದ ಎಲ್ಲರೂ ಒಟ್ಟಿಗೆ ಒಂದೆಡೆಯಲ್ಲಿ ಸೇರಿ ಸ್ತೋತ್ರಗಳನ್ನೂ, ಮಂತ್ರಗಳನ್ನು ಉಚ್ಚಧ್ವನಿಯಿಂದ ಪಠಿಸುತ್ತಾ ಯಜ್ಞಕರ್ಮವನ್ನು ವಿಸ್ತರಿಸುವರೋ ಎಂದರೆ ಮುಂದುವರಿಸುವರೋ ಆಗ ಮರುದ್ದೇವತೆಗಳಾದ ನೀವು ಯಜಮಾನರ ತೃಪ್ತ್ಯರ್ಥವಾಗಿ ಉತ್ತಮವಾದ ವೃಷ್ಟ್ಯುದಕವನ್ನು ಸುರಿಸುವಂತೆ ಮಾಡಿರಿ ಎಂದು ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠಃ ॥

ಯುಷ್ಮಾದತ್ತಸ್ಯ ಮರುತೋ ವಿಚೇತಸೋ ರಾಯಃ ಸ್ಯಾಮ ರಥ್ಯೋ೩

ವಯಸ್ವತಃ ।

ನ ಯೋ ಯುಚ್ಛತಿ ತಿಷ್ಯೋ೩ ಯಥಾ ದಿವೋ೩ಸ್ಮೇ ರಾರಂತ ಮರುತಃ

ಸಹಸ್ರಿಣಂ ॥ ೧೩ ॥

॥ ಪದಪಾಠಃ ॥

ಯುಷ್ಮಾಽದತ್ತಸ್ಯ । ಮರುತಃ । ವಿಽಚೇತಸಃ । ರಾಯಃ । ಸ್ಯಾಮ । ರಥ್ಯಃ । ವಯಸ್ವತಃ ।

ನ । ಯಃ । ಯುಚ್ಛತಿ । ತಿಷ್ಯಃ । ಯಥಾ । ದಿವಃ । ಅಸ್ಮೇ ಇತಿ । ರರಂತ । ಮರುತಃ । ಸಹಸ್ರಿಣಂ ॥

ಸಾಯಣಭಾಷ್ಯಂ ॥ ॥

ಹೇ ವಿಚೇತಸೋ ವಿವಿಧಪ್ರಜ್ಞಾ ಹೇ ಮರುತೋ ಯುಷ್ಮಾದತ್ತಸ್ಯ ಯುಷ್ಮಾಭಿರ್ದತ್ತಸ್ಯ ವಯಸ್ವತೋಽನ್ನವತೋ ರಾಯೋ ಧನಸ್ಯ ಸ್ಯಾಮ। ಭವೇಮ ಸ್ವಾಮಿನಃ ಕೇ। ರಥ್ಯೋ ರಥಸ್ವಾಮಿನೋ ವಯಂ। ಯೋ ಯುಷ್ಮಾಭಿರ್ದತ್ತೋ ರಾ ನ ಯುಚ್ಛತಿ ನ ಚ್ಯವತೇ । ಯಥಾ ದಿವಃ ಸಕಾಶಾತ್ತಿಷ್ಯ ಆದಿತ್ಯೋ ನ ಯುಚ್ಛತಿ । ತಥಾಸ್ಮೇ ಅಸ್ಮಾಸು ಸಹಸ್ರಿಣಮುಪರಿಮಿತಂ ರಾರಂತ । ರಮಯತ ಹೇ ಮರುತಃ ॥

॥ ಪ್ರತಿಪದಾರ್ಥ ॥

**ವಿಚೇತಸಃ**—ವಿವಿಧವಾದ ಪ್ರಜ್ಞೆಯುಳ್ಳ । **ಮರುತಃ**—ಎಲೈ ಮರುತ್ತುಗಳೇ । **ರಥ್ಯಃ**—ರಥವನ್ನು ಹೊಂದಿರುವ ನಾವು । **ಯುಷ್ಮಾದತ್ತಸ್ಯ**—ನಿಮ್ಮಿಂದ ಕೊಡಲ್ಪಟ್ಟವೂ । **ವಯಸ್ವತಃ**—ಅನ್ನಯುಕ್ತವಾದವೂಆದ । **ರಾಯಃ**-ಧನಕ್ಕೆ । **ಸ್ಯಾಮ**—ಒಡೆಯರಾಗುವಂತಾಗಲಿ । **ಯಥಾ**-ಯಾವರೀತಿಯಲ್ಲಿ । **ದಿವಃ**—ಅಂತರಿಕ್ಷಸ್ಥನಾದ । **ತಿಷ್ಯಃ**—ಆದಿತ್ಯನು ನಾಶರಹಿತನೋ ಅದೇ ರೀತಿ । **ಯಃ**—ನಿಮ್ಮಿಂದ ದತ್ತವಾದ ಆ ಧನವು । **ನ ಯುಚ್ಛತಿ**—ನಾಶವನ್ನು ಹೊಂದುವುದಿಲ್ಲ । **ಮರುತಃ**—ಎಲೈ ಮರುತ್ತುಗಳೇ । **ಅಸ್ಮೇ**—ನಮಗೆ । **ಸಹಸ್ರಿಣಂ**—ಅಪರಿಮಿತವಾದ ಧನವನ್ನೊದಗಿಸಿ । **ರಾರಂತ**—ರಮಿಸುವಂತೆ ಮಾಡಿರಿ.

॥ ಭಾವಾರ್ಥ ॥

ವಿವಿಧವಾದ ಪ್ರಜ್ಞೆಯುಳ್ಳ ಎಲೈ ಮರುತ್ತುಗಳೇ, ರಥಗಳಿಗೆ ಸ್ವಾಮಿಗಳಾದ ನಾವು, ನಿಮ್ಮಿಂದ ಕೊಡಲ್ಪಟ್ಟವೂ, ಅನ್ನಯುಕ್ತವಾದವೂ ಆದ ಧನಕ್ಕೆ ಒಡೆಯರಾಗುವಂತಾಗಲಿ. ಯಾವ ರೀತಿಯಲ್ಲಿ ಅಂತರಿಕ್ಷಸ್ಥನಾದ ಆದಿತ್ಯನು ನಾಶರಹಿತನೋ, ಅದೇ ರೀತಿ ನಿಮ್ಮಿಂದ ದತ್ತವಾದ ಆ ಧನವು ನಾಶವನ್ನು ಹೊಂದುವುದಿಲ್ಲ. ಎಲೈ ಮರುತ್ತುಗಳೇ, ನಮಗೆ ಅಪರಿಮಿತವಾದ ಧನಗಳನ್ನು ಕೊಟ್ಟು ನಮಗೆ ಆನಂದವನ್ನುಂಟುಮಾಡಿರಿ.

## English Translation

May we, who are possessed of chariots, intelligent Maruts, become (proprietors) of wealth, comprising food bestowed by you : of wealth that vanishes not, as Tishya (declines not) from the sky : therefore, Maruts, gratify us with infinite (riches).

॥ ವಿಶೇಷವಿಷಯಗಳು ॥

**ಅಸ್ಮೇ**— ನಿರುಕ್ತಕಾರರು **ಅಸ್ಮೇ** ಎಂಬ ಪದವು ಎಲ್ಲಾ ವಿಭಕ್ತಿಗಳಲ್ಲಿಯೂ ಒಂದೇ ವಿಧವಾದ ರೂಪವನ್ನು ಹೊಂದಿರುವುದಾದರೂ ಆಯಾಯ ವಿಭಕ್ತಿಯ ಅರ್ಥವನ್ನು ಆಯಾಯ ಪ್ರಕರಣಕ್ಕನುಸಾರವಾಗಿ ಬೋಧಿಸುತ್ತಿರುವುದು ಎಂದು ವ್ಯಾಖ್ಯಾನಮಾಡಿ ಆಯಾಯ ಉದಾಹರಣೆಗಳಲ್ಲಿ ಆಯಾಯ ವ್ಯತ್ಯಾಸವನ್ನು ತೋರಿಸಿರುವರು—

(೧) ಅಸ್ಮೇ ತೇ ಬಂಧುಃ । ವಯಮಿತ್ಯರ್ಥಃ ॥

**ಅಸ್ಮೇ ಇತ್ಯೇತತ್ಪದಂ ಸರ್ವವಿಭಕ್ತ್ಯಂತಂ । ತಸ್ಮಾದನೇಕಾರ್ಥಂ । ಏಕಮೇವ ಹ್ಯೇತಚ್ಛಬ್ದರೂಪಂ ಸಪ್ತಸ್ವಪಿ ವಿಭಕ್ತ್ಯರ್ಥೇಷು ವರ್ತತೇ । ಪ್ರಕರಣಾದಿವಶಾತ್ ತಸ್ಯ ನಿಯಮೋ ಭವತಿ । ತದ್ಯಥಾ—ಪ್ರಥಮಾಯಾಸ್ತಾವತ್—ಅಸ್ಮೇ ತೇ ಬಂಧುಃ । ವಯಮಿತ್ಯರ್ಥಃ ॥** ಎಂದರೆ ಅಸ್ಮೇ ಎಂಬ ಶಬ್ದವು ಏಳು ವಿಭಕ್ತಿಗಳ ಅರ್ಥದಲ್ಲಿಯೂ ಸಂದರ್ಭಾನುಸಾರವಾಗಿ ಉಪಯೋಗಿಸಲ್ಪಡುವುದು ಎಂದರೆ ಆಯಾ ಪ್ರಕರಣಾನುಸಾರ

ವಾಗಿ ಈ ಶಬ್ದಕ್ಕೆ ಏಳು ವಿಭಕ್ತಿಗಳಲ್ಲಿ ಯಾವ ವಿಭಕ್ತಿಯ ಅರ್ಥವನ್ನಾದರೂ ಹೇಳಬಹುದು. ಹೇಗೆಂದರೆ—**ಅಸ್ಮೇ ತೇ ಬಂಧುಃ** ಎಂಬ ವಾಕ್ಯದಲ್ಲಿ **ಅಸ್ಮೇ** ಎಂಬ ಶಬ್ದಕ್ಕೆ **ವಯಂ**—ನಾವು ಎಂದರ್ಥವಿರುವುದು. ಇದು ಪ್ರಥಮಾ ವಿಭಕ್ತಿಯ ಅರ್ಥಕ್ಕೆ ಉದಾಹರಣೆಯು.

**(೨) ಅಸ್ಮೇ ಯಾತಂ ನಾಸತ್ಯಾ ಸಜೋಷಾಃ । ಅಸ್ಮಾನಿತ್ಯರ್ಥಃ ॥**

**ದ್ವಿತೀಯಾಯಾಸ್ತಾವತ್**—ಅಸ್ಮೇ ಎಂಬ ಶಬ್ದಕ್ಕೆ ದ್ವಿತೀಯಾ ವಿಭಕ್ತಿಯಾದ ಅಸ್ಮಾನ್ ನಮ್ಮನ್ನು ಎಂದು ಅರ್ಥವು ಈ ಅರ್ಥದ ಉದಾಹರಣೆಗಾಗಿ—

**ಆ ಶ್ಯೇನಸ್ಯ ಜವಸಾ ನೂತನೇನಾಸ್ಮೇ ಯಾತಂ ನಾಸತ್ಯಾ ಸಜೋಷಾಃ ।**
**ಹವೇ ಹಿ ವಾಮಶ್ವಿನಾ ರಾತಹವ್ಯಃ ಶಶ್ವತ್ತಮಾಯಾ ಉಷಸೋ ವ್ಯುಷ್ಟೌ ॥**

(ಋ ಸಂ ೧-೧೧೮-೧೧)

ಎಂಬ ಋಕ್ಕನ್ನು ಕೊಟ್ಟಿರುವರು. ಈ ಋಕ್ಕಿನಲ್ಲಿರುವ ಅಸ್ಮೇ ಎಂಬ ಶಬ್ದಕ್ಕೆ ಅಸ್ಮಾನ್-ನಮ್ಮನ್ನು ಎಂದರ್ಥವು.

**(೩) ಅಸ್ಮೇ ಸಮಾನೇಭಿರ್ವೃಷಭ ಪೌಂಸ್ಯೇಭಿಃ । ಅಸ್ಮಾಭಿರಿತ್ಯರ್ಥಃ ॥**

**ತೃತೀಯಾಯಾಸ್ತಾವತ್**—ಇಲ್ಲಿ ಅಸ್ಮೇ ಎಂದರೆ ಅಸ್ಮಾಭಿಃ-ನಮ್ಮಿಂದ ಎಂದು ತೃತೀಯಾವಿಭಕ್ತ್ಯರ್ಥವು. ಈ ವಿಷಯದಲ್ಲಿ—

**ಭೂರಿ ಚಕರ್ಥ ಯುಜ್ಯೇಭಿರಸ್ಮೇ ಸಮಾನೇಭಿರ್ವೃಷಭ ಪೌಂಸ್ಯೇಭಿಃ ।**
**ಭೂರೀಣಿ ಹಿ ಕೃಣವಾಮಾ ಶವಿಷ್ಠೇಂದ್ರ ಕ್ರತ್ವಾ ಮರುತೋ ಯದ್ವಶಾಮ ॥**

(ಋ. ಸಂ. ೧-೧೬೫-೭)

ಎಂಬ ಋಕ್ಕನ್ನು ಉದಾಹರಣೆಯಾಗಿ ಕೊಟ್ಟಿರುವರು. ಇಲ್ಲಿ ಅಸ್ಮೇ ಎಂದರೆ ಅಸ್ಮಾಭಿಃ-ನಮ್ಮಿಂದ ಎಂದರ್ಥವು

**(೪) ಅಸ್ಮೇ ಪ್ರಯಂಧಿ ಮಘವನ್ನೃಜೀಷಿನ್ । ಅಸ್ಮಭ್ಯಮಿತ್ಯರ್ಥಃ ॥**

**ಚತುರ್ಥ್ಯಾಸ್ತಾವತ್**—ಇಲ್ಲಿ ಅಸ್ಮೇ ಎಂದರೆ ಅಸ್ಮಭ್ಯಂ-ನಮಗಾಗಿ ಎಂದು ಚತುರ್ಥೀವಿಭಕ್ತ್ಯರ್ಥವು ಉದಾಹರಣೆ-

**ಅಸ್ಮೇ ಪ್ರ ಯಂಧಿ ಮಘವನ್ನೃಜೀಷಿನ್ನಿಂದ್ರ ರಾಯೋ ವಿಶ್ವವಾರಸ್ಯ ಭೂರೇಃ ।**
**ಅಸ್ಮೇ ಶತಂ ಶರದೋ ಜೀವಸೇ ಧಾ ಅಸ್ಮೇ ವೀರಾಞ್ಛಶ್ವತ ಇಂದ್ರ ಶಿಪ್ರಿನ್ ॥**

(ಋ. ಸಂ. ೩-೩೬-೧೦)

ಎಂಬ ಋಕ್ಕಿನಲ್ಲಿರುವ ಅಸ್ಮೇ ಎಂಬ ಶಬ್ದಗಳಿಗೆ ಅಸ್ಮಭ್ಯಂ-ನಮಗಾಗಿ ಎಂದು ಚತುರ್ಥೀ ವಿಭಕ್ತ್ಯರ್ಥವು-

**(೫) ಅಸ್ಮೇ ಆರಾಚ್ಚಿದ್ದ್ವೇಷಃ ಸನುತರ್ಯುಯೋತು । ಅಸ್ಮದಿತ್ಯರ್ಥಃ ।**

**ಪಂಚಮ್ಯಾಸ್ತಾವತ್**—ಇಲ್ಲಿ ಅಸ್ಮೇ ಎಂದರೆ ಅಸ್ಮತ್-ನಮ್ಮ ದೆಶೆಯಿಂದ ಎಂದರ್ಥವು. ಉದಾಹರಣೆ—

ತಸ್ಯ ವಯಂ ಸುಮತೌ ಯಜ್ಞಿಯಸ್ಯಾಪಿ ಭದ್ರೇ ಸೌಮನಸೇ ಸ್ಯಾಮ ।
ಸ ಸುತ್ರಾಮಾ ಸ್ವವಾँ ಇಂದ್ರೋ ಅಸ್ಮೇ ಆರಾಚ್ಚಿದ್ದ್ವೇಷಃ ಸನುತರ್ಯುಯೋತು ॥

(ಋ. ಸಂ ೬-೪೭.೧೩)

ಎಂಬ ಋಕ್ಕಿನಲ್ಲಿರುವ ಅಸ್ಮೇ ಎಂಬ ಶಬ್ದಕ್ಕೆ ಅಸ್ಮತ್ ನಮ್ಮ ದೆಶೆಯಿಂದ ಎಂದು ಪಂಚಮೀವಿಭಕ್ತ್ಯರ್ಥವು.

(೬) ಊರ್ವ ಇವ ಪಪ್ರಥೇ ಕಾಮೋ ಅಸ್ಮೇ । ಅಸ್ಮಾಕಮಿತ್ಯರ್ಥಃ ।

ಷಷ್ಠ್ಯಾಸ್ತಾವತ್—ಇಲ್ಲಿ ಅಸ್ಮೇ ಎಂದರೆ ಅಸ್ಮಾಕಂ-ನಮಗೆ ಎಂದರ್ಥವು ಈ ಅರ್ಥವಿವರಣೆಗಾಗಿ—

ಆ ನೋ ಭರ ಭಗಮಿಂದ್ರ ದ್ಯುಮಂತಂ ನಿ ತೇ ದೇಷ್ಣಸ್ಯ ಧೀಮಹಿ ಪ್ರರೇಕೇ ।
ಊರ್ವ ಇವ ಪಪ್ರಥೇ ಕಾಮೋ ಅಸ್ಮೇ ತಮಾ ಪೃಣ ವಸುಪತೇ ವಸೂನಾಂ ॥

(ಋ. ಸಂ ೩ ೩೧-೧೯)

ಈ ಋಕ್ಕಿನಲ್ಲಿರುವ ಅಸ್ಮೇ ಎಂಬ ಶಬ್ದಕ್ಕೆ ಅಸ್ಮಾಕಂ--ನಮ್ಮ, ನಮಗೆ ಎಂದು ಷಷ್ಠೀವಿಭಕ್ತ್ಯರ್ಥವು.

(೭) ಅಸ್ಮೇ ಧತ್ತ ವಸವೋ ವಸೂನಿ । ಅಸ್ಮಾಸ್ವಿತ್ಯರ್ಥಃ ॥

ಸಪ್ತಮ್ಯಾಸ್ತಾವತ್—ಇಲ್ಲಿ ಅಸ್ಮೇ ಎಂದರೆ ನಮ್ಮಲ್ಲಿ ಎಂದರ್ಥವು ಉದಾಹರಣೆ—

ಅಗ್ನೇ ವಾಜಸ್ಯ ಗೋಮತ ಈಶಾನಃ ಸಹಸೋ ಯಹೋ ।
ಅಸ್ಮೇ ಧೇಹಿ ಜಾತವೇದೋ ಮಹಿ ಶ್ರವಃ ॥

(ಋ. ಸಂ. ೧-೭೯-೪)

ಈ ಋಕ್ಕಿನಲ್ಲಿರುವ ಅಸ್ಮೇ-ಎಂಬ ಶಬ್ದಕ್ಕೆ ಅಸ್ಮಾಸು-ನಮ್ಮಲ್ಲಿ ಎಂದು ಸಪ್ತಮೀವಿಭಕ್ತ್ಯರ್ಥವು.

॥ ಸಂಹಿತಾಪಾಠಃ ॥

ಯೂಯಂ ರಯಿಂ ಮರುತಃ ಸ್ಪಾರ್ಹವೀರಂ ಯೂಯಮೃಷಿ ಮವಥ ಸಾಮವಿಪ್ರಂ ।
ಯೂಯಮರ್ವಂತಂ ಭರತಾಯ ವಾಜಂ ಯೂಯಂ ಧತ್ಥ ರಾಜಾನಂ ಶ್ರುಷ್ಟಿಮಂತಂ ॥ ೧೪ ॥

॥ ಪದಪಾಠಃ ॥

ಯೂಯಂ । ರಯಿಂ । ಮರುತಃ । ಸ್ಪಾರ್ಹऽವೀರಂ । ಯೂಯಂ । ಋಷಿಂ । ಅವಥ । ಸಾಮऽವಿಪ್ರಂ ।

ಯೂಯಂ । ಅರ್ವಂತಂ । ಭರತಾಯ । ವಾಜಂ । ಯೂಯಂ । ಧತ್ಥ । ರಾಜಾನಂ । ಶ್ರುಷ್ಟಿऽಮಂತಂ ॥

॥ ಸಾಯಣಭಾಷ್ಯಂ ॥

**ಹೇ ಮರುತೋ ಯೂಯಂ ರಯಿಂ ಧನಂ ಸ್ಪಾರ್ಹವೀರಂ ಸ್ಪೃಹಣೀಯೈರ್ವೀರೈಃ ಪುತ್ರ-ಭೃತ್ಯಾದಿಭಿರುಪೇತಂ ಧತ್ಥ । ದತ್ಥ । ಹೇ ಮರುತೋ ಯೂಯಂ ಸಾಮವಿಪ್ರಂ ಸಾಮ್ನಾಂ ವಿವಿಧಂ ಪ್ರೇರ-ಯಿತಾರಾಂ ಯದ್ವಾ ಸಾಮಸಹಿತಾ ವಿಪ್ರಾ ಯಸ್ಯ ತಾದೃಶಮೃಷಿಮವಥ । ರಕ್ಷಥ । ಹೇ ಯೂಯ-ಮರ್ವಂತಮಶ್ವಂ ವಾಜಮನ್ನಂ ಚ ಭರತಾಯ ದೇವಾನ್ ಬಿಭ್ರತೇ ಶ್ಯಾವಾಶ್ವಾಯ ಧತ್ಥ । ಹೇ ಮರುತೋ ಯೂಯಂ ರಾಜಾನಂ ದೀಪ್ತಂ ಸ್ವಾಮಿನಂ ವಾ ಶ್ರುಷ್ಟಿಮಂತಂ ಸುಖವಂತಂ । ಪುತ್ರಮಿ-ತ್ಯರ್ಥಃ । ಧತ್ಥ ॥**

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ಯೂಯಂ**—ನೀವು । **ರಯಿಂ**—ಧನವನ್ನೂ । **ಸ್ಪಾರ್ಹವೀರಂ**—ಸ್ಪೃಹಣೀಯರಾದ ವೀರಪುತ್ರಾದಿಗಳನ್ನೂ । **ಧತ್ಥ**—ಕೊಡುತ್ತೀರಿ । **ಯೂಯಂ**—ನೀವು । **ಸಾಮವಿಪ್ರಂ**—ಸಾಮಮಂತ್ರಸ್ವರೂಪವನ್ನರಿತು ಸ್ತುತಿಸುವ । **ಋಷಿಂ**—ಋಷಿಯನ್ನು । **ಅವಥ**—ರಕ್ಷಿಸುತ್ತೀರಿ । **ಯೂಯಂ**—ನೀವು । **ಭರತಾಯ**—ದೇವತೆಗಳನ್ನು ಭರಿಸುವ ನನಗೆ । **ಅರ್ವಂತಂ**-ಅಶ್ವವನ್ನೂ । **ವಾಜಂ**-ಅನ್ನವನ್ನೂ (ಕೊಡುತ್ತೀರಿ) । **ಯೂಯಂ**—ನೀವು । **ರಾಜಾನಂ**—ದೊರೆಯನ್ನು । **ಶ್ರುಷ್ಟಿಮಂತಂ**—ಸಂಪದ್ಯುಕ್ತನೂ ಸುಖಯುತನೂ ಆಗುವಂತೆ ಮಾಡುತ್ತೀರಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನೀವು ಧನವನ್ನೂ ಸ್ಪೃಹಣೀಯರಾದ ವೀರಪುತ್ರಾದಿಗಳನ್ನೂ ಕೊಡುತ್ತೀರಿ. ಸಾಮಮಂತ್ರಸ್ವರೂಪವನ್ನರಿತು ಸ್ತುತಿಸುವ ಋಷಿಯನ್ನು ರಕ್ಷಿಸುತ್ತೀರಿ. ದೇವತೆಗಳನ್ನು ಭರಿಸುವ ನನಗೆ ಅಶ್ವವನ್ನೂ ಅನ್ನವನ್ನೂ ಕೊಡುತ್ತೀರಿ. ನೀವು ರಾಜನನ್ನು ಸಂಪದ್ಯುಕ್ತನೂ ಸುಖಯುತನೂ ಆಗುವಂತೆ ಮಾಡುತ್ತೀರಿ.

## English Translation

You bestow, Maruts, wealth and enviable posterity; you protect the sage learned in the Sama: you grant horses and food to (me) the ministrant priest; you render a prince prosperous.

॥ ವಿಶೇಷವಿಷಯಗಳು ॥

ಈ ಸೂಕ್ತದ ಉಪಸಂಹಾರರೂಪವಾದ ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ಶ್ಯಾವಾಶ್ವಋಷಿಯು ಧನ, ಅಶ್ವಗಳು, ಅನ್ನಾದ್ಯಾಹಾರ, ಪುತ್ರಪೌತ್ರಾದಿಗಳು, ನೂರುವರ್ಷಗಳವರೆಗೆ ಜೀವಿಸುವಂತೆ ದೀರ್ಘಾಯುಸ್ಸು ಮೊದಲಾದವುಗಳನ್ನೂ ಕೊಡಬೇಕೆಂದು ಮರುದ್ದೇವತೆಗಳನ್ನು ಪ್ರಾರ್ಥಿಸಿದಾನೆ.

॥ ಸಂಹಿತಾಪಾಠಃ ॥

ತದ್ವೋ ಯಾಮಿ ದ್ರವಿಣಂ ಸದ್ಯಊತಯೋ ಯೇನಾ ಸ್ವರ್ಣ ತತನಾಮ ನೄಁರಭಿ ।
ಇದಂ ಸು ಮೇ ಮರುತೋ ಹರ್ಯತಾ ವಚೋ ಯಸ್ಯ ತರೇಮ ತರಸಾ ಶತಂ ಹಿಮಾಃ ॥ ೧೫ ॥

॥ ಪದಪಾಠಃ ॥

ತತ್ । ವಃ । ಯಾಮಿ । ದ್ರವಿಣಂ । ಸದ್ಯಃऽಊತಯಃ । ಯೇನ । ಸ್ವಃ । ನ । ತತನಾಮ । ನೄನ್ । ಅಭಿ ।

ಇದಂ । ಸು । ಮೇ । ಮರುತಃ । ಹರ್ಯತ । ವಚಃ । ಯಸ್ಯ । ತರೇಮ । ತರಸಾ । ಶತಂ । ಹಿಮಾಃ ॥

॥ ಸಾಯಣಭಾಷ್ಯಂ ॥

ಹೇ ಸದ್ಯಊತಯಃ । ತದಾನೀಮೇವ ರಕ್ಷಾ ಯೇಷಾಂ ತೇ ತಾದೃಶಾಃ । ಸದ್ಯೋಗಮನಾ ವಾ ವೋ ಯುಷ್ಮಾನ್ ತದ್ದ್ರವಿಣಂ ಧನಂ ಯಾಮಿ । ಯಾಚಾಮಹೇ । ಯೇನ ಧನೇನ ನೄನಸ್ಮತ್ಪುತ್ರ-ಭೃತ್ಯಾದೀನಭಿ । ತತನಾಮ ಸ್ವರ್ಣ ಆದಿತ್ಯ ಇವ ರಶ್ಮೀನ್ । ಹೇ ಮರುತೋ ಮೇ ಮಮ ಸ್ವಭೂತಮಿದ-ಮಿದಾನೀಂ ಕ್ರಿಯಮಾಣಂ ವಚಃ ಸ್ತೋತ್ರಂ ಸು ಸುಷ್ಠು ಹರ್ಯತ । ಕಾಮಯಧ್ವಂ । ಯಸ್ಯ ಸ್ತೋತ್ರ-ವಚಸಸ್ತರಸಾ ಬಲೇನ ಶತಂ ಶತಸಂಖ್ಯಾಕಾನ್ ಹಿಮಾ ಹೇಮಂತಾನ್ ತರೇಮ । ಶತಸಂವತ್ಸರಂ ಜೀವೇಮೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಸದ್ಯಊತಯಃ**—ಒಡನೆಯೇ ರಕ್ಷಣೆಯನ್ನು ನೀಡತಕ್ಕ ಎಲೈ ಮರುತ್ತುಗಳೇ । **ಯೇನ**—ಯಾವ ಧನದಿಂದ । **ಸ್ವರ್ಣ**—ಆದಿತ್ಯನು ತನ್ನ ರಶ್ಮಿಗಳನ್ನು ವಿಸ್ತರಿಸುವಂತೆ । **ನೄನ್**—ನಮ್ಮ ಪುತ್ರಾದಿ ಸಂತತಿಗಳನ್ನು । **ಅಭಿ**

**ತತನಾಮ**—ನಾವು ವಿಸ್ತರಿಸಿ ವೃದ್ಧಿಪಡಿಸಬಲ್ಲೆವೋ । **ತತ್ ದ್ರವಿಣಂ**—ಅಂತಹ ಧನವನ್ನು । **ವಃ**—ನಿಮ್ಮಿಂದ । **ಯಾಮಿ**—ಯಾಚಿಸುತ್ತೇನೆ । **ಮರುತಃ**—ಎಲೈ ಮರುತ್ತುಗಳೇ । **ಯಸ್ಯ**—ಯಾವ ಸ್ತೋತ್ರದ । **ತರಸಾ**—ಬಲದಿಂದ । **ಶತಂ** ಶತಸಂಖ್ಯಾಕವಾದ । **ಹಿಮಾಃ**—ಹೇಮಂತಋತುಗಳನ್ನು (ಸಂವತ್ಸರಗಳನ್ನು) । **ತರೇಮ**—ನಾವು ಜೀವಿಸಬಲ್ಲೆವೋ ಅಂತಹ । **ಮೇ**—ನನ್ನಿಂದ । **ಇದಂ**—ಈಗ ನಿರ್ಮಿತವಾಗಿರುವ । **ವಚಃ**—ಸ್ತುತಿಯನ್ನು । **ಸು**—ಅತಿಶಯವಾಗಿ । **ಹರ್ಯತ**—ಇಚ್ಛಿಸಿರಿ.

॥ ಭಾವಾರ್ಥ ॥

ಪ್ರಾರ್ಥಿಸಿದ ಒಡನೆಯೇ ರಕ್ಷಣೆಯನ್ನು ನೀಡತಕ್ಕ ಎಲೈ ಮರುತ್ತುಗಳೇ, ಆದಿತ್ಯನು ತನ್ನ ರಶ್ಮಿಗಳನ್ನು ವಿಸ್ತರಿಸುವಂತೆ ನಾವು ಯಾವ ಧನದ ಸಹಾಯದಿಂದ ನಮ್ಮ ಪುತ್ರಾದಿ ಸಂತತಿಗಳನ್ನು ವಿಸ್ತರಿಸಿ ವೃದ್ಧಿಪಡಿಸಬಲ್ಲೆವೋ ಆ ಧನವನ್ನು ನಿಮ್ಮಿಂದ ಯಾಚಿಸುತ್ತೇನೆ. ಎಲೈ ಮರುತ್ತುಗಳೇ, ಯಾವ ಸ್ತೋತ್ರದ ಬಲದಿಂದ ಶತಸಂವತ್ಸರಗಳವರೆಗೆ ನಾವು ಜೀವಿಸಬಲ್ಲೆವೋ ಅಂತಹ ನನ್ನಿಂದ ನಿರ್ಮಿತವಾಗಿರುವ ಈ ಸ್ತುತಿಯನ್ನು ಅತಿಶಯವಾಗಿ ಇಚ್ಛಿಸಿರಿ.

## English Translation

Therefore do I solicit wealth of you, who are prompt to grant protection, whereby we may multiply our descendants, as the sun (spreads wide his rays): be propitiated, Maruts, by this my praise, by the efficacy whereof may we pass over a hundred winters.

॥ ವಿಶೇಷವಿಷಯಗಳು ॥

**ಸದ್ಯಊತಯಃ—ತದಾನೀಮೇವ ರಕ್ಷಾ ಯೇಷಾಂ ತೇ ತಾದೃಶಾಃ । ಸದ್ಯೋಗಮನಾ ವಾ ।** ಈಗಲೇ ಎಂದರೆ ತಕ್ಷಣವೇ ನಿಮ್ಮ ರಕ್ಷಣೆಗಳನ್ನು ನಮಗೆ ಕೊಡಬೇಕೆಂದು ಅಥವಾ ಈಗಲೇ ನೀವು ಈ ಯಜ್ಞಭೂಮಿಗೆ ಬರಬೇಕೆಂದು ಎರಡು ವಿಧ ಅರ್ಥವು ಸದ್ಯಊತಯಃ ಎಂಬ ಶಬ್ದದಿಂದ ಸೂಚಿತವಾಗಿದೆ.

**ಯೇನ ಸ್ವಃ ನ ನೄನ್ ಅಭಿ ತತನಾಮ-ಯೇನ ಧನೇನ ಅಸ್ಮತ್ಪುತ್ರಭೃತ್ಯಾದೀನ್ ಆದಿತ್ಯರಶೀನಿವ ತತನಾಮ ।** ಮರುದ್ದೇವತೆಗಳು ನಮಗೆ ಕೊಡುವ ಧನಾದಿಗಳಿಂದ ಸೂರ್ಯನು ತನ್ನ ರಶ್ಮಿಗಳನ್ನು ವಿಸ್ತಾರವಾಗಿ ಹರಡುವಂತೆ ನಾವು ನಮ್ಮ ಪುತ್ರಪೌತ್ರಾದಿ ಸಂತತಿಯನ್ನು ವೃದ್ಧಿಮಾಡಿ ವಿಸ್ತರಿಸೋಣ ಎಂಬ ಆಶಂಸನೆಯು ಇಲ್ಲಿ ಉಕ್ತವಾಗಿದೆ.

**ಯಸ್ಯ ತರಸಾ ಶತಂ ಹಿಮಾಃ ತರೇಮ—ಸ್ತೋತ್ರವಚಸಃ ಬಲೇನ ವಯಂ ಶತಸಂಖ್ಯಾಕಾನ್ ಹೇಮಂತಾನ್ ಶತಸಂವತ್ಸರಂ ಜೀವೇಮೇತ್ಯರ್ಥಃ ।** ನಾವು ಮರುದ್ದೇವತೆಗಳನ್ನುದ್ದೇಶಿಸಿ ಪಠಿಸುವ ಸ್ತೋತ್ರಗಳ ಪ್ರಭಾವದಿಂದ ನೂರುವರ್ಷಗಳವರೆಗೆ ಜೀವಿಸುವಂತಾಗಲಿ ಎಂದು ಋಷಿಯು ಪ್ರಾರ್ಥಿಸಿದಾನೆ. ಹಿಮಾಃ ಎಂಬ ಶಬ್ದಕ್ಕೆ ಹೇಮಂತಾನ್ ಹೇಮಂತಋತುಗಳನ್ನು ಎಂದರ್ಥವು. ಹೇಮಂತಋತುವು ಒಂದು ಸಂವತ್ಸರದಲ್ಲಿ ಒಂದು ಸಾರಿ ಮಾತ್ರ

ಬರುವುದರಿಂದ ಶತಂ ಹಿಮಾಃ ಎಂದರೆ ನೂರುಸಂವತ್ಸರಗಳು ಎಂದರ್ಥವು. ಇದರಂತೆ ಶರದಃ ಶತಂ ಎಂಬ ಶಬ್ದಗಳ ಪ್ರಯೋಗವೂ ನೂರುಸಂವತ್ಸರಗಳು ಎಂಬರ್ಥವನ್ನು ಸೂಚಿಸುವುದು. ಇಂತಹ ಪ್ರಯೋಗಗಳು ಋಗ್ವೇದದಲ್ಲಿ ವಿಶೇಷವಾಗಿವೆ

## ಐವತ್ತೈದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಪ್ರಯಜ್ಯವ ಇತಿ ದರ್ಚಶನೇಕಾದಶಂ ಸೂಕ್ತಂ ಶ್ಯಾವಾಶ್ವಸ್ಯಾರ್ಷಂ ಮಾರುತಂ । ದಶಮೀ ತ್ರಿಷ್ಟುಪ್ ಶಿಷ್ಟಾ ಜಗತ್ಯಃ । ಪ್ರಯಜ್ಯವೋ ದಶಾಂತ್ಯಾ ತ್ರಿಷ್ಟುಬಿತ್ಯನುಕ್ರಮಣಿಕಾ ॥ ಅಭಿಪ್ಲವಿಕೇ ಷಷ್ಠೇಽಹನ್ಯಾಗ್ನಿಮಾರುತೆ ಇದಂ ಸೂಕ್ತಂ ಮಾರುತನಿವಿದ್ಧಾನೀಯಂ । ಸೂತ್ರಿತಂ ಚ । ಪ್ರಯಜ್ಯವ ಇಮಂ ಸ್ತೋಮಮಿತ್ಯಾಗ್ನಿಮಾರುತಂ । ಆ-೭-೭ । ಇತಿ ॥**

ಅನುವಾದವು—**ಪ್ರಯಜ್ಯವ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಶ್ಯಾವಾಶ್ವನು ಋಷಿಯು, ಮರುತ್ತುಗಳು ದೇವತೆಯು ಈ ಸೂಕ್ತದ ಹತ್ತನೆಯ ಋಕ್ಕು ತ್ರಿಷ್ಟುಪ್ ಛಂದಸ್ಕವು. ಉಳಿದ ಋಕ್ಕುಗಳು ಜಗತೀಛಂದಸ್ಕವು. ಅನುಕ್ರಮಣಿಕೆಯಲ್ಲಿ- **ಪ್ರಯಜ್ಯವೋ ದಶಾಂತ್ಯಾ ತ್ರಿಷ್ಟುಪ್** ಎಂದು ಹೇಳಿರುವುದು. ಅಭಿಪ್ಲವಯಾಗದಲ್ಲಿ ಆರನೆಯದಿವಸ ಆಗ್ನಿಮಾರುತಶಸ್ತ್ರಮಂತ್ರಗಳನ್ನು ಪಠಿಸುವಾಗ ಈ ಸೂಕ್ತವನ್ನು ಮಾರುತನಿವಿದ್ಧಾನೀಯಸೂಕ್ತವನ್ನಾಗಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪ್ರಯಜ್ಯವ ಇಮಂ ಸ್ತೋಮಮಿತ್ಯಾಗ್ನಿಮಾರುತಂ** ಎಂಬ ಸೂತ್ರದಿಂದ (ಆ. ೭-೭) ವಿವೃತವಾಗಿರುವುದು.

## ಸೂಕ್ತ—೫೫.

ಮಂಡಲ—೫ ॥ ಅನುವಾಕ—೪ ॥ ಸೂಕ್ತ—೫೫ ॥
ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ—೧೭, ೧೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥
ಋಷಿಃ—ಶ್ಯಾವಾಶ್ವ ಆತ್ರೇಯಃ ॥
ದೇವತಾ—ಮರುತಃ ॥
ಛಂದಃ—೧-೯, ಜಗತೀ । ೧೦ ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಪ್ರಯಜ್ಯವೋ ಮರುತೋ ಭ್ರಾಜದೃಷ್ಟಯೋ ಬೃಹದ್ವಯೋ ದಧಿರೇ ರುಕ್ಮವಕ್ಷಸಃ ।
ಈಯಂತೇ ಅಶ್ವೈಃ ಸುಯಮೇಭಿರಾಶುಭಿಃ ಶುಭಂ ಯಾತಾಮನು ರಥಾ ಅವೃತ್ಸತ ॥ ೧ ॥

॥ ಪದಪಾಠಃ ॥

ಪ್ರಽಯಜ್ಯವಃ । ಮರುತಃ । ಭ್ರಾಜತ್ಽಋಷ್ಟಯಃ । ಬೃಹತ್ । ವಯಃ । ದಧಿರೇ । ರುಕ್ಮಽವಕ್ಷಸಃ ।
ಈಯಂತೇ । ಅಶ್ವೈಃ । ಸುಽಯಮೇಭಿಃ । ಆಶುಽಭಿಃ । ಶುಭಂ । ಯಾತಾಂ । ಅನು । ರಥಾಃ । ಅವೃತ್ಸತ ॥ ೧ ॥

॥ ಸಾಯಣಭಾಷ್ಯಂ ॥

ಪ್ರಯಜ್ಯವಃ ಪ್ರಕರ್ಷೇಣ ಯಷ್ಟಾರೋ ಭ್ರಾಜದೃಷ್ಟಯೋ ದೀಪ್ತಾಯುಧಾ ಮರುತೋ ಬೃಹತ್ ಪ್ರಭೂತಂ ವಯೋ ಯೌವನಲಕ್ಷಣಂ ಪ್ರಭೂತಮನ್ನಂ ವಾ ದಧಿರೇ । ಧಾರಯಂತಿ । ರುಕ್ಮವಕ್ಷಸೋ ಹಾರಾಯತವಕ್ಷಸ್ಕಾಃ । ತೇ ಮರುತಃ ಸುಯಮೇಭಿಃ ಸುಖೇನ ನಿಯಮಿತುಂ ಶಕ್ಯೈರಾಶುಭಿಃ ಶೀಘ್ರಗೈರಶ್ವೈರೀಯಂತೇ । ಪ್ರಾಪ್ಯಂತೇ । ಶುಭಂ ಶೋಭನಂ ಯಥಾ ಭವತಿ ತಥಾ । ಯದ್ವಾ। ಉದಕಮಭಿಲಕ್ಷ್ಯ ಯಾತಾಂ ಗಚ್ಛತಾಂ ಮರುತಾಂ ರಥಾ ಅಪ್ಯನ್ವವೃತ್ಸತ । ಅನುವರ್ತಂತೇ ॥

॥ ಪ್ರತಿಪದಾರ್ಥ ॥

**ಪ್ರಯಜ್ಯವಃ**—ಉತ್ಕೃಷ್ಟವಾದ ಯಜ್ಞಕರ್ತರೂ । **ಭ್ರಾಜದೃಷ್ಟಯಃ**—ಪ್ರಕಾಶಮಾನವಾದ ಆಯುಧವುಳ್ಳವರೂ । **ರುಕ್ಮವಕ್ಷಸಃ**—ವಕ್ಷಸ್ಸಿನಲ್ಲಿ ಹಾರವುಳ್ಳವರೂ, ಆದ । **ಮರುತಃ**—ಮರುತ್ತುಗಳು । **ಬೃಹತ್**—ಪ್ರಭೂತವಾದ । **ವಯಃ**—ಅನ್ನವನ್ನು । **ದಧಿರೇ**—ಹೊಂದಿರುತ್ತಾರೆ (ಮತ್ತು) । **ಸುಯಮೇಭಿಃ**—ಸುಖದಿಂದ ವಹಿಸಲು ಶಕ್ತವಾದವೂ । **ಆಶುಭಿಃ**—ಶೀಘ್ರಸಂಚಾರಿಗಳೂ ಆದ । **ಅಶ್ವೈಃ**—ಅಶ್ವಗಳಿಂದ । **ಈಯಂತೇ**—ಕರೆತರಲ್ಪಡುತ್ತಾರೆ । **ಶುಭಂ**—ಕಲ್ಯಾಣಕಾರಕರಾಗಿ । **ಯಾತಾಂ**—ಹೋಗುತ್ತಿರುವ ಅವರ । **ರಥಾಃ**—ರಥಗಳೂ ಕೂಡ । **ಅನು ಅವೃತ್ಸತ**—ಅವರನ್ನೇ ಅನುಸರಿಸುತ್ತವೆ.

॥ ಭಾವಾರ್ಥ ॥

ಉತ್ಕೃಷ್ಟವಾದ ಯಜ್ಞಕರ್ತರೂ, ಪ್ರಕಾಶಮಾನವಾದ ಆಯುಧವುಳ್ಳವರೂ ವಕ್ಷಸ್ಸಿನಲ್ಲಿ ಹಾರವುಳ್ಳವರೂ ಆದ ಮರುತ್ತುಗಳು ಪ್ರಭೂತವಾದ ಅನ್ನವನ್ನು ಹೊಂದಿರುತ್ತಾರೆ. ಸುಖದಿಂದ ವಹಿಸಲು ಶಕ್ತವಾದವೂ ಶೀಘ್ರ ಸಂಚಾರಿಗಳೂ ಆದ ಅಶ್ವಗಳಿಂದ ಕರೆತರಲ್ಪಡುತ್ತಾರೆ. ಕಲ್ಯಾಣಕಾರಕರಾಗಿ ಹೋಗುತ್ತಿರುವ ಅವರ ರಥಗಳೂ ಕೂಡ ಅವರನ್ನೇ ಅನುಸರಿಸುತ್ತವೆ.

## English Translation

The adorable Maruts, armed with bright lances and cuirassed with golden breast-plates, enjoy vigorous existence: may the cars of the quick-moving (Maruts) arrive for our good.

॥ ವಿಶೇಷವಿಷಯಗಳು ॥

**ಭ್ರಾಜದೃಷ್ಟಯಃ—ಭ್ರಾಜತ್ ಋಷ್ಟಯಃ** । ಋಷ್ಟಿ ಎಂದರೆ ಮರುದ್ದೇವತೆಗಳ ಆಯುಧವಿಶೇಷವು ಇದು ಹರಿತವಾಗಿಯೂ, ಪ್ರಕಾಶಮಾನವಾಗಿಯೂ, ಭರ್ಜಿಯ ಆಕಾರದಲ್ಲಿಯೂ ಇರುವುದೆಂದು ಹೇಳಲಾಗಿದೆ ಇಂತಹ ಪ್ರಕಾಶಮಾನವಾದ ಆಯುಧಗಳನ್ನು ಧರಿಸಿರುವವರೆಂದು **ಭ್ರಾಜದೃಷ್ಟಯಃ** ಎಂಬ ಶಬ್ದದ ಅರ್ಥವು. ಮರುದ್ದೇವತೆಗಳ ಗುಣಗಳನ್ನು ವರ್ಣಿಸುವಾಗ ಈ ಶಬ್ದದ ಪ್ರಯೋಗವು ವಿಶೇಷವಾಗಿರುವುದು. ಮತ್ತು ಈ ಶಬ್ದ ಪ್ರಯೋಗವು ಮರುದ್ದೇವತೆಗಳ ವೈಶಿಷ್ಟ್ಯವನ್ನು ಸೂಚಿಸುವುದಾಗಿದೆ ಇತರ ದೇವತೆಗಳ ವಿಷಯದಲ್ಲಿ ಈ ಶಬ್ದ ಪ್ರಯೋಗವು ಅಷ್ಟಾಗಿ ಇಲ್ಲ.

**ಬೃಹತ್ ವಯಃ**—ಈ ಶಬ್ದಗಳಿಗೆ ಭಾಷ್ಯಕಾರರು ಎರಡುವಿಧ ಅರ್ಥಗಳನ್ನು ಹೇಳಿದಾರೆ **ಬೃಹತ್** ಎಂದರೆ ದೊಡ್ಡದಾದ, ಬಹಳವಾದ, ಅಧಿಕವಾದ ಎಂದರ್ಥವು. **ವಯಃ**ಶಬ್ದಕ್ಕೆ ಅನ್ನವೆಂದು (ನಿ. ೩-೯) ಅರ್ಥ ಮಾಡುವುದಾದರೆ ಅಧಿಕವಾದ ಅನ್ನಸಂಪತ್ತುಳ್ಳವರೆಂದೂ ಅಥವಾ ತಮ್ಮನ್ನು ಸ್ತುತಿಸುವ ಯಜಮಾನರಿಗೆ ಅಧಿಕವಾದ ಅನ್ನಾದ್ಯಾಹಾರಗಳನ್ನು ಕೊಡುವವರೆಂದೂ ಅರ್ಥವು. ವಯಃಶಬ್ದಕ್ಕೆ ವಯಸ್ಸೆಂದು ಅರ್ಥಮಾಡುವುದಾದರೆ ಬೃಹತ್‌ಶಬ್ದಕ್ಕ ಹೆಚ್ಚಾದ ಎಂದೂ ವಯಃಶಬ್ದಕ್ಕೆ ವಯಸ್ಸುಳ್ಳವರೆಂದೂ ಅರ್ಥವು ಎಂದರೆ ಚಿಕ್ಕವಯಸ್ಸಿನವರಲ್ಲದ ಯುವಕರಂತಿರುವವರು. ಯೌವನಲಕ್ಷಣಯುಕ್ತರಾದವರು ಎಂದಭಿಪ್ರಾಯವು.

**ರುಕ್ಮವಕ್ಷಸಃ**—**ಭ್ರಾಜದೃಷ್ಟಯಃ** ಎಂಬ ಶಬ್ದದಂತೆಯೇ **ರುಕ್ಮವಕ್ಷಸಃ** ಎಂಬ ಶಬ್ದವೂ ಸಹ ಮರುದ್ದೇವತೆಗಳ ವಿಷಯದಲ್ಲಿ ಮಾತ್ರ ಉಪಯೋಗಿಸಲ್ಪಡುವ ಶಬ್ದವಾಗಿದೆ ಇದೂ ಅವರ ವೈಶಿಷ್ಟ್ಯವನ್ನು ವರ್ಣಿಸುವುದು. ವಕ್ಷಸ್ಸಿನಲ್ಲಿ ಸುವರ್ಣಮಯವಾದ ಹಾರಾದ್ಯಾಭರಣಗಳನ್ನು ಧರಿಸಿರುವವರು ಎಂದರ್ಥವು.

**ಸುಯಮೇಭಿಃ ಆಶುಭಿಃ ಅಶ್ವೈಃ ಈಯಂತೇ—ಸುಯಮೇಭಿ** ಎಂಬ ಶಬ್ದಕ್ಕೆ ಮರುದ್ದೇವತೆಗಳನ್ನು ಸುಖವಾಗಿ ಎಂದರೆ ಕಷ್ಟವಿಲ್ಲದೆ ಅನಾಯಾಸವಾಗಿ ವಹಿಸಬಲ್ಲಸಾಮರ್ಥ್ಯವುಳ್ಳ ಕುದುರೆಗಳು ಎಂದರ್ಥವು ಅಥವಾ ಸುಲಭವಾದ ನಿಯಮನವುಳ್ಳ ಎಂದರೆ Well-Controlled ಸಾರಥಿಯ ಹತೋಟಿಗೆ ಒಳಪಟ್ಟಿರುವ ಎಂಬರ್ಥ ವನ್ನಾದರೂ ಹೇಳಬಹುದು. **ಆಶುಭಿಃ** ಎಂಬ ಶಬ್ದಕ್ಕೆ ವೇಗವಾಗಿ ಓಡಬಲ್ಲ ಎಂದರ್ಥವು ಆದುದರಿಂದ ಈ ವಾಕ್ಯಕ್ಕೆ ಈ ಮರುದ್ದೇವತೆಗಳು ಭಾರವನ್ನು ಸುಲಭವಾಗಿ ವಹಿಸಬಲ್ಲವೂ, ಶೀಘ್ರಗಾಮಿಗಳೂ ಆದ ತಮ್ಮ ರಥಾಶ್ವಗಳಿಂದ ವಹಿಸಲ್ಪಡುತ್ತಾರೆ ಎಂದು ಮುಖ್ಯಾರ್ಥವು.

**ಶುಭಂ ಯಾತಾಂ ರಥಾಃ ಅನು ಆವೃತ್ಸತ**—ಸುಖವಾಗಿ ಸಂಚರಿಸುತ್ತಿರುವ ಮರುದ್ದೇವತೆಗಳ ರಥಗಳು ಅವರನ್ನೇ ಅನುಸರಿಸುತ್ತವೆ. ಎಂದರೆ ಅವರ ರಥಗಳು ಮರುದ್ದೇವತೆಗಳು ಎಲ್ಲಿಗೆ ಹೋಗಬೇಕೆಂದು ಬಯಸುವರೋ ಅಲ್ಲಿಗೆ ಅವರ ಇಷ್ಟಾನುಸಾರ ಅವರನ್ನು ವಹಿಸುತ್ತವೆ ಎಂದಭಿಪ್ರಾಯವು. ಅಥವಾ ಶುಭಂ ಎಂಬ ಶಬ್ದಕ್ಕೆ ಉದಕ

ವೆಂದು ಅರ್ಥಮಾಡುವುದಾದರೆ (ನಿ. ೨.೨೪) ಉದಕವನ್ನು ಲಕ್ಷಿಸಿ ಎಂದರೆ ವೃಷ್ಟ್ಯರ್ಥವಾಗಿ ಮೇಘಗಳ ಬಳಿಗೆ ಹೋಗುವ ಮರುದ್ದೇವತೆಗಳ ರಥಗಳು ಅವರನ್ನು ಅಲ್ಲಿಗೇ ಒಯ್ಯುತ್ತವೆ ಎಂಬರ್ಥವನ್ನಾದರೂ ಹೇಳಬಹುದು. ಮರುದ್ದೇವತೆಗಳ ರಥವು ಉದಕಮಯವಾದುದು ಎಂಬ ಪ್ರಸಿದ್ಧಿ ಇದೆ. **ಶುಭಂ ಯಾತಾಮನು ರಥಾ ಅವೃತ್ಸತ** ಎಂಬ ಈ ಋಕ್ಕಿನ ಕೊನೆಯಪಾದವು ಈ ಸೂಕ್ತದ ಎಲ್ಲಾ ಋಕ್ಕುಗಳಲ್ಲಿಯೂ ಕೊನೆಯ ಪದವಾಗಿ ಪಲ್ಲವಿಯಂತೆ ಪುನಃಪುನಃ ಪಠಿತವಾಗಿದೆ.

॥ ಸಂಹಿತಾಪಾಠಃ ॥

ಸ್ವಯಂ ದಧಿಧ್ವೇ ತವಿಷೀಂ ಯಥಾ ವಿದ ಬೃಹನ್ಮಹಾಂತ ಉರ್ವಿಯಾ ವಿ ರಾಜಥ ।
ಉತಾಂತರಿಕ್ಷಂ ಮಮಿರೇ ವ್ಯೋಜಸಾ ಶುಭಂ ಯಾತಾಮನು ರಥಾ ಅವೃತ್ಸತ॥

॥ ಪದಪಾಠಃ ॥

ಸ್ವಯಂ । ದಧಿಧ್ವೇ । ತವಿಷೀಂ । ಯಥಾ । ವಿದ । ಬೃಹತ್ । ಮಹಾಂತಃ । ಉರ್ವಿಯಾ । ವಿ । ರಾಜಥ ।
ಉತ । ಅಂತರಿಕ್ಷಂ । ಮಮಿರೇ । ವಿ । ಓಜಸಾ । ಶುಭಂ । ಯಾತಾಂ । ಅನು । ರಥಾಃ । ಅವೃತ್ಸತ ॥

॥ ಸಾಯಣಭಾಷ್ಯಂ ॥

**ಹೇ ಮರುತೋ ಯೂಯಂ ಸ್ವಯಮಸಹಾಯೇನೈವ ದಧಿದ್ವೇ । ಧಾರಯಧ್ವೇ । ಕುರುಧ್ವ ಇತ್ಯರ್ಥಃ । ಕಿಂ । ತವಿಷೀಂ ಬಲಂ ಸಾಮರ್ಥ್ಯಂ । ಯಥಾ ವಿದ ಜಾನೀಥ । ಅಪ್ರತಿಬದ್ಧಸಾಮರ್ಥ್ಯಾ ಇತ್ಯರ್ಥಃ । ಹೇ ಮಹಾಂತೋ ಯೂಯಮುರ್ವಿಯೋರವಃ ಸಂತೋ ವಿ । ರಾಜಥ । ಉತಾಪಿ ಚಾಂತರಿಕ್ಷಮೋಜಸಾ ಬಲೇನ ವಿ ಮಮಿರೇ । ವ್ಯಾಪ್ನುಥ । ಶುಭಮಿತ್ಯಾದಿಗತಂ ॥**

॥ ಪ್ರತಿಪದಾರ್ಥ ॥

( ಎಲೈ ಮರುತ್ತುಗಳೇ ) **ಯಥಾ ವಿದ**—ನಿಮಗೆ ಔಚಿತ್ಯತೋರಿದಂತೆ । **ತವಿಷೀಂ**—ಶಕ್ತಿಯನ್ನು । **ಸ್ವಯಂ**—ಇತರರ ಸಹಾಯವಿಲ್ಲದೇ ನೀವೇ । **ದಧಿಧ್ವೇ**—ಧರಿಸಿದ್ದೀರಿ । **ಮಹಾಂತಃ**—ಮಹಾತ್ಮರಾದ ನೀವು । **ಉರ್ವಿಯಾ**—ಅತ್ಯಧಿಕವಾಗಿ । **ವಿ ರಾಜಥ**—ಪ್ರಕಾಶಿಸುತ್ತೀರಿ । **ಉತ**—ಮತ್ತು । **ಅಂತರಿಕ್ಷಂ**—ಅಂತರಿಕ್ಷವನ್ನೂ । **ಓಜಸಾ**—ನಿಮ್ಮ ಬಲದಿಂದ । **ವಿ ಮಮಿರೇ**—ವ್ಯಾಪಿಸಿದ್ದೀರಿ । **ಶುಭಂ**—ಕಲ್ಯಾಣಕಾರಕರಾಗಿ । **ಯಾತಾಂ**—ಹೋಗುತ್ತಿರುವ ಮರುತ್ತುಗಳ । **ರಥಾಃ**—ರಥಗಳೂ ಕೂಡ । **ಅನು ಅವೃತ್ಸತ**—ಅವರನ್ನೇ ಅನುಸರಿಸುತ್ತವೆ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನಿಮ್ಮ ಶಕ್ತಿಯನ್ನು ನಿಮಗೆ ಔಚಿತ್ಯ ತೋರಿದಂತೆ, ಇತರರ ಸಹಾಯವಿಲ್ಲದೇ ನೀವು ಧರಿಸಿದ್ದೀರಿ. ಮಹಾತ್ಮರಾದ ನೀವು ಅತ್ಯಧಿಕವಾಗಿ ಪ್ರಕಾಶಿಸುತ್ತಿದ್ದೀರಿ. ಅಂತರಿಕ್ಷವನ್ನೂ ನಿಮ್ಮ ಬಲದಿಂದ ವ್ಯಾಪಿಸಿದ್ದೀರಿ. ಕಲ್ಯಾಣಕಾರಕರಾಗಿ ಹೋಗುತ್ತಿರುವ ಮರುತ್ತುಗಳ ರಥಗಳೂ ಕೂಡ ಅವರನ್ನೇ ಅನುಸರಿಸುತ್ತವೆ.

English Translation

Maruts, you have of yourselves maintained your vigour according as you judge (fit): you shine most mighty and vast, and you pervade the firmament with your power: may the cars of the quick-moving (Maruts) arrive for our good.

॥ ವಿಶೇಷ ವಿಷಯಗಳು ॥

**ಯಥಾ ವಿದ ತವಿಷೀಂ ಸ್ವಯಂ ದಧಿಧ್ವೇ**—ಎಲೈ ಮರುತ್ತುಗಳೇ, ನೀವು ಇಷ್ಟಪಟ್ಟರೆ ಇತರರ ಸಹಾಯವಿಲ್ಲದೆ ನಿಮ್ಮ ಶಕ್ತಿಸಾಮರ್ಥ್ಯಾದಿಗಳನ್ನು ಎಲ್ಲರಿಗೂ ತಿಳಿಯುವಂತೆ ಪ್ರಕಾಶಪಡಿಸುತ್ತೀರಿ. ನಿಮ್ಮ ಶಕ್ತಿಸಾಮರ್ಥ್ಯಾದಿಗಳು ಅಗಾಧವಾದುವು ನೀವು ಇನ್ನೊಬ್ಬರ ಸಹಾಯವನ್ನು ಅಪೇಕ್ಷಿಸುವವರಲ್ಲ. ಇಂತಹ ನಿಮ್ಮ ಸಾಮರ್ಥ್ಯಾತಿಶಯವು ನೀವು ಅಂತರಿಕ್ಷದಲ್ಲಿ ಸಂಚರಿಸುವಾಗ (ರಭಸದಿಂದ ಬೀಸುವಾಗ) ಸಮಸ್ತರಿಗೂ ಗೋಚರವಾಗುವುದು ನೀವು ನಿಮ್ಮ ಈ ಶಕ್ತಿಪ್ರದರ್ಶನವನ್ನು ನಿಮಗೆ ಇಷ್ಟಬಂದಾಗ ಮಾತ್ರ ಪ್ರದರ್ಶಿಸುತ್ತೀರಿ ಎಂದು ವಾಕ್ಯದ ಮುಖ್ಯಾಭಿಪ್ರಾಯವು ಮುಂದಿನ **ಬೃಹನ್ಮಹಾಂತ ಉರ್ವಿಯಾ ವಿ ರಾಜಥ** ಮತ್ತು **ಉತಾಂತರಿಕ್ಷಂ ಮಮಿರೇ ವ್ಯೋಜಸಾ** ಎಂಬ ವಾಕ್ಯಗಳು ಈಗ ಹೇಳಿದ ಅರ್ಥವನ್ನೇ ಪ್ರಕಾರಾಂತರವಾಗಿ ಸ್ಪಷ್ಟಪಡಿಸುವವು.

॥ ಸಂಹಿತಾಪಾಠಃ ॥

ಸಾಕಂ ಜಾತಾಃ ಸುಭ್ವಃ ಸಾಕಮುಕ್ಷಿತಾಃ ಶ್ರಿಯೇ ಚಿದಾ ಪ್ರತರಂ ವಾವೃಧುರ್ನರಃ ।
ವಿರೋಕಿಣಃ ಸೂರ್ಯಸ್ಯೇವ ರಶ್ಮಯಃ ಶುಭಂ ಯಾತಾಮನು ರಥಾ ಅವೃತ್ಸತ ॥ ೩ ॥

॥ ಪದಪಾಠಃ ॥

ಸಾಕಂ । ಜಾತಾಃ । ಸುऽಭ್ವಃ । ಸಾಕಂ । ಉಕ್ಷಿತಾಃ । ಶ್ರಿಯೇ । ಚಿತ್ । ಆ । ಪ್ರऽತರಂ । ವವೃಧುಃ । ನರಃ ।
ವಿऽರೋಕಿಣಃ । ಸೂರ್ಯಸ್ಯऽಇವ । ರಶ್ಮಯಃ । ಶುಭಂ । ಯಾತಾಂ । ಅನು । ರಥಾಃ । ಅವೃತ್ಸತ ॥೩॥

॥ ಸಾಯಣಭಾಷ್ಯಂ ॥

**ಸಾಕಂ ಸಹೈವ ಜಾತಾ ಉತ್ಪನ್ನಾ ಸುಭ್ವಃ ಸುಷ್ಠು ಭವಂತಃ । ಮಹಾಂತ ಇತ್ಯರ್ಥಃ । ತಥೈವ ಸಾಕಂ ಸಹೈವೋಕ್ಷಿತಾಃ ಸೇಕ್ತಾರೋ ವರ್ಷಕಾಃ ಶ್ರಿಯೇ ಚಿತ್ ಶೋಭಾಯಾ ಏವ ಪ್ರತರಂ ಪ್ರಕೃಷ್ಟ-ತರಮಾ ಸರ್ವತೋ ವವೃಧುಃ । ಅವರ್ಧಯನ್ । ನರಃ ಕರ್ಮಣಾಂ ನೇತಾರೋ ವಿರೋಕಿಣಃ ವಿರೋಚ-ಮಾನಾಃ ಸೂರ್ಯಸ್ಯೇವ ರಶ್ಮಯಃ ಸೂರ್ಯರಶ್ಮಯ ಇವ । ಶುಭಮಿತ್ಯಾದಿ ಗತಂ ॥**

॥ ಪ್ರತಿಪದಾರ್ಥ ॥

**ಸಾಕಂ**—ಒಟ್ಟಿಗೆ । **ಜಾತಾಃ**—ಉತ್ಪನ್ನರಾದವರೂ । **ಸುಭ್ವಃ**—ಮಹಾತ್ಮರೂ । **ಸಾಕಂ**—ಒಟ್ಟಿಗೆ । **ಉಕ್ಷಿತಾಃ**—ವೃಷ್ಟಿಯನ್ನು ಸುರಿಸುವವರೂ ಆದ ಮರುತ್ತುಗಳು । **ಶ್ರಿಯೇ ಚಿತ್**—ಅತ್ಯಧಿಕವಾದ ಸೌಂದರ್ಯಕಾರಕರಾಗಿಯೇ । **ಪ್ರತರಂ**—ಅತಿಶಯವಾಗಿ । ಆ-ಸರ್ವತ್ರ । **ವವೃಧುಃ**—ವೃದ್ಧಿಯನ್ನು ಪಡೆದಿದ್ದಾರೆ । **ಸೂರ್ಯಸ್ಯೇವ**—ಸೂರ್ಯನ । **ರಶ್ಮಯಃ**—ರಶ್ಮಿಗಳಂತೆ । **ವಿರೋಕಿಣಃ**—ಪ್ರಕಾಶಮಾನರಾಗಿದ್ದಾರೆ । **ಶುಭಂ**—ಮಂಗಳಕಾರಕರಾಗಿ । **ಯಾತಾಂ**—ಹೋಗುತ್ತಿರುವ ಮರುತ್ತುಗಳ । **ರಥಾಃ**—ರಥಗಳು ಕೂಡ । **ಅನು ಅವೃತ್ಸತ**—ಅವರನ್ನೇ ಅನುಸರಿಸುತ್ತವೆ.

॥ ಭಾವಾರ್ಥ ॥

ಒಟ್ಟಿಗೆ ಉತ್ಪನ್ನರಾದವರೂ, ಮಹಾತ್ಮರೂ, ಒಟ್ಟಿಗೆ ವೃಷ್ಟಿಯನ್ನು ಸುರಿಸುವವರೂ ಆದ ಮರುತ್ತುಗಳು ಅತ್ಯಧಿಕವಾದ ಸೌಂದರ್ಯಕಾರಕರಾಗಿಯೇ ಅತಿಶಯವಾಗಿ ಸರ್ವತ್ರ ವೃದ್ಧಿಯನ್ನು ಪಡೆದಿದ್ದಾರೆ. ಸೂರ್ಯನ ರಶ್ಮಿಗಳಂತೆ ಪ್ರಕಾಶಮಾನರಾಗಿದ್ದಾರೆ. ಮಂಗಳಕಾರಕರಾಗಿ ಹೋಗುತ್ತಿರುವ ಮರುತ್ತುಗಳ ರಥಗಳೂ ಕೂಡ ಅವರನ್ನೇ ಅನುಸರಿಸುತ್ತವೆ.

## English Translation

Born simultaneously, mighty, co-dispensers of moisture, they have grown exceedingly in glory: leaders (of rites), and radiant (are they) as the rays of the sun: may the cars of the quick-moving (Maruts) arrive for our good.

॥ ವಿಶೇಷವಿಷಯಗಳು ॥

**ಸಾಕಂ ಜಾತಾಃ—ಸಹೈವ ಉತ್ಪನ್ನಾಃ** । ಒಟ್ಟಿಗೆ ಉತ್ಪನ್ನರಾದವರು. ಮರುದ್ದೇವತೆಗಳ ಉತ್ಪತ್ತಿ ವಿಚಾರವನ್ನು ನಾವು ಹಿಂದೆಯೇ ಎಂದರೆ ಈ ಭಾಗದ 596 ನೇ ಪುಟದಲ್ಲಿ ವಿವರಿಸಿದೇವೆ. ದಿತಿದೇವಿಯ ಗರ್ಭದಲ್ಲಿದ್ದ ಗರ್ಭಪಿಂಡವನ್ನು ಇಂದ್ರನು ವಜ್ರಾಯುಧದಿಂದ ಏಳು ಭಾಗಗಳನ್ನಾಗಿಯೂ ಆ ಏಳು ಭಾಗಗಳಲ್ಲಿ ಪ್ರತಿಯೊಂದನ್ನೂ ಮತ್ತೆ ಏಳು ಭಾಗಗಳನ್ನಾಗಿಯೂ, ಕತ್ತರಿಸಿದನೆಂದೂ ಒಟ್ಟು ಆ ನಲವತ್ತೊಂಬತ್ತು ಗರ್ಭಪಿಂಡದ ಚೂರುಗಳನ್ನು ಪರಮೇಶ್ವರನು ಅನುಗ್ರಹಬುದ್ಧಿಯಿಂದ ಪ್ರತ್ಯೇಕ ಪುತ್ರರನ್ನಾಗಿ ಪರಿವರ್ತಿಸಿದನೆಂದೂ ಇವರೇ ಮರುದ್ಗಣಗಳೆಂದೂ ಹಿಂದೆಯೇ ಹೇಳಿದೆ. ಆದ್ದರಿಂದ ಈ ನಲವತ್ತೊಂಭತ್ತುಮಂದಿ ಮರುದ್ದೇವತೆಗಳನ್ನು **ಸಾಕಂ ಜಾತಾಃ** ಏಕಕಾಲದಲ್ಲಿ ಜನಿಸಿದವರೆಂದು ಋಷಿಯು ವರ್ಣಿಸಿದ್ದಾನೆ.

**ಸುಭ್ವಃ—ಸುಷ್ಠು ಭವಂತಃ । ಮಹಾಂತ ಇತ್ಯರ್ಥಃ ।** ಚೆನ್ನಾಗಿ ಶೋಭಿಸುತ್ತಿರುವವರು , ಎಂದರೆ ಹಿಂದೆ —

**ಅಂಸೇಷು ವ ಋಷ್ಟಯಃ ಪತ್ಸು ಖಾದಯೋ ವಕ್ಷಃಸು ರುಕ್ಮಾ ಮರುತೋ ರಥೇ ಶುಭಃ ।**
**ಅಗ್ನಿಭ್ರಾಜಸೋ ವಿದ್ಯುತೋ ಗಭಸ್ತ್ಯೋಃ ಶಿಪ್ರಾಃ ಶೀರ್ಷಸು ವಿತತಾ ಹಿರಣ್ಮಯೀಃ ॥**

(ಋ ಸಂ. ೫-೫೪-೧೧)

ಎಂಬ ಋಕ್ಕಿನಲ್ಲಿ ವರ್ಣಿಸಿರುವಂತೆ ಈ ಮರುದ್ದೇವತೆಗಳು ಬಾಹುಗಳಲ್ಲಿ ಋಷ್ಟಿಯೆಂಬ ಆಯುಧವನ್ನು ಧರಿಸಿರುವರು. ಪಾದಗಳಲ್ಲಿ ಕಾಲ್ಗಡಗಗಳನ್ನೂ, ಎದೆಯ ಮೇಲೆ ಹಾರಗಳನ್ನೂ, ಶಿರಸ್ಸಿನಲ್ಲಿ ಸುವರ್ಣಮಯವಾದ ಕಿರೀಟವನ್ನೂ ಧರಿಸಿ ಕೈಗಳಲ್ಲಿ ಮಿಂಚಿನಂಥ ಥಳಥಳಿಸುವ ದಿವ್ಯಾಯುಧಗಳನ್ನು ಹಿಡಿದು ಉತ್ತಮವಾದ ರಥದಲ್ಲಿ ಮಂಡಿಸಿ ಅಗ್ನಿಯಂತೆ ದೇದೀಪ್ಯಮಾನವಾದ ದಿವ್ಯಕಾಂತಿಯಿಂದ ಬೆಳಗುತ್ತಿರುವರು ಎಂದಭಿಪ್ರಾಯವು. ಇದಲ್ಲದೆ ಮಹಾಮಹಿಮೆಯುಳ್ಳವರು ಮತ್ತು ಅಪಾರವಾದ ಶಕ್ತಿಸಾಮರ್ಥ್ಯಗಳುಳ್ಳವರು ಎಂದೂ ಹೇಳಬಹುದು.

**ವಿರೋಕಿಣಃ ಸೂರ್ಯಸ್ಯೇವ ರಶ್ಮಯಃ ಆ ವವೃಧುಃ**—ಪ್ರಕಾಶಮಾನವಾದ ಸೂರ್ಯನ ರಶ್ಮಿಗಳು ಯಾವ ಪ್ರಕಾರ ಅಂತರಿಕ್ಷದಲ್ಲಿ ಸರ್ವತ್ರವ್ಯಾಪಿಸುವುವೋ ಅದರಂತೆ ಅಂತರಿಕ್ಷದಲ್ಲಿ ಸಂಚರಿಸುವ ಸ್ವಭಾವವುಳ್ಳ ಮರುದ್ದೇವತೆಗಳು ಸಹ ಎಲ್ಲಾ ಕಡೆಯಲ್ಲಿಯೂ ವೃದ್ಧಿಯನ್ನು ಹೊಂದಿದರು ಎಂದರೆ ವ್ಯಾಪಿಸಿದರು. (ಗಾಳಿಯು ಅಂತರಿಕ್ಷದಲ್ಲಿ ಎಲ್ಲಾ ಕಡೆಯಲ್ಲಿಯೂ ಬೀಸುವುದರಿಂದ ಎಲ್ಲೆಲ್ಲಿಯೂ ಸೂರ್ಯನ ಬೆಳಕು ಹರಡುವಂತೆ ವ್ಯಾಪಿಸಿತು ಎಂದು ಮುಖ್ಯಾಭಿಪ್ರಾಯವು)

॥ ಸಂಹಿತಾಪಾಠಃ ॥

ಆಭೂಷೇಣ್ಯಂ ವೋ ಮರುತೋ ಮಹಿತ್ವನಂ ದಿದೃಕ್ಷೇಣ್ಯಂ ಸೂರ್ಯಸ್ಯೇವ ಚಕ್ಷಣಂ ।
ಉತೋ ಅಸ್ಮಾँ ಅಮೃತತ್ವೇ ದಧಾತನ ಶುಭಂ ಯಾತಾಮನು ರಥಾ ಅವೃತ್ಸತ ॥ ೪ ॥

॥ ಪದಪಾಠಃ ॥

ಆऽಭೂಷೇಣ್ಯಂ । ವಃ । ಮರುತಃ । ಮಹಿऽತ್ವನಂ । ದಿದೃಕ್ಷೇಣ್ಯಂ । ಸೂರ್ಯಸ್ಯऽಇವ । ಚಕ್ಷಣಂ ।
ಉತೋ ಇತಿ । ಅಸ್ಮಾನ್ । ಅಮೃತऽತ್ವೇ । ದಧಾತನ । ಶುಭಂ । ಯಾತಾಂ । ಅನು । ರಥಾಃ । ಅವೃತ್ಸತ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಮರುತೋ ವೋ ಯುಷ್ಮಾಕಂ ಮಹಿತ್ವನಂ ಮಹತ್ತ್ವಮಾಭೂಷೇಣ್ಯಂ ಸ್ತುತ್ಯಂ । ಕಿಂಚ ಸೂರ್ಯಸ್ಯೇವ ಚಕ್ಷಣಂ ರೂಪಮಿವ ದಿದೃಕ್ಷೇಣ್ಯಂ ದರ್ಶನೀಯಂ । ಉತೋ ಅಪಿ ಚಾಸ್ಮಾನಮೃತತ್ವೇ ಮೋಕ್ಷೇ । ಸ್ವರ್ಗ ಇತ್ಯರ್ಥಃ । ತತ್ರ ದಧಾತನ । ಧಾರಯತ । ಶಿಷ್ಟಂ ಗತಂ ॥**

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ವಃ**—ನಿಮ್ಮ । **ಮಹಿತ್ವನಂ**-ಮಾಹಾತ್ಮ್ಯವು । **ಆಭೂಷೇಣ್ಯಂ**-ಪ್ರಶಸ್ಯವಾದುದು । **ಸೂರ್ಯಸ್ಯ**—ಸೂರ್ಯನ । **ಚಕ್ಷಣಂ ಇವ**—ಸ್ವರೂಪದಂತೆ । **ದಿದೃಕ್ಷೇಣ್ಯಂ**—ದರ್ಶನಕ್ಕೆ ಯೋಗ್ಯವಾದುದು । **ಉತೋ**—ಮತ್ತು । **ಅಸ್ಮಾನ್**—ನಮ್ಮನ್ನು । **ಅಮೃತತ್ವೇ**—ಮರಣರಾಹಿತ್ಯವನ್ನು ಹೊಂದುವಂತೆ । **ದಧಾತನ**—ಧರಿಸಿರಿ । **ಶುಭಂ**—ಮಂಗಳಕಾರಕರಾಗಿ । **ಯಾತಾಂ**—ಹೋಗುತ್ತಿರುವ ಮರುತ್ತುಗಳ । **ರಥಾಃ**—ರಥಗಳು । **ಅನು ಅವೃತ್ಸತ**—ಅವರನ್ನೇ ಅನುಸರಿಸುತ್ತವೆ

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನಿಮ್ಮ ಮಾಹಾತ್ಮ್ಯವು ಪ್ರಶಸ್ಯವಾದುದು. ಸೂರ್ಯನ ಮಂಡಲದಂತೆ ನಿಮ್ಮ ಸ್ವರೂಪವೂ ದರ್ಶನಕ್ಕೂ, ಧ್ಯಾನಕ್ಕೂ ಯೋಗ್ಯವಾದುದು. ನಮ್ಮನ್ನು ಅಮೃತರಾಗುವಂತೆ ಅನುಗ್ರಹಿಸಿ ಮಂಗಳಕಾರಕರಾಗಿ ಹೋಗುತ್ತಿರುವ ಮರುತ್ತುಗಳ ರಥಗಳು ಅವರನ್ನೇ ಅನುಸರಿಸುತ್ತವೆ

English Translation

Your might, Maruts, is to be glorified · it is to be contemplated like the orb of the sun : sustain us ever in immortality: may the cars of the quick-moving (Maruts) arrive for our good.

——— O ———

॥ ಸಂಹಿತಾಪಾಠಃ ॥

ಉದೀರಯಥಾ ಮರುತಃ ಸಮುದ್ರತೋ ಯೂಯಂ ವೃಷ್ಟಿಂ ವರ್ಷಯಥಾ ಪುರೀಷಿಣಃ ।
ನ ವೋ ದಸ್ರಾ ಉಪ ದಸ್ಯಂತಿ ಧೇನವಃ ಶುಭಂ ಯಾತಾಮನು ರಥಾ ಅವೃತ್ಸತ ॥ ೫ ॥

॥ ಪದಪಾಠಃ ॥

**ಉತ್ । ಈರಯಥ । ಮರುತಃ । ಸಮುದ್ರತಃ । ಯೂಯಂ । ವೃಷ್ಟಿಂ । ವರ್ಷಯಥ । ಪುರೀಷಿಣಃ ।**

**ನ । ವಃ । ದಸ್ರಾಃ । ಉಪ । ದಸ್ಯಂತಿ । ಧೇನವಃ । ಶುಭಂ । ಯಾತಾಂ । ಅನು । ರಥಾಃ । ಅವೃತ್ಸತ ॥**

॥ ಸಾಯಣಭಾಷ್ಯಂ ॥

**ಕಾರೀರ್ಯಾಂ ಪ್ರಥಮಸ್ಯಾಃ ಪಿಂಡ್ಯಾ ಉದೀರಯಥೇತ್ಯನುವಾಕ್ಯಾ । ಸೂತ್ರಿತಂ ಚ । ಉದೀರಯಥಾ ಮರುತಃ ಸಮುದ್ರತಃ ಪ್ರ ವೋ ಮರುತಸ್ತವಿಷಾ ಉದನ್ಯವಃ । ಆ-೨-೧೩ । ಇತಿ ॥**

**ಹೇ ಮರುತೋ ಯೂಯಂ ಸಮುದ್ರತಃ ಸಮುದ್ದ್ರವಣಸಾಧನಾದಂತರಿಕ್ಷಾದುದೀರಯಥ । ಪ್ರೇರಯಥ ವೃಷ್ಟಿಂ । ಅಯಮೇವಾರ್ಥಃ ಪುನರುಚ್ಯತೇ । ಹೇ ಪುರೀಷಿಣಃ । ಪೃಣಾತೇಃ ಪ್ರೀಣಾತೇರ್ವಾ ಪುರೀಷಮುದಕಂ । ಹೇ ತದ್ವಂತೋ ಯೂಯಂ ವೃಷ್ಟಿಂ ವರ್ಷಯಥ । ಹೇ ದಸ್ರಾ ದರ್ಶನೀಯಾಃ ಶತ್ರೂಣಾಮುಪಕ್ಷಪಯಿತಾರೋ ವಾ ವೋ ಯುಷ್ಮಾಕಂ ಧೇನವಃ ಪ್ರೀಣಯಿತಾರೋ ಮೇಘಾ ನೋಪ ದಸ್ಯಂತಿ । ನ ಶುಷ್ಯಂತಿ ॥**

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ಯೂಯಂ**—ನೀವು । **ಸಮುದ್ರತಃ**—ಅಂತರಿಕ್ಷದಿಂದ । **ವೃಷ್ಟಿಂ**-ವೃಷ್ಟಿಯನ್ನು । **ಉದೀರಯಥ**—ಪ್ರೇರಿಸುತ್ತೀರಿ । **ಪುರೀಷಿಣಃ**—ಉದಕಭರಿತರಾದ ನೀವು । **ವರ್ಷಯಥ**—ಮಳೆಯನ್ನು ಸುರಿಸುತ್ತೀರಿ । **ದಸ್ರಾಃ**—ದರ್ಶನೀಯವಾದ ರೂಪವುಳ್ಳ ಎಲೈ ಮರುತ್ತುಗಳೇ। **ವಃ**—ನಿಮ್ಮ ಸಂಬಂಧಿಯಾದ । **ಧೇನವಃ**—ತೃಪ್ತಿಕಾರಕವಾದ ಮೇಘಗಳು । **ನ ಉಪ ದಸ್ಯಂತಿ**—ಯಾವಾಗಲೂ ಶೋಷಿಸುವುದಿಲ್ಲ । **ಶುಭಂ**—ಶುಭಕಾರಕರಾಗಿ । **ಯಾತಾಂ**—ಹೋಗುತ್ತಿರುವ ಮರುತ್ತುಗಳ । **ರಥಾಃ**—ರಥಗಳೂ । **ಅನು-ಅವೃತ್ಸತ**—ಅವರನ್ನೇ ಅನುಸರಿಸುತ್ತವೆ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನೀವು ಅಂತರಿಕ್ಷದಿಂದ ವೃಷ್ಟಿಯನ್ನು ಪ್ರೇರಿಸುತ್ತೀರಿ. ಉದಕಭರಿತರಾದ ನೀವು ಮಳೆಯನ್ನು ಸುರಿಸುತ್ತೀರಿ. ದರ್ಶನೀಯವಾದ ರೂಪವುಳ್ಳ ಎಲೈ ಮರುತ್ತುಗಳೇ, ನಿಮಗೆ ಸೇರಿದವೂ, ತೃಪ್ತಿಕಾರಕವೂ ಆದ ಮೇಘಗಳು ಯಾವಾಗಲೂ ಶೋಷಿಸುವುದಿಲ್ಲ. ಶುಭಕಾರಕರಾಗಿ ಹೋಗುತ್ತಿರುವ ಮರುತ್ತುಗಳ ರಥಗಳೂ ಅವರನ್ನೇ ಅನುಸರಿಸುತ್ತವೆ

English Translation

You send (the rain), Maruts, from the firmament: charged with the waters you shower down the rain: destroyers of foes, your milch cows are never dry: may the quick-moving (Maruts) arrive for our good.

॥ ವಿಶೇಷವಿಷಯಗಳು ॥

ಕಾರೀರ್ಯೇಷ್ಟಿಯಲ್ಲಿ ಪ್ರಥಮ ಪಿಂಡಿಹೋಮದಲ್ಲಿ **ಉದೀರಯಥಾ** ಎಂಬ ಈ ಋಕ್ಕನ್ನು ಅನುವಾಕ್ಯಾ ಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಉದೀರಯಥಾ ಮರುತಃ ಸಮುದ್ರತಃ ಪ್ರ ವೋ ಮರುತಸ್ತವಿಷಾ ಉದನ್ಯವಃ** ಎಂಬ ಸೂತ್ರದಿಂದ (ಆ ೨-೧೩) ವಿವೃತವಾಗಿರುವುದು.

**ಸಮುದ್ರತಃ**—ಸಮುದ್ರಶಬ್ದವು ಅಂತರಿಕ್ಷನಾಮಗಳಲ್ಲಿ (ನಿ. ೧.೧೦) ಪಠಿತವಾಗಿದೆ, ಮತ್ತು ಈ ಋಕ್ಕಿನಲ್ಲಿ ಇದೇ ಅರ್ಥದಲ್ಲಿ ಪ್ರಯುಕ್ತವಾಗಿದೆ

**ಸಮುದ್ರ ಶಬ್ದ**ವು ಋಕ್ಸಂಹಿತೆಯಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಪ್ರಯೋಗಿಸಲ್ಪಟ್ಟಿರುವುದರಿಂದ ನಿರುಕ್ತ ಕಾರರು **ಸಮುದ್ರ** ಶಬ್ದವನ್ನು **ಅಂತರಿಕ್ಷ** ನಾಮುಗಳಲ್ಲಿ ಸೇರಿಸಿರುವರು (ನಿ. ೨.೧೦). ಅನಂತರ ಪಾರ್ಥಿವವಾದ **ಸಮುದ್ರಕ್ಕೂ ಅಂತರಿಕ್ಷ**ಪರ್ಯಾಯವಾದ **ಸಮುದ್ರಕ್ಕೂ** ವ್ಯತ್ಯಾಸವನ್ನು ತೋರಿಸಿದ್ದಾರೆ. ಇವೆರಡಕ್ಕೂ ವ್ಯತ್ಯಾಸ ವನ್ನು ತಿಳಿಯದೇ ಸಂದೇಹಕ್ಕವಕಾಶವನ್ನು ಕೊಡುವಂತೆ ಅರ್ಥಮಾಡುವವರನ್ನು ಕುರಿತು,

**ತತ್ರ ಸಮುದ್ರ ಇತ್ಯೇತತ್ಪಾರ್ಥಿವೇನ ಸಮುದ್ರೇಣ ಸಂದಿಹ್ಯತೇ।** ಅಂತರಿಕ್ಷ ಪರ್ಯಾಯವಾದ ಸಮುದ್ರ ವನ್ನು ಅನೇಕರು ಪಾರ್ಥಿವಸಮುದ್ರವೆಂದು ಭ್ರಮಿಸಿ ಅರ್ಥಮಾಡುತ್ತಾರೆ. ಅದು ಸರಿಯಲ್ಲ ಎಂದು ಸಮುದ್ರ ಶಬ್ದಕ್ಕೆ ನಿರ್ವಚನವನ್ನು ತೋರಿಸಿದ್ದಾರೆ.

**ಸಮುದ್ರಃ ಕಸ್ಮಾತ್ಸಮುದ್ದ್ರವಂತ್ಯಸ್ಮಾದಾಪಃ ಸಮಭಿದ್ರವಂತ್ಯೇನಮಾಪಃ ಸಂಮೋದಂತೇಽಸ್ಮಿನ್ ಭೂತಾನಿ ಸಮುದಕೋ ಭವತಿ ಸಮುನತ್ತೀತಿ ವಾ । (ನಿ. ೨-೧೧)**

ಮೊದಲನೆಯದಾಗಿ ಚಲಿಸು ಎಂಬರ್ಥವನ್ನು ಕೊಡುವ **ದ್ರು** ಧಾತುವಿನೊಡನೆ **ಸಮ್, ಉದ್** ಎರಡು ಉಪಸರ್ಗ ಗಳೂ ಸೇರಿಕೊಂಡು ಮೇಲಕ್ಕೆ ಉಕ್ಕಿ ಹರಿಯುತ್ತದೆ ಎಂದು ತ್ಪಾತರ್ಯವನ್ನು ಕೊಡುತ್ತದೆಯಾದ್ದರಿಂದಲೂ, ಅಥವಾ ಎರಡನೆಯದಾಗಿ ಅದೇ **ದ್ರು** ಧಾತುವಿನೊಡನೆ **ಸಮ್, ಅಭಿ** ಎಂಬ ಉಪಸರ್ಗಗಳು ಸೇರಿಕೊಂಡು (ನದಿಯ) ನೀರುಗಳು ಇದರಕಡೆಗೆ ಹರಿದುಬರುತ್ತವೆಯೆಂಬ ಅರ್ಥವನ್ನು ಕೊಡುವುದರಿಂದಲಾಗಲಿ, ಅಥವಾ **ಸಂತೋಷಪಡು** ಎಂದರ್ಥವನ್ನು ಕೊಡುವ **ಮುದ್** ಧಾತುವಿನೊಡನೆ **ಸಮ್** ಎಂಬ ಉಪಸರ್ಗವು ಸೇರಿ ಜಲಚರ ಪ್ರಾಣಿಗಳು ಇದರಲ್ಲಿ ಹರ್ಷವನ್ನನುಭವಿಸುತ್ತವೆ ಎಂಬರ್ಥವನ್ನು ಕೊಡುವುದರಿಂದಲಾಗಲಿ, ಅಥವಾ ಉದಕಕ್ಕೆ ನಿಧಿಯಾಗಿರು ವುದರಿಂದಲಾಗಲಿ ಅಥವಾ **ತೇವಮಾಡು** ಎಂಬರ್ಥವನ್ನು ಕೊಡುವ **ಉದ್** ಧಾತುವಿನೊಡನೆ **ಸಮ್** ಉಪಸರ್ಗವು ಸೇರಿ ನೆನೆಯಿಸು ಎಂದು ತಾತ್ಪರ್ಯವನ್ನು ಕೊಡುವುದರಿಂದಲಾಗಲಿ, **ಸಮುದ್ರ**ವೆಂಬ ಪದವು ನಿಷ್ಪನ್ನವಾಗಿದೆಯೆಂದು ಆ ಪದದ ನಿರ್ವಚನವನ್ನು ತೋರಿಸಿದ್ದಾರೆ (ನಿ. ೨-೧೦). ಈ ಸಂದರ್ಭದಲ್ಲಿ ಅಂತರಿಕ್ಷಪರ್ಯಾಯವಾದ ಸಮುದ್ರ ಶಬ್ದಕ್ಕೂ ಪಾರ್ಥಿವವಾದ ಸಮುದ್ರಕ್ಕೂ ವ್ಯತ್ಯಾಸವನ್ನು ತೋರಿಸುವುದಕ್ಕೆ ಒಂದು ಇತಿಹಾಸವನ್ನೂ ಉದಹರಿಸಿದ್ದಾರೆ.

**ತಯೋರ್ವಿಭಾಗಸ್ತತ್ರೇತಿಹಾಸಮಾಚಕ್ಷತೇ । ದೇವಾಪಿಶ್ಚಾರ್ಷ್ಟಿಷೇಣಃ ಶಂತನುಶ್ಚ ಕೌರವ್ಯೌ ಭ್ರಾತರೌ ಬಭೂವತುಃ । ಸ ಶಂತನುಃ ಕನೀಯಾನಭಿಷೇಚಯಾಂಚಕ್ರೇ । ದೇವಾಪಿಸ್ತಪಃ ಪ್ರತಿಪೇದೇ । ತತಃ ಶಂತನೋ ರಾಜ್ಯೇ ದ್ವಾದಶ ವರ್ಷಾಣಿ ದೇವೋ ನ ವವರ್ಷ । ತಮೂಚುರ್ಬ್ರಾಹ್ಮಣಾ ಅಧರ್ಮಸ್ತ್ವಯಾ ಚರಿತೋ ಜ್ಯೇಷ್ಠಂ ಭ್ರಾತರಮಂತರಿತ್ಯಾಭಿಷೇಚಿತಂ ತಸ್ಮಾತ್ತೇ ದೇವೋ ನ ವರ್ಷತೀತಿ । ಸ ಶಂತನುರ್ದೇವಾಪಿಂ ಶಿಶಿಕ್ಷ ರಾಜ್ಯೇನ । ತಮುವಾಚ ದೇವಾಪಿಃ ಪುರೋಹಿತಸ್ತೇಽಸಾನಿ ಯಾಜಯಾನಿ ಚ ತ್ವೇತಿ । ತಸ್ಯೈತದ್ವರ್ಷಕಾಮಸೂಕ್ತಂ ತಸ್ಯೈಷಾ ಭವತಿ ॥**

ಕುರುವಂಶಸ್ಥರೂ, ಋಷ್ಟಿಷೇಣ ಪುತ್ರರೂ ಆದ **ದೇವಾಪಿ** ಮತ್ತು **ಶಂತನು** ಎಂಬಿಬ್ಬರಲ್ಲಿ ಚಿಕ್ಕವನಾದ ಶಂತನುವು ತಾನೇ ಪಟ್ಟಾಭಿಷಿಕ್ತನಾಗಿ ಆ ರಾಜ್ಯಕ್ಕೆ ದೊರೆಯಾದನು. ದೇವಾಪಿಯು ತಪಶ್ಚರಣೆಗಾಗಿ ಕಾಡಿಗೆ ಹೊರಟುಹೋದನು. ಅಲ್ಲಿಂದ ಮೊದಲು ಹನ್ನೆರಡು ವರ್ಷಗಳಕಾಲ ಶಂತನುವಿನ ರಾಜ್ಯದಲ್ಲಿ ಮಳೆಯಾಗಲಿಲ್ಲ. ಆಗ ಬ್ರಾಹ್ಮಣರು ಶಂತನು

ವನ್ನು ಕುರಿತು, ನೀನು ದೊಡ್ಡವನಾದ ನಿಮ್ಮಣ್ಣನನ್ನು ಕಾಡಿಗೆ ಕಳುಹಿಸಿ ನೀನೇ ದೊರೆಯಾಗಿರುವುದರಿಂದ ನೀನು ಪಾಪಕೃತ್ಯವನ್ನು ಮಾಡಿದಂತಾಯಿತು. ಆದುದರಿಂದ ವೃಷ್ಟಿದೇವನು ನಿನ್ನ ರಾಜ್ಯದಲ್ಲಿ ಮಳೆಯನ್ನು ಸುರಿಸಿಲ್ಲ ಎಂದರು. ಆಗ ಶಂತನುವು ದೇವಾಪಿಯನ್ನು ರಾಜ್ಯಾಭಿಷಿಕ್ತನನ್ನಾಗಿ ಮಾಡಲು ಪ್ರಯತ್ನಿಸಿದಾಗ ದೇವಾಪಿಯು ನಾನು ನಿನಗೆ ಪುರೋಹಿತನಾಗಿದ್ದುಕೊಂಡು ನಿನಗಾಗಿ ಯಜ್ಞವನ್ನು ನೆರವೇರಿಸುತ್ತೇನೆ ಎಂದು ವೃಷ್ಟ್ಯರ್ಥವಾಗಿ ಯಜ್ಞವನ್ನು ಮಾಡಿಸಿದನು ಅನಂತರ ಊರ್ಧ್ವಭಾಗದಲ್ಲಿರುವ **ಸಮುದ್ರದಿಂದ** ಅಧೋಭಾಗದಲ್ಲಿರುವ **ಸಮುದ್ರಕ್ಕೆ** ಮಳೆಯು ಸುರಿಯಿತು ಎಂದು ಎರಡು ಸಮುದ್ರಗಳಿಗೂ ವ್ಯತ್ಯಾಸವನ್ನು ತೋರಿಸುವ,

**ಆರ್ಷ್ಟಿಷೇಣೋ ಹೋತ್ರಮೃಷಿರ್ನಿಷೀದನ್ ದೇವಾಪಿರ್ದೇವಸುಮತಿಂ ಚಿಕಿತ್ವಾನ್ ।**
**ಸ ಉತ್ತರಸ್ಮಾದಧರಂ ಸಮುದ್ರಮಪೋ ದಿವ್ಯಾ ಅಸೃಜದ್ವರ್ಷ್ಯಾ ಅಭಿ ॥**

(ಋ. ಸಂ. ೧೦-೯೮-೫)

ಈ ಋಕ್ಕನ್ನು ಉದಹರಿಸಿ ಇಲ್ಲಿರುವ **ಉತ್ತರಸಮುದ್ರಕ್ಕೂ, ಅಧರ**ಸಮುದ್ರಕ್ಕೂ ವ್ಯತ್ಯಾಸವನ್ನು ತೋರಿಸಿದ್ದಾರೆ. ಇಲ್ಲಿ **ಉತ್ತರಸಮುದ್ರ**ವೆಂದರೆ ಅಂತರಿಕ್ಷವೆಂದೂ, **ಅಧರಸಮುದ್ರ**ವೆಂದರೆ ಪಾರ್ಥಿವಸಮುದ್ರವೆಂದೂ ಅರ್ಥ. ಋಕ್ಸಂಹಿತೆಯಲ್ಲಿ **ಸಮುದ್ರ**ಶಬ್ದಕ್ಕೆ ಕೆಲವೆಡೆಗಳಲ್ಲಿ ನಿಷ್ಕರ್ಷವಾಗಿ ಪಾರ್ಥಿವಸಮುದ್ರವೆಂದೇ ಹೇಳಬಹುದು. ಆದರೆ.

**ಯಥಾ ವಾತೋ ಯಥಾ ವನಂ ಯಥಾ ಸಮುದ್ರ ಏಜತಿ ।**

(ಋ ಸಂ ೫-೭೮-೮)

ಇತ್ಯಾದಿ ಋಕ್ಕುಗಳಲ್ಲಿ **ಅಂತರಿಕ್ಷ** ಪರ್ಯಾಯವೇ ಅಥವಾ **ಪಾರ್ಥಿವ** ಸಮುದ್ರವೇ ಎಂದು ಹೇಳಲು ಕಷ್ಟವಾಗುವುದು.

**ಅಗ್ನಿಂ ವಿಶ್ವಾ ಅಭಿ ಪೃಕ್ಷಃ ಸಚಂತೇ ಸಮುದ್ರಂ ನ ಸ್ರವತಃ ಸಪ್ತ ಯಹ್ವೀಃ ।**

(ಋ. ಸಂ. ೧-೭೧-೭)

**ಸಂ ಯಂ ಸ್ತುಭೋಽವನಯೋ ನ ಯಂತಿ ಸಮುದ್ರಂ ನ ಸ್ರವತೋ ರೋಧಚಕ್ರಾಃ ।**

(ಋ. ಸಂ. ೧-೧೯೦-೭)

**ಯಾ ಆಪೋ ದಿವ್ಯಾ ಉತ ವಾ ಸ್ರವಂತಿ ಖನಿತ್ರಿಮಾ ಉತ ವಾ ಯಾಃ ಸ್ವಯಂಜಾಃ ।**
**ಸಮುದ್ರಾರ್ಥಾ ಯಾಃ ಶುಚಯಃ ಪಾವಕಾಸ್ತಾ ಆಪೋ ದೇವೀರಿಹ ಮಾಮವಂತು ॥**

(ಋ. ಸಂ. ೭-೪೯-೨)

ಇತ್ಯಾದಿ ನಾನಾ ಋಕ್ಕುಗಳಲ್ಲಿ ಪಾರ್ಥಿವಸಮುದ್ರವೆಂದು ನಿಷ್ಕರ್ಷವಾಗಿ ಹೇಳಬಹುದು. ಕೆಲವು ಕಡೆಗಳಲ್ಲಿ ಈ ಪದವು ವಿಶೇಷಣವಾಗಿ ಉಪಯೋಗಿಸಲ್ಪಟ್ಟು **ಪ್ರವಿಸತಕ್ಕ** ಎಂಬರ್ಥವನ್ನು ಕೊಡುತ್ತದೆ.

**ಅದ್ಭಿರ್ಯಾತಿ ವರುಣಃ ಸಮುದ್ರೈರ್ಯುಷ್ಮಾँ ಇಚ್ಛಂತಃ ಶವಸೋ ನಪಾತಃ ।**

(ಋ ಸಂ. ೧-೧೬೧-೧೪)

ಎಂಬ ಋಕ್ಕಿನಲ್ಲಿ **ಸಮುದ್ರೈಃ ಸಮುಂದನಸ್ವಭಾವೈಃ ಅದ್ಭಿಃ** ಪ್ರವಿಸತಕ್ಕ ಸ್ವಭಾವವುಳ್ಳ ಉದಕಗಳೊಡನೆ ಎಂದರ್ಥ. ಹೀಗೆಯೇ ಸಂದರ್ಭಾನುಸಾರವಾಗಿ ಅರ್ಥಮಾಡಬೇಕು.

॥ ಸಂಹಿತಾಪಾಠಃ ॥

ಯದಶ್ವಾನ್ಧೂರ್ಷು ಪೃಷತೀರಯುಗ್ಧ್ವಂ ಹಿರಣ್ಯಯಾನ್ಪ್ರತ್ಯತ್ಕಾಁ ಅಮುಗ್ಧ್ವಂ ।
ವಿಶ್ವಾ ಇತ್ಸ್ಪೃಧೋ ಮರುತೋ ವ್ಯಸ್ಯಥ ಶುಭಂ ಯಾತಾಮನು ರಥಾ ಅವೃತ್ಸತ ॥ ೬ ॥

॥ ಪದಪಾಠಃ ॥

ಯತ್ । ಅಶ್ವಾನ್ । ಧೂಃऽಸು । ಪೃಷತೀಃ । ಅಯುಗ್ಧ್ವಂ । ಹಿರಣ್ಯಯಾನ್ । ಪ್ರತಿ । ಅತ್ಕಾನ್ । ಅಮುಗ್ಧ್ವಂ ।
ವಿಶ್ವಾಃ । ಇತ್ । ಸ್ಪೃಧಃ । ಮರುತಃ । ವಿ । ಅಸ್ಯಥ । ಶುಭಂ । ಯಾತಾಂ । ಅನು । ರಥಾಃ । ಅವೃತ್ಸತ ॥ ೬ ॥

॥ ಸಾಯಣಭಾಷ್ಯಂ ॥

ಹೇ ಮರುತೋ ಯೂಯಂ ಯದ್ಯದಾಶ್ವಾನ್ ಧೂರ್ಷು ರಥಸಂಬಂಧಿನೀಷ್ವಯುಗ್ಧ್ವಂ ಯೋಜಿತವಂತಃ ಸ್ಥ । ಕೀದೃಶಾನಶ್ವಾನ್ । ಪೃಷತೀಃ । ಪೃಷತ್ಯೋ ಮರುತಾಮಿತ್ಯುಕ್ತತ್ವಾತ್ । ಪೃಷದ್ವರ್ಣಾ ವಡವಾಃ । ಸಾರಂಗೀ ವಾತ್ರಾಶ್ವಶಬ್ದವಾಚ್ಯಾ । ಹಿರಣ್ಯಯಾನ್ಹಿರಣ್ಯವರ್ಣಾನತ್ಕಾನ್ಕವಚಾನ್ ಪ್ರತ್ಯಮುಗ್ಧ್ವಂ ಪ್ರತ್ಯಮುಂಚತ । ಏವಂ ಕೃತ್ವಾ ವಿಶ್ವಾ ಇತ್ ಸ್ಪೃಧಃ ಸರ್ವಾನಪಿ ಸಂಗ್ರಾಮಾನ್ ಹೇ ಮರುತೋ ವ್ಯಸ್ಯಥ । ವಿಕ್ಷಿಪಥ । ಶುಭಮಿತ್ಯಾದಿ ಗತಂ ॥

॥ ಪ್ರತಿಪದಾರ್ಥ ॥

(ಎಲೈ ಮರುತ್ತುಗಳೇ) **ಯತ್**—ಯಾವಾಗ । **ಪೃಷತೀಃ**—ಪೃಷದ್ವರ್ಣವುಳ್ಳ । **ಅಶ್ವಾನ್**—ಅಶ್ವಗಳನ್ನು । **ಧೂರ್ಷು**—ನಿಮ್ಮ ರಥದ ನೊಗಗಳಲ್ಲಿ । **ಅಯುಗ್ಧ್ವಂ**—ಸೇರಿಸಿ ಕಟ್ಟುತ್ತೀರೋ (ಆಗ) । **ಹಿರಣ್ಯಯಾನ್**—ಸುವರ್ಣನಿರ್ಮಿತವಾದ । **ಅತ್ಕಾನ್**—ನಿಮ್ಮ ಕವಚಗಳನ್ನು । **ಪ್ರತಿ ಅಮುಗ್ಧ್ವಂ**—ಧರಿಸಿಕೊಳ್ಳುತ್ತೀರಿ (ಅನಂತರ) । **ಮರುತಃ**—ಎಲೈ ಮರುತ್ತುಗಳೇ । **ವಿಶ್ವಾ ಇತ್**—ಸಮಸ್ತವಾದ । **ಸ್ಪೃಧಃ**—ಶತ್ರುಗಳನ್ನೂ । **ವ್ಯಸ್ಯಥ**—ಹೊಡೆದು ಉರುಳಿಸುತ್ತೀರಿ । **ಶುಭಂ**—ಶುಭಕಾರಕರಾಗಿ । **ಯಾತಾಂ**—ಹೋಗುತ್ತಿರುವ ಮರುತ್ತುಗಳ । **ರಥಾಃ**—ರಥಗಳೂ । **ಅನು ಅವೃತ್ಸತ**—ಅವರನ್ನೇ ಅನುಸರಿಸುತ್ತವೆ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಪೃಷದ್ವರ್ಣಗಳುಳ್ಳ (ಚುಕ್ಕೆಗಳಿಂದ ಕೂಡಿದ) ನಿಮ್ಮ ಅಶ್ವಗಳನ್ನು (ಸಾರಂಗಗಳನ್ನು) ನೀವು ಯಾವಾಗ ನಿಮ್ಮ ರಥಗಳ ನೊಗಗಳಿಗೆ ಸೇರಿಸಿ ಕಟ್ಟುತ್ತೀರೋ ಆಗ ನೀವು ನಿಮ್ಮ ಸುವರ್ಣನಿರ್ಮಿತಗಳಾದ

ಕವಚಗಳನ್ನು ಧರಿಸಿಕೊಳ್ಳುತ್ತೀರಿ. ಅನಂತರ ಎಲೈ ಮರುತ್ತುಗಳೇ, ಸಕಲ ಶತ್ರುಗಳನ್ನೂ ಹೊಡೆದು ಉರುಳಿಸುತ್ತೀರಿ. ಶುಭಕಾರಕರಾಗಿ ಹೋಗುತ್ತಿರುವ ಮರುತ್ತುಗಳ ರಥಗಳೂ ಅವರನ್ನೇ ಅನುಸರಿಸುತ್ತವೆ.

English Translation

When you yoke your spotted mares to the poles (of your chariots), you lay aside your golden breast-plates, for you dissipate all hostility; may the cars of the quick-moving (Maruts) arrive for our good

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಮರುದ್ದೇವತೆಗಳು ಯುದ್ಧಸಿದ್ಧತೆಯನ್ನು ಮಾಡಿಕೊಂಡು ಯುದ್ಧಕ್ಕೆ ಹೋಗುತ್ತಿರುವುದನ್ನು ವರ್ಣಿಸಿದೆ. ಮೊದಲು ಮರುತ್ತುಗಳು ತಮ್ಮ ರಥಕ್ಕೆ ಪೃಷದ್ವರ್ಣ ಎಂದರೆ ಬಿಳೀಚುಕ್ಕೆಗಳುಳ್ಳ ಜಿಂಕೆಗಳನ್ನು ತಮ್ಮ ರಥಕ್ಕೆ ಕಟ್ಟಿ ರಥವನ್ನು ಸಜ್ಜುಗೊಳಿಸುತ್ತಾರೆ. ಅನಂತರ ತಮ್ಮ ಶರೀರಗಳು ಶತ್ರುಗಳ ಆಯುಧಗಳಿಗೆ ಅಭೇದ್ಯವಾಗಿರುವುದಕ್ಕಾಗಿ ಸುವರ್ಣಮಯವಾದ ಕವಚಗಳನ್ನು ( Armours ) ಧರಿಸುತ್ತಾರೆ. ಅನಂತರ ತಮಗೆ ಇಷ್ಟಬಂದಕಡೆ ಸಂಚರಿಸುವ ಶಕ್ತಿಯುಳ್ಳ ತಮ್ಮ ರಥದಲ್ಲಿ ಕುಳಿತು ಶತ್ರುಗಳನ್ನು (ಮೇಘಗಳನ್ನು) ಹೊಡೆದು ಓಡಿಸುತ್ತಾರೆ ಎಂಬ ಯುದ್ಧವರ್ಣನೆಯು ಇಲ್ಲಿ ಉಕ್ತವಾಗಿದೆ.

॥ ಸಂಹಿತಾಪಾಠಃ ॥

ನ ಪರ್ವತಾ ನ ನದ್ಯೋ ವರಂತ ವೋ ಯತ್ರಾಚಿಧ್ವಂ ಮರುತೋ ಗಚ್ಛಥೇದು ತತ್ ।
ಉತ ದ್ಯಾವಾಪೃಥಿವೀ ಯಾಥನಾ ಪರಿ ಶುಭಂ ಯಾತಾಮನು ರಥಾ ಅವೃತ್ಸತ ॥ ೭ ॥

॥ ಪದಪಾಠಃ ॥

ನ । ಪರ್ವತಾಃ । ನ । ನದ್ಯಃ । ವರಂತ । ವಃ । ಯತ್ರ । ಅಚಿಧ್ವಂ । ಮರುತಃ । ಗಚ್ಛಥ । ಇತ್ ।
ಊಂ ಇತಿ । ತತ್ ।
ಉತ । ದ್ಯಾವಾಪೃಥಿವೀ ಇತಿ । ಯಾಥನ । ಪರಿ । ಶುಭಂ । ಯಾತಾಂ । ಅನು । ರಥಾಃ । ಅವೃತ್ಸತ ॥೭॥

॥ ಸಾಯಣಭಾಷ್ಯಂ ॥

**ಹೇ ಮರುತೋ ವೋ ಯುಷ್ಮಾನ್ ಪರ್ವತಾಃ ಶಿಲೋಚ್ಚಯಾ ನ ವರಂತ । ನ ವಾರಯಂತು । ತಥಾ ನದ್ಯಶ್ಚ ನ ವಾರಯಂತು । ಕಿಂತು ಯತ್ರ ಯಸ್ಮಿನ್ಯಜ್ಞಾದಿಸ್ಥಾನೇಽಚಿಧ್ವಂ ಜಾನೀಥ ಸಂಕಲ್ಪಯಥ ತತ್ಸ್ಥಾನಂ ಗಚ್ಛಥೇದು । ಗಚ್ಛಥೈವ। ಉತಾಪಿ ಚ ದ್ಯಾವಾಪೃಥಿವೀ ಚ ಪರಿ ಪರಿತೋ ಯಾಥನ। ಯಾಥ ವೃಷ್ಟ್ಯರ್ಥಮಿತಿ ॥**

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ವಃ**—ನಿಮ್ಮನ್ನು । **ಪರ್ವತಾಃ**—ಪರ್ವತಗಳು । **ನ ವರಂತ**—ತಡೆಯದಿರಲಿ । **ನದ್ಯಃ**—ನದಿಗಳೂ । **ನ**—ತಡೆಯದಿರಲಿ । **ಯತ್ರ**—ಯಾವ ಪ್ರದೇಶಕ್ಕೆ । **ಅಚಿಧ್ವಂ**—ಹೋಗಬೇಕೆಂದು ಸಂಕಲ್ಪಿಸುವರೋ । **ತತ್**—ಆ ಸ್ಥಾನವನ್ನು । **ಗಚ್ಛಥೇದು**—ಖಂಡಿತ ಹೋಗಿ ಸೇರುತ್ತಿರಿ । **ಉತ**—ಮತ್ತು । **ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳನ್ನು । **ಪರಿ**—ಸುತ್ತಲೂ । **ಯಾಥನ**—ಸಂಚರಿಸುತ್ತೀರಿ । **ಶುಭಂ**—ಶುಭಕಾರಕರಾಗಿ । **ಯಾತಾಂ**—ಸಂಚರಿಸುವ ಮರುತ್ತುಗಳ । **ರಥಾಃ**—ರಥಗಳೂ ಕೂಡ । **ಅನು-ಅವೃತ್ಸತ**—ಅವರನ್ನೇ ಹಿಂಬಾಲಿಸುತ್ತವೆ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನಿಮ್ಮನ್ನು ಪರ್ವತಗಳಾಗಲಿ, ನದಿಗಳಾಗಲಿ ತಡೆಯದಿರಲಿ. ನೀವು ಯಾವ ಪ್ರದೇಶಕ್ಕೆ ಹೋಗಬೇಕೆಂದು ಸಂಕಲ್ಪಿಸುವಿರೋ, ಆ ಪ್ರದೇಶವನ್ನು ಹೋಗಿ ಖಂಡಿತ ಸೇರುತ್ತೀರಿ. ಮತ್ತು ವೃಷ್ಟ್ಯರ್ಥವಾಗಿ ದ್ಯಾವಾಪೃಥಿವಿಗಳನ್ನೆಲ್ಲಾ ಸಂಚರಿಸುತ್ತೀರಿ. ಶುಭಕಾರಕರಾಗಿ ಸಂಚರಿಸುವ ಮರುತ್ತುಗಳ ರಥಗಳೂ ಸಹ ಅವರನ್ನೇ ಹಿಂಬಾಲಿಸುತ್ತವೆ.

## English Translation

Let not the mountains, let not the rivers, arrest you : whither you purpose, (Maruts), thither repair, and compass heaven and earth; may the cars of the quick-moving (Maruts) arrive for our good.

॥ ವಿಶೇಷವಿಷಯಗಳು ॥

**ಪರ್ವತ** ಶಬ್ದದ ಪ್ರಯೋಗವು **ಇಂದ್ರ** ಮತ್ತು **ಮರುತ್ತು**ಗಳ ಸೂಕ್ತಗಳಲ್ಲಿಯೇ ಅಧಿಕವಾಗಿದೆ. ಇದರ ಸಾಧಾರಣವಾದ ಅರ್ಥವು ಪರ್ವತ (ಬೆಟ್ಟ) ವೆಂದೇ ಆದರೂ ಇದು **ಮೇಘ** ಪರ್ಯಾಯವಾಗಿರುವುದು ವಾಡಿಕೆಯಾಗಿದೆ. ನಿರುಕ್ತಕಾರರು **ಪರ್ವವಾನ್ ಪರ್ವತಃ । ಪರ್ವ ಪುನಃ ಪೃಣಾತೇಃ ಪ್ರೀಣಾತೇರ್ವಾ । ಮೇಘೋಽಪಿ ಗಿರಿರೇತಸ್ಮಾದೇವ** । (ನಿ. ೧-೨೦) **ತುಂಬು** ಎಂಬರ್ಥವನ್ನು ಕೊಡುವ ಪೃಧಾತುವಿನಿಂದಾಗಲೀ ಆರಾಧಿಸು ಅಥವಾ ತೃಪ್ತಿಗೊಳಿಸು ಎಂಬರ್ಥವನ್ನು ಕೊಡುವ **ಪ್ರೀ** ಧಾತುವಿನಿಂದಾಗಲೀ ನಿಷ್ಪನ್ನವಾದ **ಪರ್ವ** ಶಬ್ದದಿಂದ **ಪರ್ವತ**ವೆಂದಾಗಿದೆಯೆಂದು ತೋರಿಸಿ **ಪರ್ವತ** (ಬೆಟ್ಟ) ಅಥವಾ **ಮೇಘ** ಎಂದಾಗುತ್ತದೆಯೆಂದು ನಿರ್ವಚನವನ್ನು ಮಾಡಿ

ದ್ವಾರೆ. ಈ ಶಬ್ದವ್ಯುತ್ಪತ್ತಿಯು ಬರಿದಾಗಿರುವ ಪ್ರದೇಶವನ್ನು ತುಂಬುವುದು ಎಂಬಭಿಪ್ರಾಯವನ್ನಾಗಲಿ ಅಥವಾ **ಭೂತ** ಗಳನ್ನು (ವೃಷ್ಟ್ಯಾದಿಗಳಿಂದ) ತೃಪ್ತಿಪಡಿಸುವುದು ಎಂಬಭಿಪ್ರಾಯವನ್ನಾಗಲಿ ಕೊಡುತ್ತದೆ. ಇದರಲ್ಲಿ ನಿರೋಧಕವಾದು ಪರ್ವತವಾವುದು, ಉಪಕಾರಕವಾದ ಪರ್ವತವಾವುದು ಎಂಬುದನ್ನು ಗಮನಿಸಬೇಕು.

ಸಾಧಾರಣವಾಗಿ ಅಸುರರೊಂದಿಗೂ, ಪರ್ವತಗಳೊಂದಿಗೂ ಇಂದ್ರನ ಹೋರಾಟವನ್ನು ತಮಸ್ತೇಜಸ್ಸುಗಳ ಹೋರಾಟವೆಂದು ಹೇಳಬಹುದು

**ವಿ ಚಿದ್ವೃತ್ರಸ್ಯ ದೋಧತೋ ವಜ್ರೇಣ ಶತಪರ್ವಣಾ । ಶಿರೋ ಬಿಭೇದ ವೃಷ್ಣಿನಾ ॥**
(ಋ. ಸಂ. ೮-೬-೬)

ಎಂಬ ಋಕ್ಕಿನಲ್ಲಿ ಶತಸಂಖ್ಯಾಕವಾದುದೂ, ರಶ್ಮಿರೂಪವಾದುದೂ ಆದ ಪರ್ವಗಳುಳ್ಳ ವಜ್ರಾಯುಧದಿಂದ ತಮೋರೂಪನಾದವನೂ ಆವರಕನಾದವನೂ ಆದ ಅಸುರನನ್ನು ನಾಶಮಾಡಿದನು. ಇತ್ಯಾದ್ಯುದಾಹರಣೆಗಳಿಂದ **ವೃತ್ರಾದಿ** ಪದಗಳೂ ಸಹ ಜಗತ್ತನ್ನು ಆವರಿಸುವ ತಮಸ್ಸಿನ ಭೂತಾಕಾರವನ್ನು ತೋರಿಸುವಂತೆ **ಪರ್ವತ** ಶಬ್ದವೂ ಸಹ ಪರ್ವತಾಕಾರದ ತಮಸ್ಸನ್ನು ನಿರ್ದೇಶಿಸುತ್ತದೆಯೆಂದು ಹೇಳಬಹುದು. ಇದಲ್ಲದೇ ಕೇವಲ ಬೆಟ್ಟ ಅಥವಾ ಮೇಘ ವೆಂದು ಸಾಧಾರಣವಾದ ಅರ್ಥವನ್ನು ಮಾಡಿದರೆ ಆಗ ಸನ್ನಿವೇಶಗಳಿಗನುಗುಣವಾದ ಪೂರ್ಣಾರ್ಥವನ್ನು ಕೊಡುವುದಿಲ್ಲ. ಹೇಗೆಂದರೆ **ಪರ್ವತ** ಹನನದಿಂದ ಮರೆಮಾಡಿ ಇರಿಸಿದ ಗೋವುಗಳನ್ನೂ ಉದಕಗಳನ್ನೂ ಬಿಡಿಸುವುದೂ ಮತ್ತು ಉಷಸ್ಸನ್ನೂ, ಸೂರ್ಯನನ್ನೂ ಆವಿರ್ಭಾವವಾಗುವಂತೆ ಮಾಡುವುದೂ ಹೀಗೆ ನಾಲ್ಕುವಿಧವಾದ ಕಾರ್ಯಸಾಧನೆಯು ವರ್ಣಿತವಾಗಿದೆ. ಆದುದರಿಂದ ಪರ್ವತಶಬ್ದಕ್ಕೆ ಕೇವಲ ಮೇಘವೆಂದೇ ಅರ್ಥಮಾಡಿದರೆ ಅದು ಸನ್ನಿವೇಶಗಳಿಗನು ಗುಣವಾಗಿರುವುದಿಲ್ಲ

**ಅದರ್ದರುತ್ಸಮಸೃಜೋ ವಿ ಖಾನಿ ತ್ವಮರ್ಣವಾನ್ಬದ್ಬಧಾನಾಁ ಅರಮ್ಣಾಃ ।**
**ಮಹಾಂತಮಿಂದ್ರ ಪರ್ವತಂ ವಿ ಯದ್ವಃ ಸೃಜೋ ವಿ ಧಾರಾ ಅವ ದಾನವಂ ಹನ್ ॥**
(ಋ. ಸಂ. ೫-೩೨-೧)

ಎಂಬ ಋಕ್ಕಿನಲ್ಲಿಯೂ,

**ಶಿಶುಂ ನದೀನಾಂ ಹರಿಮದ್ರಿಬುಧ್ನಮಿತಿ ಗಿರಿರ್ವಾ ಅದ್ರಿರ್ಗಿರಿಬುಧ್ನಾ ॥**
(ಶ. ಬ್ರಾ ೭-೫-೨-೧೮)

ಎಂಬ ಬ್ರಾಹ್ಮಣವಾಕ್ಯದಲ್ಲಿಯೂ ಸಹ **ಪರ್ವತ, ಮೇಘ** ಎಂಬ ಪದಗಳಿಗೆ ಒಂದು ಅತಿಶಯವಾದುದೂ ಅಲೌಕಿಕ ವಾದುದೂ ಆದ ಅರ್ಥವಿರುವುದಾಗಿ ತಿಳಿಯುತ್ತದೆ ಇದು ಪರ್ವತಾಕಾರವಾದ ತಮೋರಾಶಿಯೆಂದೂ, ದ್ಯುಲೋಕಸ್ಥ ವೆಂದೂ, ಉದಕವನ್ನೂ ಗೋವನ್ನೂ ಮರೆಸಿಕೊಂಡಿರುವುದಾಗಿಯೂ ವರ್ಣಿತವಾಗಿದೆ. ಈ ತಮಸ್ಸನ್ನು ಭೇದಿಸಿ ಇಂದ್ರನು ಮರುತ್ತುಗಳೂ ಉದಕವನ್ನೂ, ತೇಜಸ್ಸನ್ನೂ ಪ್ರಸರಿಸುವಂತೆ ಮಾಡುತ್ತಾನೆ.

**ಅಹನ್ನಹಿಂ ಪರ್ವತೇ ಶಿಶ್ರಿಯಾಣಂ ತ್ವಷ್ಟಾಸ್ಮೈ ವಜ್ರಂ ಸ್ವರ್ಯಂ ತತಕ್ಷ ।**
(ಋ. ಸಂ. ೧.೩೨.೨)

ಇತ್ಯಾದಿ ಋಕ್ಕುಗಳಲ್ಲಿ **ಅಹಿ, ಶಂಬರ, ವೃತ್ರ** ಇತ್ಯಾದ್ಯಸುರರು ಈ ಪರ್ವತರೂಪವಾದ ತಮೋರಾಶಿಯಲ್ಲಿ ಅಡಗಿ ಪ್ರಹರಿಸುವ ನೀರನ್ನು ತಡೆಯುವುದರಿಂದ ಅವರನ್ನು ನಾಶಮಾಡುವ ಇಂದ್ರನು ಸ್ತುತ್ಯನು ಎಂದಿದೆ. ಹೀಗೆಯೇ

ಅನೇಕ ಕಡೆಗಳಲ್ಲಿ **ಪರ್ವತ** ಪದವು ಶತ್ರುಪರ್ಯಾಯವಾಗಿಯೂ, ಅಥವಾ ಶತ್ರುಗಳಿಗೆ ಆಶ್ರಯವಾಗಿಯೂ ಇರುವ ವರ್ಣನೆಯಿದೆ. ಆದುದರಿಂದಲೇ, **ಆರಂಸ್ತ ಪರ್ವತಶ್ಚಿತ್ಸರಿಷ್ಯನ್** (ಋ. ಸಂ. ೨-೧೧-೭), **ಶುಷ್ಮಾಚ್ಚಿದಸ್ಯ ಪರ್ವತಾ ಭಯಂತೇ** (ಋ. ಸಂ. ೨-೧೨-೧೩) ಇತ್ಯಾದಿ ಋಕ್ಕುಗಳಲ್ಲಿ ತೇಜೋರೂಪಿಯಾದ ಇಂದ್ರನು ಪ್ರತ್ಯಕ್ಷ ವಾದೊಡನೆಯೇ ಪರ್ವತರೂಪಿಗಳಾದ ತಮೋರಾಶಿಗಳು ಭಯದಿಂದ ನಡುಗಿದವೆಂದೂ, ಅವನ್ನು ಇಂದ್ರನು ಪಾತಾಳ ದಲ್ಲಿ ಅಡಗಿಸಿದನೆಂದೂ ಹೇಳಿದೆ—

ಈ ವರ್ಣನೆಗಳಿಗೆ ವಿರುದ್ಧವಾಗಿ **ಪರ್ವತವು** ತೇಜೋರೂಪಿಯಾದ ವಜ್ರಾಯುಧವೆಂದೂ, ವೃಷ್ಟ್ಯುದಕಾದಿ ಗಳಿಗೆ ಅಧಿದೇವತೆಯಾದ **ಪರ್ಜನ್ಯನೆಂದೂ** ಸಹ ಅನೇಕ ಕಡೆಗಳಲ್ಲಿ ಹೇಳಿದೆ.

**ಪ್ರಾಕ್ತಾದಪಾಕ್ತಾದಧರಾದುದಕ್ತಾದಭಿ ಜಹಿ ರಕ್ಷಸಃ ಪರ್ವತೇನ ।**

(ಋ. ಸಂ. ೭ ೧೦೪-೧೯)

**ಅಸ್ಮೇ ರುದ್ರಾ ಮೇಹನಾ ಪರ್ವತಾಸೋ ವೃತ್ರಹತ್ಯೇ ಭರಹೂತೌ ಸಜೋಷಾಃ ।**

(ಋ ಸಂ. ೮-೬೩-೧೨)

ಇತ್ಯಾದಿ ಋಕ್ಕುಗಳಲ್ಲಿ ಪರ್ವತಗಳು ಶತ್ರುನಾಶಕಾರ್ಯದಲ್ಲಿ ಇಂದ್ರನಿಗೆ ಸಹಾಯಕಗಳಾದ ಸಾಧನಗಳಾಗಿವೆ.

**ಪ್ರ ಪೂಷಣಂ ವಿಷ್ಣುಮಗ್ನಿಂ ಪುರಂಧಿಂ ಸವಿತಾರಮೋಷಧೀಃ ಪರ್ವತಾಂಶ್ಚ ।**

(ಋ. ಸಂ ೬-೨೧-೯)

**ಶಂ ನಃ ಪರ್ವತಾ ಧ್ರುವಯೋ ಭವಂತು ಶಂ ನಃ ಸಿಂಧವಃ ಶಮು ಸನ್ತ್ವಾಪಃ ।**

(ಋ. ಸಂ. ೭-೩೫-೮)

ಇತ್ಯಾದಿ ಋಕ್ಕುಗಳಲ್ಲಿ **ಪರ್ವತಕ್ಕೆ** ಮಿತ್ರ, ವರುಣ, ಪೂಷ ಮುಂತಾದ ದೇವತೆಗಳೊಡನೆ ಆಹ್ವಾನವಿದೆ.

**ಯುವಂ ತಮಿಂದ್ರಾಪರ್ವತಾ ಪುರೋಯುಧಾ ಯೋ ನಃ ಪೃತನ್ಯಾದಪ ತಂತಮಿದ್ಧತಂ ವಜ್ರೇಣ ತಂತಮಿದ್ಧತಂ ।**

(ಋ. ಸಂ. ೧-೧೩೩-೬)

**ಇಂದ್ರಾಪರ್ವತಾ ಬೃಹತಾ ರಥೇನ ವಾಮೀರಿಷ ಆ ವಹತಂ ಸುವೀರಾಃ ।**

(ಋ. ಸಂ. ೩-೫೩-೧)

ಎಂಬ ಕಡೆಗಳಲ್ಲಿಯೂ ಇತರ ಋಕ್ಕುಗಳಲ್ಲಿಯೂ **ಇಂದ್ರನಿಗೂ, ಪರ್ವತಕ್ಕೂ** ಜೊತೆಯಲ್ಲಿ ಆಹ್ವಾನವೂ ಸ್ತುತಿಯೂ ಇದೆ. ಇಲ್ಲಿ **ಪರ್ವತವೆಂದರೆ ಪರ್ಜನ್ಯನೆಂಬರ್ಥವೆಂದು** ಸಾಯಣರು ಹೇಳಿದ್ದಾರೆ. ಇಲ್ಲಿ **ಪರ್ವತವು** ಆರಾಧ್ಯ ದೇವತೆ.

॥ ಸಂಹಿತಾಪಾಠಃ ॥

ಯತ್ಪೂರ್ವ್ಯಂ ಮರುತೋ ಯಚ್ಚ ನೂತನಂ ಯದುದ್ಯತೇ ವಸವೋ ಯಚ್ಚ ಶಸ್ಯತೇ ।

ವಿಶ್ವಸ್ಯ ತಸ್ಯ ಭವಥಾ ನವೇದಸಃ ಶುಭಂ ಯಾತಾಮನು ರಥಾ ಅವೃತ್ಸತ ॥

॥ ಪದಪಾಠಃ ॥

ಯತ್ । ಪೂರ್ವ್ಯಂ । ಮರುತಃ । ಯತ್ । ಚ । ನೂತನಂ । ಯತ್ । ಉದ್ಯತೇ । ವಸವಃ । ಯತ್ । ಚ । ಶಸ್ಯತೇ ।

ವಿಶ್ವಸ್ಯ । ತಸ್ಯ । ಭವಥ । ನವೇದಸಃ । ಶುಭಂ । ಯಾತಾಂ । ಅನು । ರಥಾಃ । ಅವೃತ್ಸತ ॥ ೮ ॥

॥ ಸಾಯಣಭಾಷ್ಯಂ ॥

ಹೇ ಮರುತೋ ಯೂಯಂ ಯತ್ಪೂರ್ವ್ಯಂ ಪೂರ್ವತನಂ ಪೂರ್ವಮನುಷ್ಠಿತಂ ಯತ್ಕರ್ಮಾಸ್ತಿ ತದಿತ್ಯರ್ಥಃ । ಯಚ್ಚ ನೂತನಂ ಕರ್ಮಾಸ್ತಿ । ಯಚ್ಚೋದ್ಯತ ಊರ್ಧ್ವಂ ಪ್ರಾಪ್ಯತೇ । ಸ್ತೂಯತ ಇತ್ಯರ್ಥಃ । ಹೇ ವಸವೋ ವಾಸಕಾ ಯಚ್ಚ ಶಸ್ಯತೇ ಶಂಸನಂ ಕ್ರಿಯತೇ ತಸ್ಯ ವಿಶ್ವಸ್ಯೋಕ್ತ್ಯಸ್ಯ ನವೇದಸೋ ಜಾನಂತೋ ಭವಥ ॥

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ಯತ್**—ಯಾವ ಕರ್ಮವು । **ಪೂರ್ವ್ಯಂ**—ಪುರಾತನವಾಗಿ ಆಚರಿಸಲ್ಪಟ್ಟಿತೋ । **ಯಚ್ಚ**—ಯಾವುದು । **ನೂತನಂ**—ಈಗ ಆಚರಿಸಲ್ಪಡುವುದೋ । **ಯತ್**—ಯಾವ ಸ್ತುತಿಯು । **ಉದ್ಯತೇ**—ಗಟ್ಟಿಯಾಗಿ ಪಠಿತವಾಗುವುದೋ । **ವಸವಃ**—ವಸತಿಕಾರಕರಾದ ಎಲೈ ಮರುತ್ತುಗಳೇ । **ಯಚ್ಚ**—ಯಾವ ಸ್ತುತಿಯು । **ಶಸ್ಯತೇ**—ನಿಮ್ಮ ಪ್ರಶಂಸಾತ್ಮಕವಾಗಿ ಪಠಿಸಲ್ಪಡುವುದೋ । **ತಸ್ಯ ವಿಶ್ವಸ್ಯ**—ಸಮಸ್ತವಾದ ಆಯಾಕರ್ಮ ಮತ್ತು ಸ್ತುತಿಗಳನ್ನು । **ನವೇದಸಃ**—ನೀವು ಅರಿತವರಾಗಿ । **ಭವಥ**—ಆಗುತ್ತೀರಿ । **ಶುಭಂ**—ಶುಭಕಾರಕರಾಗಿ । **ಯಾತಾಂ**—ಹೋಗುತ್ತಿರುವ ಮರುತ್ತುಗಳ । **ರಥಾಃ**—ರಥಗಳೂ ಕೂಡ । **ಅನು ಅವೃತ್ಸತ**—ಅವರನ್ನೇ ಹಿಂಬಾಲಿಸುತ್ತವೆ.

॥ ಭಾವಾರ್ಥ ॥

ವಸತಿದಾಯಕರಾದ ಎಲೈ ಮರುತ್ತುಗಳೇ, ನಿಮ್ಮನ್ನುದ್ದೇಶಿಸಿ ಹಿಂದೆ ಯಾವ ಕರ್ಮವು ಆಚರಿಸಲ್ಪಟ್ಟಿತೋ, ಈಗ ಯಾವುದು ಆಚರಿಸಲ್ಪಡುವುದೋ, ಯಾವ ಸ್ತುತಿಯು ಗಟ್ಟಿಯಾಗಿ ಪಠಿತವಾಗುವುದೋ, ಯಾವುದು ನಿಮಗೆ

ಪ್ರಶಂಸಾತ್ಮಕವಾಗಿರುವುದೋ ಆಯಾ ಸಮಸ್ತ ಕರ್ಮಗಳನ್ನೂ ಮತ್ತು ಸ್ತುತಿಗಳನ್ನೂ ನೀವು ಪೂರ್ಣವಾಗಿ ಅರಿಯುತ್ತೀರಿ. ಶುಭಕಾರಕರಾಗಿ ಹೋಗುತ್ತಿರುವ ಮರುತ್ತುಗಳ ರಥಗಳೂ ಸಹ ಅವರನ್ನೇ ಹಿಂಬಾಲಿಸುತ್ತವೆ.

## English Translation

Whatever (rite has been addressed to you), Maruts of old; whatever is recent; whatever (hymn) is recited, Vasus, whatever prayer is repeated, do you be cognizant of all: may the cars of the quick-moving (Maruts) arrive for our good.

॥ ಸಂಹಿತಾಪಾಠಃ ॥

ಮೃಳತ ನೋ ಮರುತೋ ಮಾ ವಧಿಷ್ಟನಾಸ್ಮಭ್ಯಂ ಶರ್ಮ ಬಹುಲಂ ವಿ ಯಂತನ ।
ಅಧಿ ಸ್ತೋತ್ರಸ್ಯ ಸಖ್ಯಸ್ಯ ಗಾತನ ಶುಭಂ ಯಾತಾಮನು ರಥಾ ಅವೃತ್ಸತ ॥

॥ ಪದಪಾಠಃ ॥

ಮೃಳತ । ನಃ । ಮರುತಃ । ಮಾ । ವಧಿಷ್ಟನ । ಅಸ್ಮಭ್ಯಂ । ಶರ್ಮ । ಬಹುಲಂ । ವಿ । ಯಂತನ ।
ಅಧಿ । ಸ್ತೋತ್ರಸ್ಯ । ಸಖ್ಯಸ್ಯ । ಗಾತನ । ಶುಭಂ । ಯಾತಾಂ । ಅನು । ರಥಾಃ । ಅವೃತ್ಸತ ॥ ೯ ॥

॥ ಸಾಯಣಭಾಷ್ಯಂ ॥

**ಹೇ ಮರುತೋ ನೋಽಸ್ಮಾನ್ ಮೃಳತ । ಸುಖಯತ । ಮಾ ವಧಿಷ್ಟನ । ಅಸಮ್ಯಕ್ಕರಣಾದಿಜನಿತೇನ ಕೋಪೇನ ಮಾ ವಧಿಧ್ವಂ । ಕಿಂತ್ವಸ್ಮಭ್ಯಂ ಶರ್ಮ ಸುಖಂ ಬಹುಲಮತ್ಯಧಿಕಂ ವಿ ಯಂತನ । ಕುರುತ । ಕಿಂಚ ಸ್ತೋತ್ರಸ್ಯ ಸ್ತೋತ್ರಂ ಸಖ್ಯಸ್ಯ ಸಖ್ಯಮಧಿ ಗಾತನ । ಅಧಿಗಚ್ಛಥ । ಸ್ತುತಿಮನುಭೂಯಾಸ್ಮಾಸು ಸಖ್ಯಂ ಕುರುತೇತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ನಃ**—ನಮ್ಮನ್ನು । **ಮೃಳತ**—ಸುಖಪಡಿಸಿರಿ । **ಮಾ ವಧಿಷ್ಟನ**—ಹಿಂಸಿಸಬೇಡಿರಿ । **ಅಸ್ಮಭ್ಯಂ**—ನಮಗೆ । **ಬಹುಲಂ**—ಅತ್ಯಧಿಕವಾಗಿ । **ಶರ್ಮ**—ಸುಖವನ್ನು । **ವಿ ಯಂತನ**—ಉಂಟುಮಾಡಿರಿ । **ಸ್ತೋತ್ರಸ್ಯ**—ನಮ್ಮ ಸ್ತುತಿಯನ್ನೂ । **ಸಖ್ಯಸ್ಯ**—ನಮ್ಮ ಸಖಿತ್ವವನ್ನೂ । **ಅಧಿ ಗಾತನ**—ಅರಿಯಿರಿ । **ಶುಭಂ**—ಶುಭಕಾರಕರಾಗಿ । **ಯಾತಾಂ**—ಹೋಗುತ್ತಿರುವ ಮರುತ್ತುಗಳ । **ರಥಾಃ**—ರಥಗಳೂ । **ಅನು ಅವೃತ್ಸತ**—ಅವರನ್ನೇ ಹಿಂಬಾಲಿಸುತ್ತವೆ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನಮ್ಮನ್ನು ಸುಖಪಡಿಸಿರಿ, ಹಿಂಸಿಸಬೇಡಿರಿ. ನಮಗೆ ಅತ್ಯಧಿಕವಾಗಿ ಸುಖವನ್ನುಂಟು ಮಾಡಿರಿ. ನಮ್ಮ ಸ್ತುತಿಯನ್ನೂ ನಮ್ಮ ಸಖಿತ್ವವನ್ನೂ ಅರಿತು ಅದಕ್ಕೆ ಪ್ರತಿಫಲವನ್ನು ಕೊಡಿರಿ. ಶುಭಕಾರಕರಾಗಿ ಹೋಗುತ್ತಿರುವ ಮರುತ್ತುಗಳ ರಥಗಳೂ ಅವರನ್ನೇ ಹಿಂಬಾಲಿಸುತ್ತವೆ.

English Translation

Send us felicity, Maruts; harm us not , bestow upon us exceeding happiness: reward our adoration by your friendship: may the cars of the quick-moving (Maruts) arrive for our good.

॥ ಸಂಹಿತಾಪಾಠಃ ॥

ಯೂಯಮಸ್ಮಾನ್ನಯತ ವಸ್ಯೋ ಅಚ್ಛಾ ನಿರಂಹತಿಭ್ಯೋ ಮರುತೋ ಗೃಣಾನಾಃ ।

ಜುಷಧ್ವಂ ನೋ ಹವ್ಯದಾತಿಂ ಯಜತ್ರಾ ವಯಂ ಸ್ಯಾಮ ಪತಯೋ ರಯೀಣಾಂ ॥ ೧೦ ॥

॥ ಪದಪಾಠಃ ॥

ಯೂಯಂ । ಅಸ್ಮಾನ್ । ನಯತ । ವಸ್ಯಃ । ಅಚ್ಛ । ನಿಃ । ಅಂಹತಿऽಭ್ಯಃ । ಮರುತಃ । ಗೃಣಾನಾಃ ।

ಜುಷಧ್ವಂ । ನಃ । ಹವ್ಯऽದಾತಿಂ । ಯಜತ್ರಾಃ । ವಯಂ । ಸ್ಯಾಮ । ಪತಯಃ । ರಯೀಣಾಂ ॥೧೦॥

॥ ಸಾಯಣಭಾಷ್ಯಂ ॥

ಹೇ ಮರುತೋ ಯೂಯಮಸ್ಮಾನ್ವಸ್ಯೋ ವಸೀಯೋ ಧನಂ ಸ್ವರ್ಗಾದಿಲಕ್ಷಣಂ ಸ್ಥಾನಂ ವಾಚ್ಛಾಭಿಲಕ್ಷ್ಯ ನಯತ । ಪ್ರಾಪಯತ । ಕಿಂಚಾಂಹತಿಭ್ಯಃ ಪಾಪೇಭ್ಯೋ ನಿರ್ಣಯತ । ನಿರ್ಗಮಯತ ಗೃಣಾನಾಃ ಸ್ತೂಯಮಾನಾಃ ॥ ಕರ್ಮಣಿ ಕರ್ತೃಪ್ರತ್ಯಯಃ ॥ ಜುಷಧ್ವಂ ಸೇವಧ್ವಂ ನೋಽಸ್ಮಾಕಂ ಹವ್ಯದಾತಿಂ ಹವಿರ್ದಾನವಂತಂ ಯಜ್ಞಂ ಹೇ ಯಜತ್ರಾ ಯಷ್ಟವ್ಯಾ ಯೂಯಂ । ವಯಂ ಚ ರಯೀಣಾಂ ಬಹುವಿಧಾನಾಂ ಧನಾನಾಂ ಪತಯಃ ಸ್ಯಾಮ । ಭವೇಮ ॥

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ಯೂಯಂ**—ನೀವು । **ಅಸ್ಮಾನ್**—ನಮ್ಮನ್ನು । **ವಸ್ಯಃ ಅಚ್ಛ**—ಸಂಪದ್ಯುಕ್ತವಾದ ಪ್ರದೇಶಕ್ಕೆ ಅಭಿಮುಖವಾಗಿ । **ನಯತ**—ಕರೆದೊಯ್ಯಿರಿ । **ಗೃಣಾನಾಃ**—ನಮ್ಮಿಂದ ಸ್ತುತಿಸಲ್ಪಟ್ಟವರಾಗಿ । **ಅಂಹತಿಭ್ಯಃ**—ಪಾಪಗಳಿಂದ । **ನಿಃ (ನಯತ)**-ನಮ್ಮನ್ನು ದೂರವಾಗಿ ಕೊಂಡೊಯ್ಯಿರಿ । **ಯಜತ್ರಾಃ**-ಯಜ್ಞಾರ್ಹರಾದ ನೀವು । **ನಃ**—ನಮ್ಮ । **ಹವ್ಯದಾತಿಂ**—ಹವಿಸ್ಸಿನ ಅರ್ಪಣೆಯನ್ನು । **ಜುಷಧ್ವಂ**—ಸೇವಿಸಿರಿ । **ವಯಂ**—ನಾವು । **ರಯೀಣಾಂ**—ಅನೇಕ ವಿಧವಾದ ಧನಗಳಿಗೆ । **ಪತಯಃ**—ಒಡೆಯರಾಗಿ । **ಸ್ಯಾಮ**—ಇರುವಂತಾಗಲಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನೀವು ನಮ್ಮನ್ನು ಸಂಪದ್ಯುಕ್ತವಾದ ಪ್ರದೇಶಕ್ಕೆ ಕರೆದೊಯ್ಯಿರಿ. ನಮ್ಮಿಂದ ಸ್ತುತಿಸಲ್ಪಟ್ಟವರಾಗಿ ನಮ್ಮನ್ನು ಪಾಪದಿಂದ ಬಿಡಿಸಿರಿ. ಯಜ್ಞಾರ್ಹರಾದ ನೀವು ನಾವು ಅರ್ಪಿಸಿದ ಹವಿಸ್ಸನ್ನು ಸೇವಿಸಿರಿ. ನಾವು ಅನೇಕವಿಧವಾದ ಧನಗಳಿಗೆ ಒಡೆಯರಾಗಿ ಇರುವಂತಾಗಲಿ.

English Translation

Maruts, conduct us to opulence: propitiated by our praises, extricate us from sin: accept, adorable (Maruts), our offered oblation, and may we be the possessors of riches

## ಐವತ್ತಾರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಅಗ್ನೇ ಶರ್ಧಂತಮಿತಿ ನವರ್ಚಂ ದ್ವಾದಶಂ ಸೂಕ್ತಂ ಶ್ಯಾವಾಶ್ವಸ್ಯಾರ್ಷಂ ಮಾರುತಂ । ತೃತೀಯಾಸಪ್ತಮ್ಯೌ ಸತೋಬೃಹತ್ಯೌ ಶಿಷ್ಟಾ ಬೃಹತ್ಯಃ । ಅಗ್ನೇ ನವ ಬಾರ್ಹತಂ ತೃತೀಯಾಸಪ್ತಮ್ಯೌ ಸತೋಬೃಹತ್ಯಾವಿತ್ಯನುಕ್ರಮಣಿಕಾ ॥**

ಅನುವಾದವು— **ಅಗ್ನೇ ಶರ್ಧಂ** ಎಂಬ ಈ ಸೂಕ್ತವು ನಾಲ್ಕನೆಯ ಅನುವಾಕದಲ್ಲಿ ಹನ್ನೆರಡನೆಯ ಸೂಕ್ತವು ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಶ್ಯಾವಾಶ್ವನು ಋಷಿಯು ; ಮರುತ್ತುಗಳು ದೇವತೆಯು ; ಈ ಸೂಕ್ತದ ಮೂರು ಮತ್ತು ಏಳನೆಯ ಋಕ್ಕುಗಳು ಸತೋಬೃಹತೀಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಅಗ್ನೇ ನವ ಬಾರ್ಹತಂ ತೃತೀಯಸಪ್ತಮ್ಯೌ ಸತೋಬೃಹತ್ಯೌ** ಎಂದು ಹೇಳಿರುವುದು.

## ಸೂಕ್ತ—೫೬

॥ ಮಂಡಲ—೫ ॥ ಅನುವಾಕ—೪ ॥ ಸೂಕ್ತ—೫೬ ॥
॥ ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ—೧೯, ೨೦ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯
ಋಷಿಃ—ಶ್ಯಾವಾಶ್ವ ಆತ್ರೇಯಃ ॥
ದೇವತಾ—ಮರುತಃ ॥
ಛಂದಃ—೧, ೨, ೪-೬, ೮, ೯ ಬೃಹತೀ । ೩, ೭ ಸತೋಬೃಹತೀ ॥

॥ ಸಂಹಿತಾಪಾಠಃ ॥

ಅಗ್ನೇ ಶರ್ಧಂತಮಾ ಗಣಂ ಪಿಷ್ಟಂ ರುಕ್ಮೇಭಿರಂಜಿಭಿಃ ।
ವಿಶೋ ಅದ್ಯ ಮರುತಾಮವ ಹ್ವಯೇ ದಿವಶ್ಚಿದ್ರೋಚನಾದಧಿ ॥ ೧ ॥

॥ ಪದಪಾಠಃ ॥

ಅಗ್ನೇ । ಶರ್ಧಂತಂ । ಆ । ಗಣಂ । ಪಿಷ್ಟಂ । ರುಕ್ಮೇಭಿಃ । ಅಂಜಿಭಿಃ ।
ವಿಶಃ । ಅದ್ಯ । ಮರುತಾಂ । ಅವ । ಹ್ವಯೇ । ದಿವಃ । ಚಿತ್ । ರೋಚನಾತ್ । ಅಧಿ ॥ ೧ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಶರ್ಧಂತಂ ಶತ್ರೂನಭಿಭವಂತಂ ಯಜ್ಞಾಯೋತ್ಸಹಮಾನಂ ವಾ ಗಣಂ ಮರುತಾಂ ಗಣಮಾ ಹ್ವಯೇತಿ ಶೇಷಃ । ಕೀದೃಶಂ ಗಣಂ । ರುಕ್ಮೇಭಿಃ ರುಕ್ಮೈಃ ರೋಚಮಾನೈರಂಜಿಭಿರಾಭರಣೈಶ್ಚ ಪಿಷ್ಟಮವಯವಿತಂ । ಯುಕ್ತಮಿತ್ಯರ್ಥಃ । ಅದ್ಯಾಸ್ಮಿನ್ಯಾಗದಿನೇ ಮರುತಾಂ ವಿಶಃ ಪ್ರಜಾಃ । ಗಣಾನಿತ್ಯರ್ಥಃ । ತಾನ್ರೋಚನಾದ್ರೋಚಮಾನಾತ್ ದಿವೋ ದ್ಯುಲೋಕಾತ್ । ಅಧೀತಿ ಪಂಚಮ್ಯರ್ಥಾನುವಾದೀ। ಚಿತ್ಪೂರಣಃ ಅವಾವಸ್ತಾದಸ್ಮದಭಿಮುಖಂ ಹ್ವಯೇ । ಆಹ್ವಯಾಮಿ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ರುಕ್ಮೇಭಿಃ**—ಕಂಗೊಳಿಸುವ । **ಅಂಜಿಭಿಃ**—ಆಭರಣಗಳಿಂದ । **ಪಿಷ್ಟಂ**—ಅಲಂಕೃತರಾಗಿರುವವರೂ । **ಶರ್ಧಂತಂ**—ಶತ್ರುನಾಶಕ್ಕೆ ಶಕ್ತರಾಗಿರುವವರೂ ಆದ । **ಗಣಂ**—ಮರುದ್ಗಣವನ್ನು । **ಆ (ಹ್ವಯೇ)**—ನಾನು ಆಹ್ವಾನಿಸುತ್ತೇನೆ । **ಅದ್ಯ**—ಈ ಯಾಗದಿನದಲ್ಲಿ । **ಮರುತಾಂ ವಿಶಃ**—ಮರುದ್ಗಣವನ್ನು । **ರೋಚನಾತ್**—ಪ್ರಕಾಶಮಾನವಾದ । **ದಿವಃ**—ದ್ಯುಲೋಕದಿಂದ । **ಅಧಿ ಅವ**—ನಮಗಭಿಮುಖವಾಗಿ ಇಳಿದು ಬರುವಂತೆ । **ಹ್ವಯೇ**—ಪ್ರಾರ್ಥಿಸಿ ಕರೆಯುತ್ತೇನೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಕಂಗೊಳಿಸುವ ಆಭರಣಗಳಿಂದ ಅಲಂಕೃತರಾಗಿರುವವರೂ, ಶತ್ರುನಾಶಕ್ಕೆ ಶಕ್ತರಾಗಿರುವವರೂ ಆದ ಮರುದ್ಗಣವನ್ನು ನಾನು ಆಹ್ವಾನಿಸುತ್ತೇನೆ. ಈ ಯಾಗದಿನದಲ್ಲಿ ಪ್ರಕಾಶಮಾನವಾದ ದ್ಯುಲೋಕದಿಂದ ನಮಗಭಿಮುಖವಾಗಿ ಇಳಿದು ಬರುವಂತೆ ನಾನು ಮರುದ್ಗಣವನ್ನು ಪ್ರಾರ್ಥಿಸಿ ಕರೆಯುತ್ತೇನೆ.

## English Translation

I invoke, Agni, the victorious company (of the Maruts) decorated with brilliant ornaments; (I invoke them), the people of the Maruts, to descend to-day from above the shining heaven

॥ ವಿಶೇಷವಿಷಯಗಳು ॥

**ಅವ**—ಅವ ಎಂಬುದು ಉಪಸರ್ಗವು. ಉಪಸರ್ಗಗಳ ವಿಷಯದಲ್ಲಿ ಯಾಸ್ಕರು ಈ ರೀತಿ ನಿರ್ವಚನವನ್ನು ಹೇಳಿದಾರೆ—

**ನ ನಿರ್ಬದ್ಧಾ ಉಪಸರ್ಗಾ ಅರ್ಥಾನ್ನಿರಾಹುರಿತಿ ಶಾಕಟಾಯನಃ । ನಾಮಾಖ್ಯಾತಯೋಸ್ತು ಕರ್ಮೋಪಸಂಯೋಗದ್ಯೋತಕಾ ಭವಂತಿ। ಉಚ್ಚಾವಚಾಃ ಪದಾರ್ಥಾ ಭವಂತೀತಿ ಗಾರ್ಗ್ಯಃ। ತದ್ಯ ಏಷು ಪದಾರ್ಥಃ ಪ್ರಾಹುರಿಮೇ ನಾಮಾಖ್ಯಾತಯೋರರ್ಥವಿಕರಣಂ ॥** (ನಿ ೧-೩)

ಉಪಸರ್ಗವೆಂಬ ಪದಗಳು ಇತರ ನಾಮಾಖ್ಯಾತ ಶಬ್ದಗಳ ಜತೆಯಲ್ಲಿ ಪ್ರಯೋಗಿಸಲ್ಪಡದಿರುವಾಗ ಇವುಗಳು ಯಾವ ಅರ್ಥವನ್ನೂ ಸೂಚಿಸುವುದಿಲ್ಲ ಎಂದು ಶಾಕಟಾಯನರ ಅಭಿಮತವು. ಆದರೆ ನಾಮಾಖ್ಯಾತಶಬ್ದಗಳ ಜತೆಯಲ್ಲಿ ಸೇರಿದಾಗ ಆ ಶಬ್ದಗಳ ಅರ್ಥವನ್ನು ವಿಶೇಷರೀತಿಯಿಂದ ಅಥವಾ ವ್ಯತ್ಯಸ್ತರೀತಿಯಿಂದ ವಿವರಿಸುವವು ಗಾರ್ಗ್ಯರೆಂಬ ಆಚಾರ್ಯರು—ಉಪಸರ್ಗಗಳಿಗೆ ನಾನಾವಿಧ ಅರ್ಥಗಳಿರುವುವು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದಾರೆ. ಈ ಉಪಸರ್ಗಗಳಿಗೆ ಯಾವ ಅರ್ಥವಾದರೂ ಇರಲಿ ಅವುಗಳು ನಾಮಾಖ್ಯಾತಶಬ್ದಗಳ ಜತೆಯಲ್ಲಿ ಉಪಯೋಗಿಸಲ್ಪಟ್ಟಾಗ ಆ ನಾಮಾಖ್ಯಾತಗಳ ಅರ್ಥವನ್ನು ಸ್ವಲ್ಪ ಹೆಚ್ಚುಕಡಿಮೆ ವ್ಯತ್ಯಸ್ತವಾಗುವಂತೆ ಮಾಡುವವು ಎಂಬ ವಿಷಯವು ಮಾತ್ರ ಖಚಿತವಾದುದು ಅದರಂತೆ—

**ನ್ಯವೇತಿ ವಿನಿಗ್ರಹಾರ್ಥೀಯೌ ॥**

ನಿ, ಅವ ಎಂಬ ಉಪಸರ್ಗಗಳು ಕೆಳಗೆ, ಅಧೋಮುಖವಾಗಿ ಎಂಬರ್ಥವನ್ನು ಸೂಚಿಸುವವು. ಉದಾಹರಣೆಗೆ **ತೄ ಪ್ಲವನತರಣಯೋಃ** ಎಂಬ ಧಾತುವಿನ ರೂಪವಾದ ತರತಿ ಎಂಬ ಶಬ್ದಕ್ಕೆ ದಾಟು, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗು ಎಂಬರ್ಥವಿರುವುದು. ಈ ಧಾತುವಿಗೆ ಅವ ಎಂಬ ಉಪಸರ್ಗವನ್ನು ಸೇರಿಸಿದರೆ ಅವತರತಿ ಎಂದಾಗಿ ಮೇಲಿನಿಂದ ಕೆಳಕ್ಕೆ ಇಳಿದುಬರುವುದು ಎಂದರ್ಥವನ್ನು ಸೂಚಿಸುವುದು ಪ್ರಕೃತಮಕ್ಕಿನಲ್ಲಿ ಈ ಅರ್ಥವೇ ಉಕ್ತವಾಗಿದೆ.

**ಚಿತ್**—ಚಿತ್‌ಶಬ್ದಕ್ಕೆ ಅನೇಕಾರ್ಥಗಳಿದ್ದರೂ ಇಲ್ಲಿ ಪೂರಣಾರ್ಥದಲ್ಲಿ ಎಂದರೆ ವಾಕ್ಯಪೂರಣಕ್ಕಾಗಿ ಉಪಯೋಗಿಸಲ್ಪಟ್ಟಿದೆ. ಆದ್ದರಿಂದ ಇಲ್ಲಿ ಈ ಶಬ್ದಕ್ಕೆ ಯಾವ ನಿರ್ದಿಷ್ಟಾರ್ಥವೂ ಇಲ್ಲ.

॥ ಸಂಹಿತಾಪಾಠಃ ॥

ಯಥಾ ಚಿನ್ಮನ್ಯಸೇ ಹೃದಾ ತದಿನ್ಮೇ ಜಗ್ಮುರಾಶಸಃ ।

ಯೇ ತೇ ನೇದಿಷ್ಠಂ ಹವನಾನ್ಯಾಗಮನ್ತಾನ್ವರ್ಧ ಭೀಮಸಂದೃಶಃ ॥ ೨ ॥

॥ ಪದಪಾಠಃ ॥

ಯಥಾ । ಚಿತ್ । ಮನ್ಯಸೇ । ಹೃದಾ । ತತ್ । ಇತ್ । ಮೇ । ಜಗ್ಮುಃ । ಆऽಶಸಃ ।

ಯೇ । ತೇ । ನೇದಿಷ್ಠಂ । ಹವನಾನಿ । ಆऽಗಮನ್ । ತಾನ್ । ವರ್ಧ । ಭೀಮऽಸಂದೃಶಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಂ ಹೃದಾ ಹೃದಯೇನ ಮರುತೋ ಯಥಾ ಚಿನ್ಮನ್ಯಸೇ । ಚಿದಿತಿ ಪೂಜಾಯಾಂ । ಯೇನ ಪ್ರಕಾರೇಣಾತಿಪೂಜಿತಂ ಜಾನಾಸಿ । ತೇಷ್ವಾದರಂ ಕರೋಷೀತ್ಯರ್ಥಃ । ತದಿತ್ತಥೈವ ಮೇ ಮದರ್ಥಂ ಜಗ್ಮುರ್ಗಚ್ಛಂತ್ವಾಶಸ ಆಶಂಸಿತಾರ ಇಚ್ಛಂತಃ ಶತ್ರೂನ್ ಹಿಂಸಂತೋ ವಾ । ಅನಂತರಂ ಯೇ ಮರುತೋ ನೇದಿಷ್ಠಮತ್ಯಂತಾಂತಿಕಂ ಸಂನಿಧಾವೇವ ತೇ ತವ ಹವನಾನ್ಯಾಹ್ವಾನಾನಿ ಶ್ರುತ್ವಾಗಮನ್ ಆಗಚ್ಛಂತಿ ತಾನ್ ಭೀಮಸಂದೃಶಃ ಕಾಲವಿಲಂಬಾಸಹನೇನ ಭಯಂಕರದರ್ಶನಾನ್ವರ್ಧ । ವರ್ಧಯ ಹವಿಷ್ಪ್ರದಾನೇನ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಹೃದಾ**—ನಿನ್ನ ಹೃದಯದಲ್ಲಿ । **ಯಥಾ**—ಯಾವ ಪ್ರಕಾರವಾಗಿ (ಮರುತ್ತುಗಳನ್ನು) । **ಚಿನ್ಮನ್ಯಸೇ**—ಭಕ್ತಿಪೂರ್ವಕವಾಗಿ ಧ್ಯಾನಿಸುವೆಯೋ । **ತದಿತ್**—ಅದೇ ರೀತಿಯಲ್ಲಿ । **ಮೇ**—ನನಗೆ । **ಆಶಸಃ**—ಕಲ್ಯಾಣವನ್ನಿಚ್ಛಿಸುತ್ತಾ । **ಜಗ್ಮುಃ**—ಅವರು ಬರಲಿ । **ಯೇ**—ಯಾವ ಮರುತ್ತುಗಳು । **ನೇದಿಷ್ಠಂ**—ಅತ್ಯಂತ ಸಮೀಪದಲ್ಲಿರುವ । **ತೇ**—ನಿನ್ನ । **ಹವನಾನಿ**—ಆಹ್ವಾನಗಳನ್ನು ಮನ್ನಿಸಿ । **ಆಗಮನ್**—ದಯಮಾಡುವರೋ । **ತಾನ್**—ಅಂತಹ । **ಭೀಮಸಂದೃಶಃ**—ಭಯಂಕರ ರೂಪವುಳ್ಳ ಮರುತ್ತುಗಳನ್ನು । **ವರ್ಧ**—ತೃಪ್ತಿಪಡಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನ ಹೃದಯದಲ್ಲಿ ಮರುತ್ತುಗಳನ್ನು ಯಾವ ವಿಧದಿಂದ ಭಕ್ತಿಪೂರ್ವಕವಾಗಿ ಧ್ಯಾನಿಸುವೆಯೋ, ಅದೇ ರೀತಿಯಲ್ಲಿ ನನಗೆ ಕಲ್ಯಾಣವನ್ನಿಚ್ಛಿಸುತ್ತಾ ಅವರು ಬರಲಿ. ಯಾವ ಮರುತ್ತುಗಳು ಅತ್ಯಂತ ಸಮೀಪದಲ್ಲಿರುವ ನಿನ್ನ ಆಹ್ವಾನಗಳನ್ನು ಮನ್ನಿಸಿ ದಯಮಾಡುವರೋ, ಅಂತಹ ಭಯಂಕರ ರೂಪವುಳ್ಳ ಮರುತ್ತುಗಳನ್ನು ತೃಪ್ತಿಪಡಿಸು.

## English Translation

In whatever manner you honour the (Maruts, Agni), in your heart, may they come to me as benefactors: gratify, ( by oblations ), those fierce-looking Maruts, who most promptly come to your invocations.

॥ ವಿಶೇಷವಿಷಯಗಳು ॥

ಯಜ್ಞದಲ್ಲಿ ಮರುದ್ದೇವತೆಗಳನ್ನು ಯಜ್ಞಭೂಮಿಗೆ ಕರೆತರುವಂತೆ ಅಗ್ನಿಯನ್ನು ಪ್ರಾರ್ಥಿಸಿ ಆ ಮರುದ್ದೇವತೆಗಳು ಭಯಂಕರರೂಪವುಳ್ಳವರಾದರೂ ಅವರನ್ನು ಭಕ್ತಿಪೂರ್ವಕವಾಗಿ ಧ್ಯಾನಿಸಿ ನಮಗೆ ಕಲ್ಯಾಣವನ್ನನುಗ್ರಹಿಸಬೇಕೆಂಬ ದೃಷ್ಟಿಯಿಂದ ಅವರನ್ನು ತೃಪ್ತಿಪಡಿಸಬೇಕೆಂದು ಹೋತೃವಾದ ಅಗ್ನಿಯನ್ನು ಶ್ಯಾವಾಶ್ವಋಷಿಯು ಪ್ರಾರ್ಥಿಸಿದಾನೆ.

**ಚಿತ್—ಚಿದಿತ್ಯೇಷೋಽನೇಕಕರ್ಮಾ ।** ಯಾಸ್ಕರು ಚಿತ್ ಎಂಬ ಶಬ್ದಕ್ಕೆ ಪೂಜಾ, ನಿಂದಾ ಮೊದಲಾದ ಅನೇಕ ಅರ್ಥಗಳಿರುವವು ಎಂದು ಉದಾಹರಣೆಸಹಿತ ವಿವರಿಸಿದಾರೆ. ಅದನ್ನು ನಾವು ಹಿಂದೆಯೇ ಹೇಳಿದೇವೆ. ಪ್ರಕೃತ ಋಕ್ಕಿನಲ್ಲಿ ಚಿತ್ ಶಬ್ದವು ಪೂಜಾರ್ಥದಲ್ಲಿ ಎಂದರೆ ಭಕ್ತಿ ಗೌರವ ಇವುಗಳನ್ನು ಸೂಚಿಸುವ ಅರ್ಥದಲ್ಲಿ ಪ್ರಯುಕ್ತವಾಗಿದೆ.

**ಇತ್—ಕಂ, ಈಂ, ಇತ್,** ಉ ಎಂಬ ನಿಪಾತಗಳು ಪಾದಪೂರಣಾರ್ಥವಾಗಿ ಉಪಯೋಗಿಸಲ್ಪಡುವವು. ಈ ವಿಷಯದಲ್ಲಿ ಯಾಸ್ಕರು—

> **ಅಥ ಯೇ ಪ್ರವೃತ್ತೇಽರ್ಥೇಽಮಿತಾಕ್ಷರೇಷು ಗ್ರಂಥೇಷು ವಾಕ್ಯಪೂರಣಾ ಆಗಚ್ಛಂತಿ ಪದಪೂರಣಾಸ್ತೇ ಮಿತಾಕ್ಷರೇಷ್ವನರ್ಥಕಾಃ ಕಮೀಮಿದ್ವಿತಿ ।**
>
> (ನಿ ೧-೯).

**ಕಂ ಈಂ ಇತ್ ಉ** ಎಂಬ ಶಬ್ದಗಳು (ಅಥವಾ ನಿಪಾತಗಳು) ಛಂದೋಬದ್ಧವಲ್ಲದ ವಾಕ್ಯಗಳಲ್ಲಿ ವಾಕ್ಯಪೂರಣಾರ್ಥವಾಗಿಯೂ, ಛಂದೋಬದ್ಧವಾದ ಋಕ್ಕುಗಳಲ್ಲಿ ಅಥವಾ ಮಂತ್ರಗಳಲ್ಲಿ ( ಮಿತಾಕ್ಷರ ) ಪಾದಪೂರ್ಣಕ್ಕಾಗಿಯೂ ಉಪಯೋಗಿಸಲ್ಪಡುವವು. ಆದುದರಿಂದ ಈ ಶಬ್ದಗಳಿಗೆ ನಿರ್ದಿಷ್ಟವಾದ ಯಾವ ಅರ್ಥವೂ ಇರಬೇಕಾದುದಿಲ್ಲ ಎಂದು ವಿವರಿಸಿದ್ದಾರೆ.

॥ ಸಂಹಿತಾಪಾಠಃ ॥

ಮೀಳ್ಹುಷ್ಮತೀವ ಪೃಥಿವೀ ಪರಾಹತಾ ಮದಂತ್ಯೇತ್ಯಸ್ಮದಾ ।

ಋಕ್ಷೋ ನ ವೋ ಮರುತಃ ಶಿಮೀವಾँ ಅಮೋ ದುಧ್ರೋ ಗೌರಿವ ಭೀಮಯುಃ ॥ ೩ ॥

॥ ಪದಪಾಠಃ ॥

ಮೀಳ್ಹುಷ್ಮತೀಽಇವ । ಪೃಥಿವೀ । ಪರಾಽಹತಾ । ಮದಂತೀ । ಏತಿ । ಅಸ್ಮತ್ । ಆ ।

ಋಕ್ಷಃ । ನ । ವಃ । ಮರುತಃ । ಶಿಮೀಽವಾನ್। ಅಮಃ । ದುಧ್ರಃ । ಗೌಃಽಇವ । ಭೀಮಽಯುಃ ॥ ೩ ॥

॥ ಸಾಯಣಭಾಷ್ಯಂ ॥

ಮೀಳ್ಹುಷ್ಮತೀ ಪ್ರಬಲಸ್ವಾಮಿಕಾ ಪರಾಹತಾನ್ಯೈರಭಿಭೂತಾ ಪೃಥಿವೀವ । ಅತ್ರ ಪೃಥಿವೀ-ಶಬ್ದಸ್ತದಧಿಷ್ಠಿತಾಂ ಪ್ರಜಾಂ ಲಕ್ಷಯತಿ । ಸಾ ಯಥಾ ಸ್ವಸ್ವಾಮಿನಮುಪದ್ರುತಾಭಿಗಚ್ಛತಿ ತದ್ವದಿತಿ । ಮರುತಾಂ ಸಾಕಲ್ಯೇನ ಸರ್ವಥಾ ಪ್ರಾಪ್ತೇರ್ದೃಷ್ಟಾಂತಃ । ಏವಂ ಮದಂತೀ ಹೃಷ್ಯಂತೀ ಮರುತ್ಸೇನಾಸ್ಮತ್। ಅಸ್ಮಾನಿತ್ಯರ್ಥಃ । ಏತಿ । ಆಗಚ್ಛತಿ ಹೇ ಮರುತೋ ವೋ ಯುಷ್ಮಾಕಮಮೋ ಬಲಂ ಗಣ ಋಕ್ಷೋ ನ ಅಗ್ನಿರಿವ ಶಿಮೀವಾನ್ ಕರ್ಮವಾನ್ ದುಧ್ರೋ ದುರ್ಧರೋ ಗೌರಿವ ಭೀಮಯುರ್ಭೀಮೈರ್ವೃಷಭೈ-ರ್ಯುಕ್ತೋ ಗೌರಿವ । ಸ ಯಥಾ ಶಿಮೀವಾನ್ ಕರ್ಮವಾನ್ ॥

॥ ಪ್ರತಿಪದಾರ್ಥ ॥

**ಮೀಳ್ಹುಷ್ಮತೀ**— ಪುಷ್ಟನೂ ಶಕ್ತನೂ ಆದ ಸ್ವಾಮಿಯನ್ನು ಹೊಂದಿರುವ । **ಪೃಥಿವೀ**—ಪೃಥ್ವಿಯ ಪ್ರಜೆಗಳು । **ಪರಾಹತಾ ಇವ**—ಶತ್ರುಗಳಿಂದ ಪ್ರತಿಭಟಿತರಾದಾಗ ಆ ಸ್ವಾಮಿಯ ಆಗಮನದಿಂದ ಹರ್ಷಿತರಾಗುವಂತೆ । **ಮದಂತೀ**— ನಮಗೆ ಹರ್ಷವನ್ನುಂಟುಮಾಡುತ್ತಲೂ ತಾವು ಹರ್ಷವನ್ನು ವ್ಯಕ್ತಪಡಿಸುತ್ತಲೂ । **ಅಸ್ಮತ್**—ನಮಗಭಿಮುಖವಾಗಿ । **ಆ ಏತಿ**—(ಮರುತ್ಸೇನೆಯು) ಬರುತ್ತದೆ । **ಮರುತಃ**—ಎಲೈ ಮರುತ್ತುಗಳೇ । **ವಃ**—ನಿಮ್ಮ । **ಅಮಃ**—ಗಣದ ಬಲವು । **ಋಕ್ಷೋ ನ**—ಅಗ್ನಿಯಂತೆ । **ಶಿಮೀವಾನ್**—ಕರ್ಮಯುಕ್ತವಾಗಿದೆ । **ದುಧ್ರಃ**—ಅಪ್ರತಿಹತವಾದ ಶಕ್ತಿಯುಳ್ಳ । **ಗೌರಿವ**—ವೃಷಭದಂತೆ । **ಭೀಮಯುಃ**—ಭಯಂಕರವಾಗಿದೆ.

॥ ಭಾವಾರ್ಥ ॥

ಪುಷ್ಟನೂ ಶಕ್ತನೂ ಆದ ಸ್ವಾಮಿಯ ಸಹಾಯವನ್ನು ಹೊಂದಿರುವ ಪೃಥ್ವಿಯ ಪ್ರಜೆಗಳು ಶತ್ರುಗಳಿಂದ ಪ್ರತಿಭಟಿತರಾದಾಗ ಆ ಸ್ವಾಮಿಯ ಆಗಮನದಿಂದ ಹರ್ಷಿತರಾಗುವಂತೆ, ಮರುತ್ಸೇನೆಯ ಆಗಮನವು ನಮಗೆ ಹರ್ಷವನ್ನುಂಟುಮಾಡುತ್ತದೆ. ಎಲೈ ಮರುತ್ತುಗಳೇ, ನಿಮ್ಮ ಗಣದ ಬಲವು ಅಗ್ನಿಯಂತೆ ಕರ್ಮಯುಕ್ತವಾಗಿಯೂ, ಅಪ್ರತಿಹತವಾದ ಶಕ್ತಿಯುಳ್ಳ ವೃಷಭದಂತೆ ಭಯಂಕರವಾಗಿಯೂ ಇದೆ

## English Translation

As the (people of the) earth having a powerful lord have recourse to him when oppressed (by others), so comes (the host of the Maruts) exulting to us: your company, Maruts, active as fire, is as difficult to be resisted as a formidable ox.

॥ ವಿಶೇಷವಿಷಯಗಳು ॥

**ಪೃಥಿವೀ**—ಇಲ್ಲಿ ಪೃಥಿವೀ ಶಬ್ದಕ್ಕೆ ಪೃಥಿವಿಯಲ್ಲಿ ವಾಸವಾಗಿರುವ ಪ್ರಜೆ ಎಂಬರ್ಥವನ್ನು ಭಾಷ್ಯಕಾರರು ಹೇಳಿದಾರೆ. ಗೋವಿಕಾರವಾದ ಕ್ಷೀರವನ್ನು ಸೂಚಿಸುವುದಕ್ಕಾಗಿ ಗೋಶಬ್ದವನ್ನೇ ಉಪಯೋಗಿಸುವಂತೆ.

ಈ ಋಕ್ಕಿನಲ್ಲಿ ಮರುದ್ದೇವತೆಗಳ ವಿಷಯದಲ್ಲಿ ಮೂರು ದೃಷ್ಟಾಂತಗಳನ್ನು ಹೇಳಿದೆ—

(೧) **ಮೀಳ್ಹುಷ್ಮತೀವ ಪೃಥಿವೀ ಪರಾಹತಾ ಮದಂತೀ ।** ಪ್ರಬಲನಾದ ನಾಯಕ ಅಥವಾ ಮುಖಂಡನಿಂದ ಕೂಡಿದ ಪ್ರಜಾಸಮೂಹವು ಶತ್ರುಗಳಿಂದ ಎದುರಿಸಲ್ಪಟ್ಟಾಗ ತನ್ನ ಸಹಾಯಕ್ಕಾಗಿ ಆ ನಾಯಕನು ಮುಂದೆ ಬಂದರೆ ಯಾವರೀತಿ ಸಂತೋಷಪಡುವರೋ ಆರೀತಿ ಮರುದ್ದೇವತೆಗಳ ಆಗಮನದಿಂದ ನಮಗೆ ಸಂತೋಷವುಂಟಾಗುವುದೆಂದು ಋಷಿಯು ಮರುದ್ದೇವತೆಗಳಿಗೆ ಪ್ರಜಾನಾಯಕ ಸಂಬಂಧವನ್ನು ದೃಷ್ಟಾಂತವಾಗಿ ವರ್ಣಿಸಿದಾನೆ.

(೨) **ವಃ ಅಮಃ ಋಕ್ಷ್ಣೋ ನ ಶಿಮೀವಾನ್ ।** ಎಲೈ ಮರುತ್ತುಗಳೇ ನಿಮ್ಮ ಬಲವು ಕರ್ಮಯುಕ್ತನಾದ ಅಗ್ನಿಯಂತಿದೆ. ಯಜ್ಞಾದಿಗಳಲ್ಲಿ ಅಗ್ನಿಯ ಪ್ರಭಾವವು ಯಾವರೀತಿ ಮಹತ್ತ್ವಪೂರಿತವಾಗಿರುವುದೋ ಅಥವಾ ಕರ್ಮಯುಕ್ತವಾಗಿರುವುದೋ ಅದರಂತೆ ಮರುದ್ದೇವತೆಗಳ ಶಕ್ತಿಸಾಮರ್ಥ್ಯಗಳು ಅತಿಶಯವಾಗಿವೆ ಎಂದು ಋಷಿಯು ವರ್ಣಿಸಿದಾನೆ. ಇದು ಎರಡನೆಯ ದುಷ್ಟಾಂತವು.

(೩) **ದುಧ್ರಃ ಗೌರಿವ ಭೀಮಯುಃ ।** ಮತ್ತು ಮರುದ್ದೇವತೆಗಳ, ಶಕ್ತಿಯ ವಿಷಯದಲ್ಲಿ ಇನ್ನೊಂದು ಉಪಮಾನವನ್ನೂ ಹೇಳಿದೆ. ಅಪ್ರತಿಹತವಾದ ಶಕ್ತಿಯುಳ್ಳ ಗೂಳಿಯಂತೆ ಮರುದ್ದೇವತೆಗಳ ಬಲವು ಭಯಂಕರವಾಗಿದೆ. ಚೆನ್ನಾಗಿ ಕೊಬ್ಬಿ ಮದಿಸಿರುವ ಗೂಳಿಯು ಯಾವುದನ್ನೂ ಲಕ್ಷ್ಯಮಾಡದೆ ನಿರ್ಭಯದಿಂದ ಮುನ್ನುಗ್ಗಿ ಎದುರಿಗೆ ಸಿಕ್ಕಿದವರನ್ನು ಹಿಂಸಿಸುತ್ತಾ ಹೇಗೆ ಭಯಂಕರವಾದ ರೀತಿಯಲ್ಲಿ ವರ್ತಿಸುವುದೋ ಅದರಂತೆ ಮರುದ್ದೇವತೆಗಳೂ ಸಹ ತಮ್ಮ ರಭಸವಾದ ಆಗಮನಕಾಲದಲ್ಲಿ ವೃಕ್ಷಾದಿಗಳನ್ನು ಬುಡಸಹಿತವಾಗಿ ಉರುಳಿಸುತ್ತಾ ಯಾವ ತಡೆಯೂ ಇಲ್ಲದೆ ನೋಡಿದವರಿಗೆ ಭಯಂಕರವಾಗುವಂತೆ ವರ್ತಿಸುವರು. ಆದುದರಿಂದ ಮರುದ್ದೇವತೆಗಳ ಬಲವೂ, ಮದಿಸಿದ ಗೂಳಿಯ ಬಲವೂ ಭಯಂಕರಪರಿಣಾಮಗಳನ್ನುಂಟುಮಾಡುವ ಸಾಮರ್ಥ್ಯವುಳ್ಳದ್ದಾಗಿದೆಯೆಂದು ಒಂದರ ಶಕ್ತಿಯನ್ನು ಮತ್ತೊಂದಕ್ಕೆ ಹೋಲಿಸಿದೆ.

॥ ಸಂಹಿತಾಪಾಠಃ ॥

ನಿ ಯೇ ರಿಣಂತ್ಯೋಜಸಾ ವೃಥಾ ಗಾವೋ ನ ದುರ್ಧುರಃ ।
ಅಶ್ಮಾನಂ ಚಿತ್ಸ್ವರ್ಯಂ೧ ಪರ್ವತಂ ಗಿರಿಂ ಪ್ರ ಚ್ಯಾವಯಂತಿ ಯಾಮಭಿಃ ॥

॥ ಪದಪಾಠಃ ॥

ನಿ । ಯೇ । ರಿಣಂತಿ । ಓಜಸಾ । ವೃಥಾ । ಗಾವಃ । ನ । ದುಃಽಧುರಃ ।
ಅಶ್ಮಾನಂ । ಚಿತ್ । ಸ್ವರ್ಯಂ । ಪರ್ವತಂ । ಗಿರಿಂ । ಪ್ರ । ಚ್ಯವಯಂತಿ । ಯಾಮಽಭಿಃ ॥ ೪ ॥

॥ ಸಾಯಣಭಾಷ್ಯಂ ॥

**ಯೇ ಮರುತ ಓಜಸಾ ಸ್ವೀಯೇನ ಬಲೇನ ನಿ ರಿಣಂತಿ ಹಿಂಸಂತಿ ಶತ್ರೂನ್ ವೃಥಾನಾಯಾಸೇನ ಸ್ವಸಂಚಾರಮಾತ್ರೇಣ ಗಾವೋ ನ ದುರ್ಧುರೋ ದುಃಖೇನ ಹಿಂಸ್ಯಾ ಅಶ್ವಾ ಇವ। ತೇ ಮರುತಃ ಸ್ವರ್ಯಂ ಶಬ್ದಯಂತಮಶ್ಮಾನಂ ವ್ಯಾಪ್ತಂ ಪರ್ವತಂ ಜಗತ್ಪೂರಕೋದಕವಂತಂ । ಪರ್ವವಾನ್ಪರ್ವತಃ ಪರ್ವ ಪುನಃ ಪೃಣಾತೇಃ ಪ್ರೀಣಾತೇರ್ವಾ । ನಿ.೧.೨೦ । ಇತಿ ನಿರುಕ್ತಂ । ತಾದೃಶಂ ಗಿರಿಂ ಮೇಘಂ । ಯದ್ವಾ । ಪರ್ವತಮಿತಿ ವಿಶೇಷ್ಯಂ ಗಿರಿಮಿತಿ ವಿಶೇಷಣಂ । ನಿಗಿರತ್ಯುದಕಮಿತಿ ಗಿರಿಃ । ತಂ ಯಾಮಭಿರ್ಗಮನೈಃ ಪ್ರ ಚ್ಯಾವಯಂತ್ಯುದಕನಿರ್ಗಮನಾರ್ಥಂ ॥**

॥ ಪ್ರತಿಪದಾರ್ಥ ॥

**ಯೇ**—ಯಾವ ಮರುತ್ತುಗಳು । **ಓಜಸಾ**—ತಮ್ಮ ಬಲದಿಂದ । **ದುರ್ಧುರಃ**—ಅಪ್ರತಿಹತವಾದ ಶಕ್ತಿಯುಳ್ಳ । **ಗಾವೋ ನ**—ಅಶ್ವಗಳಂತೆ । **ವೃಥಾ**—ಕೊಂಚವೂ ಶ್ರಮವಿಲ್ಲದೇ । **ನಿ ರಿಣಂತಿ**—ಶತ್ರುಗಳನ್ನು ಹಿಂಸಿಸುವರೋ (ಆ ಮರುತ್ತುಗಳು) । **ಸ್ವರ್ಯಂ**-ಶಬ್ದಮಾಡತಕ್ಕದ್ದೂ । **ಅಶ್ಮಾನಂ**—ವ್ಯಾಪಿಸಿ ಹರಡಿರುವುದೂ । **ಪರ್ವತಂ**-ಉದಕಪೂರ್ಣವಾದುದೂ ಆದ । **ಗಿರಿಂ**—ಮೇಘವನ್ನು । **ಯಾಮಭಿಃ**—ತಮ್ಮ ಗಮನಗಳಿಂದ । **ಪ್ರ ಚ್ಯಾವಯಂತಿ**—ಕೆಳಕ್ಕೆ ಇಳಿಯುವಂತೆ ಮಾಡುತ್ತಾರೆ

॥ ಭಾವಾರ್ಥ ॥

ಅಪ್ರತಿಹತವಾದ ಶಕ್ತಿಯುಳ್ಳ ಅಶ್ವಗಳಂತೆ, ಯಾವ ಮರುತ್ತುಗಳು ತಮ್ಮ ಬಲದಿಂದ ಕೊಂಚವೂ ಶ್ರಮವಿಲ್ಲದೇ ಶತ್ರುಗಳನ್ನು ಹಿಂಸಿಸುವರೋ, ಆ ಮರುತ್ತುಗಳು ಶಬ್ದಮಾಡತಕ್ಕದ್ದೂ, ಹರಡಿರುವುದೂ, ಉದಕಪೂರ್ಣವಾದುದೂ ಆದ ಮೇಘವನ್ನು ತಮ್ಮ ಗಮನಗಳಿಂದ ಕೆಳಕ್ಕೆ ಇಳಿಯುವಂತೆ ಮಾಡುತ್ತಾರೆ.

English Translation

They who with ease destroy (their foes) by their prowess, like horses difficult to be restrained, they send down by their movements the vast and sounding water-laden cloud.

॥ ವಿಶೇಷವಿಷಯಗಳು ॥

**ಯೇ ಓಜಸಾ ನಿ ರಿಣಂತಿ**—ಮರುದ್ದೇವತೆಗಳು ತಮ್ಮ ಸ್ವಸಾಮರ್ಥ್ಯದಿಂದ ಶತ್ರುಗಳನ್ನು ಹಿಂಸಿಸುವರು ಎಂದು ಈ ವಾಕ್ಯದಲ್ಲಿ ಹೇಳಿದೆ. ಇಲ್ಲಿ ಶತ್ರುಗಳು ಎಂದರೆ ಮಳೆಯನ್ನು ಹುಯ್ಯದೆ ಉದಕವನ್ನು ತಮ್ಮಲ್ಲಿಯೇ ತಡೆದಿಟ್ಟುಕೊಂಡಿರುವ ಮೇಘಗಳು. ಮರುದ್ದೇವತೆಗಳು ತಮ್ಮ ಅತ್ಯಧಿಕವಾದ ಶಕ್ತಿಯನ್ನು ಅಂತರಿಕ್ಷದಲ್ಲಿ ಸರ್ವತ್ರ ವ್ಯಾಪಿಸಿ ಅತಿರಭಸದಿಂದ ಬೀಸುತ್ತಾ ಗುಂಪಾಗಿ ಒಂದೆಡೆ ಇರುವ ಮೇಘಗಳ ಗುಂಪನ್ನು ಚದುರಿಸಿ ಅವು ಎಲ್ಲಾ ಸ್ಥಳಗಳಲ್ಲಿಯೂ ಹರಡಿ ಮಳೆಯನ್ನು ಸುರಿಸುವಂತೆ ಮಾಡುವರು.

**ಗಾವೋ ನ ದುರ್ಧುರಃ**— ಮರುದ್ದೇವತೆಗಳು ಶತ್ರುಗಳನ್ನು (ಮೇಘಗಳನ್ನು) ಹಿಂಸಿಸುವ ವಿಷಯದಲ್ಲಿ ಇಲ್ಲಿ ಒಂದು ದೃಷ್ಟಾಂತವನ್ನು ಹೇಳಿದೆ ಯಾರಿಂದಲೂ ತಡೆಯಲಸಾಧ್ಯವಾದ ಅಶ್ವಗಳು (Spirited horses) ಯುದ್ಧ ಭೂಮಿಯಲ್ಲಿ ಶತ್ರುಗಳ ಮೇಲೆ ಮುನ್ನುಗ್ಗವಾಗ ಅವುಗಳನ್ನು ಎದುರಿಸಿ ತಡೆಯಲು ಯಾರಿಂದಲೂ ಸಾಧ್ಯವಾಗು ವುದಿಲ್ಲ ಅದರಂತೆ ಮರುತ್ತುಗಳು ಮೇಘಗಳನ್ನು ವರ್ಷಣಕ್ಕಾಗಿ ಪ್ರೇರಿಸಲು ಅತ್ಯಂತ ರಭಸದಿಂದ ಬೀಸುವುದನ್ನು ಯಾರೂ ತಡೆಯಲಾರರು ಆದ್ದರಿಂದ ಮರುದ್ದೇವತೆಗಳ ಅಪ್ರತಿಹತವಾದ ಶಕ್ತಿಯನ್ನು ಧೈರ್ಯದಿಂದ ಮುನ್ನುಗ್ಗುವ ಅಶ್ವಗಳಿಗೆ ಹೋಲಿಸಿದೆ ಇಲ್ಲಿ ಭಾಷ್ಯಕಾರರು **ಗಾವಃ** ಎಂಬ ಶಬ್ದಕ್ಕೆ ಅಶ್ವಗಳು ಎಂದರ್ಥಮಾಡಿ ಮೇಲೆ ಹೇಳಿರುವಂತೆ ಅರ್ಥವಿವರಣೆಮಾಡಿದ್ದಾರೆ. ಗೋಶಬ್ದಕ್ಕೆ ಪಶುಸಾಮಾನ್ಯವೆಂದೂ, ಆದ್ದರಿಂದ ಅಶ್ವಗಳೆಂದೂ ಅರ್ಥಮಾಡುವುದು ಸಮಂಜಸವಾದರೂ ಪ್ರಕೃತ ಋಕ್ಕಿನಲ್ಲಿ ಪ್ರಯುಕ್ತವಾಗಿರುವ ಗಾವಃ ಎಂಬ ಶಬ್ದಕ್ಕೆ ಗೋಜಾತಿಗೆ ಸೇರಿದ ವೃಷಭಗಳು ಅಥವಾ ಗೂಳಿಗಳು ಎಂದೂ ಅರ್ಥಮಾಡಬಹುದು ಈ ಗೂಳಿಗಳು ಯಾರ ಅಡ್ಡಿ ಆತಂಕಗಳೂ ಇಲ್ಲದೆ ಎಂದರೆ ಯಾರನ್ನೂ ಲಕ್ಷ್ಯಮಾಡದೆ ತಮ್ಮ ಬಲದ ಗರ್ವದಿಂದ ಸಿಕ್ಕಿದಕಡೆ ನುಗ್ಗಿ ಎದುರಿಗೆ ಸಿಕ್ಕಿದವರನ್ನು ಹಿಂಸಿಸುವಂತೆ ಎಂದು ಇನ್ನೊಂದು ವಿಧವಾದ ಅರ್ಥವೂ ಈ ವಾಕ್ಯಕ್ಕೆ ಸಾಧ್ಯವಾಗುವುದು.

**ಅಶ್ಮಾನಂ ಚಿತ್ ಸ್ವರ್ಯಂ ಪರ್ವತಂ ಗಿರಿಂ ಯಾಮಭಿಃ ಪ್ರ ಚ್ಯಾವಯಂತಿ**— ಈ ವಾಕ್ಯದಲ್ಲಿರುವ ಪರ್ವತ ಅಥವಾ ಗಿರಿ ಎಂಬ ಶಬ್ದಕ್ಕೆ ಮೇಘವೆಂದೇ ಅರ್ಥವು. ಪರ್ವತ ಗಿರಿ ಎಂಬ ಶಬ್ದಗಳಿಗೆ ಬೆಟ್ಟವೆಂಬ ಸಾಮಾನ್ಯಾರ್ಥವಿದ್ದರೂ ಇಲ್ಲಿ ಮಾತ್ರ ಮೇಘವೆಂದೇ ಅರ್ಥಮಾಡಬೇಕು. ಏಕೆಂದರೆ ಸ್ವರ್ಯಂ— ಶಬ್ದಮಾಡುವ ಎಂಬ ವಿಶೇಷಣವಿರುವುದರಿಂದ ಮೇಘಗಳು ಮಾತ್ರ ಸಿಡಿಲು ಗುಡುಗು ಮುಂತಾದ ಶಬ್ದಗಳನ್ನು ಮಾಡಲು ಸಾಧ್ಯವು ಪರ್ವತಗಳಿಗೆ ಯಾವ ವಿಧವಾದ ಶಬ್ದಗಳನ್ನು ಮಾಡಲೂ ಶಕ್ತಿಯಿಲ್ಲ ಮತ್ತು **ಅಶೂ ವ್ಯಾಪ್ತೌ**— ಎಂಬ ಧಾತುವಿನಿಂದ ನಿಷ್ಪನ್ನವಾದ ಅಶ್ಮಾನಂ ಎಂಬ ಶಬ್ದವೂ ಸಹ ಪರ್ವತಶಬ್ದಕ್ಕೆ ವಿಶೇಷಣವಾಗಿದೆ. ಅಂತರಿಕ್ಷದಲ್ಲಿ ವ್ಯಾಪಿಸಿ ಹರಡಿರುವ ಎಂದರ್ಥವು. ಅಂತರಿಕ್ಷದಲ್ಲಿ ಸರ್ವತ್ರ ವ್ಯಾಪಿಸಿ ಸಿಡಿಲು, ಗುಡುಗು ಎಂಬ ಶಬ್ದಗಳನ್ನು ಮಾಡುತ್ತಿರುವ ಮೇಘವನ್ನು ಮರುದ್ದೇವತೆಗಳು ತಮ್ಮ ಗಮನಗಳಿಂದ ಎಂದರೆ ವೇಗವಾಗಿ, ಅಥವಾ ರಭಸವಾಗಿ ಬೀಸುವುದರಿಂದ ಕೆಳಕ್ಕೆ ಇಳಿಯುವಂತೆ ಮಾಡುತ್ತಾರೆ ಎಂದರೆ ವೃಷ್ಟಿರೂಪದಲ್ಲಿ ಅಂತರಿಕ್ಷದಿಂದ ಭೂಮಿಯ ಮೇಲೆ ಬೀಳುವಂತೆ ಮಾಡುತ್ತಾರೆ. ಎಂದಭಿಪ್ರಾಯವು. ಪರ್ವತಶಬ್ದಕ್ಕೆ ಯಾಸ್ಕರು— **ಪರ್ವವಾನ್ ಪರ್ವತಃ ಪರ್ವ ಪುನಃ ಪೃಣಾತೇಃ ಪ್ರೀಣಾತೇರ್ವಾ** (ನಿ. ೧-೨೦) ಎಂದು ನಿರ್ವಚನವನ್ನು ಹೇಳಿದ್ದಾರೆ. ಗುಂಪುಗುಂಪಾಗಿ ಒಂದೆಡೆ ಒಟ್ಟಿಗೆ ಸೇರಿರುವುದರಿಂದ ಮೇಘಕ್ಕೆ ಪರ್ವತವೆಂದು ಹೆಸರು ಅಥವಾ ಅಂತರಿಕ್ಷಪ್ರದೇಶವನ್ನು ವ್ಯಾಪಿಸಿ ತುಂಬಿರುವುದರಿಂದ ಮೇಘಕ್ಕೆ ಪರ್ವತವೆಂದು ಹೆಸರು. ಅಥವಾ ಜನರಿಗೆ ವೃಷ್ಟ್ಯುದಕವನ್ನು ಒದಗಿಸಿ ಸಂತೋಷಪಡಿಸುವುದರಿಂದ ಮೇಘಕ್ಕೆ ಪರ್ವತವೆಂದು ಹೆಸರು ಎಂದು ಮೂರು ವಿಧವಾದ ಅರ್ಥಗಳನ್ನು ಹೇಳಿದ್ದಾರೆ ಪರ್ವತಶಬ್ದಕ್ಕೆ ಬೆಟ್ಟವೆಂಬ ಅರ್ಥದಲ್ಲಿಯೂ ಈ ಮೂರು ವಿಧವಾದ ಅರ್ಥಗಳು ಅನ್ವಯಿಸುವವು ಹೇಗೆಂದರೆ— ಗುಂಪುಗುಂಪಾಗಿ ಎಂದರೆ ಕಲ್ಲುಬಂಡೆಗಳ ರಾಶಿಯಿಂದ ಕೂಡಿರುವುದು, ಭೂಮಿಯಲ್ಲಿ ಬಹಳವಾದ ಪ್ರದೇಶವನ್ನು ಆಕ್ರಮಿಸಿ ಅಥವಾ ವ್ಯಾಪಿಸಿ ಅಲ್ಲಿ ತುಂಬಿರುವಂತೆ ಇರುವುದು, ಓಷಧಿ ವನಸ್ಪತಿ ಮೊದಲಾದ ವೃಕ್ಷಗಳಿಂದಲೂ, ನದಿಗಳಿಗೆ ಉಗಮಸ್ಥಾನವಾಗಿರುವುದರಿಂದಲೂ ಜನಗಳನ್ನು ಸಂತೋಷಪಡಿಸುವುದು ಎಂಬ ಮೂರು ವಿಧಗುಣಗಳು ಬೆಟ್ಟದಲ್ಲಿಯೂ ಇರುವುದರಿಂದ ಪರ್ವತವೆಂಬ ಹೆಸರು ಅನ್ವಯಿಸುವುದು. ಗಿರಿಶಬ್ದಕ್ಕೆ— ಗಿರಿರತ್ಯುದಕಂ, ಉದಕವನ್ನು ಹೊರಸೂಸುವುದು ಎಂಬ ಅರ್ಥವಿರುವುದರಿಂದ ಗಿರಿಶಬ್ದಕ್ಕೂ ಪರ್ವತಶಬ್ದಕ್ಕಿರುವಂತೆ ಮೇಘವೆಂಬ ಅರ್ಥವೇ ಇರುವುದು. ಆದುದರಿಂದ

ಈ ಋಕ್ಕಿನಲ್ಲಿ ಪರ್ವತ ಮತ್ತು ಗಿರಿ ಎಂಬ ಎರಡು ಶಬ್ದಗಳೂ ಸಮಾನಾರ್ಥವನ್ನೇ ಸೂಚಿಸುವುದರಿಂದ ಒಂದನ್ನು ವಿಶೇಷಣಪದವನ್ನಾಗಿಯೂ ಮತ್ತೊಂದನ್ನು ವಿಶೇಷ್ಯಪದವನ್ನಾಗಿಯೂ ಭಾವಿಸಿ ಅರ್ಥಮಾಡಬಹುದೆಂದು ಭಾಷ್ಯಕಾರರು ವಿವರಿಸಿದಾರೆ

॥ ಸಂಹಿತಾಪಾಠಃ ॥

ಉತ್ತಿಷ್ಠ ನೂನಮೇಷಾಂ ಸ್ತೋಮೈಃ ಸಮುಕ್ಷಿತಾನಾಂ ।

ಮರುತಾಂ ಪುರುತಮಮಪೂರ್ವ್ಯಂ ಗವಾಂ ಸರ್ಗಮಿವ ಹ್ವಯೇ ॥ ೫ ॥

॥ ಪದಪಾಠಃ ॥

ಉತ್ । ತಿಷ್ಠ । ನೂನಂ । ಏಷಾಂ । ಸ್ತೋಮೈಃ । ಸಂऽಉಕ್ಷಿತಾನಾಂ ।

ಮರುತಾಂ । ಪುರುऽತಮಂ । ಅಪೂರ್ವ್ಯಂ । ಗವಾಂ । ಸರ್ಗಂऽಇವ । ಹ್ವಯೇ ॥ ೫ ॥

ಸಾಯಣಭಾಷ್ಯಂ ॥ ॥

**ಹೇ ಮರುತೋ ಯೂಯಮುತ್ತಿಷ್ಠ । ಉತ್ತಿಷ್ಠತ ॥ ವ್ಯತ್ಯಯೇನೈಕವಚನಂ ॥ ನೂನಂ ನಿಶ್ಚಯಮೇಷಾಂ ಸ್ತೋಮೈಃ ಸ್ತೋತ್ರೈಃ ಸಮುಕ್ಷಿತಾನಾಂ ವರ್ಧಿತಾನಾಂ ಮರುತಾಂ । ಯದ್ವಾ । ಸ್ತೋಮೈರುಪಹ್ವಯ ಇತಿ ಸಂಬಂಧಃ । ತಾದೃಶಾಂ ಮರುತಾಂ ಪುರುತಮಂ ಪ್ರಭೂತತಮಮಪೂರ್ವ್ಯಂ। ನ ವಿದ್ಯತೇ ಪೂರ್ವೋ ಯೇಭ್ಯಸ್ತಮಪೂರ್ವ್ಯಂ ಸರ್ಗಂ ಸಂಘಂ ಗವಾಮುದಕಾನಾಂ ಪ್ರಸಿದ್ಧಾನಾಂ ಗವಾಂ ವಾ ಸರ್ಗಂ ಸಂಘಮಿವ ಹ್ವಯೇ । ಆಹ್ವಯೇ ॥**

॥ ಪ್ರತಿಪದಾರ್ಥ ॥

(ಎಲೈ ಮರುತ್ತುಗಳೇ) **ಉತ್ತಿಷ್ಠ**-ಎದ್ದೇಳಿರಿ । **ನೂನಂ**-ನಿಶ್ಚಯವಾಗಿಯೂ । **ಸ್ತೋಮೈಃ**-ಸ್ತೋತ್ರಗಳಿಂದ । **ಸಮುಕ್ಷಿತಾನಾಂ**—ಒಟ್ಟಿಗೆ ವೃದ್ಧಿಯನ್ನು ಹೊಂದಿದ । **ಏಷಾಂ ಮರುತಾಂ**—ಈ ಮರುತ್ತುಗಳ । **ಪುರುತಮಂ**-ಅತ್ಯಧಿಕವಾದುದೂ । **ಅಪೂರ್ವ್ಯಂ**—ಅನುಪಮವಾದುದೂ ಆದ । **ಸರ್ಗಂ**—ಸಂಘವನ್ನು । **ಗವಾಂ**—ಗೋವುಗಳ ಅಥವಾ ಉದಕಗಳ । **ಸರ್ಗಂ ಇವ**—ಸಮೂಹವನ್ನು ಕರೆಯುವಂತೆ । **ಹ್ವಯೇ**—ಪ್ರಾರ್ಥಿಸಿ ಕರೆಯುತ್ತೇನೆ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಎದ್ದೇಳಿರಿ. ನಾವು ಮಾಡುವ ಸ್ತೋತ್ರಗಳಿಂದ ಒಟ್ಟಿಗೆ ವೃದ್ಧಿಯನ್ನು ಹೊಂದಿದ ಈ ಮರುತ್ತುಗಳ ಅತ್ಯಧಿಕವಾದುದೂ ಅನುಪಮವಾದುದೂ ಆದ ಸಂಘವನ್ನು ಗೋವುಗಳ ಸಮೂಹವನ್ನು ಕರೆಯುವಂತೆ ಪ್ರಾರ್ಥಿಸಿ ಕರೆಯುತ್ತೇನೆ.

## English Translation

Rise up (Maruts): verily by my praises I invoke the mighty and unpreceded (troop) of these exalted (Maruts) like a heap of waters.

॥ ವಿಶೇಷವಿಷಯಗಳು ॥

**ಗವಾಂ ಸರ್ಗಮಿವ ಹ್ವಯೇ**—ಇಲ್ಲಿ ಋಷಿಯು ಮರುದ್ದೇವತೆಗಳ ಆಗಮನವನ್ನು ಬಯಸುವಾಗ **ಗವಾಂ ಸರ್ಗಮಿವ** ಎಂಬ ದೃಷ್ಟಾಂತವನ್ನು ಹೇಳಿರುವನು. ಮೇಯುವುದಕ್ಕೆ ವನಕ್ಕೆ ಹೋಗಿ ಸಾಯಂಕಾಲದಲ್ಲಿ ಮನೆಗೆ ಹಿಂದಕ್ಕೆ ಬರುವಾಗ ಗೋವುಗಳ ಹಿಂಡನ್ನು ಯಜಮಾನರು ಯಾವರೀತಿ ಆದರದಿಂದ ಸ್ವಾಗತಿಸಿ ಬರಮಾಡಿ ಕೊಳ್ಳುವರೋ ಅದರಂತೆ ನಾನು ಮಾಡಿದ ಸ್ತೋತ್ರಾದಿಗಳಿಂದ ಸಂತುಷ್ಟರಾದ ಮರುದ್ದೇವತೆಗಳ ಸಂಘವನ್ನು ನನು ಯಜ್ಞಭೂಮಿಗೆ ಬರುವಂತೆ ಭಕ್ತ್ಯಾದರಗಳಿಂದ ಪ್ರಾರ್ಥಿಸಿ ಕರೆಯುತ್ತೇನೆ ಎಂದು ಮರುದ್ದೇವತೆಗಳ ಸಂಘವನ್ನು ಗೋವುಗಳ ಸಮೂಹಕ್ಕೆ ಹೋಲಿಸಿ ಮರುದ್ದೇವತೆಗಳ ವಿಷಯದಲ್ಲಿ ತನಗಿರುವ ಆದರಾತಿಶಯವನ್ನು ವ್ಯಕ್ತಪಡಿಸಿದಾನೆ. ಇಲ್ಲಿ **ಗವಾಂ** ಎಂಬ ಶಬ್ದಕ್ಕೆ **ಉದಕಾನಾಂ** ಎಂದು ಅರ್ಥಾಂತರವನ್ನು ಹೇಳಿದಾರೆ. **ಗವಾಂ ಸಂಘಂ** ಎಂದರೆ ಉದಕಗಳ ಸಮೂಹವನ್ನು ಅಥವಾ ವೃಷ್ಟಿಯನ್ನು ಸುರಿಸುವ ಮೇಘಗಳನ್ನು ವೃಷ್ಟ್ಯರ್ಥವಾಗಿ ಜನರು ಬಯಸುವಂತೆ ಎಂದು ಇನ್ನೊಂದುವಿಧವಾದ ಅರ್ಥವೂ ಸಾಧ್ಯವಾಗುವುದು.

॥ ಸಂಹಿತಾಪಾಠಃ ॥

ಯುಂಗ್ಧ್ವಂ ಹ್ಯರುಷೀ ರಥೇ ಯುಂಗ್ಧ್ವಂ ರಥೇಷು ರೋಹಿತಃ ।
ಯುಂಗ್ಧ್ವಂ ಹರೀ ಅಜಿರಾ ಧುರಿ ವೋಳ್ಹವೇ ವಹಿಷ್ಠಾ ಧುರಿ ವೋಳ್ಹವೇ ॥

॥ ಪದಪಾಠಃ ॥

ಯುಂಗ್ಧ್ವಂ । ಹಿ । ಅರುಷೀಃ । ರಥೇ । ಯುಂಗ್ಧ್ವಂ । ರಥೇಷು । ರೋಹಿತಃ ।
ಯುಂಗ್ಧ್ವಂ । ಹರೀ ಇತಿ । ಅಜಿರಾ । ಧುರಿ । ವೋಳ್ಹವೇ । ವಹಿಷ್ಠಾ । ಧುರಿ । ವೋಳ್ಹವೇ ॥ ೬ ॥

॥ ಸಾಯಣಭಾಷ್ಯಂ ॥

**ಹೇ ಮರುತೋ ಯೂಯಂ ರಥೇ ಯುಷ್ಮದೀಯೇ ಸರ್ವೇಷಾಂ ಸಾಧಾರಣಭೂತೇಽರುಷೀರಾರೋಚಮಾನಾ ವಡವಾ ಯುಂಗ್ಧ್ವಂ । ಯೋಜಯಧ್ವಂ । ತಥಾ ರಥೇಷು ಯುಷ್ಮದೀಯೇಷು ರೋಹಿತೋ ರೋಹಿತವರ್ಣಾ ಯುಂಗ್ಧ್ವಂ । ಹರೀ ಅಶ್ವಾವಜಿರಾಜಿರಾವಾಶುಗಮನೌ ಧುರಿ ವೋಳ್ಹವೇ ವಹನಾಯ ಯುಂಗ್ಧ್ವಂ । ಆದರಾರ್ಥಂ ಪುನರ್ವಚನಂ । ವಹಿಷ್ಠಾ ವೋಢೃತಮಾವಶ್ವೌ ಧುರಿ ವೋಳ್ಹವೇ ॥**

॥ ಪ್ರತಿಪದಾರ್ಥ॥

( ಎಲೈ ಮರುತ್ತುಗಳೇ ) **ರಥೇ**—ನಿಮ್ಮ ರಥದಲ್ಲಿ | **ಅರುಷೀಃ**—ಹೊಂಬಣ್ಣದ ಅಶ್ವಗಳನ್ನು | **ಯುಙ್ಗ್ಧ್ವಂ**—ಸೇರಿಸಿ ಕಟ್ಟಿರಿ | **ರಥೇಷು**—ರಥಗಳಲ್ಲಿ | **ರೋಹಿತಃ**—ರೋಹಿತವರ್ಣವುಳ್ಳ ಅಶ್ವಗಳನ್ನು | **ಯುಙ್ಗ್ಧ್ವಂ**—ಯೋಜಿಸಿರಿ | **ಅಜಿರಾ**—ವೇಗಗಾಮಿಗಳಾದ | **ಹರೀ**—ಅಶ್ವಗಳನ್ನು | **ಧುರಿ**—ನೊಗಗಳಲ್ಲಿ | **ವೋಳ್ಹವೇ**—ಭಾರವನ್ನು ವಹಿಸಲು | **ಯುಙ್ಗ್ಧ್ವಂ**—ಯೋಜಿಸಿ ಕಟ್ಟಿರಿ | **ವಹಿಷ್ಠಾ**—ಭಾರವನ್ನು ವಹಿಸುವ ಸಾಮರ್ಥ್ಯವುಳ್ಳ ಅಶ್ವಗಳನ್ನು | **ವೋಳ್ಹವೇ**—ಭಾರ ವಹನಕ್ಕಾಗಿ (ಯೋಜಿಸಿರಿ)

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನಿಮ್ಮ ರಥಗಳಲ್ಲಿ ಹೊಂಬಣ್ಣದ ಅಶ್ವಗಳನ್ನೂ ಆಕರ್ಷಕವಾದ ಬಣ್ಣವುಳ್ಳ ಅಶ್ವಗಳನ್ನೂ ಕಟ್ಟಿರಿ. ವೇಗಗಾಮಿಗಳಾದ ನಿಮ್ಮ ಅಶ್ವಗಳನ್ನು ಭಾರವನ್ನು ವಹಿಸುವುದಕ್ಕಾಗಿ ನೊಗಗಳಿಗೆ ಸೇರಿಸಿ ಕಟ್ಟಿರಿ

English Translation

Yoke the bright steeds to the car ; yoke the red steeds to the cars ; yoke the swift pair of horses to bear the burden , the strong bearing to bear the burden.

॥ ವಿಶೇಷವಿಷಯಗಳು ॥

ಮರುದ್ದೇವತೆಗಳ ಅಶ್ವಗಳಿಗೆ ಪೃಷತ್ಯಃ—ಬಿಳೀಚುಕ್ಕೆಗಳಿರುವ ಜಿಂಕೆಗಳು ಎಂದು ಯಾಸ್ಕರು ನಿರ್ವಚನದಲ್ಲಿ (ನಿ. ೨-೬೮) ಹೇಳಿದಾರೆ. ಆದರೆ ಈ ಋಕ್ಕಿನಲ್ಲಿ ಋಷಿಯು ಮರುದ್ದೇವತೆಗಳನ್ನುದ್ದೇಶಿಸಿ ಮೂರು ವಿಧವಾದ ಅಶ್ವಗಳನ್ನು ತಮ್ಮ ರಥದ ನೊಗಕ್ಕೆ ಸೇರಿಸಿ ಕಟ್ಟಬೇಕೆಂದು ಪ್ರಾರ್ಥಿಸಿದಾನೆ.

**ಅರುಷೀಃ—ಆರೋಚಮಾನಾಃ ವಡಬಾಃ** | ಪ್ರಕಾಶಮಾನವಾದ ಎಂದರೆ ಧಷ್ಟಪುಷ್ಟವಾಗಿರುವವೂ ನೋಡುವುದಕ್ಕೆ ಆಕರ್ಷಣೀಯವಾಗಿರುವವೂ ಆದ ಅಶ್ವಗಳೆಂದರ್ಥವು. ಆರೋಗದೃಢಕಾಯವಾಗಿರುವ ಅಶ್ವಗಳು ನೋಡುವುದಕ್ಕೆ ರಮಣೀಯವಾಗಿರುವವು ಎಂಬ ವಿಷಯವು ಅನುಭವವೇದ್ಯವೇ ಆಗಿರುವುದು. ಅರುಷಶಬ್ದಕ್ಕೆ ಮಾಸಲು ಕೆಂಪು, ಸ್ವಲ್ಪಮಟ್ಟಿಗೆ ಕೆಂಪಾಗಿರುವ ಅಶ್ವಗಳು ಎಂದೂ ಅರ್ಥವನ್ನು ಹೇಳಬಹುದು ಈ ವಿಧವಾದ ಹೊಂಬಣ್ಣದ ಅಶ್ವಗಳನ್ನು ಎಂದು ಇಲ್ಲಿ ಹೇಳಿರುವುದು ಮರುದ್ದೇವತೆಗಳ ಸಹಜವಾದ ಅಶ್ವಗಳಾದ **ಪೃಷತ್ಯಃ** ಎಂದರೆ ಬಿಳೀಚಿಕ್ಕೆಗಳಿಂದ ಕೂಡಿದ ಜಿಂಕೆಗಳಿಗೂ ಅನ್ವಯಿಸುವುದು ಈ ವಿಧವಾದ ಕುದುರೆಗಳ ಬಣ್ಣವೂ ಜಿಂಕೆಗಳ ಬಣ್ಣವೂ ಸಾಮಾನ್ಯವಾಗಿ ಒಂದೇವಿಧವಾಗಿರುವುದರಿಂದ ಅಂತಹ ಜಿಂಕೆಗಳನ್ನು ಮರುದ್ದೇವತೆಗಳ ವಾಹನಗಳಾದ ಅಶ್ವಗಳೆಂದು ಇಲ್ಲಿ ವರ್ಣಿಸಿದೆ.

**ರೋಹಿತಃ—ರೋಹಿತವರ್ಣಾಃ** | ರಕ್ತವರ್ಣದ, ಎಂದರೆ ಕೆಂಪುಬಣ್ಣದ ಕುದುರೆಗಳು ಯಾಸ್ಕರು ಅಗ್ನಿಯ ವಾಹನವು ರೋಹಿತವೆಂದು **ರೋಹಿತೋಽಗ್ನೇಃ** (ನಿ. ೨-೨೮) ನಿರ್ವಚನವನ್ನು ಹೇಳಿದಾರೆ ; ಆದರೆ ಇಲ್ಲಿ ಮರುದ್ದೇವತೆಗಳ ವಾಹನಗಳನ್ನು ರೋಹಿತ ಶಬ್ದದಿಂದಲೇ ನಿರ್ದೇಶಿಸಲಾಗಿದೆ. ಪ್ರಾಯಶಃ ಮರುತ್ತುಗಳ ವಾಹನವಾದ ಜಿಂಕೆಗಳ ಬಣ್ಣವೂ ರೋಹಿತವರ್ಣವಾಗಿಯೇ ಇರುವುದರಿಂದ ಆ ವಿವರವನ್ನು ತಿಳಿಸುವುದಕ್ಕಾಗಿಯೇ ಋಷಿಯು ರೋಹಿತಶಬ್ದವನ್ನು ಉಪಯೋಗಿಸಿರಬಹುದು.

**ಹರೀ**—ಇಂದ್ರನ ಎರಡು ಕುದುರೆಗಳಿಗೆ **ಹರೀ** ಎಂದು ಹೆಸರೆಂದು ಯಾಸ್ಕರು **ಹರೀ ಇಂದ್ರಸ್ಯ** (ನಿ. ೨-೨೮) ಎಂಬ ವಾಕ್ಯದಿಂದ ನಿರ್ದೇಶಿಸಿದಾರೆ. ಮೇಲೆ ಹೇಳಿದ ಅರುಷಶಬ್ದವೂ ರೋಹಿತಶಬ್ದವೂ ಮರುದ್ದೇವತೆಗಳ ವಾಹನವಾದ ಪೃಷತ್ಯಃ ಎಂಬ ಜಿಂಕೆಯ ವರ್ಣವನ್ನು ಹೇಳುವುದರಿಂದ ಅವುಗಳಲ್ಲಿ ಸಾಮಾನ್ಯಧರ್ಮವಿದ್ದಂತಾಯಿತು. ಆದರೇ ಹರೀ ಎಂಬುದು ಇಂದ್ರನ ಕುದುರೆಗಳಿಗೆ ಮಾತ್ರ ಉಪಯೋಗಿಸುವ ಶಬ್ದವು. ಹರೀ ಎಂಬ ಶಬ್ದವು ದ್ವಿವಚನಾಂತಪದವಾಗಿ ಇಂದ್ರನ ಎರಡು ಕುದುರೆಗಳು ಎಂದು ಸಂಖ್ಯಾನಿರ್ದೇಶಕವಾಗಿಯೂ ಇದೆ. ಮರುದ್ದೇವತೆಗಳ ಅಶ್ವಗಳನ್ನು ಬಹುವಚನಶಬ್ದಗಳಿಂದ ನಿರ್ದೇಶಿಸುವುದು ರೂಢಿಯು. ಹೀಗಿರುವಲ್ಲಿ ಹರೀ ಎಂಬ ಶಬ್ದವನ್ನು ಋಷಿಯು ಏತಕ್ಕಾಗಿ ಉಪಯೋಗಿಸಿರುವನು ? ಹಾಗೆ ಉಪಯೋಗಿಸಿರುವುದು ತಪ್ಪಲ್ಲವೇ ಎಂದರೆ, ಅದಕ್ಕೆ ಈ ರೀತಿ ಸಮಾಧಾನವನ್ನು ಹೇಳಬಹುದು. ಇಂದ್ರನ ಕುದುರೆಗಳು ಬಹಳ ಶಕ್ತಿಸಾಮರ್ಥ್ಯಗಳುಳ್ಳವು ಇಂದ್ರನ ಮನಸ್ಸಿನ ಅಭಿಪ್ರಾಯವನ್ನು ತಾವಾಗಿಯೇ ತಿಳಿದುಕೊಂಡು ಅದರಂತೆ ರಥಕ್ಕೆ ಸ್ವಯಂಯೋಜಿತವಾಗಿ ಕ್ಷಣಮಾತ್ರದಲ್ಲಿ ಇಂದ್ರನನ್ನು ಎಲ್ಲಿಗೆಂದರೆ ಅಲ್ಲಿಗೆ ಒಯ್ಯುವ ಸಾಮರ್ಥ್ಯವನ್ನು ಪಡೆದಿರುವವು. ಈ ವಿಧವಾದ ಶಕ್ತಿಸಾಮರ್ಥ್ಯಗಳು ಇತರ ದೇವತೆಗಳ ವಾಹನಗಳಿಗೆ ಇರುವುದಿಲ್ಲ. ಆದ್ದರಿಂದ ಮರುದ್ದೇವತೆಗಳ ವಾಹನಗಳನ್ನು ವಿಶೇಷರೀತಿಯಿಂದ ವರ್ಣಿಸುವಾಗ ಇಂದ್ರನ ಕುದುರೆಗಳಲ್ಲಿರುವ ಗುಣಗಳನ್ನೂ ಸಾಮರ್ಥ್ಯಾತಿಶಯವನ್ನೂ ಮರುದ್ದೇವತೆಗಳ ವಾಹನಗಳಲ್ಲಿಯೂ ಆರೋಪಮಾಡಿ ಋಷಿಯು ವರ್ಣಿಸಿರುವನೆಂದೂ ಆದ್ದರಿಂದಲೇ **ಹರೀ** ಎಂಬ ಶಬ್ದದ ಪ್ರಯೋಗವಿರುವುದು ನ್ಯಾಯವಾಗಿದೆಯೆಂದೂ ಭಾವಿಸಬಹುದು.

॥ ಸಂಹಿತಾಪಾಠಃ ॥

ಉತ ಸ್ಯ ವಾಜ್ಯರುಷಸ್ತುವಿಷ್ವಣಿರಿಹ ಸ್ಮ ಧಾಯಿ ದರ್ಶತಃ ।
ಮಾ ವೋ ಯಾಮೇಷು ಮರುತಶ್ಚಿರಂ ಕರತ್ಪ್ರ ತಂ ರಥೇಷು ಚೋದತ ॥

॥ ಪದಪಾಠಃ ॥

ಉತ । ಸ್ಯಃ । ವಾಜೀ । ಅರುಷಃ । ತುವಿಽಸ್ವನಿಃ । ಇಹ । ಸ್ಮ । ಧಾಯಿ । ದರ್ಶತಃ ।
ಮಾ । ವಃ । ಯಾಮೇಷು । ಮರುತಃ । ಚಿರಂ । ಕರತ್ । ಪ್ರ । ತಂ । ರಥೇಷು । ಚೋದತ ॥ ೭ ॥

॥ ಸಾಯಣಭಾಷ್ಯಂ ॥

**ಉತಾಪಿ ಚ ಸ್ಯ ಸ ವಾಜೀ ವೇಜನವಾನರುಷ ಆರೋಚಮಾನಸ್ತುವಿಷ್ವಣಿಃ ಪ್ರಭೂತಧ್ವನಿರಶ್ವಃ। ಅರುಷ ಇತ್ಯನೇನ ರೋಹಿತ ಇತ್ಯುಕ್ತಂ ಭವತಿ । ಪೃಷ್ಟಿರ್ವಹತಿ ರೋಹಿತಃ । ಋಗ್ವೇ-೧-೩೯-೬ । ಇತಿ ಹ್ಯುಕ್ತಂ । ಇಹೇದಾನೀಂ ದರ್ಶತೋ ದರ್ಶನೀಯಃ ಸನ್ ಧಾಯಿ । ರಥೇ ನಿಯೋಜಿತಃ । ಸ್ಮೇತಿ**

**ಪೂರಣಃ । ಹೇ ಮರುತೋ ವೋ ಯಾಮೇಷು ಗಮನೇಷು ಸೋಽಶ್ವಶ್ಚಿರಂ ವಿಲಂಬಂ ಮಾ ಕರತ್ । ಮಾ ಕರೋತು । ತಂ ರಥೇಷು । ರಥೇ ಯುಕ್ತಮಿತಿ ಶೇಷಃ । ಪ್ರ ಚೋದತ । ಪ್ರೇರಯತ । ಯಥಾ ವಿಲಂಬಂ ನ ಕುರ್ಯಾತ್ತಥಾ ಪ್ರೇರಯತ ॥**

॥ ಪ್ರತಿಪದಾರ್ಥ ॥

**ಉತ**—ಮತ್ತು (ಎಲೈ ಮರುತ್ತುಗಳೇ) । **ಸ್ಯಃ**—ಪ್ರಸಿದ್ಧವಾದ ಅದೇ । **ವಾಜೀ**—ವೇಗಗಾಮಿಯೂ । **ಅರುಷಃ**—ಪ್ರಕಾಶಮಾನವಾದುದೂ । **ತುವಿಷ್ವಣಿಃ**—ಅಧಿಕವಾಗಿ ಶಬ್ದಮಾಡತಕ್ಕದ್ದೂ ಆದ ಅಶ್ವವು । **ಇಹ**—ಈಗ । **ದರ್ಶತಃ**—ದರ್ಶನೀಯವಾದ ರೂಪವುಳ್ಳದ್ದಾಗಿ । **ಧಾಯಿ**—ರಥಕ್ಕೆ ನಿಯೋಜಿತವಾಗಿದೆ । **ಮರುತಃ**—ಎಲೈ ಮರುತ್ತುಗಳೇ (ಅದೇ ಅಶ್ವವು) । **ಯಾಮೇಷು**—ನಿಮ್ಮ ಗಮನಕಾಲದಲ್ಲಿ । **ಚಿರಂ**—ಬಹಳಕಾಲ ಸಾವಕಾಶವನ್ನು । **ಮಾ ಕರತ್**—ಮಾಡದೇ ಇರಲಿ। **ತಂ**—ಆ ಅಶ್ವವನ್ನು। **ರಥೇಷು**—ರಥಗಳಲ್ಲಿ ಸೇರಿಸಿ । **ಪ್ರ ಚೋದತ**-ಪ್ರೇರಿಸಿರಿ

॥ ಭಾವಾರ್ಥ ॥

ಎಲೈ ಮರುತ್ತುಗಳೇ, ವೇಗಗಾಮಿಯೂ, ಪ್ರಕಾಶಮಾನವಾದುದೂ ಅಧಿಕವಾಗಿ ಹೇಷಾರವಮಾಡತಕ್ಕದ್ದೂ ದರ್ಶನೀಯವಾದ ರೂಪವುಳ್ಳದ್ದೂ ಆದ ಅಶ್ವವು ರಥಕ್ಕೆ ನಿಯೋಜಿತವಾಗಿದೆ. ಎಲೈ ಮರುತ್ತುಗಳೇ, ಅದೇ ಅಶ್ವವು ನಿಮ್ಮ ಗಮನಕಾಲದಲ್ಲಿ ಸಾವಕಾಶಮಾಡದಿರಲಿ ಆ ಅಶ್ವಗಳನ್ನು ನಿಮ್ಮ ರಥಗಳಲ್ಲಿ ಸೇರಿಸಿ ಪ್ರೇರಿಸಿ.

English Translation

And let not that horse, bright-shining, loud-neighing, of graceful form, who has been placed (in harness), delay you, Maruts, on your journey. urge him on in the car.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ ಮರುದ್ದೇವತೆಗಳ ಅಶ್ವವನ್ನು ವರ್ಣಿಸಿ ಅಶ್ವವನ್ನು ರಥಕ್ಕೆ ನಿಯೋಜಿಸಿ ಮಾರ್ಗಮಧ್ಯದಲ್ಲಿ ಎಲ್ಲಿಯೂ ನಿಲ್ಲದೆ ನೇರವಾಗಿ ಯಜ್ಞಭೂಮಿಗೆ ಬರುವಂತೆ ಅಶ್ವವನ್ನು ಪ್ರೇರಿಸಿ ಎಂಬ ಪ್ರಾರ್ಥನೆಯು ಉಕ್ತವಾಗಿದೆ.

**ಸ್ಯಃ ತ್ಯಂ** ಎಂಬ ಶಬ್ದಗಳಿಗೆ ತಚ್ಛಬ್ದಾರ್ಥವಿರುವುದು ಎಂದರೆ **ಸ್ಯಃ** ಎಂದರೆ **ಸಃ** ಎಂದೂ **ತ್ಯಂ** ಎಂದರೆ **ತಂ** ಎಂದೂ **ತ್ಯತ್** ಎಂದರೆ **ತತ್** ಎಂದೂ ಅರ್ಥವು. ಈ ವಿಧವಾದ **ಸ್ಯಃ ತ್ಯಂ ತತ್** ಮೊದಲಾದ ಶಬ್ದಗಳ ಪ್ರಯೋಗವು ಋಗ್ವೇದದಲ್ಲಿ ವಿಶೇಷವಾಗಿದೆ.

**ಅರುಷಃ—ಆರೋಚಮಾನಃ । ಅರುಷ ಇತ್ಯನೇನ ರೋಹಿತ ಇತ್ಯುಕ್ತಂ ಭವತಿ ।** ಅರುಷಶಬ್ದದ ಅರ್ಥವನ್ನು ಹಿಂದಿನ ಋಕ್ಕಿನ ವಿಶೇಷವಿಷಯಗಳಲ್ಲಿ ವಿವರಿಸಲಾಗಿದೆ. ಅರುಷ ಮತ್ತು ರೋಹಿತ ಎಂಬ ಎರಡು ಶಬ್ದಗಳಿಗೂ ಸಾಮಾನ್ಯವಾಗಿ ಒಂದೇ ಅರ್ಥವಿರುವುದೆಂದು ಭಾಷ್ಯಕಾರರ ವಿವರಣೆಯಿಂದ ತಿಳಿಯುಬಹುದು. ಹಿಂದಿನ

ಋಕ್ಕಿನಲ್ಲಿ ಬಹುವಚನಪ್ರಯೋಗವಿದೆ. ಈ ಋಕ್ಕಿನಲ್ಲಿ **ಅರುಷಃ ದರ್ಶತಃ** ಎಂದು ಮೊದಲಾಗಿ ಏಕವಚನಪ್ರಯೋಗ ವಿದೆ. ಛಂದಸ್ಸಿನಲ್ಲಿ ವಿಭಕ್ತಿವಚನವ್ಯತ್ಯಯವು ಸಾಧಾರಣನಿಯಮವಾಗಿರುವುದರಿಂದ ಏಕವಚನಕ್ಕೆ ಬಹುವಚನಾರ್ಥ ವನ್ನೂ, ಬಹುವಚನಕ್ಕೆ ಏಕವಚನಾರ್ಥವನ್ನೂ ಹೇಳುವುದು ತಪ್ಪಲ್ಲ. ಮರುದ್ದೇವತೆಗಳ ವಾಹನವನ್ನು ವರ್ಣಿಸು ವಾಗ ರೋಹಿತಶಬ್ದಪ್ರಯೋಗವು—

**ಉಪೋ ರಥೇಷು ಪೃಷತೀರಯುಗ್ಧ್ವಂ ಪ್ರಷ್ಟಿರ್ವಹತಿ ರೋಹಿತಃ ।**

(ಋ. ಸಂ. ೧-೩೯-೬)

ಇತ್ಯಾದಿ ಋಕ್ಕುಗಳಲ್ಲಿ ಕಂಡುಬರುವುದೆಂದು ಭಾಷ್ಯಕಾರರು ಮೇಲಿನ ಋಕ್ಕನ್ನುದಾಹರಿಸಿದಾರೆ.

**ಸ್ಮ**—ಎಂಬ ಶಬ್ದವು ಇಲ್ಲಿ ಪಾದಪೂರಣಾರ್ಥವಾಗಿ ಉಪಯೋಗಿಸಲ್ಪಟ್ಟಿರುವುದೆಂದು ಭಾಷ್ಯಕಾರರು ವಿವರಿಸಿದಾರೆ. ಎಂದರೆ ಈ ಶಬ್ದಕ್ಕೆ ಯಾವ ನಿರ್ದಿಷ್ಟಾರ್ಥವೂ ಇರುವುದಿಲ್ಲ ಛಂದಸ್ಸಿನಲ್ಲಿರಬೇಕಾದ ಕ್ಲೃಪ್ತ ಸಂಖ್ಯೆಯ ಅಕ್ಷರಗಳನ್ನು ಪೂರಣಮಾಡುವುದಕ್ಕಾಗಿ ಉಪಯೋಗಿಸಲಾಗಿದೆ ಆಧುನಿಕಸಂಸ್ಕೃತಭಾಷೆಯಲ್ಲಿ ಈ ಶಬ್ದವು ವರ್ತಮಾನಕಾಲವನ್ನು ಸೂಚಿಸುವ ಧಾತುಗಳ ಜತೆಯಲ್ಲಿ ಉಪಯೋಗಿಸಿದಾಗ ಭೂತಕಾಲಾರ್ಥವನ್ನು ಸೂಚಿಸುವುದು. ಉದಾ—**ವಹತಿ** ವಹಿಸುತ್ತಾನೆ ಎಂಬ ಶಬ್ದದ ಜತೆಯಲ್ಲಿ **ಸ್ಮ** ಎಂಬ ಶಬ್ದವನ್ನು ಸೇರಿಸಿದಾಗ **ವಹತಿ ಸ್ಮ** ಎಂದಾಗಿ ಆ ಶಬ್ದಗಳಿಗೆ ವಹಿಸಿದನು ಎಂದು ಭೂತಕಾಲದ ಅರ್ಥವನ್ನು ಹೇಳುವುದು ರೂಢಿಯಾಗಿದೆ.

॥ ಸಂಹಿತಾಪಾಠಃ ॥

ರಥಂ ನು ಮಾರುತಂ ವಯಂ ಶ್ರವಸ್ಯುಮಾ ಹುವಾಮಹೇ ।
ಆ ಯಸ್ಮಿನ್ತಸ್ಥೌ ಸುರಣಾನಿ ಬಿಭ್ರತೀ ಸಚಾ ಮರುತ್ಸು ರೋದಸೀ ॥೮॥

॥ ಪದಪಾಠಃ ॥

ರಥಂ । ನು । ಮಾರುತಂ । ವಯಂ । ಶ್ರವಸ್ಯುಂ । ಆ । ಹುವಾಮಹೇ ।
ಆ । ಯಸ್ಮಿನ್ । ತಸ್ಥೌ । ಸುऽರಣಾನಿ । ಬಿಭ್ರತೀ । ಸಚಾ । ಮರುತ್ऽಸು । ರೋದಸೀ ॥ ೮ ॥

॥ ಸಾಯಣಭಾಷ್ಯಂ ॥

**ವಯಮಾತ್ರೇಯಾ ರಥಂ ರಂಹಣಸ್ವಭಾವಂ ಮಾರುತಂ ಮರುತಾಂ ಸಂಬಂಧಿನಂ ರಥಂ ಶ್ರವಸ್ಯು-ಮನ್ನೇಚ್ಛುಂ ನು ಅದ್ಯಾ ಹುವಾಮಹೇ। ಆಹ್ವಯಾಮಃ। ಯಸ್ಮಿನ್ರಥೇ ಸುರಣಾನಿ ಸುರಮಣಾನಿ ಜಲಾನಿ ಬಿಭ್ರತೀ ಧಾರಯಂತೀ ರೋದಸೀ ರುದ್ರಸ್ಯ ಪತ್ನೀ ಮರುತಾಂ ಮಾತಾ। ಯದ್ವಾ। ರುದ್ರೋ ವಾಯುಃ। ತತ್ಪತ್ನೀ ಮಾಧ್ಯಮಿಕಾ ದೇವೀ ಮರುತ್ಸು ಸಚಾ ಸಹಿತಾ ಆ ತಸ್ಥೌ ಆಸ್ಥಿತವತೀ ತಂ ರಥಮಾಹುವೇ।**

॥ ಪ್ರತಿಪದಾರ್ಥ ॥

**ಯಸ್ಮಿನ್**—ಯಾವ ರಥದಲ್ಲಿ । **ಸುರಣಾನಿ**—ಉದಕಗಳನ್ನು । **ಬಿಭ್ರತೀ**—ಧರಿಸಿರುವ । **ರೋದಸೀ**—ರುದ್ರಪತ್ನಿಯು (ಮರುತ್ತುಗಳ ಮಾತೆಯು) । **ಮರುತ್ಸು ಸಚಾ**—ಮರುತ್ತುಗಳೊಂದಿಗೆ । **ಆ ತಸ್ಥೌ**—ಸ್ಥಿತಳಾಗಿದ್ದಾಳೋ ಅಂತಹ । **ಮಾರುತಂ**—ಮರುತ್ಸಂಬಂಧಿಯಾದುದೂ । **ಶ್ರವಸ್ಯುಂ**—ಅನ್ನೇಚ್ಛುವಾದುದೂ ಆದ । **ರಥಂ**—ರಥವನ್ನು । **ವಯಂ**—ನಾವು । **ಆ ಹುವಾಮಹೇ**—ಪ್ರಾರ್ಥಿಸಿ ಕರೆಯುತ್ತೇವೆ.

॥ ಭಾವಾರ್ಥ ॥

ಯಾವ ರಥದಲ್ಲಿ ಉದಕಗಳನ್ನು ಧರಿಸಿರುವ ಮರುತ್ತುಗಳ ಮಾತೆಯಾದ ರುದ್ರಪತ್ನೀ ಅಥವಾ ಮಾಧ್ಯಮಿಕಾ ವಾಕ್ಕು ಎಂಬ ದೇವತೆಯು ಸ್ಥಿತಳಾಗಿದ್ದಾಳೋ ಅಂತಹ ಮರುತ್ಸಂಬಂಧಿಯಾದುದೂ, ಅನ್ನೇಚ್ಛುವಾದುದೂ ಆದ ರಥವನ್ನು ನಾವು ಪ್ರಾರ್ಥಿಸಿ ಕರೆಯುತ್ತೇವೆ.

## English Translation

We invoke the food-laden chariot of the Maruts, in which Rodasi stood with the Maruts, bearing the delicious (waters).

॥ ವಿಶೇಷ ವಿಷಯಗಳು ॥

ಈ ಋಕ್ಕಿನಲ್ಲಿ ಮರುದ್ದೇವತೆಗಳ ರಥವನ್ನು ಸ್ತುತಿಸಲಾಗಿದೆ. ಮತ್ತು ಯಾಸ್ಕರು ಈ ಋಕ್ಕಿಗೆ ನಿರ್ವಚನವನ್ನು ಹೇಳಿದಾರೆ —

**ರಥಂ ಕ್ಷಿಪ್ರಂ ಮಾರುತಂ ಮೇಘಂ ವಯಂ ಶ್ರವಣೀಯಮಾಹ್ವಯಾಮಹ ಆ ಯಸ್ಮಿನ್ತಸ್ಥೌ ಸುರಮಣೀಯಾನ್ಯುದಕಾನಿ ಬಿಭ್ರತೀ ಸಚಾ ಮರುದ್ಭಿಃ ಸಹ ರೋದಸೀರೋದಸೀ ॥**

(ನಿ. ೧೧.೫೦)

ಮರುದ್ದೇವತೆಗಳ ರಥವು ವೇಗಗಮನವುಳ್ಳದ್ದೂ ಯಶಸ್ಸಿನಿಂದ ಪ್ರಸಿದ್ಧವಾದುದೂ ಆಗಿದೆ ಆ ರಥದಲ್ಲಿ ರುದ್ರಪತ್ನಿಯೂ ಮರುದ್ದೇವತೆಗಳ ಮಾತೆಯೂ ಆದ ರೋದಸೀ ಎಂಬ ದೇವತೆಯು ಉತ್ತಮವಾದ ಉದಕಗಳನ್ನು ಧರಿಸಿ ಮರುದ್ದೇವತೆಗಳೊಡನೆ ನಿಂತಿದ್ದಾಳೆ. ಅಂತಹ ಮರುದ್ದೇವತೆಗಳ ರಥವನ್ನು ನಾವು ಪ್ರಾರ್ಥಿಸಿ ಕರೆಯುತ್ತೇವೆ ಎಂದು ನಿರ್ವಚನದ ಮುಖ್ಯಾಭಿಪ್ರಾಯವು.

**ರಥಂ**—ರಥಶಬ್ದಕ್ಕೆ ಯಾಸ್ಕರು ತಮ್ಮ ನಿರುಕ್ತದಲ್ಲಿ—**ರಥೋ ರಹಂತೇರ್ಗತಿಕರ್ಮಣಃ। ಸ್ಥಿರತೇರ್ವಾ ಸ್ಯಾದ್ವಿಪರೀತಸ್ಯ। ರಮಮಾಣೋಽಸ್ಮಿಂಸ್ತಿಷ್ಠತೀತಿ ವಾ ರಪತೇರ್ವಾ ರಸತೇರ್ವಾ** ( ನಿ. ೯-೧೧ ) ಎಂದು ಹೇಳಿರುವರು. ಎಂದರೆ ಗಮನಕರ್ಮವನ್ನು ಸೂಚಿಸುವ ರಂಹ್ ಧಾತುವಿನಿಂದಾಗಲಿ, ಸ್ಥಿರವಾಗಿರು ಎಂದರ್ಥವುಳ್ಳ ಸ್ಥಿರತಿ ಧಾತುವಿನಿಂದಾಗಲಿ, ನಿಷ್ಪನ್ನವಾಗಬಹುದು. ಈ ರಥವು ಯಾವಾಗಲೂ ಹೋಗುತ್ತಿರು(ಸಂಚರಿಸುತ್ತಿರು)ವುದರಿಂದ ಇದಕ್ಕೆ ರಥವೆಂದು ಹೆಸರು ಅಥವಾ ಇದರಲ್ಲಿ ಕುಳಿತುಕೊಳ್ಳುವ ಯೋಧನು ಸ್ಥಿರವಾಗಿರುವನು ಅಶ್ವಾದಿ

ವಾಹನಗಳ ಮೇಲೆ ಕುಳಿತುಕೊಂಡಾಗ ಶರೀರವು ಅಲುಗಾಡುವಂತೆ, ರಥದಲ್ಲಿ ಕುಳಿತಾಗ ಅಲುಗಾಡದೆ ಸ್ಥಿರವಾಗಿ ಕುಳಿತುಕೊಳ್ಳಲು ಸಾಧ್ಯವಾಗುವುದರಿಂದ ಇದಕ್ಕೆ ರಥವೆಂದು ಹೆಸರು. ಅಥವಾ ಈ ರಥದಲ್ಲಿ ಕುಳಿತು ವಿಹರಿಸುವುದರಿಂದ ಇದಕ್ಕೆ ರಥವೆಂದು ಹೆಸರು ಎಂದು ಅನ್ವಯಾರ್ಥಗಳನ್ನು ವಿವರಿಸಿರುವರು.

**ರೋದಸೀ**—**ರೋದಸೀ** ಎಂದರೆ ದ್ಯಾವಾಪೃಥಿವಿಗಳೆಂದರ್ಥ. **ರೋದಸೀ** ಎಂಬ ಅಂಕಿತನಾಮವೂ ಅನೇಕ ಸಂದರ್ಭಗಳಲ್ಲಿ ಒಂದು ವ್ಯಕ್ತಿಯ (ರುದ್ರಪತ್ನಿಯ) ಹೆಸರನ್ನೂ ಸೂಚಿಸುತ್ತದೆ. ಆದುದರಿಂದ ಈ ಪದವು ಏಕವಚನ ಮತ್ತು ದ್ವಿವಚನ ಈ ಎರಡರಲ್ಲೂ ಪ್ರಯೋಗಿಸಲ್ಪಟ್ಟಿದೆ. ಆಯಾ ಸಂದರ್ಭಗಳಿಗನುಗುಣವಾಗಿ ಇದರ ಅರ್ಥವನ್ನು ಮಾಡಬೇಕು. ನಿರುಕ್ತಕಾರರು,

**ಉತಾಭಯೇ ಪುರುಹೂತ ಶ್ರವೋಭಿರೇಕೋ ದೃಳ್ಹಮವದೋ ವೃತ್ರಹಾ ಸನ್ ।**
**ಇಮೇ ಚಿದಿಂದ್ರ ರೋದಸೀ ಅಪಾರೇ ಯತ್ಸಂಗೃಭ್ಣಾ ಮಘವನ್ ಕಾಶಿರಿತ್ತೇ ॥**

(ಋ. ಸಂ. ೩-೩೦-೫)

ಎಂಬ ಋಕ್ಕನ್ನುದಾಹರಿಸಿ ಅಲ್ಲಿ **ರೋದಸೀ** ಎಂಬ ಪದದ ನಿರ್ವಚನವನ್ನು ಹೇಳುತ್ತಾ,

**ರೋದಸೀ ದ್ಯಾವಾಪೃಥಿವ್ಯೌ ವಿರೋಧನಾತ್ ।**

(ನಿ ೬-೧)

ಒಂದು ಪರಿಮಿತವಾದ ಎಲ್ಲೆ (ಸೀಮಾ) ಯಿಂದ ಬಂಧಿತವೂ ನಿಯಮಿತವೂ ಆಗಿರುವುದರಿಂದ ದ್ಯಾವಾಪೃಥಿವಿಗಳಿಗೆ ರೋದಸೀ ಎಂಬ ಹೆಸರು ಪ್ರಸಿದ್ಧವಾಗಿದೆಯೆಂದು ತಿಳಿಯಬೇಕು ಎಂದಿದ್ದಾರೆ. ಇದು ದ್ವಿವಚನಾಂತವಾದ **ರೋದಸೀ** ಎಂಬ ಪದದ ನಿರ್ವಚನವಾಗಿದೆ. ಪುನಃ ಏಕವಚನಾಂತವಾದ ಪದದ ಅರ್ಥವನ್ನು ತಿಳಿಸುತ್ತಾ,

ರೋದಸೀ ರುದ್ರಸ್ಯ ಪತ್ನೀ

(ನಿ. ೧೧-೪೯)

**ರೋದಸಿಯು** ರುದ್ರನ ಪತ್ನಿಯು ಎಂದು ವಿವರಿಸಿ,

**ರಥಂ ನು ಮಾರುತಂ ವಯಂ ಶ್ರವಸ್ಯುಮಾ ಹುವಾಮಹೇ ।**
**ಆ ಯಸ್ಮಿನ್ತಸ್ಥೌ ಸುರಣಾನಿ ಬಿಭ್ರತೀ ಸಚಾ ಮರುತ್ಸು ರೋದಸೀ ॥**

(ಋ ಸಂ. ೫-೫೬-೮)

ಎಂಬ ಪ್ರಕೃತ ಋಕ್ಕನ್ನುದಹರಿಸಿ ಇಲ್ಲಿ ರೋದಸೀಯೆಂದರೆ ರುದ್ರಪತ್ನಿಯೆಂಬ ಅಂಕಿತನಾಮದ ಪ್ರಯೋಗವಿದೆಯೆಂದು ತಿಳಿಸಿದ್ದಾರೆ. ಆದರೆ ಇಲ್ಲಿ ಇನ್ನೊಂದು ಸಮಸ್ಯೆಯೇಳುತ್ತದೆ. ರುದ್ರಪತ್ನಿಯೆಂದರೆ, ರುದ್ರದೇವತೆಯ ಪತ್ನಿಯೇ ಅಥವಾ ರುದ್ರ ಶಬ್ದಕ್ಕೆ ಮರುತ್ತೆಂದರ್ಥವಾಗಿ ಮರುದ್ದೇವತೆಗಳ ಪತ್ನಿಯೇ ಎಂಬ ಸಂಶಯಕ್ಕೂ ಅವಕಾಶವಾಗುವಂತೆ ಸಾಯಣರು ಎರಡು ಕಡೆಗಳಲ್ಲಿಯೂ ವ್ಯಾಖ್ಯಾನಮಾಡಿದ್ದಾರೆ, ಪ್ರಕೃತವಾದ ಋಕ್ಕನ್ನು ವಿವರಿಸುತ್ತಾ,

ರೋದಸೀ ರುದ್ರಸ್ಯ ಪತ್ನೀ ಮರುತಾಂ ಮಾತಾ । ಯದ್ವಾ ರುದ್ರೋ ವಾಯುಃ । ತತ್ಪತ್ನೀ ಮಾಧ್ಯಮಿಕಾ ದೇವೀ ॥

(ಸಾ. ಭಾ.)

ರೋದಸಿಯು ರುದ್ರಪತ್ನಿ ಮತ್ತು ಮರುತ್ತುಗಳ ಮಾತೆಯೆಂದು ಒಂದರ್ಥವಾಗಬಹುದು. ಅಥವಾ ರುದ್ರಶಬ್ದಕ್ಕೆ ವಾಯುವೆಂದರ್ಥವಿರುವುದರಿಂದ ರೋದಸಿಯೆಂದರೆ ವಾಯುಪತ್ನಿಯಾದ ಮಾಧ್ಯಮಿಕಾವಾಕ್ಕೆಂದು ಎರಡನೆಯ ಅರ್ಥವಾಗುತ್ತದೆ ಎಂದು ಎರಡು ವಿಧವಾಗಿ ವಿವರಿಸಿದ್ದಾರೆ. ಮತ್ತು,

**ಪರಾ ಶುಭ್ರಾ ಅಯಾಸೋ ಯವ್ಯಾ ಸಾಧಾರಣ್ಯೇವ ಮರುತೋ॑ ಮಿಮಿಕ್ಷುಃ ।**
**ನ ರೋ॑ದಸೀ ಅಪ ನುದಂತ ಘೋ॑ರಾ ಜುಷಂತ ವೃಧಂ ಸಖ್ಯಾಯ ದೇವಾಃ ॥**

(ಋ. ಸಂ ೧-೧೬೭-೪)

ಎಂಬ ಋಕ್ಕನ್ನು ವಿವರಿಸುವಾಗ ಹಿಂದೆ ತಿಳಿಸಿರುವಂತೆ,

**ರೋದಸಾ ಶಬ್ದೇನ ರೋದನಸ್ವಭಾವೋ ರುದ್ರಃ । ತಸ್ಯ ಸ್ತ್ರೀ ರೋದಸೀತಿ ಕೇಚಿದಾಹುಃ । ಅಪರೇ ತು ಮರುತಾಂ ಸ್ತ್ರಿಯೋ ರೋದಸೀತಿ ನಾಮಧೇಯಮಿತ್ಯಾಹುಃ । ಅಯಮೇವ ಪಕ್ಷೋ ಯುಕ್ತ ಉತ್ತರತ್ರೈವಂ ವ್ಯವಹಾರಾತ್ ॥**

ರೋದಸಿಯು ರುದ್ರಪತ್ನಿಯೆಂಬುದು ಒಂದು ಮತ ಮರುತ್ತುಗಳ ಪತ್ನಿಯೆಂಬುದು ಇನ್ನೊಂದು ಮತ. ಇವುಗಳಲ್ಲಿ ಎರಡನೆಯದೇ ಸರಿಯಾಗಿರುವಂತೆ ತೋರುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಅಲ್ಲದೇ,

**ಜೋಷದ್ಯದೀಮಸುರ್ಯಾ ಸಚಧ್ಯೈ ವಿಷಿತಸ್ತುಕಾ ರೋದಸೀ ನೃಮಣಾಃ ॥**

(ಋ ಸಂ ೧-೧೬೭-೫)

ಎಂಬ ಋಕ್ಕನ್ನು ವಿವರಿಸುವಾಗ **ರೋದಸೀ ಮರುತ್ಪತ್ನೀ ವಿದ್ಯುದ್ವಾ ।** ರೋದಸಿಯು ಮರುತ್ತುಗಳ ಪತ್ನಿಯು ಅಥವಾ ವಿದ್ಯುತ್ತೇ ಈ ಹೆಸರಿನಲ್ಲಿ ಪ್ರಸಿದ್ಧವಾಗಿದೆ ಎಂದು ತಿಳಿಸಿದ್ದಾರೆ. ಮತ್ತು ಮರುತ್ತುಗಳ ಅನ್ವೇಷಣದಲ್ಲಿಯೇ ಈ ರೋದಸಿಯು ಇರುವುದಾಗಿಯೂ ವರ್ಣಿತವಾಗಿರುವ ವಿಷಯವನ್ನುದಾಹರಿಸಿದ್ದಾರೆ. ಮತ್ತು **ರೋದಸೀ** ಪದದ ಪ್ರಯೋಗವಿರುವ ಇನ್ನೂ ಕೆಲವು ಸನ್ನಿವೇಶಗಳನ್ನು ಪರಿಶೀಲಿಸಿದರೆ,

**ತ ಇದುಗ್ರಾಃ ಶವಸಾ ಧೃಷ್ಣುಷೇಣಾ ಉಭೇ ಯುಜಂತ ರೋದಸೀ ಸುಮೇಕೇ ।**
**ಅಧ ಸ್ಮೈಷು ರೋದಸೀ ಸ್ವಶೋಚಿರಾಮವತ್ಸು ತಸ್ಥೌ ನ ರೋಕಃ ॥**

(ಋ. ಸಂ. ೬-೬೬-೬)

ಎಂಬ ಒಂದೇ ಋಕ್ಕಿನಲ್ಲಿ **ರೋದಸೀ** ಶಬ್ದವು ಎರಡು ಅರ್ಥಗಳಲ್ಲಿಯೂ ಪ್ರಯೋಗಿಸಲ್ಪಟ್ಟಿದೆ. ಇಲ್ಲಿ ಮೊದಲನೆಯ ಪದಕ್ಕೆ ಸಾಯಣರು **ದ್ಯಾವಾಪೃಥಿವ್ಯೌ** ಎಂದೂ, ಎರಡನೆಯ ಪದಕ್ಕೆ **ರುದ್ರಸ್ಯ ಪತ್ನೀ ಮಾಧ್ಯಮಿಕಾ ವಾಕ್** ಎಂದೂ ಅರ್ಥಮಾಡಿದ್ದಾರೆ. ಮತ್ತು,

**ಮಿಮ್ಯಕ್ಷ ಯೇಷು ರೋದಸೀ ನು ದೇವೀ ಸಿಷಕ್ತಿ ಪೂಷಾ ಅಭ್ಯರ್ಧಯಜ್ವಾ ।**
**ಶ್ರುತ್ವಾ ಹವಂ ಮರುತೋ ಯದ್ಧ ಯಾಥ ಭೂಮಾ ರೇಜಂತೇ ಅಧ್ವನಿ ಪ್ರವಿಕ್ತೇ ॥**

(ಋ ಸಂ ೬.೫೦-೫)

ಎಂಬಲ್ಲಿಯೂ ದೇವೀ **ದ್ಯೋತಮಾನಾ ಮಾಧ್ಯಮಿಕಾ ವಾಕ್** ಎಂದೇ ಅರ್ಥಮಾಡಿದೆ. ಋ. ಸಂ. ೧-೧೬೭-೩ ನೇ ಋಕ್ಕಿನ ವಿವರಣೆಯನ್ನು ಕೊಡುತ್ತಾ Max Muller ಎಂಬ ಪಂಡಿತನು ವಿದ್ಯುತ್, ಮಾಧ್ಯಮಿಕಾ ವಾಕ್ ಮತ್ತು ದ್ಯಾವಾಪೃಥಿವೀ ಈ ಅರ್ಥಗಳಲ್ಲಿ ಪ್ರಯುಕ್ತವಾಗಿರುವ **ರೋದಸೀ** ಎಂಬ ಪದದ ವಿಷಯವನ್ನು ಈ ರೀತಿ ತಿಳಿಸಿದ್ದಾನೆ.

> In our verse, we take **ವಾಕ್** in the sense of thunder, but as a feminine, of the lightning and thunder as the two companions of the Maruts, represents the first, **ರೋದಸೀ** or lightning, as the recognised wife, hiding herself in the house, while the other, the loud thunder, is represented as a more public companion of the Maruts. This contrast, if it is really what the poet intended, throws a curious light on the social character of the Vedic times, as it presupposes two classes of wives, not necessarily simultanious, however—, a house wife, who stays at home and is not much seen, and a wife who appears in public and takes part in the society The loud voice of the thunder as well as the usual hiding of the lightning might well suggest this comparison.
>
> [ S. B E. XXXII p 276 ]

ಈ ವಿಧವಾಗಿ ಏಕವಚನದ ಪ್ರಯೋಗಕ್ಕೂ ದ್ವಿವಚನದ ಪ್ರಯೋಗಕ್ಕೂ ವ್ಯತ್ಯಾಸವನ್ನು ತೋರಿಸುತ್ತಾ ಬೃಹದ್ದೇವತೆಯಲ್ಲಿ ಈ ವಿಧವಾಗಿ ತಿಳಿಸಿದೆ.

**ರೋದಸೀ ದೇವಪತ್ನೀನಾಂ ಅಥರ್ವಾಂಗಿರಸೇ ಯಥಾ ।**

(ಬೃ. ದೇ. ೨-೧೪೩)

ಎಂಬಲ್ಲಿ ಅಥರ್ವಾಂಗಿರಸದ (ಅಥರ್ವವೇದ) ಮತದಂತೆ ರೋದಸಿಯು ದೇವಪತ್ನಿಯರಲ್ಲಿ ಒಬ್ಬಳು ಎಂದು ಏಕವಚನದ ಪ್ರಯೋಗವಿರುವ ಉದಾಹರಣೆಯಿದೆ. ಮತ್ತು,

**ದ್ವೇ ದ್ವೇ ಪದೇ ಸಂಸ್ತುತೇ ರೋದಸೀ ಚ ದೇವಾಶ್ಚಾರ್ಥಚೇನ ವಿಭಕ್ತಮನ್ಯತ್ ।**

(ಬೃ. ದೇ. ೪-೬)

ಇತ್ಯಾದಿ ದ್ವಿವಚನ ಪ್ರಯೋಗವಿರುವೆಡೆಗಳಲ್ಲೆಲ್ಲಾ ದ್ಯಾವಾಪೃಥಿವಿಗಳೆಂದರ್ಥವಾಗುತ್ತದೆ.

॥ ಸಂಹಿತಾಪಾಠಃ ॥

ತಂ ವಃ ಶರ್ಧಂ ರಥೇಶುಭಂ ತ್ವೇಷಂ ಪನಸ್ಯುಮಾ ಹುವೇ ।
ಯಸ್ಮಿನ್ತ್ಸುಜಾತಾ ಸುಭಗಾ ಮಹೀಯತೇ ಸಚಾ ಮರುತ್ಸು ಮೀಳ್ಹುಷೀ ॥

॥ ಪದಪಾಠಃ ॥

ತಂ । ವಃ । ಶರ್ಧಂ । ರಥೇऽಶುಭಂ । ತ್ವೇಷಂ । ಪನಸ್ಯುಂ । ಆ । ಹುವೇ ।
ಯಸ್ಮಿನ್ । ಸುऽಜಾತಾ । ಸುऽಭಗಾ । ಮಹೀಯತೇ । ಸಚಾ । ಮರುತ್ऽಸು । ಮೀಳ್ಹುಷೀ ॥ ೯ ॥

॥ ಸಾಯಣಭಾಷ್ಯಂ ॥

ಹೇ ಮರುತೋ ವಃ ಶರ್ಧಂ ಯುಷ್ಮದೀಯಂ ಬಲಂ ಗಣಂ ರಥೇಶುಭಂ ರಥೇ ಶೋಭನಂ ತ್ವೇಷಂ ದೀಪ್ತಂ ಪನಸ್ಯುಂ ಸ್ತುತ್ಯಮಾ ಹುವೇ । ಆಹ್ವಯೇ । ಯಸ್ಮಿನ್ ಶರ್ಧೇ ಸುಜಾತಾ ಸುಷ್ಠು ಪ್ರವೃದ್ಧಾ ಸುಭಗಾ ಶೋಭನಭಾಗ್ಯಾತಿಮಹತೀ ಮೀಳ್ಹುಷೀ ಮೀಳ್ಹುಷ್ಟಮ ಶಿವತಮೇತ್ಯಾದೌ ದರ್ಶನಾನ್ಮೀಢ್ವಾನ್ರುದ್ರಃ । ತತ್ಪತ್ನೀ ಮೀಳ್ಹುಷೀ । ಮರುತ್ಸು ಸಚಾ ಸಹ ಮಹೀಯತೇ ಪೂಜ್ಯತೇ ತಂ ಶರ್ಧಮಾ ಹುವೇ । ಆಪಸ್ತಂಬೋऽಪಿ ರುದ್ರಪತ್ನೀಂ ಮೀಳ್ಹುಷೀಸಂಜ್ಞಯಾ ವ್ಯವಜಹಾರ । ಉತ್ತರಯಾ ದಕ್ಷಿಣಸ್ಯಾಮೀಶಾನಮಾವಾಹಯತಿ ಲೌಕಿಕ್ಯಾ ವಾಚೋತ್ತರಸ್ಯಾಂ ಮೀಳ್ಹುಷೀಂ ಮಧ್ಯೇ ಜಯಂತಂ । ಆಪ. ಗೃ. ೨೦. ೧.೩. । ಇತಿ ॥

॥ ಪ್ರತಿಪದಾರ್ಥ ॥

**ಯಸ್ಮಿನ್**—ಯಾವ ಗಣದಲ್ಲಿ । **ಸುಜಾತಾ**—ದಿವ್ಯವಾದ ಉತ್ಪತ್ತಿಯುಳ್ಳವಳೂ । **ಸುಭಗಾ**—ಮಂಗಳ ಸ್ವರೂಪಳೂ ಆದ । **ಮೀಳ್ಹುಷೀ**—ರುದ್ರಪತ್ನಿಯು । **ಮರುತ್ಸು ಸಚಾ**—ಮರುತ್ತುಗಳೊಡನೆ। **ಮಹೀಯತೇ**—ಪೂಜ್ಯಳಾಗಿ ವಿರಾಜಿಸುತ್ತಾಳೋ । **ತಂ**—ಅಂತಹ । **ರಥೇಶುಭಂ**—ರಥಕ್ಕೆ ಅಲಂಕಾರಪ್ರಾಯವಾಗಿರುವುದೂ । **ತ್ವೇಷಂ**—ಕಾಂತಿಯುತವಾದುದೂ । **ಪನಸ್ಯುಂ**—ಸ್ತುತ್ಯವಾದುದೂ ಆದ । **ವಃ ಶರ್ಧಂ**—ನಿಮ್ಮ ಗಣವನ್ನು । **ಆ ಹುವೇ**—ಪ್ರಾರ್ಥಿಸಿ ಕರೆಯುತ್ತೇನೆ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಯಾವ ಗಣದ ನಡುವೆ ನಿಂತು ದಿವ್ಯವಾದ ಉತ್ಪತ್ತಿಯುಳ್ಳವಳೂ, ಮಂಗಳ ಸ್ವರೂಪಳೂ ಆದ ರುದ್ರಪತ್ನಿಯು ಮರುತ್ತುಗಳೊಡನೆ ಸೇರಿ ಪೂಜ್ಯಳಾಗಿ ವಿರಾಜಿಸುತ್ತಿರುವಳೋ ಅಂತಹ ರಥಕ್ಕೆ ಅಲಂಕಾರಪ್ರಾಯವಾಗಿರುವುದೂ, ಕಾಂತಿಯುತವಾದುದೂ, ಸ್ತುತ್ಯವಾದುದೂ ಆದ ನಿಮ್ಮ ಗಣವನ್ನು ಪ್ರಾರ್ಥಿಸಿ ಕರೆಯುತ್ತೇನೆ.

## English Translation

I invoke that, your cohort, gracing the chariot, brilliant and adorable, amidst which the rain-bestowing (goddess), of goodly origin, and auspicious, is worshipped together with the Maruts.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ ಮರುದ್ದೇವತೆಗಳ ರಥ, ರುದ್ರಪತ್ನಿಯಾದ ರೋದಸೀ, ಮರುದ್ಗಣ ಇವರೆಲ್ಲರನ್ನೂ ಸ್ತುತಿಸಲಾಗಿದೆ.

**ಮೀಳ್ಹುಷೀ—ಮೀಳ್ಹುಷ್ಟಮ ಶಿವತಮ ಇತ್ಯಾದೌ ದರ್ಶನಾತ್ ಮೀಢ್ವಾನ್ ರುದ್ರಃ । ತತ್ಪತ್ನೀ ಮೀಳ್ಹುಷೀ ।** ತೈತ್ತಿರೀಯಸಂಹಿತೆಯ ರುದ್ರಾಧ್ಯಾಯದಲ್ಲಿ (ತೈ ಸಂ. ೪-೫-೧೦-೪) ಮೀಢುಷ್ಟಮ ಶಿವತಮ ಎಂದು ಹೇಳಿರುವುದರಿಂದ ಮೀಢ್ವಾನ್ ಎಂಬ ಶಬ್ದವು ರುದ್ರವಾಚಕವಾಗಿರುವುದು. ಮೀಳ್ಹುಷೀ ಎಂದರೆ ಆ ರುದ್ರನ ಪತ್ನಿಯು ಎಂದು ಭಾಷ್ಯಕಾರರು ವಿವರಣೆಯನ್ನು ಮಾಡಿ ಇದರ ಸಮರ್ಥನೆಗಾಗಿ ಆಪಸ್ತಂಬ ಗೃಹ್ಯಸೂತ್ರದ-

> **ಉತ್ತರಯಾ ದಕ್ಷಿಣಸ್ಯಾಮೀಶಾನಮಾವಾಹಯತಿ ಲೌಕಿಕ್ಯಾ ವಾಚೋತ್ತರಸ್ಯಾಂ ಮೀಳ್ಹುಷೀಂ ಮಧ್ಯೇ ಜಯಂತಂ ॥**
>
> (ಆಪ. ಗೃ ಸೂ ೨೦-೧-೩)

ಎಂಬ ವಾಕ್ಯವನ್ನುದಾಹರಿಸಿ ಅಲ್ಲಿ ಮೀಳ್ಹುಷೀಂ ಎಂಬ ಶಬ್ದವು ರುದ್ರಪತ್ನಿಯನ್ನು ಸೂಚಿಸುವುದೆಂದು ತೋರಿಸಿದ್ದಾರೆ. ಇದಲ್ಲದೆ ಕೃಷ್ಣಯಜುರ್ವೇದದ ಏಕಾಗ್ನಿಕಾಂಡವೆಂಬ ಭಾಗದ ದ್ವಿತೀಯಪ್ರಪಾಠಕದ ೧೮ನೆಯ ಅನುವಾಕದಲ್ಲಿ—

> **ಪಾಕಾಜಿರೈರಾಯಾಹಿ ಮಮ ಹವ್ಯಾಯ ಶರ್ವೋಽಪಸ್ಪೃಶತು ಮೀಢ್ವಾನ್ ಮೀಢುಷೇ ಸ್ವಾಹೋಽಪಸ್ಪೃಶತು ಮೀಢುಷೀ ಮೀಢುಷ್ಯೈ ಸ್ವಾಹಾ ಜಯಂತೋಽಪಸ್ಪೃಶ ಜಯಂತಾಯ ಸ್ವಾಹಾ ಭವಾಯ ದೇವಾಯ ಸ್ವಾಹಾ ।**
>
> (ತೈ. ಏಕಾಗ್ನಿಕಾಂಡ. ಪ್ರ ೨.೧೮)

ಎಂಬ ಶ್ರುತಿವಾಕ್ಯದಲ್ಲಿ ಮೀಢ್ವಾನ್ ಎಂಬ ಶಬ್ದವು ರುದ್ರನನ್ನೂ, ಮೀಢುಷೀ ಎಂಬ ಶಬ್ದವು ರುದ್ರಪತ್ನಿಯನ್ನೂ ನಿರ್ದೇಶಿಸಿರುವುದು ಸ್ಪಷ್ಟವಾಗಿಯೇ ಇದೆ.

# ಐವತ್ತೇಳನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಪಂಚಮೋಽನುವಾಕೇ ಷೋಡಶ ಸೂಕ್ತಾನಿ । ತತ್ರ ರುದ್ರಾಸ ಇತ್ಯಷ್ಟರ್ಚಂ ಪ್ರಥಮಂ ಸೂಕ್ತಂ ಶ್ಯಾವಾಶ್ವಸ್ಯಾರ್ಷಂ ಮಾರುತಂ । ಸಪ್ತಮ್ಯಷ್ಟಮ್ಯೌ ತ್ರಿಷ್ಟುಭೌ ಶಿಷ್ಟಾಃ ಷಟ್ ಜಗತ್ಯಃ। ಆ ರುದ್ರಾಸೋಽಷ್ಟೌ ದ್ವಿತ್ರಿಷ್ಟುಬಂತಮಿತ್ಯನುಕ್ರಮಣಿಕಾ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು—ಐದನೆಯ ಮಂಡಲದ ಐದನೆಯ ಅನುವಾಕದಲ್ಲಿ ಹದಿನಾರು ಸೂಕ್ತಗಳಿರುವವು. **ಅವು** ಗಳಲ್ಲಿ **ಆ ರುದ್ರಾಸಃ** ಎಂಬ ಈ ಸೂಕ್ತವು ಮೊದಲನೆಯದು. ಇದರಲ್ಲಿ ಎಂಟು ಋಕ್ಕುಗಳಿರುವವು ಈ ಸೂಕ್ತಕ್ಕೆ ಶ್ಯಾವಾಶ್ವನು ಋಷಿಯು, ಮರುತ್ತುಗಳು ದೇವತೆಯು ; ಈ ಸೂಕ್ತದ ಏಳು ಮತ್ತು ಎಂಟನೆಯ ಋಕ್ಕುಗಳು ತ್ರಿಷ್ಟುಪ್ ಛಂದಸ್ಕವು. ಉಳಿದ ಆರು ಋಕ್ಕುಗಳು ಜಗತೀಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಆ ರುದ್ರಾಸೋಽಷ್ಟೌ ದ್ವಿತ್ರಿಷ್ಟುಬಂತಂ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು

## ಸೂಕ್ತ—೫೭.

ಮಂಡಲ—೫ ॥ ಅನುವಾಕ—೫ ॥ ಸೂಕ್ತ—೫೭ ॥
ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ—೨೧, ೨೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥
ಋಷಿಃ—ಶ್ಯಾವಾಶ್ವ ಆತ್ರೇಯಃ ॥
ದೇವತಾ—ಮರುತಃ ॥
ಛಂದಃ—೧-೬, ಜಗತೀ । ೭-೮. ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಆ ರುದ್ರಾಸ ಇಂದ್ರವಂತಃ ಸಜೋಷಸೋ ಹಿರಣ್ಯರಥಾಃ ಸುವಿತಾಯ ಗಂತನ ।
ಇಯಂ ವೋ ಅಸ್ಮತ್ಪ್ರತಿ ಹರ್ಯತೇ ಮತಿಸ್ತೃಷ್ಣಜೇ ನ ದಿವ ಉತ್ಸಾ ಉದನ್ಯವೇ ॥ ೧ ॥

॥ ಪದಪಾಠಃ ॥

ಆ । ರುದ್ರಾಸಃ । ಇಂದ್ರಽವಂತಃ । ಸಽಜೋಷಸಃ । ಹಿರಣ್ಯಽರಥಾಃ । ಸುವಿತಾಯ । ಗಂತನ ।
ಇಯಂ । ವಃ । ಅಸ್ಮತ್ । ಪ್ರತಿ । ಹರ್ಯತೇ । ಮತಿಃ । ತೃಷ್ಣಽಜೇ । ನ । ದಿವಃ । ಉತ್ಸಾಃ ।
ಉದನ್ಯವೇ ॥ ೧ ॥

॥ ಸಾಯಣಭಾಷ್ಯಂ ॥

ಹೇ ರುದ್ರಾಸೋ ರುದ್ರಪುತ್ರಾ ಇಂದ್ರವಂತ ಇಂದ್ರೇಣ ಯುಷ್ಮತ್ಸ್ವಾಮಿನಾ ತದ್ವಂತಃ ಸಜೋಷಸಃ ಪರಸ್ಪರಂ ಸಮಾನಪ್ರೀತಯೋ ಹಿರಣ್ಯರಥಾ ಹಿರಣ್ಮಯರಥಾಃ ಸಂತಃ ಸುವಿತಾಯ ಸುಗಮನಾಯ ತತ್ಸಾಧನಾಯ ಸುಷ್ಠು ಸರ್ವೈರ್ಗಂತವ್ಯಾಯ ಯಜ್ಞಾಯ ತದರ್ಥಮಾ ಗಂತನ । ಆಗಚ್ಛತ । ಕಿಮತ್ರ ವಿದ್ಯತ ಇತಿ ತದುಚ್ಯತೇ । ಇಯಮಸ್ಮದಸ್ಮದೀಯಾ ಮತಿಃ ಸ್ತುತಿರ್ವೋ ಯುಷ್ಮಾನ್ ಪ್ರತಿ ಹರ್ಯತೇ । ಕಾಮಯತೇ । ತಸ್ಮಾದಾಗಚ್ಛತ । ಉದನ್ಯವ ಉದಕೇಚ್ಛವೇ ತೃಷ್ಣಜೇ ಗೋತಮಾಯ ದಿವೋ ದ್ಯುಲೋಕಸಕಾಶಾದುತ್ಸಾ ಉದಕನಿಷ್ಯಂದಾ ಯಥಾ ಯುಷ್ಮಾಭಿಃ ಪ್ರೇರಿತಾಸ್ತದ್ವದಸ್ಮದರ್ಥಮಪ್ಯಾಗತ್ಯಾಭಿಮತಂ ದದತೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಇಂದ್ರವಂತಃ**—ಇಂದ್ರನೊಡನಾಡಿಗಳೂ । **ಸಜೋಷಸಃ**—ಪರಸ್ಪರವಾದ ಪ್ರೀತಿಯುಳ್ಳವರೂ । **ಹಿರಣ್ಯರಥಾಃ**—ಸುವರ್ಣನಿರ್ಮಿತವಾದ ರಥವುಳ್ಳವರೂ ಆದ । **ರುದ್ರಾಸಃ**—ಎಲೈ ರುದ್ರಪುತ್ರರೇ (ಮರುತ್ತುಗಳೇ) । **ಸುವಿತಾಯ**—ಉತ್ತಮಪ್ರದೇಶವಾದ ಯಜ್ಞಕ್ಕೆ । **ಆ ಗಂತನ**—ಬನ್ನಿರಿ । **ಅಸ್ಮತ್**—ನಮ್ಮಿಂದ ನಿರ್ಮಿತವಾದುದೂ । **ವಃ**—ನಿಮ್ಮನ್ನುದ್ದೇಶಿಸಿದುದೂ ಆದ । **ಇಯಂ ಮತಿಃ**—ಈ ಸ್ತುತಿಯು । **ಪ್ರತಿ ಹರ್ಯತೇ**—ಅರ್ಪಿತವಾಗಿ ನಿಮ್ಮನ್ನು ಹೊಂದಲಿಚ್ಛಿಸುತ್ತದೆ । **ತೃಷ್ಣಜೇ**—ಬಾಯಾರಿಕೆಯಿಂದ ಬಳಲಿದವನೂ । **ಉದನ್ಯವೇ**—ಉದಕವನ್ನು ಅಪೇಕ್ಷಿಸಿದವನೂ ಆದ ಗೋತಮನಿಗಾಗಿ । **ದಿವಃ**—ಅಂತರಿಕ್ಷದಿಂದ । **ಉತ್ಸಾಃ ನ**—ಸ್ರವಿಸುವ ಉದಕಗಳನ್ನು ತೆಗೆದುಕೊಂಡು ಯಾವ ರೀತಿ ಇಳಿದಿರೋ (ಅದೇ ರೀತಿ ನಮ್ಮ ಯಜ್ಞಕ್ಕೂ ದಯಮಾಡಿರಿ).

॥ ಭಾವಾರ್ಥ ॥

ಇಂದ್ರನೊಡನಾಡಿಗಳೂ, ಪರಸ್ಪರ ಪ್ರೀತಿಯುಳ್ಳವರೂ, ಸುವರ್ಣನಿರ್ಮಿತವಾದ ರಥವುಳ್ಳವರೂ, ರುದ್ರಪುತ್ರರೂ ಆದ ಎಲೈ ಮರುತ್ತುಗಳೇ, ಉತ್ತಮ ಪ್ರದೇಶವಾದ ಯಜ್ಞಕ್ಕೆ ಬನ್ನಿರಿ. ನಮ್ಮಿಂದ ನಿರ್ಮಿತವಾದುದೂ, ನಿಮ್ಮನ್ನುದ್ದೇಶಿಸಿದುದೂ ಆದ ಈ ಸ್ತುತಿಯು ನಿಮಗೆ ಅರ್ಪಿತವಾಗಿ ನಿಮ್ಮನ್ನು ಹೊಂದಲಿಚ್ಛಿಸುತ್ತದೆ. ಬಾಯಾರಿಕೆಯಿಂದ ಬಳಲಿದವನೂ, ಉದಕವನ್ನು ಅಪೇಕ್ಷಿಸಿದವನೂ ಆದ ಗೋತಮನಿಗಾಗಿ ಸ್ರವಿಸುವ ಉದಕಗಳನ್ನು ತೆಗೆದುಕೊಂಡು ಅಂತರಿಕ್ಷದಿಂದ ಯಾವ ರೀತಿ ಬಂದಿರೋ, ನಮ್ಮ ಯಜ್ಞಕ್ಕೂ ಅದೇ ರೀತಿ ಬನ್ನಿರಿ.

English Translation

Rudras, servants of Indra, mutually kind, riding in golden cars come to the accessible (sacrifice): this our praise is addressed to you: (come to us as you came) from heaven, (bringing) oozing water to the thirsty (Gotama) longing for moisture.

॥ ವಿಶೇಷವಿಷಯಗಳು ॥

**ರುದ್ರಾಸಃ—ರುದ್ರಪುತ್ರಾಃ ಮರುತಃ** । ರುದ್ರಪುತ್ರರಾದ ಮರುದ್ದೇವತೆಗಳನ್ನು **ರುದ್ರಾಸಃ** ಎಂದು ತಂದೆಯ ಹೆಸರಿನಿಂದಲೇ ಇಲ್ಲಿ ನಿರ್ದೇಶಿಸಲಾಗಿದೆ.

ಇಂದ್ರನಿಗೂ ಮರುತ್ತುಗಳಿಗೂ ಇರುವ ಶಾಶ್ವತವಾದ ಸಾಹಚರ್ಯವೂ, ಅವರವರಿಗೆ ಇರುವ ರಾಜ ಪ್ರಜಾ ಸಂಬಂಧವೂ, ಮರುತ್ತುಗಳೊಡಗೂಡಿದ ಇಂದ್ರನಿಗೆ ಮುಖ್ಯವಾದ ಯಜ್ಞಕ್ರಿಯೆಗಳಲ್ಲಿ ಹವಿಸ್ಸಿನ ಅರ್ಪಣೆಯೂ ಮತ್ತು ವೃತ್ರಾಸುರನೊಡನೆ ಯುದ್ಧವನ್ನು ನಡೆಸುವಾಗ ಇಂದ್ರನಿಗೆ ಮರುತ್ತುಗಳು ಸಹಾಯಮಾಡಿರುವುದೂ ಸಂಹಿತೆಗಳಲ್ಲಿಯೂ ಬ್ರಾಹ್ಮಣಗಳಲ್ಲಿಯೂ ಅನೇಕಕಡೆ ಸ್ತುತಿಸಲ್ಪಟ್ಟಿದೆ. ಇಂದ್ರನು ಮರುತ್ತುಗಳೊಡನೆ ಸೇರಿಕೊಂಡು ಉಳಿದ ದೇವತೆಗಳಿಂದ ಪ್ರತ್ಯೇಕವಾಗಿ ಇದ್ದುದನ್ನು ತಿಳಿಸುವ ಪೂರ್ವಕಥೆಯೊಂದನ್ನು ಶತಪಥಬ್ರಾಹ್ಮಣದಲ್ಲಿ ಹೇಳಿದೆ.

**ಆತಿಥ್ಯೇನ ವೈ ದೇವಾ ಇಷ್ಟ್ವಾ । ತಾನ್ತ್ಸಮುದವಿಂದತ್ತೇ ಚತುರ್ಧಾವ್ಯದ್ರವನ್ನನ್ಯೋನ್ಯಸ್ಯ ಶ್ರಿಯಾ ಅತಿಷ್ಠಮಾನಾ ಅಗ್ನಿರ್ವಸುಭಿಃ ಸೋಮೋ ರುದ್ರೈರ್ವರುಣ ಆದಿತ್ಯೈರಿಂದ್ರೋ ಮರುದ್ಭಿರ್ಬೃಹಸ್ಪತಿರ್ವಿಶ್ವೇದೇವೈಃ ।**

(ಶ ಬ್ರಾ. ೩-೪-೨-೧)

ಹಿಂದೆ ದೇವತೆಗಳು ಆತಿಥ್ಯಕ್ರಿಯೆಯನ್ನು ನೆರವೇರಿಸಿದಾಗ ಅವರವರಲ್ಲೇ ವೈಮನಸ್ಯವುಂಟಾಗಿ ಒಬ್ಬರಿಗೊಬ್ಬರು ಸೇರಲಿಷ್ಟಪಡದೇ ನಾಲ್ಕು ಗುಂಪು ಮಾಡಿಕೊಂಡು ಬೇರೆಬೇರೆಯಾದರು. ಅಗ್ನಿಯು ವಸುಗಳೊಂದಿಗೂ ಸೋಮನು ರುದ್ರರೊಂದಿಗೂ, ವರುಣನು ಆದಿತ್ಯರೊಂದಿಗೂ, ಇಂದ್ರನು ಮರುತ್ತುಗಳೊಂದಿಗೂ ಮತ್ತು ಬೃಹಸ್ಪತಿಯು ವಿಶ್ವೇದೇವತೆಗಳೊಂದಿಗೂ ಕೂಡಿಕೊಂಡು ಪ್ರತ್ಯೇಕವಾದ ಗುಂಪುಮಾಡಿಕೊಂಡರು, ಎಂಬ ಕಥೆಯಲ್ಲಿ ಇಂದ್ರನು ಮರುತ್ತುಗಳೊಡನೆ ಸಾಹಚರ್ಯವನ್ನು ಬೆಳೆಸಿ ಅವರೊಡನೆ ಇಟ್ಟುಕೊಂಡಿರುವ ನಿಕಟವಾದ ಸಂಬಂಧವನ್ನು ಹೇಳಿದೆ. ಇದೂ ಅಲ್ಲದೇ, ಇಂದ್ರನೇ ದೊರೆಯೆಂದೂ, ಮರುತ್ತುಗಳೇ ಪ್ರಜೆಗಳೆಂದೂ ಅನೇಕಕಡೆ ಹೇಳಿದೆ. ಉದಾಹರಣೆಗೆ ಅದೇ ಶತಪಥಬ್ರಾಹ್ಮಣದಲ್ಲಿ,

**ಕ್ಷತ್ರಂ ವಾ ಇಂದ್ರೋ ವಿಶೋ ಮರುತೋ ವಿಶಾ ವೈ ಕ್ಷತ್ರಿಯೋ ಬಲವಾನ್ ಭವತಿ ।**

(ಶ ಬ್ರಾ ೪ ೩-೩-೬)

ಇಂದ್ರನು ಕ್ಷಾತ್ರತೇಜಸ್ಸುಳ್ಳ ರಾಜನು. ಮರುತ್ತುಗಳೇ ಅವನ ಪ್ರಜೆಗಳು. ಪ್ರಜೆಗಳ ಸಹಕಾರದಿಂದಲೇ ರಾಜನು ಶಕ್ತಿಯುಳ್ಳವನಾಗಿ ಆಗುತ್ತಾನೆಂದೂ, ಮರುತ್ತುಗಳ ಸಹಾಯದಿಂದ ಇಂದ್ರನ ಪರಾಕ್ರಮವು ವೃದ್ಧಿಯನ್ನು ಪಡೆಯಿತೆಂದೂ ಸೂಚಿಸಿದೆ. ಈ ರೀತಿಯಾದ ನಿಕಟವಾದ ಸಂಬಂಧವೂ ಸಾಹಚರ್ಯವೂ ಇರುವುದರಿಂದಲೇ ಇಂದ್ರನನ್ನೂ ಮರುತ್ತುಗಳನ್ನೂ ಒಟ್ಟಿಗೆ ಉದ್ದೇಶಿಸಿ ಹವಿಸ್ಸುಗಳನ್ನು ಅರ್ಪಿಸುವ ಕ್ರಮವು ಶ್ರುತಿಗಳಲ್ಲಿ ಕಂಡುಬರುತ್ತದೆ. ಮತ್ತು

**ಸ ನೋ ಮರುದ್ಭಿರ್ವೃಷಭ ಶ್ರವೋ ಧಾ ಉಗ್ರ ಉಗ್ರೇಭಿಃ ಸ್ಥವಿರಃ ಸಹೋದಾಃ ।**

(ಋ ಸಂ. ೧-೧೭೧-೫)

ಎಂಬಿವೇ ಮುಂತಾದ ಋಕ್ಕುಗಳಿಂದ ಇಂದ್ರನಿಗೂ ಮರುತ್ತುಗಳಿಗೂ ಒಟ್ಟಿಗೆ ಸೇರಿಸಿ ಆಹ್ವಾನವೂ ಹವಿಸ್ಸಿನ ಅರ್ಪಣೆಯೂ ಇದೆ. ಈ ರೀತಿಯಾದ ಸಾಹಚರ್ಯವನ್ನು ವರ್ಣಿಸಿ ಬೃಹದ್ದೇವತೆಯಲ್ಲಿ —

**ಮರುದ್ಭಿಃ ಸಹ ಯತ್ರೇಂದ್ರೋ ಮರುತ್ವಾಂಸ್ತತ್ರ ಸೋಽಭವತ್ ।**

(ಬೃ ದೇ ೪.೫೬)

ಇತ್ಯಾದಿ ವಾಕ್ಯಗಳಿಂದ ಈ ದೇವತೆಗಳ ಸಂಬಂಧಸೂಚಕವಾದ ವಿಶೇಷಣವನ್ನು ವಿವರಿಸಿದೆ. ಆದರೆ ಒಂದು ಸೂಕ್ತದಲ್ಲಿ ಇಂದ್ರನಿಗೂ ಮರುತ್ತುಗಳಿಗೂ ನಡೆದ ವಾಗ್ವಾದದ ಫಲವಾಗಿ ಅವರವರ ವೈಷಮ್ಯವೂ ಇಂದ್ರನ ಕ್ರೋಧವೂ ಸೂಚಿತವಾಗಿದೆ. ಈ ಕ್ರೋಧಕ್ಕೆ ಮೂಲವಾದ ಅವರವರ ವಾಗ್ವಾದವನ್ನು ಈ ರೀತಿ ತಿಳಿಸಿದೆ.

**ಕ್ವ೧ಸ್ಯಾ ವೋ ಮರುತಃ ಸ್ವಧಾಸೀದ್ಯನ್ಮಾಮೇಕಂ ಸಮಧತ್ತಾಹಿಹತ್ಯೇ ।**
**ಅಹಂ ಹ್ಯು೧ಗ್ರಸ್ತವಿಷಸ್ತುವಿಷ್ಮಾನ್ವಿಶ್ವಸ್ಯ ಶತ್ರೋರನಮಂ ವಧಸ್ನೈಃ ॥**

(ಋ. ಸಂ. ೧.೧೬೫.೬)

ಎಲೈ ಮರುತ್ತುಗಳೇ, ನಿಮ್ಮ ಸಹಾಯದಿಂದ ನಾನು ಅಹಿಹನನವನ್ನು ಮಾಡಿದೆನು ಎಂದು ಹೇಳುವುದು ಸುಳ್ಳು. ನಿಮಗೆ ಆ ಶಕ್ತಿಯು ತಾನೇ ಎಲ್ಲಿದ್ದಿತು ? ನನ್ನ ಶಕ್ತಿಯೇ ಅಸಾಧಾರಣವಾದುದರಿಂದ ಇತರ ಶಕ್ತಿಯ ಸಹಾಯವನ್ನು ಅಪೇಕ್ಷಿಸದೆ ವೃತ್ರಹನನಕಾಲದಲ್ಲಿ ಅದು ನನಗೆ ಸಹಾಯಮಾಡಿತು. ಕೇವಲ ನಾನು ಮಾತ್ರ ಭಯಂಕರನೂ, ಅದ್ಭುತವಾದ ಶಕ್ತಿಯುಳ್ಳವನೂ ಮಹತ್ತ್ವದಿಂದ ಕೂಡಿದವನೂ ಆಗಿದ್ದೇನೆ ಎಂದು ಮರುತ್ತುಗಳನ್ನು ತಿರಸ್ಕೃತವಾದ ದೃಷ್ಟಿಯಿಂದ ಕಂಡು ತನ್ನ ಕ್ರೋಧವನ್ನು ಪ್ರಕಟಿಸುತ್ತಾನೆ. ಇಲ್ಲಿ ಆ ಕ್ರೋಧವು ಸೂಚಿತವಾಗಿದೆ ವೃತ್ರಾಸುರನ ವಧಕಾಲದಲ್ಲಿ ಮರುತ್ತುಗಳ ಸಹಾಯವನ್ನು ಇಂದ್ರನು ಪಡೆದನೆಂಬುದು ಪ್ರಸಿದ್ಧವಾಗಿದೆ ಆದರೂ ಸಹ ಮರುತ್ತುಗಳು ಆ ವಿಷಯವನ್ನು ತಿಳಿಸಿ ಆ ಸಹಾಯದ ಜ್ಞಾಪಕಾರ್ಥವಾಗಿ ಇಂದ್ರನಿಗೆ ಸೇರಬೇಕಾದ ಹವಿಸ್ಸಿನಲ್ಲಿ ತಮಗೂ ಭಾಗವನ್ನು ಕೊಡಬೇಕೆಂದು ಕೇಳಿದಾಗ ಇಂದ್ರನು ಮರುತ್ತುಗಳಿಂದ ಯಾವ ಸಹಾಯವೂ ಆಗಿಯೇ ಇಲ್ಲವೆಂದೂ, ತಾನು ತನ್ನ ಸ್ವಶಕ್ತಿಯಿಂದಲೇ ಸಕಲಶತ್ರುಗಳನ್ನೂ ಕೊಂದನೆಂದೂ ಹೇಳಿಕೊಳ್ಳುತ್ತಾನೆ. ಇದೇ ವಿಷಯವನ್ನು ನಿರುಕ್ತಕಾರರು ತಿಳಿಸುತ್ತಾ ಈರೀತಿ ಹೇಳಿದ್ದಾರೆ—

**ಅಗಸ್ತ್ಯ ಇಂದ್ರಾಯ ಹವಿರ್ನಿರುಪ್ಯ ಮರುದ್ಭ್ಯಃ ಸಂಪ್ರದಿತ್ಸಾಂಚಕಾರ । ಸ ಇಂದ್ರ ಏತ್ಯ ಪರಿದೇವಯಾಂಚಕ್ರೇ ।** (ನಿ ೧.೫).

ಅಗಸ್ತ್ಯಮುನಿಯು ಇಂದ್ರನುನ್ನುದ್ದೇಶಿಸಿ ಹವಿಸನ್ನು ಸಿದ್ಧಪಡಿಸಿದಾಗ ಮರುತ್ತುಗಳಿಗೂ ಅದರಲ್ಲಿ ಭಾಗವನ್ನರ್ಪಿಸಲು ಅಪೇಕ್ಷಿಸಿದೊಡನೆಯೇ ಇಂದ್ರನು ಆ ವಿಷಯದಲ್ಲಿ ಆಕ್ಷೇಪಿಸಿದನು ಎಂಬ ಸಂದರ್ಭವನ್ನು ತಿಳಿಸಿ ನಿರುಕ್ತಕಾರರು ಈ ಅಂಶವನ್ನು ತಿಳಿಸುವ,

**ನ ನೂನಮಸ್ತಿ ನೋ ಶ್ವಃ ಕಸ್ತದ್ವೇದ ಯದದ್ಭುತಂ ।**
**ಅನ್ಯಸ್ಯ ಚಿತ್ತಮಭಿ ಸಂಚರೇಣ್ಯಮುತಾಧೀತಂ ವಿನಶ್ಯತಿ ॥**

(ಋ. ಸ. ೧.೧೭೦.೧).

ಎಂಬ ಋಕ್ಕನ್ನುದಹರಿಸಿದ್ದಾರೆ. ಆ ಕ್ರೋಧದ ವೇಗವು ಕಡಿಮೆಯಾಗಿ ತನಗೆ ಅದರಿಂದ ಬಾಧಕವಾಗದಿರಲೆಂದೂ ಮತ್ತು ಮರುತ್ತುಗಳಿಗೆ ನ್ಯಾಯವಾಗಿ ಸಲ್ಲಬೇಕಾದ ಹವಿರ್ಭಾಗವು ಅವರಿಗೆ ಸೇರಲೇಬೇಕೆಂಬ ಉದ್ದಿಶ್ಯದಿಂದಲೂ ಇಲ್ಲಿ ಮರುತ್ತುಗಳನ್ನುದ್ದೇಶಿಸಿ ಪ್ರಾರ್ಥಿಸಿದೆ. ಈ ವಿಧವಾದ ಸಾಂತ್ವವಚನವಾದನಂತರ ಇಂದ್ರನ ಮೈತ್ರಿಯು ಹಿಂದಿನಂತೆಯೇ ಬೆಳೆದು ತನ್ನ ಹವಿಸ್ಸಿನ ಭಾಗವನ್ನು ಮರುತ್ತುಗಳಿಗೂ ತಾನೇ ಕೊಡುತ್ತಾನೆ. ಇದೇ ವಿಷಯವನ್ನು ಎಂಟನೇ ಮಂಡಲದಲ್ಲಿ ಋಷಿಯು ಈ ರೀತಿ ಹೇಳಿ ಸ್ತುತಿಸಿದ್ದಾನೆ.

ವೃತ್ರಸ್ಯ ತ್ವಾ ಶ್ವಸಥಾದೀಷಮಾಣಾ ವಿಶ್ವೇ ದೇವಾ ಅಜಹುರ್ಯೇ ಸಖಾಯಃ ।
ಮರುದ್ಭಿರಿಂದ್ರ ಸಖ್ಯಂ ತೇ ಅಸ್ತ್ವಥೇಮಾ ವಿಶ್ವಾಃ ಪೃತನಾ ಜಯಾಸಿ ॥

(ಋ. ಸಂ. ೮-೯೬-೭)

ಎಲೈ ಇಂದ್ರನೇ, ಮರುತ್ತುಗಳೊಡನಿರುವ ನಿನ್ನ ಸಖ್ಯವು ಪ್ರಸಿದ್ಧವಾದುದು ಅವರಿಗೂ ನಿನ್ನ ಹವಿಸ್ಸಿನಲ್ಲಿ ಭಾಗವನ್ನು ಕೊಟ್ಟು ಅವರ ಸಹಾಯದಿಂದ ಶತ್ರುಗಳನ್ನೆಲ್ಲಾ ಜಯಿಸು ಎಂದು ಪ್ರಾರ್ಥಿಸಿದೆ.

ಉದನ್ಯವೇ ತೃಷ್ಣಜೇ ದಿವಃ ಉತ್ಸಾಃ—ಉದಕೇಚ್ಛವೇ ಗೋತಮಾಯ ದ್ಯುಲೋಕಸಕಾಶಾತ್ ಉದಕನಿಸ್ಯಂದಾ ಯುಷ್ಮಾಭಿಃ ಪ್ರೇರಿತಾಃ । ಕಾಡಿನಲ್ಲಿ ಬಾಯಾರಿಕೆಯಿಂದ ಅಲೆಯುತ್ತಿದ್ದ ಗೋತಮನೆಂಬ ಋಷಿಯನ್ನು ತೃಪ್ತಿಪಡಿಸುವುದಕ್ಕಾಗಿ ಅಂತರಿಕ್ಷದಿಂದ ಉದಕಪೂರ್ಣವಾದ ಬಾವಿಯನ್ನೇ ತಂದುಕೊಟ್ಟರೆಂದು ಇಲ್ಲಿ ಉಕ್ತವಾಗಿದೆ

ಪರಾವತಂ ನಾಸತ್ಯಾನುದೇಥಾಮುಚ್ಚಾಬುಧ್ನಂ ಚಕ್ರಥುರ್ಜಿಹ್ಮಬಾರಂ ॥
ಕ್ಷರನ್ನಾಪೋ ನ ಪಾಯನಾಯ ರಾಯೇ ಸಹಸ್ರಾಯ ತೃಷ್ಯತೇ ಗೋತಮಸ್ಯ ॥

(ಋ. ಸಂ ೧-೧೧೬-೯)

ಎಂಬ ಋಕ್ಕಿನಲ್ಲಿ ಈ ವಿಷಯದ ವರ್ಣನೆ ಇದೆ-ಗೋತಮನೆಂಬ ಒಬ್ಬ ಋಷಿಯು ಬಹಳ ಬಾಯಾರಿಕೆಯಿಂದ ಸಂಕಟಪಡುತ್ತಾ ಮರುಭೂಮಿಯಲ್ಲಿ (ಮರಳು ಕಾಡಿನಲ್ಲಿ) ಅಲೆಯುತ್ತಿರುವಾದ ಕುಡಿಯಲು ನೀರನ್ನು ಹುಡುಕಿ ಅದು ಸಿಕ್ಕದಿರುವ ಕಾರಣ ಅಶ್ವಿನೀದೇವತೆಗಳನ್ನು ನೀರಿಗಾಗಿ ಪ್ರಾರ್ಥಿಸಿದನು ಅವರು ಅವನಿಗೆ ನೀರು ತುಂಬಿರುವ ಒಂದು ಬಾವಿಯನ್ನೇ ತಂದು ಅದರ ಬುಡವು ಮೇಲಕ್ಕೆ ಇರುವಂತೆಯೂ ನೀರಿರುವ ಮೇಲುಭಾಗವು ಕೆಳಮುಖ ವಾಗಿರುವಂತೆ ಈ ಋಷಿಯು ಪಾತ್ರೆಯಿಂದ ನೀರನ್ನು ಕುಡಿಯುವ ಹಾಗೆ ಮಾಡಿದರು ಇದರಿಂದ ಅವನ ಬಾಯಾರಿಕೆಯು ಅಡಗಿತು ಎಂಬ ಇತಿಹಾಸವು ಇಲ್ಲಿ ವಿವರಿಸಲ್ಪಟ್ಟಿದೆ. ಮತ್ತು—

ಜಿಹ್ಮಂ ನುನುದ್ರೇಽವತಂ ತಯಾ ದಿಶಾಸಿಂಚನ್ನುತ್ಸಂ ಗೋತಮಾಯ ತೃಷ್ಣಜೇ ।
ಆ ಗಚ್ಛಂತೀಮವಸಾ ಚಿತ್ರಭಾನವಃ ಕಾಮಂ ವಿಪ್ರಸ್ಯ ತರ್ಪಯಂತ ಧಾಮಭಿಃ ॥

(ಋ. ಸಂ ೧ ೮೫-೧೧)

ಎಂಬ ಋಕ್ಕಿನಲ್ಲಿ ಮರುದ್ದೇವತೆಗಳು ತಾವು ಅಗೆದ ಬಾವಿಯನ್ನು ಗೋತಮ ಋಷಿಯು ವಾಸಮಾಡುತ್ತಿದ್ದ ದಿಕ್ಕಿನಲ್ಲಿ ಸ್ಥಾಪಿಸಿ ನೀರು ಸಿಕ್ಕುವಂತೆ ಮಾಡಿದರು ಅನಂತರ ಆ ಬಾವಿಯನ್ನು ಋಷ್ಯಾಶ್ರಮದಲ್ಲಿಯೇ ಇರಿಸಿ ಬಾಯಿಂದ ಗೋತಮ ಋಷಿಗೋಸ್ಕರ ಜಲಪ್ರವಾಹವನ್ನು ಹರಿಸಿದರು ನಾನಾವಿಧ ಪ್ರಕಾಶವುಳ್ಳ ಮರುತ್ತುಗಳು ಭಕ್ತನಾದ ಗೋತಮ ಋಷಿಯನ್ನು ಇಂತಹ ರಕ್ಷಣೆಯಿಂದ ಸಮೀಪಿಸಿ ಮೇಧಾವಿಯಾದ ಅವನ ಇಷ್ಟಾರ್ಥವನ್ನು ಆಯುರ್ಧಾರಕ ಗಳಾದ ಉದಕಗಳಿಂದ ತೃಪ್ತಿಪಡಿಸಿದರು ಎಂದಿದೆ. ಪ್ರಕೃತಋಕ್ಕಿನಲ್ಲಿ ಗೋತಮಶಬ್ದಪ್ರಯೋಗವಿಲ್ಲದಿದ್ದರೂ ಭಾಷ್ಯಕಾರರು ಈ ವಿಷಯವು ಗೋತಮ ಋಷಿಗೇ ಅನ್ವಯಿಸುವುದೆಂದೂ ಇದರಿಂದ ಮರುದ್ದೇವತೆಗಳ ಮಾಹಾತ್ಮ್ಯವು ವರ್ಣಿತವಾಗಿರುವುದೆಂದೂ ಹೇಳಿದ್ದಾರೆ

॥ ಸಂಹಿತಾಪಾಠಃ ॥

ವಾಶೀಮಂತ ಋಷ್ಟಿಮಂತೋ ಮನೀಷಿಣಃ ಸುಧನ್ವಾನ ಇಷುಮಂತೋ ನಿಷಂಗಿಣಃ ।
ಸ್ವಶ್ವಾಃ ಸ್ಥ ಸುರಥಾಃ ಪೃಶ್ನಿಮಾತರಃ ಸ್ವಾಯುಧಾ ಮರುತೋ ಯಾಥನಾ ಶುಭಂ ॥ ೨ ॥

॥ ಪದಪಾಠಃ ॥

ವಾಶೀಽಮಂತಃ । ಋಷ್ಟಿಽಮಂತಃ । ಮನೀಷಿಣಃ । ಸುಽಧನ್ವಾನಃ । ಇಷುಽಮಂತಃ । ನಿಷಂಗಿಣಃ । ಸುಽಅಶ್ವಾಃ । ಸ್ಥ । ಸುಽರಥಾಃ । ಪೃಶ್ನಿಽಮಾತರಃ । ಸುಽಆಯುಧಾಃ । ಮರುತಃ । ಯಾಥನ । ಶುಭಂ ॥

॥ ಸಾಯಣಭಾಷ್ಯಂ ॥

ಹೇ ಮರುತೋ ಯೂಯಂ ವಾಶೀಮಂತಃ । ವಾಶೀತಿ ತಕ್ಷಣಸಾಧನಮಾಯುಧಂ । ತದ್ವಂತಃ ಸ್ಥ । ಋಷ್ಟಿಮಂತಃ । ಋಷ್ಟಿರ್ನಾಮ ಛುರಿಕಾ । ತದ್ವಂತಃ ಸ್ಥ । ಏವಂ ಸರ್ವತ್ರ ಯೋಜ್ಯಂ । ಮನೀಷಿಣೋ ಮನಸ ಈಶ್ವರಾ ಮನಸ್ವಿನಃ ಸುಧನ್ವಾನಃ ಶೋಭನಧನುಷ್ಕಾ ಇಷುಮಂತೋ ವಾಣವಂತೋ ನಿಷಂಗಿಣೋ ನಿಷಂಗವಂತಃ ಸ್ವಶ್ವಾಃ ಸ್ಥ । ಶೋಭನಾಶ್ವಾ ಭವಥ । ಸುರಥಾಃ ಶೋಭನರಥಾಃ ಪೃಶ್ನಿಮಾತರಃ ಪೃಶ್ನೇಃ ಪುತ್ರಾಃ ಸ್ವಾಯುಧಾಃ ಖಡ್ಗಪರಶ್ವಾದಿಸಕಲಾಯುಧೋಪೇತಾಃ । ಏವಂ ಮಹಾತ್ಮಾನಃ ಸಂತಃ ಶುಭಂ ಶೋಭನಂ ಯಥಾ ಭವತಿ ತಥಾ ಶುಭಮುದಕಾಯ ವಾ ರಥೇನ ಯಾಥನ। ಗಚ್ಛಥ ॥

॥ ಪ್ರತಿಪದಾರ್ಥ ॥

**ಮನೀಷಿಣಃ**—ಪ್ರಾಜ್ಞರಾದ । **ಮರುತಃ**—ಎಲೈ ಮರುತ್ತುಗಳೇ । **ಯೂಯಂ**—ನೀವು । **ವಾಶೀಮಂತಃ**—ಅಲಗುಳ್ಳ ಕತ್ತಿಯನ್ನು ಹೊಂದಿದವರೂ । **ಋಷ್ಟಿಮಂತಃ**—ಭರ್ಜಿಯುಳ್ಳವರೂ । **ಸುಧನ್ವಾನಃ**—ಉತ್ತಮವಾದ ಧನುಸ್ಸನ್ನು ಹೊಂದಿದವರೂ । **ಇಷುಮಂತಃ**—ಬಾಣವನ್ನು ಧರಿಸಿದವರೂ । **ನಿಷಂಗಿಣಃ**—ಬತ್ತಳಿಕೆಯುಳ್ಳವರೂ । **ಸ್ವಶ್ವಾಃ**—ಉತ್ತಮವಾದ ಅಶ್ವಗಳುಳ್ಳವರೂ । **ಸುರಥಾಃ**—ಶ್ರೇಷ್ಠವಾದ ರಥಯುಕ್ತರೂ । **ಸ್ಥ**—ಆಗಿದ್ದೀರಿ । **ಪೃಶ್ನಿಮಾತರಃ**—ಪೃಶ್ನಿಪುತ್ರರೂ । **ಸ್ವಾಯುಧಾಃ**—ಉತ್ತಮವಾದ ಆಯುಧವುಳ್ಳವರೂ ಆದ । **ಮರುತಃ**—ಎಲೈ ಮರುತ್ತುಗಳೇ । **ಶುಭಂ**—ನಮಗೆ ಮಂಗಳವನ್ನುಂಟುಮಾಡುವುದಕ್ಕೆ । **ಯಾಥನ**—ಬನ್ನಿರಿ.

॥ ಭಾವಾರ್ಥ ॥

ಪ್ರಾಜ್ಞರಾದ ಎಲೈ ಮರುತ್ತುಗಳೇ ನೀವು ಅಲಗುಳ್ಳ ಕತ್ತಿಯುಳ್ಳವರಾಗಿಯೂ, ಗುರಾಣಿಯುಳ್ಳವರಾಗಿಯೂ ಉತ್ತಮವಾದ ಧನುಸ್ಸನ್ನೂ ಬಾಣವನ್ನೂ, ಬತ್ತಳಿಕೆಯನ್ನೂ ಹೊಂದಿದವರಾಗಿಯೂ, ಉತ್ತಮವಾದ ರಥಯುತರೂ ಅಶ್ವಯುಕ್ತರೂ ಆಗಿದ್ದೀರಿ. ಎಲೈ ಪೃಶ್ನಿಪುತ್ರರಾದ ಮರುತ್ತುಗಳೇ, ನಿಮ್ಮ ಉತ್ತಮವಾದ ಆಯುಧಗಳೊಡನೆ ನಮಗೆ ಮಂಗಳವನ್ನುಂಟುಮಾಡಲು ಬನ್ನಿರಿ.

English Translation

Intelligent Maruts, you are armed with swords, with lances, with bows, with arrows, with quivers; you are well mounted and have handsome chariots, sons of Prishni, you are well armed, come for our good.

॥ ವಿಶೇಷವಿಷಯಗಳು ॥

**ವಾಶೀಮಂತಃ**—**ವಾಶೀ** ಎಂಬ ಶಬ್ದಕ್ಕೆ ಯಾಸ್ಕರು ನಿರ್ವಚನವನ್ನು ಹೇಳುತ್ತಾ—

**ಆ ತೂ ಷಿಂಚ ಹರಿಮೀಂ ದ್ರೋರುಪಸ್ಥೇ ವಾಶೀಭಿಸ್ತಕ್ಷತಾಶ್ಮನ್ಮಯೀಭಿಃ ।**
**ಪರಿ ಷ್ವಜಧ್ವಂ ದಶ ಕಕ್ಷ್ಯಾಭಿರುಭೇ ಧುರೌ ಪ್ರತಿ ವಹ್ನಿಂ ಯುನಕ್ತ** ॥ (ಋ. ಸಂ. ೧೦-೧೦೧-೧೦)

ಎಂಬ ಋಕ್ಕನ್ನುದಾಹರಿಸಿ ಆ ಋಕ್ಕಿನಲ್ಲಿರುವ **ವಾಶೀಭಿಃ** ಎಂಬ ಶಬ್ದಕ್ಕೆ—**ವಾಶೀಭಿರಶ್ಮಮಯೀಭಿರಿತಿ ವಾ । ವಾಗ್ಭಿರಿತಿವಾ ।** (ನಿ ೪-೧೯) ಎಂದು ನಿರ್ವಚನವನ್ನು ಹೇಳಿದಾರೆ. ವಾಶೀ ಎಂಬ ಶಬ್ದವು ವಾಙ್ನಾಮಗಳಲ್ಲಿ ಪಠಿತವಾಗಿದೆ. (ನಿ ೨-೨೩) ಇಲ್ಲಿ ವಾಶೀಭಿಃ ಎಂದರೆ ಕಲ್ಲಿನ್ನಿಂದ ಮಾಡಲ್ಪಟ್ಟ, ಉಳಿಗಳಿಂದ ಕಲ್ಲಿನಿಂದಲೇ ನಿರ್ಮಿತವಾದ ಮೊನೆಯುಳ್ಳ ಆಯುಧವಿಶೇಷ ಎಂದರ್ಥವು ಮರುದ್ದೇವತೆಗಳ ಆಯುಧಗಳಲ್ಲಿ ವಾಶೀ ಋಷ್ಟಿ ಧನಸ್ಸು ಇಷು, ಆಯುಧ ಎಂಬವುಗಳನ್ನು ಈ ಋಕ್ಕಿನಲ್ಲಿ ಹೇಳಿದೆ ಎಂದರೆ ಕಲ್ಲಿನಿಂದ ನಿರ್ಮಿತವಾದ ಅಥವಾ ಕಲ್ಲಿನಂತೆ ಕಠಿನವಾದ ಆಯುಧ ವಿಶೇಷ, ಹರಿತವಾದಅಲಗುಳ್ಳ ಭರ್ಜಿ, ಬಿಲ್ಲು, ಬಾಣ, ಮತ್ತು ಇತರ ಆಯುಧಗಳು ಇವುಗಳನ್ನು ಧರಿಸಿ ಉತ್ತಮವಾದ ರಥದಲ್ಲಿ ಕುಳಿತು ವೃಷ್ಟಿರೂಪವಾದ ಉದಕವನ್ನು ಸುರಿಸುವುದಕ್ಕಾಗಿ ಹೊರಡಬೇಕೆಂದು ಪ್ರಾರ್ಥಿಸಲಾಗಿದೆ.

**ಪೃಶ್ನಿಮಾತರಃ**—ಪೃಶ್ನಿಯೇ ತಾಯಿಯಾಗಿವುಳ್ಳವರು. ಮರುದ್ದೇವತೆಗಳ ತಾಯಿಯ ಹೆಸರು ಪೃಶ್ನಿ ಎಂಬ ಗೋವು ಅಥವಾ ರುದ್ರಪತ್ನೀ ಪೃಶ್ನಿಮಾತರಃ ಎಂಬ ಶಬ್ದದ ಅರ್ಥವಿವರಣೆಯನ್ನು ನಾವು ಹಿಂದೆಯೇ ಮಾಡಿದೇವೆ.

॥ ಸಂಹಿತಾಪಾಠಃ ॥

**ಧೂನುಥ ದ್ಯಾಂ ಪರ್ವತಾನ್ದಾಶುಷೇ ವಸು ನಿ ವೋ ವನಾ ಜಿಹತೇ ಯಾಮನೋ ಭಿಯಾ ।**

ಕೋಪಯಥ ಪೃಥಿವೀಂ ಪೃಶ್ನಿಮಾತರಃ ಶುಭೇ ಯದುಗ್ರಾಃ ಪೃಷತೀರ-
ಯುಗ್ಧ್ವಂ ॥ ೩ ॥

॥ ಪದಪಾಠಃ ॥

ಧೂನುಥ । ದ್ಯಾಂ । ಪರ್ವತಾನ್ । ದಾಶುಷೇ । ವಸು । ನಿ । ವಃ । ವನಾ । ಜಿಹತೇ । ಯಾಮನಃ ।
ಭಿಯಾ ।

ಕೋಪಯಥ । ಪೃಥಿವೀಂ । ಪೃಶ್ನಿಽಮಾತರಃ । ಶುಭೇ । ಯತ್ । ಉಗ್ರಾಃ । ಪೃಷತೀಃ । ಅಯುಗ್ಧ್ವಂ॥

॥ ಸಾಯಣಭಾಷ್ಯಂ ॥

ಹೇ ಮರುತೋ ದ್ಯಾಂ । ದಿವೀತ್ಯರ್ಥಃ । ಪರ್ವತಾನ್ಮೇಘಾನ್ದಾಶುಷೇ ಹವಿರ್ದಾತ್ರೇ ಯಜಮಾನಾಯ ವಸು ಧನಾನಿ ಚ ಧೂನುಥ । ಪ್ರಾಪಯಥ । ವೋ ಯುಷ್ಮಾಕಂ ಯಾಮನೋ ಗಮನಸ್ಯ ಭಿಯಾ ಭೀತ್ಯಾ ವನಾ ವನಾನಿ ವೃಕ್ಷಾದಿಸಮೂಹಾ ನಿ ಜಿಹತೇ । ನಿತರಾಂ ಕಂಪಂತೇ । ಅವನತಾ ಭೃಶಂ ಶಂಸಂತೀತ್ಯರ್ಥಃ । ಹೇ ಪೃಶ್ನಿಮಾತರಃ ಪೃಶ್ನೇಃ ಪುತ್ರಾಃ । ಪೃಶ್ನ್ಯೈ ವೈ ಪಯಸೋ ಮರುತೋ ಜಾತಾ ಇತಿ ಹಿ ಶ್ರುತಿಃ । ಹೇ ಮರುತಃ ಪೃಥಿವೀಂ ಕೋಪಯಥ । ಅಭಿವೃಷ್ಟ್ಯಾ ಕ್ಷೋಭಯಥ । ಹೇ ಉಗ್ರಾ ಉದ್ಗೂರ್ಣಬಲಾ ಯೂಯಂ ಯದ್ಯದಾ ಶುಭ ಉದಕಾರ್ಥಂ ಪೃಷತೀರ್ಯುಷ್ಮದೀಯಾ ಅಶ್ವಾ ಅಯುಗ್ಧ್ವಂ ಯೋಜಯಥ ತದಾ ಕೋಪಯಥ ಪೃಥಿವೀಂ ॥

॥ ಪ್ರತಿಪದಾರ್ಥ ॥

(ಎಲೈ ಮರುತ್ತುಗಳೇ) **ದಾಶುಷೇ**—ಹವಿರ್ದಾತನಾದ ಯಜಮಾನನಿಗೆ। **ವಸು**—ಧನವನ್ನು ಒದಗಿಸಲು। **ದ್ಯಾಂ**—ದ್ಯುಲೋಕದಲ್ಲಿ (ಅಂತರಿಕ್ಷದಲ್ಲಿ) । **ಪರ್ವತಾನ್**—ಮೇಘಗಳನ್ನು । **ಧೂನಥ**—ಕಂಪಿಸುವಂತೆ ಮಾಡುತ್ತೀರಿ । **ವಃ**—ನಿಮ್ಮ । **ಯಾಮನಃ**—ಗಮನದ । **ಭಿಯಾ**—ಭೀತಿಯಿಂದ । **ವನಾ**—ವೃಕ್ಷಸಮೂಹಗಳು । **ನಿ ಜಿಹತೇ**—ಪೂರ್ಣವಾಗಿ ಕಂಪಿಸುತ್ತವೆ । **ಉಗ್ರಾಃ**—ಭಯಂಕರರೂ । **ಪೃಶ್ನಿಮಾತರಃ**—ಪೃಶ್ನಿಪುತ್ರರೂ ಆದ ಎಲೈ ಮರುತ್ತುಗಳೇ । **ಯತ್**—ಯಾವಾಗ । **ಶುಭೇ**—ಉದಕಾರ್ಥವಾಗಿ । **ಪೃಷತೀಃ**—ನಿಮ್ಮ ಅಶ್ವಗಳನ್ನು (ಸಾರಂಗಗಳನ್ನು) । **ಅಯುಗ್ಧ್ವಂ**—ರಥಕ್ಕೆ ಕಟ್ಟುತ್ತೀರೋ (ಆಗ) । **ಪೃಥಿವೀಂ**—ಪೃಥಿವಿಯನ್ನು । **ಕೋಪಯಥ**—ಕ್ಷುಭಿತವಾಗುವಂತೆ ಮಾಡುತ್ತೀರಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಹವಿರ್ದಾತನಾದ ಯಜಮಾನನಿಗೆ ಧನವನ್ನು ಒದಗಿಸಲು ನೀವು ಅಂತರಿಕ್ಷದಲ್ಲಿ ಮೇಘಗಳನ್ನು ಕಂಪಿಸುವಂತೆ ಮಾಡುತ್ತೀರಿ. ನಿಮ್ಮ ಗಮನದ ಭೀತಿಯಿಂದ ವೃಕ್ಷಸಮೂಹಗಳು ಪೂರ್ಣವಾಗಿ ಕಂಪಿಸುತ್ತವೆ. ಭಯಂಕರರೂ ಪೃಶ್ನಿಪುತ್ರರೂ ಆದ ಎಲೈ ಮರುತ್ತುಗಳೇ, ನೀವು ಉದಕಾರ್ಥವಾಗಿ ಯಾವಾಗ ನಿಮ್ಮ ಸಾರಂಗಗಳನ್ನು ರಥಕ್ಕೆ ಕಟ್ಟುತ್ತೀರೋ ಆಗ ಪೃಥಿವಿಯನ್ನು ಕ್ಷುಭಿತವಾಗುವಂತೆ ಮಾಡುತ್ತೀರಿ.

## English Translation

You agitate the clouds in the sky; (you give) wealth to the donor (of oblations), through fear of your approach the forests bow down, sons of Prishni, you incense the earth when, for the purpose of (sending) water, you fierce (Maruts), yoke your spotted steeds.

॥ ಸಂಹಿತಾಪಾಠಃ ॥

ವಾತತ್ವಿಷೋ ಮರುತೋ ವರ್ಷನಿರ್ಣಿಜೋ ಯಮಾಇವ ಸುಸದೃಶಃ-
ಸುಪೇಶಸಃ ।
ಪಿಶಂಗಾಶ್ವಾ ಅರುಣಾಶ್ವಾ ಅರೇಪಸಃ ಪ್ರತ್ವಕ್ಷಸೋ ಮಹಿನಾ ದ್ಯೌರಿವೋ-
ರವಃ ॥ ೪ ॥

॥ ಪದಪಾಠಃ ॥

ವಾತऽತ್ವಿಷಃ । ಮರುತಃ । ವರ್ಷऽನಿರ್ನಿಜಃ । ಯಮಾಃऽಇವ । ಸುऽಸದೃಶಃ । ಸುऽಪೇಶಸಃ ।
ಪಿಶಂಗऽಅಶ್ವಾಃ । ಅರುಣऽಅಶ್ವಾಃ । ಅರೇಪಸಃ । ಪ್ರऽತ್ವಕ್ಷಸಃ । ಮಹಿನಾ । ದ್ಯೌಃऽಇವ । ಉರವಃ ॥

॥ ಸಾಯಣಭಾಷ್ಯಂ ॥

ವಾತತ್ವಿಷಃ ಸರ್ವದಾ ಸಂಪ್ರಾಪ್ತದೀಪ್ತಯೋ ವರ್ಷನಿರ್ಣಿಜೋ ವೃಷ್ಟೇಃ ಶೋಧಯಿತಾರಃ । ಅಥವಾ ನಿರ್ಣಿಗಿತಿ ರೂಪನಾಮ । ವರ್ಷಮೇವ ರೂಪಂ ಯೇಷಾಂ ತೇ ತಾದೃಶಾಃ । ವೃಷ್ಟಿಪ್ರದಾ ಇತ್ಯರ್ಥಃ । ಯಮಾ ಇವ ಯುಗಲೋತ್ಪನ್ನಾ ಇವ ಸುಸದೃಶಾಃ ಪರಸ್ಪರಂ ಬಲರೂಪಾದಿಭಿರತ್ಯಂತಂ ಸರೂಪಾಃ ಸುಪೇಶಸಃ ಶೋಭನರೂಪಾಃ ಪಿಶಂಗಾಶ್ವಾಃ ಪಿಶಂಗವರ್ಣಾಶ್ವೋಪೇತಾಸ್ತಥಾರುಣಾಶ್ವಾ ಅರೇಪಸೋऽಪಾಪಾಃ ಪ್ರತ್ವಕ್ಷಸಃ ಪ್ರಕೃಷ್ಟಂ ತನೂಕರ್ತಾರೋ ದ್ವೇಷ್ಯಾಣಾಂ ಮಹಿನಾ ಮಹತ್ತ್ವೇನ ದ್ಯೌರಿವಾಂತರಿಕ್ಷಮಿವೋರವೋ ವಿಸ್ತೀರ್ಣಾಃ । ಉಕ್ತಲಕ್ಷಣಾ ನಾಮ ಭೇಜಿರ ಇತ್ಯುತ್ತರೇಣ ಸಂಬಂಧಃ ॥

॥ ಪ್ರತಿಪದಾರ್ಥ ॥

**ಮರುತಃ**—ಮರುತ್ತುಗಳು । **ವಾತತ್ವಿಷಃ**—ಸರ್ವದಾ ಹೊಂದಿರುವ ಕಾಂತಿಯುಳ್ಳವರೂ । **ವರ್ಷನಿರ್ಣಿಜಃ**—ವೃಷ್ಟಿಯನ್ನು ಶುದ್ಧಿಮಾಡತಕ್ಕವರೂ । **ಯಮಾ ಇವ**—ಅವಳಿ ಮಕ್ಕಳಂತೆ । **ಸುಸದೃಶಃ**—

ಒಂದೇ ರೂಪವುಳ್ಳವರೂ । **ಸುಪೇಶಸಃ**—ಸುಂದರವಾದ ಆಕಾರವುಳ್ಳವರೂ । **ಪಿಶಂಗಾಶ್ವಾಃ**—ಪಿಶಂಗವರ್ಣದ ಅಶ್ವವುಳ್ಳವರೂ । **ಅರುಣಾಶ್ವಾಃ**—ಹೊಂಬಣ್ಣದ ಅಶ್ವವುಳ್ಳವರೂ । **ಅರೇಪಸಃ**—ಪಾಪರಹಿತರೂ । **ಪ್ರತ್ವಕ್ಷಸಃ**—ಶತ್ರುನಾಶಕರೂ ಆಗಿ । **ಮಹಿನಾ**—ತಮ್ಮ ಮಹತ್ವದಿಂದ । **ದ್ಯೌರಿವ**—ಅಂತರಿಕ್ಷದಂತೆ । **ಉರವಃ**—ವಿಸ್ತೃತವಾದ ಸ್ವರೂಪವುಳ್ಳವರಾಗಿ ಪ್ರಕಾಶಿಸುತ್ತಿದ್ದಾರೆ.

॥ ಭಾವಾರ್ಥ ॥

ಸರ್ವದಾ ಹೊಂದಿರುವ ಕಾಂತಿಯುಳ್ಳವರೂ, ವೃಷ್ಟಿಯನ್ನು ಶುದ್ಧಿಮಾಡತಕ್ಕವರೂ, ಅವಳಿ ಮಕ್ಕಳಂತೆ ಒಂದೇ ರೂಪವುಳ್ಳವರೂ, ಸುಂದರವಾದ ಆಕಾರವುಳ್ಳವರೂ, ಪಿಶಂಗವರ್ಣದ ಅಶ್ವವುಳ್ಳವರೂ ಹೊಂಬಣ್ಣದ ಅಶ್ವವುಳ್ಳವರೂ, ಪಾಪರಹಿತರೂ, ಶತ್ರುನಾಶಕರೂ ಆದ ಮರುತ್ತುಗಳು ತಮ್ಮ ಮಹತ್ವದಿಂದ ಅಂತರಿಕ್ಷದಂತೆ ಅತಿ ವಿಸ್ತೃತವಾದ ಸ್ವರೂಪವುಳ್ಳವರಾಗಿ ಪ್ರಕಾಶಿಸುತ್ತಿದ್ದಾರೆ.

## English Translation

The Maruts, radiant with light, purifiers of the rain, like twins of goodly aspect and graceful form, masters of tawny and of ruddy steeds, devoid of guile, thinners (of foes), and vast in magnitude as the sky.

॥ ವಿಶೇಷವಿಷಯಗಳು ॥

**ವರ್ಷನಿರ್ಣಿಜಃ**—ವೃಷ್ಟಿಯನ್ನು ಶುದ್ಧಿಮಾಡತಕ್ಕವರು ಅಥವಾ ನಿರ್ಣಿಕ್ ಎಂಬ ಶಬ್ದಕ್ಕೆ ರೂಪವೆಂದರ್ಥವನ್ನು ಮಾಡುವುದಾದರೆ ವೃಷ್ಟಿ (ಮಳೆ) ಯೇ ರೂಪ ಅಥವಾ ಸ್ವರೂಪವಾಗಿವುಳ್ಳವರು ಎಂದರೆ ವೃಷ್ಟಿಯನ್ನುಂಟು ಮಾಡುವವರು ಎಂದು ಭಾಷ್ಯಕಾರರು ಈ ಶಬ್ದಕ್ಕೆ ಎರಡುವಿಧ ಅರ್ಥವಿವರಣೆಮಾಡಿದಾರೆ.

**ಯಮಾ ಇವ—ಯುಗಲೋತ್ಪನ್ನಾ ಇವ** । ಯಮ ಎಂದರೆ ಯಮಳರು ಏಕಕಾಲದಲ್ಲಿ ಒಂದೇ ತಾಯಿಯ ಗರ್ಭದಿಂದ ಹುಟ್ಟಿದವರು. ಅವಳೀ ಮಕ್ಕಳು ಎಂದರ್ಥ. ಏಳು ಮರುದ್ಗಣಗಳಲ್ಲಿ ಇರುವ ೪೯ ಮಂದಿ ಮರುದ್ದೇವತೆಗಳು ಏಕಕಾಲದಲ್ಲಿ ಉತ್ಪನ್ನರಾದುದರಿಂದ ಇವರನ್ನು **ಯಮಾ ಇವ** ಎಂಬ ವಿಶೇಷಣದಿಂದ ವ್ಯವಹರಿಸಲಾಗಿದೆ **ಯಮಾ ಇವ** ಎಂಬ ಈ ಶಬ್ದದ ಜತೆಯಲ್ಲಿಯೇ **ಸುಸದೃಶಃ ಸುಪೇಶಸಃ** ಎಂಬ ಮುಂದಿನ ಎರಡು ಶಬ್ದಗಳನ್ನೂ ಸೇರಿಸಿ ಅರ್ಥಮಾಡಬೇಕು. **ಸುಸದೃಶಃ ಸುಪೇಶಸಃ** ಎಂದರೆ ಒಬ್ಬರಂತೆಯೇ ಒಬ್ಬರು ಇರುವವರು ಎಂದರೆ ಎಲ್ಲರೂ ಒಂದೇ ವಿಧವಾದ ಶರೀರ, ಆಕಾರ, ವಯಸ್ಸುಗಳುಳ್ಳವರು. ಆದುದರಿಂದಲೇ ಇವರನ್ನು ಯಮಳರಂತೆ ಎಂದು ಅವಳೀ ಮಕ್ಕಳಿಗೆ ಹೋಲಿಸಿದೆ. ಅವಳೀ ಮಕ್ಕಳು ರೂಪ ಆಕಾರ ಮೊದಲಾದುವುಗಳಲ್ಲಿ ಒಂದೇ ವಿಧರಾಗಿರುವೆಂಬ ವಿಷಯವು ಅನುಭವವೇದ್ಯವಾಗಿದೆ. ಆದುದರಿಂದ ಋಷಿಯು ಮರುದ್ದೇವತೆಗಳನ್ನು ವರ್ಣಿಸುವಾಗ ಯಮಳರ ದೃಷ್ಟಾಂತವನ್ನು ಹೇಳಿದಾನೆ.

**ಪಿಶಂಗಾಶ್ವಾಃ ಅರುಣಾಶ್ವಾಃ**-ಮರುದ್ದೇವತೆಗಳ ಅಶ್ವಗಳ ವರ್ಣವನ್ನುಈ ಶಬ್ದಗಳಿಂದ ವಿವರಿಸಲಾಗಿದೆ. ಹಿಂದೆ ಎಂದರೆ ೫-೫೬-೬ ನೇ ಋಕ್ಕಿನಲ್ಲಿ ಮರುದ್ದೇವತೆಗಳ ಅಶ್ವಗಳನ್ನು ರಥಕ್ಕೆ ಹೂಡಬೇಕೆಂದು ಅವರನ್ನು ಪ್ರಾರ್ಥಿಸುವ ಸಂದರ್ಭದಲ್ಲಿ **ಅರುಷ, ರೋಹಿತ** ಎಂಬ ಶಬ್ದಗಳಿಂದ ಅವರ ಅಶ್ವಗಳ ವರ್ಣವನ್ನು ವಿವರಿಸಿದೆ. ಆ ವಿಷಯವನ್ನೇ

ಇಲ್ಲಿ ಋಷಿಯು **ಪಿಶಂಗಾಶ್ವಾಃ ಅರುಣಾಶ್ವಾಃ** ಎಂಬ ಶಬ್ದಗಳಿಂದ ಮತ್ತೆ ವರ್ಣಿಸಿದಾನೆ.

**ಮಹಿನಾ ದ್ಯೌರಿವ ಉರವಃ—ಮಹತ್ತ್ವೇನ ಅಂತರಿಕ್ಷಮಿವ ವಿಸ್ತೀರ್ಣಾಃ ।** ಅಂತರಿಕ್ಷವು ಅತ್ಯಂತ ವಿಸ್ತಾರವಾಗಿರುವ ವಿಷಯವು ಪ್ರಸಿದ್ಧವಾಗಿಯೇ ಇದೆ. ಮರುದ್ದೇವತೆಗಳ ಮಹಿಮೆಯೂ ಸಹ ಅಂತರಿಕ್ಷದಂತೆ ಅತಿ ವಿಸ್ತಾರವಾಗಿರುವುದೆಂದು ದೃಷ್ಟಾಂತಸಹಿತವಾಗಿ ವಿವರಿಸಲಾಗಿದೆ.

॥ ಸಂಹಿತಾಪಾಠಃ ॥

**ಪುರುದ್ರಪ್ಸಾ ಅಂಜಿಮಂತಃ ಸುದಾನವಸ್ತ್ವೇಷಸಂದೃಶೋ ಅನವಭ್ರರಾಧಸಃ ।**
**ಸುಜಾತಾಸೋ ಜನುಷಾ ರುಕ್ಮವಕ್ಷಸೋ ದಿವೋ ಅರ್ಕಾ ಅಮೃತಂ ನಾಮ ಭೇಜಿರೇ ॥ ೫ ॥**

॥ ಪದಪಾಠಃ ॥

**ಪುರುಽದ್ರಪ್ಸಾಃ । ಅಂಜಿಽಮಂತಃ । ಸುಽದಾನವಃ । ತ್ವೇಷಽಸಂದೃಶಃ । ಅನವಭ್ರಽರಾಧಸಃ ।**
**ಸುಽಜಾತಾಸಃ । ಜನುಷಾ । ರುಕ್ಮಽವಕ್ಷಸಃ । ದಿವಃ । ಅರ್ಕಾಃ । ಅಮೃತಂ । ನಾಮ । ಭೇಜಿರೇ ॥ ೫ ॥**

॥ ಸಾಯಣಭಾಷ್ಯಂ ॥

**ಪುರುದ್ರಪ್ಸಾಃ ಪ್ರಭೂತೋದಕಾ ಅಂಜಿಮಂತ ಆಭರಣವಂತಃ ಸುದಾನವಃ ಶೋಭನದಾನಾಸ್ತ್ವೇಷಸಂದೃಶೋ ದೀಪ್ತರೂಪಾ ಅನವಭ್ರರಾಧಸೋಽನವಭ್ರಷ್ಟಧನಾಃ ಸುಜಾತಾಸಃ ಶೋಭನಜನನಾ ಜನುಷಾ ಜನ್ಮನೈವೋಕ್ತರೂಪಾ ರುಕ್ಮವಕ್ಷಸೋ ಹಾರವಕ್ಷಸ್ಕಾ ಅರ್ಕಾಃ ಪೂಜ್ಯಾ ಮರುತೋ ದಿವೋ ದ್ಯುಲೋಕಾದಾಗತ್ಯಾಮೃತಮಮರಣಸಾಧನಂ ನಾಮೋದಕಂ ನಮನಹೇತುಕಮುಕ್ತಲಕ್ಷಣಂ ಹವಿರ್ವಾ ಭೇಜಿರೇ । ಲಬ್ಧವಂತಃ ॥**

॥ ಪ್ರತಿಪದಾರ್ಥ ॥

**ಪುರುದ್ರಪ್ಸಾಃ**—ಪ್ರಭೂತವಾದ ಉದಕವುಳ್ಳವರೂ । **ಅಂಜಿಮಂತಃ**—ಆಭರಣವುಳ್ಳವರೂ । **ಸುದಾನವಃ**—ಉತ್ತಮವಾದ ದಾನಿಗಳೂ । **ತ್ವೇಷಸಂದೃಶಃ**—ಪ್ರಭಾಯುತವಾದ ರೂಪವುಳ್ಳವರೂ । **ಅನವಭ್ರರಾಧಸಃ**—ನಾಶರಹಿತವಾದ ಧನವುಳ್ಳವರೂ । **ಸುಜಾತಾಸಃ**—ಉತ್ತಮವಾದ ಜನ್ಮವುಳ್ಳವರೂ । **ಜನುಷಾ**—ಉತ್ಪತ್ತಿಕಾಲದಿಂದಲೇ । **ರುಕ್ಮವಕ್ಷಸಃ**—ವಕ್ಷಸ್ಸಿನಲ್ಲಿ ಹಾರವುಳ್ಳವರೂ । **ಅರ್ಕಾಃ**—ಪೂಜ್ಯರೂ ಆದ ಮರುತ್ತುಗಳು । **ದಿವಃ**—ದ್ಯುಲೋಕದಿಂದ ಆವಿರ್ಭವಿಸಿ । **ಅಮೃತಂ**—ಮರಣರಹಿತವಾದ । **ನಾಮ**—ಖ್ಯಾತಿಯನ್ನು (ಅಥವಾ ಉದಕವನ್ನು) । **ಭೇಜಿರೇ**—ಧರಿಸಿದ್ದಾರೆ.

॥ ಭಾವಾರ್ಥ ॥

ಪ್ರಭೂತವಾದ ಉದಕವುಳ್ಳವರೂ, ಆಭರಣವುಳ್ಳವರೂ, ಉತ್ತಮವಾದ ದಾನಿಗಳೂ, ಪ್ರಭಾಯುತವಾದ ರೂಪವುಳ್ಳವರೂ, ನಾಶರಹಿತವಾದ ಧನವುಳ್ಳವರೂ, ಉತ್ತಮವಾದ ಜನ್ಮವುಳ್ಳವರೂ, ಉತ್ಪತ್ತಿಕಾಲದಿಂದಲೇ ವಕ್ಷಸ್ಸಿನಲ್ಲಿ ಹಾರವುಳ್ಳವರೂ, ಪೂಜ್ಯರೂ ಆದ ಮರುತ್ತುಗಳು ದ್ಯುಲೋಕದಿಂದ ಆವಿರ್ಭವಿಸಿ ಮರಣರಹಿತವಾದ ಖ್ಯಾತಿಯನ್ನು ಹೊಂದಿದ್ದಾರೆ.

English Translation

Shedders of abundant showers, wearers of ornaments, munificent, of brilliant aspect, of inexhaustible wealth, well- descended by birth, wearing golden breast-plates, entitled to adoration, (coming) from heaven, accept the ambrosial oblation.

॥ ವಿಶೇಷವಿಷಯಗಳು ॥

**ಅನವಭ್ರರಾಧಸಃ—ಅನವಭ್ರಷ್ಟಧನಾಃ ಅಥವಾ ಅಭ್ರಷ್ಟಹವಿರಾದಿಧನಾಃ ।** ರಾಧಃಶಬ್ದವು ಮಘಂ, ರೇಕ್ಣಃ ಮೊದಲಾದ ಇಪ್ಪತ್ತೆಂಟು ಧನನಾಮಗಳ ಮಧ್ಯದಲ್ಲಿ ಪಠಿತವಾಗಿರುವುದರಿಂದ (ನಿ ೩-೯) ರಾಧಃ ಎಂದರೆ ಧನವೆಂದರ್ಥವು. ಇಲ್ಲಿ ಧನಶಬ್ದಕ್ಕೆ ಹವಿರಾದಿಧನವೆಂದರ್ಥವು. ಅನವಭ್ರ ಎಂದರೆ ಭ್ರಷ್ಟವಲ್ಲದ, ವ್ಯರ್ಥವಲ್ಲದ ಎಂದರ್ಥವು. ಮರುದ್ದೇವತೆಗಳಿಗೆ ಅರ್ಪಿಸುವ ಹವಿರಾದಿಧನವು ವ್ಯರ್ಥವಾಗುವುದಿಲ್ಲ. ಅದನ್ನು ಅವರು ಸ್ವೀಕರಿಸಿ ಅದಕ್ಕೆ ತಕ್ಕ ಪ್ರತಿಫಲವನ್ನು ಯಜಮಾನರಿಗೆ ಅನುಗ್ರಹಿಸುವುದರಿಂದ ಮರುದ್ದೇವತೆಗಳಿಗೆ ಅರ್ಪಿಸಿದ ಹವಿಸ್ಸಿನ ರೂಪದ ಧನವು ವ್ಯರ್ಥವಾಗುವುದಿಲ್ಲವೆಂದು ಈ ಶಬ್ದದ ಮುಖ್ಯಾರ್ಥವು.

**ಅರ್ಕಾಃ—ಪೂಜ್ಯಾ ಮರುತಃ ।** ಪೂಜ್ಯರಾದ ಮರುದ್ದೇವತೆಗಳು ಎಂದರ್ಥವು. ಅರ್ಕಶಬ್ದಕ್ಕೆ ನಾನಾರ್ಥಗಳಿರುವವು. ಅವುಗಳನ್ನು ಸಂದರ್ಭಾನುಸಾರವಾಗಿ ಉಪಯೋಗಿಸಬೇಕು.

ಅರ್ಕಶಬ್ದಕ್ಕೆ ಅನ್ನವೆಂದೂ (ನಿ. ೩-೯) ವಜ್ರಾಯುಧವೆಂದೂ (ನಿ. ೩-೧೧) ದೇವ, ಮಂತ್ರ (ನಿ. ೫-೪) ಎಂದೂ ನಾನಾರ್ಥಗಳಿರುವವು. ಅರ್ಕಶಬ್ದಕ್ಕೆ ಯಾಸ್ಕರು—

**ಅರ್ಕಃ । ಅರ್ಕೋ ದೇವೋ ಭವತಿ ಯದೇನಮರ್ಚಂತಿ ।**
**ಅರ್ಕೋ ಮಂತ್ರೋ ಭವತಿ ಯದನೇನಾರ್ಚಂತಿ ।**
**ಅರ್ಕಮನ್ನಂ ಭವತ್ಯರ್ಚತಿ ಭೂತಾನಿ ।**
**ಅರ್ಕೋ ವೃಕ್ಷೋ ಭವತಿ ಸಂವೃತ್ತಃ ಕಟುಕಿಮ್ನಾ ॥** (ನಿ. ೫-೪)

ಎಂದು ನಾಲ್ಕು ವಿಧವಾದ ಅರ್ಥವನ್ನು ಹೇಳಿರುವರು. ಇದರ ಅರ್ಥವಿವರಣೆಯನ್ನು ಈ ರೀತಿ ಮಾಡಬಹುದು.—

**ದೇವಃ—ತಾವತ್ಸರ್ವ ಏವಾರ್ಕ ಇತ್ಯುಚ್ಯತೇ ಯದ್ಯಸ್ಮಾದೇನಂ ದೇವಂ ಅರ್ಚಂತಿ ಸ್ತೋತಾರಃ—**ಅರ್ಕ ಎಂದರೆ ದೇವತೆಯು. ಏಕೆಂದರೆ ಇದರಿಂದ ಭಕ್ತರು ಯಾರನ್ನು ಪೂಜಿಸುವುದಕ್ಕೆ ಉಪಯೋಗಿಸುವರೋ ಅಂತಹ ವ್ಯಕ್ತಿ ಅಥವಾ ದೇವನು, ಎಂದರೆ ಭಕ್ತರು ಪೂಜಿಸುವ ವಸ್ತುವಿಗೆ (ದೇವತೆಗೆ) ಅರ್ಕವೆಂದು ಹೆಸರು.

**ಅರ್ಕೋ ಮಂತ್ರೋ ಭವತಿ । ಯದ್ಯಸ್ಮಾದನೇನ ಮಂತ್ರೇಣಾರ್ಚಂತಿ ಸ್ತೋತಾರಸ್ತಸ್ಮಾದರ್ಕಃ**– ಅರ್ಕವೆಂದರೆ ಮಂತ್ರವೆಂದೂ ಅರ್ಥವಾಗುವುದು. ಏಕೆಂದರೆ, ಸ್ತೋತ್ರಮಾಡುವವರು ಇದರಿಂದ (ಅರ್ಕದಿಂದ ಅಥವಾ ಮಂತ್ರದಿಂದ) ದೇವತೆಯನ್ನು ಅರ್ಚಿಸುವರು. ಆದುದರಿಂದ ಅರ್ಕಶಬ್ದಕ್ಕೆ ಮಂತ್ರವೆಂದೂ ಹೆಸರು.

**ಅರ್ಕಮನ್ನಂ ಭವತಿ—ತದ್ಧಿ ಅರ್ಚತಿ ಭೂತಾನಿ ಯೋ ಹಿ ಪೂಜ್ಯಃ ತಸ್ಯಾನ್ನಮಪಿ ಸಂಸ್ಕಾರವಿಶೇಷೇಣ ಸಂಸ್ಕೃತಂ ಪೂಜಾಯಾಂ ಕ್ರಿಯತೇ, ಪೂಜ್ಯಂ ಚ ಸರ್ವಸ್ಯೈವಾನ್ನಂ**—ಅರ್ಕವೆಂದರೆ ಅನ್ನವೆಂದೂ ಅರ್ಥವಾಗುವುದು. ಅನ್ನವು (ಆಹಾರವು) ಸಮಸ್ತಪ್ರಾಣಿಗಳಿಗೂ ಆವಶ್ಯಕವಾಗಿರುವುದರಿಂದ ಅನ್ನವನ್ನು ಎಲ್ಲರೂ ಗೌರವಿಸಿ ಅಪೇಕ್ಷಿಸುವರು. ಎಂದರೆ, ಎಲ್ಲರೂ ಪ್ರೀತ್ಯಾದಾರಗಳಿಂದ ಗೌರವಿಸಿ ಬಯಸುವುದರಿಂದ ಅರ್ಕಶಬ್ದಕ್ಕೆ ಅನ್ನವೆಂದೂ ಅರ್ಥವಾಗುವುದು.

**ಅರ್ಕೋ ವೃಕ್ಷೋ ಭವತಿ ಯ ಏಷ ಪ್ರಸಿದ್ಧಃ । ಸಂವೃತ್ತಃ ಹಿ ಸಂಗತಃ ಸಂವ್ಯಾಪ್ತಃ ಕಟುಕಿಮ್ನಾ ಕಟುಕಭಾವೇನ ಭವತಿ**—ಇನ್ನು ಅರ್ಕಶಬ್ದಕ್ಕೆ ವೃಕ್ಷವಿಶೇಷವೆಂಬ ಹೆಸರು ಪ್ರಸಿದ್ಧವಾಗಿಯೇ ಇದೆ. ಅರ್ಕವೃಕ್ಷವೆಂದರೆ ಎಕ್ಕದಗಿಡವೆಂದು ಕರ್ಣಾಟಕಭಾಷೆಯಲ್ಲಿ ಹೇಳುವರು, ಇದರ ಸಮಿತ್ತುಗಳನ್ನು (ಕಡ್ಡಿಗಳನ್ನು) ಹೋಮಗಳಲ್ಲಿ ಉಪಯೋಗಿಸುವುದರಿಂದಲೂ, ಇದನ್ನು ಔಷಧಾದಿಗಳಲ್ಲಿ ಬಳಸುವ ರೂಢಿ ಇರುವುದರಿಂದಲೂ ಅರ್ಕ ವೃಕ್ಷವು ಎಲ್ಲರಿಗೂ ತಿಳಿದ ವಸ್ತುವಾಗಿದೆ. ಇದು ಕಹಿಯಾಗಿರುವುದರಿಂದ ಕಟುಕಿಮ್ನಾ ಎಂದು ಹೇಳುವರು. ಪ್ರಸಕ್ತ ಋಕ್ಕಿನಲ್ಲಿ ಅರ್ಕಶಬ್ದಕ್ಕೆ **ಅರ್ಚನೀಯಾಃ** ಎಂದರೆ ಪೂಜಿಸಲು ಯೋಗ್ಯರಾದ ಎಂಬರ್ಥವನ್ನು ಭಾಷ್ಯಕಾರರು ವಿವರಿಸಿರುವರು.

॥ ಸಂಹಿತಾಪಾಠಃ ॥

ಋಷ್ಟಯೋ ವೋ ಮರುತೋ ಅಂಸಯೋರಧಿ ಸಹ ಓಜೋ ಬಾಹ್ವೋರ್ವೋ
ಬಲಂ ಹಿತಂ ।
ನೃಮ್ಣಾ ಶೀರ್ಷಸ್ವಾಯುಧಾ ರಥೇಷು ವೋ ವಿಶ್ವಾ ವಃ ಶ್ರೀರಧಿ ತನೂಷು
ಪಿಪಿಶೇ ॥ ೬ ॥

॥ ಪದಪಾಠಃ ॥

ಋಷ್ಟಯಃ । ವಃ । ಮರುತಃ । ಅಂಸಯೋಃ । ಅಧಿ । ಸಹಃ । ಓಜಃ । ಬಾಹ್ವೋಃ । ವಃ । ಬಲಂ ।
ಹಿತಂ ।
ನೃಮ್ಣಾ । ಶೀರ್ಷಽಸು । ಆಯುಧಾ । ರಥೇಷು । ವಃ । ವಿಶ್ವಾ । ವಃ । ಶ್ರೀಃ । ಅಧಿ । ತನೂಷು ।
ಪಿಪಿಶೇ ॥ ೬ ॥

॥ ಸಾಯಣಭಾಷ್ಯಂ ॥

**ಹೇ ಮರುತೋ ವೋ ಯುಷ್ಮಾಕಮಂಸಯೋರಧ್ಯೃಷ್ಟಯ ಆಯುಧವಿಶೇಷಾ ಹಿತಾಃ । ಆಶ್ರಿತಾಃ । ವಕ್ಷ್ಯಮಾಣಹಿತಶಬ್ದೋ ವಿಪರಿಣಂತವ್ಯಃ । ಅಧೀತಿ ಸಪ್ತಮ್ಯರ್ಥಾನುವಾದೀ । ತಥಾ ವೋ ಬಾಹ್ವೋರಧಿ ಸಹಃ ಶತ್ರೂಣಾಮಭಿಭಾವುಕಮೋಜಃ । ಓಜ ನಾಮಾಪ್ಸವೋ ಧಾತುಃ । ತದ್ರೂಪಂ ಬಲಂ ಹಿತಂ । ನಿಹಿತಂ । ಶೀರ್ಷಸು ಶಿರಃಸು ನೃಮ್ಣಾ ನೃಮ್ಣಾನಿ ಹಿರಣ್ಮಯಾನಿ ಪಟ್ಟೋಷ್ಣೀಷಾದೀನಿ ನಿಹಿತಾನಿ । ರಥೇಷ್ವಾಯುಧಾಯುಧಾನಿ ಯುದ್ಧಸಾಧನಾನಿ ನಿಹಿತಾನಿ । ವಃ ಶ್ರೀರ್ಯುಷ್ಮಾಕಂ ಕಾಂತಿಸ್ತನೂಷು ತದೀಯೇಷ್ವಧಿ ಪಿಪಿಶೇ । ಅಧಿಷ್ಠಿತಾ । ಆಶ್ರಿತಾ ॥**

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ವಃ**—ನಿಮ್ಮ **ಅಂಸಯೋರಧಿ**—ಭುಜಗಳ ಮೇಲೆ । **ಋಷ್ಟಯಃ**–ಭರ್ಜಿಗಳು (ಪ್ರಕಾಶಿಸುತ್ತಿವೆ) **ವಃ**—ನಿಮ್ಮ । **ಬಾಹ್ವೋಃ**—ತೋಳುಗಳಲ್ಲಿ । **ಸಹಃ**—ಶತ್ರುವನ್ನು ಎದುರಿಸಬಲ್ಲ। **ಓಜಃ**—ವೀರ್ಯವೂ । **ಬಲಂ**—ಶಕ್ತಿಯೂ । **ಹಿತಂ**—ಸ್ಥಾಪಿತವಾಗಿದೆ । **ಶೀರ್ಷಸ್ಸು**—ನಿಮ್ಮ ಶಿರಸ್ಸುಗಳಲ್ಲಿ । **ನೃಮ್ಣಾ**—ಆಕರ್ಷಕವಾದ ಉಷ್ಣೀಷಾದಿಗಳು ಕಂಗೊಳಿಸುತ್ತಿವೆ । **ವಃ ರಥೇಷು**—ನಿಮ್ಮ ರಥಗಳಲ್ಲಿ । **ಆಯುಧಾ**–ಆಯುಧಗಳೂ । **ವಃ**—ನಿಮ್ಮ । **ವಿಶ್ವಾ**—ಸಮಸ್ತವಾದ । **ತನೂಷು ಅಧಿ**—ಶರೀರಾವಯುವಗಳಲ್ಲೂ । **ಶ್ರೀಃ**—ಕಾಂತಿಯು । **ಪಿಪಿಶೇ**—ವ್ಯಾಪಿಸಿ ಪ್ರಕಾಶಿಸುತ್ತಿವೆ.

॥ ಭಾವಾರ್ಥ ॥

ಎಲೈ ಮರುತ್ತುಗಳೇ ನಿಮ್ಮ ಭುಜಗಳ ಮೇಲೆ ಭರ್ಜಿಗಳು ಪ್ರಕಾಶಿಸುತ್ತಿವೆ. ನಿಮ್ಮ ತೋಳುಗಳಲ್ಲಿ ಶತ್ರುವನ್ನು ಎದುರಿಸಬಲ್ಲ ವೀರ್ಯವೂ, ಶಕ್ತಿಯೂ ಸ್ಥಾಪಿತವಾಗಿದೆ. ನಿಮ್ಮ ಶಿರಸ್ಸುಗಳಲ್ಲಿ ಆಕರ್ಷಕವಾದ ಉಷ್ಣೀಷಾದಿಗಳು ಕಂಗೊಳಿಸುತ್ತಿವೆ. ನಿಮ್ಮ ರಥಗಳಲ್ಲಿ ಆಯುಧಗಳೂ, ನಿಮ್ಮ ಸಮಸ್ತವಾದ ಶರೀರಾವಯವಗಳಲ್ಲೂ ಕಾಂತಿಯೂ ವ್ಯಾಪಿಸಿ ಪ್ರಕಾಶಿಸುತ್ತಿವೆ.

English Translation

Lances rest, Maruts, upon your shoulders; strength (of) foe-destroying powor is seated in your arms; golden (tiaras) are on your heads weapons are placed in your chariots, all glory is assembled in your limbs.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಮರುದ್ದೇವತೆಗಳು ಧರಿಸಿರುವ ಆಭರಣಗಳನ್ನೂ ಆಯುಧ ವಿಶೇಷಗಳನ್ನೂ ವರ್ಣಿಸಿದೆ ಇದರಂತೆ—

**ಅಂಸೇಷು ವ ಋಷ್ಟಯಃ ಪತ್ಸು ಖಾದಯೋ ವಕ್ಷಃಸು ರುಕ್ಮಾ ಮರುತೋ ರಥೇ ಶುಭಃ ।**
**ಅಗ್ನಿಭ್ರಾಜಸೋ ವಿದ್ಯುತೋ ಗಭಸ್ತ್ಯೋಃ ಶಿಪ್ರಾಃ ಶೀರ್ಷಸು ವಿತತಾ ಹಿರಣ್ಯಯೀಃ ॥**

(ಋ. ಸಂ ೫-೫೪-೧೧)

ಎಂಬ ಋಕ್ಕಿನಲ್ಲಿಯೂ ಸ್ವಲ್ಪ ಹೆಚ್ಚುಕಡಿಮೆ ಪ್ರಕೃತ ಋಕ್ಕಿನ ವಿವರಣೆಯೇ ಇರುವುದು.

॥ ಸಂಹಿತಾಪಾಠಃ ॥

ಗೋಮದಶ್ವಾವದ್ರಥವತ್ಸುವೀರಂ ಚಂದ್ರವದ್ರಾಧೋ ಮರುತೋ ದದಾ ನಃ।

ಪ್ರಶಸ್ತಿಂ ನಃ ಕೃಣುತ ರುದ್ರಿಯಾಸೋ ಭಕ್ಷೀಯ ವೋಽವಸೋ ದೈವ್ಯಸ್ಯ ॥

॥ ಪದಪಾಠಃ ॥

ಗೋಽಮತ್ । ಅಶ್ವಽವತ್ । ರಥಽವತ್ । ಸುಽವೀರಂ । ಚಂದ್ರಽವತ್ । ರಾಧಃ । ಮರುತಃ । ದದ । ನಃ ।

ಪ್ರಽಶಸ್ತಿಂ । ನಃ । ಕೃಣುತ । ರುದ್ರಿಯಾಸಃ । ಭಕ್ಷೀಯ । ವಃ । ಅವಸಃ । ದೈವ್ಯಸ್ಯ ॥ ೭ ॥

॥ ಸಾಯಣಭಾಷ್ಯಂ ॥

ಹೇ ಮರುತೋ ನೋಽಸ್ಮಭ್ಯಂ ಗೋಮದ್ಬಹುಭಿರ್ಗೋಭಿರುಪೇತಮಶ್ವಾವದ್ಬಹುಭಿರಶ್ವೈರುಪೇತಂ ರಥವದ್ರಥೋಪೇತಂ ಸುವೀರಂ ಸುಷ್ಠು ಪುತ್ರೋಪೇತಂ ಚಂದ್ರವದ್ಧಿರಣ್ಯೋಪೇತಂ ರಾಧೋಽನ್ನಂ ದದ । ದದತ । ವ್ಯತ್ಯಯೇನೈಕವಚನಂ । ಅಥವಾ ಲೋಡರ್ಥಸ್ಯ ಲಿಟೋ ಮಧ್ಯಮಬಹುವಚನಂ ॥ ಹೇ ರುದ್ರಿಯಾಸೋ ರುದ್ರಪುತ್ರಾ ಮರುತೋ ನೋಽಸ್ಮದೀಯಾಂ ಪ್ರಶಸ್ತಿಂ । ಸಮೃದ್ಧಿಮಿತ್ಯರ್ಥಃ । ತಾಂ ಕೃಣುತ । ಕುರುತ। ವೋ ಯುಷ್ಮಾಕಂ ಸ್ವಭೂತಮವಸೋಽವೋ ರಕ್ಷಣಂ ದೈವ್ಯಸ್ಯ ದೈವ್ಯಂ ದೇವಾರ್ಹಂ ಭಕ್ಷೀಯ । ಭಜೇಯ ॥

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ನಃ**—ನಮಗೆ । **ಗೋಮತ್**—ಗೋವುಗಳಿಂದ ಕೂಡಿದುದೂ । **ಅಶ್ವಾವತ್**—ಅಶ್ವವಿಶಿಷ್ಟವಾದುದೂ । **ರಥವತ್**—ರಥಯುಕ್ತವಾದುದೂ । **ಸುವೀರಂ**—ಉತ್ತಮವಾದ ಪುತ್ರಾದಿಗಳಿಂದ ತುಂಬಿದುದೂ । **ಚಂದ್ರವತ್**—ಹಿರಣ್ಯೋಪೇತವಾದುದೂ ಆದ । **ರಾಧಃ**—ಸಂಪತ್ತನ್ನು । **ದದ**-ಕೊಡಿ । **ರುದ್ರಿಯಾಸಃ**—ರುದ್ರಪುತ್ರರಾದ ಎಲೈ ಮರತ್ತುಗಳೇ । **ನಃ**—ನಮಗೆ । **ಪ್ರಶಸ್ತಿಂ**—ವಿಶೇಷರೀತಿಯ ಐಶ್ವರ್ಯವನ್ನು । **ಕೃಣುತ**—ಉಂಟುಮಾಡಿರಿ । **ವಃ**—ನಿಮ್ಮ । **ದೈವ್ಯಸ್ಯ**—ಪೂಜ್ಯವಾದ । **ಅವಸಃ**—ರಕ್ಷಣವನ್ನು । **ಭಕ್ಷೀಯ**—ನಾವು ಅನುಭವಿಸುವಂತೆ ಅನುಗ್ರಹಿಸಿರಿ

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನಮಗೆ ಗೋವುಗಳಿಂದ ಕೂಡಿದುದೂ, ಅಶ್ವವಿಶಿಷ್ಟವಾದುದೂ, ರಥಯುಕ್ತವಾದುದೂ ಉತ್ತಮವಾದ ಪುತ್ರಾದಿಗಳಿಂದ ತುಂಬಿದುದೂ, ಹಿರಣ್ಯಪ್ರಭೂತವಾದುದೂ ಆದ ಸಂಪತ್ತನ್ನು ಕೊಡಿ, ರುದ್ರಪುತ್ರರಾದ ಎಲೈ ಮರುತ್ತುಗಳೇ, ನಮಗೆ ವಿಶೇಷರೀತಿಯ ಐಶ್ವರ್ಯವನ್ನು ಸೃಷ್ಟಿಸಿಕೊಡಿ. ನಿಮ್ಮ ಪೂಜ್ಯವಾದ ರಕ್ಷಣವನ್ನು ನಾವು ಯಾವಾಗಲೂ ಅನುಭವಿಸುವಂತೆ ಅನುಗ್ರಹಿಸಿ.

## English Translation

Maruts, bestow upon us affluence, comprehending cattle,horses, cars, treasure, and male descendants ; sons of Rudra, grant us distinction : may I ever enjoy your divine protection.

॥ ವಿಶೇಷವಿಷಯಗಳು ॥

ಸೂಕ್ತದ ಉಪಸಂಹಾರರೂಪವಾದ ಈ ಋಕ್ಕಿನಲ್ಲಿಯೂ, ಮುಂದಿನ ಋಕ್ಕಿನಲ್ಲಿಯೂ ಶ್ಯಾವಾಶ್ವಋಷಿಯು, ಗೋವುಗಳೇ ಮೊದಲಾದ ಧನಸಂಪತ್ತನ್ನು ಕೊಡಬೇಕೆಂದು ಮರುದ್ದೇವತೆಗಳನ್ನು ಪ್ರಾರ್ಥಿಸಿದ್ದಾನೆ.

**ಗೋಮತ್ ಅಶ್ವಾವತ್, ರಥವತ್, ಸುವೀರಂ ಚಂದ್ರವತ್ ರಾಧಃ**—ಶ್ಯಾವಾಶ್ವ ಋಷಿಯು ಮರುದ್ದೇವತೆಗಳನ್ನು ತನಗೆ ಬೇಕಾದ ವಸ್ತುಗಳನ್ನು ಕೊಡಬೇಕೆಂದು ಪ್ರಾರ್ಥಿಸುವಾಗ ರಾಧಃ—ಧನವನ್ನು ಅಥವಾ ಸಂಪತ್ತನ್ನು ಕೊಡಬೇಕೆಂದು ಪ್ರಾರ್ಥಿಸಿದಾನೆ. ಆ ಧನವು ಯಾವ ರೂಪದಲ್ಲಿರಬೇಕೆಂಬುದನ್ನೂ ಸಹ ಅಲ್ಲಿಯೇ ವಿವರಿಸಿದಾನೆ. ಗೋವುಗಳು, ಅಶ್ವಗಳು, ರಥಗಳು, ಒಳ್ಳೆಯಪುತ್ರರು, ಸುವರ್ಣ ರೂಪವಾದ ಧನವು ಇವುಗಳೆಲ್ಲವನ್ನೂ ಕೊಡಬೇಕೆಂದು ಕೇಳಿದಾನೆ. ಧನವೆಂದರೆ ದ್ರವ್ಯಮಾತ್ರವಲ್ಲ. ಗೋವುಗಳು ಅಶ್ವಗಳು ಇವೇ ಮೊದಲಾದ ಪಶುಸಂಪತ್ತು ಸಹ ಧನವೆಂದೇ ಪೂರ್ವಕಾಲದಿಂದಲೂ ಪರಿಗಣಿಸಲ್ಪಡುತ್ತಿರುವುದು ರೂಢಿಯಾಗಿದೆ. ಜನರಿಗೆ ಅತ್ಯವಶ್ಯಕವಾಗಿ ಬೇಕಾದ ಯಾವ ವಸ್ತುವೇ ಆಗಲಿ ಅದನ್ನು ಧನವೆಂದು ಕರೆಯುವ ರೂಢಿಯು ಹಿಂದಿನಕಾಲ ದಿಂದಲೂ ಬಂದಿದೆ. ಋಗ್ವೇದದಲ್ಲಿಯೂ ಈ ರೀತಿಯಾಗಿಯೇ ಇದೆ.

॥ ಸಂಹಿತಾಪಾಠಃ ॥

ಹಯೇ ನರೋ ಮರುತೋ ಮೃಳತಾ ನಸ್ತುವೀಮಘಾಸೋ ಅಮೃತಾ-
ಋತಜ್ಞಾಃ ।
ಸತ್ಯಶ್ರುತಃ ಕವಯೋ ಯುವಾನೋ ಬೃಹದ್ಗಿರಯೋ ಬೃಹದುಕ್ಷಮಾಣಾಃ ॥

॥ ಪದಪಾಠಃ ॥

ಹಯೇ । ನರಃ । ಮರುತಃ । ಮೃಳತ । ನಃ । ತುವಿಽಮಘಾಸಃ । ಅಮೃತಾಃ । ಋತಽಜ್ಞಾಃ ।
ಸತ್ಯಽಶ್ರುತಃ । ಕವಯಃ । ಯುವಾನಃ । ಬೃಹತ್ಽಗಿರಯಃ । ಬೃಹತ್ । ಉಕ್ಷಮಾಣಾಃ ॥ ೮ ॥

॥ ಸಾಯಣಭಾಷ್ಯಂ ॥

**ಹಯೇ ಹೇ ನರೋ ನೇತಾರೋ ಮರುತೋ ನೋಽಸ್ಮಾನ್ಮೃಳತ । ಸುಖಯತ । ಅಸ್ಮಭ್ಯಂ ಹಿತಾಯ ವಾ ಸುಖಿನೋ ಭವತ । ಹೇ ತುವೀಮಘಾಸಃ ಪ್ರಭೂತಧನಾ ಅಮೃತಾ ಅಮರಣಸ್ವಭಾವಾ ಋತಜ್ಞಾ ಉದಕಸ್ಯ ಯಜ್ಞಸ್ಯ ವಾ ಜ್ಞಾತಾರಃ । ಕರ್ತಾರ ಇತ್ಯರ್ಥಃ । ಸತ್ಯಶ್ರುತಃ ಸತ್ಯೇನ ಸತ್ಯಫಲತ್ವೇನ ಪ್ರಸಿದ್ಧಾಃ ಕವಯೋ ಮೇಧಾವಿನೋ ಯುವಾನೋ ನಿತ್ಯತರುಣಾ ಬೃಹದ್ಗಿರಯಃ ಪ್ರಭೂತಸ್ತುತಯೋ ಬೃಹದತ್ಯಧಿಕಮುಕ್ಷಮಾಣಾ ಹವಿರ್ಭಿಃ ಸೇವಿತಾ ಉದಕಂ ವಾ ಸಿಂಚಂತೋ ಯೂಯಂ ಮೃಳತ ॥**

॥ ಪ್ರತಿಪದಾರ್ಥ ॥

**ತುವೀಮಘಾಸಃ**–ಪ್ರಭೂತವಾದ ಧನಸಂಪತ್ತುಳ್ಳವರೂ । **ಅಮೃತಾಃ**–ಮರಣರಹಿತರೂ । **ಋತಜ್ಞಾಃ**–ಸತ್ಯವನ್ನರಿತವರೂ । **ಸತ್ಯಶ್ರುತಃ**—ಯಥಾರ್ಥವಾದ ಖ್ಯಾತಿಯುಳ್ಳವರೂ । **ಕವಯಃ**—ಮೇಧಾವಿಗಳೂ । **ಯುವಾನಃ**—ನಿತ್ಯತರುಣರೂ । **ಬೃಹದ್ಗಿರಯಃ**—ಪ್ರಭೂತವಾದ ಸ್ತುತಿಗಳಿಗೆ ಪಾತ್ರರೂ । **ಬೃಹತ್**—ಅತ್ಯಧಿಕವಾಗಿ । **ಉಕ್ಷಮಾಣಾಃ**—ಹವಿಸ್ಸುಗಳನ್ನರ್ಪಿಸಲ್ಪಡತಕ್ಕವರೂ । **ನರಃ**—ನೇತೃಗಳೂ ಆದ । **ಹಯೇ ಮರುತಃ**—ಎಲೈ ಮರುತ್ತುಗಳೇ । **ನಃ**—ನಮ್ಮನ್ನು । **ಮೃಳತ**—ಸುಖಪಡಿಸಿರಿ.

॥ ಭಾವಾರ್ಥ ॥

ಪ್ರಭೂತವಾದ ಧನಸಂಪತ್ತುಳ್ಳವರೂ, ಮರಣರಹಿತರೂ, ಸತ್ಯವನ್ನರಿತವರೂ, ಯಥಾರ್ಥವಾದ ಖ್ಯಾತಿಯುಳ್ಳವರೂ, ಮೇಧಾವಿಗಳೂ, ನಿತ್ಯತರುಣರೂ, ಪ್ರಭೂತವಾದ ಸ್ತುತಿಗಳಿಗೆ ಪಾತ್ರರೂ, ಅತ್ಯಧಿಕವಾಗಿ ಹವಿಸ್ಸುಗಳನ್ನರ್ಪಿಸಲ್ಪಡತಕ್ಕವರೂ, ನೇತೃಗಳೂ ಆದ ಎಲೈ ಮರುತ್ತುಗಳೇ ನಮ್ಮನ್ನು ಸುಖಪಡಿಸಿರಿ.

English Translation

Ho, Maruts, leaders (of rites), be propitious to us, you who are infinitely opulent, immortal, shedders of rain, renowned for truth, wise, young, greatly glorified and worshipped with copious oblations.

॥ ವಿಶೇಷವಿಷಯಗಳು ॥

**ಹಯೇ**—**ಹಯೇ** ಎಂಬ ಶಬ್ದವು **ಹೇ** ಎಂಬ ಶಬ್ದದಂತೆ ಸಂಬೋಧನಾರ್ಥದಲ್ಲಿ ಉಪಯೋಗಿಸಲ್ಪಡುವುದು. ಆದ್ದರಿಂದ ಇಲ್ಲಿ **ಹಯೇ ಮರುತಃ** ಎಂದರೆ **ಹೇ ಮರುತಃ** ಎಲೈ ಮರುದ್ದೇವತೆಗಳೇ ಎಂದರ್ಥವು. ಹಯೇ ಎಂಬ ಶಬ್ದವು,

**ಹಯೇ ದೇವಾ ಯೂಯಮಿದಾಪಯಃ ಸ್ಥ ತೇ ಮೃಳತ ನಾಧಮಾನಾಯ ಮಹ್ಯಂ ।**

(ಋ. ಸಂ. ೨-೨೯-೪)

ಹಯೇ ನರೋ ಮರುತೋ ಮೃಳತಾ ನಸ್ತುವೀಮಘಾಸೋ ಅಮೃತಾ ಋತಜ್ಞಾಃ ।
(ಋ. ಸಂ. ೫ ೫೭-೮)

ಹಯೇ ಜಾಯೇ ಮನಸಾ ತಿಷ್ಠ ಘೋರೇ ವಚಾಂಸಿ ಮಿಶ್ರಾ ಕೃಣವಾವಹೈ ನು ।
(ಋ. ಸಂ. ೧೦-೯೫-೧)

ಎಂಬ ಮೂರು ಋಕ್ಕುಗಳಲ್ಲಿ ಮಾತ್ರವಿರುವುದು. ಋಗ್ವೇದದಲ್ಲಿ ಮತ್ತೆಲ್ಲಿಯೂ ಈ ಶಬ್ದದ ಪ್ರಯೋಗವಿಲ್ಲ. ಮೂರು ಸ್ಥಳಗಳಲ್ಲಿಯೂ ಈ ಶಬ್ದಕ್ಕೆ ಹೇ ಎಂಬ ಸಂಬೋಧನಾರ್ಥದಲ್ಲಿಯೇ ಪ್ರಯೋಗವಿರುವುದು.

## ಐವತ್ತೆಂಟನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ತಮು ನೂನಮಿತ್ಯಷ್ಟರ್ಚಂ ದ್ವಿತೀಯಂ ಸೂಕ್ತಂ ಶ್ಯಾವಾಶ್ವಸ್ಯಾರ್ಷಂ ತ್ರೈಷ್ಟುಭಂ ಮಾರುತಂ ತಮ್ವಿತ್ಯನುಕ್ರಮಣಿಕಾ । ವಿನಿಯೋಗೋ ಲೈಂಗಿಕಃ ॥**

ಅನುವಾದವು—**ತಮು ನೂನಂ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಶ್ಯಾವಾಶ್ವನು ಋಷಿಯು, ಮರುತ್ತುಗಳು ದೇವತೆಯು ತ್ರಿಷ್ಟುಪ್ ಛಂದಸ್ಸು ಅನುಕ್ರಮಣಿಕೆಯಲ್ಲಿ **ತಮು** ಎಂದು ಮೊದಲಾಗಿ ಹೇಳಿರುವುದು. ವಿನಿಯೋಗ ಲೈಂಗಿಕವು.

## ಸೂಕ್ತ—೫೮.

ಮಂಡಲ—೫ ॥ ಅನುವಾಕ—೫ ॥ ಸೂಕ್ತ—೫೮ ॥
ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ—೨೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥
ಋಷಿಃ—ಶ್ಯಾವಾಶ್ವ ಆತ್ರೇಯಃ ॥
ದೇವತಾ—ಮರುತಃ ॥
ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ತಮು ನೂನಂ ತವಿಷೀಮಂತಮೇಷಾಂ ಸ್ತುಷೇ ಗಣಂ ಮಾರುತಂ ನವ್ಯಸೀನಾಂ ।

ಯ ಆಶ್ವಶ್ವಾ ಅಮವದ್ವಹಂತ ಉತೇಶಿರೇ ಅಮೃತಸ್ಯ ಸ್ವರಾಜಃ ॥ ೧ ॥

॥ ಪದಪಾಠಃ ॥

ತಂ । ಊಂ ಇತಿ । ನೂನಂ । ತವಿಷೀಽಮಂತಂ । ಏಷಾಂ । ಸ್ತುಷೇ । ಗಣಂ । ಮಾರುತಂ । ನವ್ಯಸೀನಾಂ ।

ಯೇ । ಆಶುಽಅಶ್ವಾಃ । ಅಮಽವತ್ । ವಹಂತೇ । ಉತ । ಈಶಿರೇ । ಅಮೃತಸ್ಯ । ಸ್ವಽರಾಜಃ ॥ ೧ ॥

ಸಾಯಣಭಾಷ್ಯಂ ॥

ತಮು ತಮೇವ ಪೂರ್ವಂ ಸ್ತುತಮೇವ ಮಾರುತಂ ಮರುತಾಂ ಸಂಬಂಧಿನಂ ತಂ ಗಣಂ ತವಿಷೀ-ಮಂತಂ ದೀಪ್ತಿಮಂತಂ ನೂನಮದ್ಯ ಸ್ತುಷೇ । ಕೀದೃಶಾಂ ಮರುತಾಂ । ನವ್ಯಸೀನಾಂ ॥ ಲಿಂಗವ್ಯತ್ಯಯಃ ॥ ನವತರಾಣಾಂ ಸ್ತುತ್ಯಾನಾಂ ವಾ । ಏಷಾಂ ಮಾರುತಂ ಗಣಂ । ಗಣಾವಯವಭೂತಾ ಮರುತಃ । ಕೀದೃಶಾ ಇತ್ಯುಚ್ಯತೇ । ಯೇ ಮರುತ ಆಶ್ವಶ್ವಾಃ ಶೀಘ್ರಗಾಮ್ಯಶ್ವೋಪೇತಾ ಅಮವತ್ ಬಲವಂತೋ ಯಥಾ ಭವಂತಿ ತಥಾ ವಹಂತೇ ಗಚ್ಛಂತಿ । ಉತಾಪಿ ಚೇಶಿರೇ ಈಶ್ವರಾ ಭವಂತ್ಯಮೃತಸ್ಯೋದಕಸ್ಯ ಸ್ವರಾಜಃ ಸ್ವಾಯತ್ತದೀಪ್ತಯಃ ಸ್ವಯಮೇವ ರಾಜಮಾನಾಃ ತೇಷಾಂ ಗಣಂ ಸ್ತುಷೇ ॥

॥ ಪ್ರತಿಪದಾರ್ಥ ॥

ಯೇ—ಯಾವ ಮರುತ್ತುಗಳು । ಆಶ್ವಶ್ವಾಃ—ಶೀಘ್ರಗಾಮಿಗಳಾದ ಅಶ್ವಗಳುಳ್ಳವರಾಗಿಯೂ । ಅಮ-ವತ್—ಅತ್ಯಂತ ಶಕ್ತಿಯುತರಾಗಿಯೂ । ವಹಂತೇ—ಸಂಚರಿಸುವರೋ । ಉತ—ಮತ್ತು । ಸ್ವರಾಜಃ—ಸ್ವಾಯತ್ತವಾದ ಪ್ರಭಾಯುತರಾಗಿ । ಅಮೃತಸ್ಯ—ಉದಕಕ್ಕೆ । ಈಶಿರೇ—ಪ್ರಭುಗಳಾಗಿರುವರೋ । ಏಷಾಂ—ಅಂತಹ । ನವ್ಯಸೀನಾಂ—ಪೂಜ್ಯರಾದ । ಮಾರುತಂ—ಮರುತ್ತುಗಳ । ತವಿಷೀಮಂತಂ—ಪ್ರಕಾಶಾತ್ಮಕವಾದುದೂ । ತಮು—ಪ್ರಸಿದ್ಧವಾದುದೂ ಆದ । ಗಣಂ—ಸಮೂಹವನ್ನು । ನೂನಂ—ಈಗ । ಸ್ತುಷೇ—ಸ್ತುತಿಸುತ್ತೇನೆ.

॥ ಭಾವಾರ್ಥ ॥

ಯಾವ ಮರುತ್ತುಗಳು ಶೀಘ್ರಗಾಮಿಗಳಾದ ಅಶ್ವಗಳುಳ್ಳವರಾಗಿಯೂ ಅತ್ಯಂತಶಕ್ತಿಯುತರಾಗಿಯೂ ಸಂಚರಿಸುವರೋ, ಮತ್ತು ಸ್ವಾಯತ್ತವಾದ ಪ್ರಭಾಯುತರಾಗಿ ಉದಕಕ್ಕೆ ಪ್ರಭುಗಳಾಗಿರುವರೋ ಅಂತಹ ಪೂಜ್ಯರಾದ ಮರುತ್ತುಗಳ ಪ್ರಕಾಶಾತ್ಮಕವಾದುದೂ, ಪ್ರಸಿದ್ಧವಾದುದೂ ಆದ ಸಮೂಹವನ್ನು ಈಗ ಸ್ತುತಿಸುತ್ತೇನೆ.

## English Translation

I praise to-day that brilliant company of the adorable Maruts, lords of swift horses, who pass along in strength, who, self-radiant, preside over the ambrosial rain.

॥ ವಿಶೇಷವಿಷಯಗಳು ॥

**ಉ**—**ಉ** ಎಂಬ ನಿಪಾತದ ವಿಷಯದಲ್ಲಿ ಯಾಸ್ಕರು ಈ ರೀತಿಹೇಳಿದಾರೆ-

**ಅಥಾಪ್ಯುಕಾರ ಏತಸ್ಮಿನ್ನೇವಾರ್ಥೆ ಉತ್ತರೇಣ ಮೃಷೇಮೇ ವದಂತಿ ಸತ್ಯಮು ತೇ (ಮೇ) ವದಂತೀತಿ । ಅಥಾಪಿ ಪದಪೂರಣ ಇದಮು ತದು ॥**

(ನಿ. ೧-೫)

**ಉ**—ಎಂಬ ನಿಪಾತವು ವಿನಿಗ್ರಹಾರ್ಥದಲ್ಲಿ ಎಂದರೆ ಪರಸ್ಪರ ವಿರೋಧಾರ್ಥವನ್ನು ಸೂಚಿಸುವ ಸಂದರ್ಭದಲ್ಲಿ ಉಪಯೋಗಿಸಲ್ಪಡುವುದು. ಹೇಗೆಂದರೆ-**ಮೃಷೇಮೇ ವದಂತಿ ಸತ್ಯಮು ತೇ।** ಇವರು ಸುಳ್ಳನ್ನು ಹೇಳುತ್ತಾರೆ. ಅವರಾದರೋ ಸತ್ಯವನ್ನೇ ಹೇಳುತ್ತಾರೆ, ಎಂಬ ವಾಕ್ಯದಲ್ಲಿ ಸುಳ್ಳುಹೇಳುವುದು, ಸತ್ಯವನ್ನು ಹೇಳುವುದು ಎಂಬ ಪರಸ್ಪರ ವಿರೋಧಾರ್ಥಸೂಚಕವಾದ ಎರಡು ವಿಷಯಗಳಿವೆ. ಇವೆರಡನ್ನೂ ಒಂದಕ್ಕೊಂದು ಹೋಲಿಸಿ ಹೇಳುವ ಸಂದರ್ಭದಲ್ಲಿ **ಉ** ಎಂಬ ಶಬ್ದದ ಪ್ರಯೋಗವಿರುವುದು. ಇದಲ್ಲದೆ **ಉ** ಎಂಬ ಶಬ್ದವು ವಾಕ್ಯದಲ್ಲಿ ಅಥವಾ ಛಂದಸ್ಸಿನ ಪಾದದಲ್ಲಿ ಕಮ್ಮಿಯಾಗಿರುವ ಅಕ್ಷರವನ್ನು ಸೇರಿಸಿ ಪೂರ್ಣಮಾಡುವುದಕ್ಕಾಗಿಯೂ ಉಪಯೋಗಿಸಲ್ಪಡುವುದು. ಅಂತಹ ಸಂದರ್ಭದಲ್ಲಿ ಈ ಶಬ್ದಕ್ಕೆ ಇದು, ಅದು ಎಂಬರ್ಥ ಮಾತ್ರವಿದ್ದು ನಿರ್ದಿಷ್ಟವಾದ ಬೇರೆ ಯಾವ ಅರ್ಥವೂ ಇರುವುದಿಲ್ಲ. **ತದು ಪ್ರಯಕ್ಷತಮಮಸ್ಯ ಕರ್ಮ ।** ಪೂಜಾರ್ಹ ಅಥವಾ ಪ್ರಶಸ್ತವಾದ ಇಂದ್ರನ ಕರ್ಮವೇ ಎಂಬ ವಾಕ್ಯದಲ್ಲಿ **ತತ್+ಉ** ಎಂಬ ಶಬ್ದಗಳು ಆ ಕರ್ಮವೇ, ಅಥವಾ ಅದೇ ಎಂಬರ್ಥವನ್ನು ಸೂಚಿಸುವಾಗ **ಉ** ಎಂಬ ಶಬ್ದವು ತತ್ ಎಂಬ ಶಬ್ದದ ಅರ್ಥದಲ್ಲಿಯೇ ಸೇರಿಹೋಗುವುದು. ಪ್ರತ್ಯೇಕವಾದ ಅರ್ಥವಿರುವುದಿಲ್ಲ. ಆದುದರಿಂದ ಇಂತಹ ಸಂದರ್ಭದಲ್ಲಿ ಪದಪೂರಣಾರ್ಥವಾಗಿ ಈ ಶಬ್ದದ ಪ್ರಯೋಗವಿರುವುದೆಂದು ನಿರುಕ್ತವಚನದ ಮುಖ್ಯಾಭಿಪ್ರಾಯವು. ಪದಪೂರಣಕ್ಕಾಗಿ ಉ ಎಂಬ ಶಬ್ದದ ಪ್ರಯೋಗವಿರುವುದೆಂಬ ವಿಷಯದಲ್ಲಿ ನಿರುಕ್ತಕಾರರು-

**ಅಥ ಯೇ ಪ್ರವೃತ್ತೇಽರ್ಥೇಽಮಿತಾಕ್ಷರೇಷು ಗ್ರಂಥೇಷು ವಾಕ್ಯಪೂರಣಾ ಆಗಚ್ಛಂತಿ ಪದಪೂರಣಾಸ್ತೇ ಮಿತಾಕ್ಷರೇಷ್ವನರ್ಥಕಾಃ ಕಮೀಮಿದ್ವಿತಿ ।**

(ನಿ. ೧-೯)

ಎಂದು ಇನ್ನೊಂದು ನಿರುಕ್ತವಚನವನ್ನೂ ಹೇಳಿರುವರು. ಎಂದರೆ-**ಕಂ, ಈಂ, ಇತ್, ಉ** ಎಂಬ ನಿಪಾತಗಳು ಛಂದೋಬದ್ಧವಲ್ಲದ ವಾಕ್ಯಗ್ರಂಥಗಳಲ್ಲಿ ವಾಕ್ಯಪೂರಣಾರ್ಥವಾಗಿಯೂ, ಕ್ಲೃಪ್ತವಾದ ಅಕ್ಷರಸಂಖ್ಯೆಯುಳ್ಳ ಛಂದಸ್ಸುಗಳಲ್ಲಿ ಪಾದಪೂರಣಾರ್ಥವಾಗಿಯೂ ಉಪಯೋಗಿಸಲ್ಪಡುವವು. ಇವುಗಳಿಗೆ ನಿರ್ದಿಷ್ಟವಾದ ಬೇರೆ ಅರ್ಥವಿರಬೇಕಾಗಿಲ್ಲ ಎಂದು ಈ ಶಬ್ದಗಳ ಪ್ರಯೋಗವನ್ನು ವಿವರಿಸಿರುವರು.

**ನೂನಂ**—ಯಾಸ್ಕರು-

**ನೂನಮಿತಿ ವಿಚಿಕಿತ್ಸಾರ್ಥೀಯೋ ಭಾಷಾಯಾಮುಭಯಮನ್ವಧ್ಯಾಯಂ ವಿಚಿಕಿತ್ಸಾರ್ಥೀಯಶ್ಚ ಪದಪೂರಣಶ್ಚ ।**

(ನಿ. ೧-೫)

ನೂನಂ ಎಂಬ ಪದವು ಛಂದಸ್ಸುಗಳಲ್ಲಲ್ಲದೆ ಬೇರೆಕಡೆಗಳಲ್ಲಿಯೂ ವಿಚಿಕಿತ್ಸಾರ್ಥದಲ್ಲಿ ಪ್ರಯುಕ್ತವಾಗಿರುವುದು. ಛಂದಸ್ಸಿನಲ್ಲಿ ವಿಚಿಕಿತ್ಸಾರ್ಥದಲ್ಲಿಯೂ ಪದಪೂರಣಾರ್ಥದಲ್ಲಿಯೂ ಪ್ರಯುಕ್ತವಾಗಿರುತ್ತದೆ ಎಂದು ವರ್ಣಿಸಿದ್ದಾರೆ.

ದುರ್ಗಾಚಾರ್ಯರು- **ವಿಚಿಕಿತ್ಸಾನಾಮ ವಿವೇಕಪೂರ್ವಕೋ ಅವಧಾರಣಾಭಿಪ್ರಾಯಃ** । ಸಂಶಯವು ಉಂಟಾಗಿರುವ ಸನ್ನಿವೇಶಗಳಲ್ಲಿ ವಿಮರ್ಶೆಯಿಂದ ನಿಶ್ಚಯಮಾಡುವುದಕ್ಕೆ ವಿಚಿಕಿತ್ಸಾ ಎಂದು ಹೆಸರು, ಎಂದು ಅರ್ಥವಿವರಣೆ ಮಾಡಿದಾರೆ. ಸಾಯಣರು ಈ ಶಬ್ದವು ಉದಾಹರಣೆಗಾಗಿ ಕೊಟ್ಟಿರುವ **ನ ನೂನಮಸ್ತಿ** (ಋ. ಸಂ. ೧-೧೭೦-೧) ಎಂಬ ಋಕ್ಕಿನಲ್ಲಿ ವಿಚಿಕಿತ್ಸಾರ್ಥದಲ್ಲಿಯೂ ಅವಧಾರಣಾರ್ಥದಲ್ಲಿಯೂ ಪ್ರಯುಕ್ತವಾಗಿದೆ ಎಂದು ಸಮರ್ಥನೆಮಾಡಿದ್ದಾರೆ.

॥ ಸಂಹಿತಾಪಾಠಃ ॥

## ತ್ವೇಷಂ ಗಣಂ ತವಸಂ ಖಾದಿಹಸ್ತಂ ಧುನಿವ್ರತಂ ಮಾಯಿನಂ ದಾತಿವಾರಂ। ಮಯೋಭುವೋ ಯೇ ಅಮಿತಾ ಮಹಿತ್ವಾ ವಂದಸ್ವ ವಿಪ್ರ ತುವಿರಾಧಸೋ ನೄನ್ ॥ ೨ ॥

॥ ಪದಪಾಠಃ ॥

**ತ್ವೇಷಂ । ಗಣಂ । ತವಸಂ । ಖಾದಿಽಹಸ್ತಂ । ಧುನಿಽವ್ರತಂ । ಮಾಯಿನಂ । ದಾತಿಽವಾರಂ ।**

**ಮಯಃಽಭುವಃ । ಯೇ । ಅಮಿತಾಃ । ಮಹಿಽತ್ವಾ । ವಂದಸ್ವ । ವಿಪ್ರ । ತುವಿಽರಾಧಸಃ । ನೄನ್ ॥೨॥**

॥ ಸಾಯಣಭಾಷ್ಯಂ ॥

**ತ್ವೇಷಂ ದೀಪ್ತಂ ಗಣಂ ಮಾರುತಂ ತವಸಂ ಬಲವಂತಂ ಖಾದಿಹಸ್ತಂ ಕಟಕಹಸ್ತಂ ಧುನಿವ್ರತಂ ಕಂಪಯಿತೃಕರ್ಮಾಣಂ ಮಾಯಿನಂ ಪ್ರಜ್ಞಾವಂತಂ ದಾತಿವಾರಂ ದತ್ತಧನಂ ಹೇ ವಿಪ್ರ ಹೋತರ್ವಂದಸ್ವ। ಸ್ತುಹೀತಿ ಸಂಬಂಧಃ । ಹೇ ಮರುತೋ ಮಯೋಭುವಃ ಸುಖಸ್ಯ ಭಾವಯಿತಾರೋ ಮಹಿತ್ವಾ ಮಹತ್ತ್ವೇನಾಮಿತಾ ಅಪರಿಚ್ಛಿನ್ನಾಃ । ತಾನ್ ತುವಿರಾಧಸಃ ಪ್ರಭೂತಧನಾನ್ ನೄನ್ ನೇತೄನ್ ವಂದಸ್ವ ॥**

॥ ಪ್ರತಿಪದಾರ್ಥ ॥

**ವಿಪ್ರ**—ಮೇಧಾವಿಯಾದ ಎಲೈ ಹೋತೃವೇ । **ತ್ವೇಷಂ**—ಪ್ರಭಾಯುತವಾದುದೂ । **ತವಸಂ**—ಶಕ್ತಿಯುತವಾದುದೂ । **ಖಾದಿಹಸ್ತಂ**—ಕಟಕದಿಂದಲಂಕೃತವಾದ ಹಸ್ತಗಳುಳ್ಳದ್ದೂ । **ಧುನಿವ್ರತಂ**—ವೃಕ್ಷಾದಿಗಳನ್ನು ಕಂಪಿಸುವಂತೆ ಮಾಡುವುದೇ ಮುಖ್ಯಕ್ರಿಯೆಯಾಗಿ ಉಳ್ಳದ್ದೂ । **ಮಾಯಿನಂ**—ಪ್ರಜ್ಞಾಯುತವಾದುದೂ । **ದಾತಿವಾರಂ**—ಧನವನ್ನು ದಾನಮಾಡುವ ಸ್ವಭಾವವುಳ್ಳದ್ದೂ ಆದ । **ಗಣಂ**—ಮರುದ್ಗಣವನ್ನು । **ವಂದಸ್ವ**—ಸ್ತುತಿಸು। **ಯೇ**—ಯಾವ ಮರುತ್ತುಗಳು । **ಮಯೋಭುವಃ**—ಸುಖಕಾರಕರೂ । **ಮಹಿತ್ವಾ**—ತಮ್ಮ ಮಹಿಮೆಯಿಂದ । **ಅಮಿತಾಃ**—ಅಪರಿಮಿತವಾದ ಸ್ವರೂಪವುಳ್ಳವರೂ ಆಗಿದ್ದಾರೋ ಅಂತಹ । **ನೄನ್**—ನೇತೃಗಳೂ । **ತುವಿರಾಧಸಃ**—ಪ್ರಭೂತವಾದ ಧನವುಳ್ಳವರೂ ಆದ ಮರುತ್ತುಗಳ ಗಣವನ್ನು ಸ್ತುತಿಸು.

॥ ಭಾವಾರ್ಥ ॥

ಮೇಧಾವಿಯಾದ ಎಲೈ ಹೋತೃವೇ, ಪ್ರಭಾಯುತವಾದುದೂ, ಶಕ್ತಿಯುತವಾದುದೂ, ಕಟಕದಿಂದಲಂಕೃತವಾದ ಹಸ್ತಗಳುಳ್ಳದ್ದೂ, ವೃಕ್ಷಾದಿಗಳನ್ನು ಕಂಪಿಸುವಂತೆ ಮಾಡುವುದೇ ಮುಖ್ಯಕ್ರಿಯೆಯಾಗಿ ಉಳ್ಳದ್ದೂ, ಪ್ರಜ್ಞಾಯುತವಾದುದೂ, ಧನವನ್ನು ದಾನಮಾಡುವ ಸ್ವಭಾವವುಳ್ಳದ್ದೂ ಆದ ಮರುದ್ಗಣವನ್ನು ಸ್ತುತಿಸು. ಯಾವ ಮರುತ್ತುಗಳು ಸುಖಕಾರಕರೂ, ತಮ್ಮ ಮಹಿಮೆಯಿಂದ ಅಪರಿಮಿತವಾದ ಸ್ವರೂಪವುಳ್ಳವರೂ ಆಗಿದ್ದಾರೋ ಅಂತಹ ನೇತೃಗಳೂ ಪ್ರಭೂತವಾದ ಧನವುಳ್ಳವರೂ ಆದ ಮರುತ್ತುಗಳ ಗಣವನ್ನು ಸ್ತುತಿಸು.

## English Translation

Adore, priest, the resplendent and powerful company, whose arms (are decorated) with bracelets, whose function is the agitation (of the trees), who are wise and by whom wealth is eonferred: they who are bestowers of felicity, whose greatness is unbounded: glorify the opulent leaders (of rites)

॥ ವಿಶೇಷವಿಷಯಗಳು ॥

**ಗಣಂ— ಮಾರುತಂ ಗಣಂ** । ಮರುದ್ದೇವತೆಗಳನ್ನು ನಿರ್ದೇಶಿಸುವ ಸಂದರ್ಭಗಳಲ್ಲಿ **ಮಾರುತಂ ಗಣಂ, ಮಾರುತಂ ಶರ್ಧಃ** ಎಂದು ಏಳು ಗಣ ಅಥವಾ ಗುಂಪುಗಳಿಂದ ಸಹಿತರಾದ ಮರುದ್ದೇವತೆಗಳನ್ನು ಸೂಚಿಸುವುದು ರೂಢಿಯಾಗಿದೆ. **ಸಪ್ತಗಣಾ ವೈ ಮರುತಃ** ಎಂದು ಮರುತ್ತುಗಳ ಗಣವು ಏಳು. ಪ್ರತಿಯೊಂದು ಗಣ ಅಥವಾ ಗುಂಪಿನಲ್ಲಿಯೂ ಏಳೇಳು ಮರುದ್ದೇವತೆಗಳು ಇರುವರು. ಒಟ್ಟು ಏಳು ಗಣಗಳಿಂದ ನಲವತ್ತೊಂಭತ್ತು ಮಂದಿ ದೇವತೆಗಳಿರುವರು. ಇವರನ್ನೆಲ್ಲಾ ಒಟ್ಟಾಗಿ ಸೇರಿಸಿ **ಮಾರುತಂ ಗಣಂ, ಮಾರುತಂ ಶರ್ಧಃ** ಅಥವಾ **ಮರುತಃ** ಎಂಬ ಶಬ್ದಗಳಿಂದ ಕರೆಯುವರು. ಪ್ರಕೃತ ಋಕ್ಕಿನಲ್ಲಿ ಗಣಂ ಎಂಬ ಶಬ್ದಮಾತ್ರವಿದ್ದರೂ ಹಿಂದಿನ ಋಕ್ಕಿನಲ್ಲಿ ಮಾರುತಂ ಗಣಂ ಎಂದಿರುವುದರಿಂದ ಇಲ್ಲಿಯೂ **ಮಾರುತಂ ಗಣಂ** ಎಂದೇ ನಿರ್ದೇಶಿಸಿದೆಯೆಂದು ತಿಳಿಯಬೇಕು. ಈ ಋಕ್ಕಿನ ಪೂರ್ವಾರ್ಧದಲ್ಲಿ ಮರುದ್ದೇವತೆಗಳನ್ನು **ಗಣಂ** ಎಂದು ಸಮಷ್ಟಿರೂಪದಿಂದ ಸ್ತುತಿಸಲಾಗಿದೆ. ಉತ್ತರಾರ್ಧದಲ್ಲಿ **ನೄನ್** ಮೊದಲಾದ ದ್ವಿತೀಯಾ ಬಹುವಚನಾಂತ ಪದಗಳಿಂದ (ಮರುತಃ) ಮರುದ್ದೇವತೆಗಳನ್ನು ಸ್ತುತಿಸಲಾಗಿದೆ. ವಚನವ್ಯತ್ಯಯವಿದ್ದರೂ ಎರಡು ವಾಕ್ಯಗಳಲ್ಲಿಯೂ ಒಂದೇವಿಧ ಅರ್ಥವಿರುವುದು.

**ಅಮಿತಾಃ—ಅಪರಿಚ್ಛಿನ್ನಾಃ** । ಪರಿಚ್ಛಿನ್ನರಹಿತರಾಗಿರುವವರು. ಈ ಮರುದ್ದೇವತೆಗಳು ಒಬ್ಬರನ್ನೊಬ್ಬರು ಬಿಟ್ಟಿರದೆ ಯಾವಾಗಲೂ ಜತೆಯಾಗಿ ಒಟ್ಟಿಗೆ ಸೇರಿಕೊಂಡೇ ಇರುವವರು ಎಂದಭಿಪ್ರಾಯವು ಅಥವಾ **ಮಹಿತ್ವಾ ಅಮಿತಾಃ** ಎಂಬ ಶಬ್ದಗಳಿಗೆ ಒಟ್ಟಿಗೆ ಅರ್ಥವನ್ನು ಮಾಡುವಾಗ ಮಹಿಮೆಯಿಂದ ಅಧಿಕರಾದವರು ಎಂದರೆ ಮಹಿಮೆಯಲ್ಲಿ ಒಬ್ಬರು ಹೆಚ್ಚು ಮತ್ತೊಬ್ಬರು ಕಡಿಮೆ ಎಂಬ ವ್ಯತ್ಯಾಸವಿಲ್ಲದೆ ಎಲ್ಲರೂ ಒಂದೇಸಮನಾದ ಅಥವಾ ಒಂದೇ ವಿಧವಾದ ಮಹಿಮೆಯುಳ್ಳವರು ಎಂದರ್ಥವು.

**ವಿಪ್ರ—ಹೋತಃ** । ಇಲ್ಲಿ ವಿಪ್ರಶಬ್ದವು ಮೇಧಾವಿಯೆಂಬರ್ಥದಲ್ಲಿ ಹೋತೃವನ್ನು ನಿರ್ದೇಶಿಸುವುದು. ಯಜ್ಞಮಾಡುವ ಯಜಮಾನನು ಋತ್ವಿಗ್ಜನರಲ್ಲಿ ಮುಖ್ಯನಾದ ಹೋತೃವನ್ನು ವಿಪ್ರ ಎಂಬ ಶಬ್ದದಿಂದ ಸಂಬೋಧಿಸಿ ಮಹಿಮಾನ್ವಿತರಾದ ಮರುದ್ದೇವತೆಗಳನ್ನು ಸ್ತುತಿಸು ಎಂದು ನಿರ್ದೇಶಿಸಿರುವನು.

**ಮಾಯಿನಂ**—ಮಾಯಾಶಬ್ದಕ್ಕೆ ಪ್ರಜ್ಞೆ, ಕುತಂತ್ರ ಎಂಬ ಅನೇಕಾರ್ಥಗಳಿದ್ದರೂ ಇಲ್ಲಿ ಪ್ರಜ್ಞೆಯೆಂಬರ್ಥ ದಲ್ಲಿ ಪ್ರಯುಕ್ತವಾಗಿದೆ. ಪ್ರಜ್ಞಾಶಾಲಿಯಾದ, ಬಹಳ ಬುದ್ಧಿಯುಳ್ಳ ಎಂದರ್ಥವು.

**ಧುನಿವ್ರತಂ—ಕಂಪಯಿತೃಕರ್ಮಾಣಂ** । ವ್ರತಶಬ್ದವು ಕರ್ಮನಾಮಗಳಲ್ಲಿ ಪಠಿತವಾಗಿದೆ. ಧೂಞ್ ಕಂಪನೇ ಎಂಬ ಧಾತುವಿನಿಂದ ಧುನಿಶಬ್ದವು ನಿಷ್ಪನ್ನವಾಗಿ ಅಲುಗಾಡಿಸು, ಕಂಪಿಸುವಂತೆ ಮಾಡು ಎಂಬರ್ಥ ವುಳ್ಳದ್ದಾಗಿರುವುದು. ಮರುದ್ದೇವತೆಗಳು (ಚಂಡಮಾರುತ) ಅತಿರಭಸವಾಗಿ ಬೀಸುತ್ತಾ ವೃಕ್ಷಾದಿಗಳನ್ನು ಕಂಪಿಸು ವಂತೆ (ಅಲುಗಾಡುವಂತೆ) ಮಾಡುವ ಸ್ವಭಾವವುಳ್ಳವರಾದ್ದರಿಂದ ಇವರನ್ನು **ಧುನಿವ್ರತಂ** ಎಂಬ ಶಬ್ದದಿಂದ ವರ್ಣಿಸ ಲಾಗಿದೆ.

**ನೄನ್** ಎಂಬ ಪದಕ್ಕೆ ಸಾಯಣರು **ನೇತೄನ್ ಮನುಷ್ಯಾನಸ್ಮಾನ್ ಮರುತೋ ವಾ**—ನೇತೃಗಳಾದ ನಮ್ಮನ್ನು ಅಥವಾ ಮರುತ್ತುಗಳನ್ನು ಎಂದು ಎರಡು ವಿಧವಾಗಿ ಅರ್ಥಮಾಡಿದ್ದಾರೆ. **ಮಯೋಭುವಃ** ಎಂದರೆ ಸುಖ ಕಾರಕರಾದ ಎಂಬ ವಿಶೇಷಣವು ಎರಡು ಅರ್ಥಗಳಲ್ಲಿಯೂ ಹೊಂದಿಕೊಳ್ಳುತ್ತದೆ ಋಷಿಯು ತನ್ನನ್ನೂ ತನ್ನ ವಂಶದವರನ್ನೂ ಉದ್ದೇಶಿಸಿ ಹೇಳಿದ್ದರೆ ಆಗ ಮರುದ್ದೇವತೆಗಳ ಅನುಗ್ರಹದಿಂದ ತನಗೆ ಪ್ರಬಲವಾದ ಸುಖವು ಲಭಿಸಿತೆಂದರ್ಥ. ಅಥವಾ **ಮರುತಃ** ಎಂಬುದಕ್ಕೆ ವಿಶೇಷಣವಾದರೆ ಸಹಜವಾದ ಮರುತ್ತುಗಳ ಶಕ್ತಿಯನ್ನು ವರ್ಣಿಸಿ ದಂತಾಯಿತು. ಮರುತ್ತುಗಳ ಸ್ವಾಭಾವಿಕವಾದುದೂ, ಸಂಘಾತಾತ್ಮಕವಾದುದೂ ಆದ ಶಕ್ತಿಯೂ, ಆ ಶಕ್ತಿಯಿಂದ ನೆರವೇರಿಸಿದ ವೀರ್ಯಕರ್ಮಗಳೂ **ಅಮಿತಾ ಮಹಿತ್ವಾ** ಇತ್ಯಾದ್ಯನೇಕವಿಶೇಷಣಗಳಿಂದ ಸೂಚಿತವಾಗಿದೆ.

**ಸಪ್ತ ಸಪ್ತ ಹಿ ಮರುತೋ ಗಣಸ್ತಸ್ಮಾನ್ಮಾರುತಃ ಸಪ್ತಕಪಾಲಃ।**

(ಶ. ಬ್ರಾ. ೨-೫-೧-೧೩)

**ಸಪ್ತ ಸಪ್ತ ಹಿ ಮಾರುತೋ ಗಣಃ ಸರ್ವಮೇವೈತೇನ ರಥಂ ಪ್ರೀಣಾತಿ ।**

(ಶ ಬ್ರಾ. ೫-೪-೩-೧೭)

ಇತ್ಯಾದಿ ವಾಕ್ಯಗಳಿಂದ ಮರುತ್ತುಗಳು ಯಾವಾಗಲೂ ಗುಂಪುಕಟ್ಟಿಕೊಂಡೇ ಇರುವರೆಂದೂ, ಆ ವಿಧವಾದ ಗುಂಪಿನಲ್ಲಿ ಒಂದು ವಿಧವಾದ ಚೈತನ್ಯವೂ ಶಕ್ತಿಯೂ ಸಹಜವಾಗಿರುತ್ತದೆಂದೂ ತಿಳಿಯುತ್ತದೆ. ಆದುದರಿಂದ **ಅಮಿತಾ** ಎಂಬ ವಿಶೇಷಣವು ಪ್ರಕೃತವಾದ ಋಕ್ಕಿನಲ್ಲಿ ಉಚಿತವಾಗಿರುತ್ತದೆ.

**ನೄನ್** ಎಂದರೆ ನೇತೃಗಳೂ, ಪ್ರಜಾರೂಪಿಗಳೂ ಆದ ಮರುತ್ತುಗಳು ಎಂದೂ ಅರ್ಥಮಾಡಿದೆ. ಮರುತ್ತುಗಳ ದೇವತೆಗಳ ಪ್ರಜೆಗಳೆಂದು ಪ್ರಸಿದ್ಧರಾಗಿದ್ದಾರೆ.

**ಸ ಏತಾಮೈಂದ್ರೀಂ ಮರುತ್ವತೀಮಜ್ಞಪತ್ । ಕ್ಷತ್ರಂ ವಾ ಇಂದ್ರೋ ವಿಶೋ ಮರುತಃ ಕ್ಷತ್ರಂ ವೈ ವಿಶೋ ನಿಷೇದ್ಧಾ ॥**

(ಶ. ಬ್ರಾ. ೨-೫-೨-೨೭

ಇತ್ಯಾದಿ ವಾಕ್ಯಗಳಲ್ಲಿ ಈ ಅರ್ಥವು ತಿಳಿಸಿದೆ. ಆದುದರಿಂದ **ನೄನ್** ಎಂಬ ಪದಕ್ಕೆ **ಮರುತಃ** ಎಂಬ ಅರ್ಥಾಂತರವನ್ನೂ ಹೇಳುವ ಔಚಿತ್ಯವಿದೆ. **ನರಃ** ಎಂಬ ಪದವು ಮರುತ್ತುಗಳಿಗೆ ವಿಶೇಷಣರೂಪದಲ್ಲಿ ಋಕ್ಸಂಹಿತೆಯಲ್ಲಿಯೇ ಅನೇಕಕಡೆ ಗಳಲ್ಲಿ ಪ್ರಯೋಗಿಸಿರುವುದನ್ನು ಗಮನಿಸಬಹುದು ಉದಾಹರಣೆಗಾಗಿ—

ಚಿತ್ರೈರಂಜಿಭಿರ್ವಪುಷೇ ವ್ಯಂಜತೇ ವಕ್ಷಃಸು ರುಕ್ಮಾಂ ಅಧಿ ಯೇತಿರೇ ಶುಭೇ ।
ಅಂಸೇಷ್ವೇಷಾಂ ನಿ ಮಿಮೃಕ್ಷುರ್ಋಷ್ಟಯಃ ಸಾಕಂ ಜಜ್ಞಿರೇ ಸ್ವಧಯಾ ದಿವೋ ನರಃ ।

(ಋ. ಸಂ ೧-೬೪-೪)

ವಿಶ್ವವೇದಸೋ ರಯಿಭಿಃ ಸಮೋಕಸಃ ಸಂಮಿಶ್ಲಾಸಸ್ತವಿಷೀಭಿರ್ವಿರಪ್ಶಿನಃ ।
ಅಸ್ತಾರ ಇಷುಂ ದಧಿರೇ ಗಭಸ್ತ್ಯೋರನಂತಶುಷ್ಮಾ ವೃಷಖಾದಯೋ ನರಃ ॥

(ಋ. ಸಂ. ೧-೬೪-೧೦)

ಇತ್ಯಾದ್ಯನೇಕ ಋಕ್ಕುಗಳಲ್ಲಿ ನರಃ ಎಂಬ ಪದವು ಮರುತ್ತುಗಳ ಸ್ವರೂಪವನ್ನು ತಿಳಿಸುತ್ತದೆ ಅದರಂತೆಯೇ ಪ್ರಕೃತವಾದ ಋಕ್ಕಿನಲ್ಲಿಯೂ ಸಹ ನ್ನಾನ್ ಎಂದರೆ ಮರುತ್ತುಗಳನ್ನು ಎಂದರ್ಥವಾಗಬಹುದು.

॥ ಸಂಹಿತಾಪಾಠಃ ॥

ಆ ವೋ ಯಂತೂದವಾಹಾಸೋ ಅದ್ಯ ವೃಷ್ಟಿಂ ಯೇ ವಿಶ್ವೇ ಮರುತೋ ಜುನಂತಿ ।
ಅಯಂ ಯೋ ಅಗ್ನಿರ್ಮರುತಃ ಸಮಿದ್ಧ ಏತಂ ಜುಷಧ್ವಂ ಕವಯೋ ಯುವಾನಃ ॥ ೩ ॥

॥ ಪದಪಾಠಃ ॥

ಆ । ವಃ । ಯಂತು । ಉದऽವಾಹಾಸಃ । ಅದ್ಯ । ವೃಷ್ಟಿಂ । ಯೇ । ವಿಶ್ವೇ । ಮರುತಃ । ಜುನಂತಿ ।
ಅಯಂ । ಯಃ । ಅಗ್ನಿಃ । ಮರುತಃ । ಸಂऽಇದ್ಧಃ । ಏತಂ । ಜುಷಧ್ವಂ । ಕವಯಃ । ಯುವಾನಃ ॥

॥ ಸಾಯಣಭಾಷ್ಯಂ ॥

ಯೇ ವಿಶ್ವೇ ವ್ಯಾಪ್ತಾ ಮರುತೋ ವೃಷ್ಟಿಂ ಜುನಂತಿ ಪ್ರೇರಯಂತಿ ತ ಉದವಾಹಾಸ ಉದಕಸ್ಯ ವೋಢಾರೋ ಮರುತೋಽದ್ಯೇದಾನೀಂ ವೋ ಯುಷ್ಮಾನಾ ಯಂತು ಆಗಚ್ಛಂತು ಹೇ ಋತ್ವಿಗ್ಯಜಮಾನಾಃ । ಅಥ ಪ್ರತ್ಯಕ್ಷವಾದಃ । ಹೇ ಮರುತೋ ಯಃ ಪ್ರಸಿದ್ಧೋಽಯಮಗ್ನಿಃ ಸಮಿದ್ಧಃ ಸಮ್ಯಕ್ ದೀಪಿತ ಏತಮಗ್ನಿಂ ಜುಷಧ್ವಂ ಸೇವಧ್ವಂ ಹೇ ಕವಯೋ ಮೇಧಾವಿನೋ ಹೇ ಯುವಾನೋ ನಿತ್ಯತರುಣಾಃ ಸರ್ವತ್ರ ವ್ಯಾಪ್ತಾ ವಾ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಗ್ಯಜಮಾನರೇ) **ಯೇ**—ಯಾರು । **ವಿಶ್ವೇ**—ಸರ್ವವ್ಯಾಪಕರಾಗಿ । **ವೃಷ್ಟಿಂ**—ವೃಷ್ಟಿಯನ್ನು। **ಜುನಂತಿ**—ಪ್ರೇರಿಸಿ ಸುರಿಸುತ್ತಾರೋ ಅಂತಹ । **ಮರುತಃ**—ಮರುತ್ತುಗಳು । **ಉದವಾಹಾಸಃ**—ಉದಕಗಳನ್ನು ಧರಿಸಿದವರಾಗಿ । **ಅದ್ಯ**—ಈಗ । **ವಃ**—ನಿಮ್ಮ ಯಜ್ಞಕ್ಕೆ । **ಆ ಯಂತು**-ದಯಮಾಡಲಿ । **ಕವಯಃ**—ಮೇಧಾವಿಗಳೂ । **ಯುವಾನಃ**—ನಿತ್ಯತರುಣರೂ ಆದ । **ಮರುತಃ**—ಎಲೈ ಮರುತ್ತುಗಳೇ । **ಯಃ**—ಯಾವ । **ಅಯಂ. ಅಗ್ನಿಃ**—ಈ ಅಗ್ನಿಯು । **ಸಮಿದ್ಧಃ**—ಪ್ರಜ್ವಲಿತವಾಗಿದೆಯೋ । **ಏತಂ**—ಅಂತಹ ಈ ಅಗ್ನಿಯನ್ನು । **ಜುಷಧ್ವಂ**—ಸೇವಿಸಿರಿ.

॥ ಭಾವಾರ್ಥ ॥

ಎಲೈ ಋತ್ವಿಗ್ಯಜಮಾನರೇ, ಯಾರು ಸರ್ವವ್ಯಾಪಕರಾಗಿ ವೃಷ್ಟಿಯನ್ನು ಪ್ರೇರಿಸಿ ಸುರಿಸುವರೋ ಅಂತಹ ಮರುತ್ತುಗಳು ಉದಕಗಳನ್ನು ಧರಿಸಿದವರಾಗಿ ಈಗ ನಿಮ್ಮ ಯಜ್ಞಕ್ಕೆ ದಯಮಾಡಲಿ. ಮೇಧಾವಿಗಳೂ, ನಿತ್ಯತರುಣರೂ ಆದ ಎಲೈ ಮರುತ್ತುಗಳೇ, ಇಲ್ಲಿ ಪ್ರಜ್ವಲಿತವಾಗಿರುವ ಈ ಅಗ್ನಿಯನ್ನುಸೇವಿಸಿರಿ

English Translation

May the universal Maruts, who urge on the rain, come to you to-day laden with water: Maruts who are wise and young, be pleased by this fire which is kindled for you.

॥ ವಿಶೇಷವಿಷಯಗಳು ॥

**ಅದ್ಯ—ಇದಾನೀಂ । ಅಸ್ಮಿನ್ ಯಜ್ಞೇ ।** ಈಗ ಅಥವಾ ನಾವು ಮಾಡುತ್ತಿರುವ ಈ ಯಜ್ಞಕಾಲದಲ್ಲಿ ಎಂದರೆ, ನಾವು ಮಾಡುತ್ತಿರುವ ಈ ಯಜ್ಞಕ್ಕೆ ಬಂದು ಅಗ್ನಿಯನ್ನು ಸೇವಿಸಿ ಎಂಬ ಆಶಂಸನೆಯು ಇಲ್ಲಿ ಉಕ್ತವಾಗಿದೆ. ನಾವು ಮಾಡುತ್ತಿರುವ ಈ ಯಜ್ಞದಲ್ಲಿ ಅಗ್ನಿಯು ಪ್ರಜ್ವಲಿತನಾಗಿ ಬೆಳಗುತ್ತಿರುವನು. ಇಂತಹ ಅಗ್ನಿಯ ಮೂಲಕ ಮರುದ್ದೇವತೆಗಳಾದ ನೀವು ಹವಿರಾದಿಗಳನ್ನು ಸ್ವೀಕರಿಸುವುದಕ್ಕಾಗಿ ಯಜ್ಞಭೂಮಿಗೆ ಬನ್ನಿ ಎಂಬ ಪ್ರಾರ್ಥನೆಯು ಉಕ್ತವಾಗಿದೆ.

ಈ ಋಕ್ಕಿನ ಪೂರ್ವಾರ್ಧದಲ್ಲಿ ಮರುದ್ದೇವತೆಗಳನ್ನು ಪರೋಕ್ಷಕೃತವಾಕ್ಯದಿಂದಲೂ ಉತ್ತರಾರ್ಧದಲ್ಲಿ ಪ್ರತ್ಯಕ್ಷಕೃತವಾಕ್ಯದಿಂದಲೂ ಸ್ತುತಿಸಲಾಗಿದೆ. ಪರೋಕ್ಷಕೃತ, ಪ್ರತ್ಯಕ್ಷಕೃತ ಎಂದರೇನು ಎಂಬ ವಿಷಯದಲ್ಲಿ ಯಾಸ್ಕರು ಈ ರೀತಿ ವಿವರಿಸಿದಾರೆ—

ನಿರುಕ್ತಕಾರರಾದ ಯಾಸ್ಕಮಹರ್ಷಿಗಳು ವೇದಮಂತ್ರಗಳಿಗೆ ಅರ್ಥಮಾಡುವ ವಿಚಾರದಲ್ಲಿ ಹೀಗೆ ಹೇಳಿರುವರು.

**ತದ್ಯಾನಿ ನಾಮಾನಿ ಪ್ರಾಧಾನ್ಯಸ್ತುತೀನಾಂ ದೇವತಾನಾಂ ತದ್ದೈವತಮಿತ್ಯಾಚಕ್ಷತೇ ॥**
**ಯತ್ಕಾಮ ಋಷಿರ್ಯಸ್ಯಾಂ ದೇವತಾಯಾಮಾರ್ಥಪತ್ಯಮಿಚ್ಛನ್ ಸ್ತುತಿಂ ಪ್ರಯುಙ್ಕ್ತೇ**

**ಕ್ತೇ ತದ್ದೈವತಃ ಸ ಮಂತ್ರೋ ಭವತಿ॥ ತಾಸ್ತ್ರಿವಿಧಾ ಋಚಃ ಪರೋಕ್ಷಕೃತಾಃ ಪ್ರತ್ಯಕ್ಷಕೃತಾ ಆಧ್ಯಾತ್ಮಿಕಾಶ್ಚ । ತತ್ರ ಪರೋಕ್ಷಕೃತಾಃ ಸರ್ವಾಭಿರ್ನಾಮವಿಭಕ್ತಿಭಿರ್ಯುಜ್ಯಂತೆ, ಪ್ರಥಮಪುರುಷೈಶ್ಚಾಖ್ಯಾತಸ್ಯ॥ ಅಥ ಪ್ರತ್ಯಕ್ಷಕೃತಾ ಮಧ್ಯಮಪುರುಷೋಪಯೋಗಾಸ್ತ್ವಮಿತಿ ಚೈತೇನ ಸರ್ವನಾಮ್ನಾ॥ ಅಥಾಧ್ಯಾತ್ಮಿಕ್ಯ ಉತ್ತಮಪುರುಷಯೋಗಾ ಅಹಮಿತಿ ಚೈತೇನ ಸರ್ವನಾಮ್ನಾ॥ ಪರೋಕ್ಷಕೃತಾಃ ಪ್ರತ್ಯಕ್ಷಕೃತಾಶ್ಚ ಮಂತ್ರಾ ಭೂಯಿಷ್ಠಾ ಅಲ್ಪಶ ಆಧ್ಯಾತ್ಮಿಕಾಃ॥**

(ನಿರುಕ್ತ-ದೈವತಕಾಂಡ. ಅಧ್ಯಾಯ ೭ ಖಂಡ ೧-೩)

ಎಂದರೆ ಮಂತ್ರಗಳಲ್ಲಿ ದೈವತಮಂತ್ರ, ಸ್ತುತಿಮಂತ್ರ. ಆಶೀರ್ಮಂತ್ರ, ಶಪಥ, ಅಭಿಶಾಪ, ಕಶ್ಚಿದ್ಭಾವ, ಪರಿದೇವನಾ, ನಿಂದಾ, ಪ್ರಶಂಸಾ ಎಂದು ಅನೇಕ ವಿಧವಾಗಿರುವುದು. ದೈವತಮಂತ್ರವೆಂದರೆ ದೇವತೆಗಳ ಮಹಿಮೆಯನ್ನು ವರ್ಣಿಸುವ ಮಂತ್ರ, ಸ್ತುತಿಯೆಂದರೆ ಸ್ತೋತ್ರ, ಪ್ರಾರ್ಥನೆಗಳನ್ನೊಳಗೊಂಡಿರುವ ಮಂತ್ರ, ಆಶೀಃ=ಆಶೀರ್ವಾದ ಒಳ್ಳೆಯದನ್ನು ಹಾರೈಸುವ ಮಂತ್ರ. ಶಪಥ=ಪ್ರತಿಜ್ಞೆ, ಅಭಿಶಾಪ=ಕೆಟ್ಟಹಾರೈಕೆ, ಕಶ್ಚಿದ್ಭಾವ=ಒಂದು ವಿಷಯ ಅಥವಾ ತತ್ತ್ವದ ವಿವರಣೆ, ಪರಿದೇವನಾ=ವ್ಯಸನ. ನಿಂದಾ=ನಿಂದೆಯು, ಪ್ರಶಂಸಾ=ಹೊಗಳುವಿಕೆಯು, ದಾನಸ್ತುತಿ ಇತ್ಯಾದಿ

ಮೇಲೆ ಹೇಳಿದ ಅನೇಕ ವಿಧಗಳಲ್ಲಿ ದೈವತವೆಂಬ ಋಕ್ಕುಗಳು ಪರೋಕ್ಷಕೃತ, ಪ್ರತ್ಯಕ್ಷಕೃತ, ಆಧ್ಯಾತ್ಮಿಕ ಎಂದು ಮೂರು ವಿಧವಾಗಿರುವವು. ಪರೋಕ್ಷಕೃತವೆಂದರೆ— ಸ್ತುತಿಸಲ್ಪಡುವ ದೇವತೆಯು ಎದುರಿಗಿಲ್ಲದಿರುವುದರಿಂದ ಸ್ತುತಿಸುವಾಗ ಆ ದೇವತೆಯ ವಿಷಯದಲ್ಲಿ ಪ್ರಥಮಪುರುಷನಾಮಪದಗಳನ್ನೂ ಕ್ರಿಯಾಪದಗಳನ್ನೂ (Third person both in subject and predicate) ಉಪಯೋಗಿಸಿರುವ ಮಂತ್ರಗಳು; ಪ್ರತ್ಯಕ್ಷಕೃವೆಂದರೆ, ಸ್ತುತಿಸಲ್ಪಡುವ ದೇವತೆಯು ಪ್ರತ್ಯಕ್ಷವಾಗಿ ಎದುರಿಗೆ ಇದ್ದಂತೆ ಭಾವಿಸಿ ಅದನ್ನು ನೀನು ನಿನ್ನ ಮೊದಲಾದ ಮಧ್ಯಮಪುರುಷಶಬ್ದಗಳಿಂದ (Second person) ಸಂಬೋಧನೆ ಮಾಡಿ ಸ್ತುತಿಸುವ ಋಕ್ಕುಗಳು, ಅಧ್ಯಾತ್ಮಿಕವೆಂದರೆ ಉತ್ತಮಪುರುಷ (First person) ಪ್ರಯೋಗವನ್ನು ಮಾಡಿ ಸ್ತುತಿಸಿರುವ ಮಂತ್ರಗಳು. ಈ ಮೂರುವಿಧ ಮಂತ್ರಗಳಲ್ಲಿ ಪರೋಕ್ಷಕೃತ ಪ್ರತ್ಯಕ್ಷಕೃತವೆಂಬ ಎರಡುವಿಧ ಮಂತ್ರಗಳು ಹೆಚ್ಚಾಗಿರುವವು, ಆಧ್ಯಾತ್ಮಿಕಮಂತ್ರಗಳು ಕೇವಲ ಸ್ವಲ್ಪಮಾತ್ರವಿರುವವು ಎಂದು.

**ಕವಯಃ—ಕ್ರಾಂತದರ್ಶಿನಃ ಮೇಧಾವಿನೋ ವಾ ।** ಎಂದು ಸಾಯಣರು ಈ ಪದಕ್ಕೆ ಅರ್ಥವನ್ನು ಹೇಳಿದ್ದಾರೆ. ಇನ್ನು ಕೆಲವೆಡೆಗಳಲ್ಲಿ ಸಾಯಣರು ಈ ಪದದ ಅರ್ಥವನ್ನು ಎರಡುವಿಧವಾಗಿ ವಿವರಿಸಿದ್ದಾರೆ. ಮೊದಲನೆಯದಾಗಿ, "**ಯೇ ವಾ ಅನೂಚಾನಾಸ್ತೇ ಕವಯಃ**" ಎಂಬ ಶ್ರುತಿ ವಾಕ್ಯವನ್ನನುಸರಿಸಿ ವೇದಾಂಗಸಹಿತವಾದ ವೇದಾಧ್ಯಯನವನ್ನು ಮಾಡಿದಶಾಸ್ತ್ರಜ್ಞರೆಂದು ಒಂದು ವಿಧವಾಗಿಯೂ, ಎರಡನೆಯದಾಗಿ, ಕವಿಃ, ಮನೀಷೀ (ನಿ.೩-೧೫) ಎಂಬ ನಿರುಕ್ತವಾಕ್ಯವನ್ನನುಸರಿಸಿ ಮೇಧಾವಿಯೆಂದು ಇನ್ನೊಂದು ವಿಧವಾಗಿಯೂ ಅರ್ಥಮಾಬಹುದು ಎಂದು ತಿಳಿಸಿದ್ದಾರೆ.

**ಮೇಧಾವೀ ಕವಿಃ ಕ್ರಾಂತದರ್ಶನೋ ಭವತಿ ಕವತೇರ್ವಾ ।**

(ನಿ ೧೨-೧೩)

ಎಂಬುದಾಗಿ ನಿರುಕ್ತಕಾರರು **ಕವಿ**ಶಬ್ದದ ನಿರ್ವಚನವನ್ನು ಹೇಳಿದ್ದಾರೆ. **ಕ್ರಮ್** ಧಾತುವಿನಿಂದ ನಿಷ್ಪನ್ನವಾಗಿ ಕ್ರಾಂತದರ್ಶನವುಳ್ಳವನೆಂದಾಗಬಹುದು; ಅಥವಾ **ಕವ್** ಧಾತುವಿನಿಂದ ನಿಷ್ಪನ್ನವಾಗಿ ಸ್ತುತಿಮಾಡತಕ್ಕ ಸ್ತೋತೃ ವೆಂದರ್ಥವಾಗಬಹುದು, ಎಂದು ನಿರುಕ್ತಕಾರರ ನಿರ್ವಚನವು ವಿವರಿಸುತ್ತದೆ. ಕವಿಯ ಸ್ವರೂಪವೇನು? ಕವಿಯ ಶಕ್ತಿಯೇನು ? ಯಾವ ಸ್ವರೂಪ ಮತ್ತು ಶಕ್ತಿಯನ್ನು ತಿಳಿಸಲು ಋಕ್ಸಂಹಿತೆಯಲ್ಲಿ **ಕವಿ**ಶಬ್ದದ ಪ್ರಯೋಗವಿದೆ ಎಂಬುದನ್ನು ತಿಳಿಯಬೇಕಾದುದು ಅವಶ್ಯಕವಾಗಿರುತ್ತದೆ.

**ಋಷಿ, ಸುಮೇಧ, ಧೀರ, ರೇಭ** ಎಂಬ ಪದಗಳು ಯಾವ ಸ್ವರೂಪವಿಶೇಷವನ್ನು ತೋರಿಸುವುವೋ **ಕವಿ** ಶಬ್ದವೂ ಅದೇ ಅಂಶವನ್ನು ತಿಳಿಸಲು ಉಪಯುಕ್ತವಾಗಿದೆಯೆಂದು ಹೇಳಬಹುದು. ಭೂತಭವಿಷ್ಯದ್ವರ್ತಮಾನಕಾಲ ಗಳ ವ್ಯವಹಾರಗಳನ್ನೆಲ್ಲಾ ತಿಳಿಯತಕ್ಕ ಅಸಾಧಾರಣವೂ ಅಲೌಕಿಕವೂ ಆದ ಶಕ್ತಿಯನ್ನುಳ್ಳವನೇ **ಧೀರನು, ಋಷಿಯೂ** ಅವನೇ, **ಕವಿಯೂ** ಅವನೇ. ಈ ಶಕ್ತಿಯುಳ್ಳವನೇ ಸ್ತೋತ್ರರೂಪವಾದ ಕಾವ್ಯದ ಸೃಷ್ಟಿಗೂ ಅರ್ಹ ನಾಗಿದ್ದಾನೆ. ಆದುದರಿಂದ ಸ್ತುತಿಕಾರನಿಗೂ **ಕವಿ, ರೇಭ** ಇತ್ಯಾದಿಯಾದ ಹೆಸರುಗಳಿರುವುವು. ಲೌಕಿಕವಾದ ಸಾಹಿತ್ಯ ಗಳಲ್ಲೂ, ಲಕ್ಷಣಗ್ರಂಥಗಳಲ್ಲೂ **ಕವಿ, ಕಾವ್ಯ,** ಎಂಬ ಪದಗಳಿಗೆ ಇದೇ ರೀತಿಯ ಅಸಾಧಾರಣವಾದ ಶಕ್ತಿಯನ್ನು ಸೂಚಿಸುವ ಸಂಜ್ಞೆಯಿದ್ದರೂ ಅಲ್ಲಿಯ ನಿರ್ವಚನವು ಇದಕ್ಕಿಂತ ಸ್ವಲ್ಪ ವ್ಯತ್ಯಸ್ತವಾಗಿದೆಯೆಂಬಂಶವನ್ನು ಸಂದರ್ಭಾನು ಸಾರವಾಗಿ ತಿಳಿಯಬೇಕು. ಕವಿಯ ನಿಜವಾದ ಸ್ವರೂಪವನ್ನು ತಿಳಿಸಲು ನಿರುಕ್ತಕಾರರು,

**ವಿಶ್ವಾ ರೂಪಾಣಿ ಪ್ರತಿ ಮುಂಚತೇ ಕವಿಃ ಪ್ರಾಸಾವೀದ್ಭದ್ರಂ ದ್ವಿಪದೇ ಚತುಷ್ಪದೇ ।**
**ವಿ ನಾಕಮಖ್ಯತ್ಸವಿತಾ ವರೇಣ್ಯೋಽನು ಪ್ರಯಾಣಮುಷಸೋ ವಿ ರಾಜತಿ ॥**

(ಋ. ಸಂ. ೫-೮೧-೨)

ಎಂಬ ಋಕ್ಕನ್ನುದಾಹರಿಸಿ ಇಲ್ಲಿ **ಸವಿತೃ**ವಿಗೆ ವಿಶೇಷಣವಾಗಿರುವ **ಕವಿ**ಶಬ್ದವು ಸವಿತೃವಿನ ಯಾವ ಸ್ವರೂಪವನ್ನು ತೋರಿಸುವುದೆಂಬುದನ್ನು ವಿವರಿಸಿದ್ದಾರೆ. ವಿಶ್ವದ ಸಕಲ ರೂಪಗಳನ್ನೂ ಪ್ರಕಾಶಪಡಿಸುವವನಾದುದರಿಂದ ಸವಿತೃವಿಗೆ ಈ ವಿಶೇಷಣವಿದೆಯೆಂದು ತಿಳಿಯುತ್ತದೆ. ಎಂದರೆ, ಗೂಢವಾಗಿ ಅಡಗಿ ಲೋಕದ ದೃಷ್ಟಿಗೆ ಗೋಚರವಾಗದಿರುವ ಅಂಶಗಳನ್ನು ತನ್ನ ಶಕ್ತಿಯಿಂದ ಪ್ರಕಾಶಿತವಾಗುವಂತೆ ಮಾಡಿ ಲೋಕದ ದೃಷ್ಟಿಗೆ ಬೀಳುವಂತೆ ಮಾಡುವ ಶಕ್ತಿಯುಳ್ಳ ವನೆಂದರ್ಥ. ಇದೇ ಅರ್ಥದಲ್ಲಿಯೇ ಸ್ತೋತೃವಾದ ಸ್ತುತಿಕರ್ತನಿಗೂ ಸಹ ಕವಿ ಯೆಂಬ ಹೆಸರು ಪ್ರಸಿದ್ಧವಾಗಿದೆ ಈ ಭಾವವು ಋಕ್ಸಂಹಿತೆಯಲ್ಲಿರುವ,

**ಬ್ರಹ್ಮಾ ಕೃಣೋತಿ ವರುಣೋ ಗಾತುವಿದಂ ತಮೀಮಹೇ ।**
**ವ್ಯೂರ್ಣೋತಿ ಹೃದಾ ಮತಿಂ ನವ್ಯೋ ಜಾಯತಾಮೃತಂ ವಿತ್ತಂ ಮೇ ಅಸ್ಯ ರೋದಸೀ ॥**

(ಋ. ಸಂ. ೧-೧೦೫-೧೫)

ಎಂಬ ಋಕ್ಕಿನಲ್ಲಿಯೂ ಹೀಗೆಯೇ ಇತರ ಋಕ್ಕುಗಳಲ್ಲಿಯೂ ಸೂಚಿತವಾಗಿದೆ. ಉದಾಹೃತವಾದ ಈ ಋಕ್ಕಿನಲ್ಲಿ **ವ್ಯೂರ್ಣೋತಿ** ಎಂಬ ಪದಕ್ಕೆ **ಉಚ್ಚಾರಯತಿ, ಪ್ರಕಾಶಯತಿ** ಎಂದು ಸಾಯಣರು ಅರ್ಥಮಾಡಿದ್ದಾ **ಊರ್ಣುಞ್ — ಆಚ್ಛಾದನೇ**|ಮರೆಸು, ಹೊದ್ದಿಸು ಎಂಬರ್ಥದ **ಊರ್ಣು** ಧಾತುವು ಊರ್ಣೋತಿ ಎಂದಾಗುತ್ತದೆ. ಇಲ್ಲಿ **ವಿ** ಎಂಬ ಉಪಸರ್ಗದೊಡನೆ ಸೇರಿ ವಿಗತವಾದ ಆಚ್ಛಾದನೆ ಎಂದರೆ, ಮರೆಯನ್ನು ತಪ್ಪಿಸುವುದು ಎಂಬರ್ಥವನ್ನು

ಕೊಡುತ್ತದೆ ಪ್ರಕಾಶಪಡಿಸುವುದೆಂದು ತಾತ್ಪರ್ಯ. ಮನಸ್ಸಿನಲ್ಲಿ ಗುಪ್ತವಾಗಿರುವ ಭಾವವನ್ನು ಪ್ರಕಾಶಪಡಿಸುವುದರ ರೂಪದಲ್ಲಿ ಸೃಷ್ಟಿಸಾಮರ್ಥ್ಯವೂ, ಗುಪ್ತವಾಗಿರುವ ಅಂಶವನ್ನು ಪ್ರಕಾಶಪಡಿಸಿ ತೋರಿಸುವ ಶಕ್ತಿಯೂ ಸಹ ಕವಿಯ ಅಥವಾ ಸ್ತುತಿಕರ್ತನ ವಿಶೇಷಗುಣವೆಂದು ಇದರಿಂದ ತಿಳಿಯುತ್ತದೆ ಆದುದರಿಂದ ಸವಿತೃವಿಗೂ ಸ್ತುತಿಕರ್ತನಿಗೂ ಇರುವ ಸಮಾನವಾದ ಧರ್ಮವನ್ನು ಕವಿ ಶಬ್ದವು ಇಬ್ಬರಿಗೂ ತಿಳಿಸುವ ವಿಶೇಷಣವಾಗಿರುತ್ತದೆ. ಇದೇ ಲಕ್ಷಣವನ್ನೂ ಕವಿಕೃತಿಯನ್ನೂ ವಿವರಿಸುತ್ತಾ ಋಕ್ಸಂಹಿತೆಯಲ್ಲಿ,

**ಸಮಾನಂ ನೀಳಂ ವೃಷಣೋ ವಸಾನಾಃ ಸಂ ಜಗ್ಮಿರೇ ಮಹಿಷಾ ಅರ್ವತೀಭಿಃ ।**
**ಋತಸ್ಯ ಪದಂ ಕವಯೋ ನಿ ಪಾಂತಿ ಗುಹಾ ನಾಮಾನಿ ದಧಿರೇ ಪರಾಣಿ ।**

(ಋ ಸಂ ೧೦-೫-೨)

**ಬೃಹಸ್ಪತೇ ಪ್ರಥಮಂ ವಾಚೋ ಅಗ್ರಂ ಯತ್ಪ್ರೈರತ ನಾಮಧೇಯಂ ದಧಾನಾಃ ।**
**ಯದೇಷಾಂ ಶ್ರೇಷ್ಠಂ ಯದರಿಪ್ರಮಾಸೀತ್ಪ್ರೇಣಾ ತದೇಷಾಂ ನಿಹಿತಂ ಗುಹಾವಿಃ ॥**

(ಋ. ಸಂ ೧೦-೭೧-೧)

ಇತ್ಯಾದಿ ಋಕ್ಕುಗಳಲ್ಲೆಲ್ಲಾ ಈ ಭಾವವು ವ್ಯಕ್ತವಾಗಿರುತ್ತದೆ. ಕವಿಗಳು ಋತದ ಪಥವನ್ನು ಪ್ರವೇಶಿಸಿ ಅತ್ಯಂತ ಗೂಢವಾದ ಹೃದಯದಲ್ಲಿ ಅತ್ಯುತ್ತಮವಾದ ರಹಸ್ಯದ ನಾಮಗಳನ್ನು ಧರಿಸಿದ್ದಾರೆ ಮತ್ತು ಅದನ್ನು ಪ್ರಕಾಶಪಡಿಸಿ ಲೋಕಕ್ಕೆ ತಿಳಿಯುವಂತೆ ಮಾಡುತ್ತಾರೆ ಎಂದು ವರ್ಣಿತವಾಗಿದೆ ಈ ಕವಿಯ ದರ್ಶನವೂ ಪ್ರಕಾಶನರೂಪವಾದ ಸಾಧನದಿಂದಲೇ ಸಾಧ್ಯವು

**ಯಜ್ಞೇನ ವಾಚಃ ಪದವೀಯಮಾಯನ್ ತಾಮನ್ವವಿಂದನ್ನೃಷಿಷು ಪ್ರವಿಷ್ಟಾಂ ।**
**ತಾಮಾಭೃತ್ಯಾ ವ್ಯದಧುಃ ಪುರುತ್ರಾ ತಾಂ ಸಪ್ತ ರೇಭಾ ಅಭಿ ಸಂ ನವಂತೇ ॥**

(ಋ. ಸಂ ೧೦-೭೧-೩)

ಅತೀಂದ್ರಿಯಾರ್ಥದರ್ಶಿಗಳಾದ ಋಷಿಗಳಲ್ಲಿ ಸುಪ್ತವಾಗಿದ್ದ ವಾಕ್ಕನ್ನು ಯಜ್ಞರೂಪವಾದ ಸಾಧನದಿಂದ ಕವಿಗಳು ಪಡೆದರು ಅನಂತರ ಲೋಕದ ಪ್ರಜೆಗಳ ಉಪಕಾರಕ್ಕಾಗಿ ಅವರಿಗೂ ಉಪದೇಶವನ್ನು ಮಾಡಿದರು. ವಿಶ್ವತತ್ತ್ವರೂಪವಾದ ಈ ವಾಕ್ಕನ್ನು ಗಾಯತ್ರ್ಯಾದಿ ಛಂದಸ್ಸುಗಳು ಸೇವಿಸುತ್ತವೆ ಇತ್ಯಾದಿಯಾಗಿ ವಾಕ್ಪ್ರಕಾಶನರೂಪವಾದ ಸೃಷ್ಟಿಗೂ, ಯಜ್ಞರೂಪವಾದ ಕರ್ಮಕ್ಕೂ ಕೆಲವೆಡೆಗಳಲ್ಲಿ ತಾದಾತ್ಮ್ಯವನ್ನೂ ಇನ್ನು ಕೆಲವೆಡೆಗಳಲ್ಲಿ ಕಾರ್ಯಕಾರಣರೂಪವಾದ ಸಂಬಂಧವನ್ನೂ ತಿಳಿಸಿದೆ. ಇದೇ ಭಾವವನ್ನು ಶತಪಥಾದಿ ಬ್ರಾಹ್ಮಣಗಳಲ್ಲೂ ಈ ರೀತಿ ಹೇಳಿದೆ.

**ಆಯುರೇತಜ್ಜ್ಯೋತಿಃ ಪ್ರವಿಶತಿ ಯ ಏತಮನು ವಾ ಬ್ರೂತೇ ಭಕ್ಷಯತಿ ವಾ ತಸ್ಯ ವ್ರತಚರ್ಯಾ ಯಾ ಸೃಷ್ಟಾ ॥**

(ಶ. ಬ್ರಾ. ೧೪.೧-೨-೨೬)

ಎಂಬಲ್ಲಿ ಮಂತ್ರೋಚ್ಚಾರಣಪೂರ್ವಕವಾದ ಕರ್ಮಕ್ಕೂ ನೂತನಸೃಷ್ಟಿಗೂ ತಾದಾತ್ಮ್ಯವನ್ನು ಹೇಳಿದೆ. ಪ್ರಕೃತವಾದ ಋಕ್ಕಿನಲ್ಲಿ ಅತೀಂದ್ರಿಯವಿಷಯಪ್ರಜ್ಞೋಪೇತರೂ, ಸರ್ವಜ್ಞರೂ ಆದ ಮರುದ್ದೇವತೆಗಳ ಅಸಾಧಾರಣವಾದ ಗುಣವನ್ನು ತಿಳಿಸುವ ವಿಶೇಷಣವಾಗಿದೆ. ಈ ವಿಶೇಷಣವು ಅನೇಕಕಡೆಗಳಲ್ಲಿ ಉಪಯೋಗಿಸಲ್ಪಟ್ಟಿರುವುದರಿಂದ ಆಯಾ ಸಂದರ್ಭಗಳಿಗನುಗುಣವಾಗಿ ಅರ್ಥಮಾಡತಕ್ಕದಾಗಿದೆ.

॥ ಸಂಹಿತಾಪಾಠಃ ॥

ಯೂಯಂ ರಾಜಾನಮಿರ್ಯಂ ಜನಾಯ ವಿಭ್ವತಷ್ಟಂ ಜನಯಥಾ ಯಜತ್ರಾಃ ।
ಯುಷ್ಮದೇತಿ ಮುಷ್ಟಿಹಾ ಬಾಹುಜೂತೋ ಯುಷ್ಮತ್ಸದಶ್ವೋ ಮರುತಃ ಸುವೀರಃ ॥ ೪ ॥

॥ ಪದಪಾಠಃ ॥

ಯೂಯಂ । ರಾಜಾನಂ । ಇರ್ಯಂ । ಜನಾಯ । ವಿಭ್ವಽತಷ್ಟಂ । ಜನಯಥ । ಯಜತ್ರಾಃ ।
ಯುಷ್ಮತ್ । ಏತಿ । ಮುಷ್ಟಿಽಹಾ । ಬಾಹುಽಜೂತಃ । ಯುಷ್ಮತ್ । ಸತ್ಽಅಶ್ವಃ । ಮರುತಃ ।
ಸುಽವೀರಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಮರುತೋ ಯೂಯಂ ಜನಾಯ ಯಜಮಾನಾಯ ರಾಜಾನಂ ಸ್ವಾಮಿನಂ ರಾಜಮಾನಂ ವೇರ್ಯಂ ಶತ್ರೂಣಾಂ ಪ್ರೇರಕಂ ಚ್ಯಾವಯಿತಾರಂ ವಿಭ್ವತಷ್ಟಂ। ವಿಭ್ವಾ ನಾಮ ಋಭೂಣಾಂ ಮಧ್ಯಮಃ। ಸ ಕುಶಲೀ । ತೇನ ನಿರ್ಮಿತಂ। ಅತ್ಯಂತರೂಪವಂತಮಿತ್ಯರ್ಥಃ । ತಾದೃಶಂ ಪುತ್ರಂ ಜನಯಥ। ಉತ್ಪಾದಯಥ ಹೇ ಯಜತ್ರಾ ಯಷ್ಟವ್ಯಾಃ। ಹೇ ಮರುತೋ ಯುಷ್ಮದ್ಯುಷ್ಮತ್ತ ಏತಿ ಗಚ್ಛತಿ ಪುತ್ರಃ। ಕೀದೃಶಃ। ಮುಷ್ಟಿಹಾ । ಮುಷ್ಟಿಶಬ್ದೋ ಬಾಹೂಪಲಕ್ಷಕಃ। ಸ್ವಭುಜಬಲೇನೈವ ಹಂತಾ ಶತ್ರೂಣಾಂ। ತದೇವೋಚ್ಯತೇ। ಬಾಹುಜೂತಃ। ಬಾಹುಃ ಪ್ರೇರಕಃ ಶತ್ರೂಣಾಂ ಯಸ್ಯ ತಾದೃಶಃ ಪುತ್ರ ಏತಿ। ತಥಾ ಯುಷ್ಮದ್ಯುಷ್ಮತ್ತಃ ಸದಶ್ವೋ ವಿದ್ಯಮಾನಾಶ್ವಃ। ಬಹ್ವಶ್ವ ಇತ್ಯರ್ಥಃ। ಸುವೀರಃ ಶೋಭನವೀರ್ಯಃ ಪುತ್ರ ಏತಿ। ಜಾಯತ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಯಜತ್ರಾಃ**—ಪೂಜ್ಯರಾದ ಎಲೈ ಮರುತ್ತುಗಳೇ। **ಯೂಯಂ**–ನೀವುಗಳು । **ಜನಾಯ**–ಯಜಮಾನನಿಗೆ। **ರಾಜಾನಂ**—ಪ್ರಕಾಶಮಾನನೂ। **ಇರ್ಯಂ**—ಶತ್ರುನಾಶಕನೂ। **ವಿಭ್ವತಷ್ಟಂ**—ವಿಭ್ವನಿಂದ ನಿರ್ಮಿತನಾದವನೂ ಆದ ಪುತ್ರನನ್ನು । **ಜನಯಥ**—ಉತ್ಪನ್ನವಾಗುವಂತೆ ಮಾಡುತ್ತೀರಿ। **ಮರುತಃ**—ಎಲೈ ಮರುತ್ತುಗಳೇ। **ಯುಷ್ಮತ್**—ನಿಮ್ಮಿಂದ । **ಮುಷ್ಟಿಹಾ**—ಮುಷ್ಟಿಪ್ರಹಾರದಿಂದ ಶತ್ರುಗಳನ್ನು ನಾಶಮಾಡುವವನೂ। **ಬಾಹುಜೂತಃ**—ಬಾಹು ಬಲಗಳಿಂದ ಶತ್ರುಗಳನ್ನು ಜಯಿಸುವವನೂ ಆದ ಪುತ್ರನು। **ಏತಿ**—ಉತ್ಪನ್ನನಾಗುತ್ತಾನೆ। **ಯುಷ್ಮತ್**—ನಿಮ್ಮ ಅನುಗ್ರಹದಿಂದಲೇ । **ಸದಶ್ವಃ**—ಉತ್ತಮವಾದ ಅಶ್ವವುಳ್ಳವನೂ। **ಸುವೀರಃ**—ಉತ್ತಮವಾದ ವೀರ್ಯವುಳ್ಳವನೂ ಆದ ಪುತ್ರನ ಉತ್ಪತ್ತಿಯಾಗುತ್ತದೆ.

॥ ಭಾವಾರ್ಥ ॥

ಪೂಜ್ಯರಾದ ಎಲೈ ಮರುತ್ತುಗಳೇ, ನೀವು ಯಜ್ಞಕರ್ತನಿಗೆ ಪ್ರಕಾಶಮಾನನೂ, ಶತ್ರುನಾಶಕನೂ, ವಿಭ್ವನಿಂದ ನಿರ್ಮಿತನಾದವನೂ ಆದ ಪುತ್ರನನ್ನು ಉತ್ಪನ್ನವಾಗುವಂತೆ ಮಾಡುತ್ತೀರಿ. ಎಲೈ ಮರುತ್ತುಗಳೇ, ನಿಮ್ಮ ಅನುಗ್ರಹದಿಂದ ಮುಷ್ಟಿಶಕ್ತಿಯಿಂದಲೇ ಶತ್ರುಗಳನ್ನು ನಾಶಮಾಡತಕ್ಕವನೂ, ಬಾಹುಬಲದಿಂದ ಜಯವನ್ನು ಹೊಂದತಕ್ಕವನೂ, ಉತ್ತಮವಾದ ಅಶ್ವವುಳ್ಳವನೂ ಮತ್ತು ಉತ್ತಮವಾದ ವೀರ್ಯವುಳ್ಳವನೂ ಆದ ಪುತ್ರನು ಜನಿಸುತ್ತಾನೆ.

English Translation

Adorable Maruts, you cause (a son) to be born to the man (who worships you), a ruler, an over-comer of foes, and modelled by Vibhwan. from you, Maruts comes a valiant descendant, strong-fisted, mighty-aimed, from you (he acquires) an excellent steed.

॥ ವಿಶೇಷವಿಷಯಗಳು ॥

**ವಿಭ್ವತಷ್ಟಂ—ವಿಭ್ವಾನಾಮ ಋಭೂಣಾಂ ಮಧ್ಯಮಃ । ಸ ಕುಶಲೀ । ತೇನ ನಿರ್ಮಿತಂ । ಅತ್ಯಂತರೂಪವಂತಮಿತ್ಯರ್ಥಃ।** ಪೂರ್ವದಲ್ಲಿ ಅಂಗಿರಾಋಷಿಗೆ ನೀತಿಮಂಜರಿ ಎಂಬ ಪುತ್ರನಿದ್ದನು. ಇವನ ವಂಶದಲ್ಲಿ ಸುಧನ್ವಾ ಎಂಬ ಋಷಿಗೆ ಋಭು, ವಿಭು, ವಾಜ ಎಂಬ ಮೂವರು ಪುತ್ರರಿದ್ದರು ಇವರು ಸತ್ಕರ್ಮಾನುಷ್ಠಾನ, ದೇವತೆಗಳಿಗೆ ಸಹಾಯಮಾಡುವುದು, ಮೊದಲಾದ ಒಳ್ಳೆಯ ಕೆಲಸಗಳಿಂದ ದೇವತೆಗಳಜನ್ಮವನ್ನು ಪಡೆದರು ಅಥವಾ ದೇವತೆಗಳಾದರು ಎಂದು ಪ್ರತೀತಿ ಇದೆ. ಈ ಋಭು ಮೊದಲಾದ ಸುಧನ್ವನ ಮೂವರು ಪುತ್ರರಿಗೂ ಒಟ್ಟಿಗೆ ಋಭುಗಳೆಂದು ಜ್ಯೇಷ್ಠಪುತ್ರನ ಹೆಸರಿನಿಂದಲೇ ಕರೆಯುವ ರೂಢಿ ಇದೆ. ಪ್ರಕೃತ ಋಕ್ಕಿನಲ್ಲಿ ನಿರ್ದೇಶಿಸಿರುವ ವಿಭು ಎಂಬುವನು ಈ ಋಭುಗಳಲ್ಲಿ ಹಿರಿಯವನೂ ಅಲ್ಲ ಕಿರಿಯವನೂ ಅಲ್ಲ, ಮಧ್ಯಮನು. ಇವನು ವಸ್ತುನಿರ್ಮಾಣ ಕಾರ್ಯದಲ್ಲಿ ಬಹಳ ಕುಶಲನಾದ್ದರಿಂದ ಇವನಿಂದ ನಿರ್ಮಿತವಾದ ಅಥವಾ ದತ್ತವಾದ ಪುತ್ರನು ಅತ್ಯಂತ ರೂಪವಂತನೆಂದು ಪ್ರಸಿದ್ಧವು. ಅಂತಹ ಪುತ್ರನನ್ನು ಉತ್ಪನ್ನಮಾಡಬೇಕೆಂದು ಇಲ್ಲಿ ವಿಭ್ವತಷ್ಟಂ ಎಂಬ ಶಬ್ದಪ್ರಯೋಗದಿಂದ ಮರುತ್ತುಗಳನ್ನು ಪ್ರಾರ್ಥಿಸಲಾಗಿದೆ.

**ಮುಷ್ಟಿಹಾ, ಬಾಹುಜೂತಃ—ಮುಷ್ಟಿಶಬ್ದೋ ಬಾಹೂಪಲಕ್ಷಕಃ ॥ ಸ್ವಭುಜಬಲೇನೈವ ಹಂತಾ ಶತ್ರೂಣಾಂ । ತದೇವೋಚ್ಯತೇ । ಬಾಹುಜೂತಃ ಬಾಹುಃ ಪ್ರೇರಕಃ ಶತ್ರೂಣಾಂ ಯಸ್ಯ ತಾದೃಶಃ ಪುತ್ರ ಇತಿ ।** ಮುಷ್ಟಿಶಬ್ದಕ್ಕೆ ಬಾಹುವೆಂದೂ ಅರ್ಥವು ಅಥವಾ ಮುಷ್ಟಿಯೆಂದರೆ ಕೈಯಿನ ಐದು ಬೆರಳುಗಳನ್ನು ಒಳಕ್ಕೆ ಬರುವಂತೆ ಮಡಿಸಿ ಆ ಕೈಯನ್ನೇ ಆಯುಧದಂತೆ ಉಪಯೋಗಿಸುವುದಕ್ಕೆ ಮುಷ್ಟಿಯೆಂದು ಹೆಸರು. ಯಾವ ವಿಧವಾದ ಆಯುಧವನ್ನೂ ಉಪಯೋಗಿಸದೆ ಕೇವಲ ಬಾಹುಬಲದಿಂದ ಮುಷ್ಟಿಯನ್ನೇ ಆಯುಧವನ್ನಾಗಿ ಉಪಯೋಗಿಸಿ ಶತ್ರುಗಳನ್ನು ಸಂಹರಿಸುವ ಶಕ್ತಿಯುಳ್ಳ ಪುತ್ರನೆಂದರ್ಥವು. ಆಯುಧಸಹಾಯವಿಲ್ಲದೆ ಮುಷ್ಟಿಪ್ರಹಾರಗಳಿಂದಲೇ ಮಲ್ಲಯುದ್ಧವನ್ನು ಮಾಡಬೇಕಾದರೆ ಶರೀರದಲ್ಲಿ ಪುಷ್ಟಿಯೂ, ಶಕ್ತಿಯೂ ಬಹಳವಾಗಿರಬೇಕು. ಇಂತಹ ಅತ್ಯಂತ ಬಲಶಾಲಿಯೂ, ದೃಢಾಂಗನೂ ಆದ ಪುತ್ರನನ್ನು ಅನುಗ್ರಹಿಸಬೇಕೆಂದು ಮರುದ್ದೇವತೆಗಳನ್ನು ಪ್ರಾರ್ಥಿಸಲು ಪ್ರಕೃತಋಕ್ಕಿನಲ್ಲಿ **ಮುಷ್ಟಿಹಾ, ಬಾಹುಜೂತಃ** ಎಂಬ ಶಬ್ದಗಳನ್ನು ಉಪಯೋಗಿಸಲಾಗಿದೆ.

॥ ಸಂಹಿತಾಪಾಠಃ ॥

ಅರಾಇವೇದಚರಮಾ ಅಹೇವ ಪ್ರಪ್ರ ಜಾಯಂತೇ ಅಕವಾ ಮಹೋಭಿಃ ।
ಪೃಶ್ನೇಃ ಪುತ್ರಾ ಉಪಮಾಸೋ ರಭಿಷ್ಠಾಃ ಸ್ವಯಾ ಮತ್ಯಾ ಮರುತಃ ಸಂ
ಮಿಮಿಕ್ಷುಃ ॥ ೫ ॥

॥ ಪದಪಾಠಃ ॥

ಅರಾಃಽಇವ । ಇತ್ । ಅಚರಮಾಃ । ಅಹಾಽಇವ । ಪ್ರಽಪ್ರ । ಜಾಯಂತೇ । ಅಕವಾಃ । ಮಹಃಽಭಿಃ ।
ಪೃಶ್ನೇಃ । ಪುತ್ರಾಃ । ಉಪಽಮಾಸಃ । ರಭಿಷ್ಠಾಃ । ಸ್ವಯಾ । ಮತ್ಯಾ । ಮರುತಃ । ಸಂ । ಮಿಮಿಕ್ಷುಃ॥

॥ ಸಾಯಣಭಾಷ್ಯಂ ॥

ವರುಣಪ್ರಘಾಸೇ ಮಾರುತ್ಯಾ ಆಮಿಕ್ಷಾಯಾ ಅರಾ ಇವೇತಿ ಯಾಜ್ಯಾ । ಸೂತ್ರಿತಂ ಚ । ಅರಾ ಇವೇದಚರಮಾ ಅಹೇವೇಮಂ ಮೇ ವರುಣ ಶ್ರುಧಿ । ಆ-೨-೧೭ । ಇತಿ ॥ ಏಕಾದಶಿನೇ ಮಾರುತೇ ಪಶಾವೇಷೈವ ಪಶುಪುರೋಡಾಶಸ್ಯ ಯಾಜ್ಯಾ । ಸೂತ್ರಿತಂ ಚ । ಅರಾ ಇವೇದಚರಮಾ ಅಹೇವ ಯಾ ವ ಶರ್ಮ ಶಶಮಾನಾಯ ಸಂತಿ । ಆ. ೩-೭ । ಇತಿ ॥

ಅರಾ ಇವೇತ್ ರಥಶಂಕವ ಇವಾಚರಮಾ ಅನಿಕೃಷ್ಟಾಃ । ಸರ್ವಸಮಾಃ ಸಹೈವೋತ್ಪನ್ನಾ ಇತ್ಯರ್ಥಃ । ಅಹೇವಾಹಾನೀವ । ದಿವಸಾ ಯಥಾ ಸರ್ವೇಽಪಿ ಷಷ್ಟಿಘಟಿಕಾತ್ಮಕಾಸ್ತದ್ವತ್ಸಪ್ತಸಂಖ್ಯೋಪೇತಸಪ್ತಗಣರೂಪೇಣ ಸಮಾ ಇತ್ಯರ್ಥಃ । ಅನೇನ ದೃಷ್ಟಾಂತದ್ವಯೇನ ವೈಸದೃಶ್ಯಾಭಾವಃ ಪ್ರತಿಪಾದಿತಃ । ಏವಮುಕ್ತಲಕ್ಷಣಾ ಮಹೋಭಿಸ್ತೇಜೋಭಿಃ ಪ್ರಪ್ರ ಜಾಯಂತೇ । ಪ್ರಕರ್ಷೇಣ ಪ್ರಾದುರ್ಭವಂತಿ ॥ ಏಕಃ ಪ್ರಶಬ್ದಃ ಪಾದಪೂರಣ ಇತ್ಯುಪಸರ್ಗಾಭ್ಯಾಸಃ ಸ ಚ ಪೂರಣಃ ॥ ತೇ ಚಾಕವಾ ಅನಲ್ಪಾಃ। ಯದ್ವಾ ಮಹೋಭಿರಿತ್ಯಸ್ಯ ವಿಶೇಷಣಂ । ಪೃಶ್ನೇರ್ಮಾಧ್ಯಮಿಕಾಯಾ ವಾಚೋ ಗೋರೂಪಾಯಾ ಅಂತರಿಕ್ಷಸ್ಯ ವಾ ಪುತ್ರಸ್ಥಾನೀಯಾ ಉಪಮಾಸಃ ಪ್ರತ್ಯೇಕಂ ಸಮಾನಾ ರಭಿಷ್ಠಾಃ ಪ್ರಕೃಷ್ಟವೇಗಾಃ । ಏವಂ ಮಹಾನುಭಾವಾ ಮರುತಃ ಸ್ವಯಾ ಮತ್ಯಾ ಸ್ವಕೀಯಯೈವಾನುಗ್ರಹಬುದ್ಧ್ಯಾ ಸಂಮಿಮಿಕ್ಷುಃ । ವೃಷ್ಟ್ಯಾ ಸಮ್ಯಕ್ ಸಿಂಚಂತಿ ॥

॥ ಪ್ರತಿಪದಾರ್ಥ ॥

**ಅರಾ ಇವೇತ್**—ರಥಚಕ್ರದ ಅರಗಳಂತೆ । **ಅಚರಮಾಃ**—ಒಬ್ಬರಿಗೊಬ್ಬರು ನಿಕೃಷ್ಟರಾಗಿಲ್ಲದೆಯೂ। **ಅಹೇವ**—ಅಹಸ್ಸುಗಳಂತೆ ಎಲ್ಲರೂ ಒಂದೇ ಸಮನಾಗಿರುವವರೂ ಆದ ಮರುತ್ತುಗಳು । **ಅಕವಾಃ**—ಅನಲ್ಪರಾಗಿ

(ಮಹತ್ವವುಳ್ಳವರಾಗಿ) | **ಮಹೋಭಿಃ**—ಮಹತ್ತಾದ ತೇಜಸ್ಸುಗಳೊಡನೆ | **ಪ್ರಪ್ರ ಜಾಯಂತೇ**—ಒಟ್ಟಿಗೆ ಒಂದೇ ರೀತಿಯಲ್ಲಿ ಆವಿರ್ಭವಿಸುತ್ತಾರೆ | **ಉಪಮಾಸಃ**—ಒಬ್ಬರಿಗೊಬ್ಬರ ಹೋಲಿಕೆಯುಳ್ಳವರೂ | **ರಭಿಷ್ಠಾಃ**—ಉತ್ತಮವಾದ ವೇಗವುಳ್ಳವರೂ | **ಪೃಶ್ನೇಃ ಪುತ್ರಾಃ**—ಪೃಶ್ನಿಯ ಪುತ್ರರೂ ಆದ | **ಮರುತಃ**—ಮರುತ್ತುಗಳು | **ಸ್ವಯಾ ಮತ್ಯಾ** - ಸ್ವಯಂಪ್ರೇರಿತವಾದ ಅನುಗ್ರಹಬುದ್ಧಿಯಿಂದಲೇ | **ಸಂ ಮಿಮಿಕ್ಷುಃ**—ವೃಷ್ಟಿಯನ್ನು ಸುರಿಸುತ್ತಾರೆ.

॥ ಭಾವಾರ್ಥ ॥

ರಥಚಕ್ರದ ಅರಗಳಂತೆ ಒಬ್ಬಗೊಬ್ಬರು ನಿಕೃಷ್ಟರಾಗಿಲ್ಲದೆಯೂ ಅಹಸ್ಸುಗಳಂತೆ ಎಲ್ಲರೂ ಒಂದೇ ಸಮನಾಗಿರುವವರೂ ಆದ ಮರುತ್ತುಗಳು ಮಹತ್ವವುಳ್ಳವರಾಗಿ ತಮ್ಮ ಮಹತ್ತಾದ ತೇಜಸ್ಸುಗಳೊಡನೆ ಒಟ್ಟಿಗೆ ಒಂದೇ ರೀತಿಯಲ್ಲಿ ಆವಿರ್ಭವಿಸುತ್ತಾರೆ. ಒಬ್ಬರಿಗೊಬ್ಬರ ಹೋಲಿಕೆಯುಳ್ಳವರೂ, ಉತ್ತಮವಾದ ವೇಗವುಳ್ಳವರೂ, ಪೃಶ್ನಿಪುತ್ರರೂ ಆದ ಮರುತ್ತುಗಳು ಸ್ವಯಂಪ್ರೇರಿತವಾದ ಅನುಗ್ರಹಬುದ್ಧಿಯಿಂದಲೇ ವೃಷ್ಟಿಯನ್ನು ಸುರಿಸುತ್ತಾರೆ.

## English Translation

Like the spokes of a wheel, none (of you) are inferior (to the rest), but equal as days (of like duration): the sons of Prishni are born all alike, none inferior in splendour: rapid in speed, the Maruts, of their own free favour, send down (the rains)

॥ ವಿಶೇಷವಿಷಯಗಳು ॥

ವರುಣಪ್ರಘಾಸವೆಂಬ ಇಷ್ಟಿಯಲ್ಲಿ **ಆಮಿಕ್ಷಾ ಮರುತಃ** ಎಂಬ ದೇವತೆಗಳನ್ನುದ್ದೇಶಿಸಿ ಮಾಡುವ ಹೋಮದಲ್ಲಿ **ಅರಾ ಇವೇದಚರಮಾ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ-**ಅರಾ ಇವೇದಚರಮಾ ಅಹೇವೇಮಂ ಮೇ ವರುಣ ಶ್ರುಧಿ** ಎಂಬ ಸೂತ್ರದಿಂದ (ಆ ೨-೧೭) ವಿವೃತವಾಗಿರುವುದು. ಏಕಾದಶಿನ್ಯಾಮಾರುತಸಂಬಂಧವಾದ ಪಶುಯಾಗದಲ್ಲಿಯೂ ಈ ಋಕ್ಕನ್ನೇ ಪಶುಪುರೋಡಾಶಹೋಮದಲ್ಲಿ ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ-**ಅರಾ ಇವೇದಚರಮಾ ಅಹೇವ ಯಾ ವಃ ಶರ್ಮ ಶಶಮಾನಾಯ ಸಂತಿ** ಎಂಬ ಸೂತ್ರದಿಂದ (ಆ. ೩-೭) ವಿವೃತವಾಗಿರುವುದು.

ಮರುದ್ದೇವತೆಗಳಲ್ಲಿ ಎಲ್ಲರೂ ಒಂದೇ ವಿಧವಾಗಿ ಇರುವರೆಂಬ ವಿಷಯದಲ್ಲಿ ಎರಡು ಉಪಮಾನಗಳನ್ನು ಈ ಋಕ್ಕಿನಲ್ಲಿ ವಿವರಿಸಿದೆ. **ಅರಾಇವೇತ್ ಅಚರಮಾಃ** ರಥಚಕ್ರಗಳಲ್ಲಿ ಶಂಕುಗಳು (spokes) ಯಾವ ರೀತಿ ಹೆಚ್ಚು ಕಡಿಮೆ ಇಲ್ಲದೆ ಎಲ್ಲವೂ ಒಂದೇ ಸಮನಾಗಿಯೂ, ಒಂದೇ ವಿಧವಾಗಿಯೂ ಇರುವವೋ ಅದರಂತೆ ಮರುದ್ದೇವತೆಗಳಲ್ಲಿ ಪ್ರತಿಯೊಬ್ಬರೂ ಒಂದೇ ವಿಧವಾಗಿರುವರು. ಆಕಾರದಲ್ಲಾಗಲಿ, ಗುಣದಲ್ಲಾಗಲಿ, ರೂಪದಲ್ಲಾಗಲಿ, ಮಹಿಮೆಯಲ್ಲಾಗಲಿ, ಉತ್ಪತ್ತಿಯಲ್ಲಾಗಲಿ ಒಬ್ಬರಿಗೊಬ್ಬರಿಗೆ ಯಮಾವಿಧವಾದ ವ್ಯತ್ಯಾಸವೂ ಇರುವುದಿಲ್ಲ. ಈ ವಿಷಯವನ್ನು ರಥಚಕ್ರದ ಶಂಕುಗಳ ದೃಷ್ಟಾಂತದಿಂದ ವಿವರಿಸಿರುವುದು ಸಮಂಜಸವಾಗಿದೆ. ಅದರಂತೆಯೇ **ಅಹೇವ** ಎಂಬ ಇನ್ನೊಂದು ದೃಷ್ಟಾಂತವೂ ಅತ್ಯಂತ ಸಮಂಜಸವಾಗಿರುವುದು. ಅಹಸ್ಸುಗಳು ಎಂದರೆ ದಿನಗಳು ಒಂದೇ ವಿಧವಾಗಿರುವವು. ನಿನ್ನೆಯಂತೆ ಈ ದಿನ, ಈ ದಿನದಂತೆ ನಾಳೆ, ನಾಳೆಯಂತೆ ನಾಡಿದ್ದು ಇತ್ಯಾದಿಯಾಗಿ ಪ್ರತಿದಿನವೂ ಪ್ರಕಾಶದಲ್ಲಿಯಾಗಲಿ,

ಪರಿಮಾಣದಲ್ಲಾಗಲಿ ಯಾವ ವ್ಯತ್ಯಾಸವೂ ಇಲ್ಲದೆ ಒಂದೇ ವಿಧವಾಗಿರುವುದು. ಆದ್ದರಿಂದ ಮರುದ್ದೇವತೆಗಳ ವಿಷಯದಲ್ಲಿ ಈ ಎರಡು ವಿಧವಾದ ದೃಷ್ಟಾಂತಗಳು ಬಹು ಚೆನ್ನಾಗಿ ಒಪ್ಪುವವು.

**ಸ್ವಯಾ ಮತ್ಯಾ ಮರುತಃ ಸಂ ಮಿಮಿಕ್ಷುಃ**—ಸ್ವಕೀಯೈವಾನುಗ್ರಹಬುದ್ಧ್ಯಾ ವೃಷ್ಟ್ಯಾ ಸಮ್ಯಕ್ ಸಿಂಚಂತಿ । ಈ ಮರುದ್ದೇವತೆಗಳು ತಮ್ಮ ಸ್ವಬುದ್ಧಿಯಿಂದಲೇ ಎಂದರೆ ಇತರರ ನಿರ್ಬಂಧ ಅಥವಾ ಪ್ರೇರಣೆ ಇಲ್ಲದೆ ಜನಗಳಿಗೆ ಅನುಗ್ರಹಮಾಡಬೇಕೆಂಬ ಒಳ್ಳೆಯ ಬುದ್ಧಿಯಿಂದಲೇ ವೃಷ್ಟಿಯನ್ನು ಸುರಿಸುತ್ತಾರೆ ಎಂದಭಿಪ್ರಾಯವು.

॥ ಸಂಹಿತಾಪಾಠಃ ॥

ಯತ್ಪ್ರಾಯಾಸಿಷ್ಟ ಪೃಷತೀಭಿರಶ್ವೈರ್ವೀಳುಪವಿಭಿರ್ಮರುತೋ ರಥೇಭಿಃ।
ಕ್ಷೋದಂತ ಆಪೋ ರಿಣತೇ ವನಾನ್ಯವೋಸ್ರಿಯೋ ವೃಷಭಃ ಕ್ರಂದತು ದ್ಯೌಃ ॥ ೬ ॥

॥ ಪದಪಾಠಃ ॥

ಯತ್ । ಪ್ರ । ಅಯಾಸಿಷ್ಟ । ಪೃಷತೀಭಿಃ । ಅಶ್ವೈಃ । ವೀಳುಪವಿಽಭಿಃ । ಮರುತಃ । ರಥೇಭಿಃ ।
ಕ್ಷೋದಂತೇ । ಆಪಃ । ರಿಣತೇ । ವನಾನಿ । ಅವ । ಉಸ್ರಿಯಃ । ವೃಷಭಃ । ಕ್ರಂದತು । ದ್ಯೌಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ಮರುತೋ ಯದ್ಯದಾ ಪ್ರಾಯಾಸಿಷ್ಟ ಪ್ರಗಚ್ಛಥ ಪೃಷತೀಭಿಃ ಪೃಷತ್ಸಂಜ್ಞಕೈರಶ್ವೈರ್ವಾಹನಸಾಧನೈರಶ್ವೈಃ । ಅಶ್ವಶಬ್ದೋಽತ್ರ ವಾಹನಸಾಮಾನ್ಯವಚನಃ । ಅತಃ ಪುಲ್ಲಿಂಗತಾ । ತಥಾನ್ಯತ್ರ । ಯದಶ್ವಾನ್ಧೂರ್ಷು ಪೃಷತೀರಯುಗ್ಧ್ವಂ । ಋಗ್ವೇ-೫.೫೫-೬ । ರೋಹಿದಶ್ವೋಽಜಾಶ್ವ ಇತಿ ಸಮಾನಾಧಿಕರಣ್ಯಪ್ರಯೋಗಃ । ಏವಂಭೂತಾಶ್ವಯುಕ್ತೈರ್ವೀಳುಪವಿಭಿರ್ದೃಢರಥನೇಮಿಭೀ ರಥೇಭಿಃ ಪ್ರಾಯಾಸಿಷ್ಟ। ಯದ್ವಾ। ಅಶ್ವೈ ರಥೈಶ್ಚ ಸಹ ಮರುತೋ ಯದಾ ಪ್ರಾಯಾಸಿಷ್ಟ ತದಾಪಃ ಕ್ಷೋದಂತೇ। ಕ್ಷರಂತಿ। ವನಾನಿ ವೃಕ್ಷಸಮೂಹಾ ರಿಣತೇ । ಹಿಂಸ್ಯಂತೇ । ವೇಗೇನ ಭಜ್ಯಂತೇ । ಉಸ್ರಿಯಃ । ಉಸ್ರಾಃ ಸೂರ್ಯರಶ್ಮಯಃ । ತತ್ಸಂಬಂಧೀ ಪರ್ಜನ್ಯೋ ವೃಷಭೋಽಪಾಂ ವರ್ಷಿತಾ ದ್ಯೌರ್ದ್ಯೋತಮಾನೋಽವ ಕ್ರಂದತು। ಅವಾಙ್ಮುಖಂ ಶಬ್ದಯತು ವೃಷ್ಟ್ಯರ್ಥಂ ॥

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುತ್ತುಗಳೇ । **ಯತ್**—ಯಾವಾಗ । **ಪೃಷತೀಭಿಃ**—ಪೃಷತ್ಸಂಜ್ಞಕಗಳಾದ । **ಅಶ್ವೈಃ**—ಅಶ್ವಗಳಿಂದ ಯೋಜಿತವಾದವೂ । **ವೀಳುಪವಿಭಿಃ**—ದೃಢವಾದ ಇರಚಿಗಳುಳ್ಳವೂ ಆದ । **ರಥೇಭಿಃ**—

ರಥಗಳೊಡನೆ । **ಪ್ರಾಯಾಸಿಷ್ಟ**—ಹೊರಡುವಿರೋ ( ಆಗ ) । **ಆಪಃ**—ಉದಕಗಳು । **ಕ್ಷೋದಂತೆ**—ಪ್ರವಹಿಸಿ ಹರಿಯುತ್ತವೆ । **ವನಾನಿ**—ವೃಕ್ಷಸಮೂಹಗಳು । **ರಿಣತೇ**—ಹಿಂಸಿತವಾಗುತ್ತವೆ। **ಉಸ್ರಿಯಃ**—ಸೂರ್ಯರಶ್ಮಿಗಳಿಂದ ಪ್ರೇರಿತನಾದವನೂ । **ವೃಷಭಃ**—ವೃಷ್ಟಿಕಾರಕನೂ ಆದ ಪರ್ಜನ್ಯನು । **ದ್ಯೌಃ**—ಪ್ರಕಾಶಮಾನವಾಗಿ । **ಅವ-ಕ್ರಂದತು**—ಅಧೋಮುಖವಾಗಿ ಶಬ್ದಮಾಡಲಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಪೃಷತ್ಸಂಜ್ಞಕಗಳಾದ ಅಶ್ವಗಳಿಂದ ಯೋಜಿತವಾದವೂ, ದೃಢವಾದ ಇರಚಿಗಳುಳ್ಳವೂ ಆದ ರಥಗಳೊಡನೆ ಯಾವಾಗ ಹೊರಡುವಿರೋ ಆಗ ಉದಕಗಳು ಪ್ರವಹಿಸಿ ಹರಿಯತ್ತವೆ. ವೃಕ್ಷಸಮೂಹಗಳು ಹಿಂಸಿತವಾಗುತ್ತವೆ. ಸೂರ್ಯರಶ್ಮಿಗಳಿಂದ ಪ್ರೇರಿತನಾದವನೂ, ವೃಷ್ಟಿಕಾರಕನೂ ಆದ ಪರ್ಜನ್ಯನು ಪ್ರಕಾಶಮಾನವಾಗಿ ವೃಷ್ಟ್ಯರ್ಥವಾಗಿ ಅಧೋಮುಖವಾಗಿ ಶಬ್ದವನ್ನುಂಟುಮಾಡಲಿ.

## English Translation

When, Maruts, you come with stout-axled cars drawn by spotted steeds, then the waters descend, the forests are damaged, and the bright showerer (of the rain), influenced by the solar rays, may emit a downward sound.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ವೃಷ್ಟಿವರ್ಣಣವನ್ನು ವಿವರಿಸಲಾಗಿದೆ ಮರುದ್ದೇವತೆಗಳು ತಮ್ಮ ರಥದಲ್ಲಿ ಕುಳಿತು ಹೊರಡುವಾಗ ಎಂದರೆ ಅಂತರಿಕ್ಷವು ಕಪ್ಪುಮೋಡಗಳಿಂದ ಆಚ್ಛಾದಿತವಾಗಿ ಚಂಡಮಾರುತವು ಅತ್ಯಂತ ರಭಸದಿಂದ ಬೀಸುತ್ತಿರುವಾಗ ಅಂತರಿಕ್ಷದಿಂದ ವೃಷ್ಟಿಯು (ಮಳೆಯು) ಭೂಮಿಯ ಮೇಲೆ ಬಿದ್ದು ಪ್ರವಾಹರೂಪದಲ್ಲಿ ಹರಿಯುತ್ತದೆ. ಗಾಳಿಯು ಅತ್ಯಂತ ವೇಗವಾಗಿ ಬೀಸುವುದರಿಂದ ವೃಕ್ಷಗಳು ಅಲ್ಲಾಡುತ್ತಾ, ಕೆಲವು ಸಮಯಗಳಲ್ಲಿ ಬುಡಸಹಿತವಾಗಿ ಉರುಳಿಸಲ್ಪಡುತ್ತಾ ಹಿಂಸೆಗೆ ಒಳಗಾಗುತ್ತವೆ. ಇಂತಹ ಸನ್ನಿವೇಶದಲ್ಲಿ ವೃಷ್ಟಿಕಾರಕನಾದ ಪರ್ಜನ್ಯನು ಗುಡುಗು ಸಿಡಿಲು ಮೊದಲಾದ ಭಯಂಕರಶಬ್ದಗಳನ್ನು ವೃಷ್ಟಿಸೂಚಕವಾಗಿ ಮಾಡುವನು ಎಂಬ ವೃಷ್ಟಿವಿವರಣೆಯು ಇಲ್ಲಿ ಉಕ್ತವಾಗಿದೆ.

**ಪೃಷತೀಭಿಃ ಅಶ್ವೈಃ—ಪೃಷತ್ಸಂಜ್ಞಕೈರಶ್ವೈರ್ವಾಹನಸಾಧನೈರಶ್ವೈಃ। ಅಶ್ವಶಬ್ದೋಽತ್ರ ವಾಹನ-ಸಾಮಾನ್ಯವಚನಃ** । ದೇವತೆಗಳ ನಾನಾವಿಧವಾಹನಗಳನ್ನು ವಿವರಿಸುವಾಗ ಯಾಸ್ಕರು **ಪೃಷತ್ಯೋ ಮರುತಾಂ** ಬಿಳೀಚಿಕ್ಕಿಗಳುಳ್ಳ ಜಿಂಕೆಗಳೇ ಮರುದ್ದೇವತೆಗಳ ವಾಹನಗಳು (ನಿ. ೨-೨೮) ಎಂದು ಹೇಳಿರುವರು.

**ಯದಶ್ವಾನ್ಧೂರ್ಷು ಪೃಷತೀರಯುಗ್ಧ್ವಂ ಹಿರಣ್ಯಯಾನ್ಪ್ರತ್ಯತ್ಕಾ ಅಮುಗ್ಧ್ವಂ** ।

(ಋ ಸಂ. ೫-೫೫.೬)

ಎಂಬ ಋಕ್ಕಿನಲ್ಲಿ ಪೃಷತೀಃ ಎಂಬ ನಿಮ್ಮಅಶ್ವಗಳನ್ನು ರಥಕ್ಕೆ ಹೂಡಿರಿ ಎಂದು ಹೇಳಿದೆ ಪ್ರಕೃತ ಋಕ್ಕಿನಲ್ಲಿ **ಪೃಷತೀಭಿಃ ಅಶ್ವೈಃ** ಎಂಬ ಎರಡು ಶಬ್ದಗಳಿವೆ. **ಪೃಷತೀಭಿಃ** ಎಂದರೆ ಮರುದ್ದೇವತೆಗಳ ವಾಹನಗಳೆಂದು ಅರ್ಥವಿರುವಾಗ

ಅಶ್ವೈಃ ಎಂಬ ಶಬ್ದಪ್ರಯೋಗವು ವ್ಯರ್ಥವಲ್ಲವೇ ಎಂದರೆ ಇಲ್ಲಿ ಅಶ್ವಶಬ್ದಕ್ಕೆ ವಾಹನಸಾಮಾನ್ಯವೆಂದೇ ಭಾಷ್ಯಕಾರರು ಅರ್ಥವಿವರಣೆಮಾಡಿರುವರು. ಎಂದರೆ ಮರುದ್ದೇವತೆಗಳನ್ನು ವಹಿಸತಕ್ಕ ಪೃಷತೀ ಎಂಬ ಅಶ್ವಗಳು (ಜಿಂಕೆಗಳು) ಎಂದು ಈ ಎರಡು ಶಬ್ದಗಳ ಅರ್ಥವಿರುವುದು ಎಂದು ತಿಳಿಯಬೇಕು.

॥ ಸಂಹಿತಾಪಾಠಃ ॥

ಪ್ರಥಿಷ್ಟ ಯಾಮನ್ಪೃಥಿವೀ ಚಿದೇಷಾಂ ಭರ್ತೇವ ಗರ್ಭಂ ಸ್ವಮಿಚ್ಛವೋ ಧುಃ ।

ವಾತಾನ್ಹ್ಯಶ್ವಾನ್ಧುರ್ಯಾಯುಯುಜ್ರೇ ವರ್ಷಂ ಸ್ವೇದಂ ಚಕ್ರಿರೇ ರುದ್ರಿಯಾಸಃ ॥ ೭ ॥

॥ ಪದಪಾಠಃ ॥

ಪ್ರಥಿಷ್ಟ । ಯಾಮನ್ । ಪೃಥಿವೀ । ಚಿತ್ । ಏಷಾಂ । ಭರ್ತಾಽಇವ । ಗರ್ಭಂ । ಸ್ವಂ । ಇತ್ । ಶವಃ । ಧುಃ ।

ವಾತಾನ್ । ಹಿ । ಅಶ್ವಾನ್ । ಧುರಿ । ಆಽಯುಯುಜ್ರೇ । ವರ್ಷಂ । ಸ್ವೇದಂ । ಚಕ್ರಿರೇ । ರುದ್ರಿಯಾಸಃ ॥

॥ ಸಾಯಣಭಾಷ್ಯಂ ॥

ಏಷಾಂ ಮರುತಾಂ ಯಾಮನ್ಯಾಮನಿ ಗಮನೇ ಪೃಥಿವೀ ಚಿತ್ ಭೂಮಿಃ । ಚಿದಿತಿ ಪೂರಣಃ । ಪ್ರಥಿಷ್ಟ । ಪ್ರಖ್ಯಾತಾಭವತ್ । ಗರ್ಭಯೋಗ್ಯಾಭವದಿತ್ಯರ್ಥಃ । ತೇ ಚ ಮರುತೋ ಭರ್ತಾ ಲೌಕಿಕಃ ಪತಿರ್ಗರ್ಭಮಿವ ಭಾರ್ಯಾಯಾಸ್ತಥಾ ಭೂಮ್ಯಾಃ ಸ್ವಮಿತ್ಸ್ವಭೂತಂ ಗರ್ಭಂ ಗರ್ಭಸ್ಥಾನೀಯಂ ಶವ ಉದಕಂ ಧುಃ । ಸ್ಥಾಪಿತವಂತಃ । ಹಿ ಯಸ್ಮಾದ್ವಾತಾತ್ ಗಂತ್ಯಾನಶ್ವಾನ್ ಧುರಿ ರಥಸಂಬಂಧಿನ್ಯಾ-ಯುಯುಜ್ರೇ ಆಯೋಜಿತವಂತಃ ತಸ್ಮಾದ್ವರ್ಷಂ ಸ್ವೇದಂ ಸ್ವೇದಸ್ಥಾನೀಯಂ ವೃಷ್ಟಿಸಂಸ್ಥಾನೀಯಂ ಚಕ್ರಿರೇ ಕುರ್ವಂತಿ ರುದ್ರಿಯಾಸೋ ರುದ್ರಪುತ್ರಾಃ ॥

॥ ಪ್ರತಿಪದಾರ್ಥ ॥

**ಏಷಾಂ**—ಈ ಮರುತ್ತುಗಳ । **ಯಾಮನ್**—ಗಮನ ಕಾಲದಲ್ಲಿ । **ಪೃಥಿವೀ**—ಭೂಮಿಯು । **ಪ್ರಥಿಷ್ಟ**—ಫಲವಾತ್ತಾಗಿ ಆಯಿತು । **ಭರ್ತಾ**—ಲೌಕಿಕವಾದ ಪತಿಯು । **ಗರ್ಭಂ ಇವ**—ತನ್ನ ಭಾರ್ಯೆಯಲ್ಲಿ ಗರ್ಭವನ್ನು ಸ್ಥಾಪಿಸುವಂತೆ (ಮರುತ್ತುಗಳೂ ಸಹ) । **ಸ್ವಮಿತ್**—ತಮ್ಮ ಗರ್ಭರೂಪವಾದ । **ಶವಃ**—ಉದಕವನ್ನು । **ಧುಃ**—

(ಪೃಥ್ವಿಯಲ್ಲಿ) ಸ್ಥಾಪಿಸಿದ್ದಾರೆ । **ಹಿ**—ಆದುದರಿಂದಲೇ । **ವಾತಾನ್**—ವಾಯುವಿನಂತೆ ವೇಗಶಾಲಿಗಳಾದ । **ಅಶ್ವಾನ್**—ತಮ್ಮ ಅಶ್ವಗಳನ್ನು । **ಧುರಿ**—ರಥದ ನೊಗಕ್ಕೆ । **ಆ ಯುಯುಜ್ರೇ**—ಸೇರಿಸಿಕಟ್ಟಿದ್ದಾರೆ । **ರುದ್ರಿಯಾಸಃ**—ರುದ್ರಪುತ್ರರಾದ ಮರುತ್ತುಗಳು । **ಸ್ವೇದಂ**—ತಮ್ಮ ಸ್ವೇದರೂಪವಾದ । **ವರ್ಷಂ**—ವೃಷ್ಟಿಯನ್ನು। **ಚಿಕ್ರಿರೇ**—ಸುರಿಸುತ್ತಾರೆ.

॥ ಭಾವಾರ್ಥ ॥

ಈ ಮರುತ್ತುಗಳ ಗಮನಕಾಲದಲ್ಲಿ ಭೂಮಿಯು ಫಲವತ್ತಾಗಿ ಆಗುವುದು. ಲೌಕಿಕವಾದ ಪತಿಯು ತನ್ನ ಭಾರ್ಯೆಯಲ್ಲಿ ಗರ್ಭವನ್ನು ಸ್ಥಾಪಿಸುವಂತೆ ಮರುತ್ತುಗಳೂ ಸಹ ತಮ್ಮ ಗರ್ಭರೂಪವಾದ ಉದಕವನ್ನು ಪೃಥ್ವಿಯಲ್ಲಿ ಸ್ಥಾಪಿಸಿದ್ದಾರೆ. ಆದುದರಿಂದಲೇ ವಾಯುವಿನಂತೆ ವೇಗಶಾಲಿಗಳಾದ ತಮ್ಮ ಅಶ್ವಗಳನ್ನು ರಥದ ನೊಗಕ್ಕೆ ಸೇರಿಸಿ ಕಟ್ಟಿದ್ದಾರೆ. ರುದ್ರ ಪುತ್ರರಾದ ಮರುತ್ತುಗಳು ತಮ್ಮ ಸ್ವೇದರೂಪವಾದ ವೃಷ್ಟಿಯನ್ನು ಸುರಿಸುತ್ತಾರೆ.

English Translation

On their approach the earth becomes capable of fertility, and they deposit in her water as their germ, as the husband generates the embryo of the child: they have harnessed their horses fleet as the wind: the sons of Rudra have emitted their perspiration, (the rain).

॥ ವಿಶೇಷವಿಷಯಗಳು ॥

**ಏಷಾಂ ಯಾಮನ್ ಪೃಥಿವೀ ಪೃಥಿಷ್ಪಾ ಚಿತ್**—**ಮರುತಾಂ ಗಮನೇ ಭೂಮಿಃ ಪ್ರಖ್ಯಾತಾ-ಭವತ್** । ಮರುದ್ದೇವತೆಗಳ ಆಗಮನದಿಂದ ಭೂಮಿಯು ಫಲವತ್ತಾಗಿ ಆಯಿತು ಎಂದು ಇಲ್ಲಿ ಹೇಳಿದೆ. ಮರುದ್ದೇವತೆಗಳ ಆಗಮನದಿಂದ ವೃಷ್ಟಿಯು ಯಥೇಷ್ಟವಾಗಿ ಸುರಿದು ಭೂಮಿಯು ಕ್ಲಿನ್ನವಾಗಿ (ನೆನೆದು) ಸಸ್ಯಾದಿಗಳು ಅಂಕುರುವಾಗುವುದಕ್ಕೆ ಸಹಾಯವಾಗುವುದು. ಆದುದರಿಂದ ಮರುದ್ದೇವತೆಗಳ ಆಗಮನವು ಭೂಮಿಯು ಫಲವತ್ತಾಗಲು ಕಾರಣವು ಎಂಬ ವಾದವು ಸಹಜವಾಗಿಯೇ ಇದೆ. ಈ ವಿಷಯದಲ್ಲಿ ಋಷಿಯು ಇಲ್ಲಿ ಒಂದು ದೃಷ್ಟಾಂತವನ್ನು ಹೇಳಿರುವನು—

> **ಭರ್ತೇವ ಗರ್ಭಂ ಸ್ವಮಿಚ್ಛವೋ ಧುಃ—ತೇ ಚ ಮರುತೋ ಲೌಕಿಕಃ ಪತಿಃ ಗರ್ಭಮಿವ ಭಾರ್ಯಾಯಾಸ್ತಥಾ ಭೂಮ್ಯಾಃ ಸ್ವಮಿತ್ ಸ್ವಭೂತಂ ಗರ್ಭಂ ಗರ್ಭಸ್ಥಾನೀಯಂ ಶವ ಉದಕಂ ಧುಃ ಸ್ಥಾಪಿತವಂತಃ** ।

ಲೋಕವ್ಯವಹಾರದಲ್ಲಿ ಪತಿಯು ತನ್ನ ಭಾರ್ಯೆಯಲ್ಲಿ ಗರ್ಭಾಧಾನಮಾಡುವಂತೆಯೂ ಆದರಿಂದ ಪುತ್ರೋತ್ಪತ್ತಿಯಾಗುವಂತೆಯೂ, ಮರುದ್ದೇವತೆಗಳು ಭಾರ್ಯಾರೂಪವಾದ ಭೂಮಿಯಲ್ಲಿ ಉದಕವನ್ನು (ಮಳೆಯನ್ನು) ಸುರಿಸುವುದರಿಂದ ಸಸ್ಯಾದಿಗಳ ಉತ್ಪತ್ತಿಗೆ ಕಾರಣರಾಗಿರುವರು ಎಂಬ ಅಭಿಪ್ರಾಯವು ಇಲ್ಲಿ ಉಕ್ತವಾಗಿದೆ.

**ಸ್ವೇದಂ ವರ್ಷಂ—ಸ್ವೇದಸ್ಥಾನೀಯಂ ವೃಷ್ಟಿಸಂಸ್ತ್ಯಾಯಂ** । ಇಲ್ಲಿ ವೃಷ್ಟಿರೂಪವಾದ ಉದಕವನ್ನು

ಮರುದ್ದೇವತೆಗಳ ಬೆವರಿಗೆ ಹೋಲಿಸಿದೆ. ಬಿಸಲಿನಲ್ಲಿ ಸಂಚರಿಸುತ್ತಿರುವಾಗ ಮನುಷ್ಯನ ಶರೀರದಿಂದ ಬೆವರು ಹೊರಟು ಹೇಗೆ ಜಿನುಗುವುದೋ ಅದರಂತೆ ಮರುದ್ದೇವತೆಗಳು ಆಗಮಿಸುವಾಗ ವೃಷ್ಟಿರೂಪವಾದ ಉದಕವು ಭೂಮಿಯ ಮೇಲೆ ಸುರಿಯುವುದು ಎಂದು ಋಷಿಯು ವರ್ಣಿಸಿದಾನೆ.

॥ ಸಂಹಿತಾಪಾಠಃ ॥

ಹಯೇ ನರೋ ಮರುತೋ ಮೃಳತಾ ನಸ್ತುವೀಮಘಾಸೋ ಅಮೃತಾ ಋತಜ್ಞಾಃ ।

ಸತ್ಯಶ್ರುತಃ ಕವಯೋ ಯುವಾನೋ ಬೃಹದ್ಗಿರಯೋ ಬೃಹದುಕ್ಷಮಾಣಾಃ॥

॥ ಪದಪಾಠಃ ॥

ಹಯೇ । ನರಃ । ಮರುತಃ । ಮೃಳತ । ನಃ । ತುವಿऽಮಘಾಸಃ । ಅಮೃತಾಃ । ಋತऽಜ್ಞಾಃ ।

ಸತ್ಯऽಶ್ರುತಃ । ಕವಯಃ । ಯುವಾನಃ । ಬೃಹತ್ऽಗಿರಯಃ । ಬೃಹತ್ । ಉಕ್ಷಮಾಣಾಃ ॥ ೮ ॥

॥ ಸಾಯಣಭಾಷ್ಯಂ ॥

ಹಯೇ ಹೇ ನರೋ ನೇತಾರೋ ಮರುತೋ ನೋऽಸ್ಮಾನ್ಮೃಳತ । ಸುಖಯತ । ಅಸ್ಮಭ್ಯಂ ಹಿತಾಯ ವಾ ಸುಖಿನೋ ಭವತ । ಹೇ ತುವೀಮಘಾಸಃ ಪ್ರಭೂತಧನಾ ಅಮೃತಾ ಅಮರಣಸ್ವಭಾವಾ ಋತಜ್ಞಾ ಉದಕಸ್ಯ ಯಜ್ಞಸ್ಯ ವಾ ಜ್ಞಾತಾರಃ । ಕರ್ತಾರ ಇತ್ಯರ್ಥಃ । ಸತ್ಯಶ್ರುತಃ ಸತ್ಯೇನ ಸತ್ಯಫಲತ್ವೇನ ಪ್ರಸಿದ್ಧಾಃ ಕವಯೋ ಮೇಧಾವಿನೋ ಯುವಾನೋ ನಿತ್ಯತರುಣಾ ಬೃಹದ್ಗಿರಯಃ ಪ್ರಭೂತಸ್ತುತಯೋ ಬೃಹದತ್ಯಧಿಕಮುಕ್ಷಮಾಣಾ ಹವಿರ್ಭಿಃ ಸೇವಿತಾ ಉದಕಂ ವಾ ಸಿಂಚಂತೋ ಯೂಯಂ ಮೃಳತ ॥

॥ ಪ್ರತಿಪದಾರ್ಥ ॥

**ತುವೀಮಘಾಸಃ**–ಪ್ರಭೂತವಾದ ಧನಸಂಪತ್ತುಳ್ಳವರೂ । **ಅಮೃತಾಃ**–ಮರಣರಹಿತರೂ । **ಋತಜ್ಞಾಃ**–ಸತ್ಯವನ್ನರಿತವರೂ । **ಸತ್ಯಶ್ರುತಂ**—ಯಥಾರ್ಥವಾದ ಖ್ಯಾತಿಯುಳ್ಳವರೂ । **ಕವಯಃ**—ಮೇಧಾವಿಗಳೂ । **ಯುವಾನಃ**—ನಿತ್ಯತರುಣರೂ । **ಬೃಹದ್ಗಿರಯಃ**—ಪ್ರಭೂತವಾದ ಸ್ತುತಿಗಳಿಗೆ ಪಾತ್ರರೂ । **ಬೃಹತ್**—ಅತ್ಯಧಿಕವಾಗಿ । **ಉಕ್ಷಮಾಣಾಃ**—ಹವಿಸ್ಸುಗಳನ್ನರ್ಪಿಸಲ್ಪಡತಕ್ಕವರೂ । **ನರಃ** – ನೇತೃಗಳೂ ಆದ । **ಹಯೇ ಮರುತಃ**—ಎಲೈ ಮರುತ್ತುಗಳೇ । **ನಃ**—ನಮ್ಮನ್ನು । **ಮೃಳತ**—ಸುಖಪಡಿಸಿರಿ

॥ ಭಾವಾರ್ಥ ॥

ಪ್ರಭೂತವಾದ ಧನಸಂಪತ್ತುಳ್ಳವರೂ, ಮರಣರಹಿತರೂ, ಸತ್ಯವನ್ನರಿತವರೂ, ಯಥಾರ್ಥವಾದ ಖ್ಯಾತಿಯುಳ್ಳವರೂ, ಮೇಧಾವಿಗಳೂ, ನಿತ್ಯತರುಣರೂ, ಪ್ರಭೂತವಾದ ಸ್ತುತಿಗಳಿಗೆ ಪಾತ್ರರೂ, ಅತ್ಯಧಿಕವಾಗಿ ಹವಿಸ್ಸುಗಳನ್ನರ್ಪಿಸಲ್ಪಡತಕ್ಕವರೂ, ನೇತೃಗಳೂ ಆದ ಎಲೈ ಮರತ್ತುಗಳೇ, ನಮ್ಮನ್ನು ಸುಖಪಡಿಸಿರಿ.

## English Translation

Ho, Maruts, leaders (of rites), be propitious to us, you who are infinitely opulent, immortal, shedders of rain, renowned for truth, wise, young, greatly glorified, and worshipped with copious oblations.

॥ ವಿಶೇಷವಿಷಯಗಳು ॥

**ಹಯೇ**—**ಹಯೇ** ಎಂಬ ಶಬ್ದವು **ಹೇ** ಎಂಬ ಶಬ್ದದಂತೆ ಸಂಬೋಧನಾರ್ಥದಲ್ಲಿ ಉಪಯೋಗಿಸಲ್ಪಡುವುದು. ಆದ್ದರಿಂದ ಇಲ್ಲಿ **ಹಯೇ ಮರುತಃ** ಎಂದರೆ **ಹೇ ಮರುತಃ** ಎಲೈ ಮರುದ್ದೇವತೆಗಳೇ ಎಂದರ್ಥವು. ಹಯೇ ಎಂಬ ಶಬ್ದವು,

**ಹಯೇ ದೇವಾ ಯೂಯಮಿದಾಪಯಃ ಸ್ಥ ತೇ ಮೃಳತ ನಾಧಮಾನಾಯ ಮಹ್ಯಂ ।**

(ಋ ಸಂ. ೨-೨೯-೪)

**ಹಯೇ ನರೋ ಮರುತೋ ಮೃಳತಾ ನಸ್ತುವೀಮಘಾಸೋ ಅಮೃತಾ ಋತಜ್ಞಾಃ ।**

(ಋ. ಸಂ. ೫ ೫೭-೮)

**ಹಯೇ ಜಾಯೇ ಮನಸಾ ತಿಷ್ಠ ಘೋರೇ ವಚಾಂಸಿ ಮಿಶ್ರಾ ಕೃಣವಾವಹೈ ನು ।**

(ಋ. ಸಂ. ೧೦-೯೫-೧)

ಎಂಬ ಮೂರು ಋಕ್ಕುಗಳಲ್ಲಿ ಮಾತ್ರವಿರುವುದು. ಋಗ್ವೇದದಲ್ಲಿ ಮತ್ತೆಲ್ಲಿಯೂ ಈ ಶಬ್ದದ ಪ್ರಯೋಗವಿಲ್ಲ. ಮೂರು ಸ್ಥಳಗಳಲ್ಲಿಯೂ ಈ ಶಬ್ದಕ್ಕೆ ಹೇ ಎಂಬ ಸಂಬೋಧನಾರ್ಥದಲ್ಲಿಯೇ ಪ್ರಯೋಗವಿರುವುದು.

# ಐವತ್ತೊಂಭತ್ತನೆಯ ಸೂಕ್ತವು.

**ಪ್ರ ವಃ ಸ್ಪಳಿತ್ಯಷ್ಟರ್ಚಂ ತೃತೀಯಂ ಸೂಕ್ತಂ ಶ್ಯಾವಾಶ್ವಸ್ಯಾರ್ಷಂ ಮಾರುತಂ । ಅಷ್ಟಮೀ ತ್ರಿಷ್ಟುಪ್ ಶಿಷ್ಟಾಃ ಸಪ್ತ ಜಗತ್ಯಃ । ಪ್ರ ವಃ ಸ್ಪಟ್ ತ್ರಿಷ್ಟುಬಂತಮಿತ್ಯನುಕ್ರಮಣಿಕಾ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು—**ಪ್ರ ವಃ ಸ್ಪಳಕ್ರನ್** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಶ್ಯಾವಾಶ್ವನು ಋಷಿಯು ; ಮರುತ್ತುಗಳು ದೇವತೆಯು ; ಈ ಸೂಕ್ತದ ಎಂಟನೇ ಋಕ್ಕು ತ್ರಿಷ್ಟುಪ್‌ಛಂದಸ್ಕವು ; ಉಳಿದ ಏಳು ಋಕ್ಕುಗಳು ಜಗತೀಛಂದಸ್ಕವು. ಅನುಕ್ರಮಣಿಕೆಯಲ್ಲಿ **ಪ್ರ ವಃ ಸ್ಪಟ್ ತ್ರಿಷ್ಟುಬಂತಂ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

—— O ——

॥ ಓಂ ॥

## ಸೂಕ್ತ—೫೯

॥ ಮಂಡಲ—೫ ॥ ಅನುವಾಕ—೫ ॥ ಸೂಕ್ತ—೫೯ ॥
॥ ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ— ೨೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೮
ಋಷಿಃ—ಶ್ಯಾವಾಶ್ವ ಆತ್ರೇಯಃ ॥
ದೇವತಾ—ಮರುತಃ ॥
ಛಂದಃ—೧—೭, ಜಗತೀ । ೮. ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಪ್ರ ವಃ ಸ್ಪಳಕ್ರನ್ತ್ಸುವಿತಾಯ ದಾವನೇಽರ್ಚಾ ದಿವೇ ಪ್ರ ಪೃಥಿವ್ಯಾ ಋತಂ ಭರೇ ।
ಉಕ್ಷಂತೇ ಅಶ್ವಾನ್ತರುಷಂತ ಆ ರಜೋಽನು ಸ್ವಂ ಭಾನುಂ ಶ್ರಥಯಂತೇ ಅರ್ಣವೈಃ ॥ ೧ ॥

॥ ಪದಪಾಠಃ ॥

ಪ್ರ । ವಃ । ಸ್ಪಟ್ । ಅಕ್ರನ್ । ಸುವಿತಾಯ । ದಾವನೇ । ಅರ್ಚ । ದಿವೇ । ಪ್ರ । ಪೃಥಿವ್ಯೈ । ಋತಂ । ಭರೇ ।
ಉಕ್ಷಂತೇ । ಅಶ್ವಾನ್ । ತರುಷಂತೇ । ಆ । ರಜಃ । ಅನು । ಸ್ವಂ । ಭಾನುಂ । ಶ್ರಥಯಂತೇ । ಅರ್ಣವೈಃ ॥

॥ ಸಾಯಣಭಾಷ್ಯಂ ॥

ಹೇ ಮರುತೋ ವೋ ಯುಷ್ಮಭ್ಯಂ ಸುವಿತಾಯ ಸುಷ್ಠು ಪ್ರಾಪ್ತವ್ಯಾಯ ದಾವನೇ ಹವಿಷ್ಪ್ರದಾನಾಯ ಸ್ಪಟ್ ಸ್ಪ್ರಷ್ಟಾ ಹೋತಾ ಪ್ರ ಪ್ರಕರ್ಷೇಣಾಕ್ರನ್ । ಕ್ರಂದತಿ । ಸ್ತೌತಿ । ವೋ ಯುಷ್ಮಾನ್ ವಾ ಸುಷ್ಠು ಪ್ರಾಪ್ತವ್ಯಾಯ ದಾನಾಯಾಕ್ರನ್ ॥ ಕ್ರಂದತೇಃ ಶಬ್ದಕರ್ಮಣೋ ಲಙರ್ಥೇ ಲುಙಿ ತಿಪಿ ರೂಪಂ ॥ ಹೇ ಹೋತರ್ದಿವೇ ದ್ಯೋತಮಾನಾಯ ದ್ಯುದೇವಾಯ ಪ್ರಾರ್ಚ । ಪ್ರಕರ್ಷೇಣ ಸ್ತುಹಿ ಹೇ ಅತ್ಮನ್ । ತಥಾ ಪೃಥಿವ್ಯೈ ಪೃಥಿವ್ಯಾಃ ಶ್ಚ ಋತಂ ಸ್ತೋತ್ರಂ ಭರೇ । ಸಂಪಾದಯಾಮಿ । ದ್ಯಾವಾಪೃಥಿವ್ಯಾವಪಿ ಮರುತಾಮಾಧಾರತ್ವಾದತ್ರ ನಿಪಾತಭಾಜೌ ಭವತಃ । ಕಿಂಚ ತೇ ಮರುತೋಽಶ್ವಾನ್ ವ್ಯಾಪಕಾನುದಕಸಂಘಾನುಕ್ಷಂತೇ । ಸಿಂಚಂತಿ । ರಜ ಆ ಅಂತರಿಕ್ಷಮಾ ಸರ್ವತಸ್ತರುಷಂತೇ । ತರಂತಿ । ಸಂಚರಂತಿ । ಸ್ವಂ ಭಾನುಂ ಸ್ವಕೀಯಂ ತೇಜೋಽರ್ಣವೈರ್ಮೇಘೈಃ ಸಹಾನು ಶ್ರಥಯಂತೇ । ಅನುಶ್ಲೇಷಯಂತಿ । ಅನುಕೂಲಂ ಪ್ರಾಪಯಂತೀತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಮರುತ್ತುಗಳೇ) **ವಃ**—ನಿಮ್ಮನ್ನು । **ಸ್ಪಟ್**—ಹೋತೃವು । **ಸುವಿತಾಯ**—ಸುಖವಾಗಿ ಹೊಂದಬಹುದಾದ । **ದಾವನೇ**—ದಾನಾರ್ಥವಾಗಿ । **ಪ್ರ ಅಕ್ರನ್**—ಅತಿಶಯವಾಗಿ ಸ್ತುತಿಸುತ್ತಾನೆ (ಎಲೈ ಹೋತೃವೇ) । **ದಿವೇ**—ಪ್ರಕಾಶಮಾನವಾದ ಅಂತರಿಕ್ಷಕ್ಕೆ । **ಪ್ರ ಅರ್ಚ**—ಅತಿಶಯವಾದ ಸ್ತುತಿಯನ್ನರ್ಪಿಸು । **ಪೃಥಿವ್ಯೈ**—ಪೃಥಿವಿಯನ್ನುದ್ದೇಶಿಸಿ । **ಋತಂ**—ಸ್ತೋತ್ರವನ್ನು । **ಭರೇ**—ನಾನು ನಿರ್ಮಿಸುತ್ತೇನೆ । **ಅಶ್ವಾನ್**—ಸರ್ವವ್ಯಾಪಕವಾದ ಉದಕಗಳನ್ನು । **ಉಕ್ಷಂತೇ**—(ಮರುತ್ತುಗಳು) ಸುರಿಸುವಂತೆ ಮಾಡುತ್ತಾರೆ । **ರಜಃ**—ಅಂತರಿಕ್ಷವನ್ನು । **ಆ ತರುಷಂತೇ**—ಸುತ್ತಿ ಸಂಚರಿಸುತ್ತಾರೆ । **ಸ್ವಂ ಭಾನುಂ**—ಸ್ವಪ್ರಕಾಶವನ್ನು । **ಅರ್ಣವೈಃ**—ಮೇಘಗಳೊಡನೆ । **ಅನು ಶ್ರಥಯಂತೇ**— ಸೇರಿಸಿ ಐಕ್ಯಮಾಡುತ್ತಾರೆ.

॥ ಭಾವಾರ್ಥ ॥

ಎಲೈ ಮರುತ್ತಗಳೇ, ನಿಮ್ಮನ್ನು ಹೋತೃವು ಸುಖವಾಗಿ ಹೊಂದಬಹುದಾದ ದಾನಾರ್ಥವಾಗಿ ಅತಿಶಯವಾಗಿ ಸ್ತುತಿಸುತ್ತಾನೆ. ಎಲೈ ಹೋತೃವೇ, ಪ್ರಕಾಶಮಾನವಾದ ಅಂತರಿಕ್ಷಕ್ಕೆ ಅತಿಶಯವಾಗಿ ಸ್ತುತಿಯನ್ನು ಅರ್ಪಿಸು ನಾನು ಪೃಥಿವಿಯನ್ನುದ್ದೇಶಿಸಿ ಸ್ತುತಿಯನ್ನರ್ಪಿಸುತ್ತೇನೆ. ಮರುತ್ತಗಳು ಸರ್ವವ್ಯಾಪಕವಾದ ಉದಕಗಳು ಸುರಿಯುವಂತೆ ಮಾಡುತ್ತಾರೆ. ಮತ್ತು ಅಂತರಿಕ್ಷವನ್ನೆಲ್ಲಾ ಸುತ್ತಿ ಸಂಚರಿಸುತ್ತಾರೆ. ಸ್ವಪ್ರಕಾಶವನ್ನು ಮೇಘಗಳೊಡನೆ ಸೇರಿಸಿ ಐಕ್ಯಮಾಡುತ್ತಾರೆ

## English Translation

The priest glorfies you, Maruts, for the good of the donor of the oblation : offer worsip to the shining (heaven) : I bring offerings to the earth : they, the Maruts, scatter the rapid (rain) ; they traverse the firmment ; they combine their own radiance with (that of) the clouds.

॥ ವಿಶೇಷವಿಷಯಗಳು ॥

**ಸ್ಪಟ್—ಸ್ಪೃಷ್ಟಾ ಹೋತಾ ।** ಹವಿರಾದಿಗಳನ್ನು ಹೋಮಕಾಲದಲ್ಲಿ ಸ್ಪರ್ಶಮಾಡುವವನಾದ್ದರಿಂದ ಹೋತೃವೆಂಬ ಋತ್ವಿಜನನ್ನು ಸ್ಪಟ್ ಎಂದು ಇಲ್ಲಿ ಕರೆಯಲಾಗಿದೆ.

**ಅಶ್ವಾನ್—ಅಶೂ ವ್ಯಾಪ್ತೌ** ಎಂಬ ಧಾತುವಿನಿಂದ ನಿಷ್ಪನ್ನವಾದ ಅಶ್ವಶಬ್ದಕ್ಕೆ ಇಲ್ಲಿ ಸರ್ವವ್ಯಾಪಕವಾದ ಉದಕಗಳನ್ನು ಎಂದು ಅರ್ಥಮಾಡಿದೆ. ಮಳೆಯು ಸುರಿಯುವಾಗ ಎಲ್ಲೆಲ್ಲಿಯೂ ಉದಕವೇ ವ್ಯಾಪಿಸಿರುವುದರಿಂದ ಸರ್ವವ್ಯಾಪಕವಾದ ಉದಕವನ್ನು **ಅಶ್ವಾನ್** ಎಂಬ ಶಬ್ದದಿಂದ ನಿರ್ದೇಶಿಸಿದೆ.

ರಜಃ—ಅತರಿಕ್ಷವನ್ನು ಎಂದು ಇಲ್ಲಿ ಅರ್ಥವಾಡಿದೆ. ರಜಶ್ಯಬ್ದಕ್ಕೆ ಅನೇಕಾರ್ಥಗಳಿರುವವು. ಯಾಸ್ಕರು ಈ ಶಬ್ದದ ವಿಷಯದಲ್ಲಿ—

**ರಜೋ ರಜ್ಯತೇರ್ಜ್ಯೋತೀ ರಜ ಉಚ್ಯತೇ ಉದಕಂ ರಜ ಉಚ್ಯತೇ । ಲೋಕಾ ರಜಾಂಸ್ಯು-ಚ್ಯಂತೇ ।** (ನಿ. ೪-೧೯) ಬೆಳಗು ಎಂಬರ್ಥವನ್ನು ಕೊಡುವ **ರಂಜ್** ಧಾತುವಿನಿಂದ ನಿಷ್ಪನ್ನವಾಗಿರುವ **ರಜಸ್** ಶಬ್ದಕ್ಕೆ ಜ್ಯೋತಿಯೆಂದೂ ಉದಕವೆಂದೂ ಮತ್ತು ಲೋಕಗಳೆಂದೂ ಅರ್ಥವಾಗುತ್ತದೆ.

**ರಜಾಂಸಿ ಚಿತ್ರಾ ವಿ ಚರಂತಿ ತನ್ಯವೋ ದಿವಃ ಸದ್ಮ್ರಾಜಾ ಪಯಸಾ ನ ಉಕ್ಷತಂ ।**

(ಋ ಸಂ ೫-೬೩-೫)

ಎಂಬ ಋಕ್ಕನ್ನು ದಾಹರಿಸಿ ನಿರುಕ್ತಕಾರರು **ರಜಾಂಸಿ** ಎಂಬ ಪದಕ್ಕೆ **ಲೋಕಗಳು** ಎಂಬರ್ಥವಾಗುವುದೆಂದು ಹೇಳಿದ್ದಾರೆ. ನಿರುಕ್ತದ ೧೦ ನೇ ಅಧಾಯದ ೪೪ ನೇ ಖಂಡದಲ್ಲಿ,

**ಅಬ್ಜಾಮುಕ್ಥೈರಹಿಂ ಗೃಣೀಷೇ ಬುಧ್ನೇ ನದೀನಾಂ ರಜಸ್ಸು ಷೀದನ್ ।**

(ಋ ಸಂ ೭ ೩೪-೧೬)

ಎಂಬ ಋಕ್ಕನ್ನು ವಿವರಿಸುವಾಗ **ರಜಸ್ಸು** ಎಂಬ ಪದಕ್ಕೆ **ಉದಕೇಷು,**—ಉದಕಗಳಲ್ಲಿ ಎಂದರ್ಥವಾಗುತ್ತದೆಂದೂ ಮತ್ತು ೧೨ ನೇ ಅಧ್ಯಾಯದ ೭ ನೆಯ ಖಂಡದಲ್ಲಿ,

**ಏತಾ ಉ ತ್ಯಾ ಉಷಸಃ ಕೇತುಮಕ್ರತ ಪೂರ್ವೇ ಅರ್ಧೇ ರಜಸೋ ಭಾನುಮಂಜತೇ ।**

(ಋ ಸಂ. ೧-೯೨-೧)

ಎಂಬ ಋಕ್ಕನ್ನು ವಿವರಿಸುವಾಗ **ರಜಸಃ** ಎನ್ನುವುದಕ್ಕೆ ಅಂತರಿಕ್ಷವೆಂದೂ ಅರ್ಥ ಮಾಡಿದ್ದಾರೆ.

**ತ್ರೀಣಿ ಭಾಂತಿ ರಜಾಂಸ್ಯಸ್ಯ ಯತ್ಪದಾನಿ ತು ತೇಜಸಾ ।**

ಎಂದು ಬೃಹದ್ದೇವತಾಕಾರರು ವಿಷ್ಣುವಿನ ಮೂರು ಲೋಕಗಳ ಆಕ್ರಮಣವನ್ನು ವರ್ಣಿಸುವಾಗ ಮೂರು ಲೋಕಗಳ

ಪರ್ಯಾಯಪದವಾಗಿ ರಜಾಂಸಿ ಎಂಬ ಪದವನ್ನು ಪ್ರಯೋಗಿಸಿದ್ದಾರೆ. ರಜಃ, ರಜಾಂಸಿ ಎಂದರೆ ಸಾಮಾನ್ಯವಾಗಿ ಲೋಕಪರ್ಯಾಯವಾದ ಪದವಾಗಿರುತ್ತದೆ. ಆದರೆ,

ಯಸ್ಮಾ ಸೋಮಾಸೋ ಮಮದನ್ಯದುಕ್ಥೋಭೇ ಭಯೇತೇ ರಜಸೀ ಅಪಾರೇ ।

(ಋ. ಸಂ. ೪-೪೨-೬)

ಇತ್ಯಾದಿ ಋಕ್ಕುಗಳಲ್ಲಿ ಈ ಪದವು ದ್ವಿವಚನದಲ್ಲಿದ್ದು ದ್ಯಾವಾಪೃಥಿವಿಗಳೆಂದು ಪಾರಿಭಾಷಿಕವಾದ ಅರ್ಥವೇ ಹೇಳಲ್ಪಟ್ಟಿದೆ. ಕೆಲವೆಡೆಗಳಲ್ಲಿ ಮಾತ್ರ, ಎಂದರೆ,

ಅಹಶ್ಚ ಕೃಷ್ಣಮಹರರ್ಜುನಂ ಚ ವಿ ವರ್ತೇತೇ ರಜಸೀ ವೇದ್ಯಾಭಿಃ ।

(ಋ. ಸಂ. ೬-೯-೧)

ಇತ್ಯಾದಿ ಒಂದೆರಡು ಋಕ್ಕುಗಳಲ್ಲಿ ರಜಸೀ ಜಗದ್ರಂಜಯಂತೌ ಎಂದು ಧಾತುವಿನ ಮೂಲಾರ್ಥವೇ ಮುಖ್ಯವಾಗಿರುತ್ತದೆ. ಪ್ರಕೃತವಾದ ಋಕ್ಕಿನಲ್ಲಿ ಪ್ರಕಾಶಮಾನವಾದ ಅಂತರಿಕ್ಷವನ್ನು ಎಂದರ್ಥವಾಗುತ್ತದೆ.

**ಭಾನುಂ**—ಭಾನುಶಬ್ದವು ಅಹರ್ನಾಮಗಳಲ್ಲಿ ಪಠಿತವಾಗಿದೆ. ( ೨-೨೦ ) ಭಾನುವೆಂದರೆ, ಸೂರ್ಯ, ಸೂರ್ಯರಶ್ಮಿ, ಪ್ರಕಾಶ, ಅಹಸ್ಸು (ಹಗಲು) ಎಂದು ನಾನಾರ್ಥಗಳಿರುವವು. ಇಲ್ಲಿ ಈ ಶಬ್ದವು ಪ್ರಕಾಶವೆಂಬ ಅರ್ಥದಲ್ಲಿ ಪ್ರಯುಕ್ತವಾಗಿದೆ.

॥ ಸಂಹಿತಾಪಾಠಃ ॥

ಅಮಾದೇಷಾಂ ಭಿಯಸಾ ಭೂಮಿರೇಜತಿ ನೌರ್ನ ಪೂರ್ಣಾ ಕ್ಷರತಿ-
ವ್ಯಥಿರ್ಯತೀ ।
ದೂರೇದೃಶೋ ಯೇ ಚಿತಯಂತ ಏಮಭಿರಂತರ್ಮಹೇ ವಿದಥೇ ಯೇತಿರೇ
ನರಃ ॥ ೨ ॥

॥ ಪದಪಾಠಃ ॥

ಅಮಾತ್ । ಏಷಾಂ । ಭಿಯಸಾ । ಭೂಮಿಃ । ಏಜತಿ । ನೌಃ । ನ । ಪೂರ್ಣಾ । ಕ್ಷರತಿ । ವ್ಯಥಿಃ । ಯತೀ।
ದೂರೇऽದೃಶಃ । ಯೇ । ಚಿತಯಂತೇ । ಏಮऽಭಿಃ । ಅಂತಃ । ಮಹೇ । ವಿದಥೇ । ಯೇತಿರೇ । ನರಃ॥

॥ ಸಾಯಣಭಾಷ್ಯಂ ॥

**ಏಷಾಂ ॥ ಅನ್ವಾದೇಶವಿಷಯತ್ವಾದನುದಾತ್ತಃ ॥ ಏಷಾಂ ಮರುತಾಂ ಭಿಯಸಾ ಭಯೇನ ಭೂಮಿರೇಜತಿ । ಕಂಪತೇ ನೌರ್ನ ಪೂರ್ಣಾ ಪ್ರಾಣಿಭಿಃ । ಸಾ ಯಥೋದಕಮಧ್ಯೇ ಕ್ಷರತಿ ಚಲತಿ ವ್ಯಥಿರ್ವ್ಯಥಿತಾ ಯತೀ ಗಚ್ಛಂತೀ । ಏತದುಭಯಂ ನಾವಿಶೇಷಣಂ । ದೂರೇದೃಶೋ ದೂರೇ ದೃಶ್ಯಮಾನಾ ಅಪಿ ಯೇ ಮರುತ ಏಮಭಿರ್ಗಮನೈಶ್ಚಿತಯಂತೇ ಜ್ಞಾಯಂತೇ ತೇ ಮಹಾಂತೋ ಮರುತೋ ವಿದಥೇ ಯಜ್ಞೇ ಮಹೇ ಮಹತೇ ಹವಿಷೇ ಹವಿರ್ಭಕ್ಷಣಾಯಾಂತರ್ದ್ಯಾವಾಪೃಥಿವ್ಯೋರ್ಮಧ್ಯೇ ಯೇತಿರೇ । ಯತಂತೇ । ನರೋ ನೇತಾರೋ ಮರುತಃ ॥**

॥ ಪ್ರತಿಪದಾರ್ಥ ॥

**ಪೂರ್ಣಾ**—ಜನಭರಿತವಾದ । **ನೌರ್ನ**—ನಾವೆಯು । **ಕ್ಷರತಿ**—ಯಾವರೀತಿ ಕಂಪಿಸುತ್ತಲೂ । **ವ್ಯಥಿಃ**—ಗಾಬರಿಯುಳ್ಳದ್ದಾಗಿ । **ಯತೀ**—ಮುಂದಕ್ಕೆ ಸರಿಯುತ್ತಲೂ ಇರುವುದೋ ಹಾಗೆ । **ಏಷಾಂ**—ಈ ಮರುತ್ತುಗಳ । **ಭಿಯಸಾ**—ಭೀತಿಯಿಂದ । **ಭೂಮಿಃ**—ಭೂಮಿಯು । **ಏಜತಿ**—ಕಂಪಿಸುತ್ತದೆ । **ಯೇ**—ಯಾವ ಮರುತ್ತುಗಳು । **ದೂರೇದೃಶಃ**—ಅತಿದೂರದಲ್ಲಿಯೇ ಗೋಚರರಾದರೂ ಸಹ । **ಏಮಭಿಃ**—ಅವರ ಗತಿಗಳಿಂದ । **ಚಿತಯಂತೇ**—ನಿಷ್ಕೃಷ್ಟವಾಗಿ ತಿಳಿಯಲ್ಪಡುತ್ತಾರೋ । **ನರಃ**—ನೇತೃಗಳಾದ ಅಂತಹ ಮರುತ್ತುಗಳು । **ವಿದಥೇ**—ಯಜ್ಞದಲ್ಲಿ । **ಮಹೇ**—ಮಹತ್ತಾದ ಹವಿಸ್ಸನ್ನು ಭಕ್ಷಿಸಲು । **ಅಂತಃ**—ದ್ಯಾವಾಪೃಥಿವಿಗಳ ಮಧ್ಯದಲ್ಲಿ । **ಯೇತಿರೇ**—ಸಂಚರಿಸಿ ಬರುತ್ತಾರೆ

॥ ಭಾವಾರ್ಥ ॥

ಜನಭರಿತವಾದ ನಾವೆಯು ಯಾವರೀತಿ ಕಂಪಿಸುತ್ತಲೂ, ಮುಂದಕ್ಕೆ ಸರಿಯುವಾಗ ಗಾಬರಿಯುಳ್ಳದ್ದಾಗಿಯೂ ಇರುವುದೋ ಅದೇ ರೀತಿ ಈ ಮರುತ್ತುಗಳ ಭೀತಿಯಿಂದ ಭೂಮಿಯು ಕಂಪಿಸುತ್ತದೆ ಯಾವ ಮರುತ್ತುಗಳು ಅತಿದೂರದಲ್ಲಿಯೇ ಗೋಚರವಾದರೂ ಸಹ ಅವರ ವೈಯಕ್ತಿಕವಾದ ಗತಿಗಳಿಂದ ನಿಷ್ಕೃಷ್ಟವಾಗಿ ತಿಳಿಯಲ್ಪಡುತ್ತಾರೋ, ನೇತೃಗಳಾದ ಅಂತಹ ಮರುತ್ತುಗಳು ಯಜ್ಞದಲ್ಲಿ ಮಹತ್ತಾದ ಹವಿಸ್ಸನ್ನು ಭಕ್ಷಿಸಲು ದ್ಯಾವಾಪೃಥಿವಿಗಳ ಮಧ್ಯದಲ್ಲಿ ಸಂಚರಿಸಿ ಬರುತ್ತಾರೆ.

English Translation

From their approach the earth trembles with fear, as a crowded boat goes quivering (through the water) : visible from afar, they are recognized by their movements · the Maruts, leaders (of rites), pass between (heaven and earth) to the solemn sacrifice.

॥ ವಿಶೇಷವಿಷಯಗಳು ॥

ಚಂಡಮಾರುತವು ರಭಸದಿಂದ ಬೀಸುತ್ತಿರುವಾಗ ವೃಕ್ಷಾದಿಗಳು ಕಂಪಿಸುತ್ತಲೂ ಬುಡಸಹಿತವಾಗಿ ಉರುಳಿ ಹೋಗುತ್ತಲೂ ಇರುವುದಲ್ಲದೆ ಮಳೆಯೂ ಸಹ ಧಾರಾಕಾರವಾಗಿ ಬೀಳುತ್ತಾ ಗುಡುಗು, ಸಿಡಿಲು, ಮಿಂಚು

ಇವುಗಳಿಂದ ಭಯಂಕರವಾಗಿ ಕಾಣುತ್ತಿರುವುದು. ಈ ಭಯಂಕರವಾದ ದೃಶ್ಯವನ್ನೇ ಭೂಮಿಯು ಕಂಪಿಸುತ್ತಿರುವುದು ಎಂದು ಋಷಿಯು ನಾವೆಯು ದೃಷ್ಟಾತಂದಿಂದ ವರ್ಣಿಸಿರುವನು. ನಾವೆಯಲ್ಲಿ ಸಾಮಾನ್ಯವಾಗಿ ಇರಬೇಕಾದ ಜನಕ್ಕಿಂತ ಅಧಿಕವಾಗಿ ಜನರಿದ್ದರೆ ಅದು ನೀರಿನ ಅಲೆಗಳ ಹೊಡೆತಕ್ಕೆ ಸಿಲುಕಿ ಅಲುಗಾಡುತ್ತಾ ಎಲ್ಲಿ ಮುಳುಗಿ ಹೋಗುವುದೋ ಎಂಬ ಭಯಕ್ಕೆ ಆಸ್ಪದವಾಗಿರುತ್ತದೆ. ಅದರಲ್ಲಿ ಕುಳಿತಿರುವ ಜನರಿಗೆ ಗಾಬರಿಯೂ ಭಯವೂ ಬಹಳವಾಗಿರುತ್ತದೆ. ಗಾಳಿಯು ರಭಸವಾಗಿ ಬೀಸುತ್ತಾ ವೃಷ್ಟಿಯನ್ನು ಸುರಿಸುತ್ತಿರುವಾಗ ಮಳೆ, ಗಾಳಿ, ಶಿಡಿಲು, ಮಿಂಚು, ವೃಕ್ಷಗಳು ಬುಡಸಹಿತವಾಗಿ ಉರುಳುವುದು ಮೊದಲಾದ ಕಾರ್ಯಗಳು ನಿಜವಾಗಿಯೂ ಭಯಂಕರವಾಗಿರುತ್ತವೆ ಈ ಸ್ಥಿತಿಯನ್ನು ಋಷಿಯು ಜನಭರಿತವಾದ ನಾವೆಯ ದೃಷ್ಟಾಂತದಿಂದ ವರ್ಣಿಸಿರುವುದೂ ಬಹುಸಮಂಜಸವಾಗಿದೆ. ಎರಡರಲ್ಲಿಯೂ ಭಯಕ್ಕೂ ಗಾಬರಿಗೂ, ಕಳವಳಕ್ಕೂ ಆಸ್ಪದವಿರುವುದು ಇದಲ್ಲದೆ ಮರುದ್ದೇವತೆಗಳ ಆಗಮನದ ಮುನ್ಸೂಚನೆಯು ದೂರದಿಂದಲೇ ಗೊತ್ತಾಗುವುದು ಎಂದೂ ಇಲ್ಲಿ ಹೇಳಿದೆ. ಅಂತರಿಕ್ಷದಲ್ಲಿ ಮೋಡಗಳ ಸಂಗ್ರಹದಿಂದಲೂ, ಗಾಳಿಯು ವೇಗವಾಗಿ ಬೀಸುವುದರಿಂದಲೂ, ಆಗಾಗ ಮಿಂಚುತ್ತಿರುವುದರಿಂದಲೂ ಮರುದ್ದೇವತೆಗಳ ಆಗಮನದ ಸೂಚನೆಯು ದೂರದಿಂದಲೇ ಎಂದರೆ ಮೊದಲೇ ಗೊತ್ತಾಗುವುದೆಂದೂ ಇಲ್ಲಿ ವರ್ಣಿಸಿದೆ.

॥ ಸಂಹಿತಾಪಾಠಃ ॥

ಗವಾಮಿವ ಶ್ರಿಯಸೇ ಶೃಂಗಮುತ್ತಮಂ ಸೂರ್ಯೋ ನ ಚಕ್ಷೂ ರಜಸೋ ವಿಸರ್ಜನೇ ।
ಅತ್ಯಾಇವ ಸುಭ್ವ೧ಶ್ಚಾರವಃ ಸ್ಥನ ಮರ್ಯಾಇವ ಶ್ರಿಯಸೇ ಚೇತಥಾ ನರಃ ॥ ೩ ॥

॥ ಪದಪಾಠಃ ॥

ಗವಾಂಽಇವ । ಶ್ರಿಯಸೇ । ಶೃಂಗಂ । ಉತ್ಽತಮಂ । ಸೂರ್ಯಃ । ನ । ಚಕ್ಷುಃ । ರಜಸಃ । ವಿಽಸರ್ಜನೇ ।
ಅತ್ಯಾಃಽಇವ । ಸುಽಭ್ವಃ । ಚಾರವಃ । ಸ್ಥನ । ಮರ್ಯಾಃಽಇವ । ಶ್ರಿಯಸೇ । ಚೇತಥ । ನರಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಮರುತೋ ಯೂಯಂ ಗವಾಂ ಶೃಂಗಮಿವೋತ್ತಮಮುತ್ಕೃಷ್ಟಮುಷ್ಣೀಷಪಟ್ಟಾದಿಕಂ ಶ್ರಿಯಸೇ ಶ್ರಿಯೇ ಧಾರಯಥೇತಿ ಶೇಷಃ । ಸೂರ್ಯೋ ನ ಸೂರ್ಯ ಇವ । ಸ ಯಥಾ ರಜಸಸ್ತೇ-

**ಜಸೋ ವಿಸರ್ಜನೇ ಚಕ್ಷುರ್ದರ್ಶನಸಾಧನಂ ಮಂಡಲಂ ಧತ್ತೇ ತದ್ವದ್ರಜಸೋ ವೃಷ್ಟೇರ್ವಿಸರ್ಜನೇ ವಿಸರ್ಜನಾಯ ಚಕ್ಷುಃ ಸರ್ವಸ್ಯ ಪ್ರಕಾಶಕಂ ತೇಜೋ ಧಾರಯಥ । ಅತ್ಯಾ ಇವಾಶ್ವಾ ಇವ ಸುಭ್ವಃ ಸುಷ್ಠು ಸರ್ವತ್ರ ಭವಂತೋ ವೇಗವಂತಶ್ಚಾರವೋ ದರ್ಶನೀಯಾಃ ಸ್ಥನ । ಭವಥ । ಮರ್ಯಾ ಮರ್ತ್ಯಾ ಯಜಮಾನಾ ಇವ । ತೇ ಯಥಾ ಶ್ರಿಯಸೇ ಜಾನಂತಿ ಯಜ್ಞಾದಿಕಂ ತದ್ವಚ್ಛ್ರಿಯೇ ಚೇತಥ ಹೇ ನರೋ ನೇತಾರೋ ಮರುತಃ ॥**

॥ ಪ್ರತಿಪದಾರ್ಥ ॥

(ಎಲೈ ಮರುತ್ತುಗಳೇ) **ಗವಾಂ ಶೃಂಗಂ ಇವ**—ಗೋವುಗಳ ಶೃಂಗದಂತೆ । **ಉತ್ತಮಂ**—ಶ್ರೇಷ್ಠವಾದ ಉಷ್ಣೀಷಾದಿಗಳನ್ನು । **ಶ್ರಿಯಸೇ**—ನಿಮ್ಮ ಸೌಂದರ್ಯಾಭಿವೃದ್ಧಿಗಾಗಿ (ನೀವು ಧರಿಸುತ್ತೀರಿ) । **ಸೂರ್ಯೋ ನ**—ಸೂರ್ಯನು ತನ್ನ ಮಂಡಲಸ್ಥವಾದ ತೇಜಸ್ಸನ್ನು ಪ್ರಸರಿಸಿ ಹರಡುವಂತೆ (ನೀವೂ ಸಹ) । **ರಜಸಃ**—ಉದಕದ । **ವಿಸರ್ಜನೇ**—ವಿಸರ್ಜನೆಗಾಗಿ । **ಚಕ್ಷುಃ**—ಎಲ್ಲರಿಗೂ ಗೋಚರವಾದ ತೇಜಸ್ಸನ್ನು (ಧರಿಸಿದ್ದೀರಿ) । **ಅತ್ಯಾ ಇವ**—ಅಶ್ವಗಳಂತೆ । **ಸುಭ್ವಃ**—ವೇಗಗಾಮಿಗಳಾದ ನೀವು । **ಚಾರವಃ**—ಮನೋಹರರಾಗಿ । **ಸ್ಥನ**—ಇದ್ದೀರಿ । **ನರಃ**-ನೇತೃಗಳಾದ ಎಲೈ ಮರುತ್ತುಗಳೇ । **ಮರ್ಯಾ ಇವ**—ಮಾನವರಾದ ಯಜಮಾನರಂತೆ । **ಶ್ರಿಯಸೇ**—ಯಜ್ಞಾದಿಗಳು ಶ್ರೇಯಸ್ಕರವೆಂದು । **ಚೇತಥ**—ತಿಳಿದಿದ್ದೀರಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಗೋವುಗಳ ಶೃಂಗದಂತೆ ಶ್ರೇಷ್ಠವಾದ ಉಷ್ಣೀಷಾದಿಗಳನ್ನು ನಿಮ್ಮ ಸೌಂದರ್ಯಾಭಿವೃದ್ಧಿಗಾಗಿ ನೀವು ಧರಿಸುತ್ತೀರಿ. ಸೂರ್ಯನು ತನ್ನ ಮಂಡಲಸ್ಥವಾದ ತೇಜಸ್ಸನ್ನು ಪ್ರಸರಿಸಿ ಹರಡುವಂತೆ ನೀವೂ ಸಹ ಉದಕದ ವಿಸರ್ಜನೆಗಾಗಿ ಎಲ್ಲರಿಗೂ ಗೋಚರವಾದ ತೇಜಸ್ಸನ್ನು ಧರಿಸಿದ್ದೀರಿ. ಅಶ್ವಗಳಂತೆ ವೇಗಗಾಮಿಗಳಾದ ನೀವು ಮನೋಹರರಾಗಿದ್ದೀರಿ ನೇತೃಗಳಾದ ಎಲೈ ಮರುತ್ತುಗಳೇ, ಮಾನವರಾದ ಯಜಮಾನರಂತೆ ಯಜ್ಞಾದಿಗಳು ಶ್ರೇಯಸ್ಕರವೆಂದು ನೀವೂ ತಿಳಿದಿದ್ದೀರಿ.

## English Translation

You bear for your decoration, an excellent (diadem) like the horn of cattle : as the sun, the eye (of day, dispenses light), so (are you diligent) in the distribution of the rains : graceful are you, and rapid as horses, and, like (pious) mortals, you, leaders (of rites), consider (holy ceremonies) for their glory.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ನಾಲ್ಕು ದೃಷ್ಟಾಂತಗಳು ಉಕ್ತವಾಗಿವೆ—

**(೧) ಗವಾಮಿವ ಶೃಂಗಂ ಶ್ರಿಯಸೇ—ಹೇ ಮರುತಃ ಗವಾಂ ಶೃಂಗಮಿವ ಉತ್ಕೃಷ್ಟಮುಷ್ಣೀಷಪಟಾದಿಕಂ ಶ್ರಿಯೇ ಧಾರಯಥ** । ಎಲೈ ಮರುದ್ದೇವತೆಗಳೇ, ಗೋವುಗಳ ಶಿರಸ್ಸಿನ ಮೇಲೆ ಕೊಂಬುಗಳು ಯಾವ

ರೀತಿ ಪ್ರಕಾಶಿಸುತ್ತಿರುವುದೋ ಅದರಂತೆ ನಿಮ್ಮ ಶಿರಸ್ಸಿನ ಮೇಲೆ ಶಿರೋಭೂಷಣವನ್ನು ನೀವು ಧರಿಸಿ ಪ್ರಕಾಶಿಸುತ್ತಿದ್ದೀರಿ. ಶಿರಸ್ಸಿನ ಮೇಲೆ ಶೃಂಗಾರಾರ್ಥವಾಗಿರುವ ವಸ್ತುಗಳನ್ನು ವರ್ಣಿಸುವುದಕ್ಕಾಗಿ ಗೋವುಗಳ ಶೃಂಗವನ್ನು ದೃಷ್ಟಾಂತವಾಗಿ ಹೇಳಿದೆ.

**ಅಗ್ನಿಭ್ರಾಜಸೋ ವಿದ್ಯುತೋ ಗಭಸ್ತ್ಯೋಃ ಶಿಪ್ರಾಃ ಶೀರ್ಷಸು ವಿತತಾ ಹಿರಣ್ಯಯೀಃ ।**

(ಋ. ಸಂ. ೫-೫೪-೧೧)

ಎಂಬ ಋಕ್ಕಿನಲ್ಲಿ **ಶಿಪ್ರಾಃ ಶೀರ್ಷಸು** ಎಂಬ ಶಬ್ದಗಳಿಂದ ಮರುದ್ದೇವತೆಗಳ ಶಿರೋಭೂಷಣಗಳನ್ನು ವರ್ಣಿಸಲಾಗಿದೆ.

**(೨) ಸೂರ್ಯೋ ನ ರಜಸಃ ವಿಸರ್ಜನೇ ಚಕ್ಷುಃ— ಸೂರ್ಯೋ ಯಥಾ ತೇಜಸೋ ವಿಸರ್ಜನೇ ಚಕ್ಷುರ್ದರ್ಶನಸಾಧನಂ ಮಂಡಲಂ ಧತ್ತೇ ತಥಾ ಮರುತಃ ವೃಷ್ಟೇರ್ವಿಸರ್ಜನೇ ಸರ್ವಸ್ಯ ಪ್ರಕಾಶಕಂ ತೇಜೋ ಧಾರಯಥ ।** ಸೂರ್ಯನು ತನ್ನ ಮಂಡಲಸ್ಥವಾದ ತೇಜಸ್ಸನ್ನು (ಪ್ರಕಾಶವನ್ನು) ಎಲ್ಲರಿಗೂ ಗೋಚರಿಸುವಂತೆ ಪ್ರಸರಿಸಿ ಹರಡುವನೋ ಅದರಂತೆ ಮರುದ್ದೇವತೆಗಳಾದ ನೀವೂ ಸಹ ವೃಷ್ಟಿವರ್ಷಣಕ್ಕಾಗಿ ನಿಮ್ಮ ಪ್ರಕಾಶವನ್ನು ಎಲ್ಲಾ ಕಡೆಯಲ್ಲಿಯೂ ಹರಡುತ್ತೀರಿ. ಸೂರ್ಯನ ಪ್ರಕಾಶವು ಸರ್ವತ್ರ ಪ್ರಸರಿಸಿ ಹರಡುವುದು ಸರ್ವರಿಗೂ ಅನುಭವವೇದ್ಯವಾಗಿದೆ. ಅದರಂತೆ ಮರುದ್ದೇವತೆಗಳ ಪ್ರಕಾಶವೂ ಎಂದರೆ ಮಿಂಚು ಸಹಾ ವೃಷ್ಟಿಕಾಲದಲ್ಲಿ ಸರ್ವತ್ರ ಪ್ರಸರಿಸಿ ಎಲ್ಲರಿಗೂ ಕಾಣಿಸುತ್ತದೆ ಎಂದು ಈ ದೃಷ್ಟಾಂತದ ಮುಖ್ಯಾಭಿಪ್ರಾಯವು.

**(೩) ಅತ್ಯಾ ಇವ ಸುಭ್ವಃ ಚಾರವಃ— ಅಶ್ವಾ ಇವ ಸುಷ್ಠು ಸರ್ವತ್ರ ಭವಂತೋ ವೇಗವಂತಶ್ಚಾರವೋ ದರ್ಶನೀಯಾಃ ಭವಥ ।** ವೇಗವಾಗಿ ಸಂಚರಿಸುವ ಅಶ್ವಗಳು ತಮ್ಮ ಗಮನದಿಂದ ಆಕರ್ಷಕವಾಗಿರುವಂತೆ ಮರುದ್ದೇವತೆಗಳೂ ತಮ್ಮ ವೇಗಗಮನದಿಂದಲೂ, ಸರ್ವತ್ರ ವ್ಯಾಪಿಸುವ ಸ್ವಭಾವದಿಂದಲೂ ಸಮಸ್ತರಿಗೂ ಆಕರ್ಷಕರಾಗಿರುವರು ಎಂದು ಮುಖ್ಯಾಭಿಪ್ರಾಯವು. ಅಶ್ವದ ಸ್ವಭಾವವೇ ವೇಗವಾಗಿ ಸಂಚರಿಸುವುದು. ಅದರಂತೆ ಮರುದ್ದೇವತೆಗಳ ಗಮನವೂ ವೇಗವಾಗಿಯೇ ಇರುವುದು ಆದ್ದರಿಂದ ವೇಗಗಮನವು ಅಶ್ವಗಳಿಗೂ, ಮರುತ್ತುಗಳಿಗೂ ಸಮಾನಧರ್ಮವಾದ್ದರಿಂದ ಇಲ್ಲಿ ಮರುದ್ದೇವತೆಗಳನ್ನು ಅಶ್ವಗಳಿಗೆ ಹೋಲಿಸಿ ವರ್ಣಿಸಲಾಗಿದೆ.

**(೪) ಮರ್ಯಾ ಇವ ಶ್ರಿಯಸೇ ಚೇತಥ— ಮರ್ತ್ಯಾ ಯಜಮಾನಾ ಯಜ್ಞಾದಿಕಂ ಯಥಾ ಶ್ರಿಯಸೇ ಜಾನಂತಿ ತದ್ವಚ್ಛ್ರೇಯೋ ನೇತಾರೋ ಮರುತಃ ಚೇತಥ ।** ಮಾನವರಾದ ಯಜಮಾನರು ಯಜ್ಞಾದಿಕರ್ಮಗಳು ಶ್ರೇಯಃಪ್ರದವಾದವು ಎಂಬ ವಿಷಯವನ್ನು ಹೇಗೆ ಅರಿತಿರುವರೋ ಅದರಂತೆ ಮರುದ್ದೇವತೆಗಳೂ ಸಹ ಈ ವಿಧಜ್ಞಾನವನ್ನು ಪಡೆದಿರುವರು ಎಂಬರ್ಥವು ಇಲ್ಲಿ ಉಕ್ತವಾಗಿದೆ.

॥ ಸಂಹಿತಾಪಾಠಃ॥

ಕೋ ವೋ ಮಹಾಂತಿ ಮಹತಾಮುದಶ್ನವತ್ಕಸ್ಕಾವ್ಯಾ ಮರುತಃ ಕೋ ಹ ಪೌಂಸ್ಯಾ ।

ಯೂಯಂ ಹ ಭೂಮಿಂ ಕಿರಣಂ ನ ರೇಜಥ ಪ್ರ ಯದ್ಭರಧ್ವೇ ಸುವಿತಾಯ ದಾವನೇ ॥ ೪ ॥

॥ ಪದಪಾಠಃ ॥

ಕಃ । ವಃ । ಮಹಾಂತಿ । ಮಹತಾಂ । ಉತ್ । ಅಶ್ನವತ್ । ಕಃ । ಕಾವ್ಯಾ । ಮರುತಃ । ಕಃ । ಹ । ಪೌಂಸ್ಯಾ ।

ಯೂಯಂ । ಹ । ಭೂಮಿಂ । ಕಿರಣಂ । ನ । ರೇಜಥ । ಪ್ರ । ಯತ್ । ಭರಧ್ವೇ । ಸುವಿತಾಯ । ದಾವನೇ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಮರುತೋ ವೋ ಯುಷ್ಮಾಕಂ ಮಹತಾಂ ಪೂಜ್ಯಾನಾಂ ಕೋ ಯಜಮಾನೋ ಮಹಾಂತಿ ಶ್ರೇಯಾಂಸ್ಯುದಶ್ನವತ್ । ಉತ್ಕೃಷ್ಟಂ ಪ್ರಾಪ್ನುಯಾತ್ । ಕಶ್ಚ ತದರ್ಥಂ ಕಾವ್ಯಾ ಕಾವ್ಯಾನಿ ಕವೀನಾಂ ಯುಷ್ಮಾಕಂ ಸಂಬಂಧೀನಿ ಸ್ತೋತ್ರಾಣ್ಯುದಶ್ನವತ್ । ಕೋ ಹ ಕಶ್ಚ ಪೌಂಸ್ಯಾ ಪೌಂಸ್ಯಾನಿ ಪರಾಕ್ರಮಾನುದಶ್ನವತ್ । ಆದರಾರ್ಥಂ ಪುನರ್ವಚನಂ । ಯೂಯಂ ಹ ಯೂಯಂ ಖಲು ಭೂಮಿಂ ಕಿರಣಂ ನ ಕಿರಣಮಿವ ರೇಜಥ । ಕಿರಣಂ ಯಥಾ ವೃಷ್ಟ್ಯರ್ಥಂ ಚಾಲಯಥ ತದ್ವದ್ಭೂಮಿಂ ರೇಜಥ । ಯದ್ಯಸ್ಮಾತ್ ಸುವಿತಾಯ ಸುಷ್ಠು ಪ್ರಾಪ್ತವ್ಯಾಯ । ಪ್ರಾಪ್ತವ್ಯಸ್ಯೇತ್ಯರ್ಥಃ । ತಾದೃಶಸ್ಯ ಧನಸ್ಯ ವೃಷ್ಟ್ಯುದಕಸ್ಯ ವಾ ದಾವನೇ ದಾನಾಯ ಪ್ರ ಭರಧ್ವೇ ಪ್ರಕರ್ಷೇಣ ಸಂಪಾದಯಥ ವೃಷ್ಟಿಂ । ಯಸ್ಮಾದ್ಯೂಯಮೇವಂ ಕುರುಥ ತಸ್ಮಾತ್ಕ ಏವಂ ಕರೋತೀತ್ಯರ್ಥಃ ॥**

॥ ಪ್ರತಿಪದಾರ್ಥ ॥

ಮರುತಃ—ಎಲೈ ಮರುತ್ತುಗಳೇ । **ಮಹತಾಂ**-ಪೂಜ್ಯರಾದ । **ವಃ**-ನಿಮ್ಮ । **ಮಹಾಂತಿ**--ಸನಾಹಾತ್ಮ್ಯವನ್ನು । **ಕಃ**—ಯಾವ ಯಜಮಾನನು । **ಉದಶ್ನವತ್**—ಇನ್ನೂ ಅಧಿಕವಾದ ಮಹಿಮೆಯುಳ್ಳದ್ದನ್ನಾಗಿ ಮಾಡಬಲ್ಲನು । **ಕಃ**—ಯಾವನು । **ಕಾವ್ಯಾ**—ಕಾವ್ಯಾತ್ಮಕವಾದ ಸ್ತುತಿಯನ್ನು ಅರ್ಪಿಸಬಲ್ಲನು । **ಕೋ ಹ**—ಯಾವ ಯಜಮಾನನು ತಾನೇ । **ಪೌಂಸ್ಯಾ**—ನಿಮ್ಮ ವೀರ್ಯವನ್ನು ಅರಿತು ಪ್ರಶಂಸಿಸಬಲ್ಲನು । **ಯತ್**—ಯಾವ ಕಾರಣದಿಂದ । **ಸುವಿತಾಯ**—ಉತ್ತಮವಾದ ಕೌಶಲ್ಯವನ್ನು । **ದಾವನೇ**—ಉಂಟುಮಾಡಲು । **ಪ್ರ ಭರಧ್ವೇ**—ವೃಷ್ಟಿಯನ್ನು ಸುರಿಸುವಿರೋ (ಆದುದರಿಂದಲೇ) । **ಯೂಯಂ ಹ**—ನೀವು । **ಕಿರಣಂ ನ**—ಕಿರಣವು ಕಂಪಿಸುವಂತೆ । **ಭೂಮಿಂ**—ಪೃಥ್ವಿಯನ್ನು । **ರೇಜಥ**—ನಡುಗಿಸುತ್ತೀರಿ

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಪೂಜ್ಯರಾದ ನಿಮ್ಮ ಮಹಾತ್ಮ್ಯವನ್ನು ಯಾವ ಯಜಮಾನನು ಉತ್ತಮವಾಗಿ ಸ್ತುತಿಸಬಲ್ಲನು ? ಯಾವನು ಅದಕ್ಕನುರೂಪವಾಗಿ ಕಾವ್ಯಾತ್ಮಕವಾದ ಸ್ತುತಿಯನ್ನರ್ಪಿಸಬಲ್ಲನು ? ಯಾವನು ತಾನೇ ನಿಮ್ಮ ವೀರ್ಯವನ್ನರಿತು ಪ್ರಶಂಸಿಸಬಲ್ಲನು ? ನೀವು ಯಾವ ನಿಮ್ಮ ಮಾಹಾತ್ಮ್ಯದಿಂದ ಭೂಮಿಯನ್ನು ಫಲವತ್ತಾಗಿ ಮಾಡಲು ಮತ್ತು ಅದಕ್ಕೆ ಪೌಷ್ಕಲ್ಯವನ್ನುಂಟುಮಾಡಲು ವೃಷ್ಟಿಯನ್ನು ಸುರಿಸುವಿರೋ ಆದುದರಿಂದಲೇ ಕಿರಣವು ಕಂಪಿಸುವಂತೆ ನೀವು ಪೃಥ್ವಿಯನ್ನು ಕಂಪಿಸುವಂತೆ ಮಾಡುತ್ತೀರಿ.

## English Translation

Who may exalt the great excellencies of you who are adorable ? who may (offer you fitting) praises ? who (glorify your) manly (deeds) ? for you make the earth tremble like a ray (of light) when you confer the gift (of rain) for (the diffusion of) fertility.

॥ ವಿಶೇಷವಿಷಯಗಳು ॥

**ಯೂಯಂ ಹ ಭೂಮಿಂ ಕಿರಣಂ ನ ರೇಜಥ**—ಎಲೈ ಮರುದ್ದೇವತೆಗಳೇ, ನೀವು ಸೂರ್ಯಕಿರಣವು ಕಂಪಿಸುವಂತೆ ಭೂಮಿಯನ್ನು ನಡುಗಿಸುತ್ತೀರಿ ಎಂದು ಇಲ್ಲಿ ವರ್ಣಿಸಿದೆ. ಸೂರ್ಯನ ಕಿರಣವು ನಡುಗುವಂತೆ ತೋರುತ್ತಿದ್ದರೂ ಅದು ವಾಸ್ತವವಾಗಿ ನಡುಗುವುದಿಲ್ಲ. ಆ ಕಿರಣವು ವಾಯುಮಂಡಲದಲ್ಲಿ ಹಾದು ಬರುವಾಗ ಕಂಪಿಸುವಂತೆ ತೋರುವುದು. ಆದ್ದರಿಂದ ಋಷಿಯು ಇಲ್ಲಿ ಕಿರಣವು ಕಂಪಿಸುವ ದೃಷ್ಟಾಂತದಿಂದ ಭೂಮಿಯು ಕಂಪಿಸುವುದನ್ನು ವರ್ಣಿಸಿದಾನೆ.

ಈ ಋಕ್ಕಿನ ಪೂರ್ವಾರ್ಧದಲ್ಲಿ ಮರುದ್ದೇವತೆಗಳ ಶಕ್ತಿಸಾಮರ್ಥ್ಯಗಳನ್ನೂ ಮಹಿಮೆಯನ್ನೂ ಪ್ರಶ್ನೆಯ ಮೂಲಕ ವರ್ಣಿಸಲಾಗಿದೆ. **ಕೋ ಮಹತಾಂ ವಃ ಮಹಾಂತಿ ಉತ್ ಅಶ್ನವತ್**—ಎಲೈ ಮರುದ್ದೇವತೆಗಳೇ ಮಹಾಮಹಿಮಾನ್ವಿತರಾದ ನಿಮ್ಮ ಮಾಹಾತ್ಮೆಯನ್ನು ಯಾವನು ತಾನೆ ವರ್ಣಿಸಬಲ್ಲನು ? ಎಂದು ಈ ವಾಕ್ಯದಲ್ಲಿ ಹೇಳಿರುವುದಕ್ಕೆ ಯಾವ ಪುರುಷನೂ ವರ್ಣಿಸಲು ಶಕ್ಯವಿಲ್ಲ ನಿಮ್ಮ ಮಹಾತ್ಮೆಯು ಅತಿಶಯವಾಗಿದ್ದು ಯಾವ ಪುರುಷನ ಶಕ್ತಿಸಾಮರ್ಥಗಳಿಂದ ವರ್ಣಿಸಲು ನಿಲುಕುವುದಿಲ್ಲ ಎಂಬ ಪ್ರತ್ಯುತ್ತರವನ್ನು ಋಷಿಯು ನಿರೀಕ್ಷಿಸಿ ಈ ರೀತಿ ಪ್ರಶ್ನೆಮಾಡಿದಾನೆ. ಮುಂದಿನ ಪ್ರಶ್ನೆಗಳೂ ಇದರಂತೆ ಇವೆಯೆಂದು ಭಾವಿಸಬೇಕು

**ನ**—ನ ಎಂಬ ಶಬ್ದದ ಅರ್ಥ ಮತ್ತು ಪ್ರಯೋಗದ ವಿಷಯದಲ್ಲಿ ಯಾಸ್ಕರು ಈ ರೀತಿ ಹೇಳಿದಾರೆ—

**ನೇತಿ ಪ್ರತಿಷೇಧಾರ್ಥೀಯೋ ಭಾಷಾಯಾಂ । ಉಭಯಮನ್ವಧ್ಯಾಯಂ । ನೇಂದ್ರಂ ದೇವಮಮಂಸತ ಇತಿ ಪ್ರತಿಷೇಧಾರ್ಥೀಯಃ ಪುರಸ್ತಾದುಪಚಾರಸ್ತಸ್ಯ ಯತ್ಪ್ರತಿಷೇಧತಿ । ದುರ್ಮದಾಸೋ ನ ಸುರಾಯಾಂ ಇತ್ಯುಪಮಾರ್ಥೀಯಃ । ಉಪರಿಷ್ಟಾದುಪಚಾರಸ್ತಸ್ಯ ಯೇನೋಪಮಿಮೀತೇ ॥**

(ನಿ. ೧-೪)

ಎಂದು ಹೇಳಿದಾರೆ. ನ ಎಂಬ ನಿಪಾತಕ್ಕೆ ಎರಡು ವಿಧವಾದ ಅರ್ಥ ಮತ್ತು ಪ್ರಯೋಗಗಳಿರುವವು. ಲೋಕವ್ಯವಹಾರ ಭಾಷೆಯಲ್ಲಿ ನ-ಇಲ್ಲ (ಅಥವಾ ಅಲ್ಲ) ಎಂಬ ನಿಷೇಧಾರ್ಥದಲ್ಲಿಯೇ ಈ ಶಬ್ದದ ಪ್ರಯೋಗವಿರುವುದು ಆದರೆ ಛಂದಸ್ಸುಗಳಲ್ಲಿ ಎಂದರೆ ವೇದವಾಕ್ಯಗಳಲ್ಲಿ ನ ಎಂಬ ಶಬ್ದಕ್ಕೆ ನಿಷೇಧಾರ್ಥ ಮತ್ತು ಉಪಮಾರ್ಥ ಎರಡರಲ್ಲಿಯೂ ಪ್ರಯೋಗವಿರುವುದು. ಹೇಗೆಂದರೆ—**ನೇಂದ್ರಂ ದೇವಮಮಂಸತ**—ಇಂದ್ರನನ್ನು ದೇವತೆಯೆಂದು ಪರಿಗಣಿಸಲಿಲ್ಲ ಎಂಬ ವಾಕ್ಯದಲ್ಲಿ ನ ಎಂಬ ಶಬ್ದವು ನಿಷೇಧಾರ್ಥದಲ್ಲಿ (ಇಲ್ಲ ಎಂಬರ್ಥದಲ್ಲಿ) ಪ್ರಯುಕ್ತವಾಗಿದೆ. ಇಂತಹ ಸಂದರ್ಭದಲ್ಲಿ ನ ಎಂಬ ಶಬ್ದವು ಯಾವುದನ್ನು ನಿಷೇಧಿಸಬೇಕೋ ಆ ಶಬ್ದದ ಮೊದಲೇ ಇದರ ಪ್ರಯೋಗವಿರುವುದು. ಮೇಲಿನ ಉದಾಹರಣೆಯಲ್ಲಿ ಇಂದ್ರನನ್ನು ನಿಷೇಧಿಸುವುದು ಉಕ್ತವಾಗಿರುವುದರಿಂದ ಇಂದ್ರ ಶಬ್ದಕ್ಕೆ ಮೊದಲೇ **ನೇಂದ್ರಂ** ಎಂದು ನ ಶಬ್ದಪ್ರಯೋಗವಿರುವುದು. ಇನ್ನು **ದುರ್ಮದಾಸೋ ನ ಸುರಾಯಾಂ**—ಮದ್ಯವನ್ನು ಅತಿಯಾಗಿ ಪಾನಮಾಡಿ ಮತ್ತರಾಗಿರುವವರಂತೆ ಎಂಬ ವಾಕ್ಯದಲ್ಲಿ ನ ಎಂಬ ಶಬ್ದಕ್ಕೆ **ಅಂತೆ** ಎಂಬರ್ಥವಿದ್ದು ಉಪಮಾರ್ಥದಲ್ಲಿ (ಹೋಲಿಸುವಿಕೆಯಲ್ಲಿ) ಪ್ರಯುಕ್ತವಾಗಿದೆ ಈ ಸಂದರ್ಭದಲ್ಲಿ ನ ಎಂಬ ಶಬ್ದವು ಉಪಮಾನಸೂಚಕಶಬ್ದದ ಅನಂತರದಲ್ಲಿ **ದುರ್ಮದಾಸೋ ನ** ಎಂದು ಉಪಯೋಗಿಸಲಾಗಿರುವುದು

॥ ಸಂಹಿತಾಪಾಠಃ ॥

ಅಶ್ವಾ ಇವೇದರುಷಾಸಃ ಸಬಂಧವಃ ಶೂರಾ ಇವ ಪ್ರಯುಧಃ ಪ್ರೋತ
ಯುಯುಧುಃ ।
ಮರ್ಯಾ ಇವ ಸುವೃಧೋ ವಾವೃಧುರ್ನರಃ ಸೂರ್ಯಸ್ಯ ಚಕ್ಷುಃ ಪ್ರ ಮಿನಂತಿ
ವೃಷ್ಟಿಭಿಃ ॥ ೫ ॥

॥ ಪದಪಾಠಃ ॥

ಅಶ್ವಾಃऽಇವ । ಇತ್ । ಅರುಷಾಸಃ । ಸऽಬಂಧವಃ । ಶೂರಾಃऽಇವ । ಪ್ರऽಯುಧಃ । ಪ್ರ । ಉತ । ಯುಯುಧುಃ ।
ಮರ್ಯಾಃऽಇವ । ಸುऽವೃಧಃ । ವವೃಧುಃ । ನರಃ । ಸೂರ್ಯಸ್ಯ । ಚಕ್ಷುಃ । ಪ್ರ । ಮಿನಂತಿ । ವೃಷ್ಟಿऽಭಿಃ ॥ ೫ ॥

॥ ಸಾಯಣಭಾಷ್ಯಂ ॥

**ಮರುತ ಏತೇಽಶ್ವಾ ಇವ ಶೀಘ್ರಗಂತಾರೋಽರುಷಾಸ ಆರೋಚಮಾನಾಃ ಸಬಂಧವಃ । ಸಮಾನ ಏಕ ಏವ ಬಂಧುರ್ಬಂಧಕೋ ರುದ್ರೋ ಯೇಷಾಂ ತೇ ತಾದೃಶಾಃ । ಪರಸ್ಪರಂ ಬಂಧವಃ ಸ್ನೇಹಯುಕ್ತಾ ವಾ ಶೂರಾ ಭಟಾ ಇವ ಪ್ರಯುಧಃ ಪ್ರಯೋದ್ಧಾರೋ ವೈರಿಭಿಃ ಸಹ ತಾದೃಶ ಉತಾಪಿ ಚ ಪ್ರ ಯುಯುಧುಃ । ಪ್ರಕರ್ಷೇಣ ಯುಧ್ಯಂತೇ । ಮರ್ಯಾ ಇವ ಮನುಷ್ಯಾ ಯಥಾ ವರ್ಧಂತೇ ತಥಾ ಸುವೃಧಃ ಸುಷ್ಠು ವರ್ಧಯಿತಾರೋ ವರ್ಧಮಾನಾ ವಾ ನರೋ ನೇತಾರೋ ವವೃಧುಃ । ವರ್ಧಂತೇ । ಏವಂ ಮಹಾತ್ಮಾನಃ ಸೂರ್ಯಸ್ಯ ಚಕ್ಷುಸ್ತೇಜಃಸಮೂಹಂ ಮಂಡಲಂ ವಾ ವೃಷ್ಟಿಭಿಃ ಪ್ರ ಮಿನಂತಿ । ಪ್ರಕರ್ಷೇಣ ಹಿಂಸಂತಿ। ಆವೃಣ್ವಂತೀತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಅಶ್ವಾ ಇವ**—ಉತ್ತಮವಾದ ಅಶ್ವಗಳಂತೆ । **ಅರುಷಾಸಃ**—ಆಕರ್ಷಕವಾದ ವರ್ಣ ಮತ್ತು ಗತಿಗಳುಳ್ಳವರೂ । **ಸಬಂಧವಃ**—ಒಬ್ಬರಿಗೊಬ್ಬರಿಗೆ ಸಮಾನವಾದ ಪ್ರೇಮವುಳ್ಳವರೂ । **ಶೂರಾ ಇವ**—ಉತ್ತಮವಾದ ವೀರಭಟರಂತೆ । **ಪ್ರಾಯುಧಃ**—ಯುದ್ಧಕುಶಲರೂ ಆದ ಮರುತ್ತುಗಳು । **ಪ್ರ ಯುಯುಧುಃ**—ಶತ್ರುಗಳೊಡನೆ ಅತಿಶಯವಾಗಿ ಹೋರಾಡುತ್ತಾರೆ । **ಮರ್ಯಾ ಇವ**—ಮಾನವರಂತೆ । **ಸುವೃಧಃ**—ಪೌಷ್ಕಲ್ಯವನ್ನು ಹೊಂದಿದವರೂ । **ನರಃ**—ನೇತೃಗಳೂ ಆದ ಮರುತ್ತುಗಳು । **ವವೃಧುಃ**—ವೃದ್ಧಿಯನ್ನು ಹೊಂದುತ್ತಾರೆ । **ಸೂರ್ಯಸ್ಯ**—ಸೂರ್ಯನ । **ಚಕ್ಷುಃ**—ಚಕ್ಷುಸ್ಸನ್ನು (ಮಂಡಲವನ್ನು) । **ವೃಷ್ಟಿಭಿಃ**—ವೃಷ್ಟಿಗಳಿಂದ । **ಪ್ರ ಮಿನಂತಿ**—ಮುಚ್ಚುವಂತೆ ಮಾಡುತ್ತಾರೆ.

॥ ಭಾವಾರ್ಥ ॥

ಉತ್ತಮವಾದ ಅಶ್ವಗಳಂತೆ ಆಕರ್ಷಕವಾದ ವರ್ಣ ಮತ್ತು ಗತಿಗಳುಳ್ಳವರೂ, ಒಬ್ಬರಿಗೊಬ್ಬರು ಸಮಾನವಾದ ಪ್ರೇಮವುಳ್ಳವರೂ, ಉತ್ತಮವಾದ ವೀರಭಟರಂತೆ ಯುದ್ಧಕುಶಲರೂ ಆದ ಮರುತ್ತುಗಳು ಶತ್ರುಗಳೊಡನೆ ಅತಿಶಯವಾಗಿ ಹೋರಾಡುತ್ತಾರೆ. ಮಾನವರಂತೆ ಪೌಷ್ಕಲ್ಯವನ್ನು ಹೊಂದಿದವರೂ, ನೇತೃಗಳೂ ಆದ ಮರುತ್ತುಗಳು ವೃದ್ಧಿಯನ್ನು ಹೊಂದುತ್ತಾರೆ. ಸೂರ್ಯನ ತೇಜೋಮಂಡಲವನ್ನು ವೃಷ್ಟಿಗಳಿಂದ ಮರೆಯಾಗುವಂತೆ ಮಾಡುತ್ತಾರೆ.

## English Translation

Resplendent as steeds, of one kindred, they engage in combat like valiant heroes : like (prosperous) men, they, the leaders (of rites), have increased (in power), and cover the eye of the sun with showers.

॥ ವಿಶೇಷವಿಷಯಗಳು ॥

**ಅಶ್ವಾ ಇವ-ಶೀಘ್ರಗಂತಾರಃ** । ಮರುದ್ದೇವತೆಗಳ ವೇಗವು ಅತಿಶಯವಾಗಿರುವುದರಿಂದ ಅವರನ್ನು ವೇಗಗಮನವುಳ್ಳ ಅಶ್ವಗಳಿಗೆ ಹೋಲಿಸಿದೆ. **ಶೂರಾ ಇವ ಪ್ರಾಯುಧಃ ಪ್ರಯುಯುಧುಃ**-ಯುದ್ಧಕುಶಲರಾದ ಭಟರಂತೆ ಯುದ್ಧಕಾರ್ಯದಲ್ಲಿ ಕುಶಲರಾದ ಮರುದ್ದೇವತೆಗಳು ಶತ್ರುಗಳೊಡನೆ ಅತಿಶಯವಾಗಿ ಹೋರಾಡುತ್ತಾರೆ. ಇಲ್ಲಿಶತ್ರುಗಳೆಂದರೆ

ಮೇಘಗಳೆಂದರ್ಥ. ಮೇಘಗಳನ್ನು ತಮ್ಮ ರಭಸವಾದ ಗತಿಯಿಂದ ಚದುರಿಸಿ ಅವುಗಳನ್ನು ಮಳೆಹುಯ್ಯುವಂತೆ ಮಾಡುತ್ತಾರೆ. ಮಳೆಹುಯ್ಯುವ ಕಾಲದಲ್ಲಿ ಮಿಂಚು, ಸಿಡಿಲು ಗುಡುಗುಗಳು ಇರುವವು. ಇವುಗಳೇ ಯುದ್ಧದಲ್ಲಿ ಯುದ್ಧಭಟರು ಮಾಡುವ ಆರ್ಭಟಗಳು. ಇದನ್ನೇ ಇಲ್ಲಿ ಮರುದ್ದೇವತೆಗಳು ಶತ್ರುಗಳೊಡನೆ ಮಾಡುವ ಯುದ್ಧವೆಂದು ವರ್ಣಿಸಿದೆ.

**ಸಬಂಧವಃ—ಸಮಾನ ಏಕ ಏವ ಬಂಧುರ್ಬಂಧಕೋ ರುದ್ರೋ ಯೇಷಾಂ ತೇ ತಾದೃಶಾಃ । ಪರಸ್ಪರಂ ಬಂಧವಃ ಸ್ನೇಹಯುಕ್ತಾ ವಾ ।** ಈ ಮರುತ್ತುಗಳಲ್ಲಿ ಪ್ರತಿಯೊಬ್ಬರಿಗೂ ರುದ್ರನೇ ತಂದೆಯಾದ್ದರಿಂದ ಇವರು ಒಬ್ಬರಿಗೊಬ್ಬರು ಭ್ರಾತೃಸಂಬಂಧದಿಂದ ಕೂಡಿರುವರು ಎಂದಭಿಪ್ರಾಯವು. ಈ ವಿಧವಾದ ಸಂಬಂಧದಲ್ಲಿ ಸಮಾನಭಾವವಿರುವುದು ಎಂದರೆ ಪಿತಾಪುತ್ರರ ಸಂಬಂಧದಲ್ಲಿರುವಂತೆ ಪಿತೃವು ಅಧಿಕ ಪುತ್ರನು ಕೀಳು ಎಂಬ ವ್ಯತ್ಯಾಸವಿರುವುದಿಲ್ಲ. ಮರುದ್ದೇವತೆಗಳಲ್ಲಿ ಒಬ್ಬರು ಹೆಚ್ಚು ಮತ್ತೊಬ್ಬರು ಕಮ್ಮಿ ಎಂಬ ಉಚ್ಚನೀಚವ್ಯತ್ಯಾಸಗಳಿಲ್ಲದೆ ಎಲ್ಲರೂ ಒಂದೇ ವಿಧವಾದ ಸಂಬಂಧವುಳ್ಳವರು ಎಂದಭಿಪ್ರಾಯವು. ಅಥವಾ ದ್ವೇಷಾಸೂಯೆಗಳಿಲ್ಲದೆ ಪರಸ್ಪರ ಸ್ನೇಹಯುಕ್ತರಾಗಿರುವರು ಎಂದೂ ಹೇಳಬಹುದು ಎಂದು ಎರಡುವಿಧ ಅರ್ಥವಿವರಣೆ ಮಾಡಿದಾರೆ.

**ಸೂರ್ಯಸ್ಯ ಚಕ್ಷುಃ ವೃಷ್ಟಿಭಿಃ ಪ್ರ ಮಿನಂತಿ—ಸೂರ್ಯಸ್ಯ ತೇಜಸ್ಸಮೂಹಂ ಮಂಡಲಂ ವಾ ಪ್ರಕರ್ಷೇಣ ಹಿಂಸಂತಿ ಆವೃಣ್ವಂತೀತ್ಯರ್ಥಃ ।** ಈ ಮರುದ್ದೇವತೆಗಳು ತಮ್ಮ ವೃಷ್ಟಿರೂಪವಾದ ಕಾರ್ಯಗಳಿಂದ ಸೂರ್ಯನ ಪ್ರಕಾಶವನ್ನು ಅಥವಾ ಸೂರ್ಯನ ಮಂಡಲವನ್ನು ಹಿಂಸಿಸುವರು ಎಂದರೆ ಸೂರ್ಯನು ಕಾಣಿಸದಂತೆ ಮುಚ್ಚುವರು. ವೃಷ್ಟಿಕಾಲದಲ್ಲಿ ಅಂತರಿಕ್ಷವು ಮೇಘಾಚ್ಛಾದಿತವಾಗಿರುವುದರಿಂದ ಸೂರ್ಯಮಂಡಲವು ಯಾರಿಗೂ ಕಾಣಿಸುವುದಿಲ್ಲ ಎಂದಭಿಪ್ರಾಯವು

॥ ಸಂಹಿತಾಪಾಠಃ ॥

**ತೇ ಅಜ್ಯೇಷ್ಠಾ ಅಕನಿಷ್ಠಾಸ ಉದ್ಭಿದೋಽಮಧ್ಯಮಾಸೋ ಮಹಸಾ ವಿ ವಾವೃಧುಃ ।**

**ಸುಜಾತಾಸೋ ಜನುಷಾ ಪೃಶ್ನಿಮಾತರೋ ದಿವೋ ಮರ್ಯಾ ಆ ನೋ ಅಚ್ಛಾ ಜಿಗಾತನ ॥ ೬ ॥**

॥ ಪದಪಾಠಃ ॥

ತೇ । ಅಜ್ಯೇಷ್ಠಾಃ । ಅಕನಿಷ್ಠಾಸಃ । ಉತ್ಽಭಿದಃ । ಅಮಧ್ಯಮಾಸಃ । ಮಹಸಾ । ವಿ । ವವೃಧುಃ ।

ಸುಽಜಾತಾಸಃ । ಜನುಷಾ । ಪೃಶ್ನಿಽಮಾತರಃ । ದಿವಃ । ಮರ್ಯಾಃ । ಆ । ನಃ । ಅಚ್ಛ । ಜಿಗಾತನ ॥

॥ ಸಾಯಣಭಾಷ್ಯಂ ॥

ತೇ ಮರುತೋಽಜ್ಯೇಷ್ಠಾ ಅಕನಿಷ್ಠಾಸೋಽಕನಿಷ್ಠಾ ಉದ್ಭಿದ ಉದ್ಭೇದಯಿತಾರಃ ಶತ್ರೂಣಾಮಮಧ್ಯಮಾಸೋಽಮಧ್ಯಮಾಃ ಸರ್ವಪ್ರಕಾರೈಃ ಸಮಾ ಮಹಸಾ ತೇಜಸಾ ವಿ । ವವೃಧುಃ ವಿವರ್ಧಂತೇ । ಸುಜಾತಾಸಃ ಸುಷ್ಠು ಸಂಭೂತಾ ಜನುಷಾ ಜನ್ಮನಾ ಪೃಶ್ನಿಮಾತರಃ ಪೃಶ್ನೇಃ ಪುತ್ರಾ ಮರ್ಯಾ ಮನುಷ್ಯೇಭ್ಯೋ ಹಿತಾ ಯೂಯಂ ದಿವಃ ಸಕಾಶಾನ್ನೋಽಸ್ಮಾನಚ್ಛಾಭಿಮುಖಮಾ ಜಿಗಾತನ। ಸರ್ವತಃ ಪ್ರಶಂಸತ ಸಾಧ್ವನುಷ್ಠಿತಮಿತಿ । ಉತ್ತರಾರ್ಧಃ ಪ್ರತ್ಯಕ್ಷಕೃತಃ । ಯದ್ವಾ । ಯೇ ಸುಜಾತಾ ಜನುಷಾ ಪೃಶ್ನಿಮಾತರಶ್ಚ ತಾನ್ ದಿವ ಆಗತಾನ್ ಹೇ ಋತ್ವಿಜೋ ಮರ್ಯಾ ಯೂಯಮಾ ಜಿಗಾತನ ಆಗಚ್ಛತ ತೇ ನೋಽಚ್ಛ । ಆಗಚ್ಛತಾಸ್ಮದಭಿಮುಖಂ ॥

॥ ಪ್ರತಿಪದಾರ್ಥ ॥

**ತೇ**—ಅದೇ ಮರುತ್ತುಗಳು । **ಅಜ್ಯೇಷ್ಠಾಃ**-ಒಬ್ಬರಿಗಿಂತೊಬ್ಬರೂ ಜ್ಯೇಷ್ಠರಾಗಿಲ್ಲದೆಯೂ । **ಅಕನಿಷ್ಠಾಸಃ**—ಇಬ್ಬರಿಗಿಂತಿನ್ನೊಬ್ಬರೂ ಕನಿಷ್ಠರಾಗಿಲ್ಲದೆಯೂ । **ಅಮಧ್ಯಮಾಸಃ**—ಮಧ್ಯಸ್ಥಸ್ಥಾನವನ್ನು ಹೊಂದದೆ । **ಉದ್ಭಿದಃ**—(ಎಲ್ಲರೂ ಸಮಾನವಾದ ಶಕ್ತಿಯಿಂದ) ಶತ್ರುನಾಶಕರಾಗಿ । **ಮಹಸಾ**—ತಮ್ಮ ವೈಯಕ್ತಿಕವಾದ ತೇಜಸ್ಸಿನಿಂದಲೇ । **ವಿ ವವೃಧುಃ**—ವೃದ್ಧಿಯನ್ನು ಹೊಂದಿದ್ದಾರೆ । **ಜನುಷಾ**—ಸ್ವಾಭಾವಿಕವಾಗಿಯೇ । **ಸುಜಾತಾಸಃ**—ಉತ್ತಮವಾದ ಜನ್ಮವುಳ್ಳವರೂ । **ಪೃಶ್ನಿಮಾತರಃ**—ಪೃಶ್ನಿಯೇ ಮಾತೃವಾಗಿ ಉಳ್ಳವರೂ । **ಮರ್ಯಾಃ**—ಮಾನವರಿಗೆ ಹಿತಕಾರಿಗಳೂ ಆದ ಎಲೈ ಮರುತ್ತುಗಳೇ । **ದಿವಃ**—ಅಂತರಿಕ್ಷದಿಂದ । **ನಃ ಅಚ್ಛ**—ನಮಗೆ ಅಭಿಮುಖವಾಗಿ । **ಆ ಜಿಗಾತನ**—ಬನ್ನಿರಿ.

॥ ಭಾವಾರ್ಥ ॥

ಮರುತ್ತುಗಳಲ್ಲಿ ಒಬ್ಬರಿಗಿಂತ ಇನ್ನೊಬ್ಬರು ದೊಡ್ಡವರಲ್ಲ. ಒಬ್ಬರಿಗಿಂತ ಇನ್ನೊಬ್ಬರು ಚಿಕ್ಕವರಲ್ಲ. ಅವರಲ್ಲಿ ಮಧ್ಯಸ್ಥಾನವನ್ನೂ ಯಾರೂ ಪಡೆದಿಲ್ಲ. ಎಲ್ಲರೂ ಸಮಾನವಾದ ಶಕ್ತಿಯಿಂದಲೇ ಶತ್ರುನಾಶಕರಾಗಿ ತಮ್ಮ ವೈಯಕ್ತಿಕವಾದ ತೇಜಸ್ಸಿನಿಂದಲೇ ವೃದ್ಧಿಯನ್ನು ಹೊಂದಿದ್ದಾರೆ. ಸ್ವಾಭಾವಿಕವಾಗಿಯೇ ಉತ್ತಮವಾದ ಜನ್ಮವುಳ್ಳವರೂ, ಪೃಶ್ನಿಯೇ ಮಾತೃವಾಗಿ ಉಳ್ಳವರೂ, ಮಾನವರಿಗೆ ಹಿತಕಾರಿಗಳೂ ಆದ ಎಲೈ ಮರುತ್ತುಗಳೇ, ಅಂತರಿಕ್ಷದಿಂದ ನಮಗೆ ಅಭಿಮುಖರಾಗಿ ಬನ್ನಿರಿ

English Translation

None of them are older, none younger (than the others) : the destroyers of (foes), none hold a middle (rank), but all excel in glory : honourable by birth, having Prisni for your mother, you, Maruts, favourable to man, come from heaven to our presence.

॥ ವಿಶೇಷವಿಷಯಗಳು ॥

ಸಾಧಾರಣವಾಗಿ ಲೋಕವ್ಯವಹಾರದಲ್ಲಿ ಸಹೋದರರ ವಿಷಯವನ್ನು ಹೇಳುವಾಗ ಮೊದಲು ಹುಟ್ಟಿದವನನ್ನು ಜ್ಯೇಷ್ಠನೆಂದೂ ಅನಂತರ ಹುಟ್ಟಿದವನನ್ನು ಮಧ್ಯಮನೆಂದೂ ಅವನನಂತರ ಹುಟ್ಟಿದವನನ್ನು ಕಿರಿಯವನೆಂತಲೂ ಹೇಳುವುದು ರೂಢಿಯು. ಈ ರೀತಿ ವಯಸ್ಸಿನಲ್ಲಿಯೂ, ಗುಣಾದಿಗಳಲ್ಲಿಯೂ, ಶಕ್ತಿಸಾಮರ್ಥ್ಯಗಳಲ್ಲಿಯೂ, ಸಹೋದರರಾಗಿರುವರಲ್ಲಿ ಅನೇಕ ವ್ಯತ್ಯಾಸಗಳು ಕಂಡುಬರುವುದು ಲೋಕದಲ್ಲಿ ಸಾಮಾನ್ಯವಾಗಿದೆ. ಆದರೆ ಮರುದ್ದೇವತೆಗಳ ವಿಷಯವು ಹಾಗಲ್ಲ. ಇವರೆಲ್ಲರಿಗೂ ರುದ್ರನೇ ತಂದೆಯೂ ಪೃಶ್ನಿಯೇ ತಾಯಿಯೂ ಆಗಿರುವುದರಿಂದ ಇವರೆಲ್ಲರೂ ಸಹೋದರ ಸಂಬಂಧವುಳ್ಳವರಾಗಿರುವರು. ಹಾಗಿದ್ದರೂ ಇವರೆಲ್ಲರೂ ಏಕಕಾಲದಲ್ಲಿ ಉತ್ಪನ್ನರಾದುದರಿಂದ ಇವರಲ್ಲಿ ಒಬ್ಬನು ಜ್ಯೇಷ್ಠನು, ಮತ್ತೊಬ್ಬನು ಮಧ್ಯಮನು ಇನ್ನೊಬ್ಬನು ಕನಿಷ್ಠನು ಎಂಬ ಭೇದವಿಲ್ಲ. ಎಲ್ಲರೂ ಸಮಾನವಯಸ್ಕರು, ಸಮಾನಗುಣಗಳುಳ್ಳವರು, ಸಮಾನವಾದ ಆಕಾರ ಮತ್ತು ರೂಪವುಳ್ಳವರು. ಎಲ್ಲರೂ ಒಂದೇ ವಿಧವಾಗಿ ವೃದ್ಧಿಯನ್ನೈದುತ್ತಿರುವರು ಎಂದು ಮರುದ್ದೇವತೆಗಳಿಗಿರುವ ಸಮಾನಧರ್ಮವು. ಈ ಋಕ್ಕಿನಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ. ಇಂತಹ ಮರುದ್ದೇವತೆಗಳನ್ನು ನಮ್ಮ ಅಭಿಮುಖವಾಗಿ ಬರಬೇಕೆಂದು ಋಷಿಯು ಪ್ರಾರ್ಥಿಸಿದಾನೆ.

॥ ಸಂಹಿತಾಪಾಠಃ ॥

ವಯೋ ನ ಯೇ ಶ್ರೇಣೀಃ ಪಪ್ತುರೋಜಸಾಂತಾನ್ದಿವೋ ಬೃಹತಃ ಸಾನುನಸ್ಪರಿ ।

ಅಶ್ವಾಸ ಏಷಾಮುಭಯೇ ಯಥಾ ವಿದುಃ ಪ್ರ ಪರ್ವತಸ್ಯ ನಭನೂರಚುಚ್ಯವುಃ ॥ ೭ ॥

॥ ಪದಪಾಠಃ ॥

ವಯಃ । ನ । ಯೇ । ಶ್ರೇಣೀಃ । ಪಪ್ತುಃ । ಓಜಸಾ । ಅಂತಾನ್ । ದಿವಃ । ಬೃಹತಃ । ಸಾನುನಃ । ಪರಿ ।

ಅಶ್ವಾಸಃ । ಏಷಾಂ । ಉಭಯೇ । ಯಥಾ । ವಿದುಃ । ಪ್ರ । ಪರ್ವತಸ್ಯ । ನಭನೂನ್ । ಅಚುಚ್ಯವುಃ ॥

॥ ಸಾಯಣಭಾಷ್ಯಂ ॥

ಯೇ ಮರುತೋ ವಯೋ ನ ಪಕ್ಷಿಣ ಇವ ಶ್ರೇಣೀಃ ಪಂಕ್ತಯಃ ಸಂತ ಓಜಸಾ ಬಲೇನ ದಿವೋಂತರಿಕ್ಷಸ್ಯಾದಿತ್ಯಸ್ಯ ವಾಂತಾನ್ ಪರ್ಯಂತಾನ್ ಬೃಹತೋ ಮಹತಃ ಸಾನುನಃ ಸಮುನ್ನತಸ್ಯಾ-ಕಾಶವಲಯಸ್ಯ ಪರಿ ಪರಿತಃ ಪಪ್ರುಃ ಪತಂತಿ ಏಷಾಮಶ್ವಾಸೋಽಶ್ವಾಃ ಪರ್ವತಸ್ಯ ಮೇಘಸ್ಯ ನಭನೂನ್ ॥ ಭನತೇಃ ಶಬ್ದಕರ್ಮಣೋ ನಥ್ರಾಡಿತಿವತ್ ನಭನವಃ ॥ ಉದಕಾನಿ ಪ್ರಾಚುಚ್ಯವುಃ । ಚ್ಯಾವಯಂತಿ । ಉಭಯೇ ದೇವಾ ಮನುಷ್ಯಾಶ್ಚ ಯಥಾ ವಿದುರ್ಜಾನಂತಿ ತಥಾ । ಮನುಷ್ಯಾಣಾಂ ಜ್ಞಾನಂ ಪ್ರಸಿದ್ಧಂ । ದೇವಾಶ್ಚ ವೃಷ್ಟ್ಯಾ ಸತ್ಯಾಮಾಗ್ರಾಯಣಾದೌ ಹವಿಷ್ಪ್ರದಾನೇನ ಜಾನಂತಿ । ದೇವಾನಾಂ ವೃಷ್ಟಿಸಂಪೂರ್ತಿಪರಿಜ್ಞಾನಮಾಶ್ವಲಾಯನೇನೋಕ್ತಂ । ಯದಾ ವರ್ಷಸ್ಯ ತೃಪ್ತಃ ಸ್ಯಾದಥಾಗ್ರಯಣೇನ ಯಜೇತೇತ್ಯುಪಕ್ರಮ್ಯಾಪಿ ಹಿ ದೇವಾ ಆಹುಸ್ತೃಪ್ತೋ ನೂನಂ ವರ್ಷಸ್ಯಾ-ಗ್ರಯಣೇನ ಹಿ ಯಜತೇ । ಆ. ೨. ೯ । ಇತಿ ॥

॥ ಪ್ರತಿಪದಾರ್ಥ ॥

**ಯೇ**—ಯಾವ ಅದೇ ಮರುತ್ತುಗಳು । **ವಯೋ ನ**—ಪಕ್ಷಿಗಳಂತೆ । **ಶ್ರೇಣೀಃ**—ಪಂಕ್ತಿಗಳನ್ನು ರಚಿಸಿಕೊಂಡು । **ಓಜಸಾ**—ತಮ್ಮ ಬಲದಿಂದ । **ಬೃಹತಃ**—ಮಹತ್ತಾದ । **ಸಾನುನಃ**—ಆಕಾಶ ಶಿಖರದ । **ಪರಿ**—ಸುತ್ತಲೂ ಇರತಕ್ಕ । **ದಿವಃ**—ಅಂತರಿಕ್ಷದ । **ಅಂತಾನ್**—ಸೀಮಾ ಪ್ರದೇಶಗಳಲ್ಲೆಲ್ಲಾ । **ಪಪ್ರುಃ**—ಸಂಚರಿಸುತ್ತಾರೆ । **ಏಷಾಂ**—ಈ ಮರುತ್ತುಗಳ । **ಅಶ್ವಾಸಃ**—ಅಶ್ವಗಳು । **ಪರ್ವತಸ್ಯ**—ಮೇಘದ । **ನಭನೂನ್**—ಉದಕಗಳನ್ನು । **ಉಭಯೇ**-ದೇವತೆಗಳೂ ಮಾನವರೂ ಒಟ್ಟಿಗೆ । **ಯಥಾ ವಿದುಃ**-ಯಾವ ರೀತಿ ಅರಿಯುವರೋ ಹಾಗೆ । **ಪ್ರ ಅಚುಚ್ಯವುಃ**—ಸುರಿಸುತ್ತಾರೆ.

॥ ಭಾವಾರ್ಥ ॥

ಯಾವ ಅದೇ ಮರುತ್ತುಗಳು ಪಕ್ಷಿಗಳಂತೆ ಪಂಕ್ತಿಗಳನ್ನು ರಚಿಸಿಕೊಂಡು ತಮ್ಮ ಬಲದಿಂದ ಮಹತ್ತಾದ ಆಕಾಶದ ವಲಯದ ಸುತ್ತಲೂ ಇರತಕ್ಕ ಅಂತರಿಕ್ಷದ ಸೀಮಾಪ್ರದೇಶಗಳಲ್ಲೆಲ್ಲಾ ಸಂಚರಿಸುತ್ತಾರೆ. ಈ ಮರುತ್ತುಗಳ ಅಶ್ವಗಳು ಮೇಘದ ಉದಕಗಳನ್ನು ದೇವತೆಗಳೂ ಮಾನವರೂ ಒಟ್ಟಿಗೆ ಅರಿಯುವಂತೆ ಸುರಿಸುತ್ತಾರೆ.

## English Translation

Like birds (that fly) in rows they pass along in their strength above the vast summit (of the sky) to the ends of the firmament : their horses have caused the waters of the cloud to descend, as both (gods and mortals) know.

॥ ವಿಶೇಷವಿಷಯಗಳು ॥

**ವಯೋ ನ ಶ್ರೇಣೀಃ**—ಮರುದ್ದೇವತೆಗಳು ಅಂತರಿಕ್ಷದಲ್ಲಿ ಸಂಚರಿಸುವ ವಿಷಯದಲ್ಲಿ ಋಷಿಯು ಪಕ್ಷಿಗಳ ದೃಷ್ಟಾಂತವನ್ನು ಹೇಳಿದಾನೆ. ಅಂತರಿಕ್ಷದಲ್ಲಿ ಪಕ್ಷಿಗಳು ಎಂದರೆ ಒಂದೇ ಜಾತಿಯ ಪಕ್ಷಿಗಳು ಯಾವರೀತಿ ಸಾಲು

ಸಾಲಾಗಿ ಗುಂಪುಕಟ್ಟಿಕೊಂಡು ಹಾರಿಹೋಗುತ್ತವೆಯೋ ಅದರಂತೆ ಸಮಾನಧರ್ಮವುಳ್ಳ ಮರುತ್ತುಗಳೂ ಸಹ ಅಂತರಿಕ್ಷದ ಅತ್ಯುನ್ನತ ಪ್ರದೇಶಗಳಲ್ಲಿ ಸಾಲಾಗಿ ಗುಂಪುಕಟ್ಟಿಕೊಂಡು ಸಂಚರಿಸುತ್ತಾರೆ ಎಂದು ವರ್ಣಿಸಿದೆ.

**ಉಭಯೇ ಯಥಾ ವಿದುಃ**—ಈ ಮರುದ್ದೇವತೆಗಳು ವೃಷ್ಟಿಸುರಿಸುವುದನ್ನು ದೇವತೆಗಳೂ ಮನುಷ್ಯರೂ ಅರಿಯುತ್ತಾರೆ ಎಂದು ಇಲ್ಲಿ ಹೇಳಿದೆ ವೃಷ್ಟಿವರ್ಷಣವನ್ನು ಭೂಮಿಯ ಮೇಲಿರುವ ಮನುಷ್ಯರು ತಿಳಿಯುವ ವಿಷಯವು ಸಹಜವೇ ಆಗಿದೆ. ಆದರೆ ಸ್ವರ್ಗವಾಸಿಗಳಾದ ದೇವತೆಗಳಿಗೆ ಈ ವಿಷಯವು ಹೇಗೆ ಗೊತ್ತಾಗುವುದು ಎಂಬ ವಿಷಯದಲ್ಲಿ—ಯಜ್ಞಮಾಡುವ ಯಜಮಾನರು ಆಗ್ರಯಣಾದೀಷ್ಟಿಗಳಲ್ಲಿ ದೇವತೆಗಳನ್ನುದ್ದೇಶಿಸಿ ಅರ್ಪಿಸುವ ಹವಿಸ್ಸಿನಿಂದ ತಿಳಿಯುವರು ಎಂದು ಹೇಳಿದೆ. ಈ ವಿಷಯದಲ್ಲಿ ಆಶ್ವಲಾಯನ ಮಹರ್ಷಿಯು ಈ ರೀತಿ ಹೇಳಿದಾರೆ—

> **ದೇವಾನಾಂ ವೃಷ್ಟಿಸಂಪೂರ್ತಿಪರಿಜ್ಞಾ ಸಮಾಶ್ವಲಾಯನೇನೋಕ್ತಂ—ಯದಾ ವರ್ಷಸ್ಯ ತೃಪ್ತಃ ಸ್ಯಾದಥಾಗ್ರಯಣೇನ ಯಜೇತೇತ್ಯುಪಕ್ರಮ್ಯಾಪಿ ಹಿ ದೇವಾ ಆಹುಸ್ತೃಪ್ತೋ ನೂನಂ ವರ್ಷಸ್ಯಾಗ್ರಯಣೇನ ಯಜತೇ ।**

(ಆ. ೨-೯)

ದೇವತೆಗಳಿಗೆ ವೃಷ್ಟಿಪರಿಜ್ಞಾನವು ಹೇಗೆ ಆಗುವುದು ಎಂದರೆ ವೃಷ್ಟಿಯು ಯಥೇಚ್ಛವಾಗಿ ಸುರಿದ ಮೇಲೆ ಯಜ್ಞಮಾಡುವ ಯಜಮಾನನು ಆಗ್ರಯಣವೆಂಬ ಇಷ್ಟಿಯನ್ನು ಮಾಡಿ ಅದರಲ್ಲಿ ದೇವತೆಗಳ ಪ್ರೀತ್ಯರ್ಥವಾಗಿ ಹವಿರಾದಿಗಳನ್ನು ಅರ್ಪಿಸುವುದು ರೂಢಿಯು. ಇದರಿಂದ ದೇವತೆಗಳು ಸಂತುಷ್ಟರಾಗುವರು. ಆದ್ದರಿಂದ ಯಜಮಾನರು ನೆರವೇರಿಸುವ ಆಗ್ರಯಣೇಷ್ಟಿಯಲ್ಲಿ ಅರ್ಪಿಸುವ ಹವಿಷ್ಪ್ರದಾನದಿಂದ ದೇವತೆಗಳಿಗೆ ಭೂಮಿಯ ಮೇಲೆ ಆಗಿರುವ ವೃಷ್ಟಿವರ್ಷಣದ ಪರಿಜ್ಞಾನವು ಆಗುವುದು ಎಂದು ಇಲ್ಲಿ ವಿವರಿಸಲಾಗಿದೆ

॥ ಸಂಹಿತಾಪಾಠಃ ॥

ಮಿಮಾತು ದ್ಯೌರದಿತಿರ್ವೀತಯೇ ನಃ ಸಂ ದಾನುಚಿತ್ರಾ ಉಷಸೋ ಯತಂತಾಂ ।
ಆ ಚುಚ್ಯವುರ್ದಿವ್ಯಂ ಕೋಶಮೇತ ಋಷೇ ರುದ್ರಸ್ಯ ಮರುತೋ ಗೃಣಾನಾಃ ॥

॥ ಪದಪಾಠಃ ॥

ಮಿಮಾತು । ದ್ಯೌಃ । ಅದಿತಿಃ । ವೀತಯೇ । ನಃ । ಸಂ । ದಾನುऽಚಿತ್ರಾಃ । ಉಷಸಃ । ಯತಂತಾಂ ।
ಆ । ಅಚುಚ್ಯವುಃ । ದಿವ್ಯಂ । ಕೋಶಂ । ಏತೇ । ಋಷೇ । ರುದ್ರಸ್ಯ । ಮರುತಃ । ಗೃಣಾನಾಃ ॥ ೮ ॥

॥ ಸಾಯಣಭಾಷ್ಯಂ ॥

ನೋಽಸ್ಮದರ್ಥಂ ದ್ಯೌರಂತರಿಕ್ಷಂ ಮಿಮಾತು । ನಿರ್ಮಿಮಾತು ವೃಷ್ಟಿಂ । ತದನುಕೂಲಂ ಕರೋತ್ವಿತ್ಯರ್ಥಃ । ಕೀದೃಶೀ । ಅದಿತಿರದೀನಾ । ಯದ್ವಾ । ದ್ಯೌರ್ನಿರ್ಮಾತ್ವದಿತಿರ್ಭೂಮಿಶ್ಚ ಮಿಮಾತು ಸುಖಂ । ಕಿಮರ್ಥಂ । ವೀತಯ ಉತ್ಪತ್ತಯೇ ಪ್ರಜನನಾಯೆ ವಾ । ದಾನುಚಿತ್ರಾ ವಿಚಿತ್ರಪ್ರಕಾಶಾ-ದಿದಾನಾ ಉಷಸಃ ಸಂ ಯತಂತಾಂ । ಹೇ ಋಷೇ ತ್ವಯಾ ಗೃಣಾನಾಃ ಸ್ತೂಯಮಾನಾ ಮರುತಃ । ರುದ್ರಸ್ಯ ಪುತ್ರಾ ಇತ್ಯರ್ಥಃ । ಏತೇ ದಿವ್ಯಂ ಕೋಶಂ ಮೇಘಮುದಕಮಾಚುಚ್ಯವುಃ । ಆಚ್ಯಾವಯಂತಿ॥ ದ್ವಿಕರ್ಮಕೋಽಯಂ ॥

॥ ಪ್ರತಿಪದಾರ್ಥ ॥

**ನಃ**—ನಮ್ಮ । **ವೀತಯೇ**—ಸ್ಥಿತಿಗತಿಗಳಿಗಾಗಿ । **ದ್ಯೌಃ**—ಅಂತರಿಕ್ಷವೂ । **ಅದಿತಿಃ**—ಪೃಥ್ವಿಯೂ । **ಮಿಮಾತು**—ವೃಷ್ಟಿಯನ್ನು ಸುರಿಸಲಿ । **ದಾನುಚಿತ್ರಾಃ**—ಅನೇಕ ರೀತಿಯಲ್ಲಿ ಪ್ರಕಾಶಗಳನ್ನು ಹರಡತಕ್ಕ । **ಉಷಸಃ**—ಉಷಸ್ಸುಗಳೂ ಸಹ । **ಸಂ ಯತಂತಾಂ**—(ನಮ್ಮ ಶ್ರೇಯಸ್ಸಿಗಾಗಿ) ಪ್ರಯತ್ನಿಸಲಿ । **ಋಷೇ**—ಎಲೈ ಋಷಿಯೇ । **ಗೃಣಾನಾಃ**—( ನಿನ್ನಿಂದ ) ಸ್ತುತರಾಗತಕ್ಕವರೂ । **ರುದ್ರಸ್ಯ**—ರುದ್ರಪುತ್ರರೂ ಆದ । **ಏತೇ-ಮರುತಃ**—ಈ ಮರುತ್ತುಗಳು । **ದಿವ್ಯಂ**—ದ್ಯುಲೋಕೋತ್ಪನ್ನವಾದ । **ಕೋಶಂ**—ಮೇಘಸ್ಥವಾದ ಉದಕವನ್ನು । **ಆ ಅಚುಚ್ಯವುಃ**—ಸುರಿಸಲಿ.

॥ ಭಾವಾರ್ಥ ॥

ನಮ್ಮ ಸ್ಥಿತಿಗತಿಗಳಿಗಾಗಿ ಪೃಥ್ವಿಯೂ ಅಂತರಿಕ್ಷವೂ ವೃಷ್ಟಿಯನ್ನು ಸುರಿಸಲಿ ಅನೇಕ ರೀತಿಯಲ್ಲಿ ಪ್ರಕಾಶಗಳನ್ನು ಹರಡಿ ಲೋಕಕ್ಕೆ ದಾನಮಾಡತಕ್ಕ ಉಷಸ್ಸುಗಳೂ ಸಹ ನಮ್ಮ ಶ್ರೇಯಸ್ಸಿಗಾಗಿ ಪ್ರಯತ್ನಿಸಲಿ. ಎಲೈ ಋಷಿಯೇ, ನಿನ್ನಿಂದ ಸ್ತುತರಾಗತಕ್ಕವರೂ, ರುದ್ರಪುತ್ರರೂ ಆದ ಈ ಮರುತ್ತುಗಳು ದ್ಯುಲೋಕೋತ್ಪನ್ನವಾದುದೂ, ಮೇಘಸ್ಥವಾದುದೂ ಆದ ಉದಕವನ್ನು ಸುರಿಸಲಿ.

English Translation

May the heaven and the earth yield (rain) for our sustenance : may the wondefully bounteous dawns exert themselves (for our good) : may these sons of Rudra, lauded, Rishi, (by you), send down the celestial rain

॥ ವಿಶೇಷವಿಷಯಗಳು ॥

ಸೂಕ್ತದ ಉಪಸಂಹಾರರೂಪವಾದ ಈ ಕೊನೆಯ ಋಕ್ಕಿನಲ್ಲಿ ಋಷಿಯು ಮರುದ್ದೇವತೆಗಳನ್ನು ಪ್ರಾರ್ಥಿಸುತ್ತಾ ಪೃಥ್ವಿಯೂ, ಅಂತರಿಕ್ಷವೂ, ಉಷೋದೇವತೆಯೂ ಮರುತ್ತುಗಳೂ ಇವರೆಲ್ಲರೂ ಭೂಮಿಯ ಮೇಲೆ ವೃಷ್ಟ್ಯುದಕವನ್ನು ಸುರಿಸಲಿ ಎಂಬ ಆಶಂಸನೆಯನ್ನು ವ್ಯಕ್ತಪಡಿಸಿದ್ದಾನೆ.

## ಅರವತ್ತನೆಯ ಸೂಕ್ತ

**ಈಳೇ ಅಗ್ನಿಂ ಸ್ವವಸಮಿತ್ಯಷ್ಟರ್ಚಂ ಚತುರ್ಥಂ ಸೂಕ್ತಂ ಶ್ಯಾವಾಶ್ವಸ್ಯಾರ್ಷಂ। ಸಪ್ತಮ್ಯಷ್ಟಮ್ಯೌ ಜಗತ್ಯೌ ಶಿಷ್ಟಾಃ ಷಟ್ ತ್ರಿಷ್ಟುಭಃ । ಮರುದ್ದೇವತಾಕಮಗ್ನಿಮರುದ್ದೇವತಾಕಂ ವಾ। ಈಳೇ ದ್ವಿಜಗತ್ಯಂ-ತಮಾಗ್ನೇಯಂ ಚ ವೇತಿ ॥ ಸೂಕ್ತವಿನಿಯೋಗೋ ಲೈಂಗಿಕಃ ॥ ಆದ್ಯಾ ಕಾರೀರ್ಯಾಂ ಸಾಮಿಧೇನೀಷು ಯಾಜ್ಯಾ । ಸೂತ್ರಿತಂ ಚ । ಈಳೇ ಅಗ್ನಿಂ ಸ್ವವಸಂ ನಮೋಭಿರಿತಿ ಧಾಯ್ಯೇ । ಅ. ೨-೧೩ । ಇತಿ ॥**

ಅನುವಾದವು—**ಈಳೇ ಅಗ್ನಿಂ ಸ್ವವಸಂ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವವು. ಇದಕ್ಕೆ ಶ್ಯಾವಾಶ್ವನು ಋಷಿಯು, ಕೇವಲ ಮರುತ್ತುಗಳು ಅಥವಾ ಅಗ್ನಿ ಮತ್ತು ಮರುತ್ತುಗಳು ದೇವತೆಯು, ಈ ಸೂಕ್ತದ ಏಳು ಮತ್ತು ಎಂಟನೆಯ ಋಕ್ಕುಗಳು ಜಗತೀ ಛಂದಸ್ಸು, ಉಳಿದ ಆರು ಋಕ್ಕುಗಳು ತ್ರಿಷ್ಟುಪ್ ಛಂದಸ್ಸು ಅನುಕ್ರಮಣಿಕೆಯಲ್ಲಿ **ಈಳೇ ದ್ವಿಜಗತ್ಯಂತ-ಮಾಗ್ನೇಯಂ ಚ ವಾ** ಎಂದು ಹೇಳಿರುವುದು. ಸೂಕ್ತವಿನಿಯೋಗವು ಲೈಂಗಿಕವು- **ಕಾರೀರಿ** ಎಂಬ ಇಷ್ಟಿಯಲ್ಲಿ ಈ ಸೂಕ್ತದ ಮೊದಲನೆಯ ಋಕ್ಕನ್ನು ಸಾಮಿಧೇನೀ ಎಂಬ ಸಮಿದ್ಧೋಮಗಳಲ್ಲಿ ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ- **ಈಳೇ ಅಗ್ನಿಂ ಸ್ವವಸಂ ನಮೋಭಿರಿತಿ ಧಾಯ್ಯೇ** ಎಂಬ ಸೂತ್ರದಿಂದ (ಅ. ೨-೧೩) ವಿವೃತವಾಗಿರುವುದು.

---

॥ ಓಂ ॥

### ಸೂಕ್ತ—೬೦

ಮಂಡಲ—೫ ॥ ಅನುವಾಕ—೫ ॥ ಸೂಕ್ತ—೬೦ ॥
ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ—೨೫ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥
ಋಷಿಃ—ಶ್ಯಾವಾಶ್ವ ಆತ್ರೇಯಃ ॥
ದೇವತಾ— ಮರುತೋ ಮರುತೋ ವಾಗ್ನಿಶ್ಚ ॥
ಛಂದಃ—೧-೬, ತ್ರಿಷ್ಟುಪ್ । ೭, ೮ ಜಗತೀ ॥

॥ ಸಂಹಿತಾಪಾಠಃ ॥

ಈಳೇ ಅಗ್ನಿಂ ಸ್ವವಸಂ ನಮೋಭಿರಿಹ ಪ್ರಸತ್ತೋ ವಿ ಚಯತ್ಕೃತಂ ನಃ ।

ರಥೈ̍ರಿವ̱ ಪ್ರ ಭ̍ರೇ ವಾಜ̱ಯದ್ಭಿಃ ಪ್ರ̍ದಕ್ಷಿ̱ಣಿನ್ಮ̱ರುತಾ̱ಂ ಸ್ತೋಮ̍ಮೃಧ್ಯಾಂ॥

॥ ಪದಪಾಠಃ ॥

ಈಳೇ̍ । ಅ̱ಗ್ನಿಂ । ಸು̱ಽಅವ̍ಸಂ । ನಮಃ̍ಽಭಿಃ । ಇ̱ಹ । ಪ್ರ̱ಽಸ̱ತ್ತಃ । ವಿ । ಚ̱ಯ̱ತ್ । ಕೃ̱ತಂ । ನ̱ಃ ।

ರಥೈ̍ಃಽಇವ । ಪ್ರ । ಭ̱ರೇ̱ । ವಾ̱ಜ̱ಯತ್̍ಽಭಿಃ । ಪ್ರ̱ಽದ̱ಕ್ಷಿ̱ಣಿತ್ । ಮ̱ರುತಾ̍ಂ । ಸ್ತೋಮ̍ಂ । ಋ̱ಧ್ಯಾ̱ಂ॥

॥ ಸಾಯಣಭಾಷ್ಯಂ ॥

ಅಹಂ ಶ್ಯಾವಾಶ್ವೋಽಗ್ನಿಂ ಸ್ವವಸಂ ಸ್ವಾಯತ್ತರಕ್ಷಣಂ ನಮೋಭಿಃ ಸ್ತೋತ್ರೈರೀಳೇ । ಸ್ತೌಮಿ। ತತ್ಸ್ತೋತ್ರಂ ಕೃತಮಿಹೇದಾನೀಂ ಪ್ರಸತ್ತಃ ಪ್ರಸನ್ನಃ ಪ್ರಕರ್ಷೇಣ ಯಜ್ಞಂ ಪ್ರಾಪ್ತೋ ವಾ ಸನ್ ನೋಽಸ್ಮದರ್ಥಂ ವಿ ಚಯತ್ । ವಿಜಾನಾತು । ವಾಜಯದ್ಭಿರನ್ನಮಿಚ್ಛದ್ಭಿಃ ಸ್ತೋತ್ರೈ ರಥೈರಿವ ರಥೈರ್ಯಥಾಭಿಮತಂ ಪ್ರಾಪ್ನುವಂತಿ ತದ್ವದ್ಬೃಂಹಣಸಾಧನೈಃ ಪ್ರ ಭರೇ । ಪ್ರಕರ್ಷೇಣ ಸಂಪಾದಯಾಮ್ಯಭಿಮತಂ । ಪ್ರದಕ್ಷಿಣಿತ್ ಪ್ರಾದಕ್ಷಿಣ್ಯೇನ ಗಚ್ಛನ್ ಮರುತಾಂ ಸ್ತೋಮಂ ಸ್ತೋತ್ರಮೃಧ್ಯಾಂ । ವರ್ಧಯೇಯಂ ॥

॥ ಪ್ರತಿಪದಾರ್ಥ ॥

**ಸ್ವವಸಂ**—ಎಲ್ಲರಿಗೂ ತನ್ನ ರಕ್ಷಣೆಯನ್ನು ನೀಡತಕ್ಕ । **ಅಗ್ನಿಂ**—ಅಗ್ನಿಯನ್ನು । **ನಮೋಭಿಃ**—ಸ್ತೋತ್ರಗಳಿಂದ । **ಈಳೇ**—ಸ್ತುತಿಸುತ್ತೇನೆ । **ಪ್ರಸತ್ತಃ**—ಪ್ರಸನ್ನಚಿತ್ತನಾದ ಅಗ್ನಿಯು । **ಇಹ**—ಈ ಕಾಲದಲ್ಲಿ । **ಕೃತಂ**-ಆಚರಿಸಲ್ಪಟ್ಟ । **ನಃ**—ನಮ್ಮ (ಕರ್ಮಗಳನ್ನು) । **ವಿ ಚಯತ್**—ಪೂರ್ಣವಾಗಿ ಅರಿಯಲಿ । **ರಥೈಃ ಇವ**—ಅಭೀಪ್ಸಿತವಾದ ಪ್ರದೇಶಕ್ಕೆ ಸುಲಭವಾಗಿ ಕೊಂಡೊಯ್ಯುವ ರಥಗಳಂತಿರುವುವೂ । **ವಾಜಯದ್ಭಿಃ**—ಅನ್ನೇಚ್ಛುಗಳೂ ಆದ ಸ್ತುತಿಗಳಿಂದ । **ಪ್ರ ಭರೇ**—ನಾನು ಪೂಜೆಯನ್ನರ್ಪಿಸುತ್ತೇನೆ । **ಪ್ರದಕ್ಷಿಣಿತ್**—ಅಗ್ನಿಯನ್ನು ಪ್ರದಕ್ಷಿಣಪೂರ್ವಕವಾಗಿ ನಮಸ್ಕರಿಸುತ್ತಾ । **ಮರುತಾಂ**—ಮರುತ್ತುಗಳನ್ನುದ್ದೇಶಿಸಿ । **ಸ್ತೋಮಂ**—ಸ್ತೋತ್ರವನ್ನು । **ಋಧ್ಯಾಂ** – ವೃದ್ಧಿಯಾಗುವಂತೆ ಮಾಡುತ್ತೇನೆ (ಅಧಿಕವಾಗಿ ನಿರ್ಮಿಸುತ್ತೇನೆ).

॥ ಭಾವಾರ್ಥ ॥

ಎಲ್ಲರಿಗೂ ತನ್ನ ರಕ್ಷಣೆಯನ್ನು ನೀಡತಕ್ಕ ಅಗ್ನಿಯನ್ನು ನಾನು ಸ್ತೋತ್ರಗಳಿಂದ ಸ್ತುತಿಸುತ್ತೇನೆ. ಪ್ರಸನ್ನಚಿತ್ತನಾದ ಅಗ್ನಿಯು ಈ ಯಜ್ಞಕಾಲದಲ್ಲಿ ನಮ್ಮಿಂದ ಆಚರಿಸಲ್ಪಟ್ಟ ಕರ್ಮಗಳನ್ನು ಪೂರ್ಣವಾಗಿ ಅರಿಯಲಿ. ಅಭೀಪ್ಸಿತವಾದ ಪ್ರದೇಶಕ್ಕೆ ಸುಲಭವಾಗಿ ಕೊಂಡೊಯ್ಯುವ ರಥಗಳಂತಿರುವುವೂ, ಅನ್ನೇಚ್ಛುಗಳೂ ಆದ ಸ್ತುತಿಗಳಿಂದ ನಾನು ಪೂಜೆಯನ್ನರ್ಪಿಸುತ್ತೇನೆ. ಅಗ್ನಿಯನ್ನು ಪ್ರದಕ್ಷಿಣಪೂರ್ವಕವಾಗಿ ನಮಸ್ಕರಿಸುತ್ತಾ ಮರುತ್ತುಗಳನ್ನುದ್ದೇಶಿಸಿ ಸ್ತುತಿಗಳನ್ನು ನಿರ್ಮಿಸಿ ಅವರನ್ನು ಅತಿಶಯವಾಗಿ ಪ್ರಶಂಸಿಸುತ್ತೇನೆ.

## English Translation

I adore the protecting Agni with hymns: may he, propitiated on this occasion, approve of our acts: I offer (worship with praises), intended to obtain food, as if (proceeding) with cars (to the goal), circumambulating (the fire): may I exalt the praise of the Maruts

॥ ವಿಶೇಷವಿಷಯಗಳು ॥

**ರಥೈರಿವ ಪ್ರ ಭರೇ ವಾಜಯದ್ಭಿಃ-ಅನ್ನಮಿಚ್ಛದ್ಭಿಃ ಸ್ತೋತ್ರೈಃ ರಥೈರ್ಯಥಾಭಿಮತಂ ಪ್ರಾಪ್ನುವಂತಿ ತದ್ವದ್ಬೃಂಹಣಸಾಧನೈಃ ಪ್ರಕರ್ಷೇಣ ಸಂಪಾದಯಾಮ್ಯಭಿಮತಂ** । ಮನಸ್ಸನ್ನು ರಂಜಿಸುವ ಅಥವಾ ಸಂತೋಷಗೊಳಿಸುವ ಸ್ವಭಾವವುಳ್ಳ ರಥಗಳಿಂದ ಯಾವರೀತಿ ಅಭೀಷ್ಟಗಳನ್ನು ಅಥವಾ ಅಭಿಮತಸ್ಥಾನಗಳನ್ನು ಹೊಂದುವೆವೋ ಅದರಂತೆ ಅನ್ನಾದ್ಯಾಹಾರಗಳಿಗಾಗಿ ಪ್ರಾರ್ಥನೆಯನ್ನೊಳಗೊಂಡಿರುವ ಸ್ತೋತ್ರಗಳಿಂದ ಅಗ್ನಿಯನ್ನೂ ಮರುದ್ದೇವತೆಗಳನ್ನೂ ಸ್ತುತಿಸಿ ಅಭಿಮತಫಲಸಿದ್ಧಿಯನ್ನು ಪಡೆಯುತ್ತೇನೆ ಎಂದು ಋಷಿಯು ಹೇಳಿರುವನು. ಎಂದರೆ ರಥಾದಿಗಳಲ್ಲಿ ಸಂಚರಿಸುವುದರಿಂದ ಮನಸ್ಸಿಗೆ ಸಂತೋಷವುಂಟಾಗುವುದಲ್ಲದೆ ನಾವು ಹೋಗಬೇಕಾದ ಸ್ಥಾನವನ್ನು ಬೇಗನೆ ಸೇರುವೆವು. ಅದರಂತೆ ಅನ್ನವನ್ನು ಅಪೇಕ್ಷಿಸುತ್ತಾ ನಾವು ಮಾಡುವ ಸ್ತೋತ್ರಗಳಿಂದ ಅಗ್ನಿ ಮತ್ತು ಮರುದ್ದೇವತೆಗಳು ತೃಪ್ತರಾಗಿ ನಮಗೆ ಅನ್ನಾದ್ಯಾಹಾರಗಳನ್ನೂ, ಅಭಿಮತಸಿದ್ಧಿಯನ್ನೂ ಅನುಗ್ರಹಿಸಲಿ ಎಂಬ ಆಶಂಸನೆಯು ಇಲ್ಲಿ ಉಕ್ತವಾಗಿದೆ.

॥ ಸಂಹಿತಾಪಾಠಃ ॥

ಆ ಯೇ ತಸ್ಥುಃ ಪೃಷತೀಷು ಶ್ರುತಾಸು ಸುಖೇಷು ರುದ್ರಾ ಮರುತೋ ರಥೇಷು ।
ವನಾ ಚಿದುಗ್ರಾ ಜಿಹತೇ ನಿ ವೋ ಭಿಯಾ ಪೃಥಿವೀ ಚಿದ್ರೇಜತೇ ಪರ್ವತಶ್ಚಿತ್ ॥ ೧ ॥

॥ ಪದಪಾಠಃ ॥

ಆ । ಯೇ । ತಸ್ಥುಃ । ಪೃಷತೀಷು । ಶ್ರುತಾಸು । ಸುಽಖೇಷು । ರುದ್ರಾಃ । ಮರುತಃ । ರಥೇಷು ।

ವನಾ । ಚಿತ್ । ಉಗ್ರಾಃ । ಜಿಹತೇ । ನಿ । ವಃ । ಭಿಯಾ । ಪೃಥಿವೀ । ಚಿತ್ । ರೇಜತೇ । ಪರ್ವತಃ । ಚಿತ್ ॥ ೨ ॥

॥ ಸಾಯಣಭಾಷ್ಯಂ ॥

ಯೇ ಮರುತೋ ರುದ್ರಾ ರುದ್ರಪುತ್ರಾ ಆ ತಸ್ಥುಃ ಆತಿಷ್ಠಂತಿ ಪೃಷತೀಷು ಮರುತಾಂ ವಾಹನೇಷು ಶ್ರುತಾಸು ಶ್ರಾಂತಾಸು ಪ್ರಸಿದ್ಧಾಸು ವಾ ಸುಖೇಷು । ಖಮಾಕಾಶಂ ಛಿದ್ರಂ । ಶೋಭನ-ರಥಾಕ್ಷದ್ವಾರೇಷು ರಥೇಷು ರಥಾನಾ ತಸ್ಥುಃ ಆತಿಷ್ಠಂತಿ । ಹೇ ಉಗ್ರಾ ಉದ್ಗೂರ್ಣಬಲಾ ಮರುತೋ ಯೂಯಂ ಯದಾ ರಥಮಾರೂಢಾಃ ಸ್ಥ ತದಾನೀಂ ವನಾ ಚಿತ್ ವನಾನ್ಯಪಿ ನಿ ಜಿಹತೇ ನ್ಯಗ್ಗಚ್ಛಂತಿ ವೋ ಯುಷ್ಮಾಕಂ ಭಿಯಾ ಭೀತ್ಯಾ । ಪೃಥಿವೀ ಚಿತ್ ಪೃಥಿವ್ಯಪಿ ರೇಜತೇ । ಪರ್ವತಶ್ಚಿತ್ ಪರ್ವತೋಽಪಿ ರೇಜತೇ । ಕಂಪತೇ । ಉತ್ತರಾರ್ಧಃ ಪ್ರತ್ಯಕ್ಷಕೃತಃ । ಪೂರ್ವಾರ್ಧೇ ಯ ಏವಮು-ಕುರ್ವನ್ ತೇಷಾಂ ಸ್ತೋಮಮೃಧ್ಯಾಮಿತಿ ಪೂರ್ವತ್ರಾನ್ವಯಃ ॥

॥ ಪ್ರತಿಪದಾರ್ಥ ॥

**ಯೇ**—ಯಾರು । **ರುದ್ರಾಃ**—ರುದ್ರಪುತ್ರರೋ ಅಂತಹ । **ಮರುತಃ**—ಮರುತ್ತುಗಳು । **ಪೃಷತೀಷು**—ಪೃಷನ್ನಾಮಕಗಳಾದ ಅಶ್ವಗಳುಳ್ಳವೂ । **ಶ್ರುತಾಸು**—ಪ್ರಸಿದ್ಧವಾದವೂ । **ಸುಖೇಷು**—ಸುಖಕರವಾದವೂ ಆದ । **ರಥೇಷು**—ರಥಗಳಲ್ಲಿ । **ಆ ತಸ್ಥುಃ**—ಹತ್ತಿ ಕುಳಿತುಕೊಳ್ಳುತ್ತಾರೆ । **ಉಗ್ರಾಃ**—ಭಯಂಕರವಾದ ವೇಗವುಳ್ಳ ಎಲೈ ಮರುತ್ತುಗಳೇ । **(ತದಾನೀಂ**—ಆ ಕಾಲದಲ್ಲಿ**)** । **ವಃ**—ನಿಮ್ಮ । **ಭಿಯಾ**—ಭಯದಿಂದ । **ವನಾ ಚಿತ್**—ವೃಕ್ಷಸಮೂಹಗಳೂ ಕೂಡ । **ನಿ ಜಿಹತೇ**—( ನಮ್ರತೆಯನ್ನು ಸೂಚಿಸುವಂತೆ ) ಬಗ್ಗುತ್ತವೆ । **ಪೃಥಿವೀ ಚಿತ್**—ಪೃಥ್ವಿಯೂ ಕೂಡ । **ರೇಜತೇ**—ನಡಗುತ್ತದೆ । **ಪರ್ವತಶ್ಚಿತ್**—ಪರ್ವತವೂ ಕೂಡ (ಕಂಪಿಸುತ್ತದೆ).

॥ ಭಾವಾರ್ಥ ॥

ರುದ್ರಪುತ್ರರಾದ ಮರುತ್ತುಗಳು ಪೃಷನ್ನಾಮಕಗಳಾದ ಅಶ್ವಗಳುಳ್ಳವೂ, ಪ್ರಸಿದ್ಧವಾದವೂ, ಸುಖಕರವಾದವೂ, ಆದ ರಥಗಳಲ್ಲಿ ಹತ್ತಿ ಕುಳಿತುಕೊಳ್ಳುತ್ತಾರೆ. ಭಯಂಕರವಾದ ವೇಗವುಳ್ಳ ಎಲೈ ಮರುತ್ತುಗಳೇ, ಆ ಕಾಲದಲ್ಲಿ ನಿಮಗೆ ಭಯಪಟ್ಟು ವೃಕ್ಷಗಳು ನಮ್ರತೆಯನ್ನು ಸೂಚಿಸುವಂತೆ ಬಗ್ಗುತ್ತವೆ. ಪರ್ವತವು ನಡಗುತ್ತದೆ. ಪೃಥಿವಿಯೂ ಸಹ ಕಂಪಿಸುತ್ತದೆ.

## English Translation

Fierce Maruts, sons of Rudra, who ride in easy chariots (drawn by) celebrated steeds, (at your coming) the woods bow down with fear, the earth trembles, and the mountains (shake).

॥ ವಿಶೇಷವಿಷಯಗಳು ॥

ರುದ್ರಪುತ್ರರಾದ ಮರುದ್ದೇವತೆಗಳ ಆಗಮನಕಾಲದಲ್ಲಿ (ಎಂದರೆ ಚಂಡಮಾರುತವು ರಭಸವಾಗಿ ಬೀಸುತ್ತಿರುವಾಗ) ವೃಕ್ಷಾದಿಗಳು ಗಾಳಿಯ ಹೊಡೆತಕ್ಕೆ ಸಿಕ್ಕಿ ಅಲುಗಾಡುತ್ತಾ ಬಗ್ಗುವುವು. ಈ ರೀತಿ ಬಗ್ಗುವುದು ಮರುದ್ದೇವತೆಗಳಿಗೆ ಭಯದಿಂದ ನಮ್ರತೆಯನ್ನು ಸೂಚಿಸುವಂತೆ ಇರುವುದು. ಪರ್ವತ ಮತ್ತು ಭೂಮಿಯೂ ಸಹ ನಡುಗುವಂತೆ ತೋರುವುದು. ಈ ರೀತಿ ಮರುದ್ದೇವತೆಗಳ ಆಗಮನವು ಭಯಂಕರವಾಗಿರುವುದು ಎಂಬ ವಿವರಣೆಯು ಇಲ್ಲಿ ಉಕ್ತವಾಗಿದೆ.

——O——

॥ ಸಂಹಿತಾಪಾಠಃ ॥

## ಪರ್ವತಶ್ಚಿನ್ಮಹಿ ವೃದ್ಧೋ ಬಿಭಾಯ ದಿವಶ್ಚಿತ್ಸಾನು ರೇಜತ ಸ್ವನೇ ವಃ ॥
## ಯತ್ಕ್ರೀಳಥ ಮರುತ ಋಷ್ಟಿಮಂತ ಆಪಇವ ಸಧ್ರ್ಯಂಚೋ ಧವಧ್ವೇ ॥

॥ ಪದಪಾಠಃ ॥

ಪರ್ವತಃ । ಚಿತ್ । ಮಹಿ । ವೃದ್ಧಃ । ಬಿಭಾಯ । ದಿವಃ । ಚಿತ್ । ಸಾನು । ರೇಜತ । ಸ್ವನೇ । ವಃ ।

ಯತ್ । ಕ್ರೀಳಥ । ಮರುತಃ । ಋಷ್ಟಿಽಮಂತಃ । ಆಪಃಽಇವ । ಸಧ್ರ್ಯಂಚಃ । ಧವಧ್ವೇ ॥ ೩ ॥

॥ ಸಾಯಣಭಾಷ್ಯಂ ॥

**ಕಾರೀರ್ಯಾಂ ಮಾರುತಸ್ಯ ಸಪ್ತಕಪಾಲಸ್ಯ ಪರ್ವತಶ್ಚಿದಿತ್ಯೇಷಾ ಯಾಜ್ಯಾ । ಸೂತ್ರಿತಂ ಚ । ಪರ್ವತಶ್ಚಿನ್ಮಹಿ ವೃದ್ಧೋ ಬಿಭಾಯ ಸೃಜಂತಿ ರಶ್ಮಿಮೋಜಸಾ । ಆ ೨. ೧೩ । ಇತಿ ॥**

**ಹೇ ಮರುತೋ ವೋ ಯುಷ್ಮಾಕಂ ಸ್ವನೇ ಭಯಂಕರಶಬ್ದೇ ಸತಿ ಪರ್ವತಶ್ಚಿತ್ ಪರ್ವತೋಽಪಿ ಮಹಿ ಮಹಾನ್ವೃದ್ಧಃ ಸನ್ನಪಿ ಬಿಭಾಯ । ಬಿಭೇತಿ । ದಿವಶ್ಚಿತ್ ಅಂತರಿಕ್ಷಸ್ಯಾಪಿ ಸಾನು ಸಮುಚ್ಛ್ರಿತಃ ಪ್ರದೇಶೋ ರೇಜತ । ಕಂಪತೇ । ಯದ್ಯದಾ ಕ್ರೀಳಥ ಹೇ ಮರುತೋ ಯೂಯಮೃಷ್ಟಿಮಂತ ಆಯುಧವಂತಃ ಸಂತಸ್ತದಾಪ ಇವೋದಕಾನೀವ ಸಧ್ರ್ಯಂಚಃ ಸಹಾಂಚನಾ ಧವಧ್ವೇ । ಧಾವಧ್ವೇ । ಗಚ್ಛಥ ॥**

॥ ಪ್ರತಿಪದಾರ್ಥ ॥

(ಎಲೈ ಮರುತ್ತುಗಳೇ) **ಯತ್**—ಯಾವಾಗ । **ಕ್ರೀಳಥ**—ನೀವು ಕ್ರೀಡಿಸುತ್ತೀರೋ ಆಗ । **ವಃ**—ನಿಮ್ಮ । **ಸ್ವನೇ**—ಶಬ್ದವುಂಟಾದ ಕಾರಣ । **ಮಹಿ**—ಮಹತ್ಸ್ವರೂಪವುಳ್ಳದ್ದಾಗಿ । **ವೃದ್ಧಃ**—ಬೆಳೆದಿದ್ದರೂ । **ಪರ್ವತಶ್ಚಿತ್**—ಪರ್ವತವೂ ಕೂಡ । **ಬಿಭಾಯ**—ಭಯಪಡುತ್ತದೆ । **ದಿವಃ ಚಿತ್**—ಅಂತರಿಕ್ಷದ । **ಸಾನುಃ**—

ಶಿಖರದಂತಿರುವ ಉನ್ನತ ಪ್ರದೇಶವೂ ಸಹ । **ರೇಜತ**—ಕಂಪಿಸುತ್ತದೆ । **ಮರುತಃ**—ಎಲೈ ಮರುತ್ತುಗಳೇ । **ಋಷ್ಟಿಮಂತಃ**—ಆಯುಧವಿಶಿಷ್ಟರಾದ ನೀವು । **ಆಪ ಇವ**—ಉದಕಪ್ರವಾಹಗಳಂತೆ । **ಸಧ್ರ್ಯಂಚಃ**—ಒಟ್ಟಿಗೆ ಸೇರಿದವರಾಗಿ । **ಧವಧ್ವೇ**—ಮುನ್ನುಗ್ಗಿ ಸಂಚರಿಸುತ್ತೀರಿ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನಿಮ್ಮ ಕ್ರೀಡಾಕಾಲದಲ್ಲಿ ಉತ್ಪನ್ನವಾದ ಶಬ್ದದಿಂದ ಮಹತ್ಸ್ವರೂಪವನ್ನು ಹೊಂದಿರುವ ಪರ್ವತವೂ ಕೂಡ ಭಯಪಡುತ್ತದೆ. ಅಂತರಿಕ್ಷದ ಶಿಖರದಂತಿರುವ ಅತ್ಯುನ್ನತ ಪ್ರದೇಶವೂ ಕಂಪಿಸುತ್ತದೆ. ಎಲೈ ಮರುತ್ತುಗಳೇ, ಆಯುಧವಿಶಿಷ್ಟರಾದ ನೀವು ಉದಕಪ್ರವಾಹಗಳಂತೆ ಒಟ್ಟಿಗೆ ಸೇರಿದವರಾಗಿ ಮುನ್ನುಗ್ಗಿ ಸಂಚರಿಸುತ್ತೀರಿ.

## English Translation

The mountain, vast and lofty (though it be), is alarmed at your noise, and the summit of the firmament trembles when, lance-armed Maruts, you are sporting: you rush along together like waters.

॥ ವಿಶೇಷವಿಷಯಗಳು ॥

ಕಾರೀರಿ ಎಂಬ ಇಷ್ಟಿಯಲ್ಲಿ ಸಪ್ತಕಪಾಲಹವಿರ್ವಿಶಿಷ್ಟರಾದ ಮರುದ್ದೇವತೆಗಳನ್ನುದ್ದೇಶಿಸಿ ಹೋಮಮಾಡುವಾಗ **ಪರ್ವತಶ್ಚಿನ್ಮಹಿ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತ್ರಸೂತ್ರದ **ಪರ್ವತಶ್ಚಿನ್ಮಹಿ ವೃದ್ಧೋ ಬಿಭಾಯ ಸೃಜಂತಿ ರಶ್ಮಿಮೋಜಸಾ** ಎಂಬ ಸೂತ್ರದಿಂದ ( ಆ. ೨-೧೩ ) ವಿವೃತವಾಗಿರುವುದು.

ಈ ಋಕ್ಕಿನಲ್ಲಿಯೂ ಮರುದ್ದೇವತೆಗಳ ಗಮನವರ್ಣನೆ ಇದೆ. ಚಂಡಮಾರುತವು ಅತಿ ರಭಸದಿಂದ ಬೀಸುವಾಗ ಒಂದು ವಿಧವಾದ ಶಬ್ದವುಂಟಾಗುವುದು. ಶಬ್ದಸಹಿತವಾಗಿ ಈ ರೀತಿ ಬೀಸುವುದನ್ನು ಮರುದ್ದೇವತೆಗಳ ಕ್ರೀಡೆಯೆಂದು ವರ್ಣಿಸುವುದು ರೂಢಿಯು—

**ಕ್ರೀಳಂ ವಃ ಶರ್ಧೋ ಮಾರುತಮನರ್ವಾಣಂ ರಥೇ ಶುಭಂ ।**
**ಕಣ್ವಾ ಅಭಿ ಪ್ರ ಗಾಯತ ॥**
(ಋ. ಸಂ. ೧-೩೭-೧)

**ನಿತ್ಯಂ ನ ಸೂನುಂ ಮಧು ಬಿಭ್ರತ ಉಪ ಕ್ರೀಳಂತಿ ಕ್ರೀಳಾ ವಿದಥೇಷು ಘೃಷ್ವಯಃ ।**
(ಋ. ಸಂ. ೧-೧೬೬-೨)

ಇತ್ಯಾದಿ ಋಕ್ಕುಗಳಲ್ಲಿ ಮರುದ್ದೇವತೆಗಳು ಕ್ರೀಡಿಸುತ್ತಿರುವರೆಂಬ ವರ್ಣನೆ ಇದೆ.

**ಋಷ್ಟಿಮಂತಃ ಮರುತಃ ಆಪ ಇವ ಸಧ್ರ್ಯಂಚಃ ಧವಧ್ವೇ**—ಮರುದ್ದೇವತೆಗಳು ತಮ್ಮ ಆಯುಧಸಹಿತರಾಗಿ ಕ್ರೀಡಿಸುತ್ತಿರುವಾಗ (ಅಥವಾ ಸಂಚರಿಸುತ್ತಿರುವಾಗ) ಉದಕಗಳು ಬೇರೆ ಬೇರೆ ಸ್ಥಳಗಳಿಂದ ಹರಿದು

ಬಂದು ಒಟ್ಟಿಗೆ ಸೇರಿ ಯಾವರೀತಿ ತಡೆಯಿಲ್ಲದೆ ಪ್ರವಾಹರೂಪದಲ್ಲಿ ಹರಿಯುವವೋ ಅದರಂತೆ ಮರುದ್ದೇವತೆಗಳು ಒಟ್ಟಾಗಿ ಸೇರಿ ಯಾವ ಅಡ್ಡಿ ಆತಂಕಗಳಿಲ್ಲದೆ ಮುನ್ನುಗ್ಗುತ್ತಾರೆ. ಇವರ ಸಂಚಾರವನ್ನು ಪರ್ವತಾದಿಗಳೂ ತಡೆಯಲಾರವು. ಅಷ್ಟೇ ಅಲ್ಲ. ಪರ್ವತವು ಬಹಳ ದೊಡ್ಡದಾಗಿದ್ದರೂ ಮರುದ್ದೇವತೆಗಳ ಭಯದಿಂದ ನಡಗುತ್ತದೆ ಎಂಬ ವರ್ಣನೆಯು ಉಕ್ತವಾಗಿದೆ.

॥ ಸಂಹಿತಾಪಾಠಃ ॥

ವರಾ ಇವೇದ್ರೈವತಾಸೋ ಹಿರಣ್ಯೈರಭಿ ಸ್ವಧಾಭಿಸ್ತನ್ವಃ ಪಿಪಿಶ್ರೇ ।
ಶ್ರಿಯೇ ಶ್ರೇಯಾಂಸಸ್ತವಸೋ ರಥೇಷು ಸತ್ರಾ ಮಹಾಂಸಿ ಚಕ್ರಿರೇ ತನೂಷು ॥ ೪ ॥

॥ ಪದಪಾಠಃ ॥

ವರಾಃऽಇವ । ಇತ್ । ರೈವತಾಸಃ । ಹಿರಣ್ಯೈಃ । ಅಭಿ । ಸ್ವಧಾಭಿಃ । ತನ್ವಃ । ಪಿಪಿಶ್ರೇ ।
ಶ್ರಿಯೇ । ಶ್ರೇಯಾಂಸಃ । ತವಸಃ । ರಥೇಷು । ಸತ್ರಾ । ಮಹಾಂಸಿ । ಚಕ್ರಿರೇ । ತನೂಷು ॥ ೪ ॥

॥ ಸಾಯಣಭಾಷ್ಯಂ ॥

ವರಾ ಇವ ವಿವಾಹಯೋಗ್ಯಾ ಯುವಾನ ಇವ । ತೇ ಯಥಾ ರೈವತಾಸೋ ಧನವಂತೋ ಹಿರಣ್ಯೈರ್ಹಿರಣ್ಯಮಯೈರಾಭರಣವಿಶೇಷೈಃ ಸ್ವಧಾಭಿರುದಕೈಶ್ಚ ತನ್ವಃ ಸ್ವೀಯಾನಿ ಶರೀರಾಣ್ಯಭಿ ಪಿಪಿಶ್ರೇ ಸಂಯೋಜಯಂತಿ ಅಲಂಕುರ್ವಂತಿ ತದ್ವದೇತೇ ಮರುತೋऽಪಿ ರೈವತಾಸೋ ಧನವಂತೋ ಹಿರಣ್ಯೈರ್ಹಿರಣ್ಯಸ್ಥಾನೀಯೈರ್ವಿದ್ಯುದಾಖ್ಯೈರಾಭರಣೈಃ ಸ್ವಧಾಭಿಶ್ಚ ತನ್ವಃ ಸ್ವೀಯಾನಿ ಶರೀರಾಣಿ ಪಿಪಿಶ್ರೇ । ಶ್ರಿಯೇ ಶೋಭಾಯೈ ಶ್ರೇಯಾಂಸಃ ಶ್ರೇಷ್ಠಾಸ್ತವಸೋ ಬಲವಂತೋ ಮರುತೋ ರಥೇಷು ಸತ್ರಾ ಸತ್ಯಂ ಸಹ ವಾ ತನೂಷು ಮಹಾಂಸಿ ಚಕ್ರಿರೇ । ಕೃತವಂತಃ । ಸರ್ವಾಭರಣೈರುದಕೈಶ್ಚೋಪೇತಾ ರಥಾನಧಿಷ್ಠಾಯ ಶರೀರೇಷು ತೇಜಾಂಸ್ಯಧಾರಯನ್ನಿತ್ಯರ್ಥಃ ॥

॥ ಪ್ರತಿಪದಾರ್ಥ ॥

ರೈವತಾಸಃ—ಧನವಂತರಾದವರೂ । ವರಾಃ—ವಿವಾಹಕ್ಕೆ ಸಿದ್ಧರಾಗಿರತಕ್ಕವರೂ ಆದ ತರುಣರು । ಹಿರಣ್ಯೈಃ—ಸುವರ್ಣಾಭರಣಗಳಿಂದಲೂ । ಸ್ವಧಾಭಿಃ—ಉದಕಗಳಿಂದಲೂ । ತನ್ವಃ—ತಮ್ಮ ಶರೀರಗಳನ್ನು ।

**ಅಭಿ ಪಿಪಿಶ್ರೇ**—ಅಲಂಕರಿಸಿಕೊಳ್ಳುವಂತೆ । **ಶ್ರೇಯಾಂಸಃ**—ಶ್ರೇಷ್ಠರೂ । **ತವಸಃ**—ಶಕ್ತಿಯುತರೂ ಆದ ಮರುತ್ತುಗಳು । **ರಥೇಷು ಸತ್ರಾ**—ರಥಗಳಲ್ಲಿ ಸ್ಥಿತರಾಗಿ । **ಶ್ರಿಯೇ**—ತಮ್ಮ ಅಲಂಕಾರಕ್ಕಾಗಿ । **ಮಹಾಂಸಿ**—ಅನೇಕ ಉತ್ತಮವಾದ ಸಿದ್ಧತೆಗಳನ್ನು । **ಚಕ್ರಿರೇ**—ಮಾಡಿಕೊಂಡರು ಅಥವಾ ಮಾಡಿಕೊಳ್ಳುತ್ತಾರೆ.

॥ ಭಾವಾರ್ಥ ॥

ಧನವಂತರೂ ವಿವಾಹಕ್ಕೆ ಸಿದ್ಧರಾಗಿರತಕ್ಕವರೂ ಆದ ತರುಣರು ಸುವರ್ಣಾಭರಣಗಳಿಂದಲೂ ಉದಕಗಳ ಸಹಾಯದಿಂದಲೂ ತಮ್ಮ ಶರೀರಗಳನ್ನು ಅಲಂಕರಿಸಿಕೊಳ್ಳುವಂತೆ ಶ್ರೇಷ್ಠರೂ ಶಕ್ತಿಯುತರೂ ಆದ ಮರುತ್ತುಗಳು ರಥಗಳಲ್ಲಿ ಸ್ಥಿತರಾಗಿ ತಮ್ಮ ಅಲಂಕಾರಕ್ಕಾಗಿ ಅನೇಕ ಉತ್ತಮವಾದ ಸಿದ್ಧತೆಗಳನ್ನು ಮಾಡಿಕೊಂಡರು ಅಥವಾ ಮಾಡಿಕೊಳ್ಳುತ್ತಾರೆ.

English Translation

Like wealthy bridegrooms who have decorated their persons with golden (ornaments) and purifying waters, so the noble and powerful Maruts, associated together in their chariots, have made great (preparation) in their several persons for their embellishment

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಮರುದ್ದೇವತೆಗಳು ತಮ್ಮ ಶರೀರಗಳನ್ನು ಆಭರಣಾದಿಗಳಿಂದ ಮತ್ತು ಉದಕಗಳಿಂದ ಅಲಂಕರಿಸಿಕೊಂಡು ರಥಗಳಲ್ಲಿ ಕುಳಿತು ಪ್ರಕಾಶಿಸುತ್ತಾರೆ ಎಂದು ವರ್ಣಿಸಿದೆ. ಇವರು ಅಲಂಕರಿಸಿಕೊಳ್ಳುವ ವಿಧಾನವನ್ನು ಧನವಂತರಾದ ಮದುವಣಿಗರಿಗೆ ಹೋಲಿಸಿದೆ ಧನವಂತರೂ ಯುವಕರೂ ಆದ ತರುಣರು ತಮ್ಮ ವಿವಾಹಕಾಲದಲ್ಲಿ ಸುವರ್ಣಾಭರಣಗಳಿಂದ ನಾನಾವಿಧವಾಗಿ ಅಲಂಕರಿಸಿಕೊಂಡು ವಾಹನಾದಿಗಳ ಮೇಲೆ ಕುಳಿತು ಶೋಭಿಸುವಂತೆ ಮರುದ್ದೇವತೆಗಳೂ ಸಹ ತಮ್ಮಶರೀರಗಳನ್ನು ವಿದ್ಯುದಾದಿ ಆಭರಣಗಳಿಂದಲೂ ಉದಕಗಳಿಂದಲೂ ಅಲಂಕರಿಸಿಕೊಂಡು ತಮ್ಮರಥಗಳಲ್ಲಿ ಕುಳಿತು ಶೋಭಿಸ ತ್ತಾರೆ ಇಲ್ಲಿ ಮರುದ್ದೇವತೆಗಳಿಗೆ ವಿದ್ಯುತ್ತೇ (ಮಿಂಚು) ಆಭರಣ ವಿಶೇಷಗಳು ಉದಕವೇಅಲಂಕಾರಸಾಧನವು ರಥದಲ್ಲಿ ಕುಳಿತುಕೊಳ್ಳುವುದೇ ವೇಗಗಮನವು. ಎಂದರೆ ಗಾಳಿಯು ರಭಸವಾಗಿ ವೃಷ್ಟಿಕಾಲದಲ್ಲಿ ಬೀಸುತ್ತಿರುವಾಗ ಆಗಾಗ ಮಿಂಚುತ್ತಿರುವುದನ್ನು ಮರುದ್ದೇವತೆಗಳ ಆಭರಣಗಳಿಗೆ ಹೋಲಿಸಿದೆ. ವೃಷ್ಟ್ಯುದಕವೇ ಶೃಂಗಾರಸಾಧನವಾದ ವಸ್ತುವೆಂದು ಹೇಳಿದೆ ಎಂದರೆ ಮಳೆಯು ಧಾರಾಕಾರವಾಗಿ ಸುರಿಯುತ್ತಾ ಗಾಳಿಯು ರಭಸವಾಗಿ ಬೀಸುತ್ತಿರುವಾಗ ಮಿಂಚು, ಸಿಡಿಲುಗಳ ಸಹಿತವಾಗಿ ವೃಷ್ಟ್ಯುದಕವು ಬೀಳುತ್ತಿರುವ ಸನ್ನಿವೇಶವನ್ನು ಋಷಿಯು ವಿವಾಹಯೋಗ್ಯರಾದ ನವಯುವಕರ ಶೃಂಗಾರಸಿದ್ಧತೆಗೆ ಹೋಲಿಸಿ ವರ್ಣಿಸಿರುತ್ತಾನೆ.

॥ ಸಂಹಿತಾಪಾಠಃ ॥

ಅಜ್ಯೇಷ್ಠಾಸೋ ಅಕನಿಷ್ಠಾಸ ಏತೇ ಸಂ ಭ್ರಾತರೋ ವಾವೃಧುಃ ಸೌಭಗಾಯ ।

ಯುವಾ ಪಿತಾ ಸ್ವಪಾ ರುದ್ರ ಏಷಾಂ ಸುದುಘಾ ಪೃಶ್ನಿಃ ಸುದಿನಾ ಮರುದ್ಭ್ಯಃ ॥ ೫ ॥

॥ ಪದಪಾಠಃ ॥

ಅಜ್ಯೇಷ್ಠಾಸಃ । ಅಕನಿಷ್ಠಾಸಃ । ಏತೇ । ಸಂ । ಭ್ರಾತರಃ । ವವೃಧುಃ । ಸೌಭಗಾಯ ।
ಯುವಾ । ಪಿತಾ । ಸುಽಅಪಾಃ । ರುದ್ರಃ । ಏಷಾಂ । ಸುಽದುಘಾ । ಪೃಶ್ನಿಃ । ಸುಽದಿನಾ ।
ಮರುತ್ಽಭ್ಯಃ ॥ ೫ ॥

॥ ಸಾಯಣಭಾಷ್ಯಂ ॥

ಅಜ್ಯೇಷ್ಠಾಸೋಽಕನಿಷ್ಠಾಸಃ ಪರಸ್ಪರಂ ಜ್ಯೇಷ್ಠಕನಿಷ್ಠಭಾವರಹಿತಾಃ ಸಹೈವೋತ್ಪನ್ನಾಃ ಸಮಾನಬಲಾ ಏತೇ ಮರುತೋ ಭ್ರಾತರಃ ಪರಸ್ಪರಂ ಭ್ರಾತೃಭೂತಾಃ ಸಂತಃ ಸೌಭಗಾಯ ಸುಭಗತ್ವಾಯ ಸಂ ವವೃಧುಃ । ವರ್ಧಂತೇ । ಯುವಾ ನಿತ್ಯತರುಣಃ ಸ್ವಪಾಃ ಶೋಭನಕರ್ಮೈಷಾಂ ಮರುತಾಂ ರುದ್ರಃ ಪಿತಾ ಸುದುಘಾ ಸುಷ್ಠು ದೋಗ್ಧ್ರೀ ಪೃಶ್ನಿರ್ಗೋದೇವತಾ ಮಾತೃಭೂತಾ ಮರುದ್ಭ್ಯೋ ಮರುದರ್ಥಂ ಸುದಿನಾ ಶೋಭನದಿನಾನಿ । ಅಕುರುತಾಮಿತಿ ಶೇಷಃ ॥

॥ ಪ್ರತಿಪದಾರ್ಥ ॥

**ಅಜ್ಯೇಷ್ಠಾಸಃ**—ಒಬ್ಬರಿಗಿಂತೊಬ್ಬರು ಜ್ಯೇಷ್ಠರಲ್ಲದೆಯೂ । **ಅಕನಿಷ್ಠಾಸಃ**—ಒಬ್ಬರಿಗಿಂತಿನ್ನೊಬ್ಬರು ಕನಿಷ್ಠರಾಗಿಲ್ಲದೆಯೂ ಇರತಕ್ಕ । **ಏತೇ ಭ್ರಾತರಃ**—ಮರುದ್ರೂಪರಾದ ಈ ಭ್ರಾತೃಗಳು । **ಸೌಭಗಾಯ**—ತಮ್ಮ ಶ್ರೇಯೋಭಿವೃದ್ಧಿಗಾಗಿ । **ಸಂ ವವೃಧುಃ**—ಒಟ್ಟಿಗೆ ಬೆಳೆದರು । **ಯುವಾ**—ನಿತ್ಯತರುಣನಾದವನೂ । **ಸ್ವಪಾಃ**—ಶ್ರೇಷ್ಠವಾದ ಕರ್ಮಕರ್ತನೂ ಆದ । **ರುದ್ರಃ**—ರುದ್ರನು । **ಏಷಾಂ**—ಈ ಮರುತ್ತುಗಳಿಗೆ । **ಪಿತಾ**—ತಂದೆಯು (ಈ ರುದ್ರನೂ) ಮತ್ತು । **ಸುದುಘಾ**—ಉತ್ತಮವಾದ ಫಲಗಳನ್ನು ಕರೆಯತಕ್ಕ । **ಪೃಶ್ನಿಃ**—ಇವರ ಮಾತೆಯಾದ ಪೃಶ್ನಿಯೂ ಸಹ । **ಮರುದ್ಭ್ಯಃ**—ಈ ಮರುತ್ತುಗಳಿಗೆ । **ಸುದಿನಾ**—ಉತ್ತಮವಾದ ದಿನಗಳನ್ನು (ಉಂಟುಮಾಡಲಿ)

॥ ಭಾವಾರ್ಥ ॥

ಒಬ್ಬರಿಗೊಬ್ಬರು ಜ್ಯೇಷ್ಠರಲ್ಲದೆಯೂ, ಒಬ್ಬರಿಗಿಂತಿನ್ನೊಬ್ಬರು ಕನಿಷ್ಠರಾಗಿಲ್ಲದೆಯೂ ಇರತಕ್ಕ ಮರುದ್ರೂಪರಾದ ಈ ಭ್ರಾತೃಗಳು ತಮ್ಮ ಶ್ರೇಯೋಽಭಿವೃದ್ಧಿಗಾಗಿ ಒಟ್ಟಿಗೆ ಬೆಳೆದರು ನಿತ್ಯತರುಣನೂ, ಶ್ರೇಷ್ಠವಾದ ಕರ್ಮಕರ್ತನೂ ಮರುತ್ಪಿತನೂ ಆದ ರುದ್ರನೂ, ಉತ್ತಮವಾದ ಫಲಗಳನ್ನು ಕರೆಯತಕ್ಕ ಇವರ ಮಾತೆಯಾದ ಪೃಶ್ನಿಯೂ ಸಹ ಈ ಮರುತ್ತುಗಳಿಗಾಗಿ ಉತ್ತಮವಾದ ದಿನಗಳನ್ನು ಸಿರ್ಮಿಸಲಿ.

## English Translation

They are brothers, of whom no one is the elder, no one the younger, but who grew up together for their mutual prosperity : may their father, Rudra, ever youthful, the doer of good deeds, and Prishni, ( their mother), easy to be milked, grant favourable days for ( the sake of ) the Maruts.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ವರ್ಣಿಸಿರುವ ವಿಷಯಗಳು ಎಂದರೆ ಮರುದ್ದೇವತೆಗಳಲ್ಲಿ ಉಚ್ಚನೀಚ ಭಾವವಿಲ್ಲ, ಜ್ಯೇಷ್ಠಕನಿಷ್ಠವೆಂಬ ವ್ಯತ್ಯಾಸವಿಲ್ಲ. ಎಲ್ಲರೂ ಸಮಾನರು ಮತ್ತು ಸಮಾನೋತ್ಪತ್ತಿಯುಳ್ಳ ಸಹೋದರರು ಎಂಬಂಶಗಳು ಹಿಂದೆಯೇ ಎಂದರೆ—**ತೇ ಅಜ್ಯೇಷ್ಠಾ ಅಕನಿಷ್ಠಾ** ( ಋ. ಸಂ. ೫-೫೯-೬ ) ಎಂಬ ಋಕ್ಕಿನಲ್ಲಿಯೇ ಉಕ್ತವಾಗಿರುವುದನ್ನು ಋಷಿಯು ಮತ್ತೆ ವರ್ಣಿಸಿದಾನೆ. ಅರ್ಥದಲ್ಲಿಯೂ ವರ್ಣನೆಯಲ್ಲಿಯೂ ಏನೂ ವ್ಯತ್ಯಾಸವಿಲ್ಲ.

॥ ಸಂಹಿತಾಪಾಠಃ ॥

ಯದುತ್ತಮೇ ಮರುತೋ ಮಧ್ಯಮೇ ವಾ ಯದ್ವಾವಮೇ ಸುಭಗಾಸೋ
ದಿವಿ ಷ್ಠ ।
ಅತೋ ನೋ ರುದ್ರಾ ಉತ ವಾ ನ್ವಸ್ಯಾಗ್ನೇ ವಿತ್ತಾದ್ಧವಿಷೋ ಯದ್ಯ-
ಜಾಮ ॥ ೬ ॥

॥ ಪದಪಾಠಃ ॥

ಯತ್ । ಉತ್ಽತಮೇ । ಮರುತಃ । ಮಧ್ಯಮೇ । ವಾ । ಯತ್ । ವಾ । ಅವಮೇ । ಸುಽಭಗಾಸಃ ।
ದಿವಿ । ಸ್ಥ ।
ಅತಃ । ನಃ । ರುದ್ರಾಃ । ಉತ । ವಾ । ನು । ಅಸ್ಯ । ಅಗ್ನೇ । ವಿತ್ತಾತ್ । ಹವಿಷಃ । ಯತ್ ।
ಯಜಾಮ ॥ ೬ ॥

॥ ಸಾಯಣಭಾಷ್ಯಂ ॥

ಹೇ ಮರುತೋ ಯೂಯಂ ಯದುತ್ತಮ ಉತ್ಕೃಷ್ಟ ಉತ್ತಮೇ ಚರಮೇ ವಾ ದಿವಿ

**ದ್ಯುಲೋಕೇ ಮಧ್ಯಮೇ ವಾ ದಿವಿ ಯದ್ವಾವಮೇ ದಿವಿ ಹೇ ಸುಭಗಾಸಃ ಸ್ಥ ಭವಥ । ತ್ರಯೋ ವಾ ಇಮೇ ತ್ರಿವೃತೋ ಲೋಕಾಸ್ತ್ರಿಸ್ರೋ ದಿವಃ ಪೃಥಿವೀರಿತ್ಯಾದಿ ಶ್ರುತೇರ್ದ್ಯುಲೋಕಸ್ಯ ತ್ರೈವಿಧ್ಯಂ । ಅತೋಽಸ್ಮಾತ್ ಸ್ಥಾನತ್ರಯಾನ್ನೋಽಸ್ಮದರ್ಥಂ ಹೇ ರುದ್ರಾ ಆಗಚ್ಛತೇತಿ ಶೇಷಃ । ಉತ ವಾ ಅಥವಾ ನು ಅದ್ಯ ಯದ್ಯಜಾಮ ಯದ್ಧವಿಃ ಪ್ರಕ್ಷಿಪಾಮಃ ಹೇ ಅಗ್ನೇ ತ್ವಮಸ್ಯ ಹವಿಷ ಏತದ್ಧವಿರ್ವಿತ್ತಾತ್ । ವಿದ್ಧಿ ॥**

॥ ಪ್ರತಿಪದಾರ್ಥ ॥

**ರುದ್ರಾಃ**—ರುದ್ರಪುತ್ರರಾದ । **ಮರುತಃ**—ಎಲೈ ಮರುತ್ತುಗಳೇ । **ಯದುತ್ತಮೇ ದಿವಿ**—( ನೀವು ) ಯಾವ ಉತ್ತಮಲೋಕವಾದ ದ್ಯುಲೋಕದಲ್ಲಿರಲಿ । **ಮಧ್ಯಮೇ ವಾ**—ಮಧ್ಯಮಲೋಕವಾದ ಅಂತರಿಕ್ಷದಲ್ಲಿರಲಿ । **ಅವಮೇ ವಾ (ದಿವಿ)**—ಐಹಿಕವಾದ ಪಾರ್ಥಿವಲೋಕದಲ್ಲಿರಲಿ । **ಅತಃ**—ಆ ಎಲ್ಲಾ ಪ್ರದೇಶಗಳಿಂದಲೂ । **ನಃ**—ನಮಗಾಗಿ ದಯಮಾಡಿರಿ । **ಉತ ವಾ**—ಅಲ್ಲದೇ । **ಅಗ್ನೇ**—ಎಲೈ ಅಗ್ನಿಯೇ । **ನು**—ಈ ಯಾಗಕಾಲದಲ್ಲಿ । **ಯತ್ ಯಜಾಮ**—ಯಾವ ಹವಿಸ್ಸನ್ನರ್ಪಿಸುವೆವೋ । **ಅಸ್ಯ ಹವಿಷಃ**—ಅಂತಹ ಈ ಹವಿಸ್ಸನ್ನು । **ವಿತ್ತಾತ್**—ಪೂರ್ಣವಾಗಿ ತಿಳಿ.

॥ ಭಾವಾರ್ಥ ॥

ರುದ್ರಪುತ್ರರಾದ ಎಲೈ ಮರುತ್ತುಗಳೇ, ನೀವು ಯಾವ ಉತ್ತಮಲೋಕವಾದ ದ್ಯುಲೋಕದಲ್ಲಿರಲಿ, ಮಧ್ಯಲೋಕವಾದ ಅಂತರಿಕ್ಷದಲ್ಲಿರಲಿ, ಐಹಿಕವಾದ ಪಾರ್ಥಿವಲೋಕದಲ್ಲಿರಲಿ, ಆ ಎಲ್ಲಾ ಪ್ರದೇಶಗಳಿಂದಲೂ ನಮಗಾಗಿ ದಯಮಾಡಿರಿ. ಅಲ್ಲದೇ, ಎಲೈ ಅಗ್ನಿಯೇ, ಈ ಯಾಗಕಾಲದಲ್ಲಿ ಯಾವ ಹವಿಸ್ಸನ್ನರ್ಪಿಸುವೆವೋ, ಅಂತಹ ಈ ಹವಿಸ್ಸನ್ನು ಪೂರ್ಣವಾಗಿ ತಿಳಿ.

## English Translation

Auspicious Maruts, whether you abide in the upper, the middle, or the lower heaven, (come), Rudras, to us from thence ; and Agni, accept the oblation which this day we offer.

॥ ವಿಶೇಷವಿಷಯಗಳು ॥

**ಉತ್ತಮೇ ಮಧ್ಯಮೇ ಅವಮೇ ವಾ**—ಈ ಶಬ್ದಗಳಿಗೆ ಸಾಯಣರು ಸ್ವರ್ಗಲೋಕದ ಕೆಳಗಿನ, ಮಧ್ಯದ, ಮೇಲಿನ ಎಂಬ ಅವಾಂತರ ಪ್ರಭೇದಗಳೆಂದು ಅರ್ಥವಿವರಣೆಮಾಡಿದ್ದಾರೆ. ಈ ವಿಷಯದಲ್ಲಿ-**ತ್ರಯೋ ವಾ ಇಮೇ ತ್ರಿವೃತೋ ಲೋಕಾಸ್ತ್ರಿಸ್ರೋ ದಿವಃ ಪೃಥಿವೀ** ಎಂಬ ಶ್ರುತಿವಾಕ್ಯವನ್ನುದಹರಿಸಿ ದ್ಯುಲೋಕದಲ್ಲಿ ತ್ರಿವಿಧವಾದ ಸ್ಥಾನಭೇದಗಳಿರುವುದನ್ನು ಸಮರ್ಥನೆಮಾಡಿದ್ದಾರೆ. ಅಥವಾ ಉತ್ತಮಸ್ಥಾನವಾದ ದ್ಯುಲೋಕ, ಮಧ್ಯಮಸ್ಥಾನವಾದ ಅಂತರಿಕ್ಷಲೋಕ, ಕೆಳಗಿನಸ್ಥಾನವಾದ ಭೂಲೋಕ ಎಂಬ ಅರ್ಥವನ್ನಾದರೂ ಹೇಳಬಹುದು. ಈ ಮೂರು ಲೋಕಗಳಲ್ಲಿ ಯಾವ ಪ್ರದೇಶದಲ್ಲಿ ನೀವು ಈಗ ಇದ್ದರೂ ಅಲ್ಲಿಂದ ನಮ್ಮಭಿಮುಖವಾಗಿ ಬರಬೇಕೆಂದು ಪ್ರಾರ್ಥಿಸಲಾಗಿದೆ

ರುದ್ರಾಃ—ರುದ್ರಪುತ್ರಾ ಮರುತಃ । ರುದ್ರಪುತ್ರರಾದ ಮರುತ್ತುಗಳನ್ನು ಇಲ್ಲಿ ತಂದೆಯ ಹೆಸರಿನಿಂದಲೇ ಸಂಬೋಧಿಸಲಾಗಿದೆ.

॥ ಸಂಹಿತಾಪಾಠಃ ॥

ಅಗ್ನಿಶ್ಚ ಯನ್ಮರುತೋ ವಿಶ್ವವೇದಸೋ ದಿವೋ ವಹಧ್ವ ಉತ್ತರಾದಧಿ ಷ್ಣುಭಿಃ ।
ತೇ ಮಂದಸಾನಾ ಧುನಯೋ ರಿಶಾದಸೋ ವಾಮಂ ಧತ್ತ ಯಜಮಾನಾಯ ಸುನ್ವತೇ ॥ ೭ ॥

॥ ಪದಪಾಠಃ ॥

ಅಗ್ನಿಃ । ಚ । ಯತ್ । ಮರುತಃ । ವಿಶ್ವಽವೇದಸಃ । ದಿವಃ । ವಹಧ್ವೇ । ಉತ್ಽತರಾತ್ । ಅಧಿ । ಸ್ನುಽಭಿಃ ।
ತೇ । ಮಂದಸಾನಾಃ । ಧುನಯಃ । ರಿಶಾದಸಃ । ವಾಮಂ । ಧತ್ತ । ಯಜಮಾನಾಯ । ಸುನ್ವತೇ ॥ ೭ ॥

॥ ಸಾಯಣಭಾಷ್ಯಂ ॥

ಹೇ ವಿಶ್ವವೇದಸಃ ಸರ್ವಸ್ಯ ಜ್ಞಾತಾರೋ ವಿಶ್ವಧನಾ ವಾ ಹೇ ಮರುತೋ ಯದ್ಯೂಯಮ-ಗ್ನಿಶ್ಚ ದಿವೋ ದ್ಯುಲೋಕಾದುತ್ತರಾದುತ್ಕೃಷ್ಟತರಾದಧಿ ಉಪರಿ ಸ್ನುಭಿಃ ಸಾನುಭಿರುಪರಿಪ್ರದೇಶೇ ವಹಧ್ವೇ ಉಹ್ಯಧ್ವೇ । ತತ್ರ ನಿವಸಥೇತ್ಯರ್ಥಃ । ಯದ್ವಾ ಸ್ನುಶಬ್ದೇನ ತತ್ಸದೃಶಾ ಅಶ್ವಾ ಉಚ್ಯಂತೇ । ತೈರ್ವೋ-ಹ್ಯಧ್ವೇ । ತೇ ಯೂಯಂ ಮಂದಸಾನಾ ಮೋದಮಾನಾ ಅಸ್ಮದೀಯೈಃ ಸ್ತೋತ್ರೈರ್ಹವಿರ್ಭಿಶ್ಚ ಧುನಯಃ ಶತ್ರೂಣಾಂ ಕಂಪಯಿತಾರೋ ರಿಶಾದಸೋಽಸ್ಮದ್ಹಿಂಸಕಾನಾಮತ್ತಾರಃ ಸಂತೋ ವಾಮಂ ವನನೀಯಂ ಧನಂ ಧತ್ತ ದತ್ತ ಯಜಮಾನಾಯ ಸುನ್ವತೇಽಭಿಷವಂ ಕುರ್ವತೇ ॥

॥ ಪ್ರತಿಪದಾರ್ಥ ॥

ವಿಶ್ವವೇದಸಃ—ಸರ್ವಜ್ಞರಾದ। ಮರುತಃ—ಎಲೈ ಮರುತ್ತುಗಳೇ। ಯತ್—ಯಾವ ನೀವು (ಮತ್ತು)। ಅಗ್ನಿಶ್ಚ—ಅಗ್ನಿಯೂ ಕೂಡ । ದಿವಃ—ದ್ಯುಲೋಕದ । ಉತ್ತರಾತ್—ಉತ್ಕೃಷ್ಟವಾದ । ಸ್ನುಭಿಃ ಅಧಿ—ಶಿಖರಗಳಿಗಿಂತಲೂ ಮೇಲ್ಭಾಗದಲ್ಲಿ । ವಹಧ್ವೇ—ವ್ಯವಹರಿಸುವಿರೋ । ತೇ—ಅತಂಹ ನೀವು । ಮಂದಸಾನಾಃ—

ನಮ್ಮ ಸ್ತುತಿಯಿಂದ ತೃಪ್ತಿಯನ್ನು ಹೊಂದುವವರೂ । **ಧುನಯಃ**—ಶತ್ರುಗಳಿಗೆ ಕಂಪನವನ್ನುಂಟುಮಾಡುವವರೂ । **ರಿಶಾದಸಃ**—ನಮಗೆ ಹಿಂಸಾಕಾರಕರ ನಾಶವನ್ನುಂಟುಮಾಡುವವರೂ ಆಗಿ । **ಸುನ್ವತೇ**—ಸೋಮರಸವನ್ನು ಹಿಂಡಿ ಹವಿಸ್ಸನ್ನರ್ಪಿಸುವ । **ಯಜಮಾನಾಯ**—ಯಜಮಾನನಿಗೆ । **ವಾಮಂ**—ಆಕರ್ಷಕವಾದ ಧನವನ್ನು । **ಧತ್ತ**—ಕೊಡಿರಿ.

॥ ಭಾವಾರ್ಥ ॥

ಸರ್ವಜ್ಞರಾದ ಎಲೈ ಮರುತ್ತುಗಳೇ, ಯಾವ ನೀವು ಮತ್ತು ಅಗ್ನಿಯು ಕೂಡ ದ್ಯುಲೋಕದ ಉತ್ಕೃಷ್ಟವಾದ ಶಿಖರಗಳಿಗಿಂತಲೂ ಉನ್ನತಪ್ರದೇಶದಲ್ಲಿ ವ್ಯವಹರಿಸುವಿರೋ ಅಂತಹ ನೀವು ನಮ್ಮ ಸ್ತುತಿಯಿಂದ ತೃಪ್ತಿಯನ್ನು ಹೊಂದುವವರೂ, ಶತ್ರುಗಳಿಗೆ ಕಂಪನವನ್ನುಂಟುಮಾಡುವವರೂ, ನಮಗೆ ಹಿಂಸೆಯನ್ನುಂಟುಮಾಡುವವರನ್ನು ನಾಶಮಾಡುವವರೂ, ಆಗಿ, ರಸವನ್ನು ಹಿಂಡಿ ಹವಿಸ್ಸನ್ನರ್ಪಿಸುವ ಯಜಮಾನನಿಗೆ ಆಕರ್ಷಕವಾದ ಧನವನ್ನು ಕೊಡಿರಿ.

## English Translation

Maruts, who are omniscient, since you and Agni abide above the summits of the upper (region) of the sky, you who cause (your enemies) to tremble, and are the consumers of (our) foes, being pleased, bestow upon the sacrificer who offers you oblations desirable wealth.

॥ ವಿಶೇಷವಿಷಯಗಳು ॥

ಸೂಕ್ತದ ಕೊನೆಯ ಋಕ್ಕಿನಲ್ಲಿ ಅಭಿಮತವನ್ನು ಸಲ್ಲಿಸಬೇಕೆಂಬ ಪ್ರಾರ್ಥನೆಯು ಸಾಧಾರಣವಾಗಿ ಉಕ್ತವಾಗಿರುವಂತೆ ಈ ಋಕ್ಕಿನಲ್ಲಿ ಮರುದ್ದೇವತೆಗಳಿಗೆ ಸೋಮರಸವನ್ನು ಸಿದ್ಧಮಾಡಿ ಅರ್ಪಿಸುವ ಯಜಮಾನನಿಗೆ ಧನವನ್ನು ಕೊಟ್ಟು ಅನುಗ್ರಹಿಸಬೇಕೆಂಬ ಪ್ರಾರ್ಥನೆಯು ಉಕ್ತವಾಗಿದೆ

॥ ಸಂಹಿತಾಪಾಠಃ ॥

ಅಗ್ನೇ ಮರುದ್ಭಿಃ ಶುಭಯದ್ಭಿರ್ಋಕ್ವಭಿಃ ಸೋಮಂ ಪಿಬ ಮಂದಸಾನೋ ಗಣಶ್ರಿಭಿಃ ।

ಪಾವಕೇಭಿರ್ವಿಶ್ವಮಿನ್ವೇಭಿರಾಯುಭಿರ್ವೈಶ್ವಾನರ ಪ್ರದಿವಾ ಕೇತುನಾ ಸಜೂಃ ॥ ೮ ॥

॥ ಪದಪಾಠಃ ॥

ಅಗ್ನೇ । ಮರುತ್ಽಭಿಃ । ಶುಭಯತ್ಽಭಿಃ । ಋಕ್ವಽಭಿಃ । ಸೋಮಂ । ಪಿಬ । ಮಂದಸಾನಃ ।

ಗಣಶ್ರಿಽಭಿಃ ।

ಪಾವಕೇಭಿಃ । ವಿಶ್ವಂಽಇನ್ವೇಭಿಃ । ಆಯುಽಭಿಃ । ವೈಶ್ವಾನರ । ಪ್ರಽದಿವಾ । ಕೇತುನಾ । ಸಽಜೂಃ ॥೮॥

॥ ಸಾಯಣಭಾಷ್ಯಂ ॥

ಅಗ್ನೇ ಮರುದ್ಭಿರಿತ್ಯೃಷ್ಟಮ್ಯಾಗ್ನಿಮ್ಯಾರುತಸ್ಯ ಯಾಜ್ಯಾ । ಅಗ್ನೇ ಮರುದ್ಭಿಃ ಶುಭಯದ್ಭಿರ್ಋಕ್ವಭಿಃ । ಆ. ೫.೨೦ । ಇತಿ ಸೂತ್ರಿತತ್ವಾತ್ ॥

ಹೇ ಅಗ್ನೇ ಮರುದ್ಭಿಃ ಸಹ ಮಂದಸಾನಃ ಸನ್ ಸೋಮಂ ಪಿಬ । ಕೀದೃಶೈರ್ಮರುದ್ಭಿಃ । ಶುಭಯದ್ಭಿಃ ಶೋಭಮಾನೈರನ್ಯಾನ್ ಶೋಭಯದ್ಭಿರ್ವಾ ಋಕ್ವಭಿಃ ಸ್ತುತ್ಯೈರ್ಗಣಶ್ರಿಭಿರ್ಗಣಭಾವಮಾಶ್ರಯದ್ಭಿಃ ಪಾವಕೇಭಿಃ ಶೋಧಕೈರ್ವಿಶ್ವಮಿನ್ವೇಭಿರ್ವಿಶ್ವಂ ವೃಷ್ಟ್ಯಾ ಪ್ರೀಣಯದ್ಭಿರಾಯುಭಿರಾಯುಷ್ಮದ್ಭಿಃ । ಹೇ ವೈಶ್ವಾನರ ವಿಶ್ವನರಹಿತಾಗ್ನೇ ಪ್ರದಿವಾ ಪುರಾಣೇನ ಕೇತುನಾ ಜ್ವಾಲಾಪುಂಜೇನ ಸಜೂಃ ಸಹಿತಃ ॥

॥ ಪ್ರತಿಪದಾರ್ಥ ॥

**ಅಗ್ನೆ**—ಎಲೈ ಅಗ್ನಿಯೇ । **ಶುಭಯದ್ಭಿಃ**—ಪ್ರಕಾಶಮಾನರೂ । **ಋಕ್ವಭಿಃ**—ಸ್ತುತ್ಯರೂ । **ಗಣಶ್ರಿಭಿಃ**—ಸಂಘರೂಪದಲ್ಲಿ ಸೇರಿಕೊಂಡಿರುವವರೂ । **ಪಾವಕೇಭಿಃ**—ಶುದ್ಧಿಕಾರಕರೂ । **ವಿಶ್ವಮಿನ್ವೇಭಿಃ**—ವೃಷ್ಟಿಯಿಂದ ಜಗತ್ತಿಗೆ ತೃಪ್ತಿಕಾರಕರೂ । **ಆಯುಭಿಃ**—ಚಿರಾಯುಗಳೂ ಆದ । **ಮರುದ್ಭಿಃ**-ಮರುತ್ತುಗಳೊಡನೆ । **ಮಂದಸಾನಃ**—ಸಂತೋಷವನ್ನನುಭವಿಸುತ್ತಾ । **ಸೋಮಂ**—ಸೋಮವನ್ನು । **ಪಿಬ**—ಪಾನಮಾಡು । **ವೈಶ್ವಾನರ**—ವೈಶ್ವಾನರರೂಪಿಯಾದ ಎಲೈ ಅಗ್ನಿಯೇ । **ಪ್ರದಿವಾ**—ಪುರಾತನವಾದ । **ಕೇತುನಾ**—ನಿನ್ನ ಜ್ವಾಲಾರೂಪವಾದ ಕೇತು (ಜ್ವಾಲಾಸಮೂಹ) ವಿನೊಂದಿಗೆ । **ಸಜೂಃ**—ಸೇರಿಕೊಂಡು । (ಪಿಬ—ಪಾನಮಾಡು).

॥ ಭಾವಾರ್ಥ ॥

ಎಲೈ ಅಗ್ನಿಯೇ, ಪ್ರಕಾಶಮಾನರೂ, ಸ್ತುತ್ಯರೂ, ಸಂಘರೂಪದಲ್ಲಿ ಸೇರಿಕೊಂಡಿರುವವರೂ, ಶುದ್ಧಿಕಾರಕರೂ, ವೃಷ್ಟಿಯಿಂದ ಜಗತ್ತಿಗೆ ತೃಪ್ತಿಕಾರಕರೂ, ಚಿರಾಯುಗಳೂ ಆದ ಮರುತ್ತುಗಳೊಡನೆ ಸಂತೋಷವನ್ನನುಭವಿಸುತ್ತಾ ಸೋಮವನ್ನು ಪಾನಮಾಡು. ವೈಶ್ವಾನರರೂಪಿಯಾದ ಎಲೈ ಅಗ್ನಿಯೇ, ಪುರಾತನವಾದ ನಿನ್ನ ಜ್ವಾಲಾರೂಪವಾದ ಕೇತುವಿನೊಂದಿಗೆ ಸೇರಿಕೊಂಡು ಸೋಮವನ್ನು ಪಾನಮಾಡು.

## English Translation

Agni, drink the Soma-juice, rejoicing, along with the Maruts,

resplendent, adorable, associated in troops, purifying all, animating and long-lived : drink, Vaiswanara, who are identified with the ancient emblem (of flame).

॥ ವಿಶೇಷವಿಷಯಗಳು ॥

ಅಗ್ನಿಮಾರುತದೇವತೆಗಳನ್ನುದ್ದೇಶಿಸಿ ಹೋಮಮಾಡುವಾಗ **ಅಗ್ನೇ ಮರುದ್ಭಿಃ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ಅಗ್ನೇ ಮರುದ್ಭಿಃ ಶುಭಯದ್ಭಿರ್ಋಕ್ವಭಿಃ** ಎಂಬ ಸೂತ್ರದಿಂದ (ಆ. ೫-೨೦) ವಿವೃತವಾಗಿರುವುದು.

ಈ ಋಕ್ಕಿನಲ್ಲಿಯೂ ಅಗ್ನಿಯನ್ನು ಮರುದ್ದೇವತೆಗಳೊಂದಿಗೆ ಹರ್ಷಯುಕ್ತನಾಗಿ ಸೋಮಪಾನಮಾಡಬೇಕೆಂದು ಪ್ರಾರ್ಥಿಸಿದೆ.

## ಅರವತ್ತೊಂದನೆಯ ಸೂಕ್ತ

### ಪೀಠಿಕೆ.

ಭಾಷ್ಯಕಾರರು ಈ ಸೂಕ್ತದ ವಿಷಯದಲ್ಲಿ ಒಂದು ಪೂರ್ವೇತಿಹಾಸವನ್ನು ಹೇಳಿರುವರು—

**ಅತ್ರಾಶ್ಚರ್ಯಂ ಪುರಾವೃತ್ತಮಾಹುರಾಗಮಪಾರಗಾಃ ।**
**ಅರ್ಚನಾನಾಃ ಪುರಾತ್ರೇಯೋ ದಾರ್ಭ್ಯೇಣ ರಥವೀತಿನಾ ॥**

**ಆರ್ತ್ವಿಜ್ಯಾಯ ವೃತೋ ಯಜ್ಞೇ ವಿತತೇ ಹೌತ್ರ ಆಸ್ಥಿತಃ ।**
**ರಥವೀತಿಸುತಾಂ ಕನ್ಯಾಂ ದದರ್ಶ ಪಿತುರಂತಿಕೇ ॥**

**ಯಯಾಚೇ ಸ್ವಕುಮಾರಾಯ ಶ್ಯಾವಾಶ್ವಾಯ ಚ ತಾಂ ಸುತಾಂ ।**
**ಸ ಪ್ರದಾನಮನಾ ಭಾರ್ಯಾಮಪೃಚ್ಛತ್ಕಿಂ ಪ್ರಯಚ್ಛಸಿ ॥**

**ಇತಿ ಪೃಷ್ಟಾ ಪುನಃ ಪ್ರಾಹ ಕಥಮಸ್ಮೈ ಪ್ರದಾಸ್ಯಸಿ ।**
**ಇತಃ ಪೂರ್ವಂ ಸುತಾ ದತ್ತಾ ನಾಸೀದನೃಷಯೇ ಕ್ವಚಿತ್ ॥**

**ತತ್ತಥ್ಯೈವೇತಿ ನಿಶ್ಚಿತ್ಯ ಪ್ರತ್ಯಾಚಷ್ಟಾರ್ಚನಾನಸಂ ।**
**ಶ್ಯಾವಾಶ್ವಃ ಸಂಸ್ಥಿತೇ ಯಜ್ಞೇ ತೇನ ರಾಜ್ಞಾ ನಿರಾಕೃತಃ ॥**

**ತತ್ಪ್ರತ್ಯಾಶಾನ್ವಿತೋ ವಿಪ್ರಸ್ತಪಸ್ತೇಪೇ ಸುದಾರುಣಂ ।**
**ಬ್ರಹ್ಮಚರ್ಯರತಃ ಶಾಂತೋ ಭಿಕ್ಷಾರ್ಥಂ ಪರ್ಯಟನ್ ದ್ವಿಜಃ ॥**

ತರಂತಮಹಿಷೀಂ ಸಾಧ್ವೀಂ ಬಿಭ್ರಕ್ಷೇಽಸೌ ಶಶೀಯಸೀಂ ।
ಸಾ ಸಂಪ್ರಾಪ್ಯಾಂತಿಕೇ ಪತ್ಯುಃ ಪ್ರೋವಾಚಾಗತವಾನೃಷಿಃ ॥

ಇತ್ಯುಕ್ತೋ ನೃಪತಿರ್ಭಾರ್ಯಾಂ ಪ್ರತ್ಯಾಹೈನಂ ಪ್ರಪೂಜಯ ।
ಸಾನುಜ್ಞಾತಾ ಗವಾಂ ಯೂಥಂ ಪ್ರಾದಾದಾಭರಣಾನಿ ಚ ॥

ತರಂತೋಽಪಿ ಪುನಸ್ತಸ್ಮೈ ಪ್ರಾದಾದ್ಧನಮಪೇಕ್ಷಿತಂ ।
ದತ್ವಾ ಚ ಪುರುಮೀಳ್ಹಸ್ಯ ಸ್ವಾನುಜಸ್ಯಾಂತಿಕಂ ಪ್ರತಿ ॥

ಪ್ರೇರಯಾಮಾಸ ತಮೃಷಿಂ ಸೋಽಪಿ ತ್ವಾಂ ಮಾನಯಿಷ್ಯತಿ ।
ತಥೇತಿ ರಾಜ್ಞೋ ವಚನಂ ನಿಶಮ್ಯ ತದ್ಭಾರ್ಯಯಾ ದರ್ಶಿತಸರ್ವಮಾರ್ಗಃ ॥

ಗಚ್ಛನ್ ಶನೈರರ್ಧಪಥೇ ಮರುದ್ಗಣಾನ್ ಸಮಾನರೂಪಾನ್ ಸ್ವದಿದೃಕ್ಷಯಾಗತಾನ್ ।
ವಿಲೋಕ್ಯ ವಿಪ್ರಃ ಸಭಯಃ ಪ್ರಣಮ್ಯ ಕೃತಾಂಜಲಿಃ ಕಂಟಕಿತಾಂಗಸಂಘಃ ॥

ತುಷ್ಟಾವ ಹೃಷ್ಟಾನ್ ಮರುತೋ ವಿಶಿಷ್ಟೈರರ್ಥೈರ್ವಚೋಭಿಃ ಪರಿತುಷ್ಟಚಿತ್ತಃ ।
ಸಂಪ್ರಾಪ್ಯ ಸರ್ವಂ ಸ್ವಮನೀಷಿತಂ ತದಾ ಮರುದ್ಗಣೇಭ್ಯೋ ಮುದಿತಾತ್ಮವದ್ಭ್ಯಃ ॥

ತದಾಭವದೃಷಿಃ ಸೂಕ್ತದ್ರಷ್ಟಾ ಶ್ಯಾವಾಶ್ವನಾಮಕಃ ।
ಪಶ್ಚಾತ್ಸ್ವನಗೃಹಂ ಗತ್ವಾ ಭೂಯೋ ಲಬ್ಧ್ವಾ ಗವಾಂ ಶತಂ ॥

ದಾರ್ಭ್ಯೋ ಮಂತ್ರದೃಶೇ ರಾಜ್ಞಾ ಚೋದಿತಃ ಸ್ವಸುತಾಂ ದದೌ ।
ಪುರುಮೀಳ್ಹಸ್ತರಂತಶ್ಚ ತದ್ಭಾರ್ಯಾ ಚ ಶಶೀಯಸೀ ॥

ದಾರ್ಭ್ಯೋ ಯೋ ರಥವೀತ್ಯಾಖ್ಯಃ ಸಪ್ತ ಯೇ ಮರುತಾಂ ಗಣಾಃ ।
ತೇ ತಸ್ಮೈ ಯದ್ದದುಸ್ತುಷ್ಟಾಸ್ತತ್ಕೇ ಷ್ಟೇತ್ಯತ್ರ ವರ್ಣ್ಯತೇ ॥

ಆಗಮಶಾಸ್ತ್ರಪಾರಂಗತರಾದ ವಿದ್ವಾಂಸರು ಅತ್ಯಾಶ್ಚರ್ಯಕರವಾದ ಒಂದು ಪೂರ್ವೇತಿಹಾಸವನ್ನು ಈ ರೀತಿ ಹೇಳಿರುವರು—ಪೂರ್ವದಲ್ಲಿ ಅತ್ರಿವಂಶೋತ್ಪನ್ನನಾದ ಅರ್ಚನಾನಾಃ ಎಂಬ ಋಷಿಯನ್ನು ರಥವೀತಿದಾರ್ಭ್ಯನೆಂಬ ರಾಜರ್ಷಿಯು ತಾನು ಮಾಡುವ ಯಜ್ಞದಲ್ಲಿ ಪೌರೋಹಿತ್ಯವನ್ನು ವಹಿಸಿ ಯಜ್ಞವನ್ನು ನೆರವೇರಿಸಬೇಕೆಂದು ಪ್ರಾರ್ಥಿಸಿದನು. ರಾಜನ ಪ್ರಾರ್ಥನೆಯನ್ನಂಗೀಕರಿಸಿ ಅರ್ಚನಾನಸನು ತನ್ನ ಪುತ್ರನಾದ ಶ್ಯಾವಾಶ್ವನೊಂದಿಗೆ ರಾಜನ ಯಜ್ಞಗೃಹಕ್ಕೆ ಹೋಗಿ ಅಲ್ಲಿ ಹೋತೃವೆಂಬ ಋತ್ವಿಕ್ಕಿನ ಪಾತ್ರವನ್ನು ವಹಿಸಿ ಯಜ್ಞಕರ್ಮಗಳಲ್ಲಿ ನಿರತನಾಗಿದ್ದನು. ಹೀಗಿರುವಾಗ ಆ ರಥವೀತಿರಾಜನ ಸಮೀಪದಲ್ಲಿ ಕುಳಿತಿದ್ದ ರಾಜಪುತ್ರಿಯನ್ನು ನೋಡಿ ಈ ಕನ್ಯೆಯನ್ನು ತನ್ನ ಪುತ್ರನಾದ ಶ್ಯಾವಾಶ್ವನಿಗೆ ಮದುವೆಮಾಡಿಕೊಡಬೇಕೆಂದು ರಾಜನನ್ನು ಕೇಳಿದನು. ಅದಕ್ಕೆ ಆ ರಾಜನು ಸಮ್ಮತಿಸಿದರೂ ತನ್ನ ಭಾರ್ಯೆಯನ್ನು ಈ ವಿಷಯದಲ್ಲಿ ಕೇಳಿ ಅವಳ ಅಭಿಪ್ರಾಯವನ್ನು ತಿಳಿಯುವುದಕ್ಕಾಗಿ ಅಂತಃಪುರಕ್ಕೆ ಹೋಗಿ ತನ್ನ

ಪುತ್ರಿಯನ್ನು ಅರ್ಚನಾನಸಪುತ್ರನಾದ ಶ್ಯಾವಾಶ್ವನಿಗೆ ಕೊಡುವ ವಿಷಯದಲ್ಲಿ ನಿನ್ನ ಅಭಿಪ್ರಾಯವೇನೆಂದು ಕೇಳಿದನು. ಅದಕ್ಕೆ ಅವನ ಭಾರ್ಯೆಯು ಎಲೈ ಭರ್ತೃವೇ, ನಮ್ಮ ಪುತ್ರಿಯನ್ನು ಈ ಶ್ಯಾವಾಶ್ವನಿಗೆ ಕೊಡಲು ಹೇಗೆ ಸಾಧ್ಯ ? ಇವನು ಋಷಿಯಲ್ಲ. ಇದುವರೆಗೂ ನಮ್ಮ ವಂಶದಲ್ಲಿ ಋಷಿಯಲ್ಲದವರಿಗೆ ನಾವು ಕನ್ಯಾದಾನವನ್ನು ಮಾಡಿರುವುದಿಲ್ಲ. ಆದ್ದರಿಂದ ಶ್ಯಾವಾಶ್ವನಿಗೆ ನಮ್ಮ ಪುತ್ರಿಯನ್ನು ವಿವಾಹಮಾಡಿಕೊಡಲು ಸಾಧ್ಯವಿಲ್ಲ ಎಂದು ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದಳು. ರಾಜನೂ ಅದನ್ನೇ ಅನುಮೋದಿಸಿ ಅರ್ಚನಾನಸನಿಗೆ ಈ ವಿಷಯವನ್ನು ತಿಳಿಸಿದನು. ಈ ರೀತಿ ರಾಜನು ತನ್ನ ಮಾತನ್ನು ತಿರಸ್ಕರಿಸಲು ಯಜ್ಞನಡೆಯುತ್ತಿರುವಾಗಲೇ ಶ್ಯಾವಾಶ್ವನು ಅಲ್ಲಿಂದ ಹೊರಟು ತನ್ನ ಆಶ್ರಮಕ್ಕೆ ಹಿಂತಿರುಗಿ ತೀವ್ರವಾದ ತಪಸ್ಸನ್ನಾಚರಿಸುತ್ತಿದ್ದನು ಬ್ರಹ್ಮಚರ್ಯವ್ರತವನ್ನು ನಿಯಮದಿಂದ ಪಾಲಿಸುತ್ತಾ ಶಾಂತಮನಸ್ಕನಾಗಿ ತಪಸ್ಸನ್ನು ಮಾಡುತ್ತಿದ್ದನು ಒಂದು ದಿನಸ ಈ ಶ್ಯಾವಾಶ್ವನು ಭಿಕ್ಷಾಟನಮಾಡುತ್ತಿರುವಾಗ ತರಂತನೆಂಬ ರಾಜನ ಪತ್ನಿಯೂ ಸಾಧ್ವಿಯೂ ಆದ ಶಶೀಯಸೀ ಎಂಬ ರಾಜಮಹಿಷಿಯನ್ನು ಭಿಕ್ಷಾರ್ಥವಾಗಿ ಪ್ರಾರ್ಥಿಸಿದನು. ಅದನ್ನು ಕೇಳಿ ರಾಜಪತ್ನಿಯು ತನ್ನ ಪತಿಯ ಬಳಿಗೆ ಹೋಗಿ ಭಿಕ್ಷಾರ್ಥವಾಗಿ ಋಷಿಯು ಬಂದಿರುವುದನ್ನು ತಿಳಿಸಲು ರಾಜನು ಆ ಋಷಿಯನ್ನು ಉಚಿತವಾದ ಅತಿಥಿಸತ್ಕಾರಗಳಿಂದ ಪೂಜಿಸೆಂದು ಹೇಳಿದನು. ರಾಜನ ಅನುಜ್ಞೆಯಿಂದ ರಾಜಪತ್ನಿಯು ಶ್ಯಾವಾಶ್ವಋಷಿಗೆ ಅನೇಕ ಗೋವುಗಳನ್ನೂ, ದಿವ್ಯಾಭರಣಗಳನ್ನೂ ಕೊಟ್ಟು ಸತ್ಕರಿಸಿದಳು. ತರಂತರಾಜನೂ ಸಹ ಶ್ಯಾವಾಶ್ವನಿಗೆ ಬೇಕಾದಷ್ಟು ಧನಾದಿಗಳನ್ನು ಕೊಟ್ಟು ಉಪಚರಿಸಿ ತನ್ನ ತಮ್ಮನಾದ ಪುರುಮೀಳ್ಹನೆಂಬ ರಾಜನ ಬಳಿಗೆ ಹೋದಲ್ಲಿ ಅವನೂ ಸಹ ನಿನಗೆ ಯಥೇಚ್ಛವಾಗಿ ಧನಾದಿಗಳನ್ನು ಕೊಡುವನೆಂದು ಹೇಳಿ ಅವನ ಬಳಿಗೆ ಕಳುಹಿಸಿಕೊಟ್ಟನು ಶ್ಯಾವಾಶ್ವನು ರಾಜನ ಮಾತಿಗೆ ಸಮ್ಮತಿಸಿ ರಾಜಪತ್ನಿಯು ತೋರಿಸಿದ ಮಾರ್ಗದಲ್ಲಿ ಹೋಗುತ್ತಿರುವಾಗ ದಾರಿಯಲ್ಲಿ ತನಗೆ ಅಭಿಮುಖವಾಗಿ ಬರುತ್ತಿರುವ ಮರುದ್ದೇವತೆಗಳನ್ನು ಕಂಡನು. ಅವರೆಲ್ಲರೂ ಸಮಾನರೂಪ ಮತ್ತು ಆಕಾರವುಳ್ಳವರಾಗಿ ಪ್ರಕಾಶಿಸುತ್ತಿರುವುದನ್ನು ಈ ಶ್ಯಾವಾಶ್ವನು ನೋಡಿ ಭಯಭಕ್ತಿಯಿಂದ ಕೈ ಮುಗಿದುಕೊಂಡು ಪ್ರಸನ್ನಚಿತ್ತದಿಂದ ಆ ದೇವತೆಗಳನ್ನು ಅರ್ಥಗರ್ಭಿತವಾದ ವಾಕ್ಯಗಳಿಂದ ನಾನಾವಿಧವಾಗಿ ಸ್ತೋತ್ರಮಾಡಿದನು ಆ ಸ್ತೋತ್ರದಿಂದ ಆ ಮರುದ್ದೇವತೆಗಳು ತೃಪ್ತರಾಗಿ ಆ ಋಷಿಯ ಇಷ್ಟಾರ್ಥವು ಸಿದ್ಧಿಸಲೆಂದು ಅನುಗ್ರಹಿಸಿದರು ಮತ್ತು ಮರುದ್ದೇವತೆಗಳನ್ನು ಸ್ತುತಿಸಿದ್ದರಿಂದ ಶ್ಯಾವಾಶ್ವನು ಸೂಕ್ತದ್ರಷ್ಟೃವಾದ ಋಷಿಯಾದನು ಈ ವಿಷಯವನ್ನು ತಿಳಿದು ರಥವೀತಿರಾಜನು ಅವನ ಪತ್ನಿಯೂ ಸಹ ಶ್ಯಾವಾಶ್ವನ ಗೃಹಕ್ಕೆ ಬಂದು ಮಂತ್ರದ್ರಷ್ಟೃವಾದ ಅವನಿಗೆ ನೂರು ಗೋವುಗಳನ್ನು ಕೊಟ್ಟು ಸತ್ಕರಿಸಿ ತಮ್ಮ ಪುತ್ರಿಯನ್ನು ವಿವಾಹಮಾಡಿಕೊಟ್ಟರು ಈ ವಿಷಯವನ್ನೆಲ್ಲಾ ಎಂದರೆ—ಪುರುಮೀಳ್ಹ, ತರಂತ, ಅವನ ಪತ್ನೀಶಶೀಯಸೀ, ದಾರ್ಭ್ಯರಥವೀತಿ ರಾಜನು, ಸಪ್ತಮರುದ್ಗಣಗಳು ಇವರೆಲ್ಲರೂ ತನಗೆ (ಶ್ಯಾವಾಶ್ವನಿಗೆ) ಏನೇನನ್ನು ಕೊಟ್ಟು ಉಪಚರಿಸಿದರೋ ಅದೆಲ್ಲವನ್ನೂ ಶ್ಯಾವಾಶ್ವಋಷಿಯು **ಕೇ ಷ್ಠಾ ನರಃ** ಎಂಬ ಈ ಸೂಕ್ತದಲ್ಲಿ ವರ್ಣಿಸಿದಾನೆ

॥ ಸಾಯಣಭಾಷ್ಯಂ ॥

**ಕೇ ಷ್ಠಾ ನರ ಇತ್ಯೇಕೋನವಿಂಶತ್ಯೃಚಂ ಪಂಚಮಂ ಸೂಕ್ತಂ । ಅತ್ರಾನುಕ್ರಮಣಿಕಾ । ಕೇ ಷ್ಠೈಕೋನಾ ಗಾಯತ್ರಂ ಶ್ಯಾವಾಶ್ವೋಽತ್ರ ವೈದದಶ್ವಿಂ ತರಂತಪುರುಮೀಳ್ಹಾ ದಾರ್ಭ್ಯಂ ರಥವೀತಿಂ ಮರುತಶ್ಚ ದಾನತುಷ್ಟಃ ಪ್ರಶಶಂಸ ಬುಧ್ವಾ ಚ ತರಂತಮಹಿಷೀಂ ಶಶೀಯಸೀಂ ಪಂಚಮ್ಯಾನುಷ್ಟುಪ್**

**ನವಮೀ ಸತೋಬೃಹತೀತಿ । ಶ್ಯಾವಾಶ್ವ ಋಷಿಃ । ಪಂಚಮ್ಯನುಷ್ಟುಪ್ ನವಮೀ ಸತೋಬೃಹತೀ ಶಿಷ್ಟಾ ಗಾಯತ್ರ್ಯಃ । ಆದ್ಯಾಶ್ಚತಸ್ರೋ ಮರುದ್ದೇವತಾಕಾಃ । ಸನತ್ಸೇತ್ಯಾದೀನಾಂ ಚತಸೃಣಾಂ ಶಶೀಯಸೀ ನಾಮ ತರಂತಸ್ಯ ರಾಜ್ಞೋ ಭಾರ್ಯಾ ದೇವತಾ । ಉತ ಮೇಽರಪದಿತ್ಯಸ್ಯಾ ವೈದದಶ್ವಿಃ ಪುರುಮೀಳ್ಹೋ ದೇವತಾ । ಯೋ ಮೇ ಧೇನೂನಾಮಿತ್ಯಸ್ಯಾ ವೈದದಶ್ವಿಸ್ತರಂತೋ ರಾಜಾ ದೇವತಾ । ಯ ಈಂ ವಹಂತ ಇತ್ಯಾದ್ಯಾಃ ಷಣ್ಮಾರುತ್ಯಃ । ಏತಂ ಮ ಇತ್ಯಸ್ಯ ತೃಚಸ್ಯ ದಾರ್ಭ್ಯೋ ರಥವೀತಿರ್ನಾಮ ರಾಜಾ ದೇವತಾ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು—**ಕೇ ಷ್ಠಾನರಃ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಹತ್ತೊಂಭತ್ತು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ-**ಕೇ ಷ್ಠೈಕೋನಾ ಗಾಯತ್ರಂ ಶ್ಯಾವಾಶ್ವೋಽತ್ರ ವೈದದಶ್ವೀ ತರಂತಪುರುಮೀಳ್ಹೌ ದಾರ್ಭ್ಯಂ ರಥವೀತಿಂ ಮರುತಶ್ಚ ದಾನತುಷ್ಟಃ ಪ್ರಶಶಂಸ ಬುಧ್ವಾ ಚ ತರಂತಮಹಿಷೀಂ ಶಶೀಯಸೀಂ ಪಂಚಮ್ಯನುಷ್ಟುಪ್ ನವಮೀ ಸತೋಬೃಹತೀ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಶ್ಯಾವಾಶ್ವನು ಋಷಿಯು ಐದನೆಯ ಋಕ್ಕು ಅನುಷ್ಟುಪ್‌ಛಂದಸ್ಕವು, ಒಂಬತ್ತನೆಯ ಋಕ್ಕು ಸತೋಬೃಹತೀಛಂದಸ್ಕವು. ಉಳಿದ ಋಕ್ಕುಗಳು ಗಾಯತ್ರೀಛಂದಸ್ಕವು. ಈ ಸೂಕ್ತದ ಮೊದಲನೆಯ ನಾಲ್ಕು ಋಕ್ಕುಗಳು ಮರುದ್ದೇವತಾಕವು **ಸನತ್ಸಾಶ್ವ್ಯಂ** ಎಂದು ಮೊದಲಾಗುವ ಋಕ್ಕಿನಿಂದ ಮುಂದಿನ ನಾಲ್ಕು ಋಕ್ಕುಗಳಿಗೆ (೫-೮ ಋಕ್ಕುಗಳು) ತರಂತನೆಂಬ ರಾಜನ ಭಾರ್ಯೆಯಾದ ಶಶೀಯಸೀ ಎಂಬ ಸ್ತ್ರೀಯೇ ದೇವತೆಯು; **ಉತ ಮೇಽರಪತ್** ಎಂಬ ಋಕ್ಕಿಗೆ (೯ ನೇ ಋಕ್ಕು) ವಿದದಶ್ವಪುತ್ರನಾದ ಪುರುಮೀಳ್ಹನೆಂಬುವನು ದೇವತೆಯು, **ಯೋ ಮೇ ಧೇನೂನಾಂ** ಎಂಬ ಋಕ್ಕಿಗೆ (೧೦ ನೇ ಋಕ್ಕು) ವಿದದಶ್ವನ ಪುತ್ರನಾದ ತರಂತನೆಂಬ ರಾಜನೇ ದೇವತೆಯು, **ಯಂ ಈ ವಹಂತಃ** ಎಂದು ಮೊದಲಾಗುವ ಮುಂದಿನ ಆರು ಋಕ್ಕುಗಳು (೧೧-೧೬ ಋಕ್ಕುಗಳು) ಮರುದ್ದೇವತಾಕವು, **ಏತಂ ಮೇ** ಎಂದು ಮೊದಲಾಗುವ ಮುಂದಿನ ಮೂರು ಋಕ್ಕಗಳಿಗೆ (೧೭-೧೯ ಋಕ್ಕುಗಳಿಗೆ) **ದಾರ್ಭ್ಯೋ ರಥವೀತಿಃ** ಎಂಬ ಹೆಸರಿನ ರಾಜನು ದೇವತೆಯು. ವಿನಿಯೋಗವು ಲೈಂಗಿಕವು.

॥ ಓಂ ॥

## ಸೂಕ್ತ—೬೧

॥ ಮಂಡಲ—೫ ॥ ಅನುವಾಕ—೫ ॥ ಸೂಕ್ತ—೬೧ ॥
॥ ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ—೨೬, ೨೭ ೨೮ ೨೯ ॥

ಸೂಕ್ತದಲ್ಲಿರುವ ಋಕ್ಸಂಖ್ಯೆ—೧೯

ಋಷಿಃ—ಶ್ಯಾವಾಶ್ವ ಆತ್ರೇಯಃ ॥

ದೇವತಾ—೧-೪, ೧೧-೧೬. ಮರುತಃ । ೫-೮ ಶಶೀಯಸೀ ತರಂತಮಹಿಷೀ । ೯. ಪುರುಮೀಳ್ಹೋ ವೈದದಶ್ವಿಃ । ೧೦ ತರಂತೋ ವೈದದಶ್ವಿಃ । ೧೭-೧೯. ರಥವೀತಿರ್ದಾರ್ಭ್ಯಃ ।

ಛಂದಃ—೧—೪, ೬-೮, ೧೦-೧೯. ಗಾಯತ್ರೀ । ೫. ಅನುಷ್ಟುಪ್ । ೯. ಸತೋಬೃಹತೀ

॥ ಸಂಹಿತಾಪಾಠಃ ॥

**ಕೇ ಷ್ಠಾ ನರಃ ಶ್ರೇಷ್ಠತಮಾ ಯ ಏಕಏಕ ಆಯಯ ।**
**ಪರಮಸ್ಯಾಃ ಪರಾವತಃ ॥ ೧ ॥**

॥ ಪದಪಾಠಃ ॥

**ಕೇ । ಸ್ಥ । ನರಃ । ಶ್ರೇಷ್ಠಽತಮಾಃ । ಯೇ । ಏಕಃಽಏಕಃ । ಆಽಯಯ ।**
**ಪರಮಸ್ಯಾಃ । ಪರಾಽವತಃ ॥ ೧ ॥**

॥ ಸಾಯಣಭಾಷ್ಯಂ ॥

**ಹೇ ನರೋ ನೇತಾರೋ ಮರುತಃ ಶ್ರೇಷ್ಠತಮಾ ಅತ್ಯಂತಂ ಶ್ರೇಷ್ಠಾ ಯೂಯಂ ಕೇ ಷ್ಠ । ಕೇ ಸ್ಥ । ಕೇ ಭವಥ । ಏವಂ ಸ್ವರೂಪಾನಿಶ್ಚಯಾತ್ಸಂದಿಹ್ಯ ಬ್ರವೀತಿ । ಯೇ ಯೂಯಮೇಕ ಏಕಃ ಪ್ರತ್ಯೇಕಮಾಯಯ ಆಗಚ್ಛಥ । ಕಸ್ಮಾದಿತ್ಯುಚ್ಯತೇ । ಪರಮಸ್ಯಾಃ ಪರಾವತೋಽತ್ಯಂತದೂರದೇಶಾತ್ । ಅಂತರಿಕ್ಷಾದಿತ್ಯರ್ಥಃ ॥**

॥ ಪ್ರತಿಪದಾರ್ಥ ॥

**ನರಃ**—ನೇತೃಗಳಾದ ಎಲೈ ಮರುತ್ತುಗಳೇ । **ಯೇ**—ಯಾವ ನೀವು । **ಏಕಏಕಃ**—ಪ್ರತ್ಯೇಕವಾಗಿ । **ಪರಮಸ್ಯಾಃ**—ಅತ್ಯಂತವಾದ । **ಪರಾವತಃ**—ದೂರದೇಶದಿಂದ । **ಆಯಯ**—ಬರುವಿರೋ ಅಂತಹ । **ಶ್ರೇಷ್ಠತಮಾಃ**—ಅತ್ಯಂತ ಶ್ರೇಷ್ಠರಾದ ನೀವು । **ಕೇ ಷ್ಠ**—ಎಲ್ಲಿದ್ದಿರಿ ? ಎಲ್ಲಿಂದ ಬಂದಿರಿ ?

॥ ಭಾವಾರ್ಥ ॥

ನೇತೃಗಳಾದ ಎಲೈ ಮರುತ್ತುಗಳೇ, ಯಾವ ನೀವು ಪ್ರತ್ಯೇಕವಾಗಿ ಅತ್ಯಂತ ದೂರದೇಶದಿಂದ ಬರುವಿರೋ ಅಂತಹ ಅತ್ಯಂತ ಶ್ರೇಷ್ಠರಾದ ನೀವು ಎಲ್ಲಿದ್ದಿರಿ ? ಎಲ್ಲಿಂದ ಬಂದಿರಿ ?

English Translation

Who are you, most excellent leaders (of rites), who come one by one from a region exceedingly remote?

॥ ವಿಶೇಷವಿಷಯಗಳು ॥

ಎಲೈ ಮರುತ್ತುಗಳೇ, ನೀವು ಪ್ರತ್ಯೇಕವಾಗಿದ್ದರೂ ಎಲ್ಲರೂ ಒಟ್ಟಿಗೆ ಸೇರಿ ಇಲ್ಲಿಗೆ ಬಂದಿರುತ್ತೀರಿ. ಅದಲ್ಲದೆ ನೀವು ಅತ್ಯಂತ ದೂರದೇಶದಿಂದ ಬಂದಿರುವಿರಿ ಇದುವರೆಗೂ ನೀವು ಎಲ್ಲಿದ್ದಿರಿ ? ಈಗ ಎಲ್ಲಿಂದ ಬಂದಿರಿ ಎಂದು

ಋಷಿಯು ತನ್ನ ಅಭಿಮುಖವಾಗಿ ಬಂದಿರುವ ಮರುದ್ದೇವತೆಗಳನ್ನು ಪ್ರಾರಂಭದಲ್ಲಿ ಪ್ರಶ್ನೆ ಮಾಡುತ್ತಾನೆ.

ಪೀಠಿಕೆಯಲ್ಲಿ-ಶ್ಯಾವಾಶ್ವಋಷಿಯು ವನದಲ್ಲಿ ಹೋಗುತ್ತಿರುವಾಗ ಅವನ ಎದುರಿಗೆ ಮರುದ್ದೇವತೆಗಳು ಬಂದು ಗೋಚರಿಸಿದರೆಂದೂ ಅವರನ್ನು ಶ್ಯಾವಾಶ್ವನು ಸ್ತುತಿಸಿದನೆಂದೂ ಹೇಳಿದೆಯಷ್ಟೆ. ತನಗೆ ಅಭಿಮುಖವಾಗಿ ಬಂದ ಈ ದೇವತೆಗಳನ್ನು ಶ್ಯಾವಾಶ್ವನು ಮೇಲೆ ಹೇಳಿದಂತೆ ಪ್ರಶ್ನೆ ಮಾಡಿದ್ದಾನೆ. ಲೋಕವ್ಯವಹಾರದಲ್ಲಿ ಬಂಧು ಸ್ನೇಹಿತರು ಮೊದಲಾದ ಆಪ್ತರು ಕೆಲವು ಕಾಲ ಕಾರಣಾಂತರದಿಂದ ಅಗಲಿದ್ದು ಅನಂತರ ಸಂಧಿಸಿದಾಗ ಅವರನ್ನು -ಎಲ್ಲಿದ್ದಿರಿ ? ಎಲ್ಲಿಂದ ಬಂದಿರಿ? ಯಾವಾಗ ಬಂದಿರಿ ಎಂದು ಮೊದಲಾಗಿ ಕುಶಲ ಪ್ರಶ್ನೆಯನ್ನು ಮಾಡಿ ಸ್ವಾಗತಿಸುವುದು ರೂಢಿಯಷ್ಟೆ. ಅದರಂತೆ ಈ ಶ್ಯಾವಾಶ್ವಋಷಿಯೂ ಮರುದ್ದೇವಗಳನ್ನು ಈ ಋಕ್ಕಿನಲ್ಲಿಯೂ, ಮುದಿನ ಋಕ್ಕಿನಲ್ಲಿಯೂ ಆದರದಿಂದ ಪ್ರಶ್ನೆಮಾಡಿ ಸ್ವಾಗತಿಸಿರುವನೆಂದು ತಿಳಿಯಬೇಕು

॥ ಸಂಹಿತಾಪಾಠಃ ॥

ಕ್ವ ವೋಽಶ್ವಾಃ ಕ್ವಾಭೀಶವಃ ಕಥಂ ಶೇಕ ಕಥಾ ಯಯ ।
ಪೃಷ್ಠೇ ಸದೋ ನಸೋರ್ಯಮಃ ॥ ೨ ॥

॥ ಪದಪಾಠಃ ॥

ಕ್ವ । ವಃ । ಅಶ್ವಾಃ । ಕ್ವ । ಅಭೀಶವಃ । ಕಥಂ । ಶೇಕ । ಕಥಾ । ಯಯ ।
ಪೃಷ್ಠೇ । ಸದಃ । ನಸೋಃ । ಯಮಃ ॥ ೨ ॥

॥ ಸಾಯಣಭಾಷ್ಯಂ ॥

**ಹೇ ಮರುತೋ ವೋ ಯುಷ್ಮಾಕಮಶ್ವಾಃ ಕ್ವ ಕುತ್ರತ್ಯಾಃ । ಕ್ವ ಚಾಭೀಶವೋ ಬಂಧನರಜ್ಜವಃ । ಕಥಂ ಚ ಶೇಕ । ಶೀಘ್ರಂ ಗಂತುಂ ಶಕ್ತಾ ಭವಥ । ಕಥಾ ಕಥಂ ಯಯ । ಯಾತಾಃ ಸ್ಥ । ಪೃಷ್ಠೇಽಶ್ವಾನಾಂ ಪೃಷ್ಠದೇಶೇ ಸದಃ । ಸೀದತಿ ತಿಷ್ಠತ್ಯತ್ರೇತಿ ಸದಃ ಪರ್ಯಾಣಂ । ತತ್ರ ದೃಶ್ಯತೇ । ತಥಾ ನಸೋರ್ನಾಸಿಕಯೋರ್ಯಮೋ ನಿಯಮಿತಾ ಪಲಾಯನಪ್ರತಿಬಂಧಕಾರೀ ಪಶೋರ್ನಾಸಿಕಯೋರ್ದೃಶ್ಯತೇ । ತಸ್ಮಾದಶ್ವಾದಿಲಿಂಗೈಃ ಕುತ್ರಾಪಿ ತ್ವರಿತಗಮನಾ ಇವ ಪ್ರತಿಭಾಂತಿ ಕೇ ಯೂಯಮಿತಿ ದೇವತ್ವಮನವಧಾರ್ಯಾಹ ॥**

॥ ಪ್ರತಿಪದಾರ್ಥ ॥

(ಎಲೈ ಮರುತ್ತುಗಳೇ) **ವಃ**—ನಿಮ್ಮ! **ಅಶ್ವಾಃ**—ಅಶ್ವಗಳು । **ಕ್ವ**—ಎಲ್ಲಿ । **ಅಭೀಶವಃ**—ನಿಮ್ಮ ಅಶ್ವಗಳ ಕಡಿವಾಣಗಳು । **ಕ್ವ**—ಎಲ್ಲಿ । **ಕಥಂ**—ಯಾವ ವಿಧದಲ್ಲಿ । **ಶೇಕ**—ನೀವು ಸಂಚರಿಸಲು ಸಮರ್ಥರಾಗಿದ್ದೀರಿ ।

**ಕಥಾ ಯಯ**—ಎಲ್ಲಿಗೆ ಹೋಗುವಿರಿ । **ಪೃಷ್ಠೇ**—ಅಶ್ವಗಳ ಬೆನ್ನುಗಳ ಮೇಲೆ । **ಸದಃ**— ಇಡಲ್ಪಡುವ ಜೀನೂ। **ನಸೋಃ** ಮೂತಿಗಳಲ್ಲಿ । **ಯಮಃ**—ಕುದುರೆಗಳನ್ನು ತಡೆದುನಿಲ್ಲಿಸುವ ಕಡಿವಾಣವೂ ಇಲ್ಲಿ ಇವೆ.

॥ ಭಾವಾರ್ಥ ॥

ಎಲ್ಲೈ ಮರುತ್ತುಗಳೇ, ನಿಮ್ಮ ಅಶ್ವಗಳೆಲ್ಲಿ ? ನಿಮ್ಮ ಅಶ್ವಗಳ ಕಡಿವಾಣಗಳೆಲ್ಲಿ? ಯಾವ ವಿಧದಲ್ಲಿ ನೀವು ಸಂಚರಿಸಲು ಸಮರ್ಥರಾಗಿದ್ದೀರಿ ? ಎಲ್ಲಿಗೆ ಹೋಗುವಿರಿ ? ನಿಮ್ಮ ಅಶ್ವಗಳ ಬೆನ್ನಿನಮೇಲೆ ಇಡುವ ಜೀನೂ ಮತ್ತು ಮೂತಿಗಳಲ್ಲಿ ಅದನ್ನು ಹಿಡಿದು ನಿಲ್ಲಿಸುವ ಕಡಿವಾಣಗಳು ಇಲ್ಲಿ ಇವೆ

English Translation

Where are your horses? where your reins ? what is your capability ? where are you going ? the saddle is on the back (of the steeds), the bridle in their nostrils.

॥ ವಿಶೇಷವಿಷಯಗಳು ॥

ಹಿಂದಿನ ಋಕ್ಕಿನಲ್ಲಿ ಪ್ರಶ್ನೆ ಮಾಡಿರುವಂತೆಯೇ ಈ ಋಕ್ಕಿನಲ್ಲಿಯೂ ಋಷಿಯು ಮರುದ್ದೇವತೆಗಳ ಆಗುಮನದ ವಿಚಾರದಲ್ಲಿಯೂ ಅವರ ಅಶ್ವಗಳ ವಿಷಯದಲ್ಲಿಯೂ ಕುಶಲ ಪ್ರಶ್ನೆ ಮಾಡಿದಾನೆ

*****

॥ ಸಂಹಿತಾಪಾಠಃ ॥

ಜಘನೇ ಚೋದ ಏಷಾಂ ವಿ ಸಕ್ಥಾನಿ ನರೋ ಯಮುಃ ।

ಪುತ್ರಕೃಥೇ ನ ಜನಯಃ ॥ ೩ ॥

॥ ಪದಪಾಠಃ ॥

ಜಘನೇ । ಚೋದಃ । ಏಷಾಂ । ವಿ । ಸಕ್ಥಾನಿ । ನರಃ । ಯಮುಃ ।

ಪುತ್ರಽಕೃಥೇ । ನ । ಜನಯಃ ॥ ೩ ॥

॥ ಸಾಯಣಭಾಷ್ಯಂ ॥

**ಏಷಾಮಶ್ವಾನಾಂ ಜಘನೇ ಹಂತವ್ಯಪ್ರದೇಶೇ ಚೋದಃ ಪ್ರೇರಕಾ ಕಶಾ ಆರಾಗ್ರಕಾಷ್ಠ-ವಿಶೇಷೋ ವಾ ವರ್ತತೇ । ಶೀಘ್ರಗಮನಾಯ ತಾಡಯಂತ್ಯರ್ಥ ಇತ್ಯರ್ಥಃ । ಸಕ್ಥಾನ್ಯೂರುಪ್ರದೇಶಾನ್ನರೋ ನೇತಾರೋ ಮರುತೋ ವಿ ವಿವಿಚ್ಯ ಯಮುಃ । ನಿಯಚ್ಛಂತಿ । ಆಶುಧಾವನೇನ ವಿವೃತಾ**

**ಭವಂತೀತ್ಯರ್ಥಃ । ವಿವೃತಾ ದೃಷ್ಟಾಂತಃ । ಪುತ್ರಕೃಥೇ ಪುತ್ರಕರಣ ಉತ್ಪಾದನೇ ಜನಯೋ ನಾಪತ್ಯೋತ್ಪಾದಯಿತ್ರ್ಯೋ ಯೋಷಿತ ಇವ । ತಾ ಯಥಾ ಪುತ್ರೋತ್ಪಾದನಕಾಲೇ ಸಂಗಮಸಮಯ ಊರೂ ವಿವೃತೌ ಕುರ್ವಂತಿ ತದ್ವದಿತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಏಷಾಂ**—ಈ ಅಶ್ವಗಳ । **ಜಘನೇ**—ಜಘನಪ್ರದೇಶದಲ್ಲಿ । **ಚೋದಃ**—ವೇಗವಾಗಿ ಹೋಗುವಂತೆ ಪ್ರಚೋದಿಸಲು ಸಾಧನವಾದ ಅಂಕುಶವು ಪ್ರಯೋಗಿಸ್ಪಡುತ್ತದೆ । **ಪುತ್ರಕೃಥೇ**—ಪುತ್ರೋತ್ಪಾದನವೇಳೆಯಲ್ಲಿ । **ಜನಯೋ ನ**—ಸ್ತ್ರೀಯರು ತಮ್ಮ ತೊಡೆಗಳನ್ನು ಅಗಲಿಸಿಕೊಳ್ಳುವಂತೆ । **ಸಕ್ಥಾನಿ**—ಈ ಅಶ್ವಗಳ ತೊಡೆಗಳನ್ನು । **ನರಃ**—ಮರುತ್ತುಗಳು । **ವಿ ಯಮುಃ**—ಅಗಲಿಸುವಂತೆಮಾಡುತ್ತಾರೆ

॥ ಭಾವಾರ್ಥ ॥

ಈ ಅಶ್ವಗಳ ಜಘನಪ್ರದೇಶಗಳಲ್ಲಿ ಎಂದರೆ ಉದರದ ಪಕ್ಕಗಳಲ್ಲಿ ಅಂಕುಶಪ್ರಯೋಗವಿರುತ್ತದೆ ಮರುದ್ದೇವತೆಗಳು ತಮ್ಮ ಅಶ್ವಗಳನ್ನು ವೇಗವಾಗಿ ಓಡುವಂತೆ ಚೋದಿಸುತ್ತಾ ಪ್ರಸವಕಾಲದಲ್ಲಿ ಸ್ತ್ರೀಯರು ತಮ್ಮ ತೊಡೆಗಳನ್ನು ಅಗಲಿಸುವಂತೆ ಅಶ್ವಗಳ ಪಾದಗಳನ್ನು ಅಗಲಿಸುವಂತೆ ಮಾಡುತ್ತಾರ.

## English Translation

The goad is (applied) to their flanks: the drivers force them to spread their thinghs apart, like women in bringing forth children.

॥ ವಿಶೇಷವಿಷಯಗಳು ॥

**ಜಘನೇ ಚೋದಃ**—ಇಲ್ಲಿ ಜಘನವೆಂದರೆ ಪಾದಗಳೂ ಉದರವೂ ಸಂಧಿಸುವ ಪ್ರದೇಶ. ಕುದುರೆಗಳ ಕಿಬ್ಬೊಟ್ಟೆಯೆಂದು ಹೇಳಬಹುದು. ಚೋದವೆಂದರೆ goad ಅಥವಾ Stirrup ಸವಾರನು ಸವಾರಿಮಾಡುವಾಗ ತನ್ನ ಕಾಲುಗಳನ್ನು ಇಟ್ಟುಕೊಳ್ಳಲು ಸಾಧನವಾದ ಕಬ್ಬಿಣದ ಬಳೆಯಂತಿರುವ ವಸ್ತುವು ಸವಾರನ ಎರಡು ಕಾಲುಗಳಿಗೂ ಹೊಂದುವಂತೆ ಇವು ಕುದುರೆಯ ಎರಡು ಪಕ್ಕಗಳಲ್ಲಿಯೂ ಇರುವುದು ಇವುಗಳನ್ನು ಚರ್ಮದ ಪಟ್ಟಿಗೆ ಸೇರಿಸಿ ಕಟ್ಟಿ ಕುದುರೆಯ ಎರಡು ಪಕ್ಕಗಳಲ್ಲಿಯೂ ನೇತುಹಾಕಿರುತ್ತಾರೆ. ಇವುಗಳಲ್ಲಿ ಸವಾರನು ತನ್ನ ಕಾಲುಗಳನ್ನು ತೂರಿಸಿ ಇಟ್ಟುಕೊಂಡು ಸವಾರಿ ಮಾಡುತ್ತಾನೆ. ಕುದುರೆಯು ವೇಗವಾಗಿ ಹೋಗಬೇಕೆಂದು ಸವಾರನು ಅಪೇಕ್ಷಿಸಿದಾಗ ತನ್ನ ಎರಡು ಕಾಲುಗಳನ್ನು ತೂರಿಸಿಟ್ಟಿರುವ ಈ ಬಳೆಗಳನ್ನು ಕಾಲುಗಳಿಂದ ಕುದುರೆಯ ಪಕ್ಕಗಳನ್ನು ಅದುಮುತ್ತಾನೆ. ಆದರಿಂದ ಚೋದನೆಯುಂಟಾಗಿ ಕುದುರೆಯು ವೇಗವಾಗಿ ಓಡುತ್ತದೆ. ಈ ವಿಷಯವನ್ನೇ ಇಲ್ಲಿ **ಜಘನೇ ಚೋದಃ** ಎಂಬ ಶಬ್ದಗಳಿಂದ ವಿವರಿಸಿದೆ.

**ಏಷಾಂ ಸಕ್ಥಾನಿ ನರಃ ವಿ ಯಮುಃ**-ಈ ಮರುದ್ದೇವತೆಗಳು ತಮ್ಮ ಕುದುರೆಗಳ ತೊಡೆಗಳನ್ನು ಓಡುವಾಗ ಅಗಲಿಸುವಂತೆ ಮಾಡುತ್ತಾರೆ. ಯಾವ ಪ್ರಾಣಿಯೇ ಆಗಲಿ ನಾಗಾಲೋಟದಿಂದ ಓಡುವಾಗ ಅವುಗಳ ತೊಡೆಗಳು ಅಥವಾ ಕಾಲುಗಳು ದೂರ ದೂರವಾಗಿ ಅಗಲಿಸಿಕೊಂಡು ಓಡುವುದು ಕಂಡು ಬರುವುದು. ಆದ್ದರಿಂದ ಅಶ್ವಗಳ ತೊಡೆಗಳನ್ನು ಅಗಲಿಸುವಂತೆ ಮಾಡುತ್ತಾರೆ ಎಂದರೆ ಅಶ್ವಗಳು ತಮ್ಮ ಕಾಲುಗಳನ್ನು ದೂರ ದೂರಕ್ಕೆ ಅಗಲಿಸಿ ವೇಗವಾಗಿ ಓಡು

ವಂತೆ ಮಾಡುತ್ತಾರೆ ಎಂದಭಿಪ್ರಾಯವು. ತೊಡೆಗಳನ್ನು ಅಗಲಿಸುವ ವಿಷಯದಲ್ಲಿ ಋಷಿಯು ಒಂದು ದೃಷ್ಟಾಂತವನ್ನು ಹೇಳಿದ್ದಾನೆ.

**ಪುತ್ರಕೃಥೇ ನ ಜನಯಃ-ಪುತ್ರೋತ್ಪಾದನೇ ಅಪತ್ಯೋತ್ಪಾದಯಿತ್ರ್ಯೋ ಯೋಷಿತ ಇವ ।** ಪುತ್ರೋತ್ಪಾದನ ಕಾಲದಲ್ಲಿ ಎಂದರೆ ಸ್ತ್ರೀಯರು ಪುತ್ರನನ್ನು ಪ್ರಸವಿಸುವ ಕಾಲದಲ್ಲಿ, ಹೆರಿಗೆಯ ಸಮಯದಲ್ಲಿ ಯೋನಿ ಪ್ರದೇಶದಿಂದ ಶಿಶುವು ಸುಲಭವಾಗಿ ಹೊರಬರುವುದಕ್ಕಾಗಿ ತಮ್ಮ ತೊಡೆಗಳನ್ನು ಅಗಲಿಸುವರು. ಅದರಂತೆ ಮರುದ್ದೇವತೆಗಳ ಅಶ್ವಗಳು ವೇಗವಾಗಿ ಓಡುವುದಕ್ಕಾಗಿ ತಮ್ಮ ತೊಡೆಗಳನ್ನು ಅಥವಾ ಕಾಲುಗಳನ್ನು ದೂರ ದೂರವಾಗಿ ಅಗಲುವಂತೆ ಪ್ರೇರಿಸುವರು ಎಂದು ಋಷಿಯು ಅಶ್ವಗಳ ಗಮನವನ್ನು ಸ್ತ್ರೀಯರ ಪ್ರಸವಕ್ಕೆ ಹೋಲಿಸಿ ವರ್ಣಿಸಿದ್ದಾನೆ

॥ ಸಂಹಿತಾಪಾಠಃ ॥

ಪರಾ ವೀರಾಸ ಏತನ ಮರ್ಯಾಸೋ ಭದ್ರಜಾನಯಃ ।
ಅಗ್ನಿತಪೋ ಯಥಾಸಥ ॥ ೪ ॥

॥ ಪದಪಾಠಃ ॥

ಪರಾ । ವೀರಾಸಃ । ಇತನ । ಮರ್ಯಾಸಃ । ಭದ್ರऽಜಾನಯಃ ।
ಅಗ್ನಿऽತಪಃ । ಯಥಾ । ಅಸಥ ॥ ೪ ॥

॥ ಸಾಯಣಭಾಷ್ಯಂ ॥

**ಕಶಾತಾಡನಾದಿಲಿಂಗೇನ ಜಿಗಮಿಷೂನ್ಮತ್ವಾ ಬ್ರೂತೇ । ಹೇ ವೀರಾಸೋ ವೀರಾ ಅಮಿತ್ರಾಣಾಮೀರಯಿತಾರೋ ಹೇ ಮರ್ಯಾಸೋ ಮರ್ತ್ಯೇಭ್ಯೋ ಹಿತಾ ಹೇ ಭದ್ರಜಾನಯಃ । ಭದ್ರಃ ಸ್ತುತ್ಯೋ ಜಾನಿರ್ಜನ್ಮ ಯೇಷಾಂ ತೇ ತಥೋಕ್ತಾಃ । ರುದ್ರಪುತ್ರಾ ಇತ್ಯರ್ಥಃ । ಅಗ್ನಿತಪೋಽಗ್ನಿನಾ ತಪ್ತಾಸ್ತಾಮ್ರಾದಯೋ ಯಥಾ ದೀಪ್ತಾಸ್ತದ್ವತ್ ಪ್ರದೀಪ್ತಾ ಅಸಥ । ಭವತ । ಅಥವಾಗ್ನಿತಪ್ತಾ ದಗ್ಧದೇಹಾ ಯಥಾ ಪಲಾಯಂತೇ ತಥಾ ಭವಥೇತಿ ॥**

॥ ಪ್ರತಿಪದಾರ್ಥ ॥

**ವೀರಾಸಃ**—ವೀರರೂ । **ಮರ್ಯಾಸಃ**—ಮಾನವರಿಗೆ ಹಿತಕಾರಿಗಳೂ । **ಭದ್ರಜಾನಯಃ**-ಮಂಗಳಕರವಾದ ಉತ್ಪತ್ತಿಯುಳ್ಳವರೂ ಆದ ಎಲೈ ಮರುತ್ತುಗಳೇ । **ಪರಾ ಇತನ**—ನಿಮ್ಮ ಕಾರ್ಯಕ್ಕೆ ಹೊರಡಿರಿ । **ಅಗ್ನಿತಪೋ ಯಥಾ**-ಅಗ್ನಿತಪ್ತವಾದ ತಾಮ್ರಾದಿಗಳು ಪ್ರಕಾಶಿಸುವಂತೆ । **ಅಸಥ**—ನೀವೂ ಪ್ರಕಾಶಿಸುತ್ತಿದ್ದೀರಿ.

॥ ಭಾವಾರ್ಥ ॥

ವೀರರೂ, ಮಾನವರಿಗೆ ಹಿತಕಾರಿಗಳೂ, ಮಂಗಳಕರವಾದ ಉತ್ಪತ್ತಿಯುಳ್ಳವರೂ ಆದ ಎಲೈ ಮರುತ್ತುಗಳೇ,ನೀವು ನಿಮ್ಮ ಕಾರ್ಯಕ್ಕೆ ಹೊರಡಿರಿ ಅಗ್ನಿತಪ್ತವಾದ ತಾಮ್ರಾದಿಗಳು ಪ್ರಕಾಶಿಸುವಂತೆ ನೀವೂ ಪ್ರಕಾಶಿಸುತ್ತಿದ್ದೀರಿ.

English Translation

Heroes, friendly to man, of honourable birth, you are as if blazing with fire

॥ ವಿಶೇಷವಿಷಯಗಳು ॥

**ಅಗ್ನಿತಪೋ ಯಥಾಸಥ-ಅಗ್ನಿನಾ ತಪ್ತಾಸ್ತಾಮ್ರಾದಯೋ ಯಥಾ ದೀಪ್ತಾಸ್ತದ್ವತ್ ಪ್ರದೀಪ್ತಾ ಭವಥ । ಅಥವಾಗ್ನಿತಪ್ತಾ ದಗ್ಧದೇಹಾ ಯಥಾ ಪಲಾಯಂತೇ ತಥಾ ಭವಥೇತ್ಯರ್ಥಃ ।** ಈ ಋಕ್ಕಿನಲ್ಲಿ ಮರುದ್ದೇವತೆಗಳನ್ನು ಅಗ್ನಿತಪ್ತವಾದ ತಾಮ್ರಾದಿಲೋಹಗಳಿಗೆ ಹೋಲಿಸಿ ವರ್ಣಿಸಿದೆ. ಅಗ್ನಿಯಲ್ಲಿ ಕರಗುವಂತೆ ತಪ್ತವಾದ ತಾಮ್ರಾದಿಲೋಹಗಳು ಯಾವರೀತಿ ಪ್ರಕಾಶದಿಂದ ಬೆಳಗುವವೋ ಅದರಂತೆ ಮರುದ್ದೇವತೆಗಳಾದ ನೀವು ಸ್ವಪ್ರಕಾಶದಿಂದ ಬೆಳಗುತ್ತಿದ್ದೀರೆಂದು ವರ್ಣಿಸಿದೆ. ಅಥವಾ ಅಗ್ನಿತಪ ಎಂಬ ಶಬ್ದಕ್ಕೆ ಇನ್ನೊಂದು ವಿಧವಾದ ಅರ್ಥವನ್ನೂ ಹೇಳಿದೆ. ಕಾಡಿನಲ್ಲಿ ಕಾಡುಕಿಚ್ಚು ಹರಡಿದಾಗ ಅಲ್ಲಿರುವ ಪ್ರಾಣಿಗಳು ಅಗ್ನಿಯಿಂದ ತಮ್ಮ ದೇಹವು ಸುಡುವುದಕ್ಕೆ ಪ್ರಾರಂಭಿಸಿದಾಗ ಯಾವರೀತಿ ಹಿಂದು ಮುಂದು ನೋಡದೆ ಸಿಕ್ಕಿದಕಡೆಗೆ ಓಡಿಹೋಗುವವೋ ಅದರಂತೆ ನೀವು ವೇಗವಾಗಿ ಸಂಚರಿಸಿ ಎಂದು ಋಷಿಯು ವರ್ಣಿಸಿದ್ದಾನೆ. ಈ ಎರಡು ವಿಧವಾದ ಅರ್ಥವಿವರಣೆಯನ್ನು ಭಾಷ್ಯಕಾರರು ಅರ್ಥಬರುವಂತೆ ಹೊಂದಿಸಿ ಮಾಡಿದ್ದರೂ **ಅಗ್ನಿತಪೋ ಯಥಾಸಥ** ಎಂಬ ದೃಷ್ಟಾಂತಕ್ಕೆ ಮಂತ್ರ ದ್ರಷ್ಟೃವಾದ ಋಷಿಯ ಆಶಯ ಅಥವಾ ಅಭಿಪ್ರಾಯವೇನಿರುವುದೆಂದು ನಿಸ್ಕೃಷ್ಟವಾಗಿ ಹೇಳಲು ಸಾಧ್ಯವಿಲ್ಲ.

॥ ಸಂಹಿತಾಪಾಠಃ ॥

ಸನತ್ಸಾಶ್ವ್ಯಂ ಪಶುಮುತ ಗವ್ಯಂ ಶತಾವಯಂ ।

ಶ್ಯಾವಾಶ್ವಸ್ತುತಾಯ ಯಾ ದೋರ್ವೀರಾಯೋಪಬರ್ಬೃಹತ್ ॥ ೫ ॥

॥ ಪದಪಾಠಃ ॥

**ಸನತ್ । ಸಾ । ಅಶ್ವ್ಯಂ । ಪಶುಂ । ಉತ । ಗವ್ಯಂ । ಶತಽಅವಯಂ ।**

**ಶ್ಯಾವಾಶ್ವಽಸ್ತುತಾಯ । ಯಾ । ದೋಃ । ವೀರಾಯ । ಉಪಽಬರ್ಬೃಹತ್ ॥ ೫ ॥**

॥ ಸಾಯಣಭಾಷ್ಯಂ ॥

**ಸಾ ತರಂತಮಹಿಷೀ ಮಹ್ಯಂ ಸನತ್ । ಪ್ರಾದಾತ್ । ಕಿಂ । ಅಶ್ವ್ಯಮಶ್ವಾತ್ಮಕಂ ತತ್ಸಮೂಹಾತ್ಮಕಂ ವಾ ಪಶುಂ । ಜಾತಾವೇಕವಚನಂ । ಉತಾಪಿ ಚ ಗವ್ಯಂ ಗೋಸಮೂಹಾತ್ಮಕಂ ಪಶುಂ ಶತಾವಯಮನೇಕೈರವಿಭಿರ್ಯುಕ್ತಂ ಸನದಿತಿ । ಸೇತ್ಯುಕ್ತಂ ಕೇತ್ಯಾಹ । ಯಾ ಶ್ಯಾವಾಶ್ವಸ್ತುತಾಯ ಶ್ಯಾವಾಶ್ವೇನ ಮಯಾ ಸ್ತುತಾಯ ವೀರಾಯ ತರಂತರಾಯ ದೋಃ ಸ್ವಕೀಯಂ ಭುಜಮುಪಬರ್ಬೃಹತ್ ಉಪೋದಯಚ್ಛದಾಲಿಂಗನಾಯ ಸಾ ಸನದಿತಿ । ಯತೋಃ ಭರ್ತೃಪ್ರೇಮಾಸ್ಪದಾ ತಸ್ಮಾದೇವ ಬಹು ಧನಂ ದಾತುಂ ಶಕ್ತೇತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಯಾ**—ಯಾವ ಶಶೀಯಸಿಯು । **ಶ್ಯಾವಾಶ್ವಸ್ತುತಾಯ**—ಶ್ಯಾವಾಶ್ವನಿಂದ ಸ್ತುತನಾದವನೂ । **ವೀರಾಯ**—ವೀರನೂ ಆದ ತರಂತನ ಆಲಿಂಗನಕ್ಕೆ । **ದೋಃ**—ತನ್ನ ಭುಜವನ್ನು । **ಉಪಬರ್ಬೃಹತ್**—ನೀಡಿ ಆಲಿಂಗನಕ್ಕೆ ಸಹಾಯಮಾಡಿದಳೋ । **ಸಾ**—ಅವಳು । (**ಮಹ್ಯಂ**—ನನಗೆ) **ಅಶ್ವ್ಯಂ**—ಅಶ್ವಯುಕ್ತವಾದುದೂ । **ಗವ್ಯಂ**—ಗೋವುಗಳಿಂದ ಕೂಡಿದುದೂ । **ಶತಾವಯಂ**—ನೂರು ಮೇಷಗಳಿಂದ ಕೂಡಿದುದೂ ಆದ । **ಪಶುಂ**—ಪಶುಸಂಪತ್ತನ್ನು । **ಸನತ್**—ಕೊಟ್ಟಳು

॥ಭಾವಾರ್ಥ ॥

ಯಾವ ಶಶೀಯಸಿಯು ಶ್ಯಾವಾಶ್ವನಿಂದ ಸ್ತುತನಾದ ತರಂತನ ಆಲಿಂಗನಕ್ಕೆ ತನ್ನ ಭುಜವನ್ನು ನೀಡಿದಳೋ ಅವಳು ನನಗೆ ಅಶ್ವಯುಕ್ತವಾದುದೂ ಗೋವುಗಳಿಂದ ಕೂಡಿದುದೂ, ನೂರು ಮೇಷಗಳಿಂದ ಕೂಡಿದುದೂ ಆದ ಪಶುಸಂಪತ್ತನ್ನು ಕೊಟ್ಟಳು.

## English Translation

(She Sasiyasi), who has thrown her arms round the hero Taranta who was eulogized by Syavaswa, has given me cattle comprising horses, and cows, and hundreds of sheep

॥ ವಿಶೇಷ ವಿಷಯಗಳು ॥

ಈ ಋಕ್ಕಿನಲ್ಲಿ ಶ್ಯಾವಾಶ್ವಮಹರ್ಷಿಯು ತರಂತರಾಜನ ಮಹಿಷಿಯಾದ ಶಶೀಯಸೀ ಎಂಬ ಸ್ತ್ರೀಯು ತನಗೆ ಗೋವುಗಳು, ಅಶ್ವಗಳು, ಆಡುಗಳು, ಇವುಗಳನ್ನು ಕೊಟ್ಟಳೆಂದು ಅವಳ ದಾನಸ್ತುತಿಯನ್ನು ವರ್ಣಿಸಿದಾನೆ.

**(ಯಾ) ಶ್ಯಾವಾಶ್ವಸ್ತುತಾಯ ವೀರಾಯ ಉಪಬರ್ಬೃಹತ್ ಸಾ ಮಹ್ಯಂ ಅಶ್ವ್ಯಂ ... ... ಸನತ್**-ತರಂತಮಹಿಷಿಯು ತನಗೆ ಗೋವು ಮೊದಲಾದ ಪಶು ಸಂಪತ್ತನ್ನು ಕೊಟ್ಟಳೆಂದು ಆ ರಾಜಪತ್ನಿಯ ದಾನಸ್ತುತಿ ವರ್ಣನೆಮಾಡುವಾಗ ಅವಳ ಗುಣಪ್ರಶಂಸನೆಯನ್ನು ಋಷಿಯು ಮಾಡಿದಾನೆ ತನಗೆ ಗೋವುಗಳನ್ನು ಕೊಟ್ಟ ಸ್ತ್ರೀಯು ಯಾರೆಂದರೆ, ತನ್ನಿಂದ (ಶ್ಯಾವಾಶ್ವನಿಂದ) ಸ್ತುತನಾದ ಮತ್ತು ಪರಾಕ್ರಮಶಾಲಿಯಾದ ತರಂತರಾಜನ

ಮಹಿಷಿಯೇ ಅವಳು. ಮತ್ತು ಈ ಸ್ತ್ರೀಯು ತನ್ನ ಪತಿಯಾದ ತರಂತರಾಜನ ಆಲಿಂಗನಕ್ಕೆ ತನ್ನ ಬಾಹುಗಳನ್ನು ನೀಡಿ ಸಹಾಯಾಮಾಡಿದಳು ಎಂದರೆ ತನ್ನ ಪತಿಯು ಪ್ರೀತಿಯಿಂದ ತನ್ನನ್ನು ಆಲಂಗಿಸುವಾಗ ತಾನೂ ಪರಸ್ಪರ ಪ್ರೀತಿಯಿಂದ ಆವನ ಆಲಿಂಗನಕ್ಕೆ ಪ್ರತಿಯಾಗಿ ತನ್ನ ಬಾಹುಗಳನ್ನು ನೀಡಿ ಎಂದರೆ ತಾನೂ ಆಲಿಂಗನಮಾಡಿ ಒಬ್ಬರಲ್ಲೊಬ್ಬರಿಗಿರುವ ಪ್ರೀತಿಯನ್ನು ತೋರಿಸುತ್ತಿದ್ದಳು. ರಾಜನು ತನ್ನ ಪತ್ನಿಯಾದ ಈ ಶಶೀಯಸಿಯಲ್ಲಿ ಅತ್ಯಂತ ಪ್ರೀತಿಯಿಂದ ವರ್ತಿಸುತ್ತಿದ್ದನೆಂದೂ ಸತೀಪತಿಗಳಿಗೆ ಪರಸ್ಪರ ಅನುರಾಗವಿತ್ತೆಂದೂ ಋಷಿಯ ವರ್ಣನೆಯಿಂದ ವ್ಯಕ್ತವಾಗುವುದು. ಪತಿಯು ಅನುರಾಗಸೂಚಕವಾದ ಆಲಿಂಗನಾದಿಗಳಿಗೆ ಇವನ ಪತ್ನಿಯು ಪಾತ್ರಳಾಗಿದ್ದಳು ಎಂದು ಮುಖ್ಯಾಭಿಪ್ರಾಯವು. ಪತಿಯ ಪ್ರೀತ್ಯಾದರಗಳಿಗೆ ಪಾತ್ರಳಾದ ಇಂತಹ ಈ ರಾಜಮಹಿಷಿಯು ರಾಜನ ಅನುಜ್ಞೆಯಿಂದ ತನಗೆ ಅನೇಕ ಅಶ್ವಗಳನ್ನೂ, ಪಶುಗಳನ್ನೂ, ಗೋವುಗಳನ್ನೂ ಆಡುಗಳ್ನೂ ನೂರುಗಟ್ಟಲೆಯಾಗಿ ಕೊಟ್ಟಳೆಂದು ರಾಜಪತ್ನಿಯ ಔದಾರ್ಯವನ್ನು ಋಷಿಯು ಪ್ರಶಂಶಿಸಿದಾನೆ.

॥ ಸಂಹಿತಾಪಾಠಃ ॥

## ಉತ ತ್ವಾ ಸ್ತ್ರೀ ಶಶೀಯಸೀ ಪುಂಸೋ ಭವತಿ ವಸ್ಯಸೀ ।
## ಅದೇವತ್ರಾದರಾಧಸಃ ॥ ೬ ॥

॥ ಪದಪಾಠಃ ॥

**ಉತ । ತ್ವಾ । ಸ್ತ್ರೀ । ಶಶೀಯಸೀ । ಪುಂಸಃ । ಭವತಿ । ವಸ್ಯಸೀ ।**
**ಅದೇವಽತ್ರಾತ್ । ಅರಾಧಸಃ ॥ ೬ ॥**

॥ ಸಾಯಣಭಾಷ್ಯಂ ॥

**ಉತಾಪಿ ಚ ತ್ವೈಕಾ ಶಶೀಯಸೀ । ಶಶೀಯಸೀತ್ಯೇತನ್ಮಹಿಷ್ಯಾ ನಾಮ । ಸೈವ ಸ್ತ್ರೀ । ಯದ್ವಾ। ಉತೇತ್ಯಯಮೇವಕಾರಾರ್ಥೇ। ಸ್ತ್ರೀಷು ಸೈವ ಪ್ರಶಸ್ಯೇತ್ಯರ್ಥಃ ॥ ತ್ವಸಮಸಿಮನೇಮೇತ್ಯನುಚ್ಚಾನೀತಿ ವಚನಾತ್ ತ್ವೇತಿ ನಿಘಾತಃ ॥ ಸೈವ ಪುಂಸಃ ಪುರುಷಾದ್ವಸ್ಯಸೀ ವಸೀಯಸೀ ಭವತಿ । ಕಸ್ಮಾತ್ಪುಂಸ ಇತ್ಯುಚ್ಯತೇ । ಅದೇವತ್ರಾತ್ । ದೇವಾ ನ ಯೇನ ತ್ರಾಯಂತೇ ಸ್ತುತ್ಯಾದಿನಾ ಸೋಽದೇವತ್ರಃ। ತಸ್ಮಾದರಾಧಸಃ । ರಾಧೋ ಧನಂ । ದಾನಾರ್ಹಧನರಹಿತಾತ್ । ಲುಬ್ಧಕಾದಿತ್ಯರ್ಥಃ ॥**

॥ ಪ್ರತಿಪದಾರ್ಥ॥

**ಅದೇವತ್ರಾತ್**—ದೇವತೆಗಳನ್ನು ಪೂಜಿಸದೇ ಇರುವುದರಿಂದ ಅವರ ರಕ್ಷಣೆಗೆ ಪಾತ್ರನಾಗದವನೂ । **ಅರಾಧಸಃ**—ದಾನಕ್ಕೆ ಉಪಯುಕ್ತವಾದ ಧನವಿಲ್ಲದವನೂ ಆದ । **ಪುಂಸಃ**—ಪುರುಷನಿಗಿಂತಲೂ ।

**ಉತ ತ್ವಾ ಶಶೀಯಸೀ**—ಶಶೀಯಸಿಯೊಬ್ಬಳೇ । **ಸ್ತ್ರೀ**—ಹೆಂಗಸಾಗಿದ್ದರೂ ಸಹ । **ವಸ್ಯಸೀ**—ಉತ್ಕೃಷ್ಟಳಾಗಿದ್ದಾಳೆ

॥ ಭಾವಾರ್ಥ ॥

ದೇವತೆಗಳನ್ನು ಪೂಜಿಸದೇ ಇರುವುದರಿಂದ ಅವರ ರಕ್ಷಣೆಗೆ ಪಾತ್ರನಾಗದವನೂ, ದಾನಕ್ಕೆ ಉಪಯುಕ್ತವಾದ ಧನವಿಲ್ಲದವನೂ ಆದ ಪುರುಷನಿಗಿಂತಲೂ, ಹೆಂಗಸಾಗಿದ್ದರೂ ಸಹ ಶಶೀಯಸಿಯೇ ಉತ್ಕೃಷ್ಟಳು.

## English Translation

Sasiyasi, though a female, is more excellent than a man who reverences not the gods, nor bestows wealth.

॥ ವಿಶೇಷವಿಷಯಗಳು ॥

ಸಾಧಾರಣವಾಗಿ ಪುರುಷರು ಶಕ್ತಿಸಾಮರ್ಥ್ಯಾದಿಗಳಲ್ಲಿಯೂ, ಪರಾಕ್ರಮದಲ್ಲಿಯೂ, ಗುಣಗಳಲ್ಲಿಯೂ ಸ್ತ್ರೀಯರಿಗಿಂತ ಉತ್ಕೃಷ್ಟರು ಎಂಬ ಭಾವನೆಯು ರೂಢಿಯಲ್ಲಿದೆ. ಪುರುಷರಲ್ಲಿಯೂ ಸಹ ದೇವತೆಗಳನ್ನು ಪೂಜಿಸದೆ ಎಂದರೆ ಯಜ್ಞಯಾಗಾದಿಗಳನ್ನು ಮಾಡದೆ, ದಾನ ಧರ್ಮಗಳನ್ನು ಆಚರಿಸದೆ, ಜನರಿಗೆ ಯಾವ ವಿಧವಾದ ಉಪಕಾರವನ್ನೂ ಮಾಡದೆ ಕೇವಲ ಲೋಭಿತನದಿಂದ ವರ್ತಿಸುವ ಪುರುಷರು, ಪುರುಷವರ್ಗಕ್ಕೆ ಸೇರಿದ್ದರೂ ಶ್ರೇಷ್ಠರಲ್ಲ. ಜನರಿಗೆ ಇವರಲ್ಲಿ ಗೌರವಾದರಗಳಿರುವುದಿಲ್ಲ. ಇಂತಹ ಕೆಟ್ಟ ಸ್ವಭಾವದ ಪುರುಷರಿಗಿಂತ ದಾನ ಧರ್ಮಗಳಲ್ಲಿಯೂ ಪರೋಪಕಾರದಲ್ಲಿಯೂ ಮನಸ್ಸುಳ್ಳ ಸ್ತ್ರೀಯೇ ಶ್ರೇಷ್ಠಳು. ಶಶಿಯಸೀ ಎಂಬ ತರಂತರಾಜನ ಪತ್ನಿಯು ಸ್ತ್ರೀಯಾಗಿದ್ದರೂ ಇಂತಹ ಸುಗುಣವಿಶಿಷ್ಟಳಾದ್ದರಿಂದ ಹೆಸರಿಗೆ ಮಾತ್ರ ಪುರುಷರೆನಿಸಿದವರೂ ದೇವಯಜನ ದಾನ ಧರ್ಮಗಳನ್ನು ಮಾಡದವರೂ ಆದ ಅನೇಕ ಪುರುಷರಿಗಿಂತ ಎಷ್ಟೋಪಾಲು ಉತ್ಕೃಷ್ಟಳಾಗಿರುವಳು ಎಂದು ಋಷಿಯು ವರ್ಣಿಸಿದ್ದಾನೆ. ಸ್ತ್ರೀಯರಿಗಿಂತ ಪುರುಷರು ಶ್ರೇಷ್ಠರು ಎಂಬ ಸಾಮಾನ್ಯ ನಿಯಮಕ್ಕೆ ವಿರುದ್ಧವಾಗಿ ತರಂತರಾಜನ ಮಹಿಷಿಯು ಅನೇಕ ಪುರುಷರಿಗಿಂತ ಶ್ರೇಷ್ಠಳು ಎಂಬ ವಿಶೇಷೋಕ್ತಿಯು ಇಲ್ಲಿ ವಿವೃತವಾಗಿದೆ

**ಉತ-ಅಪಿ ಚ** । ಉತ ಎಂಬ ಶಬ್ದವು ಸಮುಚ್ಚಯಾರ್ಥದಲ್ಲಿಯೂ (ಮತ್ತು ಎಂಬರ್ಥ) ಅವಧಾರಣಾರ್ಥದಲ್ಲಿಯೂ ಉಪಯೋಗಿಸಲ್ಪಡುವುದು. ಪ್ರಕೃತ ಋಕ್ಕಿನಲ್ಲಿ ಯಾವ ಅರ್ಥವನ್ನಾದರೂ ಹೇಳಬಹುದು.

॥ ಸಂಹಿತಾಪಾಠಃ ॥

**ವಿ ಯೋ ಜಾನಾತಿ ಜಸುರಿಂ ವಿ ತೃಷ್ಯಂತಂ ವಿ ಕಾಮಿನಂ ।**

**ದೇವತ್ರಾ ಕೃಣುತೇ ಮನಃ ॥ ೭ ॥**

॥ ಪದಪಾಠಃ ॥

ವಿ । ಯಾ । ಜಾನಾತಿ । ಜಸುರಿಂ । ವಿ । ತೃಷ್ಯಂತಂ । ವಿ । ಕಾಮಿನಂ ।

ದೇವಽತ್ರಾ । ಕೃಣುತೇ । ಮನಃ ॥ ೭ ॥

॥ ಸಾಯಣಭಾಷ್ಯಂ ॥

**ಯಾ ಶಶೀಯಸೀ ಜಸುರಿಂ ವ್ಯಥಿತಂ ॥ ಜಸಿಸ್ತಾಡನಕರ್ಮೋಽಪಕ್ಷೇಪಣಕರ್ಮಾ ವಾ ॥ ತಂ ವಿ ಜಾನಾತಿ । ತಥಾ ತೃಷ್ಯಂತಂ ವಿ ಜಾನಾತಿ । ಕಾಮಿನಂ ಧನಾದ್ಯಭಿಲಾಷವಂತಂ ವಿ ಜಾನಾತಿ । ಅನುಕಂಪಯಾಭಿಮುಖಂ ದತ್ತವತೀತ್ಯರ್ಥಃ । ದೇವತ್ರಾ ದೇವೇಷು ಮನಃ ಕೃಣತೇ ಕುರುತೇ ದೇವಪ್ರೀತ್ಯರ್ಥಂ ಪ್ರದಾನಬುದ್ಧಿಂ ಕರೋತಿ ಯಾ ಸೈವ ಸ್ತ್ರೀತಿ ಪೂರ್ವತ್ರ ಸಂಬಂಧಃ ॥**

॥ ಪ್ರತಿಪದಾರ್ಥ ॥

**ಯಾ**—ಯಾವ ಶಶೀಯಸಿಯು । **ಜಸುರಿಂ**-ದುಃಖಿತನಾದವನ ಕಷ್ಟವನ್ನು । **ವಿ ಜಾನಾತಿ**—ಅರಿಯಲು ಶಕ್ತಳೋ । **ತೃಷ್ಯಂತಂ**—ಧನಾಪೇಕ್ಷಿಯಾದ ಪುರುಷನ ಆವಶ್ಯಕತೆಯನ್ನು । ವಿ (**ಜಾನಾತಿ**)—ಅರಿಯುವಳೋ । **ಕಾಮಿನಂ**—ಇತರ ಅಪೇಕ್ಷೆಗಳುಳ್ಳ ಪುರುಷನ ಸ್ಥಿತಿಯನ್ನು । ವಿ । (**ಜಾನಾತಿ**)—ತಿಳಿಯಬಲ್ಲಳೋ (ಮತ್ತು) । **ದೇವತ್ರಾ**—ದೇವತೆಗಳ ಪೂಜೆಯಲ್ಲಿ । **ಮನಃ**—ಮನಸ್ಸನ್ನು । **ಕೃಣುತೇ**—ಇಡುತ್ತಾಳೋ (ಅವಳೇ ಉತ್ಕೃಷ್ಟಳು).

॥ ಭಾವಾರ್ಥ ॥

ಯಾವ ಶಶೀಯಸಿಯು ದುಃಖಿತನಾದವನ ಕಷ್ಟವನ್ನು ಅರಿಯಲು ಶಕ್ತಳೋ, ಯಾವಳು ಧನಾಪೇಕ್ಷಿಯಾದ ಪುರುಷನ ಆವಶ್ಯಕತೆಯನ್ನರಿತು ಅವನ ಇತರ ಅಪೇಕ್ಷೆಗಳೂ ಪೂರೈಸುವಂತೆ ಸಹಾಯಮಾಡಬಲ್ಲಳೋ ಮತ್ತು ಯಾವಳ ಮನಸ್ಸು ದೇವಪೂಜೆಯಲ್ಲಿ ನಿರತವಾಗಿದೆಯೋ ಅವಳೇ ಉತ್ಕೃಷ್ಟಳು.

## English Translation

For she discerns one who suffers pain, one who is in want, or one desirous (of any thing), and directs her mind towards the gods

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ ತರಂತಮಹಿಷಿಯಾದ ಶಶೀಯಸಿಯ ಗುಣವರ್ಣನೆ ಇದೆ. ಈ ರಾಜಪತ್ನಿಯು ಉದಾರಮತಿಯಿಂದ ದಾನಮಾಡುವ ಸ್ವಭಾವವುಳ್ಳವಳು ಮಾತ್ರವೇ ಅಲ್ಲ. ಇತರರ ಕಷ್ಟಗಳನ್ನು ಎಂದರೆ ಕಷ್ಟ ಸ್ಥಿತಿಯಲ್ಲಿರುವ ಜನರ ದುಃಖವನ್ನು ಅರಿತು ಅವರ ವಿಷಯದಲ್ಲಿ ಮರುಕವನ್ನು ವ್ಯಕ್ತಿಪಡಿಸಿ ಅವರಿಗೆ ಸಹಾಯಮಾಡುವ ಸ್ವಭಾವದವಳು : ಧನಹೀನರಾದವರಿಗೆ ಧನವನ್ನೂ, ಸಹಾಯಾಪೇಕ್ಷಿಗಳಿಗೆ ಇತರವಿಧ ಸಹಾಯವನ್ನೂ ನೀಡಿ

ಪರೋಪಕಾರಮಾಡುವವಳು, ಧನಾದಿಗಳ ಅಭಾವದಿಂದ ಕಷ್ಟಪಡುತ್ತಿರುವ ಬಡಜನರಿಗೆ ಅವರಸ್ಥಿತಿಯನ್ನರಿತು ಧನಾದಿಗಳನ್ನು ಕೊಟ್ಟು ಸಹಾಯಮಾಡುವವಳು. ಈ ಗುಣಗಳಲ್ಲದೆ ದೇವತೆಗಳನ್ನು ಪೂಜಿಸುವುದರಲ್ಲಿಯೂ ಇವಳ ಮನಸ್ಸು ಪ್ರವರ್ತಿಸುವುದು. ಎಂದರೆ ದೇವಪೂಜಾದಿಗಳಲ್ಲಿ (ಯಜ್ಞಾದಿಗಳಲ್ಲಿ)ಯೂ ಇವಳಿಗೆ ಆಸಕ್ತಿಯಿರುವುದು ಎಂದು ಶಶೀಯಸಿಯ ಗುಣವರ್ಣನೆಯನ್ನು ಋಷಿಯು ಮಾಡಿದ್ದಾನೆ.

**ಜಸುರಿಂ—ಜಸುರಿ** ಎಂಬ ಶಬ್ದಕ್ಕೆ ಯಾಸ್ಕರು ನಿರ್ವಚನವನ್ನು ಹೇಳುತ್ತಾ-

**ಉತ ಸ್ಮೈನಂ ವಸ್ತ್ರಮಥಿಂ ನ ತಾಯುಮನು ಕ್ರೋಶಂತಿ ಕ್ಷಿತಯೋ ಭರೇಷು ।**

**ನೀಚಾಯಮಾನಂ ಜಸುರಿಂ ಶ್ಯೇನಂ ಶ್ರವಶ್ಚಾಚ್ಛಾ ಪಶುಮಚ್ಚ ಯೂಥಂ ॥**

(ಋ. ಸಂ. ೪-೩೮-೫)

ಎಂಬ ಋಕ್ಕನ್ನುದಾಹರಿಸಿ ಈ ಶಬ್ದದ ಅರ್ಥವಿವರಣೆಮಾಡಿದಾರೆ. ಅಲ್ಲಿ ಜಸುರಿಂ ಎಂದರೆ ಕ್ಷುದ್ಬಾಧೆಗೆ ಒಳಗಾದ, ಹಸಿದ ಎಂದರ್ಥವಿರುವುದು. ಪ್ರಕೃತ ಋಕ್ಕಿನಲ್ಲಿ ಆ ಅರ್ಥವನ್ನೂ ಬಾಧೆಗೆ ಒಳಗಾದ, ಕಷ್ಟಪಡುತ್ತಿರುವ ಎಂಬ ಸಾಮಾನ್ಯಾರ್ಥವನ್ನೂ ಹೇಳಬಹುದು. ಎಂದರೆ ಆಹಾರವಿಲ್ಲದೆ ಕ್ಷುದ್ಬಾಧೆಯಿಂದ ಸಂಕಟಪಡುತ್ತಿರುವ ಅಥವಾ ಇತರ ವಿಧವಾದ ಕಷ್ಟಕ್ಕೊಳಗಾಗಿ ದುಃಖಿಸುತ್ತಿರುವ ಎಂಬರ್ಥವನ್ನು ಹೇಳಬಹುದು

॥ ಸಂಹಿತಾಪಾಠಃ ॥

ಉತ ಘಾ ನೇಮೋ ಅಸ್ತುತಃ ಪುಮಾಁ ಇತಿ ಬ್ರುವೇ ಪಣಿಃ ।

ಸ ವೈರದೇಯ ಇತ್ಸಮಃ ॥ ೮ ॥

॥ ಪದಪಾಠಃ ॥

ಉತ । ಘ । ನೇಮಃ । ಅಸ್ತುತಃ । ಪುಮಾನ್ । ಇತಿ । ಬ್ರುವೇ । ಪಣಿಃ ।

ಸಃ । ವೈರಽದೇಯೇ । ಇತ್ । ಸಮಃ ॥ ೮ ॥

॥ ಸಾಯಣಭಾಷ್ಯಂ ॥

**ಉತ ಘಾಪಿ ಚ । ಘೇತಿ ಪೂರಣಃ । ನೇಮಃ । ತ್ವೋ ನೇಮ ಇತ್ಯರ್ಧಸ್ಯೇತಿ ನಿರುಕ್ತಂ । ೩-೨೦. । ನೇಮೋಽರ್ಧಃ । ಜಾಯಾಪತ್ಯೋರ್ಮಿಲಿತ್ವೈಕಕಾರ್ಯಕರ್ತೃತ್ವಾದೇಕ ಏವ ಪದಾರ್ಥಃ । ಅರ್ಧಂ ಶರೀರಸ್ಯ ಭಾರ್ಯೇತ್ಯಾದಿ ಸ್ಮೃತೇಃ । ಶಶೀಯಸ್ಯಾ ಅರ್ಧಭೂತಸ್ತರಂತಃ ಪುಮಾನಸ್ತುತ ಇತಿ ಬ್ರುವೇ । ಬಹುಧಾ ಸ್ತುತೋಽಪಿ ಗುಣಸ್ಯಾತಿಬಾಹುಲ್ಯಾದಸ್ತುತ ಏವೇತಿ ಬ್ರುವೇ ಪಣಿಃ ಸ್ತೋತಾಹಂ । ಸ ಚ ತರಂತೋ ವೈರದೇಯೇ । ವೀರಾ ಧನಾನಾಂ ಪ್ರೇರಯಿತಾರೋ ದಾನಶೀಲಾಃ । ತೈರ್ದಾತವ್ಯಂ ಧನಂ ದೇಯಂ । ತಸ್ಮಿನ್ಧನೇ ಸಮಃ । ಸರ್ವೇಭ್ಯೋ ದಾತೇತ್ಯರ್ಥಃ । ಇದಿತಿ ಪೂರಣಃ ॥**

॥ ಪ್ರತಿಪದಾರ್ಥ ॥

**ಉತ**—ಅಲ್ಲದೇ । **ನೇಮಃ**—ಶಶೀಯಸಿಯ (ಪತಿಯಾದ) ಅರ್ಧಾಂಗಿಯಾದ । **ಪುಮಾನ್**—ತರಂತನು । **ಅಸ್ತುತ ಇತಿ**—(ಅನೇಕವಾಗಿ ಸ್ತುತನಾಗುತ್ತಿದ್ದರೂ ಸಹ) ಅಸ್ತುತನೆಂದೇ । **ಪಣಿಃ**—ಸ್ತೋತೃವಾದ ನಾನು । **ಬ್ರುವೇ**—ಹೇಳುತ್ತೇನೆ । **ಸಃ**—ಆ ತರಂತನು । **ವೈರದೇಯೇ**—ಪ್ರಭೂತವಾದ ಧನದ ದಾನದ ವಿಷಯದಲ್ಲಿ । **ಸಮಃ ಇತ್**—ಸರ್ವರಿಗೂ ಸರ್ವಕಾಲದಲ್ಲೂ ಒಂದೇ ಸಮನಾಗಿದ್ದಾನೆ.

॥ ಭಾವಾರ್ಥ ॥

ಶಶೀಯಸಿಯ ಪತಿಯಾದ ತರಂತನನ್ನು ನಾನು ಅನೇಕವಿಧದಲ್ಲಿ ಸ್ತುತಿಸುತ್ತಿದ್ದರೂ ಸಹ ಅವನು ಅಸ್ತುತನೆಂದೇ ನನ್ನ ಭಾವನೆ. ಅವನ ಗುಣಗಳು ಅನಂತ. ಎಷ್ಟು ಸ್ತುತಿಸಿದರೂ ಅಲ್ಪವೇ ಆಗುತ್ತದೆ. ಆ ತರಂತನು ಧನವನ್ನು ದಾನಮಾಡುವಾಗ ಯಾರಿಗೂ ವ್ಯತ್ಯಾಸವನ್ನು ತೋರಿಸದೇ ಸರ್ವರಿಗೂ ಸರ್ವಕಾಲದಲ್ಲೂ, ಒಂದೇ ಸಮನಾಗಿದ್ದಾನೆ.

## English Translation

And, eulogizing (him), I proclaim that the man, her ( other ) half is (as it were), uncommended, for he is ever the same in munificent donations

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಶಶೀಯಸಿಯ ಗುಣವರ್ಣನೆಯು ಪರೋಕ್ಷವಾಗಿ ಎಂದರೆ ಅವಳ ಪತಿಯನ್ನು ಸ್ತುತಿಸುವುದರಿಂದ ಮಾಡಲಾಗಿದೆ. ಭಾಷ್ಯಕಾರರು-**ಅರ್ಧಂ ಶರೀರಸ್ಯ ಭಾರ್ಯೇತ್ಯಾದಿ ಸ್ಮೃತೇಃ** ಎಂದು ಹೇಳಿ ಪತಿ ಪತ್ನಿಯರಲ್ಲಿ ಶರೀರವು ಸಮಭಾಗವಾಗಿರುವುದೆಂದೂ ಇವರಲ್ಲಿ ಒಬ್ಬರನ್ನು ವರ್ಣಿಸಿದರೆ ಅರ್ಧ ಮಾತ್ರ ವರ್ಣನೆ ಮಾಡಿದಂತಾಗುವುದೆಂದೂ ಹೇಳಿ ಪತಿಯಾದ ತರಂತರಾಜನ ಗುಣವರ್ಣನೆಯೂ ಪತ್ನಿಯಾದ ಶಶೀಯಸಿಯ (ಅರ್ಧಭಾಗದ) ಗುಣವರ್ಣನೆಯೆಂದೇ ಭಾವಿಸಬೇಕೆಂದು ನಿರ್ದೇಶಿಸಿರುವರು. ಆದ್ದರಿಂದ ಈ ಋಕ್ಕಿನಲ್ಲಿರುವ ತರಂತುರಾಜನ ಗುಣಪ್ರಶಂಸೆಯು ಶಶೀಯಸಿಗೂ ಅನ್ವಯಿಸುವುದು ಎಂದು ತಿಳಿಯಬೇಕು.

**ಘ**-ಈ ಶಬ್ದವು ಇಲ್ಲಿ ಪದಪೂರಣಾರ್ಥವಾಗಿ ಎಂದರ ಪಾದದಲ್ಲಿರಬೇಕಾದ ಅಕ್ಷರಸಂಖ್ಯೆಯನ್ನು **ಪೂರ್ಣಮಾಡುವುದಕ್ಕಾಗಿ** ಉಪಯೋಗಿಸಲಾಗಿದೆ. ಇದಕ್ಕೆ ಯಾವ ನಿರ್ದಿಷ್ಟಾರ್ಥವೂ ಇಲ್ಲ ಆದರೂ ಅವಧಾರಣಾರ್ಥವನ್ನು ಬೇಕಾದರೆ ಹೇಳಬಹುದು. ಈ ಶಬ್ದವು ಸಾಧಾರಣವಾಗಿ ಸಂಹಿತಾಪಾಠದಲ್ಲಿ ಘಾ ಎಂದ ದೀರ್ಘಸ್ವರಯುಕ್ತವಾಗಿಯೂ ಪದಪಾಠದಲ್ಲಿ ಘ ಎಂದು ಹ್ರಸ್ವವಾಗಿಯೂ ಉಪಯೋಗಿಸುವುದು ರೂಢಿಯಾಗಿದೆ.

**ನೇಮಃ- ನೇಮಃ** ಎಂಬ ಶಬ್ದವು **ಪ್ರಪಿತ್ವೇ, ಅಭೀಕೇ** ಎಂದು ಮೊದಲಾದ ಇಪ್ಪತ್ತಾರು ದ್ವಿಶನಾಮಗಳಲ್ಲಿ (ನಿ.೩-೨೦) ಪಠಿತವಾಗಿದೆ, ಎಂದರೆ ಒಂದು ವಿಷಯದ ಪೂರ್ತಿಯಾಗದ ಅಥವಾ ಅರ್ಧಭಾಗದ ವಿಷಯವನ್ನು ಮಾತ್ರ ವಿವರಿಸುವಾಗ ಈ ಶಬ್ದದ ಪ್ರಯೋಗವಿರುವುದು.

**ತ್ಸೋ ನೇಮ ಇತ್ಯರ್ಧಸ್ಯ । ತ್ಸೋಽಪತತಃ । ನೇಮೋಽಪನೀತಃ । ಅರ್ಧಂ ಹರತೇರ್ವಿಪರೀತಾದ್ಧಾರಯತೇರ್ವಾ ಸ್ಯಾದುದ್ಧೃತಂ ಭವತಿ । ಋಧ್ನೋತೇರ್ವಾ ಸ್ಯಾದೃದ್ಧತಮೋ ವಿಭಾಗಃ । ಪೀಯತಿ ತ್ಸೋ ಅನು ತ್ಸೋ ಗೃಣಾತಿ । ನೇಮೋ ದೇವಾ ನೇಮೋಽಸುರಾಃ । ಇತ್ಯಪಿ ನಿಗಮೌ ಭವತಃ ॥**

(ನಿ. ೩-೨೦)

ಎಂದು ಯಾಸ್ಕರು ನೇಮಃಶಬ್ದದ ವಿಷಯದಲ್ಲಿ ನಿರ್ವಚನವನ್ನು ಹೇಳಿದ್ದಾರೆ ಎಂದರೆ—**ತ್ವಃ ನೇಮಃ** ಎಂಬ ಶಬ್ದಗಳು ಅರ್ಧ ಎಂಬರ್ಥವನ್ನು ಸೂಚಿಸುವ ಪದಗಳು **ತ್ವಃ** ಎಂದರೆ ಪೂರ್ತಿಯಾಗಿ ಹರಡಿಲ್ಲದಿರುವುದು ಎಂದರೆ ಅರ್ಧಂಬರ್ಧವಾಗಿರುವುದು ಎಂದರ್ಥವು **ನೇಮಃ** ಎಂದರೆ ಪೂರ್ತಿಯಾಗಿ ಒಯ್ಯಲ್ಪಡದಿರುವುದು ಅರ್ಧಭಾಗಮಾತ್ರ ಇರುವುದು ಎಂದರ್ಥವು. **ಅರ್ಧ** ಎಂಬ ಶಬ್ದವು (೧) ಅಪಹರಿಸು, ತೆಗೆದುಕೊಂಡುಹೋಗು ಎಂಬರ್ಥವುಳ್ಳ **ಹೃ** (ಹರತಿ) ಧಾತುವಿನಿಂದಾಗಲಿ, (೨) **ಧೃ** ಹಿಡಿದುಕೋ, ಧರಿಸು, ಎಂಬರ್ಥವುಳ್ಳ ಧಾತುವಿನಿಂದಾಗಲಿ (೩) ಅಭಿವೃದ್ಧಿಯಾಗು, ಹೆಚ್ಚಿಸು ಎಂಬರ್ಥವುಳ್ಳ **ಋಧ್** ಎಂಬ ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು ಹರತಿ ಅಥವಾ ಧಾರಯತಿ ಧಾತುವಿನ ವರ್ಣಗಳನ್ನು ವ್ಯತ್ಯಾಸ ಅಥವಾ ಹಿಂದು ಮುಂದು ಮಾಡಿದರೆ ಅರ್ಧವೆಂಬ ಶಬ್ದವು ನಿಷ್ಪನ್ನವಾಗುವುದು. ಅಥವಾ ಋಧ್ನೋತಿಧಾತುವಿನಿಂದಲಾದರೂ ನಿಷ್ಪನ್ನವಾಗಬಹುದು. ಉದಾಹರಣೆಗೆ–**ಪ್ರೀಯತಿ ತ್ಸೋ ಅನು ತ್ಸೋ ಗೃಣಾತಿ**–ಅರ್ಧಭಾಗವು ನಿಂದಿಸುತ್ತದೆ, ಇನ್ನರ್ಧಭಾಗವು ಸ್ತುತಿಸುತ್ತದೆ ಎಂಬ ವಾಕ್ಯದಲ್ಲಿ ತ್ವ ಎಂಬ ಶಬ್ದವು ಅರ್ಧ, ಇನ್ನರ್ಧ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿದೆ ಹಾಗೆಯೇ ನೇಮೋ ದೇವಾ ನೇಮೋಽಸುರಾಃ– (ಇವರಲ್ಲಿ) ಅರ್ಧಭಾಗ ದೇವತೆಗಳು, ಉಳಿದರ್ಧಭಾಗ ಅಸುರರು ಎಂಬ ವಾಕ್ಯದಲ್ಲಿಯೂ ನೇಮ ಶಬ್ದಕ್ಕೆ ಅರ್ಧವೆಂಬರ್ಥದಲ್ಲಿಯೇ ಪ್ರಯೋಗವಿರುವುದು.

**ಅಸ್ತುತಃ ಪುಮಾನ್ ಇತಿ ಬ್ರುವೇ ಪಣಿಃ**–ತರಂತರಾಜನನ್ನು ಸ್ತೋತ್ರಮಾಡುತ್ತಿರುವ ನಾನು ಅವನನ್ನು ಎಷ್ಟುಸ್ತುತಿಸಿದರೂ ಅವನು ಅಸ್ತುತಃ-ಪೂರ್ತಿಯಾಗಿಸುತಿಸಲ್ಪಡಲಿಲ್ಲ ಎಂದು ಹೇಳುವೆನು ಎಂದು ಶ್ಯಾವಾಶ್ವಋಷಿಯು ಹೇಳಿಕೊಂಡಿದ್ದಾನೆ ತರಂತರಾಜನ ಔದಾರ್ಯಾದಿಗುಣಗಳು ಅನಂತವಾಗಿರುವುದರಿಂದ ನಾನು ಎಲ್ಲಿಯೋ ಸ್ವಲ್ಪ ಭಾಗವನ್ನು ಮಾತ್ರ ವರ್ಣಿಸಿರುವೆನು ನನ್ನಿಂದ ಸಾಧ್ಯವಿಲ್ಲದ್ದದ್ದರಿಂದ ಅವನ ಗುಣಗಳನ್ನು ಪೂರ್ತಿಯಾಗಿ ವರ್ಣಿಸಲಾಗಲಿಲ್ಲ. ಆದ್ದರಿಂದ ಅಸ್ತುತ–ವರ್ಣಿಸಲ್ಪಡಲಿಲ್ಲ ಎಂದು ಋಷಿಯು ತರಂತರಾಜನ ಮಹತ್ತ್ವವನ್ನೂ ತನ್ನ ಅಲ್ಪತ್ವವನ್ನೂ ಹೇಳಿಕೊಂಡಿದ್ದಾನೆ

**ವೈರದೇಯೇ ಇತ್ ಸಮಃ**–ಸ ಚ ತರಂತೋ ವೈರದೇಯೇ। ವೀರಾ ಧನಾನಾಂ ಪ್ರೇರಯಿತಾರೋ ದಾನಶೀಲಾಃ ।ತೈರ್ದಾತವ್ಯಂ ಧನಂ ದೇಯಂ । ತಸ್ಮಿನ್ಧನೇ ಸಮಃ। ಸರ್ವೇಭ್ಯೋ ದಾತೇತ್ಯರ್ಥಃ। **ಇದಿತಿ ಪೂರಣಃ** । ಆ ತರಂತರಾಜನ ದಾನಶೀಲಾದಿಗುಣಗಳನ್ನು ಋಷಿಯು ವರ್ಣಿಸುತ್ತಾ **ವೈರದೇಯೇ ಇತ್ ಸಮಃ** ಎಂದು ಹೇಳಿರುವನು, ವೀರರೆಂದರೆ ದಾನವನ್ನುಕೊಡಬೇಕೆಂದು ಪ್ರೇರಿಸುವರು ಎಂದರೆ ದಾನಶೀಲರು ಅಂತಹ ದಾನಶೀಲರು ಕೊಡುವ ಧನಕ್ಕೆ ವೀರದೇಯ ಎಂದು ಹೆಸರು. ಇಂತಹ ಧನದಾತೃಗಳಲ್ಲಿ ತರಂತರಾಜನು ಶ್ರೇಷ್ಠನಾದವನು. ಇವನು ಸರ್ವರಿಗೂ ಪಕ್ಷಪಾತವಿಲ್ಲದೆ ಎಂದರೆ ಯಾರಿಗೂ ಇಲ್ಲವೆಂದು ಹೇಳದೆ ಸಮನಾಗಿ ಧನವನ್ನು ಕೊಡುವವನು ಎಂದು ತರಂತರಾಜನ ದಾನಸ್ತುತಿಯನ್ನು ಋಷಿಯು ಪ್ರಶಂಸಿಸಿದ್ದಾನೆ. ಇತ್ ಎಂಬ ಶಬ್ದವು ಇಲ್ಲಿ ಪಾದಪೂರಣಾರ್ಥವಾಗಿ ಪ್ರಯುಕ್ತವಾಗಿದೆ ಇಲ್ಲಿ ಈ ಶಬ್ದಕ್ಕೆ ಯಾವ ನಿರ್ದಿಷ್ಟಾರ್ಥವೂ ಇರುವುದಿಲ್ಲ.

॥ ಸಂಹಿತಾಪಾಠಃ ॥

ಉತ ಮೇಽರಪದ್ಯುವತಿರ್ಮಮಂದುಷೀ ಪ್ರತಿ ಶ್ಯಾವಾಯ ವರ್ತನಿಂ ।
ವಿ ರೋಹಿತಾ ಪುರುಮೀಳ್ಹಾಯ ಯೇಮತುರ್ವಿಪ್ರಾಯ ದೀರ್ಘಯಶಸೇ॥

॥ ಪದಪಾಠಃ ॥

ಉತ । ಮೇ । ಅರಪತ್ । ಯುವತಿಃ । ಮಮಂದುಷೀ । ಪ್ರತಿ । ಶ್ಯಾವಾಯ । ವರ್ತನಿಂ ॥
ವಿ । ರೋಹಿತಾ । ಪುರುಽಮೀಳ್ಹಾಯ । ಯೇಮತುಃ । ವಿಪ್ರಾಯ । ದೀರ್ಘಽಯಶಸೇ ॥ ೯ ॥

॥ ಸಾಯಣಭಾಷ್ಯಂ ॥

ಉತಾಪಿ ಚ ಶ್ಯಾವಾಯ ಶ್ಯಾವಾಶ್ವಾಯ ಮೇ ಮಹ್ಯಮರಪತ್ । ಅಲಪತ್ । ಸ್ಪಷ್ಟಮಾಚಷ್ಟೇ ಕಿಂ । ವರ್ತನಿಂ ಮಾರ್ಗಂ । ಕೀದೃಶೀ ಸಾ । ಯುವತಿಃ । ಪ್ರವೃತ್ತಯೌವನಾ ಪ್ರತಿ ಮಮಂದುಷಿ। ಪ್ರತಿಮೋದಮಾನಾ । ಕಸ್ಮೈ । ದೀರ್ಘಯಶಸೇ ಪ್ರಭೂತಾನ್ನಾಯ ಪ್ರಭೂತಕೀರ್ತಯೇ ವಾ ಪುರುಮೀಳ್ಹಾಯೈತನ್ನಾಮಕಾಯ ಪ್ರಭೂತಗೃಹಾಯ ವಿಪ್ರಾಯ ॥ ಕ್ರಿಯಾರ್ಥೋಪಪದಸ್ಯ ಚ ಕರ್ಮಣಿ ಸ್ಥಾನಿನಃ । ಪಾ. ೨.೩-೧೪ । ಇತಿ ಚತುರ್ಥೀ ॥ ಪುರುಮೀಳ್ಹಂ ಪ್ರಾಪ್ತುಮಿತ್ಯರ್ಥಃ । ತದರ್ಥಂ । ರೋಹಿತಾ ರೋಹಿತವರ್ಣಾವಶ್ವೌ ಶಶೀಯಸ್ಯಾ ದತ್ತೌ ವಿ ಯೇಮತುಃ । ಧೃತವಂತಾವಿತ್ಯರ್ಥಃ। ಯಾಭ್ಯಾಂ ಯುಕ್ತೇ ರಥೇ ಸ್ಥಾಪಯಿತ್ವಾ ಪುರಮೀಳ್ಹಗೃಹಸ್ಯ ಮಾರ್ಗಂ ಪ್ರದರ್ಶಯಂತೀ ಪುರತೋ ಗತಾ ಸೈವ ಪುಂಸೋ ಭವತಿ ವಸ್ಯಸೀತಿ ಪೂರ್ವತ್ರ ಸಂಬಂಧಃ ॥

॥ ಪ್ರತಿಪದಾರ್ಥ ॥

**ಉತ**—ಮತ್ತು। **ಯುವತಿಃ**—ಯುವತಿಯಾದ ಶಶೀಯಸಿಯು। **ಪ್ರತಿ ಮಮಂದುಷೀ**—ಸೌಜನ್ಯದಿಂದ ಕೂಡಿದವಳಾಗಿ । **ಶ್ಯಾವಾಶ್ವಾಯ ಮೇ**—ಶ್ಯಾವಾಶ್ವನಾದ ನನಗೆ । **ವರ್ತನಿಂ**—ಮಾರ್ಗವನ್ನು। **ಅರಪತ್**—ವಿವರಿಸಿ ಹೇಳಿದಳು ।**ರೋಹಿತಾ**—(ಅವಳಿಂದ ದತ್ತವಾದ) ಅಶ್ವಗಳು । **ವಿಪ್ರಾಯ**—ಮೇಧಾವಿಯೂ। **ದೀರ್ಘಯಶಸೇ**—ಪ್ರಖ್ಯಾತವಾದ ಹೆಸರುಳ್ಳವನೂ ಆದ । **ಪುರುಮೀಳ್ಹಾಯ**—ಪುರುಮೀಳ್ಹನಲ್ಲಿಗೆ (ನಾನು) ಹೋಗಲು। **ವಿ ಯೇಮತುಃ**—ನನ್ನನ್ನು ಕರೆದೊಯ್ದವು ।

॥ ಭಾವಾರ್ಥ ॥

ಯುವತಿಯಾದ ಶಶೀಯಸಿಯು ಸೌಜನ್ಯದಿಂದ ಕೂಡಿದವಳಾಗಿ ಶ್ಯಾವಾಶ್ವನಾದ ನನಗೆ ಮಾರ್ಗವನ್ನು ವಿವರಿಸಿ ತಿಳಿಸಿದಳು. ಅವಳಿಂದ ದತ್ತವಾದ ಅಶ್ವಗಳು ಮೇಧಾವಿಯೂ ಪ್ರಖ್ಯಾತವಾದ ಹೆಸರುಳ್ಳವನೂ ಆದ ಪುರುಮೀಳ್ಹನಲ್ಲಿಗೆ ನನ್ನನ್ನು ಕರೆದೊಯ್ದವು.

## English Translation

Young and affable, she has explained to me, Syavaswa, the road and two ruddy horses have borne me to the valiant and renowned Purumilha,

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಪುರುಮೀಳ್ಹನೆಂಬ ರಾಜನ ವಿಷಯವು ಪ್ರಸ್ತಾಪಿತವಾಗಿರುವುದರಿಂದ ಈ ಋಕ್ಕಿಗೆ ಪುರುಮೀಳ್ಹನೇ ಋಷಿಯು. ಈ ಪುರುಮೀಳ್ಹನು ತರಂತರಾಜನ ತಮ್ಮನೆಂದು ಭಾಷ್ಯಕಾರರು ಈ ಸೂಕ್ತಕ್ಕೆ ಬರೆದಿರುವ ಪೀಠಿಕೆಯಲ್ಲಿ ಹೇಳಲಾಗಿದೆ ಪುರುಮೀಳ್ಹನೆಂಬುವನು ಒಬ್ಬ ಪ್ರಸಿದ್ಧನಾದ ರಾಜರ್ಷಿಯು. ಋಗ್ವೇದದಲ್ಲಿ ಪುರುಮೀಳ್ಹನೆಂಬ ಹೆಸರಿನ ಇಬ್ಬರು ಋಷಿಗಳಿದ್ದಾರೆ ಅಂಗೀರಸಗೋತ್ರೋದ್ಭವನಾದ ಪುರುಮೀಳ್ಹನೆಂಬವನು ಎಂಟನೆಯ ಮಂಡಲದ ೭೧ ನೆಯ ಸೂಕ್ತಕ್ಕೆ(೧೫ ಋಕ್ಕುಗಳಿಗೆ) ಸುದೀತಿ ಎಂಬುವನೊಡನೆ ಸೇರಿ ಮಂತ್ರದ್ರಷ್ಟೃವಾದ ಋಷಿಯಾಗಿದ್ದಾನೆ. ಇನ್ನೊಬ್ಬ ಪುರುಮೀಳ್ಹನೆಂಬ ಹೆಸರಿನ ಋುಷಿಯು ಗೋತಮವಂಶೋದ್ಭವನಾದ ಸುಹೋತ್ರನೆಂಬುವನ ವಂಶದಲ್ಲಿ ಪ್ರಸಿದ್ಧನಾಗಿದ್ದ ವಿದದಶ್ವನೆಂಬ ರಾಜನಪುತ್ರನು. ಈ ಪುರುಮೀಳ್ಹನೂ ಅಜಮೀಳ್ಹನೆಂಬುವನೂ (ಇವನೂ ಸುಹೋತ್ರನ ಪುತ್ರನು) ಒಟ್ಟಿಗೆ ಸೇರಿ ನಾಲ್ಕನೆಯ ಮಂಡಲದ ೪೩ ಮತ್ತು ೪೪ನೇ ಸೂಕ್ತಗಳಿಗೆ (ಒಟು ೧೪ ಋಕ್ಕುಗಳಿಗೆ) ಋಷಿಯಾಗಿದ್ದಾರೆ. ಈ ಇಬ್ಬರು ಪುರುಮೀಳ್ಹರಲ್ಲಿ ಯಾರು ಪ್ರಕೃತ ಸೂಕ್ತದಲ್ಲಿ ಪ್ರತಿಪಾದಿತರಾಗಿದ್ದಾರೆ ಎಂಬ ವಿಷಯದಲ್ಲಿ ಸಂಶಯಕ್ಕೆ ಆಸ್ಪದವಿದ್ದರೂ ಕೆಲವು ಆಧಾರಗಳಿಂದ ಸುಹೋತ್ರ ವಂಶದ ವಿದದಶ್ವ ಪುತ್ರನಾದ ಪುರುಮೀಳ್ಹನೇ ಇಲ್ಲಿ ಹೇಳಿರುವ ರಾಜನೆಂದು ಹೇಳಬಹುದು.

ಈ ಸೂಕ್ತದ ಪೀಠಿಕೆಯಲ್ಲಿ ತಿಳಿಸಿರುವಂತೆ ತರಂತರಾಜನ ಮಹಿಷಿಯಾದ ಶಶೀಯಸಿಯು ಶ್ಯಾವಾಶ್ವನಿಗೆ ಗೋವುಗಳೇ ಮೊದಲಾದ ವಸ್ತುಗಳನ್ನು ಕೊಟ್ಟು ಸತ್ಕರಿಸಿದ್ದಲ್ಲದೆ ಸಮೀಪದಲ್ಲಿಯೇ ವಾಸಿಸುತ್ತಿದ್ದ ತರಂತರಾಜನ ಸಹೋದರನಾದ ಪುರುಮೀಳ್ಹನೆಂಬ ರಾಜನಿಂದಲೂ ಧನಾದಿಗಳನ್ನು ಕೊಡಿಸುವುದಕ್ಕಾಗಿ ಶ್ಯಾವಾಶ್ವನಿಗೆ ಪುರುಮೀಳ್ಹನಿದ್ದ ಊರಿಗೆ ದಾರಿಯನ್ನು ತಾನೇ ತೋರಿಸಿದಳು ಮತ್ತು ಅಲ್ಲಿಗೆ ಹೋಗಿ ಸೇರಲು ಉತ್ತಮವಾದ ಕುದುರೆಗಳನ್ನು ಕೊಟ್ಟಳು. ಆ ಕುದುರೆಗಳು ಶ್ಯಾವಾಶ್ವಋುಷಿಯನ್ನು ಪುರುಮೀಳ್ಹರಾಜನ ಬಳಿಗೆ ಒಯ್ದವು ಎಂಬ ವಿಷಯವು ಈ ಋಕ್ಕಿನಲ್ಲಿ ವಿಶದವಾಗಿ ವಿವರಿಸಲಾಗಿದೆ

॥ ಸಂಹಿತಾಪಾಠಃ ॥

ಯೋ ಮೇ ಧೇನೂನಾಂ ಶತಂ ವೈದದಶ್ವಿರ್ಯಥಾ ದದತ್ ।
ತರಂತಇವ ಮಂಹನಾ ॥೧೦॥

॥ ಪದಪಾಠಃ ॥

ಯಃ । ಮೇ । ಧೇನೂನಾಂ । ಶತಂ । ವೈದತ್ಽಅಶ್ವಿಃ । ಯಥಾ । ದದತ್ ।

ತರಂತಃಽಇವ । ಮಂಹನಾ ॥೧೦॥

॥ ಸಾಯಣಭಾಷ್ಯಂ ॥

ಇಯಂ ಪುರುಮೀಳ್ಹಸ್ತುತಿಃ । ವೈದದಶ್ವಿಃ ಪುರುಮೀಳ್ಹೋಽಪಿ ಯೋ ಮೇ ಮಹ್ಯಂ ಧೇನೂನಾಂ ಶತಂ ಯಥಾ ಯೇನ ಪ್ರಕಾರೇಣ ದದತ್ ದತ್ತವಾನ್ । ತಥಾ ಮಂಹನಾ ಮಂಹನೀಯಾನಿ ಧನಾನ್ಯಪಿ ದದತ್ ತರಂತ ಇವ । ಸ ಯಥಾ ಧೇನುಶತಂ ಬಹುವಿಧಂ ಧನಂ ಚ ದತ್ತವಾನ್ ತದ್ವದ್ವೈದದಶ್ವಿಃ ಪುರುಮೀಳ್ಹೋಽಪಿ ದದತ್ । ತಂ ಸ್ತುವ ಇತಿ ಶೇಷಃ ॥

॥ ಪ್ರತಿಪದಾರ್ಥ ॥

ಯಃ—ಯಾವ । ವೈದದಶ್ವಿಃ—ವಿದದಶ್ವಪುತ್ರನಾದ ಪುರುಮೀಳ್ಹನು । ಮೇ—ನನಗೆ । ತರಂತ ಇವ–ತರಂತನು ದಾನಮಾಡಿದಂತೆ । ಯಥಾ—ಯಾವರೀತಿ । ಧೇನೂನಾಂ ಶತಂ—ಶತಸಂಖ್ಯಾಕವಾದ ಧೇನುಗಳನ್ನು । ದದತ್—ಕೊಟ್ಟನೋ (ಹಾಗೆಯೇ) । ಮಂಹನಾ—ಅಮೌಲ್ಯವಾದ ಧನಗಳನ್ನು ಕೊಟ್ಟನು

॥ ಭಾವಾರ್ಥ ॥

ಶಶೀಯಸಿಯಿಂದ ದತ್ತವಾದ ಅಶ್ವಗಳ ಸಹಾಯದಿಂದ ನಾನು ಪುರುಮೀಳ್ಹನನ್ನು ಸೇರಿದೊಡನೆಯೇ, ಅವನೂ ಸಹ ತರಂತನು ನನಗೆ ದಾನಮಾಡಿದಂತೆ ಶತಸಂಖ್ಯಾಕವಾದ ಧೇನುಗಳನ್ನೂ ಅಮೌಲ್ಯವಾದ ಧನಗಳನ್ನೂ ಕೊಟ್ಟನು.

English Translation

Who the sons of Vidadaswa, has given me a hundred (head) of cattle, and, like Taranta, many precious gifts.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ ಶ್ಯಾವಾಶ್ವಋಷಿಯು ಪುರುಮೀಳ್ಹನು ತನಗೆ ನೂರಾರು ಗೋವುಗಳನ್ನು ಕೊಟ್ಟನೆಂದು ಅವನ ದಾನಪ್ರಶಂಸೆಮಾಡಿದ್ದಾನೆ. ಆದ್ದರಿಂದ ಈ ಋಕ್ಕಿಗೆ **ಯಾ ತೇನೋಚ್ಯತೇ ಸಾ ದೇವತಾ** ಎಂಬ ವಚನದಂತೆ ಋಕ್ಕಿನಲ್ಲಿ ಪ್ರತಿಪಾದ್ಯವಾಗಿರುವ ವಿಷಯವೇ ಆ ಋಕ್ಕಿಗೆ ದೇವತೆಯು ಎಂದು ಹೇಳಿರುವ ಪ್ರಕಾರ ಪುರುಮೀಳ್ಹನೇ ದೇವತೆಯಾಗಬೇಕು. ಭಾಷ್ಯಕಾರರಾದ ಸಾಯಣರೂ ಸಹ ಈ ಋಕ್ಕಿನ ಭಾಷ್ಯದ ಪ್ರಾರಂಭವಾಕ್ಯದಲ್ಲಿ-**ಇಯಂ ಪುರುಮೀಳ್ಹಸ್ತುತಿಃ** । ಈ ಋಕ್ಕು ಪುರುಮೀಳ್ಹನನ್ನು ಸ್ತುತಿಸುವುದಾಗಿದೆ ಎಂದು ಸ್ಪಷ್ಟವಾಗಿ ಹೇಳಿದಾರೆ. ಆದರೂ ಸಹ ಅನುಕ್ರಮಣಿಕೆಯಲ್ಲಿ-**ಯೋ ಮೇ ಧೇನೂನಾಮಿತ್ಯಸ್ಯಾ ವೈದದಶ್ವಿಸ್ತರಂತೋ ರಾಜಾ ದೇವತಾ । ಯೋ**

**ಮೇ ಧೇನೂನಾಂ** ಎಂಬ ಈ ಸೂಕ್ತದ ೧೧ನೇ ಋಕ್ಕಿಗೆ ವಿದದಶ್ವನ ಪುತ್ರನಾದ ತರಂತನೆಂಬ ಹೆಸರಿನ ರಾಜನು ದೇವತೆಯು ಎಂದು ಹೇಳಿರುವುದು. ಋಕ್ಕಿನಲ್ಲಿ ತರಂತನು ದಾನಮಾಡಿದಂತೆ ಎಂದು ಪ್ರಾಸಂಗಿಕವಾಗಿ ತರಂತ ಪ್ರಸ್ತಾಪವಿರುವುದೇ ಹೊರತು ಋಕ್ಕಿನಲ್ಲಿ ಮುಖ್ಯವಾಗಿ ಪ್ರತಿಪಾದಿತವಾಗಿರುವ ವಿಷಯವು ಪುರುಮೀಳ್ಹನ ದಾನ ಪ್ರಶಂಸೆಯೇ ಆಗಿದೆ. ಆದ್ದರಿಂದ ಪುರುಮೀಳ್ಹನೇ ಈ ಋಕ್ಕಿಗೆ ದೇವತೆಯೆಂದು ಹೇಳುವುದಕ್ಕೆ ಬದಲಾಗಿ ತರಂತನೇ ದೇವತೆಯೆಂದು ಹೇಳಿರುವುದು ಸರಿಯೇ ಎಂಬ ವಿಷಯದಲ್ಲಿ ಸಂಶಯಕ್ಕೆ ಅವಕಾಶವಿದೆ.

॥ ಸಂಹಿತಾಪಾಠಃ ॥

**ಯ ಈಂ ವಹಂತ ಆಶುಭಿಃ ಪಿಬಂತೋ ಮದಿರಂ ಮಧು ।**

**ಅತ್ರ ಶ್ರವಾಂಸಿ ದಧಿರೇ ॥೧೧॥**

॥ ಪದಪಾಠಃ ॥

**ಯೇ । ಈಂ । ವಹಂತೇ । ಆಶುऽಭಿಃ । ಪಿಬಂತಃ । ಮದಿರಂ । ಮಧು ।**

**ಅತ್ರ । ಶ್ರವಾಂಸಿ । ದಧಿರೇ ॥೧೧॥**

॥ ಸಾಯಣಭಾಷ್ಯಂ ॥

**ಇದಾನೀಂ ಮರುತ ಏವೈತ ಇತಿ ನಿಶ್ಚಿತ್ಯ ಜನಪ್ರಸಿದ್ಧೈರ್ಮಾಹಾತ್ಮ್ಯೈಃ ಸ್ತೌತಿ । ಯೇ ಮರುತ ಈಮಿದಾನೀಮಾಶುಭಿಃ ಶೀಘ್ರಗಾಮಿಭಿರಶ್ವೈರ್ವಹಂತೇ ಉಹ್ಯಂತೇ । ಕಿಂ ಕುರ್ವಂತಃ । ಮದಿರಂ ಮದಕರಂ ಮಧು ಸೋಮರಸಂ ಪಿಬಂತಃ । ಪಾಥೇಯತ್ವೇನ ಧೃತಂ ಸೋಮಮಿತ್ಯರ್ಥಃ । ತೇ ಮರುತೋऽತ್ರಾಸ್ಮಿನ್ ದೇಶೇ ಶ್ರವಾಂಸಿ ಸ್ತುತಿಜನಿತಾನಿ ಯಶಾಂಸಿ ದಧಿರೇ । ಧಾರಯಂತಿ ॥**

॥ ಪ್ರತಿಪದಾರ್ಥ ॥

**ಯೇ**—ಯಾವ ಮರುತ್ತುಗಳು । **ಈಂ**—ಈಗ । **ಆಶುಭಿಃ**—ವೇಗಗಾಮಿಗಳಾದ ಅಶ್ವಗಳಿಂದ । **ವಹಂತೇ**—ವಹಿಸಲ್ಪಡುವರೋ (ಅವರು) । **ಅತ್ರ**—ಈ ಯಜ್ಞದಲ್ಲಿ । **ಮದಿರಂ**—ಮದಕಾರಕವಾದ । **ಮಧು**—ಸೋಮರಸವನ್ನು । **ಪಿಬಂತಃ**—ಪಾನಮಾಡುತ್ತಾ । **ಶ್ರವಾಂಸಿ**—ಸ್ತುತಿಜನಿತವಾದ ಪ್ರಶಂಸೆಯನ್ನು । **ದಧಿರೇ**—ಹೊಂದುತ್ತಾರೆ ।

॥ ಭಾವಾರ್ಥ ॥

ಯಾವ ಮರುತ್ತುಗಳು ವೇಗಗಾಮಿಗಳಾದ ಅಶ್ವಗಳಿಂದ ವಹಿಸಲ್ಪಡುವರೋ ಅವರು ಈ ಯಜ್ಞದಲ್ಲಿ ಮದ ಕಾರಕವಾದ ಸೋಮರಸವನ್ನು ಪಾನಮಾಡುತ್ತಾ ಸ್ತುತಿಗಳಿಂದ ಪ್ರಶಂಸಿತರಾಗುತ್ತಾರೆ.

## English Translation

Those (Maruts) who are brought hither by swift horses, drinking the inebriating juice, receive here glorification.

॥ ವಿಶೇಷವಿಷಯಗಳು ॥

ಇದುವರೆಗೂ ಶ್ಯಾವಾಶ್ವಋಷಿಯು ಮರುದ್ದೇವತೆಗಳನ್ನು, ತರಂತಮಹಿಷಿಯಾದ ಶಶೀಯಸೀ, ತರಂತ, ಪುರುಮೀಳ್ಹ ಇವರನ್ನು ಪ್ರಶಂಸೆಮಾಡಿ ಮತ್ತೆ ಮರುದ್ದೇವತೆಗಳನ್ನು ಈ ಋಕ್ಕಿನಲ್ಲಿಯೂ ಮುಂದಿನ ಐದು ಋಕ್ಕುಗಳಲ್ಲಿಯೂ ಸ್ತುತಿಸುವನು ಋಕ್ಕಿನ ಅರ್ಥವಿವರಣೆಯು ಸ್ಪಷ್ಟವಾಗಿಯೇ ಇದೆ.

॥ ಸಂಹಿತಾಪಾಠಃ ॥

ಯೇಷಾಂ ಶ್ರಿಯಾಧಿ ರೋದಸೀ ವಿಭ್ರಾಜಂತೇ ರಥೇಷ್ವಾ ।
ದಿವಿ ರುಕ್ಮ ಇವೋಪರಿ ॥ ೧೨ ॥

॥ ಪದಪಾಠಃ ॥

ಯೇಷಾಂ । ಶ್ರಿಯಾ । ಅಧಿ । ರೋದಸೀ ಇತಿ । ವಿಽಭ್ರಾಜಂತೇ । ರಥೇಷು । ಆ ।
ದಿವಿ । ರುಕ್ಮಃಽಇವ । ಉಪರಿ ॥೧೨

॥ ಸಾಯಣಭಾಷ್ಯಂ ॥

ಯೇಷಾಂ ಮರುತಾಂ ಶ್ರಿಯಾ ಕಾಂತ್ಯಾ ರೋದಸೀ ದ್ಯಾವಾಪೃಥಿವ್ಯಾವಧಿ । ಅಧಿಷ್ಠಿತೇ ಭವತ ಇತಿ ಶೇಷಃ । ಯಸ್ಮಾದೇತೇ ಮರುತೋ ರಥೇಷು ವಿಭ್ರಾಜಂತೇ ವಿಶೇಷೇಣ ದೀಪ್ಯಂತೇ । ಆ ಇತಿ ಚಾರ್ಥೇ । ತತ್ರ ದೃಷ್ಟಾಂತಃ । ಉಪರ್ಯುಪರಿಭೂತೇ ದಿವಿ ದ್ಯುಲೋಕೇ ರುಕ್ಮೋ ರೋಚಮಾನ ಆದಿತ್ಯ ಇವ । ಯದ್ವಾ । ಉಪರಿ ರಥಸ್ಯೋಪರೀತಿ ವಾ ಯೋಜ್ಯಂ ॥

॥ ಪ್ರತಿಪದಾರ್ಥ ॥

**ಯೇಷಾಂ**—ಯಾವ ಮರುತ್ತುಗಳ । **ಶ್ರಿಯಾ**—ಕಾಂತಿಯಿಂದಲೇ । **ರೋದಸೀ**—ದ್ಯಾವಾಪೃಥಿವಿಗಳೆರಡೂ । **ಅಧಿ**—(ಆ ಕಾಂತಿಯನ್ನು)ಆಶ್ರಯಿಸಿ ನಿಂತಿವೆಯೋ । **ಉಪರಿ**—ಉನ್ನತಪ್ರದೇಶವಾದ । **ದಿವಿ**—ದ್ಯುಲೋಕದಲ್ಲಿ । **ರುಕ್ಮಃ ಇವ**—ಪ್ರಕಾಶಿಸುವ ಆದಿತ್ಯನಂತೆ । (**ಯೇ**—ಯಾವ ಮರುತ್ತುಗಳು) । **ರಥೇಷು**—ತಮ್ಮ ರಥಗಳಲ್ಲಿ । **ವಿಭ್ರಾಜಂತೇ**—ಪ್ರಕಾಶಿಸುತ್ತಾರೆಯೋ ಆ ಮರುತ್ತುಗಳು ಇಲ್ಲಿ ಪ್ರಶಂಸಿಸಲ್ಪಡುತ್ತಾರೆ.)

॥ ಭಾವಾರ್ಥ ॥

ಯಾವ ಮರುತ್ತುಗಳ ಕಾಂತಿಯನ್ನೇ ಆಶ್ರಯಿಸಿ ದ್ಯಾವಾಪೃಥಿವಿಗಳೆರಡೂ ಸ್ಥಿತವಾಗಿವೆಯೋ, ಮತ್ತು ಉನ್ನತಪ್ರದೇಶವಾದ ದ್ಯುಲೋಕದಲ್ಲಿ ಪ್ರಕಾಶಿಸುವ ಆದಿತ್ಯನಂತೆ ಯಾವ ಮರುತ್ತುಗಳು ತಮ್ಮ ರಥಗಳಲ್ಲಿ ಪ್ರಕಾಶಿಸುತ್ತಾರೆಯೋ ಆ ಮರುತ್ತುಗಳು ಇಲ್ಲಿ ಪ್ರಶಂಸಿಸಲ್ಪಡುತ್ತಾರೆ.

English Translation

They by whose glory heaven and earth are surpassed· who shine splendid in their chariots like the radiant (sun) in the heaven above·

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಮರುದ್ದೇವತೆಗಳ ಎರಡು ವಿಧ ಮಾಹಾತ್ಮ್ಯೆಯ ವರ್ಣನೆ ಇದೆ. **ಯೇಷಾಂ ಶ್ರಿಯಾ ರೋದಸೀ ಅಧಿ**–ಮರುದ್ದೇವತೆಗಳ ಕಾಂತಿಯಿಂದ ಎಂದರೆ ಶಕ್ತಿಸಾಮರ್ಥ್ಯಗಳಿಂದ ದ್ಯಾವಾಪೃಥಿವಿಗಳು ಆಶ್ರಯಿಸಿ ನಿಂತಿವೆ ಎಂದೂ **ಉಪರಿ ದಿವಿ ರುಕ್ಮ ಇವ ರಥೇಷು ವಿಭ್ರಾಜಂತೇ**–ಅಂತರಿಕ್ಷದ ಮೇಲಿರುವ ಸ್ವರ್ಗದಲ್ಲಿ ಪ್ರಕಾಶಿಸುತ್ತಿರುವ ಸೂರ್ಯನಂತೆ ರಥದಲ್ಲಿ ಕುಳಿತಿರುವ ಮರುತ್ತುಗಳು ಕಾಂತಿಯಿಂದ ಬೆಳಗುತ್ತಾರೆ ಎಂದೂ ಮರುದ್ದೇವತೆಗಳ ಗುಣವರ್ಣನೆಮಾಡಲಾಗಿದೆ

॥ ಸಂಹಿತಾಪಾಠಃ ॥

ಯುವಾ ಸ ಮಾರುತೋ ಗಣಸ್ತ್ವೇಷರಥೋ ಅನೇದ್ಯಃ ।
ಶುಭಂಯಾವಾಪ್ರತಿಷ್ಕುತಃ ॥ ೧೩ ॥

॥ ಪದಪಾಠಃ ॥

ಯುವಾ । ಸಃ । ಮಾರುತಃ । ಗಣಃ । ತ್ವೇಷऽರಥಃ । ಅನೇದ್ಯಃ ।
ಶುಭಂऽಯಾವಾ । ಅಪ್ರತಿऽಸ್ಕುತಃ ॥೧೩॥

॥ ಸಾಯಣಭಾಷ್ಯಂ ॥

**ಸ ಮಾರುತೋ ಗಣೋ ಯುವಾ ಸರ್ವತ್ರ ಮಿಶ್ರಯಿತಾ ನಿತ್ಯತರುಣೋ ವಾ ತ್ವೇಷರಥೋ ದೀಪ್ತರಥೋऽನೇದ್ಯೋऽನಿಂದ್ಯಃ ಶುಭಂಯಾವಾ ಶೋಭನಂ ಗಂತಾಪ್ರತಿಷ್ಕುತೋऽಪ್ರತಿಗತೋऽಪ್ರತಿ. ಶಬ್ದಿತೋ ವಾ । ಏವಂ ಮಹಾನುಭಾವೋ ಗಣೋ ದೀಪ್ಯತ ಇತಿ ॥**

॥ ಪ್ರತಿಪದಾರ್ಥ ॥

**ಯುವಾ**—ಸರ್ವದಾ ಸೇರಿಕೊಂಡಿರುವುದೂ । **ಶ್ವೇಷರಥಃ**—ಪ್ರಕಾಶಮಾನವಾದ ರಥವುಳ್ಳದ್ದೂ । **ಅನೇದ್ಯಃ**—ನಿರ್ದುಷ್ಟವಾದುದೂ । **ಶುಭಂಯಾವಾ**—ಶ್ರೇಷ್ಠವಾದ ಗತಿಯುಳ್ಳದ್ದೂ । **ಅಪ್ರತಿಷ್ಕುತಃ**—ಅಪ್ರತಿಹತವಾದ ಶಬ್ದವುಳ್ಳದ್ದೂ ಆದ । **ಸಃ ಮಾರುತೋ ಗಣಃ**—ಅದೇ ಮರುದ್ಗಣವು (ಪ್ರಶಂಸಿತವಾಗುತ್ತದೆ).

॥ ಭಾವಾರ್ಥ ॥

ಎಡಬಿಡದೇ ಸರ್ವದಾ ಮಿಶ್ರಿತವಾಗಿರುವುದೂ, ಪ್ರಕಾಶಮಾನವಾದ ರಥವುಳ್ಳದ್ದೂ, ನಿರ್ದುಷ್ಟವಾದುದೂ ಶ್ರೇಷ್ಠವಾದ ಗತಿಯುಳ್ಳದ್ದೂ ಆದ ಅದೇ ಮರುದ್ಗಣವು ಪ್ರಶಂಸಿತವಾಗುತ್ತದೆ.

## English Translation

That company of Maruts, ever young, riding in bright chariots, irreproachable, ausspicious, motive unobstructed.

॥ ವಿಶೇಷವಿಷಯಗಳು ॥

**ಯುವಾ— ಮಿಶ್ರಾಯಿತಾ ನಿತ್ಯತರುಣೋ ವಾ ।** **ಯುವಾ** ಎಂದರೆ ಮರುದ್ದೇವತೆಗಳು ನಿತ್ಯತರುಣರು ಅಥವಾ ಅಂತರಿಕ್ಷದಲ್ಲಿ ಸಂಚರಿಸುವಾಗ ಎಲ್ಲರೂ ಒಟ್ಟಾಗಿ (ಒಟ್ಟಾಗಿ) ಸೇರಿ ಸಂಚರಿಸುತ್ತಾರೆ. ಆದ್ದರಿಂದ ಇವರನ್ನು ಯುವಾ ಎಂಬ ಶಬ್ದದಿಂದ ವರ್ಣಿಸಲಾಗಿದೆ. ಯುವಾ ಎಂಬ ಶಬ್ದವು ಏಕವಚನಾಂತ ಪದವಾಗಿ ಗಣಃ ಎಂಬ ಪದಕ್ಕೆ ವಿಶೇಷಣವಾಗಿದೆ. ಗಣ ಎಂದರೆ ಮರುದ್ಗಣ, ಮರುದ್ದೇವತೆಗಳ ಸಮೂಹ ಅಥವಾ ಗುಂಪು. ಈ ಶಬ್ದವು ಏಕವಚನದಲ್ಲಿದ್ದರೂ ಸಮೂಹವೆಂಬರ್ಥವನ್ನು ಸೂಚಿಸುವುದರಿಂದ ಮರುದ್ದೇವತೆಗಳೆಲ್ಲರನ್ನು ನಿರ್ದೇಶಿಸುವುದು

**ಅಪ್ರತಿಷ್ಕುತಃ**— ಈ ಶಬ್ದಕ್ಕೆ ಯಾಸ್ಕರು—

**ಅಪ್ರತಿಷ್ಕುತೋಽಪ್ರತಿಷ್ಕೃತೋಽಪ್ರತಿಸ್ಖಲಿತೋ ವಾ । ಅಸ್ಮಭ್ಯಮಪ್ರತಿಷ್ಕುತ ಇತ್ಯಪಿ ನಿಗಮೋ ಭವತಿ ॥**

(ನಿ. ೬-೧೬)

ಎಂದು ನಿರ್ವಚನವನ್ನು ಹೇಳಿದಾರೆ. ಎಂದರೆ ಈ ಶಬ್ದಕ್ಕೆ ಎದುರಿಸಲು ಸಾಧ್ಯವಲ್ಲದ, ತಡೆಯಲುಸಾಧ್ಯವಾದ, ಅಸಾಧಾರಣವಾದ ಶಬ್ದವುಳ್ಳ ಇತ್ಯಾದ್ಯರ್ಥಗಳಿರುವವು. **ಅಸ್ಮಭ್ಯಮಪ್ರತಿಷ್ಕುತಃ** ( ಋ. ಸಂ. ೧-೭-೬ ) ಎಂಬ ಶ್ರುತಿವಾಕ್ಯದ ಉದಾಹರಣೆಯೂ ಇರುವುದು ಎಂದು ಹೇಳಿದಾರೆ.

॥ ಸಂಹಿತಾಪಾಠಃ ॥

**ಕೋ ವೇದ ನೂನಮೇಷಾಂ ಯತ್ರಾ ಮದಂತಿ ಧೂತಯಃ ।**

**ಋತಜಾತಾ ಅರೇಪಸಃ ॥ ೧೪ ॥**

॥ಪದಪಾಠಃ ॥

ಕಃ । ವೇದ । ನೂನಂ । ಏಷಾಂ । ಯತ್ರ । ಮದಂತಿ । ಧೂತಯಃ ।

ಋತಽಜಾತಾಃ । ಅರೇಪಸಃ ।೧೪॥

॥ ಸಾಯಣಭಾಷ್ಯಂ ॥

ಏಷಾಂ ಮರುತಾಂ ಸ್ಥಾನಂ ಕೋ ವೇದ । ಕೋ ಜಾನಾತಿ । ನೂನಮಿದಾನೀಂ ಯತ್ರ ಸ್ಥಾನೇ ಧೂತಯಃ ಶತ್ರೂಣಾಂ ಕಂಪಕಾ ಮದಂತಿ ಹೃಷ್ಯಂತಿ ಋತಜಾತಾ ಜಲಾರ್ಥಮುತ್ಪನ್ನಾ ಯಜ್ಞೇ ವಾ ಪ್ರಾದು ರ್ಭೂತಾ ಅರೇಪಸೋಽಪಾಪಾಃ ॥

॥ ಪ್ರತಿಪದಾರ್ಥ ॥

**ಯತ್ರ**—ಯಾವ ಸ್ಥಾನದಲ್ಲಿ । **ಧೂತಯಃ**—ಶತ್ರುಗಳನ್ನು ಭಯದಿಂದ ನಡಗಿಸುತ್ತಾ । **ಮದಂತಿ**—ತಾವು ಹರ್ಷಿತರಾಗಿದ್ದಾರೋ ಅಂತಹ । **ಏಷಾಂ**—ಈ ಮರುತ್ತುಗಳ ಸ್ಥಾನವನ್ನು । **ನೂನಂ**—ನಿಶ್ಚಯವಾಗಿಯೂ । **ಕೋ ವೇದ**—ಯಾವನು ತಿಳಿದಿದ್ದಾನೆ ? (ಇದೇ ಮರುತ್ತುಗಳು) । **ಅರೇಪಸಃ**—ಪಾಪರಹಿತರಾಗಿಯೂ । **ಋತಜಾತಾಃ**—ಜಲಾರ್ಥವಾಗಿ ಉತ್ಪನ್ನರಾದವರಾಗಿಯೂ ಇದ್ದಾರೆ.

॥ ಭಾವಾರ್ಥ ॥

ಯಾವ ಸ್ಥಾನದಲ್ಲಿ ಈ ಮರುತ್ತುಗಳು ಶತ್ರುಗಳನ್ನು ಭಯದಿಂದ ನಡುಗಿಸುತ್ತಾ ತಾವು ಹರ್ಷಿತರಾಗಿದ್ದಾರೆಯೋ ಅಂತಹ ಈ ಮರುತ್ತುಗಳ ಸ್ಥಾನವನ್ನು ನಿಶ್ಚಯವಾಗಿಯೂ ಯಾವನು ತಿಳಿದಿದ್ದಾನೆ ? ಇದೇ ಮರುತ್ತುಗಳು ಪಾಪರಹಿತರಾಗಿಯೂ ಜಲಾರ್ಥವಾಗಿ ಉತ್ಪನ್ನರಾಗಿಯೂ ಇದ್ದಾರೆ

## English Translation

Who knows of a certainty their (abode), where the intimidators (of their foes) rejoice? born for (the distribution of) water, exempt from defects.

॥ ವಿಶೇಷವಿಷಯಗಳು ॥

ಮರುದ್ದೇವತೆಗಳ ಮಹಿಮೆಯನ್ನು ಸಾಧಾರಣಜನರು ತಿಳಿಯಲು ಶಕ್ಯವಿಲ್ಲ. ಇವರು ಶತ್ರುಗಳನ್ನು ನಡುಗಿಸುವವರಾದರೂ ತಾವು ಸದಾ ಹರ್ಷಿತರಾಗಿರುವರು ಇವರು ಪಾಪರಹಿತರು. ವೃಷ್ಟಿರೂಪವಾದ ಜಲಾರ್ಥವಾಗಿಯೇ ಇವರು ಉತ್ಪನ್ನರಾಗಿದ್ದಾರೆ. ಎಂದರೆ ಇವರ ಅನುಗ್ರಹದಿಂದಲೇ ಭೂಮಿಯಮೇಲೆ ವೃಷ್ಟಿಯೂ ಅದರಿಂದ ಸಸ್ಯಾಭಿವೃದ್ಧಿಯೂ ಉಂಟಾಗುತ್ತದೆ. ಇಂತಹ ಮರುದ್ದೇವತೆಗಳು ಯಾವಾಗಲೂ ಸಂಚರಿಸುವ

ಸ್ವಭಾವವುಳ್ಳವರು. ಇವರ ನಿಜವಾದ ಸ್ವಸ್ಥಾನವನ್ನು ಯಾವ ಮನುಷ್ಯನೂ ತಿಳಿದಿಲ್ಲ ಎಂದು ಮರುದ್ದೇವತೆಗಳ ಅಸಾಧಾರಣಗುಣಗಳನ್ನು ಋಷಿಯು ಪ್ರಶಂಸೆ ಮಾಡಿದ್ದಾನೆ.

॥ ಸಂಹಿತಾಪಾಠಃ ॥

ಯೂಯಂ ಮರ್ತಂ ವಿಪನ್ಯವಃ ಪ್ರಣೇತಾರ ಇತ್ಥಾ ಧಿಯಾ ।
ಶ್ರೋತಾರೋ ಯಾಮಹೂತಿಷು ॥ ೧೫ ॥

॥ ಪದಪಾಠಃ ॥

ಯೂಯಂ । ಮರ್ತಂ । ವಿಪನ್ಯವಃ । ಪ್ರಽನೇತಾರಃ । ಇತ್ಥಾ । ಧಿಯಾ ।
ಶ್ರೋತಾರಃ । ಯಾಮಽಹೂತಿಷು ॥೧೫॥

॥ ಸಾಯಣಭಾಷ್ಯಂ ॥

ಹೇ ವಿಪನ್ಯವಃ ಸ್ತುತಿಕಾಮಾ ಮರುತೋ ಯೂಯಂ ಮರ್ತಂ ಮರಣಸ್ವಭಾವಂ ಯಜಮಾನಮಿತ್ಥಾನಯಾ ಧಿಯೇದಾನೀಂ ಕೃತಪ್ರಕಾರಯಾನುಗ್ರಹಬುದ್ಧ್ಯಾ ಈದೃಶೇನ ಸ್ತುತಿಕರ್ಮಣಾ ವಾ ನಿಮಿತ್ತೇನ ಪ್ರಣೇತಾರಃ ಪ್ರಕರ್ಷೇಣ ಪ್ರಾಪಯಿತಾರೋಽಭಿಮತಂ ಸ್ವರ್ಗಾದಿಕಂ । ಯಾಮಹೂತಿಷು। ಯಾಮೋ ಗಮನಂ । ತದರ್ಥಾ ಹೂತಯೋ ಯಸ್ಮಿನ್ನಿತಿ ಯಾಮಹೂತಯೋ ಯಜ್ಞಾಃ । ತೇಷು ಶ್ರೋತಾರ ಆಹ್ವಾನಾನಾಂ ॥

॥ ಪ್ರತಿಪದಾರ್ಥ ॥

**ವಿಪನ್ಯವಃ**—ಸ್ತುತಿಗಳನ್ನು ಇಚ್ಛಿಸುವ ಎಲೈ ಮರುತ್ತುಗಳೇ । **ಯೂಯಂ**—ನೀವು । **ಮರ್ತಂ**—ಯಜಮಾನನನ್ನು । **ಇತ್ಥಾ**—ಪ್ರಕೃತದಲ್ಲಿ ಪ್ರಕಾಶವಾಗಿರುವ । **ಧಿಯಾ**—ಅನುಗ್ರಹಬುದ್ಧಿಯಿಂದ । **ಪ್ರಣೇತಾರಃ**—ಸ್ವರ್ಗಾದಿಗಳಿಗೆ ಒಯ್ಯುವವರಾಗಿದ್ದೀರಿ । **ಯಾಮಹೂತಿಷು**—ಯಜ್ಞಗಳಲ್ಲಿ । **ಶ್ರೋತಾರಃ**—ಸ್ತುತಿಗಳನ್ನು ಕೇಳುವವರಾಗಿದ್ದೀರಿ.

॥ ಭಾವಾರ್ಥ ॥

ಸ್ತುತಿಗಳನ್ನು ಇಚ್ಛಿಸುವ ಎಲೈ ಮರುತ್ತುಗಳೇ, ನೀವು ಯಜಮಾನನನ್ನು ಪ್ರಕೃತದಲ್ಲಿ ಪ್ರಕಾಶವಾಗಿರುವ ಅನುಗ್ರಹಬುದ್ಧಿಯಿಂದ ಸ್ವರ್ಗಾದಿಗಳಿಗೆ ಒಯ್ಯುವವರಾಗಿದ್ದೀರಿ. ಯಜ್ಞಾದಿಗಳಲ್ಲಿ ಸ್ತುತಿಗಳನ್ನು ಕೇಳುವವರಾಗಿದ್ದೀರಿ.

## English Translation

Desirous of praise, you are the guides (to happiness) of the man who propitiates (you) by this pious rite: you are bearers of invocations to the sacrifice

॥ ವಿಶೇಷವಿಷಯಗಳು ॥

**ಇತ್ಥಾ ಧಿಯಾ-ಇದಾನೀಂ ಕೃತಪ್ರಕಾರಯಾನುಗ್ರಹಬುದ್ಧ್ಯಾ, ಈದೃಶೇನ ಸ್ತುತಿ ಕರ್ಮಣಾ ವಾ** । ಈಗ ನೀವು ನಮ್ಮ ವಿಷಯದಲ್ಲಿ ತೋರಿಸುತ್ತಿರುವ ಅನುಗ್ರಹಬುದ್ಧಿಯಿಂದ ಅಥವಾ ಈಗ ನಾವು ಮಾಡುವ ಸ್ತುತಿರೂಪವಾದ ಕರ್ಮದಿಂದ ಎಂದು ಈ ಶಬ್ದಗಳಿಗೆ ಎರಡು ವಿಧ ಅರ್ಥವಿವರಣೆಮಾಡಿದ್ದಾರೆ

**ಯಾಮಹೂತಿಷು-ಯಾಮೋ ಗಮನಂ। ತದರ್ಥಾ ಹೂತಯೋ ಯಸ್ಮಿನ್ನಿತಿ ಯಾಮಹೂತಯೋ ಯಜ್ಞಾಃ।** ಯಾಮವೆಂದರೆ ಗಮನವು ಅತಂಹ ಗಮನವು ಯಾವಕರ್ಮವನ್ನುದ್ದೇಶಿಸಿರುವುದೋ ಅದಕ್ಕೆ ಯಾಮ ಹೂತಿಯೆಂದು ಹೆಸರು ದೇವತೆಗಳ ಗಮನವು ಯಜ್ಞಾರ್ಥವಾಗಿರುವುದರಿಂದ ಎಂದರೆ ದೇವತೆಗಳು ಯಜ್ಞಗಳಲ್ಲಿ ಆಹೂತರಾಗಿ ಅಲ್ಲಿಗೆ ಹೋಗುವುದರಿಂದ **ಯಾಮಹೂತಿಷು** ಎಂದರೆ ಯಜ್ಞಗಳಲ್ಲಿ ಎಂದು ಈ ಶಬ್ದದ ಅವಯವಾರ್ಥವಿವರಣೆಮಾಡಿದ್ದಾರೆ.

**ಶ್ರೋತಾರಃ—ತೇಷು (ಯಜ್ಞೇಷು) ಶ್ರೋತಾರ ಆಹ್ವಾನಾನಾಂ** । ಆ ಯಜ್ಞಗಳಲ್ಲಿ ಯಜಮಾನರು ಮಾಡುವ ಆಹ್ವಾನವನ್ನು (ಯಜ್ಞಭೂಮಿಗೆ ಬರಬೇಕೆಂದು ಕರೆಯುವುದನ್ನು) ಕೇಳುವವರಾದ್ದರಿಂದ **ಶ್ರೋತಾರಃ** ಎಂದು ಇಲ್ಲಿ ಹೇಳಿದೆ.

॥ ಸಂಹಿತಾಪಾಠಃ ॥

ತೇ ನೋ ವಸೂನಿ ಕಾಮ್ಯಾ ಪುರುಶ್ಚಂದ್ರಾ ರಿಶಾದಸಃ ।
ಆ ಯಜ್ಞಿಯಾಸೋ ವವೃತ್ತನ ॥ ೧೬ ॥

॥ ಪದಪಾಠಃ ॥

ತೇ । ನಃ । ವಸೂನಿ । ಕಾಮ್ಯಾ । ಪುರುऽಚಂದ್ರಾಃ । ರಿಶಾದಸಃ ।
ಆ । ಯಜ್ಞಿಯಾಸಃ । ವವೃತ್ತನ ॥೧೬॥

॥ ಸಾಯಣಭಾಷ್ಯಂ ॥

**ಹೇ ರಿಶಾದಸೋ ಹಿಂಸಕಾನಾಂ ಶತ್ರೂಣಾಮತ್ತಾರೋ ಹೇ ಯಜ್ಞಿಯಾಸೋ ಯಜ್ಞಾರ್ಹಾಃ ಪುರುಶ್ಚಂದ್ರಾಃ ಪ್ರಭೂತಾಹ್ಲಾದಕಧನಾಸ್ತೇ ಯೂಯಂ ನೋಽಸ್ಮಭ್ಯಂ ವಸೂನಿ ನಿವಾಸಯೋಗ್ಯಾನಿ**

**ಧನಾನಿ ಕಾಮ್ಯಾ ಸ್ಪೃಹಣೀಯಾನ್ಯಾ ವವೃತ್ತನ । ಆವರ್ತಯಥೇತ್ಯರ್ಥಃ । ಮರುತಾಂ ದಾನಪ್ರಶಂ-ಸಾಯಾ ಅಪೇಕ್ಷಿತಶ್ಚಾನ್ನ ಪ್ರಾರ್ಥನೋಚಿತಾ ॥**

॥ ಪ್ರತಿಪದಾರ್ಥ ॥

**ರಿಶಾದಸಃ**—ಶತ್ರುಹಿಂಸಕರೂ । **ಯಜ್ಞಿಯಾಸಃ**—ಯಜ್ಞಾರ್ಹರೂ । **ಪುರುಶ್ಚಂದ್ರಾಃ**—ಆಹ್ಲಾದಕರವಾದ ಧನವುಳ್ಳವರೂ ಆದ ಎಲೈ ಮರುತ್ತುಗಳೇ । **ತೇ**—ನೀವು । **ನಃ**—ನಮಗೆ । **ಕಾಮ್ಯಾ**—ನಮ್ಮಿಂದ ಅಪೇಕ್ಷಿತವಾದವೂ । **ವಸೂನಿ**—ನಿವಾಸಯೋಗ್ಯವೂ ಆದ ಧನಗಳನ್ನು । **ಆ ವವೃತ್ತನ**—ಒದಗಿಸಿಕೊಡಿರಿ.

॥ ಭಾವಾರ್ಥ ॥

ಶತ್ರುಹಿಂಸಕರೂ ಯಜ್ಞಾರ್ಹರೂ ಆಹ್ಲಾದಕರವಾದ ಧನವುಳ್ಳವರೂ ಆದ ಎಲೈ ಮರುತ್ತುಗಳೇ, ನೀವು ನಮಗೆ ನಮ್ಮಿಂದ ಅಪೇಕ್ಷಿತವಾದುವೂ, ನಿವಾಸಯೋಗ್ಯವೂ ಆದ ಧನಗಳನ್ನು ಒದಗಿಸಿ ಕೊಡಿರಿ.

## English Translation

You, are destroyers of the malevolent, abounding in wealth and entitled to adoration, bestow upon us desirable riches.

॥ ವಿಶೇಷವಿಷಯಗಳು ॥

ಮರುದ್ದೇವತೆಗಳನ್ನು ಸ್ತುತಿಸುವ ಋಕ್ಕುಗಳಲ್ಲಿ ಕೊನೆಯದಾದ ಈ ಋಕ್ಕಿನಲ್ಲಿ ನಾವು ಅಪೇಕ್ಷಿಸುವ ಧನಾದಿಗಳನ್ನು ಕೊಡಬೇಕೆಂದು ಋಷಿಯು ಪ್ರಾರ್ಥಿಸಿದ್ದಾನೆ. ಅರ್ಥವು ಸ್ಪಷ್ಟವಾಗಿರುವುದರಿಂದ ವಿವರಣೆಯು ಅವಶ್ಯಕವಿಲ್ಲ.

॥ ಸಂಹಿತಾಪಾಠಃ ॥

ಏತಂ ಮೇ ಸ್ತೋಮಮೂರ್ಮ್ಯೇ ದಾರ್ಭ್ಯಾಯ ಪರಾ ವಹ ।
ಗಿರೋ ದೇವಿ ರಥೀರಿವ ॥ ೧೭ ॥

॥ ಪದಪಾಠಃ ॥

ಏತಂ । ಮೇ । ಸ್ತೋಮಂ । ಊರ್ಮ್ಯೇ । ದಾರ್ಭ್ಯಾಯ । ಪರಾ । ವಹ ।
ಗಿರಃ । ದೇವಿ । ರಥೀಃಽಇವ ॥ ೧೭ ॥

॥ ಸಾಯಣಭಾಷ್ಯಂ ॥

ಸಂಪನ್ನಋಷಿಭಾವಸ್ಯ ಶ್ಯಾವಾಶ್ವಸ್ಯಾರ್ಚನಾನಸಃ । ರಥವೀತಿಸುತಾಯಾಶ್ಚ ವಿವಾಹಂ ಶೌನಕೋಽಬ್ರವೀತ್ ॥ ಕಥಂ । ಮರುತ್ಸು ತು ಪ್ರಯಾತೇಷು ಶ್ಯಾವಾಶ್ವಃ ಸುಮಹಾಯಶಾಃ । ಪ್ರಾದುರ್ಭೂತಾರ್ಷಮಾತ್ಮಾನಂ ಜ್ಞಾತ್ವಾ ತ್ರಿಕುಲನಂದನಃ । ರಥವೀತೇರ್ದುಹಿತರಮಗಚ್ಛನ್ಮನಸಾ ತದಾ । ಸ ಸತ್ಯಮೃಷಿಮಾತ್ಮಾನಂ ಪ್ರವಕ್ಷ್ಯನ್ರಥವೀತಯೇ ॥ ಏತಂ ಮೇ ಸ್ತೋಮಮಿತ್ಯಾಭ್ಯಾಂ ದೌತ್ಯೇ ರಾತ್ರಿಂ ನ್ಯವೇದಯತ್ । ಋಷೇರ್ನಿಯೋಗಮಾಜ್ಞಾಯ ದೇವ್ಯಾ ರಾತ್ರ್ಯಾ ಪ್ರಚೋದಿತಃ ॥ ಆದಾಯ ಕನ್ಯಕಾಂ ದಾತುಮುಪೇಯಾಯಾರ್ಚನಾನಸಂ । ಪಾದೌ ತಸ್ಯೋಪಸಂಗೃಹ್ಯ ಸ್ಥಿತ್ವಾ ಪ್ರಹ್ವಃ ಕೃತಾಂಜಲಿಃ ॥ ರಥವೀತಿರಹಂ ದಾರ್ಭ್ಯ ಇತಿ ನಾಮ ಶಶಂಸ ಸಃ । ಮಯಾ ಸಂಯೋಗಮಿಚ್ಛಂತಂ ತ್ವಾಂ ಪ್ರತ್ಯಾಚಕ್ಷಿ ಯತ್ಪುರಾ ॥ ತತ್ಕ್ಷಮಸ್ವ ನಮಸ್ತೇಽಸ್ತು ಮೇ ಮಾ ಸ್ಮ ಭಗವನ್ ಕ್ರುಧಃ ॥ ಋಷೇಃ ಪುತ್ರಃ ಸ್ವಯಮೃಷಿಃ ಪಿತಾಸಿ ಭಗವಾನೃಷೇಃ । ಹಂತ ಪ್ರತಿಗೃಹಾಣೇಮಾಂ ಸ್ನುಷಾಮಿತ್ಯೇನಮಬ್ರವೀತ್ ॥ ತಸ್ಮೈ ದದಾವಶ್ವಶತಂ ಸ ರಾಜಾ ಸ್ವಲಂಕೃತಾಂ ಚಾಪಿ ಸುತಾಂ ಸ್ನುಷಾರ್ಥಂ। ವಿವಾಹಕಾಲೇಽಪಿ ದದೌ ನರೇಂದ್ರಃ ಶತಂ ಹಯಾನಾಂ ದುಹಿತುಃ ಸಹಸ್ರಂ ॥ ಗವಾಂ ಸಹಸ್ರಂ ವಸು ಚಪ್ರಭೂತಂ ತಪ್ತುಂ ತಪೋಂತೇಽಥ ವನಂ ಜಗಾಮೇತಿ ॥ ಹೇ ಊರ್ಮ್ಯೇ ರಾತ್ರಿ ದೇವಿ । ಊರ್ಮ್ಯೇತಿ ರಾತ್ರಿನಾಮ । ಮೇ ಮದೀಯಮೇತಂ ಸ್ತೋಮಂ ಮರುದ್ಭ್ಯಃ ಕೃತಂ ಸ್ತೋತ್ರಮಹಂ ಮಂತ್ರದೃಕ್ ಭೂತ್ವಾ ಮರುತಃ ಸ್ತುತವಾನಿತ್ಯೇವಂ ದಾರ್ಭ್ಯಾಯ ಶ್ಯಾವಾಶ್ವಾಯ ಪರಾ ಪರಾಙ್ಮುಖೀ ದಾರ್ಭ್ಯಾಭಿಮುಖೀ ಸತೀ ವಹ । ಪ್ರಾಪಯೇತ್ಯರ್ಥಃ । ತದೇವಾದರಾರ್ಥಮುಚ್ಯತೇ । ಹೇ ರಾತ್ರಿ ದೇವಿ ಗಿರಃ ಸ್ತುತೀರ್ಮರುದ್ವಿಷಯಾಃ ಪರಾ ವಹ ರಥೀರಿವ । ರಥೀ ಯಥಾ ರಥೇಽಭಿಪ್ರೇತಂ ವಸು ಸ್ಥಾಪಯಿತ್ವಾಭಿಮತಂ ದೇಶಂ ಪ್ರಾಪಯತಿ ತದ್ವತ್ ॥

॥ ಪ್ರತಿಪದಾರ್ಥ ॥

**ಊರ್ಮ್ಯೇ**—ಎಲೈ ರಾತ್ರಿದೇವಿಯೇ । **ಮೇ**—ನನ್ನಿಂದ ನಿರ್ಮಿತವಾದ **ಏತಂ ಸ್ತೋಮಂ**—ಈ ಸ್ತುತಿಯನ್ನು । **ಪರಾ**—ನನಗೆ ಪರಾಙ್ಮುಖಳಾಗಿಯೂ । **ದಾರ್ಭ್ಯಾಯ**—ದಾರ್ಭ್ಯನಿಗೆ ಅಭಿಮುಖಳಾಗಿಯೂ ಇದ್ದು । **ವಹ**—ಅಲ್ಲಿಗೆ ಸೇರಿಸು । **ದೇವಿ**—ಎಲೈ ದೇವಿಯೇ । **ರಥೀಃ ಇವ**—ರಥದ ಯಜಮಾನನು ಭಾರವಾದ ಪದಾರ್ಥಗಳನ್ನು ರಥದಲ್ಲಿ ಹೊತ್ತುಕೊಂಡು ಹೋಗುವಂತೆ । **ಗಿರಃ**—ನನ್ನ ಸ್ತುತಿಗಳನ್ನು ವಹಿಸಿಕೊಂಡು ಹೋಗು.

॥ ಭಾವಾರ್ಥ ॥

ಎಲೈ ರಾತ್ರಿದೇವಿಯೇ, ನನ್ನಿಂದ ನಿರ್ಮಿತವಾದ ಈ ಸ್ತುತಿಯನ್ನು ನನಗೆ ಪರಾಙ್ಮುಖಳಾಗಿಯೂ, ದಾರ್ಭ್ಯನಿಗೆ ಅಭಿಮುಖಳಾಗಿಯೂ ಇದ್ದು ಅವನಲ್ಲಿಗೆ ಸೇರಿಸು. ಎಲೈ ದೇವಿಯೇ, ರಥದ ಯಜಮಾನನು ಭಾರವಾದ ಪದಾರ್ಥಗಳನ್ನು ರಥದಲ್ಲಿ ಹೊತ್ತುಕೊಂಡು ಹೋಗುವಂತೆ, ನನ್ನ ಸ್ತುತಿಗಳನ್ನು ನೀನು ವಹಿಸಿಕೊಂಡು ಹೋಗು.

## English Translation

Bear to Darbhya, oh night, turning away (from me to him), this my eulogy (of the Maruts) : convey my praises, goddess, as charioteer (conveys the contents of his vehicle to their destination.

॥ ವಿಶೇಷವಿಷಯಗಳು ॥

ಇದುವರೆಗೂ ಎಂದರೆ ಈ ಮಂಡಲದ ೫೨ ನೆಯ ಸೂಕ್ತದಿಂದ ೬೨ ನೆಯ ಸೂಕ್ತಗಳವರೆಗೆ ಇರುವ ೧೧ ಸೂಕ್ತಗಳಿಂದ ಶ್ಯಾವಾಶ್ವನು ಮರುದ್ದೇವತೆಗಳನ್ನು ಸ್ತುತಿಸಿ ಆ ದೇವತೆಗಳ ಅನುಗ್ರಹದಿಂದ ಋಷಿತ್ವವನ್ನು ಪಡೆದನು ಮತ್ತು ರಥವೀತಿರಾಜನೂ ಸಹ ತನ್ನ ಪುತ್ರಿಯನ್ನು ಈ ಶ್ಯಾವಾಶ್ವಋಷಿಗೆ ಕೊಟ್ಟು ವಿವಾಹಮಾಡಿದನು. ಈ ವಿಷಯ ವನ್ನು ಶೌನಕಮಹರ್ಷಿಯು ಈ ರೀತಿ ವಿವರಿಸಿರುವರೆಂದು ಭಾಷ್ಯಕಾರರು ಹೇಳಿರುವರು—

ಸಂಪನ್ನಮೃಷಿಭಾವಸ್ಯ ಶ್ಯಾವಶ್ವಸ್ಯಾರ್ಚನಾನಸಃ ।
ರಥವೀತಿಸುತಾಯಾಶ್ಚ ವಿವಾಹಂ ಶೌನಕೋಽಬ್ರವೀತ್ ॥

ಕಥಂ ?

ಮರುತ್ಸು ತು ಪ್ರಯಾತೇಷು ಶ್ಯಾವಾಶ್ವಃ ಸುಮಹಾಯಶಾಃ ।
ಪ್ರಾದುರ್ಭೂತಾರ್ಷಮಾತ್ಮಾನಂ ಜ್ಞಾತ್ವಾ ತ್ರಿಕುಲನಂದನಃ ॥
ರಥವೀತೇರ್ದುಹಿತರಮಗಚ್ಛನ್ಮನಾ ತದಾ ।
ಸ ಸತ್ಯಮೃಷಿಮಾತ್ಮಾನಂ ಪ್ರವಕ್ಷ್ಯನ್ರಥವೀತಯೇ ॥
ಏತಂ ಮೇ ಸ್ತೋಮಮಿತ್ಯಾಭ್ಯಾಂ ದೌತ್ಯೇ ರಾತ್ರಿಂ ನ್ಯವೇದಯತ್ ।
ಋಷೇರ್ನಿಯೋಗಮಾಜ್ಞಾಯ ದೇವ್ಯಾ ರಾತ್ರ್ಯಾ ಪ್ರಚೋದಿತಃ ॥
ಆದಾಯ ಕನ್ಯಕಾಂ ದಾತುಮುಪೇಯಾಯಾರ್ಚನಾನಸಂ ।
ಪಾದೌ ತಸ್ಯೋಪಸಂಗೃಹ್ಯ ಸ್ಥಿತ್ವಾ ಪ್ರಹ್ವಃ ಕೃತಾಂಜಲಿಃ ॥
ರಥವೀತಿರಹಂ ದಾರ್ಭ್ಯ ಇತಿ ನಾಮ ಶಶಂಸ ಸಃ ।
ಮಯಾ ಸಂಯೋಗಮಿಚ್ಛಂತಂ ತ್ವಾಂ ಪ್ರತ್ಯಾಚಕ್ಷಿ ಯತ್ಪುರಾ ॥
ತತ್ಕ್ಷಮಸ್ವ ನಮಸ್ತೇಽಸ್ತು ಮೇ ಮಾ ಸ್ಮ ಭಗವನ್ ಕ್ರುಧಃ ।
ಋಷೇಃ ಪುತ್ರಃ ಸ್ವಯಮೃಷಿಃ ಪಿತಾಸಿ ಭಗವಾನೃಷೇಃ ।
ಹಂತ ಪ್ರತಿಗೃಹಾಣೇಮಾಂ ಸ್ನುಷಾಮಿತ್ಯೇನಮಬ್ರವೀತ್ ॥
ತಸ್ಮೈ ದದಾವಶ್ವಶತಂ ಸ ರಾಜಾ
ಸ್ವಲಂಕೃತಾಂ ಚಾಪಿ ಸುತಾಂ ಸ್ನುಷಾರ್ಥಂ ।
ವಿವಾಹಕಾಲೇಽಪಿ ದದೌ ನರೇಂದ್ರಃ
ಶತಂ ಹಯಾನಾಂ ದುಹಿತುಃ ಸಹಸ್ರಂ ॥

**ಗವಾಂ ಸಹಸ್ರಂ ವಸು ಚ ಪ್ರಭೂತಂ**
**ತಪ್ತುಂ ತಪೋಽನ್ತೇಽಥ ವನಂ ಜಗಾಮ ॥ ಇತಿ ।**

ಮರುದ್ದೇವತೆಗಳನ್ನು ಸ್ತುತಿಸಿ ಋಷಿಪದವಿಯನ್ನು ಪಡೆದ ಅರ್ಚನಾನಸನೆಂಬ ಋಷಿಯ ಪುತ್ರನಾದ ಶ್ಯಾವಾಶ್ವನು ರಥವೀತಿರಾಜನ ಮಗಳನ್ನು ಮದುವೆಯಾದ ವೃತ್ತಾಂತವನ್ನು ಶೌನಕಮಹರ್ಷಿಯು ಈ ರೀತಿ ಹೇಳಿರುವನು—

ಶ್ಯಾವಾಶ್ವನು ಮರುದ್ದೇವತೆಗಳನ್ನು ಹಿಂದೆ ಹೇಳಿದಂತೆ ೧೧ ಸೂಕ್ತಗಳಿಂದ ಸ್ತುತಿಸಿದ ಬಳಿಕ ಅವರು ಶ್ಯಾವಾಶ್ವನಿಗೆ ಅನುಗ್ರಹಮಾಡಿ ತಮ್ಮ ಸ್ಥಳಕ್ಕೆ ಹೊರಟುಹೋದರು. ಇತ್ತ ಶ್ಯಾವಾಶ್ವನು ತಾನು ಋಷಿಯಾದೆನೆಂದೂ ತನ್ನಿಂದ ಮೂರು ಕುಲಗಳೂ ಪವಿತ್ರವಾದವೆಂದೂ ತಿಳಿದು ಸಂತೋಷಪಟ್ಟು ಹಿಂದೆ ತಾನು ಮೋಹಿಸಿದ್ದ ರಥವೀತಿ ರಾಜನ ಪುತ್ರಿಯನ್ನು ಮನಸ್ಸಿನಲ್ಲಿಯೇ ನೆನೆನೆನೆದು ಚಿಂತಿಸುತ್ತಿದ್ದನು. ಅನಂತರ ಆ ಶ್ಯಾವಾಶ್ವಋಷಿಯು ರಥವೀತಿ ರಾಜನ ಬಳಿಗೆ ರಾತ್ರಿದೇವಿಯನ್ನು ದೂತಕಾರ್ಯಕ್ಕಾಗಿ ಕಳುಹಿಸಲು ಆಲೋಚಿಸಿ, ತಾನು ಈಗ ಮರುದ್ದೇವತೆಗಳ ಅನುಗ್ರಹದಿಂದ ನಿಜವಾಗಿಯೂ ಋಷಿಪದವಿಯನ್ನು ಪಡೆದಿರುವನೆಂಬ ಅಂಶವನ್ನು ಆ ರಾಜನಿಗೆ ತಿಳುಹಿಸಬೇಕೆಂದು ರಾತ್ರಿ ದೇವತೆಯನ್ನು ಪ್ರಾರ್ಥಿಸಿದನು ಈ ವಿಷಯವು **ಏತಂ ಮೇ ಸ್ತೋಮಂ** ಎಂದು ಮೊದಲಾಗುವ ಎರಡು ಋಕ್ಕುಗಳಲ್ಲಿ (ಈ ಸೂಕ್ತದ ೧೭ ಮತ್ತು ೧೮ ನೆಯ ಋಕ್ಕುಗಳು) ವಿವೃತವಾಗಿದೆ. ರಾತ್ರಿದೇವತೆಯು ಶ್ಯಾವಾಶ್ವ ಋಷಿಯ ಮಾತಿಗೆ ಸಮ್ಮತಿಸಿ ಅವನ ನಿಯೋಗವನ್ನು ರಥವೀತಿರಾಜನಿಗೆ ತಿಳಿಸಲು, ಆ ರಾಜನು ತನ್ನ ಪುತ್ರಿಯನ್ನು ತನ್ನ ಜತೆಯಲ್ಲಿ ಕರೆದುಕೊಂಡು ಶ್ಯಾವಾಶ್ವನ ತಂದೆಯಾದ ಅರ್ಚನಾನಸಋಷಿಯ ಸಮೀಪಕ್ಕೆ ಬಂದು ಅವನ ಪಾದ ಗಳನ್ನು ಹಿಡಿದುಕೊಂಡು ನಮಸ್ಕರಿಸಿ, ಕೈಮುಗಿದುಕೊಂಡು ನಮ್ರಭಾವದಿಂದ-ಎಲೈ ಅರ್ಚನಾನಸಋಷಿಯೇ, ನಾನು ದಾರ್ಭ್ಯವಂಶದವನಾದ ರಥವೀತಿ ಎಂಬ ಹೆಸರಿನ ರಾಜನು ಇಗೋ ಈಗ ನಿನ್ನನ್ನು ನಮಸ್ಕರಿಸುವೆನು. ಹಿಂದೆ ಎಂದರೆ ನಾನು ಮಾಡಿದ ಯಜ್ಞಕಾಲದಲ್ಲಿ, ನೀನು ನನ್ನ ಮನೆತನದೊಡನೆ ಬಾಂಧವ್ಯವನ್ನು ಬೆಳಸಲಿಚ್ಛಿಸಿ ನನ್ನ ಮಗಳನ್ನು ನಿನ್ನ ಪುತ್ರನಿಗೆ ಕೊಡಬೇಕೆಂದು ಕೇಳಿದಾಗ ನಾನು ಅದು ಸಾಧ್ಯವಿಲ್ಲವೆಂದು ನಿನ್ನ ಮಾತನ್ನು ತಿರಸ್ಕರಿಸಿದೆ ನಷ್ಟೆ. ಅದನ್ನು ಈಗ ಕ್ಷಮಿಸು, ನನ್ನ ಮೇಲೆ ಕೋಪಮಾಡಬೇಡ ಇಗೋ ನಿನಗೆ ಮತ್ತೆ ನಮಸ್ಕರಿಸು ವೆನು. ನೀನು ಋಷಿವಂಶದಲ್ಲಿ ಹುಟ್ಟಿದ ಋಷಿಪುತ್ರನು ಎಂದರೆ ನಿನ್ನ ತಂದೆಯೂ ಋಷಿಯು, ನೀನೂ ಋಷಿಯು, ಮತ್ತು (ಹೊಸದಾಗಿ) ಋಷಿಯಾಗಿರುವ ಶ್ಯಾವಾಶ್ವಋಷಿಗೆ ತಂದೆಯಾಗಿರುವೆ. ಎಂದರೆ ನಿನ್ನ ಪುತ್ರನೂ ಋಷಿಯ ು ಆದ್ದರಿಂದ ಹಿಂದೆ ನಾನು ಮಾಡಿದ ತಪ್ಪನ್ನು ಕ್ಷಮಿಸಿ ಈ ನನ್ನ ಪುತ್ರಿಯನ್ನು ನಿನ್ನ ಸೊಸೆಯನ್ನಾಗಿ ಪರಿಗ್ರಹಿಸು ಎಂದು ಪ್ರಾರ್ಥಿಸಿ ಆ ಋಷಿಗೆ ನೂರು ಅಶ್ವಗಳನ್ನು ಕೊಟ್ಟು ಸಮಾಧಾನಪಡಿಸಿ ದಿವ್ಯಾಲಂಕಾರ ಭೂಷಿತಳಾದ ತನ್ನ ಮಗಳನ್ನು ಆ ಋಷಿಗೆ ಸೊಸೆಯಂತೆ ಪರಿಗ್ರಹಿಸಬೇಕೆಂದು ಕೊಟ್ಟನು ಎಂದರೆ ಅರ್ಚನಾನಸ ಋಷಿಯ ಪುತ್ರನಾದ ಶ್ಯಾವಾಶ್ವ ಋಷಿಗೆ ತನ್ನ ಮಗಳನ್ನು ಧಾರೆಯೆರೆದುಕೊಟ್ಟನು. ವಿವಾಹಕಾಲದಲ್ಲಿಯೂ ಸಹ ರಾಜನು ತನ್ನ ಮಗಳಿಗೆ ಬಳುವಳಿ ಯಾಗಿ ಅಶ್ವಗಳನ್ನೂ, ಗೋವುಗಳನ್ನೂ ನೂರುಗಟ್ಟಲೆಯಾಗಿಯೂ ಕೊಟ್ಟನು ಅದರ ಜತೆಗೆ ಬಹಳವಾದ ಧನಾದಿ ಗಳನ್ನೂ ಕೊಟ್ಟನು ಅನಂತರ ಆ ರಾಜನು ಕೃತಕೃತ್ಯನಾಗಿ ತಪಸ್ಸನ್ನಾಚರಿಸಲು ವನಕ್ಕೆ ಹೊರಟುಹೋದನು ಎಂಬ ವೃತ್ತಾಂತವನ್ನು ಶೌನಕಮಹರ್ಷಿಯು ವರ್ಣಿಸಿರುವುದನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

**ಊರ್ಮ್ಯೇ ಮೇ ಏತಂ ಸ್ತೋಮಂ ಪರಾ ದಾರ್ಭ್ಯಾಯ ವಹ-ಹೇ ರಾತ್ರಿ ದೇವಿ ಮರುದ್ಭಿಃ ಕೃತಂ ಸ್ತೋತ್ರಮಹಂ ಮಂತ್ರದೃಕ್ ಭೂತ್ವಾ ಮರುತಃ ಸ್ತುತವಾನಿತ್ಯೇವಂ ದಾರ್ಭ್ಯಾಯಾಭಿಮುಖೀ,**

**ಶ್ಯಾವಾಶ್ವಯ ಪರಾಙ್ಮುಖೀ ಸತೀ ವಹ।** ಶ್ಯಾವಾಶ್ವಋಷಿಯು ಮರುದ್ದೇವತೆಗಳನ್ನು ಸ್ತುತಿಸಿ ಋಷಿಪದವಿಯನ್ನು ಪಡದನೆಂದು ಹಿಂದೆ ಹೇಳಿದೆಯಷ್ಟೆ. ಹಿಂದೆ ರಥವೀತಿರಾಜನಿಗೂ ತನ್ನ ತಂದೆಯಾದ ಅರ್ಚನಾನಸಋಷಿಗೂ ಯಜ್ಞಕಾಲದಲ್ಲಿ ಕನ್ಯಾರ್ಥವಾಗಿ ನಡೆದ ಸಂಭಾಷಣೆಯಲ್ಲಿ ಅರ್ಚನಾನಸನ ಪ್ರಾರ್ಥನೆಗೆ ಪ್ರತ್ಯುತ್ತರವಾಗಿ ರಥವೀತಿ ರಾಜನು-ನಿನ್ನ ಪುತ್ರನಾದ ಶ್ಯಾವಾಶ್ವನಿಗೆ ನನ್ನ ಪುತ್ರಿಯನ್ನು ಕೊಡಬೇಕೆಂದು ಕೇಳುತ್ತಿರುವೆ ಆದರೆ ನಿನ್ನ ಪುತ್ರನು ಸೂಕ್ತದ್ರಷ್ಟೃವಾದ ಋುಷಿಯಲ್ಲ, ನಮ್ಮ ವಂಶದಲ್ಲಿ ಋಷಿಯಲ್ಲದವರಿಗೆ ಕನ್ಯಾದಾನಮಾಡುವ ಪದ್ಧತಿ ಇಲ್ಲ ಆದ್ದರಿಂದ ಶ್ಯಾವಾಶ್ವನಿಗೆ ನನ್ನ ಪುತ್ರಿಯನ್ನು ವಿವಾಹಮಾಡಿಕೊಡಲು ಸಾಧ್ಯವಿಲ್ಲವೆಂದು ಹೇಳಿದ್ದನ್ನು ಮನಸ್ಸಿನಲ್ಲಿಯೆ ಚಿಂತಿಸುತ್ತಿದ್ದ ಶ್ಯಾವಾಶ್ವನು ಈಗ ತಾನು ಋಷಿಯಾಗಿರುವುದರಿಂದ ಈ ವಿಷಯವನ್ನು ರಥವೀತಿರಾಜನಿಗೆ ತಿಳಿಸಿ ಅವನು ಹಿಂದೆ ತಿಳಿಸಿದ ಅಡ್ಡಿಆತಂಕಗಳು ಈಗ ನಿವಾರಣೆಯಾಗಿರುವುದರಿಂದ ತನ್ನ ಮಗಳನ್ನು ಕೊಡಬೇಕೆಂದು ತಿಳಿಸುವುದಕ್ಕೆ ರಾತ್ರಿದೇವಿಯನ್ನೇ ದೂತಕಾರ್ಯಮಾಡಿ ತನ್ನ ವಿವಾಹಕಾರ್ಯಕ್ಕೆ ಸಹಾಯಮಾಡಬೇಕೆಂದ, ಪ್ರಾರ್ಥಿಸಿದನು. ರಾತ್ರಿಯು ಇವನ ಪ್ರಾರ್ಥನೆಯನ್ನು ನೆರವೇರಿಸುವೆನೆಂದು ಸಮ್ಮತಿಸಿದಮೇಲೆ ಆ ದೇವತೆಯೊಡನೆ ರಥವೀತಿರಾಜನಿಗೆ ಈರೀತಿ ಹೇಳಿಕಳುಹಿಸಿದನು-ನಾನು ಈಗ ಮರುದ್ದೇವತೆಗಳನ್ನು ಸೂಕ್ತ ಮಂತ್ರಗಳಿಂದ ಸ್ತುತಿಸಿ ಅವರ ಅನುಗ್ರಹದಿಂದ ಮಂತ್ರದ್ರಷ್ಟೃವಾದ ಋಷಿಯಾಗಿರುವೆನು. ಋಷಿಯಲ್ಲದವನಿಗೆ ಕನ್ಯಾದಾನಮಾಡಲು ಸಾಧ್ಯವಿಲ್ಲವೆಂಬ ನಿನ್ನ ಅಡ್ಡಿಯು ಈಗ ನಿವಾರಣೆಯಾಗಿದೆ ಆದ್ದರಿಂದ ನನಗೆ ನಿನ್ನ ಪುತ್ರಿಯನ್ನು ವಿವಾಹಮಾಡಿ ಕೊಡು ಎಂಬ ನಿಯೋಗವನ್ನು ರಾತ್ರಿದೇವಿಯೊಡನೆ ಹೇಳಿಕಳುಹಿಸಿದನು ಹೀಗೆ ಹೇಳಿಕಳುಹಿಸುವಾಗ ದೂತಳಾದ ರಾತ್ರಿಯನ್ನುದ್ದೇಶಿಸಿ ದಾರ್ಭ್ಯರಥವೀತಿಗೆ ಅಭಿಮುಖವಾಗಿ ಹೊರಟು ನನ್ನ ಮಾತನ್ನು ತಿಳಿಸು ಎಂದು ಇಲ್ಲಿ ವರ್ಣಿಸಿದೆ. ರಾತ್ರಿದೇವಿಯು ಶ್ಯಾವಾಶ್ವನ ಬಳಿಯಿಂದ ಹೊರಡುವಾಗ ಅವನಿಗೆ ಪರಾಙ್ಮುಖವಾಗಿ ಎಂದರೆ ಅವನನ್ನು ಹಿಂದೆ ಬಿಟ್ಟು ಹಿಮ್ಮುಖವಾಗಿಯೂ, ದಾರ್ಭ್ಯನ ಬಳಿಗೆ ಹೋಗುವಾಗ ಅವನ ಅಭಿಮುಖವಾಗಿಯೂ (ಎದುರಾಗಿಯೂ) ಹೋಗಬೇಕೆಂದು ಶ್ಯಾವಾಶ್ವನು ತಿಳಿಸಿದ್ದಾನೆ.

**ಗಿರೋ ದೇವಿ ರಥೀರಿವ-ಹೇ ರಾತ್ರಿ ದೇವಿ ಮರುದ್ವಿಷಯಾಃ ಸ್ತುತೀಃ ರಥೀರಿವ ಪರಾ ವಹ। ರಥೀ ಯಥಾಭಿಪ್ರೇತಂ ವಸು ಸ್ಥಾಪಯಿತ್ವಾಭಿಮತಂ ದೇಶಂ ಪ್ರಾಪಯತಿ ತದ್ವತ್।** ಎಲೈ ರಾತ್ರಿದೇವಿಯೇ, ರಥದಲ್ಲಿ ಕುಳಿತು ಪ್ರಯಾಣಮಾಡುವವನು ತನಗೆ ಬೇಕಾದ ಪದಾರ್ಥವನ್ನು ತುಂಬಿಕೊಂಡು ಬೇಕಾದ ಸ್ಥಳಕ್ಕೆ ಹೋಗುವಂತೆ ಮರುದ್ವಿಷಯವಾಗಿ ನಾನು ಮಾಡಿದ ಸ್ತುತಿಗಳ ವಿಷಯವನ್ನು ದಾರ್ಭ್ಯರಥವೀತಿರಾಜನಲ್ಲಿಗೆ ನೀನ್ನು ತೆಗೆದುಕೊಂಡುಹೋಗಿ ತಿಳಿಸು ಎಂದು ದೂತಳಾದ ರಾತ್ರಿಯನ್ನು ರಥಿಕನಿಗೂ ಮರುದ್ವಿಷಯಕವಾದ ಸ್ತುತಿಗಳನು ರಥದಲ್ಲಿ ಒಯ್ಯುವ ವಸ್ತುಗಳಿಗೂ ಹೋಲಿಸಿ ಋಷಿಯು ವರ್ಣಿಸಿದ್ದಾನೆ.

॥ ಸಂಹಿತಾಪಾಠಃ ॥

**ಉತ ಮೇ ವೋಚತಾದಿತಿ ಸುತಸೋಮೇ ರಥವೀತೌ ।**

**ನ ಕಾಮೋ ಅಪ ವೇತಿ ಮೇ ॥ ೧೮ ॥**

॥ ಪದಪಾಠಃ ॥

ಉತ । ಮೇ । ವೋಚತಾತ್ । ಇತಿ । ಸುತಽಸೋಮೇ । ರಥಽವೀತೌ ।

ನ । ಕಾಮಃ । ಅಪ । ವೇತಿ । ಮೇ ॥ ೧೮ ॥

॥ ಸಾಯಣಭಾಷ್ಯಂ ॥

ಹೇ ಊರ್ಮ್ಯೇ ಉತಾಪಿ ಚ ಮೇ ಮಾಂ ವೋಚತಾತ್ । ಬ್ರೂಹಿ । ಕಿಮಿತ್ಯುಚ್ಯತೇ । ಇತೀತ್ಥಂ । ಕಥಮಿತಿ । ಸುತಸೋಮೇ ಕೃತಸೋಮಯಾಗೇ ರಥವೀತೌ ರಾಜ್ಞಿ ಮೇ ಕಾಮಸ್ತತ್ಪುತ್ರೀವಿಷಯೋ ನಾಪ ವೇತಿ । ನಾಪಗಚ್ಛತಿ । ನ ವಿರಮತ ಇತೀತ್ಥಂ ವೋಚತಾತ್ ॥

॥ ಪ್ರತಿಪದಾರ್ಥ ॥

**ಉತ**—ಮತ್ತು, (ಎಲೈ ರಾತ್ರಿದೇವಿಯೇ) । **ಮೇ**—ನನ್ನ । **ಕಾಮಃ**—ರಥವೀತಿಪುತ್ರಿಯಲ್ಲಿರುವ ಪ್ರೇಮವು । **ನ ಅಪ ವೇತಿ**—ಕೊಂಚವೂ ಮಲಿನವಾಗಿರುವುದಿಲ್ಲ । **ಇತಿ**—ಎಂಬುದಾಗಿ । **ಸುತಸೋಮೇ**—ಸೋಮಯಾಗವನ್ನು ನೆರವೇರಿಸಿದ । **ರಥವೀತೌ**—ರಥವೀತಿಯನ್ನು ಕುರಿತು । **ಮೇ**—(ಅವನ ಪುತ್ರಿಯಲ್ಲಿರುವ), ನನ್ನ ಪ್ರೇಮವನ್ನು । **ವೋಚತಾತ್**—ವಿವರಿಸಿ ತಿಳಿಸು.

॥ ಭಾವಾರ್ಥ ॥

ಎಲೈ ರಾತ್ರಿದೇವಿಯೇ, ರಥವೀತಿಪುತ್ರಿಯಲ್ಲಿರುವ ನನ್ನ ಪ್ರೇಮವು ಕೊಂಚವೂ ಮಲಿನವಾಗಿರುವುದಿಲ್ಲ ಎಂಬುದಾಗಿ ಸೋಮಯಾಗವನ್ನು ನೆರವೇರಿಸಿದ ರಥವೀತಿಯನ್ನು ಕುರಿತು ಅವನಿಗೆ ತತ್ಪುತ್ರೀಪರವಾದ ನನ್ನ ಪ್ರೇಮವನ್ನು ವಿವರಿಸಿ ತಿಳಿಸು.

## English Translation

And say on my behalf to Rathavıti, when the libation is poured out my love (for your daughter) does not depart

॥ ವಿಶೇಷವಿಷಯಗಳು ॥

ವಿವಾಹಾರ್ಥವಾಗಿ ರಥವೀತಿರಾಜನ ಪುತ್ರಿಯನ್ನು ಬೇಡುವ ಶ್ಯಾವಾಶ್ವ ಋಷಿಯು ತಾನು ಮೋಹಿಸಿರುವ ಆ ಕನ್ಯೆಯಲ್ಲಿ ಹಿಂದೆ ತನಗಿದ್ದ ಪ್ರೀತಿಯು ಕೊಂಚವೂ ಕಡಿಮೆಯಾಗಿಲ್ಲವೆಂದೂ ಈಗಲೂ ಅವಳಲ್ಲಿ ತನ್ನ ಪ್ರೇಮವು ಅತಿಶಯವಾಗಿರುವುದೆಂದೂ ತಿಳಿಸಬೇಕೆಂದು ಪ್ರಾರ್ಥಿಸಿದ್ದಾನೆ

*

॥ ಸಂಹಿತಾಪಾಠಃ ॥

ಏಷ ಕ್ಷೇತಿ ರಥವೀತಿರ್ಮಘವಾ ಗೋಮತೀರನು ।

ಪರ್ವತೇಷ್ವಪಶ್ರಿತಃ ॥ ೧೯ ॥

॥ ಪದಪಾಠಃ ॥

ಏಷಃ । ಕ್ಷೇತಿ । ರಥऽವೀತಿಃ । ಮಘऽವಾ । ಗೋऽಮತೀಃ । ಅನು ।

ಪರ್ವತೇಷು । ಅಪऽಶ್ರಿತಃ ॥ ೧೯ ॥

॥ ಸಾಯಣಭಾಷ್ಯಂ ॥

**ಕನ್ಯಾಂ ದತ್ವಾ ಕೃತಾರ್ಥಂ ತಂ ಶ್ಯಾವಾಶ್ವೋऽಥ ವನಂ ಗತಂ । ರಥವೀತಿಂ ತಪಸ್ಯಂತಂ ಸಂಪ್ರೇಕ್ಷ್ಯಾರ್ಷೇಣ ಚಕ್ಷುಷಾ । ರಮ್ಯೇ ಹಿಮವತಃ ಪೃಷ್ಠ ಏಷ ಕ್ಷೇತೀತಿ ಸೋऽಬ್ರವೀತ್ ॥ ಏಷ ರಥವೀತಿರ್ಮಘವಾ ಧನವಾನ್ ಗೋಮತೀರನೂದಕವತೀರ್ನದೀರನು ಅನುಸೃತ್ಯ ನದೀನಾಂ ತೀರೇ ಕ್ಷೇತಿ ನಿವಸತಿ ಪರ್ವತೇಷು ಹಿಮವತ್ಪರ್ವತಪ್ರಾಂತೇಷ್ವಪಶ್ರಿತ ಆಶ್ರಿತಃ ॥**

॥ ಪ್ರತಿಪದಾರ್ಥ ॥

**ಮಘವಾ**—ಧನವಂತನಾದ । **ಏಷಃ ರಥವೀತಿಃ**—ಅದೇ ರಥವೀತಿಯು । **ಗೋಮತೀರನು**—ಗೋಮತೀ ನದಿಯ ದಡದಲ್ಲಿ । **ಕ್ಷೇತಿ**—ವಾಸಮಾಡುತ್ತಿದ್ದಾನೆ । **ಪರ್ವತೇಷು**—ಹಿಮವತ್ಪರ್ವತದ ಪ್ರಾಂತದಲ್ಲಿ **ಅಪಶ್ರಿತಃ**—ಆಶ್ರಯವನ್ನು ಹೊಂದಿದ್ದಾನೆ.

॥ ಭಾವಾರ್ಥ ॥

ಧನವಂತನಾದ ರಥವೀತಿಯು ಗೋಮತೀ ನದಿಯ ದಡದಲ್ಲಿ ವಾಸಮಾಡುತ್ತಿದ್ದಾನೆ ಹಿಮವತ್ಪರ್ವತದ ಪ್ರಾಂತದಲ್ಲಿ ಆಶ್ರಯವನ್ನು ಹೊಂದಿದ್ದಾನೆ.

English Translation

This opulent Rathaviti dwells upon the (banks of the) Gomati (river) and has his home on (the skirts of) the (Himalaya) mountains

॥ ವಿಶೇಷವಿಷಯಗಳು ॥

ಭಾಷ್ಯಕಾರರು ಈ ಋಕ್ಕಿನ ವಿಷಯದಲ್ಲಿ ಒಂದು ಶ್ಲೋಕವನ್ನು ಇಲ್ಲಿ ಹೇಳಿರುವರು ಇದರ ವಿವರಣೆಯು ಈ ರೀತಿ ಇದೆ.

**ಕನ್ಯಾಂ ದತ್ವಾ ಕೃತಾರ್ಥಂ ತಂ ಶ್ಯಾವಾಶ್ವೋಽಥ ವನಂ ಗತಂ ।**
**ರಥವೀತಿಂ ತಪಸ್ಯಂತಂ ಸಂಪ್ರೇಕ್ಷ್ಯಾರ್ಷೇಣ ಚಕ್ಷುಷಾ ॥**

ರಥವೀತಿರಾಜನು ಶ್ಯಾವಾಶ್ವಋಷಿಗೆ ತನ್ನ ಪುತ್ರಿಯನ್ನು ವಿವಾಹಮಾಡಿಕೊಟ್ಟು ತಾನು ಧನ್ಯನಾದೆನೆಂದು ತಿಳಿದು ತಪಸ್ಸುಮಾಡುವುದಕ್ಕಾಗಿ ತಪೋವನಕ್ಕೆಹೊರಟುಹೋದನು. ಈ ರೀತಿ ರಥವೀತಿರಾಜನು ತಪೋವನಕ್ಕೆ ಹೋಗಿ ಅಲ್ಲಿ ತಪಸ್ಸನ್ನು ಮಾಡುತ್ತಿದ್ದನೆಂಬ ವಿಷಯವನ್ನು ಶ್ಯಾವಾಶ್ವಋಷಿಯು ತನ್ನ ತಪೋದೃಷ್ಟಿಯಿಂದ ಅಥವಾ ಋಷಿಗೆ ಸಹಜವಾದ ಭೂತಭವಿಷ್ಯದ್ವರ್ತಮಾನವನ್ನು ತಿಳಿಯಬಲ್ಲ ಕ್ರಾಂತದೃಷ್ಟಿಯಿಂದ ತಿಳಿದು ಈ ಋಕ್ಕಿನಲ್ಲಿ ಹೇಳಿರುವಂತೆ-ರಥವೀತಿರಾಜನು ಹಿಮವತ್ಪರ್ವತದ ತಪ್ಪಲಿನಲ್ಲಿ ಗೋಮತೀ ಎಂಬ ನದಿಯ ದಡದಲ್ಲಿ (ತಪಸ್ಸನ್ನು ಮಾಡುತ್ತಾ) ವಾಸಿಸುತ್ತಿರುವನು ಎಂಬ ವಾಕ್ಯವನ್ನು ಹೇಳಿರುವನು

**ಗೋಮತೀಃ-ಗೋಮತೀರನೂದಕವತೀರ್ನದೀಃ ।** ಇಲ್ಲಿ ಗೋಮತೀಃ ಎಂದು ಬಹುವಚನ ಪ್ರಯೋಗವಿದೆ ಬಹಳವಾದ ನೀರುಳ್ಳ ನದಿ ಎಂದರ್ಥ. ಅಥವಾ ಗೋಮತಿಯೆಂಬ ಹೆಸರಿನ ನದಿಯೆಂದು ಹೇಳುವುದೇ ಇಲ್ಲಿ ಸಮಂಜಸವಾಗಿರುವುದು. ಈ ನದಿಯ ವಿಷಯದಲ್ಲಿ Wilson ಎಂಬ ಪಾಶ್ಚಾತ್ಯಪಂಡಿತನು ಈರೀತಿ ಹೇಳಿದ್ದಾನೆ-

**ಗೋಮತೀಃ** according to the comment, means, having water, rivers, being in the plural, as the name of a river it would be the Gomati river in Oudh (ಅಯೋಧ್ಯ) which rises in the skirts of the first range of the Himalayas; or it may be a river of the same appellation more to the north-west, rising in Kulu, a feeder of the Beyas or Vyasa (ಬೀಯಾಸ್ ನದಿ)

## ಅರವತ್ತೆರಡನೆಯ ಸೂಕ್ತ

### ಪೀಠಿಕೆ.

ಈ ಮಂಡಲದ ೬೨ ನೇ ಸೂಕ್ತದಿಂದ ೭೨ನೆಯ ಸೂಕ್ತದವರೆಗೆ ಇರುವ ೧೧ ಸೂಕ್ತಗಳಲ್ಲಿಯೂ ಮಿತ್ರಾವರುಣರನ್ನು ಸ್ತುತಿಸಲಾಗಿದೆ. ಈ ದೇವತೆಗಳ ವಿಷಯವಾದ ಸೂಕ್ಷ್ಮಪರಿಚಯವನ್ನು ಇಲ್ಲಿ ವಿವರಿಸಿದ್ದೇವೆ.

ಮಿತ್ರಾವರುಣರಿಬ್ಬರ ಸಾಹಚರ್ಯವು ಪ್ರಸಿದ್ಧವಾದುದು. ಅನೇಕ ವೇಳೆ ಇಬ್ಬರೂ ಒಟ್ಟಿಗೇ ಸ್ತುತರಾಗುತ್ತಾರೆ. ಅನೇಕ ವೇಳೆ ವರುಣನನ್ನುದ್ದೇಶಿಸಿದ ವೈಯಕ್ತಿಕವಾದ ಸ್ತುತಿಯಿರುತ್ತದೆ. ಆದರೆ ಮಿತ್ರನು ವರುಣರಹಿತನಾಗಿ ಸ್ತುತನಾಗುವುದು ಅಪರೂಪ. ಭಾಷ್ಯಕಾರರು ವಿವರಿಸುವಂತೆ ಮಿತ್ರನು ಅಹರಭಿಮಾನೀದೇವತೆಯಾಗಿಯೂ ವರುಣನು ರಾತ್ರ್ಯಭಿಮಾನಿದೇವತೆಯಾಗಿಯೂ ಇರುವುದು ವಾಸ್ತವವಾಗಿದ್ದರೆ ಆಗ ಇಬ್ಬರ ಸಾಹಚರ್ಯವೂ ಸಹಜವಾಗಿಯೇ ಇರುತ್ತದೆ. ಸಾಯಣರು ೧-೬೪-೩ನೇ ಮಂತ್ರಕ್ಕೆ ಭಾಷ್ಯವನ್ನು ಬರೆಯುತ್ತಾ “ **ಅಹರಭಿಮಾನಿನಂ ದೇವಂ ।**

**ಮಿತ್ರಂ ವಾ ಅಹರಿತಿ ಶ್ರುತೇಃ"** ಮಿತ್ರನು ಅಹಸ್ಸು ಎಂಬ ತಾದಾತ್ಮ್ಯವನ್ನು ತೋರಿಸುವ ಶ್ರುತಿವಾಕ್ಯವಿರುವುದರಿಂದ ಅವನು ಅಹರಭಿಮಾನಿದೇವತೆಯೆಂದೂ, ವರುಣನು ರಾತ್ರ್ಯಭಿಮಾನಿಯೆಂದು ಪ್ರಸಿದ್ಧಿಯಿದೆಯೆಂದೂ ತಿಳಿಸಿದ್ದಾರೆ. ಆಚ್ಛಾದನನಾಡು ಎಂಬರ್ಥವುಳ್ಳ ' ವೃ ಎಂಬ ಧಾತುವಿನಿಂದ 'ವರುಣ, ಶಬ್ದವು ನಿಷ್ಪನ್ನವಾಗಿದೆ. ಈ ದೇವತೆಯು ದುಷ್ಟರನ್ನು ತನ್ನ ಪಾಶದಿಂದ ಬಿಗಿಯುತ್ತಾನೆ ಮತ್ತು ರಾತ್ರಿಯು ವರುಣನಿಗೆ ಸಂಬಂಧಪಟ್ಟಿದು. **ವೃಣೋತಿ ಪಾಪಕೃತಃ ಸ್ವಕೀಯೈಃ ಪಾಶೈರಾವೃಣೋತೀತಿ ರಾತ್ರ್ಯಭಿಮಾನಿದೇವೋ ವರುಣಃ। ಶ್ರೂಯತೇ ಚ- ವಾರುಣೀ ರಾತ್ರಿಃ ।** (ತೈ ಬ್ರಾ. ೧-೭.೧೦-೧ ಇತಿ)

೧-೧೪೧-೯ ನೇ ಮಂತ್ರಾರ್ಥದ ವಿವರಣೆಯನ್ನು ಹೇಳುವಾಗಲೂ ಸಹ ಇದೇ ನಿರ್ವಚನಗಳನ್ನು ತಿಳಿಸುತ್ತಾ ಜೊತೆಯಲ್ಲಿ **ಅರ್ಯಮನು** ಈ ದೇವತಾದ್ವಯದ ನಡುವೆ ಸೇರತಕ್ಕವನೆಂದೂ ತಿಳಿಸಿದ್ದಾರೆ. **(ಅರ್ಯಮಾ ಉಭಯೋರ್ಮಧ್ಯವರ್ತೀ ದೇವಃ)** ೧ ೯೦-೧ ನೇ ಮಂತ್ರದ ವಿವರಣೆಯಲ್ಲಿ **(ಅರ್ಯಮಾ ಅಹೋರಾತ್ರವಿಭಾಗಸ್ಯ ಕರ್ತಾ ಸೂರ್ಯಃ)** ಅಹೋರಾತ್ರವನ್ನು ವಿಭಾಗಮಾಡತಕ್ಕ ಸೂರ್ಯನಿಗೆ ಅರ್ಯಮನೆಂದು ಹೆಸರೆಂದು ಸೂಚಿಸಿದ್ದಾರೆ ಪುನಃ, ೨.೩೮-೮ ನೇ ಮಂತ್ರದ ಭಾಷ್ಯದಲ್ಲಿ ವರುಣನ ಸ್ವರೂಪವನ್ನು ಈ ರೀತಿ ವರ್ಣಿಸಿದೆ.

> **ಯೋನಿಂ ಸ್ಥಾನಂ ನಿಮಿಷಿ ನಿಮೇಷೇ ಸವಿತುರಸ್ತಮಯೇ ಸತಿ ವಿಶ್ರಮಾರ್ಥಂ ಪ್ರಾಣಿಭ್ಯಃ ಪ್ರಯಚ್ಛತಿ । ವರುಣಸ್ಯ ರಾತ್ರೇರ್ನಿರ್ವಾಹಕತ್ವಾತ್ ।**

ಸೂರ್ಯಾಸ್ತಮವಾದನಂತರ ಪ್ರಾಣಿಗಳಿಗೆ ವಿಶ್ರಾಂತಿಸ್ಥಾನವನ್ನು ಕಲ್ಪಿಸಿಕೊಡುವವನೇ ವರುಣನು ಇವನೇ ರಾತ್ರಿಯ ವ್ಯವಹಾರಗಳಿಗೆಲ್ಲಾ ನಿರ್ವಾಹಕನು

೧.೩೫.೧ ರಲ್ಲು **ಅಗ್ನಿ ಸವಿತೃ** ಮತ್ತು **ರಾತ್ರಿ** ಈ ದೇವತೆಗಳೊಡನೆ **ಮಿತ್ರಾವರುಣರಿಗೆ** ಆಹ್ವಾನವಿದೆ

" ನಮ್ಮ ಕ್ಷೇಮಸಾಧನೆಗಾಗಿ ನಾನು ಅಗ್ನಿಯನ್ನು ಪ್ರಾರ್ಥಿಸಿ ಕರೆಯುತ್ತೇನೆ. ನಮ್ಮ ಸಹಾಯಾರ್ಥವಾಗಿ ಮಿತ್ರಾವರುಣರನ್ನು ಕರೆಯುತ್ತೇನೆ ವಿಶ್ವಕ್ಕೆ ವಿಶ್ರಾಂತಿದಾಯಕಿಯಾದ ರಾತ್ರಿಯನ್ನು ಕರೆಯುತ್ತೇನೆ " ಎಂದು ಉಳಿದ ದೇವತೆಗಳೊಡನೆ ಸೇರಿಸಿ ಸ್ತುತಿಸಿದೆ ಕೆಲವೆಡೆಗಳಲ್ಲಿ **ಸೂರ್ಯನೇ ಮಿತ್ರ**ಶಬ್ದವಾಚ್ಯನೆಂದೂ **ತಿಳಿಸಿದೆ. (ಮಿತ್ರಶಬ್ದಸ್ಯ ಸೂರ್ಯವಾಚಿತ್ವಾತ್** ತೈ. ಸಂ ಭಾ. ೧ ೮-೧೬-೧) ಅದೇ ಸಂದರ್ಭದಲ್ಲಿ **ವರುಣ**ಪದದ ನಿರ್ವಚನವನ್ನೂ ತಿಳಿಸುತ್ತಾ **ವರುಣಶಬ್ದಸ್ಯ ಅಂಧಕಾರವದಾವರ್ತಕವಾಚಿತ್ವಾತ್।** ಅಂಧಕಾರದಂತೆ ಸರ್ವತ್ರ ವ್ಯಾಪಿಸುವ ಸ್ವರೂಪವುಳ್ಳದ್ದರಿಂದ ವರುಣನಿಗೆ ಈ ಹೆಸರು ಪ್ರಸಿದ್ಧವಾಗಿದೆಯೆಂದು ವಿವರಿಸಿದೆ. **ಮೈತ್ರಂ ವಾಂ ಅಹಃ । ವಾರುಣೀ ರಾತ್ರಿಃ ॥** ಎಂದು ಹೇಳಿದೆ. (ತೈ ಬ್ರಾ. ೧-೭-೧೦ ೧)

> **ನ ವಾ ಇದಂ ದಿವಾ ನ ನಕ್ತಮಾಸೀದವ್ಯಾಕೃತಂ ತೇ ದೇವಾ ಮಿತ್ರಾವರುಣಾವಬ್ರುವನ್ನಿದಂ ನೋ ವಿವಾಸಯತಮಿತಿ ।** (ತೈ. ಸಂ ೬-೪-೮-೩)
>
> **ಮಿತ್ರೋ ಅಹರಜನಯದ್ವರುಣೋ ರಾತ್ರಿಂ ॥**
>
> (ತೈ. ಸಂ. ೬-೪.೮ ೩)

**ಪೂರ್ವ**ದಲ್ಲಿ ಪ್ರಪಂಚದಲ್ಲಿ **ಅಹೋರಾತ್ರ**ಗಳೆಂಬ ವಿಭಾಗವಿರಲಿಲ್ಲ. ಎಲ್ಲವೂ ಅವ್ಯಾಕೃತವಾಗಿದ್ದಿತು ಆಗ ದೇವತೆಗಳು ಮಿತ್ರಾವರುಣರನ್ನು ಕುರಿತು ' **ನೀವು ಅಹೋರಾತ್ರಗಳ ವಿಭಾಗವನ್ನು**ಂಟುಮಾಡಿ ಎಂದು **ಕೇಳಿಕೊಂಡು**ದರ **ಮೇಲೆ**

ಮಿತ್ರನು ಅಹಸ್ಸನ್ನೂ, ವರುಣನು ರಾತ್ರಿಯನ್ನೂ ನಿರ್ಮಿಸಿದರೆಂದು ತೈತ್ತಿರೀಯಸಂಹಿತಾವಾಕ್ಯವು ತಿಳಿಸುತ್ತದೆ. ಋಕ್ಸಂಹಿತೆಯಲ್ಲಿ ವರುಣನ ಸ್ತುತಿಕಾಲದಲ್ಲಿ,

**ಸ ಕ್ಷಪಃ ಪರಿಷಸ್ವಜೇ ನ್ಯು೧ ಸ್ರೋ ಮಾಯಯಾ ದಧೇ ಸ ವಿಶ್ವಂ ಪರಿ ದರ್ಶತಃ ।**

(ಋ. ಸಂ. ೮-೪೧-೩)

ದರ್ಶನೀಯ ರೂಪವುಳ್ಳ ಇದೇ ವರುಣನು ರಾತ್ರಿಯನ್ನು ಆಲಂಗಿಸುತ್ತಾನೆ. ತನ್ನ ಮಾಯಾಶಕ್ತಿಯಿಂದ ದಿವಸವನ್ನು ಸೃಷ್ಟಿಸಿ ಸಕಲವನ್ನೂ ಆಯಾ ನಿರ್ದಿಷ್ಟವಾದ ದೇಶಕಾಲಗಳಲ್ಲಿ ಪ್ರತಿಷ್ಠಾಪಿಸುತ್ತಾನೆ, ಎಂದು ಪ್ರಶಂಸಿಸಿದೆ. ಋ ಸಂ ೭-೮೭-೧ನೇ ಮಂತ್ರದ ಭಾಷ್ಯದಲ್ಲಿ,

**" ಅಸ್ತಂ ಗಚ್ಛನ್ ಸೂರ್ಯ ಏವ ವರುಣ ಇತ್ಯುಚ್ಯತೇ । ಸ ಹಿ ಸ್ವಗಮನೇನರಾತ್ರೀರ್ಜ ನಯತಿ"** ಅಸ್ತಂಗತನಾಗತಕ್ಕ ಸೂರ್ಯನಿಗೇ ವರುಣನೆಂಬ ಹೆಸರು, ಅವನು ತನ್ನ ಗಮನದಿಂದಲೇ ರಾತ್ರಿ ಯನೂ ನಿರ್ಮಿಸುತ್ತಾನೆ ಎಂದು ಸಾಯಣರು ವಿವರಿಸಿದ್ದಾರೆ.

**ಅಯಂ ವೈ ಲೋಕೋ ಮಿತ್ರಃ । ಅಸೌ ವರುಣಃ ।**

(ಶ ಬ್ರಾ ೧೨-೯-೨-೧೨)

ಈ ಪೃಥ್ವಿಯೇ ಮಿತ್ರನು, ದ್ಯುಲೋಕವೇ ವರುಣನು ಎಂದು ಶತಪಥ ಬ್ರಾಹ್ಮಣವು ಪ್ರಶಂಸಿಸಿದೆ ಹೀಗೆ ಇವರ ಗುಣ ವರ್ಣನವು ಅನೇಕರೀತಿಯಲ್ಲಿರುತ್ತದೆ.

## ಮಿತ್ರಾವರುಣರ ಗುಣಾತಿಶಯಗಳು

ಋಕ್ಸಂಹಿತೆಯಲ್ಲಿ ವರ್ಣಿತವಾಗಿರುವಂತೆ ಮಿತ್ರಾವರುಣರ ವಿಶೇಷಗುಣಗಳನ್ನು ಇಲ್ಲಿ ಸೂಕ್ಷ್ಮವಾಗಿ ತಿಳಿಸ ಲಾಗುತ್ತದೆ. ಈ ಎರಡು ದೇವತೆಗಳಲ್ಲಿ ವರುಣನು ಒಂದೊಂದು ಸಲ ಯಜಮಾನರ ಗೋಚರಕ್ಕೆ ಸಿಲುಕಬಲ್ಲನೆಂದು ಸ್ತುತನಾಗಿದ್ದಾನೆ.

"ಎಲ್ಲರಿಗೂ ಗೋಚರನಾಗತಕ್ಕ ವರುಣನನ್ನು ನಾನು ಪ್ರತ್ಯಕ್ಷವಾಗಿ ಕಂಡೆನು. ಪೃಥ್ವಿಯ ಮೇಲೆ ನಿಂತಿರ ತಕ್ಕ ಅವನ ರಥವನ್ನೂ ಸಹ ನಾನು ಪ್ರತ್ಯಕ್ಷವಾಗಿ ನೋಡಿದೆನು." (ಋ. ಸಂ. ೧-೨೫-೧೮)

"ನಾನು ವರುಣನ ದರ್ಶನವನ್ನು ಪಡೆದಾಗ ಅವನ ತೇಜಸ್ಸು ಅಗ್ನಿಯ ತೇಜಸ್ಸಿಗೆ ಸಮಾನವಾದ ಪ್ರಭೆಯುಳ ದ್ದಾಗಿದ್ದಿತು " (೭-೮೮-೨)

"ಸ್ಥಿರಸಂಕಲ್ಪವುಳ್ಳವನೂ, ಮಹತ್ಸ್ವರೂಪವುಳ್ಳವನೂ ಆದ ವರುಣನು ಪ್ರಭುತ್ವವನ್ನು ಮಾಡುತ್ತಾ ತನ್ನ ನಿವಾಸಸ್ಥಾನದಲ್ಲಿ ಸುಖವಾಗಿ ಸ್ಥಿತನಾಗಿದ್ದಾನೆ." (೧-೨೫-೧೦)

"ತಾನು ಸ್ವರ್ಣಕವಚವನ್ನು ಧರಿಸಿ ನಿಂತುಕೊಂಡು ಪ್ರಭುತ್ವವನ್ನು ಮಾಡುತ್ತಿರುವಾಗ ಅವನ ಸುತ್ತಲೂ ಅವನ ಅನುಯಾಯಿಗಳೋ ಅಥವಾ ಇತರ ದೇವತೆಗಳೋ ಸುತ್ತುವರೆದು ನಿಂತಿರುತ್ತಾರೆ. (೧-೨೫-೧೩)

"ಯಜ್ಞಕರ್ತರಾದ ಯಜಮಾನರು ಯಾವ ವರುಣನ ಗೃಹವನ್ನು ಪ್ರವೇಶಿಸಿ ಅವನನ್ನು ಸಾಕ್ಷಾತ್ತಾಗಿ ಪೂಜಿಸುವರೋ, ಆ ಗೃಹಕ್ಕೆ ಸಹಸ್ರದ್ವಾರಗಳಿರುತ್ತವೆ." (೭.೮೫.೫)

"ಸಹಸ್ರ ಆಧಾರಸ್ತಂಭಗಳಿರತಕ್ಕ ಸ್ಥಿರವಾದ ಗೃಹದಲ್ಲಿ ಪ್ರಕಾಶಮಾನನಾದ ವರುಣನು ಮಿತ್ರನೊಂದಿಗೆ ವಾಸಿಸುತ್ತಾನೆ. ಇವರಿಬ್ಬರೂ ಅಪ್ರತಿಹತವಾದ ತೇಜಸುಳ್ಳವರು" **(ರಾಜಾನಾ ; ಅಹ್ರಣೀಯಮಾನಾ)**

(೨-೪೧-೫; ೫-೬೨-೬)

"ಜಗತ್ಪ್ರಭುಗಳಾದ ಈ ಮಿತ್ರಾವರುಣರಿಬ್ಬರೂ ಸಹ, ಅಶ್ವಗಳಿಂದ ಎಳೆಯಲ್ಪಡುವುದೂ, ಸೂರ್ಯೋದಯ ಕಾಲದಲ್ಲಿ ಹೊಂಬಣ್ಣವನ್ನು ಹೊಂದಿ ಸೂರ್ಯಾಸ್ತಮಯಕಾಲದಲ್ಲಿ ಅಯೋರೂಪಕ್ಕೆ ಪರಿವರ್ತಿಸುವುದೂ ಆದ ಉತ್ತಮವಾದ ರಥದಲ್ಲಿ ಹತ್ತಿ ಕುಳಿತು ತಮ್ಮ ಸಂಚಾರವನ್ನು ಕೈಗೊಳ್ಳುತ್ತಾರೆ" (೫-೬೨-೮)

"ಈ ರಥವನ್ನು ಹತ್ತಿ, ಅತ್ಯುನ್ನತವಾದ ಅಂತರಿಕ್ಷದಲ್ಲಿ ಸಂಚರಿಸುತ್ತಾ, ಇವರಿಬ್ಬರೂ ಸಹ ದ್ಯಾವಾಪೃಥಿವಿಗಳೆಲ್ಲವನ್ನೂ ಪೂರ್ಣವಾಗಿ ವೀಕ್ಷಿಸುತ್ತಾರೆ.

(೫-೬೨ ೪, ೮, ೫-೬೨-೧)

"ವರುಣನು ವಿಸ್ತೃತವಾದ ಚಕ್ಷುಸ್ಸುಳ್ಳವನು ಆದುರಿಂದಲೇ ದೂರದೃಷ್ಟಿಯುಳ್ಳವನು"

(೧-೨೫-೫, ೧೬ ,೮-೯೦-೨)

"ಇದೇ ವರುಣನು ಸಹಸ್ರದೃಷ್ಟಿಯುಳ್ಳವನು. (ಸಹಸ್ರಚಕ್ಷಸ್) (೭-೩೪-೧೦)

ಕೆಲವೆಡೆಗಳಲ್ಲಿ ವರುಣನು ಹೊಂಬಣ್ಣದ ದೂತನುಳ್ಳವನೆಂದು ಸ್ತುತನಾಗಿದ್ದಾನೆ. **(ಹಿರಣ್ಯಪಕ್ಷಂ ವರುಣಸ್ಯ ದೂತಂ)** (೧೦-೧೨೩-೬)

ಇನ್ನು ಕೆಲವೆಡೆಗಳಲ್ಲಿ ಸೂರ್ಯನು ಮಿತ್ರಾವರುಣರ ಚಕ್ಷುಸ್ಸೆಂದು ವರ್ಣಿತನಾಗಿದ್ದಾನೆ. (**ಚಕ್ಷುರ್ಮಿತ್ರಸ್ಯ ವರುಣಸ್ಯ**) (೧-೧೧೫-೧ , ೭-೬೩-೧ , ೭-೬೧-೧ , ೧೦-೩೭-೧)

ಆದಿತ್ಯರ ಗುಂಪಿನಲ್ಲೇ ಸೇರಿದ ಅರ್ಯಮನೂ, ಮಿತ್ರಾವರುಣರೂ ಒಟ್ಟಿಗೆ **ಸೂರಚಕ್ಷಸಃ** ಎಂದು ಅನೇಕ ಕಡೆಗಳಲ್ಲಿ ವರ್ಣಿತರಾಗಿದ್ದಾರೆ. (ಉದಾ : ೭-೬೬-೧೦)

"ಮಿತ್ರಾವರುಣರು ಅತಿಕುಶಲಕ್ರಿಯೆಗೆ ಯೋಗ್ಯವಾದ ಹಸ್ತಗಳನ್ನು ಹೊಂದಿರುವರು

"ವರುಣನು **ರಾಜಾ** ಎಂಬ ವಿಶೇಷಣದಿಂದ ಅನೇಕ ಕಡೆಗಳಲ್ಲಿ ನಿರ್ದಿಷ್ಟನಾಗಿದ್ದಾನೆ. ಅವನು ದೇವಮಾನವಾದಿಗಳಿಗೆಲ್ಲಾ ಪ್ರಭುವು. ಸಕಲ ಜಗತ್ತಿಗೂ ಸಾರ್ವಭೌಮನು"

(೧-೨೪-೭, ೮ ; ೪-೧-೨ ; ೫-೪೦-೭ ; ೭-೬೪-೧ , ೧೦-೧೦೩-೯ , ೧೦-೧೭೩-೫ ; ೧೦-೧೩೨-೪)

**"ತ್ವಂ ವಿಶ್ವೇಷಾಂ ವರುಣಾಸಿ ರಾಜಾ ಯೇ ಚ ದೇವಾ ಅಸುರ ಯೇ ಚ ಮರ್ತಾಃ"**

(೨-೨೭-೧೦)

"ಸಕಲ ಭುವನಗಳಿಗೂ ವರುಣನೇ ರಾಜನು. **(ವಿಶ್ವಸ್ಯ ಭುವನಸ್ಯ ರಾಜಾ)** (೫-೮೫-೩)

"ಅಷ್ಟೇ ಅಲ್ಲದೇ, ಸ್ಥಾವರಜಂಗಮಾತ್ಮಕವಾದ ಸಕಲ ಭೂತಗಳಿಗೂ **ಸಮ್ರಾಟ್** ಆಗಿದ್ದಾನೆ"

(೭-೮೭-೬, ೧-೨೫-೧೦, ೨-೨೮-೬, ೫-೮೫-೧; ೬-೬೮-೯, ೮-೪೨-೧)

" **ರಾಜಾ, ಸಮ್ರಾಟ್,** ಇತ್ಯಾದಿ ವಿಶೇಷಣಗಳು ವೈಯಕ್ತಿಕವಾಗಿ **ವರುಣ** ನಿಗೆ ಪ್ರಯುಕ್ತವಾಗಿರುವಂತೆಯೇ, **ಮಿತ್ರಾವರುಣ** ರಿಬ್ಬರನ್ನೂ ಸೇರಿಸಿ ನಿರ್ದಿಷ್ಟವಾಗಿರುವ ಸನ್ನಿವೇಶಗಳೂ ಅನೇಕವಾಗಿವೆ."

(೧-೭೧-೯, ೧-೧೩೬-೧, ೪, ೧-೧೩೭-೧, ೫-೬೨-೬, ೫-೬೩-೨, ೩,೫, ೫-೬೫-೨, ೫-೬೮-೨, ೭-೬೪-೨, ೮-೨೩-೩೦; ೮-೨೫-೪, ೭, ೮; ೮-೧೦೧-೨; ೧೦-೬೫-೫).

ಶಕ್ತಿ, ಕ್ಷಾತ್ರವೀರ್ಯ, ಪ್ರಭುತ್ವ ಮುಂತಾದ ಅಸಾಧಾರಣ ಗುಣಗಳು ಮಿತ್ರಾವರುಣರ ವಿಶೇಷ ಗುಣಗಳೆಂದು ಪ್ರಶಂಸಿಸಿದೆ. ಆದಿತ್ಯರೊಡಗೂಡಿದ ಮಿತ್ರಾವರುಣರು ಕ್ಷತ್ರಿಯರೆಂದು ಪ್ರಸಿದ್ಧರಾಗಿದ್ದಾರೆ.

(೧ ೨೪-೬, ೧-೨೫-೫, ೧-೧ ೬-೧, ೫-೬೬-೨, ೫-೬೭-೧, ೫-೬೮-೧, ೭; ೬-೪೯-೧, ೬-೫೧-೧೦, ೬-೬೭-೫,೬, ೭-೩೪-೧೧, ೭-೬೪-೨, ೮-೨೫-೮; ೮-೬೭-೧, ೮-೧೦೧-೨)

ಈ ಗುಣಗಳಿರುವುದರಿಂದಲೇ **ರುದ್ರಾಃ ಅಸುರಾಃ** ಎಂಬ ವಿಶೇಷಣಗಳಿಂದಲೂ ಇವರು ನಿರ್ದಿಷ್ಟರಾಗಿದ್ದಾರೆ. **(ಅಸುರಾ ತಾವಾರ್ಯಾ)** ದಿವ್ಯ ಗುಣಗಳಿದ್ದರೂ ಇವರು ಭಯಂಕರರು.

೫-೭೦-೨, ೩; ೭ ೩೬-೨, ೮-೨೫-೪, ೮-೨೭-೨೦, ೭-೬೫-೨.)

ದೈವೀ ಶಕ್ತಿಯನ್ನು ಸೂಚಿಸತಕ್ಕ **ಅಸುರ** ಎಂಬ ವಿಶೇಷಣವು ವರುಣ ಪರವಾಗಿಯೇ ಅಧಿಕವಾಗಿರುತ್ತದೆ. (೧-೨೪-೧೪, ೨-೨೭-೧೦, ೫-೮೫-೫, ೬; ೮-೪೨-೧), ಇತರ ದೇವತೆಗಳ ಪರಾಗಿಯೂ ಕೆಲವೆಡೆಗಳಲ್ಲಿ ಪ್ರಯುಕ್ತವಾಗಿದೆ.

ಉಳಿದ ಎಲ್ಲಾ ವಿಶೇಷಣಗಳಿಗಿಂತಲೂ **ಮಾಯಾ** ಎಂಬ ಪದವು ವರುಣನ ಅತ್ಯಸಾಧಾರಣವಾದ ಗುಣವನ್ನು ತಿಳಿಸುತ್ತದೆ. ವರುಣನು ಕೆಲವೆಡೆಗಳಲ್ಲಿ **ಮಾಯಿನ್** ಎಂಬ ಶಬ್ದದಿಂದಲೇ ವಾಚ್ಯನಾಗಿದ್ದಾನೆ. (**೬-೪೮-೧೪; ೭-೨೮-೪**; ೧೦-೯೦-೧೦, ೧೦-೧೪೭-೫). ಒಂದೆರಡು ಸನ್ನಿವೇಶಗಳಲ್ಲಿ **ಮಾಯಾ** ಎಂದು ಮಿತ್ರಾವರುಣರಿಬ್ಬರನ್ನೂ ಸಂಬೋಧಿಸಿದೆ. ( ೩-೬೧-೭ ೫-೬೩-೪ )

**ಈ ಅಸುರ**ಶಕ್ತಿಯಿಂದಲೂ, **ಮಾಯಾ**ಶಕ್ತಿಗಳಿಂದಲೂ ಸಹ ಇವರಿಬ್ಬರೂ ವೃಷ್ಟಿಯನ್ನು ಸುರಿಸುತ್ತಾರೆ ಮತ್ತು ಧೃತವ್ರತರಾಗಿದ್ದಾರೆ.

## ಮಿತ್ರಾವರುಣರ ಸಾಹಚರ್ಯದ ಸ್ವರೂಪ ಮತ್ತು ಅವರ ಕ್ರಿಯೆಗಳು.

ವರುಣನ ಮಹತ್ತ್ವವನ್ನು ತೋರಿಸಲು ಯಾವ ಯಾವ ವಿಶೇಷಣಗಳನ್ನು ಪ್ರಯೋಗಿಸಿದೆಯೋ, ಅದೇ ವಿಶೇಷಣಗಳಿಂದ ಮಿತ್ರಾವರುಣರಿಬ್ಬರನ್ನೂ ಒಟ್ಟಿಗೆ ಸ್ತುತಿಸಿದೆ.

ಈ ಮಿತ್ರಾವರುಣರಿಬ್ಬರೂ ದ್ಯಾವಾಪೃಥ್ವಿಗಳನ್ನೆತ್ತಿಹಿಡಿದು ಅವುಗಳಿಗೆ ತಾವು ಪ್ರಭುಗಳಾಗಿದ್ದಾರೆ. ಪ್ರಕಾಶಮಾನವಾದ ದ್ಯಾವಾಪೃಥಿವಿಗಳ ಒಡೆಯರಾಗಿ, ಅಂತರಿಕ್ಷದಲ್ಲಿ ಸೂರ್ಯನನ್ನು ಸ್ಥಾಪಿಸಿದ್ದಾರೆ."

(೫-೬೨-೩, ೫-೬೯-೧, ೪ , ೫-೬೩-೭, ೬-೬೭-೫, ೭-೬೧-೪, ೧೦-೧೩೨-೨)

ಈ ಮಿತ್ರಾವರುಣರಿಬ್ಬರೂ ಎಲ್ಲಾ ಲೋಕಗಳಿಗೂ ರಕ್ಷಕರಾಗಿದ್ದಾರೆ. **(ವಿಶ್ವಸ್ಯ ಭುವನಸ್ಯ ಗೋಪಾ)**

(೨-೨೭-೪, ೫-೬೨-೯, ೭-೫೧-೨, ೮-೨೫-೧, ೧೦-೧೨೬-೪)

ಈ ಮಿತ್ರಾವರುಣರ ಆಜ್ಞಾನುವರ್ತಿಯಾಗಿಯೇ ಮಹತ್ತಾದ ಅಂತರಿಕ್ಷವೂ ಪ್ರಕಾಶಿಸುತ್ತದೆ.

(೧೦-೬೫-೫)

ಅವರೇ ವೃಷ್ಟಿಕಾರಕರಾಗಿ ಲೋಕಕ್ಕೆಲ್ಲಾ ಉಪಕಾರವನ್ನು ಮಾಡುವವರಾಗಿದ್ದಾರೆ.

(೫.೬೨-೩, ೬-೬೩ ೧ ರಿಂದ ೩)

ಅವರ ದೇವತ್ವವು ದ್ಯುಲೋಕದ ವಿಸ್ತೃತಿಯನ್ನೂ ನದಿಗಳ ದೈರ್ಘ್ಯವನ್ನೂ ಮೀರಿದುದಾಗಿದೆ.

(೧-೧೫೧-೯)

**(ಅರ್ಯಮನೊಂದಿಗೆ ಕೂಡಿದ)** ಈ ಇಬ್ಬರು ದೇವತೆಗಳೂ ಸಹ ಯಾವರೀತಿ ಸುಕೃತ್ಯಗಳಿಗೆ ಆಕರ್ಷಕರಾಗಿದ್ದಾರೋ, ಅದೇರೀತಿ ದುಷ್ಟಕಾರ್ಯಗಳಿಗೂ, ಅಸತ್ಯಜೀವನಕ್ಕೂ ವಿರೋಧಿಗಳಾಗಿ ದುಷ್ಟಬುದ್ಧಿಯುಳ್ಳವರೂ, ಅಸತ್ಯಭಾಷಿಗಳೂ ಆದ ಮಾನವರಿಗೆ ಅತ್ಯಂತ ಭಯಂಕರರೂಪವುಳ್ಳವರೂ ಆಗಿದ್ದಾರೆ

(೧-೧೫೨-೧, ೭-೬೬-೧೩)

ಅಮರ್ತ್ಯರಾದ ದೇವತೆಗಳಿಂದಲೂ ನಿರೋಧಿಸಲು ಸಾಧ್ಯವಿಲ್ಲದ ಇವರ ಸ್ಥಿರಸಂಕಲ್ಪಗಳಿಗನುಗುಣವಾಗಿ ಅವರು ತಮ್ಮ ಕಾರ್ಯಗಳನ್ನು ನೆರವೇರಿಸುತ್ತಾರೆ.

(೫-೬೩-೭, ೫-೬೯-೪)

ಈ ಮಿತ್ರಾವರುಣರು ಅವಿವೇಕಿಯಾಗಿ ಮೂಢನಾಗಿರುವ ಮನುಷ್ಯನನ್ನೂ ವಿವೇಕದಿಂದ ಯುಕ್ತನಾಗುವಂತೆ ಮಾಡುತ್ತಾರೆ. ಅವರು ಸರ್ವಜ್ಞರಾಗಿದ್ದಾರೆ. (೭.೬೦.೬, ೭)

(ಗೋಪಾಲಕನು) ಪಶುಗಳನ್ನು ನೋಡುವಂತೆ ಮಿತ್ರಾವರುಣರು ಅಂತರಿಕ್ಷದಿಂದಲೇ ಮಾನವರೆಲ್ಲರನ್ನೂ ವೀಕ್ಷಿಸಿ ಅವರ ವ್ಯವಹಾರಗಳನ್ನು ತಿಳಿಯುತ್ತಾರೆ.

(೭-೬೦-೩, ೯, ೧೬)

ಅವರು ಸತ್ಯಾತ್ಮಕರೆಂದೂ, ಶುದ್ಧಾತ್ಮರೆಂದೂ, ಪವಿತ್ರವಾದ ಯಜ್ಞಕಾರ್ಯಗಳಿಗೆ ಸಹಾಯಕರೆಂದೂ ಅನೇಕ ಕಡೆಗಳಲ್ಲಿ ವರ್ಣಿಸಿದೆ. (**ಋತಾವೃಧಾ, ಋತಜಾತಾ, ಋತಸ್ಯ ಗೋಪೌ, ಋತಾವಾನಾ**)

(೧-೨-೮; ೧-೨೩-೫; ೧-೧೩೬-೪; ೨-೨೭-೪; ೫-೬೩-೧, ೫.೬೫-೨; ೫.೬೬-೪; ೭-೬೪-೨, ೭-೬೬-೧೩; ೮-೨೩-೩೦; ೮-೨೫-೯)

ಅವರಿಬ್ಬರೇ ಸತ್ಯಕ್ಕೆ ಒಡೆಯರು, ಜ್ಯೋತಿಗಳಿಗೆ ಪತಿಗಳು **(ಋತಸ್ಯ ಜ್ಯೋತಿಷಸ್ಪತೀ)**

(೧-೨೩-೫)

ಇತರ ಆದಿತ್ಯರೊಡಗೂಡಿದ ಈ ಮಿತ್ರಾವರುಣರು ಪಾಪಕೃತ್ಯವನ್ನೂ ಅಸತ್ಯವನ್ನೂ ನಾಶಪಡಿಸುತ್ತಾರೆ.
(೨-೨೭-೪ , ೭ ೬೦-೫)

ಇವರ ಸ್ತುತಿಯನ್ನು ಪಠಿಸದೆ ಅಲಕ್ಷ್ಯಮಾಡತಕ್ಕ ಪುರುಷನು ಕ್ಷೋಭೆಯಿಂದ ನರಳುವನು.
(೧-೧೨೨.೯)

ಸ್ತುತಿಕರ್ತರು ಅಜ್ಞಾನದಿಂದ ಮಾಡಿದ ಪಾಪದ ಕ್ಷಮೆಗೆ ಇವರು ಅದಿತಿಯೊಡನೆ ಯಾಚಿತರಾಗುತ್ತಾರೆ
(೨-೨೭-೧೪)

ಪಾಪದಿಂದ ಮುಕ್ತರನ್ನಾಗಿ ಮಾಡಲು ಇವರನ್ನು ಆರ್ಯಮನೊಂದಿಗೆ ಪ್ರಾರ್ಥಿಸಿದೆ-
(೧೦-೧೨-೬)

## ಮಿತ್ರಾವರುಣರ ಮಹಾತ್ಮ್ಯದ ವಿಷಯದಲ್ಲಿ Roth ಎಂಬ ಜರ್ಮನ್ ಪಂಡಿತನ ಅಭಿಪ್ರಾಯ.

Journal of the German Oriental Society ಎಂಬ ಪತ್ರಿಕೆಯಲ್ಲಿ ಈ ಪಂಡಿತನು ಮಿತ್ರಾವರುಣರ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಈ ರೀತಿ ತಿಳಿಸಿದ್ದಾನೆ.

"ಆದಿತ್ಯರೆಂದು ಪರಿಗಣಿತವಾದ ದೇವಾತಾ ಸಮೂಹದಲ್ಲಿಮಿತ್ರಾವರುಣರ ಸಂಬಂಧವು ಪರಸ್ಪರನಿಕಟವಾದುದು. ವರುಣನನ್ನೇ ಪ್ರತ್ಯೇಕವಾಗಿ ಸ್ತುತಿಸಿರುವ ಸನ್ನಿವೇಶಗಳಿಗಿಂತಲೂ ಮಿತ್ರಾವರುಣರನ್ನೇ ಒಟ್ಟಿಗೆ ಸೇರಿಸಿ ಸ್ತುತಿಸಿರುವ ಸಂದರ್ಭಗಳೇ ವಿಶೇಷವಾಗಿವೆ. ಮಿತ್ರನನ್ನು ಪ್ರಶಂಸಿಸುವ ಸೂಕ್ತವು ಕೇವಲ ಒಂದೇ. (೩-೫೯) ಇವರಿಬ್ಬರಲ್ಲಿ ಯಾರ ಗುಣವನ್ನು ವರ್ಣಿಸಿದರೂ ಸಹ ಇಬ್ಬರಿಗೂ ಸಮಾನವಾದ ವಿಶೇಷಣವೇ ಪ್ರಯುಕ್ತವಾಗಿರುತ್ತದೆ. ಆದರೆ ಸಂಹಿತಾದಿಗಳ ಕೆಲವು ವಾಕ್ಯಗಳಲ್ಲಿ ಇಬ್ಬರಿಗೂ ಇರುವ ಸೂಕ್ಷ್ಮವಾದ ವ್ಯತ್ಯಾಸವನ್ನು ವಿವರಿಸುವ ಸಂದರ್ಭಗಳೂ ಇವೆ. ಮಿತ್ರನು ಅಹಸ್ಸಿಗೆಮೂಲವಾಗಿ ಅಂತರಿಕ್ಷದಲ್ಲಿ ಪ್ರಕಾಶಿಸುವ ಜ್ಯೋತಿಸ್ಸ್ವರೂಪನು ವರುಣನು ಸಕಲ ಲೋಕಕ್ಕೂ ಸಕಲಕಾಲಕ್ಕೂ ಪ್ರಭುವಾಗಿ ತೇಜೋರೂಪದಲ್ಲಿ ಪ್ರಕಾಶಿಸುತ್ತಿದ್ದರೂ ಸಹ, ಅಧಿಕವಾಗಿ ರಾತ್ರ್ಯಧಿದೇವತೆಯೆಂದೇ ಸ್ತುತನಾಗಿದ್ದಾನೆ ಉದಾಹರಣೆಗೆ, ವಸಿಷ್ಠಋಷಿಯಿಂದ ನಿರ್ಮಿತವಾದ ಒಂದು ಮಂತ್ರದಲ್ಲಿ "ಎಲೈ ವರುಣನೇ, ನಿಮ್ಮಿಬ್ಬರಲ್ಲಿ ಒಬ್ಬನು (ನೀನು) ಅಪ್ರತಿಹತವಾದ ಶಕ್ತಿಯುಳ್ಳವನಾಗಿ, ಎಲ್ಲರಿಗೂ ಶ್ರೇಷ್ಠವಾದ ಮಾರ್ಗದರ್ಶಕನಾಗಿದ್ದೀಯೇ. ಮಿತ್ರನು ಸಕಲ ಪ್ರಜೆಗಳಿಗೂ ಚೈತನ್ಯದಾಯಿಯಾಗಿ ಅವರನ್ನು ಕರ್ತವ್ಯಕ್ಕಾಗಿ ಪ್ರೇರಿಸುತ್ತಾನೆ" ಎಂದು ಸ್ತುತಿಸಲ್ಪಟ್ಟಿದೆ. (೭—೩೬—೨)

ಎಂದರೆ, ಅಹಸ್ಸಿನ ತೇಜೋರೂಪವಾಗಿ, ಸಕಲ ಪ್ರಾಣಿಗಳಿಗೂ ಚೈತನ್ಯದಾಯಿಯಾಗಿ ಪ್ರಪಂಚಕ್ಕೆ ಆಹ್ಲಾದವನ್ನೂ, ಕಾರ್ಯತತ್ಪರತೆಯನ್ನೂ ಉಂಟುಮಾಡುವ ಸಾಮರ್ಥ್ಯವೂ, ಪ್ರಭುತ್ವವೂ, ಮಿತ್ರನಿಗೆ ಸೇರಿದುದು ಇದು ಪರಿಮಿತವಾದ ಅಧಿಕಾರ. ವರುಣನು ರಾತ್ರ್ಯಧಿದೇವತೆಯೆಂದು ವರ್ಣಿತನಾಗಿದ್ದರೂ ಸಹ ಅವನ ಪ್ರಭುತ್ವವು ಸರ್ವವ್ಯಾಪಕವಾದುದು ಮತ್ತು ಸರ್ವಕಾಲೀನವಾದುದು

"ವರುಣನು ಅಸ್ತಂಗತನಾಗತಕ್ಕ ಸೂರ್ಯನ ಸ್ವರೂಪನು" ಇತ್ಯಾದಿಯಾಗಿ ಪರಿಮಿತವಾದ ಸ್ವರೂಪ ವರ್ಣನೆಯಿದ್ದರೂ ಸಹ (೭–೮೭–೧, ಸಾ. ಭಾ), ಅದರಲ್ಲೂ ಸತ್ಯಾಂಶವಿದೆ ವರುಣನ ನಾಮವೇ ಸೂಚಿಸುವಂತೆ ಅವನು ಅಂತರಿಕ್ಷವ್ಯಾಪಿಯಾದ ತೇಜೋವಿಶೇಷವು. ಲೋಕದಲ್ಲಿರುವ ಸಕಲ ಅಸ್ತಿತ್ವವೂ ಸರ್ವವ್ಯಾಪಿಯಾದ

ಅವನಲ್ಲೇ ಅಂತರ್ಗತವಾಗಿದೆ. ಅವನ ಸ್ವರೂಪವು ಅನಂತ. ಇಂತಹ ಅನಂತಸ್ವರೂಪವನ್ನು ಮಾನವನ ಚಕ್ಷುಸ್ಸಾಗಲಿ ಮಾನಸಿಕವಾದ ಕಲ್ಪನೆಯಾಗಲಿ ಅರಿಯಲಾರವು. ಅತ್ಯಂತ ವಿಸ್ತೃತವಾಗಿ ಹರಡಿರತಕ್ಕ ಈ ತೇಜಸ್ಸು ಅಹಸ್ಸಿನ ಕಾಲದಲ್ಲಿ ಕಣ್ಣಿಗೆ ಎಟಕಲಾರದು. ರಾತ್ರಿಕಾಲದಲ್ಲಿ, ವರುಣನನ್ನು ಆವರಿಸಿದ್ದ ಮುಸುಕು ಮಾಯವಾಗಿ ಅವನ ಸ್ವರೂಪವು ಕೊಂಚಮಟ್ಟಿಗೆ ತಿಳಿಯುತ್ತದೆ. ಅಲ್ಲದೇ, ಅಂತರಿಕ್ಷದಲ್ಲೂ, ಮೇಘದಲ್ಲೂ, ದ್ಯಾವಾಪೃಥಿವಿಗಳ ನಡುವೆಯೂ ವ್ಯಾಪಿಸಿದ್ದ ಇತರ ತೇಜಸ್ಸುಗಳೂ ಮರೆಯಾಗುತ್ತವೆ. ಆದುದರಿಂದ ಈ ಕಾಲದಲ್ಲಿ ಏಕಮಾತ್ರವಾಗಿ ಪ್ರಕಾಶಿಸುತ್ತಿರುವ ವರುಣನು ಮಾತ್ರ ಚಕ್ಷುಸ್ಸಿಗೂ ಗೋಚರನಾಗುತ್ತಾನೆ "

ತೈತ್ತಿರೀಯ ಸಂಹಿತೆಯಲ್ಲಿ ಉದಕಗಳಿಗೂ ವರುಣನಿಗೂ ಇರುವ ಸಂಬಂಧವನ್ನು ಈ ರೀತಿ ತಿಳಿಸಿದೆ.

**ಆಪೋ ವರುಣಸ್ಯ ಪತ್ನಯ ಆಸನ್ತಾ ಅಗ್ನಿರಭ್ಯಧ್ಯಾಯತ್ತಾಸ್ಸಮಭವತ್ತಸ್ಯ ರೇತಃ ಪರಾಪ- ತತ್ತದಿಯಮಭವದ್ಯದ್ದ್ವಿತೀಯಂ ಪರಾಪತತ್ತದಸಾವಭವದಿಯಂ ವೈ ವಿರಾಡಸೌ ಸ್ವರಾಟ್ ।**

(ತೈ ಸಂ. ೫-೫-೪-೧)

ಉದಕಗಳು ವರುಣನ ಪತ್ನಿಯರು. ಅಗ್ನಿಯು ಅವುಗಳನ್ನು ಮೋಹಿಸಿದನು ಮತ್ತು ಅವುಗಳ ಸಂಯೋಗವನ್ನೂ ಪಡೆದನು. ಅವನ ರೇತಸ್ಸೇಚನವಾಯಿತು ಪ್ರಥಮ ಸೇಚನದ ಫಲವಾಗಿ ಈ ಪೃಥ್ವಿಯು ಉತ್ಪನ್ನವಾಯಿತು. ಎರಡನೆಯ ಸೇಚನದ ಫಲವಾಗಿ ಅಂತರಿಕ್ಷದ ಉತ್ಪತ್ತಿಯಾಯಿತು ಈ ಪೃಥ್ವಿಯೇ ವಿರಾಟ್, ಅಂತರಿಕ್ಷವೇ ಸ್ವರಾಟ್ ಎಂದಿದೆ. ಪುರಾಣಾದಿಗಳಲ್ಲಿ ವರುಣನನ್ನು ಸಾಗರಗಳಿಗೆ ಪತಿಯೆಂದು ಸ್ತುತಿಸಿದೆ

## ಅರವತ್ತೆರಡನೆಯ ಸೂಕ್ತ

॥ ಸಾಯಣಭಾಷ್ಯಂ ॥

**ಋತೇನ ಋತಮಿತಿ ನವರ್ಚಂ ಷಷ್ಠಂ ಸೂಕ್ತಮಾತ್ರೇಯಸ್ಯ ಶ್ರುತವಿದ ಆರ್ಷಂ ತ್ರೈಷ್ಟುಭಂ ಮೈತ್ರಾವರುಣಂ । ತಥಾ ಚಾನುಕ್ರಮ್ಯತೇ । ಋತೇನ ನವ ಶ್ರುತವಿನ್ಮೈತ್ರಾವರುಣಂ ವೈ ತದಿತಿ । ವೈ ತದಿತ್ಯುಭಯೋಃ ಪ್ರಯೋಗಾತ್ತುಹ್ಯಾದಿಪರಿಭಾಷಯೈತದಾದೀನ್ಯೇಕಾದಶ ಸೂಕ್ತಾನಿ ಮಿತ್ರಾವರುಣ- ದೇವತ್ಯಾನಿ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು— **ಋತೇನ ಋತಂ** ಎಂಬ ಈ ಸೂಕ್ತವು ಐದನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು ಈ ಸೂಕ್ತಕ್ಕೆ ಶ್ರುತವಿದಾತ್ರೇಯಃ ಎಂಬುವನು ಋಷಿಯು ; ಮಿತ್ರಾ ವರುಣರು ದೇವತೆಯು ; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ- **ಋತೇನ ನವ ಶ್ರುತವಿನ್ಮೈತ್ರಾವರುಣಂ ವೈ ತದಿತಿ** ಎಂದು ಹೇಳಿರುವುದು. ವಾಕ್ಯದಲ್ಲಿ ವೈ ತತ್ ಮೊದಲಾದ ಶಬ್ದಗಳ ಪ್ರಯೋಗದಿಂದ ಈ ಸೂಕ್ತಮೊದಲು ಗೊಂಡು ಮುಂದಿನ ಹನ್ನೊಂದು ಸೂಕ್ತಗಳು ಮಿತ್ರಾವರುಣದೇವತಾಕವು ಎಂದು ತಿಳಿಯಬೇಕು ವಿನಿಯೋಗವು ಲೈಂಗಿಕವು.

॥ ಓಂ ॥

## ಸೂಕ್ತ—೬೨

ಮಂಡಲ—೫ ॥ ಅನುವಾಕ—೫ ॥ ಸೂಕ್ತ—೬೨ ॥
ಅಷ್ಟಕ—೪ ॥ ಅಧ್ಯಾಯ—೩ ॥ ವರ್ಗ—೩೦, ೩೧ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ಶ್ರುತವಿದಾತ್ರೇಯಃ ॥
ದೇವತಾ— ಮಿತ್ರಾವರುಣೌ ॥
ಛಂದಃ—ತ್ರಿಷ್ಟುಪ್ ।

॥ ಸಂಹಿತಾಪಾಠಃ ॥

ಋತೇನ ಋತಮಪಿಹಿತಂ ಧ್ರುವಂ ವಾಂ ಸೂರ್ಯಸ್ಯ ಯತ್ರ ವಿಮು-
ಚಂತ್ಯಶ್ವಾನ್ ।
ದಶ ಶತಾ ಸಹ ತಸ್ಥುಸ್ತದೇಕಂ ದೇವಾನಾಂ ಶ್ರೇಷ್ಠಂ ವಪುಷಾಮಪಶ್ಯಂ ॥

॥ ಪದಪಾಠಃ ॥

ಋತೇನ । ಋತಂ । ಅಪಿऽಹಿತಂ । ಧ್ರುವಂ । ವಾಂ । ಸೂರ್ಯಸ್ಯ । ಯತ್ರ । ವಿऽಮುಚಂತಿ ।
ಅಶ್ವಾನ್ ।
ದಶ । ಶತಾ । ಸಹ । ತಸ್ಥುಃ । ತತ್ । ಏಕಂ । ದೇವಾನಾಂ । ಶ್ರೇಷ್ಠಂ । ವಪುಷಾಂ । ಅಪಶ್ಯಂ ॥ ೧ ॥

॥ ಸಾಯಣಭಾಷ್ಯಂ ॥

ಸೂರ್ಯಸ್ಯ ಋತಂ ಸತ್ಯಭೂತಂ ಮಂಡಲಮೃತೇನೋದಕೇನಾಪಿಹಿತಮಾಚ್ಛಾದಿತಂ ಧ್ರುವಂ ಶಾಶ್ವತಮಪಶ್ಯಮಿತಿ ಸಂಬಂಧಃ । ಯತ್ರ ವಾಂ ಯುವಾಭ್ಯಾಂ ಸ್ಥಿತಿಸ್ತದಿತ್ಯರ್ಥಃ । ಸೂರ್ಯಮಂಡಲೇ ಮಿತ್ರಾವರುಣಯೋಃ ಸ್ಥಿತಿಶ್ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ । ಋಗ್ವೇ ೧-೧೧೫-೧ । ಉದ್ವಾಂ ಚಕ್ಷುರ್ವರುಣ ಸುಪ್ರತೀಕಂ ದೇವಯೋಃ । ಋಗ್ವೇ ೭-೬೧-೧ । ಇತಿ ಚಕ್ಷುರ್ಮಿತ್ರಸ್ಯ ವರುಣಸ್ಯ । ಋಗ್ವೇ ೭-೬೩-೧ । ಇತ್ಯಾದಿಷು ಪ್ರಸಿದ್ಧಾ । ಯತ್ರ ಯಸ್ಮಿನ್ಮಂಡಲೇ ಸ್ಥಿತಾನಶ್ವಾನ್ ವಿಮುಚಂತಿ ವಿಮೋಚಯಂತಿ ಸ್ತೋತಾರಃ । ಮಂದೇಹಾದಿಭಿರ್ನಿರುದ್ಧಾನಿತ್ಯರ್ಥಃ ।

ಅಥವಾ ಶ್ರೀಘ್ರಧಾವನಾಯ ಸ್ತುತ್ಯಾ ಪ್ರೇರಯಂತಿ । ಯಸ್ಮಿಂಶ್ಚ ಮಂಡಲೇ ದಶ ಶತಾ ಶತಾನಿ ಸಹಸ್ರ-ಸಂಖ್ಯಾಕಾ ರಶ್ಮಯಸ್ತಸ್ಥುಃ ತಿಷ್ಠಂತಿ ತಾದೃಶಂ ದೇವಾನಾಂ ವಪುಷಾಂ ವಪುಷ್ಮತಾಂ ತೇಜೋವತಾ-ಮಗ್ನ್ಯಾದೀನಾಂ ಶ್ರೇಷ್ಠಂ ಪ್ರಶಸ್ಯಂ ॥ ಮತ್ವರ್ಥಲಕ್ಷಣಾ ಅಥವಾ ವ್ಯಧಿಕರಣಷಷ್ಠೀ ॥ ದೇವಾನಾಂ ವಪುಷಾಂ ಶರೀರಾಣಾಂ ಶ್ರೇಷ್ಠಂ । ಮಂಡಲಂ ಹಿ ಸೂರ್ಯಸ್ಯ ವಪುಃಸ್ಥಾನೀಯಂ । ತನ್ಮಂಡಲಮ-ಪಶ್ಯಂ । ಅಥವಾ ವಾಂ ಯುವಯೋರ್ಮಧ್ಯೇ ಸೂರ್ಯಸ್ಯ ಮಂಡಲಮಪಶ್ಯಮಿತಿ ವ್ಯಾಖ್ಯೇಯಂ ಮೈತ್ರಂ ವಾ ಅಹಃ। ತೈ. ಬ್ರಾ. ೧-೭.೧೦-೧ । ಇತಿ ಶ್ರುತೇರ್ಮಿತ್ರಸ್ಯೈವ ಸೂರ್ಯತ್ವಾದಿತ್ಯಾಶಯೇನ ॥

॥ ಪ್ರತಿಪದಾರ್ಥ ॥

(ಎಲೈ ಮಿತ್ರಾವರುಣರೇ) । (**ಯತ್ರ**— ಯಾವ ಆದಿತ್ಯಮಂಡಲದಲ್ಲಿ) । **ವಾಂ**— ನಿಮ್ಮ (ವಾಸಸ್ಥಾನವಿರವುದೋ) । **ಯತ್ರ**—ಎಲ್ಲಿ । **ಅಶ್ವಾನ್**—( ಮಂದೇಹಾದಿಗಳಿಂದ ತಡೆಯಲ್ಪಟ್ಟ ) ಅಶ್ವಗಳನ್ನು । **ವಿಮುಚಂತಿ**—(ಸ್ತೋತೃಗಳು) ಬಿಡುಗಡೆ ಮಾಡುತ್ತಾರೋ । ( **ಯತ್ರ**-ಯಾವ ಮಂಡಲದಲ್ಲಿ) । **ದಶ ಶತಾ** ಸಹಸ್ರಸಂಖ್ಯಾಕವಾದ ರಶ್ಮಿಗಳು । **ಸಹ ತಸ್ಥುಃ**—ಒಟ್ಟಿಗೆ ಆಶ್ರಯವನ್ನು ಹೊಂದಿವೆಯೋ ಅಂತಹುದೂ, ( ಮತ್ತು ಯಾವುದು ) । **ದೇವಾನಾಂ**—ಪ್ರಕಾಶಮಾನರಾದ ದೇವತೆಗಳ । **ವಪುಷಾಂ**—ತೇಜೋರೂಪವಾದ ದೇಹಗಳಿಗೆಲ್ಲಾ । **ಶ್ರೇಷ್ಠಂ**—ಅತ್ಯುತ್ತಮವಾದುದೂ । **ಏಕಂ**—ಒಂದೇ ಆಶ್ರಯವಾದುದೂ । **ಧ್ರುವಂ**—ಶಾಶ್ವತಸ್ಥಿತಿಯುಳ್ಳದ್ದೂ । **ಋತಂ**—ಸತ್ಯಾತ್ಮಕವಾದುದೂ । **ಋತೇನ**—ಉದಕದಿಂದ । **ಅಪಿಹಿತಂ**—ಮುಚ್ಚಲ್ಪಟ್ಟದ್ದೂ ಆದ । **ಸೂರ್ಯಸ್ಯ ತತ್**—ಆದಿತ್ಯಮಂಡಲವನ್ನು । **ಅಪಶ್ಯಂ**—ನೋಡಿದ್ದೇನೆ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ಯಾವ ಆದಿತ್ಯಮಂಡಲದಲ್ಲಿ ನಿಮ್ಮ ವಾಸಸ್ಥಾನವಿರುವುದೋ, ಎಲ್ಲಿ ಸ್ತುತಿಕರ್ತರು ಮಂದೇಹಾದಿಗಳಿಂದ ತಡೆಯಲ್ಪಟ್ಟ ಅಶ್ವಗಳನ್ನು ಬಿಡುಗಡೆಮಾಡುವರೋ, ಯಾವ ಮಂಡಲದಲ್ಲಿ ಸಹಸ್ರಸಂಖ್ಯಾತವಾದ ರಶ್ಮಿಗಳು ಒಟ್ಟಿಗೆ ಆಶ್ರಯವನ್ನು ಪಡೆಯುವುವೋ ಅಂತಹುದೂ ಮತ್ತು ಯಾವುದು ಪ್ರಕಾಶಮಾನರಾದ ದೇವತೆಗಳ ತೇಜೋರೂಪವಾದ ದೇಹಗಳಿಗೆಲ್ಲಾ ಅತ್ಯುತ್ತಮವಾದುದೂ, ಒಂದೇ ಆಶ್ರಯವಾದುದೂ, ಶಾಶ್ವತಸ್ಥಿತಿಯುಳ್ಳದ್ದೂ, ಸತ್ಯಾತ್ಮಕವಾದುದೂ, ಉದಕದಿಂದ ಮುಚ್ಚಲ್ಪಟ್ಟದ್ದೂ ಆದ ಆದಿತ್ಯಮಂಡಲವನು ನೋಡಿದೇನೆ.

## English Translation

I Have beheld the permanent orb of the sun, your (dwelling place), concealed by water, where (the hymns of the pious) liberate ( his ) steeds; where a thousand rays abide together; the one most excellent of the (embodied) forms of the gods.

॥ ವಿಶೇಷವಿಷಯಗಳು ॥

**ಸೂರ್ಯಸ್ಯ ಋತಂ ಋತೇನ ಅಪಿಹಿತಂ ಧ್ರುವಂ ಅಪಶ್ಯಂ-ಸೂರ್ಯಸ್ಯ ಸತ್ಯಭೂತಮುದಕೇನಾಚ್ಛಾದಿತಂ ಶಾಶ್ವತಂ ಮಂಡಲಮಪಶ್ಯಂ** । ಸತ್ಯಸ್ವರೂಪವೂ, ಶಾಶ್ವತವೂ ಉದಕದಿಂದ ಎಂದರೆ ಮೇಘಮಂಡಲ

ದಿಂದ ಮುಚ್ಚಲ್ಪಟ್ಟಿರುವುದೂ ಅಥವಾ ಆವೃತವಾಗಿರುವುದೂ ಆದ ಸೂರ್ಯಮಂಡಲವನ್ನು ನಾನು ನೋಡಿದೆನು ಎಂದು ಋಷಿಯು ಇಲ್ಲಿ ವರ್ಣಿಸಿದ್ದಾನೆ. ಮಿತ್ರಾವರುಣರನ್ನು ಉದ್ದೇಶಿಸಿ ಸ್ತುತಿಸಿರುವ ಈ ಋಕ್ಕಿನಲ್ಲಿ ಸೂರ್ಯ ಮಂಡಲವನ್ನು ವರ್ಣಿಸಿರುವುದೇಕೆ? ಎಂದರೆ ಮಿತ್ರಾವರುಣರಿಗೂ ಸೂರ್ಯಮಂಡಲಕ್ಕೂ ಸಂಬಂಧವಿರುವುದು. ಅದನ್ನು ಋಷಿಯು ಮುಂದಿನ ವಾಕ್ಯಗಳಲ್ಲಿ ವಿವರಿಸಿರುವನು. ಈ ವಾಕ್ಯದಲ್ಲಿ ಋತಂ ಸತ್ಯಂ ಎಂಬ ವಿಶೇಷಣಗಳಿಂದ ಸೂರ್ಯನನ್ನು ವರ್ಣಿಸಿದೆ. ಏಕೆಂದರೆ ಸೂರ್ಯನೇ **(ಆದಿತ್ಯನೇ)** ಪರಬ್ರಹ್ಮನು. ಈ ಪರಬ್ರಹ್ಮನು ಸತ್ಯಸ್ವರೂಪನೂ ಶಾಶ್ವತನೂ ಎಂದರೆ ನಾಶರಹಿತನೂ ಆಗಿರುವನು ಎಂದು ಅನೇಕ ಶ್ರುತಿವಾಕ್ಯಗಳಲ್ಲಿ ವರ್ಣನೆ ಇರುತ್ತದೆ. **ಅಸಾವಾ-ದಿತ್ಯೋ ಬ್ರಹ್ಮೇತಿ** (ತೈ. ಆ. ೨-೧-೧) ಎಂಬ ವಾಕ್ಯದಲ್ಲಿ ನಮ್ಮ ಕಣ್ಣಿಗೆ ಗೋಚರನಾಗಿರುವ ಈ ಆದಿತ್ಯನೇ ಬ್ರಹ್ಮನು ಎಂದು ಸ್ಪಷ್ಟವಾಗಿ ಹೇಳಿದೆ. ಪರಬ್ರಹ್ಮನು ಸತ್ಯಸ್ವರೂಪನು ಎಂಬ ವಿಷಯದಲ್ಲಿ **ಋತಗ್ಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣಪಿಂಗಳಂ** ( ತೈ. ಉ. ೪-೨೪ ) ಎಂಬ ವಾಕ್ಯವು ಇದನ್ನು ವಿಶದಪಡಿಸುವುದು ಆದ್ದರಿಂದ ಋಷಿಯು ಸೂರ್ಯನನ್ನು ಪರಬ್ರಹ್ಮಸ್ವರೂಪನೆಂದು ಭಾವಿಸಿ ಬ್ರಹ್ಮನ ಗುಣವರ್ಣನೆಮಾಡುವ ವಿಶೇಷಣಪದಗಳಿಂದ ಸ್ತುತಿಸಿರುವುದು ಸಹಜವಾಗಿದೆ **ಋತೇನ ಅಪಿಹಿತಂ** ಎಂಬ ವಾಕ್ಯದಲ್ಲಿ ಋತಶಬ್ದಕ್ಕೆ ಯಾಸ್ಕರು—**ಋತಮಿತ್ಯುದಕ-ನಾಮ ಪ್ರತ್ಯೃತಂ ಭವತಿ ।** (ನಿ ೨-೨೫) ಎಂದು ನಿರ್ವಚನವನ್ನು ಹೇಳಿದಾರೆ. ಎಂದರೆ ಋತಶಬ್ದಕ್ಕೆ ಉದಕವೆಂದು ಅರ್ಥವು. ಸೂರ್ಯನು ತನ್ನ ರಶ್ಮಿಗಳ ಮೂಲಕ ಸಮುದ್ರವೇ ಮೊದಲಾದ ಜಲಾಶಯಗಳಲ್ಲಿರುವ ಉದಕವನ್ನು **(ಆವೆಯ ರೂಪದಿಂದ)** ಆಕರ್ಷಿಸುವನು ಈ ರೀತಿ ಆಕರ್ಷಿಸಿದ ಉದಕವೇ ಮೇಘವಾಗಿ ಪರಿಣಮಿಸಿ ಅಂತರಿಕ್ಷದಲ್ಲಿದ್ದು ಸೂರ್ಯಮಂಡಲವನ್ನು ಆಚ್ಛಾದಿಸುವುದು ಎಂದರೆ ಮುಚ್ಚಿರುವುದು. ಆದ್ದರಿಂದ ಇಲ್ಲಿ ಉದಕದಿಂದ ಆಚ್ಛಾದಿತವಾದ ಎಂದರೆ ಉದಕಮಯವಾದ ಮೇಘಮಂಡಲದಿಂದ ಆಚ್ಛಾದಿತವಾದ ಸೂರ್ಯಮಂಡಲವೆಂದರ್ಥವು. ಋತಶಬ್ದವು ಬಟ್ ಮೊದಲಾದ ಆರು ಸತ್ಯನಾಮಗಳಲ್ಲಿ ಪಠಿತವಾಗಿದೆ. ( ನಿ. ೩-೧೩ ) ಮತ್ತು **ಸತ್ಯಂ ವಾ ಯಜ್ಞಂ ವಾ** (ನಿ. ೪-೧೯) ಎಂದು ಋತಶಬ್ದಕ್ಕೆ ಸತ್ಯ ಅಥವಾ ಯಜ್ಞವೆಂಬ ಅರ್ಥವೂ ಇರುವುದು

**ಯತ್ರ ವಾಂ (ಸ್ಥಿತಿಃ)—ಸೂರ್ಯಮಂಡಲೇ ಮಿತ್ರಾವರುಣಯೋಃ ಸ್ಥಿತಿಃ ।** ಸೂರ್ಯಮಂಡಲದ ಸ್ವರೂಪವೇನು ಎಂಬ ವಿಷಯವನ್ನು ವಿವರಿಸುತ್ತಾ ಋಷಿಯು **ಯತ್ರ ವಾಂ** (ಸ್ಥಿತಿಃ) ಮಿತ್ರಾವರುಣರಾದ ನಿಮ್ಮ ನೆಲೆಯು ಸೂರ್ಯಮಂಡಲದಲ್ಲಿರುವುದು ಎಂದು ಹೇಳಿದಾನೆ. ಈ ವಿಷಯದಲ್ಲಿ—

**ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ ।**

(ಋ. ಸಂ. ೧-೧೧೫-೧)

**ಉದ್ವಾಂ ಚಕ್ಷುರ್ವರುಣ ಸುಪ್ರತೀಕಂ ದೇವಯೋರೇತಿ ಸೂರ್ಯಸ್ತತನ್ವಾನ್ ।**

(ಋ. ಸಂ. ೭-೬೧-೧)

**ಚಕ್ಷುರ್ಮಿತ್ರಸ್ಯ ವರುಣಸ್ಯ ದೇವಶ್ಚರ್ಮೇವ ಯಃ ಸಮವಿವ್ಯಕ್ ತಮಾಂಸಿ ।**

(ಋ. ಸಂ. ೭-೬೩-೧)

ಇತ್ಯಾದ್ಯನೇಕ ಋಕ್ಕುಗಳಲ್ಲಿ ಮಿತ್ರಾವರುಣರು ಸೂರ್ಯಮಂಡಲದಲ್ಲಿ ಸ್ಥಿತವಾಗಿರುವ ವಿಷಯವು ವಿವೃತವಾಗಿದೆ.

**ಯತ್ರ ಅಶ್ವಾನ್ ವಿಮುಚಂತಿ—ಯಸ್ಮಿನ್ಮಂಡಲೇ ಸ್ಥಿತಾನಶ್ವಾನ್ ವಿಮೋಚಯಂತಿ ಸ್ತೋ-ತಾರಃ । ಮಂದೇಹಾದಿಭಿರ್ನಿರುದ್ಧಾನಿತ್ಯರ್ಥಃ । ಅಥವಾ ಶೀಘ್ರಧಾವನಾಯ ಸ್ತುತ್ಯಾ ಪ್ರೇರಯಂತಿ ।**

ಈ ವಾಕ್ಯಕ್ಕೆ ಸಾಯಣರು ಎರಡುವಿಧ ಅರ್ಥಗಳನ್ನು ಹೇಳಿದಾರೆ. ಸೂರ್ಯಾಶ್ವಗಳು ಬೇಗಬೇಗನೆ ಓಡುವಂತೆ ಪ್ರೇರಿಸುವುದಕ್ಕಾಗಿ ಸ್ತೋತೃಗಳು ಸ್ತುತಿಗಳಿಂದ ಪ್ರಾರ್ಥಿಸುವರು ಎಂದು ಒಂದು ವಿಧವಾದ ಅರ್ಥವು ಅಥವಾ ಮಂದೇಹನಾಮಾಭಿಧೇಯರಾದ ಕೆಲವು ಅಸುರರು ಸೂರ್ಯಾಶ್ವಗಳನ್ನು ತಡೆಗಟ್ಟಿ ಸೂರ್ಯನ ಗಮನವನ್ನು ನಿರುದ್ಧಿಸುವರು. ಮಂದೇಹದ್ವೀಪವಾಸಿಗಳಾದ ಅಸುರರು ಯಾರು ? ಇವರು ಸೂರ್ಯನ ಗಮನವನ್ನು ತಡೆಗಟ್ಟಲು ಕಾರಣವೇನು ಇತ್ಯಾದಿ ವಿಷಯಗಳು ತೈ. ಆ ೨-೨ ಎಂಬಲ್ಲಿ ಈ ರೀತಿ ಹೇಳಿದೆ—

> **ರಕ್ಷಾಗ್‌ಂಸಿ ಹ ವಾ ಪುರೋಽನುವಾಕೇ ತಪೋಽಗ್ರಮತಿಷ್ಠಂತ ತಾನ್ಪ್ರಜಾಪತಿರ್ವರೇಣೋಪಾಮಂತ್ರಯತ ತಾನಿ ವರಮವೃಣೀತಾದಿತ್ಯೋ ನೋ ಯೋದ್ಧಾ ಇತಿ ತಾನ್ಪ್ರಜಾಪತಿರಬ್ರವೀದ್ಯೋಧಯಧ್ವಮಿತಿ ತಸ್ಮಾದುತ್ತಿಷ್ಠಂತಗ್‌ಂ ಹ ವಾ ತಾನಿ ರಕ್ಷಾಗ್‌ಸ್ಯಾದಿತ್ಯಂ ಯೋಧಯಂತಿ ಯಾವದಸ್ತಮನ್ವಗಾತ್ತಾನಿ ಹ ವಾ ಏತಾನಿ ರಕ್ಷಾಗ್‌ಂಸಿ ಗಾಯತ್ರಿಯಾಭಿಮಂತ್ರಿತೇನಾಂಭಸಾ ಶಾಮ್ಯಂತಿ ತದು ಹ ವಾ ಏತೇ ಬ್ರಹ್ಮವಾದಿನಃ ಪೂರ್ವಾಭಿಮುಖಾಸ್ಸಂಧ್ಯಾಯಾಂ ಗಾಯತ್ರಿಯಾಭಿಮಂತ್ರಿತಾ ಆಪ ಊರ್ಧ್ವಂ ವಿಕ್ಷಿಪಂತಿ ತಾ ಏತಾ ಆಪೋ ವಜ್ರೀ ಭೂತ್ವಾ ತಾನಿ ರಕ್ಷಾಗ್‌ಂಸಿ ಮಂದೇಹಾರುಣೇ ದ್ವೀಪೇ ಪ್ರಕ್ಷಿಪಂತಿ ಯತ್ಪ್ರದಕ್ಷಿಣಂ ಪ್ರಕ್ರಮಂತಿ ತೇನ ಪಾಪ್ಮಾನಮವಧೂನ್ವಂತ್ಯುದ್ಯಂತಮಸ್ತಂಯಂತಮಾದಿತ್ಯಮಭಿಧ್ಯಾಯನ್ಕುರ್ವನ್ ಬ್ರಾಹ್ಮಣೋ ವಿದ್ವಾನ್ತ್ಸಕಲಂ ಭದ್ರಮಶ್ನುತೇಽಸಾವಾದಿತ್ಯೋ ಬ್ರಹ್ಮೇತಿ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ ಯ ಏವಂ ವೇದ ||**
>
> (ತೈ ಆ ೨-೨)

ಪೂರ್ವದಲ್ಲಿ ರಾಕ್ಷಸರು ಉಗ್ರವಾದ ತಪಸ್ಸನ್ನಾಚರಿಸಿದರು. ಆಗ ದೇವನಾದ ಪ್ರಜಾಪತಿಯು ಪ್ರತ್ಯಕ್ಷನಾಗಿ ಅವರಿಗೆ ಯಾವ ವರವು ಬೇಕೆಂದು ಪ್ರಶ್ನಿಸಿದನು. ಆಗ ಅವರು ನಮಗೆ ಸೂರ್ಯನೊಂದಿಗೆ ಯುದ್ಧಮಾಡುವ ಶಕ್ತಿಯನ್ನೂ ಅವಕಾಶವನ್ನೂ ಕಲ್ಪಿಸಿಕೊಡು ಎಂದು ಪ್ರಾರ್ಥಿಸಿದರು. ಹಾಗೆಯೇ ಆಗಬಹುದು ಎಂದು ಪ್ರಜಾಪತಿಯು ಸಮ್ಮತಿಸಿದನು. ಆದುದರಿಂದಲೇ ರಾಕ್ಷಸರು ಸೂರ್ಯನು ಉದಯಿಸಿದೊಡನೆಯೇ ಅವನೊಡನೆ ಹೋರಾತಲುಪಕ್ರಮಿಸಿ ಅಸ್ತಕಾಲದವರೆಗೂ ಹೋರಾಡುತ್ತಲೇ ಇರುವರು. ಆದರೆ **ಗಾಯತ್ರೀ** ಪಠನದಿಂದ ಪೂತವಾದ ಉದಕದಿಂದ ಅವರನ್ನು ಓಡಿಸಲು ಸಾಧ್ಯ. ಆದುದರಿಂದಲೇ ಬ್ರಹ್ಮವಾದಿಗಳು ಪ್ರಾತಃಸಂಧ್ಯಾಕಾಲದಲ್ಲಿಯೂ (ಸಾಯಂಸಂಧ್ಯಾಕಾಲದಲ್ಲಿಯೂ ಸಹ) ಗಾಯತ್ರಿಯನ್ನು ಪಠಿಸಿ ತತ್ಪೂತವಾದ ಉದಕದಿಂದ ಅರ್ಘ್ಯವನ್ನು ಸಮರ್ಪಿಸುತ್ತಾರೆ ಅರ್ಘ್ಯರೂಪದಲ್ಲಿ ಅರ್ಪಿಸಿದ ಈ ಉದಕಬಿಂದುಗಳು ವಜ್ರಾತ್ಮಕವಾಗಿ ಪರಿಣಮಿಸಿ ರಾಕ್ಷಸರನ್ನು **ಮಂದೇಹಾರುಣವೆಂಬ** ದ್ವೀಪದಲ್ಲಿ ಎಸೆಯುತ್ತದೆ. ನಂತರ ಬ್ರಹ್ಮವಾದಿಗಳು ಪ್ರದಕ್ಷಿಣನಮಸ್ಕಾರಪೂರ್ವಕವಾದ ಪೂಜೆಯಿಂದ ತಮ್ಮ ಪಾಪವನ್ನು ನೀಗಿಕೊಳ್ಳುತ್ತಾರೆ. ಈ ತತ್ತ್ವವನ್ನರಿತ ಬ್ರಾಹ್ಮಣನು (ಬ್ರಹ್ಮಜ್ಞಾನಿಯು) ಸೂರ್ಯೋದಯಕಾಲದಲ್ಲೂ ಸೂರ್ಯಾಸ್ತಮಯಕಾಲದಲ್ಲೂ ಸಹ **ಗಾಯತ್ರಿಯನ್ನು** ಪಠಿಸಿ ಅರ್ಘ್ಯವನ್ನರ್ಪಿಸುತ್ತ ತನ್ಮೂಲಕ ಆದಿತ್ಯನನ್ನು ಉಪಾಸಿಸಿ ಧ್ಯಾನಿಸಿದರೆ ಅವನಿಗೆ ಸಕಲವಿಧವಾದ ಭದ್ರವೂ (ಕಲ್ಯಾಣವೂ) ಉಂಟಾಗುತ್ತದೆ. **ಆದಿತ್ಯನೇ** ಪರಬ್ರಹ್ಮನು. ಗಾಯತ್ರ್ಯುಪಾಸ್ಯನಾದ ಆದಿತ್ಯನೇ ಬ್ರಹ್ಮನೆಂದರಿತು ಉಪಾಸನೆಯನ್ನು ಮಾಡತಕ್ಕ ಪುರುಷನು ಬ್ರಹ್ಮಸಾಯುಜ್ಯವನ್ನು ಪಡೆದು ಬ್ರಹ್ಮರೂಪಿಯೇ ಆಗುತ್ತಾನೆ ಎಂದು ಗಾಯತ್ರೀಪಠನದ ಪ್ರಶಂಸೆಯಿದೆ.

**ಯತ್ರ ದಶ ಶತಾ ಸಹ ತಸ್ಥುಃ ದೇವಾನಾಂ ವಪುಷಂ ಶ್ರೇಷ್ಠಂ—ಯಸ್ಮಿಂಶ್ಚ ಮಂಡಲೇ ಸಹಸ್ರ-ಸಂಖ್ಯಾಕಾ ರಶ್ಮಯಸ್ತಿಷ್ಠಂತಿ ತಾದೃಶಂ ದೇವಾನಾಂ ವಪುಷ್ಮತಾಂ ತೇಜೋವತಾಮಗ್ನ್ಯಾದೀನಾಂ ಪ್ರಶಸ್ಯಂ ।** ಆ ಸೂರ್ಯಮಂಡಲದಲ್ಲಿ ಸಾವಿರಗಟ್ಟಲೆಯಿಂದ ರಶ್ಮಿಗಳು ನೆಲಸಿರುವವು. ಮತ್ತು ಆ ಸೂರ್ಯಮಂಡಲವು ತೇಜೋರಾಶಿಯಿಂದ ಯುಕ್ತವಾಗಿ ಅಗ್ನ್ಯಾದಿ ದೇವತೆಗಳ ಶರೀರಾತ್ಮಕವಾಗಿರುವುದು ದೇವತೆಗಳ ಶರೀರಗಳು ಮನುಷ್ಯರ ಶರೀರದಂತೆ ಪಾರ್ಥಿವಸಂಬಂಧವಿಲ್ಲದೆ ತೇಜೋವಿಶಿಷ್ಟವಾಗಿರುವವು. ಸೂರ್ಯಮಂಡಲವೇ ಇಂತಹ ದೇವತೆಗಳ ಶರೀರಗಳಿಗೆ ಆವಾಸಸ್ಥಾನವಾಗಿರುವುದು ಎಂಬ ವಿಷಯವು ಇಲ್ಲಿ ಉಕ್ತವಾಗಿದೆ. ಅಥವಾ ಈ ವಾಕ್ಯಕ್ಕೆ ಇನ್ನೊಂದು ವಿಧವಾದ ಅರ್ಥವೂ ಸಾಧ್ಯವೆಂದು ಭಾಷ್ಯಕಾರರು ಹೇಳಿದಾರೆ.—**ಮಂಡಲಂ ಹಿ ಸೂರ್ಯಸ್ಯ ವಪುಃ-ಸ್ಥಾನೀಯಂ । ತನ್ಮಂಡಲಮಪಶ್ಯಂ । ವಾಂ ಯುವಯೋರ್ಮಧ್ಯೇ ಸೂರ್ಯಸ್ಯ ಮಂಡಲಮಪಶ್ಯಮಿತಿ ವ್ಯಾಖ್ಯೇಯಂ । ಮೈತ್ರಂ ವಾ ಅಹಃ । ವಾರುಣೀ ರಾತ್ರಿಃ (ತೈ ಬ್ರಾ ೧-೭-೧೦-೧) ಇತಿ ಶ್ರುತೇರ್ಮಿತ್ರ-ಸ್ಯೈವ ಸೂರ್ಯತ್ವಾದಿತ್ಯಾಶಯೇನ ।** ಎಂದರೆ ಸೂರ್ಯಮಂಡಲವು ಸೂರ್ಯನಿಗೆ ಶರೀರದಂತಿರುವುದು. ಅಂತಹ ಸೂರ್ಯಮಂಡಲವನ್ನು ನಾನು ನೋಡಿದೆನು ಎಂದು ಋಷಿಯು ಹೇಳಿದಾನೆ ಅಥವಾ ಮಿತ್ರಾವರುಣರಾದ ನಿಮ್ಮ ಮಧ್ಯದಲ್ಲಿ ನಾನು ಸೂರ್ಯಮಂಡಲವನ್ನು ನೋಡಿದೆನು ಎಂಬರ್ಥವನ್ನಾದರೂ ಹೇಳಬಹುದು. ಹೇಗೆಂದರೆ ಮಿತ್ರನು ಅಹರಭಿಮಾನಿದೇವತೆಯು, ವರುಣನು ರಾತ್ರ್ಯಭಿಮಾನಿ ದೇವತೆಯು ಆದ್ದರಿಂದ ಅಹೋರಾತ್ರಿಗಳ ಮಧ್ಯದಲ್ಲಿ ನಾನು ಅಹಸ್ಸನ್ನು ಅಥವಾ ಸೂರ್ಯಮಂಡಲವನ್ನು ನೋಡಿದೆನು ಎಂದೂ ಅರ್ಥವಿವರಣೆ ಮಾಡಬಹುದು.

॥ ಸಂಹಿತಾಪಾಠಃ ॥

ತತ್ಸು ವಾಂ ಮಿತ್ರಾವರುಣಾ ಮಹಿತ್ವಮೀರ್ಮಾ ತಸ್ಥುಷೀ ರಹಭಿರ್ದು-
ದುಹ್ರೇ ।
ವಿಶ್ವಾಃ ಪಿನ್ವಥಃ ಸ್ವಸರಸ್ಯ ಧೇನಾ ಅನು ವಾಮೇಕಃ ಪವಿರಾ ವವರ್ತ ॥೨॥

॥ ಪದಪಾಠಃ ॥

ತತ್ । ಸು । ವಾಂ । ಮಿತ್ರಾವರುಣಾ । ಮಹಿಽತ್ವಂ । ಈರ್ಮಾ । ತಸ್ಥುಷೀಃ । ಅಹಽಭಿಃ । ದುದುಹ್ರೇ ।
ವಿಶ್ವಾಃ । ಪಿನ್ವಥಃ । ಸ್ವಸರಸ್ಯ । ಧೇನಾಃ । ಅನು । ವಾಂ । ಏಕಃ । ಪವಿಃ । ಆ । ವವರ್ತ ॥ ೨ ॥

॥ ಸಾಯಣಭಾಷ್ಯಂ ॥

**ಹೇ ಮಿತ್ರಾವರುಣಾ ವಾಂಯುವಯೋಸ್ತನ್ಮಹಿತ್ವಂ ಮಹತ್ತ್ವಂ ಸು ಸುಷ್ಠು । ಅತಿಪ್ರಶಸ್ತ-ಮಿತ್ಯರ್ಥಃ। ಕಿಂ ತದಿತ್ಯುಚ್ಯತೇ । ಈರ್ಮಾ ಸತತಗಂತಾ ಸರ್ವಸ್ಯ ಪ್ರೇರಕೋ ವಾದಿತ್ಯೋಽಹಭಿರಹೋ-**

ಭಿರ್ವರ್ಷ-ರ್ತುಸಂಬಂಧಿಭಿಸ್ತಸ್ಥುಷೀಃ ಸ್ಥಾವರಭೂತಾ ಅಪೋ ದುದುಹ್ರೇ । ದುಗ್ಧೇ । ಕಿಂಚ ಸ್ವಸರಸ್ಯ ಸ್ವಯಂ ಸರ್ತುರಾದಿತ್ಯಸ್ಯವಿಶ್ವಾಃ ಸರ್ವಾಃ ಧೇನಾ ಲೋಕಾನಾಂ ಪ್ರೀಣಯಿತ್ರೀರ್ದ್ಯುತೀಃ ಪಿನ್ವಥಃ । ವರ್ಧಯಥಃ ವಾಂ ಯುವಯೋರೇಕೋಽಪ್ರತಿಯೋಗೀ ಪವಿಃ । ಪವಿರಿತಿ ರಥಸ್ಯ ನೇಮಿಃ ಪವೀ ರಥನೇಮಿರ್ಭವತಿ । ನಿ. ೫-೫ । ಇತಿ ಯಾಸ್ಕವಚನಾತ್। ತಥಾಪ್ಯತ್ರ ಲಕ್ಷಿತಲಕ್ಷಣಯಾ ರಥೇ ವರ್ತತೇ ಕೇವಲಚಕ್ರಸ್ಯಾವರ್ತನಾಯೋಗಾತ್ । ಯುವಯೋರೇಕೋ ರಥೋಽನ್ವಾವವರ್ತ । ಅನುಕ್ರಮೇಣ ಪರಿಭ್ರಮತಿ ॥

॥ ಪ್ರತಿಪದಾರ್ಥ ॥

**ಮಿತ್ರಾವರುಣಾ**—ಎಲೈ ಮಿತ್ರಾವರುಣರೇ, (ಯಾವ ನಿಮ್ಮ ಮಹಾತ್ಮ್ಯದಿಂದ) । **ಈರ್ಮಾ**—ಸತತ ಗಾಮಿಯಾದ ಆದಿತ್ಯನು । **ಅಹಭಿಃ**—ತನಗೆ ಸಾಹಾಯ್ಯಕವಾದ ಅಹಸ್ಸುಗಳಿಂದ। **ತಸ್ಥುಷೀಃ**—ಚಲಿಸದೇ ನಿಂತಿದ್ದ ಉದಕಗಳನ್ನು । **ದುದುಹ್ರೇ**—ಸುರಿಯುವಂತೆ ಮಾಡುವನೋ । **ತತ್**—ಅಂತಹ । **ವಾಂ ಮಹಿತ್ವಂ**—ನಿಮ್ಮ ಮಾಹಾತ್ಮ್ಯವು । **ಸು**—ಅತಿಶಯವಾಗಿ ಪ್ರಶಸ್ಯವಾಗಿದೆ । **ಸ್ವಸರಸ್ಯ**—ಸಂಚಾರಾತ್ಮಕನಾದ ಆದಿತ್ಯನ । **ಧೇನಾಃ**—ಜಗತ್ಪ್ರೀತಿಕಾರಕವಾದ । **ವಿಶ್ವಾಃ**—ಸಮಸ್ತ ರಶ್ಮಿಗಳನ್ನೂ। **ಪಿನ್ವಥಃ**—ಪೋಷಿಸುತ್ತೀರಿ । **ವಾಂ**—ನಿಮ್ಮಿಬ್ಬರಿಗೂ। **ಏಕಃ**—ಸಮಾನವಾದ । **ಪವಿಃ**—ರಥವು । **ಅನು ಆ ವವರ್ತ**—ಸರ್ವತ್ರ ಶಾಶ್ವತವಾಗಿ ಸಂಚರಿಸುತ್ತದೆ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ಯಾವ ನಿಮ್ಮ ಮಾಹಾತ್ಮ್ಯದಿಂದ ಸತತಗಾಮಿಯಾದ ಆದಿತ್ಯನು ತನಗೆ ಸಾಹಾಯ್ಯಕವಾದ ಅಹಸ್ಸುಗಳಿಂದ ಚಲಿಸದೇ ನಿಂತಿದ್ದ ಉದಕಗಳನ್ನು ಸುರಿಯುವಂತೆ ಮಾಡುವನೋ, ಅಂತಹ ನಿಮ್ಮ ಮಾಹಾತ್ಮ್ಯವು ಅತಿಶಯವಾಗಿ ಪ್ರಶಸ್ಯವಾಗಿದೆ. ಸಂಚಾರಾತ್ಮಕನಾದ ಆದಿತ್ಯನ ಜಗತ್ಪ್ರೀತಿಕಾರಕಗಳಾದ ಸಮಸ್ತ ರಶ್ಮಿಗಳನ್ನೂ ನೀವು ಪೋಷಿಸುತ್ತೀರಿ. ನಿಮ್ಮಿಬ್ಬರಿಗೂ ಸಮಾನವಾದ ರಥವು ಸರ್ವತ್ರ ಶಾಶ್ವತವಾಗಿ ಸಂಚರಿಸುತ್ತದೆ

English Translation

Exceeding is that your greatness, Mitra and Varuna, whereby the evet-moving sun has, through (succeeding, days, milked forth the stationary waters : you augment all the (world-illumining) rays of the self-resolving (sun) : the one chariot of you two (perpetually) goes round.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಮಿತ್ರಾವರುಣರ ಮಾಹಾತ್ಮ್ಯ ವರ್ಣನೆ ಇದೆ. ಇವುಗಳನ್ನು ಮೂರು ವಾಕ್ಯಗಳಲ್ಲಿ ಮೂರು ವಿಧವಾಗಿ ಋಷಿಯು ವರ್ಣನೆಮಾಡಿದಾನೆ.

**ಈರ್ಮಾ ಅಹಭಿಃ ತಸ್ಥುಷೀಃ ದುದುಹ್ರೇ ತತ್ ವಾಂ ಮಹಿತ್ವಂ**— **ಈರ್ಮಾ ಸತತಗಂತಾ ಸರ್ವಸ್ಯ ಪ್ರೇರಕೋ ವಾದಿತ್ಯೋಽಹಭಿರಹೋಭಿರ್ವರ್ಷರ್ತುಸಂಬಂಧಿಭಿಃ ಸ್ಥಾವರಭೂತಾ ಅಪೋ ದುದುಹ್ರೇ ದುಗ್ಧೇ** । ಸದಾಕಾಲದಲ್ಲಿಯೂ ಸಂಚರಿಸುವ ಸ್ವಭಾವವುಳವನಾದ್ದರಿಂದ ಈರ್ಮಾ ಎಂದರೆ ಆದಿತ್ಯನು. ಅಥವಾ

ಸರ್ವವನ್ನೂ ಪ್ರೇರಿಸುವವನಾದ್ದರಿಂದ ಈರ್ಮಾ ಎಂದರೆ ಆದಿತ್ಯನು ಈ ಆದಿತ್ಯನು ಅಹಸ್ಸುಗಳಿಂದ ಚಲನರಹಿತವಾದ ಉದಕಗಳನ್ನು ಮಳೆಗರೆಯುವಂತೆ ಮಾಡುತ್ತಾನೆ. ಎಂದರೆ ಸೂರ್ಯನು ಅಥವಾ ಆದಿತ್ಯನು ತನ್ನ ತೀಕ್ಷ್ಣವಾದ ಕಿರಣಗಳನ್ನು ಪ್ರಸರಿಸಿ ಸಮುದ್ರಾದಿ ಚಲನವಲನರಹಿತವಾದ ಜಲಾಶಯಗಳಲ್ಲಿರುವ ಉದಕಗಳನ್ನು ಹೀರಿ ಮೇಘವನ್ನಾಗಿ ಪರಿವರ್ತಿಸಿ ಅವುಗಳ ಮೂಲಕ ವರ್ಷಾಕಾಲದ ದಿನಗಳಲ್ಲಿ ಭೂಮಿಯಮೇಲೆ ಮಳೆಹುಯ್ಯುವಂತೆ ಮಾಡುತ್ತಾನೆ. ಈ ರೀತಿ ಸೂರ್ಯನ ವರ್ಷಣಕರ್ಮವು ಮಿತ್ರಾವರುಣರಾದ ನಿಮ್ಮ ಮಹಿಮಾತಿಶಯವೇ ಆಗಿದೆ ಎಂದು ಋಷಿಯು ವರ್ಣಿಸಿದಾನೆ.

**ಸು ಸ್ವಸರಸ್ಯ ಧೇನಾಃ ವಿಶ್ವಾಃ ಪಿನ್ವಥ**—ಸಂಚಾರಸ್ವಭಾವವುಳ್ಳ ಆದಿತ್ಯನ ಜಗತ್ಪ್ರೀತಿದಾಯಕಗಳಾದ ರಶ್ಮಿಗಳನ್ನು ಪೋಷಿಸುವವರು ನೀವೇ. ಇದು ನಿಮ್ಮ ಇನ್ನೊಂದು ಮಹಿಮೆಯು.

**ವಾಂ ಏಕಃ ಪವಿಃ ಅನು ಆ ವವರ್ತ**—ಪವಿಶಬ್ದಕ್ಕೆ ಯಾಸ್ಕರು **ಪವಿರಿತಿ ರಥಸ್ಯ ನೇಮಿಃ ಪವೀರಥನೇಮಿರ್ಭವತಿ** (ನಿ. ೫-೫) ಎಂದು ನಿರ್ವಚನವನ್ನು ಹೇಳಿದಾರೆ. **ಪವಿ** ಎಂದರೆ ರಥನೇಮಿ ಎಂದರ್ಥವು. ಇಲ್ಲಿ ರಥವನ್ನೇ ನಿರ್ದೇಶಿಸುವುದಕ್ಕಾಗಿ ಈ ಶಬ್ದಪ್ರಯೋಗವಿದೆ. ಎಲೈ ಮಿತ್ರಾವರುಣರೇ ನಿಮ್ಮಿಬ್ಬರಿಗೂ ಸಮಾನವಾದ, ಇಬ್ಬರಿಗೂ ಒಂದೇ ಆಗಿರುವ ರಥವು ಸದಾಕಾಲದಲ್ಲಿಯೂ ಸರ್ವತ್ರ ಸಂಚರಿಸುತ್ತದೆ. ಎಂದರೆ ಮಿತ್ರವರುಣರಾದ ನಿಮ್ಮಿಬ್ಬರಲ್ಲಿ ಒಬ್ಬೊಬ್ಬರಿಗೂ ಪ್ರತ್ಯೇಕ ರಥವಿಲ್ಲ. ಇಬ್ಬರಿಂದ ಒಂದೇ ರಥವಿರುವುದು. ಆ ರಥವು ಎಲ್ಲಾ ಕಡೆಯಲ್ಲಿಯೂ, ಎಲ್ಲಾ ಕಾಲಗಳಲ್ಲಿಯೂ ಸಂಚರಿಸುವ ಸ್ವಭಾವವುಳ್ಳದ್ದು ಎಂದು ಮಿತ್ರಾವರುಣರ ರಥದ ಪ್ರಶಂಸೆಯು ಇಲ್ಲಿ ಉಕ್ತವಾಗಿದೆ. ಇದು ಮಿತ್ರಾವರುಣರ ಮೂರನೆಯ ಮಹಿಮೆಯು.

॥ ಸಂಹಿತಾಪಾಠಃ ॥

ಅಧಾರಯತಂ ಪೃಥಿವೀಮುತ ದ್ಯಾಂ ಮಿತ್ರರಾಜಾನಾ ವರುಣಾ ಮಹೋಭಿಃ ।
ವರ್ಧಯತಮೋಷಧೀಃ ಪಿನ್ವತಂ ಗಾ ಅವ ವೃಷ್ಟಿಂ ಸೃಜತಂ ಜೀರದಾನೂ॥

॥ ಪದಪಾಠಃ ॥

ಅಧಾರಯತಂ । ಪೃಥಿವೀಂ । ಉತ । ದ್ಯಾಂ । ಮಿತ್ರಽರಾಜಾನಾ । ವರುಣಾ । ಮಹಃಽಭಿಃ ।
ವರ್ಧಯತಂ । ಓಷಧೀಃ । ಪಿನ್ವತಂ । ಗಾಃ । ಅವ । ವೃಷ್ಟಿಂ । ಸೃಜತಂ । ಜೀರದಾನೂ ಇತಿ ಜೀರಽದಾನೂ ॥ ೩ ॥

॥ ಸಾಯಣಭಾಷ್ಯಂ ॥

ಹೇ ಮಿತ್ರರಾಜಾನಾ । ಮಿತ್ರಭೂತಾಃ ಸ್ತೋತಾರೋ ರಾಜಾನಃ ಸ್ವಾಮಿನ ಈಶ್ವರಾ ಭವಂತಿ ಯಯೋಃ ಸಕಾಶಾತ್ತೌ ಮಿತ್ರರಾಜಾನೌ । ಹೇ ವರುಣಾ ॥ ಪ್ರತಿಯೋಗ್ಯಪೇಕ್ಷಯಾ ದ್ವಿವಚನಂ । ಅತ್ರ ಪಾದಾದಿತ್ವಾದಾದ್ಯಂ ಪದಂ ನ ನಿಹನ್ಯತೇ । ವರುಣೇತ್ಯೇತಸ್ಯ ತ್ವಾಮಂತ್ರಿತಂ ಪೂರ್ವಮವಿದ್ಯಮಾನವ-ದಿತಿ ಪೂರ್ವಸ್ಯಾವಿದ್ಯಮಾನವತ್ತ್ವೇನಾಸ್ಯೈವ ಪಾದಾದಿತ್ವಾದನಿಘಾತತ್ವಂ ಯುಕ್ತಂ। ನೈವಂ ಭವತಿ । ನಾಮಂತ್ರಿತೇ ಸಮಾನಾಧಿಕರಣೇ ಸಾಮಾನ್ಯವಚನಮಿತಿ ವರುಣೇತ್ಯೇತಸ್ಯಾಮಂತ್ರಿತಸಮಾನಾಧಿ-ಕರಣತ್ವಾದಸ್ಯ ಚ ಸಾಮಾನ್ಯವಚನತ್ವಾದವಿದ್ಯಮಾನವತ್ತ್ವಾಭಾವೇನ ಪಾದಾದಿತ್ವಾಭಾವಾದುತ್ತರಸ್ಯ ನಿಘಾತತ್ವಂ ಯುಕ್ತಂ ॥ ಹೇ ದೇವೌ ಮಹೋಭಿಸ್ತೇಜೋಭಿಃ ಸ್ವಸಾಮರ್ಥ್ಯೈಃ ಪೃಥಿವೀಮುತಾಪಿ ಚ ದ್ಯಾಮಧಾರಯತಂ । ಹೇ ದೇವೌ ಯುವಾಮೋಷಧೀರ್ವರ್ಧಯತಂ ವೃಷ್ಟಿಪ್ರೇರಣೇನ । ಗಾಃ ಪಿನ್ವತಂ । ಗವಾಶ್ವಾದೀನ್ವರ್ಧಯತಂ ತದರ್ಥಂ ವೃಷ್ಟಿಮವ ಸೃಜತಂ । ಅವಾಙ್ಮುಖಂ ಪ್ರೇರಯತಂ ಹೇ ಜೀರದಾನೂ ಕ್ಷಿಪ್ರದಾನೌ ॥

॥ ಪ್ರತಿಪದಾರ್ಥ ॥

ಮಿತ್ರರಾಜಾನಾ ವರುಣಾ—ಪ್ರಕಾಶಮಾನರೂ, ಪ್ರಭುಗಳೂ ಆದ ಎಲೈ ಮಿತ್ರಾವರುಣರೇ । ಮಹೋಭಿಃ—ನಿಮ್ಮ ತೇಜಸ್ಸುಗಳಿಂದ । ಪೃಥಿವೀಂ—ಪೃಥಿವಿಯನ್ನೂ । ಉತ—ಮತ್ತು । ದ್ಯಾಂ—ದ್ಯುಲೋಕವನ್ನೂ । ಅಧಾರಯತಂ—ನೀವು ಧರಿಸಿದ್ದೀರಿ । ಜೀರದಾನೂ –ಉತ್ತಮವಾದ ಎಲೈ ದಾನಿಗಳೇ । ಓಷಧೀಃ—ಓಷಧಿಗಳನ್ನು । ವರ್ಧಯತಂ—ಬೆಳೆಸಿರಿ । ಗಾಃ—ಗೋವುಗಳನ್ನು । ಪಿನ್ವತಂ—ಪೋಷಿಸಿರಿ । ವೃಷ್ಟಿಂ—ವೃಷ್ಟಿಯನ್ನು । ಅವ ಸೃಜತಂ—ಸುರಿಸಿರಿ.

॥ ಭಾವಾರ್ಥ ॥

ಪ್ರಕಾಶಮಾನರೂ, ಪ್ರಭುಗಳೂ ಆದ ಎಲೈ ಮಿತ್ರಾವರುಣರೇ, ನಿಮ್ಮ ತೇಜಸ್ಸುಗಳಿಂದ ನೀವು ಪೃಥಿವಿಯನ್ನು ಮತ್ತು ದ್ಯುಲೋಕವನ್ನು ಧರಿಸಿದ್ದೀರಿ. ಉತ್ತಮವಾದ ಎಲೈ ದಾನಿಗಳೇ, ನೀವು ಓಷಧಿಗಳನ್ನು (ಸಸ್ಯಾದಿಗಳನ್ನು) ಬೆಳೆಸಿರಿ. ಗೋವುಗಳನ್ನು ಪೋಷಿಸಿರಿ. ವೃಷ್ಟಿಯನ್ನು ಸುರಿಸಿರಿ.

English Translation

Royal Mitra and Varuna, you uphold by your energies. earth and heaven: prompt benefactors cause the plant to grow, give nourishment to the cattle, send dowm the rain.

॥ ವಿಶೇಷವಿಷಯಗಳು ॥

ಮಿತ್ರರಾಜಾನಾ-ಮಿತ್ರಭೂತಾಃ ಸ್ತೋತಾರೋ ರಾಜಾನಾಃ ಸ್ವಾಮಿನಃ ಈಶ್ವರಾ ಭವಂತಿ ಯಯೋಃ ಸಕಾಶಾತ್ತೌ ಮಿತ್ರರಾಜಾನೌ । ಸುಹೃದ್ಭಾವದಿಂದ ನಿಮ್ಮನ್ನು ಸ್ತೋತ್ರಮಾಡುವ ಸ್ತೋತೃಜನರು ನಿಮ್ಮ ಅನುಗ್ರಹದಿಂದ ಸರ್ವರಿಗೂ ರಾಜರು ಅಥವಾ ಪ್ರಭುಗಳಾಗುವರು. ಇಂತಹ ಮಹತ್ತ್ವವುಳ್ಳ ಮಿತ್ರಾವರುಣರು ಎಂದು ಈ ಶಬ್ದದ ಅರ್ಥವಿವರಣೆಮಾಡಿದರು.

ಮಹೋಭಿಃ ಪೃಥಿವೀಂ ಉತ ದ್ಯಾಂ ಅಧಾರಯತಂ-ಎಲೈ ಮಿತ್ರಾವರುಣರೇ, ನೀವು ನಿಮ್ಮ ಸ್ವಸಾಮರ್ಥ್ಯದಿಂದ ಭೂಮಿಯನ್ನೂ ಅಂತರಿಕ್ಷ ಅಥವಾ ಸ್ವರ್ಗವನ್ನೂ ಧರಿಸಿರುವಿರಿ. ಎಂದರೆ ನಿಮ್ಮ ಮಹಿಮಾತಿಶಯದಿಂದಲೇ ಭೂಮ್ಯಂತರಿಕ್ಷಗಳು ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಿರುವವು ಎಂದಭಿಪ್ರಾಯವು.

॥ ಸಂಹಿತಾಪಾಠಃ ॥

ಆ ವಾಮಶ್ವಾಸಃ ಸುಯುಜೋ ವಹಂತು ಯತರಶ್ಮಯ ಉಪ ಯಂತ್ವರ್ವಾಕ್ ।
ಘೃತಸ್ಯ ನಿರ್ಣಿಗನು ವರ್ತತೇ ವಾಮುಪ ಸಿಂಧವಃ ಪ್ರದಿವಿ ಕ್ಷರಂತಿ ॥ ೪ ॥

॥ ಪದಪಾಠಃ ॥

ಆ । ವಾಂ । ಅಶ್ವಾಸಃ । ಸುऽಯುಜಃ । ವಹಂತು । ಯತऽರಶ್ಮಯಃ । ಉಪ । ಯಂತು । ಅರ್ವಾಕ್ ।
ಘೃತಸ್ಯ । ನಿಃऽನಿಕ್ । ಅನು । ವರ್ತತೇ । ವಾಂ । ಉಪ । ಸಿಂಧವಃ । ಪ್ರऽದಿವಿ । ಕ್ಷರಂತಿ ॥ ೪ ॥

॥ ಸಾಯಣಭಾಷ್ಯಂ ॥

ಹೇ ಮಿತ್ರಾವರುಣೌ ವಾಂ ಯುವಾಮಶ್ವಾಸೋऽಶ್ವಾಃ ಸುಯುಜಃ ಸುಷ್ಠು ರಥೇ ಯುಕ್ತಾಃ ಸಂತ ಆ ವಹಂತು । ಯತರಶ್ಮಯಃ ಸಾರಥಿನಿಯತಪ್ರಗ್ರಹಾಸ್ತೇऽರ್ವಾಗುಪ ಯಂತುಂ । ಘೃತಸ್ಯೋದಕಸ್ಯ ನಿರ್ಣಿಗ್ರೂಪಂ ವಾಮನು ವರ್ತತೇ । ಅನುಗಚ್ಛತಿ । ಕಿಂಚ ಪ್ರದಿವಿ । ಪುರಾಣನಾಮೈತತ್ । ಪುರಾಣಾಃ ಸಿಂಧವ ಉಪ ಕ್ಷರಂತಿ । ಉಪಗಚ್ಛಂತಿ ಯುವಯೋರನುಗ್ರಹಾತ್ ॥

॥ ಪ್ರತಿಪದಾರ್ಥ ॥

(ಎಲೈ ಮಿತ್ರಾವರುಣರೇ,) ವಾಂ—ನಿಮ್ಮ । ಅಶ್ವಾಸಃ—ಅಶ್ವಗಳು । ಸುಯುಜಃ—ರಥಕ್ಕೆ ಕಟ್ಟಲ್ಪಟ್ಟು । ಆ ವಹಂತು—ನಿಮ್ಮನ್ನು ಇಲ್ಲಿಗೆ ಕರೆತರಲಿ । ಯತರಶ್ಮಯಃ—ಸಾರಥಿಯಿಂದ ಹಿಡಿಯಲ್ಪಟ್ಟ ಕಡಿವಾಣಗಳುಳ್ಳವಾಗಿ । ಅರ್ವಾಕ್—ನಮಗೆ ಅಭಿಮುಖವಾಗಿ । ಉಪ ಯಂತು—ನಮ್ಮ ಸಮೀಪಕ್ಕೆ ಬರಲಿ । ಘೃತಸ್ಯ—ಉದಕದ । ನಿರ್ಣಿಕ್—ಸ್ವರೂಪವು । ವಾಂ—ನಿಮ್ಮನ್ನೇ । ಅನುವರ್ತತೇ—ಅನುಸರಿಸುತ್ತದೆ । ಪ್ರದಿವಿ—ಪುರಾತನಗಳಾದ । ಸಿಂಧವಃ—ನದಿಗಳು । ಉಪ ಕ್ಷರಂತಿ—(ನಿಮ್ಮ ಅನುಗ್ರಹದಿಂದಲೇ) ಪ್ರವಹಿಸುತ್ತವೆ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ನಿಮ್ಮ ಅಶ್ವಗಳು ರಥಕ್ಕೆ ಯೋಜಿತವಾಗಿ ನಿಮ್ಮನ್ನು ಇಲ್ಲಿಗೆ ಕರೆತರಲಿ. ಸಾರಥಿಯಿಂದ ಹಿಡಿಯಲ್ಪಟ್ಟ ಕಡಿವಾಣಗಳುಳ್ಳವಾಗಿ ನಮ್ಮ ಸಮೀಪಕ್ಕೆ ಬರಲಿ. ಉದಕದ ಸ್ವರೂಪವು ನಿಮ್ಮನ್ನೇ ಅನುಸರಿಸುತ್ತದೆ. ಪುರಾತನಗಳಾದ ನದಿಗಳು ನಿಮ್ಮ ಅನುಗ್ರಹದಿಂದಲೇ ಪ್ರವಹಿಸುತ್ತವೆ.

## English Translation

May your easily-harnessed horses bear you both (hither), and with well guided reins come down; the embodied form of water follows you, the rivers flow as of old.

॥ ವಿಶೇಷವಿಷಯಗಳು ॥

**ಯತರಶ್ಮಯಃ-ಸಾರಥಿನಿಯತಪ್ರಗ್ರಹಾಃ** । ಇಲ್ಲಿ ರಶ್ಮಯಃ ಎಂದರೆ ಹಗ್ಗಗಳು ಅಥವಾ ಕುದುರೆಗಳನು ನಿಯಮಿಸುವ ಲಗಾಮುಗಳು. ಸಾರಥಿಯು ರಥದ ಕುದುರೆಗಳನ್ನು ನಡೆಸುವಾಗ ಅವುಗಳ ಲಗಾಮುಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡು ಅವುಗಳ ಸಹಾಯದಿಂದ ಕುದುರೆಗಳನ್ನು ತನಗೆ ಬೇಕಾದಕಡೆಗೆ ಹೋಗುವಂತೆ ಪ್ರೇರಿಸುವನು. ಆದುದರಿಂದ **ಯತರಶ್ಮಯಃ** ಎಂದರೆ ಸಾರಥಿಯ ಅಧೀನಕ್ಕೊಳಪಟ್ಟಿರುವ ಲಗಾಮುಗಳುಳ್ಳ ಅಶ್ವಗಳು ಎಂದರ್ಥವು.

॥ ಸಂಹಿತಾಪಾಠಃ ॥

ಅನು ಶ್ರುತಾಮಮತಿಂ ವರ್ಧದುರ್ವೀಂ ಬರ್ಹಿರಿವ ಯಜುಷಾ ರಕ್ಷ-
ಮಾಣಾ ।

ನಮಸ್ವಂತಾ ಧೃತದಕ್ಷಾಧಿ ಗರ್ತೇ ಮಿತ್ರಾಸಾಥೇ ವರುಣೇಳಾಸ್ವಂತಃ ॥ ೫ ॥

॥ ಪದಪಾಠಃ ॥

ಅನು । ಶ್ರುತಾಂ । ಅಮತಿಂ । ವರ್ಧತ್ । ಉರ್ವೀಂ । ಬರ್ಹಿಃऽಇವ । ಯಜುಷಾ । ರಕ್ಷಮಾಣಾ ।

ನಮಸ್ವಂತಾ । ಧೃತऽದಕ್ಷಾ । ಅಧಿ । ಗರ್ತೇ । ಮಿತ್ರ । ಆಸಾಥೇ ಇತಿ । ವರುಣ । ಇಳಾಸು । ಅಂತರಿತಿ॥

॥ ಸಾಯಣಭಾಷ್ಯಂ ॥

ಶ್ರುತಾಂ ವಿಶ್ರುತಾಮಮತಿಂ । ರೂಪನಾಮ್ಯೇತತ್ । ಶರೀರದೀಪ್ತಿಮಿತ್ಯರ್ಥಃ । ತಾಮನು ವರ್ಧದನುವರ್ಧಯಂತೌ । ಬರ್ಹಿರ್ಯಜ್ಞಃ । ಸ ಇವ ಸ ಯಥಾ ಯಜುಷಾ ಮಂತ್ರೇಣ ರಕ್ಷ್ಯತೇ ತದ್ವದುರ್ವೀಂ ರಕ್ಷಮಾಣಾ ಪಾಲಯಂತೌ ನಮಸ್ವಂತಾನ್ನವಂತೌ ಹೇ ಧೃತದಕ್ಷಾತ್ತಬಲೌ ಹೇ ಮಿತ್ರ ಹೇ ವರುಣ ಹೇ ಮಿತ್ರಾವರುಣೌ ಯುವಾಮುಕ್ತಲಕ್ಷಣೌ ಸಂತಾವಿಳಾಸು ಯಾಗಭೂಮಿಷ್ವಂತರ್ಮಧ್ಯೇ ಗರ್ತೇऽಧಿ ರಥ ಆಸಾಥೇ । ಉಪವಿಶಥಃ । ರಥೋऽಪಿ ಗರ್ತ ಉಚ್ಯತೇ । ನಿ-೩. ೫. । ಇತಿ ಯಾಸ್ಕಃ । ಆ ರೋಹಥೋ ವರುಣ ಮಿತ್ರ ಗರ್ತಂ । ಋಗ್ವೇ. ೫-೬೨-೮ । ಇತಿ ॥

॥ ಪ್ರತಿಪದಾರ್ಥ ॥

**ನಮಸ್ವಂತಾ**—ಅನ್ನವಂತರೂ | **ಧೃತದಕ್ಷಾ**—ಲಬ್ಧಬಲವುಳ್ಳವರೂ ಆದ | **ಮಿತ್ರ, ವರುಣ**—ಎಲೈ ಮಿತ್ರಾವರುಣರೇ | **ಯಜುಷಾ**—ಮಂತ್ರದಿಂದ ರಕ್ಷಿತವಾಗುವ | **ಬರ್ಹಿಃ ಇವ**—ಯಜ್ಞದಂತೆ | **ಶ್ರುತಾಂ**—ಪ್ರಸಿದ್ಧವಾದ | **ಅಮತಿಂ**—ರೂಪವನ್ನು (ಶರೀರಕಾಂತಿಯನ್ನು) | **ಅನು ವರ್ಧತ್**—ವೃದ್ಧಿಯಾಗುವಂತೆ ಮಾಡುತ್ತಲೂ | **ಉರ್ವೀಂ**—ವಿಸ್ತೃತವಾದ ಅದೇ ಸ್ವರೂಪವನ್ನು | **ರಕ್ಷಮಾಣಾ**—ರಕ್ಷಿಸುತ್ತಲೂ | **ಇಳಾಸು ಅಂತಃ**—ಯಜ್ಞಭೂಮಿಗಳ ಮಧ್ಯದಲ್ಲಿ | **ಗರ್ತೇ ಅಧಿ**—ನಿಮ್ಮ ರಥಗಳಲ್ಲಿ | **ಆಸಾಥೇ**—ಕುಳಿತುಕೊಳ್ಳಿರಿ

॥ ಭಾವಾರ್ಥ ॥

ಅನ್ನವಂತರೂ, ಲಬ್ಧಬಲವುಳ್ಳವರೂ ಆದ ಎಲೈ ಮಿತ್ರಾವರುಣರೇ, ಮಂತ್ರದಿಂದ ರಕ್ಷಿತವಾಗುವ ಯಜ್ಞದಂತೆ ಪ್ರಸಿದ್ಧವಾದ ನಿಮ್ಮ ರೂಪವನ್ನು ವೃದ್ಧಿಯಾಗುವಂತೆ ಮಾಡುತ್ತಲೂ, ವಿಸ್ತೃತವಾದ ಅದೇ ಸ್ವರೂಪವನ್ನು ರಕ್ಷಿಸುತ್ತಲೂ ಯಜ್ಞಭೂಮಿಗಳ ಮಧ್ಯದಲ್ಲಿ ನಿಮ್ಮ ರಥಗಳಲ್ಲಿ ಕುಳಿತುಕೊಳ್ಳಿರಿ.

English Translation

Augmenting the well-known and ample form (of man), in like manner as the sacred grass is preserved by prayer, do you, Mitra and Varuna, who are invigorated by (sacrificial) viands, and abound in food, ascend your car in the midst of the place of sacrifice

॥ ವಿಶೇಷವಿಷಯಗಳು ॥

**ಬರ್ಹಿಃ**-**ಬರ್ಹಿಃ** ಎಂಬ ಶಬ್ದವು ಅಂತರಿಕ್ಷ ನಾಮಗಳಲ್ಲಿಯೂ (ನಿ. ೧-೧೦) ಉದಕನಾಮಗಳಲ್ಲಿಯೂ (ನಿ. -೨-೨೪) ಪಠಿತವಾಗಿದೆ. ಇದಲ್ಲದೆ ಯಾಸ್ಕರು **ಬರ್ಹಿಃ ಪರಿಬರ್ಹಣಾತ್** | (ನಿ. ೮-೯) ಯಜ್ಞಾದಿಗಳಲ್ಲಿ ದೇವತೆಗಳು ಬಂದು ಕುಳಿತುಕೊಳ್ಳುವುದಕ್ಕಾಗಿ ದರ್ಭೆಗಳಿಂದ ಮೆತ್ತಗಿರುವಂತೆ ಆಸನಗಳನ್ನು ಸಿದ್ಧಪಡಿಸುವರು. ಈ ಆಸನಗಳನ್ನು ಒಂದೇ ಆಳತೆಗೆ ಸರಿಯಾಗಿ ಕತ್ತರಿಸಿದ ದರ್ಭೆಗಳಿಂದ ನಿರ್ಮಿಸುವರು. ಇಂತಹ ಸಮನಾಗಿ ಕತ್ತರಿಸಿದ ದರ್ಭೆಗೆ ಅಥವಾ ದರ್ಭಾಸನಕ್ಕೆ ಬರ್ಹಿಃ ಎಂದು ಹೆಸರು. ಪ್ರಕೃತ ಋಕ್ಕಿನಲ್ಲಿ ಈ ಶಬ್ದವು ಯಜ್ಞವೆಂಬ ಅರ್ಥದಲ್ಲಿ ಪ್ರಯುಕ್ತವಾಗಿದೆ.

**ಗರ್ತೇ**-ಯಾಸ್ಕರು ಈ ಶಬ್ದದ ಅರ್ಥವಿಷಯದಲ್ಲಿ **ರಥೋಽಪಿಗರ್ತ ಉಚ್ಯತೇ ಗೃಣಾತೇಃ ಸ್ತುತಿಕರ್ಮಣಃ | ಸ್ತುತತಮಂ ಯಾನಂ | ಆರೋಹಥೋ ವರುಣ ಮಿತ್ರ ಗರ್ತಂ ಇತ್ಯಪಿ ನಿಗಮೋ ಭವತಿ** | (ನಿ. ೩-೫) ಎಂದು ನಿರ್ವಚನವನ್ನು ಹೇಳಿದಾರೆ ಎಂದರೆ ರಥಕ್ಕೂ ಗರ್ತವೆಂದು ಹೆಸರು. ಏಕೆಂದರೆ ಈ ಶಬ್ದವು ಸ್ತುತಿಸು ಎಂಬರ್ಥವುಳ್ಳ ಗೃಣಾತಿಧಾತುವಿನಿಂದ ನಿಷ್ಪನ್ನವಾಗಿ ಶ್ರೇಷ್ಠವಾದ ಯಾನವು ಎಂಬರ್ಥವನ್ನು ಸೂಚಿಸುವುದಾಗಿದೆ. ಈ ವಿಷಯದಲ್ಲಿ **ಆರೋಹಥೋ ವರುಣ ಮಿತ್ರ ಗರ್ತಂ** (ಋ ಸಂ. ೫.೬೨.೮) ಎಂಬ ಶ್ರುತಿವಾಕ್ಯದ ಉದಾಹರಣೆಯೂ ಇರುವುದು

॥ ಸಂಹಿತಾಪಾಠಃ ॥

ಅಕ್ರವಿಹಸ್ತಾ ಸುಕೃತೇ ಪರಸ್ಪಾ ಯಂ ತ್ರಾಸಾಥೇ ವರುಣೇಳಾಸ್ವಂತಃ ।
ರಾಜಾನಾ ಕ್ಷತ್ರಮಹೃಣೀಯಮಾನಾ ಸಹಸ್ರಸ್ಥೂಣಂ ಬಿಭೃಥಃ ಸಹ ದ್ವೌ ॥

॥ ಪದಪಾಠಃ ॥

ಅಕ್ರವಿಽಹಸ್ತಾ । ಸುಽಕೃತೇ । ಪರಃಽಪಾ । ಯಂ । ತ್ರಾಸಾಥೇ ಇತಿ । ವರುಣಾ । ಇಳಾಸು । ಅಂತರಿತಿ ।
ರಾಜಾನಾ । ಕ್ಷತ್ರಂ । ಅಹೃಣೀಯಮಾನಾ । ಸಹಸ್ರಽಸ್ಥೂಣಂ । ಬಿಭೃಥಃ । ಸಹ । ದ್ವೌ ॥ ೬ ॥

॥ ಸಾಯಣಭಾಷ್ಯಂ ॥

ಅಕ್ರವಿಹಸ್ತಾ ಅಕೃಪಣಹಸ್ತೌ । ದಾನಶೂರಾವಿತ್ಯರ್ಥಃ । ಕಸ್ಮೈ । ಸುಕೃತೇ ಶೋಭನಸ್ತುತಿಕರ್ತ್ರೇ ಪರಸ್ಪಾ ಪರಸ್ತಾತ್ಪಾತಾರೌ ರಕ್ಷಿತಾರೌ ಹೇ ವರುಣಾ ಮಿತ್ರಾವರುಣೌ ಯುವಾಂ ಯಂ ಯಜಮಾನಮಿಳಾಸು ಯಾಗಭೂಮಿಷ್ವಂತರ್ಮಧ್ಯೇ ತ್ರಾಸಾಥೇ ರಕ್ಷಥಃ ತಸ್ಮೈ ಸುಕೃತೇಽಕ್ರವಿಹಸ್ತಾ ಪರಸ್ಪಾ ಚ ಭವಥ ಇತಿ ಸಂಬಂಧಃ । ಕಿಂಚ ಯುವಾಂ ರಾಜಾನಾ ರಾಜಮಾನಾವಹೃಣೀಯಮಾನಾಕ್ರುಧ್ಯಂತೌ ದ್ವೌ ಪರಸ್ಪರಂ ಸಹ ಸಾಹಿತ್ಯೇನ ಕ್ಷತ್ರಂ ಧನಂ ಸಹಸ್ರಸ್ಥೂಣಮನೇಕಾವಷ್ಟಂಭಕಸ್ತಂಭೋಪೇತಂ ಸೌಧಾದಿರೂಪಂ ಗೃಹಂ ಚ ಬಿಭೃಥಃ । ಧಾರಯಥಃ ಸುಕೃತೇ ಯಜಮಾನಾಯ । ಅಥವಾ ಕ್ಷತ್ರಂ ಬಲಮಪರಿಮಿತಾಭಿಃ ಸ್ಥೂಣಾಭಿರುಪೇತಂ ರಥಂ ಚಾಗಮನಾರ್ಥಂ ಸಹ ಧಾರಯಥಃ ॥

॥ ಪ್ರತಿಪದಾರ್ಥ ॥

**ವರುಣಾ**—ಎಲೈ ಮಿತ್ರಾವರುಣರೇ । **ಯಂ**—ಯಾವ ಯಜಮಾನನನ್ನು । **ಇಳಾಸು ಅಂತಃ**—ಯಜ್ಞಭೂಮಿಗಳ ಮಧ್ಯದಲ್ಲಿ। **ತ್ರಾಸಾಥೇ**—ರಕ್ಷಿಸುತ್ತೀರೋ ಅಂತಹ। **ಸುಕೃತೇ**-ಸತ್ಕರ್ಮಕಾರಿಯಾದ ಯಜಮಾನನಿಗೆ **ಅಕ್ರವಿಹಸ್ತಾ**—ಉದಾರವಾಗಿ ದಾನಮಾಡುವ ಹಸ್ತವುಳ್ಳವರಾಗಿಯೂ । **ಪರಸ್ಪಾ**—ಉತ್ತಮವಾದ ರಕ್ಷಣೆಯನ್ನು ನಿಡುವವರಾಗಿಯೂ ಆಗಿರಿ । **ರಾಜಾನಾ**—ಪ್ರಭುಗಳೂ । **ಅಹೃಣೀಯಮಾನಾ**—ಕ್ರೋಧರಹಿತರೂ ಆದ । **ದ್ವೌ**—ನೀವಿಬ್ಬರೂ । **ಸಹ**—ಒಟ್ಟುಗೂಡಿ । **ಸಹಸ್ರಸ್ಥೂಣಂ**—ಸಹಸ್ರ ಕಂಭಗಳಿಂದ ಕೂಡಿದ ಗೃಹಾತ್ಮಕವಾದ । **ಕ್ಷತ್ರಂ**—ಧನವನ್ನು । **ಬಿಭೃಥಃ**—ಧರಿಸಿದ್ದೀರಿ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ಯಾವ ಯಜಮಾನನನ್ನು ನೀವು ಯಜ್ಞಭೂಮಿಗಳ ಮಧ್ಯದಲ್ಲಿ ರಕ್ಷಿಸುತ್ತೀರೋ ಅಂತಹ ಸತ್ಕರ್ಮಕಾರಿಯಾದ ಯಜಮಾನನಿಗೆ ಉದಾರವಾಗಿ ದಾನಮಾಡುವ ಹಸ್ತವುಳ್ಳವರಾಗಿಯೂ, ಉತ್ತಮವಾದ ರಕ್ಷಣೆಯನ್ನು ನೀಡುವವರಾಗಿಯೂ ಆಗಿರಿ. ಪ್ರಭುಗಳೂ, ಕ್ರೋಧರಹಿತರೂ ಆದ ನೀವಿಬ್ಬರೂ ಒಟ್ಟುಗೂಡಿ ಸಹಸ್ರ ಸ್ತಂಭಗಳಿಂದ ಕೂಡಿದ ಗೃಹಾತ್ಮಕವಾದ ಧನವನ್ನು ಧರಿಸಿದ್ದೀರಿ.

## English Translation

Be open-handed and benignant to the performer of pious acts, whom you protect in the midst of the place of sacrifice ; for you two, who are sovereigns, and free from wrath, uphold together a mansion of a thousand columns.

॥ ವಿಶೇಷವಿಷಯಗಳು ॥

**ಸಹಸ್ರಸ್ಥೂಣಂ—ಸಹಸ್ರಸ್ಥೂಣಮನೇಕಾವಷ್ಟಂಭಕಸ್ತಂಭೋಪೇತಂ ಸೌಧಾದಿರೂಪಂ ಗೃಹಂ ಚ ಬಿಭೃತಃ** । ಈ ಶಬ್ದಕ್ಕೆ ಭಾಷ್ಯಕಾರರು ಸಾವಿರ ಕಂಭಗಳುಳ್ಳ ಒಂದು ದೊಡ್ಡ ಸೌಧ ಅಥವಾ ಗೃಹವು ಎಂದರ್ಥ ಮಾಡಿದಾರೆ ಇಲ್ಲಿ ಸಹಸ್ರವೆಂದರೆ ಅನೇಕವೆಂದು ಅರ್ಥಮಾಡಬಹುದು ಅನೇಕ ಸ್ಥಂಭಗಳುಳ್ಳ ಉತ್ತಮವಾದ ಗೃಹವೆಂದರೆ ಶ್ರೇಷ್ಠತರಗತಿಗೆ ಸೇರಿದ ಸೌಧ ಅಥವಾ ಅರಮನೆ Mansion or Palace with a number of pillars ಸೌಧಾರಣವಾದ ಗೃಹಗಳಿಗೆ ಹೆಚ್ಚು ಸ್ತಂಭಗಳಿರುವುದಿಲ್ಲ. ದೊಡ್ಡದಾಗಿಯೂ ಶ್ರೇಷ್ಠರೀತಿಯಿಂದ ಕಟ್ಟಿದುದಾಗಿಯೂ ಇರುವ ಸೌಧಾದಿಗಳನ್ನು ಮಾತ್ರ ಅನೇಕ ಸ್ಥಂಭಗಳನ್ನುಉಪಯೋಗಿಸಿ ಕಟ್ಟಲಾಗುವುದು. ಆದುದರಿಂದ ಇಲ್ಲಿ ಸಹಸ್ರಸ್ಥೂಣಂ ಎಂದರೆ ಶ್ರೇಷ್ಠರೀತಿಯಿಂದ ಕಟ್ಟಿರುವ ಉತ್ತಮವಾದ ಸೌಧವು ಎಂದರ್ಥವು. ಅಥವಾ ಬಲವುಳ್ಳದ್ದೂ ಅನೇಕ ಸ್ತಂಭಗಳಿಂದ ಕೂಡಿರುವುದೂ ಆದ ನಿಮ್ಮ ರಥದಲ್ಲಿ ಯಜ್ಞಗಮನಾರ್ಥವಾಗಿ ಕುಳಿತಿರುವಿರಿ ಎಂದೂ ಅರ್ಥವಾಗಬಹುದು.

॥ ಸಂಹಿತಾಪಾಠಃ ॥

ಹಿರಣ್ಯನಿರ್ಣಿಗಯೋ ಅಸ್ಯ ಸ್ಥೂಣಾ ವಿ ಭ್ರಾಜತೇ ದಿವ್ಯ೧ಶ್ವಾಜನೀವ ।
ಭದ್ರೇ ಕ್ಷೇತ್ರೇ ನಿಮಿತಾ ತಿಲ್ವಿಲೇ ವಾ ಸನೇಮ ಮಧ್ವೋ ಅಧಿಗರ್ತ್ಯಸ್ಯ॥ ೭ ॥

॥ ಪದಪಾಠಃ ॥

ಹಿರಣ್ಯಽನಿರ್ನಿಕ್ । ಅಯಃ । ಅಸ್ಯ । ಸ್ಥೂಣಾ । ವಿ । ಭ್ರಾಜತೇ । ದಿವಿ । ಅಶ್ವಾಜನೀಽಇವ ।
ಭದ್ರೇ । ಕ್ಷೇತ್ರೇ । ನಿಽಮಿತಾ । ತಿಲ್ವಿಲೇ । ವಾ । ಸನೇಮ । ಮಧ್ವಃ । ಅಧಿಽಗರ್ತ್ಯಸ್ಯ ॥ ೭ ॥

॥ ಸಾಯಣಭಾಷ್ಯಂ ॥

**ಅನಯೋ ರಥೋ ಹಿರಣ್ಯನಿರ್ಣಿಕ್ ಹಿರಣ್ಯರೂಪಃ । ನಿರ್ಣಿಗಿತಿ ರೂಪನಾಮ । ಅಸ್ಯ ರಥಸ್ಯ ಸ್ಥೂಣಾ ಕೀಲಕಾದಯೋಽಯಃ । ಹಿರಣ್ಯನಾಮೈತತ್ । ಅಯೋವಿಕಾರಾ ಇತ್ಯರ್ಥಃ । ಅಯೋಮಯಾ**

ವಾ । ತಾದೃಶೋ ರಥೋ ದಿವ್ಯಂತರಿಕ್ಷೇ ವಿ ಭ್ರಾಜತೇ । ಕಮಿವ । ಅಶ್ವಾಜನೀವ । ಅಶ್ವಾ ವ್ಯಾಪನಶೀಲಾ ಮೇಘಾಃ । ತಾನಜತಿ ಗಚ್ಛತ್ಯತೀಶ್ವಾಜನೀ ವಿದ್ಯುತ್ । ಸೇವ ದಿವಿ ಭ್ರಾಜತೇ । ಕಿಂಚ ಭದ್ರೇ ಕಲ್ಯಾಣೇ ಸ್ತುತ್ಯೇ ವಾ ಕ್ಷೇತ್ರೇ ದೇವಯಜನೇ ತಿಲ್ವಿಲೇ ವಾ ॥ ತಿಲ ಸ್ನೇಹನೇ ॥ ತಿಲುಃ ಸ್ನಿಗ್ಧಾ ಇಲಾ ಭೂಮಿರ್ಯಸ್ಯ ತತ್ ಕ್ಷೇತ್ರಂ ತಿಲ್ವಿಲಂ ದೇವಯಜನಂ । ಘೃತಸೋಮಾದಿನಾ ಸ್ನಿಗ್ಧೇ ಭದ್ರೇ ಚ ಕ್ಷೇತ್ರೇ ನಿಮಿತಾ ಸ್ಥೂಣಾ ಯೂಪಯಸ್ಮಿನ್ಸ್ಥಿರವಸ್ಥಿತೇಃ । ಮಧ್ವೋ ಮಧುಪೂರ್ಣಂ ಗರ್ತಸ್ಯ ಗರ್ತಂ ರಥಂ ಸನೇಮ। ಸಂಭಜೇಮ । ಕರ್ಮಣಿ ಷಷ್ಠ್ಯೌ । ಅಧೀತಿ ಪೂರಣಃ ॥ ಅಥವಾ ಗರ್ತಸ್ಯಾಧಿ ರಥಸ್ಯೋಪರಿ ಮಧ್ವೋ ಮಧು ಸೋಮರಸಂ ಸನೇಮ । ಸ್ಥಾಪಯೇಮೇತ್ಯರ್ಥಃ ॥

॥ ಪ್ರತಿಪದಾರ್ಥ ॥

(ಈ ಮಿತ್ರಾವರುಣರ ರಥವು) **ಹಿರಣ್ಯನಿರ್ಣಿಕ್**—ಸುವರ್ಣನಿರ್ಮಿತವಾಗಿದೆ । **ಅಸ್ಯ**—ಈ ರಥದ । **ಸ್ಥೂಣಾ**—ಕೀಲುಗಳು । **ಅಯಃ**—ಉಕ್ಕಿನಿಂದ ನಿರ್ಮಿತವಾಗಿವೆ (ಈ ರಥವು) । **ದಿವಿ**—ಅಂತರಿಕ್ಷದಲ್ಲಿ । **ಅಶ್ವಾಜನೀವ**—ವಿದ್ಯುತ್ತಿನಂತೆ । **ವಿ ಭ್ರಾಜತೇ**—ಪ್ರಕಾಶಿಸುತ್ತದೆ । **ಭದ್ರೇ ಕ್ಷೇತ್ರೇ**—ಮಂಗಳಕರವಾದ ಪ್ರದೇಶದಲ್ಲಿಯಾಗಲಿ । **ನಿಮಿತಾ**—ಯೂಪ ಸ್ತಂಭವು (ಸ್ಥಾಪಿತವಾಗಿರುವ) । **ತಿಲ್ವಿಲೇ**—ದೇವಯಜನ ಪ್ರದೇಶದಲ್ಲಿಯಾಗಲಿ **ಅಧಿಗರ್ತ್ಯಸ್ಯ**—ರಥದೊಳಗೆ । **ಮಧ್ವಃ**—ಮಧುರವಾದ ಸೋಮರಸವನ್ನು । **ಸನೇಮ**—ತುಂಬೋಣ.

॥ ಭಾವಾರ್ಥ ॥

ಈ ಮಿತ್ರಾವರುಣರ ರಥವು ಸುವರ್ಣನಿರ್ಮಿತವಾಗಿದೆ. ಈ ರಥದ ಕೀಲುಗಳು ಉಕ್ಕಿನಿಂದ ನಿರ್ಮಿತವಾಗಿವೆ. ಈ ರಥವು ಅಂತರಿಕ್ಷದಲ್ಲಿ ವಿದ್ಯುತ್ತಿನಂತೆ ಪ್ರಕಾಶಿಸುತ್ತದೆ ಮಂಗಳಕರವಾದ ಪ್ರದೇಶದಲ್ಲಿಯಾಗಲಿ, ಯೂಪ ಸ್ತಂಭವು ಸ್ಥಾಪಿತವಾಗಿರುವ ದೇವಯಜನ ಪ್ರದೇಶದಲ್ಲಿಯಾಗಲಿ ರಥದೊಳಗೆ ಮಧುರವಾದ ಸೋಮರಸವನ್ನು ತುಂಬೋಣ.

English Translation

The substance (of their chariot) is of gold ; its pillars are of iron, and it shines in the firmament like lightning: may we load the vehicle with the libation in an auspicious place, or in the sacrificial hall, (where the columns) are erected

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಮಿತ್ರಾವರುಣರ ರಥವರ್ಣನೆ ಇದೆ ಇವರ ರಥವು ಸುವರ್ಣನಿರ್ಮಿತವಾಗಿದೆ ಕೀಲುಗಳು ದೃಢವಾಗಿರುವುದಕ್ಕಾಗಿ ಉಕ್ಕಿನಿಂದ ನಿರ್ಮಿತವಾಗಿದೆ ಇಂತಹ ರಥವು ಅಂತರಿಕ್ಷದಲ್ಲಿ ಮಿಂಚಿನಂತೆ ಅತಿ ಪ್ರಕಾಶಮಾನವಾಗಿ ಬೆಳಗುತ್ತದೆ.

**ತಿಲ್ವಿಲೇ**—ಈ ಶಬ್ದಕ್ಕೆ ಸಾಯಣರು—**ತಿಲುಃ (ತಿಲ ಸ್ನೇಹನೇ) ಸ್ನಿಗ್ಧಾ ಇಲಾ ಭೂಮಿರ್ಯಸ್ಯ ತತ್ ಕ್ಷೇತ್ರಂ ತಿಲ್ವಿಲಂ ದೇವಯಜನಂ । ಘೃತಸೋಮಾದಿನಾ ಸ್ನಿಗ್ಧೇ ಭದ್ರೇ ಚ ಕ್ಷೇತ್ರೇ । ತಿಲುಃ** ಎಂದರೆ ಸ್ನಿಗ್ಧವಾದ, ನೆನೆದಿರುವ ಎಂದರೆ ಘೃತ, ಸೋಮರಸ ಮೊದಲಾದ ದ್ರವರೂಪವಾದ ವಸ್ತುಗಳಿಂದ ಸಿಕ್ತವಾಗಿರುವ

ಎಂದರ್ಥವು. ಇಲಾ ಎಂದರೆ ಭೂಮಿಯು. ಯಜ್ಞದಲ್ಲಿ ಘೃತ, ಸೋಮ ಮೊದಲಾದವುಗಳನ್ನು ಯಥೇಚ್ಛವಾಗಿ ಉಪಯೋಗಿಸುವುದರಿಂದ ಅಲ್ಲಿರುವ ಭೂಮಿಯು ಆಗಾಗ ಚೆಲ್ಲಿಹೋಗುವ ಆ ರಸಗಳಿಂದ ನೆನೆದುಹೋಗುವುದು ಸ್ವಾಭಾವಿಕವಾಗಿದೆ. ಆದ್ದರಿಂದ ಅಂತಹ ಸಿಕ್ತಪ್ರದೇಶವು ಎಂದರೆ ಯಜ್ಞಭೂಮಿಯು ಎಂದು ತಿಲ್ವಿಲ ಶಬ್ದಕ್ಕೆ ಅರ್ಥವಿವರಣೆ ಮಾಡಿದಾರೆ.

॥ ಸಂಹಿತಾಪಾಠಃ ॥

**ಹಿರಣ್ಯರೂಪಮುಷಸೋ ವ್ಯುಷ್ಟಾವಯಃ ಸ್ಥೂಣಮುದಿತಾ ಸೂರ್ಯಸ್ಯ ।**
**ಆ ರೋಹಥೋ ವರುಣ ಮಿತ್ರ ಗರ್ತಮತಶ್ಚಕ್ಷಾಥೇ ಅದಿತಿಂ ದಿತಿಂ ಚ ॥೮॥**

॥ ಪದಪಾಠಃ ॥

ಹಿರಣ್ಯಽರೂಪಂ । ಉಷಸಃ । ವಿಽಉಷ್ಟೌ । ಅಯಃಽಸ್ಥೂಣಂ । ಉತ್ಽಇತಾ । ಸೂರ್ಯಸ್ಯ ।
ಆ । ರೋಹಥಃ । ವರುಣ । ಮಿತ್ರ । ಗರ್ತಂ । ಅತಃ । ಚಕ್ಷಾಥೇ ಇತಿ । ಅದಿತಿಂ । ದಿತಿಂ । ಚ ॥ ೮ ।

॥ ಸಾಯಣಭಾಷ್ಯಂ ॥

ಉಷಸೋ ವ್ಯುಷ್ಟೌ । ಪ್ರಾತಃಕಾಲ ಇತ್ಯರ್ಥಃ । ಸೂರ್ಯಸ್ಯೋದಿತೋದಿತಾವುದಯೇ । ಸ ಏವ ಕಾಲಃ ಪ್ರಕಾರಾಂತರೇಣೋಕ್ತಃ । ತಸ್ಮಿನ್ ಕಾಲೇ ಹಿರಣ್ಯರೂಪಮಯಃಸ್ಥೂಣಮಯೋಮಯಶಂಕುಂ ಗರ್ತಂ ರಥಂ ಹೇ ವರುಣ ಹೇ ಮಿತ್ರ ಯುವಾಂ ಗರ್ತಮಾ ರೋಹಥೋ ಯಜ್ಞಂ ಪ್ರಾಪ್ತುಂ । ಅತೋಽಸ್ಮಾದ್ಧೇತೋರದಿತಿಮಖಂಡನೀಯಾಂ ಭೂಮಿಂ ದಿತಿಂ ಖಂಡಿತಾಃ ಪ್ರಜಾದಿಕಾಂ ಚ ಚಕ್ಷಾಥೇ । ಪಶ್ಯಥಃ।

॥ ಪ್ರತಿಪದಾರ್ಥ ॥

**ವರುಣ, ಮಿತ್ರ**—ಎಲೈ ಮಿತ್ರಾವರುಣರೇ । **ಉಷಸೋ ವ್ಯುಷ್ಟೌ**—ಉಷಸ್ಸಿನ ಆವಿರ್ಭವಕಾಲದಲ್ಲೂ । **ಸೂರ್ಯಸ್ಯ ಉದಿತಾ**—ಸೂರ್ಯೋದಯಕಾಲದಲ್ಲೂ । **ಹಿರಣ್ಯರೂಪಂ**—ಸುವರ್ಣಾತ್ಮಕವಾದುದೂ । **ಅಯಃ ಸ್ಥೂಣಂ**—ಉಕ್ಕಿನಸ್ತಂಭಗಳುಳ್ಳದ್ದೂ ಆದ **ಗರ್ತಂ**—ರಥವನ್ನು । **ಆ ರೋಹಥಃ**—ನೀವು ಹತ್ತುತ್ತೀರಿ। **ಅತಃ**—ಅನಂತರ । **ಅದಿತಿಂ**—ಅಖಂಡಳಾದ ಪೃಥ್ವಿಯನ್ನೂ । **ದಿತಿಂ ಚ**—ಖಂಡರೂಪವಾದ ತತ್ಪ್ರಜೆಗಳನ್ನೂ । **ಚಕ್ಷಾಥೇ**—ನೋಡುತ್ತೀರಿ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ಉಷಸ್ಸಿನ ಆವಿರ್ಭವಕಾಲದಲ್ಲೂ, ಸೂರ್ಯನ ಉದಯಕಾಲದಲ್ಲೂ, ನೀವು ನಿಮ್ಮ ಸುವರ್ಣರೂಪವುಳ್ಳದ್ದೂ, ಉಕ್ಕಿನಸ್ತಂಭಗಳುಳ್ಳದ್ದೂ ಆದ ರಥವನ್ನು ಹತ್ತುತ್ತೀರಿ. ಅನಂತರ ಅಖಂಡಳಾದ ಪೃಥ್ವಿಯನ್ನೂ, ಖಂಡರೂಪರಾದ ಪ್ರಜೆಗಳನ್ನೂ ನೋಡುತ್ತೀರಿ.

## English Translation

At the break of dawn, at the rising of the sun, ascend, Mitra and Varuna, your golden-bodied, iron-pillared car, and thence behold theearth and its inhabitants

॥ ವಿಶೇಷವಿಷಯಗಳು ॥

**ಉಷಸೋ ವ್ಯುಷ್ಟೌ ಸೂರ್ಯಸ್ಯ ಉದಿತಾ**-ಉಷಸ್ಸಿನ ಆವಿರ್ಭಾವಕಾಲದಲ್ಲಿ ಮತ್ತು ಸೂರ್ಯನು ಉದಯಿಸಿದಾಗ ಎಂಬ ಎರಡು ವಾಕ್ಯಗಳಿಗೂ ಪ್ರಾತಃಕಾಲದಲ್ಲಿ ಎಂಬ ಒಂದೇ ಅರ್ಥವು ಸೂಚಿತವಾಗುವುದು. ಪ್ರಾತಃಕಾಲದಲ್ಲಿ ಯಜ್ಞಕರ್ಮವು ನಡೆಯುತ್ತಿರುವಾಗ ಹೋತೃವು ನಿಮ್ಮನ್ನು ಆಹ್ವಾನಮಾಡಿದೊಡನೆಯೇ ನೀವು ಯಜ್ಞಭೂಮಿಗೆ ಬರುವುದಕ್ಕಾಗಿ ನಿಮ್ಮ ಸುವರ್ಣಮಯವಾದ ಮತ್ತು ಉಕ್ಕಿನ ಸ್ಥಂಭಗಳುಳ್ಳ ರಥವನ್ನೇರುತ್ತೀರಿ ಎಂದು ಋಷಿಯು ಮಿತ್ರಾವರಣರ ಆಗಮನವನ್ನು ವರ್ಣಿಸಿದಾನೆ.

**ಅದಿತಿಂ ದಿತಿಂ ಚ ಚಕ್ಷಾಥೇ—ಅದಿತಿಮಖಂಡನೀಯಾಂ ಭೂಮಿಂ ದಿತಿಂ ಖಂಡಿತಾಂ ಪ್ರಜಾದಿಕಂ ಚ ಪಶ್ಯಥಃ ।** ಭಾಷ್ಯಕಾರರು ಅದಿತಿಶಬ್ದಕ್ಕೆ ಖಂಡರಹಿತವಾದ ಎಂದರೆ ಬೇರೆಬೇರೆಯಾಗಿ ವಿಭಾಗಿಸಲ್ಪಡದೆ ಅಖಂಡವಾಗಿ ದೊಡ್ಡದಾದ ಒಂದೇ ಆಕಾರವುಳ್ಳ ಭೂಮಿಯನ್ನು ಎಂದೂ, ದಿತಿಶಬ್ದಕ್ಕೆ-ಭಾಗಗಳಾಗಿರುವ ಎಂದರೆ ಬೇರೆ ಬೇರೆಯಾಗಿರುವ ಜನರನ್ನು ನೋಡುವಿರಿ ಎಂದೂ ಅರ್ಥವಿವರಣೆಮಾಡಿದಾರೆ. ಮಿತ್ರಾವರುಣರು ತಮ್ಮ ಸುವರ್ಣಮಯವಾದ ರಥದಲ್ಲಿ ಕುಳಿತು ಅಂತರಿಕ್ಷಮಾರ್ಗವಾಗಿ ಭೂಮಿಯಲ್ಲಿರುವ ಯಜ್ಞಭೂಮಿಗೆ ಬರುವಾಗ ಮೊದಲು ಭೂಮಿಯನ್ನೂ ಅನಂತರ ಅದರಲ್ಲಿರುವ ಜನಗಳನ್ನೂ ನೋಡುತ್ತಾರೆ ಎಂದರೆ ಮೊದಲು ಭೂಮಿಯೂ ಅನಂತರ ಅಲ್ಲಿರುವ ಜನರೂ ರಥದಲ್ಲಿ ಕುಳಿತು ಅಧೋಮುಖವಾಗಿ ನೋಡುತ್ತಿರುವ ಮಿತ್ರಾವರುಣರ ದೃಷ್ಟಿಗೆ ಬೀಳುವರು ಎಂಭಿಪ್ರಾಯವು ಸೂಚಿತವಾಗಿದೆ.

॥ ಸಂಹಿತಾಪಾಠಃ ॥

ಯದ್ಬಂಹಿಷ್ಠಂ ನಾತಿವಿಧೇ ಸುದಾನೂ ಅಚ್ಛಿದ್ರಂ ಶರ್ಮ ಭುವನಸ್ಯ ಗೋಪಾ ।
ತೇನ ನೋ ಮಿತ್ರಾವರುಣಾವವಿಷ್ಟಂ ಸಿಷಾಸಂತೋ ಜಿಗೀವಾಂಸಃ ಸ್ಯಾಮ ॥

॥ ಪದಪಾಠಃ ॥

ಯತ್ । ಬಂಹಿಷ್ಠಂ । ನ । ಅತಿಽವಿಧೇ । ಸುದಾನೂ ಇತಿ ಸುಽದಾನೂ । ಅಚ್ಛಿದ್ರಂ । ಶರ್ಮ । ಭುವನಸ್ಯ । ಗೋಪಾ ।

ತೇನ । ನಃ । ಮಿತ್ರಾವರುಣಾ । ಅವಿಷ್ಟಂ । ಸಿಸಾಸಂತಃ । ಜಿಗೀವಾಂಸಃ । ಸ್ಯಾಮ ॥ ೯ ॥

॥ ಸಾಯಣಭಾಷ್ಯಂ ॥

ದಾಕ್ಷಾಯಣಯಜ್ಞೇ ಯದ್ಬಂಹಿಷ್ಠಮಿತಿ ನವಮೀ ದ್ವಿತೀಯಸ್ಯಾಮನೂವಾಸ್ಯಾಯಾಂ ಮೈತ್ರಾ-ವರುಣಸ್ಯ ಹವಿಷೋ ಯಾಜ್ಯಾ । ಸೂತ್ರಿತಂ ಚ । ಆ ನೋ ಮಿತ್ರಾವರುಣಾ ಯದ್ಬಂಹಿಷ್ಠಂ ನಾತಿವಿಧೇ ಸುದಾನೂ । ಆ. ೨.೧೪ । ಇತಿ ॥ ಮೈತ್ರಾವರುಣೇ ಪಶೌ ಹವಿಷ ಏಷೈವ ಯಾಜ್ಯಾ । ಸೂತ್ರಿತಂ ಚ । ಯದ್ಬಂಹಿಷ್ಠಂ ನಾತಿವಿಧೇ ಸುದಾನೂ ಹಿರಣ್ಯಗರ್ಭಃ ಸಮವರ್ತತಾಗ್ರೇ । ಆ. ೩.೮ । ಇತಿ ॥

ಹೇ ಸುದಾನೂ ಶೋಭನದಾನೌ ಹೇ ಭುವನಸ್ಯ ಗೋಪಾ ಯುವಾಂ ಬಂಹಿಷ್ಠಂ ಬಹುತಮತಿ ಯದಚ್ಛಿದ್ರಮನವಚ್ಛಿನ್ನಂ ಶರ್ಮ ಸುಖಂ ಗೃಹಂ ವಾ ನಾತಿವಿಧೇಽತಿವೇದ್ಧುಮಶಕ್ಯಂ ಶರ್ಮೇಲಂ ಶರ್ಮವಿಶೇಷಣಂ ॥ ವ್ಯಧ ತಾಡನ ಇತ್ಯಸ್ಮಾದತ್ಯುಪಪದೇ ಕೃತ್ಯಾರ್ಥೇ ಕೇನ್ ಸಂಪ್ರಸಾರಣಂ ಚ ॥ ತಾದೃಶಂ ಶರ್ಮ ಧಾರಯಥಃ ತೇನ ಶರ್ಮಣಾ ನೋಽಸ್ಮಾನವಿಷ್ಟಂ । ರಕ್ಷತಂ । ಹೇ ಮಿತ್ರಾವರುಣೌ ಸಿಷಾಸಂತೋ ಧನಾನಿ ಸಂಭಕ್ತುಮಿಚ್ಛಂತೋ ವಯಂ ಜಿಗೀವಾಂಸಃ ಶತ್ರೂಣಾಂ ಧನಾನಿ ಜೇತುಮಿ-ಚ್ಛಂತಃ ಸ್ಯಾಮ । ಭವೇಮ ॥

॥ ಪ್ರತಿಪದಾರ್ಥ ॥

ಸುದಾನೂ—ಶ್ರೇಷ್ಠವಾದ ದಾನಿಗಳಾದ ಎಲೈಮಿತ್ರಾವರುಣರೇ । ಭುವನಸ್ಯ—ವಿಶ್ವಕ್ಕೆ । ಗೋಪಾ—ರಕ್ಷಕರಾದ ನೀವು । ಬಂಹಿಷ್ಠಂ-ಅತಿ ಪ್ರಭೂತವಾದುದೂ । ಅಚ್ಛಿದ್ರಂ—ಭಂಗರಹಿತವಾದುದೂ । ನಾತಿವಿಧೇ—ಇತರರಿಂದ ಭೇದಮಾಡಲು ಸಾಧ್ಯವಿಲ್ಲದುದೂ ಆದ। ಯತ್-ಯಾವ ಸುಖವನ್ನೂರಕ್ಷಣೆಯನ್ನೂ ಹೊಂದಿದ್ದೀರೋ। ತೇನ—ಅದರಿಂದ । ನಃ—ನಮ್ಮನ್ನು । ಅವಿಷ್ಟಂ—ರಕ್ಷಿಸಿ । ಮಿತ್ರಾವರುಣೌ—ಎಲೈ ಮಿತ್ರಾವರುಣರೇ । ಸಿಷಾಸಂತಃ—ಧನವನ್ನು ಹೊಂದಲು ಇಚ್ಛೆಯುಳ್ಳ ನಾವು । ಜಿಗೀವಾಂಸಃ—ಶತ್ರುಗಳನ್ನು ಜಯಿಸಿ ಅವರ ಧನಗಳನ್ನು ಪಡೆಯುವ ಶಕ್ತಿಯುಳ್ಳವರಾಗಿ । ಸ್ಯಾಮ—ಆಗುವಂತೆ ಅನುಗ್ರಹಿಸಿ.

॥ ಭಾವಾರ್ಥ ॥

ಶ್ರೇಷ್ಠರಾದ ದಾನಿಗಳಾದ ಎಲೈ ಮಿತ್ರಾವರುಣರೇ, ವಿಶ್ವಕ್ಕೆ ರಕ್ಷಕರಾದ ನೀವು ಅತಿ ಪ್ರಭೂತವಾದುದೂ, ಭಂಗರಹಿತವಾದುದೂ, ಇತರರಿಂದ ಭೇದಮಾಡಲು ಸಾಧ್ಯವಿಲ್ಲದುದೂ ಆದ ಯಾವ ಸುಖವನ್ನೂ ರಕ್ಷಣೆಯನ್ನೂ ಹೊಂದಿದ್ದೀರೋ, ಅದರಿಂದ ನಮ್ಮನ್ನು ರಕ್ಷಿಸಿ. ಎಲೈ ಮಿತ್ರಾವರುಣರೇ, ಧನವನ್ನು ಹೊಂದಲು ಇಚ್ಛೆಯುಳ್ಳ ನಾವು ಶತ್ರುಗಳನ್ನು ಜಯಿಸಿ ಅವರ ಧನಗಳನ್ನು ಪಡೆಯುವ ಶಕ್ತಿಯುಳ್ಳವರಾಗಿ ಆಗುವಂತೆ ಅನುಗ್ರಹಿಸಿ.

English Translation

Munificent Mitra and Varuna, protectors of the universe, (it is yours to grant) exceeding and perfect felicity, such as it is impossible to disturb: bless us with that (felicity), and may we ever be (possessed) of the riches we desire, and be confident of victory (over our enemies.)

॥ ವಿಶೇಷವಿಷಯಗಳು ॥

**ದಾಕ್ಷಾಯಣಯಜ್ಞ**ದಲ್ಲಿ **ಯದ್ವಂಹಿಷ್ಠಂ**—ಎಂಬ ಈ ಸೂಕ್ತದ ಒಂಭತ್ತನೆಯ ಋಕ್ಕನ್ನು ಎರಡನೆಯ ಅಮಾವಾಸ್ಯೆಯಲ್ಲಿ ಮಿತ್ರಾವರುಣರನ್ನುದ್ದೇಶಿಸಿ ಮಾಡುವ ಹವಿಸ್ಸಿನ ಹೋಮದಲ್ಲಿ ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ- **ಆ ನೋ ಮಿತ್ರಾವರುಣಾ ಯದ್ವಂಹಿಷ್ಠಂ ನಾತಿವಿಧೇ ಸುದಾನೂ** ಎಂಬ ಸೂತ್ರದಿಂದ (ಆ. ೨-೧೪) ವಿವೃತವಾಗಿರುವುದು. ಮತ್ತು ಮೈತ್ರಾವರುಣ ಸಂಬಂಧವಾದ ಪಶುಯಾಗದಲ್ಲಿಯೂ ಸಹ ಹವಿಸ್ಸನ್ನು ಹೋಮಮಾಡುವಾಗ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಯದ್ವಂಹಿಷ್ಠಂ ನಾತಿವಿಧೇ ಸುದಾನೂ ಹಿರಣ್ಯಗರ್ಭಃ ಸಮವರ್ತತಾಗ್ರೇ** ಎಂಬ ಸೂತ್ರದಿಂದ (೩-೮) ವಿವೃತವಾಗಿರುವುದು.

ಸೂಕ್ತದ ಉಪಸಂಹಾರರೂಪವಾದ ಈ ಋಕ್ಕಿನಲ್ಲಿ ಋಷಿಯು ಶಾಶ್ವತವಾದ ಸುಖವನ್ನೂ, ಗೃಹ, ಧನ ಮೊದಲಾದುವುಗಳನ್ನು ಕೊಡಬೇಕೆಂದೂ ಶತ್ರುಗಳನ್ನು ನಾವು ಜಯಿಸುವಂತಾಗಬೇಕೆಂದೂ ಮಿತ್ರಾವರುಣರನ್ನು ಪ್ರಾರ್ಥಿಸಿದಾನೆ.

**ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।**
**ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥**
**ಇತಿ ಶ್ರೀ ಮದ್ರಾಜಾಧಿರಾಜಪರಮೇಶ್ವರ ವೈದಿಕಮಾರ್ಗಪ್ರವರ್ತಕ ಶ್ರೀ ವೀರಬುಕ್ಕಭೂಪಾಲ-**
**ಸಾಮ್ರಾಜ್ಯಧುರಂಧರೇಣ ಸಾಯಣಾಮಾತ್ಯೇನ ವಿರಚಿತೇ ಮಾಧವೀಯೇ**
**ವೇದಾರ್ಥಪ್ರಕಾಶೇ ಋಕ್ಸಂಹಿತಾಭಾಷ್ಯೇ ಚತುರ್ಥಾಷ್ಟಕೇ**
**ತೃತೀಯೋಽಧ್ಯಾಯಃ ಸಮಾಪ್ತಃ**

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆ
ಋಗ್ವೇದಸಂಹಿತೆಯ ಚತುರ್ಥಾಷ್ಟಕದಲ್ಲಿ
ಮೂರನೆಯ ಅಧ್ಯಾಯವು ಸಮಾಪ್ತವಾದುದು.

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ॥

॥ ಶುಭಂ ಭೂಯಾತ್ ॥

॥ ಮಂಗಳಂ ॥